ಮಥುರೆಯಲ್ಲಿ ಅಶೀತಿವಯಸ್ಸಿನ ಒಬ್ಬ ಮನುಷ್ಯನು ಸಭೆ ಸೇರಿ ನಾಸಿಕ ಪೋರ್ಣ ದವಾಸೆ ನಸ್ಯವನ್ನು ದಾಕತೀಕ್ಷ್ಣ ಸಂಪ್ರದಾಯವೂ ಕಾರಕವೂ ಆಯುರ್ವೃದ್ಧಿ ಪ್ರದವೂ ಬಹಳ ಶಕ್ತಿವರ್ಧಕವೆಂತಲೂ, ದೇಹಕ್ಕೆ ಆರೋಗ್ಯ ಕರವಾದುದೆಂತಲೂ, ವಿಷಕಾರಕವಾದುದೆಂತಲೂ, ಇತರ ದುರ್ವ್ಯಸನಗಳಿಗಿದು ಅಂಕುಶವೆಂತಲೂ ನಿರ್ಣಯಿಸಿ ಯಾರೂ ಇನ್ನುಮೇಲೆ ನಸ್ಯವನ್ನು ಉಪಯೋಗಿಸಬಾರದೆಂದು ತಮ್ಮೊಳು ಕಟ್ಟು ಮಾಡಿಕೊಂಡಿದಾರೆ. ಪಟ್ಟಣದ ಗಳ್ಳಿಗಳು ಬಂದಿಗರುವದರಿಂದ ಅಫೀಮು ಪುರಾಣಗಳನ್ನು ಬೀದಿ ಪುರಾಣ ಶಾಸ್ತ್ರಗಳನ್ನು ದೂಷಿಸಿ ದೇಶಕ್ಕೆ ಹಾನಿಕರವೆಂದು ಸುಧಾರಕರು ಇವನ್ನು ಬಹಿರಂಗ ಧ್ವನಿಸಬೇಕಾದದ್ದು ಅವಶ್ಯಕವಾಗಿರುತಿದೆ.

ನಾಲಗಾಂವ ತಾಲ್ಲೂಕು ಬ್ರಹ್ಮಕೋಟೆಯಲ್ಲಿ ಮಾರ್ಗ ಪ್ರಸಂಗಕ್ಕಾಗಿ ಅಲ್ಲಿನ ಪ್ರತಿಯೊಬ್ಬ ರೈತನು ತಮ್ಮ ದನ ಕರುಗಳೊಡನೆ ಪರಸ್ಥಳಗಳಿಗೆ ಹೋಗಬೇಕಾದ ಪ್ರಸಂಗ ಬಂದಿರುವದರಿಂದ ಅಲ್ಲಿನ ಭೂಮಿ ಜಮೀನುದಾರನು ನಿಂಗರೆಡ್ಡಿ ಬಿಕ್ಕರೆಡ್ಡಿ ಎಂಬುವನು "ಊರವರು ಹೊರಗೆ ಹೋಗಬಾರದು, ಒಂದು ಕಡೆಯಾಗಿ ಊರೆಲ್ಲ ಪಾಳಾಗುವದು, ಆದುದರಿಂದ, ಕೊಟ್ಟಿಗ್ಗಿರುವ ಕೃಷಿಕರು ಯಾರೂ ಹೊರಗೆ ಹೋಗಬೇಕಾದುದಿಲ್ಲವು, ನನ್ನಲ್ಲಿರುವತನಕ ನಿಮ್ಮ ಜೀವನಕ್ಕೆ ಕಾಲದ ಧಾನ್ಯವನ್ನು ಕೊಡುತ್ತೇನೆ. ನೀವೆಲ್ಲರೂ ಇನ್ನು ಇಲ್ಲಿರುವನ್ನು ನನ್ನನ್ನು ಕಾಪಾಡಿರಿ, ನನ್ನಲ್ಲಿಯೂ ಧಾನ್ಯ ತೀರಿದ ಮೇಲೆ ಪರಮೇಶ್ವರನಿದ್ದಾನೆಂದು ಹೇಳಿ ಹೊರಗೆ ಹೋಗುವವರನ್ನೆಲ್ಲ ನಿಲ್ಲಿಸಿಕೊಂಡಂತೆ ಹೇಳುವರಿದೆ. ಇದು ನಿಜವಾಗಿರುವ ಪಕ್ಷಕ್ಕೆ ಈತನನ್ನೇ ಈ ಕಾಲದಲ್ಲಿ ಗರಿಮೋದಾರನೆಂದು ಹೇಳಬೇಕಾಗಿರುತದೆ. – ಸ. ವೃ.

ಫ್ರೆಂಚ್ ದೇಶಸ್ಥಳಾದ ಒಬ್ಬ ಹೆಂಗಸಿನಾದು ಈ ಭೂಮಂಡಲವನ್ನೆಲ್ಲ ಬಂದುವರೆಗೆ ಪ್ರದಕ್ಷಿಣ ಮಾಡಿಕೊಂಡು ಬಂದು ಮರಳಿ ಸಂಚಾರಕ್ಕೆ ಹೊರಟಿರುತ್ತಾಳೆ. ಈಕೆಗೆ ಈಗ ೬೮ ವರುಷಗಳು ವಯಸ್ಸಾಗಿರುತಿದೆ. ದೇಶ ಸಂಚಾರ ಮಾಡಲಿಕ್ಕೆ ಮುಖ್ಯ ಕಾರಣವೇನೆಂದರೆ, ಯಾವ ಯಾವ ದೇಶಗಳಲ್ಲಿ ಜನಗಳು ಹ್ಯಾಗೆ ವಾಸವಾಗಿರುತಲಿದಾರೆಯೋ, ಅವರ ಜೀವನವ್ಯಾಪಾರಾದಿಗಳೂ ಅವರ ಕೈವಾಡ ಕೆಲಸಗಳು ಯಾವವಿಧ ವಾದವೋ, ಸ್ತ್ರೀಯರು ಯಾವಪ್ರಕಾರ ವಿದ್ಯೆಯುಳ್ಳವರೋ, ರಾಜ್ಯಭಾರಕ್ರಮವು ಹ್ಯಾಗಿರುವದೋ, ದೇಶದ ವ್ಯವಸ್ಥೆ ಯೆಂತಿರುವದೋ ಇವುಗಳನ್ನು ನೋಡಿ ತಿಳಿದುಕೊಂಡು ಬಂದು ತನ್ನ ದೇಶದಲ್ಲಿಯೂ ಅವುಗಳನ್ನು ವಿಶೇಷತಃ ಪ್ರಚಾರಕ್ಕೆ ತರಬೇಕೆಂಬ ಆಲೋಚನೆಯುಳ್ಳವಳಾಗಿರುತ್ತಾಳೆ. ಈಕೆಯು ಭೂಪ್ರದಕ್ಷಿಣವನ್ನು ಮೂರು ವರ್ಷಗಳ ಕಾಲದಲ್ಲಿಯೇ ಪೂರೈಸಿಕೊಂಡು ಸ್ವಸ್ಥಾನಕ್ಕೆ ಹಿಂತಿರುಗಿ ಬಂದಿರುತ್ತಾಳೆಂದು ತಿಳಿಯಬರುತದೆ.

ಬಂಗಾಳ ಪ್ರೆಸಿಡೆನ್ಸಿಗೆ ಸೇರಿದ ಅಲ್ಲೀಪೂರ ಡೆಪ್ಯುಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಸಿವಿಲ್ ಮೊಕದ್ದಮೆಯು ವಿಚಾರಣೆ ಯಾಯಿತು. ಪ್ರತಿವಾದಿಯಾದ ಸ್ತ್ರೀಯು ವಾದಿಯಾದ ಒಬ್ಬ ಸಾಹುಕಾರನಿಂದ ಸಾಲ ತೆಗೆದುಕೊಂಡಿದ್ದರೂ ತಾನು ಸಾಲ ತೆಗೆದುಕೊಳ್ಳಲಿಲ್ಲವೆಂತಲೂ, ಸಾಹುಕಾರನು ತನ್ನ ಮೇಲೆ ಝೂಟಿ ಫಿರ್ಯಾದಿ ಮಾಡಿದನೆಂತಲೂ, ಕೋರ್ಟಿನಲ್ಲಿ ಪ್ರಮಾಣ ಪೂರ್ವಕ ಸುಳ್ಳು ಹೇಳಿದಳೆಂಬ ಅಗ್ರಹದ ಮೇಲೆ ವಾದಿಯಾದ ಸದರೀ ಸಾಹುಕಾರನು ಅವಳನ್ನು ಖೂನಿಮಾಡಿ, ಆಕೆಯನ್ನು ತಡೆಯಬಾರದೆ ಅಲ್ಲಿಯೇ ಪ್ರಸವಿಸಿದಳು. ಜನಿಸಿದ ಮಗುವಿನ ಮುಖವು ತಾಯಿಗೆ ಬಿದ್ದ ಏಟಿನಿಂದ ನಜ್ಜುಗಿದೆ, ಈಗ ಸಾಹುಕಾರನ ಮೇಲೆ ಅವಳು ಪ್ರತಿಯಾಗಿ ಖೂನಿ ಮಾಡಿದನೆಂದು ಫಿರ್ಯಾದು ಮಾಡಿದಳು. ಮನುಷ್ಯನಿಗೆ ಅಗ್ರಹವು ಕೃತ್ಯಾಕೃತ್ಯ ವಿವೇಕಜ್ಞಾನವಂ ಕೆಡಿಸುವ ಸ್ವಭಾವ ಕಾರಣಗಳಿಗೆ ಅವನು ಗುರಿಯಾಗದೆ ಹೋಗುವದಿಲ್ಲವು.

ಕೆಲವು ದಿವಸಗಳ ಹಿಂದೆ ದೇಶಭಕ್ತ ಸಂಸ್ಥಾನಗಳಲ್ಲಿ ನಡೆದ ಧಾನ್ಯ ಲೂಟಿಗೆ ಸಂಬಂಧಿಸಿದವರ ವಿಚಾರಣೆಯು ಅದ್ಭುತ ನಡೆಯುತಲಿದೆ. ಗತಿಸಿದ ನಾಲ್ಕು ತಿಂಗಳ ಕಾಲದಲ್ಲಿ ೧೫೦ ಜನ ದರ್ಯಾಫ್ತು ಮಾಡಲ್ಪಟ್ಟರು, ಇನ್ನೂ ಅವರ್ಸ್ವದ ನರ ವಿಚಾರಣೆ ನಡೆಯಬೇಕಾಗಿರುತಿದೆ. ಬಿದುರ ಎಂಬ ಗ್ರಾಮದಲ್ಲಿ ನಡೆದ ಲೂಟಿಗೆ ಸೇರಿದ್ದ ೬೧ ಜನರ ವಿಚಾರಣೆ ಯಾಗಿ ಒಬ್ಬನಿಗೆ ಖುಲಾಸೆ ಒಬ್ಬನಿಗೆ ಕೊರಡೆ ಏಟು, ಮಿಕ್ಕವರಿಗೆ ಮೂರು ವರುಷಗಳ ಪರ್ಯಂತ ಮಜಕೂರ ಕೈದ ಸಜಾ, ಕಾಲತಿ ಕ್ಷೆ ವಿಧಿಸಲ್ಪಟ್ಟಿತು. ಅರ್ಗಾತ್ರಾ ಎಂಬ ಗ್ರಾಮದಲ್ಲಿ ಕೆಲ್ಲೆ ಹೊಡೆದ ೮೨ ಮಂದಿ ಕಕ್ಷಿದಾರರ ದರಾಫ್ತು ನಡೆಯುತಲಿದೆ. ಈ ಮೊಕದ್ದಮೆಗಳೆಲ್ಲವು ಸೆಷನ್ಸ್ ಕೋರ್ಟಿನಲ್ಲಿ ಜರುಗುವದರಿಂದ ನೇಟಿವ ಅಸೆಸರ್‌ಗಳಿಗೆ ಗಿರಾಕಿಯು ಅಧಿಕವಾಗಿ ದೊರೆಯುವದು ಪ್ರಯಾಸವಾಗಿರುತಿದೆ.

ಅಮೆರಿಕಾ ಖಂಡದಲ್ಲಿ ನಿಕಾರಗ್ವಾ ಎಂಬ ಸರೋವರದ ಆಸಪಾಸ ಪ್ರಾಂತಗಳಲ್ಲಿ ವನಮೂಲಿಕೆಗಳನ್ನು ಸಂಗ್ರಹಿಸುವದಕ್ಕಾಗಿ ಹಿರ್ಡಿಸ್ಟರ್ ಎಂಬ ಒಬ್ಬ ಸರದಾರನು, ತನ್ನ ನಾಯಿಯೊಡನೆ ಮಾಸಾಪಿಲ್ ಪ್ರಕಾರ ಬಂದಮುನ ಹೋಗಲಾಗಿ ಸಂಗಡ ಬಂದ ನಾಯಿಯು ಸ್ವಲ್ಪದೂರದಲ್ಲಿ ತಪ್ಪಿಸಿಕೊಂಡಿತು ಆತನು ಕೂಗಿದರೂ ಹುಡುಗಿ ತನ್ನ ನಾಯಿಯು ಕಾಣದೆ ಹೋಗಲು ಹುಡುಕಿ ನೋಡಲು ಯಾವುದೋ ಸಂಕಟಪಡುತ ದೀನಸ್ವರದಿಂ ಕೂಗುವಂತೆ ಕೇಳಿಸಿತು. ಆ ಶಬ್ದವು ನಿಧಾನದಿಂದಲೆ ಆ ಬಿದ್ದ ಸ್ಥಳಕ್ಕೆ ಹೋಗಿ ನೋಡಲಾಗಿ ಸದರೀ ನಾಯಿಯು ಒಂದು ಬಳ್ಳಿಯಿಂದ ಸುತ್ತಲ್ಪಟ್ಟು ಅದರ ಮೈಯೊಳಗಣ ರಕ್ತ ಮಾಂಸಗಳನ್ನು ಶೀಘ್ರವಾಗಿ ಆ ಬಳ್ಳಿಯೇ ಹೀರುತಲಿದ್ದಂತೆ ವ್ಯಕ್ತವಾಯಿತು. ಆದಂಕೆಯು ಅವನು, ಆ ಬಳ್ಳಿಯ ರೆಂಬೆಗಳನ್ನು ಹಿಡಿದು ಕಾಪಾಡಲು ಪ್ರಯತ್ನಪಡಲು ಅವನ ಕೈಯೊಳಗಿನ ರಕ್ತ ಮಾಂಸಗಳನ್ನು ಕೂಡ ಅದು ಹೀರಲಾರಂಭಿಸಿತು. ಆದಾಗ್ಯೂ ಆತನು ಅದಕ್ಕೆ ಅಂಜದೆ ನಾಯಿಯನ್ನು ಬಿಡಿಸಿಕೊಂಡನು. ವನಮೂಲಿಕೆಗಳಲ್ಲಿ ಈ ಶಕ್ತಿಯು ಇಷ್ಟರವರೆಗೂ ನೋಡಿಯುವದಕ್ಕಾಗುವದಿಲ್ಲವು ಆದ್ದರಿಂದ ಈ ವಿಷಯವು ಆಶ್ಚರ್ಯಕರವಾಗಿರುತಿದೆ. ಅವುಗಳ ಸ್ವರೂಪವನ್ನು ಮುಂದೆ ತಿಳಿಸುವೆವು.

ಐರ್ಲ್ಯಾಂಡಿನ ಸಾರ್ವಜನಿಕ ಮುಖಂಡರಾದ ಮಿ. ಪಾರ್ನೆಲ್ ಯವರ ವಿಷಯದಲ್ಲಿ "ಟ್ರುತ್" ಎಂಬ ಇಂಗ್ಲಿಷ ಪತ್ರಿಕೆಯು ಅಭಿಪ್ರಾಯಪಡುವದೇನಂದರೆ.—"ಪಾರ್ನೆಲ್ ಯವರು ಪೇರಿಸಿ ಪಟ್ಟಣದಲ್ಲಿ ಬಹಳ ಪ್ರಜಾರಂಜಕರಾದ ರಾಜಪುರುಷರೆನ್ನಿಸಿಕೊಳ್ಳಬಹುದು. ಇವರು ಅಂತಾ ಅಸಮಾನ ಶೂರರೂ ಬುದ್ಧಿವಂತರೂ ಅಲ್ಲವು, ಇವರ ಪ್ರಸಂಗದಲ್ಲಿ ಯಾವುದೋ ಉಚಿತ ಅಭಿಪ್ರಾಯಗಳಿಲ್ಲದಿರಲಿಲ್ಲವು. ಇವರು ಮುಖ್ಯವಾಗಿ ಐರ್ಲ್ಯಾಂಡ ದೇಶಸ್ಥರು, ನಿಪುಣರು, ಅನುಕೂಲರು, ಮನೋಹರರು, ಸಾಧನ ಸಂಪನ್ನರು, ಕುಶಾಮತಿ ಮಾತುಗಳುಳ್ಳವರು, ಸ್ವಾಧೀನ ಪಡಿಸಿಕೊಂಡು ಸ್ವಪ್ರತಿಷ್ಠೆಯುಳ್ಳ ಯಾರೂ ತಮ್ಮ ಪ್ರಗೋಷ್ಠಿಯುಳ್ಳವರೂ ಸಂಪೂರ್ಣ ದೃಷ್ಟಿಯಾದ ಸ್ವಭಾವವುಳ್ಳವರು. ಐರ್ಲ್ಯಾಂಡದಲ್ಲಿ ಹಿಂದೂಗಳೂ, ಈಗಿನ ರಾಜ್ಯದಲ್ಲಿ ತದ್ದೇಶೀಯರೂ, ರಷ್ಯಾದಲ್ಲಿ ಅಲ್ಲಿನವರೂ, ಇಟಲಿಯಲ್ಲಿ ಇಟಾಲಿಯನ್ ಜನರೂ, ತುರ್ಕಿಯಲ್ಲಿ ತುರುಷ್ಕರೂ ತಮ್ಮಲ್ಲಿ ವಿಶೇಷ ಪ್ರೀತಿ ಗೌರವಗಳುಳ್ಳವರೆಂದು ಭಾವಿಸುವಂತೆ ಅಲ್ಲಲ್ಲಿ ಪರಿಗಣಿಸುತ ಈಗ ಫ್ರಾನ್ಸಿಗೆ ಹೋಗಿರುವದರಿಂದ ಅಲ್ಲಿಯೂ ಇತರ ಜಾತಿಗಳವರಿಗಿಂತ ಫ್ರೆಂಚರನ್ನೇ ತಾವು ಹೆಚ್ಚಾಗಿ ಅಭಿಮಾನಿಸುವಂತೆ ಅವರಿಗೆ ತಮ್ಮ ಶಬ್ದಜಾಲದಿಂದ ಮೋಹಗೊಳಿಸುವರು, ಇವುಗಳನ್ನೆಲ್ಲ ನೋಡಿದರೆ ಲಾರ್ಡ ಹಿಪ್ಪ್ರಿಯವರನ್ನು ಸ್ವಾರ್ಥಪರರಾದ ಕಾರ್ಯವಾದಿಯೆಂದು ಹೇಳಬಹುದಾಗಿರುತಿದೆ" ಎಂಬುದು.

ಕೆಲವು ಸಂವತ್ಸರಗಳ ಹಿಂದೆ ಅನೇಕ ಜನರನ್ನು ಗುಂಪು ಸೇರಿಸಿಕೊಂಡು, ತಾಂತ್ಯಾಭಿಲ್ಲನೆ ಅಕ್ಕನಾದ ಥಿಲಾಬಾಯಿ ಎಂಬುವಳು ಅಲ್ಲಲ್ಲಿ ದರೋಡೆ ವಗೈರೆ ಮೊದಲಾದವಂ ಮಾಡುತಲಿದ್ದಳು. ಇವಳನ್ನು ಹಿಡಿಯುವವರಿಗೆ ೧೮೮೫ನೇ ಇಸವಿಯಲ್ಲಿ ೫೦೦ ರೂಪಾಯಿಗಳು, ೧೮೮೬ನೇ ಇಸವಿಯಲ್ಲಿ ೬೦೦ ರೂಪಾಯಿಗಳು, ೧೮೮೭ನೇ ಇಸವಿಯಲ್ಲಿ ೧೦೦೦ ರೂಪಾಯಿಗಳು ಇನಾಮು ಕೊಡಲ್ಪಡುವದೆಂದು ಪತ್ರಿಕೆಗಳಲ್ಲಿ ಗವರ್ನಮೆಂಟಿನವರು ಇಷ್ಟಿಹಾರಗಳನ್ನು ಕೊಟ್ಟಿದ್ದರು. ಆದಾಗ್ಯೂ ಅವಳನ್ನು ಹಿಡಿಯಲಿಕ್ಕೆ ಒಬ್ಬರೂ ಶಕ್ತರಲ್ಲದೆ ಇದ್ದರು. ಇದಲ್ಲದೆ ಅವಳ ಸಂಚಾರಕ್ರಮವನ್ನು ಸಹ ಊಹಿಸಲಿಕ್ಕೆ ಜನರಿಗೆ ಅಸಾಧ್ಯವಾಗಿತ್ತು. ಹೀಗಿರುವಲ್ಲಿ ಅವಳಿಗೆ ವೈವಾಹಿಕ ಗ್ರಹಸ್ಥನು ಕಾಲವು ಸನ್ನಿಹಿತವಾಗಿ, ಮೃತ್ಯುವೇ ಸ್ವತಃ ಪತ್ತೇ ಮಾಡಲಿಕ್ಕೆ ಪ್ರಯತ್ನ ಪಟ್ಟಲ್ಲಿಂದ ಅವಳು ತನ್ನ ಗಂಡನು ಕಾಯಿಲೆಯಾಗಿದ್ದದರಿಂದ ಅವನನ್ನು ಒಂದು ಗುಡಿಯಲ್ಲಿಟ್ಟು ಅವನಿಗೆ ಉಪಚಾರ ಮಾಡುತಲಿರುವಾಗ್ಯೆ ಅವನ ಚಿಕಿತ್ಸೆಗಾಗಿ ವನೌಷಧಿಯಂ ತರುವದಕ್ಕೆ ಹೊರಗೆ ಬಂದ ಸಮಯದಲ್ಲಿ ಅಕಸ್ಮಾತ್ ಆ ಮಾರ್ಗವಾಗಿ ಹೋಗುತ್ತಿದ್ದವನೊಬ್ಬನಿಂದ ಹಿಡಿಯಲ್ಪಟ್ಟಳು. ಕೂಡಲೇ ವಿಚಾರಣೆಯಾಗಿ ಅವಳಿಗೆ ಫಾಸಿ ಸಜಾ ವಿಧಿಸಲ್ಪಟ್ಟಿತು. ಇವಳು ಜೀವಿಸಿದ್ದ ಕಾಲದಲ್ಲಿ ಯಾವಾಗಲೂ ಗಂಡುವೇಷವನ್ನು ಹಾಕಿಕೊಂಡು ಸಕಲ ಕೆಲಸಗಳನ್ನು ಪುರುಷರಂತೆ ಧೈರ್ಯದಿಂ ಮಾಡುತಲಿದ್ದಳಂತೆ. ಸಾಹಸಿಯಾದ ಸ್ತ್ರೀಯರು ಪುರುಷರಿಗೆ ಅಸಾಧ್ಯವಾದುದರಿಂದಲೇ ಅವರ ಪ್ರಾಬಲ್ಯತೆಯನ್ನು ಪೂರ್ವಿಕರು ನಾನಾ ಪ್ರಕಾರದಿಂ ತೆಗ್ಗಿಸಿದ್ದರು. ಈಗ ಮಾ ಅವರಿಗೆ ಅಭ್ಯಾಸಕಾಲವು ಪ್ರಸ್ತುತವಾಗಿರುತಿದೆ.

NOTICE.

T. SAMMI'S WONDERFUL MEDICINES.

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ನೇಹಿತರೂ ಕೆಲರು ನನ್ನ ಔಷಧಗಳನ್ನು ಸೇವಿಸಿ ಸೌಖ್ಯಪಟ್ಟಿರುವ ಸಂಗತಿಯನ್ನು ಸಕಲರಿಗೂ ತಿಳಿಯಪಡಿಸುವಂತೆ ನನ್ನನ್ನು ಪ್ರಾರ್ಥಿಸಿದ್ದರಿಂದಲೆ ಅವರ ಕೋರಿಕೆಯಂತೆ ಮೇಲೆ ಕಂಡ ಸಂಗತಿಯನ್ನು ಸಮಕ್ಷ ಜನರಿಗೂ ಇದರಿಂದ ತಿಳಿಯಪಡಿಸಿ ಸದರೀ ಔಷಧಗಳು ಒಪ್ಪದೆ ಗುಣವನ್ನುಂಟುಮಾಡುವವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿಂದೂ ತೈಲವು — ನಡುವು ನೋವು, ಎದೆನೋವು, ಹೊಟ್ಟೆನೋವು, ಪಕ್ಕನೋವು, ಕೀಲುನೋವು, ಮೂಲವ್ಯಾಧಿ, ಮೇಹ ಹಡಿಗಳು, ತಲೆನೋವು, ತುರಿ, ಕುರುಗಳು, ವ್ರಣಗಳು, ಗಡ್ಡೆ ಇವುಗಳನ್ನು ನಿವೃತ್ತಿ ಮಾಡುವದು ಕ್ರಯ ೦–೮–೦ ೧–೪–೦.

ಹಿಂದೂ ಕಷಾಯ.— ವಾಂತಿಭೇದಿ, ಶೀತಭೇದಿ, ರಕ್ತಭೇದಿ, ಹೊಟ್ಟೆನೋವು, ಅಜೀರ್ಣ, ತಲೆನೋವು, ಬೇವಕಡತ, ಹಲ್ಲುನೋವು, ಗಂಟಲ ವ್ರಣ, ರಜಸ್ವಲಾಕಾಲದಲ್ಲಿ ಸ್ತ್ರೀಯರಿಗುಂಟಾಗುವ ರಕ್ತ ದೋಷ ಇವುಗಳಿಗೆ ಶ್ರೇಷ್ಠವಾದುದಾಗಿದೆ, ಕ್ರಯ ೦–೮–೦ ೧–೪–೦

ಜ್ವರ ನಿವೃತ್ತಿ.— ಚಳ್ಯಾರಿ, ಕದಪೆ, ಕಾಲರಾ ಜ್ವರಗಳು, ಚರಣ್ಯಾದಿ ಜ್ವರಗಳು, ಸಂತತಜ್ವರಗಳು, ಇವುಗಳ ಗುಣವಾಗ್ಬಿಡುವ ಔಷಧವು, ಕ್ರಯ ೦–೮–೦ ೧–೪–೦

ರಕ್ತಶುದ್ಧಿಗೆ ಔಷಧವು ಕೆಂದವಾಲೆ, ಮೇಹಜಾಡ್ಯ, ಕುಷ್ಠರೋಗ, ವಿಷಮಜ್ವರ, ತುಸ್ತಿ, ಇವುಗಳಂ ನಿವೃತ್ತಿಸಿ ರಕ್ತವನ್ನು ಶುದ್ಧಿಮಾಡುವದು, ಕ್ರಯ ೦–೮–೦

ಕೆಮ್ಮಿಗೆ ಔಷಧವು — ಕೆಮ್ಮು, ಶ್ವಾಸರೋಗ, ನಾಯಿಕೆಮ್ಮು, ಎದೆನೋವು, ಉಬ್ಬಸ, ಇವುಗಳಿಗೆ ಸಿದ್ಧೌಷಧವು ಕ್ರಯ ೧–೦–೦

ಸ್ತ್ರೀಯರಿಗೆ ಔಷಧ.— ಬಲದಾಯಕವಾಗಿ ಗಾಳಿಕೊಂಡ ಸ್ತ್ರೀಯರಿಗೆ ಸಕಲವಿಧ ಮೇಹ ಬಾಧೆಗಳಿಗೆ ಶ್ರೇಷ್ಠವಾದದ್ದು. ಕ್ರಯ ೧–೮–೦.

ಸಂಜೀವನ — ಇದು, ದೌರ್ಬಲ್ಯದಿಂದುಂಟಾಗುವ ರೋಗಗಳು, ಇಂದ್ರಿಯಸ್ಖಲನ, ಕೈಕಾಲು ಜೋಮು, ಮಂದಾಗ್ನಿ ಮೊದಲಾದವನ್ನೆಲ್ಲವಂ ನಿವಾರಿಸಬಲ್ಲದ್ದಾಗಿರುತದೆ. ಕ್ರಯ ೧–೦–೦

ಬಧಿರತ್ವಕ್ಕೆ ತೈಲ — ಕಿವಿಯಲ್ಲಿ ಬರುವ ರೋಗಗಳು ಕಿವಿ ಬಿದ್ದ ದುರ್ಗಂಧವಾಗಿರುವದು ಕಿವಿ ಸೋರುವದು, ಮೊದಲಾದ ಕರ್ಣರೋಗಗಳನ್ನು ಗುಣಪಡಿಸುವದು ಕ್ರಯ ೧–೦–೦

ನರೆತ ಕೂದಲುಗಳನ್ನು ಕಪ್ಪಾಗಿ ಮಾಡುವ ತೈಲವು.— ಇದು ಬಿಳೀ ಕೂದಲನ್ನು ಕಪ್ಪಾಗಿ ಮಾಡುವದು. ಈ ತೈಲವು ಕೂದಲು ಉದುರದಂತೆ ಮಾಡುವದು. ಮತ್ತು ತಲೆಗೆ ಹಚ್ಚಿದರೆ ತಂಪಾಗಿ ಕೂದಲು ಹುಟ್ಟಿ ಬೆಳೆಯುವದು. ಕ್ರಯ ೧–೦–೦

ತಲೆಕೂದಲಿಗೆ ಸುಗಂಧವಾದ ತೈಲ — ಇದು ಕೂದಲಿಗೆ ತಂಪು, ಕಣ್ಣಿಗೆ ದೃಷ್ಟಿಯನ್ನು ಕೊಡುವದು, ಮತ್ತು ತಲೆನೋವನ್ನು ಶಮನ ಮಾಡುವದು, ತಲೆಕೂದಲಿಗೆ ಶೋಭಾಪ್ರದವಾದದ್ದು. ಕ್ರಯ ೦–೮–೦

ಶಿವತೈಲ — ಇದು, ಶರೀರದಲ್ಲಿನ ನೋವು, ವಾತರೋಗ, ಪಕ್ಷವಾತ, ಸೊಂಟನೋವು(ನ), ಕೀಲುನೋವು ಮೊದಲಾದ ಇವುಗಳಿಗೆ ಶ್ರೇಷ್ಠವಾದ ತೈಲ ಕ್ರಯ ೧–೦–೦

ದಂತಮಂಜನ — ಇದು ಬಾಯಿಯೊಳಗಿನ ದುರ್ಗಂಧವನ್ನೂ, ದಂತರೋಗಗಳನ್ನೂ ನಿವೃತ್ತಿಸಿ, ಹಲ್ಲುಗಳನ್ನು ಸ್ವಚ್ಛವಾಗಿ ಕಾಂತಿಯುಳ್ಳವುಗಳನ್ನಾಗಿ ಮಾಡುವದು. ಕ್ರಯ ೦–೮–೦

ಪಿತ್ತಗುಳಿಗೆಗಳು — ಪಿತ್ತವನ್ನೂ ವಾತಕೋಪವನ್ನೂ ಹೋಗಲಾಡಿಸಿ ಶರೀರಕ್ಕೆ ಕಾಂತಿಯನ್ನೂ ಬಲವನ್ನೂ ಕೊಡುವ ಗುಳಿಗೆಗಳು ಕ್ರಯ ೦–೮–೦

ಮೇಲೆ ತಿಳಿಸಲ್ಪಟ್ಟ ಔಷಧಗಳಲ್ಲದೆ ಕ್ರಿಮಿನಾಶಕ ಔಷಧಗಳು, ಜ್ವರಗಳು, ಕ್ಷಯ, ಬಹುಮೂತ್ರ ಮೊದಲಾದವುಗಳಿಗೆ ಔಷಧಗಳೂ, ಸಕಲವಿಧ ಇಂಗ್ಲಿಷ ಔಷಧಗಳೂ, ಅಪ್ಪಲ್ ತರಿಸಿ ಕಡಿಮೆ ಕ್ರಯಕ್ಕೆ ಮಾರಲ್ಪಡುವವು.

ಕೆಳಗೆ ಕಂಡ ಔಷಧಗಳು, ಬೆಂಗಳೂರಿನ ಬಳೇಪೇಟೆ ಮಿ. ಎಸ್. ಸಾಮಿಯವರ ಅಂಗಡಿಯಲ್ಲಿ ದೊರೆಯುವವು. ಮತ್ತು ಮದರಾಸ ಹನಸಾಲಪೇಟೆ ೧೬೮ ನೆ ನಂಬರಿನಲ್ಲಿರುವ ಮಿ. ಟಿ. ಸಾಮಿ ಅಂಡ್ ಕಂಪನಿಯವರಲ್ಲಿಯೂ, ಮದರಾಸ ಸ್ವಾಮಿಗಳ ಅಂಗಡಿಯಲ್ಲಿಯೂ ದೊರೆಯುವವು. ಪಾರ್ಸೆಲ್ ಮೂಲಕ ತರಿಸಿಕೊಳ್ಳುವ ಪಕ್ಷದಲ್ಲಿ ಬೆಂಗಳೂರಿನಿಂದ ತರಿಸಿಕೊಳ್ಳಬಹುದು. ನಿಂಗಪ್ಪ ಹೆಗಡೆ.

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವದು.

ಮದರಾಸ್ ಪ್ರೆಸಿಡೆನ್ಸಿ ಚಿತ್ತೂರು ಡಿಸ್ಟ್ರಿಕ್ಟ ಪುಂಗನೂರಲ್ಲಿ ಆರುಂಬಾಕ ರಂಗರಾಯರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ.

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ	ಕ್ರಯ ಪೋಸ್ಟೇಜ್ ಸಹ. ರೂ.	ಅ.	ಪೈ.
1	ಕೌಮುದೀವಿಲಾಸ (ಮೊದಲಿನಿಂದ ಪಂಚಸಂಧಿಗಳು ಮುಗಿಯುವ ವರಿಗು ಸಂಸ್ಕೃತ ವ್ಯಾಕರಣ ಸಿದ್ಧಾಂತಕೌಮುದಿಗೆ ಸುಲಭವಾದ ಆಂಧ್ರಭಾಷಾಂತರ.	0	4	6
2	ಸಂಗೀತನೀತಿ (ಕನ್ನಡ ಪದ್ಯಕಾವ್ಯ ನೀತಿಗ್ರಂಥವು)	0	2	6
3	ರತ್ನಪರೀಕ್ಷೆ (ಪ್ರತಿಪದಾಂಧ್ರ ಟೀಕಾ ಸಹಿತ ತೆಲುಗು ಪದ್ಯಕಾವ್ಯ)	0	2	6
4	ಉಪಯುಕ್ತ ಚಮತ್ಕಾರ ಸಂಗ್ರಹ (ಬಾಲಾವಿದ್ಯೆ)	0	2	6
	ಸ್ವಭಾವೋ ದುರ್ವ್ಯಯಃ (ಬಂಗ್ಲಾ ತಾತ್ಪರ್ಯ ಸಹಿತ)	0	2	0
	ರಘುವೀರಶತಕ (ಭಕ್ತಿನೀತಿ ಪದ್ಯಗಳು)	0	1	6
	ಕ್ರಿಸ್ತುಮತ ಖಂಡನ ಗ್ರಂಥಗಳು			
7	ಹಿಂದೂ ದೇವತಾ ಸಮರ್ಥನ	0	1	0
8	ಕ್ರಿಸ್ತುದೇವತ್ವ ವಿಚಾರ	0	1	0
	ಶ್ರೀಮನ್ ಮಧ್ವಮತಸ್ಥರಿಗೆ ಮುಖ್ಯವಾಗಿ ಬೇಕಾದ ಗ್ರಂಥಗಳು			
9	ಶ್ರೀಮನ್ ಮಧ್ವವಿಜಯ (ಸಂಸ್ಕೃತ ಕನ್ನಡ ವ್ಯಾಖ್ಯಾನ ಸಹಿತ ೬ನೇ ಸರ್ಗದ ವರಿಗು)	1	10	0
10	ಶ್ರೀಮನ್ ನ್ಯಾಯಸುಧಾಮಂಜರೀ (ಸಂಸ್ಕೃತ ಕನ್ನಡ ವ್ಯಾಖ್ಯಾನ ಸಹಿತ ಉತ್ತಮ ಕಾಗದಗಳ ಪ್ರತಿ)	1	1	0
11	ಶಿಟಲೋ ಶುದ್ಧಿಗಳು ಕಾಗದ ಪ್ರತಿ	0	15	0
12	ಸ್ತುತಿಕದಂಬ — ಶ್ರೀ ಹರಿವಾಯುಸ್ತುತಿ, ನೃಸಿಂಹಸ್ತುತಿ, ಕೃಷ್ಣಾಸ್ತುತಿ, ವಿಷ್ಣುಸ್ತುತಿ, ಜಗನ್ನಾಥ ದಾಸಾರ್ಯ ವಿರಚಿತ ಹರಿಕಥಾಮೃತಸಾರ, ದ್ವಾದಶಸ್ತೋತ್ರ, ಬ್ರಹ್ಮಸೂತ್ರ ಭಾಷ್ಯ, ವಾಯುಸ್ತುತಿ ನಿರ್ಣಯ, ಗುರುಸ್ತುತಿ, ಮಧ್ವನಾಮ, ಗೀತಾತಾತ್ಪರ್ಯ, ನಾರದಪುರಾಣ, ವಂಶಾವಳಿ, ದಶಾವತಾರ ಸ್ತೋತ್ರ ಮುಂತಾದ ೪೪ ಸ್ತುತಿಗಳಿರುವ ಸಂಚಿಕೆ	0	14	0
13	ಪ್ರಮೇಯ ನವಮಾಲಿಕಾ ಮಂಜರಿ ಸಹಿತ ಸಿದ್ಧಾಂತಸಾರ, ಜಗನ್ನಾಥ ಕಾರಿಕೆ, ತಂತ್ರಸಾರ ತಂತ್ರಾಂಶ, ಕನ್ನಡ ಸಾರಾಂಶ ಸಹಿತ ಗ್ರಂಥವು	0	3	6
14	ತಾರತಮ್ಯ ರತ್ನದರ್ಪಣ	0	1	6
15	ರಾಘವೇಂದ್ರ ಗುರುರಾಜರ ಪ್ರಭಾವ ಧ್ಯಾನ ಸಹಿತ ಸುಪ್ರಭಾತ	0	1	6
16	ವಾಯುಸ್ತುತಿ	0	1	0
17	ದ್ವಾದಶಸ್ತೋತ್ರ	0	1	6
18	ತರ್ಕತಾಂಡವ (ಪ್ರಯೋಗ ಪದ್ಧತಿ)	0	1	6
19	ನವರತ್ನ ಮಾಲಿಕಾ ಸಹಿತ ವಿಷ್ಣುಸಹಸ್ರನಾಮ ಸಂಕೀರ್ತನ ಶತಕ ಎಂಬುವ ಸ್ತುತಿಗಳು	0	1	0
	ಬಾಳಬೋಧ ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು			
20	ತಂತ್ರಸಾರ (ಶ್ರೀ ರಾಘವೇಂದ್ರ ಸ್ವಾಮಿಗಳಿಂದ ರಚಿತ ವ್ಯಾಖ್ಯಾನ ಸಹಿತ)	1	11	0
21	ಸತ್ಯಾಚಾರ ಪರಿಪಾಠ ಕರ್ಮ ನಿರ್ಣಯ (ಶ್ರೀ ಸತ್ಯಪ್ರಮೋದ ಸಹಿತ)	0	8	6
22	ಶ್ರೀರಾಜೇಂದ್ರ ಮಾಲ	0	3	6
23	ಮಣಿಮಂಜರೀ ಮಾಲಿ	0	8	0
24	ಕಾರ್ಯವಾದರತ್ನಾವಳಿ (ಮರಾಠಿ ಸಹಿತ)	0	2	0
25	ಪದ್ಯಮಾಲಾ (ದೇವತಾರ್ಚನ ಪದ್ಧತಿ)	0	1	6
26	ರಾಘವೇಂದ್ರ ಗುರುರಾಜ ನಕ್ಷತ್ರಮಾಲಾ ಸಹಿತ ಸಂಮಗ್ರ ಪುಸ್ತಕ	0	1	6

ಈ ಪುಸ್ತಕಗಳು ಬೇಕಾದವರು ಈ ಕೆಳಗೆ ಕಂಡ ವಿಳಾಸ ಇರುವವರಿಗೆ ಬರೆದು ತರಿಸಿಕೊಳ್ಳಬಹುದು. ಒಂದೇ ಸಾರಿ ೫ ಪ್ರತಿ ಪುಸ್ತಕಗಳು ಒಂದೇಸಾರಿ ತೆಗೆದುಕೊಳ್ಳುವವರಿಗೆ ೨ ಆಣೆ ಪುಸ್ತಕ ಕ್ರಯದಲ್ಲಿ ಕೊಡಲ್ಪಡುವದು.

ಆರುಂಬಾಕ ರಂಗರಾವ್,
ಪುಂಗನೂರು.

BANGALORE.—Printed and published at the KARNATIC PRESS, No. 50 HOSPITAL ROAD, PETTAH.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶವಿವಿಧಪ್ರವೃತ್ತ್ಯವಗಮಾರ್ಥ್ಯಕರ್ಣಾಟಕಪ್ರಕಾಶನಪರಾಜಿದಾಪ್ರಥಿತಸಾಹಿತೀಕೋಧಿತಾ। ಮ್ಯಗಾಂಕಹಿತವಾಸರೆನಿಹಿತಮುದ್ರಣಾಸಜ್ಜನೈರ್ದ್ವಿಜಾಸುಪರಿಪೋಷಿತಾದಿಶತಿಮಾನಸುಸಂಮುದಂ॥

Vol. XIX] BANGALORE—MONDAY, JANUARY 25, 1892 [No. 4.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ನೇ ಇಸವಿ ಜನವರಿ ೨೫ ನೇ ತಾರೀಖ್ ಸೋಮವಾರ. [ಸಂಖ್ಯೆ ೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,
ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ಹಿಂದಾಗಿ	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡತಕ್ಕವರಿಗೆ	4—0—0	5—0—0
ಹಿಂದಾಗಿ	5—0—0	6—0—0

[illegible]

ಪ್ರಕಟನೆಯ ರಿವಾಜು.

[illegible]

ADVERTISEMENTS

NOTICE.

VAIDYASARA SANGRAHA
A TREATISE ON THE [illegible] OF
HINDU MEDICINE.
Price including Postage Rs. 5-0-0
ವೈದ್ಯಸಾರ ಸಂಗ್ರಹ.

[illegible]

ನೋಟೀಸು.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

[illegible]

ಡಿ. ಬನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. ಸೋರ್ಸಾಪರಿಲಾ—ಇದು ರಕ್ತಶುದ್ಧಿ [illegible] ಬಾಟಲ್ ೧ಕ್ಕೆ ೧—೦—೦

೨. ಶಿಲಾಜಿತ ಮಿಶ್ರಿತ ಫಾಸ್ಫರಸ್ ಗುಳಿಗೆಗಳು.—[illegible] ಬಾಟಲ್ ೦—೧—೦.

೩. ಪ್ರಮೇಹ ಬಿಂದು—[illegible] ಬಾಟಲ್ ೧ಕ್ಕೆ ೧—೦—೦

೪. ಟೀಕಿಯ ಮುಲಾಮು.—[illegible] ಡಬ್ಬಿ ೧ಕ್ಕೆ ೦—೪—೦.

೫. ಸುಖವಾತದ ಔಷಧ.—[illegible] ಬಾಟಲ್ ೧ಕ್ಕೆ ೦—೧—೦.

೬. ಅದ್ಭುತ ಚಮತ್ಕಾರ.—[illegible]

೭. ಪೌಷ್ಟಿಕ ಗುಳಿಗೆಗಳು.—[illegible] ಬಾಟಲ್ ೧ಕ್ಕೆ ೦—೬—೦.

೮. ದಂತ ಶುದ್ಧಿ.—[illegible] ಡಬ್ಬಿ ೧ಕ್ಕೆ ೦—೪—೦

೯. ಗಜಕರ್ಣದ ಮುಲಾಮು.—[illegible] ಡಬ್ಬಿ ೧ಕ್ಕೆ ೦—೪—೦.

೧೦. ಜ್ವರಗಡ್ಡೆಯ ಔಷಧ ಮತ್ತು ಮುಲಾಮು.—[illegible]

೧೧. ಜ್ವರದ ಗುಳಿಗೆ.—[illegible] ಬಾಟಲ್ ೧ಕ್ಕೆ ೦—೯—೦.

೧೨. ದಾಷ್ಟಿಕ [illegible].—[illegible] ಬಾಟಲ್ ೧ಕ್ಕೆ ೧—೦—೦.

೧೩. [illegible]

ವಿಳಾಸ—ಡಿ. ಬನಕರರಾವ್ ಮತ್ತು ಕಂಪೆನಿ,
ಗಿರ್ಗಾಂವ್, ಮುಂಬೈ.

[illegible]

ನೋಟೀಸು.

[illegible]

ನೋಟೀಸ್.

DONGRAY'S SYRUP.

೧. ಡೋಂಗರೆಯವರ "ಬ್ಲಡ್ ಪ್ಯೂರಿಫೈಯರ್" ಇದು ಕ್ಷಯರೋಗ ಮತ್ತು ಬೇಗಂತಿ ರೋಗದಮೇಲೆ ಬಹಳ ಗುಣಕಾರಿಯಾಗಿದೆ. [illegible]

೨. ಡೋಂಗರೆಯವರ [illegible]

ಡಾಕ್ಟರ್ ಕೆ. ಸಿ. ಡೋಂಗರೆ,
[illegible]

ನೋಟೀಸ್.

ಇದರಿಂದ ನಮ್ಮ ಚಂದಾದಾರರಿಗೆ ನಾವು ಕ್ರಿತ [illegible]

ಪ್ರಕಟನೆ.

"ಆಂಗ್ಲೋ ಇಂಡಿಯನ್ ಪಾಕೆಟ ಡೈರಿ"
೧೮೯೨

ಈ ಡೈರಿ ಎಂಬ ದಿನಚರಿ ಪುಸ್ತಕವನ್ನು ಪ್ರತಿ ವರ್ಷದಲ್ಲಿಯೂ ತಯಾರ್ಮಾಡಿಸುತ್ತಿರುವದು ಸರಿಯಷ್ಟೆ. ಆದರೀಗ ಯಿಸಾಗಿ ಮುಂದಿನ ವರ್ಷದ ಡೈರಿ ತಯಾರ್ಮಾಡಿಸುವವರಲ್ಲಿ ಕೆಲವರು ಯಿನ್ನೂ ಕೊಂಚ ಹೆಚ್ಚಾದ ಸ್ಥಳವಿರಬೇಕೆಂದು ಅಪೇಕ್ಷೆ ಪಟ್ಟವರ ಮೇಲೆ ಮೊದಲಿಗಿಂತಲೂ ಕೊಂಚ ಉದ್ದದಲ್ಲಿಯೂ ಅಗಲದಲ್ಲಿ ಸ್ಥಳ ಕೊಟ್ಟು ಮಾಮೂಲ್ ಪ್ರಕಾರ ಜೇಬುಗಳಲ್ಲಿಡುವದಕ್ಕೆ ಅನುಕೂಲವಾಗಿರುವಂತೆ ತಯಾರಾಗಿ ಬಿಕರಿಗೆ ಸಿದ್ಧವಾಗಿರುತ್ತೆ. ಹೆಚ್ಚಾದ ಪ್ರತಿಗಳನ್ನು ನಾವು ಛಾಪು ಮಾಡಿಸುವದಿಲ್ಲವಾದ್ದರಿಂದ ಪ್ರತಿ ವರ್ಷದಲ್ಲಿಯೂ ಬಹಳ ಜನಗಳಿಗೆ ದೊರೆಯದೇ ಹೋಗುವದರಿಂದ ಅಪೇಕ್ಷೆಯುಳ್ಳವರು ಜಾಗ್ರತೆಯಿಂದ ಈ ಕೆಳಗೆ ಕಂಡವರ ಹೆಸರಿಗೆ ಅವರುಗಳ ಅಡ್ರೆಸ ತಪ್ಪಿಲ್ಲದೆ ಬರೆದು ತರಿಸಿಕೊಳ್ಳಬಹುದು

ಕ್ರಯ ೬ ಆಣೆ ಟಪಾಲ ಹಾಸಲ ೧ ಆಣೆ ಪ್ರತಿ ಬುಕ್ಕು ಛಾಪಿಗೆ ವ್ಯಾಲ್ಯೂಪೇಯಬಲ್ ಅಥವಾ ರಿಜಿಸ್ಟರ್ ಚಾರ್ಜು ೨ ಆಣೆ ಜಾಸ್ತೀ ಬೀಳುವದು, ರಿಜಿಸ್ಟರಿಲ್ಲದ ಭಾಂಗಿಗೆ ನಮ್ಮ ಜವಾಬ್ದಾರಿಯಿಲ್ಲ. ಒಟ್ಟಿಗೆ ವಿ ಪಿ ಯಾಗಿ ೧೨ ಪ್ರತಿ ತರಿಸಿಕೊಂಡವರಿಗೆ ೧ ಪ್ರತಿ ಹಾಸ್ತೀಯಾಗಿ ಕಳುಹಿಸಲ್ಪಡುವದು

ಬೆಂಗಳೂರು
ಬ್ಲಾಕ ಚರ್ಚಿ ರೋಡ್
ತಾ|| ೩೦-೧೨-೯೧

ಸತ್ಯಂ ಚಂದ್ರ ಶೇಖರಯ್ಯ,
ವರ್ನಾಕ್ಯುಲರ ಸ್ಟ್ಯಾಂಡರ್ಡ-
ಲೈಬ್ರರಿ ಪ್ರೊಪ್ರೈಟರ್

Bangalore City Municipality
ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ

ತಾ|| ೨೫ನೇ ಜನವರಿ ೧೮೯೨

ಸನ್ ೧೮೯೨ನೇ ಇಸವಿ ಜನವರಿ ೨೯ನೇ ತಾರೀಖ ಶುಕ್ರವಾರ ಮಧ್ಯಾಹ್ನ ೩ ಗಂಟೆಗೆ ಸಿಟಿ ಮ್ಯುನಿಸಿಪಲ್ ಕಮಿಷನ ಸಭಿಕರು ಕೆ. ಟಿ. ಮೊರದ ಮ್ಯುನಿಸಿಪಲ್ ಆಫೀಸಿನಲ್ಲಿ ಸಮಾಜ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಪಟ್ಟಿ

೧ ಸನ್ ೧೮೯೧ನೇ ಇಸವಿ ಡಿಸೆಂಬರ್ ತಿಂಗಳ ಬಾಬತು ಮರಣಗಳಿಗೂ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರನ ಲೆಕ್ಕ ಮತ್ತು ಪಶುವ ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ-

೨ ಸನ್ ೧೮೯೨-೯೩ನೇ ಇಸವಿಯ ಬಜೆಟ್ ಲೆಕ್ಕದಲ್ಲಿ ದಾಖಲ್ ಮಾಡಬೇಕಾದ ಕಾಮಗಾರಿಗಳ ಪಟ್ಟಿ

೩ ಸನ್ ೧೮೯೨ನೇ ಇಸವಿ ಜನವರಿ ೩ನೇ ತಾರೀಖಿನಲ್ಲಿ ಬೆಂಗಳೂರು ಕಂದಾಯದಾರರ ಸಭೆಯವರು ಮೀಟಿಂಗ್ ಮಾಡಿ ನಡೆಸಿದ ನಡವಳಿಕೆಗಳು

೪ ಸೆಂಟ್ರಲ್ ಜೈಲಿನಲ್ಲಿ ಮೃತಪಡುವ ಖೈದಿಗಳನ್ನು ದಫನ್ ಮಾಡುವದಕ್ಕೆ ಜಕ್ಕರಾಯನ ಕೆರೆಯ ಬಳಿ ಇರುವ ಸ್ಮಶಾನದ ಪೈಕಿ ಒಂದು ಭಾಗವನ್ನು ಉಳಿಸುವ ವಿಷಯದಲ್ಲಿ ಫೈಸಲಾಗದೆ ಇರುವ ಕಾಗದಪತ್ರಗಳು

೫ ಸನ್ ೧೮೯೨-೯೩ನೇ ಇಸವಿಗೆ ಮ್ಯುನಿಸಿಪಲ್ ಫಂಡಿನ ಜಮಾಖರ್ಚಿನ ಮುಂಗಡ ಬಜೆಟ ಅಂದಾಜುಪಟ್ಟಿ

೬ ಸಿಟಿ ಮಾರ್ಕೆಟಿನಲ್ಲಿ ಫಲಪುಷ್ಪ ಪ್ರದರ್ಶನ ಕಾಲದೊಳು ಕೊಡಬೇಕಾದ ಬಹುಮಾನಗಳ ಪಟ್ಟಿ, ಮತ್ತು ಅವನ್ನು ಕುರಿತ ಇತರ ತಪಸೀಲುಗಳು

೭ ಮೈಸೂರಲ್ಲಿ ಅಕ್ಟ್ರಾಯಿ ತೆರಿಗೆ ಗುರಿಮಾಡಲ್ಪಟ್ಟಿರುವ ಪದಾರ್ಥಗಳ ಪಟ್ಟಿಯನ್ನು ಕಳುಹಿಸಿ ಅದನ್ನು ಈ ಷಹರಿನಲ್ಲಿ ಜಾರಿಯೊಳು ತರಬೇಕೆಂದು ಮೈ.ಸ.ನ ಸಿಟಿ ಅಮಲ್ದಾರರು ಕಳೆದ ಡಿಸೆಂಬರ್ ೭ನೇ ತಾರೀಖಿನಲ್ಲಿ ಬರೆದ ಲೆಟರ್.

೮ ಇಳಿಸಬೇಕಾದ ಮತ್ತು ದುರಸ್ತು ಮಾಡಬೇಕಾದ ಬಾವಿಗಳ ಪಟ್ಟಿ

೯ ಯಾತ್ರಾರ್ಥ ತಿರುಪತಿಗೆ ಹೋಗಿ ಬರುವಂಥವರಿಗೆ ಸತ್ರದಲ್ಲಿ ಅನ್ನ ಹಾಕುವದು ವಗೈರೆ ಖರ್ಚಿನ ಬಗ್ಗೆ ಮ್ಯುನಿಸಿಪಲ್ ಬಜೆಟಿನಲ್ಲಿ ಉಪಪತ್ತಿ ಉಂಟುಮಾಡಬೇಕೆಂಬ ವಿಷಯ

೧೦ ಮೊಹತರ್ಫಾ ರೂಲ್ಸ ಅನುಸಾರ, ಸಿಟಿ ಮ್ಯುನಿಸಿಪಲ್ ಸರಹದ್ದಿನೊಳಗೆ ಮಿಕ್ಕ ಗಾಡಿಗಳ ಮೇಲೂ ಗಾಡಿ ತೆರಿಗೆ ವಸೂಲ್ ಮಾಡಬೇಕಾದ ವಿಷಯ

M. ANNAJI RAO,
Vice President,
City Mul Commission

ಸಿಟಿ ಮ್ಯುನಿಸಿಪಲ್ ಆಫೀಸ
ಬೆಂಗಳೂರ

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA
MONDAY, JANUARY 25, 1892
೧೮೯೨ನೇ ಇಸವಿ ಜನವರಿ ೨೫ನೇ ತಾರೀಖ ಸೋಮವಾರ

THE MUNICIPAL ELECTION RULES

ಈ ದೇಶದೊಳು ಮ್ಯುನಿಸಿಪಾಲಿಟಿ ಏರ್ಪಾಡಾದುದು ಮೊದಲು ಅದರ ಮೆಂಬರ್‌ಗಳಂ ಚುನಾಯಿಸಿ ನೇಮಕರ್ಮಾಡುವ ಭಾರವಂ ಇದುವರಿವಿಗೆ ಗವರ್ನಮೆಂಟಿನವರೇ ವಹಿಸಿದ್ದು, ಈಚೆಗೆ ಸದರೀ ಮೆಂಬರ್‌ಗಳ ಸಂಖ್ಯೆಯಂ ಜಾಸ್ತೀಮಾಡಿ, ಅವರಪೈಕಿ ಅರ್ಧಭಾಗದ ಮೆಂಬರ್‌ಗಳನ್ನು ಯಾ ಷಹರ್ ಕಂದಾಯದಾರರೇ ಚುನಾಯಿಸಿಕೊಳ್ಳಬಹುದೆಂತಲೂ, ಉಳಿದ ಅರ್ಧಭಾಗದ ಮೆಂಬರ್‌ಗಳಂ ಗವರ್ನಮೆಂಟಿನವರು ನೇಮಕರಮಾಡಿ, ಒಟ್ಟು ಮೆಂಬರ್‌ಗಳ ಪೈಕಿ ಲಾಯಖಾದವನೊಬ್ಬನು ವೈಸ್ ಪ್ರೆಸಿಡೆಂಟನಾಗಿ ನೇಮಕರ್ಮಾಡಲ್ಪಡುವನೆಂತಲೂ ವಗೈರೆ ತಪ್ಸೀಲಿಗಳೊಡನೆ ಈಚೆಗೆ ಗವರ್ನಮೆಂಟಿನವರು ನಿಬಂಧನೆಗಳಂ ಮಾಡಿ ಜನಗಳ ತಿಳುವಳಿಕೆಯಬಗ್ಗೆ ಮೈಸೂರ್ ಗೆಜೆಟಿನಲ್ಲಿ ಪ್ರಾಯಿಷ್ ಮಾಡಿರುವದು ಸರಿಯಷ್ಟೆ. ಈ ಹೊಸ ನಿಬಂಧನೆಗಳನ್ನನುಸರಿಸಿ ಮೆಂಬರ್‌ಗಳು ಚುನಾವಣೆ ಆಗಬೇಕಾದ ಕಾಲವು ಸನ್ನಿಹಿತವಾಗಿರುವದರಿಂದ ಸದರೀ ನಿಬಂಧನೆಗಳ ಗುಣದೋಷಗಳಂ ಕುರಿತು ಈಗ ವಿಚಾರ ಮಾಡಬೇಕಾದುದು ನಮ್ಮ ಕರ್ತವ್ಯವೆಂದು ಭಾವಿಸುವೆವು

ಕವಿ ಷಹರಿಗಳಂ ಕೆ ನಾಮಿನಿಸತಕ್ಕವರ ಲಾಯಖೀ ವಿಷಯದಲ್ಲಿ ಏದರಡಿ ಬರುವಂತೆ ಒಂದು ನಿಬಂಧನೆಯು ಪ್ರಾಯಿಷ್ ಮಾಡಲ್ಪಟ್ಟಿರುತ್ತದೆ, ಹ್ಯಾಗಂದರೆ ---

"ಚುನಾಯಿಸತಕ್ಕ ಜನರು ಸಾಲ ಒಂದಕ್ಕೆ ೩೦ ರೂಪಾಯಿ ಮನೆ ಬಾಡಿಗೆ ಕೊಡತಕ್ಕವರಾಗಿರಾಗಲಿ ಯಾ ೧೦ ರೂಪಾಯಿಗೆ ಕಮ್ಮಿ ಇಲ್ಲದೆ ಮ್ಯುನಿಸಿಪಲ್ ಮೊಹತರ್ಫಾ ಮತ್ತು ಜಮೀನ ಕಂದಾಯವನ್ನು ತೆರತಕ್ಕವರಾಗಿರಾಗಲಿ ಇರಬೇಕು. ಕಮ್ಮಿಷನರಾಗಿ ನೇಮಕವಾಗತಕ್ಕವರು ವರ್ಷ ಒಂದಕ್ಕೆ ೧೨೦ ರೂಪಾಯಿ ಬಾಡಿಗೆ ಕೊಡತಕ್ಕವರಾಗಿರಾಗಲಿ ಯಾ ವರ್ಷ ಒಂದಕ್ಕೆ ೩೦ ರೂಪಾಯಿ ತೆರಿಗೆಯನ್ನು ತೆರತಕ್ಕವರಾಗಿಯಾಗಲಿ ಇರಬೇಕು."

ಮೇಲಿನ ನಿಬಂಧನೆಯು ದೆಸೆಯಿಂದ ಚುನಾಯಿಸುವ ಲಾಯಖಿಯು ೩೦ ರೂಪಾಯಿಗಳ ಮನೆ ಬಾಡಿಗೆ ಕೊಡತಕ್ಕವರಲ್ಲಿಯೂ, ಅಥವಾ ೧೦ ರೂಪಾಯಿಗಳಿಗೆ ಕಮ್ಮಿ ಇಲ್ಲದೆ ಮ್ಯುನಿಸಿಪಲ್ ಮೊಹತರ್ಫಾ ಮತ್ತು ಜಮೀನ್ ಕಂದಾಯ ಕೊಡತಕ್ಕವರಲ್ಲಿಯೂ, ಮೆಂಬರಾಗುವದಕ್ಕೆ ಲಾಯಖಿಯು ಸಾಲೀಯಾನಾ ೧೨೦ ರೂಪಾಯಿಗಳ ಮನೆ ಬಾಡಿಗೆ ಕೊಡುವಂತವರಲ್ಲಿಯೂ ಅಥವಾ ವರ್ಷ ೧ಕ್ಕೆ ೩೦ ರೂಪಾಯಿಗಳ ತೆರಿಗೆ ತೆರತಕ್ಕವರಲ್ಲಿಯೂ ನೆಲಸಿದಂತೆ ಸ್ಪಷ್ಟವಾಗಿ ಕಾಣುತ್ತದೆ. ಇದರಿಂದ ಸಾಲೀಯಾನಾ ೩೦ ಮತ್ತು ೧೨೦ ರೂಪಾಯಿಗಳ ಬಾಡಿಗೆ ಬರತಕ್ಕ ಮನೆಗಳ ಮಾಲೀಕರು ಮೆಂಬರ್‌ಗಳಂ ಚುನಾಯಿಸುವದಕ್ಕಾಗಲಿ, ಮೆಂಬರಾಗಿ ಚುನಾಯಿಸಲ್ಪಡುವದಕ್ಕಾಗಲಿ ಲಾಯಖೀ ಇಲ್ಲದವರಾದರು. ಬಾಡಿಗೆ ಮನೆಗಳಲ್ಲಿ ವಾಸ ಮಾಡತಕ್ಕವರು ಯಾವದೋ ಒಂದು ಕಾರ್ಖಾನೆ ಇಲ್ಲಿಗೆ ಬಂದು ನೆಲಸಿದವರಾಗಿರುತ್ತಾರೆ. ಅಂತವರಿಗುಂಟುಮಾಡಲ್ಪಟ್ಟ ಗೌರವವು ಸ್ಥಳಿಕರಿಗಿಲ್ಲವಾಯಿತು. ಸಾಲೀಯಾನಾ ೩೦ ರೂಪಾಯಿಗಳ ಮೊಹತರ್ಫಾ ಮತ್ತು ಜಮೀನ್ ಕಂದಾಯ ಕೊಡತಕ್ಕವರು ಸಹ ಮೆಂಬರಾಗುವದಕ್ಕೆ ಲಾಯಖೀಯುಳ್ಳವರಾಗಿ ಪರಿಗಣಿಸಲ್ಪಟ್ಟಿರುವಣವು ಸ್ಥಳಿಕರಿಗಾಗಿ ನಿರ್ದೇಶಿಸಲ್ಪಟ್ಟಿರಬಹುದೆಂದು ಕಾಣುತ್ತದೆ. ಮ್ಯುನಿಸಿಪಲ್ ಸರಹದ್ದಿನೊಳಗಾಗಿ ವಿದ್ಯಾವಂತರಾಗಿಯೂ ಲೌಕಿಕವ್ಯಾಪಾರಾನುಭವವುಳ್ಳವರಾಗಿಯೂ ಇರುತ್ತ, ಸಾಲೀಯಾನಾ ೩೦ ರೂಪಾಯಿಗಳ ಮೊಹತರ್ಫಾ ಮತ್ತು ಜಮೀನ್ ಕಂದಾಯ ಕೊಡತಕ್ಕವರ ಸಂಖ್ಯೆ ಅತ್ಯಲ್ಪವಾಗಿರಬಹುದೆಂದು ಹೇಳುತ್ತೇವೆ. ಪರಂತು ಮೇಲಿನಂತೆ ಕಂದಾಯ ಕೊಡತಕ್ಕವರು ಜಿನಿಸಿ ವರ್ತಕರಲ್ಲಿಯೂ, ತೋಟದ ತಿಗಳರಲ್ಲಿಯೂ ಅನೇಕರು ದೊರೆಯಬಹುದೆಂದು ತೋರುತ್ತದೆ. ಮೆಂಬರ್‌ಗಳಂ ಚುನಾಯಿಸುವದಕ್ಕೂ ಮೆಂಬರಾಗಿ ಚುನಾಯಿಸಲ್ಪಡುವದಕ್ಕೂ ಲಾಯಖೀಯುಳ್ಳ ಜನರ ಪಟ್ಟಿ ತಯಾರಾಗಿ ಶೀಘ್ರದಲ್ಲೇ ಮೈಸೂರು ಗೆಜೆಟಿನಲ್ಲಿ ಪ್ರಾಯಿಷ್ ಆಗುವದಾಗಿರುವದರಿಂದ ಅದುವರಿವಿಗೆ ಈ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಉಳಿಸಿಕೊಂಡಿರುತ್ತೇವೆ, ಪರಂತು ಈ ವಿಷಯದಲ್ಲಿ ಗವರ್ನಮೆಂಟಿನವರು ಪ್ರಕಟಿಸಿರುವ ರೂಲ್ಸಗಳು ಇಲ್ಲಿನ ಪ್ರಜೆಗಳಿಗೆ ಕೇವಲ ಅತೃಪ್ತಿಯನ್ನೂ ಅಸಮಾಧಾನವನ್ನೂ ಉಂಟುಮಾಡಿರುವಂತೆ ಸ್ಪಷ್ಟವಾಗಿ ಕಾಣುತ್ತದೆ. ಮೇಲಿನ ಹೊಸ ನಿಬಂಧನೆಯನ್ನನುಸರಿಸಿ ಮೆಂಬರ್‌ಗಳ ಚುನಾವಣೆಯು ಯುಕ್ತವಾಗಿ ನಡೆಯುವದೆಂದು ನಂಬ ನಾವೆಣಿಸಲಾರೆವು

AMBITION IN GOVERNMENT SERVICE

ಲೋಕದಲ್ಲಿ ಮನುಷ್ಯನು ಯಾವದರಿಗೆ ಶರೀರ ಶ್ರಮದಿಂ ತನ್ನ ಜೀವನಕ್ಕೆ ಸಂಪಾದಿಸಿಕೊಳ್ಳಬೇಕಾದಸ್ಥಿತಿಯುಳ್ಳಿರುತ್ತಾನೆಯೋ ಅದುವರಿವಿಗೆ ನಿರ್ವ್ಯಾಪಾರನಾಗಿ ಸುಖವನ್ನಪೇಕ್ಷಿಸುವದು ವಿವೇಕಿಯ ಕಾರ್ಯವಲ್ಲವು, ಅಥವಾ ಕಷ್ಟಾರ್ಜಿತವಾದ ದ್ರವ್ಯವನ್ನು ತನಗೆ ಜೀವನ ಸಂಪಾದಕವನ್ನಾಗಿ ವಿನಿಯೋಗಿಸಲಾದರೂ ಬೇಕು. ನಮ್ಮವರಲ್ಲಿ ಅನೇಕರು ಸುಖವನ್ನನುಭವಿಸತಕ್ಕದ್ದು ಶರೀರವೆಂತಲೂ, ಆದುದರಿಂದ ಅದಂ ಶ್ರಮಪಡಿಸದೆ ಸುಮ್ಮನಿರಿಸುವದು ಸೌಖ್ಯವೆಂತಲೂ, ಒಂದುಬಗೆ ತಪ್ಪು ಅಭಿಪ್ರಾಯವುಳ್ಳವರಾಗಿರುತ್ತಾರೆ. ಅದು ಹಾಗಲ್ಲವು. ಸುಖವೆಂಬುದು ಚಿದ್ವಸ್ತುವಿಗೆ ಹೊರತು ಜಡವಾದ ಶರೀರಕ್ಕೆ ಎಷ್ಟುಮಾತ್ರವೂ ಅಲ್ಲವು. ಅಂತಾ ಜ್ಞಾನವಸ್ತುವಿಲ್ಲದಾಗ ಒಣಮರಕ್ಕೂ ನಮ್ಮ ಶರೀರಕ್ಕೂ ಭೇದವಿರಲಾರದಾಗಿ, ಯಂತ್ರಿಯು ಯಂತ್ರವನ್ನಡಿಸುವಂತೆ ಶರೀರವ ದೆಸೆಯಿಂದ ಕೆಲಸ ಮಾಡಿಸಿ ತತ್ಫಲವನ್ನನುಭವಿಸುವದು ಯುಕ್ತವಾಗಿರುತ್ತದೆ. ಆದುದರಿಂದಲೇ ಲೌಕಿಕ ಸುಖಾಪೇಕ್ಷೆಯುಳ್ಳವನು ಯಾವಾಗಲೂ ಮೈಗಳ್ಳನಾಗಿರಲಾಗದು. ಇದಲ್ಲದೆ ಮತ್ತೊಂದು ತಪ್ಪು ನಮ್ಮವರಲ್ಲಿ ಬಹಳ ಪ್ರಚುರಗೊಂಡಿದೆ. ಅದು ತಪ್ಪೆಂತಲೇ, ಅದು ತಿದ್ದಿಕೊಳ್ಳಬೇಕೆಂತಲೂ, ಯಾರಿಗೂ ತೋರಿದಂತೆ ಕಾಣಿಸಲಿಲ್ಲವು. ಇಂಗ್ಲಿಷ್ ಜನರ ಚಿರಪರಿಚಯದಿಂದಲಾದ್ರೂ ಅದು ನಿವಾರಿಸದೆ ಹೋದಬಗ್ಗೆ ಚಿಂತಿಸಬೇಕಾಗಿರುತ್ತದೆ. ಅದನ್ನು ಮುಂದೆಯಾದರೂ ಅದು ತಪ್ಪೆಂತಲೂ ಅದನ್ನು ತಿದ್ದಿಕೊಳ್ಳಬೇಕೆಂತಲೂ, ಎಲ್ಲರಿಗೂ ತೋರಬೇಕೆಂದು ದೇವರಂ ಪ್ರಾರ್ಥಿಸುತ್ತೇವೆ. ಅದೇನೆಂದರೆ ---ಮೊದಲು ಅನೇಕಲಕ್ಷ ಪ್ರಜೆಗಳುಳ್ಳ ಈ ಮೈಸೂರ್ ದೇಶದಲ್ಲಿ ಪ್ರಾಯಶಃ ಅನೇಕರು ಅಲ್ಪವಾದ ವ್ಯಾಪಾರವನ್ನಾದರೂ, ದುರ್ಬಲವಾದ ಕೃಷಿಯನ್ನಾದರೂ ಒಡಚುಶನದಿಂ ಕಲಿತ ಲೋಹಾರ ಕೆಲಸ ವಗೈರೆ ನಾನಾವಿಧ ಶಿಲ್ಪವಿದ್ಯೆಯನ್ನಾದರೂ ಅವಲಂಬಿಸಿ ತನ್ನಿಂದ ಲಭಿಸಬಹುದಾದ ಯಥೋಚಿತ ಅನ್ನವಸ್ತ್ರಗಳಿಂದಲೇ ತೃಪ್ತರಾಗಿ ಇತರರಿಗೆ ನಿಷ್ಪ್ರಯೋಜಕರಾಗಿ ಸಾಧಾರಣ ಸ್ಥಿತಿಯುಳ್ಳಿರುತ್ತಾರೆ. ಮಿಕ್ಕವರು ಒಂದು ವೃತ್ತಿಯಲ್ಲಿಯೂ ಧೈರ್ಯದಿಂ ಪ್ರವೇಶಿಸಿ ಶರೀರ ಶ್ರಮಪಡಲಾರದೆ ಸರ್ಕಾರ್ ನೌಕರಿಯನ್ನು ಅಪೇಕ್ಷಿಸುತ ತಾವು ಕಲಿತವಿದ್ಯೆಗಾಗಿ ವ್ಯಯವಾದ ದನವರಿವಾದವನ್ನೂ, ಈಗ ತಾವು ಅಪೇಕ್ಷಿಸುವ ಸರ್ಕಾರ್ ನೌಕರಿಯಮೂಲಕ ಲಭಿಸಬಹುದಾದ ಅಲ್ಪ ಪ್ರಯೋಜನವನ್ನೂ ಸ್ವಲ್ಪವೂ ಯೋಚಿಸದೆ ಉನ್ನತವಾದಅಧಿಕಾರಿಗಳ ದುರ್ವಚನ ದೂಷಣ ತಿರಸ್ಕಾರವಮಾನಾದಿಗಳಂ ತಮ್ಮ ಯೋಗ್ಯತಾಭಾವದಿಂದಂ ಸಹಿಸಿ ಕ್ಲೇಶಪಡತಕ್ಕವರಾಗಿಯೇ ಇರುತ್ತಾರೆ. ಇಂತಾ ತುಚ್ಛವಾದ ಮತ್ತು ಅತಿ ದುಃಖಹೇತುವಾದ, ಇನ್ನೂ ಸುಖನಿರೋಧಕವಾದ ಸರ್ಕಾರ್ ನೌಕರಿಯನ್ನು ಕೋರುತ ಅದೇ ಶ್ರೇಯಸ್ಕರವೆಂಬ ಭಾವವು ಕೇವಲ ಏಕದೇಶೀಯರಿಗೆ ಮಾತ್ರವೇ ಅಲ್ಲವು. ಈ ಸರ್ಕಾರ ಉದ್ಯೋಗವನ್ನಾಶಿಸುವದರಲ್ಲಿ ತಮಗೆ ಇತರೋಪಕಾರಕ್ಕೆ ಇನ್ನೆಷ್ಟು ದೌರ್ಭಾಗ್ಯವಾದಂ ಅವರು ಸ್ವಲ್ಪವೂ ಗಣಿಸತಕ್ಕವರಲ್ಲವು. ಎಂತಾ ಭಾಗ್ಯವಂತನಾದಾಗ್ಯೂ ಎಷ್ಟು ದೊಡ್ಡ ವಂಶಕ್ಕೆ ಸೇರಿದವನಾದಾಗ್ಯೂ "ನಮಗೆ ಸರ್ಕಾರ್ ಚಾಕರಿಯೆಂತ ಹತ್ತು ಹಣವಿದ್ದರೆ ಸಾಕು, ಎಷ್ಟು ಹಣವಿದ್ದರೇನು" ಎಂಬ ಪ್ರಾಕ್ಷಿಕರ ಮಾತು ಅವರ ಮಕ್ಕಳಿಗೂ, ಅವರಾಡುವದು ಅವರ ಮಕ್ಕಳಿಗೂ, ಹೀಗೆ ವಂಶಪರಂಪರಾನುಗತವಾಗಿರುತ್ತದೆ. ಸರ್ಕಾರ್ ಉದ್ಯೋಗವನ್ನೇ ಮುಖ್ಯವಾಗಿ ಈಗಮೆಲ್ಲರೂ ಅಪೇಕ್ಷಿಸಲಿಕ್ಕೆ ಮೂರು ಕಾರಣಗಳು ವಿನಾ ಬೇರೊಂದೂ ನಮ್ಮ ಬುದ್ಧಿಯಲ್ಲಿ ಸ್ಫುರಿಸಲಿಲ್ಲವು. ಆ ಮೂರು ಕಾರಣಗಳೂ ಸ್ವರೂಪತಃ ತುಚ್ಛಗಳಾಗಿಯೂ ಬಹ್ವನರ್ಥ ಸಂಪಾದಕಗಳಾಗಿಯೂ ಇರುತ್ತವೆ. ಅವು ಯಾವವೆಂದರೆ ---೧ನೇದು- ಇತರ ಮಾರ್ಗದಿಂ ಲಭಿಸದಷ್ಟು ವಿಶೇಷ ಧನವನ್ನು ಅಧಿಕಾರಪದದಲ್ಲಿರುವಾಗ ಸಂಪಾದಿಸಿಕೊಳ್ಳಲಿಕ್ಕೆ ಅವಕಾಶವು ಹೆಚ್ಚಾಗಿರುತ್ತದೆಂಬದು. ೨ನೇದು---ಎಲ್ಲರೂ ನಮಗೆ ಶರಣಾಗತರಾಗಿರುವರಾದ್ದರಿಂದ ನಮ್ಮಅಧಿಕಾರವನ್ನು ತದ್ವ್ಯತಿರಿಕ್ತವಾಗಿಯೂ ಬೇಕಾದವರ ಮೇಲೆ ತೋರಿಸುತ ಅವರು ಆರ್ತರಾಗಿ ಶರಣಾಗತರಾಗುವಾಗ್ಯೂ ಔದಾಸೀನ್ಯದಿಂದವರಂ ಧಿಕ್ಕರಿಸಿ ತಮ್ಮ ಉದ್ಯೋಗವೈಭವವನ್ನವರಿಗೆ ತೋರಿಸಬಹುದೆಂಬದು; ಮೂರನೆಯದು---ಕ್ಲುಪ್ತಕಾಲಕ್ಕೆ ನಿಯತವಾದ ಆಯತಿಯಂ ಕಲ್ಪಿಸಿಕೊಳ್ಳಲಿಕ್ಕೆ ಬೇರೆವಿಧದಲ್ಲಿ ಶ್ರಮಪಡಲಾರದವಾಗಿ ಮೂವತ್ತು ದಿನ ಕಳೆದರೆ ಕಥಂಚಿತ್ ನಿಷ್ಕೃಷ್ಟವಾದ ದ್ರವ್ಯದಲ್ಲಿ ಜುರ್ಮಾನೆ ಮೊದಲಾದವೆಲ್ಲ ಹೋಗಿ ಮಿಕ್ಕದ್ದು ಕೈಗೆಬರುತ್ತಿದೆಯಾದುದರಿಂದ ನಾವು ಅನ್ಯತ್ರಹೋಗಿ ಶ್ರಮಪಡಬೇಕಾದುದಿಲ್ಲವೆಂಬದು. ಮತ್ತು ಶರೀರದಲ್ಲಿ ಶಕ್ತಿ ಇರುವ ತನಕ ನೌಕರಿ ಮಾಡುವೆವಾದರೆ ಬಳಿಕ ನಮಗೆ ಸಾಯುವತನಕ ಪೆನ್ಶನ್ ದೊರೆಯುತಿದೆಂಬ ಪ್ರತ್ಯಾಶೆಯುಂಟಾಗಿರುವದು. ಇವುಗಳಲ್ಲಿರತಕ್ಕ ಅನರ್ಥಗಳಂ ಪರ್ಯಾಲೋಚಿಸಿದರೆ ಅವು ಅನಂತವಾಗಿವೆ. ಉದ್ಯೋಗಮಾಡಿದ ಮಾತ್ರದಿಂದಲೇ ಧನ ಹೇಗೆ ವರ್ಧಿಸತಕ್ಕವನಿಗೆ ನಿರೀಕ್ಷಿತವಾದವು ಪ್ರಾಯಶಃ ಕೈಕೂಡಲಾರದು. ಅರ್ಥ ಸ್ವಾರ್ಥಕ್ಕಾಗಿ ಪರಾಂತಿಯಂ ಮಾಡುವಬಗ್ಗೆ ಪ್ರವರ್ತಿಸುವವನು ಅಕ್ರಮಮಾರ್ಗದಲ್ಲಿಯೂ ಪರಹಿಂಸಾಪರನಾಗಿಯೂ ರಾಜದ್ರೋಹಿಯಾಗಿಯೂ ಧನ ಸಂಪಾದನೆಯಂ ಮಾಡಲಾರಂಭಿಸುತ್ತಾನೆ. ಆಗ ಅವನಿಗೆ ಶತ್ರುಸಮೂಹವೂ ಪ್ರಜಾವಿರೋಧವೂ ರಾಜದ್ವೇಷವೂ ಉಂಟಾಗಿ ಕದಾಚಿತ್ ಅವನ ಅಧಿಕಾರಕ್ಕೇ ಲೋಪಬಾರದೆ ಹೋಗಲಾರದು. ಇಂತಾ ಅಪಾಯಕರವಾದ ದಶೆಯಲ್ಲಿ ಬೇಕಾದ ಧನವಂ ಸಂಪಾದಿಸಿಕೊಳ್ಳಲಿಕ್ಕೆ ಧೈರ್ಯದಿಂದ ಪ್ರವರ್ತಿಸುವದು ಸಾಧ್ಯವಲ್ಲವು. ಇದಲ್ಲದೆ ಅಧಿಕಾರ ಪದದೊಳಗಿದ್ದುಕೊಂಡು, ಧನಕೀರ್ತಿಗಳ ಮೇಲೆ ದೃಷ್ಟಿಯಿಟ್ಟು ಸನ್ಮಾರ್ಗ ಫಲಾಪೇಕ್ಷಿಯಾಗಿ, ಉದಾರಿಯೆನ್ನಿಸಿಕೊಂಡು ಪ್ರಜಾನುರಾಗವುಳ್ಳಂತಾ ವಿಶೇಷ ಐಶ್ವರ್ಯಶಾಲಿ ಯಾವ ಪುರುಷನನ್ನು ನಾವು ಎಷ್ಟು ಸೂಕ್ಷ್ಮವಾಗಿ ಅರಿಸಿ ನೋಡಿದಾಗ್ಯೂ ಯಂತ್ರಸಾಧನದಿಂ ಹುಡುಕಿ ಹಿಡಿಯುವದು ಅಸಾಧ್ಯವಾಗಿರುತ್ತದೆ. ಒಂದುವೇಳೆ ದೈವದೇವತೆಯ ಸಂಪೂರ್ಣ ಅನುಗ್ರಹದಿಂದಲ್ಲಿಯಾದರೆ ಒಬ್ಬರಿಬ್ಬರು ಇಲ್ಲದಿರುವರೇ ಎಂದು ಯಾರಾದರು ಕೇಳುವ ಪಕ್ಷಕ್ಕೆ ಅವರ ಐಶ್ವರ್ಯವು ಸ್ವಾರ್ಜಿತವಾಗಿರಲಾರದು ಮತ್ತು ಅವರ ವಂಶ ಕ್ರಮಾಗತವಾದವನು ಅವರ ಪೂರ್ವಿಕರಿಂದಲಾದರು ಅನ್ಯತರವಾಗಿ ಸಂಪಾದಿಸಲ್ಪಟ್ಟದ್ದಾಗಿರಬೇಕು ಅಥವಾ ಅನಿರೀಕ್ಷಿತವಾದ ನಿಕ್ಷೇಪವಾದರೂ ದೊರೆತಿರಬೇಕೇ ಹೊರ್ತು ಅಷ್ಟು ಐಶ್ವರ್ಯವು, ತಮ್ಮ ತಿಂಗಳ ತಿಂಗಳ ಸಂಬಳಗಳಿಂದ ಬಂದದ್ದಾಗಿರಲಾರದು. ಆದುದರಿಂದಲೇ ದ್ರವ್ಯಾಕಾಂಕ್ಷೆಯುಳ್ಳವನು ಸರ್ಕಾರ್ ಉದ್ಯೋಗವನ್ನು ವಿಶೇಷವಾಗಿ ಕೋರಲಾರನು. ಎರಡನೆಯದಾದ ಅಧಿಕಾರ ಪ್ರದರ್ಶನೋದ್ದೇಶ ಸಹ ಅತಿಹೇಯವಾದದ್ದು, ಹೇತಕ್ಕೆಂದರೆ, ಅಧಿಕಾರವೆಂಬದು, ನಿರ್ಬಂಧರೂಪವಾದದ್ದು. ತದ್ಬಲ ನಿರ್ಬಂಧವನ್ನು ಸ್ವಪ್ರಯೋಜನಾರ್ಥ ಅನ್ಯರ ವಿಷಯದಲ್ಲಿ ಉಚಿತವಾಗಿ ವಿನಿಯೋಗಿಸುವಾಗ್ಯೂ ಇಲ್ಲದ ನೈಷ್ಠುರ್ಯವೂ, ಅಪ್ರೀತಿಯೂ, ದ್ವೇಷವೂ, ಪ್ರಯೋಜನಹಾನಿಯೂ, ಕದಾಚಿತ್ ಪ್ರಾಣಾಂತವಾದ ಅಪಾಯವೂ ಉಂಟಾಗುತ್ತಿವೆ. ಇದಲ್ಲದೆ ಹೀಗೆ ಪ್ರಜಾಕಂಟಕನಾಗುವವರಿಂದ ಇಹಪರಗಳೆರಡರಲ್ಲಿಯೂ ನಿಶ್ಶೇಷನಿಂದೆಗೂ, ಪಾಪಾನುಭವಕ್ಕೂ ಗುರಿಯಾಗದೆ ಹೋಗಲಾರನು. ಅತಏವ ಪ್ರಜಾರಂಜಕನಾಗಿಯೂ, ಕೀರ್ತಿಪರನಾಗಿಯೂ, ಪಾಪಭೀರುವಾಗಿಯೂ, ಪರೋಪಕಾರಿಯಾಗಿಯೂ, ಧರ್ಮಮಾರ್ಗಾಸಕ್ತನಾಗಿಯೂ ಇರುವವನೆಂದಿಗೂ ಸರ್ಕಾರ್ ಉದ್ಯೋಗವನ್ನು ಆಶಿಸಲಾರನು. ಮೂರನೆಯದಾದ ನಿಯತಾಯತಿಯಂ ಕುರಿತು

ಆಲೋಚಿಸಿದರೆ ಅದು ಸಹ ಪ್ರತಿಕ್ಷಣದಲ್ಲಿ ನೂತನವಾದುದಾಗಿಯೂ, ಬಹು ದುಃಖಕಾರಿಯಾಗಿಯೂ ಇರುತಿದೆ. ಸದಾ ಸ್ವಯತವೆಂಬುದು ಯಾವ ಶ್ವೇತ್ಯಾತಿ ಪರಸ್ಪರ ತಾಡನ ದೂಷಣಾತಿರಸ್ಕಾರಗಳನ್ನು ಶಿರಸಾವಹಿಸಿ ಬಾಗಿದ ತಲೆಯನ್ನೆತ್ತದಿರುವೆವೋ, ಯಾವತನಕ ನಿಂದ್ಯ ಮದ್ಯ ಭೇದಗಳಂ ಗಣಿಸದೆ ದಾಸ್ಯವೃತ್ತಿಯೊಡನೆ ನಿಯಮಿತ ಕಾರ್ಯಗಳನ್ನು ಕಾಲಾಕಾಲ ವಿವೇಚನೆ ಯಿಲ್ಲದೆ ಮಾಡುವೆವೋ, ಯೆಷ್ಟರಮಟ್ಟಿಗೆ ಮೇಲ್ಪಟ್ಟವರ ಪರಿಷ್ಕೃತ ದುರ್ಗುಣಗಳನ್ನು ಗುಣತ್ವೇನ ಉಪಪಾದಿಸಿ ಅವರಂ ಸ್ತೋತ್ರಮಾಡುತಲಿರುವೆವೋ ಎಷ್ಟು ದೂರ ನಾವು ಅವರ ಅಂತರ ಬಾಹ್ಯ ಪ್ರಯತ್ನೋದ್ದೇಶಗಳಿಗೆಲ್ಲ ಸಹಕಾರಿಯಾಗಿರುವೆವೋ, ತಾವತ್ಪರ್ಯಂತವೇ ಆವೇಶನವೂ, ಅವರ ಸುಭಾಷಣೆಯೂ, ಅವರ ಕಟಾಕ್ಷ ವೀಕ್ಷಣವೂ, ಅವರ ಅನುರಾಗವೂ, ಅವರ ಸಹಾಯ ಸಂಪತ್ತಿಯೂ, ಅವರ ವಿಶ್ವಾಸವೂ ಸ್ಥಿರವಾಗಿರುವವೇ ಹೊರ್ತು, ಮೇಲೆ ತಿಳಿಸಿದವುಗಳಲ್ಲಿ ಯಾವನು ಯಾವಾಗ ಸ್ವಲ್ಪ ಕಡಮೆಯಾಗುವನೆ ಬಹುಮಾನವು ಅವರಿಗೆ ತೋರಿಸದೆ, ಕೂಡಲೇ ಅಗ್ರ ಯಪ್ಪ ತಪ್ಪಿ, ಸುಭಾಷಣೆಯು ತೊಲಗಿ, ಕಟಾಕ್ಷವೀಕ್ಷಣವು ಮಾಂದ್ಯವನ್ನೈದಿ, ಅನುರಾಗವು ಕ್ಷಯವಾಗಿ, ಸಹಾಯವು ನಿವೃತ್ತಿಯಾಗಿ, ವಿಶ್ವಾಸವು ವಿನಾಶವನ್ನೈದಿ, ವೇತನವು ಸ್ವಲ್ಪಾವಸ್ಥೆಯಂ ಹೊಂದಿ, ಸಾಧ್ಯವಾದ ಮಟ್ಟಿಗೆ ಹೀನ ಮಾನ ದಶೆಗಳಿಗೆ ಉಪಪತಿ ಉಂಟಾಗದೆ ಹೋಗುವದಿಲ್ಲವು. ಇದಕ್ಕೆ ಅನೇಕ ನಿದರ್ಶನಗಳು ನಮ್ಮ ಬುದ್ಧಿಸ್ಥಗಳಾಗಿವೆ. ಪರಕೀಯರುಗಳಲ್ಲಿ ಅನಾವಶ್ಯಕವು. ಇಷ್ಟರ ವಿಪತ್ತುಗಳಿಗೆ ತಪ್ಪಿತಾಯ ದಾರಿಯು ಚೆನ್ನಾಗಿದ್ದು, ಜನನವನುಗ್ರಹವೂ ಒಟ್ಟಾಗಿದ್ದರೆಯು ಹೇಗೆ ನಿನಗೆ ಮುಖವನಾವು ಕಾಣುತ್ತೇವು; ಅಥವಾ ಜ್ಞಾನವಾದರೆ ಆ ದುಃಖದಿಂದ ರಿಕ್ತರಂತ ವರ್ತಿಸುವವರೆಷ್ಟು ಮಂದಿ, ನಿರ್ಧನರಂತೆ ವ್ಯಾಕುಲಿಸುವವರೆಷ್ಟು ಮಂದಿ, ವಿಷಯ ವೈರಾಗ್ಯವಂ ಹಾಕುವವರೆಷ್ಟು ಜನ, ದೇಶವು ಬಿಟ್ಟು ಹೋಗುತಿರುವವರೆಷ್ಟು ಜನ, ತಮ್ಮ ಶಿಷ್ಟತೆಯಂ ಪ್ರದರ್ಶಿಸಿ ಪೂರ್ವಾರ್ಜಿತವಾದ ಆಸ್ತಿಯನ್ನೆಲ್ಲ ಮಾರಿ ತಿನುವವರೆಷ್ಟು ಮಂದಿ. ಹೀಗೆ ಜೀವನಪದ ದುರ್ವೃತ್ತಾವಲಂಬಿತವಾದುದಾಗಿಯೂ, ದುಃಖಗೇತುವಾಗಿಯೂ ಇರುವದರಿಂದ, ವಿವೇಕಿಯಾದವನು ಸರ್ಕಾರ್ ನೌಕರಿಯನ್ನೇ ಮುಖ್ಯವಾಗಿ ಅಪೇಕ್ಷಿಸಲಾಗದು. ಅದು ಇಂತಾ ಅನರ್ಥಕಾರಿಯೆಂಬದನ್ನು ದೊಡ್ಡವರು ಅರಿತವರಲ್ಲವೆ; ಅವರು ತಮ್ಮ ಮಕ್ಕಳಿಗಿಂತಾ ಸುಖಗಳನ್ನುಂಟುಮಾಡಿ ಶ್ರಮಪಡಿಸಬಾರದೆಂಬದನ್ನರಿಯರೇ ಎಂದು ಕೇಳುವ ಪಕ್ಷಕ್ಕೆ, ತಮ್ಮ ಅಂತಃಕರಣ ಬಲದಿಂದ ತಾವು ನೌಕರಿಯಲ್ಲಿರದವರಿಗಾಗಿ ಅವರನ್ನು ಅಭಿವೃದ್ಧಿಗೆ ತರುವೆನೆಂಬ ಅಭಿಪ್ರಾಯದಿಂದಾ ಬಗ್ಗೆ ವಾಲ್ಲಭ್ಯವನ್ನೆಲ್ಲ ವಿನಿಯೋಗಿಸುತ್ತಾರಾಗಿ ಅವರ ಶಿಕ್ಷಣ ವ್ಯವಹಾರಗಳಲ್ಲಿ ರಿಕ್ತರೆಲ್ಲರೂ ಬಹಳ ಶ್ರಮಕ್ಕೊಳಪಡಬೇಕಾಗಿರುತಿದೆ. ಅನೇಕರು ತಮ್ಮ ಉಪಪತ್ತಿಯಂ ಗಣಿಸದೆ, ವಿದ್ಯಾವಂತರಾದ ಪರ್ವಗಳನ್ನು ಕೂಡ ಸರ್ಕಾರ್ ಉದ್ಯೋಗವನ್ನೇ ಅಪೇಕ್ಷಿಸುವಂತೆ ಪ್ರೇರಿಸಿ, ತನಗೆ ಅವಿವಾಹಕಾಲಿಯಾದವರ ಬಳಿಗೆ ಕರೆದುಕೊಂಡು ಹೋಗಿ ಅವರ ರಕ್ಷಣಾಚಾರವ ಕೈಕೊಳ್ಳಿಸಿ ಸ್ವಸ್ಥರಾಗುತ್ತಾರೆ. ಇದು ಎಷ್ಟರ ವಿವೇಕವೋ ನಾವರಿಯೆವು. ಮುಖ್ಯವಾಗಿ ಈ ಕಾಲದೊಳು ಹೇಳುವದಕ್ಕೆ ಶಕ್ಯವಿಲ್ಲದಷ್ಟು ವಿಷಯಗಳಿಂದ ಮನುಷ್ಯನು ಸ್ವತಂತ್ರನಾಗಿಯೂ, ನಿರ್ಭೀತನಾಗಿಯೂ, ಜೀವಿಸಬಹುದು. ಅದನ್ನರಿಯದೆ ಬಿಟ್ಟು ಎಲ್ಲರೂ ಮೇಲೆ ಹೇಳಿದಂತೆ ಅನರ್ಥಸಂಪಾದಕಗಳಾದ ಸರ್ಕಾರ್ ನೌಕರಿಗಳನ್ನೇ ತಾರತಮ್ಯವಿಲ್ಲದೆ ಯೆಲ್ಲರೂ ಕೋತಿ ಮೇಲೆ ಬೀಳುವದೂ, ಬಡವನ್ನರು ಕೂತ ದರಿದ್ರರಂತೆ ಅನವರತ ತಮ್ಮ ಮಕ್ಕಳ ನೌಕರಿಗಾಗಿರೆ ಶೋಧನ ಮಾಡುವುದೂ, ಬಹಳ ಹೇಳನಾಸ್ಪದ ವಿಷಯವೆಂಬದಂ ಪ್ರೌಢಾವಸ್ಥೇನ ಪರ್ವಗಳಾದ ಬಾಲಕರ ಹೃದಯಗಳಲ್ಲಿ ನೆರೆಗೊಳಿಸಿ ಉಪಪನ್ನರಾದ ಅವರ ಮಾತಾಪಿತೃಗಳನ್ನು ತಾದೃಶಭಾವದಿಂದ ನಿವೃತ್ತಿಸಬೇಕೆಂಬುದೇ ಪ್ರಸಕ್ತ ವಿಷಯ ವಿಚಾರಕ್ಕೆ ಮುಖ್ಯೋದ್ದೇಶವಾಗಿರುವದರಿಂದ ಇದಂ ಎಲ್ಲರೂ ಚೆನ್ನಾಗಿ ಭಾವಿಸಿ ವರ್ತಿಸಿದರೆ ಎಲ್ಲರಿಗೂ ಶ್ರೇಯಸ್ಕರವಾಗಿರುತಿದೆ.

CONDOLATION MEETING

ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯುನಿಸಿಪಲ್ ಬೋರ್ಡಿನಲ್ಲಿ ಚುನಾಯಿಸಲ್ಪಟ್ಟ ಕೆಲವು ಜನ ಮ್ಯುನಿಸಿಪಲ್ ಕಮ್ಮಿಷನರುಗಳ ಮತ್ತು ಪ್ರಮುಖರಾದವರನೇಕರ ಅಪೇಕ್ಷಾನುಗುಣವಾಗಿ ಮಾಹೇ ಮಜಕೂರ್ ೨೨ ನೇ ತಾರೀಖ್ ಬುಧವಾರದ ದಿವಸ ಬೆಳಗ್ಯೆ ೮ ಘಂಟೆಗೆ, ಮೇಯೋಹಾಲ್‌ನಲ್ಲಿ, ಶ್ರೀಮನ್ ಮಹಾರಾಜ್ಞೀಯವರಿಗೂ ಅವರ ಪುತ್ರರಾದ ಪ್ರಿನ್ಸ್ ಆಫ್ ವೇಲ್ಸರವರಿಗೂ, ಅವರ ಕುಟುಂಬಕ್ಕೂ ಇತರ ರಾಜಬಂಧುಗಳಿಗೂ, ಪ್ರಿನ್ಸ್ ಆಲ್‌ಬರ್ಟ್ ವಿಕ್ಟರಾದ ಡ್ಯೂಕ್ ಆಫ್ ಕ್ಲಾರೆನ್ಸ್ ಮತ್ತು ಅವಂಡೇಲ್ ಯವರ ಅಕಾಲ ಮರಣ ಪ್ರಯುಕ್ತ ಪ್ರಾಪ್ತವಾಗಿರುವ ಅಪರಿಹಾರ್ಯವಾದ ಮಹತ್ತರ ದುಃಖಕ್ಕೆ ಸಮಾನುಕಂಪವಾದ ಒಂದು ವಿಜ್ಞಾಪನೆ ಪತ್ರಿಕೆಯನ್ನು ತಯಾರ್ಮಾಡಿ ಈ ವಿಷಯದಲ್ಲಿ ಇಲ್ಲಿನ ಪ್ರಜೆಗಳು ಅವರೊಡನೆ ಅನುಭವಿಸುತಲಿರುವ ನಿರ್ವೇದವನ್ನು ಸೂಚಿಸಿ ಆಕೆಯವರ ಸಮ್ಮುಖಕ್ಕೆ ಕಳುಹಿಸಬೇಕೆಂಬದಂ ಕುರಿತು ಆಲೋಚಿಸುವುದಕ್ಕೆ ಬಹಿರಂಗವಾದ ಒಂದು ಸಭೆ ಸೇರುವದೆಂದು, ಕರ್ನಲ್ ಮೆಗ್ರಾತ್ ರವರು ಪ್ರಕಟಿಸಿರುತ್ತಾರೆ. ಪ್ರಿನ್ಸರವರ ಮರಣ ವೃತ್ತಾಂತವು ತಿಳಿಯಬಂದ ಕೂಡಲೇ ಇಲ್ಲಿನ ಮ್ಯುನಿಸಿಪಾಲಿಟಿಯವರು, ಮಹಾರಾಜ್ಞೀಯವರಿಗೆ ಒಂದು ತಂತೀ ವೃತ್ತಾಂತವು ಕಳುಹಿಸಿದರು. ಇದಕ್ಕೆ ದುಃಖೋದ್ವೇಗ ಕಾಮಕವಾದ ರೀತಿ ವೃತ್ತಾಂತವಂ ತಾವು ಆದರದೊಡನೆ ಅಂಗೀಕರಿಸಿದಂತೆ ಉತ್ತರ ರೂಪವಾಗಿ ಪ್ರಿನ್ಸ್ ಆಫ್ ವೇಲ್ಸರವರಿಂದ ಜವಾಬು ಸಹ ಬಂದಿತೆ ಕೇಳುತ್ತೇವೆ. ಹೀಗೆಯೇ ಶ್ರೀಮನ್ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀಯವರ ಪ್ರಭುತ್ವಕ್ಕೊಳಗಾದ ಪ್ರಜೆಗಳೂ ಅನ್ಯರಾಜ ಪರಿಪಾಲಿತರಾದ ಪ್ರಜೆಗಳೂ, ಸಂಸ್ಥಾನಾಧಿಪತಿಗಳೂ, ಪ್ರಕೃತ ವಿಷಯದಲ್ಲಿ ತಮಗುಂಟಾಗಿರುವ ಮನೋಭಾವಗಳಂ ನಾನಾರೀತಿಯಿಂದ ವ್ಯಕ್ತಪಡಿಸಿ ಬ್ರಿಟಿಷ್ ರಾಜವಂಶಕ್ಕುಂಟಾದ ಖೇದದಲ್ಲಿ ತಾವೂ ಭಾಗಭಾಕ್ಕುಗಳಾದಂತೆ ತಂತಿ ಮೂಲಕ ರಾಜಸನ್ನಿಧಿಗೆ ತಿಳಿಯಪಡಿಸಿಯೂ ಪಡಿಸುತಲೂ ಇದ್ದಾರೆ. ಅವುಗಳಿಗೆಲ್ಲ ಕೂಡಲೇ ತಮ್ಮ ಹೃದಯಸ್ಥ ದುಃಖವ ಸಹ ಪರಿಗಣಿಸದೆ ಪ್ರಿನ್ಸ್ ಆಫ್ ವೇಲ್ಸರವರೂ, ಮಹಾರಾಣಿಯವರೂ, ಪ್ರಜೆಗಳ ರಾಜಭಕ್ತಿ ವಿಶ್ವಾಸಗಳಂ ಕೊಂಡಾಡುತ ಜವಾಬು ಕಳುಹಿಸಿರುತ್ತಾರೆ. ಅವುಗಳೆಲ್ಲವು ಪ್ರಾಯಶಃ ವೃತ್ತಾಂತ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಡದಿರಲಿಲ್ಲವು. ಆದರೆ ಇದುವರೆವಿಗೆ ಊಟಕಮಂಡಿ ನಿವಾಸಿಗಳಾಗಲಿ ಮೈಸೂರ್ ಪಟ್ಟಣ ನಿವಾಸಿಗಳಾಗಲಿ, ಅಲ್ಲದೆ ಮಹಾರಾಜಾ ಸರ್ಕಾರದವರಾಗಲಿ, ಈ ಸಂದರ್ಭದಲ್ಲಿ ಶ್ರೀಮನ್ಮಹಾರಾಜ್ಞೀಯವರಿಗೆ ದುಃಖಸೂಚಕವಾದ ತಂತಿ ವ್ಯಕ್ತಾಂತವನ್ನು ಕಳುಹಿಸಿರುವರೆ ಯೆಂದು ಭಾವಿಸಿದರೆ ಪ್ರಜೆಗಳು ಒಂದುವೇಳೆ ಪುರೋಭಿವೃದ್ಧಿಯಿಲ್ಲದೆ ಉದಾಸೀನರಾಗಿದ್ದಾಗ್ಯೂ ಶ್ರೀಮನ್ ಮಹಾರಾಜರವರ ಸ್ವಭಾವಸಿದ್ಧವಾದ ಅವರ ಜಾಗರೂಕತೆಯು ಇಂತಾ ಪ್ರಬಲ ವಿಷಯಗಳಲ್ಲಿ ಅವರು ಸಮ್ಮತಿಗೊಳಿಸಿರಲಾರದಾದುದರಿಂದ ಅವರು ಬಹುಶಃ ತಮ್ಮ ಕರ್ತವ್ಯವನ್ನು ಮರೆತಿಲ್ಲದೆ ಮದರಾಸ್‌ನಲ್ಲಿಯೇ ಮಾಡಿರುವರಲ್ಲೇನೂ ಸಂಶಯವಿರಲಾರದು. ಹಾಗೆ ಮಾಡಿದ್ದ ಪಕ್ಷಕ್ಕೆ, ಸಾಮಾನ್ಯವಾಗಿ ಖುಷಿಖುಷಿ ಜನಗಳು ಕಳುಹಿಸಿದ್ದ ರೀತಿ ವರ್ತಮಾನಗಳೂ ಅವುಗಳಿಗೆ ಬಂದ ಪ್ರತ್ಯುತ್ತರಗಳೂ ಪ್ರಕಟವಾಗಿರುವಾಗ್ಯೆ ಪ್ರಸಿದ್ಧ ಸಂಸ್ಥಾನಾಧಿಪತಿಯವರಿಂದ ಕಳುಹಿಸಲ್ಪಟ್ಟದರ ಸಹವೇ ಯೆಲ್ಲಿಯೂ ಕಾಣಿಸದಿರಲಿಕ್ಕೇನು ಕಾರಣವು? ಒಂದುವೇಳೆ ಅಂತರಂಗವಾಗಿಯೇ ಕಳುಹಿಸಲ್ಪಟ್ಟು ಅಂತರಂಗವಾಗಿಯೇ ಜವಾಬು ಬಂದಿರಬಹುದೆಂದು ಭಾವಿಸುವೆವಾದರೆ, ಇದು ಅಷ್ಟರ ರಾಜಕೀಯ ಗೂಢವಿಷಯವಲ್ಲವಾಗಿ, ಈ ವಿಷಯದಲ್ಲಿ ಮಹಾರಾಜರ ಮನೋಭಾವವು ಹೊರಗಾಗುವ ಬಗೆ ಹ್ಯಾಗೆ? ಒಂದುವೇಳೆ ಬಹಿರಂಗವಾದುದಾಗಿಯೇ ಇದ್ದು ಅದಂ ಪ್ರಕಟಿಸದೆ ಮದರಾಸ್ ವೃತ್ತಾಂತ ಪತ್ರಿಕೆಗಳು ಉದಾಸೀನ ಮಾಡಿದವೇನೋ ಯೆಂದು ಭಾವಿಸುವವಾದರೆ, ಹಾಗೆ ಮಾಡಿದ್ದ ಪಕ್ಷಕ್ಕೆ ಅವು ರಾಜ ಮರ್ಯಾದೋಲ್ಲಂಘನ ದೋಷಕ್ಕೆ ಪಾತ್ರವಾಗದೆ ಹೋಗಲಾರವು. ಅದು ಬಹುಶಃ ಪ್ರಕಟನೆಯ ಬಗ್ಗೆ ಅವುಗಳಿಗೆ ಕಳುಹಿಸಲ್ಪಡದಿರಬಹುದೆಂದೆಣಿಸುತ್ತೇವೆ. ಮುಖ್ಯವಾಗಿ ಈ ವಿಷಯವು ಸಂದಿಗ್ಧವಾಗಿ ಹೀಗೆಂದು ನಿಶ್ಚಯಿಸಲಾರದೆ ನಮ್ಮ ಮನವು ಕಳವಳಗೊಂಡಿರುತಿದೆ. ಇನ್ನು ಪ್ರಜೆಗಳ ವಿಷಯದಲ್ಲಿ ನಾವು ದೃಢವಾದ ಅಭಿಪ್ರಾಯವಂ ತಿಳಿಸಲು ಶಕ್ತರಾಗಿದ್ದೇವೆ. ಅವರಿದುವರೆವಿಗೂ ತಮ್ಮ ನೈಜಗುಣಕ್ಕೆ ವಿಪರ್ಯಾಸವನ್ನುಂಟುಮಾಡಿದ ನೋವಕ್ಕೆ ನೋಡಂತೆ ಕಾಣಿಸಲಿಲ್ಲವು. ಅವರ ಪ್ರಸ್ತಾವವು ಯಾವ ಪತ್ರಿಕೆಯಲ್ಲಿಯೂ ಕಾಣೆನು. ಅವರ ಉದ್ದೇಶ ಪ್ರಯತ್ನಗಳೇ ಗೊತ್ತಾಗಲಿಲ್ಲವು. ಹೀಗೆ ಮಾಡಿದರೆ ಗೌರವವೆಂದು ಸೂಚಿಸಿ ಪ್ರೇರಿಸತಕ್ಕ ಪ್ರಮುಖರೇ ಅವರಲ್ಲೀಗ ಶೂನ್ಯರಾಗಿದ್ದಾರೆ. ಮತ್ತು ತಾವೇನು ನುಡಿದರೆ ತಮಗ್ಯಾವಭಾರ ಮೇಲೆ ಬೀಳುವದೋ, ಇವೆಲ್ಲಿನ ತಂಟೆಯೆಂದೆಣಿಸಿ ಯೆಲ್ಲರೂ ಅವರವರ ಮಟ್ಟಿಗೆ ಉದಾಸೀನರಾಗಿರಬಹುದೇ ಹೊರ್ತು ಬೇರೆ ಯಾವ ಕಾರಣವೂ ನಮ್ಮ ಬುದ್ಧಿಯಲ್ಲಿ ಸ್ಫುರಿಸಲಿಲ್ಲವು. ಈ ವಿಷಯವು ಅವರಿಗೆ ತೋರದಿರಬಹುದೆಂದು ನುಡಿಯಲಿಕ್ಕಾಗುವದಿಲ್ಲವು, ಯೇತಕ್ಕೆಂದರೆ, ಅನ್ಯರ ಪ್ರಯತ್ನಗಳಾದರೂ ಅವರಂ ಯೆಚ್ಚರಗೊಳಿಸದೇ ಹೋಗಿರಲಾರವು. ಮುಖ್ಯವಾಗಿ ಧನಶೋಕವಂ ಬಿಚ್ಚತಕ್ಕ ನಾಥನೇ ಇಲ್ಲದಿರುವದರಿಂದ ಬಹುಶಃ ಎಲ್ಲರೂ ಹೀನಸ್ಥರಾದಂತೆ ಕಾಣುತಿದೆ. ಆದರೆ ಇಂತಾ ಪ್ರಬಲ ಸಂದರ್ಭದಲ್ಲಿ ಸಹ ಮೈಸೂರು ದೇಶೀಯರು, ತಮ್ಮ ಮಾನುಷಧರ್ಮಕ್ಕೆಂತಲೂ, ಧನವನ್ನೇ ಬಹಳವಾಗಿ ಗೌರವಿಸತಕ್ಕವರೆಂಬದೊಂದು ಅಪಕೀರ್ತಿ ಮಹಾರಾಜ್ಞೀಯವರ ತನಕ ವ್ಯಾಪಿಸಿ ನಿದರ್ಶನವಾದಂತೆ ಯಾಯಿತು.

LOCAL AND PROVINCIAL NEWS.

ಒಳದೇಶವು ಮತ್ತು ತಾಲ್ಲೂಕ್ ಜಾತಿ ವೃತ್ತಾಂತಗಳು.

The Dewan—ನಿನ್ನೆಯ ದಿನ ರಾತ್ರಿ ಮೆಯಿಲ್ ಟ್ರೇನಿನಲ್ಲಿ ದಿವಾನರವರು ಕೋಲಾರದಿಂದ ಮದರಾಸಿಗೆ ಮಹಾರಾಜರವರ ಸಂದರ್ಶನಾರ್ಥ ದಯಮಾಡುವಂತೆ ವ್ಯವಸ್ಥೆಯಾಗಿತ್ತು. ಅವರ ಕ್ಯಾಂಪ್ ಆಫೀಸ್ ಬೆಂಗಳೂರಿಗೆ ವಾಪಸ್ ಬಂದುಬಿದ್ದಿರುವುದು.

The Alsoor murder case—ಹಲಸೂರ್ ಖೂನಿ ಮೊಕದ್ದಮೆಯಲ್ಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಸೆಷನ್ ಜಡ್ಜಿಯವರು ಅಪರಾಧಿ ಮುನಿಸಾಮಿ ಯೆಂಬವನಿಗೆ ಫಾಸೀ ಸಜಾ ವಿಧಿಸಿದರು. ಅಪರಾಧಿಯು ರೆಸಿಡೆಂಟರಲ್ಲಿ ಅಪೀಲ್ ಮಾಡಿಕೊಳ್ಳಬೇಕೆಂದಿದ್ದಾನೆ.

The Vaccination Sub Committee—ಮಕ್ಕಳಿಗೆ ಸಿಡುಬು ಗುರುತು ಹಾಕಿಸುವ ವಿಷಯದಲ್ಲಿ ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯುನಿಸಿಪಾಲಿಟಿಯವರೀಚೆಗೆ ಮಾಡಿರುವ ಕೆಲವು ನಿಬಂಧನೆಗಳನ್ನು ಕುರಿತು ಆಲೋಚಿಸಿ ರಿಪೋರ್ಟ್ ಮಾಡುವದಕ್ಕಾಗಿ ನಿಯಮಿಸಲ್ಪಟ್ಟಿದ್ದ ಸಬ್ ಕಮಿಟಿಯವರು ಮೊನ್ನೆ ದಿನ ಮೇಯೊ ಹಾಲಿನಲ್ಲಿ ಸಭೆ ಸೇರಿ ವಿಚಾರಮಾಡಿದರು. ಆ ಕಾಲದಲ್ಲಿ ಡಾಕ್ಟರ್ ಇಂಕ್‌ಸನ್ ಎಂಬವರು ಪ್ರೆಸಿಡೆಂಟರಾಗಿದ್ದರು.

Bangalore Hindupur Railway.—ಬೆಂಗಳೂರು ಹಿಂದೂಪುರ್ ರೆಯಿಲ್ ಮಾರ್ಗದಲ್ಲಿ ಸುಬೇದಾರ್ ಸತ್ರದ ಮೊದಲು ೪ನೇ ಮೈಲಿ ತನಕ ರಸ್ತೆ ಕಾಮಗಾರಿಯು ಪೂರೈಸಿದ್ದರಿಂದಲೂ, ಸೇತುವೆ ವಗೈರೆ ಕೆಲಸಗಳೆಲ್ಲವು ದೊಡ್ಡಬಳ್ಳಾಪುರದ ವರಿವಿಗೆ ಪೂರೈಸಿರುವದರಿಂದಲೂ ಬರುವ ಮಾರ್ಚಿ ಆಖೈರೊಳಗಾಗಿ ರಸ್ತೆ ಕಾಮಗಾರಿ ಯೆಲ್ಲ ಪೂರೈಸಿ, ದೊಡ್ಡಬಳ್ಳಾಪುರಕ್ಕೆ ಗಾಡಿಗಳು ಬಿಡಲ್ಪಡಬಹುದೆಂದು ರೆಯಿಲ್ವೆ ಇಲಾಖಾ ಅಧಿಕಾರಿಗಳು ನಿರೀಕ್ಷಿಸುತಲಿದ್ದಾರೆ.

Who is to account for.—ಮೈಸೂರ್ ನಾಜಮಿಂದಿಗೆ ಸೇರಿದ ಶ್ಯಾಮಾಜಮ್ಮಣ್ಣಿ ಎಂಬಾಕೆಯು ಈ ಪೂರಿಗೆ ಬಂದು ಅಕಸ್ಮಾತ್ತಾಗಿ ಗತವಾರದಲ್ಲಿ ಮೃತಪಡಲು ಈ ತಾಲ್ಲೂಕ್ ಅಮಲ್ದಾರರು ಖುದ್ದು ಹೋಗಿ ಹಾಜರಿದ್ದು ಆಕೆಯ ಜೆಂದಗಿಯನ್ನೆಲ್ಲ ಮೊಹರ್ಮಾಡಿಸಿ ಮುದ್ದೆಯನ್ನು ಪೋಲೀಸಿನವರ ಸುಪರ್ದು ಮಾಡಿದರೆಂತಲೂ, ಆಕೆಯ ಕೈಯಲ್ಲಿ ಹಾಕಿಕೊಂಡಿದ್ದ ಭಂಗಾರದ ಕಡಗಗಳಪೈಕಿ ಒಂದು ಹ್ಯಾಗೋ ಅಗೋಚರವಾಗಿ ಹೋದುದೆಯೂ. ಕಾವಲಿದ್ದ ಪೋಲೀಸಿನವರು ಯಾರೂ ತನಗೆ ತಿಳಿಯದೆಂದು ಇನ್‌ಕಾರ್ ಮಾಡುತ್ತಾರೆಂತಲೂ ಕೇಳುತ್ತೇವೆ.

A praise-worthy attempt.—ಈ ಪೂರು ನಗರ್ತರ ಪೇಟೆಯ ಶೆಟ್ಟಿ ವರ್ತಕರೆಲ್ಲರೂ ಸಭೆ ಸೇರಿ ಈಗ ಪ್ರಾಪ್ತವಾಗಿರುವ ದುರ್ಭಿಕ್ಷವು ಉಪಶಮಿಸುವ ತನಕ, ಕೇವಲ ಅನನ್ಯಗತಿಕರಾದವರಿಗೆಲ್ಲ ಜಾತಿಭೇದವಿಲ್ಲದೆ ಇಸಂ ಒಂದಕ್ಕೆ ಅರ್ಧ ಸೇರು ಅಕ್ಕಿ ಅರ್ಧ ಆಣೆ ಪ್ರಕಾರ ಕೊಟ್ಟು ಉಪಕಾರ ಮಾಡಬೇಕಾದದ್ದು ಆವಶ್ಯಕವೆಂದು ತೀರ್ಮಾನಿಸಿ ದೊಡ್ಡದೊಡ್ಡ ಸಾಹುಕಾರರೆಲ್ಲರು ಧಾರಾಳವಾಗಿ ಚಂದಾ ಮಾಡಿದ್ದಾರೆಂತಲೂ, ಅವರ ಪೈಕಿ ಪ್ರಸಕ್ತ ಸಭೆಗೆ ಅಧ್ಯಕ್ಷರಾಗಿದ್ದ ಪ್ರಸಿದ್ಧ ಸಾಹುಕಾರರೊಬ್ಬರು ತಾವು ಮಾಹೇಯಾನಾ ಯೆರಡು ರೂಪಾಯಿಗಳು ಧಾರಾಳವಾಗಿ ಕೊಡುವಂತೆ ಧೈರ್ಯವಾಗಿ ಒಪ್ಪಿಕೊಂಡಿದ್ದಾರೆಂತಲೂ, ಮುಜರಾಯಿ ಸೂಪರಿಂಟೆಂಡೆಂಟರವರಾದ ಮ|| ಶ್ರೀನಿವಾಸಾಚಾರ್ಯರು ೭೫ ರೂಪಾಯಿಗಳು ಕೊಡುವದಾಗಿ ವಾಗ್ದಾನ ಮಾಡಿದ್ದಾರೆಂತಲೂ, ಸದ್ಯಕ್ಕೆ ಯೆರಡು ತಿಂಗಳಿಗೆ ಬೇಕಾದ ಅಕ್ಕಿಯನ್ನು ಅನ್ಯದೇಶದಿಂದ ತರಿಸುವಂತೆ ತೀರ್ಮಾನಿಸಿದ್ದಾರೆಂತಲೂ ಕೇಳುತ್ತೇವೆ. ಇದರ ಇತರ ತಪಸೀಲನ್ನು ಚಂದಾದಾರರ ಹೆಸರುಗಳೊಡನೆ ಮುಂದಿನ ವಾರದಲ್ಲಿ ತಿಳಿಸುವೆವು.

H. H. The Maharaja's visit to Pondichery.—ಶ್ರೀಮನ್ಮಹಾರಾಜರವರು ಈ ದಿನ ಬೆಳಗ್ಯೆ ೭ ಘಂಟೆಗೆ ಸ್ಪೆಷಿಯಲ್ ಟ್ರೇನಿನಲ್ಲಿ ಪುದುಚೇರಿಗೆ ದಯಮಾಡುವಂತೆ ನಿಶ್ಚಯವಾಗಿರುತಿದೆ. ಶ್ರೀಮನ್ ಮಹಾರಾಜರವರನ್ನು ಉಚಿತ ಮರ್ಯಾದೆಗಳೊಡನೆ ಬರಮಾಡಿಕೊಂಡು ಗೌರವಿಸುವದಕ್ಕಾಗಿ, ಆ ಗವರ್ನಮೆಂಟಿನವರಿಂದಲೂ, ಮ್ಯುನಿಸಿಪಾಲಿಟಿಯವರಿಂದಲೂ ಮುಖ್ಯವಾಗಿ ಕೋಟೀಶ್ವರರಾದ ಮ|| ರಾ|| ಲಕ್ಷ್ಮಣಸ್ವಾಮಿ ಶೆಟ್ಟರೆಂಬವರಿಂದಲೂ ಸಕಲ ಯೋಗ್ಯಾದುಗಳೂ ಬಹುದಿನ ಪ್ರಯಾಸಂ ಮಾಡಲ್ಪಟ್ಟಿರುತಿವೆ. ಮಹಾರಾಜರವರು ೨೮ ನೇ ತಾರೀಖ್‌ವರೆವಿಗೆ ಅಲ್ಲಿಯೇ ದಯಮಾಡಿರುವರು. ಸದರೀ ಲಕ್ಷ್ಮಣಸ್ವಾಮಿ ಶೆಟ್ಟರವರು ಪಬ್ಲಿಕ್ ಪ್ರಜೆಗಳ ಉಪಯೋಗಾರ್ಥ ತಮ್ಮ ಲಾಗವಡಿನಲ್ಲಿ ಕಟ್ಟಲಿಕ್ಕೆ ಪ್ರಯತ್ನ ಪಟ್ಟಿರುವ ಕ್ಲಾಕ್ ಟವರಿನ ಅಸ್ತಿಭಾರ ಶಿಲಾಪ್ರತಿಷ್ಠೆಯಂ ಮಹಾರಾಜರವರೇ ಮಾಡಲಿಕ್ಕೆ ಅಂಗೀಕರಿಸಿರುತ್ತಾರೆ. ಮಹಾರಾಜರವರು ಜೋಧಪುರದ ಮಹಾರಾಜರಿಗೆ ಬರುವ ತಿಂಗಳಲ್ಲಿ ನಡೆಯುವ ವಿವಾಹ ಮಹೋತ್ಸವಕ್ಕೆ ಆ ಸಂಸ್ಥಾನದವರ ಆಹ್ವಾನವನ್ನಂಗೀಕರಿಸಿ ಅಲ್ಲಿಗೆ ದಯಮಾಡುವ ಸಂಕಲ್ಪವುಳ್ಳವರಾಗಿದ್ದಾರೆಂದು ಮದರಾಸ್ ಪತ್ರಿಕೆಯೊಂದು ತಿಳಿಸುತಿದೆ. ಏತನ್ಮಧ್ಯೆ ಬರೋಡೆಗೆ ಸಹ ಹೋಗಬೇಕೆಂಬ ಅಭಿಪ್ರಾಯ ವಿರುವಂತೆ ಪ್ರವಾದವುಂಟಾಗಿದೆ. ಯೆಲ್ಲಕ್ಕೂ ಇದೇ ಒಳ್ಳೆಯ ಸಮಯವಾಗಿರುತಿದೆ.

HUMAN PHYSIOLOGY

ಮಾನವಶರೀರ ತತ್ವವಿವೇಚಕ ಶಾಸ್ತ್ರ

ಭೂಗವನ್ನಿರ್ಮಿತಗಳಾದ ಪದಾರ್ಥಗಳು ಪ್ರಾಣಿ ವರ್ಗವೆಂತಲೂ, ಉದ್ಭಿಜ ವರ್ಗವೆಂತಲೂ, ಧಾತು ವರ್ಗವೆಂತಲೂ ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿರುತಿವೆ ಇವುಗಳಲ್ಲಿ ಮೊದಲನೆಯದು, ಸಜೀವಗಳಾಗಿ ಜ್ಞಾನಕರ್ಮೇಂದ್ರಿಯಗಳನ್ನು ಪಡೆದಿರುವ ಸಕಲ ಜಂತುಗಳೂ ... [illegible]

[illegible]

ಮನುಷ್ಯ ದೇಹ ಲಕ್ಷಣ.

CHAP. I.—THE BONES

ಸಂಧಿ—ಎಲುಬುಗಳು

Sec. 1.—Description of the Bones

೧ನೇ ಅಧ್ಯಾಯ—ಎಲುಬುಗಳ ವಿವರ

[illegible]

ಎಲುಬುಗಳು ೨, ಮುಂಡದ (Trunk) ಎಲುಬುಗಳು ೩, ಊರ್ಧ್ವಾಂಗದ (Upper Extremity) ಎಲುಬುಗಳು ೪, ಅಧೋಭಾಗದ (Lower Extremity) ಎಲುಬುಗಳು

2.—BONES OF THE SKULL.

೨—ತಲೆಯ ಎಲುಬುಗಳು

೧೦ ತಲೆಯ ಎಲುಬುಗಳು, ಕಪಾಲ ಮುಖ ಕಿವಿಗಳ ಎಲುಬುಗಳೆಂದು ಮೂರು ಭಾಗಗಳಾಗಿ ವಿಭಾಗಿಸಲ್ಪಟ್ಟಿವೆ

೧೧ ಕಪಾಲದಲ್ಲಿ ಎಂಟು ಎಲುಬುಗಳುಂಟು ... (Suture) ... [illegible]

[illegible]

(Trunk) ... (Spine) ... (Pelvis) ... (Heart) ... (Lungs) ... (Arteries) ... [illegible]

3.—BONES OF THE TRUNK

೩ ಮುಂಡದ ಎಲುಬುಗಳು

[illegible]

(ಸಶೇಷ)

NOTICE

T. SAMMI'S WONDERFUL MEDICINES

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ನೇಹಿತರಾದವರು ನನ್ನ ಔಷಧಗಳನ್ನು ಸೇವಿಸಿ ... ಸಕಲರಿಗೂ ... ತಿಳಿಯಪಡಿಸಿ ... ವಿಜ್ಞಾಪಿಸಿಕೊಳ್ಳುತ್ತೇನೆ

[illegible]

ಪ್ರಕಟನೆ

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವದು.

ಮದರಾಸ್ ಪ್ರೆಸಿಡೆನ್ಸಿ ... ರಂಗರಾಯರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ	ರೂ	ಆ.	ಪೈ.
1	[illegible]	0	4	6
2	[illegible]	0	2	6
3	[illegible]	0	2	6
4	[illegible]	0	2	6
	[illegible]	0	2	0
	[illegible]	0	1	6
7	[illegible]	0	1	0
8	[illegible]	0	1	0
9	[illegible]	1	10	0
10	[illegible]	1	1	0
11	[illegible]	0	1	0
12	[illegible]	0	14	0
13	[illegible]	0	3	6
14	[illegible]	0	4	6
15	[illegible]	0	1	6
16	[illegible]	0	1	0
17	[illegible]	0	1	6
18	[illegible]	0	1	6
19	[illegible]	0	1	0
21	[illegible]	1	14	0
22	[illegible]	0	8	6
23	[illegible]	0	3	6
24	[illegible]	0	3	0
25	[illegible]	0	2	0
26	[illegible]	0	1	6
26	[illegible]	0	1	6

[illegible]

BANGALORE.—Printed and published at the KARNATAKA PRESS No 50, HOSPITAL ROAD PETTAH.—1842

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX.] BANGALORE—MONDAY, FEBRUARY 1, 1892 [No. 5.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಫೆಬ್ರುವರಿ ೧ ನೇ ತಾರೀಖು ಸೋಮವಾರ. [ಸಂಖ್ಯೆ ೫.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳೀಯರಿಗೆ	ಪರಸ್ಥಳದವರಿಗೆ
	[illegible]	[illegible]
ಮುಂಗಡವಾಗಿ	6—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ	4—0—0	5—0—0
ತರುವಾಯ ,,	5—0—0	6—0—1

ಈ ಪತ್ರಿಕೆಗೆ [illegible]

ಪ್ರಕಟನೆಯ ದರ.

[illegible]

ADVERTISEMENTS

NOTICE.

VAIDYASTRA SANGRAHA

A TREATISE ON THE PRINCIPLES OF

HINDU MEDICINE

Price including Postage Rs 3 0 0

ವೈದ್ಯಶಾಸ್ತ್ರ ಸಂಗ್ರಹ.

[illegible]

ಇದರ ಕ್ರಯ—[illegible]

ರೂ. 3 0—0

[illegible]

ನೋಟೀಸು.

ಬೆಂಗಳೂರು ಕರ್ನಾಟಕ ಪ್ರೆಸ್. [illegible]

[illegible]

ಡಿ. ದಿನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible] ಬಾಟಲ್ ೧ಕ್ಕೆ [illegible]

೨. [illegible] ಫಾಸ್ಪರಸ್ ಗುಳಿಗೆಗಳು.—[illegible]

೩. [illegible] ಬಾಟಲ್ ೧ಕ್ಕೆ [illegible]

೪. [illegible] ಡಬ್ಬಿ ೧ಕ್ಕೆ [illegible]

೫. [illegible]

೬. [illegible]

೭. [illegible] ಗುಳಿಗೆಗಳು.—[illegible]

೮. ದಂತ [illegible]

೯. [illegible]

೧೦. ಜ್ವರಗಡ್ಡೆಯ ಔಷಧ ಮತ್ತು [illegible]

೧೧. ಜ್ವರದ [illegible] ಗುಟಿಕೆ.—[illegible]

೧೨. [illegible]

[illegible]

ನೋಟೀಸ್.

[illegible]

ಅನುಭವಿ ವೈದ್ಯರು.

[illegible]

ನೋಟೀಸ್.

DONGRAY'S SYRUP.

೧ ಡೊಂಗರೆಯವರ "[illegible]" ಇದು [illegible]

[illegible]

ಡಾಕ್ಟರ್ ಕೆ. ಟಿ. ಡೊಂಗರೆ,

ಡಾಕ್ಟರ್ [illegible]

[illegible], ಮುಂಬಯಿ.

ನೋಟೀಸ್.

[illegible]

THE MONEY MARKET

ಮದರಾಸ್, ತಾರೀಖು ೩೦ನೇ ಜನವರಿ ೧೮೯೨ ಬ್ಯಾಂಕ್‌ಬಿಲ್‌ಗಳು ಮೂರು ತಿಂಗಳ ಮುದ್ದತಿಗಳು, ರೂ|| ೧ಕ್ಕೆ

1s. 4 7/32d

ಸೇಕಡ 4ರೂ ಬಡ್ಡಿ ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 105-6-0 ಇಂದ 105-11-0 ವರೆಗೆ. ಮದರಾಸ್ ಬ್ಯಾಂಕ್ ಷೇರಿಗಳು (100) ರೂಪಾಯಿಗಳ ಬಡ್ಡಿ 895 ಲಾಗಾಯಿತು 900.

ಸವರ್ನಗಳು, 11-11-0

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, FEBRUARY 1, 1892

೧೮೯೨ನೇ ಇಸವಿ ಫೆಬ್ರುವರಿ ತಾ|| ೧ ನೇ ಸೋಮವಾರ

THE REVISED REGISTRATION SCHEME

ಮೈಸೂರು ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ಲವರು ತಮ್ಮ ಇಲಾಖೆಯಲ್ಲಿ ಕೆಲವು ಹೊಸ ಏರ್ಪಾಡುಗಳಂ ಜಾರೀಯಲ್ಲಿ ತರಬೇಕೆಂದುದ್ದೇಶಿಸಿ ಅದರ ಮಂಜೂರಾತಿಯ ಬಗ್ಗೆ ಕಳೆದ ಮೇ ತಿಂಗಳಲ್ಲಿ ಗವರ್ನಮೆಂಟಿಗೆ ಒಂದು ನಮೂನೆ ತಯಾರ್ಮಾಡಿ ಕಳುಹಿಸಿದ್ದರೆಂದು ತಿಳಿಸಿದ್ದೆವಷ್ಟೆ. ಇದಲ್ಲದೆ ಇನ್ಸ್ಪೆಕ್ಟರ್ ಜನರಲ್ಲವರ ಸಲಹೆಯನ್ನೂ ಅವರ ಉದ್ದಿಷ್ಟ ಏರ್ಪಾಡುಗಳನ್ನೂ ಇಳಿದೇಶದ ಕೆಲವು ಇಂಗ್ಲಿಷ್ ಪತ್ರಿಕೆಗಳು ಬಹಳ ಆಕ್ಷೇಪಿಸಿ ಇನ್ಸ್ಪೆಕ್ಟರ್ ಜನರಲ್ಲವರನ್ನು ಸಹ ವ್ಯಕ್ತಿನಿರ್ದೇಶದಿಂ ದೂಷಿಸಿದ್ದವು. ಕಡೆಗೆ ಗವರ್ನಮೆಂಟಿನವರು ೪ ತಿಂಗಳಕಾಲ ಆಲೋಚಿಸಿ ಇನ್ಸ್ಪೆಕ್ಟರ್ ಜನರಲ್ಲವರು ತಿಳಿಸಿದ ಬಾಬುಗಳ ಬಹಳ ಭಾಗವನ್ನು ವಜಾಮಾಡಿ ಕೆಲವು ಭಾಗವನ್ನು ಮಾತ್ರ ಗತವಾರದಲ್ಲಿ ಮಂಜೂರ್ಮಾಡಿದರೆಂದು ಕೇಳುತ್ತೇವೆ. ಇದರಲ್ಲಿ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ಗಳು ಮೈಸೂರಿಗೂ ಬೆಂಗಳೂರಿಗೂ ಪ್ರತ್ಯೇಕವಾಗಿ ಇರಬೇಕೆಂದು ಸೂಚಿಸಲ್ಪಟ್ಟಿದ್ದದ್ದು, ಜಾಸ್ತೀ ಖರ್ಚಾಗುವದೆಂಬ ಸಬಬಿನ ಮೇಲೆ ವಜಾಮಾಡಲ್ಪಟ್ಟಿತೆಂತಲೂ, ಅದೇ ಕಾರಣದಿಂದ ಸ್ಪೆಷಿಯಲ್ ಸಬ್ ರಿಜಿಸ್ಟ್ರಾರ್‌ಗಳ ಸಂಖ್ಯೆಯು ಕೂಡ ಬಹಳ ಕಡಮೆಮಾಡಲ್ಪಟ್ಟು, ೮ ಮಾತ್ರವೇ ಮಂಜೂರಾದಂತೆಯೂ, ತಿಳಿಯಬರುತಿದೆ. ಹಾಲಿ ಇರುವ ೫ ಸಬ್ ರಿಜಿಸ್ಟ್ರಾರ್ ಆಫೀಸುಗಳೊಡನೆ ಈಗ ಹೊಸದಾಗಿ ಏರ್ಪಟ್ಟ ನಾಲ್ಕು ಕೇರಿ ಇಟ್ಟು ೯ ರಲ್ಲಿ ೪ ಒಂದನೇ ಗ್ರೇಡೂ, ೩ ಎರಡನೇ ಗ್ರೇಡೂ, ೨ ಮೂರನೇ ಗ್ರೇಡೂ ಏರ್ಪಡಿಸಲ್ಪಟ್ಟು ಅವುಗಳಿಗೆ ಕ್ರಮವಾಗಿ ೩೦—೫೦—೩೫ ರೂಪಾಯಿಗಳ ಪ್ರಕಾರ ತಲಬ್ ಗೊತ್ತಾಗಿದೆಯೆಂತಲೂ, ಅನ್ಯ ರಿಜಿಸ್ಟ್ರೇಷನ್ ಆಫೀಸ ಹುಟ್ಟುವಳಿಯನ್ನನುಸರಿಸಿ ಏರ್ಪಡಿಸಲ್ಪಟ್ಟಿವೆಯೆಂತಲೂ ತಿಳಿಯಬರುತಿದೆ. ಇದುವರಿವಿಗೆ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಕೆಲಸಗಳನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ಗಳೂ, ಸ್ಪೆಷಿಯಲ್ ಸಬ್ ರಿಜಿಸ್ಟ್ರಾರ್‌ಗಳಿಲ್ಲದ ಪ್ರದೇಶಗಳಲ್ಲಿ ಸಬ್ ರಿಜಿಸ್ಟ್ರಾರ್ ಕೆಲಸಗಳನ್ನು ತಾಲ್ಲೂಕ ಅಮಲ್ದಾರರುಗಳೂ ನೋಡುತಲಿದ್ದರಷ್ಟೆ. ಡೆಪ್ಯುಟಿ ಕಮಿಷನರ್‌ಗಳಿಗೂ, ಅಮಲ್ದಾರರುಗಳಿಗೂ ಕೆಲಸಗಳ ಗಲಾಟೆ ಅಧಿಕವಾಗಿರುವದರಿಂದ ಈ ಗಲಾಟೆಗಳೊಡನೆ ಅವರಿಗೆ ರಿಜಿಸ್ಟ್ರೇಷನ್ ಕೆಲಸವನ್ನು ಕೂಡ ಸೇರಿಸುವದುಚಿತವಾಗಿಲ್ಲವೆಂದು ಇನ್ಸ್ಪೆಕ್ಟರ್ ಜನರಲ್ಲವರು ಪಡೆದಿರುವ ಭಾವವು ದಿವಾನರವರು ಅಂಗೀಕರಿಸಿ, ಇನ್ನು ಮೇಲೆ ಆಯಾ ಡಿಸ್ಟ್ರಿಕ್ಟ್ ಟ್ರಜರೀ ಅಸಿಸ್ಟೆಂಟ್ ಕಮಿಷನರ್‌ಗಳೇ ರಿಜಿಸ್ಟ್ರೇಷನ್ ಕೆಲಸವನ್ನು ಕೂಡ ನಿರ್ವಹಿಸುತ, ಎಕ್ಸ್ ಆಫಿಷಿಯೋ ರಿಜಿಸ್ಟ್ರಾರಾಗಿರತಕ್ಕದ್ದೆಂತಲೂ, ತಾಲ್ಲೂಕ ಶಿರಸ್ತೇದಾರರು ದಸೂಲಿಯಲ್ಲಿ ಸೇಕಡ ೮೦ ರೂಪಾಯಿಗಳಿಗೆ ಬದಲು ೫೦ ರೂಪಾಯಿಗಳು ಕಮಿಷನ್ ತೆಗದುಕೊಂಡು ಅದರಲ್ಲಿಯೇ ತಮ್ಮ ಗುಮಾಸ್ತೆಯರಿಗೆ ಕೂಡ ಕೊಟ್ಟುಕೊಳ್ಳೆಂದು ಎಕ್ಸ್ ಆಫಿಷಿಯೋ ಸಬ್ ರಿಜಿಸ್ಟ್ರಾರಾಗಿರತಕ್ಕದ್ದೆಂತಲೂ ಹುಕುಂ ಮಾಡಿದರೆಂದು ಕೇಳುತ್ತೇವೆ. ಮುಂದೆ ಕಂಟ್ರೋಲರ್ ಇನ್ಸ್ಪೆಕ್ಟರ್ ಜನರಲ್ ಕೆಲಸವನ್ನು ಸಹ ನೋಡುತಲಿದ್ದದರಿಂದ ಅದಕ್ಕಾಗಿ ಮಾಹೇಯಾನಾ ೫೦ ರೂಪಾಯಿಗಳು ರುಸುಂ ತರೀಕ ಮೊದಲನೆಯವರಿಗೆ ಸಲ್ಲುತಲಿತ್ತು. ಮೆ|| ವೆಂಕಟವರದಯ್ಯಂಗಾರ್ಯರವರು ಲೆಜಿಸ್ಲೇಟಿವ್ ಸೆಕ್ರೆಟರಿಯವರಾಗಿ ನೇಮಕರಾದ ಕಾಲದಲ್ಲಿ ಅವರಿಗೆ ೧೦೦ ರೂಪಾಯಿ ತಲಬ್ ಜಾಸ್ತೀಮಾಡಿ ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸದೊಡನೆ ಇನ್ಸ್ಪೆಕ್ಟರ್ ಜನರಲ್ ಕೆಲಸವನ್ನು ಕೂಡ ನೋಡಿಕೊಳ್ಳತಕ್ಕದ್ದೆಂದು ಹುಕುಂ ಕೊಡಲ್ಪಟ್ಟಿತು. ಅವರು ಕೆಲಸದಿಂದ ನಿವೃತ್ತರಾದ ಕಾಲದಲ್ಲಿ ಮೆ|| ಮೀನಾಕ್ಷಿ ಅಯ್ಯರವರು ಆ ಕೆಲಸಕ್ಕೆ ನೇಮಕರಾಗ್ಮಾಡಲ್ಪಡಲು, ಆಗ ಲೆಜಿಸ್ಲೇಟಿವ್ ಸೆಕ್ರೆಟರಿಯ ತಲಬ್ ೪೦೦ ರೂಪಾಯಿಗಳಿಂದ ೩೦೦ ರಲ್ಲಿ ತಗ್ಗಿಸಲ್ಪಟ್ಟಿತು. ಪರಂತು ಅವರು ೧೮೪೦ ನೇ ಇಸವಿಯ ಲಾಗಾಯಿತು, ಮಾಹೇಯಾನಾ ೫೦೦ ರೂಪಾಯಿಗಳ ತಲಬ್ ಪಡೆಯುತ ಗವರ್ನಮೆಂಟ್ ಅಡ್ವೋಕೇಟ್ ಕೆಲಸವನ್ನು ನೋಡುತಲಿದ್ದದರಿಂದ ಅದರೊಡನೆ ಲೆಜಿಸ್ಲೇಟಿವ್ ಸೆಕ್ರೆಟರಿಯಾಗಿದ್ದು ಎರಡು ಕೆಲಸಗಳನ್ನೂ ನೋಡುವದಕ್ಕಾಗಿ ಒಂದು ಸಾವಿರ ರೂಪಾಯಿಗಳು ಕೊಡಲ್ಪಡುತಲಿವೆ. ಮೆ|| ಮೀನಾಕ್ಷಿ ಅಯ್ಯರವರು ಗವರ್ನಮೆಂಟ್ ಅಡ್ವೋಕೇಟರಾಗಿ ನೇಮಕರಾದ ಕಾಲದಲ್ಲಿ ಗವರ್ನಮೆಂಟ್ ತರಫ್ ವಿನಾಯಿಸಿ ಇತರ ಕ್ರಿಮಿನಲ್ ಮೊಕದ್ದಮೆಗಳನ್ನು ತೆಗೆಯಕೂಡದೆಂಬ ನಿರ್ಬಂಧವೇರ್ಪಟ್ಟಿತು. ಅದರಿಂದ ಕ್ರಿಮಿನಲ್ ಮೊಕದ್ದಮೆಗಳ ಮೂಲಕವಾದ ಆಮದಿಯು ತಪ್ಪಿಹೋಯಿತು. ಈ ದೇಶದಲ್ಲಿ ಭಾರೀ ಮೊಕದ್ದಮೆಗಳು ಬರುವದು ಅಪೂರ್ವವಾದುದರಿಂದ ಜುಜಾಮೀ ಮೊಕದ್ದಮೆಗಳನ್ನು ತೆಗೆದುಕೊಳ್ಳುವದಕ್ಕೆ ಇಷ್ಟವಿಲ್ಲದೆ ಅದನ್ನೂ ವಜಾ ಮಾಡಿಕೊಂಡದರಿಂದ ಅವರಿಗೆ ತಲಬ್ ವಿನಾ ಬೇರೆವಿಧ ಆಮದಿ ಯಿಲ್ಲವಾಯಿತು. ಮತ್ತು ಅವರ ನೌಕರೀಯು ಪೆನ್ಶನಿಗೆ ಸಹ ಏಳಪಟ್ಟದ್ದಾಗಿರಲಿಲ್ಲವು. ಲೆಜಿಸ್ಲೇಟಿವ್ ಸೆಕ್ರೆಟರಿಯಾಗಿ ಏರ್ಪಟ್ಟ ಕಾಲದಲ್ಲಿ ಆ ತಲಬು ಮುನ್ನೂರು ರೂಪಾಯಿಗಳು ತಗ್ಗಿಹೋದುದರಿಂದ ಆ ಮೂಲಕವಾಗಿಯೂ ಅವರಿಗೆ ಆದಾಯವು ಕಡಮೆಯಾಯಿತು. ರಿಜಿಸ್ಟ್ರೇಷನ್ ಕೆಲಸಕ್ಕೆ ಪೂರ್ವದಂತೆ ೫೦ ರೂಪಾಯಿಗಳು ಸಲ್ಲುತಲಿದ್ದರೆ ಕಳೆದ ಎರಡು ವರುಷಗಳಿಗೆ ಮುನ್ನೂರು ೫೦೦ ರೂಪಾಯಿಗಳು ಎರುತಲಿತ್ತು. ಅದೂ ಇಲ್ಲದ್ದರಿಂದ ಆ ಮೂಲಕವಾಗಿಯೂ ನಷ್ಟಕ್ಕೆ ಗುರಿಯಾಗಬೇಕಾಯಿತು. ಇವರಿಗೆ ನ್ಯಾಯವಾಗಿ ಪೂರಾ ತಲಬ್ ಕೊಡಲ್ಪಟ್ಟರೆ ೧,೫೦೦ ರೂಪಾಯಿಗಳು ಸಲ್ಲಬೇಕಾಗುವುದು. ಹ್ಯಾಗೆಂದರೆ, ಗವರ್ನಮೆಂಟ್ ಅಡ್ವೋಕೇಟ್ ಕೆಲಸಕ್ಕೆ ೫೦೦ ರೂಪಾಯಿಗಳು, ಲೆಜಿಸ್ಲೇಟಿವ್ ಸೆಕ್ರೆಟರಿಗಾಗಿ ೪೦೦ ರೂಪಾಯಿಗಳು, ರಿಜಿಸ್ಟ್ರೇಷನ್ ಕೆಲಸ ನೋಡುವದಕ್ಕಾಗಿ ೫೦ ರೂಪಾಯಿಗಳು ಈಗ್ಗೆ ೭೦೦ ರೂಪಾಯಿಗಳು ಮೆಸ್ಸರ್ ಮೀನಾಕ್ಷಿ ಅಯ್ಯರವರಿಗೆ ಮಹಾರಾಜಾ ಸರ್ಕಾರದವರು ಕಡಮೆ ಮಾಡಿದಂತೆಯಾಯಿತು. ಇದನ್ನೆಲ್ಲ ಭಾವಿಸಿ ಗವರ್ನಮೆಂಟಿನವರು ಅವರಿಗೆ ಕಳೆದ ಡಿಸಂಬರ್ ೩ ನೇ ತಾರೀಖು ಲಾಗಾಯಿತು ಮಾಹೇಯಾನಾ ೫೦ ರೂಪಾಯಿಗಳು ಪೂರ್ವದಂತೆ ರಿಜಿಸ್ಟ್ರೇಷನ್ ಹುಟ್ಟುವಳಿಯಿಂದ ಕೊಡಲ್ಪಡತಕ್ಕದ್ದೆಂದು ಹುಕುಂ ಮಾಡಿರುವದಾಗಿ ಕೇಳುತ್ತೇವೆ. ಇದಲ್ಲದೆ ಮೆ|| ಮೀನಾಕ್ಷಿ ಅಯ್ಯರವರು ಇದುವರಿವಿಗೆ ಗವರ್ನಮೆಂಟ್ ಅಡ್ವೋಕೇಟರಾಗಿ ಮಾಡಿದ ಕಳೆದ ೧೦ ವರುಷಗಳ ನೌಕರಿಯನ್ನು ಮಹಾರಾಜರವರು ಪರ್ಯಾಲೋಚಿಸಿ ಅದನ್ನು ಪೆನ್ಶನ್ ಲಾಯಖಾಗಿ ಪರಿಗಣಿಸತಕ್ಕದ್ದೆಂದು ಹುಕುಂ ಮಾಡಿರುವದು ಕೇಳಿ ಸಂತೋಷಿಸುತ್ತೇವೆ. ಇವರಿಗೆ ಸರ್ಕ್ಯೂಟ ಮೊದಲಾದ ಕಾರ್ಯಗಳು ಅನೇಕವಾಗಿರುವದರಿಂದಲೂ, ಇವರ ಗೈರುಹಾಜರಿಯಲ್ಲಿ ಗವರ್ನಮೆಂಟ್ ಅಡ್ವೋಕೇಟಿನ ಕೆಲಸಗಳು ನಿಂತುಹೋಗುವದರಿಂದಲೂ ಅದಕ್ಕೆ ಅಡಚಣೆ ಇಲ್ಲದಿರುವಂತೆ ಅವರಿಗೊಬ್ಬ ಅಸಿಸ್ಟೆಂಟರು ಮಾಹೇಯಾನಾ ೩೦೦ ರೂಪಾಯಿಗಳಲ್ಲಿ ನೇಮಕರಾದಂತೆ ಈವಾರದ ಗೆಜೆಟಿನ ಮೂಲಕ ತಿಳಿಯಲಾದೆವು. ಸದರೀ ಕೆಲಸವು ಈ ಡಿವಿಜನಿನ ಪಬ್ಲಿಕ್ ಪ್ರಾಸಿಕ್ಯೂಟರಾಗಿದ್ದ ಮೆ|| ಎಸ್. ರಾಮಸ್ವಾಮಯ್ಯನವರಿಗೂ, ಅವರ ಕೆಲಸವು ನಗರ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರ್ ಮಿಸ್ಟರ್ ರಾಮರಾಯರವರಿಗೂ, ಅವರ ಕೆಲಸವು ಮಿಸ್ಟರ್ ಸುಂದರಯ್ಯರೆಂಬವರಿಗೂ ಕೊಡಲ್ಪಟ್ಟಂತೆ ವರ್ತಮಾನವಿದೆ. ರಿಜಿಸ್ಟ್ರೇಷನ್ ಸ್ಕೀಮಿನಲ್ಲಿ ಸೂಚಿಸಲ್ಪಟ್ಟಿದ್ದವೆಲ್ಲವೂ ಮಂಜೂರಾಗುವದೆಂಬ ನಿರೀಕ್ಷಣೆಯ ಮೇಲೆ ಅನೇಕ ಶಿಫಾರಸುಗಳೂ, ಮಿತಿಯಿಲ್ಲದ ದರಖಾಸ್ತುಗಳೂ ಬಂದಿರುವಂತೆ ಕೇಳುತ್ತೇವೆ. ಈಗ ಮಂಜೂರಾದ ಕೆಲಸಗಳನ್ನು ನೇಮಿಸಲಾಗಿ ಎಲ್ಲರ ಪ್ರತ್ಯಾಶೆಯೂ ಭಂಗವಾದಂತೆ ಕಾಣುತಿದೆ. ಇನ್ಸ್ಪೆಕ್ಟರ್ ಜನರಲ್ಲವರು ಸ್ವಭಾವತಃ ಉದಾರಿಗಳಾಗಿಯೂ ಅತಿ ದಾಕ್ಷಿಣ್ಯಪರರಾಗಿಯೂ ಇರುವದರಿಂದ ಈ ಸಮಯದಲ್ಲಿ ತಮ್ಮ ತಾಬೇದಾರರಾದ ಅನೇಕ ಜನ ಸರಕಾರದ ಚಾಕರಿಯನ್ನು ಕೂಡ ಪ್ರತ್ಯೇಕಿಸಲಿಕ್ಕಿಲ್ಲದೆ ಅಸ್ತುರಾದ ದೊಡ್ಡವರ ಶಿಫಾರಸುಗಳನ್ನು ಎಣಿಯಿಲ್ಲದೆ ಗೌರವಿಸುವಂತಹ ನಿರ್ಬಂಧಕ್ಕೆ ಒಳಪಟ್ಟಿರುವಂತೆ ಕಾಣುತಿದೆ. ಬಹುಕಾಲದಿಂದ ಸರ್ವಿಸ್ ಸಹ ಇಲ್ಲದಂತೆ ನೌಕರಿ ಎನುಭವಿಸುತಲಿರುವ ರಿಜಿಸ್ಟ್ರೇಷನ್ ಗುಮಾಸ್ತೆಯರ ಸ್ಥಿತಿಯು ಬಹಳ ವಿಷಾದಕರವಾಗಿರುವದೆ. ಇವರಿಗೆಲ್ಲ ದೇವರೆ ನಿಷ್ಪಕ್ಷಪಾತಿಯಿಂದ ಪೋಷಣೆ ದೊರೆಯುವಂತೆ ಮಾಡಬೇಕೆಂಬ ಕೋರಿಕೆಯೊಡನೆ, ಇನ್ಸ್ಪೆಕ್ಟರ್ ಜನರಲ್ಲವರು ಗವರ್ನಮೆಂಟಿಗೆ ಬರೆದುಕೊಂಡು ಅದು ಅವರು ಮಂಜೂರ್ಮಾಡದೆ ಹೋದರು. ಸದ್ಯೋ ಇನ್ಸ್ಪೆಕ್ಟರ್ ಜನರಲ್ಲರು ಮಾಡುತ್ತಿರುವ ಏರ್ಪಾಟುಗಳ ಸ್ವರೂಪವು ನಮಗೆ ತಿಳಿಯದ್ದರಿಂದ ನಾವು ಆ ವಿಷಯವು ಕುರಿತು ಯಾವ ವಿದದ ಅಭಿಪ್ರಾಯವೂ ತಿಳಿಸಲಿಕ್ಕೆ ಶಕ್ತರಲ್ಲದೇವೆ. ಆದರೆ ನಾವು ಕೇಳುವದು ನಿಜವಾಗಿದ್ದ ಪಕ್ಷಕ್ಕೆ ಹೊಸದಾಗಿ ಬರುವವರಿಗಿಂತಲೂ, ಹಳೇ ಚಾಕರರನ್ನು ಜಾಸ್ತಿ ಮಾಡಿಸುವದೂ ಸರಕಾರದವರಿಗೆ ಒಂದು ಪ್ರೋತ್ಸಾಹವನ್ನುಂಟು ಮಾಡುವದೂ ಯುಕ್ತವೆಂದು ಭಾವಿಸುತ್ತೇವೆ. ಈ ಏರ್ಪಾಡನ್ನು ಗವರ್ನಮೆಂಟಿನವರು ಕೂಡ ಬಹುಶಃ ಅಂಗೀಕರಿಸುವರೇ ಹೊರತು ನಿರಾಕರಿಸಲಾರರೆಂದೆಣಿಸುತ್ತೇವೆ. ಈ ಸಂದರ್ಭದಲ್ಲಿ ರಿಜಿಸ್ಟ್ರೇಷನ್ ಇಲಾಖೆಯಲ್ಲಿ ಬಹುಕಾಲದಿಂ ನೌಕರಿ ಮಾಡುತ ವಿಶೇಷ ಅನುಭವಶಾಲಿಗಳಾಗಿರುವ ಸದರೀ ಆಫೀಸ್ ಮ್ಯಾನೇಜರಿಗೆ ೧೦೦ ರಿಂದ ೧೫೦ಕ್ಕೆ ತಲಬ್ ಜಾಸ್ತೀ ಮಾಡಲ್ಪಟ್ಟ ಇಬ್ಬರಿಬ್ಬರಿಗೆ ಇಜಾಫೆ ಕೊಡಲ್ಪಟ್ಟಂತೆ ಕೇಳುತ್ತೇವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Rain in western India.—ಸಿಕ್ಕಿತು ಇಂಡಿಯಾದೇಶದ ಪೈಕಿ ಅಜಮೀರ್, ಜಯಪುರ ಮೊದಲಾದ ಪ್ರದೇಶಗಳೊಳು ಬಲವಾದ ಮಳೆ ಬಿದ್ದು, ಅದರ ಅಭಾವದಿಂ ಕಷ್ಟಪಡುತಲಿದ್ದ ವ್ಯವಸಾಯಗಾರರಿಗೆ ಅಮಿತವಾದ ಸುಖ ಉಂಟಾಯಿತೆಂದು ಕೇಳಿ ಸಂತೋಷಿಸುತ್ತೇವೆ.

The Indian National Congress.—ಪ್ರಖ್ಯಾತ ಪಂಡಿತ ಅಯೋಧ್ಯಾನಾಥರವರ ಸ್ಥಾನದಲ್ಲಿ ಮೆ|| ಡಬ್ಲ್ಯು. ಸಿ. ಬಾನರ್ಜಿಯವರು ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸಿವಿಲ್ ಜಾಯಿಂಟ್ ಸೆಕ್ರೆಟರಿಯಾಗಿ ನೇಮಕರಾಗ್ಮಾಡಲ್ಪಡುವರೆಂಬ ನಂಬಿಕೆ ಯುಂಟಾಗಿದೆ.

The Bombay Legislative Council.—ಮುಂಬೈ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಒಬ್ಬ ಮೆಂಬರಾಗಿದ್ದ ಮೆ|| ಮೂರ್ ಎಂಬವರು ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು ಅದನ್ನು ಗವರ್ನಮೆಂಟಿನವರು ಅಂಗೀಕರಿಸಿದ್ದರಿಂದ ಮೆ|| ನವರೋಜಿ ನೌರೋಜಿ ವಾಡಿಯಾ ಸಿ. ಐ. ಇ. ಎಂಬವರು ಜಾಸ್ತೀ ಇಸಂ ರಹೀಮ ವಾಡಿಯಾದ ಕೆಲಸದಲ್ಲಿ ನಿಯಮಿಸಲ್ಪಟ್ಟರು.

Death of a Rajah.—ಶಿವಾಸ್ ಸಂಸ್ಥಾನದ ಅರಸರಾದ ದಾದಾ ಸಾಹೆಬರವರು ಕೆಲವು ದಿನಗಳ ಕಾಲ ಅಸ್ವಸ್ಥಸ್ಥಿತಿಯಲ್ಲಿದ್ದು ಆಚೇವಾರದೊಳು ಕಾಲಗತಿಯನ್ನೈದಿದರು. ೧೮೪೦ನೇ ಇಸವಿಯಲ್ಲಿ ಸದರೀ ಯವರು ರಾಜ್ಯಧುರವನ್ನು ಕೈಗೊಂಡ ಮೇಲೆ ರಾಜ್ಯಾಡಳಿತದಲ್ಲಿ ಅನೇಕ ಹೊಸ ಏರ್ಪಾಡುಗಳಂ ಮಾಡಿದರು. ಇವರಿಗೆ ಮರಣ ಕಾಲದಲ್ಲಿ ವಯಸ್ಸು ಮೂವತ್ತು ವರ್ಷಗಳು ಸಂತತಿರಹಿತರಾಗಿ ಮೃತರಾದರು.

Stoppage of relief works.—ಮದರಾಸ್ ಪ್ರೆಸಿಡೆನ್ಸಿಯ ಪೈಕಿ ಪಶ್ಚಿಮ ಘಟ್ಟ ಭಾಗದಲ್ಲಿ ಬೆಳೆಗಳು ಆಗುವದಕ್ಕೆ ಅವಕಾಶವಿಲ್ಲದೆಯೂ, ಕುಡಿಯುವದಕ್ಕೆ ನೀರಿಲ್ಲದೆಯೂ ಸಾಮಾನ್ಯವಾಗಿ ಪ್ರಜೆಗಳು ತಪಿಸುತಲಿದ್ದ ಸಂಕಟ ನಿವೃತ್ತಿಗಾಗಿ ಕ್ಷಾಮನಿವಾರಕ ಕಾಮಗಾರಿಗಳು ನಡೆಸಲ್ಪಡುತಲಿದ್ದವಷ್ಟೆ. ಅಂತಾ ಪ್ರದೇಶಗಳು ವಿನಾ ಇತರ ಸ್ಥಳಗಳಲ್ಲಿ ಕಾಮಗಾರಿಗಳಂ ನಿಲ್ಲಿಸಿ ಬಿಡುವಂತೆ ಮದರಾಸ್ ಗವರ್ನಮೆಂಟು ಹುಕುಂ ಕೊಡಲ್ಪಟ್ಟಿತು.

A disastrous fire.—ಕಳೆದ ತಿಂಗಳ ೨೬ ನೇ ತಾರೀಖಿನಲ್ಲಿ ಆಫ್ಘಾನಿಸ್ಥಾನದ ಪೆಷಾವರಿನೊಳು ಸ್ಥಾಪಿಸಲ್ಪಟ್ಟಿರುವ ಮಹಾ ಮದ್ದಿನ ಮನೆಗೆ ಬೆಂಕಿ ತಗಲಿ, ಅದನ್ನು ಆರಿಸುವ ವಿಷಯದಲ್ಲಿ ಮಾಡಿದ ಪ್ರಯತ್ನಗಳೆಲ್ಲವು ನಿಷ್ಫಲವಾಗಲಾಗಿ, ಹೊಸ ಯಂತ್ರ ಹಳೇಯಂತ್ರಗಳೆಲ್ಲವು ಸುಟ್ಟುಹೋಗಿ, ಅದರಿಂದ ಲಕ್ಷ ರೂಪಾಯಿಗಳ ನಷ್ಟ ಉಂಟಾದಂತೆ ಅಂದಾಜ್ ಮಾಡಲ್ಪಟ್ಟಿದೆ.

Extension of railway in India.—ಈಗ ಬಂಗಾಳದಿಂದ ನಾಗಪುರದ ವರಿವಿಗೆ ಹಾಕಲ್ಪಡುತಲಿದ್ದ ರೈಲ್ ರಸ್ತೆಯು ಕಾಮಗಾರಿಯು ಪೂರ್ತಿಯಾಗಿ, ಪೂರ್ವಸಮುದ್ರ ತೀರದ ರೈಲ್ ರಸ್ತೆಯ ಕೆಲಸಕ್ಕೆ ಉಪಕ್ರಮವಾಗಿರುವದರಿಂದ, ಮಧ್ಯ ಇಂಡಿಯಾ ದೇಶದಲ್ಲಿನ ರಾಯಪುರದಿಂದ ವಿಶಾಖಪಟ್ಟಣದವರಿವಿಗೆ ಹಾಕಬೇಕೆಂದು ಫಾಮಿನ್ ಕಮಿಷನ್ ರಿಪೋರ್ಟಿನಲ್ಲಿ ಸೂಚಿಸಲ್ಪಟ್ಟಿದ್ದ ರೈಲ್ ರಸ್ತೆಗಳ ಪೈಕಿ ಒಂದನ್ನು ಪ್ರಾರಂಭಿಸ ಬೇಕಾಗಿರುತಿದೆ.

LOCAL AND PROVINCIAL NEWS.
ಒಳದೇಶದ ಮತ್ತು ಪ್ರಾಂತ್ಯ ಸಮಾಚಾರಗಳು.

The Government Press Superintendent.—ಮೈಸೂರ್ ಗವರ್ನಮೆಂಟ್ ಸೆಂಟ್ರಲ್ ಪ್ರೆಸ್ ಸೂಪರಿಂಟೆಂಡೆಂಟರಾದ ಮೆ|| ಟಿ. ಟಿ. ಲಿಸನ್ ಎಂಬವರು ಮೂರು ನಾಲ್ಕು ವಾರಗಳ ರಜಾ ಪಡೆದು ಕಲ್ಕತ್ತೆಯಲ್ಲಿ ನಡೆಯುವ ವಾಲಂಟಿಯರ್ ಕಾನ್ಫರೆನ್ಸಿಗೆ ಹೋಗಬರುವರೆಂದು ಕೇಳುತ್ತೇವೆ.

Dewan's office officials.—ಮೈಸೂರ್ ಲ್ಯಾಂಡ್ ರಿವಿನ್ಯೂ ಕೋಡು ಬರುವವರದವೇಲೆ ಮಾಡಲ್ಪಟ್ಟ ರೆವಿನ್ಯೂ ರೂಲ್ಸ್ ಅನುಸರಿಸಿ ದಿವಾನರವರ ಆಫೀಸಿನಲ್ಲಿರುವ ಉದ್ಯೋಗಸ್ಥರೆಲ್ಲರು ಈ ಡಿಪಾರ್ಟ್‌ಮೆಂಟಿನ ಪರೀಕ್ಷೆಗಳಲ್ಲಿ ತಾವು ಜಯಶಾಲಿಗಳಾಗಿ ಪ್ರವೃತ್ತಿ ಹೊಂದತಕ್ಕ ಸರ್ಟಿಫಿಕೇಟು ಪಡೆಯಬೇಕೆಂದು ಅಪೇಕ್ಷಿಸಲ್ಪಟ್ಟಿರುವಂತೆ ತಿಳಿಯಬರುತಿದೆ.

The gold fields.—ಕೋಲಾರ ಪ್ರಾಂತದ ಚಿನ್ನದ ಗಣಿಗಳಲ್ಲಿ ನಡೆಯುವ ತಕ್ಸೀರುಗಳ ವಿಚಾರಣೆಯು ಬಗ್ಗೆ ಪ್ರತ್ಯೇಕ ಒಬ್ಬ ಮ್ಯಾಜಿಸ್ಟ್ರೇಟರು ನೇಮಕರಾಗಬಹುದಷ್ಟೆ. ಇವರು ಕೋರ್ಟ್ ಮಾಡುವದಕ್ಕೂ, ವಾಸ ಮಾಡುವದಕ್ಕೂ ಎರಡು ಬಂಗ್ಲೆಗಳನ್ನು ತಾತ್ಕಾಲಿಕವಾಗಿ ಕಟ್ಟಿಸಿಕೊಂಡು ಗವರ್ನಮೆಂಟಿನವರು ತೀರ್ಮಾನಿಸಿರುತ್ತಾರೆ.

Removal of public offices to Mysore.—ಒಬ್ಬ ಸರ್ಕಾರ್ ಉದ್ಯೋಗಸ್ಥರು ಇಲ್ಲಿನ ಆಂಗ್ಲಿಕನ್ ಮೆಯಿಲ್ ಪತ್ರಿಕೆಗೆ ಬರೆದಿರುತ್ತಾರೇನೆಂದರೆ, ಕೆಲವು ಸರ್ಕಾರಿ ಇಲಾಖೆಗಳನ್ನು ಮೈಸೂರಿಗೆ ವರ್ಗ ಮಾಡಬೇಕೆಂದುದ್ದೇಶಿಸಿರುವದಾಗಿ ಕೆಲವು ತಿಂಗಳ ಹಿಂದೆ ಮೈಸೂರ್ ಸರ್ಕಾರ

ದವರು ಕೊಟ್ಟಿದ್ದ ಹುಕುಂ ಸದ್ಯಃ ಜಾರಿಯಲ್ಲಿ ತಪ್ಪದಲಾರದು, ಎಂಬರು.

Muzrai Inspection.—ಈಸಂಸ್ಥಾನದ ಮುಜರಾಯಿ ಇಲಾಖಾ ಸೂಪರಿಂಟೆಂಡೆಂಟರಾದ ರಾಯಬಹದೂರ್ ಮ॥ ಶ್ರೀನಿವಾಸಾಚಾರ್ಯರವರು ಈಪೂರ್ವದಲ್ಲಿರತಕ್ಕ ಸರ್ಕಾರ ದೇವಾಲಯಗಳನ್ನು ಈ ತಾಲ್ಲೂಕು ಅಮಲ್ದಾರರವರೊಡನೆ ತನಿಖೀ ಮಾಡುತ ಆಯಾ ದೇವಸ್ಥಾನಗಳ ಸ್ಥಿತಿಯನ್ನು ಬುದ್ಧಿ ಅಜಮಾಯಿಷಿ ಮಾಡಿ ನೋಡಿ ಬರೆಯುತಲಿರುವದರಿಂದ ಷರಾ ನಿರೀಕ್ಷಣದ ರಿಪೋರ್ಟಿನ ಮೇರೆಗಾದ ಕೂಡಲೆ ನಮ್ಮ ಅಭಿಪ್ರಾಯವು ತಿಳಿಸುವೆವು.

Col. De'Moss[illegible] — ಮೊದಲು ಈ ಸಂಸ್ಥಾನದಲ್ಲಿ [illegible] ಗಿದ್ದು ಈಗ ಪಂಜಾಬ್ ಗವರ್ನಮೆಂಟಿನಲ್ಲಿ [illegible] ಗತ ವರ್ಷದಲ್ಲಿ ಈ ಸ್ಥಾನಗ [illegible] ನೋಡಿ ಬರುವ [illegible] ಸುತ್ತಿದೆ

A rumoured change — [illegible]

Meteorological.—[illegible]

AN APPEAL

ಇವರಿಗೆ ಕೆಲವು ದಿವಸಗಳಲ್ಲಿ [illegible]

ತ್ರಿಮತಸ್ಥರಲ್ಲಿ ವಿದ್ವತ್ ಶ್ರೇಷ್ಠರಾಗಿಯೂ, ಪಂಡಿತರಾಗಿಯೂ, ಶಾಸ್ತ್ರಜ್ಞರಾಗಿಯೂ, ಬ್ರಾಹ್ಮಣರ ಆಚಾರ ವ್ಯವಹಾರಗಳಲ್ಲಿ ದಕ್ಷರೂ ಯೋಗ್ಯರಾದುಗಳನ್ನು ಮಾಡಲು ಅರ್ಹರಾಗಿಯೂ ಇರುವ ಮಹನೀಯರೆಲ್ಲರಿಗೂ ಮಂದನ ಪೂರ್ವಕ ವಿಜ್ಞಾಪಿಸುವದೇನೆಂದರೆ :—

ಸಜ್ಜನರೆ,—ನಮ್ಮ ದೇಶವನ್ನು ಬಹು ಸಂತಸ್ಥರೆಗಳವರಿಗೆ [illegible]

[illegible]

ಗ್ರಾಮವಾದ್ದೇ [illegible] ಎಲ್ಲಿನೋಡಿದಾಗ್ಯೂ [illegible] ಮುರಾವನೆ [illegible] ಗೋಪುರ [illegible] ಅಮೇಧ್ಯ [illegible] ತಿಳಿಯುವದಿಲ್ಲ. ದೇವಾಲಯಗಳಲ್ಲಿ, [illegible]

[illegible]

ದದೆ, ಅನ್ಯತಕ್ಕ ವಿಷಯವನ್ನು ತಮ್ಮಗಳಿಂದ ತಿಳಿದುಕೊಳ್ಳಬೇಕೆಂಬದೇ ಈವಿಷಯದಲ್ಲಿ ತಾವುಗಳೆಲ್ಲರೂ ಪಂಡಿತೋತ್ತಮರಾದ್ದರಿಂದ ಶಾಸ್ತ್ರ ಮತ್ತು ದೃಷ್ಟಾಂತವು ಮೊದಲಾದವುಗಳನ್ನು ವಿಚಾರ ಮಾಡಿ, ಗ್ರಾಹ್ಯಾ ಗ್ರಾಹ್ಯವಂ ಕುರಿತು ಒಂದು ಬುದ್ಧಿ ಪತ್ರಿಕೆಯನ್ನು ಅನುಗ್ರಹ ಪೂರ್ವಕ ದಯಮಾಡಿಸಬೇಕೆಂದು ಅತಿ ವಿನಯದಿಂ ಬೇಡುವ,

ತಮ್ಮ ಅತ್ಯಂತ ವಿಧೇಯನಾದ,
ಶ್ರೀನಿವಾಸ ಮಂದಿರದ
ಪಿ. ಗೋಪಾಲಾಚಾರ್ಯನು.

HUMAN PHYSIOLOGY.

ಮಾನವಶರೀರ ತತ್ವವಿವೇಚಕ ಶಾಸ್ತ್ರ

ಮನುಷ್ಯ ದೇಹ ಲಕ್ಷಣ

CHAP. I.—THE BONES.

೧ ನೇ ಅಧ್ಯಾಯ—ಎಲುಬುಗಳು.

Sec. 1.—Description of the Bones.

೧ ನೇ ಪ್ರಕರಣ.—ಎಲುಬುಗಳ ವಿವರ.

BONES OF THE TRUNK.

ಮುಂಡದ ಎಲುಬುಗಳು.

[illegible]

೮. ಭುಜದ ಚಪ್ಪೆಯೆಲುಬು (Shoulder Blade) [illegible]

BONES OF THE HAND.

ಕೈ ಎಲುಬುಗಳು.

[illegible]

(Lower Extremity) [illegible]

BONES OF THE LEG.

ಕಾಲಿನ ಎಲುಬುಗಳು.

[illegible]

The Knee Joint.
ಮೊಣಕಾಲಿನ ಕೀಲು.

೪೯. ಪ್ರಕೃತಿಯು ಕೀಲಿನ ಅಡಿಯಲ್ಲಿ ಎಲುಬುಗಳ ಕೊನೆಗಳು ಸವೆಯದಹಾಗೆ ಕಾಪಾಡಿಕೊಂಡು, ನಡೆಯುವಾಗಲೂ ಧುಮುಕುವಾಗಲೂ ಕೀಲಿನಲ್ಲಿ ಉಂಟಾಗುವ ಅಘಾತವನ್ನು ಕಡಿಮೆ ಮಾಡತಕ್ಕ ಘಟ್ಟಿಯೂ ಸ್ವಲ್ಪ ಕೆಟ್ಟಿ ಕೆಳವೂ ಉಳ್ಳ ಒಂದು ಬೇರೆ ವಸ್ತುವುಂಟು.

೫೦. ಪ್ರಕೃತಿಯು ಕೀಲುಗಳಲ್ಲಿ ಮಾಡಿರುವ ಹೊದಿಕೆಯು ಕೀಲುಗಳಲ್ಲಿರುವ ಪ್ರಕೃತಿಗಳನ್ನೂ ಬಂಧನಗಳನ್ನೂ ಅಪ್ಪಿಕೊಂಡು ಆ ಕೀಲುಗಳಿಗೆ ಒಳ ಹೊದಿಕೆಯಾಗಿದೆ. ಈ ಹೊದಿಕೆಯ ಪಕ್ಕಗಳಿಂದ ಕೀಲುಗಳು ಚೆನ್ನಾಗಿ ಆಡುವ ಹಾಗೆ ಒಂದುವಿಧವಾದ ರಸ ಒಸರುವದು.

೫೧. ಬಂಧನ ಎಂಬುವದು ಬಲವುಳ್ಳ ಕೆಳವಿಲ್ಲದ ಒಂದು ಬೇರೆ ವಸ್ತು. ಬಂಧನಗಳು ಶರೀರದ ಎಲುಬುಗಳನ್ನು ಒಂದಕ್ಕೊಂದು ಸೇರಿಸಿ ಕಟ್ಟುವಂತಹವುಗಳು

ಮತ್ತು ಕೆಳಗಿನ ಚಿತ್ರದಲ್ಲಿ ಮನುಷ್ಯನಿಗೂ ಮೃಗಗಳಿಗೂ ಕೀಲುಗಳ ಕಟ್ಟುವಿಕೆಯು ಸ್ವಲ್ಪ ವ್ಯತ್ಯಾಸವಿದೆ ಒಂದೇವಿಧ. ಇದು ಚೆನ್ನಾಗಿ ತಿಳಿಯುವಹಾಗೆ ಆಡು ಕುರಿ ಕೋತಿ ಮೊದಲಾದವುಗಳ ಕೀಲುಗಳನ್ನು ಬಿಡಿಸಿ ನೋಡಬಹುದು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜ್ಯಾಡಳಿತದ ಒಡೆಯರ ಸರ್ಕಾರದಿಂದ ಕಳಿಸೋಣವಾದ ಇಸ್ತಿಹಾರ್ನಾಮೆಗಳು

ನಂ ೪೧೮, ತಾರೀಖು ೧೯ ನೇ ಜನವರಿ ೧೮೯೨—ಕ್ರಿಮಿನಲ್ ಪ್ರೊಸೀಜ್ಯುರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ ಮೈಸೂರ್ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್, ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ನರಸಿಂಹಯ್ಯಂಗಾರ್ಯರವರಿಗೆ ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತವೆ.

ನಂ. ೪೧೫, ತಾ|| ೨೨ ನೇ ಜನವರಿ ೧೮೯೨—ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮತ್ತು ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ಎಸ್. ವೆಂಕಟರಾಯರವರು, ಕ್ರಿಮಿನಲ್ ಪ್ರೊಸೀಜ್ಯುರ್ ಕೋಡ್ ೧೧೦ ನೇ ಸೆಕ್ಷನ್ ಅನುಸರಿಸಿ, ಒಳ್ಳೇ ನಡತೆಗಾಗಿ ಜಾಮೀನ್ ಅಪೇಕ್ಷಿಸುವ ಅಧಿಕಾರ ಕೊಡಲ್ಪಟ್ಟಿರುತ್ತಾರೆ. ಚಿತ್ರದುರ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮತ್ತು ೨ ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮಿ|| ಸೈಯದ್ ಅಬ್ದುಲ್ ಅಜೀಜ್ ಯವರಿಗೆ ಕ್ರಿಮಿನಲ್ ಪ್ರೊಸೀಜ್ಯುರ್ ಕೋಡ್ ೩೫೭ ನೇ ಸೆಕ್ಷನ್ ಅನುಸರಿಸಿ, ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ್ ಇಂಗ್ಲೀಷ್ ಭಾಷೆಯಲ್ಲಿ ಬರೆದುಕೊಳ್ಳುವುದಕ್ಕೆ ಅಧಿಕಾರ ಕೊಡಲ್ಪಟ್ಟಿರುತವೆ

ನಂ. ೪೧೬.—ಶಿವಮೊಗ್ಗ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಚೆಲುವಯ್ಯಂಗಾರ್ಯರವರಿಗೆ ಮಹಾಲೇ ಮುಜಕೂರ್ ೧೫ ನೇ ತಾರೀಖು ಆಗಾಯಿತು ೨ ದಿನ ಕ್ಯಾಷುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೪೧೭-[illegible]—೧೧೨೦—ಮೌ" ಸಿದ್ಧಪ್ಪರೆಂಬವರು ವಾರ್ಧಕ್ಯದಿಂದ ದಾವಣಗೆರೆ ಮ್ಯುನಿಸಿಪಲ್ ಕಮಿಟೀಯ ಮೆಂಬರಾಗಿದ್ದು ಕೆಲಸ ನೋಡಲಿಕ್ಕೆ ಅಶಕ್ತರಾಗಿರುವದರಿಂದ ಅವರಿಗೆ ಬದಲಾಗಿ ಮೌ|| ಉಮಾಪತಿ ಚೆನ್ನವೀರಪ್ಪನವರು ಸದರೀ ಮ್ಯುನಿಸಿಪಾಲಿಟಿಯಲ್ಲೊಬ್ಬ ಮೆಂಬರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ಬೊಕ್ಕಸ ನಂ. ೧೧೩೮ ತಾ ೨೨ ನೇ ಜನವರಿ ೧೮೯೨.—ಸಬ್‌ಡಿವಿಷನ್ ಡಿವಿಷನ್ ಪಬ್ಲಿಕ್ ಪ್ರಾಸಿಕ್ಯೂಟರ್ ಮಿ|| ಎಸ್. ರಾಮಸ್ವಾಮಯ್ಯನವರು, ಮಹಾಲೇ ಮುಜಕೂರ್ ಗುರ್ರೇ ತಾರೀಖು ಆಗಾಯಿತು ಗವರ್ನಮೆಂಟ್ ಅಸಿಸ್ಟೆಂಟ್ ಅಡ್ವೋಕೇಟರಾಗಿ ನೇಮಕರಾಗಲ್ಪಟ್ಟಿರುತ್ತಾರೆ

SUMMARY OF NEWS
ವೃತ್ತಾಂತ ಸಂಗ್ರಹವು.

ಕ್ಯಾನಡಿಯನ್ ಖಜಾನೆಯಲ್ಲಿ ಎರಡು ವಾರಗಳ ಕೆಳಗೆ ೨೦ ಕೋಟಿ ಡಾಲರುಗಳು ಕಳವಾದವೆಂತಲೂ, ಕಳ್ಳರು [illegible] ಇಲ್ಲವೆಂತಲೂ ತಿಳಿದು ಬರುತ್ತ.

ಬಲ್ಗೇರಿಯದ ಗೌರ್ನಮೆಂಟಿನವರು ಪ್ರಿನ್ಸ್ ಫರ್ಡಿನಾಂಡ್ ರವರಿಗೆ ವರ್ಷಕ್ಕೆ ೨೦ಯ ಪೌಂಡುಗಳ ವರ್ಷಾಸನ ಕೊಡುಕಂತೆ ಶಾಸನ ಮಾಡಿರುವರು ಕೇಳುತ್ತೇವೆ.

೧೮೯೦ ನೇ ಇಸವಿ ಜುಲೈ ತಿಂಗಳ ತರುವಾಯ ಮದರಾಸ್ ಟೌನ್ ಪೋಲೀಸ್ ಕೋರ್ಟಿನಲ್ಲಿ ದಾಖಲಾಗಿರುವ ನೌಕರಿದಾರರಿಗೆ ಯಾವರು ಸರ್ವೀಸಾಗಿದ್ದರೆ ಡಾಕ್ಟರ್ ಸರ್ಟಿಫಿಕೇಟ್ ಅವಶ್ಯಕವಿಲ್ಲವೆಂದು ಶಿರಸ್ತೆ ಕೊಡಬೇಕೆಂದು ಸ್ಟೇಟ್ ಸೆಕ್ರೆಟರಿಯವರು ಆರ್ಡರ್ ಮಾಡಿದಾರೆ

ಮದರಾಸು ಎಂಬ ಸ್ಥಳದಲ್ಲಿ ಇರುವ ಒಂದು ಊರಿನಲ್ಲಿ ಒಬ್ಬ ಮರಾಟಿಯವನ ಮನೆಗೆ ಯಾವನೋ ಒಬ್ಬ ದುಷ್ಟನು ನುಗ್ಗಿ ಮೂರುಜನ [illegible]ಂದಲನ್ನೂ, ಅವರಲ್ಲಿ ಇಬ್ಬರ ಹೆಂಡತಿಯರನ್ನೂ, ಇಬ್ಬರ ಅಕ್ಕತಂಗಿಯರನ್ನೂ ಕೊಂದು ಪರಾರಿಯಾಗಿದ್ದಾನೆ ಅದರ ಪತ್ತೆ ವಿಷಯದಲ್ಲಿ ಪೋಲೀಸಿನವರು ತರದಾರು ಮಾಡುತ್ತಿದ್ದಾರೆ

ಲಾಹೋರ್ ಪಟ್ಟಣದಲ್ಲಿ ಒಬ್ಬ ಇಂಗ್ಲೀಷ್ ದೊರೆಸಾನಿಯು ದಾರಿಯಲ್ಲಿ ಹೋಗುತ್ತಿರುವಾಗ ಒಬ್ಬಾನೊಬ್ಬ ನೇಟಿವ್ ಚಾಕರನು ಅವಳ ಕೈ ಹಿಡಿದು ಎಳೆದುಕೊಂಡು ಸ್ವಲ್ಪ ದೂರ ಹೋದನೆಂತಲೂ, ಕೆಲವು ನಿಮಿಷಗಳಾದಮೇಲೂ, ಅವಳ ಸಹಾಯಕ್ಕೆ ಜನರು ಬರಲು ಅವನು ಬಿಟ್ಟು ಹೋದನೆಂತಲೂ, ಅವನ ಮೇಲೆ ಚಾರ್ಜು ಮಾಡಿದಳು. ಇದು ಅಲ್ಲಿನ ಕೋರ್ಟಿನಲ್ಲಿ ವಿಚಾರಣೆಯಾಗಿ ಅವನಿಗೆ ೪ ದಿವಸ ಕಠಿಣ ಶಿಕ್ಷೆ ವಿಧಿಸಿದರು ಎಂದು ಒಂದು ಪತ್ರಿಕೆಯು ತಿಳಿಸುತಿದೆ.

ಚಿತ್ತೂರು ಜಿಲ್ಲೆಯಲ್ಲಿ ಕಳೆದ ಜನವರಿ [illegible] ನವೆಂಬರ್ ತಿಂಗಳ ವರೆವಿಗೆ ಸುಮಾರು ೨ ಲಕ್ಷ ದನಗಳು ವ್ಯಾಧಿಯಿಂದ ಸತ್ತುಹೋದವು. ಸದರೀ ಜಿಲ್ಲಾ [illegible] ಬಂದ ಚರ್ಮಗಳ ರಫ್ತಿಯಿಂದ ಗೊತ್ತಾಗುತ್ತಿದೆ. ಕಟೇಪಡೆ ರೋಗ ಒಕ್ಕಲ ರೋಗ [illegible] ಚಿಕಿತ್ಸೆ [illegible] ದನಗಳು ನಷ್ಟವಾದವೆಂದು ಗೊತ್ತಾಗುತ್ತಿದೆ. ಚರ್ಮದ ಚಿಕ್ಕದರ [illegible] ಬಿದ್ದಿರುವ [illegible] ಇರುವಾಗಲೇ ಸಿದ್ಧವಾಗಿ ಎಷ್ಟು ಜೋಕೆ ಬಹುದೋ ಅದನ್ನು ಮಾಡಬೇಕಾಗಿದೆ. ಈಗಿನ ದರಗಳು ಇಷ್ಟು ನಷ್ಟವಾದರೆ ಮುಂದೆ ರೈತರು ಹ್ಯಾಗೆ [illegible] ಬೆಳೆ ಮಾಡ್ಯಾರು

ಉತ್ತರ ಅಮೇರಿಕಾದಲ್ಲಿರುವ ಕ್ಯಾಲಿಫೋರ್ನಿಯಾ ಎಂಬ ಸ್ಥಳದಲ್ಲಿ ಒಬ್ಬಾನೊಬ್ಬ ದೊಡ್ಡ ಮನುಷ್ಯನು ಕೆಲವು ದಿವಸಗಳ ಕೆಳಗೆ ತಾನು ಮದುವೆ ಮಾಡಿಕೊಂಡ ಹೆಂಡತಿಯನ್ನು ಪರಿತ್ಯಾಗ ಮಾಡಿದನು. ಇವನು, ಅವಳು ಬಹು ಸುಂದರಳೆಂದು ತಿಳಿದು ಅವಳು ವೇಷ ಹಾಕಿಕೊಂಡಿದ್ದವನ್ನು ಅರಿಯದೆ ಮದುವೆ ಮಾಡಿಕೊಂಡನು. ಕೆಲವು ದಿವಸಗಳವ ಮೇಲೆ ಅವಳ ನಿಜರೂಪವು ತಿಳಿಯಲು, ಅವಳು ಮೋಸ ಮಾಡಿದಳೆಂದು ಎಲ್ಲರಿಗೂ ತಿಳಿಸಿ ಪರಿತ್ಯಾಗ ಮಾಡಿದನು. ಇವಳಿಗೆ ಹಲ್ಲುಗಳೇ ಇರಲಿಲ್ಲವಾದ್ದರಿಂದ, ಸುಳ್ಳು ಹಲ್ಲುಗಳನ್ನು ಮಡಗಿಕೊಂಡಿದ್ದಳು. ಕಾಲುಗಳು ಸೊಟ್ಟವಾಗಿದ್ದರಿಂದ, ಅದಕ್ಕೆ ಒಂದು ವಿಧವಾದ ಬಟ್ಟೆಯನ್ನು ಸುತ್ತಿ ನಟಿಸುತ್ತಿದ್ದಳು.

ಪ್ರಪಂಚದಲ್ಲಿ ಎಷ್ಟು ವಿಧವಾದ ಭಾಷೆಗಳಿರುವವು, ಅವುಗಳಲ್ಲಿ ವರ್ಣಮಾಲೆಗಳು ಕೂಡ ಬೇರೆ ಬೇರೆಯಾಗಿವೆ. ಹ್ಯಾಗೆಂದರೆ ಆಫ್ರಿಕಾದಲ್ಲಿ ರೂಢವಾಗಿರುವ ಆಬಿಸೀನಿಯಾ ಭಾಷೆಯಲ್ಲಿ ೨೦೨ ಅಕ್ಷರವಾದಿಗಳಿವೆ. ಸ್ಯಾಂಡ್‌ವಿಚ್ ದ್ವೀಪಗಳಲ್ಲಿ ರೂಢಿಯಾಗಿರುವ ಭಾಷೆಗಳಲ್ಲಿ ೧೨ ಅಕ್ಷರಗಳೇ ಇವೆ. ಬರ್ಮಾ ಭಾಷೆಯಲ್ಲಿ ೧೯ ಅಕ್ಷರಗಳೂ, ಇಟಾಲಿಯನ್ ಭಾಷೆಯಲ್ಲಿ ೨೦ ಅಕ್ಷರಗಳೂ, ಬೆಂಗಾಲೀ ಭಾಷೆಯಲ್ಲಿ ೨೧ ಅಕ್ಷರಗಳೂ, ಹೀಬ್ರೂ, ಸಿರಿಯನ್, ಕ್ಯಾಲ್ಡೀ ಮತ್ತು ಸಮಾರಿಟನ್ ಭಾಷೆಗಳಲ್ಲಿ ೨೨ ಅಕ್ಷರಗಳೂ, ಫ್ರೆಂಚಿನಲ್ಲಿ ೨೩, ಲಾಟಿನ್ ಭಾಷೆಯಲ್ಲಿ ೨೫ ಅಕ್ಷರಗಳೂ, ಜರ್ಮನ್, ಡಚ್ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ೨೬ ಅಕ್ಷರಗಳೂ, ಸ್ಪ್ಯಾನಿಷ್ ಮತ್ತು ಸ್ಲೇವೋನಿಕ್ ಭಾಷೆಗಳಲ್ಲಿ ೨೭ ಅಕ್ಷರಗಳೂ, ಅರೇಬಿಯನ್ ಭಾಷೆಯಲ್ಲಿ ೨೮, ಪರ್ಷಿಯನ್ ಮತ್ತು ಕಾಪ್ಟಿಕ್ ಭಾಷೆಗಳಲ್ಲಿ ೩೨ ಅಕ್ಷರಗಳೂ, ಜಾರ್ಜಿಯನ್ ಭಾಷೆಯಲ್ಲಿ ೩೫ ಅಕ್ಷರಗಳೂ, ಅರ್ಮೀನಿಯನ್ ಭಾಷೆಯಲ್ಲಿ ೩೮ ಅಕ್ಷರಗಳೂ, ರಷ್ಯನ್ ಭಾಷೆಯಲ್ಲಿ ೪೧ ಅಕ್ಷರಗಳೂ, ಸಂಸ್ಕೃತ ಮುಂತಾದ ಭಾಷೆಗಳಲ್ಲಿ ೫೦ ಅಕ್ಷರಗಳೂ, ಎಥಿಯೋಪಿಯನ್ ಮತ್ತು ಟಾರ್ಟರಿಯನ್ ಭಾಷೆಗಳಲ್ಲಿ ೨೦೨ ಅಕ್ಷರಗಳೂ ಇವೆಯೆಂದು ತಿಳಿಯಬರುತದೆ

ನೋಟಾಬಾದಿನಲ್ಲಿ ಒಂದು ಅಪಾಯ ಸಂಭವಿಸಿ ನಾಲ್ಕು ಜನರು ಸತ್ತರು. ಬಾವಿ ಉಗಿಯುವನೊಬ್ಬನು ಬಗ್ಗಿ ಹೋಗಿ ನೋವನ್ನು ತಪ್ಪಿಸಿಕೊಂಡನು. ಅಲ್ಲಿನ ಕಲ್ಲಿನೊಳಗೆ ಯಾವನೋ ಒಂದು ಬಾವಿಯನ್ನು ಆಳವಾಗಿ ತೋಡಿಸುತಲಿರುವಾಗ ಬಾವಿಯು ಬಹಳ ಕುಸಿದುಹೋಯಿತು. ಅವನು ಬಿ.ವಿ.ಯಿಲ್ಲಾ ದುಮಿಕೊಂಡಿತು. ಅನಂತರ ಒಳಗೆ ಕೆಲಸ ಮಾಡುತ್ತಿದ್ದ ೫ ಜನರಾ ಅನ್ಯಾಯವಾಗಿ ಸತ್ತುಹೋಗುವಾಗ್ಗೆ, ಒಬ್ಬ ಅವರನ್ನು ಸಂರಕ್ಷಿಸುವದಕ್ಕೆ ಮೇಲಿನಿಂದ ಮುಚ್ಚಿಕೊಂಡಿದ್ದ ಮಣ್ಣನ್ನು ಅಗೆದು ತಳವನ್ನು ಸೇರುವದಕ್ಕೆ ೬ ಘಂಟೆಗಳ ಕಾಲ ಬೇಕಾಯಿತು. ಅಷ್ಟರೊಳಗೆ ನಾಲ್ಕು ಜನಗಳು ಸತ್ತುಹೋಗಿದ್ದರು. ಒಬ್ಬನು ಮಾತ್ರ ಜೀವಸಹಿತ ಇದ್ದನು. ಇವನು ಬಾವಿಯ ಪ್ರ್ಯಾಗದ — ಪಾರ್ಶ್ವದಲ್ಲಿದ್ದ ಮಣ್ಣಿನ ಭಿತ್ತಿ ತಳದ ಒಂದು ಭಾಗದಲ್ಲಿ ಒಂದು ಪೊಟ್ಟರೆಯಾಯಿತು ಆ ಪೊಟ್ಟರೆಯು ಒಂದು ದೊಡ್ಡ ಮನೆಯಷ್ಟು ದೊಡ್ಡದಾಗಿತ್ತು. ಮೇಲಿನಿಂದ ಮಣ್ಣು ಬೀಳುತಲೇ ಇವನೋಯವನು ಆ ಪೊಟ್ಟರೆಯನ್ನು ಹೊಕ್ಕನು ೩ ಘಂಟೆಗಳ ಕಾಲವಾದನಂತರ ಮೇಲಕ್ಕೆ ಬಂದನು ನಾಲ್ಕು ಜನರ ಪ್ರಾಣವೇನೋ ಹೋಯಿತು, ಭೂಮಿಯೊಳಗೆ ಸಿಕ್ಕಿದ ಒಬ್ಬನು ಪ್ರವೇಶದಲ್ಲಿ ಏನು ಇದೆಯೋ ಅದನ್ನು ನೋಡುತಲಿದ್ದನು.

NOTICE.

T. SAMMI'S WONDERFUL MEDICINES

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ವಂತ ಕೈಯಿಂದ ತಯಾರಿಸಿದ ನನ್ನ ಔಷಧಗಳನ್ನು ನೀವು ತಿಳಿದುಕೊಳ್ಳುವದಕ್ಕೆ ಬೇಕಾದ ಸಂಗತಿಯನ್ನು ಸಕಲರಿಗೂ ತಿಳಿಯಪಡಿಸುವಂತೆ ನನ್ನನ್ನು ಪ್ರಾರ್ಥಿಸಿದ್ದರಮೇಲೆ ಅವರ ರೋಗಕ್ಕೆ ತಕ್ಕ ಹಾಗೆ ನೋಡಿಕೊಂಡು ಸಂಬಳದಿಂದ ತಮ್ಮ ಸಮಸ್ತ ಜನರಿಗೂ ಇದರಿಂದ ತಿಳಿಯಬರುವ ಸದರೀ ಔಷಧಗಳು ಇಷ್ಟದೆ ಗುಣವನ್ನು ಯಾವಮಾಡುವವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿಂದೂ ತೈಲವು.—ಸಂಧಿವಾತ ನೋವು, ಎದೆನೋವು, ಶೀತಜ್ವರವಾಯು, ಪಕ್ಷವಾತ, ತಲೆನೋವು, ಮೈಲ ನೋವು, ಮೇಳ ಪಡೆಗಳು, ಅತಿಸಾರ, ಕುರುಗಳು. ಗಾಯಗಳು, ಗಡ್ಡೆ ಇವುಗಳನ್ನು ನಿವೃತ್ತಿ ಮಾಡುವದು ಕ್ರಯ ೦ ೪—೦ ೦ ೮—೦.

ಹಿಂದೂ ರಸಾಯನ.—ಮಾಂಸಖಂಡ, ಶೀಘ್ರಸ್ಖಲನ, ರಕ್ತಪಿತ್ತ, ಮೂತ್ರಸಂಬಂಧ, ಅಜೀರ್ಣ, ನರದೌರ್ಬಲ್ಯ, ಶೀತ ಕೆಮ್ಮು, ಕ್ಷಯರೋಗ, ಗುಲ್ಮ, ವ್ರಣ, ಧಾತುನಷ್ಟ ಮುಂತಾದ ಅನೇಕ ರೋಗಗಳನ್ನು ನಿವಾರಣೆ ಮಾಡುವ ಶಕ್ತಿ ಇದಕ್ಕೆ ಉಂಟು. ಕ್ರಯ ೦—೮ ೦ ೦—೧೨—೦

ಜ್ವರ ನಿವೃತ್ತಿ.—ಚಳಿಜ್ವರ, ತಾಪಜ್ವರ, ಸನ್ನಿಪಾತಜ್ವರ, ವಿಷಮಜ್ವರ, ಅಜೀರ್ಣಜ್ವರ, ಕಾಮಾಲೆ ರೋಗಗಳು, ಮುಂತಾದ ಸಮಸ್ತ ಜ್ವರಗಳಿಗೂ ಸಿದ್ಧೌಷಧ. ಕ್ರಯ ೦—೪—೦ ೦—೧೨—೦

ಮಕ್ಕಳಿಗೆ ಔಷಧ.—ಕೆಮ್ಮು, ಜ್ವರ, ಅತಿಸಾರ, ವಾಂತಿ, ಹೊಟ್ಟೆನೋವು, ಹಲ್ಲು ಬರುವಾಗಿನ ನೋವು ಮುಂತಾದ ರೋಗಗಳನ್ನು ನಿವಾರಿಸುವದು ಕ್ರಯ ೦ ೪ ೦

ಕೆಮ್ಮಿಗೆ ಔಷಧ.—ದಮ್ಮು, ಕ್ಷಯರೋಗ, ಗಂಟಲುನೋವು, ಎದೆನೋವು, ಉಬ್ಬಸ, ಮುಂತಾದವುಗಳಿಗೆ ಸಿದ್ಧೌಷಧ ಕ್ರಯ ೦ ೬ ೦

ಸ್ತ್ರೀಯರ ಔಷಧ.—ಋತುದೋಷಗಳಿಂದ ಕಾಣಿಸುವ ಸ್ತ್ರೀಯರ ಸಕಲ ರೋಗಗಳನ್ನು ನಿವಾರಿಸುವದು. ಕ್ರಯ ೦—೮—೦

ನೇತ್ರಾಂಜನ.—ಇದು, ದೃಷ್ಟಿ ಮಂದವಾಗಿರುವುದು, ಕಣ್ಣು ನೋವು, ಕಣ್ಣು ಕೆಂಪಗಾಗಿರುವುದು, ಪೊರೆ ಮುಂತಾದ ನೇತ್ರ ರೋಗಗಳನ್ನು ನಿವಾರಿಸುವದು ಕ್ರಯ ೦—೨—೦

ಜೀರ್ಣಕ್ಕೆ ತೈಲ.—ತಲೆಯಲ್ಲಿ ಗಾಯಗಳು ಬೀಳುವದು, ಕೂದಲು ಉದುರುವದು, ದುರ್ಗಂಧವಾಗಿರುವದು ಇವು ಮುಂತಾದ ರೋಗಗಳನ್ನು ನಿವಾರಿಸುವದು ಕ್ರಯ ೦—೨—೦.

ನವೀನ ಕೂದಲುಗಳನ್ನು ಬೆಳೆಸುವ ತೈಲವು.—ಇದು ಬೋಳು ತಲೆಯಲ್ಲಿ ಕೂದಲುಗಳನ್ನು ಹುಟ್ಟಿಸುವದು. ಕೂದಲುಗಳು ಉದ್ದವಾಗಿ ಬೆಳೆಯುವದು ಕ್ರಯ ೦—೪—

ಹಲ್ಲುಗಳಿಗೆ ಸುಗಂಧವಾದ ಪುಡಿ.—ಇದು ಹಲ್ಲುಗಳನ್ನು ಗಟ್ಟಿಯಾಗಿ ಮಾಡುವದು, ಹಲ್ಲಿನ ನೋವು, ಹುಳುಕು, ಬಾಯಿ ದುರ್ವಾಸನೆ ಇವುಗಳನ್ನು ಹೋಗಲಾಡಿಸುವದು ಕ್ರಯ ೦—೨—೦.

ಕುಷ್ಠತೈಲ.—ಇದು, ತುರಿ, ಕಜ್ಜಿ, ಹುಣ್ಣು, ಗಜಕರ್ಣ ಮುಂತಾದ ಚರ್ಮ ರೋಗಗಳನ್ನು ನಿವಾರಿಸುವ ತೈಲ ಕ್ರಯ ೦—೪—೦

ದಂತಮಂಜನ.—ಇದು ಹಲ್ಲುಗಳನ್ನು ಶುಭ್ರಮಾಡುವದಲ್ಲದೆ, ವಸಡು ಹಲ್ಲುಗಳನ್ನು ಗಟ್ಟಿಮಾಡಿ ರಕ್ತಸ್ರಾವವನ್ನು ನಿಲ್ಲಿಸುವುದು. ಕ್ರಯ ೦—೪—೦.

ಪಿತ್ತನಾಶಕಗಳು.—ಪಿತ್ತವನ್ನೂ, ಅಜೀರ್ಣವನ್ನೂ ಹೋಗಲಾಡಿಸಿ ಹಸಿವನ್ನು ಹುಟ್ಟಿಸುವ ಮಾತ್ರೆಗಳು ಕ್ರಯ ೦—೪—೦

ಮೇಲೆ ಹೇಳಲ್ಪಟ್ಟ ಔಷಧಗಳಲ್ಲದೆ ಪ್ರಸಿದ್ಧವಾದ ಮರುಂದುಗಳು, ಲೇಹ್ಯಗಳು, ಚೂರ್ಣಗಳು ಮೊದಲಾದವುಗಳಿಗೆ ಸಿದ್ಧಗಳು, ಸಕಲವಿಧ ಇಂಗ್ಲೀಷ್ ಔಷಧಗಳೂ, ಅಪ್ಪಲ್ ಬರುವ ಔಷಧಗಳು ಸಹ ಕ್ರಮವಾಗಿ ದೊರೆಯುವವು

☞ ಮೇಲೆ ಕಂಡ ಔಷಧಗಳು ಬೇಕಾದವರು ಬೆಳ್ಳಾರಿ ಕೆಸಬೆಗೆ ಸೇರಿದ ಪತ್ರಿಕಾಲಯದ ಸ್ಥಳದ ಮುಂಗಡ ಹಣದ ಯೋಗದ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು. ನಮ್ಮ ಔಷಧಗಳು ದೊಡ್ಡ ಡಾಕ್ಟರುಗಳಿಂದ, ಮದರಾಸ್ ಬೆಂಗಳೂರು ಮುಂತಾದ ಸ್ಥಳಗಳಲ್ಲಿ ಪ್ರಸಿದ್ಧರಾದವರಿಂದ [illegible] ಉತ್ತಮವೆಂದು ಸರ್ಟಿಫಿಕೇಟ್ ಹೊಂದಿರುತ್ತವೆ. ಮದರಾಸ್ [illegible] ಬೆಂಗಳೂರು [illegible] ಅಂಗಡಿಗಳಲ್ಲಿಯೂ ದೊರೆಯುವವು. ಇನ್ನೇನು ಬೇಕಾದರೂ ತರಿಸಿಕೊಳ್ಳುವ ವಿವರಕ್ಕೆ ಕೆಳಗೆ ಬರೆದಿರುವ ವಿಳಾಸಕ್ಕೆ ಬರೆಯಬೇಕು ಕಳುಹಿಸಲಾಗುವುದು.

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು.

ಮದರಾಸ್ ಪ್ರೆಸಿಡೆನ್ಸಿ ಚಿತ್ತೂರು ಡಿಸ್ಟ್ರಿಕ್ಟ್ ಪುಂಗನೂರಲ್ಲಿ ಆರ್. ಬಿ. ರಂಗರಾಯರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ.

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ.	ಕ್ರಯ ಪೋಸ್ಟೇಜ್ ಸಹ ರೂ. ಅ. ಪೈ.
1	ಕೌಮುದೀವಿಕಾಸ (ಮೊದಲಿನಿಂದ ಕಂಠಪಾಠಗಳು ರಾಮಕೃಷ್ಣದ ವರೆಗು ಸಂಸ್ಕೃತ ವ್ಯಾಕರಣ ಸಿದ್ಧಾಂತಕೌಮುದಿಗೆ ಸುಲಭ ಅರ್ಥ ಗ್ರಂಥಾಂತರ.	0 4 6
2	ಪಂಚತಂತ್ರನೀತಿ (ಚಿನ್ನಯ ಸೂರಿ ಕೃತ ಸಿದ್ಧ ಗ್ರಂಥ)	0 2 6
3	ರತ್ನಪರೀಕ್ಷೆ (ಪ್ರತಿಪದಾರ್ಥ ಟೀಕಾ ಸಮೇತ ತೆಲುಗು ವ್ಯಾಖ್ಯಾನ)	0 2 6
4	ಉಪಾಧ್ಯಾಯ ಚಮತ್ಕಾರ ಸಂಗ್ರಹ (ಜಾಣವಿದ್ಯ)	0 2 6
	ಸ್ವರಶಾಸ್ತ್ರ (ಅಂಗಶಾಸ್ತ್ರಸಹಿತ)	0 2 0
	ರಾಮಾಯಣ (ಸಂಕ್ಷೇಪ [illegible])	0 1 6
	ಶ್ರೀಮನ್ ಸಂಗೀತ ಗ್ರಂಥಗಳು	
7	[illegible]	0 1 0
8	[illegible]	0 1 0
	ಶ್ರೀವೈಷ್ಣವರಿಗೆ ಮುಖ್ಯವಾದ ಬೆಲೆಯ ಗ್ರಂಥಗಳು	
9	[illegible]	1 10 0
10	[illegible]	1 1 0
11	[illegible]	0 15 0
12	[illegible]	0 14 0
13	[illegible]	0 3 6
14	[illegible]	0 4 6
15	[illegible]	0 1 6
16	[illegible]	0 1 0
17	[illegible]	0 1 6
18	[illegible]	0 1 6
19	[illegible]	0 1 0
	[illegible]	
20	[illegible]	1 14 0
21	[illegible]	0 8 6
22	[illegible]	0 3 6
23	[illegible]	0 3 0
24	[illegible]	0 2 0
25	[illegible]	0 1 6
26	[illegible]	0 1 6

ಈ ಪುಸ್ತಕಗಳು ಬೇಕಾದವರು ಈ ಕೆಳಗೆ ಕ್ರಯದ ಹಣ ಮುಂಗಡವಾಗಿ ಕಳುಹಿಸಬೇಕು. ಒಂದೇ ಸಾರಿ [illegible] ಪುಸ್ತಕಗಳು ತರಿಸಿಕೊಳ್ಳುವವರಿಗೆ ಒಂದು ಪುಸ್ತಕ ಬಹುಮಾನ ಕೊಡಲ್ಪಡುವದು.

ಆರ್. ಬಿ. ರಂಗರಾವ್,
ಪುಂಗನೂರು.

☞ Bangalore.—Printed and published at the Karnataka Press, No. 50, Hospital Road Pettah, 1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XIX | BANGALORE—MONDAY, FEBRUARY 8, 1892 [No 6

ಸಂಪುಟ ೧೯ | ಬೆಂಗಳೂರು —ಸನ್ ೧೮೯೨ನೇ ಇಸವಿ ಫೆಬ್ರುವರಿ ೮ ನೇ ತಾರೀಖು ಸೋಮವಾರ. [ಸಂಚಿಕೆ ೬.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು.

[illegible]

ADVERTISEMENTS

NOW OUT

VAIDYASAR SANGRAHA

[illegible]

HINDU MEDICINE

[illegible]

ನೋಟೀಸು.

ಬೆಂಗಳೂರು ಕರ್ನಾಟಕ ಪ್ರೆಸ್

[illegible]

ಡಿ. ಬನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible]

೨. [illegible]

೩. [illegible]

[illegible]

ನೋಟೀಸ್.

DONGRAY'S SYRUP

೧. ಡೋಂಗರೆಯವರ "[illegible]." ಇದು ಕ್ಷಯರೋಗ ಮತ್ತು [illegible] ಗುಣಕಾರಿಯಾಗಿದೆ. [illegible]

[illegible]

೨. [illegible]

ನೋಟೀಸ್.

[illegible]

THE MONEY MARKET.

ಮದರಾಸ್, ತಾರೀಖ್ ೬ ನೇ ಫೆಬ್ರುವರಿ ೧೮೯೨.

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂ॥೧ಕ್ಕೆ 1s. 4 5/32 d.

ಶೇಕಡ 4ರೂ. ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 104-14-0 ಇಂದ 105-4-0 ರವರೆಗೆ.

ಬೆಂಗಳೂರು ಸ್ಪಿನ್ನಿಂಗ್ ಷೇರುಗಳು (500) ರೂಪಾಯಿಗಳ ಬಾಬತು 895 ಲಾಗಾಯ್ತು 900.

ಸವರಿನ್‌ಗಳು, 14-14-0 ಇಂದ 15-0-0 ವರೆಗೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 8, 1892.

೧೮೯೨ನೇ ಇಸವಿ ಫೆಬ್ರುವರಿ ತಾ॥ ೮ ನೇ ಸೋಮವಾರ.

PRICKLY-PEAR AS FODDER.

ಒಂದು ದೇಶದ ಸುಭಿಕ್ಷತೆಗೆ ತೃಣಜಲ ಕಾಷ್ಠ ಪದಾರ್ಥ ಬಾಹುಳ್ಯವೂ, ಜನಾರೋಗ್ಯವೂ ಮುಖ್ಯಾಂಗಗಳಾಗಿರುತ್ತವೆ. ಅಂಗ ಭೂತಗಳಾದವುಗಳಲ್ಲಿ ಯಾವದಕ್ಕೇನು ನ್ಯೂನತೆ ಯುಂಟಾದರೂ ಅಂಗಿಗೆ ಹಾನಿ ಸಂಭವಿಸುವದರಲ್ಲೇನೂ ಸಂದೇಹವಿಲ್ಲವು. ಸಾಮಾನ್ಯವಾಗಿ ಇಂಡ್ಯಾದೇಶದಲ್ಲಿ, ತತ್ರಾಪಿ ಈ ಮೈಸೂರು ರಾಜ್ಯದಲ್ಲಿ ೧೦ ವರುಷಗಳಿಗೊಂದಾವರ್ತಿ ದುರ್ಭಿಕ್ಷವು ತಪ್ಪದೆ ಪ್ರಾಪ್ತವಾಗುತಲಿದೆ. ಸೂರ್ಯ ಚಂದ್ರರ ಗತಿಯು ಭಿನ್ನಿಸದಾಗ್ಯೂ ಪ್ರಾಣಿ ಸೃಷ್ಟಿಯಲ್ಲಿ ವ್ಯತ್ಯಾಸ ಉಂಟಾಗುವದಿಲ್ಲವು ಆದುದರಿಂದ ಇದು ಪ್ರಾಕೃತಿಕ ಕ್ರಿಯಾನಿಗರವೆಂದೇ ವ್ಯವಹರಿಸಬೇಕಾಗಿರುತಿದೆ. ಆಗಿಂದಾಗ್ಯೆ ದುರ್ಭಿಕ್ಷವೂ ರೋಗಾದ್ಯುಪದ್ರವಗಳೂ ಪ್ರಾಣನಷ್ಟವೂ ಉಂಟಾಗಲಿಕ್ಕೆ ದೈವಿಕ ರಾಜಕೀಯಗಳಲ್ಲದೆ ಪ್ರಜಾ ಮೂಲಕವಾದ ಕಾರಣಗಳು ಸಹ ಬಹಳವಾಗಿರುತಿವೆ. ದೈವಾನುಗ್ರಹವು ಎಲ್ಲಾದರು ಕಡಮೆಯಾದಲ್ಲಿ ಸಾಧ್ಯವಾದಮಟ್ಟಿಗೆ ಅಲ್ಲಿ ಜನರಿಗೆ ಸಹಾಯವಮಾಡಿ ರಕ್ಷಿಸಬೇಕಾದುದು ಅರಸರ ಕಾರ್ಯವಾಗಿಯೂ, ಅವರೊಂದುವೇಳೆ ಉದಾಸೀನರಾಗಿದ್ದು ತಮ್ಮ ಕರ್ತವ್ಯವು ಮಾಡದೆ ಉಪೇಕ್ಷಿಸುವ ಪಕ್ಷಕ್ಕೆ ಜನಗಳು ತಮ್ಮ ರಕ್ಷಣೆಯ ವಿಷಯದಲ್ಲಿ ಬೇಕಾದ ಸೌಕರ್ಯಗಳಂ ಕಲ್ಪಿಸಿಕೊಂಡು ಸುಖ ಪಡಬೇಕಾದುದು ಅವರ ಕರ್ತವ್ಯವಾಗಿಯೂ ಇರುತಿದೆ. ರಾಜ್ಯವಂ ಪಾಲಿಸತಕ್ಕ ಅರಸನೆಷ್ಟು ಸಮರ್ಥನಾಗಿದ್ದಾಗ್ಯೂ ಅವನು ತನ್ನ ಕೆಲಸಗಳ ದೆಸೆಯಿಂದ ಜಾಗರೂಕರಿಗೆ ಹಿತಕರನಾಗುತ್ತಾನೆಯೋ ಹೊರ್ತು ಯಾವ ಯಾವ ವಿಷಯವು ಯಾವರೀತಿಯಿಂದ ತಮಗೆ ಬಾಧಕವಾಗಿ ಕಂಡು ಬರುತಿದೆಯೋ ಅದಂ ತಿಳಿದು ಪರಿಹರಿಸಿಕೊಳ್ಳಲಾರದ ಮಂದರಿಗೂ ತಾಮಸರಿಗೂ ಅವನಿಂದರೇನೂ ಪ್ರಯೋಜನ ಪ್ರಂಟಾಗಲಾರದು. ಯೋಗ್ಯಗಳಾದ ಪ್ರಯತ್ನಗಳಿಗೆ ಭಗವದನುಗ್ರಹವೂ, ರಾಜ ಸಹಾಯವೂ, ಉಂಟಾಗದೆ ಹೋಗಲಾರದು. ಆದರೆ ಅವಂ ತೊರೆದು ಕೇವಲ ತಾದೃಶ ಅನುಗ್ರಹವನ್ನೇ ನಿರೀಕ್ಷಿಸುತ ಲಿರುವವು ನಮಗೆಷ್ಟುಮಾತ್ರವೂ ಧರ್ಮವಲ್ಲವು. ಮಸಲಾ ಈಗ ಪದಾರ್ಥ ದೌರ್ಲಭ್ಯದಿಂದ ಕ್ರಯವು ಹೆಚ್ಚಿ ಜನಗಳಿಗೆ ಜೀವನವು ಪ್ರಯಾಸಸಾಧ್ಯವಾಗಿ ಏರ್ಪಟ್ಟದೆಯೇ ಹೊರ್ತು ಜನ ನಷ್ಟವನ್ನುಂಟುಮಾಡತಕ್ಕದ್ದಾಗಿ ಕಾಣಿಸಲಿಲ್ಲವು. ಕೂಲಿ ಮಾಡಿ ಧನವನ್ನಾರ್ಜಿಸಿ ಪ್ರಾಣಧಾರಣೆಗೆ ಬೇಕಾದಷ್ಟುಮಟ್ಟಿಗೆ ಆಹಾರ ಪದಾರ್ಥಗಳಂ ಹ್ಯಾಗಾದರು ಸಂಪಾದಿಸಿಕೊಳ್ಳಬಹುದು. ಆದುದರಿಂದ ಈಕ್ಷಾಮವು ಜನಗಳಿಗಿಂತಲೂ ದನಗಳಿಗೆ ತೃಣಜಲಾಭಾವಗಳಿಂದ ದುಸ್ಸಹಗಳಾಗಿ ಪರಿಣಮಿಸಿ ಅನೇಕ ಪಶುಗಳು ಪ್ರಾಣಗಳಂ ಬಿಡುತಲಿವೆ ಅವಂ ಕಾಪಾಡಲಾರದ ಸೋಮಾರಿಗಳು ಕಸಾಯಿ ಅಂಗಡಿಯವರಿಗೆ ಮಾರಿ ಗೋಹತ್ತಿ ದೋಷವಂ ಏವಂ ಬಲ್ಯೇಣ ಸಂಪಾದಿಸಿಕೊಳ್ಳುತಲಿದಾರೆ. ದನಗಳು ಮೇವಿಲ್ಲದೆ ಸಾಯುತಲಿರುವದರಿಂದ ಅದಕ್ಕೆ ತಕ್ಕ ಏರ್ಪಾಡಂ ಮಾಡಬೇಕೆಂಬದಾಗಿ ದಿವಾನರವರನ್ನು ಅವರ ಸಂಚಾರ ಕಾಲದೊಳೆಲ್ಲರೂ ಕೇಳದಿರಲಿಲ್ಲವು. ಅವರು ತಮಗೆ ಸಾಧ್ಯವಾದಷ್ಟು ಜವಾಬ್ ಹೇಳಿ ಮಿಕ್ಕ ಪ್ರದೇಶಗಳಲ್ಲಿ ಒಳ್ಳೇದೆಂತಲೂ, ಆಲೋಚಿಸುವೆವೆಂತಲೂ, ನೋಡುವಣವೆಂತಲೂ ಜವಾಬ್ ಹೇಳಿ ಹೊರಟು ಬಂದರು. ಕೂಲಿ ದಿನ್ನದೆ ಶ್ರಮ ಪಡತಕ್ಕವರಿಗೆ ಜೀವನಾಧಾರವಾಗಿ ರಿಲೀಫ್ ಕಾಮಗಾರಿಗಳಂ ಮಾಡಿಸುವಂತೆ ಹುಕುಂ ಕೊಡಬಹುದು. ಕುಡ್ಯಾಂಗ ನೀರು ದೊರೆಯದ ಪ್ರದೇಶಗಳಲ್ಲಿ ಭಾವಿಗಳನ್ನು ತೆಗೆಯುವಂತೆ ಏರ್ಪಾಡು ಮಾಡಬಹುದು. ದ್ರವ್ಯೋಪಪತ್ತಿ ಯಿಲ್ಲದವರಿಗೆ ಸಾಲವಾಗಿ ಅಡ್ವಾನ್ಸ್ ಕೊಡಿಸಿ ಬಳಿಕ ಅವರಿಂದ ವಸೂಲ್ಮಾಡಿಕೊಳ್ಳಬಹುದು. ಇವುಗಳು ವಿನಾ ಅವರಿನ್ನೇನು ಮಾಡಬಹುದು? ಇನ್ನೇನು ಮಾಡಲಿಕ್ಕೆ ಸಾಧ್ಯವಾಗುವುದು? ಪ್ರಾಯಶಃ ಇವುಗಳಿನ್ನೆಲ್ಲವು ಬಗೆಗಿಸುವದಕ್ಕೆ ತಕ್ಕ ಏರ್ಪಾಡುಗಳಂ ಮಾಡಿ ಹುಕುಂ ಕೊಟ್ಟಿರುವದಲ್ಲವೆ ಅವುಗೆ ತೋರಬರುವದಿನ್ನೇನಾದರೂ ಇದ್ದು ಅದು ಶ್ಲಾಘ್ಯವಾಗಿಯೂ ಸಾಧ್ಯವಾಗಿಯೂ ಇದ್ದರೆ ಅದನ್ನು ಮಾಡುವ ಆಲೋಚನೆಯೊಡನೆ ಅವರು ಈಚೆಗೆ ಮದರಾಸಿಗೆ ದಯಮಾಡಿದ್ದ ಕಾಲದಲ್ಲಿ ಅಲ್ಲಿನ ರೆವಿನ್ಯೂಬೋರ್ಡ್ ಆಫಿಸಿಗೆ ಹೋಗಿ, ಮೆ॥ ರಾಜರತ್ನಂ ಮೊದಲ್ಯಾರಿಂದ ಕ್ಷಾಮವಿಷಯಕವಾದ ಏರ್ಪಾಡುಗಳನ್ನೆಲ್ಲ ತಿಳಿದುಕೊಂಡು ಅದಕ್ಕೆ ಸಂಬಂಧಿಸಿದ ಕಾಗದ ಪತ್ರಗಳಂ ತಮಗೆ ಕಳುಹಿಸಿಕೊಡಬೇಕೆಂದು ಹೇಳಬಂದಿರುವಂತೆ ಕೇಳುತ್ತೇವೆ. ಇದರಿಂದ ಗವರ್ನಮೆಂಟಿನವರು ಸಾಧ್ಯವಾದ ಮಟ್ಟಿಗೆ ಪ್ರಾಣರಕ್ಷಣೆಯಲ್ಲಿ ಪ್ರಯತ್ನಗಳಾಗಿರುವಂತೆ ಸ್ಪಷ್ಟವಾಗುತಿದೆ. ಪ್ರಜೆಗಳು ಆತ್ಮರಕ್ಷಣೆಗಿಂತಲೂ, ಪಶುಗಳು ಜಂತುಗಳ ರಕ್ಷಣೆಯ ವಿಷಯದಲ್ಲಿ ಬಹಳ ಶ್ರಮವಂ ವಹಿಸಬೇಕಾದುದು ಆವಶ್ಯಕವಾಗಿರುವಲ್ಲಿ ಆ ವಿಷಯದೊಳು ಸುಲಭಸಾಧ್ಯಗಳಾದ ಏರ್ಪಾಡುಗಳನ್ನೆಲ್ಲ ಮಾಡದೆ ಉಪೇಕ್ಷಿಸಿ ದನಗಳನ್ನು ಆಹಾರವಿಲ್ಲದ್ದೆ ಸಾಯುವಂತೆ ಮಾಡಿ ಗವರ್ನಮೆಂಟಿನವರ ಮೇಲೆ ಬೀಳುವದು ಸ್ವಲ್ಪವೂ ಯೋಗ್ಯವಾಗಿ ಕಾಣಿಸಲಿಲ್ಲವು. ಜನ್ಮಯನ್ನಿಟ್ಟುಕೊಂಡು ತುಪ್ಪಕ್ಕೆ ಪೇಚಾಡುವಂತೆ ಈ ದೇಶದಲ್ಲಿ ದನಗಳ ಆಹಾರಕ್ಕೆ ಯೋಗ್ಯವಾದ ಪದಾರ್ಥವು ಹೇರಳವಾಗಿ ದೊರೆಯುವಾಗ್ಯೂ ಅದಂ ಕೆಲಬರಿಸಿ ಕ್ರಮವಾಗಿ ಉಪಯೋಗಿಸಿಕೊಳ್ಳಲಾರದೆ ಶ್ರಮಪಡುತ್ತಾರೆ. ಸ್ವಲ್ಪಶ್ರಮಪಟ್ಟರೆ ದನಗಳಿಗೆ ಆಹಾರವಂ ಸುಲಭವಾಗಿ ಸಂಪಾದಿಸಿಕೊಂಡು ಅವಂ ಕಾಪಾಡಬಹುದೇನೆಂದರೆ.— ಈ ದೇಶದ ಪ್ರತಿ ಅನೇಕ ಕಡೆಗಳಲ್ಲಿ ಚೊಂತೆಕಳ್ಳಿ ಯಾ ಪಾಪಾಸ್‌ಕಳ್ಳಿ ಎಂಬದು ಬಹಳವಾಗಿ ದೊರೆಯುತಿದೆ. ಅದು ಪಕ್ವಮಾಡಿ ದನಗಳಿಗೆ ಹಾಕಿದರೆ ಅವು ಪುಷ್ಟಿಯಾಗಿಯೂ ದೃಢವಾಗಿಯೂ ಇರುವವು. ಬಳ್ಳಾರಿಯಲ್ಲಿ ಪ್ರಸಿದ್ಧರಾಗಿಯೂ, ಕೀರ್ತಿ ಕಾಮರಾಗಿಯೂ, ಪ್ರಜಾನುರಾಗವುಳ್ಳವರಾಗಿಯೂ, ಧಾರ್ಮಿಕರಾಗಿಯೂ ಇರುವ ರಾಯ ಬಹದೂರ್ ಏ. ಸಭಾಪತಿ ಮೊದಲಿಯಾರ್‌ರವರು ಗತ ಧಾತು ಈಶ್ವರ ಸಂವತ್ಸರಗಳ ಕ್ಷಾಮಕಾಲದಲ್ಲಿ ಪಶುಗಳು ಮೇವಿಲ್ಲವೆ ಕೃಶಿಸಿ ನಷ್ಟವಾಗುತಲಿದ್ದದಂ ನೋಡಿ ಬಹಳ ಅನುತಪಿಸುತ ಕಡೆಗೆ ಅದಕ್ಕೆ ಪರಿಹಾರಕವಾಗಿ ಮೇಲೆ ಕಂಡ ಚೊಂತೆಕಳ್ಳಿಯನ್ನು ದುಲ್ಲಿಗೆಬದಲಾಗಿ ಉಪಯೋಗಿಸಿ ನೋಡಬೇಕೆಂಬ ಭಾವ ವುಂಟಾಗಿ ಅದಂ ಪರೀಕ್ಷಿಸಲೆತ್ನಿಸಿದರು. ಮೊದಲು ಅದನ್ನು ತಮ್ಮ ದನಗಳಿಗೆ ಹಾಕಿ ಅವುಗಳ ಸ್ಥಿತಿಯನ್ನ ಜವಾಬು ಷೀ ಮಾಡಿ ತರುವಾಯ ಪಶುರೋಗ ಚಿಕಿತ್ಸಕರಿಂದ ಪರಿಶೋಧನೆ ಮಾಡಿಸಿ, ಅದು ಉತ್ತಮ ಆಹಾರವೆಂದು ಡಾಕ್ಟರ್‌ಗಳು ಏಕಕಂಠ್ಯದಿಂ ದೃಢವಾಗಿ ಹೇಳಿದ ತರುವಾಯ ಅದನ್ನು ಉಪಯೋಗಿಸಿ ನೋಡಬೇಕೆಂದು ಜನರಂ ಪ್ರೇರಿಸಿ, ಪರೀಕ್ಷಿಸುವಂತೆ ಡಿಸ್ಟ್ರಿಕ್ಟ್ ಕಲೆಕ್ಟರ್‌ಗಳಿಗೆ ಹುಕುಂ ಕೊಡಬೇಕೆಂದು ಮದರಾಸ್ ರೆವಿನ್ಯೂಬೋರ್ಡಿಗೆ ಮೆ॥ ರಾ॥ ಸಭಾಪತಿ ಮೊದಲಿಯಾರ್‌ರವರು ಬರೆದಿದ್ದರು. ಅದರಂತೆ ಚೆಂಗಲ್ಪಟ್ಟು ವಗೈರೆ ಕೆಲವು ಡಿಸ್ಟ್ರಿಕ್ಟ್ ಕಲೆಕ್ಟರ್‌ಗಳು ಅಜಮಾಯಿಷೀ ಮಾಡಿ ಇದು ದನಗಳಿಗೆ ಶ್ಲಾಘ್ಯವಾದದ್ದಾಗಿ ರುತಿದೆಂದು ಅಭಿಪ್ರಾಯ ಪಟ್ಟು ಅದಂ ಬೋರ್ಡಿಗೆ ಬರೆದರು. ಈ ದೇಶದಲ್ಲಿ ಕೂಡ ಕ್ಲಾರ್ಕಿನಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷ್ನರರು ದನಗಳಿಗೆ ಹಾಕಿಸಿ ತೃಪ್ತಿಕರವಾದದೆಂದು ತಾತ್ಪರ್ಯಪಟ್ಟಿರುತ್ತಾರೆ ಮೆ॥ ಸಭಾಪತಿ ಮುದಲಿಯಾರ್‌ರವರು ಪ್ರಕಟಿಸಿರುವ ಪ್ರಸಿದ್ಧ ಪತ್ರಿಕೆಯಿಂದ ಸದರೀ ನಾಗದಾಳಿಯನ್ನು ತಯಾರ್ಮಾಡಿ ದನಗಳಿಗುಪಯೋಗಿಸುವ ಕ್ರಮವು ಸ್ಪಷ್ಟವಾಗಿ ವ್ಯಕ್ತವಾಗುತಿದೆ. ಹ್ಯಾಗಂದರೆ — ಇದಕ್ಕಾಗಿ ರಾವ್ ಬಹದ್ದೂರ್ ಮೆ॥ ಎ. ಸಭಾಪತಿ ಮೊದಲಿಯಾರು) ಒಂದು ಇಕ್ಕಳವನ್ನು ಚಾಕನ್ನು ಮತ್ತು ಚಿಮುಟೆಯನ್ನೂ ಮಾಡಿಸಿ ಇದಾರೆ. ಮುಳ್ಳುಗಳ್ಳಿಯ ಯಲೆಯನ್ನು ಇಕ್ಕಳದಿಂದ ಹಿಡಿದುಕೊಂಡು ಅದರ ಮೇಲಿರುವ ಮುಳ್ಳುಗಳನ್ನು ಚಿಮುಟದಿಂದ ಕಿತ್ತುಹಾಕಬೇಕು. ಯಲೆಗಳ ಮೇಲಿರುವ ಮುಳ್ಳುಗಳನ್ನೆಲ್ಲ ಈ ಮೇರಿಗೆ ತೆಗದು ಹಾಕಿದ ನಂತರ ಯಲೆಗಳನ್ನು ನೀರಿನಲ್ಲಿ ಹಾಕಿ ತೊಳೆದು ಯಲೆಯ ಜೆಗಟಿಗೆ ಮುಳ್ಳೇನಾದರೂ ಅಂಟಿಕೊಂಡಿದ್ದರೆ ಅಂತ ಮುಳ್ಳು ಮತ್ತು ಯಲೆಯ ಮೇಲಿರುವ ಮಣ್ಣು ಸಹ ಹೋಗುವಹಾಗೆ ಮಾಡಬೇಕು ಅನಂತರ ಯಲೆಗಳನ್ನು ಒಂದು ಚವರ ಅಂಗುಲದಳತೆಯ ಚೌ ತುಂಡುಗಳಾಗುವ ಹಾಗೆ ಚಾಕಿನಿಂದ ಕುಯ್ಯಬೇಕು

ಈ ತುಂಡುಗಳನ್ನು ದನಗಳಿಗೆ ರುಚಿ ಹತ್ತುವ ಹಾಗೆ ಮಾಡುವದಕ್ಕೋಸ್ಕರ ಹುರಳಿಯ ಹಿಟ್ಟಿಗಾಗಲಿ ಅಥವಾ ಕಣ್ಣೆ, ತೊಗರಿ, ಹೆಸರು, ಅವರೆ ಮುಂತಾದ ಕಾಳಿನ ಹಿಟ್ಟಿಗಾಗಲಿ ಸ್ವಲ್ಪ ಉಪ್ಪನ್ನು ಕಲಿಸಿ ಅಂತಾ ಹಿಟ್ಟನ್ನು ಮೇಲೆ ಹೇಳಿದ ಮುಳ್ಳುಗಳ್ಳಿಯ ಯಲೆಯ ತುಂಡುಗಳ ಮೇಲೆ ಪ್ರವರಿಸಬೇಕು. ಹೀಗೆ ಮಾಡಿದ ತುಂಡುಗಳನ್ನು ದನಗಳು ಸ್ವೇಚ್ಛೆಯಿಂದ ತಿನ್ನದೆ ಹೋದ ಪಕ್ಷಕ್ಕೆ ಕೆಲವು ತುಂಡುಗಳನ್ನು ಅವುಗಳ ಬಾಯಿಯಲ್ಲಿ ಇಟ್ಟು ಅವುಗಳು ಅವನ್ನು ಅಗಿಯುವ ಹಾಗೆ ಮಾಡಬೇಕು. ಈ ಮೇರಿಗೆ ಒಂದೆರಡು ದಿವಸ ಅಭ್ಯಾಸ ಮಾಡಿಸಿದರೆ ದನಗಳು ಹುರಳೀ ಹಿಟ್ಟು ಉಪ್ಪು ಸಹ ಸೇರದೆ ಇರುವ ತುಂಡುಗಳನ್ನೇ ರುಂಬಾ ಆತುರದಿಂದ ತಿನ್ನುವದಕ್ಕೆ ಪ್ರಾರಂಭಿಸುವವು, ಪರಂತು ದನಗಳಿಗೆ ಈ ಆಹಾರ ರುಚಿಯಾಗಿರುವದಕ್ಕೋಸ್ಕರ ೧೦ ಪೌಂಡು (ಅಂದರೆ ೧೨ ಸೇರು) ತೂಕವುಳ್ಳ ಮುಳ್ಳುಗಳ್ಳಿ ತುಂಡುಗಳಿಗೆ ಒಂದು ಹಿಡಿ ಹುರಳೀ ಹಿಟ್ಟನ್ನೂ ಒಂದು ತೋಲ ಉಪ್ಪನ್ನೂ ಕಲಿಸಿದರೆ ಒಳ್ಳೆಯದು.

ಬೆಳಗಿನ ಹೊತ್ತು ೧೦ ಅಥವಾ ೧೫ ಪೌಂಡು (ಅಂದರೆ ೧೨ ಅಥವಾ ೧೫ ಸೇರು) ತೂಕದಷ್ಟು ಮುಳ್ಳುಗಳ್ಳಿಯನ್ನು ಸಾಯಂಕಾಲವೂ, ಅಷ್ಟೇ ಮುಳ್ಳುಗಳ್ಳಿಯನ್ನು ರಾತ್ರಿಗೂ ೫-೬ ಪೌಂಡು (ಅಂದರೆ ೮-೧೦ ಸೇರು) ತೂಕವುಳ್ಳ ಕದಬಿಯನ್ನೆ ಜೋಳದ ಕಡ್ಡಿಯನ್ನಾಗಲೀ ಅಥವಾ ಹುಲ್ಲನ್ನಾಗಲೀ ಕೊಟ್ಟರೆ ಕೆಲಸ ಮಾಡುವ ಸಾಧಾರಣ ದನದ ಪೋಷಣೆಗೆ ಸಾಕಾಗಿರುತ್ತೆ.

ಬಳ್ಳಾರಿಯಲ್ಲಿ ಮುಳ್ಳುಗಳ್ಳಿಯನ್ನು ಕತ್ತರಿಸುವದಕ್ಕಾಗಿ ೧೫೦ ಪೌಂಡು (ಅಂದರೆ ೨೦೮ ಸೇರು) ತೂಕಕ್ಕೆ ಯರಡಾಣೇ ಮಜೂರೀ ಕೊಡಲ್ಪಡುತ್ತೆ. ೧೫೦ ಪೌಂಡು ರೂಕ ಮುಳ್ಳುಗಳ್ಳೀ ತುಂಡುಗಳು ಮೇಲೆ ಹೇಳಿದ ಕದಬಿ ಯಾನೆ ಜೋಳದ ಕಡ್ಡಿಯೊಂದಿಗೆ ಸೇರಿ ೫ ದನಕ್ಕೆ ಸಾಕಾಗುತ್ತೆ, ಪ್ರಾರಂಭದಲ್ಲಿ ಕೂಲೀ ಹೆಂಗಸರಿಗೆ ಅಷ್ಟು ಯಲೆಗಳನ್ನು ತಯಾರು ಮಾಡುವದಕ್ಕೆ ಆಗುವದಿಲ್ಲ ಆದರೆ ಅಭ್ಯಾಸವಾದಮೇಲೆ ಅವರು ಈ ಕೆಲಸವನ್ನು ಬಹಳ ಜಾಗ್ರತೆಯಾಗಿ ಮಾಡುತ್ತಾರೆ.

ಧಾತು ಈಶ್ವರ ಸಂವತ್ಸರದ ಕ್ಷಾಮದಲ್ಲಿ ಸಾವಿರಾರುದನಗಳು ಈ ಮೇವಿನಿಂದ ಬದುಕಿದವು

ಮೇಲೆ ಹೇಳಿದ ಆಯುಧಗಳ ಬೆಲೆ ಇಕ್ಕಳ ಚಾಕು, ಚಿಮುಟ ಮೂರೂ ಸೇರಿ ೨೪ ಆಣೇ ಮಾತ್ರ ವಾಗಿರುತ್ತೆ. ಇದರಿಂದ ಬರುವ ಉತ್ಪತ್ತಿ ಪೈಕಿ ಈ ಆಯುಧಗಳನ್ನು ಮಾಡುವದಕ್ಕೆ ತಗಲುವ ಖರ್ಚಿಗಾಗಿ ೨ ಆಣೇ ಬಾಕಾ ಉಳಿದ ಹಣವು ಬಳ್ಳಾರಿಯಲ್ಲಿರುವ ಸನ್ಮಾರ್ಗ ಸಮಾಜದ ಫಂಡಿಗೆ ಸೇರಿಸಲ್ಪಡುತ್ತೆ.

ಬಳ್ಳಾರಿಯಲ್ಲಿರುವ ಎ. ಸಭಾಪತಿ ಮೊದಲಿಯಾರ್ ಅಂಡ್ ಕಂಪನಿಯವರಿಗೆ ಬರದರೆ ಅವರು ಈ ಆಯುಧಗಳನ್ನು ಕಳುಹಿಸುತ್ತಾರೆ.

ಮುಖ್ಯವಾಗಿ ಮೆ॥ ಸಭಾಪತಿ ಮುದಲಿಯಾರ್‌ರವರು ತಿಳಿಸುವಮಾರ್ಗವು ಸುಲಭವಾಗಿಯೂ, ಅನುಭವಪೂರ್ವಕವಾದುದಾಗಿಯೂ, ದುರ್ಭಿಕ್ಷ ದೊರೆಯದ ಕಾಲದಲ್ಲಿ ದನಗಳನ್ನು ಕಾಪಾಡಲಿಕ್ಕೆ ಒಳ್ಳೇ ಉಪಾಯವಾಗಿಯೂ ಇರುವದರಿಂದ ಇದಂ ರೈತರೆಲ್ಲರು ಅಜಮಾಯಿಷೀ ಮಾಡುವದು ಆವಶ್ಯಕವಾಗಿರುತಿದೆ. ದನಗಳು ಕೃಶಿಸಿ ಸಾಯುವದನ್ನು ಅವು ಕಾಪಾಡಲಾರದೆ ಕನ್ನಿಕ್ರಯಕ್ಕೆ ಕಟುಕರಿಗೆ ಮಾರಿ ಅವರವು ಖಡ್ಗದ ಅಂಗಡಿಗೆ ಸಾಗಿಸಿ ವಧಿಸುವದನ್ನು ನೋಡಿ ಸಂಕಟಪಡುವದಕ್ಕಿಂತಲೂ ಅಲ್ಪಪ್ರಯತ್ನದಿಂದಲೇ ಗೋರಕ್ಷಣ ಮಾಡಿದ ಪುಣ್ಯ ಕೀರ್ತಿ ಪ್ರಯೋಜನಗಳು ಲಭಿಸುವದರೊಳೇನೂ ಸಂದೇಹವಿರಲಾರದು.

QUEEN'S MESSAGE TO HER SUBJECTS

ಇವರಡಿ ಕಂಡ ಲೇಖನವನ್ನು ಮದರಾಸ್ ಗವರ್ನಮೆಂಟಿನವರು ಪ್ರಾಂತ್ಯಯ ಒಸ್ಗೆ ಕಳುಹಿಸುತ್ತಾರಾಗಿ ಅದರ ವಿಷಯ ಗೌರವವಂ ಪರಿಭಾವಿಸಿ ಅದಕ್ಕೆ ಮುಖ್ಯಾವಕಾಶವಂ ಕೊಟ್ಟಿರುತ್ತೇವೆ:—

ಶ್ರೀಮನ್ಮಹಾರಾಣಿಯವರು, ಇವರಡಿ ಕಾಣಿಸಿದ ಲೇಖನವನ್ನು ಹೋಮ್ ಸೆಕ್ರೆಟರಿಗಳಾದ ಮೆ॥ ಮ್ಯಾಥ್ಯೂಸ್ ಮೊದಲಿಗರಿಗೆ ಕಳುಹಿಸಿರುತ್ತಾರೆ;—

"ನನಗೂ ನನ್ನ ಬಂಧು ಬಾಂಧವರಿಗೂ ಪ್ರಜೆಗಳಿಗೂ ಉಂಟಾದ ಸಂಕಟಗಳೊಳು ಒಂದೇ ಒಂದು ವಿನಾ ಇತರ ಸರ್ವ ಸಂಕಟಗಳಿಗಿಂತಲೂ ಅತ್ಯಂತ ಕ್ಲೇಶಪ್ರದವಾಗಿಯೂ, ದುಃಖಾವಹವಾಗಿಯೂ ಇರುವ ಈ ವಿಪತ್ತಿನಲ್ಲಿ ನನ್ನ ಸಾಮ್ರಾಜ್ಯದ ಸರ್ವ ಕಡೆಗಳಿಂದಲೂ, ನನ್ನ ಪ್ರಜೆಗಳು, ಪ್ರಕಟಿಸಿದ ರಾಜಭಕ್ತಿಯನ್ನೂ ಪ್ರೇಮ ಪೂರ್ವಕವಾದ ಅನುತಾಪವನ್ನೂ ನೋಡಿ ನನಗುಂಟಾದ ಅತ್ಯಂತ ಕೃತಜ್ಞತೆಯನ್ನು ಪುನಃ ವ್ಯಕ್ತಪಡಿಸುವದು ನನ್ನ ಕರ್ತವ್ಯವಾಗಿದೆ. ಪರಿಪೂರ್ಣವಾಗಿಯೂ, ಯೋಗ್ಯ ಸುಗುಣಭರಿತನಾಗಿಯೂ ಇದ್ದ ನನ್ನ ಪ್ರಿಯ ಪೌತ್ರನ ಅಕಾಲ ಮರಣದಿಂದ ಚಿಂತಾಕ್ರಾಂತರಾದ ಆತನ ಮಾತಾ ಪಿತೃಗಳಿಗೂ, ಪ್ರಿಯ ವಧುವಿಗೂ, ವಿವಾಹಿತಳಾದ ವರಗೂ ಭಗವಂತನ ಅತ್ಯರ್ಥವಾದ ಈ ನಿರ್ಣಯವು ಅತ್ಯಂತ ದುಸ್ಸಹವಾಗಿ ಕಾಣುತಿದೆ. ಇಂತಾ ಸಂದರ್ಭದಲ್ಲಿ ಲೋಕವ್ಯಾಪಕವಾದ ಪ್ರಜೆಗಳು ಒಡನೆ ಬಹುಮುಖವಾಗಿ ವ್ಯಕ್ತಪಡಿಸಿದ ಅನುತಾಪವು ನಮಗೆ ಪರಿತೃಪ್ತಿಕರವಾಗಿರುತದೆ. ಆದುದರಿಂದ ನಮಗೋಸ್ಕರ ಸಮದುಃಖವನ್ನೂ, ನನ್ನ ಪೌತ್ರನ ಸುಗುಣ ವಿವೇಚನವನ್ನೂ, ಪ್ರತ್ಯಕ್ಷ ಪಡಿಸುವ ಲೇಖನಗಳಿಗಾಗಿ ನನ್ನ ಕೃತಜ್ಞತೆಯನ್ನು ಸಕಲ ಪ್ರಜೆಗಳಿಗೂ ಶ್ರುತ ಪಡಿಸಬೇಕೆಂದು ಕುತೂಹಲಪಡುತ್ತೇನೆ. ನನ್ನ ಸ್ವಪ್ರಜ್ಞರಿಗೆ ಸರಿ ಸಮಾನವಾದ ಭಕ್ತಿಯನ್ನು ನನ್ನಲ್ಲಿಟ್ಟಿದ್ದ ಈ ನನ್ನ ಪೌತ್ರನ ಮರಣದಿಂದುಂಟಾದ ಶೋಕದೊಳು ನನಗೂ, ನನ್ನ ಬಂಧು ಬಾಂಧವರಿಗೂ ನನ್ನ ಪ್ರಜೆಗಳೇ ಸಹಾಯಕರೂ ಕ್ಲೇಶೋಪಶಾಂತರೂ ಆಗಿರುತ್ತಾರೆ. ಗತ ಮೂವತ್ತು ವರುಷಗಳೊಳು ನಮಗುಂಟಾದ ವಿಯೋಗಗಳು ಅತ್ಯಂತ ದುಃಖಕರವಾದವುಗಳೆಂಬದಕ್ಕೇನೂ ಸಂದೇಹವಿಲ್ಲ. ಪರಂತು ನನ್ನ ಕಷ್ಟಗಳೂ ಶೋಕವ್ಯಥೆಗಳೂ ಸಾಂಸಾರಿಕ ಚಿಂತನೆಗಳೂ ಅನೇಕವಾಗಿದ್ದರೂ ನನ್ನ ಪ್ರಾಣವು ದೇಹದಲ್ಲಿರುವವರೆಯುಂ, ನನ್ನ ಪ್ರೀತಿ ಪಾತ್ರವಾದ ಸಾಮ್ರಾಜ್ಯದ ಕ್ಷೇಮಲಾಭವು ವೃದ್ಧಿಯಾಗುವಂತೆ ರಾಜ್ಯಭಾರವನ್ನು ನಡಿಸಲಿಕ್ಕೆ ಜಗದ್ರಕ್ಷಕನಾದ ದೇವರು ನನಗೆ ಸಹಾಯದನ್ನೂ, ತ್ರಾಣವನ್ನೂ ದಯಪಾಲಿಸಲಿ ಯೆಂಬದೇ ನನ್ನ ಮನಃಪೂರ್ವಕವಾದ ಪ್ರಾರ್ಥನೆಯಾಗಿರುತ್ತದೆ."

Occasional Notes.
ನೈಮಿತ್ತಿಕ ವಿಷಯನ್ಯಾಸ.

A charge of bribery—ಕಲಿಕತ್ತೆ ಪೋಲೀಸ್ ಸೂಪರಿಂಟೆಂಡೆಂಟರಾದ ಜಾರ್ಜ್ ಎಂಬವರು ರುಷುವತ್ ತೆಗದುಕೊಂಡರೆಂಬ ಅಪವಾದನೆಯಮೇಲೆ ಸಸ್ಪೆಂಡ್ ಮಾಡಲ್ಪಟ್ಟು ದರ್ಯಾಫ್ತಿಗೆ ಗುರಿಮಾಡಲ್ಪಟ್ಟಿರುತ್ತಾರೆ. ಇದರ ಫಲಿತಾಂಶವು ಮುಂದೆ ತಿಳಿಯಬೇಕಾಗಿರುತ್ತದೆ.

Charge against a Government Officer. ಮದರಾಸು ಗವರ್ನಮೆಂಟ್ ಸರ್ವೆ ಇಲಾಖೆ ಅಧಿಕಾರಿಯಾದ ಮಿ ಬಾರ್ಬರ್ ಎಂಬವರು ತಮ್ಮ ಅಧಿಕಾರ ಬಲದಲ್ಲಿ ಸ್ವಪಕ್ಷಪಾತವನ್ನು ನಡೆಸಿದರೆಂಬ ಅಪವಾದನೆಯು ಮದರಾಸು ಗವರ್ನಮೆಂಟ್ ಹುಕುಂ ಅನುಸರಿಸಿ, ಚಾರ್ಜ್ ಮಾಡಲ್ಪಟ್ಟು ಬಳ್ಳಾರಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದರ್ಯಾಪ್ತಿಗೆ ಗುರಿಮಾಡಲ್ಪಟ್ಟರೆಂದು ತಿಳಿಯಬರುತ್ತದೆ.

Influenza in Calcutta —ಈಚೆಗೆ ಕಲ್ಕತ್ತೆಯಲ್ಲಿ, ಇನ್‌ಫ್ಲುಯೆನ್‌ಜಾ ಎಂಬ ವಿಷಜ್ವರ ರೋಗವು [illegible] ಹೆಚ್ಚಾಗಿ ಅಲ್ಲಿನ ಹೈಕೋರ್ಟಿನ ಜಡ್ಜಿಗಳ ಪೈಕಿ ಮೂವರು ಕೋರ್ಟಿಗೆ ಬರಲಿಲ್ಲ [illegible]. ಸದರೀ ರೋಗವು [illegible] [illegible] ತಿಳಿಸುತ್ತದೆ.

Trifling [illegible] — [illegible] ಉದ್ಯೋಗಸ್ಥರು [illegible] ಮೊದಲಾದ ಸ್ಥಳಗಳಿಂದ [illegible] ಬಗ್ಗೆ [illegible] ಮಾಡಿಸಿದರೆಂದು [illegible] ತೀರ್ಮಾನ ಮಾಡಿದರು. [illegible] ಹೇಳುತ್ತಾರೆ.

A wedding in a royal family.—ಬರೋಡೆ ಗಾಯಕವಾಡ ಮಹಾರಾಜರವರ ಸೋದರಿಯಾದ ಮತ್ತು ಸ್ವರ್ಗಸ್ಥರಾದ ಸೇನಾಪತಿಯವರ ಪುತ್ರ [illegible] ಗಾಯಕವಾಡರ ಕುಮಾರಿಯವರಿಗೆ ವಿವಾಹ ಮಹೋತ್ಸವ ನಡೆಯಿತು. ಎಂದು ಹಾಲಿನಲ್ಲಿ ನಾಗಪುರದ [illegible] ಎಂಬವರು ೫೦೦ ಮಂದಿ ಪರಿವಾರದೊಡನೆ ಬರೋಡೆಗೆ ಬಂದು ಸೇರಿದರು. ಅವರನ್ನು ಉಚಿತ ಮರ್ಯಾದೆಯೊಡನೆ ಮೆರವಣಿಗೆ ಮಾಡಿಕೊಂಡು ರೆಯಿಲ್ವೇ ಸ್ಟೇಷನಿನಿಂದ ಕರೆದುಕೊಂಡು ಬಂದು ಅವರಿಗಾಗಿ ನಿಷ್ಕರ್ಷೆಯಾಗಿದ್ದ ಬಂಗ್ಲೆಯಲ್ಲಿ ಇಳಿಸಿದರು. ದೇವಸ್ಥಾನಗಳು [illegible] ಬಹಳ ಉತ್ಸವದಿಂದ ಕೊಟ್ಟಿದ್ದಾರೆ. ಅವರ ಗೌರವಾನುಗುಣವಾಗಿ ಭೋಜ್ಯ ಪದಾರ್ಥಗಳು ಗಾಡಿ ಮೊದಲಾದವು ಸರಬರಾಯಿ ಮಾಡಲ್ಪಡುವವು. ಈ ವಿವಾಹಕ್ಕಾಗಿ ಆಹ್ವಾನಪತ್ರಿಕೆಗಳು ಹೋಗಿರುತ್ತವೆ. ಒಡೆಯರು ಮೊದಲಾದ ದೊಡ್ಡ ದೊಡ್ಡ ಸರ್ದಾರರು ಮೊದಲಾದವರು ಬರುತ್ತಿದ್ದಾರೆ.

A point of Hindu Law.— ಮಿತಾಕ್ಷರವೆಂಬ ಧರ್ಮಶಾಸ್ತ್ರವು ಆಚಾರದೊಳಿರುವ ಅಹಮದ್ ನಗರದಲ್ಲಿ ವಿಧವೆಯರಿಗೆ ದಾಯಬಾಧ್ಯತೆಯಿಂದ ಪ್ರಾಪ್ತವಾದ ಸ್ವತ್ವವನ್ನು ಮನಸ್ವೀ ವಿನಿಯೋಗಿಸಿಕೊಳ್ಳುವದಕ್ಕೆ ಅಧಿಕಾರ ಉಂಟೆಂಬ ಒಂದು ದೊಡ್ಡ ವಿಷಯವು ಮುಂಬೈ ಹೈಕೋರ್ಟ್ ಫುಲ್ ಬೆಂಚಿನ ನಿರ್ಣಯಕ್ಕೆ ತರಲ್ಪಟ್ಟು ಆ ವಿಷಯದಲ್ಲಿ ಅವರು ತಿಳಿಸಿದ ಅಭಿಪ್ರಾಯವೇನೆಂದರೆ:— ವ್ಯವಹಾರ ಮಯೂಖವೆಂಬ ಧರ್ಮಶಾಸ್ತ್ರವು ಆಚಾರದೊಳಿರುವ ಮುಂಬೈ ಮತ್ತು ಗುಜರಾತ್ ಪ್ರಾಂತಗಳಲ್ಲಿ, ವಿತಂತುವಾದವರಿಗೆ ಅಂತಾ ಅಧಿಕಾರ ಉಂಟು. ದಾನ ಅಥವಾ ವೃದ್ಧಿ ಮೂಲಕ ಲಭಿಸುವ ಜಮೀನುಗಳ ವಿಷಯದಲ್ಲಿ ಅಧಿಕಾರವುಂಟು. ಜಸ್ಟಿಸ್ ಸ್ಕಾಟ್ ಎಂಬವರು ಹಿಂದೂ ಧರ್ಮಶಾಸ್ತ್ರಗಳಿಗೆ ಮಾಡುವ ಅರ್ಥವು ಪ್ರಿವೀ ಕೌನ್ಸಿಲಿನವರ ಅಭಿಪ್ರಾಯಕ್ಕೆ ವಿರುದ್ಧವಾಗಿರುತ್ತದೆ. ಜುಡಿಷಲ್ ಕಮಿಟಿಯವರ ಅಭಿಪ್ರಾಯಾನುಸಾರವಾಗಿ ನಡೆಸಬೇಕಾದುದು ಇಲ್ಲಿನ ಜಡ್ಜಿಗಳಿಗೆ ಕರ್ತವ್ಯವಾಗಿರುವದರಿಂದಲೂ, ಪ್ರಿವೀ ಕೌನ್ಸಿಲಿನವರು ದಾಯಮೂಲಕ ಲಭ್ಯವಾದ ಚರಸ್ವತ್ತಿನ ವಿಷಯದಲ್ಲಿ ವಿತಂತುವಾದವರಿಗೆ ವಿಶೇಷವಿಲ್ಲದ ಅಧಿಕಾರವಿಲ್ಲವೆಂದು ಅಭಿಪ್ರಾಯ ಪಡುವದರಿಂದಲೂ ಅದನ್ನು ಅನುಸರಿಸಬೇಕಾದ್ದು ಎಂಬದು.

LOCAL AND PROVINCIAL NEWS
ಸ್ವದೇಶಮತ್ತು ತಾಲ್ಲೂಕ್ ವರ್ತಮಾನಗಳು

Furlough to India.—ಇಲ್ಲಿನ ಮುನಿಸಿಪಲ್ ಅಸಿಸ್ಟೆಂಟ್ ಎಂಜಿನಿಯರ್ ಮಿ ಸಿ. ನರಸಿಂಹ ಅಯ್ಯಂಗಾರರಿಗೆ ಕಳೆದ ತಿಂಗಳ ೧೪ನೇ ತಾರೀಖು ಮೊದಲು ೬ ತಿಂಗಳ ಕಾಲ ಫರ್ಲೋ ರಜಾ ಕೊಡಲ್ಪಟ್ಟಿರುತ್ತದೆ.

Civil Surgeon.—ಕಡೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಡಾಕ್ಟರ್ ಎ. ಎಂ. ಶರ್ಮಾ ವರಿಗೆ ಕಳೆದ ತಿಂಗಳ ೩ನೇ ತಾರೀಖು ಮೊದಲು ಅಥವಾ ಅವರು ಕೆಲಸ ಒಪ್ಪಿಸಿಕೊಟ್ಟ ತಾರೀಖು ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುವುದಾಗಿ ಕೇಳುತ್ತೇವೆ.

Weavers.—ಮೈಸೂರು ಡಿಸ್ಟ್ರಿಕ್ಟಿನಲ್ಲಿರುವ ನೇಕಾರರು ಬಹುಮಂದಿ ಜೀವನಕ್ಕಿಲ್ಲದೆ ಕಷ್ಟ ಪಡುತ್ತಿರುವದರಿಂದ ಅವರಿಗೆ ಜೀವನೋಪಾಯವು ಕಲ್ಪಿಸಿ ಅವರ ಕಸಬಿಗೆ ಪ್ರೋತ್ಸಾಹ ಕೊಡುವ ತಾತ್ಪರ್ಯದೊಡನೆ ಮೈಸೂರ್ ಗವರ್ನಮೆಂಟಿನವರು ೮೦೦೦ ರೂಪಾಯಿಗಳು ಅಡ್ವಾನ್ಸ್ ತಕಾವಿ ಕೊಡುವದಕ್ಕೆ ಹುಕುಂ ಮಾಡಿರುತ್ತಾರೆಂದು ಕೇಳುತ್ತೇವೆ. ಇದು ಕೇವಲ ಶ್ಲಾಘ್ಯವಾದ ಏರ್ಪಾಡೆನಿಸುವದು.

Privilege leave.—ಶಿವಮೊಗ್ಗ ಡಿಸ್ಟ್ರಿಕ್ಟ್ ಹೊಸನಗರ ತಾಲ್ಲೂಕು ಅಮಲ್ದಾರ್ [illegible] ರವರಿಗೂ, ಮೈಸೂರು ಡಿಸ್ಟ್ರಿಕ್ಟ್ ಯಳಂದೂರು ತಾಲ್ಲೂಕು ಅಮಲ್ದಾರ್ ಮಿ ಎಂ ತಿರುಮಲಾಚಾರ್ಯರವರಿಗೂ ಮಾರ್ಚಿ [illegible] ತಾರೀಖು ಮೊದಲು ಅಥವಾ ಅವರು ಕೆಲಸ ಒಪ್ಪಿಸಿಕೊಡುವ ತಾರೀಖು ಮೊದಲು ೫೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

The Matriculation result — ಕಳೆದ ಡಿಸೆಂಬರ್ ತಿಂಗಳಲ್ಲಿ ನಡೆದ ಎಫ್ ಎ. ಮೆಟ್ರಿಕ್ಯುಲೇಷನ್ ಪರೀಕ್ಷೆಗಳ ಫಲಿತಾಂಶಗಳು ಸಮಾನವಾಗಿ ಪ್ರಕಟವಾಗಬೇಕಾದ ಕಾಲವಾಗಿದ್ದಾಗ್ಯೂ ಎಫ್. ಎ ರಿಜಲ್ಟ್ ಮಾತ್ರ ಕೆಲವು ಕಾರಣಗಳಿಂದ ವಿಳಂಬವಾಗಿ ಮೆಟ್ರಿಕ್ಯುಲೇಷನ್ ರಿಜಲ್ಟ್ ಮಾತ್ರ ಹೊರಟಿತು. ಈ ಸಂವತ್ಸರ ಒಟ್ಟು ಮಂದಿ ತೇರ್ಗಡೆಯಾಗಿದ್ದಾರೆ. ತತ್ರಾಪಿ ಮೊದಲನೇ ತರಗತಿಯಲ್ಲಿ ಅನೇಕರು ಪ್ಯಾಸ್ ಮಾಡಿರುತ್ತಾರೆ. ಈಗಿನ ಪದ್ಧತಿಯನ್ನನುಸರಿಸಿ ಇದೇ ಕಡೇ ಪರೀಕ್ಷೆಯಾಗಿರುತ್ತದೆ. ಮುಂದಿನ ಯೋಜನೆಯಲ್ಲಿ ಪ್ರತಿ ವಿದ್ಯಾರ್ಥಿಯೂ ೩ ಸಂವತ್ಸರಗಳ ಕಾಲ ಒಂದು ಸ್ಕೂಲಿನಲ್ಲಿ ಓದಿ ಸರ್ಟಿಫಿಕೇಟ್ ಹೊಂದದ್ದಿದ್ದರೆ ಮೆಟ್ರಿಕ್ ಪರೀಕ್ಷೆಗೆ ಅಪ್ಲಿಕೇಷನ್ ಕೊಡಲಾಗದೆಂದು ವ್ಯವಸ್ಥೆಯಾಗಿರುತ್ತದೆ.

Railway extension.—ನಂಜನಗೂಡಿನಿಂದ ಎರಡು ರೆಯಿಲ್ ರಸ್ತೆಯನ್ನು ಹಾಕಬೇಕೆಂದು ಗವರ್ನಮೆಂಟಿನವರಾಲೋಚಿಸುತ್ತಿರುವತೆ ಕೇಳುತ್ತೇವಲ್ಲದೆ ರಸ್ತೆ ಪ್ಲೇಟ್‌ಲೇಯರ್ ಕೆಲಸಕೂಡ ಶೀಘ್ರದಲ್ಲಿ ಉಪಕ್ರಮಿಸಲ್ಪಡುವದೆಂದು ತಿಳಿಯಬರುತ್ತದೆ. ಸದರೀ ಎರಡು ಮಾರ್ಗಗಳ ಪೈಕಿ ಒಂದು ನೀಲಗಿರಿಯ ಕೆಳಭಾಗದಲ್ಲಿರುವ ಸೇಗೂರ್ ಘಾಟಿಯ ಮಾರ್ಗವಾಗಿ ಏಲ ಘಾಟಿಗೆ ಹೋಗಿ ಸೇರುವದು. ಎರಡನೆಯದು ನಿಮಿಷಪತಿ ದಿಕ್ಕು ಮಾರ್ಗವಾಗಿ ಈರೋಡಿಗೆ ಹೋಗಿ ಅಲ್ಲಿ ಮದರಾಸ್ ಮತ್ತು ದಕ್ಷಿಣ ಇಂಡ್ಯಾ ರೆಯಿಲ್ವೆಗಳೊಡನೆ ಸಂಧಿಸುವದು.

Suspension.—ಹಿರಿಯೂರ್ ತಾಲ್ಲೂಕ್ ಅಮಲ್ದಾರ್ ನಾರಾಯಣ ರಾವ್ ಎಂಬವರ ಮೇಲೆ ಬಂದಿರುವ ಕೆಲವು ಫಿರ್ಯಾದುಗಳನ್ನು ವಿಚಾರಿಸಿ ವ್ಯವಸ್ಥೆ ಮಾಡುವ ಉದ್ದೇಶದಿಂದ ಅವರು ಕೆಲಸದಿಂದ ಸಸ್ಪೆಂಡ್ ಮಾಡಲ್ಪಟ್ಟಿರುವದರಿಂದ ತಮ್ಮ ಕೆಲಸದ ಚಾರ್ಜನ್ನು ಶಿವಮೊಗ್ಗೆಯಿಂದ ಸುಬ್ಬರಾಯರು ಬಂದು ತೆಗದುಕೊಳ್ಳುವ ವರೆಗೆ ಸದರೀ ತಾಲ್ಲೂಕ್ ಶಿರಸ್ತೇದಾರರಿಗೊಪ್ಪಿಸಿ ಕೂಡಲೇ ಹೊರಟುಬಂದು ಬೆಂಗಳೂರಲ್ಲಿ ಚೀಫ್ ಸೆಕ್ರೆಟರಿಯವರಿಗೆ ತಮ್ಮ ಹಾಜರೀ ರಿಪೋರ್ಟ್ ಮಾಡತಕ್ಕದ್ದು. ಶಿವಮೊಗ್ಗ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಪೋಲೀಸ್ ಇನ್‌ಸ್ಪೆಕ್ಟರ್ ಎನ್. ಸುಬ್ಬರಾಯರವರು ನಾರಾಯಣ ರಾಯರಿಗೆ ಬದಲಾಗಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಹಿರಿಯೂರ್ ತಾಲ್ಲೂಕು ಅಮಲ್ದಾರ್ ಪ ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಅಫಿಷಿಯೇಟಿಂಗ್ ತರೀಕೆ ಮೇರೆಗೆ ನೇಮಿಸಲ್ಪಟ್ಟಿರುತ್ತಾರೆಂದು ತಿಳಿಯಬರುತ್ತದೆ. ಮಿ ನಾರಾಯಣ ರಾಯರಮೇಲೆ ಬಂದಿರುವ ಫಿರ್ಯಾದು ಸ್ವರೂಪವೇನೆಂದು ಗೊತ್ತಾಗಲಿಲ್ಲ. ಮುಂದೆ ಇವರ ವಿಚಾರಣೆಯಲ್ಲಿ ಅದು ವ್ಯಕ್ತವಾಗಬಹುದು. ಅವರ ಅದು ಸತ್ಯವಾದ ಮಟ್ಟಿಗೆ ಬಹಿರಂಗವಾಗಿ ಜರಿಗಿಸಿದರೆ ನ್ಯಾಯವು ಅಪಕ್ಷಪಾತಾನುಗುಣವಾಗಿ ಎಲ್ಲರಿಗೂ ತಿಳಿವಂತೆ ಯೇ ನಡೆದಂತೆ. ಆಗ ರೇಯತರ ಫಿರ್ಯಾದಿಗೂ ಅವಕಾಶವಿರಲಾರದು.

H. H The Maharaja.—ಶ್ರೀಮನ್ ಮಹಾರಾಜರವರು ಈಗಿನ ಪ್ರೋಗ್ರಾಮಿನ ಪ್ರಕಾರ ನಾಳೆಯ ದಿನ ಸ್ಪೆಷಿಯಲ್ ಟ್ರೈನಿನಲ್ಲಿ ಮದರಾಸಿನಿಂದ ಈ ಪ್ಲೇಸಿಗೆ ದಯಮಾಡುವರೆಂದು ತಿಳಿಯಬರುತ್ತದೆ. ಮಹಾರಾಜರವರಿಗೆ ಮದರಾಸ್ ವಾಸವು ಬಹಳ ಪ್ರಯೋಗ್ಯವಾಗಿಯೂ, ಮನೋಹರವಾಗಿಯೂ ಇದ್ದದರಿಂದ ಸಂವತ್ಸರದಲ್ಲಿ ಎರಡು ತಿಂಗಳ ಕಾಲ ಅಲ್ಲಿ ವಾಸ ಮಾಡಬೇಕೆಂಬ ಅಭಿಪ್ರಾಯವು ಪುಟ್ಟಿರುವುದೆಂದೂ ಅದಕ್ಕಾಗಿ ಮೈಲಾಪುರದೊಳಗೆ ಸ್ವಂತಕ್ಕೆ ಭಾರೀ ಬಂಗ್ಲೆಯೊಂದು ಖರೀದಿಗೆ ತೆಗದುಕೊಳ್ಳಬೇಕೆಂದು ಯೋಚಿಸಿ ಏರ್ಪಾಡು ಮಾಡಲ್ಪಟ್ಟದೆಯೆಂದೂ, ಇದು ನಿಶ್ಚಯವಾಗಿ ಮಹಾರಾಜರವರ ಸ್ವದೇಶ ವಾಸಿಗೂ, ತತ್ರಾಪಿ ರಾಜಧಾನಿಯಲ್ಲಿರುವ ಸಕಲಪ್ರಜೆಗಳಿಗೂ ಇದನ್ನು ಕಡಮೆಯಾಗಿರುವದೆಂದೂ, ಅವರ ಸಮಾಧಿಯೊಡನೆ ಹೋಗಿರುವ ನಮ್ಮ ಬಾತ್ಮೀದಾರನೊಬ್ಬನು ತಿಳಿಸುತ್ತಾನೆ. ಇದಲ್ಲದೆ ನುಡಿಯಲ್ಪಟ್ಟ ಮೇಲೆ ನಾಟಕ ನಾಟಕ ಕಬ್ಬನ್ ಸಾಹೇಬರವರ ಬಗ್ಗೆಯು ಸಹ ಬಾಡಿಗೆಯವರಿಂದ ಖರೀದಿಗೆ ತೆಗದುಕೊಳ್ಳಲ್ಪಟ್ಟಂತೆಯೂ, ಅಲ್ಲಿಗೂ ಹಿಂದೆರಡು ಗಳಿಗೆ ಹೋಗಿರುವರೆಂದೂ ಕೇಳುತ್ತೇವೆ. ನಂತರಗೆ ಮಹಾರಾಜರವರು ದಯಮಾಡುವ ವಿಷಯದಲ್ಲಿಯೂ, ನೀಲಗಿರಿಗೆ ಹೋಗುವದರಿಂದುಂಟಾಗುವ ಪ್ರಯೋಜನವನ್ನು ಕುರಿತೂ ಅನೇಕಾವರ್ತಿ ಈ ಪತ್ರಿಕೆಯಲ್ಲಿ ವಿಚಾರಮಾಡಿರುತ್ತೇವೆ. ಈಗ ನಮ್ಮ ಅಭಿಪ್ರಾಯವು ಮಹಾರಾಜರ ಸಂಕಲ್ಪದೊಂದಿಗೆ ಸಾಮ್ಯವಾಗಿ ಮೇಳೈಸಿರುವದರಿಂದ ನಮಗೆ ಸಂತೋಷವಾಗಿದ್ದು ಅವರ ಪ್ರಾರ್ಥನೆ ಸಿದ್ಧಿಯಾಗಲು ಮರಳಿ ಲಭಿಸಲೆಂದು ಪ್ರಾರ್ಥನೆಯು ಅವಕಾಶ ಪುಟ್ಟಿಸುವಂತೆ ದಯಮಾಡಲಿ.

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ವಸೂಲಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ.—

೧೮೯೨ನೇ ಇಸವಿ ಜನವರಿ ತಾರೀಖು ೩೧ ಮೊದಲು ಫೆಬ್ರುವರಿ ೬ನೇ ತಾರೀಖು ವರಿವಿಗೆ.

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	೯೬
ಜವಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	೪೬
ಗತವಾರದ ಶಿಲ್ಕು ಸೇರು	...	೪೭
ಜಾಮ್ಲ	...	೯೯॥
ಊಟಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	...	೨೪
ಖರ್ಚಾದ ಅಕ್ಕಿ ಸೇರು	...	೭೦
ಶಿ.ಕಾ.ಬ.ಕಿ	...	೫೪
ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.		
ಬೆಕ್ಕಳಿಡ ವಿದ್ಯಾರ್ಥಿ	...	೧
ಪಾದಯಾತ್ರಿಕರು ವಿದ್ಯಾರ್ಥಿಗಳು	...	೩
ಕಷ್ಟಕೊಡತಕ್ಕ ಆಹಾರ ಪಾಕ ಮಾಡುವ ಪರಿಚಾರಕರು	...	೦೬
ಪ್ರಯಾಣಸ್ಥರು	...	೧
ಜಾಮ್ಲ	...	೨೫

HUMAN PHYSIOLOGY.
ಮಾನವಶರೀರ ತತ್ವವಿವೇಚಕ ಶಾಸ್ತ್ರ

ಮನುಷ್ಯ ದೇಹ ಲಕ್ಷಣ

CHAP. II.—THE MUSCLES.

೨ನೇ ಅಧ್ಯಾಯ.—ನಾಡಿಗಳ ವಿವರ.

Sec 1—Description of the Muscles.

೧ನೇ ಪ್ರಕರಣ—ನಾಡಿಗಳ ವಿವರ.

೧. ಕಣ್ಣು ರೆಪ್ಪೆ ಬಡಿಯುವದು, ಮೂಗು ತಿರುಗಿಸುವದು, ನಾಲಿಗೆ ಚಾಚುವದು, ಮೊದಲಾದ ಅಲ್ಪ ಚಲನೆಗಳು ಎಲುಬುಗಳನ್ನು ವಿಸ್ತರಿಸಿ ಉಂಟಾಗುವವು. ಕಾಲು ಆಡಿಸುವದು, ಕೈ ಬೀಸುವದು, ಮೊದಲಾದ ದೊಡ್ಡ ಚಲನೆಗಳು, ಎಲುಬುಗಳ ಆಧಾರದಿಂದ ಉಂಟಾಗುತ್ತವೆ. ಈ ವಿಧವಾದ ಚಲನೆಗಳಿಗೆಲ್ಲಾ ಕಾರಣವಾದ ಉಪಕರಣಗಳು ನಾಡಿಗಳೆನ್ನಲ್ಪಡುವವು.

೨. ನಾಡಿಗಳನ್ನು ಒಟ್ಟಾಗಿ ಹೇಳಿದರೆ, ತಲೆಯಲ್ಲಿ ೯೪ ಕುತ್ತಿಗೆಯಲ್ಲಿ ೫೨, ಮುಂಡದಲ್ಲಿ ೧೬೩. (Upper Extremities) ಭುಜಗಳಲ್ಲಿ ೧೦೨. (Lower Extremities) ಅಧೋಭಾಗದಲ್ಲಿ ೧೧೬, ಇವುಗಳ ಮೊತ್ತ ಅನ್ನು ಅನೇಕ ಸಣ್ಣ ನಾಡಿಗಳುಂಟು, ಎಲ್ಲವುಗಳನ್ನು ಕೂಡಿಸಿ ಹೇಳಿದರೆ, ಮನುಷ್ಯ ದೇಹದಲ್ಲಿ ಹೆಚ್ಚು ಕಡಿಮೆ ೫೦೦ ನಾಡಿಗಳುಂಟು. ಅದಾಗ್ಯೂ ಕಡಿಮೆ ಹೆಚ್ಚಾದ ಬಗೆ ಅವಯವಗಳ ನಾಡಿಗಳು ಈ ಒಟ್ಟಿನಲ್ಲಿ ಸೇರಲಿಲ್ಲ.

೩. ನಾಡಿಗಳೆಂಬುವುಗಳು ಅನೇಕ ಮೃದುವಾದ ಕೆಂಪು ಬಣ್ಣ ಸಣ್ಣ ದಾರಗಳು ಕೂಡಿಕೊಂಡು ಏರ್ಪಟ್ಟಿರುವ ವಸ್ತುಗಳು. ಕೆಲವು ನಾಡಿಗಳಲ್ಲಿರುವ ದಾರಗಳು ನೆಟ್ಟಗೆ ಇರುವವು. ಇತರ ಕೆಲವು ನಾಡಿಗಳ ದಾರಗಳು ತಮ್ಮೊಳಗೆ ಒಂದನ್ನೊಂದು ಅಂಟಿಕೊಂಡು ಬಿಳುಪಾದ ಪ್ರಕಾರ ಸ್ನಾಯುವಿನಲ್ಲಿ (Tendon) ಕೂಡಿ ಸೇರುವವು. ಇನ್ನು ಕೆಲವು ನಾಡಿಗಳ ದಾರಗಳು ಹಿಂದಿನ ಗರಿ ಅಥವ ಕೊಕ್ಕೆ ಗರಿಯ ಕಾಂಡದ ಹಾಗೆ ಮಧ್ಯದಲ್ಲಿ ಸೇರಿ ಸ್ನಾಯುವಿನಲ್ಲಿ ಸೇರುವವು.

೪. ನಾಡಿಯ ಕೊನೆಗಳಲ್ಲಿ ಅದರ ದಾರಗಳು ದಾರಕ್ಕಿಂತ ಹೆಚ್ಚಾದ ಒಂದು ಬಿಳೀ ವಸ್ತುವಿನಲ್ಲಿ ಸಂಬಂಧಿಸುತ್ತವೆ. ಆ ವಸ್ತುವೇ ಸ್ನಾಯುವೆನ್ನಲ್ಪಡುತ್ತವೆ. ಇದು ಸರ ಹಾರಗಳಂತೆ ಆಗುತ್ತದೆ.

ಒಂದು ಕೋಳಿಯ ಕಾಲನ್ನು ಬೇಯಿಸಿ ನೋಡಿದರೆ, ನಾಡಿಯ ದಾರ (Fibre) ಸ್ನಾಯುಗಳ (Tendons) ರೂಪವು ಎಲುಬುಗಳೊಡನೆ ಅಂಟಿಕೊಂಡಿರುವ ವಿಧವೂ, ಕಾಣಬರುವದು.

೫. ಸ್ನಾಯುಗಳು ಹಲವು ಆಕಾರವಾದವುಗಳು ಕೆಲವು ಸ್ಥಳಗಳಲ್ಲಿ ಉದ್ದವಾಗಿ ಸಣ್ಣ ಹಗ್ಗದಂತೆಯೂ, ಇನ್ನು ಕೆಲವು ಸ್ಥಳಗಳಲ್ಲಿ ಸೂತ್ರದ ದಪ್ಪನಾಗಿಯೂ, ಬೇರೆ ಕೆಲವು ಸ್ಥಳಗಳಲ್ಲಿ ತೆಳ್ಳಗಾಗಿ ವಿಸ್ತರವಾಗಿಯೂ, ಇರುತ್ತವೆ. ಅವು ನಾಡಿಗಳನ್ನು ಎಲುಬಿನ ಭಾಗಗಳ ಸಂಗಡಲೂ, ಕೆಲವು ವೇಳೆ ಬೇರೆ ನಾಡಿಗಳ ಸಂಗಡಲೂ, ಸೇರಿಸುವವುಗಳಾಗುವವು.

ಕೆಲವು ಕಾಲಿನಲ್ಲಿರುವ ಸ್ನಾಯುಗಳಿಗೆ ಕವಚವಾಗಿರುವ ಚೋಳಿಕ ಪೊರೆಯು (Synovial Membrane) ಎಂಬದು ಉದ್ದವಾಗಿರುವ ಚೀಲದಂತಿರುವ ಒಳಪು ಸೇರಿ ಹೊಗಲು ಜಾರಿಸಿದ, ಆ ಸ್ಥಳದಲ್ಲಿ ಸ್ನಾಯು ಗಂಟು ಕಟ್ಟಿಕೊಳ್ಳುತ್ತದೆ.

೬. ಒಂದು ನಾಡಿಯನ್ನು ಕರೆದಾ ಮಾತ್ರವಾಗಿ ಅದರ ತುದಿಗಳಲ್ಲಿ ಒಂದು, ಮೊದಲನೇ ತುದಿ ಎಂದೂ, ಇನ್ನೊಂದು ಕಡೇ ತುದಿಯೆಂದೂ, ಹೇಳಲ್ಪಡುವದು.

೭. ಬಹು ಸ್ಥಿರವಾದ ಭಾಗದಲ್ಲಿ ಕಟ್ಟಿಕೊಂಡಿರುವ ತುದಿ ಆರಂಭಸ್ಥಾನವೆಂತಲೂ ಮೊದಲನೇ ತುದಿ ಎಂದು ಹೇಳಲ್ಪಡುವದು.

ಪ್ರಾಚೀನ ಆನಂದಾಶ್ರಮದ ಚರಿತ್ರೆಯು ಮತ್ತು ಅದನ್ನು ಕುರಿತು ಎಲ್ಲ ಜನರಿಗೆ ವಿಜ್ಞಾಪನೆಯು

ನಮ್ಮ ಪೂರ್ವಿಕರು ಬಹಳ ಪ್ರಾಚೀನ ಕಾಲದಿಂದ ವಿದ್ವಾಂಸರಾಗಿದ್ದು, ಅನೇಕ ವಿಧ ಶಾಸ್ತ್ರಗಳ ಸಂಬಂಧವಾಗಿ ಸ್ವತಂತ್ರ ಶೋಧನೆಮಾಡಿ, ದೊಡ್ಡ ದೊಡ್ಡ ಗ್ರಂಥಗಳನ್ನು ಬರೆದಿಟ್ಟಿರುವರು. ಜಗತ್ತಿನಲ್ಲಿ ಅತ್ಯಂತ ಪ್ರಾಚೀನ ಗ್ರಂಥಗಳು ನಮ್ಮ ದೇಶದಲ್ಲಿ ಇರುತ್ತವೆಂದು ಅನೇಕ ವಿದ್ವಾಂಸರ ಅಭಿಪ್ರಾಯವು. [illegible]

[illegible]

NOTICE

T. SAMMIS WONDERFUL MEDICINES

[illegible]

[illegible]

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು.

[illegible] ಪುಸ್ತಕಗಳು.

ನಂ.	ವಿವರ	ರೂ.	ಆ.	ಪೈ.
1	[illegible]	0	4	6
2	[illegible]	0	2	6
3	[illegible]	0	2	6
1	[illegible]	0	2	6
	[illegible]	0	2	0
	[illegible]	0	1	6
7	[illegible]	0	1	0
8	[illegible]	0	1	0
9	[illegible]	1	10	0
10	[illegible]	1	1	0
11	[illegible]	0	15	0
12	[illegible]	0	14	0
13	[illegible]	0	3	6
14	[illegible]	0	4	6
15	[illegible]	0	1	6
16	[illegible]	0	1	0
17	[illegible]	0	1	6
18	[illegible]	0	1	6
19	[illegible]	0	1	0
20	[illegible]	1	14	0
21	[illegible]	0	8	6
22	[illegible]	0	[illegible]	6
23	[illegible]	0	3	0
24	[illegible]	0	2	0
25	[illegible]	0	1	6
26	[illegible]	0	1	6

[illegible]

[illegible], ಪ್ರಕಾಶಕರು.

BANGALORE.—Printed and published at the KARNATAKA PRESS, No. 50, HOSPITAL [illegible] Road, 1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX | BANGALORE—MONDAY, FEBRUARY 15, 1892 [No. 7.

ಸಂಪುಟ ೧೯.] ಬೆಂಗಳೂರು—ಸನ್ ೧೮೯೨ನೇ ಇಸವಿ ಫೆಬ್ರವರಿ ೧೫ನೇ ತಾರೀಖು ಸೋಮವಾರ. [ಸಂಖ್ಯೆ. ೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

[illegible]

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

[illegible] 1—0—0 5—0—0 6—0—0

[illegible]

ಪ್ರಕಟನೆಯ ದರಗಳು.

[illegible]

ADVERTISEMENTS

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ನೋಟೀಸು.

ಬೆಂಗಳೂರು ಕರ್ಣಾಟಕ ಪ್ರೆಸ್

[illegible]

ಡಿ ಬಿನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible] ರಕ್ತಶುದ್ಧಿ ಮಾಡುವದಕ್ಕೆ ಅತ್ಯುತ್ತಮವಾದದ್ದು [illegible] ಬಾಟಲ್ ೧ಕ್ಕೆ ರೂಪಾಯಿ ೧—೦—೦

೨. [illegible] ಗುಳಿಗೆಗಳು—[illegible] ಬಾಟಲ್ ೧—೧೦—೦

೩. [illegible] ಬಾಟಲ್ ೧ಕ್ಕೆ ೧—೦—೦.

೪. [illegible] ಪೆಟ್ಟಿ ೧ಕ್ಕೆ ೧—೮—೦.

೫. [illegible]

೬. ಅದ್ಭುತ ಚಮತ್ಕಾರ—[illegible]

೭. [illegible] ಗುಳಿಗೆಗಳು.—[illegible]

೮. ದಂತ ಶುದ್ಧಿ—[illegible]

೯. ಗರ್ಭರಕ್ಷಕ ಮುಲಾಮು—[illegible]

೧೦. ಜ್ವರಗಜಸಿಂಹ ಔಷಧ ಮತ್ತು ಮುಲಾಮು.—[illegible]

೧೧. ಜ್ವರವು, ಗುಟಿಕೆ.—[illegible]

೧೨. [illegible]

ವಿಶೇಷ ಸೂಚನೆ.—[illegible]

ವಿಳಾಸ—ಡಿ ಬಿನಕರರಾವ್ ಮತ್ತು ಕಂಪೆನಿ,

[illegible]

[illegible]

ನೋಟೀಸು.

DONGRAY'S SYRUP.

೧ ಡೊಂಗರೆಯವರ "ಜೀವನಾಮೃತಸ್ವರಸ" [illegible]

[illegible]

ಡಾಕ್ಟರ್ ಕೆ. ಟಿ. ಡೊಂಗರೆ,

[illegible]

ನೋಟೀಸು.

[illegible]

ಕನ್ನಿಂಗ್‌ಹ್ಯಾಂ ಪಿಜಿಟ್ಸ್.

[illegible]

ನೋಟೀಸು.

[illegible]

THE MONEY MARKET.

ಮದರಾಸ್, ತಾರೀಖ್ ೧೫ನೇ ಫೆಬ್ರುವರಿ ೧೮೯೨.

ಬ್ಯಾಂಕ್‌ಬಿಲ್ಲುಗಳು ಯಾನೆ ದರ್ಶನಹುಂಡಿಗಳು, ರೂ|| ೧ಕ್ಕೆ 1s. 3 31/32 d.

ಸೇಕಡ ೪ರೂ. ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 105-0-0 ಇಂದ 105-6-0 ವರಿಗೆ.

ಮದರಾಸ್‌ಬ್ಯಾಂಕ್‌ಷೇರ್‌ಗಳು (500) ರೂಪಾಯಿಗಳಬಾಬತು 895 ಲಾಗಾಯತು 900

ಸವರೇನುಗಳು, 14-14-0 ಇಂದ 15-0-0 ವರಿಗೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 15, 1892.

೧೮೯೨ನೇ ಇಸವಿ ಫೆಬ್ರುವರಿ ತಾ|| ೧೫ ನೇ ಸೋಮವಾರ.

THE CITY MARKET SHOW

ಕಳೆದ ಶನಿವಾರದಿನ ಪ್ರಾತಃಕಾಲ ೭ ಘಂಟೆಯು ಮೊದಲು ಮಧ್ಯಾಹ್ನ ೧ ಘಂಟೆಯು ವರಿವಿಗೆ, ಕಳೆದ ಸಂವತ್ಸರದಲ್ಲಿ ನಡೆದಂತೆ, ಈಸಂವತ್ಸರದಲ್ಲೂ ಈ ಮಹಲ್ ಮಾರ್ಕೆಟಿನಲ್ಲಿ ಫಲಶಾಕ ಪ್ರದರ್ಶನವು ನಡೆಯಿತು. ಪೂರ್ಣಕಳಶಿಯಾಗಿಯೇ ತೋರಣ ಕದಳೀಸ್ತಂಭ ಮೊದಲಾದವುಗಳಿಂದಲಂಕೃತವಾಗಿದ್ದ ಚಪ್ಪರದಲ್ಲಿ, ಆಯಾ ಪದಾರ್ಥಗಳಿಗೆ ನಿಷ್ಕೃಷ್ಟವಾಗಿದ್ದ ಸ್ಥಳಗಳಲ್ಲಿ ಬಹುವಿಧಫಲಗಳೂ ಶಾಕಗಳೂ ಇಡಲ್ಪಟ್ಟು ನೋಡುವವರ್ಕೆ ಸಂತೋಷ ಜನಕವಾಗಿ ಕಣ್ಗೊಳಿಸುತಲಿದ್ದವು. ಮಧ್ಯಾಹ್ನ ಹನ್ನೊಂದು ಘಂಟೆಗೆ ದಿವಾನರವರು ದಯಮಾಡಿದರು. ನೇಟಿವ್ ಅಧಿಕಾರಿಗಳಪೈಕಿ ಮಹಾರಾಜರವರ ಕೌನ್ಸಿಲರ್ ಮತ್ತು ಚೀಫ್ ಜಡ್ಜಿಯವರಾದ ಮ|| ಟಿ. ಆರ್. ಎ. ತಂಬುಶೆಟ್ಟಿಗಳವರು, ರಾಯಬಹದೂರ್ ಮ. ಎ. ಸಭಾಪತಿ ಮೊದಲಿಯಾರ್ರವರು, ಡಿಪ್ಯುಟಿ ಡೆಪ್ಯುಟಿ ಕಮಿಷನರ್ ಮ|| ಮಹಮ್ಮದಲ್ಲಿ ಸಾಹೇಬರು, ಚೀಫ್ ಸೆಕ್ರೆಟರಿ ಮ|| ತಿನುವದರಾಯರವರು, ನಂದೀದುರ್ಗ ಡಿಸ್ಟ್ರಿಕ್ಟ್ ಜಡ್ಜಿಯವರಾದ ಮ|| ಟಿ. ನರಹರಿರಾಯರವರು, ರೆವಿನ್ಯೂ ಸೂಪರಿಂಟೆಂಡೆಂಟರಾದ ಮ|| ವಿ. ಎಸ್. ನರಸಿಂಹಯ್ಯಂಗಾರ್ರವರು, ದರ್ಬಾರ್ ಭಕ್ಷಿಯವರು ಮ|| ಎ. ನರಸಿಂಹಯ್ಯಂಗಾರ್ರವರು, ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಾದ ಮ|| ವಿ. ಪಿ. ಮಾಧವರಾಯರವರು, ರಿಜಿಸ್ಟ್ರಾರ್ ಜನರಲ್ ಮತ್ತು ಲೆಜಿಸ್ಲೆಟಿವ್ ಸೆಕ್ರೆಟರಿಯಾದ ಮ|| ಸಿ. ಮಿನಾಕ್ಷಿ ಅಯ್ಯರವರು, ಯೂರೋಪಿಯನ್ ಅಧಿಕಾರಿಗಳಪೈಕಿ, ಈ ಸಂಸ್ಥಾನದ ರೆಸಿಡೆಂಟರಾದ ಸರಿಹಾರಿ ಪ್ರಿಡರ್‌ಗಾಸ್ಟ್ ಸಾಹೇಬರು,ಅವರ ಅಸಿಸ್ಟೆಂಟರು,ಮಹಾರಾಜರವರ ಪ್ರೈವೆಟ್ ಸೆಕ್ರೆಟರಿಯವರಾದ ಕರ್ನಲ್‌ಕ್ಯಾಂಬಲ್‌ಸಾಹೇಬರವರುಮೊದಲಾದವರೂ ಬಂದಿದ್ದರು. ಮಧ್ಯಾಹ್ನ ಹನ್ನೆರಡು ಘಂಟೆಗೆ ಘನತೆ ಪಡೆದ ಶ್ರೀಮನ್ಮಹಾರಾಜರವರು ಅಶ್ವಾರೂಢರಾಗಿ ದಯಮಾಡುವ ಸೂಚನೆ ತಿಳಿದು ದಿವಾನರು ಮೊದಲಾದವರು ಚಪ್ಪರದ ಮುಂಬಾಗಿಲಲ್ಲಿ ಹಾಜರಿದ್ದು ಮಹಾರಾಜರವರನ್ನು ಉಚಿತ ಮರ್ಯಾದಾ ಪುರಸ್ಸರವಾಗಿ ಬರಮಾಡಿಕೊಂಡರು. ಮಹಾರಾಜರವರು ಅಶ್ವಾವರೋಹಣಾನಂತರ ಕೂದರೆ ಮಧ್ಯ ಮಂಟಪದಲ್ಲಿ ಕೆಲವು ನಿಮಿಷಗಳ ಕಾಲ ನಿಂತು ಅಲ್ಲಿ ಹಾಜರಿದ್ದ ಕೆಲವರು ನೇಟಿವ್ ಅಧಿಕಾರಿಗಳು ದೂಡಿದ ಮಂದಸ್ಮಿತಪೂರ್ವಕವಾದ ಮರ್ಯಾದೆಗಳಂ ಅಂಗೀಕರಿಸಿ ಅವರ ಪೈಕಿ ಕೆಲವರ ಕ್ಷೇಮಲಾಭಗಳಂ ಕರುಣಿತ ಶಬ್ದಗಳಿಂದ ವಿಚಾರಿಸಿದ ತರುವಾಯ ಮ|| ವಿ. ಪಿ. ಮಾಧವರಾಯರವರು ಮೊದಲಾದ ಕೆಲವರೊಡನೆ ಅಂಗಡಿ ಸಾಲುಗಳಂ ಕಟಾಕ್ಷಿಸುವದಕ್ಕಾಗಿ ದಯಮಾಡಿದರು. ಅವೆಲ್ಲವು ನೋಡಿಕೊಂಡು ಬಂದ ಬಳಿಕ ಚಪ್ಪರದಲ್ಲಿ ನಿಂತುಕೊಂಡು ದಿವಾನರವರೊಡನೆ ಕೆಲವು ನಿಮಿಷಗಳಕಾಲ ಮಾತನಾಡುತಲಿದ್ದು, ರಾಜಮಾರ್ಗಗಳಾದ ಜಾತ್ಯಶ್ವಗಳಿಂದಲಂಕೃತವಾಗಿ ಕಾಮಿರ್ಡ ರಥದಲ್ಲಿ ಬಿಜಯಂಗೈದು ದೊಡ್ಡಪೇಟೆಯ ಮಾರ್ಗವಾಗಿ ಸವಾರಿಯು ಅರಮನೆಗೆ ಚಿತ್ತೈಸಿತು. ತರುವಾಯ ಬಂದಿದ್ದ ದೊಡ್ಡ ಮನುಷ್ಯರೆಲ್ಲರು ತಮ್ಮತಮ್ಮ ಗಾಡಿಗಳಂ ಹತ್ತಿ ಸ್ವಸ್ಥಾನಗಳಿಗಾಗಿ ತೆರಳಿದರು.

ಈಗಿನ ಕಾಲಸ್ಥಿತಿಯಂ ಕುರಿತು ಯೋಚಿಸಲಾಗಿ ಈ ಪ್ರದರ್ಶನವು ಇಷ್ಟು ವಿತರಣೆಯಿಂದ ನಡೆದದ್ದಕ್ಕೆ ಈ ಷಹರ್ ಮ್ಯೂನಿಸಿಪಲ್ ಆಫೀಸ್ ಮ್ಯಾನೇಜರಾದ ಮ|| ಪಿ. ಸಾಮಿದಾಸ್ ಪಿಳ್ಳೆಯವರು ಮಾಡಿದ ಶ್ಲಾಘ್ಯವಾದ ಪ್ರಯತ್ನ ಮತ್ತು ಮಿಕ್ಕಿನತ್ತೇ ಕಾರಣವೆಂದೆಣಿಸುವೆವು.

ಈ ಸಂದರ್ಭದಲ್ಲಿ ನಾವೊಂದುವಿಷಯವನ್ನಿಲ್ಲಿ ತಿಳಿಸಬೇಕಾದುದು ಆವಶ್ಯಕವೆಂದು ಭಾವಿಸುವೆವೇನುವದೆ — ಈ ಪ್ರದರ್ಶನಕ್ಕೆ ಆಹ್ವಾನ ರೂಪವಾಗಿ ಟಿಕೆಟುಗಳು ಕಳುಹಿಸಿ ಅವುಗಳ ಆಧಾರದಮೇಲೆ ಅಲ್ಲಿಗೆ ಬಂದವರನ್ನು ಚಪ್ಪರದ ಬಾಗಿಲಲ್ಲಿ ತಡೆಮಾಡಿ ಅಗೌರವ ಪಡಿಸುವಣವೂ, ಟಿಕೆಟಿಲ್ಲದೆ ಬುಡುಬುಡಿಕೆಯರಂತೆ ವೇಷ ಹಾಕಿಕೊಂಡು ಬಂದಿದ್ದ ಕುಪ್ಪಸದ ಅಂಗಡಿಯವರನ್ನು ನಿರಾತಂಕವಾಗಿ ಒಳಕ್ಕೆ ಬಿಡುವಣವೂ, ಕೇವಲ ಹೇಳನಾಸ್ಪದವಾಗಿ ಕಾಣುತಿದೆ. ಇದು ಶಿವಾಯಿ ಈಪ್ರದರ್ಶನಕ್ಕೆ ಪದಾರ್ಥಗಳಂ ತರುತಿದ್ದವರಿಗೆ ಕೊಡಬೇಕಾದ ಇನಾಂಗಳಂ ಇಷ್ಟು ಮಾತ್ರ ಮಾಡುವದರಲ್ಲಿ ವಿವೇಚನೆ ಸಾಲದ್ದೆಂದು ಭಾವಿಸುತ್ತೇವೆ. ಬಹು ಕ್ರಮದಿಂದ ಉತ್ತಮವಾದ ಫಲ ಶಾಕಗಳಂ ತಂದಿಟ್ಟವರು ಕೆಲವರು ನಿರುತ್ಸಾಹಿಗಳಾಗಿ "ನಾವು ಪಟ್ಟ ಕಷ್ಟ ವ್ಯರ್ಥವಾಯಿತು." ಅಂದುಕೊಂಡು ಹೋದದಂ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಸಾಲಕ್ ಪ್ರೈಸ್ ಪ್ರೆಸಿಡೆಂಟರಾದ ಮ|| ಶ್ರೀನಿವಾಸಾಚಾರ್ಯರವರ ಕಾಲದಲ್ಲಿ ಅನುತ್ಸಾಹ ಕರಗಳಾದ ಇಂತಾ ಘಟನೆಗಳಿಗೆ ಅವಕಾಶ ಲೇಶವಿರುತಿರಲಿಲ್ಲವು. ಮುಖ್ಯವಾಗಿ ಇಂತಹ ವಿಶೇಷ ಸಂದರ್ಭಗಳಲ್ಲಿ ಸಂಪೂರ್ಣ ಅವಧಾನವು ಕೊಟ್ಟು ಪರಸ್ಪರದಯಾನು ರುಜನನೀಯಮ್ಮ ಪರಿಶ್ರಮಕ್ಕೆ ಪರಮ ಪ್ರಯೋಜನವೆಂದು ಭಾವಿಸಿ ಸೌಮ್ಯಭಾವದಿ ವಿವೇಚನೆಯೊಡನೆ ವರ್ತಿಸತಕ್ಕ ಪ್ರತ್ಯೇಕ ಅಧಿಸರ್ಭ್ಯರಿಗೆ ಏರ್ಪಡದೆ ಹೋಗಿರುವದೇ ಇಂತಾ ಅವ್ಯವಸ್ಥೆಗಳಿಗೆಲ್ಲ ಕಾರಣವೆಂದೆಣಿಸುತ್ತೇವೆ.

THE MYSORE CIVIL SERVICE

ಮೈಸೂರ್ ಗವರ್ನಮೆಂಟಿನಲ್ಲಿ ಭಾರೀ ಉದ್ಯೋಗಗಳಿಗೆ ಲಾಯಖಾದವರನ್ನು ಚುನಾಯಿಸಿ ನೇಮಕರಮ್ಮಾದತಕ್ಕಬಗ್ಗೆ ಅವರಿಗೆಪ್ರತ್ಯೇಕಸಿವಿಲ್ ಸರ್ವಿಸ್ ಪರೀಕ್ಷೆಯನ್ನೇರ್ಪಡಿಸಿ ಅದಂಮಹಾರಾಜರವರು ಕಳೆದ ಅಕ್ಟೋಬರ್‌ತಿಂಗಳಲ್ಲಿ ಮಂಜೂರ್ಮಾಡಿದ್ದರಷ್ಟೆ. ಪ್ರಸಕ್ತ ಯೋಜನೆಯನ್ನನುಸರಿಸಿ ಕೆಲವು ನಿಬಂಧನೆಗಳನ್ನು ಮಾಡಿ ಜಾರಿಯಲ್ಲಿ ತರುವದಕ್ಕಾಗಿ ಮೊನ್ನೆಯದಿನ ಮಧ್ಯಾಹ್ನ ದಿವಾನರವರ ಆಫೀಸ್ ಕೌನ್ಸಿಲ್ ಹಾಲಿನಲ್ಲಿ ಒಂದು ಸಭೆ ಸೇರಿತ್ತು. ಅದಕ್ಕೆ ಇಲ್ಲಿನವರಲ್ಲದೆ ಮದರಾಸಿನಿಂದ ಕೂಡ ಪ್ರಸಿದ್ಧರಾದ ಕೆಲವು ದೊಡ್ಡಮನುಷ್ಯರು ಬಂದಿದ್ದರು. ಅವರ.ಗಳ್ಯಾರೆಂದರೆ — ಪ್ರಸಕ್ತ ಸಭೆಯ ಪ್ರೆಸಿಡೆಂಟರಾದ ಡಾಕ್ಟರ್ ಡಂಕನ್‌ಯವರು, ರೆವರೆಂಡ್ ಡಾಕ್ಟರ್ ಮಿಲ್ಲರ್‌ಯವರು, ಮ|| ರಂಗನಾಥ ಮೊದಲಿಯಾರ್ರವರು. ದಿವಾನ್ ಬಹದೂರ್ ಆರ್ ರಘುನಾಥರಾಯರವರು, ಇಲ್ಲಿನ ಅಧಿಕಾರಿಗಳಲ್ಲಿ ಸದರೀ ಸಭೆಗೆ ಅರ್ಹರಾದ ಮ|| ಜೆ. ಕೂಕ್‌ಯವರು, ಮ|| ಎಲ್. ರೈಸ್‌ಯವರು, ಮ|| ಜೆ. ಭಾಭಾಯವರುಹೋಗಿದ್ದರು. ದಿವಾನರವರು ಮೀಟಿಂಗ್ ಸಮಯಕ್ಕೆ ಬಂದು ೧೦ನಿಮಿಷಗಳಕಾಲವಿದ್ದು ವಾಪಸ್‌ಹೊರಟುಹೋದರು. ಪ್ರತಿ ಮೀಟಿಂಗಿನಲ್ಲಿಯೂ ಪ್ರೆಸಿಡೆಂಟರಿಗೆ ಮೊದಲನೆಯ ಎರಡುರೂ||ಗಳೂ, ಬಂದು ಮೆಂಬರ್‌ಗಳಿಗೆ ೧೫ರೂ||ಗಳೂ ಕೊಡಲ್ಪಡತಕ್ಕದ್ದೆಂದು ನಿಷ್ಕರ್ಷೆಯಾಗಿರುತಿದೆ. ಈಕಮಿಟಿಗೆಸೇರಿರುವರೆಲ್ಲರು ಪ್ರಸಿದ್ಧ ವಿದ್ಯಾವಂತರಾಗಿಯೂ, ದೊಡ್ಡ ಅಧಿಕಾರಗಳಲ್ಲಿರುವವರಾಗಿಯೂ ಇರುತ್ತಾರೆ. ಇವರೊಡನೆ ಮದರಾಸ್ ಪ್ರೆಸಿಡೆನ್ಸಿಯ ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರ್ ಮ|| ಗ್ರಿಗ್ ಸಾಹೇಬರನ್ನು ಮೆಂಬರಾಗಿ ಸೇರಿಸಿಕೊಂಡಿದ್ದರೆ ಬಹಳ ಚೆನ್ನಾಗಿರುವದು. ಯಾತಕ್ಕೆಂದರೆ, ಅವರು ಯಾವಾಗಲು ನೂತನ ವ್ಯವಸ್ಥೆಯಲ್ಲಿ ಆಸಕ್ತರಾದುದರಿಂದ ಇಂತಾ ಯೋಜನೆಗಳಲ್ಲಿ ಶ್ಲಾಘ್ಯಗಳಾದ ಸಲಹೆಗಳು ಕೊಡುವರು. ಇಷ್ಟರವರೆ ಪ್ರತ್ಯೇಕ ಪರೀಕ್ಷೆಯನ್ನಿಟ್ಟು ಕ್ರಮಪಡುವದಕ್ಕಿಂತಲೂ ಇಂಡಿಯನ್ ಸಿವಿಲ್‌ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾದವರಲ್ಲಿ ಸಮರ್ಥರನ್ನು ಚುನಾಯಿಸಿಕೊಳ್ಳಬಹುದಾಗಿತ್ತು. ಈಗ ಏರ್ಪಾಟಾಗುವ ಪರೀಕ್ಷೆಯು ಕಾಠಿಣ್ಯದಲ್ಲಿ ಸಿವಿಲ್‌ಸರ್ವಿಸ್ ಪರೀಕ್ಷೆಗೆ ಸಮಾನವಾಗಿದ್ದರೆ ಪ್ರತ್ಯೇಕ ಪರೀಕ್ಷೆಯಿಂದ ಪ್ರಯೋಜನವಿಲ್ಲವು. ಇಂಡ್ಯ ಗವರ್ನಮೆಂಟಿನವರೀ ಸದರೀ ಪರೀಕ್ಷೆಯನ್ನು ವಜಾ ಮಾಡಬೇಕೆಂದು ಆಲೋಚಿಸುತಲಿರುವಂತೆ ತಿಳಿಯಬರುತಿದೆ. ಹೀಗಿರಲಾಗಿ ಮಹಾರಾಜಾ ಸರ್ಕಾರದವರಿಗೆ ಪ್ರತ್ಯೇಕ ಪರೀಕ್ಷೆಯನ್ನೇರ್ಪಡಿಸಿ ಅದರಲ್ಲಿ ವಿಶೇಷದಿಂದಿರ್ವ್ಯವ ತೋರ್ಪಡಿಸಿ ಸಮರ್ಥರನ್ನಿಸಿಕೊಂಡವರೇ ಆವಶ್ಯಕವಾಗಿರುವಂತೆ ಕಾಣುತಿದೆ. ಮುಂದೆ ಇಲ್ಲಿನ ನೌಕರಿಗಳು ಬ್ರಿಟಿಷ್ ಗವರ್ನಮೆಂಟಿ ನೌಕರಿಗಳಿಗಿಂತ ಶ್ರೇಷ್ಠವಾಗಿರಬಹುದೆಂದೆಣಿಸುತ್ತೇವೆ ಮುಖ್ಯವಾಗಿ ಸಮರ್ಥರಾದ ನೌಕರರ ದೊರೆಯುವ ವಿಷಯದಲ್ಲಿ ಬ್ರಿಟಿಷ್‌ಗವರ್ನಮೆಂಟಿನವರಿಗಿಂತಲೂ ಮಹಾರಾಜಾಸರ್ಕಾರಕ್ಕೆ ಪೌರ್ಲಭ್ಯತ್ರೂ ಸ್ಥಿರಾಸನ್ನೂ ಅಧಿಕವಾಗಿ ಈರೀತಿಯಾ ಯೋಜನೆಗೆ ಮುಕುಂಕೊಟ್ಟಾರೆ ಕಾಣುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Wedding in a royal family. — ಬಾವನಗರ್ ಸಂಸ್ಥಾನದ ಮಹಾರಾಜರವರ ಪುತ್ರಿಯವರಿಗೆ ವಿವಾಹಕ್ಕೆ ನಿಶ್ಚಯವಾಗಿರುವಂತೆಯೂ ಸದರೀ ಶುಭಕ್ಕಾಗಿ ಹದಿನಾರುಲಕ್ಷ ರೂ|| ಗಳು ವ್ಯಯ ಮಾಡಲ್ಪಡುವದೆಂತಲೂ ಒಂದಾನೊಂದು ಪತ್ರಿಕೆ ತಿಳಿಸುತಿದೆ.

Discovery of old records. — ಸ್ವತಂತ್ರಾಧಿಕಾರವುಳ್ಳ ತಿಪರಾ ಸಂಸ್ಥಾನದಲ್ಲಿ ಈಚೆಗೆ ಸುಮಾರ್ ೭೦೦ ವರ್ಷಗಳ ಕೆಲವು ಹಳೇಕಾಗದ ಪತ್ರಗಳು ದೊರೆತು, ತನ್ಮೂಲಕ ಬಂಗಾಳೆ ಮತ್ತು ಉತ್ತರ ಇಂಡಿಯಾ ದೇಶಗಳ ಪೂರ್ವ ಚರಿತ್ರೆಗಳು ಬಹಳಮಟ್ಟಿಗೆ ಹೊರಗಾಗಿರುತಿವೆ.

Mr. A. H. T Martindale. — ಕೆಲವು ಸಂವತ್ಸರಗಳ ಹಿಂದೆ ಇಲ್ಲಿ ಸ್ವಲ್ಪ ಕಾಲ ಅಸಿಸ್ಟೆಂಟರಾಗಿದ್ದ ಮ|| ಎ. ಹೆಚ್. ಟಿ. ಮಾರ್ಟಿನ್‌ಡೇಲ್ ಯವರು, ಈಗ ಇಂಡ್ಯ ಗವರ್ನಮೆಂಟ್ ಫಾರಿನ್ ಇಲಾಖೆಯಲ್ಲಿ ಸ್ಪೆಷಿಯಲ್ ಡ್ಯೂಟಿಯಮೇಲೆ ನಿಯಮಿಸಲ್ಪಟ್ಟಿದ್ದಾರೆಯಷ್ಟೆ. ಇವರು ಬಹುಶಃ ಅಜಮಿಯರ್ ಕಮಿಷನರಾಗಿ ಆಕ್ಟಿಂಗ್ ತರೀಖ್ ನೇಮಕರಮ್ಮಾದಲ್ಪಡುವರೆಂದಲೂ, ಅಲ್ಲಿನ ಕಾಯಂ ಕಮಿಷನರ್ ಕರ್ನಲ್ ಬಿಡಲ್ಫ್ ಯೆಂಬವರು ಗ್ವಾಲಿಯರ್ ಸಂಸ್ಥಾನದ ರೆಸಿಡೆಂಟರಾಗಿ ನಿಯಮಿಸಲ್ಪಡುವರೆಂತಲೂ ತಿಳಿಯಬರುತಿದೆ.

Liberality of a Parsee gentleman. — ಮುಂಬೈಯಲ್ಲಿ ಪ್ರಸಿದ್ಧ ಸಾಹುಕಾರರಾದ ಸರ್ ದಿನ್ಷಾ ಮಾನಕ್‌ಜಿ ಪೆಟಿಟ್ ಯೆಂಬ ದೊಡ್ಡಮನುಷ್ಯರು ಪುನೇಯಲ್ಲಿ ಧರ್ಮಾರ್ಥ ಒಂದು ವೈದ್ಯಶಾಲೆಯಂ ಕಟ್ಟುವದಕ್ಕಾಗಿ ೧೦,೦೦೦ ರೂಪಾಯಿಗಳು ತಾವು ಕೊಡುವದಾಗಿ ವಾಗ್ದಾನ ಮಾಡಿದರೆಂದು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಸದರೀ ಮೊಬಲಗನ್ನು ಪುನೇ ಕಂಟೋನ್ಮೆಂಟ್ ಕಮಿಟಿಯವರು ಅಂಗೀಕರಿಸಿದರಲ್ಲದೆ, ಅದಕ್ಕೆ ಬೇಕಾದ ಜಮೀನನ್ನು ಕೊಟ್ಟು ಅದರ ಪೋಷಣೆಯಂ ತಾವು ವಹಿಸುವದಾಗಿ ಗವರ್ನಮೆಂಟಿನವರು ಒಪ್ಪಿಕೊಳ್ಳುವರು.

Tramway in Madras. — ಮದರಾಸಿನೊಳು ಟ್ರಾಂವೆ (ಬೀದಿಗಳಲ್ಲಿ ಹಾಕಲ್ಪಡುವ ಸಣ್ಣ ರೈಲುರಸ್ತೆ) ಹಾಕುವದಕ್ಕಾಗಿ ಮೆಸ್ಸರ್ಸ್ ಹಚ್ಚಿನ್ಸ್ ಕಂಪೆನಿಯವರು ಕೊಟ್ಟ ದರಖಾಸ್ತನ್ನು ಗವರ್ನಮೆಂಟಿನವರು ಅಂಗೀಕರಿಸಿ ಸದರೀ ರಸ್ತೆಯನ್ನು ಹಾಕತಕ್ಕದ್ದೆಂದು ಅವರು ಕೊಟ್ಟ ಹುಕುಮಿನ ನಕಲು ಕಳೆದವಾರದ ಮದರಾಸ್ ಗವರ್ನಮೆಂಟ್ ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುತಿದೆ. ಇದರಿಂದ ಸ್ವಲ್ಪ ಕಾಲದೊಳಗಾಗಿ ಮದರಾಸಿನಲ್ಲಿ ಬೀದಿ ಬೀದಿಗೂ ರೈಲ್ ಗಾಡಿಗಳಮೇಲೆ ಜನಗಳು ತಿರುಗಾಡುವದನ್ನು ನೋಡಬಹುದೆಂದು ತೋರುತಿದೆ.

A princely liberality. — ಘನವೆತ್ತ ಇಂದೂರಿನ ಹೋಲ್ಕರ್ ಮಹಾರಾಜರವರು ಮದರಾಸ್ ರೆವಿನ್ಯೂ ಬೋರ್ಡಿಗೆ ೪,೦೦೦ ರೂ., ಪುನೆ, ಸೋಲಾಪುರ, ಸತಾರಾ, ಧಾರ್ವಾಡ, ಈ ಡಿಸ್ಟ್ರಿಕ್ಟ್ ಕಲೆಕ್ಟರ್‌ಗಳಿಗೆ ಫೀ ಇಸಂ ೧,೫೦೦ ರೂ., ಅಹಮದ ನಗರದ ಕಲೆಕ್ಟರ್‌ಬಳಿಗೆ ೧,೦೦೦ ರೂಪಾಯಿಗಳು, ಈಪ್ರಕಾರ ಕಳುಹಿಸಿ, ಸದರೀ ಮೊಬಲಗುಗಳ ಪೈಕಿ ಸೇಕಡ ೬೦ ರೂಪಾಯಿಗಳು ದನಗಳ ಪೋಷಣೆಯಬಗ್ಗೆ, ೪೦ ರೂಪಾಯಿಗಳು ದುರ್ಭಿಕ್ಷ ಪೀಡಿತರಾದ ಬಡವರ ವಿಷಯದಲ್ಲೂ ಉಪಯೋಗಿಸತಕ್ಕದ್ದೆಂದು ಅಪೇಕ್ಷಿಸಿದಂತೆ ಕೇಳಿ ಬಹಳ ಸಂತೋಷಿಸುತ್ತೇವೆ.

A question of limitation. — ಈಚೆಗೆ ಮದರಾಸ್ ಸ್ಮಾಲ್‌ಕಾಜ್ ಕೋರ್ಟಿನೊಳು ಲಿಮಿಟೇಷನ್ ವಿಷಯದಲ್ಲಿ ಒಂದು ಪಕ್ಷ್ನವುಂಟಾಗಿ ಅದು ಸದರೀ ಕೋರ್ಟಿನ ಜಡ್ಜಿಯವರಾದ ಮ|| ಕೃಷ್ಣಸಾಮಿ ಪಿಳ್ಳೆಯವರಿಂದ ವ್ಯವಸ್ಥೆ ಮಾಡಲ್ಪಟ್ಟಿತು, ಹ್ಯಾಗಂದರೆ — ಒಂದು ಪಕ್ಷದವರು ಪ್ರತಿವಾದಿಯಾದವರು ಮೂರನೆ ವರ್ಷದ ಮುಟ್ಟಿದ ಸನ್ಮಾರ್ಗವಾದ್ರವೇ ತನಗೆ ಸಾಲ ಕೊಟ್ಟಿತು, ಅದು ಮುಟ್ಟಿದ ತಾರೀಖ್ ನಾಮದ ತ್ರಿದತಾರೀಖಿಗೆ ಮೂರು ವರ್ಷಗಳು ಮೀರಿದವರಿಂದ ಕಾಲದೋಷಕ್ಕೆ ಒಳಪಟ್ಟಿತೆಂತಲೂ ವಾದಿಸಿದರು. ಮೊದಲು ಮುಟ್ಟಿದ ಸಮ್ಮನ್ ಜಾರೀ ಆಗದೆ ಹೋದಾಗ್ಯೂ ಮೂರುವರ್ಷಗಳೊಳಗಾಗಿರುವದರಿಂದ ದಾವಾಕ್ಕೆ ಕಾಲದೋಷ ಪ್ರಾಪ್ತವಾಗಲಿಲ್ಲ ತೀರ್ಪು ಜಡ್ಜಿಯವರು ಅಭಿಪ್ರಾಯ ಪಟ್ಟರು.

LOCAL AND PROVINCIAL NEWS.
ಸ್ಥಳವೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು

The Resident. — ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರಿಹಾರಿ ಪ್ರಿಡರ್‌ಗಾಸ್ಟರವರು ಬರುವ ಏಪ್ರೆಲ್ ತಿಂಗಳ ಮಧ್ಯಭಾಗದವರಿವಿಗೆ ರೆಸಿಡೆಂಟ್ ಕೆಲಸದಿಂದ ನಿವೃತ್ತರಾಗುವ ಸಂಭವವಿಲ್ಲವೆಂಬದಾಗಿ ಅಲಹಾಬಾದ್ ಪಯೋನಿಯರ್ ಪತ್ರಿಕೆಯು ಖಚಿತವಾಗಿ ತಿಳಿಸುತಿದೆ.

The Cotton Mill. — ಮೈಸೂರ್ ಮಹಾರಾಜರವರ ಅರಳೆ ಕಂಪ್ನಿ ಮತ್ತು ರೇಷ್ಮೆ ಕಾರ್ಖಾನೆಗಳಲ್ಲಿ ಅಂಡರ್ ಸೆಕ್ರೆಟರಿ ಮ|| ಎಂ. ನಾರಾಯಣರಾಯರವರನ್ನೂ ಅಸಿಸ್ಟೆಂಟ್ ಕರ್ನಲ್ ಮ|| ಹೆಚ್. ಹ್ಯಾರಿಸ್ ಯವರನ್ನೂ ಗವರ್ನಮೆಂಟ್ ತರಫ್ ಡೈರೆಕ್ಟರ್‌ಗಳಾಗಿ ನೇಮಕರಮ್ಮಾದಿರುವಂತೆ ಸರ್ಕಾರದವರು ತಿಳಿಸಿರುತ್ತಾರೆ.

The Huzur Treasury. — ಹುಜೂರ್‌ಖಜಾನೆಯ ವಿಷಯದಲ್ಲಿ ಮೈಸೂರ್ ಸರ್ಕಾರದವರು ಕೆಲವು ಬದಲಾವಣೆಗಳನ್ನು ಮಾಡಲುದ್ದೇಶಿಸಿರುವಂತೆ ಕೇಳುತ್ತೇವೇನಂದರೆ: — ಖಜಾನೆಯನ್ನೂ ಅದಕ್ಕಾಗಿ ಯೋಜಿತವಾಗಿರುವ ಪ್ರತ್ಯೇಕ ಶಿಬ್ಬಂದಿಯನ್ನೂ ವಜಾ ಮಾಡಿ ಇನ್ನುಮೇಲೆ ವಿಶಿಷ್ಟ ಹಣವನ್ನು ಮದರಾಸ್ ಬ್ರಾಂಚ್ ಬ್ಯಾಂಕಿನಲ್ಲೇ ಜಮಾಯಿಸತಕ್ಕದ್ದೆಂತಲೂ, ಅಲ್ಲಿಯೇ ಜಮಾಖರ್ಚು ನಡೆಯತಕ್ಕದ್ದೆಂತಲೂ ಏರ್ಪಾಟು ಮಾಡಬೇಕೆಂಬದು. ಈ ಯೋಜನೆಯು ಎಷ್ಟರ ಮಟ್ಟಿಗೆ ಶ್ಲಾಘ್ಯವಾಗಿರುವುದೋ ನೋಡಬೇಕು.

The Resident's Tour. — ಮೈಸೂರ್ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರಿಹಾರಿ ಪ್ರಿಡರ್ ಗಾಸ್ಟ್, ಕೆ. ಸಿ. ಎಸ್. ಐ. ಸಿ. ಐ. ಇ. ಯವರು, ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರಾದ ಕೆಪ್ಟನ್. ಸಿ. ಡಬ್ಲ್ಯು. ರಾವೆನ್‌ಷಾಯವರೊಡನೆ ಗತ ಶನಿವಾರದ ದಿನ ಮಧ್ಯಾಹ್ನ ದಕ್ಷಿಣ ಮಹಾ

ರಾಪ್ಟ್ರ) ರೆಯಿಲ್ ಮಾರ್ಗವಾಗಿ ಹಾಸನ ಡಿಸ್ಟ್ರಿಕ್ಟಿಗೆ ಸರಿಕ್ಷ್ಯಾವೆ ದಯಮಾಡಿದರು. ರೆಸಿಡೆಂಟರವರು ಬಾಣಾವಾರದ ತನಕ ರೆಯಿಲ್ ಮಾರ್ಗದಲ್ಲಿ ಹೋಗಿ ಅಲ್ಲಿಂದ ಹಳೇಬೀಡುವಗ್ಯೆರೆ ಪ್ರದೇಶಗಳಿಗೆ ದಯಮಾಡುವರೆಂದು ಕೇಳುತ್ತೇವಲ್ಲದೆ ಇವರು ವಾಪಸ್ ಬರಲಿಕ್ಕೆ ಸುಮಾರ್ ಹತ್ತು ಹನ್ನೆರಡು ದಿನಗಳು ಹಿಡಿಯಬಹುದೆಂದು ತೋರುತಿದೆ.

Theft in a railway carriage.— ಗತ ಗುರುವಾರದ ದಿನ ಸಾಯಂಕಾಲ ಮದರಾಸಿನಿಂದ ಹೊರಟ ಮೆಯಿಲ್ ಟ್ರೈನಿನಲ್ಲಿ ಪ್ರಯಾಣ ಹೊರಟು ಈ ಊರಿಗೆ ಬಂದ ರೆಡ್ಡಿ ವ್ಯಾಪಾರ ಮಾಡುವ ಮಂಜುನಾಥ ನರಸಿಂಹುಲು ಶೆಟ್ಟಿ ಯೆಂಬಾತನು, ಇಲ್ಲಿನ ಕಂಟೋನ್ಮೆಂಟ್ ಸ್ಟೇಷನಿನಲ್ಲಿ ಗಾಡಿ ನಿಂತ ಬಳಿಕ, ತನ್ನ ಕೆಮಿಸ್ ಚೀಲವನ್ನು ನೋಡಲಾಗಿ ಅದರ ಬಾಯಿ ಕೊಯ್ಯಲ್ಪಟ್ಟಿದ್ದಂತೆ ಕಂಡುಬಂತು. ಅಲ್ಲಿಯೇ ಅದು ತೆಗೆದು ನೋಡಲಾಗಿ ಅದರೊಳಗಿದ್ದ ೧೯೦೦ ರೂಪಾಯಿಗಳ ಕರೆನ್ಸಿ ನೋಟುಗಳು ಕಾಣದೆ ಹೋದವು. ಇವು ಹಿಂದಿನ ರಾತ್ರಿಯಲ್ಲಿ ಯಾವಾಗ ಯಾರಿಂದ ಅಪಹರಿಸಲ್ಪಟ್ಟವೋ ತಿಳಿಯಲಿಲ್ಲ. ಸದರೀ ನೋಟುಗಳೊಡನೆ ೧೮ ರೂಪಾಯಿಗಳ ನಗದು, ಕೆಲವು ಆಭರಣಗಳೂ ಕಳವಾಗಿರುವುವೆಂದು ಪೋಲೀಸಿನವರಿಗೆ ರಿಪೋರ್ಟ್ ಮಾಡಿರುವನಾಗಿ ಕೇಳುತ್ತೇವೆ.

Mr. Basappaji Urs.—ಮಾರ್ಚಿ ಮಾಹೆ ೧೮ ನೇ ತಾರೀಖು ಚಾಮರಾಜಪುರದಲ್ಲಿ ನಡೆಯತಕ್ಕ ವಿವಾಹ ಮಹೋತ್ಸವಕ್ಕೆ ದಯಮಾಡಬೇಕೆಂಬದಾಗಿ, ಶ್ರೀಮನ್ ಮಹಾರಾಜರವರು ಮದರಾಸಿನಲ್ಲಿದ್ದ ಕಾಲದಲ್ಲಿ ಲಗ್ನ ಪತ್ರಿಕೆಯು ಕಳುಹಿಸಲ್ಪಟ್ಟಿತ್ತಷ್ಟೆ. ಅದಕ್ಕೆ ಮಹಾರಾಜರವರು ಸ್ವತಃ ದಯಮಾಡಲಿಕ್ಕೆ ಅನುಕೂಲಿಸದೆ ಹೋದುದರಿಂದ ತಮ್ಮ ಪ್ರತಿನಿಧಿಯಾಗಿ ತಮ್ಮ ಭಾವಮೈದುನರಾದ ಮಿ|| ಬಸಪ್ಪಾಜಿ ಅರಸರವರನ್ನು ಪರಿಮಿತ ಪರಿಜನರೊಡನೆ ಸದರೀ ವಿವಾಹ ಮಹೋತ್ಸವಕ್ಕೆ ಹೋಗಿಬರುವಂತೆ ಆಜ್ಞಾಪಿಸಿದ ಪ್ರಕಾರ ಅವರು ಆದಿತ್ಯವಾರದ ದಿವಸ ಮುಂಜಾನೆ ಮಾರ್ಗವಾಗಿ ಧರ್ಮಪುರಕ್ಕೆ ಪ್ರಯಾಣ ಮಾಡಿದರೆಂದು ತಿಳಿಯಬರುತಿದೆ.

Appointment.—ಕೆಲವ ಲ್ಯಾಬರ್ ಆಫೀಸಿನಲ್ಲಿ ಅಕೌಂಟೆಂಟರಾಗಿದ್ದ ಮಿ|| ಕೃಷ್ಣಸ್ವಾಮಿರಾವ್ ಬಿ. ಎ., ಯವರು ಮಾಹೆಯಾನಾ ೭೦ ರೂಪಾಯಿಗಳ ಸಂಬಳದಲ್ಲಿ ರೆವಿನ್ಯೂ ಪ್ರೊಬೇಷನರಾಗಿ ನೇಮಿಸಲ್ಪಟ್ಟು ದಿವಾನರವರ ಆಫೀಸಿನಲ್ಲಿ ಚೀಫ್ ಸೆಕ್ರೆಟರಿಯವರ ಬಳಿ ಕೆಲಸ ನೋಡತಕ್ಕದ್ದೆಂದು ಹುಕುಮಾಗಿರುವಂತೆ ಕೇಳಿ ಸಂತೋಷಿಸುತ್ತೇವೆ. ಇವರು ಬಿ. ಎ. ಕ್ಲಾಸ್ ಮಾಡಿ ಐದಾರು ಸಂವತ್ಸರಗಳಾದಾಗ್ಯೂ ಇದುವರಿವಿಗೆ ಇವರಿಗೆ ತಕ್ಕ ಪ್ರೋತ್ಸಾಹಕವಿಲ್ಲದಿದ್ದಂತೆ ಕಾಣುತಿದೆ. ಇವರು ಬೆಂಗಳೂರು ಡಿವಿಜನ್ ಸಾಬಕ್ ಹೆಡ್ ಮಾಸ್ತರರಾಗಿದ್ದು ಈ ಸಂಸ್ಥಾನದಲ್ಲಿ ಬಹುಕಾಲ ನೌಕರಿ ಮಾಡಿ ಪ್ರಸಿದ್ಧಿಯನ್ನೈದಿದ್ದ ಗುಂಡ್ಲುಪೇಟೆ ಸುಬ್ಬರಾಯರ ಪೌತ್ರರಾಗಿಯೂ ಕೆಲವು ಸಂವತ್ಸರಗಳ ಹಿಂದೆ ಮೃತರಾಗಿದ್ದ ಗತಿಸಿದ ವೆಂಕಟಸುಬ್ಬರಾಯರವರ ಪುತ್ರರಾಗಿಯೂ ಇರುತ್ತಾರೆ. ಈಗಿನ ಕಾಲದಲ್ಲಿ ಸರ್ಕಾರ ನೌಕರಿಗೆ ಆವಶ್ಯಕಗಳಾಗಿರುವ ಗುಣಗಳೆಲ್ಲಾ ಇವರು ಪಡೆದಿರುವದರಿಂದ ಶೀಘ್ರದಲ್ಲಿ ಅಭಿವೃದ್ಧಿಯೊಳು ಬರುವದರಲ್ಲೇನೂ ಸಂಶಯವಿರಲಾರದು.

The season and prospects.—ಬೆಂಗಳೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ತಮ್ಮ ಡಿಸ್ಟ್ರಿಕ್ಟಿನ ಪ್ರಸ್ತುತ ಕಾಲಸ್ಥಿತಿಯಂ ಕುರಿತು ಗವರ್ನಮೆಂಟಿಗೆ ಬರೆದಿರುವ ರಿಪೋರ್ಟನ್ನು ಎಲ್ಲರೂ ತಿಳಿಯತಕ್ಕದ್ದು ಆವಶ್ಯಕವಾಗಿರುವದರಿಂದ ಅದರ ಸಾರಾಂಶವನ್ನಿದರಡಿ ಪ್ರಕಟಿಸುತ್ತೇವೆ:—ಬೆಂಗಳೂರಿನಲ್ಲಿ ದನಗಳಿಗಾದ ಘಾಸುಕುಚಟಗಳ್ಯಾವದೂ ಇಲ್ಲದ್ದು ಬಿಸ್ತರ ಸಂಖ್ಯೆಯೇನೂ ಕಂಡುಬಂದ ವೃದ್ಧಿಯಾಗಲಿಲ್ಲವು. ಈಗ್ಯೆ ಬಂದುತಿಂಗಳ ಕಾಲವಾಗಿ ರೂಪಾಯಿ ಒಂದಕ್ಕೆ ಅಕ್ಕಿ ೭—೮ ಸೇರುಗಳ ಪ್ರಮಾಣವಾಗಿಯೂ, ರಾಗಿ ೧೩—೧೪ ಸೇರುಗಳ ಪ್ರಮಾಣವಾಗಿಯೂ ಒಂದೇ ವಿಧವಾಗಿ ಮಾರಲ್ಪಡುತಲಿವೆ. ಅಂಗಡಿ ಬೀದಿಗಳಲ್ಲಿ ಜಿನಿಸಿಗಳು ಬೇಕಾದಷ್ಟು ದೊರೆಯುತಿವೆ. ರಾಗಿ ರಬ್ಬಿ ಬೆಳೆಗಳು ಸ್ವಲ್ಪ ಕಡಿಮೆಯಾಯಿತು. ಪಟ್ಟಣದಲ್ಲಿ ಕೂಲಿಮಾಡಿ ಜೀವಿಸತಕ್ಕವರಿಗೆ ಕೂಲಿ ಕೆಲಸಗಳು ಬೇಕಾದಷ್ಟು ದೊರೆಯುತಿವೆ. ಷಹರಿಗೆ ಜಲದ ಸತಿಯನ್ನೂ ಆರೋಗ್ಯಾಭಿವೃದ್ಧಿಯನ್ನೂ ಉಂಟುಮಾಡುವ ಬಗ್ಗೆ ಕೆಲವು ಹೊಸ ಕಾಮಗಾರಿಗಳು ಮಾಡಿಸುವಂತೆ ಉದ್ದೇಶಿಸಲ್ಪಟ್ಟಿರುತಿದೆ. ಷಹರಿನ ಪಶ್ಚಿಮ ಭಾಗವನ್ನು ಬಡಾಯಿಸುವ ತಾತ್ಪರ್ಯದೊಡನೆ ೪೦೦ ನಿವೇಶನಗಳಂ ನಿರ್ಮಿಸಿ ಕ್ರಯಕ್ಕೆ ಕೊಡುವದರಿಂದ ಊರೊಳಗೆ ಮನೆಗಳಂ ಕಟ್ಟಿಕೊಳ್ಳಲಿಕ್ಕೆ ಅನುಕೂಲವಿಲ್ಲದವರು ಬಡಾವಣೆಯೊಡನೆ ಅದಂ ತೆಗೆದುಕೊಳ್ಳುವರು. ಈಗ ಉದ್ದೇಶಿಸಿರುವ ಕಾಮಗಾರಿಗಳಲ್ಲಿ ಮೊದಲನೆಯದು, ಅರಳೇಪೇಟೆಯ ಚರಂಡಿಯನ್ನು ಅಗ್ರಹಾರದ ಕೆರೆಗೆ ತಿರುಗಿಸುವದು. ಎರಡನೆಯದು, ಕೋಟೆಯ ಕಂದಕವನ್ನು ಮುಚ್ಚಿಸಿಬಿಡುವದು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜಾ ರವರ ಗವರ್ನಮೆಂಟ್ ಕಚೇರಿಯಿಂದ ಹೊರಡಿಸಲ್ಪಟ್ಟ ಪ್ರಕಟನೆಗಳು.

ನಂ ೪೦೩, ತಾ|| ೬ನೇ ಫೆಬ್ರುವರಿ ೧೮೯೨.—ಅಸಿಸ್ಟೆಂಟ್ ಸರ್ಜನ್ ಪಿ. ರಾಮಾನುಜುಲು ನಾಯುಡು ಎಲ್. ಎಂ. ಎಸ್. ಯವರು ೩ನೇ ಗ್ರೇಡಿನಲ್ಲಿ ೭ ಸಂವತ್ಸರಗಳ ನೌಕರಿಯನ್ನು ಪೂರೈಸಿರುವದರಿಂದ ೧೮೯೧ನೇ ಇಸವಿ ನವಂಬರ್ ೧೮ನೇ ತಾರೀಖಿನಿಂದಾಗಾಯ್ತು ೨ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಂತೆ ಭಾವಿಸಲ್ಪಡುವುದು.

ನಂ|| ೪೨೯, ತಾ|| ೩ನೇ ಫೆಬ್ರುವರಿ ೧೮೯೨.—ಇದರಡಿ ಕಂಡ ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟು ಮಂಜೂರಾಗಿರುತಿವೆ. ಡಾಕ್ಟರ್ ಎ. ಎಸ್. ಪಳನೀಯಾಂಡಿ ಪಿಳ್ಳೆಯವರು ಕಾಹಿಲೆಯಾಗಿರುವಂತೆ ರಜಾ ಬರುವದರಿಂದ ಅವರಿಗೆ ಬದಲು ಸಿವಿಲ್ ಸರ್ಜನ್ ಮಿ|| ಪಿ. ಎಸ್. ಅಚ್ಯುತರಾಯರವರು ಶಿವಮೊಗ್ಗೆಯಿಂದ ಚಿಕ್ಕಮಗಳೂರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಬೆಂಗಳೂರು ಸೆಂಟ್ ಮಾರ್ಥಾಯವರ ಆಸ್ಪತ್ರೆಗೆ ಡ್ಯೂಟಿಗಿರುವ ಸಬ್ ಅಸಿಸ್ಟೆಂಟ್ ಸರ್ಜನ್ ಬಿ. ಡಿ. ರಾಘವೇಂದ್ರರಾಯರವರು, ಮಿ|| ಅಚ್ಯುತರಾಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿವಮೊಗ್ಗೆಯಲ್ಲಿ ಸಿವಿಲ್ ಸರ್ಜನ್ ಕೆಲಸವನ್ನು ಆಕ್ಟಿಂಗ್ ತರೀಕ ನೋಡತಕ್ಕದ್ದು.

ನಂ|| ೪೩೦, ತಾ|| ೪ನೇ ಫೆಬ್ರುವರಿ ೧೮೯೨.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ ೧೭೦ನೇ ಸೆಕ್ಷನ್ ಅನುಸರಿಸಿ ಕೋಲಾರ್ ಗೋಲ್ಡ್ ಫೀಲ್ಡ್ಸ್‌ಗಳ ಸ್ಪೆಷಿಯಲ್ ಮ್ಯಾಜಿಸ್ಟ್ರೇಟರಾದ ಮಿ|| ಜೆ. ಡಬ್ಲ್ಯು. ಗ್ರೈಮ್ಸವರಿಗೆ, ೧೮೯೨ನೇ ಇಸವಿ ಫೆಬ್ರುವರಿ ೧ನೇ ತಾರೀಖಿನಿಂದಾಗಾಯ್ತು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೪೩೧, ತಾ|| ೫ನೇ ಫೆಬ್ರುವರಿ, ೧೮೯೨.—ಮೈಸೂರ್ ರೆವಿನ್ಯೂ ಸರ್ವೆ ಡೆಪ್ಯುಟಿ ಸೂಪರಿಂಟೆಂಡೆಂಟ್ ಕರ್ನಲ್ ಜೆ. ರದರ್‌ಫರ್ಡ್ ಯವರಿಗೆ ೧೮೯೨ನೇ ಇಸವಿ ಮಾರ್ಚಿ ೫ನೇ ತಾರೀಖಿನಿಂದಾಗಾಯ್ತು ಅಥವಾ ಅವರುಪಯೋಗಿಸಿಕೊಳ್ಳಬಹುದಾದ ಆ ತರುವಾಯ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೪೩೨, ತಾ|| ೬ನೇ ಫೆಬ್ರುವರಿ ೧೮೯೨.—ಶಿಕಾರಿಪುರದ ಸಬ್ ಡಿವಿಜನ್ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ. ಎಂ. ವೆಂಕಟನಾರಣಪ್ಪನವರಿಗೆ, ೧೮೯೨ನೇ ಇಸವಿ ಫೆಬ್ರುವರಿ ೨ನೇ ತಾರೀಖಿನಿಂದಾಗಾಯ್ತು ಅಥವಾ ಅವರುಪಯೋಗಿಸಿ ಕೊಳ್ಳುವ ತಾರೀಖ್ ಮೊದಲು ೨ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ನಂ ೪೩೩, ತಾ ೯ನೇ ಫೆಬ್ರುವರಿ ೧೮೯೨.—ಮಿಲಿಟರಿ ಸೆಕ್ರೆಟರಿಯವರ ಆಫೀಸ್ ಮ್ಯಾನೇಜರ್ ಮಿ|| ಜೆ. ಹೌಸಿಯವರು, ಮಿಲಿಟರಿ ಸೆಕ್ರೆಟರಿಯವರಿಗೆ ಪರ್ಸನಲ್ ಅಸಿಸ್ಟೆಂಟರಾಗಿಯೂ, ಅಮೃತಮಹಲ್ ಇಲಾಖಾ ಇನ್‌ಚಾರ್ಜ್ ಆಫೀಸರಾಗಿಯೂ, ಮೇಜರ್ ಎ. ಜೆ. ಪ್ಯಾಕ್‌ಮನ್‌ರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ನೌಕರರಾಗ್ಯೆದಲ್ಪಟ್ಟಿರುತ್ತಾರೆ.

ನಂ|| ೪೩೪—ನಗರ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರ್ ಮಿ|| ಎಂ. ರಾಮರಾಯರವರು ನಂಜನಗೂಡ್ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ಬೆಂಗಳೂರಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಅಡ್ವೊಕೇಟ್ ಮಿ|| ಸುಂದರಯ್ಯನವರು ನಗರವಾದ ಮಿ|| ರಾಮರಾಯರಿಗೆ ಬದಲಾಗಿ ನಗರ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನೌಕರರಾಗ್ಯೆದಲ್ಪಟ್ಟಿರುತ್ತಾರೆ.

ನಂ|| ೪೩೫—ತಿಪಟೂರ್ ತಾಲ್ಲೂಕ್ ಅಮಲ್ದಾರ್ ಲಕ್ಷ್ಮಣರಾಯರಮೇಲೆ ತರಲ್ಪಟ್ಟಿರುವ ಕೆಲವು ಚಾರ್ಜಿಗಳು ವಿಚಾರಣೆಯಾಗಿ ವ್ಯವಸ್ಥೆಯಾಗುವ ತನಕ ಸಸ್ಪೆಂಡ್ ಮಾಡಲ್ಪಟ್ಟಿರುತ್ತಾರೆ. ಕೂಡಲೇ ಇವರು ಕೆಲಸದಿಂದ ನಿವೃತ್ತರಾಗತಕ್ಕದ್ದು. ಚಿತ್ರದುರ್ಗ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಪೋಲೀಸ್ ಇನ್ಸ್‌ಪೆಕ್ಟರ್ ಬಿ. ಹನುಮಂತರಾಯರವರು ಲಕ್ಷ್ಮಣರಾಯರವರ ಗೈರುಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತಿಪಟೂರ್ ತಾಲ್ಲೂಕ್ ಅಮಲ್ದಾರ್ ಮತ್ತು ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ ನೌಕರರಾಗ್ಯೆದಲ್ಪಟ್ಟಿರುತ್ತಾರೆ. ಇವರು ಕೂಡಲೇ ಹೋಗಿ ಕೆಲಸದ ಮೇಲೆ ಹಾಜರಾಗತಕ್ಕದ್ದು.

NEWS LETTERS.
ವೃತ್ತಾಂತ ಪತ್ರಿಕೆಗಳು.

ತಿರುಪತಿ, ತಾ|| ೧೫ನೇ ಫೆಬ್ರುವರಿ ೧೮೯೨.

ಅಯ್ಯಾ,—ಶ್ರೀಮಂತ ದಿವಾನ್ ಪೂರ್ಣಯ್ಯನವರ ಮೊಮ್ಮಕ್ಕಳಾದ ಶ್ರೀಮಂತ ಯಳಂದೂರ್ ಜಹಗೀರದಾರ್ ಮೈಸೂರ್ ಚೀಫ್ ಕೋರ್ಟ್ ಜಡ್ಜಿಯವರಾದ ಕೃಷ್ಣಮೂರ್ತಿರಾಯರವರೂ, ಶ್ರೀಮಂತ ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಪೂರ್ಣಯ್ಯನವರು ಸಹ ಸಂಸಾರ ಸಮೇತರಾಗಿ ಜನವರಿ ೩೧ನೇ ತಾರೀಖ್ ಸ್ಥಿರವಾರ ಪ್ರಾತಃಕಾಲ ೭ ಘಂಟೆಗೆ ತಿರುಪತಿ ಸ್ಟೇಷನ್ನಲ್ಲಿ ಇಳಿದರು. ಆ ಕಾಲಕ್ಕೆ ಸರಿಯಾಗಿ ದೇವಸ್ಥಾನದ ಆನೆ ಕುದುರೆ ನಗಾರಿ ಮೇಳ ತಾಳ ಮೊದಲಾದ ಸಕಲ ವಾದ್ಯಗಳು ಪುರಜನರೊಡನೆ ದೇವಸ್ಥಾನದ ಉದ್ಯೋಗಸ್ಥರೆಲ್ಲರು ಕಾದಿದ್ದು ಪುಷ್ಪ ತೋರಣಗಳು ಉಡುಗೊರೆ ಶ್ರೀಮಂತರುಗಳಿಗೂ ಹಾಕಿಸಿ ೭ ಕುದುರೆ ಫೀಟನಲ್ಲಿ ಗ್ರಾಮ ಪ್ರದಕ್ಷಿಣವಾಗಿ ಕರೆದುಕೊಂಡು ಬಂದು ನಿಯಮಿತವಾದ … ಇಳಿಸಿದರು. ಅನಂತರ ಸ್ನಾನಾಹ್ನಿಕಗಳು ಮಾಡಿಕೊಂಡ ತರುವಾಯ ಶ್ರೀ ಗೋವಿಂದರಾಜಸ್ವಾಮಿಯವರ ದರ್ಶನಕ್ಕೆ ದಯಮಾಡಿ ಅಲ್ಲಿ ಶ್ರೀ ದೇವರ ದರ್ಶನ ಮಾಡಿಕೊಂಡು ಮೇಳ ತಾಳಗಳೊಡನೆ ಬಿಡಾರಕ್ಕೆ ದಯಮಾಡಿ ೧ನೇ ಭಾನುವಾರ ಪ್ರಾತಃಕಾಲ ೮ ಘಂಟೆಗೆ ಬೆಟ್ಟಕ್ಕೆ ದಯಮಾಡಿದರು. ಅಲ್ಲಿಯೂ ಸಕಲ ಮಾನಮರ್ಯಾದೆಗಳೊಡನೆ ದೇವಸ್ಥಾನದ … ಬಂದು ಕರೆದುಕೊಂಡು ಹೋಗಿ ಮೈಸೂರು ಸರ್ಕಾರ ಸತ್ರದಲ್ಲಿ ಇಳಿಸಿ ಸ್ನಾನಾಹ್ನಿಕಗಳು ಮಾಡಿಕೊಂಡ ತರುವಾಯ ಶ್ರೀ ದೇವರ ವಿಶ್ವರೂಪ ಸೇವೆ ಮೊದಲು … ಸಕಲ ಸೇವೆಗಳು ಮಾಡಿಕೊಂಡು ಶ್ರೀ ದೇವರಿಗೆ … ಸಮರ್ಪಣೆ ಮಾಡಿ ಕಾಣಿಕೆ ೫೦೦ ರೂಪಾಯಿ ಕಟ್ಟಿಸಿ ಶ್ರೀ ದೇವರ … ಸೇವೆ, ನೈವೇದ್ಯ ಪೂಜಾದಿಗಳಿಗೆ ಬೇಕಾದ ಹಣ ಕೊಟ್ಟು ಶ್ರೀದೇವರಿಗೆ ಕಲ್ಯಾಣೋತ್ಸವ ಮಾಡಿಸಿ, ರಾತ್ರಿ … ಉತ್ಸವ ಮಾಡಿಸಿ ಅನಂತರ ಮೇಳ ತಾಳಗಳೊಡನೆ ಬಿಡಾರಕ್ಕೆ ದಯಮಾಡಿದರು. ತಾ|| ೨ನೇ ಸೋಮವಾರ ಪ್ರಾತಃಕಾಲ ಆಕಾಶಗಂಗಾ, ಪಾಪವಿನಾಶನ ತೀರ್ಥಕ್ಕೆ ಹೋಗಿ ಅಲ್ಲಿ ಸ್ನಾನಾಹ್ನಿಕಗಳು ಮಾಡಿಕೊಂಡು ಪುನಃ ಬಂದು ಶ್ರೀ ದೇವರ ಸಂದರ್ಶನ ಮಾಡಿಕೊಳ್ಳುವ ಕಾಲದಲ್ಲಿ ಶ್ರೀ ದೇವರ … ಶ್ರೀಮಂತರವರಿಗೆ ಒಂದು ಶಾಲು, ಶಾಲ್, ಕಿಂಖಾಪು … ಶ್ರೀಮಂತರಿಗೆ ಒಂದು ಕಲಾಬತ್ತು ಶಾಲ್, ಕಿಂಖಾಪು, ಕಲಾಬತ್ತು ಜರಿ ರುಮಾಲು, ಶ್ರೀಮಂತರ ಮಕ್ಕಳಿಗೆ ಒಂದು ಶಲ್ಲೆ, ಶಾಲ್, … ಮೇಳ ತಾಳ ಮೊದಲಾದ … ಬಿಡಾರಕ್ಕೆ ಕರೆದುಕೊಂಡು ಬಂದು ಅನಂತರ ಶ್ರೀಮಂತರು ದೇವಸ್ಥಾನದ ಸಕಲ ನೌಕರರಿಗೂ ಯೋಗ್ಯತಾನುಸಾರವಾಗಿ ವಸ್ತ್ರಗಳು ಶಾಲುಗಳು ಮರ್ಯಾದೆ ನಡಿಸಿ ಅನಂತರ ರಾತ್ರಿ ೮ ಘಂಟೆಗೆ ಕೆಳಗೆ ತಿರುಪತಿಗೆ ದಯಮಾಡಿದರು. ೩ನೇ ತಾರೀಖ್ ಮಂಗಳವಾರದ ದಿನ ಸಾಯಂಕಾಲ ಶ್ರೀ ಪದ್ಮಾವತೀ ಸಂದರ್ಶನಕ್ಕಾಗಿ ಅಲಮೇಲು ಮಂಗಾಪುರಕ್ಕೆ ದಯಮಾಡಿ ಅಲ್ಲಿ ಶ್ರೀ ಮಹಾಲಕ್ಷ್ಮೀದೇವಿಗೆ ಬನಾರಸ್ … ಸಮರ್ಪಣೆ ಮಾಡಿ ಅಲ್ಲಿಂದ ಹಿಂತಿರುಗಿ ತಿರುಪತಿಗೆ ಬಂದು ದೇವಸ್ಥಾನದ ನೌಕರರೆಲ್ಲರಿಗೆ … ಗಳು ಧೋತ್ರಗಳು ಬಹುಮಾನ ಕೊಟ್ಟು ೪ನೇ ಬುಧವಾರ ಪ್ರಾತಃಕಾಲ ೬ ಘಂಟೆಯ ರೈಲ್ ಗಾಡಿಯಲ್ಲಿ ಬೆಂಗಳೂರಿಗೆ ದಯಮಾಡಿದರು. ಈ ರೀತಿಯಾಗಿ ಏತತ್ಕಾಲದಲ್ಲಿ ಅನೇಕ ಸಂಸ್ಥಾನಾಧಿಪತಿಗಳಿಗಿಂತ ಶ್ರೀಮಂತರವರು ಅಲ್ಲಿನ ಜನಗಳಿಗೆ ಸಕಲ ಮರ್ಯಾದೆ ನಡೆಸಿ ತಮ್ಮ ಔದಾರ್ಯವನ್ನು ತೋರಿಸಿ ಬಹು ಯಶಸ್ಸನ್ನು ಸಂಪಾದಿಸಿಕೊಂಡು ಪೂರ್ವದಲ್ಲಿ ದಿವಾನ್ ಪೂರ್ಣಯ್ಯನವರು ದಯಮಾಡಿದ್ದ ಜ್ಞಾಪಕ ಅಲ್ಲಿನ ಜನಗಳಿಗೆ ಸೂಚನೆಯಾಗುವಂತೆ ಮಾಡಿದರು.

ಈ ಪ್ರಾಂತ ಕ್ಷಾಮದಿಂದ ಧಾರಣೆ ಬಹಳ ಹೆಚ್ಚಿ ಹೋಗಿದೆ, ದೇವರು ಕಾಪಾಡಬೇಕು.

ತಮ್ಮ ವಿಧೇಯನಾದ,
ತಿರುಪತಿ ನಿವಾಸಿ

LETTERS TO THE EDITOR.
ಈ ಪತ್ರಿಕಾ ಲೇಖರಿಗೆ ಬರೆಯಲ್ಪಟ್ಟ ಕಾಗದಗಳು

ಅಯ್ಯ,—ತಾವು ದಯಮಾಡಿ ಒಂದೆರಡು ವಾರಗಳ ಹಿಂದೆ ದೇವಾಲಯಗಳನ್ನು ಕುರಿತು ನಾನು ಬರೆದು ಅಪ್ಪ ಪತ್ರಿಕೆಯನ್ನು ತಮ್ಮ ವೃತ್ತಾಂತ ಪತ್ರಿಕಾಮೂಲಕ ಪ್ರಕಟಿಸಿರುತ್ತೀರಷ್ಟೆ. ಅದರಲ್ಲಿ ಕಂಡ ಕೆಲವಂಶಗಳನ್ನು ಸುಳ್ಳೆಂದು ಭಾವಿಸಿ ವೆಂಕಟ ಕೃಷ್ಣಮಾಚಾರ್ಯರೆಂಬ ಒಬ್ಬ ವೈಷ್ಣವರು … ಅವರ ಅಭಿಪ್ರಾಯಕ್ಕೆ ಅರ್ಹವಾಗದ ಕೆಲವು ಮಾತುಗಳನ್ನು ಬರೆದಿರುತ್ತಾರೆ. ಅಂತಹ ಲೇಖನದಿಂದ ನನಗೆ ಯಾವವಿಧವಾದ ಪ್ರಯೋಜನವೂ ಇಲ್ಲವಾದ ಕಾರಣ, ಅವರಂತೆ ನಾನು ಸಹ "ಬೈಗುಳ" ಶಬ್ದಗಳನ್ನು ಉಪಯೋಗಿಸತಕ್ಕದ್ದು ಸುತರಾಂ ಗೌರವವಲ್ಲ. ಪರಂತು ದೇವಸ್ಥಾನಗಳ ವಿಷಯದಲ್ಲಿ ನಾನು ಬರೆದಿರತಕ್ಕ ವಿಷಯಗಳ ವಾಸ್ತವ್ಯತೆಯನ್ನು ಮಹಾಜನರು ಸೂಪರಿಂಟೆಂಡೆಂಟ್ ಮುಜರಾಯಿ … ಕಡೆಯಿಂದಲೇ ಬೇಕಾದವರು ತಿಳಿದುಕೊಳ್ಳಬಹುದು. 'ಕೆರೋಸೀನ್ ಆಯಿಲ್' ಎಣ್ಣೆಯ ವಿಷಯದಲ್ಲಿ ಬ್ರಹ್ಮಶ್ರೀ ವಾಸುದೇವ ಶಾಸ್ತ್ರಿಗಳ ಅಭಿಪ್ರಾಯವನ್ನು ಇದರಡಿ ತಿಳಿಸುತ್ತೇನೆ. ಅದನ್ನು ಪ್ರಕಟಪಡಿಸಬೇಕೆಂದು ಬೇಡುತ್ತೇನೆ. ಮತ್ತು ಕಲ್ಪಿತ ಲೇಖಕರಿಗೆ ಪ್ರತ್ಯುತ್ತರಗಳು ಬರೆಯತಕ್ಕದ್ದು ಮತಿಗಳ ಕಾರ್ಯವಲ್ಲವಾಗಿ, ಅಂತಹ ಬರವಣಿಗೆಗಳನ್ನು ಅತ್ಯಂತ ಅನಾದರದಿಂದ ಗಮನಿಸದೆ ಇರತಕ್ಕದ್ದೇ ಯುಕ್ತವಾಗಿ ಕಾಣಿಸುತಿದೆ.

ತಮ್ಮ ವಿಧೇಯನಾದ,
ಬೆಂಗಳೂರು ಶ್ರೀ ಕೃಷ್ಣಪುರ ಮಂದಿರದ
ಎ. ಗೋಪಾಲಾಚಾರ್ಲು.

ಈ ಭರತ ಖಂಡದಲ್ಲಿ ಬಹುಕಾಲದಿಂದ ಉತ್ಪತ್ತಿಯಾಗುವ ಎಳ್ಳು, ಹುಚ್ಚೆಳ್ಳು, ಕಳ್ಳೇಕಾಯಿ ಬೀಜ, ಹರಳು, ಹೊಂಗೆ ಬೀಜ, ಇಪ್ಪೇಬೀಜ, ಕುಸುಮೆ, ಅಗಸೇಬೀಜ, ಬೇವಿನಬೀಜ ಕೊಬ್ಬರಿ, ಸಾಸುವೆ ಇವುಗಳ ಎಣ್ಣೆಗಳ ಪೈಕಿ ಕೆಲವು ವಿಧಗಳಾದ ಎಣ್ಣೆಗಳಿಗೂ ಮತ್ತು ತುಪ್ಪಕ್ಕೂ ದೇವರ ಸನ್ನಿಧಿಯಲ್ಲಿ ದೀಪ ಹಚ್ಚುವದಕ್ಕೆ ಶಾಸ್ತ್ರ ವಿಧಿಯೂ ಕೆಲವು ಎಣ್ಣೆಗಳಿಗೆ ನಿಷೇಧವೂ ನಮ್ಮ ಧರ್ಮಶಾಸ್ತ್ರ, ಪುರಾಣ, ಆಗಮಾದಿಗಳು ಇವುಗಳಲ್ಲಿ ಉದಾಹರಿಸಲ್ಪಟ್ಟಿವೆ. ದೇಶಾಂತರದಲ್ಲಿ ಕೆಲ ಕಾಲದಿಂದೀಚೆಗೆ ಮಾತ್ರ ಪ್ರಯೋಗದಲ್ಲಿರುವ ಪ್ರಕೃತ ಈ ದೇಶದಲ್ಲಿಯೂ ಪ್ರಯೋಗಕ್ಕೆ ಬಂದಿರುವ ತಮ್ಮ … ಕಲ್ಲೆಣ್ಣೆಗೆ ಧರ್ಮಶಾಸ್ತ್ರಗಳಲ್ಲಿ ನೂತನತ್ವದಿಂದ ಯುಕ್ತ ವಿಧಿ ನಿಷೇಧಗಳಿಲ್ಲದಿದ್ದಾಗ್ಯೂ ಅಸಹ್ಯವಾದ ದುರ್ಗಂಧತ್ವ, ಕಣ್ಣುನೋವು, ತಲೆನೋವು ಮೊದಲಾದ ಪ್ರತ್ಯಕ್ಷ ದುಷ್ಟವಾದ ಅನರ್ಥವು, ಸದರೀ ಎಣ್ಣೆಯಿಂದ ದೀಪ ಹಚ್ಚುವ ಕಾಲದಲ್ಲಿ ವಿಶೇಷ … ಅನುಭವಸಿದ್ಧವಾಗಿದೆ. ತುಪ್ಪ, ಕೊಬ್ಬರಿ ಎಣ್ಣೆ, ಎಳ್ಳೆಣ್ಣೆ, ಹರಳೆಣ್ಣೆ, ಇವುಗಳ ದೀಪ … ಅಜ್ಞಾನ ನಿವೃತ್ತಿ ಪೂರ್ವಕ ಆತ್ಮಸ್ವರೂಪಪ್ರಕಾಶ ಪ್ರವೃತ್ತಿ, … ಶಾಸ್ತ್ರಗಳು ಉದಾಹರಿಸುತ್ತವೆ. ಈ ಕಲ್ಲೆಣ್ಣೆಯ ದೀಪ ಹಚ್ಚುವುದರಿಂದ … ದೇವರ ಸನ್ನಿಧಿಯಲ್ಲಿ … ಮೊದಲಾದ ನಾಲ್ಕು ವಿಧಗಳ ಸ್ನೇಹಗಳಿಂದ ದೀಪ ಹಚ್ಚಬೇಕೆ ವಿನಾ ಹಿಂದಿನ ಮೇಲ್ಗಳಿಂದ ಸ್ಪಷ್ಟವಾಗಿ ಪ್ರಮಾಣಕ್ಕೆ ಒಳಪಡದ ಈ ಲೋಕ ಭಯಂಕರವಾದ ಕಲ್ಲೆಣ್ಣೆಯಿಂದ ದೀಪ ಹಚ್ಚುವ … ಯುಕ್ತ ತೋರಲಿಲ್ಲ. ಉತ್ಸವ ಕಾಲಗಳಲ್ಲಿ ಸೇರುವ ಭಕ್ತ ಜನಗಳಿಗೆ ಉತ್ಸಾಹಕರವಾಗಿ ಮತ್ತು ರಂಜನವಾಗಿರುವದೇ ಫಲವೆಂದು ತೋರುವ ಪಕ್ಷದಲ್ಲಿ ಅಂತರ್ಗರ್ಭಾಲಯದ ಸನ್ನಿಧಿಯನ್ನು ಬಿಟ್ಟು ಬಾಹ್ಯಾಲಯಗಳಲ್ಲಿ ಹಚ್ಚಿಟ್ಟು … ಇರುವಂತೆ ಮಾಡಿ ಈ ಕಲ್ಲೆಣ್ಣೆಯಿಂದ ದೀಪ ಹಚ್ಚಬಹುದು.

[illegible]

ವಾಸುದೇವ ಶಾಸ್ತ್ರಿ.

ಭೂಮಿಯ ಆನಂದಾಶ್ರಮದ ಚರಿತ್ರವು.

ಮತ್ತು,

ಅದನ್ನು ಕುರಿತು ಎಲ್ಲ ಜನರಿಗೆ ವಿನಂತಿಯು.

(ಕಳೆದಸಾರದ ಶೇಷ)

೩. ನನ್ನ ಹತ್ತರ ಈಗ ಇದ್ದ ಗ್ರಂಥಗಳು ಮತ್ತು ಮುಂದೆ ಒದಗತಕ್ಕಂಥವುಗಳ ಎಷ್ಟು ಪ್ರತಿಗಳು ದೊರೆತ್ಯಾವೋ ಅಷ್ಟೆಲ್ಲವುಗಳು ಬೇಕು. ಇದರ ಕಾರಣವೇನೆಂದರೆ, ಆನಂದಾಶ್ರಮದೊಳಗಿಂದ ಛಾಪಿಸಿ ಕೊಡತಕ್ಕ ಗ್ರಂಥಗಳು ಒಂದೇ ಪ್ರತಿಯ ಮೇಲಿಂದ ಛಾಪಿಸಲ್ಪಡದೆ ಪ್ರತಿಯೊಂದು ಗ್ರಂಥದ ಭಿನ್ನ ಭಿನ್ನ ಪ್ರತಿಗಳನ್ನು ಬೇರೆ ಬೇರೆ ಸ್ಥಳಗಳಿಂದ ನೂರಕಿಸಿ, ಅವೆಲ್ಲವುಗಳೊಳಗಿನ ಉತ್ತಮ ಶುದ್ಧ ಪಾಠಗಳು ಮಾತ್ರ ಮೂಲ ಗ್ರಂಥದಲ್ಲಿ ತೆಗೆದುಕೊಳ್ಳಲ್ಪಟ್ಟು ಉಳಿದ ವ್ಯಾಕರಣ ಶುದ್ಧವಾದ ಎಲ್ಲ ಪಾಠಗಳು ಗ್ರಂಥದಲ್ಲಿ ಪ್ರತಿಯೊಂದು ಪೃಷ್ಠದಲ್ಲಿ ಕೆಳಗೆ ಕೊಡಲ್ಪಡುತ್ತವೆ. ಮತ್ತು ಎಷ್ಟು ಪ್ರತಿಗಳ ಮೇಲಿಂದ ಆ ಗ್ರಂಥವು ಶುದ್ಧ ಮಾಡಲ್ಪಡುತ್ತದೋ ಅಷ್ಟು ಪ್ರತಿಗಳ ವರ್ಣನೆ ಮತ್ತು ಅವುಗಳ ಮಾಲಕರ ಹೆಸರು ಗ್ರಂಥದ ಆರಂಭದಲ್ಲಿ ಕೊಡಲ್ಪಡುತ್ತದೆ. ಒಂದೇ ಪ್ರತಿಯನ್ನು ತೆಗೆದುಕೊಂಡು ಅದನ್ನು ಉತ್ತಮ ಶುದ್ಧವಾಗಿ ಛಾಪಿಸುವ ಸಾಧನಗಳು ಈಗ ಇರುವದಿಲ್ಲ, ಆದಕಾರಣ ಗ್ರಂಥ ಶುದ್ಧ ಮಾಡಲಿಕ್ಕೆ ಎಷ್ಟು ಹೆಚ್ಚಿಗೆ ಪ್ರತಿಗಳು ದೊರೆತ್ಯಾವೋ ಅಷ್ಟು ಹೆಚ್ಚು ಉಪಯೋಗವಾಗುತ್ತದೆ.

"ನನ್ನ ಹತ್ತರ ಯಾವ ಗ್ರಂಥಗಳು ಇರುತ್ತವೆಂದು ತಿಳಿಸಬೇಕು, ಅವರ ಇಲ್ಲದವುಗಳನ್ನು ಮಾತ್ರ ಕಳುಹಿಸುವೆವು" ಎಂದು ಎಷ್ಟೋ ಮಿತ್ರರು ಹೇಳಿದರು. ಅವರು ಮೇಲಿನ ಸಂಗತಿಯನ್ನು ಕುರಿತು ವಿಚಾರ ಮಾಡುವರಾದರೆ ಒಂದೇ ಗ್ರಂಥದ ಅನೇಕ ಪ್ರತಿಗಳು ಯಾತಕ್ಕೆ ಬೇಕಾಗುವವೆಂಬುದನ್ನು ಕೂಡಲೇ ತಿಳುಕೊಂಡಾರು.

೪. ನನ್ನ ಬಳಿಗೆ ಗ್ರಂಥಗಳನ್ನು ಕಳುಹಿಸುವಂಥವರು ಅವುಗಳನ್ನು ತಮ್ಮ ಇಷ್ಟವಿದ್ದರೆ ಆನಂದಾಶ್ರಮಕ್ಕೆ ಉಚಿತವಾಗಿ ಕೊಡಬಹುದು, ಇಷ್ಟವಿಲ್ಲದಿದ್ದರೆ ಉಚಿತವಾಗಿ ಕೊಡಬಾರದು.

೫. ಉಚಿತವಾಗಿ ಕೊಡಲ್ಪಟ್ಟ ಅಥವಾ ಆನಂದಾಶ್ರಮದಲ್ಲಿ ಇಡಲಿಕ್ಕೆ ಮಾತ್ರ ಕೊಡಲ್ಪಟ್ಟ ಎಲ್ಲ ಗ್ರಂಥಗಳ ಬಗ್ಗೆ, ಗ್ರಂಥದ ಯಜಮಾನನಿಗೆ ನನ್ನ ಸಹಿ ಅಥವಾ ಆನಂದಾಶ್ರಮದ ವ್ಯವಸ್ಥಾಪಕರ ಸಹಿಯುಳ್ಳ ರಸೀತಿ ಕೊಡೋಣವದಲ್ಲದೆ, ಮತ್ತು ಅದರಲ್ಲಿ ಗ್ರಂಥದ ಹೆಸರು, ಅದರ ಪೃಷ್ಠಗಳು ಮತ್ತು ಅದರ ಸ್ಥಿತಿ ವಗೈರೆ ಕಾಣಿಸುವವರೆಲ್ಲಿ [illegible].

೬. ಆನಂದಾಶ್ರಮದಲ್ಲಿ ಇಡಲಿಕ್ಕೆ ಕೊಡಲ್ಪಟ್ಟ ಯಾವ ಗ್ರಂಥವಾದರೂ ಯಜಮಾನನಾಗಲಿ, ಅವನ ಅನಂತರ ಯೋಗ್ಯ ಅಧಿಕಾರ ಪಡೆಕೊಂಡಂಥ ಬೇರೆ ಯಾವಾತನಾಗಲಿ ಯಾವ ಸಮಯದಲ್ಲಾದರೂ ತಿರುಗಿ ಬೇಡಿದರೆ ಹಿಸೂ [illegible] ತಿರುಗಿ ಕೊಡಲ್ಪಟ್ಟೀತು. ಆನಂದಾಶ್ರಮದಿಂದ ಕೊಡಲ್ಪಟ್ಟ ರಸೀದಿ ಮಾತ್ರ ತಿರುಗಿ ತೆಗೆದುಕೊಳ್ಳಲಾದೀತು. ತಿರುಗಿ ಬೇಡಿದ ಗ್ರಂಥವೇ ಆ ಸಮಯದಲ್ಲಿ ಆನಂದಾಶ್ರಮದಲ್ಲಿ ಛಾಪಿಸಲ್ಪಡುತ್ತಿದ್ದರೆ, ಛಾಪಿಸಿ ಮುಗಿಯುವ ಪರ್ಯಂತರ ಮಾಲಿಕರು ದಯಮಾಡಿ ಅದನ್ನು ಇಡಗೊಡಬೇಕೆಂದು ಅವರಿಗೆ ನನ್ನ ವಿನಂತಿಯುಂಟು.

೭. ಆನಂದಾಶ್ರಮದ ಛಾಪಖಾನೆಯೊಳಗಿಂದ ಯಾವ ಗ್ರಂಥಗಳು ಛಾಪಿಸಿ ಪ್ರಸಿದ್ಧವಾಗುತ್ತವೋ, ಅವುಗಳ ಛಾಪಿಸುವ ಮೊದಲು ಬಂದಂಥ ಪ್ರತಿಗಳು ಅವುಗಳ ಮಾಲಿಕರಿಗೆ ತಿರುಗಿ ಕೊಡಲ್ಪಡುವವಲ್ಲದೇ ಛಾಪಿಸಿದ ಒಂದು ಪ್ರತಿಯು ಉಚಿತವಾಗಿ ಕಳುಹಿಸಲ್ಪಡುವದು. ಪ್ರತಿಯ ಮಾಲಿಕರು ಛಾಪಿಸಿದ ಪ್ರತಿಯನ್ನು ಮಾತ್ರ ಉಚಿತವಾಗಿ ತೆಗೆದುಕೊಂಡು, ಮೂಲ ಪ್ರತಿಯನ್ನು ಅನಂತರವಾದರೂ ಆನಂದಾಶ್ರಮದಲ್ಲಿ ಇಟ್ಟರೆ ನನ್ನ ಕಡೆಯಿಂದ ಅಡ್ಡಿ ಇಲ್ಲ. ಇದುವರೆಗೆ ಬಹಳ ಜನರು ಹಾಗೆ ಮಾಡಿದ್ದಾರೆ, ಮತ್ತು ಮುಂದಾದರೂ ಅದೇಪ್ರಕಾರ ನಡೆಯುತ್ತಲಿರಲಿ, ಯಾಕಂದರೆ ಮುಂದೆ ಎರಡನೇ ಆವೃತ್ತಿ ತೆಗೆಯುವ ಸಮಯದಲ್ಲಿ ಈ ಪ್ರತಿಯು ಉಪಯೋಗವಾದೀತು.

೮. ಆನಂದಾಶ್ರಮದಲ್ಲಿ ಇಡಲಿಕ್ಕೆ ಕೊಡಲ್ಪಟ್ಟ ಯಾವ ಗ್ರಂಥವಾದರೂ ಆನಂದಾಶ್ರಮದ ಉಪಯೋಗವಲ್ಲದೆ ಬೇರೆ ಉಪಯೋಗಕ್ಕೆ ಮಾಲಕರ ಅಪ್ಪಣೆಯು ದೊರತು ಹೊರತು ಹಚ್ಚಲ್ಪಡಲಿಕ್ಕಿಲ್ಲ. ಇದು ಅಲ್ಲದೆ ಉತ್ತಮ ರೀತಿಯಿಂದ ಜತನ ಮಾಡಲ್ಪಟ್ಟು ಅನುಕೂಲವಾದಂತೆ ಛಾಪಿಸಿ ಎಲ್ಲ ಜನರ ಉಪಯೋಗಕ್ಕೆ ತರೋಣವರಲ್ಲಿ ಬಂದೀತು.

೯. ಈಗ ನಾನು ಮಾಡಿದ ಶೋಧದಲ್ಲಿ ನನಗೆ ತಿಳಿದು ಬಂದ್ದೇನಂದರೆ: ಇದುವರೆಗೆ ಛಾಪಿಸಲ್ಪಡದಂಥ ಸಂಸ್ಕೃತ ಗ್ರಂಥಗಳು ಇನ್ನೂ ಎಂಟು ಹತ್ತು ಸಾವಿರಕ್ಕೆ ಮಿಕ್ಕಿರುತ್ತವೆ. ಪೂರ್ಣ ಶೋಧ ಮಾಡಿದರೆ ಈ ಸಂಖ್ಯೆ ಸಹ ಹೆಚ್ಚಿತೆಂದೇ ಎಂದು ಕಂಡು ಬಂದೀತು. ಇವೆಲ್ಲಾ ಗ್ರಂಥಗಳನ್ನು ಅನುಕೂಲವಾದದ್ದಾಗಿ ಛಾಪಿಸಿ ಉಜ್ಜೀವಿತವಾಗಿ ತರಬೇಕೆಂದು ನನ್ನ ಇಚ್ಛೆಯುಂಟು. ಈ ಕೆಲಸವು ಇನ್ನು ಅರ್ಧ ಶತಮಾನ ಗಳಾದರೂ ಮುಗಿಯುವಂಥದ್ದಲ್ಲ. ಅವರ ಗ್ರಂಥಗಳು ಸಂಗ್ರಹವಾದ ಲಕ್ಷಕ್ಕೆ, ನಾನು ಆನಂದಾಶ್ರಮದಲ್ಲಿ ಈಗ ಮಾಡಿದಂಥಾ ಮತ್ತು ಮುಂದೆ ಮಾಡಲ್ಪಡುವಂಥಾ ವ್ಯವಸ್ಥೆಯಿಂದ ಈ ಎಲ್ಲ ಗ್ರಂಥಗಳು ಎಂದಾದರೂ ಛಾಪಿಸಲ್ಪಟ್ಟಾವು.

೧೦. ಗ್ರಂಥಗಳು ಛಾಪಿಸಲ್ಪಟ್ಟು ಓದುಕ್ಕೆ ಸಿಕ್ಕುದರೆ ಎಷ್ಟು ಅನುಕೂಲವಾಗುತ್ತದೆಂಬುದನ್ನು ಬ್ಯಾಸ ಅಗತ್ಯ ಈಗ ಇರುವದಿಲ್ಲ. ಈ ಸಂಗತಿಯು ಪ್ರತಿ ಒಬ್ಬ ವಾಚಕನ ಅನುಭವಕ್ಕೆ ಬಂದೇ ಇರುತ್ತದೆ. ಇದರ ಕುರಿತು ಹೊಸದಾದದೊಂದು ಗ್ರಂಥವು ಛಾಪಿಸಲ್ಪಟ್ಟರೆ ಅದರ ಪ್ರಸಿದ್ಧಿಯು ಬಹಳವಾಗುತ್ತದೆ, ಮತ್ತು ಅದರಿಂದ ಬಹು ಜನರಿಗೆ ಉಪಯೋಗವಾಗುತ್ತದೆ. ಅಂದಮೇಲೆ ಈಗ ಗ್ರಂಥ ಛಾಪಿಸಲಿಕ್ಕೆ ಕೊಡಬಾರದು ಎಂಬ ತಿಳುವಳಿಕೆ ಇರತಕ್ಕದ್ದು ಉಪಯೋಗವಿಲ್ಲ. ಗ್ರಂಥ ಛಾಪಿಸಿದ್ದರಿಂದ ಎಷ್ಟೋ ಉಪಯೋಗವಾಗುತ್ತದೆಂಬ ವಿಷಯ ನನಗೆ ಅನುಭವ ಬಂದಿರುತ್ತದೆ. ಆನಂದಾಶ್ರಮದಿಂದ ಮೊಟ್ಟಮೊದಲಿಗೆ ಗಣೇಶಾಥರ್ವಶೀರ್ಷ ನಾರಸ್ಯ‑ರುವಾಧ್ಯಾಯಗಳ ಎರಡು ಛಾಪ್ಯಗಳು ಮತ್ತು ಪುರುಷಸೂಕ್ತ ಭಾಷ್ಯ‑ನಾನು ಛಾಪಿಸಿ ತೆಗೆದಲು, ಈಗಿನ ಕಾಲದಲ್ಲಿ ಇಂಥ ಗ್ರಂಥಗಳಿಗೆ ಕೇಳುವವರು ಯಾರೂ ಇಲ್ಲವೆಂದು ಕೆಲವರು ಅಂದು ತೋರಿಸಿದರು. ಆದರೆ ಆ ಗ್ರಂಥದ ಪ್ರಸಾರದ ಮೇಲಿಂದ ಸರಿ ವಿರುದ್ಧವಾದ ಅನುಭವ ಸಿಕ್ಕಿತು. ಆ ಮೂರು ಗ್ರಂಥಗಳ ಹನ್ನೊಂದುನೂರು ಪ್ರತಿಗಳು ಖರ್ಚಾದವು. ಇವುಗಳಲ್ಲಿ ಆರುನೂರು ಪ್ರತಿಗಳು ಬಿನ್ನಳಿವಾಗಿ ಖರ್ಚಾದವು, ಒಂದು ಪ್ರತಿಯು ಕಲಿಂದ ೪‑೫ ಜನರಾದರೂ ಓದುತ್ತಾರೆ, ಅಂದ ಮೇಲೆ ಈ ಮಾತಿನಿಂದ ನೋಡಿದರೆ ೨ ಸಾವಿರಕ್ಕೆ ಮಿಕ್ಕ ಜನರು ಈ ಗ್ರಂಥವನ್ನು ಓದಿದರೆಂದು ಕಾಣುತ್ತದೆ. ನಾನು ಛಾಪಿಸಿದ ವೇದಾಂತದ ಗ್ರಂಥಗಳೇ ಮೊದಲು ನೂರು ಕಡೆಯಲ್ಲಿ ಛಾಪಿಸಲ್ಪಟ್ಟಿರುತ್ತವೆ, ಆದರೂ ನನ್ನ ಪ್ರತಿ ಒಂದು ಗ್ರಂಥದ ೫೦೦ ವರೆಗೆ ಪ್ರತಿಗಳು ಖರ್ಚಾದವಲ್ಲದೆ ಈಗ ಜನರು ಇವೇ ಪ್ರತಿಯನ್ನು ಏಕೆಂದು ಹೀಗೆ ತಾರೆ. ಸಂಸ್ಕೃತ ವಿದ್ಯೆಯು ದಿನ ಹೋದಹಾಗೆ ಹೆಚ್ಚಿ ಉಜ್ಜೀವಿತ ಸ್ಥಿತಿಗೆ ಬಂದೀತು ಎಂದು ನನ್ನ ಅಭಿಪ್ರಾಯವು, ಮತ್ತು ಇದು ಉಜ್ಜೀವಿತವಾಗಬೇಕಾದರೆ ಅದರ ಒಳಗಿನ ಎಲ್ಲ ತರದ ಗ್ರಂಥಗಳು ಛಾಪಿಸಲ್ಪಟ್ಟು ಎಲ್ಲರಿಗೆ ಸಿಕ್ಕುವಂತೆ ಮಾಡುವದು ಬಹಳ ಅಗತ್ಯವಾಗಿರುತ್ತದೆ. ನಾನು ಆ ದನ್ನು ಮಾಡಲಿಕ್ಕೆ ಮನಸ್ಸಿನಲ್ಲಿ ಸಿದ್ಧನಾಗಿದ್ದೇನೆ, ಆದರೆ ಇದಕ್ಕೆ ಹಳೇ ಕಲ್ಪಿತ ಗ್ರಂಥಗಳು ಸಿಕ್ಕುವದೇ ಮುಖ್ಯ ಸಾಧನವಾಗಿದೆ. ಇದನ್ನು ನನಗೆ ಜನರು ದಯಮಾಡಿ ಒದಗಿಸಿ ಕೊಡತಕ್ಕದ್ದು.

೧೧. ಎಲ್ಲಾದರೂ ಯಾರ ಹತ್ತರ ಹಳೇ ಗ್ರಂಥಗಳ ದೊಡ್ಡ ಸಂಗ್ರಹವಿದ್ದು ಅತನು ಬದುಕಿದ್ದ ದೆಶೆಯಲ್ಲಿ ಅತನಿಗೆ ಅದನ್ನು ಹೀಗೆ ಕೊಡಲಿಕ್ಕೆ ಅನುಕೂಲ ಇಲ್ಲದ್ದರೆ, ನಾನು ಅತನಿಗೆ ಸ್ವಲ್ಪ ಮಟ್ಟಿಗೆ ಹಣ ಕೊಟ್ಟು ಆ ಎಲ್ಲಾ ಗ್ರಂಥಗಳನ್ನು ಕೊಂಡುಕೊಳ್ಳಲಿಕ್ಕೆ ಸಹಾ ಸಿದ್ಧನು. ಮತ್ತು ಆ ಗೃಹಸ್ಥನ ಹೆಸರಿನ ಪ್ರತ್ಯೇಕ ಸಂಗ್ರಹ ಮಾಡಲಿಕ್ಕೂ ಸಿಂದು ಅತನಿಗೆ ನಾನು ವಚನ ಕೊಡುತ್ತೇನೆ. ಆ ಗ್ರಂಥಗಳೊಳಗಿನ ಅವುಗಳ ಛಾಪಿಸಿದ ಪ್ರತಿಗಳು ಸಹ ಅತನಿಗೆ ಸಿಕ್ಕಲಿಕ್ಕಿಲ್ಲ.

೧೨. ಕೆಲವು ವಿದ್ವಾಂಸರ ಮನೆತನಗಳಲ್ಲಿ ಹಳೆಯ ಬಹಳ ದೊಡ್ಡ ಗ್ರಂಥಸಂಗ್ರಹವಿದ್ದು ಅದನ್ನು ಉತ್ತಮ ರೀತಿಯಿಂದ ಜೋಪಾನ ಮಾಡಿ ಇಟ್ಟು ಅವರ ಉಪಯೋಗಕ್ಕಾದರೂ ಒಳ್ಳೇ ರೀತಿಯಿಂದ ಮಾಡುವ ಪುರುಷರು ಆ ವಂಶದಲ್ಲಿ ಇರುವದು ಎಷ್ಟೋ ಕಡೆಯಲ್ಲಿ ಕಾಣಬರುತ್ತದೆ. ಇಂಥ ಸಂಗ್ರಹದೊಳಗಿನ ಗ್ರಂಥಗಳ ಒಂದು ಪಟ್ಟಿಯು ನನಗೆ ಸಿಕ್ಕಿ ಅದರೊಳಗಿನ ಯಾವ ಗ್ರಂಥವು ಛಾಪಿಸುವ ಕೆಲಸಕ್ಕಾಗಲೀ ಅಥವಾ ನಕಲು ಮಾಡಿಕೊಳ್ಳುವದಕ್ಕಾಗಲೀ ಬೇಕಾಯಿತೋ ಆ ಗ್ರಂಥವನ್ನು ಮಾತ್ರ ನಿಯಮಿತ ಮುದ್ದತಿಯಿಂದ ಸದರಿ ಸಂಗ್ರಹದ ಮಾಲಿಕರು ನನಗೆ ಕೊಟ್ಟರೆ, ಅದುಕೂಡ ನನಗೆ ಬಹು ದೊಡ್ಡ ಸಹಾಯವಾಯಿತೆಂದು ತಿಳಿದೇನು.

೧೩. ಸಂಸ್ಕೃತ ಗ್ರಂಥಗಳು ಇದ ವರೆಗೆ ಅನೇಕ ಕಾರಣಗಳಿಂದ ಎಷ್ಟೋ ನಾಶವಾಗಿ ಹೋದವು, ಇನ್ನು ಮುಂದಾದರೂ ಅವುಗಳನ್ನು ಯೋಗ್ಯ ವ್ಯವಸ್ಥೆಯಿಂದ ಜೋಪಾನ ಮಾಡದೆ ಇದ್ದರೆ ಇನ್ನು ಎಷ್ಟೋ ನಾಶವಾಗಿ ಹೋಗುವವು. ಸಂಸ್ಕೃತ ವಿದ್ಯೆಗೆ ನಮಗೆ ಇಷ್ಟೆಷ್ಟು ಸಿಕ್ಕದ ಸಂಬಂಧ ಇಲ್ಲದೇ ಇರುವ ಪಾಶ್ಚಾತ್ಯ ರಾಷ್ಟ್ರದ ಜನರು ಸಾವಿರಗಟ್ಟಲೆ ರೂಪಾಯಿ ಖರ್ಚು ಮಾಡಿ ಸಂಸ್ಕೃತ ಗ್ರಂಥಗಳನ್ನು ದೊರಕಿಸಿ ಜೋಪಾನ ಮಾಡಿ ಇಡುತ್ತಾರೆ, ಮತ್ತು ಅವರೊಳಗಿನ ಕೆಲವರು ಅವುಗಳ ಅಭ್ಯಾಸ ಮಾಡುವದರಲ್ಲಿ ಕೂಡ ತಮ್ಮ ಆಯುಷ್ಯವನ್ನೆಲ್ಲ ಹಾಕುತ್ತಾರೆ, ಹೀಗಿದ್ದು ನಾವು ಆ ಗ್ರಂಥಗಳನ್ನು ಶಾಶ್ವತವಾಗಿ ಜೋಪಾನ ಮಾಡುವವರ ಕಡೆಗೆ ಅವುಗಳ ಅಭ್ಯಾಸ ಮಾಡುವವರ ಕಡೆಗೆ ದುರ್ಲಕ್ಷ್ಯಮಾಡುತ್ತೇವೆ ಹಾಗು ಮಾಡುತ್ತೇವೆ, ಈ ಸಂಗತಿಯು ಬಹು ಲಜ್ಜಾಸ್ಪದವಾಗಿರುತ್ತದೆ. ಇದನ್ನು ಕುರಿತು ವಿಚಾರ ಮಾಡಿ ನನ್ನ ದೇಶಬಾಂಧವರು ಮನಃಪೂರ್ವಕವಾಗಿ ಸಹಾಯ ಮಾಡುವರೆಂದು ನಾನು ಆಶಿಸುತ್ತೇನೆ. ನಾನು ಅವರ ಕೂಡ ದ್ರವ್ಯದ ಸಹಾಯ ಬೇಡುವದಿಲ್ಲ, ಹಸ್ತ ಗ್ರಂಥಗಳ ಸಹಾಯ ಬೇಡುತ್ತೇನೆ, ಮತ್ತು ನನಗೆ ಆ ಗ್ರಂಥಗಳ ಅಭಿಲಾಷೆಯೂ ಹೊತ್ತು ನನ್ನ ಇಚ್ಛೆಯು ಇಲ್ಲ. ಈ ಸಂಗತಿಯನ್ನು ಲಕ್ಷ್ಯಕ್ಕೆ ತರಬೇಕೆಂದು ಸರ್ವರಿಗೂ ನನ್ನ ವಿನಂತಿಯುಂಟು.

ಮಹಾದೇವ ಚಿಮಣಾಜೀ ಆಪಟೆ,

ಬಿ ಎ, ಎಲ್, ಎಲ್ ಬಿ,

ಯುನಿವರ್ಸಿಟಿಯ ಫೆಲೊ, ವ ಯುನಿವರ್ಸಿಟಿಯ

ಹೈಕೋರ್ಟಿನ ವಕೀಲ್.

NOTICE.

T. SAMMI'S WONDERFUL MEDICINES.

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ನೇಹಿತರಲ್ಲೊಬ್ಬರು ನನ್ನ ಔಷಧಗಳನ್ನು ಉಪಯೋಗಿಸಿ ಸೌಖ್ಯವನ್ನೈದಿದ ಸಂಗತಿಯನ್ನು ಸಕಲರಿಗೂ ತಿಳಿಯಪಡಿಸುವಂತೆ ನನ್ನನ್ನು ಪ್ರಾರ್ಥಿಸಿದ್ದರಿಂದಲೇ ಅವರ ಕೋರಿಕೆಯಂತೆ ಮುಂದೆಕಂಡ ಸಂಗತಿಯನ್ನು ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸಿ ಸದರೀ ಔಷಧಗಳಿಂ ತಪ್ಪದೆ ಗುಣವನ್ನುಂಟುಮಾಡುವವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿಂದೂ ತೈಲವು —ನರೆವು ರೋಗ, ಎದೆರೋಗ, ಶಾಕ್ತಿವಾತವು, ಬತ್ತೆನೋವು, ಕಾಲುನೋವು, ಮೂಲವ್ಯಾಧಿ, ಕೀಲು ವಾತೆಗಳು, ತಲೆನೋವು, ತುರಿ, ಕುರುಗಳು, ವ್ರಣಗಳು, ಗಜ್ಜೆ ಇವುಗಳನ್ನು ನಿವೃತ್ತಿ ಮಾಡುವದು ಕ್ರಯ ೦ ೪—೦ ೦ ೪—೦.

ಹಿಂದೂ ತೈಲವು —[illegible], ಶೀತಜ್ವರ, ರಕ್ತ[illegible], ಹೊಟ್ಟೆನೋವು, [illegible], ತಲೆನೋವು, ಮೇಲು [illegible], ಹಸ್ತಾಂಗ[illegible], [illegible] ವ್ರಣ, [illegible] ಮೊದಲಾದ [illegible] ನಿವೃತ್ತಿ ಮಾಡುವದು. ಕ್ರಯ ೦—೧೦ ೦—೧೧—೦.

ಜ್ವರ ನಿವೃತ್ತಿ—[illegible], ಕೆಮ್ಮು, ಕೆಮ್ಮಲ್ [illegible], ಅಧ್ಯಾಹ್ನಕ ಜ್ವರಗಳು, ಸಂ[illegible]ಗಳು, [illegible] ಗುಣಪಡಿಸುವದು. ಕ್ರಯ ೦—೧೦ ೦—೧೪—೦.

ರಕ್ತಶುದ್ಧಿಗೆ ಔಷಧ — [illegible] ಕ್ರಯ ೦ ೪ ೦

ಕೆಮ್ಮಿಗೆ ಔಷಧ — [illegible] ಕ್ರಯ ೧ ೦—೦

ಶ್ವೇತಕುಷ್ಠ ಔಷಧ.—[illegible] ಕ್ರಯ ೭—೮—೦.

ಸೌಖ್ಯವು—ಇದು, [illegible] ಕ್ರಯ ೧—೦—೦.

ಬಧಿರತ್ವಕ್ಕೆ ತೈಲ —[illegible] ಕ್ರಯ ೧—೦—೦

ಚರಿತ ಕೂದಲುಗಳನ್ನು ಕಪ್ಪಗೆ ಮಾಡುವ ತೈಲವು—ಇದು [illegible] ಕ್ರಯ ೧—೦—೦

ತಲೆಕೂದಲಿಗೆ ಸುಗಂಧವಾದ ತೈಲವು —ಇದು [illegible] ಕ್ರಯ ೧—೦—೦.

ದಿವ್ಯಜಲ —ಇದು, ಶರೀರದಲ್ಲಿನ [illegible] ಕ್ರಯ ೧—೦—೦.

ದಂತಧಾವನ —ಇದು [illegible] ಕ್ರಯ ೦—೪—೦

ಪಿತ್ತಗುಳಿಗೆಗಳು —[illegible] ಕ್ರಯ ೦—೪—೦

ಮೇಲೆ ತಿಳಿಸಲ್ಪಟ್ಟ ಔಷಧಗಳಲ್ಲದೆ [illegible] ಕುಲಪರಂಪರೆಯಿಂದ ದೊರಕುವವು

ಇಲ್ಲಿ ಹೇಳಿದ ಔಷಧಗಳು ಬೇಕಾದವರು ಬಳ್ಳಾರಿ [illegible] ದೊರೆಯುವವು. [illegible] ಟಿ. ಸಾಮಿ [illegible] ಮದರಾಸು [illegible] ಬಳ್ಳಾರಿಯಿಂದ ತರಿಸಿಕೊಳ್ಳಬಹುದು.

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು

ಮದರಾಸ್ ಪ್ರಸಿದ್ಧ ಚಿತ್ತೂರು ಡಿಸ್ಟ್ರಿಕ್ಟ್ ಪುಂಗನೂರಲ್ಲಿ ಆರುಂಬತ್ತಿ ರಂಗರಾಯರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ.

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ.	ಕ್ರಯ ಪೋಸ್ಟೇಜ್ ಸಹ ರೂ.	ಆ.	ಪೈ.
1	ಕೌಮುದೀವಿಲಾಸ (ಮೊದಲಿನಿಂದ ಸಂಬಂಧಗಳು ರಾಮಕೃಷ್ಣರ ಮರೀ ಸಂಸ್ಕೃತ ವ್ಯಾಕರಣ ಸಿದ್ಧಾಂತಕೌಮುದಿಗೆ ಸುಲಭಕ್ಕೆಲಿ ಆಂಧ್ರಭಾಷಾಂತರ.)	0	4	6
2	ಸುಮತಿಸನೀತಿ (ತೆನ್ನರ ಪದ್ಯಕಾವ್ಯ ಸಟೀಕಾಸಹಿತ)	0	2	6
3	ರತ್ನಪರೀಕ್ಷೆ (ಪ್ರತಿಪದಾಂಧ್ರ ಟೀಕಾಸಹಿತ ತೆಲುಗು ಪದ್ಯಕಾವ್ಯ)	0	2	6
4	[illegible] ಚಮತ್ಕಾರ ಸಂಗ್ರಹ ([illegible])	0	2	6
[illegible]	[illegible]	0	2	0
[illegible]	[illegible]	0	1	6
	ಕನ್ನಡ ಲಿಪಿಯ ಗ್ರಂಥಗಳು			
7	[illegible]	0	1	0
8	[illegible]	0	1	0
	[illegible]			
9	[illegible]	1	10	0
10	[illegible]	1	1	0
11	[illegible]	0	15	0
12	[illegible]	0	14	0
13	[illegible]	0	8	6
14	ತಾರತಮ್ಯ [illegible]	0	4	6
15	[illegible]	0	1	6
16	[illegible]	0	1	0
17	[illegible]	0	1	6
18	ಪದ್ಯಮಾಲಾ ([illegible])	0	1	6
19	[illegible]	0	1	0
	[illegible] ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು			
20	ತಂತ್ರದೀಪಿಕಾ ([illegible])	1	14	0
21	[illegible]	0	8	6
22	[illegible] ಮೂಲ	0	3	0
23	[illegible] ಮೂಲ	0	3	0
24	[illegible] (ಟಿಪ್ಪಣಿ ಸಹಿತ)	0	2	0
25	ಪದ್ಯಮಾಲಾ ([illegible])	0	1	6
26	[illegible]	0	1	6

ಈ ಪುಸ್ತಕಗಳು ಬೇಕಾದವರು ಈ ಕೆಳಗೆ ಸ್ವಹಸ್ತವಾದಿ ಇರುವವರಿಗೆ ಬರೆದು ತರಿಸಿಕೊಳ್ಳಬಹುದು. ಹಿಂದೆ ಮಾರಿದ ಹತ್ತು ಪುಸ್ತಕಗಳು ಒಂದೇಸಾರಿ ತೆಗೆದುಕೊಳ್ಳುವಂತವರಿಗೆ ಒಂದು ಪುಸ್ತಕ ಉಚಿತವಾಗಿ ಕೊಡಲ್ಪಡುವದು.

ಆರುಂಬತ್ತಿ ರಂಗರಾವ್,

ಪುಂಗನೂರು.

Bangalore: -Printed and published at the Karnataka Press, No. 50, Hospital Pettah Road,—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತ್ಯುಪಗಮಸಾರ್ವ್ವ ಕರ್ಣಾಟಕಪ್ರಕಾಶನಪರಾಘಿದಾಪ್ರಥಿತಸಂಹಿತೀಕೋಧಿತಾ ॥ ಮ್ರಗಾಂಕಹಿಮಪಾಸರೆನಿಹಿತಮುದ್ರಣಾಸಜ್ಜ್ಯಸ್ಕೈರ್ದ್ಧಿ ಶಾಸುನರಿಪೋಷಿತಾದಿಕಶಿಮಾನಸಂಸಂತುತಂ ॥

Vol. XIX] BANGALORE—MONDAY, FEBRUARY 22, 1893 [No. 8.

ಸಂಪುಟ ೧೯] ಬೆಂಗಳೂರು:—ಸನ್ ೧೮೯೩ ನೇ ಇಸಿವಿ ಫೆಬ್ರುವರಿ ೨೨ ನೇ ತಾರೀಖ್ ಸೋಮವಾರ. [ಸಂಚಿಕೆ ೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಮುಂಗಡವಾಗಿ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ಬಿ. ಬಿ. ಹಿಂತವಾಟ್

ಬೆಂಗಳೂರ್, ಮಿಲ್ ಆಸ್ಪತ್ರೆ ರೋಡ್ ...

ನೋಟೀಸ್.

ಬೆಂಗಳೂರು ಕರ್ಣಾಟಕಾ ಪ್ರೆಸ್.

[illegible]

ಡಿ. ದಿನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. ಸಾರ್ಸಾಪರಿಲ್ಲಾ—ಇದು ರಕ್ತಶುದ್ಧಿ ಮಾಡುವದಕ್ಕೆ ಅತ್ಯುತ್ತಮವಾದದ್ದು. ... [illegible] ... ಬಾಟಲ್ ೧ಕ್ಕೆ ರೂಪಾಯಿ ೧—೪—೦

೨. ಕಿರಾಯತ ಮಿಶ್ರಿತ ಫಾಸ್ಫರಸ್ ಗುಳಿಗೆಗಳು.—... [illegible] ... ಬಾಟಲ್ ೧—೮—೦.

೩. ಪ್ರಮೇಹ ರಿಪು—... [illegible] ... ಬಾಟಲ್ ೧ಕ್ಕೆ ೧—೦—೦.

೪. ಟಾನಿಯ ಪುಡರ್.—... [illegible] ... ಪೆಟ್ಟಿ ೧ಕ್ಕೆ ೦—೪—೦.

೫. ಸಂಧಿವಾತದ ಔಷಧ.—... [illegible] ...

೬. ಅದ್ಭುತ ಚಮತ್ಕಾರ.—... [illegible] ... ೧—೦—೦

೭. ಪಾಚಕ ಗುಳಿಗೆಗಳು.—... [illegible] ... ಬಾಟಲ್ ೧ಕ್ಕೆ ೦—೪—೦.

೮. ದಂತ ಶುದ್ಧಿ.—... [illegible] ... ಪೆಟ್ಟಿ ೧ಕ್ಕೆ ೦—೪—೦.

೯. ಗಜಕರ್ಣದ ಮುಲಾಮ್.—... [illegible] ... ಪೆಟ್ಟಿ ೧ಕ್ಕೆ ೦—೪—೦.

೧೦. ಜ್ವರಗಳ್ಳಿಯ ಔಷಧ ಮತ್ತು ಮುಲಾಮ್.—... [illegible] ... ೦—೪—೦.

೧೧. ಜ್ವರದ ಗುಳಿಗೆ.—... [illegible] ... ಬಾಟಲ್ ೧ಕ್ಕೆ ೦—೪—೦.

೧೨. ಪೌಷ್ಟಿಕ ಸಿರಪ್.—... [illegible] ... ಬಾಟಲ್ ೧ಕ್ಕೆ ೧—೦—೦.

ಔಷಧಿಗಳ ಸೂಚನೆ.—... [illegible]

ವಿಳಾಸ—ಡಿ. ದಿನಕರರಾವ್ ಮತ್ತು ಕಂಪೆನಿ,

ಗಿರ್ಗಾಂವ್, ಮುಂಬೈ.

[illegible]

ನೋಟೀಸು.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ.

ಕಮ್ಮಿಷನ್ ಏಜಂಟ್ಸ್.

[illegible]

ವಿಳಾಸ—ಗಣೇಶ ರಾಮಚಂದ್ರ ಕರ್ಕರೆ,

ಮತ್ತು ಕಂಪೆನಿ, ಕಮ್ಮಿಷನ್ ಏಜಂಟ್ಸ್,

... ಮುಂಬೈ.

ನೋಟೀಸ್.

DONGRAY'S SYRUP.

೧. ಡೋಂಗರೆಯವರ "ಸ್ಪೆಷಲ್ ಬಾಲಾಮೃತ ಸಿರಪ್" ... [illegible] ... ಬಾಟಲ್ ಒಂದು (೧) ... [illegible]

೨. ಡೋಂಗರೆಯವರ ಪಾಚಕ ... [illegible] ... ಬಾಟಲ್ ಒಂದಕ್ಕೆ ೧ ರೂ.

೩. ಅಂಚೆಯ ಸೂಚನೆ—... [illegible]

ಡಾಕ್ಟರ್ ಕೆ. ಟಿ. ಡೋಂಗರೆ,

ಡಾಕ್ಟರ್ ಕಾಸೆಯವರ ... ,

... ಮುಂಬೈ.

ನೋಟೀಸ್.

[illegible]

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತಾ.—

೧೮೯೨ ನೇ ಇಸವಿ ಫೆಬ್ರುವರಿ ತಾರೀಖ್ ೧೪ರ ಮೊದಲು ಫೆಬ್ರುವರಿ ೨೦ ನೇ ತಾರೀಖು ವರಿವಿಗೆ.

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ ...	82
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ ..	42¼
ಗತವಾರದ ಶಿಲ್ಕು ಸೇರು .	57¼
ಜುಮ್ಲ ..	99¼
ಅಡಿಗೆ ಸಾಮಾಗ್ರಿಗಳಿಗಾಗಿ ಮಾರಲ್ಪಟ್ಟ ಸೇರು .	21¼
ಖರ್ಚಾದ ಅಕ್ಕಿ ಸೇರು ..	57½
ಜಾಸ್ತಿ ಬಾಕಿ .	7
ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.	3
ವಿಶ್ವಕ್ಕಲ್ಲದ ವಿದ್ಯಾರ್ಥಿ	3
ಬಾಯಿಂ ಇರತಕ್ಕ ವಿದ್ಯಾರ್ಥಿಗಳು .	41
ಶಾಸ್ತ್ರ ಕೋಡತಕ್ಕ ಪ್ರಯಾಣ, ಮಾಜಾರಕ ವಗೈರೆ ಸಂಖ್ಯೆ	16
ಪ್ರಯಾಣಸ್ಥರು ...	3
ಜುಮ್ಲ .	13

THE MONEY MARKET

ಮದರಾಸ್, ತಾರೀಖ್ ೨೦ನೇ ಫೆಬ್ರುವರಿ ೧೮೯೨.

ಬ್ಯಾಂಕ್‌ಬಿಲ್‌ಗಳು ಯಾನೆ ದರ್ಶನಹುಂಡಿಗಳು, ರೂಪಾಯಿಕ್ಕೆ

1s 4d

ಸೇಕಡ 4ರ ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 104-0-0 ಇಂದ 104-12-0 ವರಿಗೆ

ಮದರಾಸ್ ಬ್ಯಾಂಕ್‌ಷೇರ್‌ಗಳು (500) ರೂಪಾಯಿಗಳ ಬಾಬತು 905 ಲಾಗಾಯಿತು 910

ಸವರನ್‌ಗಳು, 14-15-0 ಇಂದ 15-0-0 ವರಿಗೆ

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 22, 1892

೧೮೯೨ನೇ ಇಸವಿ ಫೆಬ್ರುವರಿ ತಾ|| ೨೨ನೇ ಸೋಮವಾರ.

VEGETARIANISM

ನಿರ್ದುಷ್ಟಗಳಾದ ಮತ್ತು ಅಬಾದಕಗಳಾದ ಭೋಜ್ಯಪದಾರ್ಥಗಳನ್ನು ಭೋಜನಶಾಲೆಗಳಲ್ಲಿ ವಿನಿಯೋಗಿಸುವ ವಿಷಯದಲ್ಲಿ ಯೂರೋಪ್ ದೇಶೀಯರು ತೀವ್ರಗಳಾದ ಮಹತ್ಪ್ರಯತ್ನಗಳಂ ಮಾಡುತಲಿರುವಂತೆ ತಿಳಿಯಬರುತ್ತಿದೆ. ಯೂರೋಪ್ ಖಂಡದ ಅನೇಕ ಪ್ರದೇಶಗಳಲ್ಲಿ ಏತದರ್ಥ ಸಂಘಗಳೇರ್ಪಾಡಾಗಿರುತ್ತಿವೆ, ಶುದ್ಧ ಶಾಕ ಫಲ ಕಂದಮೂಲಗಳುಳ್ಳ ಭೋಜನ ಶಾಲೆಗಳೂ, ವಿಶ್ರಾಂತಿ ಸ್ಥಾನಗಳೂ ಅನೇಕವಾಗಿ ನೆಲೆಗೊಳಿಸಲ್ಪಟ್ಟಿರುತ್ತಿವೆ. ಮಾನುಷ ಗುಣಾಭಿವೃದ್ಧಿಗೆ ಶಾಕ ಫಲ ಕಂದ ಮೂಲವರ್ಗವು ಬಹಳ ಅನುಗುಣವಾದವೆಂದು ಅವಘೋಷಿಸಿ ವಾದಿಸತಕ್ಕ ಮಾರ್ಗಾನುಸಾರಿಗಳು ಅನೇಕರೇರ್ಪಡುತಲಿದಾರೆ. ಈ ವಿಷಯದಲ್ಲಿ ಇಂಗ್ಲಿಷಿನವರು ಪ್ರಥಮ ಪ್ರವರ್ತಕರಾಗಿ ಯೇರ್ಪಟ್ಟು ಬಳಿಕ ಅವರು ತಮ್ಮ ಸಹಾಯಾರ್ಥವಾಗಿ ಅಮೆರಿಕಾ ದೇಶೀಯರಂ ಕರೆದುಕೊಂಡಂತೆ ಕಾಣುತಿದೆ. ಈಗ್ಯೆ ಅನೇಕ ಸಂವತ್ಸರಗಳ ಕಾಲದಮೊದಲು, ಶಾಕಾಹಾರಿಯಾಗಿದ್ದ ಮೆ|| ಹೆನ್ರಿ ಎಸ್ ಕ್ಲಬ್ ಯೆಂಬವರು, ತಾನು ಮಾತ್ರವಲ್ಲದೆ ತಮ್ಮ ಮನೆತನದವರನ್ನೆಲ್ಲ ತಮ್ಮ ಮಾರ್ಗವನ್ನನುಸರಿಸುವಂತೆ ಮಾಡಿ ಅದಂ ಅಮೆರಿಕಾ ಖಂಡದಲ್ಲಿ ಸರ್ವತ್ರ ಪ್ರಚಾರದೊಳು ತರುವ ಉದ್ದೇಶದೊಡನೆ ಅಲ್ಲೊಂದು ಮಾಸ ಪತ್ರಿಕೆಯನ್ನು ಈಗ್ಯೆ ಮೂರುವರುಷಗಳ ಹಿಂದೆ ಪ್ರಕಟಿಸಲೆತ್ನಿಸಿ ಅದ್ಯಾಪಿ ನಡೆಸುತಲಿದಾರೆ. ಇದಕ್ಕೆ ಸೇರಿದಂತೆ ಬಂದು ಸಮಾಜವನ್ನೇರ್ಪಡಿಸಿ ಅದಕ್ಕೆ ಅಮೆರಿಕಾ ಖಂಡದ "ಶಾಕಾಹಾರ ಪರಿಗ್ರಹ ಸಂಘ" ವೆಂಬದಾಗಿ ಹೆಸರಿಟ್ಟು ಅದಕ್ಕೆ ಸುಮಾರ್ ಹತ್ತುಸಾವಿರ ಜನರಕನಕ ಮೆಂಬರಾಗಿ ಸೇರಿಸಿ ಮಾಂಸಾಶನರಾಗಿದ್ದವರನ್ನೆಲ್ಲ ಅದಂ ತ್ಯಜಿಸುವಂತೆ ಪ್ರೇರಿಸಿ ಮನಸಾಪಿ ಅದಂ ಸ್ಮರಿಸುವುದು ಸಹ ಜಿಗುಪ್ಸಾಕರವ ಮೆಂದೆಣಿಸುವಷ್ಟು ವೈಮನಸ್ಯವನ್ನುಂಟುಮಾಡಿ ತಮ್ಮ ಮಾರ್ಗಕ್ಕೆ ತಂದುಕೊಂಡರು. ಇವರು ಪ್ರಕಟಿಸುತಲಿರುವ ಮಾಸ ಪತ್ರಿಕೆಗೆ ಚಂದಾ ಸಾಲಿಯಾನಾ ೧|| ರೂಪಾಯಿ ಗೊತ್ತುಮಾಡಲ್ಪಟ್ಟಿರುತಿದೆ. ಇದರಲ್ಲಿ ಮಾಂಸಾಹಾರವಂ ದೂಷಿಸಿ ಅದರಿಂದುಂಟಾಗತಕ್ಕ ಬಹುವಿದ ದುರ್ಗುಣಗಳಂ ನಿರೂಪಿಸಿ ಶಾಕಾಹಾರವೆ ಶ್ರೇಷ್ಠವಾದುದೆಂದು ಘೋಷಿಸಿ ವಾದಿಸುವ ಲೇಖನಗಳು ಅನೇಕ ಅದಗಿರುತಿವೆ. ಇಂಡ್ಯದೇಶದಲ್ಲಿ ಶ್ರದ್ಧಾಳುಗಳಾದ ಉತ್ತಮ ಬ್ರಾಹ್ಮಣರಂತೆ ಮಾಂಸಾಶನವಂ ನಿಂದಿಸಿ ಅತಿ ಹೇಯವಾಗಿ ಪರಿಭಾವಿಸಿರತಕ್ಕವರನೇಕರು ಸಹ ಸದರೀಪತ್ರಿಕೆಗೆ ಆಗಾಗ್ಯೆ ಬರೆಯುತಲಿದಾರೆ. ಅಮೆರಿಕಾ ದೇಶೀಯರಾದ ಸದರೀ ಬ್ರಾಹ್ಮಣರು, ಮಾನವಪ್ರಕೃತಿಗೆ ಮಾಂಸಾಹಾರಕ್ಕಿಂತಲೂ ಶಾಕಾದಿಗಳು ಉತ್ಕೃಷ್ಟವಾದದೆಂಬದಂ ಶಾಸ್ತ್ರತಃ ಮತ್ತು ಶರೀರತತ್ವವಿವೇಚಯೊಡನೆ ನಿರೂಪಿಸಲೆತ್ನಿಸಿದಾರೆ. ಈ ಸಮಾಜಕ್ಕೆ ಸೇರಿದ ಉಪಶಮಾಜಗಳು ಸಕಲ ದೇಶಗಳಲ್ಲಿಯೂ ನೆಲೆಗೊಳಿಸಲ್ಪಟ್ಟವೆ. ನಾವು ಅವಹಂನೋಡಿ ವಿವೇಕವಂ ತಂದುಕೊಳ್ಳಲಾಗದೆ, ಇಂಡ್ಯಾದೇಶೀಯರೊಳು, ತತ್ರಾಪಿ ಅಗ್ರವರ್ಣಕ್ಕೆ ಸೇರಿದವರೆನ್ನಿಸಿಕೊಂಡಿರುವವರ ಪೈಕಿ ಆ ಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರನೇಕರಿಗೆ, ಶಾಕಾಹಾರವು ಬಲಪ್ರದವಾದುದಲ್ಲವು, ಪರಂತು ವಿವಿಧ ಮಾಂಸಾಹಾರವೇ ವೀರ್ಯವರ್ಧಕವಾದುದೆಂಬ ಭಾವ ರತಿಮೋಹ, ನಿಷಿದ್ಧಗಳಾಗಿಯೂ ಅಪೇಯಗಳಾಗಿಯೂ ಇರುವ ಪದಾರ್ಥಗಳ ಸೇವನೆಯಲ್ಲಿ ಬದ್ಧಾದರವುಳ್ಳವರಾಗಿರುತಲಿದಾರೆ ಮದ್ಯಪಾನವು ಈಗ ಹ್ಯಾಗೆ ಅಲ್ಲಿಯಲ್ಲಿ ವೃದ್ಧಿಯನ್ನೈದುತ ಬರುತಲಿದೆಯೋ ಹಾಗೆಯೇ ಮಾಂಸಾಹಾರವೂ ತ ಗೂಢವಾಗಿ ಉತ್ತಮ ವರ್ಣದವರೊಳು ಅಭ್ಯಾಸದಲ್ಲಿ ಬರುತಲಿವೆ. ಔಷದ ರೂಪದಿಂದದು ಸ್ನೇಹವೈಲಕ್ಷಣ್ಯಾಭಿವೃದ್ಧಿಗಾಗಿ ಸ್ವೀಕರಿಸಲ್ಪಟ್ಟಾಗ್ಯೂ ಅದರ ತೀಕ್ಷ್ಣೋವ ರಾಮುಕವಾದ ಮಾಂಸವು ಕೆಲವರಿಗೆ ಸುಲಭವಾಗಿ ದೊರೆಯದೆ, ಅದಕ್ಕಾಗಿ ಬಹಳ ಪ್ರಯಾಸ ಪಡುತ್ತಾರೆ ಮಾಂಸವು ಮದ್ಯದಂತಲ್ಲವು. ಅದು ದ್ರವಪದಾರ್ಥ ವಾದುದರಿಂದ ನೋಡತಕ್ಕವರಿಗೆ ಔಷದ ಭ್ರಾಂತಿಯನ್ನುಂಟುಮಾಡುವ ಶಕ್ತಿಯುಳ್ಳದ್ದಾಗಿರುತಿದೆ ಆದುದರಿಂದ ಮಾಂಸವನ್ನು ವಾಸಗೃಹಗಳಲ್ಲಿ ಪಕ್ವಮಾಡಿಸಿ ಇತರ ಪದಾರ್ಥಗಳೊಡನೆ ಸೇವಿಸಲಿಕ್ಕೆ ಇನ್ನೂ ಸ್ವಲ್ಪ ಸಂಕೋಚವು ಅನೇಕರಿಗೆ ಬಾಧಿಸುತಲಿರುವಂತೆ ಕಾಣುತಿದೆ. ಈ ವಿಷಯದಲ್ಲಿ ಅಪರಿಚಿತರಾದವರ ಸಹಾಯವಂ ನಿರೀಕ್ಷಿಸಿದರೆ ಅದು ಸಮಯಕ್ಕೊದಗದೆ ತಮ್ಮ ಗುಟ್ಟು ಹೊರಗಾಗುವದೆಂಬ ಭೀತಿಯೊಡನೆ ಅದಕ್ಕೆ ಅನುಕೂಲವಾದ ಪಂಚಮರನ್ನೇ ಏಮುಪರ್ಯೆಣ ಚುನಾಯಿಸಿ ಸಾರಸ್ಯಕ್ಕೂ ಅಶ್ವರಕ್ಷಣೆಗೂ ಇಟ್ಟುಕೊಂಡು ಅವರಿಗೆ ತಮ್ಮ ವಾಸಗ್ರಹಗಳಿಗೆ ಸೇರಿದಂತೆ ಮನೆಗಳಂಟ್ಟಿಸಿಕೊಟ್ಟು ಮನೆಯ ಯಾಚಕ ಪರಿಚಾರಕರಂತೆ ನಿಯತವಾಗಿಟ್ಟುಕೊಂಡಿರುವ ವಾಡಿಕೆಯು ಈಗ ಅಧಿಕವಾಗುತಲಿದೆ. ಚಂಡಾಳಸಂಸರ್ಗವೂ, ಚಂಡಾಳವಾಟಿಕಾಪ್ರವೇಶವೂ, ಚಂಡಾಳಸ್ವೀಕೃತೋದಕಪ್ರಾಶನವೂ, ಅವರೊಡನೆ ಸಲ್ಲಾಪವೂ ಅತಿ ನಿಕೃಷ್ಟವೆಂದು ಮನುಪರಾಶರಾದಿಗಳು ತಿಳಿಸಿ, ಅವುಗಳಿಗೆ ಅತಿದಾರುಣಗಳಾದ ಪ್ರಾಯಶ್ಚಿತ್ತಗಳಂ ವಿಧಿಸಿರುತ್ತಾರೆ. ಅವುಗಳೆಲ್ಲವು ನಿರರ್ಥಕಗಳೆಂದೆಣಿಸಲ್ಪಟ್ಟವೆ. ಮುಖ್ಯವಾಗಿ, ಈ ದೇಶದಲ್ಲಿ ಅಗ್ರವರ್ಣಕ್ಕೆ ಸೇರಿದವರು ಮಾಂಸಾಹಾರಸುರಾಪಾನ ಮೊದಲಾದವು ದೋಷ್ಯವೆಂದು ತ್ಯಜಿಸಿರುವದಿವು ಯುಕ್ತವಾದುದೆಂಬ ಭಾವನೆಯು ಯೂರೋಪ್ ದೇಶೀಯರಿಗೆ ಅನುಭವಪೂರ್ವಕ ವುಂಟಾಗಿ ಅವರುಸಹ ಬಹುವಿಧ ಪ್ರಯತ್ನಗಳಮೂಲಕ ಅಂತಾ ನಿಷಿದ್ಧ ಪದಾರ್ಥಗಳ ಸೇವನೆಯಂ ತ್ಯಜಿಸುತ ಬರುವ ಈ ಕಾಲದೊಳಿಲ್ಲಿನವರನೇಕರು ಅದಂ ಪರಿಗ್ರಹಿಸಲೆತ್ನಿಸಿರುವದು ಕಲಿವಿಡಂಬನಮಹಾತ್ಮ್ಯವಲ್ಲದೆ ಬೇರೆಯಾವದೂಕಾರಣವಲ್ಲವೆಂದೆಣಿಸಬೇಕಾಗಿದೆ. ಕಾಲಗತಿಯಿಂದ ಸಕಲವೂ ವಿರೂಪವನ್ನೈದುತಲಿರುವಾ ಈ ಹಿಂದಕ್ಕಾಗಿ ಚಿಂತಿಸಿ ಪ್ರಯೋಜನವಿಲ್ಲವು.

Occasional Notes
ನೈಮಿತ್ತಿಕ ವಿಷಯನ್ಯಾಸ.

Wedding in Jodhpur —ಜೋಧಪುರ ಸಂಸ್ಥಾನದ ಯುವರಾಜರವರಿಗೆ ಈಗ ವಿವಾಹೋತ್ಸವ ನಡೆಯುತಲಿದೆಯಷ್ಟೆ. ಈ ವಿಶೇಷ ಸಂದರ್ಭದಬಗ್ಯೆ ಪ್ರಾಯಶಃ ಪ್ರತಿ ನೇಟಿವ್ ಸಂಸ್ಥಾನಗಳಿಂದಲೂ ರಾಜಾರ್ಹಗಳಾದ ಶಿಲ್ಕತಿಗಳೊಡನೆ ಪ್ರತಿ ನಿಧಿಗಳು ಅಲ್ಲಿಗೆ ಕಳುಹಿಸಲ್ಪಟ್ಟಿರುತ್ತಾರೆ.

English translation of Ashtadhyayi —ವಾಯುವ್ಯ ದೇಶದ ಹೈಕೋರ್ಟ್ ವಕೀಲರಾದ ಶಿರಶ್ಚಂದ್ರವಾಸು, ಬಿ ಎ ಯವರು ಪಾಣಿನಿಯಿಂದ ರಚಿಸಲ್ಪಟ್ಟಿರುವ ಅಷ್ಟಾಧ್ಯಾಯಿ ಎಂಬ ವ್ಯಾಕರಣ ಸೂತ್ರಗಳಂ ಇಂಗ್ಲಿಷ್ ಭಾಷೆಯಲ್ಲಿ ಭಾಷಾಂತರ ಮಾಡುತಲಿರುವಂತೆ ತಿಳಿಯಬರುತಿದೆ. ಇದು ಸಂಸ್ಕೃತಭಾಷಾನಭಿಜ್ಞರಾದವರಿಗೆ ಕೇವಲ ಉಪಯುಕ್ತವಾದ ಕಾರ್ಯವಾಗಿರುತಿದೆ

Colonel P D Henderson —ದಗ್ಗಿ ಮತ್ತು ದರೋಡೆ ಇಲಾಖೆಯ ಸ್ಯೂಪರಿಂಟೆಂಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಯವರು, ಸರ್‌ಹ್ಯಾರಿ ಪ್ರೆಂಡರ್‌ಗ್ಯಾಸ್ಟ್ ಯವರಿಗೆ ಬದಲಾಗಿ ಇಲ್ಲಿನ ರೆಸಿಡೆಂಟ್ ಕೆಲಸಕ್ಕೆ ಬರುವಂತೆ ವ್ಯವಸ್ಥೆಯಾಗಿರುವದಾಗಿ ಈ ವಾರದಲ್ಲಿ ಬಂದ ವಂತಿ ವೃತ್ತಾಂತದ ಮೂಲಕ ತಿಳಿಯಬರುತಿದೆ ಇವರು ಈಗ್ಯೆ ೨೦ ವರುಷಗಳಹಿಂದೆ ಮದರಾಸ್ ಕ್ಯಾವಲ್ರಿ ಇಲಾಖೆಯನ್ನಗಲಿ ಇಂಡ್ಯ ಗವರ್ನಮೆಂಟ್ ಪೊಲಿಟಿಕಲ್ ನೌಕರಿಯನ್ನು ಪ್ರವೇಶಿಸಿದ್ದರು

A Hindu temple robbed. —ಸಿಲೋನ್ ದ್ವೀಪದಲ್ಲಿರುವ ಒಂದು ಹಿಂದೂ ದೇವಾಲಯದಲ್ಲಿ ಸುಮಾರ್ ೫೦,೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಒಡವೆಗಳು ಕಳವಾಗಿ, ಸದರೀ ಆಲಯಕ್ಕೆ ಸೇರಿದ ಮೂವರು ಗುರುಗಳು ದಸ್ತಗಿರಿ ಮಾಡಲ್ಪಟ್ಟು ದರ್ಯಾಫ್ತಿಗೆ ಗುರಿಯಾಗಿರುತ್ತಾರೆ. ಇಂತ್ಯ ದೇವದೇವಳು, ತತ್ರಾಪಿ ದಕ್ಷಿಣ ದೇಶದೊಳು ಯೆಷ್ಟೋ ದೇವಾಲಯಗಳಲ್ಲೂ ಮಠಗಳಲ್ಲೂ ಇದ್ದ ಆಭರಣಗಳೂ ಇತರ ಚರ ಜಂಗಮಗಳೂ ಬಹುವಿದ ಕಾರಣಗಳ ದೆಸೆಯಿಂದ ನಿರ್ನಾಮವಾದುದಕೆ ಸಿಲೋನ್ ದ್ವೀಪದಲ್ಲಿ ಆದ ಬಗ್ಯೆ ಯೇತಕ್ಕೆ ಚಿಂತಿಸಬೇಕು.

Outlook in Southern India —ಈಚೆಗೆ ಹೊರಗಾದ ಸರ್ಕಾರೀ ರಿಪೋರ್ಟಿನ ದೆಸೆಯಿಂದ ಮದರಾಸ್ ಪ್ರೆಸಿಡೆನ್ಸಿಯ ಕಾಲಸ್ಥಿತಿಯು ಕೇವಲ ಚಿಂತನೀಯವಾಗಿ ಕಾಣುತಿದೆ ಕ್ಷಾಮ ಪೀಡಿತಗಳಾದ ಡಿಸ್ಟ್ರಿಕ್ಟ್‌ಗಳಲ್ಲಿ ಸದ ಜನರು ಅದರ ಬಾಧೆಯನ್ನು ಅನುಭವಿಸ ಬೇಕಾದವರಾಗಿರುವದಲ್ಲದೆ ಸದರೀ ಡಿಸ್ಟ್ರಿಕ್ಟ್‌ಗಳೂ ಒಂದು ದಿನ ಪಚ್ಚು ಕಡಿಮೆ ದುರ್ಭಿಕ್ಷ ಪೀಡಿತಗಳಾಗುವವು. ಇದುವರಿವಿಗೆ ೨೧,೩೭೬ ಸಲ ಮೈಲ್‌ಗಳ ಪ್ರದೇಶವು ಕ್ಷಾಮ ಪೀಡಿತವಾಗಿ ತನ್ನಿವಾಸಿಗಳಾದ ೩೫,೭೭,೬೭೩ ಜನರು ಅದರ ಬಾಧೆಯನ್ನನುಭವಿಸುತಲಿದಾರೆ. ಕ್ಷಾಮ ನಿವಾರಕಗಳಾದ ಕಾಮಗಾರಿಗಳಂ ನಿಲ್ಲಿಸಿ ಬಿಟ್ಟಾಗ್ಯೂ ಅವುಗಳಲ್ಲಿ ಜನರಸಂಖ್ಯೆಯು ಹೆಚ್ಚಾಗಿ ವೃದ್ಧಿಯಾಗುತಲಿದೆ ಹೊಸಭಾವಿಗಳಂಕಟ್ಟಿಸಿಕೊಳ್ಳುವದಕ್ಕಾಗಿಯೂ ಹಳೇ ಬಾವಿಗಳಂ ದುರಸ್ತುಮಾಡಿಕೊಳ್ಳುವದಕ್ಕಾಗಿಯೂ, ದನಗಳಂ ಕೊಂಡುಕೊಳ್ಳುವದಕ್ಕಾಗಿಯೂ, ಬೀಜದಾನ್ಯಕ್ಕಾಗಿಯೂ, ಇದುವರಿವಿಗೆ ರೈತರಿಗೆ ಹನ್ನೊಂದು ಲಕ್ಷ ರೂಪಾಯಿಗಳು ತಕಾವಿ ಕೊಡಲ್ಪಟ್ಟಿರುತಿದೆ. ಈ ಸಂವತ್ಸರದಲ್ಲಿ ಮೊದಲು ಆರುತಿಂಗಳ ಕಾಲಕ್ಕೆ ರಿಲೀಫ್ ಕಾಮಗಾರಿಗಳಿಗಾಗಿ ಇಪ್ಪತ್ತೇಳು ಲಕ್ಷ ರೂಪಾಯಿಗಳೂ ಧರ್ಮಾರ್ಥವಾದ ಅನ್ನ ಸತ್ರಗಳಿಗಾಗಿ ೬೬,೦೦೦ ರೂಪಾಯಿಗಳೂ ಅಂದಾಜ್ ಮಾಡಲ್ಪಟ್ಟಿತು. ಈಗಿನ ಸ್ಥಿತಿಯಂ ಯೋಚಿಸಿ ಅನುಭವನನ್ನರಾದವರೂ ಕಷ್ಟಜೀವಿಗಳೂ ದಾತು ಈಶ್ವರ ಸಂವತ್ಸರಗಳ ಕ್ಷಾಮವಂ ಜ್ಞಾಪಕಕ್ಕೆ ತಂದುಕೊಳ್ಳುತ ಚಿಂತಾಕ್ರಾಂತರಾಗಿ ಅಹನ್ಯ ಹನಿಕಾಲವಂ ಕಳೆಯುತಲಿದಾರೆ.

Bangalore City Municipality
ಬೆಂಗಳೂರ್‌ಸಿಟಿ ಮ್ಯೂನಿಸಿಪಾಲಿಟಿ.

ತಾ|| ೨೦ ನೇ ಫೆಬ್ರುವರಿ ೧೮೯೨

ಸರ್ ೧೮೯೨ನೇ ಇಸವಿ ಫೆಬ್ರುವರಿ ೨೫ನೇ ತಾರೀಖ್ ಬುಧವಾರ ಮಧ್ಯಾಹ್ನ ೪ ಘಂಟೆಗೆ, ಸಿಟಿ ಮ್ಯೂನಿಸಿಪಲ್ ಸಭಾಸದರು ಕೋಟೆಯಲ್ಲಿರುವ ಮ್ಯೂನಿಸಿಪಲ್ ಆಫೀಸನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಸ್ತು.

೧. ಸರ್ ೧೮೯೨ನೇ ಇಸವಿ ಜನವರಿ ಮಾಹೆ [illegible] ಬಾಬ್ತು ನಾಷು ಜಮಾಖರ್ಚು ಲೆಕ್ಕ, ಮನೆಗಳಿಗೆ ಹೋಗಿ [illegible] ಮಾಡುವ ಮೆಡಿಕಲ್ ಆಫೀಸರ ಲೆಕ್ಕ, ಮತ್ತು ಕಾಮಗಾರಿಗಳ [illegible] ಕುರಿತ ರಿಪೋರ್ಟ್

೨. [illegible]ನಲ್ಲಿ ಮೃತ ಪಡತಕ್ಕ ವ್ಯಾಧಿಗಳನ್ನು ದರ್ಜ ಮಾಡುವದಕ್ಕಾಗಿ ಒಂದು [illegible] ವಿಷಯವನ್ನು ಕುರಿತು ೯ನೇ ಇಸವಿ ಜನವರಿ ೭ನೇ ತಾರೀಖ್ ನಲ್ಲಿ [illegible] ಮಾಡಿದ [illegible] ಸರ್ಕಾರ್ ನಿರ್ಣಯದ ಮೇಲೆ [illegible] ಗವರ್ನಮೆಂಟರವರು ಮಾಡಿದ [illegible] ನಂಬರ್ ಪ್ರೊಸೀಡಿಂಗ್ಸ್.

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

೯. [illegible]

M. Annaji Rao,
For President,
City Municipal Commission

ಸಿಟಿ ಮ್ಯೂನಿಸಿಪಲ್ ಆಫೀಸ್
ಬೆಂಗಳೂರು

LOCAL AND PROVINCIAL NEWS
ಸ್ಥಳದೇಶಮತ್ತುತಾಲ್ಲೂಕುವಾರ್ತಾವೃತ್ತಾಂತಗಳು.

H H the Maharaja —ಶ್ರೀಮನ್ಮಹಾರಾಜರವರು ಬರುವತಿಂಗಳ ಗುರ್ರೇತಾರೀಖಿನಲ್ಲಿ ಮೈಸೂರಿಗೆ ದಯಮಾಡುವರೆಂದು ತಿಳಿಯಬರುತಿದೆ.

The Resident —ಗತ ವಾರದಲ್ಲಿ ಹಾಸನ ಪ್ರಾಂತಕ್ಕೆ ಸರ್ಕ್ಯೂಟ್ ಹೋಗಿದ್ದ ಬ್ರಿಟಿಷ್ ರೆಸಿಡೆಂಟರವರು ತಮ್ಮ ಅಸಿಸ್ಟೆಂಟರೊಡನೆ ಗತ ಬುಧವಾರದ ದಿನ ಈಪೂರಿಗೆ ವಾಪಸ್ ದಯಮಾಡಿದರೆಂದು ಕೇಳುತ್ತೇವೆ

The Mysore Civil Service Regulations. ಆಚೇ ಶನಿವಾರದ ದಿನ ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಯ ವಿಷಯಕವಾದ ಒಂದು ಸಭೆಸೇರಿ ಅದಕ್ಕೆ ಅನೇಕ ದೊಡ್ಡ ಮನುಷ್ಯರು ಮದರಾಸ್ ನಿಂದ ಬಂದಿದ್ದಂತೆ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಸದರೀ ಸಭೆಯವರು ಸೇರಿ ಮಾಡಿದ ಕೆಲವು ನಿಬಂಧನೆಗಳನ್ನು ನಾವು ನೋಡಿದೆವು ಅವುಗಳನ್ನು ಸಾಧ್ಯವಾದರೆ ಮುಂದಿನ ವಾರದಲ್ಲಿ ನಮ್ಮ ಅಭಿಪ್ರಾಯದೊಡನೆ ಪ್ರಕಟಿಸುವೆವು.

Murder —ಈಗ್ಯೆ ಮೂರುನಾಲ್ಕು ದಿವಸಗಳ ಹಿಂದೆ ಮಾಲೂರ್ ತಾಲ್ಲೂಕಿಗೆ ಸೇರಿದ ತೇಕಲ್ ಗ್ರಾಮದಲ್ಲಿ ಘೋರವಾದ ಖೂನಿ ಯೊಂದು ನಡೆದಂತೆ ತಿಳಿಯಬರುತಿದೆ ಒಬ್ಬ ಮನುಷ್ಯನು ತನ್ನ ಭಾರ್ಯೆಯ ತಲೆಯನ್ನು ಕಡಿದು ಅದಂ ಬೀದಿಯಲ್ಲಿ ತೆಗದುಕೊಂಡು ಹೋಗಿ ಕಡೆಗೆ ಒಂದು ದೇವಾಲಯದಲ್ಲಿಟ್ಟು ಪೂಜೆಮಾಡಿದನು. ಅವನು ಒಡನೆ ದಸ್ತಗಿರಿ ಮಾಡಲ್ಪಟ್ಟು ಪೊಲೀಸ್ ವಿಚಾರಣೆಯಲ್ಲಿದಾನೆ.

Successful Brahmin girls.—ಈಸಲದ ಲೋವರ್ ಸೆಕೆಂಡರಿ ಪರೀಕ್ಷೆಗೆ ಮಹಾರಾಣಿಯವರ ಬಾಲಿಕಾ ಪಾಠಶಾಲೆಯಿಂದ ಹೋಗಿದ್ದ ೧೨ ಮಂದಿಯಲ್ಲಿ ೯ ಜನ ಬ್ರಾಹ್ಮಣ ಜಾತಿ ಬಾಲಿಯರು ತೇರ್ಗಡೆಯಾಗಿರುವದು ಕೇಳಿ ಸಂತೋಷಿಸುತ್ತೇವೆ. ಈ ವರ್ಷ ಆರ್ಯಬಾಲಿಕಾ ಪಾಠಶಾಲೆಯಿಂದ ಕಳುಹಿಸಿದ್ದ ಒಬ್ಬ ಹುಡುಗಿ ಹೋಗಿ ತೇರ್ಗಡೆಯಾದಂತೆ ತಿಳಿದುಬರುತ್ತದೆ. ಮುಖ್ಯವಾಗಿ ಸ್ತ್ರೀಯರು ತಮ್ಮ ಜಾತಿ ಮತ ನಿರ್ಬಂಧಗಳಿಂದ ಬದ್ಧರಾಗಿ ನಿರ್ಬಂಧವನ್ನು ಅನುಭವಿಸುತ್ತ ಸಂಕುಚಿತರಾಗಿದ್ದ ಬ್ರಾಹ್ಮಣ ಯುವತಿಯರಿಗೀಗ ಬಂದ ವಿದ್ಯಾಭ್ಯಾಸ ಸ್ವಾತಂತ್ರ್ಯ ಸುಖಾನುಭವವು ಈಗಿನ ಪ್ರಮಾಣದಲ್ಲಿ ಆಗಿರುವದಕ್ಕಾಗಿ ಇತರ ಕುಲವೃದ್ಧರೂ ಉದಾಸೀನರೂ, ಹಿತಿಗಳೂ ಕೊಂಡಾಡದಿರಲಾರರು.

Readmission to Hinduism.—ಕೆಲವು ಕಾಲದ ಹಿಂದೆ ಕ್ರಿಶ್ಚಿಯನಾಗಿ ಹೋಗಿದ್ದ ವಿಶ್ವಂಭರ ಮೊದಲಿ ಎಂಬ ತನು, ತನ್ನ ಬುದ್ಧಿಹೀನತೆ ದೋಷಕ್ಕಾಗಿ ಬಹಳ ಅನುತಾಪಿಸಿ ಸ್ವಧರ್ಮದಲ್ಲಿ ಬಂದು ತನ್ನನ್ನು ಪ್ರಾಯಶ್ಚಿತ್ತದಿಂದ ಶುದ್ಧನಾಗಿಸಿ ಸೇರಿಸಿಕೊಳ್ಳಲು ತನ್ನ ಜಾತಿಯ ವರ್ಣ ಪ್ರಮುಖರಾದ [illegible] ರಾಯಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್‍ರವರು ಕಟ್ಟಿಸಿರುವ ಈಶ್ವರ ದೇವಾಲಯದಲ್ಲಿ ಗತ ಗುರುವಾರದ ದಿನ ಸಭೆ ಸೇರಿ ಕುಲಸ್ಥರೆಲ್ಲರೂ ಒಪ್ಪಿ ಕೆಲವು ಪ್ರಾಯಶ್ಚಿತ್ತ ಕ್ರಿಯೆಗಳ ನಂತರ ಆತನನ್ನು ಮರಳಿ ತಮ್ಮ ಮತದಲ್ಲಿ ಸೇರಿಸಿಕೊಂಡು ಆತನು ತನ್ನ ಮೇಲೆ ಸರ್ವ ಅಧಿಕಾರವಿರುವ ಪರಮಾತ್ಮನ ಲಕ್ಷ್ಯವಿಲ್ಲವೆಂದು ತಿಳಿದು ನಿರ್ಣಯಿಸಿದುದಕ್ಕೆ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಪಾದರಿಗಳೆ? ಇನ್ನು ನಿಮ್ಮ ಪ್ರಯತ್ನಗಳೆಲ್ಲವು ವಿಫಲಗಳಾಗುವ ಕಾಲ ಪ್ರಾಪ್ತವಾಯಿತು. ನಿಮ್ಮ ಹಿತೋಪದೇಶಗಳು ಅರಣ್ಯರೋದನಗಳಾಗುವ ಸಮಯ ಸನ್ನಿಹಿತವಾಯಿತು! ಇನ್ನು ನೀವೆಲ್ಲರು ಸ್ವದೇಶೋನ್ಮುಖರಾಗಿ ತೆರಳಬಹುದು. ಹೀಗೆಯೇ ತಮ್ಮ ಕೃತ್ಯಕ್ಕಾಗಿ ಅನುತಾಪಿಸಿ ಪರಧರ್ಮದಿಂದ ಹಿಂದಿರುಗಿ ಬಂದವರನ್ನು ಸ್ವಜನರು ಸ್ವೀಕರಿಸಬೇಕಾದುದು ಯೋಗ್ಯವಾಗಿರುವಂತೆ [illegible] ಬಳಗದವರೆಲ್ಲರೂ ನಿಜ ಹಿತಗಳಾದ ಪ್ರಾಯಶ್ಚಿತ್ತಗಳಾದ ಬಳಿಕ ಸ್ವಜಾತಿಯಲ್ಲಿ ಸೇರಿಸಿಕೊಳ್ಳುವದು ಶಾಸ್ತ್ರನಿರುದ್ಧವಾಗಲಾರದು; ಮತ್ತು ಕೆಲವು ಕಾಲದೊಳಗಾಗಿ ಕ್ರಿಶ್ಚಿಯನ್ನರ ಹಾವಳಿಯು ಕುಗ್ಗಿ ತಗ್ಗಿಹೋಗುವದು.

THE MYSORE GAZETTE
ಮೈಸೂರು ಗಜೆಟ್

ಶ್ರೀಮನ್ಮಹಾರಾಜರವರ ಗವರ್ನ್‌ಮೆಂಟಿನವರ ಸರಕಾರದಿಂದ ಹೊರಡಿಸಿದ ಪ್ರಸಿದ್ಧಪತ್ರಗಳು

ನಂ ೪೮೧, ತಾ|| ೧೧ನೇ ಫೆಬ್ರುವರಿ ೧೮೯೨.—ಗವರ್ನ್‌ಮೆಂಟಿನವರು ೧೮೯೧ನೇ ಇಸವಿ ಡಿಸೆಂಬರ್ ೧೬ನೇ ಮಾರ್ಚ್ ೧೪೨೨—೨೪ನೇ ನಂಬರುಳ್ಳ ತಮ್ಮ ಪ್ರೊಸೀಡಿಂಗ್ಸಿನಲ್ಲಿ ಮಂಜೂರ್ ಮಾಡಿರುವ ರೂಲ್ ಪ್ರಮಾಣವನ್ನನುಸರಿಸಿ, ೧೮೯೨ನೇ ಇಸವಿ ಜನವರಿ ೧ನೇ ತಾರೀಖ್ ಮೊದಲು ಇದರ ಕೆಳಕಂಡ ಮುನ್ಸಿಫರುಗಳು ನೇಮಕ ಮಾಡಲ್ಪಟ್ಟಿರುತ್ತಾರೆ—

೧ನೇ ಗ್ರೇಡ್ ಮುನ್ಸಿಫರಾಗಿರತಕ್ಕವರು

ಇವರು ೧ಕ್ಕೆ ೩೦೦ ರೂಪಾಯಿಗಳ ಸಂಬಳದಲ್ಲಿ ಇದ್ದವರು

೧ ಮೆ|| ಎ. ಎ. ವೆಂಕಟರಾಮ ಪಿಳ್ಳೆಯವರು
೨ ,, ಎಸ್. ವಿ. ಕಟವರದಮ್ಮಯ್ಯಂಗಾರ್

೨ನೇ ಗ್ರೇಡ್ ಮುನ್ಸಿಫರಾಗಿ ತಕ್ಕವರು

ಇವರು ೧ಕ್ಕೆ ೨೫೦ ರೂಪಾಯಿಗಳ ಸಂಬಳದಲ್ಲಿ ನಾಲ್ವರು

೧ ಮೆ|| ಪಿ. ಗಿರಾಚಾರ್ಯರು
೨ ,, ಎಂ. ವೆಂಗಪತಿ ನಾಯಡು
೩ ,, ವರದರಾಜಮ್ಮಯ್ಯಂಗಾರ್ಯರು
೪ ,, ಸಿ. ಬಿ. ಶೇಷಗಿರಿರಾಯರವರು

೩ನೇ ಗ್ರೇಡ್ ಮುನ್ಸಿಫರಾಗಿರತಕ್ಕವರು

ಇವರು ೧ಕ್ಕೆ ೨೦೦ ರೂಪಾಯಿಗಳ ಸಂಬಳದಲ್ಲಿ ಇದ್ದವರು

೧ ಮೆ|| ಜೆ. ಟಿ. ವಾಂಡರ್‌ಬೋರ್ಗ್
೨ ,, ಬಿ. ಶ್ರೀನಿವಾಸರಾಯರವರು
೩ ,, ಬಿ. ವೆಂಕಟಾಚಾರ್ಯರವರು
೪ ,, ಸಿ. ಸುಬ್ಬರಾಮಯ್ಯನವರು
೫ ,, ಬಂಡಾರ [illegible]ಯವರು
೬ ,, ಪಿ. ವಿ. ಸಿಟ್ಟಪ್ಪಯ್ಯನವರು

೪ನೇ ಗ್ರೇಡ್ ಮುನ್ಸಿಫರಾಗಿರತಕ್ಕವರು

ಇವರು ೧ಕ್ಕೆ ೧೫೦ ರೂಪಾಯಿಗಳ ಸಂಬಳದಲ್ಲಿ ಇದ್ದವರು

೧ ಮೆ|| ಎ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ಯರವರು ಬಿ. ಎ. ಬಿ. ಎಲ್.
೨ ,, ಬಿ. ಆರ್. ವೆಂಕಟರಾಯರು
೩ ,, ತಿಮ್ಮಕೃಷ್ಣರಾಯರವರು ಬಿ. ಎ. ಬಿ. ಎಲ್.
ಬಸವರಾಧ್ಯರವರು ಬಿ. ಎ. ಬಿ. ಎಲ್.
೪ * ನಾಗಪ್ಪನವರು ಬಿ. ಎ. ಬಿ. ಎಲ್.
೫ ,, * ತಿರುಮಲೈಯಂಗಾರ್ಯರವರು ಬಿ. ಎ. ಬಿ. ಎಲ್.

* ಇವರುಗಳು ತಮ್ಮ ತಮ್ಮ ಕೆಲಸದಮೇಲೆ ಹೋಗಿ ಹಾಜರಾದ ತಾರೀಖ್ ಮೊದಲುಗೊಂಡು ಸಂಬಳ ಪಡೆಯುವರು.

ಮೆ|| ಇ. ಸಿ. ಶಿವಪ್ರಿಯನ್ ಪಿಳ್ಳೆಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಇದರಡಿ ಕಂಡ ನೇಮಕರಾತಿಗಳು ಹಂಗಾಮಿಯಾಗಿ ಮಂಜೂರ್ ಮಾಡಲ್ಪಟ್ಟಿರುತ್ತವೆ—

೩ನೇ ಗ್ರೇಡ್ ಮುನ್ಸಿಫರಾದ ಮೆ|| ಪಿ. ಶಿಂಗರಾಚಾರ್ಯರವರು ೧೮೯೨ನೇ ಇಸವಿ ಜನವರಿ ೧೩ನೇ ತಾರೀಖ್ ಮೊದಲುಗೊಂಡು ಹಂಗಾಮಿಯಾಗಿ ೧ನೇ ಗ್ರೇಡ್ ಮುನ್ಸಿಫರಾಗಿ ಕೆಲಸ ನೋಡತಕ್ಕದ್ದು.

೩ನೇ ಗ್ರೇಡ್ ಮುನ್ಸಿಫರಾದ ಮೆ|| ಜೆ. ಟಿ. ವಾಂಡರ್‌ಬೋರ್ಗ್‌ರವರು, ೧೮೯೨ನೇ ಇಸವಿ ಜನವರಿ ೧೩ನೇ ತಾರೀಖ್ ಮೊದಲುಗೊಂಡು ಹಂಗಾಮಿಯಾಗಿ ೨ನೇ ಗ್ರೇಡ್ ಮುನ್ಸಿಫರಾಗಿ ಕೆಲಸ ನೋಡತಕ್ಕದ್ದು.

೪ನೇ ಗ್ರೇಡ್ ಮುನ್ಸಿಫರಾದ ಮೆ|| ಬಿ. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಬಿ. ಎ. ಬಿ. ಎಲ್. ರವರು, ೧೮೯೨ನೇ ಇಸವಿ ಜನವರಿ ೧೩ನೇ ತಾರೀಖ್ ಮೊದಲುಗೊಂಡು ಹಂಗಾಮಿಯಾಗಿ ೩ನೇ ಗ್ರೇಡ್ ಮುನ್ಸಿಫರಾಗಿ ಕೆಲಸ ನೋಡತಕ್ಕದ್ದು.

ಮೆ|| ಶಿವಪ್ರಿಯನ್ ಪಿಳ್ಳೆಯವರು, ತಮ್ಮ ಕೆಲಸದಮೇಲೆ ಹೋಗಿ ಹಾಜರಾಗುವ ತಾರೀಖ್‌ವರೆಗೂ ಹಂಗಾಮಿ ತರೀಕೆ ೪ನೇ ಗ್ರೇಡ್ ಮುನ್ಸಿಫರಾಗಿ ಕೆಲಸ ನೋಡತಕ್ಕದ್ದು.

ನಂ ೪೮೨, ತಾ|| ೧೧ನೇ ಫೆಬ್ರುವರಿ ೧೮೯೨.—ಈಗ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡುತ್ತಿರತಕ್ಕ, ಚಿತ್ರದುರ್ಗ ಮುನ್ಸಿಫರಾದ ಮೆ|| ಯಂ. ವೆಂಗಪತಿ ನಾಯಡುರವರು, ಚಿಕ್ಕಮಗಳೂರಿಗೆ ವರ್ಗಮಾಡಲ್ಪಟ್ಟಿರುತ್ತಾರೆ. ಇವರು ಫೆಬ್ರುವರಿ ೧೬ನೇ ತಾರೀಖ್ ಬೆಳಿಗ್ಗೆ ಹಾಜರಾಗಿ ಅಲ್ಲಿ ಕೆಲಸ ನೋಡುತ್ತಿರುವ ಮುನ್ಸಿಫ್ ಕೋರ್ಟಿಗೆ ಹೋಗಿ ಹಾಜರಾಗತಕ್ಕದ್ದು.

ಚಿಕ್ಕಮಗಳೂರಿಗೆ ನಿಯಮಿತರಾಗಿದ್ದ ಮುನ್ಸಿಫ್ ಮೆ|| ಸಿ. ಸುಬ್ಬರಾಯುಡುರವರು, ಈಗ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಕೆಲಸ ನೋಡುತ್ತಿರುವದರಿಂದ ಅವರು ಸದರಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನ ಚಾರ್ಜನ್ನು ಮಾರ್ಚ್ ಮಾಹೆ ೧ನೇ ತಾರೀಖ್ ಮೊದಲು ತೆಗೆದುಕೊಳ್ಳುವರು.

ಮೆ|| ಎಸ್. ವೆಂಕಟವರದಮ್ಮಯ್ಯಂಗಾರ್ಯರವರು, ಬೆಂಗಳೂರು ಸಬ್‌ಡಿವಿಜನ್ ಕೆಲಸವನ್ನು ಅಯ್ಯಂಗಾರ್ ರವರ ರಜಾ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಇದರ ಕೆಳಕಂಡ ವರ್ಗಗಳೂ ನೇಮಕರಾತಿಯು ಸಹ ಮಂಜೂರ್ ಮಾಡಲ್ಪಟ್ಟಿರುತ್ತವೆ—

೧ ಶ್ರೀರಂಗಪಟ್ಟಣದ ಮುನ್ಸಿಫ್ ಮೆ|| ಸಿ. ವಿ. ಶೇಷಗಿರಿರಾಯರವರು, ಮೈಸೂರ್ ಮುನ್ಸಿಫರಾಗಿರತಕ್ಕದ್ದು.

೨ ನೆಲಮಂಗಲಕ್ಕೆ ನಿಯಮಿತರಾಗಿದ್ದ ಮುನ್ಸಿಫ್ ಮೆ|| ಬಿ. ಶ್ರೀನಿವಾಸರಾಯರವರು, ಶ್ರೀರಂಗಪಟ್ಟಣದ ಮುನ್ಸಿಫರಾಗಿರತಕ್ಕದ್ದು.

೩. ಮೈಸೂರ್ ಅಕ್ಟಿಂಗ್ ಮುನ್ಸಿಫ್ ಮೆ|| ಲಕ್ಷ್ಮೀನಾರಾಯಣಪ್ಪನವರು, ನೆಲಮಂಗಲದ ಮುನ್ಸಿಫ್ ಕೆಲಸವನ್ನು ಹಂಗಾಮಿಯಾಗಿ ನೋಡುತ್ತಿರತಕ್ಕದ್ದು.

ನಂ ೪೮೪—ಚಿತ್ರದುರ್ಗ ಡಿಸ್ಟ್ರಿಕ್ಟ್ ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ|| ಸುಬ್ಬರಾಯರವರಿಗೆ, ಸಿವಿಲ್ ಪ್ರೊಸೀಜರ್ ಕೋಡ್ ೧೫ನೇ ಸೆಕ್ಷನ್ ಅನುಸರಿಸಿ, ಡಿಕ್ರಿಯ ಅಕ್ಟಗೊಳಿಸತಕ್ಕ ರಿಕ್ಕಾರ್ಡುಗಳನ್ನು ಗ್ರಾಹ್ಯಮಾಡತಕ್ಕ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ ೪೮೩, ತಾ|| ೧೩ನೇ ಫೆಬ್ರುವರಿ ೧೮೯೨.—ಸರ್ ೧೮೯೧ನೇ ಇಸವಿ ಡಿಸೆಂಬರ್ ೨೯ನೇ ತಾರೀಖು ಮೈಸೂರ್ ಗೆಜೆಟಿನ ಮೊದಲನೇ ಭಾಗದ ೩೪೪ನೇ ಪುಟದಲ್ಲಿ ಮುದ್ರಿಸಲ್ಪಟ್ಟಿರುವ ಅದೇ ಇಸವಿ ಡಿಸೆಂಬರ್ ೧೩ನೇ ಮಾರ್ಚ್ ೯೦ ೧೮೨೨ನೇ ನಂಬರ್ ಇನ್ಸ್ಟ್ರಕ್ಷನ್ ನಾಮೆಯಲ್ಲಿ ಕಂಡ ಮತ್ತು ಮೈಸೂರ್ ಲೋಕಲ್ ಸರ್ವಿಸಸ್ ರೆಗ್ಯುಲೇಷನಿನ ೧೨ನೇ ಸೆಕ್ಷನ್ ಅನುಸರಿಸಿ ಮೈಸೂರ್ ಜೆಂಟ್ರಲ್ ಕೌನ್ಸಿಲ್ ರಚಿಸಲ್ಪಟ್ಟ ನಿಬಂಧನೆಗಳಲ್ಲಿ ಹರ್ತೆಯದಕ್ಕೆ ಪ್ರತಿಯಾಗಿ ಇದರಡಿ ಕಂಡದ್ದು ಸೇರಿಸಲ್ಪಟ್ಟಿರುವವೆ—

ಪರೀಕ್ಷೆಗೆ ಗೊತ್ತಾದ ತಾರೀಖಿಗೆ ಮೂರು ದಿವಸಗಳು ಪೂರ್ವಭಾವಿಯಾಗಿ ಪರೀಕ್ಷೆಗೆ ಹಾಜರಾಗತಕ್ಕ ಯಾವ ಉಮೇದುವಾರನ ದರಖಾಸ್ತು ಮಂಜೂರ್ ಮಾಡಲ್ಪಟ್ಟಿದೆಯೋ ಅಂಥಾ ಪ್ರತಿ ಉಮೇದುವಾರನು, ಡಿಸ್ಟ್ರಿಕ್ಟ್ ಯಾ ತಾಲ್ಲೂಕ್ ಖಜಾನೆಗೆ ಮೊದಲನೇ ಗ್ರೇಡ್ ಪ್ಲೀಡರ್ ಪರೀಕ್ಷೆಗಾಗಿ ೨೫ ರೂಪಾಯಿಗಳೂ, ಎರಡನೇ ಗ್ರೇಡ್ ಪ್ಲೀಡರ್ ಪರೀಕ್ಷೆಗಾಗಿ ೧೫ ರೂಪಾಯಿಗಳೂ ಪಾವತಿಮಾಡಿ ಆ ರಸೀದಿಯನ್ನು ಚೀಫ್ ಕೋರ್ಟ್ ರಿಜಿಸ್ಟ್ರಾರ್‌ರವರಿಗೆ ಕಳುಹಿಸತಕ್ಕದ್ದು.

ಪರೀಕ್ಷೆಗೆ ಹಾಜರಾಗಬಹುದೆಂದು ಮಂಜೂರ್ ಮಾಡಿ ಚೀಫ್ ಕೋರ್ಟ್ ರಿಜಿಸ್ಟ್ರಾರವರು, ಕಳುಹಿಸುವ ಲಿಖಿತವು ಮುಖ್ಯವಾದ ಆಧಾರವನ್ನು ಪರೀಕ್ಷೆಯ ತಾರೀಖಿನಲ್ಲಿ ಪರೀಕ್ಷಕರಲ್ಲಿಗೆ, ಪರೀಕ್ಷಾ ಕಾಲದಲ್ಲಿ ಹೋಗುವವರಿಗಾಗಿ ನಿಯಮಿತರಾದ ಅಧಿಕಾರಿಗಳಿಗೆ, ಹಾಜರ್ ಮಾಡದಿರುವ ಯಾವ ಉಮೇದುವಾರನೇ ಆಗಲಿ ಪರೀಕ್ಷಿಸಲ್ಪಡಲಾರನು.

ನಂ ೪೮೬—ಕಡೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮೆ|| ಪಿ. ಜಿ. ನಾರ್ಣಯ್ಯನವರಿಗೆ ಕಳೆದ ಡಿಸೆಂಬರ್ ತಿಂಗಳ ೪ನೇ ಮಾರ್ಚ್ ೫೯೨ನೇ ನಂಬರುಳ್ಳ ಪ್ರೊಸೀಡಿಂಗ್ಸ್ ನಾಮೆಯ ಮುಖಾಂತರ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಮೂರು ತಿಂಗಳ ರಜಾ ೧೮೯೨ನೇ ಇಸವಿ ಮಾರ್ಚಿ ೧೬ನೇ ತಾರೀಖ್ ವರೆವಿಗೆ ಜಾಸ್ತೀ ಮಾಡಲ್ಪಟ್ಟಿರುತ್ತದೆ.

ಹಾಸನ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಮೆ|| ಎಸ್. ಕೃಷ್ಣಸ್ವಾಮಯ್ಯನವರಿಗೆ, ೧೮೯೧ನೇ ಇಸವಿ ಫೆಬ್ರುವರಿ ೧ನೇ ಮಾರ್ಚ್ ೨೧೯೦ ೨೧ನೇ ನಂಬರ್ ಪ್ರೊಸೀಡಿಂಗ್ಸಿನ ನಿಯಮಗಳಿಗೊಳಪಟ್ಟು ಉಪಯೋಗಿಸಿಕೊಳ್ಳುವ ತಾರೀಖಿನಿಂದ [illegible] ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ ೪೮೯—ಮೈಸೂರ್ ಡಿಸ್ಟ್ರಿಕ್ಟ್ ಸಾಕೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ|| ಶೀತಾರಾಮಯ್ಯನವರಿಗೆ, ೧೮೯೧ನೇ ಇಸವಿ ಫೆಬ್ರುವರಿ ೫ನೇ ಮಾರ್ಚ್ ೨೧೪೦—೨೧ನೇ ನಂಬರುಳ್ಳ ಪ್ರೊಸೀಡಿಂಗ್ಸಿನ ನಿಯಮಗಳಿಗೊಳಪಟ್ಟು ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ ೪ ದಿನಗಳ ಕ್ಯಾಷುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ ೪೯೫ ತಾ ೧೩ನೇ ಫೆಬ್ರುವರಿ ೧೮೯೨.—ರಾಜರಾಜೇಶ್ವರ ಚಕ್ರವರ್ತಿನೀಯವರಾದ ಶ್ರೀ ಮಹಾರಾಣಿಯವರ ಜ್ಯೇಷ್ಠ ಪೌತ್ರರಾದ ಮೆ|| ಪ್ರಿನ್ಸ್ ಅಲ್ಬರ್ಟ್ ವಿಕ್ಟರ್‌ರವರಿಗೆ ಬಂದಿರುವ ನಿಧನದ ಸಂಬಂಧವಾಗಿ [illegible]

ನಾವು ಮತ್ತು ನಮ್ಮ ಪ್ರಜೆಗಳು ಆಗಲಿ ಪ್ರತಿಯೊಬ್ಬರಿಗೆ ಆಗಲಿ [illegible] ಇಲ್ಲವೆಂಬುದಾಗಿ [illegible] ನಮ್ಮ ರಾಜ್ಯದ [illegible] ಪ್ರತಿನಿಧಿಯಾಗಿ [illegible] ಮತ್ತು ರಾಜವಂಶದವರಿಗೆ [illegible] ಸಂತಾಪ [illegible] ಉತ್ತರೋತ್ತರ ಅಭಿವೃದ್ಧಿ [illegible] ನಮ್ಮ [illegible] ಆತನ [illegible] ಸಂಬಂಧ [illegible] ಗವರ್ನ್‌ಮೆಂಟ್ [illegible]

ಇಂಥಾ ಸಂದರ್ಭದಲ್ಲಿ ಕೋಟ್ಯಂತರ ಪ್ರಜೆಗಳ ಮನಃಪೂರ್ವಕವಾದ ಸಂತಾಪ ಸೂಚಕಗಳು ವಿಶೇಷ ಸಮಾಧಾನಕರವಾಗಿ ಇರುತ್ತವೆ. ನಮಗೂ ನಮ್ಮ ಸ್ತ್ರೀಯರಿಗೂ ಸಹಾಯವನ್ನು ಮತ್ತು ಸಮಾಧಾನವನ್ನು ಉಂಟುಮಾಡುತ್ತಲಿರುವ ನಮ್ಮ ಪ್ರಜೆಗಳ ಸಾರ್ವತ್ರಿಕವಾಗಿ ನಮ್ಮಲ್ಲಿ ಭಕ್ತಿಯುಳ್ಳ ನಿಷ್ಠೆ ನಮ್ಮ ಪುತ್ರನ ಗುಣಗ್ರಹಣ ಮತ್ತು ನಮ್ಮೊಡನೆ ಅನುತಾಪ ಪೂರ್ವಕವಾದ ಅಭಿಪ್ರಾಯಗಳಿಗಾಗಿ ನಾವು ಮನಃಪೂರ್ವಕವಾಗಿ ಕೃತಜ್ಞತೆಯುಳ್ಳವರಾಗಿದ್ದೇವೆ. ಈ ೫೦ ಸಂವತ್ಸರಗಳಲ್ಲಿ ವಿಶೇಷವಾದ ವಿಯೋಗದುಃಖಗಳು ನಮಗೆ ಸಂಭವಿಸಿರುತ್ತವೆ. ನಮ್ಮ ಕಷ್ಟಗಳು ಚಿಂತೆಗಳು ಏರಿ [illegible] ನಮ್ಮ ಜೀವಿತಕಾಲಾವಧಿ ನಮ್ಮ ಪ್ರೀತಿಪಾತ್ರವಾದ ಪ್ರಜೆಗಳ ಸೌಖ್ಯಾಭಿವೃದ್ಧಿಗಾಗಿ ಕೆಲಸ ಮಾಡಲು ಶಕ್ತಿಯನ್ನೂ ಸಹಾಯವನ್ನೂ ಭಗವಂತನು ನಮಗೆ ಅನುಗ್ರಹಿಸುವನೆಂದು ಪ್ರಾರ್ಥಿಸುತ್ತೇವೆ.

ಮರಣಮ್ಮತಿ ವಿಕ್ಟೋರಿಯಾ.

ನಂ ೬೪೦—೧೧೦, ತಾರೀಖ್ ೧೨ನೇ ಫೆಬ್ರುವರಿ, ೧೮೯೨—ಮೈಸೂರ್ ಪ್ರಾಂತದ ಸೂಪರಿಂಟೆಂಡಿಂಗ್ ಇಂಜನಿಯರ್, ಮತ್ತು ಮೈಸೂರ್ ಗವರ್ನ್‌ಮೆಂಟ್ ಮರಾಮತ್ ಇಲಾಖೆ ಅಂಡರ್ ಸೆಕ್ರೆಟರಿಯವರಾದ ಮೆ|| ಜೆ. ಗ್ರೀವ್ಸ್ ಎಂ. ಐ. ಸಿ. ಇ. ಯವರಿಗೆ ೧೮೯೨ನೇ ಇಸವಿ ಮಾರ್ಚ್ ೩೦ನೇ ತಾರೀಖ್ ಆಗಾಯಿತು ಅಥವಾ ಅವರು ಹೊರಡತಕ್ಕ ತಾರೀಖ್ ಮೊದಲು, ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ ೬೬೪—೧೧೨ ಅಸಿಸ್ಟೆಂಟ್ ಚೀಫ್ ಇಂಜನಿಯರ್ ಮತ್ತು ಮೈಸೂರ್ ಗವರ್ನ್‌ಮೆಂಟ್ ಮರಾಮತ್ ಇಲಾಖೆ ಅಸಿಸ್ಟೆಂಟ್ ಸೆಕ್ರೆಟರಿ ಮೆ|| ಡಬ್ಲ್ಯು ಮೆಕ್‌ಹಚ್ಚಿನ್ ಸಿ. ಇ. ಯವರಿಗೆ, ೧೮೯೨ನೇ ಇಸವಿ ಮಾರ್ಚಿ ೩೦ನೇ ತಾರೀಖ್ ಮೊದಲು ಅಥವಾ ಅವರು ಹೊರಡತಕ್ಕ ತಾರೀಖ್ ಆಗಾಯಿತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ ೬೭೨—೧೧೩—ತಾರೀಖ್ ೧೫ನೇ ಫೆಬ್ರುವರಿ, ೧೮೯೨—ಇದರಡಿ ಕಂಡ ವರ್ಗವು ಸರ್ಕಾರ್ ನೌಕರಿಯ ಪ್ರಯೋಜನಕ್ಕಾಗಿ ಮಾಡಲ್ಪಟ್ಟಿರುತ್ತದೆ. ಅಪ್ರೆಂಟಿಸ್ ಇಂಜನಿಯರ್ ಮೆ|| ಎಂ. ರಾಮರಾವ್ ಎಲ್. ಸಿ. ಇ. ಯವರು ಶಿವಮೊಗ್ಗೆಯಿಂದ ಕೋಲಾರ್ ಡಿವಿಜನಿಗೆ ಹೋಗಿ ಕೂಡಲೇ ಹಾಜರಾಗತಕ್ಕದ್ದು.

ಧಾರವಾಡ ಕರ್ನಾಟಕ ವಿದ್ಯಾವರ್ಧಕ ಸಂಘ

ಬಹುಮಾನಗಳು

ಈ ಪ್ರಾಂತದಲ್ಲಿ ಕನ್ನಡ [illegible] ನವೆಂಬರ್ ೧೫ನೇ ತಾರೀಖಿನ ದಿನ [illegible] ಕರ್ನಾಟಕ ವಿದ್ಯಾವರ್ಧಕ ಸಂಘದ ಸಭೆಯಲ್ಲಿ ಕನ್ನಡ ಗ್ರಂಥವನ್ನು ಬರೆದವರಿಗೂ [illegible] ಕನ್ನಡ ಭಾಷೆಯಲ್ಲಿ ಚನ್ನಾಗಿ [illegible] ಪ್ರೋತ್ಸಾಹ ಕೊಡುವ [illegible] ಗೊತ್ತು ಮಾಡಿದ ಬಹುಮಾನ

ಸಹಜ ಬಹುಮಾನಗಳು

(೧) ೫೦ ರೂಪಾಯಿ—[illegible] ಸಹಾಯವಿಲ್ಲದೆ ಕನ್ನಡಿಗರಿಗೆ ತಿಳಿಯುವಂತೆ [illegible] ಜ್ಞಾನ [illegible] ಪುಸ್ತಕಗಳನ್ನು ಬರೆದವರಿಗೆ

(೨) ೫೦ ರೂಪಾಯಿ—[illegible] ಮಾಡಿದವನ್ನು [illegible] ಪರೀಕ್ಷೆ ಕೊಟ್ಟವರಿಗೆ

(೩) ೫೦ ರೂಪಾಯಿ—[illegible] ವಿಷಯದಲ್ಲಿ ಪದ್ಯವನ್ನು ರಚಿಸಿ [illegible] ಪರೀಕ್ಷೆ [illegible] ಇದರಲ್ಲಿ [illegible] ಇರುವದು ಅದೆ

ಮ|| ರಾ|| [illegible] ಇವರ ಇನಾಮು

(೪) ೫೦ ರೂಪಾಯಿ—[illegible] ಪರೀಕ್ಷೆ ಕೊಟ್ಟವರಿಗೆ

ಮ|| ರಾ|| [illegible] ಇವರ ಇನಾಮು

(೫) ೧೦ ರೂಪಾಯಿ—[illegible] ಪರೀಕ್ಷೆ ಕೊಟ್ಟವರಿಗೆ?

ಮ|| ರಾ|| [illegible] ಇವರ ಇನಾಮು

(೬) ೧೦ ರೂಪಾಯಿ—[illegible] ವ್ಯಾಕರಣ ಕನ್ನಡ [illegible] ಉಪಯೋಗ [illegible] ಪರೀಕ್ಷೆ [illegible]

ಮ|| ರಾ|| ಶ್ರೀನಿವಾಸರಾವ್ [illegible] ಇವರ ಇನಾಮು

(೭) [illegible] ರೂಪಾಯಿ—[illegible] ಪ್ರಾಯವನ್ನು [illegible] ಕೊಟ್ಟವರಿಗೆ

ಮ|| ರಾ|| ಶ್ರೀನಿವಾಸ ಅಯ್ಯಂಗಾರರು ... ಕೂಡಿ ಕೊಡುವ ... [illegible]

(೮) ೭೦ ರೂಪಾಯಿ ... ಕನ್ನಡದಲ್ಲಿ ಹೊಸ ... ಯನ್ನು ಬರೆದವರಿಗೆ

ಈ ಪುಸ್ತಕವು ... ಗಂಗಾಧರ ... ತೀರ್ಪಿನ ... [illegible]

ಈ ವಿಷಯಗಳ ಸಂಬಂಧವಾದ ಪರೀಕ್ಷೆಯು ... ರಂಭವಾಗಿ ... (೧೮೯೨ನೇ ಇಸವಿ ಅಕ್ಟೋಬರ್ ... ನೇ ತಾರೀಖಿನಿಂದ ... ನೇ ತಾರೀಖಿನವರೆಗೆ) ನಡೆಯುವದು ... [illegible] ... ಕನ್ನಡ ... ಉದ್ಯೋಗ ... ವಿಷಯದಲ್ಲಿ ... ಸಂಬಂಧವಿಲ್ಲ ... ಗುಣಗಳನ್ನು ಪಡೆದವರಿಗೆ ... ನಗಳು ದೊರೆಯುವವು

... ಪುಸ್ತಕಗಳನ್ನು ... ಕಳುಹಿಸಬೇಕು

A. R. K...

ಉಪಾಧ್ಯಕ್ಷ ... [illegible]

SUMMARY OF NEWS

ವೃತ್ತಾಂತ ಸಂಗ್ರಹವು.

[illegible]

ಕಳೆದ ಅಕ್ಟೋಬರ್ ... [illegible]

ತುರ್ಕಿಸ್ತಾನದಲ್ಲಿ ... [illegible]

ಪ್ರಜೆಗಳ ... [illegible]

ಬೆಂಗಳೂರು ಪಟ್ಟಣದಲ್ಲಿ ... [illegible]

NOTICE

T SAMMI'S WONDERFUL MEDICINES

ಟಿ ಸಾಮಿ ಎಂಬವರ ಆಶ್ಚರ್ಯಕರವಾದ ಔಷಧಗಳು.

ನನ್ನ ... ಔಷಧಗಳನ್ನು ... ಸಕಲರಿಗೂ ತಿಳಿಯ ಪಡಿಸುವಂತೆ ... ಜನರಿಗೂ ಇದರಿಂದ ... ಔಷಧಗಳು ತಪ್ಪದೆ ... [illegible]

ಜ್ವರ ... [illegible] ಕ್ರಯ ೦ ೮ — ೦ ೮ ೦

[illegible]

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವದು.

ಮದರಾಸ್ ... ಬೆಂಗಳೂರು ... ರಂಗರಾಯರ ... ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

ವಿವರ	ರೂ	ಆ	ಪೈ
1 ... (... ರಾಮಕೃಷ್ಣ ... ಸಂಸ್ಕೃತ ವ್ಯಾಕರಣ ಸಿದ್ಧಾಂತ ಕೌಮುದಿ ...)	0	4	6
2 ... (ಕನ್ನಡ ಪದ್ಯಕಾವ್ಯ ...)	0	2	6
3 ... (... ಟೀಕಾ ... ಪದ್ಯಕಾವ್ಯ)	0	2	6
4 ...	0	2	6
...	0	2	0
...	0	1	6
ಕೃಷ್ಣಮೂರ್ತಿ ... ಗ್ರಂಥಗಳು			
7 ...	0	1	0
8 ...	0	1	0
ಶ್ರೀಮದ್ ... ಮುಖ್ಯವಾಗಿ ... ಗ್ರಂಥಗಳು			
9 ...	1	10	0
10 ...	1	1	0
11 ...	0	15	0
12 ...	0	14	0
13 ...	0	1	6
14 ...	0	4	6
15 ...	0	1	6
16 ...	0	1	0
17 ...	0	1	0
18 ... (... ವೃತ್ತಿ)	0	1	6
19 ...	0	1	0
...			
20 ...	14	0	0
21 ...	0	8	6
22 ...	0	3	0
23 ...	0	3	0
24 ...	0	2	0
25 ...	0	1	6
26 ...	0	1	6

ಈ ಪುಸ್ತಕಗಳು ಬೇಕಾದವರು ... [illegible]

... ರಂಗರಾವ್, ಬೆಂಗಳೂರು

☞ BANGALORE —Printed and published at the KARNATAKA PRESS, No. 60, HOSPITAL ROAD, BANGALORE —1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XIX] BANGALORE —MONDAY, FEBRUARY 29, 1892 [No 9.

ಸಂಪುಟ ೧೯.] ಬೆಂಗಳೂರು — ಸನ್ ೧೮೯೨ ನೇ ಇಸವಿ ಫೆಬ್ರುವರಿ ೨೯ ನೇ ತಾರೀಖು ಸೋಮವಾರ. [ಸಂಚಿಕೆ. ೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ,

[illegible]

[illegible]	5—0—0	3—0—0
[illegible] ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ

[illegible]	4—0—0	5—0—0
[illegible] ,,	5—0—0	6—0—0

[illegible]

ಪ್ರಕಟನೆಯ ವಿಷಯ.

[illegible]

ADVERTISEMENTS

NOTICE.

VAIDYASTRA SANGRAHA

A TREATISE ON THE PRINCIPLES OF HINDU MEDICINE

Price including Postage Rs 5-0-0

ವೈದ್ಯಶಾಸ್ತ್ರ ಸಂಗ್ರಹ

[illegible]

ನೋಟೀಸು.

ಬೆಂಗಳೂರು ಕರ್ಣಾಟಕ್ ಪ್ರೆಸ್.

[illegible]

ಡಿ. ಬಿನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible]

೨. [illegible]

೩. ಪ್ರಮೇಹದ ರಿಪು — [illegible]

೪. [illegible]

೫. [illegible]

೬. ಅದ್ಭುತ ಚಮತ್ಕಾರ — [illegible]

೭. [illegible] ಗುಳಿಗೆಗಳು. — [illegible]

೮. [illegible]

೯. [illegible]

೧೦. [illegible]

೧೧. ಜ್ವರದ, ಗುಟಿಕೆ. — [illegible]

೧೨. [illegible]

[illegible]

ನೋಟೀಸು.

ಗಣೇಶ ರಾಮಚಂದ್ರ ತರೀಕ ಮತ್ತು ಕಂಪೆನಿ

[illegible]

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜವಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ—

೧೮೯೨ ನೇ ಇಸವಿ ಫೆಬ್ರುವರಿ ತಾರೀಖು ೨೧ ರ ಮೊದಲು ಫೆಬ್ರುವರಿ ೨೭ ನೇ ತಾರೀಖು ವರಿವಿಗೆ.

[illegible]	86
[illegible]	40¼
[illegible]	57¼
ಒಟ್ಟು	97½
[illegible]	20
[illegible]	22¼
[illegible]	55¼
[illegible]	8
[illegible]	3
[illegible]	14
[illegible]	16
[illegible]	2
ಒಟ್ಟು	41

THE MONEY MARKET

[illegible]

1s 4 3/12d

[illegible] 105-4-0 [illegible] 105-10-0 [illegible]

[illegible] 905 [illegible] 910.

[illegible] 14-15-0 [illegible] 15-0-0 [illegible]

TELEGRAMS.

ರಾಜಕೀಯ ವೃತ್ತಾಂತ ಸಂಗ್ರಹವು.

[illegible]

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, FEBRUARY 29 1892

೧೮೯೨ನೇ ಇಸವಿ ಫೆಬ್ರುವರಿ ತಾ|| ೨೯ನೇ ಸೋಮವಾರ

AMILDARS IN THE MYSORE PROVINCE

ಈ ದೇಶದಲ್ಲಿ ಅಮಲ್ದಾರರೆಂದು ಕರೆಯಲ್ಪಡುವ ತಾಲ್ಲೂಕ್ ಅಧಿಕಾರಿಗಳು ಮಾಡಬೇಕಾದ ಕಾರ್ಯಗಳು, ಅವರಿಗಿರಬೇಕಾದ ಯೋಗ್ಯತೆ, ಅವರನ್ನು ನೇಮಕಮಾಡಬೇಕಾದರೀತಿ, ಇವುಗಳನ್ನು ಕುರಿತು ಹಿಂದೆ ಅನೇಕ ಪ್ರಕರಣಗಳಲ್ಲಿ ವಿಸ್ತಾರವಾಗಿ ವಿಚಾರ ಮಾಡಿರುತ್ತೇವೆ. ಒಂದು ರಾಜ್ಯದಲ್ಲಿ ಪ್ರಧಾನಾಧಿಕಾರವಾದ ಅಮಲ್ದಾರೀ ಉದ್ಯೋಗದ ಸ್ವರೂಪ ಪ್ರಯೋಜನಗಳು ಆಬಾಲವೃದ್ಧರಿಗೂ ಚೆನ್ನಾಗಿ ತಿಳಿದವಾಗಿರುತ್ತವೆ. ಈಚೆಗೆ ಅಂದರೆ ಗತ ಒಂದೆರಡು ವಾರಗಳ ಮೈಸೂರ್ ಗೆಜೆಟಿನಿಂದ ಕೆಲವು ತಾಲ್ಲೂಕ್‌ಗಳ ಅಮಲ್ದಾರರುಗಳ ಮೇಲೆ ಯಾವದೋ ಫಿರ್ಯಾದ್ ಬಂದು ಅದು ವ್ಯವಸ್ಥೆ ಪ್ರಾಪ್ತವಾಗುವತನಕ ಅವರು ಕೆಲಸಗಳಿಂದ ಅಮಾನತ ಮಾಡಲ್ಪಟ್ಟಿರುವದಾಗಿಯೂ, ಮತ್ತೊಬ್ಬರು ಕ್ರಮವಾದ ವಿಚಾರಣೆಯಲ್ಲಿರುವದಾಗಿಯೂ ತಿಳಿಯಬರುತ್ತದೆ. ಇನ್ನೂ ಕೆಲವು ತಾಲ್ಲೂಕ್ ಅಮಲ್ದಾರರಿಗೆ ಶಿರೋವೇದನೆಗುಪ ಕ್ರಮವಾಗಿರುವಂತೆ ಕೇಳುತ್ತೇವೆ. ಇವರ ಮೇಲೆ ಬಂದಿರುವ ಫಿರ್ಯಾದಗಳೆಲ್ಲವು ಯಾಮವತ್ತ ವಗೈರೆಗೆ ಸಂಬಂಧಪಟ್ಟವೆಂದು ನಮ್ಮ ತಿಳುವಳಿಕೆಗೆ ಬಂದಿರುತ್ತದೆ. ಅವರ ವಿಷಯಸ್ವರೂಪವು ಕ್ರಮವಾದ ಸ್ಥಾನದಲ್ಲಿ ನಿರ್ಧರವಾಗುವತನಕ ಅದಂ ಕುರಿತು ಯಾವವಿಧ ಅಭಿಪ್ರಾಯವನ್ನಾಗಲಿ ತಿಳಿಸುವಣವು ಪತ್ರಿಕಾಲೇಖಕರ ಧರ್ಮವಲ್ಲವಾಗಿ ಅದಂ ಕುರಿತು ನಾವೀಗ ವಿಚಾರಮಾಡಲಿಕ್ಕೆ ಸ್ವಲ್ಪವೂ ಪ್ರಯತ್ನ ಪಡುವದಿಲ್ಲವು. ಪರಂತು ಅಮಲ್ದಾರರಿಗೆ ಪೂರ್ವದೊಳಿದ್ದ ಗೌರವವನ್ನೂ, ಅದಕ್ಕೀ ದೇಶದಲ್ಲೀಗ ಉಂಟಾಗಿರುವ ಲಾಘವವನ್ನೂ ಕುರಿತ ಕೆಲವು ಅಂಶಗಳಂ ಮಾತ್ರ ಈಗ ತಿಳಿಸುವೆವು, ಹ್ಯಾಗೆಂದರೆ.—

ಸಾಬಕ್ ಟೀಪ್ಪೂ ಸುಲ್ತಾನರವರ ಕಾಲದಲ್ಲಿ ಅಮಲ್ದಾರರ ಸ್ವರೂಪ ಯೋಗ್ಯತೆಗಳು ವಿಜಾತೀಯಗಳಾಗಿದ್ದಂತೆ ತಿಳಿಯಬರುತ್ತದೆ. ಸುಲ್ತಾನರವರಿಗೆ ಸ್ವಮತಾಭಿಮಾನವು ಉನ್ಮತ್ತಕವಾಗಲು ಅವರು ತಮ್ಮ ಮಿಲಿಟೆರಿ ಇಲಾಖೆಯಲ್ಲಿ ಬಾದಶಾಪ್ ಹೊರುತಲಿದ್ದವರಿಗೆಲ್ಲ ಅಮಲ್ದಾರ್ ಉದ್ಯೋಗವನ್ನು ದಾರಾಳವಾಗಿ ಕೊಡುತಬಂದರು. ಲೌಕಿಕವ್ಯವಹಾರಜ್ಞಾನ ಶೂನ್ಯರಾದ ಸದರೀ ಅಧಿಕಾರಿಗಳು ಆ ಕಾಲದಲ್ಲಿ ಆಡಿದ ಮಾತುಗಳೂ, ಮಾಡಿದ ಕಾರ್ಯಗಳೂ, ಸ್ಮರಣೆಗೆ ಬರುವಾಗೆಲ್ಲ ಜನರ ಹೇಳನಕ್ಕೆ ಅದ್ಯಾಪಿ ವಿಷಯಗಳಾಗಿಯೇ ಇರುತ್ತವೆ. ತರುವಾಯ ದಿವಾನ್ ಪೂರ್ಣಯ್ಯನವರ ಕಾರಕರ್ದಿಯಲ್ಲಿ ಸದರೀ ಅಧಿಕಾರವು ಕದಾಚಿತ್ ಕೆಲವರು ವೈದಿಕರಿಗೆ ಕೊಡಲ್ಪಟ್ಟಂತೆಯೂ, ಅವರು ಲೌಕಿಕಜ್ಞಾನವಿಲ್ಲದೆ ನಡೆಸಿದ ಆಡಳಿತಗಳು ವಿಚಿತ್ರಗಳಾಗಿದ್ದಂತೆಯೂ ಈಗಲೂ ಜನಗಳು ಯಾವಾಗಲಾದರು ಹೇಳಿಕೊಳ್ಳುತ್ತಾರೆ. ಸಾಬಕ್ ಮಹಾರಾಜರವರ ಪ್ರಭುತ್ವದಲ್ಲಿ ಸದರೀ ಅಧಿಕಾರವು ಕೆಲವರ ನಬಿಜ್ಞಾರ ಪಾಲಾದವೆಂತಲೂ, ಅವರ ದಾಂದಳೆಯೇ ರಾಜ್ಯಕ್ಷೋಭೆಗೆ ಕಾರಣವಾಗಿ ಯೇರ್ಪಟ್ಟಿತೆಂತಲೂ ವ್ಯಕ್ತವಾಗುತ್ತದೆ. ಈ ರಾಜ್ಯವು ಬ್ರಿಟಿಷರ ಸುಫರ್ದಾಗಿ ಅವರು ಸ್ವತಃ ಪ್ರಭುತ್ವ ಮಾಡಲಿಕ್ಕೆ ಪ್ರಾರಂಭಿಸಿದ ಕಾಲದಲ್ಲಿ ಅಮಲ್ದಾರಿಯು ರೂಪಾಂತರವನ್ನೈದಿತು. ಸರ್ ಮಾರ್ಕ್ ಕಬ್ಬನ್ ಸಾಹೇಬರವರ ಕಾಲದಲ್ಲಿ ತಾಲ್ಲೂಕಿನ ಮುಖ್ಯಾಧಿಕಾರಿಗಳಾದ ಅಮಲ್ದಾರ್, ಪೇಷ್ಕಾರ್, ಶಿರಸ್ತೇದಾರ್, ಕಿಲ್ಲೇದಾರ್ ಈ ನಾಲ್ಕು ಉದ್ಯೋಗಗಳ ಏರ್ಪಾಡನ್ನು ತಮ್ಮ ಅಧಿಕಾರದಲ್ಲೇ ಇಟ್ಟುಕೊಂಡು ಇನ್ನುಳಿದ ಉದ್ಯೋಗಗಳ ವಿಲೇವಾರಿ ಅಧಿಕಾರವನ್ನು ಡಿವಿಜನ್ ಸೂಪರಿಂಟೆಂಡೆಂಟುಗಳಿಗೆ ಒಪ್ಪಿಸಿದ್ದರು. ಸದರೀ ಸೂಪರಿಂಟೆಂಡೆಂಟುಗಳು ಚೋಪ್‌ದಾರೀ, ಮಾಹಿತಿ, ಜವಾಬ್‌ದಾರಿ, ಪಟಾಯಖ ಮೊದಲಾದವನ್ನಾಲೋಚಿಸಿ ಒಂದೊಂದಾಗಿ ಸಡಲಬಿಡುತಬಂದು ಅಮಲ್ದಾರಿ ಸಹ ಅವರ ಸಿಫಾರಸ್ ಮೇರೆಗೇನೇ ಮಂಜೂರ್ಮಾಡುವ ಪದ್ಧತಿ ಯೇರ್ಪಟ್ಟಿತು. ಆಗಿನ ಕಾಲದಲ್ಲಿ ನೌಕರರಿಗೆ ಪೆನಶನ್ ಹೆಚ್ಚು, ತಲಬ್ ಕಮ್ಮಿ, ಮತ್ತು ಮಾಮೂಲ್ ಅನುಸರಿಸಿ ಕೆಲಸ ನಡಿಸುವಣವೇ ಮುಖ್ಯವಾಗಿತ್ತು. ಆದುದರಿಂದ ಅಮಲ್ದಾರರಿಗೆ ಈಗಿನಷ್ಟು ಗಿರಾಕಿ ಯುಂಟಾಗಿರಲಿಲ್ಲವು. ಅನಂತರ ಸಾಬಕ್ ಚೀಫ್ ಕಮಿಷನರಾದ ಮೆ|| ಬೌರಿಂಗ್ ಸಾಹೇಬರವರು ೧೮೬೯ನೇ ಇಸವಿಯಲ್ಲಿ ಮಾಡಿದ ಲವಾಜಮಾ ಏರ್ಪಾಡಿನಿಂದ ಳು, ಸದರೀ ಉದ್ಯೋಗಗಳಿಗೆ ಭಾರೀ ಸಂಬಳವೂ, ಅಧಿಕ ಗೌರವವೂ ಉಂಟುಮಾಡಿದ್ದರಿಂದ ಜನಗಳ ಖಾಹಿಷ್ ಹೆಚ್ಚಲಿಕ್ಕೆ ಕಾರಣವಾಯಿತು. ಇಂತಾ ಅಮಲ್ದಾರಿಯು, ತಾಲ್ಲೂಕ್ ಪೇಷ್ಕಾರರಾಗಿದ್ದವರಿಗೇನೇ ಸಲ್ಲತಕ್ಕದ್ದೆಂತಲೂ, ಮುಲ್ಕೀ ರೆವಿನ್ಯೂ ಅನುಭವವುಳ್ಳವರೇ ಅದಕ್ಕೆ ಯೋಗ್ಯರೆಂತಲೂ, ಮಧ್ಯೆ ಕೆಲವು ಕಾಲ ನಿಬಂಧನೆ ಮಾಡಲ್ಪಟ್ಟಿತ್ತು. ತರುವಾಯ ಡಿವಿಜನಿನಲ್ಲಿ ಯೆಲ್ಲಾಪಿಯವರೇ, ಸಮಾನವಾಗಿ ಅಮಲ್ದಾರರಾಗಿರಬೇಕೇ ಹೊರ್ತು ಯಾವದಾದರೊಂದು ಬಗೆಯವರನ್ನೇ ಚುನಾಯಿಸಿ ನೇಮಕಮಾಡುವಣವು ಯುಕ್ತವಲ್ಲವೆಂದು ವ್ಯವಸ್ಥೆಯಾಗಿತ್ತು. ಈ ಕಾರಣದಿಂದ ನಾನಾಜಾತಿಯವರು ತಮ್ಮ ತಮ್ಮ ಪಾಲ್ಯ ಬಲದಿಂದ ಅಮಲ್ದಾರಿಗಳನ್ನಾಳಿಸಿ ಸ್ವಾಧೀನ ಪಡಿಸಿಕೊಳ್ಳುತ ಬರಲು, ಕಡೆಗೆ ಆ ಸಾಮಿ ಗೌರವವೂ ಲಾಯಖಿಯೂ ಕಡಮೆಯಾಗುತಬಂದು ಕ್ರಮೇಣ ಮೈಸೂರ್ ಸೀಮೆಯ ಅಮಲ್ದಾರರು ಶುದ್ಧ ಅಸಮರ್ಥರೆಂದು ಮೇಲ್ಪಟ್ಟ ಅಧಿಕಾರಿಗಳ ತಿಳುವಳಿಕೆಗೆ ಬಂದು ಅವರಿಗೆ ತಕ್ಕ ಪರೀಕ್ಷೆಯನ್ನು ಕಲ್ಪಿಸಿ, ಅದಂ ಕೊಟ್ಟವರಿಗೇನೇ ಆ ಕೆಲಸ ಸಿಕ್ಕುವದೆಂದು ನಿಷ್ಕರ್ಷೆ ಮಾಡಿದರು. ತಾಲ್ಲೂಕ್‌ಗಳ ಕ್ಲಾಸ್‌ವಾರಿ ಏರ್ಪಾಡನ್ನು ತಪ್ಪಿಸಿ ಇಸಂಗಳ ಪಸೀರೆಯ ಮೇಲೆ ಕ್ಲಾಸ್‌ಗಳು ವಿಂಗಡಿಸಿ ತದನುಗುಣವಾಗಿ ತಲಬ್ ಕೊಡಲಿಕ್ಕೆ ಪ್ರಾರಂಭವಾಯಿತು. ಹೀಗೆ ಕಾಲಕ್ರಮದಿಂ ನಾನಾವಿಧವಾಗಿ ಬದಲಾಯಿಸುತ ಬಂದ ಅಮಲ್ದಾರರ ಸ್ಥಿತಿಯು, ಈ ರಾಜ್ಯವಂ ಶ್ರೀಮನ್ಮಹಾರಾಜರವರಿಗೊಪ್ಪಿಸಲಿಕ್ಕೆ ಅನುಗುಣವಾಗಿ ಮಾಡಬೇಕಾದ ಆವಶ್ಯಕತೆಯುಂಟಾದಮೇಲೆ ರೂಪಾಂತರವನ್ನೈದಿತು. ಕಡೆಗೆ ಅಮಲ್ದಾರರಿಗೆ ತಕ್ಕ ತಾಲ್ಲೂಕೂ, ತಾಲ್ಲೂಕಿಗೆ ತಕ್ಕ ಅಮಲ್ದಾರರೂ ದೊರೆಯದೆಹೋದದು ಮಾತ್ರವಲ್ಲದೆ ತಾಲ್ಲೂಕಿನಲ್ಲಿ ಕೆಲಸ ನೋಡುವ ಶಿರಸ್ತೇದಾರರಿಗೆ ಅಮಲ್ದಾರೀ ಪ್ರತ್ಯೇಕ ಯುಂಟೋ ಇಲ್ಲವೋ ಎಂಬದು ಅವರಿಗೇ ಗೊತ್ತಿಲ್ಲದೆ ಹೋಯಿತು. ಕ್ರಮೇಣ ಪರೀಕ್ಷೆ ಕೊಟ್ಟಂತವರಿಗೆ ತಮಗೆ ಕೆಲಸವಾಗುತ್ತದೆಂಬ ನಂಬಿಕೆಗೆ ಅವಕಾಶವಿಲ್ಲದೆ ಹೋಯಿತು. ಶ್ರೀಮನ್ಮಹಾರಾಜರವರಿಗೆ ಪ್ರಭುತ್ವ ಒಪ್ಪಿಸಲ್ಪಟ್ಟ ಮೇಲೆ ಅಮಲ್ದಾರೀ ಯೇರ್ಪಾಡುಗಳು ಮತ್ತೂ ವಿಜಾತೀಯಗಳಾದವು. ಇತರ ಲಾಯಖಿಗಳೆಲ್ಲವೂ ಅನಾದರಣೀಯಗಳಾಗಿ ಕೇವಲ ಇಂಗ್ಲಿಷ್‌ನಲ್ಲಿ ಡ್ರಾಫ್ಟ್‌ಗಳು ಬರೆಯಲಿಕ್ಕೂ ಡೆಪ್ಯುಟಿ ಕಮಿಷನರ್‌ಗಳ ಹಿಂದೆ ಚಟುವಟಿಕೆಯಾಗಿ ಕುದುರೆ ಸವಾರಿ ಮಾಡಲಿಕ್ಕೂ ಬಂದಿದ್ದರೆ ಸಾಕೆಂಬ ಅಭಿಪ್ರಾಯ ಪ್ರಚುರಗೊಂಡಿತು. ಇದರಿಂದ ಪೆಮ್ಮಟಮಾತ್ರವಂ ಅನುಭವವಿಲ್ಲದೆ ಮುಲ್ಕೀನಿಷಯದಲ್ಲಿ ಭತ್ತದ ಮರ ಎಷ್ಟರ ಎತ್ತರವಿರುತ್ತದೆಂದು ಕೇಳುವಂತವರಿಗೂ, ಒಂದೆರಡು ದರೋಡೆಗಳನ್ನು ಪತ್ತೆಮಾಡಿ ಸಮೂದಿಗೆಬಂದ ಪೊಲೀಸ್ ಇನ್ಸ್‌ಪೆಕ್ಟರ್‌ಗಳಿಗೂ ನಿರ್ವಿಚಾರವಾಗಿ ಅಮಲ್ದಾರಿಯು ಕೊಡಲ್ಪಡುವ ಪದ್ಧತಿ ಯೇರ್ಪಟ್ಟಿತು. ಈ ಪದ್ಧತಿಯಿಂದ ಯಾವ ಇಲಾಖೆಯವರಿಗೆ ಹಕ್ಕುಂಟೋ, ಯಾರಿಗೆ ಇಲ್ಲವೋ ಅದಂ ನಿಷ್ಕರ್ಷೆ ಮಾಡುವದು ಸಹ ಅಸಾಧ್ಯವಾಗಿ ಕುದಿರಿದೆ. ಅಮಲ್ದಾರೀ ಖಾಹಿಷ್ ಉಳ್ಳವರು ಡಿಸ್ಟ್ರಿಕ್ಟ್, ಡಿವಿಜನ್, ಮುಜರಾಪ್ ಈ ಮೂರು ಅಧಿಕಾರಸ್ಥಾನಗಳಲ್ಲಿ ಉಮೇದ್ ಮಾಡಿದವರಾಗಿರಬೇಕಾದ ನಿರ್ಬಂಧ ವಿಲ್ಲದೆ ಹೋಯಿತು. ಮುಖ್ಯವಾಗಿ ಈ ವಿಷಯದಲ್ಲಿ ಪ್ರವರಿಗಿನ ನಮ್ಮ ಹಿಂದಿನ ಅನುಭವವನ್ನು ಕ್ರೋಡೀಕರಿಸಿ ನೋಡಿದರೆ ಮತದರ್ಮದೋಷಾದಿಯಲ್ಲಿ ಒಂದೊಂದು ಕಾಲದೊಳು ಪೇಷ್ಕಾರ್ ಶಿರಸ್ತೇದಾರರೇ ವಿಶೇಷತಃ ಯೇರ್ಪಡುತ ಬಂದರು. ಮತ್ತೊಂದು ಸಮಯದೊಳು ಪರೀಕ್ಷೆ ಕೊಡುವಣವೇ ಯೋಗ್ಯತಾಪಾದಕವಾಗಿತ್ತು. ಬೇರೊಂದು ಸಂದರ್ಭದಲ್ಲಿ ಅನ್ಯದೇಶೀಯರೇ ಬಹಳವಾಗಿ ಚುನಾಯಿಸಲ್ಪಡುತಬಂದರು. ಇನ್ನೊಂದು ಪ್ರಕರಣದೊಳು ಫಕ್ತ ಇಂಗ್ಲಿಷ್ ಬಲ್ಲವರೇ ಹುದಿಕೆ ತೆಗೆಯಲ್ಪಟ್ಟರು. ಇತರ ಒಂದು ಕಾಲದೊಳು ಎಂತವನಾದರೂ ಆಗಲಿ, ಬ್ರಾಹ್ಮಣರಲ್ಲದಿದ್ದರೆ ಸಾಕೆಂದು ಭಾವಿಸಿ ಅಂತವರನ್ನೇ ನೇಮಕಮಾಡಲ್ಪಡುತ ಬಂದರು. ಬೇರೆಯ ಕಾಲದಲ್ಲಿ ಕಸ್ಬದಾರರಿಗಳಾಗಿದ್ದರೂ ಬಾಧಕವಿಲ್ಲ, ಮುಸಲ್ಮಾನರಾಗಿದ್ದರೆ ಉತ್ತಮವೆಂಬ ಭಾವನೆಯಿಂದ ಅಂತವರನ್ನೇ ಅಮಲ್ದಾರಿ ಪಟ್ಟಿನಮೇಲೆ ಕುಳ್ಳರಿಸುತಬಂದರು. ಮತ್ತೊಂದು ಕಾಲದಲ್ಲಿ ಆಶ್ರಿತ ಪಕ್ಷಪಾತದಿಂ ಗುಣವಿವೇಚನೆ ಇಲ್ಲದೆ ಅಜ್ಞರಾದವರು ಚುನಾಯಿಸಲ್ಪಡುತ ಬಂದರು. ಈಚೆಗೆ ಡೆಪ್ಯುಟಿ ಕಮಿಷನರ್‌ಗಳಿಗೂ ಅಮಲ್ದಾರರುಗಳಿಗೂ ಇರುವ ಸಂಬಂಧವು ಪ್ರಕಾರಾಂತರವಾಗಿ ಏರ್ಪಟ್ಟು ಅವರಿಬ್ಬರಿಗೂ ಡೆಮಿ ಆಫಿಷಿಯಲ್ ಕಾಗದಗಳು ಹೋಗಿ ಬರುವದಕ್ಕೆ ಪ್ರಾರಂಭವಾಗಿ ತಾಲ್ಲೂಕ್ ರಿಕಾರ್ಡ್‌ಗಳಲ್ಲಿ ಅಸಲಿ ಹುಕುಂ ಬರೆಯುವದು ಸಹ ಪ್ರಯಾಸವಾಯಿತು. ಜಮಾಬಂದಿಗೆ ರೆವಿನ್ಯೂ ಶಿರಸ್ತೇದಾರರನ್ನು ಕರೆದುಕೊಂಡು ಹೋಗುವಣವು ಡೆಪ್ಯುಟಿ ಕಮಿಷನರ ಗೌರವಕ್ಕೆ ಲೋಪವೆಂಬ ಭಾವ ತಲೆದೋರಿತು. ಡಿಸ್ಟ್ರಿಕ್ಟ್ ರೆವಿನ್ಯೂ ಶಿರಸ್ತೇಕೆಲಸದಿಂದ ಅಮಲ್ದಾರಿಗೆ ಹೋಗುವ ಕ್ರಮವೇರ್ಪಟ್ಟದರಿಂದ ಹಿಂದೆ ನೆಲೆಗೊಂಡಿದ್ದ ಕ್ರಮವು ಅಂದರೆ, ಅಮಲ್ದಾರಿ ಮಾಡಿ ನಾಯಬ್ ಶಿರಸ್ತೇಹಿತೆ ಶಿರಸ್ತೇ ವಗೈರೆ ಜವಾಬ್ದಾರಿ ಕೆಲಸಗಳಿಗೆ ಬಂದ ಮಾಹೀತ್‌ದಾರರ ಮೂಲಕ ಜಮಾಬಂದಿ ಕಾಲದಲ್ಲೂ ಇತರ ಕಾಲದಲ್ಲಿಯೂ ಅಮಲ್ದಾರರ ಆಡಳಿತಗಳನ್ನು ತನಿಖೀ ಮಾಡಿ ರಿವ್ಯೂ ಮಾಡುವ ವಾಡಿಕೆ ಕುದುರಂಗ ತಪ್ಪಿಹೋಯಿತು. ಏತನ್ನ ಅಮಲ್ದಾರೀ ಉದ್ಯೋಗವು ಮೊದಲಿನಿಂದ ಅವ್ಯವಸ್ಥಿತವಾಗಿಯೂ ಅನಿಶ್ಚಿತವಾಗಿಯೂ ಇರುವದರಿಂದಲೂ, ಈಚೆಗೆ ಕೇವಲ ಬಾಲಿಶರಾಗಿಯೂ, ಅನುಭವಶೂನ್ಯರಾಗಿಯೂ, ಅತಿ ಕಾಂಕ್ಷಿಗಳಾಗಿರುವರನೇಕರು ಪ್ರಜೆಗಳ ಯೋಗಕ್ಷೇಮಗಳಿಗೆ ಜವಾಬ್ದಾರರಾಗಿ ಯೇರ್ಪಡುತ ಬಂದದರಿಂದಲೂ, ಅನೇಕ ಅಕ್ರಮಗಳಿಗೆ ಅವಕಾಶವುಂಟಾಗಿರುತ್ತದೆ. ಈ ಅಂಶವು ಈಚೆಗೆ ದಿವಾನರವರು ಸರ್ಕ್ಯೂಟ್ ಹೋಗಿಬಂದಮೇಲೆ ಒಬ್ಬೊಬ್ಬ ಅಮಲ್ದಾರರ ಶೀಲಸ್ವಭಾವಗಳು ಹೊರಪಡುತ ಬರುತ್ತವೆ. ಇನ್ನೆಷ್ಟು ದಿನಗಳ ತನಕ ಈಗಿನ ಸ್ಥಿತಿಯು ನೆಲಸಿರುವುದೋ ನೋಡುವೆವು.

SERVICES OF DEVADASEES IN HINDU TEMPLES

ಇಂಡ್ಯ ದೇಶೀಯರಾದ ನಮ್ಮ ಪೂರ್ವ ಸಂಪ್ರದಾಯಗಳೂ ಮತಾಚಾರಗಳೂ ಆಧುನಿಕ ವೈಲಕ್ಷಣ್ಯಕ್ಕೆ ಸುತರಾಂ ಸರಿಬೀಳುವದಿಲ್ಲವು. ಈ ವಿಷಯದಲ್ಲಿ ಈಗಿನ ಕಾಲದವರನ್ನು ವೃದ್ಧಾಜಡರಾದವರು ನಾನಾವಿಧವಾಗಿ ದೂಷಿಸಿ ಆಕ್ಷೇಪಿಸುತಲಿರುತ್ತಾರೆ. ಈ ಉಭಯರಿಗೂ ಮಧ್ಯೆ ಇರುವ ಅವಕಾಶವು ಅತಿ ದೀರ್ಘವಾದುದರಿಂದ ಇವರಿಬ್ಬರನ್ನೂ ಸಮಾಧಾನಪಡಿಸಿ ಅವರವರ ಭಾವನೆಗಳಂ ಸಮನ್ವಯಮಾಡಿ ಪರಸ್ಪರ ಸಂಬಂಧವನ್ನುಂಟುಮಾಡುವುದು ಪ್ರಕೃತಸ್ಥಿತಿಯಲ್ಲಿ ಮಧ್ಯವರ್ತಿಗಳಿಗೆ ಅತಿ ಪ್ರಯಾಸ ಸಾಧ್ಯವಾಗಿರುತ್ತದೆ. ವೇದ ಶಾಸ್ತ್ರಗಳಿಂದಲೂ, ಶಿಷ್ಟಾಚಾರಗಳಿಂದಲೂ ಏರ್ಪಟ್ಟಿರುವ ವಿಧಿ ನಿಷೇಧಗಳು ಕಾಲ ದೇಶ ಜನ ಪ್ರಕೃತಿಗೆ ಅನುಗುಣವಾಗಿ ಬದಲಾಯಿಸಲ್ಪಡಬೇಕಲ್ಲದೆ ಸರ್ವ ಕಾಲದಲ್ಲಿಯೂ ಸರ್ವ ದೇಶಗಳಲ್ಲಿಯೂ, ಸರ್ವಾವಸ್ಥೆಯಲ್ಲಿಯೂ ಒಂದೇಬಗೆಯಾಗಿರಬೇಕೆಂಬದು ಶಾಸ್ತ್ರಗಳ ಉದ್ದೇಶವಾಗಿರುವಂತೆ ಕಾಣಿಸಲಿಲ್ಲವು, ಮತ್ತು ನಮ್ಮ ಅನುಭವವಿರುದ್ಧವಾಗಿರುತ್ತದೆ. ಪೂರ್ವಯುಗಗಳಲ್ಲಿ ನೆಲಗೊಂಡಿದ್ದ ಬಹುವಿಧ ಧರ್ಮಗಳು ಈ ಯುಗದಲ್ಲಿ ಸಲುವಳಿ ಇಲ್ಲದೆ ಹೋಗಿರುತ್ತವೆ. ಹೀಗೆಯೇ ಕಾಲೋಚಿತವಾಗಿ ಆಚಾರಗಳನ್ನು ಬದಲಾಯಿಸಿ ಲೌಕಿಕವ್ಯಾಪಾರದಲ್ಲಿ ನಿರತರಾಗಿ ಉತ್ತರೋತ್ತರಾಭಿವೃದ್ಧಿಯನ್ನು ಪಡೆಯಬೇಕಾದುದು ದೇಶ ಜನಾಭಿವೃದ್ಧಿ ನಿಮಿತ್ತಕವೆಂದು ಆಧುನಿಕರು ವಾದಿಸುತಾರೆ. ಇದಲ್ಲದೆ ಪೂರ್ವಿಕರಿಂದ ಕಲ್ಪಿಸಲ್ಪಟ್ಟ ಕೆಲವು ಧರ್ಮಾಚಾರಗಳು ಆ ಕಾಲದ ದೇಶ ಜನಸ್ಥಿತಿಗತಿಗಳಿಗೆ ತಕ್ಕಂತೆ ಒಳ್ಳೆಯ ಉದ್ದೇಶಗಳುಳ್ಳವಾಗಿದ್ದರೂ ಅವುಗಳನ್ನೇ ಈಗಲೂ ಅನುಸರಿಸುತಿರಬೇಕೆಂದು ಮುಷ್ಕರ ಹಿಡಿದರೆ ಕೆಲವು ಅಸಾಧ್ಯಗಳಾಗಿಯೂ, ಕೆಲವು ವಿರುದ್ಧ ಪರಿಣಾಮಕಗಳಾಗಿಯೂ ಅನೇಕ ಅಹಿತಗಳಾಗಿಯೂ ಏರ್ಪಡುತ್ತವೆ. ಇದರ ಫಲವೇನಾಗುತ್ತದೆಯೆಂದರೆ ಕ್ರಮೇಣ ಮನಸ್ಸಿಗೆ ವೇದಶಾಸ್ತ್ರ ಪ್ರಾಮಾಣ್ಯಜ್ಞಾನವೂ, ಅವುಗಳಿಂದ ವಿಧಿಸಲ್ಪಟ್ಟ ಸದ್ಧರ್ಮಗಳಲ್ಲಿ ಅಗೌರವ ಅಶ್ರದ್ಧೆಗಳೂ, ದುರ್ಧರ ತಿರಸ್ಕಾರ ಮೊದಲಾದವೂ ಹುಟ್ಟುವದಲ್ಲದೆ ಅದರಿಂದ ಪ್ರಬಲತರ ಅನಿಷ್ಟಗಳು ಒದಗುವೆ ಹಿಂಗಲಾರವೆಂದು ಸಹ ಭಯಪಡಿಸುತಲಿರುತ್ತಾರೆ. ಏತದ್ವಿರೋಧಿಗಳಾದ ಪ್ರಾಚೀನರು ಪರಪಕ್ಷದವರ ಅವಿನಯಮದೌದ್ಧತ್ಯವಂ ಸರ್ವ್ಯತೋಷಿಸುವದು ಕ್ರಮಕ್ಕೊಳಪಡದರೆ ಸರ್ವವೂ ಕಾಲಕ್ಕೆ ಅನ್ವಯಿಸಿ ಗತಾನುಗತಿಕರಾಗಿ ಜನರೆಲ್ಲರು ಸ್ವೇಚ್ಛೆಯಿಂದ ನಡೆಸಿ ಭ್ರಷ್ಟರಾಗಬೇಕಾದ ಕಾಲವೂ ಜಗವತ್ಸಂಕಲ್ಪವೂ ಸನ್ನಿಹಿತಗಳಾಗಿರುವಾಗ್ಯ ಅವಂ ನಿವೃತ್ತಿಸಲಿಕ್ಕೆ ಯಾರಿಗೆ ಸಾಧ್ಯವೆಂದು ಒಂದೇ ಮಾತಿನಿಂದ ಅಧಿಕ್ಷೇಪ ಮಾಡಿ ಕೆಲಸ ವಿಪಟ್ಟಾಗಳಿಂದ ನಿರ್ಣಯ ಪ್ರತಿರ್ಣಯಂಗಳು ಪವರೀಗ ಸ್ವಾಭಾವಿಕವಾಗಿ ಯೇರ್ಪಟ್ಟಿದೆ. ಈಗ ಕಾಲ ದೇಶೋಚಿತಗಳಾದ ನಿಬಂಧನೆಗಳಂ ಮಾಡಲಿಕ್ಕೆ ಮನು ಪರಾಶರಾದಿ ಪೂರ್ವ ಮಹರ್ಷಿಗಳು ಬರಬೇಕೆಂದು ವೈದಿಕರು ವಾದಿಸಿದರೆ ಅದು ಅಸಾಧ್ಯವು. ಎಲ್ಲವು ಸ್ವೇಚ್ಛಾನುಸಾರವಾಗಿ ಬದಲಾಯಿಸಿ ನೂತನವಾದ ವೈಚಿತ್ರ್ಯವಂ ಕಲ್ಪಿಸಿ ತಾವು ಪ್ರಸಿದ್ಧಿಗೆ ಬರಬೇಕೆಂದು ಆಧುನಿಕರು ಅಪಿ ಪ್ರವಣರು ಬಹಳ ಪ್ರಯಾಸ ಪಡುತ್ತಾರೆ. ಈ ಸಾಪ್ರಾದ್ವಿರುದ್ಧಭಾವಗಳೊಂದಾಗಿ ಒಂದು ಕಾರ್ಯವಾಗುವದೆಂಬ ಅಂಶವೇ ಸಂದೇಹಾಸ್ಪದವಾಗಿರುತ್ತದೆ. ಅದರಿಂದ ಉಭಯಪಕ್ಷದವರಿಗೂ ಮಧ್ಯವರ್ತಿಯಾದ ಮೂರನೆಯವರೊಬ್ಬರು ಆವಶ್ಯವಾಗಿರುತ್ತಾರೆ. ಅಂತವರು ಜ್ಞಾನವಿದ್ಯಾಸಂಪನ್ನರಾಗಿ ಉಭಯ ಪಕ್ಷದವರಿಗೂ ಹಿತವಂ ಮಾಡಿ ಸಮಾಧಾನಪಡಿಸತಕ್ಕವರಾಗಿದ್ದರೆ ಒಳ್ಳೆಯದು. ಅಂತವರು ದೊರೆಯುವುದು ಪ್ರಯಾಸವಾಗಿರುವದರಿಂದ ಆ ಕಾರ್ಯವು ಆಳತಕ್ಕ ಅರಸರೇ ಸಾಮ ದಾನೋಪಾಯಗಳಿಂದ ಮಾಡಿಸಬೇಕಾದದು ಆವಶ್ಯಕ. ಇದುವರಿವಿಗೂ ಪಾಲಕರಾಗಿದ್ದವರು ವಿದೇಶಸ್ಥರಾಗಿಯೂ ವಿಜಾತೀಯರಾಗಿಯೂ ಇದ್ದುದರಿಂದ ಅವರ ಮೂಲಕ ನಾವೆಷ್ಟುಮಟ್ಟಿಗೆ ಸಹಾಯವಂ ನಿರೀಕ್ಷಿಸಬಹುದೋ ಅದಕ್ಕಿಂತ ಹೆಚ್ಚೇಯಾಗಿ ಎದುರು ನೋಡಕೂಡದಿತ್ತು. ಈಗ ಹಿಂದೂಮತಸಂಪ್ರದಾಯಗಳಿಗೆ ಬದ್ಧರಾಗಿಯೂ, ಅವುಗಳ ರಕ್ಷಣೆಯಲ್ಲಿ ಆದರವುಳ್ಳವರಾಗಿಯೂ ಇರುವ ಹಿಂದೂ ಅರಸರೇ ಪಾಲಕರಾಗಿರುವಾಗ ಈಗಲೂ ತಾದೃಶ ಆವಶ್ಯಕ ಏರ್ಪಾಡುಗಳಂ ಕಾಲೋಚಿತವಾಗಿ ಜರಿಗಿಸದಿದ್ದರೆ ಮುಂದೆ ಯೆಂದಿಗೂ ಕ್ರಮಪಡಲಾರದು. ಇಂತಾ ಬದಲಾವಣೆಗಳಂ ಮಾಡುವ ಕಾಲದಲ್ಲಿ ತಮ್ಮ ಅಧಿಕಾರ ಬಲಕ್ಕೆ ಉಪಷ್ಟಂಭಕವಾಗಿ ಜ್ಞಾನವಯೋವೃದ್ಧರಾದ ಪಂಡಿತರ ಅಭಿಪ್ರಾಯಗಳು ಸಹ ಶೇಖರಿಸಿಕೊಂಡರೆ ಅವರ ಉದ್ದೇಶ ಪ್ರಯತ್ನಗಳಾವಾಗಲೂ ವಿಫಲಗಳಾಗಲಾರವು. ಇದಕ್ಕೆ ನಿದರ್ಶನವಾಗಿ ಒಂದಂಶವಂ ಕುರಿತಿಲ್ಲಿ ಸ್ವಲ್ಪ ವಿಚಾರ ಮಾಡುತ್ತೇವೆ, ಹ್ಯಾಗೆಂದರೆ,—

ಪೂರ್ವದಲ್ಲಿ ಶೈವ 'ವೈಷ್ಣವಾಗಮಾದಿಗಳೇ' ರ್ಪಟ್ಟ ಅವುಗಳಿಗೆ ಅನುಗುಣವಾದ ದೇವಾಲಯಗಳೂ, ಪೂಜೆ ಪುರಸ್ಕಾರಗಳೂ ನೆಲೆಗೊಂಡ ಕಾಲದಲ್ಲಿ ದೇವತಾ ಸೇವೆಗಾಗಿ ಶುದ್ಧರಾದ ನಾಟ್ಯವೆಂಬ ವರ್ಣ್ಣದವರಲ್ಲಿ ಪಾತ್ರ ಲಕ್ಷಣಗಳುಳ್ಳ ಸುಂದರಿಯರಾದ ಹುಡುಗಿಯರನ್ನು ಕನ್ಯೆಯರಾಗಿದ್ದಾಗಲೇ ತಂದು ದೇವಸ್ಥಾನಗಳಲ್ಲಿ ಅವರಿಗೆ ಮುದ್ರೆ ಹಾಕಿಸಿ, ದೇವ ದಾಸಿಗಳೆಂದು ಕರೆಸಿಟ್ಟು ದೇವಾಲಯಗಳಿಂದಲೇ ಅವರಿಗೆ ಜೀವನವನ್ನು ನಡೆಸುತ ಇಟ್ಟುಕೊಂಡಿದ್ದರು ಅವರುಗಳ ಧರ್ಮ್ಮಾಚಾರ ಪದ್ಧತಿಗಳು ಶೈವ ವೈಷ್ಣವಾಗಮಗಳಲ್ಲಿ ಚೆನ್ನಾಗಿ ಹೇಳಲ್ಪಟ್ಟಿವೆ. ಇಂತಾ ದೇವದಾಸಿಯರು ಪ್ರತಿ ದೇವಸ್ಥಾನದಲ್ಲಿಯೂ ಅನೇಕರಿರುತ್ತಾರೆ. ಈ ಕ್ರಮ ಏರ್ಪಟ್ಟ ಕಾಲದಲ್ಲಿ ಅದು ಯಾವದೋ ಒಂದು ಒಳ್ಳೆ ಉದ್ದೇಶದಿಂದ ವ್ಯವಸ್ಥಿತವಾದುದಾಗಿರಬೇಕಲ್ಲದೆ ವಿರುದ್ಧವಾದ ಲಪ್ರವನಾಗಿ ಅನರ್ಥಕಾರಿಯಾಗಬೇಕೆಂದಿರಲಾರದು. ಆದಿಯಿಂದ ನವೀನ ಉತ್ಸವವೇ ಮುಟ್ಟದೆಂದು ಹ್ಯಾಗೆ ಹೇಳಬಹುದು? ಬ್ರಹ್ಮ, ವಿಷ್ಣು ರುದ್ರ ಇಂದ್ರಾದಿ ಅಷ್ಟದಿಕ್ಪಾಲಕರ ಸಭೆಗಳಲ್ಲಿ ಸಹ ರಂಭಾದಿ ದೇವತಾಸ್ತ್ರೀಯರು ದಾಸಿಭಾವವನ್ನು ವಹಿಸಿ ನೃತ್ಯ ಗೀತ ವಾದ್ಯಗಳೊಡನೆ ಅವರ ನಾನಾ ಗುಣ ಸಂಕೀರ್ತನವು ಮಾಡುತಲಿದ್ದರೆಂಬದಕ್ಕೆ ಅನೇಕ ದೃಷ್ಟಾಂತಗಳಿರುತಿವೆ. ಹೀಗಿದ್ದಾಗ್ಯೂ ಕಾಲಕ್ರಮದಿಂ ಮಂತ್ರ ತಂತ್ರ ತತ್ತ್ವವೆಂದು ಯಾವು ಅರ್ಚಕ ಕೈಲಿದ್ದು ಇದ್ದೂ ಇವರ ಸ್ವರೂಪ ಪ್ರಕಾಶನವಾಗಿ ಪ್ರಯೋಜನಕ್ಕೆಲ್ಲಾ ಸಾಧಕವಾಗಿದ್ದು ಸ್ವರೂಪವ... ಯು ಹ್ಯಾಗೆತಗ್ಗಿ ಹೋಯಿತೋ ಹಾಗೆಯೇ ಸದುದ್ದೇಶದಿಂದೇರ್ಪಡಿಸಲ್ಪಟ್ಟ ಏರ್ಪಾಡುಗಳೆಲ್ಲವ ಊಪತಭ್ರಷ್ಟರಿಗೆ ಸಹಕಾರಿಗಳಾಗಿ ಪರಿಣಮಿಸಿವೆ. ದೇವರ ಸೇವೆಗಾಗಿ ಏರ್ಪಟ್ಟ ದಾಸಿಯರು ಅರ್ಚಕ ಪರಿಚಾರಕ ಕಪಾಚಿತ ಧರ್ಮ್ಮಕರ್ತರ ಸೇವೆಗೆ ಉಪಯುಕ್ತರಾಗಿದಾರೆ. ಭಗವನ್ನಾಮ ಸಂಕೀರ್ತನಕ್ಕೆ ಬದಲು, ಶೃಂಗಾರದ ಹಾಡುಗಳು ಕಾಣಿರಿದವು. ಪೇಪರ ಕಂಟ್ರಾಕ್ಟರಿಗೆ ಉದ್ದಿಷ್ಟರಾದವರು ವಿಷಯಾಂತರೋಪಯೋಗಿಗಳಾಗಿ ಕಾಣರಿಸಿದರು. ಕಡೆಗೆ ದೇವಸ್ಥಾನಗಳಲ್ಲಿ ದರ್ಮಕರ್ತರಿಗೂ ಅಸ್ಥಿರರಾದ ಅರ್ಚಕ ಪರಿಚಾರಕರಿಗೂ ತಪ್ಪಬಹುದಾಗ ದೇವರನ್ನು ನಿಮಿತ್ತಮಾಡಿದ್ದರೆ ಮಾಸ್ಥಾನಗಳಲ್ಲಿ ಕಾರ್ಯ್ಯಕಟ್ಟಸಿ ತಾಪಗಳು ಜರಿಗಿಸುವಷ್ಟಕ್ಕೆ ಬಂದು ಮುಕ್ತಾಯವಾಯಿತು. ಇದು ಯೋಗ್ಯವಾದ ಕಾರ್ಯವೆಂದು ಯಾರಾದರು ಹೇಳುವರೆ? ಅದು ಆರ್ಯಪಸ್ಮೃತವೆಂದು ಬಾವಿಸಬಹುದೆ? ಇದು ಜಗನ್ಮಂಗಳವೋಲ್ಲಾಸ ಕರವೆಂದು ಭಾವಿಸಬಹುದೆ? ಇಂತಾ ಪದ್ಧತಿಗಳನ್ನು ತಪ್ಪಿಸುವದೊಳ್ಳೇದೆಂದು ಆಧುನಿಕರು ಹೇಳಿದರೆ ಅದು ತಪ್ಪಾಗುವದೆ? ಇಂತವುಗಳನ್ನು ಬದಲಾಯಿಸುವದರಿಂದ ಸ್ಥಲದೇವರ ಮಹಾತ್ಮ್ಯಕ್ಕಾಗಲಿ, ಆಗಮೋಕ್ತಗಳಾದ ಧರ್ಮ್ಮಗಳಿಗಾಗಲಿ ಯೇನಾದರು ಉಪಹತಿಯುಂಟಾಗುವದೇ? ಇವುಗಳನ್ನು ನಮ್ಮ ವೈದಿಕರು ಮನಃಪೂರ್ವಕವಾಗಿ ಪರಿಚಿಂತಿಸಿ ಯೋಕ್ಯ ಸ್ವತಃ ಕ್ರಮಪಡಿಸಿಕೊಳ್ಳಬಾರದು? ಇಂತಾ ವಿಷಯಗಳಲ್ಲಿ ಗವರ್ನಮೆಂಟಿನವರು ವಿಧಿ ಇಲ್ಲದೆ ಪ್ರವೇಶಿಸಬೇಕಾದಷ್ಟು ಆಭಾಸಕ್ಕೆ ಬರುವ ತನಕ ನಮ್ಮವರು ಉದಾಸೀನರಾಗಿ ನೋಡುತ್ತಿರಬೇಕು? ಈಚೆಗೆ ಚಿಕ್ಕಬಳ್ಳಾಪುರದ ತಾಲ್ಲೂಕ ನಂದಿಗ್ರಾಮದಲ್ಲಿರುವ ಭೋಗನಂದೀಶ್ವರ ದೇವರಿಗೆ ನಡೆದ ರಥೋತ್ಸವ ಕಾಲದಲ್ಲಿ ಸದರೀ ದೇವಸ್ಥಾನದ ಕಾಯಂ ದಾಸಿಯವಳು ಮೃತಪಟ್ಟ ಅವಳಿಗೆ ವಾರಸುದಾರರೊಬ್ಬರೂ ಇಲ್ಲದೆ ಹೋದದರಿಂದ ಉತ್ಸವಾಂಗವಾಗಿ ರಮಾಮಣಿ ಎಂಬವಳೊಬ್ಬ ದಾಸಿಯವಳನ್ನು ಮುಗಾಮಿಯಾಗಿ ಮೊಕರರ್ ಮಾಡಿ ಉತ್ಸವ ಜರಿಗಿಸಿದಂತೆಯೂ, ಅವಳೀ ನೌಕರಿಯಬಗ್ಗೆ ರೂಪಾಯಿ ೧೨-೫-೧೧ ಸವರಿ ದೇವಸ್ಥಾನದ ಬಾಬತು ಸಿಲ್ಕು ಮೊಬಲಗಿನಿಂದ ಕೊಡಿಸಬೇಕೆಂಬದಾಗಿಯೂ, ನಮೂದಿಸಿರುಂ ಜಾರಾತಿಯಬಗ್ಗೆ ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು ಕಳೆದ ಡಿಸೆಂಬರ್ ತಿಂಗಳ ೧೮ನೇ ತಾರೀಖಿನಲ್ಲಿ ಒಂದು ಬಿಲ್ಲನ್ನು ಮಂಜೂರು ಮಾಡಿ ೨೮೬—೫ನೇ ನಂಬರ್ ಡಾಕೆಟ್ ಬರೆದಿದ್ದದಕ್ಕೆ ಅದಂ ಮುಜರಾಯಿ ಸ್ಯೂಪರಿಂಟೆಂಡೆಂಟರವರು ದಿವಾನರವರ ಅಪ್ರೂವಲಿಗೆ ಕಳುಹಿಸಿದರು. ಅದರಮೇಲೆ ಅವರು ಸದರೀ ಬಿಲ್ ಬಾಬತು (೧೨-೫-೧೧) ಮೊಬಲಗನ್ನು ಈಸಂದರ್ಭದಲ್ಲಿ ವಿಶೇಷತಃ ಮಂಜೂರ್ ಮಾಡಿ ಅಡಿಟ್ಟಿಗೆ ಕಳುಹಿಸುವಂತೆ ಹುಕುಂ ಮಾಡಿದರಲ್ಲದೆ ಮೇಲೆ ಕಂಡ ಸಂದರ್ಭಗಳಲ್ಲಿ ತಾತ್ಕಾಲಿಕವಾಗಿ ಕಸಬುದಾರರಾದ ಹೆಂಗಸರನ್ನು ಮುಗಾಮಿಯಾಗಿ ಯೇನು ಡಿಸಬೇಕಾದುದೇನೂ ಆವಶ್ಯಕವಿಷಯವಲ್ಲವು. ಸಿಲ್ಕು ಮೊಬಲಗುಗಳನ್ನು ದೇವಸ್ಥಾನಗಳ ದಾಕೀಜ್ ವಗೈರೆ ಆವಶ್ಯಕಗಳಾದ ಇತರ ಉಪಯುಕ್ತಾಂಶಗಳಿಗೆ ಉಳಿಸಿಕೊಳ್ಳಬಹುದಾಗಿರುತಿದೆ. ಪ್ರಸ್ತುತದಲ್ಲಿಯೂ ಗವರ್ನಮೆಂಟಿನವರು ಪ್ರತಿದೇವಾಲಯಕ್ಕೂ ಸಂಬಂಧಿಸಿದ ದೇವದಾಸಿಗಳು ಅಲ್ಲಿ ಮಾಡಬೇಕಾದ ನ್ಯಾಯವಾದ ಸೇವೆಗಳನ್ನು ವಿಧಿಸಿ ಪ್ರತ್ಯೇಕ ಒಟ್ಟು ಹುಕುಂ ಕೊಡುವರು, ಅದರಲ್ಲಿ ತಾಳೆ ಯಾನ್ಯಾವು ಸೇರಿರಲಾರದು, ಮುಖವಾಗಿ ಮಾಜೀ ಮುಜರಾಯಿ ೪ನೇ ತಾರೀಖಿನಲ್ಲಿ ೮೮೬—೫೮ನೇ ನಂಬರ್ ಪ್ರೊಸೀಡಿಂಗ್ಸ ಮೂಲಕ ಆಜ್ಞಾಪಿಸಿರುತ್ತಾರೆ. ಅನೇಕರಿಗೆ ಇದು ಶಬ್ದತಃ ಕಠಿಣವಾಗಿ ತೋರಿದಾಗ್ಯೂ ಸ್ವರೂಪತಃ ಬಹಳ ಪ್ರಯೋಜನ ಕರವೆಂದು ಭಾವಿಸದಿರಲಾರರು. ಹೀಗೆಯೇ ಮುಜರಾಯಿ ಮೇಲುಕೋಟೆ ದೇವಸ್ಥಾನಗಳ ವಿಷಯಗಳಲ್ಲಿ ಸಹ ಯೆರಡು ಪ್ರಾಶಸ್ತ್ಯಗಳಾದ ಯೇರ್ಪಾಡುಗಳು ಮಾಡಿ ಯೆರಡು ಪ್ರೊಸೀಡಿಂಗ್ಸ ಮಾಡಿರುತ್ತಾರೆ. ಅವುಗಳನ್ನು ಮುಂದಿನವಾರದಲ್ಲಿ ಪ್ರಕಟಿಸುವೆವು. ಮುಖ್ಯವಾಗಿ ಇದುವರಿವಿಗೆ ಉಪೇಕ್ಷಿಸಲ್ಪಟ್ಟಿದ್ದ ಮುಜರಾಯಿ ಇಲಾಖೆಯ ಪುನರ್ವ್ಯವಸ್ಥೆಯಬಗ್ಗೆ ಒಬ್ಬ ಸಮರ್ಥರಾದ ಅಧಿಕಾರಿ ಯೇರ್ಪಟ್ಟ ಅವರು ಅನವರತ ಸಂಚಾರ ಮಾಡಿ ಅಲ್ಲಿಯನ್ನಿನ ಪರಿಹಾರ್ಯಗಳಾದ ದುಷ್ಪದ್ಧತಿಗಳನ್ನು ನಿವೃತ್ತಿಸುವ ಸಂಕಲ್ಪ ಪ್ರಬಲವರಾಗಿರುವದರಿಂದ ಒಬ್ಬರಿಗೂ ಅಸಮಾಧಾನ ವುಂಟಾಗದೆ ಕೆಲವು ಕಾಲದಲ್ಲಿಯೇ ಯೆಲ್ಲವೂ ಕ್ರಮಪಡಬಹುದೆಂದು ನಂಬುತ್ತೇವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Quantity of gold in circulation.— ಈಗ ಇಂಗ್ಲಾಂಡ ದೇಶದಲ್ಲಿ ೧೧೦,೦೦೦,೦೦೦ಪೌಂಡುಗಳ ಅಥವಾ ಸುಮಾರ್ ೪೬೫ ಟನ್‌ಗಳ ತೂಕವುಳ್ಳ ಭಂಗಾರದ ನಾಣ್ಯಗಳು ಚಲಾವಣೆಯಲ್ಲಿರುವಂತೆ ಅಂದಾಜಾಗಿರುತಿದೆ.

Prince Albert Victor's Scholarships ಗತಿಸಿದ ಪ್ರಿನ್ಸ್ ಆಲ್ಬರ್ಟ್ ವಿಕ್ಟರವರು ಪತಿಯಾಲಾ ಸಂಸ್ಥಾನಕ್ಕೆ ದಯಮಾಡಿದ್ದ ಸಂದರ್ಭದ ಜ್ಞಾಪಕಾರ್ಥ ಅವರ ಹೆಸರಿನಲ್ಲಿ ಪತಿಯಾಲಾ ಮಹಾರಾಜರವರು ಪಂಜಾಬ್ ಯೂನಿವರ್ಸಿಟಿಯಲ್ಲಿ ೧೨ ವಿದ್ಯಾರ್ಥಿ ವೇತನಗಳನ್ನೇರ್ಪಡಿಸಿರುವಂತೆ ತಿಳಿಯಬರುತಿದೆ.

Small Cause Court, Madras.—ಮದರಾಸ್ ಪ್ರೆಸಿಡೆನ್ಸಿ ಸ್ಮಾಲ್ ಕಾಸ್ ಕೋರ್ಟ್ ಎರಡು ಮೂರನೆ ಜಡ್ಜಿಗಳಾದ ಮ|| ರಾ ಪಿ ಶ್ರೀನಿವಾಸರಾಯರವರಿಗೂ, ಮ|| ರಾ|| ಟಿ. ವಿ. ಶೇಷಗಿರಿಸ್ವಾಮಿ ಪಿಳ್ಳೆಯವರಿಗೂ ಬರುವ ಏಪ್ರಿಲ್ ತಿಂಗಳ ಗುರ್ರೇತಾರೀಖ್ ಲಾಗಾಯತು ಇನ್ನೂ ಒಂದು ವರುಷ ಕಾಲ ಜಾಸ್ತಿಯಾಗಿ ನೌಕರಿಯಲ್ಲಿರಲಿಕ್ಕೆ ಹುಕುಂ ಕೊಡಲ್ಪಟ್ಟಿರುವಂತೆ ತಿಳಿಯಬರುತಿದೆ.

Khedive's Military Order.— ಈಜಿಪ್ಟ ರಾಜ್ಯದ ಅರಸರಾದ ಹೊಸ ಖೆಡೈವ್‌ಯವರು ಮಿಲಿಟರಿ ಸಂಬಂಧವಾದ ಕಾಗದ ಪತ್ರಗಳೆಲ್ಲವು ಈಜಿಪ್ಟ ರಾಜ್ಯದ ಯುದ್ಧ ಇಲಾಖಾ ಮಂತ್ರಿಯವರ ಮೂಲಕವಾಗಿಯೇ ತಮಗೆ ಕಳುಹಿಸಲ್ಪಡಬೇಕಲ್ಲದೆ ಬ್ರಿಟಿಷ್ ಆಫಿಸರ್‌ಗಳ ಮುಖಾಂತರ ಕಳುಹಿಸಕೂಡದೆಂದು ಖಂಡಿತವಾಗಿ ಹುಕುಂ ಕೊಟ್ಟಿದಾರೆಂದು ಕೇರೋ ಪಟ್ಟಣದಲ್ಲಿ ಪ್ರವಾದ ವುಂಟಾಗಿರುತಿದೆ.

H. H. the First Prince of Cochin.— ಕೊಚ್ಚಿ ಸಂಸ್ಥಾನದ ಯುವರಾಜರಾದ ಘನವನ್ನು ಹೊಂದಿದ ವೀರ ಕೇರಳವರ್ಮ ಯೆಂಬವರಿಗೆ ನೇತ್ರರೋಗ ಪ್ರಾಪ್ತವಾಗಲು ಅದರ ಚಿಕಿತ್ಸೆಗಾಗಿ ಡಾಕ್ಟರ್ ಗೋಲ್ಡ್ ಎಂಬವರನ್ನು ಕರೆದುಕೊಂಡು ಮದರಾಸಿಗೆ ಬಂದರೆಂತಲೂ, ತಮ್ಮ ನೇತ್ರಚಿಕಿತ್ಸೆಯ ವಿಷಯಗಾಗಿ ಡಾಕ್ಟರ್ ಬ್ರಾಕ್‌ಮನ್ ಯವರೊಡನೆ ಆಲೋಚಿಸುವವರಾಗಿದಾರೆಂತಲೂ ಕೇಳುತ್ತೇವೆ.

The M. L. Degree Examination.— ಈ ಸಂವತ್ಸರ ಮದರಾಸ್ ಯೂನಿವರ್ಸಿಟಿಯ ಎಂ. ಎಲ್. ಪರೀಕ್ಷೆಗೆ ದರಖಾಸ್ತು ಕಳುಹಿಸಿದ್ದ ಆರು ಮಂದಿಯ ಪೈಕಿ ಮೂರು ಜನ ಮಾತ್ರ ಪರೀಕ್ಷೆಗೆ ಹಾಜರಾಗಿದ್ದರು. ಕಡೆಗೆ ಆ ಮೂವರು ಸಹ ತೇರ್ಗಡೆಯಾಗಲಿಲ್ಲವೆಂದು ತಿಳಿಯಬರುತಿದೆ. ಈ ಸಲ ಮದರಾಸ್ ಯೂನಿವರ್ಸಿಟಿಗೆ ಬಹಳ ಪ್ರತಿಷ್ಠೆ ಯುಂಟಾದಂತಾಯಿತು. ಇತರ ಯೂನಿವರ್ಸಿಟಿಗಳಿಗಿಂತಮದರಾಸ್‌ಯೂನಿವರ್ಸಿಟಿ ಪರೀಕ್ಷೆಯಲ್ಲೇನೋ ವೈಚಾತ್ಯವಿರುವಂತೆ ಕಾಣುತಿದೆ.

Females to the front.—ಸ್ಕಾಟ್‌ಲ್ಯಾಂಡ್‌ನಲ್ಲಿರುವ ನಾಲ್ಕು ಯೂನಿವರ್ಸಿಟಿಯವರು ಪುರುಷರಂತೆ ಸ್ತ್ರೀಯರು ಸಹ ಅದೇ ಷರತುಗಳಿಗೊಳಪಟ್ಟ ಯೂನಿವರ್ಸಿಟಿ ಪರೀಕ್ಷೆಗಳಂಕೊಟ್ಟು ಡಿಗ್ರಿಗಳು, ಇನಾಂಗಳು, ಅಲ್ಯಾಬ್‌ಗಳು ಮೊದಲಾದವು ಪಡೆಯಬಹುದೆಂದು ತೀರ್ಮಾನಿಸಿರುವಂತೆ ತಿಳಿಯಬರುತಿದೆ. ಲಂಡನ್ ಯೂನಿವರ್ಸಿಟಿಯ ಬಿ. ಎ. ವಗೈರೆ ಪರೀಕ್ಷೆಗಳಲ್ಲಿ ಅನೇಕಮಂದಿ ಸ್ತ್ರೀಯರು ಫ್ರೆಂಚ್, ಜೆರ್ಮನ್ ಮೊದಲಾದ ಭಾಷೆಗಳಲ್ಲಿ ತೃಪ್ತಿಕರವಾಗಿ ಮೊದಲನೇ ತರಗತಿಯೊಳು ತೇರ್ಗಡೆಯಾದರು.

Government scholarship.— ಇಂಗ್ಲಾಂಡಿಗೆ ಹೋಗಿ ವಿದ್ಯಾಭ್ಯಾಸ ಮಾಡತಕ್ಕವರಿಗೆ ಸರ್ಕಾರದವರು ಕೊಡುವ ವಿದ್ಯಾರ್ಥಿ ವೇತನಗಳ ಪೈಕಿ ಒಂದನ್ನು ಮದರಾಸ್ ಯೂನಿವರ್ಸಿಟಿಯವರ ಯುಕ್ತಿ ದಾರಿಗೊಪ್ಪಿಸಿರುತ್ತಾರೆ. ಯೂನಿವರ್ಸಿಟಿ ಅಧಿಕಾರಿಗಳು ಪ್ರತಿವರ್ಷದಲ್ಲಿ ನಡೆಯುವ ಪರೀಕ್ಷೆಯ ಫಲಿತಾಂಶದಮೇಲೆ ವಿದ್ಯಾರ್ಥಿವೇತನವು ಲಾಯಖ್ ಇರುವರಿಗೆ ಕೊಡುವರು; ಸದರೀ ಪರೀಕ್ಷೆಗೆ ಹೋಗತಕ್ಕ ಉಮೇದ್‌ವಾರರೆಲ್ಲರು ಬರುವ ತಿಂಗಳ ೧೫ನೇ ತಾರೀಖಿನೊಳಗಾಗಿ ಯೂನಿವರ್ಸಿಟಿ ರಿಜಿಸ್ಟ್ರಾರಿಗೆ ತಮ್ಮ ದರಖಾಸ್ತುಗಳನ್ನು ಕಳುಹಿಸತಕ್ಕದ್ದು.

Post Office Savings Banks.—ಇಂಡ್ಯಾ ದೇಶದ ಪೋಸ್ಟಾಫೀಸ್‌ಗಳಿಗೆ ಸಂಬಂಧಿಸಿದಂತೆ ಆರುವರೆ ಸಾವಿರ ಸೇವಿಂಗ್ಸ್ ಬ್ಯಾಂಕ್‌ಗಳು ಸ್ಥಾಪಿಸಲ್ಪಟ್ಟಿರುತಿವೆ. ಇವುಗಳಲ್ಲಿ ನಾಲ್ಕುಲಕ್ಷ ಎಂಟು ಸಾವಿರ ಮಂದಿಯ ಡಿಪಾಜಿಟರ್ ಲೆಕ್ಕಗಳು ತೆರೆಯಲ್ಪಟ್ಟಿರುತಿವೆ. ಇವರು ಮೂರುವರೆ ಕೋಟಿ ರೂಪಾಯಿಗಳು ನಗದ್ ಠೇವಣೀ ಇಟ್ಟಿರುತ್ತಾರೆ. ಗತ ಸಂವತ್ಸರದಲ್ಲಿ ಠೇವಣೀ ದಾರರಿಗೆ ಷುಮಾರ್ ಇಪ್ಪತ್ತೆರಡು ಲಕ್ಷ ರೂಪಾಯಿಗಳು ಬಟವಾಡೆ ಮಾಡಲ್ಪಟ್ಟಿರುತಿವೆ. ಸದರೀ ಲೆಕ್ಕಗಳ ಪೈಕಿ ಸುಮಾರ್ ಮುಪ್ಪಾಗದಲು ನೂರು ರೂಪಾಯಿಗೊಳಪಟ್ಟ ಮೊತ್ತದ್ದಾಗಿರುವಂತೆ ಸಾರ್ವಜನಿಕ ರಿಪೋರ್ಟಿನಿಂದ ತಿಳಿಯಲಾದೆವು.

Relief works in Hyderabad.— ಹೈದರಾಬಾದ್ ಸಂಸ್ಥಾನದ ಮಂತ್ರಿಯವರು ತಾಲ್ಲೂಕುದಾರರಿಗೆಲ್ಲ ತಮ್ಮ ತಮ್ಮ ಇಲಾಖಾ ಮಾರೀ ಫತ ರಿಲೀಫ್ ಕಾಮಗಾರಿಗಳಂ ಮಾಡಿಸಿ ಅವುಗಳಲ್ಲಿ ಕಷ್ಟಪಟ್ಟು ಕೆಲಸ ಮಾಡಲಿಕ್ಕೆ ಶಕ್ತಿ ಸಾಲದಿರತಕ್ಕವರನ್ನೇ ಹುಡುಕಿ ದಾಖಲ್ಮಾಡಿಕೊಳ್ಳಬೇಕೆಂದು ಹುಕುಂ ಮಾಡಿರುತ್ತಾರೆ. ರೆತ್ನಾ ಅವರಲ್ಲಿ ಅನ್ನ ಸಾಲಿಗಳನ್ನಿಡಿಸಬೇಕಾದಷ್ಟರ ಆವಶ್ಯಕತೆ ಇರುವಂತೆ ಮಂತ್ರಿಯವರು ಭಾವಿಸುವದಿಲ್ಲವು. ಪರಂತು ಕೇವಲ ಅನಾಥರಾಗಿ ಕೆಲಸ ದೊರೆಯದೆ ಜೀವನಾರ್ಥ ಶ್ರಮ ಪಡುತಲಿರುವವರಿಗೆ ಸರ್ಕಾರ್ ಖರ್ಚಿನಲ್ಲಿ ಅನ್ನ ಹಾಕಿಸಲಿಕ್ಕೆ ತಾಲ್ಲೂಕ್ ದಾರರಿಗೆಲ್ಲ ಅಧಿಕಾರ ಕೊಡಲ್ಪಟ್ಟಿರುತಿದೆ. ದಿಸ್ಟ್ರಿಕ್ಟ್ ಜಾತಿನಲ್ಲಿ ಹೊಸದಾಗಿ ಭಾವಿಗಳು ತೆಗೆಸುವಬಗ್ಗೆ ಭಾರೀ ಮೊಬಲಗು ನಿಜಾಂ ಸರ್ಕಾರದಿಂದ ಮಂಜೂರಾಗಿ ರಿಲೀಫ್ ಕಾಮಗಾರಿಗಳಿಗೆ ಪ್ರಾರಂಭಿಸಲ್ಪಟ್ಟಿರುವಂತೆ ತಿಳಿಯಬರುತಿದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕಜಾತಿವೃತ್ತಾಂತಗಳು.

Two orang outangs.—ಮೈಸೂರಲ್ಲಿರುವ ಮೃಗ ಪಕ್ಷಿಗಳ ಶಾಲೆಯಲ್ಲಿರುವಬಗ್ಗೆ ಯೆರಡು ವಾನರ ವಿಶೇಷವನ್ನು ಶ್ರೀಮನ್ ಮಹಾರಾಜರವರು ಮದರಾಸಿನಿಂದ ತರಿಸಿರುತ್ತಾರೆಂದು ಕೇಳುತ್ತೇವೆ.

Re opening of Courts.—ಬಿಸಿಲು ಕಾಲಕ್ಕೆ ಪೂರ್ವಾಂಗವಾಗಿ ಈ ಜಿಲ್ಲೆಯ ಸಿವಿಲ್ ಕೋರ್ಟುಗಳಿಗೆ ಕೊಡಲ್ಪಟ್ಟಿದ್ದ ರಜಾ ಬರುವ ಬುಧವಾರದೊಡನೆ ಪೂರೈಸುವದರಿಂದ, ಅವುಗಳೆಲ್ಲವು ಬರುವ ತಿಂಗಳ ೪ ನೇ ತಾರೀಖ್ ಶುಕ್ರವಾರದಿನ ಮರಳಿ ತೆಗೆಯಲ್ಪಡುವವು.

H. H. the Maharajah.—ಶ್ರೀಮನ್ ಮಹಾರಾಜರವರು ತಮ್ಮ ಪುತ್ರಿಕಳತ್ರ ಬಾಂಧವರೊಡನೆ ನಾಳೆಯದಿನ ೧೨ ಘಂಟೆ ೪೦ ನಿಮಿಷಗಳಿಗೆ ಸ್ಪೆಷಿಯಲ್ ಟ್ರೇನಿನಲ್ಲಿ ಮೈಸೂರಿಗೆದಯಮಾಡುವರು. ಆಕಾಲದಲ್ಲಿ ಪೂರ್ವದ ಪದ್ಧತಿ ಪ್ರಕಾರ ಸಕಲ ಯೇರ್ಪಾಡುಗಳೂ ಮಾಡಲ್ಪಡುವವು.

A further grant.—ತುಮಕೂರ್ ಡಿಸ್ಟ್ರಿಕ್ಟಿನಲ್ಲಿ ನೀರಾವರಿ ಕೆಲಸಗಳ ಬಗ್ಗೆ ಮೈಸೂರ್ ಗವರ್ನಮೆಂಟಿನವರು ಮೊದಲು ಮಂಜೂರ್ ಮಾಡಿರುವುದಲ್ಲದೆ ಇನ್ನೂ ಜಾಸ್ತಿಯಾಗಿ ೧೫,೦೦೦ ರೂಪಾಯಿಗಳು ಕೊಟ್ಟಿರುತ್ತಾರೆ. ಇದುವರಿವಿಗೆ ಒಟ್ಟು ೫೫,೦೦೦ ರೂಪಾಯಿಗಳು ಸಾಂಗ್ಸನ್ ಮಾಡಿರುತ್ತಾರಲ್ಲದೆ, ತೆಗೆಯಲ್ಪಟ್ಟ ಭಾವಿಗಳನ್ನು ಅಜಮಾಯಿಷೀ ಮಾಡುವದಕ್ಕಾಗಿ ಮೂವರು ಓವರ್‌ಸಿಯರ್‌ಗಳನ್ನು ಮೊಕರರ್ ಮಾಡಿರುತ್ತಾರೆ.

H. H. The Maharani and family.— ಶ್ರೀಮನ್ ಮಹಾರಾಣಿಯವರು ತಮ್ಮ ಮಕ್ಕಳೊಡನೆ ಗತ ಶುಕ್ರವಾರದದಿನ ಬೆಳಗ್ಗೆ ಗವೀಪುರಕ್ಕೆ ದಯಮಾಡಿ ಗವಿ ಗಂಗಾಧರೇಶ್ವರ ಸ್ವಾಮಿಯನ್ನು ದರ್ಶನ ಮಾಡಿಕೊಂಡು ಅರಮನೆಗೆ ದಯಮಾಡಿದರು. ಇದಕ್ಕಾಗಿ ಗವೀಪುರದ ರಸ್ತೆಯು ಸಾಧ್ಯವಾದಮಟ್ಟಿಗೆ ಗುಡಿಸಿ ನೀರು ಚೆಲ್ಲಿ ಸಾಫ್ ಮಾಡಲ್ಪಟ್ಟಿತಲ್ಲದೆ ದೇವಸ್ಥಾನದಲ್ಲಿ ಸಹ ಮಹಾರಾಣಿಯವರಿಗೆ ದೇವರ ದರ್ಶನಕ್ಕೆ ಬೇಕಾದ ಯೇರ್ಪಾಡುಗಳೆಲ್ಲವು ಮಾಡಲ್ಪಟ್ಟಿದ್ದವು.

A new Agraharam.—ಮೈಸೂರಿನವರಿನೊಳು ರಮಾವಿಲಾಸಕ್ಕೆ ಸೇರಿದ ಹಾಗೆಯೇ ೧೮ ಮನೆಗಳುಳ್ಳ ಶ್ರೀತಾ ವಿಲಾಸ ಅಗ್ರಹಾರವನ್ನು ಕಟ್ಟಿಸುವಂತೆ ಆಜ್ಞೆ ಮಾಡಿ ಕಾಮಗಾರಿಯು ಅರ್ಧ ಮಟ್ಟಿಗೆ ಆಗಿದೆ. ಆ ಮನೆಯ ಕಂಟ್ರಾಕ್ಟ್ ನೆ ಸುಬ್ರಯರವರೂ ಮರಮತ್ತು ಬಕ್ಷಿ ಚಿಕ್ಕಲಿಂಗಪ್ಪಾಜಿಯವರೂ ಬಹಳ ಮುತುವರ್ಜಿಯಿಂದ ಕೆಲಸ ನೋಡುತ ಬಹಳ ವಿಚಕ್ಷಣೆಯಿಂದ ಕೆಲಸ ಜರುಗಿಸುತ್ತಾರೆ. ಒಂದೊಂದು ಮನೆಗೆ ಸಹಸ್ರ ರೂಪಾಯಿಗಳಿಗಿಂತಲೂ ಕಡಮೆಯಾಗಿ ಅಂದಾಜಾಗುವದಿಲ್ಲ. ಇದುವರಿಗೂ ಲೇಟ ಮಹಾರಾಜರು ಕಟ್ಟಿಸಿರುವ ಹಿಂದು ಅಗ್ರಹಾರವಾದರೂ ಇದಕ್ಕೆ ಸಮಾನವಾಗಿ ಆಗುವದಿಲ್ಲ. ದಾನವನ್ನು ಸ್ವೀಕಾರ ಮಾಡತಕ್ಕ ಬ್ರಾಹ್ಮಣರ ಸುಕೃತವೇ ಸುಕೃತ. ಪಡಿನಾಲ್ಕು ಮನೆಯು ಒಂದೇ ವಿಧವಾಗಿದೆ. ಯಾವ ಭಾಗದಲ್ಲಿಯೂ ಹೆಚ್ಚು ಕಡಮೆ ಇಲ್ಲ ವೈದೆ.

Application for a special grant.—ಪ್ರಕೃತ ಕಾಲಸ್ಥಿತಿಯನ್ನಾಲೋಚಿಸಿ ಈ ಪೂರಲ್ಲಿರುವ ಲಂಗರಖಾನೆಯ ಖರ್ಚಿಗೆ ಈಗ ಮಂಜೂರಾಗಿರುವಮೊಬಲಗು ಸಾಲದೆ ಇರುವದರಿಂದ ಜಾಸ್ತೀಯಾಗಿ ಒಂದು ಸಾವಿರ ರೂಪಾಯಿಗಳು ಬಿಟ್ಟು ಹುಟ್ಟುವಳಿಯಲ್ಲಿ ಕೊಡಿಸಬೇಕೆಂದು ಹಜರ್ ಮ್ಯುನಿಸಿಪಲ್ ಕಮ್ಮಿಟೀ ಪ್ರೆಸಿಡೆಂಟರವರು ಮಾಹೇನುಜಕೂರಿ ೯ನೇ ಮಾರ್ಚಿ, ೧೮೬೧ ನೇ ನುಬರ್ ಲೆಟರ್ ಮೂಲಕ ಗವರ್ನಮೆಂಟಿನವರನ್ನು ಕೇಳಿಕೊಂಡಿದ್ದದಕ್ಕೆ, ಅವರು ಅಪೇಕ್ಷಿಸಿದ ೧,೦೦೦ ರೂಪಾಯಿಗಳನ್ನು ಜನರಲ್ ರೆವಿನ್ಯೂವಿನಿಂದ ಬಳಸಿಕೊಳ್ಳಬಹುದೆಂತಲೂ ಮರುತು ಲಂಗರ್ ಖಾನೆಗೆ, ಸ್ವತಃ ಜೀವಿಸಲಿಕ್ಕೆ ಅಶಕ್ತರೆಂದು ತೋರುವ ಅನಾಥರು ಮಾತ್ರ ಖಂಡಿತವಾಗಿ ದಾಖಲ್ಮಾಡಿಕೊಂಡು ಅಂತವರಿಗೆ ಜೀವನ ನಡೆಸತಕ್ಕದ್ದೆಂತಲೂ ಇದೇ ತಿಂಗಳ ೧೬ನೇ ತಾರೀಖಿನಲ್ಲಿ ಹುಕುಂಮಾಡಿರುತ್ತಾರೆ.

The weather.—ಸರ್ವತ್ರ ನೀರಸವಾಗಿರುವ ಈಗಿನ ಕಾಲಸ್ಥಿತಿಯೂ ಧೂಳಿನೊಡನೆ ಕೂಡಿ ಅತಿಶೋಷಕವಾಗಿರುವ ಘೋಳಿಯೂ ಪ್ರಾಣಿಗಳಿಗೆ ಯೆಷ್ಟುಮಾತ್ರವೂ ಸುಖಕರವಲ್ಲದೆ ಇದೆ. ಕಾರಂಜಿ ಕೆರೆಗಳ ಕೇವಲ ಕೃಷಿಪ್ರೂರ್ವಕ [illegible] ನೀರು ಸಹ ಕಡಮೆಯಾಗುತ ಬರುವದರಿಂದ ಕಾರಂಜಿಗಳೇ ಜೀವನಾಧಾರಗಳಾಗಿರುವ ಈ ಪೂರಿನ ಅನೇಕ ಪ್ರದೇಶಗಳಲ್ಲಿ ಜನಗಳಿಗೆ ನೀರಿನ ದುರ್ಭಿಕ್ಷವು ಈಗಲೇ ಪ್ರಾರಂಭವಿಸಿದ ಕೆ ಕಾಣುತಿದೆ. ಈ ಸಲದ ಬೇಸಿಗೆ ಹ್ಯಾಗೆ ಕಳೆಯುವುದೋ ಎಂಬ ಸಂದೇಹದಿಂದ ಭಯವೂ ಉಂಟಾಗಿದೆ. ಭಾವಿಗಳಲ್ಲಿ ನೀರು ಬಹಳ ರಗ್ಗ ಹೋಯಿತು. ಕೆಲವು ಮನೆಗಳ ಭಾವಿಗಳಲ್ಲಿ ನೀರು ಸುತರಾಂ ಬತ್ತುತಬುತು. ಪದಾರ್ಥಗಳ ತುಟ್ಟಿಯಂತೂ ಬಡವರಿಗೆ ಬಹಳ ಅಸಾಧ್ಯವಾಗಿದೆ. ತಾಲ್ಲೂಕ್ ಜಾಗಗಳಲ್ಲಿ ಸೋಪ್ಸಾಪ್ತ ಗ್ರಾಮ ಬಾಧ್ಯಸ್ಥವಾಗಿ ಧನಗಳಿಗೆ ಹುಲ್ಲು ನೀರಿಲ್ಲದೆ ಅವು ಕೇವಲ ಶೋಚನೀಯವಾದ ಸ್ಥಿತಿಯಲ್ಲಿ ರುವಂತೆ ತಿಳಿಯಬರುತಿದೆ. ಗವರ್ನಮೆಂಟಿನವರು ನೀರಾವರಿ ಕಾಮಗಾರಿಗಳನ್ನು ಅಲ್ಲಿಯಲ್ಲಿ ಮಾಡಿಸುತ ಧಾರಾಳವಾಗಿ ದ್ರವ್ಯಸಹಾಯ ಮಾಡುವದರಲ್ಲಿ ಹಿಂದೆಗೆಯಲಿಲ್ಲವು. ನಿಯೋಗಿಯವರು ಮೊದಲಾದವರಿಗೆ ಜೀವನಾಧಾರವು ಕಲ್ಪಿಸಿ ಅವರಿಗೆ ಸಹಾಯ ಮಾಡುವಬಗ್ಗೆ ಡಿಸ್ಟ್ರಿಕ್ಟ್ ನೆಟ್ವೇಟಿವ್ ಕಮ್ಮಿಟಿಯವರಗಳ ಸಿಫಾರಸ್ಸಿನ ಮೇಲೆ, ದ್ರವ್ಯ ಸಹಾಯ ಮಾಡುತಲಿದ್ದಾರೆ. ಬೆಂಗಳೂರು ಡಿಸ್ಟ್ರಿಕ್ಟ್ ನೆಟ್ವೇಟಿ ಕಮ್ಮಿಟಿಯವರವರು ಬರೆದ ರಿಪೋರ್ಟಿನಮೇಲೆ ಆನೇಕಲ್ ತಾಲ್ಲೂಕಿನಲ್ಲಿರುವ ನಿಯೋಗಿಯವರ ಸಹಾಯಾರ್ಥ ೧೯,೦೦೦ ರೂಪಾಯಿಗಳನ್ನು ನೆಟ್ವೇಟಿ ಕಮ್ಮಿಟಿಯವರ ಸ್ವಾಧೀನದಲ್ಲಿ ಕಾಯುವಾಗಿಟ್ಟಿದಾರೆ. ಅವರು ಸದರೀ ನಿಯೋಗಿಯವರಿಂದ ಜವಳಿಗಳನ್ನು ನ್ಯಾಯವಾದ ಬೆಲೆಗಿದೆ ತೆಗೆದುಕೊಂಡು ಅದು ದಳ್ಳಾಳಿಗಳ ಮಾರಿಕೆಗೆ ಮಾಡುತ್ತಾರೆ. ನಿಯೋಗಿಯವರಿಗೂ ಗಿರಾಕಿಯನ್ನೊದಗಿಸಿ ಅವರ ಮನಸ್ಸಿಗೆ ತಕ್ಕಂತೆ ಕೂಡಲೇ ರೂಪಂ ದೊರೆಯುವಂತೆ ಮಾಡಬೇಕೆಂಬದೇ ಗವರ್ನಮೆಂಟಿನವರ ಮುಖ್ಯೋದ್ದೇಶವಾಗಿರುತಿದೆ. ಹೀಗೆಯೇ ಚಿತ್ರದುರ್ಗ ಡಿಸ್ಟ್ರಿಕ್ಟ್ ಮೊಳಕಾಲ್ಮುರು ತಾಲ್ಲೂಕಿನಲ್ಲಿರುವ ನಿಯೋಗಿಯವರ ಸಹಾಯಕ್ಕೆ ಬಗ್ಗೆ ೧೦,೦೦೦ ರೂಪಾಯಿಗಳು ಮಂಜೂರ್ಮಾಡಲ್ಪಟ್ಟಿರುತ್ತೆ. ಈಗ ಬಾಧ್ಯಸ್ಥವಾಗಿರುವ ದುರ್ಭಿಕ್ಷವು ಈ ದೇಶದಲ್ಲಿ ಮಾತ್ರವಲ್ಲದೆ ಹೈದರಾಬಾದ್ ವಗೈರೆ ಪ್ರಾಂತಗಳಲ್ಲಿ ಸಹ ವ್ಯಾಪಿಸಿದೆ. ಆಯಾ ಗವರ್ನಮೆಂಟಿನವರು ಅಲ್ಲಿಯಲ್ಲಿ ಸಾಧ್ಯಗಳಾದ ಯೋಚನೆಗಳು ಮಾಡುತಲಿದ್ದಾರೆ. ಗವರ್ನಮೆಂಟಿನವರೊಡನೆ ಧನಿಕರಾದವರು ಸಹ ಅನೇಕರು ಭೂತದಯಾನುರಾಗದಿಂದ ಧನಸಹಾಯ ಮಾಡುತಲಿದ್ದಾರೆ. ಈ ದೇಶದಲ್ಲಿ ಮಾತ್ರ ಅಂತಾ ಪ್ರವೃತ್ತಿಯು ಬಹಳ ದುರ್ಲಭವಾಗಿರುವುದಕ್ಕೆ ಜನರ ಸ್ವಭಾವವೇ ಕಾರಣವೆಂದು ಭಾವಿಸಬೇಕಾಗಿದೆ.

SUMMARY OF NEWS.
ವೃತ್ತಾಂತ ಸಂಗ್ರಹವು.

ಚೀನಾ ದೇಶದಲ್ಲಿ ಎರಡು ತಲೆಯುಳ್ಳ ಒಬ್ಬ ಮನುಷ್ಯನು ಎರಡು ಸುಸ್ವರವಾದ ಗಾನದಿಂದ ಆಶ್ಚರ್ಯಕರವಾದ ಧನವನ್ನು ಸಂಪಾದಿಸುತ್ತಲಿದ್ದಾನೆ. ಅತನು ಒಂದು ಮುಖದಿಂದ ಸ್ತುತಿಯನ್ನು ಹಿತವು ಎರಡನೆಯದರ ಪಾಡುತ್ತಾನಂತೆ.

ತಿಪ್ಪರ, ನೂಕಲ್ಲು ಹಾಗು ಬಿಟಿಸಾಂಗ್ ಡಿಸ್ಟ್ರಿಕ್ಟುಗಳು ಇದುವರೆಗೂ ಬಂಗಾಳಿಗೆ ಸೇರಿದ್ದವು. ಈಗ ಅವುಗಳನ್ನು ಬಿರುಮರಿಗೆ ಸೇರಿಸಬೇಕೆಂದು ಅಭಿಪ್ರಾಯ ಪಡುವರೆಂದು ತಿಳಿಯಬರುತಿದೆ.

ಮಾರ್ಚಿ ತಿಂಗಳ ಮೊದಲನೇ ತಾರೀಖಿನಿಂದ ಸಮುದ್ರ ತೀರಗಳಲ್ಲಿರುವ ಪಟ್ಟಣಗಳಲ್ಲಿ ರಾತ್ರಿವೇಳೆ ಒಂದು ಹೊಸತನವಾದ ದೀಪವನ್ನು ಹಚ್ಚುವರು. ಇದರ ಸಹಾಯದಿಂದ ಹಡಗುಗಳು ಬರುವದೂ ಹೋಗುವದೂ ಕಾಣುವವು. ಇದರಿಂದ ಹಡಗುಗಳನ್ನು ನಡಿಸಲು ಬಹು ಅನುಕೂಲವಾಗುವದು.

ಚಿತ್ರ ಕಲೆಯಲ್ಲಿ ಪ್ರಸಿದ್ಧಿಯನ್ನು ಹೊಂದಿರುವ ಮಿಸೆಸ್ ಬಟ್ಲರ್ ಎಂಬಾಕೆಯು ಛೇಗಾರ್ಜಿಯವರ ಭಾವ ಚಿತ್ರವನ್ನು ಬರೆಯುವುದಕ್ಕೆ ಒಪ್ಪಿಕೊಂಡಿರುವಳಾಗಿ ಕೇಳುತ್ತೇವೆ. ಈ ಕೆಲಸಕ್ಕಾಗಿ ಮಹಾರಾಣಿ ಗಿಡ್ಡವರ ಚಿತ್ರವನ್ನು ಬರೆಯುವದಕ್ಕೆ ಆಕೆಯು ಮರಿಯಾನೆಗೆ ಹಿಂದ ಕೇಳಿ ತಿಳಿಯಬರುತಿದೆ.

ದಕ್ಷಿಣ ಅಮೆರಿಕದ್ದೂ—ಬಿರ್ಗಾನ್ನಲ್ಲಿ ಇರುತ್ತಿದ್ದ ಒಂದು ಕುಟುಂಬದವರು ಬೇಲಿಯಿಂದ ಹೊರ ಬರಬೇಕೆಂದು ಹೊರಟು ಹೋದರು. ಅಲ್ಲಿ ಆಡುವಾಗ ಪಾಠಬಲ್ಲವ ಒಂದು ಚಿಕ್ಕು ಚಿಪ್ಪಿ ಕೆಲವು ಎಲ್ಲರೋ ಹೋಗಿದ್ದ ಅದು ಸುಮಾರು ಕತ ಕೆಲಸಕ್ಕೆ ೬ ಲಕ್ಷ ಜನ ಸಂಖ್ಯೆಯುಳ್ಳ ಪಟ್ಟಣವಾಗಿರುವ ತನ್ನ ಒಡೆಯನನ್ನು ಕಂಡುಕೊಂಡಿತು!

ಕಳೆದ ತಿಂಗಳ ೧೬ ನೇ ತಾರೀಖಿನ ದಿವಸದ ಪ್ರಿನ್ಸ್ ಆಫ್ ವೇಲ್ಸ್ ವಿಕ್ಟೋರಿಯರ ಮುದ್ದಾದ ಮಗಳು ಇನ್ನೂ ತಿಳಿಯಬರುವುದು. ಆ ಸುದಿನ ಪರ್ವದಂದ ಪತ್ರಿಕಾ ಕರ್ತರಲ್ಲಿ ಪ್ರಿನ್ಸ್‌ರವರ ವಿಷಯವಾಗಿ ಏನು ಬರೆಯುವರೋ ಅದನ್ನೆಲ್ಲಾ ಒಂದು ಬುಕ್ಕಿನ ರೂಪದಲ್ಲಿ ಮುದ್ರಿಸ ಬೇಕೆಂದು ಪ್ರಿನ್ಸ್ ಆಫ್ ವೇಲ್ಸ್‌ರವರು ಅಭಿಪ್ರಾಯ ಪಡುತ್ತಾರೆಂದು ಬಿಬಿಯಾನೊಂದು ಪತ್ರಿಕೆಯು ತಿಳಿಸುತಿದೆ.

ಮಗ್ಲೀ ಪಟ್ಟಣದಲ್ಲಿರ್ಗ ಬಡವನು ಕ್ಷೌರವನ್ನು ಮಾಡಿಕೊಳ್ಳಲಕ್ಕಾಗಿ ಒಬ್ಬನೊಂದು ಅಂಗಡಿಯಲ್ಲಿ ಸ್ವಲ್ಪ ಚಿಕ್ಕಿ ನವ್ವು ಬೆಳೆಯುನ್ನು ಕದ್ದದಕ್ಕೆ ಅಲ್ಲಿನ ಮಾಜಿಸ್ಟ್ರೇಟರಾದ ಪಾಜಿ ಟ್ರೇಟರು ಅವನಿಗೆ ಒಂದು ವರ್ಷದ ಕಠಿಣ ಶಿಕ್ಷೆ ಯನ್ನು ವಿಧಿಸಿದರು. ಅಲ್ಲಿ "ಇನ್ನು ೩೦ ವರ್ಷಗಳ ತನಕ ದಯವಿಟ್ಟಿಲ್ಲದಿರುವಂತೆ ಅಪ್ಪಣೆ ಕೊಡಬೇಕೆಂದು" ಅವನಾಥಿಯ ನ್ಯಾಯಾಧಿಪರು ಬೇಡಿಕೊಂಡನಂತೆ.

ಒಡನೆಯಾ ಬಾವ್ ಪಟ್ಟಣದಿಂದ ಒಬ್ಬ ಬಟ್ಟೆ ಮಾರ್ಕಿಯು ಕ್ಯಾರು ಪಟ್ಟಣಕ್ಕೆ ವರ್ಷ ೨೩ ಒಡನೆಯಾ ಪೂರಿಗ ಅಲ್ಲಿನ ಜನಗಳನ್ನೆಲ್ಲ ದೇವಸ್ಥಾನದಲ್ಲಿ ಸೇರಿಸಿ ಉಪನ್ಯಾಸವನ್ನು ಮಾಡುತ್ತಿದ್ದನು. ಆ ದಿವಸ ಅಲ್ಲಿನ ಜನಗಳು ಏಳಳ ಉಪನ್ಯಾಸವಿರಿಸಿದ್ದರು. ಅವನೇಳಿಗೆ ಆ ಪಟ್ಟಿಯು ಆಕ್ರಮಣಕ್ಕೆ ಹೋಗಲು ಹೆಚ್ಚು ನಂಬಿದರುವಾಗ ಸುಮಾರು ೨೦ ಕಾಗೆಗಳು ಬಂದು ಅವನನ್ನಲ್ಲ ೪೦—೫೦ ಬೆಕ್ಕುಗಳನ್ನು ತಲ ಎಳೆದು ಹೊತ್ತು ಕೊಂಡು ಹೊರಟುಹೋದವು. ಆದ್ದರಿಂದ ಆ ದಿವಸ ಉಪನ್ಯಾಸವನ್ನು ನಿಲ್ಲಿಸಿದನೆಂದು ತಿಳಿಯಬರುತಿದೆ.

ಯೂರೋಪಿನ ಖಂಡದಲ್ಲಿರುವ ದಪ್ಪ ದೇಶದಲ್ಲಿ ಕ್ಷಾಮದ ಸ್ಥಿತಿಯು ಬಹಳ ಹೆಚ್ಚಾಗಿದೆ. ಜಿಯರ್ಭಾಗದಲ್ಲಿ ಅನೇಕ ಜನರು ಚಳಿಗೆ ಸಿಕ್ಕಿದ್ದಾರೆ. ಮತ್ತೊಂದು ಜಾಗದಲ್ಲಿ ಆ ಹೆಂಗಸರು ಕ್ಷೌರವನ್ನು ತಾಳಲಾರದೆ ಆತ್ಮಹತ್ಯವನ್ನು ಮಾಡಿಕೊಳ್ಳುತಲಿದ್ದಾರೆ. ಅನೇಕರು ಕ್ಷಾಮಕ್ಕೆ ಪ್ರಾಪ್ತರಾಗಿರುವುದರಿಂದ ಕಲೆಯಲ್ಲಿ ನಿಲ್ಲ ಬೇಕಾಗಿರುವುದು. ಇದನ್ನಲ್ಲ ಕೇಳಿ ಸಾಮಾಜಿಕರ ಅನೇಕ ಧರ್ಮಾತ್ಮರು ಲಕ್ಷಾಂತರ ರೂಪಾಯಿಗಳನ್ನು ಕೊಟ್ಟರು. ಆ ದಿನಗಳಲ್ಲಿ ಹೆಂಗಸರು ಅಭಿಮಾನದಿಂದ ೨,೦೦,೦೦೦ ರೂಪಾಯಿಗಳನ್ನು ಕೊಟ್ಟರೆಂದು ಕೇಳಿ ಸಂತೋಷಿಸುತ್ತೇವೆ.

ಕಲ್ಕತ್ತಾ ಯೂನಿವರ್ಸಿಟಿ ಎಫ್. ಎ. ಪರೀಕ್ಷೆಯಲ್ಲಿ ಸಂಸ್ಕೃತವನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಂಡಿರುವ ವಿದ್ಯಾರ್ಥಿಗಳು ವೇದಾಂತ ಶಾಸ್ತ್ರದಲ್ಲಿಯೂ ಉತ್ತರವನ್ನು ಕೊಡಬೇಕೆಂಬ ನಿಯಮವನ್ನು ಈಗ ಇಲ್ಲವೆಂದು ಇದಕ್ಕೆ ಕೆಲವರು ಆಕ್ಷೇಪಣೆ ಮಾಡಿದರು. ೧೮೯೬ ನೇ ಇಸವಿಯಿಂದ ವೇದಾಂತಶಾಸ್ತ್ರದಲ್ಲೇ ಪರಿಪೂರ್ಣವಾದ ನಿಯಮವು ಪಡೆಯುವರೆಂದು ತಿಳಿಯಬರುತಿದೆ.

ಪ್ರೊಫೆಸರ್ ವ್ಯಾಟ್ ಯುವರು ಈಗ ಕಲ್ಕತ್ತಾ ಪಟ್ಟಣದಲ್ಲಿರುವದರಿಂದ ಅಲ್ಲಿನ ದೇಶವನ್ನೆಲ್ಲಾ ಅಕಾರ ಪರ್ಯಟನ ದಲ್ಲಿ ಸಂಚರಿಸುವಾಗಿ ನೋಡಬೇಕೆಂದು ಪ್ರಯತ್ನಪಡುತಲಿದ್ದಾರೆಂತಲೂ, ಇವರು ಸಂಚಾರಕ್ಕೆ ಹೋಗುವಾಗ ತಮ್ಮ ಸಂಗತಿ ಜನಸ್ಥರನ್ನು ಕರೆದುಕೊಂಡು ವರ್ಷದಿನಗಳ ೧೬ ನೇ ತಾರೀಖಿನೊಳಗಾಗಿ ಹೊರಡುವರೆಂತಲೂ ತಿಳಿಯಬರುತಿದೆ.

NOTICE

T. SAMMI'S WONDERFUL MEDICINES.

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ನೇಹಿತರಲ್ಲಿರುವ ನನ್ನ ಔಷಧಗಳನ್ನು ನೇರ ಪಡೆಯಲಿಚ್ಛಿಸುವವರು ಸಂಗತಿಯನ್ನು ಸಕಲರಿಗೂ ತಿಳಿಯಪಡಿಸುವರೆ ನನ್ನನ್ನು ಪ್ರಾರ್ಥಿಸಿದ್ದರಮೇಲೆ ಅವರ ಕೋರಿಕೆಯಂತೆ ಮೇಲಿರುವ ಸಂಗತಿಯನ್ನು ಆದ್ದರಿಂದ ಜನರಿಗೂ ಇದರಿಂದ ತಿಳಿಯಪಡಿಸಿ ಇದರ ಔಷದಗಳ ತಲ್ಪದೆ ಗುಣ ನನ್ನ ಒಡುವಾದುವನೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿಂದೂ ತೈಲವು.—ನಗೆಯ ಶೂಲೆ, ಎದೆನೋವು, ಶಿರಶ್ಶೂಲೆ, ಪಕ್ಷವಾತ, ತಲೆನೋವು, ಸೊಂಟ ಶೂಲೆ, ಕೀಲು ಶೂಲೆಗಳು, ತಲೆಸುತ್ತು, ತುರಿ, ಕುರುಗಳು, ವ್ರಣಗಳು, ಗಾಯ ಇವುಗಳನ್ನು ನಿವೃತ್ತಿ ಮಾಡುವದು ಕ್ರಯ ೦ ೧—೦ ೧ ೧—೦.

ಹಿಂದೂ ಶರಬತ್ತು.—ವಾಂತಿ ಭೇದಿ, ಆಮಶಂಕೆ, ಗ್ರಹಣಿ, ಭೇದಿ, ಹೊಟ್ಟೆನೋವು, ಅಗ್ನಿಮಾಂದ್ಯ, ತಲೆನೋವು, ಜ್ವರ, ಶೀತ, ಹಲ್ಲುನೋವು, ಗಂಟಲು ವ್ರಣ, ರಕ್ತಬಹಿರ್ಗಮನ ಇವುಗಳಿಗೆ ಶ್ರೇಷ್ಠವಾದುದಾಗಿದೆ. ಕ್ರಯ ೦-೧—೦ ೦-೮—೦.

ಜ್ವರ ನಿವೃತ್ತಿ.—ಚಳಿಜ್ವರ, ಕಡಜ್ವರ, ಗಡ್ಡೆ, ಸನ್ನಿಪಾತ ಜ್ವರಗಳು, ಅಂತರ ಜ್ವರಗಳು, ಸಂತತ ಜ್ವರಗಳು, ಇವುಗಳಿಗೆ ಅತ್ಯುತ್ತಮವಾದುದು. ಕ್ರಯ ೦-೧—೦ ೦-೧೨—೦.

ರಕ್ತಶುದ್ಧಿಗೆ ಔಷಧವು.—ಕುಷ್ಠ, ಮೇಹರೋಗ, ಗುಲ್ಮ, ತುರಿ, ಚಿಪ್ಪುರೋಗ, ತಿಮಿರ ಇತ್ಯಾದಿ ರೋಗಗಳನ್ನು ಪರಿಹರಿಸುತ್ತದೆ. ಕ್ರಯ ೦-೧—೦.

ಕಣ್ಣಿಗೆ ಔಷಧವು.—ಕಣ್ಣುನೋವು, ಕಣ್ಣುಬೇನೆ, ನೀರು ಸೋರುವಿಕೆ, ಮಬ್ಬು, ಪೊರೆ, ಇತ್ಯಾದಿ ಕಣ್ಣಿನ ರೋಗಗಳಿಗೆ ಬಹಳ ಶ್ರೇಷ್ಠವು. ಕ್ರಯ ೦-೮—೦.

ಶ್ವೇತಕುಷ್ಠಕ್ಕೆ ಔಷಧವು.—ಜಾಡ್ಯ ಬಿಡಿಸುವ ಶುದ್ಧವಾದ ಸಕಲವಿಧ ಶ್ವೇತ ಬಾಧೆಗಳಿಗೆ ಶ್ರೇಷ್ಠವಾದದ್ದು ಕ್ರಯ ೧-೮—೦.

ಸೌಖ್ಯ ವರ್ಧಕ.—ಇದು, ದೌರ್ಬಲ್ಯದಿಂದುಂಟಾಗುವ ರೋಗಗಳನ್ನು, ಕಾಮ್ಬೇಲುವನ್ನು, ರೇತಸ್ಸು ಕ್ಷೀಣಿಸುವಿಕೆ, ಮುಂತಾದ ನಾನಾವಿಧವಾದ ರೋಗಗಳನ್ನು ನಿವಾರಿಸುವುದು. ಕ್ರಯ ೧-೦—೦.

ಅಭಿರತ್ನ ತೈಲ.—ಶಿರಿನೂಲು ಜಾಡ್ಯಗಳು ಕೇಶ ಸುರಿಯುವ ಜಾಡ್ಯ ದೂರವಾಗುವದು. ಕೇಶ ಕಪ್ಪಾಗಿ ಬೆಳೆದು, ಮಿದುವಾಗಿ ಶೋಭೆಯಾಗಿರುವುದು. ತಲೆ ಶೂಲೆ ಕಡಮೆಯಾಗುವದು. ಕ್ರಯ ೦-೧೦—೦.

ಚಕ್ಷು ಪುಷ್ಟಿ ತೈಲವು.—ಕಣ್ಣು ಮಂಜಾದ ದೃಷ್ಟಿಯುಳ್ಳವರು ಕಣ್ಣುಗಳಿಗೆ ಹಾಕಿಕೊಂಡರೆ ನೋಟ ಸ್ಪಷ್ಟವಾಗುವುದು. ಕಣ್ಣಿನ ಬೆಳಕು ಹೆಚ್ಚುವುದು. ಕ್ರಯ ೦-೧—೦.

ದಂತರೋಗನಿವಾರಣಿ.—ಹಲ್ಲುನೋವು, ಹಲ್ಲು ಅಲ್ಲಾಡುವಿಕೆ, ಒಸಡು ಊತ ಇವುಗಳನ್ನು ಪರಿಹರಿಸುವುದು. ಕ್ರಯ ೦-೨—೦.

ಸಿದ್ಧೌಷಧ.—ಇದು, ಪಿತ್ತಜ್ವರ, ವಾತಜ್ವರ, ಹೃದ್ರೋಗ, ಮುಂತಾದವುಗಳನ್ನು ಕಡಮೆ ಮಾಡುವುದು. ಇದನ್ನು ಉಪಯೋಗಿಸಿದರೆ ಶ್ವಾಸ ಸಂಬಂಧವಾದ ರೋಗಗಳು ಶಮನವಾಗುವುವು. ಕ್ರಯ ೦-೧—೦.

ಮೂಲವ್ಯಾಧಿಗೆ ಔಷಧವು.—ಇದು ಎಲ್ಲಾ ವಿಧವಾದ ಮೂಲವ್ಯಾಧಿಗಳನ್ನು ನಿವಾರಿಸುವುದು. ರಕ್ತಮೂಲವ್ಯಾಧಿಯನ್ನು ನಿವೃತ್ತಿ ಮಾಡುವುದು. ಇದು ಬಹಳ ಶೀಘ್ರವಾಗಿ ಗುಣಮಾಡುವುದು. ಕ್ರಯ ೦-೮—೦.

ಪಿತ್ತಶಮನ ತೈಲವು.—ಪಿತ್ತವನ್ನೂ, ತಲೆಸುತ್ತುವಿಕೆಯನ್ನೂ ಹೋಗಲಾಡಿಸಿ ಸರಿಯಾದ ಕಾಂತಿಯನ್ನು ಕೊಡುವುದು. ಕ್ರಯ ೦-೮—೦.

ಮೇಲೆ ಹೇಳಲ್ಪಟ್ಟ ಔಷಧಗಳಲ್ಲದೆ ಶ್ರೇಷ್ಠವಾದ ಅನೇಕ ಔಷಧಗಳು, ಮಾತ್ರೆಗಳು, ಲೇಹ್ಯಗಳು, ಭಸ್ಮಗಳು, ಚೂರ್ಣಗಳು ಮೊದಲಾದುವುಗಳು ನನ್ನಲ್ಲಿ ದೊರೆಯುತ್ತವೆ. ಅವುಗಳ ವಿವರಗಳನ್ನು ತಿಳಿಯಬೇಕಾದರೆ ಕಾಗದ ಬರೆಯಬೇಕು. ಅವುಗಳು ಸದರಿ ಕೆಳಗಿನ ವಿಳಾಸದಲ್ಲಿ ದೊರೆಯುವುವು.

ಔಷಧಗಳಿಗೆ ಹಣ ಮುಂಗಡವಾಗಿ ಕಳುಹಿಸಬೇಕು. ವಿ. ಪಿ. ಪಿ. ಮೂಲಕ ಕಳುಹಿಸಲ್ಪಡುವುವು. ಅಂಚೆ ಖರ್ಚು ಪ್ರತ್ಯೇಕವಾಗಿ ಕೊಡಬೇಕು. ಮದರಾಸ್, ಜಾರ್ಜ್ ಟೌನ್, ೧೨೮ ನೇ ನಂಬರ್ ಮನೆಯಲ್ಲಿರುವ ಟಿ. ಸಾಮಿ ಎಂಬ ನನ್ನ ವಿಳಾಸಕ್ಕೆ ಕಾಗದಗಳನ್ನು ಬರೆಯಬೇಕು. ಇದಲ್ಲದೆ ಬೆಂಗಳೂರಿನಲ್ಲಿಯೂ ಈ ಔಷಧಗಳು ದೊರೆಯುತ್ತವೆ. ಅಲ್ಲಿ ಕೊಳ್ಳಬೇಕಾದವರು ಕರ್ಣಾಟಕ ಪ್ರಕಾಶಿಕಾ ಮುದ್ರಾಕ್ಷರಶಾಲೆಯಲ್ಲಿ ವಿಚಾರಿಸಬಹುದು.

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು.

ಮದರಾಸ್ ಪ್ರೆಸಿಡೆನ್ಸೀ ಚಿತ್ತೂರು ಡಿಸ್ಟ್ರಿಕ್ಟ್ ಪುಂಗನೂರಲ್ಲಿ ಆರುಂಬಾಕಂ ರಂಗರಾಯರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ.

ಎನಗು ಅಪ್ಪರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ	ಕ್ರಯ ಪೋಸ್ಟೇಜ್ ಸಹ ರೂ ಆ. ಪೈ.
1	ಕೌಮುದೀವಿಲಾಸ (ಮೊದಲಿನಿಂದ ಪಂಚಸಂಧಿಗಳ ರಾಮಸ್ಸಿದ್ದ ವರಿಗು ಸಂಸ್ಕೃತ ವ್ಯಾಕರಣ ಸಿದ್ಧಾಂತಕೌಮುದಿಗೆ ಸುಲಭವಾದ ಅಂತ ಭಾಷಾಂತರ.	0 4 6
2	ಸದಾಶಿವನೀತಿ (ಕನ್ನಡ ಪದ್ಯಕಾವ್ಯ ನೀತಿಗ್ರಂಥವು)	0 2 6
3	ರತ್ನ ಪರೀಕ್ಷೆ (ಪ್ರತಿಪದಾರ್ಥ ಟೀಕಾ ಸಹಿತ ತೆಲುಗು ಪದ್ಯಕಾವ್ಯ)	0 2 6
4	ಉಪಯುಕ್ತಿ ಚಿಂತಾಮಣಿ ಸಂಗ್ರಹ (ಪ್ರಾಣ ಪದ್ಯ)	0 2 6
5	ಸ್ವಪ್ನ ಶಾಸ್ತ್ರ (ಸ್ವಪ್ನಾಧ್ಯಾಯ ಸಹಿತ)	0 2 0
6	ರಾಮಾಯಣ (ಪಕ್ಷಿ ಶಕುನ ಸಹಿತ)	0 1 6
	ಕನ್ನಡ ಮತ್ತು ತೆಲುಗಿನ ಗ್ರಂಥಗಳು	
7	[illegible]	0 1 0
8	ಕೃಷ್ಣಜನ್ಮ ವಿಚಾರ	0 1 0
	ಗ್ರಂಥ ಮಧ್ಯ ಮುದ್ರಿಸಿದ ಪುಸ್ತಕಗಳು	
9	ಶ್ರೀರಾಮ ಪಟ್ಟಾಭಿಷೇಕ (ಸಂಸ್ಕೃತ ಶ್ಲೋಕ ವ್ಯಾಖ್ಯಾನ ಸಹಿತ) [illegible]	1 10 0
10	ಶ್ರೀರಾಮ ಗೋಷ್ಠಿ (ಸಂಸ್ಕೃತ ಶ್ಲೋಕ ವ್ಯಾಖ್ಯಾನ ಸಹಿತ) [illegible]	1 1 0
11	ನಿಘಂಟು ಸಂಗ್ರಹ ಕಾವ್ಯ [illegible]	0 15 0
12	ಸ್ತೋತ್ರ ಮಾಲಿಕಾ (ಶ್ರೀ ಪರಿವಾರ ಸ್ತೋತ್ರ, ಸ್ತುತಿ ಸ್ತೋತ್ರ, ಸ್ವಾಮಿ ಸ್ತುತಿ, [illegible] ಪುರಾಣ ಸ್ತೋತ್ರ [illegible] ಬಾಲ ವಿರಚಿತ ಸ್ತೋತ್ರಾವಳಿ, [illegible] ಪ್ರಸ್ತಾವನೆ [illegible])	0 14 0
13	ಜ್ಞಾನೋಪದೇಶ ಸುಧಾ ಸಿಂಧು ಸ್ತೋತ್ರ [illegible]	0 3 6
14	ತಾರಾವಳಿ ಪ್ರಶ್ನ ದರ್ಪಣ	0 4 6
15	ರಾಮಾಯಣ ಸಂಗ್ರಹ [illegible]	0 1 6
16	ವಾಮನ [illegible]	0 1 0
17	ವಸ್ತುವೀಕ್ಷಣ	0 1 6
18	ಪದ್ಯಮಾಲಾ (ವೇದಾಂತ ಪದ್ಧತಿ)	0 1 6
19	ನವರತ್ನಮಾಲಿಕಾ [illegible]	0 1 0
	ಏ ಶೋಧನ ಅಕ್ಷರದ ಮುದ್ರಿಸಲ್ಪಟ್ಟ ಪುಸ್ತಕಗಳು	
20	ತಂತ್ರದೀಪಿಕಾ (ಶ್ರೀ ರಾಮಚಂದ್ರಸ್ವಾಮಿ ವಿರಚಿತ ಪ್ರಶ್ನ ಶಾಸ್ತ್ರ ಶ್ರೀರಾಮನ ಟಿಪ್ಪಣಿ ಸಹಿತ)	1 10 0
21	ಸಾಂಖ್ಯ [illegible] (ಶ್ರೀ [illegible] ಸಹಿತ)	0 8 6
22	ಶಿವಾನಂದ ಲಹರಿ	0 3 6
23	ಮಾನಸ ಪೂಜಾ	0 3 0
24	ಆನಂದ ಲಹರಿ (ಶಂಕರಾಚಾರ್ಯ ಕೃತ)	0 2 0
25	ಪದ್ಯಮಾಲಾ (ವೇದಾಂತ ಪದ್ಧತಿ)	0 1 6
26	[illegible]	0 1 6

ಈ ಪುಸ್ತಕಗಳು ಬೇಕಾದವರು ಈ ಕೆಳಗೆ ಸ್ಪಷ್ಟವಾಗಿ ಬರೆದ ವಿಳಾಸಕ್ಕೆ ಪತ್ರ ಬರೆದುಕೊಳ್ಳಬಹುದು. ಒಂದ ಮಾರಿಗೆ ಪತ್ರ ಪುಸ್ತಕಗಳು ಎಂದೆಂದು ತೆಗೆದುಕೊಳ್ಳುವವರಿಗೆ ಒಂದು ಪುಸ್ತಕ ಕ್ರಯವಿಲ್ಲದೇ ಕೊಡಲ್ಪಡುವುದು.

ಆರುಂಬಾಕಂ ರಂಗರಾವ್,
ಪುಂಗನೂರು

BANGALORE.—Printed and published at the KARNATAKA PRESS, No. 50, HOSPITAL ROAD PETTAH.—1897.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE—MONDAY, MARCH 7, 1892. [No. 10.

ಸಂಪುಟ ೧೯.] ಬೆಂಗಳೂರು:—ಸರ್ ೧೮೯೨ ನೇ ಇಸವಿ ಮಾರ್ಚ ೭. ನೇ ತಾರೀಖ್ ಸೋಮವಾರ. [ಸಂಚಿಕೆ ೧೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

[illegible]

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

[illegible]

ಪ್ರಕಟನೆಯ ರಿವಾಜ್.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ಬಿ. ವಿ. ವೆಂಕಟಾಚಾರ

[illegible]

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

[illegible]

ಡಿ. ದಿನಕರರಾವ್ ಮತ್ತು ಕಂಪನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

೯. [illegible]

೧೦. [illegible]

೧೧. [illegible]

೧೨. [illegible]

[illegible]

ನೋಟೀಸ್.

[illegible]

Bangalore City Municipality

ಬೆಂಗಳೂರ್ ಸಿಟಿ ಮ್ಯೂನಿಸಿಪಾಲಿಟಿ.

ನೋಟೀಸ್.

ನಂಬರ್ ೧೦೬೯.

[illegible]

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

೯. [illegible]

೧೦. [illegible]

[illegible]

M. Ansaji Rao,

For President,

City Municipal Commission.

Bangalore City Municipality.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಇಷ್ತಿಹಾರ್‌ನಾಮೆ.

[illegible]

ಅವಶ್ಯಕವಾದ ಕಂಟ್ರಾಕ್ಟು ಮುಚ್ಚಳಿಕೆಯನ್ನು ಅವರು ಬರೆದುಕೊಡಲು ತಪ್ಪಿದರೆ ಅವರ ಠೇವಣೀ ಮೊಬಲಗು ದಂಡವಾಗಿ ಸೇರಿಸಿಕೊಳ್ಳಲ್ಪಡುವುದು. ಯಾವ ಟೆಂಡರನ್ನೇ ಆಗಲಿ ಯಾವ ಕಾರಣವನ್ನೂ ತಿಳಿಸದೆ ತಳ್ಳಿಹಾಕುವ ಸ್ವಾತಂತ್ರ್ಯವನ್ನು ಬೋರ್ಡಿನವರು ಉಳಿಸಿಕೊಂಡಿರುತ್ತಾರೆ.

M. ANNAJI RAO,
Vice President,
City Municipal Commission

ನೋಟೀಸ್.

ಯಡತೊರೆ ತಾಲ್ಲೂಕು ಬೇರ್ಯಾ ಪಟ್ಟಣದಲ್ಲಿರುವ ಕಂಳ ಪಾಳ್ಳೇಗೌಡನ ಮಗ ಜೊಂಕ ನಲ್ಲೇಗೌಡನು ತಿಳಿಸುವದೇನೆಂದರೆ — ೧೮೯೨ನೇ ಇಸವಿ ಜನವರಿ ಮಾಹೇ ೩೦ನೇ ತಾರೀಖಿನಲ್ಲಿ ಹುಣಸೂರು ಸ್ಟಾಂಪ್ ವೆಂಡರ್ ಬಳಿ ಬಂದು ರೂಪಾಯಿನ ಛಪಾ ಕಾಗದವನ್ನು ನನಗೆ ತಿಳಿಯದಂತೆ ನನ್ನ ಹೆಸರಿನಿಂದ ತೆಗದುಕೊಂಡಿರುವವರನ್ನು ಪತ್ತೇ ಮಾಡಿ ಕೊಟ್ಟವರಿಗೆ ೫ ರೂಪಾಯಿ ಇನಾಂ ಕೊಡುತ್ತೇನೆ.

THE BANGALORE SREENIVASA MANDIRAM

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತಾ —

೧೮೯೨ ನೇ ಇಸವಿ ಫೆಬ್ರವರಿ ತಾರೀಖ್ ೨೪ರ ಮೊದಲು ಮಾರ್ಚಿ ೫ ನೇ ತಾರೀಖು ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಸ್ಥರ ಸಂಖ್ಯೆ	97
ಜಮಾಯಿಸಿದ ಧಾನ್ಯದ ಸೇರು ಗಳ ಸಂಖ್ಯೆ	48
ಗತವಾರದ ಶಿಲ್ಕು ಸೇರು	55½
ಜುಮ್ಲಾ	103½
ಅಡಿಗೆ ಸಾಮಾನುಗಳಿಗಾಗಿ ಮಾರಲ್ಪಟ್ಟ ಸೇರು	21
ಖರ್ಚಾದ ಅಕ್ಕಿ ಸೇರು	31½
ಶಿಲ್ಕು ಬಾಕಿ	58
ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್.	7
ಬಿಕ್ಷುಕರ ವಿದ್ಯಾರ್ಥಿ	3
ಬೇರೆ ಇತರಕ್ಕೆ ವಿದ್ಯಾರ್ಥಿಗಳು	11
ಕಲ್ಲೆ ಕೊಡತಕ್ಕ ಅರ್ಚಕ, ಪರಿಚಾರಕ ವಗೈರೆಯವರ ಸಂಖ್ಯೆ	16
ಪ್ರಯಾಣಸ್ಥರು	2
ಜುಮ್ಲಾ	32

THE MONEY MARKET.

ಮದರಾಸ್, ತಾರೀಖ್ ೧ನೇ ಮಾರ್ಚಿ ೧೮೯೨

ಬ್ಯಾಂಕ್ ಬಿಲ್ಲುಗಳು ಯೂನೆಟೆಡ್ ನಮೂನೆಗಳು, ರೂ||ಕ್ಕೆ

1s 3 27/32d

ಸೇಕಡ ೪ರೂ ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 105-4-0 ಇಂದ 105 12 0 ವರೆಗೆ

ಮದರಾಸ್ ಬ್ಯಾಂಕ್ ಷೇರುಗಳು (500) ರೂಪಾಯಿಗಳ ಬಾಬತು 905 ಇಂದ ಯಿಂದ 910

ಸವರೇನುಗಳು, 11-14-0 ಇಂದ 15-0-0 ವರಿವಿಗೆ

ಬಾತಮಿದಾರರ ತಿಳುವಳಿಕೆಗೋಸ್ಕರ ನೋಟೀಸ

“ಸಂದೇಹನಿ ಧುನಿಮನ್ಯ” .— ಎಂಬುವರಿಗೆ ನಿಮ್ಮ ಲೇಖನದಲ್ಲಿ ಕಂಡ ಅಂಶಗಳನ್ನು ರುಜು ಮಾಡಿಕೊಡುವದಕ್ಕೆ ನೀವು ಬದ್ಧರಾಗಿರುವ ಪಕ್ಷಕ್ಕೆ ಅದನ್ನು ನಾವು ಪತ್ರಿಕೆಯಲ್ಲಿ ಪ್ರಕಟಿಸುವೆವು — ಎಡಿಟರ್, ಕ ಪ್ರ

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, MARCH 7, 1892

೧೮೯೨ನೇ ಇಸವಿ ಮಾರ್ಚಿ ತಾ|| ೭ ನೇ ಸೋಮವಾರ.

PUBLIC SERVANTS IN THE MYSORE PROVINCE.

ಕಾಲ ದೇಶ ಸ್ಥಿತಿಯನ್ನನುಸರಿಸಿ ನಾನಾವಿಧ ಬದಲಾವಣೆಗಳಿಗೆ ಗುರಿಯಾಗುತ ಬಂದ ಅಮಲ್ದಾರಿ ಉದ್ಯೋಗವಂ ಕುರಿತು ವಿಚಾರ ಮಾಡುವಾಗ್ಯೆ ಈಗ ಕೆಲವರು ಅಮಲ್ದಾರರಿಗೆ ಶಿರೋವೇದನೆ ಪ್ರಾಪ್ತವಾಗಿ ಅವರು ಚಿಕಿತ್ಸಕಾಧೀನರಾಗಿರುವಂತೆ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಈ ಶಿರೋರೋಗವು ಕಾಲವೈಪರೀತ್ಯದಿಂ ಸಾಂಕ್ರಾಮಿಕ ರೂಪವಾಗಿ ಪರಿಣಮಿಸಿ ಅನ್ಯತ್ರ ಸಹ ವ್ಯಾಪಿಸುತ ಬರುವಂತೆ ಕಾಣುತಿದೆ. ಇದು ಸಾಮಾನ್ಯ ಚಿಕಿತ್ಸೆಯಿಂದುಪಶಮಿಸುವಂತೆ ತೋರುವದಿಲ್ಲವು. ಚಿಕಿತ್ಸಕರಿಗೆ ರೋಗ ನಿದಾನವು ಅದ್ಯಾಪಿ ಸ್ಪಷ್ಟತರವಾದಂತೆ ವ್ಯಕ್ತವಾಗುವದಿಲ್ಲವು. ರೋಗಿಗಳಿಗೆ ತಮ್ಮ ಭವಿಷ್ಯತ್ಪರಿಣಾಮವ ತಿಳದುಕೊಳ್ಳಬೇಕೆಂಬ ಆತುರವು ಅಧಿಕವಾಗಿರುವದು ಸಹಜವಾಗಿದ್ದಾಗ್ಯೂ ರೋಗೋತ್ಪತ್ತಿಯನ್ನು, ಅದರ ಪರಿಣಾಮವನ್ನೂ ಒಬ್ಬರಿಗೂ ತಿಳಿಸದೆ ಚಿಕಿತ್ಸಕರು ತಮ್ಮೊಳಗೆ ಗೂಢವಾಗಿಟ್ಟುಕೊಂಡಿರುವಂತೆ ಕಾಣುತಿದೆ. ಇದರಿಂದ ರೋಗಿಗಳ ಪರಿಣಾಮವು ಚಿಕಿತ್ಸಕರಸಾಮರ್ಥ್ಯಕ್ಕನುಸಾರವಾಗಿರುವುದು. ಈ ವಾರದ ಮೈಸೂರ್ ಗೆಜೆಟಿನ ದೆಸೆಯಿಂದ ಮುನ್ಸಫ್ ಮೈಮಂಗವತಿ ನಾಯುಡರು ಸಹ ಸಸ್ಪೆಂಡಿನಲ್ಲಿರುವಂತೆ ವ್ಯಕ್ತವಾಗುತಿದೆ. ಇದರಕಾರಣವು ಇತರರವಿಷಯದಲ್ಲುಂಟಾದ ಕಾರಣಗಳಂತೆ ಗೂಢವಾಗಿದೆ. ನಮಗೆ ಅದಂ ತಿಳದುಕೊಳ್ಳಬೇಕೆಂಬ ಆತುರವಾಗಲಿ ಪ್ರವೃತ್ತಿಯಾಗಲಿ ಸದ್ಯಃ ಇರುವದಿಲ್ಲವು. ಏತತ್ಕಾಂದರ್ಭ ಬ್ರಾಯಶಃ ಸರ್ಕಾರ್ ಉದ್ಯೋಗಸ್ಥರಮೇಲೆ ಬರತಕ್ಕ ದೋಷಗಳ ಸ್ವರೂಪವು ಸಾಮಾನ್ಯೇನ ಯೆಲ್ಲರಿಗೂ ತಿಳದವಾಗಿಯೇ ಇರುತಿವೆ. ಆದಾಗ್ಯೂ ಈ ಸಂದರ್ಭದಲ್ಲಿ ಕೆಲವು ಅಂಶಗಳನ್ನು ನಮೂದಿಸಿ ನಮ್ಮ ಮಿತ್ರರೊಬ್ಬರು ಈ ವಾರದಲ್ಲಿ ನಮಗೆ ಬರೆದಿರುವ ಲೇಖನವು ಪ್ರಕೃತಸಂದರ್ಭೋಚಿತವಾದುದಾಗಿರುವದರಿಂದ ಅದನ್ನಿದರಡಿ ಪ್ರಕಟಿಸುತ್ತೇವೆ, ಏನೆಂದರೆ —

ರಾಜಕಾರ್ಯಗಳಲ್ಲಿ ನಿಯಮಿಸಲ್ಪಡುವ ಅಧಿಕಾರಿಗಳಿಗೆ ಆವಶ್ಯಕವಾಗಿರತಕ್ಕ ಗುಣಗಳನ್ನು ಮನುಕಾಮಂದಕ ರಾಜಧರ್ಮ ಮೊದಲಾದ ಗ್ರಂಥಗಳು ಅನೇಕ ಪ್ರಕಾರಗಳಾಗಿ ಹೇಳುತಿವೆ. ಅಂತಾ ಗುಣಗಳೆಲ್ಲಾ ಉಪದಾತ್ರಯ ವರ್ಜಿತರಾಗಿರುವಣವೇ ಮುಖ್ಯವೆಂದು ತಿಳಿಸಲ್ಪಟ್ಟಿದೆ. ಉಪದಾತ್ರಯವೆಂದರೆ, ಸರ್ಕಾರ್ ಕೆಲಸಗಳನ್ನು ನಡೆಸತಕ್ಕ ಉದ್ಯೋಗಸ್ಥರು ಅರ್ಥ, ಕಾಮ, ಧರ್ಮಗಳೆಂಬ ಮೂರು ಉಪಧೆಗಳನ್ನು ತೊರೆದು ರಾಜದ್ರೋಹಕ್ಕೂ, ಪ್ರಜಾದ್ರೋಹಕ್ಕೂ ಅವಕಾಶವಂ ಕೊಡದೆ ತಮ್ಮ ಅಧಿಕಾರಗಳನ್ನು ನಡಿಸತಕ್ಕದ್ದು ಅವರಿಗೆ ಕರ್ತವ್ಯವಾಗಿರುತಿದೆ. ಇವುಗಳಲ್ಲಿ ಅರ್ಥೋಪಧೆ ಯೆಂದರೆ ಅಂತಾ ಅಧಿಕಾರಿಗಳು ಕೇವಲ ಧನಾಪೇಕ್ಷೆಯುಳ್ಳವರಾಗಿ, ರಾಜಾಜ್ಞೆಯಿಂದ ತಮಗೆ ನಿಯಮಿಸಲ್ಪಟ್ಟರುವ ವೇತನಕ್ಕಿಂತಲೂ ಅಧಿಕವಾದ ಅರ್ಥವಂ ಕೋರಿ, ಏಕ ಕಾಲದಲ್ಲಿಯೇ ಅತುಲೈಶ್ವರ್ಯ ಸಂಪನ್ನರಾಗಬೇಕೆಂಬ ಅತಿ ಕಾಂಕ್ಷೆಯೊಡನೆ ಉತ್ಕೋಚವೆಂಬ ರುಷುವತ್ತಿಗೋಸ್ಕರ ತಮ್ಮ ಅಧಿಕಾರವನ್ನು ದುರ್ವಿನಿಯೋಗ ಪಡಿಸುವಿಕೆ. ರುಷುವತ್ತೆಗೆದುಕೊಳ್ಳುವ ಅಧಿಕಾರಿಗಳ ಸ್ವರೂಪಾನುಗುಣವಾಗಿ ಪ್ರಯೋಜನವು ಸಿದ್ಧಿಸುತಿದೆ. ಅವರವರು ಸ್ವತಃ ಕಾರ್ಯಾತುರರಿಂ ತಂದುಕೊಡುವ ದ್ರವ್ಯದಿಂದಲೇ ತೃಪ್ತರಾಗಿ ಅವರಿಗೆ ಸಹಾಯ ಮಾಡಿ ಮನಸ್ಸಂತೋಷ ಪಡಿಸುವಣವು ಒಂದು ಪಕ್ಷವು. ಲಾಭ ನಷ್ಟಗಳನ್ನನುಭವಿಸತಕ್ಕವರಿಬ್ಬರಿಂದಲೂ ರುಷುವತ್ತೆಗದುಕೊಂಡು ಅವರಿಬ್ಬರು ಸಮಾಧಾನ ಪಡಿಸಿ ತಮ್ಮ ಬಾಯಾರಿಕೆಯು ತೀರಿಸಿಕೊಳ್ಳುವಣವು ಯೆರಡನೆಯ ಪಕ್ಷವು. ಹಿಂಸಾ ಪೂರ್ವಕವಾಗಿ ಸುಲಿಗೆ ಮಾಡುವಣವು ಮೂರನೆಯ ಪಕ್ಷವು. ಪ್ರಥಮದ್ವಿತೀಯ ಪಕ್ಷಾವಲಂಬಿಗಳಾದವರು ಅನೇಕರು ಯೆಂತಾ ಅಪಾಯಗಳಿಗೂ ತಾವು ಗುರಿಯಾಗದೆ ಚತುರರೆನ್ನಿಸಿಕೊಂಡು ಇನ್ನೂ ಅಭಿವೃದ್ಧಿಗೆ ಬರುತ್ತಾರೆ. ಅವರಮೇಲೆ ಪ್ರಾಯಶಃ ಫಿರ್ಯಾದೆ ಬರುವದಿಲ್ಲವು. ತೃತೀಯಪಕ್ಷವು ಅತಿ ದಾರುಣವಾದುದರಿಂದ ಅದು ಉಭಯತಾಪಿ ಸಂಕಟಗಳಿಗೆ ಗುರಿಮಾಡದಿರುವದಿಲ್ಲವು.

ಕಾಮೋಪಧೆ ಯೆಂದರೆ ಅಂತಾ ಅಧಿಕಾರಿಗಳು ಕೇವಲ ಕಾಮಾತುರರಾಗಿ ಪರಸ್ತ್ರೀಯರನ್ನಪೇಕ್ಷಿಸಿ ಅವರು ಯೊಂದುವದಕ್ಕೋಸ್ಕರ ಬಲಾತ್ಕಾರ ಪೂರ್ವಕವಾಗಿ ತಮ್ಮ ಅಧಿಕಾರಗಳಂ ವಿನಿಯೋಗಿಸುವಿಕೆಯು. ಧರ್ಮೋಪಧೆ ಯೆಂಬದು, ಅಂತಾ ಅಧಿಕಾರಿಗಳು ಸ್ವಮತಾಚಾರ ಸಂಪ್ರದಾಯಗಳಲ್ಲಿ ವಿಶೇಷ ದುರಭಿಮಾನವುಳ್ಳವರಾಗಿ, ಕೆಲವರಿಗೆ ಪ್ರಯೋಜನ ಹಾನಿಯನ್ನುಂಟುಮಾಡಿ ಸ್ವೀಯರಿಗೆ ತಮ್ಮ ಅಧಿಕಾರ ಬಲದಿಂ ವಿಶೇಷ ಪ್ರಯೋಜನವಂ ಕಲ್ಪಿಸಿ ಅವರನ್ನಭಿವೃದ್ಧಿಗೆ ತರುವಣವು ಒಂದು ಪಕ್ಷವು; ತಮ್ಮ ಕೈಕೆಳಗಿನ ಜನರೆಲ್ಲರೂ ತಮನ್ನೂ ತಮ್ಮ ಮತಾಚಾರಗಳನ್ನೂ ಕೊಂಡಾಡಬೇಕೆಂಬ ಕೋರಿಕೆ ಯುಳ್ಳವರಾಗಿ ಅಬದ್ಧ ಬೇಕಾದ ಪಕ್ಷಪಾತಗಳಂ ಮಾಡುವಣವು ಎರಡನೆಯ ಪಕ್ಷವು. ಈ ಪ್ರಕಾರ ಮೂರು ಬಗೆಯಾದ ಉಪಧೆಗಳೂ ರಾಜಕಾರ್ಯ ಪ್ರವರ್ತಕರಾದ ಉದ್ಯೋಗಸ್ಥರಿಗೆ ಪ್ರಬಲ ದೋಷಗಳಾಗಿರುವದರಿಂದ ಅವುಗಳಂ ಪುದ್ದಂಗ ಬಿಟ್ಟಿರುವವರನ್ನೇ ರಾಜಕಾರ್ಯಾಧಿಕಾರಿಗಳನ್ನಾಗಿ ಮಾಡಬೇಕೆಂದು ರಾಜಧರ್ಮಗಳು ಹೇಳುತಿವೆ. ಹೀಗಿದ್ದರೂ ಪ್ರಕೃತ ರಾಜಕಾರ್ಯ ಪದ್ಧತಿಯೊಳು ರುಷುವತ್ತೆಂಬದು ಮಾತ್ರ ಪ್ರಬಲ ದೋಷವಾಗಿ ಗಣಿಸಲ್ಪಟ್ಟು ಅದಂ ನಿವೃತ್ತಿಗೊಳಿಸುವಬಗ್ಯೆ ಕ್ರೂರಾ ನಿಗೇ ಇಡಲ್ಪಟ್ಟಿರುವತೆಯೂ, ಕದಾಚಿತ್ ಅಂತಾ ಅಪರಾಧ ಮಾಡಿದವರಿಗೆ ಖಂಡಿತವಾದ ದಂಡನೆಯು ವಿಧಿಸಲ್ಪಡುವಂತೆಯೂ ಜನಗಳಿಗೊಂದುಬಗೆ ನಂಬಿಕೆಯುಂಟಾಗಿರುತಿದೆ. ಮಿಕ್ಕ ಯೆರಡು ದೋಷಗಳು ಪ್ರಬಲಗಳಾಗಿದ್ದರೂ ಅವು ವಿಶೇಷವಾಗಿ ವಿಚಾರಿಸಲ್ಪಡುವದಂ ಕಾಣೆವು. ಮುಖ್ಯವಾಗಿ ಸರ್ಕಾರಕ್ಕೂ ಪ್ರಜೆಗಳಿಗೂ ಕ್ಷೇಮವನ್ನುಂಟುಮಾಡುವ ಸದರೀ ಮೂರು ದೋಷಗಳ ಸ್ವರೂಪವನ್ನು ಯೆಲ್ಲರೂ ವಿಶದವಾಗಿ ತಿಳಿಯುವಂತೆ ಇಲ್ಲಿ ವಿವರಿಸುವೆವು, ಹ್ಯಾಗಂದರೆ '—ಯೋಗಕ್ಷೇಮೌ ಸದಾರಕ್ಷ್ಯೌ ಪ್ರಜಾನಾಂ ಹಿತಕಾರಿಣಾ । ರಾಜ್ಞಾ ಸಮುಜಿಗುಪ್ಸ್ಯಂ ಯಾಭ್ಯಾಂ ರಾಷ್ಟ್ರಂ ವಿವರ್ಧತೆ' ಅಂದರೆ ಅರಸನು ತನ್ನ ಪ್ರಜೆಗಳಿಗೆ ಹಿತವಂ ಮಾಡುವನಾದರೆ ಅವರ ಸ್ವತ್ತುಗಳಿಗೆ ಅಪಾಯವಿಲ್ಲದೆಯೂ, ಅವರಿಗುಂಟಾಗುವ ನ್ಯಾಯವಾದ ಲಾಭಕ್ಕೆ ಹಾನಿ ಇಲ್ಲದೆಯೂ ಯುಕ್ತವಾಗಿ ರಕ್ಷಿಸಬೇಕು. ಅವುಗಳ ರಕ್ಷಣೆಯಿಂದ ಅವನ ರಾಜ್ಯವು ವೃದ್ಧಿಯನ್ನೈದುವದೆಂಬದಾಗಿಯೂ, (ಅದಂಡ್ಯಾರ್ದಂಡಯನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ । ಅಯಶೋ ಮಹದಾಪ್ನೋತಿ ನರಕಂ ಚಾಧಿಗಚ್ಛತಿ ।) ಅಂದರೆ ನಿರಪರಾಧಿಗಳನ್ನು ದಂಡಿಸತಕ್ಕವನಾಗಿಯೂ ಅಪರಾಧಿಗಳನ್ನು ದಾಕ್ಷಿಣ್ಯಾದಿಗಳಿಂದ ಸುಮ್ಮನೆ ಬಿಟ್ಟುಬಿಡತಕ್ಕವನಾಗಿಯೂ ಇರುವ ಅರಸನು ಪ್ರಬಲ ಅಪಕೀರ್ತಿಯನ್ನೂ ನರಕವನ್ನೂ ಹೊಂದುವನೆಂದಾಗಿಯೂ (ಯಸ್ಯಾಧಿಕಾರಿನಿರ್ದೋಷ ಪೀಡ್ಯಂತೇ ... ಪ್ರಜಾಃ । ತಸ್ಯ ರಾಜ್ಞಶ್ಚಿರಂ ರಾಜ್ಯಂ ಸರ್ವದ್ಧಿಮಧಿಗಚ್ಛತಿ) ಅಂದರೆ ಯಾವ ಅರಸನ ದೇಶದ ಪ್ರಜೆಗಳು ರಾಜಕಾರ್ಯ ಪ್ರವರ್ತಕರಾಗಿಯೂ, ಉಪದಾತ್ರಯ ದೋಷ ಯುಕ್ತರಾಗಿಯೂ, ದೊಡ್ಡ ಮೀನುಗಳು ಸಣ್ಣ ಮೀನುಗಳಂ ನುಂಗುವಂದದಿ ತಮ್ಮ ಅಧಿಕಾರ ಬಲದಿಂದ ಬಡವರಾದ ಪ್ರಜೆಗಳನ್ನು ಪೀಡಿಸತಕ್ಕವರಾಗಿಯೂ ಇರುತ್ತಾರೋ ಸದರೀ ಅರಸನ ರಾಜ್ಯವು ದೀರ್ಘಕಾಲ ವೃದ್ಧಿಯನ್ನೈದಲಾರದೆ ಕ್ಷಿಪ್ರದಲ್ಲಿ ಕ್ಷೈಸುತ ಬರುವದೆಂಬದಾಗಿಯೂ ರಾಜ ದರ್ಮಶಾಸ್ತ್ರಗಳು ತಿಳಿಸುವದರಿಂದ ತಮ್ಮ ಪ್ರಜೆಗಳಿಗೆ ತಮ್ಮ ಕಡೆಯವರಾದ ಅಧಿಕಾರಿಗಳಿಂದಲೂ, ಅವರ ಆಪ್ತರಿಂದಲೂ ಅನ್ಯರಿಂದಲೂ ಉಪದ್ರವ ಪ್ರಂಟಾಗದಂತೆ ಅವರಂ ಕಾಪಾಡಿಕೊಳ್ಳುವಣವೇ ಅರಸನ ಮುಖ್ಯದರ್ಮವಾಗಿರುತಿದೆ. ಹೀಗಿದ್ದಾಗ್ಯೂ ಈ ಕಾಲದಲ್ಲಿ ಸದರೀ ಉದ್ಯೋಗಸ್ಥರ ಮೂರು ಬಗೆಯಾದ ದೋಷಗಳ ಪೈಕಿ ಮೊದಲನೆಯದಾದ ಅರ್ಥೋಪಧೆ ಯೆಂಬ ರುಷುವತ್ ಬಾಬನ್ನು ಮಾತ್ರ ದೊಡ್ಡ ಅಪರಾಧವನ್ನಾಗಿ ಭಾವಿಸಿ ಅದಕ್ಕೆ ತಕ್ಕಂತೆ ಶಿಕ್ಷೆಯಂ ವಿಧಿಸುವದಲ್ಲದೆ ಇತರಗಳಾದ ಯೆರಡು ದೋಷಗಳಿಗೆ ಅಷ್ಟು ವಿಶೇಷನಿಗೇ ಕೊಡುವಂತೆ ಕಾಣುವದಿಲ್ಲವು. ಪ್ರಕಾರಾಂತರೇಣ ಭಾವಿಸಿದರೆ ಈ ಮೂರು ದೋಷಗಳಲ್ಲಿ ಮೊದಲನೆಯದಾದ ರುಷುವತ್ತೆಂಬದು ಸ್ವರೂಪತಃ ನೀಚವಾದದ್ದಾಗಿದ್ದರೂ ತದ್ದೋಷದಿಂದ ಸರ್ಕಾರಕ್ಕೆ ನುಕ್ಸಾನೇನೂ ಇಲ್ಲವು. ಪ್ರಜೆಗಳಾದರೋ, ಸ್ವಕಾರ್ಯ ಸಿದ್ಧಿಗೋಸ್ಕರ ಅಧಿಕಾರಿಗಳಿಗೆ ದ್ರವ್ಯವನ್ನು ಕೊಡುವಣವಾಗಿರುವದರಿಂದ ಹಾಗೆಕೊಡುವಂತವರು ಸ್ವಕಾರ್ಯಸಿದ್ಧಿಯಿಂದ ಸಂತುಷ್ಟರಾಗಿ ವ್ಯಯವಂ ಗಣಿಸುವದಿಲ್ಲವು. ಕಾರ್ಯ ಸಿದ್ಧಿಯಾಗದೆ ರುಷುವತ್ತನ್ನು ಮಾತ್ರ ಕೊಟ್ಟವರಿಂದಾಗಲಿ, ಒಂದು ವ್ಯವಹಾರದಲ್ಲಿ ಸೋತು ಹೋಗುವವರಿಂದಾಗಲಿ, ಅದು ಪ್ರಕಟವಾದೀತೇ ಹೊರ್ತು ಬೇರೆ ಕಾರಣದಿಂದಲ್ಲವು, ಅದೂ ಬಹಳ ಅಪೂರ್ವವು. ಕದಾಚಿತ್ ಪ್ರಕಟವಾಗಿ ಧೃಢಪಡಿಸಿರುವ ಸಂದರ್ಭದಲ್ಲಿ ಅದಂ ಕೂಡಲೇ ವಿಚಾರಿಸಿ ವಿಮರ್ಶಿಸದೆ ವಿಳಂಬಿಸಿದರೆ ಅಷ್ಟರಲ್ಲು ದೋಷಿಯು ನಿರ್ದುಷ್ಟನೆಂದೇರ್ಪಡಲಿಕ್ಕೆ ಬೇಕಾದ ಅವಕಾಶವುಂಟಾಗುತಿದೆ. ಈಗ ಅಲ್ಲಿಯಲ್ಲಿ ಜರುಗುವದಾಗಿ ನಮ್ಮ ತಿಳುವಳಿಕೆಗೆ ಬಂದಿರುವ ಮತ್ತು ಗವರ್ನಮೆಂಟಿನವರಿಂದುಪೇಕ್ಷಿಸಲ್ಪಟ್ಟಿರುವ ಕಾಮೋಪಧೆ ಯೆಂಬ ಎರಡನೇ ಅಧಿಕಾರಿ ದೋಷವನ್ನು ಕುರಿತು ಯೋಚಿಸಿದರೆ ಅದು ಮಾನಿತರಾದ ಸಕಲಜನಗಳಿಗೂ ದುಸ್ಸಹವಾದ ದುಃಖ ಹೇತುವಾಗಿರುತಿದೆ. ಹ್ಯಾಗಂದರೆ —ಕೆಲವರು ಸರ್ಕಾರ್ ಉದ್ಯೋಗಸ್ಥರು ಕೇವಲ ಕಾಮಾತುರರಾಗಿ ಪರಸ್ತ್ರೀಯರನ್ನು ಬಲಾತ್ಕಾರ ಮಾಡುವಣ, ಅವರ ಪತಿಗಳನ್ನು ತಪ್ಪಿಸಿ ತಾವೇ ಅವರನ್ನು ಇಟ್ಟುಕೊಂಡು ನಿರ್ಲಜ್ಜೆಯಿಂದವರು ಸಂಗಡ ಕರೆದುಕೊಂಡು ಪರಸ್ಥಳಗಳಿಗೆ ಸರ್ಕೀಟ ಹೋಗಿ ತಮ್ಮ ವಿಭವಾನುಗುಣವಾಗಿ ಅವರಿಗೂ ಜರಿಗಿಸುವಂತೆ ಜನರಂ ಬಲಾತ್ಕರಿಸುವಣ, ಆ ಹೆಂಗಸರ ಇಷ್ಟಬಂಧುಗಳ್ಯಾರಾದರು ಅದಕ್ಕೆ ವಿರೋಧ ಮಾಡಿದರೆ ಅಂತವರಿಗೆ ನಾನಾವಿಧ ತೊಂದರೆಗಳನ್ನುಂಟುಮಾಡಿ ಕಡೆಗೆ ಯಾವದಾದರು ದೋಷವಂ ಕಲ್ಪಿಸಿ ತಮ್ಮ ಅಧಿಕಾರ ಬಲದಿಂದವರಂ ದಂಡಿಸುವಣ, ತಮ್ಮ ಪ್ರೇಯಸಿಯರನ್ನು ತಮ್ಮ ದ್ರವ್ಯಾರ್ಜನೆಗೆ ಸಹಕಾರಿಗಳನ್ನಾಗಿ ಮಾಡಿಕೊಂಡು ಅವರು ಹುಡಿಕಿ ತೆಗೆದು ತೋರಿಸುವ ನ್ಯಾಯಾನುಸಾರ ವ್ಯಾಜ್ಯ ವ್ಯವಸ್ಥೆ ಮಾಡುವಣ, ಇಂತಾ ವಿಷಯಗಳಲ್ಲಿ ತಮ್ಮ ಅಧಿಕಾರವನ್ನು ವಿನಿಯೋಗಿಸುತ್ತಾರೆ. ಮತ್ತು ಕೆಲವರು ತಮ್ಮ ಅಧಿಕಾರ ಗರ್ವದಿಂದ ದರ್ಮದಲ್ಲಿಯೂ ಮಾನದಲ್ಲಿಯೂ ದೃಷ್ಟಿಯಿಡದೆ ಪರಸ್ತ್ರೀಯರಲ್ಲಿ ಪ್ರವರ್ತಿಸಲು, ಆ ಹೆಂಗಸರ ಬಂಧುಗಳಿಂದ ಮಾಡಲ್ಪಡುವ ಪಾದರಕ್ಷಾ ಪ್ರಹಾರ ಮೊದಲಾದ ಬಗೆಬಗೆ ಹೀನಕೃತ್ಯಗಳನ್ನು ಸಹಿಸಿಕೊಂಡು ಅಲ್ಲಿದ್ದರೆ ತಮ್ಮ ಪ್ರಾಣಹಾನಿಗಳಿಗೇನು ಅಪಾಯ ಸಂಭವಿಸುವುದೋ ಯೆಂಬ ಭೀತಿಯೊಡನೆ ಅದರಿಂದ ತಪ್ಪಿಸಿಕೊಳ್ಳುವಬಗ್ಯೆ ತಾವಿರುವ ತಾಲ್ಲೂಕಿನ ಪ್ರಜೆಗಳು ಪುಂಡರೆಂತಲೂ, ಅನುಮಾನಾಂತರೆಂತಲೂ, ಕ್ಷುದ್ರಗಳೆಂತಲೂ ತಿಳಿಸಿ, ಅವರನ್ನು ತಹಬಂದಿಯಲ್ಲಿಡಲಿಕ್ಕೆ ತಮಗೆ ಶಕ್ತಿ ಸಾಲದೆಂದು ಮೇಲ್ಪಟ್ಟವರಿಗೆ ಅನ್ಯಥಾ ಜ್ಞಾನವನ್ನುಂಟುಮಾಡಿ ಬೇರೆ ಸ್ಥಳಕ್ಕೆ ವರ್ಗ ಮಾಡಿಸಿಕೊಂಡು ಹೋಗುತ್ತಾರೆ. ಇವರ ಪ್ರಕೃತಿ ಚಾಪಲ್ಯವೆಂಬದು ಯೆಲ್ಲಿಗೆ ಹೋದಾಗ್ಯೂ ಸುಮ್ಮನಿರಗೊಳಿಸಲಾರದಾಗಿ ಅಲ್ಲಿಗೆ ಹೋದ ಒಂದೆರಡು ತಿಂಗಳ ಕಾಲದೊಳಗಾಗಿಯೇ ತಮ್ಮ ದಿವ್ಯಚರಿತ್ರೆಯಂ ಹೊರಪಡಿಸತೊಡಗುತ್ತಾರೆ. ಇವೆಲ್ಲವೂ ಸರಕಾರದವರಿಗೆಷ್ಟು ಯಶೋಹಾನಿಕರವಾದವೋ, ಇವುಗಳಿಗೆಯಾವದರಿಂದ ಅವಕಾಶ ಪ್ರಂಟಾಯಿತೋ, ಉದ್ಯೋಗಕ್ಕೆಷ್ಟು ಅಗೌರವಾಪಾದಕವೋ ಅದಂ ಅಭಿಜ್ಞರು ತಿಳಿಯದೆ ಇರಲಾರರು. ಧರ್ಮೋಪಧೆ ಎಂಬ ಮೂರನೇ ಅಧಿಕಾರಿ ದೋಷವನ್ನು ಕುರಿತಾಲೋಚಿಸಿದರೆ, ಸ್ವಮತಾಚಾರ ಸಂಪ್ರದಾಯಗಳಲ್ಲಭಿಮಾನಿಗಳಾದ ಉದ್ಯೋಗಸ್ಥರು ಅನ್ಯಮತ ಸಂಪ್ರದಾಯಗಳಲ್ಲಿ ದ್ವೇಷಾಸೂಯೆಗಳಂ ವಹಿಸುತ ಸ್ವಮತಸ್ಥರ ಅಭಿವೃದ್ಧಿಯಲ್ಲಿ ಅಪೇಕ್ಷೆಗೊಂಡು ಅನ್ಯರಿಗೆ ನಾನಾವಿಧೋಪದ್ರವಗಳಂ ಕಲ್ಪಿಸುವದರೊಳು ತಮ್ಮ ಅಧಿಕಾರಗಳನ್ನುಪಯೋಗಿಸುತ್ತಾರಾಗಿ, ಇದೂ ಜನಗಳಿಗೆ ಬಹಳ ದುಃಖಕರವಾಗಿರುವದಲ್ಲದೆ ಪರಂಪರೆಯಾ ರಾಜಕಾರ್ಯಗಳಿಗೂ ಹಾನಿಯುಂಟಾಗದೆ ಹೋಗಲಾರದು. ಏನಂದರೆ ಇಲ್ಲಿ ತಿಳಿಸಲ್ಪಟ್ಟ ಮೂರು ದೋಷಗಳೂ ಪ್ರಬಲಗಳಾಗಿಯೂ ಜನರಿಗೆ ದುಃಖ ಕಾರಿಗಳಾಗಿಯೂ ಇರುವಲ್ಲಿ ಅವುಗಳಂ ಚೆನ್ನಾಗಿ ವಿಚಾರಿಸಿ ತಕ್ಕ ಶಿಕ್ಷೆಯಂ ಮಾಡದೆ ಸಾಮಾನ್ಯೇನ ಪ್ರಥಮ ದೋಷಕ್ಕಾಗಿ ನಿಮಿತ್ತ

ಪತ್ರಕ್ಕೆ ಗೂಢವಾಗಿ ವಿಚಾರಣೆಮಾಡಿ ಅಪರಾಧಿಯು ಪಾಲ್ಲಭ್ಯಾನುಗುಣವಾಗಿ ವಿಮರ್ಶೆ ಮಾಡುವ ಸಂಪ್ರದಾಯವು ಸಮದರ್ಶಿಗಳಿಗೆ ಲಕ್ಷಣವಲ್ಲವು. ಒಬ್ಬನು ನಸ್ಪಿಂತೆ ಮಾಡಿಕಿಕ್ಕೆ ಅವನ ಅಪರಾಧವು ಸಾಮಾನ್ಯವಾದದ್ದಾಗಿರಲಾರದಷ್ಟೆ. ಅಂತಾ ಅಪರಾಧಿಯು ಒಂದುವೇಳೆ ನಿರ್ದೋಷಿಯಾಗಿದ್ದರೆ ಆ ಅಂಶವು ನ್ಯಾಯಸ್ಥಾನದಲ್ಲಿ ಬಹಿರಂಗವಾಗಿ ಪತಕ್ಕೆ ಸ್ಥಿರಪಡಲಾರದು? ಪೂರ್ವಕ್ಕಿಂತಲೂ ಈಗ ಧರ್ಮಾರ್ಥ ಕಾನೋನು ಪಥಾನಿಬದ್ಧ ಪಕ್ಷಪಾತಾದಿಗಳಿಗೆಳಸದೆ ದಾರಾಳವಾಗಿ ವರ್ತಿಸತಕ್ಕವರು ಅನೇಕರೇರ್ಪಟ್ಟಿರುವದಂ ನಾವು ಬಹು ಮುಖವಾಗಿ ಕಂಡು ಕೇಳಿದ್ದೇವೆ. ಅಂತಾ ಅಧಿಕಾರಿಗಳ ಸಂಖ್ಯೆಯು ಈಗ ಹೆಚ್ಚಲಿಕ್ಕೇನು ಕಾರಣ? ಸರ್ಕಾರದವರ ಅನುರಾಗಸೂಚಕವಾದ ವಿಷಯ ವಿಮುಖತೆಯೆ? ಅಲ್ಲದೆ ಬಾಧೀಸಿನ್ಯ ಯುಕ್ತವಾದ ತಾಟಸ್ಥ್ಯವೆ? ಇವುಗಳ ಪೈಕಿ ಯಾವದೊಂದು ಕಾರಣವಾಗಿದ್ದರೂ ಅದು ನಿರ್ಮಾಸ್ಯವಾದ ಪ್ರಭುತ್ವಕ್ಕೆ ಮಾಲಿನ್ಯವನ್ನುಂಟುಮಾಡದೆ ಹೋಗಲಾರದು. ಪ್ರಕೃತ ಪಾಲನಾಕ್ರಮವು ಸುಗುಣಾಂಶಗಳಿಂದ ಪೂರ್ವಾಪೇಕ್ಷೆಯಾ ಸ್ಮರಣೀಯವಾಗಿಯೂ, ಪ್ರಶಂಸಾರ್ಹವಾಗಿಯೂ, ಕೀರ್ತಿ ಪ್ರತಿಷ್ಠಾಸೂಚಕವಾಗಿಯೂ ಇರಬೇಕೆಂಬ ಉತ್ತರವಾದ ಕೋರಿಕೆಯೂ ತದನುಗುಣವಾದ ಪ್ರವೃತ್ತಿಯೂ ನಮ್ಮ ಪ್ರಕೃತ ದಿವಾನರವರ ಉದ್ದೇಶಗಳಿಗೆ ಪರಮಾವಧಿಯಾ ನ್ಯೂನತೆಯನ್ನುಂಟುಮಾಡತಕ್ಕದಾಗಿ ಏರ್ಪಟ್ಟಿರುವ ಬಗ್ಗೆ ನಾವು ಬಹಳ ವಿಷಾದಿಸುತ್ತೇವೆ. ಉದ್ಯೋಗಸ್ಥರ ನಿಸ್ಪೃಹತೆಗೂ ತ್ರಿಕರಣ ಶುದ್ಧಿಗೂ ವಿದ್ಯೆ ಮತ್ತು ಅಧಿಕವೇತನವು ಸಹಕಾರಿಗಳಾಗುತವೆಂಬ ಭಾವನೆ ಯೇನೋ ಸರ್ಕಾರದವರಿಗುಂಟಾಗಿರಲು ಅವರು ವಿದ್ಯಾಮತರಾಗಿರುವವರು ಹುಡುಕಿ ಹುಡಿಕಿ ತೆಗದು ನೇಮಕರಮಾಡುತ್ತ, ಅವರಿಗೆ ಕ್ರಮವಾರ್ಗದಲ್ಲಿ ದ್ರವ್ಯಾರ್ಜನಾ ಪ್ರವೃತ್ತಿ ಇಲ್ಲದಿರಬೇಕೆಂಬ ಭಾವನೆಯಿಂದ ಆಫೀಸರುಗಳ ರೇಟುಗಳಂ ನೂರರ ಪ್ರಕಾರ ಜಾಸ್ತಿ ಮಾಡುತ ಬಂದಾಗ್ಯೂ ಅವರ ತಾತ್ಪರ್ಯವು ವಿಫಲವಾಗುವಂತೆ ಜವಾಬದಾರಿ ಉದ್ಯೋಗಗಳಲ್ಲಿರುವ ಕೆಲವರು ಅಮಲ್‍ದಾರರೂ, ಮುನ್ಸಫಗಳೂ, ಅಸಿಸ್ಟೆಂಟ್ ಕಮಿಷನರುಗಳೂ ಅಕ್ರಮ ಮಾರ್ಗಗಳಲ್ಲಿ ವರ್ತಿಸಿ ಮಹಾರಾಜಾ ಸರ್ಕಾರಕ್ಕೆ ಅಪಕೀರ್ತಿಯನ್ನುಂಟು ಮಾಡುವಣವು ಅವರಿಗಷ್ಟಮಾತ್ರವೂ ಯೋಗ್ಯವಲ್ಲವು. ಅಂತವರೆಲ್ಲರು ಸಾಧ್ಯವಾದಷ್ಟು ತ್ವರೆಯಲ್ಲಿ ತಮ್ಮ ಕೆಲಸಗಳಿಂದ ನಿವೃತ್ತರಾದರೆ ಯೆಲ್ಲರಿಗೂ ಸುಖವಾಗಿರುವುದು

Occasional Notes
ನೈಮಿತ್ತಿಕ ವಿಷಯನ್ಯಾಸ.

The present revenue of Upper Burmah.—ಬರ್ಮಾ ರಾಜ್ಯದ ಈಗಿನ ರೆವಿನ್ಯೂ ೪೩,೪೩,೦೨೦ ರೂಪಾಯಿಗಳು. ಮುಂದೆ ಇನ್ನು ವೃದ್ಧಿಯಾಗುವದಕ್ಕೆ ಕಾರಣಗಳು ಬಹಳವಾಗಿ ಕಂಡುಬರುತಲವೆ.

A case of fraud.—ಈಚೆಗೆ ಹೈದರಾಬಾದಿನಲ್ಲಿ ಅತಿ ವಿಚಿತ್ರವಾದ ಮೋಸಕೃತ್ಯವೊಂದು ನಡೆಯಿತು ಹ್ಯಾಗಂದರೆ—ಅಲ್ಲಿನ ಅಕೌಂಟೆಂಟ್ ಜನರಲವರ ಆಫೀಸಿನಲ್ಲಿಟ್ಟದ್ದ ಬೆಳ್ಳಿ ನಾಣ್ಯಗಳ ಚೀಲಗಳಿಗೆ ಬದಲು ತಾಮ್ರ ನಾಣ್ಯಗಳು ತುಂಬಿದ ಚೀಲಗಳು ತುಂಬಿಡಲ್ಪಟ್ಟಿದ್ದವು.

A pertinent remark.— ಹಿಂದೂಗಳು ಪೂರ್ವಕಾಲದೊಳು ತಮಗುಂಟಾಗಿದ್ದ ಕೀರ್ತಿ ಪ್ರತಿಷ್ಠೆಗಳನ್ನೂ ಸುಖವನ್ನೂ ಮರಳಿ ಹೊಂದುವದರಲ್ಲಿ ಆಂತರವಾದ ಅಭಿಲಾಷೆಯುಳ್ಳವರಾಗಿದ್ದರೆ, ಅವಂ ಪಡೆಯುವದಕ್ಕೆ ಪೂರ್ವಕಾಲದಲ್ಲಿ ಅವರು ಯಾವ ಉಪಾಯಗಳಂ ಕಲ್ಪಿಸಿಕೊಂಡಿದ್ದರೊ ಅವು ಮರಳಿ ಕೈಗೊಳ್ಳಬೇಕೆಂತಲೂ, ವೇದಾಧ್ಯಯನವು ಹಿಂದುಗಳಿಗೆ ಸುಖಸಂಪಾದನ ನಿಮಿತ್ತಕವಾಗುವದೆಂತಲೂ ಇಂಡಿಯನ್ ಮಿರರ್ ಎಂಬ ಪತ್ರಿಕೆ ಅಭಿಪ್ರಾಯ ಪಡುತಿದೆ.

A grievance removed.—ಈಚೆಗೆ ಮದರಾಸ ಹೈಕೋರ್ಟಿನಲ್ಲಿ ಒಂದು ಮೊಕದ್ದಮೆಯು ಅಪೀಲವೇ ಯು ಹೆಗಲು ಒಂದು ಪಂಪೆಯುಮೇಲೆ ದಾಖಲ್ಮಾಡಲ್ಪಟ್ಟಿತೆಂಬ ಕಾರಣದಮೇಲೆ ತಳ್ಳಿಹಾಕಲ್ಪಟ್ಟದರಿಂದ ಅಪೀಲ್ ವಾದಿಯ ಬೆನ್ನಾರಿಹೋಗಿ, ಅಪೀಲರ್ಜಿಗಳನ್ನು ನಾಲ್ಕು ಘಂಟೆಯ ತನಕ ದಾಖಲ್ಮಾಡಬಹುದೆಂದು ಗೊತ್ತಾಗಿದ್ದಾಗ್ಯೂ ಈರೀತಿ ಮಾಡುವವರಿಂದ ಕಕ್ಷಿಗಾರರು ಕೆಡುವದಕ್ಕೆ ಕಾರಣ ವುಂಟಾಗುತಿದೆಯೆಂದು ಅಪೀಲ್ ವಾದಿಯ ಕಡೆ ಬ್ಯಾರಿಸ್ಟರ್ ಮೆ|| ಎಸ್. ಸುಬ್ರಹ್ಮಣ್ಯಯವರು ಮ. ಜಸ್ಟಿಸ್ ಮುತ್ತುಸಾಮಿ ಅಯರ್ ಮತ್ತು ಜಸ್ಟಿಸ್ ಬೆಸ್ಟ್ ಯವರ ತಿಳುವಳಿಕೆಗೆ ತರಲು, ಸದರೀ ಇಬ್ಬರು ಜಡ್ಜಿಗಳು ಸೇರಿ ಅಪೀಲನ್ನು ದಾಖಲ್ಮಾಡಿಕೊಂಡು ಮುಂದೆ ಆರೀತಿ ಮಾಡಿ ಕಕ್ಷಿಗಾರರಿಗೆ ತೊಂದರೆ ಯುಂಟುಮಾಡಕೂಡದೆಂದು ಹುಕುಂ ಕೊಟ್ಟರು.

Small Cause Court law.—ಮದರಾಸ್ ಸ್ಮಾಲ್‍ಕಾಸ್‍ಕೋರ್ಟಿನಲ್ಲಿ ಲಿಮಿಟೇಷನ್ ಅಂದರೆ ಕಾಲದೋಷವಂ ಕುರಿತ ಒಂದೀತವು ಅಸ್ವರ್ ಜಡ್ಜಿಯವರಿಂದ ವ್ಯವಸ್ಥೆಯಾಗಿರುತಿದೆ ಹ್ಯಾಗಂದರೆ.—ಈ ಮೊಕದ್ದಮೆಯಲ್ಲಿ ವಾದಿಯಿಂದ ಹಾಜರ್ಮಾಡಲ್ಪಟ್ಟ ಪತ್ರವು ವಾದಿಯ ಹೆಸರಿನಲ್ಲಿ ಹುಟ್ಟಿದ್ದಾಗ್ಯೂ ದಾವಾ ಅರ್ಜಿಯಲ್ಲಿ ವಾದಿಯ ಏಜಂಟನ ಹೆಸರಿನಲ್ಲಿ ಹುಟ್ಟಿರುವದಾಗಿ ನಮೂದಿಸಲ್ಪಟ್ಟಿರು. ಈ ರೆಫ್ಯು ವಿಚಾರಣೆ ಕಾಲದಲ್ಲಿ ಹೊರಗಾಗಿ, ದಾವಾ ಪತ್ರದಲ್ಲಿ ಕಂಡುಬಂದ ದಾವಾ ಅರ್ಜಿಯನ್ನು ತಿದ್ದಬೇಕೆಂದು ಕೋರ್ಟಿನವರು ಹುಕುಂಮಾಡಿ, ಮರಳಿ ವಿಚಾರಣೆಗೆ ಬಂದ ಕಾಲದಲ್ಲಿ, ಕಾಲದೋಷ ವುಂಟಾಗುವದಕ್ಕೆ ಮುಂಚಿತವಾಗಿ ದಾವಾ ದಾಖಲಾಗಿದ್ದಾಗ್ಯೂ ಅದರಲ್ಲಿ ಕಂಡ ತಪ್ಪನ್ನು ತಿದ್ದಿದ ಕಾಲವು ವ್ಯಾಜ್ಯಕಾರಣ ವುಂಟಾದದಕ್ಕೆ ಮೂರು ವರ್ಷಗಳು ಮೀರಿಹೋಗಿರುವದರಿಂದ ದಾವಾಕ್ಕೆ ಕಾಲದೋಷವುಂಟಾಯಿತೆಂದು ಜಡ್ಜಿಯವರು ಅಭಿಪ್ರಾಯ ಪಟ್ಟು ಮೊಕದ್ದಮೆಯನ್ನು ವಜಾಮಾಡಿದರು.

The late Salem Ramaswami Mudaliyar M. A. B. L.—ಮದರಾಸ ಹೈಕೋರ್ಟಿನ ವಕೀಲರುಗಳ ಪೈಕಿ ಒಬ್ಬರಾಗಿಯೂ ಪರುತು ಬೇರೆ ಬಹುವಿಧ ಸುಗುಣಗಳಿಂದ ಪ್ರಸಿದ್ಧಿಯನ್ನೈದಿದ್ದ ರಾಯಬಹದೂರ್ ಸೇಲಂ ರಾಮಸ್ವಾಮಿ ಮುದಲಿಯಾರ್ರವರು ಈಚೆಗೆ ಮೂರು ನಾಲ್ಕು ತಿಂಗಳ ಕಾಲದ ಮೊದಲು ಶರೀರಾಲಸ್ಯದಿಂ ಕಷ್ಟಪಡುತಲಿದ್ದು ಗತವಾರದಲ್ಲಿ ಕಾಲಗತಿಯನ್ನೈದಿದರೆಂಬ ವೃತ್ತಾಂತವಂ ಕೇಳುವದಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಮರಣ ಕಾಲದಲ್ಲಿ ಈ ದೊಡ್ಡಮನುಷ್ಯರ ವಯಸ್ಸು ಮೂವತ್ತೆಂಟು ವರ್ಷಗಳು. ಇವರು ಸಾಮಾನ್ಯವಾಗಿ ಹಿಂದೂ ಸಮುದಾಯಕ್ಕೆ ಕೇವಲ ಉಪಯುಕ್ತಗಳಾದ ಕಾರ್ಯಗಳಲ್ಲಿ ಉತ್ತರವಾದ ಅಕ್ಕರೆಯೊಡನೆ ಪ್ರವೇಶಿಸಿ ಬಹುಮುಖವಾಗಿ ಸಹಕರಿಸುತ ತನ್ಮೂಲಕ ವಿಶೇಷವಾದ ಕೀರ್ತಿ ಪ್ರತಿಷ್ಠೆಗಳಂ ಸಂಪಾದಿಸಿಕೊಂಡು ಯೆಲ್ಲರ ಪ್ರೀತಿ ಗೌರವಗಳಿಗೂ ವಿಷಯರಾಗಿದ್ದರು. ಇಂತಾ ಪುರುಷರ ಅಕಾಲ ಮರಣಕ್ಕೆ ಪ್ರಜೆಗಳ ದೌರ್ಭಾಗ್ಯವಿನಾ ಬೇರೆ ಯಾವಕಾರಣವನ್ನು ಹೇಳಬಹುದು.

A point of law.—ಮದರಾಸ್ ಹೈಕೋರ್ಟಿನಲ್ಲಿ ಈಚೆಗೆ ವ್ಯವಸ್ಥೆಯಾದ ಒಂದು ಮೊಕದ್ದಮೆಯ ಸಾರಾಂಶವು ಸಾಮಾನ್ಯವಾಗಿ ಯೆಲ್ಲರಿಗೂ, ವಿಶೇಷತಃ ಲಾಯರ್‍ಗಳಿಗೂ ಅವಶ್ಯ ತಿಳಿದಿರಬೇಕಾದ ವಿಷಯವಾಗಿರುವದರಿಂದ ಅದನ್ನಿದರಡಿ ಪ್ರಕಟಿಸಿರುತ್ತೇವೆ:—

ಹಿಂದೂಜಾತಿ ಹೆಂಗಸೊಬ್ಬಳು ಮೃತಪಡುವ ಕಾಲದಲ್ಲಿ ಆಕೆಯ ಗಂಡನು, ಒಬ್ಬ ಮಗನು, ಒಬ್ಬ ಮಗಳು ಇವರು ಜೀವಿಸಿದ್ದರು. ಆಕೆಯು ಮೃತಪಟ್ಟ ಕೆಲವು ದಿವಸಗಳೊಳಗಾಗಿಯೇ ಮಗಳು ಮೃತಪಟ್ಟಳು. ಮಗನಾದವನು ಗತಿಸಿದ ತನ್ನ ತಾಯಿಗೆ ಸ್ತ್ರೀಧನವಾಗಿ ಬಂದ ಕೆಲವು ಚಿಂದಗಿಗಳು ತನಗೆ ಸೇರಬೇಕೆಂದು ತಂದೆಯಮೇಲೆ ದಾವೇ ಮಾಡಿದನು. ಆನರೆಬಲ್ ಜಸ್ಟಿಸ್ ಮುತ್ತುಸಾಮಿ ಅಯ್ಯರವರೂ ಆನರೆಬಲ್ ಮೆ|| ಜಸ್ಟಿಸ್ ಪಾರ್ಕರವರೂ ಸೇರಿ ಯೋಚಿಸಿ, ಅವಿವಾಹಿತಳಾದ ಮಗಳು ವಂಶಜಳಾಗಿ ತಾಯಿಯ ಸ್ತ್ರೀಧನಕ್ಕೆ ಸಂಪೂರ್ಣ ಬಾಧ್ಯಸ್ಥಳಾಗಿರುತ್ತಾಳೆ, ಅವಳ ಮರಣಾನಂತರ ಅವಳ ತಂದೆಯನ್ನುಪೇಕ್ಷಿಸಿ ಸೋದರನು ಅವಳ ಚಿಂದಗಿಗೆ ವಾರಸ್‍ದಾರನೆಂದು ನಿರ್ಣಯಿಸಿದರು.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‍ಜಾತಿವೃತ್ತಾಂತಗಳು.

Order for retrial.—ಕೆಲವು ದಿವಸಗಳ ಕೆಳಗೆ ಟೌನ್ ಮ್ಯಾಜಿಸ್ಟ್ರೇಟಿಕೋರ್ಟಿನಲ್ಲಿ ಮೆ|| ತಿರುಮಲಾಚಾರ್ಯರ ವಿಚಾರಣೆ ನಡೆದು ಕೋರ್ಟು ಬರಕಾಸ್ತಾಗುವತನಕ ಸಜಾ, ೧೫ ರೂಪಾಯಿ ಜುರ್ಮಾನೆವಿಧಿಸಿದ್ದದ್ದು ಸರಿಯಷ್ಟೆ. ಆ ಮೊಕದ್ದಮೆಯ ಕಟ್ಟನ್ನು ಈಚೆಗೆ ಚೀಫ್‍ಕೋರ್ಟಿನವರು ಪರಿಸೀಲನೆ ಮಾಡಿ ಶಿಕ್ಷೆ ಹೆಚ್ಚಿಸದೆ ಇರುವದಕ್ಕೆ ಕಾರಣ ತೋರಿಸಬೇಕೆಂದು ಸದರೀ ತಿರುಮಲಾಚಾರ್ಯರಿಗೆ ನೋಟಿಸ್ ಕೊಟ್ಟದಾರೆ.

Devil in Tirumakudlu Narsipur.—ತಿರುಮಕೂಡ್ಲು ನರಸೀಪುರದ ತಾಲ್ಲೂಕ ತಿರುಮಕೂಡ್ಲಿನಲ್ಲಿರುವ ಶ್ರೀ ಅಗಸ್ತ್ಯೇಶ್ವರ ಸ್ವಾಮಿ ದೇವಸ್ಥಾನದ ಗೋಪುರದಲ್ಲಿ ಹಿಂದಕ್ಕೆ ಒಬ್ಬ ಹಳೇಪಾದು ಕರ್ಣಾಟಕರವನು ನೇಣು ಹಾಕಿಕೊಂಡು ಪ್ರಾಣತ್ಯಾಗ ಮಾಡಿಕೊಂಡಿದ್ದ ಸಂಗತಿಯನ್ನು ತಿಳಿಸಿದ್ದೆವಷ್ಟೆ. ಈಗ ಅಪನುಪಿಶಾಚವಾಗಿ ಒಬ್ಬ ಒಕ್ಕಲಿಗರವಳನ್ನು ಹಿಡಿದುಕೊಂಡಿದ್ದು ಅವಳನ್ನು ಬಿಟ್ಟು ದೇವಸ್ಥಾನದ ಪರಿಚಾರಕನನ್ನು ಹಿಡುಕೊಂಡಿತು. ಆ ಪರಿಚಾರಕನು ರಕ್ತದ ವಾಂತಿ ಮಾಡಿಕೊಂಡು ಜ್ಞಾನ ತಪ್ಪಿ ಮೃತನಾದನು. ಈಗ ದೇವಸ್ಥಾನದಲ್ಲಿ ಒಬ್ಬೊಬ್ಬರು ತಿರುಗುವದಕ್ಕೆ ಹೆದರುತಲಿದಾರೆ. ಚ.

Obituary.—ಹಿತವಾದಿನಿಯ ಎಡಿಟರಾದ ಮೆ|| ಸಿ. ಸುಬ್ಬರಾವ್ ಬಿ. ಎ. ರವರ ತಮ್ಮ ೧೬ ವರುಷದ ಸಿ. ಸುಬ್ರಾವ್ ಎಂಬ ಹುಡುಗನು ಶನಿವಾರದ ದಿವಸ ರಾತ್ರಿ ಊಟಮಾಡಿಕೊಂಡು ಮೆಟ್ರಿಕ್ಯುಲೇಷನ್ ಕ್ಲಾಸಿನ ಪಾಠವನ್ನು ಚಿಂತನೆಮಾಡಿ ಮಲಗಿಕೊಂಡವನು ಬೆಳಗ್ಗೆ ೯ ಘಂಟೇವರಿಗೂ ಏಳಲೇ ಇಲ್ಲ. ಇಷ್ಟು ಹೊತ್ತಿನವರಿಗೂ ಏಳಲಿಲ್ಲವಲ್ಲಾ ಎಂಬದಾಗಿ ಮೆ|| ಸಿ. ಸುಬ್ಬರಾಯರೇ ಹೋಗಿ ಅಲ್ಲಾಡಿಸಿ ನೋಡುವಾಗ್ಗೆ ಜ್ಞಾನವಿಲ್ಲದೆ ಉತ್ಕಟವಾದ ಸಂಬಂಧವಾದ ಸಂಕಟ ಪಡುತ್ತಿದ್ದನು. ಒಡನೆ ಅವರು ತಮಗೆ ತಿಳಿದದ್ದನ್ನು ಚಿಕಿತ್ಸೆ ಮಾಡಿದ್ದಲ್ಲದೆ ಮ|| ಡಾ|| ಆರ್ಕೊಗಂ ಮೊದಲಿಯಾರ್ರವರು ಚಿಕಿತ್ಸೆ ಮಾಡಿದರು. ಆದರೂ ಫಲಕಾರಿಯಾಗದೆ ಮೃತಪಟ್ಟಂತೆ ತಿಳಿಯಬರುತಿದೆ. ಚ.

Re-introduction of Octroi duties in the C. & M. Station.—ಈಗ್ಯೆ ಕೆಲವುಸಂವತ್ಸರಗಳಹಿಂದೆ ಸಿವಿಲ್ ವ ಮಿಲಿಟರಿ ಸ್ಟೇಷನ್‍ಮ್ಯುನಿಸಿಪಾಲಿಟಿಯವರು ವಜಾಮಾಡಿದ್ದ ಆಕ್ಟ್ರಾಯಿ ತೆರಿಗೆಯನ್ನು ಬರುವತಿಂಗಳ ಗುರ್ರೇ ತಾರೀಖ್ ಮೊದಲು ಮರಳಿ ಜಾರಿಯಲ್ಲಿ ತರುವಂತೆ ವ್ಯವಸ್ಥೆಯಾಗಿರುವದಾಗಿ ತಿಳಿಯಬರುತಿದೆ. ೬ ಒಣಗಿದ ಮತ್ತು ಹಸೀತೊಗಿಸಸಾಮಗಳು, ೫೫ ವೀಳ್ಯದೆಲೆಗಳು, ೨ ಪೌಂಡುಗಳ ತೂಕವುಳ್ಳ ಹೊಗೆಸೊಪ್ಪು, ಇವುಗಳು ದರ್ ಸ್ವಂತ ಉಪಯೋಗಕ್ಕಾಗಿ, ಗಾಡೀಯೂ ರೈಲ್ ಮಾರ್ಗಗಳಲ್ಲಿ ಬರುವ ಪ್ರಯಾಣಸ್ಥರು ತರುವರಾದರೆ ಅಂತವರಿಂದ ಅವುಗಳಿಗೆ ಹಾಸಲ್ ವಸೂಲ್ಮಾಡಕೂಡದೆಂದು ನಿರ್ಣಯವಾಗಿರುತಿದೆ. ಸದರೀ ಪದಾರ್ಥಗಳನ್ನು ಅಲ್ಲಿನ ಮ್ಯುನಿಸಿಪಲ್ ಸರಹದ್ದಿನೊಳಗಾಗಿಟ್ಟು ಮಾರತಕ್ಕ ಚಿಲ್ಲರೆ ಅಂಗಡಿಯವರು ಲೈಸೆನ್ಸ್ ಪಡೆದು ಮುಂದೆ ಮಾರಬೇಕಾದವರಾಗಿರುತ್ತಾರೆ.

Famine operation in Mysore.—ಈಸಂಸ್ಥಾನದಲ್ಲೀಗ ಸಂಭವಿಸಿರುವದಾಗಿ ಜನಗಳು ಮಾತ್ರ ಹೇಳಿಕೊಳ್ಳುತಲಿರುವ ಕ್ಷಾಮದ ವಿಷಯದಲ್ಲಿ ದಿವಾನರವರು ಸ್ವತಃ ಸಂಚರಿಸಿ ಅಲ್ಲಿಯುಳ್ಳ ಸ್ಥಿತಿಯಮೇಲೆ ಮಾಡಿದ ಏರ್ಪಾಡುಗಳನ್ನೆಲ್ಲ ನಮೂದಿಸಿ ಆಗಿಂದಾಗ್ಯೆ ಫಾಯಿಸ್ ಮಾಡುತಬಂದ ಮೆಮೋರಾಂಡಮನ್ನು ಪೈಸರಾಯಿಯವರು ಕಟಾಕ್ಷಿಸಿ,ದಿವಾನರವರ ಪುರೋದೃಷ್ಟಿಯನ್ನೂ ಸಮಯೋಚಿತ ಜಾಗರೂಕತೆಯನ್ನೂ ಕೊಂಡಾಡಿ ಬಹಳ ಸಂತೋಷ ಅದು ತಿಳಿಯಪಡಿಸಿದರೆಂಬದಾಗಿ ಒಂದಾನೊಂದು ಪತ್ರಿಕೆಗೆ ಮೈಸೂರ ಬಾತಮಿದಾರನೊಬ್ಬನು ಬರೆದಿರುತ್ತಾನೆ. ಇದುವರಿವಿಗೆ ದಿವಾನರವರ ನೋಟೀಸುಗಳನ್ನು ಅವರಿಗೆ ಬಂದ ಡಿಸ್ಟ್ರಿಕ್ಟ್‍ಜಾತಿ ಸರ್ಕಾರೀ ಕಾಗದ ಪತ್ರಗಳನ್ನೂ ನೋಡಲಾಗಿ, ಪ್ರಜೆಗಳು ಹೇಳಿಕೊಂಡು ಗಾಬರಿ ಪಡುವಷ್ಟು ಕ್ಷಾಮವಾಗಲಿ ಕ್ರಮವಾಗಲಿ ಸದ್ಯಃ ಇಲ್ಲವೆಂದು ಅವುಗಳಿಂದ ಸ್ಪಷ್ಟವಾಗಿ ಯೇರ್ಪಡುತಿದೆ. ಇವನ್ನೆಲ್ಲ ನೋಡಲಾಗಿ ರಿಮಿಷನೆಂಬದು ಲಭಿಸುವದು ದುರ್ಲಭವಾಗಿಕಾಣುತಿದೆ ಶ್ರಮಪಡುತ್ತೇವೆಂದು ಗೋಳಾಡತಕ್ಕ ಜನರ ಮಾತುಗಳನ್ನು ನಂಬುವಣವೆ? ಸರ್ಕಾರದವರು ಸ್ವತಃ ಅಜಮಾಯಿಷೀ ಮಾಡಿ ತಿಳಿಸುವ ರಿಪೋರ್ಟನ್ನು ನಂಬುವಣವೆ?

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜೇಶ್ವರ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಷ್ತಿಹಾರ್‍ನಾಮೆಗಳು.

ನಂ, ೪೬೭, ತಾ|| ೨೩ನೇ ಫೆಬ್ರವರಿ ೧೮೯೨—ಇದರಡಿ ಕಂಡ ಸಬ್ ಅಸಿಸ್ಟೆಂಟ್ ಸರ್ಜಿಯನ್‍ಗಳು ೨ನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ ಬಡ್ತೀ ಮಾಡಲ್ಪಟ್ಟಿರುತ್ತಾರೆ.—

೧. ಮೆ|| ಟಿ. ಎಸ್. ನಂಜಪ್ಪ ಎಂ. ಬಿ. ಎಂ. ಸಿ.
೨. " ಪಿಬ್ಬ್ಯಶ್ರೀನಿವಾಸಯ್ಯಂಗಾರ್, ಎಂ. ಬಿ ಎಂ. ಸಿ
೩. " ಬಿ ಡಿ. ರಾಘವೇಂದ್ರರಾವ್, ಎಲ್. ಎಂ. ಅಂಡ್. ಎಸ್.
೪. " ಸಿ. ಜಿ. ಜನುವರ್‍ಸಿಂಗ್, ಎಲ್. ಎಂ. ಅಂಡ್ ಎಸ್.

ನಂ. ೪೫೬ ತಾ|| ೨೫ನೇ ಫೆಬ್ರವರಿ, ೧೮೯೨—ಮೆ|| ಪಿ. ವೆಂಕಟಾಚಾರವರು ಕಡೂರ್ ಡಿಸ್ಟ್ರಿಕ್ಟ್ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ವ ಟ್ರಿಜರಿ ಆಫೀಸರ್ ಕೆಲಸಗಳ ಚಾರ್ಜಿನಿಂದ ಬಿಡುಗಡೆಯಾದ ಕೂಡಲೇ, ಈಗ ಸಸ್ಪೆಂಡ್ ಮಾಡಲ್ಪಟ್ಟಿರುವ ಎಂ. ಮಂಗಪತಿ ನಾಯುಡರವರಿಗೆ ಬದಲಾಗಿ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿಕ್ಕಮಗಳೂರ್ ಮುನ್ಸಫರಾಗಿ ಆಕ್ಟಿಂಗ್ ತರೀಕ ಕೆಲಸ ನೋಡತಕ್ಕದ್ದು.

ನಂ. ೪೫೭ ತಾ ೨೯ನೇ ಫೆಬ್ರವರಿ, ೧೮೯೨—ಚೆನ್ನರಾಯಪಟ್ಟಣ ತಾಲ್ಲೂಕ ಅಮಲ್‍ದಾರ್ ಕೆ. ರಾಮಾನುಜಯ್ಯಂಗಾರ್ರವರು ಮ. ಪಂಚನದ ರಾಯರವರ ಗೈರ್ ಹಾಜರಿಯಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಾಸನ ಡಿಸ್ಟ್ರಿಕ್ಟಿನಲ್ಲಿ ಆಫಿಷಿಯೇಟಿಂಗ್ ಅಸಿಸ್ಟೆಂಟ್ ಕಮಿಷನರಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ನಂ. ೪೫೮.—ಮಿಸ್ ಅಯಾಚೆಮ್ಮಾಳ್ ಎಲ್. ಎಂ. ಎಸ್. ಯವರು ಮೂರನೇ ಗ್ರೇಡ್ ಅಸಿಸ್ಟೆಂಟ್ ಸರ್ಜಿಯನಾಗಿ ನೇಕರರ್.

ನಂ. ೪೫೯.—ಖಜಾನಾ ಬಕ್ಷಿ ಮೆ|| ಪಿ. ಪಿ. ರಾಸಾಮಿ ಮುದಲಿಯಾರ್ರವರು, ಈಸಂಸ್ಥಾನದ ಹುಜೂರ್ ಖಜಾನೆಯ ಆಫಿಸರರಾಗಿ ನೇಮಕಮಾಡಲ್ಪಟ್ಟಿರುತ್ತಾರೆ. ಮೆ|| ಟಿ. ರಾಯಲು ಶೆಟ್ಟಿಯವರು, ಸಂಸ್ಥಾನದ ಹುಜೂರ್ ಖಜಾನೆಯ ಬಕ್ಷಿಯರಾಗಿ ನೇಕರರ್ ಮಾಡಲ್ಪಟ್ಟಿರುತ್ತಾರೆ.

ನಂ. ೨. ತಾರೀಖ್ ೨೯ನೇ ಫೆಬ್ರವರಿ ೧೮೯೨. ಶ್ರೀಮೋಗಾಚೇರಿ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ರಾಮಸ್ವಾಮಯ್ಯಂಗಾರ್ರವರು, ಭೂಗಾಮಿನಾ ತರೀಫ ತಮ್ಮ ಇತರ ಕೆಲಸಗಳೊಡನೆ, ಬೆಂಗಳೂರ್ ಮುನ್ಸಫರ ಸಿವಿಲ್ ಜ್ಯುರಿಸ್‍ಡಿಕ್ಷನಿಗೆ ಸೇರಿದ ಸ್ಥಳ ಸರಹದ್ದಿನೊಳಗಾಗಿ ಚಲಾಯಿಸುವದಕ್ಕೆ ಮುನ್ಸಫ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ. ೪೬೦—ಸರ್ಕಾರ್ ನೌಕರಿಯಲ್ಲುಂಟಾದ ತಾತ್ಕಾಲಿಕ ಜರೂರಿಯಾತ್ ನಿಮಿತ್ತದಿಂದ ಇದರಡಿ ಕಂಡ ಆಫಿಸರ್‍ಗಳ ನೇಕರದಾತಿಗಳು ಪಸ್ಥಳ ಪಿಲೇವಾರಿಗಳು ಕೂಡಲೇ ಜಾರೀಯಲ್ಲಿ ತರತಕ್ಕದ್ದೆಂದು ಹುಕುಂ ಮಾಡಲ್ಪಟ್ಟಿರುತಿವೆ.

ಬೆಂಗಳೂರ್ ಅಮಲ್ದಾರ್ ಕುಪ್ಪುಸ್ವಾಮಿ ನಾಯುಡರವರು ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ನೌಕರಿಯುಬಗ್ಯೆ ಜಾಸ್ತೀ ಅಸಿಸ್ಟೆಂಟ್ ಕಮಿಷ್ನರರಾಗಿರತಕ್ಕದ್ದು.

ತುಮಕೂರ್ ತಾಲ್ಲೂಕ್ ಅಮಲ್ದಾರ್ ಅಬ್ದುಲ್ ಅಜೀಜ್‌ಯವರು ತುಮಕೂರ್ ಡಿಸ್ಟ್ರಿಕ್ಟಿನಲ್ಲಿ ನೌಕರಿಯುಬಗ್ಯೆ ಜಾಸ್ತೀ ಅಸಿಸ್ಟೆಂಟ್ ಕಮಿಷ್ನರರಾಗಿರತಕ್ಕದ್ದು.

ಸೆಟಲ್‌ಮೆಂಟ್ ಇಲಾಖೆಯಲ್ಲಿ ಸ್ಪೆಷಿಯಲ್ ಡ್ಯೂಟಿ ಮೇಲಿರುವ ಅಮಲ್ದಾರ್ ಪಿ. ರಾಮಸ್ವಾಮಿ ಅಯ್ಯಂಗಾರ್ಯರವರು, ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ನೌಕರಿಯುಬಗ್ಯೆ ಜಾಸ್ತೀ ಅಸಿಸ್ಟೆಂಟ್ ಕಮಿಷ್ನರರಾಗಿರತಕ್ಕದ್ದು.

ನಂ. ೬೬೨ ತಾ॥ ೨ನೇ ಮಾರ್ಚ್ ೧೮೯೨.—ರೆವಿನ್ಯೂ ಸರ್ವೇ ಇಲಾಖೆಯಲ್ಲಿ ಕೆಲಸ ನೋಡುತ್ತಲಿರುವ ಅಸಿಸ್ಟೆಂಟ್ ಕಮಿಷನರ್ ಮ॥ ಡಿ. ಅಪ್ಪುರಾಯರವರು, ಜನರಲ್ ರಿಫರ್ ಫರ್ಲೋ ಯರು ಪ್ರಿವಿಲೇಜ್ ರಜಾ ಮೇರೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಮೈಸೂರ್ ರೆವಿನ್ಯೂ ಸರ್ವೇ ಇಲಾಖಾ ಡೆಪ್ಯುಟಿ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ್ ಮೇಕರರಾಗಿ ನೇಮಕರಾಗಿದಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಅಲಹಾಬಾದಿನ ಆರ್ಯ ಸಮಾಜದವರು, ಗತಿಸಿದ ಬ್ರಾಡ್ಲಾ ಯವರ ಜ್ಞಾಪಕಾರ್ಥವಾಗಿ ಒಂದು ಸಂಸ್ಕೃತ ಮತ್ತು ಇಂಗ್ಲಿಷ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಯೋಚಿಸುತ್ತಾರೆ.

ಕಲ್ಕತ್ತಾ ಸ್ಟಾಂಡಿಂಗ್ ಕಾಂಗ್ರೆಸ್ ಕಮಿಟಿಗೆ ಸರ ರಮೇಶ ಚಂದ್ರಮಿತ್ತರಿಯವರನ್ನು ಪ್ರೆಸಿಡೆಂಟರನ್ನಾಗಿ ಚುನಾಯಿಸಿದರೆಂದು ತಿಳಿಯಬರುತದೆ.

ಚೀನಾ ರಾಜ್ಯದಲ್ಲಿ ಉಪಯೋಗಿಸಲ್ಪಟ್ಟ ಪೋಸ್ಟ್ ಸ್ಟಾಂಪುಗಳು ಬಹಳ ಪ್ರಯೋಜನಕಾರಿಯಾದದ್ದು. ಏತಕ್ಕೆಂದರೆ, ಆ ದೇಶದಲ್ಲಿ ೧೦೦ ಅಂತ ಸ್ಟಾಂಪುಗಳನ್ನು ಕೊಟ್ಟರೆ ಅದಕ್ಕೆ ಪ್ರತಿಯಾಗಿ ಒಂದು ಮಗುವನ್ನು ಕೊಟ್ಟುಬಿಡುತ್ತಾರೆ. ಈ ರೀತಿಯಿಂದ ರೋಮನ್ ಕ್ಯಾಥೋಲಿಕ್ ಜನಗಳು ಉಪಯೋಗಿಸಲ್ಪಟ್ಟ ಸ್ಟಾಂಪುಗಳನ್ನು ಕೂಡಿಟ್ಟು, ೧೦೦ ಸ್ಟಾಂಪುಗಳಾದಾಗ ಅವನ್ನು ಕೊಟ್ಟು ಒಂದು ಮಗುವನ್ನು ತೆಗೆದುಕೊಂಡು ಅದನ್ನು ಒಂದು ಕ್ರಿಶ್ಚಿಯನ್ ಮಗುವಾಗಿ ಸಾಕುತ್ತಾರೆಂದು ಕ್ರಿಶ್ಚಿಯನ್ ಪೇಟ್ರಿಯಾಟ್ ಪತ್ರಿಕೆ ತಿಳಿಸುತ್ತದೆ.

ಒಬ್ಬ ಮನುಷ್ಯನು ಆಸ್ಟ್ರೀಯ ಎಂಬ ಸ್ಥಳದಿಂದ ಒಬ್ಬ ಸ್ತ್ರೀಯಳನ್ನು ಸ್ನೇಹ ಮಾಡಿ ಅಲ್ಲಿಂದ ಕಲ್ಕತ್ತಾ ಪಟ್ಟಣಕ್ಕೆ ಕರೆದುಕೊಂಡು ಬಂದು ಕೆಲವು ದಿವಸ ಸುಖವಾಗಿದ್ದುಕೊಂಡಿದ್ದು ಒಂದು ದಿನ ಅವನು ಅವಳಿಗೆ ಆಕೆಯ ಹುಟ್ಟಿದ ಹಬ್ಬ ಮರ್ಯಾದಿಸಿದನು. ಅವಳು ಮನೆಗೆ ಬಂದು ಬುದ್ಧಿ ಜ್ಞಾನವಿಲ್ಲದೆ ಬಿದ್ದಿರಲು ಆಗ ಅವಳನ್ನು ಕೊಂದು ಅವಳ ಮೈಮೇಲಿದ್ದ ಒಡವೆಗಳನ್ನು ತೆಗೆದುಕೊಂಡು ಅವನು ಪರಾರಿಯಾದ ಅವನು ಸಿಕ್ಕಿಬಿದ್ದು ದಂಡನೆ ಹೊಂದುವನು ಎಂಬುದರಲ್ಲಿ ಸಂಶಯವಿಲ್ಲ!

ಮಿಸ್ಸರ್ ಎಂಬ ಸ್ಥಳದಲ್ಲಿ ಒಂದು ಆಶ್ಚರ್ಯಕರವಾದ ಬಾವಿಯು ಸಿಕ್ಕಿತು. ಆ ದಿಕ್ಕಿನ ಉತ್ತರ ಭಾಗದಲ್ಲಿ ಒಂದು ಮಹತ್ತು ಇದೆ. ಆ ದಾರಿಯ ಬದಿಯ ಮಧ್ಯದಲ್ಲಿ ಒಂದು ಬಾವಿಯು ಸಿಕ್ಕಿತು. ಆ ಬಾವಿಯು ಸುತ್ತಲೂ ಮರದಿಂದ ಕಟ್ಟಿದೆ. ಆ ಬಾವಿಯ ಒಂದು ಪಾರ್ಶ್ವದಲ್ಲಿ ಕಲ್ಲಿನ ಮೇಲೆ ಅಕ್ಷರಗಳು ಕೆತ್ತಲ್ಪಟ್ಟಿವೆ. ಅದರ ಅದು ಯಾವ ಭಾಷೆಯ ಅಕ್ಷರವೋ ತಿಳಿಯದು. ಬಾವಿಯು ಬಹು ಪುರಾತನವಾದದ್ದೆಂದು ತಿಳಿಯಬರುತದೆ. ಅದರ ನೀರು ಬಹು ಶೀತಲವಾಗಿದೆ, ಮತ್ತು ಕೆಲವು ರೋಗಗಳನ್ನು ಗುಣ ಮಾಡತಕ್ಕದ್ದೆಂದು ಹೇಳುತ್ತಾರೆ.

ರೋಮ್ ಪಟ್ಟಣದಲ್ಲಿ ವಾಸ ಮಾಡುತಲಿದ್ದ ಒಬ್ಬ ಐಶ್ವರ್ಯವಂತಳಾದ ವಿಧವೆಯು ತನ್ನ ಆಸ್ತಿಯಲ್ಲಿ ಮುಕ್ಕಾಲು ಪಾಲನ್ನು ಚಾರ್ಲ್ಸ್ ಗ್ರೀವ್ಸ್ ಎಂಬುವನಿಗೆ ಕೊಡಬೇಕೆಂದು ಬರೆದಳು. ಇದನ್ನು ಕೇಳಿ ಗ್ರೀವ್ಸ್ ಎಂಬುವನು ತನಗೆ ಉಳಿದ ಕಾಲುಪಾಲು ಸೇರದಿದ್ದಲ್ಲವಲ್ಲ ಎಂದು ಆ ವಿಧವೆಯೊಡನೆ ಸ್ನೇಹವೂ ಎಲ್ಲ ಆಸ್ತಿಯನ್ನು ತಾನೇ ಸುಲಿದುಕೊಳ್ಳಬೇಕೆಂದು ಒಂದಾನೊಂದು ದಿವಸ ಸಾರಾಯಿಯ ಸಂಗಡ ವಿಷವನ್ನು ಬೆರಸಿ ಆ ವಿಧವೆಗೆ ಕೊಟ್ಟನು. ಏನೂ ತಿಳಿಯದ ಆ ವಿಧವೆಯು ಅದನ್ನು ಪಾನ ಮಾಡಿದಳು. ಸ್ವಲ್ಪ ಕಾಲವಾದನಂತರ ಅವಳು ಮೃತಪಟ್ಟಳು. ಇದನ್ನು ತಿಳಿದು ಆಸ್ಪತ್ರೆಗೆ ಅವಳ ಶವವನ್ನು ತೆಗೆದುಕೊಂಡು ಹೋಗಿ ಪರೀಕ್ಷೆ ಮಾಡಿ ನೋಡಲಾಗಿ ಅದರಲ್ಲಿ ವಿಷವು ಸಿಕ್ಕಿದುದರಿಂದ ಚಾರ್ಲ್ಸ್ ಗ್ರೀವ್ಸ್ ಎಂಬುವನೇ ಈ ಅಕೃತ್ಯಕ್ಕೆ ಕರ್ತೃವೆಂದು ತಿಳಿದು ಅವನನ್ನು ತಕ್ಷಣ ಜೈಲಿಗೆ ಹಾಕಿದರು.

ರೀವಾ ಮಹಾರಾಜರವರ ಪತಿಯು ಕೆಲವು ದಿವಸಗಳ ಕೆಳಗೆ ಕಾಲವಾದದ್ದನ್ನು ಎಲ್ಲರೂ ಓದಿರಬಹುದು. ಅಂದಿನಿಂದ ರಾಣಿಯವರಿಗೆ ಮನಸ್ಸು ಬಂದ ದಿವಾನರನ್ನು ನೇಮಿಸಲು, ಅವಕಾಶವಿಲ್ಲದವರಾಗಿರುತ್ತಾರೆ. ರಾಜ್ಯದಲ್ಲಿರತಕ್ಕ ದೊಡ್ಡ ದೊಡ್ಡ ಕೆಲಸಗಳಿಗೆಲ್ಲ ಒಂದೇ ಮನೆಯವರನ್ನು ನೇಮಿಸಿರುವದರಿಂದ ಅದು ರಾಜ್ಯಕ್ಕೆ ಅನುಕೂಲವಿಲ್ಲದ್ದರಿಂದ, ಅವನ್ನು ಬದಲಾಯಿಸಿ ತಿಳುವಳಿಕೆಯುಳ್ಳ ಮತ್ತೊಬ್ಬ ದಿವಾನನನ್ನು ನೇಮಿಸಲು ಶಕ್ತಿಯನ್ನು ಕೊಡಬೇಕೆಂದು ಗವರ್ನರವರನ್ನು ಕೇಳಿಕೊಂಡಿದ್ದರು. ಗವರ್ನರವರು ಅದಕ್ಕೆ ಒಬ್ಬ ಪ್ರತಿನಿಧಿಯನ್ನು ತಮ್ಮ ಸಮೀಪಕ್ಕೆ ಕಳುಹಿಸಬೇಕೆಂದು ಹೇಳಿದರು. ಅದರಂತೆಯೇ ಕಳುಹಿಸಲು, ಗವರ್ನರವರಿಗೆ ಮನಸ್ಸು ಬರಲಿಲ್ಲವಾದ್ದರಿಂದ ಸುಮ್ಮನಿರಬೇಕಾಯಿತು. ರೀವಾ ಮಹಾರಾಜರು ಮರಣಕಾಲದಲ್ಲಿ ತನ್ನ ಪತ್ನಿಗೆ ಮನಸ್ಸು ಬಂದ ದಿವಾನರನ್ನು ಚುನಾಯಿಸುವ ಶಕ್ತಿಯನ್ನು ಕೊಡಬೇಕೆಂದು ಹೇಳಲಿಲ್ಲವಾದ್ದರಿಂದ ಗವರ್ನರವರು ಕೊಡಲಿಲ್ಲವೆಂದು ಉತ್ತರ ಕೊಟ್ಟರು.

ಚೀನಾ ದೇಶದ ನಿವಾಸಿಗಳು ಇಲಿ, ಬೆಕ್ಕು, ನಾಯಿ ಮುಂತಾದ ಪ್ರಾಣಿಗಳನ್ನು ಆಹಾರವಾಗಿ ಉಪಯೋಗಿಸಿಕೊಳ್ಳುತ್ತಾರೆಂದು ಎಲ್ಲರೂ ಹೇಳುತ್ತಾರೆ. ಆದರೆ ಅದು ಹಾಗಲ್ಲ; ಆ ದೇಶದಲ್ಲಿ ಆ ಪ್ರಾಣಿಗಳನ್ನು ಉಪಯೋಗಿಸಿಕೊಳ್ಳುವದು ೧೦೦೦ಕ್ಕೆ ಒಬ್ಬನು ಇರಬಹುದು. ಆದರೆ ಅಲ್ಲಿನ ನಿವಾಸಿಗಳಲ್ಲಿ ಅನೇಕರು ಅವುಗಳನ್ನು ತಿನ್ನುವದಿಲ್ಲ. ಅದೂ ಅಲ್ಲದೆ ಬಡವರಾದವರು ಕೂಡ ಅನ್ನವನ್ನು ತಿನ್ನುತ್ತಾರೆ. ಬಡವರಾಗಿಯೂ, ಐಶ್ವರ್ಯವಂತರಾಗಿಯೂ ಇಲ್ಲದೆ ಮಧ್ಯಸ್ಥರಾಗಿರುವವರು ಮೀನುಗಳನ್ನೂ, ಕೋಳಿಗಳನ್ನೂ ಉಪಯೋಗಿಸುತ್ತಾರೆ. ಅಲ್ಲಿನ ಅಲ್ಪ ಪ್ರಾಣಿಗಳಾದ ಹೆಗ್ಗಣ, ಬೆಕ್ಕು, ನಾಯಿಗಳನ್ನು ತಿನ್ನುತ್ತಾರೆಂಬುದು ಅಪದ್ಧ. ಆದರೆ ಅಲ್ಲಿನ ಆಶ್ಚರ್ಯವೇನೆಂದರೆ—ಅಲ್ಲಿನ ರಾಜನು ಏನಾ ಕೆಳಗೆ ಹೇಳಲ್ಪಡುವವುಗಳನ್ನು ತಿನ್ನಕೂಡದು; ಮತ್ತು ಆ ರಾಜನು ಆ ಪದಾರ್ಥಗಳು ಏನಾ ಮತ್ತಾವುದನ್ನೂ ತಿನ್ನುವದಿಲ್ಲ. ಕರಡಿಯ ಪರಿಗಳು, ಜಿಂಕೆಯ ಬಾಲ, ಬಾತುಗಳ ನಾಲಿಗೆ, ಒಂಟೆಯ ಹಿಂಬಾಗ, ಎತ್ತಿನ ಹಿಮ್ಮಡಿಗಳು, ಕೋತಿಯ ತುಟಿಗಳು ಮತ್ತು ಮೀನುಗಳ ಬಾಲ.

ಉತ್ತರ ಅಮೇರಿಕಾ ಖಂಡದ ಯುನೈಟೆಡ್ ಸ್ಟೇಟ್ಸಿನಲ್ಲಿ ವರ್ತಮಾನ ಪತ್ರಿಕೆಗಳಿಗೆ ಲೇಖನಗಳನ್ನು ಬರೆದು ಆದಾಯದ ಜೀವನವನ್ನು ಮಾಡಿ ಐಶ್ವರ್ಯವಂತರಾಗಿರುವವರು ಅನೇಕರು ಇದ್ದಾರೆ ಎಂತಲೂ, ಮತ್ತು ಅಲ್ಲಿನ ವಿದ್ಯಾಭಿವೃದ್ಧಿಯ ಚಮತ್ಕಾರವನ್ನು ಕುರಿತು ಅಲ್ಲಿನ ಒಂದು ಪತ್ರಿಕೆಯು ತಿಳಿಸುತ್ತದೆ. ಅದರಿಂದ ಮುಂದೆ ಬರೆಯಲ್ಪಡುವವರು ಈಗ ಎಷ್ಟು ದ್ರವ್ಯವನ್ನು ಸಂಪಾದಿಸಿದವರೋ ಅದನ್ನು ಮುಂದೆ ತಿಳಿಸುತ್ತೇವೆ. ಡಾಕ್ಟರ್ ಚಾರ್ಲ್ಸ ಡ್ಯಾನ ಎಂಬುವರು ಇಂಗ್ಲಿಷ ವರ್ತಮಾನ ಪತ್ರಿಕೆಗಳಿಗೆ ಲೇಖನವನ್ನು ಬರೆಯುತಾ ೫೦,೦೦೦ ಪೌಂಡಿನ ಆಸ್ತಿ ಸಂಪಾದಿಸಿದ್ದಾರೆ. ಅದೇ ಕೆಲಸದಲ್ಲಿ ಅಭಿವೃದ್ಧಿಗೆ ಬಂದ ಪುಲಿಟ್ಜರ್ ಎಂಬುವರು ೧,೬೦,೦೦೦ ಪೌಂಡಿನ ಸ್ಥಿತಿವಂತರು. ವಿಲ್ಸನ್ ಹಾರ್ನ್ ಎಂಬುವರ ಆಸ್ತಿಯು ೬೦೦೦ ಪೌಂಡುಗಳು, ಜಿ. ಡಬ್ಲ್ಯು ಎಂಬುವರ ಆಸ್ತಿಯು ೩,೦೦,೦೦೦ ಪೌಂಡುಗಳು, ಎನ್ಲಾರ್ಡ್ ನೈ ಎಂಬುವರ ಆಸ್ತಿಯು ೫೦,೦೦೦ ಪೌಂಡುಗಳು, ಫ್ರೆಂಚ್. ಬ್ಯೂಮಿಸ್ ಎಂಬುವರ ಆಸ್ತಿಯು ೨೦,೦೦೦ ಪೌಂಡುಗಳು, ಇ. ಪಿ. ಹೇಲಿಯವರ ಆಸ್ತಿಯು ೧೫,೦೦೦ ಪೌಂಡುಗಳು, ಇದೇ ರೀತಿಯಲ್ಲಿ ಇನ್ನೂ ಅನೇಕರು ಅಭಿವೃದ್ಧಿಗೆ ಬಂದಿರುತ್ತಾರೆ. ಅದರಿಂದ ಬಹು ಪ್ರಖ್ಯಾತಿಯುಳ್ಳವರಾಗಿಯೂ, ಜನಗಳಿಗೆ ಆನಂದಕರವಾಗಿಯೂ ಮ॥ ಜೇಮ್ಸ್ ವಿಟ್‌ಕಾಂಬ್ ಯವರು ಹಾಗೆ ಬರೆದಿರುವರು; ಇವರ ಲೇಖನದಿಂದಲೂ, ಮತ್ತು ಉಪನ್ಯಾಸಗಳಿಂದಲೂ ವರ್ಷ ಒಂದಕ್ಕೆ ಸುಮಾರು ೪೦೦೦ ಪೌಂಡುಗಳು ಉತ್ಪತ್ತಿಯಾಗುತ್ತವೆ.

ಅಸ್ಸಾಮಿನಲ್ಲಿ ನಡೆದ ವೃತ್ತಾಂತವನ್ನು ಕೇಳಿದ ಇಂಡಿಯಾ ಗವರ್ನಮೆಂಟಿನವರಿಗೆ ಯಶಸ್ಸು ದೊರೆಯಲಿಲ್ಲ; ಒಬ್ಬ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರವರು ಸಭೆಯಿಂದ ಹೊರಟು ಅಸ್ಸಾಮಿನ ದಿಕ್ಕಿಗೆ ಬರಲು, ಎದುರಿಗೆ ಬಂದ ಬೆಟ್ಟಗಳನ್ನು ಸುತ್ತಿಕೊಂಡು, ತಲೆಯಮೇಲೆ ಒಂದು ಕುಕ್ಕೆಯನ್ನು ಇಟ್ಟುಕೊಂಡು ಹೆಗಲಿನಮೇಲೆ ಹೊರೆಗಳನ್ನು ಹೊತ್ತುಕೊಂಡು ಬರುತ್ತಿದ್ದ ಕೆಲವು ಜನರನ್ನು ಕಂಡು, ಆ ಜನರು ಅವರ ಸಮೀಪಕ್ಕೆ ಬಂದು ಅವರು ಅನುಭವಿಸುತ್ತಿರುವ ಕಷ್ಟದಿಂದ ಬಿಡಿಸಬೇಕೆಂದು ಸೂಪರಿಂಟೆಂಡೆಂಟರನ್ನು ಬೇಡಿಕೊಂಡರು. ಅದನ್ನು ವಿಚಾರಿಸಲಾಗಿ ಒಬ್ಬನೊಬ್ಬ ಮುನಸಿಫ್ ಎಂಬುವನು ಕೆಲವು ಜನಗಳನ್ನು ಕ್ರಯಕ್ಕೆ ತೆಗೆದುಕೊಂಡು ಗುಲಾಮರಂತೆ ತನ್ನಲ್ಲಿಟ್ಟುಕೊಂಡು ದಾಸ್ಯನರಂತೆ ಬಾಧಿಸುತ್ತಿದ್ದನು. ಇದನ್ನು ಕಂಡು ಇವರು ಮಾಡಿಸಲು, ಗವರ್ನಮೆಂಟಿನವರು ಆ ಮುನಸಿಫ ವಿಶ್ವಾಸನನ್ನು ಇಂಡಿಯನ್ ಪೀನಲ್‌ಕೋಡ್ ೩೭೦, ೩೭೧, ೩೭೪, ಸೆಕ್ಷನ್‌ಗಳಿಂದ ಛಾರ್ಜ್ ಮಾಡಲು, ವಿಚಾರಣೆಯಲ್ಲಿ ಅವನಿಗೆ ಒಂದು ವರ್ಷ ಕಠಿಣ ಸಜಾ ವಿಧಿಸಿದರು. ಆದರೆ ಅಸ್ಸಾಮಿನ ನ್ಯಾಯಾಧಿಪತಿಯು ಸೆಕ್ಷನ್ ೩೭೪, ೩೭೦, ಅನುಸರಿಸಕ್ಕೆ ಗುರುವಾಗಿಲ್ಲವೆಂದು ಹೇಳಿದರು; ಆ ಮುನಸಿಫ ವಿಶ್ವಾಸನು ಹೈಕೋರ್ಟಿಗೆ ಅಪೀಲ್ ಮಾಡಿದನು. ಅದು ಹಾಗಿರಲಿ; ಕೆಲವು ಕೂಲಿ ಜನರನ್ನು ಗುಲಾಮರನ್ನಾಗಿ ಮಾಡಿಕೊಂಡು ಹಿಂಸಿಸುವ ವಿಷಯ ಗವರ್ನಮೆಂಟಿನವರು ಏನು ಮಾಡುತ್ತಿದ್ದರು.

NOTICE.

T. SAMMI'S WONDERFUL MEDICINES.

ಟಿ. ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು.

ನನ್ನ ಸ್ನೇಹಿತರನೇಕರು ನನ್ನ ಔಷಧಗಳನ್ನು ಸೇವಿಸಿ ಸೌಖ್ಯವನ್ನೈದಿದ ಸಂಗತಿಯನ್ನು ಸಕಲರಿಗೂ ತಿಳಿಯಪಡಿಸುವಂತೆ ನನ್ನನ್ನು ಪ್ರಾರ್ಥಿಸಿದ್ದರಮೇಲೆ ಅವರ ಕೋರಿಕೆಯಂತೆ ಮೇಲ್ಕಂಡ ಸಂಗತಿಯನ್ನು ಸಮಸ್ತ ಜನರಿಗೂ ಇದರಿಂದ ತಿಳಿಯಪಡಿಸಿ ನನ್ನ ಔಷಧಗಳು ತಪ್ಪದೆ ಗುಣವನ್ನುಂಟುಮಾಡುವವೆಂದು ವಿಜ್ಞಾಪಿಸಿಕೊಳ್ಳುತ್ತೇನೆ.

ಹಿಂದೂ ತೈಲವು.—ನರಗಳ ನೋವು, ಎದೆನೋವು, ಪಾರ್ಶ್ವವಾಯು, ಪಕ್ಕೆನೋವು, ಕೀಲುನೋವು, ಮೂಲವ್ಯಾಧಿ, ದೇಹದ ಬಾವುಗಳು, ತಲೆನೋವು, ತುರಿ, ಕುರುಗಳು, ವ್ರಣಗಳು, ಗಜ್ಜೆ ಇವುಗಳನ್ನು ನಿವೃತ್ತಿ ಮಾಡುವದು. ಕ್ರಯ ೦–೮–೦ ೦-೮–೦.

ಹಿಂದೂ ಕಷಾಯ.—ವಾಂತಿಭೇದಿ, ಶೀತಭೇದಿ, ರಕ್ತಭೇದಿ, ಹೊಟ್ಟೆನೋವು, ಅಜೀರ್ಣ, ತಲೆನೋವು, ಬಾಯಿ ಕರತ, ಹಲ್ಲುನೋವು, ಗಂಟಲು ವ್ರಣ, ರಜಸ್ಸಂಬಂಧವಾದ ಸ್ತ್ರೀಯರಿಗುಂಟಾಗುವ ರಕ್ತದೋಷ ಇವುಗಳಿಗೆ ಶ್ರೇಷ್ಠವಾದುದಾಗಿದೆ, ಕ್ರಯ ೦–೪ ೦ ೦–೧೨–೦.

ಜ್ವರ ನಿವೃತ್ತಿ.—ಚಳಿಜ್ವರ, ಕಡಲೆ, ಕಲರ್ ಜ್ವರಗಳು, ಆರಣ್ಯಕ ಜ್ವರಗಳು, ಸಂತತಜ್ವರಗಳು, ಇವುಗಳಿಗೆ ಗುಣಕರವಾದ ಔಷಧವು. ಕ್ರಯ ೦–೮–೦ ೦–೧೨–೦.

ರಕ್ತಪುಷ್ಟಿಗೆ ಔಷಧವು.—ಕಂಠಮಾಲೆ, ಮೇಹರೋಗ, ಪಿತ್ತಕರ, ಪಿತ್ತದಿಂದಲು, ಕೆಮ್ಮು ಇವುಗಳಿಂದ ನಿವೃತ್ತಿಸಿ ರಕ್ತಪುಷ್ಟಿ ಮಾಡಿ ಆರೋಗ್ಯವನ್ನುಂಟುಮಾಡುವದು. ಕ್ರಯ ೦–೮ ೦.

ಕೆಮ್ಮಿಗೆ ಔಷಧವು.—ಕೆಮ್ಮು, ಕ್ಷಯರೋಗ, ನಾಯಿಕೆಮ್ಮು, ಎದೆನೋವು, ಉಬ್ಬಸ, ಮೊದಲಾದವುಗಳಿಗೆ ಔಷಧವು. ಕ್ರಯ ೦-೮-೦.

ಶ್ವೇತಕುಷ್ಠ ಔಷಧವು.—ಬಿಳಿ ಕುಷ್ಠದಿಂದ ಕೂಡಿರುವ ತೊನ್ನು ಮೊದಲಾದ ದೇಹ ಬಾಧ್ಯಗಳಿಗೆ ಶ್ರೇಷ್ಠವಾದದ್ದು. ಕ್ರಯ ೩–೮–೦.

ಸೌಖ್ಯಾನ.—ಇದು, ದೌರ್ಬಲ್ಯದಿಂದುಂಟಾಗುವ ರೇತಸ್ಖಲನ, ಇಂದ್ರಿಯನಷ್ಟ, ರೋಗಗಳು ಕ್ಷಯರೋಗ, ಸಂಧಿವಾತ ಮೊದಲಾದವನ್ನೆಲ್ಲಾ ನಿವಾರಿಸತಕ್ಕವುಗಳಾಗಿವೆ. ಕ್ರಯ ೧–೦–೦.

ಆಪರೇಷನ್ ತೈಲ.—ಕಿವಿಯಲ್ಲಿ ನೋವಾಗಲು ಕೀವು ಸುರಿಯುತ ದುರ್ಗಂಧವಾಗಿರುವದು. ಕಿವಿ ಕೇಳದಿರುವದು, ಮುಂತಾದ ಕಿವಿ ರೋಗಗಳನ್ನು ತೊಲಗಿಸುವದು. ಕ್ರಯ ೧–೦–೦

ನರೆತ ಕೂದಲುಗಳನ್ನು ಕಪ್ಪಾಗಿ ಮಾಡುವ ತೈಲವು.—ಇದು ಬಿಳೀ ಕೂದಲನ್ನು ಕಪ್ಪಗೆ ಮಾಡುವದು. ತೈಲದ ಗುಣವು ಹೋಗಲಾರದು. ಇದು ಕೂದಲಿಗೆ ಹಚ್ಚಿದರೆ ಚೆನ್ನಾಗಿ ಕೂದಲು ಹುಟ್ಟಿ ಬೆಳೆಯುವದು. ಕ್ರಯ ೧–೦–೦

ತಲೆಕೂದಲಿಗೆ ಸುಗಂಧವಾದ ತೈಲವು.—ಇದು ಶರೀರವನ್ನು ತಣ್ಣಗೆ ಮಾಡುವದು, ನೇತ್ರಗಳಿಗೆ ಪ್ರಕಾಶವನ್ನುಂಟುಮಾಡುವದು, ಮುಖದಲ್ಲಿ ಕಾಂತಿಯುಂಟುಮಾಡುವದು, ತಲೆಕೂದಲಿಗೆ ಕಾಂತಿಪ್ರದವಾದುದು. ಕ್ರಯ ೧–೦–೦.

ಶಿವತೈಲ.—ಇದು, ಶರೀರದಲ್ಲಿನ ವಾಯು, ಮೂಲವಾಯು, ಚಳುಕು, ಪಾರ್ಶ್ವತಲೆನೋವು, ಗುಳುಕು, ಸಂಧಿವಾತ, ಇವುಗಳಿಗೆ ಶ್ರೇಷ್ಠವಾದ ತೈಲ ಕ್ರಯ ೧–೦–೦.

ದಂತಚೂರ್ಣ.—ಇದು ಬಾಯಿ ಹೊಲಸಿನ ದುರ್ಗಂಧವನ್ನೂ, ದಂತದೊಸಿನ ರಕ್ತಸ್ರಾವವನ್ನೂ ನಿವೃತ್ತಿಸಿ, ಹಲ್ಲುಗಳನ್ನು ಸ್ವಚ್ಛಮಾಡಿ ಕಾಂತಿಯುಂಟುಮಾಡುವುದು. ಕ್ರಯ ೦–೮–೦.

ಪಿತ್ತಗುಳಿಗೆಗಳು.—ಪಿತ್ತವನ್ನೂ ತಲೆನೋವನ್ನೂ ಹೋಗಲಾಡಿಸಿ ಸರಿಯಾಗಿ ಕಾಲಪ್ರವರ್ತಿಯಾದರಿಕ್ಕೆ ಒಳ್ಳೆ ಮಾತ್ರೆಗಳು. ಕ್ರಯ ೦–೮–೦.

ಮೇಲೆ ತಿಳಿಸಲ್ಪಟ್ಟ ಔಷಧಗಳಲ್ಲದೆ ಶ್ರಮನಾಶಕಕ್ಕೆ, ಮರದ ತೈಲಗಳು, ಜ್ವರಗಡ್ಡೆ, ಮೇದು, ಬಹುಮೂತ್ರ ಮೊದಲಾದವುಗಳಿಗೆ ಔಷಧಗಳೂ, ಸಕಲವಿಧ ಇಂಗ್ಲಿಷ್ ಔಷಧಗಳೂ, ಅಪ್ಸಲ್ ತರದ ಕಸ್ತೂರಿಯೂ ಸುಲಭಕ್ರಯಕ್ಕೆ ದೊರೆಯುವವು.

☞ ಮೇಲೆ ಕಂಡ ಔಷಧಗಳು ಮೊದಲಾದವು ಬಳ್ಳಾರಿ ಸಸವೇಶ ನೇರಿದ ಬ್ರಾಂಚ್ ಸೆಟಲಿಯಲ್ಲಿರುವ ಮೆಸ್ಸರ್ಸ್ ಸಾಮಿಯವರ ಶಾಪಿನಲ್ಲಿ ದೊರೆಯುವವು. ನಮ್ಮ ಏಜೆಂಟರಾದ, ಮದರಾಸ್ ಮಿಂಟ್ ಸ್ಟ್ರೀಟ್ ೧೩೬ ನೇ ನಂಬರ್ ಮನೆಯಲ್ಲಿರುವ ಎಸ್. ಯತೀಂದ್ರಸೆಟ್ಟಿ ಅಂಡ್ ಕಂಪೆನಿಯಲ್ಲಿಯೂ, ಮದರಾಸ್ ಗುಜಲಿ ಅಂಗಡಿ ಬಜಾರಿನಲ್ಲಿರುವ ಔಷಧ ಅಂಗಡಿಗಳಲ್ಲಿಯೂ ದೊರೆಯುವವು. ಪಾರ್ಸೆಲ್ ಮೂಲಕ ತರಿಸಿಕೊಳ್ಳುವ ಪಕ್ಷದಲ್ಲಿ ನೇರಾಗಿ ಬಳ್ಳಾರಿಯಿಂದ ತರಿಸಿಕೊಳ್ಳುವುದೇ ಸಿದ್ಧಕ್ರಮವಾಗಿರುವುದು.

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು.

ಮದರಾಸ್ ಪ್ರೆಸಿಡೆನ್ಸೀ ಚಿತ್ತೂರು ಡಿಸ್ಟ್ರಿಕ್ಟ್ ಪುಂಗನೂರಲ್ಲಿ ಅರುಂಬಕಂ ರಂಗರಾವಿನವರ ಬಳಿಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿ ಇರುವ ಪುಸ್ತಕಗಳ ವಿವರ.

ತೆಲುಗು ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ.	ಕ್ರಯ ರೂ.	ಆ.	ಪೈ.
1	ಕೌಮುದೀವಿಲಾಸ (ಮೊದಲಿನಿಂದ ಪಂಚಸಂಧಿಗಳು ರಾಮಕೃಷ್ಣರ ಮಗು ಸಂಸ್ಕೃತ ವ್ಯಾಕರಣ ಸಿದ್ಧಾಂತಕೌಮುದಿಗೆ ಸುಲಭಶೈಲಿ ಆಂಧ್ರಭಾಷಾಂತರ.	0	4	6
2	ಸದಾಶಿವನೀತಿ (ಕನ್ನಡ ಪದ್ಯಕಾವ್ಯ ನೀತಿನಿರೂಪಣ)	0	2	6
3	ರತ್ನಪರೀಕ್ಷೆ (ಪ್ರತಿಪದಾಂಧ್ರ ಟೀಕಾಸಹಿತ ತೆಲುಗು ಪದ್ಯಕಾವ್ಯ)	0	2	6
4	ಉಪಮುಕ್ತ ಚಮತ್ಕಾರ ಸಂಗ್ರಹ (ವಾಗ್ವಿಜೃಂ)	0	2	6
	ಸ್ವರಾಜ್ಯಮ್ (ಸಂಧ್ಯಾನಾಥ್ಯಸಹಿತ)	0	2	0
	ರಘುವೀರಶತಕ (ಪರ್ತಿಸೀಮ ರಾಮಯ್ಯಗಳ)	0	1	6
	ಪ್ರಸ್ತುತ ಬಂದಿನ ಗ್ರಂಥಗಳು.			
7	ಹಿಂದೂ ದೇವತಾ ಶತಕ	0	1	0
8	ಕೃಷ್ಣದೇವ ವಿಚಾರ	0	1	0
	ಶ್ರೀಮದ್ ಮಧ್ವಸಿದ್ಧಾಂತ ಮಧ್ಯವಾಗಿ ಬೇಕಾದ ಗ್ರಂಥಗಳು			
9	ಶ್ರೀಮದ್ ಮಧ್ವವಿಜಯ (ಸಂಸ್ಕೃತ ಕನ್ನಡ ವ್ಯಾಖ್ಯಾನ ಸಹಿತ ೭ ನೇ ಸರ್ಗದ ವರೆಗು)	1	10	0
10	ಶ್ರೀಮನ್ಮಧ್ವ ಸಿದ್ಧಾಂತ (ಸಂಸ್ಕೃತ ಕನ್ನಡ ವ್ಯಾಖ್ಯಾನ ಸಹಿತ [illegible])	1	1	0
11	ದಿವ್ಯ ಸಂಹಿತಾ ಕೋಶದ ಪ್ರತಿ	0	15	0
12	ಸ್ತೋತ್ರ—ಶ್ರೀ ಹರಿವಾಯುಸ್ತುತಿ, ನಖಸ್ತುತಿ, ಮಧ್ವಾಷ್ಟಕ, [illegible]	0	14	0
13	ಸ್ತೋತ್ರಮಾಲಿಕಾ [illegible]	0	3	6
14	ತಾರತಮ್ಯ ರತ್ನದರ್ಪಣ	0	4	6
15	ದಶಾವತಾರ ಸ್ತೋತ್ರ ಸಹಿತ [illegible]	0	1	6
16	ವಾಯುಸ್ತುತಿ	0	1	0
17	ವಿಷ್ಣುಸ್ತೋತ್ರ	0	1	6
18	ಪದ್ಯಮಾಲಾ (ದೇವತಾದ್ವಯ ಪದ್ಧತಿ)	0	1	6
19	ನವಗ್ರಹ ಸ್ತೋತ್ರ, [illegible]	0	1	0
	ಬಾಳಬೋಧ ಅಕ್ಷರದಿಂದ ಮುದ್ರಿಸಲ್ಪಟ್ಟ ಪುಸ್ತಕಗಳು			
20	ತಂತ್ರಸಾರಸಂಗ್ರಹ (ಶ್ರೀ ರಾಘವೇಂದ್ರಸ್ವಾಮಿ ಚರಣವಿರಚಿತ ಬ್ರಹ್ಮಸೂತ್ರ ವ್ಯಾಖ್ಯಾನ ಟಿಪ್ಪಣಿ ಸಹಿತ)	1	10	0
21	ಸವ್ಯಾಖ್ಯಾನ ನಾರಾಯಣ ಪಂಡಿತಾಚಾರ್ಯ ಕೃತ ಸುಮಧ್ವವಿಜಯ (ಶ್ರೀ ಮಾಧ್ವ [illegible])	0	8	6
22	ಶ್ರೀಮದ್ಭಾಗವತ ಮೂಲ	0	3	6
23	ಮಣಿಮಂಜರೀ ಮೂಲ	0	3	0
24	ಕಾರ್ಯಾಕಾರ್ಯ ನಿರ್ಣಯ (ಮಧ್ವಾರ್ಥ ಸಹಿತ)	0	2	0
25	ಪದ್ಯಮಾಲಾ (ದೇವತಾದ್ವಯ ಪದ್ಧತಿ)	0	1	6
26	ರಾಘವೇಂದ್ರ ಗುರುರಾಜ ಸ್ತೋತ್ರಮಾಲಾ ಸಹಿತ ನಾಮಾವಳಿ	0	1	6

ಈ ಪುಸ್ತಕಗಳು ಬೇಕಾದವರು ಈ ಕೆಳಗೆ ಕೈಬರಹ ಮಾಡಿ ಇರುವವರಿಗೆ ಬರೆದು ತರಿಸಿಕೊಳ್ಳಬಹುದು. ಒಂದೇ ಮಾದರಿ ಹತ್ತು ಪುಸ್ತಕಗಳು ಒಂದೇಸಾರಿ ತೆಗೆದುಕೊಳ್ಳುವವರಿಗೆ ಒಂದು ಪುಸ್ತಕ ಕ್ರಯವಿಲ್ಲದೆ ಕೊಡಲ್ಪಡುವದು.

ಅರುಂಬಕಂ ರಂಗರಾವ್,
ಪುಂಗನೂರು

☞ BANGALORE:—Printed and published at the KARNATAKA PRESS, No. 50, HOSPITAL ROAD PETTAH —1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE—MONDAY, MARCH 14, 1892 [No. 11.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಮಾರ್ಚ್ ೧೪ ನೇ ತಾರೀಖು ಸೋಮವಾರ. [ಸಂಚಿಕೆ ೧೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

[illegible]

[illegible]	8—0—0	9—0—0
[illegible]	9—0—0	10—8—0

ಇಂಗ್ಲಿಷ್ ಬಿಟ್ಟು ಕನ್ನಡಭಾಗಗಳಿಗೆ.

[illegible]	4—0—0	5—0—0
[illegible]	5—0—0	6—0—0

[illegible]

ಪ್ರಕಟನೆಯ ವಿಷಯ.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

[illegible]

ಬಿ. ವಿನಕರರಾವ್ ಮತ್ತು ಕಂಪೆನಿಯವರ

ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

೯. [illegible]

೧೦. [illegible]

೧೧. [illegible]

೧೨. [illegible]

೧೩. [illegible]

[illegible]

Bangalore City Municipality.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ನೋಟೀಸು.

[illegible]

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

೮. [illegible]

[illegible]

M. ANNAJI RAO,
For President,
City Municipal Commission.

Bangalore City Municipality.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಜಾಹೀರನಾಮೆ.

[illegible]

ನೋಟೀಸು.

[illegible]

ತಿಳಿಸಲ್ಪಟ್ಟ ತಾರೀಖ್ ಮೊದಲು ಒಂದು ವಾರದೊಳಗಾಗಿ ಆವಶ್ಯಕವಾದ ಕೈಫಿಯತ್ತು ಮುಚ್ಚಳಿಕೆಯನ್ನು ಆವರುಬರ ದಾಖಲಿಸಲು ತಪ್ಪಿದರೆ ಅವರ ರೇವಣೀ ಬೊಬಲನು ವಂಶೆನಾಗಿ ಸೇರಿಸಿಕೊಳ್ಳಲ್ಪಡುವುದು. ಯಾವ ದರಖಾಸ್ತನ್ನೇ ಆಗಲಿ ಯಾವ ಕಾರಣವನ್ನೂ ತಿಳಿಸದೆ ತಳ್ಳಿಹಾಕುವ ಸ್ವಾತಂತ್ರ್ಯವನ್ನು ಬೋರ್ಡಿನವರು ಉಳಿಸಿಕೊಂಡಿರುತ್ತಾರೆ.

M. ANNAJI RAO,
For President,
City Municipal Commission.

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ:—

೧೮೯೨ ನೇ ಇಸವಿ ಮಾರ್ಚಿ ತಾರೀಖ್ ೬ರ ಮೊದಲು ದುರ್ಗ್ಸ ೧೨ ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	92
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	45
ಗತವಾರದ ಶಿಲ್ಕು ಸೇರು	...	55
ಜುಮ್ಲಾ	...	103
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	..	22½
ಖರ್ಚಾದ ಅಕ್ಕಿ ಸೇರು	..	22¾
ಜ.ತ. ಬಾಕಿ	...	57¼
ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್. 7		
ಕ್ರಿಶ್ಚಿಯನ್ ವಿದ್ಯಾರ್ಥಿ	..	3
ಬಾಯಸ್ ಇಸತಕ್ಕ ವಿದ್ಯಾರ್ಥಿಗಳು	..	14
ಕಟ್ಟೆ ಕೆಲಸತಕ್ಕ ಅರ್ಚಕ, ಪರಿಚಾರಕ ವಗೈರೇರಸಂಖ್ಯೆ		17
ಪ್ರಯಾಣಸ್ಥರು	...	4
ಜುಮ್ಲಾ	...	45

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 14, 1892.
೧೮೯೨ ನೇ ಇಸವಿ ಮಾರ್ಚಿ ತಾ|| ೧೪ನೇ ಸೋಮವಾರ.

CHARITABLE INSTITUTIONS IN MYSORE.

ಮೈಸೂರ್ ಸೀಮೆಯ ಸತ್ರ ದೇವಾಲಯಗಳ ತಾತ್ಕಾಲಿಕ ಸ್ಥಿತಿ ಗತಿಗಳಂ ಕುರಿತು ನಾವು ಅನೇಕಾವರ್ತಿ ಈ ಪತ್ರಿಕಾ ಮೂಲಕ ವಿಚಾರ ಮಾಡಿರುತ್ತೇವೆ ಯಷ್ಟೆ. ತತ್ಪ್ರಯುಕ್ತವಾಗಿಯಾದರೂ ಅಥವಾ ವಸ್ತುಸ್ಥಿತಿಯನ್ನರಿತಾದರೂ ಗವರ್ನಮೆಂಟನವರು ಸ್ವಯಮೇವಾಗಲಿ, ಅನ್ಯಮುಖವಾಗಿ ಯಾಗಲಿ, ಯಾವದಾದರೊಂದು ವ್ಯವಸ್ಥೆಯಂ ಮಾಡುವರೆಂದು ಇದುವರಿವಿಗೆ ನಿರೀಕ್ಷಿಸುತಿದ್ದೆವು. ಪರಂತು ನಮ್ಮ ನಿರೀಕ್ಷಣೆಯು ಸಫಲವಾಗುವ ಸಂಭವವು ಇದುವರಿವಿಗೆ ವುಂಟಾಗಿರಲಿಲ್ಲವು. ಈಗ ಗವರ್ನಮೆಂಟನವರಿಗೆ ಅವುಗಳ ವಿಷಯದಲ್ಲಿ ಶ್ರದ್ಧೆಯುಂಟಾಗಿ ತಾವೇ ಅವುಗಳ ಪುನರ್ವ್ಯವಸ್ಥೆಯ ಬಗ್ಯೆ ಪ್ರವರ್ತಿಸಿರುವದರಿಂದ ಅವು ಕ್ರಮೇಣ ಒಳ್ಳೆಯ ಸ್ಥಿತಿಗೆ ಬರಬಹುದೆಂದೆಣಿಸುತ್ತೇವೆ. ದೇವಾಲಯಗಳ ಅವಳಿತಗಳು ಅನೇಕ ಪ್ರದೇಶಗಳಲ್ಲಿ ಬಹಳ ಅನುತಾಪಕರವಾಗಿವೆ. ತತ್ರಾಪಿ ಸತ್ರಗಳ ವಿಷಯಗಳಂ ಕುರಿತು ತಿಳಿಸಬೇಕಾದುದೇ ಇಲ್ಲವು. ಇದಕ್ಕೆ ಗವರ್ನಮೆಂಟನವರ ಅಶ್ರದ್ಧೆಯನ್ನು ಕಾರಣತ್ವೇನ ನಮೂದಿಸಿ ಆಕ್ಷೇಪಿಸುವದಕ್ಕಿಂತಲೂ ಜನಗಳ ಅಚಾತುರ್ಯವನ್ನೇ ಮುಖ್ಯವಾಗಿ ಉದಹರಿಸಿ ನಿಂದಿಸಬೇಕಾಗಿರುತಿದೆ. ಪೂರ್ವದೊಳೀ ಸತ್ರದೇವಾಲಯಗಳಿಗೆ ಅತ್ಯಭ್ಯುದಯ ಸ್ಥಿತಿಯುಂಟಾಗಿದ್ದಾಗ ಕಾಲ ಮಹಿಮೆಯಿಂದಲೂ, ದೇಶದ ಸುಭಿಕ್ಷತೆಯಿಂದಲೂ, ಜನಗಳ ಜ್ಞಾನ ಭಕ್ತಿ ವೈರಾಗ್ಯಗಳಿಂದಲೂ ಧರ್ಮಕರ್ತರ ಉದ್ದೇಶಕ್ಕಿಂತಲೂ ಕೆಲವು ಭಾಗದಲ್ಲಿ ಹೆಚ್ಚಾಗಿಯೇ ನಡಯುತಲಿದ್ದವು. ಬರುತಬರುತ ಇವುಗಳಲ್ಲಿ ಜನಗಳಿಗೆ ವಿಶ್ವಾಸವು ಕಡಮೆಯಾಗುತ ಬಂದಹಾಗೆಲ್ಲ ಅವರಪ್ರೋತ್ಸಾಹವು ತಗ್ಗಿ, ಅಲ್ಲಿಯಲ್ಲಿ ವಂಚಕರು ಪ್ರಬಲಿಸಿ ಮೂಲಪ್ರವರ್ತಕರ ಉದ್ದೇಶಗಳಿಗೆ ಭಂಗವನ್ನುಂಟುಮಾಡುತ, ಅನ್ಯ ಮತದವರ ದೂಷಣ ತಿರಸ್ಕಾರಗಳಿಗೆ ಗುರಿ ಮಾಡಿದರು. ಪರಂತು ದೇವಸ್ಥಾನಗಳು, ತತ್ರಾಪಿ ವಿಷ್ಣು ದೇವಸ್ಥಾನಗಳು ಯಥೋಚಿತ ಜೀವದಶೆಯಲ್ಲಿರುತಲಿವೆ. ದೇವಸ್ಥಾನಗಳಲ್ಲಿ ಕ್ರಮವಾಗಿ ಪಡಿತರ ದೀಪಾರಾಧನೆಗಳು ಜರಗದಿದ್ದರೂ ಸಂಧಿ ಕಾಲಗಳಲ್ಲಿ ಅರ್ಚಕನು ಗುಡಿಯ ಬಾಗಿಲುಗಳನ್ನಾದರು ತೆರದು ಮುಚ್ಚುತ್ತಾನೆ. ಸತ್ರಗಳ ಸ್ಥಿತಿಯು ಹಾಗಲ್ಲವು. ಬರುತ ಬರುತ ನಿರಖ್ ಜಾಸ್ತಿಯಾಗುತ ಬಂದರೂ ಪೂರ್ವದಂತೆ ತಸ್ದೀಕಗಳು ನಡೆಸಲ್ಪಡುತ ಬಂದಾಗ್ಯೂ ತಿಂಗಳಲ್ಲಿ ಹದಿನೈದು ದಿನಗಳಕಾಲ ಬಾಗಿಲುಗಳು ತೆರೆಯಲ್ಪಡುವದಿಲ್ಲವು. ಯಾವ ಸತ್ರಗಳಲ್ಲಿ ಸಮೃದ್ಧವಾಗಿ ಅನ್ನದಾನ ಮಾಡಲ್ಪಡುತಲಿತ್ತೊ ಅಂತಾ ಸತ್ರಗಳಲ್ಲಿ ಅನ್ನದ ಸಂಗತಿ ಸ್ವಪ್ನಪ್ರಾಯವಾಗಿದೆಯೆಂದು ಬಹುಮುಖವಾಗಿ ತಿಳಿಯಬರುತಿದೆ. ಇಂತಾ ಧರ್ಮಕಾರ್ಯಗಳನ್ನು ಹೊಸದಾಗಿ ಏರ್ಪಡಿಸಬೇಕೆಂದು ನಾವು ಹೇಳುವದಿಲ್ಲವು. ಒಂದುವೇಳೆ ನಾವು ಹಾಗೆ ಹೇಳಿದಾಗ್ಯೂ ಅದು ಹೇಳನಕ್ಕೆ ವಿಷಯವಾಗದಿರಲಾರದು. ಪರಂತು ಈ ದೇಶದ ಪೂರ್ವರಾಜರು ಧರ್ಮಬದ್ಧರಾಗಿ ಯೆಲ್ಲಕ್ಕಿಂತಲೂ ಸತ್ರ ದೇವಾಲಯಗಳನ್ನ ಅತ್ಯಂತ ಶ್ರದ್ಧೆಯೊಡನೆ ನಡೆಸುತ ಬಂದಹಾಗಿ ಅವರ ರಾಜ್ಯದಲ್ಲಿ ಸರ್ಕಾರಿ ಮೂಲಕ ನಡೆಸಲ್ಪಡತಕ್ಕ ದಾನ ಧರ್ಮಗಳು ಹ್ರಾಸವನ್ನೈದದೆ ಪೋಷಿಸಲ್ಪಡಬೇಕೆಂಬದೇ ನಮ್ಮ ಕೋರಿಕೆಯಾಗಿರುತಿದೆ. ಅಷ್ಟರ ಕಾರ್ಯವು ನಡೆಸಲ್ಪಟ್ಟರೆ ಆದಿಪ್ರವರ್ತಕರ ಉದ್ದೇಶಗಳಂ ಕಾಪಾಡಿ ಗೌರವಿಸಿದಂತಾಗುವದು. ಸತ್ರಗಳ ವಿಷಯದಲ್ಲಿ ನಮ್ಮ ಅಭಿಪ್ರಾಯವೇನಂದರೆ—ಇದುವರಿವಿಗೆ ಸರ್ಕಾರದಿಂದ ಯೆಷ್ಟು ನಿಸ್ಕರ್ಷೆಯಾಗಿರುತಿದೆಯೋ ಅದನ್ನು ಲೋಪವಿಲ್ಲದಂತೆ ನಡೆಸುತ ಬರುವದಲ್ಲದೆ ನಿರಖ್ ಜಾಸ್ತಿಯಿಂದ ಯೆಷ್ಟಂಶ ನ್ಯೂನವಾಗಿದೆಯೋ ಅಷ್ಟಕ್ಕೆ ಜನಗಳಾಗಲಿ, ಗವರ್ನಮೆಂಟನವರಾಗಲಿ ಸಹಾಯ ಮಾಡಿ ಕ್ರಮವಾಗಿ ನಡೆಸಿದರೆ ಬಹಳ ಚೆನ್ನಾಗಿರುವುದು. ಹಾಗೆ ಯುಕ್ತವಾದ ಯಾವದಾದರೊಂದು ವ್ಯವಸ್ಥೆಯಂ ಮಾಡಿದರೆ ಅವು ವಿಚಾರಿಸಿಕೊಳ್ಳುವದಕ್ಕೆ ಇದುವರಿವಿಗೆ ಮಾಡಲ್ಪಟ್ಟಿರುವ ಯೇರ್ಪಾಡುಗಳು ಸುತರಾಂ ತೃಪ್ತಿಕರವಾಗಿಲ್ಲದ್ದರಿಂದ ತೋಳನನ್ನಲ್ಲದೆ ಮಾನುಷಸ್ವಭಾವುಳ್ಳವರನ್ನು ಮೊಕರರ್ ಮಾಡಿದರೆ ಯೋಗ್ಯವಾಗಿ ನಡೆಯುವುದು. ಕೇವಲ ಆಶ್ರಿತಪಕ್ಷಪಾತದಿಂದಲೇ ಮೊಕರರ್ ಮಾಡಿದರೆ ಅದು ವಿರುದ್ಧ ಫಲದಾಯಕವಾಗದೆ ಹೋಗುವದಿಲ್ಲವು. ಇಂತಾ ಧರ್ಮಕಾರ್ಯಗಳಲ್ಲಿ ಈದೇಶೀಯರಿಗೆ ಸ್ವಾಭಾವಿಕವಾದ ಪ್ರವೃತ್ತ್ಯುತ್ಸಾಹಗಳು ಸುತರಾಂ ಸೊಲ್ಪ. ಆದರೆ ಅವರು ದೂಷಿಸಬೇಕೆಂಬದು ನಮ್ಮ ಉದ್ದೇಶವಲ್ಲವು. ದಕ್ಷಿಣದೇಶದಲ್ಲಿ ಅಬಲೆಯರಾದ ಸ್ತ್ರೀಯರು ಕೆಲವರು ಸ್ವತಃ ಶ್ರಮಪಟ್ಟು ಯಾಚಿಸಿ ಧರ್ಮ ಮಾಡಿರುವ ಹಾಗೆ ಈ ದೇಶದ ಧನಿಕರೆನಿಸಿದವರು ಮಾಡಲಿಲ್ಲವು. ನಾಟುಕೋಟೆ ವರ್ತಕರು ಒಂದೊಂದು ಪ್ರದೇಶದಲ್ಲಿ ಶಾಶ್ವತವಾಗಿ ಜರುಗುವಂತೆ ಧರ್ಮಗಳಂ ಮಾಡಿರುವದೂ, ಅವುಗಳ ವಿಚಕ್ಷಣೆಯೂ ನಮ್ಮ ಕೇಳ್ವಿಕೆಗೆ ಬಂದಾಗಲೆಲ್ಲ ನಮಗೆ ಅಮಿತವಾದ ಆನಂದವನ್ನುಂಟುಮಾಡತಕ್ಕವಾಗಿವೆ. ಬದರಿನಾಥ್ ಕಾಂಚಿ ಮೊದಲಾದ ಅನೇಕ ದೇವಾಲಯಗಳಲ್ಲಿ ಅನೇಕರ ಧರ್ಮಗಳು ಅದ್ಯಾಪಿ ಜರುಗುತಲಿದೆ, ಅಂತಾ ಧರ್ಮಗಳು ಯಾವದೊಂದನ್ನೂ ನಾವಿಲ್ಲಿ ನೋಡಲಿಲ್ಲವು. ಮಸಲು ಸತ್ರ ಕಟ್ಟದರೆ ಅಲ್ಲಿ ಬಂದು ನಿಲ್ಲುವ ಗಾಡಿ ಯೆತ್ತುಗಳ ಮೂಲಕ ಗೊಬ್ಬರ ಜಮಾಯಿಸಿ ಆ ಮೂಲಕ ಸಾಲೀಯಾನಾ ಒಂದು ಬಗೆ ಆಯತಿಯುಂಟಾಗುವದಲ್ಲಾ ಯೆಂಬ ಕೋರಿಕೆಯೊಡನೆ ಅನೇಕರು ಈ ಪ್ರಾರ ಲ್ಲಿ ಸತ್ರಗಳಂ ಕಟ್ಟಿಸಿದಾರೆಯೇ ಹೊರ್ತು ಆಗಂತುಕರಿಗೆ ಅಲ್ಲಿ ಇತರ ಯಾವ ಅನುಕೂಲ್ಯವೂ ಇರುವಂತೆ ತೋರಲಿಲ್ಲವು. ಸತ್ರ ನಿರ್ಮಾಣಮಾಡಿದಂತವನಿಗೆ ಇಷ್ಟಮಿತ್ರರಾಗಿದ್ದರೆ ಅಂತವರು, "ಮನೆಗಿಂತಲು ಗುಡಿ ಭದ್ರವೆಂಬಂತೆ" ಒಂದೊಂದು ಪ್ರದೇಶವನ್ನಾಕ್ರಮಿಸಿಕೊಂಡು ಬರತಕ್ಕವರಂ ಉತಾಪದಿಂದ ಆಚೆಕಳುಹಿಸಿಬಿಡುತ್ತಾರೆ. ಈ ಸತ್ರಗಳಲ್ಲಿ ಒಳಗೆ ಪ್ರವೇಶಿಸಿ ಏಂದು ಹೊತ್ತು ಅಡಿಗೆ ಮಾಡಿಕೊಳ್ಳಬೇಕಾದರೆ, ಅಲ್ಲಿನ ರಘುದೇವನಾಲಿಯ ಮೊದಲು ಸ್ವಂತಗಾರನ ತನಕ ಉಪಸಮರ್ಪಣೆ ಮಾಡಬೇಕಾಗಿರುತಿದೆ. ಹೊರಗೆ ತಂಗಲಿಕ್ಕೆ ಪೋಲೀಸಿನವರು ಕೊಂಚವಲ್ಲಿ ಅವಕಾಶ ಕೊಡುವದಿಲ್ಲವು. ಈ ಸತ್ರದಲ್ಲಿ ಲಕೋಟೆಗೆ ಸಹ ಒಂದು ಅಗುಳುದೊರೆಯುವದಿಲ್ಲವು. ಸರ್ಕಾರ್ ಸತ್ರ ವಿಚಾರಣೆ ವಿಷಯವೇನೊ ಪ್ರಸಿದ್ಧವಾಗಿಯೇ ಯಿದೆ. ಏಕೇನ ಸತ್ರಗಳಿಂದ ಈ ಕಾಲದಲ್ಲಿ ಉಪ್ಪಿನಷ್ಟು ಪ್ರಯೋಜನಗಳು ಲಭಿಸುವಂತಿಲ್ಲದ್ದು. ದೇವಾಲಯಗಳ ಸ್ಥಿತಿಯಂ ಅನೇಕಾವರ್ತಿ ತಿಳಿಸಿ ನಮಗೇ ಆ ವಿಷಯದಲ್ಲಿ ಬೇಜಾರುಂಟಾಗಿರುತಿದೆ. ದೇವಸ್ಥಾನಗಳ ಗರ್ಭ ಗೃಹಗಳಲ್ಲಿ ಸಹ ಮೂಲವಿಗ್ರಹಗಳಿಗೆ ಸ್ಥಳ ದೊರೆತಿದೆಯೋ ಇಲ್ಲವೊ ಅನುಮಾನವು. ದೇವರ ಆಭರಣಗಳು ಅರ್ಚಕ ಗುಡಿಯಲ್ಲಿವೆಯೆಂಬದು ಸಂಶಯಾಸ್ಪದವಾದುದು. ಗುಮಾಸ್ತೆಗಳನ್ನಿದದೆ ವಿದಾನುಮಾಡಿಕೊಂಡು ದೇವರಆರಾಧನೆಗೆ ಬರುವ ಅಂಶವು ಸಂದೇಹಾಸ್ಪದವು. ದೇವಸ್ಥಾನಗಳಲ್ಲಿ ಉದ್ದಿಷ್ಟವಾದ ಪೇಶಾಂತರಿ ಕಟ್ಟೆಯೆಂಬದು ಅರ್ಚಕ ಪರಿಚಾರಕರ ಪಾಲಾಗುತಿವೆ. ಭಕ್ಷ್ಯಭೋಜ್ಯಾದಿಗಳು ಕ್ರಯ ಕೊಟ್ಟರೂ ದೊರೆಯುವವದಲ್ಲವು. ಗೋಷ್ಠಿ ವಿನಿಯೋಗಕ್ಕೆ ಅವಕಾಶವುಳ್ಳ ವೈಷ್ಣವಾಲಯಗಳ ಅವಳಿತವು ಹೀಗಾದರೆ ಶಿವಾಲಯಗಳ ಸ್ಥಿತಿ ಬೇರೆ ರೂಪಾಂತರವನ್ನೈದಿದೆ. ಅರಂತು ಅವುಗಳನ್ನೆಲ್ಲ ನಾವಿಲ್ಲಿ ವಿಸ್ತರಿಸಿ ಹೇಳುವದರಿಂದ ಕುಚೋದ್ಯವೇ ಹೊರ್ತು ಬೇರೊಂದು ಪ್ರಯೋಜನವು ಕಾಣಿಸಲಿಲ್ಲವು. ಪ್ರಕೃತ ಸಂದರ್ಭದಲ್ಲಿ ನಾವು ಮುಖ್ಯವಾಗಿ ತಿಳಿಸುವದೇನಂದರೆ:—ಈ ಸತ್ರ ದೇವಾಲಯಗಳನ್ನು ತಿಂಗಳಿಗೊಂದಾವರ್ತಿ ತಪ್ಪದೆ ಅಜಮಾಯಿಸು ಮಾಡಿ ಅವುಗಳ ಸ್ಥಿತಿಯನ್ನು ಕರಾರ್ವಾಕ್ ರಿಪೋರ್ಟ್ ಮಾಡುವ ಬಗ್ಯೆ ದೈವಭಕ್ತಿಯುಳ್ಳವರಾಗಿಯೂ ಪ್ರಾಮಾಣಿಕರಾಗಿಯೂ ಇರುವವರನ್ನು ಡಿಸ್ಟ್ರಿಕ್ಟಿಗೆ ಒಬ್ಬರಪ್ರಕಾರ ಮೊಕರರ್ ಮಾಡಿ ಅವರು ಪ್ರತಿನಿತ್ಯವು ಪೋಲೀಸ್ ಮತ್ತು ಸ್ಕೂಲ್ ವಗೈರೆ ಇನ್ಸ್ಪೆಕ್ಟರಗಳಂತೆ, ಹಮೇಷಾ ತಿರುಗುತಲಿರಬೇಕೆಂತಲೂ, ತಗಿಂದಾಗ್ಯೆ ಆಯಾಧರ್ಮಶಾಲೆಗಳ ಅಮಲಿಗಳನ್ನು ಮುಜರಾಯಿ ಸೂಪರಿಂಟೆಂಡೆಂಟರಿಗೆ ರಿಪೋರ್ಟ್ ಮಾಡತಕ್ಕದ್ದೆಂತಲೂ ನಿಷ್ಕರ್ಷಿಸಿಜಾರಿಯಲ್ಲಿ ತಂದ ಪಕ್ಷಕ್ಕೆ ಇತರ ಇಲಾಖೆಗಳಂತೆ ಇದೂ ಯಥೋಚಿತ ಯೋಗ್ಯವಾಗಿ ಜರಗಬಹುದೆಂದೆಣಿಸುತ್ತೇವೆ. ತಾಲ್ಲೂಕು ಅಮಲ್ದಾರರು ತಮ್ಮ ತಾಲ್ಲೂಕಿನಲ್ಲಿರುವ ಸತ್ರ ದೇವಸ್ಥಾನಗಳನ್ನು ಚೆನ್ನಾಗಿ ತನಿಖೀ ಮಾಡುತ್ತಾರೆಂಬ ಭ್ರಾಂತಿಯು ಗವರ್ನಮೆಂಟನವರಿಗೆ ಬಹಳವಾಗಿರಬಹುದು. ಪರಂತು ಅವರ ಕಾರ್ಯಾದಿಯು ಯುಕ್ತವಾಗಿಯೂ ಶ್ರದ್ಧಾಪೂರ್ವಕವಾದುದಾಗಿಯೂ ಇದ್ದರೆ ಇಷ್ಟರ ಬೇಬಂದಿಗೆ ಅವುಗಳೆಂದಿಗೂ ಬರದಿರಲಾರವಾದುದರಿಂದ ಈ ಅಂಶವನ್ನು ಮುಜರಾಯಿ ಸೂಪರಿಂಟೆಂಡೆಂಟರವರು ಗವರ್ನಮೆಂಟನವರ ಅವಧಾನಕ್ಕೆ ತಂದು ತಕ್ಕ ಯೇರ್ಪಾಡುಗಳಂ ಮಾಡುವರೆಂದು ನಂಬುತ್ತೇವೆ.

NANDIDROOG-A SANITARIUM.

ಶ್ರೀಮನ್ಮಹಾರಾಜರವರು ವಸಂತ ಋತುವಿನಲ್ಲಿ ತಮ್ಮ ಸುಖ ವಸತಿಗೋಸ್ಕರ ನೀಲಗಿರಿಯಲ್ಲಿರುವಂತೆ ನಂದೀಬೆಟ್ಟದಮೇಲೆ ಸಹ ಒಂದು ಬಂಗ್ಲೆಯನ್ನು ತೆಗದುಕೊಳ್ಳಬೇಕೆಂದು ನಿಷ್ಕರ್ಷಿಸಿ ಆಬಗ್ಯೆ ನಾಬಕ್ ಸರ್ಮಾರ್ಕ್ ಕಬ್ಬನ್ ಸಾಹೇಬರ ಬಂಗ್ಲೆಯನ್ನು ೧೫,೦೦೦ ರೂಪಾಯಿಗಳಿಗೆ ಕ್ರಯಕ್ಕೆ ಮಿ|| ಬೌರಿಂಗ್ ಯೆಂಬವರಿಂದ ಈಚೆಗೆ ತೆಗದುಕೊಂಡರೆಂದು ಹಿಂದಿನ ವಾರದಲ್ಲಿ ತಿಳಿಸಿದ್ದೆವಷ್ಟೆ. ಅದರ ಕ್ರಯ ವಗೈರೆ ವ್ಯವಹಾರಗಳೆಲ್ಲವು ಪೂರೈಸಿ ಸರ್ಕಾರ್ ಸುಫರ್ದಾದಂತೆಯೂ, ಅದು ಮಹಾರಾಜರವರ ವಾಸಕ್ಕನುಗುಣವಾದ ರೀತಿಯಲ್ಲಿ ರಿಪೇರಿ ವಗೈರೆ ಮಾಡಿ ಸಿದ್ಧಪಡಿಸಲಿಕ್ಕೆ ಮರಮ್ಮತ್ ಇಲಾಖಾ ಚೀಫ್ ಇಂಜನಿಯರವರಿಗೆ ಹುಕುಂ ಕೊಡಲ್ಪಟ್ಟಿರುವದು ತಯೂ, ಶ್ರೀಮನ್ಮಹಾರಾಜರವರು ಈ ಸಂವತ್ಸರ ಬೇಸಿಗೆಯನ್ನು ನಂದಿಯಲ್ಲಿಯೇ ಕಳೆಯಬೇಕೆಂದುದ್ದೇಶಿಸಿರುವಂತೆಯೂ ತಿಳಿದುಬಹಳ ಸಂತೋಷಿಸುತ್ತೇವೆ. ಅತಿಶಯವಾದ ರಾಮಣೀಯತೆಯೂ, ಸುಖವೂ, ವಾತೋದಕಗಳ ಆರೋಗ್ಯ ಗುಣವೂಉಳ್ಳ ನಂದಿಗಿರಿಯಲ್ಲಿ ಆಗಿಂದಾಗ್ಯೆ ವಾಸ ಮಾಡುವದು ಬಹಳ ಸುಖಕರವಾಗಿಯೂ, ತಮ್ಮ ಪ್ರಜೆಗಳ ಅಭೀಷ್ಟವಂ ನೆರವೇರಿಸಿದಂತೆಯೂ ಆಗುವದೆಂದು ನಾವು ಅನೇಕ ಪ್ರಕರಣಗಳಲ್ಲಿ ಸೂಚಿಸಿದ್ದೆವು. ಪರಂತು ಅದರ ಔಚಿತ್ಯವು ಮಹಾರಾಜರವರ ದಿವ್ಯಚಿತ್ತದಲ್ಲಿದುವರಿವಿಗೆ ತೋರದೆ ಇದ್ದು ಈಗ ಕಾಲ ಪರಿಪಾಕದಿಂದದೇಹ್ಯ ಭ್ಯವೆಂದು ಭಾವಿಸುವಂತೇ ಪರ್ಟ್ಟದಕ್ಕಾಗಿ ನಾವುಬಹಳ ಸಂತೋಷಿಸುತ್ತೇವೆ. ಪ್ರಸಕ್ತ ನಮ್ಮವಿಚಾರಕ್ಕೆ ವಿಷಯವಾದ ಈ ನಂದೀದುರ್ಗವಂಕುರಿತ ಕೆಲವು ಪೂರ್ವ ವೃತ್ತಾಂತವನ್ನೀಸಂದರ್ಭದಲ್ಲಿ ಈ ಪತ್ರಿಕೆಯನ್ನೋದತಕ್ಕವರ ಜ್ಞಾಪಕಕ್ಕೆ ಮರಳಿ ತರುವೆನ್ನ ಬಸೆ ..ಗೆ.

ಮೈಸೂರು ದೇಶದಲ್ಲಿರುವ ಅನೇಕ ಬೆಟ್ಟಗಳ ಪೈಕಿ ಸಾವನದುರ್ಗ, ಶಿವಗಂಗೆ, ಬಿಳಿಗಿರಿರಂಗನಬೆಟ್ಟ, ಕಾಮರೇಮುಖದ ದಿಕ್ಕು, ಬಾಬಾಬುಡನ್ ಗಿರಿ ಮೊದಲು ಮುಖ್ಯಗಳಾಗಿಯೂ ಪ್ರಸಿದ್ಧಗಳಾಗಿಯೂ ಇರುತವೆ. ಇವುಗಳೊಳಗೆ ಮೊದಲನೆಯದ ನಂದೀದುರ್ಗವು ಬೆಂಗಳೂರಿಗೆ ಉತ್ತರದಿಕ್ಕಿನಲ್ಲಿ ೩೬ ಮೈಲಿಗಳ ಫಾಸಲೆಯೊಳಗಿರುತ್ತೆ. ಇದು ಸಮುದ್ರದ ಮಟ್ಟಕ್ಕೆ ೪೮೦೦ ಅಡಿಗಳ ಎತ್ತರವುಳ್ಳದ್ದಾಗಿಯೂ, ಮೇಲ್ಭಾಗದಲ್ಲಿ ಪ್ರಾಯಶಃ ಮೈಲ್ ವಿಶಾಲವಾಗಿಯೂ ಇದೆ. ನಂದಿದುರ್ಗವೆಂದು ಒಂದೇ ಹೆಸರು ಪ್ರಸಿದ್ಧವಾಗಿದ್ದಾಗ್ಯೂ, ನಂದಿಗಿರಿ, ಚೆನ್ನಗಿರಿ, ದಿಬ್ಬಗಿರಿ, ಬ್ರಹ್ಮಗಿರಿ, ಹರಿಹರಬೆಟ್ಟವೆಂದು ಐದು ಪರ್ವತಗಳು ಕೂಡುತವೆ. ಅವುಗಳೊಳಗೆ, ಐದು ನದಿಗಳು ಹುಟ್ಟಿ ಪ್ರವಹಿಸುತವೆ. ಕ್ಷೀರನದಿ ಮೊದಲಾದ ಆರ್ಕಾವತಿ ಪಶ್ಚಿಮದಲ್ಲೂ, ಉತ್ತರಪಿನಾಕಿನಿ ಪೆನ್ನಾರು ಉತ್ತರದಲ್ಲೂ, ದಕ್ಷಿಣ ಪಿನಾಕಿನಿ ಪಾಲಾರು ಪೂರ್ವದಲ್ಲೂ, ಬಹಳ ವಿಸ್ತಾರವಾಗಿ ಹರಿಯುತಿರುತಿವೆ. ಮಹರ್ಷಿ ಚಿತ್ರಪತಿಗಳಂಬ ಮತ್ತೊಂದು ಸೊಗಸುಂಟು ಅವು ಅಷ್ಟೇನು ಪ್ರಸಿದ್ಧಗಳಲ್ಲವು. ಸಾವಿರಾರು ಅಡಿ ಬೆಟ್ಟದಮೇಲೆ ಪೋಂದು, ಕೆಳಗೆ ಆ ಪದದಲ್ಲಿ ಪ್ರಾರಂಭವಾಗಿ ಮತ್ತೂ ಈ ಪುರದ ಪ್ರಾಚೀನಗಳಾದ ಎರಡು ಆಲಯಗಳಿವೆ, ಇವು ಬಹಳ ವಿಶಾಲವಾಗಿಯೂ, ಚಿತ್ರಪಟ ಕೆಲಸಗಳಿಂದ ಕೂಡಿದವಾಗಿಯೂ ಇರುತಿವೆ. ಬೆಟ್ಟದಮೇಲೆ ಇರುವ ದೇವರಿಗೆ ಯೋಗನಂದೀಶ್ವರನೆಂತಲೂ, ಕೆಳಗಿರುವ ದೇವರಿಗೆ ಭೋಗನಂದೀಶ್ವರನೆಂತಲೂ ಹೆಸರು. ಇದು ಕೇವಲ ಪುರಾಣಪ್ರಸಿದ್ಧವಾಗಿ ಇರುವದಲ್ಲದೆ ಹಿಂದಿನಿಂದಲೂ ಯಾತ್ರಾಸ್ಥಳವಾಗಿ ಯಿದೆ. ಅಲ್ಲಿನ ಸ್ಥಳ ಪುರಾಣದಲ್ಲಿ ಅದು ಋಷಿಗಳು ಇದ್ದ ಜನಸ್ಥಾನವೆಂದು ಹೇಳಲ್ಪಟ್ಟಿದೆ. ಆ ಸ್ಥಳದಲ್ಲಿಯೂ ಅದರ ಆಸಪಾಸ ಪ್ರದೇಶಗಳೊಳಗೂ ವ್ಯಾಘ್ರಗಳ ವ ಮೊತ್ತಗಳುಂಟಾಗುತವೆ. ಪ್ರತಿ ಸಂವತ್ಸರ ಶಿವರಾತ್ರಿ ಕಾಲದಲ್ಲಿ ಪ್ರಬಲವಾದ ಜಾತ್ರೆಯೂ ಪರಿಷೆಯೂ ಆಗುತವೆ. ಆಗ ಲಕ್ಷಾಂತರ ರೂಪಾಯಿಗಳ ಮೊತ್ತಗಳು ಕೋಟ್ಯಾಗುತವೆ.

ನಂದಿಯು ಚಿಕ್ಕಬಳ್ಳಾಪುರದ ಪಾಳೆಗಾರರಿಗೆ ಒಳಪಟ್ಟಿತ್ತು. ಅವರಿಗೆ ಈಗ ನಾಮಮಾತ್ರಕ್ಕೆ ಪಾಳೆಗಾರರೆಂಬ ಗೌರವಪ್ರಾಶಸ್ತ್ಯಗಳು ಸಲ್ಲುತವೆ. ಪೂರ್ವದ ಮೈಸೂರು ಅರಸರು ದೇಶಕಸ್ತು ಮಸೂಲ ಮಾಡುವದಕ್ಕೂ, ತಮ್ಮ ಅಧಿಕಾರದಲ್ಲಿ ಅವರನ್ನು ತೆಗದುಕೊಳ್ಳುವದಕ್ಕೂ, ಸವಾಲರ್ಷವರಲ್ಲಿ ಖಾನರನ್ನು ಕಳುಹಿಸಿದರು. ಆಗ ಅವರು ಸದರೀ ಪಾಳೆಗಾರರನ್ನು ಪ್ರಯಾಸದಿಂದ ಸೋಲಿಸಿ ರಾಜ್ಯಮಾಡಿದರು.

ಆಗ ಪಾಳೆಗಾರರಾಗಿದ್ದವರು "ನಂದೀಶ್ವರನಿಗಿತ್ತ ಕೈ ಪರರಿಗೆತ್ತುವದಿಲ್ಲ" ವೆಂದು ಅವರು ಕೈದಿನಲ್ಲಿರುವಾಗಲೂ ಕೈದಿನ ಸ್ಥಳದಲ್ಲಿ ಸುಜನ್ಯ ಮಾಡದೆ ಮುತ್ತ್ವರ ಹಿಡಿದನೆಂಬದಾಗಿ ಯಿವಾಗಲೂ ಜನಗಳು ಹೇಳುತಲಿದ್ದಾರೆ. ಹೈದರಲ್ಲೀಖಾನನು ಫೌಜು ಯಿಡುವದಕ್ಕೂ, ಯುದ್ಧಾದಿಗಳಿಗೂ ಅನುಕೂಲ್ಯವೆಂದು ತಿಳಿದು, ಶತ್ರುಗಳಿಗೆ ಅಭೇದ್ಯವಾಗಿರುವಂತೆ ನಂದೀಬೆಟ್ಟದಮೇಲೆ ದುರಬೋಕ್ ಖಿಲ್ಲೇ ಕಟ್ಟಿಸಿದರು. ಮತ್ತು ತಕ್ಕಷ್ಟು ಫೌಜನ್ನೂ ಅಲ್ಲಿ ಇಟ್ಟರು. ಅದರ ಈ ದಿನದ ಈಗಲೇನೂ ಪ್ರಯೋಜನ ವಿಲ್ಲವಾದಾಗ್ಯೂ ಪ್ರಸಂಗವಶಾತ್ಯ ಹೇಳುವ ದೇನಂದರೆ:—ಆಶ್ಚರ್ಯಕರವಾದ ಶಕ್ತಿಯುಳ್ಳ ಇಂಗ್ಲಿಷ ತೋಪುಗಳಿಂದ ಸಹ ಸದರೀ ಕೋಟೆಯು ಒಂದು ಕಲ್ಲು ಕದಲಿಸುವದು ಸಾಧ್ಯವಲ್ಲವೆಂದು ಎಣಿಸುತ್ತೇವೆ. ಟೀಪೂ ಸುಲ್ತಾನರು ಈ ಬೆಟ್ಟಕ್ಕೆ "ಗರ್ದಾಷಿಕೋ" ಎಂದು ಹೆಸರುಕೊಟ್ಟು ತಾಬೆ ಒಂದು ಆಸಕ್ತಿ ಕಾಲ್ವೆರಿಯನ್ನು ಮೊಕರರ್ ಮಾಡಿದರು. ಯುದ್ಧದಲ್ಲಿ ಸಿಕ್ಕಿದ ಕೈದಿಗಳನ್ನೂ ಯಿಲ್ಲಿ ಯಿಡುತಿದ್ದರು. ತಕಸೀರ್ ಮಾಡಿದವರನ್ನು ಬೆಟ್ಟದಮೇಲಿನಿಂದ ತಳ್ಳುತಿದ್ದಂತೆಯೂ ಪ್ರಸಿದ್ಧವಾಗಿದೆ. ಬೆಟ್ಟದ ಬುಡದಲ್ಲಿ ಸುಲ್ತಾನ್ ಪೇಟೆಯೆಂದು ಒಂದು ಗ್ರಾಮ ಬಂದು ಕಾಲದೊಳಗೆ ಮಾಡಲ್ಪಟ್ಟಿದ್ದು

ಪ್ರಸಿದ್ಧವಾಗಿದೆ. ಯೂರೋಪಿಯನ್ ಟ್ರೈಬುಗಳು ಸೇರಿಸಲ್ಪಟ್ಟದ್ದರಿಂದ ೧೭೯೧ ನೇ ಇಸವಿಯಲ್ಲಿ ಲಾರ್ಡ್ ಕಾರ್ನವಾಲಿಸ್ ಯವರ ಫೌಜಿನಿಂದ ಮುತ್ತಿಗೆ ಹಾಕಲ್ಪಟ್ಟು ಸದರಿ ಬಿಟ್ಟು ತೆಗೆದುಕೊಳ್ಳಲ್ಪಟ್ಟಿರು. ತತ್ಕಾಲದಲ್ಲಿ ಬ್ರಿಟಿಷರವರಿಗೆ ಕುಮ್ಮಕ್ಕು ಮಾಡಿದ್ದಕ್ಕಾಗಿ ಚಿಕ್ಕಬಳ್ಳಾಪುರದ ಸಂಸ್ಥಾನದ ಪಾಳೇಗಾರರಿಗೆ ಕೆಲವು ಕಾಲ ಸಹ ಕೊಡಲ್ಪಟ್ಟಿರುತ್ತೆ. ಇವರ ಅಧಿಕಾರದ ಮೇಲೆ ಅವರು ಸೌತ್ ಜನರಲ್ ಕಾರ್ನವಾಲಿಸ್ ರವರಿಗೆ ಗೌರವವನ್ನು ತೋರಿಸಿದ್ದರು. ಈ ಯುದ್ಧವು ಅಂತವಾಗಿ ಮಾಳಿ ಕರಾರುಪ್ರಕಾರ ಟಿಪ್ಪುಸುಲ್ತಾನರಿಗೆ ವಾಪಸ್ ಕೊಡಲ್ಪಟ್ಟಿತು. ಆಗ ಸುಲ್ತಾನರು ದೇವರಿಗೆ ತಪ್ಪಿಕೆ ಮುಂತಾದದ್ದು ನಡಿಸಿದನು, ಈ ದುರ್ಗವು ಪರರ ವಶವಾಯಿತು ಎಂಬ ಆಕ್ರೋಶದಿಂದ ಅಮ್ಮನವರ ವಿಗ್ರಹವನ್ನು ಕಿತ್ತಿಸಿ ಜಲದಲ್ಲಿ ಹಾಕಿಸಿದನು. ಒಂದು ನವರಾತ್ರಿ ದಿನ ಬಿಟ್ಟು ಮಿಕ್ಕ ದಿನಗಳಲ್ಲಿ ಹಿಂದುಗಳು ಯಾರು ಹೋಗಬೇಕಾದಾಗ್ಯೂ ಕದ ದಾಟದೇ ಹೋಗಬೇಕೆಂದು ನಿರ್ಬಂಧಪಡಿಸಿದರು. ಟಿಪ್ಪು ಸುಲ್ತಾನರ ಕಾಲಾನಂತರ ಪೂರ್ಣಯ್ಯನವರು ದೇವಸ್ಥಾನಕ್ಕೆ ಸಂಪ್ರೋಕ್ಷಣೆ ಮಾಡಿಸಿದರು.

ಮೈಸೂರು ರಾಜ್ಯವು ಸರ್ ಮಹಾರಾಜರವರ ಜಿಮ್ಮೆಗೆ ಬಂದ ಬಳಿಕ ಗಡಿ ಬಿಲ್ಲೆಗಳನ್ನು ಬಂದೋಬಸ್ತು ಮಾಡುವ ಅಧಿಕ ತನಾಮಮ ಪರ ಪ್ರಕಾರ ಇಂಗ್ಲೀಷರವರ ಇಷ್ಟವನ್ನು ಅನುಸರಿಸತಕ್ಕದ್ದಾದ್ದರಿಂದ ಮಹಾರಾಜರವರು ಆ ಬಾಬಿನಲ್ಲಿ ಎಷ್ಟು ಮಾತ್ರವೂ ಅವರಿಗೆ ಕೊರತೆಯಾವ ಆವಶ್ಯಕತೆ ಇಲ್ಲದೆ ಬ್ರಿಟಿಷ್ ಫೌಜ್ ಬಿಡುಕಾಲದ ಪ್ರಕಾರ ಸದರಿ ಸುಬ್ಬಾರೇಟಿಯುಳ್ಳ ಗ್ಯಾರಿಸನ್ ಮಾಡಿಸಿದ್ದು ಸದರಿ ಫೌಜಿನ ಸಂಗಡ ಮಿಲಿಟರಿ ಜನರಲ್ ಕಾಪ್ಟನ್ ಮತ್ತು ಆಫೀಸರುಗಳ ಬಂಗ್ಲೆಗಳ ಗುರುತು ಅದ್ಯಾಪಿ ಅವರ ಕಾಣುತ್ತದೆ. ಆ ಕಾಲದ ಮೊದಲೇ ಈ ಬೆಟ್ಟದಲ್ಲಿ ಅರಳಗಡ್ಡೆ ಫಸಲ್ ಹಾಕುವದಕ್ಕೆ ಶುರುವಾಯಿತು.

ಈ ನಂದಿ ಸ್ಥಳವು ಈ ದೇಶದ ಇತರ ಸ್ಥಳಗಳಿಗಿಂತ ಬಹಳ ಆರೋಗ್ಯಕರವೆಂದು ತಿಳಿದು ಸೌತ್ ಜನರಲ್ ಕಾರ್ನವಾಲಿಸ್ ತಮಗಾಗಿ ಒಂದು ಬಂಗ್ಲೆಯನ್ನು ಕಟ್ಟಿಸಿದರು. ಹೀಗೆಯೇ ಆಗಿನ ಕಾಲದ ಮಿಕ್ಕ ಆಫೀಸರುಗಳೂ ಅಂದರೆ ಮೇಜರ್ ಕನ್ನಿಂಗ್‌ಹಾಂ, ಕರ್ನಲ್ ಹಿಲ್, ಗ್ರ್ಯಾಂಟ್, ಮುಂತಾದ ಆಫೀಸರು ಬೇರೆಬೇರೆ ಬಂಗ್ಲೆಗಳನ್ನು ಕಟ್ಟಿಸಿದರು. ಬರುತಮಿಂತ ಜನರಲ್ ಕಾರ್ನವಾಲಿಸ್ ಪ್ರತಿ ಸಂವತ್ಸರ ಜನವರಿ ೮ನೇ ತಾರೀಖು ವಿಧುರ ...ಟ್ಟಿನಮೇಲೆಯೇ ಇದ್ದು ಕಚೇರಿ ಮಾಡುತ್ತಿದ್ದರಿಂದ ಕಚೇರಿ ಜನಗಳು ಏರುವದಕ್ಕೂ ಹೋಗುವದಕ್ಕೂ ಸುಲಭವಾಗಿರುವ ಬೆಟ್ಟ ಹಾದಿಯನ್ನು ಸದರಿ ಕುಮಟೆ ರಸ್ತೆ ಸಹ ಮಾಡಿಸಲ್ಪಟ್ಟಿತು. ಮತ್ತು ಅವರು ವಾಸಮಾಡುವದಕ್ಕೆ ನಮ್ಮಲ್ಲಿ ದೇವಸ್ಥಾನದ ಸುತ್ತಲೂ ಅನೇಕ ಕಲ್ಲುಮಂಟಪಗಳು ತಯಾರಾದ್ದಲ್ಲದೆ ಅಮೃತ ಸರೋವರವೆಂಬ ಅನ್ವರ್ಥ ನಾಮವುಳ್ಳದ್ದೆಂದು ಜನಗಳು ಕೊಂಡಾಡುವ ಒಂದು ಕೊಳ ಹೊಸದಾಗಿ ಮಾಡಿಸಲ್ಪಟ್ಟಿತು. ಬೆಟ್ಟದಮೇಲೆ ಗಿಡ ಕಟುಮಾಟುಗಳು ಇರುವುದರಿಂದ ಸರ್ವತ್ರ ಜೋಗವಾಗಿ ಗಿಡಗಳು ಬೆಳದು ಅಡವಿ ಬೆಳೆಯುತ್ತಿರುವದರಿಂದ ಕಾಡು ಮೃಗಗಳು ಬಂದು ಸೇರಿ ಶಿಕಾರಿಗೂ ಅನುಕೂಲವಾಗಿತ್ತು. ಇಲ್ಲಿನ ಮುನಿಸಿಪಲ್ ಕಮಿಟಿಗೆ ಸೇರಿದ್ದ ಪುಸ್ತಕ ಶಾಪ್ಸ್ ಎಂಬದರಿಂದ ಒಂದು ಕಾಫಿತೋಟ ಕೂಡ ನಿರ್ಮಿಸಲ್ಪಟ್ಟಿತು. ಬೆಟ್ಟದ ಕೆಳಗೆ ಕ್ರಮೇಣ ಜನಸಂಖ್ಯೆ ಹೆಚ್ಚಿ ಅದಕ್ಕೆ ತಕ್ಕ ವ್ಯಾಪಾರವೂ ಅಂಗಡಿಗಳಾದ ಅಂಗಡಿಗಳೂ ಬೆಟ್ಟವು ವಿಶೇಷ ಪೇಳಲ್ಪಡತಕ್ಕ, ಸರ್ವಾಂಗಸುಂದರವಾದ, ನಿಲಗಿರಿಗಿಂತ ಇದು ವಿಶೇಷ ಅನುಕೂಲ್ಯವೂ ಸುಖವೂ ಉಳ್ಳ ಸ್ಥಳವಾಗಿರುತ್ತೆ.

LOCAL AND PROVINCIAL NEWS
ಒಳದೇಶದ ಮತ್ತು ತಾಲ್ಲೂಕು ಜಾತಿಸ್ಥ ವೃತ್ತಾಂತಗಳು.

The Dewan.—ಈ ಸಂಸ್ಥಾನದ ದಿವಾನರವರು ಕಳೆದ ಬೃಹಸ್ಪತಿವಾರದ ದಿನ ಮೈಸೂರಿಂದ ಈಪ್ರೊರಿಗೆ ದಯಮಾಡಿದರು. ಇಲ್ಲಿ ಒಂದು ವಾರದ ಕಾಲವಿದ್ದು ತರುವಾಯ ಕೋಲಾರ್ ಡಿಸ್ಟ್ರಿಕ್ಟಿಗೆ ಸರ್ಕ್ಯೂಟು ಹೊರಡುವರೆಂದು ಕೇಳುತ್ತೇವೆ.

ಬ್ಯಾಂಕಿನವರು ಕೊಳ್ಳುವ ವಿಲಾಯತಿ ಹುಂಡಿಗಳು ರೂಪಾಯಿಗೆ 1s. 3 17/32d.
ಸೇಕಡ ೪ರೂ. ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು 106-8-0 ಇಂದ 107-0-0 ವರೆಗೆ.
ಮದರಾಸ್ಬ್ಯಾಂಕ್ ಷೇರ್‌ಗಳು (500) ರೂಪಾಯಿಗಳ ಬಾಬತು 917 ಆಗಾಯಿತು 918
ಸವರಿನ್‌ಗಳು, 15-3-0 ಇಂದ 15-4-0 ವರೆಗೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MARCH 28, 1892

೧೮೯೨ನೇ ಇಸವಿ ಮಾರ್ಚಿ ತಾ॥ ೨೮ನೇ ಸೋಮವಾರ.

DISTRIBUTION OF PRIZES TO THE STUDENTS OF THE GOVT GIRLS' SCHOOL.

ಶ್ರೀಮನ್ಮಹಾರಾಜಾ ಸರ್ಕಾರದಿಂ ಪರಿಪೋಷಿತವಾಗಿ ನಡೆದುಬರುವ ಇಲ್ಲಿನ ಗವರ್ನಮೆಂಟ್ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಭ್ಯಾಸಂಗೈಯುತ ಸಾಂವತ್ಸರಿಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಮತ್ತು ಸಾಮಾನ್ಯವಾಗ ಓದುತಲಿರುವ ವಿದ್ಯಾರ್ಥಿನೀಯರಿಗೆ ಇನಾಂಗಳಂ ಕೊಡುವ ಉದ್ದೇಶದಿಂ ಗತ ಶುಕ್ರವಾರದ ದಿನ ಪ್ರಾತಃಕಾಲ ೮ ಘಂಟೆಗೆ ಸದರೀ ಪಾಠಶಾಲಾ ಸೌಧದಲ್ಲಿ ಒಂದು ಸಭೆ ನಡೆಯಿತು. ಸದರೀ ಸಭೆಗೆ ಯೂರೋಪಿಯರ್ ದೊಡ್ಡ ಮನುಷ್ಯರ ಪೈಕಿ ಇಲ್ಲಿನ ಸೆಂಟ್ರಲ್ ಕಾಲೀಜ್ ಪ್ರಿನ್ಸಿಪಲರಾದ ಮೆ॥ಜೆ. ಕೂಕ್, ಎಂ. ಎ. ಯವರೂ, ಮೆ॥ ಜೆ. ಶ್ಯಾಮರ್ಣಯವರೂ, ಈ ಇಬ್ಬರು ದೊಡ್ಡ ಮನುಷ್ಯರ ಭಾರ್ಯೆಯರೂ, ಇನ್ನು ಕೆಲವರು ಯೂರೋಪಿಯರ್ ಲೇಡಿಗಳೂ, ನೇಟಿವ್ ದೊಡ್ಡ ಮನುಷ್ಯರ ಪೈಕಿ ಇಲ್ಲಿನ ಚೀಫ್‌ಕೋರ್ಟ್ ಜಡ್ಜಿಯರಾದ ಮಿಸ್ಟರ್ ಎ. ರಾಮಚಂದ್ರಯ್ಯರವರು, ವಿದ್ಯಾಭ್ಯಾಸದ ಇಲಾಖಾ ಸೆಕ್ರಿಟರಿಯರಾದ ಮೆ॥ ಎಚ್. ಜೆ. ಭಾಭಾಯವರು, ಸೆನ್ಸಸ್ ಸೂಪರಿಂಟೆಂಡೆಂಟರಾದ ಮೆ॥ವಿ. ಎನ್. ನರಸಿಮ್ಮಯ್ಯಂಗಾರ‍್ರವರು, ವೈಸ್‌ಪ್ರೆಸಿಡೆಂಟು ಮೆ॥ ಎಂ. ಅಣ್ಣಾಜಿ ರಾಯರವರು, ಸ್ಕೂಲುಗಳ ಇನ್ಸ್‌ಪೆಕ್ಟರ್ ಮೆ॥ ಬಿ. ವೆಂಕಟವರತಯ್ಯಂಗಾರ‍್ರವರು, ಸಿಟಿ ಅಮಲ್ದಾರ್ ಮೆ॥ ಬಿ. ನಾಗೇಶರಾಯರವರು, ಅಡ್ವೊಕೇಟ್ ಮೆ॥ ಎಸ್. ನಾರಾಯಣರಾಯರವರು, ಮೆ॥ ವೆಂಕಟರಾಮಯ್ಯನವರು ಮೊದಲಾದವರೂ ಬಂದಿದ್ದರು. ಮೆ॥ ಕೂಕ್‌ಸಾಹೇಬರವರ ಭಾರ್ಯೆಯವರು ಸಭೆಯ ಅಗ್ರಾಸನವಂ ವಹಿಸಿದರು. ಕೂಡಲೆ ಕೆಲವರು ವಿದ್ಯಾರ್ಥಿನೀಯರು ಸರಸ್ವತೀ ಸ್ತೋತ್ರರೂಪವಾದ ಕೀರ್ತನವಂ ಹಾಡಿದರು. ತರುವಾಯ ಪಾಠಶಾಲಾ ಸೆಕ್ರಿಟರಿಯವರಾದ ಮೆ॥ ರಘುನಾಥರಾವ್, ಬಿ. ಎ. ಯವರು ಅದರ ಸಾಂವತ್ಸರಿಕ ರಿಪ್ಪೋರ್ಟನ್ನು ಓದಿದರು. ತರುವಾಯ ವಿದ್ಯಾರ್ಥಿನೀಯರು ಕೆಲವರು ಪದ್ಯ ಗದ್ಯ ರೂಪವಾದ ಸಂಸ್ಕೃತ ಮತ್ತು ಕನ್ನಡ ಗ್ರಂಥಗಳಲ್ಲಿ ಕೆಲವು ಭಾಗಗಳನ್ನೋದಿದರು. ಇದಾದಮೇಲೆ ಅಗ್ರಾಸನಾಧಿಪತಿಯವರು ವಿದ್ಯಾರ್ಥಿನೀಯರಿಗೆ ಅವರವರ ಯೋಗ್ಯತಾನುಗುಣವಾಗಿ ಪೂರ್ವಭಾವಿಯಾಗಿ ತಯಾರ್ಮಾಡಲ್ಪಟ್ಟಿದ್ದ ಪಟ್ಟಿಯನ್ನನುಸರಿಸಿ ಇನಾಂಗಳಂ ಕೊಟ್ಟರು. ತರುವಾಯ ಮೆ॥ ಕೂಕ್ ಸಾಹೇಬರವರು ಯೆದ್ದು ನಿಂತುಕೊಂಡು ತಮ್ಮ ಭಾರ್ಯೆಯ ಪ್ರತಿನಿಧಿತ್ವೇನ ಪಾಠಶಾಲೆಯ ದೈನಂದಿನಾಭಿವೃದ್ಧಿಯಂಕುರಿತು ವಿದ್ಯಾರ್ಥಿನೀಯರಿಗೂ ಉಪಾಧ್ಯಾಯಿನಿಯರಿಗೂ ಪ್ರೋತ್ಸಾಹಕರವಾಗಿ ಸ್ವಲ್ಪಹೊತ್ತು ಮಾತನಾಡಿ ಕುಳಿತುಕೊಂಡ ಕೂಡಲೆ ಮೆ॥ರಾಮಚಂದ್ರಯ್ಯರವರು ಯೆದ್ದು ನಿಂತುಕೊಂಡು ಉಚಿತ ಶಬ್ದಗಳಿಂದ ಸಭ್ಯರ ಪರವಾಗಿ ಸಭಾ ನಾಯಕಿಯವರಿಗೆ ವಂದನಂಗೈದರು. ಕೂಡಲೆ ಕೆಲವರು ವಿದ್ಯಾರ್ಥಿನೀಯರು ಮೈಸೂರು ರಾಜಮಂಡಲ ಶ್ರೇಯಃಪ್ರಾರ್ಥನಾರೂಪವಾದ ಕೀರ್ತನವಂ ಹಾಡಿದರು. ಸಭೆ ಬರಖಾಸ್ತಾಯಿತು.

ಈ ವಿಶೇಷ ಸಂದರ್ಭದೊಳು ನಡೆದ, ಸಾಮಾನ್ಯವಾಗಿ ಹಿಂದೂ ಸಮುದಾಯಕ್ಕೆ, ವಿಶೇಷತಃ ಹಿಂದೂ ಸ್ತ್ರೀ ಸಮುದಾಯಕ್ಕೆ, ಕೇವಲ ಗೌರವಾವಹಕವಾಗಿಯೂ, ಅಭೂತಪೂರ್ವಕವಾಗಿಯೂ ಇರುವ ಒಂದು ವಿಶೇಷಾಂಶವಂ ನಾವು ಈ ಪತ್ರಿಕಾ ಪಾಠಕರ ಅವಧಾನಕ್ಕೆ ತರದೆ ಹೋಗುವೆವಾದರೆ ನಮ್ಮ ಕರ್ತವ್ಯದಲ್ಲಿ ಲೋಪವನ್ನುಂಟುಮಾಡಿದ ಅಪರಾಧಕ್ಕೆ ನಾವು ಗುರಿಯಾಗಬೇಕಾಗುವದೆಂಬ ಬೀತಿಯಿಂದ ಅದನ್ನಿಡದಿ ಸಂಗ್ರಹರೂಪವಾಗಿ ತಿಳಸುವೆವೆಂತೆಂದರೆ—

ಈ ಸಭಾ ಮಂಟಪದರೊಳ್ಳೊಂದು ಮೇಜಿನ ಮೇಲೆ, ಪ್ರದರ್ಶನಾರ್ಥ, ನಾನಾವಿಧ ಕಸೂದಿ ಕೆಲಸಗಾರಿಕೆಯುಳ್ಳ ಪದಾರ್ಥಗಳು ತಂದಿಡಲ್ಪಟ್ಟದ್ದವು. ಈ ಸಭೆಗೆ ಬಂದಿದ್ದ ಯೂರೋಪಿಯರ್ ಲೇಡಿಗಳ ಪೈಕಿ ಒಬ್ಬರಿಬ್ಬರು ಅವುಗಳನ್ನು ನೋಡಿ ಅವುಗಳ ಕೆಲಸಗಾರಿಕೆಯ ಬಗ್ಗೆ ಅತ್ಯಂತ ಸಂತೋಷ ಯುಕ್ತರಾಗಿ, ಅವುಗಳ ನಿರ್ಮಾತೃ ಯಾರೆಂದು ಪ್ರಶ್ನೆ ಮಾಡಲು ಅಲ್ಲಿದ್ದ ದೊಡ್ಡ ಮನುಷ್ಯರೊಬ್ಬರು ಕೊಠಡಿಯ ಬಾಗಿಲಲ್ಲಿ ನಿಂತಿರ್ದ ಒಬ್ಬ ಹೆಂಗುಸಂ ತೋರಿಸಿ, ಆಕೆಯಂ ಸಭಾ ಮಂಟಪಕ್ಕೆ ಕರೆಯಲು ವಿಗತಕೇಶಿಯಾದ ಜಾನಕಿಯಮ್ಮ ಯೆಂಬಾಕೆಯು ಅತ್ಯುತ್ಸಾಹದೊಡನೆ ಮಂದಸ್ಮಿತಳಾಗಿ ಅತಿ ವೇಗದಿಂ ಸದರೀ ಕೊಠಡಿಯಿಂದ ಬಂದು ತನ್ನಂ ಕರೆಯಿಸಿದ ಇಂಗ್ಲಿಷ್ ಲೇಡಿಗಳಿಗೆ ಹಸ್ತಚಾಲನಪೂರ್ವಕವಾಗಿ, ಸದರೀ ವಿದ್ಯೆಯೊಳು ತಾನು ಪಡೆದಿರುವ ಅನನ್ಯ ಸಾಧಾರಣವಾದ ಪ್ರವೀಣತೆಯಂ ಅವರಿಗೆ ತೋರ್ಪಡಿಸಿ, ಅವರೆಲ್ಲರಂ ಕೊಠಡಿಗೆ ಕರೆದುಕೊಂಡು ಹೋಗಿ ಅಲ್ಲಿ ನೆರೆದಿರ್ದ ಗೌರವ್ಯರಾದ ಕುಲಾಂಗನೆಯರ ಮಧ್ಯದಲ್ಲಿ ಪದೇಪದೆ ಸದರೀ ಲೇಡಿಗಳೊಡನೆ ಹಸ್ತಚಾಲನಂಗೈಯುತ ಮಾತನಾಡಿದ ರೀತಿಯು ಅಲ್ಲಿದ್ದವರೂ ತನ್ನಂತೆ ಪ್ರಕಸಿತ್ತಯಂ ಪಡೆಯಬೇಕಾಗಿದ್ದರೆ ತನ್ನ ಮಾರ್ಗವಂ ಅವರೆಲ್ಲರು ಅವಲಂಬಿಸದ ಹೊರತು ಅದು ಲಭ್ಯವಲ್ಲವೆಂಬ ಭಾವವಂ ವ್ಯಕ್ತಗೊಳಿಸುವಂತಾದ್ದಾಗಿತ್ತು. ಸದರೀ ಜಾನಕಿಯಮ್ಮನು ಪಡೆದಿರುವ ಗೌರವವು, ಭಸ್ಮದಿಂ ಆಚ್ಛಾದಿತವಾದ ಅಗ್ನಿಕಣದೋಪಾದಿಯಲ್ಲಿ ಇದುವರಿವಿಗೆ ಸ್ವಜನರಲ್ಲಿ ಮಾತ್ರ ಗೂಢವಾಗಿರುತಲಿತ್ತೇ ಹೊರತು ಯೂರೋಪಿಯನ್ನರುಗಳ ಪರಿಗಣನೆಗೆ ವಿಷಯವಾಗಿರಲಿಲ್ಲವು. ಅಂತಾ ಸಮಯವು ಈಗ ಕೈಗೂಡಿದ ಬಗ್ಗೆ ಆಕೆಯ ಭಾಗ್ಯವಿಶೇಷವಂ ಬಹುಮಾನವಾಗಿ ಕೊಂಡಾಡುವೆವು. ಬಾಲ್ಯಾರಭ್ಯ ಈಕೆಯು ಶಾರೀರಕಶ್ರಮದಿಂದಾರ್ಜಿಸಿದ ಕೀರ್ತಿ ಪ್ರತಿಷ್ಠೆಗಳು ಪೂರ್ವಜನ್ಮ ಸುಕೃತ ಪರಿಪಾಕದಿಂ ಲಭಿಸತಕ್ಕದ್ದೇ ಹೊರತು ಅನ್ಯಥಾ ಲಭಿಸಲಾರದು.

GEOLOGY

ಈಗ ಇಂಗ್ಲಿಷಿನವರು ಜಿಯಾಲಜಿ ಯೆಂದು ವ್ಯವಹರಿಸುತಲಿರುವ ಭೂಗರ್ಭ ವಿವರಣೆ ಎಂಬ ನಾಮಾಂತರವುಳ್ಳ ಒಂದು ಸಣ್ಣ ಕನ್ನಡ ವಾಕ್ಯಗ್ರಂಥವು ಈಗ್ಯೆ ಕೆಲವುವಾರಗಳಹಿಂದೆ ಮೆ॥ ರಾ॥ ನರಸಿಹ್ಮಶಾಸ್ತ್ರಿಗಳೆಂಬವರಿಂದ ನಮಗೆ ಕಳುಹಿಸಲ್ಪಟ್ಟಿತು. ಪರಂತು ಅದು ಇದುವರಿವಿಗೆ ಅದೃಶ್ಯವಾಗಿದ್ದುದರಿಂದ ಅದರ ವಿಷಯಕವಾದ ಪ್ರಸ್ತಾವಕ್ಕೆ ಈ ಪತ್ರಿಕೆಯಲ್ಲಿ ಅವಕಾಶವಿಲ್ಲದೆ ಹೋದಬಗ್ಗೆ ಚಿಂತಿಸುತ್ತೇವೆ. ಈಗಿನ ಕಾಲದಲ್ಲಿ ವಿದ್ಯಾ ವ್ಯಾಸಂಗವು ದಿನೇ ದಿನೆ ವೃದ್ಧಿಯಾಗುತಲೂ ವಿದ್ಯಾರ್ಥಿಗಳಿಗೆ ಸಕಲ ಶಾಸ್ತ್ರಗಳಲ್ಲಿಯೂ ಜ್ಞಾನ ಸಂಪಾದನದೊಳು ಪ್ರವೃತ್ತ್ಯುತ್ಸಾಹಗಳು ಅಧಿಕವಾಗುತಲೂ ಇರುವದರಿಂದ ಇದುವರಿವಿಗೆ ಯಾರಿಂದಲೂ ಭಾಷಾಂತರ ಮಾಡಲ್ಪಡದಿದ್ದ ಪ್ರಸಕ್ತ ಭೂಗೋಳಾಂತರ್ಗತ ಪದಾರ್ಥ ತತ್ವ ವಿವೇಚಕ ಶಾಸ್ತ್ರವು ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದುದಾಗಿಯೂ ಅವಶ್ಯ ತಿಳಿಯತಕ್ಕ ವಿಷಯವಾಗಿಯೂ ಇರುತಿದೆ. ಈಗ ಪ್ರಾಯಶಃ ವಿದ್ಯಾರ್ಥಿಗಳೆಲ್ಲರು ಭೂಗೋಳಶಾಸ್ತ್ರದಲ್ಲಿ ಒಳ್ಳೆಯ ಜ್ಞಾನವಂ ಸಂಪಾದಿಸಿ ಆಯಾ ನದೀ ಪರ್ವತ ಪಟ್ಟಣಗಳ ಸ್ಥಾನ ವಿಶೇಷಗಳನ್ನೂ, ಅಲ್ಲಿಯಲ್ಲಿ ದೊರೆಯುವ ಪದಾರ್ಥ ಸ್ವರೂಪವನ್ನೂ ಚೆನ್ನಾಗಿ ತಿಳದುಕೊಂಡಿರುತ್ತಾರೆ. ಮತ್ತು ಆಧ್ಯಕಜ್ಞಾನ ಸಂಪಾದನಕ್ಕೆ ತಕ್ಕ ಗ್ರಂಥಗಳು ಬಹುಳವಾಗಿ ಬೋಧಿಸಲ್ಪಡುತಿವೆ. ಆದರೆ ಸಾಧಾರಣವಾಗಿ ವಿದ್ಯಾರ್ಥಿಗಳು ಭೂಮಿಯ ಒಳಭಾಗದಲ್ಲಿರುವ ವಿಶೇಷಾಂಶಗಳನ್ನರಿಯಲಿಕ್ಕೆ ತಕ್ಕ ಸಾಧನವು ದುರ್ಲಭವಾಗಿರುತಿದೆ. ಈಗ ಭೌತಿಕಶಾಸ್ತ್ರಜ್ಞಾನವೂ, ಮೃತ್ಪಾಷಾಣ ಲೋಹಾದಿ ಧಾತು ಸ್ವರೂಪ ವಿವೇಚಕ ಜ್ಞಾನವೂ ಆವಶ್ಯಕವಾಗಿರುವಲ್ಲಿ ಅದರಲ್ಲೊಂದು ಭಾಗವಾದ ಪ್ರಕೃತಿಲಕ್ಷಣವನ್ನೂ, ತತ್ಸ್ವಭಾವವನ್ನೂ, ಅದರ ಪರಿಮಾಣವನ್ನೂ, ಮೃತ್ಪಾಷಾಣಗಳ ರೂಪ ಗುಣ ಭೇದಗಳನ್ನೂ ತಿಳದುಕೊಳ್ಳಲಿಕ್ಕೆ ಪ್ರಯತ್ನ ಪಡತಕ್ಕದ್ದು ಕರ್ತವ್ಯವಾಗಿರುತಿದೆ. ಇದು ಮೈಸೂರ್ ಲೋವರ್ ಸೆಕಂಡರಿ ಪರೀಕ್ಷೆಯಲ್ಲಿ ಒಂದು ಪರೀಕ್ಷಾ ಗ್ರಂಥವಾಗಿ ಅಂಗೀಕರಿಸಿ ಕನ್ನಡ ಪಾಠಶಾಲೆಗಳಲ್ಲಿ ಪಠನಗ್ರಂಥವಾಗಿಡಲಿಕ್ಕೆ ವಿಷಯ ಗೌರವದಿಂದಲೂ, ಭಾಷಾ ಸೌಲಭ್ಯದಿಂದಲೂ ಬಾಲಕರಿಗೆ ಸುಲಭವಾಗಿ ಅರ್ಥವಾಗುವಂತೆ ಅಲ್ಲಿಯಲ್ಲಿ ಬರೆಯಲ್ಪಟ್ಟಿರುವ ವಿಶೇಷಾಂಶಗಳಿಂದಲೂ ಅರ್ಹವಾಗಿದೆ ಎಂಬದು ನಿರಾಕ್ಷೇಪಣೀಯವಾದುದು. ಇದನ್ನು ಡೈರ್ಯಕ್ಟರ್ ಸೆಕ್ರಿಟರಿಯವರು ಪುರಸ್ಕರಿಸಿ ಪಾಠಶಾಲೆಗಳಲ್ಲಿಟ್ಟು, ಪ್ರಚಾರದೊಳು ತಂದು ತನ್ಮೂಲಕ ಗ್ರಂಥಕರ್ತರ ಪರಿಶ್ರಮಕ್ಕೆ ತಕ್ಕ ಪ್ರತಿ ಫಲವನ್ನೂ ಇಂತಾ ಪ್ರಯತ್ನಗಳಂ ಮಾಡತಕ್ಕವರಿಗೆ ಪರಂಪರೆಯಾ ಪ್ರೋತ್ಸಾಹವನ್ನೂ ಉಂಟುಮಾಡುವರಾದರೆ ಪರಿಮುಚಿತಗಳಾಗಿರುವ ಇನ್ನೂ ಅನೇಕ ಅಪೂರ್ವ ವಿಷಯಗಳು ಪ್ರಚಾರವನ್ನೈದಿ ಜನಗಳಿಗೆ ಜ್ಞಾನಾಭಿವೃದ್ಧಿಯಾಗಲಿಕ್ಕೆ ಕಾರಣವಾಗಿರುವದೆಂದು ನಂಬುತ್ತೇವೆ

Occasional Notes
ನೈಮಿತ್ತಿಕ ವಿಷಯನ್ಯಾಸ.

The Viceroy's visit to Bombay.—ಇಂಡ್ಯರಾಜ್ಯದ ವೈಸ್‌ರಾಯ್‌ಯವರು ಈ ದಿನ ಕಲ್ಕತ್ತೆಯಿಂದ ಸ್ಪೆಷಲ್ ಟ್ರೇಯಿನ್ನಲ್ಲಿ ಹೊರಟು ೩೦ ನೇ ತಾರೀಖ್‌ನಲ್ಲಿ ಮುಂಬೈ ಸೇರುವರು.

Retirement.—ಅಲಹಾಬಾದ್‌ಹೈಕೋರ್ಟ್ ಜಡ್ಜಿಯವರಾದ ಮೆ॥ ಜಸ್ಟಿಸ್ ಸ್ಟ್ರೈಟ್ ಯವರು ಈ ತಿಂಗಳ ೩೦ ನೇ ತಾರೀಖ್‌ನಲ್ಲಿ ತಮ್ಮ ಕೆಲಸವಂ ಬಿಟ್ಟು ನಿವೃತ್ತಿ ಸುಖಾನುಭವದ ಬಗ್ಯೆ ಸ್ವದೇಶಕ್ಕೆ ತೆರಳುವರು.

A circular.—ಜುಡಿಷಲ್ ಆಫಿಸರ್‌ಗಳು ತಮಗೆ ಕಾಲ ಸಾಲದೆಂಬ ಕಾರಣದಮೇಲೆ ಮೊಕದ್ದಮೆಗಳಂ ನಿಲ್ಲಿಸಿದಬಾರದು, ಪರಂತು ದೀರ್ಘ ಇಮ್ಮಡಿಕೊಂಡು ಕೆಲಸ ಮಾಡಬೇಕೆಂದು ಬಂಗಾಳೆ ಗವರ್ನಮೆಂಟಿನವರು ಈಚೆಗೆ ಸರ್ಕ್ಯೂಲರ್ ಹುಕುಂ ಕೊಟ್ಟಿರುತ್ತಾರೆ.

Another case of polygamy.—ಬರಿಸಾಲ್ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮ ನಿವಾಸಿಯಾದ ಮೊಮಾರ್ ೭೮ ವರ್ಷಗಳ ವಯಸ್ಸುಳ್ಳ ಈಶ್ವರ ಚಂದ್ರಮುಕರ್ಜಿ ಯೆಂಬಾತನಿಗೆ ಈಗ ೧೦೩ ಭಾರ್ಯೆಯರಿರುತ್ತಾರೆಂದು ಸಿವಿಲ್ ವ ಮಿಲಿಟರಿ ಗಜೆಟ್ ಪತ್ರಿಕೆ ತಿಳಸುತಿದೆ.

The Convocation of the Madras University.—ಈಸಲ ನಡೆದ ಬಿ. ಎ. ಮತ್ತು ಬಿ. ಎಲ್., ಪರೀಕ್ಷೆಗಳಲ್ಲಿ ತೇರ್ಗಡೆಯಾದವರಿಗೆ ಡಿಗ್ರಿಗಳಂ ಕೊಡುವದಕ್ಕಾಗಿ ಈ ತಿಂಗಳ ೩೦ ನೇ ತಾರೀಖ್ ಬೃಹಸ್ಪತಿವಾರ ಸಾಯಂಕಾಲ ನಾಲ್ಕುವರೆ ಘಂಟೆಗೆ ಸೆನೆಟ್ ಹೌಸ್ ಎಂಬ ಕಟ್ಟಡದಲ್ಲಿ ಸಭೆ ಸೇರುವುದು.

The Bombay Legislative Council.—ಮುಂಬೈಗವರ್ನಮೆಂಟ್ ನ್ಯಾಯವಿಧಾಯಕ ಸಭೆಯಲ್ಲಿ ರಾವ್ ಬಹದೂರ್ ರಣಛೋಡಲಾಲ್ ಚೋಟಾಲಾಲ್, ಸಿ. ಐ. ಇ. ಎಂಬವರೂ, ರಾವ್ ಬಹದೂರ್ ಕೃಷ್ಣಾಜಿ ಲಕ್ಷ್ಮಣ್‌ನಲ್ಕರ್, ಸಿ. ಐ. ಇ. ಎಂಬವರೂ, ಜಾಸ್ತೀ ಇಸುಂ ತರೀಖ್ ಮೆಂಬರ್‌ಗಳಾಗಿ ನೇಮಕರಮ್ಮಾಡಲ್ಪಟ್ಟಿರುವಂತೆ ಸರ್ಕಾರೀಯಾಗಿ ಪ್ರಕಟಿಸಲ್ಪಟ್ಟಿರುತಿದೆ.

The money order branch of the Post Office.—ಇಂಡ್ಯದೇಶದ ಪೋಸ್ಟಾಫಿಸ್ಸಿಗೆಸೇರಿದ ಮಣಿಆರ್ಡರ್ ಇಲಾಖೆಯು ಪ್ರಜೆಗಳಿಗೆ ಉಪಯುಕ್ತವಾದದ್ದಾಗಿಯೂ ಪ್ರಯೋಜನಕರವಾದದ್ದಾಗಿಯೂ ಇರುತಿದೆ. ಸನ್ ೧೮೯೦-೯೧ ನೇ ಸಾಲಿನಲ್ಲಿ ೧೯,೭೨,೭೦,೩೦೨ ರೂಪಾಯಿಗಳ ಮಣಿಆರ್ಡರ್‌ಗಳು ಕಟ್ಟಿ ಅದರ ಕಮಿಷನ್ ಬಗ್ಯೆ ೧೯,೩೨,೫೯೮ ರೂಪಾಯಿಗಳು ಹುಟ್ಟುವಳಿಯಾಗಿರುತಿದೆ

Compromise.—ವೆಂಕಟಗಿರಿ ಅರಸರವರ ಸಹೋದರರಿಂದ ಸಂಸ್ಥಾನದ ಹಿಂದಗಿಯ ವಿಭಾಗದಬಗ್ಯೆ ತರಲ್ಪಟ್ಟ ಎರಡು ಮೊಕದ್ದಮೆಗಳಲ್ಲೂ ಬೊಬ್ಬಿಲಿ ಅರಸರವರೂ ವೆಂಕಟಗಿರಿ ಸಂಸ್ಥಾನದ ದಿವಾನರಾದ ಮೆ॥ ನಾರಾಯಣಸಾಮಿ ಶೆಟ್ಟರವರೂ ಪ್ರವೇಶಿಸಿ, ವಾದಿ ಪ್ರತಿವಾದಿಗಳಿಗೆ ಸಮಾಧಾನ ಮಾಡಿಸಿ ವ್ಯವಹಾರವಂ ವ್ಯವಸ್ಥೆ ಮಾಡಿದರೆಂದು ಕೇಳುವದಕ್ಕೆ ಸಂತೋಷಿಸುತ್ತೇವೆ.

Cattle and agricultural implements.—ಸರ್ಕಾರ್ ಕಂದಾಯದಬಾಕಿ ಬಗ್ಯೆ ರೈತರ ಸ್ವತ್ತುಗಳು ಜಪ್ತು ಮಾಡುವಲ್ಲಿ, ವ್ಯವಸಾಯೋಪಕರಣಗಳನ್ನೂ, ಒಂದು ಜತೆ ಉಳುವ ಯೆತ್ತನ್ನೂ ವಿನಾಯಿಸಬೇಕೆಂದು ಮದರಾಸ್ ರೆವಿನ್ಯೂ ಬೋರ್ಡ್ ಮೆಂಬರ್‌ಗಳ ಪೈಕಿ ಬಹುಮಂದಿ ಕೊಟ್ಟ ಅಭಿಪ್ರಾಯಾನುಸಾರವಾಗಿ, ಮೇಲಿನಂತೆ ವಿನಾಯಿಸಿ ಕಾಯಂ ಹುಕುಂನಾಮಾ ಮಾಡತಕ್ಕದ್ದೆಂದು ಗವರ್ನ್ ಮೆಂಟಿನವರು ರೆವಿನ್ಯೂ ಬೋರ್ಡಿಗೆ ಹುಕುಂ ಕೊಟ್ಟಿರುತ್ತಾರೆ

Cause of head-ache.—ಮನುಷ್ಯರಿಗೆ ತಲೆನೋವು ಕಾಲಕ್ಲುಪ್ತಿಯಿಲ್ಲದೆ ನಿದ್ರೆ ಮಾಡುವದರಿಂದಲೇ ಸಾಮಾನ್ಯವಾಗಿ ಉಂಟಾಗುತಿದೆ. ನಿಷ್ಕೃಷ್ಟವಾದ ಮತ್ತು ಉಚಿತ ಕಾಲದಲ್ಲಿ ಯಾರು ನಿದ್ರೆ ಮಾಡುತ್ತಾರೆಯೊ ಅವರಿಗೆ ಸಾಧಾರಣ ತಲೆನೋವು ಬರುವದಿಲ್ಲವು. ಯಾರಿಗಾದರು ತಲೆನೋವು ಕಂಡಕೂಡಲೆ ಒಂದೆರಡು ಘಂಟೆಯಕಾಲ ಮಲಗಿಕೊಂಡು ನಿದ್ರೆ ಹೋದರೆ ಕೂಡಲೆ ಅದು ಪರಿಹಾರವಾಗುತಿದೆಂದು ಒಂದಾನೊಂದು ಪತ್ರಿಕೆಯು ತಿಳಸುತಿದೆ.

Polygamy.—ಬಂಗಾಳೇ ದೇಶದೊಳಗಣ ಫರೀದ್‌ಪೂರ್ ಎಂಬ ಷಹರಿಗೆ ಸೇರಿದ ಅನ್ಯ ಗ್ರಾಮವೆಂಬ ಒಂದು ಗ್ರಾಮದಲ್ಲಿ ೨೦ ವರ್ಷಗಳ ವಯಸ್ಸುಳ್ಳ ಬಾಲಕನೊಬ್ಬನು ೧೭ ಮಂದಿ ಭಾರ್ಯೆಯರುಳ್ಳವನಾಗಿಯೂ, ೨೩ ವರ್ಷಗಳ ವಯಸ್ಸುಳ್ಳ ಜೇಷ್ಠನೊಬ್ಬನು ನಾಲ್ಕುಮಂದಿ ಭಾರ್ಯೆಯರುಳ್ಳವನಾಗಿಯೂ ಇರುವದಲ್ಲದೆ, ೧೬ ವರ್ಷಗಳ ವಯಸ್ಸುಳ್ಳ ಇನ್ನೊಬ್ಬನು ಯೇಳನೇಸತಿಯೆ ಈಚೆಗೆ ಮದುವೆ ಮಾಡಿಕೊಂಡಿರುವಂತೆ ಆ ಪ್ರಾಂತದ ಪತ್ರಿಕೆಯೊಂದು ತಿಳಸುತಿದೆ.

Charity.— ಮಹಾರಾಜಾ ಜೋತೀಂದ್ರ ಮೋಹರ್‌ಟಾಗೋರ್ರವರು ಸುಶೀಲರಾದ ವಿತಂತುಗಳ ಉಪಯೋಗಾರ್ಥ ಒಂದು ಲಕ್ಷ ರೂಪಾಯಿಗಳಂ ತೆಗದಿಟ್ಟು, ಸನ್ ೧೮೯೦ ನೇ ಇಸವಿಯಲ್ಲಿ ಹುಟ್ಟಿದ ಧರ್ಮದಾಯಗಳಂ ಕುರಿತ ಕಾನೂನನ್ನನುಸರಿಸಿ ತಮಗೆ ಸಹಾಯಕರಾಗುವಂತೆ ಗವರ್ನ್‌ಮೆಂಟಿನವರಂ ಅಪೇಕ್ಷಿಸಿರುತ್ತಾರೆಂದು ತಿಳಸಿ, ಧರ್ಮಕಾರ್ಯಾಸಕ್ತರಾದವರು ಅದಂ ಆಚರಣೆಯೊಳು ತರುವದಂ ಬಿಟ್ಟು ಮೊದಲು ಗವರ್ನ್ ಮೆಂಟಿನವರಿಗೆ ತಿಳಸುವದಕ್ಕೆ ಯೇನು ಕಾರಣವೊ ನಾವರಿಯೆವೆಂದು ಪುನೆ ಮರಾಟಾ ಪತ್ರಿಕೆಯು ಆಕ್ಷೇಪಿಸುತಿದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

H. H. the Maharaja.—ಶ್ರೀಮನ್ಮಹಾರಾಜರವರು ಬರುವ ತಿಂಗಳಲ್ಲಿ ನೀಲಗಿರಿಗೆ ಬಿಜಯಂಗೈಯ್ಯಕ್ಕೆ ದಯಮಾಡುವ ಅಭಿಪ್ರಾಯವುಳ್ಳವರಾಗಿದಾರೆಂದು ಹಿಂದೆ ತಿಳಸಿದ್ದೆವಷ್ಟೆ. ಈಗ ಸದರೀ ಅಂಶವು ನಿಗಾದಾರವಾದುದೆಂದು ಮೈಸೂರ್ ಪತ್ರಿಕೆಯೊಂದು ಖುದಿಸಿ ಬರುವ ತಿಂಗಳ ಅಪಭಾಗದಲ್ಲಿ ನೀಲಗಿರಿಗೆ ದಯಮಾಡುವರೆಂದು ತಿಳಸುತಿದೆ.

Holidays.—ಗತ ಶುಕ್ರ ಶನಿವಾರಗಳೆರಡು ದಿನಗಳ ಪೈಕಿ ಪೂರ್ವದಿನವು ಮಹಾರಾಜರವರ ಸಿಂಹಾಸನಾರೋಹಣ ಶುಭ ದಿನವಾದುದರಿಂದಲೂ, ಅದರ ಮಾರನೆಯ ದಿನವು ಈ ತಿಂಗಳಲ್ಲಿ ಆಖೈರ್ ಶನಿವಾರವಾದುದರಿಂದಲೂ ಎಲ್ಲಿನ ಸರ್ಕಾರ ಇಲಾಖೆಗಳಿಗೆಲ್ಲ ರಜಾ ಕೊಡಲ್ಪಟ್ಟಿತ್ತು.

Obituary.—ಈ ಪ್ರಾಂತ್ಯ ಸಿವಿಲ ಮಿಲಿಟರಿ ಸ್ಟೇಷನಿನಲ್ಲಿ ಈಗ್ಯೆ ಬಹುಕಾಲದ ಮೊದಲು ಪ್ರಕಟಿಸಲ್ಪಡುತಲಿರುವ ಕಾಸಿಮುಲಖ್ಬಾರ್ ಎಂಬ ಒಂದು ಹಿಂದುಸ್ಥಾನಿ ಪತ್ರಿಕೆಯ ಪ್ರೊಪ್ರೈಟರ ಮತ್ತು ಎಡಿಟರಾದ, ಮೆ|| ಕಾಸಿಂಗಂ ಎಂಬವರು, ಮೊನ್ನೆಯ ದಿನ ಕಾಲವಗತಿಯನ್ನೈದಿದರೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರಿಗೀಗ ೬೫ ವರುಷಗಳ ವಯಸ್ಸಾಗಿರುತಿದೆ. ಇವರು ಈಗ್ಯೆ ಕೆಲವು ಕಾಲದ ಮೊದಲು ಶ್ವಾಸ್ಯ ವಾಯುವಿನಿಂದ ಸಂಕಟಪಡುತಲಿದ್ದು, ಅದರಮೇಲೆ ಜ್ವರವೂ, ಪ್ರಜ್ಞಾಭಂಗವೂ ದೌರ್ಬಲ್ಯವೂ ಪ್ರಾಪ್ತವಾಗಿ, ಕಡೆಗೆ ಅವರ ಶರೀರ ವಿಯೋಗಕಾರಿಯಾದವೆಂದು ತಿಳಿಯಲಾದೆವು. ಇವರಿಗೆ ನಾಲ್ಕು ಜನ ಗಂಡುಮಕ್ಕಳೂ ಮೂವರು ಹೆಣ್ಣುಮಕ್ಕಳೂ ಇರುತ್ತಾರೆ. ಮೆ|| ಕಾಸಿಂಗಂ ಎಂಬವರು ಮಹಮ್ಮದೀಯ ಸಮೂಹದಲ್ಲಿ ಪ್ರಸಿದ್ಧರಾಗಿಯೂ ಧನಿಕರಾಗಿಯೂ ಇದ್ದರು. ಇವರು ಸ್ವಜನರಿಗೂ ಇತರರಿಗೂ ವಿಶೇಷವಾದ ಉಪಕಾರಗಳಂ ಮಾಡುತಲಿದ್ದರು. ಇವರಿಂದ ಪ್ರಕಟಿಸಲ್ಪಡುತಲಿದ್ದ ಕಾಸಿಮುಲಖ್ಬಾರ್ ಪತ್ರಿಕೆಯು, ಲೇಖನದ ಮತ್ತು ಲೆಕ್ಕದ ಗೌರವದಿಂದ ಗವರ್ನಮೆಂಟಿನವರ ಮತ್ತು ಅನೇಕಜನ ಮುಸಲ್ಮಾನರ ಪ್ರಶಂಸೆಗೆ ವಿಷಯವಾಗಿತ್ತು.

ಚೀಫ್ ಕೋರ್ಟ್ ಜಡ್ಜಿಯವರಾದ ಮೆ|| ಕೃಷ್ಣಮೂರ್ತಿಗಳವರ ತಂದೆಯವರಾದ ಮತ್ತು ಹುಜೂರ್ ಖಜಾನೆ ಶಿರಸ್ತೇದಾರರಾಗಿದ್ದ, ಮರಾ|| ಕುಪ್ಪುರಾಯರವರು ಮೊನ್ನೆಯ ದಿನ ರಾತ್ರಿ ಕಾಲಗತಿಯನ್ನೈದಿದರೆಂಬ ವೃತ್ತಾಂತವು ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಇವರಿಗೆ ಕೆಲವು ಸಂವತ್ಸರಗಳ ಮೊದಲು ಪ್ರಸ್ತವಾಗಿದ್ದ, ವಾತರೋಗವು ಕಡೆಗೆ ಶ್ವಾಸ್ಯವಾಯು ರೂಪವಾಗಿ ಪರಿಣಮಿಸಲು, ಕಡೆಗೆ ಅವರು ಬಹಿಸ್ಸಂಚಾರಕ್ಕೆ ಸಹ ಅಸಮರ್ಥರಾಗಿ ಮಾಡಿ ಕೆಲಸದಿಂದ ನಿವೃತ್ತಿಯಂ ಹೊಂದುವಂತೆ ಮಾಡಿತು. ಒಂದೇ ರೀತಿ ಗುಣವಾಗಬಹುದೆಂಬ ಪ್ರತ್ಯಾಶೆಯೊಡನೆ, ಅತಿ ದೀರ್ಘಕಾಲ ರಜಾ ತೆಗೆದುಕೊಂಡು ನಾನಾವಿಧಗಳಾದ ಇಂಗ್ಲಿಷ್, ಹಿಂದೂ ಯುನಾನಿ ಚಿಕಿತ್ಸೆಗಳಂ ಮಾಡಿಸಿಕೊಂಡು ತಕ್ಕನುಸಾರ ಅರ್ಥವ್ಯಯ ಮಾಡಿದಾಗ್ಯೂ ದೀರ್ಘಕಾಲಿಕವಾದ ಸದರೀ ರೋಗವು ಚಿಕಿತ್ಸಕರಿಗೆ ಅಸ್ವಾಧೀನವಾಗಲು, ಕಡೆಗೆ ಇರುವಂತೆ ಇರುವರೆಂಬ ಕೋರಿಕೆಯೊಡನೆ ಮೆ|| ಕುಪ್ಪುರಾಯರವರು ಪೆನ್ಷನ್ ಪಡೆಯುವದಕ್ಕೆ ತಾವಾಗಿಯೇ ಅಪೇಕ್ಷಿಸಿ ತಮ್ಮ ನೌಕರಿಗೆ ಸಂಬಂಧಪಟ್ಟ ಕಾಗದ ಪತ್ರಗಳನ್ನೆಲ್ಲ ಕಂಟ್ರೋಲರಿಗೆ ಕಳುಹಿಸಿ ಅದರ ಮಂಜೂರಾತಿಯ ಬಗ್ಯೆ ಕಾಲವಂ ನಿರೀಕ್ಷಿಸುತಲಿದ್ದರು. ಹೀಗಿರುವಲ್ಲಿಯೇ ಅನಿರೀಕ್ಷಿತವಾಗಿ ಸದರೀ ರೋಗವು ವೃದ್ಧಿಯನ್ನೈದಿ ಅವರಂ ಕಡೆಗೆ ಮೃತ್ಯುವಶವಡಿಸಿದ್ದಾಗಿ ನಿಷಾದಿಸುವೆವು. ಇವರಿಗೆ ಸುಮಾರು ೬೫ ವರುಷಗಳ ವಯಸ್ಸಿಗೆ ಮೇಲ್ಪಟ್ಟಿರಬಹುದೆಂದೆಣಿಸುತ್ತೇವೆ. ಇವರ ವಿಯೋಗಜನ್ಯವಾದ ಕ್ಲೇಶಾನುಭವಕ್ಕೆ ಭಾರ್ಯೆಯೂ ನಾಲ್ಕೈದು ಜನ ಮಕ್ಕಳೂ ಇರುತ್ತಾರೆ.

The Whether—ಈಗ ಕಾಲಸ್ಥಿತಿಯು ಬಹಳ ದುಸ್ಸಹವಾಗಿದೆ. ಬಿಸಲಿನ ಝಳವು ದಿನೇ ದಿನೇ ಹೆಚ್ಚುತಲಿದೆ. ರಾತ್ರಿ ಕಾಲದಲ್ಲಿ ಸೆಕೆಯೂ ಸೊಳ್ಳೆಯ ಕಾಟವೂ ಅಧಿಕವಾಗಿದೆ. ಕೆರೆ ಭಾವಿಗಳಲ್ಲಿ ನೀರು ಬತ್ತಿ ಹೋದದರಿಂದ ಕೆಲವು ಕಡೆಗಳಲ್ಲಿ ಜಲ ಕಷ್ಟವು ತಲೆದೋರಿದೆ. ಜಲ ವಸತಿಯ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ಯಾವ ಏರ್ಪಾಡೂ ಮಾಡಲಿಲ್ಲವೆ.

BANGALORE CITY MUNICIPALITY.

ಬೆಂಗಳೂರ್ ಸಿಟಿ ಮ್ಯೂನಿಸಿಪಾಲಿಟಿ.

೧೯ ನೇ ಮಾರ್ಚಿ, ೧೮೯೩.

೧೮೯೩ ನೇ ಇಸವಿ ಮಾರ್ಚಿ ೨೧ ನೇ ತಾರೀಖ್ ಬುಧವಾರ ಪ್ರಾತಃಕಾಲ ೮ ಘಂಟೆಗೆ, ಸಿಟಿ ಮ್ಯೂನಿಸಿಪಲ್ ಕಮಿಷನರುಗಳು ಕೋಟೆಯಲ್ಲಿರುವ ಮ್ಯೂನಿಸಿಪಲ್ ಆಫೀಸಿನಲ್ಲಿ ಸಭೆ ಸೇರುವಾಗ ಅವರ ಆಲೋಚನೆಗೆ ತರಲ್ಪಡುವ ವಿಷಯಗಳು ಯಾವವೆಂದರೆ.

೧ ೧೮೯೩ ನೇ ಇಸವಿ ಫೆಬ್ರುವರಿ ತಿಂಗಳ ಬಾಬತು ಫಾಲತಿ ಜಮಾಖರ್ಚು ಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರರ ಲೆಕ್ಕ ಮತ್ತು ಕಾಮಗಾರಿಗಳ ವೃದ್ಧಿಯನ್ನು ಕುರಿತ ರಿಪೋರ್ಟ್.

೨ ಕಾರ್ಟ ಷೆಡ್ ವಸ್ತುಗಳನ್ನು ಕೊಂಡುಕೊಳ್ಳುವದಕ್ಕಾಗಿ ಹಣ ಬೇಕೆಂದು ಮ್ಯೂನಿಸಿಪಲ್ ಸ್ಕೂಲ್ ಹೆಡ್ ಮಾಸ್ಟರ್ ಬರೆದುಕೊಂಡಿರುವ ಅರ್ಜಿ.

೩ ಸಿವಿಲ್ ವ ಮಿಲಿಟರಿ ಸ್ಟೇಷನ್ ಮ್ಯೂನಿಸಿಪಲ್ ಬೋರ್ಡ್ ಪ್ರೆಸಿಡೆಂಟರವರು, ಸ್ಟೇಷನ್ ಮ್ಯೂನಿಸಿಪಾಲಿಟಿಯಲ್ಲಿ ಮುಂದಿನ ತಿಂಗಳ ಮೊದಲು ಅಕ್ಟ್ರಾಯಿ ತೆರಿಗೆಯನ್ನು ಜಾರಿಮಾಡುವ ವಿಷಯವನ್ನು ಕುರಿತೂ, ಅಲ್ಲಿನ ತೆರಿಗೆ ಸಿಟಿ ಮ್ಯೂನಿಸಿಪಾಲಿಟಿಯಲ್ಲೂ ತೆರಿಗೆ ಮತ್ತು ಲೈಸೆನ್ಸ್ ದರಗಳನ್ನು ಗೊತ್ತುಮಾಡಬೇಕೆಂತಲೂ ನಮೂದಿಸಿ ಬರೆದ ೧೮೯೩ ನೇ ಇಸವಿ ಮಾರ್ಚಿ ೨ ನೇ ತಾರೀಖಿನ ನಂಬರ್ ಲೆಟರ್.

೪ ಸಿಟಿ ಮ್ಯೂನಿಸಿಪಾಲಿಟಿಗೆ ಎತ್ತುಗಾಡಿಗಳು ತಂಗುವದಕ್ಕೆ ಸ್ಥಳ ನಿರ್ಮಾಣವನ್ನು ಕುರಿತ ಕಾಗದ ಪತ್ರಗಳು.

೫ ೧೮೯೩–೯೪ ನೇ ಇಸವಿಯ ಬಾಬತು ಬಡ್ಜೆಟ್ಟಿಗೆ ಆಖೈರ್ ವ್ಯವಸ್ಥೆ.

೬ ಮ್ಯೂನಿಸಿಪಲ್ ಮೆಂಬರುಗಳ ಚುನಾವಣೆ ನಿಯಮವನ್ನು ಕುರಿತ ನಿಬಂಧನೆಗಳನ್ನು ಬದಲಾಯಿಸುವ ವಿಷಯದಲ್ಲಿ ಪ್ರೆಸಿಡೆಂಟರ ಅಭಿಪ್ರಾಯವನ್ನು ಅಪೇಕ್ಷಿಸಿ ಮೈಸೂರು ಗವರ್ನಮೆಂಟಿನವರು ಬರೆದ ೧೮೯೩ ನೇ ಇಸವಿ ಮಾರ್ಚಿ ೧೩ ನೇ ತಾರೀಖು ೧೭,೫೬೭—L ೧,೫೦೦ ನೇ ನಂಬರ್ ಪ್ರೊಸೀಡಿಂಗ್ಸ್.

೭ ಮುಂದಣ ಸರ್ಕಾರಿ ಸ್ಕೂಲಿಗೆ ಇರತಕ್ಕ ಬರುವ ದರಖಾಸ್ತುಗಳ ವ್ಯವಸ್ಥೆ —

೧ ಷಹರಿನಲ್ಲಿ ಬೀದಿ ದೀಪ್ಪವಂತಿಕೆ ದರಖಾಸ್ತು

೨ ತರಕಾರಿ ಮಾರ್ಕೆಟಿನಲ್ಲಿ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು

೩ ಕೋಟೆಯ ದಿನ್ನೆಯ ಮೇಲೆ ತಂಗುವ ಬಗ್ಗದ ಗಾಡಿಗಳ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು

೪ ತಿಂಗಳ ಸಂತೆಯನ್ನು ನಡಿಸಿಕೊಳ್ಳುವದಕ್ಕೆ ದರಖಾಸ್ತು

೮ ಮಿಸ್ ಅನ್ನಾ ಆಸ್ಟಾಕ್, ಎಲ್ ಎಂ ಎಸ್ ಎಂಬವರನ್ನು ಅಸಿಸ್ಟೆಂಟ್ ಸರ್ಜನರಾಗಿ ನೇಮಿಸುವುದು, ಅವರ ನೌಕರಿಯನ್ನು ಮ್ಯೂನಿಸಿಪಾಲಿಟಿಗೆ ಕೊಡುವ ವಿಷಯದಲ್ಲಿ ಗವರ್ನಮೆಂಟಿನವರು ಮಾಡಿದ ೧೮೯೩ ನೇ ಇಸವಿ ಫೆಬ್ರುವರಿ ೨೭ ನೇ ತಾರೀಖು ೧೬,೫೯೪—೬೦೦—L ೧,೩೭೦ ನೇ ನಂಬರ್ ಪ್ರೊಸೀಡಿಂಗ್ಸ್.

೯ ಓಲ್ಡ್ ಟೌನಿನಲ್ಲಿ ಬಸ್ಸಾಂಬಿಯವರ ಪ್ರೊಸೀಡಿಂಗ್ಸ್ ಕಾಯಿದೆ ಸದರಿ ಸಂಬಂಧ ಅವರ ಸರ್ಕ್ಯುಲರ್ ಎಂಬುದು ಈ ತಿಂಗಳ ೧೩ ನೇ ತಾರೀಖಿನಲ್ಲಿ ಬರೆದ ಕಾಗದ.

೧೦ ಕಡೆಗೆ ಮ್ಯೂನಿಸಿಪಲ್ ಲಿಮಿಟಿನಿಂದ ಹೊರಪಟ್ಟ ಕಾಡುಗೋಡಿಯ ದೇವಸ್ಥಾನದ ರಸ್ತೆಯ ಎಡಭಾಗದಲ್ಲೂ ಇರುವ ಜಮೀನಿನ ಸಂಗತಿ ವ್ಯವಸ್ಥೆ.

೧೧ ದಂಡಿಗೆ ಕೇರಿಯ ಬಗ್ಗೆ, ಮಹಮ್ಮದೀಯ ಜನರ ಸ್ಮಶಾನಕ್ಕಾಗಿಯೂ, ಮೈಸೂರು ರಸ್ತೆಯಲ್ಲಿ ಓಬಿಸ ಎಂಬ ಗುಡಿ ಹೊಡೆಯುವ ಬನ್ನಿಯ ಬಳಿ ಹೊಸ ಮಾಡಲ್ಪಟ್ಟಿರುವ ಸ್ಥಳವನ್ನು ಕುರಿತ ವಿಷಯ.

V. P. Madhava Rao,
President,
City Municipal Commission

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದರ್ಮಕ್ಕಾಗಿ ವಸೂಲಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ರಸೀದಿ ತೋರಿಸುವ ಪಟ್ಟಿ —

೧೮೯೩ ನೇ ಇಸವಿ ಮಾರ್ಚಿ ತಾರೀಖ್ ೨೦ರ ಮೊದಲು ಮಾರ್ಚಿ ೨೬ ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಸ್ಥಳಗಳ ಸಂಖ್ಯೆ	88
ವಸೂಲಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	36¼
ಕತವಾರದ ಕಿಲ್ಲಾ ಸೇರು	52¾
ಜಮ್ಲಾ	89
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	18½
ಖರ್ಚಾದ ಅಕ್ಕಿ ಸೇರು	24½
ಸಿಲ್ಕು ಬಾಕಿ	46

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ಡಿಟೈಲ್.

ಅರ್ಚಕರು	7
ದಿಕ್ಕಿಲ್ಲದ ವಿದ್ಯಾರ್ಥಿ	5
ಪ್ರತಿಯೊಬ್ಬರಿಗೆ ವಿದ್ಯಾರ್ಥಿಗಳು	13
ಕಲ್ಲಿ ಕೊಡತಕ್ಕ ಅರ್ಚಕ, ಪೂಜಾರಕ ಪರಿಚಾರಕರ ಸಂಖ್ಯೆ	18
ಪ್ರಯಾಣಸ್ಥರು	6
ಜಮ್ಲಾ	49

THE MYSORE GAZETTE

ಮೈಸೂರು ಗೆಜೆಟ್

ಶ್ರೀಮನ್ ಮಹಾರಾಜ ರಾಜಶ್ರೀ ಯವರ ಸರ್ಕಾರದಿಂದ ಹೊರಡಿಸಲ್ಪಟ್ಟ ನೋಟೀಫಿಕೇಷನುಗಳು

ನಂ. ೪೨೦ ತಾರೀಖ್ ೧೬ ನೇ ಮಾರ್ಚಿ, ೧೮೯೩—ಡೆಪ್ಯುಟಿ ಪೋಲಿಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಎಂ. ವೆಂಕಟೇಶಯ್ಯನವರಿಗೆ ೧೮೯೩ ನೇ ಇಸವಿ ಮಾರ್ಚಿ ೧೫ ನೇ ತಾರೀಖ್ ಲಗಾಯತು ಅವರು ಉಪಯೋಗಿಸಿಕೊಳ್ಳದ ತಾರೀಖ್ ಮೊದಲು ಮೂರು ತಿಂಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೪೨೧ ಮೈಸೂರು ಡಿಸ್ಟ್ರಿಕ್ಟ್ ನ ಡೆಪ್ಯುಟಿ ಅಸಿಸ್ಟೆಂಟ್ ಕಮಿಷನರ್ ಮೆ|| ಪೈ ಸೀತಾರಾಮಯ್ಯನವರಿಗೆ, ೧೮೯೩ ನೇ ಇಸವಿ ಫೆಬ್ರುವರಿ ೧೮ ನೇ ತಾರೀಖು ೬೫ ನೇ ನಂಬರ್ ನೋಟಿಫಿಕೇಷನ್ ಮೂಲಕ ಕೊಡಲ್ಪಟ್ಟಿದ್ದ ೬ ದಿನಗಳ ಕ್ಯಾಜುವಲ್ ರಜಾ ಪ್ರೈವೇಟ್ ೧೮೯೩ ನೇ ಇಸವಿ ಫೆಬ್ರುವರಿ ೬ ನೇ ತಾರೀಖ್ ಮೊದಲು ೧೧ ನೇ ತಾರೀಖ್ ವರಿವಿಗೆ ಉಭಯ ದಿನಗಳೂ ಸೇರಿ ೬ ದಿವಸಗಳು ಮಾತ್ರವೇ ಉಪಯೋಗಿಸಿ ಕೊಳ್ಳಲ್ಪಟ್ಟ ದ್ದರಿಂದ ಉಪಯೋಗಿಸಿಕೊಳ್ಳದ ಭಾಗ ಅಂದರೆ ೨ ದಿವಸಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ. ೬೯೩ ಬಾಬಾಬುದನ್ನಲ್ಲಿ ಉಪಯೋಗಿಸಲ್ಪಟ್ಟಿರುವ ಡಿಸ್ಟ್ರಿಕ್ಟ್ ಹಾಸನ ಕಡೂರ್ ಡಿಸ್ಟ್ರಿಕ್ಟ್ ಟ್ರೆಜರಿ ಬಾಬ್ತಿನಲ್ಲಿರುವ ಅಸಿಸ್ಟೆಂಟ್ ಕಮಿಷನರ್ ಮೆ|| ಟಿ ಜಿ. ಸುಬ್ರಹ್ಮಣ್ಯಮ್ ಅವರಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿದ್ದ ಬಟ್ಟಿ ೩ ತಿಂಗಳ ರಜಾವಿಗೆ ಸೇರಿದಂತೆ ಇನ್ನೂ ಆರುವಾರಗಳ ಕಾಲ ಜಾಸ್ತಿ ರಜಾ ಕೊಡಲ್ಪಟ್ಟಿದೆ. (೧೮೯೩ ನೇ ಇಸವಿ ಡಿಸೆಂಬರ್ ೧೫ ನೇ ತಾರೀಖ್ ೨೭ ನೇ ನಂಬರ್, ೧೮೯೩ ನೇ ಇಸವಿ ಫೆಬ್ರುವರಿ ೧೮ ನೇ ತಾರೀಖ್ ೪೩೩ ನೇ ನಂಬರ್ ಡಿಸ್ಟ್ರಿಕ್ಟ್ ಹಾಸನ ಮೊದಲಾದ ರಜಾ.)

ನಂ. ೬೯೭, ತಾ|| ೧೭ ನೇ ಮಾರ್ಚಿ ೧೮೯೩—ಅಸಿಸ್ಟೆಂಟ್ ಕಮಿಷನರ್ ಮೆ|| ಬಿ ರಾಮಸ್ವಾಮಯ್ಯನವರು, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರ ಆಫೀಸ್ ಚಾರ್ಜನ್ನು, ೧೮೯೩ ನೇ ಇಸವಿ ಮಾರ್ಚಿ ೧೦ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಪಿ ಪುಟ್ಟಣ್ಣನವರ ವಶಕ್ಕೆ ಒಪ್ಪಿಸಿರುತ್ತಾರೆ.

ನಂ. ೬೯೮. ಅಸಿಸ್ಟೆಂಟ್ ಕಮಿಷನರ್ ಮೆ|| ಕೆ. ಎಸ್ ಜೋಗಯ್ಯನವರು, ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ೧೮೯೩ ನೇ ಇಸವಿ ಫೆಬ್ರುವರಿ ೨೮ ನೇ ತಾರೀಖಿನ ಪೂರ್ವಾಹ್ನದಲ್ಲಿ, ಪರ್ಮನೆಂಟ್ ಮೆ|| ಹೆಚ್ ತಿಮ್ಮಕೃಷ್ಣರಾಯರವರಿಗೊಪ್ಪಿಸಿರುತ್ತಾರೆ.

ನಂ. ೬೯೯—ಬೆಂಗಳೂರ್ ಸೆಂಟ್ರಲ್ ಜೇಲ್ ಆಫೀಸ್ ಸೂಪರಿಂಟೆಂಡೆಂಟ್ ಮೆ|| ಪಿ ಎ ಥೋಂಪ್ಸ್ ಎಲ್. ಎಂ ಎಸ್, ಎಂಬವರು, ಮೂರನೇ ಗ್ರೇಡ್ ಸರ್ಜನರಾಗಿ ೫ ಸಂವತ್ಸರಗಳ ಕಾಲ ಸರ್ವೀಸ್ ಪೂರೈಸಿದ್ದರಿಂದ, ಅವರನ್ನು ೧೮೯೦ ನೇ ಇಸವಿ ಡಿಸೆಂಬರ್ ೧೯ ನೇ ತಾರೀಖು ಲಗಾಯತು, ಸ್ಥಳದ ನೌಕರಿಯಲ್ಲಿ ಸರ್ಜನರಾಗಿ ೨ ನೇ ಗ್ರೇಡಿಗೆ ಗವರ್ನಮೆಂಟಿನವರು ಬಡ್ತೀ ಮಾಡಿರುತ್ತಾರೆ.

ನಂ. ೭೦೦ ತಾ|| ೨೩ ನೇ ಮಾರ್ಚಿ ೧೮೯೩—ಚೀಫ್ ಕೋರ್ಟ್ ಅಡ್ವೋಕೇಟ್ ಮೆ|| ಎಂ. ಸಿ ರಂಗಯ್ಯಂಗಾರ್ ಬಿ ಎ, ಎಂಬವರು, ಪರಗಣೆ ಮುಂತಾದವು ಮಾರಿದ ಸಂಬಂಧ ಕೊಡಲ್ಪಡುವವರೆಗೆ ಬೆಂಗಳೂರಿನಲ್ಲಿ ಅಡಿಷನಲ್ ಮ್ಯಾಜಿಸ್ಟ್ರೇಟ್ ಕೆಲಸವನ್ನು ಆಕ್ಟಿಂಗ್ ಆಗಿ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ. ಇವರು ಕೂಡಲೇ ಕೆಲಸವನ್ನು ವಹಿಸಿಕೊಳ್ಳತಕ್ಕದ್ದು.

PUBLIC CHARITY

ಈಗ ಪ್ರಾಪ್ತವಾಗಿರುವ ಕ್ಷಾಮದ ದೆಸೆಯಿಂದ ಸಂಕಟ ಪಡುತಲಿರುವ ದಿಕ್ಕಿಲ್ಲದ ಬ್ರಾಹ್ಮಣರಿಗೂ ಇತರರಿಗೂ ಯಥೋಚಿತ ಜೀವನಾಧಾರವಂ ಕಲ್ಪಿಸಿ ಅವರಂ ರಕ್ಷಿಸುವ ಉದ್ದೇಶದೊಡನೆ ಪ್ರಮುಖರಾದ ದೊಡ್ಡಮನುಷ್ಯರನೇಕರು ಕಳೆದ ಜನವರಿ ತಿಂಗಳ ೩ ನೇ ತಾರೀಖಿನಲ್ಲಿ ಒಂದು ಸಭೆ ಸೇರಿ ಅದರ ಕಾರ್ಯ ನಿರ್ವಹಣೆಯ ಬಗ್ಯೆ ಒಂದು ಕಮಿಟಿ ಏರ್ಪಟ್ಟು ಸದರೀ ಕಮಿಟಿಯವರು ಪ್ರತಿನಿತ್ಯ ಅನೇಕರಿಗೆ ಅಕ್ಕಿ ದಾನ ಕೊಡುತಲಿದ್ದಾರೆಂತಲೂ, ಇದಕ್ಕಾಗಿ ಅನೇಕರು ಧಾರಾಳವಾಗಿ ಚಂದಾ ಮಾಡಿರುತ್ತಾರೆಂತಲೂ ಹಿಂದೆಯೇ ತಿಳಿಸಿದ್ದೆವಷ್ಟೆ. ಈ ದತ್ತಕಾರ್ಯಕ್ಕಾಗಿ ತಿಂಗಳಕಟ್ಟಲೆ ಕೊಡುವಂತೆ ಈಗ್ಯೆ ನವಾಬಿ ಇದುವರಿವಿಗೆ ಸಗಮರೂಪವಾಗಿ ಸಹಾಯ ಮಾಡಿರುವ ದೊಡ್ಡ ಮನುಷ್ಯರ ಹೆಸರುಗಳನ್ನು ಅವರವರ ಔದಾರ್ಯ ಮತ್ತು ಪ್ರಜಾನುರಾಗ ಪ್ರದರ್ಶನಾರ್ಥ ಇದರಡಿ ಪ್ರಕಟಿಸಿರುತ್ತೇವೆ. ಪ್ರಸಕ್ತ ಧರ್ಮಕಾರ್ಯವಂ ಆಗಿಂದಾಗ್ಯೆ ಅನೇಕ ಜನ ಅಧಿಕಾರಿಗಳೂ ಇತರರೂ ಹೋಗಿ ತನಿಖೆ ಮಾಡಿ ಪ್ರೋತ್ಸಾಹ ಪಡಿಸುತಲಿದ್ದಾರೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ.

ಮ|| ರಾ ಮುಜರಾಯಿ ಸೂ ಆ. ಶ್ರೀನಿವಾಸಾಚಾರ್ಯರವರು ೭೫ ೦ ೦

,,	ರತ್ನಪುರಿ ಸಂಜೀವಶಾಸ್ತ್ರಿಗಳು	೩೫ ೦ ೦
,,	ದೊಡ್ಡಿ ವೆಂಕಟಪ್ಪಶೆಟ್ಟರು	೫೦ ೦ ೦
,,	ಪೈ ಸಂಜೀವಪ್ಪನವರು	೨೫ ೦ ೦
,,	ಕೋಟೆ ಮಹಾಪುಣ್ಯನವರು	೨೫ ೦ ೦
,,	ಸ್ಕಬೆಟ್ಟ ಅಣ್ಣಯ್ಯಶೆಟ್ಟಿ	೨ ೦ ೦
,,	ಪೈ ದೊಡ್ಡ ಬಸಣ್ಣನವರು	೨೫ ೦ ೦
,,	ವಿ ಅಪ್ಪಾಜಪ್ಪನವರು	೧೫ ೦ ೦
,,	ಪತ್ರಿ ವೀರಪ್ಪನವರು	೧೫ ೦ ೦
,,	ಎಸ್ ಮುನಿಯಪ್ಪನವರು	೧೨ ೦ ೦
,,	ಜವಳಿ ಅಂ ರಾಮಕೃಷ್ಣಪ್ಪನವರು	೧೦ ೦ ೦
,,	ಪೈ ಶಿದ್ಧಪ್ಪನವರ ನಂಜುಂಡಪ್ಪನವರು	೫ ೦ ೦
,,	ಸಣ್ಣ ಮುನಿನಂಜಪ್ಪನವರು	೧೦ ೦ ೦
,,	ಗರುಡಿ ದೊಡ್ಡ ವೀರಪ್ಪನವರು	೫ ೦ ೦
,,	ಮಧುರೆ ಚೆನ್ನಪ್ಪನವರು	೫ ೦ ೦
,,	ಚಿಕ್ಕ ಗೋವಿಂದಪ್ಪನವರು	೩ ೦ ೦
,,	ಜವಳಿ ಅಂಗಡಿ ಆದಪ್ಪನವರು	೧೦ ೦ ೦
,,	ಜವಳಿ ಅಂಗಡಿ ಗಡದಪ್ಪನವರು	೧೦ ೦ ೦
,,	ಕಂಚಿನ ಅಂಗಡಿ ಮುನಿಯಪ್ಪನವರು	೨೦ ೦ ೦
,,	ಮಾಹಾಜನನವರ ಮುನಿಯಪ್ಪನವರು	೬ ೦ ೦
,,	ಪಿ ವಿ ಆ ರಾಮಸ್ವಾಮಿ ಶೆಟ್ಟರವರು	೧೦ ೦ ೦
,,	ಚಿಕ್ಕಮೈನ ನಂಜುಂಡಪ್ಪನವರು	೫ ೦ ೦
,,	ಮು ಸೂಗಪ್ಪನವರು	೧೦ ೦ ೦
,,	ಜವಳಿ ಅಂಗಡಿ ದೇವಾಜಿರಾವ್	೪ ೦ ೦
,,	ಅಡ್ವೊಕೇಟ್ ನಾರಾಯಣರಾಯರವರು	೧೦ ೦ ೦
,,	,, ಎಸ್. ಮಹಿಸ್ವರಯ್ಯಂಗಾರ್	೧೦ ೦ ೦
,,	,, ಕೃಷ್ಣಮೂರ್ತಿರಾಯರವರು	೧೦ ೦ ೦
,,	ಭರಮಣ್ಣಶೆಟ್ಟರ ಅಣ್ಣಯ್ಯಪ್ಪ	೧೦ ೦ ೦
,,	ಜವಳಿ ಅಂಗಡಿ ಎಸ್ ಮುನಿರಾಮಣ್ಣ	
	ಕಾವೇಟಿ ರಂಗಪ್ಪನವರ ಸಹ	೧೦ ೦ ೦
	ಜಮಾದಾರ್ ಟ್ರೆಜರಿ ಆಫೀಸ್ ಷರಾ	
,,	ಸ್ವಾಮಿ ಮುದಲಿಯಾರ್ರವರು	೧೫ ೦ ೦
	ಎಕ್ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಆರ್ ವಿ	
,,	ಚಿನ್ನಪ್ಪರಾಯರವರು	೨೦ ೦ ೦
	ಅಮಲ್ದಾರ್ ಸುಬ್ಬನಾರಾಯಣರವರು	
,,	ರವರು	೧೦ ೦ ೦
,,	ಗೋವಿಂದರಾಜ ಮೊದಲಿಯಾರ್ರವರು	೫ ೦ ೦
,,	ನರಸಿಂಹಯ್ಯಂಗಾರ್ರವರು	೩ ೦ ೦
,,	ಗಣಿಶಪ್ಪ ಸುಬ್ಬರವರು	೨ ೮ ೦
,,	ಜಮೀನ್ದಾರ್ ರಾಮರಾವ್ ಪೇಟನೋಕರ	೫ ೦ ೦
,,	ಚೆನ್ನ ಸಿಕ್ರಂಟ್ ಆನಂದರಾವ್	೧೦ ೦ ೦
,,	ಕೆ ಪುಟ್ಟಣ್ಣಶೆಟ್ಟರವರು	೨ ೦ ೦
,,	ಸಿಟಿ ಅಮಲ್ದಾರ್ ನಾಗೇಶರಾಯರವರು	೨ ೮ ೦
,,	ತಿಪ್ಪಸಿ ಲಕ್ಷ್ಮಯ್ಯನವರು	೫ ೦ ೦
,,	ಪಿ.ಡಬ್ಲ್ಯೂ ಡಿ ದೊಡ್ಡಣ್ಣನವರು	೧೫ ೦ ೦
,,	ಅಸಿಸ್ಟೆಂಟ್ ಸಂತಾನರಾಯರು	೧೦ ೦ ೦
,,	ಅಡ್ವೊಕೇಟ್ ಎಸ್ ರಾಮಸ್ವಾಮಯ್ಯಂಗಾರ್ರವರು	೧೨ ೮ ೦
,,	ಅಡ್ವೊಕೇಟ್ ನಂಜುಂಡಪ್ಪನವರು	೧೦ ೦ ೦
,,	ಅಡ್ವೊಕೇಟ್ ಎಸ್ ಶ್ರೀನಿವಾಸಯ್ಯಂಗಾರ್ರವರು	೧೦ ೦ ೦
,,	ಸೊಂಡೆಕೊಪ್ಪ ನಂಜುಂಡಪ್ಪನವರು	೧೦ ೦ ೦
,,	ನವರಂಗಿ ಶಾಮಣ್ಣನವರು	೫ ೦ ೦
,,	ಡಿಪ್ಯುಟಿ ಅಮಲ್ದಾರವರು	೫ ೦ ೦

SUMMARY OF NEWS

ವೃತ್ತಾಂತ ಸಂಗ್ರಹವು.

ಬರೋಡೆ ಗಾಯಕವಾಡ ಮಹಾರಾಜರವರು ವಿಲಾಯತಿಗೆ ಬೇಗನೆ ಹೋಗತಕ್ಕವರಾಗಿದಾರೆ

ಕಲ್ಕತ್ತೆಯಲ್ಲಿ ರಾಜಾಬಜಾರ್ ಎಂಬ ಬೀದಿಗೆ ಅಗ್ನಿಪ್ರವೇಶವಾಗಿ ಸುಮಾರು ೧೫ ಲಕ್ಷ ರೂಪಾಯಿ ಲುಕ್ಸಾನಾಗಿರುತ್ತದೆ

ಮುಂಬೈಯಲ್ಲಿ ಕೆಲವರು ತಾಕ್ಟರ್‌ಗಳು ಶಕ್ತಿಯಾದ ಮ್ಯಲಿ ತೆಗೆಯುವ ಕಾಯಿದೆಯನ್ನು ಈ ಹಿಂದೂಸ್ಥಾನದಲ್ಲಿ ಜಾರಿಗೆ ತರಬೇಕೆಂದು ಗೌರ್ನಮೆಂಟಿನವರಿಗೆ ಬೇಡುತ್ತಾರೆ

ಆಫ್ಘಾನಿಸ್ಥಾನದ ಅಮೀರರು ಮುಂಬೈಯಲ್ಲಿರುವ ಮಾರ್ಟಿನ್ ಕಂಪೆನಿಯವರಿಗೆ ಎರಡು ಚಿನ್ನದ ನಡುಕಟ್ಟುಗಳನ್ನು [illegible] ಅಪ್ಪಣೆ ಕೊಟ್ಟಿದ್ದಾರೆ. ಈ ನಡುಕಟ್ಟುಗಳಲ್ಲಿ ಒಂದು ೧೨೦೦ ತೊಲಾ ತೂಕವುಳ್ಳದ್ದಾಗಿಯೂ ಇನ್ನೊಂದು ೭೦೦ ತೊಲಾ ತೂಕವುಳ್ಳದ್ದಾಗಿಯೂ ಇರುವವು [illegible] ಇವುಗಳನ್ನು [illegible] ಎಂದು ಇನ್ನೂ ಗೊತ್ತಾಗಿಲ್ಲ.

[illegible] ವಿದ್ಯಾ ಸಾಹಿತ್ಯದಲ್ಲಿ ನಿಪುಣನಾದ [illegible] ಲಕ್ಷದಂತೆ [illegible]

[illegible]

[illegible]

[illegible]

ನೋಟಿಸ್.

ಗಣೇಶ ರಾಮಚಂದ್ರ ಕರ್ಣಿ ಮತ್ತು ಕಂಪೆನಿ ಕಮಿಷನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟು ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸುವುದಕ್ಕೆ ಸನ್ನದ್ಧರಾಗಿರುತ್ತೇವೆ

ಎಲ್ಲಾ ತರಹ ಔಷಧಗಳು, ಪುಸ್ತಕಗಳು, [illegible]ಗಳು, [illegible] ಮುದ್ರೆಗಳು, [illegible]ಗಳು, [illegible]ಗಳು, [illegible] ಸಾಲುಗಳು, [illegible] ಕನ್ನಡಕಗಳು [illegible] ರತ್ನಗಳು, [illegible] ಉಂಗುರಗಳು, [illegible] ಪಾತ್ರೆಗಳು [illegible] ಕೇಸು, [illegible] ಇವು ಮೊದಲಾದ ಸಾಮಾನುಗಳು

[illegible]

ವಿಳಾಸ — ಗಣೇಶ ರಾಮಚಂದ್ರ ಕರ್ಣಿ ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್ [illegible] ಮುಂಬೈ

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡ ಭಾಗಗಳಿಗೆ

	[illegible]	[illegible]
ಮುಂಗಡ [illegible]	8—0—0	9—6—0
ತರುವಾಯ „	9—0—0	10—8—0

ಇಂಗ್ಲೀಷು ಅಥವಾ ಕನ್ನಡ ಭಾಗಗಳಿಗೆ.

ಮುಂಗಡ [illegible]	4—0—0	5—0—0
ತರುವಾಯ „	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible] ಪಙ್ತಿ ಒಂದಕ್ಕೆ	0—2—0
ಎರಡನೆ [illegible] ಪಙ್ತಿ ಒಂದಕ್ಕೆ	0—1—0

[illegible]

ADVERTISEMENTS

NOTICE.

VAIDYASARA SANGRAHA

A TREATISE ON THE ... OF ... HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು [illegible]

ಇದರ ಕ್ರಯ [illegible] ಮತ್ತು [illegible] ಪ್ರತಿ ಒಂದಕ್ಕೆ ರೂ 5 -0—0

[illegible]

ಬೆಂಗಳೂರ್ [illegible]

NOTICE

T. SAMI'S WONDERFUL MEDICINES

ಟಿ ಸಾಮಿ ಎಂಬವರ ಆಶ್ಚರ್ಯಕರವಾದ ಹಿಂದೂ ಔಷಧಗಳು

[illegible] ವಿಜ್ಞಾಪಿಸಿಕೊಳ್ಳುತ್ತೇನೆ

[illegible]

ಪ್ರಕಟನೆ.

ಬಹಳ ಸುಲಭಕ್ರಯಕ್ಕೆ ವಿಕ್ರಯಿಸಲ್ಪಡುವವು.

ಮದರಾಸ್ [illegible] ಇರುವ ಪುಸ್ತಕಗಳ ವಿವರ [illegible] ಮುದ್ರಿಸಲ್ಪಟ್ಟ ಪುಸ್ತಕಗಳು.

	ವಿವರ	ಕ್ರಯ ಪೋಸ್ಟೇಜ್ ಸಹ ರೂ ಅ ಕ.
1	[illegible]	0 1 6
2	[illegible] (ಕನ್ನಡ ಪದ್ಯಕಾವ್ಯ [illegible])	0 2 6
3	ರತ್ನಪರೀಕ್ಷೆ [illegible]	0 2 6
4	[illegible]	0 2 6
	[illegible]	0 2 0
	[illegible]	0 1 6
7	[illegible]	0 1 0
8	[illegible]	0 1 0
9	[illegible]	1 10 0
10	[illegible]	1 1 0
11	[illegible]	0 15 0
12	[illegible]	0 14 0
13	[illegible]	0 3 6
14	[illegible]	0 1 6
15	[illegible]	0 1 6
16	[illegible]	0 1 0
17	[illegible]	0 1 6
18	[illegible]	0 1 6
19	[illegible]	0 1 0
20	[illegible]	1 10 0
21	[illegible]	0 8 6
22	[illegible]	0 3 6
23	[illegible]	0 1 0
24	[illegible]	0 2 0
25	[illegible]	0 1 6
26	[illegible]	0 1 6

ಈ ಪುಸ್ತಕಗಳು ಬೇಕಾದವರು [illegible]

[illegible]

ಬೆಂಗಳೂರು.

BANGALORE —Printed and published at the KARNATAKA PRESS No 10, Hospital Road Pettah —1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE—MONDAY, APRIAL 4, 1892 [No. 14.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಏಪ್ರಿಲ್ ೪ ನೇ ತಾರೀಖ್ ಸೋಮವಾರ. [ಸಂಚಿಕೆ ೧೪.

ಕರ್ನಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,
ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ ಅಂಚೆ ಇಲ್ಲದೆ	ಪರಸ್ಥಳದವರಿಗೆ ಅಂಚೆಸಹಿತ.
ಮುಂಗಡ ಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ ಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ [illegible] ಕಳುಹಿಸತಕ್ಕವರು [illegible] ಇಂಗ್ಲಿಷ್ [illegible] ತಿಳಿಸಬೇಕು [illegible] ಬೆಂಗಳೂರಿಗೆ [illegible].

ಪ್ರಕಟನೆಯ ರಿವಾಜ್.

ಮೊದಲನೆ ಪ್ರಕಟನೆಗೆ, ಒಂದಕ್ಕೆ 0—2—0
ಎರಡನೆ ಮೊದಲಾದ ಪ್ರಕಟನೆಗೆ, ಒಂದಕ್ಕೆ 0—1—0

[illegible]

ADVERTISEMENTS.

NOTICE.

VAIDYASARA SANGRAHA
A TREATISE ON PRINCIPLES OF THE
HINDU MEDICINE.
Price including Postage Rs 5-0-0
ವೈದ್ಯಸಾರ ಸಂಗ್ರಹ.

ಈ ಗ್ರಂಥದಲ್ಲಿ [illegible] ಇದ್ದರೆ [illegible].

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಕೂಲಿ ಸಹಿತ ಪ್ರತಿ ಒಂದಕ್ಕೆ ರೂ 5—0—0
ಟಿ. ಬಿ. [illegible].
ಬೆಂಗಳೂರು, [illegible] ನವಂಬರ್.

ನೋಟೀಸ್.

ಬೆಂಗಳೂರು ಕರ್ನಾಟಕ ಪ್ರೆಸ್.
೧೮೬೪ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ [illegible] ಸಾಧನಗಳು [illegible].

ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸ ಮಾತ್ರವೇ ನಡೆಯುತದೆ. [illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ಶಿ ಮತ್ತು ಕಂಪನಿ.
ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿನ್ನ ಬೆಳ್ಳಿಗಳು, ಛತ್ರಿಗಳು, [illegible], [illegible], ಕನ್ನಡಕಗಳು, [illegible], ಅತ್ತರುಗಳು, ಅತ್ಯುತ್ತಮವಾದ ವಸ್ತ್ರಗಳು, [illegible], ಪಾತ್ರೆಗಳು, [illegible], ಕಾಗದ, [illegible] ಸಾಮಾನುಗಳು

[illegible] ಕಳುಹಿಸುವ ಜವಾಬು ಬರೆಯಬೇಕು.

ವಿಳಾಸ,—ಗಣೇಶ ರಾಮಚಂದ್ರ ಕರ್ಶಿ,
ಮತ್ತು ಕಂಪನಿ, ಕಮಿಷನ್ ಏಜಂಟ್ಸ್,
[illegible], ಮುಂಬಯಿ

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದ ಸಹಾಯಕ್ಕಾಗಿ ಬರುತ್ತಿರುವ ಆಸ್ತಿ ಮತ್ತು ಅದರ ವಿನಿಯೋಗದ ವಿವರವನ್ನು ತೋರಿಸುವ ದಾಖಲೆ.—

೧೮೯೨ ನೇ ಇಸವಿ ಮಾರ್ಚಿ ತಾರೀಖು ೩೧ರ ವರೆಗೆ ಮೊದಲು ಏಪ್ರಿಲ್ ೧ನೇ ತಾರೀಖಿನ ವರೆಗೆ—

ಆಸ್ತಿ ಪಡೆಯುವ ಶಾಲಾ ಬಾಲಕರ ಸಂಖ್ಯೆ	..	51
ಜನಮಾನದ ಭಾಷ್ಯದ ಕಲಿಸುವಿಕೆ ಸಂಖ್ಯೆ	...	38½
ನಡಾವಳಿ ಕಲ್ಪ ಕೀಲು	..	46
ಜಾವಲ್ಲ	...	54½
[illegible] ವರ್ಷದಲ್ಲಿ ಕಲಿಯಲ್ಪಟ್ಟ ಕೀಲು	..	10½
[illegible] ಕೀಲು	...	20
ಜಾತಾ ಬಿ	...	45

[illegible] ಬಾಲಕರ ಸಂಖ್ಯೆ ಮತ್ತು ಡಿಸ್ಟ್ರಿಕ್ಟ್.

ಓದುವವರು	..	7
ನಿತ್ಯ ಬರುವ ವಿದ್ಯಾರ್ಥಿ	...	3
[illegible] ವಿದ್ಯಾರ್ಥಿಗಳು	..	7
[illegible]		16
ಪ್ರಯಾಣಸ್ಥರು	...	7
ಜಮಲ್ಲ	...	40

THE MONEY MARKET.

ಮದರಾಸ್, [illegible] ೨ನೇ ಏಪ್ರಿಲ್ 1892.
ನೂರು 100ರೂ [illegible] ಗವರ್ನಮೆಂಟ್ ಪತ್ರಗಳು, ರೂ [illegible], 107-8-0 ರಿಂದ 107 0 0 ರವರೆಗೆ,
ಮದರಾಸ್ ಬ್ಯಾಂಕಿನ ಷೇರುಗಳು, (500) [illegible] 913 [illegible] 918 ರವರೆಗೆ,
[illegible] ಬ್ಯಾಂಕಿನ ಷೇರುಗಳು, (100) [illegible] 170 ರಿಂದ 175 ರವರೆಗೆ,
[illegible], 15-9-0
[illegible], ಲಂಡನ್ಗೆ
6 [illegible], 1s. 2 13/32 d.
[illegible], 1s 3 11/32 d
[illegible], 1s [illegible] d

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 4, 1892.

೧೮೯೨ನೇ ಇಸವಿ ಏಪ್ರಿಲ್ ತಾ ೪ ನೇ ಸೋಮವಾರ.

OFFICIAL VAGARIES.

ಈ ಸಂಸ್ಥಾನದ ಮುಖ್ಯ ವಳಿಗೆ ಮುಖ್ಯಾಧಾರವಾಗಿರುವ ಯೆಕ್ಸೈಜ ಮೂಲಕವಾದ ಆದಾಯವು ಸಾಲಿಬಸಾಲಿ ಅಧಿಕವಾಗುತಲಿರುವದರಿಂದ ಅದಕ್ಕೆ ಪ್ರತ್ಯೇಕ ಒಬ್ಬ ಕಮಿಷನರ್ ೧,೫೦೦ ರೂಪಾಯಿಗಳ ಸಂಬಳದಲ್ಲಿ ಭಾರೀ ಲವಾಜಮೆಯೊಡನೆ ನೇಮಕರಾಗಿದಾರೆ ಯಂದಷ್ಟೆ. ಈ ಉದ್ಯೋಗವನ್ನು ಅವರೊಬ್ಬರಾಗಿ ನಿರ್ವಹಿಸುವದಸಾಧ್ಯವೆಂದೆಣಿಸಿ ಅವರ ಸಹಾಯಾರ್ಥ ಮೆ॥ ಮೆಕ್ ಹಾನನ್ ಯೆಂಬವರನ್ನು ಯೆಕ್ಸೈಜ್ ಅಸಿಸ್ಟೆಂಟ್ ಕಮಿಷನರಾಗಿ ಏರ್ಪಡಿಸಿದರು. ಇವರ ಕೆಲಸವು ವಿಶದೀಕರಿಸವಾಗಿ ಜರಗತಕ್ಕದ್ದಲ್ಲವೆಂದೆಣಿಸಿ ಅವರ ಸಹಾಯಾರ್ಥ ಇನ್ನೂ ಡಪುಟಿ ಅಸಿಸ್ಟೆಂಟ್ ಕಮಿಷನರ್ ಮೆ॥ ಗೋಪಾಲಯ್ಯಂಗಾರ್ಯರವರನ್ನು ಆಡಿಷನಲ್ ಅಸಿಸ್ಟೆಂಟರಾಗಿ ನೇಮಕರನ್ನಾಡಿದರು. ಇಷ್ಟಾದಾಗ್ಯೂ ಕೆಲಸಸಾಲದೆಂಬುದು ದುರ್ಘಟವಾಗಿದೆ. ಮೆ॥ ಮೆಕಾನವರು ಯೆಕ್ಸೈಜ್ ಇಲಾಖೆಯಲ್ಲಿ ದಿವಾನರವರ ಅಂಡರ್ ಸೆಕ್ರೆಟರಿಯಾಗಿ ನೇಮಕರಾಗುವರೆಂದು ಕೇಳುತ್ತೇವೆ. ಈ ವೃತ್ತಾಂತವು ನಿಜವಾಗಿರುವ ಪಕ್ಷಕ್ಕೆ ಬಹಳ ವಿಪರೀತವಾದುದೆಂದೆಣಿಸಬೇಕಾಗಿರುತದೆ. ಹ್ಯಾಗಂದರೆ, ಎಕ್ಸೈಜ್ ಇಲಾಖೆಗೆ ಸೆಕ್ರೆಟರಿಯೆಂಬುವರ್ಯಾರೂ ಇದುವರೆವಿಗೆ ಇಲ್ಲದಿರುವಾಗ್ಯೆ ಇವರು ಯಾರಿಗೆ "ಅಂಡರ್" ಆಗುವರೋ ತಿಳಿಯಲಿಲ್ಲವು. ಮತ್ತು ಯೆಕ್ಸೈಜ್ ಕಮಿಷನರ ತಾಪೆಯು ದೊಡ್ಡಂಗ ಶಪ್ಪಿದಂತಾಗುತಿದೆ. ಒಂದುವೇಳೆ ಇತರಸೆಕ್ರೆಟರಿಗಳಂತೆಯೇ ಎಕ್ಸೈಜ್ ಕಮಿಷನರನ್ನು ಭಾವಿಸುವದಾದರೆ ಅವರಿಗೆ ಕಮಿಷನರ್ ಯೆನ್ನುವಷ್ಟು ಭಾರೀ ಹೆಸರು ಅನಾವಶ್ಯಕವಾಗಿರುತಿದೆ. ಒಂದು ಇಲಾಖೆಯಲ್ಲಿ ಮುಖ್ಯಾಧಿಕಾರಿಯು ಸೆಂತಕರವಿಲ್ಲದೆ ಅವರ ಅಸಿಸ್ಟೆಂಟರುಗಳಿಗೂ ಗವರ್ನಮೆಂಟಿನವರಿಗೂ ಸಾಕ್ಷಾತ್ಸಂಬಂಧವೇರ್ಪಡುವ ಪಕ್ಷಕ್ಕೆ ಅನಾವಶ್ಯಕವಾದ ಸವರೀ ಉದ್ಯೋಗವು ಕಾಪಿಟ್ಟು ಮಹಾಮಾಡಲ್ಪಡಲಿಕ್ಕೆ ಯೋಗ್ಯವಾದುದಾಗಿರುತಿದೆ. ಇವಲ್ಲದೆ ಅಸಿಸ್ಟೆಂಟರುಗಳನ್ನು ಯನ್ನು ಗವರ್ನಮೆಂಟಿನವರು ಮನಸ್ವೀ ಹೆಚ್ಚಿಸುತ ಬರುವುದೆಲ್ಲ ಮುಖ್ಯಾಧಿಕಾರಿಗಳ ಪಾಲು ಮಾರಿಕೆ ಯೆಂಬುದು ಅಧಿಕವಾಗುತ ಬಂದು ಸ್ವೇಚ್ಛೆಯಾಗಿ ತಾವು ಮಾಡಬೇಕಾದ ಕರ್ತವ್ಯಗಳನ್ನು ಸಹ ತಮ್ಮ ಅಸಿಸ್ಟೆಂಟರಿಗೊಪ್ಪಿಸಿ ತಮ್ಮ ಬರಾವರ್ದಿಗೆ ರುಜು ಮಾಡುವದು ಕೂಡ ಕ್ರಮವೆಂದು ಭಾವಿಸುವಷ್ಟು ಸರಿಗೆಯನ್ನು ಗವರ್ನಮೆಂಟಿನವರು ಬಹುಮಾಡಿಕೊಟ್ಟವಾರೆ. ವಾಸ್ತವ್ಯಕ್ಕೆ ಕೊಡಲ್ಪಟ್ಟ ಸ್ವಾತಂತ್ರ್ಯವನ್ನು ದುರ್ವಿನಿಯೋಗ ಪಡಿಸುವ ಪಕ್ಷಕ್ಕೆ ಯೋಗದೆ ಕೆಲವರು ತಿಂಗಳುತಪ್ಪೆ, ಮತ್ತು ಕೆಲವರು ಪಕ್ಷಕಪ್ಪೆ, ಇನ್ನು ಕೆಲವರು ವಾರಕಪ್ಪೆ, ಬೇರೆ ಕೆಲವರು ಸಾಯಂಕಾಲ ವೇಳೆಯಲ್ಲಿ ಘಂಟೆ ಸಮಾಪಿಯೊರಮು ಕಾಲದಲ್ಲಿ ಆಫೀಸಿಗೆ ಯೋಗಿ ಬರುವ [illegible] ಪುಸ್ತಕಗಳನ್ನು ತೆಗೆದುಕೊಂಡಿರುವದರಿಂದ ಇವರ ಮನೆಗೆ ಪ್ರತಿನಿತ್ಯವೂ ದಪ್ತರಗಳನ್ನು ಬಗಲಲ್ಲಿಟ್ಟುಕೊಂಡು ಬಿಸಿಲಿನಲ್ಲಿ ಕಚೇರಿಯಂತೆ ಅಲ್ಲದ ವಿಧಿಯಂ ವಿಧಾತನೇತಕ್ಕೆ ಬರೆದನೋ ಯೆಂದು ಸಂಕಟ ಪಡುತ ತಮ್ಮ ಜನ್ಮವನ್ನಿಟ್ಟುಕೊಂಡು ಕಾಲಕಳೆಯುವ ಯೆಂದು ಇವ್ವರೇವತಾರಿ ಘನವಂ ತಿರಸ್ಕಾರದಿಂದಲೂ ಮಾಡುತಲಿರುವ ತಾಬೇದಾರಿ ಉದ್ಯೋಗಸ್ಥರ ರೋದನಧ್ವನಿಯು ಯೆತ್ತ ನೋಡಿದಾಗ್ಯೂ ಪ್ರಬಲಿಸುತಲಿದೆ. ಈ ವಿಷಯದಲ್ಲಿ ಈ ವಾರದೊಳು ನಮಗೆ ಬಂದ ಒಂದು ಲೇಖನವನ್ನಾ ಮೂಲಾಗ್ರ ಪ್ರಕಟಿಸಲಿಕ್ಕೆ ಅವಕಾಶ ವಿಲ್ಲದಿದ್ದರೂ, ಅದಂ ಸಂಗ್ರಹಿಸಿ ಅದರ ಮುಖ್ಯಭಾವವನ್ನಿಲ್ಲಿ ತಿಳಿಸುತ್ತೇವೆ:

ಅದರ ಸಾರ.—"ಈಗ ಆಫಿಸರ್‌ಗಳಾಗಿ ಬರುತಲಿರತಕ್ಕವರು ವಿದ್ಯಾಬುದ್ಧಿ ಪ್ರಭಾವ ಮಹೋಧ್ಯಗಳಿಂದ ಸಂಪೂರ್ಣ ಪರಿಪಕ್ವರೆಂದು ಭಾವಿಸಲ್ಪಟ್ಟದ್ದಾಗ್ಯೂ ಅವರು ವಿಶೇಷ ಕ್ರಮಬದ್ಧರಾಗಿಲ್ಲವು. ಒಂದು ಅಥವಾ ಎರಡುವರೆ ಘಂಟೆಯ ಕಾಲಕ್ಕಿಂತ ಜಾಸ್ತಿಯಾಗಿ ಶರೀರ ದಂಡನೆಯಂ ಮಾಡಲಾರರು. ಫಲಾಹಾರ ಕೈಕಳ್ಳಿ ಸಮಾಚಾರಗಳು ಮಧ್ಯೆ ಮಧ್ಯೆ ಜರಗದಿದ್ದರೆ ಅವರ ಪ್ರಾಣವು ನಿಲ್ಲಲಾರದು. ಅನೇಕರಿಗೆ ತಮ್ಮ ಆಫೀಸ್ ರೂಂಗಳಲ್ಲಿ ಸೋಫಾ ಹಾಕಿಸಿಕೊಳ್ಳಲಿಕ್ಕೆ ಅವಕಾಶ ವಿಲ್ಲದಿರುವದರಿಂದಾಗಿ ಅಂತಃ ಸುಖಪಡತಕ್ಕ ಸ್ಥಳ ಸಂಕೋಚವು ಕುರಿತು ಮೊರೆಯಿಡುತಲಿದಾರೆ. ಇವು, ಯೆರಡು ಘಂಟೆಗೆ ಬಂದು ನಾಲ್ಕು ಘಂಟೆಗೆ ಹೊರಡು ಹೋಗತಕ್ಕವರ ವಿಷಯವೇ ಹೊರತು, ಕಚೇರಿಗೆ ಸುತರಾಂ ಬಾರದಿರುವವರ ವಿಷಯವಲ್ಲವು. ಇವರು ಅನಿಯತವಾಗಿ ಬಂದಾಗ್ಯೂ ತಮ್ಮ ತಾಬೇದಾರರ ಹಾಜರಿ ಗೈರುಹಾಜರೀ ವಿಷಯದಲ್ಲಿ ಮಾತ್ರ ಬಹಳ ಖಂಡಿತವಾಗಿ ವರ್ತಿಸುತ ೧೧ ಘಂಟೆಯ ಮೇಲೆ ೫ ನಿಮಿಷಗಳು ಸಹ ತಾಬೇದಾರರನ್ನು ವಿಳಂಬ ಮಾಡದೆ ತಮ್ಮ ಪಹರಿಕೆಯ ಬಗ್ಗೆ ಕಳುಹಿಸಬೇಕೆನ್ನುವವನ್ನು ನಿಸ್ಸಂದೇಹರಾಗಿದಾರೆ. ಸ್ವಲ್ಪ ಹೊತ್ತು ಹೋಗಿ ಬಂದರೆ ಜುರ್ಮಾನೆ ಹಾಕುವವರಲ್ಲಿ ಕಾತ್ರ್ಯ ದಕ್ಷಿಣಾತಾರಿಗಳಂ ತೋರಿಸತಕ್ಕವರಲ್ಲವು. ತಾಬೇದಾರರ ಶ್ರಮವೂ ಸುಖದುಃಖವೂ ಅವರಿಗೆ ಅನಾವಶ್ಯಕವು. ಸಾಧ್ಯಾಸಾಧ್ಯಗಳನ್ನು ಕಾಲಾಂಗಗಳನ್ನು ಭಾವಿಸದೆ ಘಾಳಿ, ಬಿಸಿಲು, ಮಳೆ, ಶ್ರಮ ಮೊದಲಾದವುಗಳಸದೆ, ಅವರ ಅದರಸ್ಪಂದವನ್ನರಿತು ವರ್ತಿಸಬೇಕೆನ್ನುವವರ ಕೆಲಸ ಕೂಲ ಬಡಿಕೆದೆಯುದು. ಇಂತಹರಲ್ಲಿ ಸಾವೃತ್ತಿಯಂ ಮಾಡಿ ಜೀವಿಸಬೇಕಾದಂತ ಈ ಸಾಧನ ಜನ್ಮವನ್ನೆತ್ತಿ ಧ್ರುವ ಪಡುವದಕ್ಕಿಂತಲೂ ನರಕದ ಜನ್ಮವು ಉತ್ತಮವೆಂದು ಬಹುಸುಯ್ಯುತ್ತ, ಸವರೀ ಪತ್ರಿಕಾರ್ಯಕರು ಪ್ರಸ್ತುತ ಅಧಿಕಾರಿಗಳ ಗುಣವರ್ಣನಾ ಪೂರ್ವಕ ತನ್ನ ಲೇಖನವಂ ಪೂರೈಸಿರುತ್ತಾನೆ. ಮುಖ್ಯವಾಗಿ ನಿಯತವಾದ ಕ್ರಮವನ್ನವಲಂಬಿಸಬೇಕಾದುದು ಪ್ರತಿಮನುಷ್ಯನಿಗೂ ಆವಶ್ಯಕವಾದುದಾಗಿರುತಿದೆ. ಪ್ರತ್ಯಪ ರಾಜಕಾರ್ಯ ನಿರ್ವಾಹಕರಿಗೆ ಅದು ಕೇವಲ ಅಪೇಕ್ಷಿತವು. ಈ ಒಂದು ಗುಣವಿಶೇಷವು ಇಂಗ್ಲೀಷರಲ್ಲಿ ಅಭ್ಯಾಸ ನೆಲಗೊಂಡಿರುವದರಿಂದಲೇ ಅವರಲ್ಲಿ ಪ್ರತ್ಯೇಕವಾಗಿ [illegible]

ವೆಂಬದು ಇದುವರಿವಿಗೆ ಸ್ಥಿರಪಟ್ಟು ಅವರು ಸಾರ್ವಭೌಮರಾಗಿ ಪ್ರಭುತ್ವ ಮಾಡುತಲಿದ್ದಾರೆ ಇಂಗ್ಲಿಷಿನವರಾದಾಗ್ಯು, ತಾವು ಅನ್ಯರಿಗೆ ಮಾರ್ಗದರ್ಶಿಗಳಾಗಿದ್ದು, ಬಳಿಕ ತಮ್ಮಂತೆ ಎಲ್ಲರೂ ವರ್ತಿಸಬೇಕೆಂದಪೇಕ್ಷಿಸತಕ್ಕವರೇ. ಯೋಗ್ಯ ನ್ಯಾಯಮಾರ್ಗಾವಲಂಬನದಲ್ಲಿ ಸ್ವಪರಭೇದಗಳಂ ಪರಿಗಣಿಸತಕ್ಕವರಲ್ಲವು ನೇಟಿವ್ ಅಧಿಕಾರಿಗಳಲ್ಲಿ ತಾಬೇದಾರಿ ಮಾಡಿ ಅವರು ಸಂತೃಪ್ತಿಪಡಿಸಿ ಪ್ರಯೋಜನವಂ ಪಡೆಯುವದಕ್ಕಿಂತಲೂ ಒಬ್ಬ ಯೂರೋಪಿಯನ್ನಲ್ಲಿ ಚಾಕರನಾಗಿದ್ದು ಯಾವ ಪ್ರಯೋಜನವನ್ನೂ ಹೊಂದದಿರುವದು ಕ್ಷೇಮಕರವೆಂಬ ಭಾವವು ಪ್ರಾಯಶಃ ತಾಬೇದಾರಿ ಉದ್ಯೋಗಸ್ಥರಿಗೆಲ್ಲ ಉಂಟಾಗುತಬರುವದರಿಂದ ತಾದೃಶ ಅಭಿಪ್ರಾಯವನ್ನು ಜನರಿಗೆ ಅವಿಚಾರ ಸಾಧಕತೆಯಿಂದ ನಮ್ಮವರುಂಟುಮಾಡುತ ಬರುವದಕ್ಕಾಗಿ ನಾವು ಬಹಳ ವಿಷಾದಿಸುತ್ತೇವೆ. ಪ್ರಾರಂಭದಲ್ಲಿ ಸ್ವಲ್ಪವಿಷಯಗಳಲ್ಲಿಯೇ ಇವರಿಗಿಷ್ಟರ ಆಲಸ್ಯವೂ, ಸೌಕುಮಾರ್ಯವೂ, ಭೋಗಾನುಭವೇಚ್ಛೆಯೂ, ಸ್ವಪರಭೇದಜ್ಞಾನವೂ, ಆರೋಪಿತ ಅಂತಸ್ತುಗಳೂ ಯೇರ್ಪಟ್ಟಮೇಲೆ ಇವರು ಕೋರುತಲಿರುವ ಅಧಿಕಾರ ಸ್ವಾತಂತ್ರ್ಯ ಪ್ರಯೋಜನಗಳೆಲ್ಲವು ಒದುವೇಳೆ ನಿಭ್ಛಿಸಿದರೆ ಇವರ ರಾಜಸ ತಾಮಸ ಗುಣಂಗಳನ್ನೆಷ್ಟು ಬದಲಾವಣೆಗಳಿಗೆ ಅವರು ಒಳಪಡಿಸುವರೋ ಅದು ಊಹಿಸಲಸಾಧ್ಯವಾಗಿದೆ ನಾವು ಮೊದಲು ಪ್ರಾರಂಭಿಸಿದ ವಿಷಯಕ್ಕೂ ಮುಕ್ತಾಯ ಮಾಡಿದ್ದಕ್ಕೂ ಸಂಬಂಧವಿಲ್ಲವೆಂದು ತೋರಿದಾಗ್ಯು ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವದರಿಂದ ಅವರಿಗೆ ಮತ್ತಷ್ಟು ದಾಲುಮಾರಿಕೆಯು ವೃದ್ಧಿಯನ್ನೈದದೆ ಹೋಗಲಿಲ್ಲವೆಂಬದಂ ತಿಳಿಸುವಾಗ್ಯು ಇಷ್ಟುದೂರ ವಿಚಾರಕ್ಕೆ ಅವಕಾಶವಾಯಿತೇ ಹೊರ್ತು ನೇಟಿವ್ ಅಧಿಕಾರಿಗಳು ಅನುಭವಿಸುತಲಿರುವ ಸುಖ ಸಂತೋಷಗಳಂ ಭಂಗಪಡಿಸಬೇಕೆಂಬ ಉದ್ದೇಶದಿಂದಲ್ಲವು

A NOVEL MARRIAGE.
ಅಪೂರ್ವ ವಿವಾಹ ಸಂಬಂಧ

ಕಲ್ಕತ್ತಾ ಅಮೃತಬಜಾರ್ ಪತ್ರಿಕೆಯಲ್ಲಿ 'ಕಪ್ಪು ಮತ್ತು ಕೆಂಪು ವರ್ಣವುಳ್ಳ ದಂಪತಿಗಳ ಅನುರಾಗಪೂರ್ವಕವಾದ ವಿವಾಹ ಸಂಬಂಧವು" ಎಂಬದಾಗಿ ವಿಲಕ್ಷಣ ಸಂಗತಿಯೊಂದು ಬರೆಯಲ್ಪಟ್ಟಿರುತ್ತಿದೆ. ಅದು ಪ್ರಾಯಶಃ ಓದುವವರೆಲ್ಲರು ಆಶ್ಚರ್ಯಪಡುವರೆಂದು ನಾವದರ ಭಾಷಾಂತರವನ್ನು ಇದಡಿ ಪ್ರಕಟಿಸುತ್ತೇವೆ:—

ಈ ಹಿಂದೂಸ್ಥಾನದಲ್ಲಿ ಪ್ರಸಿದ್ಧವಾಗಿರುವ ಒಂದು ಮನೆತನಕ್ಕೆ ಸೇರಿದ ಒಬ್ಬ ಹಿಂದೂ ದೊಡ್ಡ ಮನುಷ್ಯನು ಹತ್ತು ಕೆಲವು ಸಂವತ್ಸರಗಳ ಹಿಂದೆ ಇಂಗ್ಲೆಂಡಿಗೆ ಹೋಗಿ ಒಂದು ದೊಡ್ಡ ಪರೀಕ್ಷೆಯಂ ಕೊಟ್ಟು ಅದರಲ್ಲಿ ತೇರ್ಗಡೆಯಂ ಹೊಂದಿದುದರಿಂದ ಆತನಿಗೆ ಇಂಡ್ಯಾ ಗವರ್ನಮೆಂಟಿನವರು ಒಂದು ಕೆಲಸವನ್ನು ದರಫಾಟ್ ಮಾಡಿದರು. ಈ ವರ್ತಮಾನವನ್ನರಿತ ಆತನ ತಂದೆಯು ಮಹದಾನಂದಪರವಶನಾಗಿ ತನ್ನ ಪುತ್ರನು ತನ್ನ ಬಳಿಗೆ ಬಂದ ಕೂಡಲೇ ಆತನಿಗೆ ಪ್ರಾಯಶ್ಚಿತ್ತವಂ ಮಾಡಿಸಿ ಸ್ವಜನರೊಳು ಸೇರಿಸಿಕೊಳ್ಳಬೇಕೆಂದಾಲೋಚಿಸಿ ಅದಕ್ಕೆ ಬೇಕಾದ ಯೇರ್ಪಾಡುಗಳಂ ಮಾಡಿದನು. ಇಷ್ಟರಲ್ಲೇ ತನ್ನ ಪುತ್ರನು ಇಂಗ್ಲೆಂಡಿನಲ್ಲೇ ಒಬ್ಬ ಇಂಗ್ಲಿಷ್ ಲೇಡಿಯನ್ನು ವಿವಾಹ ಮಾಡಿಕೊಂಡು ತನ್ನ ಸಂಗಡ ಕರೆದುಕೊಂಡು ಬರುತಿರುವ ವೃತ್ತಾಂತವಂ ಕೇಳಿದ ಕೂಡಲೇ ಆತನ ಉತ್ಸಾಹವೆಲ್ಲವೂ ಕೋಪರೂಪವಾಗಿ ಪರಿಣಮಿಸಿತು. ಬಳಿಕ ತನ್ನ ಪುತ್ರನ ಮುಖಾವಲೋಕನ ಮಾಡುವದಿಲ್ಲವೆಂದು ಪ್ರತಿಜ್ಞೆ ಮಾಡಿಕೊಂಡು ಅವನು ಊರಿಗೆ ಬಂದಾಗ್ಯು ಹೋಗಿ ನೋಡದೆ ಸುಮ್ಮನಿದ್ದನು. ಪುತ್ರನು ಊರಿಗೆ ಬಂದಮೇಲೆ ಅಲ್ಲಿನ ಮುಸಾಫರಖಾನೆಯಲ್ಲಿ ಇಳಿದುಕೊಂಡು ತನ್ನ ಆಗಮನ ವೃತ್ತಾಂತವಂ ಪತ್ರಿಕಾಮೂಲಕ ತಂದೆಗೆ ತಿಳುಹಿಸಿದನು. ಅದಕ್ಕೂ ತಂದೆಯಾದವನು ಜವಾಬು ಕೊಡದೆ ಸುಮ್ಮನಿದ್ದನು. ಅನಂತರ ಆ ಮಗನು ಒಂದು ದಿನ ತಾನಾಗಿಯೇ ತನ್ನ ಭಾರ್ಯೆಯಂ ಸಂಗಡ ಕರೆದುಕೊಂಡು ತನ್ನ ತಂದೆಯ ಮನೆಗೆ ಬಂದು ತಲೆಬಾಗಿಲನ್ನು ತಟ್ಟಿದನು. ಒಳಗಿನಿಂದ ತಾಯಿಯು ಬಂದು ಬಾಗಿಲನ್ನು ತೆರೆದು ನೋಡಿದಳು. ಕೂಡಲೇ ಪುತ್ರನು ಸಾಷ್ಟಾಂಗವಾಗಿ ನಮಸ್ಕಾರ ಮಾಡಿದನು. ತರುವಾಯ ಹಿಂದೂಸ್ತ್ರೀಯರಂತೆ ಉಡಿಗೆ ತೊಡಿಗೆ ಆಭರಣ ಮೊದಲಾದವುಗಳಿಂದಲಂಕೃತಳಾಗಿದ್ದ ಆತನ ಭಾರ್ಯೆಯು, ತಾನು ಬಗಲಲ್ಲಿ ಎತ್ತಿಕೊಂಡಿದ್ದ ಸುಂದರವಾದ ಮಗುವನ್ನು ಕೆಳಗೆ ಇಳಿಸಿ ಹಿಂದೂ ಪದ್ಧತಿ ಪ್ರಕಾರ ಅತ್ತೆಗೆ ನಮಸ್ಕಾರ ಮಾಡಿದಳಂತೆ, ಆಗಲಾ ತಾಯಿಯ ಆನಂದವೆಷ್ಟಾದದಿರಬಹುದು? ಬಳಿಯಲೇ ಹೋಗಿ ಮೊಮ್ಮಗನ ಹಸ್ತ ತೆಗೆದು

ಯಂ ಹೊರೆಡಿ ಕೂಡಲೇ ದೊಡ್ಡ ಅರಿತಾದವಳ್ಳಿ ನಿಮಿತ್ತನಾಗಿ ಬಂದ ಪುತ್ರನನ್ನು ನೋಡಿ ಆನಂದಿಸದಿರುವಳೇ? ಆನಂತರ ಆ ಮಗನ ವಿಸ್ಮಯಕರವಾದ ನೂತನ ಸೊಸೆಯನ್ನೂ ಸುಂದರನಾದ ಮೊಮ್ಮಗನನ್ನೂ ನೋಡಿ ಒಗ್ಗಬಹುದೇ? ತಾಯಿಯು ಮಗನನ್ನು ಕೈಯಲ್ಲಿ ಎತ್ತಿ ತೊಡೆಯ ಮೇಲೆ ಕುಳ್ಳಿರಿಸಿ ಮುದ್ದಾಡಿದಳು. ಈ ರೀತಿ ತಾಯಿಯ ಅಭಿಮಾನವು ಅತ್ಯತ್ಕಟವಾಗಲು ತಂದೆಯು ಬಂದು ಮಗನಂ ಆಲಿಂಗನ ಮಾಡಿಕೊಂಡರು. ಆಗ ಯಲ್ಲರಿಗೂ ಆಯಾ ಬಾಷ್ಪಗಳು ಉಕ್ಕಿದವು. ವಿವಾಹಿತಳಾದ ನಮ್ಮ ನೂತನ ಇಂಗ್ಲಿಷ ಸೊಸೆಯು ಬಹಳ ವಿನೀತಳಾಗಿಯೂ, ಹಿಂದೂ ಸಂಪ್ರದಾಯಗಳನ್ನರಿತಿರುವವಳಾಗಿಯೂ ತತ್ಸಾಮ್ಪ್ರದಾಯಗಳಾದ ನಾನಾವಿಧ ದಾನಗಳುಳ್ಳವಳಾಗಿಯೂ, ತನ್ನ ಪತಿಯ ಕುಲಧರ್ಮಗಳ ಸಲಕ್ಷಣವಾಗಿ ಅಭ್ಯಸಿಸಿರುವವಳಾಗಿಯೂ, ಇರುತ್ತಾಳಲ್ಲದೆ ಅತ್ತೆ ಮಾವಂದಿರಿಗೂ, ತನ್ನ ಗಂಡನ ಇತರ ಬಂಧುಗಳಿಗೂ ಬಹಳ ನಮ್ರತೆಯ ಭಕ್ತಿಗಳಿಂದ ವರ್ತಿಸುತ ಅವರನುರಾಗವಂ ಸಂಪಾದಿಸಿ ಶ್ರೇಯಸ್ಸಾತ್ರಳಾಗಿರುತಲಿದಾಳೆ, ಎಂದು ಇದುವರಿವಿಗೂ ಹಿಂದೂಗಳಿಗೆ, ಅನ್ಯದೇಶದವರೊಡನೆ ವಿವಾಹಸಂಬಂಧ ವ್ಯವಹಾರಂಗಳೇ ಆದರೂ ಅಭಿರುಚಿಯಾಗಿ ಕ್ರಮೇಣ ಒಂದೊಂದಾಗಿ ವ್ಯವಹಾರದಲ್ಲಿ ತಂದುಕೊಂಡರು. ಮೊದಲು ಬೂಟ್ಸ್ ವ್ಯಂಗ್ಯವಾಗಿ ಭಾವಿಸಲ್ಪಡುತಿದ್ದರು ಈಗ ಸ್ವಲ್ಪ ಪಟ್ಟಣವಾಗಿ ಸ್ತ್ರೀ ಸಮೂಹದಲ್ಲಿ ಸಹ ಧಾರಾಳವಾಗಿ ಉಪಯೋಗಿಸುವಷ್ಟು ಸೌಖ್ಯವನ್ನೈದಿತು. ಬರಸ್ಟರ್ ಟೋಪಿಯು ಈಗ ರೂಢಾಂತರಗಳಿಂದ ಬಳಕೆಯಲ್ಲಿ ಬಂದ ಹಾಗೆಯೇ ಯೂರೋಪಿಯನ್ ಲೇಡಿಗಳು ಉತ್ತಮ ಪ ನಿಯಮಗಳನ್ನು ಮೊದಲನೆಯದಾಗಿ ಸ್ವೀಕರಿಸಲ್ಪಡುತಲಿವೆ ಉನ್ನತವಾದ ಗಮನವು ನಿಸಿದ್ಧವೆಂಬ ನಿಯಮವು ನಿವೃತ್ತಿಯಾಗಿ ಸಮುದ್ರಯಾನವು ಸರ್ವ ಸಾಧಾರಣವಾಗುತ್ತಿದೆ ಪ್ರಾಯಶ್ಚಿತ್ತವೆಂಬದು ದಿನೇ ದಿನೇ ಕಡಿಮೆಯಾಗುತ್ತಿದೆ. ಪ್ರತಿ ದೇಶಕ್ಕೆ ಹೋಗಿ ಬರುವರು ಸರ್ವಸಾಧಾರಣವಾಗಿ ನಡೆಯುತ್ತಿದ್ದರೂ ಇದುವರೆಗೆ ಆಕಸ್ಮಿಕವಾಗಿತ್ತು ಈಗ ತದ್ವಿಷಯಕ ಸಂಕೋಚವು ನಿವೃತ್ತಿಯಾದಂತೆ ತೋರಿ ಕಂಡು ಸಮಸ್ತ ಎಂದು ಸಾರ್ವಕಾಲಿಕವಾಗಿ ನಡೆಯುವುದಾಗಿದೆ. ಇನ್ನು ಮೇಲೆ ವಿವಾಹ ಪ್ರಯುಕ್ತಗಳಾದ ಗೋತ್ರ, ಸೂತ್ರ, ಪ್ರವರ ಮೊದಲಾದ ನಿರ್ಬಂಧಗಳೂ, ದಿನ, ತಿಥಿ, ವಾರ, ನಕ್ಷತ್ರ ವಗೈರೆ ನಿಯಮಗಳೂ ಅನಾವಶ್ಯಕವಲ್ಲದ ಇಂಗ್ಲೆಂಡಿನಲ್ಲಿ ಈಗ ಜರುಗುತ್ತಿರುವ ಸಂಬಂಧ ಪರಿತ್ಯಾಗ ವಿಷಯಕ ನಿಬಂಧನೆಯನ್ನು ಹಿಂದೂ ಧರ್ಮಶಾಸ್ತ್ರಕ್ಕೆ ಪ್ರತ್ಯಾಮ್ನಾಯವಾಗಿ ಜಾರಿಯಲ್ಲಿ ತಂದುಕೊಳ್ಳುವದರಲ್ಲೇನೂ ಬಾಧಕವಿಲ್ಲವು

Occasional Notes
ನೈಮಿತ್ತಿಕ ವಿಷಯನ್ಯಾಸ.

Retention in service—ಮದರಾಸ್ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಂಸ್ಕೃತ ಭಾಷಾ ಪಂಡಿತರಾಗಿರುವ ಡಾಕ್ಟರ್ ಆಪರ್ಟ್ ಎಂಬವರು ಇನ್ನೊಂದು ಸಂವತ್ಸರದ ಕಾಲ ನೌಕರಿಯಲ್ಲಿರುವಂತೆ ಗವರ್ನಮೆಂಟಿನವರು ಮಂಜೂರ್ ಮಾಡಿರುತ್ತಾರೆ.

Famine relief—ಈಚೆಗೆ ಬಂದ ರಿಪೋರ್ಟಿನದೆಸೆಯಿಂದ, ಮದರಾಸ್ ಪ್ರೆಸಿಡೆನ್ಸಿಯಲ್ಲಿ ನಡೆಸಲ್ಪಡುವ ಕ್ಷಾಮನಿವಾರಕ ಕಾಮಗಾರಿಗಳಲ್ಲಿ ೪೮,೦೦೦ ಜನರೂ, ರಾಜಪುತಾನಾ ದೇಶದೊಳು ಒಟ್ಟು ೪೩,೦೦೦ ಉತ್ತರ ಬರ್ಮಾದೇಶದಲ್ಲಿ ೩೭,೦೦೦ ಜನರೂ, ಬಂಗಾಳೀ ದೇಶದಲ್ಲಿ ೧೧,೦೦೦ ಜನರೂ, ಮುಂಬೈಯಲ್ಲಿ ೩,೦೦೦ ಜನರೂ ಕೂಲಿ ಮಾಡಿ ಜೀವಿಸುತಲಿದಾರೆಂದು ತಿಳಿಯಬರುತಿದೆ.

Cholera.—ಹರಿದ್ವಾರದಲ್ಲಿ ವಾಂತಿಭೇದಿ ರೋಗ ವ್ಯಾಪಿಸಿರುವದರಿಂದ, ಯಾತ್ರಾರ್ಥಿಗಳಾಗಿ ಅಲ್ಲಿಗೆ ಹೋದವರೆಲ್ಲರು ವಾಪಸ್ ಕಳುಹಿಸಲ್ಪಡುತಲಿದಾರೆಂತಲೂ, ರೈಲ್ ಚಾರ್ಜನ ಬಗ್ಯೆ ಅವರು ಕೊಟ್ಟ ರುಸುಂ ಪೈಕಿ ಅವರು ಸಂಚಾರ ಮಾಡಿದ ದೂರದವರಿವಿಗೆ ರುಸುಮನ್ನು ವಜಾಮಾಡಿಕೊಂಡು ಉಳಿದವನ್ನು ರೈಲ್ ಅಧಿಕಾರಿಗಳು ಅವರಿಗೆ ವಾಪಸ್ ಕೊಟ್ಟರೆಂತಲೂ ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

Change of Counsels—ಕಳೆದ ವಾರದೊಳು ಮದರಾಸ್ ಹೈಕೋರ್ಟಿನಲ್ಲಿ ಒಂದು ರಿವ್ಯೂ ಮೊಕದ್ದಮೆಯು ವಿಚಾರಣೆಯಾಗುತ್ತಿರುವಾಗ್ಯೆ ಮೊದಲು ಸದರೀ ಮೊಕದ್ದಮೆಯನ್ನು ಮೆ॥ ಶಂಕರ ಮೇನನ್ ಎಂಬವರು ನಡಿಸಿ, ಈಗ ಬೇರೆಯೊಬ್ಬರು ನಡೆಸುವದು ಬಹಳ ಅಕ್ರಮವಾದುದು, ಒಂದು ಮೊಕದ್ದಮೆಯಲ್ಲಿ ಆಗಿಂದಾಗ್ಯೆ ವಕೀಲರುಗಳಂ ಬದಲಾಯಿಸುವಣವು ಕೆಟ್ಟ ವಾಡಿಕೆ, ಅದಂ ತಪ್ಪಿಸುವ ವಿಷಯದಲ್ಲಿ ಒಂದು ನಿಬಂಧನೆಯಂ ಮಾಡಬೇಕಾದುದವಶ್ಯಕವೆಂದು ಚೀಫ್ ಜಸ್ಟಿಸ್‌ಯವರೂ, ಮೆ॥ ಜಸ್ಟಿಸ್ ಪಾರ್ಕರವರೂ ತಿಳಿಸಿದರು.

Magisterial cross examination.—ಈಚೆಗೆ ಬರ್ಹಾಂಪುರ ಪಟ್ಟಣ ಸಬ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಿ ಸದರೀ ಡಿಸ್ಟ್ರಿಕ್ಟ್ ಸೆಷನ್ ಕೋರ್ಟಿಗೆ ಕಮಿಟ್ ಆದ ಒಂದು ದರೋಡೆ ಮೊಕದ್ದಮೆಯಲ್ಲಿ ಆಪಾದಿತರುಗಳು ಫಿರ್ಯಾದಿಯ ಕಡೆ ಸಾಕ್ಷಿಗಳನ್ನು ತಾವು ಸೆಷನ್ ಕೋರ್ಟಿನಲ್ಲಿ ಪಾಟೀ ಸವಾಲ್ ಮಾಡುವದಾಗಿ ಹೇಳಲು ಅದು ಸಬ್ ಮ್ಯಾಜಿಸ್ಟ್ರೇಟರು ಒಪ್ಪಿ ಮೊಕದ್ದಮೆಯನ್ನು ಕಮಿಟ್ ಮಾಡಿದರು ಸೆಷನ್ ಜಡ್ಜಿಯವರು ಹಾಗೆ ಮಾಡಿದ್ದು ತಪ್ಪೆಂದು ಭಾವಿಸಿ, ಸದರೀ ಮೊಕದ್ದಮೆಗೆ ಸೇರಿದ ಕಾಗದ ಪತ್ರಗಳಂ ವಾಪಸ್ ಮಾಡಿ, ಫಿರ್ಯಾದಿಯ ಸಾಕ್ಷಿಗಳನ್ನು ಅಪರಾಧಿಗಳು ಪಾಟೀ ಸವಾಲ್ ಮಾಡದೆಹೋದರೆ ಸಬ್‌ಮ್ಯಾಜಿಸ್ಟ್ರೇಟರು ಮಾಡತಕ್ಕದ್ದೆಂದು ಹುಕುಂ ಕೊಟ್ಟರು. ಸಾಕ್ಷಿಗಳ ಪ್ರಾಮಾಣಿಕತೆಯಂ ಪರಿಶೀಲನೆ ಮಾಡುವದಕ್ಕಾಗಿ ಸಬ್‌ಮ್ಯಾಜಿಸ್ಟ್ರೇಟರು ಪಾಟೀಸವಾಲ್ ಮಾಡತಕ್ಕದ್ದು ಆವಶ್ಯಕವೆಂಬ ವಿಷಯದಲ್ಲಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಸೆಷನ್ ಜಡ್ಜಿಯವರ ಅಭಿಪ್ರಾಯವನ್ನು ಒಪ್ಪಿದಾಗ್ಯು ಸೆಷನ್ ಜಡ್ಜಿಯವರು ಹಾಗೆ ಮಾಡುವದಕ್ಕೆ ಆಧಾರವೇನೆಂದು ಆಕ್ಷೇಪಿಸಿ ಇವರ ವ್ಯವಸ್ಥೆಯ ಬಗ್ಯೆ ಹೈಕೋರ್ಟಿಗೆ ಬರೆದರು. ಅಲ್ಲಿನ ಚೀಫ್ ಜಸ್ಟಿಸ್‌ಯವರೂ ಮೆ॥ ಜಸ್ಟಿಸ್ ವಿಲ್ಕಿನ್ಸನ್‌ಯವರೂ ಸೇರಿ, ಅಕ್ಟಿಂಗ್ ಸೆಷನ್ ಜಡ್ಜಿಯವರು ಅವಲಂಬಿಸಿದ ಮಾರ್ಗವು ಕೇವಲ ನ್ಯಾಯವಿರುದ್ಧವಾದುದೆಂತಲೂ, ರೆಕಾರ್ಡುಗಳಂ ವಾಪಸ್ ಮಾಡುವದಕ್ಕೆ ಕ್ರಿಮಿನಲ್ ಪ್ರೊಸಿಡ್ಯೂರ್‌ನಲ್ಲಿ ಯೆಲ್ಲಿಯೂ ಅವಕಾಶವಿಲ್ಲವೆಂತಲೂ, ಸೆಷನ್‌ಜಡ್ಜಿಯವರು ಅಭಿಪ್ರಾಯಪಟ್ಟಂತೆ, ಪಾಟೀ ಸವಾಲನ್ನು ಉಪೇಕ್ಷಿಸುವದರಲ್ಲಿ ನ್ಯಾಯ ವಿರುದ್ಧವಾದ ಅಥವಾ ಆಕ್ಷೇಪಣೀಯವಾದ ಅಂಶ ಯಾವದೂ ಇಲ್ಲವೆಂತಲೂ, ಅಪರಾಧಿಗಳ ಕಡೆ ಲಾಯರ್ ಮಾಡಬೇಕಾದ ಕೆಲಸವನ್ನು ಸಬ್ ಮ್ಯಾಜಿಸ್ಟ್ರೇಟರು ಮಾಡುವಣವು ಕೇವಲ ಅಕ್ರಮವೆಂತಲೂ, ಮೊಕದ್ದಮಾ ಸಾಚಾವೆಂದು ತೃಪ್ತಿಕರವಾಗಿ ತಿಳಿಯಬಂದರೆ ಸಬ್ ಮ್ಯಾಜಿಸ್ಟ್ರೇಟರು ಅದನ್ನು ಕಮಿಟ್ ಮಾಡಬೇಕಾದ್ದು ಅವರ ಕರ್ತವ್ಯವೆಂತಲೂ, ಪಾಟೀ ಸವಾಲಿಬಗ್ಯೆ ಮೊಕದ್ದಮೆಯನ್ನು ವಾಪಸ್ ಮಾಡುವದಕ್ಕೆ ಸೆಷನ್‌ಜಡ್ಜಿಯವರಿಗೆ ಅಧಿಕಾರವಿಲ್ಲವೆಂತಲೂ ತೀರ್ಮಾನಿಸಿದರು

ಚಂದಾದಾರರಿಗೆ.

ಇದರಿಂದ ಕೃತಜ್ಞಪಡಿಸುವದೇನೆಂದರೆ —

ಈ ಸಂವತ್ಸರದಲ್ಲಿ ಇದುವರಿವಿಗೆ ಮೂರು ತಿಂಗಳು ಕಳೆದು ನಾಲ್ಕನೆಯ ತಿಂಗಳು ನಡೆಯುತಲಿದೆಯಾಗಿ ಇನ್ನೂ ತಡಮಾಡದೆ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಮೊಬಲಗನ್ನು ಕೂಡಲೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

೪—೪—೯೨. ಪ್ರೊಪ್ರೈಟರ್

LOCAL AND PROVINCIAL NEWS
ಒಳದೇಶಮತ್ತುತಾಲ್ಲೂಕ್‌ಜಾತಿವೃತ್ತಾಂತಗಳು.

Educational—ಡೆಹರಾಡೂನಿನಲ್ಲಿ ಸ್ಥಾಪಿಸಲ್ಪಟ್ಟಿರುವ ಇಂಪೀರಿಯಲ್ ಫಾರೆಸ್ಟ್ ಸ್ಕೂಲಿಗೆ ಹೋಗಿ ವಿದ್ಯಾಭ್ಯಾಸ ಮಾಡಲಿಕ್ಕೆ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯು ಈದಿನ ಮೊದಲು ಬುದವಾರದ ತನಕ ಪಬ್ಲಿಕ್ ಆಫೀಸ್ ಕಟ್ಟಡದಲ್ಲಿ ನಡೆಯುವುದು.

H. H. the Maharajas' visit to Calcutta ಬರುವ ನವಂಬರ್ ತಿಂಗಳಲ್ಲಿ ಶ್ರೀಮನ್ಮಹಾರಾಜರವರು ಸಂಸಾರ ಸಮೇತರಾಗಿ ಕಲ್ಕತ್ತಾ ಪಟ್ಟಣಕ್ಕೆ ದಯಮಾಡುವರೆಂತಲೂ, ಅಲ್ಲಿ ೨ ತಿಂಗಳ ಕಾಲ ವಾಸವಾಗಿದ್ದು ಅನಂತರ ವಾಪಸ್ ದಯಮಾಡುವರೆಂತಲೂ, ಬಹಳ ನಂಬಿಕಸ್ಥರ ಮೂಲಕ ತಿಳಿಯ ಬಂದಿದೆ —ವೃ. ಪ.

H. H. the Maharajah—ಶ್ರೀಮನ್ಮಹಾರಾಜರವರು ಮಾಚಿ ಮಾಹೆ ೧೩ ನೇ ತಾರೀಖಿನಲ್ಲಿ ತಮ್ಮ ಪುತ್ರ ಪುತ್ರೀ ಕಳತ್ರ ಮಿತ್ರರೊಡನೆ ನೀಲಗಿರಿಗೆ ದಯಮಾಡುವ ಕಾರ್ಯದ ಬಗ್ಯೆ ಬೇಕಾದ ಯೇರ್ಪಾಡುಗಳೆಲ್ಲ ನಡೆದು ಪ್ರಯಾಣ ನಿಧ್ಕರ್ಷೆಯಾಗಿರುವಂತೆ ನಮ್ಮ ಮೈಸೂರ್ ಬಾತಮೀದಾರನು ತಿಳಿಸುತ್ತಾನೆ. ಯುವರಾಜರಿಗೂ ಅವರ ಮಾತುಶ್ರೀಯವರಿಗೂ ಸಹ ನೀಲಗಿರಿ ವಾಸವು ಯೋಗ್ಯವಲ್ಲದೇ ಹೋದಬಗ್ಯೆ ವಿಷಾದಿಸುತ್ತೇವೆ.

Archaeological Deptt—ಆರ್ಕಿಯಾಲಾಜಿಕಲ್ ಇಲಾಖಾ ಡೈರೆಕ್ಟರವರಾದ ಮೆ॥ ರೈಸ್ ಸಾಹೆಬರವರು ಬರುವ ತಿಂಗಳ ಗುಡ್ ಫ್ರೈಡೇ ತಾರೀಖ್ ಮೊದಲು ಮೂರು ತಿಂಗಳ ಕಾಲ ರಜಾ ಪಡೆದು ಇಂಗ್ಲೆಂಡಿಗೆ ಹೋಗಬೇಕೆಂದಿದಾರೆಂತಲೂ, ಅವರ ಗೈರ್‌ಹಾಜರೀ ಕಾಲದಲ್ಲಿ ಅವರ ಅಸಿಸ್ಟೆಂಟರಾದ ಮೆ॥ ವಿ ಎನ್ ನರಸಿಂಹಯ್ಯಂಗಾರ್ಯರವರು ಸದರೀ ಕೆಲಸವನ್ನು ಆಕ್ಟಿಂಗ್ ತರೀಕ್ ನೋಡುತಲಿರುವರೆಂತಲೂ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ

Hindu female Salvationists—ಊರಿನಲ್ಲಿ ವಿದ್ಯಾವತಿಯರಾದ ಗೌಡ ಬ್ರಾಹ್ಮಣ ಯುವತಿಯರಿಬ್ಬರು ಪರಿಷದ್ದನ್ನು ಮಾಡಲು ಪ್ರಕ್ರಮಿಸಿರುವರು ಶನಿವಾರ, ಏಕಾದಶಿ ಇಂತಾ ದಿವಸಗಳಲ್ಲಿ ದೇವರ ನಾಮ ಸಂಕೀರ್ತನೆಯನ್ನು ಏಕಾಗ್ರಚಿತ್ತರಾಗಿ ಪಠನೆ ಮಾಡುತ್ತಾ ಮುಕ್ತಿ ಮಾರ್ಗವನ್ನು ಅಪೇಕ್ಷಿಸಿ, ಸನ್ಮಾರ್ಗದಲ್ಲಿ ನಡಿಯುತ್ತಿರುವರು ಈಗ ಸ್ವಲ್ಪ ದಿನಗಳಿಗೆ ಮುಂಚೆ ಒಬ್ಬ ದೊಡ್ಡ ಮನುಷ್ಯರ ಮನೆಯಲ್ಲಿ ಇವರು ಮಾಡಿದ ಕಥೆಯು ಕೇವಲ ಶ್ರಾವ್ಯವಾಗಿಯೂ ಮನೋರಂಜಕವಾಗಿಯೂ ನಡೆಯಿತೆಂದಾಗಿ ತಿಳಿಯಬರುತದೆ —ವೃ. ಪ.

The Resident—ಇಲ್ಲಿನ ರೆಸಿಡೆಂಟರವರು ತಮ್ಮ ಅಸಿಸ್ಟೆಂಟರೊಡನೆ ಗತ ಗುರುವಾರದದಿನ ಚಿನ್ನದ ಗನಿಗಳನ್ನು ನೋಡುವ ಉದ್ದೇಶದಿಂ ಕೋಲಾರ್ ಪ್ರಾಂತಕ್ಕೆ ದಯಮಾಡಿದ್ದು ಅಲ್ಲಿನವರು ಮಾಡಿದ ಔತಣವಗೈರೆ ಸತ್ಕಾರಗಳನ್ನಂಗೀಕರಿಸಿ ಶುಕ್ರವಾರದ ದಿನ ವಾಪಸ್ ಬಂದರು. ಇವರು ಪ್ರಾಯಶಃ ಈ ತಿಂಗಳ ಮಧ್ಯಭಾಗದಲ್ಲಿ ಇಲ್ಲಿನ ಸಂಬಂಧವನ್ನು ನಿವೃತ್ತಿಸಿಕೊಂಡು ಹೊರಟು ಹೋಗುವರಾದುದರಿಂದ ಇದೇ ಟಯ್ಯರ್ ಸರ್‌ಕ್ಯೂಟೆಂದು ಭಾವಿಸಬೇಕಾಗಿದೆ ಇವರು ತಮ್ಮ ಕೆಲಸದ ಚಾರ್ಜನ್ನೊಪ್ಪಿಸಿ ಹೊರಡುವದಕ್ಕೆ ಮುಂಚಿತವಾಗಿ ಮೈಸೂರಿಗೆ ದಯಮಾಡಿ ಬರುವ ಸಂಭವ ಕಾಣುತಿದೆ

The weather—ಮಧ್ಯೆ ಕಾಲಸ್ಥಿತಿಯಲ್ಲಿ ಸ್ವಲ್ಪ ಬದಲಾವಣೆಯುಂಟಾಗಿತ್ತು. ಪರಂತು ಅದು ದೃಢವಾದುದಲ್ಲವು ಗತ ಗುರುವಾರದ ದಿನ ಮಧ್ಯಾಹ್ನಾತ್ಪರ ಪಿತಕ್ಪುರ ನಿವಾಸಿಗಳ ಜಲಕಷ್ಟ ನಿವಾರಣಾರ್ಥ ಭಗವದನುಗ್ರಹರೂಪವಾಗಿ ವೇತ ಮಾಸುಕುತೆ, ಆಕಾಶ್ಯ ದಿಕ್ಕಿನಲ್ಲಿ ಒಳ್ಳೆಯ ವರ್ಷಸೂಚನೆಗಳು ಕಂಡುಬಂದವು ಅದಕ್ಕೆ ತಕ್ಕಂತೆ ಕೆಲವು ಹನಿಗಳು ಯೆಣಿಸಿದಂತೆ ಬಿದ್ದವು. ಪರಂತು ರೇವತಿಯಲ್ಲೇ ಮುಂಗಾರಿ ಲಕ್ಷಣವು ಕಂಡುಬಂದದರಿಂದ ಇದೊಂದು ಶುಭಲಕ್ಷಣವೆಂದು ಜನಗಳು ಹೇಳಿಕೊಳ್ಳುತ್ತಾರೆ. ಬಿಸಿಲಿನ ಝಳವು ದುಸ್ಸಹವಾಗಿದೆ ಕಾರಂಜಿ ಕೆರೆಯಲ್ಲಿ ಈಗ್ಯೆ ಕೆಲವು ದಿವಸಗಳ ಹಿಂದೆ ಬಿಡಲ್ಪಟ್ಟಿದ್ದ ನೀರು ಬತ್ತಿಹೋದುದರಿಂದ ಮರಳ ಬಿಡಲ್ಪಟ್ಟು, ಕಾರಂಜಿಗಳಗೆಲ್ಲ ಹರಿಯುತಲಿದೆ. ಈಗ ಸರ್ವ್ವಾ ಜಲಾ ಸುಕೂಲ್ಯವುಕೊಡ ಬ್ರಿಟಿಷನವರ ದಯೆಯುಂಟಾಗ ಬೇಕಾಗಿರುತಿದೆ. ಜನಿಸಿಗಳ ದಾರಣೆಯು ಸ್ವಲ್ಪ ಹೆಚ್ಚು ಕಡಮೆ ಯೇರುತಲಿದಾಗಿದೆ.

The weather in Mysore—ಇಲ್ಲಿ ಬಿಸಿಲಿನ ರಭಸವು ಬಹಳ ಜೋರಾಗಿದೆ ಮಳೆ ಎಬ್ಬರ ಶಬ್ದ ಸ್ವಪ್ನಪ್ರಾಯವಾಗಿದೆ ಮೋಡ

...ಕಬ್ಬುವದೇ ಇಲ್ಲ. ಇನ್ನೂ ೧೦—೧೫ ದಿವಸಗಳವರಿಗೂ ಬಿಸಲು ಇದೇರೀತಿಯಲ್ಲಿ ದಹಿಸುತಿದ್ದರೆ ಮನೆಗಳು ಮತ್ತು ಸುಡತಕ್ಕ ಇತರ ಪದಾರ್ಥಗಳು ಹತ್ತಿಕೊಂಡು ಜನರಿಗೆ ನಷ್ಟವನ್ನುಂಟು ಮಾಡುವವರಲ್ಲಿ ಸಂದೇಹವಿಲ್ಲ. ಈ ಊರಿನ ಎಲ್ಲಾ ಕಡೆಯಲ್ಲಿಯೂ ಸಿಡುಬು ಜ್ವರ ಹರಡಿಕೊಂಡಿವೆ. ೧—೨ ದಿವಸಗಳ ಕೆಳಗೆ ಸಜರುಬಾಗಿನಲ್ಲಿ ಇಬ್ಬರಿಗೆ ಕಾಲರಾ ಉಪದ್ರವಾಗಲಿ ಲಕ್ಷಣವೇನ್ಮೃತಪಟ್ಟರು. ಕಾಲವು ಹೀಗೆ ಇರುವಾಗ್ಯೆ ಇಲ್ಲವೆ ಇದರಕ್ಕೆ ಸಾಂಕ್ರಾಮಿಕ ವ್ಯಾಧಿಗಳು ಘೋರವಾಗಲಾದವೇನಾಶ್ಚರ್ಯ-ವೃ. ನ.

Obituary.—ಘೋಸಿರ್ ಸಮೂಹದಲ್ಲಿ ಪ್ರಮುಖರೆನಿಸಿಕೊಂಡು ಈ ಪುರದಲ್ಲಿ ವಾಸವಾಗಿದ್ದ ಮೆ|| ಕಾಮಾ ಎಂಬ ದೊಡ್ಡಮನುಷ್ಯರು ಗತ ಶುಕ್ರವಾರದವಿನ ಬೆಳಗ್ಗೆ ಕಾಲಗತಿಯನ್ನೈದಿದರೆಂದು ಹೇಳಲಿಕ್ಕೆ ವಿಷಾದಿಸುತ್ತೇವೆ. ಇವರು ಹೆಡ್ಯುಕೇಷನ್ ಸೆಕ್ರೆಟರಿ ಮೆ|| ಬಾಬಾ ಬುವರಮನೆಯಲ್ಲಿ ವಾಸವಾಗಿದ್ದರು. ಇವರಿಗೆ ಹ್ಲೇಗು ಎಂಬಾ ರೋಗವು ಪ್ರಾರಂಭದಲ್ಲಿ ಸಾಮಾನ್ಯವಾಗಿ ಕಾಣಿಸಿ ಅನೇಕವೇಗೆ ಪ್ರಬಲಿಸಿ ಪ್ರತಿಕ್ರಿಯೆಗೊಳ್ಳದವೆ ಮರಣಪ್ರದವಾಯಿತು. ಇದನ್ನರಿಯದೆ ಕೆಲವರು ನಾನಾವಿಧವಾಗಿ ಹೇಳುತ್ತಾರೆ. ಪಾರ್ಸಿ ಮತ ಸಿದ್ಧಾಂತ ರೀತ್ಯಾ ಘೋಸಿರ್‌ಗಳಲ್ಲಿ ಶವಸಂಸ್ಕಾರವಿಲ್ಲವೆಂದು ಅವರ ಅನಾದಿ ಸಂಪ್ರದಾಯ ಪ್ರಕಾರ "ಶವಗಳನ್ನು" ಅಂದರೆ, ಪಕ್ಷಿಗಳಿಗೆ ಆಹಾರವಾಗಿ ಮಾಡುವದಕ್ಕೆ ಆರ್ಹ ಸ್ಥಳ ವಿಲ್ಲದಿದ್ದದರಿಂದ ಅದಕ್ಕಾಗಿ ಪ್ರತ್ಯೇಕ ಕಟ್ಟಡವು ಪಡೆದು ಬಳಿಕ ಪ್ರೇತಕರ್ಮಗಳು ಅವರ ಜಾತಿ ಮತಾನುಸಾರ ನಡೆಸಲ್ಪಟ್ಟಂತೆ ತಿಳಿಯಬರುತಿದೆ.

Cholera—ವ್ಯಸ್ತರ ಕಾಲಸ್ಥಿತಿಯನ್ನನುಸರಿಸಿ ಅಲ್ಲಿಯಲ್ಲಿ ಜುಲಾಬ್ ಜ್ವರ ವಗೈರೆ ಸಾಂಕ್ರಾಮಿಕ ರೋಗಗಳು ಪ್ರಬಲಿಸುತಲಿರುವಂತೆ ತಿಳಿಯಬರುತಿದೆ. ಇವು ಮತ್ತೂ ಹೆಚ್ಚು ವೃದ್ಧಿಗೊಳಿಸಲಿಕ್ಕೆ ತಕ್ಕಂತೆ ಉತ್ಸವಗಳೂ ಪರಿಷೆಗಳೂ, ಸನ್ನಿಹಿತಗಳಾಗಿ ಅವುಗಳ ವ್ಯಾಜದಿ ಜನಗಳು ಪರಸ್ಥಳಗಳಿಂದ ಬಹು ವಿಶೇಷವಾಗಿ ಜನಸಂಮರ್ದವುಂಟಾಗುವ ಸುಸ್ಥಳವೂ ಈಗ ಸನ್ನಿಹಿತವಾಗಿದೆ. ಬರುವ ಬುಧವಾರದವಿನ ಮೇಲು ಕೋಟೆಯಲ್ಲಿ ಶ್ರೀ ಸಂಪತ್ಕುಮಾರನಿಗೆ ವೈರಮುಡಿ ಉತ್ಸವ ಮಾಡುವದರಿಂದ ದೇವರ ದರ್ಶನಾರ್ಥ ದೇಶ ದೇಶಗಳಿಂದಲೂ ಬಹುಮಂದಿ ಅಲ್ಲಿಗೆ ಹೋಗುವ ವಾಡಿಕೆಯನ್ನನುಸರಿಸಿ, ಈ ಸಂವತ್ಸರವೂ ಅನೇಕರು ಹೋಗಬಹುದು. ಪರಂತು ಈಗ ನವರೀ ಕ್ಷೇತ್ರದಲ್ಲಿ ವಿಶೇಷವಾಗಿ ವೃದ್ಧಿಯನ್ನೈದುತಲಿರುವ ವಾಂತಿ ಭೇದಿ ರೋಗವೂ ಜಲದುರ್ಭಿಕ್ಷವೂ, ಆಹಾರ ಪದಾರ್ಥ ದೌರ್ಲಭ್ಯವೂ ಅಧಿಕವಾಗಿರುವದರಿಂದ ಪ್ರಜೆಗಳು ಹೋದರೆ ಬಹಳ ಶ್ರಮಕ್ಕೊಳಪಡಬೇಕಾಗಿರುವದು. ಮೊದಲು ಶರೀರರಕ್ಷಣೆಯು ಆವಶ್ಯಕವಾದುದರಿಂದ ಈ ವಿಷಯದಲ್ಲಿ ಜನಗಳು ಜಾಗರೂಕರಾಗಿರಬೇಕೆಂದು ಕೋರುತ್ತೇವೆ. ಈ ಅಂಶವನ್ನು ಪ್ರಜೆಗಳ ತಿಳುವಳಿಕೆಯ ಬಗ್ಗೆ ಪ್ರಕಟಿಸುವಂತೆ ಮೈಸೂರು ಸರ್ಕಾರದವರು ನಮಗೆ ತಿಳಿಸುತ್ತಾರೆ.

A patroling damsel in Mysore.—ಶ್ರೀಮನ್ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿ ಸುಮಾರು ೨೨—೨೩ ವರುಷ ವಯಸ್ಸುಳ್ಳವಳೊಬ್ಬಳು, ರವಿವರ್ಮಾ ಚಿತ್ರಕಾರನಿಂದ ಲಕ್ಷ್ಮೀಚಿತ್ರಾನುಸಾರವಾಗಿ ಸಿಂಗರಿಸಿಕೊಂಡು, ಪಾಂಡು, ಜಾಕೆಟು, ಕೈಯಲ್ಲಿ ಬೆತ್ತ, ಕಾಲಿಗೆ ಬೂಟ್ಸ್ ವಸ್ತ್ರಗಳನ್ನು ಪುರುಷರಂತೆ ಧರಿಸಿ, ಅತಿ ಜಾಗ್ರತೆಯಾಗಿ ಹೋಗುತ್ತಲಿರುವಳು. ಕಳೆದ ಶುಕ್ರವಾರ ರಾತ್ರಿ ಸುಮಾರು ೧೨ ಘಂಟೆ ಸಮಯದಲ್ಲಿ ಮೇಲ್ಕಂಡು ಕೆಲವು ವೇಷಧಾರಿಣಿಯಾಗಿ, ಬಿಜಯ ಮಾಡಿ ಸುತ್ತಿದ್ದಳು. ಆಕಾಶದಲ್ಲಿ ಯಾವನೋ ಒಬ್ಬನು "ಅದ್ಯಾರು" ಎಂದು ಪ್ರಶ್ನೆ ಮಾಡಲು, "ಬೀಕ್ಸ್ಟ್ರೆಡ್ ಏಸೆ" ಎಂದು ಜವಾಬು ಕೊಟ್ಟು, ಮುಂದೆ ಪ್ರಯಾಣ ಮಾಡಿದಳು. ಈ ಪ್ರಕಾರವಾಗಿ ಎಷ್ಟು ದಿವಸಗಳಿಂದ ನಡೆದು ಬರುತ್ತದೆಯೋ ಗೊತ್ತಾಗಿ ತಿಳಿಯಲಿಲ್ಲ. ಸ್ವಲ್ಪಾದಿವಸಗಳಿಗೆ ಮುಂಚೆ ಒಬ್ಬ ಬೀಟಿನವನು ಕಂಡು ಮಾತನಾಡಿಸಿದಾಗ, ಪ್ರತ್ಯುತ್ತರ ಹೇಳದೆ ಹೊರಡಲು, ಯಾರೋ ಒಬ್ಬ ದೊಡ್ಡಮನುಷ್ಯರೆಂದು ಪೊಲೀಸಿಗೆ ಬೆರಗಾಗಿ ಬಿಟ್ಟುಬಿಟ್ಟನೆಂದಲೂ ತಿಳಿಯಬರುತ್ತೆ. ಇಂತಾ ನಿಶಿರಾತ್ರಿಯಲ್ಲಿ ಸ್ವಕಾರ್ಯ ಧುರಂಧರಳಾಗಿ ನಿರ್ಭೀತಿಯಿಂದ ಯಾವ ಉದ್ದೇಶವನ್ನು ಕುರಿತು ಪ್ರಯಾಣ ಮಾಡುತ್ತಿರಬಹುದೋ ವಾಚಕರೇ ಊಹಿಸಬಹುದು!! ಆದರೆ ಕಾಲಾನು ಕಾಲದಲ್ಲಿ ಆದರೂ, ಈ ನಿಶಾಚರಳ ಗುಟ್ಟು ರಟ್ಟಸಿ, ತನ್ನ ದುಷ್ಕೃತ್ಯಕ್ಕೆ ತಕ್ಕ ಫಲವನ್ನು ಶೀಘ್ರದಲ್ಲಿಯೇ ಹೊಂದುವದರಲ್ಲಿ ಸಂಶಯವಿಲ್ಲವೆಂದು ಅಲ್ಲಿನ ಅಗ್ರಹಾರ ನಿವಾಸಿಯೊಬ್ಬನು ಈ ರೀತಿಯಾಗಿ ಬರೆಯುತ್ತಾನೆ.—ವೃ. ಪ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾ ಸಾಹೆಬ್ ಬಹದ್ದೂರವರ ಸರ್ಕಾರದಿಂದ ಹೊರಹೊರಟಾದ ಇಶ್ತಿಹಾರನಾಮೆಗಳು.

ನಂ ೮೪೯. ತಾ|| ೨ನೇ ಮಾರ್ಚಿ ೧೮೯೩—ಸರ್ ೧೮೯೨ನೇ ಇಸವಿ ಮಾರ್ಚಿ ೧೮ನೇ ತಾರೀಖಿನ ಪರ್ಯಂತ್ಯರ, ಶಿವಮೊಗ್ಗ ಡಿಸ್ಟ್ರಿಕ್ಟ್ ೨ನೇ ಅಸಿಸ್ಟೆಂಟ್ ಕಮಿಷನರ್ ಕೋರ್ಟಿನ ಚಾರ್ಜನ್ನು ಮೆ. ಎಸ್. ಚೆಲುವಯ್ಯಂಗಾರ್ರವರು ಕೊಟ್ಟು ಮೆ. ಬಿ. ರಾಮಸ್ವಾಮಯ್ಯರವರು ತೆಗದುಕೊಂಡಿರುತ್ತಾರೆ.

ನಂ ೮೫೦, ೨೮ನೇ ಮಾರ್ಚಿ—ಪೆಶಸ್ಸ್ಟ್ರ ಅಸಿಸ್ಟೆಂಟ್ ಕಮಿಷನರ್ ಮೆ. ಬಿ. ರಾಮಸ್ವಾಮಯ್ಯಂಗಾರ್ರವರು, ಸರ್ ೧೮೯೨ನೇ ಇಸವಿ ಮಾರ್ಚಿ ೧೮ನೇ ತಾರೀಖಿನ ಪೂರ್ವಾಹ್ನದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನೊಳು ನೌಕರಿಯ ಬಗ್ಗೆ ಹಾಜರಾದರು.

ನಂ|| ೮೫೧, ೨೫ನೇ ಮಾರ್ಚಿ—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟ್ ಮುನಸೀಫ್ ಮೆ. ಎ. ಆನಂದರಾಯರವರಿಗೆ ಒಬ್ಬ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರ ಕೊಡಲ್ಪಟ್ಟಿರುತಿದೆ.

ನಂ|| ೮೫೨—ಸರ್ ೧೮೯೨ನೇ ಇಸವಿ ಫೆಬ್ರವರಿ ೫ನೇ ಮಕ್ರ್ಮ ೨೧೮೦-೨೧-೨೦ನೇ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಿಯಮವನ್ನನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಬೇಲೂರು ತಾಲ್ಲೂಕ್ ಅಮಲ್ದಾರ್ ಸಿ. ಎಸ್. ಚೌಡಯ್ಯನವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ೬ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೮೫೩, ತಾ|| ೨೩ನೇ ಮಾರ್ಚಿ—ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಎಂ. ಆರ್. ಲೇಮೇಂಗ್ ಮೊರ್ನಯವರು, ಸರ್ ೧೮೯೨ನೇ ಇಸವಿ ಫೆಬ್ರವರಿ ಗುರ್ರೇ ತಾರೀಖಿನಲ್ಲಿ ನೌಕರಿಯ ಬಗ್ಗೆ ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ರಿಪೋರ್ಟ್ ಮಾಡಿದರು.

ನಂ ೮೫೪—ಸಾಗರದ ಸಾಬಕ್ ಮುನ್ಸಿಫ್ ಶಿವಜ್ಞಾನ ಪಿಳ್ಳೆಯವರಿಗೆ, ಸರ್ ೧೮೯೧ನೇ ಇಸವಿ ನವಂಬರ್ ೮ನೇ ಮಕ್ರ್ಮ ಲಾಗಾಯತು ೧೮೯೦ನೇ ಇಸವಿ ಫೆಬ್ರವರಿ ೨ನೇ ತಾರೀಖಿನವರಿಗೆ ಕೊಡಲ್ಪಟ್ಟ ೩ ತಿಂಗಳು ೨೫ ದಿನಗಳ ಫರ್ಲೋ ರಜಾ ಮತ್ತು ಸರ್ ೧೮೯೦ನೇ ಇಸವಿ ಡಿಸೆಂಬರ್ ೨೩ನೇ ತಾರೀಖ್ ಮೊದಲು ೯ನೇ ಇಸವಿ ಜನವರಿ ೨ನೇ ತಾರೀಖ್ ವರಿವಿಗೆ ಮೆಡಿಕಲ್ ಸರ್ಟಿಫಿಕೇಟ್ ಮೇಲೆ ಕೊಡಲ್ಪಟ್ಟ ೧೩ ತಿಂಗಳ ರಜಾ ಈ ಎರಡರ ಪೈಕಿ ಮೊದಲನೆಯದು ಕಾಮಿಲೇ ರಜಾಕ್ಕೂ, ಎರಡನೆಯದು ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೬೩ನೇ ಆರ್ಟಿಕಲ್ ಅನುಸರಿಸಿ, ಫರ್ಲೋ ರಜಾಕ್ಕೂ ಬದಲಾಯಿಸಲ್ಪಟ್ಟಿರುತಿದೆ.

ಮೈಸೂರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್.

ಸರ್ ೧೮೯೨ನೇ ಇಸವಿ ಮಾರ್ಚಿ ೨ನೇ ಮಕ್ರ್ಮ ೧೩೩೫-L ೧೮೦೫ನೇ ನಂಬರುಳ್ಳ ಇಸ್ತಿಹಾರ್ ನಾಮೆಯು ಮರಳಿ ಓದಲ್ಪಟ್ಟಿತು.

ಮ್ಯುನಿಸಿಪಲ್ ಕಮಿಷನರ್‌ಗಳ ಚುನಾವಣೆ ಕಾಲವನ್ನು ಸರ್ ೧೮೯೨ನೇ ಇಸವಿ ಜೂನ್ ಗುರ್ರೇ ತಾರೀಖ್ ವರಿವಿಗೆ ನಿಲ್ಲಿಸಿ ಇಡಬೇಕೆಂತಲೂ, ಸದರೀ ಚುನಾವಣೆಯ ವಿಷಯದಲ್ಲಿ ಮಾಡಲ್ಪಟ್ಟಿರುವ ನಿಬಂಧನೆಗಳ ೫ ಮತ್ತು ೬ನೇ ಕಲಂಗಳನ್ನು ತಿದ್ದುಪಡಿಮಾಡುವ ವಿಷಯವು ಬೋರ್ಡಿನವರ ಮುಂದೆ ಇಡಲ್ಪಟ್ಟು, ಅವರ ಭಾವವು ಪ್ರೆಸಿಡೆಂಟರ ಅಭಿಪ್ರಾಯದೊಡನೆ ಗವರ್ನಮೆಂಟಿಗೆ ತಿಳಿಸಲ್ಪಡುವದೆಂತಲೂ ನಮೂದಿಸಿ, ಸರ್ ೧೮೯೨ನೇ ಇಸವಿ ಮಾರ್ಚಿ ೨೩ನೇ ತಾರೀಖಿನಲ್ಲಿ ಸಿಟಿ ಮ್ಯುನಿಸಿಪಲ್ ಪ್ರೆಸಿಡೆಂಟರವರು ಬರೆದ ೧೦೩೦ ನೇ ನಂಬರ್ ಲೆಟರ್ ಓದಲ್ಪಟ್ಟಿತು.

ಬೆಂಗಳೂರ್, ಸರ್ ೧೮೯೨ನೇ ಇಸವಿ ಮಾರ್ಚಿ ೨೬ ತಾ||.
ನಂ|| ೧೩೯೫—೫೦—L, ೧೮೦೩.

ಹುಕುಂ—ಚುನಾವಣೆಯನ್ನು ೧೮೯೨ನೇ ಇಸವಿ ಜೂನ್ ಗುರ್ರೇ ತಾರೀಖ್ ವರಿವಿಗೆ ನಿಲ್ಲಿಸಿ ಇಡುವಣವು ಮಂಜೂರ್ಮಾಡಲ್ಪಟ್ಟಿದೆ.

೨ ಚುನಾವಣೆಯನ್ನು ಕುರಿತ ನಿಬಂಧನೆಗಳನ್ನು ಬದಲಾಯಿಸುವ ವಿಷಯದಲ್ಲಿ ಬೋರ್ಡಿನವರ ಮತ್ತು ಪ್ರೆಸಿಡೆಂಟರವರ ಅಭಿಪ್ರಾಯವು ನಿರೀಕ್ಷಿಸಲ್ಪಟ್ಟಿದೆ.

೩ ಮುಂದಿನ ಚುನಾವಣೆಗೆ ಮುಂದಾಗಿ ಉದ್ಯೋಗದ ಅವಧಿ ಕಳೆದು ಹೋಗುವ ಕಮಿಷನರ್‌ಗಳು ಅವರ ಕೆಲಸಕ್ಕೆ ಬೇರೆಜನರುಮೊಕರರ್ರಾಗುವವರೆಗೆ ಉದ್ಯೋಗದಲ್ಲಿರತಕ್ಕದ್ದು.

CORRESPONDENCE.

ಮ, ರಾ, ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸಮಕ್ಷಮಕ್ಕೆ.

ಅಯ್ಯಾ,—ಇಂಗ್ಲಿಷಿನವರ ಪ್ರಭುತ್ವವು ಈ ಇಂಡ್ಯಾದೇಶದಲ್ಲಿ ದೃಢಪಟ್ಟದ್ದು ಮೊದಲು, ಏತದ್ದೇಶೀಯರಾದ ನಮ್ಮ ಸ್ಥಿತಿಯು ಬಹು ಪ್ರಕಾರದಿಂದಭಿವೃದ್ಧಿಯನ್ನೈದಿತೆಂಬದರಲ್ಲೇನೂ ಸಂಶಯವಿಲ್ಲವು. ಇಂಗ್ಲಿಷ್‌ಭಾಷಾ ಪ್ರಚುರ್ಯವೂ, ತದ್ದೇಶೀಯರ ಪರಿಚಯ ಸಾಹಚರ್ಯ ಸಲ್ಲಾಪಗಳೂ ನಮ್ಮವರಿಗೆ ಅಭಿಮತಗಳಾಗಿ ಬಹುವಿಧ ವಿನಿಮಯಗಳಿಗವರಂ ಒಳಪಡಿಸಿದವು. ನಮ್ಮ ದೇಶೀಯರು ಕಾಲಕ್ರಮದಿಂ ವಿದ್ಯಾವೈಲಕ್ಷಣ್ಯಗಳಂ ಪಡೆಯುತ ಅಭಿವೃದ್ಧಿಯನ್ನೈದುವ ವಿಷಯದಲ್ಲಿ ಪ್ರೋತ್ಸಾಹಕರಗಳಾಗಿಯೂ ಸಹಾಯಕಗಳಾಗಿಯೂ ಇರುವ ಬ್ರಿಟಿಷಿನವರ ಔದಾರ್ಯವೂ, ಸದ್ಬಸನುತೆಯೂ, ಪ್ರಜಾಭಿಮಾನವೂ, ಕೇವಲ ಶ್ಲಾಘ್ಯಗಳಾಗಿರುತಿವೆ ಯೆಂಬದಕ್ಕೆ ಸಂದೇಹವಿಲ್ಲವು. ಆದಾಗ್ಯೂ ಒಂದುಕಡೆಲ್ಲಿ ಮಾತ್ರ ಕೊರತೆಯುಂಟಾಗಿರುವದು ನಾನು ಕೇವಲ ವಿಷಾದದೊಡನೆ ಇಲ್ಲಿ ಪ್ರಸ್ತಾವಿಸಬೇಕಾಗಿದೆ. ನಮ್ಮ ಜನರು ಲೌಕಿಕ ಪ್ರಯೋಜನಕ್ಕೋಸ್ಕರ ಪರವಿದ್ಯೆಯಂ ಕಲಿತು ಪ್ರವರ್ಧಮಾನರಾಗುವದರಲ್ಲಿ ನಾನೇನೂ ದೋಷ ಹೇಳುವದಿಲ್ಲವು. ಮತ್ತು ನಾನೊಂದು ವ್ಯಾಪ್ಯಸ್ಥಿತಿಯಲ್ಲಿರುತ ಪರಕೀಯಸ್ವಾಕಂಡು ಸಹಿಸಲಾರದೆ ಅಸಹಿಷ್ಣುತೆಯಿಂದಲಾಗಲಿ ನಾನು ಆಕ್ಷೇಪಿಸ ತೊಡಗಲಿಲ್ಲವು. ಅಥವಾ ನನಗುಂಟಾಗಿರುವ ಲೇಖನ ಪಟುವ ಕೌಶಲ್ಯ ಪ್ರದರ್ಶನಾರ್ಥ ಏತದ್ವಿಷಯವಂ ಕುರಿತಿಲ್ಲಿ ಬರೆಯಲುದ್ಯುಕ್ತನಾಗಲಿಲ್ಲವು. ಆದರೆ ಲೋಕದೊಳು ಸ್ವೀಯಪರಕೀಯಗಳೆಂಬ ದ್ವಿವಿಧ ವಸ್ತುಜಾತಗಳಲ್ಲಿ ಸ್ವೀಯಾಭಿಮಾನವು ಸಕಲ ಪ್ರಾಣಿಸಾಧಾರಣ ಗುಣವಾಗಿ ಯೇರ್ಪಟ್ಟಿರುವದರಿಂದಲೂ, ಅಂತಾ ಅಭಿಮಾನಕ್ಕೆ ಜೀವಾಧಿಷ್ಠಾನವಾದ ಶರೀರಾದ್ಯ ಪುತ್ರಮಿತ್ರ ಕಳತ್ರ ಗೃಹಾರಾಮ ಪಶುಕ್ಷೇತ್ರ ನಗರ ದೇಶ ಮೊದಲಾದವೂ ಸ್ವವಿದ್ಯೆಯೂ, ಸ್ವಮತಾಚಾರ ವೇಷಭಾಷಾದಿಗಳೂ ವಿಷಯಗಳಾಗಿರುವದರಿಂದ ತಾದೃಶ ಅಭಿಮಾನಾವಿಷ್ಟನಾಗಿ ಕೆಲವು ವಿಷಯಗಳನ್ನಿಲ್ಲಿ ಪ್ರಸ್ತಾವಿಸುತ್ತೇನೆ. ಅನ್ಯದೇಶ ಭಾಷಾಭ್ಯಾಸವು ನಮ್ಮವರಿಗೆಷ್ಟರಮಟ್ಟಿಗೆ ಪಿಳ್ಳೆಯ ಪ್ರಯೋಜನಗಳನ್ನುಂಟುಮಾಡಿ ಅವರು ಪರಿಗಣನೀಯಸ್ಥಿತಿಗೆ ತರಲಾಯಿತೋ, ಅದರಿಂದ ಎಷ್ಟರ ಔನ್ನತ್ಯ ಪ್ರಾಭವ ಐಶ್ವರ್ಯಾದಿ ಪ್ರಯೋಜನಗಳುಂಟಾದವೋ ಅವುಗಳಿಗಿಂತಶತಾಂಶದೊಳು ವಿರುದ್ಧ ಗುಣಭಾವ ಚರ್ಯೆಗಳನ್ನುಂಟುಮಾಡದಿರಲಿಲ್ಲವು. ಏತದ್ದೋಷವು ತದ್ವಿದ್ಯಾಜನ್ಯವಾದುದೆಂದು ಹೇಳದೊಡೆ ಅದಕ್ಕೆ ವಿರುದ್ಧ ಗುಣನಿವಾರಕ ಶಕ್ತಿಯೇ ಯಿಲ್ಲದೆ ಹೋಗುತಲಾದುದರಿಂದ ತತ್ಪ್ರಯುಕ್ತವಾದ ಜ್ಞಾನವೈಚಿತ್ರ್ಯಕ್ಕೆ ವಿಶೇಷ ವಿಲ್ಲದಂತಾಗುತಿದೆ. ಆದುದರಿಂದ ಪರವಿದ್ಯೆಯನ್ನು ಕಾರಣತ್ವೇನ ನುಡಿಯುವದಕ್ಕಿಂತಲೂ ಹೇಳನಾಸ್ಪದಗಳಾದ ನಮ್ಮವರ ಅನುಕರಣ ಶಕ್ತಿಯಂ ಕಾರಣವನ್ನಾಗಿ ಭಾವಿಸುವೆನು. ಇಂಗ್ಲಿಷ್ ಭಾಷಾಭ್ಯಾಸವು ಇಂಗ್ಲಿಷಿನವರಿಗೆ ವಿಶೇಷ ಫಲದಾಯಕಗಳಾಗಲೇತಕ್ಕೆ, ಅದೇ ಭಾಷೆಯು ನಮ್ಮವರಿಗೆ ಅನರ್ಥಕಾರಿಯಾಗಿ ಪರಿಣಮಿಸಲೇತಕ್ಕೆ; ಇದರ ಮೂಲಕಾರಣವು ದುರೂಹವಾಗಿರುತಿದೆ. ಯಾವದೋ ಒಂದುವಿಧ ಪ್ರಯೋಜನವು ಹೊಂದಿದ ಮಾತ್ರದಿಂದಲೇ ನಮ್ಮವರು ಮೈಮರೆತು, ತಮ್ಮ ಜಾತಿಕುಲ ಮರ್ಯಾದೆಗಳಲ್ಲಿ ಅನಾಸ್ಥೆಯೂ, ಸ್ವಮತಾಚಾರ ವ್ಯವಹಾರ ವೇಷಭಾಷಾದಿಗಳಲ್ಲಿ ಅಶ್ರದ್ಧೆಯೂ, ತಮ್ಮ ಶಾಸ್ತ್ರ ಸಂಪ್ರದಾಯಗಳಲ್ಲಿ ಅನಾದರವೂ ಹುಟ್ಟಿ, ಅವುಗಳಿಂದ ಪರವಿದ್ಯೆಯೊಳು ಅಕ್ಕರೆಯೂ, ಪರಸಮಯದೊಳು ಅಭಿನಿವೇಶನವೂ, ವಿಜಾತೀಯಗಳಾದ ಪರರ ವೇಷಗಳಲ್ಲಿಯೂ ಆಹಾರವಿಹಾರಾದಿಗಳಲ್ಲಿಯೂ ಅಭಿರುಚಿಯೂ ಉಂಟಾಗಿ ಮುಖ್ಯವಾಗಿ ತಾವು ಯಾವ ಜಾತಿಯವರೋ ಅಂತಾ ಜಾತಿಯವರೆಂದು ಅನ್ಯರಿಂದ ಕರೆಯಲ್ಪಡುವದಂ ಸಹ ಹೇಳನವಾಗಿ ಎಣಿಸುವಂತೆ ಪರಿಣಮಿಸಿದೆ. ಇಂತಾ ಪರಸಂಪ್ರದಾಯಗಳಲ್ಲಿ ನಮ್ಮವರು ಗುಣ ದೋಷ ವಿಚಾರಪೂರ್ವಕ ಪ್ರವರ್ತಿಸುತ್ತಾರೆಂದು ಯಾರಾದರೂ ಯೆಣಿಸಿರುವ ಪಕ್ಷಕ್ಕೆ ಅದು ಕೇವಲ ಭ್ರಾಂತಿಜನ್ಯವಾದುದೆಂದು ಹೇಳುತ್ತೇನೆ. ವಿಜಾತೀಯ ಸಂಪ್ರದಾಯಗಳನ್ನು ಪರಿಗ್ರಹಿಸುವದರಲ್ಲಿ ಯೆಷ್ಟರ ವಿಚಾರಪರರಾಗಿರುತ್ತಾರೋ ಸ್ವಜಾತೀಯ ಸಂಪ್ರದಾಯವಂ ತ್ಯಜಿಸುವದರಲ್ಲಿ ಅಷ್ಟರ ವಿಚಾರಪರರಲ್ಲವು. ಪುರುಷರಿಗೀಸ್ಥಿತಿ ಯುಂಟಾಗಲಿಕ್ಕೆ ಇಷ್ಟರ ಕಾಲವು ಆವಶ್ಯಕವಾಗಿತ್ತು. ಅದು ಸಾಂಗವನ್ನೈದಿದರಿಂದ ಸ್ತ್ರೀಸಮೂಹದಲ್ಲಿ ತಾದೃಶಸ್ಥಿತಿ ಈಗ ತಲೆದೋರಿತು. ಸ್ತ್ರೀಯರ ಗುಣವಿಪರ್ಯಯಕ್ಕೆ ಅಷ್ಟರದೀರ್ಘಕಾಲವೂ ಅನುಕೂಲೋತ್ತೇಜಕಸಾಮಗ್ರಿಗಳೂ ದೃಢತರವ್ಯಾಸಂಗ ಪ್ರಯತ್ನಗಳೂ ಆವಶ್ಯಕವಿಲ್ಲವು. ಸುಗುಣಾಂಶಗಳಲ್ಲಿ ಪುರುಷರಿಗಿಂತ ಕಡಮೆಯಾಗಿದ್ದರೂ ದುರ್ಗುಣಗಳಲ್ಲಿ ಮಿಗಿಲಾಗಿಯೇ ಇರುವುದು. ಪುರುಷನಿಗೆ ಭಾರ್ಯೆಯೇ ಆಯಾ ಸಮಯಗಳಲ್ಲಿ ಸ್ನೇಹಿತಳಾಗಿಯೂ, ಹಿತಬೋಧಿನಿಯಾಗಿಯೂ, ವಿವೇಕವನ್ನುಂಟುಮಾಡುವವಳಾಗಿಯೂ, ಧರ್ಮಾಧರ್ಮಗಳಂ ತಿಳಿಸತಕ್ಕವಳಾಗಿಯೂ, ಯೋಗಕ್ಷೇಮ ನಿರ್ವಾಹಕಳಾಗಿಯೂ,ಮನೋವಿನೋದಕಳಾಗಿಯೂ ಇರುತ್ತಾಳಾಗ, ಗೃಹಸ್ಥಾಶ್ರಮದಲ್ಲಿ ಇರತಕ್ಕವನಿಗೆ ಭಾರ್ಯೆಯೊಬ್ಬಳೇ ಸಕಲ ವಿಷಯಗಳಲ್ಲಿಯೂ ಸಹಾಯಭೂತಳಾಗಿರುವದರಿಂದ ಅಂತವಳಿಗೆ ವಿದ್ಯಾಮೂಲಕವಾದ ಜ್ಞಾನವು ಕಲ್ಪಿಸಿ ಅವಳಂ ಪ್ರಬುದ್ಧಾಂಗನೆಯಾಗಿ ಮಾಡಬೇಕೆಂಬ ಅಭಿಲಾಷೆಯೂ ಪ್ರವೃತ್ತಿಯೂ ಇಂಗ್ಲಿಷಿನವರ ಮೂಲಕ ನಮ್ಮವರಿಗೀಗ ಸಾಮುದಾಯಕವಾಗಿ ಉಂಟಾಗುತ ಬರುವತಿರುವದಕ್ಕೆ ಅನೇಕ ನಿದರ್ಶನಗಳೇರ್ಪಟ್ಟವೆ. ಸ್ತ್ರೀವಿದ್ಯಾಭ್ಯಾಸವು ರೂಪಾಂತರವೃಳ್ಳದ್ದಾದರೆ ಕಾಲಾಂತರದಲ್ಲಿ ಭರ್ತೃಭಾರ್ಯೆಯರಿಗೆ ಹೃದಯ ಸಾಮರಸ್ಯ ಪ್ರಬಲಾಗಲಾರದೆಂಬ ಭಾವದೊಡನೆ ಅವರ ವಿದ್ಯಾಭ್ಯಾಸ ಕ್ರಮವಂ ಸಹ ಪುರುಷಕ್ರಮಕ್ಕೆ ತಿರಿಗಿಸಿ ತಮ್ಮ ಅಭಿರುಚಿ ವರ್ತನಗಳಿಗೆ ಅನುಗುಣವಾಗಿರುವಂತೆ ಅವರು ತಯಾರ್ಮಾಡುತಲಿದಾರೆ. ಇಂತಾ ತಯಾರಿಯು ಒಂದುವೇಳೆ ತಮಗವಿಶೇಷ ಪ್ರಯೋಜನಕಾರಿಯಾಗದೆಹೋದಾಗ್ಯೂ ಅನ್ಯರಿಗೆಪ್ರಯೋಜನಕರವಾಗದೆಹೋಗಲಾರದು. ಈಗಿನ ವಿದ್ಯಾಭ್ಯಾಸಕ್ರಮದಿಂದ ಉದ್ದಿಷ್ಟಪ್ರಯೋಜನಗಳಿಗಿಂತ ಅನುದ್ದಿಷ್ಟಾನರ್ಥಗಳು ಹೇರಳವಾಗಿ

ಸಂಭವಿಸುವವರಲ್ಲೇನೂ ಸಂಶಯವಿಲ್ಲವು. ವರ್ತಮಾನ ಕಾಲೀನರಾದ ತರುಣಿಯರ ಹೃದಯದಲ್ಲುಂಟಾಗಿರುವ ಭಾವವನ್ನೂ, ತದ್ಭಾವೋದ್ಬೋಧಕ ಸಾಮಗ್ರಿಗಳನ್ನೂ, ತದನುಗುಣಗಳಾದ ಪ್ರೋತ್ಸಾಹ ಸೌಕರ್ಯಗಳನ್ನೂ, ಅವರ ತಾತ್ಕಾಲಿಕ ವರ್ತನಗಳನ್ನೂ ನೋಡಲಾಗಿ, ಸ್ತ್ರೀಶಿಕ್ಷಣಾಕಸ್ಮಿಕದಿಂ ಅವರ ಜಂವೆರಡು ಗುಣಗಳಿಂದಲೇ ಅವರ ಭವಿಷ್ಯತ್ ಸ್ಥಿತಿಗತಿಗಳು ಸಹ ಸ್ಪಷ್ಟವಾಗಿ ಊಹಿಸಬಹುದಾಗಿದೆ. ಸ್ತ್ರೀಗೆ ಸಾಮಾನ್ಯವಾಗಿಯೂ ತೆತ್ತಿ? ಪತಿವ್ರತೆಗೆ ವಿಶೇಷವಾಗಿಯೂ ಅಪೇಕ್ಷಿತವಾದ ಲಜ್ಜೆಯೆಂಬುದಂ ಪ್ರಥಮತಃ ಈಗಿನ ವಿದ್ಯಾಭ್ಯಾಸ ಕ್ರಮವು ನಿವೃತ್ತಿಗೈದು ಧೈರ್ಯ ಸಾಹಸಾದಿ ಗುಣಗಳಂ ಹುಟ್ಟಿಸದಿರಲಿಲ್ಲವು. ಧೈರ್ಯದಿಂ ಸ್ವಾತಂತ್ರ್ಯವೂ, ಸ್ವಾತಂತ್ರ್ಯದಿಂ ಇಷ್ಟಾನುವರ್ತನವೂ, ಅದರಿಂದ ವ್ಯಾಪ್ಯವ್ಯಾಪಕ ಗುರು ಶಿಷ್ಯಾದಿಭಾವವಿಹೀನತೆಯೂ ಉಂಟಾಗುತ ಅದೊಂದು ಪ್ರತ್ಯೇಕ ಮಾರ್ಗವನ್ನವಲಂಬಿಸ ತಕ್ಕದ್ದಾಗಿರುತದೆ. ರಾಸ್ವತ ಮಾರ್ಗವು ಪ್ರಾಚೀನರಿಂದನುಸರಿಸಲ್ಪಟ್ಟದ್ದಾಗಿಯಾದರೂ ವರ್ತಮಾನ ಕಾಲೀನರಪೇಕ್ಷಿಸುವಂತಾದ್ದಾಗಿ ಯಾದರೂ, ಅಥವಾ ಯಾವು ನೋಡಿ ಅನುಕರಿಸಬಹುದೆನಿಸಿದೆವೆಯೋ ಅಂತಾ ಇಂಗ್ಲೀಷಿನವರ ಮಾರ್ಗಾನುಸಾರವಾದುದಾಗಿ ಯಾದರೂ ಯಿರುವಂತೆ ಭಾವಿಸಲಾಗದು. ಕೆಲವು ಕಾಲದಲ್ಲಿಯೇ ಪುರುಷರಂತೆ ಹಿಂದೂ ಸ್ತ್ರೀಯರು ಕೂತ ಯೂರೋಪಿಯನ್ ದೊರೆಸಾನಿಗಳ ಅಂತಸ್ತಿಗೆ ಬರುವವರಲ್ಲೇನೂ ಸಂಶಯವಿಲ್ಲವು. ಅವರಲ್ಲಿರುವ ಇತರ ಸುಗುಣಗಳಂ ಪಡೆಯದಿದ್ದರೂ ಸ್ವಾತಂತ್ರ್ಯವೆಂಬ ಒಂದು ಗುಣವುಮಾತ್ರ ತಪ್ಪದೆ ಸ್ವೀಕರಿಸುವ ಕೋರಿಕೆಯುಳ್ಳವರಾಗಿರುತ್ತಾರೆಂಬವಕ್ಕೆ ತಕ್ಕ ನಿದರ್ಶನಗಳನ್ನು ಈಗಲೇ ವ್ಯಕ್ತಿ ಪಡಿಸುತ ಬರುತಲಿದೆ. ಗಾರ್ಗಿ, ಮೈತ್ರೇಯಿ, ಶಕುಂತಲಾ, ಸೀತಾ, ದಮಯಂತೀ ಮೊದಲಾದವರು ಪರಿಶೋಧಿತ ವಿದ್ಯಾವತೀಯರಾಗಿದ್ದು ಹ್ಯಾಗೆ ಗ್ರಂಥಾಂತರಗಳಿಂ ತೋರಬರುತ್ತ ಸುಪ್ರಸಿದ್ಧರಾಗಿದ್ದರೋ ಅಂತರುತೆಯೋ ತಾವ್ರಾತೀರ್ಣ ಭಾವುರಾಗ ಬೇಕೆಂಬತಾತ್ಪರ್ಯವು ಈಗಿನ ಕಾಲದ ಬಾಲಕಿಯರನೇಕರಿಗೆ ಪ್ರುಟಾಗಿದೆ. ಪರಂತು ಅವರಲ್ಲಿದ್ದ ಒಂದೊಂದು ಅನರ್ಘ ಗುಣಗಳಿಂದ ಅವರು ಯೆಷ್ಟರ ಪ್ರಶಂಸೆಗೆ ವಿಷಯರಾಗಿದ್ದರೋ ತಾದೃಶ ಗುಣಗಳಾಗಲಿ, ಅವು ಪಡೆಯಬೇಕೆಂಬ ಅಪೇಕ್ಷೆಯಾಗಲಿ, ಅವರಂತೆ ಪರ್ತಿಸಬೇಕೆಂಬ ಪ್ರವೃತ್ತಿಯಾಗಲಿ ಈಗಿನವರಿಗಿರುತಿದೆಂಬದು ಅನುಮಾನವು. ನಮ್ಮವರನೇಕರು ಯೋಗ ಸಿದ್ಧಿಯನ್ನೈದದೆಯು ಗಾರ್ಗಿ ಮೈತ್ರೇಯಿಗಳಂತೆ ಮುಕ್ತಿ ಪಡ್ಡರೆನ್ನಿಸಿಕೊಳ್ಳಬಹುದು. ಪತಿಭಕ್ತಿ, ಪಶ್ಚಾನುಸರಣ, ಗುರುಭಾವ, ಕ್ಷಮಸಹಿಷ್ಣುತೆ, ಏವಮಾದಿಗುಣಗಳಂ ಪಡೆಯದಂತೆಯೇ ಶಕುಂತಲಾ, ಸೀತಾ, ದಮಯಂತೀಯರಾಗಿ ನಿಲ್ಲಬಹುದು. ಆದರೆ ಅವರುತ ಜಗದೊಳು ವಿಶ್ವಸನೀಯರಾಗಿರುವರೆಂಬದು ಮಾತ್ರ ಬಹಳ ಅನುಮಾನವು. ಪ್ರಕೃತ ವಿದ್ಯಾಭ್ಯಾಸಕ್ರಮವು ಪತಿಪ್ರದಯೋಲ್ಲಂಘನ ಪ್ರವರ್ತಕರುವ ವಿವಾಹಿತ ಅವಿವಾಹಿತ ತರುಣಿಯರಿಗೂ, ಅವರು ವಿವಾಹ ಮಾಡಿಕೊಳ್ಳುವ ಮತ್ತು ಮಾಡಿಕೊಂಡಿರುವ ನವನಾಗರಿಕರಾದ ತರುಣರಿಗೂ ಉಲ್ಲಾಸಕರವಾಗಿರಬಹುದು. ಅನ್ಯರಿಗೆಲ್ಲ ಅವರು ನೋಡಿ ಅನುಮೋದಿಸಿ ಆನಂದಿಸಬಹುದು. ಆದರೆ ಐಹಿಕ ಸುಖವಿಮುಖರಾಗಿಯೂ ಕೇವಲ ಭಗವದ್ಧ್ಯಾನನಿರತರಾಗಿಯೂ ಇರತಕ್ಕಾದ ವಿಶ್ವೆಗಳಿಗೆ ಲೌಕಿಕ ಪ್ರಯೋಜನ ಕರಗಳಾದ ವಿದ್ಯಾ ಕೌಶಲ್ಯವನ್ನೂ, ಬಹುಜನ ಸಾನ್ನಿಧ್ಯದಲ್ಲಿ ಪ್ರವೇಶ ಸಲ್ಲಾಪಗಳನ್ನೂ, ಆತ್ಮೋತ್ಕೃಷ್ಟತಾ ಪ್ರದರ್ಶಕಗಳಾದ ಚಾಕಚಕ್ಯಗಳನ್ನೂ, ಸ್ತ್ರೀಸ್ವಾತಂತ್ರ್ಯವಲ್ಲದ ನಿರ್ಲಜ್ಜೆಯನ್ನೂ ಉಂಟುಮಾಡುವಷ್ಟರ ಶಕ್ತಿಯುಳ್ಳ ಈಗಿನ ವಿದ್ಯಾಭ್ಯಾಸದಿಂದೇನು ಪ್ರಯೋಜನವೋ, ಸಾಧ್ವೀಗಳಾಗಿರಲಿಕ್ಕೆ ಅದೆಷ್ಟರ ಆವಶ್ಯಕವೋ, ಅನ್ಯರುಗಳಂತೆ ನರ್ತಿಸತಕ್ಕವರ

ರಿಷ್ಟರ ಗುಣಶಾಲಿಗಳೋ, ಅವರ ಸದಾವಾಸವು ತದಿತರ ಸ್ತ್ರೀಯರಿಗಷ್ಟು ಪ್ರಯೋಜನಕಾರಿಯಾದುದೋ ನಾನರಿಯೆನು. ಮುಖ್ಯವಾಗಿ ಕಣ್ಣಿನವಿಗೆ ಚಿಕಿತ್ಸೆ ಮಾಡಿ ಕಣ್ಣುಗಳನ್ನೇ ಕಳೆದುಕೊಂಡಂದದಿ ನಮ್ಮ ಸ್ಥಿತಿಗೂ ಅಭಿರುಚಿಗೂ ತಕ್ಕಂತೆ ನಮ್ಮ ಹೆಂಗಸರು ಸಹ ಅಭಿವೃದ್ಧಿಗೊಳಿಸಿ ಅವರಮೂಲಕ ಆನಂದವಡಬೇಕೆಂಬದಕ್ಕಾಗಿ ಈಗ ಮಾಡಲ್ಪಡುವ ಪ್ರತಿಕ್ರಿಯೆಯು ಸರ್ವಥಾ ಯುಕ್ತವಲ್ಲವು. "ಪರಾರ್ಥಘಟನಾದಕ್ಷಸ್ತತ್ಸ್ವನರ್ಥಾಯನೋಯದ" ಎಂಬ ನ್ಯಾಯದಿಂ ವಿಧವೆಯರಿಗೊಂದು ದರ್ಶನವು ಕಲ್ಪಿಸಿ ಅವರಂ ಸನಾಥರನ್ನಾಗಿ ಮಾಡಿ ಅಭಿವೃದ್ಧಿ ಪಡಿಸಬೇಕೆಂಬ ಉದ್ದೇಶಾಂತರಗಳಿಂದ ಅವರು ನೇಪಥ್ಯದಿಂದ ಸಾಕ್ಷಾದ್ರಂಗಕ್ಕೆ ಸೆಳೆಯಲಾದವಿಸಿರವ ಸೂತ್ರಸಾರಿಗಳಾಗಿ ಯೋಗ್ಯರ್ ತನಾಗರಿಕರು ಪ್ರಬಲಾವಿಷ್ಟಕ್ಕೆ ಗುರಿಯಾಗಬಿದಲಾರರು. ನ್ಯಾಯವಾದಿಗಳು ದಾಸ್ತ್ರ ವಿಹಿತಗಳಾಗಿಯೂ, ಶಿಷ್ಟಾನುಮತಗಳಾಗಿಯೂ ಇರುವ ಕಾರ್ಯಗಳಲ್ಲಿ ಮಾತ್ರ ಪ್ರವರ್ತಿಸುವದೆ ಹೊರತು ಪ್ರತ್ಯಕ್ಷ ಹಾನಿಕರಗಳಾದ ವಿಷಯಗಳಲ್ಲಲ್ಲವು ಇದು ಮೇಲೆ ಹೇಳಲ್ಪಟ್ಟ ನೇತ್ರರೋಗದ ಚಿಕಿತ್ಸೆಯಂತಾದುದಾಗಿರುವದರಿಂದ ಇದರಿಂದೇನೂ ಪ್ರಯೋಜನವಿಲ್ಲವು. ಪ್ರತಿಕ್ರಿಯಾತಯದವಾದಗುಣ ವಿಶಿಷ್ಟಯುಗಳುಂ ಕುರಿತು ಪುರ ಷರಿಗಾಗಿ ಈಗ ಅಪಿಜ್ಞಾರು ಹ್ಯಾಗೆ ನಿದಾನಿಸ ತರಿದ ರಿಯೋ ಹಾಗೆ ಅವರ ಸ್ತ್ರೀಯರಿಗಾಗಿ ಸಹ ದೂಖ ಪರಿಶೀಲನಾದ ಕಾಲಕ್ರ ಸನ್ನಿಹಿತವಾಗಿಯೆಂದು ಬೇಡುತಿರುವ,

ತಮ್ಮ ನಿವೇದಕನಾದ,
ಸುಗುಣಪಿಲಾಷ.

SUMMARY OF NEWS.

ವೃತ್ತಾಂತ ಸಂಗ್ರಹವು.

[illegible] ಇವರು [illegible] ಈ ವ್ಯಾಪಾರದ ಕಾಗದ ಪತ್ರಗಳನ್ನು [illegible] ಗಳನ್ನು ತೆರೆಯಲು ವಾಯಿದ್ದಾರೆ [illegible]

[illegible] ದೇಶದ ರಾಣಿಯು ತನ್ನ ರಾಜ್ಯದಲ್ಲಿನ ಸ್ವದನ್ನು [illegible] ಮಂದಿಗಳನ್ನು [illegible] ಆಜ್ಞೆ, ಹೊರಗೆ [illegible] ಮತ್ತು [illegible] ಮಾಡುತ್ತಾರೆ.—ವೃ ದ

[illegible] ಸಿಟಿ [illegible] ಜನರು [illegible] ಕಷ್ಟಪಡುತ್ತಿರುವದನ್ನು [illegible] ಸಂತೋಷಿಸು [illegible] —ವೃ ಪ

[illegible] ಹೆಚ್ಚಾದ ರಷ್ಯ [illegible] ಮನೆಗಳು ಸುಟ್ಟುಹೋಗಿ [illegible] ೫೧,೦೦೦ ಮನೆಗಳು ನಾಶವಾದವು [illegible] ಜನರು [illegible] —ವೃ ಕ

ಹಿಂದೂಸ್ಥಾನದಲ್ಲಿ [illegible] ಆಫೀಸು ಇರುವ ಊರಿನ ಹೆಸರುಗಳನ್ನು [illegible] ಕಾಗದಗಳ [illegible] ಬರೆಯುವದು ಕಠಿಣವಾಗಿ [illegible] ಇರುವದನ್ನು ಎಂತು [illegible] ಅದಕ್ಕನುಸಾರ ಸಂಕೇತ [illegible] ಮಾಡಬೇಕೆಂದು ಪೋಸ್ಟ್ಮಾಸ್ಟರ್ ಜನರಲ್ ರವರು ಯೋಚಿಸುತ್ತಿರುವಂತೆ ತಿಳಿಯಬರುತ್ತದೆ. ಹ್ಯಾಗಂದರೆ—ಮೆಥ ಲೀ ಪಟ್ಟಣ ಎಂಬದಕ್ಕೆ M P M ಎಂಬ ಮೂರು ಅಕ್ಷರಗಳಿಂದ ಸಂಕೇತ ಮಾಡುವದಾಗಿ, ಎಲ್ಲಾದಕ್ಕೂ ಹೀಗೆ ಹೇಳಿದ್ದಾರೆ.

ಕೆಲವು ದಿವಸದಿಂದ ಒಂದು [illegible] ಧೂಮಕೇತು ನಕ್ಷತ್ರವು ಕಾಣುತ್ತಿರಿದೆ. ಅದು ರಾತ್ರಿ 2½ ಘಂಟೆಗೆ ಹುಟ್ಟಿ, ದೆಗಿನ ಮೂವರ ೪ ಘಂಟೆ ಹೊತ್ತಿಗೆ [illegible] ಆದು [illegible] ಕಾಂತಿಯಿಂದ [illegible] ಆಮಾವಾಸ್ಯೆ [illegible] ಮುಂದಕ್ಕೆ [illegible] ಈ [illegible] ಗೆ [illegible] ಪಟ್ಟಣದ [illegible]

ಈ ತಿಂಗಳು ೧೨ ನೇ ತಾರೀಖಿನ [illegible] ಜ್ಯೋತಿಶ್ಶಾಸ್ತ್ರಜ್ಞರು [illegible] ಇದನ್ನು ನೋಡಿದ ಅನೇಕರು ಈ ಕ್ಷಾಮವು [illegible] ಪರಿಯುವದಿಲ್ಲವೆಂಬುವದಕ್ಕೆ [illegible] ದೃಷ್ಟಾಂತವೆಂದು ಹೇಳುತ್ತಾರೆ [illegible]

ಕಳೆದ ೧೮ ನೇ [illegible] ನಡೆದ [illegible] ಯಿಂದ ಇಂಡಿಯಾ ದೇಶದಲ್ಲಿ ಇರುವ [illegible] ಸಂಖ್ಯೆಯು ೨೨,೪೦೦೦,೦೦೦ ಎಂದು ಗೊತ್ತು ಮಾಡಲ್ಪಟ್ಟಿದೆ. [illegible] ದ ೧೦ ವರುಷಗಳಿಂದ ೩,೫೧,೦೦,೦೦೦ ಮಂದಿ ಹೆಚ್ಚಿರುತ್ತಾರೆ. ಈ ಒಟ್ಟು ಸಂಖ್ಯೆಯು ಹ್ಯಾಗೆ ಹಿಂದೂಗಳು ೨೦,೭೬,೫೪ [illegible] ಮುಸಲ್ಮಾನರು ೫೭,೩೨೧,೬೪ [illegible] ಕ್ರೈಸ್ತರು [illegible] ಸಿಕ್ಕರು ೧೯,೦೭,೪೨೩ ಮಂ, ಪಾರ್ಸಿಯರು ೫೧,೦೦,೦ [illegible] ಮಂದಿ [illegible] ಜೈನರು [illegible] ಮಂದಿ [illegible] ೪೯,೪೭೭ ಮಂದಿ, ಬೌದ್ಧರು [illegible] ರಾಣಿಯರು [illegible] ಮಂದಿ [illegible] ೨,೦೦,೦೦೦ ಮಂದಿ [illegible] ೧,೦೦,೦೦,೦೦೦ ಮಂದಿಗಳು [illegible]

[illegible] ದಿವಸಗಳ ಹಿಂದೆ [illegible] [illegible]

[illegible] ಬ್ರಿಟಿಷ್ [illegible] [illegible] ಸಾಧಾರಣವಾಗಿ [illegible] ಕೆಲಸ [illegible] [illegible] ನಿಂದ ಇದನ್ನು [illegible] ಕೆಲಸ ನಡೆ ಸುತ್ತೇವೆ. ನಾವು ಹಿಡಿ ಯೋಚನೆಯುಳ್ಳವರಾದು ಹುಟ್ಟು ಬೆಳಸಿದ್ದರವೋ [illegible] ಗೌರ್ನ್ಮೆಂಟಿನವರು ನಾವು ಈ ವಿಷಯದಲ್ಲಿ ಯೋಚಿಸಿ, ಪರಿಹಾರ ಮಾಡಿಕೊಡುತ್ತಿ ನೆಂದು ಪ್ರತ್ಯುತ್ತರ ಕೊಟ್ಟಿರುತ್ತಾರೆ.—ವೃ ಚ.

EXTRACTS

ಬುದ್ಧಿ ವಿಕಲ್ಪ.

(ವೃತ್ತಾಂತ ಚಿಂತಾಮಣಿ)

ಮೈಸೂರು ಸರ್ಕಾರದಲ್ಲಿ ವಿದ್ಯಾವಂತನಾಗಿಯೂ [illegible] ಯೋಗ್ಯತೆಯುಳ್ಳವನಾಗಿಯೂ ಇರುವ ಒಬ್ಬ ಅಧಿಕಾರಿಯು [illegible] ಹೀಗೆ ಬಂದು [illegible] ಅಲ್ಲಿ [illegible] ದಿನಗಳ ಹಾಗೆ [illegible] ಆದ [illegible]

ನೆಯಲ್ಲಿ [illegible] ಎಂತಲೂ ಅವು ಗ್ರಸ್ತನಾಗಿರುವದರಿಂದ ಹೀಗೆ ಆಗಿದೆ ಎಂದು ಜೀವ ಮನೆಗೆ ಬಿಕ್ಕಲು ಹೋದರು ಅಲ್ಲಿರುವಾಗ ಆ ಮನೆಯವಿಗೆ ವ್ಯಾಧಿಯು ವೃದ್ಧಿ ಹೊಂದುತ್ತಾ ಬಂತು. ಆ ಅಧಿಕಾರಿಗಳಿಗೆ ಅವರ ಮೇಲಿನ ಯೋಚನೆಯಿಂದ ಬುದ್ಧಿಯು ವಿಕಲ್ಪವಾಯಿತು. ಹೀಗೆ ಇರುವಾಗ ತಮ್ಮ ಮನೆ [illegible] ಕಡೆಗೆ [illegible] ಹಿಡಿದುಕೊಂಡು ಹೋಗಿ, [illegible] "[illegible]" ಎಂದು [illegible] ಎತ್ತಿ [illegible] "[illegible] ಇಲ್ಲವಾದರೆ [illegible]" ಎಂದು [illegible] ಆದರೆ [illegible]

ಜೋಗ್ಯತೆಗೆ ಕಾಲವಲ್ಲ.

(ವ್ಯಸನಕರ ಸಮಾಚಾರ)

[illegible]

BANGALORE.—Printed and published at the KARNATAKA PRESS No. 10, HOSPITAL ROAD, PETTAH.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರಪ್ರಪಂಚನಗರಮಾರ್ಗಕರ್ಣಾಟಕಪ್ರಕಾಶನಪರಾಪದಾಪ್ರಥಿತಸಾಹಿತೀಶೋಭಿತಾ॥ಮೃಗಾಂಕಹಿತವಾಸರೇನಿಹಿತಮುದ್ರಣಾಸಜ್ಜನೈರ್ದ್ದಿಶಾಸುಪರಿದೃಶ್ಯತಾದಿಶತಿಮಾನಸಂಸಂಮುದಂ॥

Vol. XIX] BANGALORE —MONDAY, APRIAL 11, 1892 [No 15.

ಸಂಪುಟ ೧೯.] ಬೆಂಗಳೂರು —ಸರ್ ೧೮೯೨ನೇ ಇಸವಿ ಏಪ್ರೆಲ್ ೧೧ ನೇ ತಾರೀಖ್ ಸೋಮವಾರ. [ಸಂಚಿಕೆ ೧೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧೯೨	ಸ್ಟ್ಯಾಂಪ್ ಸಹಿತವಾಗಿ ಹಿಂದುಗಡೆ	ಹಿಂದುಗಡೆ ಇಲ್ಲದವರಿಗೆ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರ ಸಾಲು ವರಾಡಿದ ತಾರೀಖ್ ಮೊದಲು ಬಂದು ತಿಂಗಳೊಳಗಾಗಿ ಚಂದಾ ವಿಷಯವನ್ನು ಕಳುಹಿಸುವವರಿಗೆ ಮಾತ್ರ ಅಡ್ವಾನ್ಸ್ ದರವು. ಪತ್ರಿಕೆ ಕಳುಹಿಸುವುದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗೆ ಕಡಮೆಯಾಗಿ ಚಂದಾ ತೊಗೊಳ್ಳುವುದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆಯದಫಾ ಸಾಲಿಗೆ ಒಂದಕ್ಕೆ ೦—೩—೦

ಎರಡನೆಯದಫಾ ಸಾಲಿಗೆ ಒಂದಕ್ಕೆ ೦—೧—೦

[illegible] —ಎರಡಾವರ್ತಿಗಿಂತ ಜಾಸ್ತಿಯಾಗಿ ಪ್ರಕಟಿಸಬೇಕಾದ ನೋಟೀಸ್ ಮೊದಲಾದ್ದಕ್ಕೆ ಹಣ ಒಂದಕ್ಕೆ [illegible] ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ [illegible] ಮಾತುಗಳಿಗೆ ಪ್ರಕಟನೆಗಳು ಕಳುಹಿಸುವವರು ಅದು [illegible] ಸ್ಪಷ್ಟವಾಗಿ [illegible] ವರು ನ [illegible] ಪ್ರಕಟಿಸುತ್ತ [illegible] ಎಷ್ಟು ಆವರ್ತಿ ಪ್ರಕಟಿಸಲ್ಪಡಬೇಕಾಗಿರುವುದು [illegible] ಕಳುಹಿಸಲ್ಪಡದೆ ಪ್ರಕಟನೆಗಳು [illegible] ಪ್ರಕಟನೆಗಳಿಗೆ ಈ ಪತ್ರಿಕೆಗೆ ಕಳುಹಿಸ [illegible] ಯಾವುವೂ ಪ್ರಕಟಿಸಲ್ಪಡುವುದಿಲ್ಲ.

ADVERTISEMENTS

NOTICE

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾಗಿರುವವರು ಮೊಬಲಗು ಸಹಿತ [illegible] ಬರೆದುಕೊಂಡರೆ ಪುಸ್ತಕ ಕೊಡಲ್ಪಡುವುದು [illegible]

ಇದರ ಕ್ರಯ —ಸ್ಟ್ಯಾಂಪ್ ಸಹಿತ ಪ್ರತಿ ಒಂದಕ್ಕೆ ರೂ 5—0—0

[illegible]

ಬೆಂಗಳೂರ್, [illegible] ನಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭವಾದ ದರಗಳಿಗೆ ಶೀಘ್ರವಾಗಿಯೂ ಚೆನ್ನಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತಿವೆ. ಇತರ ಭಾಷೆಗಳನ್ನು ಸದರೀ ಕಂಪೆನಿಯ ಪ್ರೊಪ್ರೈಟರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ವಸ್ತ್ರಗಳು, ಚಿನ್ನ ವಸ್ತ್ರಗಳು, ಛಾಯಾಪಟಗಳು, ಪಟಗಳು, [illegible] [illegible], [illegible], [illegible] ಕಾಗದಗಳು, [illegible] ದಸ್ತಗಳು, [illegible] ಗಡಿಯಾರಗಳು, [illegible], ಆಫೀಸ್ [illegible]ಗಳು, [illegible]ಗಳು, ಅತ್ತರುಗಳು, ಅತ್ಯುತ್ತಮವಾಗಿರುವ [illegible] ಉಂಗುರಗಳು, [illegible] ಪಾತ್ರಗಳು, [illegible] ಪಾತ್ರೆಗಳು, [illegible], [illegible] ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಟಿಕೆಟ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ —ಗಣೇಶ ರಾಮಚಂದ್ರ ಕರ್ಕೆ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್

[illegible], ಪೋಸ್ಟ್ ಆಫೀಸ್, ಮುಂಬೈ

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ವರಸೀಲ್ ತೋರಿಸುವ ರೆಟ್ಟಾ.—

೧೮೯೨ನೇ ಇಸವಿ ಏಪ್ರಿಲ್ ತಾರೀಖ್ ೩ ರವರೆಗಿನ ಮೊದಲು ಏಪ್ರಿಲ್ ೯ ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	92
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	..	37¼
ಗತವಾರದ ಬಾಕಿ ಸೇರು	.	45
ಜುಮ್ಲಾ	..	82¼
ಅಡಿಗೆ ಸಾಮಗ್ರಿಗಳಿಗಾಗಿ ಖರ್ಚಾದ ಸೇರು	..	18¼
ಬಾಕಿ ಉಳಿದ ಅಕ್ಕಿ ಸೇರು	.	19
ಜಾತಾ ಬಾಕಿ	...	45

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

ಅನಾಥರು	...	7
[illegible] ವಿದ್ಯಾರ್ಥಿ	...	4
[illegible] ವಿದ್ಯಾರ್ಥಿಗಳು	..	7
ಕಟ್ಟಿಕೊಡತಕ್ಕ ಅಕ್ಕಿ, ವಾರ ಕಟ್ಟಳೆ ವಿದ್ಯಾರ್ಥಿಸಂಖ್ಯೆ		16
ಪ್ರಯಾಣಸ್ಥರು	...	4
ಜುಮ್ಲಾ	..	38

THE MONEY MARKET.

ಮದರಾಸ್, ಶನಿವಾರ, ತಾರೀಖ್ ೯ನೇ ಏಪ್ರಿಲ್ 1892.

ಸೇಕಡ 4ರೂ ಬಡ್ಡಿಯ ಗವರ್ನಮೆಂಟ್ ಪತ್ರಗಳು, ರೂ [illegible], 106-12-0 ರಿಂದ 107-4-0ರವರೆಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ [illegible] 915 ರಿಂದ [illegible] 920ವರೆಗೆ.

[illegible] ಬ್ಯಾಂಕ್ ಷೇರುಗಳು, (100) [illegible] 170 ರಿಂದ 175 ವರೆಗೆ

ಸವರ್ನಗಳು, 15—10—0

ಬ್ಯಾಂಕುಗಳು [illegible] ದರ, ರೂ ೧ಕ್ಕೆ

6 ತಿಂಗಳ ಮಿಯಾದಿಗೆ, 1s 9 3/2d

ಡಿಟ್ಟೋ 4 ತಿಂಗಳ ಮಿಯಾದಿಗೆ, 1s 3 7/32d

ಡಿಟ್ಟೋ ಕೇಳಿದಾಗ, 1s 3¼d.

Bangalore City Municipality.

ಬೆಂಗಳೂರ್ ಸಿಟಿ ಮ್ಯುನಿಸಿಪಾಲಿಟಿ.

ಇಷ್ತಿಹಾರ್‌ನಾಮೆ.

ಈ ಶಹರ್ ಪಶ್ಚಿಮಭಾಗದಲ್ಲಿ ಮನೆ ನಿವೇಶನಗಳ ವಿಲೇವಾರಿ ವಿಷಯದಲ್ಲಿ ಸರ್ ೧೮೯೨ನೇ ಇಸವಿ ಮಾರ್ಚಿ ೩ನೇ ತಾರೀಖಿನಲ್ಲಿ ಕೊಡಲ್ಪಟ್ಟ ಸಿಟಿ ಮ್ಯುನಿಸಿಪಲ್ ಇಷ್ತಿಹಾರ್ ನಾಮೆಯೊಳು "ವೈಶ್ಯ ಸಮುದಾಯಕ್ಕೆ" ಎಂಬದಕ್ಕೆ ಬದಲು "ನಗರ್ತರು ಸೇರಿ ವೈಶ್ಯ ಸಮುದಾಯಕ್ಕೆ" ಎಂಬದಾಗಿ ಓದಿಕೊಳ್ಳಬೇಕಾದ್ದಲ್ಲದೆ "ಶಿವಾಚಾರ ಸಮುದಾಯಕ್ಕೆ" ಯೆಂಬವರ ತರುವಾಯ ಬರುವ "ನಗರ್ತರು ಸೇರಿ" ಎಂಬ ಮಾತುಗಳನ್ನು ಬಿಟ್ಟುಬಿಡತಕ್ಕದ್ದು.

M. ANNAJI RAO,
For President,
City Municipal Commission

ಬೆಂಗಳೂರು
ಸಿಟಿ ಮ್ಯುನಿಸಿಪಲ್ ಆಫೀಸ್,
ತಾ॥ ೯ನೇ ಏಪ್ರಿಲ್ ೧೮೯೨.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 11, 1892

೧೮೯೨ನೇ ಇಸವಿ ಏಪ್ರಿಲ್ ತಾ॥ ೧೧ ನೇ ಸೋಮವಾರ

A WARNING TO OUR MATADHI-PATIES.

ಪೂರ್ವ ಕಾಲದಲ್ಲಿ ಮತೋದ್ಧಾರಕರೆಂದು ಪ್ರಸಿದ್ಧಿಯಂ ಪಡೆದಿದ್ದವರೆಲ್ಲರು ಒಬ್ಬೊಬ್ಬ ರಾಜರ ವಾಲ್ಲಭ್ಯವಂ ಸಂಪಾದಿಸಿಕೊಂಡು ಅವರ ಪ್ರಾಬಲ್ಯದಿಂ ತಮ್ಮ ಮತವಂ ಪ್ರಚಾರದೊಳು ತಂದರು. ಇದಲ್ಲದೆ ಸ್ವಮತ ನಿರ್ಧಾರಣಕ್ಕಾಗಿ ಪರಮತಗಳಂ ಖಂಡಿಸಿ ಅನ್ಯ ಮತಾವಲಂಬಿಗಳನೇಕರಂ ಸ್ವಮತದಲ್ಲಿ ಸೇರಿಸಿಕೊಂಡು ವೃದ್ಧಿಪಡಿಸಿದರು. ಶ್ರೀ ಬುದ್ಧರು, ಶ್ರೀ ಶಂಕರಾಚಾರ್ಯರವರು, ಶ್ರೀ ರಾಮಾನುಜಾ ಚಾರ್ಯರವರು, ಶ್ರೀ ಮಧ್ವಾಚಾರ್ಯರವರು ಮೊದಲಾದವರೆಲ್ಲರು ದೇಶಾಟನ ಮಾಡಿ ಅಲ್ಲಿದ್ದ ಪ್ರಸಿದ್ಧ ಪಂಡಿತರೊಡನೆ ವಾದಿಸಿ ಜಯಕೇತುಗಳಂ ಪಡೆದು ಪ್ರತಿಷ್ಠೆಯನ್ನೈದಿ ಹಿಂದಿರಿಗಿ ಹೋದಂತೆ ಅನೇಕ ನಿದರ್ಶನಗಳಿಂದ ವ್ಯಕ್ತವಾಗುತಿದೆ. ಮತ ರಕ್ಷಣೆಯ ವಿಷಯದಲ್ಲಿಯೂ, ಸಂಘ ಪರಿಷ್ಕರಣ ವಿಷಯದಲ್ಲಿಯೂ ಈಕಾಲದ ಮಠಾಧಿಪತಿಗಳಿಗಿರುವಷ್ಟರ ಶ್ರದ್ಧೆಯು ಪೂರ್ವಿಕರಿಗಿದ್ದ ಪಕ್ಷಕ್ಕೆ ದ್ವೈತಾದ್ವೈತ ವಿಶಿಷ್ಟಾದ್ವೈತ ಮತಗಳು ಈ ಆರ್ಯಾವರ್ತದಲ್ಲಿ ಉತ್ಪನ್ನಗಳಾಗಿಹೋಗಿ ಬಹಳಕಾಲವಾಗಿರುವದು. ಸದರೀ ಮತಗಳು ಕ್ಷೀಣಿಸುತ ಬರಲಿಕ್ಕೆ ಉತ್ತೇಜಕ ಸಾಮಗ್ರಿಗಳು ಅನೇಕ ಯೇರ್ಪಡುತ ಬರುತಲಿವೆ. ಇವುಗಳ ಪೈಕಿ ಪದಾರ್ಥ ತತ್ವ ವಿವೇಚಕರನೇಕರೇರ್ಪಟ್ಟು ಅವರು ವಾದಿಸಿದಕ್ಕೆ ಸ್ವಭಾವವಾದದಿಂ ಜನಗಳಿಗೆ ಭಕ್ತಿ ವಿಶ್ವಾಸಗಳು ತಪ್ಪಿಹೋಗಿರುವದು ಪ್ರಥಮ ಕಾರಣವು. ಏತನ್ಮತ ವಿರೋಧಿಗಳಾದ ಅನ್ಯ ಮತಸ್ಥರು ಪ್ರಬಲಿಸಿ ಪರಮತ ದೂಷಣ ಪೂರ್ವಕ ಸ್ವಮತ ಪ್ರಶಂಸೆ ಮಾಡಿಕೊಳ್ಳುವಣ್ತು ಯೆರಡನೆಯ ಕಾರಣವು. ಸ್ವಮತ ಸ್ವರೂಪವನು ಚೆನ್ನಾಗಿ ಉಪದೇಶಿಸಿ ಸಂಶಯಂಗಳನ್ನಿರುಹತಕ್ಕ ಗುರುಗಳು ದುರ್ಲಭರಾಗಿ ಹೋಗಿರುವುದು ಮೂರನೆಯ ಕಾರಣವು. ಸ್ವಮತ ವಿಷಯಕವಾದ ಜ್ಞಾನ ಸಂಪಾದನದಲ್ಲಿ ಜನಗಳಿಗೆ ಅಭಿರುಚಿ ಕಡಮೆಯಾಗುತಲಿರುವದು ನಾಲ್ಕನೆಯ ಕಾರಣವು. ಕ್ರಿಸ್ತೀಯರುಗಳು ಅನ್ಯ ಮತಸ್ಥರಂ ಮತಬೋಧನೆ ಮಾಡಿ ಸ್ವಮತದೊಳು ಸೇರಿಸಿಕೊಳ್ಳುತ್ತಾರೆಂದು ಅವರ [illegible] ಕ್ಷೇಪಿಸಿವಾಗ್ಯೂ ಅವರ ಉದ್ದೇಶ ಪ್ರಯತ್ನಗಳು ನೀಚವಾದವೆಂದು ಸುತಿಯಲಾಗದು. ಅನ್ಯ ಮತಸ್ಥರನ್ನು ಸ್ವಮತದಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಅವರು ನಾನಾವಿಧ ಪ್ರಯತ್ನಗಳಂ ಮಾಡುತಲಿದಾರೆ. ಮೊದಲು ಬೋಧಿಸಿ ಮನಸ್ಸನ್ನು ವಿಮೋಚಗೊಳಿಸುತ್ತಾರೆ. ಅದಕ್ಕೆ ಸ್ವಾಧೀನರಾಗದಿದ್ದರೆ ನಾನಾವಿಧ ಪ್ರಲೋಭನೆಗಳನ್ನುಂಟುಮಾಡಿ ಸ್ವಾಧೀನ ಪಡಿಸಿಕೊಳ್ಳುತ್ತಾರೆ. ಇವರು ಮಾಡತಕ್ಕ ಪ್ರಯತ್ನಗಳಲ್ಲಿ ನಮ್ಮವರು ಅರ್ಧವಾದರೂ ಮಾಡಿದಾಗ್ಯೂ ಹಿಂದೂ ಮತವು ಮತ್ತೊಮ್ಮೆ ಸ್ಥಿತಿಯನ್ನೈದಿ ಯಾರಿಂದಲೂ ಚಲಿಸಲ್ಪಡಲಾರದ್ದಾಗಿರುವದಲ್ಲದೆ ಅನ್ಯ ಮತಸ್ಥರ ಸಂಖ್ಯೆಯು ಕುಗ್ಗುತ ಅಧಿಕವಾಗುತ ಬರುವದು. ಈಗಿರುವ ಮಠಗಳನ್ನೇರ್ಪಡಿಸಿ, ಅವುಗಳಿಗೆ ತಮ್ಮ ಶಿಷ್ಯವರ್ಗದಲ್ಲಿ ಯೋಗ್ಯರಾದವರು ನಿಯಮಿಸಿ, ಅವರಿಗೆ ತಮ್ಮ ಶಿಷ್ಯ ಕೋಟಿಯ ಮೇಲೆ ವಿಚಾರಣಾಧಿಕಾರವಂ ಕಲ್ಪಿಸಿದ್ದಕ್ಕೆ ಆದಿ ಪ್ರವರ್ತಕರ ಮುಖ್ಯೋದ್ದೇಶವು ಬೇರೆ ವಿಧವಾದುದಾಗಿರ್ದೇ ಹೊರತು ಈಗಿನ ಮಠಾಧಿಪತಿಗಳು ಭಾವಿಸಿರುವಂತಾದ್ದಲ್ಲವು. ಪೂರ್ವಾಚಾರ್ಯರುಗಳಿಂ ತಮ್ಮಿಂದ ವ್ಯವಸ್ಥಾಪಿತವಾದ ಮಠಗಳು ಸರ್ವವ್ಯಾಪಕವಾಗಿ ವೃದ್ಧಿಯನ್ನೈದಬೇಕೆಂಬ ಕೋರಿಕೆ ಯುಂಟಾಗಿದ್ದದ್ದು ಸ್ವಾಭಾವಿಕವೆಂದು ಖಣವೆಂತರೇಂ ಯೆಣಿಸುತ್ತೇವೆ. ಅಂತಾ ಭಾವನೆಯುಳ್ಳವರಾಗಿದ್ದುದರಿಂದಲೇ ಸ್ವಮತಪ್ರಚಾರಾರ್ಥ ಮಠಾಧಿಪತಿಗಳನ್ನು, ತತ್ಪ್ರಜೆಗಳ ಧರ್ಮ ರಕ್ಷಣಾರ್ಥ ಕೆಲವು ನಿಯಮಗಳನ್ನು, ಅವುಗಳ ವಿಚಾರಣಾರ್ಥ ಆಯಾಸ್ಥಳಗಳಲ್ಲಿ ಮಠಾಧಿಪತಿಗಳಿಗೆ ಪ್ರತ್ಯಾವಸ್ಥೆಯರಾಗಿ ಮಠಮುದ್ರೆಯವರನ್ನು ನಿಯಮಿಸಿದರು. ಪೂರ್ವಿಕರ ಸಾಧ್ಯೋದ್ದೇಶಗಳ ಪ್ರಕಾರ ಹಿಂದಿನ್ನಾದರು ಈಗ ಇರತಕ್ಕವರು ಸರಿಯಾಗಿ ನೆರವೇರಿಸತಕ್ಕದಲ್ಲವು. ನಮ್ಮ ಮಠಾಧಿಪತಿಗಳನೇಕರಿಗೆ ತಮ್ಮ ಆಶ್ರಮ ಧರ್ಮದಲ್ಲಿ ಮಾಡಬೇಕಾದ ಕರ್ತವ್ಯಗಳು ಯಾವುವೆಂದು ಗೊತ್ತಿಲ್ಲದೆ ಹೋಗಿದೆ. ಇವರಿಗೆ ಸ್ವಮತಪ್ರಚಾರದಲ್ಲಿ ದೃಷ್ಟಿಯೇ ಇಲ್ಲವು. ವಿದ್ಯೆಯು ಉಪಪನ್ನರಾಗಿರದಿದ್ದರೆ ಪಡೆತರತಕ್ಕ ತ್ಯಾಗ್ಯಗಳು ಇವರಿಗೆ ಅನಾವಶ್ಯಕವು. ಮತವಿಷಯಕವಾದ ಉಪನ್ಯಾಸವೆಂಬುದು ಪರಮತ ಖಂಡನಾ ಪದವಾದಸ್ವಮತ ಪ್ರಶಂಸೆಯಾಗಿರುತಿದೆ. ಇವರ ದೇಶಾಟನವು ಕೇವಲ ಶಿಷ್ಯವಿತ್ತಾಪಹಾರಕವಾದುದೇ ಹೊರತು ಇವರು ಪರಸ್ಥಳಗಳಿಗೆ ಹೋಗಿ ಸಾಧಿಸಿದ ಅಂಶವು ಕೇವಲ ಅಲ್ಪವಾಗಿರುತಿದೆ. ಉದಾಸೀನರಾದ ಇಂತಾ ಮಠಾಧಿಪತಿಗಳ ಆಶ್ರಯದಲ್ಲಿ ಸೇರಿರತಕ್ಕವರ ಯೋಗ್ಯತೆಯಂ ವಿಚಾರಿಸಿದರೆ ಅವರು ಸದರೀ ಸನ್ಯಾಸಿಗಳಿಗೆ ತಕ್ಕ ಅಂತರಂಗ ಶಿಷ್ಯರಾಗಿಯೇ ಇರುತ್ತಾರೆ. ಆಯಾ ಮಠಗಳಿಗೆ ಪೂರ್ವಾರ್ಜಿತವಾದ, ಆಧಮಾನ

ಕಾಲಿಗಳಾದತಚ್ಛಿಷ್ಯರಿಂದಲೂ ಕೊಡಲ್ಪಟ್ಟಿರುವ ಸ್ಥಿರಚರ ಸ್ವತ್ತುಗಳೆಲ್ಲವೂ ನಿರರ್ಥಕಗಳಾಗಿವಿನಿಯೋಗಿಸಲ್ಪಡುತಿವೆ. ಮಠಾಧಿಪತಿಗಳಿಗೆವರ್ಷಾಶನವು ಕಲ್ಪಿಸಿದ ಕಾಲದಲ್ಲಿ ಅವರು ಉದರಪೋಷಣೆಗಾಗಿ ಶ್ರಮ ಪಡದೆ ತಮ್ಮ ಆಶ್ರಮೋಚಿತ ಧರ್ಮಗಳಂ ಕಾದಾಡುತ ಸ್ವಮತಾಭಿವೃದ್ಧಿಯಲ್ಲಿ ನಿರತರಾಗಿರಬೇಕೆಂಬದೇ ಮುಖ್ಯೋದ್ದೇಶವಾಗಿತ್ತೇ ಹೊರ್ತು ಅಪ್ರಯೋಜಕರನ್ನೂ ಸೋಮಾರಿಗಳನ್ನೂ ಗುಂಪು ಸೇರಿಸಿಕೊಂಡು ಅವರ ಹೊಟ್ಟೆಗೆ ಪೋಷಕವಾಗಿ ಅನ್ನ ಹಾಕಬೇಕೆಂಬದಲ್ಲವು. ಕದಾಚಿತ್ ಮಾರ್ಗವಶಾತ್ ಬರತಕ್ಕ ಅತಿಥಿಗಳನ್ನು ಸತ್ಕರಿಸಬೇಕೆಂಬ ತಾತ್ಪರ್ಯದೊಡನೆ ಸಹಾಯ ಮಾಡಲ್ಪಟ್ಟಿತೇ ಹೊರ್ತು ಮನೆಬಾಗಿಲನ್ನಿಟ್ಟುಕೊಂಡು ಅನಾಯಾಸವಾಗಿ ತಿಂದು ಕಳೆಯುತಿದೆ ಯಲ್ಲಾ ಯೆಂದು ಪಂಚಪಾತ್ರೆಗಳನ್ನು ತೆಗದುಕೊಂಡು ಹೊತ್ತಿಗೆ ಸರಿಯಾಗಿ ಹೋಗುವಸ್ಥಳವಾಸಿಗಳ ಪ್ರಯೋಜನಾರ್ಥವಲ್ಲವು. ದೂರದೇಶಗಳಿಗೆ ಹೋಗಿ ವಿದ್ವತ್ಸಭೆಯಲ್ಲಿ ವಾಕ್ಯಾರ್ಥ ಹೇಳಿ ಅವರು ಜೆಯಿಸಿ ಸ್ವಮತವು ಪ್ರಚಾರಗೊಳಿಸಿ ಬರಬೇಕೆಂಬ ಕುತೂಹಲದೊಡನೆ ಛತ್ರಿ ಪಾಲಕಿ ವಗೈರೆ ಸಾಧನಗಳು ಕಲ್ಪಿಸಲ್ಪಟ್ಟವೆಹೊರ್ತು ಒಬ್ಬರು ದೇವಸ್ಥಾನದ ಮಹದ್ವಾರದಮುಂದೆ ತಮ್ಮ ಯಾನದಿಂದಿಳಿದರೆ ಮತ್ತೊಬ್ಬರು ಗರ್ಭಗೃಹದ ಮುಂದೆಯೆ ಇಳಿಯಬೇಕೆಂದುವಗೈರೆ ನಾನಾವಿಧವಾಗಿ ಸ್ಪರ್ಧಿಸಿ ಕಲಹಿಸಲಿಕ್ಕಲ್ಲವು. ಸನ್ಯಾಸಿಗಳಿಗೆ ಕುಟೀರವು ಅವಶ್ಯಕವಾದುದಾದರೂ ಬಹುಮಂದಿಶಿಷ್ಯರು ಪ್ರತಿನಿತ್ಯವೂ ಅವರ ಬಳಿಗೆಹೋಗಿ ಬ್ರಹ್ಮ ವಿದ್ಯಾಭ್ಯಾಸಗಳಂ ಮಾಡಬೇಕೆಂಬ ತಾತ್ಪರ್ಯದಿಂದವರಿಗೆ ವಿಶಾಲ ರಮಣೀಯವಾದ ಶಿಲಾಮಯಗಳಾದ ಮಠಗಳು ನಿರ್ಮಿಸಿ ಕೊಡಲ್ಪಟ್ಟವೇಹೊರ್ತು ತಮ್ಮ ಪೂರ್ವಾಶ್ರಮ ಬಾಧುಗಳ ನಿಯತವಾಸಕ್ಕಲ್ಲವು. ಮುಖ್ಯವಾಗಿ ಮಠಾಧಿಪತಿಗಳು ತಮಗೆ ಮೇಲ್ವಿಚಾರಣಾ ಕರ್ತರ್‍ಯಾರೂ ಇಲ್ಲವೆಂಬ ಭಾವನೆಯೊಡನೆ ತಮ್ಮ ಇಷ್ಟಾನುಸಾರ ವರ್ತಿಸುತ, ದೇವಸ್ಥಾನಗಳ ಧರ್ಮಕರ್ತರೆಂದು ಹೆಸರಿಟ್ಟುಕೊಂಡಿರುವ ಧನಪಿಶಾಚಗಳು ಆಲಯ ದ್ರವ್ಯವು ಹಾಳುಮಾಡುತಲಿರುವಂತೆಯೇ ಇವರು ಕೂಡ ಮಠದ ದ್ರವ್ಯವನ್ನೆಲ್ಲ ದುರ್ವಿನಿಯೋಗ ಪಡಿಸುತ್ತಾರೆ. ಇದು ಕೇವಲ ಅಕ್ರಮವಾರ್ಗವಾಗಿರುತಿದೆ. ದುಡಧರನಾದ ಅರಸನು, ತನ್ನ ಪ್ರಕೃತಿ ಮಂಡಲಕ್ಕೆಲ್ಲ ರಕ್ಷಕನಾಗಿದ್ದರೂ, ಆತನೊಂದುವೇಳೆ ದುರ್ಮಾರ್ಗಪ್ರವರ್ತಕನಾದರೆ ಆತನು ರಾಜ್ಯ ಕೋಶಗಳೊಡನೆ ತ್ಯಾಗ ನಾಶನನ್ನೈದುವನೋ ತದ್ವತ್ ಶಿಷ್ಯರಕ್ಷಕನಾದ ಗುರುವು ಅವಿವೇಕಿಯಾದರೆ ಆತನು ಖಂಡಿಸಲಿಕ್ಕೆ ಶಿಷ್ಯರಿಗೆ ಸ್ವಾತಂತ್ರ್ಯವಿಲ್ಲದೆ ಹೋಗಲಿಲ್ಲವು. ಆದುದರಿಂದ ತತ್ಕಾಲದಲ್ಲಿ ಧರ್ಮದಾಯ ದೇವಾದಾಯಗಳ ಸ್ಥಿತಿ ಗತಿಗಳಂ ಕ್ರಮಪಡಿಸಿ ವ್ಯವಸ್ಥೆ ಮಾಡಬೇಕೆಂಬ ಶ್ರದ್ಧೆಯೂ ಆವಶ್ಯಕತೆಯೂ ಗವರ್ಣಮೆಂಟನವರಿಗುಂಟಾಗಿರುವವರಿಂದ ಅವರು ಮಠಾಧಿಪತಿಗಳಿಗೆ ಕರ್ತವ್ಯವಾಗಿರುವ ಯಾವದಾದರೊಂದು ವ್ಯಾಪಾರವು ನಿಯಮಿಸಬೇಕಾದದು ಆವಶ್ಯಕವಾಗಿರುತಿದೆ. ಹ್ಯಾಗಂದರೆ, ಕೆಲವು ದಿವಸಗಳ ಹಿಂದೆ ಶ್ರೀ ಶೃಂಗೇರಿ ಸ್ವಾಮಿಗಳವರು, ಮಡಿಕೇರಿಯಲ್ಲಿರುವ ಒಂದು ದೇವಸ್ಥಾನದಲ್ಲಿ ಬಹುಜನ ಹಿಂದೂಗಳನ್ನು ಬರಮಾಡಿಕೊಂಡು ಅವರಿಗೆಲ್ಲ ಸಮರ್ಥಕವಾಗಿರುವಂತೆ ಜಾತಿ ಮತಾಚಾರಗಳ ರಕ್ಷಣೆಯು ಕೇವಲ ಉಪಾದೇಯ ವಾದುದೆಂಬ ವಿಷಯವಂ ಕುರಿತು ಶ್ಲಾಘ್ಯವಾಗಿ ಉಪನ್ಯಾಸವಮಾಡಿ ಅವರವರ ಕರ್ಮ ಸ್ವರೂಪವನ್ನು ನಿರ್ಧರಿಸಿ ತಿಳಿಸಿದರೆಂದು ಕೇಳಲಿಕ್ಕೆ ಬಹಳ ಸಂತೋಷಿಸುತ್ತೇವೆ. ಈಗಿನ ವ್ಯತ್ಯಸ್ತಾವಸ್ಥೆಯಲ್ಲಿ ಆಚಾರ್ಯರವರು ಶಿಷ್ಯಾನುಗ್ರಹಾರ್ಥ ಮಾಡಿದ ಕಾರ್ಯವು ಬಹಳ ಕೊಂಡಾಡತಕ್ಕದ್ದಾಗಿಯೂ ಅವರ ಆಶ್ರಮ ಧರ್ಮೋಚಿತವಾದುದಾಗಿಯೂ ಇರುತಿದೆ. ಶ್ರೀ ಸ್ವಾಮಿಗಳವರು ವರ್ಣಾಶ್ರಮ ಧರ್ಮಗಳನ್ನೂ, ಕರ್ಮಜ್ಞಾನ ಸ್ವರೂಪವನ್ನೂ, ಶ್ರೀಮತ ಸಿದ್ಧಾಂತರೀತ್ಯಾ ಮೋಕ್ಷಸ್ವರೂಪವನ್ನೂ ಮೋಕ್ಷಸಾಧನೋಪಾಯವನ್ನೂ ಚೆನ್ನಾಗಿ ಉಪಪಾದನಮಾಡಿ, ಆಯಾಮತಾವಲಂಬಿಗಳು ತಾವು ಪಡೆದ ಗುರು[illegible]ಕವಂತೆ ವರ್ತಿಸಿ ಪುನರಾವರ್ತಿ ರಹಿತವಾದ ಸರ್ವೋನ್ನತ ಸ್ಥಿತಿಯನ್ನೈದಬೇಕೆಂದು ಆಜ್ಞಾಪಿಸಿದರು. ಈ ಅಭಿಪ್ರಾಯವು ನಿರಾಕ್ಷೇಪಣೀಯವಾದುದಾಗಿಯೂ ಸರ್ವಸಮ್ಮತವಾದುದಾಗಿಯೂ ಇರುತಿದೆ. ಇಂತಾ ಕಾರ್ಯಗಳು ಈಗ ಬಹಳ ಆವಶ್ಯಕವಾಗಿರುತಿವೆ. ಇತರ ಮಠಾಧಿಪತಿಗಳುಸಹ ಇವರಂತೆ ಆಗಿಂದಾಗ್ಯೆ ಮಾಡಿಸಿದರೆ ಯೋಗ್ಯವಾಗಿರುವದು. ಮಿಷನೆರಿಗಳು, ತಮ್ಮ ಬೋಧನಾ ಬಲದಿಂ ಯೆಷ್ಟೋಮಂದಿಯನ್ನು ಸ್ವಮತದಲ್ಲಿ ಸೇರಿಸಿಕೊಳ್ಳುತ್ತಾರೆಯೋ ಅವರ ಸುವ್ಯಾಖ್ಯಾನುಗುಣವಾಗಿ ಪ್ರಯೋಜನಗಳು ಹೆಚ್ಚಿಸಲ್ಪಡುವವೆಂಬ ಸದರೀಯವರಲ್ಲಿರುವ ನಿಯಮವು ನಮ್ಮಲ್ಲಿಯೂ ಇರುವದಾದರೆ ನಮ್ಮ ಮಠಾಧಿಪತಿಗಳು ಈಗಿನಂತೆ ಶಿಷ್ಯರ ಪಾದಪ್ರಾಪ್ತ್ಯೇಕಪರರಾಗಿರಲಾರರು. ಅದಿಲ್ಲದೆ ಹೋದುದರಿಂದಲೇ ಗುರು ಶಿಷ್ಯರ ಯೋಗಕ್ಷೇಮವು ಪರಸ್ಪರವಿಲ್ಲದೆ ಹೋಯಿತು. ಈಗಲು ಪ್ರತಿ ಮಠಾಧಿಪತಿಯೂ ತಮ್ಮ ಆಸ್ಥಾನದಲ್ಲಿರುವ ಪಂಡಿತರ ಸಹಾಯದೊಡನೆ ವಾರಕ್ಕೊಂದಾವರ್ತಿ ಜಾತಿ ಮತಧರ್ಮಾಚಾರಗಳನ್ನೂ ವೇದಾಂತವಿಷಯಗಳನ್ನೂ ಸುಬೋಧನ್ಯವಾಗಿ ಯೆಲ್ಲರಿಗೂ ತಿಳಿಯುವಂತೆ ಉಪನ್ಯಾಸ ಮಾಡತಕ್ಕದ್ದು ಅಪೇಕ್ಷಿತವಾಗಿರುತಿದೆ. ಅಂತಾ ಉಪನ್ಯಾಸವು ಸಾಧ್ಯವಾದ ಮಟ್ಟಿಗೆ ದೇಶಭಾಷೆಯಲ್ಲಿರತಕ್ಕದ್ದು. ಪ್ರತಿಸಂವತ್ಸರಾಂತದಲ್ಲಿಯೂ ಮಠದ ಆದಾಯ ವ್ಯಯಗಳನ್ನು ತೋರಿಸುವ ಒಂದು ಲೆಕ್ಕದೊಡನೆ ಆಸಂವತ್ಸರದಲ್ಲಿ ಧರ್ಮಸಭೆಗಳು ಇಷ್ಟು ಸಲ ಸೇರಿದ್ದಂತೆಯೂ, ಅದು ಕೇಳುವದಕ್ಕಾಗಿ ಇಷ್ಟುಜನ ಬಂದಿದ್ದರೆಂತಲೂ, ಸದರೀ ಸಭೆಯಿಂದ ಪ್ರಕೃತಿಮಂಡಲಕ್ಕೆ ಇಷ್ಟರ ಪ್ರಯೋಜನ ವುಂಟಾಯಿತೆಂತಲೂ, ಮಠಾಧಿಪತಿಗಳ ಸ್ವಂತ ಮೊಹರೊಡನೆ ತನಿಖೆಯಬಗ್ಯೆ ಧರ್ಮಾದಾಯ ವಿಚಾರಣಕರ್ತರಾದ ಮುಜರಾಯಿ ಸೂಪರಿಂಟೆಂಡೆಂಟರ ಬಳಿಗೆ ಕಳುಹಿಸಬೇಕೆಂಬ ಒಂದು ನಿರ್ಬಂಧ ವುಂಟುಮಾಡಲ್ಪಡುವ ಪಕ್ಷಕ್ಕೆ ಮಠದ ಸ್ವತ್ತು ಸಾರ್ಥಕವಾಗಿ ವಿನಿಯೋಗಿಸಲ್ಪಡಲಿಕ್ಕೂ ಮಠಾಧಿಪತಿಗಳಿಂದ ಶಿಷ್ಯಮಂಡಲಿಗೊಂದು ಪ್ರಯೋಜನ ವುಂಟಾಗಲಿಕ್ಕೂ, ಯತಿಗಳ ಚಿತ್ತವೃತ್ತಿಯು ವಿಷಯಾಂತರವ್ಯಾಪೃತವಾಗದಿರಲಿಕ್ಕೂ, ಲೀನವಾಗುತಲಿರುವ ಜಾತಿ ಮತ ಧರ್ಮಗಳು ಆತ್ಯಂತಿಕವಾಗಿ ನಾಶವಾಗದಿರಲಿಕ್ಕೂ ಕಾರಣವಾಗಿರುವುದು. ಸ್ವರೂಪತಃ ಈ ಸಲಹೆಯು, ಮಠಗಳಿಂದ ಪ್ರಯೋಜನವು ಹೊಂದಿ ಸುಖಪಡುತಲಿರುವವರಿಗೆಲ್ಲ ಬಹಳ ದಾರುಣವಾಗಿ ತೋರಬಹುದು. ಮತ್ತು ಮಠಾಧಿಪತಿಗಳ ಗೌರವಕ್ಕೆ ಹಾನಿ ಯೆಂದು ಸಹ ಅವರು ಭಾವಿಸಬಹುದು. ಅವರ ಕ್ಷೇಮಚಿಂತಕರಾದ ವಿವೇಕಿಗಳು ಹಾಗೆ ಯೆಂದಿಗೂ ಯೆಣಿಸಲಾರರು. ಈ ವಿಷಯದಲ್ಲಿ ತಕ್ಕ ಯೇರ್ಪಾಡುಗಳಂ ಮಾಡಬೇಕಾಗಿರುವ ಆವಶ್ಯಕತೆಯನ್ನು ಮುಜರಾಯಿ ಸೂಪರಿಂಟೆಂಡೆಂಟರವರು ಗವರ್ಣಮೆಂಟನವರ ಅವಧಾನಕ್ಕೆ ತರುವರೆಂದು ನಂಬುತ್ತೇವೆ.

"KARNATAKA KAVYAMANJARI."

ಮೈಸೂರು ರಾಜಧಾನಿಯಲ್ಲಿರುವ ಕರ್ಣಾಟಭಾಷಾಪ್ರವೀಣರಾದ ಕೆಲವರು ಪಂಡಿತರ ಸಹಾಯದಿಂ, ನಾನಾವಿಧ ಪ್ರಾಚೀನ ಗ್ರಂಥಗಳ ಸಂಗ್ರಹರೂಪವಾದ ಕರ್ಣಾಟ ಕಾವ್ಯಮಂಜರಿ ಎಂಬ ಒಂದು ಮಾಸ ಪತ್ರಿಕೆಯು ಈ ತಿಂಗಳ ಮೊದಲು ಪ್ರಾರಂಭಿಸಿ ಮುದ್ರಿಸಲ್ಪಡುತಲಿದೆ. ಈ ಪತ್ರಿಕೆಯ ಪ್ರಯೋಜನೋದ್ದೇಶಗಳಂ ಕುರಿತು ಇದರ ಪ್ರಥಮಪ್ರವರ್ತಕರು ಈಗ್ಯೆ ಕೆಲವುದಿವಸಗಳ ಹಿಂದೆ ಪ್ರಕಟಿಸಿದ್ದ ಪ್ರಕಟನ ಪತ್ರಿಕೆಯಲ್ಲಿ ವಿಶೇಷತಃ ತಿಳಿಸಿರುತ್ತಾರೆ. ಸದರೀ ಪ್ರಕಟನೆಯಂ ನಾವು ನೋಡಿದ ಕಾಲದಲ್ಲಿ ಅವರ ಉದ್ದೇಶವಂ ಕೊಂಡಾಡಿ ಶ್ರಮಸಾಧ್ಯವಾದ ಅವರ ಪ್ರಯತ್ನವಂ ಕಾರ್ಯತಃ ನೋಡಬೇಕೆಂಬ ಕುತೂಹಲವುಳ್ಳವರಾಗಿದ್ದೆವು. ಅದಕ್ಕೆ ತಕ್ಕಂತೆಯೇ ಈ ವಾರದಲ್ಲಿ ಸದರೀ ಪತ್ರಿಕಾಧಿಪರು ಕೃಪೆಯೊಡನೆ ಕಳುಹಿಸಿದ ಅದರ ಪ್ರಥಮಸಂಚಿಕೆಯಂ ಉತ್ಸಾಹದೊಡನೆ ಸ್ವೀಕರಿಸಿ ಆಮೂಲಾಗ್ರ ಓದಿ ನೋಡಿದೆವು. ಈ ಸಂಚಿಕೆಯಲ್ಲಿ ಪ್ರತ್ಯೇಕ ಪುಟ ಸಂಖ್ಯೆಗಳೊಡನೆ ಐದು ವಿಧ ವಿಷಯಗಳು ಪ್ರಕಟಿಸಲ್ಪಟ್ಟಿರುತಿವೆ. ಅವುಗಳ್ಯಾವವೆಂದರೆ,—ಅಲಂಕಾರ ವಿಷಯದಲ್ಲಿ ತಿರುಮಲಾರ್ಯರೆಂಬವರು ವಿರಚಿಸಿದ ಅಪ್ರತಿಮ ವೀರ ಚರಿತವೆಂಬ ಗ್ರಂಥವು ಮೊದಲನೆಯದು. ಸಿಂಗರಾರ್ಯರೆಂಬವರು ರಚಿಸಿದ ಮಿತ್ರಗೋವಿಂದವೆಂಬ ಕರ್ಣಾಟಕ ನಾಟಕವು ಎರಡನೆಯದು. ಆಂಡಯ್ಯನೆಂಬ ಜೈನಕವಿವಿರಚಿತವಾದ ಕಬ್ಬಿಗರಕಾವವೆಂಬ ಚಂಪುಪ್ರಬಂಧವುಮೂರನೆಯದು. ಕವಿರಾಜಹಂಸರಾಜಕೃತವಾದ ರತ್ನಾಕರಾಧೀಶ್ವರಶತಕವೆಂಬ ಬಂದುಶತಕವು ನಾಲ್ಕನೆಯದು. ಶ್ರೀ ಚಿಕ್ಕದೇವ ಮಹಾರಾಜರ ಸಂಚಯ ಹೊನ್ನಮ್ಮನ ಹದಿಬದೆಯ ಧರ್ಮವೆಂಬ ಸಾಂಗತ್ಯವು ಐದನೆಯದು. ಪ್ರಾಯಶಃ ಮೇಲೆ ಕಂಡ ಗ್ರಂಥಗಳೆಲ್ಲವು ಪುರಾತನವಾದವಾಗಿಯೂ ಕರ್ಣಾಟಕಭಾಷಾಜ್ಞಾನ ಸಂಪಾದನಾಭಿಲಾಷಿಗಳಿಗೆ ಪ್ರಯೋಜನಕರವಾದವಾಗಿಯೂ, ಶುದ್ಧ ಪಂಡಿತರಾದವರಿಗೆ ಮಾತ್ರವೇ ಲಭ್ಯವಾಗತಕ್ಕವಾಗಿಯೂ ಇರುತಿವೆ. ಈಗ ಮುದ್ರಿಸಲ್ಪಟ್ಟಿರುವ ಗ್ರಂಥಗಳು ಪ್ರಕೃತ ಸ್ಥಿತಿಯಲ್ಲಿ ಪಂಡಿತರಿಗೆ ವಿನಾ ಇತರರಿಗೆ ಪ್ರಯೋಜನಕರವಲ್ಲವಿವೆ. "ಸಜನ್ಯೋಷು ಚಪಂಡಿತಃ" ಎಂಬಂತೆ ಸಾವಿರದಲ್ಲೊಬ್ಬನು ಇದು ಪುರಸ್ಕರಿಸಿ ಪ್ರೋತ್ಸಾಹಪಡಿಸತಕ್ಕ ಪಂಡಿತನಿದ್ದಾಗ್ಯೂ ಅಂತವನ ಅಲ್ಪಸಹಾಯವು ಏತತ್ಪತ್ರಿಕಾಧಿಪರ ಉದ್ದೇಶ ಪೂರ್ತಿಗೆ ಸಹಕಾರಿಯಾಗಲಾರದು. ಪ್ರೋತ್ಸಾಹ ವಿಹೀನತೆಯೇ ಪ್ರಯತ್ನಭಂಗಕ್ಕೆ ಮುಖ್ಯ ಕಾರಣವಾದುದರಿಂದ ಉದ್ದಿಷ್ಟ ಪ್ರಯತ್ನವು ನಿರ್ವಿಘ್ನವಾಗಿ ನೆರವೇರುವಷ್ಟರ ಸಹಾಯ ಸಂಪತ್ತಿಯುಂಟಾಗಬೇಕೆಂದು ಕೋರುತ್ತೇವೆ. ಇದಕ್ಕೆ ವಿಶೇಷ ಪ್ರೋತ್ಸಾಹವೂ ದ್ರವ್ಯಾನುಕೂಲ್ಯವೂ ಉಂಟಾಗಬೇಕಾದರೆ ಸದರೀ ಕಾವ್ಯಮಂಜರಿಯ ಪ್ರಯೋಜನವಂ ಪಂಡಿತೇತರರಿಗೆ ಸಹ ವ್ಯಾಪಿಸುವಂತೆ ಮಾಡಬೇಕಾದುದು ಚಿತವಾಗಿರುತಿದೆ. ಈ ಗ್ರಂಥಗಳು ಟೀಕೆಯೊಡನೆ ಕೂಡಲೆ ಪ್ರಕಟಿಸಲ್ಪಟ್ಟದ್ದರೆ ಅವು ಓದತಕ್ಕವರಿಗೆ ಉಲ್ಲಾಸಕರವಾಗಿಯೂ ಸಹಾಯಕರವಾಗಿಯೂ ಇರುವವು. ಹಾಗಿಲ್ಲದೆ ಕಾಲನಿರೀಕ್ಷಣೆಯಂ ಮಾಡಿ ಅವುಗಳ ಟೀಕೆಯು ಕ್ಯೆಗೆ ಬಂದಮೇಲೆ ಪುಸ್ತಕವು ಬಿಚ್ಚಿ ನೋಡುವದಕ್ಕೆ ಈಗ ಚಂದಾ ಮಾಡಬೇಕಾದ ಆವಶ್ಯಕತೆ ಯೇನೆಂದು ಯಾರಾದರು ಆಕ್ಷೇಪಿಸಬಹುದು. ಮತ್ತು ಅಂತವರಿಗೆ ಸದ್ಯಃ ಅದರಿಂದಾವ ಪ್ರಯೋಜನವೂ ಸಿದ್ಧಿಸದೆ ಹೋಗುತಿದೆ. ಆದುದರಿಂದ ಸದಾರು ಗ್ರಂಥಗಳನ್ನೇಕ ಕಾಲದಲ್ಲಿ ಪ್ರಾರಂಭಿಸಿ ಒಂದಕ್ಕೂ ಬೇಕಾದ ಅವಕಾಶವಿಲ್ಲದಂತೆ ಮಾಡಿಕೊಳ್ಳುವದಕ್ಕಿಂತಲೂ ಟೀಕೆಯೊಡನೆ ಎರಡು ಗ್ರಂಥಗಳಿಗೆ ವಿಹಾರವಂತೆ ಕ್ರಮವಾಗಿ ಪ್ರಕಟಿಸುತ ಬಂದರೆ ಅದರಿಂದ ಓದತಕ್ಕವರಿಗೆ ಸಾಧ್ಯಸ್ಯವಾದ ಪ್ರಯೋಜನ ವುಂಟಾಗುವುದು. ಇದಲ್ಲದೆ ಇದಕ್ಕೆ ನಿಷ್ಕರ್ಷಿಸಲ್ಪಟ್ಟ ಮಾಗಿರುವ ಚಂದಾ ಮೊಬಲಗು (೮—೪—೦) ರೂಪಾಯಿಗಳು ಬಹಳ ಅಧಿಕವಾಗಿಯೂ ರಿಕ್ತರಿಗೆ ಅಸಾಧ್ಯವಾದುದಾಗಿಯೂ ಇರುತಿದೆ. ಒಂದುವೇಳೆ ಪಂಡಿತರ ಪರಿಶ್ರಮಕ್ಕೆ ತಕ್ಕ ಪ್ರತಿಫಲವನ್ನುಂಟುಮಾಡಬೇಕೆಂಬ ಕೋರಿಕೆಯೊಡನೆ ಅಧಿಕ ಮೌಲ್ಯ ಇಡಲ್ಪಟ್ಟಿರಬಹುದು. ಅದರಿಂದವರಿಗೇನೂ ಲಾಭ ವುಂಟಾಗಲಾರದು. ಈ ವಿಷಯಗಳಂ ಶ್ರೀಮಾನ್ ತಿರುಮಲಾಚಾರ್ಯರೂ, ಅನಂತಾಚಾರ್ಯರೂ ಆಲೋಚಿಸಿ ತಕ್ಕ ಏರ್ಪಾಡುಗಳಂ ಮಾಡುವಪಕ್ಷಕ್ಕೆ ಅದರ ಉಪಯುಕ್ತತೆಯು ಕೂಡಲೇ ವ್ಯಕ್ತವಾಗಬಹುದು. ಇದುವರಿವಿಗೆ ಪ್ರಕಟಿಸಲ್ಪಟ್ಟಿರುವ ಗ್ರಂಥಗಳನ್ನು ನೋಡಲಾಗಿ, ಬಹಳ ಶ್ರಮಪಟ್ಟು ಸಾಧ್ಯವಾದ ಮಟ್ಟಿಗೆ ಪರಿಶೋಧಿಸಿ ಮುದ್ರಿಸಿರುವಂತೆ ವ್ಯಕ್ತವಾಗುತಿದೆ. ಆದಾಗ್ಯೂ ಕೆಲವು ಪ್ರಕರಣಗಳಲ್ಲಿ ಅಶುದ್ಧಗಳು ಹ್ಯಾಗೋ ಪ್ರವಿಷ್ಟವಾಗಿರುತಿವೆ. ಅವುಗಳಿಗೆ ಪಂಡಿತರು ಬಹುಶಃ ಲಕ್ಷ್ಯಕೊಡದಿರಲಾರರು. ಮುಖ್ಯವಾಗಿ ಪ್ರಸಕ್ತ ಮಾಸಪತ್ರಿಕೆಯು ಸರ್ವವಿಷಯದಿಂದಲೂ ಪರಿಗ್ರಾಹ್ಯವಾಗಿಯೂ ಶ್ಲಾಘನೀಯವಾಗಿಯೂ ಇರುತಿದೆ. ಪತ್ರಿಕಾಧಿಪರು ವಾಗ್ದಾನಮಾಡಿರುವ ಟೀಕೆಯನ್ನು ಇದರೊಡನೆ ಪ್ರಕಟಿಸುವ ಪಕ್ಷಕ್ಕೆ ವಿದ್ಯಾರ್ಥಿಗಳಿಗೆ ಬಹಳ ಉಪಯುಕ್ತವಾದುದಾಗಿರುವುದು. ಯೆಡ್ಯುಕೇಷನ್ ಸೆಕ್ರೆಟರಿಯವರು ಅವರ ಕೆಲವು ಪ್ರತಿಗಳನ್ನು ತೆಗದು ತಾಲ್ಲೂಕ್ ಸ್ಕೂಲ್‌ಗಳಿಗೆ ವಿನಿಯೋಗಿಸಿದರೆ ಅಲ್ಲಿನ ಬಾಲಕರಿಗೆ ಜ್ಞಾನಾಭಿವೃದ್ಧಿಗೆ ಅವಕಾಶವುಂಟುಮಾಡಿದಂತಾಗುವದು. ಯೂನಿವರ್ಸಿಟಿ ಪರೀಕ್ಷೆಗಳ ಕನ್ನಡ ಭಾಗಕ್ಕೆ ಇಡಬಹುದಾದ ಗ್ರಂಥಗಳು ಕೆಲವು ಇದರಲ್ಲಿರುವದರಿಂದ ಸಿಂಡಿಕೇಟಿಗಳವರು ಚುನಾಯಿಸಿದುವದಾದರೆ ಸದರೀ ಪರೀಕ್ಷೆಗಳಿಗೆ ಯೋಗತಕ್ಕ ಉಮೇದ್ವಾರರಿಗೂ ಸದರೀ ಮಾಸಪತ್ರಿಕೆಯು ಉಪಯುಕ್ತವಾಗಿರುವುದುದೆಂದುನಿಃಶಂಕವಾಗಿಹೇಳುತ್ತೇವೆ.

THE LATE Mr. [illegible] W. HAYES.

ಈಗ್ಯೆ ಮೂವತ್ತು ನಲವತ್ತು ಸಂವತ್ಸರಗಳಕಾಲಕ್ಕಿಂತ ಮೇಲ್ಪಟ್ಟು, ಈ ದೇಶಗಳಲ್ಲಿಯೂ, ಅನ್ಯ ದೇಶಗಳಲ್ಲಿಯೂ ಬಹುಮಂದಿಗೆ ಪರಿಚಿತರಾಗಿ ಪ್ರಸಿದ್ಧಿಯಂ ಪಡೆದಿದ್ದ ಮಿ|| ಜೆ. ದಬ್ಳ್ಯು. ಹೇಜ್ ಯವರು ಈಚೆಗೆ ಸುಮಾರು ೧೫ ದಿನಗಳ ಮೊದಲು ಕಾಹಿಲೆಯಾಗಿದ್ದು ಗತ ಶುಕ್ರವಾರದದಿನ ಸಾಯಂಕಾಲ ೫ ಘಂಟೆಗೆ ಕಾಲಗತಿಯನ್ನೈದಿದರೆಂಬ ವೃತ್ತಾಂತವು ಕೇಳಲಿಕ್ಕೆ ವಿಷಾದಿಸುತ್ತೇವೆ. ಮಿ|| ಹೇಜ್ ಯವರು ಈ ದೇಶದಲ್ಲೇ ಜನಿಸಿ ಇಲ್ಲಿಯೇ ವೃತರಾಗಿದ್ದರಿಂದ ಇವರ ಯಾವತ್ಕಾಲವನ್ನೂ ಮೈಸೂರ್ ದೇಶದಲ್ಲಿಯೇ ಕಳೆದದಂತಾಯಿತಾಗಿ ಇವರು ಸ್ವದೇಶೀಯರೆಂತಲೇ ಭಾವಿಸಬೇಕು. ಇವರು ಸೀಬ್ ಚೀಫ್ ಕಮಿಷನರ್ ಸರ್ ಮಾರ್ಕ ಕಬ್ಬನ್ ಸಾಹೇಬರವರ ಕಾಲದಲ್ಲಿ ಅಭಿವೃದ್ಧಿಗೆ ಬಂದರು. ಆಗ ಇವರಿಗಿದ್ದವಾಲ್ಲಭ್ಯದಿಂದ ೧೮೫೯ ನೇ ಇಸವಿಯಲ್ಲಿ ಮಧುರೆಜಿಲ್ಲಾ ಡೆಪ್ಯುಟಿ ಕಲೆಕ್ಟರಾಗಿ ಹೋದರು. ತರುವಾಯ ಕೆಲವು ಕಾಲದಮೇಲೆ ಅನಂತರ ಇಲ್ಲಿಗೆ ವಾಪಸ್ ಬಂದರು. ಇವರ ಸಂಬಂಧವು ಯಾವದಾದರೊಂದು ವಿಧವಾಗಿ ಈ ದೇಶೀಯರಿಗೆ ನಿಯತವಾಗಿರುತಲಿತ್ತು. ಇವರ ಪ್ರಾಶಸ್ತ್ಯವು ಒಂದೊಂದು ಕಾಲದಲ್ಲಿ ಒಂದೊಂದು ರೂಪವಾಗಿತ್ತು. ಈ ಪ್ರಾಂತ್ಯದಲ್ಲಿರುವ ಅನೇಕ ಕಂಪನಿಗಳಿಗೆ ಮುಂಬರಾಗಿಯೂ, ಒಂದೆರಡು ವೃತ್ತಾಂತ ಪತ್ರಿಕಾಧಿಪರಾಗಿಯೂ, ನಾಲ್ಕೈದು ವರುಷಗಳಕಾಲ ಮ್ಯುನಿಸಿಪಲ್ ಕಮಿಷನರಾಗಿಯೂ, ಇದ್ದು ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಈ ಸಂಸ್ಥಾನದ ಆದಳಿತಕ್ಕೆ ಸಂಬಂಧಿಸಿದ ಕೆಲವು ಕಾಗದ ಪತ್ರಗಳು ಮಿ|| ಹೇಜ್ ಯವರ ವಶದಲ್ಲಿರುವಂತೆಯೂ, ಅವು ಅವರು ಜೀವಿಸಿದ್ದಾಗ ಪ್ರಕಟಿಸಿದ್ದರೆ ಅವು ಓದತಕ್ಕವರಿಗೆ ಉಲ್ಲಾಸಕರವಾಗಿ ಅನೇಕ ವಿಷಯಗಳು ಹೊರಗಾಗಿರುವವೆಂತಲೂ ಅವರ ರೀತಿಮಾಡದೆ ಗತಿಸಿದ್ದರಿಂದ ಅವರೊಡನೆ ಅವು ಸಹ ನಾಶವಾಗುವ ಕಾಲ ಪ್ರಾಪ್ತವಾದಬಗ್ಯೆ ನಿಷಾದಿಸುತ್ತೇವೆಂತಲೂ ಒಳದೇಶದ ಈವಿನಿಂಗ್ ಮೆಯಿಲ್ ಪತ್ರಿಕೆಯು ತಿಳಿಸುತಿದೆ. ಇವರು ಮೈಸೂರ್ ರಾಜ್ಯತಂತ್ರ ವಿಷಯದಲ್ಲಿ ಬಹಳ ಸಂಬಂಧಿಸಿದ್ದಂತೆ ಯಾವ ದಾಖಲೆಯಿಂದಲೂ ಏರ್ಪಡಲಿಲ್ಲವು. ಪರಂತು ಇವರ ತಂದೆಗಳು ಸಾಬ್ ಮಹಾರಾಜರವರಲ್ಲಿ ಪಡೆದಿದ್ದ ಪಸೀಲೆಯ ಬಲದಿಂದ ಇವರಿಗೂ ಅರಮನೆಯಲ್ಲಿ ಯಥೋಚಿತ ಪ್ರಾಭವವುಂಟಾಗಿದ್ದಂತೆ ಸ್ಪಷ್ಟವಾಗುತಿದೆ. ಒಂದುವೇಳೆ ಹಾಗೆ ಸಂಸ್ಥಾನಕ್ಕೆ ಸಂಬಂಧಿಸಿದ ಕಾಗದ ಪತ್ರಗಳಿರುವದು ನಿಜವಾಗಿರುವ ಪಕ್ಷಕ್ಕೆ ಅವುಗಳೇ ಮಿ|| ಹೇಜ್ ಯವರ ಸಂಪತ್ಪ್ರಾಭವಗಳಿಗೆ ಕಾರಣವಾಗಿರುವವೆಂದೆಣಿಸುತ್ತೇವೆ. ಇವರ ಸಾಮರ್ಥ್ಯವು ಅತ್ಯದ್ಭುತವಾದದ್ದು. ಇವರ ಆಕರ್ಷಣೆಗೆ ಸ್ವಾಧೀನರಾಗದಿದ್ದವರೊಬ್ಬರ

ನನ್ನು ಕಾಣೆವು. ಇವರು ಬಹಳ ತಂತ್ರಜ್ಞರಾದ ಕಾರ್ಯವಾದಿಯಾಗಿದ್ದದರಿಂದಲೇ ಇವರೆಲ್ಲರ ಪ್ರಭುತ್ವದಲ್ಲಿಯೂ ಪ್ರಾಶಸ್ತ್ಯವಂ ಪಡೆದಿದ್ದರು. ಇವರಿಗೂ ಗವರ್ನಮೆಂಟಿನವರಿಗೂ ನೆರೆಗೊಂಡಿದ್ದ ಪರಿಚಯ ಸ್ನೇಹಸಂಬಂಧಕ್ಕೆ ನಿದರ್ಶನವಾಗಿ ಅವರು ನಡೆಸುತಲಿರುವ ಇಂಗ್ಲಿಷ್ ಪತ್ರಿಕೆಗೆ ಸಾಲೀಯಾನಾ ೨,೦೦೦ ರೂಪಾಯಿಗಳು ಪ್ರಕಾರಾಂತರದಿಂ ಇವರಿಗೆ ಕೊಡಲ್ಪಡುತಲಿದೆ. ಇವರಿಗೆ ಕನ್ನಡ, ಅರವ, ತೆಲುಗು, ದಖನಿ ಭಾಷೆಗಳು ಚೆನ್ನಾಗಿ ಬರುತಿದ್ದವು. ಈಗ ಇವರಿಗೆ ೬೮ ವರುಷಗಳು ೬ ತಿಂಗಳ ವಯಸ್ಸಾಗಿರುತಿದೆ. ಏತನ್ಮಧ್ಯೆ ಎರಡಾವರ್ತಿ ವಿವಾಹ ಮಾಡಿಕೊಂಡರೆಂತಲೂ, ಎರಡನೆಯ ಭಾರ್ಯೆಗೆ ಸಂಬಂಧಿಸಿದ ಜೀವದಿಗ ಸರಬದಳೆಮಟ್ಟಿಗೆ ಇವರ ಸ್ವಾಧೀನವಾಯಿತೆಂತಲೂ, ಇವರಿಗೆ ಪ್ರಬುದ್ಧರಾದ ನಾಲ್ವರು ಪುತ್ರರೂ, ನಾಲ್ವರು ಪುತ್ರಿಯರೂ, ಐವತ್ತು ಜನ ಮೊಮ್ಮಕ್ಕಳೂ, ಐದು ಜನ ಮರಿಮಕ್ಕಳೂ ಅದ್ಯಾಪಿ ಜೀವಿಸಿದ್ದಾರೆಂತಲೂ ಸ್ಟೇಟ್ಸ್ ಪತ್ರಿಕಾ ಮೂಲಕ ಕೇಳಲಿಕ್ಕೆ ಸಂತೋಷಿಸುತ್ತೇವೆ, ಪವುತು ಮೊಮ್ಮಕ್ಕಳ ಸಂಖ್ಯೆಯು ಮಾತ್ರ ಅತಿಶಯೋಕ್ತಿಯಾಗಿರಬಹುದೆಂದೆಣಿಸುತ್ತೇವೆ. ಮೊನ್ನೆಯ ದಿನ ಸಾಯಂಕಾಲ ೫ ಘಂಟೆಗೆ ಹುಸೂರ್ ರೋಡ್ ಸಿಮಿಟ್ರಿಯಲ್ಲಿ ಇವರ ದಹನ ಕ್ರಿಯೆಗಳು ನಡೆದವು. ಅವು ಫ್ರೀಮೇಸನ್ನರ ಮತ್ತು ಮಿಲಿಟರಿ ಮರ್ಯಾದೆಗಳನ್ನನುಸರಿಸಿದ್ದವು. ಮ|| ಜೇಜ್ ಯವರು ಫ್ರೀಮೇಸನಾಗಿದ್ದದರಿಂದಲೂ, ಬೆಂಗಳೂರ್ ರೈಫಲ್ ವಾಲಂಟಿಯರ್ ಫೋರ್ಸ್‌ನಲ್ಲಿ ಮೇಜರ್ ಪಟ್ಟ ಆನರರಿ ಹೇ ಪ್ಯಾಸ್ಟರಾಗಿದ್ದದರಿಂದಲೂ, ಎರಡು ವಿಧ ಮರ್ಯಾದೆಗಳಿಗೂ ಅರ್ಹರಾಗಿದ್ದರು. ಊಟಿ ನಿವಾಸಿಗಳಲ್ಲಿ ಬಹಳ ದಿಳಬರಾದ ಮತ್ತು ಅನುಭವ ಶಾಲಿಯಾಗಿದ್ದವರು ಕಣ್ಣು ಮರೆಯಾಗಿ ಹೋದದ್ದು ಎಲ್ಲರಿಗೂ ದುಃಖಿಸತಕ್ಕ ವಿಷಯವಾಗಿರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

The Madras High Court.—ಬೇಸಿಗೆಯಬಗ್ಗೆ ಮದರಾಸ್ ಹೈಕೋರ್ಟ್ ಬರುವ ಮೇ ತಿಂಗಳ ೯ ನೇ ತಾರೀಖ್ ಮೊದಲು ಜೂನ್ ೧೬ ನೇ ತಾರೀಖ್ ವರಿವಿಗೆ ಮುಚ್ಚಲ್ಪಡುತ್ತದೆ.

Bengalee girls to the front.—ಕಲ್ಕತ್ತೆಯೊಳಗಿರುವ ಮುಖ್ಯಗಳಾದ ನೇಟಿವ್ ಬಾಲಿಕಾ ಪಾಠಶಾಲೆಗಳ ವಿದ್ಯಾರ್ಥಿನೀಯರ ಪೈಕಿ ಏಳುಮಂದಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೂ, ಆರುಮಂದಿ ಎಫ್. ಎ. ಪರೀಕ್ಷೆಗೂ, ಮೂವರು ಬಿ. ಎ. ಪರೀಕ್ಷೆಗೂ ಈಸಲ ಹೋಗಿರುತ್ತಾರೆಂದು ತಿಳಿಯಬರುತಿದೆ.

False personation.—ಈಚೆಗೆ ಅಲಿಪುರ ಪ್ರಾಂತದಲ್ಲಿ ಮ್ಯೂನಿಸಿಪಲ್ ಕಮಿಷನರುಗಳ ಚುನಾವಣೆ ಕಾಲದೊಳು ಮೂವರು ಬಾಬುಗಳು ತಾವು ಅಭಿಪ್ರಾಯ ಕೊಡುವದಕ್ಕೆ ಲಾಯಖಾದ ಜನರಿಗೆ ಸೇರಿದವರೆಂದು ಹೇಳಿಕೊಂಡು ಮೋಸಕೃತ್ಯ ನಡೆಸಿದಬಗ್ಗೆ ಮ್ಯೂನಿಸಿಪಾಲಿಟಿಯವರು ಪೊಲೀಸ್ ಕೋರ್ಟಿನಲ್ಲಿ ಅವರ ಮೇಲೆ ಫಿರ್ಯಾದ್ ಮಾಡಲು ಅವರ ವಿಚಾರಣೆಯ ಬಗ್ಗೆ ಸಮ್ಮನ್ ಹುಟ್ಟಿರುತಿದೆ.

A benevolent act.—ಕಲ್ಕತ್ತೆಯೊಳು ಧರ್ಮಾಢ್ಯ ಸತ್ಪುರುಷರಾದ ಹಿಂದೂ ದೊಡ್ಡಮನುಷ್ಯರು ಕೆಲವರು ಸೇರಿ ಒಟ್ಟಾಗಿ ಅಕ್ಕಿಯಂ ಕೊಂಡುಕೊಂಡು ಬಡವರಾದವರಿಗೆ ಸುಲಭ ಕ್ರಯಕ್ಕೆ ಚಿಲ್ಲರೆಯಾಗಿ ಮಾರಿದರೆ ಈಗಿನ ಕಾಲದಲ್ಲಿ ಅವರಿಗೆ ಬಹಳ ಅನುಕೂಲವಾಗಿರುವದೆಂದು ಯೋಚಿಸಿ ತಮ್ಮೊಳಗೆ ತಾವು ಚಂದಾಮೂಲಕ ಹಣವನ್ನು ಜಮಾಯಿಸುತಲಿದ್ದಾರೆಂದು ಕೇಳುವದಕ್ಕೆ ಸಂತೋಷಿಸುತ್ತೇವೆ.

Retirement of the Viceroy.—ಇಂಡ್ಯಾ ರಾಜ್ಯದ ವೈಸ್‌ರಾಯ್‌ಯವರಾದ ಲಾರ್ಡ್‌ಲ್ಯಾನ್ಸ್‌ಡೌನ್ ಸಾಹೇಬರವರು ಬರುವ ಡಿಸೆಂಬರ್ ತಿಂಗಳಲ್ಲಿ ಸ್ವದೇಶಕ್ಕೆ ಪ್ರಯಾಣ ಮಾಡುವರೆಂತಲೂ, ಆ ಕಾಲಕ್ಕೆ ಅವರು ನಾಲ್ಕು ವರ್ಷಗಳ ಕಾಲ ವೈಸ್‌ರಾಯ್ ಪದವಿಯಲ್ಲಿದ್ದಂತೆ ಆಗುವದೆಂತಲೂ, ಇದೇ ಉದ್ದೇಶದಿಂದಲೇ ಅವರ ಪ್ರೈವೇಟ್ ಸೆಕ್ರೆಟರಿಯವರಾದ ಕರ್ನಲ್ ಆರ್ಡಗ್ ಎಂಬವರು ಇಂಡಿಯಾ ಆಫೀಸಿನಲ್ಲಿ ಕೆಲವು ಏರ್ಪಾಡುಗಳು ಮಾಡುವದಕ್ಕಾಗಿ ಇಂಗ್ಲೆಂಡಿಗೆ ಕಳುಹಿಸಲ್ಪಟ್ಟರೆಂತಲೂ ಪರಶ್ಚ ಎಂಬ ಪತ್ರಿಕೆ ತಿಳಿಸುತಿದೆ.

Loss by fire.—ಆಚೇ ವಾರದಲ್ಲಿ ಬರ್ಮಾ ದೇಶದ ರಾಜಧಾನಿಯಾದ ಮಾಂಡಲೆ ಯೆಂಬ ಪಟ್ಟಣದೊಳು ಪ್ರಾಪ್ತವಾದ ಅಗ್ನಿಪ್ರವೇಶದಿಂ ಒಬ್ಬರ ಅಂದಾಜ್ ಪ್ರಕಾರ ಒಂದುಕೋಟಿ ರೂಪಾಯಿಗಳು ನಷ್ಟವಾದಂತೆ ತಿಳಿಯಬರುತಿದೆ. ಥಿಬಾ ದೊರೆ ಅರಸರ ಕಾಲದಲ್ಲಿ ೧೫ ಲಕ್ಷ ರೂಪಾಯಿಗಳ ವ್ಯಯದಿಂ ಕಟ್ಟಲ್ಪಟ್ಟ ಒಂದು ದೇವಸ್ಥಾನವು ಬೆಂಕಿಗೆ ಆಹುತಿಯಾಯಿತು. ಇನ್ನು ಯೇನೇನು ಹೋಯಿತೊ ಮುಂದೆ ವ್ಯವಸ್ಥೆಯಾಗಬೇಕಾಗಿದೆ. ದೇಶದ ಅರಸರೇ ದೇಶಭ್ರಷ್ಟರಾಗಿ ಹೋಗಿರುವಲ್ಲಿ ಇತರ ನಷ್ಟಗಳ ಬಗ್ಗೆ ಚಿಂತಿಸಬೇಕೆ.

The successors of Lord Lansdowne and Lord Roberts.—ಇಂಡ್ಯಾರಾಜ್ಯದ ಪ್ರಕೃತ ವೈಸ್‌ರಾಯ್ ಯವರಾದ ಲಾರ್ಡ್‌ಲ್ಯಾನ್ಸ್‌ಡೌನ್ ಯವರೂ, ಇಂಡ್ಯಾರಾಜ್ಯದ ಕಮಾಂಡರ್ ಇನ್‌ಚೀಫರವರಾದ ಲಾರ್ಡ್‌ರಾಬರ್ಟ್ಸ್ ಯವರೂ ತಮ್ಮ ಅಧಿಕಾರ ಪದಗಳಂ ಬಿಡುವಲ್ಲಿ ವೈಸ್‌ರಾಯ್ ಪದವಿಗೆ ಲಾರ್ಡ್ ಜಾರ್ಜ್ ಹಾಮಿಲ್ಟನ್ ಯವರೂ, ಕಮಾಂಡರ್ ಇನ್‌ಚೀಫ್ ಕೆಲಸಕ್ಕೆ ಡ್ಯೂಕಾಫ್ ಕನಾಟಿಯವರೂ ನಿಯಮಿಸಲ್ಪಡುವರೆಂದು ಇಂಗ್ಲೆಂಡಿನಲ್ಲಿ ಪ್ರಸ್ತಾಪಿಸಲ್ಪಡುತಲಿರುವದಾಗಿ ಇಂಡಿಯನ್ ಡೆಯಿಲೀ ನ್ಯೂಸ್ ಎಂಬ ಪತ್ರಿಕೆಗೆ ಲಂಡನ್‌ನಗರದಲ್ಲಿ ಲಂಡನ್ ಪಟ್ಟಣದಿಂದ ಒಬ್ಬ ಬಾತಮೀದಾರನು ಬರೆಯುತ್ತಾನೆ.

The Bangabasi and English education.—ಈಗ ಪ್ರಾಪ್ತವಾಗಿರುವ ಜಲ ಮತ್ತು ಧಾನ್ಯಗಳ ದೌರ್ಲಭ್ಯವನ್ನು ಕುರಿತು ಕಲ್ಕತ್ತೆಯೊಳು ಪ್ರಕಟಿಸಲ್ಪಡುವ ಬಂಗವಾಸಿಯೆಂಬ ಪತ್ರಿಕೆ ಅಭಿಪ್ರಾಯ ಪಡುವದೇನಂದರೆ:—ಇಂಗ್ಲಿಷ್ ವಿದ್ಯಾಭ್ಯಾಸದ ಫಲ ಮತ್ತು ಉದ್ದೇಶವು ಬಾಲಕರಿಗೆ ಅನ್ಯಥಾ ಜ್ಞಾನವನ್ನುಂಟುಮಾಡತಕ್ಕದ್ದಾಗಿದೆ. ದೇಶದೊಳು ಹಿಂದೂಗಳಿಗೆ ಈಗ ಜಲಕ್ಷಾಮ ಪ್ರಾಪ್ತವಾದಕ್ಕೂ, ತನ್ಮೂಲಕವಾದ ಕೆಡುಕುಗಳಿಗೂ ಈಗ ಆಚರಣೆಯೊಳಿರುವ ಇಂಗ್ಲಿಷ್ ವಿದ್ಯಾಭ್ಯಾಸದ ಕ್ರಮವೇ ಕಾರಣವೆಂಬದು ನಿಸ್ಸಂಶಯವಾದ ವಿಷಯವು, ಎಂಬದು. ಈ ಲೇಖಕರು ತಿಳಿಸಿರುವ ಕಾರ್ಯ ಕಾರಣಗಳು, ಷೇಕ್ಸ್‌ಪಿಯರ್ ಸಾಹೇಬರಿಗೂ ಗೋಕಲಾಷ್ಟಮಿಗೂ ಯೆಷ್ಟು ಸಂಬಂಧವಿರುತಿದೆಯೋ ಅಷ್ಟು ಸಂಬಂಧ ಪ್ರಂಪಾದವಾಗಿರುತಿದೆ.

Encouragement to Sanskrt learning.—ಸಂಸ್ಕೃತ ಭಾಷೆಗೆ ಪ್ರೋತ್ಸಾಹನದಂತಿರುವ ನವ್ಯೇಪದದಲ್ಲಿನ ಪಾಠಶಾಲೆಗಳ ಅಭಿವೃದ್ಧಿ ವಿಷಯದಲ್ಲಿ ಗವರ್ನಮೆಂಟಿನವರು ಮಾಡಲು ಯೋಚಿಸಿರುವ ಸಹಾಯವೇನೆಂದರೆ:—

ಸದರೀ ಪಾಠಶಾಲೆಯ ವಿದ್ಯಾರ್ಥಿಗಳಿಗೆ ಮಾಹೆಯಾನಾ ಕೊಡಲ್ಪಡುತ ಬರುವ ವೇತನವಲ್ಲದೆ ಇದರಡಿ ತಿಳಿಸಲ್ಪಡುವ ಏರ್ಪಾಡುಗಳು ಮಾಡಲ್ಪಡತಕ್ಕವು:—

೧. ಸನ್ ೧೮೯೩—೯೪ ನೇ ಇಸವಿಯಲ್ಲಿ ೩,೭೦೦ ರೂಪಾಯಿಗಳು ಪಾಠಶಾಲೆಗೆ ಸಹಾಯದ್ರವ್ಯ ಕೊಡಲ್ಪಡುವವು.

೨. ಸನ್ ೧೮೯೪—೯೫ ನೇ ಇಸವಿಯಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕಾಗಿ ೩,೧೦೦ ರೂಪಾಯಿಗಳು ವ್ಯಯ ಮಾಡಲ್ಪಡುವವು. ಈ ಮೊಬಲಗು ಪೈಕಿ ೯,೬೦೦ ರೂಪಾಯಿಗಳು ಪರೀಕ್ಷೆಗೆ ಹೋಗುವಂತವರ ವೇತನದ ಬಗ್ಗೆ ಕೊಡಲ್ಪಡುವವು.

೩. ಸನ್ ೧೮೯೫—೯೬ ನೇ ಇಸವಿಯಲ್ಲಿ ಒಬ್ಬೇ ಕಾರ್ಯದ ಬಗ್ಗೆ ೧೩,೬೦೦ ರೂಪಾಯಿಗಳು ವ್ಯಯ ಮಾಡಲ್ಪಡುವವು.

೪. ಸನ್ ೧೮೯೬—೯೭ ನೇ ಇಸವಿಯಲ್ಲಿ ಅದೇ ಉದ್ದೇಶಕ್ಕಾಗಿ ೧೯,೦೦೦ ರೂಪಾಯಿಗಳು ವಿನಿಯೋಗಿಸಲ್ಪಡುವವು.

ಚಂದಾದಾರರಿಗೆ.

ಇದರಿಂದ ಪ್ರಕಟಪಡಿಸುವದೇನಂದರೆ:—

ಈ ಸಂವತ್ಸರದಲ್ಲಿ ಇದುವರಿವಿಗೆ ಮೂರು ತಿಂಗಳು ಕಳೆದು ನಾಲ್ಕನೆಯ ತಿಂಗಳು ನಡೆಯುತಲಿದೆಯಾಗಿ ಇನ್ನೂ ನಾವಕಾಶ ಮಾಡದೆ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಮೊಬಲಗನ್ನು ಕೂಡಲೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

೮—೪—೯೩. ಪ್ರೊಪ್ರೈಟರ್.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕ್‌ಜಾತ್‌ವೃತ್ತಾಂತಗಳು.

The new Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾಗಿ ನೇಮಕರಾಮ್ಮಿಡಲ್ಪಟ್ಟ ಕರ್ನಲ್ ಹೆಂಡರಸನ್ ಸಾಹೇಬರವರು ಕಳೆದ ಮಂಗಳವಾರದ ದಿನ ಸಿಂಲಾನಿಂದ ಹೊರಟರಾಗಿ ಇನ್ನು ಎರಡು ಮೂರು ದಿನಗಳೊಳಗಾಗಿ ಇಲ್ಲಿಗೆ ಬಂದು ಸೇರಿ ತಮ್ಮ ಹೊಸಕೆಲಸದ ಚಾರ್ಜನ್ನು ವಹಿಸಬಹುದೆಂದು ಕಾಣುತಿದೆ.

The Dewan.—ಗತವಾರದಲ್ಲಿ ಇಲ್ಲಿನ ದಿವಾನರಾದ ಮ|| ಕೆ. ಶೇಷಾದ್ರಿಅಯ್ಯರವರು ಮೈಸೂರಿಗೆ ಪ್ರಯಾಣ ಮಾಡಿದರು. ಬರುವ ಬುಧವಾರದದಿನ ಶ್ರೀಮನ್ಮಹಾರಾಜರವರು ನೀಲಗಿರಿಗೆ ದಯಮಾಡಿದ ತರುವಾಯ ೧೫ ನೇ ತಾರೀಖ್ ಶುಕ್ರವಾರದದಿನ ದಿವಾನರವರು ಇಲ್ಲಿಗೆ ವಾಪಸ್ ಬರುವರೆಂದು ಕೇಳುತ್ತೇವೆ.

Increase of pay.—ಈ ಸಂಸ್ಥಾನದಲ್ಲಿ ಪುರಾತನ ಶಾಸನಾನ್ವೇಷಣ ಕಾರ್ಯಕ್ಕಾಗಿ ಏರ್ಪಟ್ಟಿರುವ ಇಲಾಖಾ ಡೈರೆಕ್ಟರಾದ ಮ|| ಎಲ್. ರೈಸ್ ಸಿ. ಐ. ಇ. ಯವರ ಸಂಬಳನ್ನು ಶ್ರೀಮನ್ಮಹಾರಾಜಾ ಸರ್ಕಾರದವರು ೧೫೦ ರೂಪಾಯಿಗಳಿಗೆ ಬಡ್ತೀ ಮಾಡಿದಂತೆ ಕೇಳಿ ಸಂತೋಷಿಸುತ್ತೇವೆ.

The Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಸರ್‌ಹಾರಿ ಪ್ರಿಡೆಕ್ಸ್ ಸಾಹೇಬರವರು ತಮ್ಮ ಅಧಿಕಾರವಂ ಬಿಟ್ಟು ಸ್ವದೇಶ ಗಮನೋದ್ಯುಕ್ತರಾಗಿರುವದರಿಂದ, ತತ್ಪೂರ್ವ ಶ್ರೀಮನ್ಮಹಾರಾಜರವರ ದರ್ಶನವಂ ಮಾಡಿಕೊಂಡು ಬರಬೇಕೆಂಬ ಉದ್ದೇಶದೊಡನೆ ಸಂಸಾರ ಸಮೇತರಾಗಿ ಕಳೆದಸೋಮವಾರದದಿನ ಮೈಸೂರಿಗೆ ಹೋಗಿದ್ದು ಬೃಹಸ್ಪತಿವಾರದದಿನ ಸಾಯಂಕಾಲ ಇಲ್ಲಿಗೆ ವಾಪಸ್ ಬಂದು ಸೇರಿದರು. ಈ ಸಾಹೇಬರವರು ಈ ತಿಂಗಳ ೧೬ ನೇ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜನ್ನೊಪ್ಪಿಸಿ ಕೂಡಲೇ ಸ್ವದೇಶಕ್ಕೆ ಪ್ರಯಾಣ ಬೆಳಸುವರೆಂದು ಕೇಳುತ್ತೇವೆ.

The weather.—ಈಚೆಗೆ ಎರಡುಮೂರು ದಿನಗಳ ಮೊದಲು ಪ್ರತಿದಿನದಲ್ಲೂ ಮಧ್ಯಾಹ್ನಾತ್ಪರ ಮೇಘಮುಸುಕಿ ಸಿಡಿಲು ಮಿಂಚುಗಳೊಡನೆ ವರ್ಷಕ್ಕೆ ಪ್ರಾರಂಭವಾಗಿ ಯಥಾಶಕ್ತಿ ಸುಹಮಾಸವೆಂಬ ರೀತ್ಯಾ ಕೆಲವು ಹನಿಗಳು ಬೀಳುತಲಿವೆ. ನಿನ್ನೆಯದಿನ ಮಧ್ಯಾಹ್ನಾತ್ಪರ ಸುಮಾರು ಎರಡು ಘಂಟೆಗೆ ಮೇಘಮುಚ್ಚಿ ವರ್ಷಕ್ಕೆ ಪ್ರಾರಂಭವಾಗಿ, ಅನೇಕಲ್ಲು ಬಿದ್ದು ಬೀದಿಗಳೆಲ್ಲವು ತುಂಬಿಹೋದವು. ವರ್ಷವಾದರೂ ಬೀದಿಗೆ ನೀರುಚೆಲ್ಲಿದಂತೆ ಧೂಳು ಅಣಗುವದಕ್ಕೆ ಸಾಕಾದಷ್ಟು ಬತ್ತು. ವರ್ಷಸೂಚನೆಗಳಲ್ಲಿ ಕೊರತೆಯಿಲ್ಲವು. ವರ್ಷಾಭಾವದಿಂದುಂಟಾಗತಕ್ಕ ಫಲಾನುಭವಕ್ಕೆ ಗುರಿಯಾದವರು ಭಾರೀ ಸಂಬಳಗಳುಳ್ಳ ಅಧಿಕಾರಗಳು ವಿನಾ ಇತರ ಜನಗಳಾದವರಿಂದ ಯೆಲ್ಲವು ಅವರ ಕರ್ಮಾನುಗುಣವಾಗಿ ನಡೆಯುವದು. ಇತರ ವಿಷಯಗಳು ಹಿಂದಿನವಾರದಲ್ಲಿ ತಿಳಿಸಿದಂತೆ ಯೇಕರೂಪವಾಗಿವೆ. ಈ ಪ್ರಾಂತದಲ್ಲಿ ಈಗ ಜ್ವರರೋಗ ಪ್ರಬಲಿಸಿ ಸಾಧಾರಣ ಪ್ರತಿ ಮನೆಯಲ್ಲೂ ಒಬ್ಬರಿಬ್ಬರು ಮಲಗಿದ್ದಾರೆ

THE MYSORE GAZETTE.
ಮೈಸೂರು ಗೆಜೆಟ.

ಶ್ರೀಮನ್ ಮಹಾರಾಜ ರಾಜಶ್ರಾಯೆ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಶ್ತಿಹಾರ್‌ನಾಮೆಗಳು.

ನಂ. ೪೯೬, ತಾ|| ೩೦ ಮಾರ್ಚ್ ೧೮೯೩.—ಶ್ರೀಮನ್ಮಹಾರಾಜಾ ಸರ್ಕಾರದಲ್ಲಿ ನೌಕರಿಯಲ್ಲಿದ್ದ ಕ್ಯಾಪ್ಟನ್ ಆರ್. ಜಿ. ಜೋನ್ಸ್ ಯವರನ್ನು ಬ್ರಿಟಿಷ್ ಗವರ್ನಮೆಂಟಿನಲ್ಲಿರುವ ಅವರ ಸ್ವಂತ ಕೆಲಸದೊಡನೆ ದರ್ಬಾರ್‌ನವರ ಸುಪರ್ದಿಗೊಪ್ಪಿಸಿರುವದರಿಂದ ಶ್ರೀಮನ್ಮಹಾರಾಜರವರು ಸದರೀಯವರನ್ನು ಮೈಸೂರ್ ಸೇನೆಯ ಕಮಾಂಡೆಂಟರಾಗಿಯೂ, ತಮ್ಮ ಮಿಲಿಟರಿ ಸೆಕ್ರೆಟರಿಯಾಗಿಯೂ, ಅಮೃತಮಹಲ್ ಇಲಾಖೆಯ ಚೀಫ್ ಆಫೀಸರ್ ಇನ್‌ಚಾರ್ಜ್ ಆಗಿಯೂ ನೇಮಿಸಿರುತ್ತಾರೆ. ಮೇಜರ್ ಪಿ. ಹೆಚ್. ಮ್ಯಾಕಿಂಟೈರ್ ಯವರು ರಜಾ ಮೇಲೆ ಫರ್ಲೋ ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವದುತನಕ ಆಕ್ಟಿಂಗ್ ತರೀಕ್ ನೇಮಕರಾಮ್ಮಿಡಿರುತ್ತಾರೆ. ಮೇಜರ್ ಮ್ಯಾಕಿಂಟೈರ್ ಯವರು ಮಿಲಿಟರಿ ಸೆಕ್ರೆಟರಿ ಆಫೀಸ್ ಮತ್ತು ಅಮೃತಮಹಲ್ ಇಲಾಖಾ ಚಾರ್ಜನ್ನು ೧೮೯೩ ನೇ ಇಸವಿ ಜನವರಿ ೨೦ ನೇ ತಾರೀಖು ಅಪರಾಹ್ನದಲ್ಲಿ ಕ್ಯಾಪ್ಟನ್ ಜೋನ್ಸ್ ಯವರಿಗೊಪ್ಪಿಸಿರುತ್ತಾರೆ.

ನಂ. ೪೯೭, ತಾ|| ೩೧ನೇ ಮಾರ್ಚ್ ೧೮೯೩.—ಮ|| ಎಂ. ಜಿ. ಕೃಷ್ಣಮೂರ್ತಿ ಅಯ್ಯಂಗಾರ್ಯವರು ೧೮೯೩ ನೇ ಇಸವಿ ಮಾರ್ಚ್ ೨೦ ನೇ ತಾರೀಖು ಪೂರ್ವಾಹ್ನದಲ್ಲಿ ಮೈಸೂರ್ ಡಿಸ್ಟ್ರಿಕ್ಟ್ ಯೆಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರ್ ಕೆಲಸದಲ್ಲಿ ಪ್ರವೇಶಿಸಿರುತ್ತಾರೆ.

ನಂ. ೪೯೮.—ಸನ್ ೧೮೭೭ ನೇ ಇಸವಿಯ ಮೂರನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ೬ ನೇ ಸೆಕ್ಷನ್ ಅನುಸರಿಸಿ ಮೈಸೂರ್ ಶ್ರೀಮನ್ಮಹಾರಾಜಾ ಸರ್ಕಾರದವರು ಕಡೂರ್ ಡಿಸ್ಟ್ರಿಕ್ಟ್ ಆಫೀಸ್ ರಿಜಿಸ್ಟ್ರೇಷನ್ ಹೆಡ್ ಕ್ಲರ್ಕ್ ಎಂ. ನರಸಿಂಹಯ್ಯನವರು ಹಂಗಾಮಿ ತರೀಕ್ ಚಿಕ್ಕಮಗಳೂರ್ ಸ್ಪೆಷಿಯಲ್ ಸಬ್ ರಿಜಿಸ್ಟ್ರಾರಾಗಿ, ೧೮೯೩ ನೇ ಇಸವಿ ಏಪ್ರಿಲ್ ಗುರ್ರೇ ಲಾಗಾಯಿತು ನೇಮಕರಾಮ್ಮಿಡಲ್ಪಟ್ಟಿರುತ್ತಾರೆ.

ನಂ. ೧, ತಾ|| ೧ನೇ ಏಪ್ರಿಲ್, ೧೮೯೩.—ತುಮಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಬಿ. ಶ್ರೀನಿವಾಸ ರಾಯರವರು ಕಳೆದ ತಿಂಗಳ ೧೨ ನೇ ತಾರೀಖ್ ಪೂರ್ವಾಹ್ನದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಸ್ಪೆಷಿಯಲ್ ಡ್ಯೂಟಿಬಗ್ಗೆ ಹಾಜರಾದಂತೆ ರಿಪೋರ್ಟ್ ಮಾಡಿರುತ್ತಾರೆ.

ನಂ. ೨.—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಸಾಗರದ ಆಕ್ಟಿಂಗ್ ಮುನ್ಸಿಫ್ ಮ|| ಶಿವಪ್ರಕಾಶಂ ಪಿಳ್ಳೆಯವರಿಗೆ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ. ೩, ತಾ|| ೩ನೇ ಏಪ್ರಿಲ್ ೧೮೯೩.—ಮೈಸೂರ್ ಆರ್ಕಿಯೊಲಾಜಿಕಲ್ ರೀಸರ್ಚಸ್ ಅಂದರೆ ಪುರಾತನ ಶಾಸನಾನ್ವೇಷಣ ವಿಚಾರಣ ಕರ್ತರಾದ ಮ|| ಬಿ. ಎಲ್. ರೈಸ್ ಸಿ. ಐ. ಇ. ಯವರಿಗೆ ಬರುವ ಮೇ ತಿಂಗಳ ೪ನೇ ತಾರೀಖು ಮೊದಲು ಅಥವಾ ಅದರ ತರುವಾಯ ಅವರುಪಯೋಗಿಸಿಕೊಳ್ಳಬಹುದಾದ ತಾರೀಖ್ ಮೊದಲು ಇಂಡ್ಯಾ ದೇಶವಂ ಬಿಟ್ಟು ಅನ್ಯತ್ರ ಹೋಗುವ ಬಗ್ಗೆ ೩ ತಿಂಗಳಕಾಲ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತಿದೆ.

ನಂ. ೪.—ಹೊಳೇ ನರಸೀಪುರ ಮುನ್ಸಿಫ್ ಮ|| ಎನ್. ಚೆಲುವಯ್ಯಂಗಾರ್ ಬಿ. ಎ. ಬಿ. ಎಲ್ ಯವರಿಗೆ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ. ೫.—ಸನ್ ೧೮೯೨ ನೇ ಇಸವಿ ಫೆಬ್ರವರಿ ೫ನೇ ಮಹರ್ ೩೧೯೬-೩೧-ಸರ್ಕ್ಯುಲರ್ ೨೦ ನೇ ನಂಬರ್ ಪ್ರೊಸೀಡಿಂಗ್ಸಿನ ನಿಯಮಪ್ರಕಾರ ಮಂಡ್ಯ ತಾಲ್ಲೂಕ್ ಅಮಲ್‌ದಾರ್ ರಾಜಾ ಮೊದಲಿಯಾರ್ಯವರಿಗೆ ೧೮೯೩ನೇ ಇಸವಿ ಮಾರ್ಚ್ ೧೬ ನೇ ತಾರೀಖ್ ಲಾಗಾಯಿತು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೬, ತಾ|| ೮ನೇ ಏಪ್ರಿಲ್ ೧೮೯೨.—ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟಿನ ನಿಯಮಗಳನ್ನನುಸರಿಸಿ ಕೊಡಲ್ಪಟ್ಟ ೧೮೯೨ನೇ ಇಸವಿ ಮಾರ್ಚಿ ೧೮ನೇ ಮಾರ್ಚಿ ೮೨೨ನೇ ನಂಬರ್ ಗವರ್ನಮೆಂಟ ಇನ್ಸ್ಟ್ರಕ್ಷನ್ನಿನಲ್ಲಿ "ಡಿಸ್ಟ್ರಿಕ್ಟ್ ಟ್ರಜರಿ ಚಾರ್ಜನ್ನು ವಹಿಸಿರುವ ಅಥವಾ ಇತರ" ಎಂಬ ಮಾತುಗಳಿಗೂ "ಅಸಿಸ್ಟೆಂಟ್ ಕಮಿಷನರುಗಳನ್ನು" ಎಂಬ ಮಾತುಗಳಿಗೂ ಮಧ್ಯೆ "ಅಥವಾ ಇತರ ಆಫೀಸರುಗಳನ್ನು" ಎಂಬ ಮಾತುಗಳು ಸೇರಿಸಲ್ಪಡತಕ್ಕದ್ದೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಅಜ್ಞಾಪಿಸಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಜರ್ಮನಿ ಯುದ್ಧದ ಮಾಸಾಯನು ದಕ್ಷಿಣಾಯನ ಪ್ರಾರಂಭದಲ್ಲಿ ಮಳೆಯಿಲ್ಲವೆಂದೂ ಉತ್ತರಾಯಣದ ಪ್ರಾರಂಭದಲ್ಲಿ ಯುದ್ಧವಂತೆ.—ಕ. ವೃ.

ಕೊಟ್ಟಭಾಷೆಗೆ ತಪ್ಪಿ ನಡೆದವನನ್ನು ನಾಲ್ಕು ಸಂವತ್ಸರಗಳ ವರೆಗೆ ನಿರ್ಜನವಾದ ಕಾನನದಲ್ಲಿ ಇಡಬೇಕೆಂದು ಜಟಿಲೀ ನಿರ್ಬಂಧವನ್ನು ಮಾಡಿರುತ್ತಾರಂತೆ.—ಕ. ವೃ.

ಪ್ರಕೃತ ರಾವಲ್ಪಿಂಡಿಯಲ್ಲಿ ವಿಶೇಷ ಮಳೆ ಬಿದ್ದದರಿಂದ ಧಾನ್ಯಗಳು ಅಗ್ಗವಾಗಿ, ಜನರು ಮಹಾಸಂತೋಷದಲ್ಲಿರುತ್ತಾರೆಂದು ತಿಳಿಯಬರುತ್ತದೆ—ಲೋ. ಬಂ.

ಮಣಿಪುರ ಸಂಸ್ಥಾನದಲ್ಲಿ ಕೊಹಿಮಾ ಪಟ್ಟಣದಿಂದ ರಾಜಧಾನಿಯವರೆಗೆ ರೈಲ್ ರಸ್ತೆಯನ್ನು ಹಾಕುವದಕ್ಕಾಗಿ ೩೩ ಲಕ್ಷ ರೂಪಾಯಿಗಳನ್ನು ಕೊಡುವರೆಂದು ತಿಳಿಯಬರುತ್ತದೆ.

ಹೈದರಾಬಾದ್ ನಿಜಾಮರವರು ತಮ್ಮ ರಾಜ್ಯದಲ್ಲಿ ಎಲ್ಲಾ ಮುಖ್ಯಪಟ್ಟಣಗಳಿಗೂ ರೈಲ್ ರಸ್ತೆಯನ್ನು ಹಾಕಿಸಬೇಕೆಂದು ಆಲೋಚಿಸುತ್ತಾರೆ. ಹೀಗೆ ಮಾಡುವದರಿಂದ ಅಲ್ಲಿನ ಪ್ರಜೆಗಳಿಗೆ ಅನೇಕ ವಿಷಯಗಳಲ್ಲಿ ಸಹಾಯ ಉಂಟಾಗುವದು.

ಮದ್ರಾಸಿನಲ್ಲಿ ನೂತನವಾಗಿ ಉಂಟಾಗುವ ಎಲೆಕ್ಟ್ರಿಕ್ ಟ್ರಾಂವೇ ಎಂಬ ಕ್ಷಣಿಕದ್ಯೋತಿಯ ಬಲದಿಂದ ಓಡುವ ಚಿಕ್ಕ ರೈಲ್ ಗಾಡಿ ಕಂಪೆನಿಯ ಷೇರುಗಳು ಪ್ರಸಿದ್ಧಪಡಿಸಲ್ಪಟ್ಟಿತು. ಈ ಕಂಪೆನಿಯವರು ೧೯ ರೂಪಾಯಿಗಳಿಗೆ ೧ ಷೇರಿನಂತೆ ಮಾರುತ್ತಾರೆ, ಬೇಕಾದವರು ತರಿಸಿಕೊಳ್ಳಬಹುದು.

ಕೆಲವು ನಾಟಕದ ಹುಡುಗರು ತಲೆಯಿತ್ತಿ ಅನೇಕ ಸಂಸಾರದವರು ಕೆಡಿಸುತ್ತಿದ್ದಾರೆ. ಕೆಲವು ಹೆಂಗಸರು ನಾಟಕ ನೋಡುವದಕ್ಕೆ ಹೋಗಿ ಹುಡುಗರು ರಾತ್ರಿ ನಾಟಕದ ವೇಷವನ್ನು ನೋಡಿ ಬೆರಗಾಗಿ ಅವರಲ್ಲಿ ಮೋಹಗೊಂಡು, ಅವರ ಬೆನ್ನಿಗೆ ಬೆರಗಾಗಿ ಗಂಡನನ್ನೂ, ಹೆತ್ತ ಮಕ್ಕಳನ್ನೂ ಬಿಟ್ಟು ಬರುತ್ತಿದ್ದಾರೆ. ಬಂದಿಕೆರೆಯಲ್ಲಿ ಒಬ್ಬ ಬ್ರಾಹ್ಮಣ ಸ್ತ್ರೀಯು ನಮ್ಮ ದೃಷ್ಟಿಗೆ ಬಿದ್ದಳು, ವಿಚಾರ ಮಾಡಿದ್ದರಲ್ಲಿ ಕೋಟೆಯಿಂದ ಓಡಿ ಬಂದಳೆಂದು ಗೊತ್ತಾಯಿತು.—ಪೇ

ಮೈಸೂರು ಷಹರಿನಲ್ಲಿರುವ ಅರಸುಗಳ ಪೈಕಿ ೫೦ ರೂಪಾಯಿಗಿಂತಲೂ ಕಡಮೆ ಸಂಬಳವನ್ನು ಹೊಂದುವವರಿಗೆ ಈ ಕ್ಷಾಮಕಾಲ ಮುಗಿಯುವವರೆಗೂ ಅವರಿಗೆ ಕೊಡತಕ್ಕ ತಲಬಿನ ಸಂಗಡ ೩೦ ಸೇರು ಅಕ್ಕೀ ಉಚಿತವಾಗಿ ಕೊಡಿಸಬೇಕೆಂದು ಅರಮನೆಯಲ್ಲಿ ತೀರ್ಮಾನವಾಗಿ ಜಾರಿಯಲ್ಲಿ ಬಂದಿರುತ್ತದೆ. ಈಗಲೇ ಅನ್ನ ವಸ್ತ್ರಗಳಲ್ಲದೆ ಇತರ ವಿಷಯಗಳಿಗಾಗಿ ಪ್ರತಿ ತಿಂಗಳಲ್ಲಿಯೂ ಸಾಲ ಮಾಡುತ್ತಿರುವಂಥಾ ಅರಸುಗಳಿಗೆ ಈ ಏರ್ಪಾಡು ಎಷ್ಟರಮಟ್ಟಿಗೆ ಸಹಾಯಕವಾಗಿರುವದೋ ವಾಚಕರೇ ಊಹಿಸಿಕೊಳ್ಳಬಹುದು.—ವೃ ಪ.

ಕಲ್ಕತ್ತೆಯಲ್ಲಿ ವಾರಕ್ಕೆ ಮೂರಾವರ್ತಿ ಪ್ರಕಟಿಸಲ್ಪಡುತ್ತಲಿರುವ ಹಿಂದೂ ಪೇಟ್ರಿಯಾಟ್ ಎಂಬ ಪತ್ರಿಕೆಯನ್ನು ಇನ್ನು ಮೇಲೆ ನಿತ್ಯವೂ ಪ್ರಕಟಿಸಬೇಕೆಂದು ಯೋಚಿಸಿ ತತ್ಪತ್ರಿಕಾಧಿಪರು ಆ ಬಗ್ಗೆ ಬೇಕಾದ ಏರ್ಪಾಡುಗಳನ್ನು ಮಾಡುತಲಿರುವರೆಂದು ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇದು ವಾರಪತ್ರಿಕೆಯಾಗಿದ್ದು ಕ್ರಮೇಣ ವಾರಕ್ಕೆ ಎರಡಾವರ್ತಿ ಪ್ರಕಟಿಸಲ್ಪಡುತಿದ್ದು ಈಗ ಮೂರು ಸಲ ಮುದ್ರಿಸಲ್ಪಡುತಲಿದೆ. ಇದು ಹೀಗೆ ಕ್ರಮೇಣ ಅಭಿವೃದ್ಧಿಯನ್ನೈದಲಿಕ್ಕೆ ಅದು ನಡೆಸಲ್ಪಡುವ ರೀತಿಯೇ ಮುಖ್ಯ ಕಾರಣವಾಗಿರುತ್ತದೆ, ಇದು ಬಹಳ ಪುರಾತನ ಪತ್ರಿಕೆಯಾಗಿರುತ್ತದೆ

ಮುಜರಾಯಿ ಸೂಪರಿಂಟೆಂಡೆಂಟ್ ಶ್ರೀನಿವಾಸಾಚಾರ್ಯರು ಶಿವಗಂಗೆಗೆ ದಯಮಾಡಿ ಅಲ್ಲಿನ ದೇವಸ್ಥಾನದ ಅತ್ರಿ ಮಗ್ರಿಗಾಗಿ ಏನು ಜವಾಬ್ ಹೇಳುತ್ತೀರೆಂದು ಶಿವಗಂಗೆ ಮಠದ ಸ್ವಾಮಿಗಳನ್ನು ಕೇಳಿದ್ದಕ್ಕೆ ಅವರು ತಮ್ಮ ಅಪ್ಲಿಕೇಷನ್ನು ಈ ಬಂದಿವಸಾನ್ನಕ್ಕೂ ಬಹಳ ದೂರವಾದದ್ದರಿಂದ ಸರ್ಕಾರದವರು ಮುರಿಕೊಡಬೇಕೆಂದು ಹೇಳಿದ ವಿಷಯದಲ್ಲಿ ಶ್ರೀನಿವಾಸಾಚಾರ್ಯರು ಬಹಳ ಸಂತೋಷಪಟ್ಟು ಸ್ವಾಮಿಗಳನ್ನು ಕೊಂಡಾಡುತ್ತ ನಿಬಸಂಗಲದ ತಾಲ್ಲೂಕು ಅಮಲ್ದಾರರಿಗೆ ದೇವಸ್ಥಾನದಲ್ಲಿ ಉಂಟಾಗಿರುವ ಕೆಲ್ಲಲ್ಲವನ್ನು ನಿಷ್ಕರ್ಷಿಸತಕ್ಕಬಗ್ಗೆ ೫೦೦ ರೂಪಾಯಿ ಸ್ಯಾಂಕ್ಷನ್ ಮಾಡಿಸಿ ದಾಖಲು ಕೇಳಲು ಸಂತೋಷಿಸುತ್ತೇವೆ.—ವೃ. ದೇ.

ಕಳೆದ ತಿಂಗಳಿನ ಅಖೈರು ಭಾಗದಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಒಬ್ಬ ಕುರುಬರವನ ಮನೆಯಲ್ಲಿ ಒಂದು ಮೇಕೆಯು ತಲೆ ೧, ದೇಹ ೨, ಕಾಲುಗಳು ೮, ಬಾಲ ೨, ಇಂಥಾ ಮರಿಯನ್ನು ಹಾಕಿತೆಂತಲೂ, ಆ ಮರಿಯು ಹುಟ್ಟಿದ ಅರ್ಧ ಘಂಟೆಯೊಳಗಾಗಿ ಮೃತಪಟ್ಟಿತೆಂತಲೂ, ಮತ್ತು ಈ ಊರಿಗೆ ಸಮೀಪದಲ್ಲಿರುವ ಗೊಲ್ಲರಹಳ್ಳಿ ಎಂಬ ಗ್ರಾಮದಲ್ಲಿ ೨೦ ಸಾವಿರ ಗಿಡಿಕೆಗಳು ನಂಜಿನ ಗಾಳಿ ಬಂದು ಹೋದವೆಂತಲೂ, ಇವರ ಆ ಭಾಗವು ಸುತ್ತಲೂ ಒಂದು ಫರಲಾಂಗ್ ಭೂಮಿಯವರೆಗೂ ಜನಗಳು ಇದನ್ನು ನೋಡುವದಕ್ಕೆ ಹೋಗದಂತೆ ಬಂದು ನಿಂತಿದ್ದವೆಂತಲೂ, ಮತ್ತು ಆ ಪ್ರಾಂತದಲ್ಲಿ ಮಳೆ ಆಗಿ ಕೆರೆಕುಂಟೆಗಳಿಗೆ ಅರ್ಧ ಅಡಿ ನೀರು ಬಂದಿರುತ್ತದೆಂತಲೂ ವರ್ತಮಾನ ಬಂದಿರುತ್ತದೆ.—ವೃ. ಪ.

ಅರಮನೆ ಇಲಾಖೆಯಲ್ಲಿ ವೇತನಗಳನ್ನು ಪಡೆದು ವಿದ್ಯಾಭ್ಯಾಸಂಗ ಮಾಡುತ್ತಿರುವವರ ಪೈಕಿ ೬—೭ ಮಂದಿ ಅರಸು ಮಕ್ಕಳನ್ನು ಮಿಲಿಟರಿ ಇಲಾಖೆಯಲ್ಲಿ ತರ್ಫೀ ಮಾಡುವದಕ್ಕಾಗಿ ತಕ್ಕ ಏರ್ಪಾಡುಗಳನ್ನು ಶ್ರೀಮನ್ಮಹಾರಾಜರವರು ಮಾಡಿರುವರೆಂದು ಕೇಳುತ್ತೇವೆ. ವೇತನವನ್ನೋ, ಅಥವಾ ಸಂಬಳಗಳನ್ನೋ ಪಡೆದು ವ್ಯರ್ಥಕಾಲಕ್ಷೇಪ ಮಾಡುತ್ತಿರುವ ಇನ್ನೂ ಕೆಲವು ಅರಸುಗಳು ನಮ್ಮನ್ನು ಯಾವದಾದರೂ ಕೆಲಸಗಳನ್ನು ಕಲಿಯುವದಕ್ಕೆ ಹಾಕಿದರೆ ನಾವು ಕಲಿತುಕೊಳ್ಳುತ್ತೇನಲ್ಲಾ ಎಂದು ತಮ್ಮ ತಮ್ಮಲ್ಲೇ ಹೇಳಿಕೊಳ್ಳುತ್ತಿರುವರು. ಶ್ರೀಮನ್ಮಹಾರಾಜರವರು ಈಗ ಮಾಡಿರುವ ಏರ್ಪಾಡು ಅತ್ಯಂತ ಸಂತೋಷಕರವಾದದ್ದೇನು, ಅರಸುಗಳಲ್ಲಿ ಯೋಗ್ಯವಾಗಿರತಕ್ಕವರ ವಿಷಯದಲ್ಲೂ ಇಂಥಾ ಯಾವದಾದರೊಂದು ಏರ್ಪಾಡನ್ನು ಮಾಡುವರೆಂದು ನಂಬುತ್ತೇವೆ—ವೃ. ಪ

ಮೈಲಾರದಲ್ಲಿ ಒಬ್ಬ ಸನ್ಯಾಸಿಯು ಮನಸ್ಸಿನಲ್ಲಿ ಮದುವೆ ಆಗ್ನ ನಡಿಸಿಕೊಳ್ಳಬೇಕೆಂಬ ಕೋರಿಕೆ ಹುಟ್ಟಿದವನಿಂದ ಪೂರ್ವಾಶ್ರಮದ ತನ್ನ ಮನೆಯ ಕಡೆಯಿಂದ ೧೦೦ ರೂಪಾಯಿಗಳನ್ನು ತೆಗೆದುಕೊಂಡನು. ಈ ಮಾತು ಹೊರಗಾದ ಕೂಡಲೆ ಕೆಲವು ಗೃಹಸ್ಥರು ಆ ಸ್ವಾಮಿಯನ್ನು ಮಂತ್ರ ಘೋಷಕ್ಕೆ ಕರೆದೊಯ್ದು ಸದರೀ ರೂಪಾಯಿಗಳನ್ನು ತೆಗೆದುಕೊಂಡು ಲಗ್ನ ಸಮಾರಂಭವು ನಡೆಸಿದರು. ಒಬ್ಬನು ಮಾವನಾದನು, ಒಬ್ಬ (ಸೂಳೆ) ಪಾತ್ರದವಳನ್ನು ಉತ್ತಮಳಾಗಿ ಮಾಡಿದರು, ಲಗ್ನವಾಗಿದ್ದ ಒಂದು ಹುಡುಗಿಯನ್ನು ಇದುಮಾಗಿ ಮಾಡಿದರು, ಲಗ್ನ ಕಾರ್ಯವೆಲ್ಲ ರೀತಿಯಮೇಲೆ ಎಲ್ಲವೂ ಬಯಲ್ಲೇ ಮಾರ್ಗವಾಗಿ ಸ್ವಾಮಿಯ ಊಟ ಹೊರಟಿತು, ನಡುನಡುವೆ ಸ್ವೇಚ್ಛಾ ಬಂದವರೆಲ್ಲ ಇದ್ದೊಬ್ಬರಂತೆ ಎಲ್ಲರೂ ಓಡಿಹೋದರು, ಹುಡುಗಿ ಸ್ವಾಮಿಗಳೊಬ್ಬರೇ ಉಳಿದರು! ಸ್ವಾಮಿಗಳು ಏನೆ ಏನೆ ಎಂದುಕೊಂಡು ಕೊನೆಗೆ ಪೊಲೀಸಿನವರಲ್ಲಿ ಫಿರ್ಯಾದ್ ಮಾಡಿದರಂತೆ. ಇವರ ಪೈಕಿ ಮೂವರು ಸಿಕ್ಕಿದ್ದಾರೆ—ಲೋ. ಬಂ.

ಮೈಲೂರಲ್ಲಿ ಕಾಮರಾಜ ಮರಿಯಪ್ಪನವರ ಜೊತೆಯಲ್ಲಿ ಒಂದು ವಿಚಾರ ನಡೆಯಿತು. ಆಕೆಯು ದೇಶಾಂತರದಿಂದ ಬಂದವಳು, ಕೆಲವು ದಿವಸಗಳಮೇಲೆ ಹುಡುಗಿಯು ಸತ್ತುಹೋದಳು. ಹುಡುಗಿಯ ತಾಯಿಯು ಮಗಳ ವಿರಹವನ್ನು ತಡೆಯಲಾರದೆ ಆಯುಸ್ಸನ್ನು ಕಳೆಯುವದಕ್ಕೆ ತೀರ್ಮಾನಿಸಿ ನಿಂತಿರುವಾಗ ಬಳಿ ನಡೆದ ಪಿತೃಕರ್ಮದಲ್ಲಿ ಒಬ್ಬ ಹುಡುಗನು ಈಕೆಯ ಮನೆಗೆ ಬಂದು ಅತ್ತೆಗೆ ಅಡ್ಡಬಿದ್ದನು. ಆ ಸ್ತ್ರೀಯು ನೀನು ಯಾರಪ್ಪಾ ಅನ್ನಲಾಗಿ, ನಾನು ನಿಮ್ಮ ಅಳಿಯನು ಇವಳು ಮೊದಲನೇ ಸ್ವರ್ಗ ಆಶ್ರಮದ ತೀರಿಕೊಳ್ಳದೆ ಎರಡನೇ ಸ್ವಾದಿಯ ಆಗುವನು ಎಂದನ್ನು ಕೇಳಿ ಹಿಗ್ಗಿ, ಆ ಹುಡುಗನನ್ನು ಕರೆದುಕೊಂಡು ಬಂದು ಕೋಲಾಹಲದೊಡನೆ ಹುಡುಗಿ ಪತ್ನಿ ಮಾಡಿ ಹುಡುಗಿಯ ವಿವಾಹ ವ್ಯವಹಾರವನ್ನು ಏರ್ಪಡಿಸಿದಳು. ಹುಡುಗಿಯು ಈಗ ಗರ್ಭಿಣಿಯಾಗಿದ್ದಾಳೆ. ಆ ಹುಡುಗನ ತಾಯಿಯು ಮಗನನ್ನು ಹುಡುಕುತ್ತ ಬಂದಿದ್ದಾಳೆ. ಅವಳು ನೋಡುವಾಗ ಇವನು ಗಳೆಯನಾಗಿದ್ದಾನೆ. ಈಗ ಆ ಹುಡುಗಿಯನ್ನು ಯಾರು ನಾಗದೇವರೋ ತಿಳಿಯದೆ ಪೇಚಾಡುತ್ತ, ಒಂದು ಕಕ್ಷಿಯವರು ಇವನೇ ಅಳಿಯನೆಂತಲೂ, ಇನ್ನೊಂದು ಕಕ್ಷಿಯವರು ಇವನು ಗೆಳೆಯನೆಂತಲೂ ಕಲಹವಾಗುತ್ತಿದೆ. ನಿಜಾಂಶವನ್ನು ವಿಚಾರಿಸಿ ಮುಂದೆ ತಿಳಿಸುವೆವು.—ವೃ. ದೇ

EXTRACTS.

ಒಬ್ಬ ಸ್ತ್ರೀಯು ವಿಶೇಷ ಆಭರಣಗಳನ್ನು ಧರಿಸಿಕೊಂಡು ಒಬ್ಬ ಸಾಹುಕಾರನ ಬಳಿಗೆ ಹೋಗಿ ನನ್ನ ಯಜಮಾನರಿಗೆ ದೊಡ್ಡ ದೊಡ್ಡ ಕಿಮ್ಮತ್ತಿನ ಒಡವೆಗಳು ಬೇಕು; ನೀನು ಇಲ್ಲಿಗೆ ತೆಗೆದುಕೊಂಡು ಬರಬೇಕೆಂದು ಹೇಳಿದಳು. ಆಗಲವನು ಅವಳಿಗೆ ಬೇಕಾದ ಒಡವೆಗಳನ್ನು ತೆಗೆದುಕೊಂಡು ಅವಳ ಹಿಂದೆ ಅವಳ ಬಂಗ್ಲೆಗೆ ಹೋದನು. ಅಲ್ಲಿ ಅವಳು, ಆ ವ್ಯಾಪಾರಸ್ಥನು ತೆಗೆದುಕೊಂಡು ಹೋಗಿದ್ದ ಒಡವೆಗಳನ್ನು ತನ್ನ ಯಜಮಾನನಿಗೆ ತೋರಿಸಿಕೊಂಡು ಬರುವೆನು ತಾ ಎಂದು ಅವನಿಂದ ಕೇಳಲು ಅವನು ಸ್ವಲ್ಪ ಸಂಶಯಪಟ್ಟು, ಅವಳ ಮೈಮೇಲೆ ಒಡವೆ ಹಾಕಿಕೊಂಡು ಒಡೆದಿದ್ದ ಅವಳ ಒಡವೆ ಕೂಸನ್ನು ನೋಡಿ, ಈ ಕೂಸಿಗೋಸ್ಕರವಾದರೂ ಬರಲಾರಳೆ? ಎಂದು ಮನಸ್ಸಿನಲ್ಲಿ ಸಮಾಧಾನ ಮಾಡಿಕೊಂಡು ಒಡವೆಗಳನ್ನು ಕೊಟ್ಟನು. ಅಮೇಲೆ ಅವಳು ಒಳಗೆ ಹೋಗಿ ಕೂಡಲೇ ಆ ಒಡವೆಗಳ ಕ್ರಯವನ್ನು ತಂದುಕೊಟ್ಟು ಹೇಳಿದ್ದೇನಂದರೆ—ನನ್ನ ಯಜಮಾನರಿಗೆ ಇನ್ನೂ ೪೫,೦೦೦ ರೂಪಾಯಿಗಳ ಒಡವೆಗಳು ಬೇಕಾಗಿರುವವು, ನೀವು ತರಬೇಕೆಂದು ಹೇಳಿದಳು. ಆಗಲಾ ವ್ಯಾಪಾರಿಯು ಸಂತೋಷದಿಂದ ತರುತ್ತೇನೆಂದು ಹೇಳಿ ಹೊರಟು ಹೋದನು. ಮರುದಿನ ಅದೇ ವೇಳೆಗೆ ದಾಗೀನೆಗಳನ್ನು ತೆಗೆದುಕೊಂಡು ಬಂದ ಕೂಡ್ಲೇ ಮೊದಲನೇದಿನ ಒಡವೆಗಳ ಕಿಮ್ಮತ್ತ ತಂದುಕೊಟ್ಟವಳು ಬಂದು ಒಡವೆಗಳನ್ನು ಕೊಟ್ಟರೆ ತೋರಿಸಿಕೊಂಡು ಬರುತ್ತೇನೆಂದವಳು. ಆಗಲಾ ವ್ಯಾಪಾರಿಯು ಮುಂಚಿನ ದಿವಸ ಆಡುತಿದ್ದ ಕೂಸು ಇಲ್ಲಿ ಇಲ್ಲದಿರುವದು, ಕೊಡಲಿಕ್ಕೇನೂ ಅಡ್ಡಿ ಇಲ್ಲವೆಂದು ಆ ಲಕ್ಷ ಒಡವೆಗಳನ್ನು ಅವಳ ವಶಕ್ಕೊಪ್ಪಿಸಿದನು. ಅವಳು ಒಡವೆಗಳನ್ನು ತೆಗೆದುಕೊಂಡು ಹೋದವಳು ಬಹಳ ಹೊತ್ತಿಗೆ ಬಾರದೆ ಹೋದಳು. ಆಗೀಟು ಬಹು ಹೊತ್ತು ಕಾದು ಘಂಟೆಗಳ ಕಾಲ ಕಾದು ದೇಸನ್ನು ಇನ್ನು ಯಾಕೆ ಬರಲಿಲ್ಲವೆಂದು ಒಳಗೆ ಹೋಗಿ ನೋಡುವಲ್ಲಿ ಅಲ್ಲಿ ಒಬ್ಬರನ್ನೂ ಕಾಣದೆ ಏನೆ ಏನೆ ಬಡಿದುಕೊಂಡು, ಆ ಕೂಸಿನ ಬಳಿ ಹೋಗಿ ನೋಡಲು ಅದು ಸತ್ತದ್ದಾಗಿತ್ತು. ಅನಂತರ ಕಲ್ಲೆದೆಯು ಬಂದು ನೊಂದು ಮಾಡುತ್ತ ಪೋಲೀಸಿನವರಿಗೆ ತಿಳಿಸಿರುತ್ತಾನೆ. ಸದರೀ ಹೆಂಗಸು ಇದುವರೆಗೂ ಪತ್ತೆ ಇಲ್ಲವು—ಲೋ. ಬಂ.

ಪತಿವ್ರತಾ ಸ್ತ್ರೀಯರ ಧರ್ಮವು.

ಮುಂಬಯಿ ಎಲ್ಫಿನ್ಸ್ಟನ್ ಕಾಲೇಜಿನ ಸಂಸ್ಕೃತ ಪಂಡಿತರಾದ ವಾಸ್ಕರ ಪೀಟರ್ಸನ್ ದೊರೆಗಳು ಅನೇಕ ಸಂಸ್ಕೃತ ಗ್ರಂಥಗಳನ್ನು ಶೋಧಿಸಿ ಸುಲ್ಕ್ಯಾಭ್ಯಾಸವನ್ನು ಕುರಿತು ಕೆಲವು ಉತ್ಕೃಷ್ಟಗುಣದ ನಿಯಮಗಳನ್ನು ಟೈಂಸ್ ಆಫ್ ಇಂಡಿಯಾ ಪತ್ರಿಕೆಗೆ ಬರೆದು ಕಳುಹಿಸಿರುತ್ತಾರೆ. ಅವುಗಳನ್ನು ನಮ್ಮ ಪ್ರಿಯರಾದ ವಾಚಕರಿಗಾಗಿ ಇಲ್ಲಿ ಕನ್ನಡಿಸಿ ಪ್ರಕಟಿಸುತ್ತೇವೆ. ಈ ಕೆಳಗಿನ ನಿಯಮಗಳನ್ನು ಸುಮಾರು ೨,೦೦೦ ವರ್ಷಗಳ ಹಿಂದೆ ನಮ್ಮವರಿಂದ ಬರೆಯಲ್ಪಟ್ಟಿದ್ದ ಗ್ರಂಥಗಳಿಂದ ಸಂಗ್ರಹಿಸಿರುತ್ತಾರೆ. ಆ ನಿಯಮಗಳು ಯಾವವೆಂದರೆ —

೧. ಪತಿವ್ರತಾಸ್ತ್ರೀಯು ತನ್ನ ಪತಿಯೇ ದೈವವೆಂದು ನಂಬಿ ಆತನನ್ನು ಆಳ ಭಕ್ತಿ ಆತನ ವಿಶ್ವಾಸವನ್ನೂ ಅನುರಾಗವನ್ನೂ ಹೊಂದಬೇಕು.

೨. ಪತಿಯು ಅಪ್ಪಣೆಯಿಲ್ಲದೆ ಯಾವ ಯಜ್ಞವನ್ನೂ ವ್ರತವನ್ನೂ ಕೈಕೊಳ್ಳಬಾರದು.

೩. ಮನೆಯನ್ನು ಗುಡಿಸಿ ಸಾರಿಸಿ ಕನ್ನಡಿಯಂತೆ ಸ್ವಚ್ಛವಾಗಿಡಬೇಕು. ಮನೆಯನ್ನು ಪುಷ್ಪಗಳಿಂದಲೂ, ತೋರಣಗಳಿಂದಲೂ ಶೃಂಗರಿಸಬೇಕು. ಮತ್ತು ನಿತ್ಯವು ಮೂರು ಸಾರಿ ಸ್ನಾನವನ್ನು ಮಾಡಿ ನಿರ್ಮಲವಾದ ವಸ್ತ್ರಗಳನ್ನು ಧರಿಸಿಕೊಳ್ಳಬೇಕು.

೪. ಅತ್ತೆ, ಮಾವ, ಭಾವಮೈದುನ, ನಾದಿನಿ ಮುಂತಾದ ಎಲ್ಲಾ ನೆಂಟರೊಡನೆ ಬಹಳ ಪ್ರೀತಿಯಿಂದಲೂ ವಿಧೇಯತ್ವದಿಂದಲೂ ವರ್ತಿಸಬೇಕು.

೫. ಮನೆಯ ಹಿತ್ತಲೊಳಗೆ ಸ್ವಂತವಾದ ತೋಟವನ್ನು ತಯಾರ್ ಮಾಡಿ ಪಲ್ಯ ಕಾಯಿಗಳನ್ನೂ ಹೂವಿನ ಗಿಡಗಳನ್ನೂ ಬೆಳಸಬೇಕು.

೬. ಪತಿವ್ರತಾಸ್ತ್ರೀಯರು ವದಿಟಿಗಾರ್ತಿಯರೂ ಮಂತ್ರಗಾರ್ತಿಯರೂ ಆದ ಹೆಂಗಸರೊಡನೆ ಸ್ನೇಹ ಮಾಡಬಾರದು

೭. ಪತಿಗೆ ಪ್ರಿಯಕರವಾದ ಪದಾರ್ಥಗಳ್ಯಾವವೆಂಬದು ಕಲಿತುಕೊಂಡು ಅಡಿಗೆ ಮಾಡಬೇಕು. ಆವಾಗ ಯಾವದು ಹಿತಕರವೋ ಎಂಬುವನ್ನು ಸಹ ಪರೀಕ್ಷಿಸಬೇಕು.

೮. ಪತಿಯು ಹೊರಗಿನಿಂದ ಮನೆಗೆ ಬರುವಾಗ್ಯೆ ಆತನ ಸಪ್ಪಳ ಕೇಳ ಮನೆಯ ಒಳಗಿನವಾಗಕ್ಕೆ ಮುಂದಾಗಿ ನಿಂತು ತನ್ನ ಪತಿ ಯಾವನಾಜ್ಞಾಪಿಸುವನೆಂಬುದು ನಿರೀಕ್ಷಿಸಿ ಆದಂ ತಿಳಿದುಕೊಳ್ಳಲಿಕ್ಕೆ ಸಿದ್ಧವಾಗಿರಬೇಕು

೯. ತನ್ನ ಕೈಯಿಂದ ಪತಿಯ ಪಾದವನ್ನು ಪ್ರಕ್ಷಾಳನ ಮಾಡಬೇಕು.

ಪತಿವ್ರತಾ ಸ್ತ್ರೀಯರು ಪತಿಯ ಮುಂದುಗಡೆ ಏಕಾಂತದಲ್ಲಿದ್ದಾಗ್ಯೂ ಅಲಂಕಾರರಹಿತಳಾಗಿರಬಾರದು.

೧೧. ಪತಿಯು ದುರ್ಮಾರ್ಗದಿಂದ ಅಥವಾ ಅನ್ಯಾಯದಿಂದ ಹಣವನ್ನು ವೆಚ್ಚ ಮಾಡುತಿದ್ದರೆ ಏಕಾಂತದಲ್ಲಿ ಆತನಿಗೆ ಬುದ್ಧಿ ಹೇಳಬೇಕು.

೧೨. ಪತಿವ್ರತಾಸ್ತ್ರೀಯು ಪತಿಯ ಆಜ್ಞೆಯಿಲ್ಲದೆ ಲಗ್ನ ಸಮಾರಂಭಗಳಿಗಾಗಲಿ, ನೆರೆಹೊರೆಯೊಳಗೆ ಕಥೆ ಹೇಳಲಿಕ್ಕಾಗಲಿ, ದೇವತಾದರ್ಶನಕ್ಕಾಗಲಿ ಹೋಗಬಾರದು.

೧೩. ಪತಿಯು ಮನೋರಂಜನವಾಗುವಂಥಾ ವಿಲಾಸಗಳನ್ನೇ ಮಾಡಬೇಕು.

೧೪. ಪತಿಯು ಮಲಗಿದನಂತರ ಪತಿವ್ರತೆಯು ಮಲಗಬೇಕು. ಅವಕ್ಕೆ ಪೂರ್ವದಲ್ಲಿ ಎದ್ದಿರಬೇಕು. ಬಗಲು ಪತಿಯು ಮಲಗಿದರೆ ಅವನನ್ನು ಎಬ್ಬಿಸಬಾರದು

೧೫. ಪತಿಯು ಕೈಯಿಂದ ಏನಾದರೂ ಪ್ರಮಾದಗಳು ಸಂಭವಿಸಿದರೆ ಪತಿವ್ರತಾಸ್ತ್ರೀಯು ಕಿಂಚಿತ್ತು ಕೋಪಿಸಿ ಸ್ಪಷ್ಟೋಕ್ತಿಯಿಂದ ಸಂಭಾಷಣ ಮಾಡಬೇಕು. ಆದರೆ ಬಹಳ ಮಾತ ಹೇಳಬಾರದು.

೧೬. ಪತಿಯು ಏಕಾಂತವಾಗಿದ್ದಾಗ ಅಥವಾ ಪತಿಯು ಪ್ರಿಯ ಮಿತ್ರರಿದ್ದಾಗ ಪತಿಯು ಕೆಟ್ಟಕೆಲಸಗಳಮೇಲೆ ಹೋಗದಿದ್ದರೆ ನಿಂತಿರಲಿಕ್ಕೆ ಅಡ್ಡಿ ಇಲ್ಲ

೧೭. ಕೆಟ್ಟನಡತೆ, ಕೆಟ್ಟನ ಮಿತ್ರ, ಮೋರೆ ಗಂಟಿಕ್ಕಿ ಮಾತನಾಡೋಣ, ಮನೆಯ ಹೊರಗೆ ನೋಡುತ್ತ ಬಾಗಿಲಲ್ಲಿ ನಿಂತುಕೊಳ್ಳೋಣ, ತೋಟ ಮುಂತಾದ್ದರಲ್ಲಿ ಏರಡನೇಯವರ ಕೂಡೆ ಮಾತಾಡೋಣ, ಏಕಾಂತದಲ್ಲಿ ಬಹಳಹೊತ್ತು ನಿಲ್ಲೋಣ ಇತ್ಯಾದಿಗಳನ್ನು ಪತಿವ್ರತಾಸ್ತ್ರೀಯು ತ್ಯಜಿಸತಕ್ಕದ್ದು.

೧೮. ಪತಿವ್ರತಾಸ್ತ್ರೀಯು ಸ್ವಚ್ಛವಾಗಿರಬೇಕು. ಮೇಲೆಗೆ ತಕ್ಕಹಾಗೆ ಪೋಷಾಕ್ ಧರಿಸಬೇಕು. ವಿಶೇಷ ದಿನಗಳಲ್ಲಿ ವಿಶೇಷವಾದ ಪೋಷಾಕನ್ನೂ, ಉಳಿದ ದಿನಗಳಲ್ಲಿ ಸಾಧಾರಣ ಪೋಷಾಕನ್ನೂ ಧರಿಸಬೇಕು.

೧೯. ಪ್ರಪಂಚಕ್ಕೆ ಪ್ರಯೋಜನಕರವಾದ ಸರ್ವ ವಸ್ತುಗಳನ್ನು ಆದರದಿಂದ ಸಂಗ್ರಹಿಸಿ ಕಾಪಾಡಬೇಕು.—ಚಿಂ.

ರಂಗೂರಿನಲ್ಲಿ ಸ್ಥಾಪಿಸಲ್ಪಟ್ಟಿರುವ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯಾಗಿರುವ ಒಬ್ಬ ಹುಡುಗಿಯನ್ನು ಅವಳ ಗಂಡನು ತನ್ನ ಮನೆಗೆ ಕಳುಹಿಸಿಕೊಡಬೇಕೆಂದು ಅತ್ತೆ ಮಾವನನ್ನು ಕೇಳಿದನು. ಅತ್ತೆ ಮಾವ ಸ್ಕೂಲಿನವರನ್ನು ಕೇಳಿದರು. ಸ್ಕೂಲಿನವರು ಮೂಲ ಮಂತ್ರ ಉಪದೇಶ ಮಾಡಿದಂತೆ ತೋರುವದಕ್ಕೆ ಅತ್ತೆ ಮಾವನು ಅವಳನ್ನು ಕಳುಹಿಸಿ ಕೊಡದೆ ಇಲ್ಲಿಯೆ ನಿಶ್ಚಯಿಸುವದೇ ಕಾರಣವಾಗಿದೆ. ಈ ಕದೀಮರು ತಂದ ದಿನಕ್ಕೆ ಬಾಲ್ಯದಲ್ಲಿ ಮದುವೆಯಾದ ಈ ಹೆಣ್ಣು ಕೂಸು ತನಗೆ ಅವಶ್ಯಕವಿಲ್ಲವೆಂದು ಹೇಳುತ್ತಾಳೆಯಂತೆ. ಇದನ್ನೆಲ್ಲಾ ನೋಡಿದರೆ ಏನು ತೋರುವದೋ ಬುದ್ಧಿವಂತರಾದ ವಾಚಕರು ಊಹಿಸಬೇಕಾಗಿದೆ. ಸ್ಕೂಲಿನವರು ಇಂಥಾ ಹುಡುಗಿಯರಿಗೆ ವೇತನವನ್ನು ಕೊಡುವದೂ, ಸ್ಕೂಲಿಗೆ ಬರಮಾಡಿಸಿ ಕೊಳ್ಳುವದೂ ಪಾಠಶಾಲೆಯ ಹೆಸರಿಗೆ ಕುಂದು ಹತ್ತುವಹಾಗಾಗಿದೆ. ಕಮಿಟಿಯವರ ಪ್ರಾಸ್ಪೆಕ್ಟನ್ನು ನೋಡಿದರೂ ಹೀಗಾದರೆ ಮುಂದೆ ಗತಿಯೇನು ಯೋಚಿಸಿದರೆ ಸ್ತ್ರೀವಿದ್ಯಾಭ್ಯಾಸ ಪಕ್ಷಪಾತಿಗಳಾದ ನಮ್ಮಂತಹ ಬಹಳ ಜನಕ್ಕೆ ಬಹಳ ವ್ಯಸನವಾಗುತ್ತದೆ. ಈ ಹುಡುಗಿಯು ಹದಿನಾರು ವರ್ಷ ಪ್ರಾಯದವಳಾಗಿದ್ದಾಳೆಂದು ನಾವು ಕೇಳುತ್ತೇವೆ. ತನ್ನ ಪತಿಯ ಮೇಲೆ ಕರುಣೆ ಸರಿಯಾದ ಕಾರಣದಿಂದ ತಕ್ಕ ಸಹಾಯದ ರೀತಿಯು ಅನ್ಯರಿಂದ ಕೊಡಲ್ಪಟ್ಟ ಪಕ್ಷದಲ್ಲಿ ಗಂಡನನ್ನು ಸ್ವಲ್ಪನೇ ತಿರಸ್ಕರಿಸುತ್ತಿರುವಳೋ ಆ ಕಾರಣವು ಅಸಂಭವ್ಯವಾಗಿದೆ. ಇನ್ನು ಮುಂದೆ ಇಂಥಾ ಅಪವಾದ ಕೇಳದ ಹಾಗೆ ಪಾಠಶಾಲೆಗೆ ಉಂಟಾಗದಂತೆ ಕಮಿಟಿಯವರು ಎಚ್ಚರಿಕೆಯಿಂದ ನೋಡಬೇಕು. ಅದಲ್ಲದೆ ಅವರಿಗೂ, ಪಾಠಶಾಲೆಗೂ ವಿಶೇಷ ಗೌರವ ತರತಕ್ಕದ್ದಾಗಿರುವದು. ಈಗ ಯಾವ ಹುಡುಗಿಯು ತನ್ನ ಗಂಡನೊಡನೆ ಇರಲಿಕ್ಕೆ ತಿರಸ್ಕಾರ ಮಾಡುತ್ತಾಳೆಯೋ ಆ ಹುಡುಗಿಯನ್ನು ಪಾಠಶಾಲೆಯಿಂದ ಹೊರಡಿಸಿ ವಿಶೇಷವಾಗಿ, ಆಕೆಯ ವೇತನವನ್ನು ನಿಲ್ಲಿಸಿದರೆ ಉಳಿದ ಪಾಠಶಾಲೆಯ ಹುಡುಗಿಯರ ಮನಸ್ಸಿಗೆ ಬಾರದು. ಹೀಗೆ ಮಾಡದ ಪಕ್ಷದಲ್ಲಿ ನೀತಿವಂತರಾದವರು ಬಾಲಿಕೆಯರಿಗೆ ವಿದ್ಯಾಭ್ಯಾಸ ಕೊಡುವದಕ್ಕೆ ಅನೇಕ ಹೆದರುತ್ತಾರೆ. ಜನರು ಮುಂದೆ ತಮ್ಮ ತಮ್ಮ ಅಭಿಮಾನಿಗಳನ್ನು ಪಾಠಶಾಲೆಗೆ ಕಳುಹಿಸಿ ಕೊಡುವದನ್ನು ಬಿಟ್ಟು ಮಾಡುವ ಆಲೋಚನೆ ಮಾಡುತ್ತಾರೆ. ಅದ್ದರಿಂದ ಪಾಠಶಾಲೆಗೆ ಬಾಲಿಕೆಯರಿಲ್ಲದೆ ಹೋಗುವದಕ್ಕೆ ಅವಕಾಶ ಉಂಟಾಗುತ್ತದೆ. ಇಂಥಾ ದುರಾಚಾರಗಳೆಲ್ಲಾ ಬರುವವೆಂಬ ಭಯದಿಂದಲೇ, ಪೂರ್ವಿಕರು ಸ್ತ್ರೀಯರಿಗೆ ವಿದ್ಯಾಭ್ಯಾಸ ಕೊಡಬಾರದೆಂದು ನಿರ್ಬಂಧಿಸಿದರು. ಅವರು ಓದಿಸಬಾರದೆಂದು ಹೇಳುವ ಅಭಿಪ್ರಾಯ, ಇದಕ್ಕೆ ಕಾರಣವಾಗಿದ್ದಿತೋ ಅದನ್ನು ಈ ಪಾಠಶಾಲೆಯ ವಿದ್ಯಾಭ್ಯಾಸ ಮಾಡುವ ಬಾಲಿಕೆಯರು ಸಾಕಾರವಾಗಿ ಮಾಡಿದರೆ ನಾವು ತಿಳಿದುಕೊಳ್ಳಬಹುದಾಗಿದೆ. ಈಗಿನ ಕಾಲದಲ್ಲಿ ದ್ರವ್ಯವಂತರು ವಿವಾಹ ಸ್ತ್ರೀಯರ ಇಷ್ಟಕ್ಕೆ ಪ್ರತಿ ಹೇಳದೆ ದ್ರವ್ಯವನ್ನು ವಿನಿಯೋಗ ಮಾಡುವವನು ಯಾರೋ, ಅವನಿಗೆ ಸ್ತ್ರೀಯು ಸ್ವಾಧೀನಳಾಗಿರುತ್ತಾಳೆ. ಹಾಗೆ ದ್ರವ್ಯವಿಲ್ಲದ ಪಕ್ಷದಲ್ಲಿ ಅವಳ ಭಾವನೆಯನುಸಾರವಾಗಿ ನಡೆದುಕೊಳ್ಳುತ್ತ ಅವರು ನಡೆಸುವ ಕಾರ್ಯವನ್ನು ಕಂಡರೂ ಕಾಣದ ಹಾಗೆ ನಟಿಸುತ್ತಿರುವ ಪುರುಷನು ಯಾರೋ ಅವನಿಗೆ ಸ್ವಾಧೀನಳಾಗಿರುತ್ತಾಳೆ. ಇವು ಎರಡೂ ಇಲ್ಲದೆ ಅನುಕೂಲವಾದ ಸ್ತ್ರೀರತ್ನವು ಬೇಕಾದರೆ ಆತನಿಗೆ ವಿಶೇಷ ಪುಣ್ಯವಿರಬೇಕು. ಮುಖ್ಯವಾಗಿ ಧನಿಕರಾದವರ ಭಾರ್ಯೆಯರಿಗೆ ವಿದ್ಯಾಭ್ಯಾಸ ಯೋಗ್ಯವಾಗಿ ಕಲಿಸುತ್ತಿದೆಯಲ್ಲದೆ ಬಡವರಿಗೆ ಇಲ್ಲ. ಸ್ತ್ರೀ ವಿದ್ಯಾಭ್ಯಾಸದಿಂದ ಪ್ರಜೆಗಳಿಗೆ ಪ್ರಯೋಜನ ಉಂಟೆಂದು ಹೇಳುವ ಪುರುಷರಿಗೆಲ್ಲಾ ಈಗಿನ ಶಾಲೆಯ ಬಾಲಿಕೆಯರು ಬುದ್ಧಿ ವಿವೇಕಗಳನ್ನು ಕಲ್ಪಿಸುತ್ತಲಿದ್ದಾರೆ. ಆರಂಭದಲ್ಲೇ ವಕ್ರವಾಗಿ ಪರಿಣಮಿಸಿರುವದನ್ನು ನೋಡಿದರೆ ಇನ್ನೂ ಕೆಲವು ಕಾಲ ಹೋದಮೇಲೆ ಏನಾಗುವದೋ ಹೇಳುವದಕ್ಕಾಗುವದಿಲ್ಲ. ಸ್ತ್ರೀ ವಿದ್ಯಾಭ್ಯಾಸವು ಪ್ರಯೋಜನಕಾರಿಯಾದ್ದಾದರೂ ಬಾಲೆಯರನ್ನು ಪಾಠಶಾಲೆಗೆ ಕಳುಹಿಸುವದರಿಂದ ಅವರಿಗೆ ಸಹವಾಸ ದೋಷಗಳುಂಟಾಗಿ ವಕ್ರಮಾರ್ಗವ ಅನುವರ್ತಿಸುವದಕ್ಕೆ ಅವಕಾಶವಾಗುತ್ತಿದೆ. ಅದ್ದರಿಂದ ತಮ್ಮ ಪತ್ನಿಯರೊಡನೆ ಸುಖವಾಗಿ ಬಾಳಬೇಕೆಂಬ ಅಪೇಕ್ಷೆಯುಳ್ಳ ಬಾಲಕರು ಕೂಡ ತಮ್ಮ ಪತ್ನಿಯರನ್ನು ಸ್ಕೂಲಿಗೆ ಕಳುಹಿಸಿ ಕೊಡುವದನ್ನು ಪೂರ್ತಿ ನಿಲ್ಲಿಸಿ ಮನೆಯಲ್ಲಿಯೇ ವೃದ್ಧರಾದವರಿಂದ ವಿದ್ಯಾಭ್ಯಾಸವನ್ನು ಸಂಪಾದಿಸುವದು ಉಚಿತವಾಗಿ ಕಾಣುತ್ತದೆ.—ವೃ. ದೇ.

BANGALORE —Printed and published at the KARNATAKA PRESS, No 10, HOSPITAL ROAD, PETTAH—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಶಮವಿವಿಧಸ್ವತ್ವತ್ಯಪಗಮಾರ್ಥ್ಯ ಕರ್ನಾಟಕಪ್ರಕಾಶನಪರಾಭಿದಾಪ್ರಥಿತಸಾರಿಹಿತೈಕಶೋಭಿತಾ | ವ್ಯಗಾಂಕಹಿತವಾಸರೇನಿಹಿತಮುದ್ರಣಾಸಜ್ಜನಸ್ಸೈರ್ [illegible] |

Vol. XIX.]	BANGALORE—MONDAY, APRIL 18, 1892.	[No. 16.
ಸಂಪುಟ ೧೯.]	ಬೆಂಗಳೂರು:—ಸನ್ ೧೮೯೨ ನೇ ಇಸವಿ ಏಪ್ರೆಲ್ ೧೮ ನೇ ತಾರೀಖು ಸೋಮವಾರ.	[ಸಂಚಿಕೆ ೧೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ ಹಾಕಿಲ್ಲದೆ	ಪರಸ್ಥಳದವರಿಗೆ ಪೋಸ್ಟೇಜಿ
ಮುಂಗಡವಾಗಿ ಒಂದಕ್ಕೆ ವರುಷಕ್ಕೆ	8—0—0	9—0—0
ಹಿಂದಾಗಿ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ವರುಷಕ್ಕೆ	4—0—0	5—0—0
ಹಿಂದಾಗಿ ,,	5—0—0	6—0—0

ಈ ಪತ್ರಿಕೆಗೆ ಚಂದಾವನ್ನು ಪಾವತಿ ತಾರೀಖು ಮೊದಲು [illegible] ಸ್ಥಳಾಂತರವಾಗಿ ಹೋಗುವ ಚಂದಾದಾರರು ತಮ್ಮ ವಿಳಾಸವನ್ನು ತಿಳಿಸಬೇಕು. [illegible] ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. [illegible] ಬೇರೆ ಬೇರೆ ಅಂಗೀಕರಿಸಲ್ಪಡುವದು.

ಪ್ರಕಟನೆಯ ರಿವಾಜು.

ಮೊದಲನೆಯ ಸಾರಿ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯ ಸಾರಿ ಪಂಕ್ತಿ ಒಂದಕ್ಕೆ	೦—೧—೦

ಸೂ—ಎರಡಾವರ್ತಿಗಿಂತ ಹೆಚ್ಚಾಗಿ ಪ್ರಕಟಿಸತಕ್ಕ ಜಾಹೀರು ಮುಂತಾದ್ದಕ್ಕೆ ಪಂಕ್ತಿ ಒಂದಕ್ಕೆ ೧ ಆಣೆ [illegible]. ಈ ಪತ್ರಿಕೆಯ ಕಾರ್ಯ [illegible] ಪ್ರಕಟನೆಗಳನ್ನು [illegible] [illegible] ಪ್ರಕಟನೆಗಳನ್ನು [illegible] ಪತ್ರಿಕೆಗೆ ಕಳುಹಿಸಿ [illegible] ಪ್ರಕಟಿಸಲಾಗುವದು.

ADVERTISEMENTS.

NOTICE.

VAIDYASARA SANGRAHA

A TREATISE ON THE CHIEF OBJECTS OF

HINDU MEDICINE.

☞ *Price including Postage Rs 5-0-0*

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಕ್ಷೇಮವಾಗಿ ಮೊದಲಾದ [illegible] ರಾಜ ಮನ್ನಣೆ ಪಡೆದಿರತಕ್ಕವರ ದೇಶಕ್ಕೆ ಬರೆದುಕೊಂಡರೆ [illegible] ಕೊಡಲ್ಪಡುವದು. ಮೊದಲಿನ ಇಲ್ಲದ ದರಬಾರ್ ನಿಗೆ ಸಿಗೋ ಕೊಡಲ್ಪಡುವದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲು [illegible] ಪ್ರತಿ ಒಂದಕ್ಕೆ ರೂ 5—0—0

ಟಿ. ಎ. ವೆಂಕಟಾಚಾರ್,

ಬೆಂಗಳೂರ್, [illegible]

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಅನೇಕವಿಧ ಕೆಲಸಗಳು ಸುಲಭವಾದ ಕ್ರಯಕ್ಕೆ ಅಚ್ಚು ಮಾಡಿಕೊಡಲ್ಪಡುವುವು.

ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸ ಮುಂತಾದ್ದು ನಡೆಯುತ್ತದೆ. ಇತರ [illegible] ಕೆಲಸ [illegible] ಬರೆದು ತಿಳಿಸಬಹುದು.

ನೋಟೀಸ್.

ಗಣೇಶ ರಾಮಚಂದ್ರ ಆರ್ಕ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಜಾಗ್ರತೆಯಾಗಿ [illegible] ಪ್ಯಾಕ್ಟರಿ [illegible] ಕಮಿಷನ್ ತೆಗೆದುಕೊಂಡು ಕಳುಹಿಸಿಕೊಡಲು ಸಿದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ರತ್ನ ಮುಂತಾದ್ದುಗಳು, ಛತ್ರಿಗಳು, [illegible] [illegible], [illegible], ವಸ್ತ್ರಗಳು, [illegible], ಚಿತ್ರಗಳು, [illegible], ಕನ್ನಡಿಗಳು, ಗಡಿಯಾರಗಳು, [illegible], [illegible], ಆಫೀಸ್ [illegible], ಕಬ್ಬಿಣ [illegible], [illegible] [illegible] ಮುಂತಾದ [illegible] ಸಾಮಾನುಗಳು.

[illegible] ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಮೇಲೆ ಜವಾಬ್ ಕೊಡಲಾಗುವದು.

ವಿಳಾಸ,—ಗಣೇಶ ರಾಮಚಂದ್ರ ಆರ್ಕ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ಠಾಕೂರ್‌ದ್ವಾರ, ಪಾರೇಖ್ [illegible], ಮುಂಬೈ.

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ತಖ್ತೆ:—

೧೮೯೨ನೇ ಇಸವಿ ಏಪ್ರಿಲ್ ತಾರೀಖು ೧ ರಿಂದ ಏಪ್ರಿಲ್ ೧೬ ನೇ ತಾರೀಖು ವರೆಗೆ.—

ಅಕ್ಕಿ ವಸೂಲು ಮಾಡಿದ ಸ್ಥಳಗಳ ಸಂಖ್ಯೆ	...	81
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	36½
ನಡೆದಿರುವ ಬಿಲ್ಲೆ ಸೇರು	...	45
ಒಟ್ಟು	..	81½
ಆಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	...	18½
ಖರ್ಚಾದ ಅಕ್ಕಿ ಸೇರು	...	31
ಒಟ್ಟು	...	32

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ.

ಅನಾಥರು	...	7
ಸಂಸ್ಕೃತ ವಿದ್ಯಾರ್ಥಿ	...	5
ಇಂಗ್ಲಿಷ್ ಓದತಕ್ಕ ವಿದ್ಯಾರ್ಥಿಗಳು	...	7
ಪೆಟ್ಟಿಗೆ ಹೊರತಕ್ಕ ಆಳುಗಳ, ಮೊದಲಾದ ಪರ್ಯಾಟಕರ ಸಂಖ್ಯೆ		16
ಸ್ವಯಂಪಾಕದವರು	...	27
ಒಟ್ಟು	...	62

THE MONEY MARKET.

ಮದರಾಸ್, ಶನಿವಾರ, ತಾರೀಖು 16 ನೇ ಏಪ್ರಿಲ್ 1892.

ಸೇಕಡ 4ರೂ, ಬಡ್ಡಿಯ ಗವರ್ನಮೆಂಟ್ ಪತ್ರಗಳು, ರೂಪಾಯಿ ೧೦೦ಕ್ಕೆ 106-10-0 ರಿಂದ 107-2-0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತ್ತು 916 ರಿಂದ ಮೇಲೆ 922 ವರೆಗೆ.

[illegible] ಬ್ಯಾಂಕ್ ಷೇರುಗಳು (100) ರೂ 165 ರಿಂದ 170 ವರೆಗೆ.

ಸವರೀನುಗಳು, 15—12—0

ಬ್ಯಾಂಕ್ ಹುಂಡಿಗಳು ಲಂಡನ್ ಪಟ್ಟಣಕ್ಕೆ ರೂ ೧ಕ್ಕೆ

6 ತಿಂಗಳ ಮುದ್ದತಿಗೆ, 1s. 3 9/32 *d.*

ದರ್ಶನ 4 ತಿಂಗಳ ಮುದ್ದತಿಗೆ, 1s. 3 7/32 *d.*

ದರ್ಶನ ಹುಂಡಿಗೆ, 1s. 3¼ *d.*

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಇಷ್ತಿಹಾರನಾಮೆ.

ಈ ದಫ್ತರ ಪಶ್ಚಿಮ ಭಾಗದಲ್ಲಿ ಮನೆ ನಿವೇಶನಗಳ ವಿಕ್ರಯದ ವಿಷಯದಲ್ಲಿ ಸನ್ ೧೮೯೨ನೇ ಇಸವಿ ಮಾರ್ಚಿ ೭ನೇ ತಾರೀಖಿನಲ್ಲಿ ಕೊಡಲ್ಪಟ್ಟ ಸಿಟಿ ಮ್ಯುನಿಸಿಪಲ್ ಇಷ್ತಿಹಾರ ನಾಮೆಯೊಳು "ಪ್ರತ್ಯೇಕ ಸಮುದಾಯಕ್ಕೆ" ಎಂಬದಕ್ಕೆ ಬದಲು "ನಗರ್ತರು ಸೇರಿ ಪ್ರತ್ಯೇಕ ಸಮುದಾಯಕ್ಕೆ" ಎಂಬದಾಗಿ ಓದಿಕೊಳ್ಳಬೇಕಾದ್ದಲ್ಲದೆ "ಆಚಾರ ಸಮುದಾಯಕ್ಕೆ" ಯೆಂಬದರ ತರುವಾಯ ಬರುವ "ನಗರ್ತರು ಸೇರಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

M. ANNAJI RAO,
For President,
City Municipal Commission.

ಬೆಂಗಳೂರು
ಸಿಟಿ ಮ್ಯುನಿಸಿಪಲ್ ಆಫೀಸ್,
ತಾ|| ೧೫ನೇ ಏಪ್ರಿಲ್ ೧೮೯೨.

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ನಂ|| ೧೧.

ಇಷ್ತಿಹಾರನಾಮೆ.

ಬೆಂಗಳೂರು ಸಿಟಿ ವೆಸ್ಟರ್ನ್ ಯೆಕ್ಸ್‌ಟೆನ್ಷನ್, ಅಂದರೆ ಪಶ್ಚಿಮದ ಕಡೆ ಹೊಸದಾಗಿ ಮಾಡಲ್ಪಡುವ ಪೇಟೆಯಲ್ಲಿ, ೫೦ ಅಡಿಗಳ ಅಗಲ, ೧೨೪ ಅಡಿಗಳ ಉದ್ದ ಇರುವ ಬ್ಲಾಕ್ ನಿವೇಶನಗಳನ್ನು ಕೊಂಡುಕೊಳ್ಳುವದಕ್ಕೆ ಅಪೇಕ್ಷೆ ಯುಳ್ಳವರು ಆ ಬಗ್ಗೆ ತಮ್ಮ ದರಖಾಸ್ತುಗಳನ್ನು ಲಕೋಟೆಯಲ್ಲಿ ಹಾಕಿ ಸೀಲ್ ಮಾಡಿ, ಬ್ಲಾಕ್ ನಿವೇಶನಕ್ಕೆ ದರಖಾಸ್ತೆಂದು ಮೇಲೆ ಬರೆದು ಈ ತಿಂಗಳ ೩೦ನೇ ತಾರೀಖಿನಲ್ಲಿ ಅಥವಾ ತತ್ಪೂರ್ವ ಇದರಡಿ ರುಜು ಮಾಡಿರುವಂತವರಿಗೆ ತಲಪುವಂತೆ ಕಳುಹಿಸತಕ್ಕದ್ದು.

M. ANNAJI RAO,
For President,
City Municipal Commission.

ಸಿಟಿ ಮ್ಯುನಿಸಿಪಲ್ ಆಫೀಸ್,
ಬೆಂಗಳೂರು,
ತಾ|| ೧೫ನೇ ಏಪ್ರಿಲ್ ೧೮೯೨.

ನೋಟೀಸ್.

ಬೆಂಗಳೂರು ಸಿವಿಲ್ ಜಡ್ಜಿಯವರ ಕೋರ್ಟಿನಲ್ಲಿ.

೧೮೯೨ನೇ ಇಸವಿ ಮಿಸಲೆನಿಯಸ್ ನಂಬರ್ ೨.

ತುಮಕೂರಲ್ಲಿರತಕ್ಕ
ಪಿ. ವೆಂಕಟಾಚಾರ್ಯುಲು. } ಅರ್ಜಿದಾರ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ.

ತುಮಕೂರು ಸೇವಿಂಗ್ಸ್ ಬ್ಯಾಂಕಿಗೆ ತುಮಕೂರು ಲಕ್ಷ್ಮೀವಿಲಾಸ ಬ್ಯಾಂಕಿನಿಂದ ಸಲ್ಲಬೇಕಾಗಿದ್ದ ತುಮಕೂರು ಡಿಸ್ಟ್ರಿಕ್ಟ್ ಜಡ್ಜಿಯವರ ಕೋರ್ಟ್ ೧೮೯೦ನೇ ಇಸವಿ ಸಿವಿಲ್ [illegible] ನಂಬರ್ ಡಿಕ್ರೀ ಮೊದಲಾದವುಗಳ ಸಹಾ ಡಿಕ್ರೀ ಅಮಲ್ದಾರರಲ್ಲಿ ಈ ಅರ್ಜಿದಾರ ಸದರಿ ಲಕ್ಷ್ಮೀವಿಲಾಸ ಬ್ಯಾಂಕಿಗೆ ಕೊಡಬೇಕಾಗಿದ್ದ ಸಾಲದ ಮೊಬಲಗನ್ನು ಡಿಕ್ರೀ ಮಾಡಿಸಿಕೊಂಡಿದ್ದು ಸದರಿ ಮೊಬಲಗು ವಸೂಲಿ ಮಾಡತಕ್ಕದ್ದಕ್ಕೆ ಅರ್ಜಿದಾರ ಮೇಲೆ ಮಾಡಿದ್ದನ್ನು [illegible] [illegible] ಸದರಿ [illegible] ರವರ ಮೇಲೆ [illegible] ತುಮಕೂರ್ ಸಬ್‌ಜಡ್ಜಿಯವರ ಕೋರ್ಟ್ ೧೮೯೧ನೇ ಇಸವಿ ಜನವರಿ ೭ನೇ ನಂಬರಿನಲ್ಲಿ [illegible] [illegible] ಡಿಕ್ರೀ ಹೊಂದಿ ಆ ಡಿಕ್ರೀ ಅಮಲ್ದಾರಿಯಲ್ಲಿ ಈ ಕೋರ್ಟ್ ೧೮೯೧ನೇ ಇಸವಿ [illegible] [illegible]

ಈ ಅರ್ಜಿದಾರನಿಗೆ ತುಮಕೂರು ಡಿವಿಜನ್ ಪಬ್ಲಿಕ್ ವರ್ಕ್ಸ್ ಡಿಪಾರ್ಟುಮೆಂಟಿನಿಂದ ಸಲ್ಲಬೇಕಾಗಿದ್ದ ರಾಗಲವಾಡಿ ಮತ್ತು ಹೊಸಕೆರೆ ಕಾಂಟ್ರಾಕ್ಟ್ ಬಾಬತ್ತು ಮೊಬಲಗನ್ನು ಅರ್ಜಿದಾರನಿಗೆ ಕೊಡದಂತೆ ತುಮಕೂರ್ ಡಿವಿಜನ್ ಎಗ್ಸಿಕ್ಯುಟಿವ್ ಇಂಜಿನಿಯರಿಗೆ ಪ್ರೊಹಿಬಿಟರಿ ಆರ್ಡರ್ ಮಹಾಲ್ ಜಪ್ತಿ ಮಾಡಿಸಿ ಅನಂತರ ೧೮೯೧ನೇ ನವಂಬರ್ ೨೩ನೇ ತಾರೀಖಿನಲ್ಲಿ [illegible] [illegible] ೧೮೯೧ನೇ ಇಸವಿ ಅಪೀಲ್ [illegible] ನೇ ನಂಬರಿನಲ್ಲಿ ಅರ್ಜಿ ಹಾಕಿದಾಗ ಆಕ್ಷೇಪಿಸಿದ್ದು ವಜಾ ಆಗಿ ಆದಾಗ್ಯೂ ಯಾವ ಕ್ರಮವೂ ನಡೆಯಲ್ಲವಾಗಿ ಸದರೀ ಡಿಕ್ರೀ ಬಾರಿಯಾಗುತ್ತೆ. ಆದ್ದರಿಂದ ತುಮಕೂರ್ ಡಿವಿಜನ್ ಯೆಗ್ಸಿಕ್ಯುಟಿವ್ ಇಂಜನಿಯರಿಗೆ ಕೊಟ್ಟಿರತಕ್ಕ ಪ್ರೊಹಿಬಿಟರಿ ಆರ್ಡರ್ ವಿತ್ ಡ್ರಾ ಮಾಡಬೇಕೆಂದು ಅಪ್ಲಿಕೇಷನ್ ದಾಖಲ್ ಮಾಡಿ ಇದ್ದಾನೆ.

ಲೋಕಲ್ ಜಡ್ಜ್ಮೆಂಟ್ ಘೋಷಿ ಆಗಿರುವವರಿಂದಲೂ ಈ ಡಿಕ್ರೀ ಪಡೆಯಕ್ಕೆ ಹಕ್ಕು ಪ್ರಾಪ್ತಿಯಾಗಿರುವ ಸೇವಿಂಗ್ಸ್ ಬ್ಯಾಂಕ್, ಲಕ್ಷ್ಮೀವಿಲಾಸ ಬ್ಯಾಂಕ್ ಇವುಗಳ ಈಗಿನ ಏಜಂಟ್, ಸೆಕ್ರೆಟರಿ, ಲಿಕ್ವಿಡೇಟರ್, ರಿಸೀವರ್ ಯಾ ಷೇರ್‌ಹೋಲ್ಡರುಗಳು ಯಾರಾದರೂ ಗೊತ್ತಾಗುವದಿಲ್ಲವೆಂಬದಾಗಿ ಅರ್ಜಿದಾರ್ರು ಸದರಿ ಲಿಕ್ವಿಡೇಟರ್ ಕೇಳಿಕೊಂಡಿರುವದರಿಂದ ಈ ನೋಟೀಸನ್ನು ಸಕಲರಿಗೂ ತಿಳಿಯತಕ್ಕಬಗ್ಗೆ ಪ್ರಚುರ ಮಾಡಿದೆ. ಈ ಅಪ್ಲಿಕೇಷನ್ ಯಾತಕ್ಕೆ ಮಂಜೂರ್ ಮಾಡಕೂಡದೋ ಆ [illegible] ಕಾರಣವನ್ನು ತೋರಿಸತಕ್ಕಬಗ್ಗೆ ೧೮೯೨ನೇ ಮೇ [illegible] ನೇ ತಾರೀಖಿಗೆ ಗೊತ್ತು ಮಾಡಿದೆ. ಆದಿನ ಹಗಲು ೧೧ ಘಂಟೆಗೆ ಹಾಜರಾಗಿ ತಿಳಿಯಪಡಿಸತಕ್ಕದ್ದು.

ತಾರೀಖ್ ೧೫ನೇ ಏಪ್ರಿಲ್, ೧೮೯೨ನೇ ಇಸವಿ.

"ಟ್ರೂ ಆರ್ಡರ್"

S. SESHAGIRI ROW,
ಶಿರಸ್ತೇದಾರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 18, 1892.

೧೮೯೨ನೇ ಇಸವಿ ಏಪ್ರಿಲ್ ತಾ|| ೧೮ ನೇ ಸೋಮವಾರ.

REFORM IN BARODA.

ಈ ಸಂವತ್ಸರದಲ್ಲಿ ನಮಗೆ ಈ ಪ್ರಾಂತ್ಯದಲ್ಲಿ ಸ್ಥಾಪಿತವಾಗಿರುವ ಜಲದೌರ್ಲಭ್ಯ ಪ್ರಯುಕ್ತವಾದ ಕ್ಷಾಮವು ಅತ್ಯಧಿಕವಾಗಿರುವದರಿಂದ ಈ ಸಮಯದಲ್ಲಿ ಜನರ ಕ್ಷಾಮನಿವಾರಣಾರ್ಥ ಯೆಲ್ಲಿ ಯಾರೇನು ಮಾಡಿದಾಗ್ಯೂ, ಅದು, ನಮಗೆ ಸ್ವಾನುಭವದಿಂದುಂಟಾದ ದುಃಖದ ಹೃದಯಾವ್ಯಾಧಿಯನ್ನು ಶಮನ ಮಾಡತಕ್ಕದ್ದಾಗಿರುವದರಿಂದ ಅದು ಕೊಂಚವಾದರೂ ಮುಖಕರವಾಗಿಯಾದರೂ ಕ್ಷಾಮಾತುರರಾದ ನಮ್ಮ ಬಳಲಿಕೆಯು ನಿವೃತ್ತಿಸಿಕೊಂಡು ಸ್ವಲ್ಪ ವಿಶ್ರಾಂತಿಸುಖವನ್ನನುಭವಿಸುವದು. ಹ್ಯಾಗಂದರೆ—ಸಂಪತ್ಪ್ರಭವ ವ್ಯಾಪಾರಗಳಲ್ಲಿ ಈ ಮೈಸೂರುರಾಜ್ಯಕ್ಕೆ ಸಮಾನವಾಗಿರುವ ಅಥವಾ ಕೆಲವು ಭಾಗದಲ್ಲಿ ಅಧಿಕವಾಗಿರುವ ಬರೋಡಾ ರಾಜ್ಯವು ಅದರ ಪ್ರಕೃತ ಮಹಾರಾಜರವರ ಪಾಲನೆಯಲ್ಲಿ ನಿತ್ಯಸಂತುಷ್ಟವಾಗಿ, ದೈನಂದಿನಾಭಿವೃದ್ಧಿಯು ಹೊಂದುತಲಿರುವುದು ಬಹುಮುಖವಾಗಿ ತಿಳಿಯಬರುತಿದೆ. ಬರೋಡ ರಾಜಧಾನಿಗೆ ಶಾಶ್ವತವಾದ ಜಲವಸತಿಯು ಕಲ್ಪಿಸುವದಕ್ಕಾಗಿ ಈಚೆಗೆ ೩೦ ಲಕ್ಷ ರೂಪಾಯಿಗಳ ತನಕ ಖರ್ಚು ಮಾಡಿ ಆ ಸರ್ಕಾರದವರು ಕಟ್ಟಿಸಿರುವ ನೀರಾವರಿ ಕಟ್ಟದ ಕಾಮಗಾರಿಯು ಪೂರೈಸಿದ ಕಾಲದಲ್ಲಿ ಗಾಯಕವಾಡ ಮಹಾರಾಜರವರು ಮಾಡಿದ ಪ್ರಸಂಗದಿಂದ, ತಾವು ಪಟ್ಟಾಭಿಷಿಕ್ತರಾದ ಕಾಲದ ಮೊದಲು, ಇದುವರಿವಿಗೆ, ಅಂದರೆ ಗತ ೧೫

ಸಂವತ್ಸರಂಗಳ ಕಾಲದಲ್ಲಿ ದೇಶ ಜನ ಯೋಗಕ್ಷೇಮ ನಿಮಿತ್ತಕಗಳಾದ ಅಭಿವೃದ್ಧಿಗಳನ್ನೂ ನೂತನ ಯೋರ್ಪಾಡುಗಳನ್ನೂ ಸಂಗ್ರಹಿಸಿ ತಿಳಿಸಿ, ಮುಂದೆ ತಾವು ಉದ್ದೇಶಿಸಿರುವವಂ ಸೂಕ್ಷ್ಮವಾಗಿ ಸೂಚಿಸಿರುತ್ತಾರೆ. ಗಾಯಕವಾಡಿಯವರು ಆ ಸಂದರ್ಭದಲ್ಲಿ ತಿಳಿಸಿದ ಪ್ರತಿಶಬ್ದವೂ ಪ್ರಜೆಗಳಿಗೆ ದೃಢವಾದ ಪ್ರತಿಪತ್ತಿಯನ್ನುಂಟು ಮಾಡತಕ್ಕದ್ದಾಗಿತ್ತಲ್ಲದೆ ಮಹಾರಾಜರವರು ದೈವಕೃಪಾಲಬ್ಧವಾದ ತಮ್ಮ ಕರ್ತವ್ಯವನ್ನೂ ಜವಾಬ್ದಾರಿಯನ್ನೂ ಸಂಪೂರ್ಣವಾಗಿ ತಿಳಿದು ವರ್ತಿಸುತಲಿರುವಂತೆ ಅದರಿಂದ ವ್ಯಕ್ತವಾಗುತಿದೆ. ಅನೇಕ ಜನ್ಮಾರ್ಜಿತ ಪುಣ್ಯವಿಶೇಷದಿಂ ಲಭಿಸಿರುವ ಪ್ರಕೃತ ಪದವಿಗೆ ಸದಸದ್ವಿವೇಕವೇ ಮುಖ್ಯ ಪ್ರಯೋಜನವಾಗಿರುತಿದೆ. ಆದುದರಿಂದ ಈ ಸಂದರ್ಭದಲ್ಲಿ ಒಬ್ಬ ಮಹಾರಾಷ್ಟ್ರ ರಾಜರಿಂದ ಘೂರ್ಜರರನುಭವಿಸುತಲಿರುವ ಸುಖ ಸಂತೋಷಗಳನ್ನು ಸ್ಮರಿಸಿ ಕೊಂಡು ಆನಂದಿಸುವೆವು. ಗಾಯಕವಾಡಿ ಮಹಾರಾಜರವರು ತಮ್ಮ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಯಲ್ಲಿ ಅತ್ಯಾಸಕ್ತರಾಗಿದಾರೆಂಬದಂ, ಅನೇಕ ಲಕ್ಷ ಪ್ರಜೆಗಳು ವಾಸವಾಗಿರುವ ರಾಜಧಾನಿಯಲ್ಲಿ ಶಾಶ್ವತವಾದ ಅಂದರೆ ಯೆಂಟು ವರುಷಗಳ ವರಿವಿಗೆ ಅವಿಚ್ಛಿನ್ನವಾಗಿ ಮಳೆ ಬಾರದಿದ್ದರೂ ಜನರಿಗೆ ಜಲಸಂಕಟ ವುಂಟಾಗದಿರುವಂತೆ ಮಾಡಿರುವ ಯೋರ್ಪಾಡು ಒಂದೇ ಬೇಕಾದಷ್ಟು ಸೂಚಿಸತಕ್ಕದ್ದಾಗಿರುತಿದೆ. ಜಲವಸತಿಯಂ ಕಲ್ಪಿಸಬೇಕಾದ ವಿಷಯವು ಸಾಬಕ್ ಖಂಡೇರಾವ್ ಮಹಾರಾಜರ ಕಾಲದ ಮೊದಲು ಆಲೋಚಿಸಲ್ಪಡುತಲಿದ್ದಂತೆ ಕಾಣುತಿದೆ. ಇದಕ್ಕಾಗಿ ಆಯಾ ಸಂದರ್ಭದಲ್ಲಿ ಬಹುವಿಧ ಯೋರ್ಪಾಡುಗಳು ಮಾಡಬೇಕೆಂದು ಉದ್ದೇಶಿಸಲ್ಪಟ್ಟದ್ದವು. ಪರಂತು ಅವುಗಳಲ್ಲಿದ್ದ ಕೆಲವು ಲೋಪಗಳಿಂದಲೂ, ಅವು ಬಹುಧನವ್ಯಯಸಾಧ್ಯವಾದವಾಗಿದ್ದದರಿಂದಲೂ, ಕಾರ್ಯತಃ ಉಪಕ್ರಮಿಸಲ್ಪಡಲಿಲ್ಲವು. ೧೮೮೫ನೇ ಇಸವಿಯಲ್ಲಿ ಪ್ರಕೃತ ನೀರಾವರಿ ಕಾಮಗಾರಿಯು ಪ್ರಥಮತಃ ಪ್ರಾರಂಭಿಸಲ್ಪಟ್ಟು ೯೦ನೇ ಇಸವಿಯಲ್ಲಿ ಪೂರ್ತಿಯನ್ನೈದಿದಂತೆ ತಿಳಿಯ ಬರುತಿದೆ. ಈಗ್ಯೆ ಒಂದು ಸಂವತ್ಸರ ಕಾಲವಾಗಿ ಅದರಿಂದಲೇ ಊರಿಗೆಲ್ಲ ನೀರು ಒದಗಿಸಲ್ಪಡುತಲಿದೆ. ಪರಂತು, ಈಗ ಸಿಗುವ ನೀರು ಕ್ರಮವಾಗಿ ಶೋಧಿಸಲ್ಪಟ್ಟು ಸ್ವಚ್ಛೋದಕವು ಜನರಿಗೆ ಲಭಿಸುವದಕ್ಕೆ ತಕ್ಕ ಯೋರ್ಪಾಡು ಮಾಡಲ್ಪಟ್ಟಂತೆ ಕೇಳಲಿಕ್ಕೆ ಸಂತೋಷಿಸುತ್ತೇವೆ. ಪ್ರಜಾಭರಿತವಾದ ದೊಡ್ಡದೊಡ್ಡ ಪಟ್ಟಣಗಳಲ್ಲಿ ಜನರಿಗೆ ಅಪೇಕ್ಷಿತವಾದದು ಉದಕವು. ಅದು ಅಭಾವವಾದರೆ ಅವರನುಭವಿಸುವ ಶ್ರಮವು ಅನಿರ್ವಚನೀಯವಾದುದಾಗಿರುತ್ತದೆ. ಅಂತಾ ಶ್ರಮವು ತಮ್ಮ ರಾಜಧಾನಿಯ ಪ್ರಜೆಗಳಿಗುಂಟಾಗದಿರುವದಕ್ಕಾಗಿ ಗಾಯಕವಾಡಿಯವರು ಮಾಡಿದ ಯೋರ್ಪಾಡಿನಿಂದ ಅವರಿಗೆ ಅವರಲ್ಲಿ ವಿಶೇಷ ಅನುಗ್ರಹ ವುಂಟಾದಂತೆ ಭಾವಿಸುತ್ತೇವೆ. ಜೀವನಾಧಾರವಾದ ಉದಕವು ಜನಗಳಿಗೆ ಆರೋಗ್ಯಪ್ರದವಾಗಿಯೂ, ಬಲವರ್ಧಕವಾಗಿಯೂ ಇರುವ ಬಗ್ಯೆ ಮಾಡಿರುವ ಯೋರ್ಪಾಡು ಶ್ಲಾಘ್ಯವಾಗಿರುತಿದೆ. ಗಾಯಕವಾಡಿ ಮಹಾರಾಜರವರಿಗೆ ಕೇವಲ ಪ್ರಸಿದ್ಧಪಟ್ಟಣಗಳನ್ನಭಿವೃದ್ಧಿ ಪಡಿಸಿ ಅವುಗಳಿಗೆ ವಿಶೇಷ ಪ್ರಾಶಸ್ತ್ಯವನ್ನುಂಟುಮಾಡ ಬೇಕೆಂಬವೇ ತಾತ್ಪರ್ಯವಲ್ಲವು. ತಮ್ಮ ರಾಜ್ಯದ ಪಟ್ಟಣಗಳಿಗೆ ಸಹಾಯಕವಾಗಿರುವ ಗ್ರಾಮಾಂತರಗಳ ಪುರೋಭಿವೃದ್ಧಿಯ ವಿಷಯದಲ್ಲಿ ಸಹ ದೃಢವಾದ ಅಭಿನಿವೇಶವುಳ್ಳವರಾಗಿರುತ್ತಾರೆ. ಅನೇಕ ಗ್ರಾಮಗಳು ನದಿಯ ಮತ್ತು ಭಾರೀ ಕೆರೆಗಳ ಆಸರೆಯುಳ್ಳವವಾಗಿರುವದರಿಂದ ಅವುಗಳಲ್ಲಿ ಜನರಿಗೆ ಜಲ ಕಷ್ಟವೆಂಬದು ಸ್ವಲ್ಪವೂ ಇರುವದಿಲ್ಲವು. ಯಾವ ಕಡೆಗಳಲ್ಲಿ ಜನರಿಗೆ ಜಲವಸತಿಯು ಬಹಳ ಅಪೇಕ್ಷಿತವಾಗಿರುತಿದೆಯೊ ಅಂತಾ ಪ್ರದೇಶಗಳಲ್ಲಿ ಜನರಿಗೂ ದನಗಳಿಗೂ ಧಾರಾಳವಾಗಿ ನೀರು ದೊರೆಯುವಂತೆ ಸರ್ಕಾರ್ ಲಾಗವಿನಲ್ಲೇ ಬಾವಿಗಳಂ ತೆಗೆಸಲಿಕ್ಕೆ ಬೇಕಾದ ಏರ್ಪಾಡುಗಳು ಮಾಡಲ್ಪಡುವವು. ಇದಕ್ಕಾಗಿ ನೂರು ಮಂದಿಗೆ ೪ ರೂಪಾಯಿಗಳ ಪ್ರಕಾರ ಖರ್ಚು ಮಾಡತಕ್ಕದ್ದೆಂದು ಉದ್ದೇಶಿಸಲ್ಪಟ್ಟಿರುತಿದೆ. ಗ್ರಾಮಾಭಿವೃದ್ಧಿಯ ವಿಷಯದಲ್ಲಿ ಗಾಯಕವಾಡಿಯವರು ಮಾಡಬೇಕೆಂದುದ್ದೇಶಿಸಿರುವ ಯೋರ್ಪಾಡನ್ನು ಪ್ರಾಯಶಃ ಕೆಲವರು ಇಂಗ್ಲಿಷ್‌ನವರು ಆಕ್ಷೇಪಿಸಿ ಸ್ವತಃ ಜನರು ಮಾಡಿಕೊಳ್ಳಬೇಕಾದ ಯೋರ್ಪಾಡುಗಳಿಗೆಲ್ಲ ಹೀಗೆ ಸರ್ಕಾರದವರು ಸಾಕ್ಷಾತ್ತಾಗಿ ಸಹಾಯ ಮಾಡಿದರೆ ಅವರು ದುರ್ನೀತರಾಗಲಿಕ್ಕೆ ಕಾರಣವಾಗುತಿದೆಂದು ನುಡಿಯಬಹುದು. ಪರಂತು ಮಹಾರಾಜರಿಗುಂಟಾಗಿರುವ ಅಪರಿಮಿತವಾದ ಪ್ರಜಾನುರಾಗವೇ ಅವರಂ ಪ್ರಸಕ್ತವಿಷಯದಲ್ಲಿ ಪ್ರೇರಿಸಿರುತಿದೆ. ಬರೋಡೆ ನಗರ ಪೌರಿಕರಾರೋಗ್ಯಾಭಿವೃದ್ಧಿಯ ವಿಷಯವು ಮಹಾರಾಜರವರ ಅವಧಾನವನ್ನಾಕರ್ಷಿಸಿರುವಂತೆ ತಿಳಿಯಬರುತಿದೆ. ಪ್ರಾಯಶಃ ನೇಟಿವ್ ರಾಜ್ಯಗಳೆಲ್ಲವು ಬಹುಕಾಲದ ಹಿಂದೆ ಆಗಿನ ಕಾಲ ದೇಶ ಪ್ರಜಾಭಿರುಚಿಗಳಿಗೆ ಅನುಗುಣವಾಗಿ ಕಟ್ಟಲ್ಪಟ್ಟವಾಗಿರುವದರಿಂದ ಅವು ಈಗಿನ ಕಾಲೋಚಿತವಾಗಿ ಬದಲಾಯಿಸಲ್ಪಡಬೇಕಾದದ್ದು ಅಪೇಕ್ಷಿತವಾಗಿರುತಿದೆ. ಈ ವಿಷಯವಂ ಕುರಿತು ಪ್ರಸ್ತಾವಿಸಿದಾಗ ಮಹಾರಾಜರವರು, ತಾವು ಈಗ್ಯೆ ಕೆಲವು ಕಾಲದ ಮೊದಲು ಮನದೊಳಾಲೋಚಿಸಿ ನಿಶ್ಚಯಿಸಿರುವ ನಮೂನೆಗಳಂತೆ ಕ್ಷಿಪ್ರದಲ್ಲಿಯೇ ರಾಜಬೀದಿಗಳು ಮೊದಲಾದವಂ ವಿಸ್ತರಿಸಿ ಕ್ರಮಪಡಿಸಬೇಕೆಂದಿವೇಯೆಂದು ಆಜ್ಞಾಪಿಸಿದರು. ಇವಲ್ಲದೆ ರಘುಪತಿ ವಾಲಿಗಳನೇಕರು ಏತದರ್ಥ ಮೊಕದ್ದಮ್ಮೆ ತಲ್ಪಮವರು. ಮತ್ತು ಇದಕ್ಕಾಗಿ ಯೋರ್ಪಾಟಾಗುವ ಒಬ್ಬ ಸ್ಯಾನಿಟರಿ ಆಫೀಸರರು ಗ್ರಾಮ ಪೌರಿಕಾರೋಗ್ಯ ವಿಚಾರಣೆಯಂ ಮಾಡಿಕೊಳ್ಳುವರು. ಇದಕ್ಕಾಗಿ ೧೦೦ ಮಂದಿಗೆ ಯೆಂಟು ರೂಪಾಯಿಗಳ ಮೊದಲು ಹತ್ತು ರೂಪಾಯಿಗಳ ತನಕ ಖರ್ಚುಮಾಡುವಂತೆ ವ್ಯವಸ್ಥೆಯಾಗಿರುತಿದೆ. ಮುಖ್ಯವಾಗಿ ಪಟನ್ ಜಾಗಗಳ ಪೋಲೀಸ್ ವಿಷಯದಲ್ಲಿ ಕರ್ಸರ್ವೇಸೀ ಘಂಡನ್ನು ವೃದ್ಧಿಪಡಿಸಿ, ಅನ್ಯಗಳ ವಿಚಾರಣೆಯು ಪಂಚಾಯತರಿಂದಲೂ ಒಬ್ಬ ಸಿವಿಲ್ ಸರ್ಜನ್ ಮ ಸ್ಯಾನಿಟರಿ ಕಮಿಷನರಿಂದಲೂ ಮಾಡಲ್ಪಡುವವು. ಹೀಗೆಯೇ ಇನ್ನೂ ಕೆಲವು ಏರ್ಪಾಡುಗಳಂ ಮಾಡುವದರ ಮೂಲಕ ಪಾರಿಶುದ್ಧ್ಯವಿಷಯಕವಾದ ಲೋಪಗಳು ನಿವೃತ್ತಿಸಲ್ಪಡುವವು. ಇದೇ ರೀತಿ ಪ್ರಜೆಗಳ ವಿದ್ಯಾಭಿವೃದ್ಧಿಯ ವಿಷಯದಲ್ಲಿ ಸಹ ಮಹಾರಾಜರವರು ಬಹಳ ಜಾಗರೂಕರಾಗಿದಾರೆಂದು ತಿಳಿಯಬರುತಿದೆ. ಅವರು ಯಾವಾಗಲು ಸಂಪೂರ್ಣಫಲಕಾರಿಗಳಾದ ಏರ್ಪಾಡುಗಳಂ ಮಾಡುವದರಲ್ಲಿ ಕುತೂಹಲವುಳ್ಳವರಾಗಿದಾರೆಯೇ ಹೊರ್ತು ಅಲ್ಪಪ್ರಯೋಜನಕರಗಳಾದ ವಿಷಯಗಳಿಂದ ತೃಪ್ತಿಯನ್ನೈದತಕ್ಕವರಲ್ಲವು. ಜನಗಳಿಗೆ ಶಾಸ್ತ್ರಜ್ಞಾನವಂ ವೃದ್ಧಿಪಡಿಸುವದರೊಡನೆ ಪ್ರಥಮಶಿಕ್ಷೆಗೂ ಬೇಕಾದಷ್ಟು ಪ್ರೋತ್ಸಾಹ ವುಂಟುಮಾಡಲ್ಪಡುತಲಿದೆ. ಸ್ತ್ರೀ ವಿದ್ಯಾಭಿವೃದ್ಧಿಯಂ ಕುರಿತು ಪ್ರಸ್ತಾವಿಸಿದ ಮೇಲೆ ಮಹಾರಾಜರವರು ತಿಳಿಸಿದರೇನಂದರೆ, ನನ್ನ ಪ್ರಜೆಗಳ ಪೈಕಿ ಹೀನದಶೆಯಲ್ಲಿರುವ ಕೃಷಿಜೀವಿಗಳಿಗೆ ಇನಾಂ ಮೊದಲಾದ ಉಚಿತ ಪ್ರೋತ್ಸಾಹಗಳ ಮೂಲಕ, ವಿದ್ಯಾ ಪ್ರಯುಕ್ತವಾದ ಜ್ಞಾನವನ್ನುಂಟುಮಾಡುವದರಲ್ಲಿ ನಾನೀಗ ಉದ್ದೇಶಿಸಿರುವದಕ್ಕಿಂತಲೂ ಪ್ರತ್ಯೇಕ ಯೋರ್ಪಾಡ್ಯಾವದೂ ಇರಲಾರದು, ಎಂದು ತಿಳಿಸಿದರು. ಈ ಉದ್ದೇಶದೊಡನೆ, ಯಾವ ಗ್ರಾಮದಲ್ಲಿ ಅಧಮಪಕ್ಷ ೧೬ ಮಂದಿ ಬಾಲಕರು ಕ್ರಮವಾಗಿ ಬರುತ್ತಾರೆಯೋ ಅಲ್ಲಿ ಒಂದು ಪಾಠಶಾಲೆಯನ್ನೇರ್ಪಡಿಸಿ ಉಪಾಧ್ಯಾಯರಿಗೆ ದ್ರವ್ಯಸಹಾಯವನ್ನೂ ಪಾಠಶಾಲೆಗೆ ಆವಶ್ಯಕಗಳಾದ ಇತರ ಸಾಮಗ್ರಿಗಳನ್ನೂ ಕೊಡುವಂತೆ ಮಹಾರಾಜರವರು ಹುಕುಂ ಮಾಡಿರುತ್ತಾರೆ. ಈ ಯೋಜನೆಯ ಪ್ರಕಾರ ಕಳೆದ ಎರಡು ತಿಂಗಳ ಕಾಲದೊಳು ೧೨೪ ಗ್ರಾಮಗಳಲ್ಲಿ ಪಾಠಶಾಲೆಗಳು ಸ್ಥಾಪಿಸಲ್ಪಟ್ಟವಲ್ಲದೆ ಆ ಬಗ್ಯೆ ಅನೇಕ ದರಖಾಸ್ತುಗಳು ಅದ್ಯಾಪಿ ಬರುತಲಿರುವಂತೆ ತಿಳಿಯಬರುತಿದೆ. ಪ್ರಜೆಗಳೀರೀತಿ ವಿದ್ಯಾಭಿವೃದ್ಧಿಯಂ ಹೊಂದಿ ಪ್ರವರ್ಧಮಾನರಾಗುವದರಿಂದ, ಅವರಿಗೆ ಸ್ವವಿಷಯಕವಾದ ಸುಬಿಕೆಯೂ, ಸರ್ಕಾರ್ ಆಡಳಿತದಲ್ಲಿ ವಿವೇಕಪೂರ್ವಕವಾದ ಶ್ರದ್ಧೆಯೂ ಉಂಟಾಗಬಹುದೆಂಬದಾಗಿ ಶ್ರೀಮನ್ ಮಹಾರಾಜರವರು ಬಹಳ ನಿರೀಕ್ಷಿಸುತ್ತಾರೆ. ಜನರಿಗಿಂತಾ ವಿಷಯಗಳಲ್ಲಿ ಅಕ್ಕರೆಯೂ ಅಭಿರುಚಿಯೂ ಉಂಟಾಗುವಂತೆ ಅವರಂ ಪ್ರೇರಿಸುವದಕ್ಕಾಗಿ ಮೊದಲು ಗ್ರಾಮ ಸಮುದಾಯದವರನ್ನಭಿವೃದ್ಧಿ ಪಡಿಸಬೇಕಾದುದು ಆವಶ್ಯಕವೆಂಬದಾಗಿ ಭಾವಿಸಲ್ಪಟ್ಟಿದೆ. ಇದಕ್ಕೆ ತಕ್ಕಂತೆ ಗ್ರಾಮ ಪಂಚಾಯತ ಕೋರ್ಟನ್ನೇರ್ಪಡಿಸಿ, ಪಟೇಲರ ತಲಬನ್ನು ಜಾಸ್ತಿ ಮಾಡಿರುತ್ತಾರೆ. ಗ್ರಾಮಪೋಲೀಸ್ ಯೋರ್ಪಾಡು ಮಹಾರಾಜಾ ಸರ್ಕಾರದವರ ಅವಧಾನಕ್ಕೀಗ ಮುಖ್ಯ ವಿಷಯವಾಗಿರುತಿದೆ. ಪ್ರಜೆಗಳು ಯಾವತರದ ದುರ್ಭರವಾದ ಸುಂಕ ಸಿದ್ದಾಯಗಳಿಂದ ಪೀಡಿತರಾಗಿ ಸಂಕಟಪಡುತಲಿರುವರೋ ತಾವತ್ಪರ್ಯಂತ ಮೇಲೆ ತಿಳಿಸಲ್ಪಟ್ಟ ಪ್ರಯೋಜನಕರಗಳಾದ ಯೋರ್ಪಾಡುಗಳು ಜರಗುವದು ಪ್ರಯಾಸವೆಂಬ ಅಂಶವನ್ನು ಮಹಾರಾಜರವರು ಸಂಪೂರ್ಣವಾಗಿ ಅರಿತವರಾಗಿ ಅನೇಕ ವಿಧ ಕಂದಾಯಗಳನ್ನವರು ವಜಾಮಾಡಿದರು. ಇನ್ನೂ ವಜಾ ಮಾಡಬೇಕೆಂಬ ಸಂಕಲ್ಪವುಳ್ಳವರಾಗಿರುವಂತೆ ತಿಳಿಯಬರುತಿದೆ. ಪ್ರಜೆಗಳಿಗೆ ದುಸ್ಸಹವಾದ ಮತ್ತು ಅವರಂ ತಲೆಯೆತ್ತಗೊಡಿಸದಂತಾ ಕಂದಾಯಗಳನ್ನು ಸರ್ಕಾರದವರು ಯಾಕೆ ಯಾವ ತನಕ ಅವರಿಂದ ಬಲಾತ್ಕಾರಪೂರ್ವಕ ವಸೂಲ್ಮಾಡುತ್ತಾರೆಯೋ ಅದುವರಿವಿಗೆ ಜನಗಳಿಗೆ ಶಾರೀರ ಮಾನಸಿಕಾಭಿವೃದ್ಧಿಯೂ, ಆತ್ಮರಕ್ಷಣಾಸ್ವಾತಂತ್ರ್ಯವೂ ಉಂಟಾಗಲಾರದೆಂಬದಂ ತಾವು ಚೆನ್ನಾಗಿ ಅರಿತಿರುವಂತೆಯೂ, ಆದುದರಿಂದ ಒಟ್ಟು ಸರ್ಕಾರ್ ಕಂದಾಯವನ್ನು ಕಡಮೆ ಮಾಡಬೇಕಾದದ್ದೂ, ಸಾಧ್ಯವಾದಷ್ಟುಮಟ್ಟಿಗೆ ಅದನ್ನು ಸಾಮಾನ್ಯೇನ ಪ್ರಜೆ ಅದರ ಭಾರವಂ ಯೆಲ್ಲರೂ ವಹಿಸುವಂತೆ ಮಾಡಬೇಕಾದದ್ದೂ, ಪ್ರತಿ ಮನುಷ್ಯನು ಯೇತಕ್ಕಾಗಿ ಯೆಷ್ಟು ಕೊಡುತ್ತಾನೋ ಆ ಅಂಶವನ್ನು ಗವರ್ನಮೆಂಟಿನವರೂ, ಕಂದಾಯದಾರನು ಸಹ ಚೆನ್ನಾಗಿ ತಿಳಿದುಕೊಳ್ಳುವಂತೆ ಸದರೀ ಕಂದಾಯ ತಗಾದೆಯನ್ನು ಸುಲಭಪಡಿಸಬೇಕಾದದ್ದೂ ನಮ್ಮ ಕರ್ತವ್ಯವಾಗಿರುತಿದೆಂತಲೂ ಗಾಯಕವಾಡಿ ಮಹಾರಾಜರವರು ಆಜ್ಞಾಪಿಸಿದರು. ಇಂತಾ ವಿಲಕ್ಷಣಾಭಿಪ್ರಾಯಗಳಿಗೆ ಅನುಗುಣವಾಗಿ ಮಹಾರಾಜರವರು ತಮ್ಮ ಸಂಸ್ಥಾನದಿಂದ ಅನ್ಯದೇಶಗಳಿಗೆ ರಫ್ತಾಗತಕ್ಕ ಸರಕುಗಳ ಮೇಲಿನ ತೆರಿಗೆಯನ್ನು ವಜಾ ಮಾಡಿ ಅಮದ್ ತೀರ್ವೆಯನ್ನು ಕೂಡ ನಿಬಂಧಿಸುವ ತಾತ್ಪರ್ಯವುಳ್ಳವರಾಗಿರುತ್ತಾರೆ. ಒಳದೇಶದಲ್ಲಿ ಅನೇಕ ಚಿಲ್ಲರೆ ಸುಂಕಗಳು ಇದುವರಿವಿಗೆ ವಜಾ ಮಾಡಲ್ಪಟ್ಟಿರುತಿವೆ. ಸರ್ಕಾರೀಯಾಗಿ ಒಂದು ಅಗ್ರಿಕಲ್ಚರಲ್ ಬ್ಯಾಂಕನ್ನು ಸ್ಥಾಪಿಸಿ ಅದರಲ್ಲಿ ರೈತರಿಗೆ ವ್ಯವಸಾಯಾಭಿವೃದ್ಧಿಯ ಬಗ್ಯೆ ಧಾರಾಳವಾಗಿ ತಕಾವಿ ಅಡ್ವಾನ್ಸ್ ಕೊಡುವಂತೆ ಯೋರ್ಪಾಡು ಮಾಡುವವರಾಗಿದಾರೆ. ನಾಲಾ ಕಾಮಗಾರಿಗಳು ಕ್ಷಿಪ್ರದಲ್ಲಿಯೇ ಉಪಕ್ರಮಿಸಲ್ಪಡುವವು. ಅದವಿಗಳು ತಕ್ಕ ವಿಚಾರಣೆಯೊಡನೆ ಸರ್ಕಾರ್ ತರಫಿನಲ್ಲಿ ರಕ್ಷಿಸಲ್ಪಡುವವು. ಅಲ್ಲಿಯಲ್ಲಿ ವ್ಯವಸಾಯ ಸಂಬಂಧವಾದ ಪರೀಕ್ಷೆಗಳು ಶಾಸ್ತ್ರಮರ್ಯಾದಾನುಸಾರ ಮಾಡಲ್ಪಟ್ಟು ಅದರ ಸಿದ್ಧಾಂತವೆಲ್ಲರಿಗೂ ಸ್ಪಷ್ಟವಾಗುವಂತೆ ತಿಳಿಸಲ್ಪಡುವವು. ಆ ದೇಶದ ಗನಿಗಳಲ್ಲಿ ದೊರೆಯುವ ಪದಾರ್ಥಗಳಂ ಕಂಡು ಹಿಡಿದು ತನ್ಮೂಲಕ ಉತ್ಪತ್ತಿಯು ವೃದ್ಧಿಯಾಗಲಿಕ್ಕೆ ಬೇಕಾದ ಆನುಕೂಲ್ಯಗಳನ್ನುಂಟುಮಾಡುವ ಪ್ರತಿಜ್ಞೆಯುಳ್ಳವರಾಗಿದಾರೆ. ಶ್ರೀಮನ್ ಮಹಾರಾಜರವರು ತಮ್ಮ ಪ್ರಜೆಗಳಿಗೆ ಕೊಟ್ಟ ಇವರಡಿ ಕಂಡ ಪ್ರತಿಜ್ಞಾರೂಪವಾದ ಅಭಯವು ಬಹಳ ಕೊಂತಾದತಕ್ಕದ್ದಾಗಿರುತಿದೆ. "ನನ್ನ ಪ್ರಜೆಗಳ ಸ್ವತಸ್ಸ್ವತಂತ್ರ್ಯಾಭಿವೃದ್ಧಿಯಲ್ಲಿಯೂ ರಾಜ್ಯಪಾಲನಾ ಕ್ರಮ ಪರಿಷ್ಕರಣದಲ್ಲಿಯೂ ನನ್ನ ಯಾವಚ್ಛಕ್ತಿಯಂ ಲೋಪವಿಲ್ಲದೆ ವಿನಿಯೋಗಿಸುತ್ತೇನೆ" ಎಂಬದು. ಒಂದುವೇಳೆ ಅದರಂತೆ ಕಾರ್ಯತಃ ಜರಗಲಿ, ಅಥವಾ ಜರಗದೆ ಹೋಗಲಿ, ಪ್ರಜೆಗಳ ಸುಖದುಃಖಗಳಿಗೆ ಕಾರಣಭೂತನಾದ ಪಾಲಕನಿಂದ ಹೃದಯಾಭ್ಯಂತರದಿಂದಾದ ಶಬ್ದಗಳಾದರೂ ಧಾರಾಳವಾಗಿ ಹೊರಟವಂ ಆನಂದದೊಡನೆ ಕೇಳಿ ಸಂತೋಷಿಸಿದ ಅಲ್ಲಿನವರ ಭಾಗ್ಯವು ಯೆಂದಿಗೂ ಕೊಂಡಾಡಲ್ಪಡದಿರಲಾರದು. ಹೀಗಿರುವಲ್ಲಿ ಪೂರ್ವಭಾವಿಯಾಗಿ ಮಾಡಿದ ವಾಗ್ದಾನಗಳನ್ನೆಲ್ಲ ಕೊರತೆ ಇಲ್ಲದಂತೆ ನೆರವೇರಿಸಿ ಪ್ರಜಾಸಂತೃಪ್ತಿಯನ್ನೆ ಅಹರ್ನಿಶವೂ ಕೋರುವ ಅರಸರ ಪಾಲನೆಯಲ್ಲಿರುವ ಪ್ರಜೆಗಳ ಸುಖ ಸಂತೋಷಗಳಿಗೆಮಿತಿಯಿರಲಾರದು. ಹೊಸದಾಗಿ ಸ್ಮಾಲ್‌ಕಾಜ್‌ಕೋರ್ಟ್ ಪದ್ಧತಿಯೂ, ಸಿವಿಲ್ ವ ಕ್ರಿಮಿನಲ್ ಮೊಕದ್ದಮೆಗಳಲ್ಲಿ ಚೀಫ್ ಮ್ಯಾಜಿಸ್ಟ್ರೇಟುಗಳೇರ್ಪಾಡೂ, ರೆವಿನ್ಯೂ ಮತ್ತು ಜುಡಿಷಲ್ ಅಧಿಕಾರಗಳಂ ಪ್ರತ್ಯೇಕಿಸುವದೂ, ಪಂಚಾಯತೀ ಕೋರ್ಟುಗಳ ವ್ಯವಸ್ಥಾಪನೆಯೂ, ಉದ್ದೇಶಿಸಿ ಜಾರಿಯಲ್ಲಿ ತರಲ್ಪಟ್ಟಂತೆ ಕೇಳುತ್ತೇವೆ. ಪ್ರಜೆಗಳನ್ನು ತಮ್ಮ ಅಂತರಂಗಕ್ಕೆ ವಿಷಯರನ್ನಾಗಿ ಮಾಡಿ ಅವರ ಪ್ರೀತಿ ಗೌರವ ವಿಶ್ವಾಸಗಳನ್ನಭಿವೃದ್ಧಿಪಡಿಸಿಕೊಳ್ಳಬೇಕೆಂಬ ಕೋರಿಕೆಯೂ, ತಮ್ಮ ಯೋರ್ಪಾಡುಗಳೆಲ್ಲವು ಪ್ರಜೆಗಳ ನ್ಯಾಯ್ಯವಾದ ವಿಮರ್ಶೆಗೆ ಒಳಪಟ್ಟಿರಬೇಕೆಂಬ ಅಪೇಕ್ಷೆಯೂ ಶ್ರೀಮನ್ ಮಹಾರಾಜಾ ಸ್ಯಾಯಾಜಿರಾಯರವರಿಗೆ ನಿರವಧಿಕವಾಗಿರುತಿದೆಂಬದಂ ಕೇಳಿ ನಾವು ಬಹಳ ಸಂತೋಷಿಸುತ್ತೇವೆ. ಪರಂತು ಮಹಾರಾಜರವರ ಕೋರಿಕೆಯು ಕಾರ್ಯತಃ ಅಷ್ಟೇನು ಪ್ರಯೋಜನಕರವಾಗಲಿಕ್ಕೆ ತಕ್ಕಂತೆ ಜನಗಳು ಅದ್ಯಾಪಿ ವಿದ್ಯಾವಂತರಾಗಿ ಅರ್ಹತೆಯನ್ನು ಸಿಕೊಂಡಿರುವಂತೆ ಕಾಣಿಸಲಿಲ್ಲವು. ಇದೇ ಅಂಶವನ್ನೇ ಮಹಾರಾಜರವರು ಸಹ ವ್ಯಥೆಯಾಗಿ ನುಡಿದು ಈ ಲೋಪನಿವಾರಣಾರ್ಥ ಬೇಕಾದ ಯೋರ್ಪಾಡುಗಳಂ ಮಾಡುತಲಿದಾರೆ. ಗಾಯಕವಾಡಿ ಮಹಾರಾಜರವರು ಈ ಸಂದರ್ಭದಲ್ಲಿ ದೂರಿದ ಪ್ರಸಂಗವು ರಾಜಾಜ್ಞಾರೂಪವಾದ ಮುಖ್ಯ ಶಾಸನವೆಂತೆಯೂ, ತಮ್ಮ ಭವಿಷ್ಯದುದ್ದೇಶ ಪ್ರಯತ್ನಗಳಂ ತಿಳಿಸಿ ಪ್ರಜೆಗಳಿಗೆ ನಂಬಿಕೆಯನ್ನುಂಟು ಮಾಡುವಂತಾ ಅಭಯಪ್ರದಾನವೆಂತೆಯೂ, ಸಮಾನ ಸ್ಥಿತಿಯಲ್ಲಿರುವ ಇತರರಿಗುಪದೇಶರೂಪವಾದುದಾಗಿಯೂ ಇರುತಿದೆ. ಯುರೋಪ್ ಖಂಡದಲ್ಲಿ ಸುಖ ಸಂಪದಭಿವೃದ್ಧಿಯಿಂದ ಪ್ರಸಿದ್ಧಿಯನ್ನೈದಿರುವ ಅನೇಕ ಉತ್ತಮ ರಾಜ್ಯಗಳಲ್ಲಿ ಗಾಯಕವಾಡಿಯವರು ಸ್ವತಃ ಸಂಚರಿಸಿ ಅಲ್ಲಿನ ಪ್ರಭುತ್ವ ಕ್ರಮವನ್ನೂ ರಾಜ್ಯಾಡಳಿತದಲ್ಲಿ ಅರಸರಿಗೂ ಪ್ರಜೆಗಳಿಗೂ ನೆರೆಗೊಂಡಿರುವ ಸುಯುಕ್ತ ಸಂಬಂಧ ಸ್ವರೂಪವನ್ನೂ ನೋಡಿ ತಿಳಿದುಕೊಂಡಿರುತ್ತಾರೆ. ಇವರ ದೇಶಾಟನದಿಂದುಂಟಾದ ಪ್ರಯೋಜನವು, ಪರ್ಷಿಯಾ ರಾಜ್ಯದ ಅರಸರಾದ ಷಾಯವರ ವಿಷಯದಲ್ಲಿ ವಿರುದ್ಧ ಫಲಪ್ರದವಾದಂತೆ ಆಗಲಿಲ್ಲವು. ಅವರು ಅನ್ಯ ದೇಶ ಸಂಚಾರ ಮಾಡಿ ಸಂಪಾದಿಸಿದ ಜ್ಞಾನವು ಸ್ವಪ್ರಜಾಭಿವೃದ್ಧಿಯಲ್ಲಿ ಅಸೂಯಾರೂಪವಾಗಿ ಪರಿಣಮಿಸಿ ತದ್ಭಂಗದಲ್ಲಿಯೇ ಪ್ರವೃತ್ತಿಯನ್ನುಂಟುಮಾಡುತ ಬಂತು. ಪರಂತು ಗಾಯಕವಾಡಿ ಮಹಾರಾಜರವರ ವಿಷಯದಲ್ಲಿ ಸದರೀ ಜ್ಞಾನವು ಮತ್ತಷ್ಟು ವಿಕಾಸವಂ ಹೊಂದಿ, ವಿವೇಕದಿಂ ಉದಾರ ಪ್ರಯತ್ನಗಳಂ ಮಾಡುತ ತನ್ಮೂಲಕ ತಮ್ಮ ಪ್ರಜೆಗಳ ನೆಮ್ಮದಿಯಂ ಅಭಿವೃದ್ಧಿಪಡಿಸಿ ತಮ್ಮ ಹೆಸರೂ ಕೀರ್ತಿಯೂ, ಸರ್ವ ಸಮ್ಮತವಾದ ತಮ್ಮ ಪಾಲನಾಕ್ರಮವೂ ಊರ್ಜಿತವಪ್ಪ ಚಿರಸ್ಮರಣೀಯಗಳಾಗಿರುವಂತೆ ಮಾಡುವದರಲ್ಲಿ ಪ್ರಸರಿಸಿ ಅನಿರೀಕ್ಷಿತಫಲವಂ ಕೊಡತಕ್ಕದ್ದಾಗಿರುವದೆಂಬದು ನೇಟಿವ್ ಸಂಸ್ಥಾನಗಳ ಶ್ರೇಯೋಭಿಲಾಷಿಗಳಿಗೆಲ್ಲ ವಿಶೇಷ ಆನಂದ ಸಂದಾಯಕವಾಗದಿರಲಾರದೆಂದೆಣಿಸುತ್ತೇವೆ.

FRUITS OF FEMALE LIBERTY.

ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಎರಡುವಿಧ ವೃತ್ತಾಂತಗಳಿಂದ ಮೈಸೂರ್ ದೇಶದಲ್ಲಿ, ತತ್ರಾಪಿ ಮೈಸೂರಲ್ಲಿ ಸ್ತ್ರೀವಿದ್ಯಾಭ್ಯಾಸವು ಸಂಪೂರ್ಣ ಫಲದಾಯಕವಾದುದೆಂದು ಭಾವಿಸಬೇಕಾಗಿದೆ. ಮೊದಲನೆಯದು, ವಿವಾಹ ಸಂಬಂಧಪರಿತ್ಯಾಗ ಪ್ರವೃತ್ತಿ, ಎರಡನೆಯದು, ದೇಶಾಂತರಗಮನವು. ಈ ಎರಡು ಪ್ರಕರಣಗಳಲ್ಲಿಯೂ ಬಾಲೆಯರು ವಿದ್ಯಾಭ್ಯಾಸಪ್ರಯುಕ್ತವಾದ ರಸಾಸ್ವಾದನವಂಗೈದು ಗುಣದೋಷ ವಿಮರ್ಶೆಯಂ ಮಾಡುವವರ ಕಣ್ತೆರೆಸಿಕೊಂಡಿರುತ್ತಾರೆ. ಮೊದಲನೆಯವಳಿಗೆ ಪ್ರೌಢಿಮೆಯುಅಧಿಕವಾಗಿ ವಿವಾಹಿತ ಪತಿಯಂ ನಿರಾಕರಿಸಿ ಆತನ ವಿವಾಹವು ತನಗೆ ಅನಭಿಮತವಾದುದರಿಂದ ಅವನ ಸಹವಾಸವು ತನಗಾವಶ್ಯಕವಿಲ್ಲವೆಂದು ನ್ಯಾಯಸ್ಥಾನದಲ್ಲಿ ಬಹಿರಂಗವಾಗಿ ತನ್ನ ವಕೀಲನಮೂಲಕ ಆಕೆ ವಾದಿಸುವದಕ್ಕೆ ಪ್ರಯತ್ನ ಪಟ್ಟಿರುವಂತೆ ತಿಳಿಯಬರುತಿದೆ. ಎರಡನೆಯವಳು ಗ್ರಂಥಾವಲೋಕನ ಜನ್ಯವಾದ ವಿಷಯ ಪರಿಜ್ಞಾನವು ವಿವಿಧ ಮಾರ್ಗದಿಂದನುಭವಿಸಿ ನೋಡಬೇಕೆಂಬ ಕುತೂಹಲದೊಡನೆ ಅಭೀಷ್ಟಪುರುಷನ್ನನುವರ್ತಿಸಿ ಸ್ಥಾನಭ್ರಷ್ಟಳಾಗಿ ಹೊರಟುಹೋದಂತೆ ಕೇಳುತ್ತೇವೆ. ಇವರಿಬ್ಬರೂ ಚಿರಕಾಲ ಗುರುಕುಲ ವಾಸಮಾಡಿ ಸ್ವಾತಂತ್ರ್ಯದ ಸ್ವರೂಪವಂ ಚೆನ್ನಾಗಿ ಅರಿದು ಅದಂ ಸ್ವಾನುಷ್ಠಾನದೊಳು ತಂದುಕೊಂಡಂತೆ ಕಾಣುತಿದೆ. ಈಪ್ರಕಾರ ಯಿಬ್ಬರಲ್ಲಿ ಒಬ್ಬಾಕೆಯು, ತಾನು ವಿದ್ಯಾಭ್ಯಾಸದಿಂ ಪಡೆದ ಜ್ಞಾನವಂ ವಿನಿಯೋಗಿಸಲಿಕ್ಕೆ ನಾಟಕಶಾಲೆಯನ್ನೂ ಮತ್ತೊಬ್ಬಾಕೆಯು ನ್ಯಾಯಸ್ಥಾನವನ್ನೂ ಸಹಕಾರಿಗಳಾಗಿ ಏರ್ಪಡಿಸಿಕೊಂಡರು. ಏತದ್ರೂಪವಾದ ಪರ್ಯವಸಾನವನ್ನೇ ಅನೇಕ ಕುಟುಂಬವು ಮೈಸೂರಲ್ಲಿ ಪ್ರತಿಕ್ಷಣವೂ ನಿರೀಕ್ಷಿಸುತಲಿದೆ. ಈ ವಿಷವಾದ ಪರ್ಯವಸಾನವು ಸಾಮಾನ್ಯವಾದುದೆಂದೆಣಿಸಲಾಗದು. ಇದು ಬಹುದಿನವೂ ಸಾಧ್ಯವಾದುದಾಗಿರುತಿದೆ. ಅನ್ಯದೇಶೀಯರಂತೆ ಇತ್ತ ದೇಶೀಯರು ಕೂಡ ನೀತಿವರ್ತರಾಗಿ ಪ್ರವರ್ಧಮಾನರಾಗಲಿಕ್ಕೇನು ಮಾಡಬೇಕೆಂಬುದಾಗಿ ಕೆಲವರು ತಮ್ಮೊಳಗೆ ಚಿಂತೆ ಮಾಡಿಕೊಂಡ ಅದಕ್ಕೊಂದುಪಾಯವಂ ತಿಳಿಸುತ್ತಾರೇನೆಂದರೆ,—ಮೇಲೆ ಮಕ್ಕಳ ವರ್ತನವು ತಾಯಿಯಾದವಳಿಂದಲೇ ಕ್ರಮಪಟ್ಟು ವ್ಯವಸ್ಥೆಯನ್ನೈದಬೇಕಾಗಿರುವದರಿಂದ, ಅಂತಾ ತಾಯಿಯು ಒಳ್ಳೆಯವಳಾಗಿ, ತನಗೆ ಭಗವದನುಗ್ರಹದಿಂದ ಲಬ್ಧವಾದ ಮಕ್ಕಳ ನಡತೆಯನ್ನು ಲಕ್ಷಿಸಿ ಕ್ರಮಪಡಿಸುವದಕ್ಕೆ ಅವಳು ಸ್ವತಃ ಶಕ್ತಳಾಗುವಳಾದರೆ, ಹೊರಗಿನ ಸಹಾಯವ ನಿರೀಕ್ಷಿಸದಂತೆಯೇ ಅವಳ ಕುಟುಂಬ ಮಡಕ್ಕಳಿಗೆ ಳುಂಟಾಗುವದೆಂತಲೂ, ಯಾವತ್ಪರ್ಯಂತ ಸ್ತ್ರೀಯರು ಮುಗ್ಧರಾಗಿ ತಮ್ಮ ಕರ್ತವ್ಯಗಳನ್ನರಿಯದಿರುತ್ತಾರೆಯೋ ತಾವತ್ಪರ್ಯಂತ ಯಾವದೂ ಕ್ರಮಪಡಲಾರದೆಂತಲೂ, ಆದುದರಿಂದ ಮೊದಲು ಸ್ತ್ರೀಯರ ಜ್ಞಾನಾಭಿವೃದ್ಧಿಯಲ್ಲಿ ನಿಗೆ ಕೊಡಬೇಕಾದುದು ಅವಶ್ಯಕವೆಂಬ ಜ್ಞಾನವು ನಮ್ಮ ದೇಶಿಯರಿಗುಂಟಾಗಬೇಕೆಂತಲೂ, ಸ್ತ್ರೀಯರಂ ಬಿಟ್ಟು ಒಂದು ಜನಾಂಗವು ಎಂದಿಗೂ ಸುಖಪಡಲಾರದೆಂತಲೂ, ಅನೇಕರು ತಾತ್ಪರ್ಯಪಟ್ಟದಾರೆ. ಇದು ಪರೀಕ್ಷಿಸಲಿಕ್ಕೆ ಪ್ರವರ್ತಿಸಿದ ಹಿತವ್ರೇಶೀಯರಿಗೆ ಪ್ರಥಮ ಪ್ರವೇಶದಲ್ಲಿಯೇ ದಂತ ಭಗ್ನವಾದಂತೆ ಬಹಳ ವಿರುದ್ಧ ಫಲವುಂಟಾದದಂ ನೋಡಿ ಬಹಳ ವಿಷಾದಿಸುತ್ತೇವೆ. ವಿದ್ಯಾವತಿಯರಾದ ಹಿಂದೂ ಸ್ತ್ರೀಯರಿಂದ ದೇಶಕ್ಕುಂಟಾಗುವ ಪ್ರಯೋಜನವು ಈ ರೂಪವಾದುದಾಗಿರುವದಕ್ಕೆ ನಮ್ಮ ಶ್ರೇಯೋಭಿವೃದ್ಧಿಗೆ ಮುಂದೆ ಇಂತವರೇ ಕಾರಣಭೂತರಾದಾರಲ್ಲವೆ! ಮುಖ್ಯವಾಗಿ ಇಂತಾ ವಿರುದ್ಧಫಲದಾಯಕವಾದ ಸ್ತ್ರೀವಿದ್ಯಾವ್ಯಾಸಂಗದಲ್ಲಿ ಆಧುನಿಕ ವೈಲಕ್ಷಣ್ಯಾಭಿಮಾನಿಗಳು ಅವರದೊಡನೆ ಸಹ ಕರಿಸುತಲಿದಾರೆ. ಇಷ್ಟು ಕ್ಷಿಪ್ರದಲ್ಲಿಂತಾ ಫಲವನ್ನಿತ್ತ ವಿದ್ಯಾಭ್ಯಾಸ ಕ್ರಮವು ನಾಗರಿಕರೆನಿಸಿರುವ ಇಂಗ್ಲಿಷಿನವರಿಗೆ ಸಹ ದುರೂಹವಾದುದೆಂದು ಭಾವಿಸುತ್ತೇವೆ. ತನಗೆ ಮೊದಲು ಮಾಡಲ್ಪಟ್ಟ ವಿವಾಹವು ನಿರ್ಧಾರವಾಗಲಿಲ್ಲವೆಂದು ವಾದಿಸುವ ಪುತ್ರಿಯ ವಾಕ್ಯವಂ ಕೇಳಿ ಆಕೆಯ ತಂದೆಯು ಎಷ್ಟು ಆನಂದಪರವಶನಾಗಿದಾನೆಯೋ, ಅವಳ ಪಕ್ಷವನ್ನವಲಂಬಿಸಿ ವಾದಿಸುವದಕ್ಕಾಗಿ ಪ್ರವರ್ತಿರಿರುವ ವಕೀಲನ ನ್ಯಾಯ ವಿಚಕ್ಷಣೆಯು ಯೆಷ್ಟರ ಪ್ರಶಂಸಾರ್ಹವಾದುದೋ ಊಹಿಸಲಸಾಧ್ಯವಾದುದಾಗಿರುತಿದೆ. ಇವರಿಬ್ಬರೂ ಇವರಿಂದುಂಟಾಗುವ ಮುಂದಿನ ಅನರ್ಥಗಳನ್ನೂ, ಹಿಂದೂ ಸಮೂಹಕ್ಕುಂಟಾಗುವ ಮಾನಹಾನಿಯನ್ನೂ ಅನಾದಿಸಿದ್ಧಗಳಾದ ಶಾಸ್ತ್ರ ಸಂಪ್ರದಾಯಗಳಿಗುಂಟಾಗುವ ಹ್ರಾಸವನ್ನೂ ಸ್ವಲ್ಪವೂ ಭಾವಿಸದೆ ಹೋದರು. ಈ ರಾಜ್ಯವು ಬಹುಕಾಲ[illegible]ದಲು ಕ್ರಮ ಕ್ರಮವಾಗಿ ಅಭಿವೃದ್ಧಿಗೆ ಬಂದಿದೆ ಯೆಂಬದಕ್ಕೆ ನಿದರ್ಶನವಾಗಿ ವಿಚಿತ್ರಗಳಾದ ಸದರೀ ಎರಡು ಮೊಕದ್ದಮೆಗಳು ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳ ಪರಿವಿಗೆ ಹೋಗಿರುವದರಿಂದ ಅವುಗಳ ಪರ್ಯವಸಾನವನ್ನು ಆದರದೊಡನೆ ನಿರೀಕ್ಷಿಸುತಲಿದೇವೆ. ಮುಂಬೈ ರುಕ್ಮಾಬಾಯಿಯ ಮೊಕದ್ದಮೆಗಿಂತಲೂ ಇವು ವಿಜಾತೀಯವಾದವಾಗಿಯೂ, ಸ್ಥಳದವರಿಗೆ ತತ್ರಾಪಿ ಬ್ರಾಹ್ಮಣ ಸಮೂಹಕ್ಕೆ ಮುಖ್ಯವಾದವಾಗಿಯೂ ಇರುತಿವೆ. ಇದೇನಾದರು ವೈರೂಪ್ಯವಂ ಹೊಂದುವ ಪಕ್ಷಕ್ಕೆ ಹಿಂದೂ ವೈವಾಹಿಕ ಧರ್ಮಶಾಸ್ತ್ರಗಳು ಬುದ್ಧಾಂಗರದ್ದಾಗಿ ಹೋಗುವವಲ್ಲದೆ ಸನಾತನ ಸತ್ಸಂಪ್ರದಾಯಗಳೆಲ್ಲವು ಮೂಲತೋ ಹಾನಿಯನ್ನೈದಿ ಅನಿರ್ಲಕ್ಷಿತ ಮಹದನರ್ಥಗಳು ಪ್ರಾಪ್ತವಾಗುವದರೊಳೇನೂ ಸಂಶಯವಿರಲಾರದು.

Occasional Notes
ನೈಮಿತ್ತಿಕ ವಿಷಯನ್ಯಾಸ.

Dismissal of a charge —ರಾಮನಾಥಪುರದ ಅರಸರಮೇಲೆ ಮೋಸದ ಬಗ್ಗೆ ತರಲ್ಪಟ್ಟ ಮೊಕದ್ದಮೆಯು ಪ್ರಥಮ ವಿಚಾರಣೆಯಲ್ಲೇ ವಜಾ ಮಾಡಲ್ಪಟ್ಟದ್ದಾಗಿ ತಿಳಿಯಬರುತಿದೆ.

A report.— ಹರಿದ್ವಾರದಲ್ಲಿ ಶಾಂತಿಭೇದಿ ರೋಗ ತಲೆದೋರಿ ಯಾತ್ರಾರ್ಥಿಗಳು ಅಲ್ಲಿಗೆ ಹೋಗಕೂಡದೆಂಬ ನಿರ್ಬಂಧ ಮಾಡಲ್ಪಟ್ಟದರಿಂದ ತಮಗೆ ೮,೫೦,೦೦೦ ರೂಪಾಯಿಗಳ ನಷ್ಟ ಉಂಟಾಯಿತೆಂದು ಅಲ್ಲಿನ ಗುರುಪೀಠದವರು ಇಂಡ್ಯ ಗವರ್ನಮೆಂಟಿನ ಮೇಲೆ ದಾವೆ ತರುವವರಾಗಿದಾರೆಂಬ ಪ್ರವಾದ ಹುಟ್ಟಿರುತಿದೆ.

Abuse of privilege.— ಮದರಾಸ್ ಮತ್ತು ದಕ್ಷಿಣ ಇಂಡಿಯಾ ರೈಲ್ವೆಗಳ ಪ್ರಯಾಣ ನೌಕರಿಯಲ್ಲಿರುವ ಗಾರ್ಡುಗಳು ವಗೈರೆ ಕೆಲವರು ತಮ್ಮ ಸ್ವಂತ ಕೆಲಸಕ್ಕೆ ಬೇಕಾದ ಪದಾರ್ಥಗಳಂ ಚಾರ್ಜಿಲ್ಲದೆ ತಂದುಕೊಳ್ಳುವದಕ್ಕೆ ಅವಕಾಶ ಕೊಡಲ್ಪಟ್ಟಿರುತ್ತಾರೆಯಷ್ಟೆ. ಸದರೀ ಜನರು ತಮಗೆ ಬೇಕಾದ್ದಲ್ಲದೆ ತಮ್ಮ ಸ್ನೇಹಿತರಿಗೆ ಬೇಕಾದ್ದನ್ನು ಸಹ ತರುವದಾಗಿ ಅಧಿಕಾರಿಗಳಿಗೆ ತಿಳಿಯಬಂದು, ಆ ರೀತಿ ತರಲ್ಪಡುವ ಸಾಮಾನುಗಳಿಗೆ ಚಾರ್ಜು ವಸೂಲ್ಮಾಡುವದಲ್ಲದೆ ಕಠಿಣವಾದ ದಂಡನೆಗೆ ಸಹ ಗುರಿಯಾಗುವರೆಂದು ಎಚ್ಚರಿಸಲ್ಪಟ್ಟದಾರೆ.

Treasure trove.—ಪೆರಿ ಪ್ರಾಂತದಲ್ಲಿ ರೈಲ್ ರಸ್ತೆ ಹಾಕುವದಕ್ಕಾಗಿ ಕೂಲಿ ಜನರು ಅಗೆಯುತ್ತಿರುವಲ್ಲಿ ಒಂದು ಅಶ್ವತ್ಥ ಗಿಡದ ಕೆಳಗೆ ಹೂಳಲ್ಪಟ್ಟಿದ್ದ ಒಂದು ದೊಡ್ಡ ಮಣ್ಣಿನ ಗಡಿಗೆ ಸಿಕ್ಕಿ ಅದನ್ನು ತೆರದು ನೋಡಲಾಗಿ ಅದರೊಳಗೆ ಅಕಬರ್ ಪಾದಷಾ ಯವರ ಕಾಲದ ಘಂಗಾದ ಮೊಹರಾಗಳು ತುಂಬಿದ್ದವು. ಸದರೀ ಕೂಲಿ ಜನರು ಅದಂ ಯಾರಿಗೂ ತಿಳಿಸದೆ ತಮ್ಮೊಳಗೆ ಹಂಚಿಕೊಂಡರು, ಪರಂತು ಅವರ ಪೈಕಿ ಯೊಬ್ಬನು ತನಗೆ ಲಬ್ಧವಾದ ಭಾಗದಿಂದ ತೃಪ್ತನಾಗದೆ ಈ ಸಂಗತಿಯನ್ನು ಪೋಲೀಸಿನವರಿಗೆ ತಿಳಿಸಿದನು. ಅವರು ಬಂದು ಪತ್ತೆ ನಡೆಸಿದ್ದರಲ್ಲಿ ೬೬೫ ಮೊಹರಾಗಳು ಮಾತ್ರ ದೊರೆತವು. ಅದರ ಕ್ರಯ ೪,೧೬೫ ರೂಪಾಯಿಗಳು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟವು. ಒಟ್ಟು ಸಿಕ್ಕಿದವು ೧,೦೦೦ ವೆಂದು ಈಚೆಗೆ ಗೊತ್ತಾಯಿತು. ಇದನ್ನಪಹರಿಸಿದವರು ಪರಾರಿಯಾಗಿದಾರೆ,

ಚಂದಾದಾರರಿಗೆ.

ಇದರಿಂದ ಕೃತಪಡಿಸುವದೇನಂದರೆ:—

ಈ ಸಂವತ್ಸರದಲ್ಲಿ ಇದುವರಿವಿಗೆ ಮೂರು ತಿಂಗಳು ಕಳೆದು ನಾಲ್ಕನೆಯ ತಿಂಗಳು ನಡಯುತಲಿದೆಯಾಗಿ ಇನ್ನೂ ಸಾವಕಾಶ ಮಾಡದೆ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಮೊಬಲಗನ್ನು ಕೂಡಲೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

೪—೪—೯೨. ಪ್ರೊಪ್ರೈಟರ್.

LOCAL AND PROVINCIAL NEWS.
ಒಳದೇಶ ಮತ್ತು ತಾಲ್ಲೂಕ್‌ಜಾತಿವೃತ್ತಾಂತಗಳು.

The Kolar Goldfields.—ಕಳೆದ ತಿಂಗಳೊಳು ಕೋಲಾರದ ಬಂಗಾರದ ಗನಿಗಳಿಂದ ಒಟ್ಟು ೨,೦೩,೫೯೧ ರೂಪಾಯಿಗಳ ಬಂಗಾರ ತೆಗೆಯಲ್ಪಟ್ಟು ವಿಲಾಯತಿಗೆ ರವಾನಿಸಲ್ಪಟ್ಟವು.

The Dewan.—ಈ ಸಂಸ್ಥಾನದ ದಿವಾನರಾದ ಮಿ|| ಕೆ. ಶೇಷಾದ್ರಿ ಅಯ್ಯರ್ ಸಿ. ಎಸ್. ಐ. ಯವರು ಕಳೆದ ಬುಧವಾರದ ದಿನ ಮಧ್ಯಾಹ್ನ ೧ ಘಂಟೆಗೆ ಮೈಸೂರಿಂದ ಇಲ್ಲಿಗೆ ವಾಪಸ್ ದಯಮಾಡಿದರು.

The Late Resident.—ಇಲ್ಲಿ ರೆಸಿಡೆಂಟರಾಗಿದ್ದ ಸರ್ ಹ್ಯಾರಿ ಪ್ರೆಂಡರ್‌ಗ್ಯಾಸ್ಟ ಸಾಹೆಬರವರು ಕಳೆದ ಶುಕ್ರವಾರದ ದಿನ ರಾತ್ರಿ ಸ್ವದೇಶಗಮನೋದ್ಯುಕ್ತರಾಗಿ ಮದರಾಸಿಗೆ ಪ್ರಯಾಣ ಮಾಡಿದರು.

The new Resident.—ಕಳೆದ ಬೃಹಸ್ಪತಿವಾರದ ದಿನ ಮಧ್ಯಾಹ್ನ ೧ ಘಂಟೆಗೆ ದಕ್ಷಿಣ ಮರಾಠಾ ರೈಲ್ವೇ ಮಾರ್ಗವಾಗಿ ಇಲ್ಲಿನ ಹೊಸ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೆಬರವರು ದಯಮಾಡಿದರು. ಅವರನ್ನು ಬರಮಾಡಿಕೊಳ್ಳುವದಕ್ಕಾಗಿ ದಿವಾನರು ಮೊದಲಾಗಿ ಇಲ್ಲಿನ ವಿಶಿಷ್ಟ ಅಧಿಕಾರಿಗಳೂ ಸ್ಟೇಷನ್ ಪ್ಲಾಟ್‌ಫಾರಮಿನಲ್ಲಿ ಹಾಜರಿದ್ದು ಉಚಿತ ಮರ್ಯಾದೆಯೊಡನೆ ಬರಮಾಡಿಕೊಂಡರು. ತೋಪೆ ಮೊದಲಾದ ಪೂರ್ವೋಕ್ತ ಮರ್ಯಾದೆಗಳೆಲ್ಲವು ನಡೆಸಲ್ಪಟ್ಟವು. ಅದೇ ದಿನ ತಮ್ಮ ನೂತನಾಧಿಕಾರವನ್ನು ಸರ್ ಹ್ಯಾರಿ ಪ್ರೆಂಡರ್‌ಗ್ಯಾಸ್ಟ ಸಾಹೆಬರವರಿಂದ ವಹಿಸಿದರು.

Restitution of conjugal rights.— ನಾಗಪ್ಪನೆಂಬುವನು ತನ್ನ ಹೆಂಡತಿಯಮೇಲೆ ವಿವಾಹದ ಹಕ್ಕನ್ನು ಸ್ಥಿರಪಡಿಸಿಕೊಳ್ಳುವದಕ್ಕೋಸ್ಕರ ಮೈಸೂರು ಮುನಸೀಫ್ ಕೋರ್ಟಿನಲ್ಲಿ ದಾವಾ ಮಾಡಿದಾನೆ. ಆ ಬಾಲೆಯು ಒಬ್ಬ ಸೆಕೆಂಡ್‌ಕ್ಲಾಸ್ ಪ್ಲೀಡರ ಮಗಳು ಮತ್ತು ಮಹಾರಾಣಿಯ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾರ್ಜನೆ ಮಾಡತಕ್ಕವಳು. ಅವಳಕಡೆ ಲಾಯರು ಡಿಫೆನ್ಸ್ ಹೇಳುವದರಲ್ಲಿ ಬಾಲ್ಯಾವಸ್ಥೆಯಲ್ಲಿ ಮದುವೆಯಾದುದರಿಂದ ಅವಳು ಒಪ್ಪಿ ಮದುವೆ ಆಗಲಿಲ್ಲವಾದಕಾರಣ ವಿವಾಹವುಬದ್ಧವಲ್ಲವೆಂದು ಹೇಳಿದಾರೆ. ಇದರ ಫಲಿತಾಂಶದ ನಿರೀಕ್ಷಣೆಯಿಂದ ನಮ್ಮ ಅಭಿಪ್ರಾಯವನ್ನು ಮಾನಸಿಕಮಾಡಿರುವೆವು. ವೃ. ಬಂ.

Asoka's Edicts.— ಆರ್ಕಿಯೋಲಾಜಿಕಲ್ ಇಲಾಖಾ ಡೈರೆಕ್ಟರಾದ ಮಿ|| ಎಲ್. ರೈಸ್ ಸಾಹೆಬರು ಶಾಸನಾನ್ವೇಷಣದ ಬಗ್ಗೆ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ಹೋಗಿದ್ದ ಕಾಲದಲ್ಲಿ ಚಿನ್ನ ಹಗರಿ ಯೆಂಬ ಹೊಳೆಯ ದಡದಲ್ಲಿರುವ ಕೆಲವು ಗುಡ್ಡಗಳಮೇಲೆ ಅಶೋಕನಿಂದ ಕೊಡಲ್ಪಟ್ಟದ್ದ ಶಾಸನವು ಬರೆಯಲ್ಪಟ್ಟಿರುವದಂ ಕಂಡು ಹಿಡಿದು ಅದರಂತೆ ಪ್ರತಿಯೊಂದು ಪತ್ರಿಕೆಯಂ ತಯಾರ್ ಮಾಡಿ ಛಾಪಿಸಿದಾರೆಂದು ತಿಳಿಯಬರುತಿದೆ. ಇದು ಬಹಳ ಪುರಾತನ ಶಾಸನವಾಗಿರುತಿದೆಯಲ್ಲದೆ ಅಶೋಕನ ಪ್ರಭುತ್ವವು ಮೈಸೂರ್ ದೇಶದಲ್ಲಿ ಸಹ ವ್ಯಾಪಿಸಿದ್ದಂತೆ ಕಾಣುತಿದೆ. ಈ ಶಾಸನವು ಸ್ವಲ್ಪ ಹೆಚ್ಚು ಕಡಮೆಯಾಗಿ ಡಾಕ್ಟರ್ ಭೂಲರವರು ಭಾಷಾಂತರಮಾಡಿ ಮುದ್ರಿಸಿರುವ ರೂಪನಾಥ ಮೊದಲಾದವರ ಶಾಸನಗಳಿಗೆ ತಾಳೆ ಬೀಳುವಂತೆ ಮಿ|| ರೈಸಿಯವರು ತಿಳಿಸುತ್ತಾರೆ.

Treasure-trove.—ತಿರುಮಕೂಡ್ಲು ನರಸೀಪುರದ ತಾಲ್ಲೂಕು ಬನ್ನೂರು ರಾಮಸ್ವಾಮಿ ನಾಲೆಯ ಏರಿಮೇಲೆ ಫರಲಾಂಗಿನ ಕಲ್ಲುಗಳನ್ನು ತೆಗೆಯುತ್ತಿರುವಾಗ ಒಂದು ಕಪ್ಪೆ ಒಂದು ಕಲ್ಲು ಗಡಿಗೆ, ಒಂದು ಮಣ್ಣಿನ ಗಡಿಗೆ ಸಿಕ್ಕಿದವು. ಅವುಗಳ ಪೈಕಿ ಒಂದರಲ್ಲಿ ಕಂಠೀರಾಯಿ ಹಣಗಳು, ಒಂದರಲ್ಲಿ ವರಹಾಗಳು ತುಂಬಿದ್ದವು. ಅದನ್ನು ತೆಗೆದಮೇಲೆ ಅಲ್ಲಿದ್ದ ಆಳುಗಳೂ, ದಸಾಳಾಯವರೂ, ಕಂಟ್ರಾಕ್ಟದಾರ್ ಓವರ್‌ಸೀರ್ ಇವರೆಲ್ಲಾ ಆಳುವ ಪಾಲಿನವರಾಗಾಯಿತು ಎಸ್ಟೇರುಗಳವರಿಗೆ ಮುನಾಸಬ್ ಹಂಚಿಕೊಂಡು ಹೋದರೆಂದು ಒಂದು ಮೂಗರ್ಜಿ ತಾಲ್ಲೂಕಿಗೆ ಬಂದಮೇಲೆ ಅಮಲ್ದಾರರು ಹೋಗಿ, ಅಜಮಾಯಿಷಿ ಮಾಡುವಾಗ್ಯ ೩೦ ಕಂಠೀರಾಯಿ ಹಣ ಒಂದು ವರಹಾ ಮಟ್ಟಿಗೆ ಸಿಕ್ಕಿತು. ಅಮಲ್ದಾರರು ಅಲ್ಲಿ ಜವಾನರನ್ನು ಪಹರೆ ಇಟ್ಟು ಪತ್ತೇ ತರದೂದು ನಡೆಸುತ್ತಲಿದಾರೆ. ಅವರವರ ಕೈಗೆ ಸಿಕ್ಕಿದ ಹಣ ಹೊರೆಯುವದುತಾನೆ ದುರ್ಲಭ!—ವೃ. ಪ.

The weather.—ಈಚೆಗೆ ಒಂದುವಾರದ ಮೊದಲು ವರ್ಷ ಸೂಚನೆಗಳ್ಯಾವವೂ ಇಲ್ಲವು. ಬಿಸಿಲು ದಿನೇ ದಿನೆ ಜೋರಾಗುತ ಬರುತಲಿದೆ. ಈಪುರಿನ ಅನೇಕ ಪ್ರದೇಶಗಳೊಳು ಮನೆಗಳ ಭಾವಿಗಳಲ್ಲಿ ನೀರಿಲ್ಲದೆ ಪ್ರಜೆಗಳು ಪಡುವ ಶ್ರಮವು ಹೇಳಲಶಕ್ಯವಾಗಿದೆ. ಮ್ಯುನಿಸಿಪಾಲಿಟಿಯವರು ಅಲ್ಲಿಯಲ್ಲಿ ಭಾವಿಗಳಂ ಅಗೆಯಿಸುತಲಿದಾರೆ. ಈ ದೊಡ್ಡ ಷಹರಿಗೆ ಅಂತಾ ಭಾವಿಗಳು ಯೆಷ್ಟಾದರೆ ಈಡಾದೀತು. ಈವಿಷಯವಾಗಿ ಆಗಿಂದಾಗ್ಯ ಇಲ್ಲಿನವರಿಗೆ ಉಂಟಾಗುವ ಕಷ್ಟವು ಹ್ಯಾಗೆ ತಪ್ಪುವದೋ ನಾವರಿಯೆವು. ಆಹಾರ ಪದಾರ್ಥಗಳ ಧಾರಣೆಗಳು ಒಂದೇ ವಿಧವಾಗಿವೆ. ಸರ್ಕಾರೀ ಗೆಜೆಟಿನಲ್ಲಿ ಪ್ರತಿ ವಾರದಲ್ಲೂ ಘಾಯಿಷ್‌ಮಾಡಲ್ಪಡುವ ನಿರಖ್ ಪಟ್ಟಿಗೂ ತಾಲ್ಲೂಕ್‌ಕಚೇರಿನಿಂದ ನಮ್ಮ ಬಾತಮಿದಾರರು ಕಳುಹಿಸುವ ನಿರಖ್ ಪಟ್ಟಿಗೂ ಬಹಳ ವ್ಯತ್ಯಾಸ ಕಾಣಬರುತಿದೆ. ಇದರ ವಾಸ್ತವಾಂಶವನ್ನರಿಯುವದು ಕಷ್ಟಸಾಧ್ಯವಾಗಿದೆ.

A new Regulation.—ಇದುವರಿವಿಗೆ ಮೈಸೂರು ಸೀಮೆಯಲ್ಲಿ ಜಾರಿಯಲ್ಲಿರುವ ನ್ಯಾಯ ನಿಬಂಧನೆಗಳು ಸಾಲದೆಂಬ ಭಾವನೆಯೊಡನೆ ಇಂಡ್ಯ ಗವರ್ನಮೆಂಟಿನವರ ಪ್ರೇರಣೆಯ ಮೇಲೆ ಶ್ರೀಮನ್ ಮಹಾರಾಜಾ ಸರ್ಕಾರದವರು ವ್ಯಾಪಾರ ಸಂಬಂಧ ಸರಕುಗಳಮೇಲೆ ಮೋಸಕರಗಳಾದ ವ್ಯಾಪಾರ ಗುರ್ತುಗಳನ್ನು ಹಾಕಿ ಸದರೀ ಪದಾರ್ಥಗಳ ಅಸ್ಸಲ್ ತಯಾರೀದಾರರಿಗಿರುವ ತಯಾರೀ ಬಾಧ್ಯತೆಗೆ ಲೋಪ ವುಂಟುಮಾಡುವ ತಪ್ಪಿದನ್ನು ನಿರೋಧಿಸುವ ಬಗ್ಗೆ ಒಂದು ರೆಗ್ಯುಲೇಷನನ್ನು ಕ್ರಮದೊಳು ಜಾರಿಯಲ್ಲಿ ತರುವದಾಗಿದಾರೆ. ಈ ದೇಶದಲ್ಲಿ ನಾನಾವಿಧ ಪದಾರ್ಥಗಳನ್ನು ತಯಾರ್ಮಾಡುವ ಕೋಠಿಗಳೂ, ಕೋಠಿವಾಲರೂ ಅನೇಕರಿರುವ ಅಂಶವು ಜಗತ್ಪ್ರಸಿದ್ಧವಾಗಿಯೇ ಇದೆ. ಕೋಠಿಗಳಲ್ಲಿರುವಾಗ್ಯೆ ವ್ಯಾಪಾರ ಗುರ್ತನ್ನು ಕೆಡಿಸಿ ಸುಳ್ಳುಗುರ್ತನ್ನು ಹಾಕುವದಕ್ಕೆ ಹ್ಯಾಗೆ ಪ್ರಯತ್ನ ಪಡಬಹುದು? ಯೂರೋಪ್ ತಯಾರೀ ಪದಾರ್ಥಗಳಿಗೂ ದೇಶೀಯ ಪದಾರ್ಥಗಳಿಗೂ ಸ್ವರೂಪದಲ್ಲಿಯೇ ಬಹಳ ತಾರತಮ್ಯವಿರುತಿದೆ. ಹೀಗಿರುವಲ್ಲಿ ಇಂಗ್ಲಿಷ್ ವರ್ತಕರು ತಮ್ಮ ದೇಶದಲ್ಲಿ ಹಾಕಿ ಕಳುಹಿಸುವ ಗುರ್ತನ್ನು ಇಲ್ಲಿನವರು ಮಾರಿಸುವದರಿಂದವರಿಗೇನೂ ಪ್ರಯೋಜನ ವಿಲ್ಲವು. ಇದಲ್ಲದೆ ಈ ದೇಶದಲ್ಲಿ ತಯಾರಾಗಿ ಅನ್ಯ ದೇಶಗಳಿಗೆ ರಫ್ತಾಗುವ ಸರಕುಗಳು ಬಹಳ ಸ್ವಲ್ಪವಾಗಿರುತಿದೆ. ಹೀಗಿರುವಲ್ಲಿ ಪ್ರಸಕ್ತ ಹೊಸನಿಬಂಧನೆಯನ್ನು ಜಾರಿಯೊಳು ತಂದದ್ದರಿಂದೇನೂ ಪ್ರಯೋಜನ ಕಾಣಿಸಲಿಲ್ಲವು.

ಸುಮಾರು ಕಳೆದ ಎರಡು ವಾರದಲ್ಲಿ ಮೈಸೂರು ಪೇಟೆಯಲ್ಲಿರುವ ಅನುಭವಸ್ಥ ಸಂಬಾಳನ ಹೆಂಡತಿ ಗಂಡನು ಮನೆಯನ್ನು ಬಿಟ್ಟು ಆಕಸ್ಮಿಕವಾಗಿ ಹೊರಟು ಹೋದಳೆಂತಲೂ, ಅಲ್ಲಿನವರಿಗೂ ಪತ್ತೆ ಆಗಿಲ್ಲವೆಂತಲೂ ಸೂಚಿಸಲ್ಪಟ್ಟಿತ್ತು. ಈಗ ಕೆಲವು ದಿವಸಗಳೊಳಗೆ ಆಕೆಯು ಒಬ್ಬ ಬ್ರಾಹ್ಮಣನ ಜೊತೆಯಲ್ಲಿ ಬೆಂಗಳೂರು ಛತ್ರದಲ್ಲಿದ್ದಳೆಂದು ವರ್ತಮಾನ ಬಂದದ್ದರಮೇಲೆ, ಆಕೆಯ ಗಂಡನು ಶ್ರೀ ಶೃಂಗೇರಿ ಸ್ವಾಮಿಗಳವರ ಆರ್ ಅ ಎರಾಬಿಯರಾಗಿ ... ಪಟ್ಟಣದಲ್ಲಿರುವ ಒಬ್ಬ ಬ್ರಾಹ್ಮಣ ... ಟೆಲಿಗ್ರಾಫ್ ಮುಂತಾದ್ದನ್ನು ಕೊಟ್ಟು ಅವರನ್ನು ಕರೆದುಕೊಂಡು ಬನ್ನೀ ಎಂದು ಕಳುಹಿಸಿಕೊಟ್ಟನು. ಈ ಮಾ ... ಬೆಂಗಳೂರಿಗೆ ದಯಮಾಡಿ ಆ ... ಆಕೆಯನ್ನು ನೋಡಿದರೆಂತಲೂ, ... ಕರೆದುಕೊಂಡು ಬರಲಿ ಮೂರನೇ ದಿವಸ ಹೊರಟುಬಂದು ... ಭದ್ರಂಗದ ಆಕೆಯು ಬರುವದಿಲ್ಲವೆಂದು ಹೇಳಿದಂತೆ ತಿಳಿಸಿದರೆಂತಲೂ, ವರ್ತಮಾನ ಕೇಳುತ್ತೇವೆ. ಈಗ ಕೆಲವರು ಆಕೆಯು ಮದರಾಸಿನಲ್ಲಿರುತ್ತಾಳೆಂತಲೂ, ಮತ್ತೆ ಕೆಲವರು ಮಂಡ್ಯ ತಾಲ್ಲೂಕಿನ ಗ್ರಾಮಾಂತರದಲ್ಲಿರುತ್ತಾಳೆಂತಲೂ, ಹೇಳಿಕೊಳ್ಳುತ್ತಿರುವದನ್ನು ಆಕೆಯ ಗಂಡನು ಕೇಳಿ, ಆಕೆಯನ್ನು ... ಕರೆದುಕೊಂಡು ಹೋಗಿರುವ ಬ್ರಾಹ್ಮಣನನ್ನೂ ... ರಾಮಗಳ ನಗಗಳನ್ನು ಅಪಹರಿಸಿಕೊಂಡು ಹೋಗಿರುವುದರಿಂದ ಮೈಸೂರು ... ಕೋರ್ಟಿನಲ್ಲಿ ವಕೀಲರ ಮೂಲಕ ದಾವಾ ಮಾಡಿರುತ್ತಾನೆಂದು ವರ್ತಮಾನ ಕೇಳುತ್ತೇವೆ.—ವೃ. ಪ.

THE MYSORE GAZETTE.
ಮೈಸೂರು ಗೆಜೆಟ್

ಶ್ರೀಮನ್ ಮಹಾರಾಜರ ... ಸರ್ಕಾರದಿಂದ ಹೊರಡಿಸಲ್ಪಟ್ಟ ... ನೋಟೀಸುಗಳು

ನಂ ೭, ತಾ|| ೬ನೇ ಏಪ್ರಿಲ್—ಮೈಸೂರ್ ಡಿ| ಆಕ್ಟಿಂಗ್ ರೆವಿನ್ಯೂ ಕಮಿಷನರ್ ಮ್ಮ ನರಸಿಂಹಯ್ಯನವರು, ಬೇರೆ ಕೆಲಸದಮೇಲೆ ಕಳುಹಿಸಲ್ಪಟ್ಟಿರುವ ಮ|| ಎಂ. ಕೃಷ್ಣಯ್ಯಂಗಾರ್ರವರ ಬದಲು ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ, ತಿರುಮಕೂಡ್ಲು ನರಸೀಪುರ ತಾಲ್ಲೂಕು ಹನೇ ಗ್ರೇಡ್ ಅಮಲ್ದಾರ್ ಮ ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರಿಖ್ ಕೆಲಸನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ನಂ ೧೦, ತಾ|| ೪ನೇ ಏಪ್ರಿಲ್—ಸರ್ಕಾರವೇ ಇಸವಿ ಮಾರ್ಚ್ ೧೮ನೇ ತಾರೀಖಿನ ಮಧ್ಯಾನ್ಹ ... ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು, ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮಿಷನರ್ ಮ|| ಎನ್. ನರಸಿಂಹಯ್ಯಂಗಾರ್ರವರು ಕೊಟ್ಟು, ಅಸಿಸ್ಟೆಂಟ್ ಕಮಿಷನರ್ ಮ|| ಕೃಷ್ಣಯ್ಯಂಗಾರ್ರವರು ತೆಗೆದುಕೊಂಡಿರುತ್ತಾರೆ.

ನಂ. ೧೧—ಹಿರಿಯೂರ್ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಎನ್ ಸುಬ್ಬರಾಯರು ಅವರು ... ಉಪಯೋಗಿಸಿಕೊಂಡಿರಬಹುದಾದ ತಾರೀಖ್ ಲಾಗಾಯತು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹೊಸದುರ್ಗದ ಡೆಪ್ಯುಟಿ ಅಮಲ್ದಾರ್ ಕೆ. ಕಾಮಣ್ಣ ಬಿ. ಎ. ಯವರು, ಎನ್. ಸುಬ್ಬರಾಯರು ರಜಾಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಹಿರಿಯೂರ್ ತಾಲ್ಲೂಕು ಅಮಲ್ದಾರ್ ಮ ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವರು.

ನಂ. ೧೨, ತಾ|| ೧೧ನೇ ಏಪ್ರಿಲ್—ಬೆಂಗಳೂರು ಸಿಟಿ ಅಮಲ್ದಾರ್ ಬಿ. ನಾಗೇಶರಾಯರವರು ೧೮೯೨ನೇ ಇಸವಿ ಮಾರ್ಚ್ ೨೯ನೇ ತಾರೀಖ್ ಮೊದಲು ೩೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

SUMMARY OF NEWS
ವೃತ್ತಾಂತ ಸಂಗ್ರಹವು.

[illegible]

[illegible]

EXTRACTS

[illegible]

[illegible]

ಗಂಜಾಂ.

[illegible]

ಕರ್ನೂಲ್

[illegible]

ಬಳ್ಳಾರಿ

[illegible]

ಅನಂತಪುರ

[illegible]

ಕಡಪ

[illegible]

ತಂಜಾವೂರು

[illegible]

ಸೇಲಂ

[illegible]

ಕೊಯಮುತ್ತೂರು

[illegible] ಪಾಲ್ಲು ಸಿಕ್ಕುತಿವೆ ದನಗಳು ಸುಮಾರು ಸ್ಥಿತಿಯಲ್ಲಿವೆ.

BANGALORE —Printed and published at the KARNATAKA PRESS, No. 40, HOSPITAL ROAD, PETTAH—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧವೃತ್ತಿಪ್ರವೃತ್ತಿವರ್ಗವಾರ್ತಾಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ[illegible]

Vol. XIX.] BANGALORE—MONDAY, APRIL 25, 1892. [No. 17.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಏಪ್ರಿಲ್ ೨೫ ನೇ ತಾರೀಖು ಸೋಮವಾರ. [ಸಂಖ್ಯೆ ೧೭.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ. ಪೋಸ್ಟೇಜಿಲ್ಲದೆ.	ಪರಸ್ಥಳದವರಿಗೆ. ಪೋಸ್ಟೇಜಿಸಹಿತ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖು ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸತಕ್ಕವರಿಗೆ ಮಾತ್ರನೆ ಅಡ್ವಾನ್ಸ್ ದರದ ಮೇಲೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ 0—2—0

ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ 0—1—0

ಸೂ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟು ಕೆಲವ ಇನ್ಸರ್ಶನ್ ಮಾಡಬೇಕಾಗ್ಯೆ ಪಙ್ಕ್ತಿ ಒಂದಕ್ಕೆ ಗೊತ್ತುಮಾಡಿದಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಖಾಯಮಾಗಿ ಮುಂದುವರಿಯಬೇಕಾದ ಪ್ರಕಟನೆಗಳ ವಿಷಯದಲ್ಲಿ ಸ್ಪೆಷಲ್ ಕಂಟ್ರಾಕ್ಟು ಮಾಡಲ್ಪಡುವದು. [illegible] ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಿದ್ದಲ್ಲಿ ಅವರು ಪುನಃ ಕಾಗದ ಬರೆಯುವವರೆಗೆ ಅವು ಪ್ರಕಟಿಸುತ್ತಿರುವ [illegible] ಪ್ರಕಟಿಸಲ್ಪಟ್ಟ [illegible] ಸೋಮವಾರ [illegible] ಸರ್ಕ್ಯುಲೇಷನ್ [illegible] ಪ್ರಕಟನೆಗಳು [illegible] ಪತ್ರಿಕೆಗೆ ಕಳುಹಿಸತಕ್ಕ ಕಾಗದಗಳು [illegible] ಕ್ರಮವಾಗಿ [illegible] ಪ್ರಕಟಿಸಲಾಗುವದು. [illegible]

ADVERTISEMENTS.

NOTICE.

VAIDYASARA SANGRAHA

A TREATISE ON THE SCIENCE OF HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾಗಿರುವವರು ಮೊಬಲಗಿನೊಡನೆ ಈ ಕೆಳಗಿನ ವಿಳಾಸಕ್ಕೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ರೆವಾಸ್ತುಗಳಿಗೆ ಸಿಗೇ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಪಾಸಲ್ ರಿವೇಲ್ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮಹಾಲಕ್ಷ್ಮಿ ರೋಡ್ ೬೦ ನಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು.

ಇದರಲ್ಲಿ ಸಕಲ ಇಂಗ್ಲಿಷ್ ಕನ್ನಡ ಕೆಲಸ ಮಾತ್ರ ನಡೆಯುತ್ತದೆ. ಇತರ ಭಾಷೆಗಳನ್ನು ಸದರೀ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇವರಿಂದ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ರಕ್ತಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ಚಾಕುಗಳು, ಟ್ರಂಕುಗಳು, ಕಾಟ್ಲೇರಿ ಸಾಮಾನುಗಳು, ಪಟ್ಟೆಸೀರೆಗಳು, ಜರತಾರಿ ಕಾಲುಗಳು, ಹಸ್ತಕೃತ ಬಿಡಿ ಕಸೂತಿಗಳು, ಹುಡುಗರಿಗೆ ತಕ್ಕ ಆಟದ ಸಾಮಾನುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸ್‌ಗಳು, ಷರಟುಗಳು, ಅತ್ತರಗಳು, ಅತ್ಯುತ್ತಮವಾದ ರತ್ನಗಳು, ಬಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಕೇಸರಿ, ಕಸ್ತೂರಿ ಇತ್ಯಾದಿ ಇತರ ಸಾಮಾನುಗಳು.

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಟಿಕೆಟ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕರೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್.
ಠಾಕೂರದ್ವಾರ, ಪೋಸ್ಟ್ ಆಫೀಸ್, ಮುಂಬೈ.

THE BANGALORE SREENIVASA MANDIRAM

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ.—

೧೮೯೨ನೇ ಇಸವಿ ಏಪ್ರಿಲ್ ತಾರೀಖು ೧೭ರಿಂದ ೨೩ನೇ ತಾರೀಖು ವರೆಗೆ.—

ಅಕ್ಕಿ ವಸೂಲು ಮಾಡಿದ ಸ್ಥಳಗಳ ಸಂಖ್ಯೆ	...	87
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	32½
ಗತವಾರದ ಶಿಲ್ಕು ಸೇರು	...	32
ಜುಮ್ಲಾ	..	64½
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	..	16½
ಖರ್ಚಾದ ಅಕ್ಕಿ ಸೇರು	...	23½
ಜಾಮಾ ಬಾಕಿ	...	24½

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

ಅನಾಥರು	..	7
ವಿಶಿಷ್ಟ ವಿದ್ಯಾರ್ಥಿ	...	4
ಬಾಯಂ ಬರತಕ್ಕ ವಿದ್ಯಾರ್ಥಿಗಳು	...	4
ಕಟ್ಟಿಕೊಡತಕ್ಕ ಅರ್ಚಕ, ಪರಿಚಾರಕ ವಗೈರೆರ ಸಂಖ್ಯೆ		16
ಪ್ರಯಾಣಸ್ಥರು	...	16
ಜುಮ್ಲಾ	...	47

THE MONEY MARKET.

ಮದರಾಸು, ಶನಿವಾರ, ತಾರೀಖು ೨೩ ನೇ ಏಪ್ರಿಲ್ 1892.

ಸೇಕಡ ೪ರೂ. ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 107-5-0 ರಿಂದ 107-10 ರವರೆಗೆ.

ಮದರಾಸ್ ಬ್ಯಾಂಕಿನ ಷೇರುಗಳು, (500) ರೂಪಾಯಿಗಳ ಬಾಬತು 926 ಲಾಗಾಯಿತು 930 ವರೆಗೆ.

ಇನ್ಡಿಯನ್ ಆಫ್ ಮತ್ತು ಯೂನಿಯನ್ ಬ್ಯಾಂಕ್ ಷೇರುಗಳು, (100) ಬಾಬತು 165 ರಿಂದ 170 ವರೆಗೆ.

ಸವರೇನ್, 15—12—0

ಬ್ಯಾಂಕಿನ ಬಿಲ್ಲುಗಳು ಮಾರಲ್ಪಡುವ ದರಗಳು, ಲಂಡನ್ನಿಗೆ

6 ತಿಂಗಳ ಮುದ್ದತಿಗೆ, 1s. 3 13/32 d.

ಇಮೀಡಿಯೆಟ್ 4 ತಿಂಗಳ ಮುದ್ದತಿಗೆ, 1s. 3 11/32 d

ಟೆಲಿಗ್ರಾಫಿಕ್ ಟ್ರಾನ್ಸ್‌ಫರ್, 1s 3¼ d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, APRIL 25, 1892.

೧೮೯೨ನೇ ಇಸವಿ ಏಪ್ರಿಲ್ ತಿಂಗಳು ೨೫ ನೇ ಸೋಮವಾರ.

A CIRCULAR ORDER TO TEMPLE SERVANTS.

ಈ ಕಾಲದಲ್ಲಿ ಹಿಂದೂ ದೇವಾಲಯಗಳ ದುರ್ದಶೆಗೆ ಕಾರಣಗಳಾಗಿ ಏರ್ಪಟ್ಟಿರುವ ಅನೇಕ ವಿಷಯಗಳ ಪೈಕಿ ಯಾವದಂ ನಾವು ಬಹಳ ಮುಖ್ಯವಾದುದೆಂದು ಭಾವಿಸಿ ಅದಕ್ಕಾಗಿ ಅಂತಃ ಅನುತಪಿಸುತ ಅದರ ಪ್ರತೀಕಾರದ ಬಗ್ಯೆ ಕಾಲವಂ ನಿರೀಕ್ಷಿಸುತಲಿದ್ದೆವೋ ಅಂತಾ ಕಾಲವೀಗ ಸನ್ನಿಹಿತವಾಗಿ ತಾದೃಶ ವಿಷಯವು ಶ್ರೀಮನ್ ಮಹಾರಾಜಾ ಸರ್ಕಾರದವರ ಅವಧಾನಕ್ಕೆ ವಿಷಯವಾಗಿ ಅವರು ಆಬಗ್ಯೆ ಒಂದು ಪ್ರತಿಕ್ರಿಯೆಯಂ ಮಾಡಲಿತ್ನಿಸಿದಾರೆಂಬ ಅಂಶವನ್ನರಿತು ನಾವು ಬಹಳ ಸಂತೋಷಿಸುತ್ತೇವೆ. ಈಗ ಗವರ್ನಮೆಂಟಿನವರು ಮಾಡಬೇಕೆಂದಿರುವ ಏರ್ಪಾಡುಗಳಂ ಸಗುಣೋಪಾಸನೆಯಲ್ಲಿ ಭಕ್ತಿಶ್ರದ್ಧೆಯುಳ್ಳವರೆಲ್ಲರೂ ಸೇರಿ ಬಹುಕಾಲದ ಹಿಂದೆಯೇ ಮಾಡಬಹುದಾಗಿತ್ತು. ಆಗಲೇ ಅವರಾರೀತಿ ಮಾಡಿದ್ದರೆ ಈಗ ಗವರ್ನಮೆಂಟಿನವರ ಪ್ರವೇಶೋದ್ಯೋಗಗಳು ಜನಗಳಿಗೆ ಅತಿ ದಾರುಣವಾಗಿ ತೋರಲಾರವು. ಆಲಯ ಪ್ರತಿಷ್ಠೆಯು ಪುಣ್ಯ ಸಂಪಾದಕವೆಂಬದು ನಮ್ಮವರಿಗೆ ಬಹುಕಾಲದಿಂದ ಅನುಸರಿಸಿಬಂದಿರುವ ಭಾವನೆಯಾಗಿರುತ್ತದೆ. ಈ ಭಾವನೆಯೊಡನೆ ಅನೇಕರು ಅಂದರೆ ಸಂಸ್ಥಾನಾಧಿಪತಿಗಳು ಮೊದಲು ಭಿಕ್ಷುಕರತನಕ ತಮ್ಮ ತಮ್ಮ ಶಕ್ತ್ಯನುಸಾರ ಸಂಪತ್ತಿಗಳಿಗೆ ತಕ್ಕಂತೆ ಧನರೂಪವಾಗಿಯೂ, ಭೂರೂಪವಾಗಿಯೂ, ಆಭರಣ ರೂಪವಾಗಿಯೂ, ವಾಹನ ರೂಪವಾಗಿಯೂ ದೇವಾಲಯಗಳಿಗೆ ಸಹಾಯಗಳಂ ಮಾಡಿ ತಮ್ಮ ಕೀರ್ತಿ ಪ್ರತಿಷ್ಠೆಗಳನ್ನೂ ಅರ್ಜಿತವಡಿಸಿದರು. ಆ ಕಾಲದಲ್ಲಿ ಅವರ ಅಭೀಷ್ಟಗಳು ಕೂಡಲೇ ಸಿದ್ಧಿಸುತಲಿದ್ದದರಿಂದ ಅವರಿಗೆ ಅವುಗಳಲ್ಲಿ ವಿಶೇಷ ಪ್ರತಿಪತ್ತಿ ಯುಂಟಾಗಿತ್ತು. ಈಗ ಜನರಿಗೆ ತಾದೃಶ ಪ್ರತಿಪತ್ತಿ ಕಡಮೆಯಾಗುತ ಬಂದದಕ್ಕೆ ಅವರ ಇಷ್ಟಾರ್ಥ ಸಿದ್ಧಿಸದೆ ಹೋಗುವದೂ, ಆ ಪರಮಾವಶ್ಯಕವಾದ ಬಿಂಬ ಸಾನ್ನಿಧ್ಯವು ವ್ಯರ್ಥವಾಗಿರುವದೂ, ತಾದೃಶ ಅಸಾನ್ನಿಧ್ಯವು ಕ್ರಿಯಾಲೋಪವಂ ದಿನೇ ದಿನೇ ವೃದ್ಧಿಯನ್ನೈದುತಬರುವದೂ ಮುಖ್ಯ ಕಾರಣಗಳಾಗಿ ಏರ್ಪಟ್ಟವೆ. ಇಂತಾ ಕ್ರಿಯಾಲೋಪವೆಂಬದು ಮುಖ್ಯವಾಗಿ ದೇವಸ್ಥಾನದ ಅರ್ಚಕ ಪರಿಚಾರಕರಿಗೆ ಸಂಬಂಧಿಸಿದ್ದಾಗಿರುತಿದೆ. ತಥಾಪಿ ಅರ್ಚಕನ ಲೋಪವು ವಿಶುದ್ಧ ಫಲವಾಯಕವಾದುದೆಂದು ಭಾವಿಸತಕ್ಕದ್ದು. ಇಂತವರ ಅಜಾಗರೂಕತೆಯಿಂದಲೂ, ಅನಭಿಜ್ಞತೆಯಿಂದಲೂ, ಶಾಸ್ತ್ರೋಕ್ತರೀತ್ಯಾ ಭಗವದಾರಾಧನೆಯು ಪಕ್ಷ ಕಾಲಗಳಲ್ಲಿ ಜರುಗುವುದು ದುರ್ಲಭವಾಗಿದೆ. ಅರ್ಚಕನ ವರ್ತನವನ್ನಾಕ್ಷೇಪಿಸಿ ಬುದ್ಧಿಹೇಳತಕ್ಕಾದವರು, ಪಾರುಪತ್ತೇಗಾರರೂ, ಧರ್ಮಕರ್ತರೂ, ಸಾಮಾನ್ಯವಾಗಿ ಗ್ರಾಮಸ್ಥರೂ ಆಗಿರುವದರಿಂದ ಅವರೊಬ್ಬರಿಗೂ ಒಂದೊಂದು ಕಾರಣದಿಂದವರಲ್ಲಿ ಆವಶ್ಯಕತೆಯಿಲ್ಲದೆ ಹೋಗಿದೆ. ಪಾರುಪತ್ತೇಗಾರರಿಗೂ ಧರ್ಮಕರ್ತರಿಗೂ, ದೇವಸ್ಥಾನದಿಂದವನ್ನು ಉಪಜೀವನಕ್ಕೇನಾದರು ಬರುವದೇ, ಆದಿವಿನ ದೇವಾಲಯದ ಸ್ವತ್ವದ ಪೈಕಿ ಯಾವದಂ ಭೋಗ್ಯ ಮಾಡುವದೆಂಬ ಸ್ವಾರ್ಥಪರವಾದ ಆಲೋಚನೆಗಳುಂಟಾಗಿ ಇತರ ವಿಷಯಗಳಲ್ಲಿ ಅವರ ಮನವು ಪ್ರವೇಶಿಸಲೊಲ್ಲದು. ಗ್ರಾಮಸ್ಥರು ನಿವೇದಿತ ಪದಾರ್ಥಗಳು ಯಾವದಿನದ್ದಾಗಲಿ ತಮ್ಮ ಕೈಯಲ್ಲಿ ಬಿದ್ದರೆ ಸಾಕೆಂಬುವದ್ದರ ಶ್ರದ್ಧೆಯುಳ್ಳವರಾಗಿರುವದರಿಂದಲೂ, ಆಯಾ ಗ್ರಾಮಗಳಲ್ಲಿರತಕ್ಕವರಿಗೆ ಬೇರೆ ಜೀವನ ಮಾರ್ಗವಿಲ್ಲದೆ ಅವರದನ್ನೇ ನಂಬಿಕೊಂಡಿರುವದರಿಂದಲೂ ಅರ್ಚಕನನ್ನು ವಿರೋಧಿಸಿಕೊಳ್ಳಲಿಕ್ಕೆ ಅವರಿಗೆ ತಾತ್ಪರ್ಯ ವಿರುವದಿಲ್ಲವು. ಕರುಣಾಯ ಅರ್ಚಕನ ನಡತೆಯಂ ಕುರಿತು ತಿಳಿಸಬೇಕಾದವರ್ಯಾರು? ಸ್ಥಳಾಧಿಕಾರಿಗಳಲ್ಲವೆ? ಅವರು ದೇವಾಲಯಗಳಿಗೆ ಹೋಗುವದೇ ಅಪ್ರಿಯವು. ಕದಾಚಿತ್ ಅನ್ಯರ ಬಲವಂತದ ಮೇಲೆ ಹೋದಾಗ್ಯೂ ಅವರಿಗಲ್ಲಿ ನಡೆಯಲ್ಪಡುವ ರಾಜೋಪಚಾರಗಳಿಂದ ಸ್ವತಃ ಪ್ರೀತರಾಗಿ ತಮಗೇ ದೈವತ್ವವು ಪ್ರಾಪ್ತವಾಗಿದೆ ಎಂಬ ಭಾವನೆಯೊಡನೆ ಹಿಂದಿರುಗಿ ಬರುತ್ತಾರಾಗಿ ಅವರು ಅಂತಾ ಮರ್ಯಾದೆಗಳಂ ಕಾಡಿ ಬಿಡ್ಡುಕಲಿಬಿಡ್ಡು ಸುವರೇ ಹೊರತು ಆಲಯದ ನಡತೆಯನ್ನಾಕ್ಷೇಪಿಸಿ ಅದಂ ತೋರಗೊಡಿಸಿಕೊಳ್ಳಲಾರರು. ಏತಕೆನ ಅರ್ಚಕರು ಸ್ವತಂತ್ರರಾಗಿ ಅವರಮೇಲೆ ಅನ್ಯರ ನಿರ್ಬಂಧವಿಲ್ಲದೆ ಹೋಗುವದರಿಂದ ಕಡೆಗೆ ದೇವಸ್ಥಾನದ ಪೌರಹಿತ್ಯ ಗೃಹಕೃತ್ಯಗಳಿಗಿಂತಲೂ ಅಧಮವಾಗಿಯೂ, ಐಚ್ಛಿಕವಾದುದಾಗಿಯೂ ಏರ್ಪಟ್ಟಿತು. ಇನ್ನೂ ವಿಚಾರಿಸಲಾಗಿ, ಅನೇಕರಿಗೀಗ ದೇವಸ್ಥಾನಗಳಿಗೆ ಹೋಗುವದು ನಿಷ್ಪ್ರಯೋಜಕವೆಂಬ ಭಾವವು ಪ್ಯಾಗೆ ಹರಿದೋರಿದೆಯೋ ತದ್ವತ್ ಅರ್ಚಕರಲ್ಲಿ ಸಹ ಅನೇಕರಿಗೆ ಅರ್ಚಕ ತನವು ಅಗೌರವಕ್ಕೇನಕಾರಿ ಅದರು ತಮ್ಮ ಕಡೆ ಅವಾಮುಡೇಯರೊಬ್ಬರನ್ನಿಟ್ಟು ಅವರ ಮೂಲಕ ಕೆಲಸ ಜರಗಿಸುತ ಬರುತ್ತಾರೆ. ಅವರಿಷ್ಟರ ಕ್ರಮವು ಸಹ ವಹಿಸಲಾರರು. ಆದರೆ, ಅರ್ಚಕವಾನ್ಯವೊಂದು ಮುಖ್ಯ ಅವರು ಪ್ರಚಾಡಿಸುವದರಿಂದ ಅತ್ಯಂತಿಕವಾಗಿ ಅದರ ಸಂಬಂಧವು ನಿವೃತ್ತಿ ಮಾಡಿಕೊಳ್ಳಲಾರದಿದಾರೆ. ಇದರಿಂದ ನಿರಕ್ಷರ ಕುಕ್ಷಿಗಳಾಗಿಯೂ, ಆಚಾರಹೀನರಾಗಿಯೂ, ದುರ್ವೃತ್ತರಾಗಿಯೂ ಇರುವ ಬಾಲಕರು ಸಹ ತಾರತಮ್ಯವಿಲ್ಲದೆ ಬಂದು ಗುಡಿ ಬಾಗಿಲುಗಳಂ ತೆರದು ಘಂಟೆ ಅಲ್ಲಾಡಿಸಿ ಬಿಂದಿಗೆ ನೀರನ್ನು ಒಂದೇ ಆವರ್ತಿ ದೇವರ ತಲೆಯಮೇಲೆ ಸುರಿದು ಬಾಗಿಲುಗಳನ್ನು ಮುಚ್ಚಿಕೊಂಡು ಹೋಗುವಂತೆಯೂ ಲಂಗೋಟಿಗಳೊಡನೆ ಶೀಘ್ರ-ಪ್ರಸಾದಗಳನ್ನು ಭಗವತ್ಸನ್ನಿಧಿಯಲ್ಲಿ ಜ್ಞಾನವಮೋನ್ಯರ್ಧರಿಗೆ ಕೊಡುತಂತೆಯೂ ಪರಿಣಮಿಸಿದೆ. ಇಂತಾ ಸ್ಥಿತಿಯೊಳು ದೇವರಲ್ಲಿ ಅರ್ಚಕನಿಗೆ ಎಷ್ಟರ ಭಕ್ತಿ ಇರಬಹುದೋ ಅತನ ಉಪಾಸ್ಯವಾದ ಬಿಂಬದೊಳೆಷ್ಟರ ಮಹಿಮೆ ಇರುವದೋ, ಅಭೀಷ್ಟಪ್ರದಾಯಕವಾಗಿರುವಂತ ಅಂತಾ ವಿಗ್ರಹಗಳಲ್ಲಿ ಜನರ

ಗೇನು ಭಕ್ತಿ ಇರುವದೋ, ಏತದ್ರಕ್ಷಣಾರ್ಥ ಕೊಡಲ್ಪಡುವ ದಸ್ತೆ ಯೆಷ್ಟುಮಟ್ಟಿಗೆ ವಿವೇಚನೆಯಿಂದನೆ ವ್ಯಯವಾಗುತಿದೆಯೋ, ಅದರಿಂದ ಆ ಧರ್ಮಕರ್ತರ ಉದ್ದೇಶ ಕೋರಿಕೆಗಳೆಷ್ಟರಮಟ್ಟಿಗೆ ಸಫಲಗಳಾಗುವವೋ, ಇಂತಾ ದೇವಾಲಯಗಳು ಜನಗಳಿಗೆಷ್ಟುಮಟ್ಟಿಗೆ ದೈವಭಕ್ತಿಯನ್ನು ಪರಲೋಕಬೀತಿ ಮುನ್ನೂ ಉಂಟು ಮಾಡುವವೋ ಅವಂ ಅಜ್ಞಾನೇ ಆಲೋಚಿಸಬಹುದು. ಇಷ್ಟುದೂರ ಪರಂಪರೆಯಾ ಅನುವರ್ತಿಸಬಂದ ಅನರ್ಥಗಳ ನಿವಾರಣೆಯ ಬಗ್ಯೆ ಒಬ್ಬರೂ ಇದುವರಿವಿಗೆ ಪ್ರವರ್ತಿಸದೆ ಹೋದದಕ್ಕಾಗಿ ನಾನು ಬಹಳ ವಿಷಾದಿಸುತ್ತೇವೆ ಈಗ ಗವರ್ನಮೆಂಟಿನವರು ಮುಜರಾಯಿ ಇಲಾಖೆಯಿಂದ ಅಧಿಕಾರಿಗೆಲ್ಲ ಕೊಟ್ಟಿರುವ ಇದರಡಿ ಕಂಡ ಎಬ್ಬಟ ಹುಕುಂ ಬಹಳ ಯೋಗ್ಯವಾದುದಾಗಿಯೂ ಅರ್ಚಕರ ಮತ್ತು ದೇವಸ್ಥಾನಗಳ ಪ್ರಕೃತ ಅಗೌರವ ಸ್ಥಿತಿಯಂ ಹೋಗಲಾಡಿಸಿ ಕೀರ್ತಿಗೌರವಗಳನ್ನುಂಟುಮಾಡತಕ್ಕದ್ದಾಗಿಯೂ ಇರುವದರಿಂದ, ಅದಕ್ಕೊಂದು ಅಪಿ ಥವು ಕಲ್ಪಿಸಿ ಸರ್ಕಾರದವರ ಉದ್ದೇಶವನ್ನರಿಯದೆ ಸ್ವಂ ಮನಸ್ಸಾಪ ಪಡದೆ, ತಾವು ಯಾವ ಕಾರ್ಯಕ್ಕಾಗಿ ನಿಯಮಿತರಾಗಿದ್ದಾರೆಯೋ ಆ ಕಾರ್ಯದ ಪ್ರಯೋಜನೋದ್ದೇಶಗನ್ನು ನೆರವೇರಿಸುವಿಕೆಗೆ ಸ್ವಾಂ ಶಕ್ತರಾಗುವಂತೆ ಬೇಕಾದ ಏರ್ಪಾದುಗಳಂ ಮಾಡಿಕೊಳ್ಳುವದು ಆವಶ್ಯಕವೆಂದು ಬಾವಿಸತಕ್ಕದ್ದು

ಮೈಸೂರು ಸಂಸ್ಥಾನದ ಮುಜರಾಯಿ ಇಲಾಖೆಗೆ ಸೇರಿದ ಸಮಸ್ತ ದೇವಸ್ಥಾನಗಳ ಅರ್ಚಕರಿಗೂ ತಿಳಿಯಪಡಿಸುವದೇನೆಂದರೆ —

ಆಯಾ ಪ್ರದೇಶಗಳಲ್ಲಿ ದೇವಸ್ಥಾನಗಳನ್ನು ಕಟ್ಟಿಸಿ ನಡಿಸುತ ಬ ವದರಲ್ಲಿ ಸದ್ಭಕ್ತರಾಗಿಯೂ, ಆಗಮಜ್ಞರಾಗಿಯೂ ಇರುವ ಅರ್ಚಕರು ವಿಕಳರಾಗಿದ್ದು, ತಮ್ಮ ನಿಜ ಧರ್ಮಗಳನ್ನೂ ಕರ್ತವ್ಯವನ್ನೂ ತಿಳಿಯದೆ ಇರುವ ಅರ್ಚಕರು ಅಧಿಕಸಂಖ್ಯಾಕರಾಗಿಯೂ ಇರುವಂತೆ ಕಾಣಬರುತಿದೆ

ದೇವಾಲಯಗಳಲ್ಲಿ ಭಗವತ್ಸಾನ್ನಿಧ್ಯವು ಅರ್ಚಕರ ತಪ್ಪೋಬಲದಿಂದಲೇ ಉಂಟಾಗುವದೆಂಬುವದು ಶಾಸ್ತ್ರಪ್ರಸಿದ್ಧವಾಗಿರುವದರಿಂದ ಅರ್ಚಕರು ದುಃಶೀಲರಾದರೆ ದೇವತಾ ಸಾನ್ನಿಧ್ಯವು ಕ್ರಮೇಣ ಕಡಮೆಯಾಗಿ ಆದರ ಜನರಿಗೆ ಶ್ರದ್ಧೆಗಳು ತಪ್ಪಿಹೋಗುತ ಬರುವವು

ಅರ್ಚಕರಲ್ಲಿ ಕೆಲವರು ತಮ್ಮ ಅರ್ಚನ ವೃತ್ತಿಯನ್ನು ಪರಂಪರಾ ಗ್ರಾಸ್ಯವಾದ ಸ್ವತ್ತಾದ ಭೂಮಾನ್ಯಗಳಂತೆ ಈ ಕೆಲಸಕ್ಕೆ ಆಗಮಿಕರಾದ ತಮ್ಮನ್ನು ಬಿಟ್ಟರೆ ಬೇರೆ ಯಾರೂ ದೊರೆಯುವದಿಲ್ಲವೆಂದು ಆರಿಗಾದರೂ ತಮ್ಮ ನಡತೆ ಪ್ರಾಮಾಣ್ಯ ಈ ಕೆಲಸವು ತಮ್ಮ ಸ್ವತ್ತೆಂದು ತಿಳಿದುಕೊಂಡಿದ್ದಂತೆ ತೋರುತ್ತಾ ಇರುವಂತಾಗಿ ತಿಳಿದು ಬರುತಿದೆ

ಅದಕ್ಕಾಗಿ ಯೆಂ ಇವರು ಸದ್ವೃತ್ತರೆ ವಿಷಯದಲ್ಲಿ ಜಾಗ್ರತೆ ವಿನಾ ದುರ್ವೃತ್ತರ ವಿಷಯದಲ್ಲಿ ಪರಿಗಣಿಸಲ್ಪಡದೆ ಇರದು ಮತ್ತು ಆಗಮಿಕರು ಹೊರತು ಇತರ ಸಂದರ್ಭದಲ್ಲಿ ವೈದಿಕರು ಸ್ವಕೀಯ ಪೂಜೆಯು ನಡಸಲ್ಪಡಿ ಏಕೆ ಎಂಬುದು ಶಾಸ್ತ್ರಸಿದ್ಧವಾಗಿ ಇರುತಿದೆ

ಅರ್ಚಕರ ಅರ್ಹತೆಯನ್ನು ತಿಳಿಯುವದಕ್ಕಾಗಿ ದೇವಪೂಜಾ ಮಂತ್ರಗಳಲ್ಲಿಯೂ, ಅಭಿಷೇಕೋಪಯುಕ್ತಗಳಾದ ಸೂಕ್ತಗಳಲ್ಲಿಯೂ, ತತ್ಪ್ರಮಾಣ ಭೂತವಾದ ತತ್ತದಾಗಮ ಭಾಗದಲ್ಲಿಯೂ ಅರ್ಚಕರು ಈ ಬಗ ಯೆಂತು ಅರಿತಿರುವರು ಕಳಿಸಿ ಅನುಸರಿಸ ಸಾಕ್ಷಿಸಲ್ಪಡುವರು

ದುರ್ವೃತ್ತರಾದ ಅರ್ಚಕರನ್ನು ಕೆಲಸದಿಂದ ತಪ್ಪಿಸುವದರಲ್ಲಿ ಸಂದೇಹವಿಲ್ಲವು

A. SRINIVASACHARLU,
Muzrai Superintendent &
Secretary to the Dewan

ಈ ಸಂದರ್ಭದಲ್ಲಿ ನಾವು ಗವರ್ನಮೆಂಟಿನವರಿಗೊಂದು ಅಂಶವನ್ನು ತಿಳಿಸುತ್ತೇವೇನೆಂದರೆ, ಆಗಮಾದಿಗಳಲ್ಲಿ ಅರ್ಚಕರಂ ಪರೀಕ್ಷಿಸಬೇಕಾದರೆ ಪರೀಕ್ಷಕನು ಸ್ವತಃ ಆಗಮಜ್ಞನಾಗಿಯೂ, ವ್ಯುತ್ಪನ್ನನಾಗಿಯೂ, ಇರಬೇಕಾದುದರಿಂದ, ಅಂತವನನ್ನು ಹುಡಿಕಿ ಏರ್ಪಡಿಸಬೇಕಾದುದು ಅವಶ್ಯಕವಾಗಿರುತಿದೆ. ಹಾಗಿಲ್ಲದೆ ತಾವು ಪಂಡಿತರೆಂಬ ದುರಭಿಮಾನದಿಂದ ತಾಲುಗಳನ್ನು ಸುತ್ತಿಕೊಂಡು ವರೆ ತಲೂಗುವವರನ್ನು ಪರೀಕ್ಷಕರನ್ನಾಗಿ ಯೇರ್ಪಡಿಸಿ, ಅವರಿಗೆ ತಿಳಿಯದ ವಿಷಯಗಳಲ್ಲಿ ಸಹ ಸರ್ವಂಕಷಪ್ರಜ್ಞೆಯಂ ತೋರಿಸುವಂತವರನ್ನು ಅವರ ಪಾಂಡಿತ್ಯ ಗೌರವಾರ್ಥ ನಿಯಮಿಸಿದರೆ ಪ್ರಕೃತ ಒಳ್ಳೆ ಹುಕುಮಿನ ಉದ್ದೇಶವು ಸ್ವಲ್ಪವೂ ಈಡೇರಲಾರದೆಂಬುದಂ ಸರ್ಕಾರದವರು ಚೆನ್ನಾಗಿ ಜ್ಞಾಪಕದಲ್ಲಿಟ್ಟಿರಬೇಕೆಂದು ಕೋರುತ್ತೇವೆ.

REMISSION OF WET ASSESSMENT

ಈ ಪತ್ರಿಕೆಯ ಮತ್ತೊಂದು ಬಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಮಹಾ ಮಜಕೂರ್ ೧೨ನೇ ಮಾರ್ಚಿ ೧೮೯೧ನೇ ಸಂಬರುಳ್ಳ ಶ್ರೀಮನ್ಮಹಾರಾಜಾ ಸರ್ಕಾರದವರ ಪ್ರೊಸೀಡಿಂಗ್ಸಿನಿಂದ ತರೀ ಕಂದಾಯವನ್ನು ಅರ್ಧವಾಸಿ ಮಾಫಿ ಮಾಡಿರುವಂತೆ ತಿಳಿಯಬರುತಿದೆ ಆದರೆ ಕೆರೆ ಆಸರೆಯಲ್ಲಿ ಸಾಗುವಳಿ ಯಾಗುವ ತರೀ ಜಮೀನುಗಳಿಗೆ ಮಾತ್ರವೇ ರಿಮಿಷನ್ ಕೊಡಲ್ಪಟ್ಟಿರುತಿದೆ ಈ ಸಂವತ್ಸರದಲ್ಲಿ ದಿವಾನರವರೇ ಖುದ್ದು ಅಪವಾಯಿಷಿ ಮಾಡಿ ನಿಜಸ್ಥಿತಿಯನ್ನರಿತದ್ದರಿಂದ ಕಂದಾಯ ಮಾಫಿ ಮಾಡ ಬೇಕಾದ ಆವಶ್ಯಕತೆಯು ಅವರಿಗೆ ಸಂಪೂರ್ಣವಾಗಿ ತೋರಬಂತು. ಅವರು ಸ್ವತಃ ಸರ್ಕ್ಯೂಟ್ ಹೋದಾಗ ದೇಶಸ್ಥಿತಿಯನ್ನು ನೋಡದಿದ್ದ ಪಕ್ಷಕ್ಕೆ ಕೇವಲ ಡೆ|| ಕಮಿಷನರುಗಳ ರಿಪೋರ್ಟಿನಮೇಲೆ ಇಷ್ಟು ಪರಿಭಾವನೆಗೆ ಅವಕಾಶ ವುಂಟಾಗಿರಲಾರದು. ಅನೇಕ ಸ್ಥಳಗಳಲ್ಲಿ ಪ್ರಜಾ ಕಂದಾಯವು ಮಾಫಿ ಮಾಡಬೇಕಾಗಿರುತಿದೆ, ಆದಾಗ್ಯೂ ಗವರ್ನಮೆಂಟಿನವರು ತೋರಿಸಿದ ಔದಾರ್ಯವು ಕೆಲವರ ಕೃಪಾರ್ಹವಾಗಿರುವದರಿಂದ ಅದಕ್ಕೆ ಅನೇಕರು ಸಂತೃಪ್ತರಾಗಿದ್ದಾರೆ ಆದರೆ ಕೆಲವು ಕಡೆಗಳಲ್ಲಿ ರೈತರು ನಾಟಿ ಮಾಡದ ನಿಜ ಬಾವಿಗಳನ್ನು ತೆಗೆಸಿ ಸಾಗುವಳಿಗೆ ಉಪಕ್ರಮಿಸಿ ಅದರಲ್ಲಿ ನಿರೀಕ್ಷಿಸಿದ ಫಸಲು ನಷ್ಟವಾಗಿರುವದಲ್ಲದೆ ಅದರಿಂದ ಬಾನಿಗಾಗಿ ತೆಗದ ಸಾಲದ ಹೊರೆ ಹೆಚ್ಚಾಗಿದಾರೆ ಅವರ ಸ್ಥಿತಿಯು ಬಹಳ ಶೋಚನೀಯವಾಗಿರುತಿದೆ ಅವರಲ್ಲಿದ್ದ ಬೀಜದ ಧಾನ್ಯವು ಕೂಡ ಈಗ ನಿಶ್ಶೇಷವಾಗಿ ಹೋಗಿರುವದು. ಸರ್ಕಾರ್ ಕಂದಾಯ ವಗೈರೆಯು ತನ್ನದೆ ಹೇಳಿಕೊಂಡು ಸಾಲ ತೆಗದು ಕೆಲಸಕ್ಕೆ ಹೊರಟು ತೆಗೆದಿರುವ ಸಾಲದ ಬಾದ್ಯತೆಯು ಅಧಿಕವಾಗಿರುತಿದೆ. ಇವರಲ್ಲಿದ್ದ ಕಾಲುವೆಗಳಲ್ಲಿ ಕೆಲವು ಮೋಟಿಲ್ಲದೆ ಸತ್ತುಹೋದವು. ಕೆಲವು ಮುಂದಿನ ಸ್ಥಿತಿಯನ್ನಾಲೋಚಿಸಿ ಅಲ್ಪ ಕ್ರಯಕ್ಕೆ ಮಾರಲ್ಪಟ್ಟವು ಉಳಿದಿರುವವನ್ನು ಸರ್ಕಾರದವರ ಕಂದಾಯ ವಗೈರೆ ಸಂಬಂಧಿಸಿಗಾಗಿ ನಿವೃತ್ತಿಸಿಕೊಳ್ಳಬೇಕಾಗಿರುವುದು ಆದುದರಿಂದ ಇವರಸ್ಥಿತಿಯು ಗವರ್ನಮೆಂಟಿನವರಿಂದ ಪೇಕ್ಷ ಸಲ್ಪಡತಕ್ಕದಲ್ಲವು ಇದಲ್ಲದೆ ತರೀ ಕಂದಾಯವನ್ನು ಮಾಫಿ ಮಾಡಿದ್ದರಿಂದ ಅವರಿಗೆ ಯಾವ ಪ್ರಯೋಜನವು ಮುಖ್ಯವಾಗಿ ಉದ್ದೇಶದಲ್ಲಿ ಸಾಧ್ಯವಾಗಿರಲಾರದೆಂಬುದು ಗವರ್ನಮೆಂಟಿನವರು ಅರಿಯದಿರಲಾರರು, ಯೇತಕ್ಕೆಂದರೆ, ಈ ದೇಶದಲ್ಲಿ ತರೀ ಸಾಗುವಳಿಗಿಂತಲು ಖುಷ್ಕಿ ಸಾಗುವಳಿಯೇ ಅಧಿಕವಾಗಿರುತಿದೆ ಸರ್ಕಾರಕ್ಕೆ ತರೀ ಕಂದಾಯ ಕೊಡತಕ್ಕವರಿಗಿಂತಲೂ ಭಾರಿಯಾಗಿ ಖುಷ್ಕಿ ಕಂದಾಯವಂ ಕೊಡತಕ್ಕವರೇ ಅಧಿಕವಾಗಿದಾರೆ. ಅಂತವರಿಗೆ ತರಿ ಖುಷ್ಕಿ ಪೈರುಗಳಿಗೂ ಯಿಲ್ಲದೆ ಸರ್ಕಾರ್ ಕಂದಾಯವನ್ನು ಮಾತ್ರ ಕೊಡುವಂತೆ ನಿರ್ಬಂಧಿಸುವದು ಸುತರಾಂ ನ್ಯಾಯವಲ್ಲವು. ತರೀ ಕಂದಾಯದೊಡನೆ ಖುಷ್ಕಿಗೆ ಸಹ ಯಥೋಚಿತ ರಿಯಾಯತಿ ತೋರಿಸಲ್ಪಟ್ಟದ್ದೇ ಆದರೇ ಉಪಕಾರವು ಜನರು ಬಹಳ ಸ್ಮರಿಸಿಕೊಳ್ಳುವರು ಇದಲ್ಲದೆ ಅವರಿಗೆ ಮುಂದಿನ ಸಾಗುವಳಿಗೆ ಸ್ವಲ್ಪ ಪ್ರೋತ್ಸಾಹ ವನ್ನುಂಟುಮಾಡಿದಂತಾಗುವದು ಆದುದರಿಂದ ದಿವಾನರವರು ಈ ಅಂಶವನ್ನು ಚೆನ್ನಾಗಿ ಪರ್ಯಾಲೋಚಿಸಿ ಬಡವರಾದ ರೈತರ ವಿಷಯದಲ್ಲಿ ಸಹಾಯ ಮಾಡಬೇಕೆಂದು ಕೋರುತ್ತೇವೆ ಈಗ ಸಾದರಪಡಿಸಲ್ಪಟ್ಟ ರಿಯಾಯತಿ ಹುಕುಮನ್ನು ಜಾರಿಯೊಳು ತರುವದರಲ್ಲಿ ಅನೇಕ ಅಕ್ರಮಗಳು ಅಂಕುರಿಸುವದರಲ್ಲೇನೂ ಸಂದೇಹವಿಲ್ಲವು ಲೆಕ್ಕಗಳ ಮೇಲೂ ಪಟ್ಟಿಗಳ ಮೇಲೂ ದರಖಾಸ್ತುಮಾಡಿ ಹುಕುಂ ಕೊಡತಕ್ಕ ಹುಜೂರ್ ಕಚೇರಿಯವರಿಗೆ, ಸ್ಥಳಾಧಿಕಾರಿಗಳಿಂದ ರೈತರಿಗುಂಟಾಗುವ ನಿರ್ಬಂಧವು ಸ್ಪಷ್ಟವಾಗಿ ತಿಳಿಯಬರುವದಿಲ್ಲವು. ರೈತರಿಗೆ ರಿಯಾಯತಿ ತೋರಿಸಬೇಕೆಂಬ ಉದಾರಬಾವದಿಂದ ಪ್ರವರ್ತಿಸಿರುವ ಗವರ್ನಮೆಂಟಿನವರ ಶಾಘ್ಯವಾದ ಉದ್ದೇಶವನ್ನು ಕಾರಬಾರಿ ಉದ್ಯೋಗಸ್ಥರು ಸಫಲಪಡಿಸುತ್ತಾರೆಂಬ ನಂಬಿಕೆಯು ನಮಗೆ ಸ್ವಲ್ಪಮಾತ್ರವೂ ಇಲ್ಲವು. ವರ್ಷಾಭಾವವೂ ಫಲನಷ್ಟವೂ ರೈತರಿಗೆಷ್ಟರ ಕ್ರಮನಿಮಿತ್ತಕವಾದವೋ, ಸ್ಥಳಾಧಿಕಾರಿಗಳಿಗೆ ಅಷ್ಟರ ಸಂತೋಷ ಪ್ರಯೋಜನಪ್ರದವಾಗಿರುತಿವೆ ಅವನ್ನೆಲ್ಲ ವಿವರಿಸಿ ಪ್ರಯೋಜನವಿಲ್ಲವು

ಒಬ್ಬ ರೈತನು ಒಂದುರೂಪಾಯಿ ರಿಮಿಷನ್ ಪಡೆಯಬೇಕಾದರೆ ಅರ್ಧ ರೂಪಾಯಿಯಾದರೂ ಕಳೆದುಕೊಳ್ಳದೆ ಅವನಿಗದು ಸಿಕ್ಕುವದನುಮಾನವು. ನಿನಗೆ ಕಷ್ಟ ನನಗೆ ಪ್ರಯೋಜನ ವೆಂಬಂತೆ ಅವನಿಗೆ ಕ್ರಮವು ತಪ್ಪಿದ್ದಲ್ಲವು, ಗವರ್ನಮೆಂಟಿನವರು ರಿಯಾಯತಿ ಮಾಡಿ ತಮ್ಮ ಆಯತಿಯನ್ನು ಕಳೆದುಕೊಂಡದ್ದು ಮಾತ್ರ ನಿಲ್ಲುತಿದೆ ಆದುದರಿಂದ ಈ ಸಂದರ್ಭದಲ್ಲಿ ನಾವು ಗವರ್ನಮೆಂಟಿನವರ ಅವಗಾಹನೆಗೆ ಮುಖ್ಯವಾಗಿ ಸೂಚಿಸುವದೇನೆಂದರೆ, ಮೇಲೆಕಂಡ ಪ್ರೊಸೀಡಿಂಗಿನ ೭ ನೇ ಕಲಮಿನಲ್ಲಿ ತಿಳಿಸಲ್ಪಟ್ಟಿರುವಂತೆ ರಿಮಿಷನ್ ದಸ್ತ ದಯಾರ್ ಮಾಡ ತಕ್ಕದ್ದನ್ನು ಆಯಾ ಸ್ಥಳದ ಡೆಪ್ಯೂಟಿ ಕಮಿಷನರಿಗೆ ಒಪ್ಪಿಸಿ, ಅವರು ಸ್ವತಃ ಆಯಾ ಸ್ಥಳಕ್ಕೆ ಹೋಗಿ ರೈತರನ್ನು ಒಟ್ಟುಗೂಡಿಸಿ ಅವರು ಪ್ರತಿ ದಾಖಲೆ ವಲ್ಲಿಯೂ ಖುದ್ದು ಅವರಾದಿ ಹಿಂದಾಗಿ ರೈತರ ಹಕೀಕತ್ತುಗಳನ್ನು ಆಲ್ಲಿಯೇ ಕೇಳುತ ಬಾದರೈತರಿಗೆ ಇತರರ ತೊಂದರೆಯು ಕಡಮೆಯಾಗುವದು ರಾಜ್ಯದಲ್ಲಿ ಒಂದಕ್ಕೆ ೪ ಆಣೆಗಿಂದಲೂ ಹೆಚ್ಚಾಗಿ ಇದುವರಿವಿಗೆ ರಿಯಾಯತಿ ಮಾಡಲ್ಪಟ್ಟಿರುವ ನಿಜರ ಸಂದರ್ಭಗಳಲ್ಲಿ ೪ ಆಣೆಯಂತೆ ಜಾಸ್ತಿಯಾಗಿ ಮಾಡತಿ ಮಾಡಲ್ಪಟ್ಟ ಪಕ್ಷಗಳು, ಅವರಿಗೆ ಮಾಡದೆ ಮಾಡಲ್ಪಡ ಬೇಕೆಂದು ಹುಕುಂ ಆಗಿರುತಿದೆ ಈ ಪಕ್ಷಗಳು ಬರಾ ರೈತರಿಗೆ ಸರಿಯಾಗಿ ಹಂಚಲ್ಪಡಾಗುವ ವಿಷಯದಲ್ಲಿ ಜವಾಬ್ದಾರ ನೊಬ್ಬನು ಅವಶ್ಯಕವಾಗಿರುತಿದೆ ಪಸೂಲಿ ಕ್ರಮದಂತೆಯೇ ರೀತಿ ಕ್ರಮವನ್ನೂ ಅನುಸರಿಸಿ, ಪಟೇಲ್ ಶ್ಯಾನಭೋಗರ ಮೂಲಕವಾಗಿ ದಾರಿ ಇತರ ಅಧಿಕಾರಿಗಳ ಮೂಲಕವಾಗಿ ಯಾಗಲಿ ಅವರಿಗೆ ಹಾಜತಿ ಮಾಡಿಸಿದರೆ ಹಣ ಸಂದಂತೆ ಸಾಷಾಗಿ ರಸೀದಿಗಳುಮಾತ್ರ ಸರ್ಕಾರಕ್ಕೆ ಬಂದು ಸೇರುವವು ಆದುದರಿಂದ ರೀತಿಯೇ ಕೆಲಸವನ್ನು ಡೆಪ್ಯೂಟಿ ಕಮಿಷನರವರು ಇತರರಿಗೆ ಒಪ್ಪಿಸದೆ ಸ್ವತಃ ಮಾಡಿಕೊಳ್ಳಬೇಕಾದದ್ದು ಆವಶ್ಯಕವೆಂದು ಭಾವಿಸಿ ದೇನೆ ಈ ವಿಷಯಗಳನ್ನೆಲ್ಲ ಗವರ್ನಮೆಂಟಿನವರು ಆಲೋಚಿಸಿ ಪ್ರತ್ಯೇಕವಾಗಿಯೇ ಪ್ರತ್ಯೇಕ ಹುಕುಂ ಕೊಡಬೇಕೆಂದು ಕೋರುತ್ತೇವೆ.

REPORT ON THE ADMINISTRATION OF TRAVANCORE

೧೮೯೦—೯೧ ನೇ ಇಸವಿ ಬಾಬತು ತಿರುವಾಂಕೂರ್ ಸಂಸ್ಥಾನದ ಸಾಲಿ ಯಾನೇ ರಿಪೋರ್ಟಿನ ಪ್ರತಿಯೊಂದು ಮಾಡು ಶನ ಮೇರೆ ಅಲ್ಲಿನ ಸರ್ಕಾರದವರಿಂದ ಈ ವಾರದಲ್ಲಿ ನಮಗೆ ಕಳುಹಿಸಲ್ಪಡಲು ನಾವು ಕೃತಜ್ಞತೆಯೊಡನೆ ಅಂಗೀಕರಿಸಿದೆವು. ಮಲಯಾಳ ವರ್ಷ(ಕಾಲ) ಕಳೆದ ಆಗಸ್ಟು ೧೫ ನೇ ತಾರೀಖಿನವರೆಗೆ ಅಲ್ಲಿನ ಸರ್ಕಾರೀ ಸರ್ ಫ್ರಾನ್ಸಿಸ್‌ಮಾಗ್ಸ್ ದಾನ್ ಮಾಧವರಾವ್ ರೋಜಗಾಗಲಿಕ್ಕೆ ೪ ತಿಂಗಳಕಾಲ ಹಿಡಿದಿತು ಇಷ್ಟುಕಾಲ ವಿಳಂಬಕ್ಕೆ ತಕ್ಕ ಕಾರಣವು ರಿಪೋರ್ಟಿನಿಂದ ಹೊರಗಾಗುವದಿಲ್ಲವು ಈ ಸಂಸ್ಥಾನದ ಆವಳತವು ಅದರ ಹಿಂದಿನ ವರುಷಕ್ಕಿಂತ ಅನೇಕ ಬಾಬುಗಳಲ್ಲಿ ಅಭಿವೃದ್ಧಿಯನ್ನೈದಿರ ತಿದೆ ಇದಂ ಕುರಿತು ಮತ್ತೊಂದು ಸಂದರ್ಭದಲ್ಲಿ ವಿಚಾರಮಾಡುತ್ತೇವೆ

Occasional Notes
ನೈಮಿತ್ತಿಕ ವಿಷಯನ್ಯಾಸ

The Indian Railways—೧೮೯೦—೯೧ ನೇ ಇಸವಿ ಮಾರ್ಚಿ ೩೧ ನೇ ತಾರೀಖಿಗೆ ಪೈಸಲಾದ ಸಂವತ್ಸರದಲ್ಲಿ ಇಂಡ್ಯ ದೇಶದ ತಮಾಂ ರೈಲ್ವೆ ಬಂಟಾ ಮುಟ್ಟವಳಿಯು, ೧೮೯೦ ೯೦ ನೇ ಇಸವಿಯಲ್ಲಿ ಕಂಡುಬಂದದಕ್ಕಿಂತಲೂ ೨,೬೯,೦೦,೦೦೦ ರೂಪಾಯಿಗಳು ಜಾಸ್ತಿಯಾಗಿ ಮುಟ್ಟವಳಿಯಾಗಿರುತಿದೆ.

The Chenab weir—ಸಿಂದುನದಿಗೆ ಸೇರುವ ನದಿಗಳ ಪೈಕಿ ಯೊಂದಾದ ಚೀನಾಬ್ ಯೆಂಬ ಉಪನದಿಗೆ ಕಟ್ಟೆ ಕಟ್ಟಿ ಕಾಲ್ವೆ ತಿರಿಗಿಸುವದರಿಂದ ೪೦೦,೦೦೦ ಎಕ್ರೆ ಜಮೀನುಗಳಿಗೆ ಅದರಿಂದ ನೀರು ಹರಿದು ಸಾಗುವಳಿಯಾಗುವದಾಗಿರುವದಂ ಕಂಡು, ೧೧,೦೦, ೦೦೦ ಎಕ್ರೆ ಜಮೀನುಗಳಿಗೆ ನೀರು ಹರಿಯುವಂತೆ ಸದರೀ ನಾಲೆಯನ್ನು ಬಿಡಿಸಬೇಕೆಂದು ಹುಕುಂ ಆಗಿದೆ.

Theft—ಈ ತಿಂಗಳ ೨೦ ನೇ ತಾರೀಖಿನಲ್ಲಿ ಕಲ್ಕತ್ತೆಯಲ್ಲಿನ ಇಂಡಿಯನ್ ದೆಮಿಲಿನ್ಯಾಸ್ ಯೆಂಬ ವೃತ್ತಾಂತ ಪತ್ರಿಕೆಯ ಆಫೀಸ್ ಕ್ಯಾಷಿಯರವರು ಒಂದು ಪೆಟ್ಟಿಗೆಯಲ್ಲಿ ಸುಮಾರ್ ಒಂದು ಲಕ್ಷ ರೂಪಾಯಿಗಳ ಕ್ರಯವುಳ್ಳ ನೋಟಿಸ್, ಪ್ರಾಮಿಸರಿ ನೋಟುಗಳು ಮೊದಲಾದವು ತನ್ನ ಗಾಡಿಯಲ್ಲಿಟ್ಟು ಕಳುಹಿಸಿದ್ದು ಬಜಾರಿನಲ್ಲಿ ಕಳವು ಹೋಯಿತೆಂದು ಆ ವೃತ್ತಾಂತ ಪತ್ರಿಕೆಯಿಂದು ತಿಳಿಸುತ್ತದೆ

The Mysore Gold Mining Company—ಮೈಸೂರು ಗೋಲ್ಡ್ ಮೈನಿಂಗ್ ಕಂಪೆನಿ ಷೇರ್ ಹೋಲ್ಡರುಗಳು ಕಳೆದ ತಿಂಗಳ ೩೦ ನೇ ತಾರೀಖಿನಲ್ಲಿ ಲಂಡನ್ ಪಟ್ಟಣದಲ್ಲಿ ಸಭೆ ಸೇರಿ ಕಂಪೆನಿಯ ಸಾರ್ವಜನಿಕ ಲೆಕ್ಕಗಳಂ ದರಖಾಸ್ತಿನ ಸವಿಸ್ತಾರದಲ್ಲಿ ಒಟ್ಟು ೬೭೮ ಔನ್ಸು ಬಂಗಾರದ ದೊರೆತು ಇದಕ್ಕಾಗಿ ೨,೬೦,೮೪೫ ಪೌಂಡುಗಳು ಜಮಾ ಬಂದಿರುವಂತೆ ಅಗ್ರಾಸನಾದಿಪತಿಯವರು ಸಭ್ಯರಿಗೆ ತಿಳಿಸಿದರು.

Failure of Pledge—ಮದುರೆ ಡಿಸ್ಟ್ರಿಕ್ಟ್ ಕಲೆಕ್ಟರ್ ಮತ್ತು ಜಾಯಿಂಟ್ ಮ್ಯಾಜಿಸ್ಟ್ರೇಟರವರ ಮೇಲೆ ರಾಮಚಂದ್ರರಾಯರವರು ಮಾಡಿದ್ದ ರುಸುವತ್ ಅಪವಾದವನ್ನು ಮಿ|| ಎವನ್ಸ್ ಎಂಬುವರು ವಿಚಾರಣೆ ಮಾಡುತಲಿದ್ದರಷ್ಟೆ. ಕಡೆಗೆ ಮಿ|| ರಾಮರಾಯರವರಮೇಲೆ ಯಾವ ಅಪವಾದವೂ ರುಜುವಾಗಿದೆ, ಅವರು ನಿರ್ದೋಷಿಯೆನ್ನಿಸಿಕೊಂಡರೆಂದು ಕೇಳುವದಕ್ಕೆ ಸಂತೋಷಪಡುತ್ತೇವೆ

A Laudable Attempt—ದಕ್ಷಿಣ ಬಂಗಾಳ ದೇಶದವರು, ಮದಿರಪಾನಿಗಳು ಮದ್ಯಸಾರ ಸರ್ಕಾರ ಸಹಾಯವನ್ನು ನಿರೀಕ್ಷಿಸದೆ ಇರುವಂತೆ ಅವರಿಗೆ ಸಹಾಯದಿಂದ ಗಾಡಿ, ದವಾಖಾನೆ, ಅವರ ಗವರ್ನಮೆಂಟಿನವರ ಉದ್ದೇಶಕ್ಕೆ ಅವಿರುದ್ಧವಾಗಿ, ಯಾವಾಗಲು ಶಾಸ್ತ್ರವನ್ನು ಸ್ಪಷ್ಟವಾಗಿ ಹೊರಡಿಸಿ ನಡೆದಿರುವದಕ್ಕೆ ತಕ್ಕ ಯೇರ್ಪಾಡುಗಳಂ ಮಾಡಬೇಕೆಂದು ಅಲ್ಲಿನವರು ಕೆಲವರು ಸೇರಿ ಪರಿಶ್ರಮಿಸುವವರಂ ಪ್ರೇರಿಸುತಲಿದಾರೆಂದು ತಿಳಿಯಬರುತಿದೆ ಇದು ಕೇವಲ ಯೋಗ್ಯವಾದ ಮತ್ತು ಆವಶ್ಯಕವಾದ ಪ್ರಯತ್ನವೆ

Combination among animals—ಪ್ರಾಣಿ ಕೋಟಿಗಳಿಗೆ ಒಗ್ಗಟ್ಟುಂಟೆಂಬದಕ್ಕೆ ನಿದರ್ಶನ ರೂಪವಾಗಿ ಒಂದು ಸಂದರ್ಭ ನಡೆಯಿತೆಂದು ತಿಳಿಯಬರುತಿದೇನೆಂದರೆ —ರಾಷ್ಟ್ರಮಂಡ ಯೆಂಬ ಪ್ರದೇಶದೊಳು ಪಟ್ಟಾ ಆ ಹುಲ್ಲು ಒಂದು ಚೆನ್ನಾಗಿ ಬೆಳೆಯುತ ದನಕಾಯುವವನಿಗೆ ಬಹಳ ತೊಂದರೆ ಕೊಡುತಲಿತ್ತು. ಈಚೆಗೆ ಯೊಂದುದಿನ ಸದರೀ ಹುಲಿಯು ಕೋಣಗಳ ಗುಂಪಿನಮೇಲೆ ಬಿದ್ದು ಅದರಪೈಕಿ ಯೊಂದನ್ನು ಹಿಡಿಯಲು ಉಳಿದವೆಲ್ಲವು ಸೇರಿ ಹುಲಿಯನ್ನು ಛಿನ್ನಾಭಿನ್ನವಾಗಿ ಸೀಳಿ ಹಾಕಿದವೆಂದು ಆ ವೃತ್ತಾಂತಪತ್ರಿಕೆ ಯೊಂದು ತಿಳಿಸುತಿದೆ

Admission of sudras to the vedic class—ಕಲ್ಕತ್ತೆಯ ಸಂಸ್ಕೃತ ಕಾಲೇಜ್ ಪಾಠಶಾಲೆಗೆ ಸೇರಿದ ವೇದಾಧ್ಯಯನ ತರಗತಿಯಲ್ಲಿ ಶೂದ್ರರನ್ನು ಸೇರಿಸಿಕೊಳ್ಳುವದಕ್ಕೆ ಪ್ರಾರಂಭವಾಯಿತೆಂದು ಕೇಳುತ್ತೇವೆ ಹಿಂದೂಮತ ಪ್ರವಿಷ್ಟರಾದವರು ಪುರಾತನಗಳಾದ ತಮ್ಮ ಮತ ಪ್ರಶಸ್ತಗಳಾದ ನಿರ್ಬಂಧಗಳಂ ಮೀರಿಗೊತ್ತ

ಸ್ವತಂತ್ರರಾಗಿ ಪ್ರವರ್ತಿಸಿದಬಗ್ಗೆ ಎಷ್ಟು ದುಃಖಿಸಿದಾಗ್ಯೂ ಸಾಲದ್ದಾಗಿರುತಿದೆ. ಇವೆಲ್ಲವೂ ಕಲಿ ಮಹಾತ್ಮ್ಯವಲ್ಲದೆ ಮತ್ತೇನೆನ್ನಬಹುದು. ಇಂತಾ ದಪ್ಕಲ್ಯಗಳಿಗೆ ಬಂಗಾಳೀ ದೇಶವೇ ಜನ್ಮ ಭೂಮಿಯೆಂದು ಕಾಣುತಿದೆ.

A circular.—ನೇಟಿವ್ ಅಫಿಸರಿಗಳು ಯೂರೋಪಿಯರ್ನರ ವಾಡಿಕೆಯನ್ನನುಸರಿಸಿ ತಾವು ರುಜು ಹಾಕುವಲ್ಲಿ ತಮ್ಮ ಅಪ್ಪ ಹೆಸರುಗಳ ಮತ್ತು ಹೆಸರುಗಳ ಮೊದಲಕ್ಷರವನು ಮಾತ್ರ ಹಾಕುವದರಿಂದ ಅವರು ಕಂಡು ಹಿಡಿಯುವ ಪ್ರಯಾಸವು ದಿನೇ ದಿನೆ ಹೆಚ್ಚುತ ಬರುವದರಿಂದ ಸರ್ಕಾರ್ ನೌಕರರು ಸರ್ಕಾರೀ ಕಾಗದ ಪತ್ರಗಳಿಗೆ ರುಜು ಹಾಕುವಲ್ಲಿ ತಮ್ಮ ಹೆಸರುಗಳು ಸ್ಪಷ್ಟವಾಗಿಯೂ, ನೇಟಿವ್ [illegible] ತಮ್ಮ ಅಪ್ಪ ಹೆಸರುಗಳು ಪೂರ್ತಿ [illegible] ಬರೆಯತಕ್ಕದ್ದೆಂದೂ ಬಂಗಾಳೆ ಗವ[illegible]ರವರು ಸರ್ಕ್ಯುಲರ್ ಹುಕುಂ ಕೊಟ್ಟಿದ್ದಾರೆ.

Labourers on relief works.—ಈಗಿನ ಬಾರ್ಕ್ಷದ ದೆಸೆಯಿಂದ ಕಷ್ಟಪಡುತಲಿರುವ ಪ್ರಜೆಗಳ ಜೀವನ ನಿರ್ವಹಣೆಯನು ಏರ್ಪಡಿಸುವ ಕ್ಷಾಮನಿವಾರಕ ಕಾರ್ಖಾನೆಗಳಲ್ಲಿ ಕೂಲೀ ಮಾಡುತಲಿರುವ ಜನರ ಸಂಖ್ಯೆ—ಮದರಾಸ್ ಪ್ರೆಸಿಡೆನ್ಸಿಯಲ್ಲಿ ೫೧೩೬೭ ಮಂದಿ, ಮುಂಬೈಯಲ್ಲಿ ೧,೪೪೧, ಬಂಗಾಳೆಯಲ್ಲಿ ೩೦,೪೯೩ ಬರ್ಮ ದೇಶದೊಳು ೨,೫೦೦, ಮೈಸೂರು ಮತ್ತು ಕೊಡಗು ದೇಶಗಳಲ್ಲಿ ೭ ೧೨೪, ರಾಜಪುಟಾನಾ ದೇಶದಲ್ಲಿ ೮೧,೫೩೪ ತ್ರಿ ಮಾಡುವದಕ್ಕೆ ಕಲ್ಪಿಸಲ್ಪಟ್ಟ ದರ್ಮಾರ್ಥ ಸ್ಥಳಗಳಲ್ಲಿ ಅನ್ನ ಸತ್ರಗಳಲ್ಲಿ ಜೀವಿಸುತಲಿರುವವರ ಸಂಖ್ಯೆ.—ಮೈಸೂರು ದೇಶದಲ್ಲಿ ೯೬೮, ಬಂಗಾಳ ದೇಶದೊಳು ೧,೭೦೬, ರಾಜಪುಟಾನಾ ದೇಶದಲ್ಲಿ ೭,೬೫೪. ಜಲದೌರ್ಲಭ್ಯ ಇನ್ನು ತಪ್ಪಿಲ್ಲವು. ದನಗಳಿಗೆ ಹುಲ್ಲು ಸಿಕ್ಕುವದಿಲ್ಲವು. ಹಾರಂಗಳು ಮೇಕತಿಶಯವಾಗಿ ಹೆಚ್ಚಾಗಿಯೇ ಇವೆ

ನೋಟಿಸ್.

ಚಂದಾದಾರರಿಗೆ.

ಇದರಿಂದ ತಿಳಿಯಪಡಿಸುವದೇನೆಂದರೆ —

ಈ ಸಂವತ್ಸರದಲ್ಲಿ ಇದುವರಿವಿಗೆ ಮೂರು ತಿಂಗಳು ಕಳೆದು ನಾಲ್ಕನೆಯ ತಿಂಗಳು ನಡೆಯುತಲಿದೆಯಾಗಿ ಇನ್ನೂ ಸಾವಕಾಶ ಮಾಡದೆ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಮೊಬಲಗನ್ನು ಕೂಡಲೆ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

೨೫—೪—೯೩. ಪ್ರೊಪ್ರೈಟರ್.

LOCAL AND PROVINCIAL NEWS

ಒಳದೇಶ ಮತ್ತು ತಾಲ್ಲೂಕು ಜಾತಿ ವರ್ತಮಾನಗಳು.

Rain.—ಕಳೆದವಾರದ ಅಪರಭಾಗದಲ್ಲಿ ದೇವನಹಳ್ಳಿಯು ಮೊದಲು ಮಾಲೂರು ವರಿವಿಗೆ ರೆಯಿಲ್ ಮಾರ್ಗದಲ್ಲಿ ಬಲವಾದ ಮಳೆ ಬಿದ್ದಂತೆ ತಿಳಿಯಬರುತಿದೆ.

Cholera.—ಕೃಷ್ಣರಾಜಪೇಟೆ ತಾಲ್ಲೂಕು ಚೆನ್ನರಾಯಪಟ್ಟಣದಲ್ಲಿ ವಾಂತಿ ಭೇದಿ ರೋಗ ವ್ಯಾಪಿಸಿದಂತೆ [illegible] ಎಂದ ಕೂಡಲೆ ಅಲ್ಲಿಗೆ ಏಪ್ಪ ಆಸ್ಪತ್ರೆಯ [illegible]ರು ಕಳುಹಿಸಲ್ಪಟ್ಟರು.

The Dewan.—ಈ ಸಂಸ್ಥಾನದ ದಿವಾನರಾದ ಮಿ ಕೆ. ಶೇಷಾದ್ರಿ ಅಯ್ಯರ್, ಸಿ. ಎಸ್ ಐ ಯವರು ಶೀಘ್ರದಲ್ಲಿ ಕೆಲವು ತಿಂಗಳ ಕಾಲ ರಜಾ ಪಡೆದುಕೊಳ್ಳುವವರಾಗಿರುತೆಯೆಂದು ಮರಳ ಪ್ರವಾದ ಹುಟ್ಟಿದೆ. ಇದು ಸುಳ್ಳು ನಿರಾಧಾರವಾದುದೆಂದು ನಾವು ಎಣಿಸುತ್ತೇವೆ.

The new Resident.—ಈಚೆಗೆ ಇಲ್ಲಿಗೆ ರೆಸಿಡೆಂಟರಾಗಿ ಬಂದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೇಬರವರು ಆಚೇ ರಸಿಡೆಂಟನಿ ಪ್ರಥಮವರ್ತಿ ಕೋರ್ಟ್ ಮಾಡಿದರು. ಆ ಕಾಲದಲ್ಲಿ ಹಾಜರಿದ್ದ ಸ್ಟೇಟ್ ಗಳಿಗೂ ಎಲ್ಲರಿಗೂ ಸನ್ಮಾನವಾದನಂತರ ತಮ್ಮ ಕೆಲಸಕ್ಕೆ ಹೊರಟು ಹೋದರು.

The Octroi Manager.—ಇಲ್ಲಿನ ಆಕ್ಟ್ರಾಯಿ ಇಲಾಖಾ ಮ್ಯಾನೇಜರಾಗಿದ್ದ ಮೈ॥ ನಾರಾಯಣ ರಾಯರವರು ಪೋಲೀಸ್ ಇಲಾಖೆಗೆ ವರ್ಗ ಮಾಡಲ್ಪಟ್ಟದ್ದು ಮೊದಲು ಸದರೀ ಕೆಲಸ ಖಾಲಿಯಾಗಿತ್ತಷ್ಟೆ. ಕಳೆದ ವಾರದಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಆಫಿಸ್ ಡೆಪ್ಯುಟಿ ಅಕೌಂಟೆಂಟರಾದ ಮೆ॥ ಗುರುರಾಯರು ಆಕ್ಟ್ರಾಯಿ ಇಲಾಖಾ ಮ್ಯಾನೇಜರಾಗಿ ನೇಮಕರಾಗ್ಮಿಡಲ್ಪಟ್ಟರು.

The weather.—ಕಳೆದ ವಾರದೊಳು ಪ್ರತಿದಿನದ ಸಾಯಂಕಾಲ ಮೋಡಾರು ನಾಲ್ಕುಘಂಟೆಗೆ ಮೋಡ ಮುಸುಕಿ ಬಲವಾದ ಮಳೆಗೆ ಪ್ರಾರಂಭವಾಗಿ ಕಡೆಗೆ ಪ್ರಯೋಜನಕಾರಿಯಲ್ಲದೆ ಹೋಯಿತು. ಅದರ ಆರೋಗ್ಯವೇನೂ ಇಲ್ಲ. ಆಹಾರ ಪದಾರ್ಥಗಳ ಧಾರಣೆಗಳು ಸ್ವಲ್ಪ ಮೇಕರಣವಾಗಿಯೇ ಇದೆ. ಜ್ವರ ರೋಗ ಮಾತ್ರ ಅಲ್ಲಲ್ಲಿ ವ್ಯಾಪಿಸಿದೆ. ಇನ್ನೇನೂ ಅತಿಶಯವಿಲ್ಲ.

The Registration Department.—ಮೈಸೂರ್ ಸಬ್ ರಿಜಿಸ್ಟ್ರಾರ್ ಮೆ॥ ತಿರುಮಲಾಚಾರ್ಯ ಈ ತಿಂಗಳಲ್ಲಿ ಪೆನ್ಷನ್ ಮೇಲೆ ನಿವೃತ್ತರಾದದರಿಂದ ಅವರ ಕೆಲಸಕ್ಕೆ ಆಪೇಕ್ಷಾರವಲ್ಲಿ ಮೊಕದ್ದಾದ ಸುಜನರೂ ಸಬ್ ರಿಜಿಸ್ಟ್ರಾರ್ ಮೆ. ಎ. ರಂಗನಾಥ ರಾಯರವರು ೩ನೇ ಗ್ರೇಡಿನಿಂದ ೧ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟರು. ಮೆ॥ ರಂಗನಾಥರಾಯರವರ ಕೆಲಸಕ್ಕೆ ಇನ್ಸ್ಪೆಕ್ಟರ್ ಆಫೀಸ್ ಅಕೌಂಟೆಂಟರಾಗಿದ್ದ ಮಿ॥ ಎಂ. ಕೃಷ್ಣಸ್ವಾಮಯ್ಯಂಗಾರ್ಯರು ನಿಯಮಿಸಲ್ಪಟ್ಟರು. ಅವರವರ ಕೆಲಸಗಳ ಚಾರ್ಜು ತೆಗೆದುಕೊಂಡರೆಂದು ತಿಳಿಯಬರುತ್ತದೆ. ಮೆ॥ ತಿರುಮಲಾಚಾರ್ಯರವರು ತಮಗೆ ಕೊಡಲ್ಪಟ್ಟ ಪಿಂಚಿಣಿಯನ್ನು ಬಹಳ ತಿಂಗಳಕಾಲವಾಗಿ ಅನುಭವಿಸುವ ಭಾಗ್ಯವು ದೊರೆಯುವದೆ ಹೋದಬಗ್ಗೆ ಬಹಳ ವಿಷಾದಿಸುತ್ತೇವೆ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜಾ ರವರ ಸರ್ಕಾರದಿಂದ ಹೊರಡಿಸಿದ ಇಸ್ತಿಹಾರ ನಾಮೆಗಳು.

ನಂ॥ ೧೬. ತಾ॥ ೧೨ನೇ ಏಪ್ರೆಲ್ ೧೮೯೩—ಪ್ರೊಬೇಷನರ್ ಮೊಸಿ. ದೇವರಾಜೇ ಅರಸರವರು, ಮೆ॥ ಬೆಂಗಳೂರು ಜೈಲರ ವರ ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ರಿಜರ್ವ್ ಪೋಲೀಸ್ ಇನ್ಚಾರ್ಜಿನಲ್ಲಿ ಪ್ರೊಬೇಷನರ್ ಸೂಪರಿಂಟೆಂಡೆಂಟರಾಗಿ ಆಕ್ಟಿಂಗ್ ತರೀಕ ನೇಮಕರಾಗ್ಮಿಡಲ್ಪಟ್ಟಿರುತ್ತಾರೆ. ಮೆ॥ ಸಿ ದೇವರಾಜೇ ಅರಸರವರು ೧೮೯೩ನೇ ಇಸವಿ ಮಾರ್ಚಿ ೩೧ನೇ ಮಧ್ಯಾಹ್ನದ ಅಪರಾಹ್ನದಲ್ಲಿ ರಿಜರ್ವ್ ಪೋಲೀಸ್ ಚಾರ್ಜನ್ನು ತೆಗೆದುಕೊಂಡರು.

ನಂ॥ ೧೩ ತಾ॥ ೧೩ನೇ ಏಪ್ರೆಲ್, ೧೮೯೩—ಹಾಸನ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮೆ॥ ಎ. ಎಚ್ ಸ್ಟ್ರಾಂಗ್ವೇ ಬಿ. ಎ ಯವರಿಗೆ, ೯೩ನೇ ಇಸವಿ ಜನವರಿ ೪ನೇ ಮಧ್ಯಾಹ್ನ, ೮೩ನೇ ನಂಬರ್ ಗವರ್ನಮೆಂಟ್ ಇಸ್ತಿಹಾರ್ನಾಮೆಯು ಮೂಲಕ ಮಂಜೂರು ಮಾಡಲ್ಪಟ್ಟ ರಜಾವಿಗೆ ಸೇರಿದಂತೆ. ಇನ್ನೂ ಮೂರು ತಿಂಗಳ ಕಾಲ ಕಾಯಿದೇ ರಜಾ ಕೊಡಲ್ಪಟ್ಟಿರುತಿದೆ.

ನಂ ೧೭—ಕಡೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಡಾಕ್ಟರ್ ಎ. ಎಸ್. ಫರ್ನಾಂಡಿಸ್ ಯವರಿಗೆ, ೧೮೯೩ನೇ ಇಸವಿ ಫೆಬ್ರವರಿ ಗುರ್ತೇತಾರೀಖು ೬೭ನೇ ನಂಬರ್ ಇಸ್ತಿಹಾರ್ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೨೪ ತಿಂಗಳ ಪ್ರಿವಿಲೇಜ್ ರಜಾ ಪೈಕಿ ೭೬ ದಿವಸಗಳನ್ನು ಮಾತ್ರವೇ ಉಪಯೋಗಿಸಿಕೊಂಡದರಿಂದ ಅನುಭವಿಸಿಕೊಳ್ಳದೆ ಬಾಕೀ ನಿಂತ ಹಿಂದು ದಿನವು ಇದರಿಂದ ರದ್ದುಮಾಡಲ್ಪಟ್ಟಿರುತಿದೆ.

ನಂ॥ ೧೪. ತಾ॥ ೧೮ನೇ ಏಪ್ರೆಲ್, ೧೮೯೩—ತುಮಕೂರು ಡಿಸ್ಟ್ರಿಕ್ಟು ಮಧುಗಿರಿ ತಾಲ್ಲೂಕು ಅಮಲ್ದಾರ್ ಕಂಠೀರವಾ ಚಾರ್ಯರಿಗೆ, ೧೮೯೩ನೇ ಇಸವಿ ಫೆಬ್ರವರಿ ೫ನೇ ಮಧ್ಯಾಹ್ನ ೩೧೮೦-೭೧-೨೦ ನೇ ನಂಬರಿನ್ನು ಗವರ್ನಮೆಂಟ್ ಪ್ರೊಸೀಡಿಂಗ್ಸ್ ನಿಯಮವನ್ನನುಸರಿಸಿ, ಮಾರ್ಚಿ ಮಜಕೂರ್ ೧೨ನೇ ತಾರೀಖ್ ಆಗಾಯಿತು ೮ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ॥ ೧೬ L. ೯೯, ತಾ॥ ೧೬ನೇ ಏಪ್ರೆಲ, ೧೮೯೩—ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರಿ ಇನ್ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ಚಿತ್ರದುರ್ಗದ ಮ್ಯುನಿಸಿಪಲ್ ಬೋರ್ಡ್ ವೈಸ್ ಪ್ರೆಸಿಡೆಂಟರಾಗಿ ನೇಮಕರಾಗ್ಮಿಡಲ್ಪಟ್ಟಿದ್ದಾರೆ.

ನಂ॥ ೨೨—ಇಂಡ್ಯಾ ಗವರ್ನಮೆಂಟ್ ಫಾರಿನ್ ಇಲಾಖೆಯವರಿಂದ ಕೊಡಲ್ಪಟ್ಟ ಇದರ ಕೆಳಕಂಡ ಇಸ್ತಿಹಾರ್ನಾಮೆಯು ಸಕಲ ಜನಗಳ ತಿಳುವಳಿಕೆಯಬಗ್ಗೆ ಪ್ರಕಟ ಮಾಡಲ್ಪಟ್ಟಿರುತಿದೆ.

"ನಂ ೫೩೩. G. ತಾ ೬ನೇ ಏಪ್ರೆಲ್, ೧೮೯೩ ಮೊದಲನೇ ಕ್ಲಾಸ್ ರೆಸಿಡೆಂಟರಾಗಿಯೂ, ಧಗ್ಗಿನ ಡೆಕಾಯಿಟಿಗಳನ್ನಡಗಿಸುವದಕ್ಕಾಗಿ ಯೇರ್ಪಟ್ಟಿರುವ ಇಲಾಖೆಯ ಜನರಲ್ ಸೂಪರಿಂಟೆಂಡೆಂಟರಾಗಿಯೂ ಇರುವ ಮೇಜರ್ ಕೇವಲಿಗೆ ಸೇರಿದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಿ. ಎಸ್. ಐ ಯವರು, ಮೈಸೂರಲ್ಲಿ ೧ನೇಕ್ಲಾಸ್ ರೆಸಿಡೆಂಟರಾಗಿಯೂ, ಕೊಡಗು ಚೀಫ್ ಕಮಿಷನರಾಗಿಯೂ, ಜನರಲ್ ಸರ್. ಹೆಚ್. ಎನ್. ಡಿ ಪ್ರೆಂಡರ್ ಗ್ಯಾಸ್ಟ್ ಕೆ ಸಿ ಬಿ, ವಿ ಸಿ, ಆರ್. ಇ ಯವರ ನೌಕರಿಯು ಮಿಲಿಟರಿ ಇಲಾಖೆಯವರ ವಿಲೇವಾರಿಗೊಪ್ಪಿಸಲ್ಪಟ್ಟಿರುವದರಿಂದ ಅವರಿಗೆ ಬದಲಾಗಿ ಅವರಿಂದ ಸದರೀ ಕೆಲಸಗಳ ಚಾರ್ಜನ್ನು ತೆಗೆದುಕೊಂಡ ತಾರೀಖ್ ಮೊದಲು, ನೇಮಕರಾಗ್ಮಿಡಲ್ಪಟ್ಟಿರುತ್ತಾರೆ."

ನಂ॥ ೨೧—ಚಿಂತಾಮಣಿ ತಾಲ್ಲೂಕ್ ಅಮಲ್ದಾರ್ ಎಸ್. ವೆಂಕಟಾಚಾರ್ಯರವರಿಗೆ ಅವರು ಪಡೆಯುವ ತಾರೀಖ್ ಆಗಾಯಿತು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತದೆ.

ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರಿಂದ ಸಾದರ್ಮಾಡಲ್ಪಟ್ಟ ಪ್ರೊಸೀಡಿಂಗ್ಸ್ ಯಾನೆ ನಡವಳಿ, ಜನರಲ್-ತಾರೀಖು ೧೦ ನೇ ಏಪ್ರೆಲ್, ೧೮೯೩ ನೇ ಇಸವಿ.

ಹುಕುಂ ನಂ D ೫೯೪, ತಾರೀಖು ೩ ನೇ ಏಪ್ರೆಲ್, ೧೮೯೩ ನೇ ಇಸವಿ, ಮೊಕ್ಕಾಂ ಬೆಂಗಳೂರು.

ಬೆಂಗಳೂರು, ಮೈಸೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿಯೂ, ಹಾಸನ ಡಿಸ್ಟ್ರಿಕ್ಟಿನ ಕೆಳಗಿನ ಅರಸೀಕೆರೆ ವ ಚನ್ನರಾಯಪಟ್ಟಣ ತಾಲ್ಲೂಕುಗಳಲ್ಲಿಯೂ ಕಡೂರು ಡಿಸ್ಟ್ರಿಕ್ಟಿನ ಕಡೂರು ತಾಲ್ಲೂಕಿನಲ್ಲಿಯೂ ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟಿನ ಚೆನ್ನಗಿರಿ ತಾಲ್ಲೂಕಿನಲ್ಲಿಯೂ ಇರುವ ತರೀ ಜಮೀನುಗಳು (ಅಂದರೆ ಕೆರೆಗಳ ಕೆಳಗಿನ ಭತ್ತ ಬೆಳೆಯತಕ್ಕ ಜಮೀನುಗಳಿಗೆ) ೧೮೯೧—೯೩ ನೇ ಸಾಲಿನ ಕಂದಾಯದ ಅರ್ಧಭಾಗವನ್ನು ಸರ್ಕಾರದವರು ಇದರ ಕೆಳಕಂಡ ಮಾಫ್ ಮಾಡಿರುತ್ತಾರೆ. ಪರಂತು ಅಂತಾ ಜಮೀನುಗಳು ಕೆರೆಗಳಲ್ಲ ನೀರಿಲ್ಲದ ಪ್ರಯುಕ್ತ ಅಥವಾ ನೀರು ಸಾಲದ್ದರಿಂದ ಬಂಜರಾಗಿ ಯಾದರೂ ಯಾ ಸಾಗುವಳೀ ಮಾಡಲ್ಪಟ್ಟಾಗ್ಯೂ ಫಸಲಿಲ್ಲದೆಯಾದರೂ ಇರಬೇಕು. ಮೇಲ್ಕಂಡ ಈ ಹುಕುಮನ್ನು ಜಾರಿಯಲ್ಲಿ ತರುವ ಬಗ್ಗೆಗಾಗಿ ಜವಾಬ್ದಾರೀ ಆಫಿಸರರಿಗೂ, ಅಮಲ್ದಾರರಿಗೂ, ಡೆಪ್ಯುಟಿ ಕಮಿಷನರಿಂದ ಕೊಡತಕ್ಕಾಗುವ ಆವಶ್ಯಕವಾದ ತಿಳುವಳಿಕೆಯಲ್ಲಿ, ಮೇಲ್ಕಂಡ ರಿಯಾಯತಿಯು ಕೆರೇ ನೀರಿನ ಆಧಾರದಿಂದ ಸಾಗುವಳಿ ಮಾಡಲ್ಪಡುವ ಜಮೀನುಗಳಿಗೆ ಲಾಗು ಮಾಡಲ್ಪಡತಕ್ಕದ್ದೇ ಹೊರತು ಸಾಧಾರಣ ನೀರಿನ ಆಧಾರದಿಂದ ಸಾಗುವಳೀ ಮಾಡಲ್ಪಡುವಂತಾ ಜಮೀನಿಗೆ ಎಷ್ಟುಮಾತ್ರವೂ ಲಾಗು ಮಾಡಲ್ಪಡತಕ್ಕದ್ದಲ್ಲವೆಂಬ ವಿಷಯವು ಸದರೀ ಆಫಿಸರುಗಳಿಗೆ ಸ್ಪಷ್ಟವಾಗಿ ತಿಳಿಸತಕ್ಕದ್ದು. ಈ ರಿಯಾಯತಿಯು, ಕೆರೆಗೆ ನೀರು ಬಾರದ್ದರಿಂದ ಜಮೀನ್ ಸಾಗುವಳೀ ಮಾಡಲು ಅವಕಾಶವಿಲ್ಲದ ಸಂದರ್ಭಗಳಲ್ಲಿಯೂ ಅಥವಾ ಅಲ್ಪ ಸ್ವಲ್ಪ ನೀರು ಬಂದದರಿಂದ ಸಾಗುವಳಿ ಮಾಡಲ್ಪಟ್ಟಾಗ್ಯೂ ನೀರು ಸಾಲದೇ ಹೋದ ಪ್ರಯುಕ್ತ ಫಸಲ್ ಆಗದೆ ಇರುವ ಸಂದರ್ಭಗಳಲ್ಲಿಯೂ ಮಾತ್ರವೇ ಕೊಡಲ್ಪಡುವ ವಿಷಯದಲ್ಲಿ ಸ್ಥಳಿಕ ಆಫಿಸರುಗಳು ಖಬರಾ ನಿಗೇ ಕೊಡುವರೆಂಬದಾಗಿ ಗವರ್ನಮೆಂಟಿನವರು ನಂಬುತ್ತಾರೆ.

೨ ತರೀ ಕಂದಾಯ ಕಟ್ಟಲ್ಪಟ್ಟ ಜಮೀನುಗಳ ವಿಷಯದಲ್ಲಿ ಕೆರೇ ನೀರಿನ ಉಪಯೋಗಕ್ಕೋಸ್ಕರ ನೀರು ಸರಡಿಯು ಅಂತಾ ತರೀ ಕಂದಾಯದಲ್ಲಿ ಸೇರಿಸಲ್ಪಡದೇ ಅಲಾಹಿದಾ ಆಗಿ ವಿಧಿಸಲ್ಪಟ್ಟದ್ದರೆ ಮೇಲಿನ ಹುಕುಂ ಅನುಸರಿಸಿ ಅಂತಾ ನೀರು ಸರಡಿಯು ಪೂರ್ತಿಯಾಗಿ ಮಾಫ್ ಮಾಡಲ್ಪಡಬೇಕು.

೩. ಇದುವರಿಗೆ ಸಾದರ್ಮಾಡಲ್ಪಟ್ಟ ಹುಕುಂಗಳ ಅನುಸಾರವಾಗಿ ನಡಿಸಲ್ಪಟ್ಟಿರುವ ವಿಚಾರಣೆಯಿಂದ, ಡೆಪ್ಯುಟಿ ಕಮಿಷನರ್‌ಗಳು ಅವರ ಡಿಸ್ಟ್ರಿಕ್ಟುಗಳಲ್ಲಿ ಇರತಕ್ಕ ಯಾವ ತರೀ ಜಮೀನುಗಳು ಬಂಜರಾಗಿರುತ್ತವೆ ಮತ್ತು ಕೆರೆಯಲ್ಲಿ ನೀರು ಇಲ್ಲದ ಸಬಬ್ ಯಾವ ತರೀ ಜಮೀನುಗಳಲ್ಲಿ ಬೆಳೆಯಾಗಲಿಲ್ಲವೆಂಬ ಅಂಶಗಳು ಪೂರ್ತಿಯಾಗಿ ತಿಳಿದು ಇರುತ್ತಾರಾಗಿ, ಹಾಲಿ ಸಾದರ್ಮಾಡಲ್ಪಟ್ಟ ರಿಯಾಯತಿ ಹುಕುಮನ್ನು ಜಾರೀ ಮಾಡುವದರಲ್ಲಿ ಯಾವದೊಂದು ಅಕ್ರಮವೂ ನಡೆಯದಂತೆ ಅಡ್ಡಿ ಮಾಡಲು ಅವರು ಶಕ್ತರಾಗಿದ್ದಾರೆಂದು ಗವರ್ನಮೆಂಟಿನವರು ನಂಬುತ್ತಾರೆ.

೪. ಡಿಸ್ಟ್ರಿಕ್ಟ್ ಆಫಿಸರರು ಪೂರ್ತಿಯಾದ ನಿಗೇ ಕೊಡಬೇಕಾದ ಮತ್ತೊಂದು ಮುಖ್ಯ ಅಂಶವೇನೆಂದರೆ, (೧೮೭೭—೭೮ ನೇ) ಬರಾಧಾನ್ಯ ಸಂವತ್ಸರದಲ್ಲಿ ಅನೇಕಾನರ್ಥ ಸಂಭವಿಸಿದಂತೆ ಗ್ರಾಮಾಧಿಕಾರಿಗಳಿಂದ ಸದರೀ ರಿಯಾಯತಿಯು ಆಪಂಕಪಡಿಸಲ್ಪಟ್ಟು ಅಪಹರಿಸಲ್ಪಡದಂತೆ ತಕ್ಕ ಏರ್ಪಾಡು ಮಾಡಬೇಕಾಗಿರುತ್ತೆ. ಅನೇಕ ಸಂದರ್ಭಗಳಲ್ಲಿ ಈ ರಿಯಾಯತೀ ಹುಕುಮಿನ ಪ್ರಕಾರ ರಿಮಿಷನ್ ಪಡೆಯುವದಕ್ಕೆ ಅರ್ಹರಾದ ರೈತರು ಫೆಬ್ರವರಿ ವ ಮಾರ್ಚ್ ತಿಂಗಳಲ್ಲಿ ಯರಡು ಕಿಸ್ತು ಮಾತ್ರ) ಅಂದರೆ ರೂಪಾಯಿ ೧ ಕ್ಕೆ ೪ ಆಣೆ ಮೇರೆ ಕೊಟ್ಟಿರಬಹುದು. ಅಂತಾ ಸಂಗತಿಗಳಲ್ಲಿ ಬಾಕೀ ಇರುವ ೪ ಆಣೆಗಳು ಮಾಫ್ ಮಾಡಲ್ಪಡಬೇಕು, ರೂಪಾಯಿ ೧ ಕ್ಕೆ ೪ ಆಣೆ ಗಿಂತಲೂ ಹೆಚ್ಚಾಗಿ ಇದುವರಿಗೆ ಪಾವತೀ ಮಾಡಲ್ಪಟ್ಟಿರಬಹುದಾದಂತಾ ವಿನಾಯಿತೀ ಸಂಗತಿಗಳಲ್ಲಿ ೪ ಆಣೆಗಿಂತ ಜಾಸ್ತೀಯಾಗಿ ಪಾವತೀ ಮಾಡಲ್ಪಟ್ಟ ಮೊಬಲಗು ಅವರಿಗೆ ರೀಫಂಡ್ ಯಾನೆ ವಾಪಸ್ ಮಾಡಲ್ಪಡಬೇಕು.

೫ ಈ ಹುಕುಮಿನಿಂದ ಕೊಡಲ್ಪಟ್ಟ ರಿಮಿಷನ್ ಯಾನೆ ಸೋಡೀ ಸಂಗತಿಯು, ತಕ್ಷಣ ಸರ್ವರಿಗೂ ಪ್ರಸಿದ್ಧವಾಗಿ ತಿಳಿಸಲ್ಪಡಬೇಕು.

೬. ರೈತರ ರಶೀತೀ ಬುಕ್ಕುಗಳು ಕೂಡಲೆ ಜಾಗರೂಕತೆಯಿಂದ ತನಿಖೀ ಮಾಡಲ್ಪಡಬೇಕು; ಅದೇ ಕಾಲದಲ್ಲಿಯೇ ಶಾನಭಾಗರುಗಳು, ಸೋಡಿ ಕೊಡಲ್ಪಡಬೇಕಾದ ಕೇಸುಗಳ ಪಟ್ಟಿಯನ್ನು ತಯಾರ್ ಮಾಡಬೇಕು. ಈ ಪಟ್ಟಿಗಳು, ಅಮಲ್ದಾರರಿಂದಲೂ, ಅಸಿಸ್ಟೆಂಟ್ ವ ಡೆಪ್ಯುಟಿ ಕಮಿಷನರವರಿಂದಲೂ ಸುಹಾ ಆಯಾ ಗ್ರಾಮಗಳಲ್ಲಿನ ಪೈರಿನ ಸ್ಥಿತಿ, ಕೆರೆಯ ನೀರು, ವಸಿತೀ ಇವುಗಳನ್ನು ಕುರಿತು ಇದುವರಿಗೆ ತರಿಸಲ್ಪಟ್ಟಿರುವ ಶಪ್ಪೀಲ್ ರಿಪೋರ್ಟುಗಳೊಡನೆ ಜಾಗರೂಕತೆಯಿಂದ ತನಿಖೀ ಮಾಡಲ್ಪಡಬೇಕು. ಇವೇ ಮುಂತಾದ ಅವಶ್ಯಕ ತೋರುವ ತನಖಾಂ ಎಚ್ಚರಿಕೆಗಳೂ ಡೆಪ್ಯುಟಿ ಕಮಿಷನರ್‌ಗಳಿಂದ ತಕ್ಷಣ ಅಚರಿಸಲ್ಪಡತಕ್ಕದ್ದು.

ಎಲ್. ಅನಂತಸ್ವಾಮಿ ರಾವ್,
ಅಂಡರ್ ಸೆಕ್ರೆಟರಿ.

THE PHILOSOPHY OF ARHATS
(ಅರ್ಹತ ಸಿದ್ಧಾಂತವು.)

ಮೇಲೆಕಂಡ ಸಿದ್ಧಾಂತಸ್ವರೂಪವನ್ನೂ ಅವರ ಆಚಾರ ವ್ಯವಹಾರಗಳನ್ನೂ ಅನೇಕ ಪ್ರಮಾಣ ನಿದರ್ಶನಗಳೊಡನೆ ಪೂರ್ವವೇ ಒಂದು ಸಂದರ್ಭದಲ್ಲಿ ವಿವರವಾಗಿ ಈ ಪತ್ರಿಕೆಯಲ್ಲಿ ಪ್ರಕಟಿಸಿರುವುದು ಪ್ರಾಚೀನ ಚಂದಾದಾರರ ಜ್ಞಾಪಕದಲ್ಲಿಯೂ ಇರಬಹುದೆಂದೆಣಿಸುತ್ತೇವೆ. ಈ ವಾರದಲ್ಲಿ ಬಳ್ಳಾರಿ ಸನ್ಮಾರ್ಗ ಬೋಧಿನಿ ಯೆಂಬ ಆಂಧ್ರಪತ್ರಿಕೆಯು ಕೆಲವು ವಿಶೇಷಾಂಶಗಳೊಡನೆ ಸದರೀ ಮತದ ಕುರಿತು ವಿಚಾರ ಮಾಡಿರುತ್ತದೆ. ಇದು ತನ್ಮತಾವಲಂಬಿಗಳಾದ ನಮ್ಮ ಚಂದಾದಾರರನೇಕರಿಗೆ ಜ್ಞಾತವ್ಯವಾಗಿಯೂ ಉಲ್ಲಾಸಕರವಾಗಿಯೂ ಇರುವವದರಿಂದ ಅದನ್ನಿದರಡಿ ಭಾಷಾಂತರದಿಂ ಪ್ರಕಟಿಸುತ್ತೇವೆ, ಏನೆಂದರೆ,—

"ಪ್ರಕೃತ ಅರ್ಹತಮತವು ಕ್ಷಣಿಕ ವಿಜ್ಞಾನವಾದಿಯ ಮತವಂ ನಿರಾಕರಿಸಿ, ಸ್ವಸಿದ್ಧಾಂತವಂ ಸ್ಥಾಪಿಸಿದ್ದಾಗಿರುತಿದೆ. ಇವರ ಮತರೀತ್ಯಾ ಸಪ್ತಪದಾರ್ಥಗಳಿರುವಂತೆ ಸ್ಪಷ್ಟವಾಗುತಿದೆ. ಅವುಗಳ್ಯಾವವೆಂದರೆ,—ಜೀವ, ಅಜೀವ, ಆಸ್ರವ, ಸಂವರ, ನಿರ್ಜರ, ಬಂಧ, ಮೋಕ್ಷಗಳೆಂಬವೇ ಸಪ್ತಪದಾರ್ಥಗಳು. ಇವುಗಳಲ್ಲಿ ಜೀವಾಜೀವಗಳೆಂಬ ಯೆರಡು ಪದಾರ್ಥಗಳೇ ಕೇವಲ ಮುಖ್ಯವಾದವು. ಈ ಯೆರಡು ಪದಾರ್ಥಗಳಲ್ಲಿ ಯೂ ಅವಾಂತರಭೇದಗಳು ಕೆಲವಂ ತಿಳಿಸುತ್ತಾರೆ. ಇವಂ ಅರ್ಹತರು ಅಸ್ತಿಕಾಯವೆಂಬ ಒಂದು ಸಾಂಕೇತಿಕ ಶಬ್ದದಿಂದ ವ್ಯವಹರಿಸುತ್ತಾರೆ. ಈ ಅಸ್ತಿಕಾಯವು ಐದು ಬಗೆಯಾಗಿರುತಿದೆ ಅವುಗಳ್ಯಾವವೆಂದರೆ, ಜೀವಾಸ್ತಿಕಾಯ, ಪುದ್ಗಲಾಸ್ತಿಕಾಯ, ಧರ್ಮಾಸ್ತಿಕಾಯ, ಅಧರ್ಮಾಸ್ತಿಕಾಯ, ಆಕಾಶಾಸ್ತಿಕಾಯ ಯೆಂಬದಾಗಿ ಶಾಸ್ತ್ರೀಯವಾಗಿ ವ್ಯವಹರಿಸುತ್ತಾರೆ. ಇವುಗಳೆಲ್ಲದರಲ್ಲಿಯೂ "ಸಪ್ತಭಂಗೀನ್ಯಾಯವು" ಹೇಳಲ್ಪಡುತಿದೆ ಇದಕ್ಕೆ ಸ್ಯಾದ್ವಾದವೆಂದು ಹೆಸರು. ಸ್ಯಾದಸ್ತಿ, ಸ್ಯಾನ್ನಾಸ್ತಿ, ಸ್ಯಾದಸ್ತಿಚ ನಾಸ್ತಿಚ, ಸ್ಯಾದವಕ್ತವ್ಯಃ, ಸ್ಯಾದಸ್ತಿಚಾವಕ್ತವ್ಯಶ್ಚ, ಸ್ಯಾನ್ನಾಸ್ತಿಚಾವಕ್ತವ್ಯಶ್ಚ, ಸ್ಯಾದಸ್ತಿಚ ನಾಸ್ತಿಚಾವಕ್ತವ್ಯಶ್ಚೇತಿ. ಶ್ಲೋ|| ಸರ್ವಜ್ಞೋಜಿತರಾಗಾದಿ ದೋಷಸ್ತ್ರೈಲೋಕ್ಯಪೂಜಿತಃ । ಯಥಾಸ್ಥಿತಾರ್ಥವಾದೀಚ ದೇವೋರ್ಹನ್ಪರಮೇಶ್ವರಃ ॥ ಈ ಶ್ಲೋಕಾರ್ಥವೇನೆಂದರೆ,—ಪರಮೇಶ್ವರನು, ಸರ್ವಜ್ಞನೆಂತಲೂ, ರಾಗಾದಿ ದೋಷವಿವರ್ಜಿತನೆಂತಲೂ, ಲೋಕತ್ರಯಪೂಜಿತನೆಂತಲೂ, ಯಾವಾಗಲು ಸತ್ಯವನ್ನೇ ಬೋಧಿಸತಕ್ಕವನೆಂತಲೂ ತಿಳಿದು ಉಪಾಸನೆ ಮಾಡಬೇಕೆಂಬದು ತಾತ್ಪರ್ಯವು. ಹಿಂದೆ ತಿಳಿಸಿದ ಜೀವಾದಿ ಪದಾರ್ಥಗಳನ್ನು ವಿವರಿಸುತ್ತೇವೆ ಹ್ಯಾಗಂದರೆ.—ಜೀವನೆಂದರೆ—ಭೋಕ್ತನೆಂದರ್ಥವು. ಅಂತಾ ಜೀವನಿಗೆ ಅನುಭವಯೋಗ್ಯವಾದ ವಸ್ತುವೇ ಅಜೀವ ಪದಾರ್ಥವು. ಶಬ್ದಾದಿ ವಿಷಯೇಚ್ಛೆಯಿಂದ ಶ್ರೋತ್ರಾದೀಂದ್ರಿಯಗಳು ಪ್ರವರ್ತಿಸಿ ತತ್ತದ್ವ್ಯಾಪಾರಗಳಂ ಮಾಡುವಣವಂ ಆಸ್ರವವೆಂದು ಹೇಳುತ್ತಾರೆ. ಇಂತಾ ಇಂದ್ರಿಯ ವ್ಯಾಪಾರ ನಿರೋಧಕವಾದ ಯಮನಿಯಮಾದಿಗಳು ಸಂವರವೆಂತಲೂ, ಪಾಪನಿವಾರಕವಾದ ತಪ್ತಶಿಲಾರೋಹಣ ಮೊದಲಾದ ಕಾಯಶುದ್ಧಿಗಳಂ ನಿರ್ಜರವೆಂತಲೂ, ಬಂಧವೆಂದರೆ ಕರ್ಮವೆಂತಲೂ, ಮೋಕ್ಷವೆಂದರೆ, ಕರ್ಮಪಾಶ ನಾಶನವಾದಮೇಲೆ ಸರ್ವಲೋಕಾಕಾಶದಲ್ಲಿ ಪ್ರವೇಶಿಸಿ ಸಂತತೋರ್ಧ್ವಗಮನವಂ ಪಡೆಯುವಣವೆಂತಲೂ, ಜೀವಾಸ್ತಿಕಾಯವೆಂದರೆ ಜೀವರೂಪಗಳಾದ ಪದಾರ್ಥಗಳೆಂತಲೂ, ಪುದ್ಗಲವೆಂದರೆ, (ಪೂರ್ಯಂತೆಗಲಂತೀತಿಪುದ್ಗಲಾಃ | ಅಂದರೆ-ಪರಮಾಣುಗಳ ಸಮ್ಮೇಳನದಿಂ ಒಂದು ರೂಪದಿಂ ಪೆರ್ಚಿ ಅದು ಮರಳಿ ಪೂರ್ವಸ್ಥಿತಿಯಂ ಹೊಂದುವ ಸ್ವಭಾವವುಳ್ಳದ್ದು) ಶರೀರವೆಂತಲೂ, ಧರ್ಮವೆಂದರೆ, ಜೀವಿಯ ಸ್ವಭಾವವನ್ನನುಸರಿಸಿ ಊರ್ಧ್ವಗಮನಕ್ಕೆ ಹೇತುವಾಗತಕ್ಕಂತಾ ಪುಣ್ಯವಿಶೇಷವೆಂತಲೂ, ಅಧರ್ಮವೆಂದರೆ, ಊರ್ಧ್ವಗಮನ ಶೀಲನಾಗುವಂತಾ ಜೀವನಿಗೆ ದೇಹದಲ್ಲಿ ನಿಯತಸ್ಥಿತಿಯನ್ನುಂಟುಮಾಡತಕ್ಕ ಪಾಪ ವಿಶೇಷವೆಂತಲೂ, ಆಕಾಶವೆಂದರೆ ನಿರಾವರಣವೆಂತಲೂ, ತಿಳಿದು ಪದಾರ್ಥಗಳ ನಿಜಸ್ಥಿತಿಯನ್ನರಿಯತಕ್ಕದ್ದು. ಇದಲ್ಲದೆ ಜೀವಾಸ್ತಿಕಾಯವು ಮೂರುವಿಧಗಳುಳ್ಳದ್ದಾಗಿರುತಿದೆ ಕೆಲವರು ಅರ್ಹತ ಮುಖ್ಯರಾದ ನಿತ್ಯಸಿದ್ಧರಾಗಿಯೂ, ಕೆಲವರು ಇದುವರಿವಿಗೆ ಮುಕ್ತರಾಗಿಯೂ, ಮತ್ತು ಕೆಲವರು ಬದ್ಧಜೀವಿಗಳಾಗಿಯೂ ಇರುತ್ತಾರೆ. ಪುದ್ಗಲಾಸ್ತಿಕಾಯವು ಆರುವಿಧಗಳುಳ್ಳವಾಗಿರುತಿವೆ ಪೃಥ್ವೀ, ಅಪ್ಪು, ತೇಜಸ್ಸು, ವಾಯು, ಸ್ಥಾವರ, ಜಂಗಮವು ಆಕಾಶಾಸ್ತಿಕಾಯವು, ಸಾಂಸಾರಿಕಾಕಾಶವೆಂತಲೂ, ಮುಕ್ತಾಶ್ರಯವಾದ ಅಲೋಕಾಕಾಶವೆಂತಲೂ ಎರಡುವಿಧವಾಗಿರುವಂತೆ ತಿಳಿಯತಕ್ಕದ್ದು. ಬಂಧ ರೂಪಗಳಾದ ಕರ್ಮಗಳು ಅಷ್ಟವಿಧಗಳು, ಅವುಗಳಲ್ಲಿ ನಾಲ್ಕು ಘಾತುಕ ಕರ್ಮಗಳು, ನಾಲ್ಕು ಅಘಾತುಕ ಕರ್ಮಗಳು. ತತ್ವಜ್ಞಾನದಿಂ ಮುಕ್ತಿಯುಂಟಾಗಲಾರದೆಂಬಬುದ್ಧಿಯನ್ನುಂಟುಮಾಡುವ ಕರ್ಮಗಳು ಘಾತುಕ ಕರ್ಮಗಳೆಂದು ತಿಳಿಯತಕ್ಕದ್ದು. ಇವಕ್ಕೇ ಜ್ಞಾನಾವರಣವೆಂದು ಹೆಸರು. ಅರ್ಹತ ತಂತ್ರಶ್ರವಣದಿಂ ಮುಕ್ತಿಯುಂಟಾಗಲಾರದೆಂಬ ಜ್ಞಾನವನ್ನುಂಟುಮಾಡತಕ್ಕ ಕರ್ಮಗಳನ್ನು ದರ್ಶನಾವರಣವೆಂದು ತಿಳಿಯಬೇಕು. ಅನೇಕರಿಂದ ತೋರಿಸಲ್ಪಟ್ಟ ಮೋಕ್ಷ ಮಾರ್ಗದಲ್ಲಿ ಆಸಕ್ತಿಯೊಡನೆ ಪ್ರವರ್ತಿಸದಿರುವಣವೇ ಮೋಹಕರ್ಮಗಳೆನ್ನಿಸಿಕೊಳ್ಳುತಿವೆ. ಮೋಕ್ಷ ಮಾರ್ಗದಲ್ಲಿ ಪ್ರವರ್ತಿಸಲಿಕ್ಕೆ ವಿಘ್ನಕಾರಿಗಳಾದವು ಅಂತರಾಯ ಕರ್ಮಗಳು, ಈ ನಾಲ್ಕು ವಿಧ ಕರ್ಮಗಳು ಶ್ರೇಯಸ್ಕರ್ಮಗಳಂ ಕೆಡಿಸತಕ್ಕವಾದುದರಿಂದ ಅನ್ವರ್ಥ ಸಂಜ್ಞೆಯಿಂದವುಗಳಿಗೆ ಘಾತುಕ ಕರ್ಮಗಳೆಂಬ ಹೆಸರುಂಟಾಯಿತು. ವೇದನೀಯ, ನಾಮಿಕ, ಗೋತ್ರಿಕ, ಆಯುಷ್ಕಗಳೆಂಬವು ಅಘಾತುಕಕರ್ಮಗಳೆಂದು ತಿಳಿಯತಕ್ಕದ್ದು. ನನಗೆ ತಿಳಿಯತಕ್ಕಂತಾ ತತ್ವವುಂಟೆಂಬ ಅಭಿಮಾನವು ವೇದನೀಯವು; ನಾನು ಹೆಸರುಳ್ಳವನಾಗಿದೇನೆಂಬ ಅಭಿಮಾನವು ನಾಮಿಕವು; ನಾನು ಪೂಜ್ಯನಾದ ದೇಶಿಕನ ಶಿಷ್ಯ ವಂಶದಲ್ಲಿ ಜನಿಸಿದವನೆಂಬ ಅಭಿಮಾನವು ಗೋತ್ರಿಕವು; ಶರೀರ ಸ್ಥಿತ್ಯರ್ಥವಾಗುವಂತಾ ಕರ್ಮಗಳು ಆಯುಷ್ಕವೆಂದು ಕರೆಯಲ್ಪಡುತಿವೆ. ಇಂತಾ ಕರ್ಮಾಷ್ಟಕಗಳು ಯಾರಿಗೆ ನಿವೃತ್ತಿಯಾಗುತಿವೆಯೋ ಅವರಿಗೆ ಮೋಕ್ಷವುಲಭಿಸುತಿದೆಂಬವೇ ಅರ್ಹತಮತದಲ್ಲಿನ ಮುಖ್ಯಸಿದ್ಧಾಂತವಾಗಿರುತಿವೆ.

> ಶ್ಲೋ|| ಜನೋಪಯೋಗುದುಸಮ್ಯಕ್ ತತ್ವಜ್ಞಾನೋಪಯೋಕಃ । ಜ್ಞಾನದರ್ಶನಚಾರಿತ್ರಾಣ್ಯಪವರ್ಗಸ್ಯವರ್ತ್ಮನಿ । ಸ್ಯಾದ್ವಾದಸ್ಯಪ್ರಮಾಣೇದ್ವೆಪ್ರತ್ಯಕ್ಷಮನುಮಾಪಿಚ । ನಿತ್ಯಾನಿತ್ಯಾತ್ಮಕಂಸರ್ವಂನವತತ್ವಾನಿಸಪ್ತವಾ ॥

ಈ ಮತದಲ್ಲಿ ಮುಖ್ಯಾಂಶಗಳ್ಯಾವವೆಂದರೆ,—ಸತ್ಯ,ಅಹಿಂಸೆ, ಜ್ಞಾನ, ವೈರಾಗ್ಯ ಮೊದಲಾದ ಸುಗುಣಗಳಂ ಪಡೆದಂತವನಿಗೇ ಮೋಕ್ಷವು ಲಭಿಸುವುದು. ಅಂತವನಿಗೇ ಜಿನಶಬ್ದವಾಚ್ಯನಾದ ಪರಮೇಶ್ವರನ ಅನುಗ್ರಹ ವುಂಟಾಗುವದಲ್ಲದೆ ಅನ್ಯರಿಗದು ಯೆಂದಿಗೂ ಸಿದ್ಧಿಸಲಾರದು. ಇದಕ್ಕೆ ಅರ್ಹತಮತವೆಂತಲೂ, ಜೈನ ಮತವೆಂತಲೂ, ದಿಗಂಬರಮತವೆಂತಲೂ ಪರ್ಯಾಯನಾಮಗಳುಂಟಾಗಿ ವ್ಯವಹರಿಸಲ್ಪಡುತಲಿವೆ. ಇವರು ಉತ್ತರ ದೇಶದಲ್ಲಿಯೂ ಮೈಸೂರು ಶೀಮೆಯ ಪ್ರಕೃತಿ ಕೆಲವು ಪ್ರದೇಶಗಳಲ್ಲಿಯೂ ವಾಸವಾಗಿರುತ್ತಾರೆ. ಈ ಮತಸ್ಥರು ನಿರೀಶ್ವರ ವಾದಿಗಳೆಂತಲೂ 'ವೇದಶಾಸ್ತ್ರಗಳನ್ನಂಗೀಕರಿಸದಿರುವದರಿಂದ' ನಾಸ್ತಿಕರೆಂತಲೂ ಅನೇಕರು ಅಭಿಪ್ರಾಯ ಪಟ್ಟಿರುತ್ತಾರೆ. ಇವರಿಗೆ ಆಪ್ತನಾದದೇವರೂ ಅಣು ವೇದಗಳೂ ವುಂಟು. 'ಇವರೆಲ್ಲಿ ಅಂಗೀಕರಿಸಲ್ಪಟ್ಟಿರುವ ಯತಿ ಧರ್ಮಗಳು ಬಹಳ ಕಠಿಣಗಳಾದವಾಗಿರುತಿವೆ. ಗೃಹಸ್ಥಧರ್ಮಗಳು ಕೂಡ ಕೆಲವು ಕೊಂಡಾಡತಕ್ಕವಾಗಿರುತಿವೆ. ದಿಗಂಬರ ಜೈನರಿಗೂ ಶ್ವೇತಾಂಬರ ಜೈನರಿಗೂ ಕೆಲವು ವಿಷಯಗಳಲ್ಲಿ ಅಭಿಪ್ರಾಯಭೇದವುಂಟಾಗಿರುತಿದೆ.

ಸ್ತ್ರೀ ಸ್ವಾತಂತ್ರ್ಯ ವಿಮರ್ಶ.

ಮೈಸೂರ ಸಿಟಿಯಲ್ಲಿ ಪರಾರಿಯಾಗಿದ್ದ ಗುಂಡಮ್ಮನೆಂಬುವಳು ಮಂಡ್ಯದಲ್ಲಿ ಕು ರಂಗಾಚಾರಿ ಎಂಬ ಶ್ರೀವೈಷ್ಣವ ಬ್ರಾಹ್ಮಣನ ಮನೆಯಲ್ಲಿ ಇದ್ದದ್ದನ್ನು ಅವಳ ಗಂಡನು ತಿಳಿದು ವಾರಂಟು ಹುಟ್ಟಿಸಿ ಪೋಲೀಸಿನವರನ್ನು ಕರೆದುಕೊಂಡು ಹೋಗಿ ಅವನ ಮನೆಯನ್ನು ಹುಡುಕಿಸುವಾಗ್ಯೆ ಒಂದು ಕತ್ತಲೆಮಾಡ ಕೋಣೆಯಲ್ಲಿ ಅಡಗಿಕೊಂಡಿದ್ದ ಗುಂಡಮ್ಮನನ್ನೂ ಮತ್ತು ಡಿಟೋ ಕು ರಂಗಾಚಾರಿಯನ್ನೂ ದಸ್ತಗಿರಿ ಮಾಡಿ ಮೈಸೂರಿಗೆ ಕಳುಹಿಸಿಕೊಟ್ಟರು ನಿನ್ನೇ ಸೋಮವಾರ ಟೌನ್ ಮ್ಯಾಜಿಸ್ಟ್ರೇಟಾದ ಮೆ|| ರಾಘವೇಂದ್ರ ರಾಯರು ಅಪರಾಧಿಯನ್ನು ಕರಸಿ ಪ್ರಿಲಿಮಿನೆರಿ ವಿಚಾರಣೆಯನ್ನು ನಡಿಸಿ ತಾರೀಖು ೧೯ ನೇ ಮಂಗಳವಾರಕ್ಕೆ ಹಿಯರಿಂಗ್ ಇಟ್ಟರು ಡಿಟೋ ಮಂಗಳವಾರ ದಿವಿ ೧೨|| ಘಂಟೆಗೆ ವಿಚಾರಣೆಯು ನಡೆಯಿತು. ಗುಂಡಮ್ಮನ ಗಂಡನಾದ ಅಣ್ಣಯ್ಯನೇ ಫಿರ್ಯಾದಿಯಾಗಿನಿಂತು, ೧ ನೇ ಅಪರಾಧಿಯಾದ ಗುಂಡಮ್ಮನು ತನ್ನ ಮನೆಯಲ್ಲಿದ್ದ ೨೦೦—೩೦೦ ರೂಪಾಯಿಗಳ ನಗಗಳನ್ನು ಅಪಹರಿಸಿಕೊಂಡು ೨ ನೇ ಅಪರಾಧಿ ಕು ರಂಗಾಚಾರಿಯ ಚಿತಾವಣೆಯಿಂದ ಮನೆಯನ್ನು ಬಿಟ್ಟು ಹೋದಳೆಂದು ಫಿರ್ಯಾದು ಮಾಡಿರುತ್ತಾನೆ, ಫಿರ್ಯಾದಿ ಕಡೆ ಮೆಸ್ಸರ್ಸ್ ಕೆ. ಸುಬ್ರಮ್ಮಣ್ಯ, ಎ. ರಾಮಣ್ಣನವರು, ಎಂ. ಎಸ ಕೃಷ್ಣಸ್ವಾಮಿ ರಾಯರು, ಮತ್ತು ಎಂ. ತಮ್ಮಯ್ಯನವರು, ಇವರು ವಕೀಲರಾಗಿ ನಿಂತರು ೨ ನೇ ಅಪರಾಧಿ ಕಡೆ ಮಿಸ್ಸರ್ಸ್ ಕೃಷ್ಣಯ್ಯಂಗಾರ್ರು, ಶ್ರೀನಿವಾಸಯ್ಯಂಗಾರ್ರು, ೧ ನೇ ಅಪರಾಧಿಯ ಕಡೆ ಮ|| ಸುಬ್ಬಣ್ಣನವರು ವಕೀಲರಾಗಿದ್ದರು ವಿಚಾರಣೆಯು ಪ್ರಾರಂಭವಾಗಿ ಫಿರ್ಯಾದಿ ಕಡೆ ೫ ಸಾಕ್ಷಿಗಳ ಕೈಫಿಯತ್ತಾದ ನಂತರ ೧ ನೇ ಅಪರಾಧಿಯಾದ ಗುಂಡಮ್ಮನನ್ನು ಪ್ರಶ್ನೆ ಮಾಡಿದರು ಅವಳ ಕೈಫಿಯತ್ತೇನಂದರೆ,

ಕೋರ್ಟ್ ಸವಾಲ್—ನಿನ್ನ ಹೆಸರೇನು? ನೀನು ಯಾವ ಜಾತಿ? ಎಲ್ಲಿರುವದು.

ಜವಾಬು—ನನ್ನ ಹೆಸರು ಗುಂಡಮ್ಮ ಮುಳಕನಾಡು ಬ್ರಾಹ್ಮಣಜಾತಿ ನಾನು ಮಂಡ್ಯದಲ್ಲಿ ಇರುವದು.

ಸವಾಲು—ನಿನಗೆಷ್ಟು ವಯಸ್ಸು? ನಿನಗೆ ಯಾತರಿಂದ ಜೀವನ?

ಜವಾಬು—ನನಗೆ ೨೨ ವರುಷ, ನಾನು ಯಾತರಿಂದಲೂ ಜೀವನ ಮಾಡುವದಿಲ್ಲ.

ಸವಾಲು—ನಿನ್ನ ಗಂಡನ ಹೆಸರೇನು? ನೀನು ಆತನನ್ನು ಶಾಸ್ತ್ರೋಕ್ತವಾಗಿ ಮದುವೆ ಮಾಡಿಕೊಂಡೆಯಾ?

ಜವಾಬು—ನನ್ನ ಗಂಡನು ಅಣ್ಣಯ್ಯ, ಶಾಸ್ತ್ರೋಕ್ತವಾಗಿ ಮದುವೆ ಆಗಿದೆ.

ಸವಾಲು—ನೀನು ಎಷ್ಟು ವರುಷಗಳಿಂದ ನಿನ್ನ ಗಂಡನೊಂದಿಗೆ ಸಂಸಾರ ಮಾಡಿಕೊಂಡಿದ್ದೀಯೆ? ನಿನಗೆ ಮಕ್ಕಳುಂಟೆ?

ಜವಾಬು—೮—೬ ವರುಷಗಳಿಂದ ಸಂಸಾರ ಮಾಡಿಕೊಂಡಿದ್ದೇನೆ. ನನಗೆ ಸುಮಾರು ನಾಲ್ಕು ವರುಷದ ಒಂದು ಹೆಣ್ಣು ಮಗಳಿರುವಳು.

ಸವಾಲು—ನೀನು ಮನೆಯನ್ನು ಬಿಟ್ಟು ಎಷ್ಟು ದಿವಸವಾಯಿತು? ಯಾತಕ್ಕೋಸ್ಕರ?

ಜವಾಬು—ನಾನು ಮನೆ ಬಿಟ್ಟು ಒಂದು ತಿಂಗಳಾಯಿತು ಈಗ್ಯೆ ಸುಮಾರು ಆರುತಿಂಗಳ ಕೆಳಗೆ ನಾನು ಮುಟ್ಟಾಗಿ ಚಿಕ್ಕ ಮನೆಯಲ್ಲಿದ್ದೆ, ಮನೆಯಲ್ಲಿ ಗಂಡ ಮತ್ತು ಅತ್ತೆ ಇರಲಿಲ್ಲ. ರಾಮಚಂದ್ರ ಪಂಡಿತನೆಂಬವನು ನನ್ನ ಒಳಗೆ ಬಂದು ನನ್ನನ್ನು ಕೆಡಿಸಿದ, ಅವನು ನನ್ನ ಕೋಣೆಯನ್ನು ಬಿಟ್ಟು ಹೊರಗೆ ಹೋಗುವಾಗ್ಯೆ ನನ್ನ ಗಂಡನೂ ಅತ್ತೆಯೂ ಬಂದು ನೋಡಿದರು. ಅವನನ್ನು ಆಚೆಗೆ ಕಳುಹಿಬಿಟ್ಟು ನನ್ನನ್ನು ಹೊಡೆದು ಬಡಿದು ಬೈದು ಫಜೀತಿ ಮಾಡಿದರು ಅನಂತರ ಹೀಗೆಯೇ ಮಾಡುತಿದ್ದರು ಈಗ್ಯೆ ಒಂದು ತಿಂಗಳಲ್ಲಿ ನಾನು ಮುಟ್ಟಾಗಿ ಸ್ನಾನ ಮಾಡುವದಕ್ಕೆ ಕೆರೆಗೆ ಹೋದೆ, ಅಲ್ಲಿ ಬಿಗೆಯುವದಕ್ಕೂ ಸ್ನಾನ ಮಾಡುವದಕ್ಕೂ ಕಲ್ಲು ಸಿಕ್ಕಲಿಲ್ಲ ಅದ್ದರಿಂದ ಮನೆಗೆ ಬರುವದಕ್ಕೆ ಹೊತ್ತಾಯಿತು. ಇದಕ್ಕಾಗಿ ನನ್ನ ಗಂಡನು ಹೊಡೆದು ಬೈದು ರಾಂಗ್ ಮಾಡಿದ ರಾಮಚಂದ್ರ ಪಂಡಿತನು ಇದನ್ನು ಕೇಳಿ ನನ್ನಿಂದ ನಿನಗೆ ಇಷ್ಟು ಕಷ್ಟಬಂತಲ್ಲವೆ ನಾನು ನಿನ್ನನ್ನು ಜೋಪಾನ ಮಾಡುತ್ತೇನೆ, ಬಾ ಎಂದು ಕರೆದುಕೊಂಡು ಹೋಗಿ ಈರೂರು ರೈಲ್ ಸ್ಟೇಷನ್ ಬಳಿ ಇರುವ ನಂಜರಾಜ ಬಹದ್ದೂರರವರ ಛತ್ರದಲ್ಲಿ ನನ್ನನ್ನು ೧೫ ದಿವಸಗಳವರೆಗೂ ಇಟ್ಟಿದ್ದ. ೧೬ ನೇ ದಿವಸ ಒಂದು ಮದರಾಸೀರೆಯನ್ನೂ ನಗದು ಐದು ರೂಪಾಯಿಗಳನ್ನೂ ತಂದು ಕೊಟ್ಟು ನೀನು ಬಂಗಳೂರಿಗೆ ಹೋಗು; ನಾನೂ ಬರುತ್ತೇನೆ ಎಂದು ನನ್ನನ್ನು ಕಳುಹಿಸಿದ, ನಾನು ಬೆಂಗಳೂರಿಗೆ ಹೋಗಿ ಒಂದು ಛತ್ರದಲ್ಲಿ ಇಳುಕೊಂಡೆ; ೨ನೇ ಅಪರಾಧಿಯಾದ ರಂಗಾಚಾರಿಯು ರಾಯಿಲಿಯಿಂದ ಅದೇ ಛತ್ರದಲ್ಲಿದ್ದ, ಆತನ ತಂಗಿಯು ಅಲ್ಲೇ ಇದ್ದಳು. ಇವನು ನಮ್ಮ ಮನೆಯಲ್ಲಿ ನಾಟಕದ ಕಂಪೆನಿಗೆ ಬರುತಿದ್ದ, ಇವನ ಗುರ್ತು ನನಗಿತ್ತು, ಇವನು ಬೆಂಗಳೂರಿಂದ ತನ್ನ ಸ್ಥಳವಾದ ಮಂಡ್ಯಕ್ಕೆ ಹೋಗಿ ರೋಗ ವಾಸಿಮಾಡಿಕೊಂಡು ಪುನಃ ಮೈಸೂರಿಗೆ ಹೋಗಬೇಕೆಂದಿದ್ದ, ಇದನ್ನು ನಾನು ತಿಳಿದು ನಾನು ನಿಮ್ಮ ಜೊತೆಯಲ್ಲಿ ಮಂಡ್ಯಕ್ಕೆ ಬರುತ್ತೇನೆ. ಕರೆದುಕೊಂಡು ಹೋಗಿ ಯೆಂದು ಕೇಳಿಕೊಂಡೆ, ಅವನು ಒಪ್ಪಿ ನನ್ನನ್ನು ಕರೆದುಕೊಂಡು ಹೋಗಿ ಮಂಡ್ಯದಲ್ಲಿ ಅವನ ಮನೆಯಲ್ಲಿ ಒಂದು ಕೋಣೆಯನ್ನು ನನಗೆ ಬಿಟ್ಟುಕೊಟ್ಟ, ನಾನು ಅಲ್ಲಿ ಬೇರೆ ಇದ್ದೆ. ಪೋಲೀಸಿನವರು ಬಂದು ನನ್ನನ್ನು ದಸ್ತಗಿರಿ ಮಾಡಿ ಹಿಡಿದು ತಂದರು. ನಾನು ನಗಗಳೊಂದನ್ನೂ ಕದ್ದಿಲ್ಲ, ನಾನು ತೆಗದುಕೊಂಡು ಹೋಗಲಿಲ್ಲ ಉಟ್ಟ ಬಟ್ಟೆಯಲ್ಲಿ ಹೊರಕ್ಕೆ ಹೋದೆ.

ಈ ಮೊಕದ್ದಮೆಯು ಸಾಯಂಕಾಲ ೫|| ಘಂಟೆಯವರಿಗೆ ವಿಚಾರಣೆ ಆಯಿತು. ಕಳವು ರುಜುವಾತಾದಂತೆ ಕಾಣಬರುವದಿಲ್ಲ ೧ನೇ ಅಪರಾಧಿ ಗುಂಡಮ್ಮನಿಗೆ ಬಿಡುಗಡೆ ಆದರೂ ಆಗಬಹುದು ೨ ನೇ ಅಪರಾಧಿ ರಂಗಾಚಾರಿಯ ಮೇಲೆ ತಪ್ಪು ಸಾಬೀತಾಗಬಹುದೆಂದು ಜಡ್ಜಿಗಳು ಊಹಿಸುವಂತೆ ಕಾಣಬರುತಿವೆ, ಇದರ ಫಲಿತಾಂಶ ಇನ್ನೂ ಗೊತ್ತಾಗಲಿಲ್ಲ ಇದೇ ತಿಂಗಳ ೨೬ ನೇ ಮಂಗಳವಾರಕ್ಕೆ ಹಿಯರಿಂಗ್ ಇಟ್ಟು, ಮಂಡ್ಯದ ಮತ್ತು ಬೆಂಗಳೂರಿನ ಪೋಲೀಸ್ ರಿಕಾರ್ಡುಗಳನ್ನು ತರಿಸುವಂತೆ ಆರ್ಡರ್ ಮಾಡಿರುತ್ತಾರೆ—ವೃ ಕ.

SUMMARY OF NEWS.
ವೃತ್ತಾಂತ ಸಂಗ್ರಹವು.

ಬೊಂಬಾಯಿ ಮತ್ತು ಬರೋಡಾ ರೈಲ್ವೆ ಕಂಪೆನಿಯವರು ತಮ್ಮ ರೈಲ್ ಗಾಡಿಗಳಲ್ಲಿ ರಾತ್ರಿ ಕಾಲದೊಳು ಗ್ಯಾಸಿನಿಂದ ದೀಪವನ್ನು ಹತ್ತಿಸತಕ್ಕ ಬಗ್ಗೆ ಯತ್ನಿಸುತಿದ್ದಾರೆ

ಜೇಲಂ ಮತ್ತು ರಾವಲಪಿಂಡಿ ಪಟ್ಟಣಗಳ ಮಧ್ಯ ಹಾಕಿರುವ ರೈಲ್ ರಸ್ತೆಯನ್ನು ರಿಪೇರಿ ಮಾಡಿ ಉತ್ತಮವಾದ ಸ್ಥಿತಿಯಲ್ಲಿಡುವದಕ್ಕಾಗಿ ಇಂಡಿಯಾ ಸರ್ಕಾರದ ಸೆಕ್ರೆಟರಿಯವರು ೬೫| ಲಕ್ಷ ರೂಪಾಯಿಗಳನ್ನು ಸ್ಯಾಂಕ್ಷನ್ ಮಾಡಿರುತ್ತಾರೆ.

ಪ್ರಸಿದ್ಧರಾಷ್ಟ್ರಕ್ಕೆ ಸೇರಿದ ಒಂದಾನೊಂದು ಗ್ರಾಮದಲ್ಲಿ ಸ್ಯಾಮ್ಯುವಲ್ ಮೆಂಟೆಸ್ ಎಂಬ ಹೆಂಗಸು ತನ್ನ ... ಮಾಡಿದ್ದಕ್ಕೆ ಅವಳಿಗೆ ಅಲ್ಲಿನ ನ್ಯಾಯಾಧಿಪತಿಯು ಎರಡು ವರುಷ ದಂಡವನ್ನು ವಿಧಿಸಿದನು. ಅವಳು ಲೋಕಸುಂದರಿಯಾಗಿದ್ದದರಿಂದ ಸ್ವಾಮಿ ಸಹ ಅವಳ ವಿಷಯದಲ್ಲಿ ಕನಿಕರ ಪಟ್ಟನೆಂದು ಅಲ್ಲಿನವರು ಹೇಳಿ ಸಂತೋಷಪಡುತಿದ್ದಾರೆ

ಜರ್ಮನೀ ರಾಜ್ಯದಲ್ಲಿ ಒಂದು ನರಿಯು ಮೂರು ಜೀತೆ ಮರಿಗಳನ್ನು ತನ್ನ ಬಿಲದಲ್ಲಿಟ್ಟುಕೊಂಡು ಕಾಪಾಡುತ್ತಿರುವದನ್ನು ಒಬ್ಬನೊಬ್ಬ ಪ್ರಯಾಣಸ್ಥನು ಕಂಡು, ಆ ಮರಿಗಳನ್ನು ಅಪಹರಿಸಿಕೊಂಡು ಹೋಗಬೇಕೆಂದು ಯತ್ನಿಸಲು, ಆ ನರಿಯು ಅವನ ಅಭಿಪ್ರಾಯವನ್ನು ತಿಳಿದು ಅವನಮೇಲೆ ಬಿದ್ದು ಅವನನ್ನು ಕಚ್ಚಿ ಆ ಸ್ಥಳದಲ್ಲೇ ಕೊಂದು ಬಿಟ್ಟಿತೆಂದು ತಿಳಿಯಬರುತಿದೆ

ಇಂತಾ ಬೇಸಿಗೆ ಕಾಲದಲ್ಲಿ ನೀರನ್ನು ಆರೋಗ್ಯಕರವಾದದ್ದನ್ನಾಗಿಯೂ, ಅತ್ಯಂತ ಶೀತಗುಣವುಳ್ಳದ್ದನ್ನಾಗಿಯೂ, ಮಾಡಬೇಕಾದರೆ ೮ ಓಜ್ ನೈಟ್ರೇಟ್ ಆಫ್ ಅಮೋನಿಯಾ, ಕಾರ್ಬೋನೇಟ್ ಆಫ್ ಸೋಡಾ ೮ ಓಜ್, ಈ ಎರಡು ಪದಾರ್ಥಗಳನ್ನು ೮ ಔನ್ಸಿನ ಒಳ್ಳೇ ತಿಳಿಯಾದ ನೀರಿನಲ್ಲಿ ಬೆರಸಿ ಒಂದು ತವರಿನ ... ಪಾತ್ರೆಯಲ್ಲಿ ಹಾಕಿ ನೀರು ಇಟ್ಟಿರುವ ಕೊಳಗ ಬದಲಿಯಲ್ಲಿ ಈ ಸಣ್ಣ ಪಾತ್ರೆಯನ್ನು ಇಟ್ಟರೆ ಸ್ವಲ್ಪ ಹೊತ್ತಿನಲ್ಲೇ ಆ ಕೊಳಗದ ಲಿಯ ನೀರೆಲ್ಲಾ ಮಂಜ ಹೋಗಿಬಿಟ್ಟುಕೊರೆಯುತ್ತಿರುವದು.

ಈಗ್ಯೆ ೬—೭ ದಿವಸಗಳ ಕೆಳಗೆ ಸುಮಾರು ೯—೧೦ ವರುಷ ವಯಸ್ಸುಳ್ಳ ಒಂದು ಗಂಡು ಮಗುವು ಮೈಸೂರು ಪುರದಲ್ಲಿ ಒಕ್ಕಲಿಗನ ಅಳುತ್ತಾ ನಿಂತಿತ್ತು ಇದನ್ನು ಒಬ್ಬ ಪೋಲೀಸ್‌ನವನು ನೋಡಿ ಸ್ಟೇಷನಿಗೆ ಕರೆದುಕೊಂಡು ಹೋದನು ವಾರಸ್ಯ ದಿನದ ಲಾಗಾಯಿತು ಎಲ್ಲಾ ಪೋಲೀಸ್‌ಲ್ಲಿಯೂ ಆ ಮಗುವನ್ನು ನಡಿಸಿಕೊಂಡು ಹೋದರು ಈಗ ಸರದೀಮಗುವಿನ ವಾರಸುದಾರರು ಯಾರೂ ಇಲ್ಲದವಾಗಿ ಕಾಣಬರುತ್ತೆ. ಆ ಮಗುವು ನೋಡುವದಕ್ಕೆ ಶೋಭನವಾಗಿಯೂ, ದಷ್ಟಪುಷ್ಟವಾದ ಕೈಕಾಲುಗಳುಳ್ಳದ್ದಾಗಿಯೂ, ಬೆಳ್ಳಿ ಉಡುದಾರ, ಕೈ ಕಾಲುಗಳಿಗೆ ಬೆಳ್ಳಿ ಬಳೆಯನ್ನುಳ್ಳದ್ದಾಗಿಯೂ, ಕಿವಿಯಲ್ಲಿ ಒಂದೆರಡು ನಗಗಳನ್ನು ಹಾಕಿಕೊಂಡೂ ಇರುತಿದೆ. ಇಂತಾ ಸುಕುಮಾರ ಶರೀರವುಳ್ಳ ಮಗುವನ್ನು ಬಿಟ್ಟ ಕಠಿನ ಹೃದಯವುಳ್ಳ ಮಾತಾಪಿತೃಗಳು ಹ್ಯಾಗೆ ನಿಶ್ಚಿಂತೆಯಿಂದಿದಾರೆಯೋ ವಾಚಕರೇ ಊಹಿಸಬಹುದು!!

ಕ್ರಿಮಿಯಾ ಪ್ರಾಂತದಲ್ಲಿ ಕ್ರಿಸ್ಟಸರ್ ಎಂಬೊಬ್ಬ ಗೃಹಸ್ಥನು ಬೇಟೆಯಾಡುವದಕ್ಕೋಸ್ಕರ ಕಾಡಿನಲ್ಲಿ ಹೋಗುತಿರಲು ಮಾರ್ಗದಲ್ಲಿ ಒಂದು ಹೆಂಗಸಿನ ಹೆಣವನ್ನು ಕಂಡು, ಆತನಿಗೆ ಕನಿಕರ ಹುಟ್ಟಾಗಿ, ಅದನ್ನು ಮಣ್ಣು ಮಾಡಬೇಕೆಂದು ಸಮಾಪದಲ್ಲಿ ಒಂದು ದೊಡ್ಡ ಹಳ್ಳವನ್ನು ತೋಡಲಾರಂಭಿಸಿದನು. ಅವನು ಸುಮಾರು ಅರ್ಧ ಪುರುಷಪ್ರಮಾಣ ತೆಗೆಯಲು ಅದರಲ್ಲಿ ಅಪರಿಮಿತವಾದದ್ರವ್ಯವು ಆವನಿಗೆ ಕಂಡುಬಂತು. ಕಡೆಗೆ ಆ ಹೆಣವನ್ನು ಅಲ್ಲೇ ಒಂದು ಸ್ಥಳದಲ್ಲಿ ಪವಿತ್ರವಾಗಿ ಮುಚ್ಚಿಟ್ಟು, ಆ ಧನವನ್ನು ತೆಗೆದುಕೊಂಡು ತನ್ನ ಮನೆಗೆ ಬಂದನು. ಇದರ ವಿಷಯವನ್ನು ಸ್ವಲ್ಪವೂ ಯಾರಿಗೂ ತಿಳಿಸದೆ ತನ್ನ ಸ್ನೇಹಿತರ ಜೊತೆಯಲ್ಲಿ ಬಂದು ಗೌರವದಿಂದ ಪ್ರೇತ ಸಂಸ್ಕಾರವನ್ನು ಮಾಡುತಿರಲು ಅವಳಿಗೆ ಪ್ರಾಣವು ಮರಳಿಬಂದು ಬದುಕಿಕೊಂಡಳು. ಅವಳು ತರುಣಿಯಾಗಿಯೂ ಅನಾಥಳಾಗಿಯೂ ಇದ್ದದರಿಂದ ಅವನವಳನ್ನು ತನ್ನ ಸ್ವಂತ ಮಗಳಂತೆ ಎಣಿಸಿ, ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಒಬ್ಬ ದೊಡ್ಡ ಸರದಾರನ ಮಗನಿಗೆ ಕೊಟ್ಟು ಮದುವೆ ಮಾಡಿದನು.

BANGALORE.—Printed and published at the KARNATAKA PRESS, No 40, HOSPITAL ROAD, PETTAH.—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಜಾಮುದಿವಿದಸ್ವನ್ನಸ್ವಪಗಮಾರ್ಕಕರ್ಣಾಟಕಪ್ರಕಾಶನಪರಾಭಿದಾಪ್ರಥಿತಸಾಹಿತೀಶೋಭಿತಾ । ಮೃಗಾಂಕಹಿತವಾಸರನಿಹಿತಮುದ್ರಣಾಸದ್ವಸ್ತ್ರೀಶಾಸುಪರಿಪೂರ್ಣತಾಜಿಕತಿಮಾನಸಂಸುಮುದಂ

Vol. XIX] BANGALORE—MONDAY, MAY 2, 1892. [No. 18.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಮೇ ೨ ನೇ ತಾರೀಖು ಸೋಮವಾರ. [ಸಂಚಿಕೆ ೧೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

	ಮುಂಗಡವಾಗಿ ಕೊಟ್ಟರೆ	ವರ್ಷಾಖೈರಿನಲ್ಲಿ ಕೊಟ್ಟರೆ
ಬೆಂಗಳೂರಿನವರಿಗೆ	8—0—0	9—0—0
ಬೇರೆ ಕಡೆ ,,	9—0—0	10—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

ಬೆಂಗಳೂರಿನವರಿಗೆ	4—0—0	5—0—0
ಬೇರೆ ಕಡೆ ,,	5—0—0	6—0—0

ಇನ್ನು ಮೇಲೆ ಚಂದಾಹಣವನ್ನು ಪಾವತಿ ಮಾಡಿದ ತಾರೀಖಿನ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು; ಪತ್ರಿಕೆಯನ್ನು ಅಪೇಕ್ಷಿಸುವವರು ಚಂದಾದಾರರು ಇಂಗ್ಲೀಷ್ ಭಾಗದ ಸ್ಥಾನದಲ್ಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನೂ ತೆಗೆದುಕೊಳ್ಳಬಹುದು. ಮುಂಗಡವಾಗಿ ಚಂದಾ ಕೊಡಲು ಅಂಗೀಕರಿಸಬೇಕಾದದ್ದು.

ಪ್ರಕಟನೆಯ ರಿವಾಜ್.

ಮೊದಲನೆಸಾರಿಗೆ ಪಂಕ್ತಿ ಒಂದಕ್ಕೆ ೦—೨—೦

ಎರಡನೆಸಾರಿಯಿಂದ ಪಂಕ್ತಿ ಒಂದಕ್ಕೆ ೦—೧—೦

ಮೂರು—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಸಾರಿ ಹಾಕಬೇಕೋ ಅಷ್ಟು ಪಂಕ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಹಾಕುವ ಜಾಹೀರಾತುಗಳ ಬಗ್ಗೆ ಪ್ರಕಟನೆಯನ್ನು ಕಳುಹಿಸುವವರು ಅವು ಎಷ್ಟು ಸಾರಿ ಹಾಕಬೇಕಾಗಿರುವದೆಂಬುದನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವವರೆಗೆ ಅವು ಪ್ರಕಟಿಸುತ್ತಿದ್ದು ಹಾಗೆ ಎಷ್ಟುಸಾರಿ ಪ್ರಕಟಿಸಲ್ಪಟ್ಟವೋ ಅಷ್ಟಕ್ಕೆ ಮೇಲೆ ಕಂಡ ದರದಂತೆ ಕೊಡತಕ್ಕದ್ದು. ಪ್ರಕಟನೆಗಳ ಬಗ್ಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಪ್ರಕಾಶಕರಾದ ಮ್ಯಾನೇಜರಿಗೆ ಮುಂಚಿತವಾಗಿ ಕಳುಹಿಸಬೇಕು. ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಿರಲಾರೆವು. ಕ್ರಮವಾಗಿ ಬರುವಂಥ ಲೇಖನಗಳನ್ನು ಯಥಾವಕಾಶವಾಗಿ ಪ್ರಕಟಿಸಲಾಗುವದು. ನಿರಾಕರಿಸಲ್ಪಟ್ಟ ಲೇಖನಗಳನ್ನು ಹಿಂದಕ್ಕೆ ಕಳುಹಿಸಲ್ಪಡಲಾರವು.

ADVERTISEMENTS

NOTICE.

VAIDYASARA SANGRAHA

A TREATISE ON PRINCIPLES OF THE

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾಗಿರುವವರು ಮೊಬಲಗಿನೊಡನೆ ಪುಸ್ತಕಗಳಿಗಾಗಿ ಪ್ರಕಟಿಸಲ್ಪಡುವವರ ಹೆಸರಿಗೆ ಬರೆದರೆ ಪುಸ್ತಕಗಳು ಕಳುಹಿಸಲ್ಪಡುವವು. ಮೊಬಲಗು ಇಲ್ಲದ ಪತ್ರಗಳನ್ನು ಗಮನಿಸಲಾಗುವುದಿಲ್ಲ.

ಇದರ ಕ್ರಯ—ಅಂಚೆ ಮತ್ತು ಅಂಚೆ ಹಾಸಲು ಸಹಿತ ಪ್ರತಿ ಒಂದಕ್ಕೆ ರೂ ೫- 0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮಹಾ ಆಸ್ಪತ್ರೆ ರೋಡ್ ೪೮ ನೇ ನಂಬರ್.

ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೩ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು. ಇದರಲ್ಲಿ ಸರ್ವ ಇಂಗ್ಲೀಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತವೆ. ಇತರ ತರಬೇತಿಗಳನ್ನು ಸಹ ಕಾರ್ಖಾನೆಯ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ಗಣೇಶ ರಾಮಚಂದ್ರ ಶರ್ಮ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿನ್ನ ಮುತ್ತುಗಳು, ಘಡಿಯಾರಗಳು, ಚೈನುಗಳು, ಟ್ರಂಕುಗಳು, ಕಾಶ್ಮೀರ ಶಾಲುಗಳು, ಪಟ್ಟೆಸೀರೆಗಳು, ಜರತಾರಿ ಸೀರೆಗಳು, ಚಂದ್ರಕಾಂತ ಮುಂತಾದ ಕನ್ನಡಕಗಳು, ಮುಂತಾಗಿ ತಕ್ಕ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸು ಡ್ರೆಸ್ಸುಗಳು, ಪಟ್ಟೆಗಳು, ಅತ್ತರುಗಳು, ಅತ್ಯುತ್ತಮವಾಗಿರುವ ರತ್ನಗಳು, ಘಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ಮೊದಲಾದ ಇತರ ಸಾಮಾನುಗಳು.

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬು ದೊರೆಯಲಾರದು.

ವಿಳಾಸ—ಗಣೇಶ ರಾಮಚಂದ್ರ ಶರ್ಮ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,

ಠಾಕೂರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ.

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲನ್ನು ತೋರಿಸುವ ಲೆಕ್ಕ.—

೧೮೯೨ನೇ ಇಸವಿ ಏಪ್ರಿಲ್ ೨೪ ನೇ ತಾರೀಖಿನಿಂದ ಮೇಲು ಏಪ್ರಿಲ್ ೩೦ ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	82
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	39½
ಗತವಾರದ ಶಿಲ್ಕು ಸೇರು	...	24½
ಜಮಾ	...	64
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	...	19½
ಖರ್ಚಾದ ಅಕ್ಕಿ ಸೇರು	...	21½
ಜಾತಾ ಬಾಕಿ	...	23

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್.

ಅಭ್ಯಾಗತರು	..	7
ದಿಕ್ಕಿಲ್ಲದ ವಿದ್ಯಾರ್ಥಿ	...	3
ಖಾಯಂ ಇರತಕ್ಕ ವಿದ್ಯಾರ್ಥಿಗಳು	..	0
ಕಷ್ಟಕೊಡತಕ್ಕ ಆರ್ತರು, ಪರೋಪಕಾರಕ ವರ್ಗದವರ ಸಂಖ್ಯೆ		16
ಪ್ರಯಾಣಸ್ಥರು	...	16
ಜಮಾ	...	42

THE MONEY MARKET

ಮದರಾಸ್, ಶನಿವಾರ, ತಾರೀಖ್ 30 ನೇ ಏಪ್ರಿಲ್ 1892.

ಸೇಕಡ 4ರೂ, ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 107-9-0 ರಿಂದ 107-14 0 ರವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 926 ಲಾಗಾಯತು 930 ವರೆವಿಗೆ.

ಕಮರ್ಷಿಯಲ್ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರುಗಳು, (100) ಬಾಬತು 165 ರಿಂದ 170 ವರೆವಿಗೆ.

ಸವರನ್‌ಗಳು, 15—12—0

ಬ್ಯಾಂಕ್‌ಬಿಲ್ಲುಗಳು ಯಾವ ನಮೂನೆಗಳು, ರೂಪಾಯಿಕ್ಕೆ

6 ತಿಂಗಳ ಮಿಯಾದಿಗೆ, 1s. 3¾ d.

ಡಿಟೋ 4 ತಿಂಗಳ ಮಿಯಾದಿಗೆ, 1s 3 5/16 d

ಡಿಟೋ ಕೇಳಿದಾಗ, 1s. 3 7/32 d

ನೋಟಿಸ್.

ಚಂದಾದಾರರಿಗೆ.

ಇದರಿಂದ ಪ್ರಕಟಪಡಿಸುವದೇನಂದರೆ—

ಈ ಸಂವತ್ಸರದಲ್ಲಿ ಇದುವರೆವಿಗೆ ನಾಲ್ಕು ತಿಂಗಳುಕಳೆದು ಐದನೆಯ ತಿಂಗಳು ಪ್ರಾರಂಭವಾಯಿತು, ಆದ್ದಾಗ್ಯೂ ನಮ್ಮ ಚಂದಾದಾರರೆಲ್ಲರು ಅವರವರ ಚಂದಾಹಣವನ್ನು ಕೂಡಲೇ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

೨—೫—೯೨. ಪ್ರೊಪ್ರೈಟರ್.

ನೋಟೀಸ್.

ಡಿಸ್ಟಿಲರಿ ಕೆಲಸವನ್ನು ಕಲಿತುಕೊಳ್ಳುವದಕ್ಕೆ ಬುದ್ಧಿವಂತನಾದ ಮತ್ತು ಇಪ್ಪತ್ತೈದು ವಯಸ್ಸಿನ ಒಬ್ಬನು ಬೇಕಾಗಿರುತ್ತದೆ. ಕಟ್ಟಡ ಕೆಲಸದಲ್ಲೂ ಜೋಡಣೆ ಕೆಲಸದಲ್ಲೂ ಸ್ವಲ್ಪ ಅನುಭವವುಳ್ಳವನು ಅಂಗೀಕರಿಸಲ್ಪಡುವನು. ಚಟುವಟಿಕೆಯುಳ್ಳವನಾಗಿಯೂ ಇಂಗ್ಲೀಷ್ ಮತ್ತು ಕನ್ನಡ ಭಾಷೆ ತಿಳಿದವನಾಗಿಯೂ ಇರಬೇಕು.

ಯೋಗ್ಯತಾ ಪತ್ರಿಕೆಗಳೊಡನೆ ಬೆಂಗಳೂರಿನಲ್ಲಿರುವ ಮೆಸ್ಸರ್ಸ್ ಬ್ರ್ಯೂರಿ ಕಂಪೆನಿಯ ಏಜಂಟರಿಗೆ ಸ್ವಂತ ಅಕ್ಷರದಲ್ಲಿ ಬರೆದುಕೊಳ್ಳಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 2, 1892

೧೮೯೨ನೇ ಇಸವಿ ಮೇ ತಾ|| ೨ ನೇ ಸೋಮವಾರ.

REPORT ON THE ADMINISTRATION OF TRAVANCORE

ಗತವಾರದಲ್ಲಿ ನಮಗೆ ಕಳುಹಿಸಲ್ಪಟ್ಟ ತಿರುವಾಂಕೂರು ಸಂಸ್ಥಾನದ ಸಾಲಿಯಾನಾ ರಿಪೋರ್ಟನ್ನು ಸ್ಥೂಲವಾಗಿ ಓದಿ ನೋಡಿದೆವು. ಇದರಲ್ಲಿ ಪ್ರಥಮತಃ ದೇಶ ರಕ್ಷಣಾರ್ಥ ಏರ್ಪಡಿಸಲ್ಪಟ್ಟ ನ್ಯಾಯನಿಬಂಧನೆಗಳು ಪರ್ಯಾಲೋಚನೆಗೆ ಯೋಗ್ಯವಾಗಿರುತ್ತವೆ. ಸನ್ ೧೮೯೦-೯೧ ನೇ ಇಸವಿಯಲ್ಲಿ ಅಲ್ಲಿನ ನ್ಯಾಯವಿಧಾಯಕ ಸಭೆಯವರ ವಿಚಾರಕ್ಕೆ ವಿಷಯಗಳಾಗಿದ್ದ ಆರು ಮಸೂದಾ ರೆಗ್ಯುಲೇಷನ್‌ಗಳು ೧೮೯೦-೯೧ (೧೦೬೬) ನೇ ಇಸವಿಯಲ್ಲಿ ಮಹಾರಾಜರವರ ಮಂಜೂರಾತಿಯಂ ಪಡೆದು ಜಾರಿಯಲ್ಲಿ ತರಲ್ಪಟ್ಟವು. ಅವುಗಳಲ್ಲಿ ಮೊದಲನೆ—ಸನ್ ೧೮೬೧ನೇ ಇಸವಿಯಲ್ಲಿ ಇಂಡ್ಯಾ ದೇಶದೊಳು ಸರ್ವತ್ರ ಜಾರಿಯಲ್ಲಿಟ್ಟ ದಾನೇದು ಮಾರಿಗೆ ಸಂಬಂಧಿಸಿದ ರೆಗ್ಯುಲೇಷನ್, ತಂಬಾಕ್ ಪ್ರಕೋಪ್ತ ವಿಷಯಕವಾದದ್ದು ೨ನೆಯ ರೆಗ್ಯುಲೇಷನ್, ಮುನಸೀಫ್‌ಗಳಿಗೂ ಜಿಲ್ಲಾ ಜಡ್ಜಿಗಳಿಗೂ ಸ್ಮಾಲ್‌ಕಾಜ್ ಅಧಿಕಾರಗಳನ್ನು ೨೦ ರಿಂದ ೩೦ ರೂಪಾಯಿಗಳಿಗೂ, ೫೦ ರಿಂದ ೭೦ ರೂಪಾಯಿಗಳ ತನಕಲೂ ಹೆಚ್ಚಿಸುವದಕ್ಕಾಗಿ ಏರ್ಪಟ್ಟದ್ದು ೩ನೆಯ ರೆಗ್ಯುಲೇಷನ್, ವ್ಯವಸಾಯಾಭಿವೃದ್ಧಿಯ ಬಗ್ಗೆ ಖುಷಿಖಾಸ್ ಜನಗಳಿಗೆ ಸರ್ಕಾರದಿಂದ ಸಾಲಕೊಡುವ ವಿಷಯದಲ್ಲಿ ಮಾಡಲ್ಪಟ್ಟಿರುವದು ನಾಲ್ಕನೆಯ ರೆಗ್ಯುಲೇಷನ್. ಈ ನಾಲ್ಕು ರೆಗ್ಯುಲೇಷನ್‌ಗಳೂ ತಾತ್ಕಾಲಿಕ ಸ್ಥಿತಿಯಲ್ಲಿ ಕೇವಲ ಆವಶ್ಯಕವೆಂದು ಭಾವಿಸಿ ಜಾರಿಯಲ್ಲಿ ತರಲ್ಪಟ್ಟಿರುತ್ತವೆ. ಇನ್ನೂ ಕಾನೂನುಗಳು ಮಸೂದಾ ರೆಗ್ಯುಲೇಷನ್‌ಗಳು ಈ ಸಂವತ್ಸರದೊಳು ಕೌನ್ಸಿಲಿನಲ್ಲಿ ಪರ್ಯಾಲೋಚನೆಯಲ್ಲಿರುವಂತೆ ತಿಳಿಯಬರುತ್ತದೆ. ಅವುಗಳಲ್ಲಿ ಆಯುಧಗಳನ್ನು ಕುರಿತ ಮತ್ತು ಯಿಂಡಿಯನ್ ಆಕ್ಟನ್ನು ಅನುಸರಿಸಿ ಮಾಡಲ್ಪಟ್ಟ ರೆಗ್ಯುಲೇಷನ್‌ಗಳು ಮುಖ್ಯವಾದವಾಗಿರುತ್ತವೆ. ಮಿಕ್ಕವು ಸಾಮಾನ್ಯೇನ ಸ್ಥಳದವರಿಗೆ ಆವಶ್ಯಕವಾದವಾಗಿರುತ್ತವೆ. ಈ ಸಾಲಿನಲ್ಲಿ ನ್ಯಾಯವಿಧಾಯಕ ಸಭೆಯು ೬ ಆವರ್ತಿ ಸೇರಿದ್ದಂತೆಯೂ ಆ ಸಭೆ ಹಿಂದಿನ ೯ ದಿನಗಳ ತನಕ ಕೂಡಿತ್ತೆಂತಲೂ ರಿಪೋರ್ಟಿನಿಂದ ವ್ಯಕ್ತವಾಗುತ್ತದೆ. ಏಕೆಂದರೆ ಇದು ಸೋಕಲಾಗಿ ಸದರೀ ಸಂಸ್ಥಾನದ ಲೆಜಿಸ್ಲೇಟಿವ್ ಇಲಾಖೆಯಲ್ಲಿನ ಆತಳಕವು ಸಾಧ್ಯವಾದ ಮಟ್ಟಿಗೆ ತೃಪ್ತಿಕರವಾಗಿ ಜರಗಿತೆಂದು ನುಡಿಯಬಹುದು.

ಯಿರಡನೆಯದು, ಮಿಲಿಟರಿ ಇಲಾಖೆಯು—ಈ ಇಲಾಖೆಯಲ್ಲಿ ಪ್ರಖ್ಯಾತವಾದ ಗಳೇನು ಬದಲಾವಣೆಗಳ್ಯಾವದೂ ಜರಗಲಿಲ್ಲವು. ಈ ಸಂವತ್ಸರದಲ್ಲಿ ೬ ಜನ ಪೆನ್‌ಷನ್ ಪಡೆದರು, ಮಾಜಿ ಗ್ರಾಚ್ಯುಯಿಟಿಯನ್ನೂ ತೆಗೆದುಕೊಂಡವಿನ್ನಷ್ಟು ರಾದರು. ೧೧೨ ಜಿಲ್ಲೆ ರೂಪಾಯಿಗಳ ತನಕ ದುಸ್ತುಗಳು ಹೊಸದಾಗಿ ಮಹಾರಾಜರವರ ಬಾಡಿ ಗಾರ್ಡಿಗೆ ತೆಗೆದು ಕೊಡಲ್ಪಟ್ಟವು.

ಪೋಲೀಸ ಇಲಾಖಾ—ಸಂಸ್ಥಾನದ ಒಟ್ಟು ಪೋಲೀಸ್ ಶಿಬ್ಬಂದಿಯು ೧೬೩೦ ಮಂದಿಯೆಂದು ಗೊತ್ತಾಗುತ್ತದೆ. ಸರಾಸರಿ ೧೭೩೦ ಜನಕ್ಕೆ ಒಬ್ಬ ಇಸಂ ಪ್ರಕಾರ ಪೋಲೀಸ್ ಬಂದೋಬಸ್ತು ಕಲ್ಪಿಸಲ್ಪಟ್ಟಿರುತ್ತದೆ. ಇವರ ಪೈಕಿ, ಯೂರೋಪಿಯನ್ ವ ಯೂರೇಷಿಯನ್‌ಗಳು ೨೨ಜನ, ಬ್ರಾಹ್ಮಣರು ೫೭; ಮಲಯಾಳಿ ಕೂದ್ರರು ೧೨೫೪, ಪಾಂಡಿ ಕೂದ್ರರು ೧೧೨; ನೇಟಿವ್ ಕ್ರಿಶ್ಚಿಯನ್ನರು ೧೧೮; ಮುಸಲ್ಮಾನರು ೧೭೩; ಇತರ ಜಾತಿಯವರು ೧೦೫; ಈರೀತಿ ನೌಕರಿಯಲ್ಲಿದ್ದಾರೆ. ಮತ್ತು ೧೫೩೯ ಜನ ಸ್ವದೇಶೀಯರಾಗಿಯೂ, ೯೦ ಜನ ಪರಸ್ಥಳದವರಾಗಿಯೂ ಇರುತ್ತಾರೆ. ಸಂಸ್ಥಾನಕ್ಕೆ ಈ ಬಾಬಿನಲ್ಲಿ ಒಟ್ಟು ಸರಾಸರಿ ೧,೭೬,೩೧೧—೧೨—೧೧ ರೂಪಾಯಿಗಳು ಖರ್ಚಾಗಿರುತ್ತದೆ. ಇದರ ಹಿಂದಿನ ಸಂವತ್ಸರಕ್ಕಿಂತಲೂ ಈ ಸಾಲಿನಲ್ಲಿ ೫೬೬೫ ಜಿಲ್ಲೆ ರೂಪಾಯಿಗಳ ಖರ್ಚು ಕಡಮೆಯಾಗಿರುತ್ತದೆ. ಈ ಸಂವತ್ಸರದಲ್ಲಿ ಪೋಲೀಸಿನವರ ಮೇಲೆ ಫಿರ್ಯಾದುಬಂದು ದಂಡಿಸಲ್ಪಟ್ಟವರ ಸಂಖ್ಯೆ ಅದರ ಹಿಂದಿನ ವರುಷಕ್ಕಿಂತ ಕಡಮೆ ಯೆಂದು ತಿಳಿಯಬರುತ್ತದೆ. ಈ ಇಲಾಖಾ ಆಡಳಿತದಲ್ಲಿ ಮದರಾಸ್ ಪ್ರೆಸಿಡೆನ್ಸಿಯ ಭವಿತವ್ಯಕ್ಕಿಂತಲೂ ಅನೇಕ ವಿಷಯಗಳಲ್ಲಿ ಬಹಳ ತೃಪ್ತಿಕರವಾಗಿದೆಯೆಂದು ಪ್ರಸಕ್ತ ರಿಪೋರ್ಟಿನ ಆಧಾರದಮೇಲೆ ನುಡಿಯಬಹುದಾಗಿದೆ. ಮಧ್ಯಮಪ್ರಯುಕ್ತವಾದ ಅಶಕ್ತತೆ ಮಗ್ಗಿರೆ ಕಾರಣಗಳಿಂದ ಪೂರ್ವದೊಳಿದ್ದವರೆಲ್ಲರೂ ನಿವೃತ್ತರಾಗುತ ಬಂದಂತೆಲ್ಲ ಅವರ ಸ್ಥಾನದಲ್ಲಿ ನೌಕರರಾದವರೆಲ್ಲರು ವಿದ್ಯಾವಂತರಾಗಿಯೂ, ಶರೀರ ದಾರ್ಢ್ಯವುಳ್ಳವರಾಗಿಯೂ ಇರುವದಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಇದಕ್ಕೆ ಸಂಬಂಧಿಸಿದ ಇತರ ವಿಷಯಗಳನ್ನು ಕುರಿತು ಮುಂದಿನವಾರದಲ್ಲಿ ವಿಚಾರ ಮಾಡುವೆವು.

EVIL INFLUENCE OF MODERN DRAMATIC COMPANIES

ಸಾಮಾನ್ಯವಾಗಿ ನಾಟಕಾವಲೋಕನವು ದುರ್ಗುಣಪ್ರವರ್ತಕನಾದುದರಿಂದ "ಅಶ್ಲೀಲ್ಯಂನಾವ ಲೋಕಯೋಕ್ತಿ" ಎಂದು ಪೂರ್ವಿಕರು ಅದಂ ಬಹಳ ಗರ್ಹಿತವಾಗಿ ಭಾವಿಸುತಲಿದ್ದರು, ಮತ್ತು ನಟ ವಿಟ ಗಾಯಕರಿಗೆ ಅವರವರ ಸ್ವರೂಪಾನುಗುಣವಾದ ಮರ್ಯ್ಯಾದೆಯೇ ಲಭಿಸುತಲಿತ್ತು. ಇಂತವರ ಸಹವಾಸ ಸಲ್ಲಾಪ ಸಂಪರ್ಕಾದಿಗಳು ವರ್ಧಿಷ್ಣುಗಳಿಗಾದಾಗಲು ಅಯುಕ್ತವೆಂಬ ಭಾವವುಳ್ಳವರಾಗಿದ್ದರು. ತಥಾಪಿ ಗೃಹಿಣಿಯರು ಯಾವಾಗಲು ಅದಂ ನೋಡಕೂಡದೆಂದು ಖಂಡಿತವಾಗಿ ನಿಷೇಧಿಸಿದ್ದರು ನಾಟಕಶಾಲೆಗಳಿಗೆಹೋಗುವದರಿಂದಲ್ಲಿ ಅವರಿಗೆ ಪ್ರಾಪ್ತವಾಗುವ ಉತ್ತೇಜಕಸಾಮಗ್ರಿಗಳಿಂದವರ ಮನಸ್ಸು ವೈಕಲ್ಯವನೈದಿ ಪರವಶ್ಯತೆಯಂ ಹೊಂದುವವಲ್ಲದೆ ಕಡೆಗೆ ಅದು ಅಸ್ವಾಧೀನವಾಗಿ ಇಷ್ಟಾನುಸಾರವು ವರ್ತಿಸುವುದು. ಆದುದರಿಂದ ಅದಕ್ಕೆ ಸಂಸ್ಥಾಸಿತ್ತ್ರ ನಾಅವಕಾಶ ಕೊಡಕೂಡದೆಂಬದು ಅವರ ಭಾವವಾಗಿತ್ತು. ಈಗಲೂ ಅನೇಕರು ಅದೇ ಅಭಿಪ್ರಾಯವುಳ್ಳವರಾಗಿರುತ್ತಾರೆ. ಆದರೆ ಇಂಗ್ಲಿಷ ವಿದ್ಯಾಭ್ಯಾಸವೂ, ಯೂರೋಪ ದೇಶೀಯರ ವೈಲಕ್ಷಣ್ಯ ಮಾರ್ಗಾನುಸರಣವೂ ಈಗಿನ ಕಾಲದಲ್ಲಿ ಬಹಳ ಸ್ಥಿತಿಭೇದಗಳನ್ನುಂಟು ಮಾಡಿರುತಿದೆ. ನಾಟಕಾವಲೋಕನದಿಂದ ಲೌಕಿಕಜ್ಞಾನವೂ, ಆಯಾ ಕಾಲದೇಶ ಜನಸ್ಥಿತಿಯೂ ಚೆನ್ನಾಗಿ ವ್ಯಕ್ತವಾಗಿ ಜ್ಞಾನವು ವಿಕಾಸವನ್ನೈದುವದೆಂಬ ಅಭಿಪ್ರಾಯವು ಇಂಗ್ಲಿಷನವರಿಗುಂಟಾಗಿರುವದರಿಂದ ಅವರು ತಮ್ಮ ಭಾರ್ಯೆಯರೊಡನೆ ದಾರಾಳವಾಗಿ ನಾಟಕಶಾಲೆಗಳಿಗೆ ಹೋಗಿ ಬರುವಂತಾ ಪದ್ಧತಿಯನ್ನಂಗೀಕರಿಸಿದರು. ಅವರು ನೋಡಿ ನಮ್ಮವರಲ್ಲಿ ನಾಗರಿಕರು ಕೆಲವರು ತದ್ವತ ವರ್ತಿಸಲಾರಂಭಿಸಿದಾರೆ. ಇದು ಕ್ರಮೇಣ ಸ್ತ್ರೀಯರೊಂದಿಯಾಗಿ ದಾರಾಳವಾಗಿ ರಾತ್ರಿ ಕಾಲದಲ್ಲಿ ನಾಟಕಗಳಿಗೆ ಹೋಗಿ ಬರುವ ಪ್ವೈರಸ್ವಾತಂತ್ರ್ಯವನ್ನುಂಟುಮಾಡಿತು. ಪುರುಷರು ತಮ್ಮ ಉಲ್ಲಾಸಾರ್ಥ ಪ್ರಥಮತಃ ತಮ್ಮ ಭಾರ್ಯೆಯರಿಗೆ ಕಲ್ಪಿಸಿಕೊಟ್ಟ ಸ್ವಾತಂತ್ರ್ಯವು ಊರ್ಜಿತವಾಗಿ ಕಡೆಗೆ ಅದು ರೂಪಾಂತರದಿಂದ ವರಿಗೆ ಅಸಾಧ್ಯವಾಗ್ಯಪರಿಣಮಿಸಿತಲ್ಲದೆ ಸ್ತ್ರೀಯರ ಹೃದಯದಲ್ಲಿ ಸಾಕ್ಷಾತ್ ವಿರುದ್ಧ ಭಾವವನ್ನುಂಟುಮಾಡುವಷ್ಟರ ಶಕ್ತಿಪ್ರದವಾಯಿತು. ಇದಲ್ಲದೆ ಅವರು ಸುಖಾಪಿಸತಕ್ಕ ವಿದ್ಯಾ ಮೂಲಕವಾದ ಜ್ಞಾನಕ್ಕೆ ಅದು ಪರುವರೆಯಾ ಸಹಕಾರಿಯಾಗಿ ಅವರಂ ವಿಜಾತೀಯವಾದ ಮಾರ್ಗದಲ್ಲಿ ಸೆಳೆದುಕೊಂಡು ಹೋಗದಿರುವದಿಲ್ಲವು. ಮೈಸೂರ ರಾಜಧಾನಿಯಲ್ಲಿ ಸ್ತ್ರೀ ವಿದ್ಯಾಭ್ಯಾಸವು ಸಕಲಜನಾಕರ್ಷಕವಾಗಿಜಗತ್ಪ್ರಸಿದ್ಧವಾ ಪಫಲವು ಕೊಡುವಂತಾದ್ದಾಗಲಿಕ್ಕೆ ಪ್ರಥಮತಃ ಅಲ್ಲಿ'ನೆಲೆಗೊಂಡ ನಾಟಕಶಾಲೆಯು ಬಹಳ ಸಹಕರಿಸಿ ತನ್ನಯಾವಚ್ಛಕ್ತಿಯನ್ನೂ ಲೋಪವಿಲ್ಲದೆ ಅಬಲೆಯರ ವಿಷಯದಲ್ಲಿ ವಿನಿಯೋಗ ಪಡಿಸಿತು. ನಮ್ಮ ಹಿಂದೂ ಸಾಮಾಜಿಕ ಸ್ಥಿತಿಯು ಅಭಾಸವನ್ನೈದಲಿಕ್ಕೆ, ಒಬ್ಬರನ್ನೋಡಿ ಮತ್ತೊಬ್ಬರು ನಾನಾವಿಧ ಹೆಸರುಗಳನ್ನಿಟ್ಟು ನಾಟಕಕಂಪನಿಗಳನ್ನು ಸ್ಥಾಪಿಸಿ ಊರೂರು ತಿರುಗುತ ಅಲ್ಲಿ ಬರುವ ಅಲ್ಪಸ್ವಲ್ಪ ದ್ರವ್ಯವೆಲ್ಲವು ಮನಸ್ವೀ ವ್ಯಯಮಾಡಿ ಶರೀರ ಒಪ್ಪಿ ಪಾಟವಗಳಂ ಕಳೆದುಕೊಂಡು ಭ್ರಷ್ಟರಾಗುತ ಬರುವದು ಮುಖ್ಯಕಾರಣವೆಂದು ಭಾವಿಸುತ್ತೇವೆ. ಇಂತಾ ಸಂಘಗಳಿಗೆ ಸೇರಿರತಕ್ಕವರಲ್ಲಿ ಮುಕ್ಕಾಲು ಮೂರುವೀಸ ಪಾಲುಜನ ಬ್ರಾಹ್ಮಣರಾಗಿಯೂ ವಿಶ್ವವರಿತರ ವರ್ಣದವರಾಗಿಯೂ ಇರುತ್ತಾರೆ. ಸಾಮಾನ್ಯೇನ ಇವರ ಸಂಘವೆಲ್ಲವು ವರ್ಧಿಷ್ಣುಗಳಾದ ಬಾಲಕರಿಂದಲೇ ನಿಬಿಡವಾಗಿರುತಿದೆ. ಅವರಲ್ಲಿಯೂ ಸಾಮಾನ್ಯಸ್ಥಿತಿಯಲ್ಲಿರುವವರು ಅಲ್ಪವಾಗಿಯೂ ದೊಡ್ಡವರ ಕುಟುಂಬದಲ್ಲಿ ಜನಿಸಿ ಅದಕ್ಕೆ ಕೀರ್ತಿ ಸಂಪಾದಕರಾಗಿರಬೇಕಾದವರೂ ಧನಿಕರ ಕುಮಾರರೂ ಬಹಳವಾಗಿರುತ್ತಾರೆ. ಬಾಲ್ಯ ವಯಸ್ಸಿನಲ್ಲಿ ಪ್ರವರ್ಧಮಾನರಾಗಬೇಕಾದ ಇಂತಾ ಬಾಲಕರು ತಮ್ಮ ಜ್ಞಾನವಿವೇಕಾಂತರಗಳಲ್ಲಿ ವಿನಿಯೋಗಿಸಿ, ತಮ್ಮ ರೂಪ ಲಾವಣ್ಯ ಸೌಶೀಲ್ಯಾದಿಗಳಂ ವ್ಯರ್ಥಗೊಳಿಸಿ, ಊರೂರು ತಿರುಗುತ ಮುದುಗಳಿಗೆ ಬಂಗುಗಳಂ ತೊಳೆದುಕೊಂಡು, ಜನಮಧ್ಯದಲ್ಲಿನಾಟ್ಯವಾಡುತ ವಿರಹವಂ ತೋರಿಸಿ, ಶೋಕ ರಹಿತವಾದ ದುಃಖವಂ ಪ್ರದರ್ಶಿಸಿ ವಿಖಿಸುತ, ಅಭಾವ ಚೇಷ್ಟೆಗಳಂ ತೋರಿಸಿ, ತಮ್ಮನ್ನೋಡಿ ಆನಂದಿಸತಕ್ಕ ಜನರ ಹೃದಯದೊಳು ವಿಕಾರವನ್ನುಂಟುಮಾಡಿ ಭ್ರಷ್ಟರಾಗುವದು ಅವರ ಮಾತಾ ಪಿತೃಗಳಿಗೂ ಇಷ್ಟ ಬಾಂಧವರಿಗೂ ಹಿತಕರವಾಗಿರುವದೆ? ಯೆಂದಿಗೂ ಇರಲಾರದು. ತಮ್ಮ ಬಾಲಕರು ದಂಡಿಸಿ ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಸಾಧ್ಯವಾದ ಪ್ರಯತ್ನಗಳನ್ನವರುಮಾಡಿ ಅವು ವ್ಯರ್ಥಗಳಾಗಲು ಕಡೆಗೆ ನೈರಾಶ್ಯದಿಂದವರು ದುರ್ವಿಧಿಗೊಳಪಡಿಸಿ ಕೈಬಿಟ್ಟರಬಹುದು. ದಂಡಸಾಧ್ಯರಾಗಿಯೂ ಸ್ವಜನರ ಹಿತೋಕ್ತಿಗಳಿಗೆ ಕಿವಿ ಕೊಡದೆಯೂ ದುಷ್ಟಜನ ಸಹವಾಸದಿಂ ಕಡೆಗೆ ಬಹುವಿದ ಅನರ್ಥಗಳಿಗೆ ಗುರಿಯಾಗಿ ನಾಶವು ಹೊಂದುತಲೂ ಇರುವ ಬಾಲಕರ ವಿಷಯದಲ್ಲಿ ಸ್ವಜನರ ಬೋಧನೆಗಳಿಗಿಂತಲೂ ಪರರ ಉಪದೇಶವು ವಿಶೇಷ ಪ್ರಯೋಜನಕಾರಿಯಾಗುವದೆಂದುಭಾವಿಸಿ ಅವರು ಕುರಿತು ಇದರವಿ ಕಂಡ ಕೆಲವುವಿಷಯಗಳಂ ತಿಳಿಸುತ್ತೇವೆ, ಏನಂದರೆ –

ವರ್ಧಿಷ್ಣುಗಳಾದ ಬಾಲಕರೆ! ನಿಮ್ಮ ವೇಷಭಾಷೆಗಳಂ ನೋಡಲಾಗಿ ನೀವು ಇಂಗ್ಲಿಷ ವಿದ್ಯಾಭ್ಯಾಸವು ಮಾಡಿ ಲೌಕಿಕ ಸುಖ ಸುಖಾದಿಗಳಲ್ಲಿ ಆಸಕ್ತಿಯುಳ್ಳವರಾಗಿರುವಂತೆ ಕಾಣಬರುತಿದೆ. ನೀವು ನಾಟ್ಯರಂಗದಲ್ಲಿ ಧರಿಸುವ ವಸ್ತ್ರಾಭರಣಗಳಿಂದಲೂ, ನೀವು ಅಲ್ಲಿ ತೋರಿಸುವ ನಾನಾವಿಧ ಅಭಿನಯಾದಿಗಳಿಂದಲೂ ನಿಮಗೆ ವಿಶೇಷ ಉತ್ಸಾಹ ವುಂಟಾಗಬಹುದು. ಇದಲ್ಲದೆ ನಿಮ್ಮ ನಾಟಕವು ನೋಡತಕ್ಕ ಜನಗಳಿಗೆ ಬಹಳ ಉಲ್ಲಾಸಕರವಾಗಿಯೂ ಹೃದಯಾಕರ್ಷಕವಾಗಿಯೂ ಮೋಹಜನಕವಾಗಿಯೂ ಇರಬಹುದು. ಪರಂತು ನಿಮ್ಮ ಮಾತಾ ಪಿತೃಗಳಿಗೂ ನಿಮಗೂ ಮಾತ್ರ ಬಹಳ ವಿಚಾರವನ್ನುಂಟುಮಾಡದಿರಲಿಲ್ಲವು. ವಿದ್ಯಾರಂಗ್ರಹಣ ಕಾಲದಲ್ಲಿ ಅದು ಕೆಡಿಸಿಕೊಂಡು ನೀವು ಇಂತಾ ಸ್ಥಿತಿಗೆ ಬರುವದು ಬಹಳ ವಿಷಾದಕರವಾಗಿರುತಿದೆ. ಮೊದಲು ನೀವು ನಾಟಕಶಾಲೆಗಳಿಗೆ ಹೋಗುತಲೇ ಈ ವಿನೋದಗಳಲ್ಲಿ ಪ್ರವರ್ತಿಸಿ ಕಡೆಗೆ ಪ್ರಿಯಯುಕ್ತವಾದ ಸಂತೋಷಾನುಭವವು ದಿನೇ ದಿನೇ ಪ್ರಬಲಗೊಳ್ಳಲು ನೀವು ಎಲ್ಲವು ತೊರೆದು ಅದನ್ನೇ ಒಂದು ವೃತ್ತಿಯಾಗಿ ಅವಲಂಬಿಸಿ ದೇಶ ದೇಶ ತಿರುಗುವದಕ್ಕುಪಕ್ರಮಿಸಿರುತ್ತೀರಿ ನಿಮ್ಮ ತಾಯಿ ತಂದೆಗಳು ಈ ರೀತಿ ದೇಶ ಸಂಚಾರವು ಯೋಗ್ಯವಲ್ಲವೆಂದು ಆತುರಿಸಲು, ದ್ರವ್ಯಾರ್ಜನೆಗಾಗಿ ಹೋಗುವದಿಲ್ಲವೆಂತಲೂ, ಉಲ್ಲಾಸಾರ್ಥವಾಗಿ ಹೋಗುವದರಿಂದ ತಮಗೆ ಯಾವಬಾಧಕವೂ ವುಂಟಾಗಲಾರದೆಂತಲೂ, ಹೇಳಿ ಅವರ ಬಾಯಿಮುಚ್ಚಿಸಿದಿರಿ. ನೀವು ಅನ್ಯದೇಶಗಳಿಗೆ ಹೋದಾಗ ಅಲ್ಲಿನ ನಿಮ್ಮ ವರ್ತನಗಳನ್ನು ನೋಡಿ ಅನುತಪಿಸಿ ನಿರ್ಬಂಧಿಸತಕ್ಕವರೊಬ್ಬರೂ ಇಲ್ಲದ್ದರಿಂದಲೂ, ನಿಮ್ಮ ಇಷ್ಟಾನುಸಾರ ಖರ್ಚು ಮಾಡಲಿಕ್ಕೆ ಬೇಕಾದ ಧನವು ಸುಲಭವಾಗಿ ನಿಮಗೆ ದೊರೆಯುವದರಿಂದಲೂ ನೀವು ಯೋಚಿಸಿದಂತೆ ಹಿಂದಿರಿಗಿ ಬರುವ ಅಂಶವು ಸಂಶಯಾಸ್ಪದವು ಮತ್ತು ಅನ್ಯದೇಶ ಸಂಚಾರ ಕಾಲದಲ್ಲಿ ನಿಮ್ಮ ಮಾತಾಪಿತೃಗಳನ್ನೂ ವಿದ್ಯಾಭ್ಯಾಸವನ್ನೂ ನಿಮ್ಮ ಕರ್ತವ್ಯವನ್ನು ಸಹ ಕುಪ್ಪಾಂಗಿ ಮರೆತುಯೋಗುತ್ತೀರಿ. ತಲೆಗಳಲ್ಲಿ ಚೋಪಗಳನ್ನು ಹಾಕಿಕೊಂಡು ನೇತ್ರಭೂಷಣಗಳಾಗಿ ಇಂಗ್ಲಿಷ ನಮೂನೆ ಕೋಡೆಗಳನ್ನು ಧರಿಸಿ, ಮೂರು ರೂಪಾಯಿಗಳಿಗೆ ಸಹ ಸುಲಭವಾಗಿ ದೊರೆಯುವ ಒಂದು ಘಡಿಯಾರವು ತಗಲಹಾಕಿಕೊಂಡು ಸಂದುಸಂದು ತಿರುಗುತ ಕೇಳಿದವರಿಗೆಲ್ಲ ನಾವು ಫಲಾನೇ ನಾಟಕ ಕಂಪೆನಿಯವರೆಂದು ಹೇಳಿಕೊಳ್ಳುವಣವು ನಿಮಗೊಂದು ಸಾಮಾನ್ಯ ಪಟ್ಟ ವಿಶೇಷವಾಗುತೀರಾದರಾಯಿತೆ? ಪೂರ್ವದಲ್ಲಿ ಅಧಮಜಾತಿಯವರು ಅವಲಂಬಿಸಿದ್ದ ಈ ವೃತ್ತಿಗೆ ನೀವೇ ಸನ್ನದ್ಧರಾದುದರಲ್ಲಿ ನಿಮಗೇನೂ ವ್ಯಂಗ್ಯ ತೋರಲಿಲ್ಲವೆ? ನಿಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ನಿಮ್ಮಲ್ಲಿ ಬಂದು ನೆರೆತಕ್ಕವರು ಸಾಮಾನ್ಯರಲ್ಲದೆ ಅವರೇನಾದರು ಸನ್ಮಾನಿತರೆ? ರಾಜ ಸಭೆಗಳಲ್ಲಿ ನಿಜಯೋಗ್ಯತೆಯಂ ತೋರಿಸಿ ಜಯದೇವಿಗಳಂ ಪಡೆಯಲಿಕ್ಕಿವೇನಾದರು ಶಾಸ್ತ್ರವಾದವೆ? ಅಲ್ಲದೆ ಶತಘಂಟಾವಧಾನವೆ? ನವವಿಧ ಪರಿಹಾಸಕದತ್ತ್ಯಗಳು ನಿಮಗೆ ಸಹಜಕೃತ್ಯಗಳೆ? ನಿಮ್ಮ ಪೂರ್ವಿಕರ ವಂಶ ಗೌರವವು ಹೋಗಲಾಡಿಸುವವು ನಿಮಗೆ ಘನತೆಯೆ? ಸ್ವಭಾವಸಿದ್ಧಗಳಾದ ನಿಮ್ಮ ವೇಷಭೂಷೆಗಳೆಲ್ಲವು ಬಿಚ್ಚಿಡಿಸಿಕೊಂಡು ಮೂರು ವೇಷಗಳಂ ಧರಿಸಲಿಕ್ಕೆ ನಿಮಗೆ ಮನವು ಹ್ಯಾಗೆ ಒಡಂಬಡುತಿದೆಯೆ. ನಾಪವಿಯೆವು ಅವಿತ್ವನ್ನರಾದವರಿಂದ ಅಕಾಸ್ತ್ರೀಯವಾಗಿ ರಚಿಸಿಕೊಳ್ಳುವ ಲಕ್ಷಣ ವಿರುದ್ಧಗಳಾದ ಗ್ರಂಥಗಳನ್ನು ಸಹ ಯಥೋಚಿತವಾಗಿ ಕಲಿತುಕೊಂಡು ನಾಟಕವುಟ್ಟೆಂದು ಯಾವ ನಿಯಮವೂ ಯಿಲ್ಲದೆ ಮನಸ್ಸು ಬಂದಂತೆಲ್ಲ ಸೆಳೆಯುತ ಆ ಕಾಲದಲ್ಲಿ ಗಂಧರ್ವಾಂಶನಂ ನಟಿಸಿರುವಂತೆ ಮೆರೆಯುವದೂ,ಕರ್ಣ ವೇಷವನ್ನೂ,ಅಸಹಜವಾದಭೇದವನ್ನೂ ಅನುಭವವಾದ ಸಂತೋಷವನ್ನನುಸ್ಟಪಡಿಸಿ ಪ್ರಸುಪದವುದೂ ನಿರುಗೆಟ್ಟರ ದುರುವಸ್ಥೆಯು, ಅದರಲ್ಲಾದರೂ ಶಿಷ್ಟ್ರೀಯವಾದಜ್ಞಾನ ನಿಮಗುಂಟಾಗಿದೆಯೋ? ಕೈಯಲ್ಲಿಗದ ಒಬ್ಬಪುರುಷನನ್ನು ನೋಡಿ ನೀನೇನು ಯೋಗಸೇಯೆಂದು ಕೇಳಿದ ಮಾತ್ರಕ್ಕೆ ಅದು ತನ್ನ ಪುರುಷರೀಯವಾದ ಮಾತೆಂದು ತಿಳಿದು ಅದಕ್ಕಾಗಿ ರೇಗಿದ ಮಟ್ಟ ಆಗ್ರಹಪತ್ತುತಲಿರುವಲ್ಲಿ ನೀವು ಗುರುತರವಾಗಿ ಜನಿಸಿ, ಸ್ತ್ರೀವೇಷಗಳಂ ಧರಿಸಿಕೊಂಡು ವಿರಹತಾಪವುತಾಳಿ, ಮಿಥ್ಯಾಪ್ರಸವವೇದನೆಗಳನ್ನನುಭವಿಸಿ, ಇಲ್ಲದ ಮಕ್ಕಳಂ ಪೆತ್ತು ನಾನಾವಿಧ ಚೇಷ್ಟೆಗಳಂ ಮಾಡುತ ಸಭೆಗಳಲ್ಲಿ ಬರುವುದು ನಿಮಗೆ ಮಾನಹಾನಿಯಲ್ಲವೆ? ನಿಮ್ಮಲ್ಲಿ ಕೆಲವರು ವೇಷಗಳಂ ಹಾಕಿಕೊಳ್ಳುವಂತೆಯೇ ನಿಜವಾದ ನಿಷ್ಠೋಷ್ಯರನುತೆಯೂ, ಬಂಧುಶೋತಾಳಗಳಂತೆಯೂ, ಇರುವಲ್ಲಿ ನೀವು ನಿಜವಾಗಿ ವೇಷಗಳಂ ಹಾಕಿಕೊಳ್ಳಬೇಕೆ? ನಿಮ್ಮಲ್ಲಿ ವಿವಾಹವಿಲ್ಲದವರು ಅನೇಕರಿರಬಹುದಾಗಿ ಅಂತವರಿಗೆ ಅವರ ಪ್ರಕೃತಸ್ಥಿತಿಯು ಕನ್ಯೆಯಂ ಕೊಡುವಂತವರಿಗೆ ಒಂದು ಗೌರವವನ್ನುಂಟುಮಾಡತಕ್ಕದ್ದಾಗಿದೆಯೆ? ವಿವಾಹಿತರಾದವರ ವಿಷಯದಲ್ಲಿ ಅವರ ಅತ್ತೆ ಮಾವಂದಿರು ದುಃಖಿಸುತ ತಮ್ಮ ಅಳಿಯಂದಿರ ದುರ್ದಶೆಗೆ ತಕ್ಕ ಪ್ರತೀಕಾರವಂ ಮಾಡಲಾರದೆ ಹೆಣ್ಣುಮಕ್ಕಳಿಯರಂ ನಿಮ್ಮ ಬಳಿಗೆ ಕಳುಹಿಸಲಿಕ್ಕೆ ಅಂಜಿ ತಮ್ಮಲ್ಲಯೇ ಯಿಟ್ಟುಕೊಂಡಿರುವದು ನಿಮಗೆ ಮಾನಹಾನಿಯಲ್ಲವೆ? ನಿಮ್ಮ ತಾಯಿ ತಂದೆಗಳನ್ನು ದುಃಖಪಡಿಸುವದು ನಿಮಗೆಷ್ಟರ ಪಾಪವು. ನಿಮ್ಮ ಬಾಲ್ಯಾಸಂತಾಪವು ನಿಮ್ಮ ಕುಲಕ್ಷಯ ಹೇತುವಾದದಲ್ಲವೆ? ಸುಖವಾಗಿರತಕ್ಕ ನೀವು ಪುತ್ರಶೋಕಾದಿಗಳನ್ನೂ ಕವಡಹನಾದಿಗಳನ್ನೂ ಪ್ರೇತಕರ್ಮಗಳನ್ನೂ ತೋರಿಸುವುದು ನಿಮ್ಮ ಶ್ರೇಯೋಹಾನಿಯೆಂದು ನಿಮಗೆ ಯೋಚನೆಕ್ಕೆ ತೋರಲಿಲ್ಲವೆ? ನಿಮ್ಮ ಪರಿಚಯ ಸಹವಾಸಸಲ್ಲಾಪಗಳೇ ದೂಷ್ಯವೆಂದು ಅಭಿಜ್ಞರುಭಾವಿಸಿ ದೂರಹೋಗುವಣ್ತ ಅಭಿಜ್ಞಜನಪ್ರತ್ಯೇಕಿಸಿದ ನಿಮಗೆ ಪ್ರಯೋಜನ ಹಾನಿಯಲ್ಲವೆ? ನಿಮ್ಮ ಶ್ರೇಯೋಭಿವೃದ್ಧಿಗೆ ಮತ್ತುಪ್ರಯತ್ನದವರುತು ಹಿತಚಿಂತಕರಂತೆ ನಟಿಸುವವರನೇಕರು ನೀವು ಒಂದೆರಡು ರೂಪಾಯಿಗಳಿಗೆ ಮಾರುವ ನಿಮ್ಮ ಗೌರವವನ್ನು ಕೊಂಡುಕೊಂಡು ಕುರ್ಚಿಗಳ ಮೇಲೆ ತಮ್ಮ ಮೋಹನಾಂಗಿಯರೊಡನೆ ಕುಳಿತುಕೊಳ್ಳುವಷ್ಟರ ರಸಿಕರಿಗೆ ನಿಮ್ಮ ಯೋಗ್ಯತೆಯಂ ತೋರಿಸುವದರಿಂದೇನು ಪ್ರಯೋಜನವು? ನೀವು ಪುರುಷರಾಗಿ ಸ್ತ್ರೀವೇಷವಂ ಧರಿಸಲಿಕ್ಕುಪಕ್ರಮಿಸಿದಮೇಲೆ ನಿಮ್ಮನ್ನು ನೋಡಿ ಸ್ತ್ರೀಯರು ಸ್ವಭಾವಸಿದ್ಧಗಳಾದ ಧರ್ಮಗಳಂ ತೊರೆದು ಪೌರುಷಗುಣಗಳಂ ತಾಳ್ದು ಪುರುಷವೇಷಗಳನ್ನು ಧರಿಸಲೆಣ್ಣಿಸಿ ನಿಮ್ಮ ಜೊತೆಯಲ್ಲಿ ಅವರೂ ನಾಟಕಶಾಲೆಯಂ ಪ್ರವೇಶಿಸುತಲಿದಾರೆ. ನಿಮಗಿಂತಾಸ್ಥಿತಿ ವಿಪರ್ಯಯವುಂಟಾದುದು ದುಃಖಕರವಲ್ಲದೆ ಹೋಗಿದೆ. ಕಡೆಗೆ ನಿಮಗೆ ರಾಸಿಕ್ಯವು ಹೆಚ್ಚಿ ಸ್ತ್ರೀವೇಷಗಳಿಗೆ ಪುರುಷರು ಅನರ್ಹರೆಂಬ ಭಾವತರಿದೋರಿ ಅವಕ್ಕೆ ತಕ್ಕ ಹೆಂಗಸರನ್ನೇ ಜೊನಾಯಿಸಿ ನಿಯಮಿಸಿಕೊಳ್ಳುವಷ್ಟು ನಿರ್ಲಜ್ಜೆಯು ನಿಮ್ಮಲ್ಲಿ ನಿರೂಢವಾಯಿತು. ಈ ಪ್ರಪಂಚವೇ ಒಂದು ವಿಜಾತೀಯವಾದ ಕಪಟನಾಟಕಶಾಲೆಯಾಗಿಯೂ, ನಾವೆಲ್ಲರೂ ಕಪಟವೇಷಧಾರಿಗಳಾಗಿಯೂ, ನಮಗೆ ವಿಧಾಯಕನಾದ ಭಗವಂತನೇ ಭರತಾಚಾರ್ಯನಾಗಿ ತನ್ನ ಕೈಯೊಳು ಸೂತ್ರವು ದರಿಸಿರುವಲ್ಲಿ ಅದರಿಂದ ತಪ್ಪಿಸಿಕೊಳ್ಳಲಿಕ್ಕೆ ನೀವು ಪ್ರಯತ್ನಪಡುವದು ಬಿಟ್ಟು ನೀವೊಂದು ಪ್ರತ್ಯೇಕ ಅಜ್ಞಾನನಾಟಕವು ಕಲ್ಪಿಸಿಕೊಂಡು ಬಹಿರಂಗವಾಗಿ ತಿರುಗಬೇಕೆ? ವಿದ್ಯಾಧಿಕಾರಿಗಳಿಂದಲೇ ಕೈವಶ್ಯರಾಗಿ, ನಿರರ್ಥಕ ಕೀರ್ತಿಗಳಂ ತೊರೆದು ಸತ್ಯಪ್ರವೃತ್ತಿಯನ್ನೈದುವದಕ್ಕೆಂತಲೂ ಚೆನ್ನಾಗಿ ವಿದ್ಯಾಭ್ಯಾಸವು ಮಾಡಿ ಉನ್ನತ ಪರೀಕ್ಷೆಗಳಲ್ಲಿ ತೇರ್ಗಡೆಯನ್ನೈದಿ ದೊಡ್ಡ ಉದ್ಯೋಗಗಳಂ ಸಂಪಾದಿಸಿಕೊಂಡು ನಿಜವಾದ ಅಧಿಕಾರ ಗೌರವಗಳನ್ನನುಭವಿಸುತ ನಿಮ್ಮನ್ನು ಪಡೆದ ಮಾತಾ ಪಿತೃಗಳಿಗೂ ಇಷ್ಟಮಿತ್ರರಿಗೂ ಸಂತೋಷಕರರಾಗಬಾರದೆ? ನಿಮ್ಮ ಅಯೋಗ್ಯ ಸಹವಾಸದಿಂದೆಷ್ಟು ಕುಟುಂಬವು ನಾಶವನ್ನೈದಿತು. ಎಷ್ಟುಮಂದಿ ಮಾನಿನಿಗಳ ಪಾತಿವ್ರತ್ಯವು ಭಂಗವಾದ ನಾಶವನ್ನೈದಿದವು ನಿಮ್ಮ ಅವಳಿಯಿಂದೆಷ್ಟುಜನ ಕಷ್ಟದ ದುಃಖಪಡುತಲಿದಾರೆ. ನಿಮ್ಮಲ್ಲಿ ಸ್ವಭಾವ [illegible] ವಾಗಿ ಕಡೆಗೆ ಕೋರ್ಟಿಗಳ ಪರಿಪಿ [illegible] ಸಾಲಗಾರರ ಬಾಷೆಗಳಂ ತಡೆಯಲಾರದೆ [illegible] ಯರ ಮೇಲಿದ್ದ ಒಡವೆಗಳನ್ನು [illegible] ಅವರಿಗೆ ತಿಳಿಯದಂತೆ ಕದ್ದು [illegible] ಅಲ್ಲಿಗೂ ಅನ್ಯರ ವಿಘ್ನಿಯು ದಪ್ಪದ [illegible] ಬೋಳರಾಗಿ ಹೊಗಿ ಮುಂದು [illegible] ದಾಯವಿಲ್ಲದಂತೆ ಸರ್ವಸ್ವವು ಹೋಗಲಾಡಿಸಿಕೊಂಡವರನ್ನೂ, ಅನೇಕರ ತಮ್ಮ ಸಾಮಾನುಗಳನ್ನುಮಾರಿಕೊಂಡು ದೇಶಭ್ರಷ್ಟರಾಗಿ ಹೋದವರನ್ನೂ ನಾವು ನೋಡಿದೇವೆ. ಆದುದರಿಂದ ನಾವು ನಿಮಗೆ ಮುಖ್ಯವಾಗಿ ತಿಳಿಸುವದೇನಂದರೆ,— ನೀವು ನಾಟಕದಲ್ಲಿ ಸಂಬಂಧವಂ ತ್ಯಜಿಸಿ ಹೊರಗೆ ಬಂದು ಮುಂದೆ ನಿಮ್ಮ ಕ್ಷೇಮವರ್ಧಕಗಳಾದ ವ್ಯಾಪಾರಗಳಂ ಕೈಗೊಳ್ಳಿರಿ; ಮಾತಾಪಿತೃಗಳಿಗೆ ಶರಣಾಗತರಾಗಿ ಇಷ್ಟಮಿತ್ರರ ಮನ್ನಣೆಯಂ ಪಡೆದಿರಿ. ಖಿನ್ನರಾದ ನಿಮ್ಮ ಭಾರ್ಯೆಯರನ್ನು ಪ್ರತಿಜ್ಞಾವಚನಗಳಂ ಸಂತೃಪ್ತಿಗೊಳಿಸಿರಿ. ನಿಮ್ಮ ಅಜ್ಞಾನ ನಾಟಕದಲ್ಲಿ ನೀವು ಸಂಪಾದಿಸಿದ ನಾನಾವಿಧ ದುರಾಚಾರಗಳನ್ನೆಲ್ಲ ತೊರೆದು ಭಗವದ್ಧ್ಯಾನ ನಿರತರಾಗಿ ಗತಿಸಿದ ನಿಮ್ಮ ಅವಿವೇಕವು ಕುರಿತು ಅನುತಪಿಸುತ ಮುಂದೆ ಇತರರು ನಿಮ್ಮ ಮಾರ್ಗವನ್ನವಲಂಬಿಸದಿರುವಂತೆ ಅವರಿಗೆ ನಿಮ್ಮ ಚರಿತ್ರವು ತಿಳಿಸಿ ವಿವೇಕದಿಂ ವರ್ತಿಸಬೇಕೆಂಬದೇ ನಿಮ್ಮ ಶ್ರೇಯೋಭಿಲಾಷಿಗಳಾದ ನಮ್ಮ ಕೋರಿಕೆಯಾಗಿರುತಿದೆ. ಈ ಅಂಶವನ್ನು ನಮ್ಮ ಬಾಲಕರೆಲ್ಲರು ಜ್ಞಾಪಕದಲ್ಲಿಟ್ಟು ಯೋಗ್ಯವಾಗಿ ವರ್ತಿಸುವಂತೆ ಅವರು ಪ್ರೇರಿಸಬೇಕಾದುದು ಅವರ ಹಿತಚಿಂತರಿಗೆಲ್ಲ ಆವಶ್ಯಕವಾಗಿರುತಿದೆ. ಇಂತಾ ವಿಷಯಗಳಿಗೆ ಗವರ್ನಮೆಂಟಿನವರು ಪ್ರೋತ್ಸಾಹ ಮಾಡದರೆ ಅವರು ಅದರಿಂದುಂಟಾಗುವ ಅನರ್ಥ ಪರಂಪರೆಗಳಿಗೆ ಅವಕಾಶವಂ ಪಡೆಯುವ್ಯೇಣ ಪ್ರೇರಕರಾದವರಾಗುತ್ತಾರೆ. ಆದುದರಿಂದ ಈ ನಾಟಕ ಕಂಪೆನಿಗಳ ಹೆಸರುಗಳೇ ನಿರ್ನಾಮಗಳಾಗಿ ಹೋದ ಹೊರತು ಹಿಂದೂ ಸಮಾಜವು ತತ್ರಾಪಿ ಸ್ತ್ರೀ ಸಮೂಹವು ಕ್ಷೇಮಪಡುವದಸಾಧ್ಯವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A prediction.—ತಂಜಾವೂರು ಪ್ರಾಂತದ ಜ್ಯೋತಿಷ್ಯನೊಬ್ಬನು ದಕ್ಷಿಣದೇಶದಲ್ಲೆಲ್ಲ ಈ ಸಂವತ್ಸರದಲ್ಲಿ ಒಳ್ಳೆಯ ವರ್ಷ ಬೀಳುವದೆಂದು ಹೇಳುತ್ತಾನೆ.

A royal trip to England.—ಈ ತಿಂಗಳ ೭ನೇ ತಾರೀಖಿನಲ್ಲಿ ಬರೋಡೆ ಗಾಯಕವಾಡ ಮಹಾರಾಜರವರು ಇಂಗ್ಲಂಡಿಗೆ ಹೊರಡುವ ಸನ್ನಾಹಗಳು ನಡೆಯುತಲಿವೆಯೆಂತಲೂ, ಯೂರೋಪ್ ಖಂಡದಲ್ಲಿ ಆರು ತಿಂಗಳಕಾಲ ಸಂಚಾರ ಮಾಡಬಹುದೆಂತಲೂ ಒಂದಾನೊಂದು ಪತ್ರಿಕೆ ತಿಳಿಸುತಲಿದೆ.

Anarchists in Spain.—ಸ್ಪೈನ್ ದೇಶದ [illegible] ನಗರದಲ್ಲಿ ರಾಜ [illegible] ಕೆಲವರು ಸೇರಿ, ಅಲ್ಲಿನ ಪಾರ್ಲಿ [illegible] ಮೆಂಟ ಕಟ್ಟಡ, ನೆನೆಶಿಸುವ ಕಟ್ಟಡ [illegible] ಗಳು, ಮುಖ್ಯವಾದ ಮಂತ್ರಿಗಳ ಕಚೇರಿ [illegible], ರಾಜಧಾನಿಯ ಬ್ಯಾಂಕ್ ಮೊದಲಾದ ದೊಡ್ಡ ದೊಡ್ಡ ಕಟ್ಟಡಗಳು ಇವುಗಳಿಗೆ ಸುರಂಗಮಾಡಿ ಮದ್ದುಗುಂಡುಗಳನ್ನಿಟ್ಟು ನಾಶ ಮಾಡಬೇಕೆಂದು ನಡೆಸುತಲಿದ್ದ ಸಂಚಿನ ಸಂಬಂಧವಾದ ಕಾಗದಪತ್ರಗಳು ದೊರೆತವು.

Transportation for life.—ಮುಂಚೆಯೂ ಹಲವಾರು ಮುಸಲ್ಮಾನರು ಸೇರಿ ಜೋಗೀ ಜಾತಿ ಹುಡುಗಿ ಒಬ್ಬಳನ್ನು ಕೇವಲ ಕ್ರೂರವಾದ ರೀತಿಯಲ್ಲಿ ಕೆಡಿಸಿದ ಅಪರಾಧದ ಬಗ್ಗೆ ಅಲ್ಲಿನ ಡಿಸ್ಟ್ರಿಕ್ಟ್ ಸೆಷನ್ ವಿಚಾರಣೆಯಲ್ಲಿ ದ್ವೀಪಾಂತರ ವಾಸವನ್ನು ಒಪ್ಪಿಸಿದ್ದನ್ನು ಜಡ್ಜಿಯವರು ತಾವು ಜಡ್ಜಿಯ ಕೆಲಸಕ್ಕೆ ಬಂದಂದು ಮೊದಲು ಇಂಥಾ ಕ್ರೂರವಾದ ಮೊಕದ್ದಮೆಯು ಯಾವಾಗಲೂ ತಮ್ಮ ಮುಂದೆ ವಿಚಾರಣೆಗೆ ಬಂದಿರಲಿಲ್ಲ ವೆಂದು ಹೇಳಿ, ಅಪರಾಧಿಗಳ ಪೈಕಿ ಮುಖ್ಯಸ್ಥರಾದ ಇಬ್ಬರಿಗೆ ಜನ್ಮಪರಿಯಂತರ ದ್ವೀಪಾಂತರವಾಸ ಮಾಡುವ ದಂಡನೆಯಂ ವಿಧಿಸಿದರು.

Greed well served.—ಈಚೆಗೆ ಕಲ್ಕತ್ತೆಯೊಳು ಒಂದು ದಿನ ಕೂಲಿಯವನೊಬ್ಬನು, ಒಂದು ಜಾಕಾಯಿ ಹಸ್ತಗಳಿಯಲ್ಲಿ ಔಷಧಗಳ ಮತ್ತು ವಾಸನಾದ್ರವ್ಯಗಳ ಶೀಷೆಗಳಂ ತುಂಬಿ ತಲೆಯಮೇಲೆ ಇಟ್ಟುಕೊಂಡು ಹೋಗುತಿರುವಾಗ್ಯೆ ಯಿತವಜು ಸದರೀ ಪೆಟ್ಟಿಗೆಯು ಕೆಳಗೆ ಬಿದ್ದು ಒಳಗೆ ಇದ್ದ ಶೀಷೆಗಳೆಲ್ಲವು ಒಡೆದುಹೋಗಿ ದ್ರವ ಪದಾರ್ಥಗಳೆಲ್ಲವು ಬೀದಿಯಲ್ಲಿ ಚೆಲ್ಲಿ ಹೋದವು. ಕೂಡಲೆ ದಾರಿಯಲ್ಲಿ ಹೋಗುತಿದ್ದವರು ಗುಂಪು ಗುಂಪಾಗಿ ಸೇರಿದರು. ಕೆಲವರು ಅದಂ ನೋಡಿ ಜಸುತಾಪ ಪಟ್ಟರು, ಕೆಲವರು ವಾಸನೆ ಪದಾರ್ಥಗಳಲ್ಲಿದ್ದ ಶೀಷೆಗಳನ್ನು ಸಂಗ್ರಹಿಸುವದಕ್ಕೆ ಯತ್ನಪಟ್ಟು ಅದರಲ್ಲಿದ್ದದಂ ತೆಗದು ಮೈಗೆ ಲೇಪನ ಮಾಡಿಕೊಂಡು ಆನಂದ ಪರವಶರಾದರು. ಆ ಕಾಲದಲ್ಲಿ ಅಲ್ಲಿ ನಿಂತುಕೊಂಡಿದ್ದ ಕೋಚ್‌ಮಾನನೊಬ್ಬನು ತಾನು ಸಂತೋಷವನ್ನನುಭವಿಸುವದಕ್ಕೆ ಇದು ಒಳ್ಳೆಯ ಸಮಯವೆಂದು ಭಾವಿಸಿ ಒಂದು ಶೀಷೆಯ [illegible] ತೆಗದು ಅದರೊಳಗಿನ ದ್ರವ ಪದಾರ್ಥ [illegible] ಮುಕ್ಕೆ ಚನ್ನಾಗಿ ಬಳೆದುಕೊಂಡನು. [illegible] ತಲೆ ಘಟ್ಟಿಯಾಗಿ ಅದಟಿಕೊಂಡು ಶೀಷೆಯನ್ನು ಕೆಳಗೆ ಹಾಕಿ ಉರಿಯಂ ತಡಿಯಲಾರದೆ ಕೂಗಿಕೊಂಡು ಕುಣಿದಾಡುವದಕ್ಕೆ ಪ್ರಾರಂಭಿಸಲು ಅವನ ದುರವಸ್ಥೆಯನ್ನು ಎಲ್ಲರು ನೋಡಿ ನಕ್ಕರಂತೆ. ಸದರೀ ಶೀಷೆಯಲ್ಲಿದ್ದದು ಅಗ್ನಿದ್ರಾವಕ. ದುರಾಶಾಪೀಡಿತರಾದವರಿಗುಂಟಾಗುವ ಫಲಾನುಭವ ಈರೀತಿಯಾಗಿಯೇ ಇರುವದು.

The growing fancy of a Native Prince.—ಇಂಡ್ಯಾ ದೇಶದ ನೇಟಿವ್ ಸಂಸ್ಥಾನಾಧಿಪತಿ ಯೊಬ್ಬನಿಗಾಗಿ ಇಂಗ್ಲಂಡ್ ದೇಶದೊಳಗಣ ಗಾಡಿಗಳ ತಯಾರೀ ಕಂಪೆನಿಯವರೊಬ್ಬರು ರಾಜಮಾರ್ಗಗಳಾದ ಮೂರು ರೈಲ್ ಗಾಡಿಗಳು ಈಗ ತಯಾರ್ಮಾಡುತಲಿದ್ದಾರೆ. ಅವು ನೋಡುವದಕ್ಕೆ ಚಕ್ರಗಳುಳ್ಳ ಅರಮನೆಯೋ ಎಂದಿಯು ಶಿವೆ, ಆ ಗಾಡಿಗಳಲ್ಲಿ ಅರಸರಿಗೂ ಅವರ ಪರಿಜನ ಪರಿಚಾರಕರಿಗೂ ಹಗಲು ಮತ್ತು ರಾತ್ರಿ ಕಾಲಗಳಲ್ಲಿನ ಸಂಚಾರಕ್ಕೆ ಬೇರೆ ಬೇರೆ ಅಂಕಣಗಳು ಮಾಡಲ್ಪಟ್ಟಿರುವದಲ್ಲದೆ, ಬಿಸಿ ನೀರು ತಣ್ಣೀರು ಹೊರತು ಬರುವ ಪಂಜು ಗಳಿಗ ಳೂ ತೆಗದುಕೊಂಡು ಹೋಗುವದಕ್ಕೆ ಅವಕಾಶ ಕಲ್ಪಿಸಲ್ಪಟ್ಟಿರುತದೆ. ಗಾಡಿ ಗಂಟೆಕ್ಕೆ ೭೦ ಮೈಲುಗಳು ಸಾಗಬಹುದೆಂದು ಅಂದಾಜ್ ಮಾಡಲ್ಪಟ್ಟಿದೆ. ಪ್ರತಿಗಾಡಿಗೂ ಯೆಲೆಕ್ಟ್ರಿಕ್ ಲೈಟ್ ಯೆಂಬ ದೀಪ ಇಡಲ್ಪಟ್ಟಿದೆ. ಅದರಲ್ಲಿನ ಕಸ್ತೂರಿಗಳು ಮಾತ್ರ ನಾಲ್ವತ್ತು ಮೈಲಿಗಳ ದೂರದವರೆಗೆ ಬೀಳುವದು ಎಂದು ಒಂದು ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿದೆ. ಅದು ಬಹುಶಃ ನಾಲ್ಕುಸಾವಿರ ಪೌಂಡುಗಳಾಗಿರಬೇಕೆಂದು ನಂಬುತ್ತೇವೆ. ಈ ಸರ ಒಟ್ಟು ಬೆಲೆಯು ೧೨,೦೦೦ ಪೌಂಡು ಗಳಿಗೆ ಹೇಳಲ್ಪಟ್ಟದ್ದಾಗಿದ್ದರೆ ಸಾಕಾಗಬಹುದು. ಇದು ಈಗಿನ ಪ್ರಕಾರ ೧,೭೪,೫೦೦ ರೂಪಾಯಿಗಳಾಗುತಿವೆ. ಇಂಡ್ಯಾ ದೇಶದ ನೇಟಿವ್ ಅರಸರುಗಳ ವೈಲಕ್ಷಣ್ಯವೃತ್ತಿಯು ಫಲ ಪರ್ಯವಸಾನವು ಈರೀತಿಯಾಗಿ ಕಂಡುಬರುವದು. ಯಾವ ರಾಜ್ಯದಲ್ಲಿ ಪ್ರಜೆಗಳಮೇಲೆ ಅರಸನಿಗೂ, ಅರಸನಮೇಲೆ ಪ್ರಜೆಗಳಿಗೂ ಪರಸ್ಪರ ನಿರ್ಬಂಧವೂ ಇವಾದ ಅಧಿಕಾರ ಸಂಗಿರುವದಿಲ್ಲವೋ ಆ ರಾಜ್ಯಗಳ ಅರಸನ ತಲೆಗಳೆಲ್ಲವು ಮೇಲಿನಂತೆ ಕುಡಿದ ಕಾಲಕ್ರಮೇಣ ಲಯಿಸುವುದು. ಆ ಫಲ ನಿಜವಾಗಿ ಜಿನಸುಗಳು ಅನೇಕವಾಗಿ ರುವದರಿಂದ ಆಯಾ ಭಾಗದವರಿಗೆ ವಿಶೇಷವಾಗಿ ತಿಳಿಸವೇಕಾದ್ದೇನಿದೆ.

LOCAL AND PROVINCIAL NEWS
ಒಳದೇಶದ ಮತ್ತು ತಾಲ್ಲೂಕ್ ಜಾತಿವೃತ್ತಾಂತಗಳು.

Water supply.—ಈ ನಗರದ ಸದರ ಹದ್ದಿನಲ್ಲಿ ಪ್ರಸ್ತುತವಾಗಿರುವ ಜಲದುರ್ಭಿಕ್ಷ ನಿವೃತ್ತಿಯ ಬಗ್ಗೆ ಅಲ್ಲಿಯಲ್ಲಿ ಬಾವಿಗಳನ್ನು ತೆಗೆಯಿಸುವದಕ್ಕಾಗಿ ೩,೦೦೦ ರೂಪಾಯಿಗಳು ಸಾಂಗ್ಷನ್ ಆಗಿರುವದು. ಇದನ್ನನುಸರಿಸಿ ಮ್ಯುನಿಸಿಪಾಲಿಟಿಯವರು ಅವಶ್ಯಕಗಳಾದ ಪ್ರದೇಶಗಳಲ್ಲಿ ಭಾವಿಗಳನ್ನು ತೆಗೆಯಿಸುವ ತಜವೀಜಿನಲ್ಲಿದ್ದಾರೆಂದು ಕೇಳುತ್ತೇವೆ.

Slow in fulfilment.—ಈಗಿನ ದುರ್ಭಿಕ್ಷವು ಉಪದ್ರವಿಸುವ ತನಕ ಅನಾಥರಾದ ಬ್ರಾಹ್ಮಣರಿಗೂ ಇತರರಿಗೂ ಪ್ರತಿನಿತ್ಯವೂ ಅಕ್ಕಿ ಕೊಡತಕ್ಕದ್ದೆಂದು ನಿರ್ಧರಿಸಿಕೊಂಡು ಅದಕ್ಕೆ ಅನೇಕರು ಸಹಾಯ ಮಾಡುವಂತೆ ವಾಗ್ದಾನ ಮಾಡಿದ್ದಾರೆಂತಲೂ, ಯೋಗ್ಯವಾದ ವಿಚಾರಣೆಯಲ್ಲಿ ಕ್ರಮವಾಗಿ ಕೊಡಲ್ಪಡುತಿದೆಯೆಂತಲೂ ಹಿಂದೆಯೇ ತಿಳಿಸಿದ್ದೆವಷ್ಟೆ. ಈಚೆಗೆ ನಾವು ಕೇಳುವದರಲ್ಲಿ ಮೊದಲು ವಾಗ್ದಾನ ಮಾಡಿ ತೋರಿಸಿದ ಉಪಪನ್ನರಾದ ಮತ್ತು ಉನ್ನತಾಧಿಕಾರಗಳಲ್ಲಿರುವ ನೇಟಿವ್ ದೊಡ್ಡಮನುಷ್ಯರನೇಕರು ಇದುವರೆವಿಗೆ ಯೇನೂ ಕೊಡದೆಯೂ, ಕೇಳಲಿಕ್ಕೆ ಹೋಗುವವರಿಗೆ ಒಳಗೆ ಪ್ರವೇಶಕ್ಕೆ ಅವಕಾಶ ಕೊಡದೆಯೂ ಕಾಲಹರಣ ಮಾಡುತಲಿದ್ದಾರೆಂಬದಂ ಕೇಳಲಿಕ್ಕೆ ನಾವು ವಿಷಾದಿಸುತ್ತೇವೆ.

The weather.—ಪ್ರತಿನಿತ್ಯವೂ ಸಾಯಂಕಾಲದಲ್ಲಿ ಪ್ರಳಯ ಕಾಲದಂತೆ ಮೇಘಾವರಣವೂ ಗುಡುಗು ಮಿಂಚೂ ಘಾಳಿಯೂ ಕೊರತೆಯಿಲ್ಲದಿವೆ. ಆಕಾಶಬರಗಳನ್ನು ನೋಡಿದರೆ ವಾಕ್ಷಣಾರ್ಥ ಹೊರಹೊಮ್ಮುತಿದೆ. ಅಲ್ಲಿಯಲ್ಲಿ ಯಥೋಚಿತ ಮಳೆಯಾದಂತೆ ವರ್ತಮಾನ ಬಂದಾಗ್ಯೂ ಈ ಪ್ರಾಂತ್ಯದಲ್ಲಿ ಮಾತ್ರ ಜಲದುರ್ಭಿಕ್ಷ ನಿವೃತ್ತಿ ಕಾಲವು ಇದ್ಯಾಪಿ ಸನ್ನಿಹಿತವಾದಂತೆ ಕಾಣಿಸಲಿಲ್ಲವು. ಕುಡಿಯುವದಕ್ಕೇ ನೀರು ದೊರೆಯುವದು ಪ್ರಯಾಸವಾಗಿರುವಲ್ಲಿ ಸ್ನಾನವೆಂಬದರ ಪ್ರತ್ಯಾಶೆಯೇ ಇಲ್ಲವು. ಕೆತ್ಯಾದಿ ರಿಕ್ತರಾದ ಬ್ರಾಹ್ಮಣರದವರ್ಗದ ಸ್ತ್ರೀಯರ ಕಷ್ಟವನ್ನು ಕೇಳಬೇಕಾದುದೇ ಇಲ್ಲವು. ಈ ದುರ್ದಶೆಯನ್ನು ಮ್ಯುನಿಸಿಪಾಲಿಟಿಯವರು ನಿವೃತ್ತಿಸಿದರೆ ಒಂದು ಅಲಯ ಪ್ರತಿಷ್ಠೆ ದಾಡಿದಷ್ಟು ಪುಣ್ಯವು ಪ್ರಾಪ್ತವಾಗುವುದು. ತಾಲ್ಲೂಕ್ ಜಾತಿನಲ್ಲಿ ಉಬಾಲ್ ಜುಲಾಬ್ ರೋಗ ತಲೆದೋರಿ ಇನ್ನು ಉಪಶಮಿಸಲಿಲ್ಲವೆಂದು ತಿಳಿಯಬರುತಿದೆ.

Application for loans.—ಈ ಊರು ಪಶ್ಚಿಮ ದಿಗ್ಭಾಗದಲ್ಲಿ ಪಹರನ್ನು ಬೆಳೆಯಿಸುವ ತಾತ್ಪರ್ಯದೊಡನೆ ಹೊಸದಾಗಿ ಹಾಲೀನಿವೇಶನಗಳನ್ನು ಮ್ಯುನಿಸಿಪಾಲಿಟಿಯವರು ವಿಂಗಡಿಸಿ ಜಾತಿವಾರಾಗಿ ಸುಲಭ ಖರೀದಿಗೆ ಕೊಡುತಲಿರುವದು ಪ್ರಸಿದ್ಧವಾಗಿದೆಯಷ್ಟೆ. ಈಗ ಸುಲಭಕ್ರಯಕ್ಕೆ ಜಮೀನ್ ದೊರೆಯುವದಂ ಕಂಡು ಭಿಕ್ಷುಕರು ಸಹ ಅಲ್ಲಿಯಲ್ಲಿ ಯೋಚಿಸಿ ನಿವೇಶನಗಳನ್ನು ಕ್ರಯಕ್ಕೆ ಕೊಂಡುಕೊಂಡಿದ್ದಾರೆ, ಪರಂತು ಗವರ್ನಮೆಂಟನವರು ಕ್ಲುಪ್ತಕಾಲದಲ್ಲಿ ಕಟ್ಟಬೇಕೆಂದು ನಿರ್ಬಂಧಿಸಿ ಹಾಗೆ ಕಟ್ಟಲ್ಪಡದ ಭಾಗವನ್ನು ಮರಳಿ ಬೇರೆ ವಿಧದಿಂ ವಿಲೇ ಮಾಡುವಾಗ್ಯೆ ಈ ರಿಕ್ತರೆಲ್ಲರು ಯೇನುಮಾಡಬೇಕೆಂದು ದಾರಿಯೂ ತಿಳಿಯಲಿಲ್ಲವು. ಈಗ ಹಾಲೀ ನಿವೇಶನಗಳನ್ನು ತೆಗದುಕೊಂಡಿರುವ ಸರ್ಕಾರ್ ಉದ್ಯೋಗಸ್ಥರೆಲ್ಲರು ತಾವು ಕ್ಲುಪ್ತಕಾಲದಲ್ಲಿ ನಿವೇಶನಗಳನ್ನು ನೆಮೂನೆಯಂತೆ ಕಟ್ಟಿಕೊಳ್ಳಲಿಕ್ಕೆ ಶಕ್ತಿಯಿಲ್ಲದ್ದರಿಂದ, ತಮಗೆ ಗವರ್ನಮೆಂಟನವರು ಸಾಲ ಕೊಟ್ಟು ಕ್ರಮೇಣ ಪಮ್ಮಿಂದ ವಸೂಲ್ ಮಾಡಿಕೊಳ್ಳಬೇಕೆಂದು ಪ್ರಾರ್ಥಿಸಿ ದಿವಾನರವರಿಗೆ ಅರ್ಜಿ ಬರೆದುಕೊಂಡಿದ್ದಾರೆಂದು ಕೇಳುತ್ತೇವೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಹೊರಟಾದ ಇಷ್ತಿಹಾರ್‌ನಾಮೆಗಳು.

ನಂ ೨೩, ತಾ|| ೧೯ ನೇ ಏಪ್ರಿಲ್ ೧೮೯೨—ಶಿವಮೊಗ್ಗಾ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್ ಮಿ|| ಕೆ ನಾಗೇಶ ರಾಯರವರಿಗೆ ೧೮೯೨ನೇ ಇಸವಿ ಜನವರಿ ೯ ನೇ ಮಕ್ಕಾಂ ೩೯೯ ನೇ ನಂಬರ್ ಇಷ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಮೂರುತಿಂಗಳ ಪ್ರಿವಿಲೇಜ್ ರಜಾ ೧೮೯೨ ನೇ ಇಸವಿ ಮಾರ್ಚಿ ೩೧ ನೇ ತಾರೀಖಿನೊಡನೆ ಪ್ರಾರ್ಥಿಸಿದ್ದರಿಂದ ಅವರು ಮಾಹೇ ಮಜಕೂರ್ ಗುರ್ರೀ ತಾರೀಖಿನ ಪ್ರಾರ್ಥ್ಯಾಹ್ನದಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟ್ ಟ್ರೆಜರಿಯ ಮತ್ತು ಮೂರನೇ ಅಸಿಸ್ಟೆಂಟ್ ಕಮಿಷನರ್ ಕೋರ್ಟಿನ ಚಾರ್ಜನ್ನೂ ಅದೇ ತಿಂಗಳ ೨ ನೇ ತಾರೀಖಿನಲ್ಲಿ ಡಿಸ್ಟ್ರಿಕ್ಟ್ ಹೆಡ್ ಚಾರ್ಜನ್ನೂ ತೆಗದುಕೊಂಡರು.

ನಂ. ೨೭, ತಾ ೨೧ ನೇ ಏಪ್ರಿಲ್, ೧೮೯೨—ಕಡೂರ್ ತಾಲ್ಲೂಕ್ ಅಮಲ್ದಾರ್ ಎಸ್. ಶ್ರೀನಿವಾಸರಾಯರವರಿಗೆ ೧೮೮೯ ನೇ ಇಸವಿ ಫೆಬ್ರವರಿ ೫ ನೇ ಮಕ್ಕಾಂ ೭೧೪೦—೭೧—೨೦೦ ನೇ ನಂಬರುಳ್ಳ ಪ್ರೊಸೀಡಿಂಗ್ಸ್ ನಿಯಮಗಳನ್ನನುಸರಿಸಿ ಮಾಹೇ ಮಜಕೂರ್ ೧೩ ನೇ ತಾರೀಖ್ ಆಗಾಯಿತು ೫ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೨೮.—೧೮೯೧ ನೇ ಇಸವಿ ಜುಲೈ ೨೧ ನೇ ಮಕ್ಕಾಂ ೧೮೭ ನೇ ನಂಬರ್ ಇಷ್ತಿಹಾರ್‌ನಾಮೆಯನ್ನನುಸರಿಸಿ ವ್ಯವಸಾಯಕ್ಕಾಗಿ ಭಾವಿಗಳನ್ನು ಅಗೆಯಿಸುವದಕ್ಕೆ ಸಾಲಕೊಡಲ್ಪಡತಕ್ಕ ಬಗ್ಗೆ, ಮಾಡಲ್ಪಟ್ಟ ಸ್ಪೆಷಿಯಲ್ ರೂಲ್ಸಿನ ಮೊದಲನೇ ಸೆಕ್ಷನ್ ಅನುಸರಿಸಿ ಸದರೀ ರೂಲ್ಸ್, ೧೮೯೧ ನೇ ಇಸವಿ ಡಿಸೆಂಬರ್ ೧೨ ನೇ ಮಕ್ಕಾಂ ಮೊದಲು, ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಜಾರೀಯೊಳು ತರಲ್ಪಡತಕ್ಕದ್ದೆಂದು ಇದರಿಂದ ಘೋಷಿಸ್ ಮಾಡಲ್ಪಟ್ಟಿರುತಿದೆ.

ನಂ L. ೨೨ ತಾ|| ೨೨ನೇ ಏಪ್ರಿಲ್,೧೮೯೨. ಸನ್ ೧೮೯೧ ನೇ ಇಸವಿ ನೆವಂಬರ್ ೨೮ ನೇ ಮಕ್ಕಾಂ ೩೧೬ ನೇ ನಂಬರ್ ಇಷ್ತಿಹಾರ್‌ನಾಮೆಯೊಡನೆ ಘೋಷಿಸ್ ಮಾಡಲ್ಪಟ್ಟ ಮ್ಯುನಿಸಿಪಲ್ ಕಮಿಷನರ್‌ಗಳ ಚುನಾವಣೆಗೆ ಸಂಬಂಧಿಸಿದ ನಿಬಂಧನೆಗಳ ೫.೬ ನೇ ಪ್ಯಾರಾಗಳಿಗೆ ಬದಲಾಗಿ ಇದರಡಿ ಕಂಡ ನಿಬಂಧನೆಗಳು ಸೇರಿಸಲ್ಪಡತಕ್ಕದ್ದೆಂದು ಘನವನ್ನು ಹೊಂದಿದ ಶ್ರೀಮನ್ಮಹಾರಾಜಾ ಸರ್ಕಾರದವರು ಹುಕುಂ ಮಾಡಿರುತ್ತಾರೆ.

೫. ಒಬ್ಬ ಮ್ಯುನಿಸಿಪಲ್ ಕಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಅರ್ಹ ರಾಗಬೇಕಾದರೆ ಅವರು

(a) ಪುರುಷರಾಗಿರಬೇಕು.

(b) ೨೫ ವರುಷಗಳ ವಯಸ್ಸು ಪೂರ್ತಿಯಾಗಿ ಸಂದವರಾಗಿರಬೇಕು.

(c) ವಿದ್ಯಾವಂತರಾಗಿರಬೇಕು.

(d) ಯಾವ ಡಿವಿಜನಿಗಾಗಿ ಚುನಾಯಿಸಲ್ಪಡುತ್ತಾರೋ ಆ ಡಿವಿಜನಿನ ಮ್ಯುನಿಸಿಪಲ್ ಸರಹದ್ದುಗಳೊಳಗೆ ವಾಸ ಮಾಡತಕ್ಕವರಾಗಿರತಕ್ಕದ್ದು, ಮತ್ತು,

(e) ಚುನಾವಣೆಯು ನಡೆಯುವ ಹಿಂದಿನ ವರ್ಷದಲ್ಲಿ ನೂರು ರೂಪಾಯಿಗಳ ಬಾಡಿಗೆ ಬರುವಂತಾ ಒಂದು ಮನೆಯನ್ನು ಸ್ವಂತವಾಗಿ ಪಡೆದಿದ್ದು ಆ ಮನೆಯಲ್ಲಿ ವಾಸವಾಗಿರುವಂತವರಾಗಿರಬೇಕು ಅಥವಾ ಈ ರೆಗ್ಯುಲೇಷನ್ ಅನುಸರಿಸಿ, ಕೊಡಬೇಕಾದ ಕಂದಾಯಗಳನ್ನು ಸಲ್ಲಿಸಿದವರಾಗಿರಬೇಕು. ಮತ್ತು ಸದರೀ ಷಹರ್ ಸರಹದ್ದುಗಳಲ್ಲಿ ಮೊದಲನೇ ವರ್ಷದ ಜಮೀನ್ದಾರರಾದವರು ಯಾವ ಸ್ಥಿರ ಅಂತಾ ಸಾಲಿಗೆ ೩೦ ರೂಪಾಯಿಗಳಿಗೆ ಕಡಮೆಯಿಲ್ಲದ ವರಮಾನವನ್ನು, ಅಥವಾ ಆತನು ಯಾವದಾದರು ಯೂನಿವರ್ಸಿಟಿ ಯಾನೆ ಶಾಸ್ತ್ರ ಪಾಠಶಾಲೆಯ ಗ್ರಾಜ್ಯುಯೇಟಾಗಿದ್ದಲ್ಲಿ ೧೫ ರೂಪಾಯಿಗಳಿಗೆ ಕಡಮೆಯಿಲ್ಲದ ವರಮಾನವನ್ನು ಬಾವತೀ ಮಾಡಿರಬೇಕು. ಪರಂತು ಯಾವದಾದರೊಂದು ಅವಿಭಕ್ತ ಹಿಂದೂ ಕುಟುಂಬದವರು ೬೦ ರೂಪಾಯಿಗಳ ವರಿಗಿನ ಉತ್ಪನ್ನವನ್ನಾಗಲಿ, ಅಥವಾ ಚುನಾವಣೆ ನಡೆಯುವ ಹಿಂದಿನ ವರ್ಷದಲ್ಲಿ ೨೦೦ ರೂಪಾಯಿಗಳ ಬಾಡಿಗೆ ಬರಬಹುದಾದ ಒಂದು ಮನೆಯನ್ನು ಸ್ವಂತವಾಗಿ ಪಡೆದಿರುವ ಯಾ ವಾಸವಾಗಿರುವ ಪಕ್ಷಕ್ಕೆ, ಅಂತಾ ಕುಟುಂಬಕ್ಕೆ ಸೇರಿದವರ್‍ಯಾರಾದರೊಬ್ಬರು ಇತರ ಆವಶ್ಯಕಗಳಾದ ಯೋಗ್ಯತೆಗಳನ್ನು ಪಡೆದಿದ್ದರೆ ಅಂತವರೊಬ್ಬ ಮ್ಯುನಿಸಿಪಲ್ ಕಮಿಷನರಾಗಿ ಮೆಂಬರಾಗುವದಕ್ಕೆ ಅರ್ಹರಾಗಿರತಕ್ಕದ್ದು. ಮತ್ತು ಒಬ್ಬ ಮ್ಯುನಿಸಿಪಲ್ ಕಮಿಷನರಾಗಿ ಚುನಾಯಿಸಲ್ಪಡತಕ್ಕ ಬಗ್ಗೆ ಅರ್ಹರಾಗಬೇಕಾದರೆ ಚುನಾವಣೆ ಮಾಡಲ್ಪಡುವ ತಾರೀಖಿನಲ್ಲಿ ಅವರು,

(f) ಇಂಡಿಯನ್ ಪೀನಲ್ ಕೋಡ್ ಅನುಸರಿಸಿ ೬ ತಿಂಗಳ ಮಾಯಿದೆಗೆ ಕಡಮೆಯಾಗದ ಕೈದ್ ಸಜಾ ವಿಧಿಸಬಹುದಾದ ಯಾವದಾದರು ತಕ್ಸೀರ್ ಬಗ್ಗೆ ದಂಡಿಸಲ್ಪಟ್ಟವರಾಗಿಯೂ,

(g) ಚುನಾವಣೆ ತಾರೀಖಿಗೆ ಹಿಂದಿನ ಯೆರಡು ವರುಷಗಳ ಕಾಲದಲ್ಲಿ ದಿವಾಳಿಯಾದವರೆಂದು ಪ್ರಕಟಿಸಲ್ಪಟ್ಟವರಾಗಿಯೂ,

(h) ಸದರೀ ಮ್ಯುನಿಸಿಪಾಲಿಟಿಯ ಒಬ್ಬ ತಾಬೇದಾರೀ ನೌಕರರಾಗಿಯೂ,

(i) ಯಾವದಾದರೂ ಜಾಯಿಂಟ್ ಸ್ಟಾಕ್ ಕಂಪೆನಿ ಯೆಂಬ ವ್ಯವಸ್ಥಿತ ಸಂಘದಲ್ಲಿ ಒಬ್ಬ ಭಾಗಸ್ಥರಾಗಿರುವದಕ್ಕಿಂತ ಇತರ ವಿಧ ಸಂಬಂಧ ವಿರತಕ್ಕವರಾಗಿಯೂ, ಮ್ಯುನಿಸಿಪಾಲಿಟಿಯೊಡನೆ ಯಾವದಾದರು ಗುತ್ತಿಗೆ ಅಥವಾ ಅದಕ್ಕಾಗಿ ಕೆಲಸ ಮಾಡುವವರಾಗಿಯೂ, ಇರಕೂಡದು.

೬. ಚುನಾವಣೆ ಬಗ್ಗೆ ಅಭಿಪ್ರಾಯ ಕೊಡುವದಕ್ಕೆ ಅರ್ಹರಾಗಬೇಕಾದರೆ,—

(a) ಪುರುಷರಾಗಿರಬೇಕು.

(b) ೨೧ ವರುಷಗಳ ವಯಸ್ಸು ಪೂರ್ತಿಯಾಗಿ ಸಂದವರಾಗಿರಬೇಕು.

(c) ಯಾವ ಡಿವಿಜನಿಗೋಸ್ಕರ ಮೆಂಬರ್ ಚುನಾಯಿಸಲ್ಪಡುವರೋ ಅಂತಾ ಡಿವಿಜನಿನ ಸರಹದ್ದುಗಳಲ್ಲಿ ವಾಸವಾಗಿರತಕ್ಕದ್ದು ಮತ್ತು,

(d) ತಾವು ಅಭಿಪ್ರಾಯ ಕೊಡುವ ಹಿಂದಿನ ವರ್ಷದಲ್ಲಿ ೩ ರೂಪಾಯಿಗಳ ಬಾಡಿಗೆಬರುವ ಒಂ

ದು ಮನೆಯನ್ನು ಸ್ವಾಂತವಾಗಿ ಕೊಂಡು ಯಾ ವಾ ಮಾಡತಕ್ಕವರಾಗಿ ಅಥವಾ ಹೀಗೆ ಸಂಭದ ಸೆಕ್ರೆಟರಿ ತರೀಕ್ ಬಾಡಿಗೆ ಕೊಟ್ಟಂತವರಾಗಿ ಅಥವಾ ಈ ರೆಗ್ಯುಲೇಷನ್ ಅನುಸರಿಸಿ ಕಂದಾಯಗಳನ್ನು ದಾವತೀ ಮಾಡಿದವರಾಗಿಯೂ, ಆಯಾ ವರುಷಕ್ಕೆ ಜನವರಿ ೧ ನೇ ತಾರೀಖಿನ ಸರಕಾರದ ಕೋಶದಲ್ಲಿ ಉಳಕ್ಕೋಸ್ಕರ ೧೦ ರೂಪಾಯಿಗಳಿಗೆ ಕಡಮೆ ಇಲ್ಲದಂತೆಯೂ, ಅವರೊಂದು ಯೂನಿವರ್ಸಿಟಿ ಗ್ರಾಜ್ಯುಯೇಟಾಗಿದ್ದ ಪಕ್ಷದಲ್ಲಿ ೫ ರೂಪಾಯಿಗಳಿಗೆ ಕಡಮೆಯಿಲ್ಲದಂತೆಯೂ ದಾವತಿ ಮಾಡಿರತಕ್ಕವರಾಗಿಯೂ ಇರಬೇಕು.

ನಂ. ೩೦. ತಾ|| ೨೭ ನೇ ಏಪ್ರಿಲ್ ೧೮೯೨.—ಕೋಲಾರ ಡೆಪ್ಯುಟಿ ಅಮಲ್‌ದಾರ್ ಆರ್. ಸುಬ್ಬಣ್ಣನವರು ೧೮೯೧ ನೇ ಇಸವಿ ಆಗಸ್ಟ್ ೧೨ ನೇ ತಾರೀಖ್ ಲಾಗಾಯಿತು ಚಿಕ್ಕಬಳ್ಳಾಪುರದ ಸೆಕೆಂಡ್ ಗ್ರೇಡ್ ಅಮಲ್‌ದಾರರಾಗಿ ಆಕ್ಟಿಂಗ್ ತರೀಕ್ ಕೆಲಸ ನೋಡಿರುತ್ತಾರೆ.

ನಂ. ೩೧.—ಬೇಲೂರ್ ತಾಲ್ಲೂಕ್ ಅಮಲ್‌ದಾರ್ ಸಿ. ಎನ್. ಬಾಡಯ್ಯನವರಿಗೆ, ೧೮೯೨ ನೇ ಇಸವಿ ಮಾರ್ಚಿ ೨೫ ನೇ ನಂಬರ್ ೪೯೩ ನೇ ನಂಬರ್ ಇಸ್ತಿಹಾರ್‌ನ ಮೇಯಲ್ಲಿ ಕೊಡಲ್ಪಟ್ಟಿದ್ದ ಆರು ದಿನಗಳ ಕ್ಯಾಜುಯಲ್ ರಜಾ ಇನ್ನೊಂದು ದಿನದ ವರಿವಿಗೆ ಜಾಸ್ತಿ ಮಾಡಲ್ಪಟ್ಟಿತು.

ನಂ. ೩೨.—ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರಾಗಿರುವ, ಈಗ ರೆವಿನ್ಯೂ ಸರ್ವೇ ಇಲಾಖೆಯಲ್ಲಿ ನೌಕರಿ ಮಾಡುತಲಿರುವ ಮಿ|| ಪಿ ಅಬ್ದುಲ್ ಖರೀಂ ಯವರಿಗೆ ೧೮೯೧ ನೇ ಇಸವಿ ಮಾರ್ಚಿ ೭ ನೇ ತಾರೀಖ್ ಲಾಗಾಯಿತು ೩೦ ದಿವಸಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೩. ಬೆಂಗಳೂರ್ ಸಿಟಿ ಅಮಲ್‌ದಾರ್ ಬಾಬ್ಳ್ ನಾಗೇಶರಾಯರವರು, ಮಾರ್ಚಿ ಮಾಹೆ ೧೧ ನೇ ತಾರೀಖ್ ೧೨ ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ೨೦ ದಿವಸಗಳ ಪ್ರಿವಿಲೇಜ್ ರಜಾ ಪೈಕಿ ೧೧ ದಿನಗಳನ್ನು ಮಾತ್ರವೇ ಉಪಯೋಗಿಸಿಕೊಂಡು ಇದೇ ತಿಂಗಳ ೪ ನೇ ತಾರೀಖಿನ ದಿನ ಕೆಲಸದ ಮೇಲೆ ಹಾಜರಾದದರಿಂದ ಅದರ ಪೈಕಿ ಉಪಯೋಗಿಸಿಕೊಳ್ಳಲ್ಪಡದ ಭಾಗವಾದ ೯ ದಿನಗಳ ರಜಾ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ.

ನಂ. ೩೪.—ಹಾಸನ ಡಿಸ್ಟ್ರಿಕ್ಟ್ ಪೋಲೀಸ ಸೂಪರಿಂಟೆಂಡೆಂಟ್ ಮಿ|| ಜೆ. ಡಬ್ಲ್ಯು. ನೈಟ್ ಯವರಿಗೆ ಮಾರ್ಚಿ ಮಾಹೆ ೩೧ ನೇ ತಾರೀಖ್ ಮೊದಲು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೫. ಫ್ರೆಂಚ್‌ರಾಕ್ಸ್ ಸಬ್ ಡಿವಿಜನ್ ಅಸಿಸ್ಟೆಂಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ನಂಜರಾಜೇ ಅರಸಿನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೩೬. ೧೮೯೨ ನೇ ಇಸವಿ ಫೆಬ್ರುವರಿ ೨೯ ನೇ ಮಾಹೆ ೪೬೦ ನೇ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಬೆಂಗಳೂರ್ ಅಮಲ್‌ದಾರ್ ಮೈ ಕುಪ್ಪುಸ್ವಾಮಿ ನಾಯುಡರವರನ್ನು ಕೋಲಾರ ಡಿಸ್ಟ್ರಿಕ್ಟ್‌ನಲ್ಲಿ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಮ್ಮಾಡಿ ಕೊಡಲ್ಪಟ್ಟಿದ್ದ ಹುಕುಂ, ಅವರ ಪ್ರಾರ್ಥನೆಯ ಮೇಲೆ ಇದರಿಂದ ರದ್ದು ಮಾಡಲ್ಪಟ್ಟಿರುತ್ತದೆ. ಕೋಲಾರ್ ಅಮಲ್‌ದಾರ್ ಕೇಮಾ ಹನುಮಂತಯ್ಯನವರು ಹಂಗಾಮಿಯಾಗಿ, ಕೋಲಾರ ಡಿಸ್ಟ್ರಿಕ್ಟಿನಲ್ಲಿ ರಿಲೀಫ್ ಕೆಲಸಗಳ ಬಗ್ಗೆ ಎಕ್ಸ್‌ಟ್ರಾ ಅಸಿಸ್ಟೆಂಟ್ ಕಮಿಷನರಾಗಿ ನೇಮಕರಮ್ಮಾಡಲ್ಪಟ್ಟಿರುತ್ತಾರೆ.

ನಂ. ೩೭.—ಮೈಸೂರ್ ಸರವಿಸ್ ರೆಗ್ಯುಲೇಷನ್‌ಗಳ ೧೩೦ ಮತ್ತು ೧೩೪ ನೇ ಆರ್ಟಿಕಲ್‌ಗಳನ್ನನುಸರಿಸಿ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ಸಿ. ಸುಬ್ಬನರಸಯ್ಯರವರಿಗೆ ೧೮೯೨ ನೇ ಇಸವಿ ಮಾರ್ಚಿ ೨೬ ರ ಮೊದಲು ೩೦ ನೇ ತಾರೀಖ್ ವರಿವಿಗೆ ಉಭಯ ದಿನಗಳು ಸೇರಿ ೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

SUMMARY OF NEWS
ವೃತ್ತಾಂತ ಸಂಗ್ರಹವು.

ಸ್ವತಂತ್ರ ಊರಿನಲ್ಲಿ ಮುಸ್ಸಫರ್ ಎಂಬವನೊಬ್ಬನು ಬೇಟೆಗಾಗಿ ಕಾಡಿಗೆ ಹೋಗಿದ್ದನು. ಆ ಕಾಲಕ್ಕೆ ಬಾಯಾರಿಕೆಯಿಂದ ಬಳಲುತಿರಲು, ಆಕಸ್ಮಾತ್ ಸುಂದರವಾದ ಒಂದು ಫಲವನ್ನು ಕಂಡು ಅದನ್ನು ತೆಗೆದುಕೊಂಡು ತಿಂದನು. ಕೂಡಲೇ ಅವನು ಒಳ್ಳೇ ಭವಿಷ್ಯತ್ಕೃತಿಯುಳ್ಳ ಒಬ್ಬ ಕೇಳಗನಾಗಿ ತನ್ನ ಮನಸಿಗೆ ಬಂದು ನಡೆದ ವೃತ್ತಾಂತವನ್ನು ಹೇಳಿದನು.

ಜೇಳು ಕಡಿದರೆ ಅದಕ್ಕೆ ಸುಲಭವಾದ ೨ ಉಪಾಯಗಳನ್ನು ಶ್ರೀಯುತರಾದ ದಾಮೋದರ ಭಾಕಿ ಎಂಬ ಒಬ್ಬ ಕೀರ್ತಿ ಪ್ರಾಂತದ ವೈದ್ಯರು ಪ್ರಸಿದ್ಧ ಪಡಿಸುತ್ತಾರೆ ಅದೇನಂದರೆ.—(೧) ಜೇಳು ಕಚ್ಚಿದ ಜಾಗೆಯ ಮೇಲೆ ೧೦ ಮಿನಿಟಿನ ವರಿವಿಗೆ ನೀರು ಸುರಿಯಬೇಕು. ಅಥವಾ (೨) ಉತ್ತಮವಾದ ಇಂಗನ್ನು ತಂದು ನೀರಿನಲ್ಲಿ ತೇಯ್ದು ಕಡಿದ ಜಾಗಕ್ಕೆ ಹಚ್ಚಬೇಕು.

ವಿಲಾಯತಿಯ ಪಾರ್ಲಿಮೆಂಟಿನಲ್ಲಿ ಮೆಂಬರಾಗಿದ್ದ ಹುಪ್ಪ್ರಿ ಡೆಪ್ ಸ್ಮಿತ್‌ರವರು ಕಾಲಾಧೀನರಾದನಂತರ, ಅವರ ವಿಲ್ಲಿನಲ್ಲಿ ಕಂಡಿರುವ ಪ್ರಕಾರ ೧,೬೪೪,೦೦೦ ಪೌಂಡುಗಳು ಅಥವಾ ೧೬,೪೯,೦೦೦ ರೂಪಾಯಿಗಳ ಆಸ್ತಿ ಇರುತಿದೆಂದು ಗೊತ್ತಾಯಿತು. ರಿವ್ಯೂ ಆಫ್ ರಿವ್ಯೂಸ್ ಎಂಬ ಒಂದು ಮಾಸಪತ್ರಿಕೆಯು, ಈತ ಪಬ್ಲಿಕ್ ಪ್ರಜೆಗಳಿಗೆ ಪ್ರತಿನಿಧಿಯಾಗಿದ್ದುಕೊಂಡು ಕೂಡ ಅವರ ಉಪಯೋಗಾರ್ಥವಾಗಿ ತನ್ನ ದ್ರವ್ಯದಲ್ಲಿ ಸ್ವಲ್ಪ ವಿನಿಯೋಗ ವಾಗುವಂತೆ ಸಹ ಮಾಡಿಸದೆ ಇರುವದಂ ನೋಡಿದರೆ ವಿಲಾಯತಿಗೇನೆ ನಾಚಿಕೆ ಕೇಡಾಗಿದೆ ಎಂಬದಾಗಿ ತಿಳಿಸುತಿದೆ.—ವೃ. ಟಿ.

ಅಮೇರಿಕಾ ಖಂಡದಲ್ಲಿ ಗಾಡಿವಾಲನಾದ ಒಬ್ಬ ಮುದುಕನು ತನ್ನ ಗಂಡಸಿಗೆ ವಿಷವನ್ನು ಹಾಕಿಸಿ, ಅವನು ಮೃತನಾದ ಮೇಲೆ ಮನೆಯಲ್ಲಿದ್ದ ಧನಕನಕಗಳನ್ನೆಲ್ಲವನ್ನು ತೆಗೆದುಕೊಂಡು ಬಹಳ ಸಂತೋಷದೊಡನೆ ತನ್ನ ಉಪಪತಿಯ ಮನೆಗೆ ಬಂದಳು. ದೈವಯೋಗದಿಂದ ಅವಳು ಬರುವಷ್ಟರಲ್ಲಿ ಆ ಉಪಪತಿಯು ಸಹ ಮಡಿದಿದ್ದನು. ಆಮೇಲೆ ತನ್ನ ಮನೆಗೆ ಬರುತ್ತಿರುವಾಗ ದಾರಿಯಲ್ಲಿ ಕಳ್ಳರು ಅವಳನ್ನು ಹೊಡೆದು ದೋಚಿಕೊಂಡು ಬಿಟ್ಟುಬಿಟ್ಟರು. ಆಮೇಲೆ ಅವಳು ಒಬ್ಬ ಹಳೇ ಚೋರನನ್ನು ಮದುವೆಯಾಗಿಕೊಂಡು ಅವನೊಡನೆ ಬಾಳುತ್ತಿದ್ದಳು. ಅನ್ಯಾಯಮಾರ್ಗದಲ್ಲಿ ಪ್ರವರ್ತಿಸತಕ್ಕವರ ಕೊನೆಗೆ ಹೀಗೇ ಆಗುವದು.—ಲೋಕಬಂಧು.

ಈಗಿನ ರಷ್ಯಾ ಚಕ್ರವರ್ತಿಯವರ ಮುತ್ತಜ್ಜನು ಒಂದು ದಿನ ನಾಸ್ಕೋ ಪಟ್ಟಣದಿಂದ ಕುದುರೇ ಮೇಲೆ ಕೂತುಕೊಂಡು ಹೋಗುತ್ತಿರುವಾಗ ಕೈಯಲ್ಲಿದ್ದ ಕಮಚಿ ಯು ಕೆಳಕ್ಕೆ ಬಿದ್ದು ಹೋಗಲು, ದಾರಿಯಲ್ಲಿ ಬರುತಿದ್ದ ಒಬ್ಬ ಹುಡುಗನನ್ನು ನೋಡಿ ಆ ಕಮಚಿಯನ್ನು ತೆಗೆದುಕೊಡು ಎಂದು ಕೇಳಲು ಹುಡುಗನು ಒಡನೆ ಆ ಕಮಚಿಯನ್ನು ತೆಗೆದುಕೊಟ್ಟನು. ತಾವು ಯಾರು? ತಮ್ಮ ಹೆಸರೇನು? ತಮಗೇನು ಕೆಲಸವಿದೆ ಎಂಬದಾಗಿ ಬಹಳ ವಿನಯದಿಂದ ಕೇಳಲು, ಆತನು ಸಂತೋಷದಿಂದ ದೇಶವನ್ನು ಆಳುವಂತಾ ಚಕ್ರವರ್ತಿಯ ಮುತ್ತಜ್ಜನು ಎಂದು ಹೇಳಲು, ಆ ಹುಡುಗನು ಅತ್ಯಂತ ಹೃಷ್ಟನಾಗಿ ನಟಿಸಿ, ಕೈಯಲ್ಲಿದ್ದ ಕಮಚಿಯನ್ನೇ ಇಷ್ಟು ನಿರ್ಲಕ್ಷ್ಯದಿಂದಿಳಿಸುವವರು ಪ್ರಜೆಗಳ ಸಂರಕ್ಷಣೆ ಹ್ಯಾಗೆ ಮಾಡುವರೋ ಎಂದು ಕೇಳಲು, ಆದಕ್ಕೆ ಚಕ್ರವರ್ತಿಯ ಮುತ್ತಜ್ಜನು ಅತ್ಯಾಶ್ಚರ್ಯವನ್ನು ಹೊಂದಿ ಇಂತಾ ಬುದ್ಧಿವಂತನಾದ ಹುಡುಗನನ್ನು ಬಿಡಬಾರದೆಂದು ಅವನನ್ನು ಅರಮನೆಗೆ ಕರೆದುಕೊಂಡು ಹೋಗಿ ಸಂರಕ್ಷಿಸುತಲಿದ್ದನು. ಈಗಿನ ಭಾರತೀಯರ ಕೆಲವು ಅರಸುಗಳಲ್ಲಿ ಹೀಗೇ ಏನಾದರೂ ಅಂದರೆ ಅವನ ಗತಿಯೇನು?

ಮೈಸೂರು ಮಹಾರಾಜಾ ಕಾಲೇಜಿನ ಎದುರು ಭಾಗದಲ್ಲಿರುವ ಉಪೇಯರಾಡಿಗೆ ತಾಲ್ಲೂಕ್ ಆಮಲ್ದಾರರು ಮೊದಲಾದ ಅಧಿಕಾರಿಗಳು ಕಳೆದ ಮಂಗಳವಾರ ಸಾಯಂಕಾಲದಲ್ಲಿ ದಯಮಾಡಿದ್ದರು. ಆ ಕಾಲದಲ್ಲಿ ಇಲ್ಲಿನ ಕೃಷ್ಣವಿಲಾಸದ ಅಗ್ರಹಾರ ನಿವಾಸಿಯಾಗಿಯೂ ಟೌನ್ ಪೋಲೀಸ ಇಲಾಖೆಯಲ್ಲಿ ವಕೀಲರಾಗಿಯೂ ಇದ್ದ ಒಬ್ಬ ಶ್ರೀವೈಷ್ಣವ ಬ್ರಾಹ್ಮಣನು ಕಾರ್ಯಾರ್ಥಿಯಾಗಿ ಅವರುಗಳನ್ನು ಕಾಣುವ ಉದ್ದೇಶ ಸಹ ಅವರಿಗೆ ಬಂದು ಅವರಸಮುಖವನ್ನು ನಿರೀಕ್ಷಿಸಿಕೊಂಡಿದ್ದನಂತಲೂ, ಅಷ್ಟರಲ್ಲೇ ಒಂದು ದೊಡ್ಡ ನಾಗರಹಾವು ಆ ವಾಲ್ಯಾರ್ಯನವರೋ ಎಂ ಕಾಲಿನಮೇಲೆ ಹಾಯುತಿರಲು ತಾವೇ ಕಂಡು ತಮ್ಮ ಕಾಲನ್ನು ಒದರಿದರೆಂತಲೂ, ಆ ರಭಸಕ್ಕೆ ನೆಲದಮೇಲೆ ಬಿದ್ದು ಅತ್ಯಂತ ರೋಷದಿಂದ ತನ್ನ ಗಾಡಿವಲ್ಲಿ ನಿಂತಿದ್ದ ಬಡಪಾಯಿ ಬ್ರಾಹ್ಮಣನ ಉಂಗುಷ್ಠ ನಿಂತು ಆತನನ್ನು ಕಚ್ಚಿಬಿಟ್ಟಿತೆಂತಲೂ, ಒಡನೆಯೇ ಅಲ್ಲಿದ್ದವರು ಆತನನ್ನು ಒಂದು ಗಾಡಿಯಲ್ಲಿ ಹಾಕಿ ರಾತ್ರಿ ಸುಮಾರು ೮ ಘಂಟೆ ಸಮಯದಲ್ಲಿ ಆಸ್ಪತ್ರೆಗೆ ಕಳುಹಿಸಿದರೆಂತಲೂ, ಅಲ್ಲಿ ತಕ್ಕ ಚಿಕಿತ್ಸೆಗಳನ್ನು ಮಾಡಿದಾಗ್ಯೂ ಗುಣ ಹೊಂದದೆ ಬರದೆ ಹೋದದ್ದರಿಂದ ಅವನ ಮನೆಗೆ ಕಳುಹಿಸಿ ಕೊಟ್ಟರೆಂತಲೂ, ಸುಮಾರು ೧೧ ಘಂಟೆಯ ಸಮಯದಲ್ಲಿ ಮೃತಪಟ್ಟನೆಂತಲೂ, ಮಾರನೇದಿನ ಪ್ರಾತಃಕಾಲಕ್ಕೆ ಇವನನ್ನು ನೋಡಲಿಕ್ಕೆ ಬಂದಿದ್ದ ಕೆಲವು ಮಂದಿ ಅಧಿಕಾರಿಗಳು ಈ ಅಕಾಲ ಮರಣವನ್ನು ನೋಡಿ ಬಹಳ ವಿಷಾದ ಪಡುತ ಹೋದರು ಹೋದರೆಂತಲೂ ತಿಳಿಯು ಬರುತಿದೆ. ಪ್ರಪಂಚದಲ್ಲಿ ಮನುಷ್ಯರಿಗೆ ಮೃತ್ಯುವೇ ಪತೆಯು ಯಾವ ಯಾವ ರೂಪವಾಗಿ ಬಂದೇನು ಗತಿಗಳನ್ನು ಕೊಟ್ಟು ಕೊಳ್ಳುವಳೋ! ಎಂಬದನ್ನು ಜ್ಞಾಪಕದಲ್ಲಿಟ್ಟುಕೊಂಡಿರಬೇಕಲ್ಲವೇ!!

EXTRACTS.

ಸ್ವಮತದ್ರವ್ಯ ಸಂಪಾದನಾರ್ಥ ಪ್ರಕಾರಾಂತರದಿಂ ಪ್ರವರ್ತಿಸಿ ತಮ್ಮ ಉದ್ದೇಶಗಳಂ ಸಫಲಗೊಳಿಸುತಲಿರುವ "ಸಾಲ್‌ವೇಷನ್ ಆರ್ಮಿ" ಅಂದರೆ ಮೋಕ್ಷಸೇನೆಗೆ ಅಧಿಪತಿಯಾಗಿರುವ ಜನರಲ್ ಬೂತ್‌ಯವರು ಈಗ್ಯೆ ಕೆಲವು ತಿಂಗಳ ಹಿಂದೆ ಇಲ್ಲಿಗೆ ಬಂದು ಮರಳಿ ಸ್ವದೇಶಕ್ಕೆ ಹೋದಮೇಲೆ ಅಲ್ಲಿ ಒಬ್ಬ ಪತ್ರಿಕಾಧಿಪರೊಡನೆ ಇಂಡ್ಯಾದೇಶದ ವೃತ್ತಾಂತವಂ ಕುರಿತು ಮಾತನಾಡುತಲಿರುವಾಗ್ಯೆ ಇಲ್ಲಿನವರ ವಿಷಯವಾಗಿ ಇದರಡಿ ಕಂಡಂತೆ ತಿಳಿಸಿದರೆಂದು ತಿಳಿದುಬರುತಿದೆ. ಹಿಂದೂ ದೇಶೀಯರು ಇಂಗ್ಲೆಂಡ್ ದೇಶಸ್ಥರಿಗಿಂತ ಅನೇಕ ವಿಷಯಗಳಲ್ಲಿ ಅಧಿಕ ಉದಾರಿಗಳು; ನಾನು ಕ್ರಿಸ್ತುಮತ ಬೋಧಕನಾಗಿದ್ದಾಗ್ಯೂ ನನ್ನನ್ನು ವಿಶೇಷ ಮರ್ಯಾದೆಯೊಡನೆ ಆದರಿಸಿ ನನ್ನ ಉಪನ್ಯಾಸಗಳೆಲ್ಲವಂ ಉತ್ಸಾಹದೊಡನೆ ಕೇಳಿದರು. ಕಾಂಗ್ರೆಸ್ ಸಭಾಧ್ಯಕ್ಷರಲ್ಲಿ ಕೆಲವರು ಸ್ವರಿಸಿ ಅವರೊಡನೆ ಪ್ರಸಂಗಿಸಿದೆನು. ಅವರು ವಿದ್ಯಾವಂತರಾಗಿಯೂ ದೇಶ ಪರಿಪಾಲನಾ ವ್ಯವಹಾರಗಳನ್ನು ಚೆನ್ನಾಗಿ ಅರಿತವರಾಗಿಯೂ ಇರುವದರಿಂದ ತಮ್ಮ ದೇಶ ಪರಿಪಾಲನಾಧಿಕಾರದಲ್ಲಿ ತಮ್ಮನ್ನು ಕೂಡ ಸೇರಿಸಿಕೊಳ್ಳಬೇಕೆಂಬದೇ ಅವರ ಅಭಿಪ್ರಾಯವಾಗಿರುತಿದೆ. ಗವರ್ನಮೆಂಟಿನವರು ಅವರ ಅಭಿಪ್ರಾಯವನ್ನು ಸುಲಭವಾಗಿ ನೆರವೇರಿಸಬಹುದು. ಹಿಂದೂಗಳು ಆಂಗ್ಲೇಯರ ಮೇಲೆ ತಿರುಗಿಬಿದ್ದು ಕಾರ್ಯಭಾಗ ಮಾಡುವರೆಂದು ಸ್ವಪ್ನದಲ್ಲಿಯೂ ಸ್ಮರಿಸಬೇಕಾದುದಿಲ್ಲವು. ನನ್ನ ಸೈನ್ಯವನ್ನು ನಿರ್ಭೀತಿಯಿಂದ ಹಿಂದೂಗಳ ವಶ ಪಡಿಸುವೆನು. ನಾನು ಮಾತ್ರವಲ್ಲವು, ನನ್ನ ಪುತ್ರಪೌತ್ರರಂ ಸಹ ಅವರ ವಶ ಪಡಿಸುವದಕ್ಕೆ ಸಂದೇಹವಿಲ್ಲವು. ಇಂಡ್ಯಾದೇಶದ ಪೈಕಿ ನಾನೆಲ್ಲೆಲ್ಲಿ ಸಂಚರಿಸಿದೆನೋ ಅಲ್ಲಿನ ಹಳ್ಳಿಗಳಲ್ಲಿ ಹಿಂದೂಗಳು ನನ್ನನ್ನು ಅತ್ಯಾದರದಿಂ ಗೌರವಿಸಿ ಉಪಚರಿಸಿದರು. ನನ್ನನ್ನು ಯಾರೂ ಸ್ವಲ್ಪವೂ ಅಗೌರವದಿಂ ಕಂಡು ವರ್ತಿಸಲಿಲ್ಲವು. ನನ್ನ ವಿಷಯವಾಗಿ ಯಾರೂ ಆಗ್ರಹ ಪಟ್ಟವರಿಲ್ಲವು. ಇಂಡಿಯಾ ದೇಶನಿವಾಸಿಗಳಾದವರು ಇಂಗ್ಲೀಷರಿಗಿಂತಲೂ ಬಹಳ ಉದಾರಿಗಳೆಂದು ನುಡಿಯಬಹುದು. ನಾವು ಇಂಗ್ಲೀಷರೆಂದು ಕರೆಯುವ ಪ್ರಜೆಗಳಲ್ಲಿ ೬,೦೦೦ ಮಂದಿಗಿಂತ ಅಧಿಕವಾಗಿ ಯಾವ ಬಗೆಗಳ ನರನು ಕೊಟ್ಟು ಟಿಕ್ಕೆಟುಗಳನ್ನು ತೆಗೆದುಕೊಂಡು ನನ್ನ ಪ್ರಸಂಗವಂ ಉಲ್ಲಾಸದೊಡನೆ ಕೇಳಿ ಆನಂದಿಸಿದ್ದು" ಎಂಬದು. ಜನರಲ್ ಬೂತ್‌ಯವರು ಈಚೆಗೆ ಇಂಗ್ಲಾಂಡಿನಲ್ಲಿ ಮಾಡಿದ ಪ್ರಸಂಗ ವಿಷಯದಲ್ಲಿ ಪ್ರಯತ್ನ ಪಡಲು ಅಲ್ಲಿ ನೆರೆದಿದ್ದ ಮೂರುಸಾವಿರ ಮಂದಿಯ ಪೈಕಿ ಮುಖ್ಯಸ್ಥರಾದ ಜನರು ಕೂಡಿ ಹಾಜರಿದ್ದ ಪ್ರಸಂಗ ಸಮಯದೊಳಗೆ ನಾಳೆ ಮಾಡಿ ಪ್ರಸಂಗಿಕರನ್ನು ನೀರ್ಧರಿಸಿಕೊಂಡು ಅವರಿಗೆ ಅವಮಾನ ಮಾಡಿದರು. ಅದರಮೇಲೆ ಅವರು ಮಹಾಶಾಂತರಾಗಿ ಸಭಾ ಸ್ಥಾನವಂ ಬಿಟ್ಟು ಹೊರಟು ಹೋದರೆಂದು ತಿಳಿಯಬರುತಿದೆ. ಸ್ವದೇಶದಲ್ಲಿದ್ದರೆ ಆಗಾಗ್ಗೆ ಜನರಲ್ ಬೂತ್‌ಯವರಿಗುಂಟಾಗುವದಲ್ಲವೇ ಅವರಿಗೆ ಇಂಡ್ಯಾದೇಶದಲ್ಲಿ ಲಭಿಸಿದ ಮಾನ ಮರ್ಯಾದೆಗಳು ಸ್ಮರಣೆಗೆ ಬಂದು ಹಿಂದೂಗಳ ಶೀಲಸ್ವಭಾವವಂ ಬಹಳವಾಗಿ ಕೊಂಡಾಡುವದಕ್ಕೆ ಅವಕಾಶ ತೆರೆದು ಪರಿಶೀಲನೆಯುಂಟಾದಂತೆ ಭಾಸವಾಗುತ್ತದೆ.—ಅ. ಪ್ರ.

ಮೈಸೂರು ಸಂಸ್ಥಾನದಲ್ಲಿ ಸುಮಾರು ೫೦ ಲಕ್ಷ ಜನರಿರುತ್ತಾರೆ. ಈ ಪೈಕಿ ಸುಮಾರು ೪ ಲಕ್ಷ ಜನಗಳು ಉದ್ಯೋಗ, ಅಧಿಕಾರ, ವ್ಯವಸಾಯ, ವಾಣಿಜ್ಯಗಳಿಂದ ಜೀವನ ಮಾಡುತ ಕೂಡಿದವರ್ರಿಗೂ ಅನ್ನ ವಸ್ತ್ರಗಳಿಗೆ ಸಮೃದ್ಧಿಯಾಗಿ ಇರುತ್ತಾರೆ. ಮಿಕ್ಕ ಜನಗಳ ಸ್ಥಿತಿಯು ಅತ್ಯಂತ ಶೋಚನೀಯವಾದದ್ದು. ಅವರುಗಳು ಕಷ್ಟಪಟ್ಟು ದುಡಿದಾಗ್ಯೂ ಕೆಲವರು ವಾರಗುತ್ತಿಗೆ ಹೊಲಗಳಿಂದ ಅಲ್ಪ ಸ್ವಲ್ಪ ಜೀವನೋಪಾಯಗಳನ್ನು ಸಂಪಾದಿಸಿಕೊಳ್ಳುತಲೂ, ಸಾಲವೆ ಹೆಚ್ಚಾದಕ್ಕೆ ಮಕ್ಕಳು ಮರಿ ಮೊದಲಾಗಿ ಸಹ ಕೂಲಿಗಳನ್ನು ಮಾಡುತಲೂ ಬಹಳ ಕಷ್ಟ ಪಡುತ್ತಾರೆ. ಕಾಫೀ ತೋಟ ಮೊದಲಾದವುಗಳಲ್ಲಿ ಕೂಲಿ ಮಾಡುತವಂತರದ್ದು ಅನ್ನ ವಸ್ತ್ರಗಳಿಗೆ ಸಾಲದೆ ದಟ್ಟಿಯಲ್ಲಿ ಗಡ್ಡೆಯಂದು ಅನೇಕ ರೋಗಗಳಿಗೆ ಗುರಿಯಾಗಿ ಪ್ರತಿ ಸಾಲಿನಲ್ಲಿಯೂ ಲಕ್ಷಾಂತರ ಜನಗಳು ಸಾಯುತ್ತಿರುವದು ಮಲೆನಾಡು ಪ್ರದೇಶದಲ್ಲಿರತಕ್ಕ ಜನರಿಗೆ ಗೊತ್ತಾಗಿರಬಹುದು. ಮೈದಾನ ಪ್ರದೇಶಗಳಲ್ಲಿಯೂ ಲಕ್ಷಾಂತರ ಜನಗಳು ಅನ್ನ ವಸ್ತ್ರಗಳಿಲ್ಲದೆ ನಾನಾವಿಧವಾದ ಆಪತ್ತುಗಳನ್ನು ಪಡುತಿರುವದು ಸರ್ಕಾರಕ್ಕೂ ವೇದ್ಯವೇ ಇದೆ. ಲಕ್ಷಾಂತರ ಜನಗಳ ಮಕ್ಕಳು ಹೊಟ್ಟೆತುಂಬ ಊಟಕ್ಕೂ, ಹೊಟ್ಟೆ ತುಂಬ ಅನ್ನಕ್ಕೂ ದಾರಿಯಿಲ್ಲದೆ ಅನೇಕ ಊರುಗಳ ಮತ್ತು ಗ್ರಾಮಗಳ ಬೀದಿಗಳಲ್ಲಿ ನಿರುದ್ಯೋಗಿಗಳಾಗಿ ಇರುವದು ಕೂಡ ಅನೇಕರಿಗೆ ತಿಳಿದಿರಬಹುದು. ಗಂಡಸರಾಗಲಿ ಹೆಂಗಸರಾಗಲಿ ಉದ್ಯೋಗವೇ ಲಕ್ಷಣಶೋಭನವಾದದ್ದು. ಸರಿಯಾದ ಉದ್ಯೋಗವಿಲ್ಲದೆ ಆಲಸ್ಯರಾಗಿ ಬೆಳೆಯತಕ್ಕವರು ಆತ್ಮಾವಲಂಬಿಗಳಾದಾರೆ? ಹಾಗೆ ಉದ್ಯೋಗವಿಲ್ಲದೆ ಬೆಳೆಯತಕ್ಕವರು ದೊಡ್ಡವರಾದಮೇಲೆ ಯಾವರೀತಿಯಲ್ಲಿ ಜೀವನ ಮಾಡುವರೋ ಅದನ್ನು ಸ್ವಲ್ಪ ಯೋಚಿಸೋಣ. ಈದ್ದರಿಂದ ಸರ್ಕಾರ ಆತ್ಮಾವಲಂಬನೆಯಿಂದ ಒದುಕಲಿ ಎಂದು ಆತ್ಮಾವಲಂಬನೆ ಮಾಡದವರ ದರ್ಶನ ಧರ್ಮವಾಗಿ ಪಾಠಶಾಲೆಗಳನ್ನೂ, ಬುದ್ಧಿಯನ್ನೂ ಕೈ ಕಾಲುಗಳನ್ನೂ ಕೊಟ್ಟು ಇದ್ದಾನೆ. ಇವುಗಳನ್ನು ಬಾಲ್ಯದಲ್ಲಿಯೇ ಯಾವರೀತಿಯಲ್ಲಿ ವ್ಯವಸಾಯ ಮಾಡಿದರೆ ನಾವು ಆತ್ಮಾವಲಂಬಿಗಳಾಗಬಹುದೋ ಆ ರೀತಿಯಲ್ಲಿ ಸರಿಯಾದ ಶಿಕ್ಷೆಯನ್ನು ಸರ್ಕಾರ ಮಾಡಬೇಕು. ಹಾಗೆ ಹೊಂದುವಂತೆ ತಕ್ಕ ಏರ್ಪಾಡುಗಳನ್ನು ತಂದೆ ತಾಯಿಗಳು ಮಾಡಬೇಕು.

ಇಂತಾ ಏರ್ಪಾಡುಗಳನ್ನು ತಂದೆ ತಾಯಿಗಳು ಮಾಡುತ್ತಾರೆಯೋ ಇಲ್ಲವೋ ಎಂಬುವ ವಿಷಯವನ್ನು ಸರ್ಕಾರದವರು ನಿಗಾ ಇಟ್ಟು ನೋಡಬೇಕು. ಹಾಗೆ ಒಂದುವೇಳೆ ಅವರು ಮಾಡದ ಇದ್ದ ಪಕ್ಷದಲ್ಲಿ ಆ ಕಾರ್ಯವನ್ನು ಸರ್ಕಾರದವರು ತಾವೇ ವಹಿಸಬೇಕು. ಸರ್ಕಾರದವರು ಇರುವದು ಯಾತಕ್ಕೋಸ್ಕರ? ಸಕಲ ಪ್ರಜೆಗಳೂ ಯಾವದಾದರೂ ಒಂದು ಉದ್ಯೋಗದಲ್ಲಿ ಆತ್ಮಾವಲಂಬನೆಯಿಂದ ಜೀವಿಸಿ ಸರ್ಕಾರದ ವಿಪಾಡುಗಳಿಗೋಸ್ಕರ ಒಂದು ಭಾಗವನ್ನು ಕೊಟ್ಟು, ಹಾಗೆ ಕೊಟ್ಟ ಭಾಗಕ್ಕೆ ಪ್ರತ್ಯುಪಕಾರವಾಗಿ ಅವಶ್ಯವಾಗತಕ್ಕ ಸೌಖ್ಯಗಳನ್ನು ಅನುಭವಿಸುವುದಕ್ಕೂ ಪ್ರವರ್ತಕರಾಗಿ ಸರ್ಕಾರದ ಅಭಿಮಾನಕ್ಕೂ ಸತ್ಪುರುಷರ ಗೌರವಕ್ಕೂ ಪಾತ್ರರಾಗಿ ಇರುವದು ಪ್ರಜೆಗಳಿಗೆ ಕರ್ತವ್ಯವಲ್ಲವೇ? ಯಾವೊ ನಿರುದ್ಯೋಗಿಗಳಾಗದಂತೆ ವ್ಯವಸಾಯ, ವಾಣಿಜ್ಯ, ಕೈಗಾರಿಕೆ ಕೆಲಸ ಮೊದಲಾದವುಗಳಿಗೆ ಉದಾರವಾದ ಏರ್ಪಾಡುಗಳನ್ನು ಎಲ್ಲೆಲ್ಲಿಯೂ ಮಾಡಿ ಉದ್ಯೋಗದಿಂದ ಜೀವಿಸುವದೇ ಗೌರವವಾದ ಜೀವನವೆಂಬ ಪ್ರತ್ಯಯವನ್ನು ಪ್ರಜೆಗಳಿಗೆ ಹುಟ್ಟಿಸಿ ಹಾಗೆ ಅವರು ಜೀವನ ಮಾಡುವದರಿಂದ ಸರ್ಕಾರಕ್ಕೆ ವಿಶೇಷ ಲಾಭವನ್ನು ಹೊಂದಿ ಲಭ್ಯವಾದ ಲಾಭವನ್ನು ಸರ್ಕಾರದ ಪ್ರತಿಷ್ಠೆಗೆ ಎಷ್ಟೋ ಅಷ್ಟನ್ನು ವಿನಿಯೋಗ ಮಾಡಿ, ಉಳಿದ್ದನ್ನು ಪ್ರಜೆಗಳು ಇನ್ನೂ ಹೆಚ್ಚಾಗಿ ಅಭಿವೃದ್ಧಿಗೆ ಬರುವಂತೆ ನಾನಾ ವಿಧ ಏರ್ಪಾಡುಗಳಿಗೋಸ್ಕರ ವಿನಿಯೋಗಿಸಿ ಪ್ರಜೆಗಳ ಹಿತಚಿಂತಕರಾಗಿರುವದು ಸರ್ಕಾರಕ್ಕೆ ಕರ್ತವ್ಯವಲ್ಲವೇ? ಅನ್ನ ವಸ್ತ್ರಗಳಿಗೆ ಕೂಡ ಇಲ್ಲದೆ ಕಂದಾಯವನ್ನು ಕೊಡತಕ್ಕ [illegible] ನೋಡದೆ ಕಂದಾಯವನ್ನು ವಸೂಲ್ ಮಾಡಿ ವಸೂಲಾದ ದ್ರವ್ಯವನ್ನು ಸರ್ಕಾರದ ಉದ್ಯೋಗಸ್ಥರಿಗೆ, ಅವರ ಕೆಲಸಕ್ಕೂ ಅವರಿಗೆ ತಕ್ಕ ಸಂಬಳಕ್ಕೂ ತಾರತಮ್ಯವೇ ಇಲ್ಲದಂತೆ ದುಂದಿನ ಸಂಬಳವನ್ನು ಕೊಡುತಲೂ ತಾವು ತಮ್ಮ ಯೋಗ್ಯತೆಯನ್ನು ವಿನಾ ತೆರೆದುಕೊಳ್ಳುತಲೂ ಪ್ರಜೆಗಳ ದಾರಿದ್ರ್ಯ ಪತನಗಕ್ಕೆ ಏರ್ಪಾಡುಗಳಲ್ಲಿ ಸಮುಚಿತವಾದ ವಿದ್ಯಾಭ್ಯಾಸಗಳನ್ನು ಕೊಡದೆಲೂ ಇರತಕ್ಕದ್ದು ಸರ್ಕಾರಕ್ಕೆ ಲಾಭಕರವಾದದ್ದೆ? [illegible] ವಾಸಸ್ಥಾನವಾದ ಗ್ರಾಮವಾಸಿಗಳು ಮತ್ತು ಅನಾಥರು ಜಾಪ ಇಟ್ಟುಕೊಂಡಿರುತ್ತಿದ್ದವರೋ ಸಾಗದೇ [illegible] ಅನಾಥರನ್ನು. ಪಡದು ಗ್ರಾಮ ಭೂಮಿಗಳನ್ನು ಸಂಪಾದಿಸಿಕೊಳ್ಳುತ, ಬಿಸಿಲಿನಲ್ಲಿ ಮನೆ ಮೊದಲಾದವುಗಳನ್ನು ಗಿರವಿ ಮಾಡಿ ಹೊಟ್ಟೆ ತುಂಬ ಅನ್ನಕ್ಕೂ ಕೂಡ ರೋಗವಿಲ್ಲದೆ [illegible] ಆಗಿ ಅನೇಕ ರೋಗಗಳಿಗೆ ಗುರಿಯಾಗಿ ನಾನಾ ವಿಧ [illegible] ಗಳನ್ನು ಅನುಭವಿಸಿ ಸರ್ವಸ್ವವನ್ನೂ [illegible] ಸಹಿಸುತ್ತಿದ್ದ ಒಬ್ಬರ ಇದ್ದರೆ ಪೈಕಿ ಸಹ ಯಾವ [illegible] ಯಾಗುತಲಿವೆ. ಅನಾಥನ್ನರಾದವರು [illegible] ನೋಡುವ ದೃಶ್ಯವನ್ನು ಸಹ [illegible] ಪಾಳೆಯದ ಸಹಿಸಿ ನಿಶ್ಚಯಾತ್ಮಕ, ದಾನಶೀಲ [illegible] ತ್ವವನ್ನಲ್ಲಿ ಅನುಭವಿಸಿ [illegible] ಕೈಗಾರಿಕೆಯಿಂದ ಅನೇಕ ಸವಿವರ ಜನಗಳನ್ನು ಒಂದು ಕಡೆ [illegible] ಸ್ವರ ಮಿತಿ ಇಲ್ಲದೆ [illegible] ದಿನವನ್ನು ಮರ್ತ್ಯರು [illegible] ನೋಡತಕ್ಕ ದಾರಿಗೆ ತಾನೇ ಸಂತೋಷ ಉಂಟು [illegible] ಇಂತಾ ಸಂದರ್ಭಗಳಲ್ಲಿ ಸರ್ಕಾರದವರು ತಮ್ಮ ಕರ್ತವ್ಯವನ್ನು ಗಮನಿಸ ಬೇಕು. ಎಲ್ಲೆಲ್ಲಿಯೂ ಸಣ್ಣ ಗ್ರಾಮಗಳನ್ನು ಬಿಟ್ಟು ಸಮುದಾಯಗಳನ್ನು ಅವಲಂಬಿಸದೆ ಇರತಕ್ಕ ಜನಗಳನ್ನು ಬಲಾತ್ಕಾರವಾಗಿ ಕೃಷಿ, ಕೈಗಾರಿಕೆ ಕೆಲಸಗಳಲ್ಲಿ ಪ್ರವರ್ತಿಸುವಂತೆ ಮಾಡಿ ಅವರ ಲಾಭಗಳನ್ನು ಖಚರ್ ಜೀತ ಆ ಜನಗಳಿಗೆ ಸಲ್ಲುವಂತೆ ಏರ್ಪಾಡು ಮಾಡಿಸುತ ಬಂದರೆ ಸರ್ಕಾರಕ್ಕೆ ಕೀರ್ತಿಯೂ, ಪ್ರಜೆಗಳಿಗೆ ಆತ್ಮಾವಲಂಬನೆಯೂ ಉಂಟಾದೀತು. ಈ ಸಂಸ್ಥಾನದಲ್ಲಿ ಒಂದೊಂದು ಕೋಟಿ ರೂಪಾಯಿನ ವರಮಾನ ಉತ್ಪತ್ತಿಯಾಗುತ್ತದೆ. ಈಗ ೪—೫ ವರುಷಗಳಿಂದ ಉತ್ಪತ್ತಿಯು ಕ್ರಮ ಕ್ರಮವಾಗಿ ಜಾಸ್ತಿಯಾಗುತಲೇ ಇದೆ. ಕೋಸಲ ಕೇಶಿ ಷರಾಬು ಜಾಬುಗಳಲ್ಲಿ ಉತ್ಪತ್ತಿಯು ವಿಶೇಷವಾಗಿ ಜಾಸ್ತಿಯಾಯಿತು. ಇದರ ಕಾರಣವನ್ನು ನಾವು ಸಾವಕಾಶವಾಗಿ ಬರೆಯುತ್ತೇವೆ. ಸರ್ಕಾರದವರು ಜಾಸ್ತಿಯಾಗತಕ್ಕ ವರಮಾನದಲ್ಲಿ ಸೇಕಡ ೫೦ ರಷ್ಟು ವರ್ಷಂಪ್ರತಿ ಕ್ರಮವಾಗಿಯೂ ಜನಗಳಿಗೆ ಆತ್ಮಾವಲಂಬನೆ ಉಂಟಾಗತಕ್ಕ ಕೃಷಿ ಕೈಗಾರಿಕೆ ಕೆಲಸಗಳ ಅಭಿವೃದ್ಧಿಗೋಸ್ಕರ ವಾಗಿಯೂ ನಿಯಮಿಸಿ ಅವುಗಳಿಗೆ ತಕ್ಕ ಏರ್ಪಾಡುಗಳನ್ನು ಪ್ರತಿ ಒಂದು ಗ್ರಾಮದಲ್ಲಿಯೂ ನಡೆಯುವಂತೆ ಮಾಡಿಸಿ ಪ್ರಜೆಗಳು ದುರ್ವ್ಯಸನಗಳಿಂದ ಪರಸ್ಪರ ದ್ವೇಷವನ್ನು ಮಾಡುವದಕ್ಕೆ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳಿಗೆ ಹೋಗಿ ಕೆಟ್ಟು ಹೋಗದಂತೆ, ಸಕಾಲದಲ್ಲಿ ದ್ವಿಜ ಮೊದಲಾದವುಗಳನ್ನು ಮಾಡಿಸಿ ಸಮಾಜದಲ್ಲಿ ಉಂಟಾಗತಕ್ಕ ಅನರ್ಥ ಪರಂಪರೆಗಳನ್ನು ತಪ್ಪಿಸುವದಕ್ಕೋಸ್ಕರ ಎಲ್ಲಾ ಗ್ರಾಮಗಳಲ್ಲಿಯೂ ಪಟ್ಟಣಗಳಲ್ಲಿಯೂ, ಪಾಪ ಭೀರುಗಳಾಗಿಯೂ, ದೇಶಾಭಿಮಾನಿಗಳಾಗಿಯೂ, ಗೌರವಸ್ಥರಾಗಿಯೂ ಇರತಕ್ಕವರನ್ನು ಸೇರಿಸಿ ಸಭೆಯೊಂದನ್ನು ಮಾಡಿ ಆದರಿಂದ ಜನಗಳು ಅನರ್ಥಕ್ಕೆ ಭಾಗಿಗಳಾಗದಂತೆ ಮಾಡಿಸುತ ಬಂದರೆ ಸರ್ಕಾರಕ್ಕೆ ಉತ್ಪತ್ತಿ ಇನ್ನೂ ಹೆಚ್ಚುವದಲ್ಲದೆ ಪ್ರಜೆಗಳು ಕೂಡ ವಿಶೇಷ ಸೌಖ್ಯದಿಂದಲೂ, ಕೃತಜ್ಞತೆಯಿಂದಲೂ, ರಾಜಭಕ್ತಿಯಿಂದಲೂ ಬಂದು ಸರ್ಕಾರಕ್ಕೆ ಕೀರ್ತಿಯನ್ನು ತರುವರು.—ವೃ. ಪ.

☞ BANGALORE.—Printed and published at the KARNATAKA PRESS, No. 40, Hospital Road, Pettah.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿದಪ್ರವೃತ್ತ್ಯುಪಗಮಾರ್ಹ್ಯಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಶೋಭಿತಾ। ವ್ಯಗಾಂಕಹಿತವಾಸರೆಸಿಹಿತಮುದ್ರಣಾಸಜ್ಜ್ನಸ್ಯರ್ದ್ಧಿಕಾಸುವರಿಭೂಷಿತಾದಕಶಿವಾನಸಂಸುಮುದಃ

Vol. XIX] BANGALORE:—MONDAY, MAY 9, 1892. [No. 19.

ಸಂಪುಟ ೧೯.] ಬೆಂಗಳೂರು:—ಸ್ ೧೮೯೨ ನೇ ಇಸವಿ ಮೇ ೯ ನೇ ತಾರೀಖ್ ಸೋಮವಾರ. [ಸಂಚಿಕೆ ೧೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಪೋಲ್ ರಸ್ತೆ	ಸ್ಥಳದವರಿಗೆ ಹೊರಗಿನವರಿಗೆ.	ಅಂಚೆಖರ್ಚು ಸಹಿತ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸದಿರುವವರಿಗೆ ಮುಂದಿನ ಅಂಕ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಿಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

ಮೊದಲನೆಯದಾಗಿ ಪಂಕ್ತಿ ಒಂದಕ್ಕೆ	೦—೨—೦
ಎರಡನೆಯದಾಗಿ ಪಂಕ್ತಿ ಒಂದಕ್ಕೆ	೦—೧—೦

ಸರಾ—ಎರಡಾವರ್ತಿಗಿಂತ ಹೆಚ್ಚಾಗಿ ಎಷ್ಟು ಕಡವೆ ಕಾಬೂಜ್ ಮಾಡಿದಾಗ್ಯೂ ಪಂಕ್ತಿ ಒಂದಕ್ಕೆ ೧ ಆಣೆಯಂತೆ [illegible] ಕೊಡತಕ್ಕದ್ದು. ಈ ಪತ್ರಿಕೆಯಲ್ಲಿ ಖಾಯಮ್ ಆಗಿ [illegible] ಪ್ರಕಟನೆಗಳ ಕಳುಹಿಸುವವರು [illegible] ಕಾಂಟ್ರಾಕ್ಟ್ ಮಾಡಿಕೊಳ್ಳಬಹುದು [illegible] ಇಲ್ಲದಿದ್ದಲ್ಲಿ ಅವರು [illegible] ಪ್ರಕಟಿಸುವ [illegible] ಎಷ್ಟು ಸಾರಿ ಪ್ರಕಟಿಸಲ್ಪಡಬೇಕೆಂಬುದು [illegible] ಕಳುಹಿಸತಕ್ಕದ್ದು. ಪ್ರಕಟನೆಗಳನ್ನು [illegible] ಕಳುಹಿಸಬೇಕು. ಈ ಪತ್ರಿಕೆಗೆ ಕಳುಹಿಸ [illegible] ಕಾಗದಗಳು [illegible] ಕ್ರಮವಾಗಿ [illegible] ಪ್ರಕಟಿಸಲಾರೆವು. [illegible]

ADVERTISEMENTS.

NOTICE.

VAIDYASARA SANGRAHA

A TREATISE ON PRINCIPLES OF HINDU MEDICINE

☞ Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು [illegible] ಬೇಕಾದವರು [illegible] ರವಾನೆ ಮಾಡತಕ್ಕವರ [illegible] ಕಳುಹಿಸಲ್ಪಡುವದು. [illegible] ಸಿಗಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. ವೆಂಕಟಾಚಾರ್,

ಬೆಂಗಳೂರ್. ಪೇಟೆ [illegible] ನೆಂಬರ್.

ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತವೆ. [illegible]

ನೋಟಿಸ್.

ಗಣೇಶ ರಾಮಚಂದ್ರ ಕರ್ಣಿ ಮತ್ತು ಕಂಪೆನಿ. ಕಮಿಷನ್ ಏಜೆಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ರಕ್ತ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, [illegible] ವಾಚುಗಳು, [illegible] ಕಾಗದಗಳು, [illegible] ಕನ್ನಡಕಗಳು, [illegible] ಆಫೀಸ್ [illegible] ಅತ್ತರುಗಳು, [illegible] ಪಾತ್ರೆಗಳು, ಕಾಸು, [illegible] ವಸ್ತ್ರ ಮುಂತಾದ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಮೇಲೆ ಜವಾಬ್ ದೊರೆಯುವದು.

ವಿಳಾಸ,—ಗಣೇಶ ರಾಮಚಂದ್ರ ಕರ್ಣಿ,
ಮತ್ತು ಕಂಪೆನಿ, ಕಮಿಷನ್ ಏಜೆಂಟ್ಸ್
ದಾದರ್ ದ್ವಾರ, ಮಾಹೀಮ್ ಪೋಸ್ಟ್, ಮುಂಬಯಿ.

THE BANGALORE SREENIVASA MANDIRAM.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ದವಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ:—

೧೮೯೨ ನೇ ಇಸವಿ ಮೇ ೧ ನೇ ತಾರೀಖ್ ಮೊದಲು ಮೇ ೭ ನೇ ತಾರೀಖ್ ವರೆಗೆ.—

ಅಕ್ಕಿ ಕಳುಹಿಸಿದ ಗೃಹಸ್ಥರ ಸಂಖ್ಯೆ	..	97
ಜವಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	41
ಹಿಂದಿನ ವಾರದ ಶಿಲ್ಕು ಸೇರು	...	23
ಜುಮ್ಲಾ	...	64
ಆಯಾ ಸಮಯಗಳಿಗಾಗಿ ಖರ್ಚಾದ ಸೇರು	...	29½
ಶಿಲ್ಕು ಉಳಿದ ಅಕ್ಕಿ ಸೇರು	...	18½
ಜಾತು ಬಾಕಿ	...	25

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್,

ಅನಾಥರು	...	7
ಬಿ ಕ್ಲಾಸ ವಿದ್ಯಾರ್ಥಿ	...	2
ಬಾಲಾ ಇರತಕ್ಕ ವಿದ್ಯಾರ್ಥಿಗಳು	..	0
ಕಷ್ಟ ಕೊಡತಕ್ಕ ಆರೋಗ್ಯ, ಸಾಧು ರಕ ವಸ್ತ್ರ ಸಂಖ್ಯೆ		16
ಪ್ರಯಾಣಸ್ಥರು	...	12
ಜುಮ್ಲಾ	...	37

THE MONEY MARKET.

ಮದರಾಸ್, ಶನಿವಾರ, ತಾರೀಖ್ 7 ನೇ ಮೇ 1892.

ನೂರಕ್ಕೆ 4ರೂ. ಬಡ್ಡಿ ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 108ರಿಂದ 108-6ರವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 930 ಲಾಗಾಯತು 935ವರೆಗೆ,

ಕಮರ್ಷಿಯಲ್ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರುಗಳು, (100) ಬಾಬತು 165 ರಿಂದ 170 ವರೆಗೆ,

ಸವರನ್‌ಗಳು, 15—15—0

ಬ್ಯಾಂಕ್ ಬಿಲ್ಲುಗಳು ಮಾನಿ ವಸ್ತ್ರದ ಮಾಮೂಲುಗಳು, ರೂಪಾಯಿಗೆ 6 ತಿಂಗಳ ಮಾಮೂಲಿಗೆ, 1s 2¾ d.

ಇದೇ 4 ತಿಂಗಳ ಮಾಮೂಲಿಗೆ, 1s 3 5/16 d

ತಾರೀಖ್ ಕೇಬಲ್, 1s. 3 7/32 d.

ನೋಟಿಸ್.

ಚಂದಾದಾರರಿಗೆ.

ಇದರಿಂದ ಪ್ರಕಟಪಡಿಸುವದೇನಂದರೆ:—

ಈ ಸಂವತ್ಸರದಲ್ಲಿ ಇದುವರೆವಿಗೆ ನಾಲ್ಕು ತಿಂಗಳುಗಳು ಕಳೆದು ಐದನೆಯ ತಿಂಗಳು ಪ್ರಾರಂಭವಾಯಿತು, ಇನ್ನಾದರೂ ಸಾವಕಾಶಮಾಡದೆ ನಮ್ಮ ಚಂದಾದಾರರೆಲ್ಲರು ಅವರವರ ಚಂದಾ ಮೊಬಲಗನ್ನು ಕೂಡಲೇ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

೨—೫—೯೨. ಪ್ರೊಪ್ರೈಟರ್.

ನೋಟಿಸ್.

ಡಿಸ್ಟಿಲರಿ ಕೆಲಸವನ್ನು ಕಲಿತುಕೊಳ್ಳುವದಕ್ಕೆ ಬುದ್ಧಿವಂತನಾದ ಮತ್ತು ಇಪ್ಪತ್ತು ವರ್ಷ ವಯಸ್ಸಿನ ಒಬ್ಬನು ಬೇಕಾಗಿರುತ್ತದೆ. ಕಚ್ಚೇರಿ ಕೆಲಸದಲ್ಲೂ ಜೋಡಣೆ ಕೆಲಸದಲ್ಲೂ ಸ್ವಲ್ಪ ಅನುಭವವುಳ್ಳವನು ಅಂಗೀಕರಿಸಲ್ಪಡುವನು. ಚತುರತೆಯುಳ್ಳವನಾಗಿಯೂ ಇಂಗ್ಲಿಷ್ ಮತ್ತು ಕನ್ನಡ ಭಾಷೆ ತಿಳಿದವನಾಗಿಯೂ ಇರಬೇಕು.

ಯೋಗ್ಯತಾ ಪತ್ರಿಕೆಗಳೊಡನೆ ಬೆಂಗಳೂರಲ್ಲಿರುವ ಮೆಸ್ಸರ್ಸ್ ಮ್ಯಾಕ್ ಕಂಪೆನಿಯ ಏಜಂಟರಿಗೆ ಸ್ವಂತ ಅಕ್ಷರದಲ್ಲಿ ಬರೆದುಕೊಳ್ಳಬೇಕು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 9, 1892.

೧೮೯೨ ನೇ ಇಸವಿ ಮೇ ತಾ॥ ೯ ನೇ ಸೋಮವಾರ

MUTT AGENTS.

ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ।
ತಮೇಕಂ ದುರ್ಲಭಂ ಮನ್ಯೇ ಶಿಷ್ಯಹೃತ್ತಾಪಹಾರಕಂ॥

ಯೆಂಬಂತೆ ಶಿಷ್ಯವಿತ್ತಾಪಹಾರಕರಾದ ಗುರುಗಳಂ ಪ್ರಾಯಶಃ ಈಗಿನ ಕಾಲದಲ್ಲಿ ಅನೇಕರಂ ನಾವು ಸಂಪಾದಿಸಿಕೊಳ್ಳಬಹುದು. ಪರಂತು ಶಿಷ್ಯಹೃತ್ತಾಪಹಾರಕನಾದ ಆಚಾರ್ಯನೊಬ್ಬನು ನೋಡುವದು ಬಹಳ ಪ್ರಯಾಸವಾಗಿರುತ್ತದೆ. ಇಂತಾ ದೌರ್ಭಾಗ್ಯದಿಂದ ಗುರುಶಿಷ್ಯಭಾವವು ಕುದುಂಗ ನಶಿಸಿ ಅವರಿಬ್ಬರಲ್ಲಿ ಪರಸ್ಪರ ಪ್ರೀತಿ ಗೌರವಗಳಿಲ್ಲದೆ ಹೋಗಿವೆ. ಇದರಿಂದ ಅವರಲ್ಲಿ ಒಬ್ಬರಿಗೆ ಮತ್ತೊಬ್ಬರ ಭೀತಿಯು ಕಡಿಮೆಯಾಗಿ ಅವರವರ ಮಟ್ಟಿಗೆ ಅವರವರು ಮನ ಸ್ವಧರ್ಮವು ಸಹ ತ್ಯಜಿಸಿ ಉಚ್ಛೃಂಖಲವಾಗಿ ವರ್ತಿಸುವಂತೇರ್ಪಟ್ಟಿದೆ. ಗುರು ಮಠಗಳ ತಾತ್ಕಾಲಿಕ ಸ್ಥಿತಿಯಿಂದ ಅವುಗಳ ಗೌರವವು ದಿನೇ ದಿನೇ ಹ್ರಾಸವನ್ನೈದುತ ಬರುತಲಿದೆ. ಇದು ವೃದ್ಧಿಪಡಿಸಿ ಮಠಗಳಂ ನಿರ್ವಾಹ ಗೊಳಿಸಲಿಕ್ಕೆ ಅವರ ಕಡೆಯವರಾದ ಮಠಮುದ್ರೆಯವರು * ಬದ್ಧಕಂಕಣರಾಗಿ ಕಾದಿರುತಾರೆ. ಇವರು ಧನಲೋಭದಿಂ ಮಾಡುವ ಮತ್ತು ಮಾಡಿಸುವ ಅಕೃತ್ಯಗಳು ಬ್ರಾಹ್ಮಣ್ಯ ವಿನಾಶಕವಾಗಿಯೂ, ಶಾಸ್ತ್ರನಿಷಿದ್ಧವಾದವಾಗಿಯೂ ಲೋಕವಿರುದ್ಧವಾದವಾಗಿಯೂ ಇರುತಿವೆ. ಇಂತಾ ಅಕೃತ್ಯಗಳನ್ನು ಮಾಡತಕ್ಕ ಘಾತುಕರಂ ಶಿಕ್ಷಿಸಲಿಕ್ಕೆ ಮಠಾಧಿಪತಿಗಳಿಗೆ ಅವಕಾಶವಿರುವದಿಲ್ಲವೆ. ಯೇತಕ್ಕಂದರೆ, ಕತಿವಿಧ ದುಷ್ಕೃತ್ಯಗಳಿಂದ ಆರ್ಜಿಸುವ ದ್ರವ್ಯಗಳಿಗೆ ಅವರೂ ಭಾಗ ಭಾಗಿಗಳಾಗುವದರಿಂದ “ಅದೃಷ್ಟಮೇವ ಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ” ಯೆಂಬದಾಗಿ ಅವರ ದುಷ್ಕೃತ್ಯಗಳ ಫಲಾನುಭವಕ್ಕೆ ಸದರೀ ಮಠಾಧಿಪತಿಗಳು ಕೂಡ ಪಾತ್ರರಾಗದೆ ಹೋಗಲಾರರು. ಈಗ್ಗೆ ಕೆಲವು ತಿಂಗಳ ಹಿಂದೆ ಮಾನಿತರಾದ ಒಬ್ಬ ದೊಡ್ಡಮನುಷ್ಯರು ದೇಶಾಂತರಗತರಾದ ಕಾಲದಲ್ಲಿ ಅವರು ಶಿಷ್ಟರ ಕಟ್ಟೆಯಲ್ಲಿರುವ ಮಠಮುದ್ರೆಯವರು ಕರ್ಮನಷ್ಟಕರಗಳಾದ ಅಸದ್ವ್ಯವಹಾರಗಳಂ ಮಾಡಿಸಿ, ಆಶೌಚದಲ್ಲಿದ್ದವರಂ ದ್ರವ್ಯಾಶೆಯಿಂದ ಅಪರಕಾರ್ಯಗಳಲ್ಲಿ ಅನ್ವಯಿಸಿದರೆಂಬ ಅಂಶವು ಪ್ರಸಿದ್ಧವಾಗಿದೆಯಷ್ಟೆ. ಇಂತಾ ಘಾತುಕ ಕೃತ್ಯಗಳಂ ಮಾಡಿದವರಿಗೆ ಶ್ರೀಮಠದವರು ಬಹಿಷ್ಕಾರ ಹಾಕಿ ಬೇರೊಬ್ಬರನ್ನು ನಿಯಮಿಸಿದರೆಂದು ಕೇಳುತ್ತೇವೆ. ಹಾಗೆ ನಿಯಮಿಸಿದವರ ಯೋಗ್ಯತೆಯಂ ವಿಚಾರಿಸಿದರೆ ಅದು ಸಹ ಬಹಳ ವಿಷಾದಿಸತಕ್ಕದ್ದಾಗಿರುತಿದೆ. ಹೀಗೆ ಮಾಡುವದರಿಂದ ಘಟಿಸುವದು ಕಡ್ಮೆ ಕಡೆ ಮಠಮುದ್ರೆಯವರು ಮಾಡುವ ಅಕೃತ್ಯಗಳಿಗೆಲ್ಲ ಪರಿಹಾರವಾಗಿ ಹೋಯಿತೆಂದು ಪ್ರಜೆಗಳು ಧಾರಾಳವಾಗಿ ಹೇಳಿಕೊಳ್ಳಲಿಕ್ಕೆ ಬೇಕಾದ ಅವಕಾಶ ಪ್ರಾಪ್ತವಾಗಿರುತಿದೆ. ಈಚೆಗೆ ಅಂದರೆ ಗತವಾರದಲ್ಲಿ ಮತ್ತೊಂದು ಕೇಳಲು ಅನುಚಿತವಾದ ವಿಷಯವು ಜರಗಿದಂತೆ ನಗರಕೋಟೆ ಧಕನ ಮೂಲಕ ನಮ್ಮ ಕಿವಿಗೆ ಬಿದ್ದಿರುತಿದೆ. ಅದೇನಂದರೆ—ಮಠಮುದ್ರೆಯವರ ಆಶ್ರಿತರಾದ ಯಾರದ ವಿತಂತು ಜ್ಯೇಷ್ಠಸಹೋದರಿಯೊಬ್ಬಳೆಯು ಈಚೆಗೆ ಮೃತಪಟ್ಟಂತೆಯೂ, ಆಕೆಯ ಕರ್ಮಗಳ ಅವಳ ಸಹೋದರರಿಂದ ನಡೆದ ಪ್ರಾರಂಭಿಸಲ್ಪಟ್ಟ ೧೦–೧೧–೧೨ ನೇ ದಿನಗಳಲ್ಲಿ ಕ್ರಮವಾಗಿ ವೃಷೋತ್ಸರ್ಜನ, ಏಕೋದ್ದಿಷ್ಟ, ಸಪಿಂಡ್ಯಾದಿಗಳು ಜರಗಿಸಲ್ಪಟ್ಟವೆಂತಲೂ, ಏಕಾದಶ ಹನ್ನೆರಡನೆಯ ದಿನ ರಾತ್ರಿ ಕರ್ತನಿಗೂ ಅವನ ಬಂಧುಗಳಿಗೂ ಜಾತಾಶೌಚ ವೊಂದು ಪ್ರಾಪ್ತವಾಯಿತೆಂತಲೂ, ಈ ಆಶೌಚದೊಡನೆ ಸಪಿಂಡೀಕರಣ ಶ್ರಾದ್ಧವು ಮಾಡಿದರೆಂತಲೂ ತಿಳಿಯ ಬರುತಿದೆ. ಹನ್ನೆರಡನೆಯ ದಿನದೊಳಗಾಗಿ ವಿವಾಹಾದಿಗಳು ಪ್ರಾಪ್ತವಾದರೂ, ಕರ್ತನ ಭಾರ್ಯೆ ರಜಸ್ವಲೆಯಾಗಿದ್ದಾಗ್ಯೂ ಸಪಿಂಡೀಕರಣವನ್ನು ನಿಲ್ಲಿಸಿ ವರ್ಷಾಂತದಲ್ಲಿ ಮಾಡಬೇಕೆಂಬದಾಗಿ ಹೇಮಾದ್ರಿ ವೈದ್ಯನಾಥೀಯರು ಮೊದಲಾದವರು ವಿಧಿಸಿದ್ದಾರೆ. ಅದೇ ರೀತಿ ಅನೇಕ ಕಡೆಗಳಲ್ಲಿ ನಡೆಯುತಿವೆ. ಆದರೆ ಕಲ್ಯಾಣಪುರ ನಗರಸ್ಥರಾದ ಶಿಷ್ಟರು ಶ್ರೀಮಧ್ವರು ಆಗಮೋದ್ಘಾಟಿಸಿ ತಪ್ಪು ಆಚರ ಣೆಯಲ್ಲಿ ತರಲಾರಂಭಿಸಿರುವ ಆಚಾರದಂತ ವೊಂದರಲ್ಲಿ ವಿನಾ ಮತ್ತಲ್ಲಿಯೂ ಯಾವ ಜಾತಿಗಳಲ್ಲಿಯೂ ಆಶೌಚದೊಡನೆ ಶ್ರಾದ್ಧವು ಮಾಡಬಹುದೆಂತಲೂ ಆಶೌಚವಿರುವದನ್ನ ಆರ್ಯ ಪದ್ಧತಿಯಲ್ಲಿಡಬಹುದೆಂತಲೂ ವಿಧಿಸಿರುವದಿಲ್ಲವು. ಈ ಕ್ರಮವನ್ನನುಸರಿಸಿ ಮಾಡಲ್ಪಟ್ಟ ಕರ್ಮಗಳು ದುಷ್ಕರ್ಮಗಳೇ ಹೊರತು ಬ್ರಾಹ್ಮಣ್ಯಾಚಾರಕ್ಕ

* ಆಯಾ ಪ್ರದೇಶಗಳಲ್ಲಿ ಮಠಗಳ ತರಫ್ ಮೊಕದಮೆ ನಡೆಸುವ [illegible] ಮಠಮುದ್ರೆಯವರೆಂದಾಗಿಯೂ [illegible] ಕರೆಯುತ್ತಾರೆ. ಪರಂತು ನಾವು ಹೀಗೆ ಹೇಳುವದು [illegible] ಉದ್ಯೋಗ [illegible] ಸರ್ವತ್ರ.

ಣವಾಗಿವಿಲ್ಲವು. ಈ ಕಾಲದಲ್ಲಿ ಕಲಿ ಮಹಿಮೆ ಯಿಂದವರ್ಯಾಯಃ ವೇದೋಕ್ತ ಶ್ರೌತ ಸ್ಮಾರ್ತ ಕರ್ಮಗಳೆಲ್ಲವನ್ನು ಬಿಟ್ಟು ಬಹುತೇಕ ಸಂಧ್ಯಾವಂದನಾದಿ ನಿತ್ಯಕರ್ಮಗಳನ್ನು ಕೇವಲ ಶಿಖಾ ಯಜ್ಞೋಪವೀತ ತಿಲಕ ಧಾರಣಾದಿಗಳಿಂದ ಲೇ ಬ್ರಾಹ್ಮಣ್ಯವು ಪರ್ಯವಸಾನವನ್ನು ಹೊಂದಿದೆಯು ಲ್ಲದೆ ಮಾತಾಪಿತೃಗಳು ಶ್ರದ್ಧೆಯಿಂದ ಅಗ್ನಿಷ್ಟೋಮ ಅಪ್ತೋರ್ಯಾಮಗಳದ ಯಾಗಾದಿಗಳಿಗಿಂತ ಅತಿ ಶುಭವಾಗಿ ಭಾವಿಸಲ್ಪಡುತ್ತಲಿದೆ. ತತ್ರಾಪಿ ಬ್ರಾಹ್ಮಣ್ಯಸೂಚಕಗಳಾದ ಶಿಖಾಯಜ್ಞೋಪವೀತಗಳನ್ನು ಸಹ ರೂಪಾಂತರಗಳನ್ನು ಕೃಪೆ ಪ್ರಯಾಸದಿಂ ಕಂಡುಕೊಳ್ಳಬೇಕಾಗಿದೆ. ಶಿಖೆಯು ಭಾವನಾ ವೈಲಕ್ಷಣ್ಯವಂ ಹೊಂದಿ ಸೌಂದರ್ಯಪ್ರದರ್ಶನಾರ್ಥ ಕತ್ತರಿಸಲ್ಪಟ್ಟು ಅನೇಕರಲ್ಲಿ ಅದು ಅದೃಶ್ಯವಾಯಿತು. ಯಜ್ಞೋಪವೀತವೆಂಬದು ಅಂತರಾಂತರಗಳಲ್ಲಿ ಅಂಗಿಯ ಅನೇಕ ಕೋಟುಗಳೊಳಗೆ ಅಚ್ಛಾದಿತವಾಗುವದರಿಂದ ಅದೂ ಇದ್ದರೂ ಯಿಲ್ಲದಂತೆಯೇ ಭಾವಿಸಬೇಕಾಗಿದೆ. ಪುಂಡ್ರಧಾರಣವಂತೂ ಕಣ್ಣಲ್ಲಿಯೂ ಸೌಂದರ್ಯ ಸೂಚಕವೆಂಬ ಅಭಿಪ್ರಾಯವು ತಲೆದೋರಲು ಅದು ದೃಶ್ಯಾದೃಶ್ಯವಾಗಿ ಯೇರ್ಪಟ್ಟಿತು. ಗತ್ಯಾಗತ್ಯಾ ಮಾತಾಪಿತೃಗಳ ಸಾಂವತ್ಸರಿಕ ಶ್ರಾದ್ಧವೊಂದು ವ್ಯವಹಾರಕ್ಕಾಗಿ ಉಳಿದಿದೆ. ಅದು ಸಹ ಕೆಲವು ಕಡೆಗಳಲ್ಲಿ ದುಷ್ಟರವಾಗಿದೆ. ಈ ಕಾಲದಲ್ಲಿ ಜನಗಳಿಗೆ ಇಷ್ಟ ಪರಕರ್ಮಶ್ರದ್ಧೆಯುಂಟಾಗಿರುವಾಗ ಅವರಿಗೆ ತಕ್ಕ ಅಲ್ಪಸ್ವಲ್ಪ ಭಕ್ತಿ ವಿಶ್ವಾಸಗಳಂ ಸಹ ನಿರ್ಮೂಲವಾಗಿಸಲಿಕ್ಕೆ ಕರ್ಮಭ್ರಷ್ಟರಾದ ಈ ಮಠಮುದ್ರೆಯವರು ಪ್ರಬಲಿಸಿ ಇಂತಾ ಅಕೃತ್ಯಗಳನ್ನು ಸ್ವಲ್ಪವೂ ಶಂಕೆಯಿಲ್ಲದೆ ಮಾಡುತ್ತ ಬರುವದು ಮಠಾಧಿಪತಿಗಳು ತಿಳಿದುತಿಳಿಯದಂತಿರುವುದೂ, ಕದಾಚಿತ್ ತಿಳಿದರೆ ಅದಕ್ಕೆ ತಕ್ಕ ಪ್ರತೀಕಾರವಂ ಕೂಡಲೇ ಮಾಡದೆ ಔದಾಸೀನ್ಯವಂ ವ್ಯಕ್ತಪಡಿಸುವದೂ, ವಿಷಯ ವಿಚಾರ ವಿಹೀನರಾದ ಲೌಕಿಕರು ಅವರಿಗೆ ಬಹಿಷ್ಕಾರವಂ ಹಾಕಿಸಿ ಪತ್ತರಿಸದೆ ಅವರು ಹೇಳುವಂತೆಲ್ಲ ಕುಣಿಯುತ್ತ ಸ್ವಯಂಪತಿತರಾಗುವದೂ ಬಹಳ ವಿಷಾದಕರವಾಗಿದೆ. ಐಹಿಕವಿಷಯದಲ್ಲಿ ಅರಸನೂ ಆಮುಷ್ಮಿಕ ವಿಷಯದಲ್ಲಿ ಆಚಾರ್ಯನೂ ಪ್ರಜೆಗಳಿಂದ ನಿಯಮಿತರಾಗಿ ಗೌರವಿಸಲ್ಪಡತಕ್ಕವರಾದುದರಿಂದ ಅವರು ಅಧರ್ಮ ಪ್ರವರ್ತಕರಾಗುವ ಸಂದರ್ಭಗಳಲ್ಲಿ ಅವರ ಜನಗಳು ನಿವೃತ್ತಿಸಲಿಕ್ಕೆ ಸಂಪೂರ್ಣ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ದುಶ್ಚರಿತ್ರನಾದ ಶಿಷ್ಯರಿಗೆ ಬಹಿಷ್ಕಾರ ಹಾಕತಕ್ಕ ಅಧಿಕಾರವು ಗುರುವಿಗೆ ಹ್ಯಾಗೆ ಯೋಗ್ಯರೀತಿಯಿಂದುಂಟಾಗಿದೆಯೋ ಅದೇರೀತಿ ಶಿಷ್ಯರು ಸಹ ಆಚಾರ್ಯರ ವಿಷಯದಲ್ಲಿ ವರ್ತಿಸಲಿಕ್ಕೆ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ. ಹೀಗಿರುವಲ್ಲಿ ಮಠಮುದ್ರೆಯವರ ವಿಷಯವಂ ಕುರಿತು ನಾವು ವಿಶೇಷ ತಿಳಿಸಬೇಕಾದುದೇ ಇಲ್ಲವು. ಯಾವಾಗ ಮಠದಿಂ ನಿಯಮಿತರಾದವರು ಯೋಗ್ಯರಾಗಿಯೂ ಪಾಪಭೀರುಗಳಾಗಿಯೂ ಇರುವದಿಲ್ಲವೋ ಆಗ ಊರಿನ ಮಹಾಜನಗಳೆಲ್ಲರು ಒಗ್ಗಟ್ಟಾಗಿ ಸೇರಿ ಅವರಂ ನಿವೃತ್ತಿಸಿ ತೊರದು ಬಿಟ್ಟರೆ ಇಂತಾ ಅನರ್ಥಗಳು ಪ್ರಾಪ್ತವಾಗಲಾರವು. ಇನ್ನು ಮುಂದೆ ಈ ವಿಷಯದಲ್ಲಿ ಅವರವರೇ ತಕ್ಕ ಯೋಚನೆಗಳಂ ಮಾಡಿಕೊಂಡು ಜಾಗರೂಕರಾಗಿರಬೇಕೆಂದು ಕೋರುತ್ತೇವೆ.

REPORT ON THE ADMINISTRATION OF TRAVANCORE.

ತಿರುವಾಂಕೂರ್ ಸಂಸ್ಥಾನಕ್ಕೆ ಸೇರಿದ ರೆವಿನ್ಯೂ, ಸ್ಲೇಟಿವ್, ಮಿಲಿಟರಿ, ಪೋಲೀಸ್ ಇಲಾಖೆಗಳ ಅತಳಿತಗಳನ್ನು ಸಂಗ್ರಹಿಸಿ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಸದರೀ ಸಂಸ್ಥಾನದ ನಗದೀ ಯಾತ್ ಜಮಾಖರ್ಚು ಲೆಕ್ಕಗಳ ಗೋಷ್ವಾರೆಯನ್ನಿದರಡಿ ಪ್ರಕಟಿಸುತ್ತೇವೆನೆಂದರೆ.—

ಗತ ಸಂವತ್ಸರದಲ್ಲಿ ಸಂಸ್ಥಾನದ ಒಟ್ಟು ಹುಟ್ಟುವಳಿಯು ೭೯,೫೮,೮೪೦ ರೂಪಾಯಿಗಳು. ಇವುಗಳ ಜಮಾ ತಪಸೀಲ್ ಹ್ಯಾಗಂದರೆ.—

ಲ್ಯಾಂಡ್ ರೆವಿನ್ಯೂ ..	೧೯,೮೯,೧೫೯
ನಮ್ಮಕ್ .	೧೯,೦೯,೮೭೦
ಸ್ಟಾಂಪ್‌ಗಳು	೭,೮೫,೨೮೫
ಅಬಕಾರಿ ಮತ್ತು ಅಫೀಂ ...	೪,೬೫,೯೮೩
ಕಸ್ಟಂಸ್ ..	೫,೮೩,೧೮೯
ತಂಬಾಕ್ ..	೯,೪೫,೮೭೦
ಪೋಲೀಸ್ ವ ಇತರ ಸಾಮಾನುಗಳು	೭,೫೯,೭೩೮
ಫಾರೆಸ್ಟ್ ..	೫,೫೯,೧೧೭
ರಜಿಸ್ಟ್ರೇಷನ್ .	೧,೬೦,೫೭೯
ಪೋಸ್ಟಾಫೀಸ್	೪೪,೫೪೩
ಟಂಕಸಾಲೆ ...	೩,೧೬೯
ಲಾ ಮತ್ತು ಜಸ್ಟಿಸ್ ...	೪,೨೯,೮೯೪
ಮೆರೈನ್ .	೭೧,೭೮೩
ವಿದ್ಯಾಭ್ಯಾಸ, ಶುಶ್ರೂಷೆ .	೩೮,೯೩೦
ಮರಾಮತ್ ಇಲಾಖೆ .	೧೪,೮೭೩
ಗವರ್ನಮೆಂಟ್ ಸಿಕ್ಯೂರಿಟಿಗಳ ಮೇಲಿನ ಬಡ್ಡಿಗಳು	೧,೮೬,೪೮೬
ಚಿಲ್ಲರೆ ಬಾಬುಗಳು ..	೭,೩೯,೪೬೦
ಜಮಾ .	೭೯,೫೮,೮೪೦

ಇವುಗಳ ಖರ್ಚು ತಪಸೀಲ್ ಹ್ಯಾಗಂದರೆ —

ದೇವಾಲಯ ಮತ್ತು ಮತ ಸಂಬಂಧವಾದ ಸ್ಥಾಪನೆಗಳು ..	೬,೭೭,೬೬೫
ದರ್ಬಾರು ಬಾಬುಗಳು .	೪,೯೬,೯೦೫
ಅರಮನೆ ಖರ್ಚು .	೫,೬೫,೧೭೬
ರಾಜ್ಯದ ಸಾಮಾನ್ಯ ಆಡಳಿತದ ಖರ್ಚು	೭,೬೫,೧೬೧
ಲ್ಯಾಂಡ್ ರೆವಿನ್ಯೂ ಖರ್ಚು .	೪,೦೬,೧೭೬
ರೆವಿನ್ಯೂ ಮತ್ತು ಸರ್ವೆ ಸೆಟಲ್‌ಮೆಂಟ್	೭,೧೪,೬೮೫
ನಮ್ಮಕ್ .	೪,೭೬,೭೦೦
ಸ್ಟಾಂಪ್‌ಗಳು	೧೭,೬೧೪
ಅಬ್ಕಾರಿ ವ ಅಫೀಂ	೫,೧೪೬
ಕಸ್ಟಂಸ್ .	೭೮,೯೭೮
ತಂಬಾಕ್	೪೩,೮೩೦
ಪೋಲೀಸ್ ವ ಇತರ ಸಾಮಾನುಗಳು	೧,೪೪,೦೬೮
ಫಾರೆಸ್ಟ್ ..	೭,೮೯,೬೬೬
ರಜಿಸ್ಟ್ರೇಷನ್	೫೮,೦೬೪
ಪೋಸ್ಟಾಫೀಸ್ ..	೨೯,೬೯೬
ಟಂಕಸಾಲೆ	೫,೧೫೭
ಲಾ ಮತ್ತು ಜಸ್ಟಿಸ್	೬,೨೯,೮೬೪
ಜೈಲುಗಳು .	೪೧,೬೪೮
ಪೋಲೀಸ್ .	೧,೬೫,೪೮೦
ಮೆರೈನ್ ..	೧೪,೬೨೯
ವಿದ್ಯಾಭ್ಯಾಸ ವಗೈರೆ ...	೭,೬೧,೫೮೦
ಮೆಡಿಕಲ್ .	೧,೫೧,೧೬೬
ಕಾನ್ಸರವೇನ್ಸಿ ವಗೈರೆ ಸ್ಯಾನಿಟರಿ ಇಲಾಖೆಗಳು	೯೮,೯೬೦
ನಾಯರ್ ಸೈನ್ಯ ..	೧,೬೪,೧೯೩
ಆನೆ ಕುದುರೆ ಇಲಾಖೆಗಳು	೧,೦೫,೯೫೦
ಪೆನ್ಶನುಗಳು	೭,೧೭,೫೫೪
ಮರಾಮತ್ ಇಲಾಖಾ .	೧೭,೪೬,೦೬೫
ಸ್ಟೇಷನರಿ ಮತ್ತು ಪ್ರಿಂಟಿಂಗ್	೫೫,೮೫೪
ಬ್ರಿಟಿಷ್ ಗವರ್ನ್‌ಮೆಂಟಿನವರ ಸಬಸಿಡಿ	೮,೧೦,೬೫೦
ಚಿಲ್ಲರೆ ಬಾಬುಗಳು	೮೯,೭೯೪
ಮಹಾರಾಜರವರ ಚಿಕ್ಕಪ್ಪನವರ ವರ್ಷವರ್ಧಂತಿ ಉತ್ಸವದ ಖರ್ಚು ..	೧೫,೦೬೦
ಮಹಾರಾಜರವರ ರಾಮೇಶ್ವರಯಾತ್ರೆ ಖರ್ಚು	೬೪,೯೦೧
ಮಹಾರಾಜಪುತ್ರರು ಮದರಾಸಿಗೆ ಬಿ. ಎ ಪರೀಕ್ಷೆಗೂ ಕಾನ್ವೊಕೇಷನ್ ಸಭೆಗೂ ಬಂದು ಹೋದ್ದ ಖರ್ಚು	೧೪,೫೦೦
ಸೆನ್ಸಸ್ ಖರ್ಚು	೪೦,೦೦೦
ಜಮಾ	೬೭,೩೩,೮೮೧
ಚಿಲ್ಲರೆ ಬಾಬುಗಳಲ್ಲಿ ಖರ್ಚು	೧೦೯೬೮
ಜಮಾ	೬೭,೪೪,೭೪೯
ಬೊಕ್ಕಸದಾಖಲಾ ಮುಂದಿನಸಾಲಿಗೆ ಸಿಲ್ಕು ಉಳಿದದ್ದು	೭೯,೪೧,೫೦೪
ಜಮಾ	೧,೪೬,೮೬,೨೫೩

ಲ್ಯಾಂಡ್ ರೆವಿನ್ಯೂ ಬಾಬಿನಲ್ಲಿ ಹಿಂದಿನ ವರುಷದ ಬಡ್ಜೆಟ್ ಅಂದಾಜಿಗಿಂತಲೂ ೧೨೦,೭೬೭ ರೂಪಾಯಿಗಳು ಕಮ್ಮಿ ಹುಟ್ಟುವಳಿಯಾಗಿರುತ್ತಿದೆ. ತಿರುವನಂತಪುರ ಮತ್ತು ಪದ್ಮನಾಭಪುರದಲ್ಲಿ ಫಸಲ್ ನಷ್ಟಕ್ಕಾಗಿ ಕೊಡಲ್ಪಟ್ಟ ರಿಮಿಷನ್ ದೆಸೆಯಿಂದಲೂ ರೆವಿನ್ಯೂ ಮೊಕದ್ದಮೆಗಳ ವ್ಯವಸ್ಥೆಯಲ್ಲಿ ಕಮ್ಮಿ ಹುಟ್ಟುವಳಿಯಾದುದರಿಂದಲೂ ನಿರೀಕ್ಷಿಸಿದ್ದಂತೆ ಹುಟ್ಟುವಳಿಯಾಗಲಿಲ್ಲವು. ನಮ್ಮಕ್ ಬಾಬಿನಲ್ಲಿ ಮೇಲೆ ಕಂಡ ನಷ್ಟದ ಪ್ರಕೃತಿ ಅರ್ಧಭಾಗಿ ಅಂದರೆ, ೪೧,೪೭೬ ರೂಪಾಯಿಗಳು ಅಂದಾಜಿಗಿಂತ ಜಾಸ್ತಿಯಾಗಿ ಸರ್ಕಾರಕ್ಕೆ ನಷ್ಟಕಂಡು ಬಂದಿರುತಿದೆ. ಇದು ಉಪ್ಪಿನ ಜಾಸ್ತೀ ಗಿರಾಕಿಯಿಂದಲೂ ಕ್ಯಾಪಿಟೇಷನ್ ಮೂಲಿಯಿಂದಲೂ ಹೆಚ್ಚು ಹುಟ್ಟುವಳಿಯಾಗಲಿಕ್ಕೆ ನಿಮಿತ್ತವಾಯಿತು. ಸ್ಟ್ಯಾಂಪ್ ಮತ್ತು ಅಬಕಾರಿ ಬಾಬುಗಳಲ್ಲಿ ೬,೩೪೯ ರೂಪಾಯಿಗಳು ಕಡಿಮೆಯಾದವು. ಈ ಬಾಬುಗಳಲ್ಲಿ ಇನ್ನೂ ಜಾಸ್ತೀ ಮೊಬಲಗು ಕಡಿಮೆ ಬರಬಹುದೆಂದು ನಿರೀಕ್ಷಿಸಲ್ಪಟ್ಟಿತ್ತು. ಪರಂತು ಸಾಕ ಅತ್ಯೆರಿನಲ್ಲಿ ಸ್ಟ್ಯಾಂಪ್ ಖರ್ಚು ವಿಶೇಷವಾಗಲು ತನ್ಮೂಲಕ ಸ್ವಲ್ಪಮಟ್ಟಿಗೆ ಕೂಡುದಲೆಯಾಯಿತು. ಅಬಕಾರಿ ಮತ್ತು ಅಫೀಂ ಬಾಬಿನಲ್ಲಿ ಅಂದಾಜಿಗಿಂತ ೬,೩೧೦ ರೂಪಾಯಿಗಳು ಕಡಿಮೆಯಾಗಲಿಕ್ಕೆ ಹಿಂದಿನ ಸಿಲ್ಕು ಉಳಿಯದಿದ್ದದ್ದೇ ಕಾರಣವು.

ದರ್ಬ್ಯಾ ಪೀಲ್ವೆಯ ಮೂಲಕ ೭೨,೮೩೮ ರೂಪಾಯಿಗಳು ಜಾಸ್ತೀ ಯಾಗಲಿಕ್ಕೆ ಕೊಬ್ಬರಿ ಯೆಲಕ್ಕಿ ವಿಶೇಷತಃ ಅನ್ಯ ದೇಶಗಳಿಗೆ ರಫ್ತಾದದ್ದು ನಿಮಿತ್ತವೆಂದು ತಿಳಿಯಬರುತಿದೆ. ತಂಬಾಕ್ ಚೆನ್ನಾಗಿ ಖರ್ಚಾದಾಗ್ಯೂ ಹುಟ್ಟುವಳಿಯು ಕಡಮೆಯಾದಂತೆ ಸ್ಪಷ್ಟವಾಗುತಿದೆ. ಯೇಲಕ್ಕಿ ವಗೈರೆ ಸಾಮಾನುಗಳಂ ಬಿಕರೀ ಮೂಲಕ ೧,೬೬,೧೭೬ ರೂಪಾಯಿಗಳ ಲಾಭವೂ, ಫಾರೆಸ್ಟ್ ಬಾಬಿನಲ್ಲಿ ೧೫,೫೭೫ ರೂಪಾಯಿಗಳ ಲುಕ್ಸಾನೂ ಸುಸ್ಥಿತಿಗಳುಂಟಾದಂತೆ ವ್ಯಕ್ತವಾಗುತಿದೆ ಈ ಸಂವತ್ಸರದಲ್ಲಿ ಚೌಬೀನೆಗಳ ಗಿರಾಕಿಯು ಹಿಂದಿನ ವರುಷಕ್ಕಿಂತ ಕಡಮೆಯಾದದ್ದು ಮುಖ್ಯಕಾರಣವೆಂದು ತಿಳಿಯತಕ್ಕದ್ದು

ರಿಜಿಸ್ಟ್ರೇಷನ್ ಬಾಬಿನಲ್ಲಿ ಸರ್ಕಾರಕ್ಕೆ ಯಥೋಚಿತ ಲಾಭವೆಂತಲೇ ಹೇಳಬೇಕು. ಸ್ಥಿರಸ್ವತ್ತುಗಳಿಗೆ ಸಂಬಂಧಿಸಿದ ದಸ್ತಾವೇಜುಗಳು ಈ ಸಾಲಿನಲ್ಲಿ ಜಾಸ್ತೀ ರಿಜಿಸ್ಟರಾದುದರಿಂದ ಖರ್ಚು ಜಾತಾ ೮,೩೪೮ ರೂಪಾಯಿಗಳು ಸಿಲ್ಕು ಉಳಿದವು. ಇತರ ಬಾಬುಗಳಲ್ಲಿ ಕಂಡುಬಂದ ಕಮ್ಮಿ ಜಾಸ್ತೀ ಹುಟ್ಟುವಳಿಯ ಕಾರಣಗಳನ್ನು ಮುಂದಿನ ವಾರದಲ್ಲಿ ತಿಳಿಸುವೆವು.

OUR MARRIAGE SYSTEM

ಇತಿಹಾಸ ಪುರಾಣಾಗಮಗಳಲ್ಲಿ ತಿಳಿಸಲ್ಪಟ್ಟಿರುವ ಆಚಾರ ವ್ಯವಹಾರಗಳು ಪ್ರಾಮಾಣ್ಯದಿಂದ ವೇದವಿರುದ್ಧಗಳಲ್ಲವೋ ತಾವತ್ಪರ್ಯಂತವೇ ಅವು ಗ್ರಾಹ್ಯಗಳೇ ಹೊರತು ವೇದವಿರುದ್ಧಗಳಾದವು ಸರ್ವಾತ್ಮನಾ ಬಿಡತಕ್ಕವುಗಳಾಗಿರುತ್ತಿವೆ. ಇದನ್ನನುಸರಿಸಿ ಆರ್ಯರಾದ ನಮಗೆ ವೈದಿಕಮಾರ್ಗಾನುಸರಣವೇ ಉಪಾದೇಯವಾಗಿಯೂ, ಅತ್ಯಾವಶ್ಯಕವಾದುದಾಗಿಯೂ ಭಾವಿಸಲ್ಪಟ್ಟಿರುತ್ತಿದೆ. ಹೀಗಿದ್ದಾಗ್ಯೂ ನಮ್ಮಲ್ಲಿ ವೇದಶಾಸ್ತ್ರವಿರುದ್ಧಗಳಾದ ಕೆಲವು ಆಚಾರಗಳು ಹ್ಯಾಗೋ ತಲೆದೋರಿ ಅಂಧಪರಂಪರೆಯಾಗಿ ಯೆಲ್ಲರಿಂದಲೂ ಅನುಷ್ಠಿಸಲ್ಪಡುತ್ತ ಬರುತಲಿವೆ. ಇವಕ್ಕೆ ವಿಚಾರಪರರಾದವರ್ಯಾರಾದರು ಪ್ರಮಾಣವಂ ಪಚಾರಿಸದರೆ ಶಿಷ್ಟಜನಾನುಷ್ಠಾನದೊಳಿರುವದರಿಂದ ಅವು ಶಾಸ್ತ್ರೀಯಗಳಾಗಿಯೇ ಇರಬಹುದೆಂದು ಸಮಾಧಾನ ಹೇಳುತ್ತಾರೆ. ಅವರ ಮತವನ್ನಂಗೀಕರಿಸಿ ಅಪ್ಪಟಿಕೊಡನೆ ಆ ವಿಷಯವಂ ಬಿಟ್ಟು ಸುಮ್ಮನಿರದೆ ಗ್ರಂಥಾಧಾರವಂ ಕೋರಿಸಿದೆಂದು ಕೇಳುವ ಪಕ್ಷಕ್ಕೆ ಅಧಿಕ ಪ್ರಸಂಗಿಗಳೆಂತಲೂ ಅತಿವಾದಿಗಳೆಂತಲೂ ದೂಷಿಸಿ ನಾಸ್ತಿಕಕೋಟಿಗೆ ಸೇರಿಸಿ ಬಿಡುತ್ತಾರೆ. ಈಗ ಸಾಮಾನ್ಯವಾಗಿ ಅನುಷ್ಠಿಸಲ್ಪಡುತಲಿರುವ ವಿಜಾತೀಯ ಆಚಾರಗಳಲ್ಲಿ ವೈವಾಹಿಕ ಪದ್ಧತಿಯು ಪ್ರಧಾನತಃ ವಿಚಾರಾರ್ಹವಾಗಿರುತಿದೆ

ನಮ್ಮಲ್ಲಿ ಯೇರ್ಪಟ್ಟಿರುವ ವಿವಾಹವು ಕೇವಲ ಐಹಿಕ ಸುಖಾಭಿಲಾಷೆಯಿಂದಂಗೀಕರಿಸಲ್ಪಡತಕ್ಕದ್ದಲ್ಲವೆಂಬದಾಗಿ ಶ್ರುತಿ ಸ್ಮೃತಿಗಳಿಂದ ವ್ಯಕ್ತವಾಗುತಿದೆ. ಆದುದರಿಂದ ವಿವಾಹಕ್ಕೆ ಪ್ರಾಧಾನ್ಯವಾದ ಪಾರಮಾರ್ಥಿಕೋದ್ದೇಶ ಸಹ ಪ್ರತ್ಯೇಕವಾಗಿರುತಿದೆ. ಇಂತಾ ವಿವಾಹ ವಿಷಯದಲ್ಲಿ ಅನೇಕ ಧರ್ಮಶಾಸ್ತ್ರಗಳು ಪ್ರವರ್ತಿಸಿ, ಕನ್ಯಾವರಣ, ವಾಗ್ದಾನಕ್ರಮ, ಕನ್ಯಾದಾನಕ್ರಮ, ವಿವಾಹಲಕ್ಷಣ, ವಿವಾಹಯೋಗ್ಯಕಾಲ, ವಿವಾಹಾದಿಗಳಂ ಕುರಿತು ಬಹಳವಾಗಿ ವಿಧಿಸಿರುತಿವೆ. ಈಗ ಬ್ರಾಹ್ಮಣರಾದಿಯಾಗಿ ವರ್ಣತ್ರಯದವರೂ ವಿವಾಹವನ್ನು ಒಂದೇ ದಿನದೊಳು ದೇವತಾಯತನದಲ್ಲಿ ಜರಿಗಿಸುವ ಕ್ರಮವು ಇಷ್ಟಿಷ್ಟು ಧನಿಕ ರಿಕ್ತ ತಾರತಮ್ಯವಿಲ್ಲದೆ ಯೆಲ್ಲರಿಂದಲೂ ಅಂಗೀಕರಿಸಲ್ಪಡುತಲಿದೆ. ಬ್ರಾಹ್ಮ್ಯಾದಿ ವಿವಾಹಗಳ ಪೈಕಿ, ಗಾಂಧರ್ವ, ಆಸುರ, ಪೈಶಾಚ, ರಾಕ್ಷಸ ವಿವಾಹಗಳು ನಿಕೃಷ್ಟಗಳಾದವಾಗಿರುತಿವೆ. ಪರಸ್ಪರ ಸಂಕೇತ ಪೂರ್ವಕ ವಿವಾಹ ಮಾಡಿಕೊಳ್ಳುವದು ಗಾಂಧರ್ವವು, ಕನ್ಯೆಯು ತಂದೆಯಂ ದ್ರವ್ಯದಿಂ ಸಂತೋಷಪಡಿಸಿಕೊಂಡು ಕೊಂಡು ವಿವಾಹ ಮಾಡಿಕೊಳ್ಳುವದು ಆಸುರ ವಿವಾಹವು. ಪ್ರಾಯಶಃ ಇದೇ ಈಗ ವಿಶೇಷತಃ ಸರ್ವತ್ರ ಜರುಗುತಿದೆ. ನಿದ್ರಾವಸ್ಥೆಯಲ್ಲಿ ಪ್ರಮತ್ತರಾಗಿರುವ ಇಷ್ಟ ಬಂಧುಗಳಿಗೆ ತಿಳಿಯದಂತೆ ಮೋಸದಿಂ ಅವರ ಕನ್ಯೆಯನ್ನಪಹರಿಸಿ ವಿವಾಹ ಮಾಡಿಕೊಳ್ಳುವದು ಪೈಶಾಚವು. ಕನ್ಯಾ ಬಂಧುಗಳ ಶಿರವಂ ಛೇದಿಸಿ ಅಳುತಲಿರುವ ಬಂಧುಗಳಿಂದ ರೋದನ ಮಾಡುತಲಿರುವ ಕನ್ಯೆಯಂ ಅಪಹರಿಸಿ ವಿವಾಹ ಮಾಡಿಕೊಳ್ಳುವದು ರಾಕ್ಷಸ ವಿವಾಹವು. ಇಂತಾ ಆಸುರ ಪೈಶಾಚ ರಾಕ್ಷಸ ಕೃತ್ಯಗಳಂ ಮಾಡತಕ್ಕವರು ಸ್ವರೂಪತಃ ಅತಿ ಘಾತುಕರಾಗಿರಬೇಕಾದಾಗ್ಯೂ ಅವರು ಮೇಲೆ ತಿಳಿಸಲ್ಪಟ್ಟ ಮಾರ್ಗಗಳಲ್ಲಿ ಕನ್ಯೆಯಂ ಅಪಹರಿಸಿ ತರುವಾಯ ವಿವಾಹ ಪೂರ್ತಿಗಾಗಿಯೂ ಭಾರ್ಯಾತ್ವವು ಸಿದ್ಧಿಸುವದಕ್ಕಾಗಿಯೂ ಶಾಸ್ತ್ರೋಕ್ತಗಳಾದ ಕರ್ಮಗಳನ್ನು ಬ್ರಾಹ್ಮ್ಯಾದಿ ವಿವಾಹಗಳಲ್ಲಿ ಜರಿಗುವಂತೆಯೇ ಜರಿಗಿಸುತ್ತಾರೆ. ಆದುದರಿಂದ ಸಕಲವಿಧ ವಿವಾಹಗಳಿಗೂ ಆಯಾ ಮಂತ್ರೋಕ್ತಗಳಾದ ವ್ಯಾಪಾರಗಳು ತತ್ತತ್ಕಾಲಗಳಲ್ಲಿ ಅವಶ್ಯ ಅನುಷ್ಠಾನಾರ್ಹಗಳೆಂದೇರ್ಪಡುತಿದೆ ಶಾಸ್ತ್ರಗಳಲ್ಲಿ ವಧೂವರರಿಗೆ ವಿವಾಹ ಯೋಗ್ಯಕಾಲವು ಹಾಗೆ ನಿಬಂಧಿಸಲ್ಪಟ್ಟಿದೆಯೋ ಅದೇರೀತಿ ಆಯಾ ಮಂತ್ರಾರ್ಥಗಳಿಗೆ ತಕ್ಕ ವ್ಯಾಪಾರಗಳಂ ಮಾಡಲಿಕ್ಕೆ ಸಹ ಕಾಲವು ಗೊತ್ತಾಗಿ ವಿವಾಹವು ಐದು ದಿನಗಳ ತನಕ ಜರಗಬೇಕೆಂದು ಅವಧಿ ಕಟ್ಟಲ್ಪಟ್ಟಿರುತಿದೆ ಈ ವಿವಾಹಾಂಗಗಳಾದ ದೇವತಾವಾಹನ, ನಾಂದಿ, ಪಾಣಿಗ್ರಹಣ, ಪ್ರಧಾನ ಹೋಮ, ಸಪ್ತಪದಿ, ಪ್ರವೇಶ ಹೋಮ, ಅರುಂಧತೀ ದರ್ಶನ, ಸ್ಥಾಲೀಪಾಕ, ಗಂಧರ್ವಾವ್ಹಾನ, ಶೇಷಹೋಮ, ನಾಕಬಲಿ ಇವುಗಳೆಲ್ಲವು ಪ್ರಥಮದಿನಾರಭ್ಯ ಐದು ದಿನಗಳ ತನಕ ಜರಗಿಸಲ್ಪಡಬೇಕೆಂತಲೂ ಅನಂತರ ನಾಲ್ಕು ಅಥವಾ ಐದು ಸ್ಥಾಲೀಪಾಕಗಳನ್ನಾದರು ಗಾರ್ಹಸ್ಥ್ಯ ಸಿದ್ಧ್ಯರ್ಥ ಮಾಡಬೇಕೆಂತಲೂ ವೈವಾಹಿಕ ಶಾಸ್ತ್ರಗಳು ವಿಧಿಸುತಿವೆ. ಇವೆಲ್ಲ ಕರ್ಮಗಳು ಹಗಲಿನಲ್ಲಿ ಕೆಲವು ಘಂಟೆಗಳ ಕಾಲದೊಳಗಾಗಿ ಜರಿಗಿಸಲ್ಪಡಬೇಕೆಂಬದು ಶಾಸ್ತ್ರಕಾರರ ಅಭಿಪ್ರಾಯವೆಂದು ಒಬ್ಬರೂ ಹೇಳಲಾರರು. ಇದೇ ರೀತಿ, ಮೂರು ವರ್ಗಗಳ ತನಕ ನಡೆಸಬೇಕಾದ ಉಪನಯನವು ಸಹ ಒಂದೇ ದಿನದಲ್ಲಿ ದೇವಾಲಯಗಳಲ್ಲಿ ಮಾಡುವ ಸಂಪ್ರದಾಯವು ಪ್ರಬಲಗೊಂಡಿದೆ ವಿವಾಹೋಪನಯನಾದಿಗಳಲ್ಲಿ ಕಾಲಕರ್ಮ ಪ್ರಮಾಣಗಳಿಗೆ ಇತ್ಯಂತೆ ಮಂತ್ರಗಳು ಪ್ರವರ್ತನರುವಾಗ್ಯೆ ಅದು ಲೋಪ ಮಾಡಿದರೆ ಮಂತ್ರಕ್ರಿಯಾಲೋಪಗಳು ಸಹ ಸ್ವಕೃತ ವುಂಟಾಗದೆ ಹೋಗುವದಿಲ್ಲವು. ಸ್ವೇಚ್ಛೆಯಿಂದಲೂ ಶಾಸ್ತ್ರೋಕ್ತವಾಗಿ ಮಾಡತಕ್ಕ ವಿವಾಹಗಳಿಂದೇನು ಪ್ರಯೋಜನವು ? ಶಾಸ್ತ್ರವ್ಯತಿರಿಕ್ತಗಳಾದ ಕರ್ಮಾಚರಣೆಯಿಂದೇನು ಫಲವು ? ಕರ್ಮಲೋಪಕ್ಕಿಂತಲೂ ಈ ವಿವಾಹ ವಿಧಿಯನ್ನೇ ತ್ಯಜಿಸಿ ಕೂಡ ರ್ಶಿಗಳಂತೆ ಕೂತಿಕ್ಕೆ ಮಾಡಿಕೊಳ್ಳುವದುತ್ತಮವು. ಅಲ್ಲಿಯೂ ಒಂದು ನಿಯಮವೂ ವ್ಯಾಪಾರವೂ ಆವಶ್ಯಕವಾಗಿರುತಿದೆ ಹೀಗಿರುವಾಗ್ಯೂ ಬ್ರಾಹ್ಮಣರು ಮೊದಲು ಯೆಲ್ಲರೂ ಮಂತ್ರಕ್ರಿಯಾಕಾಲಗಳನ್ನಾಕರ್ಷಿಸಿ ಒಂದು ದಿನದಲ್ಲಿ ಆಲಯಗಳಲ್ಲಿ ಮಾಡುವ ಪದ್ಧತಿಯನ್ನು ಯಾವ ಕಾಲದಲ್ಲಿ ಯೇತಕ್ಕಾಗಿ ಯಾವ ಮಹಾನುಭಾವನು ವ್ಯವಹಾರದೊಳು ತಂದನೋ ಅದು ಗೊತ್ತಾಗುವದಿಲ್ಲವು ಆತನೊಂದು ವೇಳೆ ವಿಧಿವಿಹಿತಗಳಾದ ಇತರ ಕರ್ಮಗಳನ್ನು ಮಾಡುವಂತೆ ಪ್ರೇರಕನಾಗಿದ್ದರೆ ಅವನು ಯೆಲ್ಲರೂ ಈಗಿನಂತೆ ಅನುವರ್ತಿಸಿರಲಾರರು. ಇಂತಾ ವಿರುದ್ಧ ವಿವಾಹ ಪದ್ಧತಿಯು ಪ್ರಾಯಶಃ ಬ್ರಾಹ್ಮಣರಲ್ಲಿ ತಲೆದೋರಿ ವರ್ಣತ್ರಯದವರಿಂದ ಅನುಷ್ಠಿತವಾಗಿರಬಹುದೆಂದೂಹಿಸುತ್ತೇವೆ. ಏತಕ್ಕೆಂದರೆ

ಐವತ್ತು, ಅರವತ್ತು ವರುಷಗಳ ವಯಸ್ಸಾದ ಮೇಲೆ ಬಾಲೆಯರು ವಿವಾಹ ಮಾಡಿಕೊಳ್ಳುವ ವಾಡಿಕೆಯೂ, ಬಹು ಭಾರ್ಯಾ ಪರಿಗ್ರಹಾಚಾರವೂ ಪ್ರಬಲಿಸಿದ ಬಳಿಕ ವಯಸ್ಸಿನ ತರತಮ್ಯವು ಪರಿಗಣನೀಯವಾಗದೆ ವಿವಾಹ ಜರಗಲಿಕ್ಕೆ ಪ್ರಾರಂಭವಾಗಲು ಅಂತಾ ವೃದ್ಧವರರು ಬಾಲ ಭಾರ್ಯೆಯರೊಡನೆ ಉರವಣಿ ಕಂಚುಕಬೇಲನಾದ ವಿವಾಹ ವಿನೋದಗಳಂ ಜರಿಗಿಸಲಿಕ್ಕೆ ನಾಚಿಕೆ ಪಟ್ಟು ಒಬ್ಬರಿಗೂ ತಿಳಿಯದಂತೆ ಗೂಢವಾಗಿ ದೂರಪ್ರದೇಶದಲ್ಲಿರುವ ಒಂದು ದೇವಾಲಯಕ್ಕೆ ಹೋಗಿ ಮಾಂಗಲ್ಯ ಧಾರಣ ಮಾಡುವ ಪದ್ಧತಿಯೇ ಏತದಿವ ವಿಕಾಹಕ್ಕೆ ಮುಖ್ಯಕಾರಣವೆಂದು ಭಾವಿಸುತ್ತೇವೆ. ಈ ಕ್ರಮವು ಕ್ರಮೇಣ ರಿಕ್ತರಾದವರಿಗೆ ವೈವಾಹಿಕ ಖರ್ಚನ್ನು ಕಡಮೆ ಮಾಡಿಕೊಳ್ಳುವದಕ್ಕೆ ಸಹಕಾರಿಯಾಗಲು ಅವರು ತಮ್ಮ ರಿಕ್ತದೋಷವನ್ನೊಂದು ಆಧಾರವಾಗಿಟ್ಟುಕೊಂಡು ಎಲ್ಲರೂ ಉಭಯಗಳ್ಳಿ ನಿಗ್ರಹ ವಿವಾಹಗಳಂತೆ ಮಾಡಲಾರಂಭಿಸಿದರು. ತದುವಾಯು ಈ ಸಂಪ್ರದಾಯವು ಅವರಿಂದ ಮುಂದಕ್ಕೆ ಹೋರದು ದರಿಕದಲ್ಲಿ ಹೋಗಿ ಸದ್ಯಃ ನಿಂತಿದೆ. ಇನ್ನು ಮುಂದೆ ಅದು ಸಂಸ್ಥಾನಾಧಿಪತಿಗಳ ಬಳಿಗೆ ಹೋಗಬೇಕಾಗಿ ಉಳಿದು ಬಾಕಿ ಇರುತಿದೆ. ಈಗಿನ ಕಾಲದಲ್ಲಿ ವೈಲಕ್ಷಣ್ಯಪರಿಬಾಧಿಗಳಿಗೂ ದ್ರವ್ಯಾರ್ಜನೈಕಪರರಾದವರಿಗೂ ವೈವಾಹಿಕ ಖರ್ಚನ್ನು ತಗ್ಗಿಸಬೇಕೆಂಬ ಉದ್ದೇಶದ ಯತ್ನಗಳು ಜನಿಸಿವಾಗಿದೆ. ವಿವಾಹ ಖರ್ಚಿನಲ್ಲಿಗ ಇಷ್ಟ ಜನಾಹ್ವಾನ, ಬ್ರಾಹ್ಮಣ ದಕ್ಷಿಣೆ, ಜೂತ ಸಂತೃಪ್ತಿಯೂ, ದುಬಾರಿ ಖರ್ಚು ಬಾಬುಗಳೆಂಬ ಮಾವವು ಸಾಧ್ವ ಶ್ರೀಕವಾಗಿವೆ. ಹುವ ಕಾಲಗಳಲ್ಲಿ ಅನ್ಯತ್ರ ಇರುವ ಇಷ್ಟಬಂಧುಗಳೆಲ್ಲರು ಏಕತ್ರ ಸೇರಿ ಉತ್ಸಾಹಪಡೋಣವೆ ಐದೆಂಬ ಲೌಕಿಕಾನುಸಾರ ಪ್ರಮುಖ್ಯ ಸದರೀ ಕ್ರಮ ಮೊದಲಂ ಹುದಂತೆ ಕಾಣುತಿದೆ. ಬ್ರಾಹ್ಮಣ ದಕ್ಷಿಣೆಯೆಂಬದು ಕೊಡುವವನ ಪ್ರವಾರ್ಯ ಪ್ರದರ್ಶನಾರ್ಥವಾಗಿಯಾಗಲಿ, ತೆಗೆದುಕೊಳ್ಳತಕ್ಕವರ ದಾರಿದ್ರ್ಯ ನಿವಾರಣಾರ್ಥವೆಂದಾಗಲಿ ಏರ್ಪಟ್ಟದ್ದಲ್ಲವು ವರಂತು ಅದು ವಿವಾಹಕ್ಕೊಂದು ಮುಖ್ಯಾಂಗವಾಗಿ ಮಾತ್ರ ಪರಿಗಣಿಸಲ್ಪಟ್ಟಿದೆ. ಹ್ಯಾಗೆಂದರೆ— "ನ ಸ್ಯಾದ ಯಜ್ಞದಕ್ಷಿಣಾವತಾವಿ ದಿವ ನಿತ್ರು ದಕ್ಷಿಣಾವತಾಂಬವಿವ್ಯಾಸಃ | ದಕ್ಷಿಣಾಮುತಂ ಪ್ರತಿಜುತ್ತ ದಕ್ಷಿಣಾಮುತಂ ಪ್ರತಿರುತ್ತಯುಃ" ಅಂದರೆ ದಕ್ಷಿಣೆ ಕೊಡತಕ್ಕವರಿಗೆ ಈ ಭೂದೇವಿಸವಲ್ಲಿ ಪ್ರಜಾಪರ್ಗಗಳಂದ ದಾರುಣವನ ಮೊದಲಾದವು ಉಂಟಾಗುತಿವೆ. ದಕ್ಷಿಣೆ ಕೊಡತಕ್ಕವರಿಗೆ ಆಕಾಶದೊಳಗಿರುವ ಸೂರ್ಯಾದಿ ಲೋಕಗಳು ಪ್ರಾಪ್ತವಾಗುತಿವೆ. ದಕ್ಷಿಣೆ ಕೊಡತಕ್ಕವರೇ ಮೋಕ್ಷವನ್ನು ಹೊಂದುತ್ತಾರೆ. ದಕ್ಷಿಣೆ ಕೊಡತಕ್ಕವರೇ ದೀರ್ಘಾಯುಸ್ಸನ್ನು ಹೊಂದುವರು, ಎಂದಾಗಿ ತಿಳಿಸಿರುವದರಿಂದ ವಿವಾಹಿತರಾದ ವಧೂವರರಶ್ರೇಯೋಭಿವೃದ್ಧಿಗಾಗಿ ಹಿರಣ್ಯದಾನವು ಮೊದಲ್ಪಡುತಿದೆ. ಇದು ತಗ್ಗಿಸುವದರಿಂದ ಪ್ರತ್ಯವಾಯ ದೋಷ ಒಂದು ಪ್ರಾಪ್ತವಾಗದಿರುವದಿಲ್ಲವು. ಹಾಗೆಯೇ ಭೂತ ತೃಪ್ತಿ ಯೆಂಬದು ಸಹ ಒಂದು ಬಗೆ ಶಾಂತಿರೂಪವಾಗಿರುತಿದೆ. ನಾಂದಿ ಮೊದಲಾದ ಕಾರ್ಯಗಳು ಹ್ಯಾಗೆ ವಿಶ್ವದೇವತಾಕವಾದವೋ ಹಾಗೆ ಭಗವತ್ಕೈಂಕರ್ಯ ರೂಪವಾದ ವಿವಾಹ ಯಜ್ಞದಲ್ಲಿ ಭಗವತ್ಪ್ರೀತ್ಯರ್ಥವಾಗಿ ಅನ್ನದಾನವು ದನವ್ಯಕರಣೀಯವಾಗಿರುತಿವೆ. ಹೀಗಿದ್ದಾಗ್ಯೂ ಇವುಗಳಿಗೆ ತಗಲುವ ಖರ್ಚನ್ನು ಮಗಳಿಗಾದರೂ ಎಳೆಯನಿಗಾದರೂ ಕೊಟ್ಟರೆ ಪ್ರಯೋಜನ ಪ್ರಬಲ ಭಾವವು ಅನೇಕರಿಗುಂಟಾಗಲು ಅವರು ತಮ್ಮ ಮನೆಯಲ್ಲಿ ಏಳೆಂಬಿಸಿ ವಿವಾಹಾದಿ ಶುಭಕಾರ್ಯಗಳಂ ಮಾಡದೆ ಯಾವ ದಾವದೊಂದು ಕ್ಷೇತ್ರವು ಅಥವಾ ಸನ್ನಿಧಿಯ ವ್ಯಾಜದಿಂದಲ್ಲಿಗೆ ಹೋಗಿ ತಮ್ಮ ಉದ್ದೇಶವು ಕೆಲವು ಘಂಟೆಗಳ ಕಾಲದೊಳಗಾಗಿ ಪೂರೈಸಿಕೊಂಡು ಹಿಂತಿರುಗಿ ಬರುತ್ತಾರೆ. ಏತೇನ ಮುಖ್ಯಕ್ರಿಯಾ ಲೋಪಗಳು ಉಪವನ್ನು ಅನುಪವನ್ನು ತಿಪ್ಪಿತಿಗೂ ಸಮಾನವಾಗಿ ಏರ್ಪಟ್ಟದೆ. ಇದಕ್ಕೆಲ್ಲ ಯಲ್ಲಿ ಪ್ರಮಾಣವಿದೆಯೋ ತಿಳಿಯಲಿಲ್ಲವು. ಕದಾಚಿತ್ ಇದ್ದಾಗ್ಯೂ ಸರ್ವಜನ ಸಾಧಾರಣ್ಯೇನ ಎಲ್ಲರಿಂದಲೂ ಅನುಷ್ಠಿಸಲ್ಪಡತಕ್ಕದ್ದಾಗಿರುವ ಪಕ್ಷಕ್ಕೆ ಮೇಲೆ ಕಂಡ ಮಂತ್ರಗಳಿಗೆ ಸಾರ್ಥಕ್ಯವಿಲ್ಲದೆ ಹೋಗಬೇಕಾಗಿರುತಿದೆ. ಹೀಗೆ ಅನೇಕ ವಿಷಯಗಳಲ್ಲಿ ಜನಗಳು ದ್ರವ್ಯಲೋಭದಿಂ ಅಪಾರ್ಥಗಳಂ ಮಾಡಿ ವೇದಶಾಸ್ತ್ರ ಪ್ರಮಾಣಗಳಿಗೆ ವಿರುದ್ಧವಾಗಿ ವರ್ತಿಸುತ ಅದು ಅನ್ಯರಿಗೆ ಬೋಧಿಸುತ ಬರುವದಕ್ಕಾಗಿಯೂ, ಅವಿಚಾರಪರರಾಗಿ ಜನರದು ಅದನ್ನಿಸಿ ಪಾಪಕ್ಕೆ ಗುರಿಯಾಗುವದಕ್ಕಾಗಿಯೂ, ಶಾಸ್ತ್ರಗಳ ಉದ್ದೇಶ ಪ್ರಯೋಜನಗಳನ್ನರಿಯದೆ ಅವುಗಳಿಗೊಂದು ದೋಷವನ್ನಾರೋಪಿಸುತ ಕೇವಲ ತಮ್ಮ ಪ್ರಾಥಿಮೆಯಂ ವ್ಯಕ್ತಪಡಿಸುವದಕ್ಕಾಗಿಯೂ ವಿಷಾದಿಸುತ್ತೇವೆ

Occasional Notes
ನೈಮಿತ್ತಿಕ ವಿಷಯನ್ಯಾಸ.

A daring decoity.—ಈಚೆಗೆ ಆಗ್ರಾ ಡಿಸ್ಟ್ರಿಕ್ಟಿಗೆ ಸೇರಿದ ಜಯಾತ್ಪುರವೆಂಬ ಪಟ್ಟಣದಲ್ಲಿ ಮೂವತ್ತು ಮಂದಿ ದರೋಡೆ ಕಳ್ಳರು ಆಯುಧಪಾಣಿಗಳಾಗಿ ಧನಿಕನಾದ ಒಬ್ಬ ವರ್ತಕನ ಮನೆಗೆ ಪ್ರವೇಶಿಸಿ ಯಜಮಾನನನ್ನು ಗೋಲಿಯಿಂದ ಹೊಡೆದು ಕೊಂದುಹಾಕಿ ಮನೆಯಲ್ಲಿದ್ದವನ್ನೆಲ್ಲ ಲೂಟಿ ಮಾಡಿಕೊಂಡು ಹೋದರು.

Murder.—ಈ ತಿಂಗಳ ೩ ನೇ ತಾರೀಖಿನಲ್ಲಿ ದಾವರ್‌ಖಂಡಿ ಡಿಸ್ಟ್ರಿಕ್ಟಿಗೆ ಸೇರಿದ ಗುಜರ್‌ಖಾನ್ ಎಂಬ ಪಟ್ಟಣದಲ್ಲಿ ಒಬ್ಬ ಹೆಂಡತಿಯು ಪರಪುರುಷನೂ ಕೂಡಿರುವದು ಪ್ರತ್ಯಕ್ಷದಲ್ಲಿ ನೋಡಿ ಕೋಪಾವಿಷ್ಟನಾಗಿ ಕೂಡಲೆ ಅವಳಂ ಕೊಂದುಹಾಕಿದ್ದಲ್ಲದೆ, ಸದರೀ ಅನ್ಯಪುರುಷನು ಸಹ ಕೊಲ್ಲಬೇಕೆಂದು ಮಾಡಿದ ಪ್ರಯತ್ನದಲ್ಲಿ ಅವನಿಗೆ ಇಟ್ಟ ಗುರಿಗಳೆಲ್ಲವು ತಪ್ಪಿಹೋಗಿ ಬೇರೆ ಐವರನ್ನು ಕೊಂದುಹಾಕಿದನು. ಈ ಘಾತುಕನ ಕೂಡಲೆ ದಸ್ತಗಿರಿ ಮಾಡಲ್ಪಟ್ಟನು.

The Manipur Raj — ಮಣಿಪುರ ಸಂಸ್ಥಾನದ ಮಾಜಿ ಅರಸರಾದ ಸೂರಸಿಂಗ್ ಎಂಬವರ ಮುಮ್ಮಕ್ಕಳಾದ ಸೂರಚಾಂದ್ ಯೆಂಬವರು ಸದರೀ ಸಂಸ್ಥಾನದ ಅರಸ[illegible]ಸಲ್ಪಟ್ಟು, ೧೫ ದಿನಗಳ ಹಿಂದೆ ಅಲ್ಲಿರುವ ಪೊಲಿಟಿಕಲ್ ಏಜೆಂಟರು ಮತ್ತು ಸೂಪರಿಂಟೆಂಡೆಂಟರಾದ ಮೇಜರ್ ಮ್ಯಾಕ್ಸ್‌ವೆಲ್ ಯೆಂಬವರಿಂದ ಪಟ್ಟಾಭಿಷೇಕೋತ್ಸವವು ಬಹಳ ಸಂಭ್ರಮದೊಡನೆ ಜರಗಿಸಲ್ಪಟ್ಟಿತು. ಇದಕ್ಕಾಗಿ ನಾಗಾಸ್ ಯೆಂಬವರ ವ್ಯಕಿ ಪ್ರಮುಖರಾದವರೆಲ್ಲರು ಕರೆಯಿಸಲ್ಪಟ್ಟಿದ್ದರು. ಇದರಿಂದ ಬ್ರಿಟಿಷ್ ಸರ್ಕಾರದವರು ಮಣಿಪುರಸಂಸ್ಥಾನಕ್ಕೆ ನಾಮಮಾತ್ರಕ್ಕೆ ಒಬ್ಬ ಅರಸನು ಕೂಡಿರಿಸಿ, ಸನ್ನದ ಕೊಟ್ಟರೆಂ ಬುದೇರ್ಪಟ್ಟಿತು. ಈ ವೈಪರೀತ್ಯದ ದೆಸೆಯಿಂದ ಇಷ್ಟಕ್ಕೇನೇ ತೃಪ್ತರಾಗಬೇಕಾಗಿದೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

Tumkur Sessions.—ಈದಿನ ತುಮಕೂರಲ್ಲಿ ಸೆಷನ್ ವಿಚಾರಣೆಗೆ ಪ್ರಾರಂಭವಾಗುವದು. ಇದು ಪೂರೈಸಲಿಕ್ಕೆ ಹದಿನೈದು ದಿನಗಳು ಹಿಡಿಯಬಹುದೆಂದು ತೋರುತಿದೆ.

Festival.—ಈ ಪ್ರಾಂತರು ಬಳೇ ಬಾಗಿಲ ಬಳಿ ಇರುವ ಶ್ರೀ ನೃಸಿಂಹಸ್ವಾಮಿಯವರಿಗೆ ಬ್ರಹ್ಮೋತ್ಸವವು ಪ್ರಾರಂಭವಾಗಿ ಪ್ರತಿದಿನವೂ ನಡೆಯುತಲಿದೆ. ಈಗ ಉತ್ಸವಾದಿಗಳಲ್ಲಿ ಶ್ರದ್ಧೆಯುಳ್ಳವರು ಬಹಳ ವಿರಳರಾಗುತ ಬಂದುದರಿಂದ ಅವು ಕ್ರಮೇಣ ಒಂದೊಂದಾಗಿ ನಿಂತು ಹೋಗುತ ಬರುತಲಿವೆ. ದೇವಸ್ಥಾನದ ಅರ್ಚಕರಿಗೆ ಮಾತ್ರ ವಿಗ್ರಹವನ್ನು ಹೊರಗೆ ಎತ್ತಿ ಇಡದೆ ಹೋದರೆ ತಮ್ಮ ಜೀವನಕ್ಕೆಲ್ಲಿ ಉಪದ್ರವುಂಟಾಗುವದೆಯೋ ಯೆಂಬ ಭಯವಾತ್ರ ಪ್ರದಾಮಾಡುತಲಿದಾರೆ.

Sree Sankarachar's Aradhanam.—ವೈಶಾಖಶುದ್ಧ ಪ್ರಾದಶಿಯಾದ ನಿನ್ನೆಯದಿನ ಶ್ರೀಮಚ್ಛಂಕರ ಭಗವತ್ಪಾದ ಜಗದ್ಗುರುಗಳವರ ಆರಾಧನ ಮಹೋತ್ಸವವು ಈ ಪ್ರಾಂತ ಸುಲ್ತಾನ್ ಪೇಟೆಯಲ್ಲಿರುವ ಶ್ರೀಶೃಂಗೇರಿ ಶ್ರೀಮಠದಲ್ಲಿ ಯಥೋಚಿತವಾಗಿ ನಡೆಯಿತು. ಆದಿನ ಪ್ರಾತಃಕಾಲ ೬ ಘಂಟೆಗೆ ಸರಿಯಾಗಿ ಮೇಲಿನ ಶ್ರೀ ಶೃಂಗೇರೀ ಮಠದ ದೇವಾಲಯಕ್ಕೆ ಗುರುಭಕ್ತಿಯುಳ್ಳವರೆಲ್ಲರೂ ಬಿಯಮಾಡಿ ಅಲ್ಲಿ ನಡೆದ ಆರಾಧನೋತ್ಸವ ಗುರುಚರಿತ್ರ ಉಪನ್ಯಾಸಾದಿ ಕಾರ್ಯಗಳಿಗೆಲ್ಲ ಸಹಾಯಕರಾಗಿದ್ದು ನೆರವೇರಿಸಿ ಗುರು ಕೃಪಾಕಟಾಕ್ಷಕ್ಕೆ ಪಾತ್ರರಾದರೆಂದು ಕೇಳಲಿಕ್ಕೆ ಸಂತೋಷಿಸುತ್ತೇವೆ.

An objectionable practice.—ಭಕ್ತ ದೇವಾಲಯಗಳಲ್ಲಿರುವ ಬೋಪಗಳ ಅಕ್ರಮಗಳೂ ಕ್ರಮವಾಗಿ ಗವರ್ನಮೆಂಟನವರ ಅವಧಾನಕ್ಕೆ ಬರುತ ಅವರೊಂದೊಂದಕ್ಕೆ ತಕ್ಕ ಪ್ರತಿಕ್ರಿಯೆಗಳಂ ಮಾಡುತ ಬರುವ ಅಂಶವಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಕೋಟೆ ವೆಂಕಟರಮಣಸ್ವಾಮಿ, ಗವಿ ಗಂಗಾಧರೇಶ್ವರಸ್ವಾಮಿ, ರಂಗನಾಥಸ್ವಾಮಿ, ನೃಸಿಂಹಸ್ವಾಮಿ ವಗೈರೆ ಅನೇಕ ದೇವಸ್ಥಾನಗಳಲ್ಲಿ ಅರ್ಚಕರು ವಗೈರೆರು ಬಾಯಮಾಗಿ ವಾಸಮಾಡುತ ಅನೇಕ ಅಕೃತ್ಯಗಳಂ ಮಾಡುವ ಅಂಶವು ಇಷ್ಟು ಕಾಲದ ಮೇಲೆ ಪ್ರತಿಸ್ರಿಯಾಹರ್ವಾಗಲು ಅವರೆಲ್ಲರೂ ಸದರೀ ಪ್ರದೇಶಗಳನ್ನು ಕೂಡಲೆ ಖಾಲೀಮಾಡಿ ಬೇರೆ ಸ್ಥಳಗಳಿಗೆ ಹೋಗಬೇಕೆಂದು ಗವರ್ನಮೆಂಟನವರು ಹುಕುಂ ಮಾಡಿದಾರೆ

The weather.—ಈಗ ಬಿಸಲು ಅತಿ ದುಸ್ಸಹವಾಗಿದೆ. ನಿನ್ನೆಯದಿನವೂ ಮೊನ್ನೆಯದಿನವೂ ರಾತ್ರಿಯೂ ಷುಮಾರ್ ಒಳ್ಳೇ ಮಳೆಯಾಯಿತು. ಈ ಪ್ರಾಂತದಲ್ಲಿ ಉಪಾಲಿ ಜುಲಾಬ್ ರೋಗ ತಲೆದೋರಿದೆ ಯೆಂದು ಕೇಳುತ್ತೇವೆ. ಕೆರೆಯಲ್ಲಿ ಹುದ್ದಾಂಗ ನೀರಿಲ್ಲದೆ ಹೋದ ಬಳಿಕ ಪ್ರಾಣರಕ್ಷಣಾರ್ಥ ಮಿಲಿಟರಿ ಸ್ಟೇಷನ್‌ನವರು ಯಥೇಚ್ಛ ನೀರು ಕೊಟ್ಟದಾರೆ. ಅದು ಒಣಗಿದ ಭೂಮಿಯಲ್ಲಿ ಹರಿದು ಬರುವಾಗಲೇ ಅರ್ಧ ಹೀರಿಹೋಗಿ ಉಳಿದದ್ದು ಬಂದು ಸೇರುತಿದೆ. ಈ ನೀರು ಅನೇಕರಿಗೆ ಕೃತ್ಯವನ್ನುಂಟುಮಾಡಿದ್ದರಾದ್ಯಾಪ್ರವನಗಳಿಗೆ ಆಕರವಾಗಿದೆ. ಬಿಸಿಲಿನ ತೈಕ್ಷ್ಣ್ಯವೇ ಅತಿ ದಾರುಣವಾಗಿ ಅದೇ ಜ್ವರರೂಪೇಣ ಪರಿಣಮಿಸಿದೆ. ನಿರುಪ್‌ಗಳು ಸರ್ಕಾರೀ ರಿಪೋರ್ಟಿನಲ್ಲಿ ವ್ಯತ್ಯಾಸವಾಗಿದ್ದರೂ ನಗದ್ ಕೊಟ್ಟು ಖರೀದಿಮಾಡತಕ್ಕವರಿಗೆ ಮಾತ್ರ ಯಾವವಿಧ ಲಾಭವೂ ಕಂಡುಬರುವದಿಲ್ಲವು. ಮ್ಯುನಿಸಿಪಾಲಿಟಿಯವರು ಬಹಳ ತರವಾಹ್ ಮಾಡುತ ಜಾಕಪ್ಪವಂ ಹೋಗಲಾಡಿಸುವ ಬಗ್ಗೆ ಭಾವಿಗಳಂ ಅಲ್ಲಿಯಲ್ಲಿ ಅಗೆಯುಸುತಲಿದಾರೆ. ಗವರ್ನಮೆಂಟನವರು ತಮ್ಮ ಔದಾರ್ಯ ಪ್ರದರ್ಶನಾರ್ಥ ಧಾರಾಳವಾಗಿ ಧನವ್ರಯ ಮಾಡಲಿಕ್ಕೆ ಸಾಂಗ್ಶನ್ ಮಾಡುತಲಿದಾರೆ. ಅನೇಕ ಜನ ಕೂಲಿಯವರು ಇದರಿಂದ ಜೀವನ ಮಾಡುತಲಿದಾರೆ. ಮದ್ದು ಗುಂಡುಗಳು ಬೇಕಾದಷ್ಟಕ್ಕೆ ಖರ್ಚಾಗುತಿವೆ. ಇಷ್ಟಾದಾಗ್ಯೂ ಜನರಿಗೆ ಕುಡಿಯಲಿಕ್ಕೆ ಮಾತ್ರ ನೀರು ದೊರೆಯುವುದು ಪ್ರಯಾಸವು. ತತ್ರಾಪಿ ಬಟ್ಟೆ ಒಗೆಯಲಿಕ್ಕೂ ಸ್ನಾನಮಾಡಲಿಕ್ಕೂ ಜನರನ್ನುಭವಿಸುತಲಿರುವ ತೊಂದರೆಯು ವಾಚಾಮಗೋಚರವಾಗಿದೆ. ಅವರು ಕಂದಾಯ ಕೊಡುವದರಲ್ಲಾಗಲಿ, ಮ್ಯುನಿಸಿಪಾಲಿಟಿಯವರು ಅಕ್ಕರೆಯೊಡನೆ ವಸೂಲ್ಮಾಡುವದರಲ್ಲಾಗಲಿ ಸ್ವಲ್ಪವೂ ಹಿಂಜರಿಯುವದಿಲ್ಲವು.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಷ್ತಿಹಾರ್‌ನಾಮೆಗಳು.

ನಂ|| ೩೪, ತಾ|| ೨೫ನೇ ಏಪ್ರಿಲ್ ೧೮೯೨— ಸನ್ ೧೮೭೭ನೇ ಇಸವಿ ೩ನೇ ನಂಬರ್ ಇಂಡಿಯನ್ ರಿಜಿಸ್ಟ್ರೇಷನ್ ಆಕ್ಟು ೬ನೇ ಸೆಕ್ಷನಿನ ನಿಯಮಗಳನ್ನನುಸರಿಸಿ ಮೈಸೂರು ಶ್ರೀಮನ್ಮಹಾರಾಜಾ ಸರ್ಕಾರದವರು ಇದರಡಿ ಬರುವ ನೇಮಕದರಾತಿಗಳಂ ಮಾಡಿರುತ್ತಾರೆ:—

ನಂಜನಗೂಡು ೩ನೇ ಗ್ರೇಡ ಸಬರಿಜಿಸ್ಟ್ರಾರ್ ಎಂ ರಂಗನಾಥ ಶಾಸ್ತ್ರಿ ಬಿ. ಎ ಯವರು, ಪೆನ್ಶನ್ ಮೇಲೆ ನಿವೃತ್ತರಾದ ಎನ್. ಆರ್ ತಿರುಮಲಾಚಾರ್ಯ ಬದಲು ೧ನೇ ಗ್ರೇಡಿಗೆ ಬಡ್ತೀ ಹೊಂದಿ ಲ್ಪಟ್ಟು ಮೈಸೂರಿಗೆ ನಿಯಮಿಸಲ್ಪಟ್ಟಿರುತ್ತಾರೆ.

ಕಂಟ್ರೋಲರ್ ಆಫೀಸಿನಲ್ಲಿ ಅಕೌಂಟೆಂಟಾಗಿರುವ ಎ. ಕೃಷ್ಣಯ್ಯಂಗಾರ್ ಬಿ. ಎ. ಯವರು, ಬಡ್ತೀ ಹೊಂದಿದ ಎಂ. ರಂಗನಾಥರಾಯರಿಗೆ ಬದಲು, ಅಜಮಾಯಿಷೀ ತರೀಕ್ ನಂಜನಗೂಡು ೩ನೇ ಗ್ರೇಡ ಸಬ ರಿಜಿಸ್ಟ್ರಾರಾಗಿ ನೇಮಕರಾಗಲ್ಪಟ್ಟಿರುತ್ತಾರೆ.

ನಂ|| ೩೯, ತಾ|| ೨೩ನೇ ಏಪ್ರಿಲ್—ಮೈಸೂರ ಡಿಸ್ಟ್ರಿಕ್ಟಿನ ಸೆಷನ್ಸ್‌ಕೋರ್ಟಿನ ಆಕ್ಟಿಂಗ್ ಶಿರಸ್ತೇದಾರರಾದ ಮಿ|| ಜೆ. ಹಾರ್ಟ್ ಎಂಬವರು ಮತ್ತೊಂದು ಹುಕುಂ ಕೊಡಲ್ಪಡುವತನಕ ತಾತ್ಕಾಲಿಕವಾಗಿ, ಬೆಂಗಳೂರು ಅಡಿಷನಲ್ ಮುನಸಫರಾಗಿ ಕೆಲಸ ನೋಡುವಂತೆ ನೇಮಕರಾಗಲ್ಪಟ್ಟಿರುತ್ತಾರೆ.

ನಂ|| ೪೦, ತಾ|| ೨೮ನೇ ಏಪ್ರಿಲ್—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೩೩೩ನೇ ಸೆಕ್ಷನ್ ಅನುಸರಿಸಿ, ತುಮಕೂರು ಮುನಸಫ್ ಮತ್ತು ೨ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮಿ|| ಎ. ಆನಂದರಾಯರವರು ಸಾಕ್ಷಿಗಳ ಸಾಕ್ಷ್ಯವನ್ನು ಸ್ವದಸ್ತೂರ್ ಇಂಗ್ಲಿಷ್ ಭಾಷೆಯಲ್ಲಿ ತೆಗೆದುಕೊಳ್ಳುವಂತೆ ಹುಕುಂ ಮಾಡಲ್ಪಟ್ಟಿರುತ್ತಾರೆ.

ನಂ|| ೪೧, ತಾ|| ೨೮ನೇ ಏಪ್ರಿಲ್—ಸನ್ ೧೮೯೨ನೇ ಇಸವಿ ಏಪ್ರಿಲ್ ೩೦ನೇ ತಾರೀಖಿನ ಪೂರ್ವಾಹ್ನದಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಖಜಾನೆ ಚಾರ್ಜನ್ನು ಮಿ|| ಎಲ್. ವೆಂಕಟರಾಯರು ಕೊಟ್ಟು ಮಿ|| ಸೈಯದ್ ಅಮೀರ್ ಹಸನ್‌ಯವರು ತೆಗೆದುಕೊಂಡಿರುತ್ತಾರೆ.

ನಂ|| ೪೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೦ನೇ ಸೆಕ್ಷನ್ ಅನುಸರಿಸಿ ಮೈಸೂರ್ ಡಿಸ್ಟ್ರಿಕ್ಟ್ ಯೆಕಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ಮಿ|| ಎಂ. ಕೃಷ್ಣಯ್ಯಂಗಾರ್ರವರು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟಿ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ ೩೦೬ನೇ ಸೆಕ್ಷನ್ ಅನುಸರಿಸಿ ಮೊಕದ್ದಮೆಗಳನ್ನು ಸೆಷನ್ ಕಮಿಟ್ ಮಾಡುವ ಅಧಿಕಾರ ಸಹ ಕೊಡಲ್ಪಟ್ಟಿರುತ್ತಾರೆ.

ನಂ|| ೪೩—ಶಿವಮೊಗ್ಗಾ ಸಿವಿಲ್ ಹಾಸ್ಪಿಟಲ್‌ನಲ್ಲಿ ಕೆಲಸ ಮಾಡುತ್ತಿರುವ ಸಬ ಆಸಿಸ್ಟೆಂಟ್ ಸರ್ಜನ್ ಬಿ. ಶಿ. ರಾಘವೇಂದ್ರರಾಯರು ಈಗ ಹಿಲೇ ಯೆಂದು ರಿಪೋರ್ಟ್ ಬಂದಿರುವ ಮಿಸ್ ಪೆಲ್ಟ್‌ಯವರಿಗೆ ಬದಲು ಬೆಂಗಳೂರು ಪ್ರಸವಾಸ್ಪತ್ರೆಯಲ್ಲಿ ಕೆಲಸ ನೋಡುವಂತೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ|| ೪೩—ಸನ್ ೧೮೯೧ನೇ ಇಸವಿ ಸೆಪ್ಟೆಂಬರ್ ೬ನೇ ಮಂಗಳವಾರ ಮೈಸೂರ್ ಗೆಜೆಟಿನ ೩ನೇ ಭಾಗ, ೭೪ನೇ ಪುಟದಲ್ಲಿ ಪ್ರಕಟಿಸಲ್ಪಟ್ಟಿರುವ ೩೩ನೇ ನಂಬರ್ ಇಷ್ತಿಹಾರ್‌ನಾಮೆಗೆ ಬದಲು ಈ ದೇಶದಲ್ಲಿನ ಯಾವ ಸೆಷನ್ಸ್‌ಕೋರ್ಟಿನಿಂದಾಗಲಿ ವಿಧಿಸಲ್ಪಡುವ ದಂಡನೆಯಮೇಲೆ ತೆರಲ್ಪಡುವ ಅಪೀಲುಗಳ ವಿಷಯದಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್‌ಕೋಡ್ ೪೨೨ನೇ ಸೆಕ್ಷನ್ ಅನುಸರಿಸಿ ಕೊಡಲ್ಪಡಬೇಕಾದ ವಿಶಿಷ್ಟ ನೋಟೀಸ್‌ಗಳು, ಮತ್ತು ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೫೦೬ನೇ ಅಥವಾ ಇನ್ಯಾವ ಸೆಕ್ಷನ್‌ಗಳನ್ನಾಗಲಿ ಅನುಸರಿಸಿ, ಪಬ್ಲಿಕ್ ಪ್ರಾಸಿಕ್ಯೂಟರಿಗೆ ಕೊಡಬೇಕಾದ ನೋಟೀಸ್‌ಗಳು, ಚೀಫ್‌ಕೋರ್ಟ್ ಮುಂದೆ ಗವರ್ನಮೆಂಟನವರ ತರಫೆ ಹಾಜರಾಗಬೇಕಾದ ಆಫೀಸರ್, ಕ್ರೌನ್‌ಪ್ರಿಮರ್ ಮೊದಲಾದ ಮೊಕದ್ದಮೆಗಳಲ್ಲಿ ಕೊಡಲ್ಪಡಬೇಕಾದ ನೋಟೀಸ್‌ಗಳು, ಇವೆಲ್ಲವು ಅಸಿಸ್ಟೆಂಟ್ ಗವರ್ನಮೆಂಟ್ ಅಡ್ವೋಕೇಟರಿಗೆ ಕೊಡಲ್ಪಡತಕ್ಕದ್ದು.

ನಂ|| ೪೪—L ೬೩೨, ತಾ|| ೩ನೇ ಮೇ.—ತುಮಕೂರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ|| ನಾರಣಯ್ಯಂಗಾರ್ರವರು, ಮಿ|| ಜೆ. ನಾರ್ಥ್ ಯವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಚಿಕ್ಕಮಗಳೂರು ಮ್ಯುನಿಸಿಪಾಲಿಟಿಯ ವೈಸ್ ಪ್ರಸಿಡೆಂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಕಲ್ಕತ್ತಾದಲ್ಲಿ ಒಬ್ಬ ಸ್ತ್ರೀಯು ಒಂದು ಜೋತನ್ನು ಹೆತ್ತಳು. ಅದು ತಾಯಿಯ ಸ್ತನ್ಯಪಾನಕ್ಕೆ ಬಂದಾಗ ವಿಚಿತ್ರವಾಗಿ ತೋರುವದಿಲ್ಲವೆ!

ಬಂಗಾಳ ನಾಗಪುರದ ಆಸ್ಥಳಗಳು ೧೬೫ ಮೈಲು ಉದ್ದ, ಅದರಿ ನಲ್ಲಿ ಮೈಲುಗಳು ೫೫೪, ಇದರಲ್ಲಿ ೪೧೧ ಮೈಲು ಸ್ಟೇಷನುಗಳವೆ. ರೈಲಿನ ಸ್ಟೇಷನುಗಳೇ ಇಷ್ಟು ಇರುವಾಗ್ಗೆ ಇನ್ನು ಅದರ ಅಭಿವೃದ್ಧಿಯು ಎಷ್ಟರವರೆಗೆ ಇದೆಯೋ ವಾಚಕರೇ ಊಹಿಸಬೇಕು.

ಕಳೆದ ತಿಂಗಳ ೨೯ ನೇ ತಾರೀಖಿನ ದಿನ ರಾತ್ರಿ ೧೧||ಘಂಟೆಗೆ ನಮ್ಮ ಊರಲ್ಲಿ ಪೋಲೀಸಿನ ಪೋಸ್ಟಾಫೀಸಿನಿಂದ ೩||ಮೈಲಿ ಫಾಸಲೆಯಲ್ಲಿರುವ ವರಿಸ್ಕೆ ಪಟ್ಟೆಯ ಪಕ್ಕಗೆ ಟಪಾಲು ಬಸ್ತು ತೆಗೆದುಕೊಂಡು ಹೋಗುವ ಕಾಲದಲ್ಲಿ ಕಳ್ಳರು ಬಂದು ರನ್ನರನ್ನು ಹೊಡೆದು ಅಂಚೇ ಬಸ್ತನ್ನು ಕಳವುಮಾಡಿಕೊಂಡು ಹೋದರು.—ವೃ. ಚಿ.

ನಾಗಪುರದ ಪ್ರಾಂತದಲ್ಲಿರುವ ಗಾಣಿಗರೂ, ನೇಗೆಯವರೂ ಶಟ್ಟು ಮಾಡಿಕೊಂಡು ಇನ್ನು ಮೇಲೆ ದೇಶಾಂತರದಿಂದ ಬರುವ ಬಟ್ಟೆ, ಸೀಮೆಯಣೆ ಮೊದಲಾದವುಗಳನ್ನು ಉಪಯೋಗಿಸಬಾರದು, ಸ್ವದೇಶದ್ದನ್ನೇ ಉಪಯೋಗಿಸಬೇಕು. ಹಾಗೆ ಮಾಡದೆ ಇರುವವರು ಜಾತಿ ಭ್ರಷ್ಟನಾಗಿ ತಿಳಿಯತಕ್ಕದ್ದೆಂದು ಮಾಡಿಕೊಂಡಿರುತ್ತಾರೆ.

ಪಾಂಡಿಚ್ಚೇರಿಯಲ್ಲಿ ನಾಲ್ಕು ಮಂದಿ ನೇಟಿವ ಜನರೂ, ಒಬ್ಬ ಯುರೋಪಿಯನ್ ಚಪ್ರಾಸಿಯವನೂ ಸೇರಿ ಬಂದು ಸಭೆಯಲ್ಲಿ ಗದ್ದಲ ಮಾಡಿ ವರ್ಡಿಪರ್ ಗೇಬ್ರಿಲಿ ಎಂಬವರನ್ನು ಗುಂಡಿನಿಂದ ಹೊಡೆದು ಕೊಂದು ಹಾಕಿದರು. ಇವರನ್ನು ಕಳೆದ ೨೪ ನೇ ತಾರೀಖಿನಲ್ಲಿ ಮುಕ್ತಿಪ್ಪಿ ಮಾಡಿದರು. ಇನ್ನೂ ಫೈಸಲಾಗಲಿಲ್ಲ. ಅಲ್ಲಿನ ಒಬ್ಬ ಪ್ರೈಕಾರ್ಟೆ ವಕೀಲರು ಸ್ವಬಿಗಳಪರವಾಗಿ ವಾದಿಸುತ್ತಾರೆಂದು ತಿಳಿದುಬಂದಿದೆ. ವೃ. ಪ.

ಬಂಗಾಳದಲ್ಲಿ ೯ ವರುಷದ ಹುಡುಗನೊಬ್ಬನು ಕೆರೆಯೊಳಗೆ ಬೀಳಲು, ಆ ಕೆರೆಯ ಸುತ್ತಲೂ ಸುಮಾರು ೨೦೦ ಜನಗಳು ವೀರನಿಗೆ ನಿಂತುಕೊಂಡು ಹೀಗಾಯಿತಲ್ಲಾ ಎಂದು ಪಶ್ಚಾತ್ತಾಪ ಪಡುತಲಿದ್ದರು. ಆ ಗುಂಪಿನಲ್ಲಿ ಒಬ್ಬ ಸ್ತ್ರೀಯು ಬರೀ ಪಶ್ಚಾತ್ತಾಪದಿಂದೇನೂ ಪ್ರಯೋಜನ ವಿಲ್ಲವೆಂದು ಹೇಳುತ್ತಾ, ಒಡನೆ ಆ ಕೆರೆಯಲ್ಲಿ ಮುಳುಗಿ, ಆ ಹುಡುಗನನ್ನು ಮೇಲಕ್ಕೆ ಎತ್ತಿಕೊಂಡು ಬಂದು ಜಲಗಂಡದಿಂದ ಕಾಪಾಡಿದಳು.

ಮೊರಾಕೋ ಎಂಬ ರಾಜ್ಯದ ಸುಲ್ತಾನರ ಮಗನಿಗೆ ವಿವಾಹವಾಯಿತು. ಆ ಕಾಲದಲ್ಲಿ ಬಂದಿದ್ದ ಪ್ರಜೆಗಳು ಸುಲ್ತಾನರಿಗೆ ೨೦೦ ಜನ ಗುಲಾಮರನ್ನು ಕಾಣಿಕೆಯನ್ನಾಗಿ ಒಪ್ಪಿಸಿದರು. ೧೦ ವರುಷದಿಂದ ೧೩ ವರುಷದ ವರೆಗಿನ ವಯಸ್ಸಿನವರಿಗೆ ೧೫೦ ರೂಪಾಯಿನಿಂದ ೩೦೦ ರೂಪಾಯಿಗಳವರೆಗೆ ಬೆಲೆ ಯಾಗುತ್ತದೆ. ಅವರಲ್ಲೂ ಸುಂದರಿಯಾದ ಯುವತಿಯರಿಗೆ ಇನ್ನೂ ಹೆಚ್ಚು ಬೆಲೆಯಾಗುವದು ಹೆಚ್ಚು.

ತಿರುಮಕೂಡ್ಲು ನರಸೀಪುರದ ತಾಲ್ಲೂಕು ಸೋಸಲೆಯಲ್ಲಿರುವ ಗುಂಜಾ ನರಸಿಂಹ ಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀರಂಗಮ್ಮ ಎಂಬಾಕೆಯು ಸೇವೆ ನಡಸಿ ತೀರ್ಥ ತೆಗೆದುಕೊಳ್ಳುವದಕ್ಕೆ ಹೋದದ್ದಕ್ಕಾಗಿ ಕೆಲವು ಜನ ಶ್ರೀವೈಷ್ಣವರು ಸಂಪ್ರೋಕ್ಷಣೆಯಾಗಬೇಕೆಂದು ಮಾಡಿದ ಪಿರ್ಯಾದಿನಲ್ಲಿ ಆಕೆ ಮುನ್ಸೀಫ್ ಕೋರ್ಟಿನಲ್ಲಿ ದಾವಾಮಾಡಿದ್ದದ್ದು ಸರಿಯಷ್ಟೆ. ಕಳೆದ ವಾರದಲ್ಲಿ ಆಕೆಗೆ ೬೪ ರೂ. ನಷ್ಟ ಕಟ್ಟಿ ಕೊಡಬೇಕೆಂದು ಫೈಸಲಾಯಿತು —ವೃ. ಚಿ.

ಈಗ್ಗೆ ಕೆಲವು ತಿಂಗಳುಗಳ ಕೆಳಗೆ ಪಿರೋಜಪೆ ಮತ್ತು ಎಲಿಯೂರು ಸ್ಟೇಷನ್‌ಗಳ ಮಧ್ಯೆ ರೈಲು ಡಿಕ್ಕಿ ಮುಕ್ಕಿ ಹೋದದ್ದರಲ್ಲಿ ಪ್ರಯಾಣಿಕನ್ನನಾಗಿ ಬಂದ ನಾಗಪ್ಪನೆಂಬುತನಿಗೆ ಏನೂ ಅಪಾಯವಿಲ್ಲದೆ ಆ ಅಪಾಂತರದಲ್ಲಿ ತಾನು ತಂದಿದ್ದ ೪೦೦ ರೂಪಾಯಿಗಳೂ ಹೋಯಿತು. ಆ ನೋಟುಗಳನ್ನೂ ಮತ್ತು ಆ ಅಪಾಂತರದಲ್ಲಿ ತನಗುಂಟಾದ ವಿಪತ್ತಿನಿಂದ ದೇಹದಾರ್ಢ್ಯ ತಪ್ಪಿಹೋಗಿರುವದರಿಂದ ತನ್ನ ಜೀವನಕ್ಕೆ ಸರಿಯಾದ ಹಣದ ಮೊಬಲಗನ್ನು ಕೊಡಿಸಬೇಕೆಂದು ಸರ್ಕಾರ ಮತ್ತೂ ರೈಲ್ವೆ ಕಂಪೆನಿಯವರ ಮೇಲೆ ಇಲ್ಲಿ ದಾವಾ ಮಾಡಿದ್ದಾರೆ.

ಕಲ್ಕತ್ತಾ ಪಟ್ಟಣದಲ್ಲಿ ಈಗ ಸ್ಥಾಪಿಸಿರುವ ಒಂದು ಕಮಿಟಿಯವರು ಎಲ್ಲಾ ಜಾತೀ ಹಾವುಗಳನ್ನೂ ಹಿಡಿದುಕೊಂಡು ಬಂದು ಅವುಗಳನ್ನು ಸಾಕಿ ಮತ್ತು ಅವುಗಳು ಕಚ್ಚಿದ್ದಕ್ಕೆ ಏನೇನು ಇಲಾಜು ಮಾಡಿದರೆ ಚನ್ನಾಗಿ ಗುಣವಾಗುತ್ತವೆಯೋ ಅವುಗಳನ್ನು ನಿದರ್ಶನ ಪೂರ್ವಕವಾಗಿ ಕಂಡು ಹಿಡಿಯಬೇಕೆಂದು ಸಂಕಲ್ಪ ಮಾಡಿಕೊಂಡು, ಸರ್ಕಾರದವರ ಅನುಮತಿಯನ್ನು ಕೇಳಿದರು. ಅದಕ್ಕೆ ಸರ್ಕಾರದವರೂ ಒಪ್ಪಿ ಅಪ್ಪಣೆಯನ್ನು ಕೊಟ್ಟಿರುತ್ತಾರೆ. ಇದರಿಂದ ಮುಂದೆ ಪ್ಯಾಗೆ ಆಗುವದೋ ನೋಡಬೇಕು.

ಆಸ್ಸಾಂನಲ್ಲಿ ಒಂದು ವಿಧ ಸರ್ಪವು ಬಹಳ ಪ್ರಬಲವಾಗಿರುವದು. ಇದು ಇತರ ಹಾವುಗಳನ್ನು ತಿಂದು ಜೀವಿಸುತ್ತದೆ. ಯಾವಾಗಲೂ ಗದ್ದೆಗಳ ಸಮೀಪದಲ್ಲೇ ಇರುವದು, ಅತ್ಯಂತ ಶೀಘ್ರವಾಗಿ ಓಡುತ್ತದೆ ಅಲ್ಲದೆ ಇದರ ಹಿಡಿದ ಕಚ್ಚುವದೆ ಮತ್ತ್ಯಾವ ಹಾವೂ ಓಡಲಾರದು. ಇದು ಜನರಮೇಲೆ ಬೀಳುವದು ಬಹಳ ಹೆಚ್ಚು. ಮುಂದೆಯೂ ಹಿಂದೆಯೂ ಏಕಕಾಲದಲ್ಲಿ ನೃತ್ಯೃಯನ್ನಿಟ್ಟು ನೋಡುವುದು ಇದರ ಬಲದಲ್ಲಿ ವಿಶೇಷ ಬಲವುಂಟು ಆದರೆ ಈ ಹಾವಿನಲ್ಲಿ ಹೇಳಿದುದು ವಿಶೇಷವಾಗಿರುತದೆ.—ವೃ. ಪ.

ಫೀರೋಜಪುರ ಎಂಬಲ್ಲಿ ವ್ಯಭಿಚಾರ ದೋಷಕ್ಕಾಗಿ ೯ ಜನರು ಕೂಡಿ ಒಬ್ಬ ಮಾರವಾಡಿಯನ್ನೂ, ಅತನ ಪ್ರಿಯಪುತ್ರಳನ್ನೂ, ಮಗನನ್ನೂ ಖೂನ ಮಾಡಿದರು. ಇದರ ವಿಚಾರಣೆಯಾಗಿ ಅವರೆಲ್ಲರಿಗೆ ಫಾಶೀ ಸಜಾ ವಿಧಿಸಲ್ಪಟ್ಟಿತು. ಅಂತೂ ೧೧ ಜನರು ಮೃತ್ಯುವಿಗೆ ಗುರಿಯಾದರು. ಈ ಎಂಟು ಜನರಲ್ಲಿ ಬ್ರಾಹ್ಮಣ, ಮುಸಲ್ಮಾನ, ಹೊಲೆಯ, ಮಾದಿಗ ಮೊದಲಾದ ಬೇರೆ ಬೇರೆ ಜಾತಿಯವರಿದ್ದರು. ದುಷ್ಕಾರ್ಯಕ್ಕಾಗಿ ಯಾವ ಜಾತಿಯವರೇ ಆಗಲಿ ಒಂದಾಗುತ್ತಾರೆ. ಆದೇ ಸತ್ಕಾರ್ಯಕ್ಕಂದರೆ ತಂದೆ ಮಕ್ಕಳಾಗಿದ್ದರೂ ಅವರ ನಡುವೆ ಬಹು ವಿರೋಧ ವುಂಟಾಗುತಿದೆ.—ಲೋ. ಬಂ.

ಸ್ಯೂಯಾರ್ಕಿನಲ್ಲೊಬ್ಬ ರಾಕ್ಷಸನಿರುವನು, ಅವನಿಗೆ ಮೂರು ನಾಲಿಗೆಗಳು, ನಾಲ್ಕು ಗಡ್ಡಗಳು, ಮೂರು ಕಣ್ಣುಗಳು, ಮೂರು ಕಿವಿಗಳು ಈ ಪ್ರಕಾರ ಅವಯವಗಳಿರುತಿವೆ! ಒಂದು ಕಿವಿಯು ಮಧ್ಯನೆಯು ಕಿವಿಯಂತಿರುತಿದೆ! ನಾಲ್ಕು ಸಣ್ಣ ಸಣ್ಣ ನಾಲಿಗೆಗಳವೆ, ಅವುಗಳಿಗೆ ಚಲಿಯುವದಕ್ಕೆ ಮಾರ್ಗವಿಲ್ಲ! ಆತನು ಮೂರು ಬಗೆಯ ಬಣ್ಣಗಳಲ್ಲಿ ಪ್ರವೀಣನಾಗಿದ್ದಾನೆ. ಕೆಳಗಣ ಗಡ್ಡವು ಮೇಲಿನ ಗಡ್ಡಗಳ ಕೆಳಗೆ ೨—೩ ಅಂಗುಲದಂತರದ ಮೇಲಿರುತಿದೆ. ಮೋರೆಯು ಬಲ್ಲುಗವು ತೀರ ಹಪ್ಪಳದಂತಿದೆ. ಎಡಭಾಗದ ಎರಡು ಭಾಗವಾಗಿ ಜಾಡಿದ ಎರಡು ಕಣ್ಣುಗಳಾಗಿರುತಿದೆ. ಇವನು ಕೇವಲ ತರುಣನಿದ್ದಾನಂತೆ! ಸೃಷ್ಟಿಯಲ್ಲಿನ ವೈಚಿತ್ರ್ಯವು ಊಹಿಸಕೂಡದು.—ಕ. ವೃ.

ವಿಲಾಯಿತಿಯಲ್ಲಿ ಒಬ್ಬ ರೊಟ್ಟಿ ಮಾಡುವವನು ತನ್ನ ಕಾರಖಾನೆಯನ್ನು ಬಹಳವಾಗಿ ವೃದ್ಧಿಪಡಿಸಿ ವಿಲಾಯಿತಿ ಸುತ್ತ ಪಕ್ಷಣ ಅನೇಕಾ ಬಿಂದಿನ್ನೆಯವ ವಿಲಿ, ದೊಡ ಪಟ್ಟಣಗಳಲ್ಲೂ ಕಾಣೆ ಕಾರಖಾನೆಗಳನ್ನು ಇಟ್ಟು ರೊಟ್ಟಿಯ ವ್ಯಾಪಾರದಿಂದ ವಿಶೇಷ ದ್ರವ್ಯ ಸಂಪಾದಿಸಿ, ಮೃತನಾದನು. ಅವನ ಕಡೆಯವರಲ್ಲಿ ಒಬ್ಬನು ತಾನು ವಾರಸದಾರ, ತನಗೆ ಆ ಸ್ವತ್ತೆಲ್ಲಾ ಸೇರಬೇಕೆಂದು ಕೋರ್ಟಿನಲ್ಲಿ ದಾವಾ ಮಾಡಿದನು. ಈ ವ್ಯಾಜ್ಯ ೩೦ ವರುಷಗಳಿಂದ ನಡೆಯುತ್ತಲಿದೆ. ಅದರಲ್ಲಿ ೩ ಬಗದಾವಾಗಳು ಆಗಿವೆ. ಈಗ ಅದು ಪಾರ್ಲಿಮೆಂಟು ಹೌಸ ಆಫ್ ಲಾರ್ಡ್ಸ ಸಭೆಯಲ್ಲಿ ನಡೆಯುತ್ತಲಿದೆ. ಇಷ್ಟು ಕಾಲವಾದರು ಇನ್ನೂ ಫೈಸಲಾಗಲಿಲ್ಲ

ಗದಗಿನ ವರ್ತಕ ಬೀದಿಯಲ್ಲಿ ಇಬ್ಬರು ಪರಸ್ಥಳದವರು ಅವತ್ತಿನ ರಾತ್ರಿಯಲ್ಲಿ ಒಂದು ಛತ್ರದಲ್ಲಿ ಮಲಗಿಕೊಂಡು ಇದ್ದರು. ಒಬ್ಬ ಕಳ್ಳನು ಅವರ ಚೀಲದಲ್ಲಿರುವದನ್ನೆಲ್ಲಾ ಅಪಹರಿಸಬೇಕೆಂದು ಯೋಚನೆ ಮಾಡಿಕೊಂಡು, ಪುತ್ತಿನ ಪದಾರ್ಥಗಳನ್ನು ತೆಗೆದುಕೊಂಡು, ಅವರ ಬಳಿಯಲ್ಲಿ ತಾನು ಪರಸ್ಥಳದವನಂತೆ ನಟಿಸಿ, ಸವಿಮಾತುಗಳಿಂದ ಮೋಸಗೊಳಿಸಿ, ತಾನು ತಂದಿದ್ದ ಪುತ್ತಿನ ಪದಾರ್ಥಗಳನ್ನು ತಿನ್ನಿಸಿ, ಕಾಲು ಘಂಟೆ ಹೊತ್ತು ಕಳೆಯಲು, ಅವರು ಸ್ಮೃತಿ ತಪ್ಪಿ ಮಲಗಿಕೊಂಡರು. ಆ ಕಳ್ಳನು ಇದ್ದುದ್ದನ್ನೆಲ್ಲಾ ತೆಗೆದುಕೊಂಡು ಕಾಲ್ತೆಗೆದನು. ಆ ಪರಸ್ಥಳದವರು ಮರುದಿನ ಬೆಳಿಗ್ಗೆ ಎದ್ದು ನೋಡಿಕೊಳ್ಳುವಾಗ್ಗೆ ತಮ್ಮ ಗಂಟು ತಮಗೆ ಸ್ವಪ್ನ ಪ್ರಾಯವಾಯಿತೆಂದು ವ್ಯಸನ ಪಡುತ್ತಿದ್ದರು.

ವಿಲಾಯಿತಿಯಲ್ಲಿನ ಒಂದು ರೀಡಿಂಗ್ ರೂಮಿನಲ್ಲಿ ವರ್ತಮಾನ ಪತ್ರಿಕೆಗಳನ್ನು ಓದುತ್ತಲಿದ್ದ ಚಿಕ್ಕ ಹುಡುಗನಾದ ಇಬ್ಬರು ಅಣ್ಣತಮ್ಮಂದಿರು ಒಂದು ಖೂನಿ ವಿಷಯವನ್ನು ಓದಿದ ಮೇಲೆ, ಒಬ್ಬನು ತನ್ನ ಸಹೋದರನನ್ನು ಕುರಿತು ಖೂನಿ ಹ್ಯಾಗೆ ಮಾಡುವರು, ಅದರಿಂದ ಹ್ಯಾಗೆ ನೋವು ಉಂಟಾಗುತ್ತದೆಯೋ ನೋಡೋಣ ನಾನು ಹೊಡೆಯುತ್ತೇನೆ ನೀನು ತಡೆದುಕೊಳ್ಳುತ್ತೀಯಾ ಎಂದು ಕೇಳಲು; ಸಹೋದರನು ಆಗಲೆಂದು ಒಪ್ಪಿಕೊಂಡನು. ಕೂಡಲೆ ಆವನ ಕತ್ತಿನಮೇಲೆ ಮೊದಲಿದ್ದ ಚಾಕುವಿನಿಂದ ತಿಂದ ಸಹೋದರನಿಗೆ ಘಾಯವಾದದ್ದಲ್ಲದೆ ಬಹಳವಾಗಿ ಕೂಗಿಕೊಂಡನು. ಸುತ್ತುಮುತ್ತಲಿದ್ದವರು ಒಂದು ಚಿಕಿತ್ಸೆ ಮಾಡುವದಕ್ಕೆ ಎತ್ತಿಸುವಷ್ಟರಲ್ಲಿ ಮೃತನಾದನು.—ವೃ. ಚಿಂ.

ಮೈಸೂರು ಕಿಲ್ಲೆಯಲ್ಲಿರುವ ಅಣ್ಣಾಭಟ್ಟನ ಮೊಕದ್ದಮೆಯನ್ನು ಟರ್ನರ್ ಮ್ಯಾಜಿಸ್ಟ್ರೇಟರು ನಿನ್ನೆ ಮಂಗಳವಾರಕ್ಕೆ ಹಿಯರಿಂಗ್ ಹಾಕಿದ್ದರಷ್ಟೆ. ಆ ದಿವಸ ೨ ನೇ ಅಪರಾಧಿ ಶ್ರೀರಂಗಪಟ್ಟಣ ಕಡೆ ಸಾಕ್ಷಿಗಳಿಗೆ ಸಮನ್ ಜಾರಿ ಆಗದೆ ಇದ್ದದ್ದರಿಂದ ಅವರಿಗೆಲ್ಲಾ ಪುನಃ ಸಮನ್ ಕಟ್ಟಿಸುವದಾಗಿ ಹುಕುಂ ಮಾಡಿ, ನಾಳೆ ೧೦ ನೇ ತಾರೀಖ್ ಮಂಗಳವಾರಕ್ಕೆ ಹಿಯರಿಂಗ್ ಹಾಕಿರುತ್ತಾರೆ. ಅವರೆ ೧ ನೇ ಅಪರಾಧಿ ಗುಂಡಮ್ಮನ ವಿಷಯವಾಗಿ ಬೆಂಗಳೂರಿಂದ ಪೋಲೀಸ್ ರಿಪೋರ್ಟುಗಳು ಬಂದಿರಲಿಲ್ಲವಾದ್ದರಿಂದ ಪುನಃ ಅದೇ ೧೦ ನೇ ತಾರೀಖಿನ ದಿವಸವೂ ಆಗಾಗಿ ಹಿಟ್ಟೋ ರಿಪೋರ್ಟು ಸಮೇತವಾಗಿ ಹಾಜರು ಮಾಡುವ ಪೋಲೀಸ್ ಆಫಿಸರು ಬರಬೇಕೆಂದು ಬೆಂಗಳೂರು ಪೋಲೀಸ್ ಇನ್ಸ್‌ಪೆಕ್ಟರಿಗೆ ಯಾದಿ ಕಳುಹಿಸುವಂತೆ ಹುಕುಂ ಮಾಡಿ ಅವಳ ವಿಷಯವನ್ನು ಆ ದಿನವೇ ಫೈಸಲ್ ಮಾಡುವದಾಗಿ ತೀರ್ಮಾನಿಸಿದರು. ಮ್ಯಾಜಿಸ್ಟ್ರೇಟರವರು ಯಾರಾದರೂ ಅವಳ ಪರವಾಗಿ ೨೦೦ ರೂಪಾಯಿಗಳಿಗೆ ಜಾಮೀನ್ ಕೊಡುವದಾದರೆ ಅವಳನ್ನು ಬಿಡಬಹುದೆಂದು ಹುಕುಂ ಮಾಡುವದಾಗಿ ತಿಳಿಸಿದರು. ಆದರೆ ಅವಳಿಗೆ ಯಾರೂ ಜಾಮೀನ್ ಆಗದೇ ಹೋದ್ದರಿಂದ ಅವಳನ್ನು ಪುನಃ ಲಾಕಪ್ಪಿನಲ್ಲಿ ಇಡುವ ಹಾಗೆ ಹುಕುಂ ಆಗಿರುತ್ತೆ.—ವೃ. ಪ

EXTRACTS.

ರಜಾ ತೆಗೆದುಕೊಂಡು ಸ್ವದೇಶಕ್ಕೆ ಹೋಗಿ ಬಂದ ಒಬ್ಬ ಇಂಗ್ಲಿಷ್ ಸರದಾರನು "ಲಂಡನ್ ಪ್ರೇಮಪಾತ್ರರು" ಎಂಬ ಒಂದು ವಿಷಯವಂ ಕುರಿತು ಈಚೆಗೆ ಮುಂಬೈ ಪತ್ರಿಕೆಯೊಂದಕ್ಕೆ ಬರೆದಿರುವ ಲೇಖನದಿಂ ಇಂಗ್ಲಿಷಿನವರ ನೀತಿ ನಿಯಮಗಳು ಸುಲಭವಾಗಿ ತಿಳಿಯಬರುವವರಿಂದ ಅದರ ಸಾರಾಂಶವನ್ನಿವರಡಿ ತಿಳಿಸುತ್ತೇವೆ ಸುಂದರೇ:—

ಡಾಕ್ಟರ್ ನ್ಯೂಜಹಾಲ್ಮನೆಂಬವರೊಬ್ಬರು ರಚಿಸಿರುವ ಗುಪ್ತ ವಿದ್ಯಮಾನಗಳು ಎಂಬ ಗ್ರಂಥದೊಳು ಸಂಯುಕ್ತ ರಾಜ್ಯದಲ್ಲಿ (ಇಂಗ್ಲಾಂಡ್ ಸ್ಕಾಟ್ಲಾಂಡ್, ಐರ್ಲ್ಯಾಂಡ್ ಮತ್ತು ವೇಲ್ಸ್) ೧೫ ವಯಸ್ಸು ಮೊದಲು, ೫೫ ವರುಷಗಳ ಪರ್ಯಂತ ಇರುವ ಒಟ್ಟು ಸ್ತ್ರೀ ಸಂಖ್ಯೆಯಲ್ಲಿ ಅರ್ಧ ವಾಸಿ ವಿಧವೆಗಳಾಗಿಯೂ ಅವಿವಾಹಿತರಾಗಿಯೂ ಇರುತ್ತಾರೆ. ಇದಲ್ಲದೆ ೧೮೫೮ ನೇ ಇಸವಿಯು ಮೊದಲು ಪ್ರಜಾಸಂಖ್ಯೆಗೂ ವಿವಾಹ ಸಂಖ್ಯೆಗೂ ಮಾಮೂಲಾಯಿ ಪ್ರಕಾರ ತಾಳೆ ನೋಡಿದರೆ ವಿವಾಹ ನಿರ್ಬಂಧಕ್ಕೊಳಪಡುವ ಇಚ್ಛೆಯುಳ್ಳ ಸ್ತ್ರೀಯರ ಸಂಖ್ಯೆಯು ದಿನೇದಿನೇ ಕಡಮೆಯಾಗುತ ಬರುತಲಿದೆ ಯೆಂದು ಸ್ಪಷ್ಟವಾಗುತಿದೆ. ವಿವಾಹವು ಸುಖಪ್ರದವಾದುದೆ ಅಥವಾ ಅವಿವಾಹಿತ ದಶೆಯು ಸಂತೋಷಪ್ರದವಾದುದೆ ಯೆಂಬ ವಿಚಾರವು ಈಚೆಗೆ ಇಂಗ್ಲಿಷ್ ಸ್ತ್ರೀಯರನೇಕರಿಗುಂಟಾಗಲು ಅವರು ವಿಚಾರಪೂರ್ವಕ ವಿವಾಹವು ಸುಖೋಪಕರವಾದುದಲ್ಲವೆಂದು ಬಹಿರಂಗವಾಗಿ ಸಭೆಗಳಲ್ಲಿ ತಕ್ಕ ಯುಕ್ತಿವಾದಗಳಿಂದ ನಿರೂಪಿಸಿ ನಿರ್ಧರಿಸಿರುತ್ತಾರೆ. ಇದಕ್ಕೆ ತಕ್ಕಂತೆ ವಿವಾಹ ಮಾಡಿಕೊಳ್ಳುವವರ ಸಂಖ್ಯೆಯು ಸಹ ತಗ್ಗುತಲಿದೆ. ಪರಂತು ಹಾಗೆ ಕಡಮೆಯಾದಾಗ್ಯೂ ಸ್ತ್ರೀ ಪುರುಷ ವ್ಯಾಮೋಹವೆಂಬದು ಮಾತ್ರ ಸ್ವಲ್ಪವಾದ ಕಡಮೆಯಾಗಲಿಲ್ಲವೆಂದು ಅನುಭವದಿಂ ವ್ಯಕ್ತವಾಗುತಿದೆ. ಸ್ತ್ರೀ ಪುರುಷರು ಜನ್ಮಾದಭ್ಯ ಪರಸ್ಪರ ಸುಪರ್ಕಸಂಬಂಧಗಳಿಲ್ಲದೆ ಜೀವಿಸಿದ್ದು ಗತಿಸತಕ್ಕವರು ಕೋಟಿಗೊಬ್ಬರು ದೊರೆಯುವರು ಅಸಾಧ್ಯವೆಂದೆಣಿಸುತ್ತೇವೆ ಮತ್ತು ಅದು ಪ್ರಾಕೃತಿಕ ಧರ್ಮಕ್ಕೆ ಬಹಳ ವ್ಯತಿರಿಕ್ತವಾದುದಾಗಿರುತಿದೆ. ಆದುದರಿಂದ ಸ್ತ್ರೀಪುರುಷ ಸಂಬಂಧವು ಅತ್ಯಾವಶ್ಯಕವಾದುದೆಂತಲೇ ಪ್ರಾಯೇಣ ಯೋರ್ಪಿನಲ್ಲದೆ ವಿವಾಹ ಸಂಬಂಧವು ಕದಾಚಿತ್ ವ್ಯಾಮೋಹಕಾರಿಯಾಗುವದಿಲ್ಲವೆಂಬದಂ ನಾವು ಬಲ್ಲೆವು. ವಿವಾಹಾತ್ಪೂರ್ವ ಜನಿಸುವ ವ್ಯಾಮೋಹವು ತಾವತ್ಪರ್ಯಂತ ವೃದ್ಧಿಯನ್ನೈದುತ ಉದ್ದೇಶವು ಪೂರ್ತಿಗೈಸಿದಾಗ್ಯೂ ಅದು ಕಡೆಯಲ್ಲಿ ಕಾರಣಾಂತರಗಳಿಂದ ವಿವಾಹಸಂಬಂಧ ಪವಿತ್ರ್ಯಗಳೊಡನೆ ನಿವೃತ್ತಿಯಾಗಿರುತಿದೆಯಾಗಿ ಅಂತಾ ವಿವಾಹವು ಸುಖಪ್ರದವಾದುದೆಂದು ಭಾವಿಸಲಾಗದು. ಪ್ರಥಮ ವ್ಯಾಮೋಹ ವೃತ್ತಿಪರನ್ನು (ಇದು ಕೇವಲ ಮಾನಸಿಕವೆಂದು ಭಾವಿಸಕೂಡದು.) ಅನಂತರ ಅನ್ಯರು ವಿವಾಹ ಮಾಡಿಕೊಳ್ಳುವದು ಪ್ರಯಾಸವು. ಪ್ರಾಥಮಿಕವ್ಯಾಮೋಹಕ್ಕಿಂತಲೂ ಪಶ್ಚಾತ್ ಪುಂಟಾಗುವ ವ್ಯಾಮೋಹವು ಊರ್ಜಿತವಾದದ್ದಲ್ಲವೆಂದು ಇಂಗ್ಲಾಂಡಿನಲ್ಲಿ ಸ್ತ್ರೀಪುರುಷರ ಹೃದಯದೊಳು ವಿವಾಹ ಪರಿಜ್ಞಾನ ವುಂಟಾಗುತಿದೆ. ಈ ಪರಿಜ್ಞಾನ ವುಂಟಾಗುವದರೊಳಗಾಗಿ ಸ್ತ್ರೀ ಪುರುಷರ ವಿಷಯದಲ್ಲಿ ಪರಸ್ಪರಾಭಿಪ್ರಾಯವು ಕ್ಷಣಿಕಗಳಾಗಿ ಭಿನ್ನಿಸುವದು ವಾಡಿಕೆಯಾಗಿರುವದರಿಂದ ವಿವಾಹವು ಪ್ರಾಯೇಣ ನೆರವೇರುವದು ಅಪೂರ್ವವಾಗಿರುತಿದೆ. ಬೇಸಿಗೆ ಕಾಲದ ನೊಣಗಳಂತೆ ಪ್ರೇಮಪಾತ್ರರು ಒಬ್ಬ ಸ್ತ್ರೀಗೆ ಸರ್ವತ್ರ ಸಿದ್ಧವಾಗಿರುತ್ತಾರೆ. ಅಂತಾ ಪ್ರಿಯರಿಗೆ ತಮ್ಮ ಪ್ರೀತಿ ಪ್ರದರ್ಶನಕ್ಕೆ ಯುಕ್ತಸ್ಥಾನವಾದ ಪ್ರಾರ್ಥನಾಲಯಗಳನ್ನು ಸಾಂಕೇತಿಕ ಸ್ಥಾನವನ್ನಾಗಿ ಅಂಗೀಕರಿಸಿ ಅಲ್ಲಿಗೆ ಏತದರ್ಥ ಹೋಗುತ್ತಾರೆ. ಅವರು ಅಲ್ಲಿ ಮಾಡುವ ಪ್ರಾರ್ಥನೆಯು ಅಭೀಷ್ಟ ವಿಷಯಕವಾದುದಾಗಿಯೇ ಇರುತಿದೆ. ವ್ಯಾಮೋಹ ಪ್ರದರ್ಶಕಗಳಾದ ಸರಸ ಸಲ್ಲಾಪಗಳಿಗೆ ನಾಟಕಶಾಲೆಗಳು ಪ್ರಿಯರಿಗೆ ಜನ್ಮಭೂಮಿಯಾಗಿರುತಿದೆ. "ರೋಮಿಯೋ" ಜೂಲಿಯೇಟಿ ಎಂಬ ನಾಟಕವನ್ನಾಡುವಾಗ ಪ್ರಿಯರು ತಮ್ಮ ವೃತ್ತಾಂತವು ಸಹಿಸಲಾರರು. ಮತ್ತು ಅವರು ಮನೆಯಲ್ಲಿ ತಂಗುವದು ಪ್ರಯಾಸವು. ರೆಯಿಲ್ ಸ್ಟೇಷನ್‌ಗಳು ಸಹ ಇವರಿಗೆ ಸಮಾಗಮಸ್ಥಾನಗಳಾಗಿರುತಿವೆ. ಅಲ್ಲಿನ ಜನಸಂಮರ್ದದಲ್ಲಿ ಐಷ್ಟಾಲಾಪಗಳಿಗೆ ಅವಕಾಶ ವುಂಟಾಗುವಂತೆ ವಿಶೇಷ ವಿಷಯಗಳಿಗೆ ಅನುಕೂಲವಾಗುವದಿಲ್ಲವು. ಇಲ್ಲಿ ಪ್ರಿಯರ ಅಭೀಷ್ಟವು ಸಂಪೂರ್ಣವಾಗಿ ಫಲಕಾರಿಯಾಗುವದಿಲ್ಲವು. ರಾತ್ರಿ ಕಾಲದಲ್ಲಿ ನಡೆಯುವ "ಬಾಲ್" ಯೆಂಬ ನೃತ್ಯಾಲಯವು ಕಾಮುಕರಿಗುಪಭೋಗಸ್ಥಾನವೆನ್ನಿಸಿಕೊಂಡಿರುತಿದೆ. ಅಲ್ಲಿ ಬಹುಜನರ ಮಧ್ಯೆ ತಮ್ಮ ಕೋರಿಕೆಗಳನ್ನೆಲ್ಲ ಈಡೇರಿಸಿಕೊಳ್ಳಲಿಕ್ಕೆ ಅವಕಾಶವಿರುತಿದೆ. ಪಿಕ್ಚರ್ ಪಬ್ಲಿಕ್ ಯೆಂಬ ಸಾರ್ವಜನೀನೋಪವನಗಳು ನೃತ್ಯಾಲಯಗಳಿಗಿಂತ ವಿಶೇಷೋಪಭೋಗಾರ್ಹಗಳಾದ ಪ್ರದೇಶಗಳಾಗಿರುತಿವೆ ದಿನಾಂತದೊಳು ರಮಣೀಯವಾದ ವಸಂತಋತುವಿನ ಸಂಧ್ಯಾರಾಗವು ಅವರ ಅನುರಾಗ ವಿವರ್ಧಕವಾದುದರಿಂದ, ಅಂತಾ ಉಪವನಗಳಲ್ಲಿ ಬೇಕಾದಹಾಗೆಲ್ಲಾ ನರ್ಮಗರ್ಭಗಳಾದ ಸಲ್ಲಾಪಗಳೊಡನೆ ಸರಸವಾಡುವ ನವ ಯುಗ್ಮಗಳನ್ನು ನೋಡಬಹುದು. ಉಪವನದ ಬಾಗಿಲನ್ನು ದಾಟಿದ ಕೂಡಲೇ ವಿವೇಕ ದೀಕ್ಷೆ ಲಜ್ಜೆ ಇವುಗಳು ತೊಲಗುವವು, ಆ ಯುಗ್ಮಗಳು ತಮ್ಮನ್ನು ಯಾರು ನೋಡಿದರೂ ಲಕ್ಷ್ಯಸದೆ ನಿರ್ಭೀತಿಯಿಂದ ವಿಹರಿಸುವಷ್ಟು ಹೃದಯಸಾರಳ್ಯ ವುಳ್ಳವರಾಗಿರುತ್ತಾರೆ. ಮುಖ್ಯವಾಗಿ ಯುವತಿಗಳಿಗೆ ವಿವಾಹ ಸಂಬಂಧಗಳಿಗೊಳಪಡುವದಕ್ಕಿಂತಲೂ ಅನುರಾಗ ಮಾತ್ರವಾಗುವ ಅಪೇಕ್ಷೆಯು ಗಂಡಸರಲ್ಲಿಯೂ ಸ್ತ್ರೀಯರಲ್ಲಿಯೂ ಬಹಳವಾಗಿ ವೃದ್ಧಿಯನ್ನೈದುತ ಬರುತಲಿದೆ. ಪೂರ್ವಕಾಲದಲ್ಲಿ ಮಾನವಜಾತಿಯೊಳು ವಿವಾಹ ನಿರ್ಬಂಧವಿರುತಲಿರಲಿಲ್ಲವೆಂದು ಪೂರ್ವ ಕಥಾವೃತ್ತಾಂತಗಳಿಂದ ಸ್ಪಷ್ಟವಾಗುತಿದೆ ಅದರಂತೆ ವ್ಯವಸ್ಥಿತವಿದ ವಿಲಕ್ಷಣರಾಷ್ಟ್ರಗಳಲ್ಲಿ ವಿವಾಹ ನಿರ್ಬಂಧವು ಎಂದು ನಾಶನವಾಗುವದೆಂದು ಅನುರಾಗ ಪರವಶರಾದ ವ್ಯಾಮೋಹವುಳ್ಳವರೆಲ್ಲರು ಪ್ರತೀಕ್ಷಿಸುವದಲ್ಲಿಯೂ ನಿರೀಕ್ಷಿಸುತಲಿದಾರೆ ವೇಲ್ಸ್ ಪ್ರಾಂತದೊಳು ಕೃಷಿಜೀವಿಯಾದ ವೃದ್ಧನೊಬ್ಬನು ತನ್ನ ಮಗಳನ್ನು ನಾಟಕಶಾಲೆಗೆ ಕಳುಹಿಸುತಿದ್ದನು. ಆ ಹುಡಿಗಿಯು ನರ್ತನದಲ್ಲಿ ಬಹಳ ಪ್ರವೀಣಳಾದ ವರ್ತಮಾನವು ಮುದುಕನಿಗೆ ಆಗಿಂದಾಗ್ಯೆ ತಿಳಿಬರುತಿತ್ತು. ಮಗಳು ಬಂದು ನನ್ನ ನರ್ತನದ ಕೌಶಲ್ಯವನ್ನು ನೋಡೆಂದು ತಂದೆಗೆ ಹಿಂದೆರಡು ಸಾರಿ ಹೇಳಿಕೊಂಡಳು. ಆದರೂ ಅವನು ಹೋಗಲಿಲ್ಲ. ಕಡೆಯಲ್ಲಿ ಆ ಹುಡಿಗಿಯ ಶಿಕ್ಷಕಳು ಆಗ್ರಹಪಟ್ಟದ್ದರಿಂದ ಮುದುಕನು ಒಂದುರಾತ್ರಿ ಮಗಳ ನರ್ತನವನ್ನು ನೋಡಲಿಕ್ಕೆ ಹೋದನು. ಆ ಕಾಲಕ್ಕೆ ತಾನು ನೋಡಿದ್ದನ್ನು ಮುದುಕನು ಈ ಪ್ರಕಾರ ಒಂದು ವರ್ತಮಾನ ಪತ್ರಿಕೆಗೆ ಬರೆದಿದ್ದಾನೇನೆಂದರೆ,—

"ಮಗಳ ಪದವಿನ್ಯಾಸವನ್ನೂ, ಹಾವಭಾವಗಳನ್ನೂ ನೋಡಿ ನನಗೆ ಸಂತೋಷವಾಯಿತು. ಮುಂದೆ ಕುಣಿಯುತ ಕುಣಿಯುತ ಆಕೆ ಒಂದು ಗಿರಿಕೆಯನ್ನು ಹೊಡೆದಳು; ಅದರಿಂದ ಆಕೆಯ ನಿಲುವಂಗಿ ದೂರ ಹಾರಿ ಆಕೆಯ ಮೊಣಕಾಲುಗಳು ಕಾಣಿಸಿದವು. ಮುಂದೆ ಕೆಲವು ಹೊತ್ತು ಕುಣಿದು ಮತ್ತೊಂದು ಗಿರಿಕೆ ಹೊಡೆದಾಗ ತೊಡೆಗಳು ಕಾಣಿಸಿದವು. ತರುವಾಯ ೩ ಸಾರಿ ಗಿರಿಕೆ ಹೊಡೆದಾಗ ಬತ್ತಲೆಯಾದ ಹಾಗೆ ನಡುವಿನ ವರಿಗೆ ಯಾವತ್ತು ಮರ್ಮಾವಯವಗಳು ಸ್ಪಷ್ಟವಾಗಿ ಕಾಣಿಸಿದವು. ಅವರಿಂದ ನನಗೆ ಬಹಳ ಸಿಟ್ಟುಬಂದು ಹುಡಿಗಿಯನ್ನು ಎರಡುಬೆಟ್ಟು ಹೊಡೆದು ಮನೆಗೆಳೆದುಕೊಂಡು ಬಂದೆನು; ಪುನಃ ನಾಟಕಶಾಲೆಗೆ ಕಳುಹಿಸಲಿಲ್ಲವು, ಎಂಬದು.

BANGALORE:—Printed and published at the KARNATAKA PRESS, No 40, HOSPITAL ROAD, PETTAH—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತ್ಯವಗಮಾರ್ಥ್ಯಕರ್ಣಾಟಕಪ್ರಕಾಶನವಜಿಜ್ಞಾಸ್ಯಂತ್ಯಪಾಹಿತೀಪೋವಿತಾ॥ ಮೃಗಾಂಕಹಿತಪಾಸರನಿಹಿತಮುದ್ರಣಾಸಜ್ಜನ್ಯದ್ದಿಶಾಸುಪರಿಶೋಬಿತಾದಿಶತಿವಾನಸಂಸುಕುಕಂ॥

Vol. XIX] BANGALORE—MONDAY, MAY 16, 1892. [No. 20.

ಸಂಪುಟ ೧೯.] ಬೆಂಗಳೂರು —ಸನ್ ೧೮೯೨ ನೇ ಇಸವಿ ಮೇ ೧೬ ನೇ ತಾರೀಖು ಸೋಮವಾರ. [ಸಂಚಿಕೆ ೨೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಪಾಕಟಿಲ್ಲದೆ	ಪರಸ್ಥಳದವರಿಗೆ ಪಾಸ್ಟೇಜ್ ಸೇರಿ
ಮುಂಗಡವಾಗಿ ಕೊಡುವವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡುವವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದರಖಾಸ್ತು ಮಾಡಿದ ತಾರೀಖಿನಿಂದ [illegible] ಒಂದು ತಿಂಗಳೊಳಗಾಗಿ ಚಂದಾ ಹಣವು ಕೊಡ [illegible] ವವರಿಗೆ ಮಾತ್ರವೆ ಅಡ್ವಾನ್ಸ್ ದರ [illegible] ಪತ್ರಿಕೆಯು ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ [illegible] ಮಾಗವಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡುವದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆಯದಕಾ ಪಜ್ತಿ ಒಂದಕ್ಕೆ ೦—೨—೦

ಎರಡನೆಯದಕಾ ಪಜ್ತಿ ಒಂದಕ್ಕೆ ೦—೧—೦

[illegible] ಎರಡನೆಯದಕ್ಕಿಂತ [illegible] ಪಜ್ತಿ ಒಂದಕ್ಕೆ [illegible] ಮಾಡಲ್ಪಡುವದು. ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು ಕಳುಹಿಸುವವರು [illegible] ಮಾಡಲ್ಪಡದೇ ಇದ್ದರೆ [illegible] ಸ್ಪಷ್ಟವಾಗಿ [illegible] ಪ್ರಕಟಿಸುತ [illegible] ಪ್ರಕಟಿಸಲ್ಪಟ್ಟವುಗಳ [illegible] ಪ್ರಕಟನೆಗಳನ್ನು [illegible] ಪ್ರಕಟನೆ [illegible] ಪತ್ರಿಕೆಗೆ ಕಳುಹಿಸ [illegible] ನಾವು [illegible] ಪ್ರಕಟಿಸುವದಿಲ್ಲ [illegible]

ADVERTISEMENTS

NOTICE.

VAIDYASARA SANGRAHA

A TREATISE ON THE CHIEF DISEASES [illegible]

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾವಳಿಕ್ಷೇಮುದ್ರ [illegible] ರಾಜಾ ವಾಡಿರತನ್ನವರ [illegible] ಸ್ತಕ ಕೂಡಲೇ ಕಳುಹಿಸಲ್ಪಡುವದು [illegible] ದರಖಾಸ್ತುಗಳಿಗೆ ಸೀಘ್ರ ಕೊಡಲ್ಪಡುವದು

ಇದರ ಕ್ರಯ—ಸ್ವಾಹಿಂಗ್ ಮತ್ತು ಅಂಚೇ ದಾಸಲ್ ರೆವಿಲ್ ಪ್ರತಿ ಒಂದಕ್ಕೆ ರೂ 5 0—0

ಟಿ. ಬಿ. ವೆಂಕಟಾಚಾರ್

ಬೆಂಗಳೂರ್. [illegible]

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭವಾದ [illegible] ವಾಗಿಯೂ ಶ್ಲಾಘ್ಯವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸದ್ಯಃ ಇಂಗ್ಲಿಷ್ ಕನ್ನಡ ಕೆಲಸ ಮಾತ್ರ [illegible] ಇತರ [illegible] ಗಳನ್ನು [illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ಡಿ ಮತ್ತು ಕಂಪನಿ.

ಕಮಿಷನ್ ಏಜಂಟ್ಸ್

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

[illegible] ಗಳು, [illegible] ಮುತ್ತುಗಳು [illegible] ಗಳು, ಜರ್ಮನ್ [illegible] ಪಾತ್ರಗಳು, ಕೇಸರಿ, [illegible] ಇವೇ ಮೊದಲಾದ ಸಾಮಾನುಗಳು.

[illegible]

ವಿಳಾಸ —ಗಣೇಶ ರಾಮಚಂದ್ರ ಕರ್ಡಿ

ಮತ್ತು ಕಂಪನಿ ಕಮಿಷನ್ ಏಜಂಟ್ಸ್,

[illegible]

THE BANGALORE SREENIVASA MANDIRAM

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ದ ಮಾರ್ಥವಾಗಿ ಏರ್ಪಡಿಸಲ್ಪಟ್ಟ ಅಕ್ಷಿ ಮತ್ತು ಅದರ ವಿನಿಯೋಗದ ರಿಪೋರ್ಟು ತೋರಿಸುವ ದಾಖಲೆ —

೧೮೯೨ನೇ ಇಸವಿ ಮೇ ೪ ನೇ ತಾರೀಖ್ ಮೊದಲು ಮೇ ೧೦ನೇ ತಾರೀಖ್ ವರಿವಿಗೆ —

ಅಕ್ಕಿ ವಸೂಲು ಮಾಡಿದ [illegible]	95
ಜನರಿಗಿಸಿದ [illegible]	52½
[illegible]	2
ಜಮ್ಲಾ	77½
[illegible] ಮಾಡಲ್ಪಟ್ಟ ಕೇವು	26½
[illegible]	29½
[illegible]	2
[illegible]	
[illegible]	7
[illegible]	6
[illegible]	7
[illegible]	14
[illegible]	1
ಜಮ್ಲಾ	4

ನೋಟೀಸ್.

[illegible]

ಬೆಂಗಳೂರು [illegible] ಪತ್ರಿಕೆಗಳನ್ನು [illegible] ಬರೆಯಬೇಕಾಗಿದೆ.

ದಕ್ಷಿಣ ಮಹರಾಷ್ಟ್ರ ರೈಲ್ವೆ.

ಸನ್ ೧೮೯೨ ನೇ ಇಸವಿ ಜುಲೈ ತಿಂಗಳ ಆಗಾಯಿತು ನಡೆಯುವ ಸಂವತ್ಸರದಲ್ಲಿ ಬೇಕಾಗಿರುವ ಇದರಡಿ ತಿಳಿಸಲ್ಪಡುವ ಸರಂಜಾಂಗಳ ಸರಬರಾಜ್‌ಬಗ್ಗೆ ದರಖಾಸ್ತುಗಳು ಕೇಳಲಾಗುತ್ತವೆ, ಮತ್ತು ಸದರೀ ದರಖಾಸ್ತುಗಳು ಸನ್ ೧೮೯೨ ನೇ ಇಸವಿ ಜೂನ್ ೧೫ನೇ ತಾರೀಖ್ ವರಿವಿಗೆ ಅಂಗೀಕರಿಸಲ್ಪಡುವವು.

೧ ಸ್ವದೇಶದ ತಯಾರೀಬಾಬತು ಚಿಲ್ಲರೆ ಸಾಮಾನುಗಳು.

೨ ಯೂನಿಫಾರ್ಮ್, ಕಂಬಳಿ, ಮತ್ತು ಟೋಪಿ ಬಟ್ಟೆಗಳು.

೩. ದಾಸ್ತಾನುಗಳು.

ಟೆಂಡರ್ ಷೆಡ್ಯೂಲಿನ ಛಾಪಾ ಹಾಕಿದ ನಮೂನೆಯಲ್ಲಿ ದರಖಾಸ್ತುಗಳನ್ನು ಬರೆದು ಕಳುಹಿಸತಕ್ಕದ್ದು. ೧, ೨, ೩ ನೇ ಬಾಬತು ಸಾಮಾನುಗಳ ವಿಷಯದಲ್ಲಿ ಸದರೀ ಛಾಪಾ ಹಾಕಿದ ನಮೂನೆಗಳನ್ನು ಧಾರ್ವಾಡದಲ್ಲಿರುವ ಸ್ಟೋರ್ ಕೀಪರಿಂದಲೂ, ಹಾಗೆ ಮಸ್ಸೆರೆ ಸಾಮಾನುಗಳ ವಿಷಯದಲ್ಲಿ ಧಾರವಾಡದಲ್ಲಿರುವ ಆಫೀಸಿನಿಂದಲೂ ನಮೂನೆ ಒಂದಕ್ಕೆ ೪ ಆಣೆ ರುಸುಂ ಕೊಟ್ಟು ಪಡೆಯಬಹುದು.

ಕಂಪೆನಿಯವರ ಯಾವ ಕನ್ಸೋಲಿ ಪಟ್ಟಿಯ ಮತ್ತು ಷರತ್ತುಗಳ ಮೇರೆ ಕಂಟ್ರಾಕ್ಟುಗಳು ಕೊಡಲ್ಪಡುತವವೋ, ಅವು ಟೆಂಡರ್ ಷೆಡ್ಯೂಲಿಗೆ ಪ್ರತಿ ಒಂದಕ್ಕೂ ಸೇರಿಸಲ್ಪಟ್ಟಿರುತವೆ. ಚಿಲ್ಲರೆ ಸಾಮಾನುಗಳು, ಯೂನಿಫಾರ್ಮ್, ಮತ್ತು ದಾಸ್ತಾನುಗಳ ವಿಷಯದಲ್ಲಿ ತಿಳಿಯಬೇಕಾದ ಜಾಸ್ತೀ ಅಂಶಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರಿಂದಲೂ, ಹಾಗೆ ಮಸ್ಸೆರೆ ಸಾಮಾನುಗಳ ವಿಷಯವನ್ನು ಧಾರವಾಡದಲ್ಲಿರುವ ಆಫೀಸಿನಿಂದಲೂ ತಿಳಿದುಕೊಳ್ಳಬಹುದು.

[illegible] ದು ಧಾರವಾಡದಲ್ಲಿರುವ ದಕ್ಷಿಣ ಮಹರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರ ಹೆಸರಿಗೆ ಕಳುಹಿಸತಕ್ಕದ್ದು.

ಸ್ವದೇಶದ ಬಾಬತು ಸಾಮಾನುಗಳ ಬಗ್ಗೆ ದರಖಾಸ್ತು.

ಯೂನಿಫಾರ್ಮ್, ಕಂಬಳಿ ಮತ್ತು ಟೋಪಿ ಬಟ್ಟೆಯಬಗ್ಗೆ ದರಖಾಸ್ತು.

ದಾಸ್ತಾನುಗಳ ಬಗ್ಗೆ ದರಖಾಸ್ತು.

ಹಾಗೆ ಮಸ್ಸೆರೆ ಬಗ್ಗೆ ದರಖಾಸ್ತು, ಯೆಂಬದಾಗಿ ಅವಾ ಸಾಮಾನುಗಳಿಗೆ ತಕ್ಕಂತೆ ಇರಬೇಕು.

ಏಜಂಟರವರು ಈ ದರಖಾಸ್ತುಗಳಾಗಲಿ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

ಏಜಂಟರ ಆಫೀಸ್,
ಧಾರವಾಡ,
೩೦ ನೇ ಮೇ ೧೮೯೨.

J. CAMPBELL,
Agent

ಬೆಂಗಳೂರು ಸಿಟಿ ಮ್ಯೂನಿಸಿಪಲ್ ಬೋರ್ಡ್ ಆಫೀಸಿನಿಂದ.

ಇಸ್ತಿಹಾರ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ವಿಕ್ರಯಕ್ಕೆ ಬಿಡಲ್ಪಟ್ಟ ಈ ವಾರ್ಡಿನಲ್ಲಿ ಅಂಥ ಕಟ್ಟಡಗಳ ಛಾವಣಿ, ಕಲ್ಲು ವಗೈರೆ ಸಾಮಾನುಗಳನ್ನು ಕಿತ್ತುಕೊಂಡು ಹೋಗತಕ್ಕ ಬಗ್ಗೆ

ಸ್ಟೇಷನ್ ರೋಡಿನಲ್ಲಿ 26, 27, [illegible] ಮತ್ತು [illegible] ವಸ್ತು	ಬರುವ ಮಾಹೆ 19, 20, 21, 24 ನೇ ತಾರೀಖುಗಳ [illegible] 7½ ಘಂಟೆಗೆ ಸದರೀ ಪ್ಲಾಟುಗಳ [illegible] ಮಾಡಲ್ಪಡುತ್ತಿರುವುದರಿಂದ ಇಷ್ಟ ಪಡುವವರು ಆ ವೇಳೆಗೆ ಸರಿಯಾಗಿ ಹಾಜರಿದ್ದು ಸವಾಲ್ ಮಾಡಿ ಪಡೆಯಬಹುದು

೨, ಈ ಸಾಮಾನುಗಳನ್ನು ಸವಾಲ್ ಮಾಡಿದ ಕೂಡಲೆ ಸವಾಲ್ ಮೊಬಲಗು ಪೂರಾ ಹಾಜರೀ ಮಾಡಿ ರಸೀದಿ ಪಡೆದು ೬ ದಿವಸದೊಳಗಾಗಿ ತೆಗೆದುಕೊಳ್ಳತಕ್ಕ ಸಾಮಾನುಗಳನ್ನು ಆ ಜಾಗದಿಂದ ತಮ್ಮ ಸ್ವಂತ ಖರ್ಚಿನಿಂದ ಸಾಗಿಸಿಕೊಂಡು ಆ ಸ್ಥಳವನ್ನು ಖುಲ್ಲಾ ಮಾಡಿಬಿಡತಕ್ಕದ್ದು.

3 ಸವಾಲ್ ಮೊಬಲಗು ಹಾಜರೀ ಮಾಡದೆಯೂ ಮೇಲೆ ಹೇಳಿದ ಮೇರೆಗೆ ಸಾಮಾನು ಸಾಗಿಸಿಕೊಳ್ಳದೆಯೂ ಇದ್ದರೆ [illegible] ಅದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗು [illegible] ವಸೂಲ್ ಮಾಡಲ್ಪಡುತ್ತಲ್ಲದೆ ವಸೂಲ್ ಬಾಕಿ ಇರುವ ಮೊಬಲಗು [illegible] ಕೊಳ್ಳಲ್ಪಡುತ್ತೆ, ತಿಳಿಯುವದು.

ತಾರೀಖ್ 11 ನೇ ಮಾಹೆ ಮೇ,
ಸನ್ 1892 ನೇ ಇಸವಿ

M. ANKAJI RAO,
For President,
City Municipal Commission

THE MONEY MARKET.

ಮದರಾಸ್, ಶನಿವಾರ, ತಾರೀಖು 14 ನೇ ಮೇ 1892.

ಸೇಕಡ ೪ರೂ ಬಾಬತು ಗವರ್ನಮೆಂಟ್ ಪತ್ರಗಳು, ೧೦೦ ರೂಪಾಯಿಗಳು, 108-8-0 ಇಂದ 108 14-0 ವರೆಗೆ

ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 930 ರಿಂದ ಯಿತು 9೩ ವರೆವಿಗೆ,

ಅಗ್ರಾ ಮತ್ತು ಮಾಸ್ಟರ್‌ಮನ್ಸ್ ಬ್ಯಾಂಕ್ ಷೇರುಗಳು, (100) ಬಾಬತು 165 ರಿಂದ 170 ವರೆವಿಗೆ,

ಸವರಿನುಗಳು, 15–15–0

ಬ್ಯಾಂಕುಬಿಲ್ಲುಗಳು ದಾನಿದತ್ತವಸೂಲಿಗಳು ಲಂಡನ್ನಿಗೆ

6 ತಿಂಗಳವಾಯಿದೆಗೆ, 1s. 3 9/16 d.

ಹಾಗೆ 4 ತಿಂಗಳ ವಾಯಿದೆಗೆ, 1s 3¼ d.

ಹಾಗೆ ಕೇಳಿದಾಗ, 1s. 3 13/32 d.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 16, 1892

೧೮೯೨ನೇ ಇಸವಿ ಮೇ ತಾ|| ೧೬ ನೇ ಸೋಮವಾರ

THE TREE AND THE FRUIT

ಮಕ್ಕಳನ್ನು ಬಾಲ್ಯದಲ್ಲಿಯೇ ಶಿಕ್ಷಿಸಿ ಅವರ ಗುಣವರ್ತನಗಳನ್ನು ತಿದ್ದಿ ಕ್ರಮಪಡಿಸಬೇಕಾದುದು ಆವಶ್ಯಕವೆಂಬ ಅನುಭವಶಾಲಿಗಳ ಮಾತು ಸಟೆಯಲ್ಲವು. ಮಗುವು ಜನಿಸಲಿಕ್ಕೆ ನೂರು ಸಂವತ್ಸರಗಳಿಗೆ ಪೂರ್ವವೇ ಅದರ ವಿದ್ಯಾಭ್ಯಾಸವು ಉಪಕ್ರಮಿಸಲ್ಪಡತಕ್ಕದ್ದೆಂಬುದು ಕೆಲವರ ಮತವಾಗಿರುತ್ತದೆ. ಈ ಅಭಿಪ್ರಾಯದಲ್ಲಿ ಬಹಳಮಟ್ಟಿಗೆ ನಿಜವಿಲ್ಲದೆ ಹೋಗಲಿಲ್ಲವು. ಮಗುವು ತನ್ನ ತಾಯಿತಂದೆಗಳ ಮತ್ತು ತನ್ನ ಪೂರ್ವಿಕರ ಸದಸದ್ಗುಣಗಳನ್ನು ಬಹಳ ಮಟ್ಟಿಗೆ ಪಡೆಯುತ್ತದೆ. ಆದುದರಿಂದ ಆ ಮಗುವಿನ ಗುಣಗಳನ್ನು ಅದರ ತಾಯಿ ತಂದೆಗಳಿಂದ ನಿರ್ಧರಿಸಿ ತಿಳಿದುಕೊಳ್ಳುವದಕ್ಕೆ ಸಾಧ್ಯವಾಗುತ್ತದೆ. ಇದರೀ ಯವರ ಗುಣಗಳು ಯಾವ ರೀತಿಯಾಗಿರ ... ಮವಾಗಿರುತ್ತದೆ. ಒಬ್ಬ ಮನುಷ್ಯನು ನೀತಿವಂತನಾಗಲಿಕ್ಕೆ ವಿದ್ಯಾಭ್ಯಾಸದಮೂಲಕ ಸಕಲ ನಿರ್ಬಂಧಗಳನ್ನು ವನಿಗುಂಟುಮಾಡಿದಾಗ್ಯೂ ಪಾರಂಪರ್ಯವಾಗಿ ಅನುಸರಿಸಿ ಬಂದ ಆತನ ದುರ್ಗುಣಗಳು ತಮ್ಮ ಶಕ್ತಿಯನ್ನೇ ವ್ಯಾಪಕಗೊಳಿಸುವದು ಆಗಿಂದಾಗ್ಯೆ ನೋಡುತಲಿದ್ದೇವೆ. ಪರಂಪರಾಗತವಾದ ಒಳ್ಳೆಯ ಕೋರಿಕೆಗಳುಸಹ ವಿದ್ಯಾಭ್ಯಾಸಬಲದಿಂದುಂಟಾಗಬಹುದಾದ ಪ್ರಯೋಜನಕ್ಕೆ ಪೂರ್ವವೇ ಮಗುವಿನ ವರ್ತನದಲ್ಲಿ ಸೇರಿಯನ್ನು ಸ್ವತಃ ವೃದ್ಧಿಯನ್ನೈದುತ್ತವೆ. ಇದರಿಂದ ಗುಣಪರಿಷ್ಕರಣದಲ್ಲಿ ವಿದ್ಯೆಗುಂಟಾದ ಶಕ್ತಿಯನ್ನು ಈ ಪ್ರಪಂಚದಲ್ಲಿ ಮನುಷ್ಯನೆನ್ನಿಸಿಕೊಳ್ಳಲಿಕ್ಕೆ ಅರ್ಹನಾಗುವ ಬಗ್ಗೆ ತಾನು ಸ್ವತಃ ಮಾಡಬೇಕಾದ ಪ್ರಯತ್ನಗಳನ್ನೂ ನಾವು ನಿರಾಕರಿಸತಕ್ಕವರಲ್ಲವು. ಪರಂತು ನಮ್ಮ ಅಭಿಪ್ರಾಯವೇನಂದರೆ, ಪರಂಪರಾಗತವಾದ ಕೋರಿಕೆಗಳು ಯಾವಾಗಲು ಆತ್ಮಾಭಿವೃದ್ಧಿಗೆ ಸಹಾಯಕವಾಗಿಯಾದರೂ ಅಥವಾ ಅಡ್ಡಿ ಪಡಿಸತಕ್ಕದ್ದಾಗಿಯಾದರೂ ಇರುವುದೆಂಬದು. ಈ ಸಿದ್ಧಾಂತದಿಂದ ಒಂದುಕಡೆ ಮಾತಾಪಿತೃಗಳು ತಮ್ಮ ಗುಣಗಳಿಂ ಪರಿಷ್ಕರಿಸಿಕೊಂಡು ತನ್ಮೂಲಕ ತಮ್ಮ ಮಕ್ಕಳಿಗೆ ನೀತಿ ಮತ್ತು ಆತ್ಮಸಂಬಂಧವಾದ ಸದ್ಭಾವವನ್ನುಂಟುಮಾಡಲಿಕ್ಕೆ ತಮಗಿರುವ ಉತ್ತರವಾದಿತ್ವ ಅವರ ಸ್ಮರಣೆಗೆ ಬರುವುದು. ಅದೇ ರೀತಿ ಮತ್ತೊಂದುಕಡೆ ಸದರೀ ಸಿದ್ಧಾಂತವು ಮನುಷ್ಯನ ಭವಿಷ್ಯತ್ತಿನ ವಿಷಯಕವಾದ ಒಂದು ಕೋರಿಕೆಯಂ ನಮ್ಮ ಹೃದಯದೊಳುಂಟುಮಾಡುವುದು. ಮನುಷ್ಯನ ಪೂರ್ವವಿದ್ಯಾಭ್ಯಾಸದ ಪ್ರಯೋಜನಗಳೆಲ್ಲ ಕಾಲಾಂತರದಲ್ಲಿ ಕ್ಷೀಣವಾಗಿ, ಅದರಿಂದ ಮುಂದೆ ಜನಿಸತಕ್ಕ ತತ್ಸಂತತಿಯವರಿಗೆಲ್ಲ ಸರ್ವೋತ್ಕೃಷ್ಟವಾದ ಗುಣಗಳುಂಟಾಗಿ ಅವರು ಅನುಸರಿಸಿ ಬರುವವು. ಇಂಥಾ ಶ್ರೇಷ್ಠ ಗುಣಗಳು ಮನುಷ್ಯನ ಜೀವಿತಕಾಲದಲ್ಲಿ ವಿದ್ಯಾಭ್ಯಾಸದಿಂದುಂಟಾಗುವ ಜ್ಞಾನವಿಕಾಸಕ್ಕೆ ಸಹಕಾರಿಯಾಗಿ, ನಿಜವಾದ ಮಾನುಷ ಪರ್ಯಾಪ್ತಿಗೆ ಸುಲಭಪಡಿಸುತ್ತವು. ವಿದ್ಯಾಭ್ಯಾಸದ ಉದ್ದೇಶವು ಮನುಷ್ಯನ ಉದಾರ ಹೃದಯವನ್ನೂ ಮನಸ್ಸನ್ನೂ ಹೋಗುವದಿಲ್ಲವು. ಪೂರ್ವ ವಿದ್ಯಾಭ್ಯಾಸದಿಂ ಮಾನವಗುಣದೊಳುಂಟಾಗತಕ್ಕ ಪ್ರಯೋಜನವು ಇದುವರೆವಿಗೆ ದೃಶ್ಯವಾಗಿರುತ್ತದೆ. ನಾಗರಿಕರಾದ ಮಾತಾಪಿತೃಗಳ ಕೆಲ ವರುಷಗಳ ವಯಸ್ಸಿನ ಒಂದು ಮಗುವಿಗೂ, ನಾಗರಿಕರಲ್ಲದವರ ಸಮಾನ ವಯಸ್ಸಿನ ಮತ್ತೊಂದು ಮಗುವಿಗೂ ಇರುವ ಗುಣತಾರತಮ್ಯವು ಪರಿಶೀಲಿಸಲು, ಯೆರಡನೆಯದಕ್ಕಿಂತಲೂ, ಮೊದಲನೆಯದು ವಿಶೇಷ ವಿಷಯಗ್ರಾಹಕತಾ ಶಕ್ತಿಯುಳ್ಳದ್ದಾಗಿಯೂ ವಿದ್ಯಾಭ್ಯಾಸಾರ್ಹವಾದುದಾಗಿಯೂ ಸಂಭಾವಿತಗಳಾದ ನಡವಳಿಕೆಗಳಿಗೆ ಅವಕಾಶವುಳ್ಳದ್ದಾಗಿಯೂ, ನೀತಿ ಮತ್ತು ಜ್ಞಾನಾಭಿವೃದ್ಧಿಯಲ್ಲಿ ತೀವ್ರವೃದ್ಧಿಯುಳ್ಳದ್ದಾದುದಾಗಿಯೂ ಇರುವುದು. ಮೇಲೆ ಕಂಡ ವಿಷಯಗಳನ್ನೆಲ್ಲ ಪರ್ಯಾಲೋಚಿಸಲಾಗಿ ಪ್ರತಿ ಮನುಷ್ಯನಿಗೂ ಸ್ವಾರ್ಥವಾಗಿ ಯಲ್ಲದೆ ತನ್ನ ಸಂತತಿಯವರ ಪ್ರಯೋಜನ ನೋಡಿ ಜನೋದ್ದೇಶದೊಡನೆ ಸಹ ತನ್ನ ಸ್ವಭಾವನ್ನಭಿವೃದ್ಧಿ ಪಡಿಸಿಕೊಳ್ಳತಕ್ಕದುದು ಅತ್ಯಾವಶ್ಯಕವೆಂದೇರ್ಪಡುತ್ತದೆ.

ಒಬ್ಬ ಮನುಷ್ಯನು ತನ್ನ ಉತ್ತರಕಾಲೀನರಿಗೆ ನಿರವಧಿಕವಾದ ಧನವನ್ನಾರ್ಜಿಸಿಡಲಿಕ್ಕೆ ಪ್ರಯತ್ನಪಡುವದಕ್ಕಿಂತಲೂ ಪ್ರಯೋಜನಕರಗಳಾದ ಸದ್ಗುಣಗಳುಂಟಾಗಲಿಕ್ಕೆ ಜೀವಿತ ಅವರಿಗ ಳಂಕಲ್ಪಿಸಿದರಿಕ್ಕೆ ವಿಶೇಷತಃ ಪ್ರಯತ್ನಪಡುವದು ಆವಶ್ಯಕವಾಗಿರುತ್ತದೆ. ಸದ್ಗುಣಗಳು ಕಳ್ಳರು ಮೊದಲಾದವರಿಂದೆಂದಿಗೂ ಅಪಹರಿಸಲ್ಪಡತಕ್ಕವಲ್ಲವು, ಮತ್ತು ಅವು ಯಾವವಿಧವಾ ನಿಗಳಿಗೂ ವಿಷಯಗಳಾಗಲಾರವು. ಐಶ್ವರ್ಯವು ದೈವಿಕ ಮಾನುಷಗಳಾದ ಸಕಲವಿಧ ನಷ್ಟಗಳಿಗೂ ಪಾತ್ರವಾಗಿ ಕಡೆಗೆ ಅದು ಆತ್ಮಾನಿಷ್ಟ ... ರ್ಯವು ಯಾವ ಪ್ರಯೋಜನವಂ ಕೋರಿ ಕೇಜಿಸಿಡಲ್ಪಡುತ್ತದೋ ಅಂತವರಿಗೆ ಅದು ಬಾಧಕವಾಗಿಯೂ, ಸಕಲ ಪೌರುಷದ ನಿವಾರಕವಾದುದಾಗಿಯೂ, ಶಾಂತಿ ತೆಮದವನ್ನೂ ಗುಣಗಳನ್ನೂ ಕೊಡವನ್ನಿಯ್ಯದೆ ಅಹಂಕಾರಾದಿ ತಾಮಸಗುಣವರ್ಧಕವಾದುದಾಗಿಯೂ, ಸುಲಭವಾಗಿ ಅಸತ್ತಕ್ಕ ತುಚ್ಛೋಪಭೋಗಗಳಿಂದ ನೀತಿಧರ್ಮಗಳಿಂ ಹೋಗಮಾಡತಕ್ಕದ್ದಾಗಿಯೂ ಇರುತ್ತದೆ. ಮೇಲೆ ನಾವು ತಿಳಿಸಿದ ಗುಣವಿಚಾರವನ್ನು ವ್ಯತ್ಯಕ್ತಧನಕಾರಣದಕ್ಕೇನ ಬಾಧಿಸಬಹುದಾಗಿರದಿದ್ದಾಗ್ಯವರೆ.—ತಾದೃಶ ಗುಣಗಳಲ್ಲಿ ಸ್ವಲ್ಪವಾದರೂ ತತ್ಸಂತತಿಯವರಿಂದ ಅನುಭವಿಸಲ್ಪಡದೆ ಹೋಗುವದಿಲ್ಲವು. ದುರ್ಗುಣದಿಂದ ಧನಿಂದಾಲೋಚಿಸಿದ್ದಾಗ್ಯೂ ಅದು ಪ್ರತ್ಯಕ್ಷ ರೂಪೇಣ ಭಾವಿಸಬಹುದು. ನಾವು ಗುಣಜ್ಞರಾದವರ ಮನೆಯಲ್ಲಿ ಜನಿಸಿದಮಾತ್ರದಿಂದಲೂ ಮಗುವಿಗೆ ತಿಳಿಯಬೇಕಾದ ಉತ್ತಮ ವಿಷಯ ಪ್ರಯೋಜನವೇ? ಅಂತಾ ಸ್ವಭಾವನೆಯುಂಟಾದ ಮಗುವು, ಪರಿಷ್ಕಾರಗಳಾದ ಸಮಯದಲ್ಲಿ ಯೂ, ಧೈರ್ಯಯುಂಟಾಗುವಾಗಲೂ ತನ್ನ ಮಾತಾಪಿತೃಗಳ ಗೌರವಾನುಗುಣವಾಗಿ ವರ್ತಿಸುತ್ತ, ತತ್ಪುತ್ರನೆನ್ನಿಸಿಕೊಳ್ಳಲಿಕ್ಕೆ ಸ್ವತಃ ಶಕ್ತನಾಗುವುದು. ಮಾತಾಪಿತೃಗಳು ಗುಣಶಾಲಿಗಳಾಗಿರುವದರಿಂದ ಸಮಯಾಚಾರ ಸಂಬಂಧಗಳಾದ ಪ್ರಯೋಜನಗಳನ್ನುತವಾಗಿರುವದರಿಂದ ಅವು ಇಲ್ಲಿ ತಿಳಿಸುವದನಾವಶ್ಯಕವು. ಬ್ರಾಹ್ಮಣೋತ್ತಮರ ಪುತ್ರರು, ಅನ್ಯರ ನಂಬಿಕೆಗೂ ಗೌರವಕ್ಕೂ ವಿಷಯರಾಗಬಲ್ಲರು. ಪ್ರಾಯೇಣ ಅಂತಾ ಗೌರವ ವಿಶ್ವಾಸಗಳು ಅನ್ಯಾನಗಳಲ್ಲಿ ಅಕ್ರಮವಾಗಿದ್ದಡೆತಕ್ಕವಾಗಿದ್ದರೂ, ಪರ್ಯವಸಾನವಾತು ಮೇಲೆ ಕಂಡವಕ್ಕಿಂತಲೂ ಅನ್ಯದವಾಗಿರಲಾರದು. ಮಾತಾಪಿತೃಗಳ ನಡತೆಯು ಪ್ರತ್ಯಕ್ಷ ಧನಕಾರಣಕ್ಕೇನ ತಿಳಿಸಿದವಷ್ಟು. ಅದು ಮಗುವಿನ ಜೀವನಕ್ಕೆಷ್ಟುಮಟ್ಟಿಗೆ ಸಹಕಾರಿಯಾಗಿರುವದೆಂಬದಂ ಸ್ವಲ್ಪ ಆಲೋಚಿಸುತ್ತೇವೆ. ಬೋಧನೆಗಿಂತಲೂ ನಿದರ್ಶನವು ಶ್ರೇಷ್ಠವೆಂದು ಪ್ರಾಚೀನರು ತಾತ್ಪರ್ಯ ಪಟ್ಟಿರುತ್ತಾರೆ. ಈ ಗಲೂ ಇದು ಸಾಮಾನ್ಯೋಕ್ತಿಯಾಗಿರುತ್ತದೆ. ಆದುದರಿಂದ ಅದಕ್ಕಿಂತಾಗಿರುವ ವ್ಯಾಪಕತ್ವವು ಅದ್ಯಾಪಿ ಹೋಗಲಿಲ್ಲವು. ಮಾತಾಪಿತೃಗಳ ವರ್ತನದಿಂದ, ಅವರ ಪುತ್ರನು ಐಹಿಕಕ್ಕಿಂತಲೂ ಆತ್ಮವಿಚಾರದಲ್ಲಿ ದನ್ನ ತಾನುತಂದೆಗಳ ಬಹಳ ಅನುಕರಣವನ್ನುಳ್ಳವರಾಗಿದರೆಂಬುದಂ ತಿಳಿದುಕೊಳ್ಳತಕ್ಕದ್ದು. ಆಧ್ಯಾತ್ಮಿಕವಿದ್ಯೆಯವಿಚಾರವಿಹೀನನಾದ ಕುಟುಂಬದಲ್ಲಿ ಜನಿಸಿ ಅವೃತ್ತ ತಿಳಿಯುತ್ತ ಬಾಲಕನೊಬ್ಬನಿಗೆ ದೈವದತ್ತವೆಂಬದು ದ್ರಾಗುಂಟಾಗುವುದು ? ಅಕಟಾ ! ಯಾವ ಗೃಹದಲ್ಲಿ ಮುಖ್ಯವಾಗಿ ನಡೆಯತಕ್ಕವು ಆರಾಧಿಸಲ್ಪಡುತ್ತಲಿರುವದೋ, ಎಲ್ಲರ ಜನವೇ ಮುಖ್ಯ ಧರ್ಮವಾಗಿ ತೋರುವದೋ, ಅವರೋ, ಬಲ್ಲಿ ಸ್ವಾಮಿ ಪ್ರತ್ಯಕ್ಷ ... ತಪರಿಬಾವನೆಯೊಡನೆ ಪುರಸ್ಕರಿಸಲ್ಪಡದೆ ಸ್ವದಾನಪುರಸ್ಸರವಿಲ್ಲದಿರುವವೋ, ಯಾವ ಕುಟುಂಬದ ಜನರ ಕೇಳ್ವಿಕೆಯಲ್ಲಿ ... ಕೊಡದಿರುವುದೋ, ಯಾವ ಸಂಸಾರದಲ್ಲಿ ಪರದೂಷಣೆಯೇ ಸೌರಾಜ್ಯ ಪ್ರಸ್ತಾಪವಿಷಯವಾಗಿ ಏರ್ಪಟ್ಟಿರುವದೋ, ಯಾವ ... ಪುರುಷರ ಕೀರ್ತಿ ಗೌರವಗಳು ಸುಶಿಕ್ಷಿತರಾಗಿರಲಾರವೋ, ಬಲ್ಲಿ ಪ್ರಜಾನುರಾಗವೆಂಬದು ಕಾಣೆಲ್ಪಡವೋ, ಅಂತಾ ಕುಟುಂಬದಕರಿಗಳೆನಿಸಿಗೂ ಮಾನುಷಗುಣಸಂಪದಾರಾಗಲಾರರೆಂದು ನಿಜವಾಗಿ ಹೇಳುತ್ತೇವೆ. ಮುಖ್ಯವಾಗಿ ನಮ್ಮ ಬಾಲಕರಿಗೆ ನಾವು ದೈವಭಕ್ತಿಯನ್ನುಪದೇಶಿಸುತ್ತೇವೆ. ಅದರ ಅರ್ಥವೆಂಬುದಂ ... ಅವರಿಗೆ ತಿಳಿದ ಅನುಕರಣೀಯವನ್ನುಂಟುಮಾಡು ವದರಲ್ಲಿ ನಮ್ಮ ಜಾಣ್ಮೆ ಕೃತಿಯಂ ವಿನಿಯೋಗಿಸತಕ್ಕವರಾಗಿರುವದರಿಂದ ಏತನ್ಮೂಲಕ ಪ್ರಕೃಷ್ಟ ಸಂಬಂಧ ಮಾತ್ರವು ವ್ಯಕ್ತವಾಗುತಲಿದೇನಂದರೆ,—ಬಾಲಕರು ಸದ್ಗುಣಗಳಿಂದಲೂ ದನವನ್ನೇ ... ತ ಬರುತ್ತಿವೆ. ಮಾತಾಪಿತೃಗಳ ಗುಣವು ಸಾಂಸಾರಿಕ ವೃತ್ತಿಯಲ್ಲಿರುವ ಬಾಲಕರಿಗೆ ಕೇವಲ ಉಪಾದೇಯವೆಂಬದನ್ನೂ ಅದರಿಂದಾಕ ಪ್ರಯೋಜನಗಳುಂಟಾಗುತ್ತವೆಂಬದನ್ನೂ ಮುಂದಿನವಾರದಲ್ಲಿ ನಿರೂಪಿಸುವೆವು.

Occasional Notes

ನೈಮಿತ್ತಿಕ ವಿಷಯಗಳು.

The annual cost of German Army—ಜರ್ಮನೀ ದೇಶದ ಸೈನ್ಯಕ್ಕಾಗಿ ೧೮೯೧—೯೨ ನೇ ಇಸವಿಯಲ್ಲಿ ... ಯವಾಗಿರುತ್ತದೆ. ಸನ್ ೧೮೯೦—೯೧ ನೇ ಇಸವಿಗೆ ನಾಲ್ಕೂವರೆ ಕೋಟಿ ರೂಪಾಯಿಗಳು ಜಾಸ್ತಿ ಖರ್ಚು ಆದಾಗ ಮಾಡಲ್ಪಟ್ಟಿರುತ್ತದೆ.

Administration of Baroda—ಬರೋಡಾ ಗಾಯಕವಾಡ ಮಹಾರಾಜರವರು ಯೂರೋಪಿನಕ್ಕೆ ದಯಮಾಡಿರುತ್ತಾರೆಯಷ್ಟೆ. ಇವರ ಗೈರ್ಹಾಜರೀ ಕಾಲದಲ್ಲಿ ರಾಜ್ಯಕಾರ್ಯವು ಮಂತ್ರಾಲೋಚಕ ಸಭೆಯವರ ಸಹಾಯದಿಂದ ದಿವಾನರು ನಡೆಸುವರೆನಿಸಲ್ಪಡುವರು.

The Gackwar's trip to England—ಈ ತಿಂಗಳ ೬ ನೇ ತಾರೀಖು ಬರೋಡಾದ ಶ್ರೀಮಂತ ಸರ್ಕಾರ ಗಾಯಕವಾಡ ಮಹಾರಾಜರವರು ತಮ್ಮ ಬಾಯಿಯವರನ್ನೂ, ಮಕ್ಕಳನ್ನೂ ಸಹ ಕರೆದುಕೊಂಡು ಯೂರೋಪಿನಲ್ಲಿ ಇಂಗ್ಲಾಂಡದೇಶಕ್ಕಾಗಿ ಮುಂಬಯಿಯಲ್ಲಿ ಹಡಗು ಹತ್ತಿದರು.

Exemption from local taxation—ಲೋಕಲ್ ಸೆಸ್ಸುಗಳ ಅಧಿಕಾರ ಸರಹದ್ದಿನೊಳಗೆ ಇರುವ ಲಿಮಿಟೆಡ್ ಕಂಪೆನಿಗಳು ಕಟ್ಟತಕ್ಕವುಗಳು ಮಾತ್ರಕ್ಕೆ ಗುರಿಯಾಗತಕ್ಕದ್ದೆಂಬ ಜಿಲ್ಲಾ ಬೋರ್ಡುಗಳು, ಲೋಕಲ್ ಬೋರ್ಡ್ ಆಕ್ಟಿನ ... ನೇ ಇಸವಿಯಲ್ಲಿ ಹುಟ್ಟಿದ ಗವರ್ನಮೆಂಟು ಹುಕುಂ ಅನುಸರಿಸಿಯೂ ಸದರೀ ಕಟ್ಟತಕ್ಕವುಗಳು ಕಂಪೆನಿಯವರು ಗುರಿಯಾಗತಕ್ಕದ್ದಲ್ಲವೆಂದು ಮದರಾಸ್ ಗವರ್ನಮೆಂಟಿನವರು ನಿಣ೯ಯಿಸಿರುತ್ತಾರೆ.

Liberality of a native gentleman—ರಾಜಾ ಸರ್ ಸವಾಯಿ ರಾಮಸ್ವಾಮಿ ಮೊದಲಿಯಾರವರು ಧರ್ಮಕಾರ್ಯಕ್ಕಾಗಿ ಮಾರಳ ೧೫,೦೦೦ ರೂಪಾಯಿಗಳು ಕೊಟ್ಟರು. ಸದರೀ ಮೊಬಲಗು ಪ್ರತಿ ೩,೦೦೦ ರೂಪಾಯಿಗಳು ಕಾಂಚೀಪುರದ ಆಸ್ಪತ್ರೆಗಳಿಂದಾದುದಕ್ಕಾಗಿ ಸರ್ಕಾರ ... ಆಲ್ಬರ್ಟ್ ವಿಕ್ಟರ್ ಹಾಸ್ಪಿಟಲ್ ... ಮಹಿಳಾ ... ಮುನ್ಸಿಪಲ್ ... ಪಡಿಗೆ ಕಳುಹಿಸಲ್ಪಟ್ಟವು. ಉಳಿದ ಮೊಬಲಗು, ಮದರಾಸ್ ಪ್ರಸವಾಸ್ಪತ್ರೆಗಾಗಿ ಇದುವರೆವಿಗೆ ಕೊಡಲ್ಪಟ್ಟಿರುವ ೪೦,೦೦೦ ರೂಪಾಯಿಗಳಿಗೆ ಸೇರಿಸುವಂತೆ ಅಕೌಂಟೆಂಟ್ ಜನರಲವರಿಗೆ ಕಳುಹಿಸಲ್ಪಟ್ಟಿತು.

A Misapprehension.—ನ್ಯಾಯಾಲಯ ... ಯನ್ನು ... ಕೇಳಲ್ಪಡುವ ನಿರ್ಣಯ ... ಇವರ ... ಯನ್ನು ಹೇಳಿ ... ಕಂಪೆನಿಯವರೊಬ್ಬರು ಹೆಸರಾ ... ನ್ಯಾಯಾಲಯದ ಗೋಡೆಗಳು, ತಳ ... ನಾನಾವಿಧವಾದ ... ಪನ್ನ ... ಗಳ ... ಸಿಗಳ ಮನೆಗಳು ... ತ್ತವೆ. ಇದಕ್ಕೆ ... ಬಾಗಿಲು ... ಅದರ ... ಹೋಲ ... ಬಾಗಿಲು ದನ್ನ ... ತಾನೇ ಮುಚ್ಚಿಕೊಳ್ಳುತದೆ. ... ಕಾಯದನ್ನು ... ಮೊದಲಾದ ಕಾರ್ಯಗಳ್ನ ಕಳೆಯುತ್ತಾರೆ.

LOCAL AND PROVINCIAL NEWS

ಸ್ಥಳೀಯ ಮತ್ತು ಪ್ರಾಂತೀಯ ಸಮಾಚಾರಗಳು.

A Trip to Nandidroog—ಶಿವಾನಸಮುದ್ರ, ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರು, ಕಾರ್ಪೋರನ್ ... ಬೆಂಗಳೂರಿಂದ ... ರಾ ವಿನೋದಾರ್ಥ ನಂದಿಬೆಟ್ಟಕ್ಕೆ ಹೋಗಿರು ವಂತೆ ತಿಳಿಯಬರುತ್ತದೆ.

His Highness' return from Ooty—ಶ್ರೀಮನ್ಮಹಾರಾಜರವರು ಊಟಕಮಂಡಲದಿಂದ ಈಗಿನ ಏರ್ಪಾಟಿನ ಪ್ರಕಾರ ೨೫ ನೇ ತಾರೀಖಿನಲ್ಲಿ ಹೊರಟು ೨೦ ನೇ ತಾರೀಖಿಗೆ ರಾಜಧಾನಿಗೆ ದಯಮಾಡುವರೆಂದು ತಿಳಿಯಬರುತ್ತದೆ.

The weather—ಈಚೆಗೆ ಪ್ರತಿ ದಿನ ಸಾಯಂಕಾಲದಲ್ಲಿ ನಾಲ್ಕು ಘಂಟೆಗೆ ಮೋಡ ಮುಸುಕಿ ಪ್ರಬಲವಾದ ವರ್ಷ ಬರುವದೆಂಬದಕ್ಕೆ ಸೂಚಿತವಾದ ಪ್ರತ್ಯಾಕ್ಷೆಯನ್ನುಂಟುಮಾಡುತದೆ ದಲ್ಲಿ ಕೊರತೆ ಇಲ್ಲವು, ಪರಂತು ಪಲ್ಲವಾಗ ಯುಕ್ತವಾದ ಪ್ರತಿಯಂ ಹೋಗಲಾಡಿಸುವದಕ್ಕೆ ತಕ್ಕಷ್ಟು ವರ್ಷ ಒಂದು ದಿನವಾದರು ಬೀಳಲಿಲ್ಲವು. ಪಟ್ಟಣದ ಬಳಿ ಇರುವ ಕೆರೆ ಕುಂಟೆಗಳ್ಯಾವುದಕ್ಕೂ ನೀರು ಬರಲಿಲ್ಲವು, ಪರಸ್ಪರಿಯಲ್ಲಿ ... ಕೆರೆಗಳಿಗೆ ನೀರು ಬಂದಿರುವ ... ಬಡಗಿನ ... ದೆಸೆಯಿಂದ ... ದಾಗಿ ಪೀಡಿತವಾಗಿ ... ಉತ್ಪತ್ತಿಗಳಿಗೆ ಧಾರಣೆಗಳು ಸ್ವಲ್ಪ ಇಳಿದವೆ, ಜ್ವರರೋಗವು ಈಪಟ್ಟಣದಲ್ಲಿ ಬಹಳವಾಗಿ ವ್ಯಾಪಿಸಿದೆ. ಇತರ ವಿಷಯಗಳು ಯಥಾರೀತಿಯಾಗಿದೆ.

Official changes.—ನಮ್ಮ ವರದಿಗಾರರಿಂದ ... ದಿಂದ ತಿಳಿಯಬರುತದೇ ನೆಂದರೆ, ಮಿ|| ಶ್ರೀನಿವಾಸಯ್ಯಂಗಾರ್ಯರಿಗೆ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಕೆಲಸವನ್ನೂ, ಮಿ|| ಕೃಷ್ಣ ... ಬಿಡಿಗೆ ಡಿಸ್ಟ್ರಿಕ್ಟ್ ... ತಿರುಮಲಾಚಾರ್ಯರಿ ... ಅಸಿಸ್ಟೆಂಟ್ ಕಮಿಷನರ ಕೆಲಸ ... ಮಿ|| ಕೆ. ಮಹಮ್ಮದ ... ಚಿತ್ರದುರ್ಗದ

ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಶ್ನರ್ ಕೆಲಸವೂ, ಮ॥ ರಾಘವೇಂದ್ರರಾಯರಿಗೆ ಫ್ರೆಂಚ್‌ರಾಕ್ಸ್ ಸಬ ಡಿವಿಜನ್ ಕೆಲಸವೂ ಆಗುವದಾಗಿ ತಿಳಿಯ ಬರುತ್ತೆ.—ವೃ. ಚಿಂ.

The Birthday honors — ಈ ಸೆಲದ ಶ್ರೀ ಮತಿ ಮಹಾರಾಜ್ಞೀ ಇಂಡ್ಯ ಚಕ್ರವರ್ತಿನೀ ಯವರ ವರ್ಷವರ್ಧಂತಿಯ ದಿನ ಗೌರವಾರ್ಥ ಕೊಡತಕ್ಕ ಅಲ್ಕಾಬಗಳಿಗೆ ಲಾಯಖಾದ ಇವರ ಹಿಕಂತ ದೊಡ್ಡಮನುಷ್ಯರ ಹೆಸರುಗಳು ಇಂ ಡ್ಯ ಗವರ್ನಮೆಂಟನವರ ಪಟ್ಟಿಯಲ್ಲಿ ದಾಖಲಾಗಿ ವೆಯೆಂಬ ವರ್ತಮಾನವಂ ಕೇಳಲಿಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ಅವರುಗಳ್ಯಾ ರೆಂದರೆ,–ಇಲ್ಲಿನ ಬ್ರಿಟಿಷ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಿ. ಎಸ್. ಐ. ಯವರು, ದಿವಾನ ಮ॥ ಶೇಷಾದ್ರಿಅಯ್ಯರ್ ಸಿ. ಎಸ್. ಐ. ಯವರು, ಚೀಫ್ ಜಡ್ಜಿ ಮ॥ ಟಿ. ಆರ್. ಏ ತಂಬುಚಟ್ಟಿ ರವರು.

Temple servants' strike.— ನಂಜನಗೂ ಡಿನಲ್ಲಿರುವ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಿ ಗೆ ಕಳೆದ ಶನಿವಾರದ ದಿವಸ ಚಂತಾಮಣಿ ಅನು ಶಿವಾರದ ಉತ್ಸವವನ್ನು ಮಾಡಿಸಿ, ನೈವೇದ್ಯ ಕ್ಕಾಗಿ ೫೦ ಸೇರು ಅಕ್ಕಿ ಚಿತ್ರಾನ್ನವನ್ನು ಮಾಡಿ ಸಿದ್ದರು. ಅದರಲ್ಲಿ ಎಲ್ಲಾ ನೌಕರರಿಗೂ ನಿಸಿ ಯೋಗವಾದ ನಂತರ ಸ್ವಲ್ಪ ಅನ್ನವನ್ನು ವಾದ್ಯ ದವರಿಗೂ, ಸೂಳೆಯರಿಗೂ ಬಿಟ್ಟಿಗೆ ಹಂಚ್ಚಿ ಹಂಚಿಕೊಳ್ಳಿರೆಂದು ಹೇಳಲು, ಅವರು ತಾವೇ ಹಂಚಿಕೊಂಡು ಬೇಡವೆಂದು ಹೇಳಿದರಂತೆ. ಅದಕ್ಕೆ ಅಮಲ್ದಾರರು ಪ್ರತ್ಯುತ್ತರ ಕೊಟ್ಟವರನ್ನು ಆಚೆಗೆ ಕಳುಹಿಸಿರೆಂದು ಹೇಳಲು, ೧೬ ಜನ ಸೂ ಳೆಯರೂ ೩೦ ಜನ ವಾಲಗದವರೂ ಹೊರ ಟುಹೋದವರು ಬರಲೇ ಇಲ್ಲ. ಪರಂತು ದೇವ ತಾಸೇವೆಯೇನೋ ನಡೆಯುತಲಿದೆ.—ವೃ. ಚಿಂ.

A Rumour.—ಪ್ರೊಬೇಷನರಿ ಇನ್ಸ್‌ಪೆಕ್ಟರ್ ಜ ನರಲ್ ಮ॥ ರಿಕ್ಕೆಟ್ಸ್ಯವರು ಮ॥ ಆರ್. ಎಚ್ ಚೆಲುವರಾಯರವರ ಸ್ಥಾನದಲ್ಲಿ ಎಕ್ಸೈಸ್ ಕಮಿಶ್ನರರಾಗಿ ನಿಯಮಿಸಲ್ಪಡುವರೆಂತಲೂ, ಅ ವರ ಕೆಲಸಕ್ಕೆ ಬೆಂಗಳೂರ್ ಡಿಸ್ಟ್ರಿಕ್ಟ ಡೆಪ್ಯು ಟಿ ಕಮಿಶ್ನರರಾದ ಮ॥ ವಿ. ಪಿ. ಮಾಧವರಾಯರ ವರು ನೇಮಕವಾಗುವರೆಂತಲೂ, ಮ॥ ಫ್ರೇಜರ್ ಯ್ಯವರಿಗೆ ರಜಾ ಪೂರೈಸುತ ಬಂದದರಿಂದ ಅ ವರು ಬೆಂಗಳೂರ್ ಡಿಸ್ಟ್ರಿಕ್ಟ ಚಾರ್ಜನ್ನು ತೆ ಗದುಕೊಳ್ಳುವರೆಂತಲೂ ಈ ವಾರದಲ್ಲಿ ಬಲವಾದ ಪ್ರವಾದ ಪ್ರಬಲವಾಗಿರುತಿದೆ. ಮ॥ ವಿಜಯರಂಗಪ್ಪ ರಾಯರವರಿಗೆ ಜೇಮ್ಸ್ ಸಕ್ರೆಟರಿ ಕೆಲಸವು ನಿಶ್ಚ ಯವಾದ ಕಾಲದಲ್ಲಿ ಕೇಂದ್ರ ಷರಾಪ್ ವಿಚಾರಣೆ ಯು ಹ್ಯಾಗೆ ಇಡಿರಿತೋ ಬದಸ್ತೂರ್ ಪ್ರಕೃತ ಉದ್ಯೋಗ ನಿವಾರಣ ಕಾಲದಲ್ಲಿನ್ನೇನು ಕೂಡದ ಬೇಕಾಗಿದೆಯೋ ತಿಳಿಯಲಿಲ್ಲವು.

Local and irrigation cesses.—ಶ್ರೀಮನ್ ಮೈಸೂರ್ ಮಹಾರಾಜಾ ಸರ್ಕಾರದವರು ಕ ಳೆದ ಸಂವತ್ಸರದಲ್ಲಿ ಪ್ರಾಪ್ತವಾದ ದುರ್ಭಿಕ್ಷವ ನ್ನಾಲೋಚಿಸಿ, ರೈತ ಜನರಮೇಲೆ ನಿ ಗೇ ಇಟ್ಟ ಪರೀ ಕಂದಾಯ ಅಂದರೆ ಲೋಕಲ್ ಅನರ ತರೀ ಕಂದಾಯ, ಇನ್ನೂ ವಿಚಾರಿಸಿದರೆ ಲೋಕಲ್ ಅನರ ಭರ್ತಿಮಾಡಿ ತರೀ ಕಂದಾಯದ ಮೈಕೆ ಅರ್ಧಭಾಗವನ್ನು ಮುಂದೆ ಕೊಡುವುದಂತೆ ಹುಟ್ಟು ಹುಕುಂ ಕೊಟ್ಟ ಅದನ್ನು ಜಾರೀಯ ಲ್ಲಿ ತಂದಿರುತ್ತಾರೆ. ಒಂದುವೇಳೆ ಇದುವರಿವಿಗ ಕಂದಾಯವು ಅರ್ಧಕ್ಕಿಂತ ಜಾಸ್ತೀ ಬಸೂಲಾ ಗಿದ್ದರೆ ಅಂತಾ ಅಧಿಕ ಮೊಬಲಗನ್ನು ರೀಫಂಡ ಮಾಡತಕ್ಕದ್ದೆಂದು ಸಹ ಗವರ್ನಮೆಂಟಿನವರು ಹುಕುಂ ಮಾಡಿರುವದಕ್ಕಾಗಿ ಬಹಳ ಸಂತೋ ಷಿಸುತ್ತೇವೆ. ನೀರುಹಾರಿಗೆ ಸಿಗುವುದಲ್ಲಿ ಕೊ ಡ ಮೇಲೆ ಕಂಡಂತೆ ರಿಯಾಯಿತಿ ತೋರಿಸ ಲ್ಪಟ್ಟರುತಿದೆ. ಸರ್ಕಾರ್ ಜಮೀನುಗಳಿಗೆ ಇರಿ ಗೇಷನ್‌ಸೆಸ್ ಕಂದಾಯದಲ್ಲಿ ಲೀನವಾಗಿರುವದರಿಂ ದ ಅದು ಕುರಿತ ಚಿಂತ್ನೆಗೆ ಅವಕಾಶವಿಲ್ಲವೆಂ ದು ಭಾವಿಸಿದಾಗ್ಯೂ ಅದು ಇನಾಂಜಮೀನಿನ ಯದಲ್ಲಿ ಮಾತ್ರ ಬಾಧಕವಾಗಿ ಪರಿಣಮಿಸಿದೆ. ಸರ್ಕಾರೀ ಮತ್ತು ಇನಾಮತೀ ಜಮೀನುಗಳೆರಡ ಕ್ಕೂ ಲೋಕಲ್ ಸೆಸ್ ಅರ್ಧವಾಸಿ ಮಾಫಿ ಮಾಡ ಬೇಕಾದದ್ದು ನ್ಯಾಯವಾಗಿರುತಿದೆ. ಈ ವಿಷಯ ದಲ್ಲಿರುವರಿಗೆ ಖುದಿರವಾದ ಹುಕುಂ ಕೊಡಲ್ಪ ಟ್ಟಂತೆ ಕಾಣಲಿಲ್ಲವು. ಅದು ಕುರಿತು ಸಾಧ್ಯವಾ ದ ತ್ವರೆಯಲ್ಲಿ ತಾಲ್ಲೂಕುಗಳಿಗೆ ಏಪ್ಪ ಹುಕುಂ ಕೊಟ್ಟರೆ ರೈತರಿಗೆ ತಾಲ್ಲೂಕ ಅಧಿಕಾರಿಗಳ ಸ ಕೋಟಿಯು ತಪ್ಪುತಿದೆ. ಮಸಲಾ ಇನ್ನಿಗೇ ಷನ್‌ಸೆಸ್ಸನ್ನು ಸರ್ಕಾರ್ ಜಲ ಧಾರಯಲ್ಲಿ ಇನಾ ಮತಿ ತರೀ ಜಮೀನುಗಳಿಗೆ ಕೆಲವು ಡಿಸ್ಟ್ರಿಕ್ಟ ಗಳಲ್ಲಿ ವಸೂಲ್ ಮಾಡುತ್ತಾರೆ. ಇನ್ನೂ ಕೆಲವು ಡಿಸ್ಟ್ರಿಕ್ಟಗಳಲ್ಲಿ ತರೀ ಬಾಗಾಯಿತೆಂದು ಸರ್ವೆ ರಿಜಿಸ್ಟರ್‌ನಲ್ಲಿ ನಮೂದಿಸಲ್ಪಟ್ಟ ಮಾತ್ರಕ್ಕೆ ಸದ ರೀ ಸೆಸ್ ವಸೂಲ್ಮಾಡುತ್ತಾರೆ. ಹೀಗೆಯೇ ನೋ ಡೆಕಂಡ ವಿಷಯನ್ನ ಅವ್ಯವಸ್ಥಿತವಾಗುವದೆಂದು ತೋರುವದರಿಂದ ಈಗ ವ್ಯವಸ್ಥಿತವಾದ ಹು ಕುಂ ಆವಶ್ಯಕವಾಗಿರುತಿದೆ.

ಕಂಪೆನಿಯವರ ಯಾವ ಡೆಪ್ಯೂಟಿ ಪಟ್ಟಿಯು ಮತ್ತು ಷರತ್ತುಗಳ ಮೇಲೆ ಕಂಟ್ರಾಕ್ಟುಗಳು ಕೊಡಲ್ಪಡುವವೋ, ಅವು ಟೆಂಡರ್ಸ್ ಷೆಡ್ಯೂಲೆಂಬದಕ್ಕೆ ಪ್ರತಿ ಒಂದಕ್ಕೂ ಸೇರಿಸಲ್ಪಟ್ಟಿರುತ್ತದೆ. ಚಿಲ್ಲರೆ ಸಾಮಾನುಗಳು, ಯೆಣ್ಣೆ, ಮತ್ತು ದುಸ್ತುಗಳ ವಿಷಯದಲ್ಲಿ ತಿಳಿಯಬೇಕಾದ ಜಾಸ್ತೀ ವಿವರಗಳನ್ನು ಹುಬ್ಬಳ್ಳಿಯಲ್ಲಿರುವ ಸ್ಟೋರ್ ಕೀಪರರಿಂದಲೂ, ಕಾಗದ ವಗೈರೆ ಸಾಮಾನುಗಳ ವಿಷಯದಲ್ಲಿ ಧಾರವಾಡದಲ್ಲಿರುವ ಆಡಿಟರಿಂದಲೂ ತಿಳಿದುಕೊಳ್ಳಬಹುದು.

ದರಖಾಸ್ತುಗಳನ್ನು ಲಕೋಟೆಯಲ್ಲಿ ಹಾಕಿ ಸೀಲ್‌ಮಾಡಿ ಇವರಡಿ ಕಾಣಿಸುವಂತೆ ವಿಳಾಸ ಬರೆದು ಧಾರವಾಡದಲ್ಲಿರುವ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯ ಏಜಂಟರ ಹೆಸರಿಗೆ ಕಳುಹಿಸತಕ್ಕದ್ದು.

ಸ್ವದೇಶದ ಬಾಬತು ಸಾಮಾನುಗಳ ಬಗ್ಗೆ ದರಖಾಸ್ತು.
ಯೆಣ್ಣೆ, ಕೊಬ್ಬು ಮತ್ತು ಚಿಂದಿ ಬಟ್ಟೆಯಬಗ್ಗೆ ದರಖಾಸ್ತು.
ದುಸ್ತುಗಳ ಬಗ್ಗೆ ದರಖಾಸ್ತು.
ಕಾಗದ ವಗೈರೆ ಬಗ್ಗೆ ದರಖಾಸ್ತು, ಯೆಂಬದಾಗಿ ಆಯಾ ಸಾಮಾನುಗಳಿಗೆ ತಕ್ಕಂತೆ ಇರಬೇಕು.

ಏಜಂಟರವರು ಈ ದರಖಾಸ್ತುಗಳಲ್ಲಿ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲವು.

ಏಜಂಟರ ಆಫೀಸ್,
ಧಾರವಾಡ,
೨೦ ನೇ ಮೇ ೧೮೯೨.

J. CAMPBELL,
Agent.

THE BANGALORE SREENIVASA MANDIRAM.

ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜವಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ಪಟ್ಟಿ:—

೧೮೯೨ನೇ ಇಸವಿ ಮೇ ೨ನೇ ತಾರೀಖು ಮೊದಲು ಮೇ ೨೮ನೇ ತಾರೀಖು ವರಿವಿಗೆ —

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	97
ಜವಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	58½
ಗತವಾರದ ಶಿಲ್ಕು ಸೇರು	...	32
ಜಮಲಾ	...	90½
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	..	29
ಖರ್ಚಾದ ಅಕ್ಕಿ ಸೇರು	...	21½
ಜ. ತ. ಬಾಕಿ	..	40

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲು.

ಆಳುಗಳು	...	7
[illegible] ವಿದ್ಯಾರ್ಥಿ	...	3
[illegible] ವಿದ್ಯಾರ್ಥಿಗಳು	...	11
[illegible] ವಗೈರೆಸಂಖ್ಯೆ		16
ಪ್ರಯಾಣಸ್ಥರು	...	9
ಜಮಲಾ	...	4[illegible]

ಜೀವದಯೆ.

[illegible]

ಸ್ವಪ್ನದಸ್ಥೆ.

[illegible]

THE MONEY MARKET.

ಮದರಾಸು, ಶನಿವಾರ, ತಾರೀಖ್ 28 ನೇ ಮೇ 1892

ಸೇಕಡ 4ರ ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 108-14-0 ಇಂದ 109-4-0 ರವರೆಗೆ.

ಮದರಾಸ್ ಬ್ಯಾಂಕ್ ಷೇರ್‌ಗಳು, (500) ರೂಪಾಯಿಗಳ ಬಾಬತು 945 ಲಾಗಾಯಿತು 950ವರೆಗೆ

ಕಮರ್ಷಿಯಲ್ ವ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರ್‌ಗಳು, (100) ಬಾಬತು 165 ರಿಂದ 170 ವರೆಗೆ.

ಸವರನ್‌ಗಳು, 15-12-0

ಬ್ಯಾಂಕ್‌ಬಿಲ್‌ಗಳು ಯಾನೆ ದೃಷ್ಟಹುಂಡಿಗಳು, ಲಂಡನ್ನಿಗೆ, 6 ತಿಂಗಳವಾಯಿದೆಗೆ, 1s. 3 15/32 d.

ಡಿಟೋ 4 ತಿಂಗಳ ವಾಯಿದೆಗೆ, 1s 3 13/32 d.

ಡಿಟೋ ಕೇಳಿದಾಗ, 1s. 3 5/16 d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, MAY 30, 1892

೧೮೯೨ನೇ ಇಸವಿ ಮೇ ತಾ|| ೩೦ ನೇ ಸೋಮವಾರ.

PAST AND PRESENT.

ಕೃತತ್ರೇತಾದ್ವಾಪರ ಕಲಿಯೆಂಬ ಯುಗ ಚತುಷ್ಟಯಗಳಲ್ಲಿಯೂ ಪ್ರಜೆಗಳೂ ತತ್ಪರಿಪಾಲಕರಾದ ಅರಸರೂ ಮಾರ್ಗ ಚತುಷ್ಟಯಗಳಂ ಅನುಷ್ಠಾನದಲ್ಲಿ ತಂದುಕೊಳ್ಳುತ ಬಂದರು, ಹ್ಯಾಗೆಂದರೆ.—ಕೃತಯುಗದವರು ಪಾರಮಾರ್ಥಿಕವನ್ನೂ, ತ್ರೇತಾಯುಗದವರು ಪಾರಮಾರ್ಥಿಕ ವ್ಯವಹಾರವನ್ನೂ, ದ್ವಾಪರ ಯುಗದವರು ವ್ಯವಹಾರ ಪಾರಮಾರ್ಥಿಕವನ್ನೂ, ಕಲಿಯುಗದವರು ಶುದ್ಧ ವ್ಯಾವಹಾರಿಕವನ್ನೂ ಅನುಸರಿಸುತಬಂದಂತೆ ನುಡಿಯಬಹುದು. ಕೃತಯುಗದಲ್ಲಿದ್ದ ಪ್ರಜೆಗಳೂ ಅರಸರೂ ಕೇವಲ ಪಾರಮಾರ್ಥಿಕವನ್ನೇ ಮುಖ್ಯವಾಗಿ ಪರಿಭಾವಿಸಿ, ರಾಜ್ಯ ಪರಿಪಾಲನಾದಿಗಳಿಗೆ ವಿಧಿಗಳನ್ನೂ, ಆಕಾಲದಲ್ಲಿ ಮಹನೀಯರಾಗಿದ್ದ ಋಷಿಗಳಮೂಲಕ ರಾಜಧರ್ಮವೊದಲಾದ ಶಾಸ್ತ್ರಗಳನ್ನೂ, ಜನರ ಆಚಾರ ವ್ಯವಹಾರಾದಿಗಳನ್ನು ಬೋಧಿಸತಕ್ಕ ಸ್ಮೃತಿಗ್ರಂಥಗಳನ್ನೂ ರಚಿಯಿಸಿ ಅವುಗಳಲ್ಲಿ ತಿಳಿಸಲ್ಪಟ್ಟಂತೆ ಅರಸರು ಸ್ವತಃ ವರ್ತಿಸುತ ಪ್ರಜೆಗಳನುಸರಿಸುವಂತೆ ಅವರು ನಿರ್ಬಂಧಿಸುತಲಿದ್ದರು. ಇದಲ್ಲದೆ ಯುದ್ಧಕಾಲಗಳಲ್ಲಿ ವಿನಾ ಇತರ ಕಾಲಗಳಲ್ಲಿ ಯಜ್ಞಾದಿ ಕರ್ಮಗಳನ್ನು ಮಾಡುತ ಭಗವದ್ಧ್ಯಾನ ಪರರಾಗಿಯೂ, ಶಾಂತಿದಯಾ ತಪಸ್ಸತ್ಯ ಶೌಚ ಶೀಲರಾಗಿಯೂ ಪ್ರವರ್ತಿಸುತಲಿದ್ದುದರಿಂದ ಅರಸರು ಪ್ರಜೆಗಳಲ್ಲಿಯೂ ಪ್ರಜೆಗಳು ಅರಸರಲ್ಲಿಯೂ ಪರಸ್ಪರ ಪ್ರೀತಿ ಗೌರವ ಭಯಾನುರಾಗಗಳುಳ್ಳವರಾಗಿರುತಲಿದ್ದರು. "ರಾಜಾಚಪ್ರತ್ಯುತಂಬಾಪಂ ರಾಜಾಪಾಪಂಪುರೋಹಿತಃ" ಯೆಂಬದಾಗಿ ಪ್ರಜೆಗಳು ಮಾಡುವ ಪಾಪ ಪುಣ್ಯಗಳಲ್ಲಿ ಅರಸರು ಭಾಗಭಾಗಿಗಳಾದುದರಿಂದ ಅವರು ಅಧರ್ಮಪರರಾಗದಂತೆ ನೋಡಿಕೊಳ್ಳತಕ್ಕದುದು ತಮ್ಮ ಕರ್ತವ್ಯವೆಂದು ಭಾವಿಸಿದ್ದರು. ಅರಸರು ಮಾಡುವ ಪಾಪ ಪುಣ್ಯಗಳ ಫಲಾಫಲಗಳು ಅವರ ಆಚಾರ್ಯರನ್ನು ಸೇರುವದಾದುದರಿಂದ ಅರಸರ ನಡವಳಿಕೆಯನ್ನು ತಿದ್ದಿ ಹಿತವಂ ಬೋಧಿಸುವದು ತಮ್ಮ ಕರ್ತವ್ಯವೆಂದು ಆ ಆಚಾರ್ಯರು ಭಾವಿಸಿದ್ದರು. ಹೀಗೆ ಯೆಲ್ಲರೂ ಧರ್ಮಬದ್ಧರಾಗಿದ್ದುದರಿಂದ ಕಾಲವೃಷ್ಟಿಯೂ, ಫಲಸಮೃದ್ಧಿಯೂ, ಪ್ರಜಾರೋಗ್ಯವೂ ನೆಲೆಗೊಂಡಿದ್ದವು.

ಎರಡನೆಯದಾದ ತ್ರೇತಾಯುಗದಲ್ಲಿ ಯೆಲ್ಲರೂ ಪಾರಮಾರ್ಥಿಕ ವ್ಯವಹಾರ ಪರರಾಗಿದ್ದುದರಿಂದ ಆ ಕಾಲದಲ್ಲಿದ್ದ ರಾಜರು ತತ್ಕಾಲೋಚಿತಗಳಾದ ಧರ್ಮಶಾಸ್ತ್ರಗಳನ್ನು ಆಗಿನ ಜನರ ನಡವಳಿಕೆಗೂ ಶರೀರ ದಾರ್ಢ್ಯಕ್ಕೂ ತಕ್ಕಂತೆ, ಆಗಿನ ಋಷಿಗಳಿಂದ ರಚಿಯಿಸಿ ಅವುಗಳಂತೆ ಸ್ವತಃ ನಡೆದುಕೊಳ್ಳುತ, ಜನರು ಕೂಡ ನಡೆಯುವಂತೆ ಆಜ್ಞಾಪಿಸುತಲಿದ್ದರಾಗಿ ತತ್ಕಾಲಾನುಗುಣವಾಗಿ ಪಾಲ್ಯಪಾಲಕರು ಪರಸ್ಪರ ಪ್ರೀತಿ ಗೌರವಗಳುಳ್ಳವರಾಗಿದ್ದರು. ಈ ಯುಗಧರ್ಮಗಳು ಮೊದಲನೆಯ ಯುಗಧರ್ಮಗಳಿಗಿಂತಲೂ ಕಾಲುವಾಸಿ ಕಡಮೆಯಾಗಿದ್ದವು.

ಮೂರನೆಯದಾದ ದ್ವಾಪರ ಯುಗದಲ್ಲಿ ರಾಜ್ಯಪಾಲನೆಗೋಸ್ಕರ ಪ್ರಭುಗಳಾದ ಧರ್ಮಪುತ್ರಾದಿಗಳು ಆ ಕಾಲದೊಳಿದ್ದ ಕುಲಜ್ಞಾನ ವಯೋವೃದ್ಧರಾದ ಭೀಷ್ಮರು ಮೊದಲಾದವರ ಮೂಲಕ ಸಕಲ ರಾಜನೀತಿ ಧರ್ಮ ಪದ್ಧತಿಗಳನ್ನು ತಿಳಿದು ತದ್ವತ್ ಸ್ವತಃ ನಡೆಯುತಲೂ ಅನ್ಯರಿಂದ ನಡೆಸುತಲೂ ಬಂದರು. ಈ ಯುಗವು ವ್ಯಾವಹಾರಿಕ ಪ್ರಧಾನ ಪಾರಮಾರ್ಥಿಕವು ಳ್ಳದಾದುದರಿಂದ ವ್ಯವಹಾರ ಕಾರ್ಯಗಳನ್ನು ಜರಿಗಿಸಿಕೊಂಡು ಪಾರಮಾರ್ಥಿಕದಲ್ಲಿ ಜನರು ದೃಷ್ಟಿಯನ್ನಿಟ್ಟಿದ್ದರು. ಇವುಗಳಿಗನುಗುಣಗಳಾದ ನೀತಿ ಧರ್ಮಶಾಸ್ತ್ರಗಳು ಕಾಲ ದೇಶ ಪ್ರಕೃತ್ಯನುಗುಣವಾಗಿ ಯೇರ್ಪಟ್ಟವು.

ನಾಲ್ಕನೆಯದಾದ ಈ ಕಲಿಯುಗದಲ್ಲಿ ಕೇವಲ ವ್ಯಾವಹಾರಿಕವೇ; ಯೆಂತೆಂದರೆ ಪಾರಮಾರ್ಥಿಕವೆಂಬದು ಶುದ್ಧಾಂಗವಾಗಿಲ್ಲವು. ಇದರಿಂದಲೇ ಈ ಕಾಲದ ಪ್ರಭುಗಳಿಗೂ ಜನಗಳಿಗೂ ಸಾಮಾನ್ಯವಾಗಿ ವ್ಯಾವಹಾರಿಕದಲ್ಲಿ ಶ್ರದ್ಧೆ ಯಿರುವಂತೆ ಪಾರಮಾರ್ಥಿಕದಲ್ಲಿಲ್ಲವು ಈಗಿನ ಜನರಿಗೆ ಶಿಕ್ಷಾಸ್ಮೃತಿಗಳು ಅಂದರೆ ಪೀನಲ್‌ಕೋಡ್ ಮೊದಲಾದ ಅನೇಕ ನ್ಯಾಯಶಾಸ್ತ್ರಗಳು ಪಾಲಕರಿಂದೇರ್ಪಡಾಗಿ ಅವುಗಳಂತೆ ಪ್ರಭುಗಳು ಜರುಗುತಲೂ ಜರಿಗಿಸುತಲೂ ಬರುತಲಿದ್ದಾರೆ. ಹಿಂದಿನ ಯುಗಗಳಂತೆ ಪಾರಮಾರ್ಥಿಕವನ್ನು ಸ್ವಲ್ಪಮಟ್ಟಿಗಾದರು ಮುಖ್ಯತ್ವೇನ ಅಂಗೀಕರಿಸುವದಕ್ಕೆ ಅದು ಈಗಿನಜನರ ನಡವಳಿಕೆಗೆ ಶುದ್ಧಾಂಗ ಅನುಕೂಲಿಸಲಾರದು. ಕೇವಲ ವ್ಯಾವಹಾರಿಕವನ್ನನುಸರಿಸಿ ನಡೆಸಲ್ಪಡುವ ರಾಜ್ಯ ವಿಷಗಳಲ್ಲಿ ಪಾರಮಾರ್ಥಿಕವನ್ನಂಗೀಕರಿಸಲಿಕ್ಕೆ ಯೆಂತವರೂ ಶಕ್ತರಾಗಲಾರರು. ಪೂರ್ವಯುಗದವರು ಪಾರಮಾರ್ಥಿಕವನ್ನು ಹೆಚ್ಚು ಕಡಮೆಯಾಗಿ ಅಂಗೀಕರಿಸಿದ್ದುದರಿಂದಲೇ ವ್ಯಾವಹಾರಿಕದಲ್ಲಿ ಅವರಿಗೆ ಪ್ರವೇಶವು ಕಡಮೆಯಾಗಿದ್ದಂತೆ ಯೇರ್ಪಡುತಿದೆ. ವ್ಯಾವಹಾರಿಕ ವಿಷಯೋಪಯುಕ್ತಗಳಾದ ಗ್ರಂಥಗಳು ಈಗಿನಂತೆ ಪೂರ್ವದಲ್ಲಿ ಯಾವ ಋಷಿಗಳಿಂದಲೂ ರಚಿಸಲ್ಪಡಲಿಲ್ಲವು. ಆಧುನಿಕರಭಾವನಾನುಗುಣವಾದ ಈಗಿನ ವ್ಯಾವಹಾರಿಕಜ್ಞಾನವು ಅವರಿಗೆ ಕಡಮೆಯಾಗಿದ್ದಂತೆ ಕಾಣುತಿದೆ. ಕೃತತ್ರೇತಾದ್ವಾಪರ ಯುಗಗಳಲ್ಲಿ ಅರಸರ ಮತ್ತು ಜನರ ನಡವಳಿಕೆಗಳಿಗೂ ಬುದ್ಧಿಗೂ ಶರೀರಧರ್ಮಕ್ಕೂ ತಕ್ಕಂತೆ ಧರ್ಮಶಾಸ್ತ್ರಗಳು ಋಷಿಗಳಿಂದ ಕಲ್ಪಿಸಲ್ಪಟ್ಟವಾದುದರಿಂದಲೇ ಅಂತಾ ಧರ್ಮಶಾಸ್ತ್ರಗಳಿಗೆ ಅನ್ಯೋನ್ಯವ್ಯತ್ರಿಯೂ ಐಕಕಂಠ್ಯವೂ ಇಲ್ಲದೆ ಅವುಹಿಂದೊಂದು ವಿಧವಾಗಿ ಬೋಧಿಸುತಿವೆ. ಇದಕ್ಕಾಗಿ ನಾವು ಆಶ್ಚರ್ಯಪಡಬೇಕಾದುದಿಲ್ಲವು. ಅವುಗಳನ್ನಾಗಲಿ, ಅವಂ ರಚಿಸಿದವರನ್ನಾಗಲಿ ನಾವು ನಿಂದಿಸಿ ಪ್ರಯೋಜನವಿಲ್ಲವು. ಆಯಾ ಯುಗದಲ್ಲಿ ಜನರ ಪರಿಪಾಲನೆಗಾಗಿ ಯೇರ್ಪಟ್ಟ ಧರ್ಮಶಾಸ್ತ್ರಗಳಲ್ಲಿ ಐಕಕಂಠ್ಯವಿಲ್ಲದಮಾತ್ರದಿಂದಲೇ ಅವಂ ಸುಳ್ಳೆಂದು ನಾವು ಹ್ಯಾಗೆ ಭಾವಿಸಬಹುದು? ವೈದಿಕರಾದ ಕೆಲವರಿಗೆ ಈ ವಿಭಾಗಕ್ರಮವು ತಿಳಿಯದೆ, ಹಿಂದಿನ ಧರ್ಮಶಾಸ್ತ್ರಗಳಲ್ಲಿ ತಿಳಿಸಲ್ಪಟ್ಟಿರುವ ಆಚಾರ ಪದ್ಧತಿಗಳ ಪ್ರಕಾರ ಈಗ ಜನಗಳು ಅನುವರ್ತಿಸಲಿಕ್ಕೆ ಇದು ವ್ಯಾವಹಾರಿಕ ಪ್ರಧಾನವಾದ ಯುಗವೆಂತಲೂ, ಪ್ರಭುತ್ವವೆಂತಲೂ ತಿಳಿಸಿ ಅದರಿಂದನುಕೂಲಿಸಲಾರದೆಂದು ಹೇಳುತ್ತಾರೆ ಆದರೆ ವ್ಯಾವಹಾರಿಕ ಪ್ರಧಾನವಾದ ಯುಗದಲ್ಲಿ ವರ್ಣಾಶ್ರಮಧರ್ಮಗಳೂ ವೇದವಿಹಿತ ಕರ್ಮಗಳೂ ಬಿಡಲ್ಪಡತಕ್ಕವೇ ಎಂಬ ಪ್ರಶ್ನೆ ಯುಂಟಾಗಬಹುದು, ಬಿಡತಕ್ಕವೆಂದು ಹೇಳಬೇಕಾದ ಆವಶ್ಯಕತೆಯು ಪ್ರತ್ಯೇಕವಾಗಿಲ್ಲ ವರಂತುನಾಮಮಾತ್ರ ಕೈವರ್ಣಾಶ್ರಮಧರ್ಮಗಳು ನೆಲೆಗೊಂಡು ಕೆಲವು ಕರ್ಮಗಳು ಯೆಲ್ಲಿಯಾದರೊಂದುಕಡೆ ಕೆಲವರಿಂದನುಷ್ಠಿಸಲ್ಪಡುತಲಿದ್ದ್ಯಾಗ್ಯೂ ಅವು ಶಾಸ್ತ್ರೋಕ್ತವಾಗಿ ಜರುಗುವಂತೆ ಹೇಳುವದಕ್ಕೆ ಸಾವಸವು ಸಾಲದ್ದಾಗಿರುತಿದೆ. ವ್ಯಾವಹಾರಿಕ ಪ್ರಧಾನಯುಗದಲ್ಲಿಯೂ ಪ್ರಭುತ್ವದಲ್ಲಿಯೂ ಜನರು ಅಧರ್ಮಪರರಾಗದೆ ವೇದಶಾಸ್ತ್ರ ವಿಹಿತಾಚಾರಗಳನ್ನು ಸಮಗ್ರವಾಗಿ ಜರಿಗಿಸುತ್ತಾರೆಂದು ಹೇಳಲಿಕ್ಕೆ ಯಾರೂ ಶಕ್ತರಾಗಲಾರರೆಂಬ ನಂಬಿಕೆಯು ನಮ್ಮ ಮನದೊಳು ನಿರಂಥವಾಗಿರುತಿದೆ. ಪರಂತು ನಮ್ಮ ನಂಬಿಕೆಯಂ ನಿರಾಕರಿಸಿ ನಿರೂಪಿಸಲಿಕ್ಕೆ ಅಭಿಮುಖರಾದವರೊಬ್ಬರೂ ಇದುವರಿವಿಗೆ ಯಲ್ಲಿಯೂ ಕಾಣಲಿಲ್ಲವು. "ಯಥಾರಾಜಾ ತಥಾಪ್ರಜಾಃ" ಎಂಬ ಲೋಕೋಕ್ತಿಯ ಅನುಭವಗಳು ಏವಂರೀತ್ಯಾ ಸಿದ್ಧಾಂತ ಮಾಡಲ್ಪಟ್ಟಿತೆಂದು ನಾವಿಲ್ಲಪ್ರತ್ಯೇಕವಾಗಿ ತಿಳಿಸಬೇಕಾದ ಆವಶ್ಯಕತೆಯಿಲ್ಲವು. ಲೋಕದಲ್ಲಿ ಧರ್ಮ ಪರಿಪಾಲನವು ಪ್ರಭು ಧರ್ಮವೆಯೂ ರತು ಪ್ರಜಾಧರ್ಮವೆಂದು [illegible]ಡದು. ಪ್ರಭುಗಳು ಯಿದಿರೂಪಗಳಾದ ಧರ್ಮಗಳಂ ಕಾಪಾಡುವರೋ, ನೆಲೆಗೊಳಿಸುವರೋ, ತಾದೃಶವರ್ಮಗಳನ್ನೇ ಪ್ರಜೆಗಳುಕೂಡ ಅವಲಂಬಿಸದಿರಲಾರರು. ಪಾರಮಾರ್ಥಿಕ ಜ್ಞಾನದಿಂದಲ್ಲವಾದರೂ ಪ್ರತಿಷ್ಠಾರ್ಥ ವೇದಾಭ್ಯಾಸವು ಮಾಡಿ ತಾವು ಧರ್ಮಶಾಸ್ತ್ರ ವಿಹಿತ ಕರ್ಮಗಳನ್ನು ಲೋಪವಿಲ್ಲದೆ ಮಾಡುತ್ತೇವೆಂದು ಹೇಳಿಕೊಳ್ಳುವ ಈಗಿನ ಕಾಲದ ವೈದಿಕರ ಪುತ್ರರು ಯಾಣ ವಿದ್ಯಾಭ್ಯಾಸವಂ ಮಾಡಿದರೆ ಅವರಿಗೆ ಸಮಾನರು ಪೂಣವಿದ್ಯಾಭ್ಯಾಸ ಮಾಡಿದವರಲ್ಲೇ ನೆಲಿಸುವುದು. ಅವರ ವಿದ್ಯಾ ಪ್ರಕಟನವು ರಪ್ಯಭಾಷಾಭ್ಯಾಸ ಮಾಡಿದವರಲ್ಲೇ ಯೆಂತೆಂದರೆ ಅನ್ಯತ್ರ ಇರಲಾರದು. ಅವರು ಯಾಚಿಸುವ ಪದಾರ್ಥಗಳು ಪೂಣವಿದ್ಯಾಭ್ಯಾಸ ಮಾಡಿದವರಲ್ಲಿರುವದಲ್ಲವೆ? ಈ ಲೋಕದಲ್ಲೆಲ್ಲ ಇಂಗ್ಲಿಷಿನವರ ಪ್ರಭುತ್ವವು ನಡೆಗೊಂಡು ಇಂಗ್ಲಿಷ್ ವಿದ್ಯೆಯನ್ನೇ ಸಮಸ್ತ ಜನಗಳೂ ವ್ಯಾಸಂಗ ಮಾಡುತ ತಾಮಾತ್ರ್ಯವು ವಹಿಸಿರುವಲ್ಲಿ ವ್ಯಾವಹಾರಿಕ ಪ್ರಧಾನವಾಗಿರುವ ಈ ಕಾಲದೊಳು ಅದನ್ನಪೇಕ್ಷಿಸದಿರುವವರು ಧಲಾನ ಯವರೆಂದು ಹ್ಯಾಗೆ ಹೇಳುವದಕ್ಕೆ ಸಾಧ್ಯವಾದೀತು? ಈಗ ವೇದಶಾಸ್ತ್ರ ವಿಹಿತ ಕರ್ಮಗಳನ್ನೂ ಸದಾಚಾರಗಳನ್ನೂ ತ್ಯಜಿಸಿದವರು ಯಷ್ಟರಮಟ್ಟಿಗೆ ಪ್ರಾಯಶ್ಚಿತ್ತಾದಿಗಳಂ ನಡೆಸುತಲಿದ್ದಾರೆಯೋ ಅದು ಯೆಲ್ಲರಿಗೂ ಚೆನ್ನಾಗಿ ತಿಳಿದ ಅಂಶವಾಗಿಯೇ ಇದೆ. ಪೂರ್ವಕಾಲದಲ್ಲಿ ಮುಖ್ಯವಾಗಿ ಬ್ರಾಹ್ಮಣರಲ್ಲಿ ವೇದಶಾಸ್ತ್ರಾಭ್ಯಾಸವಂ ಮಾಡಿ ಸದಾಚಾರ ಸಂಪನ್ನನೆನಿಸಿದ ಬ್ರಹ್ಮಚಾರಿಯನ್ನು ಹುಡಿಕಿ ಅಂತವನಿಗೆ ತಮ್ಮ ಪುತ್ರಿಯಂ ದಾನಮಾಡಬೇಕೆಂಬ ಕೋರಿಕೆಯೊಡನೆ ಮಾತಾಪಿತೃಗಳು ದೇಶಾಟನ ಮಾಡುತ ಕದಾಚಿತ್ ಆ ವರನು ದರಿದ್ರನಾಗಿದ್ದಾಗ್ಯೂ ಕನ್ಯೆಯಂ ಕೊಟ್ಟು ವಿವಾಹ ಮಾಡಿಸುವ ಪದ್ಧತಿಯು ನೆಲೆಗೊಂಡಿದ್ದದ್ದು ಪ್ರಸಿದ್ಧವಾಗಿಯೇ ಇದೆ ಇದು ಪಾರಮಾರ್ಥಿಕ ದೃಷ್ಟಿಯಿಂದ ನಡೆಸಲ್ಪಡತಕ್ಕದ್ದಾಗಿತ್ತು. ಈಗ ಅದರೋ ಆ ವೇದಶಾಸ್ತ್ರಸ್ಥಾನವನು ಬಿ. ಎ. ಎಂ. ಎ. ಪರೀಕ್ಷೆಗಳೂ, ಅಧಿಕಾರ ಸ್ಥಾನಮಾದ್ರವ್ಯಸಂಪದ್ವರ್ಗಗಳೂ ಆಕ್ರಮಿಸಿರುವವು. ಇಂಗ್ಲಿಷ್ ವಿದ್ಯಾಭ್ಯಾಸವಂ ಮಾಡಿ ದೊಡ್ಡ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು ಹುಟ್ಟು ದರಿದ್ರರಾಗಿದ್ದರೂ, ಅಂತವರನ್ನು ಹುಡಿಕಿ ತಮ್ಮ ಕನ್ಯೆಯಂ ಕೊಟ್ಟು ವಿವಾಹ ಮಾಡಿಸುವಕಾಲ ಪ್ರಾಪ್ತವಾಗಿದೆ. ಹಿಂದೆ ಮಾತಾಪಿತೃಗಳು ವರವಿದ್ದ ವರಾನ್ವೇಷಣಾಧಿಕಾರವು ಸಾಧ್ಯವಾದ ಮಟ್ಟಿಗೆ ಈಗ ತತ್ಪುತ್ರಿಯರಿ ಗೊಪ್ಪಿಸಲ್ಪಟ್ಟಿದೆ. ಪೂರ್ವದಲ್ಲಿ ವೇದಶಾಸ್ತ್ರಾಭ್ಯಾಸ ಮಾಡಿದವರಿಗೆ ವಿವಾಹವಾಗುವದು ಪ್ರಯಾಸವಾಗಿತ್ತು. ಈಗ ವೇದಶಾಸ್ತ್ರಾಭ್ಯಾಸ ಮಾಡಿದವರಿಗೆ ವಿವಾಹವಾಗುವದು ಅತಿಪ್ರಯಾಸವು. ಹಿಂದೆ ಇವರು ರಾಜಸಭೆಯಲ್ಲಿಯೂ ಇತರ ಸ್ಥಳಗಳಲ್ಲಿಯೂ ಸನ್ಮಾನಿತರಾಗಿ ವಿಶೇಷ ದ್ರವ್ಯಾರ್ಜನೆ ಮಾಡುತಲಿದ್ದರು. ಈಗ ಇವರಿಗೆ ಸಾಮಾನ್ಯರ ಗೃಹ ಪ್ರವೇಶ ಸಹ ದೊರೆಯುವದು ಪ್ರಯಾಸ ವಾಗಿದೆಯಲ್ಲದೆ ಒಂದುವೇಳೆ ಅಶನ ಸಹ ದೊರೆಯುವದಿಲ್ಲವು ಮುಖ್ಯವಾಗಿ ಫಲಾನೇ ಸೋಮಯಾಜಿ ಯೆಂತಲಾಗಲಿ ಶ್ರೌತಿಯೆಂತಲಾಗಲಿ ಕರೆಯಲ್ಪಡುವದರಲ್ಲಿರುವ ಸಂತೋಷಕ್ಕಿಂತಲೂ ಫಲಾನೆ ಯೂನಿವರ್ಸಿಟಿಯ ಬಿ. ಎ., ಎಂ. ಎ. ಯೆಂದು ಕರೆಯಲ್ಪಡುವವರಲ್ಲಿ ವಿಶೇಷ ಸಂತೋಷವನ್ನುಳ್ಳವರಾಗಿದ್ದಾರೆ. ಇದು ವ್ಯಾವಹಾರಿಕ ಪ್ರಧಾನವಾದ ಯುಗವಾಗಿಯೂ ಪ್ರಭುತ್ವವಾಗಿಯೂ ಇಲ್ಲದಿದ್ದರೆ ಈಗ ವ್ಯಾವಹಾರಿಕಪ್ರಧಾನರಾದ ಇಂಗ್ಲಿಷ್ ಪಂಡಿತರಿಗಿರುವ ಗೌರವದಲ್ಲಿ ಪತ್ತು ಕೊಳ್ಳಾದುಭಾಗ ಸಹ ಪಾರಮಾರ್ಥಿಕ ಪ್ರಧಾನರಾದ ಸಂಸ್ಕೃತ ಪಂಡಿತರಿಗುಂಟಾಗುವದಿಲ್ಲವು. ಇದರಿಂದಲೇ ಇದು ವ್ಯಾವಹಾರಿಕ ಪ್ರಧಾನವಾದ ಯುಗವೆಂತಲೂ ಪ್ರಭುತ್ವವೆಂತಲೂ ಹೇಳಿದೆವು. ಆಯಾ ಯುಗದಲ್ಲಿಯೂ ಪ್ರಭುತ್ವದಲ್ಲಿಯೂ ರಚಿಸಲ್ಪಟ್ಟ ಧರ್ಮಶಾಸ್ತ್ರಗಳ ಪ್ರಕಾರ ಆ ಪ್ರಭುತ್ವದಲ್ಲಿಯೂ ಯುಗದೊಳು ಜರಿಗಿಸಬೇಕೆಂಬ ದುರಭಿಮಾನವಂ ಬಿಟ್ಟುಬಿಡುವದೇ ಒಳ್ಳೇದು. ಯಾವದಾದರೊಂದುಕಾರ್ಯವುನಮ್ಮ ಪೂರ್ವಿಕರಿಂದ ತಿಳಿಸಲ್ಪಟ್ಟ ಧರ್ಮಶಾಸ್ತ್ರ ಪ್ರೋಕ್ತವೆಂದು ಈಗ ಯಾವನಿಂದಲಾದರೂ ಆಚರಿಸಲ್ಪಡುವಲ್ಲಿ ಅದು ವ್ಯವಹಾರದೊಳಿರುವ ಆಕ್ಟುಗಳಿಗೆ ವಿರುದ್ಧವಾದುದಾಗಿರುವದಕ್ಕೆ ಅಂತವನು ಶಿಕ್ಷೆಗೆ ಗುರಿಯಾಗದೆ ಹೋಗಲಾರನು. ಯಾರು ಯಾರು [illegible]ನ್ನು ಹ್ಯಾಗೆ ಹ್ಯಾಗೆ ಮಾಡಿದರೂ ಅವಿಲ್ಲವು ಈ ದೇಶದಲ್ಲೀಗ ಪ್ರಬಲರಾಗಿರುವ ಬ್ರಿಟಿಷ್ ಗವರ್ನಮೆಂಟಿನವರ ಶಿಕ್ಷಾಸ್ಮೃತಿಗಳಿಗೆ ಅವಿರುದ್ಧಗಳಾಗಿರಬೇಕೇ ಯೆಂತೆಂದರೆ ಅನ್ಯಥಾ ವಾಗಿರಕೂಡದು. ಆದುದರಿಂದ ವ್ಯವಹಾರಪ್ರಧಾನವಾದ ಈ ಯುಗದಲ್ಲಿ ಈಗಿನ ಪ್ರಭುತ್ವದೊಳು ವ್ಯವಹಾರ ನಿಪುಣರಿಗೆ ಜೀವನವೇ ಯೆಂತೆಂದರೆ ತದಿತರರಿಗೆ ಅದು ದುರ್ಲಭವೆಂಬದನುಭವಸಿದ್ಧವಾದವಿಷಯವಾಗಿರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Cholera in Cashmere.—ಕಾಶ್ಮೀರ ದೇಶದ ರಾಜನ ನಿಯಾಸ ಶ್ರೀನಗರದಲ್ಲಿ ವಾಂತಿಭೇದಿ ರೋಗ ತಲೆದೋರಿ ಪ್ರತಿದಿನವಲ್ಲೂ ನೂರು ಜನರಿಗೆ ತಗಲುತಲಿರುವಂತೆ ಅಲ್ಲಿಂದ ಬಂದ ತಂತಿ ವರ್ತಮಾನವರಿಂದ ತಿಳಿಯಬರುತಿದೆ.

Tobacco octroi.—ಮದರಾಸ್ ಸಹರ್ ನೊಳು ಹೊಗೆಸೊಪ್ಪಿನಮೇಲಿ ಆಕ್ಟ್ರಾಯ್ ತೆರಿಗೆ ವಸೂಲ್ಮಾಡಬೇಕೆಂದು ಅಲ್ಲಿನ ಮುನಿಸಿಪಾಲಿಟಿಯವರು ಮಾಡಿ ಕಳುಹಿಸಿಕೊಟ್ಟ ನಿಬಂಧನೆಯನ್ನು ಗವರ್ನಮೆಂಟಿನವರು ಮಂಜೂರ್ಮಾಡಿದರಾಗಿ ಅದು ಬರುವ ತಿಂಗಳ ಮೊದಲು ಜಾರೀಯೊಳು ತರಲ್ಪಡುವದು.

Obituary.—ಆಪ ಆದಿತ್ಯವಾರ ರಾತ್ರಿ ಅಲ್ವಾರ್ ಸಂಸ್ಥಾನದ ಮಹಾರಾಜರವರು ಸೈನಿಟಿ ಎಂಬ ಪ್ರದೇಶದಲ್ಲಿ ಅನಿರೀಕ್ಷಿತವಾಗಿ ಕಾಲಗತಿಯನ್ನೈದಲು ಅವರ ಸಂಗಡ ಇದ್ದ ನೀತಿ ಸಂಸ್ಥಾನದ ಪೊಲಿಟಿಕಲ್ ಯೇಜಂಟರಾದ ಕರ್ನಲ್ ಫ್ರೇಜರವರು ಕೂಡಲೆ ಅಲ್ವಾರಿಗೆ ಹೊರಟು ಹೋದರು.

The Gaekwar of Baroda.—ಬರೋಡೆ ಗಾಯಕವಾಡ ಮಹಾರಾಜರವರು ಕುಟುಂಬ ಸಮೇತರಾಗಿ ಯೂರೋಪ್ ದೇಶಕ್ಕೆ ಪ್ರಯಾಣ ಮಾಡಿದರೆಂದು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೇ, ಸದರೀ ಯವರು ಇಟಲೀ ದೇಶದೊಳಗಣ ನೇಪಿಲ್ಸ್ ಯೆಂಬ ಪಟ್ಟಣವು ಸೇರಿದರೆಂದು ತಂತಿವೃತ್ತಾಂತಬಂದಿರುತಿದೆ

Murder—ಅಲ್ವಾರ್ ಸಂಸ್ಥಾನದ ದಿವಾನರಾದ ಕುಂಜಿಬಿಹಾರಿಲಾಲ್ ಯೆಂಬವರು, ಮಹಾರಾಜರವರು ಮೃತಪಟ್ಟ ಮರುದಿನ, ಅಲ್ವಾರ್‌ನಲ್ಲಿ ಗೂಢವಾಗಿ ಖೂನ್ ಮಾಡಲ್ಪಟ್ಟರು. ಇದಕ್ಕೆ ಉಂಟಾದ ಕಾರಣ ಹೊರಗಾಗಲಿಲ್ಲವು. ಇದರ ಪತ್ತೆಯ ಬಗ್ಗೆ ರಾಜ್ಯಕಾರ್ಯ ವಿಚಾರಣಾಧಿಕಾರ ಸಭೆಯವರು ಖುಪಿತವಾಗಿ ಪರ್ಯಾಪ್ತಿ ಮಾಡುತಲಿದಾರೆ.

Cholera.—ಮದರಾಸಿನಲ್ಲಿ ಈಗ ವಾಂತಿಭೇದಿ ರೋಗ ಪ್ರಬಲಗೊಂಡು ಪ್ರಾಣಹಾನಿಗಳುಂಟಾಗುತಲಿರುವಂತೆ ತಿಳಿಯಬರುತಿದೆ. ಕಳೆದ ಸೋಮವಾರದ ದಿನ ಬೆಳಗ್ಗೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮ॥ ಸ. ಲಕ್ಷ್ಮೀನರಸೀಂಹಸಾಹೇಬರವರ ಮಗ ಸುಮಾರು ೧೫ ವರ್ಷಗಳ ವಯಸ್ಸುಳ್ಳ ಬಾಲಕನು ಸದರೀ ರೋಗಕ್ಕೆ ಸಿಕ್ಕಿ

ಯಾದನೆಂದು ಕೇಳುವದಕ್ಕೆ ಬಹಳ ವಿಷಾದಿಸುತ್ತೇನೆ.

Committed to the Sessions.—ಈಚೆಗೆ ಹೈದರಾಬಾದ ಪಟ್ಟಣದ ಇಲ್ಲದ ಗದ್ದಲಕ್ಕೆ ಜಸ್ಟ ಭೂಮಿಯಾದಂತೆ ಕಾಣುತ್ತದೆ. ಅಲ್ಲಿ ನಡೆದ ಜವಾಹಿರ್ ಕಳವು ಮೊಕದ್ದಮೆಗೆ ಸಂಬಂಧಪಟ್ಟವರೆಂಬ ಮೂವರು ನವಾಬರುಗಳ ಪೈಕಿ ಇಬ್ಬರು ಯೇಳುಲಕ್ಷರೂಪಾಯಿಗಳ ಕಳವು ಮಾಲುಗಳು ತೆಗೆದುಕೊಂಡರೆಂಬದಾಗಿ ಆಪಾದಿಸಲ್ಪಟ್ಟು ಸೆಷನ್ ವಿಚಾರಣೆಯು ಬಗ್ಗೆ ಕಮಿಟ ಮಾಡಲ್ಪಟ್ಟಿರುತ್ತಾರೆ.

A fatal fire.—ಈ ತಿಂಗಳ ೨೦ ನೇ ತಾರೀಖಿನ ಮಧ್ಯಾಹ್ನ ಕಲ್ಕತ್ತೆಗೆ ಸೇರಿದ ಶಿಲಿಪುರ ಪೈಕಿ ಒಂದು ಬಸ್ತಿಗೆ ಬೆಂಕಿ ತಗಲಿ, ಅದು ಆರಿಸುವಕ್ಕಾಗಿ ಜಲಯಂತ್ರಗಳು ಬರುವವರೊಳಗಾಗಿ ೨೦೦ ಗುಡಿಸಲುಗಳು ಪೂರಾ ಸುಟ್ಟುಹೋದವಲ್ಲದೆ ಒಬ್ಬ ಮುದುಕನೂ ಅವನ ಹೆಂಡತಿಯೂ ಬೆಂಕಿಗೆ ಸಿಕ್ಕಿ ಬೆಂದುಹೋಗಿ ಅವರ ಮೂಳೆಗಳೆರಡು ದೊರೆತವು. ಅವರ ಮಗು ಒಂದು ತಪ್ಪಿಹೋಗಿದ್ದು ಅದೂ ಬೆಂಕಿಗೆ ಸಿಕ್ಕಿ ಮೃತಪಟ್ಟಿರಬೇಕೆಂದು ಯೋಚಿಸುತ್ತಿದಾರೆ.

Fire.—ಈಚೆಗೆ ಕಲ್ಕತ್ತೆಗೆ ಸೇರಿದ ಟಲಿಗಂಜ್ ಎಂಬ ಪೇಟೆಗೆ ದಾಳಿ ಬೆಂಕಿ ತಗಲಿ ನೂರಾರು ಗುಡಿಸಲುಗಳು ಸುಟ್ಟು ಹೋದವಲ್ಲದೆ ಸಾವಿರಾರು ಮಂದಿ ಜನಗಳು ತಮ್ಮ ವ ನಗ ನಾಣ್ಯ ಇತರ ಪದಾರ್ಥಗಳನ್ನೂ ಯೋಗಿ ಸಿಕೊಂಡು ಜೀವನೋಪಾಯಕ್ಕಾಗಿ ಕಷ್ಟಪಡುತಲಿದಾರೆ. ಮನುಷ್ಯರಿಗೆ ಅಗ್ನಿಯಿಂದ ಪ್ರಾಣಹಾನಿಗಳುಂಟಾಗದೆ ಹೋದಾಗ್ಯೂ ಇನ್ನೂರು ಹಸುಗಳು ದನಗಳು ಸತ್ತುಹೋದವಲ್ಲದೆ ಸ್ವತ್ತುಗಳು ಅಧಿಕವಾಗಿ ನಾಶವಾಯಿತೆಂದು ಅಲ್ಲಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತ್ತದೆ.

End of the Cabul trouble.—ಕಾಬೂಲ್ ಅಮೀರರವರಿಗೂ ಬ್ರಿಟಿಷ್ ಗವರ್ನಮೆಂಟಿಗೂ ಚಿತ್ರಾಲ್ ಯೆಂಬ ನಾಡಿನ ಪಟ್ಟದ ವಿಷಯದಲ್ಲಿ ಸ್ವಲ್ಪ ಅಸಮಾಧಾನ ಪ್ರಾಪ್ತಿಯಾಗಿ, ಆ ಬಗ್ಗೆ ಸದರೀ ಎರಡು ಸರಕಾರಕ್ಕೂ ಕಠಿಣವಾದ ಕಾಗದ ಪತ್ರಗಳು ನಡೆಯುತಲಿದ್ದದ್ದು ಪ್ರಸಿದ್ಧ ವಿಷಯವಾಗಿದೆಯಷ್ಟೆ. ಆ ದೇಶದ ಅರಸನಾದ ಉಮ್ರಾಖಾನ್ ಯೆಂಬವನ ಮೇಲೆ ದಂಡೆತ್ತಿ ಹೋಗಬೇಕೆಂಬ ಉದ್ದೇಶ ತಮಗೆ ಯಿಲ್ಲವೆಂದು ಅಮೀರರವರು ಇಂಡ್ಯಾಗವರ್ನಮೆಂಟಿಗೆ ಜವಾಬ್ ಕೊಟ್ಟದ್ದರಿಂದ ಈ ಕಲಹವು ವ್ಯವಸ್ಥೆಯಾಯಿತೆಂದು ಹೇಳಬಹುದು.

Liberality of a native lady.—ಮದ್ರಾಸ್ ನಿವಾಸಿಯಾದ ಮುನಿಯಾಳ ಸುವರ್ಣನಾಯಿ ಎಂಬಾಕೆಯು ಈ ಸಂವತ್ಸರ ಪ್ರಾರಂಭದ ಮೊದಲು ಬಂದ ಮೆಡಿಕಲ್ ಕಾಲೇಜ್ ಪಾಠಶಾಲೆಯು ರಕ್ಷಣೆಯಂ ಕಾಯುವಾಗಿ ಅದರ ಸ್ವಹಸ್ತ ಸ್ಥಾಪಿಸುವ ಪ್ರಮೋದನೆ ಅದಂ ಸ್ವಾಧೀನಪಡಿಸಿಕೊಂಡು ಬಡವರಾದ ವಿದ್ಯಾರ್ಥಿಗಳಲ್ಲರಿಗೂ ಪಾಠಶಾಲೆಗೆ ಅವರು ಕೊಡಬೇಕಾದ ರುಸುಮನ್ನು ತಪ್ಪಿಸಿರುತ್ತಾರೆ. ಸದರೀ ಮಹಾರಾಣಿಯವರು ಪಾಠಶಾಲೆಯ ಸುರಕ್ಷಣೆ ಫಂಡಿಗೆ ಲೀಬಾನಾ ೨೦,೦೦೦ ರೂಪಾಯಿಗಳ ಬೆಲೆಯುಳ್ಳ ಕೆಲವು ಜಮೀನುಗಳು ಕೊಡಬೇಕೆಂದು ಯೋಚಿಸುತಲಿದಾರೆ.

A brutal triple murder.—ಈ ತಿಂಗಳ ೪ ನೇ ತಾರೀಖಿನಲ್ಲಿ ಕಲ್ಕತ್ತೆಯೊಳು ಕೇವಲ ಕ್ರೂರವಾದ ರೀತಿಯಲ್ಲಿ ಒಂದು ಖೂನಿ ನಡೆಯಿತು ಹ್ಯಾಗೆಂದರೆ, ಒಬ್ಬ ಮುಸಲ್ಮಾನನಿಗೆ ತನ್ನ ಹೆಂಡತಿಯು ವ್ಯಭಿಚರಿಸುತ್ತಾಳೆಂಬ ಸಂಶಯ ಪ್ರಾಪ್ತಿಯಾಗಿ ಅದನ್ನು ಕಂಡುಹಿಡಿಯಬೇಕೆಂಬ ಪ್ರಯತ್ನ ನಡೆಯುತಲಿದ್ದಲ್ಲಿ, ತನ್ನ ನೆರೆಹೊರೆಯ ಜೊತೆ ಒಬ್ಬ ಹೆಂಗಸೂ ಈ ದುಷ್ಕೃತ್ಯಕ್ಕೆ ಸಹಾಯ ಮಾಡುವದು ತಿಳಿಯಬಂದು ಸದರೀಯವನು ಬೆಚ್ಚಿಕತ್ತಿಯನ್ನು ಹಿಡಕೊಂಡು

ಬೆಳಗಿನ ಝಾಮದಲ್ಲಿ ಸದರೀ ಮೂವರು ಹೆಂಗಸರೂ ನಿದ್ರೆ ಹೋಗುತ್ತಿರುವಲ್ಲಿ ಮೂವರನ್ನು ಕಡಿದು ಹಾಕಿದನು. ಇವನು ಕೂಡಲೆ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆಗೆ ಗುರಿಯಾಗಿರುತ್ತಾನೆ.

Salute loving elephants.—ಉತ್ತರದೇಶದೊಳು ರಾಯಪೂರ್ ಎಂಬ ಪಟ್ಟಣಕ್ಕೆ ಸೇರಿದ ಖಮಾರಿಯ ಎಂಬ ಕಾಡಿನಿಂದ ಒಂದು ಗಂಡು ಮತ್ತೊಂದು ಹೆಣ್ಣು ಈ ಎರಡು ಆನೆಗಳು ಬಂದು ಫಸಲುಗಳನ್ನೆಲ್ಲ ನಾಶಮಾಡುತಿವೆ. ಅವುಗಳಲ್ಲಿ ಗ್ರಾಮಸ್ಥರು ಒಂದು ವಿಲಕ್ಷಣವಾದ ಗುಣವು ಕಂಡು ಹಿತದ ನಮಸ್ಕಾರ ತಮ್ಮ ಫಸಲುಗಳನ್ನು ಕಾಪಾಡಿಕೊಳ್ಳುತ್ತಾರೆ, ಅಂದರೆ ಸದರೀ ಆನೆಗಳು ತಮಗೆ ಯಾರು ವಿಧೇಯರಾಗಿ ನಮಸ್ಕಾರ ಮಾಡುತ್ತಾರೆಯೋ ಅಂತವರ ಫಸಲುಗಳಂ ಮುಟ್ಟುವದಿಲ್ಲವಾಗಿ ರೈತರು ಅದಂ ತಿಳಿದುಕೊಂಡು ಆ ರೀತಿ ಮಾಡಿ ತಮ್ಮ ಫಸಲುಗಳಂ ಕಾಪಾಡಿಕೊಂಡರೆಂದು ಒಂದಾನೊಂದು ಪತ್ರಿಕೆಯು ಸದರೀ ಸ್ಥಳದ ಬಾತಮೀದಾರನು ಬರೆಯುತ್ತಾನೆ.

Treating a passenger as goods.—ನಿಜಾಮ್ ರಾಜ್ಯದಲ್ಲಿ ಒಬ್ಬ ಮುಸಲ್ಮಾನ ಪಠಾಣನು ಜೆಮಾದಾರ್ ಐದು ಮಣಗಳ ತೂಕದ್ದಾಗಿ ಕಬ್ಬಿಣದ ಸರಪಳಿಗಳನ್ನೂ ಕಟ್ಟುಗಳನ್ನೂ ಮೈಮೇಲೆ ಹಾಕಿಕೊಂಡು ರೈಲ್ ಗಾಡಿ ಹತ್ತುವದಕ್ಕೆ ಬರಲು ರೈಲ್ವೆ ಅಧಿಕಾರಿಗಳು ಅದು ನೋಡಿ ಪ್ರಯಾಣಸ್ಥರ ಗಾಡಿಯಲ್ಲಿ ಬಿಡುವದಿಲ್ಲವೆಂದು ಹೇಳಿ ಅವನನ್ನು ತೂಕದ ಸರಕುಗಳ ಗಾಡಿಯಲ್ಲಿ ಕಳುಹಿಸುವದಾಗಿ ಹೇಳಲು, ನೀವು ಸರಪಳಿಗಳನ್ನೂ ಕಟ್ಟುಗಳನ್ನೂ ಹಾಕಿಕೊಂಡು ಪ್ರಯಾಣಸ್ಥರ ಗಾಡಿಯಲ್ಲಿ ಸಂಚಾರ ಮಾಡುವದಕ್ಕೆ ಅವನಿಂದ ಯಾವ ರುಸುಮನ್ನು ತೆಗೆದುಕೊಳ್ಳದೆ ಇರುವಲ್ಲಿ ತನ್ನನ್ನು ಮಾತ್ರ ಬಿಡುವದಿಲ್ಲವೆಂದು ಹೇಳುವದಕ್ಕೆ ಕಾರಣವೇನೆಂದು ಬಹಳವಾಗಿ ವಾದಿಸಿದನು, ಪರಂತು ಅವನ ವಾದವು ಪ್ರಯೋಜನಕಾರಿಯಾಗದೆ ಹೋಯಿತು. ಬಿಸಿಲಿನ ವೇಗಕ್ಕೆ ಅವನು ಮೈಮೇಲೆ ಹಾಕಿಕೊಂಡಿದ್ದ ಕಬ್ಬಿಣದ ಆಭರಣಗಳೆಲ್ಲವೂ ಬಿಸಿಯಾಗಿ ಬೇಸಿಗೆಯಿಂದ ಅಗಿಂದಾಗ್ಯೆ ಅವನ ಮೇಲೆ ನೀರು ಚೆಲ್ಲಬೇಕಾಯಿತು, ಎಂದು ಪತ್ರಿಕೆ ಅಸ್ಪಷ್ಟವಾಗಿ ತಿಳಿಸುತ್ತಿದೆ.

LOCAL AND PROVINCIAL NEWS.

ಸ್ಥಳೀಯ ಮತ್ತು ತಾಲ್ಲೂಕು ವೃತ್ತಾಂತಗಳು.

The Resident.—ಈ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರವರು ಕಳೆದ ಬೃಹಸ್ಪತಿವಾರದ ದಿನ ಮಧ್ಯಾಹ್ನ ಶ್ರೀಮನ್ಮಹಾರಾಜರವರ ದರ್ಶನಾರ್ಥ ಮೈಸೂರಿಗೆ ಪ್ರಯಾಣ ಮಾಡಿದರು. ಅಲ್ಲಿಂದ ಅದೇ ದಿನ ವಾಪಸ್ ಬರುವದಾಗ ನಿಷ್ಕಲ್ಮಷ್ಯವಾಗಿತ್ತು.

Arrival of a native nobleman.—ಕಾಶೀ ವಾರಾಣಸೀ ದೇಶಕ್ಕೆ ಸೇರಿದ ಮೋರ್ವಿ ಸಂಸ್ಥಾನದ ಠಾಕೂರರವರು ಈಗ ದಕ್ಷಿಣ ದೇಶ ಸಂಚಾರ ಮಾಡುತಲಿರುವದು ಸರಿಯಷ್ಟೆ. ಸದರೀ ಅರಸರವರು ಈ ತಿಂಗಳ ೨೦ ನೇ ತಾರೀಖ್ ಶುಕ್ರವಾರದ ದಿನ ಪ್ರಾತಃಕಾಲ ಮೈಸೂರ್ ಟ್ರೈನಿನಲ್ಲಿ ತಮ್ಮ ಪರಿಜನ ಪರಿವಾರ ಸಮೇತನೆ ಈ ಪ್ರಾಂತಕ್ಕೆ ಬಂದು ಸೌಮುಕಾರ್ ದೊರೆಸ್ವಾಮಿ ಶೆಟ್ಟರವರ ಬಂಗ್ಲೆಯಲ್ಲಿ ಇಳಿದಿರುತ್ತಾರೆ. ಇವರು ಇಲ್ಲಿ ಒಂದು ತಿಂಗಳ ಕಾಲವಿದ್ದು ಹೋಗುವರೆಂದು ಕಾಣುತ್ತದೆ.

The weather.—ಈಚೆಗೆ ಒಂದು ವಾರದ ವೇಳೆಯಿಂದಲು, ತಕ್ಕಷ್ಟು ಆಗಿಂದಾಗ್ಯೆ ಬೀಳುತಲಿದ್ದ ತುಂತುರು ಮಳೆ ನಿಂತುಹೋಗಿ ಕೆರೆಗಳಲ್ಲೂ ಕೊಳಗಳಲ್ಲೂ ಮನೆ ಬಾವಿಗಳಲ್ಲೂ ನೀರಿಲ್ಲದೆ ಜನರು ಬಹಳ ಪ್ರಯಾಸಪಡುತಲಿದಾರೆ. ಆಹಾರ ಪದಾರ್ಥಗಳ ಪೈಕಿ ಅಕ್ಕಿಯ ಧಾರಣೆಯಲ್ಲಿ ಒಂದು ರೂಪಾಯಿ ಏರಿದೆ, ಇತರ ಧಾನ್ಯಗಳ ಧಾರಣೆಗಳು ಹಿಂದೇ ವಿಪರೀತವಾಗಿವೆ. ಪ್ರಾಂತ್ಯದಲ್ಲಿ ಬಲವಾಗಿಯೂ ಕಡೂರು ಶಿವಮೊಗ್ಗ ಡಿಸ್ಟ್ರಿಕ್ಟುಗಳಲ್ಲಿ ಸುಮಾರಾಗಿಯೂ ವರ್ಷ ಬಿದ್ದಂತೆ ತಿಳಿಯಬರುತ್ತದೆ. ಈ ಪ್ರಾಂತ್ಯದಲ್ಲಿ ಈಚೆಗೆ ಜ್ವರರೋಗ ಕಡಿಮೆಯಾಗಿ ಯಾವ ಗ್ರಾಮದಲ್ಲಿ ನೋಡಿದಾಗ್ಯೂ ಒಬ್ಬರಿಬ್ಬರು ಸದರೀ ರೋಗದಿಂದ ಪೀಡಿತರಾಗಿದಾರೆ. ಚಿತ್ರದುರ್ಗ, ತುಮಕೂರು, ಮುಖ್ಯವಾಗಿ ಕೋಲಾರ್ ಡಿಸ್ಟ್ರಿಕ್ಟುಗಳ ತಾಲ್ಲೂಕುಗಳಿಂದ ಬರುವ ರಿಪೋರ್ಟುಗಳ ದೆಸೆಯಿಂದ ಅಲ್ಲಿನ ಸ್ಥಿತಿಯು ಕೇವಲ ಶೋಚನೀಯವಾಗಿರುತ್ತದೆ. ಶೀಘ್ರದಲ್ಲಿ ಬಲವಾದ ವರ್ಷ ಬಾರದೆ ಹೋದರೆ ಈ ದೇಶದ ಪ್ರಜೆಗಳು ಅಂದರೆ ರೈತಾಪಿ ಜನರು ಪ್ರಬಲ ಕಷ್ಟಕ್ಕೆ ಗುರಿಯಾಗುವದರಲ್ಲಿ ಸಂಶಯವಿರಲಾರದು.

Transfer.—ಕ್ಲೋಸ್‌ಪೇಟೆ ತಾಲ್ಲೂಕು ಕಚೇರಿ ಮತ್ತು ಸಬ್‌ಡಿವಿಜನ್ ಆಫೀಸುಗಳು ಸದರೀ ತಾಲ್ಲೂಕು ಕಸಬೆಯಲ್ಲೀಗ ಇರುತಲಿದೆಯಷ್ಟೆ. ಚೆನ್ನಪಟ್ಟಣವು ವಾಣಿಜ್ಯ ಸ್ಥಳಗಳಿಂದಲೂ ವ್ಯಾಪಾರಾಭಿವೃದ್ಧಿಯಿಂದಲೂ ಪ್ರಜಾಬಾಹುಳ್ಯದಿಂದಲೂ ತಾಲ್ಲೂಕ್ ಹೆಡ್‌ಕ್ವಾರ್ಟರಾಗಿರಲಿಕ್ಕೆ ಪ್ರಶಸ್ತವಾದ ಸ್ಥಳವಾಗಿರುವದರಿಂದ ಅಲ್ಲಿಗೆ ವರ್ಗ ಮಾಡಬೇಕೆಂದು, ಅಲ್ಲಿನ ಪ್ರಜೆಗಳು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಿಗೆ ಅರ್ಜಿ ಬರೆದುಕೊಳ್ಳಲು, ಅವರು ಅದು ಯೋಗ್ಯವಾದ ಯೋಜನೆಯೆಂದು ಗವರ್ನಮೆಂಟಿನವರಿಗೆ ಸಿಫಾರಸ್ಸು ಮಾಡಿದರ ಮೇಲೆ ಆ ರೀತಿ ಮಾಡತಕ್ಕದೆಂದು ಮಹಾರಾಜಾ ಸರ್ಕಾರದವರು ಪ್ರೊಸೀಡಿಂಗ್ಸ್ ಮಾಡಿದಾರೆಂದು ಕೇಳುತ್ತೇವೆ. ಆದರೆ ಈ ಯೋಜನೆಯು ಯಾವಾಗ ಜಾರಿಯಲ್ಲಿ ಬರುವದೋ ತಿಳಿಯಲಿಲ್ಲವು. ಕ್ಲೋಸ್‌ಪೇಟೆಯು ಚೆನ್ನಪಟ್ಟಣದೊಡನೆ ಸೇರುವದರಿಂದಲೂ, ಅಲ್ಲಿನ ಡೆಪ್ಯುಟಿ ಅಮಲ್ದಾರಿಯು ವಜಾ ಆಗುವದರಿಂದಲೂ, ರಿಜಿಸ್ಟ್ರೇಷನ್ ಬಗ್ಗೆ ಸ್ಥಳಸರಹದ್ದು ಬಹಳವಾದುದರಿಂದಲೂ, ಸದರೀ ಕೆಲಸದ ಗಲಾಟೆಯು ಮುಂದೆ ಅಲ್ಲಿ ಅಧಿಕವಾಗುವದರಲ್ಲೇನೂ ಸಂಶಯವಿರಲಾರದು. ಆ ಕೆಲಸವನ್ನು ನಿರ್ವಹಿಸಲಿಕ್ಕೆ ತಾಲ್ಲೂಕ್ ಶಿರಸ್ತೇದಾರರಿಗೆ ಅವಕಾಶ ಸಾಲದ್ದರಿಂದಲೂ ಜನರಿಗೆ ಅನುಕೂಲ್ಯವು ಕಡಮೆಯಾಗುವದರಿಂದಲೂ, ಈ ಸಂದರ್ಭದಲ್ಲಿಯೇ ಪ್ರತ್ಯೇಕ ಸಬ್ ರಿಜಿಸ್ಟ್ರಾರರೊಬ್ಬರನ್ನು ನೇಮಕ ಮಾಡತಕ್ಕದ್ದು ಅತ್ಯಾವಶ್ಯಕವಾಗಿರುತ್ತದೆ.

ಕೆಲವು ದಿವಸಗಳ ಕೆಳಗೆ ಶ್ರೀರಂಗಪಟ್ಟಣದ ತಾಲ್ಲೂಕಿನ ಒಂದು ಹಳ್ಳಿಯಲ್ಲಿ ಜನರೆಲ್ಲರೂ ಸೇರಿ ದನಿ ಉಪದ್ರವನ್ನು ಹೋಗಲಾಡಿಸುವದಕ್ಕೆ ಕೆಲವು ರೂಪಾಯಿಗಳನ್ನು ಎತ್ತಿ ಬೊಂಬೆ ಒಂದು ಮೈದಾನದಲ್ಲಿ ತಂದಿಟ್ಟು ಒಂದು ದೊಡ್ಡ ಪೂಜೆಯನ್ನು ತಮ್ಮ ಮೂರ್ತಿ ಹಾಕಿ ಅದಕ್ಕೆ ಕೆಲವು ಆಭರಣಗಳನ್ನು ಧರಿಸಿ, ಸೀರೆ ಉಡಿಸಿ, ಅದರ ಮುಂದೆ ನಾನಾ ಬಗೆಗಳ ಅನ್ನಗಳನ್ನು ರಾಶಿಯಾಗಿ ಸುರಿದು ಬಂದರಂತಲೂ, ಇದನ್ನೆಲ್ಲಾ ನೋಡಿಕೊಂಡಿದ್ದ ಒಬ್ಬ ಬಡಗೈಯವನು ಆ ದಿವಸ ರಾತ್ರಿಯಲ್ಲಿ ಅಲ್ಲಿಗೆ ಹೋಗಿ ಆ ಪೂಜೆಯನ್ನು ಮುರಿದು ತಂಬಿಟ್ಟನ್ನು ತಿಂದು ಬರೆ ಆಭರಣಗಳನ್ನು ಅಪಹರಿಸಿಕೊಂಡು ಹೋದನೆಂತಲೂ, ಅವನು ಮನೆಗೆ ಹೋದ ಒಡನೆಯೇ ಅವನಿಗೆ ಕಾಲರಾ ತಗಲಿ ಮೃತಪಟ್ಟನೆಂತಲೂ ವರ್ತಮಾನ ಕೇಳುತ್ತೇವೆ. ಆದರೆ ಇದು ನಿಜವಾಗಿದ್ದ ಪಕ್ಷಕ್ಕೆ ಆ ಮನುಷ್ಯನು ಮನೆಗೆ ಹೋದನಂತರ ಆಲೋಚಿಸಿ ಹೆದರಿ ಈ ಮೃತ್ಯುವಿಗೆ ಒಳಗಾದನೆಂದು ಹೇಳಬೇಕಾಗುವದೇ ಹೊರತು ಆ ಪೂಜೆಯನ್ನು ಮುರಿದದ್ದರಿಂದಲೇ ಅವನಿಗೆ ಮರಣ ಪ್ರಾಪ್ತವಾಯಿತೆಂದು ಎಂದಿಗೂ ಊಹಿಸಲಾರೆವು.—ವ್ಯ. ಪ.

ಕೆಲವು ದಿವಸಗಳ ಹಿಂದೆ ಒಬ್ಬ ಹೆಂಗಸು ದೇವರ ಆವೇಶ ಬಂತೆಂದು ಒಂದು ಶ್ಲೋಕವನ್ನು ಅರ್ಧ ರಾತ್ರಿ ವೇಳೆಯಲ್ಲಿ ವೀರಣ್ಣನ ಹೊಲದಲ್ಲಿರುವ ಚಿಕ್ಕ ಗರಡಿಯ ಹತ್ತಿರಕ್ಕೆ ಬಂದಳು. ಆಕೆ ಕೆಲವು ಮಾತುಗಳನ್ನು ಆಡುವದರಲ್ಲಿ ಅಲ್ಲಿ ನಿಂತಿದ್ದವರೆಲ್ಲರೂ ಎಷ್ಟು ತಪ್ಪು ತಿಳಿದು, ಈ ಸೀರೆ ವೇಳೆಯಲ್ಲಿ ಹಾವು ಬರುತ್ತಕ್ಕೆ ಬರುವನೆಂದು ಕೇಳುವಾಗ್ಯೆ ಮಕ್ಕಳನ್ನು ನೀವು ಯಾವದಕ್ಕೂ ಅಂಜದೆ (ಮಾಂತ್ರಿಕನಿಗೆ) ಭಯ ಪಡದೇ ಇರಿ ಎಂದು ದೇವಿ ತನಗೆ ಹೆತ್ತ ಮಕ್ಕಳೆಂದು ಸಂತೈಸಿ ಮಡಿಲು ಹೆತ್ತವನ್ನು ಕೊಟ್ಟರು. ಅನಂತರ ಗಂಧಾಕ್ಷತೆಯನ್ನು ಕೇಳುವದಕ್ಕೆ ಸನ್ನೆ ಮಾಡಿದಳು. ಒಬ್ಬರು ಪಾಗ್ರತೆಯಾಗಿ ಗರಡಿ ಒಳಹೊಕ್ಕು ಅಲ್ಲಿ ಕಾಣದಿರುವ ಮೂರ್ತಿ ಯೆಂದು ಅಲ್ಲಿದ್ದ ಮಣ್ಣಿನ ಮುಖವನ್ನು ಆಕೆ ತಲೆಗೆ ಹೊದಿಸಿದರು. ಆದರೆ ಆ ವನ್ನು ಹಾಕಿಕೊಂಡು ಸುಮಾರು ಒಂದು ಘಳಿಗೆಯ ಕಾಲದ ವರೆಗೂ ಅತ್ತಿತ್ತ ಓಡ್ಯಾಡಿಕೊಂಡು ಇದ್ದಳು. ಅದನ್ನು ನೋಡಿದ ಜನರೆಲ್ಲರೂ ಬಹಳವಾಗಿ ನಗುತ್ತಲಿದ್ದರು. ಅನಂತರ ದೇವತೆಯು ಬಿಟ್ಟು ಹೋದಳೆಂದು ಸದರೀ ಹೆಂಗಸು ನೆಲದ ಮೇಲೆ ಬಿದ್ದು ಸ್ವಲ್ಪ ಹೊತ್ತಿನ ಮೇಲೆ ತನ್ನ ತಲೆಗೆ ಹಾಕಿದ್ದ ಮಾಳಿ ಮುಖವನ್ನು ನೋಡಿ ಅದು ಹಾಕಿದವರನ್ನು ಬೈಯ್ಯುತ್ತಿದ್ದಳು.—ವ್ಯ. ಪ.

CORRESPONDEOCE.

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಬಾಧ್ಯರಲ್ಲವು.—ಎಡಿಟರ್ ಕ. ಪ್ರ.]

ಮ॥ ರಾ॥ ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ॥ ಕ್ಕೆ,

ಅಯ್ಯಾ,—ಧಾರ್ಮಿಕರಾದ ಪೂರ್ವಿಕರಿಂದಲೂ ಆಧುನಿಕರಿಂದಲೂ ಮಾಡಲ್ಪಟ್ಟಿರುವ ದಾನಧರ್ಮಗಳ ರಕ್ಷಣೆಯ ವಿಷಯದಲ್ಲಿಯೂ ಅಂತಾ ಧರ್ಮಕರ್ತರ ಉದ್ದೇಶ ಪೂರ್ತಿಯ ವಿಷಯದಲ್ಲಿಯೂ, ಪುರಾತನಗಳಾದ ಹಿಂದೂ ಶಾಸ್ತ್ರ ಸಂಪ್ರದಾಯಗಳ ಬಾಂಧವಗಳು ಯಥೋಚಿತ ಅಭಿವೃದ್ಧಿಗಳಾಗಿ ನಡೆಯುತಲಿರತಕ್ಕ ವಿಷಯದಲ್ಲಿಯೂ ನಾನು ವಿಶೇಷ ಉತ್ಸಾಹವುಳ್ಳವನಾಗಿರುವದರಿಂದ, ಈ ಅಂಶವಂ ಕುರಿತು ಶ್ರೀಮನ್ಮಹಾರಾಜಾ ಸರ್ಕಾರದವರು ಈಚೆಗೆ ಪ್ರಕಟಿಸುತಲಿರುವ ಪ್ರತಿ ಪ್ರೊಸೀಡಿಂಗಿನನ್ನೂ ತಮ್ಮ ಪತ್ರಿಕೆಯಲ್ಲಿಯೂ ಇತರರ ಪತ್ರಿಕೆಗಳಲ್ಲಿಯೂ ಆಗಿಂದಾಗ್ಯೆ ನೋಡಿ ಸಂತೋಷಿಸುತಲಿದೇನೆ. ಸರ್ಕಾರದವರು ಮಾಡತಕ್ಕ ಹುಕುಂಗಳೆಲ್ಲವು ಪ್ರಯೋಜಕ ಯೋಗ್ಯಗಳಾಗಿಯೂ, ಪ್ರಕೃತ ಸ್ಥಿತಿಯಲ್ಲಿ ಆವಶ್ಯಕವಾದವಾಗಿಯೂ ಇರುತಿವೆ. ಆದರೆ ಕೆಲವು ಬಾಬೆಗಳಲ್ಲಿ ಇದುವರಿವಿಗೆ ಅವರು ಕೊಟ್ಟಿರುವ ಹುಕುಂಗಳು ಕೇವಲ ತಮ್ಮ ಅಧಿಕಾರ ಬಲವನ್ನೇ ಪ್ರಾಮುಖ್ಯದ ಹೊರಪಡಿಸತಕ್ಕವಾಗಿರುತಿವೆ. ಯಾವಾಗಲು ನಡೆಯುತಕ್ಕವನು ಯೆಡವುವದು ಸ್ವಾಭಾವಿಕ ವಾದುದರಿಂದ ಗವರ್ನಮೆಂಟಿನವರೆನ್ನಿಸಿಕೊಂಡ ಮಾತ್ರಕ್ಕೆ ಮಾನುಷ ಧರ್ಮಗಳಾದ ಬುದ್ಧಿಪ್ರಮಾದ ದೋಷಗಳವರು ಬಿಡತಕ್ಕವರಲ್ಲವಾಗಿ ಈ ಸಂದರ್ಭದಲ್ಲಿ ಅವರ ತಿಳುವಳಿಕೆಯ ಬಗ್ಗೆ ಕೆಲವು ಅಂಶಗಳಂ ತಮ್ಮ ಪತ್ರಿಕಾ ಮೂಲಕ ತಿಳಿಸಬೇಕೆಂಬ ಕೋರಿಕೆಯುಳ್ಳವನಾಗಿರುತ್ತೇನೆ.

ಕಳೆದ ವರುಷದ ಜಾಲೈ ತಿಂಗಳ ನಾಲ್ಕನೇ ತಾರೀಖು ೬೦೮೩—೯೦—೨೬ ನೇ ನಂಬರುಳ್ಳ ಒಟ್ಟು ಹುಕುಂ ರೂಪವಾದ ಗವರ್ನಮೆಂಟ್ ಪ್ರೊಸೀಡಿಂಗ್ಸನಲ್ಲಿ, ಮುಜರಾಯಿ ಖಾತಾ ವಿಚಾರಣೆಯುಳ್ಳದ್ದ ಆಯಾ ದೇವಸ್ಥಾನಗಳಿಗೆ ಸಂಬಂಧಿಸಿದ ಅನುಪಯುಕ್ತಗಳಾದ ಆಭರಣಗಳನ್ನು ಮಾರಿಸುವ ಒಂದು ಪಟ್ಟಿಯನ್ನು ತಯಾರುಮಾಡಿ ಕಳುಹಿಸಬೇಕೆಂಬದಾಗಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ಗಳಿಗೆ ವಿಧಿಸಲ್ಪಟ್ಟಿತು. ಅದೇ ರೀತಿ ಯೆಂಟು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್‌ಗಳೂ ಮೇಲೆ ಕಂಡ ಪಟ್ಟಿಗಳೊಡನೆ ತಮ್ಮ ತಮ್ಮ ರಿಪೋರ್ಟುಗಳನ್ನು ಕಳೆದ ಡಿಸೆಂಬರ್ ಅಖೈರೊಳಗಾಗಿ ಕಳುಹಿಸಿದರು. ಈಗ ಅವುಗಳನ್ನೆಲ್ಲ ಗವರ್ನಮೆಂಟಿನವರು ಪರಿಶೀಲಿಸಿ ಮಾರ್ಚಿ ಮಾಹೆ ೯ ನೇ ತಾರೀಖಿನಲ್ಲಿ ೧೯೦—೯೩—೧೦ ನೇ ನಂಬರ್ ಪ್ರೊಸೀಡಿಂಗ್ಸ್ ಮೂಲಕ ಇದರ ತಿಳಿಸಲ್ಪಟ್ಟಿರುವಂತೆ ಹುಕುಂ ಮಾಡಿರುತ್ತಾರೇನೆಂದರೆ.—ಈಗ ಬಂದಿರತಕ್ಕ ರಿಪೋರ್ಟುಗಳನ್ನು ಸ್ಟೇಟ್ಮೆಂಟುಗಳನ್ನು ನೋಡಲಾಗಿ ಅವುಗಳಾದ ಡಿಸ್ಟ್ರಿಕ್ಟ್ ಜಾತಿ ಆಯಾ ದೇವಸ್ಥಾನಗಳಲ್ಲಿ ಮುಮಾರ್ ೯೫,೫೫೫—೩—೪ ರೂಪಾಯಿಗಳ ಅಂದಾಜ್ ಕ್ರಯ ಬಾಳತಕ್ಕ ಆಭರಣಗಳು ಅನುಪಯುಕ್ತವಾಗಿರುವಂತೆ ಸ್ಪಷ್ಟವಾಗುತಿದೆ ಹ್ಯಾಗೆಂದರೆ.—

ಮೈಸೂರ	ಡಿ॥	ಅಂದಾಜ್ ಮೌಲ್ಯ	[illegible]
ತುಮಕೂರ	„	„	[illegible]
ಬೆಂಗಳೂರ	„	„	[illegible]
ಶಿವಮೊಗ್ಗ	„	„	[illegible]
ಕಡೂರ	„	„	[illegible]
ಚಿತ್ರದುರ್ಗ	„	„	[illegible]
ಹಾಸನ	„	„	[illegible]
		ಒಟ್ಟು	೯೫,೫೫೫—೩—೪

೨. ವಿಶೇಷವಾಗಿ ಆಭರಣಗಳು ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ದೇವಾಲಯಗಳಿಗೆ ಸೇರಿದವಾಗಿಯೇ ಇವೆ. ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರೂ, ಇತರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳ ಅಭಿಪ್ರಾಯಗಳು ಕೇಳಲ್ಪಟ್ಟದರ ಮೇಲೆ ಪ್ರಕಾರ ಜಾಸ್ತಿ ಆಭರಣಗಳನ್ನು ವಿ

ಕ್ರಯಿಸುವದೊಳ್ಳೆಯದೆಂದು ತಾತ್ಪರ್ಯಪಟ್ಟ ಶಿಫಾರಸ್ಸು ಮಾಡಿರುತ್ತಾರೆ.

೩. ಈರೀತಿ ಮಿರುವದರಿಂದ, ತಪ್ಪಿಗೆಳನ್ನೆ ನಮೂದಾಗಿರುವ ಆಭರಣಗಳನ್ನು ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸುವಕ್ಕೆ ಗವರ್ನಮೆಂಟಿನವರು ಹುಕುಂ ಕೊಟ್ಟಿರುತ್ತಾರಲ್ಲದೆ, ಅಂತಾ ಹರಾಜ್, ಡಿಸ್ಟ್ರಿಕ್ಟ್ ಹೆಡ್ ಕ್ವಾರ್ಟರ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ ಅಥವಾ ಡಿಸ್ಟ್ರಿಕ್ಟಿನಲ್ಲಿ ಮುಜರಾಯಿ ಕೆಲಸವಂ ನೋಡುತಲಿರುವ ಅಸಿಸ್ಟೆಂಟ್ ಕಮಿಷನರ ಸಮಕ್ಷಮದಲ್ಲಿ ನಡೆಯತಕ್ಕದ್ದು.

೪. ಸದರೀ ಹರಾಜ್ ಮೈಸೂರ್ ಗೆಜೆಟಿನಲ್ಲಿಯೂ, ಆಯಾ ಸ್ಥಳದ ನ್ಯೂಸ್ ಪೇಪರ್‌ಗಳಲ್ಲಿಯೂ, ಪ್ರಾಯುಷ ಮಾಡಲ್ಪಡತಕ್ಕದ್ದು ಈ ಅಂಶವನ್ನು ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್‌ಗಳಲ್ಲಿಯೂ ಆಯಾ ತಾಲ್ಲೂಕುಗಳಲ್ಲಿಯೂ ಡಂಗೋರೆಯ ಮೂಲಕ ತಕ್ಕಂತೆ ಬಹಿರಂಗ ಪಡಿಸತಕ್ಕದ್ದು.

೫ ಹರಾಜ್ ಹುಟ್ಟುವಳಿ ಮೊಬಲಗು ಆಯಾ ದೇವಸ್ಥಾನಗಳ ಫಂಡಿಗೆ ಜಮಾ ದಾಖಲ್ಮಾಡಲ್ಪಡುವುದು ಆ ಮೊಬಲಗಿನ ರಕ್ಷಣೆಯ ವಿಷಯದೊಳು ಪ್ರತ್ಯೇಕ ಹುಕುಂ ಕೊಡಲ್ಪಡುವುದು.

೬ ಚಾಮರಾಜ ನಗರ ತಾಲ್ಲೂಕಿನಲ್ಲಿರುವ ಶ್ರೀ ಚಾಮರಾಜೇಶ್ವರ ಸ್ವಾಮಿಯ ಮತ್ತು ವೀರಭದ್ರ ದೇವರ ಆಭರಣಗಳೂ, ತಿರುಮಕೂಡ್ಲು ನರಸೀಪುರ ತಾಲ್ಲೂಕಿನಲ್ಲಿರುವ ಸೋಸಲೆ ಮೊನ್ನಾದೇವಿಗೆ ಸೇರಿದ ಆಭರಣಗಳೂ ಬಹಳ ಬೆಲೆಯುಳ್ಳವೆಂತಲೂ, ಅವುಗಳ ಕ್ರಯವು ೬೫,೩೭೧-೯-೩ ರೂಪಾಯಿಗಳು ಅಂದಾಜಾಗಿದೆಯೆಂತಲೂ ತಿಳಿಯಬರುವದರಿಂದ ಅವುಗಳನ್ನು ಹರಾಜ ಹಾಕಿಸುವ ವಿಷಯದಲ್ಲಿ ವಿಶೇಷ ಜಾಗರೂಕತೆಯಂ ವಹಿಸಬೇಕಾದುದು ಅವಶ್ಯಕವಾಗಿರುತಿದೆ, ಹರಾಜ್ ಹಾಕಿಸುವ ಅಂಶವನ್ನು ಚೆನ್ನಾಗಿ ಬಹಿರಂಗ ಪಡಿಸಿದಮೇಲೆ ಅದು ಮೈಸೂರಲ್ಲಾಗಲಿ, ಅಥವಾ ಬೆಂಗಳೂರಲ್ಲಾಗಲಿ ನಡೆಯಬಹುದಾದುದರಿಂದ ಆ ಕಾಲದಲ್ಲಿ ಮೈಸೂರ್ ಡೆಪ್ಯುಟಿ ಕಮಿಷನರವರು ಖುದ್ದು ಹಾಜರಿದ್ದು ನಿಗೇವಾನಿಯಿಂದ ಹರಾಜ್ ಮಾಡಿಸಬೇಕೆಂದು ಕೋರುವದಲ್ಲದೆ ಆ ಅಂಶವನ್ನು ನೋಟಿಸ್‌ಗಳ ಮೂಲಕ ತಕ್ಕಂತೆ ಮದರಾಸ್ ಮತ್ತು ಮುಂಬೈಯಲ್ಲಿರುವ ಪ್ರಮುಖರಾದ ವ್ಯಾಪಾರ ಕೋಠಿಯವರಿಗೆ ತಿಳಿಯಪಡಿಸಬೇಕೆಂದು ಸಹ ಅಪೇಕ್ಷಿಸಲ್ಪಟ್ಟಿರುತಿದೆ

ಎ ಶ್ರೀನಿವಾಸಾಚಾರ್ಲು,
ಸೆಕ್ರಟರಿ.

ಮೇಲೆ ಕಂಡ ಪ್ರೊಸೀಡಿಂಗ್ಸಿನಲ್ಲಿ ತಿಳಿಸಲ್ಪಟ್ಟಿರುವ "ಅನಾವಶ್ಯಕಗಳಾದ" ಮತ್ತು "ಜಾಸ್ತಿಯಾದ" ಎಂಬ ಯೆರಡು ಶಬ್ದಗಳು ಈಗ ನನ್ನ ಅತಿ ವಾದಕ್ಕೆ ವಿಷಯಗಳಾಗಿವೆ ಒಂದು ದೇವಸ್ಥಾನದಲ್ಲಿರುವ ಆಭರಣಗಳು ಯೆರಡುವಿಧವಾಗಿ ಅನುಪಯುಕ್ತಗಳೆಂದು ಭಾವಿಸಲ್ಪಡಬಹುದು. ಧರಿಸಲಿಕ್ಕೆ ಅನುಕೂಲವಿಲ್ಲದಂತೆ, ಅಂದರೆ ಮುರಿದು ವೈರೂಪ್ಯವನ್ನೈದಿದರೂ ಅನರ್ಹತ್ವೇನ ನುಡಿಯಬಹುದು. ಅಥವಾ ಪ್ರತಿನಿತ್ಯ ವಿಗ್ರಹಗಳಿಗೆ ಧರಿಸದೆ ಕದಾಚಿತ್ ಒಂದು ವಿಶೇಷ ಸಂದರ್ಭದಲ್ಲಿ ಕ್ಲುಪ್ತ ಕಾಲದೊಳು ಧರಿಸಿದಾಗ್ಯೂ ಮಿಕ್ಕ ಕಾಲದೊಳು ಅವು ಅನುಪಯುಕ್ತವೆಂತಲೇ ನುಡಿಯಬಹುದು. ಈ ಎರಡುಬಗೆ ಅನುಪಯುಕ್ತತೆಗಳಲ್ಲಿ ಯಾವ ದೆಸ್ಸೆಗೆ ಈಗ ಹರಾಜಿಗೆ ಗುರಿಮಾಡಲ್ಪಟ್ಟಿರುವ ಆಭರಣಗಳು ಸೇರಿದವಾಗಿವೆಯೋ ಗೊತ್ತಾಗಲಿಗಲ್ಲವು. ಕಾಲಕರ್ಮ ಸಂಯೋಗದಿಂದ ಮೂಲ ಧರ್ಮಕರ್ತರು ಗತಿಸಿಹೋದಾಗ್ಯೂ ಅವರಿಗೆ ತಮ್ಮಿಂದ ಮಾಡಲ್ಪಟ್ಟ ದಾನ ಧರ್ಮಗಳು ಶಾಶ್ವತವಾಗಿ ದೃಶ್ಯವಾಗಿರಬೇಕೆಂಬ ಕೋರಿಕೆಯೊಡನೆ ಅವರು ಆಭರಣರೂಪಗಳಾಗಿಯೂ, ಭೂವಾಹನ ರೂಪಗಳಾಗಿಯೂ ಅನೇಕ ದೇವಸ್ಥಾನಗಳಿಗೆ ಕೊಟ್ಟಿರುತ್ತಾರೆ. ಸ್ಥಿರಸ್ವತ್ತುಗಳು ವಿಕಶಿತವಾಗದಿದ್ದರೂ ಚರಸ್ವತ್ತುಗಳು ಮಾತ್ರ ಕಾಲಕ್ರಮೇಣ ಅನುಭವಪಂಚುಗಳಾಗಿ ವಿಕಲತೆಗಳಾಗದೆ ಹೋಗುವಬಲ್ಲವು. ಹಾಗನ್ನಾದ್ದರಿಂದರೆ ಅವಂ ಅನುಪಯುಕ್ತವೆಂದು ಭಾವಿಸಿ ರೂಪಾಂತರ ಮಾಡಹೊತ್ತಿಸಿದರೆ ಮೂಲಕರ್ತರ ಉದ್ದೇಶವನ್ನೇ ಭಂಗಪಡಿಸಿ ವಿರೂಪಗೊಳಿಸಿದಂತಾಗುತಿದೆ. ಒಂದು ವಿಷಯವು ಉಪಯುಕ್ತಾನುಪಯುಕ್ತತೆಯು ತತ್ಸ್ವರೂಪವನ್ನನುಸರಿಸಿಯೂ, ಭಾವನಾನುಗುಣವಾಗಿಯೂ, ಕಾಲದೇಶೋಚಿತವಾಗಿಯೂ ಯೋಗ್ಯತೆಗೆ ತಕ್ಕದ್ದಾಗಿರುತ್ತಿದೆ ಒಂದು ದೇಶದಲ್ಲಿ ಒಂದು ಕಾಲದೊಳು ಒಂದು ವಿಧವಾಗಿ ಒಬ್ಬರಿಗೆ ಅನುಪಯುಕ್ತವಾದ ಒಂದು ವಿಷಯವು ಬೇರೊಂದು ದೇಶದಲ್ಲಿ ಮತ್ತೊಂದು ಕಾಲದೊಳು ಅನ್ಯವಿಧವಾಗಿ ಇತರರೊಬ್ಬರಿಗೆ ಉಪಯುಕ್ತವಾಗಿ ತೋರಿರುವದಕ್ಕೆ ಅನೇಕ ದೃಷ್ಟಾಂತಗಳು ಕಂಡುಬಂದಿವೆ ಅನಿಶ್ಚಿತವೆಂದು ಹೇಳುವದು ಸಹ ಮೇಲೆ ಕಂಡಂತೆ ಅನುಚಿತವು. ನಿಶ್ಚಿತವೆಂಬುದೂ ಅನಿಶ್ಚಿತವೆಂಬುದು ಸಹ ಮಾನಸಿಕ ಪರಿಣಾಮರೂಪವಾಗಿರುತಿದೆ ಭಕ್ತಿಪೂರ್ವಕವಾಗಿಯೆಂದು ಕೊಡಲ್ಪಟ್ಟ ಆಭರಣಗಳು ದೇವರಿಗೆ ಅಧಿಕವೆಂದೆಣಿಸಿ ಅವುಗಳಂ ಮಾರಿ ಬೇರೆವಿಧವಾಗಿಟ್ಟು ಬಡ್ಡಿ ಸಂಪಾದಿಸುವ ಕೋರಿಕೆಯು ನ್ಯಾಯವಾಗಿರುವ ಪಕ್ಷಕ್ಕೆ ಅದೇ ಸಂಭಾವನೆಯು ಭೂ ವಾಹನಾದಿಗಳ ವಿಷಯಗಳಲ್ಲಿಯೂ, ಮತ್ತೊಂದು ಕಾಲದಲ್ಲಿ ಇನ್ನೊಬ್ಬರಿಗೆ ಇದೇರೀತಿ ಯೋಚನೆ ತೋರಬಾರದು ? ಹಾಗೆಯೇ ದೇವತಾದಾಯ ಧರ್ಮಗಳು ಅನುತ್ಪಾದಕವೆಂದು ತೋರಿ ಇತರ ವಿಷಯಗಳಿಗೆ ಅವು ಯಾತಕ್ಕೆ ವಿನಿಯೋಗಿಸಲ್ಪಡಕೂಡದು ? ಏಕೇನೆ ಅಪರಿಮಿತವಾಗಿದ್ದಾಗ್ಯೂ, ಪ್ರಕೃತದೊಳ ಅನುಪಯುಕ್ತವಾಗಿದ್ದಾಗ್ಯೂ, ಅವುಗಳನ್ನು ದುರಸ್ತುಮಾಡಿ, ಅಥವಾ ಹಾಗೆ ಮಾಡಲಿಕ್ಕೆ ಸಾಧ್ಯವಿಲ್ಲದಿದ್ದರೆ ಬೇರೊಂದನ್ನಾದರು ಮಾಡಿಟ್ಟು, ಧರ್ಮಕರ್ತರ ಉದ್ದೇಶವು ಕೆಡದೆ ಅವರ ಜ್ಞಾಪಕವು ಸ್ಥಿರವಾಗಿರುವಂತೆ ಕಾಪಾಡಬೇಕಾದುದು ಟ್ರಸ್ಟಿಗಳ ಕರ್ತವ್ಯವಾಗಿರುತಿದೆ. ಟ್ರಸ್ಟಿಗಳಿಗೆ ದತ್ತಿಯೋಬ ಮೊಬಗದಂತೆ ಕಾಪಾಡತಕ್ಕ ಪ್ರತೀಕಾರ ಅಧಿಕಾರ ವೊಂದುವಿನಾ ಮತ್ಯಾವ ಅಧಿಕಾರವೂ ಇರುವದಿಲ್ಲವು. ಈಗ ಗವರ್ನಮೆಂಟಿನವರದೆಂದು ಕರೆಯಲ್ಪಡುವ ದೇವಾಲಯಗಳೆಲ್ಲವೂ ಒಂದು ಕಾಲದಲ್ಲಿ ಒಬ್ಬೊಬ್ಬರಿಂದ ಕಟ್ಟಲ್ಪಟ್ಟವಲ್ಲವೆ ಅವುಗಳ ಭಿತ್ತಿಗಾಗಿ ಅವರು ಏರ್ಪಡಿಸಿಟ್ಟ ದಿನವನ್ನು ವರ್ತ್ಸಂತರಿಯವರು ಅಪಹರಿಸದೆ ಕಾಪಾಡುವನೆಂಬ ನಂಬಿಕೆಯಿಲ್ಲದೆ ಸದರೀ ಆಸ್ತಿಯನ್ನೂ ದೇವಸ್ಥಾನನ್ನೂ ಸರ್ಕಾರ್ ಸುಪರ್ದ ಮಾಡಿ ಅವರು ತಮ್ಮ ಧರ್ಮರಕ್ಷಣೆಗೆ ಟ್ರಸ್ಟಿಗಳನ್ನಾಗಿಟ್ಟು ಗತಿಸಿದರು. ಆದುದರಿಂದ ಈ ವಿಷಯದಲ್ಲಿ ಗವರ್ನಮೆಂಟಿನವರಿಗೆ ಮೂಲಕರ್ತರ ಉದ್ದೇಶಕ್ಕೆ ವಿರುದ್ಧವಾಗಿ ನಡೆಸುವ ಅಧಿಕಾರವಿರುವಂತೆ ಅವರ ವರ್ತನದಿಂದ ವಿನಾ ಮತ್ಯಾವದರಿಂದಲೂ ಸ್ಪಷ್ಟವಾಗುವದಿಲ್ಲವು. ಒಂದು ವೇಳೆ ತಮಗೆ ಅಂತಾ ಅಧಿಕಾರವುಂಟೆಂದು ಆರೋಪಿಸಿಕೊಳ್ಳುವ ಪಕ್ಷಕ್ಕೆ ಆಲಯಗಳನ್ನು ಮಸ್ಜಿದ್ದಾಗಿಯೂ ಮಸ್ಜಿದಿಗಳನ್ನು ಚರ್ಚಗಳಾಗಿಯೂ, ಚರ್ಚಗಳನ್ನು ದತ್ತಶಾಲೆಗಳಾಗಿಯೂ ಮಾಡಬಹುದಷ್ಟೆ. ಕಡೆಗೆ ಇವುಗಳಂ ಮಾಡುವ ಪ್ರಯೋಜನವು ಏತರೂಪವಾದುದಷ್ಟೆ. ಹೀಗೆಯೇ ಅವ್ಯವಸ್ಥಿತವಾಗಿ ಕಾರ್ಬಾರ್ ಮಾಡುವವರ ಅಭಿಪ್ರಾಯದಂತೆಲ್ಲ ಬದಲಾಯಿಸುತ ಕೆಲವು ಕಾಲದಲ್ಲಿ ಪೂರ್ವರೂಪವೇ ಬದಲಾಯಿಸಿ ಪ್ರಕಾರಾಂತರವಾಗಿ ಪ್ರಥಮ ಧರ್ಮಕರ ಧರ್ಮವೂ, ಅವರ ಹೆಸರೂ ಕಾಲವು ಸಹ ನಿರ್ನಾಮಗಳಾಗುವ ಸಮಯ ತಪ್ಪದೆ ಪ್ರಾಪ್ತವಾಗುವದೆಂಬ ಭೀತಿಯು ನನ್ನನ್ನು ಬಾಧಿಸುತಲಿರುವದರಿಂದ ಈ ವಿಷಯದಲ್ಲಿ ನನ್ನಂತೆ ಇನ್ನೂ ಇತರರು ಚಿಂತಿಸಬಹುದೆಂದೆಣಿಸುತ್ತೇನೆ. ಈಗ ಯೆಂಟು ಡಿಸ್ಟ್ರಿಕ್ಟ್‌ಗಳಲ್ಲಿಯೂ ಡೆಪ್ಯುಟಿ ಕಮಿಷನರ್‌ಗಳಾಗಿರುವವರು ಜಾಸ್ತಿಯಾದ ಆಭರಣಗಳಂ ಮಾತ್ರ ವಿಕ್ರಯಿಸಿ ಎಡಬೇಕೆಂದು ಕೊಟ್ಟ ಸಂಸಿಗೆ ನಾನು ಆಶ್ಚರ್ಯಪಡುವದಿಲ್ಲವು. ಆದರೆ ಕೇವಲ ಪೌರವಾರ್ಥಿಕರಾಗಿಯೂ ಲೋಕಾಪವಾದ ಭೀರುವಾಗಿಯೂ, ಯುಕ್ತಾಯುಕ್ತ ವಿವೇಚನಾಶಾಲಿಗಳೂ ಇರುವ ದಿವಾನ್ ಮ ಶೇಷಾದ್ರಿ ಅಯ್ಯರವರು ಈ ವಿಷಯದಲ್ಲಿ ಡೆಪ್ಯುಟಿ ಕಮಿಷನರ್‌ಗಳ ಅಭಿಪ್ರಾಯವಂ ಪೋಷಿಸಿ ಹುಕುಂ ಕೊಟ್ಟ ಬಗ್ಗೆ ನಾನು ಆಶ್ಚರ್ಯಪಡುತ್ತೇನೆ ದಿವಾನರವರೇ ಈ ರೀತಿ ಹುಕುಂ ಮಾಡಿದ ಮೇಲೆ ಮುಜರಾಯಿ ಸೂಪರಿಂಟೆಂಡೆಂಟರ ಸಲಹೆಯಿಂದೇನು ಪ್ರಯೋಜನವು ? ಮುಖ್ಯವಾಗಿ ಇದಂ ಕುರಿತು ಚೆನ್ನಾಗಿ ಭಾವಿಸದರೆ ಇದು ಅನಾಲೋಚಿತ ನಿರ್ಣಯವೆಂದೆಣಿಸಿ ವಿಷಾದಿಸುವ, ತಮ್ಮ ವಿಧೇಯನಾದ,

ಭಕ್ತವತ್ಸಲನು.

ಅಯ್ಯಾ—ಮೇ ತಿಂಗಳ ೧೬ನೇ ತಾರೀಖಿನ ಕರ್ನಾಟಕಪ್ರಕಾಶಿಕಾ ಪತ್ರಿಕೆಯಲ್ಲಿ ಶ್ರೀಮನ್ಮಹಾರಾಜರವರುಗೋಸ್ಕರವಾಗಿ ದೇವಾಲಯಗಳಲ್ಲಿ ಆರೋಗ್ಯವನ್ನು ಹೇಳುವ ವಿಷಯ ಪ್ರಕಟಿಸಿದ್ದೀರಷ್ಟೆ, ಅದು ಯುಕ್ತವೇ ಸರಿ ಅದರೆ ಬಹುಕಾಲದಿಂದ, ಆದರೆ ಆಳಿದ ಮಹಾಸ್ವಾಮಿಗಳಾದ ಶ್ರೀಮನ್ಮಹಾರಾಜಾಧಿರಾಜ ಕೃಷ್ಣರಾಜ ಭೂಪಾಲಕರ ದಿವಸದಿಂದ ಈ ಸ್ಥಳದಲ್ಲಿ ಶ್ರೀನಿವಾಸದೇವರ ದೇವಸ್ಥಾನದಲ್ಲಿ ನಿತ್ಯ [illegible] ಆಶೀರ್ವಾದವನ್ನು ಈ ಕೆಳಗೆ ತಮ್ಮಗಳ ತಿಳುವಳಿಕೆಗೋಸ್ಕರ ಉದಹರಿಸುತ್ತೇನೆ ಸ್ವಸ್ತಿ [illegible] — ಸ್ವಸ್ತ್ಯಸ್ತು ಮಂತ್ರಾರ್ಥಾಸ್ಸತ್ಯಸ್ಸಫಲಾ ಸ್ಸಂತತಿರ್ಭವಂತೋ [illegible] ತೇ ನಾಮ್ನಾಂತು, ಅಸ್ಯ ಶ್ರೀ ವೇಂಕಟೇಶ್ವರ ದೇವತಾ [illegible] ಬ್ರಹ್ಮಾಂಡನಾಯಕ [illegible] ವ್ಯವಸಿತ್ಯಸ್ತು [illegible] ಭಕ್ತಸಂತತೀ ಸತತಂ ಪರಿಪಾಲನಾರ್ಥಂ [illegible] ಶ್ರೀ ಶ್ರೀನಿವಾಸ [illegible] ಪ್ರಸನ್ನ ಶ್ರೀ ಶ್ರೀನಿವಾಸ ಸ್ವಾಮಿನೋ ನಿತ್ಯೋತ್ಸವ, ನೈಮಿತ್ತಿಕೋತ್ಸವ, ವಸಂತೋತ್ಸವ, ಉಯ್ಯಾಲೋತ್ಸವ, [illegible] ಪವಿತ್ರೋತ್ಸವ, ಕಲ್ಯಾಣೋತ್ಸವ, ಪುಷ್ಪೋತ್ಸವ, ಅಗ್ರೋತ್ಸವ, ಪವಿತ್ರೋತ್ಸವ ಶ್ರೀಕೃಷ್ಣ ಜನ್ಮೋತ್ಸವ [illegible] ರಥೋತ್ಸವ, ಬ್ರಹ್ಮೋತ್ಸವ, ಮೃಗಯೋತ್ಸವ, ತೆಪ್ಪೋತ್ಸವ, [illegible] ಸರ್ವ ಮಹೋತ್ಸವಂ ಅಪರಿಮಿತವೃದ್ಧಿ [illegible] ವಂತೇ [illegible] ಶ್ರೀ ಶ್ರೀನಿವಾಸ ಬ್ರಹ್ಮತಂತ್ರ [illegible] ಮಹಾರಾಜ [illegible] ವಿನಾಸಕ್ತ [illegible] ಆತ್ರೇಯಸಗೋತ್ರ [illegible] ನಕ್ಷತ್ರ [illegible] ತಸ್ಯ ಶ್ರೀಮನ್ಮಹೀಶೂರಪುರವರಾಧೀಶ ಶ್ರೀ [illegible] ತಸ್ಯ ಶ್ರೀಮದ್ಯುವರಾಜ ಕೃಷ್ಣರಾಜ [illegible] ಸಹ ಸಕುಟುಂಬ ಪುತ್ರಪೌತ್ರಾಭಿವೃದ್ಧಿಂ [illegible] ಭವಂತು [illegible] ಭವಂತು, ರಾಜ ಭಕ್ತಿಃ [illegible] ಭವಂತು, [illegible] ಸಿದ್ಧಿರಸ್ತು, [illegible] ಭವಂತು, ಸಮಸ್ತ [illegible] ಭವಂತು, ಎಂದು ಹೀಗೆ [illegible] ನಿತ್ಯದಲ್ಲಿಯೂ ನಡೆಯುತಲಿದೆ ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿರುವ ಪ್ರಕಾರವೇ ನಡೆಯತಕ್ಕದ್ದು ಯುಕ್ತವೋ ಹೇಳಿ [illegible] ಅನುಚಿತವಾಗಿಯೂ ಪೂರ್ವ ಆಚಾರಪರಂಪರೆಗಳಿಂದ ಉಕ್ತವಾಗಿ ಮಾಡತಕ್ಕದ್ದು ಯುಕ್ತವೋ ತಮ್ಮ ಚಿತ್ತದಲ್ಲಿ ತಂದು ಇದನ್ನು ತಮ್ಮ ಪತ್ರಿಕಾದ್ವಾರಾ ಪ್ರಕಟಿಸಬೇಕೆಂದು ವಿಧೇಯನಾಗಿ ಕೇಳಿಕೊಳ್ಳುತ್ತೇನೆ.

೨೧-೫-೯೨ ನೋಣವಿನಕೆರೆ,	ಪೂರ್ವ ಸಂಪ್ರದಾಯಾಭಿಮಾನಿ

THE MYSORE GAZETTE.
ಮೈಸೂರು ಗೆಜೆಟ

ಶ್ರೀಮನ್ ಮಹಾರಾಜ [illegible] ಸರ್ಕಾರದಿಂದ ಕೊಡಲ್ಪಡುವ ಇಷ್ತಿಹಾರ್‌ಗಳು.

ನಂ. ೬೨, ತಾ|| ೧೬ ನೇ ಮೇ ೧೮೯೨ — ಸನ್ ೧೮೯೧ ನೇ ಇಸವಿ ಅಕ್ಟೋಬರ್ ೨೨ ನೇ ಮುರ್ಕಂ ೩೦೫ ನೇ ನಂಬರ್ ಇಸ್ತಿಹಾರ್ ನಾಮೆಯನ್ನನುಸರಿಸಿ ಪ್ರಕಟಪಡಿಸಲ್ಪಟ್ಟ, ಮೈಸೂರ್ ಸ್ಟೇಟ್ ಇನ್ಷ್ಯೂರೆನ್ಸ್ ರೂಲ್‌ಗಳಲ್ಲಿ ೨೧ ನೇ ರೂಲಿಗೆ ಇದರಡಿ ತಿಳಿಸಲ್ಪಡುವ ಜಾಸ್ತೀ ಭಾಗವನ್ನು ಸೇರಿಸುವಂತೆ ಮೈಸೂರ್ ಶ್ರೀಮನ್ ಮಹಾರಾಜಾ ಸರ್ಕಾರದವರು ಹುಕುಂ ಮಾಡಿರುತ್ತಾರೆ

ಪಾಲಿಸಿ ಕೊಡಲ್ಪಟ್ಟ ತಾರೀಖ್ ಲಾಗಾಯಿತು ಒಂದು ತಿಂಗಳೊಳಗಾಗಿ ಖಜಾನೆಯಿಂದ ಅವು ತೆಗೆದುಕೊಳ್ಳಲ್ಪಡದಿದ್ದಾಗ್ಯೆ, ಸದರೀ ಅಂಶವು ಸೆಕ್ರಟರಿಯವರಿಗೆ ರಿಪೋರ್ಟ್ ಮಾಡಲ್ಪಟ್ಟ ಆ ದರಮೇಲೆ ಅವರು ಬೀಮಾದಾರರನ್ನು ಹೊಸದಾಗಿ ಮೆಡಿಕಲ್ ಸರ್ಟಿಫಿಕೇಟ್ ಹಾಜರ್ಮಾಡಬೇಕೆಂದು ಅಪೇಕ್ಷಿಸತಕ್ಕದ್ದು.

ನಂ. ೬೮,—ಮೈಸೂರ್ ರೆವಿನ್ಯೂ ಸರ್ವೆ ಇಲಾಖೆಯಲ್ಲೀಗ ಕೆಲಸ ನೋಡುತಲಿರುವ ೩ ನೇ ಕ್ಲಾಸ್ ಅಮಲ್ದಾರ್ ಲಿಂಗೋ ಮಲ್ಹಾರ್ ನಾಯಕ್‌ಯವರು, ಮಾಹೇಯಾನಾ ೧೮೦ ರೂಪಾಯಿಗಳ ತಲಬಿನಲ್ಲಿ ತಿಂಗಳೊಂದಕ್ಕೆ ೨೦ ರೂಪಾಯಿಗಳು ಹೊರಗಿನ ಸಂಚಾರದಬಗ್ಗೆ ಬತ್ತಾ ಸಮೇತ ಸರ್ವೆ ಇಲಾಖೆಯಲ್ಲಿ ಸಬ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾಗಿ ನೇಮಕರಾಗಲ್ಪಟ್ಟಿರುತ್ತಾರೆ

ನಂ. ೬೯, ತಾ ೧೨ ನೇ ಮೇ ೧೮೯೨.— ಮೆ|| ವಿ. ಪಿ. ಮಾಧವರಾಯರವರು ಬೆಂಗಳೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರ ಆಫೀಸ್ ಸೀಲ್‌ಗಳು ಮತ್ತು ಖಜಾನೆ ಚಾರ್ಜ್‌ಗಳನ್ನು ಮೆ|| ಮಿಯರ್ ಷಜಾಯತ್ ಅಲ್ಲೀಖಾನರವರಿಗೆ, ೧೮೯೨ ನೇ ಇಸವಿ ಮೇ|| ೧೬ ನೇ ಮುರ್ಕಂ ಪೂರ್ವಾಹ್ನದಲ್ಲಿ ಒಪ್ಪಿಸಿರುತ್ತಾರೆ. ಮೆ|| ಎಲ್. ರಿಕೆಟ್ಸ್ ಯವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ ಆಫೀಸ್ ಚಾರ್ಜನ್ನು ೧೮೯೨ ನೇ ಇಸವಿ ಮೇ|| ೧೬ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ವಿ ಪಿ. ಮಾಧವ ರಾಯರವರಿಗೊಪ್ಪಿಸಿರುತ್ತಾರೆ.

ನಂ. ೭೦ —ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಮಿ ಹೆಚ್ ಫುಟ್ಸ್‌ಸನವರಿಗೆ, ಅವರು ಪಡೆಕೊಳಗಿಸಿಕೊಳ್ಳುವ ತಾರೀಖ್ ಲಾಗಾಯಿತು ೨ ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ

ನಂ ೭೧, ತಾ|| ೧೮ ನೇ ಮೇ ೧೮೯೨ — ಬೆಂಗಳೂರ್ ಟೌನ್ ಮ್ಯಾಜಿಸ್ಟ್ರೇಟರೆಂಬದಕ್ಕೆ ಬದಲಾಗಿ ಮುಂದೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟೆಂದು ಕರೆಯಲ್ಪಡತಕ್ಕದ್ದು.

ನಂ. ೭೨, ತಾ ೧೯ ನೇ ಮೇ ೧೮೯೨ — ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ ಸೈಯದ್ ಅಮೀರ್ ಹುಸೇನಯವರು, ಚಿತ್ರದುರ್ಗ ಡಿಸ್ಟ್ರಿಕ್ಟ್ ಟ್ರೆಜರೀ ಚಾರ್ಜನ್ನು ೧೮೯೨ ನೇ ಇಸವಿ ಮೇ ೯ ನೇ ಮುರ್ಕಂ ಅಪರಾಹ್ನದಲ್ಲಿ [illegible] ಅಸಿಸ್ಟೆಂಟ್ ಕಮಿಷನರ್ ಮಿ [illegible] ರವರಿಗೆ ಒಪ್ಪಿಸಿರುತ್ತಾರೆ

ನಂ. ೭೩ —ಮೆ|| ಆರ್. ವಿಜಯ [illegible] ರಾಯರವರು ಯೆಕ್ಸೈಜ್ ಕಮಿಷನರವರ ಆಫೀಸ್ ಚಾರ್ಜನ್ನು ೧೮೯೨ ನೇ ಇಸವಿ ಮೇ ೧೨ ನೇ ತಾರೀಖಿನ ಪೂರ್ವಾಹ್ನದಲ್ಲಿ ಮೆ|| ಎಲ್ ರಿಕೆಟ್ಸ್ ಯವರಿಗೊಪ್ಪಿಸಿರುತ್ತಾರೆ.

ನಂ. ೭೮ —ಡೆಪ್ಯುಟಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಎಂ. ವೆಂಗಯ್ಯ ಶೆಟ್ಟರವರಿಗೆ ೧೮೯೨ ನೇ ಇಸವಿ ಮಾರ್ಚಿ ೧೬ ನೇ ಮುರ್ಕಂ ೪೮೦ ನೇ ನಂಬರ್ ಇಸ್ತಿಹಾರ್‌ನಲ್ಲಿ ಕೊಡಲ್ಪಟ್ಟದ್ದು ೨ ತಿಂಗಳ ಪ್ರಿವಿಲೀಜ್ ರಜಾ ಇನ್ನೊಂದು ತಿಂಗಳ ತನಕ ಹೆಚ್ಚಿಸಲ್ಪಟ್ಟಿರುತಿದೆ

ನಂ. ೭೯, ತಾ. ೨೧ ನೇ ಮೇ ೧೮೯೨ — ಮಿ ವಿ ಎನ್ ನರಸಿಂಹಯ್ಯಂಗಾರ್ಯರವರು ಸೆನ್ಸಸ್ ಸೂಪರಿಂಟೆಂಡೆಂಟ ಕೆಲಸದೊಡನೆ, ಮೈಸೂರ್ ಸೀಮೆಯಲ್ಲಿ ಅರ್ ಕಿಯೋಲಾಜಿಕಲ್ ರೀಸರ್ಚಗಳ ಡೈರೆಕ್ಟರಿಗೆ ಅಸಿಸ್ಟೆಂಟರಾಗಿ ನೇಮಕರಾಗಲ್ಪಟ್ಟಿರುತ್ತಾರೆ. ಮಿ ನರಸಿಂಹಯ್ಯಂಗಾರ್ರವರು ೧೮೯೨ ನೇ ಇಸವಿ ಎಪ್ರಿಲ್ ೮ ನೇ ಮುರ್ಕಂ ಪೂರ್ವಾಹ್ನದಲ್ಲಿ ತಮ್ಮ ಕೆಲಸದಲ್ಲಿ ಪ್ರವೇಶಿಸಿರುತ್ತಾರೆ.

ನಂ. ೮೦ —ಫರ್ಲೋ ರಜಾಮೇಲಿರುವ ಸರ್ಜನ್ ಮೇಜರ್ ಬೆನ್ಸನ್‌ಯವರ ಗೈರ್ ಹಾಜರಿಯಲ್ಲಿ ಸರ್ಜನ್ ಮೇಜರ್ ಡಾಸನ್‌ಯವರು ಮೈಸೂರ್ ಸಿವಿಲ್ ಸರ್ಜನ್ ಮತ್ತು ಕೆಮಿಕಲ್ ಯೆಗ್ಜಾಮಿನರಾಗಿಯೂ, ಮೈಸೂರ್ ಪೆಯಿಲ್ ಮತ್ತು ಹೆಂಗಸರ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿಯೂ ಆಕ್ಟಿಂಗ್ ಪರೀಕ್ ಮೇಲೆ ನೇಮಕರಾಗಲ್ಪಟ್ಟಿರುತ್ತಾರೆ

BANGALORE —Printed and published at the KARNATAKA PRESS, No 40, HOSPITAL ROAD, PETTAH —1892

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE —MONDAY, JUNE 6, 1892 [No 23.

ಸಂಪುಟ ೧೯.] ಬೆಂಗಳೂರು:—ಸರ್ ೧೮೯೨ ನೇ ಇಸವಿ ಜೂನ್ ೬ ನೇ ತಾರೀಖು ಸೋಮವಾರ. [ಸಂಚಿಕೆ ೨೩.

ಕರ್ನಾಟಕ ಪ್ರಕಾಶಿಕಾ.

ಕ್ರಯದ ಮುಂಗಡ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ	ಪರಸ್ಥಳದವರಿಗೆ
	ಅಂಚೆ ಕೂಲಿ ಸಹಿತ	
ಮುಂಗಡವಾದರೆ ವರ್ಷಕ್ಕೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾದರೆ ವರ್ಷಕ್ಕೆ	4—0—0	5—0—0
ತರುವಾಯ ,	5—0—0	6—0—0

[illegible]

ಪ್ರಕಟನೆಯ ರೇಟುಗಳು

[illegible]	೦—೨—೦
[illegible]	೦—೧—೦

[illegible]

ADVERTISEMENTS

NOTICE.

VAIDYASARA SANGRAHA

[illegible]

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ

[illegible]

ಇದರ ಕ್ರಯ—[illegible] ಪ್ರತಿ ಒಂದಕ್ಕೆ ರೂ 5-0—0

[illegible]

ನೋಟೀಸು.

ಬೆಂಗಳೂರು ಕರ್ನಾಟಕ ಪ್ರೆಸ್.

೧೮೬೫ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

[illegible]

ನೋಟೀಸ್.

ನುಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಆರ್ಕಾಟ್ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇತರದ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟಿನ ಮೂಲಕ ರೆಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

[illegible]

ಸದರ್ನ್ ಮರಾಟಾ ರೈಲ್ವೇ.

ನೋಟೀಸು.

ಯಂತ್ರಸಂಬಂಧಿ ಸಾಮಾನುಗಳೂ, ಕಠಿಣವಾದ ಧಾತುಗಳಿಂದ ಮಾಡಿದ ಕಿರಾಣೀ ಸಾಮಾನುಗಳೂ, ತರತರದ ರೈಲ್ವೇ ಹತ್ಯಾರಗಳೂ, ಜಾಕಸ್ಕ್ರೂಗಳೂ, ಪರ್ಮನೆಂಟ ವೇ ಸಾಮಾನುಗಳೂ, ಪರಿಬ್ಲಾಕಗಳೂ, ಧಾತುಗಳೂ, ಆ ದೀಸುಗಳೂ, ಅವುಗಳ ಗಾಲಿಗಳೂ, ಕಬ್ಬಿಣದ ಪೇಡುಗಳೂ, ಪಾಲೀ ಪೀಪಾಯಿಗಳೂ, [illegible] ಕುರ್ಚಿ, ಮೇಜು, [illegible] ಮುಂತಾದ ಸಾಮಾನುಗಳೂ, ಇನ್ನು ಅನೇಕ ತರದ ರೈಲ್ವೆಯ ನಿರುಪಯೋಗೀ ಸಾಮಾನುಗಳ [illegible] ತಾರೀಖು ೧೫ ನೇ ಜೂನ್ ೧೮೯೨ ನೇ ಇಸವಿ ಬುಧವಾರದ ದಿನ [illegible] "ಜನರಲ್ ಸ್ಟೋರ" ದಲ್ಲಿ ಮುಂಜಾನೆ ೧೧ ಘಂಟೆಗೆ ಪ್ರಸಿದ್ಧವಾಗಿ ಲೀಲಾಂವು ಮಾಡಲ್ಪಡುವದು.

ಸ್ಟೋರಕೀಪರನ ಆಫಿಸ್ ಹುಬ್ಬಳ್ಳಿ ತಾ|| ೩ ನೇ ಜೂ. ೧೮೯೨.	ಡಬ್ಲ್ಯು. ಡಬ್ಲ್ಯು. [illegible] ಸ್ಟೋರಕೀಪರ, ಸದರ್ನ ಮರಾಟಾ ರೈಲ್ವೇ

THE MONEY MARKET.

[illegible] ೪ ನೇ ಜೂನ್ 1892.

[illegible] ರೂ [illegible] 108 12-0 ಇಂದ 109 12 0 ವರೆಗೆ.

[illegible] ಬ್ಯಾಂಕ ಷೇರುಗಳು, (500) [illegible] 950 [illegible]

[illegible] ಬ್ಯಾಂಕ ಷೇರುಗಳು, (100) [illegible] 165 ಇಂದ 170 ವರೆಗೆ.

ಸಾವರಿನ್, 13—12—0

[illegible] 6 ತಿಂಗಳ [illegible], 1s 3 21/32 d.

[illegible] 4 ತಿಂಗಳ [illegible], 1s 3 19/32 d

[illegible], 1s. 3 ½d.

THE BANGALORE SREENIVASA MANDIRAM.

ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ಲೆಖ್ಖ:—

೧೮೯೨ ನೇ ಇಸವಿ ಮೇ ೨೯ ನೇ ತಾರೀಖು ಮೊದಲು ಜೂನ್ ೪ ನೇ ತಾರೀಖು ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	94
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	62¼
ಗತವಾರದ ಶಿಲ್ಕು ಸೇರು	...	40
ಜುಮ್ಲಾ	..	102¼
[illegible] ಸೇರು	..	32¾
ಖರ್ಚಾದ ಅಕ್ಕಿ ಸೇರು	...	29½
ಜುಮ್ಲಾ ಬಾಕಿ	...	40½

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

ಅನಾಥರು	...	7
[illegible] ವಿದ್ಯಾರ್ಥಿ	...	2
[illegible] ವಿದ್ಯಾರ್ಥಿಗಳು	...	19
[illegible]		16
ಬ್ರಹ್ಮಚಾರಿಗಳು	...	13
ಜುಮ್ಲಾ	...	58

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 6, 1892

೧೮೯೨ ನೇ ಇಸವಿ ಜೂನ್ ತಾ|| ೬ ನೇ ಸೋಮವಾರ.

THE PROSPECTS OF OUR YOUNG MEN

ವರ್ತಮಾನಕಾಲದ ಬಾಲಕರ ಭವಿಷ್ಯತ್ತಿನ ವಿಚಾರ.

ಪ್ರಕೃತ ಕಾಲ ದೇಶಸ್ಥಿತಿಯನ್ನು ವರೀಕ್ಷಿಸಿ ನೋಡಿದಾಗಲ್ಯೂ ನಮ್ಮ ಬಾಲಕರ ಪುರೋವೃದ್ಧಿಯಲ್ಲಿ ನಮಗೆ ಸ್ವಲ್ಪವೂ ನಂಬಿಕೆಯುಂಟಾಗಲಿಲ್ಲವು. ಲೌಕಿಕ ಸುಖಾಪೇಕ್ಷೆಯಿಂದ ಅವರು ರಾಜಭಾಷೆಯಾದ ಮತ್ತು ಅರ್ಥಕರಿಯಾದ ಇಂಗ್ಲಿಷ್ ಭಾಷಾಭ್ಯಾಸವೇ ತಮ್ಮ ಜನ್ಮಸಾಫಲ್ಯಹೇತುವೆಂದು ಭಾವಿಸಿ, ದೇಶಭಾಷೆಯನ್ನುಪೇಕ್ಷಿಸಿ, ಸ್ವಜಾತಿಮತಸಂಪ್ರದಾಯಗಳನ್ನುದಾಸೀನಮಾಡಿ, ಸ್ವಮತಗ್ರಂಥಗಳನ್ನನಾದರಿಸಿ, ಸ್ವಾಯತ್ತಗಳಲ್ಲಿ ಅನನುರಕ್ತಿಯಂ ವ್ಯಕ್ತಪಡಿಸಿ, ಸ್ವಜನರಲ್ಲಿ ಅಲಕ್ಷ್ಯ [illegible] ಪ್ರವರ್ತಿಸಿ, ಸಕಲ ವಿಷಯಂಗಳೊಳು ತಾಮಸ್ವತಂತ್ರಭಾವದೊಡನೆ ನಡವ ಭಾವವನ್ನೇ ಪ್ರಾಯಶಃ ಎಲ್ಲರೂ ಅಭ್ಯಾಸಮಾಡುತ್ತಿದ್ದಾರೆ. [illegible] ಇಂಗ್ಲಿಷ್ [illegible] ಗಿರುವವೆ [illegible] ಪ್ರಾಪ್ತವಾಗುವದು [illegible]

ವಿದ್ಯಾಮದವನ್ನು ಪಡೆಯುತ್ತಿರುವುದು ಅತಿ ಪ್ರಯಾಸದಿಂದಾರ್ಜಿಸುವ ಆ ಶುಷ್ಕವಾದ ಜ್ಞಾನಕ್ಕೆ ಅವರಿಗೆ ಈಗ ಲಭಿಸುವ ಫಲವು ವಿಚಾರಣೀಯವಾಗಿರುತಿದೆ. ಐಹಿಕಸುಖಾಪೇಕ್ಷೆಯಿಂದ ಆ ಭಾಷೆಯನ್ನು ಅಭ್ಯಸಿಸುವವರ ಸಂಖ್ಯೆಯು ಪ್ರತಿಸಂವತ್ಸರದಲ್ಲಿಯೂ ವೃದ್ಧಿಯಾಗುತಲಿದೆ. ಅವರು ತಮ್ಮ ಉದರ ಭರಣಕ್ಕಾಗಿ ಪಡುವ ಶ್ರಮವೂ ಜೀವನ ಸಂಪಾದನಾರ್ಥ ಅನ್ಯರ ಹಟ್ಟಾಗಿಲುಗಳಲ್ಲಿ ನಿರೀಕ್ಷಿಸಿ ಉಪಸರ್ಪಣೆ ಮಾಡುವುದೂ, ಪರಕೃತ ದೂಷಣ ತಿರಸ್ಕಾರ ಪ್ರಹಾರಗಳನ್ನವರು ನಿರ್ವೇದದಿಂ ಸಹಿಸಿಕೊಂಡು ಸ್ವಗೃಹಗಳಂ ಕುರಿತು ತೆರಳುವದೂ, ದಿನೇದಿನೆ ಅಧಿಕವಾಗಿ ಅವರ ಪರಿತಾಪವು ದುಸ್ಸಹವಾಗುತಲಿದೆ. ಈಗಿನ ಬಾಲಕರು ಹಿಂದೆ ಪಿತ್ರಾರ್ಜಿತವಾದ ದ್ರವ್ಯವೇನಾದರು ಇದ್ದರೆ ಅದಂ ವಿದ್ಯಾಸಂಗ್ರಹಣಾರ್ಥ ವ್ಯಯಮಾಡಿ ರಿಕ್ತಹಸ್ತದೊಡನೆ ಲೋಕಯಾತ್ರಾಭಿಮುಖರಾಗಿ ಹೊರಡುತ್ತಾರೆ. ಅಂತಾ ಪಿತೃಕೃತಧನವಿಲ್ಲದವರು ಬಾಲ್ಯವನ್ನೆಲ್ಲವಿದ್ಯಾಭ್ಯಾಸಕ್ಕಾಗಿಅನ್ಯರಗೃಹಗಳಲ್ಲಿ ಕಳೆದು ಸುಖವೆಂಬದಂ ಸ್ವಲ್ಪವೂ ಅರಿಯದೆ ಶ್ರಮಪಡುತ ತಮ್ಮ ಶರೀರೇಂದ್ರಿಯಾದಿಗಳನ್ನೆಲ್ಲ ಕಳೆದುಕೊಳ್ಳುವದರಿಂದತನ್ಮೂಲಕವಾಗಿಯೂ ಅವರಿಗೆ ಆತ್ಮಭರಣವು ಪ್ರಯಾಸವಾಗಿಪರಿಣಮಿಸುತಲಿದೆ. ಇವರಸಂಖ್ಯೆಯು ದಿನೇದಿನೆ ಹೆಚ್ಚುತ ಬರುವದರಿಂದಲೂ, ಬಾಲಕರು ಸ್ವಪರಭೇದಜ್ಞಾನದಿಂದ ಸ್ವಮಯಧರ್ಮೋಚಿತರಾಗಿಲುಚಿತರೀತಿಯಿಂದ ಪುರಸ್ಕರಿಸದೆ ಹೋಗುವದರಿಂದಲೂ, ವಿದ್ಯಾವಂತರಾದವರು ಮಾತ್ಸರ್ಯದಿಂದವರ ಜ್ಞಾನವಂ ಉಪಲಾಳನೆ ಮಾಡದೆ ಹೋಗುವದರಿಂದಲೂ ಅವರ ದುಃಖವು ಇಮ್ಮಡಿಸುತಲಿದೆ. ಜೀವನ ಸಾಧಕವಾದ ಸಕಲ ಮಾರ್ಗಗಳೂ ನಿರವಕಾಶವಾದವಾಗಿವೆ. ಅವುಗಳಲ್ಲಿ ಆಯತಿಯು ಕ್ರಮೇಣ ಕಡಮೆಯಾಗುತಲಿದೆ. ಹೊಸ ಮಾರ್ಗಗಳಲ್ಲಿ ಪ್ರವರ್ತಿಸಲಿಕ್ಕೆ ಉಪಪತ್ತಿಯೂ ಸಾಧನವೂ ಅವರಿಗೆ ದುರ್ಗ್ರಾಹ್ಯವಾಗಿವೆ. ಅವರಿಗೆ ಧನ ಸಹಾಯಮಾಡಿಪ್ರೋತ್ಸಾಹ ಪಡಿಸುವಷ್ಟರ ಉದಾರಿಗಳಾದ ಧನಿಕರು ಅತಿ ದುರ್ಲಭರಾಗಿದಾರೆ. ಅತಿಪ್ರಯಾಸದಿಂದೆಲ್ಲಿಯಾದರು ಯಾವದಾದರೊಂದುವಿಧ ಕೃಷಿ ಮಾಡಿದರೆ ಅದಕ್ಕೆ ಪರಕೃತವಿಘ್ನಗಳುಂಟಾಗಿ ಅವು ಮೂಲತಃ ಹಾನಿಯನ್ನೈದಲಿಕ್ಕೆ ಬೇಕಾದ 'ಸಾಮಗ್ರಿಗಳು ಸ್ವತಃ ಬಂದು ಕೂಡುತಿವೆ. ಕಡೆಗೆ ಅವರ ಪ್ರಯತ್ನಗಳೆಲ್ಲ ವಿಫಲವಾಗಿ, ಮೂಲಧನವು ನಾಶವಾಗಿ ಶ್ರಮವು ವ್ಯರ್ಥವಾಗಿ ನಂಬಿಕೆಯು ಕೆಟ್ಟುಹೋಗಿ ಮುಂದಿನ ಜೀವನಕ್ಕೆ ಅವಕಾಶವಿಲ್ಲದೆ ಸಂಕಟಕ್ಕೊಳಪಡುತ್ತಾರೆ. ಈಗಿನ ಬಾಲಕರಿಗೆ ಪೂರ್ವಸ್ಥಿತಿಯು ತಪ್ಪಿ ಹಿಂದಿನ ಕ್ರಮವು ಸರಿಬೀಳದೆಹೋಗಿರುವದು ಮಾತ್ರವಲ್ಲದೆ ಭವಿಷ್ಯಸ್ಥಿತಿಗನುಕೂಲವಾದ ನೂತನಕ್ರಮವು ದೂರವಾಗಿದೆ. ಅವರ ಸ್ಥಿತಿಯು ಮುಂದೆ ಕ್ರಮಪಡುವ ಬಗೆ ಕಾಣಲಿಲ್ಲವು.

PARASARA MADHAVIYA.

ಪರಾಶರ ಮಾಧವೀಯ ಧರ್ಮಶಾಸ್ತ್ರ*

ಈಚೆಗೆ ಬೆಂಗಳೂರು ಟ್ರೌನ್ ಮುದ್ರಾಕ್ಷರಶಾಲೆಯಲ್ಲಿ ಮ|| ರಾ|| ಹರಿರಾಂ ಮಿಸ್ಸರ್ ಯೆಂಬವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿರುವ ಪರಾಶರ ಮಾಧವೀಯ ಧರ್ಮಶಾಸ್ತ್ರದ ಸಮಗ್ರ ಪ್ರತಿಯೊಂದು ಯೆರಡು ವಾರಗಳಹಿಂದೆ ನಮಗೆ ಕಳುಹಿಸಲ್ಪಟ್ಟಿತು. ಈ ಗ್ರಂಥದಮುದ್ರಾಂಕನವು ಸಮಾಪ್ತಿಯನ್ನೈದಿ ಗ್ರಂಥ ಪ್ರಚಾರಕರ ಕೃತಪ್ರಯತ್ನವು ಸಫಲ ಮಾದುದಂ ಕಂಡು ನಮಗುಂಟಾದ ಸಂತೋಷದಿಂದಲೂ, ನಮಗೆ ಗೌರವಪೂರ್ವಕ ಕಳುಹಿಸಲ್ಪಟ್ಟ ಕೃತಜ್ಞತೆಯಿಂದಲೂ ಅದನ್ನು ಪರದೊಡನೆ ಅಂಗೀಕರಿಸಿದೆವು. ಪರಂತು ಮಧ್ಯೆ ನಮಗುಂಟಾಗಿದ್ದ ಕಾರ್ಯಬಾಹುಳ್ಯದಿಂದ ಅದಂ ಕುರಿತ ನಮ್ಮ ಅಭಿಪ್ರಾಯವಂ ಪತ್ರಿಕಾಮೂಲಕ ಪ್ರಕಟಿಸಲಿಕ್ಕೆ ವ್ಯವಧಾನವಿಲ್ಲದೆ ಇದ್ದದಕ್ಕಾಗಿ ಚಿಂತಿಸುತ್ತೇವೆ. ಈ ಗ್ರಂಥವು ಈಗ್ಯೆ ಐದಾರು ವರುಷಗಳ ಹಿಂದೆಯೇ ಮುದ್ರಿಸಲಿಕ್ಕೆ ಪ್ರಾರಂಭಿಸಲ್ಪಟ್ಟು ಚಂದಾದಾರರಿಗೆ ಕೆಲವು ಸಂಚಿಕೆಗಳು ಕಳುಹಿಸಲ್ಪಟ್ಟವು. ಆಗ ನಮಗೆ ಕಳುಹಿಸಲ್ಪಟ್ಟಿದ್ದ ಇದರ ಪ್ರಥಮ ದ್ವಿತೀಯ ಸಂಚಿಕೆಗಳ ವಿಷಯವಾದ ನಮ್ಮ ಅಭಿಪ್ರಾಯವಂ ಈ ಪತ್ರಿಕೆಯಲ್ಲಿ ಪೂರ್ವವೇ ಪ್ರಕಟಿಸಿರುತ್ತೇವೆ. ಕೇವಲ ಧನಸಾಧ್ಯವಾದ ಪುಸ್ತಕ ಪ್ರಯತ್ನಕ್ಕೆತಕ್ಕ ಪ್ರೋತ್ಸಾಹವು ಮ|| ರಾ|| ಹರಿರಾಂ ಮಿಸ್ಸರವರಿಗೆ ದೊರೆಯದೆ ಹೋಗಲು ಮಧ್ಯೆ ಇದರ ಅಭಿವೃದ್ಧಿಯು ಮಾಂದ್ಯವನ್ನೈದಿತ್ತು. ಆಗ ಇದು ಕೊನೆಮುಟ್ಟದೆ ಹೋಹದಂ ಕೇಳಿ ನಾವು ಬಹಳ ಚಿಂತಿಸಿದೆವು. ಈಗ ಮ|| ಹರಿರಾಂಯವರು ಸತ್ಪ್ರಯತ್ನದಿಂದಲೂ ಗ್ರಂಥವು ಪೂರ್ತಿಮಾಡಿ ಪ್ರಚಾರ ಪಡಿಸಿದಬಗ್ಯೆ ನಾವು ಬಹಳ ಸಂತೋಷಿಸುತ್ತೇವೆ. ಇದು ಕನ್ನಡದಲ್ಲಿ ಭಾಷಾಂತರ ಮಾಡಿದ ಬ್ರಹ್ಮಶ್ರೀ ಚಿಂಚೋಳಿ ವೆಂಕಣ್ಣಾಚಾರ್ಯರವರು ಚಿತ್ತಸ್ಥೈರ್ಯದಿಂ ಪೂರ್ತಿಗೈದದ್ದು ಮತ್ತೂ ಪ್ರಶಂಸಾರ್ಹವಾದುದಾಗಿರುತಿದೆ. ಗ್ರಂಥಬಾಹುಳ್ಯವಂ ಯಾರಾದರು ನೋಡಿದರೆ ಅವರಿಗೆ ಮೇಲೆಕಂಡ ಪಂಡಿತರಿದಂ ಭಾಷಾಂತರ ಮಾಡಿದಾಗ ಅವರಿಗುಂಟಾದ ಶಾರೀರಕ ಮಾನಸಿಕ ಶ್ರಮಗಳೂ, ಅದಂ ಮುದ್ರಿಸುವದಕ್ಕಾಗಿ ಹರಿರಾಂಯವರು ಅನುಭವಿಸಿದ ಬಹುವಿಧ ಅನುಪಪತ್ತಿಗಳೂ ಸ್ಪಷ್ಟವಾಗದಿರಲಾರವು. ವಿಶೇಷ ಪರಿಶ್ರಮದ ಫಲರೂಪವಾದ ಪುಸ್ತಕ ಗ್ರಂಥವನ್ನು ಯೆಲ್ಲರೂ ಅಂಗೀಕರಿಸಿಅದರಪಠನ ಪ್ರಯೋಜನವಂ ಹೊಂದುವದೇ ಅದಕ್ಕೆ ಪ್ರತಿಫಲವೆಂದುಭಾವಿಸುತ್ತೇವೆ. ಶ್ರಮಕ್ಕೆತಕ್ಕ ಫಲವು ಲಭಿಸದಿದ್ದರೆ ಗುಣವಿಚಾರಪರರಲ್ಲದ ನಿರುತ್ಸಾಹಿಗಳ ಔದಾರ್ಯೋಚಿತಜ್ಞತೆಯಂ ನುಡಿ ಶ್ರಮಿಸಿದ್ದು ತಮ್ಮ ಅವಿವೇಕವೆಂದೆಣಿಸಿ ಮೇಲೆಕಂಡವರಿಬ್ಬರೂ ವಿಷಾದಿಸಬಹುದು. ಅದಕ್ಕೆ ಅವಕಾಶ ಉಂಟಾಗದಂತೆ ಸ್ವದೇಶೀಯರ ಜ್ಞಾನವನ್ನೂ ಪ್ರಯತ್ನವನ್ನೂ ಪುರಸ್ಕರಿಸಿ ಗೌರವಿಸ ಬೇಕಾದುದು ಸ್ವದೇಶಾಭಿಮಾನಿಗಳಾದವರಿಗೆಲ್ಲ ಮುಖ್ಯಕರ್ತವ್ಯವಾಗಿರುತಿದೆ. ಈಗ್ರಂಥವು ಒಳ್ಳೆಯ ಕಾಗದದಲ್ಲಿ ಸ್ಫುಟವಾದ ಅಕ್ಷರಗಳಿಂದ ಸಪ್ರಮಾದಮುಟ್ಟಗ ಪರಿಶೋಧಿಸಿ ಮುದ್ರಿಸಲ್ಪಟ್ಟಿರುತಿದೆಯಲ್ಲದೆ ಬ್ರಹ್ಮಶ್ರೀ ವೆಂಕಣ್ಣಾಚಾರ್ಯರವರು, ಇದು ಭಾಷಾಂತರ ಮಾಡುವಾಗ್ಯೆ ಬಹಳ ಮಟ್ಟಿಗೆ ಮೂಲಗ್ರಂಥವನ್ನ ಅನುವರ್ತಿಸಿ, ಕರ್ಣಾಟ ಭಾಷೆಯ ಮರ್ಯಾದೆಯಂ ಕಾಪಾಡಿಕೊಂಡು ಸುಲಭ ಶೈಲಿಯಲ್ಲಿ ಪಂಡಿತರು ಅಭಿನಂದಿಸುವಂತೆ ಬರೆದಿರುತ್ತಾರೆ. ಅನೇಕವಿಧ ಧರ್ಮಾಶ್ರಮಗಳನ್ನು ಭೋಧಿಸತಕ್ಕ ಮತ್ತು ಈ ಕಲಿಯುಗದಲ್ಲಿ ಮುಖ್ಯಪ್ರಮಾಣಗ್ರಂಥವಾಗಿ ಏರ್ಪಟ್ಟಿರುವ ಪರಾಶರ ಮಾಧವೀಯವು ಸಂಸ್ಕೃತದಲ್ಲಿ ರಚಿಸಲ್ಪಟ್ಟು ಅದಕ್ಕೆ ಮಾಧವಾಚಾರ್ಯರವರಿಂದ ಅತಿ ಗಂಭೀರವಾಗಿಯೂ ವಿಸ್ತೃತವಾಗಿಯೂ ಅವರ ಅಂಕಿತದಲ್ಲಿ ಒಂದು ವ್ಯಾಖ್ಯಾನವು ಬರೆಯಲ್ಪಟ್ಟಿದ್ದಾಗ್ಯೂ ಅದು ಸಂಸ್ಕೃತ ಭಾಷಾಜ್ಞಾನವಿಲ್ಲದಿರುವ ಜನಗಳಿಗೆ ಪ್ರಯೋಜನಕಾರಿಯಲ್ಲವು. ಒಳ್ಳೆಯ ವ್ಯುತ್ಪತ್ತಿಯುಳ್ಳವರುಸಹ ಪ್ರಾಯೇಣ ಸ್ಮೃತಿಗಳಿಗೆ ಅರ್ಥಮಾಡುವಾಗ್ಯೆ ಅಪಾರ್ಥಗಳಂ ಮಾಡಿ ಅನರ್ಥಗಳನ್ನುಂಟುಮಾಡುವುದು ಪ್ರಸಿದ್ಧವಾಗಿರುತಿದೆ. ಕೃತಿಕರ್ತರ ಹೃದಯವನ್ನರಿತು ಸಮಂಜಸವಾಗಿ ಅರ್ಥಮಾಡಿ ಇತರ ಸ್ಮೃತಿಗಳಿಗೆ ಐಕಕಂಠ್ಯವಂ ಕಲ್ಪಿಸುವ ಪಂಡಿತರು ವಿಶೇಷವಾಗಿ ದೊರೆಯುವದಿಲ್ಲವು. ಹೀಗಿರುವಾಗ್ಯೆ ಸಂಸ್ಕೃತಗ್ರಂಥವನ್ನಾಶ್ರಯಿಸದ ಇತರರಿಗೇನೂ ಪ್ರಯೋಜನವಿಲ್ಲವೆಂಬದನ್ನಾಲೋಚಿಸಿ ವೆಂಕಣ್ಣಾಚಾರ್ಯರು ಕರ್ಣಾಟ ಭಾಷೆಯಲ್ಲಿದಂ ಭಾಷಾಂತರಮಾಡಿ ಸುಲಭ ಪಡಿಸಿದ್ದು ಬಹಳ ಕೊಂಡಾಡತಕ್ಕ ಕಾರ್ಯವಾಗಿರುತಿದೆ. ಈ ಗ್ರಂಥಾಪೇಕ್ಷೆಯುಳ್ಳವರು ಬೆಂಗಳೂರು ಟ್ರೌನ್ ಪ್ರೆಸ್ ಪ್ರೊಪ್ರೈಟರಾದ ಮ|| ರಾ|| ಹರಿರಾಂ ಮಿಸ್ಸರ್ ಯವರಿಗೆ ಬರೆದು ತರಿಸಿಕೊಳ್ಳಬಹುದು.

* ಇದರ ಕ್ರಯ, ಪೋಸ್ಟೇಜ್ ಮತ್ತು ಪ್ಯಾಕಿಂಗ್ ಛಾರ್ಜ್ ಬೇರೆ ಪ್ರತಿ ೧ಕ್ಕೆ 6-4-0

REQUISITE QUALIFICATIONS

ಅಪೇಕ್ಷಣೀಯಗಳಾದ ಗುಣಗಳು

ಲೋಕದಲ್ಲಿ ಪ್ರತಿ ಮನುಷ್ಯನಿಗೂ ಅಪೇಕ್ಷಣೀಯವಾದ ವಿಷಯವೊಂದು ನಿಯತವಾಗಿರುತಲಿದೆ, ಯೇನೆಂದರೆ—ದರಿದ್ರರಿಗೆ ಧನವು, ಧನಿಕನಿಗೆ ತ್ಯಾಗವು, ತ್ಯಾಗಿಗೆ ವಿವೇಕವು, ವಿವೇಕಿಗೆ ವಿದ್ಯೆ, ವಿದ್ಯಾವಂತನಿಗೆ ವಿನಯ, ವಿನೀತನಿಗೆ ಶಕ್ತಿ, ಶಕ್ತಿವಂತನಿಗೆ ಶಾಂತಿ, ಶಾಂತನಿಗುತ್ಸಾಹ, ಉತ್ಸಾಹಿಗೆ ಮಂತ್ರಶಕ್ತಿ, ಮಂತ್ರಿಗೆ ಪ್ರಾಭವ, ಪ್ರಭುವಿಗೆ ದಯೆ, ದಯಾಳುವಿಗೆ ಆಸ್ತಿಕ್ಯ, ಆಸ್ತಿಕನಿಗೆ ಜ್ಞಾನ, ಜ್ಞಾನಿಗೆ ವಿಜ್ಞಾನ, ವಿಜ್ಞಾನಿಗೆ ಸತ್ಪ್ರವರ್ತನವು, ಸತ್ಪ್ರವರ್ತಕನಿಗೆ ಅದೂಷಕತ್ವ, ಅದೂಷಕನಿಗುಚಿತಜ್ಞತೆ, ಉಚಿತಜ್ಞನಿಗೆ ಸದನುಷ್ಠಾನ, ಸದನುಷ್ಠಾನನಿರತನಿಗೆ ಪರಬ್ರಹ್ಮಾನುಸಂಧಾನ, ಇವು ಅಪೇಕ್ಷಿತಾಂಶಗಳಾಗಿರುತಿವೆ ಮೇಲೆ ಕಂಡ ಗುಣಗಳಲ್ಲಿ ಒಂದಿರುವ ಸ್ಥಳದೊಳು ಮತ್ತೊಂದು ಸಾಮಾನ್ಯವಾಗಿರುವದಿಲ್ಲವಾದುದರಿಂದ ಮೊದಲನೆಯ ಗುಣವು ವೈರೂಪ್ಯವಂಪೊಂದಿ ದುಃಖಕಂದಾಯಕವಾಗುತಿದೆ. ದರಿದ್ರನಿಗೆ ಅಪೇಕ್ಷಿತವಾದುದು ಧನವು. ಅದು ಲಭಿಸಿದೊಡೆ ಅವನ ದಾರಿದ್ರ್ಯವು ನಿವೃತ್ತಿಯಾಗುವುದು. ನಿಜ ದಾರಿದ್ರ್ಯ ನಿವಾರಕವಾದ ಧನವು ಅವನಿಗೆ ಏಕಕಾಲದಲ್ಲಿ ಲಭಿಸಿದೊಡೆ ತನ್ನ ಪೂರ್ವಸ್ಥಿತಿಯಂ ಕುದ್ದಾಂಗ ಮರೆತುಬಿಡುವದು ಸ್ವಾಭಾವಿಕವು. ಆದುದರಿಂದಲೇ ಪೂರ್ವಸ್ಥಿತಿಯ ಸ್ಮರಣೆಯು ಹೋಗದಂತೆ, ಭಗವಂತನವನಿಗೆ ಅಪೇಕ್ಷಣೀಯವಾದ ಐಶ್ವರ್ಯವು ಸುಲಭವಾಗಿ ಅನುಗ್ರಹಿಸುವದಿಲ್ಲವು ಒಂದುವೇಳೆ ಭಾಗ್ಯವಿಗ್ಯೆಯುವನಾದರೆ ಮೊದಲನೆಯ ದೋಷವು ನಿವೃತ್ತಿಯಾಗಿ ಮತ್ತೊಂದರ ಸ್ಥಾನವನ್ನಾಕ್ರಮಿಸುವುದು. ಸಾಧಾರಣವಾಗಿ ಧನಿಕನಿಗೆ ದಾತೃತ್ವವೆಂಬದು ದುರ್ಲಭವಾಗಿದೆ. ಅವನಿಗದು ಅಪೇಕ್ಷಿತಗುಣವಾದುದು. ಅದು ಇಲ್ಲದೆ ಹೋಗುವದರಿಂದ ತನಗೆ ಪುಣ್ಯ ವಿಶೇಷದಿಂ ಲಭಿಸುವ ದ್ರವ್ಯದ ಪ್ರಯೋಜನವನ್ನೂ ಅದು ರಕ್ಷಿಸಿ ಅನುಭವಿಸಬೇಕಾದ ವಿಧವೂ ತಿಳಿಯದೆ “ ಅರ್ಥಾನಾಮಾರ್ಜನೇ ದುಃಖ ಅರ್ಜಿತಾನಾಂಚ ರಕ್ಷಣೇ । ನಾಶೇದುಃಖಂವ್ಯಯೇದುಃಖಂಕಿಮರ್ಥಂ ದುಃಖಭಾಜನಂ ” ಎಂಬದಾಗಿ ಅವನಿಗೆ ಸಕಲವಿಧದಿಂದಲೂ ದುಃಖವನ್ನೂ ಪ್ರಾಣಾಂತವಾದ ಆತ್ಮಾನಿಷ್ಟವನ್ನೂ ಉಂಟುಮಾಡದೆ ಹೋಗುವದಿಲ್ಲವು. ಕದಾಚಿತ್ ಔದಾರ್ಯವೆಂಬದಂ ಕುರಿಸಿದರೆ, ಅದು ವಿವೇಕಯುಕ್ತವಾಗಿರಲಾರದು, ತಾದೃಶದಾತೃತ್ವವು ದುರ್ವಿನಿಯೋಗಯುಕ್ತವಾಗಿ, ಅಂದರೆ ಚಾರ ಬಟ ಚೋರ ಬೇಟಕ ನಟ ನರ್ತಕಗಾಗಿ ತನ್ಮೂಲಕವಾಗಿಯೂ ಆತ್ಮಾನಿಷ್ಟಕಾರಿಯಾಗುವದರಿಂದ ತ್ಯಾಗಿಗೆ ವಿವೇಕವು ಯಾವಾಗಲು ಮೃಗ್ಯವು. ವಿವೇಕವೆಂಬದು ಅರ್ಥದಿಂದಲಾಗಲಿ ಪ್ರಾಭವದಿಂದಲಾಗಲಿ ಲಭಿಸತಕ್ಕದ್ದಲ್ಲವು, ಅದು ಕೇವಲ ವಿದ್ಯೆಯಿಂದಲೇ ದೊರೆಯಬೇಕಾದುದಾಗಿರುತಿದೆ. ವಿದ್ಯಾವಂತನಾಗಿ ಸದಸದ್ವಿವೇಕ ವುಂಟಾದರೆ ಆಗ ವಿನಯವು ಶೂನ್ಯವಾಗಿ, ತನಗೆ ಸಮಾನರಿಲ್ಲವೆಂಬ ದುರಭಿಮಾನವೂ, ಆತ್ಮೋತ್ಕರ್ಷ ಜ್ಞಾನವೂ ಉಂಟಾಗುತಿದೆ. ಆಗ ದುರ್ವಿನೀತನಾದ ಅವನ ಬಳಿ ಯಾರೂ ಸೇರಲೊಲ್ಲರಾಗಿ ಅವನ ವಿದ್ಯೆಯೂ ಐಶ್ವರ್ಯವೂ, ವಿವೇಕವೂ ಕರಾವಡಿಂದಾಚ್ಛಾದಿತವಾದ ದೀಪದಂತೆ ಅಪ್ರಕಾಶವಾಗಿ ಮಾಲಿನ್ಯವನ್ನೈದಿ ಕಡೆಗೆ ಅದನ್ನಲ್ಲಿಯೇ ನಾಶವನ್ನೈದುವುದು. ಒಂದುವೇಳೆ ವಿದ್ಯೆಯೂ, ವಿನಯವೂ ಉಂಟಾಗಿ ಶಕ್ತಿಹೀನನಾದರೆ, ಆ ವಿನಯವು ಕೌಟಿಲ್ಯದಲ್ಲಿ ಪರ್ಯವಸಾನವನ್ನೈದಿ ಪರರ ನಂಬಿಕೆಗೆ ವಿಷಯನಾಗದೆ ತಾನೊಬ್ಬರನ್ನೂ ನಂಬದೆ ಪರಸ್ಪರಾನುಮಾನದಿಂ ವೇಷಧಾರಿ ಯೆಂಬ ನಿಂದೆಯು ತಪ್ಪುವದಿಲ್ಲವು. ವೇಷಧಾರಿಯೆಂದೇರ್ಪಟ್ಟಮೇಲೆ ಅವನ ಇತರ ಗುಣಗಳೆಲ್ಲವು ಪ್ರಯೋಜನಕರಗಳಾಗದೆ ಹೋಗುವವು. ಆದುದರಿಂದ ಶಕ್ತಿಯುಕ್ತವಾದ ವಿನಯವೇ ಅಪೇಕ್ಷಣೀಯವಾದುದಾಗಿರುತಿದೆ ಅಥವಾ ಒಂದುವೇಳೆ ಶಕ್ತಿಯುಂಟಾಗಿ ಅದರೊಡನೆ ಶಾಂತತ್ವ ವುಂಟಾಗದಿದ್ದರೆ ಆ ಶಕ್ತಿಯು ಅಪಾಯಕರವಾಗಿ ಪ್ರಾಣಹಾನಿಯನ್ನುಂಟುಮಾಡದಿರಲಾರದು, ಹ್ಯಾಗಂದರೆ, ಕೇವಲ ಶಕ್ತಿಯನ್ನೇ ನಂಬಿ ಅದಂ ದುಡಿಕಿ ವಿನಿಯೋಗಿಸುವಾಗ, ಅದರ ಫಲವು ದುಃಖರೂಪವಾಗಿಯೇ ಇರುವುದು ಶಾಂತನಾಗಿ ಅನವರತ ನಿರುತ್ಸಾಹಿಯಾಗಿದ್ದರೆ ಅವನಿಗೆ ಈ ಪ್ರಪಂಚವೇ ದುಃಖರೂಪವಾಗಿ ಯಾವದರಿಂದಲೇನೂ ಪ್ರಯೋಜನವಿಲ್ಲದೆ ಹೋಗುತಿದೆ. ಇಂತಾ ನಿರುತ್ಸಾಹಿಗಳಿಗೆ ಅರ್ಥವಿದ್ದಾಗ್ಯೂ ಅದರ ರಕ್ಷಣಾದಿಗಳ ವಿಷಯದಲ್ಲಿ ಮತ್ತೊಬ್ಬ ಬೇರಕಾರಿಯಾಗುತಿದೆ. ಆದುದರಿಂದ ಉತ್ಸಾಹವು ಆದರ್ಶವು. ಆ ಉತ್ಸಾಹವನ್ನು ವಿಷಯಾವಿಷಯ ವಿವೇಚನೆಯೊಡನೆ ಕಾಲದೇಶೋಚಿತವಾಗಿ ವಿನಿಯೋಗಿಸದಿದ್ದರೆ ಅದು ಹೇಳನಾಸ್ಪದವಾಗಿ ಉನ್ಮಾದ ರೂಪವಾಗಿ ಪರಿಣಮಿಸದೆ ಹೋಗಲಾರದು. ಆದುದರಿಂದ ಮಂತ್ರಶಕ್ತಿಯು ಬೇಕಾಗಿರುತಿದೆ. ಮಂತ್ರಶಕ್ತಿಯಿದ್ದು ಪ್ರಭುವಾಲ್ಲದ್ದವಿಲ್ಲದಿದ್ದರೆ ಆ ಶಕ್ತಿಗೆ ವಿನಿಯೋಗವಿಲ್ಲದೆ ಅದು ಅನುಪಯುಕ್ತವಾಗಿಯಾದರೂ ಅಥವಾ ವಿಷಯಾಂತರಗಳಲ್ಲಾದರೂ ಉಪಯೋಗಿಸಲ್ಪಡುವುದು. ಆದುದರಿಂದ ಪ್ರಾಭವವು ಬೇಕಾಗಿರುತಿದೆ. ಅದೃಷ್ಟವಶಾತ್ ಅದು ಲಭಿಸಿ ಅನರ್ಘಗುಣವಾದ ದಯೆಯೆಂಬದೊಂದು ಇಲ್ಲದಿದ್ದರೆ ಸರ್ವಗುಣಗಳನ್ನೂ ನಾಶಪಡಿಸಿ ಪ್ರಬಲಾನಿಷ್ಟಕ್ಕೆ ಅವನಂ ಗುರಿಮಾಡುವುದು.

THE HURIDWAR MELA

ಹಿಮವತ್ಪರ್ವತ ಪ್ರಾಂತದಲ್ಲಿರುವ ಹರಿದ್ವಾರದಲ್ಲಿ ನಡೆಯುತ್ತಿರುವ ಉತ್ಸವ ಕಾಲದಲ್ಲಿ ನಾನಾದೇಶಗಳಿಂದ ಅನೇಕ ಲಕ್ಷಪ್ರಜೆಗಳುಬಂದು ಜಮಾಯಿಸುವುದು ವಾಡಿಕೆಯಾಗಿರುತಿದೆ. ಈಸಂವತ್ಸರದೊಳಗಲ್ಲಿ ಉಬಾಳಿ ಜಲಾವರೋಗವು ಪ್ರಬಲಿಸಿದ್ದದರಿಂದ ಸದರೀ ಉತ್ಸವಕ್ಕೆ ಅನ್ಯದೇಶೀಯರ್ಯಾರೂ ಬರಕೂಡದೆಂದು ವಾಯುವ್ಯಶೀಮೆಯ ಲೆಫ್ಟಿನೆಂಟಿಗವರ್ನರವರು ಹುಕುಂ ಮಾಡಿದ್ದರು. ಆದಾಗ್ಯೂ ಅನೇಕರು ಭಕ್ತಿಪರವಶರಾಗಿ ತಮ್ಮ ಪ್ರಾಣಾಪಾಯವಂ ಸಹ ಯೋಚಿಸದೆ ಅಲ್ಲಿಗೆ ಹೋಗಿದ್ದರು. ಆ ಕಾಲದಲ್ಲಿ ಅಲ್ಲಿನ ಅಧಿಕಾರಿಗಳಿಂದ ಪ್ರಜೆಗಳು ಅನುಭವಿಸಿದ ಪರಿಭವಗಳು ಕೇವಲ ವಿಷಾದಕರವಾದವಾಗಿಯೂ, ಗವರ್ನಮೆಂಟಿನವರಿಗೆ ಪ್ರಜೆಗಳಲ್ಲಿರುವ ಅಂತರವಾದವಿದ್ವೇಷವನ್ನು ಸೂಚಿಸತಕ್ಕವಾಗಿಯೂ ಇತ್ತು. ಈ ವಿಷಯವಂ ಕುರಿತು ಕಲ್ಕತ್ತೆಯ ಅಮೃತಬಜಾರ ಮತ್ತು ಸ್ಟೇಟ್ಸಮನ್ ಪತ್ರಿಕೆಗಳಲ್ಲಿ ಪ್ರಕಟಿಸಿದ್ದ ಲೇಖನಗಳೂ ತತ್ಪತ್ರಿಕಾ ಲೇಖಕರ ಅಭಿಪ್ರಾಯಗಳೂ ಗವರ್ನಮೆಂಟಿನವರ ವರ್ತನಗಳಂ ಖಂಡಿಸಿ ನಿಷ್ಠುರೋಕ್ತಿಗಳಿಂದಾಕ್ಷೇಪಿಸತಕ್ಕವಾಗಿದ್ದವು. ಸದರೀ ಲೇಖನಗಳಂ ನಾವು ನೋಡಲಾಗ ಅವುಗಳಿಂದ ಯಾತ್ರಾರ್ಥಿಗಳಾಗಿ ಹೋಗಿದ್ದ ಹಿಂದೂಗಳ ಮನವಂ ಅಲ್ಲಿನ ಅಧಿಕಾರಿಗಳು ಬಹಳ ನೋಯಿಸಿ ಹಿಂಸಿಸಿದರೆಂದು ಸ್ಪಷ್ಟವಾಗುತಿದೆ. ಅವರ ಸಂಕಟಗಳ ಮುಖ್ಯಕಾರಣವಂ ವಿಚಾರಿಸಲಾಗಿ ಜನಗಳ ಗುಂಪನ್ನು ಚೆದರಿಸುವದಕ್ಕಾಗಿ ಕೆಲವರು ಮುಸಲ್ಮಾನ್ ಪೋಲೀಸ್ ಕಾನ್ಸ್ಟೆಬಲ್‌ಗಳು ನಿಯಮಿಸಲ್ಪಟ್ಟಿದ್ದರೆಂದು ವ್ಯಕ್ತವಾಗುತಿದೆ. ಯಾತ್ರಾರ್ಥಿಗಳಾದವರ ವಿಷಯದಲ್ಲಿ ಅವರು ಮಾಡಿದ ಜುಲುಂ ಕೇವಲ ದಾರುಣವಾದವಾಗಿಯೂ, ಕ್ರೌರ್ಯಪ್ರದರ್ಶಕ ಮಾಡುದಾಗಿಯೂ, ಹಿಂದೂಗಳಿಗೂ ಮುಸಲ್ಮಾನರಿಗೂ ಇರುವ ವಿದ್ವೇಷ ಸೂಚಕವಾದುವಾಗಿಯೂ ಯಿರುತಿದೆ. ಇಂತಾ ಅಕ್ರಮಗಳೆಂತವರಿಗೂ ಆಗ್ರಹವನ್ನುಂಟುಮಾಡದೆ ಇರಲಾರದು. ಸದರೀ ಪೋಲೀಸ್ ಕಾನ್ಸ್ಟೆಬಲ್‌ಗಳ ವರ್ತನವಂ ಕುರಿತು ಅಮೃತ ಬಜಾರ್ ಪತ್ರಿಕೆಯು ತಿಳಿಸುತಿದೇನಂದರೆ —೧. ರಸ್ತೆಗಳಲ್ಲಿಯೂ, ಘಾಟಗಳಲ್ಲಿಯೂ, ದೇವಾಲಯಗಳಲ್ಲಿಯೂ, ಪರಸ್ಥಳದವರು ಯಾವರೀತಿಯಲ್ಲಿ ಹ್ಯಾಗೆ ಕಂಡುಬಂದಾಗ್ಯೂ ಸ್ತ್ರೀಪುರುಷ ಪ್ರ

ತ್ಯಾಸ ನಿಲ್ಲದೆಯೂ, ಅನರವರ ಜಾತಿಮತ ಸಂಪ್ರದಾಯಗಳಂ ಗೌರವಿಸದೆಯೂ ಹಿಡಿದು ಹೊರಗೆ ಕಳುಹಿಸುತ ಬಂದರು. ೨ ದುರ್ಮಾರ್ಗರಾದ ಸದರೀ ಮುನಿಸ್ಪಲ್ ಕಾನ್‌ಸ್ಟೇಬಿಲ್‌ಗಳು ಹೆಂಗಸರನ್ನು ಹಿಡಿದು ಸೆಳದುಕೊಂಡುಬಂದು ರೆಯಿಲ್ವೇಸ್ಟೇಷನಿನಲ್ಲಿಟ್ಟರು. ೩ ಸ್ತ್ರೀಯರನ್ನು ವಾಚಾಮಗೋಚರವಾದ ಮಾನಭಂಗಕ್ಕೊಳಪಡಿಸಿದರು. ೪. ತಾಯಿ ತಂದೆಗಳಿಂದ ಮಕ್ಕಳನ್ನೂ, ಗಂಡನಿಂದ ಭಾರ್ಯೆಯನ್ನೂ, ಸಹೋದರರಿಂದ ಸೋದರಿಯರನ್ನೂ, ಇಷ್ಟಬಂಧುಗಳಿಂದ ಅವರ ಮಿತ್ರರನ್ನೂ ಕನಿಕರವಿಲ್ಲದೆ ತೊಲಗಿಸಿದರು. ೫ ಯಾತ್ರಿಕರು ಭೋಜನ ಮಾಡುತ ಕುಳತಿದ್ದರೆ ಅವರನ್ನವನ್ನು ಕಾಲಿಂದ ಒದೆದು ಹೊರಗೆ ಅಟ್ಟಿಬಿಟ್ಟರು. ೬. ಅದನ್ನಡ್ಡಿ ಪಡಿಸಿದವರನ್ನು ಬಲವಾಗಿ ಹೊಡೆದು ಜುಲುಂ ಮಾ... ...ಕೇಸು ಪಕ್ಷಪಾತೀಯವಾದ ... ಸನವರ ವರ್ತನ ... ವರ ಅವಧಾನಕ್ಕೆ ಬಾರದಿರು ... ಮಾರ್ಗರಾಗಿದರು ವಿಷಾ ... ನ್ಯಾಸ ಬಹಳ ಆಶ್ಚರ್ಯಕರ ... ವರಿಂದ ಗವರ್ನಮೆಂಟನವ... ವರ ಅಭಿರುಚಿಯಂ ಸೂಚಿಸದಿ...

...asional Notes
ನೈಮಿತ್ತಿಕ ವಿಷಯನ್ಯಾಸ.

Rain.—ಕಳೆದ ಶನಿವಾರದ ದಿನ ಮಧ್ಯಾಹ್ನ ತ್ವರ ಮಡಲಾಸನಲ್ಲಿ ಶಿಶಿಲು ಮಿಂಚುಗಳಿಂದನೆ ಅರ್ಧ ಘಂಟೆಯು ಕಾಲ ಬಲವಾದ ಮಳೆ ಎಸ್ಸಂತ ತಿಳಿಯಲಾದದೆ.

The ex-Rajah of Venceatagiri.—ವೆಂಕಟಗಿರಿ ಸಂಸ್ಥಾನದ ವೃದ್ಧ ಅರಸನವರ. ರಾಜವೃಣವೆಂಬ ಚಿನ್ನಾಪತಿ ರೋಗಪೀಡಿತರಾಗಿ ಅಸ್ವಸ್ಥ ಸ್ಥಿತಿಯಲ್ಲಿರುವಂತೆ ಕೇಳುವದಕ್ಕೆ ಬಹಳ ವಿಷಾದಿಸುತ್ತೇವೆ.

Dissolution of Parliament.— ಮಹಾರಾಜ್ಞೀಯವರ ಪಾರ್ಲಿಯಮೆಂಟ ಸಭಾಜನ್ಯ ಈ ತಿಂಗಳ ಕಡೇವಾರದಲ್ಲಿ ಖಂಡಿತವಾಗಿ ಒಡೆದು ಹಾಕಲ್ಪಡುವದೆಂದು ಲಂಡನ್ ಪಟ್ಟಣದಿಂದ ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತದೆ.

Rain in Madura.—ಕಳೆದಬೃಹಸ್ಪತಿವಾರದ ದಿನ ಮಧ್ಯಾಹ್ನತ್ಪರ ಮೂರುಘಂಟೆಯ ಮೊದಲು ೫ ಘಂಟೆಯ ವರಿವಿಗೆ ಮಧುರೆಯಲ್ಲಿ ನಾಲ್ಕುವರೆ ಇಂಚ್ ಮಳೆ ಬಿದ್ದಂತೆ ಅಲ್ಲಿನ ಬಾತಮಿದಾರನೊಬ್ಬಾತನು ಮದರಾಸ್ ಮೆಯಿಲ್ ಪತ್ರಿಕೆಗೆ ಬರೆದಿರುತ್ತಾನೆ.

The new Maharaja of Ulwar.—ಅಲ್ವಾರ್ ಸಂಸ್ಥಾನದ ಮೃತಪಟ್ಟ ಮಹಾರಾಜರವರ ಪುತ್ರರಾದ ಕುನ್ವರ್ ಜಯಸಿಂಗಜೆ ಎಂಬವರು ಪಟ್ಟಾಭಿಷಿಕ್ತರಾದದಂ ಇಂಡ್ಯ ಗವರ್ನ್‌ಮೆಂಟನವರು ಮಂಜೂರ್ಮಾಡಿದರು. ಬಾಲಕರಾದ ಸದರೀ ಮಹಾರಾಜರವರು ಬಹಳ ವರ್ಧಿಷ್ಣುವಾಗಿರುತ್ತಾರೆಂದು ತಿಳಿದು ಬಹಳ ಸಂತೋಷಿಸುತ್ತೇವೆ.

An astrological prediction.— ಜಯ ...ರಿಂದ ಪ್ರಕಾಶ ಸರಸ್ವತಿ ಯೆಂಬ... ನು ಒಬ್ಬಾತನೊಂದು ಕಲ್ಪತ್ತಾ ಪ... ...ತ್ರದಲ್ಲೇನೆಂದರೆ:—ಜೂನ್ ತಿಂ... ...ದಿನವಿನ ಕೆಟ್ಟ ಗಾಳಿ ಮತ್ತು ...ವ ಪ್ರಾಣಹಾನಿಯೂ ಪದಾ... ...ಷ್ಟವೂ ಉಂಟಾಗುವದೆಂದು ಗಣಿತದ ... ತಿಳಿಯಬರುತದೆ, ಎಂಬದು.

A windfall to Government.—ಸೇಲಂ ಡಿಸ್ಟ್ರಿಕ್ಟಿಗೆ ಸೇರಿದ ಒಂದು ಗ್ರಾಮದವಳಾಗಿದ್ದ ಮೀನಲೋಚನ ಕಾಮಾಕ್ಷಿ ಅಮ್ಮಾಳ್ ಎಂಬಾಕೆಯು ಕೆಲವು ಕಾಲದ ಮೊದಲು ಮನೋವಿಕಾರದಲ್ಲಿದ್ದು ನ್ಯಾಯವಾದಸಂತತಿಕೊನ್ನಳಾಗಿ ಈಚೆಗೆ ಮೃತಪಟ್ಟದರಿಂದ ಸಾಲೀಯಾನಾ ೧೦,೦೦೦ ರೂಪಾಯಿಗಳ ಆಯತಿಯುಳ್ಳ ೨,೦೦,೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಆಕೆಯ ಜಂಗಮಗಳು ಗವರ್ನ್‌ಮೆಂಟಿಗೆನೇರಿಹೋದವು.

A ruling.—ಅವಶ್ಯಕತೆ ಯಿಲ್ಲದ ಸಂದರ್ಭಗಳಲ್ಲಿ, ಸಾಲೀಯಾನಾ ೫೫,೦೦೦ ರೂಪಾಯಿಗಳು ಖರ್ಚು ಜಾಸ್ತೀ ಯಾಗುವ ಲವಾಜಮಾ ವಿನುಕೆಯು, ಅದು ಇತರ ಕಾರಣಗಳ ಮೇಲೆ ತಮ್ಮ ಮಂಜೂರಾತಿಯಂ ಪಡೆದ ಬೇರಾಗ ಅವಶ್ಯಕತೆಯಿಲ್ಲದ ಸಂದರ್ಭದಲ್ಲಿ ಕೂಡ, ಮಂತ್ರಾಲೋಚಕ ಸಮಾಜದೊಳಗಣ ತಮ್ಮ ಮಂಜೂರಾತಿಯಂ ಪಡೆಯದೆ ಜಾರಿಯಲ್ಲಿ ತರಲ್ಪಡಕೂಡದೆಂದು ಇಂಡಿಯಾ ಸ್ಟೇಟ ಸೆಕ್ರಿಟೆರಿಯವರು ನಿರ್ಣಯಿಸಿರುತ್ತಾರೆ.

The succession to the Viceroyalty.—ಇಂಡ್ಯ ರಾಜ್ಯದ ಈಗಿನ ವೈಸ್‌ರಾಯಿಯವರಾದ ಲಾರ್ಡ್ ಲ್ಯಾನ್ಸ್‌ಡೌನ್ ಯವರ ಸ್ಥಾನಕ್ಕೆ ಲಾರ್ಡ್ ಯೆವೆಲ್ಲಿನ್ ಬೇರಿಂಗ್ ಎಂಬವರು ನಿಯಾಮಕವಾಗುವ ಸಂಭವವುಂಟೆಂದು ಹುಟ್ಟಿದ ಪ್ರವಾದದ ವಿಷಯದಲ್ಲಿ, ಸದರೀ ಪದವಿಗೆ ಇದುವರಿವಿಗೆ ಯಾರೂ ನಿಯಾಮಕವಾಗಲಿಲ್ಲವು, ಯಾರು ನಿಯಮಿಸಲ್ಪಡುವರೋ ಅದೂ ತಿಳಿಯಲಿಲ್ಲವು, ಎಂದು ಲಂಡನ್ ಪಟ್ಟಣದಿಂದ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯಬರುತದೆ.

A restriction—ಕ್ಷಾಮ ಕಾಲದಲ್ಲಿ ನೈಜಾಮರ ಸಹಾಯಾರ್ಥ ಗವರ್ನ್‌ಮೆಂಟನವರು ಅವರಿಗೆ ಮುಂದಾಗಿ ಹಣ ಕೊಟ್ಟು ಅವರಿಂದ ತಪಸಾರ್ಮಾಡಿಸುವ ಬಟ್ಟೆಗಳು ಅಗಲವಲ್ಲೂ ಉದ್ದದಲ್ಲೂ ಒಂದೇವಿಧವಾಗಿ ಇಲ್ಲದೆ, ಮರಳಿ ಅವುಗಳಂ ಖರ್ಚು ಮಾಡುವದಾವು ಕಷ್ಟಸಾಧ್ಯವಾಗಿ ಕಂಡುಬರುತದೆಂದು ರೆವಿನ್ಯೂ ಬೋರ್ಡಿನವರು ಗವರ್ನ್‌ಮೆಂಟಿಗೆ ತಿಳಿಸಿದ್ದರಿಂದ ಆ ವಿಷಯಕ್ಕೆ ಕಲೆಕ್ಟರುಗಳು ನಿಗಾ ಕೊಡತಕ್ಕದ್ದೆಂದು ಗವರ್ನ್‌ಮೆಂಟನವರು ಹುಕುಂ ಮಾಡಿರುತ್ತಾರೆ.

A warning.—ಆಗ್ರಾ ಮತ್ತು ಲಕ್ನೋ ಪಟ್ಟಣಗಳಲ್ಲಿ ಪ್ರಕಟಿಸಲ್ಪಡುವ ದೇಶಭಾಷಾ ವೃತ್ತಾಂತ ಪತ್ರಿಕೆಗಳಲ್ಲಿ ಘಾಯಿಸ್ಮಾಡಲ್ಪಡುವ ಔಷಧಗಳನ್ನು ಕುರಿತ ಪ್ರಕಟನೆಗಳು ಬಹು ಭಾಷೆಗಳುಳ್ಳದ್ದಾಗಿರುವದರಿಂದ ಮುಂದೆ ಆರೀತಿ ಮಾಡುವ ಪಕ್ಷಕ್ಕೆ ಸದರೀ ಪತ್ರಿಕೆಗಳ ಎಡಿಟರುಗಳು ಕ್ರಿಮಿನಲ್ ವಿಚಾರಣೆಗೆ ಗುರಿಮಾಡಲ್ಪಡುವರೆಂದು ವಾಯುವ್ಯದೇಶದ ಸರ್ಕಾರದವರು ಯೆಚ್ಚರಿಸಿರುತ್ತಾರೆ. ಬನಾರಸಿನಲ್ಲಿ ಒಬ್ಬ ಎಡಿಟರು ಮೇಲಿನಂತೆ ಮಾಡಿದಬಗ್ಗೆ ೫೦ ರೂಪಾಯಿಗಳ ಜುಲ್ಮಾನೆ ವಿಧಿಸಲ್ಪಟ್ಟನು.

Famine relief— ಮದರಾಸ್ ಪ್ರೆಸಿಡೆನ್ಸಿಯೊಳು ಕ್ಷಾಮನಿವಾರಕ ಕಾಮಗಾರಿಗಳಲ್ಲಿ ಕೂಲಿ ಮಾಡಿ ಜೀವಿಸತಕ್ಕವರು ೪೦,೫೦೯. ಧರ್ಮಾರ್ಥವಾಗಿ ಸ್ಥಾಪಿಸಲ್ಪಟ್ಟಿರುವ ಅನ್ನಶಾಲೆಗಳಲ್ಲಿ ಜೀವಿಸತಕ್ಕವರು ... ೪೩ ಮುಂಬೈ ಕಾಮಗಾರಿಗಳೊಳು ಕೂಲೀ ಮೂಲಕ ಜೀವಿಸತಕ್ಕವರು ೧೫,೬೩೧. ಬಂಗಾಳೆಯಲ್ಲಿ ಕಾಮಗಾರಿಗಳೊಳು ೫೨,೮೬೭. ಸರ್ಕಾರ್ ಅನ್ನಸತ್ರಗಳಲ್ಲಿ ೪,೬೧೫. ಬರ್ಮಾದೇಶದೊಳು ಕಾಮಗಾರಿಗಳಲ್ಲಿ ೧೫,೫೪೫. ಮೈಸೂರು ಕಾಮಗಾರಿಗಳಲ್ಲಿ ೨,೮೭೮. ರಾಜಪುಟಾನಾ ದೇಶದಲ್ಲಿ ಕಾಮಗಾರಿಗಳಲ್ಲಿ ೩೨,೯೭೪. ಧರ್ಮಸತ್ರಗಳಲ್ಲಿ ೧೨,೯೯೩. ಮೇಲಿನ ಸಂಖ್ಯೆಯು ದಿನೆಯಿಂದ ಹಿಂದೆ ಇದ್ದದ್ದಕ್ಕಿಂತಲೂ ಈಚೆಗೆ ಕಡಮೆಯೆಂದು ಕಾಣುತಿದೆ.

Cholera at Srinagar.— ಒಂದಾನೊಂದು ಪತ್ರಿಕೆಯ ಶ್ರೀನಗರದ ಬಾತಮಿದಾರನು, ಸದರೀ ಪತ್ರಿಕೆಗೆ ತಂತಿ ಮೂಲಕ ತಿಳಿಸಿರುತ್ತಾನೇನೆಂದರೆ,—ಇಲ್ಲಿ ವಾಂತಿಭೇದಿ ರೋಗವು ಕೇವಲ ಭಯಂಕರವಾದ ರೀತಿಯಲ್ಲಿ ವ್ಯಾಪಿಸಿ, ಈ ವಾರದೊಳು ೧,೬೦೦ ಜನರು ಮೃತಪಟ್ಟರು. ಈ ಪಟ್ಟಣದೊಳು ಜನರು ಬಹಳ ಭೀತಿಗೊಂಡಿರುತ್ತಾರೆ. ಈಚೆಗೆ ದಾರುಣವಾದ ಅಗ್ನಿಪ್ರವೇಶದ ಮೂಲಕ ೨,೦೦೦ ಮನೆಗಳು ಸುಟ್ಟುಹೋಗಿ ೪೦,೦೦೦ ಜನರು ವಾಸಗೃಹಗಳಿಲ್ಲದೆ ಕಷ್ಟಪಡುತಲಿದಾರೆ. ಆಹಾರ ಪದಾರ್ಥಗಳ ದಾರಣೆಗಳು ದುರ್ಭಿಕ್ಷಕಾಲದಲ್ಲಿರುವಂತಿವೆ. ಧಾನ್ಯಾಭಾವದಿಂ ಆಹಾಕಾರ ಹುಟ್ಟಿದೆ. ರಾಬಿ ಎಂಬ ಧಾನ್ಯವು ಪೂರಾ ಕೆಟ್ಟುಹೋಯಿತು. ಪ್ರಜೆಗಳು ಸಹಾಯಾಪೇಕ್ಷಿಗಳಾಗಿರುತ್ತಾರೆ, ಎಂಬದು.

Remission and suspension of demand of assessment.—ಈಗ ಪ್ರಾಪ್ತವಾಗಿರುವ ದುರ್ಭಿಕ್ಷ, ತನ್ಮೂಲಕ ರೈತಾಬೀ ಜನರು ಅನುಭವಿಸುವ ಕಷ್ಟ, ಇವುಗಳಂ ಮದರಾಸ್ ಗವರ್ನ್‌ಮೆಂಟನವರು ಚೆನ್ನಾಗಿ ಪರ್ಯಾಲೋಚಿಸಿ, ಬಳ್ಳಾರಿ ಡಿಸ್ಟ್ರಿಕ್ಟ ಕೈಕಿ ಯಲ್ಲಿಯೆಲ್ಲಿಯಾಗುವಳಿ ಸುತರಾಂ ಇಲ್ಲವು, ಅಥವಾ ಸಾಗುವಳಿ ಆಗಿದ್ದಾಗ್ಯೂ ಕೈಗೆ ಬಂದದ್ದು ಯೆರಡು ಆಣೆಗೆ ಕಡಮೆ ಆಯಿತೋ ಅಂತಾ ಪ್ರದೇಶಗಳಲ್ಲೆಲ್ಲ ಕಂದಾಯವನ್ನು ಪೂರಾ ಮುಜರೆ ಕೊಡತಕ್ಕದೆಂತಲೂ, ಆರು ಆಣೆಗೆ ಕಡಮೆಯಾಗಿ ಹುಟ್ಟವಳಿಯಾದ ಜಮೀನುಗಳ ಮೇಲಿನ ಕಂದಾಯವನ್ನು, ಮುಂದಿನ ವರ್ಷಾಕಾಲದ ಫಲಾಫಲಗಳು ತಿಳಿಯಬರುವ ತನಕ ವಸೂಲ್ಮಾಡಕೂಡದೆಂತಲೂ ಹುಕುಂ ಮಾಡಿರುತ್ತಾರೆ. ಇದೇ ರೀತಿ ನೆಲ್ಲೂರು ಡಿಸ್ಟ್ರಿಕ್ಟಿನ ವಿಷಯದಲ್ಲೂ ನಡೆಸತಕ್ಕದ್ದೆಂದು ಹುಕುಂ ಕೊಟ್ಟಿರುತ್ತಾರೆ. ಆದರೆ ಈ ಡಿಸ್ಟ್ರಿಕ್ಟಿನ ವಿಷಯದಲ್ಲಿ, ಸಾಗುವಳಿಯಾಗಿ ಕೈಗೆ ಬಂದ ಫಸಲು ನಾಲ್ಕಾಣೆಗೆ ಮೇಲ್ಪಡದೆ ಇರುವ ಪಕ್ಷಕ್ಕೆ, ಕಂದಾಯ ವಸೂಲಿಯನ್ನು ಮುಂದಿನ ವರ್ಷದ ಫಸಲ್ ಕೈಗೆ ಬರುವತನಕ ನಿಲ್ಲಿಸತಕ್ಕದ್ದೆಂದು ಹುಕುಂ ಆಗಿದೆ.

ಅನಂತಪುರ ಡಿಸ್ಟ್ರಿಕ್ಟಿನಲ್ಲೂ ಬಂಜರ್ ಬಿದ್ದುಹೋದ ಜಮೀನುಗಳಿಗೂ ಫಸಲಿಗಳು ಪೂರಾ ಕೆಟ್ಟುಹೋದ ವಿಷಯದಲ್ಲೂ ಕಂದಾಯವನ್ನು ಪೂರಾ ಮುಜರೆ ಕೊಡತಕ್ಕದ್ದೆಂತಲೂ, ನಾಲ್ಕಾಣೆಗೆ ಕಡಮೆಯಾಗಿ ಹುಟ್ಟುವಳಿಯಾದದಕ್ಕೆ ಸೇಕಡಾ ೫೦ ರ ಮೇರಿಗೆ ಮುಜರೆ ಕೊಡತಕ್ಕದೆಂತಲೂ, ಉಳಿದದ್ದನ್ನು ಮುಂದಿನ ಫಸಲ್ ಕೈಗೆ ಬರುವ ತನಕ ನಿಲ್ಲಿಸತಕ್ಕದ್ದೆಂತಲೂ ಹುಕುಂ ಮಾಡಿರುತ್ತಾರೆ.

LOCAL AND PROVINCIAL NEWS.
ಒಳದೇಶಮತ್ತುತಾಲ್ಲೂಕುಜಾತಿವೃತ್ತಾಂತಗಳು.

H. H. the Maharaja.—ಶ್ರೀಮನ್ಮಹಾರಾಜರವರು ಬರುವ ತಿಂಗಳ ಆದ್ಯಂತ ಭಾಗದಲ್ಲಿ ಅಥವಾ ಆಗಸ್ಟು ತಿಂಗಳ ಆದಿಭಾಗದಲ್ಲಿ ಈ ಪ್ರಾಂತಿಗೆ ದಯಮಾಡುವರೆಂದು ತಿಳಿಯಬರುತಿದೆ.

The Resident.—ಈ ಸಂಸ್ಥಾನದ ರೆಸಿಡೆಂಟಾದ ಕರ್ನಲ್ ಹೆಂಡರ್ಸನ್ ಸಾಹೇಬರವರು ತಮ್ಮ ಪುತ್ರಿಯೊಡನೆ ಕಳೆದ ಮಂಗಳವಾರದ ದಿನ ಬೆಂಗಳೂರಿಗೆ ವಾಪಸ್ ಬಂದರು.

The Mysore Races.—ಈಸಲ ಮೈಸೂರಲ್ಲಿ ಬರುವ ಜೂಲೈ ತಿಂಗಳ ೧೨, ೧೪, ೧೬, ೧೯ ಈ ತಾರೀಖ್‌ಗಳಲ್ಲಿ ಕುದುರೆ ಜೂಜು ನಡೆಯುವದು.

The Sampangi Tank.—ಈ ಪ್ರಾಂತು ಅಲಸೂರು ಬಾಗಿಲಬಳಿಇರುವ ಸಂಪಂಗಿಕೆರೆಯ ಮರಮತ್ತು, ಅಂದರೆ ಅಗೆದು ಆಳವಾಗಿ ಮಾಡುವದು ವಗೈರೆ ಕೆಲಸಕ್ಕಾಗಿ ೪,೪೨೪ ರೂಪಾಯಿಗಳು ಮಂಜೂರಾಗಿರುವಂತೆ ಕೇಳುತ್ತೇವೆ.

The first Prince's birthday.—ಈದಿನ ಯುವರಾಜರಾದ ಶ್ರೀ ಕೃಷ್ಣರಾಜ ಒಡೆಯರವರ ವರ್ಷ ವರ್ಧಂತಿಯಾದುದರಿಂದ ಈ ಸಂಸ್ಥಾನದ ವಿಶಿಷ್ಟ ಇಲಾಖೆಗಳಿಗೂ ರಜಾ ಕೊಡಲ್ಪಟ್ಟಿರುತದೆ. ಏತದರ್ಥ ಶ್ರೀಮನ್ಮಹಾರಾಜರವರ ಕೌನ್ಸಿಲ್ ಮೆಂಬರುಗಳು, ಚೀಫ್‌ಕೋರ್ಟ್ ಜಡ್ಜಿಗಳು, ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರು, ಸ್ಟಾಟಿಸ್ಟಿಕ್ ಮತ್ತು ಸ್ಪೆಷಲ್ ಆಫೀಸರವರು, ಚೀಫ್ ಮತ್ತು ಅಂಡರ್ ಸೆಕ್ರೆಟರಿಗಳು, ಮುಜರಾಯಿ ಸೂಪರಿಂಟೆಂಡೆಂಟರವರು, ರಿಜಿಸ್ಟ್ರಾರ್ ಜನರಲರು, ರಾಯಬಹದೂರ್ ಎ. ಸಭಾಪತಿ ಮುದಲಿಯಾರ್ರವರು ಮೊದಲಾದವರು ನಿನ್ನೆಯದಿನ ಬೆಳಗಿನ ಗಾಡಿಯಲ್ಲಿ ಮೈಸೂರಿಗೆ ಪ್ರಯಾಣ ಮಾಡಿದರು.

The weather.—ಕಳೆದಬೃಹಸ್ಪತಿವಾರದ ಮೊದಲು ಪ್ರತಿ ದಿನದಲ್ಲೂ ಸಾಯಂಕಾಲ ಆರು ಘಂಟೆಯಮೇಲೆ ಮೋಡ ದುಸುಕಿ ಮುಸುರಾಗಿ ಮಳೆ ಬೀಳುತಲಿದೆ. ಈ ಸಂವತ್ಸರದೊಳು ಇದುವರಿವಿಗೆ ಈ ಪ್ರಾಂತಲ್ಲಿ ಇಷ್ಟರಮಟ್ಟಿಗೆ ಯಾವಾಗಲು ಮಳೆ ಬಿದ್ದದ್ದಿಲ್ಲವು. ಈ ವರ್ಷವು ಉಳುವ ಕೆಲಸಕ್ಕೆ ಬಹಳಮಟ್ಟಿಗೆ ಅನುಕೂಲವಾದದ್ದು, ಕೆರೆ ಕುಂಟೆಗಳಿಗೆ ಸ್ವಲ್ಪ ನೀರೂ ಬಂತು, ಭೂಮಿಯಲ್ಲೂ ಶೇನುವು ಉಂಟಾಯಿತು. ಕ್ಷೇತ್ರದಲ್ಲಿ ದನಗಳಿಗೆ ಒಳ್ಳೆಯ ಮೇವು ಸಿಕ್ಕುವದರಲ್ಲಿ ಸಂಶಯವಿಲ್ಲವು. ಹೀಗೆಯೇ ಇನ್ನು ಅಂದಾದರು ತಡವೆ ಒಳ್ಳೆಯ ಮಳೆಬಿದ್ದರೆ ದುರ್ಭಿಕ್ಷ ಭೀತಿಯು ನಿವೃತ್ತಿಯಾಗಬಹುದು, ಆಹಾರ ಪದಾರ್ಥಗಳ ದಾರಣೆಗಳು ಸ್ವಲ್ಪ ಇಳಿದಿದೆ, ಕ್ರಮೇಣ ಇನ್ನು ಇಳಿಯಬಹುದು. ಈ ಪ್ರಾಂತಲ್ಲಿ ಈಗ ವಾಂತಿ ಭೇದಿ ರೋಗ ಅಲ್ಲಿಯಲ್ಲಿ ವ್ಯಾಪಿಸಿ ದಿನ್ನಂಒಂದಕ್ಕೆ ನಾಲ್ಕಾರು ಜನರು ಹೋಗುತಲಿರುವಂತೆ ತಿಳಿಯಬರುತಿದೆ. ಈ ರೋಗದ ವ್ಯಾಪಕತೆಯನ್ನು ಅಡ್ಡಿ ಪಡಿಸುವದಕ್ಕೆ ಕರ್ತರಾದ ಇಲಾಖೆಯವರು ತಮ್ಮ ಕರ್ತವ್ಯಂ ನೆರವೇರಿಸುವರೆಂದು ನಂಬುತ್ತೇವೆ.

Regulation No II of 1892—೨೮ ನೇ ವಾರದ ಮೈಸೂರ್ ಗೆಜಟನಲ್ಲಿ ಮುದ್ರಿಸಲ್ಪಟ್ಟಿರುವ ರೆಗ್ಯುಲೇಷನನ್ನು ನೋಡಲಾಗಿ ಮೈಸೂರ್ ಸ್ಟೇಟ್ ಟ್ರಸ್ಟಿ ಬಂಕ್ಕಿಗೆ ಮತ್ತೊಂದುರೆಗ್ಯುಲೇಷನ್ ಜಾರಿ ಬಲಾವಂತ ಯೋಚಿಸಬೇಕಾಗಿದೆ. ಈ ರೆಗ್ಯುಲೇಷನ್ ಕಳೆದತಿಂಗಳ ೨೩ ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರ ಮಂಜೂರಾತಿಯಂ ಪಡೆದು ಜಾರಿಯಲ್ಲಿ ಬಂದಿರುತದೆ. ಇದು, ಭರ್ಯಾದಿಗೆ ಅವಕಾಶವುಳ್ಳ ಯಾವದಾದರೊಂದು ತಕ್ಸೀರಿನಿಂದ ಅನ್ಯನೊಬ್ಬನಿಗೆ ಮರಣ ಸಂಭವಿಸುವಂತಾ ಸಂದರ್ಭದಲ್ಲಿ ಅವನ ಕುಟುಂಬಕ್ಕೆ ನಷ್ಟಪರಿಹಾರ ರೂಪವಾಗಿ ಧನ ಸಹಾಯ ಮಾಡುವಬಗ್ಗೆ ಯೇರ್ಪಟ್ಟ ನಿಬಂಧನೆಯಾಗಿರುತಿದೆ. ಬ್ರಿಟಿಷ್ ಇಂಡ್ಯದೇಶದಲ್ಲಿ ಜಾರಿಯೊಳಿರುವ ಆಕ್ಟನ್ನು ಸ್ವಲ್ಪ ಶಬ್ದಭೇದಗಳಿಂದ ಇಲ್ಲಿ ಜಾರಿಯಲ್ಲಿ ತಂದುಕೊಳ್ಳಲ್ಪಟ್ಟದೆ. ಇದುವರಿವಿಗೆ ಈ ವಿಷಯದಲ್ಲಿ ನಿಶ್ಚಿತವಾದ ಕಾನೂನ್ ಯಾವದೂ ಇಲ್ಲದೆ ಇದ್ದದರಿಂದ ಅನೇಕ ಪ್ರಕರಣಗಳಲ್ಲಿ ಒಬ್ಬರಮರಣದಿಂದ ಅವರಕುಟುಂಬವೆಲ್ಲವು ಪ್ರಬಲ ನಷ್ಟಕ್ಕೆ ಗುರಿಯಾದಾಗ್ಯೂ, ಅವರಿಗೆ ಪರಿಹಾರ ದ್ರವ್ಯವಂ ತಕ್ಸೀರದಾರನಿಂದ ಕೊಡಿಸಲಿಕ್ಕೆ ಆಸ್ಪದವಿಲ್ಲದೆ ಜಡ್ಜಿಗಳು ತೊಡಕ್ಕುಮೆಗಳನ್ನು ಹಿಡಿಯದೆ, ನಿರಾಕರಿಸುತಲಿದ್ದರು. ಈ ದೋಷವು ಗವರ್ನ್‌ಮೆಂಟನವರ ತಿಳುವಳಿಕೆಗೆ ಬಂದು ಆದರಮೇಲೆ ಪ್ರಕೃತ ರೆಗ್ಯುಲೇಷನನ್ನು ಜಾರಿಯಲ್ಲಿ ತಂದಿರುತ್ತಾರೆ.

THE MYSORE GAZETTE.
ಮೈಸೂರು ಗೆಜಟ್.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂ. ೪೩, ತಾ|| ೨೬ನೇ ಮೇ.—ಮೃತಪಟ್ಟ ಮೆ|| ಎಸ್. ಸುಬ್ಬರಾಯರಿಗೆ ಬದಲು ಅಡ್ವೋಕೇಟ ಮೆ|| ಸಿ. ರಾಜಾರಾಯರವರು ಅಷ್ಟಗ್ರಾಮ ಡಿವಿಜನ್ ಪಬ್ಲಿಕ್ ಪ್ರಾಸಿಕ್ಯೂಟರಾಗಿ ನಿಯಮಿಸಲ್ಪಟ್ಟಿರುತ್ತಾರೆ.

ನಂ. ೪೩, ತಾ|| ೨೭ನೇ ಮೇ.—ಸನ್ ೧೮೯೨ ನೇ ಇಸವಿ ಮೇ ೪ನೇ ತಾರೀಖಿನಲ್ಲಿ, ಕಡೂರ್ ಡಿಸ್ಟ್ರಿಕ್ಟ ತರೀಕೆರೆಯಲ್ಲಿ, ೩ ನೇ ಕ್ಲಾಸ್ ಪೋಸ್ಟ್ ಮತ್ತು ಟೆಲಿಗ್ರಾಫ್ ಸೇರಿದ ಆಫೀಸು ಸ್ಥಾಪಿಸಲ್ಪಟ್ಟತೆಂದು ಇದರಿಂದ ಸಮಸ್ತ ಜನರಿಗೂ ತಿಳಿಸಲ್ಪಟ್ಟಿರುತದೆ.

A CATECHISM OF THE ARYA DHARMA OF GOUTAMA BUDHA

ಗೌತಮ ಬುದ್ಧಪ್ರೋಕ್ತವಾದ ಆರ್ಯಧರ್ಮ ಪ್ರಶ್ನೋತ್ತರಾವಳಿ.

ಪ್ರ —ಈ ಆರ್ಯಾವರ್ತದಲ್ಲಿ ನೆಲೆಗೊಂಡಿರುವ ಸಿದ್ಧಾಂತಗಳಲ್ಲದೆ ಸಾಂಖ್ಯಯೋಗ ಶಾಸ್ತ್ರಗಳಿಗೆ ಸಮಾನವಾದ ಸಿದ್ಧಾಂತವು ಬೇರೆಯೊಂದು ಬೋಧಿಸಲ್ಪಟ್ಟು ಪ್ರಚಾರದೊಳದೆಯಷ್ಟೆ, ಅದು ಯಾವದು ತಿಳಿಸಿರಿ ?

ಉ.—ಬುದ್ಧನಿಂದುಪದೇಶಿಸಲ್ಪಟ್ಟ ಬೌದ್ಧ ದರ್ಶನವು.

ಪ್ರ.—ಶಾಕ್ಯಮುನಿಯು ಬೌದ್ಧಸಿದ್ಧಿಯನ್ನೈದಲಿಕ್ಕೆ ಪೂರ್ವದೊಳಾರಲ್ಲಿ ಯೋಗಶಾಸ್ತ್ರವನ್ನಭ್ಯಸಿಸಿದರು. ಅದು ನಿಮಗೇನಾದರು ತಿಳಿಯುವದೆ ?

ಉ.—ಯೋಗಶಾಸ್ತ್ರಜ್ಞರಾದ ರಾಮಪುತ್ರರು ಮತ್ತು ಅಲರ್ಕರೆಂಬ ಇಬ್ಬರು ಬ್ರಾಹ್ಮಣಶ್ರೇಷ್ಠರಲ್ಲಿ ತಚ್ಛಾಸ್ತ್ರವನ್ನಭ್ಯಸಿಸಿದಂತೆ ತಿಳಿಯಬರುತಿದೆ.

ಪ್ರ —ಬುದ್ಧನ ತಾತ್ಪರ್ಯಾನುಸಾರ ಮನುಷ್ಯನ ದುಃಖನಿಮಿತ್ತವನ್ನು ಒಂದು ಶಬ್ದದಿಂ ಎನಗೆ ನೀವು ತಿಳಿಸುವಿರಾ ?

ಉ.—ಮಾನವದುಃಖಕ್ಕೆ ಅವಿದ್ಯೆಯೇ ಮೂಲಕಾರಣವು (ಅವಿದ್ಯೆಗೂ ಅಜ್ಞಾನಕ್ಕೂ ತಾರತಮ್ಯವಿಲ್ಲವು. ಎರಡೂ ಒಂದೇಯೆಂದು ತಿಳಿಯುವುದು.)

ಪ್ರ.—ಏತತ್ಪರಿಹಾರಮಾರ್ಗವಂ ನೀವು ನನಗೆ ಅರುಹುವಿರಾ ?

ಉ.—ಅಂಧಕಾರ ರೂಪವಾದ ಅಜ್ಞಾನ ನಿವೃತ್ತಿಪೂರ್ವಕ ವಿಮಲಜ್ಞಾನ ಸಂಪಾದನವೇ ಇದಕ್ಕುಪಾಯವು.

ಪ್ರ.—ಅಜ್ಞಾನವು ದುಃಖ ನಿಮಿತ್ತಕವಾಗುವದೇತಕ್ಕೆ ?

ಉ.—ಅಯ್ಯಾ, ಈ ಅಜ್ಞಾನ ಮಹಿಮೆಯಂ ನಾನೇನೆಂದು ಹೇಳಲಿ, ಅದರ ವ್ಯಾಪಕತೆಯಂ ನಾನೆಷ್ಟು ಕೊಂಡಾಡಲಿ, ಅದರ ವಶೀಕರಣಶಕ್ತಿಯಂ ನಾನೆಷ್ಟು ವರ್ಣಿಸಲಿ, ಅಜ್ಞಾನದಿಂದ ಬುದ್ಧಿಯು ಮಾಂದ್ಯವನ್ನೈದಿ ಎಷಯಸ್ವರೂಪ ಗ್ರಾಹಕತಾ ಶಕ್ತಿಯನ್ನೂ ಉಚಿತಮಾರ್ಗಾನುಸರಣ ಪ್ರವೃತ್ತಿಯನ್ನೂ ಪ್ರಥಮದಲ್ಲಿ ಹೋಗಲಾಡಿಸಿಕೊಳ್ಳುತಿದೆ ಮರುವಾಯ ಅದರ ಪ್ರಭಾವದಿಂದ ತುಚ್ಛವಾದವು ಅನರ್ಘವೆಂದು ಭಾವಿಸುವಂತೆಯೂ, ದುಃಖಸಂಕೂಲದಕ್ಕಾಗಿ ಬಹಳ ಶ್ರಮ ಪಡುವಂತೆಯೂ, ಕೇವಲ ಭ್ರಾಮಕಗಳಾದ ಅಸ್ಥಿರಪದಾರ್ಥಗಳಂ ಸ್ಥಿರವೆಂದೆಣಿಸಿ ಅವುಗಳೊಳ್ ಹಿಸುಕುತೆಯೂ, ಶ್ಲಾಘ್ಯಗಳಾದ ಲಬ್ಧ ಪದಾರ್ಥಗಳಂ ನಿಂದಿಸಿ ಅಲಭ್ಯವಾದವನ್ನಾಶಿಸಿ ಅವು ಲಭಿಸದಿದ್ದರೆ ಅದಕ್ಕಾಗಿ ಕ್ಲೇಶಪಡುವಂತೆಯೂ, ಉತ್ತಮಗಳಾದ ಶಾಶ್ವತ ವಸ್ತುಗಳಂ ತೊರೆದು ನೀಚ ವಿಷಯಗಳನ್ನಾಶಿಸಿ ಅವುಗಳಗಾಗಿ ನಮ್ಮ ಜೀವನವಂ ವ್ಯರ್ಥಗೊಳಿಸುವಂತೆಯೂ ಪ್ರೇರಿಸುತಿದೆ. ಇವುಗಳಿಂದಲೇ ಮನುಷ್ಯನಿಗೆ ಈ ಭೂಮಂಡಲದಲ್ಲಿ ಸಕಲಾನಿಷ್ಟಗಳೂ ಸಕಲ ಪಾಪಗಳೂ ಉಂಟಾಗುತಿವೆ. ಆದುದರಿಂದ ದುಃಖಬೀಜವನು ನಾವು ಮೊದಲು ನಾಶನಮಾಡಬೇಕು.

ಪ್ರ.—ನೀವು ಈಗ ತಿಳಿಸಿದ ಅನರ್ಘ ವಸ್ತುವೆಂಬದು ಯಾವದು ?

ಉ.—ಮನುಷ್ಯನ ಸ್ಥಿತಿಗೂ ಆತನ ಅದೃಷ್ಟಕ್ಕೂ ಕಾರಣಭೂತಗಳಾದ ರಹಸ್ಯವು ತಿಳಿದುಕೊಳ್ಳತಕ್ಕದ್ದು. ಹಾಗೆ ತಿಳಿಯುವದರಿಂದ, ಇಹಜನ್ಮದ ಮತ್ತು ಅದರ ಇತರ ಸಂಬಂಧಗಳ ನಿಜವಾದ ಸ್ವರೂಪವು ಯಥಾವಸ್ಥಿತವಾಗಿ ಅರಿತುಕೊಳ್ಳಲಿಕ್ಕೂ, ಸರ್ವೋತ್ಕೃಷ್ಟವಾದ ಸುಖಾನುಭವಕ್ಕೆ ನಾವು ಪಾತ್ರರಾಗುವಂತೆ ಜೀವಿಸಲಿಕ್ಕೂ, ನಮಗೂ ನಮಗೆ ಸೇರಿದವರಿಗೂ ಲೆಕ್ಕವಾದರೂ ಕಷ್ಟವಿಲ್ಲದೆ ರಕ್ಷಿಸಿಕೊಳ್ಳಲಿಕ್ಕೂ ಅವಕಾಶವುಂಟಾಗುತಿದೆ.

ಪ್ರ —ಪ್ರಸವದರ್ಜನ್ಮದಿಂದ ನಮ್ಮನ್ನು ರಕ್ಷಿಸಿ ಸಕಲವಿಧ ದುಃಖಗಳನ್ನೂ ಹೋಗಲಾಡಿಸಿ ನಮ್ಮ ಅಜ್ಞಾನವಂ ನಿವೃತ್ತಿಸಿ ವಿವೇಕವನ್ನುಂಟುಮಾಡುವಂತಾ ಜ್ಯೋತಿಯಾವದು?

ಉ.—ಬುದ್ಧನು ತಿಳಿಸಿದಂತಾ ಮಾರ್ಗ ಚತುಷ್ಟಯಜ್ಞಾನವು ಕೇವಲಶ್ಲಾಘ್ಯವಾದುದು.

ಪ್ರ —ಆ ಮಾರ್ಗಚತುಷ್ಟಯವಂ ತಿಳಿಸಿರಿ ?

ಉ.—ಜನ್ಮ ನಿಮಿತ್ತಕಗಳಾದ ದುಃಖಕಾರಣವು. ತಜ್ಜನ್ಮನಿಮಿತ್ತಕವಾದ ದುಃಖವು, ಇದಕ್ಕೆ ಆಶೆಯೇ ಅಂಕುರವು. (ಆಶೆ ಎಂದರೆ ಲಬಿಸಿದ್ದಕ್ಕೆ ತೃಪ್ತನಾಗದೆ, ಉದ್ದಿಷ್ಟಕೋರಿಕೆಯನ್ನೀಡೇರಿಸಿಕೊಳ್ಳಲಿಕ್ಕೆ ಸ್ವರ್ಗ ಆಶಕ್ತನಾಗಿದ್ದಾಗ್ಯೂ ಅಲಭ್ಯಪದಾರ್ಥವನ್ನಾಶಿಸುವದು) ಆಶಾನಿವೃತ್ತಿ, ಮತ್ತು ಅನ್ನಿವೃತ್ತ್ಯುಪಾಯಗಳೇ ಮಾರ್ಗಚತುಷ್ಟಯವು.

ಪ್ರ.—ದುಃಖ ನಿಮಿತ್ತಕವಾದವು ಯಾವವು? ಅವು ನನಗೆ ಕೃಪೆಯಿಟ್ಟು ತಿಳಿಸಿರಿ ?

ಉ.—ಜನ್ಮ, ಪ್ರಾಯ, ವ್ಯಾಧಿ, ಮರಣ, ವಿಯೋಗ, ತ್ಯಾಜ್ಯವಲ್ಲದ್ದನ್ನು ನಿಂದಿಸುವಣ, ಅಲಭ್ಯವಾದದನ್ನಾಶಿಸುವಣ, ಇವುಗಳೆಲ್ಲ ದುಃಖ ನಿಮಿತ್ತಕಗಳು.

ಪ್ರ —ಪ್ರತಿವ್ಯಕ್ತಿಗೂ ದುಃಖ ವಿಜಾತೀಯವಾಗಿರುವುವೋ ?

ಉ —ಅಹುದು.—ವ್ಯಕ್ತಿಭೇದದಂತೆ ಅವು ಭಿನ್ನಗಳಾಗಿರುವುವು, ಪರಂತು ಸ್ವಭಾವಾನುಗುಣವಾಗಿ ಯೆಲ್ಲರೂ ಅವು ಅನುಭವಿಸಬೇಕು

ಪ್ರ.—ಮುಂದಿಗೂ ಸುತ್ತ ತ್ರಯವನ್ನುಂಟುಮಾಡುವ ಮರಣ ಅಜ್ಞಾನದಮುಕ್ತವಾದ ಆದೆಯೆಂದುಂಟಾಗುವ ದುಃಖದಿಂ ನಾವು ನಿರ್ಮುಕ್ತರಾಗುವ ಬಗೆ ಹ್ಯಾಗೆ?

ಉ.—ಈ ಪ್ರಪಂಚದಲ್ಲಿ ನೀತಿಪೂರ್ವಕ ತಾನು ಜೀವಿಸಿ ದುಃಖಪ್ರದಗಳಾದ ಪ್ರಪಂಚ ವಿಷಯಾನುದವನ್ನನುಭವಿಸಬೇಕೆಂಬ ಅತಿಕಾಂಕ್ಷೆಯಂ ನಾಶಗೊಳಿಸಿ ಆದದಿಂ ನಿಮುಕ್ತಾದಾಗುವುದುಪಾಯ ನ್ಯಾಯವೇ ದಾರಿಯಾಗುವುದು ಎಂದರಿತಿದೇನೆ

ಪ್ರ —ಅಂತಾ ಅತಿಕಾಂಕ್ಷಾ ವಿನಾಶವು ಹೊಂದುವ ಬಗೆ ಹ್ಯಾಗೆ ?

ಉ —ಬುದ್ಧನು ತನ್ನ ದಿವ್ಯಜ್ಞಾನದಿಂ ಕಂಡು ಹಿಡಿದು ಲೋಕರಕ್ಷಣಾರ್ಥ ಮಾನುಷರಿಗೋಸ್ಕರ ಉಪದೇಶಿಸಿದ ವಿಷ್ಯಂಗಳಿಂದ ಅಷ್ಟಮಾರ್ಗಾನುಸರಣ ಅಥವಾ ಅಷ್ಟಶೀಲನ್ನಸಿಂದದು ನಮಗೆ ಸ್ವಾಧೀನವಾಗುವುದು.

ಪ್ರ —ಅಷ್ಟಶೀಲವೆಂಬ ವಿಚಿತ್ರವಾದ ಶಬ್ದಾರ್ಥವೇನು ? ಅವು ಯಾವವು ?

ಉ.—ಈ ಅಷ್ಟಶೀಲಗಳು ಮಾರ್ಗಗಳೆಂದೂ ಅಂಗಗಳೆಂದೂ ಕರೆಯಲ್ಪಡುತಿವೆ ಅವುಗಳ್ಯಾವವೆಂದರೆ —

೧ —ಶುದ್ಧವಾದ ನಂಬಿಕೆ ೨ ನಿರ್ದುಷ್ಟವಾದ ಆಲೋಚನೆ, ೩. ಸತ್ಯಂಭಾಷಣೆ, ೪ ಸದ್ವರ್ತನೆ, ೫ ಸಜ್ಜೀವನ, ಸತ್ಪ್ರಯತ್ನ, ಸಚ್ಚಿಂತನೆ, ನಿಮೀಲಧ್ಯಾನ

ಈ ಅಷ್ಟಾಂಗಗಳಂ ಯಾವನು ಅಭ್ಯಸಿಸಿ, ಸಿದ್ಧಿಮಾಡಿಕೊಳ್ಳುವನೋ ಆತನು ದುಃಖದಿಂ ನಿವೃತ್ತನಾಗಿ ಇಹದೊಳ್ ಜೀವನ್ಮುಕ್ತನಾಗುವನು.

ಪ್ರ — ಮೋಕ್ಷಶಬ್ದಕ್ಕೆ ಉತ್ತಮವಾದ ಬೇರೊಂದು ಪ್ರತಿಪದವನ್ನು ತಿಳಿಸಿರಿ ?

ಉ.—ಆಗಲಿ. ಮೋಕ್ಷವಾದರೆ, ಬಂಧವಿಮೋಚನೆ

ಪ್ರ.—ಬಂಧವಿಮೋಚನೆ ಯೆಂದರೆ, ಯಾವದರಿಂದ ಏರ್ಪಡುವಂಥ ಬಂಧವಿಮೋಚನೆ?

ಉ —ಜನ್ಮಪರಂಪರೆಯಿಂದುಂಟಾಗುವ ದುಃಖಬಂಧವಿಮುಕ್ತಿಯೆಂದರಿಯುವುದು. ಜನ್ಮಪರಂಪರೆಯೆಲ್ಲವೂ ಅಜ್ಞಾನಾದಿಗಳಿಂದಲೂ ದುರಾಶೆಯಿಂದಲೂ ಉಂಟಾಗುತಿವೆ

ಪ್ರ —ಮೋಕ್ಷ ಅಥವಾ ಬಂಧವಿಮೋಚನವಾದ ಮೇಲೆ ನಮಗೆ ಲಭಿಸುವದೇನು ?

ಉ —ನಿರ್ವಾಣಸುಖವು.

(ಸಶೇಷ)

SUMMARY OF NEWS

ವೃತ್ತಾಂತ ಸಂಗ್ರಹವು.

ಮದ್ರಾಸಿನಲ್ಲಿ ಹೈಕೋರ್ಟಿನವರ ನ್ಯಾಯಸ್ಥಾನಕ್ಕಾಗಿ ಕಟ್ಟಲ್ಪಟ್ಟ ಕಟ್ಟಡದಲ್ಲಿ [illegible] ಗವರ್ನರವರ ಸಮಕ್ಷದಲ್ಲಿ ಕೆಲಸಕ್ಕೆ ಪ್ರಾರಂಭವಾಗುವದು

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

BANGALORE —Printed and published at the KARNATAKA PRESS, No. 40, HOSPITAL ROAD, PETTAH — 1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRĀKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] ಸಂಪುಟ ೧೯.] | BANGALORE—MONDAY, JUNE 13, 1892 | ಬೆಂಗಳೂರು:—೧೮೯೨ ನೇ ಇಸವಿ ಜೂನ್ ೧೩ ನೇ ತಾರೀಖು ಸೋಮವಾರ. | [No. 24. [ಸಂಖ್ಯೆ ೨೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷು ಮತ್ತು ಕನ್ನಡಭಾಗಗಳಿಗೆ.

	ಸ್ಥಳದವರಿಗೆ	ಪರಸ್ಥಳದವರಿಗೆ
ಮುಂಗಡವಾಗಿ ಕೊಡುವವರಿಗೆ	8—0—0	9—0—0
ತರುವಾಯ „	9—0—0	10—8—0

ಇಂಗ್ಲೀಷು ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಡುವವರಿಗೆ	4—0—0	5—0—0
ತರುವಾಯ „	5—0—0	6—0—0

[illegible]

ಪ್ರಕಟನೆಯ ದರಗಳು.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON [illegible]

HINDU MEDICINE

Price including Postage Rs 5 0-0

ವೈದ್ಯಸಾರ ಸಂಗ್ರಹ.

[illegible]

ಬೆಲೆ ಅಂಚೆ ಕೂಲಿ ಸಹ ರೂ 5 0—0

[illegible]

ನೋಟೀಸ್.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

[illegible]

ನೋಟೀಸ್.

ನೂತನಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ಣಿ ಮತ್ತು ಕಂಪೆನಿ.

ಕನ್ಮಿಷರ್ ಏಜಂಟ್ಸ್.

[illegible]

ಸದರ್ ಬಜಾರ್ ಸ್ಟೋರ್ಸ್.

ನೋಟೀಸು.

ಯುದ್ಧಸಂಬಂಧೀ ಸಾಮಾನುಗಳೂ, ಕಠಿಣವಾದ ದಾರುಗಳಿಂದ ಮಾಡಿದ ಪೀಠೋಪಕರಣ ಸಾಮಾನುಗಳೂ, ಬಗೆಬಗೆಯ ರೈಲ್ವೇ ಹತ್ಯಾರಗಳೂ, ಜಾಕಸ್ತ್ರಗಳೂ, ಮಹಾನವಮಿ ಸಾಮಾನುಗಳೂ, ಪಾಬ್ಲಿಕಗಳೂ, ಧಾತುಗಳೂ, ಟೀನುಗಳೂ, ಅವುಗಳ ಗಾಲಿಗಳೂ, ಕಬ್ಬಿಣದ ಪೆಟ್ಟಿಗೆಗಳೂ, ಫಾಲೀ ಪೀಪಾಯಿಗಳೂ, ಕಿತ್ತಾನ ಚರ್ಮಗಳೂ, ಸಾಗವಾನಿ ಮತ್ತು ಉಕ್ಕಿನ ಸಿಲೀಪಾಟುಗಳೂ, ಕುರ್ಚಿ, ಮೇಜು, ಕಪಾಟು ಮುಂತಾದ ಸಾಮಾನುಗಳೂ, ಇನ್ನೂ ಅನೇಕತರದ ರೈಲ್ವೆಯ ನಿರುಪಯೋಗೀ ಸಾಮಾನಿನ ಬೆರೆತ ಸಮುದಾಯವೂ, ತಾರೀಖು ೨೩ ನೇ ಜೂನ್ ೧೮೯೨ ನೇ ಇಸವಿ [illegible]ವಾರದ ದಿನ "ಮುಬ್ರ್ಯ್ಲೀ ಜನರಲ್ ಸ್ಟೋರ್"ವಲ್ಲಿ ಮುಂಜಾನೆ ೧೧ ಘಂಟೆಗೆ ಪ್ರಸಿದ್ಧವಾಗಿ ಲಿಲಾಮ್ ಮಾಡಲ್ಪಡುವವು.

ಸ್ಟೋರ್ ಕೀಪರ್ಸ್ ಆಫೀಸ್ [illegible] ೧೮೯೨	[illegible] ಸ್ಟೋರ್ ಕೀಪರ್, ಸದರ್ ಮದ್ರಾಸು ರೈಲ್ವೆ.

THE MONEY MARKET.

ಮದರಾಸ್, ಶನಿವಾರ ತಾರೀಖು 11 ನೇ ಜೂನ್ 1892.

[illegible] 108-2 0 [illegible] 109-8-0 [illegible]

[illegible] (500) [illegible] 960 [illegible] 965 [illegible]

[illegible] (100) [illegible] 165 [illegible] 170 [illegible]

[illegible] 15—7—0

[illegible]

6 [illegible] 1s. 3 23/32 d.

[illegible] 1s 3 21/32 d

[illegible] 1s. 3 9/16 d.

THE BANGALORE SREENIVASA MANDIRAM.

ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಇದರ ವಿನಿಯೋಗದ ತಪಸೀಲ್ ತೋರಿಸುವ ತಖ್ತಾ:—

೧೮೯೨ ನೇ ಇಸವಿ ಜೂನ್ ೪ ನೇ ತಾರೀಖಿನಿಂದ ಜೂನ್ ೧೧ ನೇ ತಾರೀಖಿನವರೆಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	94
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	57¼
ಗತವಾರದ ಶಿಲ್ಕು ಸೇರು	...	40½
ಜಮ್ಲಾ	...	97¾
ಊಟಕ್ಕೆ ಸಾಮಗ್ರಿಗಳಿಗಾಗಿ ವಿನಿಯೋಗಿಸಲ್ಪಟ್ಟ ಸೇರು	..	27¼
ಖರ್ಚಾದ ಅಕ್ಕಿ ಸೇರು	...	27¼
ಜುಮಲಾ ಬಾಕಿ	...	42¼

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ:

ಅನಾಥರು	...	7
ಬಿಸಿ ಬಡ ವಿದ್ಯಾರ್ಥಿ	...	4
ಪಾಠಶಾಲೆಗಳ ವಿದ್ಯಾರ್ಥಿಗಳು	...	21
ಕಷ್ಟಕೋಟಲೆಯವರು, ಪರೋಪಕಾರ ಪಡೆದವರ ಸಂಖ್ಯೆ		16
ಪ್ರಯಾಣಸ್ಥರು	...	6
ಜಮ್ಲಾ	...	54

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 13, 1892.

೧೮೯೨ನೇ ಇಸವಿ ಜೂನ್ ತಾ|| ೧೩ ನೇ ಸೋಮವಾರ.

TRANSFER OF RAILWAY POLICE

ಲೋಕದಲ್ಲಿ ಮನುಷ್ಯನ ಬಾಹ್ಯಕೆಯು ಅವನ ಅಭಿವೃದ್ಧಿಯಂತಿರುವದೆಂಬದರಲ್ಲಿ ಸ್ವಲ್ಪವೂ ಸಂದೇಹವಿಲ್ಲವು. ನೇಟಿವ್ ಸಂಸ್ಥಾನಾಧಿಪತಿಗಳು ತಮ್ಮ ಪ್ರಜೆಗಳ ಕ್ಷೇಮಲಾಭಗಳಲ್ಲಿ ಯೆಷ್ಟರ ಶ್ರದ್ಧೆಯುಳ್ಳವರಾಗಿರುವರೆಯೋ ಅದಕ್ಕನುಗುಣವಾಗಿಯೇ ಅವರ ಸುಸ್ತುತ್ಯಭವನಗಳೂ ವೃದ್ಧಿಯನ್ನೈದುತಲಿವೆ. ಕಾಲಾನುಗುಣವಾಗಿ ಅವರ [illegible] ವೈಭವಗಳೆಲ್ಲವು ಕ್ರಮೇಣ ವ್ಯಕ್ತವಾಗುತ್ತ ಬರುವದಲ್ಲದೆ, ತಾವು ಕೇವಲ ರಾಜಶಬ್ದಮಾತ್ರದಿಂ ಗೌರವಿಸಲ್ಪಡುತಲಿರುವದಲ್ಲದೆ, ವಿಧವಾತ ಅವರ ಪದ್ಯಾಲೋಚನೆಗೆ ವಿಷಯಗಳಾಗದೆ ಯೋಗಿವೆ. ಸ್ವಭಾವಮಾದ ಅವರ [illegible] ಹೃದಯ [illegible] ಪರರಿಗೆ [illegible] ಗುರಿಯೆ [illegible] ಅನೇಕ ದೃಷ್ಟಾಂತಗಳು ಮೇಲೆ ಮೇಲೆ ಕಾಣಬರುತಲಿವೆ. ಈ ಸಂಸ್ಥಾನದ ಪೋಲೀಸ್ ವಿಚಾರಣಾಧಿಕಾರದಲ್ಲಿ ಕೆಲವು ಭಾಗವು ಬ್ರಿಟಿಷ್ ಗವರ್ನಮೆಂಟಿಗೊಪ್ಪಿಸಲ್ಪಡುವದೆಂದು ವಾರ್ತೆಯ ಕೆಲವು ತಿಂಗಳ ಹಿಂದೆಯೇ ತಿಳಿಸಿದ್ದೆವಷ್ಟೆ. ಆ ಕಾಲವೀಗ ಸನ್ನಿಹಿತವಾಗಿ, ದಕ್ಷಿಣ ಮಹಾರಾಷ್ಟ್ರ ರೈಲ್ವೇ ಲೈನಿನಲ್ಲಿನ ಪೋಲೀಸ್ ವಿಚಾರಣೆಯ ಶ್ರೀಮನ್ಮಹಾರಾಜ್ಯರ ಸರ್ಕಾರದವರ ಅಧಿಕಾರದಲ್ಲಿರುವದೆಂದು ಇಂಡ್ಯಾ ಗವರ್ನಮೆಂಟಿನವರು ಅಪೇಕ್ಷೆಪಡುತ್ತಿದ್ದಾರೆ [illegible] ವೈಸ್‌ರಾಯ್ ಸಾಹೇಬರವರು [illegible] ರಮ್ಯವೇ [illegible]

...ಯೋರ್ಣಾದಾಗಳಂತೆಯೇ ದಕ್ಷಿಣ ಮ... ಸ್ಟ್ರ ರೆಯಿಲ್ವೇ ಲೈನಿನಲ್ಲಿ ಸಹ ಮಾಡಲ್ಪ... ಮಹಾರಾಜಾ ಸರ್ಕಾರದವರ ಸುಫರ್ದ... ಸದರೀ ಪೋಲೀಸ್ ವಿಚಾರಣಾಧಿಕಾರವು ತತ್ಕಾಲಿಕವಾಗಿ ನಿವೃತ್ತಿಸಲ್ಪಡುವದೆಂತಲೂ ಕೇಳಲಿಕ್ಕೆ ನಾವು ಬಹಳ ಅಸಮಾಧಾನಪಟ್ಟವ ರಾಗಿದೇವೆ. ಶ್ರೀಮನ್ಮಹಾರಾಜರವರ ದಿವ್ಯಚಿತ್ತ ವಲ್ಲಿದು ಸ್ಮರಣೀಯವೆಂದು ಸಹ ಕೋರಿತೋ ಇಲ್ಲವೋ ನಾವರಿಯೆವು. ವರಂತು ಅವರಿಗಿರುವ ಈ ಸಂಪೂರ್ಣಾಧಿಕಾರಗಳು ಒಂದೊಂದು ಕಾಲದಲ್ಲಿ ಕಡಲುಗಳಾಗಿ ಚದರಿಹೋಗುತಲಿರುವದನು ಕಂಡೂ ಸಂಸ್ಥಾನಾಭಿಮಾನಿಗಳಿಗೆ ಮನೋವ್ಯಥೆಯುಂಟಾಗದೆ ಹೋಗುವದಿಲ್ಲವು. ಈ ದೇಶದಲ್ಲಿ ಬ್ರಿಟಿಷ್ ಪ್ರಭುತ್ವವು ತಪ್ಪಿ ನೇಟಿವ್ ಆಳ್ವಿಕೆಯು ನೆಲೆಗೊಂಡ ಹತ್ತು ವರ್ಷಗಳ ಕಾಲದೊಳಗಾಗಿ ಅನೇಕ ವಿಷಯಗಳು ಬಹಳ ರೂಪಾಂತರವನ್ನೈದಿವವು, ವರಂತು ಬ್ರಿಟಿಷ್‌ಪಾಲನಾಕ್ರಮವನ್ನನುಸರಿಸಿ ಇದುಮೇಲಿ ಸಲ್ಪಡುತಲಿದೆಯೆಂಬ ಪ್ರತಿಷ್ಠೆಗೆ ಬಾಧ್ಯತೆಕ ವಿಷಯವಾಗಿದ್ದಾಗ್ಯೂ ಈ ಸಂಸ್ಥಾನದ ಸ್ವೀಯಗಳಾದ ಸ್ವಾತಂತ್ರ್ಯಗಳನೇಕ ವಿಗಳತವಾದವು. ಅಂಚೆಯು ಪರಾಧೀನವಾಯಿತು, ರೆಯಿಲ್ವೆಯು ಅನ್ಯರ ಹಸ್ತಗತವಾಯಿತು, ಪೋಲೀಸ್ ಅಧಿಕಾರವು ಆಕ್ರಮಿಸಿಕೊಳ್ಳಲ್ಪಟ್ಟಿತು, ಮುಂದೆಯಾವ ದರಮೇಲೆ ಗ್ರಹಗಳ ವಕ್ರವೀಕ್ಷಣಗಳು ಬೀಳುವವೋ ತಿಳಿಯಲಿಲ್ಲವು. ಮುಖ್ಯವಾಗಿ ಬ್ರಿಟಿಷ್ ಗವರ್ನಮೆಂಟಿನವರು ನೇಟಿವ್ ರಾಜ್ಯಗಳ ವಿಷಯದಲ್ಲಿ ಮಾತ್ರ ಅರ್ಧಾಂತರ ಸನ್ನಭಂಗನ್ಯಾಯವನ್ನಂಗೀಕರಿಸಿ ತದ್ವತ್ ನಡೆಸಲುಪಕ್ರಮಿಸಿದಾರೆ ಹ್ಯಾಗೆಂದರೆ,—ತಮ್ಮ ಸಾರ್ವಭೌಮತ್ವದ ರಕ್ಷಣಾರ್ಥ ಪ್ರೋಷಿತ ಸಂಸ್ಥಾನಗಳು ಎರವೆಯೆಂದು ನುಡಿಯಬೇಕು. ಅವು ಸ್ವಾತಂತ್ರ್ಯವಿಹೀನವಾದುದಾಗಿ ಇಲ್ಲದಂತೆ ಭಾವಿಸಲ್ಪಡತಕ್ಕವಾಗಿರಬೇಕು. ಅವು ಇವೆಯೆಂತಲೂ ಹೇಳಕೂಡದು. ಇಲ್ಲವೆಂತಲೂ ಭಾವಿಸಕೂಡದು. ಅವು ಜೀವಿಸಿರುವಂತೆಯೂ ಕಂಡುಬರುತಲಿರಬೇಕು. ಸ್ಥಿರವಾದ ನಿರ್ಜೀವವಾಗಿರುವಂತೆಯೂ ತೋರುತಲಿರಬೇಕು. ಈ ಸನ್ನಭಂಗನ್ಯಾಯವು ಕಾಪಾಡಲ್ಪಡುತಲಿರುವ ನೇಟಿವ್ ಅರಸರು ನಾಮಾನ್ಯರಾಗಿ ಜ್ಞಾನವರ್ಧನ ಚಾರಿತ್ರ್ಯಗಳೆಂಬ ತ್ರಿನಿರತಾನುಷ್ಠಾನ ನಿರತರಾಗಿರುತಲಿದಾರೆ. ಇವರ ಜ್ಞಾನವು ರೆಸಿಡೆಂಟರಲ್ಲಿಯೂ, ದರ್ಶನ ಚಾರಿತ್ರ್ಯಗಳು ಬ್ರಿಟಿಷ್ ಗವರ್ನಮೆಂಟಿನವರಲ್ಲಿಯೂ ನೆಲೆಗೊಂಡಿವೆ. ಆದಾಗ್ಯೂ ಅವರ ವಿಷಯದಲ್ಲಿ ತೋರಿಸಲ್ಪಡುವ ಔದಾರ್ಯವೆಂಬುದು ಮಾತ್ರ ಬಹಳ ಸಂಕುಚಿತವಾಗಿರುತಿದೆ. ಪೋಲೀಸ್ ವಿಚಾರಣೆಯಲ್ಲಿ ಕೆಲವು ಬಾಗಗಳು ಪರಾಧೀನವಾಗುವದರಿಂದ ಪ್ರಜೆಗಳಿಗೆ ಹಿಂಸೆ ಒಂದೇ ಹೊರ್ತು ಮತ್ಯಾವವಿಧದಿಂದಲೂ ಮಹಾರಾಜಾ ಸರ್ಕಾರಕ್ಕೆ ಪ್ರತಿಷ್ಠೆಯೂ ಲಾಭನ್ನೂ ವುಂಟಾಗಲಿಲ್ಲವು. ಈ ಸಂದರ್ಭದಲ್ಲಿ ಆಂಶೋಕ್ತವಾಗಿ ಹೇಳಿದ್ದರೂ ಕ್ರಿಮಿನಲ್ ಅಧಿಕಾರಗಳು ಪೋಲೀಸಿಗೆ ಸಂಬಂಧಿಸಿದ ಮಟ್ಟಿಗೆ ನಿವೃತ್ತಿಸಲ್ಪಟ್ಟಂತೆ ಸ್ಪಷ್ಟವಾಗುತಿದೆ. ದರೀಪ್ರಾರ್ಥ ಮಾಗಿ ಉಪಕ್ರಮವಾದ ಈ ಯೋರ್ಜನು ಮುಂದೆ ಯೆಷ್ಟುದೂರ ಯಾವ ರೂಪವನಾಗಿ ಪರಿಣಮಿಸುವದೋ ಯೆಂಬ ಭೀತಿಯೊಂದುಕಡೆ ನಮಗೆ ನಿಯತವಾಗಿರಲೇ ಇದೆ.

PARLIAMENTARY GENERAL ELECTION.

ಬ್ರಿಟಿಷ್ ಪಾರ್ಲಿಯಮೆಂಟ್ ಸಭಾಪದ ಮೆಂಬರಗಳ ಚುನಾವಣೆ.

ಈಗ ಇರತಕ್ಕ ಬ್ರಿಟಿಷ್ ಪಾರ್ಲಿಮೆಂಟ್ ಸಭೆಯು ವಜಾ ಮಾಡಲ್ಪಟ್ಟು ಅವರ ಪುನರ್ನ್ಯಾವಸ್ಥೆಯಬಗ್ಗೆ ಮೆಂಬರಗಳ ಚುನಾವಣೆಯು ಅತಿ ಶೀಘ್ರದಲ್ಲಿ ಅಂದರೆ ಬರುವ ತಿಂಗಳ ಆದಿಭಾಗದಲ್ಲಿ ನಡೆಯುವದಾಗಿದೆ. ಈಗ ಇಂಗ್ಲೆಂಡ್ ರಾಜ್ಯದ ಕೆಲವು ರಾಜಕೀಯ ವಿಷಯವ್ಯವಸ್ಥೆಯು ಬಹಳ ಅಸಾಧ್ಯವಾಗಿ ಪರಿಣಮಿಸಿ ಪ್ರಜೆಗಳು ವಿನ್ನಾಭಿಪ್ರಾಯಗಳುಳ್ಳವರಾಗಿರುವದರಿಂದ ಕಕ್ಷಿಭೇದಗಳೇರ್ಪಟ್ಟು ಅವರವರು ತಮ್ಮ ತಮ್ಮ ಪ್ರಾಬಲ್ಯಕ್ಕಾಗಿ ನಿರ್ವ್ಯಾಜವಾದ ಪಟ್ಟಿನ್ನೆ ವ್ಯಸನಿ...ಯು ಸಮಿತ ...ವದುವಲಿದಾರೆ. ಇದರಿಂದ ಅಲ್ಲಿನ ಪ್ರಜೆಗಳು ಚಿತ್ತಸ್ವಾಸ್ಥ್ಯವಿಲ್ಲದೆ ಕಳವಳಗೊಂಡಿರುವಂತೆ ತಿಳಿಯಬರುತಿದೆ. ಪ್ರಕೃತ ಸಂದರ್ಭದಲ್ಲಿ ಯಾವ ಕಕ್ಷಿಯವರು ಪ್ರಬಲಿಸಿ ಅಧಿಕಾರಪದಕ್ಕೆ ಬರುವರೋ ಅದು ಈಗ ಹೇಳಕೂಡದೆ ಇದೆ. ಕೆಲವು ತಿಂಗಳ ಹಿಂದೆ ಇದ್ದ ವಿದ್ಯಮಾನವನ್ನನುಸರಿಸಿ ಮಿಸ್ಟರ್ ಗ್ಲಾಡ್‌ಸ್ಟನ್ ಪಕ್ಷಾವಲಂಬಿಗಳೇ ಪ್ರಭುತ್ವಕ್ಕೆ ಬರಬಹುದೆಂದೂಹಿಸಲಿಕ್ಕೆ ಅವಕಾಶ ವುಂಟಾಗಿತ್ತು. ತರುವಾಯ ಕನ್‌ಸರ್ವೆಟಿವ್ ಕಕ್ಷಿಯವರು ಅಂದರೆ ಈಗ ಅಧಿಕಾರದಲ್ಲಿರತಕ್ಕ ರಾಜ ಪಕ್ಷಾವಲಂಬಿಗಳೇ ಪ್ರಬಲಿಸಬಹುದೆಂಬ ಸಂಭವ ಕಾಣಬಂತು. ಈಗ ಮರಳಿ ಲಿಬರಲ್ ಕಕ್ಷಿಯವರ ಜಯಸೂಚಕಗಳಾದ ಚಿನ್ಹೆಗಳು ಕಂಡುಬರುತಲಿವೆ. ಆಯಾ ಕಕ್ಷಿಗಳಿಗೆ ಅಧ್ಯಕ್ಷರಾದವರು ಪ್ರಜೆಗಳಿಗೆ ಜೊಪಿಸಿ ತಮ್ಮ ಪಕ್ಷವನ್ನವಲಂಬಿಸುವದಕ್ಕಾಗಿ ಅವರಿಗೆ ನಾನಾವಿಧ ಪ್ರತಿಜ್ಞೆಗಳನ್ನೂ ಪ್ರತ್ಯಾಶೆಗಳನ್ನೂ ಉಂಟುಮಾಡುವ ಸ್ವಾಧೀನ ಪಡಿಸಿಕೊಳ್ಳುತಲೂ, ಅಲ್ಲಿಯಲ್ಲಿ ದೇಶದ ಮತ್ತು ಪ್ರಭುತ್ವದ ಸ್ಥಿತಿಯು ಕುರಿತು ಪ್ರಸಂಗಿಸುತಲೂ ಇದಾರೆ. ಇವರಪಯಾಪದಪಯಗಳು, ಇತರ ಅನೇಕ ರಾಜಕೀಯ ವಿಷಯಗಳೊಡನೆ ಐರ್ಲ್ಯಾಂಡ್ ರಾಜ್ಯಕ್ಕೆ ಸ್ವತಂತ್ರವಾಗಿ ಪ್ರತ್ಯೇಕ ಪಾರ್ಲಿಮೆಂಟನ್ನೇರ್ಪಡಿಸಿಕೊಳ್ಳುವ ಅಧಿಕಾರವು ಅಲ್ಲಿನ ಪ್ರಜೆಗಳಿಗುಂಟುಮಾಡುವ ವಿಷಯವ್ಯವಸ್ಥೆಯನ್ನನುಸರಿಸಿರುತಿದೆ. ಮಿ|| ಗ್ಲ್ಯಾಡ್‌ಸ್ಟನ್‌ಯವರು ತಾವು ಜೀವಿಸಿರುವದರೊಳಗಾಗಿ ಐರಿಷ್ ಪಾರ್ಲಿಮೆಂಟ್ ಸಭೆಯನ್ನೇರ್ಪಡಿಸಿ ಅದಕ್ಕೆ ಅಲ್ಲಿನವರು ಮೆಂಬರಾಗಿ ಯೇರ್ಪಡುವರು ನೋಡತಕ್ಕೆಂಬ ದೃಢಾಭಿನಿವೇಶವುಳ್ಳವರಾಗಿದಾರೆ. ಈ ವಿಷಯವು ರಾಜಪಕ್ಷಾವಲಂಬಿಗಳಿಗೆ ರುಚ್ಯಾಂಗ ಇಷ್ಟವಿಲ್ಲವು ಇದು ಮುಂದೆ ಹ್ಯಾಗೆ ಪರಿಣಮಿಸುವದೋ ತಿಳಿಯಲಿಲ್ಲವು. ಪ್ರಸಕ್ತ ಬಲಾಬಲಗಳಿಂದ ಇಂಡ್ಯಾ ದೇಶದ ಆಡಳತದಲ್ಲಿಯೂ ಕೆಲವು ಸ್ಥಿತಿಭೇದಗಳುಂಟಾಗಬಹುದೆಂದೂಹಿಸಬಹುದಾಗಿದೆ ಅವು ಗವರ್ನರ್ ಜನರಲ್ಲವರ ಬದಲಾವಣೆ ರೂಪವಾಗಿಯೂ ಮುಂದೆ ಅವರ ಸ್ಥಾನದಲ್ಲಿ ಬರತಕ್ಕರಾಗುವಂತವರು ಯಾವ ಪಕ್ಷಾವಲಂಬಿಯಾಗಿರುವರೋ ತದನುಗುಣವಾದ ಅವರ ಸಿದ್ಧಾಂತವರ್ತನ ರೂಪವಾಗಿಯೂ ಇರುವುವು. ವರಂತು ಇಂಡ್ಯಾ ದೇಶೀಯರ ವಿಷಯದಲ್ಲಿ ಯಾವಪಕ್ಷದವಗಿದ್ದಾಗ್ಯೂ ಯಾರು ಅಧಿಕಾರಪದಕ್ಕೆ ಬಂದಾಗ್ಯೂ ಪಕ್ಷಾವಲಂಬಿಗಳಾಗಿದ್ದಾಗ್ಯೂ ಸ್ವಲ್ಪ ಹೆಚ್ಚು ಕಡಮೆಯಾಗಿ ಹಿಂದೂಗಳಪ್ರಯೋಜನಾಂಕದಲ್ಲಿ ಸಮಾನ ಭಾವನೆಯುಳ್ಳವರಾಗಿರುವದರಿಂದ ಸ್ವರೂಪತಃ ಅವರದಯಾಗದಯಗಳಿಂದ ಇಂಡ್ಯಾ ದೇಶೀಯರಿಗುಂಟಾಗುವ ಲಾಭನಷ್ಟಗಳು ಅಲ್ಪವಾಗಿರುತಿವೆ. ಆದಾಗ್ಯೂ ಇಂಡ್ಯಾದೇಶದ ಸ್ಥಿತಿಗತಿಗಳಂಕುರಿತ ವಿಚಾರವು ಆಗಿಂದಾಗ್ಗೆ ಪಾರ್ಲಿಮೆಂಟನಲ್ಲಿ ಜರುಗುತಲೂ ನ್ಯಾಷನಲ್ ಕಾಂಗ್ರಸ್ ಸಭೆಯವರ ಉದ್ದೇಶ ಪ್ರಯತ್ನಗಳಿಗೆ ಬ್ರಿಟಿಷ್ ಪ್ರಜೆಗಳ ಪೈಕಿ ಕೆಲವರು ಸಹಾಯಕರಾಗುವಾಗೆ ಹೇಳುವದರಿಂದಲೂ, ಇಂಗ್ಲ್ಯಾಂಡಿಗೆ ಇಲ್ಲಿಂದ ಹೋಗಿ ಇಲ್ಲಿನ ಸ್ಥಿತಿಯನ್ನೂ ಇಲ್ಲಿನವರ ಅಪೇಕ್ಷಿತಾಂಶಗಳನ್ನೂ ಕುರಿತು ಪ್ರಸಂಗಿಸಿದ ನಮ್ಮವರ ವಿಜ್ಞಾಪನೆಗಳನ್ನವರು ಆದರಿಸಿದಂಗೀಕರಿಸಿದ್ದರಿಂದಲೂ ಮುಂದೆ ಲಿಬರಲ್ ಪಕ್ಷಾವಲಂಬಿಗಳಿಗೇ ನಾವರು ಶುಭಕಾಲಪ್ರಾಪ್ತವಾದರೆ ಅವರು ನಮಗೆ ಮೇಲುಂಟುಮಾಡಬಹುದೆಂಬ ಪ್ರತ್ಯಾಶೆಯೊಂದೇ ಇಲ್ಲಿನವರಿಗೆ ಪ್ರಸಕ್ತ ಪಾರ್ಲಿಮೆಂಟರಿ ಯೆಲೆಕ್ಷನ್ ವಿಷಯದಲ್ಲಿ ಕ್ರದ್ಧೆಯನ್ನುಂಟು ಮಾಡತಕ್ಕದ್ದು ಹೊರ್ತು ಬೇರೊಂದೂ ಇಲ್ಲವು. ಆದುದರಿಂದಲೇ ಇದರ ಪರ್ಯವಸಾನವು ನಾವು ಈಗ ಆತುರದೊಡನೆನಿರೀಕ್ಷಿಸುತಲಿದೇವೆ. ಈಗಇರತಕ್ಕ ವೈಸ್‌ರಾಯಿಯವರು ಶೀಘ್ರದಲ್ಲಿ ತಮ್ಮ ಕೆಲಸದಿಂದನಿವೃತ್ತರಾಗುವರೆಂಬಪ್ರವಾದವು ಪ್ರಬಲಿಸಿದೆ.

THE LATE RAJA OF VENKATAGIRI

ವೆಂಕಟಗಿರಿ ಸಂಸ್ಥಾನದ ವೃದ್ಧರಾಜರವರು ಈ ಚೆಗೆ ಕೆಲವು ದಿನಗಳ ಮೊದಲು ಚಿನ್ನು ಘಣ ರೋಗದಿಂ ಅಸ್ವಸ್ಥ ಸ್ಥಿತಿಯಲ್ಲಿರುವಂತೆ ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ಅರಸರ ರೋಗ ನಿವೃತ್ತಿಯಬಗ್ಗೆ ಮಾಡಲ್ಪಟ್ಟ ಉತ್ತಮವಾದ ಬಹುವಿಧ ಚಿಕಿತ್ಸೆಗಳೆಲ್ಲವು ನಿಷ್ಫಲಗಳಾಗಿ ಕಳೆದ ಸೋಮವಾರದ ದಿನ ಸಾಯಂಕಾಲ ಮೈಲಾಪುರದಲ್ಲಿ ಕಾಲಗತಿಯನೈದಿದರೆಂಬ ವೃತ್ತಾಂತವು ಕೇಳಿ ಬಹಳ ವಿಷಾದಿಸುತ್ತೇವೆ. ಇವರು ಸನ್ ೧೮೭೮ ನೇ ಇಸವಿಯಲ್ಲಿ ಸಿ. ಎಸ್. ಐ. ಎಂಬ ಪ್ರಶಸ್ತಿಯಂ ಪಡೆದರು. ಇವರಿಗೆ ಭಾರ್ಯೆಯೂ ವೃದ್ಧೆಯಾದ ತಾಯಿಯೂ ಆರುಮಂದಿ ಮಕ್ಕಳೂ ಇದಾರೆ. ಪುತ್ರರ ಪೈಕಿ ಜ್ಯೇಷ್ಠರು ವೆಂಕಟಗಿರಿ ಸಂಸ್ಥಾನದ ಪ್ರಕೃತ ಅರಸರು, ಇನ್ನೊಬ್ಬರು ಸ್ವೀಕಾರದ ಮೂಲಕ ಬೊಬ್ಬಿಲಿ ಸಂಸ್ಥಾನದ ಅರಸರಾದರು, ಮೂರನೇಯವರು ಮೇಲಿನಂತೆ ಪೀಠಾಪುರ ಸಂಸ್ಥಾನಾಧಿಪತಿಯಾದರು, ನಾಲ್ಕನೆಯವರು ಪಿಟ್ಟಾಪುರ ಸಂಸ್ಥಾನಾಧಿಪತಿಯಾದರು. ನಿವೃತ್ತಪಟ್ಟ ಅರಸರವರ ಕಳೇಬರವು ದಹನ ಸಂಸ್ಕಾರದ ಬಗ್ಗೆ ಸ್ಪೆಶಲ್ ಟ್ರೈನಿನಲ್ಲಿ ವೆಂಕಟಗಿರಿಗೆ ಸಾಗಿಸಲ್ಪಟ್ಟಿತು. ಈ ಸಂಸ್ಥಾನವು ವಿಸ್ತೀರ್ಣದಲ್ಲಿ ಸಾಮಾನ್ಯವಾದುದಾಗಿದ್ದರೂ ಒಳ್ಳೆಯ ಆಯತಿಯುಳ್ಳದ್ದು ಮತ್ತು ಖಜಾನೆಯಲ್ಲಿ ೫೦ ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಹಾಜರಿರುವಂತೆ ತಿಳಿಯಬರುತಿದೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Emperor William's reconciliation.—ಜರ್ಮನಿ ಚಕ್ರವರ್ತಿಯವರಾದ ವಿಲ್ಲಿಯಂಯವರಿಗೂ ಅವರ ಸಾಚಿವ್ಯಪ್ರಧಾನ ಮಂತ್ರಿಯವರಾದ ಪ್ರಿನ್ಸ್ ಬಿಸ್‌ಮಾರ್ಕ್‌ಯವರಿಗೂ ಈಗ ವುಂಟಾಗಿರುವ ಮನಸ್ತಾಪವು ನಿವೃತ್ತಿಯಾಗಿ ಇಬ್ಬರೂ ಸಮಾಧಾನರಾದರೆಂದು ತಿಳಿಯಬರುತಿದೆ. ಇದು ನಿಜವಾಗಿರುವ ಪಕ್ಷಕ್ಕೆ ಸದರೀ ದೇಶಾಡಳತದಲ್ಲಿ ಬಹಳ ಮುಖ್ಯ ಬದಲಾವಣೆಗಳು ಮುಂದೆ ಪ್ರಾಪ್ತವಾಗಬಹುದೆಂದೆಣಿಸುತ್ತೇವೆ. ಇದಲ್ಲದೆ ಈ ಗಿರತಕ್ಕ ಪ್ರಧಾನ ಮಂತ್ರಿಯವರಾದ ಕೌಂಟ್ ವಾನ್ ಕ್ಯಾಪ್ರಿವಿಯೆಂಬವರು ಪ್ರಕೃತ ಅವರ ಕೆಲಸದಿಂದ ನಿವೃತ್ತಿಸಲ್ಪಡುವರೆಂಬುದಾಗಿ ಸಾಧಾರಣವಾದ ಪ್ರವಾದ ವುಂಟಾಗಿದೆ. ಪ್ರಿನ್ಸ್‌ಬಿಸ್ಮಾರ್ಕ್‌ಯವರು ಅಧಿಕಾರ ಪದಕ್ಕೆ ಬರುವದಕ್ಕಾಗಲೂ ವಿಶೇಷ ಆಶ್ಚರ್ಯಕರಗಳಾದ ಅಂಶಗಳನೇಕ ಸಂಭವಿಸುವದರಲ್ಲೇನೂ ಸಂಶಯವಿಲ್ಲವು.

A discovery.—ಈಚೆಗೆ ಜರ್ಮನಿ ಡಾಕ್ಟರೊಬ್ಬರು ವಿದ್ಯಾ ಶೋಧನೆಯಂ ಮಾಡುವಾಗ್ಯೆ ನೂತನವಾದ ಒಂದು ಅಂಶವು ತಾವು ಕಂಡುಹಿಡಿದಂತೆ ತಿಳಿಸುತ್ತಾರೆನುದರೆ:— ದೀರ್ಘಕಾಲ ಜೀವಿಸಿರತಕ್ಕವರೆಲ್ಲರೂ ಪ್ರಾಯೇಣ ರಾತ್ರಿಕಾಲದಲ್ಲಿ ಬಹಳ ಹೊತ್ತು ಎಚ್ಚರಿತ್ತುಕೊಂಡಿರುತ್ತಾರೆ. ಎಂಭತ್ತು ವರುಷಗಳವರಿಗೆ ಜೀವಿಸಿರುವವರಲ್ಲಿ ನೇಕರು ಎಂಭತ್ತುಮಂದಿ ರಾತ್ರಿಕಾಲದಲ್ಲಿ ಶೀಘ್ರವಾಗಿ ಮಲಗಿಕೊಂಡು ಬೆಳಗ್ಗೆ ಜಾಗ್ರತೆಯಾಗಿ ಯೇಳುವದಿಲ್ಲವೆಂದು ಸದರೀ ಡಾಕ್ಟರ್ ತಿಳಸುತ್ತಾರೆ. ಹೊತ್ತು ಮೀರಿ ಮಲಗಿಕೊಳ್ಳುವದು ಒಳ್ಳೇದಲ್ಲದೆ ಬೆಳಗಿನಹೊತ್ತು ಜಾಗ್ರತೆಯಾಗಿ ಯೇಳುವದು ಸಾಕ್ಷಾದ್ವಿರುದ್ಧ ಆದ ಕಾರಣದಿಂದ ಕಾಲ ಬೆಳಗ್ಗೆ ಯೇಳುವದರಿಂದ ಶರೀರ ದಾರ್ಢ್ಯವು ಕಡಮೆಯಾಗಿಯುಸ್ಸು ಕಡಮೆಯಾಗುತಿದೆಂತಲೂ ಸದರೀಯವರು ನಿಶ್ಚಯಿಸಿರುತ್ತಾರೆ.

Cessasion of trade between India and Kabul.—ಈಗ ಇಂಡ್ಯಾದೇಶಕ್ಕೂ ಕಾಬೂಲಿಗೂ ಮಧ್ಯೆ ನೆಲಗೊಂಡಿರುವ ವ್ಯಾಪಾರ ಸಂಬಂಧವನ್ನು ಕುದ್ದಾಂಗ ತಪ್ಪಿಸಿ ಅಮೀರರವರ ನ್ನು ಮೌಕೂಫ ಮಾಡಬೇಕೆಂಬ ಆಲೋಚನೆಯು ಅಮೀರರವರಿಗುಂಟಾಗಿ ಅವರು ತತ್ಪ್ರಯತ್ನದೊಳಿರುವಂತ ಪೆಷಾವರ್‌ನಲ್ಲಿ ಪ್ರವಾದ ವುಂಟಾಗಿದೆ. ಕಾಬೂಲಿನಲ್ಲಿರುವ ವರ್ತಕರ ಮೂಲಕ ಪೆಷಾವರಿಗೆ ತಿಳಿಯಬಂದದ್ದೇನೆಂದರೆ:— ಆಫ್‌ಘಾನಿಸ್ತಾನ್ ರಾಜ್ಯದಿಂದ ಕುದುರೆಗಳು, ಚನ್ನ, ವಸ್ತ್ರ ವಗೈರೆ ಯಾವ ಪದಾರ್ಥಗಳನ್ನಾದರು ಯಾರಾದರು ಇಂಡ್ಯಾದೇಶಕ್ಕೆ ರಫ್ತು ಮಾಡುವರಾದರೆ ಅವರಿಗೆ ಭಾರೀ ಜುರ್ಮಾನೆಯನ್ನೂ ಕಠಿನ ದಂಡನೆಯನ್ನೂ ವಿಧಿಸುವಂತೆ ಅಮೀರರವರು ಖಡಿತವಾದ ಹುಕುಂ ಕೊಟ್ಟಿರುತ್ತಾರೆಂಬದು, ಇದರಿಂದ ಪೆಷಾವರಿನಲ್ಲಿರುವ ವರ್ತಕರೆಲ್ಲರು ಬಹಳ ದಿಲ್ಗಾಗಿರುವಂತೆ ತಿಳಿಯಬರುತಿದೆ.

Sea-voyage question.—ಸಮುದ್ರಯಾನ ವಿಚಾರವು ಈಗ ಸಕಲ ಮತಸ್ಥರಲ್ಲಿಯೂ ವಿಚಾರಾರ್ಹವಾದ ಮುಖ್ಯವಿಷಯವಾಗಿ ಯೇರ್ಪಟ್ಟದೆ. ಈ ವಿಷಯವು ವಿಚಾರಕರ ಸ್ವರೂಪ ಭಾವನಾನು ಗುಣವಾಗಿ ನಿರ್ಧರಿಸಲ್ಪಡತಕ್ಕದ್ದಾಗಿದೆ. ಈಚೆಗೆ ಮುಂಬೈಯಲ್ಲಿರುವ ಪೂರ್ವದ ಯಸ್ಸರಾದ ಜೈನ್ಯಮತಸ್ಥರೆಲ್ಲರೂ ಸಭೆ ಸೇರಿ ಇಂಗ್ಲ್ಯಾಂಡಿಗೆ ಹೋಗಿ ಬರುವ ವಿಷಯವು ಕುರಿತು ವಿಚಾರ ಮಾಡಿದರು. ಆ ಕಾಲದಲ್ಲಿ ಮಿಸ್ಟರ್ ಜನ್ಮಾದಾಸ್ ಯೆಂಬವರು ಸಭಾಧ್ಯಕ್ಷರಾಗಿ ವರಿಸಲ್ಪಟ್ಟರು. ಜೈನ್ಯರು ಅನ್ಯದೇಶಗಳಿಗೆ ಸಮುದ್ರಮಾರ್ಗವಾಗಿ ಹೋಗಕೂಡದೆಂಬ ನಿಷೇಧವೇನೂ ಜೈನ್ಯ ಮತದಲ್ಲಿಲ್ಲವೆಂದು ಪ್ರಸಂಗಿಕರು ಕೆಲವರು ಅಭಿಪ್ರಾಯಪಟ್ಟರುತ್ತಾರೆ. ಇಂಡ್ಯಾ ದೇಶೀಯರಲ್ಲಿ ಇತರ ಮತಾವಲಂಬಿಗಳಿಗಿಂತಲೂ ಜೈನ್ಯರು ಉದಾರಭಾವ ವುಳ್ಳವರಾದುದರಿಂದಲೂ ಸರ್ವ ಭೂತದಯಾಪರರಾದುದರಿಂದಲೂ ಅನ್ಯದೇಶಗಳಿಗೆ ಹೋಗುವದರೊಳು ಅವರ ಅಕ್ಷೇಪನಕ್ಕೆ ಯೇನೂ ಇರಲಾರದೆಂದು ತಾವು ಭಾವಿಸುವಂತ ಕಡೆಗೆ ಅಗ್ರಾಸನಾಧಿಪತಿಯವರು ತಿಳಸಿದರು.

Nomination to the Sikkim Guddee.—ದೇಶಭ್ರಷ್ಟರಾಗಿ ಹೋದ ಸಿಕಿಂ ಅರಸನವರಿಗೆ ಮರಳಿ ಸಿಂಹಾಸನ ಪ್ರಾಪ್ತಿ ಇಲ್ಲವು. ಸದಾರೆ ಯೆಂದಿಯಾಡಿದವರು ಸದರೀ ಅರಸರ ಪುತ್ರರ ಪೈಕಿ ಒಬ್ಬರನ್ನು ರಾಜರನ್ನಾಗಿ ಯೇರ್ಪಡಿಸಿ ಅವರು ಪ್ರಭುತ್ವಕ್ಕೆ ಅರ್ಹರಾಗುವ ತನಕ ತತ್ಪ್ರತಿನಿಧಿಯಾಗಿ ರಾಜ್ಯಭಾರ ಮಾಡಲಿಕ್ಕೆ ಒಂದು ಕೌನ್ಸಿಲನ್ನು ಯೇರ್ಪಡಿಸಬೇಕೆಂದು ಇಂಡ್ಯಾಗವರ್ನಮೆಂಟಿಗೆ ಸಿಫಾರಸ್ ಮಾಡಿದಾರೆಂದು ಕೇಳುತ್ತೇವೆ. ಇದಂ ಬಹುಶಃ ಗವರ್ನಮೆಂಟಿನವರು ಅಂಗೀಕರಿಸಬಹುದೆಂದು ತೋರುತಿದೆ ಅವರು ತಮ್ಮ ನಿರ್ಣಯವನ್ನು ತಿಳಿಯಪಡಿಸುವಷ್ಟರೊಳಗಾಗಿ ಈಗಿನ ಅರಸರ ಪಟ್ಟರಿಗುಂಟಾದ ಕಾರಣವು ಹೋಗಗುವದೆಂದು ನಂಬುತ್ತೇವೆ. ಚಪಲಾ ಭೂಟ ಮಾರ್ಗವಾಗಿ ಟಿಬೆಟ್ ಯೆಂಬ ಪ್ರದೇಶಕ್ಕೆ ಹೋಗಕೂಡದೆಂದು ಅವರು ಪ್ರತಿಷೇಧಿಸಲ್ಪಟ್ಟದ್ದಾಗ್ಯೂ ಅದಕ್ಕೆ ವ್ಯತಿರಿಕ್ತವಾಗಿ ಜೀವಿಸಿಗಿಯಂ ಕಳಿಯುವಷ್ಟೆ ಅಲ್ಲಿಗೆ ಹೋರಟುಹೋದರೆಂಬ ಪ್ರವಾದ ವುಂಟಾಗಿದೆ. ಅವರು ದೇಶಭ್ರಷ್ಟರಾಗಿ ಅನಾಮಧೇಯರಾಗಲಿಕ್ಕೆ ಇದೇ ಸಾಕಾದ ಕಾರಣವಾಗಿರುತಿದೆ.

A curious incident.—ಇದರಡಿ ತಿಳಿಸಲ್ಪಡುವ ಅದ್ಭುತವಾದ ವೃತ್ತಾಂತವು ಒಂದು ಇಂಗ್ಲಿಷುಪತ್ರಿಕೆಯಲ್ಲಿ ತಿಳಿಸಲ್ಪಟ್ಟಿರುತಿದೇನುದರೆ:— ಈಚೆಗೆ ಒಂದು ದಿನ ಒಬ್ಬ ದೊಡ್ಡ ಮನುಷ್ಯರು ಬರ್ಲಿನ್ ಯೆಂಬ ಪ್ರದೇಶಕ್ಕೆ ಸಮೀಪದಲ್ಲಿನ ಒಂದು ಭಾವಿಯ ದಡದೊಳು ನಿಂತು ನೋಡುತಲಿರುವಾಗ್ಯೆ ಸಮೀಪದಲ್ಲಿದ್ದ ಹೊಲದಲ್ಲಿ ಹೆಣ್ಣು ಕೋಳಿಯೊಂದು ಸತ್ತು ಬಿದ್ದಿದು ನೋಡಿದರು. ಕೂಡಲೇ ಯಿಲ್ಲಿಂದಲೋ ಒಂದು ಇಲಿ ಓಡಿಬಂದು ಸತ್ತು ಕೋಳಿಕು ಬಿದ್ದಿದ್ದ ಕೋಳಿಯನ್ನು ಘ್ರಾಣಿಸಿ, ನುಕೋವದೊಡನೆ ಜಾಗ್ರತೆಯಾಗಿ ಓಡಿಹೋಯಿತು. ಇವನ್ನೆಲ್ಲ ನೋಡುತಲಿದ್ದವರು ಪ್ರಕೃತಿ ತತ್ವವಿವೇಚಕರಾದುದರಿಂದ ಪರ ಭಾವವನ್ನರಿತು, ಕೂಡಲೇ ಆ ಸ್ಥಳದಿಂದ ಕೋಳಿಯ ಮುದ್ದೆಯನ್ನು ತೆಗದು ವಿಶೇಷ ಮುಂದೆ ಯೇನು ನಡೆಯುತಿದೆಯೋ ನೋಡುವ ಇವೆಂದು ಆಶ್ಚರ್ಯದೊಡನೆ ದೂರದಲ್ಲಿ ನಿಂತು

ಕೊಂಡಿದ್ದರು. ಮುಂದಿನ ಉಪಯೋಗಾರ್ಥ ಆ ಕೋಳಿಯ ಮಾಂಸವನ್ನು ಸಂಗ್ರಹಿಸಿಕೊಂಡು ಹೋಗುವ ಉದ್ದೇಶದಿಂದಲೇ ಮೊದಲು ಓಡಿ ಹೋದ ಮರಿಯ ಜೊತೆ ಬಿಡ ಇತರ ಇಲಿಗಳನ್ನು ಕರೆದುಕೊಂಡು ಬಂದು ನೋಡಲು ಅಷ್ಟು ಕೋಳಿ ಇರಲಿಲ್ಲವು. ಆಗ ಕೈ ಬರಿದಾಗಿ ಬರಲು ಬಹಳ ಆಶ್ಚರ್ಯವನ್ನುಂಟುಮಾಡುಲಾರಂಭಿಸಿತು. ಇದು ತನ್ನನ್ನು ಮೋಸಮಾಡಿ ಕರೆದುಕೊಂಡು ಬಂತೆಂದು ಇತರ ಇಲಿಗಳು ಭಾವಿಸಿ ಮುಂದೆ ಈ ರೀತಿಯಾದ ಪರಿಹಾಸವು ಸಿಕ್ಕಿದೊಡನೆ ಮಾತಕೊಡದೆ ಬೆಚ್ಚಿಸುವಂದದಿ ಅದರ ಮೇಲೆ ಇತರ ಇಲಿಗಳೆಲ್ಲವೂ ಬಿದ್ದು ಕಚ್ಚಿ ಅದು ಕೊಂದುಹಾಕಿತು. ಇದು ನಿಜವಾಗಿ ನಡೆದ ವೃತ್ತಾಂತ.

The Present condition of Hyderabad.—ನಮ್ಮೆಂದರೆಯೂ, ಗದ್ದ ಅಧಿಕಾರಿಗಳೂ, ಬಿಡಾಸೀನ್ಯವೂ, ಜನತೆಯೂ ಯಲ್ಲಿ ಹ್ರುಟಿಸಿರುವವೋ ಅಲ್ಲಿನ ಸ್ಥಿತಿ ಯಾವಾಗಲು ವಿಷಮವಸ್ಥೆಯಲ್ಲಿಯೇ ಇರುವದು. ಈಗ ನೇಟಿವ್ ಸಂಸ್ಥಾನಗಳ ಪೈಕಿ ಸಂಪತ್ಪ್ರಭವ ಗೌರವಗಳಲ್ಲಿ ಮೊದಲನೆಯದೆನಿಸಿರುವ ಹೈದರಾಬಾದ್ ಸಂಸ್ಥಾನದ ಪ್ರಸ್ತುತ ಸ್ಥಿತಿಯಂ ಕುರಿತು ಇಂಡಿಯನ್ ಡಾರಿಸ್ಪೆಂಡ ಪತ್ರಿಕೆಯು ತಿಳಿಸುತಿದೇ ನೆಂದರೆ,—"ಹೈದರಾಬಾದು ಸಂಸ್ಥಾನದ ತಾತ್ಕಾಲಿಕ ಸ್ಥಿತಿಯಂ ಪರ್ಯಾಲೋಚಿಸಿ ನೋಡಲಾಗಿ ಅದು ಇಂಗ್ಲೀಷರ ಕೀರ್ತಿ ಗೌರವಗಳಿಗೆ ಮಾಲಿನ್ಯವನ್ನುಂಟು ಮಾಡತಕ್ಕದ್ದಾಗಿಯೂ ನಾಗರಿಕ ಮಂದಿಗೆ ಅವಮಾನಕರವಾದುದಾಗಿಯೂ ಇರುತಿದೆ. ಸದರೀ ಸಂಸ್ಥಾನದಲ್ಲಿ, ನ್ಯಾಯನಿಬಂಧನೆಗಳೂ ಸರ್ವಸಮುತ್ವವೂ ಸನ್ಮಾರ್ಗವೂ, ಪ್ರಾಮಾಣಿಕತೆಯೂ ಕುದ್ದಾಂಗ ಇಲ್ಲವೆಂದು ನಾವು ನಂಬಿ ದೃಢವಾಗಿ ಹೇಳುತ್ತೇವೆ. ಅಪರಾಧಿಗಳಿಗೆ ಶಿಕ್ಷೆಯೂ ಅವಮಾನವೂ ಇಲ್ಲದೆ ಹೋಗಿರುವದರಿಂದ ತಸ್ಕರರುಗಳ ಕೈ ನೀಡಿ ದಾಗಸ್ಯ ವೃದ್ಧಿಯಾಗಿ ವ್ಯಥಪಡುತಲಿವೆ. ಅಲ್ಲಿನ ಪ್ರತಿ ಸರ್ಕಾರಿ ಇಲಾಖೆಯಲ್ಲಿಯೂ ಪ್ರತಿಗ್ರಾಮದಲ್ಲಿಯೂ ಖುಷಾಮತಿ ಲಂಚ ವ್ಯಾಪಿಸಿ ಒಪ್ಪನರ್ಥಗಳನ್ನುಂಟು ಮಾಡುತಲಿವೆ. ಯಲ್ಲಿ ನೋಡಿದರೂ ಗ್ಯಾ ಪ್ರಾಣ ಮಿತಿಯ ಕೌರ್ಯವೂ ಅಧಿಕವಾಗಿರುವದರಿಂದ ಅಲ್ಲಿನ ಪ್ರಜೆಗಳು ಅತಿರಿಕ್ತರಾಗಿಯೂ ಅನಾಹಿನರಾಗಿಯೂ ಸುಖವಿಲ್ಲದಿರುತಲಿರಬಹುದು! ನಾಗರಿಕರಿಂದ ಶ್ರೇಷ್ಠತರಾದ ನಿಜಾಮರವರ ಪ್ರಭುತ್ವ ಕ್ರಮವು ಮೇಲೆ ತಿಳಿಸಲ್ಪಟ್ಟಂತೆ ನಿಜವಾಗಿರುವ ಪಕ್ಷಕ್ಕೆ ಮಾರ್ಗದರ್ಶಕರಿಂದ ಇಂಗ್ಲೀಷಿನವರ ಕೀರ್ತಿಕ್ರಮಕ್ಕೆದು ನ್ಯೂನತೆ ಯುಂಟುಮಾಡತಕ್ಕದ್ದೆಂಬದರಲ್ಲಿ ಸಂಶಯವಿಲ್ಲವು."

LOCAL AND PROVINCIAL NEWS

ಒಳದೇಶವರ್ತಮಾನ ತಾಲ್ಲೂಕ್ ವಾರ್ತಾವೃತ್ತಾಂತಗಳು

The late Mr J D Sandford, M. A., Barrister-at Law.—ಹಿಂದೆ ಈ ಸಂಸ್ಥಾನದಲ್ಲಿ ಕೆಲವು ಸಂವತ್ಸರಗಳ ಕಾಲ ಜಾಡಿಷಿಯಲ್ ಕಮಿಷನರಾಗಿಯೂ, ಸ್ವಲ್ಪಕಾಲ ಚೀಫ್ ಜಡ್ಜಿಯವರಾಗಿಯೂ ಇದ್ದ ಬ್ಯಾರಿಸ್ಟರ್ ಮಿ|| ಜೆ. ಡಿ. ಸ್ಯಾಂಡ್‌ಫೋರ್ಡ್ ಸಾಹೇಬರವರು ಪ್ರಾಯಶಃ ಈ ದೇಶೀಯರೆಲ್ಲರ ಜ್ಞಾಪಕದಲ್ಲಿರಬಹುದಷ್ಟೆ. ಸದರೀ ದೊಡ್ಡ ಮನುಷ್ಯರು ಈಚೆಗೆ ಸ್ವದೇಶದೊಳು ಕಾಲಗತರಾದರೆಂಬ ವೃತ್ತಾಂತ ವಂ ಕೇಳುವದಕ್ಕೆ ನಮ್ಮಂತೆ ಈ ದೇಶೀಯ ಅನೇಕರು ವಿಷಾದಿಸಬಹುದು. ಇವರಿಗೆ ಮರಣಕಾಲದಲ್ಲಿ ವಯಸ್ಸು ೬೦ ವರ್ಷಗಳು.

The weather.—ಈಚೆಗೆ ಒಂದು ವಾರದ ಮೊದಲು ವರ್ಷಸೂಚನೆಗಳ್ಯಾವವೂ ಇಲ್ಲವು. ಬಿಸಿಲು ಚೆನ್ನಾಗಿಯೇ ಕಾಯುತಲಿದೆ. ಇದು ವರಿಗೆ ಬಿದ್ದ ಮೂರು ಕತನೆ ವಿಪ್ಪ ಮಳೆಯಿಂದ ಭೂಮಿಯಲ್ಲಿ ಸ್ವಲ್ಪ ತನುವುಂಟಾಗಿ ಸ್ವಲ್ಪ ಬೆಳೆಯುವದಕ್ಕೆ ಅವಕಾಶ ಉಂಟಾಯಿತು ಹೇಳಬಹುದು. ತಾಲ್ಲೂಕ್ ಜಾತಿನ ಬದ್ಧ ವರ್ಷದ ವಿಷಯದಲ್ಲಿ ಸರ್ಕಾರೀ ಗೆಜೆಟ್ ಮೂಲಕ ತಿಳಿಯಬರುವದಕ್ಕೂ ನಮ್ಮ ಬಾತಮಿದಾರರ ರಿಪೋರ್ಟುಗಳೂ ಬಹಳ ತಾರತಮ್ಯವಿದೆ. ಸರ್ಕಾರೀ ರಿಪೋರ್ಟುಗಳಲ್ಲಿ ದುರ್ಭಿಕ್ಷ ಪ್ರಯುಕ್ತವಾದ ಭೀತಿ ಪ್ರಾಯಶಃ ತಪ್ಪುವ ಬಂದಂತೆ ತಿಳಿಸಲ್ಪಡುತಲಿದ, ಬಾತಮಿದಾರರು ತಿಳಿಸುವ ಕಷ್ಟಗಳು ಅಪರಿಮಿತವಾಗಿದೆ. ಅನೇಕ ಕಾರಣಗಳಿಂದಲೂ ಬಾತಮಿದಾರರ ರಿಪೋರ್ಟುಗಳು ನಿಜವಾದವು ನಾವು ನಂಬಬೇಕಾಗಿದೆ, ಏತಕ್ಕೆಂದರೆ-ಸರ್ಕಾರೀ ರಿಪೋರ್ಟುಗಳಂ ಬರೆಯುವಂತ ಉದ್ಯೋಗಸ್ಥರು ನಾವು ಕೇಳಿದ ಕಾಲವಲ್ಲಿ, ದುರ್ಭಿಕ್ಷದ ಸ್ಥಿತಿಯಂ ಯಥಾವತ್ತಾಗಿ ತಿಳಿಸಿದರೆ ಜನಗಳಿಗೆ ಜೀಕೆಂದು ಭೀತಿಯನ್ನುಂಟುಮಾಡಿದಂತೆ ಆಗುವದಲ್ಲದೆ, ಕಂದಾಯ ಬಾಕಿಗಳು ವಸೂಲಾಗುವದಕ್ಕೆ ಬಹಳ ಅಡಚಣೆಯುಂಟಾಗುವದು, ದುರ್ನೀತಿ ತಿಳಿಸಕೂಡದೆಂದು ಮೇಲ್ಪಟ್ಟ ಅಧಿಕಾರಿಗಳಿಂದ ಖಚಿತವಾದ ಹುಕುಂ ಬಂದಿದೆ ದನ್ಯತ್ರಾತಿ ಆದುದರಿಂದ ಬಾತಮಿದಾರರ ಲೇಖನಗಳ ಗೌರವವಹಿಸಬೇಕಾಗಿದೆ. ಆಹಾರ ಪದಾರ್ಥಗಳ ದಾರಣೆಗಳು ಹಿಂದಿನ ವಾರದಲ್ಲಿ ತಿಳಿಸಿದಂತೆಯೇ ಇವೆ. ಈ ಪ್ರಾಂತ್ಯಗಳು ಈಚೆಗೆ ಕೆಲವು ದಿನಗಳ ಮೊದಲು ವಾಂತಿ ಭೇದಿ ರೋಗ ಅಲ್ಲಿಯಲ್ಲಿ ವ್ಯಾಪಿಸಿ, ದಿನ ಒಂದಕ್ಕೆ ನ ಲ್ಕಾರು ಮಂದಿ ಪ್ರಾಣಗಳಂ ಹೋಗಮಾಡಿಸಿಕೊಳ್ಳುತಲಿದಾರೆ. ಈ ರೋಗವು ವಿಶೇಷವಾಗಿ ಸ ರ್ಕಾರ ನೇಟಿವರಲ್ಲೂ ಕಸ್ಬಾ ಜನಮಿಸ್ಸಿವಾದ ಬಡ್ಡಿಗಾರರ ಮತ್ತು ಮುಸಲ್ಮಾನ ಕೇರಿಗಳಲ್ಲಿ ವ್ಯಾಪಿಸಿರುವಂತೆ ಕಾಣುತಿದೆ.

Prizes.—ಮೈಸೂರು ದೇವರಾಜ ಬಹದ್ದೂರವರ ದಕ್ಷಿಣ ವಿಚಾರಣಾಧಿಕಾರಿಗಳು ಇದರಡಿ ತಿಳಿಸಲ್ಪಡುವ ಬಹುಮಾನಗಳಂ ಕೊಡುವಂತೆ ನಿಷ್ಕರ್ಷಿಸಿರುತ್ತಾರೆ:—

೧. ಬಾಲರಿಗಾಗಿ ಮೈಡಾನೆವೆ ಎಂಬವರು ರಚಿಸಿರುವ ಪ್ರೊಲಿಟಿಕಲ್ ಎಕಾನೆ ಮಿ ಎಂಬ ಗ್ರಂಥವನ್ನು ಒಳ್ಳೇ ಕನ್ನಡ ಭಾಷೆಯಲ್ಲಿ ತರ್ಜುಮೆ ಮಾಡಿಕೊಟ್ಟವರಿಗೆ ೫೦೧ ರೂಪಾಯಿಗಳು. ಈ ಕಾರ್ಯಕ್ಕೆ ಸ್ಪರ್ಧಿ ಮಾಡಲು ಇಷ್ಟಪಡುವವರು ೯೩ ನೇ ಇಸವಿ ಮಾರ್ಚಿ ೩೧ ನೇ ತಾರೀಖಿನೊಳಗಾಗಿ ತಾವು ಮಾಡುವ ತರ್ಜುಮೆಯನ್ನು ಸದರೀ ಕಮಿಟಿಯ ಸೆಕ್ರೆಟರಿ ಯವರಿಗೆ ಕಳುಹಿಸಬೇಕು.

೨. ಕನ್ನಡವನ್ನು ಪ್ರಥಮ ಭಾಷೆಯನ್ನಾಗಿ ತೆಗೆದುಕೊಂಡು ದಿ ಕಥ ಪ್ರಕಲ್ಲಿ ಎಂ ಎ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾಗುವಂತ ಮೈಸೂರು ದೇಶೀಯ ನಾವ ಗ್ರಾಜ್ಯುಯೇಟಿಗೆ ೨೦೦ ರೂಪಾಯಿಗಳು.

೩. ಸಂಸ್ಕೃತವನ್ನು ದ್ವಿತೀಯಭಾಷೆಯಾಗಿ ತೆಗೆದುಕೊಂಡು, ಸೆಪ್ಟೆಂಬರ್ ೯೨ ನೇ ಇಸವಿ ಏಪ್ರಿಲ್ ತಿಂಗಳೊಳಗಾಗಿ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಂ ಕೊಟ್ಟು ಮೊದಲನೆಯವಳಾಗಿ ತೇರ್ಗಡೆಯಾಗುವ ಮೈಸೂರು ದೇಶೀಯಳಾದ ಉತ್ತಮಜಾತಿ ಹೆಂಗಸಿಗೆ ೫೦೦ ರೂಪಾಯಿಗಳು

೪. ಕನ್ನಡವನ್ನು ದ್ವಿತೀಯಭಾಷೆಯಾಗಿ ತೆಗೆದುಕೊಂಡು ಸೆಪ್ಟೆಂಬರ್ ೯೨ ನೇ ಇಸವಿ ಏಪ್ರಿಲ್ ತಿಂಗಳೊಳಗಾಗಿ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಂ ಕೊಟ್ಟು ಮೊದಲನೆಯವಳಾಗಿ ತೇರ್ಗಡೆಯಾಗುವ ಮೈಸೂರು ದೇಶೀಯಳಾದ ಉತ್ತಮಜಾತಿ ಹೆಂಗಸಿಗೆ ೧೦೦ ರೂಪಾಯಿಗಳು

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ಛಾಮರಾಜೇಂದ್ರ ಒಡೆಯರವರ ಸರ್ಕಾರದಿಂದ ಕೊಡಲ್ಪಡುವ ಪ್ರಕಟನ ನಿಬಂಧನೆಗಳು.

ಲೆಜಿಸ್ಲೇಟಿವ್ ಶಾಖೆ

ಇದರ ಕೆಳಗೆ ರಗ್ಯುಲೇಷನ್ ಸಂ ೧೮೯೨ ನೇ ಇಸವಿ ಮೇ ಮಾಹೆ ೨೪ ನೇ ತಾರೀಖಿನಲ್ಲಿ ದಿವಾನ್ ಮೆಮ ಶ್ರೀ [illegible] ಮಹಾರಾಜ [illegible] ಬಹದ್ದೂರವರ ಮಂಜೂರಾತಿಯನ್ನು ಪಡೆದು ಸಕಲ ಜನರಿಗೆ ತಿಳುವಳಿಕೆಯಾಗುವ ಹಾಗೆ ಇದರಿಂದ ಪ್ರಕಟಿಸಲ್ಪಟ್ಟಿರುತ್ತೆ.

REGULATION NO II of 1892

೧೮೯೨ ನೇ ಇಸವಿ ೨ ನೇ ನಂಬರು ರಗ್ಯುಲೇಷನ್.

ವ್ಯಾಖ್ಯಾನವೂ ತತ್ಸಂಬಂಧವಾದ ಮನುಷ್ಯನಿಗೆ [illegible] ಲಾಟರಿ [illegible] ದೊಡ್ಡ ದ್ರವ್ಯವನ್ನು [illegible] ಬಹುಮಾನವಾಗಿ [illegible]

ಯಾವನು ತನ್ನ ಅಕ್ರಮಕೃತ್ಯದಿಂದ ಯಾ ಅಪ್ರಯೋಗದ ಯಾ ಕೊಡುವ ಮತ್ತೊಬ್ಬನನ್ನು [illegible] ಯಾ ಅಥವಾ [illegible] ಮಾಡಿದಾಗ್ಯೂ [illegible]

[illegible] ಪ್ರಯೋಗಕ್ಕಾಗಿ ಮನುಷ್ಯರಿಗೆ ಗಂಡಾಂತರವಿದ್ದು [illegible] ಪ್ರಕಾರ ನ್ಯಾಯವಾಗಿ ವ ಯುಕ್ತವಾಗಿ [illegible] ಶ್ರೀಮನ್ ಮಹಾರಾಜರವರು ಸಂತೋಷದಿಂದ [illegible] ಇದರಡಿ ಕಂಡಂತೆ ನಿಯಮಿಸುತ್ತಾರೆ.

೧. ಅಕ್ರಮವಾದ ಯಾ ಅಪ್ರಯೋಗದ ಯಾ ಕೊಡುವ ದಿಂದ ಯಾತ ಮನುಷ್ಯನಿಗಾದರೂ ಮರಣ ಪ್ರಾಪ್ತವಾಗಿ [illegible] ಗತಿಯಲ್ಲಿ ಸದರೀ ಕೃತ್ಯ ಯಾ ಅಪ್ರಯೋಗ ಯಾ ಲೋಪ (ಮರಣ ಪ್ರಾಪ್ತವಾಗದೆ ಇದ್ದಲ್ಲಿ) ಸಂಕಟಪಟ್ಟ ಮನುಷ್ಯನಿಗೆ ಅದರ ಕುರಿತು ವ್ಯವಹಾರ ಮಾಡಿ

ವ್ಯಾಖ್ಯಾನವಾದ ತತ್ಸಂಬಂಧದಿಂದ ಪ್ರತಿಪಟ್ಟವನ ಕುಟುಂಬಕ್ಕೆ ಉಂಟಾದ ಲುಕ್ಸಾನಿನ ಪರಿಹಾರ ದ್ರವ್ಯದ ವ್ಯವಹಾರ.

ಲುಕ್ಸಾನುಗಳನ್ನು ವಸೂಲುಮಾಡಿಕೊಳ್ಳುವದಕ್ಕೆ ಹಕ್ಕು ವುಂಟು ಮಾಡಿ ಇರತಕ್ಕದ್ದಾಗಿ ಇದ್ದರೆ ಯಾವನು ಮರಣ ವುಂಟಾಗದೇ ಇದ್ದಲ್ಲಿ ವ್ಯವಹಾರಕ್ಕೆ ಗುರಿಯಾಗಿ ಇರುವನೋ ಆ ಮನುಷ್ಯನು ಸಂಕಟಪಟ್ಟವನು ಮೃತನಾಗಿ ಇದ್ದಾಗ್ಯೂ ಮತ್ತು ಹಾಗೆ ಮೃತನಾದದ್ದು ನ್ಯಾಯದಲ್ಲಿ [illegible] ಯಾ ಇತರ [illegible] ಅಗತ್ಯ ಸಂಗತಿಯಾಗಿ ಇದ್ದಾಗ್ಯೂ ಲುಕ್ಸಾನುಗಳ ಬಗ್ಗೆ ವ್ಯವಹಾರಕ್ಕೆ ಯಾ ದಾವೆಗೆ ಗುರಿಯಾಗತಕ್ಕದ್ದು ಮತ್ತು ಇದರಿಂದ ನಿರ್ಣಯಿಸುವದೇನಂದರೆ—ಯಾರ ಹೀಗೆ ಮರಣ ಪ್ರಾಪ್ತವಾಯಿತೋ ಆ ಮನುಷ್ಯನ ಹೆಂಡತಿ ಗಂಡ ತಾಯಿ ತಂದೆ ಮಗು ಯಾರಾದರೂ ಇದ್ದರೆ ಅವರ ಪ್ರಯೋಜನಕ್ಕಾಗಿ ಅಂಥಾ ಪ್ರತಿ ವ್ಯವಹಾರವನ್ನು ಯಾ ದಾವೆಯನ್ನು ಮಾಡತಕ್ಕದ್ದು ಮತ್ತು ಅದನ್ನು ಮೃತಪಟ್ಟ ಮನುಷ್ಯನ * ಎಗ್ಸಿಕ್ಯೂಟರು ಯಾ † ಅಡ್ಮಿನಿಸ್ಟ್ರೇಟರು ಯಾ * ರೆಪ್ರೆಸೆಂಟೆಟಿವ್ ತನ್ನ ಹೆಸರಿನಲ್ಲಿ ತರತಕ್ಕದ್ದು ಮತ್ತು ಅಂಥಾ ಪ್ರತಿ ವ್ಯವಹಾರದಲ್ಲೂ ಯಾರಿಗೋಸ್ಕರ ವ್ಯವಹಾರ ತಂದಿರುವದೋ ಆ ಪಕ್ಷಗಾರರಿಗೆ [illegible] ಮರಣದಿಂದ ಉಂಟಾದ ಲುಕ್ಸಾನಿಗೆ ಸಮವಾದಂತ ಕೋರ್ಟಿನವರಿಗೆ ತೋರುವಷ್ಟು ಲುಕ್ಸಾನುಗಳನ್ನು ಕೋರ್ಟಿನವರು ಕೊಡಿಸಬಹುದು. ಮತ್ತು ಹಾಗೆ ಖರ್ಚಾಗುವ ಮೊಬಲಗಿನಲ್ಲಿ ಪ್ರತಿವಾದಿಯ ಕಡೆಯಿಂದ ವಸೂಲಾಗದೇ ಇರುವ [illegible] ಖರ್ಚುಗಳನ್ನು ಕಳೆದು ಉಳಿದ [illegible] ಕೋರ್ಟಿನವರು ತಮ್ಮ ತೀರ್ಪಿನ ಮೂಲಕವಾಗಿ ಯಾ ಕ್ರಮವಾಗಿ ಆಜ್ಞಾಪಿಸುವಷ್ಟು ಭಾಗಗಳಾಗಿ ಅವರಲ್ಲಿ ಹಂಚಿಕೊಡತಕ್ಕದ್ದು.

೨. ಪರಂತು ಹಿಂದಿನ ಸಂಗತಿಯಲ್ಲೇ ಕಾಣು ಯಾ ಅದೇ ವಿಷಯದಲ್ಲಿ ಒಂದು ವ್ಯವಹಾರಕ್ಕಿಂತ ಹೆಚ್ಚು ದಾವೆಗಿಂತ ಹೆಚ್ಚು ವ್ಯವಹಾರ ಯಾ ದಾವೆಯನ್ನು ತರಕೂಡದು. ಒಂದು ದಾವೆಗಿಂತ ಹೆಚ್ಚು ದಾವೆ ತರಕೂಡದು. ಸ್ಥಿತಿಗೆ ಬಂದ ನಷ್ಟಕ್ಕೆ ಪರಿಹಾರವಾಗಿ [illegible] ಪರಂತು ಅಂಥಾ ಯಾವ ವ್ಯವಹಾರವೂ ಯಾ ದಾವೆಯಲ್ಲೂ ಮೃತಪಟ್ಟವನ ಎಗ್ಸಿಕ್ಯೂಟರು ಆಗಲಿ ಅಡ್ಮಿನಿಸ್ಟ್ರೇಟರು ಆಗಲಿ ರೆಪ್ರೆಸೆಂಟೆಟಿವ್ ಆಗಲಿ ಸದರೀ ಮೃತನ ಸ್ಥಿತಿಗೆ ಅಂಥಾ ತಪ್ಪು ಕೃತ್ಯದಿಂದ ಯಾ ಅಕ್ರಮದಿಂದ ಯಾ ಲೋಪದಿಂದ ವುಂಟಾದ ಧನರೂಪವಾದ ಯಾವ ನಷ್ಟಕ್ಕಾದರೂ [illegible] ಅದನ್ನು ಬಿಡಬಹುದು. ಹಾಗೆ ವಸೂಲಾದ ಹಣವು ಮೃತಪಟ್ಟವನ ಸ್ಥಿತಿಯ ಸೊತ್ತುಗಳಿಗೆ ಸೇರಿದ್ದಾಗಿ ಭಾವಿಸತಕ್ಕದ್ದು.

೩. ಅಂಥಾ ಯಾವ ವ್ಯವಹಾರವೂ ಯಾ ದಾವೆಯೂ ಯಾರ ನಿಮಿತ್ತ ಯಾ ತರಫಿನಲ್ಲಿ ತರಲ್ಪಡುವದೋ ಅಂಥಾ ವ್ಯವಹಾರವನ್ನು ಯಾ ದಾವೆಯನ್ನು ತರುವವರು ಪ್ರತಿವಾದಿಗೆ ತಿಳಿಸಬೇಕು. ತರುವಾಯ ಆ ಮನುಷ್ಯನ ಯಾ ಮನುಷ್ಯರ ಹೆಸರು ತಿಳಿಸುವದಲ್ಲದೆ ಮತ್ತು ಯಾವರ ವಿಷಯದಲ್ಲಿ ನಷ್ಟಗಳನ್ನು ಒದಗಿಸುವದಕ್ಕೆ ಮುನ್ನಿರೋಧಿಸಿದರೋ ಆ ದಾವೆಯ ಸ್ವಭಾವದ ಪೂರಾ ತಪ್ಸೀಲು ಸಮೇತವಾಗಿ ಒದಗಿಸತಕ್ಕದ್ದು.

೪. ಈ ಕೆಳಗಿನ ಶಬ್ದಗಳೂ, ಶಬ್ದಗಳೂ, ಇದರಿಂದ ಅವಕ್ಕೆ ಕೊಡಲ್ಪಟ್ಟಿರುವ ಅರ್ಥಗಳನ್ನು ಒಪ್ಪಿಗೆಯ ಪ್ರಯೋಗವ ಅರ್ಥವಿವರಣೆ ಸಂದರ್ಭದಿಂದ ಯಾ ಸ್ವಭಾವದ ಅನ್ಯಥಾ ಆವೇಶ ಇರುವದಲ್ಲಿಗೆ ವ್ಯಕ್ತವಾಗಿ [illegible]

* ಎಗ್ಸಿಕ್ಯೂಟರ್ ಅಂದರೆ—ಒಂದು ಮನುಷ್ಯನು ತನ್ನ ಸ್ಥಿತಿಯ ಆಡಳಿತಕ್ಕೆ ವೀಲ್ ಮೂಲಕ ನೇಮಿಸಿದ ಮನುಷ್ಯನು.

† ಅಡ್ಮಿನಿಸ್ಟ್ರೇಟರ್ ಅಂದರೆ—ಅಂಥಾ ನೇಮಕವಿಲ್ಲದೆ ಮೃತಪಟ್ಟ ಮನುಷ್ಯನ ಸೊತ್ತನ್ನು ನ್ಯಾಯ ಪ್ರಕಾರ ಆಡಳಿತಕ್ಕೆ ತೆಗೆದುಕೊಂಡಿರುವವನು.

* ರೆಪ್ರೆಸೆಂಟೆಟಿವ್ ಅಂದರೆ—ಸ್ಥಿತಿಗೆ ಬಾಧ್ಯಸ್ಥನಾಗಿ ಕೆಲಸ ನಡಿಸತಕ್ಕವನು

ಇರತಕ್ಕದ್ದು. ಅವನ ಪಿತರ ಯೋಗಕ್ಷೇಮಾಧಾರ ಮಾತುಗಳು ಮನುಷ್ಯರ ಯಾವ ಅರ್ಥಗಳ ಬಹುವಚನ ಸಹ ಉಪಯೋಗಿಸುವದ ಗ್ರಹಿಸಬೇಕಾದದ್ದು. ಪುಲ್ಲಿಂಗಾರ್ಥದ ಮಾತುಗಳು ಸ್ತ್ರೀಲಿಂಗ ವಾಗಳಿಗೆ ಸಹ ಪ್ರಯೋಗಿಸುವದಾಗಿ ಭಾವಿಸತಕ್ಕದ್ದು. "ಮನುಷ್ಯನು" ಎಂಬ ಮಾತು ರಾಜತಂತ್ರದ ಮತ್ತು ಪ್ರತ್ಯೇಕ ಬಾಬತು ಜನಗಳಿಗೆ ಸಹ ಪ್ರಯೋಗಿಸತಕ್ಕದ್ದು. "ತಂದೆಯು" ಎಂಬ ಮಾತು ತಂದೆಯನ್ನೂ, ತಾತನನ್ನೂ, ಅಜ್ಜನನ್ನೂ ಒಳ್ಗೊಂಡಿರತಕ್ಕದ್ದು. ಮತ್ತು "ಮಗು" ಎಂಬ ಮಾತು ಮಗನನ್ನೂ, ಮಗಳನ್ನೂ, ಮೊಮ್ಮಗನನ್ನೂ, ಮೊಮ್ಮಗಳನ್ನೂ, ಮಲ್ಮಕ್ಕಳ ಮಗನನ್ನೂ, ಮಲ್ಮಕ್ಕಳ ಮಗಳನ್ನೂ ಒಳಗೊಂಡು ಇರತಕ್ಕದ್ದು.

ಕೆ. ಶೇಷಾದ್ರಿ ಅಯ್ಯರ್,
ಮೈಸೂರು ಸಂಸ್ಥಾನದ ದಿವಾನ್.

A CATECHISM OF THE ARYA DHARMA OF GOUTAMA BUDHA

ಗೌತಮ ಬುದ್ಧಪ್ರೋಕ್ತವಾದ ಆರ್ಯಧರ್ಮ ಪ್ರಶ್ನೋತ್ತರಾವಳಿ.

(ಕಳೆದವಾರದ ಶೇಷ)

ಪ್ರ.—ನಿರ್ವಾಣವೆಂದರೇನು?

ಉ.—ವಿನಿಮಯಗಳಿಗೆ ಅತ್ಯಂತಿಕ ಅನವಕಾಶವಾದುದಾಗಿಯೂ, ಸಂಪೂರ್ಣ ವಿರಕ್ತಿಯುಳ್ಳದ್ದಾಗಿಯೂ, ಆಶಾಪಾಶರಹಿತವೂ ಅವಿಚ್ಛಿನ್ನತೆಯಾದುದಾಗಿಯೂ, ಪಾಂಚಭೌತಿಕವಾದ ಮಾನವಜನ್ಮ ನಿಮಿತ್ತಕ ವಸ್ತುವಿನಾಶಕವಾದುದಾಗಿಯೂ ಇರುವ ಒಂದು ಸ್ಥಿತಿವಿಶೇಷ ವೆಂದರಿಯುವ್ರದು. ಮರಣರಹಿತವಾದ ಮತ್ತು ಅನಂತರ ವಿಕಸಿತ ದಿವ್ಯಜ್ಞಾನದಿಂ ಗ್ರಹಿಸಬಹುದಾದ ಅನಿರ್ವಚನೀಯ ದಿವ್ಯಪದವೆಂದು ತಿಳಿಯತಕ್ಕದ್ದು. ನಿರ್ವಾಣಪದವನ್ನೈದುವದಕ್ಕೆ ಪೂರ್ವದೊಳು ಮನುಷ್ಯನು ಅನಾದ್ಯವಿಚ್ಛಿನ್ನ ಅನಿರ್ವಚನೀಯ ನಿತ್ಯಪ್ರವಾಹ ರೂಪವಾದ ಜನ್ಮಪರಂಪರೆಯಂ ಪಡೆಯುತಲಿರುತ್ತಾನೆ. ಏಕೆಂದರೆ,—ಭೌತಿಕ ಶರೀರದಲ್ಲಿ ಪುನರ್ಜನ್ಮ ನಿಮಿತ್ತಕಗಳಾದ ಮುಖ್ಯ ವೇದನಾದಿಗಳನ್ನಾಗಿರಿಸಿಕೊಂಡಿರುವದರಿಂದ ಅವು ಅನೇಕ ಜನ್ಮಗಳನ್ನುಂಟುಮಾಡುತಲಿವೆ.

ಪ್ರ.—ಪುನರ್ಜನ್ಮಕಾರಕವಾದುದು ಯಾವದು?

ಉ.—ಪಂಚಭೂತಾತ್ಮಕವಾದ ಪ್ರಪಂಚದಲ್ಲಿ ತನ್ನ ಜೀವನೋಪಯೋಗಿಗಳಾದ ವಿಷಯಗಳೊಳುಂಟಾಗುವ ಅಸಂತೃಪ್ತಿರೂಪವಾದ ತೃಷ್ಣೆಯೇ ಇದಕ್ಕೆ ಬೀಜವು. ಶರೀರ ಧಾರಣೆಯ ವಿಷಯದಲ್ಲುಂಟಾಗುವ ಅನಿವಾರ್ಯವಾದ ಆಶೆಯು, ಸ್ವತಃ ಬಲಿಷ್ಠವಾದುದರಿಂ ಅದು ಚೇತನನಂ ಐಹಿಕವಾದ ಜೀವನದಲ್ಲಿ ಹಿಂದಕ್ಕೆ ಸೆಳೆಯದಿರುವದಿಲ್ಲವು.

ಪ್ರ.—ಅತೃಪ್ತಿರೂಪವಾದ ತೃಷ್ಣಾಸ್ವಭಾವದಿಂದ ನಮ್ಮ ಪುನರ್ಜನ್ಮಗಳಿಗೇನಾದರು ಬಾಧಕವುಂಟಾಗುತಿದೆಯೆ?

ಉ.—ಅಹುದು, ಅದರಿಂದ ಮಾತ್ರವಲ್ಲದೆ ನಮ್ಮ ಏಕವ್ಯಕ್ತಿಕವಾದ ಗುಣಾಗುಣಗಳಿಂದಲು ಸಹ ಜನ್ಮಪರಂಪರೆಗೆ ವಿರೋಧ ವುಂಟಾಗುತಿದೆ.

ಪ್ರ.—ನಮ್ಮ ಪುನರ್ಜನ್ಮದಲ್ಲುಂಟಾಗತಕ್ಕ ಸ್ಥಿತಿರೂಪಗಳನ್ನು ನಮ್ಮ ಗುಣದೋಷಗಳು ಪರಿಷ್ಕರಿಸಿ ಸ್ವಶಕ್ತಿಯಂ ನೆಲಗೊಳಿಸುವಷ್ಟರ ಬಲಿಷ್ಠವಾದವೆ?

ಉ.—ನಮ್ಮ ಗುಣದೋಷಗಳು ಬಹಳ ಮಟ್ಟಿಗೆ ಅದಂ ಪರಿಷ್ಕರಿಸುತಿವೆ. ನಮ್ಮಲ್ಲಿ ಗುಣಾಧಿಕ್ಯವುಂಟಾದೊಡೆ ನಾವು ಮುಂದಿನ ಜನ್ಮದಲ್ಲಿ ಉತ್ತಮವಾದ ಸ್ಥಿತಿಯೊಳು ಸುಖದಿಂ ಜನಿಸಬಹುದು. ದೋಷಾಧಿಕ್ಯವಾಗಿದ್ದರೆ ತದನುಗುಣವಾಗಿ ಮುಂದಿನ ಜನ್ಮವು ದುಷ್ಟವಾದುದಾಗಿಯೂ ದುಃಖಪೂರಿತವಾದುದಾಗಿಯೂ ಇರುವ್ರದು.

ಪ್ರ.—ಈ ಸಿದ್ಧಾಂತವು, ಆಧುನಿಕ ವಸ್ತುವಿವೇಚಕ ಶಾಸ್ತ್ರಜ್ಞರಿಂದ ಘೋಷಿಸಲ್ಪಟ್ಟದೆಯೇ, ಅಥವಾ ನಿರಾಕರಿಸಲ್ಪಟ್ಟದೆಯೋ?

ಉ.—ಈ ಸಿದ್ಧಾಂತವು ಕಾರ್ಯಕಾರಣರೂಪವಾದುದಾಗಿರುವದರಿಂದ ಅದು ಭೌತಿಕಶಾಸ್ತ್ರ

REEL NO

1

FLASHNO-
I

ನುಸಾರವಾಗಿರುತಿದೆ. ಬೌತಿಕ ಶಾಸ್ತ್ರ ಸಿದ್ಧಾಂತರೀತ್ಯಾ ಮನುಷ್ಯರೊಳಗಿನ ಅಸಂಪೂರ್ಣವಾದ ಕನಿಷ್ಠದಶೆಯಿಂದ ಪೂರ್ಣವಾದ ಉತ್ಕೃಷ್ಟದಶೆಗೆ ಪುರೋಭಿವೃದ್ಧಿಯನ್ನೈದುವವರಿಂದುಂಟಾಗುವ ಬಿಟ್ಟು ಫಲರೂಪವಾದುದಾಗಿರುತಿದೆ.

ಪ್ರ.—ಭೌತಿಕಶಾಸ್ತ್ರರೀತ್ಯಾ ಈ ಸಿದ್ಧಾಂತಕ್ಕೆ ಹೆಸರೇನು ?

ಉ.—ನಿರವಯವವಾದ ಜೀವಪರಮಾಣುವಿನ ಅವಿಚ್ಛಿನ್ನವಿಕಾಸವಾದವೆಂದು ಹೇಳಬಹುದು.

ಪ್ರ.—ಬುದ್ಧನು ತನ್ನ ಸಿದ್ಧಾಂತವನ್ನೆಲ್ಲ ಒಂದು ಸೂತ್ರದಲ್ಲಿ ಸಂಗ್ರಹಿಸಿ ಯೇನಾದರು ತಿಳಿಸಿದಾನೆಯೋ ?

ಉ.—ಹೇಳಿದಾನೆ.

ಪ್ರ.—ಅದು ತಿಳಿಸಿರಿ, ಕೇಳುವಣ ?

ಉ.—ಸರ್ವಪಾಪಸ್ಯಾಪಕರಣಂ ಕುಶಲಸ್ಯೋಪಸಂಪದಿ, ಸಚಿತ್ತಪರ್ಯೋದಪನಂಪಿತದ್ಬುದ್ಧಾನುಶಾಸನಂ||

ಪ್ರ.—ಇವರ ಅರ್ಥವಂ ಸಂಗ್ರಹಿಸಿ ತಿಳಿಸಿರಿ ?

ಉ.—ದೋಷರಹಿತನಾಗಿ ಸದ್ಗುಣಗಳಂ ಪಡೆದು ಹೃದಯಶುದ್ಧಿಯೊಡನೆ ವೃದ್ಧಿಯನ್ನೈದಬೇಕೆಂಬುದೇ ಬುದ್ಧಾನುಶಾಸನವಾಗಿರುತಿದೆ

ಪ್ರ.—ಈ ಅನುಶಾಸನಗಳಿಂದ ಬೌದ್ಧಮತವು ಕರ್ಮಮತವೆಂದೇರ್ಪಡುತಿದೆಯೋ ಅಥವಾ ನಿಷ್ಕರ್ಮಮತವೆಂದೇರ್ಪಡುತಿದೆಯೋ ?

ಉ.—ಪಾಪರಹಿತನಾಗುವವು ನಿಷ್ಕರ್ಮವೆಂದು ನುಡಿಯಬಹುದು. ಪರಂತು, ಸದ್ಗುಣಗಳಂಪಡೆದು ಹೃದಯಶುದ್ಧಿಯುಳ್ಳನಾಗುವುದು ಸಂಪೂರ್ಣ ಕ್ರಿಯಾರೂಪವಾದ ಗುಣಗಳಾಗಿರುತಿವೆ. ನಾವು ದೋಷರಹಿತರಾಗಿರಬೇಕಾದುದುಮಾತ್ರವಲ್ಲದೆ ನಿಜವಾಗಿ ಸಾಧುಗಳಾಗಿರಬೇಕೆಂದು ಸಹ ಬುದ್ಧನು ತಿಳಿಸಿರುತ್ತಾನೆ.

ಪ್ರ.—ಬೌದ್ಧರು ಅನುಸರಿಸತಕ್ಕ ತ್ರಿಸರಣಂದರೆ ಮಾರ್ಗತ್ರಯವೆಂಬದು ಯಾವದು ?

ಉ.—ಬುದ್ಧಂಸರಣಂಗಚ್ಛಾಮಿ ಅಂದರೆ,—ಬುದ್ಧನನ್ನನುವರ್ತಿಸುವೆನು, ಆತನ ಧರ್ಮವನ್ನೇ ಕೊಂಡಾಡುವೆನು, ಆತನ ಸಿದ್ಧಾಂತವನ್ನೇ ಪರಿಗ್ರಹಿಸುವೆನು ಎಂಬ ತ್ರಿಸರಣಾನುಷ್ಠಾನದಿಂದ ಭಗವಂತನಾದ ಬುದ್ಧನನ್ನು ಗುರುವನ್ನಾಗಿಯೂ, ಸನ್ಮಾರ್ಗದರ್ಶಕನನ್ನಾಗಿಯೂ, ಆತನ ಸಿದ್ಧಾಂತವನ್ನು ಮುಖ್ಯಾಂಶ ಮತ್ತು ಶಾಶ್ವತವಾದ ಸತ್ಯಧರ್ಮಗಳಿಗೆ ಸಾರಭೂತವಾದದನ್ನಾಗಿಯೂ, ಶಾಶ್ವತ ಪದದರ್ಶಕವಾದದನ್ನಾಗಿಯೂ, ಬುದ್ಧೋಪದಿಷ್ಟವಾದ ತತ್ವೋಪದೇಶಕ್ಕೆ ಗುರುಸಮುದಾಯರೂಪವಾದದ್ದನ್ನಾಗಿಯೂ ಭಾವಿಸಲಿಕ್ಕೆ ಕಾರಣವಾಗುವದು. (ಸಶೇಷ)

SUMMARY OF NEWS
ವೃತ್ತಾಂತ ಸಂಗ್ರಹವು.

ಧಾರ ಸಂಸ್ಥಾನದ ಮಹಾರಾಜರವರು ಜಪ್ಪವಾಯು ರೋಗದಿಂ ಅಸ್ವಸ್ಥಸ್ಥಿತಿಯಲ್ಲಿದಾರೆ.

ಕಳೆದ ದಿನಗಳ ಕಸು ಪೀಗವಲ್ಲ ಕ್ರೀನಗರದೊಳು ಬಿರುಸಾದ ಭೂಕಂಪ ಪುಟ್ಟಿಯಿತು

ಸಿಕಂದರಾಬಾದಿನಲ್ಲಿ ೯ ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಹೊಸದಾಗಿ ರೈಲ್ವೆ ಸಾಮಾನು ತಯಾರು ಕಾರ್ಖಾನೆಯೊಂದು ಕಟ್ಟಲ್ಪಡುವುದು.

ಕಲಿಕತ್ತೆಯ ಟ್ರಾಂವೆ (ಬೀದಿಗಳ ರೈಲು) ಕಂಪೆನಿಯವರ ಕುದುರೆಗಳು ಬಿಸಲಿನ ವೇಗವಂ ತಡಿಯಲಾರದೆ ಅನೇಕವಾಗಿ ಮೃತಪಟ್ಟವು.

ಕಚ್ ಬೆಹಾರ್ ಸಂಸ್ಥಾನದ ಮಹಾರಾಣಿಯವರು ಸಿಲೋನ ದ್ವೀಪಕ್ಕೆ ಬಿಜಯಂಗೈದು ನೊದಲು ಅವರಿಗೆ ಬಹಳ ಆರೋಗ್ಯ ದೊರೆಯಿತು

ಕಾಬೂಲಿನಲ್ಲಿ ಪಾಂಡಿತ್ಯಪು ರೋಗದ ವ್ಯಾಪಕತೆ ಬಹಳ ಸುಟ್ಟಗೆ ತಗ್ಗಿದೆ ಈ ರೋಗದ ಬಡಿಯುವ ಬೂದು ಬಿಟ್ಟು ಹಿಡಿ ಜೋಲಿಸ್ಕೆ ಅಂಗಡಿಯವರು ಮೊದಲಿನಂತೆ ವಾಪಸು ಬರುತಲಿದಾರೆ.

ಅಲ್ವಾರ ಸಂಸ್ಥಾನದ ದಿವಾನರು ಮೆರ್ ಮಾಡಿದ್ದಬೇಕು ವಿಷಯದಲ್ಲಿ ಯಾರೂ ಏನ್ನಾಗು ಮಾಡಬಹುದಿಲ್ಲ, ಪರಂತು ಸದರಿ ಮೊಕದ್ದಮೆಯ ಪತ್ತಿಯ ವಿಷಯದಲ್ಲಿ ಖಂಡಿತವಾದ ಪ್ರಯತ್ನಗಳು ನಡೆಯುತಲಿದೆ.

ಲಾಹೋರ ಪ್ರಾಂತದಲ್ಲಿ ಬಹು ಹಿಂದೂಧರ್ಮೀಯರು ತಮ್ಮ ನಾಲಿಗೆಯನ್ನು ಕುಯಿದುಕೊಳ್ಳಲು ಅದು ಪರಿಕ್ರ ಪ್ರಾಯಿಯಿತು ಈ ಅಪ್ರಾಕೃತವಾದ ಕಾರ್ಯವನ್ನು ತಡೆಹಿ ಆವಶ್ಯವಾದ ಕಾರ್ಯಕ್ಕಾಗಿ ಕ್ರಮ್ಮಾ ಜನರಾದ ಹಿಂದೂಗಳು ಸಭಾ ಮೂಲಕ ಹಣ ಜಮಾಯಿಸುತಲಿದಾರೆ.

ಅಮೇರಿಕಾದಲ್ಲಿ [illegible] ಪ್ರವಾಹ ಎಂದು ೧೫೦೦ ತಳದ ಜನರು [illegible] ಕಟ್ಟಿ ೪ ಕೋಟಿ ರೂಪಾಯಿಗಳವರೆಗೆ ಲಕ್ಷ್ಯನಾಗಿರುತಿದೆ ಮೊದಲು ಇದ್ದ ಎಡೆಯ್ಲೇ ಕಸ್ಬೆಗಳ ಸ್ಥಳ ಗುರ್ತ ಇಲ್ಲ ಲಕ್ಷಾವಧಿ ಜನರು ತಿರಿದಿದಾರೆ. ನಿಜವಾದ ಸಂಖ್ಯೆ ಗೊತ್ತಾಗಲಿಲ್ಲ.—ಲೋಕ. ಬಂ

ಈಚೆಗೆ ಗಂಗಾನದಿಯಲ್ಲಿ ಸ್ನಾನ ಮಾಡುವಂತವರಿಗೆ ತೋಪ್ರಪು ಕೂಡಲೆ ಸಿದ್ಧಿಸುತಿದೆ, [illegible] ಅಲ್ಲಿನ ಸ್ನಾನಘಟ್ಟಗಳಲ್ಲಿ ಒಂದು ತರದ ಮತ್ಸ್ಯಗಳು [illegible] ಸ್ನಾನ ಮಾಡುವಂತವರನ್ನು ಕಚ್ಚುತಾವೆ, ಅದರ ವಿಷ ತಗಲಿದವರಿಗೆ ಕೂಡಲೇ ಮೋಕ್ಷಪ್ರಾಪ್ತಿಯಾಗುವದು ಸಿದ್ಧ ಈ ಮೊಸಳೆಯ ಹಾವಳಿಗಳ ದೈತ್ಯ ಒಂದನ್ನು ಹಿಡಿದು ವಿವಿಧವನ್ನು ಪ್ರದರ್ಶಕಶಾಲೆಗೆ ಕಳುಹಿಸುವರು

ಒಂದು ಘಂಟೆಯನ್ನು ಒಂದು ಸಲ ಹೊಡೆದರೆ ಎಷ್ಟು ದೂರ ನಾದ ಕೇಳುತ್ತದೆ ಎಂಬದನ್ನು [illegible] ಪರೀಕ್ಷೆ ಮಾಡಬೇಕೆಂದು ಯೋಚಿಸಿ [illegible] ಘಂಟೆಯನ್ನು ಒಂದು [illegible] ಕಾಲಿದ್ದ [illegible] ಪರೀಕ್ಷೆ ಮಾಡಿದ್ದರಲ್ಲಿ ೩೦,೯೯೦,೩೦೦ ಮೈಲು [illegible] ಕೇಳಿಸುತದೆ ಎಂದು ಗೊತ್ತಾಗಿದೆ.—ವೃ. ಬಂ.

ಅಲ್ವಾರ್ ಮಹಾರಾಜರು [illegible] ಸ್ವರ್ಗ [illegible] ಅಲ್ವಾರ್ [illegible]

[illegible]

ಧಾರ [illegible] ಯತ್ನಾಸ ಪದ್ಧತಿಯ [illegible] ವಿಶ್ರಾಂತಿ ಸಮಯವನ್ನು ಅನುಭವಿಸುವರು ಸುಖವಾಗಿ.—ವೃ. ಬಂ.

ಪಂಡಿತ [illegible] ಎಂಬ ಜ್ಯೋತಿಷ್ಕರೊಬ್ಬರು ಈಚೆಗೆ ಅಲಹಾಬಾದಿಗೆ ಬಂದಿದ್ದಾರೆ, ಇವರು [illegible] ವಿಷಯಗಳಂ ಮನುಷ್ಯನ ಮುಖವನ್ನು ನೋಡಿದ ಕೂಡಲೆ ಖಚಿತವಾಗಿ ಹೇಳುತ್ತಾರೆ. ಅವರಂ ನೋಡಿ ಮಾತನಾಡಿದವರಿಂದ ಅವರು ಜ್ಯೋತಿಷ್ಕರು ಮಾತ್ರವಲ್ಲದೆ [illegible] ಶಾಸ್ತ್ರದಲ್ಲಿ ಸಹ ಅನನ್ಯ ಸಾಧಾರಣ ಜ್ಞಾನವುಳ್ಳವರೆಂದು ತಿಳಿಯುತ್ತದೆ [illegible] ವಾಕ್ಯಗಳಂ [illegible] ಪ್ರಶ್ನೆಗಳಿಗೆ ಅವರು ಕೊಡುವ ಉತ್ತರಗಳು ಸ್ವಲ್ಪವಾದರೂ ವ್ಯತ್ಯಾಸವಿಲ್ಲದೆ [illegible] ಒಂದು ಪುಸ್ತಕವಂ [illegible] ಗ್ರಹಿಸಿ ಹೇಳುತ್ತಾರೆ ಯಾವ ಕಾಲದಲ್ಲೂ ತಪ್ಪು ಮಾಡಿಲ್ಲವು, ಒಂದುಸಲ ಮಾಡಿದಾಗ್ಯೂ [illegible] ಈ ಪಂಡಿತರನ್ನು [illegible] ಪರೀಕ್ಷೆಗೆ ಒಳಪಡಿಸಿ ತೃಪ್ತರಾದ ನೇಟಿವ ಮತ್ತು ಯೂರೋಪಿಯನ್ ದೊಡ್ಡ ಮನುಷ್ಯರಿಂದ [illegible] ಪಡೆದಿದ್ದಾರೆ [illegible] ಶಾಸ್ತ್ರದಲ್ಲಿ [illegible] ಇವರ ವಯಸ್ಸು ಇಪ್ಪತ್ತನಾಲ್ಕು ವರ್ಷಗಳು [illegible] ಪ್ರಶ್ನೆಗೆ ಉತ್ತರವಂ ಹೇಳುವದಕ್ಕೆ ಒಂದೇ ನಿಮಿಷ ತೆಗೆದುಕೊಳ್ಳುತ್ತಾರೆ

[illegible]

EXTRACTS
ವಿಶಿಷ್ಟಾದ್ವೈತ ಸಿದ್ಧಾಂತವು.

[illegible]

ತಲೂ, ಭೋಗ ಉಪಕರಣವೆಂತಲೂ, ಭೋಗಸ್ಥಾನವೆಂತಲೂ ಮೂರುವಿಧಗಳಾಗಿರುತಿವೆ ಇಂತಾ ಜಗತ್ತಿಗೆ ಕರ್ತ ಮತ್ತು ಉಪಾದಾನಕಾರಣನು, ಉತ್ಕೃಷ್ಟ ಶಬ್ದವಾಚ್ಯನಾದ ವಾಸುದೇವನೊಬ್ಬನು ವಿನಾ ಅನ್ಯರೊಬ್ಬರೂ ಅಲ್ಲವು ಇದಕ್ಕೆ ಪ್ರಮಾಣವು—"ವಾಸುದೇವಃ ಪರಂಬ್ರಹ್ಮ ಕಲ್ಯಾಣಗುಣಸಂಯುತಃ || ಭುವನಾನಾಮುಪಾದಾನಂ ಕರ್ತಾಜೀವನಿಯಾಮಕಃ ||" ಎಂಬದು. ಇಂತಾ ವಾಸುದೇವನೇ ಪರಮ ಕಾರುಣಿಕನಾಗಿಯೂ, ಭಕ್ತವತ್ಸಲನಾಗಿಯೂ, ಪರಮ ಪುರುಷನಾಗಿಯೂ ಇರುತ್ತಾನೆ. ಈತನು ಉಪಾಸಕರ ಮನೋರಥವನ್ನನುಸರಿಸಿ ಅವರಿಗೆ ಅಭೀಷ್ಟ ಫಲಗಳನ್ನು ಕೊಡುವಬಗ್ಗೆ ತನ್ನ ಲೀಲೆಯಿಂದ ಅರ್ಚಾ, ವಿಭವ, ವ್ಯೂಹ, ಸೂಕ್ಷ್ಮ, ಅಂತರ್ಯಾಮಿ ಎಂಬ ಭೇದಗಳಿಂದ ಐದುವಿಧಗಳಾಗಿ ಉಪಾಸನೆ ಮಾಡಲ್ಪಡುತ್ತಾನೆ ಅರ್ಚಾ ಅಂದರೆ ಪ್ರತಿಮಾದಿಗಳು, ವಿಭವಗಳೆಂದರೆ ರಾಮಾದ್ಯವತಾರಗಳು, ವ್ಯೂಹವೆಂದರೆ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ ನಾಲ್ಕು ಭೇದಗಳಿಂದ [illegible]. ವಾಸುದೇವಾಖ್ಯವಾದ ಪರಬ್ರಹ್ಮ [illegible] ಅಪಹತಪಾಪತ್ವಾದಿಗುಣಗಳುಳ್ಳವನೇ ಸೂಕ್ಷ್ಮತತ್ವವಾಚ್ಯನು. ಈತನೇ [illegible] ಅಂತರ್ಯಾಮಿ ಎಂದರೆ, ಸರ್ವಜೀವನಿಯಾಮಕನು [illegible]

[illegible]

ಈ ಪ್ರಕಾರವಾಗಿ ಉಪಾಸನೆ ಮಾಡತಕ್ಕ [illegible] ಸ್ವರೂಪಾದಿಗುಣವಾಗಿ [illegible] ಅವು ಯಾವವಂದರೆ—ಅಭಿಗಮನ, ಉಪಾದಾನ, ಇಜ್ಯ, ಸ್ವಾಧ್ಯಾಯ, ಯೋಗ, ಎಂಬ ಐದು ಭೇದಗಳು. ಅಭಿಗಮನವೆಂದರೆ, ದೇವತಾಸ್ಥಾನ ಮಾರ್ಗಗಳ [illegible] ಸಂಮಾರ್ಜನ [illegible] ಮೊದಲಾದ ಕೈಂಕರ್ಯ ಉಪಾದಾನವೆಂದರೆ ಚಂದನ, ಕುಸುಮ ಮೊದಲಾದ ಪೂಜಾದ್ರವ್ಯಗಳನ್ನು ಸಂಪಾದಿಸುವದು ಇಜ್ಯ ಅಂದರೆ ದೇವತಾಪೂಜೆ, ಸ್ವಾಧ್ಯಾಯವೆಂದರೆ, ಅರ್ಥಾನುಸಂಧಾನಪೂರ್ವಕ ಮಂತ್ರಜಪವನ್ನು ತತ್ವಪ್ರತಿಪಾದಕವಾದ ವೇದಾಂತಶಾಸ್ತ್ರವನ್ನು ಅಭ್ಯಸಿಸುವದು ಯೋಗವೆಂದರೆ ದೇವತಾನುಸಂಧಾನ ಈ ಪ್ರಕಾರವಾಗಿ ಉಪಾಸನಾ ಕರ್ಮಯುಕ್ತವಾದ ಜ್ಞಾನದಿಂದ ಪ್ರತ್ಯಕ್ಷದರ್ಶನಗಳದವನೆನಿಸಲು ಭಗವದ್ಭಕ್ತನಿಗೆ ಭಕ್ತವತ್ಸಲನಾದ ಪುರುಷೋತ್ತಮನು ನಿರವಧಿಕಾನಂದರೂಪನಾಗಿಯೂ, ಪ್ರಸನ್ನಾನತಿರ ರಹಿತನಾಗಿಯೂ ಸ್ವಾದಿಷ್ಟಾನಂದನಾಗಿಯೂ ಇರುವ ವೈಕುಂಠವನ್ನು ಅನುಗ್ರಹಿಸಿ ಚೇತನನನ್ನು ರಕ್ಷಿಸುವನೆಂಬದೇ ಈ ಸಿದ್ಧಾಂತದ ಮುಖ್ಯಾಭಿಪ್ರಾಯವಾಗಿರುತಿದೆ.—

ಸರ್ವಮತಾಭಿಮಾನಿ.

☞ BANGALORE—Printed and published at the KARNATAKA PRESS, No. 40, HOSPITAL ROAD, PETTAH—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE—MONDAY, JUNE 20, 1892. [No. 25.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಜೂನ್ ೨೦ ನೇ ತಾರೀಖು ಸೋಮವಾರ. [ಸಂಚಿಕೆ ೨೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಬಾಗಗಳಿಗೆ.

[illegible]	ಸ್ಥಳದವರಿಗೆ.	ಪರಸ್ಥಳದವರಿಗೆ.
	[illegible]	[illegible]
ಮುಂಗಡ ವರ್ಷಕ್ಕೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಬಾಗಗಳಿಗೆ.

ಮುಂಗಡ ವರ್ಷಕ್ಕೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

[illegible] ೦—೨—೦

[illegible] ೦—೧—೦

[illegible]

ADVERTISEMENTS.

NOTICE.

VAIDYASARA SANGRAHA

A TREATISE ON [illegible]

HINDU MEDICINE

Price including Postage Rs 5-0-0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಪೋಸ್ಟೇಜ್ ಮತ್ತು [illegible] ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, [illegible]

ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೩ ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

[illegible]

ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ತೈಲ—[illegible]

ಜ್ವರದ ಗುಳಿಗೆಗಳು.—[illegible]

[illegible]

ವಾತರೋಗಕ್ಕೆ ಚೂರ್ಣ.—[illegible]

ನೇತ್ರರೋಗಕ್ಕೆ ಮಾತ್ರೆ—[illegible]

[illegible]

ಭಸ್ಮಗಳು.—[illegible]

ಲೇಹ್ಯಗಳು.—[illegible]

ಪರಿಮಳಗಳು—ಗಂಧ, [illegible]

ಚೂರ್ಣಗಳು—[illegible]

ನೋಟಿಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಅಡಿಯಲ್ಲಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತನದಿಂದ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸುವುದಕ್ಕೆ ಸನ್ನದ್ಧರಾಗಿರುತ್ತೇವೆ.

[illegible]

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ್ ಕೊಡಲಾಗದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕೆ,

[illegible] ಕಮಿಷನ್ ಏಜಂಟ್ಸ್,

ಠಾಕೂರದ್ವಾರ, [illegible] ಮುಂಬೈ

THE BANGALORE SREENIVASA MANDIRAM.

ಬೆಂಗಳೂರು ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ [illegible] ತೋರಿಸುವ [illegible].—

೧೮೯೨ ನೇ ಇಸವಿ ಜೂನ್ ೧೧ ನೇ ತಾರೀಖು ಮೊದಲು ಜೂನ್ ೧೮ ನೇ ತಾರೀಖುವರಿವಿಗೆ.—

ಅಕ್ಕಿ [illegible] ಸಂಖ್ಯೆ	...	94
[illegible] ಸಂಖ್ಯೆ	...	57¼
[illegible]	...	40½
ಜಮ್ಲ	...	97¾
[illegible]	...	27¼
[illegible] ಅಕ್ಕಿ [illegible]	...	27¾
[illegible]	...	42½

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ.

[illegible]	...	7
[illegible] ವಿದ್ಯಾರ್ಥಿ	...	[illegible]
[illegible] ವಿದ್ಯಾರ್ಥಿಗಳು	...	21
[illegible]	...	16
[illegible]	...	6
ಜಮ್ಲ	...	54

THE MONEY MARKET.

ಮದರಾಸ್, ಶನಿವಾರ, ಜೂನ್ 18ನೇ [illegible] 1892.

[illegible] 107-11-0 ರಿಂದ 108-4-0ವರೆಗೆ.

[illegible] ಬ್ಯಾಂಕ್ ಷೇರುಗಳು, (500) ರೂಪಾಯಿಗಳ [illegible] 960 [illegible] 965ವರೆಗೆ.

[illegible] ಬ್ಯಾಂಕ್ [illegible] ಬ್ಯಾಂಕ್ ಷೇರುಗಳು, (100) [illegible] 165 ರಿಂದ 170 ವರೆಗೆ.

[illegible] 15-10-0

[illegible]

6 ತಿಂಗಳ [illegible], 1s. 3 23/32 d.

[illegible] ತಿಂಗಳ [illegible], 1s. 3 26/32 d

[illegible], 1s. 3 9/16 d.

ನೋಟಿಸ್.

ಇದರಿಂದ ತಿಳಿಯಪಡಿಸುವದೇನೆಂದರೆ:— ಪುಚ್ಚ್‌ಬರ ಮತ್ತು ಕುಷ್ಠರೋಗಿಗಳ ಆಸ್ಪತ್ರೆಗಳೂ, ಪ್ರಸವಾಸ್ಪತ್ರೆಗಳೂ, ವೈದ್ಯಶಾಲೆಗಳೂ ಬೇಕಾದ ಆಹಾರ ಜಿನಸಿಗಳು, ಔಷಧಸಾಮಗ್ರಿಗಳು ಮತ್ತು ಚಿಲ್ಲರೆ ಸಾಮಾನುಗಳು, ಇವುಗಳ ಸರಬರಾಯಿ ಬಗ್ಗೆ ಟೆಂಡರುಗಳು ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರಿಂದ ಸನ್ ೧೮೯೨ ನೇ ಇಸವಿ ಜೂನ್ ೩೦ ನೇ ತಾರೀಖುವರಿವಿಗೆ ಅಂಗೀಕರಿಸಲ್ಪಡುವವು.

ಇತರ ತಪ್ಸೀಲುಗಳಬಗ್ಗೆ ೧೮೯೨ ನೇ ಇಸವಿ ಜೂನ್ ೯ ನೇ ಮರ್ಚ್ಯಂ ಮೈಸೂರು ಗವರ್ನಮೆಂಟ್ ಗೆಜಟನ್ನು ನೋಡತಕ್ಕದ್ದು.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 20, 1892.

೧೮೯೨ನೇ ಇಸವಿ ಜೂನ್ ೨೦ ನೇ ಸೋಮವಾರ.

HINDU REFORMERS.

ಈ ಕಾಲದಲ್ಲಿ ವಿದ್ಯಾವಂತರಾದ ನಾಗರಕರಿಗೆ ಪ್ರಾಬೋಧ ಮನೋನಿಶ್ಚಯವೆಂಬುದು ದುರ್ಲಭವೆಂದು ಭಾವಿಸಬೇಕಾಗಿದೆ. ಇವರ ಅಭಿಪ್ರಾಯಗಳೂ ಉದ್ದೇಶ ಪ್ರಯತ್ನಗಳೂ, ಸಾಧಾರಣವಾಗಿ ತಾತ್ಕಾಲಿಕ ಸಮಯೋಚಿತ ವಿಷಯ ವೇಷಭೂಷೆಗಳಿಂದ ಅವರಿಗೆ ತೃಪ್ತಿಯನ್ನುಂಟುಮಾಡಿ ಪ್ರತಿಷ್ಠಾಪರರಾಗಬೇಕೆಂಬ ಸಹಕಾರಿಗಳಾಗಿರುತ್ತಿವೆ. ವಿಷಯಸುಖವು ಮತ್ತರಾದ ಅವರಿಗೆ ಸತ್ಯಶೀಲವೆಂಬುವ ಉತ್ಸಾಹವು ದೀರ್ಘಾಲೋಚನೆಯುಳ್ಳ ವಿಷಯ ವಿಮರ್ಶೆಯಲ್ಲಿಯೂ ಇರುವದಿಲ್ಲವು. ಈಗ ಇಂಗ್ಲಿಷ್ ವಿದ್ಯಾಭ್ಯಾಸವು ಮಾಡಿ ಯೂನಿವರ್ಸಿಟಿ ಪಟ್ಟಗಳು ಪಡೆದ ಕೂಡಲೇ ತಮ್ಮ ಕರ್ತವ್ಯವು ಸಾಂಗವಾಯಿತೆಂದೂ, ಇನ್ನು ಸ್ವದೇಶೀಯರಿಗೆ ಹಿತವು ಮಾಳ್ಪುದರೊಳು ಪ್ರವರ್ತಿಸಿದ ಹೊರತು ತಾವು ಸಂಪಾದಿಸಿದ ವಿದ್ಯೆಯೂ ವೈಲಕ್ಷಣ್ಯವೂ ಪ್ರಯೋಜನಕರವಾಗಲಾರದೆಂದೂ ಭಾವಿಸಿ ತಾವು ಸಮಯಾಚಾರ ಪರಿಷ್ಕರಣ ಪ್ರವರ್ತಕರಾದರೇನೆಂದು ಮಗೆ ಪ್ರಾಕಸ್ಯ ವುಂಟಾಗುವದೋ ಬ ಭ್ರಾಂತಿಯೊಡನೆ ಕಾಲೇಜುಗಳನ್ನು ಬಿಟ್ಟ ಗ್ರಂಥಗಳನ್ನು ಕೆಳಗೆ ಬಿಟ್ಟಕೂಡಲೇ ಸಭಾಮಧ್ಯದಲ್ಲಿ ಪ್ರಾಸಂಗಿಕ ಸ್ಥಾನವನ್ನಾಕ್ರಮಿಸಿ ಲೋಕಹಿತಾರ್ಥ ಅವತರಿಸಿದ ಜ್ಞಾನೋದಯರೆಂದು ತಿಳಿದು ಸಮಯಾಚಾರ ಪರಿಷ್ಕರಣ ವಿಚಾರವು ಕುರಿತು ಚರ್ಚಿಸಲೆತ್ನಿಸುತ್ತಾರೆ. ಇವರಿಗೆ ತಮ್ಮ ಸಾಮರ್ಥ್ಯವೂ ಅದರಿಂದುಂಟಾಗುವ ಲಾಭನಷ್ಟಗಳೂ ಸುತರಾಂ ತಿಳಿಯುವದಿಲ್ಲವು. ಅಥವಾ ತಿಳಿದಾಗ್ಯೂ ತಿಳಿದಂತೆ ವ್ಯಕ್ತಪಡಿಸಬಹುದಿಲ್ಲವು. ಲೋಕಹಿತಚಿಂತಕರೂ ಧುರೀಣರಾದ ಮೇಲೆ ಕಂಡ ಶಿಕ್ಷಣ ಕ್ರಮದಿಂದ ಸಕಲ ಪ್ರಯತ್ನಗಳೂ, ಸಕಲ ವಾದಗಳೂ, ಸಕಲ ಶಾಸ್ತ್ರಗಳೂ, ಸಕಲ ವ್ಯವಸ್ಥೆಗಳೂ ಮುಖ್ಯಗಳಾದ ನಾಲ್ಕು ವಿಷಯಗಳಿಗೆ ಸಂಬಂಧಿಸಿದವಾಗಿರುತ್ತಿವೆ. ಮೇಲೆ ಹೇಳಿದ ಅವುಗಳಿಂ ಬಿಟ್ಟು ಅವರಿಗೆ ಹಿಂ

ದೂರುತವನ್ನು ಲಕ್ಷಣೀಯಗಳಾದ ಪ್ರತ್ಯಕ್ಷ ಬಾಧಕಗಳಾದ ಇತರ ಅಂಶಗಳ್ಯಾವದೂ ಇದರೊಳಿದ್ದರೂ ಅಥವಾ ವಿಚಾರಯೋಗ್ಯವೆಂದು ಕಂಡುಬರುವದಿಲ್ಲವು. ಅವುಗಳ್ಯಾವವೆಂದರೆ–ಮೊದಲನೆಯದು ಸಮುದ್ರಯಾನ, ಇದರಲ್ಲಿ ದ್ವೀಪಾಂತರವಾಸ ಸಹ ಅಂತರ್ಭೂತವಾಗಿರುತಿದೆ. ೨ ನೆಯದು ಹಿಂದೂ ವಿವಾಹ ಪರಿಷ್ಕರಣ ಇದರಲ್ಲಿ ಬಾಲ್ಯವಿವಾಹ ನಿರೋಧ ಪೂರ್ವಕ ಪ್ರೌಢ ವಿವಾಹವು ಸೇರಿಸಿ ಪ್ರೋತ್ಸಾಹಿಸಲ್ಪಡುತಿದೆ. ೩ ನೆಯದು ವಿಧವಾ ವಿವಾಹವು. ಇದರಲ್ಲಿ ಬಾಲವಿಧವಾ ಪಕ್ಷಾವಲಂಬಿಗಳು ಕೆಲವರು, ಸಾಮಾನ್ಯೇನ ವಿಧವಾ ಸಮುದಾಯಕ್ಕೆ ಹಿತಂಕರಣವಾಗಬೇಕೆಂಬ ತಾತ್ಪರ್ಯದೊಡನೆ ತತ್ಪಕ್ಷವನ್ನವಲಂಬಿಸಿದವರು ಕೆಲವರು. ೪ ನೆಯದು ದೇಶ ಜಾತಿ ಮತಪ್ರಯುಕ್ತ ತಾರತಮ್ಯ ನಿವಾರಣ ಪೂರ್ವಕ ಗಾಂಧರ್ವವಿವಾಹಾನುಸರಣವು, ಇವುಗಳೇ ಮುಖ್ಯವಾಗಿ ಆಧುನಿಕರಿಗೆ ಪರಿಷ್ಕರಣೀಯಾಂಶವಾಗಿವೆ. ಮೇಲೆ ಕಂಡ ನಾಲ್ಕು ವಿಷಯಗಳೂ ಬಹಳ ಪ್ರಬಲವಾದವಾಗಿಯೂ ಬಹು ಜನಾಭಿಮತ್ಯೈಕಮತ್ಯದ ಮೇಲೆ ಶಾಸ್ತ್ರಾಧಾರಗಳಿಗವಿರುದ್ಧವಾಗಿದ್ದರೆನೇ ಆಚರಣೆಯಲ್ಲಿ ಬರತಕ್ಕವಾಗಿಯೂ ಇರುವದು. ಹೀಗಿರುವಾಗ್ಯೆ ಇವು ಪರಿಷ್ಕರಿಸತಕ್ಕವರು ಯಾರು? ಯತ್ಕ ಯಾವವಿಧದಿಂ ಪರಿಷ್ಕರಿಸಬೇಕು? ಇವರನಿರ್ಣಯಗಳನ್ನಂಗೀಕರಿಸತಕ್ಕವರ್ಯಾರು? ಇವರೊಳೆಲ್ಲರಿಗೂ ಪ್ರತಿಪತ್ತಿಯುಂಟಾಗಲಿಕ್ಕೆ ಇವರಲ್ಲಿರತಕ್ಕ ಅಸಾಧಾರಣ ಮಹಿಮೆಯೇನು? ಅಥವಾ ಇವರಿಗೆ ಅನ್ಯರು ಕೊಂಡಾಡುವಂತಾ ಚಿತ್ತಸ್ಥೈರ್ಯವೂ ನಿಸ್ಪೃಹತ್ವವೂ ಯೇನಿವೆ? ಇವುಗಳನ್ನು ಸ್ವಲ್ಪವೂ ಭಾವಿಸದೆ ಸ್ಮೃತಿ ಬಾಲಕರು ಸಹ ತಮ್ಮುಪದೇಶಕ್ಕೆ ಪಕ್ರಮಿಸಿ ಪುರಾತನವಾದುದೆಂದು ಹೇಳುವ ಮಾತ್ರಕ್ಕೆ ಗುಣದೋಷ ವಿಚಾರವಿಲ್ಲದೆ ದೂಷಿಸುತ ತಮ್ಮ ಪ್ರೌಢಿಮೆಯಂ ತೋರಿಸಿ ಮೆರೆಯುತ್ತಾರೆ. ಅವರ ಅಭಿಪ್ರಾಯಗಳು ಅವರಿಗೇ ನಿರ್ಣಯವಿಲ್ಲವು ಅವರಿಂದ ಸಿದ್ಧಾಂತಮಾಡಲ್ಪಟ್ಟ ವಿಷಯವು ಕಾಲಪ್ರಕೃತಿ ಭೇದದಿಂದ ವಿರುದ್ಧಫಲದಾಯಕವಾಗಿ ಅದು ಸ್ವವಿಷಯದಲ್ಲಿ ಬಾಧಕವಾಗಿ ಪರಿಣಮಿಸತಕ್ಕದ್ದಾಗಿದ್ದರೆ ಆಗ ಅವರು ತಮ್ಮ ಅಭಿಪ್ರಾಯವಂ ನಯವಾಗಿ ಬದಲಾಯಿಸಿಕೊಂಡು ಅದಕ್ಕೆ ಅರ್ಥಕಲ್ಪನೆ ಮಾಡುತ್ತಾರೆ. ಈಗಿನ ಸಮಯಾಚಾರ ಪರಿಷ್ಕರಣವೆಂಬದು ಸಾಮಾನ್ಯೇನ ಏವಂರೂಪವಾಗಿರುತಿದೆ. ಮೇಲೆ ಕಂಡ ನಾಲ್ಕು ವಿಷಯಗಳಲ್ಲಿ ಮೊದಲನೆಯ ಮೂರು ಅಂಶಗಳಂ ಕುರಿತು, ಹಿಂದೆ ಅನೇಕಾವರ್ತಿ ಈ ಪತ್ರಿಕೆಯಲ್ಲಿ ಬಹಳ ಮಟ್ಟಿಗೆ ವಿಚಾರ ಮಾಡಿರುತ್ತೇವೆ ಸಮುದ್ರಯಾನ ವಿಷಯದೊಳು ಯುಗಾಂತರದಲ್ಲಿ ಅಥವಾ ಅನೇಕ ಶತ ಸಂವತ್ಸರಗಳ ಹಿಂದೆ ಯಾವದೋ ಒಂದು ವಿಶೇಷ ಸಂದರ್ಭದಲ್ಲಿ ಯಾರೋ ಕೆಲವರಿಂದ ಸಮುದ್ರಯಾನ ಮಾಡಲ್ಪಟ್ಟಂತೆ ಕೆಲವು ಗ್ರಂಥಗಳಲ್ಲಿ ಬರೆಯಲ್ಪಟ್ಟಿರುವ ಆಧಾರದ ಮೇಲೆ ಶಾಸ್ತ್ರೀಯವೆಂದು ವಾದಿಸಿ ಪ್ರೋತ್ಸಾಹಿಸಬಹುದೇಹೊರ್ತು ಬ್ರಾಹ್ಮಣರು ಸಮುದ್ರಯಾನ ಮಾಡಬಹುದೆಂದು ಯೆಲ್ಲಿಯೂ ಕಂಠೋಕ್ತವಾಗಿ ತಿಳಿಸಲ್ಪಟ್ಟಂತೆ ಕಾಣಿಸಲಿಲ್ಲವು. ಬ್ರಾಹ್ಮಣ ದ್ವೇಷಿಗಳಾದ ಅನ್ಯಜಾತಿಯವರು ತಮ್ಮ ಮಾತಾಪಿತೃಗಳ ಮೃತದಿನಗಳಲ್ಲಿ ಯೆಡೆ ಕೊಡಲಿಕ್ಕೆ ಹಾರವರನ್ನೇ ಬಯ್ಯುತ ಹುಡುಕುವಂತೆ ನಿರ್ಬಂಧರೂಪವಾದ ಶಾಸ್ತ್ರಪ್ರಮಾಣಗಳನ್ನು ದೂಷಿಸುತ ಅವುಗಳ ಆಧಾರವಂ ಹುಡುಕುತ ಹೋರಾಡುವದ್ಯಾತಕ್ಕೋ ನಾವರಿಯೆವು. ಈಚೆಗೆ ಅನೇಕರು, ಈ ಸಮುದ್ರಯಾನ ವಿಷಯವಿಮರ್ಶೆಯು ಕಾಲಕ್ರಮೇಣ ಜರಿಗಿ ವ್ಯವಸ್ಥೆಯಾಗಲೆಂದು ಭಾವಿಸಿ ಇದಂ ಸ್ವಾನುಷ್ಠಾನದೊಳು ತಂದುಕೊಳ್ಳಲಾರಂಭಿಸಿದಾರೆ. ಅಂತವರ ವಿಷಯದಲ್ಲಿ ಯಾವ ಪ್ರಮಾಣಗಳಾದರೂ ಕಟ್ಟುನಿಟ್ಟಾದರೂ ಪ್ರತಿಬಂಧಿಸಲಿಲ್ಲವು ಈಗ ಕಲ್ಕತ್ತೆಗೆ ಸ್ಟೀಮರಿನಲ್ಲಿ ಹೋಗಿ ಬರುವ ವಾಡಿಕೆಯು ಪ್ರಬಲಿಸುತಲಿದೆ. ಇದುವರಿವಿಗೆ ಅನೇಕರು ಈ ದೇಶದಿಂದಲೂ ಇತರ ದೇಶಗಳಿಂದಲೂ ೩—೪ ದಿನಗಳಮೇಲ್ಪಟ್ಟು ಸ್ಟೀಮರಿನಲ್ಲಿಯೇ ರಾತ್ರಿ ಹಗಲು ಪ್ರಯಾಣ ಮಾಡಿ ಹೋಗಿ ಬರುತ್ತಾರೆ. ಅವರ ಪ್ರಾಬಲ್ಯವು ನಿಷ್ಪಕ್ಷಪಾತಿಗಳಾದ ಖಂಡಿತವಾದಿಗಳಿಗೆ ಕೂಡ ಮೌಕ್ಯವನ್ನುಂಟು ಮಾಡದಿರಲಿಲ್ಲವು. ಈಗ ಯೇಳು ದಿನಗಳಿಗುಂಟಾಗಿರುವ ಗ್ರಾಹ್ಯತೆಯು ಮುಂದೆ ೨೦ ದಿನಗಳಿಗೆ ಯೇಕೆ ಉಂಟಾಗಕೂಡದು? ಈಗ ಕಲ್ಕತ್ತೆ ಯಾತ್ರೆಯು ಶಿಷ್ಟಜನಾನುಮತವಾಗಿ ಪಟ್ಟಣವಾಸವಾಗಿ ಹ್ಯಾಗೆ ಏರ್ಪಟ್ಟದೆಯೋ ಹಾಗೆಯೇ ಇನ್ನೂ ಅತ್ಯಲ್ಪಕಾಲದಲ್ಲಿಯೇ ಇಂಗ್ಲಾಂಡ್ ಯಾತ್ರೆಯು ಪುಣ್ಯದೇಶ ಯಾತ್ರಾಪೇಕ್ಷೆಯಾ ಪಾವನತಮವಾಗಿ ಯೆಣಿಸಲ್ಪಟ್ಟು ಸರ್ವಸಾಧಾರಣವಾಗಿ ವ್ಯವಹಾರದೊಳು ಬಾರದೆ ಹೋಗಲಾರದು. ಆದುದರಿಂದ ಸಮಯಾಚಾರ ಪರಿಷ್ಕರಣ ಪ್ರವರ್ತಕರಿಗೆ ಕಾಲಗತಿಯೇ ಅನುಕೂಲವಾಗಿರುವದರಿಂದ ಅವರು ಈ ವಿಷಯದಲ್ಲಿ ವ್ಯರ್ಥಶ್ರಮವಹಿಸಿ ಮನಃಕ್ಲೇಶಪಡಬೇಕಾದ ಆವಶ್ಯಕತೆಯೇನೂ ನಮಗೆ ಕಾಣಿಸಲಿಲ್ಲವು ಯಾರ ಪ್ರವೃತ್ತಿ ನಿವೃತ್ತಿಗಳಿಲ್ಲದೆಯೇ ಬಾಲಕಿಯರ ವಿವಾಹ ವಯಃಪರಿಮಾಣವು ಈಗ ೧೦-೧೨ ವರುಷಗಳವರಿವಿಗೆ ಹೆಚ್ಚುತಬಂದಿದೆ. ಇದು ಇನ್ನೂ ತರುಣಿಯರ ರೂಪಲಾವಣ್ಯೈಶ್ವರ್ಯ ವಿದ್ಯಾನುಗುಣವಾಗಿ ಹೆಚ್ಚುತಿಹರ ಬಹುದೆಂಬ ಸಂಭವ ಕಂಡುಬರುತಲಿದೆ. ಪ್ರಾಥಮಿಕ ವಿದ್ಯಾಭ್ಯಾಸದಲ್ಲಿಯೇ ಬಾಲಕಿಯರಿಗೆ ತಮ್ಮ ಮಾತಾಪಿತೃಗಳು ನಿಶ್ಚಯಿಸಿದ ವಿವಾಹಿತಪತಿಯಂ ನಿರಾಕರಿಸಿ ವಿವಾಹ ಸಂಬಂಧ ಪರಿತ್ಯಾಗವು ಅಪೇಕ್ಷಿಸುತಲಿದಾರೆ, ಇವರು ಸಂಪೂರ್ಣ ವಿದ್ಯಾವತಿಯರಾಗುವಾಗ ಅವರ ಪರಿಣಯ ವಿಚಾರವಂ ಅವರು ಅನ್ಯರಿಗೆ ಬಿಟ್ಟುಕೊಡಲಾರರು. ಅವರ ಭವಿಷ್ಯತ್ಸುಖ ನಿಮಿತ್ತಕವಾದ ವೈವಾಹಿಕ ನಿರ್ಬಂಧ ವ್ಯವಸ್ಥಾಭಾರವಂ ಅವರು ಸ್ವತಃ ಕೈಗೊಳ್ಳುವಾಗ್ಯೆ ಅವರ ವಿವಾಹ ಸ್ವರೂಪವೂ ಅವರ ಪತಿವರಣಕ್ರಮವೂ ಅಪರಪೇಕ್ಷಿಸಬಹುದಾದ ಸಂಬಂಧವೂ ವಿಜಾತೀಯಗಳಾಗಿರುವವು. ಹಾಗೆ ಮುಂದೆ ಇರುವದಂ ಊಹಿಸಲಿಕ್ಕೆ ಈಗಲೇ ಬೇಕಾದ ನಿದರ್ಶನಗಳು ಅನೇಕ ಕಡೆಗಳಲ್ಲಿ ಕಂಡುಬರುತಲಿವೆ. ಆದುದರಿಂದ ಬಾಲ್ಯವಿವಾಹ ವಿಷಯದಲ್ಲಿ ಪುರುಷ ಪ್ರಯತ್ನವಂ ಕಾಲವು ನಿರೀಕ್ಷಿಸುತಲಿರಲಿಲ್ಲವು. ಮೂರನೆಯದಾದ ವಿಧವಾ ವಿವಾಹ ವಿಚಾರವು ಸ್ತ್ರೀಯರಿಗಿಂತಲೂ ಪುರುಷರಿಗೆ ಬಹಳ ಅಪೇಕ್ಷಣೀಯಾಂಶವಾಗಿರುತದೆ. ವಿವಾಹವೆಂಬದು ಒಂದು ಒಡಂಬಡಿಕೆ ರೂಪವೆಂತಲೂ, ಅಂತಾ ಒಡಂಬಡಿಕೆಯು ಯಾವದಾದರೊಂದುಬಗೆ ನಿಬಂಧನೆಗೊಳಪಟ್ಟಿರುವದೆಂತಲೂ, ಅಂತಾ ನಿಬಂಧನೆಯು ನಾನಾವಿಧವಾದ ಲೌಕಿಕ ಸುಖಾನುಭವಕ್ಕೆ ನಿರ್ಬಂಧರೂಪವಾದುದೆಂತಲೂ, ಆದುದರಿಂದ ವಿವಾಹವು ಸ್ವಾತಂತ್ರ್ಯ ನಿರೋಧಕವೆಂತಲೂ ಭಾವಿಸಲ್ಪಡುತಲಿದೆ. ಹೀಗಿರುವದರಿಂದ ಪುನರ್ವಿವಾಹಕ್ಕೆ ಕೆಲವರು ಪುರುಷರೇ ಪ್ರಬಂಧಿಸಿ ಸ್ತ್ರೀಯರಂ ಬಲಾತ್ಕರಿಸುವಂತೆ ತೋರುತಿದೆ ಯೇಹೊರ್ತು ಪುನರ್ವಿವಾಹವು ನಿಷೇಧಿಸಲ್ಪಟ್ಟಿರುವ ಮತಗಳಿಗೆ ಸೇರಿದ ಯಾವ ವಿಧವಾ ಸ್ತ್ರೀಯಾಗಲಿ ಪುನರ್ವಿವಾಹವನ್ನಪೇಕ್ಷಿಸಿ ತನಗಾವಶ್ಯಕವೆಂದು ವಾದಿಸುವಂತೆ ನಾವು ಇದುವರಿವಿಗೆ ಕೇಳಲಿಲ್ಲವು. ಅಂತವರೆಲ್ಲಿಯಾದರೂ ಪಂಡಿತರಮಾಬಾಯಿಯಂತವರಿದ್ದರೆ ಅವರು ಆಧುನಿಕ ವೈಲಕ್ಷಣ್ಯಾಭಿಲಾಷಿಗಳಾಗಿ ಸ್ವಜಾತಿಮತಕುಲ ನಿರ್ಬಂಧಗಳಿಂದ ವಿಮುಕ್ತರಾದವರಾಗಿರುತ್ತಾರೆ. ಏತೇನ ಅಪೇಕ್ಷಿತವಾದ ವಿಧವಾ ಹಿತಂಕರಣದಲ್ಲಿ ಪುರುಷರಿಗೆ ವಿಶೇಷಶ್ರದ್ಧೆಯೂ ಚಿಂತೆಯೂ ಉಂಟಾಗಲಿಕ್ಕೆ ಯಾವದೋ ಒಂದು ಗೂಢೋದ್ದೇಶವು ಪ್ರಬಲಗೊಂಡಿರಬೇಕೇ ಹೊರ್ತು ಯಿಂಗಿತರಿಗೆ ಮಾಡಬೇಕಾಗಿಲ್ಲವು. ಕಾನನ ಕೌಮುದಿಯಂತೆ ನಿಷ್ಪ್ರಯೋಜಕವಾದ ವಿಧವೆಯರ ವಯೋರೂಪ ವಿಭ್ರಮಗಳಂ ಸಾರ್ಥಕಪಡಿಸಿ ನೋಡಿ ಆನಂದಿಸಬೇಕೆಂಬ ಸ್ವಪ್ರಯೋಜನೋದ್ದೇಶದಿಂ ಬೇರಾವರೆ ಪುರುಷರು ಪುನರ್ವಿವಾಹವಂ ಘೋಷಿಸಿ ವಾದಿಸಬಹುವಲ್ಲದೆ ಅನೇಕರಂ ವಿಚಾರಿಸಿದ್ದರಲ್ಲಿ ಅವರಿಗೆ ಪುನರ್ವಿವಾಹ ನಿರ್ಬಂಧದಲ್ಲಿ ಸಿಕ್ಕಲಿಕ್ಕೆ ಶುದ್ಧಾಂಗ ಇಷ್ಟವಿಲ್ಲವೆಂದು ಸ್ಪಷ್ಟವಾಗಿ ತಿಳಿಯಬರುತಿದೆ. ಆದುದರಿಂದ ಹಿಂದೂ ವಿಧವೆಯರು ಪುರುಷಸಹಾಯವನ್ನಪೇಕ್ಷಿಸುವ ಸ್ಥಿತಿಯಲ್ಲೀಗ ಇರುವದಿಲ್ಲವು. ಕಡೆಯದಾದ ಮತತಾರತಮ್ಯವಿಲ್ಲದೆ ವಿವಾಹ ಸಂಬಂಧವಂ ಬೆಳಿಸಬೇಕೆಂಬ ಅಪೇಕ್ಷೆಯು ವರ್ತಮಾನ ಕಾಲದ ನಾಗರಿಕರಿಗೆ ಅತ್ಯುತ್ಕಟವಾಗಿದೆ. ಈ ಅಂಶವು ಪ್ರಥಮತಃ ಕೈಗೂಡಿದರೆ ಇತರ ಮೂರು ವಿಷಯಗಳು ಸದ್ಯಃ ಸಫಲಗಳಾಗಿದ್ದರೂ ಅವರು ಅದಕ್ಕಾಗಿ ವಿಶೇಷ ಚಿಂತಿಸುವಂತಿಲ್ಲವು. ಇವರು ಸಾಧ್ಯವಾದಮಟ್ಟಿಗೆ ಈಗ ತಮ್ಮೊಳು ಭೋಜನ ಪ್ರತಿಭೋಜನ ನಿರ್ಬಂಧವಂ ತಮ್ಮ ಇಷ್ಟಾನುಸಾರ ನಿವೃತ್ತಿಸಿಕೊಂಡು ದಾರಾಳವಾಗಿ ತ್ರಿಮತದವರೂ ಏಕತ್ರ ಸೇರಿ ಭೋಜನಪಾನಾದಿಗಳಂ ಮಾಡುತ್ತಾರೆ. ಇದೀಗ ಸಾಧಾರಣ ವಿಷಯವಾಗಿ ಯೇರ್ಪಟ್ಟದೆ. ಪರಂತು ಇದೇ ವಿವಾದ ಸಂಬಂಧಕ್ಕೆ ತಮ್ಮ ಹೆಂಗಸರು ಸಹ ಅನುಕೂಲರಾಗಿರುವದಕ್ಕೆ, ಸ್ನೇಹಾಭಿವೃದ್ಧಿಗೆ ಸಾಧಕವೆಂದು ಭಾವಿಸಲ್ಪಟ್ಟಿರುವ ಪರಸ್ಪರ ವಿವಾಹ ಸಂಬಂಧ ರಾಹಿತ್ಯವೂ ಪ್ರಬಲ ಬಾಧಕವಾಗಿರುವಂತೆ ಯೆಣಿಸಿದಾರೆ ಇವರು ಈರೀತಿ ಅಪೇಕ್ಷಿಸಲಿಕ್ಕೆ ಕಾರಣವು ವ್ಯಕ್ತವಾಗಲಿಲ್ಲವು. ಬಹುಶಃ ಅನ್ಯತ್ರ ದೊರೆಯಬಹುದಾದ ಸೌಂದರ್ಯಾತಿಶಯದಿಂದಲೂ ನೂತನ ವಿಷಯಾನುರಾಗದಿಂದಲೂ ಈ ಕೋರಿಕೆ ಅವರಿಗುಂಟಾಗಿರಬಹುದೆಂದೆಣಿಸುತ್ತೇವೆ. ಆದರೆ ವಿವಾಹ ಪ್ರಯೋಜನವನ್ನೂ, ಅದು ಸ್ವಜಾತಿಮತದವರಲ್ಲಿಯೇ ಮಾಡಿಕೊಳ್ಳಬೇಕೆಂಬ ವಿಷಯದಲ್ಲಿ ಶಾಸ್ತ್ರಕರು ಈಗಿರುವ ನಿಬಂಧನೆಯಂ ಮಾಡಲಿಕ್ಕೆ ಅವರು ಭಾವಿಸಿದ್ದ ಕಾರಣಗಳನ್ನೂ ಇದಕ್ಕೆ ಸಂಬಂಧ ಕಡೆಗಳಲ್ಲಿ ಯೆಣ್ಣು ಕೊಟ್ಟು ತೆಗೆದು ಸಂಬಂಧ ಬೆಳಿಸುವದರಿಂದುಂಟಾಗುವ ಪ್ರಯೋಜನಗಳನ್ನೂ ಮುಂದೆ ತಿಳಿಸುವೆವು.

TANK REPAIRS.

ಕೆರೆಗಳ ದುರಸ್ತಿ

ಇನಾಂ ಗ್ರಾಮಗಳಲ್ಲಿರುವ ಕೆರೆಗಳು ಅನೇಕ ಕಡೆಗಳಲ್ಲಿ ಶಿಕಸ್ತಾಗಿ ಅವುಗಳಂ ಇನಾಂದಾರರು ಕೊಂಚವಲ್ಲಿ ರಿಪೇರಿ ಮಾಡದೆ ಬಿಟ್ಟಿರುವದರಿಂದ ಅವುಗಳ ಕೆಳಗೆ ಇರುವ ಸರ್ಕಾರ್ ಕೆರೆಗಳಿಗೆ ಬಾಧಕವುಂಟಾಗಿ ಅವೂ ಹಾಳಾಗುವದನ್ನಾಲೋಚಿಸಿ ಗವರ್ನಮೆಂಟಿನವರು ಇನಾಂ ಗ್ರಾಮಗಳ ಕೆರೆಗಳನ್ನು ಕೂಡ ಆಗಿಂದಾಗ್ಯೆ ರಿಪೇರಿ ಮಾಡತಕ್ಕ ಆವಶ್ಯಕತೆಯುಳ್ಳವರಾಗಿರುತ್ತಾರೆ ಇನ್ನು ಕೆಲವು ಕೆರೆಗಳ ವಿಷಯದಲ್ಲಿ ಗವರ್ನಮೆಂಟು ಮತ್ತು ಇನಾಂದಾರರು ಸಮಾನ ಪ್ರಯೋಜನ ಪ್ರಾಪ್ತರಾಗಿದಾರೆ. ಅಂತಾ ಕೆರೆಗಳ ಜಲಾಧಾರದಿಂ ಇನಾಮತಿ ಜಮೀನುಗಳೂ, ಸರ್ಕಾರ್ ಜಮೀನುಗಳೂ ಏಕರೂಪವಾಗಿ ಸಾಗುವಳಿಯಾಗುತಿವೆ ಇಂತಾ ಸಂದರ್ಭಗಳಲ್ಲಿ ಸರ್ಕಾರದವರು ಮಾಡುವ ಕೆರೆ ರಿಪೇರಿಗಳಬಗ್ಯೆ ಇನಾಂದಾರರು ತಮ್ಮ ಭಾಗಕ್ಕೆ ಕೊಡಬೇಕಾದ ಸಹಾಯ ದ್ರವ್ಯವನ್ನು ಇಷ್ಟೆಂದು ಗೊತ್ತು ಮಾಡಿಕೊಳ್ಳಬೇಕಾದುದು ಆವಶ್ಯಕವೆಂದು ಗವರ್ನಮೆಂಟಿನವರು ಭಾವಿಸಿದಾರೆ. ಈ ವಿಷಯದಲ್ಲಿ ನಿರ್ಣಯ ರಚನಾದ ಯಾವದಾದರೊಂದು ಹುಕುಂ ಕೊಡಲ್ಪಡುವದರೊಳಗಾಗಿ ಪ್ರತಿ ತಾಲ್ಲೂಕಿನಲ್ಲಿರುವ ಮೇಲೆ ಕಂಡ ಸ್ವಭಾವವುಳ್ಳ ಕೆರೆಗಳೆಷ್ಟು ಇವೆಯೋ ಅವುಗಳ ಸಂಖ್ಯೆಯನ್ನೂ ಅವುಗಳ ಕೆಳಗೆ ಸಾಗುವಳಿಯಾಗುವ ಜಮೀನು ಹುಟ್ಟುವಳಿ ಮೊಬಲಗನ್ನೂ ತಿಳಿಯಬೇಕೆಂದು ಅಪೇಕ್ಷಿಸಿ ಡಿಸ್ಟ್ರಿಕ್ಟ ಜಾತ್ ಡೆಪ್ಯುಟಿ ಕಮಿಷನರಗಳಿಗೆ ಇದರಡಿ ಕಂಡ ತಪಸೀಲುಳ್ಳ ಒಂದು ತಖ್ತೆಯನ್ನು ತಯಾರಿಸಿ ಕಳುಹಿಸಬೇಕೆಂದು ಹುಕುಂ ಕೊಟ್ಟಿದಾರೆಂದು ತಿಳಿಯಬರುತಿದೇನೆಂದರೆ.—

(೧) ಪ್ರತಿ ತಾಲ್ಲೂಕಿನಲ್ಲಿರುವಂತಾ ಸರ್ಕಾರ್ ಗ್ರಾಮಗಳಲ್ಲಿಯೂ ಇನಾಂ ಗ್ರಾಮಗಳಲ್ಲಿಯೂ ಇರುವ ಜಮೀನುಗಳು ಸಮಾನವಾಗಿ ಸಾಗುವಳಿಯಾಗಲಿಕ್ಕೆ ನೀರು ಹರಿಯುವಂತಾ ಕೆರೆಗಳ ಸಂಖ್ಯೆ.

೨. ಅಂತಾ ಸಾಗುವಳಿ ಜಮೀನಿನ ವಿಸ್ತೀರ್ಣ, ಚೇರೀಜ್, ಮತ್ತು ಅಂತಾ ಕೆರೆ ಆಸರೆಯಿಂದ ಸಾಗುವಳಿಯಾಗುವ ಇನಾಂ ಮತ್ತು ಸರ್ಕಾರ್ ಜಮೀನುಗಳಿಗಾಗಿ ದಾಮಾಷಾಯಿ ಪ್ರಕಾರ ಸಲ್ಲತಕ್ಕ ಕ್ವಿಟರೆಂಟ್.

೩. ಇನಾಂ ಗ್ರಾಮಗಳಲ್ಲಿರತಕ್ಕ ಕೆರೆಗಳ ಆಧಾರದಿಂ ಅದರ ಕೆಳಗೆ ಇರುವ ಸರ್ಕಾರ್ ಕೆರೆಗಳು ಭರ್ತಿಯಾಗತಕ್ಕವು ಯೇನಾದರು ಇದ್ದಲ್ಲಿ ಅಂತಾ ಇನಾಂದಾರರ ಕೆರೆಗಳ ಸಂಖ್ಯೆ

೪. ಮೇಲೆ ಕಂಡ ಕೆರೆಗಳ ಆಸರೆಯಿಂದ ಸಾಗುವಳಿಯಾಗತಕ್ಕ ಇನಾಂ ಜಮೀನುಗಳ ಬಾಬ್ತು ವಿಸ್ತೀರ್ಣ, ಚೇರೀಜ್, ಮತ್ತು ಅವುಗಳ ದಾಮಾಷಾಯಿ ಪ್ರಕಾರ ಕ್ವಿಟರೆಂಟ್.

೫ ಸರ್ಕಾರ್ ಕೆರೆಗಳ ಕೆಳ ಭಾಗದಲ್ಲಿಯೂ, ಮೇಲ್ಭಾಗದಲ್ಲಿಯೂ ಇರುವ ಇನಾಂ ಜಮೀನುಗಳ ವಿಸ್ತೀರ್ಣ ಮತ್ತು ಚೇರೀಜ್.

೬. ಇನಾಮತಿ ಜಮೀನುಗಳು ಸರ್ಕಾರ್ ಕೆರೆಯ ಆಸರೆಯಿಂದ ಸಾಗುವಳಿಯಾಗದಿದ್ದಾಗ್ಯೂ ಸದರೀ ಜಮೀನುಗಳಿಗೆ ಮೇಲ್ಭಾಗದಲ್ಲಿ ಯಾವದಾದರು ಸರ್ಕಾರ್ ಕೆರೆಗಳಿದ್ದು ಅವುಗಳ ಜಲಾಧಾರದಿಂದ ಇನಾಂದಾರರ ಕೆರೆ ತುಂಬಿ ಅದರಿಂದ ಸಾಗುವಳಿಯಾದರೆ ಅಂತಾ ಜಮೀನುಗಳ ವಿಸ್ತೀರ್ಣ, ಚೇರೀಜ್, ದಾಮಾಷಾಯಿ ಕ್ವಿಟರೆಂಟ್, ಮತ್ತು. ಇನಾಂ ಕೆರೆಗಳ ಮೇಲ್ಭಾಗದಲ್ಲಿರುವ ಸರ್ಕಾರ್ ಕೆರೆಗಳಿಂದ ಇನಾಂ ಗ್ರಾಮಗಳ ಕೆರೆಗಳು ತುಂಬದಾಗ್ಯೂ ಅಂತಾ ಸರ್ಕಾರೀ ಕೆರೆಯ ಆಸರೆಯಲ್ಲಿ ಸಾಗುವಳಿಯಾಗುವ ಇನಾಮತಿ ಜಮೀನಿನ ವಿಸ್ತೀರ್ಣ, ಬೀಜವರಿ ವಗ್ಯೆರೆ.

೭ ಇದುವರಿವಿಗೆ ಗವರ್ನಮೆಂಟಿನವರಿಂದ ಮಾಡಲ್ಪಟ್ಟಿರುವ ಕೆರೆ ರಿಪೇರಿಗಳಬಗ್ಯೆ ಆ ತಾರೀಖ್ ವರಿವಿಗೂ ಇನಾಂದಾರರಿಂದ ಸಲ್ಲಬೇಕಾಗಿರುವ ಸಹಾಯದ್ರವ್ಯದ ಮೊತ್ತವು.

೮ ಈ ವಿಷಯದಲ್ಲಿ ಗವರ್ನಮೆಂಟಿನವರು ನಿಷ್ಪಕ್ಷವಾದ ಒಂದು ತೀರ್ಮಾನ ಮಾಡಲಿಕ್ಕೆ ಆವಶ್ಯಕವಾಗಿ ತಿಳಿಯಬೇಕಾದ ಉಪಯುಕ್ತಾಂಶಗಳೆಂದು ಡೆಪ್ಯುಟಿ ಕಮಿಷನರಗಳು ಭಾವಿಸಬಹುದಾದ ಇತರ ವಿಷಯಗಳು,

ಈ ಹುಕುಮನ್ನು ನೋಡಲಾಗಿ ಇನಾಂದಾರರಿಗೆ ಶೀಘ್ರದಲ್ಲಿ ಕಂಟ್ರಿಬ್ಯೂಷನ್ ತಗಾದೆ ಯುಂಟಾಗಬಹುದೆಂದು ತೋರುತಿದೆ. ಇವರು ತಮ್ಮ ಕೆರೆಗಳನ್ನು ಸ್ವತಃ ದುರಸ್ತು ಮಾಡಿಕೊಂಡರೆ ಸರ್ಕಾರದವರ ಪ್ರವೇಶಕ್ಕೂ ನಿರ್ಬಂಧಕ್ಕೂ ಅವಕಾಶವಿರಲಾರದು.

LOCAL AND PROVINCIAL NEWS

ಒಳದೇಶ ಮತ್ತು ತಾಲ್ಲೂಕ್ ಪ್ರಾಂತ್ಯ ವೃತ್ತಾಂತಗಳು.

H. H the Maharaja.—ಬರುವ ತಿಂಗಳ ಅಂತ್ಯಭಾಗದಲ್ಲಿ ಶ್ರೀಮನ್ಮಹಾರಾಜರವರು ತಮ್ಮ ಕುಟುಂಬ ಸಮೇತರಾಗಿಲ್ಲಿಗೆ ದಯಮಾಡುವರೆಂದು ನಿರೀಕ್ಷಿಸಲ್ಪಟ್ಟದೆ

Mr. Standish Lee.—ಮೈಸೂರ್ ದರ್ಬಾರ್ ಸಾನಿಟರಿ ಇಂಜನಿಯರಾದ ಮಿ|| ಸ್ಟ್ಯಾಂಡಿಷ್ ಲೀಯವರು ಮೈಸೂರ್ ಗವರ್ನಮೆಂಟಿಗೆ ಸಾನಿಟರಿ ಇಂಜನಿಯರಾಗಿ ಮೊಕರರ್ ಮಾಡಲ್ಪಟ್ಟಿರುತ್ತಾರೆ.

Remission.—ಗ್ರಾಮನೌಕರಿ ಜಮೀನುಗಳು ತರೀಯಾಗಿದ್ದರೆ ಲೋಕಲ್ ಫಂಡ್ ಸೇರಿ ಅರ್ಧ ಕ್ವಿಟರೆಂಟ್ ಮಾಫ್ ಮಾಡಿರುವಂತೆ ಈಚೆಗೆ ಹುಕುಂ ಬಂದಿರುತಿದೆ ದೇವದಾಯದ ಜಮೀನುಗಳಿಗೆ ಈ ರಿಯಾಯತಿ ಇಲ್ಲವೆನ್ನುತ್ತಾರೆ.

Train service.—ಪೂರ್ವೋಕ್ತ ನಾವು ತಿಳಿಸಿದ್ದ ಪ್ರಕಾರ ಬರುವ ತಿಂಗಳ ಗುರ್ರೇ ತಾರೀಖ್ ಮೊದಲು ಮೈಸೂರಿಂದ ಪುನೇ ವರಿವಿಗೆ ಹೋಗಿ ಬರುತಲಿರುವ ರೆಯಿಲ್ ಗಾಡಿಗಳ ಸಂಚಾರ ಕಾಲಗಳಲ್ಲಿ ಕೆಲವು ಬದಲಾವಣೆಗಳು ನಡೆದು ಜಾರಿಯಲ್ಲಿಬರುವದಾಗಿದೆಯೆಂದು ತಿಳಿಯಬರುತಿದೆ.

Railway Extension.— ನಂಜನಗೂಡಿನಿಂದ ಗೂಡಲೂರ್ ವರಿವಿಗೆ ಹಾಕಲ್ಪಡುತಲಿರುವ

ರೆಯುದ್ವೇ ಕಾಮಗಾರಿಯು ಅತಿ ತೀವ್ರವಾಗಿ ಜರುಗುತಲಿದೆ. ಇದು ಕ್ಷಿಪ್ರದಲ್ಲಿಯೇ ಅಂದರೆ ಉದ್ದೇಶಿಸಲ್ಪಟ್ಟಿರುವ ಕಾಲಕ್ಕೆ ಪೂರ್ವವೇ ಪೂರೈಸಬಹುದೆಂದು ತೋರುತಿದೆ.

Col. C. Bowen.—ಈಸಂಸ್ಥಾನದ ಮರಮತ್ ಇಲಾಖಾ ಶೆಕ್ರೆಟರಿಯವರಾದ ಕರ್ನಲ್ ಬವನ್ ಸಾಹೇಬರವರು ಬರುವ ತಿಂಗಳಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗಿ ಸ್ವದೇಶಕ್ಕೆ ಹೊರಡುವರಾಗಿರುವರೆಂದು ಕೇಳುತ್ತೇವೆ. ಇವರ ಸ್ಥಾನದಲ್ಲಿ ಯಾರು ನಿಯಮಿಸಲ್ಪಡುವರೋ ತಿಳಿಯಲಿಲ್ಲವು. ಕರ್ನಲ್ ಬವನ್‌ಯವರ ಜ್ಞಾಪಕವು ಇರುವಂತೆ, ಅವರ ಕೈಕೆಳಗೆ ನೌಕರಿ ಮಾಡಿದವರೆಲ್ಲರು ಸೇರಿ ಅವರ ಫೋಟೋ ತೆಗೆಸುವ ಪ್ರಯತ್ನದೊಳಿರುವಂತೆ ತಿಳಿಯಬರುತಿದೆ.

The Resident.—ಬರುವ ತಿಂಗಳ ೧೨ನೇ ತಾರೀಖಿನಲ್ಲಿ ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಿ. ಎಸ್. ಐ. ಯವರು ಜರೂರಿಯಾದ ಸ್ವಂತ ಕೆಲಸದ ಬಗ್ಯೆ ಮೂರು ತಿಂಗಳ ಫರ್ಲೋ ರಜಾ ಪಡೆದು ಇಂಗ್ಲೆಂಡಿಗೆ ಹೊರಡುವವರಾಗಿದಾರೆಂದು ಸುಬತಕ್ಕೆ ಮೂಲಕ ತಿಳಿಯಬರುವಂತೆ ಹಿಂದೂದೇಶದ ಈವನಿಂಗ್ ಮೈಯಿಲ್ ಪತ್ರಿಕೆ ತಿಳಿಸಿ ಅವರ ಗೈರುಹಾಜರಿ ಕಾಲದಲ್ಲಿ ಅಸಿಸ್ಟೆಂಟ್ ರೆಸಿಡೆಂಟರವರು ಆಕ್ಟಿಂಗಾಗಿ ಅವರ ಕೆಲಸವನ್ನು ನೋಡುವರೆಯೂ ಅವಶ್ಯಕವಿದ್ದಾಗ ಇನ್ನುಳಿದವು ಸಾಗಾಣಿ ವಗೈರೆ ವಗೈರೆಗಳು ನಡೆಯುವಂತೆಯೂ ಸೂಚಿಸುತಿದೆ.

Robbery.—ಹಾಲೀ ಮಾರ್ಚ್ ೧೭ ನೇ ತಾರೀಖಿನ ರಾತ್ರಿ ಇಲ್ಲಿಂದ ಚಿಕ್ಕಬಳ್ಳಾಪುರಕ್ಕೆ ಹೋಗುವ ತಪಾಲ್ ಗಾಡಿಯು ಮಾಮೂಲು ನಾಯಕನ ೭ ಮೈಲಿಯ ಹೊಳೆಯಲ್ಲಿ ಚಿಕ್ಕಬಳ್ಳಾಪುರಕ್ಕೆ ಇಂದು ಮೈಲಿನ ಹಾಸಲೆಯಲ್ಲಿ ಹೋಗುತಲಿರುವಾಗ್ಯೆ ಕೆಲವರು ಕತ್ತರು ಹಾಗೆ ಕಟ್ಟಿ ಗಾಡಿಯಲ್ಲಿದ್ದವರನ್ನು ಹೊಡೆದು ಅವರ ಬಳಿಯಿದ್ದ ೧೫೦೦ ರೂಪಾಯಿಗಳ ಬಾಬಿಗಳನ್ನು ಅಪಹರಿಸಿಕೊಂಡು ಪರಾರಿಯಾದರೆಂದು ಕೇಳುತ್ತೇವೆ. ಸದರಿ ಗಾಡಿಯಲ್ಲಿ ಪ್ರಯಾಣ ಹೊರಡುವವರು ವಿಶೇಷಕ್ಕಾಗಿ ಸಕಲ ಸನ್ನಾಹಗಳಂ ಮಾಡಿಕೊಂಡು ಈ ಪ್ರಾಂತದ ಹೊರಟಂತವನ್ನು ತಿಳಿದು ತಪಾಲಿಗಾಡಿಯವರ ಪರೀಕ್ಷೆನವೇ ಈ ಕಳವು ನಡೆಸಲ್ಪಟ್ಟಂತೆ ಭಾವಿಸಬೇಕಾಗಿದೆ. ಪ್ರಜೆಗಳ ಸುಸುಖಕ್ಕೆ ಇವೆಲ್ಲವು ಅಂಕುರವೆಂದೆಣಿಸುತ್ತೇವೆ.

Cavery water.—ಇಂಗ್ಲೀಷಿನವರ ಪ್ರಭುತ್ವದಲ್ಲಿ ಪೃಥಿವ್ಯಾದಿ ಪಂಚಭೂತಗಳು ಸಹ ಅಸ್ವಾಧೀನಗಳಾಗಿ ಅವರ ನಿರ್ಬಂಧಗಳಿಗೊಳಪಟ್ಟು ಅಂದಿನಿಂದ ಕಾಲ ಪ್ರಸಕ್ತವಾಗಿರುತಿದೆ ಬಹುವಿಧ ನಿರ್ಬಂಧ ರೂಪವಾದ ಈ ಪ್ರಭುತ್ವವು ಏನೆಂದು ಕೊಂಡಾಡಬೇಕು? ಶ್ರೀಮನ್ ಮಹಾರಾಜಾ ಸರ್ಕಾರದವರು ತಮ್ಮ ದೇಶದೊಳಗಿನ್ನೂ ಯಾವುದೇ ಗವರ್ನ್‌ಮೆಂಟಿನವರ ದಯಾಜಾರೀತಿಯಿಂ ಪಡೆದ ಕಾವೇರಿ ನದಿಗೆ ಅಡ್ಡವಾಗಿ ಅಣೆಕಟ್ಟು ಕಟ್ಟಿ ನೀರು ತಿರಿಗಿಸಿಕೊಂಡು ಉಪಯೋಗಿಸಿಕೊಳ್ಳ ಕೂಡದೆಂತಲೂ, ಹಾಗೆ ಉಪಯೋಗಿಸಿಕೊಳ್ಳುವದರಿಂದ ಮದರಾಸ್ ಪ್ರೆಸಿಡೆನ್ಸಿಯ ಪೈಕಿ ತಿರುಚನಾಪಳ್ಳಿ ತಂಜಾವೂರು ವಗೈರೆ ದಕ್ಷಿಣ ಡಿಸ್ಟ್ರಿಕ್ಟ್‌ಗಳಿಗೆ ದಾರಾಳವಾಗಿ ನೀರು ಹರಿಯಲಿಕ್ಕೆ ಅಭ್ಯಂತರವಾಗಿ ಸಾಗುವಳಿಗೆ ಅಡಚಣೆಯುಂಟಾಗುತದೆಂತಲೂ, ಈಚೆಗೆ ಹುಕುಂ ಮಾಡಿದಾರೆಂದು ಒಳದೇಶದ ಪಯೊನೀರ್ಸ್ಟ ಪತ್ರಿಕೆ ಹೇಳುತಿದೆ. ಸ್ವದೇಶದಲ್ಲಿ ಹರಿಯುವ ಭಗವದ್ದತ್ತವಾದ ಉದಕವನ್ನು ಉಪಯೋಗಿಸಿ ಕೊಳ್ಳಲಿಕ್ಕೆ ಸಹ ಸ್ವಾತಂತ್ರ್ಯ ತಪ್ಪಿತು.

A meeting.—ಬೆಂಗಳೂರು ನಗರ್ತರ ಪೇಟೆಯಲ್ಲಿನ ಕ್ಷಾಮನಿವಾರಕ ಧರ್ಮಸಹಾಯ ಸಂಘದವರು ಕಳೆದ ತಿಂಗಳ ೨೯ನೇ ತಾರೀಖು ಭಾನುವಾರದ ಜನ ಸಭೆ ಸೇರಿದ್ದರೆಂತಲೂ, ಸದರೀ ಸಭೆಗೆ ಚೀಫ್‌ಕೋರ್ಟ್ ಜಡ್ಜಿಯರಾದ ಮೆ|| ರಾಮಚಂದ್ರಯ್ಯರವರೂ, ಮುಜರಾಯಿ ಸೂಪರಿಂಟೆಂಡೆಂಟ್ ಮೆ|| ಶ್ರೀನಿವಾಸಾಚಾರ್ಯರವರು ವಗೈರೆ ದೊಡ್ಡ ಮನುಷ್ಯರುಗಳೂ ಬಹುಜನ ವರ್ತಕರೂ ಬಂದಿದ್ದರೆಂತಲೂ, ಆ ಕಾಲದಲ್ಲಿ ಮೆ|| ಶ್ರೀನಿವಾಸಾಚಾರ್ಯರವರು ಅಗ್ರಾಸನವನ್ನಂಗೀಕರಿಸಿ, ಕಮ್ಮಿಟಿಯವರಿದುವರಿವಿಗೆ ಅಂದರೆ ಫೆಬ್ರವರಿ ಲಾಗಾಯಿತು ಮೇ ಆಖೈರುವರಿವಿಗೆ ಅನೇಕ ಕುಟುಂಬಗಳಿಗೆ ಸಹಾಯ ಮಾಡುತ ಬಂದದಕ್ಕಾಗಿ ತಾವೆಲ್ಲರು ಸಂತೋಷಿಸಿ ಕೃತಜ್ಞರಾಗಿರುವಂತೆ ತಿಳಿಸಿದರೆಂತಲೂ, ಆವರಮೇಲೆ ಮೆ|| ರಾಮಚಂದ್ರಯ್ಯನವರು ಇನ್ನೂ ೫ ತಿಂಗಳಕಾಲ ಸದರೀ ಧರ್ಮ ನಡೆಯಬೇಕೆಂದು ಅಪ್ಪಣೆ ಕೊಟ್ಟ ತರುವಾಯ ಮೆ|| ಶ್ರೀನಿವಾಸಾಚಾರ್ಯರವರು ಜೂನ್ ಜುಲೈ ಎರಡು ತಿಂಗಳು ನಡೆಸಿ ಮುಂದೆ ಕಾಲಸ್ಥಿತಿಯನ್ನು ಯೋಚಿಸಿಯೇ ಏರ್ಪಾಡು ಮಾಡಬೇಕೆಂದು ಹೇಳಿದರೆಂತಲೂ ತಿಳಿಯಬಂದಿವೆ.

೨೫ ರೂ, ಮೆ|| ರಾಮಚಂದ್ರಯ್ಯರವರು ಎರಡು ತಿಂಗಳ ಚಂದಾ ಕೊಟ್ಟರು.
೧೫ ರೂ. ಅ. ಅಪ್ಸೋಜೀಕೇಶವ ರಾಮಸ್ವಾಮಯ್ಯರವರು.
೫೦ ರೂ|| ಸಾಂಬಶಿವಯ್ಯನವರು.
೧೫ ರೂ. ಬಿ. ವೆಂಕಟರಾಮಯ್ಯನವರು.
೫೦ ರೂ|| ಸಬ್‌ಜಡ್ಜಿ ನಂಜುಂಡಯ್ಯನವರು ಎರಡು ತಿಂಗಳ ಚಂದಾ ಕೊಟ್ಟಿರುತ್ತಾರೆ.

ಶ್ರೀಮನ್ಮಹಾರಾಜ್ಞೀ ಇಂಡ್ಯಾ ಚಕ್ರವರ್ತಿನೀಯವರ ಜಾತಕವು.



ಕಳೆದ ಮೇ ತಿಂಗಳ ೨೪ ನೇ ತಾರೀಖಿನ ದಿನ ಶ್ರೀಮನ್ ಮಹಾರಾಜ್ಞೀಯವರ ೭೩ ನೇ ವರ್ಷವರ್ಧಂತೀ ಶುಭದಿನವಾದುದರಿಂದ ಆ ದಿನ ವಡಾಮುಲುಕ್ ಪ್ರಕಾರ ಜಗತ್ತಕ್ಕೆ ಸಕಲ ರಾಜಮರ್ಯಾದೆಗಳೂ ನಡೆದವಷ್ಟೆ. ಆಕೆಯವರು ಜನಿಸಿದ ಸಂವತ್ಸರ ಮಾಸ ತಿಥಿ ಕಾಲಲಗ್ನಗಳನ್ನು ಹಿಡಿದು ಕೆಲವರು ಜ್ಯೋತಿಷ್ಯರು ಆಕೆಯವರ ಜನನಕಾಲದಲ್ಲಿದ್ದ ಗ್ರಹಗತಿಗಳಂ ಸ್ಫುಟೀಕರಿಸಿ ಅವರ ಜಾತಕದರಾಶಿ ಕುಂಡಲಿಯು ಮೇಲೆ ಕಂಡಂತೆ ಯಿದ್ದಿರಬೇಕೆಂದೂಹಿಸಿ ಭೂತ ಭವಿಷ್ಯದ್ವರ್ತಮಾನ ಯೋಗ ಫಲಾ ಫಲಗಳಂ ನಿಶ್ಚೈಸಿರುತ್ತಾರೆ.

ಇವರು ೧೮೧೯ ನೇ ಸಂವತ್ಸರ ಮೇ ತಿಂಗಳು ೨೪ ನೇ ತಾರೀಖಿಗೆ ಸರಿಯಾದ ಶಾಲೀವಾಹನಶಕ ೧೭೪೧ನೇಯ ವಿಕ್ರಮನಾಮ ಸಂವತ್ಸರ ವೈಶಾಖ ಬಹುಳ ಚತುರ್ಥಿ ಶುಕ್ರವಾರ, ಬೆಳಗಿನ ಝಾವ ೪ ಘಂಟೆಗೆ ಮೇಷಲಗ್ನದಲ್ಲಿ ರಾಮ ಮಹರ್ಷಿಕೆಯೊಳು ಜನಿಸಿದರು. ಈಗ ಇವರಿಗೆ ಶುಕ್ರಮಹದ್ದಶೆಯು ನಡೆಯುತಲಿದೆ. ಜನನ ಕಾಲದಲ್ಲಿ ಮೇಷದೊಳು ಕುಜ ಶುಕ್ರರೂ, ವೃಷಭದಲ್ಲಿ ರವಿ ಬುಧರೂ, ಕನ್ಯೆಯಲ್ಲಿ ಕೇತುವೂ ಕುಂಭದಲ್ಲಿ ಗುರು ಚಂದ್ರರೂ, ಮೀನದಲ್ಲಿ ಶನಿ ರಾಹುಗಳೂ ಇದ್ದರು. ಗ್ರಹಗಳ ಸ್ಥಿತಿ ಈರೀತಿ ಇದ್ದದರಿಂದಲೇ ಮಹದೈಶ್ವರ್ಯವೂ ಅಖಂಡಾಧಿಪತ್ಯವೂ, ಸಂತಾನಾಭಿವೃದ್ಧಿಯೂ ದೀರ್ಘಾಯುರಾರೋಗ್ಯವೂ ಉಳ್ಳವರಾಗಿದಾರೆಂದು ಕಾಲಜ್ಞರು ಹೇಳುತ್ತಾರೆ. ಇದಕ್ಕೆ ಮಹಾರಾಣಿಯವರ ತಾತ್ಕಾಲಿಕ ಪ್ರಾಭವವೈಭವಗಳೇ ನಿದರ್ಶನಗಳಾಗಿವೆ

CORRESPONDEOCE.

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಏತತ್ಪತ್ರಿಕಾ ಲೇಖಕರು ಬಾಧ್ಯರಲ್ಲವು.—ಎಡಿಟರ್ ಕ. ಪ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ಅಯ್ಯಾ,—ಈ ರಾಜ್ಯದಲ್ಲಿ ಬ್ರಿಟಿಷ್ ಅಡ್ಮಿನಿಸ್ಟ್ರೇಷನ್ ತಾಟಸ್ಥ್ಯವನ್ನು ವಹಿಸಿ ಇನ್ನೂ ೧೨ ವರುಷಗಳಕಾಲ ಕಳೆಯಲಿಲ್ಲವು. ಇಷ್ಟರಲ್ಲಿಯೆ ಮೈಸೂರು ದೇಶದ ನೇಟಿವ್ ಪೇಪರ್‌ಗಳು ಯಿದ್ವೇ ವಿಧದಿಂ ತಮ್ಮ ಮಹಾರಾಜರ ಗೌರವ ಮರ್ಯಾದೆಗಳನ್ನೂ, ರಾಜ್ಯಭಾರ ಕ್ರಮಗಳನ್ನೂ, ಅದರಲ್ಲಿ ಉಂಟಾದ ನ್ಯೂನಾಧಿಕ್ಯಗಳನ್ನೂ ಕುರಿತು ಸಚ್ಛಿತ್ತಾದ ನಡುತ ಹೊಗಳಿಕೊಳ್ಳುತಿವೆ. ಸದರನ್ ಮಹಾರಾಷ್ಟ್ರ ಕಂಪೆನಿಯವರು ಸ್ಟೇಟ್ ರೈಲ್ವೇ ಕೆಲಸವನ್ನು ವಹಿಸಿದನ್ನು, ಇಂಪೀರಿಯಲ್ ಪೋಸ್ಟಿನವರು ಹಳೇ ಅಂಚೆಯನ್ನು ತೆಗದುಕೊಂಡದ್ದೂ, ರೈಲ್ವೇ ಸ್ಟೇಷನ್‌ಗಳಲ್ಲಿನ ಕಂದಾಚಾರ ಕ್ರಮವು ಇಂಪೀರಿಯಲ್ ಪೋಲೀಸ್ ವಿಚಾರಣೆಗೊಳಪಟ್ಟದ್ದೂ, ಮೈಸೂರು ಸಂಸ್ಥಾನವು ಅದಾಯಗಳಂತ ಬಚಾಯಿಸುವದಕ್ಕೆ ಕಾರಣವೆಂದು ಅರಿಯದೆ ಅದಕ್ಕೆ ಯೇನೋ ಗೌರವ ಲೋಪವಾಯಿತೆಂದು ಭಾವಿಸುತ್ತಾರೆ. ನಿಜವಾಡಿದರೆ ನಿಷ್ಠುರವೆಂಬ ಗಾದೆ ಸಟೆಯಲ್ಲವೆ. ಇಂಗ್ಲಿಷ್ ಕ್ರಮಪ್ರಕಾರ ವಸೂಲಾಗುವ ಛಾಪಾಕಾಗದ, ರಿಜಿಸ್ಟ್ರೇಷನ್, ಗೋಸ್ಪಿವ್ಯಸಿನಿಂಗ್, ಎಕ್ಸೈಜ್ ಡ್ಯೂಟಿ, ಈ ಬಾಬ ವಜಾ ಮಾಡಿದರೆ ಈಚೆಗೆ ಸಾರ ಬಕಾಲಿ ಜಾಸ್ತಿಯಾಗುವ ಬದಾಮುಯಿತು ಗೊತ್ತಾಗುವುದು. ಬ್ರಿಟಿಷ್ ರೆಸಿಡೆಂಟರು ಬೆಂಗಳೂರಲ್ಲಿ ವಾಸವಾಗಿಲ್ಲದಿದ್ದರೆ ಬೆಂಗಳೂರಲ್ಲಿ ಖಜಾನೆ ನಿಂತಿರುವದೂ, ಜ್ಯೆವೆಲರಿಗಳು ಬಂದೋಬಸ್ತಾಗಿರುವದೂ ತಿಳಿದೀತು. ಬ್ರಿಟಿಷ್ ಕ್ಯಾವಲರಿ ಇಲ್ಲದಿದ್ದರೆ ಮೈಸೂರು ಸವಾರರು ಅಂಚೇ ಲಕೋಟೆಗಳನ್ನು ಸರಿಯಾಗಿ ತಂದುಕೊಡುವದು ಹೊರಗಾಗುತಿತ್ತು. ಮದರಾಸ್ ಪೋಲೀಸ್ ಕ್ರಮ ಸ್ಥಿರಪಡದೆ ಇದ್ದರೆ ಕಂದಾಚಾರದ ಕಾರಬಾರ್ ಹಿಂದೆ ಜರಿಗಿದ ಹಾಗೆಯೇ ಮುಂದೆಯೂ ಲಾಚಕಾಮಿಗೆ ಕಾರಣವಾಗಿರುತಿತ್ತು. ಜುಡಿಷಿಯಲ್ ಕೋರ್ಟುಗಳಲ್ಲಿ ಲಾ ಸಿಸ್ಟಂ ಏರ್ಪಟ್ಟು ಚೀಫ್‌ಕೋರ್ಟ್ ಜಡ್ಜಿಗಳು ಮದರಾಸಿನವರಾಗಿರುವದರಿಂದಲೇ ಇನಸ್ನು ವರ್ತಕರು ವ್ಯಾಪಾರ ಸುಖದ ಮಾಡುತ ಸ್ವಸ್ಥರಾಗಿದಾರೆ. ಮುಂಬೈ ರೆವಿನ್ಯೂ ಸರ್ವೇ ಸೆಟಲ್‌ಮೆಂಟ್ ಕ್ರಮ ಜಾರೀಯಲ್ಲಿ ಬಂದು ಗ್ರಾಂಟಿಸಾಹೇಬರು ಉರ್ಜಿತವಾಗಿ ಇಲ್ಲದೆ ಇದ್ದರೆ ಮುಲ್ಕೀ ಕ್ರಮ ಗ್ರಾಮಕ್ಕೆ ಒಂದು ರೀತಿ ಆಗದೆ ಹೋಗುತಿತ್ತು. ಜಮೀನ್ದಾರಿಗಳು ಈಗ ಹೊಸ ಅಸಿಸ್ಟೆಂಟ್ ಕಮಿಷನರ್‌ಗಳ ಅಡಳತಕ್ಕೆ ಸಿಕ್ಕಿ ಅಲ್ಲಾಡುತಲಿವೆ ನೋಡಿ. ಕೆಲವು ಜನಗಳು ದೊಡ್ಡ ಅಧಿಕಾರಗಳು ಅಂದರೆ ಅಸಿಸ್ಟೆಂಟ್ ಕೆಲಸಗಳು ಮನಸ್ಸು ಬಂದವರಿಗೆ ಕೊಡಲ್ಪಡುತಲಿರುವದರಿಂದ ಹ್ಯಾಗಾದರು ಅರಮನೇ ಹಣ ಕತ್ತರಿಸಿಹೋಗುತ್ತೆಂದು ಭಾವಿಸುತ್ತಾರೆ. ಈ ದೇಶೀಯರಿಗೆ ಅಧಿಕಾರಗಳು ಪ್ರಾಪ್ತವಾದರೆ ಜವಾನಿ ಇಸಮಿಗೆ ಇಷ್ಟು ರೂಪಾಯಿ ಯೆಂಬ ಸ್ಥಳವಷ್ಟಿ ಪುನಃ ತಲೆ ಯೆತ್ತುತ್ತೆಂಬುವದಕ್ಕೆ ಸಂದೇಹ ಉಂಟೆ? ಮೈಸೂರ್ ಮಹಾರಾಜರಂತಾ ದೀರ್ಘ ದರ್ಶಿಗಳು ಯಾರೂ ಇಲ್ಲವು, ಅವರು ಅನಿಷ್ಟಕ್ಕೆ ತಮ್ಮ ದಿವಾನರನ್ನೂ ರೆಸಿಡೆಂಟರನ್ನೂ ಗುರಿಮಾಡಿ ತಾವು ಸ್ವಸ್ಥವಾಗಿ ಇದಾರೆ. ನಿಜವಾಗಿ ಅವರಭ್ಯಯ ಉಭಯಪ್ರರಿಗೂ ಉಂಟು. ಅವರ ಯೋಗ್ಯತೆಮೇರೆ ಬ್ರಿಟಿಷ್ ಸರ್ಕಾರದವರು ಸಾಲಿಗೆ ಹತ್ತು ಲಕ್ಷರೂಪಾಯಿಗಳು ಸಬಸಿಡಿ ಮಾಫಿ ಮಾಡಿದಾರೆ ಯೆಷ್ಟೋರ್ಮ್ಮ ಇತರಳಿಮರ್ಯ್ಯನೋ ದಿ ಇಲ್ಲವು. ರೈಲ್ವೆ ರಸ್ತೆಗಳು, ಕಾಫಿ ತೋಟಗಳು, ಅನೇಕ ಕಂಪೆನಿಗಳು ಸ್ಥಾಪಿತವಾಗಿ ಯಾವಾಗ್ಯೂ ಪರಾಯ ದೇಶಸ್ಥರ ಅಧಿಕಾರಕ್ಕೆ ಒಳಪಟ್ಟಿರುವ ಈಮೈಸೂರು ರಾಜ್ಯವು ಯಾವಸ್ಥಿತಿಯಲ್ಲಿಂಬೇಕೋ ಆಸ್ಥಿತಿಯಲ್ಲಿಯೇ ಇದೆ. ಬ್ರಿಟಿಷ್ ಅಧಿಕಾರ ಈದೇಶದಲ್ಲಿ ಪ್ರಬಲಿಸಿದಹಾಗೆಲ್ಲ ಅರಸರಿಗೂ, ಪ್ರಮುಖರಿಗೂ, ಕ್ಷೇಮವುಂಟು.

೧೫—೬—೯೨. ಪ್ರಜಾಭಿಮಾನಿ.

ವೇಳೆ ಪ್ರಕಟಿಸಲ್ಪಟ್ಟಿರುವ «ಪ್ರಜಾಭಿಮಾನಿ» ಯೆಂಬವರ ಲೇಖನವನ್ನೋದಿದಕೆಲ್ಲರೂ ಅವರು ಬ್ರಿಟಿಷ್ ಪಕ್ಷಾವಲಂಬಿಯೆಂದು ಭಾವಿಸದಿರಲಾರರು. ಈ ದೇಶದಲ್ಲಿ ಬ್ರಿಟಿಷ್ ಅಧಿಕಾರವು ಪ್ರಬಲಿಸಿದ ಹಾಗೆಲ್ಲ ಅರಸರಿಗೂ ಪ್ರಮುಖರಿಗೂ ಪ್ರಜೆಗಳಿಗೂ ಕ್ಷೇಮ ಉಂಟಾಗಬಹುದೆಂದು ತಾವು ಭಾವಿಸುವಂತೆ ಸದರೀ ಲೇಖಕರು ಬರೆಯುತ್ತಾರೆ. ಆದರೆ ಇವರ ತಾತ್ಪರ್ಯವು ಸ್ಪಷ್ಟವಾಗುತದಿಲ್ಲವು. ಯೂರೋಪಿಯನ್‌ಗಳು ನೇಟಿವ್ ಅರಸರ ಕೈಕೆಳಗೆ ನೌಕರಿ ಮಾಡುತ ಅವರಿಲ್ಲಿ ಸಕಲ ಅಡಳತಗಳನ್ನೂ ನಡೆಸುತಲಿರಬೇಕೆಂಬದು ಇವರ ಭಾವವೋ ಅಲ್ಲದೆ ಬ್ರಿಟಿಷಿನವರ ಅಧಿಪತ್ಯಕ್ಕೊಳಪಟ್ಟು ಹಿಂದೂಗಳು ಪ್ರಭುತ್ವ ಮಾಡಬೇಕೆಂಬದೋ ತಿಳಿಯಲಿಲ್ಲವು. ಯೂರೋಪಿಯನ್ ಜನರ ಪ್ರಾಬಲ್ಯವನ್ನಪೇಕ್ಷಿಸುವ ಪಕ್ಷಕ್ಕೆ ಪರಂಪರೆಯೂ ನೇಟಿವ ಪ್ರಭುತ್ವಕ್ಕೆಂದು ಅಕ್ರಿಯಸ್ಸನ್ನು ಕೋರಿದಂತಾಗುತಿದೆ. ಬ್ರಿಟಿಷ್ ಇಂಡ್ಯಾದೇಶದಲ್ಲಿರುವ ನೇಟಿವ್‌ಗಳಿಂದ ಪಾಲಿಸಲ್ಪಡಬೇಕೆಂಬದಾದರೆ ಅದು ರಾಜ್ಯವನ್ನೇ ಮರಳಿ ಬ್ರಿಟಿಷ್ ಸುಪರ್ದ್ ಮಾಡಿ ಅವರಿಂದ ಜೀವನಾಂಶ ಪಡೆಯುವದುತ್ತಮವೆಂದು ಹೇಳುವದಕ್ಕೆ ಪ್ರತ್ಯಾಮ್ನಾಯವಾಗಿರುತಿದೆ. ಈ ರಾಜ್ಯವು ಬಹುವಿಧ ಅವಸ್ಥೆಗಳಗೊಳಗಾಗಿ ಒಂದೊಂದು ಅವಸ್ಥೆಯಲ್ಲಿ ಒಂದೊಂದು ಬಗೆಯಾದ ಅಕ್ರಮಗಳಿಂದ ಬಹುವಿಧ ಸಂಕಟಗಳನ್ನನುಭವಿಸಿದದ್ದು ಪನ್ನೈದಿರುವದು ಪ್ರಜಾಭಿಮಾನಿಗೆ ತಿಳಿದಿರಬಹುದಾದುದರಿಂದ ಅದಂಕುರಿತು ಇಲ್ಲಿ ಮರಳಿ ವಿಚಾರ ಮಾಡುವದರಿಂದೇನೂ ಪ್ರಯೋಜನವಿಲ್ಲವು.—ಎಡಿ. ಕ. ಪ್ರ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಶ್ರೀ ಬಹದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂ. ೯೧, ತಾ|| ೪ ನೇ ಜೂನ್ ೧೮೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೭೭ ನೇ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್ ಮೆ|| ಪಿ.ಎಸ್. ಅಚ್ಯುತರಾಯರವರಿಗೆ ೧೮೯೨ ನೇ ಇಸವಿ ಮೇ ೧೯ ನೇ ಮಧ್ಯಾಹ್ನ ಲಾಗಾಯಿತು ಹತ್ತು ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೯೨, ತಾ|| ನೇ ಜೂನ್ ೧೮೯೨—ಚಿತ್ರದುರ್ಗ ಡಿಸ್ಟ್ರಿಕ್ಟ್ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮೆ|| ಮಿಯರ್ ಕಮಾಲುದ್ದೀನ್ ಅಲ್ಲೀಖಾನರವರು ತಾವು ಕಾಹಿಲೆಯಾಗಿರುವಂತೆ ರಿಪೋರ್ಟ್ ಮಾಡಿರುವದರಿಂದ ಅವರು ವಯೋಗಿಸಿಕೊಳ್ಳುವ ತಾರೀಖ್ ಮೊದಲು ಆರುವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ. ಅಸಿಸ್ಟೆಂಟ್ ಕಮಿಷನರ್ ಮೆ|| ಸೈಯದ್ ಅಮೀರ್ ಹಸೇನ್‌ಯವರು, ಮೆ|| ಕಮಾಲುದ್ದೀನ್ ಅಲ್ಲೀಖಾನರ ಗೈರ್ ಹಾಜರಿ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಆಗಿ ಆಕ್ಟಿಂಗ್ ಸರ್ವೀಸ್ ಮಾಡತಕ್ಕದ್ದಾಗಿ ನೇಮಿಸಲ್ಪಟ್ಟಿರುತ್ತಾರೆ. ಬೆಂಗಳೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ರಾಮಾರಾಮ ನಾಯಕ್‌ಯವರು ನಾಪಹಾಸ್ಯ ಕೆಲಸಗಳ ನಿರ್ವಹಣೆಯ ಬಗ್ಯೆ ಹುಗುವಿನ ತರೀಕ್ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ. ೯೩.—ಅಸಿಸ್ಟೆಂಟ್ ಕಮಿಷನರ್ ಮೆ|| ಜೆ. ಜೆ ನಾರ್ಥ್‌ಯವರಿಗೆ, ೧೮೯೧ ನೇ ಇಸವಿ ಡಿಸಂಬರ್ ೪, ೧೮೯೨ ನೇ ಇಸವಿ ಫೆಬ್ರವರಿ, ೧೫, ಮಾರ್ಚ್ ೧೬, ಮತ್ತು ಮೇ ೭ ನೇ ಮುರ್ರಂಗಳುಳ್ಳ ೭೯೨,೪೪೩—೪೮೩ ಮತ್ತು ೫೦ ನೇ ನಂಬರುಗಳುಳ್ಳ ಇಷ್ತಿಹಾರ್ ನಾಮೆಗಳ ಮೂಲಕ ಮಂಜೂರ್ ಮೆಡಿಕಲ್ ಸರ್ಟಿಫಿಕೇಟ್ ಮೇರೆ ಕೊಡಲ್ಪಟ್ಟಿದ್ದ ರಜಾವಲ್ಲದೆ ಇನ್ನೊಂದು ತಿಂಗಳಕಾಲ ಜಾಸ್ತೀ ರಜಾ ಕೊಡಲ್ಪಟ್ಟಿರುತಿದೆ.

ನಂ. ೯೪—ಸಿವಿಲ್ ಪ್ರೊಸೀಜರ್ ಕೋಡಿನ ೧೨ ನೇ ಸೆಕ್ಷನ್ ಅನುಸರಿಸಿ ಮೈಸೂರ್ ಜೆಯಿಲ್ ಆಫಿಷಿಯೇಟಿಂಗ್ ಸೂಪರಿಂಟೆಂ

ಬೆಂಟರಾದ ಸರ್ಜಿಯನ್ ಲೆಫ್ಟಿನೆಂಟ್ ಕರ್ನಲ್ ಪಿ. ಎಚ್. ಡಾಬ್ಸನ್‌ಯವರಿಗೆ, ಅವರು ಚೀಫ್ ಆಫೀಸ್ ಯೇಟಿಂಗ್ ಸ್ಯಾನಿಟರಿ ಕಮೀಷನರಾಗಿದ್ದು ಕೆಲಸ ನೋಡುತಲಿರುವತನಕ ಮೆಡಿಕಲ್ ಖಾನೆಯೊಳಗೆ ಚಲಾಯಿಸತಕ್ಕ ಬಗ್ಗೆ ಒಂದನೇ ಕ್ಲಾಸ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತಿವೆ.

ನಂ. ೯೫.—ಹುಜೂರ್ ಖಜಾನೆಯ ಖಜಾಂಚಿಯಾದ ಮ|| ಟಿ. ರಾಯಲುಶೆಟ್ಟರವರಿಗೆ ಮೈಸೂರ್ ಸರ್ವಿಸ ರೆಗ್ಯುಲೇಷನ್‌ಗಳ ೧೭೨ ನೇ ಆರ್ಟಿಕಲ್ ಅನುಸರಿಸಿ ೧೮೯೨ ನೇ ಇಸಿವಿ ಏಪ್ರಿಲ್ ೨೨ ನೇ ತಾರೀಖ್ ಲಾಗಾಯಿತು ಹನ್ನೆರಡು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೯೬, ತಾ|| ೮ ನೇ ಜೂನ್ ೧೮೯೨ — ಶಿಕಾರಿಪುರದ ತಾಲ್ಲೂಕ್ ಅಮಲ್ದಾರ್ ಆರ್|| ಸುಬ್ಬರಾಯರವರಿಗೆ, ೧೮೯೨ ನೇ ಇಸಿವಿ ಜನವರಿ ೨೮ ನೇ ಹುಕುಂ ೪೨೧ ನೇ ನಂಬರುಳ್ಳ ಖ್ಯಾರ್ ನಾಮೆಯಲ್ಲಿ ಕೊಡಲ್ಪಟ್ಟಿದ್ದ ೭ ದಿನಗಳ ಪ್ರಿವಿಲೇಜ್ ರಜಾ ಇನ್ನು ೮ ದಿನಗಳಿಗೆ ಜಾಸ್ತಿ ಮಾಡಲ್ಪಟ್ಟಿರುತಿದೆ.

ನಂ. ೯೭.—೧೮೯೨ ನೇ ಇಸಿವಿ ಫೆಬ್ರವರಿ ೨೯ ನೇ ಹುಕುಂ ೧೩೫೯೮—೬೦೦—[.—೧೩೯೧ ನೇ ನಂಬರುಳ್ಳ ಗವರ್ನಮೆಂಟ್ ಪ್ರೊಸೀಡಿಂಗ್ಸಿನಲ್ಲಿ ನಮೂದಾಗಿರುವ ಹುಕುಂ ಅನುಸರಿಸಿ ಅಸಿಸ್ಟೆಂಟ್ ಸರ್ಜಿಯನ್ ಮಿಸ್ಟರ್ ಅಯಾಚಿತ್ತ ಮೂಲ್, ೧೮೯೨ ನೇ ಇಸಿವಿ ಮೇ ೩ ನೇ ಮಧ್ಯಾಹ್ನದಲ್ಲಿ ಕೆಲಸಕ್ಕೆ ಹಾಜರಾಗಿರುವಂತೆ ಚೀಫ್ ಸೆಕ್ರೆಟರಿಯವರಿಗೆ ರಿಪೋರ್ಟ್ ಮಾಡಿರುವದರಿಂದ ಮಂಗಾಮಿ ದರೀಕೆ ಬೆಂಗಳೂರ್ ಪ್ರಸವಾಸ್ ಪತ್ರೆಯಲ್ಲಿ ನೌಕರಿ ಮಾಡುವಂತೆ ನಿಯಮಿಸಲ್ಪಟ್ಟಿರುತ್ತಾರೆ. ಸಬ್ ಅಸಿಸ್ಟೆಂಟ್ ಸರ್ಜಿಯನ್, ಬಿ. ದಿ. ರಾಘವೇಂದ್ರ ರಾಯರವರು, ಬೆಂಗಳೂರು ಪ್ರಸವಾಸ್ಪತ್ರೆಯಿಂದ ಸೆಂಟ್ರಲ್ ಮಾರ್ಫಾನಯವರ ಆಸ್ಪತ್ರೆಗೆ ವರ್ಗಾಯಿಸಲ್ಪಟ್ಟಿರುತ್ತಾರೆ.

ನಂ. ೯೮, ತಾ|| ೧೧ ನೇ ಜೂನ್ ೧೮೯೨.—ಮೈಸೂರ್ ಡಿಸ್ಟ್ರಿಕ್ಟ್ ಪೊಲೀಸ್ ಸ್ಯುಪರಿಂಟೆಂಡೆಂಟ್ ಮ|| ವೆದರಾಲ್‌ಯವರು ೧೮೯೨ ನೇ ಇಸಿವಿ ಮೇ ೨೮ ನೇ ಹುಕುಂ ಅಪರಾಹ್ನದಲ್ಲಿ ಪ್ರಿವಿಲೇಜ್ ರಜಾ ಪ್ರಯುಕ್ತ ಕೆಲಸಕ್ಕೆ ವಾಪಸ್ ಬಂದಂತೆ ರಿಪೋರ್ಟ್ ಮಾಡಿರುವದರಿಂದ ಅವರು ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್ಲವರ ಆಫೀಸಿನಲ್ಲಿ ಸ್ಪೆಷಿಯಲ್ ಡ್ಯೂಟಿಬಗ್ಗೆ ನಿಯಮಿಸಲ್ಪಟ್ಟಿರುತ್ತಾರೆ. ಮ|| ವೆದರಾಲ್‌ಯವರು ಸ್ಪೆಷಿಯಲ್ ಡ್ಯೂಟಿಮೇಲಿರುವ ಕಾಲದತನಕ ಅವರ ಗೈರ್‌ಹಾಜರಿಯಲ್ಲಿ ಮ|| ಹಾರ್ಡಿಯವರು ಮೈಸೂರ್ ಡಿಸ್ಟ್ರಿಕ್ಟ್ ಪೊಲೀಸ್ ಇನ್‌ಚಾರ್ಜಿನಲ್ಲಿರುತಲಿರತಕ್ಕದ್ದಲ್ಲದೆ ಮ|| ಅಬ್ದುಲ್‌ರಹಿಂ ಮೆಕ್ರಿಯವರು ಬೆಂಗಳೂರ್ ಡಿಸ್ಟ್ರಿಕ್ಟ್ ಪೊಲೀಸ್ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ. ೯೯.—ಕೊಪ್ಪ ತಾಲ್ಲೂಕ್ ಅಮಲ್ದಾರ್ ಸಿ. ಕೃಷ್ಣರಾಯರವರಿಗೆ ೧೮೯೨ ನೇ ಇಸಿವಿ ಮೇ ೨೭ ನೇ ತಾರೀಖ್ ಲಾಗಾಯಿತು, ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಯೆಡದಳ್ಳಿ ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಅಳಸಿಂಗರಾಚಾರ್ಯರು, ಸಿ. ಕೃಷ್ಣರಾಯರವರು ರಜಾಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ, ಸ್ವಂತ ಕೆಲಸಗಳೊತನೆ ಕೊಪ್ಪ ತಾಲ್ಲೂಕ್ ಚಾರ್ಜಿನಲ್ಲಿರುವರು.

ಸರ್ಕಾರಿ ಹುಕುಮುಗಳು.

ತಾಲ್ಲೂಕುಗಳಲ್ಲಿ ತೆರಲ್ಪಟ್ಟ ಅನೇಕ ವರುಷಗಳ ವಿಲೇ ಆಗದೆ ಬಾಕಿ ಉಳಿದಿರುವ [illegible] ಗವರ್ನಮೆಂಟಿನವರ ತಿಳುವಳಿಕೆಗೆ ಬಂದಿರುತದೆ. [illegible] ಲಾಗಾಯಿತು ಮೂರು ತಿಂಗಳಿಗಿಂತಲೂ ಹೆಚ್ಚಾಗಿ [illegible] ಬಾಕಿಯಿದ್ದಿರುವ ದರಖಾಸ್ತುಗಳ [illegible] ಎಲ್ಲಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರು ಈ ತಿಂಗಳ [illegible] ಕೆಲಸ ಗವರ್ನಮೆಂಟಿನಿಂದ ಅಪ್ಪಣೆಯಾಗಿರುತಿದೆ.

ಇನುಮುಂದೆಯೂ ಮೈಸೂರು ಸರ್ವಿಸ ರೆಗ್ಯುಲೇಷನ್ [illegible] ನೇ ಪ್ರಕರಣಕ್ಕನುಸಾರವಾಗಿ ಡೆಪ್ಯುಟಿ ಮತ್ತು ಅಸಿಸ್ಟೆಂಟ್ ಕಮೀಷನರುಗಳು, ಸಬ್‌ಡಿವಿಜನ್ ಆಫೀಸರುಗಳು, ಮತ್ತು ತಾಲ್ಲೂಕು ಆಫೀಸರುಗಳು ತಮ್ಮ ತಮ್ಮ [illegible] ಬಿಲ್ಲುಗಳನ್ನು [illegible] ಆಫೀಸಿಗೆ ಕಳುಹಿಸಿಕೊಡುತಿದ್ದರಷ್ಟೆ. [illegible] ಡೆಪ್ಯುಟಿ ಕಮೀಷನರುಗಳ ಬಿಲ್ಲುಗಳು [illegible] ಡೆಪ್ಯುಟಿ ಕಮೀಷನರವರೇ [illegible] ಮಾಡಬಹುದು, ಮತ್ತು ಡೆ|| ಕಮೀಷನರು ತಮ್ಮ ಬಿಲ್ಲುಗಳನ್ನು ಮಾತ್ರ [illegible] ಕಳುಹಿಸಿಕೊಡಬೇಕು.

ಡಿಸ್ಟ್ರಿಕ್ಟ್ [illegible] ಮೆಂಬರುಗಳು [illegible] ಅವರಿಗೆ ಕಾಲವನ್ನು [illegible] ಈ ಮೆಂಬರುಗಳನ್ನು [illegible] ಉಳ್ಳವರಾಗಿರುತ್ತಾರೆ. [illegible]

[illegible]

ಎ [illegible] ಧರ್ಮಗಳನ್ನು [illegible] [illegible]

೨. ಇವರು [illegible] ಎಂದು [illegible]

[illegible]

ಗವರ್ನಮೆಂಟಿನ ವರ್ತಮಾನ

[illegible]

ನಾವರೂ ಇದೇ ವಿಷಯವಾಗಿ [illegible] ಗುರಿಯಾದರೆ ಅವರಿಗೆ [illegible] ವಿವರಿಸಿರುವ ರೀತಿಯು ಸಂಪೂರ್ಣವಾಗಿ ಕೊಡಲ್ಪಡುವದೆಂದು ತಿಳಿಯ ಬೇಕಾದ್ದು.

(ಸ್ವ) ಎ. ಶ್ರೀನಿವಾಸಾಚಾರ್ಯ,
ಸೆಕ್ರೆಟರಿ

SUMMARY OF NEWS
ವೃತ್ತಾಂತ ಸಂಗ್ರಹವು.

[illegible]

ಇಂಗ್ಲೀಷ ಜೋತಿಶ್ಯಾಸ್ತ್ರದಲ್ಲಿ ಪಂಡಿತರಾದವರು [illegible] —ವೃ. ಪ.

[illegible]

[illegible]

[illegible]

[illegible]

[illegible]

☞ BANGALORE —Printed and published at the KARNATAKA PRESS, No 40, Hosoor Road, Pettah —1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX.] BANGALORE—MONDAY, JUNE 27, 1892. [No. 26.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ನೇ ಇಸವಿ ಜೂನ್ ೨೭ನೇ ತಾರೀಖ್ ಸೋಮವಾರ. [ಸಂಚಿಕೆ ೨೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

[illegible]	ಮುಂಗಡವಾಗಿ	ಕಡೆಗೆ
ಮುಂಗಡಗೋಸ್ಕರವಾಗಿ	8—0—0	9—0—0
[illegible] „	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

[illegible]	4—0—0	5—0—0
[illegible] „	5—0—0	6—0—0

[illegible]

ಪ್ರಕಟನೆಯ ರವಾನೆ.

[illegible] 0—0—0

[illegible] 0—0—0

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE [illegible]

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಬಿ. ವಿ. [illegible]

[illegible]

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

[illegible]

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ಣ ಮತ್ತು ಕಂಪೆನಿ.

ಕಮ್ಮಿಷನ್ ಏಜಂಟ್ಸ್.

[illegible]

THE BANGALORE SREENIVASA MANDIRAM.

ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಬಿಡಲಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ಪಟ್ಟಿ:—

೧೮೯೨ನೇ ಇಸವಿ ಜೂನ್ ೧೯ನೇ ತಾರೀಖ್ ಮೊದಲು ಜೂನ್ ೨೫ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	93
[illegible] ಸಂಖ್ಯೆ	...	58
ಗತವಾರದ ಬಾಕಿ ಸೇರು	...	45
ಜಮ್ಲಾ	...	103
[illegible] ಸೇರು	...	29
[illegible] ಅಕ್ಕಿ ಸೇರು	...	27
ಬಾಕಿ [illegible]	...	47

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ.

[illegible]	...	7
[illegible] ವಿದ್ಯಾರ್ಥಿ	...	4
[illegible] ವಿದ್ಯಾರ್ಥಿಗಳು	...	19
[illegible]		16
ಪ್ರಯಾಣಸ್ಥರು	...	8
ಜಮ್ಲಾ	...	45

THE MONEY MARKET.

[illegible] 25ನೇ [illegible] 1892.

[illegible] 107-14-0 [illegible] 108-4-0 [illegible]

[illegible] (100) [illegible] 96 [illegible]

[illegible] (100) [illegible] 165 [illegible] 170 [illegible]

[illegible] 15—12—0

[illegible] 6 [illegible] 1s. 2¾d.

[illegible] 4 [illegible] 1s. 3 7/64 d.

[illegible] 1s. 3 11/32 d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JUNE 27, 1892.

೧೮೯೨ನೇ ಇಸವಿ ಜೂನ್ ತಾ|| ೨೭ನೇ ಸೋಮವಾರ.

HINDU LUKEWARM CHARITY.

ಲೋಕದಲ್ಲಿ ಒಂದು ಫಲ ನಿರೀಕ್ಷಣೆಯೊಡನೆ ಮಾಡಲ್ಪಡುವ ದಾನವು ಯಾವಾಗಲೂ ಪ್ರಶಂಸನೀಯವಾಗಲಾರದು. ಪ್ರಥಮ ಪುರುಷಾರ್ಥವು ತುರೀಯಕ್ಕೆ ಸಾಧನವಾಗಿರುತ್ತದೆ. [illegible] ಈ ಕಾಲದಲ್ಲಿ ಮಾಡಲ್ಪಡುವ ದಾನಧರ್ಮಗಳೆಲ್ಲವು ಮಾಡತಕ್ಕವರಿಗೊಂದು ಬಿರುದ ಪ್ರತಿಷ್ಠೆ ಸಂಪಾದಕವಾಗಿಯಾದರೂ, ಅಥವಾ ಅವರ [illegible] ಸರಕಾರ [illegible] ಯಾದರೂ, ಅಥವಾ [illegible] ಮಾಡುವ ಧನದ ಮೂಲ [illegible] ಮುಖಭಂಗದಿಂದ ಮಾಡಲ್ಪಡತಕ್ಕವಾಗಿಯಾದರೂ ಇರುತ್ತವೆ. ಈ ಮೂರು ಸಂದರ್ಭಗಳಲ್ಲಿಯೂ ಲಭಿಸುವ ಪ್ರಯೋಜನಗಳು [illegible] ವು. ಏನಂದರೆ ಉದ್ದೇಶವು ಯಾವವಿಧವಾಗಿಯಾದರೂ ಇರಲಿ, ಮನುಷ್ಯನಿಗೆ ಧರ್ಮಬುದ್ಧಿಯೂ ಭೂತದಯೆಯೂ ಆವಶ್ಯಕ ಗುಣಗಳಾಗಿರುತ್ತವೆ. [illegible]

[illegible]

ಕಾಯುವ ಬಿಸಲಿಗೆ ಬಿಟ್ಟು ಮರೆಮಾಡುವವರು ನಾವಲ್ಲವೆಂದು ಹೇಳಿ ತಪ್ಪಿಸಿಕೊಳ್ಳಲಾರಂಭಿಸಿದಾರೆ. ಇವರ ದಿವ್ಯನಾಮ ಸ್ಮರಣೆಗಿಂತಲೂ ವ್ಯಕ್ತಿ ನಿರ್ದೇಶವಿಲ್ಲದೆ ಮೌನವಾಗಿರುವಿಕೆಯು, ಅವರಿಗೂ ನಮಗೂ ಸಹ ಗೌರವಾವಹವಾಗಿರುವುದು. ಕುಬೇರಾಂಶಜರಾದ ಈ ಶ್ರೀಮತ್ಸದ್ಗೃಹಸ್ಥರು, ಬರುವ ಆಗಸ್ಟ್ ತಿಂಗಳಲ್ಲಿ ಈ ಪುರದೊಳು ನಡೆಯುವ ಮ್ಯುನಿಸಿಪಲ್ ಎಲೆಕ್ಷನ್ನಲ್ಲಿ ತಮ್ಮನ್ನು ಮ್ಯುನಿಸಿಪಲ್ ಕಮಿಷನರಾಗಿ ಚುನಾಯಿಸುವಂತೆ ತಮ್ಮ ಬಳಿಗೆ ಬರುವವರನ್ನೆಲ್ಲ ಬಹಳ ದೈನ್ಯಭಾವದಿಂ ಕೇಳಿಕೊಳ್ಳುತಲಿರುವುದಾಗಿ ಕೇಳುತ್ತೇವೆ. ಪರದುಃಖಾಸಹಿಷ್ಣುಗಳಾದ ಸದರೀ ಉದಾರ ಶಿರೋಮಣಿಗಳು ಮ್ಯುನಿಸಿಪಲ್ ಕಮಿಷನರ್‌ಗಳಾಗಿ ಹೊರಡುವರೆ ಇವರು ತಮ್ಮನ್ನು ಚುನಾಯಿಸಿದವರ ಗೆಟ್ಟವರಿಟ್ಟಿಗೆ ಸುಖ ಸ್ವಾತಂತ್ರ್ಯ ರಕ್ಷಕರಾಗಿ ಪ್ರಜಾಪಕ್ಷವನ್ನವಲಂಬಿಸಿ ತಮ್ಮ ಕರ್ತವ್ಯವಂ ನೆರವೇರಿಸುವರೋ ನಾನರಿಯೆನು. ಸ್ವದೇಶೀಯರಾದ ಆಕಾರ ಪ್ರಾಣರಕ್ಷಣೆಯಲ್ಲಿಯೇ ಇಷ್ಟರ ಕೃಷಿಯೂ, ಅನುರಾಗವೂ, ಆವಶ್ಯಕತೆಯೂ ಇವರಿಗುಂಟಾಗಿರುವಲ್ಲಿ ಇತರ ವಿಷಯಗಳಲ್ಲಿ ತಿಳಿಸಬೇಕಾದುದೇನೂ ಇರುವದಿಲ್ಲವು. ಇವರ ಪ್ರಯತ್ನಕ್ಕೆ ಸ್ವದೇಶೀಯರಲ್ಲಿಷ್ಟರ ಸಹಾಯವೂ ಪ್ರೋತ್ಸಾಹವೂ ದೊರೆಯಿತಷ್ಟೆ. ಅದಕ್ಕೆ ಸ್ವಸ್ತ್ಯಾಗದೆ ಸದರೀ ಕಮಿಟಿಯು ಮಾನೇಜಿಂಗ್ ಮೆಂಬರ್‌ಗಳು ಸೇರಿ ತಮ್ಮ ಅದೃಷ್ಟವನ್ನು ಮತ್ತೊಂದು ವಿಧದಿಂದ ಪರೀಕ್ಷಿಸಲೆತ್ನಿಸಿ ಆ ಮೂಲಕವಾಗಿಯೂ ಸಂತೃಪ್ತರಾದರೆಂದು ಕೇಳುತ್ತೇವೆ. ಶ್ರೀಮನ್ಮಹಾರಾಜ್ಞೀ ಪರಿವಿಗೆ ಪ್ರಸಿದ್ಧಿಗೆ ಬಂದು ಅನಿವಾರಣವಾದ ನ್ಯಾಯಿಗ ಎಂಬ ಪ್ರಾಶಸ್ತ್ಯವಂ ಸಂಪಾದಿಸಿ ಶ್ರೀಮನ್ಮೈಸೂರ್ ಮಹಾರಾಜರಿಂದ ಸನ್ಮಾನಿತರಾಗಿ ಮದರಾಸಿನಲ್ಲಿ ಅನೇಕ ಧರ್ಮಕಾರ್ಯಗಳಿಗೆ ಮೂಲಕರ್ತರೆಂಬ ಪ್ರತಿಷ್ಠೆಯನ್ನಾರ್ಜಿಸಿ, ಹಿಂದೂ ಸಮುದಾಯದಲ್ಲಿ ಸನ್ಮಾನಿತರೆಂದು ಭಾವಿಸಲ್ಪಟ್ಟಿರುವ ಸರ್ ಕವರಿ ರಾಮಸ್ವಾಮಿ ಮೊದಲಿಯಾರ್ರವರು ಹಿಂದಿನ ವಾರಗಳ ಹಿಂದೆ ಈ ಪುರಿಗೆ ಬಂದಿದ್ದ ಕಾಲದೊಳು, ಮೇಲೆ ಕಂಡ ಕ್ಷಾಮನಿವಾರಕ ಧರ್ಮಸಹಾಯ ಸಂಘದ ಕಾರ್ಯದರ್ಶಿಗಳು ಕೆಲವರು ಅವರಬಳಿಗೆ ಹೋಗಿ ತಮ್ಮ ಪ್ರಯತ್ನೋದ್ದೇಶಗಳನ್ನರುಹಿ, ಚಂದಾ ಕೊಟ್ಟು ಸಹಾಯ ಮಾಡಿರುವ ಕೆಲವರು ದೊಡ್ಡ ಮನುಷ್ಯರ ಹೆಸರುಗಳನ್ನು ತಿಳಿಸಲು, ಮೊದಲಿಯಾರ್ರವರು ತಾನೂ ಸಾಧ್ಯವಾದ ಸಹಾಯ ಮಾಡುವಂತೆ ವಾಗ್ದಾನಮಾಡಿ ಇಲ್ಲಿನವರ ಪ್ರಯತ್ನವು ಬಹಳ ಕೊಂಡಾಡಿ ಇಲ್ಲಿಂದ ಮದರಾಸಿಗೆ ಹೋದ ಕೂಡಲೆ ಐವತ್ತು ರೂಪಾಯಿಗಳ ಕರೆನ್ಸೀ ನೋಟನ್ನು ಕಳುಹಿಸಿದರೆಂದು ಅರಿತೆವು. "ದಾನಂ ವಾತ್ಸಲ್ಯಕಂ" ಯೆಂಬದಾಗಿ ದಾನವು ಕೊಡತಕ್ಕವರ ಇಷ್ಟಾನುಸಾರವಾದುದರಿಂದ ಈ ಸಂದರ್ಭದಲ್ಲಿ ದಾನ ಕೊಟ್ಟ ಹಸುವನ್ನು ಹಲ್ಲು ಹಿಡಿದು ನೋಡುವಣವು ಧರ್ಮವಲ್ಲವೆಂಬದು ನಾವು ಅರಿತಿದ್ದಾಗ್ಯೂ ದಾನ ದಾತೃ ಪ್ರತಿಗ್ರಹೀತರ ವಿಷಯವು ಸ್ವಲ್ಪ ವಿಚಾರಾರ್ಹವಾಗಿರುತಿದೆ. ದಾನವು—ಇದು ಏಕದೇಶಿಕಮಾದುದಲ್ಲನ್ನು ಮತ್ತು ಐಹಿಕ ಭೋಗೋಪಯುಕ್ತಗಳಾದ ವಿವಾಹಾದಿ ಕಾರ್ಯಗಳಿಗುದ್ದಿಷ್ಟವಾದುದಲ್ಲವು. ಅನಪೇಕ್ಷಿತವಿಷಯಕ್ಕುದ್ದಿಷ್ಟವೆಂದು ನುಡಿಯಬಾರದು. ಅಥವಾ ಸರ್ವಜನೋಪಯುಕ್ತವಾದ ಪ್ರಯತ್ನವಲ್ಲವೆಂದು ಭಾವಿಸಲಾಗದು. ಇದು ಒಬ್ಬರಿಗೆ ಆವಶ್ಯಕವು ಮತ್ತೊಬ್ಬರಿಗೆ ಅನಾವಶ್ಯಕವೆಂದು ಚಿಂತಿಸಕೂಡದು. ಇದಕ್ಕೆ ದೇಶ ಜನ ಜಾತಿಭೇದಗಳ್ಯಾವದೂ ವಿನಿಕ್ಷಿಪ್ತಗಳಲ್ಲವು. ಹೀಗಿರುವಾಗ್ಯೆ ಸರ್, ರಾಮಸ್ವಾಮಿ ಮೊದಲಿಯಾರ್ರವರ ದಾತೃತ್ವವು ಅನ್ಯತ್ರ ಅಪ್ರತಿಘಾತವಾಗಿ ಪ್ರಸರಿಸುತಲಿದ್ದುದು ಪ್ರಕೃತ ವಿಷಯದಲ್ಲಿ ಸಂಕುಚಿತವಾಗಿ ವಿಕಸಿಸಿದ್ದುದು ನೋಡಿದರೆ ನಮಗೆ ಆಶ್ಚರ್ಯವೂ ಅನುತಾಪವೂ ಏಕಕಾಲದಲ್ಲಿ ಅತ್ಯವಮಿತವಾಗಿ ಉಂಟಾಗದಿರಲಿಲ್ಲವು. ಇಲ್ಲಿ ಆಶ್ಚರ್ಯವು, ಉದ್ದಿಷ್ಟ ವಿಷಯಸ್ವರೂಪದ ಪ್ರಯೋಜನ ಪರಿಭಾವನಾರಾಹಿತ್ಯಪ್ರಯುಕ್ತವಾದುದಾಗಿಯೂ, ಅನುತಾಪವೆಂಬುದು ಸ್ವದೇಶೀಯರ ದೌರ್ಭಾಗ್ಯಪ್ರಯುಕ್ತವಾದುದಾಗಿಯೂ ಇರುತಿದೆ. ಇನ್ನು ದಾತೃವಿಷಯವಂ ಕುರಿತು ಚಿಂತಿಸಿದರೆ ಅದು ಸಾಧಾರಣವಾದುದಲ್ಲವು. ಸರ್ ರಾಮಸ್ವಾಮಿ ಮೊದಲಿಯಾರ್ರವರು ಅನೇಕ ಪ್ರಕರಣಗಳಲ್ಲಿ ಪರರ ಹಿತಾರ್ಥ ಕುಂಜನಾರ್ಥ ಮಾಡಿರುವ ಧರ್ಮಗಳು ಅವರಿಗೀಗ ಮಹತ್ಪ್ರಸಿದ್ಧಿಯನ್ನೂ ಗೌರವವನ್ನೂ ಉಂಟುಮಾಡಿರುತಿವೆ. ಆದುದರಿಂದ ದಾನವು ಅವರಿಗೆ ನೂತನವೆಂದು ಹೇಳಲಿಕ್ಕಿಲ್ಲವು. ಮದರಾಸಿನಲ್ಲಿ ಬಾಡಿಗೆ ಗಾಡಿಗಳಿಗೆ ಕಟ್ಟತಕ್ಕ ಕುದುರೆ ಯೆತ್ತುಗಳ ಶ್ರಮ ನಿವಾರಣೆಯ ವಿಷಯದೊಳು ಸರ್. ರಾಮಸ್ವಾಮಿ ಮೊದಲಿಯಾರ್ರವರಿಗುಂಟಾದ ಅನುತಾಪವು ಕ್ಷುತ್ಪೀಡಿತರಾಗಿ ಕ್ರಮಪಡುತಲಿರುವ ಇಲ್ಲಿನ ರಿಕ್ತರ ವಿಷಯದಲ್ಲಿ ಏತಕ್ಕೆ ಉಂಟಾಗಲಿಲ್ಲವೋ ತಿಳಿಯಲಿಲ್ಲವು. ಹಿಂದುವೇಳೆ ಸದರೀ ಮೊದಲಿಯಾರ್ರವರ ಭಾವನೆಯಲ್ಲಿ ಮದರಾಸಿನಲ್ಲಿರುವವನಕರುಗಳು ದಮ್ಮ ಧರ್ಮಕ್ಕೆ ಅರ್ಹಗಳಾದಷ್ಟು ಸಹ ಇಲ್ಲಿನವರು ಯೋಗ್ಯರಲ್ಲವೆಂದು ತೋರಿಯೋ, ಅಥವಾ ಅನ್ಯರಾಜ್ಯದಲ್ಲಿ ತಾವು ಮಾಡುವ ಧರ್ಮವು ಪ್ರಸಿದ್ಧವಾಗಿ ಕೀರ್ತಿ ಸಂಪಾದಕವಾಗಲಾರದೆಂಬ ತಾತ್ಪರ್ಯದಿಂದಲೋ, ಉಪವರನ್ನರಾದ ಧನಿಕರೂ, ಅಧಿಕಾರಿಗಳೂ ಹೇರಳವಾಗಿದ್ದಾಗ್ಯೂ ಅವರಲ್ಲಿರೂ ಲೌಕ್ಯದಿಂ ಸ್ವದೇಶೀಯರ ಯೋಗಕ್ಷೇಮದಲ್ಲಿ ಉದಾಸೀನರಾಗಿರುವಾಗ್ಯೆ ಅಂತವರ ಕರ್ತವ್ಯವು ತಾವು ಕೈಗೊಳ್ಳುವದರಿಂದ ತಮಗ ನೂ ಪುಣ್ಯವುಂಟಾಗಲಾರದೆಂಬ ಮನೋನಿಶ್ಚಯದಿಂದಲೋ, ತಮ್ಮ ಸ್ವಜನಸಹಾಯವಂ ವಾಚಾ ನುಡಿಯುವವರ್ಗೆ ಸಹ ನಮಗೆ ಸಂಕೋಚವಾಗುವಷ್ಟು ಪಗ್ಗಿಸಿ ಏತದರ್ಥ ಸ್ವದೇಶಕ್ಕೆ ಹೋಗಿ ಪ್ರತ್ಯೇಕ ಒಂದು ಕಾಗದ ಬರೆಯುವಷ್ಟರ ಶ್ರಮವನ್ನವರು ವಹಿಸಿದ್ದಕ್ಕಾಗಿ ನಿಶೇಷತಃ ಅನುತಪಿಸಬೇಕಾಗಿದೆ. ಪ್ರತಿಗ್ರಹೀತರಾದರೋ ಪರಾನಿಕರಾದ ದೊಡ್ಡ ಮನುಷ್ಯರು. ಇವರು ಸ್ವತಃ ಸಾಧ್ಯವಾದಷ್ಟು ಸಹಾಯ ಮಾಡಿ ಅನ್ಯರ ಸಹಾಯವನ್ನಪೇಕ್ಷಿಸುತ್ತಾರೆಯೇ ಹೊರ್ತು ಕೇವಲ ಪರೋಪಜೀವಿಗಳಾಗಿರಲಿಲ್ಲವು. ಇದುವರಿವಿಗೆ ತಮ್ಮ ಸ್ವಂತ ದ್ರವ್ಯವನ್ನು ವ್ಯಯಮಾಡಿ ಅನ್ಯರ ಪ್ರತಿಜ್ಞಾಭಂಗದಿಂ ಭಗ್ನೋತ್ಸಾಹಿಗಳಾಗಿ ಈರೀತಿ ಯಾಚನೆಗೆ ಹೊರಟರು. ಇಲ್ಲಿನ ಚೀಫ್‌ಕೋರ್ಟ್ ಜಡ್ಜಿಯವರಾದ ಮ ರಾ ಜಸ್ಟೀ ರಾಮಚಂದ್ರಯ್ಯರವರಿಗೂ, ಇದಕ್ಕೆ ಪ್ರಥಮ ಪ್ರವರ್ತಕರಾದ ಮ ರಾ|| ರಾಯಬಹದೂರ್ ಆರ್‌ಕಾಟ್ ಶ್ರೀನಿವಾಸಾಚಾರ್ಯರಿಗೂ ಈಮೈಸೂರ್ ರಾಜ್ಯವು ಜನ್ಮಭೂಮಿಯಲ್ಲದಿದ್ದರೂ, ಇಲ್ಲಿನವರು ನೆಂಟರಿಷ್ಟರಲ್ಲದಿದ್ದರೂ ಇಲ್ಲಿನವರ ವಿಷಯದಲ್ಲಿ ಯಾವವಿಧವಾದ ಅನುರಾಗ ಅವರಿಗಿರಬೇಕಾದ ಆವಶ್ಯಕತೆ ಇಲ್ಲದಿದ್ದರೂ, ಅನೇಕರಿಗೆ ನಿದರ್ಶನದ್ದಾಗಿಯೂ ಪ್ರೇರಕವಾಗಿಯೂ ಇರುವಂತೆ ಇದುವರಿವಿಗೆ ಕೊಟ್ಟಿರುವದಲ್ಲದೆ ತಿಂಗಳು ಒಕ್ಕೆ ೧೦೦ ರೂಪಾಯಿಗಳ ಪ್ರಕಾರ ಮರಳ ಯೆರಡು ತಿಂಗಳ ಚಂದಾ ಹಣವನ್ನು ಕೊಟ್ಟು ಇನ್ನೂ ಒಂದೆರಡು ತಿಂಗಳಕಾಲ ಅದೇರೀತಿ ನಡೆಸುವಂತೆ ಉದಾರಭಾವದೊಡನೆ ಅವರು ಮಾಡಿರುವವಾಗ್ದಾನಗಳನ್ನು ಈ ಸಂದರ್ಭದಲ್ಲಿ ಸಕಲರ ತಿಳುವಳಿಕೆಗೋಸ್ಕರ ಮತ್ತೊಂದಾವರ್ತಿ ಅರುಹದೆ ಕಾದುದು ಕೇವಲ ಅವಶ್ಯಕವೆಂದು ಭಾವಿಸುತ್ತೇವೆ.

ಮುಖ್ಯವಾಗಿ ಕೊಡತಕ್ಕದ್ದೆಂಬದು ಒಂದು ವಿದ್ಯೆಯಾದುದರಿಂದ ಇತರ ವಿದ್ಯೆಗಳಂತೆ ಅದು ಅಭ್ಯಾಸದಿಂ ಲಭಿಸತಕ್ಕದ್ದಲ್ಲವು. ಅದು ಪುರುಷನ ಪೂರ್ವಜನ್ಮ ಪುಣ್ಯವಿಶೇಷದಿಂ ಲಭಿಸಬೇಕಾದುದೇಯೊರ್ತು ಅನುಕರಿಸಿ ಬರತಕ್ಕದ್ದಲ್ಲವು. ಈ ಗುಣ ಸಂಪಾದನಕ್ಕೆ ಉಪಪನ್ನನಾಗಿಯೇ ಯಿರಬೇಕೆಂಬ ಆವಶ್ಯಕವೂ, ಸ್ವದೇಶೀಯನಾಗಿ ಸ್ವಜನಾಭಿಮಾನಿಯಾಗಿರಬೇಕೆಂಬ ನಿರ್ಬಂಧವೂ ಯಿರುವದಿಲ್ಲವು. ಉದಾರಿಯಾದವನು ಯಾವ ದೇಶೀಯನಾಗಿದ್ದಾಗ್ಯೂ ಯಾವಬಗೆಯವನಾಗಿದ್ದಾಗ್ಯೂ ಇತರ ಯೆಂತಾ ದುರ್ಗುಣಗಳುಳ್ಳವನಾಗಿದ್ದಾಗ್ಯೂ, ಬಾಧಕಗಳಿಲ್ಲವು. ಲೋಭವು ಸಕಲಗುಣಗಳನ್ನೂ ಹರಿಸತಕ್ಕದಾದುದರಿಂದ ಲೋಭಿಗುಂಟಾಗುವ ಸಂಪತ್ಪ್ರಾಭವಗಳೆಲ್ಲವು ವಿಧವಾ ಸೌಂದರ್ಯದಂತೆ ವಿಷಯಾಂತರೋಪ ಯೋಗಿಗಳಾಗಿ ಅನರ್ಥ ಸಂಪಾದಕಗಳಾಗುತವರಲ್ಲೇನೂ ಸಂದೇಹವಿಲ್ಲವು. ಮುಖ್ಯವಾಗಿ ಅನ್ನವಿಲ್ಲದೆ ಸಾಯುವ ಜನಗಳಿಗೆ ತತ್ಪ್ರಾಪಿ ತಮ್ಮ ದೇಶೀಯರಿಗೆ ಕಷ್ಟ ಸಂಭವಿಸುತಿರುವ ಕಾಲದಲ್ಲಿ ಧನಿಕರಾದವರು, ತಮ್ಮ ಧನವಂ ಸ್ವಲ್ಪವಾದರೂ ವೆಚ್ಚಮಾಡಿ ಸಹಾಯ ಮಾಡದೆ ಬೆಲೆಯುಳ್ಳ ವಸ್ತ್ರವನ್ನು ಧರಿಸಿಕೊಂಡು, ಜೋಡಿ ಕುದುರೆಗಳು ಕಟ್ಟಿದ ಗಾಡಿಗಳಲ್ಲಿ ಸಂಚರಿಸುತ ದುರ್ಗಮವಾದತಮ್ಮ ದಿವ್ಯಗೃಹಗಳಲ್ಲಿ ವಾಸ ಮಾಡುತ ಆತ್ಮಸಂಪ್ರೀಣನವೇ ಸಕಲ ಪುರುಷಾರ್ಥವೆಂದು ಭಾವಿಸಿ, ಅನ್ಯರುಬಂದು ಯಾಚಿಸಿದಾಗ ಅವರಿಗೆ ಕೈಗಳನ್ನು ತಿರಿಗಿಸುತ ನೀತಿ ನಿಟಾರಗಳಂ ಹೇಳುವದರಿಂದಲಾಗಲಿ, ಮನೆಯಲ್ಲಿ ಪ್ರವೇಶಕ್ಕೆ ಅವಕಾಶ ಕೊಡದೆ ಧಿಕ್ಕರಿಸಿ ಅಗೌರವ ಪಡಿಸುವದರಿಂದಲಾಗಲಿ ಯೇನೂ ಪ್ರಯೋಜನವಿಲ್ಲವು. ನಿಶ್ಚಯವಾಗಿ ದಾರಿದ್ರ್ಯಪೀಡಿತರಾದ ಜನಗಳಿಗೆ ಸಹಾಯ ಮಾಡುವದೇ ಧನಿಕನಾದ ಪುರುಷನಿಗೆ ಧರ್ಮವು. ಮನುಷ್ಯನ ಸಿರಿಯು ಸ್ಥಿರವಲ್ಲವು ಜಗತ್ತಿನಲ್ಲಿ ದೃಶ್ಯಪದಾರ್ಥಗಳೆಲ್ಲವೂ ನಷ್ಟವಾಗುವದು ಸತ್ಯವಾಗುವದ ಕ್ಷಣಿಕ ಪದಾರ್ಥಕ್ಕೆ ಸೊಕ್ಕೆ ಮೆರೆಯುದುದರಿಂದ ಮುಂದನು ತಿಯಬಹುದು.

Occasional Notes
ನೈಮಿತ್ತಿಕ ವಿಷಯನ್ಯಾಸ.

The Coronus—ಕೊರೋನ ರಾ ದಿ ೩ದ ಜನಗಳು ಅತಿಭಕ್ಷಕರೆಂತಲೂ ಪ್ರತಿನಿತ್ಯವೂ ೧೪ ಸಲ ಭೋಜನಮಾಡುತ್ತಾರೆಂತಲೂ, ತಿಳಿಯಬರುತಿದೆ. ಅಷ್ಟು ಸಲ ಉಣ್ಣ ಮನುಷ್ಯನು ತಿಂದು ಜೀರ್ಣಿಸಿಕೊಳ್ಳಲಿಕ್ಕೆ ಸಾಧ್ಯವಾಗುವದೆ ?

The English education.—ಹಿಂದೂಗಳು ಮುಂದೆ ಇಂಗ್ಲಿಷ್ ವಿದ್ಯೆಯನ್ನು ವಿಶೇಷ ಅಪಧಾನದೊಡನೆ ಮುಖ್ಯವೆಂದೆಣಿಸಿ ಅಭ್ಯಸಿಸದೆ ಸಂಸ್ಕೃತವನ್ನಭ್ಯಸಿಸಿ ವಿದ್ಯಾವಂತರಾಗಬೇಕೆಂತಲೂ ಇಂಗ್ಲಿಷ್ ಭಾಷೆಯು ಈಗಿನ ಕಾಲದಲ್ಲಿ ಅವರ ಖರ್ಚಿಗೆ ತಕ್ಕಷ್ಟ ಪ್ರತಿಫಲವೂ ಕೊಡತಕ್ಕದ್ದಲ್ಲವೆಂತಲೂ ಇಂಡಿಯನ್ ಮಿರರ್‌ಪತ್ರಿಕೆ ತಾತ್ಪರ್ಯ ಪಡುತಿದೆ.

Opening of the new High Court buildings.—ಮದರಾಸ್ ಹೈಕೋರ್ಟಿಗಾಗಿ ಈಗ ಕಟ್ಟಲ್ಪಡುತಲಿರುವ ಹೊಸಕಟ್ಟಡದ ಕಾಮಗಾರಿಗಳೆಲ್ಲವು ಪೂರೈಸಿದ್ದರಿಂದ, ಅದರಲ್ಲಿ ಬರುವ ತಿಂಗಳ ೧೦ ನೇ ತಾರೀಖ್‌ಮೊದಲು ಕೋರ್ಟು ಮಾಡಲ್ಪಡುಪದಲ್ಲದೆ, ಈ ನೂತನ ಗೃಹಪ್ರವೇಶೋತ್ಸವ ಕಾಲದಲ್ಲಿ ಮದರಾಸ್ ಗರ್ವನರಾದ ಲಾರ್ಡ್ ವೆನ್‌ಲಾಕ್‌ಯವರು ಅಧ್ಯಕ್ಷತೆಯಂ ವಹಿಸುವರೆಂತಲೂ, ತತ್ಸಮಯೋಚಿತ ವಿಭವದೊಡನೆ ತತ್ತನ್ಯಾಯಸ್ಥಾನಗಳಲ್ಲಿ ಸಂಚಾರವೂ ಚೀಫ್ ಜಸ್ಟೀಸಿಯವರ ಕೋರ್ಟಿನಲ್ಲಿ ಪ್ರಸಂಗವೂ ನಡೆಯುವದೆಂತಲೂ ತಿಳಿಯಬರುತಿದೆ.

Census operations in India.—ಗತಸಂವತ್ಸರದಲ್ಲಿ ಈ ಇಂಡ್ಯದೇಶದೊಳು ಸರ್ವತ್ರ ನಡೆಯಲ್ಪಟ್ಟ ಜನೋಪಮಾರಿ ಲೆಕ್ಕ ತಯಾರಿಬಗ್ಗೆ ಬಹಳ ಕಾಗದವು ಖರ್ಚಾಗಿರುತಿದೆ. ಇದಕ್ಕಾಗಿ ೯ ಕೋಟಿ ಪತ್ರಿಗಳು ಉಪಯೋಗಿಸಲ್ಪಟ್ಟವು ಇವುಗಳಂ ಸೇರಿಸಿ ತೂಕ ಮಾಡಿದರೆ ಖುಮಾರಿ ೬೯೦ ಟನ್‌ಗಳಾಗಬಹುದಲ್ಲದೆ ಇವುಗಳನ್ನೆಲ್ಲ ಒಂದಾಗಿ ಅಂಟಿಸಿ ಸೇರಿಸಿದರೆ ಅದು ೧೨೦೦ ಮೈಲುಗಳ ಘಾಸಲೆಯತನಕ ವ್ಯಾಪಿಸುವದೆಂದು ಅಂದಾಜಾಗಿರುತಿದೆ. ಇದಕ್ಕಾಗಿ ಒಟ್ಟು ೫ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಖರ್ಚಾದುದೆ ಲೆಕ್ಕವಾಗಿರುತಿದೆ.

A cruel order.—ಕಾಬೂಲಿ ಅಮೀರರವರು, ತಮ್ಮ ಪ್ರಭುತ್ವಕ್ಕೊಳಪಟ್ಟಿರುವ ಹಜಾರಜಾಟಿ ಯೆಂಬ ಡಿಸ್ಟ್ರಿಕ್ಟಿಗೆ ಸೇರಿದ ಅರ್ಜಗಾರ್ ಯೆಂಬ ಪ್ರದೇಶದಲ್ಲಿರುವ ಆಫೆಘಾರ್ನ್ ಸೈನಿಕರ ಉಪಯೋಗಕ್ಕೆ ಅಲ್ಲಿರುವ ಪ್ರತಿಮನುಷ್ಯನನ್ನೂ ಕೊಂದು ಅವನ ಭಾರ್ಯೆಯನ್ನು ತಂದುಕೊಡಬೇಕೆಂದು ಖಂಡಿತವಾದ ಹುಕುಂ ಕೊಟ್ಟರೆಂದು ಪ್ರನೆ ಪತ್ರಿಕೆಯೊಂದು ತಿಳಿಸುತಿದೆ ಇದರಿಂದಲೇ ಅಮೀರರವರಸ್ವಭಾವವುವ್ಯಕ್ತವಾಗುತಿದೆ. ಆದಾಗ್ಯೂ ಇದಂ ನಾವು ಕೂರವೆಂದು ಹೇಳುವದಿಲ್ಲವು. ಏತಕ್ಕೆಂದರೆ ಕೆಲವುಬ್ರಿಟಿಷ್ ಮಿಲಿಟರಿ ಸ್ಟೇಷನ್‌ಗಳಲ್ಲಿ ಬ್ರಿಟಿಷ್ ಸೋಲ್ಜರ್‌ಗಳು ತಮ್ಮ ಕಾಮೋಪಶಮನಾರ್ಥ ಮಧ್ಯಸ್ಥಗಾರರನ್ನು ಕಳುಹಿಸಿ ಹೆಂಗೆರನ್ನು ಮೋಸಗೊಳಿಸಿ ಸ್ವಾಧೀನ ಪಡಿಸಿಕೊಳ್ಳುವದೂ ಅವರೊಂದುವೇಳೆ ಪಕ್ಕದಾಗಬಿದ್ದರೆ ಅವರಮೇಲೆ ಬಿದ್ದು ಜಾಲಂಪಾದಿ ಮೃಗಗಳಂತೆ ಬಲಿಯಂ ತೀರಿಸಿಕೊಂಡು ಅವರನ್ನಲ್ಲಿಯೇ ಬಿಟ್ಟು ಯೆಂದು ಹೋಗುವಣವೂ ಪ್ರಬಲಿಸಿವೆ. ಗುಂಡಾವರು ಜೇನಿನಿ ಇಂತಾ ಅಕ್ರಮಗಳನ್ನು ನೋಡಿ ಸಹಿಸಿಕೊಂಡು ದುಃಖ ಪಡುವದಕ್ಕಿಂತಲೂ ಪೂರ್ವಭಾವಿಯಾಗಿ ಪ್ರಾಣವಂ ಕಳೆಯಕೊಂಡು ಬಳಿಕ ನ್ಯಟಗುವ ಅಪಮಾನಕ್ಕೆ ಗುರಿಯಾಗದಿರುವುದುತ್ತಮವಾದುದರಿಂದ ಇದು ಆಕ್ಷೇಪಣೀಯವಲ್ಲವು.

LOCAL AND PROVINCIAL NEWS.
ಸ್ಥಳದೇಶಮತ್ತು ತಾಲ್ಲೂಕಿನವಾರ್ತೆಗಳು.

The Acting Resident.—ಇಲ್ಲಿನ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್‌ಯವರು ಜರೂರಿಯಾತಿ ಸ್ವಂತ ಕೆಲಸದಮೇಲೆ ಬರುವ ತಿಂಗಳಲ್ಲಿ ಇಂಗ್ಲಾಂಡಿಗೆ ಹೋಗುವವರಾಗಿರುವಂತೆ ಗತವಾರದಲ್ಲಿ ತಿಳಿಸಿದ್ದೆವಷ್ಟೆ. ಇವರ ಗೈರ್ ಹಾಜರೀಕಾಲದಲ್ಲಿ ಜೆಯಪುರ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಟ್ರೇವರ್‌ಯವರು ಇಲ್ಲಿನ ಆಫಿಷಿಯೇಟಿಂಗ್ ರೆಸಿಡೆಂಟರಾಗಿ ನಿಯಮಿಸಲ್ಪಡುವರೆಂತಲೂ, ಅವರಿಗೆ ಬದಲು ಮೇಜರ್ ಫಾರ್ಡ್ ಎಂಬವರು ಜಂಗೀಮಿಯಾಗಿ ಹೋಕರರಾಗುವರೆಂತಲೂ ತಿಳಿಯಬರುತಿದೆ.

The weather.—ಕಳೆದ ವಾರದೊಳು ಪ್ರಾಯಶಃ ಪ್ರತಿದಿನ ಸಾಯಂಕಾಲದಮೇಲೆ ಮೋಡ ಮುಚ್ಚಿ ಬಲವಾದ ವರ್ಷಸೂಚನೆಗಳು ಕಾಣಬರುತ ನಿನ್ನೆಯದಿನ ರಾತ್ರಿ ಸುಮಾರಿ ಅರ್ಧಘಂಟೆಯೊತನವರಿ ಸಮಾಪ್ತಿಯನ್ನೈದಿತು. ವರ್ಷದ ವಿಷಯದಲ್ಲಿ ರೈತಾಪಿ ಜನರು ಭಗ್ನಮನಸ್ಕರಾಗಿ ಚಿಂತಿಸುತಲಿದ್ದಾರೆ. ಆಹಾರ ಪದಾರ್ಥಗಳ ದಾರಣೆಗಳು ಹಿಂದಿನ ವಾರದಂತೆಯೇ ಇವೆ. ಪಾಂತಿಭೇದಿ ರೋಗದ ಬೆಸೆಯಿಂದ ಆಗಿಂದಾಗ್ಯೆ ಪ್ರಾಣಹಾನಿಗಳುಂಟಾಗುತಲಿವೆ. ಜ್ವರಾದ್ಯದಿವ್ಯಾಧಿಗಳು ಇರಲೇ ಇವೆ. ಪ್ರಜೆಗಳಿಗೆ ಸುಖವೂ ನೆಮ್ಮದಿಯೂ ಸಾಲದು.

Election of Municipal Commissioners.—ಈಷಹರ್ ಮ್ಯುನಿಸಿಪಲ್ ಕಮಿಷನರ್‌ಗಳ ಚುನಾವಣೆಯು ಬರುವ ಆಗಸ್ಟ್ ೧ನೇ ತಾರೀಖ್ ಶನಿವಾರದ ದಿನ ಪ್ರಾರಂಭವಾಗಿ ಅದೇ ತಿಂಗಳ ೩ನೇ ತಾರೀಖ್ ವರವಿಗೆ ನಡೆಯುವದು ಹ್ಯಾಗೆಂದರೆ :—

೧ನೇ ಬಳೆಪೇಟೆ	ಡಿವಿಜನಿಗೆ	೧ನೇ	ಆಗಸ್ಟ್
೨ನೇ ಮನವರ್ತಪೇಟೆ	„	೨	„
೩ನೇ ಅಲಸೂರು	„	೨	„
೪ನೇ ಪ್ಯಾಲೆಸ್ / ೫ನೇ ಪೈಗನ್ರ್ಯಾಂಡ್	„	೨	„
೬ನೇ ನಗರ್ತರಪೇಟೆ	„	೩	„
೭ನೇ ಲಾಲ್‌ಬಾಗ್	„	೩	„
೮ನೇ ಕೋಟೆ	„	೩	„

ಚುನಾವಣೆ ವಿಷಯದಲ್ಲಿ ಬಾಯಿಲೀಯುಳ್ಳ ಜನರೆಂದು ಸರ್ಕಾರದವರ ತಿಳುವಳಿಕೆಗೆ ಬಂದ ಜನರ ಹೆಸರುಗಳು ಮೈಸೂರ್ ಗೆಜೆಟಿನಲ್ಲಿ ಘೋಷಿಸ್ ಮಾಡಲ್ಪಟ್ಟಿರುವದರಿಂದ, ಅಂತವರೆಲ್ಲರೂ ಆಯಾ ತಾರೀಖ್ ಗಳಲ್ಲಿ ಗೊತ್ತು ಮಾಡಲ್ಪಟ್ಟಿರುವ ಸ್ಥಳಗಳಿಗೆ ಹೋಗಿ ತಮ್ಮ ಡಿವಿಜನಿಗೆ ಯಾರನ್ನು ಕಮಿಷನರಾಗಿ ಚುನಾಯಿಸಬೇಕೋ ಆಬಗ್ಗೆ ಲಿಖಿತಮೂಲಕ ಅಭಿಪ್ರಾಯ ಕೊಟ್ಟರೆ ಯಾರಿಗಾಗಿ ಜಾಸ್ತೀ ಅಭಿಪ್ರಾಯಗಳು ಕೊಡ

ಲ್ಪಡುವವೋ ಅಂತವರನ್ನು ಗವರ್ನಮೆಂಟಿನವರು ಕಮಿಷನರಾಗಿ ಮೊಕರರ್ ಮಾಡುವರು. ವಿದ್ವಾಂಸರಾಗಿಯೂ, ಪ್ರಮಾಣಿಕರಾಗಿಯೂ, ಪ್ರಜೆಗಳ ಕ್ಷೇಮಚಿಂತಕರಾಗಿಯೂ, ಅಕ್ಕರೆಯಿಂದ ಕೆಲಸ ಮಾಡತಕ್ಕವರಾಗಿಯೂ ಇರುವಂತವರನ್ನು ತಿಳಿದು ಅವರ ವಿಷಯದಲ್ಲಿ ಅಭಿಪ್ರಾಯ ಕೊಟ್ಟರೆ ಪ್ರಜೆಗಳಿಗೆ ಕ್ಷೇಮ ವುಂಟು.

CORRESPONDEOCE

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಈ ಪತ್ರಿಕಾ ಲೇಖಕರು ಬಾಧ್ಯರಲ್ಲವು—ಎಡಿಟರ್ ಕ. ಪ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸ|| ಕ್ಕೆ.

ಅಯ್ಯಾ,—ಈ ಕೆಳಗೆ ಬರೆಯಲ್ಪಡುವ ಕೆಲವು ವಿಷಯಗಳಿಗೆ ನಿಮ್ಮ ಪತ್ರಿಕೆಯ ಒಂದು ಭಾಗದಲ್ಲಿ ಅವಕಾಶವನ್ನು ಕೊಡುವಿರೆಂದು ನಂಬಿ ಪ್ರಕಟಿಸುತ್ತೇನೆ. ಏನೆಂದರೆ—

ನನ್ನ ದೇಶದವರು ವಿದ್ಯೆಗೆ ಯೋಗ್ಯರಾದ ಬಳಿಕ ಈ ಸಮಯದಲ್ಲಿ ಇದ್ದ ಯೋಗ್ಯತೆಯ ಕಾರ್ಯಕಾರಣಗಳನ್ನು ಭಾವಿಸಿ ನೋಡಲಾಗಿ ನನಗೆ ಸ್ಫುರಿಸುತ್ತಿರುವ ಕಾರಣವು ಏನಾದರೂ ತೋರದೆ ಇರುವ ಕಾರಣ ಮನಸ್ಸಿಗೆ ತಿಳಿದು ಕೊಳ್ಳಬೇಕೆಂಬ ಕೋರಿಕೆಯುಳ್ಳವನಾಗಿ ಬರೆಯುತ್ತೇನೆ. ಇಂಗ್ಲೀಷ್ ದೇಶದಲ್ಲಿ ಉತ್ಪತ್ತಿಯಾದ ವೈಜ್ಞಾನಿಕ ಶಾಸ್ತ್ರಗಳೂ ಪ್ರಾಚ್ಯಗ್ರಂಥಗಳೂ ಈ ಕಾಲದಲ್ಲಿ ಸ್ತ್ರೀ ಪುರುಷರು ವಿದ್ಯಾವಂತರಾಗುತ್ತ ಬರುತ್ತಿರುವದನ್ನು, ಅವರಿಗೆ ವಿದ್ಯಾಮೂಲಕವಾದ ವೈಲಕ್ಷಣ್ಯಗಳನ್ನುಂಟುಮಾಡಬೇಕೆಂಬ ಭಾವದಿಂದಲೇ ಗವರ್ನಮೆಂಟಿನವರು ಅಂತಾ ವಿದ್ಯೆಯನ್ನು ಜನಗಳಿಗೆ ಕಲಿಸುವದಕ್ಕಾಗಿ ನಾನಾವಿಧ ವಿದ್ಯಾಶಾಲೆಗಳನ್ನೇರ್ಪಡಿಸಿ ಆ ವಿಷಯದಲ್ಲಿ ಸಂಪೂರ್ಣ ಸಹಾಯ ಮಾಡುತಲಿರುವದನ್ನು, ತದ್ವಾರಾ ಜನರು ವಿದ್ಯಾವಂತರಾಗಿ ಪ್ರಸಿದ್ಧಿಗೆ ಬರುವದನ್ನು ನೀವು ಅಂಗೀಕರಿಸುತ್ತೀರಷ್ಟೆ. ಹೀಗಿದ್ದಾಗ್ಯೂ ವಿದ್ಯಾವಂತರಾಗಿಯೂ, ತತ್ಪ್ರಯುಕ್ತವಾದ ಬಹುವೈಲಕ್ಷಣ್ಯಗಳುಳ್ಳವರಾಗಿಯೂ, ಪ್ರಸಿದ್ಧರಾಗಿಯೂ, ಬಹುಶ್ರುತರಾದವರ ವರ್ತನಗಳನ್ನು ಕಂಡಾಗ ಅನ್ಯರು ನಗುವಂತೆ ಆಗುವದು. ನಾನು ಅದನ್ನು ನೋಡಿ ನನ್ನ ಮನಸ್ಸಿನಲ್ಲಿ ಬಹಳ ವ್ಯಸನ ಪಡುತ್ತೇನೆ. ಲೋಕದಲ್ಲಿ ಸಾಮಾನ್ಯರೆಲ್ಲರು ನಿಂದಿಸುವಂತಾ ದುಷ್ಕಾರ್ಯಗಳಲ್ಲಿ ಅವರ ಬುದ್ಧಿ ಪ್ರವರ್ತಿಸುವದು ನೋಡಿದರೆ ಮನುಷ್ಯನ ಸ್ವಭಾವ ಗುಣಗಳನ್ನು ಆಮೂಲಾಗ್ರವಾಗಿ ಬದಲಾಯಿಸಿ ಬೇರೆ ಗುಣಗಳನ್ನುಂಟುಮಾಡಲಿಕ್ಕೆ ಅವರು ಪಡೆದ ಲೌಕಿಕ ವಿದ್ಯೆಗೆ ಸ್ವರೂಪತಃ ಒಂದು ಶಕ್ತಿ ಯಿರುತ್ತದೆಂದು ಭಾವಿಸಕೂಡದಿಂದ ವಿದ್ಯೆಗೆ ಸಕಲ ಕರ್ತವ್ಯಾಕರ್ತವ್ಯ ಜ್ಞಾನವುಂಟೆಂಬುದು ಕೆಲವರ ಮತವಾಗಿರುತ್ತದೆ. ಅದಕ್ಕೆ ಸರ್ವಸಾಧಾರಣವಾಗಿ ವಿವೇಕ ವೈಲಕ್ಷಣ್ಯ ಕಲ್ಪನವೇ ನಿಜಶಕ್ತಿಯಾಗಿರುವ ಪಕ್ಷಕ್ಕೆ ಅವರಲ್ಲಿ ಯಾವಬಗೆ ದುರ್ಗುಣಗಳೂ ಇಲ್ಲದಿರಬೇಕು. ಹಾಗೆಯೇ ಒಂದು ದೇಶದಲ್ಲಿ ವಿದ್ಯಾವಂತರ ಸಂಖ್ಯೆ ಹೆಚ್ಚುಗುತ ಬರುವಲ್ಲೆಲ್ಲ ಅಲ್ಲಿ ದೋಷಗಳೂ ಅಕ್ರಮಗಳೂ ಕಡಮೆಯಾಗುತ ಬರಬೇಕಾದುದು ಸಹಜವಾಗಿರುತ್ತದೆ. ವಿದ್ಯೆ ಮಿಕ್ಕದು ಪ್ರಬಲಿಸಿದಂತೆಲ್ಲ ದುಷ್ಕೃತ್ಯಗಳು ಕಡಮೆಯಾಗಲಿಕ್ಕೆ ಪ್ರತಿಯಾಗಿ ಅವು ಹೆಚ್ಚುತ ಬರಲಿಕ್ಕೆ ಕಾರಣವು ನನಗೆ ಸ್ಪಷ್ಟವಾಗಲಿಲ್ಲವು. ವಿದ್ಯೆಯೆಂಬುವದು ಯುಕ್ತಾಯುಕ್ತ ವಿಮರ್ಶಕ ಜ್ಞಾನರೂಪವಾಗಿರುತ್ತದೆ. ಈ ಜ್ಞಾನದಿಂದ ಮನುಷ್ಯನಿಗುಂಟಾಗುವ ಪ್ರಯೋಜನವು, ಶಾಸ್ತ್ರಗಳಿಂದ ಬೋಧಿಸಲ್ಪಟ್ಟ ಮತ್ತು ಅನ್ಯರ ಮನಸ್ಸಿಗೆ ನೋವನ್ನುಂಟುಮಾಡುವಂತಾ ಕಾರ್ಯಗಳನ್ನು ಬಿಟ್ಟು, ಅನ್ಯರಿಗೆ ಬೋಧಿಸುವದಾಗಿರುತ್ತದೆ. ಇಂತಾ ದುಷ್ಕಾರ್ಯಗಳಲ್ಲಿ ವ್ಯಭಿಚಾರವೆಂಬುದು ಈಗ ಕ್ರಮೇಣ ಪ್ರಬಲಿಸುತ ಬರುತಲಿದೆ. ಅದು ಹ್ಯಾಗುವದೆಂದರೆ:—ಸ್ತ್ರೀಪುರುಷರಿಗೆ ವಿವಾಹ ರೂಪವಾದ ಪರಸ್ಪರ ಸಂಬಂಧವುಂಟಾಗುವ ಕಾಲದಲ್ಲಿ ಇಬ್ಬರು ಬಿಟ್ಟು ಮತ್ತೊಬ್ಬರು ಅತಿಚರಿಸುವದಿಲ್ಲವೆಂದು ಪರಸ್ಪರ ಪ್ರಮಾಣ ಮಾಡಲ್ಪಡುತಿದೆ. ಅಂತಾ ಪ್ರಮಾಣವನ್ನು ತಪ್ಪಿ ವ್ಯಭಿಚರಿಸುವದು ಸ್ತ್ರೀಪುರುಷರಿಗೆ ಪ್ರಬಲದೋಷವಲ್ಲವೆ. ಈ ದೋಷವು ಪುರುಷನಲ್ಲಿ ಕೇವಲ ಮೋಹದಿಂದುಂಟಾಗುತಿದೆ. ಸ್ತ್ರೀಯರಲ್ಲಾದರೋ ಧನಲೋಭಾಶೆಗಳಿಂದುಂಟಾಗುತಿದೆ. ಇವೆರಡೂ ಇಲ್ಲದ ಪರಕೀಯರಾದವರು ವಿದ್ಯಾವಂತರೆನಿಸಿಕೊಂಡ ಅವಿವೇಕಿಗಳು ಕೆಲವರು ಮೋಹಿಸಿ, ಧನಮುಂತಾದ ಉಪಾಯಗಳಿಂದಲೂ ಅವರು ವಶ್ಯರಾಗದೆ ಹೋದರೆ ಬಲಾತ್ಕಾರದಿಂದಲೂ, ಅವರು ಕೆಡಿಸುತ್ತಾರೆ. ಇವರು ಸಾಧಾರಣವಾಗಿ ವಿವಾಹ ಕಾಲಗಳಲ್ಲಿ ವಿನೋದಾರ್ಥ ನರ್ತಕೀಯರನ್ನು ಕರೆಯಿಸಿ, ಹಾಡಿಸುವದೂ ಅವರ ನಾಟ್ಯವಿನಯಗಳಿಂ ನೋಡುವದೂ, ಬಹಳ ದುಷ್ಯವೆಂತಲೂ ಅವರಿಂದ ವರ್ಧಿಷ್ಣುಗಳ ಮನವು ಕೆಟ್ಟುಹೋಗುತಿವೆಯೆಂತಲೂ, ಸ್ವೈರಿಣಿಯರಾದ ಅವರ ದರ್ಶನ ಸಲ್ಲಾಪಗಳು ಕುಟುಂಬದಲ್ಲಿ ದುಷ್ಪ್ರವೃತ್ತಿಗೆ ನಿಮಿತ್ತವೆಂತಲೂ ಬಹಿರಂಗವಾಗಿ ಚರ್ಚಿಸುತ್ತಿರುವವರು ತಮಗೆ ಶುಭಕಾಲಗಳಲ್ಲಿ ಅಂತಾ ವೇಶ್ಯೆಯರ ಸಂಬಂಧವಿಲ್ಲದಿರುವಂತೆ ಹೆಣ್ಣು ಹುಡುಗಿಯರಿಗೆ ಸಂಗೀತವಿದ್ಯೆ ಫಿಡಲ್ ಮೊದಲಾದವು ವಿನ್ಯಾಸ ಕಲಿಸಿ ಅವರು ಪಿಯಾನೋ ಮುಂತಾದವರಲ್ಲಿ ಅತ್ಯಾಸಕ್ತರಾಗಿದ್ದಾರೆ. ಇವರಿಗೆ ನಿರ್ಭಾಗ್ಯರಾದ ಸಾಮಾನ್ಯರು ಮಾತ್ರ ದೂಷ್ಯರಾದರೆ ಹೊರ್ತು ಪರಕಾಂತೆಯರು ತ್ಯಾಜ್ಯರಲ್ಲದೆ ಹೋಗಿದಾರೆ. ಇಂತಾ ಬಲಾತ್ಕಾರದಿಂ ಅವರಿಗೇನು ಪ್ರಯೋಜನವೋ, ಧನಲುಬ್ಧರಾದ ವಾರಾಂಗನೆಯರು ವ್ಯಭಿಚಾರ ಯೇತಕ್ಕೆ ಒಬ್ಬನ ಕುಟುಂಬವು ಕೆಡಿಸಬೇಕೋ ಸವರೀ ಭೋಗಿನೀಯರು ಅವರಿಗೇನು ಅಪಕಾರ ಮಾಡಿದರೋ ನಾನರಿಯೆನು. ಇವರಿಗೆ ಪರಲೋಕದಲ್ಲಿ ಕುಂಭೀಪಾಕ ಮಹಾನರಕ ಯಾತನಗಳಲ್ಲದೆ ಈ ಲೋಕದಲ್ಲಿಯೂ ಮನೋವ್ಯಥೆಯು ತಪ್ಪಲಾರದು. ಮುಖ್ಯವಾಗಿ ಯಾವ ಕಾರಣದಿಂದಲೋ ಈಗ ವ್ಯಭಿಚಾರವು ಉತ್ತಮರಲ್ಲಿ ಪ್ರಬಲಿಸಿ ಅವರ ವಂಶಕ್ಕೆ ಅಪಕೀರ್ತಿಯುಂಟಾಗುತ ಬರುತಲಿದೆ. ಈ ಕೆಟ್ಟ ಕೆಲಸ ನಾತಿವರ್ಣಿತ ಸವರೀ ಕಾಮುಕರು ಯಾವ ದಾರಿಯೂ ಬೇರೆ ಉಪಾಯದಿಂ ತಮ್ಮ ಕಾಮ ಪ್ರಾಪ್ತಿ ಸಾಧಿಕೊಳ್ಳುವದು ಉಚಿತವಾಗಿ ತೋರುತಿದೆ. ಇಂತಾ ದುಷ್ಕೃತ್ಯಾಭಿವೃದ್ಧಿಗೀಗ ಪ್ರಬಲವಾಗಿರುವ ಕಾರಣಾ ತಿಳಿಯಲಪೇಕ್ಷಿಸುವ,

ತಮ್ಮ ವಿಧೇಯನಾದ,

ಧರ್ಮಪಿಪಾಸು

ಪಾಶುಪತ ದರ್ಶನವು.

ಲೋಕದಲ್ಲಿ "ಪಾಶುಪತಮತ" ವೆಂಬ ಪ್ರಸಿದ್ಧವಾದ ದರ್ಶನವೊಂದು ನೆಲೆಗೊಂಡಿರುತಿದೆ. ಈ ಮತವು ವೈಷ್ಣವಾದಿ ಮತಗಳಂ ನಿರಾಕರಿಸಿ ಸ್ವಮತವಂ ಸ್ಥಾಪಿಸುತಿದೆ. ಹ್ಯಾಗೆಂದರೆ, ಮೇಲೆ ಉದಹರಿಸಿದ ವೈಷ್ಣವ ಮತದಲ್ಲಿ ಜೀವನು ಈಶ್ವರಾಧೀನನಾದುದರಿಂದ ದಾಸತ್ವಾದಿ ಧರ್ಮಗಳುಳ್ಳವನಾಗಿರುವನೆಂದು ತಿಳಿಸಲ್ಪಟ್ಟಿರುತಿದೆ. ಪರಾಧೀನನಾದ ಜೀವನಿಗೆ ಯಾವಗೂ ಸ್ವಾತಂತ್ರ್ಯವಿಲ್ಲದ್ದರಿಂದ ಮುಕ್ತಿಯುಂಟಾಗಲಾರದು. ಯೇತಕ್ಕೆಂದರೆ ಪರಾಧೀನನಾಗಿಯೂ ಪರವಶ್ಯತ್ವ ರಹಿತನಾಗಿಯೂ ಇರುವದರಿಂದ ಅದು ಅವನಿಗೆ ಲಭಿಸುವದಿಲ್ಲವು. ಇದಕ್ಕೆ ದೃಷ್ಟಾಂತವೇನೆಂದರೆ,—ನಾವು ಪರಾಧೀನರು, ಪರಾಧೀನರು, ಆದುದರಿಂದ ಮುಕ್ತಿರಹಿತರು. ಮುಕ್ತರು, ಪರಮೇಶ್ವರಗುಣ ಸಂಬಂಧವಿಲ್ಲದವರು, ಮತ್ತು ಸಕಲ ದುಃಖಬೀಜ ವಿಲ್ಲದವರು, ಅದರಿಂದ ಮುಕ್ತರು ಯೆಂಬದಾಗಿ ಅನುಮಾನಪ್ರಮಾಣವನ್ನಂಗೀಕರಿಸತಕ್ಕ ಮಹೇಶ್ವರರು ಕೆಲವರು ಪರಮ ಪುರುಷಾರ್ಥ ಸಾಧನವಾದ ಪಂಚಾರ್ಥ ಪ್ರಪಂಚವು ಪ್ರತಿಪಾದಿಸಿದ ಕ್ಕೆ ಪಾಶುಪತ ಸಿದ್ಧಾಂತವನ್ನಾಶ್ರಯಿಸಿರುತ್ತಾರೆ. ಈ ಸಿದ್ಧಾಂತದಲ್ಲಿ ಪ್ರಥಮ ಸೂತ್ರವು "ಅಥಾತಃ ಪಶುಪತೇಃ ಪಾಶುಪತಯೋಗ ವಿಧಿಂ ವ್ಯಾಖ್ಯಾಸ್ಯಾಮಃ||" ಈ ಸೂತ್ರಾರ್ಥವೇನೆಂದರೆ,—ಅಥ ಅಂದರೆ, ಗುರೋಃ ಶಿಷ್ಯ ವಿಷಯನಿರೂಪಣಾನಂತರ ಈಶ್ವರನಿಗೆ ಪಾಶುಪತಯೋಗ ವಿಧಿಯಂ ತಿಳಿಸುತ್ತೇನೆಂದು ಭಾವವು. ಪರಮಶಿವನು, ಗುರು ಎಂತವನಾಗಿರಬೇಕೆಂದು ಪ್ರಶ್ನೆ ಮಾಡಲು ಅವನು ಇದರಡಿ ತಿಳಿಸಲ್ಪಡುವ ಲಕ್ಷಣ ಸಮನ್ವಿತನಾಗಿರಬೇಕೆಂದು ತಿಳಿಸಲ್ಪಟ್ಟ ಗಣಕಾರಿಕೆ ಎಂಬ ಗ್ರಂಥದಲ್ಲಿ ಬರೆಯಲ್ಪಟ್ಟಿರುತಿದೆ. "ಪಂಚಕಾಸ್ತ್ವಷ್ಟವಿಜ್ಞೇಯಾ ಗಣಶ್ಚೈಕಸ್ತ್ರಿಕಾತ್ಮಕಃ। ವೇತ್ತಾ ನವಗಣಸ್ಯಾಸ್ಯ ಸಂಸ್ಕರ್ತಾ ಗುರುರುಚ್ಯತೇ। ಲಾಭಾಮಲೋಪಾಯಾಖ್ಯ ದೇಶಾವಸ್ಥಾ ವಿಶುದ್ಧಯಃ। ದೀಕ್ಷಾಕಾರೀ ಬಲಾನ್ಯಷ್ಟೌ ಪಂಚಕಾಸ್ತ್ರೀಣಿ ವೃತ್ತಯಃ||" ಇಲ್ಲಿ ಲಾಭವೆಂದರೆ, ಮಾಡತಕ್ಕ ಉಪಾಯ ಫಲರೂಪವಾಗಿರುತಿದೆ. ಆ ಲಾಭವು ಜ್ಞಾನವೆಂತಲೂ, ತಪಸ್ಸೆಂತಲೂ ದೇವನಿತ್ಯತ್ವವೆಂತಲೂ, ಸ್ಥಿತಿಯೆಂತಲೂ, ಶುದ್ಧಿಯೆಂತಲೂ ಐದುವಿಧಗಳಾಗಿರುತಿವೆ. ಇನ್ನು ಮಲವೆಂದರೆ "ಆತ್ಮಾಶ್ರಿತೋ ದುಷ್ಟಭಾವಸ್ತುಮಲಃ। ಸಮಿಥ್ಯಾಜ್ಞಾನ ದೇವಾತ್ಪಂಚವಿಧಃ" ಅಂದರೆ ತನ್ನನ್ನಾಶ್ರಯಿಸಿದ ದುಸ್ಸ್ವಭಾವವು ಮಲವೆಂದು ಕರೆಯಲ್ಪಡುವುದು, ಅದು ಐದುವಿಧವು. ಇದಕ್ಕೆ ಪ್ರಮಾಣವೇನೆಂದರೆ—"ಮಿಥ್ಯಾಜ್ಞಾನಮಧರ್ಮಶ್ಚ ಸಕ್ತಿಹೇತುಶ್ಚ್ಯುತಿಸ್ತಥಾ। ಪಶುತ್ವಮೂಲಂ ಪಂಚೈತೇ ತಂತ್ರೇಹೇಯಾ ವಿವಿಕ್ತತಃ||" ಸಾಧಕನಿಗೆ ವಾರಿಶುದ್ಧ್ಯವನ್ನುಂಟು ಮಾಡತಕ್ಕ ಉಪಾಯಗಳು ದಾಸಚರ್ಯಾದಿಭೇದಗಳಿಂದ ಐದುವಿಧಗಳಾಗಿರುತಿವೆ. ಇದಕ್ಕೆ ಪ್ರಮಾಣವು "ವಾಸಚರ್ಯಾಜಪೋ ಧ್ಯಾನಂ ಸದಾರುದ್ರಸ್ಮೃತಿಸ್ತಥಾ। ಪ್ರತಿಪತ್ತಿಶ್ಚ ಲಾಭಾನಾಂ ಉಪಾಯಾಃ ಪಂಚನಿಶ್ಚಿತಾಃ||" ಯಾವದರಿಂದ ಅರ್ಥಾನುಸಂಧಾನಪೂರ್ವಕ ಜ್ಞಾನತಪೋವೃದ್ಧಿಯುಂಟಾಗುವದೋ ಅದು ದೇಶವೆಂದು ವ್ಯವಹರಿಸಲ್ಪಡುತಿದೆ. "ಗುರುರ್ಜನೋ ಗುಹಾದೇಶಃ ಸ್ಮಶಾನಂ ರುದ್ರಏವಚ ॥" ಲಾಭವು ಪ್ರಾಪ್ತಿಯಾದ ಬಳಿಕ್ಕ ಒಂದರಲ್ಲಿಯೇ ಸ್ಥಿರವಾಗಿರಲಿಕ್ಕೆ ಅವಸ್ಥೆಯೆಂದು ಹೆಸರು. ವಿಶುದ್ಧಿಯೆಂದರೆ ಮೇಲೆ ತಿಳಿಸಲ್ಪಟ್ಟ ಮಿಥ್ಯಾಜ್ಞಾನಾವರಣ ವಿನಾಶವು. ಇದು ಐದು ವಿಧ. ಈಪ್ರಕಾರ ಪದಾರ್ಥ ಪಂಚೀಕರಣ ಮಾಡಲ್ಪಡುತಿದೆ. ಪಶುಗಳೆಂದರೆ ಜೀವಸಮುದಾಯವೆಂತಲೂ ಜೀವನಿಗೆಪತಿಯಾದವನು ಈಶ್ವರನಾದುದರಿಂದ ಪಶುಪತಿಯೆಂತಲೂ, ಅಂತಾ ಈಶ್ವರನು ಪಾರತಂತ್ರ್ಯ ಬದ್ಧಜೀವಿಗಳಿಗೆ ನಿಯಾಮಕನಾಗಿರುವನೆಂತಲೂ, ಮುಕ್ತಜೀವರಾದಾಗಲು ಸ್ವತಂತ್ರರಾಗಿರುತ್ತಾರೆಂತಲೂ, ಮಾಯಾಪಾಶದಿಂ ಬದ್ಧರಾದವರು ಬದ್ಧಜೀವರೆಂತಲೂ ಮಾಯಾಬಂಧ ವಿವರ್ಜಿತರಾದವರು ವಿಮುಕ್ತರೆಂತಲೂ, ಜೀವರು ಮಾಯಾ ವಿಮುಕ್ತರಾಗುವ ಬಗ್ಗೆ ಪತಿಯಾದ ಈಶ್ವರನನ್ನುಪಾಸನೆ ಮಾಡಬೇಕೆಂತಲೂ ಈ ಪಾಶುಪತ ದರ್ಶನದಲ್ಲಿ ಸಿದ್ಧಾಂತ ಮಾಡಲ್ಪಟ್ಟಿರುತಿದೆ.

ಶೈವದರ್ಶನವು.

ಮೇಲೆ ತಿಳಿಸಲ್ಪಟ್ಟ ಪಾಶುಪತದರ್ಶನ ಸಿದ್ಧಾಂತದಲ್ಲಿ ಪರಮೇಶ್ವರನು ಕರ್ಮಾಪೇಕ್ಷೆ ಇಲ್ಲದಂತೆಯೇ ಪ್ರಾಣಿಗಳಿಗೆ ಸ್ವರ್ಗ ನರಕಪ್ರಯುಕ್ತ ಸುಖ ದುಃಖಾನುಭವಗಳಂ ಅನುಗ್ರಹಿಸುತ್ತಾನೆಂತಲು ನಿರ್ಣಯಮಾಡಲ್ಪಟ್ಟದೆಯಷ್ಟೆ. ಇದರಮೇಲೆ ಕೆಲವರ ಪೂರ್ವಪಕ್ಷವೇರ್ಪಟ್ಟು ಪ್ರತ್ಯೇಕ ದರ್ಶನ ವೊಂದು ನೆಲೆಗೊಂಡಿತು. ಅದು ಏನೆಂದರೆ—ಪಾಶುಪತ ಸಿದ್ಧಾಂತರೀತ್ಯಾ ಈಶ್ವರನಲ್ಲಿ ವೈಷಮ್ಯನೈರ್ಘೃಣ್ಯಾದಿ ದೋಷಗಳನ್ನಂಗೀಕರಿಸಬೇಕಾಗುತಿದೆ. ನಿರ್ದೋಷಿಯಾದ ಪರಮೇಶ್ವರನಿಗೆ ದೋಷಾರೋಪಣ ಮಾಡುವದು ಯುಕ್ತವಲ್ಲವು ಮತ್ತು ಆತನ ಈಶ್ವರತ್ವಕ್ಕೆ ಲೋಪ ವುಂಟಾಗುವದು. ಆದುದರಿಂದ ದೋಷ ದೂಷಿತವಾದ ಪಾಶುಪತ ದರ್ಶನಕ್ಕಿಂತಲೂ ನಿರ್ದುಷ್ಟವಾದ ಶೈವ ಮತವು ಶ್ರೇಷ್ಠವೆಂದು ಭಾವಿಸಿ ಪ್ರತ್ಯೇಕ ಸಿದ್ಧಾಂತವಂ ಶೈವರು ಮಾಡಿದ್ದರಿಂದಲೇ ಇದಕ್ಕೆ ಶೈವಸಿದ್ಧಾಂತವೆಂಬದಾಗಿ ಹೆಸರುಂಟಾಯಿತು. ಈ ಸಿದ್ಧಾಂತರೀತ್ಯಾ ಪರಮೇಶ್ವರನು ಪ್ರಾಣಿ ಕೋಟಿಗಳ ಸುಕೃತ ದುಷ್ಕೃತಗಳ ಗುಣಾಗುಣಗಳನ್ನನುಸರಿಸಿ ಅವುಗಳಿಗೆ ತತ್ತತ್ಸ್ವರೂಪಾನುಗುಣಗಳಾದ ಫಲಾಫಲಗಳನ್ನೂ ಸ್ವರ್ಗ ನರಕಾನುಭವಗಳನ್ನೂ ಕೊಡುತ್ತಾನೆಂತಲೂ ಕರ್ತೃಕ್ಕೆ ಜೀವರು ಸ್ವತಂತ್ರರೆಂತಲೂ ಅವುಗಳ ಫಲವನ್ನವರು ಅವಶ್ಯ ಅನುಭವಿಸತಕ್ಕವರೆಂತಲೂ ಅಂಗೀಕರಿಸಲ್ಪಟ್ಟಿರುತಿದೆ. ಈ ಮತದಲ್ಲಿ ಪ್ರಸಿದ್ಧಗಳಾದ ಪದಾರ್ಥಗಳು ಮೂರೆಂದು ತಿಳಿಯತಕ್ಕದ್ದು. ಪತಿಪಶುಪಾಶಭೇದಾತ್ತ್ರಯಃ ಪದಾರ್ಥಾಃ ಇತಿ—ತದುಕ್ತಂ ತಂತ್ರತತ್ವಜ್ಞೈಃ—ತ್ರಿಪದಾರ್ಥಂ ಚತುಷ್ಪಾದಂ ಮಹಾತಂತ್ರಂ ಜಗದ್ಗುರುಃ। ಸೂತ್ರೇಣೈಕೇನ ಸಂಕ್ಷಿಪ್ಯ ಪ್ರಾಹ ವಿಸ್ತರತಃ ಪುನಃ|| ಅಂದರೆ ಪತಿ ಈಶ್ವರನು, ಪಶುಗಳು ಜೀವರು, ಈ ಜೀವರಿಗೆ ಕಾಮಕರ್ಮಾದಿಗಳು ಪಾಶಗಳು ಯೆಂಬ ಮೂರು ವಿಷಯಗಳೇರ್ಪಟ್ಟವು. ವಿವಾದಾಧ್ಯಾಸಿತಂ ಸಕರ್ತೃಕಂ ಕಾರ್ಯತ್ವಾತ್ ಘಟವತ್ ಅಂದರೆ ವಿವಾದ ವಿಷಯವಾದ ದೇಹಾದಿ ಪ್ರಪಂಚಕ್ಕೆ ಕರ್ತನೊಬ್ಬನಿಲ್ಲದಿದ್ದರೆ ಹೊಸದಾಗಿ ಜನಿಸಲಾರದೆಂಬ ಅನುಮಾನ ಪ್ರಮಾಣದಮೇಲೆ ಈಶ್ವರನನ್ನಂಗೀಕರಿಸಬೇಕಾಯಿತು. "ಅಜ್ಞೋಜಂತುರನೀಶೋಯಂ ಆತ್ಮನಃ ಸುಖದುಃಖಯೋಃ। ಈಶ್ವರಪ್ರೇರಿತೋಗಚ್ಛೇತ್ ಸ್ವರ್ಗಂವಾಶ್ವಭ್ರಮೇವವಾ" ಅಂದರೆ ಅಜ್ಞನಾದ ಜೀವನು ಸ್ವತಂತ್ರನಲ್ಲದೆ ಈಶ್ವರ ಪಾರತಂತ್ರ್ಯದೊಡನೆ ಸುಖದುಃಖಗಳನ್ನೂ ಸ್ವರ್ಗ ನರಕಗಳನ್ನೂ ಅನುಭವಿಸುತ್ತಾನೆಂತಲೂ ಕರ್ಮಾನುಸಾರವಾಗಿ ಈಶ್ವರನು ಜೀವನಿಗೆ ಸುಖದುಃಖಗಳಂ ಕೊಡುವನೆಂತಲೂ ನುಡಿದು ಅದುಅಂಗೀಕರಿಸಿದಾಗ್ಯೂ ಆತನ ಸ್ವಾತಂತ್ರ್ಯಕ್ಕೆ ಲೇಶವಾದರೂ ಲೋಪವಿರಲಾರದು. ಹ್ಯಾಗೆಂದರೆ ಕೋಶಾಧ್ಯಕ್ಷನನ್ನಪೇಕ್ಷಿಸುವ ಅರಸನಿಗೆಸ್ವಾತಂತ್ರ್ಯವಿಲ್ಲವೆಂದು ನುಡಿಯುವದಕ್ಕಾಗುವದೆ! ಆರೀತಿ ಹೇಳಲಾಗದು. "ಸರ್ವಜ್ಞಸ್ಸರ್ವಕರ್ತೃತ್ವಾತ್ ಸಾಧನಾಂಗಃ ಫಲೈಸ್ಸಹ। ಯೋಯಜ್ಜಾನಾತಿಕುರುತೇ ಸತದೇವೇತಿಸುಸ್ಥಿತಂ।" ಅಂದರೆ ಈಶ್ವರನು ಸರ್ವಜ್ಞನು, ಸರ್ವಕರ್ತನು, ಸರ್ವಸ್ವತಂತ್ರನು ಯೆಂದು ಭಾವವು. ಜಗತ್ಕರ್ತನಾದ ಈಶ್ವರನು ಅವಯವಿಯೋ ನಿರವಯವಿಯೋ ಯೆಂದು ಪ್ರಶ್ನೆಮಾಡಿದೊಡೆ ಯೆರಡು ಪಕ್ಷಗಳನ್ನೂ ಅಂಗೀಕರಿಸಿ ಉತ್ತರ ಹೇಳಬಹುದೇನೆಂದರೆ, ಅಶರೀರನಾದ್ದ ಪರಮಾತ್ಮನು ಶರೀರಕ್ಕೆ ಚೈತನ್ಯವನ್ನುಂಟುಮಾಡತಕ್ಕ ಶಕ್ತಿಯುಳ್ಳವನಾದುದರಿಂದ ಅವನು ಅವಯವಶೂನ್ಯನಾಗಿದ್ದರೂ ಜಗತ್ಕರ್ತನಾಗಿರಲಿಕ್ಕೇನೂ ಅಭ್ಯಂತರವಿಲ್ಲವು. ಅಥವಾ ಶರೀರವುಳ್ಳವನೆಂದು ಹೇಳಿದಾಗ್ಯೂ ನಮಗಿರುವಂತಾ ಪ್ರಾಕೃತ ಶರೀರ ವುಳ್ಳವನಾಗಿರಲಾರನು. ಶರೀರವುಳ್ಳವನೆಂದು ಹೇಳಿದ ಮಾತ್ರದಿಂದಲೆ ಈಶ್ವರನು ನಮ್ಮಂತೆ ಒಬ್ಬನೆಂದಾಗಲಿ, ಅಥವಾ ನಾವೂ ಈಶ್ವರನಂತೆಯೆಂದಾಗಲಿ ಭಾವಿಸುವದು ಹಾಸ್ಯಾಸ್ಪದವಾಗಿರುವುದು. ಯುಕ್ತಿಯಿಂ ನೋಡಿ ನರಿ ಬರೆಹಾಕಿಕೊಂಡರೆ ಹುಲಿಯ ಸಮಾನತ್ವ ತೋರಿದರೆ ಅದು ನಮಗೆಂದಿಗೂ ಸಿದ್ಧಿಸತಕ್ಕದ್ದಲ್ಲವು. ನಮ್ಮ ಪ್ರಾಕೃತ ಶರೀರಕ್ಕೂ ಆತನ ಅಪ್ರಾಕೃತ ಶರೀರಕ್ಕೂ ಬಹಳ ಭೇದವುಂಟು. ಮುಖ್ಯವಾದ ನಿರಾಲಂಬವಾದ ಒಂದು ಪದಾರ್ಥವನ್ನು ಮನದೊಳು ಧರಿಸಿ ಧ್ಯಾನಿಸುವುದು ಪ್ರಥಮದೊಳು ಪ್ರಾಣಿಗಳಿಗೆ ಪ್ರಯಾಸವಾದುದರಿಂದಲೇ ಭಕ್ತವತ್ಸಲನಾದ ಆತನು ಉಪಾಸಕರಿಗನುಕೂಲವಾಗಿರುವಂತೆ ಸ್ವೇಚ್ಛೆಯೊಡನೆ ಆಯಾ ದಿವ್ಯ ಶರೀರಗಳಂ ಧರಿಸಿ ಪ್ರಕೃತಿ ಮಂಡಲವು ಪೋಷಿಸುತ್ತಾನೆ. ಪಶುಸದೃಶರಾದ ಪ್ರಾಣಿಗಳನ್ನು ಬಂಧಕ್ಕೂ ಬಂಧವಿಮೋಚನಕ್ಕೂ ಒಳಪಡಿಸಲಿಕ್ಕೆ ಪಶುಪತಿಯಾದ ಈಶ್ವರನು ಸ್ವತಂತ್ರನಾಗಿರುತ್ತಾನೆ. ಆತನ ಉಪಾಸನೆಯಂ ಮಾಡಿದವರು ಬಂಧವಿಮುಕ್ತರಾಗಿ ಸಕಲ ಶ್ರೇಯಸ್ಸನ್ನೂ ಪಡೆಯುವರೆಂಬದೇ ಈ ಸಿದ್ಧಾಂತಾಭಿಪ್ರಾಯವಾಗಿರುತಿದೆ. ಇದೇ ಶೈವವಿಶಿಷ್ಟಾದ್ವೈತವೆಂದು ಕರೆಯಲ್ಪಡುತಿದೆ. ಇದರಲ್ಲಿ ಶಿವಸರ್ವೋತ್ಕೃಷ್ಟತ್ವವು ಮುಖ್ಯವಾಗಿ ಉಪಪಾದಿಸಲ್ಪಡುತಿದೆ. ಇದಕ್ಕೆ ಸಾಧಕವಾದ ಆಗಮಾದಿ ಪುರಾಣಗಳು ಅನೇಕ ಪ್ರವರ್ತಿಸಿ ವ್ಯವಹಾರದೊಳಿರುತಿವೆ.

ಸರ್ವಮತಾಭಿಮಾನಿ.

SUMMARY OF NEWS
ವೃತ್ತಾಂತ ಸಂಗ್ರಹವು.

ಆಪ್ರಿಕ ದೇಶಕ್ಕೂ ಆಪ್ರಿಕಾ ಖಂಡಕ್ಕೂ ನಡುವೆ ಇರುವ ಕೆಂಪು ಸಮುದ್ರದಲ್ಲಿ ಕಲ್ಲುತಿಂದು ಪಕ್ಷಿ ಸಿಕ್ಕೊಳ್ಳುವಂತವಿರುವದು ಗಿಳಿತುತನೆ —ಬೆಂ.

ಲಂಡನ್ ನಾ ಎಂಬುದರಲ್ಲಿ ಆಕಾಶದೊಳಗಿನ ನಕ್ಷತ್ರಗಳು ಪತನವಾದಂತೆ ಬೀಳುತ್ತಿರುವ ಕಬ್ಬಿಣದ ಕಲ್ಲಿನ ಹೊಟ್ಟೆಯೊಳಗೆ ವಜ್ರಗಳು ಸಿಕ್ಕಿರುತವೆ —ಬೆಂ

ಪಂಜಾಬಿನಲ್ಲಿ ಯಾವದೊಂದು ಆಲೋಚನೆ ಬಂದು ನಿನ್ನ ಹತ್ತಿರವಿದ್ದರೆ ದುಃಖಿಸಿಕೊಳ್ಳುವಾಗೈ ತುಸು ಬಿಸಿನೀರು ಕುಡಿದು ಬೇಕು ಆದರೆ ನಿನ್ನ ಬರುತ್ತದೆಂದು ಒಬ್ಬ ಡಾಕ್ಟರನು ಹೇಳುತ್ತಾನೆ ಉಪಾಯ ಸುಲಭವಾಗಿದೆ —ಬೆಂ

೧೮೯೨ ನೇ ಇಸವಿ ಜೂನ್ ೧೮ ನೇ ತಾರೀಖಿಗೆ ಮುಗಿದ ವಾರದ ಬಾಬತು ಮದರಾಸ ಪ್ರೆಸಿಡೆನ್ಸಿಯ ಡಿಸ್ಟ್ರಿಕ್ಟು ಬಾತ್ ಕಾಲಸ್ಥಿತಿಯನ್ನು ಕುರಿತ ರಿಪೋರ್ಟ್ — ಈಗಿನ ವರ್ತಮಾನಗಳ ಪ್ರಕಾರ ದಕ್ಷಿಣದ ಮದರಾಸ ಪ್ರೆಸಿಡೆನ್ಸಿಯಲ್ಲಿ ಬಹಳ ಜಾಗಗಳಲ್ಲಿ ಪ್ರಾರಂಭವಾಗಿದೆ. ಕ್ಷಿಪ್ರದಲ್ಲಿ ಮಳೆ ಬಾರದೆ ಹೋಗುವ ಪಕ್ಷದಲ್ಲಿ ಅನೇಕ ಪ್ರದೇಶಗಳಲ್ಲಿ ಬಹಳ ಸಂಕಟ ಪ್ರಾಪ್ತವಾಗುವದು. ಬೆ ವಾರದೊಳು ಡೆಕ್ಕನ್ ಸರಕಾರ, ಕರ್ನಾಟಕ ಆಂಧ್ರ ಕ್ಷಾಮಪೀಡಿತಗಳಾದ ಕೆಲವು ಪ್ರದೇಶಗಳಲ್ಲಿ ಒಳ್ಳೆ ಮಳೆ ಆಯಿತು. ಪಶ್ಚಿಮ ಸಮುದ್ರ ತೀರದಲ್ಲಿ ಅಪ್ಪಾಜಿ ಪಟ್ಟಿ, ಅನಂತಪುರ, ಬಳ್ಳಾರಿ, ಕರ್ನೂಲ್ ಡಿಸ್ಟ್ರಿಕ್ಟ್ ಗಳ ಕೆಲವು ಪ್ರದೇಶಗಳಲ್ಲಿ ಅಲ್ಪ ವೃಷ್ಟಿ ... [illegible]

EXTRACTS
ಜಾರತ್ವ.

ಈ ಲೋಕದಲ್ಲಿ ಜಾರತ್ವವೆಂಬ ಒಂದು ಪಿಶಾಚಿಯು ಈ ಕಾಲದಲ್ಲಿ ಎಲ್ಲಾ ಜಾತಿಗಳಲ್ಲಿಯೂ ಅಧಿಕವಾಗಿ ಕಾಣುತ್ತಿರುವದು ... [illegible]

... ದೇವಾಲಯಗಳಲ್ಲಿಯೂ, ಮಠಗಳಲ್ಲಿಯೂ ವಾಸವಾಗಿರುವ ಪೂಜೆ, ಜಪ, ಅನುಷ್ಠಾನಗಳಂ ಮಾಡಿದರೂ ತಮ್ಮ ಚಂಚಲತ್ವವನ್ನು ಕಳೆದುಕೊಳ್ಳಲಾರರು ದೇವರ ಶಾಪ ಶಿಕ್ಷೆಗಳಿಗೆ ಗುರಿಯಾಗಿರುತ್ತಾರೆ

ಜಾರತ್ವ ಕೆಟ್ಟದು ಎಂಬುವದಕ್ಕೆ ನಮ್ಮ ಶಾಸ್ತ್ರ ಪ್ರಮಾಣ ... [illegible] ... ಸ್ಮೃತಿ ಪ್ರಮಾಣ ಶ್ಲೋಕ — ... [illegible]

ಅರ್ಥ —ಲೋಕದಲ್ಲಿ ಪತಿವ್ರತೆಯಾಗಿರಲಿ, ಅಥವಾ ಜಾರಿಣಿಯಾಗಿರಲಿ ... [illegible]

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

೧೮ ನೇ ಜೂನ್ ೧೮೯೨

೧೮೯೨ ನೇ ಇಸವಿ ಜೂನ್ ೩೦ ನೇ ತಾರೀಖು ಬೃಹಸ್ಪತಿವಾರದ ಪ್ರಾತಃಕಾಲ ೮ ಘಂಟೆಗೆ ಸಿಟಿ ಮ್ಯೂನಿಸಿಪಲ್ ಸಂಘದವರು ಬೆಂಗಳೂರು ಕೋಟೆಯಲ್ಲಿರುವ ಮ್ಯೂನಿಸಿಪಲ್ ಆಫೀಸಿನಲ್ಲಿ ಸಭೆ ಸೇರುವಾಗ ಅವರ ನಿರ್ಣಯಕ್ಕೆ ತರಲ್ಪಡುವ ವಿಷಯಗಳ ಯಾದಾಸ್ತು

೧ ೧೮೯೨ ನೇ ಇಸವಿ ಮೇ ತಿಂಗಳ ಬಾಬತು ನಗದು ಜಮಾಖರ್ಚು ಲೆಕ್ಕ, ಮರಣ ಲೆಕ್ಕ, ರೋಗಿಗಳಿಗೆ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರ ಲೆಕ್ಕ, ಮತ್ತು ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟು

೨ ಸಿಟಿ ಅಮಲ್ದಾರರಿಗೂ ಮ್ಯೂನಿಸಿಪಲ್ ಎಗ್ಸಿಕ್ಯೂಟಿವ್ ಇಂಜನಿಯರರಿಗೂ ತಲುಪ ಬತ್ತೇ ವಿಷಯವನ್ನು ಕುರಿತು ೧೮೯೨ ನೇ ಇಸವಿ ಮೇ ತಿಂಗಳ ೨೭ ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ... —L ... ನೇ ನಂಬರ ಪ್ರೊಸೀಡಿಂಗ್ಸ

೩ ಆಕ್ಟಿಂಗ್ ಮ್ಯಾನೇಜರನ್ನು ಮ್ಯೂನಿಸಿಪಲ್ ಆಫೀಸ ಮ್ಯಾನೇಜರ ವ ... ಆಫೀಸ ಮ್ಯಾನೇಜರನ್ನು ... ಉದ್ಯೋಗದ ಹೆಸರು ಬದಲಾವಣೆ ಮಾಡಿ ಆಕ್ಟಿಂಗ್ ಮ್ಯಾನೇಜರಾಗಿಯೂ ... ೧೮೯೨ ನೇ ಇಸವಿ ಮೇ ತಿಂಗಳ ೨೭ ನೇ ತಾರೀಖಿನಲ್ಲಿ ಗವರ್ನಮೆಂಟಿನವರು ಮಾಡಿದ ... —L ... ನೇ ನಂಬರ ಪ್ರೊಸೀಡಿಂಗ್ಸ

೪ ೧೮೯೧—೯೨ ನೇ ಇಸವಿಯಲ್ಲಿ ಗವರ್ನಮೆಂಟ್ ... ೨೦೦ ರೂಪಾಯಿಗಳ ... ವಿಷಯವಾಗಿ ನಡೆದಿರುವ ಕಾಗದ ಪತ್ರಗಳು

೫ ೧೮೯೧—೯೨ ನೇ ಇಸವಿಯಲ್ಲಿ ಆದ ... ಮತ್ತು ಅದಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳು

೬ ಕಾರ್ಪೊರೇಷನ್ ... [illegible] ... ಕಾಗದ ಪತ್ರಗಳು

೭ ... [illegible]

೮ ... [illegible]

೯ ... [illegible]

೧೦ ... [illegible]

೧ ... [illegible]

೨ ... [illegible]

೩ ... [illegible]

೪ ... [illegible]

೧೧ ... [illegible]

೧೨ ... [illegible]

೧೩ ... [illegible]

೧೪ ... [illegible]

೧೫ ... [illegible]

೧೬ ... [illegible]

೧೭ ... [illegible]

೧೮ ... [illegible]

೧೯ ... [illegible]

೨೦ ಗುಬ್ಬಿ ತೋಟದಪ್ಪನವರು ... ವಿಷಯದಲ್ಲಿ ನಡೆದ ಕಾಗದ ಪತ್ರಗಳು

ಬೆಂಗಳೂರು } ಸಿಟಿ ಮ್ಯೂನಿಸಿಪಲ್ ಆಫೀಸ,

MIR SHUJAYAT ALI KHAN
President
City Municipal Commission

BANGALORE —Printed and published at the KARNATAKA PRESS, No. 40, ... ROAD, PETTAH —1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XIX] BANGALORE — MONDAY JULY 4, 1892 [No 27

ಸಂಪುಟ ೧೯] ಬೆಂಗಳೂರು — ೧೮೯೨ನೇ ಇಸವಿ ಜುಲೈ ೪ನೇ ತಾರೀಖ್ ಸೋಮವಾರ [ಸಂಚಿಕೆ ೨೭

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಬಾಗಗಳಿಗೆ

[illegible]

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ

[illegible]

ADVERTISEMENTS

NOTICE

VAIDYASARA SANGRAHA

HINDU MEDICINE

[illegible]

ನೋಟೀಸು.

ಬೆಂಗಳೂರು ಕರ್ಣಾಟಿಕ್ ಪ್ರೆಸ್

[illegible]

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಸುಲಭವಿಸಿದ್ಧವಾದ ಔಷಧಗಳು

[illegible]

ನೋಟೀಸ್

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ ಕಮಿಷನ್ ಏಜಂಟ್ಸ್

ಇ ಷರದಿ ತಿಳಿಸಲ್ಪಡುವ ಸಾಮಾನುಗಳನ್ನು ಶೇಕಡಾವಾರಿಗೆ ಸಾಪ್ರ ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದ ವಿ ವ್ಯಾಲ್ಯೂ ಪೇಯಬಲ್ ಫೋಸ್ಟ್ ಮೂಲಕ ತಕ್ಕ ಕಮಿಷನ್ ತೆಗದುಕೊಂಡು ರವಾನಿಸುವುದಕ್ಕೆ ಸನ್ನದ್ಧರಾಗಿರುತ್ತೇವೆ

[illegible] ಔಷಧಗಳು ಪುಸ್ತಕಗಳು, ಮುತ್ತುಗಳು, [illegible] ಗಳು, ಘಡಿಯಾರಗಳು, [illegible] ಗಳು, [illegible] ಪಟಗಳು, ಉತ್ತರೀಗಳು, [illegible] ಪಾತ್ರೆಗಳು, ವೇಸು, [illegible] ಸಾಮಾನುಗಳು

[illegible]

ವಿಳಾಸ — ಗಣೇಶ ರಾಮಚಂದ್ರ ಕರ್ಕೆ,

ಮತ್ತು ಕಂಪೆನಿ ಕಮಿಷನ್ ಏಜಂಟ್ಸ್

[illegible] ಪೋಸ್ಟ್ ಮುಂಬೈ

THE BANGALORE SRI SRINIVASA MANDIRAM

ಬೆಂಗಳೂರು ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ [illegible] ಅಕ್ಕ ಮತ್ತು ಅವರ ನಿಸಿಯೋಗದ ದಿನಸಿಂದ ಪೋಷಿಸುವ [illegible] —

೧೮೯೨ನೇ [illegible] ತಾರೀಖ್ ವರೆವಿಗೆ —

[illegible]	98
[illegible]	66½
[illegible]	47
ಜಮ್ಮ	113½
[illegible]	3
[illegible]	101
[illegible]	61

[illegible] ಸಂಖ್ಯೆ [illegible]

[illegible]	7
[illegible] ವಿದ್ಯಾರ್ಥಿ	4
[illegible] ವಿದ್ಯಾರ್ಥಿಗಳು	6
[illegible]	17
[illegible]	4
ಜಮ್ಮ	38

THE MONEY MARKET

[illegible] 2ನೇ ಜುಲೈ 1892

[illegible] ಗವರ್ನಮೆಂಟ್ ಪತ್ರಗಳು [illegible] 107 10 0 ರಿಂದ 108 0 0 ವರೆಗೆ

[illegible] (100) [illegible]

[illegible] 99 5 [illegible] 930 [illegible]

[illegible] (100) [illegible] 165 ರಿಂದ 170 ವರೆಗೆ

[illegible] 15—12—0

[illegible]

6 [illegible] 1s 1 9 23/

[illegible] 4 [illegible] 1s 3 17/32d

[illegible] 1s 3 7 16d

LATEST TELEGRAMS

ತಂತಿ ವೃತ್ತಾಂತ

ಲಂಡನ್, ತಾ|| ೨೯ನೇ ಜೂನ್, ೧೮೯೨—ಈ ದಿನ ಪಾರ್ಲಿಮೆಂಟ್ ಸಭೆಯು, ವಜಾ ಮಾಡಲ್ಪಟ್ಟಿತು ಶ್ರೀಮನ್ಮಹಾರಾಜ್ಞೀಯವರು ಆಜ್ಞಾಪಿಸಿದ್ದೇನಂದರೆ—ಹೊಸದಾಗಿ ಪಾರ್ಲಿಮೆಂಟ್ ಸಭೆಯನ್ನೇರ್ಪಡಿಸಿ ಆ ಸಭೆಯವರ ಮೂಲಕ ಪ್ರಜಾಭಿಪ್ರಾಯವನ್ನರಿಯತಕ್ಕಾದ ಕಾಲವೀಗ ಪ್ರಾಪ್ತವಾಗಿದೆ ಅನ್ಯ ಸಂಸ್ಥಾನಾಧಿಪತಿಗಳೊಡನೆ ನಮಗೆ ಸೇರಿಗೊಂಡಿರುವ ಸಂಬಂಧವು ಮಿತ್ರಭಾವವುಳ್ಳದ್ದಾಗಿರುತಿದೆ ಇಂಡಿಯಾ ಕೌನ್ಸಿಲ್ ಮಸವಿದಾ ಆಕ್ಟನ್ನು ಮನಃಪೂರ್ವಕ ನಾವಂಗೀಕರಿಸಿರುತ್ತೇವೆ. ಸದರೀ ಮಸವಿದೆಯ ಬಲದಿಂದ ಇಂಡ್ಯ ಗವರ್ನಮೆಂಟಿನವರು ಇಂಡ್ಯದೇಶದಲ್ಲಿರುವ ನಾನಾ ಜಾತಿ ಮತಗಳವರ ಅಭಿಪ್ರಾಯಗಳನ್ನೂ ಅಪೇಕ್ಷಿತಾಂಶಗಳನ್ನೂ ಇನ್ನೂ ಸಂಪೂರ್ಣವಾಗಿ ವಿಚಾರಿಸಿ ತಿಳದುಕೊಳ್ಳುವದಕ್ಕೂ, ರಾಜ್ಯಕಾರ್ಯ ನಿರ್ವಹಣೆಯಲ್ಲಿ ಯುಕ್ತವಾದ ಸಲಹೆಗಳಂ ಕೊಟ್ಟು ಸಹಾಯ ಮಾಡುವದಕ್ಕೆ ಸಂಪೂರ್ಣ ಅರ್ಹರಾದವರ ಅನುಕೂಲ್ಯತೆಯಂ ಪಡೆಯಲಿಕ್ಕೂ ಶಕ್ತರಾಗಬಹುದೆಂದು ನಾವು ದೃಢವಾಗಿ ನಂಬುತ್ತೇವೆಂಬದು.

ಲಂಡನ್, ತಾ ೩೦ನೇ ಜೂನ್, ೧೮೯೨—ನಿನ್ನೆಯ ರಾತ್ರಿಯ ಸರ್ಕಾರೀ ಗೆಜೆಟಿನಲ್ಲಿ ಪಾರ್ಲಿಮೆಂಟ್ ಸಭೆ ಮೌಕೂಫ್ ಮಾಡಲ್ಪಟ್ಟ ಅಂಶವು ಪ್ರಕಟಿಸಲ್ಪಟ್ಟಿತು ಆಗಸ್ಟ್ ೪ನೇ ತಾರೀಖ್ ನಲ್ಲಿ ಹೊಸ ಪಾರ್ಲಿಮೆಂಟ್ ಸಭೆಯು ಮರಳಿ ಸೇರುವಂತೆ ವ್ಯವಸ್ಥೆ ಮಾಡಲ್ಪಟ್ಟಿರುತಿದೆ

ಮಿ|| ಗ್ಲ್ಯಾಡ್‌ಸ್ಟನ್‌ಯವರಿಗೆ ನೇತ್ರರೋಗವಾಧಿಯು ಗುಣವಾಗಿ ಆದಿನ ಚಿಳ್ಗ್ರೆ ಮಿಡ್‌ಲೋಥಿಯನ್ ಕೌಂಟಿಗೆ ಎಲೆಕ್ಷನ್ ವಿಷಯದಲ್ಲಿ ಪ್ರಜೆಗಳಿಗೆ ಬೋಧಿಸಿ ದೇಶದಸ್ಥಿತಿಯನ್ನದರಿಗೆ ಅರುಹುವದಕ್ಕಾಗಿ ಹೊರಟುಹೋದರು

ಅಲಹಾಬಾದ್, ತಾ|| ೨೯ನೇ ಜೂನ್ ೧೮೯೨ — ಆಫ್ಘನಿಸ್ಥಾನ ರಾಜ್ಯದ ನಿವ್ವಳದಿಗೆ ಭಂಗವನ್ನುಂಟುಮಾಡಿರುವವರು ಅಚಕ್ ಜೈಯಸ್ ಎಂಬ ಜನರೆಂದು ತಿಳಯಬರುತಿದೆ. ಇವರು ಜನರಂ ದಾರಿಕಟ್ಟಿ ಹೊಡೆದು ಕಡಿಯುವವರಲ್ಲಿ ಬಹಳ ಪ್ರವೀಣರಾದವರಾಗಿರುತ್ತಾರೆ. ಇವರು ಕೋಜಾಕ್ ಪ್ರಾಂತಕ್ಕೆ ಪಶ್ಚಿಮದಲ್ಲಿರುವ ಒಂದು ವೈರಾಸಿನೊಳು ಪೊಕ್ಕ್ಯಂ ಮಾಡಿಕೊಂಡು ಅವಿಚಾರರವರ ಮಾರ್ಗಸ್ಥರನ್ನು ಹೊಡೆದು ದೋಚಿಕೊಂಡು ಹೋಗುತಲಿದಾರೆ. ಉರಜುಫ್ರಾನ್ ಪ್ರಾಂತಕ್ಕೆ ಸೈನ್ಯವು ಕಳುಹಿಸಲ್ಪಟ್ಟಿರುವದರಿಂದ ಕಂದಾರ್ ಗ್ಯಾರಿಜನ್ನಲ್ಲಿರುವ ಸೇನಾಬಲವು ದುರ್ಬಲವೆಂದು ಭಾವಿಸಿ ಸದರೀ ಜನರೀಗ ಕಂಧಾರಿಗೂ ನ್ಯೂಚ್ಮನ್ ಎಂಬ ಸ್ಥಳಕ್ಕೂ ಮಧ್ಯ ರಸ್ತೆಯನ್ನು ಬಂದುಮಾಡಿ ಸಂಚರಿಸುವವರಿಗೆ ಬಾಧೆಯನ್ನುಂಟುಮಾಡುವಷ್ಟು ಪ್ರಬಲರಾಗಿದಾರೆ

ಕ್ಷಾಮನಿವಾರಕವಾದ ಒಂದು ಕಮಿಟಿನ್ನು ಕಾಮಗಾರಿಯಂ ಜರಗಿಸುವ ವಿಷಯದಲ್ಲಿ ಅಪ್ಪರ್ ಬರ್ಮಾ ರಾಜ್ಯದಿಂದ [illegible] ಪಯೋನಿಯರ್ ಪತ್ರಿಕೆಗೆ ಆಶ್ಚರ್ಯಕರವಾದ ವೃತ್ತಾಂತವೊಂದು ಬಂದಿರುತಿದೆನೆಂದರೆ — [illegible]

ಕೆಲಸಗಳ ಬಗ್ಗೆ ಕೂಲಿಗೆ ಬರುವವಕ್ಕೆ ಬರುತ್ತಿದ್ದವರು ಒಂದು ಡಿಸ್ಟ್ರಿಕ್ಟಿನಲ್ಲಿ ನಿರಾಕರಿಸಿದ್ದರಿಂದ ಕ್ಷಾಮದ ಬಾಧೆಯು ಕೇವಲ ಅಲ್ಪವೆಂದೂಹಿಸಬೇಕಾಗಿದೆಯಲ್ಲದೆ ಪ್ರಾರಂಭಿಸಲ್ಪಟ್ಟ ಕಾಮಗಾರಿಯನ್ನು ಕುಡ್ಲಾಂಗ ನಿಂತುಹೋಗದಂತೆ ಅದು ಕೊನೆ ಮುಟ್ಟಿಸುವಬಗ್ಗೆ ಕಾಮಗಾರಿಗೋಸ್ಕರ ಮದರಾಸ್ ಪ್ರಾಂತದಿಂದ ಕೂಲಿ ಜನವನ್ನು ಕಳುಹಿಸಬೇಕಾದಷ್ಟರ ಆವಶ್ಯಕತೆ ಯುಂಟಾಗಿರುತ್ತದೆಂಬುವದು. ಈ ವಿಷಯವು ಪ್ರಕಟಿಸಿದ ಪಯೋನಿಯರ್ ಪತ್ರಿಕೆಯು ಈ ವೃತ್ತಾಂತದಲ್ಲಿ ಮುಖ್ಯವಾದ ಭಾಗವು ನಿಜವೆಂದು ಭಾವಿಸಲಿಕ್ಕೆ ಕಾರಣವಿಲ್ಲದೆ ಹೋಗಲಿಲ್ಲವೆಂದು ತಾತ್ಪರ್ಯಪಡುತ್ತದೆ.

ಅಲಹಾಬಾದ್‌ನಲ್ಲಿ ಬಿಸಲಿನ ಝಳವು ಅತಿ ಭಯಂಕರವಾದುದಾಗಿರುತ್ತದೆ. ಇನ್ನೂ ವರ್ಷಕ್ಕೆ ಪ್ರಾರಂಭವಾಗಲಿಲ್ಲವು. ದುಸ್ಸಹವಾದ ಬಿಸಲಿನ ತೈಕ್ಷ್ಣ್ಯದಿಂದ ಸಮಯಾಚಾರ ಸಂಬಂಧಗಳಾದ ಬರ್ಹ್ವಾಂಶಗಳು ಜರಗದೆ ನಿಂತುಹೋಗಿರುತ್ತವೆ

ಮುಂಬೈ ಗವರ್ನರಾದ ಲಾರ್ಡ್ ಹ್ಯಾರಿಸ್ ಸಾಹೇಬರವರ ಕೈಯನ್ನು ಈಗ್ಗೆ ಕೆಲವು ದಿವಸಗಳ ಹಿಂದೆ ಅವರ ಕುದುರೆಯೊಂದು ಕಚ್ಚಿತು. ಆ ಕಾಲದಲ್ಲಿ ಅವರವಕ್ಕೆ ತಕ್ಕ ಚಿಕಿತ್ಸೆ ಮಾಡದೆ ಉದಾಸೀನ ಮಾಡಿದ್ದರಿಂದ ಅದು ಈಗ ಅವರಿಗೆ ವಿಶೇಷ ಬಾಧೆಯನ್ನುಂಟುಮಾಡಿದೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 4, 1892.
೧೮೯೨ನೇ ಇಸವಿ ಜೂಲೈ ತಾ|| ೪ ನೇ ಸೋಮವಾರ.

THE MYSORE CIVIL SERVICE EXAMINATION.

ಈ ಸಂಸ್ಥಾನಕ್ಕೆ ಇದುವರಿವಿಗೆ ಇಲ್ಲದೆ ಇದ್ದು ಈಗ ಕೇವಲ ಅಪೇಕ್ಷಿತವೆಂಬ ಭಾವನೆಯಿಂದ ಏರ್ಪಡಿಸಲ್ಪಟ್ಟ ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯು ಈದಿನ ದಿವಾನರ ಆಫೀಸ್ ಕೌನ್ಸಿಲ್ ಹಾಲಿನೊಳು ಎಡ್ಯುಕೇಷನ್ ಸೆಕ್ರೆಟರಿಯವರ ವಿಚಾರಣೆಯಲ್ಲಿ ನಡೆಯುವುದು. ಈ ಪರೀಕ್ಷೆಗೆ ದರಖಾಸ್ತು ಕಳುಹಿಸಿದ್ದ ಉಮೇದುವಾರರಲ್ಲಿ ಐದಾರು ಜನ ಬರಲಿಲ್ಲವೆಂತಲೂ ಬಂದಿರುವವರ ಪೈಕಿ ಇಬ್ಬರು ಮೆಡಿಕಲ್ ಯೆಗ್ಜಾಮಿನೇಷನ್‌ನಲ್ಲಿ ನಾಲಾಯಖ್ ಏರ್ಪಟ್ಟದರಿಂದ ಅವರೂ ವಜಾ ಆಗಲಾಗಿ ೧೪ ಜನ ಉಮೇದುವಾರರು ಪರೀಕ್ಷೆಗೆ ಹಾಜರಾಗಿದಾರೆಂತಲೂ ತಿಳಿಯಬರುತ್ತದೆ. ಇದಕ್ಕಾಗಿಬಂದಿರತಕ್ಕವರೆಲ್ಲರು ಶ್ರಾವ್ಯವಯಸ್ಕರಾಗಿಯೂ ಒಳ್ಳೆಯ ಮೇಧಾಶಕ್ತಿಯುಳ್ಳವರಾಗಿಯೂ ಇರುತ್ತಾರೆ. ಇವರ ಪೈಕಿ ಕೆಲವರು ಇದುವರಿವಿಗೆ ಯೂನಿವರ್ಸಿಟಿ ಪರೀಕ್ಷೆಯಲ್ಲಿ ಬಹಳ ತೃಪ್ತಿಕರವಾಗಿ ತೇರ್ಗಡೆಯಾಗಿ ಒಂದೆರಡು ಮೆಡಲ್‌ಗಳನ್ನು ತೆಗೆದಿರುವವರಾಗಿರುತ್ತಾರೆ ಅವರ ಯೋಗ್ಯತಾ ಪ್ರದರ್ಶನಕ್ಕೆ ಅವರು ಪಡೆದಿರುವ ಪ್ರಶಸ್ತಿಯೇ ಸಾಕಾದ ನಿದರ್ಶನವಾಗಿರುತ್ತದೆ. ಹೀಗಿದ್ದಾಗ್ಯೂ ಅವರು ಮರಳಿ ಪರೀಕ್ಷಿಸುವಣವೆಂಬುದು ಸ್ವಲ್ಪ ಪರಿಹಾಸಾಸ್ಪದ ವಿಷಯವಾಗಿರುತ್ತದೆ. ಇದರಿಂದ ಮೈಸೂರಲ್ಲಿ ನಡೆಯುವ ಪರೀಕ್ಷೆಯು ಇಂಡಿಯನ್ ಯೂನಿವರ್ಸಿಟಿ ಪರೀಕ್ಷೆಗಿಂತಲೂ ಅಧಿಕಾಂಶಗಳಿಂದ ಶ್ರೇಷ್ಠವಾಗಿ ನಡೆಸಲ್ಪಡುವದೆಂದು ಭಾವಿಸಲಿಕ್ಕೆ ಅವಕಾಶ ವುಂಟುಮಾಡಿಕೊಂಡಂತಾಯಿತು. ಇಂಥಾ ಪರೀಕ್ಷೆಯಂ ಮದರಾಸ ಗವರ್ನಮೆಂಟಿನವರೇರ್ಪಡಿಸಿಕೊಂಡಿರುವಾಗ್ಯೆ ಇಲ್ಲಿನವರೀತಕ್ಕೆ ಅಂತಾದ್ದನ್ನು ಅಂಗೀಕರಿಸಬಾರದೆಂದು ಯಾರಾದರು ಆಕ್ಷೇಪಿಸಬಹುದು. ಹಾಗೆ ಆವಶ್ಯಕತೆಯುಂಟಾಗಿ ಅಂಗೀಕರಿಸುವಣದರಲ್ಲಿ ಆಕ್ಷೇಪಣೆಯೇನೂ ಇಲ್ಲವು. ಪರಂತು, ಆ ಗವರ್ನಮೆಂಟಿನವರಂತೆ ಇಷ್ಟಬಂದವರಿಬ್ಬರನ್ನು ಕ್ರಮಬಟ್ಟು ಓದಿ ಪರೀಕ್ಷೆಕೊಟ್ಟವರಿಗೆ ಸಮಾನವಾಗಿ ಅಂಗೀಕರಿಸಿ ಕೆಲಸ ಕೊಡುವದಾಗಿ ಅವರು ವಾಗ್ದಾನ ಮಾಡಿರುವಂತೆ ಯಿಲ್ಲಿಯೂ ಕಾಣಿಸಲಿಲ್ಲವು. ಇದರಲ್ಲಿ ಕಾಗಿಯನ್ನೂ ಕೋಗ್ಲೆಯನ್ನೂ ಒಂದಾಗಿ ಭಾವಿಸಿದಾಗ್ಯೂ, ವಸಂತಕಾಲದೊಳು ತತ್ತತ್ಸ್ವರಧ್ವನಿಯು ಅವುಗಳ ಯೋಗ್ಯತೆಯಿಂದ ವ್ಯಕ್ತವಾಗುವಂತೆ, ಉಚಿತಕಾಲದಲ್ಲಿ ಗವರ್ನಮೆಂಟಿನವರ ಅಭಿಮಾನಕ್ಕೆ ವಿಷಯರಾದವರಿಗೂ, ಪರೀಕ್ಷೆಯಲ್ಲಿ ಯೋಗ್ಯತಾಪ್ರದರ್ಶನ ಮೂಲಕ ತೇರ್ಗಡೆಯಾಗಿ ಮೊಕರರಾಗತಕ್ಕವರಿಗೂ ಉಂಟಾದ ತಾರತಮ್ಯವು ವ್ಯಕ್ತವಾಗಬಹುದಲ್ಲದೆ ಆಗ ಸರ್ಕಾರದವರ ಉಚಿತಜ್ಞತೆಸಹ ಪ್ರಕಟವಾಗುವುದು. ಸರ್ಕಾರ್ ನೌಕರಿಯಲ್ಲಿ ಮನುಷ್ಯನಿಗೆ ಚಿರಕಾಲಿಕವಾದ ಅನುಭವವೂ, ಸಹನೆಯೂ, ಗೌರವವೂ ಆವಶ್ಯಕವಾಗಿರಬೇಕಾದ ಗುಣಗಳಾಗಿರುತ್ತವೆ. ಅವು ಗ್ರಾಂಥಿಕವಾಗಿ ಲಭಿಸತಕ್ಕದ್ದಲ್ಲವು. ಇದುವರಿಂದ ಇವು ಕಾಲಾಂತರದಲ್ಲಿ ಯೇತಕ್ಕೆ ಬರಬಾರದೆಂದು ಕೇಳುವ ಪಕ್ಷಕ್ಕೆ ಸರ್ಕಾರ್ ನೌಕರಿಯಲ್ಲಿ ಯಾವದಕ್ಕೆ ಯಾರು ತಾನೆ ಅರ್ಹರೆನಿಸಿಕೊಳ್ಳಲಾರರೊ ನಾವರಿಯೆವು.

Occasional Notes
ನೈಮಿತ್ತಿಕ ವಿಷಯನ್ಯಾಸ.

A cure for cough.—ಕ್ಷಯರೋಗಕ್ಕೆ ಗುಧದ ಯಣ್ಣೆ ಪರಿಹಾರಕ ವಸ್ತುವೆಂದು ಬಹು ಸ್ವರವೇಕರು ಅನುಭವಪೂರ್ವಕತಿಳಿಸುತ್ತಾರೆ

Cholera.—ಕಾಶೀನಾಡು ಪ್ರಾಂತದಲ್ಲಿ ವಾಂತಿಭೇದಿ ರೋಗ ಪ್ರಬಲಗೊಳ್ಳಲು ಅಲ್ಲಿನ ಅಧಿಕಾರಿಗಳು ತನ್ನಿವೃತ್ತ್ಯೋಪಾಯವನ್ನರಿಯದೆ ಕೇವಲ ಚಿಂತಾಕ್ರಾಂತರಾಗಿರುವಂತೆ ತಿಳಿಯಬರುತ್ತದೆ.

Season at Cochin.—ಕೊಚ್ಚಿಯಲ್ಲಿ ಸುತರಾಂ ಮಳೆ ಇಲ್ಲವು, ಬೆಳೆ ಪೈರುಗಳೆಲ್ಲ ಒಣಗುತಲಿವೆ, ಇನ್ನು ಒಂದು ವಾರದೊಳಗಾಗಿ ಮಳೆ ಬಾರದೆ ಹೋಗುವ ಪಕ್ಷದಲ್ಲಿ ಬೆಳೆಗಳೆಲ್ಲ ನಾಶವಾಗುವವು. ಕಾಲದ ಹೇಷ್ಯಗಳು ಬಹಳಾ ಅಪಾಯವಾಗಿವೆ, ದಾರಣೆಗಳು ಹೆಚ್ಚುತಲಿವೆ, ಎಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತ್ತದೆ.

Prosperity of the people in the Sonthal Perganas.—ಸಂತಾಲ ಪ್ರಾಂತವ ಮಿಷನೆರಿಯಾದ ಮಿ|| ಹಾಲ್ಸಬೋ ಎಂಬ ಧರ್ಮಪ್ರಚಾರಕರು ಅಲ್ಲಿನ ಜನರ ಪ್ರಕೃತಸ್ಥಿತಿಯಂ ಕುರಿತು ಇದರಡಿ ತಿಳಿಸಲ್ಪಡುವಂತೆ ಬರೆಯುತ್ತಾರೆ.— ಸಂತಾಲ ಪರ್ಗಣಾವಿನಲ್ಲಿ ಜನರು ಆಹಾರವಿಲ್ಲದೆಯೂ ಬಾಡುತಲಿದಾರೆ. ಗಿಡಗಳ ಸೊಪ್ಪುಗಳನ್ನು ಉಪ್ಪಿಲ್ಲದೆ ಬೇಯಿಸಿ ತಿನ್ನುತ್ತಾರೆ. ಚಿಕಿತ್ಸೆಯಬಗ್ಗೆ ನಾನು ಹೋಗಿ ನೋಡಿದ ಒಂದು ಕುಟುಂಬದಲ್ಲಿ ರೋಗಿಯು ಆಹಾರವಿಲ್ಲದೆಯೂ ಕ್ಷಾಮ ಜ್ವರದಿಂದಲೂ ಒಣಗಿಹೋಗಿ ಮೂಳೆಗಳು ಮಾತ್ರವಿದ್ದವು ಸದರೀ ಕುಟುಂಬದಲ್ಲಿ ಒಬ್ಬರಿಗೂ ೬೪ ಘಂಟೆಗಳ ಕಾಲ ಆಹಾರವಿಲ್ಲವು, ಎಂಬದು.

Figures of the last Census.—ಈಚೆಗೆ ನಡೆದ ಖಾನೇಷುಮಾರಿಯನ್ನು ಕುರಿತು ಹೊರಗಾದ ರಿಪೋರ್ಟು ಪತ್ರಿಕೆಗಳ ಮೂಲಕ ತಿಳಿಯಬರುತ್ತದೇನೆಂದರೆ'—

ಇಂಡ್ಯದೇಶದ ಒಟ್ಟು ಪ್ರಜಾಸಂಖ್ಯೆಯು ೨೮,೭೧,೪೯,೬೨೩ ಆದು ೧೮೮೧ನೇ ಇಸವಿಯಲ್ಲಿ ತೆಗೆಯಲ್ಪಟ್ಟ ಸೆನ್ಸಸ್ ಪ್ರಜಾಸಂಖ್ಯೆಗಿಂತಲೂ ೨,೩೩,೮೯,೦೦೦ ಜಾಸ್ತಿಯಾಗಿದೆ. ನೇಟಿವ್ ಸಂಸ್ಥಾನಗಳ ಪ್ರಜಾ ಸಂಖ್ಯೆಯು ೬,೬೦,೫೦,೦೦೦ ಕ್ಕಿಂತಲು ಸ್ವಲ್ಪ ಜಾಸ್ತಿಯಾಗಿದೆ ದೊಡ್ಡ ದೊಡ್ಡ ಷಹರುಗಳ ಪ್ರಜಾ ಸಂಖ್ಯೆಯು ೨,೩೬,೨೯,೦೦೦, ಇಂಡ್ಯ ರಾಷ್ಟ್ರದ ಒಟ್ಟು ಪ್ರಜಾಸಂಖ್ಯೆಯ ಪೈಕಿ ೨೩,೬೫,೦೦,೦೦೦ ಜನರು ವಿದ್ಯಾಹೀನರು, ೧,೭೬,೦೦೦ ಮಂದಿಗಿಂತಲೂ ಅಧಿಕವಾಗಿ ಕುಷ್ಠರೋಗ ಪೀಡಿತರು, ಸಮಾರು ೪,೫೮,೦೦೦ ಮಂದಿ ಕುರುಡರು, ೧,೯೬,೦೦೦ ಮಂದಿ ಕಿವುಡರು ಮತ್ತು ಮೂಗರು, ೭೬,೦೦೦ ಮಂದಿ ಹುಚ್ಚರು.

Fighting in Afghanistan.—ಕಳೆದ ತಿಂಗಳ ೧೬ನೇ ತಾರೀಖಿನಲ್ಲಿ ಅಫಘಾನಿಸ್ತಾನದೇಶದಿಂದ ಅಲಹಾಬಾದಿಗೆ ಬಂದ ತಂತಿ ವರ್ತಮಾನದ ದೆಸೆಯಿಂದ, ಅಲ್ಲಿ ಈಗ ಕಾಬೂಲ್ ಅಮೀರರವರ ಸೇನೆಗೂ ಹಜಾರಸ್ ಯೆಂಬ ಜನರಿಗೂ ನಡೆಯುತಲಿರುವ ಯುದ್ಧದಲ್ಲಿ ಹಜಾರರೆ ಯೆಂಬವರ ಮೇಲೆ ಯುದ್ಧಕ್ಕೆ ಹೋಗುವದಿಲ್ಲವೆಂದು ಹೇಳಿದ ಕೆಲವರು ಅಫಘಾನ್ ಸೇನೆಯ ಆಫೀಸರ್‌ಗಳನ್ನು ಅಮೀರರವರು ಬೇಡಿ ಹಾಕಿ ತರಿಸಿ ಕೊಲ್ಲದೇ ಅವರನ್ನೆಲ್ಲ ಕೇವಲ ಕ್ರೂರವಾದ ರೀತಿಯಲ್ಲಿ ಗಲ್ಲಿಗೆ ಹಾಕಿಸಿದರೆಂದು ತಿಳಿಯಬರುತ್ತದೆ.

ಅದೇ ತಿಂಗಳ ೨ನೇ ತಾರೀಖಿನಲ್ಲಿ, ಜನರಲ್ ಗುಲಾಂ ಹೈದರೆಂಬವರ ಹುಕುಮಿನಲ್ಲಿ ಅಮೀರರವರ ಸೇನೆಗೂ ಉಂಡಾರ್ ಯೆಂಬವರ ಸೇನೆಗೂ (೬೦೦೦) ಪ್ರಬಲ ಯುದ್ಧ ಪ್ರಾರಂಭವಾಗಿ ಯೇಳು ಘಂಟೆಯಕಾಲ ನಡೆದು ಕಡೆಗೆ ಗುಲಾಂ ಹೈದರರು ಒಂದೂವರೆಮೈಲಿ ಫಾಸಲೆ ವರಿವಿಗೆ ಹಿಂದಕ್ಕೆ ಓಡಿಸಲ್ಪಟ್ಟು, ಉಂಡಾರಿನವರು ಒಂದು ಬೆಟ್ಟದಮೇಲಿರುವ ಬಂದೋಬಸ್ತಾದ ಒಂದು ಪ್ರದೇಶ ಸೇರಿ ಕೋಹಾತ್ ಷುಲ್ತಾನ್ ಯೆಂಬ ಜಾಗವನ್ನು ಸ್ವಾಧೀನ ಮಾಡಿಕೊಂಡರು. ಉಭಯ ಪಕ್ಷಿಯವರಲ್ಲ ಒಪ್ಪತ್ತರಲ್ಲಿ ಷ ದೂರಿ ೨೦೦ ಮಂದಿಯ ವರಿವಿಗೆ ಯುದ್ಧದಲ್ಲಿ ಮೃತಪಟ್ಟರೆಂಬವಾಗಿ ಮೊದಲು ಬಂದ ರಿಪೋರ್ಟ್ ಮರಳಬಂದ ರಿಪೋರ್ಟಿನ ದೆಸೆಯಿಂದ ಸ್ಥಿರಪಟ್ಟಿತು. ಅಮೀರರವರ ಸೇನಾಪತಿಯವರಾದ ಗುಲಾಂ ಹೈದರವರ ಪ್ರಕೃತಸ್ಥಿತಿಯು ಕೇವಲ ಚಿಂತನೀಯವಾಗಿರುವಂತೆ ಕಾಣುತ್ತದೆ. ಅವರಿಗೆ ಕಳುಹಿಸಲ್ಪಟ್ಟ ಸರಂಜಾಮುಗಳೆಲ್ಲವು ಮಧ್ಯಮಾರ್ಗದಲ್ಲಿ ಶತ್ರುಗಳಿಂದ ಬಂದು ಮಾದಲ್ಪಟ್ಟವು. ಈ ಕಲಹವು ಯಾಗೆ ಪರ್ಯವಸಾನವಂ ಹೊಂದುವದೆ ಮುಂದೆ ತಿಳಿಯಬೇಕಾಗಿದೆ.

ನೋಟಿಸ್.

ಇದರಿಂದ ಈ ಪತ್ರಿಕೆಯ ಚಂದಾದಾರರಿಗೆ ನಾವು ಪ್ರಕಟಿಸುವದೇನೆಂದರೆ:—

ಸನ್ ೧೮೯೨ ನೇ ಇಸವಿ ಜನವರಿ ತಿಂಗಳ ಮೊದಲು ನಡೆಯುತಲಿರುವ ಚಾಲತೀ ಸಾಲ್‌ನಲ್ಲಿ ಆರು ತಿಂಗಳು ಕಳೆದು ೭ ನೇ ತಿಂಗಳು ನಡೆಯುತಲಿದ್ದಾಗ್ಯೂ ನಮ್ಮ ಚಂದಾದಾರರ ಪೈಕಿ ಅನೇಕರು ಇದುವರಿಗೆ ಚಂದಾ ಹೊಬಲಗನ್ನು ಕಳುಹಿಸಿಕೊಡದೆ ಇರುವದಕ್ಕಾಗಿ ಬಹಳ ವಿಷಾದಿಸುತ್ತೇವೆ. ಬಾಕೀದಾರರೆಲ್ಲರು ದಯವಿಟ್ಟು ಈ ನೋಟೀಸನ್ನು ನೋಡಿದ ಕೂಡಲೆ ಅವರವರು ಈ ಸಾಲಿಗೆ ಮುಂಗಡವಾಗಿ ಕೊಡಬೇಕಾದ ಚಂದಾ ಬಾಕಿಗಳನ್ನು ಇನ್ನಾದರು ಕಳುಹಿಸಿ ಕೊಡಬೇಕೆಂದು ಮತ್ತೊಂದು ದಫಾ ಜ್ಞಾಪಕ ಕೊಟ್ಟಿರುತ್ತೇವೆ.

೪—೭—೯೨. ಪ್ರೊಪ್ರೈಟರ್.

LOCAL AND PROVINCIAL NEWS
ಸ್ಥಳದೇಶ ಮತ್ತು ತಾಲ್ಲೂಕು ವೃತ್ತಾಂತಗಳು

H. H. The Maharajah.—ಶ್ರೀಮನ್ಮಹಾರಾಜರವರು, ಈ ತಿಂಗಳ ೨೪ ನೇ ತಾರೀಖಿನಲ್ಲಿ ಈ ಪ್ರಾರಿಗೆ ದಯಮಾಡಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

The Resident.—ಇಲ್ಲಿನ ಬ್ರಿಟಿಷರೆಸಿಡೆಂಟರಾದ ಕರ್ನಲ್ ಹೆಂಡರ್‌ಸನ್ ಸಾಹೇಬರವರು ಮೂರುತಿಂಗಳ ರಜಾ ಮೇಲೆ ಈ ತಿಂಗಳ ೧೭ ನೇ ತಾರೀಖಿನಲ್ಲಿ ಸ್ವದೇಶಕ್ಕೆ ಹೊರಡುವರು. ಇವರ ರಜಾ ಕಾಲದಲ್ಲಿ ಕರ್ನಲ್ ಪೀಕಾಕ್ ಎಂಬವರು ಇವರ ಕೆಲಸವ ಬದಲೀ ನೋಡುವರು.

Mr. J. Cook.—ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾದ ಮಿ|| ಜೆ. ಕೂಕ್ ಸಾಹೇಬರು ಒಂದು ವರ್ಷದ ರಜಾ ಮೇಲೆ ಶೀಘ್ರದಲ್ಲಿ ಸ್ವದೇಶಕ್ಕೆ ಹೊರಡುವವರಾಗಿದಾರೆ ಇವರ ಗೈರಾಜರೀ ಕಾಲದಲ್ಲಿ ಇಲ್ಲಿನ ಕಾಲೇಜ್ ಪ್ರಿನ್ಸಿಪಾಲ್ ಕೆಲಸವನ್ನು ಬದಲೀ ನೋಡುವದಕ್ಕೆ ಬಗ್ಯೆ ಮದರಾಸ್‌ನಲ್ಲಿರುವ ಮಿ|| ಶ್ರೀನಿವಾಸ ಅಯ್ಯರ್, ಎಂ. ಎ. ಯವರು ನಿಯಮಿಸಲ್ಪಟ್ಟಿರುವರೆಂತ ಕೇಳುತ್ತೇವೆ.

The Muzrai Superintendent.—ಈ ಸಂಸ್ಥಾನದ ಮುಜರಾಯ್ ಸೂಪರಿಂಟೆಂಡೆಂಟರಾದ ವೆ|| ಎ. ಶ್ರೀನಿವಾಸಾಚಾರ್ಲು ಯವರು ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ದೇವಸ್ಥಾನಗಳು ಮೊದಲಾದ ಧರ್ಮಸ್ಥಾಪನೆಗಳ ಪ್ರಕೃತಸ್ಥಿತಿಯಂ ಪ್ರತ್ಯಕ್ಷದಲ್ಲಿ ನೋಡಿಬರುವ ಉದ್ದೇಶದೊಡನೆ ಸರ್ಕ್ಯೂಟ್ ಹೊರಟು ಸುಮಾರು ತಿಂಗಳಕಾಲವಾಯಿತು. ಇನ್ನು ಒಂದೆರಡು ದಿನಗಳೊಳಗಾಗಿ ವಾಪಸ್ ಬರಬಹುದೆಂದು ಕಾಣುತ್ತದೆ.

A case against an official.—ಈ ಪ್ರಾರು ಅಲಸೂರು ಪೇಟೆಯಲ್ಲಿರುವ ನಾಗೇಶರಾವ್ ಎಂಬಾತನು ತನ್ನ ಭಾವಮೈದುನ ವಿಷಯದಲ್ಲಿ ನಡೆಸಿದ ಅಕ್ರಮಗಳನ್ನು ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವಷ್ಟೆ. ಸದರೀ ಮೊಕದ್ದಮೆಯು ಕಳೆದ ಶನಿವಾರದದಿನ ಇಲ್ಲಿನ ಸಬ್‌ಜಡ್ಜಿಯವರ ಕೋರ್ಟಿನಲ್ಲಿ ವಿಚಾರಣೆ ಕ್ರಮಕ್ಕೆ ಬಂದು ಬರುವ ಬುಧವಾರದದಿನ ತಮ್ಮ ತೈಸಲನ್ನು ಹೇಳುವದಾಗಿ ಜಡ್ಜಿಯವರು ತಿಳಿಸಿದರು. ಈ ಮೊಕದ್ದಮೆಯ ಪರ್ಯವಸಾನವಂ ಬಹುಮಂದಿ ಕೇವಲ ಆತುರದೊಡನೆ ನಿರೀಕ್ಷಿಸುತಲಿದಾರೆ.

The weather.—ಕಳೆದ ಆದಿತ್ಯವಾರದ ಮೊದಲು ಮೂರು ದಿನಗಳು ರಾತ್ರಿಕಾಲದಲ್ಲಿ ಮೋಡ ಮುಸುಕಿ ಒಳ್ಳೆಯ ಮಳೆ ಆಯಿತು. ಕೆರೆ ಕುಂಟೆಗಳಿಗೆ ಸ್ವಲ್ಪ ನೀರುಬಂತು. ವ್ಯವಸಾಯ ಕೆಲಸಕ್ಕೆ ಇದು ಬಹಳ ಉಪಯುಕ್ತವಾಯಿತೆಂಬುದರಲ್ಲಿ ಸಂಶಯವಿಲ್ಲವು. ಪರಂತು ಈ ಮಳೆಯಿಂದ ಜಲಕ್ಷಾಮ ನಿವೃತ್ತಿಯಾಗಲಾರದು. ಇದೇ ರೀತಿ ಇನ್ನು ಆರೇಳಾವರ್ತಿ ಬಲವಾದ ಮಳೆ ಬಂದರೆ ಆಗ ಕ್ಷಾಮ ರೂಪ ಬಯ ಸಂಪೂರ್ಣವಾಗಿ ತಪ್ಪುವದು. ಇದುವರಿವಿಗೆ ಕ್ಷಾಮ ರಾಜನ ಕೈಸೆಗೆ ಗುರಿಯಾಗಿದ್ದ ಕೋಲಾರ್ ಡಿಸ್ಟ್ರಿಕ್ಟ ಪೈಕಿ ಅನೇಕ ತಾಲ್ಲೂಕುಗಳಲ್ಲಿ ಒಳ್ಳೆಯ ಮಳೆ ಬಿದ್ದು ಕೆರೆಕುಂಟೆಗಳಿಗೆ ನಾಲ್ಕಾರು ತಿಂಗಳಿಗೆ ಆಗುವಷ್ಟು ನೀರು ಬಂದಿರುವಂತೆ ಕೇಳಿ ಬಹಳ ಸಂತೋಷಿಸುತ್ತೇವೆ. ಪದಾರ್ಥಗಳ ದಾರಣೆಗಳು ಸ್ವಲ್ಪ ಇಳಿದಿರುವಂತೆ ಕಾಣುತ್ತದೆ. ವಾಂತಿಭೇದಿ ರೋಗವು ಈ ಪ್ರಾರಲ್ಲಿ ವ್ಯಾಪಿಸಿದ್ದಾಗ್ಯೂ, ವಿಶೇಷ ವೃದ್ಧಿಯನ್ನು ಹೊಂದದೆ ಇರುವದಕ್ಕಾಗಿ ಸಂತೋಷಿಸುತ್ತೇವೆ ದೈವಕೃಪೆಯಿಂದ ಪೂರಾ ನಿವೃತ್ತಿಯಾಗಬಹುದು.

Hand-writing test.—ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದವರು ಕೈಬರಹದಲ್ಲಿ ಸಹ ಪರೀಕ್ಷೆ ಕೊಡಬೇಕೆಂದು ಏರ್ಪಟ್ಟ ಮದರಾಸ್ ಗವರ್ನಮೆಂಟ್ ರೂಲ್ಸ್ ಅನುಸರಿಸಿ ಕಳೆದ ಮೇ ತಿಂಗಳಲ್ಲಿ ನಡೆದ ಸದರೀ ಪರೀಕ್ಷೆಯೊಳು ಇದರಡಿಕಂಡ ಮೈಸೂರುದೇಶದ ಉಮೇದವಾರರು ತೇರ್ಗಡೆಯಾಗಿರುತ್ತಾರೆ:—

೧. ಬುರ್ಗಸಾಸ್ ರಘವೇಂದ್ರರಾವ್.
೨. ಕೋಲಾರ ವೆಂಕಟಪ್ಪ
೩. ಎ. ಸುಬ್ರಮಣ್ಯ ಅಯ್ಯರ್
೪. ಶ್ಯಾಮಶಾಸ್ತ್ರಿ.
೫. ಜಾನ್ ವಿಲಿಯಮ್ ರಾಬಿನ್ಸ್.
೬. ಶ್ರೀರಂಗಪಟ್ಟದ ಬಾಪೂರಾವ್
೭. ಎಂ ನಾರಾಯಣಸ್ವಾಮಿ
೮. ವಿಲ್ಲಿಯಮ್ ಆರ್ಥರ್ ಬ್ರಿಟೊ.
೯. ಶ್ರೀರಂಗದ ಶ್ರೀನಿವಾಸಯ್ಯಂಗಾರ್
೧೦. ಮಂಡಯಂ ಎ ಶ್ರೀನಿವಾಸಯ್ಯಂಗಾರ್
೧೧. ಜಾರ್ಜ್ ಮಿಚೇಲ್ ಕೂಪರ್
೧೨. ವಿಕೆ ಕೃಷ್ಣಸ್ವಾಮಿ.
೧೩. ಎಂ. ಸುಬ್ಬರಾವ್.

CORRESPONDENCE.

[ಇದರಲ್ಲಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಜವಾಬ್ದಾರರಲ್ಲವು.—ಎಡಿಟರ್ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ನಿಶ್ಚಯವಾದ ವರ್ತಮಾನ ತಮಗೆ ತಿಳಿಸತಕ್ಕಷ್ಟು ಪ್ರಬಲಾಂಶವೊಂದೂ ಇಲ್ಲದಿರುವದಕ್ಕಾಗಿ ವಿಷಾದಿಸುತ್ತೇನೆ. ಈಗಲೂ ಪ್ರಾಯಶಃ ಹಾಗೆಯೇ ಇದೆ, ಆದಾಗ್ಯೂ ಈ ಕೆಳಗೆ ನಾನು ತಿಳಿಸುವ ಅಂಶವು ಈ ದೇಶೀಯರಿಗೆ ಸ್ಪಷ್ಟವಾಗಿ ತಿಳಿಯುವ ಹಾಗೆ ಮಾಡುದೊಂದೇ ನನ್ನ ಉದ್ದೇಶವಾಗಿದೆ.

ನಮ್ಮ ದೇಶೀಯರು ತಮಗೆ ಕಾಲವು ಪ್ರತಿಕೂಲವಾಗಿದೆಯೆಂತಲೂ, ತಮ್ಮ ಉದ್ದೇಶ ಪ್ರಯತ್ನಗಳೆಲ್ಲವು ಭಂಗವನ್ನೈದಿ ತಾವು ಪ್ರಬಲ ನಷ್ಟಕ್ಕೆ ಗುರಿಯಾಗುತ ಬರುವುದಾಗಿಯೂ, ಈ ದೇಶದ ಐಶ್ವರ್ಯವೆಲ್ಲವು ಅನ್ಯತ್ರ ಸಾಗಿಹೋಗುತಿದೆಯೆಂತಲೂ, ತಮಗಿಲ್ಲಿ ನ್ಯಾಯವಾಗಿ ಲಭಿಸಬೇಕಾದ ಪ್ರಯೋಜನವು ಲಭಿಸುವದಿಲ್ಲವೆಂತಲೂ ಅಸಮಾಧಾನದಿಂ ಮೊರೆಯಿಡುತ "ರಾಜಾ ಕಾಲಸ್ಯಕಾರಣಂ" ಯೆಂಬದಾಗಿ ಪ್ರಭುತ್ವ ಕ್ರಮವು ಕಾರಣವನ್ನಾಗಿ ಎಣಿಸಿ ಅದಂ ಆಕ್ಷೇಪಿಸುತಲಿರುತ್ತಾರೆ. ಪರಂತು ಈ ಸಂದರ್ಭದಲ್ಲಿ ಪ್ರಭುತ್ವದ ಗುಣದೋಷ ವಿಚಾರವಂ ಮಾಡಲಿಕ್ಕೆ ನಾನು ಪ್ರವರ್ತಿಸುವದಿಲ್ಲವು, ಏತಕ್ಕೆಂದರೆ, ಆ ಭಾರವಂ ತಮ್ಮಂತಾ ವೃತ್ತಾಂತ ಪತ್ರಿಕಾಲೇಖಕರೇ ವಹಿಸಿರುವವರಿಂದ ಅದು ನನಗೆ ಅನಾವಶ್ಯಕ ವಿಷಯವಾಗಿರುತಿದೆ. ಪ್ರಭುತ್ವಕ್ರಮವನ್ನಾಕ್ಷೇಪಿಸುವ ಪ್ರಜೆಗಳು ತಮ್ಮ ಸ್ಥಿತಿಪರಿಷ್ಕರಣ ವಿಷಯದಲ್ಲಿ ಯೆಷ್ಟರಮಟ್ಟಿಗೆ ಶ್ರದ್ಧೆಯಂ ವಹಿಸಿ ತಮ್ಮ ಕರ್ತವ್ಯವಂ ನಿರ್ವಹಿಸಲಿಕ್ಕೆ ಶಕ್ತರಾಗಿದಾರೆಯೋ ಅದಂ ಕುರಿತು ಸ್ವಲ್ಪ ವಿಚಾರ ಮಾಡಿ ಅವರ ಅವಧಾನವನ್ನಾಕರ್ಷಿಸಬೇಕೆಂದಿರುತ್ತೇನೆ. ಯಾವದಾವದೊಂದು ರಾಜ್ಯವು ಪರಿಪಾಲಿಸತಕ್ಕ ಪ್ರಭುವೇ ತಾ ಸರ್ವಜ್ಞನಾಗಿದ್ದಾಗ್ಯೂ ಆತನ ವ್ಯಾಪಾರಗಳೂ ಉದ್ದೇಶ ಪ್ರಯತ್ನಗಳೂ ಸಕಲಜನ ಸಮ್ಮತವಾಗಿರುವದೆಂದು ಭಾವಿಸಕೂಡದು. ಆತನೂ ನಮ್ಮಂತೆ ಮನುಷ್ಯ ಸಾಮಾನ್ಯನೇ ಹೊರತು ಅತಿಶಯ ಮಹಿಮೆಯುಳ್ಳವನಲ್ಲವು. ನಾವ್ಯಾರಿಂದ ಗೌರವಿಸಲ್ಪಡುತ್ತೇವೆ ಆತನಿಗೂ ಹಿಂದು ಹೇಳಿರುವ ಗೌರವವೂ ಪ್ರತಿಷ್ಠೆಯೂ [illegible] ಆತನು ಒಬ್ಬರೂ ಲಕ್ಷ್ಯಮಾಡದಿದ್ದರೆ ರಾಜತ್ವ ಪ್ರಭುತ್ವಗಳಾದವು. ಆದುದರಿಂದ ಅರಸನ ಕೃತ್ಯಾಕೃತ್ಯಗಳಿಗೂ, ಗುಣದೋಷಗಳಿಗೂ, ಲಾಭನಷ್ಟಗಳಿಗೂ ಸುಖದುಃಖಗಳಿಗೂ ಪ್ರಜೆಗಳೇ ಕಾರಣಭೂತರಲ್ಲದೆ ಪ್ರತ್ಯೇಕವಾಗಿ ಯೇನೂ ಆತನಿಗುಂಟಾಗುವದಿಲ್ಲವು. ಆದುದರಿಂದಲೇ ಪಶ್ಚಿಮಖಂಡಗಳಲ್ಲಿ ಪ್ರಜಾ ಸಂದಣಿಯೊಂದೊಂದು ಅಧಿಕಾರವನ್ನು ಪಡೆಯಬೇಕೆಂದು ಭಾವಗೊಂಡಿದಾರೆ. ಪಶ್ಚಿಮಖಂಡದ ಕೆಲವು ರಾಜ್ಯಗಳಲ್ಲಿ ಪ್ರಭುತ್ವಕ್ರಮಗಳು ಮೂರುವಿಧವಾಗಿ ಏರ್ಪಟ್ಟಿವೆ. ಫ್ರಾನ್ಸ್ ಮೊದಲಾದ ರಾಜ್ಯಗಳಂತೆ ರಾಜಸಂಬಂಧವಿಲ್ಲದೆ ಪ್ರಜಾ ಸಮುದಾಯ ಮಾತ್ರ ಸ್ಥಾಪಿಸಲ್ಪಟ್ಟಿರುವದು ಒಂದು ವಿಧವು. ರಷ್ಯಾ ಮೊದಲಾದ ರಾಜ್ಯಗಳಂತೆ ಪ್ರಜಾ ಸಂಬಂಧವಿಲ್ಲದೆ ಏಕವ್ಯಕ್ತಿಶಾಸನವಾದ ಆಜ್ಞೆಯನ್ನೇ ಪ್ರತ್ಯೇಕವಾಗಿ ನಡೆಸಲ್ಪಡುವದು ಮತ್ತೊಂದು ವಿಧವು. ಇಂಗ್ಲಾಂಡ ಮೊದಲಾದ ರಾಜ್ಯಗಳಂತೆ ಪ್ರಜಾ ಪ್ರತಿನಿಧಿಗಳಿಗೆ ಬದ್ಧನಾಗಿ ತನ್ನ ಸ್ವಾತಂತ್ರ್ಯಗೌರವವಂ ಕಾಪಾಡಿಕೊಂಡು ಪ್ರಭುತ್ವ ಮಾಡುವದು ಮೂರನೆಯ ವಿಧವು. ಈ ಮೂರುವಿಧ ಪ್ರಭುತ್ವ ಕ್ರಮಗಳಲ್ಲಿ ಇರುವ ಮಟ್ಟಿಗೆ ಕಡೆಯದೇ ಶ್ರೇಯಸ್ಕರವಾದುದೆಂದು ತೋರುತಿದೆ. ಮೊದಲನೆಯದರಲ್ಲಿ ಅನರ್ಥಗಳನೇಕ ಏರ್ಪಟ್ಟು ದೇಶವು ಸಮಾಧಾನಸ್ಥಿತಿಯಲ್ಲಿ ಇರಲಾರದು. ಎರಡನೆಯದರಲ್ಲಿ ಪ್ರಜಾ ವಿರೋಧವು ಹೆಚ್ಚಿ ಶತ್ರು ಪ್ರಾಬಲ್ಯವು ಅಧಿಕವಾಗಿ ಪ್ರಬಲಾನಿಷ್ಟಗಳೇ ಆಗುತ್ತವೆ. ಆದುದರಿಂದ ಕಡೆಯದೇ ಉತ್ತಮವಾದುದು. ಈ ಕ್ರಮದಲ್ಲಿ ಇಂಡ್ಯಾದೇಶವು ಪಾಲಿಸಲ್ಪಡಬೇಕೆಂಬ ತಾತ್ಪರ್ಯದೊಡನೆ ಲಾರ್ಡ್ ರಿಪನ್ನಿಯವರು ಪ್ರಜಾಯೋಗ್ಯತೆಯಂ ಪರೀಕ್ಷಿಸುವದಕ್ಕಾಗಿ ಸ್ವದೇಶ ಪರಿಪಾಲನಾ ಕ್ರಮವು ನೆಲಗೊಳಿಸಿ ನಗರ ವಿಚಾರಣಾಧಿಕಾರದಲ್ಲಿ ಕೆಲವು ಸ್ವಾತಂತ್ರ್ಯಗಳಂ ಅವರಿಗೆ ಒಪ್ಪಿಸಿದರು. ಇದು ಕೆಲವು ಪ್ರದೇಶಗಳಲ್ಲಿ ಸಫಲವಾಯಿತು, ಮತ್ತು ಕೆಲವುಕಡೆಯಲ್ಲಿ ವಿಫಲವಾಯಿತು. ಈ ವಿಷಯದಲ್ಲಿ ಮೈಸೂರ ರಾಜ್ಯವು ಅವಿಮುಖವಾಗಿರಬೇಕೆಂಬ ಕೋರಿಕೆಯೊಡನೆ ಪ್ರಜಾ ಪ್ರತಿನಿಧಿ ಸಭೆಯೆಂಬ ಒಂದು ಸಮಾಜವಂ ನೆಲಗೊಳಿಸಿ ಮಹಾರಾಜಾ ಸರ್ಕಾರದವರು ಅದು ಪ್ರತಿ ಸಂವತ್ಸರದಲ್ಲಿಯೂ ಜರಿಗಿಸುತ, ಕಾರ್ಯತಃ ಅದರಿಂದೊಂದು ಪ್ರಯೋಜನವಿಲ್ಲದಿದ್ದಾಗ್ಯೂ ನಾಮತಃ ಸಂಸ್ಥಾನಕ್ಕೊಂದು ಪ್ರತಿಷ್ಠಾ ಸಂಪಾದಕವಾಗಿರುವದರಿಂದ ಸದರೀ ಸಭೆಯನ್ನು ಅಡ್ಮಿನಿಸ್ಟ್ರೇಟಿವ್ ಬಾಡಿ, ಅಂದರೆ ಕಾರ್ಯನಿರ್ವಾಹಕ ಸಭೆಯಾಗಿ ಅಂಗೀಕರಿಸದೆ, ಕನ್ಸಲ್ಟೇಟಿವ್ ಬಾಡಿ, ಅಂದರೆ ಆಲೋಚನೆ ಸಭೆಯೆಂತೆ ನಾಮಮಾತ್ರಕ್ಕೆ ಇಟ್ಟುಕೊಂಡಿದಾರೆ. ಈಗ್ಯೆ ಹತ್ತು ಹನ್ನೆರಡು ವರ್ಷಗಳ ಮೊದಲು ಪ್ರತಿ ಸಂವತ್ಸರದಲ್ಲಿಯೂ ನಡೆವ ಸಭೆಯಲ್ಲಿ ಪ್ರಜೆಗಳು ತಿಳಿಸುವ ಅಭಿಪ್ರಾಯಗಳನ್ನೂ ಅದಂ ಸರ್ಕಾರದವರು ಗೌರವಿಸಿ ಪುರಸ್ಕರಿಸಿದ ಬಗೆಯನ್ನೂ ನೋಡಿದ ಅನುಭವಶಾಲಿಗಳು ಉಭಯರ ಸ್ವಾರ್ಥಪರತೆಗಾಗಿ ಚಿಂತಿಸದಿರಲಾರರು. ಈಗ ಬೆಂಗಳೂರ ಮ್ಯುನಿಸಿಪಲ್ ಮುನಿಸಿಪಾಲಿಟಿಗಳಿಗೆ ಮೆಂಬರುಗಳನ್ನು ಚುನಾಯಿಸುವ ಸ್ವಾತಂತ್ರ್ಯವನ್ನು ಗವರ್ನಮೆಂಟಿನವರು ಪ್ರಜೆಗಳಿಗೆ ಕೊಟ್ಟು ಜನರ ಜಾಗರೂಕತೆಯನ್ನೂ ಶ್ರದ್ಧೆಯನ್ನೂ ಅಕ್ಕರೆಯೊಡನೆ ನೋಡುತ್ತ, ಅವರಲ್ಲಿ ಯಥೋಚಿತ ಲೋಪ ಕಂಡುಬಂದರೆ ಅದಂ ಪ್ರಬಲವಾಗಿ ಪರಿಗಣಿಸಿ ಅವರ ಅಸಮರ್ಥತೆಯಂ ಜ್ಞಾಪಿಸಿ [illegible] ಸ್ವಾತಂತ್ರ್ಯಕ್ಕೆ ಹಸ್ತಾಂತರಿಸುವದಕ್ಕೆ ಸನ್ನದ್ಧರಾಗಿರುವರು. ಈಪಟ್ಟಣದ ನಿವಾಸಿಗಳು ಎಚ್ಚರದೆ ಇರತಕ್ಕವರಾಗಿರುವದಕ್ಕಾಗಿ ನಾನು ಬಹಳ ವಿಷಾದಿಸುತ್ತೇನೆ. ರಾಜಕೀಯಗಳಾದ ವಿಷಯಗಳಲ್ಲಿ ಅನ್ಯರ ಅಭಿವೃದ್ಧಿಯಂ ನೋಡಿ ನಮ್ಮವರು ಗೋಳಾಡುತ್ತಾರೆಯೇ ಹೊರತು ಯಾವದೇ ವಿಷಯವನ್ನು ಯಾವ ರೀತಿಯಿಂದ ಅನುಕೂಲವಾಗಿ ಮಾಡಿಕೊಂಡು ಬರತಕ್ಕದನ್ನು ಪರಿಹರಿಸಿಕೊಳ್ಳುವದಕ್ಕೆ ಪ್ರಯತ್ನಿಸುವದಿಲ್ಲವು. ಲೋಕದಲ್ಲಿ ಸಕಲವೂ ಯೆಲ್ಲರಿಗೂ ತಿಳಿದಿರುವದಾದುದರಿಂದ ತನಗೆ ತಿಳಿಯದ್ದನ್ನು ಬಲ್ಲವರಿಂದರಿಯುವದೂ, ಅರಿತದಂ ಅನ್ಯರಿಗೆ ತಿಳಿಸುವದೂ ಮನುಷ್ಯಧರ್ಮವಾಗಿರುತಿದೆ. ಆಂಗ್ಲೇಯರ ವೇಷ ಆಚಾರಾನುಕರಣದಲ್ಲಿ ಮಾತ್ರ ವಿಶೇಷ ಶ್ರದ್ಧಾ ಚಾತುರ್ಯಗಳುಳ್ಳವರಾಗಿದ್ದರೂ ಅನ್ಯತ್ರ ಸಾಮಾನ್ಯರಾಗಿರುವ ಮೇಲೆ ಕಂಡ ಮಾತು ಹೊಗಳಿಕೆಗೆ ಮಾತ್ರ ಬಹಳ ಮಾತುಗಾರರಾಗಿರುತ್ತಾರೆ. ಜನಸಮೂಹಕ್ಕೆ ಶ್ರೇಯಸ್ಕರವಾದ ಇವರು ಇದರ ಫಲಂ ಕಡೆಯುವದಕ್ಕೆ ನಡೆ ಅವಕಾಶವಿಲ್ಲದೆ, ಯೇಕೆಂದರೆ, ಸ್ವಾರ್ಥಬುದ್ಧಿಯಲ್ಲಿ ಅತ್ಯಭಿನಿವೇಶವೂ ಪರದ್ರೋಹದಲ್ಲಿ ಅನವಧಾನವೂ ಹೆಚ್ಚಾಗಿವೆ. ನಿದ್ರಾವಸ್ಥೆಯಲ್ಲಿರತಕ್ಕಂತವರನ್ನು ಜಾಗ್ರದವಸ್ಥೆಯಲ್ಲಿ ಸುಪ್ರಯೋಜನ ಪ್ರವೃತ್ತಿಯೊಡನೆ ಇರತಕ್ಕ ಅನ್ಯರು ಯೆಚ್ಚರಗೊಳಿಸಿದಾಗ್ಯೂ ಯೇಳದೆ ಸ್ವಭಾವಸಿದ್ಧವಾದ ಜಡತೆಯನ್ನೇ ಪ್ರಕಟಪಡಿಸುತ ತಮ್ಮ ನಿದ್ರಾಭಂಗವಂ ಮಾಡುವವರನ್ನು ದೂಷಿಸುವದರಿಂದ ತಮ್ಮ ನಷ್ಟವನ್ನರಿಯದೆ ಹೋಗುವದಲ್ಲದೆ ಲೌಕಿಕವಿಷಯಗಳಾದ ವ್ಯವಹಾರಾನುಭವ ಕಾಲವು ಅತಿಕ್ರಮಿಸುವದಕ್ಕಾಗಿ ಅವರು ಚಿಂತಿಸುವಂತೆ ಸ್ವಲ್ಪವಂ ವ್ಯಕ್ತಪಡಿಸುವದಿಲ್ಲವು. ಮುಖ್ಯವಾಗಿ ಮಾನ್ಯವಾದ ವಿವೇಕ ಚತುರತೆ ಧೈರ್ಯ ಉತ್ಸಾಹ ಸಾಹಸ ಪರಾಕ್ರಮ ವಿದ್ಯೆ ವೈಶಿಷ್ಟ್ಯಮುಂತಾದ ಸುಗುಣಗಳಂ ಪಡೆದ ಸ್ವದೇಶೀಯರಾದರೂ ಒಕ್ಕನ್ನಂತಾ ನಿರ್ಭಾಗ್ಯನಾದವನೊಬ್ಬನು ಪ್ರತಿಷ್ಠೆಯನ್ನೈದಬೇಕೆಂದು ಭಾವಿಸಿದೊಡೆ ದರಿದ್ರಸ್ಯ ಮನೋರಥಾ ಅಂದರೆ ನಿರ್ಧನನಕೋರಿಕೆಯಂತೆ ವ್ಯರ್ಥವಾಗುತಿದೆ. ಬರುವ ತಿಂಗಳಲ್ಲಿ ನಡೆಯತಕ್ಕ ಮ್ಯುನಿಸಿಪಲ್ ಯಲೆಕ್ಷನಿನಲ್ಲಿ ಚುನಾಯಿಸತಕ್ಕವರೂ, ಚುನಾಯಿಸಲ್ಪಡುವವರೂ ಏನು ಮಾಡಬೇಕೋ ಅದಂ ತಿಳಿಸುವ ಆವಶ್ಯಕತೆಯು ಪ್ರಜೆಗಳಿಗಾಗಲಿ, ಏತಕ್ಕೆ ಪರಿಜ್ಞಾನವನ್ನುಂಟುಮಾಡಬೇಕೆಂಬ ಅಪೇಕ್ಷೆಯು ಗವರ್ನಮೆಂಟಿನವರಿಗಾಗಲಿ ಸ್ವಲ್ಪವೂ ಇಲ್ಲವು. ಪ್ರಜೆಗಳು ತಮ್ಮ ಹೆಸರು ಮ್ಯುನಿಸಿಪಲ್ ಲಿಸ್ಟಿನಲ್ಲಿ ದಾಖಲಾಗಿದ್ದರೆ ಸಾಕೆಂದು ಭಾವಿಸಿ ತಮ್ಮ ಹೆಸರು ಗೆಜೆಟಿನಲ್ಲಿ ಪ್ರಿಂಟಾಗಿರುವದಂ ನೋಡಿದ ಮಾತ್ರದಿಂದಲೇ ಸ್ವಸ್ಥಚಿತ್ತರಾಗಿ ತಮ್ಮ ಕರ್ತವ್ಯವೆಲ್ಲವು ಪೂರ್ತಿಯಾದಂತೆ ಭಾವಿಸಿದಾರೆ. ಗವರ್ನಮೆಂಟಿನವರು ತಮ್ಮ ನಾಗರಿಕತನವ ನೆರವೇರಿಸಿ ಬಿಟ್ಟೆವೆಂಬ ಪ್ರತಿಷ್ಠೆಯುಂಟಾದರೆ ಸಾಕೆಂಬ ಅಭಿಪ್ರಾಯದೊಡನೆ ಫಲಪರ್ಯವಸಾನವು ಯಾವರೂಪವಾದರೂ ಚಿಂತಿಸದೆ, ತಮ್ಮ ಸ್ವಾಧೀನದಲ್ಲಿರುವ ಗೆಜೆಟಿನಲ್ಲಿ ಒಂದೆರಡು ವಾರಗಳು ನಾಮಾವಳಿಯಂ ಪ್ರಕಟಿಸಿ ಬಿಟ್ಟದರಿಂದ ತಮ್ಮ ಕರ್ತವ್ಯವು ತೀರಿತೆಂದೆಣಿಸಿರುವಂತೆ ತೋರುತಿದೆ. ಜನರಿಗೆ ತಮ್ಮ ಸ್ವಾತಂತ್ರ್ಯ ಸ್ವರೂಪವೇನು ತಾವು ಯಾರನ್ನು ಪ್ರತಿನಿಧಿಗಳನ್ನಾಗಿ ಚುನಾಯಿಸಬೇಕೋ, ಅವರಿಗೆ ಯಾವ ಸ್ವಾತಂತ್ರ್ಯವನ್ನು ಕೊಡತಕ್ಕದ್ದೊ, ಈ ಅಂಶಗಳೊಂದೂ ಗೊತ್ತಿಲ್ಲವು. ಚುನಾಯಿಸಲ್ಪಡಬೇಕೆಂಬ ಪ್ರತಿಷ್ಠಾಪರರಾದವರಿಗೆ, ಜನರುಳಿಟ್ಟು ಅವರ ಸುಖದುಃಖಗಳನ್ನರಿತು ಅವರಿಗೆ ತಿಳಿಯದ ಅಂಶಗಳಂ ಬೋಧಿಸಿ ತಮ್ಮನ್ನು ಚುನಾಯಿಸತಕ್ಕವರಿಗೆ ತನಗೆ ಸಾಧ್ಯವಾದಮಟ್ಟಿಗೆ ಸಹಾಯ ಮಾಡುವಂತೆ ಮಾಡಿಕೊಂಡು ಅವರಂ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಆವಶ್ಯಕತೆಯು ಇಲ್ಲವು. ಜನಗಳಂ ತಮ್ಮ ಗೃಹದ್ವಾರದಲ್ಲಿ ಬಂದು ದಿವ್ಯ [illegible] ತಮ್ಮನ್ನು ಕಾದು ಪ್ರಾರ್ಥಿಸಿ ತಮ್ಮ ಪಕ್ಷವನ್ನವಲಂಬಿಸಿ ತಮ್ಮನ್ನುದ್ಧರಿಸುವಂತೆ ಪ್ರಾರ್ಥಿಸಬೇಕೆಂಬ ಅಭಿಪ್ರಾಯ ಪ್ರವರ್ತಕರಾಗಿರುವಂತೆ ಕಾಣುತಿದೆ. ಜನರಲ್ಲಿ ಪರಸ್ಪರ ಪ್ರೀತಿ, ಗೌರವ, ನಂಬಿಕೆಯು ಇಲ್ಲದ್ದರಿಂದ ಯಾರದನ್ನು ಗೊತ್ತುಮಾಡಲಾರದೆ ಆವಶ್ಯಕವಿದ್ದವನು ತಮ್ಮ ಬಳಿಗೆ ಬಂದು ಪ್ರಾರ್ಥಿಸಲೆಂಬ ತಾತ್ಪರ್ಯವುಳ್ಳವರಾಗಿದಾರೆ. ಗವರ್ನಮೆಂಟಿನವರು ನಿಯಮಿತಕಾಲದ ಪರಿಮಿತಿಗೆ ತುಸ್ತಾಗಿ ನೋಡುತಲಿದ್ದು [illegible] ಪ್ರಕಟಪಡಿಸುವ ಸಂಕಲ್ಪವುಳ್ಳವರಾಗಿದಾರೆ. ಆದುದರಿಂದ ಇದ್ದಟ್ಟುಮಂದಿಯು [illegible] ಮುಂದಿನ ಚುನಾವಣೆಯು ಹ್ಯಾಗೆ ನೆರವೇರಬಹುದೋ ಯೆಂಬ ಅನುಮಾನದಿಂದ ಚಿಂತೆಯೂ, ಅವಮಾನವೂ, ನೈರಾಶ್ಯವೂ ನನ್ನನ್ನು ಬಾಧಿಸುತಿದೆ. ಇಂಗ್ಲಾಂಡಿನಲ್ಲೀಗ ರಾಜ್ಯಭಾರವು ಕ ವ್ಹಿಂಗ ಬಲಹೀನವಾದ ಸ್ಥಿತಿಯೊಳದೆ. ಮಹಾರಾಣಿಯವರು ತಮಗೆ ಬಾಧಕವಾಗಿರುವ ಪಾರ್ಲಿಮೆಂಟ ಸಭೆಯನ್ನು ಮುಕ್ತಾಯಮಾಡಿ ನೂತನವಾದ ನಿರ್ವಾಚನ ವಿಷಯದಲ್ಲಿ ತಮ್ಮ ದೇಶದ ಜನರ ಅಭಿಪ್ರಾಯವಂ ಕೋರಿದಾರೆ. ಪ್ರಜಾಭಿಮತ ಸಂಪಾದನಕ್ಕಾಗಿ ಅವರವರು ನಾನಾವಿಧ ಪ್ರಸಂಗವ ಮಾಡಿಕೊಂಡು ಪಟ್ಟಣಗಳಲ್ಲಿ ಸಂಚರಿಸುತಲಿದಾರೆ. ಮ॥ ಗ್ಲ್ಯಾಡ್‌ಸ್ಟನ್ನಿಯವರು ಈಚೆಗೆ ಸ್ವಪಕ್ಷಾವಲಂಬಿಗಳಿಗೆ ದೇಶದ ತಾತ್ಕಾಲಿಕಸ್ಥಿತಿಯಂ ಕುರಿತು ತಿಳಿಸುವಾಗ್ಯೆ ಪರಪಕ್ಷದವರೊಬ್ಬರು ಕಕ್ಷಿಪ್ರಯುಕ್ತವಾದ ವಿದ್ವೇಷದಿಂದ ಅವರ ನಯನವನ್ನೂ, ಯೋಗ್ಯತೆಯನ್ನೂ, ವೃದ್ಧತ್ವವನ್ನೂ ಸ್ವಲ್ಪವೂ ಲೆಕ್ಕಿಸದೆ ಯಾವದೋ ಒಂದು ಪದಾರ್ಥವಂ ಅವರ ಮುಖದ ಕಡೆ ಹಾಕಲು ಅವರ ಕಣ್ಣಿಗೆ ತಗಲಿತು. ದೈವಾತ್ ನೇತ್ರಕ್ಕೆ ಅಪಾಯ ಪ್ರಾಪ್ತವಾಗದೆ ಘಾಯದೊಡನೆ ಪರ್ಯವಸಾನವಾಯಿತು. ಅದೂ ಈಗ ಗುಣವಾಗಿದೆ. ಎಲೆಕ್ಷನ್ ವಿಷಯಕ್ಕಾಗಿ ಇಂಗ್ಲಾಂಡಿನೊಳು ನಾನಾವಿಧ ಸಂಕಟಗಳನ್ನನುಭವಿಸುತಲಿದಾರೆ. ಈ ಕಕ್ಷಿಯದಲ್ಲಿ ಜಯಾಪಜಯಗಳು ಪ್ರಜಾಭಿಪ್ರಾಯಾಧೀನವಾಗಿರುತಿದೆ. ಅದು ಪ್ರತಿನಿಧಿಗಳ ಶಕ್ತಿ ಯುಕ್ತಿ ಪ್ರತಿಷ್ಠಾರೂಪವಾಗಿರುತಿದೆ. ಇಷ್ಟರ ದೇಶದಲ್ಲಿಯೂ ಪ್ರಭುತ್ವವೂ ಮಾಡುತ್ತ ಕದಾಚಿತ್ ಧನಪ್ರಯತ್ನದಿಂದ ಪ್ರಜೆಗಳಂ ಸ್ವಾಧೀನ ಪಡಿಸಿಕೊಳ್ಳುತಲಿದಾರೆ. ಇಲ್ಲಿ ಅಂತಾದ್ದೇನೂ ಅವಶ್ಯಕವಿಲ್ಲವು. ನಾವು ಅನುನಯಗಳಾದ ಮಾತುಗಳಿಂದಲೇ ತೃಪ್ತರಾಗಿ ಸ್ವಾಧೀನರಾಗತಕ್ಕವರಾಗಿದ್ದೇವೆ. ನಮ್ಮವರಲ್ಲಿರುವ ಪರಸ್ಪರ ಈರ್ಷ್ಯಾಸೂಯೆಗಳಿಂದ ಅದು ಸಹ ಅಲಭ್ಯವಾಗಿದೆ. ಅಧಿಕಾರಿಗಳಿಗೂ ಪ್ರಜೆಗಳಿಗೂ ಸ್ನಿಗ್ಧತೆ ಇಲ್ಲವು. ಪಂಡಿತರಿಗೂ ಪಾಮರರಿಗೂ ಪರಸ್ಪರಾನುರಾಗವು ಕಡಿಮೆಯಾಗಿ ವಿದ್ಯಾವಂತರು ತಮ್ಮ ಕುಟುಂಬರಕ್ಷಣಾರ್ಥ ಭಾರೀ ಸಂಬಳವಾದರೆ ಸಂತೃಪ್ತರಾಗಿ ಗವರ್ನಮೆಂಟಿನವರ ತರಫೆ ಸೇರಿಕೊಂಡು, ಕೊನೆಸೇರಂಬಿಯಲ್ಲಿ ಕುಳಿತು ಅದರ ಬಾಧನಂ ಕಡಿಯುತಕ್ಕವರಾಗಿದಾರೆ. ಜನರು ಅರ್ಥಾತುರರಾಗಿದಾರೆಯೇ ಹೊರತು ಅದನ್ನಾರ್ಜಿಸುವ ವಿಧವನ್ನರಿತವರಲ್ಲವು. ಇಂತಾ ಸ್ಥಿತಿಯಲ್ಲಿರುವ ಜನರಿಗೇನು ಯೆಲೆಕ್ಷನ್ ದು ಮಾಡಿದರೆ ಪ್ರಯೋಜನಕಾರಿಯಾಗುವುದು? ಎಲೆಕ್ಷನ್ ದಿನ ಅವರವರು ಬಜಾರುಗಳಲ್ಲಿಯೂ, ಆಫೀಸಜಾರ್ಗಳಲ್ಲಿಯೂ, ಡಾಬೋಗಳಲ್ಲಿಯೂ ಕುಳಿತು ರೀತಿಯೊಡನೆ ಒಂದುಸಲ ಪೇಟೆಯಲ್ಲಿ ವಿಜಯದಶಮಿ ಮೆರವಣಿಗೆಯಂತೆ ಹೋಗಿ ಬಂದ ಮಾತ್ರದಿಂದಲೇ ಜನರು ಪ್ರವಿಸುವರೆಂಬ ನಂಬಿಕೆಯು ನನಗೆ ಸ್ವಲ್ಪವೂ ಇಲ್ಲವು. ಇದಕ್ಕಾಗಿ ಮಾಡಬೇಕಾದ ಪ್ರಯತ್ನಗಳನೇಕ ಇದ್ದಾಗ್ಯೂ ಅವುಗಳಲ್ಲೊಂದನ್ನು ಮಾತನಾಡದೆ ಎಲ್ಲರೂ ಉದಾಸೀನರಾಗಿರುವಬಗ್ಗೆ ಚಿಂತಿಸುತ್ತೇನೆ. ಮುಖ್ಯವಾಗಿ ಸ್ವದೇಶೀಯರಂ ಕುರಿತು ನನ್ನ ಪ್ರಾರ್ಥನೆ ಯೇನೆಂದರೆ— "ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ" ಎಂಬದಾಗಿ ಪ್ರಯತ್ನವಂತನಾದ ಪುರುಷಶ್ರೇಷ್ಠನಿಗೆ ಸಂಪತ್ತು ಲಭಿಸುವದೆಂಬ ನೀತಿವಾಕ್ಯವಂ ನಮ್ಮವರಲ್ಲಿ ಯೆಲ್ಲಾ ಜಾತಿಯವರೂ, ಯೆಲ್ಲಾ ವಯಸ್ಸಿನವರೂ, ಸರ್ವಕಾಲಾವಸ್ಥೆಯೊಳಗೂ ಜ್ಞಾಪಕದಲ್ಲಿಟ್ಟು ವರ್ತಿಸಬೇಕೆಂಬದಾಗಿದೆ. ತಮ್ಮ ಪುರುಷಪ್ರಯತ್ನವಂ ಮಾಡದೆ, ಒರಗಿದ್ದಿಯು ಬರುವದನೋಡಿ ಜಡತೆಯಿಂದ ಕುಟ್ಟಿಕೊಂಡ ನಿರ್ಭಾಗ್ಯಳಂತೆ ಅನ್ಯದೇಶೀಯರ ಸಂಪತ್ಪ್ರಭವ ವೈಭವಗಳಂ ನೋಡಿ ಸಹಿಸದೆ ದುಃಖಪಡುತ ಅವರಂ ಮನಸ್ಸಿನಲ್ಲಿ ದೂಷಿಸುವದರಿಂದ ತಮ್ಮ ಕರ್ತವ್ಯ ಲೋಪಪ್ರಯುಕ್ತವಾದ ಮತ್ತು ಪರನಿಂದಾಪ್ರಯುಕ್ತವಾದ ದೋಷದ್ವಯಗಳಿಗೆ ಪಾತ್ರರಾಗದೆ ಹೋಗಲಾರರು.

ತಮ್ಮ ವಿಧೇಯನಾದ,
ನಿಷ್ಪಕ್ಷಪಾತಿ.

SUMMARY OF NEWS
ವೃತ್ತಾಂತ ಸಂಗ್ರಹವು.

ಕಲ್ಕತ್ತೆಯೊಳು, ಈಸಿಂಗ್‌ಯೆಕ್ಕೋ ಮತ್ತು ಕಲ್ಕತ್ತಾ ಗೆಜೆಟ್ ಎಂಬ ಹೆಸರಿನ ದಿನಪತ್ರಿಕೆಯೊಂದು ಪ್ರಕಟಿಸಲ್ಪಡುವದಕ್ಕೆ ಪ್ರಾರಂಭವಾಗಿದೆ.

ಕಳೆದ ತಿಂಗಳ ೧೮ ನೇ ತಾರೀಖಿನಲ್ಲಿ ಪಷಾವರ್ ಪಟ್ಟಣದಲ್ಲಿ [illegible] ೩ ತಾಸಿ ೧೮ ಘಂಟೆಯು ಕಾಲ ಉರಿಯುತಲಿತ್ತು. ಇದರ ಪೆಟ್ಟಿನಿಂದ ಒಂದು ಲಕ್ಷ ರೂಪಾಯಿಗಳು ನಷ್ಟವಾದವು.

ಗೋವಾ [illegible] ದೇಶವಾಸ್ತವ್ಯ ಮತಿಯವನ್ನು ಪಟ್ಟಿಗಳು ಇತಿಕೊಳ್ಳಬೇಕೆಂದು ಒಂದು ನಿರ್ಣಯ ಮಾಡಲ್ಪಟ್ಟಿರುವಂತೆ ಅಲ್ಲಿನ ಪತ್ರಿಕೆಯೊಂದು ತಿಳಿಸುತಿದೆ.

ಕಳೆದ ತಿಂಗಳ ೧೬ ನೇ ತಾರೀಖಿನಲ್ಲಿ ರಾವಲ್‌ಪಿಂಡಿಗೆ ಬಂದ ಪಠಾಣ ಜಾತಿಯವನೊಬ್ಬನು, ಸರಹದ್ದು ಪ್ರಾಂತದ ಜಾತಿಯವರು ಸಾವಿರಾರುಮಂದಿ ಗುಂಪುಗೂಡಿ ಮಹಾಘೋರವಾದ ಯುದ್ಧ ಮಾಡುವದಕ್ಕೆ ಯೆಲ್ಲರು ಸೇರಿದರೆಂದು ಪ್ರಕಟಿಸಿರುತ್ತಾರೆ.

ರಾಮಪುರದ ನವಾಬ ಮೊಕದ್ದಮೆಯಲ್ಲಿ ಆಪಾದಿತರಿಗೆ ಅಡ್ವೊಕೇಟರಾಗಿದ್ದ ಮಿ. ಕಾಲ್ವಿನ್ ಯೆಂಬುವರಿಗೆ ಒಂದು ದಿವಸದ ಕೆಲಸಕ್ಕೆ ೩೨,೦೦೦ ರೂಪಾಯಿ ಫೀಜ್ ಸಿಕ್ಕಿತು. ಇದು ವೈಸರಾಯಿಯವರ ಸಂಬಳಕ್ಕಿಂತಲೂ ಜಾಸ್ತಿಯಾಯಿತು.

ಪಂಜಾಬ್ ಸರಹದ್ದು ಪ್ರಾಂತದಲ್ಲಿ ನೇಟಿವ್ ಸಿಪಾಯಿಯವರು ತಾರತಮ್ಯವಿಲ್ಲದೆ ಪಕ್ಷಪಾತವನ್ನು ನಡೆಸುತಲಿರುವದಾಗಿ ಅಲ್ಲಿನ ಅಧಿಕಾರಿಗಳಿಗೆ ತಿಳಿದುಬಂದು ಇಂತಾದು ಪ್ರವೃತ್ತಿಯಂ ನಿರೋಧಿಸುವ ವಿಷಯದಲ್ಲಿ ಹೆಚ್ಚು ಉಪಾಯವಂ ಯೋಚಿಸುತಲಿದಾರೆ.

ಕಾಶ್ಮೀರದೇಶದ ರಾಜಧಾನಿಯಾದ ಶ್ರೀನಗರದಲ್ಲಿ [illegible] ರೋಗ ವ್ಯಾಪಿಸಿದ್ದು ಮೊದಲು ಕಳೆದ ಮಾರ್ಚ್ ೩ ನೇ ತಾರೀಖ ಮೊದಲುಗೊಂಡು ಮೇ ತಿಂಗಳ ೧೮ ನೇ ತಾರೀಖವರೆಗೆ ೧೦೭೬ ಮಂದಿಗೆ ರೋಗ ಸಿದ್ಧಿಸಿತು, ೪,೬೭೩ ಮಂದಿ ಮೃತಪಟ್ಟರು. ೧೯೦೬ ಮಂದಿ [illegible] ಬಳಲುತ್ತಾರೆ.

[illegible]

EXTRACTS

ಮೈಸೂರು ಬಾಲಿಕಾ ಪಾಠಶಾಲಾ

[illegible]

ತಿರುಪತಿ ದೇವಸ್ಥಾನದ ವಿಷಯ.

[illegible]

Bangalore.—Printed and published at the Karnataka Press, No. 40, Hospital Road, Pettah.—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible motto line]

Vol. XIX.] BANGALORE:—MONDAY, JULY 11, 1892. [No. 28.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ನೇ ಇಸವಿ ಜುಲೈ ೧೧ ನೇ ತಾರೀಖು ಸೋಮವಾರ. [ಸಂಚಿಕೆ ೨೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಅನ್ಯದಭಾಗಗಳಿಗೆ.

ಸಾಲ್ ಒಕ್ಕೆ	ಪೂರ್ವದಲ್ಲಿ ಕೊಡತಕ್ಕದ್ದು.	ಕಡೆಗೆ ಕೊಡತಕ್ಕದ್ದು.
ಬೆಂಗಳೂರಿನವರಿಗೆ	8—0—0	9—0—0
ಪರಸ್ಥಳದವರು ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಬೆಂಗಳೂರಿನವರಿಗೆ	4—0—0	5—0—0
ಪರಸ್ಥಳದವರು ,,	5—0—0	6—0—0

ಈ ಪತ್ರಿಕೆಗೆ ಚಂದಾವನ್ನು ಕಳುಹಿಸುವ ತಾರೀಖಿನಿಂದ [illegible]

ಪ್ರಕಟನೆಯ ದರಗಳು.

ಮೊದಲನೆ ಸಲದ ಪಂಕ್ತಿ ಒಂದಕ್ಕೆ ೦—೨—೦

ಎರಡನೇ ಸಲದಿಂದ ಪಂಕ್ತಿ ಒಂದಕ್ಕೆ ೦—೧—೦

[illegible] ಈ ಪತ್ರಿಕೆಯಲ್ಲಿ [illegible]

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾದಲ್ಲಿ [illegible]

ಇದರ ಕ್ರಯ—ಪೋಸ್ಟೇಜ್ ಮತ್ತು [illegible] ಪ್ರತಿ ಒಂದಕ್ಕೆ ರೂ ೫—೦—೦

ಟಿ. ಬಿ. [illegible]

ಬೆಂಗಳೂರ್, [illegible]

ನೋಟಿಸು.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

[illegible]

ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ಜ್ವರದ ಗುಳಿಗೆಗಳು.—[illegible] ರೂ. ೧ಕ್ಕೆ [illegible] ಗುಳಿಗೆಗಳು.

[illegible] ಸಿಸೆ ೧ಕ್ಕೆ [illegible]

ನೇತ್ರರೋಗಕ್ಕೆ ಮಾತ್ರೆ.—[illegible]

ಭಸ್ಮಗಳು.—[illegible]

ಲೇಹ್ಯಗಳು.—[illegible]

[illegible] ಡಬಿ ೧ಕ್ಕೆ ೧ ರೂ.

ನೋಟಿಸ್.

ಗಣೇಶ ರಾಮಚಂದ್ರ ಕರಿರ್ ಮತ್ತು ಕಂಪೆನಿ.

ಕಮ್ಮಿಷನ್ ಏಜಂಟ್ಸ್.

[illegible] ಸನ್ನದ್ಧರಾಗಿರುತ್ತೇವೆ.

[illegible]

THE BANGALORE SREENIVASA MANDIRAM.

ಬೆಂಗಳೂರು ಶ್ರೀನಿವಾಸ ಮಂದಿರಂ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ವಿವರ ತೋರಿಸುವ ಲೆಖ್ಖ:—

೧೮೯೨ನೇ ಇಸವಿ ಜುಲೈ ೨ನೇ ತಾರೀಖಿನಿಂದ [illegible] ಜುಲೈ ೮ ನೇ ತಾರೀಖಿನವರಿಗೆ.—

ಅಕ್ಕಿ ಕಳುಹಿಸಿದ ಗೃಹಗಳ ಸಂಖ್ಯೆ	...	98
[illegible] ಸಂಖ್ಯೆ	...	58
ಗತವಾರದ ಶಿಲ್ಕು ಸೇರು	...	61
ಜಮಾ	...	119
[illegible] ಸೇರು	...	50
[illegible] ಸೇರು	...	29½
[illegible]	...	45½

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ.

[illegible]	...	7
[illegible] ವಿದ್ಯಾರ್ಥಿ	...	4
[illegible] ವಿದ್ಯಾರ್ಥಿಗಳು	...	7
[illegible] ಸಂಖ್ಯೆ		17
[illegible]	...	12
ಜಮಾ	...	47

THE MONEY MARKET.

[illegible], ಜುಲೈ 9ನೇ [illegible] 1892.

[illegible] 106-4-0 ರಿಂದ 106-10-0ವರೆಗೆ,

[illegible] (500) [illegible] 930 [illegible] 935ವರೆಗೆ,

[illegible] (100) [illegible] 165 ರಿಂದ 170 ವರೆಗೆ,

[illegible] 15—11—0

[illegible] 6 [illegible] 1s. 27/16d.

[illegible] 1s. 3⅜d.

[illegible] 1s. 331/32d.

LATEST TELEGRAMS.

ತಂತಿ ವರ್ತಮಾನ.

ಸಿಂಲಾ, ೩ ನೇ ಜುಲೈ.—ಶ್ರೀನಗರದಲ್ಲಿ ವಾಂತಿಭೇದಿ ರೋಗವು ನಿವೃತ್ತಿಯಾಗಿದ್ದು ಗ್ಯಾರಿಸನ್ [illegible] ದೇಶದ ಡಿಸ್ಟ್ರಿಕ್ಟ್ ಜಾತಿನಲ್ಲಿ ಪ್ರತಿದಿನವಲ್ಲೂ ಪೂರ್ವಕ್ಕಿಂತಲೂ ಈಗ ೨೦೦ ಮಂದಿಗೆ ಜಾಸ್ತಿಯಾಗಿ ರೋಗ ತಗಲಿ ಸಾಯುತ್ತಲಿರುವಂತೆ ಅಲ್ಲಿಂದ ಈಚೆಗೆ ವರ್ತಮಾನ ಬರುತಲಿದೆ.

ಅಲಹಾಬಾದ್, ೭ನೇ ಜುಲೈ.—ಈಚೆಗೆ ಬಂದ ವರ್ತಮಾನದ ದೆಸೆಯಿಂದ, ಅಫ್ಘಾನಿಸ್ಥಾನ ದೇಶದೊಳಗೆ ಈಚೆಗೆ ಪ್ರಾರಂಭವಾದ ಯುದ್ಧವು ಗುಲಾಂಹೈದರ್‌ಖಾನ್ ಎಂಬವರ ಮುಖ್ಯತನದಲ್ಲಿ ಅಮೀರರವರ ಸೈನಿಕರ ಪ್ರಾಬಲ್ಯವಾಗಿದೆ ಎಂದು ತಿಳಿಯಬರುತಿದೆ.

ಲಂಡನ್, ೫ ನೇ ಜುಲೈ.—ಬರೋಡೆ ಗಾಯಕವಾಡಿ ಮಹಾರಾಜರವರು ನಿನ್ನೆಯದಿನ ಮಹಾರಾಜ್ಞಿಯವರ ದರ್ಶನಕ್ಕೆ ಹೋಗಿದ್ದ ಕಾಲದಲ್ಲಿ ಮಹಾರಾಜ್ಞಿಯವರು ಪೂರ್ಣ ಮರ್ಯಾದೆಗಳೊಡನೆ ಅವರು ಬರಮಾಡಿಕೊಂಡರು.

ರಾಮಪುರದ ಜನರಲ್ ಅಜಿಮುದ್ದೀನ್ ಎಂಬುವವನನ್ನು ಖೂನಿ ಮಾಡಿದ ಬಗ್ಗೆ ಮರಣದಂಡನೆ ವಿಧಿಸಲ್ಪಟ್ಟ ನಾಲ್ವರೂ ನಿನ್ನೆಯದಿನ ಗಲ್ಲಿಗೆ ಹಾಕಲ್ಪಟ್ಟರು. ಅಪರಾಧಿಗಳು ತಮ್ಮ ವಿಷಯದಲ್ಲಿ ದಯಾಪೂರ್ವಕ ಮನ್ನಿಸಿ ಬಿಡಬೇಕೆಂದು ಬರೆದುಕೊಂಡ ಅರ್ಜಿಯನ್ನು ಸರ್ ಅಕಲ್ಯಾಂಡ್ ಕಾಲ್ವಿನ್ ಇವರು ಪೂರಾ ಯೋಚಿಸಿ ಆಮೇಲೆ ತಳ್ಳಿಹಾಕಿ ಬಿಟ್ಟರು. ಬ್ರಿಟಿಷರಿಗೆ ವಿಧಿಸಲ್ಪಟ್ಟ ಮರಣದಂಡನೆಯನ್ನು ಯಾವತ್ತು ದಿನಗಳ ಕಾಲ ನಿಲ್ಲಿಸಬೇಕೆಂದು ಅವರ ಕಡೆಯವರು ಕೊಟ್ಟ ಅರ್ಜಿ ಸಹ ತಿರಸ್ಕರಿಸಲ್ಪಟ್ಟಿತು.

ಅಲಹಾಬಾದ್, ೬ ನೇ ಜುಲೈ.—ಅಫ್ಘಾನಿಸ್ಥಾನ ದೇಶದಿಂದ ಈಚೆಗೆ ಬಂದ ವರ್ತಮಾನದ ದೆಸೆಯಿಂದ, ಅಮೀರರವರು ಉರಜ್‌ಘಾನ ಜಾರಸ್ ಎಂಬ ಜಾತಿಯವರೊಡನೆ ಸಮಾಧಾನ ಮಾಡಿಕೊಳ್ಳಬಾರದೆ ಯೋಚಿಸುತ್ತಲೂ, ಜೆಸೂಪ್ ಮತ್ತು ಇತರ ಪ್ರದೇಶಗಳಲ್ಲಿನ ಆಯಾ ಜಾತಿಯವರೆಲ್ಲರು ಅಫ್ಘಾನ್ ಜನರ ಮೇಲೆ ಬಿದ್ದದ್ದರಿಂದ ಕಲಹವು ವೃದ್ಧಿಯಾಗುತಿರುವದೆಂತಲೂ ತಿಳಿಯಬರುತಿದೆ.

ಲಂಡನ್, ೬ ನೇ ಜುಲೈ.—[illegible] ಎಂಬ ಪಟ್ಟಣದಲ್ಲಿ ವಾಂತಿಭೇದಿ ರೋಗ ತಗಲಿ ದಿನ ಒಂದಕ್ಕೆ ೧೦೦ ಮಂದಿಯು ಮೃತರಾಗಿ ಸಾಯುತಲಿರುವಂತೆ ಈಚೆಗೆ ವರ್ತಮಾನ ಬಂದಿರುತಿದೆ.

ಅಲಹಾಬಾದ್, ೬ನೇ ಜುಲೈ.—[illegible] ಎಂಬ ಜಾತಿಯ ಮುಖಂಡನಾದ ಅಮೀರಖಾನ ನೆಂಬವನು ಕಲಹಪ್ರಿಯರಾದ ಐನೂರು ಮಂದಿಯನ್ನು ಸೇರಿಸಿಕೊಂಡು, ಖೈಬರ್‌ಘಾಟು ಮಾರ್ಗದಲ್ಲಿ ಲೂಟಿ ಮಾಡಬೇಕೆಂದು ಪ್ರಯತ್ನಪಟ್ಟನು, ಪರಂತು ರಾಜಕೀಯ ಅಧಿಕಾರಿ ಜನರಿಂದ ಹಿಂದಕ್ಕೆ ಓಡಿಸಲ್ಪಟ್ಟನು. ತರುವಾಯ ಅಮೀರಖಾನನು ಖೈಬರ್‌ಘಾಟಿಯ ಮುಂದುಗಡೆ ಇರುವ ಒಂದು ಬೆಟ್ಟದ ಮೇಲೆ ಹೋಗಿ ಸೇರಿಕೊಂಡನು. ಖೈಬರ್‌ಘಾಟಿಯ ಮಸರೆಯವರಿಗೆ ಅವನನ್ನು ಓಡಿಸುವದಕ್ಕೆ

ಹುಕುಂ ಕೊಡಲ್ಪಟ್ಟಿತು, ಪರ್ಶಿಯ ಅವರು ಆ ರೀತಿ ಮಾಡುವದಕ್ಕೆ ಮುಂಚಿತವಾಗಿ ಮಾರ್ಘ್ವಿ ಎಂಬ ಕೋಟೆಯಮೇಲೆ ಜುಲುಂ ನಡಿಸಿದನು ಅಲ್ಲಿನ ಗ್ಯಾರಿಸನ್ ಸೈನಿಕರು ಕೋಧಾವೇಶದೊಡನೆ ತಿರುಗಿಬಿದ್ದು ಇವನಿಗೆ ಅವಕಾಶ ಕೊಡದೆ ಹೋದರು. ತರುವಾಯ ಅಮೀರ್ ಖಾನನು ಕೆಲವು ಗುಡಿಸಲುಗಳಿಗೆ ಬೆಂಕಿ ಹಚ್ಚಿದನು, ಪರಂತು ಕರ್ನಲ್ ವಾರ್‌ಬರ್ಟನ್ ಎಂಬವರು ಖೈಬರ್ ಘಾಟು ಸೇನೆಯೊಡನೆ ಬರುವವಂ ತಿಳಿದು ಆತುರದೊಡನೆ ಹಿಂದಕ್ಕೆ ಹೋಗಿಬಿಟ್ಟನು. ಈಗ ಪೆಷಾವರ್ ಪ್ರಾಂತದಿಂದ ತೋಫೆಗಳು, ಸವಾರ್ ಸೈನ್ಯ, ಕಾಲ್ಬಲ ಮೊದಲಾದವು ಜುರೂಪ್ನಾಂತಕ್ಕೆ ಕಳುಹಿಸಲ್ಪಡುತವೆ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 11, 1892

೧೮೯೨ನೇ ಇಸವಿ ಜೂಲೈ ತಾ॥ ೧೧ ನೇ ಸೋಮವಾರ

THE CITY MUNICIPALITY

ಈ ಷಹರ್ ಮ್ಯೂನಿಸಿಪಾಲಿಟಿಯ ಕಾರ್ಯನಿರ್ವಹಣೆಯ ಬಗ್ಗೆ ಪ್ರೆಸಿಡೆಂಟರೆಂತಲೂ, ವೈಸ್ ಪ್ರೆಸಿಡೆಂಟರೆಂತಲೂ, ಆಫಿಸ್ ಮಾನೇಜರೆಂತಲೂ ಮೂವರು ಅಧಿಕಾರಿಗಳು ಏರ್ಪಟ್ಟಿದ್ದರು. ಸಾಮಾನ್ಯವಾಗಿ ಕಂದಾಯ ವಸೂಲೀ ಕೆಲಸವನ್ನು ವೈಸ ಪ್ರೆಸಿಡೆಂಟರ ತಿಳುವಳಿಕೆ ಮತ್ತು ಹುಕುಮಿನ ಮೇಲೆ ಮ್ಯಾನೇಜರಾದವರು ನಿರ್ವಹಿಸುತ ಬರುತಲಿದ್ದರು. ಈ ಏರ್ಪಾಡು ಈಚೆಗೆ ಸುಮಾರು ಎಂಟುತಿಂಗಳ ಹಿಂದಿನವರಿವಿಗೆ ಆಚರಣೆಯಲ್ಲಿರುತಲಿತ್ತು. ಈಗ್ಗೆ ಸುಮಾರು ಹತ್ತುತಿಂಗಳ ಹಿಂದೆ ಈ ಷಹರ್ ಮ್ಯೂನಿಸಿಪಾಲಿಟಿಗೆ ಸೇರಿದಂತೆ ಸಿಟಿ ಅಮಲ್ದಾರರೆಂಬ ಹೆಸರಿನಿಂದ ಒಬ್ಬ ಅಧಿಕಾರಿಯು ನೌಕರರ್ರಾಕಲ್ಪಟ್ಟು, ಅವರು ಮ್ಯೂನಿಸಿಪಾಲಿಟಿಯ ಕಾರ್ಯಗಳ ಪೈಕಿ ಬಹುಭಾಗವನ್ನು ವಿಶೇಷ ಮಹನತ್ತು ಮತ್ತು ತಿಳುವಳಿಕೆಯಿಂದ ಸ್ವಯಂ ನಿರ್ವಹಿಸುವದಕ್ಕೆ ಅಧಿಕಾರ ವುಂಟುಮಾಡಲ್ಪಟ್ಟು ನಡೆಸುತ ಬರುತಲಿದಾರೆ, ಪರಂತು ಕೆಲವು ಕಾಲ ವೈಸ್ ಪ್ರೆಸಿಡೆಂಟರಾಗಿದ್ದ ಪುಟ್ಟಣ್ಣಶೆಟ್ಟಿರವರು ಬೇರೆ ಕೆಲಸದಮೇಲೆ ಹೊರಟುಹೋದ ಮೇಲೆ ಮ್ಯೂನಿಸಿಪಲ್ ವೈಸ್‌ಪ್ರೆಸಿಡೆಂಟಿ ಕೆಲಸಕ್ಕೆ ನಾಮಮಾತ್ರಕ್ಕೆ ಒಬ್ಬ ಅಧಿಕಾರಿಯು ಕುದಿರಿ, ಸಿಟಿ ಅಮಲ್ದಾರರು ಸಿದ್ಧಪಡಿಸಿ ಕಳುಹಿಸಿಕೊಡುವ ಕೆಲವು ಕಾಗದಪತ್ರಗಳಿಗೆ ತಮಗೆ ವಿರಾಮವಾದ ಕಾಲದಲ್ಲಿ ಕೈಬರಹ ಇಡುವ ಶ್ರಮಸಾಧ್ಯವಾದ ಕಾರ್ಯಕ್ಕಾಗಿ ತಪ್ಪದೆ ರುಸುಮನ್ನು ಮಾತ್ರ ಪಡೆಯುತಬಂದರು. ಮೆ॥ ಮಾಧವರಾಯಚ್ಚವರು ಬೆಂಗಳೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮಿಷನರ್ ಅಧಿಕಾರದಿಂದ ಪೋಲೀಸ್ ಇನ್ಸ್ಪೆಕ್ಟರ್ ಜನರಲ್ ಕೆಲಸಕ್ಕೆ ವರ್ಗಮಾಡಲ್ಪಡುವದಕ್ಕೆ ಕೆಲವುದಿನಗಳ ಹಿಂದೆ, ಸಿಟಿ ಅಮಲ್ದಾರರು ವೈಸ್ ಪ್ರೆಸಿಡೆಂಟಿ ಕೆಲಸಕ್ಕೆ ಲಾಯಖಾಗಿರುವವರಿಂದ ಸದರೀ ಕೆಲಸಕ್ಕೆ ಅವರನ್ನು ನಿಯಮಿಸುವದುಚಿತವಾಗಿರುವದೆಂದು ಗವರ್ನಮೆಂಟಿಗೆ ಶಿಫಾರಸ್ ಮಾಡಿದರು. ಸದರೀ ಶಿಫಾರಸ್ ಕ್ರಮೇಣ ಕೌನ್ಸಿಲರ್‌ಗಳ ಅಭಿಪ್ರಾಯದಬಗ್ಗೆ ಕಳುಹಿಸಲ್ಪಡುವಲ್ಲಿ ಮೆ॥ ಚೆಂಚಲರಾಯರವರು ಇಂಗ್ಲಿಷ್ ಬಾಷಾ ನಭಿಜ್ಞರಾದವರನ್ನು ವೈಸ್‌ಪ್ರೆಸಿಡೆಂಟಿ ಕೆಲಸದಲ್ಲಿರುವಣವು ಉಚಿತವಲ್ಲವೆಂದು ಅಭಿಪ್ರಾಯ ಪಟ್ಟದ್ದರಿಂದ ಸಿಟಿ ಅಮಲ್ದಾರರವರ ಇತರ ಲಾಯಖಿಗಳೆಲ್ಲವು ನಿಷ್ಪ್ರಯೋಜಕಗಳಾಗಿ ಪರಿಣಮಿಸಿದವು. ಸಿಟಿ ಅಮಲ್ದಾರರು ಈಗ ನಾಮತಃ ವೈಸ್ ಪ್ರೆಸಿಡೆಂಟರಲ್ಲದೆ ಹೋದಾಗ್ಯೂ ಕಾರ್ಯತಃ ಆ ಕೆಲಸವನ್ನು ನಿರ್ವಹಿಸುತ ಬರುತಲಿದಾರೆ, ಪರಂತು ಇಂಗ್ಲಿಷ್ ತಿಳಿಯದ ನಾಲಾಯಖೀಯಿಂದ, ತಾವು ಸೈನ್ ಮಾಡುವ ಕಾಗದ ಪತ್ರಗಳಿಗೆ ಪ್ರೆಸಿಡೆಂಟರವರ ಸೈನನ್ನು ಪಡೆಯಬೇಕಾಗಿರುವದರಿಂದ ಅದಕ್ಕೆ ಅವರಿಗೆ ವಿರಾಮವಾಗಿರುವ ಕಾಲವನ್ನು ನಿರೀಕ್ಷಿಸಬೇಕಾಗಿಬಂದು ಮ್ಯೂನಿಸಿಪಲ್ ಕೆಲಸಗಳು ಸುಸ್ಥಿಬಿಳುವದಕ್ಕೆ ಅವಕಾಶ ವುಂಟಾಯಿತು. ಕೆಲಸ ಮಾಡುವಂತವರೊಬ್ಬರು, ತಲಬ್ ಪಡೆಯುವಂತವರೊಬ್ಬರಾಗಿ ಕುದರಿದಮೇಲೆ, ಅಕ್ಕರೆಯಿಂದಲೂ ತಿಳುವಳಿಕೆಯಿಂದಲೂ ಇಲಾಖಾ ಕಾರ್ಯಗಳಂ ನಿರ್ವಹಿಸುವಂತವರಿಗೆ ಪ್ರೋತ್ಸಾಹಭಂಗವನ್ನುಂಟುಮಾಡಿದಂತೆ ಆಗುವದರಲ್ಲಿ ಸಂಶಯವಿಲ್ಲವು. ಈಚೆಗೆ ಕೆಲವು ಕಾಲದವೊದಲು ವೈಸ್ ಪ್ರೆಸಿಡೆಂಟರೆಂದು ರುಜು ಮಾಡುತಲಿದ್ದ ಅಧಿಕಾರಿಗೆ ಸಲ್ಲುತಬಂದ ರುಸುಮನ್ನು ಬೇರೆ ಇಟ್ಟಿರುವಂತೆ ಹುಕುಂ ಮಾಡುವದಕ್ಕೆ ಅಧಿಕಾರಿಗಳು ಕುದಿರದರೆ ಹೊರತು ಸದರೀ ಕೆಲಸವನ್ನು ಯಾರು ನಿರ್ವಹಿಸುತ್ತಾರೆ, ಅದು ಯಾರಿಗೆ ನ್ಯಾಯವಾಗಿ ಸಲ್ಲಬೇಕೆಂಬ ವಿಚಾರವೇ ಶೂನ್ಯವಾಗಲು, ಅಧಿಕಾರಿಗಳ ತಲಪ್‌ವ್ಯಕ್ತಿ ತಾರತಮ್ಯದಿಂದೇರ್ಪಡುತಿದೆಂದು ಜನರು ಯೋಚಿಸುವದಕ್ಕೆ ಸಂಶಯಾಸ್ಪದವಾಕಾಶ ವುಂಟಾಗದೆ ಹೋಗಲಿಲ್ಲವು. ಈ ವಿಷಯವಂ ಕುರಿತು ನಮ್ಮ ವಿಚಾರವು ಸದ್ಯಃ ನಿಲ್ಲಿಸಿ ಇಲ್ಲಿನ ಮ್ಯೂನಿಸಿಪಲ್ ಬೋರ್ಡ ಮಾಸೀಯನಾ ಮೀಟಿಂಗ್ ಕಾಲದಲ್ಲಿ ನಡೆಸಲ್ಪಡುವ ವಿಷಯ ವಿಚಾರಕ್ರಮವು ಕುರಿತು ಸ್ವಲ್ಪ ವಿಚಾರ ಮಾಡುವೆವು ಈ ಬೋರ್ಡಿನ ಮೆಂಬರುಗಳು, ಅಂದರೆ ಕಮಿಷನರ್‌ಗಳ ಒಟ್ಟು ಸಂಖ್ಯೆಯಲ್ಲಿ ಒಹುಮಂದಿ ಇಂಗ್ಲಿಷ್‌ಭಾಷಾ ಪರಿಚಯ ವಿಲ್ಲದವರೆಂಬ ಅಂಶ ಪ್ರಸಿದ್ಧವಾಗಿದ್ದಾಗ್ಯೂ, ಮೀಟಿಂಗ್ ಕಾಲದಲ್ಲಿ ನಡೆಸಲ್ಪಡುವ ವಿಷಯ ವಿಚಾರವು ಪ್ರಾಯಶಃ ಇಂಗ್ಲಿಷ್ ಭಾಷೆಯಲ್ಲೇ ನಡೆಸಲ್ಪಡುತಿದೆ. ಅಲ್ಲಿ ವಿಚಾರಕ್ಕೆ ತರಲ್ಪಡುವ ಪ್ರತಿವಿಷಯದ ಸಾರಾಂಶವು ಆ ಕಾಲದಲ್ಲಿ ಹಾಜರಿರುವ ಪ್ರತಿಮೆಂಬರಿಗೂ ಅವರ ಸ್ವಭಾಷೆಯಲ್ಲಿ ತಿಳಿಸಲ್ಪಡಬಹುದೆಂದು ನಾವು ಯೋಚಿಸಿದಾಗ್ಯೂ ಪ್ರತಿಯೊಂದು ಸಂಗತಿಯಲ್ಲೂ ಅದುವರಿವಿಗೆ ನಡೆದಿರುವ ಕಾಗದ ಪತ್ರಗಳಂ ಸ್ವಯಂ ನೋಡಿ ಅದರಮೇಲೆ ಸ್ವಾಭಿಪ್ರಾಯವಂ ಕೊಡುವದು ಉಚಿತವಾಗಿರುವದೇ ಹೊರತು ಅನ್ಯರ ಮುಖದಿಂ ಸಂಗ್ರಹವಾಗಿ ಕೇಳಿ ಅವರಂ ಅನುವರ್ತಿಸಿ ಅಭಿಪ್ರಾಯ ಕೊಡುವಣವು ಅವರಿಗೂ ಗೌರವವಲ್ಲವು, ಮತ್ತು ಯಾರ ಪ್ರತಿನಿಧಿಗಳಾಗಿ ಅವರು ಬೋರ್ಡಿಗೆ ಹೋಗುತ್ತಾರೆಯೋ ಅಂತಾ ಪ್ರಜೆಗಳಿಗೂ ಪ್ರಯೋಜನ ಕಾರಿಯಾಗಿರಲಾರದು.

ಏತನ್ನಗರ ಮ್ಯೂನಿಸಿಪಾಲಿಟಿಯು ಸಾಮಾನ್ಯವಾಗಿ ಪ್ರಜೆಗಳ ಸುಖವಸತಿಗೆ ಆವಶ್ಯಕಗಳಾದ ಏರ್ಪಾಡುಗಳಂ ಮಾಡುವದಕ್ಕಾಗಿ ಗವರ್ನಮೆಂಟಿನವರಿಂದ ಏರ್ಪಡಿಸಲ್ಪಡುವ ಒಂದು ನಗರ ವಿಚಾರಕ ಸಭೆಯಾಗಿರುವದರಿಂದ ಅದರಲ್ಲಿ ವಿಶಿಷ್ಟ ಕೆಲಸಗಳನ್ನೂ ದೇಶಭಾಷೆಯಲ್ಲಿ ನಡೆಸಿ, ಅನಿವಾರ್ಯದ ಸಂಧರ್ಭಗಳಲ್ಲಿ ರಾಜಭಾಷೆಯೊಳು ನಡಿಸುವಣವು ಪ್ರಜಾ ಸಮ್ಮತವಾಗಿರುವುದು. ಹಾಗೆ ಮಾಡುವಣವು ಸಾಧ್ಯವಲ್ಲವೆಂದು ಗವರ್ನಮೆಂಟಿಗೆ ಕಂಡುಬರುವಪಕ್ಷಕ್ಕೆ ಇಂಗ್ಲಿಷ್‌ಭಾಷಾ ಪರಿಚಯ ವುಳ್ಳವರನ್ನೇ ಹುಡಿಕಿ ಕಮಿಷನರಾಗಿ ಚುನಾಯಿಸಬೇಕೆಂದು, ಚುನಾವಣೆ ಕ್ರಮವಂ ಕುರಿತು ಗವರ್ನಮೆಂಟಿನವರು ಈಚೆಗೆ ರಚಿಸಿ ಪ್ರಕಟಿಸಿದ ನಿಬಂಧನೆಗಳಲ್ಲಿ ಒಂದು ಕಲಂ ಸೇರಿಸಿದ್ದರೆ ಚೆನ್ನಾಗಿರುತಲಿತ್ತು. ಕಮಿಷನರ್‌ಗಳ ಚುನಾವಣೆ ಬಾಧ್ಯತೆಯಂ ಪ್ರಜೆಗಳಿಗೆ ಕೊಟ್ಟಮೇಲೆ ಅವರಿಗೆ ವಿಷಯ ಸ್ವರೂಪಜ್ಞಾನ ವುಂಟಾಗಲಿಕ್ಕೆ ಅವಕಾಶವಿಲ್ಲದಂತೆ ಮಾಡುವಣವು ಉಚಿತವಾಗಿ ಕಾಣುವದಿಲ್ಲವು.

THE GENERAL ELECTION.

ಸುಮಾರು ಆರುವರ್ಷಗಳ ಕಾಲದ ಮೊದಲು ನೆಲಗೊಂಡು ನಡೆದು ಬರುತಲಿದ್ದ ಶ್ರೀಮನ್ಮಹಾರಾಜ್ಞೀಯವರ ಪಾರ್ಲಿಯಮೆಂಟ ಸಮಾಜವು ಕಳೆದತಿಂಗಳ ೨೮ ನೇ ತಾರೀಖ್‌ನಲ್ಲಿ ಒಡೆದುಹಾಕಲ್ಪಟ್ಟು ಮರಳಿ ಅದರ ಮೆಂಬರ್‌ಗಳು ಆಯು ತುಕಡಿಯ ಪ್ರಜೆಗಳಿಂದ ಚುನಾಯಿಸಲ್ಪಡುತರಿದಾರೆಯಷ್ಟೆ. ಈ ಸಮಾಜವು ಹೌಸಾಫ ಲಾರ್ಡ್ಸ ಎಂಬ ರಾಜಪಕ್ಷಾವಲಂಬಿಗಳಿಂದಲೂ, ಹೌಸಾಫ ಕಾಮನ್ಸ್ ಎಂಬ ಪ್ರಜಾ ಪಕ್ಷಾವಲಂಬಿಗಳಿಂದಲೂ ಕೂಡಿದ್ದಾಗಿಯೂ, ಕನ್ಸರ್ವೆಟಿವ್ ಮತ್ತು ಲಿಬರಲ್ ಎಂಬ ಕಕ್ಷಿದ್ವಯ ವುಳ್ಳದ್ದಾಗಿಯೂ ಇರುತಿದೆ. ಇದುವರಿವಿಗೆ ಕನ್ಸರ್ವೆಟಿವ್ ಕಕ್ಷಿಯವರಲ್ಲಿ ಪ್ರಮುಖರಾದ ಲಾರ್ಡ ಸಾಲಿಸ್‌ಬರಿ ಎಂಬವರು ಪ್ರಧಾನ ಮಂತ್ರಿತ್ವವಂ ಕೈಗೊಂಡು ರಾಜ್ಯಕಾರ್ಯಗಳಂ ನಿರ್ವಹಿಸುತ ಬಂದರು. ಈಗ ಮೆಂಬರ್‌ಗಳ ಚುನಾವಣೆಯು ನಡೆಯುತಲಿರುವದರಿಂದ ಮೇಲಿನವರ ಅಧಿಕಾರವೇ ಸ್ಥಿರಪಡುವದೊ ಅಥವಾ ಲಿಬರಲ್ ಕಕ್ಷಿಯಲ್ಲಿ ಮುಖಂಡರಾದ ಮೆ॥ ಗ್ಲಾಡಸ್ಟನ್‌ಯವರೇ ಸಚಿವತ್ವವಂ ಕೈಗೊಳ್ಳುವರೊ ಎಂಬ ಅಂಶ ಇನ್ನು ೧೫ ದಿನಗಳೊಳಗಾಗಿ ಗೊತ್ತಾಗುವುದು. ಉಭಯ ಕಕ್ಷಿಯವರೂ ಸಾಮದಾನಭೇದೋಪಾಯಗಳಿಂದ ತಮ್ಮ ತಮ್ಮ ಪ್ರಾಭವವಂ ಊರ್ಜಿತಪಡಿಸುವ ವಿಷಯದಲ್ಲಿ ಪ್ರಬಲ ಪ್ರಯತ್ನಗಳಂ ಮಾಡುತಲಿದಾರೆ. ಈ ತಿಂಗಳ ೯ನೇ ತಾರೀಖ್ ರಾತ್ರಿಯುವರಿವಿಗೆ ಕನ್ಸರ್ವೆಟಿವ್ ಕಕ್ಷಿಗೆ ಸೇರಿದವರು ೧೬೪ ಮಂದಿಯೂ, ಲಿಬರಲ್ ಕಕ್ಷಿಗೆ ಸೇರಿದವರು ೧೪೧ ಮಂದಿಯೂ, ಯೂನಿಯನಿಸ್ಟ ಎಂಬ ಕಕ್ಷಿಗೆ ಸೇರಿದವರು ೨೩ ಮಂದಿಯೂ, ಮೆ॥ ಪಾರ್ನೆಲ್‌ಯವರ ಕಕ್ಷಿಗೆ ಸೇರಿದವರು ನಾಲ್ವರೂ, ಪಾರ್ನೆಲರಿಗೆ ಪ್ರತ್ಯರ್ಥಿಯಾದವರ ಕಕ್ಷಿಗೆ ಸೇರಿದವರು ೧೬ ಮಂದಿಯೂ ಚುನಾಯಿಸಲ್ಪಟ್ಟಿರುತ್ತಾರೆ. ಈ ಸಲದ ಚುನಾವಣೆಯಲ್ಲಿ ಇಂಡ್ಯದೇಶೀಯರಿಗೆ ಪಾರ್ಲಿಮೆಂಟ ಸಮಾಜದಿಂದ ಆಗಬೇಕಾದ ಕಾರ್ಯಗಳಂ ಬಗೆಗೊಳಿಸುವದರಲ್ಲಿ ಬದ್ಧಾನಿಮಿಷವೇಕ ಪ್ರಸಿದ್ಧರಾಗಿದ್ದ ಮೆ॥ ಮೆಕ್ಲೀನ್ ಎಂಬವರಿಗೆ ಪಾರ್ಲಿಮೆಂಟನಲ್ಲಿ ಸ್ಥಾನವಿಲ್ಲದಂತಾದ್ದೆಂದು, ಇಂಡ್ಯದೇಶೀಯರಾದ ಮೆ॥ ದಾದಾಭಾಯಿ ನೌರೋಜಿ ಎಂಬ ಪಾರ್ಸಿಜಾತಿಯ ಮನುಷ್ಯರನ್ನು ಪಾರ್ಲಿಮೆಂಟ ಸಮಾಜದಲ್ಲಿ ತಮ್ಮ ಕಡೆ ಪ್ರತಿನಿಧಿಯಾಗಿ ಸೆಂಟ್ರಲ್ ಫಿನ್ಸ್‌ಬರಿಯೆಂಬ ಸ್ಥಳದ ಜನರು ಚುನಾಯಿಸಿದ್ದೆಂದು, ಈ ಎರಡು ಸಂಗತಿಗಳೂ ಇಂಡ್ಯದೇಶೀಯರಾದವರೆಲ್ಲರಿಗೂ ಸಂತೋಷ ಜನಕವಾದ ವೃತ್ತಾಂತವಾಗಿರುತಿದೆ. ಇಂಡ್ಯದೇಶದ ವಿಷಯ ಗವರ್ನಮೆಂಟ ಮಂತ್ರಾಲೋಚಕ ಸಮಾಜದ ಮೆಂಬರ್‌ಗಳ ಪೈಕಿ ಅರ್ಧವಾಸಿಯಂ ತಾವು ಚುನಾಯಿಸಿಕೊಳ್ಳುವ ಬಾಧ್ಯತೆಯಂ ತಮಗೆ ಉಂಟಾಗಬೇಕೆಂಬ ಪ್ರಜೆಗಳ ಪ್ರಾರ್ಥನೆಯಂ ಉಲ್ಲೇಖಿಸಿ ನಡೆಸಿಕೊಡುವ ವಿಷಯದಲ್ಲಿ ಬ್ರಿಟಿಷ್ ಅಧಿಕಾರಿಗಳಿಗೆ ಸರ್ವಾತ್ಮನಾ ಸಮಾಧಾನವಿಲ್ಲದೆ ಇರುವಲ್ಲಿ ಇಂಡ್ಯದೇಶೀಯ ರೊಬ್ಬರು ಮಹಾರಾಜ್ಞೀಯವರ ಪಾರ್ಲಿಮೆಂಟ ಸಮಾಜದಲ್ಲಿ ಒಬ್ಬ ಮೆಂಬರಾಗಿ ಸೇರಿಸಲ್ಪಟ್ಟದ್ದು ಕೇವಲ ಆಶ್ಚರ್ಯಕರವಾದ ವಿಷಯವಾಗಿರುತಿದೆ.

THE WEATHER AND THE PROSPECTS

ಕಳೆದ ವಾರವೆಲ್ಲ ಯಾವಾಗಲೂ ಮೋಡ ಮುಚ್ಚಿಕೊಂಡು ನಿಮಿಷಮಾತ್ರ ವಿರಾಮವಿಲ್ಲದೆ ತುಂತುರ ಮಳೆ ಬೀಳುತಲಿತ್ತು. ಇದರಿಂದ ಕೆರೆಕುಂಟೆಗಳಿಗೆ ವಿಶೇಷವಾಗಿ ನೀರು ಬರುವುದೆಂದು ನಾವು ಯೋಚಿಸಲಾರೆವು, ಪರಂತು ಭೂಮಿಯಲ್ಲಿ ಒಳ್ಳೆ ಹದ ವುಂಟಾಗಿರಬಹುದಾದುದರಿಂದ ಸ್ವಲ್ಪ ದಿನಗಳಲ್ಲೇ ದನಗಳಿಗೆ ಪೂರ್ಣವಾಗಿ ಮೇವು ಸಿಕ್ಕಬಹುದು. ಕಳೆದ ವಾರದ ಮೈಸೂರು ಗಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುವ ಈ ತಿಂಗಳ ೨ ನೇ ತಾರೀಖಿಗೆ ಮುಗಿದ ವಾರದ ಬಾಬತು ಕಾಲಸ್ಥಿತಿ ರಿಪೋರ್ಟಂ ನೋಡಲಾಗಿ, ಬೆಂಗಳೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರತಿ ತಾಲ್ಲೂಕಿನಲ್ಲೂ ಒಂದಂಗುಲ ಮೊದಲು ಮೂರಂಗುಲದ ವರಿವಿಗೆ ಮಳೆಯಾದಂತೆ ತಿಳಿಯಬರುತಿದೆ. ಕೋಲಾರ ಡಿಸ್ಟ್ರಿಕ್ಟ ಪೈಕಿ ಗೌರೀಬಿದನೂರೊಂದು ವಿನಾ ಇತರ ತಾಲ್ಲೂಕುಗಳಲ್ಲೆಲ್ಲ ಒಂದಂಗುಲ ಮೊದಲು ಅಯಿದಂಗುಲದ ವರಿವಿಗೆ ವರ್ಷವಾಗಿರುವಂತೆ ಕಾಣುತಿದೆ. ತುಮಕೂರು ಡಿಸ್ಟ್ರಿಕ್ಟ ಪೈಕಿ ಕೊರಟಗೆರೆ, ತುರುವೇಕೆರೆ, ಹುಲಿಯೂರ್‌ದುರ್ಗ, ಈ ಮೂರು ವಿನಾ ಇತರ ತಾಲ್ಲೂಕುಗಳಲ್ಲಿ ಸಮೃದ್ಧಿಯಾಗಿ ಮಳೆ ಬಿದ್ದಿರುವಂತೆ ತಿಳಿಯಬರುತಿದೆ ಮೈಸೂರು ಡಿಸ್ಟ್ರಿಕ್ಟ ಪೈಕಿ ಹೆಗ್ಗಡದೇವನಕೋಟೆ, ನಂಜನಗೂಡು, ಕೃಷ್ಣರಾಜಪೇಟೆ, ಈ ಮೂರು ತಾಲ್ಲೂಕುಗಳಲ್ಲಿ ಮಳೆ ಇಲ್ಲದೆ, ಅನ್ಯತ್ರ ಸ್ವಲ್ಪ ವುಂಟೆಂದು ತೋರುತಿದೆ. ... ಸನ ಡಿಸ್ಟ್ರಿಕ್ಟ ಪೈಕಿ ಬೇಲೂರು, ... ಯಪಟ್ಟಣ, ಅರಸೀಕೆರೆ, ಹೊಳೇನರಸೀಪುರ, ... ನಾಲ್ಕು ತಾಲ್ಲೂಕುಗಳಲ್ಲಿ ಒಂದೆರಡು ... ವರ್ಷ ಬಿದ್ದದು ವಿನಾ ಅನ್ಯತ್ರ ಸುತರಾಂ ಇಲ್ಲವು. ಶಿವಮೊಗ್ಗಾ ಡಿಸ್ಟ್ರಿಕ್ಟಿನ ಪೈಕಿ ... ಳಯಲ್ಲಿ ಮಾತ್ರ ಒಂದೂವರೆ ಇಂಚ್ ಮಳೆ ಬಿದ್ದಿರುವಂತೆಯೂ, ಇತರಪ್ರದೇಶಗಳೊಳು ಸುತರಾಂ ಇಲ್ಲವೆಂತಲೂ ತೋರುತಿದೆ. ಕಡೂರು ಡಿಸ್ಟ್ರಿಕ್ಟ ಪೈಕಿ ಚಿಕ್ಕಮಗಳೂರು, ಕಡೂರು, ಈ ಯೆರಡರಲ್ಲಿ ಮಾತ್ರ ಸ್ವಲ್ಪ ಮಳೆ ಆಗಿದೆ, ಅನ್ಯತ್ರ ಬಿದ್ದದ್ದು ಪರಿಗಣನೀಯವಲ್ಲವು. ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಚಳ್ಳಕೆರೆ, ಹೊಸದುರ್ಗ, ಈ ಯೆರಡು ತಾಲ್ಲೂಕುಗಳು ವಿನಾ ಅನ್ಯತ್ರ ಕೆಲವು ಕಡೆ ಬಲವಾಗಿಯೂ ಕೆಲವು ಪ್ರದೇಶಗಳಲ್ಲಿ ಸಾಮಾನ್ಯವಾಗಿಯೂ ಮಳೆ ಬಿದ್ದಂತೆ ತಿಳಿಯಬರುತಿದೆ ದೇಶದ ಕಾಲಸ್ಥಿತಿ ವಿಷಯದಲ್ಲಿ ಸರ್ಕಾರೀ ರಿಪೋರ್ಟಿನ ಮೂಲಕ ತಿಳಿಯಬರುವದಕ್ಕೂ ಖಾಸಗಿಯಾದಾತರ ರಿಪೋರ್ಟಗಳ ಮೂಲಕ ತಿಳಿಯಬರುವದಕ್ಕೂ ಬಹಳ ವ್ಯತ್ಯಾಸವಿರಾಗ್ಯೂ, ಪ್ರಜೆಗಳಿಗೆ ಇದುವರಿವಿಗೆ ಉಂಟಾಗಿದ್ದ ಪ್ರಾಣಸಂಶಯಯುಕ್ತವಾದ ಭೀತಿಯು ಈಚೆಗೆ ಬಿದ್ದ ಮಳೆಯ ದೆಸೆಯಿಂದ ಪ್ರಾಯಶಃ ನಿವೃತ್ತಿಯಾಗಿರಬಹುದೆಂದು ನಂಬುತ್ತೇವೆ. ಪರಂತು ಮುಂದೆಯೂ ಉಚಿತಕಾಲಗಳಲ್ಲಿ ಮಳೆಬಿದ್ದರೇನೆ ಪ್ರಕೃತ ದುರ್ದಶೆ ನಿವೃತ್ತಿಯಾಗುವದೇ ಹೊರತು ಅನ್ಯಥಾ ಆಗಲಾರದು. ಈಗ ರೈತರು ವಿಶೇಷ ಪ್ರೋತ್ಸಾಹ ಮತ್ತು ಆಸಕ್ತಿಯೊಡನೆ ಉಳುಮೆ ಮತ್ತು ಪೆರಾವ್ ಕೆಲಸಗಳಲ್ಲಿ ನಿರತರಾಗಿರುತ್ತಾರೆ. ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟುಗಳ ಪೈಕಿ ಕೆಲವು ತಾಲ್ಲೂಕುಗಳಲ್ಲಿ ರಾಗಿ ಪೆರಾವಾದ ಕೂಡಲೆ ರುತುಮಳೆಗೆ ಪ್ರಾರಂಭವಾಗಿ ಚೆಲ್ಲಿದ ಬೀಜಗಳು ಚೆದರಿಹೋದದರಿಂದ ಮುಂದೆ ಪಸಲ್ ಚೆನ್ನಾಗಿ ಆಗಲಾರದೆಂದು ರೈತರು ಹೇಳಿಕೊಳ್ಳುತಲಿರುವಂತೆ ನಮ್ಮ ಖಾಸಗಿಯಾದವರ ಮೂಲಕ ತಿಳಿದು ಬರುತಿದೆ ಒಂದು ಪಸಲ್ ಕೈಗೆ ಬರುವದರೊಳಗಾಗಿ ಅದಕ್ಕೆ ವಿಘ್ನಕಾರಿಗಳಾದ ಪ್ರತಿಬಂಧಕ ಸಾಮಗ್ರಿಗಳು ಬಹುವಾಗಿರುವದರಿಂದ ಆವೆಲ್ಲವು ದೈವಾನುಗ್ರಹದಿಂದ ನಿವೃತ್ತಿಯಾಗಿ ... ಬಹು ಕಷ್ಟಜೀವಿಗಳು ... ರಾಗಿರುತ್ತಾರೆ ಮುಖ್ಯವಾ... ರಗಳ ಹಿಂದೆ ಇದ್ದ ಸ್ಥಿತಿಗಿಂ... ಳಮಟ್ಟಿಗೆ [illegible] ಬಹುದು. ದೈವಕೃಪೆಯಿಂದ ಕ್ರಮೇಣ ಯೆಲ್ಲವು ಸುಸ್ಥಿತಿಗೆ ಬರಬೇಕೆಂದು ಕೋರುತ್ತೇವೆ.

Occasional Notes
ನೈಮಿತ್ತಿಕ ವಿಷಯನ್ಯಾಸ.

Heavy rain.—ಕಳೆದ ಬುಧವಾರದ ದಿನ ರಾತ್ರಿ ರಾಯಿಚೂರ್ ಮೊದಲು ಅರಕೋಣಂ ವರಿವಿಗೂ, ಜೋಲಾರ್‌ಪೆಟ್ಟೆಯ ಮೊದಲು ಮದರಾಸ್ ವರಿವಿಗೂ ಬಲವಾದ ಮಳೆಯಾದಂತೆ ತಿಳಿಯಬರುತಿದೆ.

Suppression of Dacoity.—ಬುಂದೇಲಖಂಡ್ ಪ್ರಾಂತದಲ್ಲಿ ದರೋಡೆ ಜನರ ಕಾಟ ಹೆಚ್ಚಾಗಲು ಅವರ ಪುಂಡತನ್ನಡಗಿಸಬೇಕೆಂಬ ಉದ್ದೇಶದೊಡನೆ ಠಗ್ಸ ಮತ್ತು ದರೋಡೆ ಇಲಾಖಾ ಸೂಪರಿಂಟೆಂಡೆಂಟವರು ಬುಂದೇಲಖಂಡ್‌ನಲ್ಲಿರುವ ಪೊಲಿಟಕಲ್ ಏಜಂಟರೊಡನೆ ಮಾತನಾಡುವದಕ್ಕಾಗಿ ಅಲ್ಲಿಗೆ ಹೋಗಿರುತ್ತಾರೆ.

Decline in Govt. papers.—ಈಗ ಅಫ್ಘಾನಿಸ್ತಾನ್ ರಾಜ್ಯದಲ್ಲಿ ಪ್ರಾಪ್ತವಾಗಿರುವ ಗದ್ದಲದ ದೆಸೆಯಿಂದ, ಈಚೆಗೆ ಕೆಲವು ದಿನಗಳ ಮೊದಲು ಕಲ್ಕತ್ತೆಯೊಳು ಗವರ್ನಮೆಂಟ ಪತ್ರಗಳ ಧಾರಣೆಗಳು ಇಳಿದಿರುವಂತೆ ಅಲ್ಲಿಂದ ವರ್ತಮಾನ ಬಂದ ಕೂಡಲೆ ಮದರಾಸ್‌ನಲ್ಲಿ ಸಹ ಸದರೀ ಪತ್ರಗಳ ಧಾರಣೆಗಳು ಇಳಿಸಲ್ಪಟ್ಟಂತೆ ಕಾಣುತಿದೆ.

Mr. Garstin's scheme.—ಮದರಾಸ್ ಪ್ರೆಸಿಡೆನ್ಸಿಯಲ್ಲಿ ಆಯಾ ತಾಲ್ಲೂಕುಗಳ ತಹಸಿಲ್‌ದಾರರುಗಳಿಗೆ ಇರುವ ಮ್ಯಾಜಿಸ್ಟ್ರೇರಿಯಲ್ ಅಧಿಕಾರವನ್ನು ತಪ್ಪಿಸಿ ಬೆಂಚ್ ಮ್ಯಾಜಿಸ್ಟ್ರೇಟರನ್ನು ನೇಮಕಮಾಡುವ ವಿಷಯದಲ್ಲಿ ಮಿ॥ ಗ್ಯಾರಿಸ್ಟನ್‌ಯವರಿಂದ ಮಾಡಲ್ಪಟ್ಟ ಹೊಸ ಯೋಜನೆಯು ಬರುವ ಅಕ್ಟೋಬರ್ ಗುನ್ನೇ ತಾರೀಖ್ ಮೊದಲು ಜಾರಿಯೊಳು ತರಲ್ಪಡುವದಾಗಿಯೂ ಆಯಾ ಡಿಸ್ಟ್ರಿಕ್ಟು ಕಲೆಕ್ಟರ್‌ಗಳು ಆವಶ್ಯಕಗಳಾದ ಯೋಜನೆಗಳನ್ನು ಮುಂದಾಗಿ ಮಾಡತಕ್ಕದ್ದೆಂದು ತಿಳಿಸಲ್ಪಟ್ಟಿರುತ್ತಾರೆ.

Opening of the new High Court.—ಈಚೆಗೆ ಮದರಾಸಿನಲ್ಲಿ ನಾಲ್ಕಾರು ಲಕ್ಷರೂಪಾಯಿಗಳ ಖರ್ಚಿನಿಂದ ಹೊಸದಾಗಿ ಕಟ್ಟಲ್ಪಟ್ಟ ಹೈಕೋರ್ಟ್ ಕಟ್ಟಡದಲ್ಲಿ ನಾಳೆಯದಿನ ಸಾಯಂಕಾಲ ನಾಲ್ಕೂವರೆ ಘಂಟೆಗೆ ಪ್ರೆಸಿಡೆನ್ಸಿ ಗವರ್ನರವರ ಸಮಕ್ಷಮದಲ್ಲಿ ಕೆಲಸಕ್ಕೆ ಉಪಕ್ರಮವಾಗುವದು. ಈ ವಿಶೇಷ ಸಂದರ್ಭವನ್ನು ನೋಡುವದಕ್ಕಾಗಿ ಗೌರವ್ಯರಾದ ಯೂರೋಪಿಯನ್ ಮತ್ತು ನೇಟಿವ್ ದೊಡ್ಡಮನುಷ್ಯರುಗಳಿಗೆ ಆಹ್ವಾನ ಪತ್ರಿಕೆಗಳು ಕಳುಹಿಸಲ್ಪಡುವವು. ಇದನ್ನು ಒಂದು ದೊಡ್ಡ ಉತ್ಸವದಂತೆ ಕೊಂಡಾಡುವದಕ್ಕೆ ಆವಶ್ಯಕಗಳಾದ ಏರ್ಪಾಡುಗಳೆಲ್ಲ ನಡೆದಿರುತಿವೆ.

A request refused.—ಕಲ್ಕತ್ತೆಯೊಳಿರುವ ಕೆಲವರು ದೊಡ್ಡಮನುಷ್ಯರೂ, ಅನೇಕರು ವಿದ್ಯಾರ್ಥಿಗಳೂ, ಮತ್ತು ಕೆಲವರು ಇತರ ಜನರೂ ಸೇರಿ ವಾಲಂಟಿಯರ್ ಸೇನೆಯ ಕಲ್ಪಕ್ಕೆ ತಮಗೆ ಸಹ ಸೇರುವ ಅನುಮತಿಯನ್ನು ಕೊಡಬೇಕೆಂದು ಗವರ್ನಮೆಂಟಿನವರಿಗೆ ಅರ್ಜಿ ಬರೆದುಕೊಂಡದ್ದಕ್ಕೆ, ಇದುವರೆಗೆ ಅನುವರ್ತಿಸುತ ಬಂದ ನಿಯಮ ಮತ್ತು ರಾಜ್ಯತಂತ್ರ ಕ್ರಮಕ್ಕೆ ವಿರೋಧವಾಗಿ ಅರ್ಜಿದಾರರ ಪ್ರಾರ್ಥನೆಯನ್ನು ನೆರವೇರಿಸುವ ವಿಷಯದಲ್ಲಿ ತಮಗಿರುವ ಅಶಕ್ತತೆಯನ್ನು ಕುರಿತು ಚಿಂತಿಸುತ್ತ, ಅರ್ಜಿದಾರರ ರಾಜಭಕ್ತಿ ಪೂರ್ವಕವಾದ ಅಭಿಪ್ರಾಯದ ಬಗ್ಗೆ ತಮ್ಮ ಒಪ್ಪಿಗೆಯನ್ನು ಅವರಿಗೆ ತಿಳಿಸುವಂತೆ ಹುಕುಂ ಕೊಟ್ಟರು. ಇದೊಂದು ವಿಧದ ಸಮ್ಮೋಹನವಾದದ್ದು.

A railway accident.—ಕಳೆದ ಆದಿತ್ಯವಾರದ ದಿನ ಮೂರನೇ ತರಗತಿ ರೈಲ್ವೆ ಗಾಡಿಯಲ್ಲಿ ಕುಳಿತು ಹೋಗುತಲಿದ್ದ ಪ್ರಯಾಣಸ್ಥನೊಬ್ಬನು ಗಾಡಿಯ ಬಾಗಿಲ ಕದವಿನಮೇಲೆ ಒರಗಿಕೊಂಡಿರುವಲ್ಲಿ ಅದಕ್ಕೆ ಬೀಗ ಹಾಕದೆ ಇದ್ದದರಿಂದ ಆವಡಿ ಸ್ಟೇಷನಿಗೆ ಒಂದು ಮೈಲ್ ಫಾಸಲೆಯಲ್ಲಿ ಅದು ತೆರೆಕೊಂಡು ಸದರೀ ಮನುಷ್ಯನು ಕೆಳಗೆ ಬಿದ್ದುಬಿಟ್ಟನು. ಗಾಡಿ ಹೊರಟುಹೋಯಿತು. ರಕ್ಷೆಯ ಕಾವಲ್‌ಗಾರನು ಅವನು ಆವಡಿ ಸ್ಟೇಷನಿಗೆ ಸಾಗಿಸಿಕೊಂಡು ಹೋದನು, ಪರಂತು ಅವನು ಅಲ್ಲೇ ಮೃತನಾದನು, ಎಂದು ಮದರಾಸ್ ಪತ್ರಿಕೆಯಿಂದ ತಿಳಿಯುವದರಿಂದ ರೈಲ್ವೆ ಪ್ರಯಾಣಸ್ಥರು ಇಂಥಾ ವಿಷಯದಲ್ಲಿ ಕೇವಲ ಎಚ್ಚರ ಪುಳ್ಳವರಾಗಿರಬೇಕೆಂದು ಸೂಚಿಸುತ್ತೇವೆ.

ನೋಟಿಸ್.

ಇದರಿಂದ ಈ ಪತ್ರಿಕೆಯ ಚಂದಾದಾರರಿಗೆ ನಾವು ಪ್ರಕಟಪಡಿಸುವದೇನೆಂದರೆ:—

ಸನ್ ೧೮೯೨ ನೇ ಇಸವಿ ಜನವರಿ ತಿಂಗಳ ಮೊದಲು ನಡೆಯುತಲಿರುವ ಚಾಲತೀ ಸಾಲಿನಲ್ಲಿ ಆರು ತಿಂಗಳು ಕಳೆದು ೭ ನೇ ತಿಂಗಳು ನಡೆಯುತಲಿದ್ದಾಗ್ಯೂ ನಮ್ಮ ಚಂದಾದಾರರ ಪೈಕಿ ಅನೇಕರು ಇದುವರೆಗೆ ಚಂದಾ ಮೊಬಲಗನ್ನು ಕಳುಹಿಸಿಕೊಡದೆ ಇರುವದಕ್ಕಾಗಿ ಬಹಳ ವಿಷಾದಿಸುತ್ತೇವೆ. ಬಾಕೀದಾರರೆಲ್ಲರು ದಯಮಾಡಿ ಈ ನೋಟೀಸನ್ನು ನೋಡಿದ ಕೂಡಲೆ ಅವರವರು ಈ ಸಾಲಿಗೆ ಮುಂಗಡವಾಗಿ ಕೊಡಬೇಕಾದ ಚಂದಾ ಬಾಕಿಗಳನ್ನು ಇನ್ನಾದರು ಕಳುಹಿಸಿ ಕೊಡಬೇಕೆಂದು ಮತ್ತೊಂದು ದಫಾ ಜ್ಞಾಪಕ ಕೊಟ್ಟಿರುತ್ತೇವೆ.

೮—೭—೯೨. ಪ್ರೊಪ್ರೈಟರ್.

LOCAL AND PROVINCIAL NEWS

ಒಳದೇಶ ಮತ್ತು ತಾಲ್ಲೂಕ್‌ಜಾತ ವೃತ್ತಾಂತಗಳು.

Heavy rain.—ಕಳೆದ ಶುಕ್ರವಾರದದಿನ ರಾತ್ರಿ ಜೋಲಾರ್‌ಪೇಟೆಯ ಮೊದಲು ಮದರಾಸ್‌ವರಿವಿಗೆ ಒಳ್ಳೆಯ ಮಳೆ ಬಿದ್ದಂತೆಯೂ ಜೋಲಾರ್‌ಪೇಟೆಯಲ್ಲಿ ಕೆಲವು ಘಂಟೆಯೊಳಗೆ ಬಲವಾದ ವರ್ಷವಾದಂತೆಯೂ ರೈಲ್ವೆ ಪ್ರಯಾಣಸ್ಥರಮೂಲಕ ತಿಳಿಯಬರುತಿದೆ.

The Dewan.—ಈ ಸಂಸ್ಥಾನದ ದಿವಾನರಾದ ಮೆ॥ ಕೆ. ಶೇಷಾದ್ರಿಅಯ್ಯರ್, ಸಿ. ಎಸ್. ಐ ಯವರು ಕಳೆದ ಶುಕ್ರವಾರದದಿನ ಬೆಳಿಗ್ಗೆ ತಮ್ಮ ಅಂಡರ್ ಸೆಕ್ರೆಟರಿಯಾದ ಮೆ॥ ಎಸ್. ಅನಂತರಾಮರಾಯರವರೊಡನೆ ನಾಳೆಯದಿನ ನಡೆಯುವ ಕುದುರೆ ಜೂಜಿನಬಗ್ಗೆ ಮೈಸೂರಿಗೆ ದಯಮಾಡಿದರು.

Cholera.—ಈ ಪ್ರಾಂತದಲ್ಲಿ ವಾಂತಿಭೇದಿ ರೋಗವು ಸ್ವಲ್ಪಮಟ್ಟಿಗೆ ಶಾಂತವಾಗುತ ಬರುತಲಿದೆ ಎಂದು ಕಳೆದ ವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ರೋಗವು ಅದ್ಯಾಪಿ ಅಲ್ಲಲ್ಲಿ ವ್ಯಾಪಿಸಿಕೊಂಡು ಪ್ರಾಣಹಾನಿಗಳನ್ನುಂಟು ಮಾಡುತಿದೆ ಎಂದು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ.

The Mysore Races.— ಮೈಸೂರಿನೊಳು ನಾಳೆಯದಿನ ಕುದುರೆ ಜೂಜಿಗೆ ಪ್ರಾರಂಭವಾಗುವದರಿಂದ ಅದಕ್ಕೆ ಒಪ್ಪಿದ ಜೂಜು ಕುದುರೆಗಳು ಅನೇಕವಾಗಿ ಅಲ್ಲಿಗೆ ಕಳುಹಿಸಲ್ಪಟ್ಟವಲ್ಲದೆ ಈ ವಿನೋದವನ್ನು ನೋಡುವ ಉದ್ದೇಶದಿಂದ ಬಹುಮಂದಿ ಯೂರೋಪಿಯನ್ ಆಫೀಸರುಗಳು ಇದುವರೆಗೆ ಹೋಗಿಯೂ ಇನ್ನು ಹೋಗುತಲೂ ಇದ್ದಾರೆ.

Mysore Police.—ಶ್ರೀಮನ್ಮಹಾರಾಜರವರ ಪ್ರೈವೇಟ್ ಸೆಕ್ರೆಟರಿಯಾಗಿದ್ದು ನಿವೃತ್ತರಾದ ಮೇಜರ್ ಮಾರ್ಟಿನ್ ಸಾಹೇಬರವರ ಕುಮಾರರಾದ ಮೆ॥ ಮಾರ್ಟಿನ್‌ಯವರು ಮೈಸೂರು ಡಿಸ್ಟ್ರಿಕ್ಟು ಪೋಲೀಸ್ ಸೂಪರಿಂಟೆಂಡೆಂಟರಾಗಿ ನಿಯಮಿಸಲ್ಪಟ್ಟು ಸದರೀ ಕೆಲಸದಲ್ಲಿ ಕಾಯಂದಾರರಾದ ಮೆ॥ ಪದನಾಲ್ ಎಂಬವರು ಮೈಸೂರು ಬೆಂಚ್ ಮ್ಯಾಜಿಸ್ಟ್ರೇಟರಾಗಿ ನೇಮಕವಾಗಿಯೂ ಇರುವರೆಂದು ಒಂದು ಬಿನ ಪ್ರಮಾಣ ಮೈಸೂರಲ್ಲಿ ಪ್ರಚುರಗೊಂಡಿರುವಂತೆ ಇಲ್ಲಿನ ಈವನಿಂಗ್ ಮೆಯಿಲ್ ಪತ್ರಿಕೆಯ ಮೈಸೂರು ಬಾತಮೀದಾರರ ಕಾಗದಮೂಲಕ ತಿಳಿಯಬರುತದೆ.

Attempt at theft.—ಬಿಟ್ಟಿ ಪೈಲ್ವಾನನೂ ಮತ್ತಿಬ್ಬರು ಪೋಕರಿಗಳೂ ಸೇರಿ ಕಳವು ಮಾಡುವದಕ್ಕೆ ಮನಸ್ಸು ಮಾಡುತ್ತಿದ್ದಾರೆಂದು ಪೋಲೀಸಿನವರಿಗೆ ಒಂದು ಮೂಗರ್ಜಿ ಬಂತು. ಅದರ ಮೇಲೆ ಅವರು ಆ ಪೈಲ್ವಾನನ ಮೇಲೆ ಗುಮಾನಿ ಇಟ್ಟು ಪತ್ತೆ ಮಾಡುವ ಸಂಬಂಧ ಡಿಟೆಕ್ಟಿವ್ ಆಫೀಸರನ್ನು ಹಾಕಿದರು. ಅವರು ನಿಗಾ ಮಾಡಿಕೊಂಡಿರುವಲ್ಲಿ ಸದರೀ ಪೈಲ್ವಾನನು ಕನ್ನಕತ್ತರಿಯೊಡನೆ ಸಿಕ್ಕಿದನು. ಕೂಡಲೇ ದಸ್ತಗಿರಿ ಮಾಡಿ ೬ ತಿಂಗಳು ಸಜಾ ವಿಧಿಸುವಂತೆ ಮಾಡಿದರು. ಮೂಗರ್ಜಿಯಿಂದ ಅನೇಕ ವಿಷಯಗಳು ಪತ್ತೆಯಾಗುತ್ತವೆ.—ಪ್ರೈ ಬೆ

The new Resident.—ಇಲ್ಲಿನ ಕಾಯಂ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಸಾಹೇಬರವರು ರಜಾ ಮೇಲೆ ಸ್ವದೇಶಕ್ಕೆ ಹೊರಟು ಹೋಗುವರಾಗಿ ಅವರ ಗೈರುಹಾಜರೀ ಕಾಲದಲ್ಲಿ ರೆಸಿಡೆಂಟ್ ಕೆಲಸವನ್ನು ಬದಲೀ ನೋಡತಕ್ಕದ್ದಕ್ಕೆ ನೇಮಕಮಾಡಲ್ಪಟ್ಟಿರುವ ಜಯಪುರ ಸಂಸ್ಥಾನದ ರೆಸಿಡೆಂಟರಾದ ಕರ್ನಲ್ ಪೀಕಾಕ್‌ಯವರು ನಿನ್ನೆಯ ದಿನ ಮಧ್ಯಾಹ್ನ ೧ ಘಂಟೆ ೩೦ ನಿಮಿಷಗಳಿಗೆ ದಕ್ಷಿಣ ಮಹರಾಷ್ಟ್ರ ರೈಲ್ವೇ ಮಾರ್ಗವಾಗಿ ಇಲ್ಲಿಗೆ ಬಂದು ಸೇರಿದರು. ಆ ಕಾಲದಲ್ಲಿ ಇಲ್ಲಿನ ಅಧಿಕಾರಿಗಳು ರೆಯರ್‌ವೆ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಹಾಜರಿದ್ದು ಉಚಿತ ಮರ್ಯಾದೆಗಳೊಡನೆ ರೆಸಿಡೆಂಟರನ್ನು ಬರಮಾಡಿಕೊಂಡರು. ನಿನ್ನೆಯದಿನ ಆದಿತ್ಯವಾರವಾದುದರಿಂದ ಇಂತಾ ಸಂದರ್ಭಗಳಲ್ಲಿ ಮಾಮೂಲಾಗಿಯೂ ಮರ್ಯಾದಾರ್ಥವಾಗಿಯೂ ಹಾಕಲ್ಪಡುವ ತೋಪುಗಳಿಗೆ ಅವಕಾಶವಿಲ್ಲವಾಯಿತು.

A warning to evil-doers.—ಇಲ್ಲಿನ ಮಿಲಿಟರಿ ಸ್ಟೇಷನ್ ಕಲೆಕ್ಟರ್ ಆಫೀಸಿನಲ್ಲಿ ರೈಟರಾಗಿದ್ದ ನಾಗೇಶರಾಯನೆಂಬಾತನೂ ಬೇರೆ ನಾಲ್ವರೂ ಸೇರಿ ತನ್ನ ಭಾವಮೈದುನನ ವಿಷಯದಲ್ಲಿ ನಡೆಸಿದ ದುಷ್ಕೃತ್ಯದಬಗ್ಗೆ ಇಲ್ಲಿನ ಸಬ್‌ಜಡ್ಜಿಯವರ ಕೋರ್ಟಿನಲ್ಲಿ ಕ್ರಿಮಿನಲ್ ವಿಚಾರಣೆಗೆ ಗುರಿಯಾಗಿದ್ದ ಸಂಗತಿಯು ಹಿಂದಿನವಾರದ ಪತ್ರಿಕೆಯ ಮೂಲಕ ತಿಳಿಸಿದ್ದೆವಷ್ಟೆ. ಸದರೀ ವಿಚಾರಣೆಯು ಪೂರ್ತಿಯಾಗಿ ಸಬ್ ಜಡ್ಜಿಯವರು ಮೊದಲನೇ ಅಪರಾಧಿಯಾದ ನಾಗೇಶರಾಯನು ಮೂರು ತಿಂಗಳ ಸಾಧಾರಣ ಕೈದ್ ಸಜಾ ಅನುಭವಿಸಬೇಕಾದ್ದಲ್ಲದೆ ೫೦೦ ರೂಪಾಯಿಗಳ ಜುರ್ಮಾನೆ ತೆರತಕ್ಕದ್ದೆಂದಲೂ, ಅದನ್ನು ಕೊಡಲು ತಪ್ಪಿದರೆ ಮೂರು ತಿಂಗಳ ಕಠಿಣ ಸಜಾ ಅನುಭವಿಸತಕ್ಕದ್ದೆಂದಲೂ, ಉಳಿದ ಮೂರು ನಾಲ್ಕನೇ ಅಪರಾಧಿಗಳು ಫೀ ಇಸಮ ೫೦ ರೂಪಾಯಿಗಳ ಜುರ್ಮಾನೇ ತೆರತಕ್ಕದ್ದೆಂತಲೂ ವಿಧಿಸಿದರು. ಒಡನೆ ಅಪರಾಧಿಯಾದ ನಾಗೇಶರಾಯನು ಚೀಫ್‌ಕೋರ್ಟಿಗೆ ಅಪೀಲ್ ಮಾಡಿದ್ದದರಲ್ಲಿ ಆತನನ್ನು ಜಾಮೀನಿನಮೇಲೆ ಖುಲಾಸೇ ಮಾಡತಕ್ಕದ್ದೆಂದು ಹುಕುಂ ಆದಂತೆ ಕೇಳುತ್ತೇವೆ.

A warning.—ಬೆಂಗಳೂರು ಸಿಟಿ ಮ್ಯುನಿಸಿಪಲ್ ಸಭೆಯ ಪ್ರೆಸಿಡೆಂಟರು ಈ ಪೇಟೆ ನಿವಾಸಿಗಳ ಆರೋಗ್ಯಕ್ಕೆ ಮತ್ತು ಎಚ್ಚರಿಕೆಯ ಬಗ್ಗೆ ಪ್ರಕಟಿಸುವಂತೆ ಇದರಡಿ ಬರುವ ಅಂಶವನ್ನು ನಮಗೆ ತಿಳಿಸಿರುತ್ತಾರಾಗಿ ಅದಕ್ಕೆ ಸರ್ವರು ವಿಶೇಷದೃಷ್ಟಿ ಕೊಡಬೇಕೆಂದು ಕೋರುತ್ತೇವೆ.—

ಈ ಪೇಟೆಯಲ್ಲಿ ವಾಂತಿಭೇದಿ ರೋಗವು ಅಲ್ಲಲ್ಲಿ ವ್ಯಾಪಿಸಿದೆ. ಮನೆಗಳ ಹಿತ್ತಲುಗಳು, ಪಾಯಖಾನೆಗಳು, ಇವುಗಳನ್ನು ಸಾಫ್ ಮಾಡಿಸಿ ಯಾವಾಗಲು ಪರಿಶುದ್ಧವಾಗಿ ಇಟ್ಟುಕೊಂಡಿರಬೇಕಾದ್ದಲ್ಲದೆ ತಾವು ಭುಜಿಸುವ ಮತ್ತು ಕುಡಿಯುವ ಪದಾರ್ಥಗಳ ವಿಷಯದಲ್ಲಿ ಬಹಳ ಎಚ್ಚರವುಳ್ಳವರಾಗಿದ್ದ ಹೊರತು ನಾನು ಹುಕುಂ ಮಾಡಿರುವಂತೆ ಹೊರಗಡೆ ಬೀದಿಗಳನ್ನು ಪಾಕಾಗಿಟ್ಟುಕೊಂಡಿರುವಣ, ಚುಕಿ ಹಾಕಿಸುವಣ, ಮತ್ತು ಹೊಗೆ ಹಾಕುವಣ, ಇಂತಾ ಕಾರ್ಯಗಳಿಂದಲೇ ವಿಶೇಷ ಪ್ರಯೋಜನ ಪ್ರಾಪ್ತವಾಗಲಾರದು. ಆಯಾ ಡಿವಿಜನ್ ಕಮಿಷನರುಗಳೂ ಕುಟುಂಬರ ಸಂಘದವರೂ ಪ್ರಜೆಗಳು ತಮ್ಮ ತಮ್ಮ ವಾಸಗೃಹ ಹಿತ್ತಲುಗಳನ್ನೂ ಪಾಯಖಾನೆಗಳನ್ನೂ ಪಾಕಾಗಿ ಇಟ್ಟುಕೊಂಡಿರುವಂತೆ ಅವರು ಪ್ರೇರಿಸಬೇಕೆಂದು ಅಪೇಕ್ಷಿಸಲ್ಪಟ್ಟಿರುತ್ತಾರೆ, ಆಗಿಂದಾಗ್ಗೆ ನೋಡಿ ರಿಪೋರ್ಟ್ ಮಾಡುವದರಲ್ಲಿ ಯಾರಾದರು ಮುಸ್ಸಿಕರವಾಗಿ ಅಶ್ರದ್ಧೆ ಮಾಡುವಂತೆ ತಿಳಿಯ ಬಂದರೆ ಅಂತವರ ವಿಷಯದಲ್ಲಿ ಕ್ರಮ ನಡೆಸುವದಕ್ಕೆ ಆಸ್ಪದ ಉಂಟಾಗುವದು.

Sd. Mir Shujaet Ali Khan,
President.

THE KOLAR GOLD FIELD.

ಮೈಸೂರು ಕಂಪೆನಿ.—ಕಳೆದ ಜನವರಿ ತಿಂಗಳ ಮೊದಲು ಜೂನ್ ಆಖೈರ್‌ವರಿವಿಗೆ ಆರು ತಿಂಗಳ ಕಾಲಕ್ಕೆ ಒಟ್ಟು ೨೮,೬೦೧ ತೊಲೆ ಭಂಗಾರ ದೊರೆತಿರುತದೆ. ಇದು ಹಿಂದಿನ ಎರಡು ವರ್ಷಗಳಗಿಂತ ಬಹಳ ಕಡಮೆ.

ಉರಿಗಾಂ ಕಂಪೆನಿ.—ಕಳೆದ ಜನವರಿ ಮೊದಲು ಜೂನ್ ಆಖೈರ್ ವರಿವಿಗೆ ಆರು ತಿಂಗಳ ಕಾಲಕ್ಕೆ ಒಟ್ಟು ೪೯,೯೮೦॥ ತೊಲೆ ಭಂಗಾರ ಸಿಕ್ಕಿತು. ಇದು ಹಿಂದಿನ ಎರಡು ವರ್ಷಗಳಗಿಂತಲು ಜಾಸ್ತಿ.

ನಂದೀದುರ್ಗ ಕಂಪೆನಿ.—ಕಳೆದ ಜನವರಿ ಮೊದಲು ಜೂನ್ ಆಖೈರ್ ವರಿವಿಗೆ ಆರು ತಿಂಗಳ ಕಾಲಕ್ಕೆ ೩೭,೪೬೭॥ ತೊಲೆ ಭಂಗಾರ ಸಿಕ್ಕಿತು. ಇದು ಹಿಂದಿನ ಸಾಲಿಗಿಂತಲೂ ಜಾಸ್ತಿ.

ಬಾಲಘಾಟ್ ಕಂಪೆನಿ.—ಈ ಕಂಪೆನಿಗೆ ಕಳೆದ ಆರು ತಿಂಗಳ ಕಾಲಕ್ಕೆ ೬,೯೪೦॥ ತೊಲೆ ಭಂಗಾರ ಸಿಕ್ಕಿತು.

ಕಳೆದ ಆರು ತಿಂಗಳ ಕಾಲಕ್ಕೆ ಮೇಲಿನ ನಾಲ್ಕು ಕಂಪೆನಿಗಳಿಂದ ಒಟ್ಟು ಹುಟ್ಟುವಳಿಯಾದ ಭಂಗಾರವು ೧,೨೨,೯೮೭॥ ತೊಲೆಗಳು. ಈಗಿನ ಧಾರಣೆಯ ಪ್ರಕಾರ ಅಂದರೆ ತೊಲೆ ೧ಕ್ಕೆ ೧೯ ರಂತೆ ರೂಪಾಯಿ ೨೩,೩೬,೭೬೧॥ ರೂಪಾಯಿಗಳ ಕ್ರಯ ಬಾಳುವಷ್ಟು ಭಂಗಾರ ಸಿಕ್ಕಿ ಅನ್ಯದೇಶಕ್ಕೆ ಹೊರಟುಹೋಯಿತು. ಈ ಸಂವತ್ಸರದ ಆಖೈರೊಳಗಾಗಿ ಸುಮಾರ್ ಒಂದು ಕೋಟಿ ರೂಪಾಯಿಗಳ ಚಿನ್ನ ಸಿಕ್ಕಿ ದೇಶಾಂತರಗತವಾಗಬಹುದು.

ಮೈಸೂರು ಸದ್ವಿದ್ಯಾಪಾಠಶಾಲಾ.

ಈಗ್ಯೆ ಕೆಲವು ದಿವಸಗಳಿಗೆ ಮುಂಚೆ ಈ ಪಾಠಶಾಲೆಯ ವಿಷಯದಲ್ಲಿ ಒಬ್ಬ ದೊಡ್ಡಮನುಷ್ಯರಿಂದ ಬಂದ ಒಂದು ಲೇಖನವನ್ನು ನಾವು ಮುದ್ರಿಸಿ ಇದ್ದೆವು. ಈಚೆಗೆ ಆ ಸ್ಥಳವನ್ನೂ ಅದರ ಮೇಲೆ ತಳಹದಿ ತೆಗೆಯುತ್ತಲಿರುವದನ್ನೂ ನಾವು ನೋಡಿದೆವು. ಈ ಕೆಲಸವನ್ನು ಯಾರು ಮಾಡಿಸುತ್ತಾರೆಂದು ವಿಚಾರಿಸುವಲ್ಲಿ ಮ॥ ರಾ॥ ದರಬಾರು ಬಕ್ಷಿಯವರು ಒಂದು ಬಂಗಲೆಯನ್ನು ಕಟ್ಟಿಸುತ್ತಾರೆಂದು ತಿಳಿಯ ಬಂತು. ಇದು ಮ್ಯುನಿಸಿಪಲ್‌ಜಾಗ ಸದ್ವಿದ್ಯಾಶಾಲೆಗೆ ಸೇರಿದರೆ ಪಾಠಶಾಲೆಗೆ ಉಪಯೋಗವಾಗುವದರಿಂದ ಪ್ರಜೆಗಳಿಗೆ ಉಪಯೋಗವಾದಂತಾಗುತ್ತದೆ. ಮ್ಯುನಿಸಿಪಲ್ ಬೋರ್ಡಿನವರು ಈ ಸ್ಥಳವನ್ನು ಪಾಠಶಾಲೆಗೆ ಕೊಡುವದೇ ಧರ್ಮವಾದದ್ದು. ಹೀಗಿದ್ದಾಗ್ಯೂ ದರಬಾರು ಬಕ್ಷಿಯವರು ತಳಹದಿ ತೆಗೆಸುವದನ್ನು ನೋಡಿದರೆ ಬೋರ್ಡಿನವರು ಈ ಸ್ಥಳವನ್ನು ಅವರಿಗೆ ಕೊಟ್ಟಿರಬಹುದೆಂದು ತೋರುತ್ತೆ. ಈ ಪಾಠಶಾಲೆಯ ಕಮಿಟಿಯವರು ಆ ಸ್ಥಳದಲ್ಲಿ ದೇಶಾಂತರದ ವಿದ್ಯಾರ್ಥಿಗಳ ವಾಸಕ್ಕೋಸ್ಕರ ಒಂದು ವಿದ್ಯಾರ್ಥಿ ಶಾಲೆಯನ್ನು ಕಟ್ಟಿಸಬೇಕೆಂದು ಯೋಚನೆ ಮಾಡಿರುವಂತೆ ತಿಳಿಯಬರುತ್ತದೆ. ಪ್ರಜೆಗಳಿಗೆ ಪ್ರಯೋಜನಕರವಾದ ಕೆಲಸಕ್ಕಾಗಿ ಹೀಗೆ ವಿರೋಧವನ್ನು ಮಾಡುವದು ಯುಕ್ತವಲ್ಲ. ಈ ಅಂಶವನ್ನು ಪರ್ಯಾಲೋಚಿಸಿ ಮ॥ ರಾ॥ ದರಬಾರು ಬಕ್ಷಿಯವರು ಆ ಸ್ಥಳವನ್ನು ಒಂದುವೇಳೆ ತಾವು ಮ್ಯುನಿಸಿಪಾಲಿಟಿಯವರಿಂದ ಪಡೆದುಕೊಂಡಿದ್ದಾಗ್ಯೂ ಪಾಠಶಾಲೆಗೆ ಬಿಟ್ಟುಕೊಡುವದು ಧರ್ಮವಾದದ್ದು. ಮ॥ ದರಬಾರು ಬಕ್ಷಿಯವರು ವಿದ್ಯಾಭಿಮಾನಿಗಳು. ಈ ಸ್ಥಳವನ್ನು ವಿದ್ಯಾರ್ಥಿಗಳ ಪ್ರಯೋಜನಕ್ಕೋಸ್ಕರ ಬಿಟ್ಟುಕೊಡುವರೆಂದು ನಾವು ನಂಬಿದ್ದೇವೆ. ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ದರಬಾರು ಬಕ್ಷಿಯವರೇ ಕಟ್ಟಿಸಿಕೊಟ್ಟರೆ ಇದಕ್ಕಾಗಿ ಆ ಪಾಠಶಾಲೆಗೆ ಸೇರಿದ ವಿದ್ಯಾರ್ಥಿಗಳು ಮ॥ ದರಬಾರು ಬಕ್ಷಿಯವರ ಉದಾರವಾದ ಧರ್ಮಕ್ಕಾಗಿ ಕೃತಜ್ಞರಾಗಿರುವರು. ಮ॥ ಗಂಜಾಂ ನರಸಿಂಹಯ್ಯನವರು ೫೦೦ ಸಾವಿರ ರೂಪಾಯಿನವರಿಗೂ ಮುಟ್ಟಿಸಿ ಪಾಠಶಾಲೆಯನ್ನು ಕಟ್ಟಿಸಿದರು. ಮ್ಯುನಿಸಿಪಾಲಿಟಿಯವರೂ ಮತ್ತು ಮ॥ ದರಬಾರು ಬಕ್ಷಿಯವರೂ ಈ ಪಾಠಶಾಲೆಯ ಸ್ಥಾಪಕರ ಧರ್ಮಕ್ಕೆ ನ್ಯೂನತೆಯುಂಟಾಗದಂತೆಯೂ ತಮಗೆ ಗೌರವ ಪ್ರಾಪ್ತವಾಗುವಂತೆಯೂ, ವಿದ್ಯಾರ್ಥಿಗಳಿಗೆ ಪಕ್ಷಪಾತಿಯಾಗಿರುವಂತೆಯೂ ನಡೆದುಕೊಳ್ಳುವರೆಂದು ನಂಬಿದ್ದೇವೆ ವೃ ವ

SUMMARY OF NEWS.

ವೃತ್ತಾಂತ ಸಂಗ್ರಹವು.

ಈಚೆಗೆ ಭರದ್ವಾಜ ಷಹರಿನಲ್ಲಿ ಆರವತ್ತು ವರ್ಷಗಳ ವ ಯಸ್ಸಿನ ಒಬ್ಬ ಬ್ರಾಹ್ಮಣನು ಹನ್ನೆರಡು ವರ್ಷಗಳ ವಯ ಸ್ಸಿನ ಒಬ್ಬ ಹುಡುಗಿಯನ್ನು ಮದುವೆ ಮಾಡಿಕೊಂಡಿರು ತ್ತಾನೆ.

[illegible]

ಗಿಲ್ಬರ್ಟ್ ದ್ವೀಪದಿಂದ ಬಂದ ವರ್ತಮಾನದಿಂದ [illegible] —ವೃ. ಪ.

[illegible]

[illegible]

ಸಂಸ್ಕೃತ ಭಾಷೆಯನ್ನು [illegible]

[illegible]

[illegible] —ವೃ. ಪ.

[illegible]

[illegible] ತಾವೇ ತಮ್ಮ ರಾಜ್ಯದ ಚೆಸರನ್ನೇ ಇಟ್ಟಿರುತ್ತಾರೆ. ಈತೆಯ ಮಣೀ ಧಾರಾಳವನ್ನು ಸಮಸ್ತರೂ ಕೊಂಡಾ ಡುತಲಿದ್ದಾರೆ.—ವೃ. ಪ.

ನಿಜಾಂ ಸರ್ಕಾರದವರು ಟಂಕಸಾಲೆಯ [illegible] ರೂಪಾಯಿಗಳಿಗೆ [illegible]

[illegible]

[illegible]

[illegible]

[illegible] —ವೃ. ಪ.

[illegible]

[illegible] —ವೃ. ಪ.

[illegible]

[illegible] ಪೊಂದಿರು ಗೋಚರ ಯಾವುದೇ ಬಿಟ್ಟದ್ದು ಅತಿವಾಶ್ಚರ್ಯ ವಾಗಿದೆ. [illegible]

EXTRACTS.

[illegible]

[illegible]

BANGALORE:—Printed and published at the KARNATAKA PRESS, No. 66, [illegible] ROAD, PETTAH.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX.] BANGALORE.—MONDAY JULY 18, 1892. [No. 29.

ಸಂಪುಟ ೧೯.] ಬೆಂಗಳೂರು—ಸರ್ ೧೮೯೨ ನೇ ಇಸವಿ ಜೂಲೈ ೧೮ ನೇ ತಾರೀಖ್ ಸೋಮವಾರ. [ಸಂಖ್ಯೆ ೨೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ

ಮುಂಗಡವಾಗಿ ...	8—0—0	9—0—0
ತರುವಾಯ "	10—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ

ಮುಂಗಡವಾಗಿ ...	1—0—0	—0—0
ತರುವಾಯ	0—0—0	0—1

[illegible]

[illegible]

ADVERTISEMENTS

NOTICE

VAIDYASARA SANGRAHA

A TREATISE ON THE ... HINDU MEDICINE

Price including P... 0 0

ವೈದ್ಯಸಾರ ಸಂಗ್ರಹ

[illegible]

ನೋಟೀಸ್.

ಬೆಂಗಳೂರು ಕರ್ನಾಟಕ್ ಪ್ರೆಸ್.

[illegible]

ನೋಟೀಸ್.

ಸುಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷದಗಳು

[illegible]

ನೋಟೀಸ್.

ಗಣೇಶ ರಾಮಚಂದ್ರ ಕಶೀ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಿಂದ ತಿಳಿಸಲ್ಪಡುವ ಸಾಮಾನುಗಳನ್ನು ... ಸುಲಭ ಕ್ರಯಕ್ಕೆ ಬಹಳ ... ವ್ಯಾಲ್ಯು ಪೇಯಬಲ್ ... ಕಮಿಷನ್ ತೆಗೆದುಕೊಂಡು ... ಸನ್ನದ್ಧರಾಗಿರುತ್ತೇವೆ

[illegible]

ನೋಟೀಸ್

ಇದರಿಂದ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ... ಕಳುಹಿಸಿ ಕೊಡಲಾಗುವದು

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

THE BANGALORE SREENIVASA MANDIRAM

ಬೆಂಗಳೂರು. ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಬಯಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ಕಡಿ.—

೧೮೯೨ನೇ ಇಸವಿ ಜೂಲೈ ... ನೇ ತಾರೀಖ್ ಮೊದಲು ಜೂಲೈ ... ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	95
... ಧಾನ್ಯದ ... ಸಂಖ್ಯೆ	59½
... ಕೊಳ್ಳ ಸೇರು	45¼
ಒಟ್ಟು	104
... ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	[illegible]
... ಅಕ್ಕಿ ಸೇರು	39
...	44
ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್.	
...	7
... ವಿದ್ಯಾರ್ಥಿ	5
... ವಿದ್ಯಾರ್ಥಿಗಳು	7
...	17
...	24
ಒಟ್ಟು	60

THE MONEY MARKET

ಶುಕ್ರವಾರ ... 16 ನೇ ಜೂಲೈ 1892.

... ಗವರ್ನಮೆಂಟ್ ಪತ್ರಗಳು, ... 106 10 0 ರಿಂದ 107 9-0 ವರೆಗೆ.

... (500) ರೂಪಾಯಿಗಳ ... 940 ...

... ಬ್ಯಾಂಕ್ ... (100) ... 165 ರಿಂದ 170 ...

... 15-13-0

... 1s 3 13/32d

... 4 ... 1s 3 11/32d

... 1s 3¼d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 18, 1892

೧೮೯೨ನೇ ಇಸವಿ ಜೂಲೈ ೧೮ ನೇ ಸೋಮವಾರ

HER HIGHNESS THE MAHARANI'S GIRLS SCHOOL, MYSORE

ಈ ಸಂಸ್ಥಾನಕ್ಕೆ ರಾಜಧಾನಿಯಾಗಿರುವ ಮೈಸೂರ್ ಪಟ್ಟಣದಲ್ಲಿ ... ಕಾಲದಲ್ಲಿ ... "... ಸ್ಕೂಲ್" ಎಂಬ ಅಭಿಧಾನದ ... ಬಾಲಿಕಾಪಾಠಶಾಲೆಯು ... ವಿದ್ಯಾರ್ಥಿನಿಯರಿಗೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳನ್ನು ... ಉತ್ಪತ್ತಿಯಾದ ... ಈ ಶಾಲೆಯ ... ವಿದ್ಯಾರ್ಥಿನಿಯರ [illegible]

ನೇಕರು ಕನ್ನಡ ಮತ್ತು ಸಂಸ್ಕೃತ ಭಾಷೆಗ
ಳೊಳು ಸಾಮಾನ್ಯವಾದ ಜ್ಞಾನವು ಸಂಪಾದಿ
ಸಿದಂತಿಲ್ಲವೆ, ಆಧುನಿಕ ವೈಲಕ್ಷಣ್ಯಾಭಿವೃದ್ಧಿಗೆ
ಮುಖ್ಯಾಂಗವಾಗಿ ತೋರಬಂದಿರುವ ಗಾನ ವಿದ್ಯೆ
ಯನ್ನು ಅಭ್ಯಸಿಸಿ, ಆಯಾ ಸಂದರ್ಭಗಳೊಳು
ತಮ್ಮ ವಿದ್ಯಾ ವೈದುಷ್ಯಾದಿ ಪ್ರಕಟಪಡಿಸುತ
ಲಿದ್ದಾರೆ. ಈ ಪಾಠಶಾಲೆಯಲ್ಲಿ ಓದುತಲಿರುವ
ವಿದ್ಯಾರ್ಥಿನೀಯರನೇಕರಿಗೆ ಮಹೀಯಾಸಾ
ಹೇವನ್ನು ರೂಪಾಯಿಗಳ ವರಿವಿಗೆ ವಿದ್ಯಾರ್ಥಿವೇತ
ನಗಳು ಕೊಡಲ್ಪಡುತಲಿವೆ. ಈ ಪಾಠಶಾ
ಲೆಯು ಪ್ರಾಯಶಃ ಪ್ರಾರಂಭಕಾಲದ ಮೊದಲು
ದರ್ಬಾರ್ ಬಕ್ಷಿಯವರಾದ ಮ|| ರಾ|| ಅಂಬಿಲ್
ನರಸಿಂಹಯ್ಯಂಗಾರ್ಯರ ವಿಚಾರಣೆಯಲ್ಲೇ ಇ
ರುತಲಿತ್ತು. ಇದರ ಆಡಳಿತಕ್ರಮದಲ್ಲಿನ ಗುಣ
ದೋಷಗಳಂ ಕುರಿತು ಮೈಸೂರು ಷಹರಿನಲ್ಲಿ
ಪ್ರಕಟಿಸಲ್ಪಡುತಲಿರುವ ವೃತ್ತಾಂತ ಚಿಂತಾಮ
ಣಿ ಮತ್ತು ಜಿರಿಕಿಡ ಎಂಬ ಪತ್ರಿಕೆಗಳು ಆಗಿಂದಾ
ಗ್ಯೆ ವಿಸ್ತಾರವಾಗಿ ವಿಚಾರಮಾಡುವದರಲ್ಲಿ ದೋ
ಷಗಳು ಪ್ರಾಧಾನ್ಯೇನ ಕಂಡುಬರುತಲಿವೆ. ಇದರ
ನಿಜಸ್ಥಿತಿಯನ್ನರಿಯಬೇಕೆಂಬ ಆಕ್ಕರೆಯೊಡನೆ
ಆಗಿಂದಾಗ್ಯೆ ನಾವು ಮಾಡುತ ಬರುವ ವಿಚಾರಣೆ
ಯೊಳು ಸದರೀ ಪತ್ರಿಕೆಗಳು ಮಾಡುವ ದೋ
ಷೋದ್ಘಾಟನೆಕ್ಕೆ ಸಂಪೂರ್ಣಾವಕಾಶ ವುಂಟೆಂದು
ಕಾಣಬರುತಲಿದೆ. ಈ ಕಾರಣದಿಂದಲೋ ಅಥವಾ
ಕಾರಣಾಂತರದಿಂದಲೋ ಸುಮಾರ್ ಒಂದು ವರ್ಷದ
ಹಿಂದೆ ಸದರೀ ಪಾಠಶಾಲಾ ವಿಚಾರಣಾಧಿಕಾರವು
ಗವರ್ನಮೆಂಟಿನವರು ವಹಿಸಿಕೊಂಡು, ಒಂದು
ಕಮಿಟಿಯನ್ನೇರ್ಪಡಿಸಿ, ಅದಕ್ಕೆ ಶ್ರೀಮನ್ಮಹಾ
ರಾಜರವರ ಮಂತ್ರಾಲೋಚಕ ಸಭೆಯ ಮೆಂಬರ್
ಗಳಲ್ಲೊಬ್ಬರಾದ ಮೆ|| ಚೆಂಚಲರಾಯರವರು,
ಚೀಫ್ ಜಡ್ಜಿಯವರಾದ ಮೆ|| ತುಂಬುಚೆಟ್ಟರು
ಮೊದಲಾದ ದೊಡ್ಡ ಮನುಷ್ಯರು ಮೆಂಬರಗಳಾ
ಗಿ ನಿಯಮಿಸಿ, ಪಾಠಶಾಲೆಯ ಖರ್ಚುಗಳನ್ನೆಲ್ಲ
ತಾವೇ ವಹಿಸಿ ನಡೆಸುತ ಬರುತಲಿದಾರೆ. ಹೀ
ಗಿದ್ದಾಗ್ಯೂ ಕಳೆದ ವಾರದ ಮೈಸೂರ್ ಹೆರಿಲ್ಡ
ಪತ್ರಿಕೆಯಲ್ಲಿ ಈ ಪಾಠಶಾಲೆಯ ವಿಷಯವಂ ಕು
ರಿತು ಪ್ರಕಟಿಸಲ್ಪಟ್ಟಿರುವ ವಿಚಾರದೊಳು ಪ್ರಬಲ
ತರಗಳಾದ ಕೆಲವು ದೋಷಗಳು ಹೊರಗಿಡಲ್ಪಟ್ಟಿ
ರುತಿವೆ, ಪರಂತು ಅದರ ಸ್ವರೂಪ ಮಿತಾದ್ದೆಂ
ಬ ಅಂಶ ವ್ಯಕ್ತವಾಗಲಿಲ್ಲವು. ಮೆ|| ಚೆಂಚಲರಾಯ
ರವರು ಕಮಿಟಿಯಲ್ಲಿ ಅಗ್ರಾಸನವಂ ವಹಿಸಿರುವ
ಕಾಲದಲ್ಲಿ ಪಾಠಶಾಲಾ ಕಾರ್ಯಗಳು ನಡೆಯಬೇಕಾ
ದರೀತಿಯಲ್ಲಿ ನಡೆಯಲಿಲ್ಲವೆಂತಲೂ, ವಿದ್ಯಾರ್ಥಿನೀ
ಯರಲ್ಲಿ ಇವುವರಿವಿಗೇನೇ ಪಾಠಶಾಲೆಯಿಂದ ನಿವೃ
ತ್ತಿಸಲ್ಪಡತಕ್ಕವರನೇಕರಿರುತ್ತಾರೆಂತಲೂ,
ಈಚೆಗೆ ಪಾಠಶಾಲೆಯಲ್ಲಿ ಸೇರಿಸಲ್ಪಟ್ಟ ಇಬ್ಬರು
ಕೇವಲ ಅಗೌರವವಾದ ವ್ಯಕ್ತಿಗಳೆಂತಲೂ, ಸ್ಥ
ಳದ ಮತ್ತು ಪಾಠಶಾಲೆಯ ಸ್ಥಿತಿಯನ್ನರಿತವರೆ
ಲ್ಲರು ಏವಂಪರ್ಯೇಣ ಕಮಿಟಿಗೆ ಸೇರಿಸಲ್ಪಡದೆ
ಹೋದರೆಂತಲೂ, ಸೇರಿಸಲ್ಪಟ್ಟಿರುವ ಕೆಲವರು
ತಮ್ಮ ಕರ್ತವ್ಯದಲ್ಲಿ ಲೋಪವನ್ನುಂಟುಮಾಡು
ವಣವರಿಂದುಂಟಾಗಬಹುದಾದ ಫಲವು ಸಹ ಸ
ದ್ಗೃಹಸ್ಥರ್ಯಾದಿ ಪರನ್ಯಾಯರಂಜನಾನುರಕ್ತರಾ
ಗಿರುತ್ತಾರೆಂತಲು ಪತ್ರಿಕೆ ಆಕ್ಷೇಪಿಸುತಿದೆ.

ಈ ಪಾಠಶಾಲೆಯು ಮಹಾರಾಣಿಯವರ ಹೆಸ
ರಿನಲ್ಲಿ ಸ್ಥಾಪಿಸಲ್ಪಟ್ಟಿರುವದೊಂದು, ಇದರ ವಿ
ಚಾರಣೆಯ ಬಗ್ಗೆ ಗೌರವ್ಯರಾದ ಅಧಿಕಾರಿಗಳು
ಸೇರಿ ಒಂದು ಕಮಿಟಿಯಾಗಿ ಯೇರ್ಪಟ್ಟಿರುವ
ದವು ಒಂದು, ಇದು ಕೇವಲ ಉನ್ನತಸ್ಥಿತಿಯ
ಲ್ಲಿದೆ ಎಂಬ ದಿಗಂತ ವಿಶ್ರಾಂತವಾದ ಯಶಸ್ಸೊಂ
ದು, ಇಂತಾ ಸ್ಥಿತಿಯಲ್ಲಿರುವ ಪಾಠಶಾಲೆಯ ವಿ
ಷಯದಲ್ಲಿ ಸ್ಥಳದ ಪತ್ರಿಕೆಗಳು ಆಗಿಂದಾಗ್ಯೆ ಕೇ
ವಲ ಹಾಸ್ಯಾಸ್ಪದವಾದ ರೀತಿಯಲ್ಲಿ ದೋಷೋ
ದ್ಘಾಟನ ಮಾಡುವದಂ ನೋಡಿ ನಾವು ಬಹ
ಳ ಅತೃಪ್ತಿಗೊಳ್ಳುತಲಿದೇವೆ. ಸದರೀ ಪತ್ರಿಕೆ
ಗಳ ಲೇಖನಗಳು ಸುತರಾಂ ನಿರವಕಾಶವಾದ
ವೆಂದು ಹೇಳುವದಕ್ಕೆ ಸಾಧ್ಯವಲ್ಲದೆ ಇರುತಿದೆ.
ಸದರೀ ಲೇಖನದಲ್ಲಿ ತಿಳಿಸಲ್ಪಟ್ಟಿರುವ ಅಂಶಗಳ
ಪೈಕಿ ಬಹುಭಾಗವಂ ಅನ್ಯಮುಖೇನ ನಾವು ಅ
ನೇಕ ಸಂದರ್ಭಗಳಲ್ಲಿ ಕೇಳರುತ್ತೇವೆ. ಈ ಪಾ
ಠಶಾಲೆಯ ಆಡಳಿತದಲ್ಲಿನ ಬಹುವಿಧ ದೋಷಗಳ
ಪ್ಪತಿ, ಸಾಂಸಾರಿಕ ವೃತ್ತಿಯನ್ನು ನಡೆಯಿಸಬೇ
ಕಾದವರಾಗಿರುವ ಕುಲಾಂಗನೆಯರಿಗೆ ಏಳನೆ ಫ
ಠಿಲ್ ಮೊದಲಾದ ಪಾಠ್ಯಗಳಂ ಕಲಿಸುವದೊಂ
ದು, ಬಹುವಿಧ ಕ್ರಮಗಳೊಡನೆ ಅನೇಕ ಸಂವ
ತ್ಸರಗಳ ಕಾಲ ಮೂಸಿವಸಿಟಿಗಳಲ್ಲಿ ಓದುವ
ತ ವಿದ್ಯಾರ್ಥಿಗಳಿಗೆ ಲಭಿಸದಷ್ಟು ವಿಲಾಸಾಸನವು
ಇವರಿಗೆ ಕೊಡಲ್ಪಡುವದೊಂದು, ಪ್ರಾಯೆಯ
ರಾದಮೇಲೆ ಅವರಂ ಪಾಠಶಾಲೆಯಲ್ಲಿಟ್ಟುಕೊಂ
ಡು ದೂರಸ್ಥಳಗಳಲ್ಲಿರುವ ಅವರ ಪತಿಗಳ ಸಹ
ವಾಸಕ್ಕೆ ಅವಕಾಶವಿಲ್ಲದಂತೆ ಮಾಡಿರುವದೊಂ
ದು, ಇವರ ವಿಷಯದಲ್ಲಿ ನವೀನ ನಾಗರಕಾಭಿಲಾ
ಷಿಗಳಾದವರು ಉಂಟುಮಾಡುವ ಪ್ರೋತ್ಸಾಹ
ವೊಂದು, ಇತ್ಯಾದಿ ಕಾರಣಗಳ ದೆಸೆಯಿಂದ ವಿ
ದ್ಯಾರ್ಥಿನೀಯರು ನಿರಂಕುಶಪ್ರವರ್ತನಕ್ಕೆ ಉ
ಪಕ್ರಮಿಸಿ ಮಾತಾಪಿತೃಗಳಿಗೂ ಅತ್ತೆಮಾವಂದ
ರಿಗೂ ಅಪಖ್ಯಾತಿಯನ್ನು, ಸ್ವಜನರಲ್ಲಿ ಅಗೌರ
ವವನ್ನುಂಟುಮಾಡುವದಲ್ಲದೆ ಅಗ್ನಿಸಾಕ್ಷಿಯಾಗಿ
ವಿವಾಹ ಮಾಡಿಕೊಂಡ ಪತಿಗೆ ಅಂತರವಾದ
ದುಃಖವನ್ನುಂಟುಮಾಡುತಲಿದಾರೆ. ಆದುದರಿಂ
ದ ಮಹಾರಾಣಿಯವರ ಗೌರವ ರಕ್ಷಣಾರ್ಥ
ವಾಗಿಯಾದರು ಕಮಿಟಿಯವರು ಈ ವಿಷಯವು
ಅಕ್ಕರೆಯೊಡನೆ ವಿಚಾರಿಸಿ ಅದರ ನಿಜಸ್ಥಿತಿಯ
ನ್ನರಿತು ಅದರಲ್ಲಿನ ದೋಷಗಳಂ ಪರಿಹರಿಸುವ
ವಿಷಯದಲ್ಲಿ ಸಂಪೂರ್ಣಾವಧಾನವು ಕೊಡಬೇ
ಕೆಂದು ಕೋರುತ್ತೇವೆ.

PRESENTATION OF AN ADDRESS.

ಮದರಾಸ್ ರೆಮಿನ್ಯೂ ಬ್ಯಾಂಕ್ ಮ್ಯಾನೇಜ
ರಾಗಿದ್ದ ಮೆ|| ಲೂಯಿ ಎಡ್. ಮಾಸ್ ಸಾಹೇಬರು
ಈಚೆಗೆ ಸದರೀ ರೆಮಿನ್ಯೂ ಬೋರ್ಡಿನ ಮ್ಯಾ
ನೇಜರಾಗಿ ಮೊಕರರ್ಮಾಡಲ್ಪಟ್ಟದರಿಂದ ಈ ವಿ
ಶೇಷ ಸಂದರ್ಭದಲ್ಲಿ ಕೃತಜ್ಞತಾ ಪೂರ್ವಕವಾದ
ತಮ್ಮ ಶುಭವಾದನವು ಸದರೀ ಸಾಹೇಬರವರಿಗೆ
ತಿಳಿಸಬೇಕೆಂಬ ಆಂತರವಾದ ಕೋರಿಕೆಯೊಡನೆ
ಈ ಪೇಟೆಯ ವರ್ತಕರನೇಕರು ಸೇರಿ ಚಂದಾ
ಮೂಲಕ ಆವಶ್ಯಕವಾದ ದ್ರವ್ಯಾನುಕೂಲ್ಯವಂ
ಕಲ್ಪಿಸಿಕೊಂಡು, ಪೂರ್ವ ಭಾವಿಯಾಗಿ ಮಾಡ
ಬೇಕಾದ ವಿಶಿಷ್ಟ ಸನ್ನಾಹಗಳಂ ಮಾಡಿಕೊಂ
ಡು, ಕಳೆದ ಶನಿವಾರದದಿನ ಸಾಯಂಕಾಲ ನಾ
ಲ್ಕು ಘಂಟೆಗೆ ಇಲ್ಲಿನ ಸೆಂಟ್ರಲ್ ಕಾಲೀಜ್ ಕಟ್ಟ
ಡದಲ್ಲಿ ಸಭೆ ಸೇರಿಸಲ್ಪಟ್ಟು ಇದಕ್ಕೆ ಕೆಲವರು
ಯೂರೋಪಿಯರ್ ಸರದಾರರೂ ಬಹುಮಂದಿ
ನೇಟಿವ್ ದೊಡ್ಡಮನುಷ್ಯರೂ ವರ್ತಕರೂ ಬಂ
ದಿದ್ದರು. ಈ ಸಭೆಯಲ್ಲಿ ಮೆ|| ಪಿ. ಎನ್. ಕೃ
ಷ್ಣಮೂರ್ತಿಯವರು ಸಭ್ಯರ ಪ್ರಾರ್ಥನೆಯ
ಮೇಲೆ ಅಗ್ರಾಸನವು ವಹಿಸಿ, ಮೆ. ಮಾಸ್ ಯ
ವರು ತಮ್ಮ ಅಧಿಕಾರ ಪದದೊಳು ಸಾಮಾನ್ಯ
ವಾಗ ಪ್ರಜೆಗಳ ವಿಷಯದಲ್ಲಿ ವಿಶೇಷತಃ ವರ್ತಕ
ರ ವಿಷಯದಲ್ಲಿ ಆಗಿಂದಾಗ್ಯೆ ಮಾಡುವ ಸಹಾಯ
ಗಳಂ ಪರಿಮಿತ ಶಬ್ದಗಳಿಂದ ಸಭ್ಯರಿಗೆ ತಿಳಿಸಿ
ಕುಳಿತುಕೊಂಡ ಮೇಲೆ ಅಡ್ರೆಸ್ ಓದಲ್ಪಟ್ಟು, ವಿ
ಚಿತ್ರವಾದ ಕೆಲಸಗಾರಿಕೆಯುಳ್ಳ ಒಂದು ಬೆಳ್ಳಿಸಂ
ಪುಟದಲ್ಲಿಡಲ್ಪಟ್ಟು ಸದರೀ ಸಾಹೇಬರಿಗೆ ಒಪ್ಪಿ
ಸಲ್ಪಟ್ಟಿತು. ಮೆ|| ಮಾಸ್ ಯವರು ಅದಂ ಸಂ
ತೋಷದೊಡನೆ ಅಂಗೀಕರಿಸಿ, ಪ್ರಜೆಗಳ ವಿಷ
ಯದಲ್ಲಿ ತಮಗೆ ಸಾಧ್ಯವಾದ ಸರ್ವ ಸಹಾಯ
ವಂ ಮಾಡುವದು ತಮ್ಮ ಕರ್ತವ್ಯವೆಂದು ತಾ
ವು ಭಾವಿಸಿರುವದಾಗಿ ಪತ್ರಿಕೆ ತಿಳಿಸಿ ಕುಳಿತು
ಕೊಂಡ ಮೇಲೆ ಸಭ್ಯರಿಗೆ ಪುಷ್ಪಹಾರಗಳು ಹಾ
ಕಲ್ಪಟ್ಟು ಸಭೆ ಬರಖಾಸ್ತಾಯಿತು.

Occasional Notes.
ನೈಮಿತ್ತಿಕ ವಿಷಯನ್ಯಾಸ.

A subscription.—ಜುನಾಗಾಡ್ ಸಂಸ್ಥಾನ
ದ ನವಾಬರವರು ಮುಸಲ್ಮಾನರ ವಿದ್ಯಾಭ್ಯಾಸ
ಕ್ಕಾಗಿ ಕರಾಚಿ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿರು
ವ ಪಾಠಶಾಲೆಯ ಫಂಡಿಗೆ ೧೨,೦೦೦ ರೂಪಾಯಿ
ಗಳು ಚಂದಾ ಮಾಡಿರುತ್ತಾರೆ.

The Gaekwar of Baroda.—ಬರೋಡೆ
ಗಾಯಕವಾಡ ಮಹಾರಾಜರವರು ಕಳೆದ ತಿಂಗ
ಳ ೧೪ನೇ ತಾರೀಖಿನಲ್ಲಿ ಪ್ಯಾರಿಸ್ ಪಟ್ಟಣದಿಂದ
ಲಂಡನ್ ಪಟ್ಟಣಕ್ಕೆ ಹೋಗಿ ಅದೇ ೨೦ನೇ ತಾ
ರೀಖಿನ ಮಧ್ಯಾಹ್ನಾನಂತರ ತಮ್ಮ ಸಂಸ್ಥಾನದ
ಪೊಲಿಟಿಕಲ್ ಏಜೆಂಟರೊಡನೆ ಇಂಡಿಯಾ ಸ್ಟೇಟ್
ಸೆಕ್ರೆಟರಿಯವರ ಭೇಟಿಗೆ ಹೋಗಿದ್ದರು.

The East Coast Railway.—ಪೂರ್ವ ಸ
ಮುದ್ರತೀರ ಮಾರ್ಗದಲ್ಲಿ ಹಾಕಲ್ಪಡುತಲಿರುವ
ರೈಲುರಸ್ತೆಯ ಕಾಮಗಾರಿಯಬಗ್ಯೆ ಕಳೆದ
ಸಾಲಿ ಬಜೆಟ್ಟಿನ ಲೆಕ್ಕದಲ್ಲಿ ಸುಮಾರ್ ೧೫ ಲಕ್ಷ
ರೂಪಾಯಿಗಳು ಸೇರಿಸಲ್ಪಟ್ಟಿತ್ತು. ಈಸಾಲಿ
ನಲ್ಲೂ ಖರ್ಚಾಗುವದಕ್ಕೆ ಅವಕಾಶ ವುಂಟೆಂದು
ಇಂಜನಿಯರಗಳು ತಿಳಿಸುವ ಪಕ್ಷಕ್ಕೆ ಜಾಸ್ತೀ
ಮೊಬಲಗು ಕೊಡಲ್ಪಡುವ ಸಂಭವ ವುಂಟು.

Eruption of Mount Etna.— ಸಿಸಲೀ
ದ್ವೀಪದೊಳಗಿನ ಯೆಟ್ನಾಯೆಂಬ ಪರ್ವತದ (ಜ್ವಾ
ಲಾಮುಖಿ)ಮುಂಭಾಗವು ಒಡೆಯುತಲಿರುವದರಿಂ
ದ ಅದರಲ್ಲಿನ ಅಗ್ನಿಕಣಗಳು,ಕಲ್ಲುಗಳು,ಬೂದಿ,
ಇವೆಲ್ಲವು ಹೊರವು ಅತಿವೇಗದೊಡನೆ ಆಸುಪಾಸಿ
ನ ಷಹರಗಳ ಮೇಲೆ ಬಿದ್ದು ಸರ್ವನಾಶಕ್ಕೆ ಕಾರ
ಣವಾಗುವದೆಂಬ ಭೀತಿ ದಿನೇ ದಿನೆ ವೃದ್ಧಿಯಾ
ಗುತಲಿದೆ. ಹಿಂದೆ ಕೆಲವು ಸಂದರ್ಭಗಳಲ್ಲಿ ಅ
ಪೇರಿರೀತಿಯಾಗಿ ಅದರ ಸುತ್ತಲು ಇರುವ ಅನೇ
ಕ ಷಹರಗಳೂ ಅನೇಕ ಸಹಸ್ರ ಪ್ರಜೆಗಳೂ
ನಾಶವಾದರು. ಆ ದೇಶೀಯರಿಗೆ ಮರಳಿ ಅಂ
ತಾ ದೌರ್ಭಾಗ್ಯ ದಶೆ ಪ್ರಾಪ್ತವಾಗುವದಾಗಿದೆ.

The Pudacota Dewanship.— ಪುದು
ಕೋಟೆ ಸಂಸ್ಥಾನದ ದಿವಾನರಾದ ಮೆ|| ಶೇಷ
ಯ್ಯ ಶಾಸ್ತ್ರಿಗಳವರು ಪ್ರಕೃತ ತಮ್ಮ ಅಧಿಕಾ
ರ ಪದದಿಂ ನಿವೃತ್ತರಾಗುವ ಸಂಭವ ವುಂಟಾಗಿ
ರುವದರಿಂದ ಅವರ ಕೆಲಸಕ್ಕೆ ಮದರಾಸ್ ಮ್ಯೂ
ನಿಸಿಪಾಲಿಟಿಯ ವೈಸ್ ಪ್ರಸಿಡೆಂಟರಾದ ರಾಯ
ಬಹದೂರ್ ಮೆ|| ರಾಮಸ್ವಾಮಿ ಶೆಟ್ಟರು ಒಬ್ಬ
ಉಮೇದವಾರರೆಂದು ಮದರಾಸ್ ಪತ್ರಿಕೆಯೊಂ
ದು ತಿಳಿಸುತಿದೆ. ಈ ದೊಡ್ಡ ಮನುಷ್ಯರಿಗೆ
ಸದರೀ ಅಧಿಕಾರವು ಲಭಿಸುವ ಪಕ್ಷಕ್ಕೆ ಈಗಿನ
ತಮ್ಮ ಅಧಿಕಾರದಲ್ಲಿ ಮದರಾಸ್ ಪ್ರಜೆಗಳ ಪ್ರೀ
ತಿ ಗೌರವಗಳಿಗೆ ಯೆಷ್ಟರಮಟ್ಟಿಗೆ ವಿಷಯ
ರಾದರೋ ಅಲ್ಲಿಯೂ ಅಷ್ಟೇ ಆಗಬಹುದು.

Heavy rain in Bombay.—ಆಚೆ ವಾರ
ದೊಳು ಮುಂಬೈ ಪ್ರಾಂತದಲ್ಲಿ ಬಿರುಗಾಳಿಯಿಂ
ದೊಡಗೂಡಿ ಬಲವಾದ ಮಳೆಬಿದ್ದು ಬಹಳ ನ
ಷ್ಟಕ್ಕೆ ಕಾರಣವಾದುದಲ್ಲದೆ ದೊಡ್ಡದೊಡ್ಡ ಮ
ರಗಳೆಲ್ಲವು ಬಿದ್ದುಹೋದವು. ಒಬ್ಬ ಯೂರೋ
ಪಿಯನ್ ಒಂದು ದೋಣಿಯಲ್ಲಿ ಕುಳಿತು ಸ್ಟೀಮ
ರಿಗೆ ಹೋಗುವದಕ್ಕಾಗಿ ಹೊರಟನು. ತೆರುವಾ
ಯ ಆತನೇನಾದನೋ, ದೋಣಿ ಯೇನಾಯಿತೊ
ಒಂದೂ ತಿಳಿಯಬರಲಿಲ್ಲವು. ನದಿಗಳಲ್ಲೂ ನಾಲೆ
ಗಳಲ್ಲೂ ಪ್ರಬಲ ಪ್ರವಾಹ ಹರಿಯುತಲಿದೆ
ಹೋಲ್ಕಾರ್ ಸೇತುವೆಯು ಮುಳುಗಿಹೋಯಿ
ತು, ಅದರ ಪೈಕಿ ಮರದ ಕಟಕಟೆಗಳು ಮಾತ್ರ
ಕಾಣಬರುತಿದೆ, ಎಂದು ಪತ್ರಿಕೆ ಮುಂಬೈ ಪತ್ರಿ
ಕೆಯೊಂದರ ಮೂಲಕ ತಿಳಿಯಬರುತಿದೆ.

A thanks-giving ceremony.—ಮೆ||
ದಾದಾಭಾಯಿ ನೌರೋಜಿಯವರು ಮಹಾರಾ
ಜ್ಞೀಯವರ ಪಾರ್ಲಿಯಮೆಂಟಿನಲ್ಲಿ ಒಬ್ಬ ಮೆಂ
ಬರಾಗಿ ಚುನಾಯಿಸಲ್ಪಟ್ಟ ಅಂಶ ತಂತಿ ಮೂಲ
ಕ ಮುಂಬೈಗೆ ತಿಳಿಯಬಂದ ಕೂಡಲೆ ಅವರ
ಗೌರವಾರ್ಥ ಈ ತಿಂಗಳ ೭ನೇ ತಾರೀಖಿನಲ್ಲಿ
ಅಲ್ಲಿನ ಪಾರ್ಸಿ ಜಾತಿ ಗುರುಪೀಠದವರನೇಕರು
ಸೇರಿ ದೇವರ ಪ್ರಾರ್ಥನೆಯಂ ಮಾಡಿದರು. ಆ
ದಿನ ಪಾರ್ಸಿ ಪಾಠಶಾಲೆಗಳಿಗೆಲ್ಲ ರಜಾ ಕೊಡಲ್ಪ
ಟ್ಟಿತು. ಮತ್ತು ಮುಂಬೈಯಲ್ಲಿ ಪ್ರತಿ ಮನು
ಷ್ಯನೂ ಆತನಿಗೆ ಸದರೀ ಪದವಿ ಪ್ರಾಪ್ತವಾದ
ದ್ದಾಗೂ ಅಷ್ಟು ಸಂತೋಷದೊಡನೆ ಒಬ್ಬರಿ
ಗೊಬ್ಬರು ಹಸ್ತಚಾಲನ ಮೂಲಕ ಶುಭವಾದನ
ಮಾಡುತ, ಕೂಡಲೇ ಒಂದು ದೊಡ್ಡ ಸಭೆ ಸೇರಿ
ಮೆ|| ದಾದಾಭಾಯಿ ಯವರನ್ನು ತಮ್ಮ ಕಡೆ ಪ್ರ
ತಿನಿಧಿಯಾಗಿ ಚುನಾಯಿಸಿದ ಸೆಂಟ್ರಲ್ ಫಿನ್ಸ್
ಬರಿ ಜನರಿಗೆ ಕೃತಜ್ಞತಾ ಪುರಸ್ಸರವಾದ ತ
ಮ್ಮ ವಂದನವನ್ನೂ, ಮೆ|| ದಾದಾಭಾಯಿ ನೌ
ರೋಜಿಯವರಿಗೆ ತಮ್ಮ ಶುಭವಾದನವನ್ನೂ ತಿ
ಳಿಸಬೇಕೆಂಬ ಯೋಚನೆ ಯುಂಟಾಯಿತು.

An important law point.—ಬಸ್ತೀರಿ
ಪ್ರಾಂತದಲ್ಲಿ ಸೀತಾರಾಮ ಮಿಶ್ರ ಎಂಬಾತನು ಒಂ
ದು ಕ್ರಿಮಿನಲ್ ಮೊಕದ್ದಮೆಯಲ್ಲಿ ಪೀನಲ್ ಕೋಡ್
ಪ್ರಕಾರ ಅಲ್ಲಿನ ಮ್ಯಾಜಿಸ್ಟ್ರೇಟರಿಂದ ೫೦ ರೂ
ಪಾಯಿಗಳ ಜುರ್ಮಾನೆ ವಿಧಿಸಲ್ಪಟ್ಟನು, ಪರಂತು
ಅದನ್ನು ತೆರುವದಕ್ಕೆ ಮುಂಚಿತವಾಗಿಯೇ ಆತ
ನು ಮೃತಪಟ್ಟನು. ಮ್ಯಾಜಿಸ್ಟ್ರೇಟರು ಜು
ರ್ಮಾನೆಯ ವಸೂಲಿಯಬಗ್ಯೆ ಮೃತಪಟ್ಟವನ ಅ
ವಿಭಕ್ತ ಚರಜಿಂದಿಗಿಗಳಂ ಜಪ್ತು ಮಾಡಿ ಹರಾಜ್
ಹಾಕಿಸುತಲಿರುವದಲ್ಲದೆ ಸ್ಥಿರಜಿಂದಗಿಗಳಂ ಸಹ
ಜಪ್ತು ಮಾಡುವದರಲ್ಲಿದಾರೆ. ಸದರೀ ಡಿಸ್ಟ್ರಿ
ಕ್ಟ್ ಸೆಷನ್ಸ್ ಜಡ್ಜಿಯವರು ಮ್ಯಾಜಿಸ್ಟ್ರೇಟ
ರ ನಡವಳಿತಗಳು ಕಾನೂನಿಗೆ ಅನುಗುಣವಾಗಿ
ಲ್ಲವೆಂದು ಯೋಚಿಸಿ, ಸದರೀ ಮೊಕದ್ದಮೆಯ
ಸ್ವಭಾವವು ವಿವರ ಕಲ್ಕತ್ತಾ ಹೈಕೋರ್ಟ
ಗೆ ರಿಪೋರ್ಟ್ ಮಾಡಿ, ಇಂಡಿಯನ್ ಪೀನಲ್
ಕೋಡ್ ೭೦ನೇ ಸೆಕ್ಷನ್ ಪ್ರಕಾರ ಅವಿಭಕ್ತ
ಚರ ಜಿಂದಗಿಗಳಂ ಹರಾಜ್ ಮಾಡಿಸಬಹುದೆ,
ಯಾವ ಸಂದರ್ಭದಲ್ಲೂ ಸ್ಥಿರ ಜಿಂದಗಿಯನ್ನು
ಹರಾಜ್ ಮಾಡಿಸಬಹುದೆ, ಮಾಡಿಸ ಬಹುದಾದ
ರೆ ಯಾವ ಸೆಕ್ಷನ್ ಅಥವಾ ಪ್ರೊಸೀಡಿಂಗ್ಸ್
ಪ್ರಕಾರ, ಎಂದು ಪ್ರಶ್ನೆ ಮಾಡಲು, ಚರ ಜಿಂದ
ಗಿಗಳ ವಿಷಯದಲ್ಲಿ, ಅವು ಮೃತಪಟ್ಟವನ ಸ್ವಾಂ
ತವಾಗಿದ್ದರೆ ಮಾತ್ರ ಮ್ಯಾಜಿಸ್ಟ್ರೇಟರು ಜಪ್ತು
ಮಾಡಬಹುದು. ಸ್ಥಿರ ಜಿಂದಗಿಗಳ ವಿಷಯದ
ಲ್ಲಿ ಇದುವರಿವಿಗೆ ಪ್ರಸಕ್ತಿ ಯುಂಟಾಗಲಿಲ್ಲವು.
ಆದುದರಿಂದ ಯಾವಾಗ್ಯೂ ಉಂಟಾಗಲಾರದ
ಕಾನೂನನ್ನು ಅನುಸರಿಸಿದ ಪ್ರಶ್ನೆಗಳಿಗೆ ಈ
ಕೋರ್ಟಿನವರು ಜವಾಬ್ ಕೊಡುವದಿಲ್ಲವು. ಅಂ
ತಾ ಸಂದರ್ಭಗಳು ಉಂಟಾಗುವ ವರಿವಿಗೆ ಪ್ರ
ಶ್ನೆ ಮಾಡಲಾಗದು, ಎಂಬದಾಗಿ ಹೈಕೋರ್ಟಿನ
ವರು ಜವಾಬ ಕೊಟ್ಟರು.

Capture of dacoit leaders.— ಅಲಿಘರ್
ಪ್ರಾಂತದಲ್ಲಿ ಪ್ರಸಿದ್ಧವಾದ ಒಂದು ದರೋಡೆ
ಗುಂಪಿಗೆ ಮುಖಂಡನಾದ ಷಿವ್‌ಸಹಾಯಿ ಯೆಂಬ
ವನು ಅವನ ಸಾನಿ ಕಳ್ಳನಾದ ಭೀಮಸೇನ ಎಂಬ
ವನು ಮೊದಲಾದ ಕೆಲವರು ಕಳ್ಳರೊಡನೆ ದಸ್ತಗಿ
ರಿ ಮಾಡಲ್ಪಟ್ಟನು. ಅನೇಕ ಸಂವತ್ಸರಗಳ
ಕಾಲದ ಮೊದಲು ಅಲಿಘರ್ ಮೊದಲಾದ ಕೆಲವು
ಡಿಸ್ಟ್ರಿಕ್ಟುಗಳಲ್ಲಿ ಇವರ ಹೆಸರಂ ಕೇಳದವರೆ ಜನ
ರು ನಡುಗುತಲಿದ್ದರು. ಸದರೀ ಕಳ್ಳರು ಕಳೆದ
ಜೂನ್ ೨೦ನೇ ತಾರೀಖು ರಾತ್ರಿ ಅಲಿಘರ್ ಡಿಸ್ಟ್ರಿ
ಕ್ಟಿನಲ್ಲಿರುವ ಠಾಕೂರ್ ಕಲ್ಯಾಣಸಿಂಗ್ ಎಂಬಾತನ
ಮನೆಗೆ ನುಗ್ಗಿದರು. ಆತನು ತನ್ನ ಸ್ನೇಹಿತರು
ಮತ್ತು ಬಂಧುಜನರು ಸೇರಿಸಿಕೊಂಡು ಕಳ್ಳರ
ನ್ನು ಬೆನ್ನಟ್ಟಿ ಹೋಗುವಲ್ಲಿ ಕಳ್ಳರು ಗೋಲಿ
ಯಿಂದ ಹೊಡೆಯುವದಕ್ಕೆ ಪ್ರಾರಂಭಿಸಲು ಗ್ರಾ
ಮಸ್ಥನೊಬ್ಬನಿಗೆ ಗೋಲಿ ತಗಲಿ ಪ್ರಾಣಬಿಟ್ಟ
ನು. ಗ್ರಾಮಸ್ಥರೆಲ್ಲರು ಸೇರಿ ಕಳ್ಳರನ್ನು ಅಡ್ಡ
ಹಾಕಿಕೊಳ್ಳಲು ಒಬ್ಬರಿಗೊಬ್ಬರು ಕೈಕಲೆತು
ಯುದ್ಧಕ್ಕೆ ಪ್ರಾರಂಭವಾಗಿ ಗ್ರಾಮಸ್ಥರಲ್ಲಿ ಮ
ರಳ ಇಬ್ಬರಿಗೆ ಗೋಲಿ ತಗಲಿ ಸತ್ತುಹೋದ
ರು. ಅದರಮೇಲೆ ಠಾಕೂರವರ ಕಡೆಯವರು
ಅಶಕ್ತರಾಗಿ ನಿಂತುಬಿಟ್ಟರು. ದರೋಡೆ ಗುಂಪಿನ
ವರು ಯೆಟಾ ಡಿಸ್ಟ್ರಿಕ್ಟು ಜಲೆಸೂರ್ ಸರಹದ್ದು
ಸೇರಿದರು. ಅಲ್ಲಿ ಪ್ರಬಲನಾದ ಸೀತಾರಾಮ ಎಂ
ಬಾತನು ದರೋಡೆ ಗುಂಪಿನವರು ತನ್ನ ಗ್ರಾಮ
ಮಾರ್ಗವಾಗಿ ಹೋಗುವ ವರ್ತಮಾನವಂ ಕೇಳಿ
ದ ಕೂಡಲೆ ತನ್ನ ಜಾತಿ ಜನರಂ ಕರೆದುಕೊಂಡು
ದರೋಡೆಯವರ ಮೇಲೆಬಿದ್ದು ಹೊಡೆದು ನಾ
ಲ್ಕರನ್ನು ದಸ್ತಗಿರಿ ಮಾಡಿದನು. ಅವರ ಪೈಕಿ
ಪ್ರಸಿದ್ಧಕಳ್ಳನಾದ ಷಿವ್‌ಸಹಾಯ್ ಮತ್ತು ಭೀಮ
ಸೇನನೆಂಬವನು ಸೇರಿದ್ದನು. ಠಾಕೂರ್ ಕಲ್ಯಾ

ಣಸಿಂಗ ಮತ್ತು ಆತನ ಜನರಿಗೂ, ಸೀತಾರಾಂ ಮತ್ತು ಆತನ ಜನರಿಗೂ ಗವರ್ನಮೆಂಟಿನವರು ಉಚಿತವಾದ ಇನಾಂಗಳಂ ಕೊಡಬಹುದೆಂದು ಕಾಣುತಿದೆ.

The opium trade.—ಅಫೀಂ ವ್ಯಾಪಾರದ ವಿಷಯದಲ್ಲಿ ಸ್ವಾಭಿಲೀಷೆ ದೇಶೀಯರ ಅಭಿಪ್ರಾಯವನ್ನು ಅಲ್ಲಿನ ಪತ್ರಿಕೆ ಯೊಂದು ತಿಳಿಸುವದೆ ಹ್ಯಾಗೆಂದರೆ '—ಅಫೀಮಿನ ಸ್ವಾಭಾವಿಕ ಗುಣ, ಅದನ್ನು ಪಯೋಗಿಸಿಕೊಳ್ಳುವದರಿಂದುಂಟಾಗುವ ಫಲ, ಇವುಗಳ ವಿಷಯದಲ್ಲಿ ಪ್ರವೇಶವಿಲ್ಲದ ಅಭಿಪ್ರಾಯವಂ ಮರವಣಿ ಅನ್ಯಥಾ ಜ್ಞಾನವನ್ನುಂಟುಮಾಡುವ ವಿಷಯದಲ್ಲಿ ಅಫೀಂ ವ್ಯಾಪಾರಕ್ಕೆ ಪ್ರೋತ್ಸಾಹಕರಾದವರು ಸಾಹಸಿಕರವಾದ ಪ್ರಯತ್ನಗಳಂ ಮಾಡುತಲಿದ್ದಾರೆ [illegible] ನೋತು [illegible] ವರ್ತಮಾನ ಪತ್ರಿಕೆಗಳ [illegible] ದ ಮೂಲಕವಾಗಿಯೂ, ಸಾರ್ವ [illegible] ಮತ್ತು ಅನುಗತಗಳಾದ ಉಪ [illegible] ಮಾಡುವವರ ಮೂಲಕವಾಗಿಯೂ, [illegible] ಕಣ್ಣಿಗೆ ಮಣ್ಣುಹಾಕಿ, ಆವ್ಯಾಪಾರ [illegible] ಚೀನಾ ದೇಶಕ್ಕೂ [illegible] ದೇಶಕ್ಕೂ ಕೇವಲ ಪ್ರಯೋಜನಕಾರಿಯಾ [illegible] ವದು, ನಿಷೇಧಿಸುವದರಿಂದ ಒಂದೇ ಪಿಡುಗುಗಳುಂಟಾಗುವದೆಂಬ ನಂಬಿಕೆಯನ್ನುಂಟುಮಾಡುವ ವಿಷಯದಲ್ಲಿ ಒಂದು ಪ್ರಯತ್ನ ನಡೆಯುತಲಿದೆ. ಪರಂತು ಈ ದುಷ್ಟ ವ್ಯಾಪಾರಕ್ಕೆ ಪ್ರೋತ್ಸಾಹಕರಾದವರು ಅತಿವಾದಮಾಡುತ್ತಾರೆ. ಅವರು ಅತಿಯಾಗಿ ನಿರೂಪಿಸಲು ಪ್ರಯತ್ನಿಸಿ, ತನ್ಮೂಲಕ ತಮ್ಮ ಹೇಳಿಕೆಯಲ್ಲಿ ನಂಬಿಕೆಯಂ ಹೋಗಲಾಡಿಸಿಕೊಳ್ಳುತ್ತಾರೆ. ಇದರ ನಿಜಾಂಶವು ಅವರಿಗೆ ವಿರುದ್ಧ ಫಲದಾಯಕವಾಗಿರುತಿದೆ. ಅಫೀಂ ವ್ಯಾಪಾರವನ್ನು ಕುರಿತ ದೀರ್ಘವಾದ ನೋಟದಿಂದಾಗಿ ಅದು ದುಷ್ಟತ್ವ ಮತ್ತು ದುರ್ಗತಿಗಳಂ ತುಂಬಿದೆ. ಇದು ಮೇಲಿನಿಂದ ಕೆಳಗಿನ ವರಿವಿಗೂ ಸ್ವಾಭಾವಿಕವಾದ ದುಷ್ಟಚೇಷ್ಟೆಯುಳ್ಳದ್ದಾಗಿರುತಿದೆ. ಆಯುಧ ಬಲದಿಂದ ಚೀನಾ ದೇಶೀಯರಿಗೆ ಹಿಂದೆ ಉಂಟುಮಾಡಲ್ಪಟ್ಟ ಸಂಕಟಗಳಂ ಪರಿಹರಿಸುವ ವಿಷಯದಲ್ಲಿ ನಮ್ಮ ದೇಶೀಯರು ಯಾವಾಗ್ಯೂ ಕೆಟ್ಟವರಾಗಲಾರರಾಗಿ, ಅಪರಿಹಾರ್ಯವಾದ ಸಂಕಟಗಳನೆ ಅವರು ಗುರಿಮಾಡುವ ಮತ್ತು ಬಲಹೀನರಾದ ದೇಶೀಯರಮೇಲೆ ಅದು ಹೇರಿಸುವದರಲ್ಲಿ ಮುಸ್ಕರ ಹಿಡಿಯುವ ಸರ್ಕಾರಕ್ಕೆ ಅಪಕೀರ್ತಿಯನ್ನುಂಟುಮಾಡುವ ಅಫೀಂ ವ್ಯಾಪಾರವಂ ನಿರೋಧಿಸುವವರಕ್ಕೆ ನಿಕಟರು ಅವರು ಬದ್ಧರಾಗಿರುತ್ತಾರೆ, ಎಂಬದು.

ಮುಂಬೈ ಕಾಂಗರ್ ಎಂಬ ಮಹಾರಾಷ್ಟ್ರ ಪತ್ರಿಕೆಯಲ್ಲಿ ಪ್ರಕಟಿಸಿ ಮಾಡಲ್ಪಟ್ಟದ್ದ ಅಫೀಮನ್ನು ಕುರಿತ ಒಂದಂಶವು ಈ ಪತ್ರಿಕೆಯನ್ನೋದುವವರಿಗೆ ವಿನೋದಕರವಾಗಿರುವದೆಂದು ಎಣಿಸಿ ಅದನ್ನಿದರಡಿ ಪ್ರಕಟಿಸುತ್ತೇವೆ. ಅದೇನೆಂದರೆ.—

ಒಂದು ವೃತ್ತಾಂತ ಪತ್ರಿಕೆಯ ಪ್ರಕಟನ ಕಾರ್ಯಾಲಯದ ಜನಾರ್ದನ ಎಂಬ ಕೆಲಸ ತನ್ನ ಸೇವಕನಾದ ರಾಮನಿಗೆ [illegible] ಕರೆದು ಲಕೋಟುಗಳಂ ಪೋಸ್ಟಾಫೀಸಿಗೆ ತೆಗೆದುಕೊಂಡು ಹೋಗುವಾಗ ಅಫೀಸಿಗೆ ಸಹ ಹೋಗಿ ನಿನ್ನ ಯಜಮಾನನಿಗೆ ಒಂದು ರೂಪಾಯಿ ತೆಗೆದುಕೊಂಡು ಅದಕ್ಕೆ ಅಫೀಂ ತಂದುಕೊಡು [illegible] ಮೊಹರು ಕೇಳಿ ಅದು [illegible] ಕೊಂಡು ಬಾ [illegible] ಅಫೀಂ ಯಾತಕ್ಕೆ ಬೇಕು ಕೇಳಿದ [illegible]

[illegible] ನಿನಗೆ ನೀನು ಯಾತಕ್ಕೆ ಪ್ರಶ್ನೆ [illegible] ಕೆಲಸ ಹೋಗಿ ತೆಗೆದುಕೊಂಡು [illegible] ರಾಮನು ಗಂಡನಾದ [illegible] ಹೋಗಿ ಬಂದು ಯಜಮಾನನು ತನ್ನನ್ನು ಕೇಳಿ ಒಂದು ರೂಪಾಯಿ ತೆಗೆದುಕೊಂಡು ಅದಕ್ಕೆ ಅಫೀಂ ತರಬೇಕೆಂದು ಹೇಳಿದನು. ಆತನು ಈ ಮಾತಂ ಕೇಳಿ ಕಡೆಗೆ ಮನೆಗೆ ಹೋಗಿ, ಇದೇನು? ಯಜಮಾನನಿಗೆ ಹುಚ್ಚು ಹಿಡಿದಂತೆ ಕಾಣುತಿದೆ. ಒಂದು ರೂಪಾಯಿಗೆ ಅಫೀಂ ತರಬೇಕೆಂದು ನನಗೆ ಯಾರು ಹೇಳಿದರೆಂದು ಕೇಳಿದನು

ರಂಭಾವು: ಅವರಿಗೆ ಹುಚ್ಚು ಹಿಡಿಯಲಿಲ್ಲವು, ಅಫೀಂ ತರುವಂತೆ ನಾನು ಹೇಳಿದೆ.

ರಂಭಾವು: ಅವರ ಅವನಿಗೆ ಹುಚ್ಚು ಹಿಡಿಯಲಿಲ್ಲವು?

ಜಾನಕೀಬಾಯಿ: ಇಲ್ಲ, ಅವನಿಗೆ ಹುಚ್ಚು ಹಿಡಿಯುತಲಿದೆಯೋ ತಾವೇ ನೋಡಬಹುದು, ಅಫೀಂ ತಿನ್ನುವದು ದೇಹಕ್ಕೆ [illegible] ಮತ್ತು ಆರೋಗ್ಯಕರವಾದದ್ದೆಂದು ಒಬ್ಬ ಡಾಕ್ಟರ್ ಹೇಳುವದಾಗಿಯೂ, ಅಫೀಂ ತಮಗೆ ಇಷ್ಟವಾದದ್ದೆಂತಲು ತಾವು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುತ್ತೀರಿ, ಹಾಗೆ ಸ್ವಂತಾ ಪ್ರಕಟಿಸುವದಕ್ಕೆ ನೀವೇ ಹುಚ್ಚರೋ? ಅಫೀಂ ಆರೋಗ್ಯಕರವಾಗಿರುವ ಪಕ್ಷಕ್ಕೆ ಅದನ್ನು [illegible] ಸ್ವಲ್ಪ ಕೊಟ್ಟು ಕ್ರಮೇಣ ಅವರ ಶರೀರಾರೋಗ್ಯವನ್ನು ಹೆಚ್ಚಿಸುವದಕ್ಕಾಗಿ ನಾನು ಆಲೋಚಿಸಿದೆನು

ರಂಭಾವು: ಚೆನ್ನಾಯಿತು! ನಾವು ವೃತ್ತಾಂತ ಪತ್ರಿಕೆಯಲ್ಲಿ ಏನು ಪ್ರಕಟಿಸಿದಾಗ್ಯೂ ಅವನ್ನೆಲ್ಲ ನೀನು ಮನೆಯಲ್ಲಿ ಜಾರಿಮಾಡಿ ತರುವ್ವೆ! ಅಫೀಂ ಕೆಟ್ಟದ್ದೆಂದು ಹೇಳುವಂತವರ ಬಾಯಿಗಳಂ ಮುಚ್ಚುವದಕ್ಕಾಗಿ ಒಬ್ಬ ಡಾಕ್ಟರನು ತಿಳಿಸಿದ ಅಭಿಪ್ರಾಯವಂ ನಾನು ನ್ಯೂಸ್‌ಪೇಪರ್‌ನಲ್ಲಿ ಪ್ರಕಟಿಸಿದನು. ಪರಂತು ಡಾಕ್ಟರ್ ಹೇಳುವಂತೆ ನಾವು ಮಾಡಿದರೆ ನಾವು ಬಹಳ ಸಂಕಟಕ್ಕೆ ಗುರಿಯಾಗುವೆವು. ಡಾಕ್ಟರಗಳು ಹೇಳುವದನ್ನು ನಂಬಿದರೆ ಅವರಲ್ಲಿ ಯಾವಾಗ್ಯೂ ಐಕಮತ್ಯವಿಲ್ಲವು.

ಜಾನಕೀಬಾಯಿ: [illegible] ಬರೆಯುವ ದೋಷವು, ಆಗ [illegible] ಹೇಳಿಯೋದುವದು ನಾನು ಕಾಣೆನು. ನಿಮ್ಮ ಪತ್ರಿಕೆಯಲ್ಲಿ ಅದನ್ನು ನಾನು ಓದಿದ ಕೂಡಲೆ ಅದನ್ನು ಪರೀಕ್ಷಿಸಿ ನೋಡಬೇಕೆಂದು ನಾನು ಯೋಚಿಸಿದೆನು, ಎಂಬುದು

ನೋಟಿಸ್.

ಇದರಿಂದ ಈಕೆಳಗಿನ ಚಂದಾದಾರರಿಗೆ ನಾವು ಪ್ರಕಟಿಸುವದೇನಂದರೆ;—

ಸನ್ ೧೮೯೩ ನೇ ಇಸವಿ ಜನವರಿ ತಿಂಗಳ ಮೊದಲು ನಡೆಯುತಲಿರುವ ಚಾಲ್ತೀ ಸಾಲ್‌ನಲ್ಲಿ ಆರು ತಿಂಗಳು ಕಳೆದು ೭ ನೇ ತಿಂಗಳು ನಡೆಯುತಲಿದ್ದಾಗ್ಯೂ ನಮ್ಮ ಚಂದಾದಾರರ ಪೈಕಿ ಅನೇಕರು ಇದುವರೆಗೆ ಚಂದಾ ಹಣಗಳನ್ನು ಕಳುಹಿಸಿಕೊಡದೆ ಇರುವದಕ್ಕಾಗಿ ಬಹಳ ವಿಷಾದಿಸುತ್ತೇವೆ. ಬಾಕೀದಾರರೆಲ್ಲರು ದಯಮಾಡಿ ಈ ನೋಟೀಸನ್ನು ನೋಡಿದ ಕೂಡಲೆ ಅವರವರು ಈ ಸಾಲಿಗೆ ಮುಂಗಡವಾಗಿ ಕೊಡಬೇಕಾದ ಚಂದಾ ಬಾಕಿಗಳನ್ನು ಇನ್ನಾದರು ಕಳುಹಿಸಿ ಕೊಡಬೇಕೆಂದು ಮತ್ತೊಂದು ದಫಾ ಜ್ಞಾಪಕ ಕೊಡುತ್ತೇವೆ.

೮—೭—೯೩. ಪ್ರೊಪ್ರೈಟರ್.

LOCAL AND PROVINCIAL NEWS

ಸ್ಥಳದೇಶಮತ್ತುತಾಲ್ಲೂಕ್‌ವರ್ತಮಾನಗಳು.

Colonel Bowen.—ಈ ಸಂಸ್ಥಾನದ ಮಾಜಿ ಪಬ್ಲಿಕ್ ವರ್ಕ್ಸ್ ಸೆಕ್ರೆಟರಿಯಾದ ಕರ್ನಲ್ ಬೋವೆನ್ ಯವರು ಕಳೆದ ಮಂಗಳವಾರದ ದಿನ ದಕ್ಷಿಣ ಮಹಾರಾಷ್ಟ್ರ ರೈಲು ಮಾರ್ಗವಾಗಿ ಸ್ವದೇಶಕ್ಕೆ ಪ್ರಯಾಣ ಮಾಡಿದರು.

Municipal Audit.—ಈ ಸಂಸ್ಥಾನದ ಆಯಾ ಮ್ಯುನಿಸಿಪಾಲಿಟಿಗಳ ಲೆಕ್ಕಗಳ ಸರಿಯಾಗಿ ಇಡಲ್ಪಟ್ಟದೆಯೋ ಎಂಬ ಅಂಶವನ್ನು ತನಿಖಿ ಮಾಡುವ ಕೆಲಸಕ್ಕಾಗಿ ಕಂಟ್ರೋಲರ್ ಆಫೀಸಿನಿಂದ ಆಡಿಟರನ್ನು ಕಳುಹಿಸತಕ್ಕದ್ದೆಂದು ಗವರ್ನಮೆಂಟಿನವರು ಮಂಜೂರ್ಮಾಡಿರುತ್ತಾರೆ.

The Acting Resident.—ಈ ಸಂಸ್ಥಾನದ ರೆಸಿಡೆಂಟ್ ಕೆಲಸದ ಬದಲೀ ನೋಡುವದಕ್ಕಾಗಿ ಬಂದ ಕರ್ನಲ್ ಹೆಂಡರ್ಸನ್ ಸಾಹೇಬರವರು ಕಳೆದ ಶುಕ್ರವಾರದ ದಿನ ತಮ್ಮ ಪತ್ನೀ ಪುತ್ರಿಯರೊಡನೆ ಮೈಸೂರಿಗೆ ದಯಮಾಡಿದರು. ಬಹುಶಃ ನಾಳೆಯದಿನ ವಾಪಸ್ ಬರಬಹುದೆಂದು ಕಾಣುತಿದೆ.

Sanction accorded.—ಮದರಾಸ್ ರೈಲ್ವೆ ಕೋಲಾರ್ ರೋಡ್ ಸ್ಟೇಷನಿಂದ ಕೋಲಾರ್ ಗೋಲ್ಡ್ ಫೀಲ್ಡ್ ಎಂಬ ಚಿನ್ನದ ಗಣಿಗಳವರಿವಿಗೆ ಒಂದು ರೈಲ್ವೆ ರಸ್ತೆಯನ್ನು ಹಾಕುವುದಕ್ಕೆ ಗವರ್ನಮೆಂಟನವರು ಮಂಜೂರ್ಮಾಡಿರುತ್ತಾರೆ. ಇದಕ್ಕೆ ಆವಶ್ಯಕಗಳಾದ ಖರ್ಚುಗಳನ್ನು ಮೈಸೂರ್ ಸರ್ಕಾರದವರು ವಹಿಸುವರೆಂದು ಕೇಳುತ್ತೇವೆ.

Royalty on stone.—ರೆಯಾಲ್ಟಿ ರಸ್ತೆಗಳು ಹಾಕುವದಕ್ಕೆ ಬಗ್ಗೆ ಕೊಡಲ್ಪಟ್ಟಿರುವ ಜಮೀನುಗಳಲ್ಲಿ ಬಂಡೆಗಳಂ ಸುಟ್ಟು ಕಲ್ಲುಗಳಂ ತೆಗೆದುಕೊಂಡರೆ ಆ ಬಗ್ಗೆ ರೆಯಾಲ್ಟಿ ಕಂಪೆನಿಗಳಿಂದ, ಆಯಾ ಸ್ಥಳದ ಸ್ಥಿತಿಗಳಿಗೆ ಅನುಸಾರವಾಗಿ, ಬಂಡಿ ಒಂದಕ್ಕೆ ಸೆಲ್ಯು [illegible] ವರಿವಿಗೆ [illegible] ವಸೂಲ್ಮಾಡಬೇಕೆಂದು ಮೈಸೂರು ಸರ್ಕಾರದವರು ನಿಬಂಧನೆ ಮಾಡಿರುವಂತೆ ತಿಳಿಯಬರುತಿದೆ.

Central College.—ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್‌ರಾದ ಮೆ|| ಜೆ. ಕುಕ್ ಸಾಹೇಬರವರು ಫರ್ಲೋ ರಜಾಮೇಲೆ ಸ್ವದೇಶಕ್ಕೆ ಹೋಗಿಬರುವ ಸನ್ನಾಹದಲ್ಲಿರುತ್ತಾರೆಯಾದ್ದರಿಂದ ಈ ಸುಸಂದರ್ಭದಲ್ಲಿ ಅವರ ವಿದ್ಯಾರ್ಥಿಗಳೆಲ್ಲರು ಸೇರಿ ಅವರಿಗೆ ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸುವದನ್ನು ತಮ್ಮ ಕರ್ತವ್ಯವೆಂದು ಭಾವಿಸಿ, ಅದಕ್ಕೆ ಆವಶ್ಯಕಗಳಾದ ಖರ್ಚುಗಳಬಗ್ಗೆ ಚಂದಾ ಮೂಲಕ ಪ್ರಯತ್ನ ಮಾಡುತಲಿರುವಂತೆ ಕೇಳುತ್ತೇವೆ.

The Sivaganga Mutt.—ಶಿವಗಂಗೆ ಶ್ರೀ ಮಠದ ಕಾರ್ಯಗಳು ತೃಪ್ತಿಕರವಾಗಿಲ್ಲವೆಂದು ಮುಜರಾಯಿ ಸೂಪರಿಂಟೆಂಡೆಂಟರು ಮಾಡಿದ ರಿಪೋರ್ಟನ್ನನುಸರಿಸಿಯೂ, ಶ್ರೀ ಸ್ವಾಮಿಗಳೇ ಮಠದ ಕಾರ್ಯಗಳು ಸರ್ಕಾರದವರು ವಹಿಸಿಕೊಳ್ಳಬೇಕೆಂದು ಕೇಳಿಕೊಂಡದ್ದನ್ನನುಸರಿಸಿಯೂ, ಸದರೀ ಮಠದ ಮತ್ತು ದೇವಸ್ಥಾನದ ಕಾರ್ಯಗಳಂ ನೆಲಮಂಗಲ ತಾಲ್ಲೂಕು ಅಮಲ್ದಾರರು ವಹಿಸತಕ್ಕದ್ದೆಂದು ಗವರ್ನಮೆಂಟನವರು ಹುಕುಂ ಮಾಡಿರುವಂತೆ ಕೇಳುತ್ತೇವೆ.

Central College, Bangalore.—ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾಭ್ಯಾಸಂ ಗೈಯುವ ವಿದ್ಯಾರ್ಥಿಗಳಿಗೆ ಇನಾಂಗಳು ಕೊಡುವದಕ್ಕಾಗಿಯೂ, ಸಾಂವತ್ಸರಿಕ ರಿಪೋರ್ಟನ್ನು ಓದುವದಕ್ಕಾಗಿಯೂ, ಈ ತಿಂಗಳ ೧೯ ನೇ ತಾರೀಖ್ ಮಂಗಳವಾರದ ದಿನ ಸಾಯಂಕಾಲ ೫ ಘಂಟೆಗೆ ಸದರೀ ಕಾಲೇಜ್ ಕಟ್ಟಡದಲ್ಲಿ ಸಭೆ ಸೇರುವುದು. ಈ ಸಭೆಯಲ್ಲಿ ಇಲ್ಲಿನ ಚೀಫ್ ಕೋರ್ಟ್ ಚೀಫ್ ಜಡ್ಜಿಯವರಾದ ಮೆ|| ಟಿ. ಆರ್. ಎ. ತಂಬುಶೆಟ್ಟಿರವರು ಅಗ್ರಾಸನವಂ ವಹಿಸುವರು.

A daring theft.—ನಿನ್ನೆಯ ದಿನ ಬೆಳಗ್ಗೆ ಸುಮಾರು ಹನ್ನೆರಡು ಘಂಟೆಯ ಸಮಯದಲ್ಲಿ ಗವರ್ನಮೆಂಟ್ ಬಾಲಿಕಾ ಪಾಠಶಾಲೆಗಾಗಿ ಒಬ್ಬ ಹುಡುಗಿಯು ಇಲ್ಲಿನ ಚೌಕದ ಬಳಿ ಇರುವ ಪೊಲೀಸ್ ಸ್ಟೇಷನ್ ಮುಂದುಗಡೆ ಹೋಗುತ್ತಿರುವಲ್ಲಿ ಒಬ್ಬ ಮುಸಲ್ಮಾನನು ಬಂದು ಸದರೀ ಹುಡುಗಿಯ ಕತ್ತಿನಲ್ಲಿ ಕಟ್ಟಿಕೊಂಡಿದ್ದ ಬಂಗಾರದ ಚೊಬ್ಬಸರವನ್ನು ಕಿತ್ತುಕೊಂಡು ಸ್ಟೇಷನಿಗೆ ಎದುರಿಗಿರುವ ಸಂದಿನ ಮಾರ್ಗವಾಗಿ ಓಡಿಹೋಗಲು ಸದರೀ ಹುಡುಗಿಯು ಅರಿಚಿಕೊಂಡದಂ ಆ ಸಂದಿನಲ್ಲಿರುವ ಮನೆಯವರು ಕೇಳಿ ಓಡಿಬಂದು ಕಳ್ಳನು ಹಿಡದು ಪೊಲೀಸಿನವರ ವಶಮಾಡಿದರು. ಈ ದಿನ ಅವನ ವಿಚಾರಣೆ ನಡೆಯುವದು. ಪೊಲೀಸ್ ಸ್ಟೇಷನಿನಮುಂದೆ ಇಂತಾ ಕೃತ್ಯಗಳು ನಡೆಯುವದು ಅವರಿಗೆ ಕೇವಲ ಗೌರವಾಮರ ವಾಗಿರುತಿದೆ

SEASON REPORT.

ಸನ್ ೧೮೯೩ನೇ ಇಸವಿ ಜೂಲೈ ೮ನೇ ತಾರೀಖಿಗೆ ಕೈದಾದ ವಾರದ ಬಾಬತು ಸರ್ಕಾರೀ ಕಾಲಸ್ಥಿತಿ ರಿಪೋರ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.—ಈ ಡಿಸ್ಟ್ರಿಕ್ಟಿಗೆ ಸೇರಿದ ಪ್ರತಿ ತಾಲ್ಲೂಕಿನಲ್ಲೂ ೧ರ ಮೊದಲು ೨ ಇಂಚಿನ ವರಿವಿಗೆ ಮಳೆ ಬಿದ್ದಿರುತಿದೆ. ಸಾಮಾನ್ಯವಾಗಿ ಪೈರುಗಳೆಲ್ಲವು ಚೆನ್ನಾಗಿವೆ ನೀರೂ ಮೇವೂ ಸಿಕ್ಕುತವೆ. ದನಗಳ ಸ್ಥಿತಿ ಪೂರ್ವಕ್ಕಿಂತಲೂ ಈಗ ವಾಸಿ.

ಕೋಲಾರ ಡಿ||—ಈ ಡಿಸ್ಟ್ರಿಕ್ಟಿನಲ್ಲಿ ಪ್ರತಿ ತಾಲ್ಲೂಕಿನಲ್ಲೂ ೧ರ ಮೊದಲು ೬ ಇಂಚಿನವರಿವಿಗೂ ಮಳೆ ಬಿತ್ತು. ಬೆಳೆಗಳು ಸಾಮಾನ್ಯವಾಗಿ ಚೆನ್ನಾಗಿವೆ. ನೀರೂ ಮೇವೂ ಸಿಕ್ಕುತಿವೆ.

ತುಮಕೂರು ಡಿ||—ಈ ಡಿಸ್ಟ್ರಿಕ್ಟಿನಲ್ಲಿ ತುಮಕೂರು, ಮದ್ದಗಿರಿ, ದೊಡ್ಡಗಡ ಈ ಮೂರು ತಾಲ್ಲೂಕುಗಳು ವಿನಾ ಅನ್ಯತ್ರ ಅಲ್ಪ ವರ್ಷ. ಬೆಳೆಗಳುಚೆನ್ನಾಗಿವೆ ನೀರೂಮೇವೂಸಿಕ್ಕುತಿವೆ

ಮೈಸೂರು ಡಿ||—ಇದರಲ್ಲಿ ಕೆಲವುಕಡೆ ಮಳೆ ಇಲ್ಲ, ಕೆಲವು ತಾಲ್ಲೂಕುಗಳಲ್ಲಿ ಒಂದೆರಡು ಛಿಟಿಕ್ ಮಳೆ ಬಿತ್ತು. ದನಗಳು ಚೆನ್ನಾಗಿವೆ. ನೀರೂ ಮೇವೂ ಸಿಕ್ಕುತಿವೆ ಬೆಳೆಗಳು ಚೆನ್ನಾಗಿವೆ.

ಹಾಸನ ಡಿ.—ಮಂಜರಾಬಾದಿನಲ್ಲಿ ಬಲವಾಗಿಯೂ ಅನ್ಯತ್ರ ಮಧ್ಯಮವಾಗಿಯೂ ಆಯಿತು, ಬೆಳೆಗಳು ಚೆನ್ನಾಗಿವೆ. ನೀರೂ ಮೇವೂ ಸಿಕ್ಕುತಿವೆ.

ಶಿವಮೊಗ್ಗ ಡಿ||—ನಗರ, ತೀರ್ಥಹಳ್ಳಿ, ಸಾಗರ, ಈ ಮೂರು ತಾಲ್ಲೂಕುಗಳ ಪೈಕಿ ನಗರದಲ್ಲಿ ಬಲವಾಗಿಯೂ, ಸಾಗರ ತೀರ್ಥಹಳ್ಳಿಯಲ್ಲಿ ಮಧ್ಯಮವಾಗಿಯೂ, ಅನ್ಯತ್ರ ಅಲ್ಪವಾಗಿಯೂ ಮಳೆ ಬಿದ್ದಿರುತಿದೆ. ಬೆಳೆಗಳು ಚೆನ್ನಾಗಿವೆ ದನಗಳು ಮಧ್ಯಮವಾಗಿವೆ.

ಕಡೂರು ಡಿಸ್ಟ್ರಿಕ್ಟ್.—ಚಿಕ್ಕಮಗಳೂರು, ಕಡೂರು, ಈ ಎರಡು ತಾಲ್ಲೂಕುಗಳಲ್ಲಿ ಒಂದೆರಡು ಛಿಟಿಕ್‌ಗಳ ಮಳೆ ಬಿತ್ತು, ಅನ್ಯತ್ರ ಅಲ್ಪ ವರ್ಷ. ಬೆಳೆಗಳು ಚೆನ್ನಾಗಿವೆ. ಮೇವು ಸಿಕ್ಕುತಿವೆ. ದನಗಳು ಮಧ್ಯಮವಾಗಿವೆ.

ಚಿತ್ರದುರ್ಗ ಡಿಸ್ಟ್ರಿಕ್ಟ್.—ಮೊಳಕಾಲ್ಮೂರು, ಜಗಲೂರು, ಈ ಎರಡರಲ್ಲೂ ಒಂದೆರಡು ಛಿಟಿಕ್ ಮಳೆ, ಅನ್ಯತ್ರ ಅಲ್ಪ. ಸಾಮಾನ್ಯವಾಗಿ ಬೆಳೆಗಳು ಮಧ್ಯಮವಾಗಿವೆ ದನಗಳು ಬಡ ಸ್ಥಿತಿಯಲ್ಲಿವೆ. ನೀರೂ ಮೇವೂ ಸಿಕ್ಕುತಿವೆ. ಒಣಗಿದ ಹುಲ್ಲು ಸಿಕ್ಕದೆ ದನಗಳಿಗೆ ಗಿಡಗಳಸೊಪ್ಪು ಹಾಕುತ್ತಾರೆ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರವರ ಸರ್ಕಾರದವರ ಸರ್ಕಾರದಿಂದ ಕೊಡಲ್ಪಟ್ಟ ಹುಕುಂನಾಮೆಗಳು.

೮ನೇ ಜೂಲೈ ೧೮೯೩

ನಂ||೩೫೦-G 92—93.—ರೆವಿನ್ಯೂ ಕ್ಲಾರ್ಕ್ ಜಿಲ್ಲಾ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಚಂಗಯ್ಯ ಶೆಟ್ಟಿರಿಗೆ, ಸನ್ ೧೮೯೩ನೇ ಇಸವಿ ಮೇ ೩ನೇ ಮಾರ್ಚ್‌ಮುಖ್ಯ ೨೮ನೇ ನಂಬರ್ ನೋಟಿಫಿಕೇಷನ್ ಮೂಲಕ ಕೊಡಲ್ಪಟ್ಟ ೩ ತಿಂಗಳ ಪ್ರಿವಿಲೇಜ್ ರಜಾ ಪೂರ್ತಿಯಾಗಿ ಕೆಲಸಕ್ಕೆ ವಾಪಸ್ ಬಂದು, ಸನ್ ೧೮೯೩ನೇ ಇಸವಿ ಜೂನ್ ೩ನೇ ತಾರೀಖ್ ಮಧ್ಯಾಹ್ನದಿಂದ ಪೋಲೀಸ್ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಸಿ. ದೇವರಾಜ ಅರಸಿನವರಿಂದ ರೆಯಿಲ್ವೆ ಪೋಲೀಸ್ ಚಾರ್ಜ್ ಮರಳಿ ವಹಿಸಿದರು.

ನಂ|| ೩೫೫-G 25—93.—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾದ ಮೆ|| ಆರ್. ಬಿ. ಮೈಸೂರ್‌ರವರು, ೧೮೯೩ನೇ ಇಸವಿ ಜೂನ್ ೧೫ನೇ ತಾರೀಖ್ ಮೊದಲು ೫ ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ವಿದ್ಯಾಭ್ಯಾಸದ ಇಲಾಖಾ.

ನಿ. ನಂ ೩-೬-೧.—ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್‌ರಾದ ಮೆ|| ಜೆ. ಕುಕ್ ಎಂ. ಎ. ಯವರು ಸನ್ ೧೮೯೩ನೇ ಜೂಲೈ ೨೩ನೇ ತಾರೀಖ್ ಮೊದಲು ಅಥವಾ ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ವರ್ಷದ ಫರ್ಲೋ ರಜಾ ಕೊಡಲ್ಪಟ್ಟಿರುತ್ತಾರೆ.

೨. ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಲಿಟರೇಚರ್ ಪ್ರೊಫೆಸರರಾದ ಮೆ|| ಟಿ. ಡಿ. ಟೇಟ್, ಎಂ. ಎ. ಯವರು, ಮೆ|| ಕುಕ್ ಸಾಹೇಬರು ಫರ್ಲೋ ರಜಾಮೇಲಿರುವ ಕಾಲದಲ್ಲಿ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲ್‌ರಾಗಿ ನಿಯಮಿಸಲ್ಪಟ್ಟಿರುತ್ತಾರೆ.

SUMMARY OF NEWS.

ವೃತ್ತಾಂತ ಸಂಗ್ರಹವು.

ಬೊಗಳೆ ದೇಶದೊಳಗೆ ಒಂದು ಹೊಲದಲ್ಲಿ ವಿಸ್ತಾರವಾಗಿ ಕಾಂಪನ್ನು ಸಿಕ್ಕಲು ಅಲ್ಲಿನ ಹೊಲಗಳನ್ನೆಲ್ಲ ಅಗೆದು ನೋಡು ತಲಿರುವಂತೆ ಬಂದಿಸಿದಂತು ಪತ್ರಿಕೆ ತಿಳಿಸುತದೆ.

ಸುಮಂತ ವಿಷ್ಣು ಕರಮರಕರೆಂಬುವರ ಪತ್ನಿಯು ಛಿ ಅಬ್ಲಿಯಾದನ್ನಿ ಈ ವರ್ಷ ಎಲ್. ಎಮು. ಅಂಡ ಎಸ್. ಪರೀಕ್ಷೆ ಯಲ್ಲಿ ತೇರ್ಗಡೆಯಾದಳು.—ಟೋ. ಬಂ.

ಜೋಂಮಿಯಾ ಎಂಬುವಲ್ಲಿಯು ಬೆಂಕಿ ಹತ್ತಿ ೩೦೦ ಜನರು ಸುಟ್ಟು ಬೂದಿಯಾದರು. ೫೦೦ ಜನರು ಅ ಷ್ಟ ವಷ್ಟ ಹೊಂದುತ್ತಾರೆ. ೧೦ ಲಕ್ಷ ರೂಪಾಯಿಗಳ ಲು ಕ್ಸಾನಾಗಿರುತ್ತದೆ.—ಟೋ. ಬಂ.

[illegible]

EXTRACTS.

[illegible]

A CURIOUS CLOCK.

[illegible]

Reg. Haynauld —Printed and published at the KARNATAKA PRESS, No 40, [illegible] ROAD, PETTAH.—1893.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX | BANGALORE—MONDAY JULY 25, 1892. | No. 30.

ಸಂಪುಟ ೧೯ | ಬೆಂಗಳೂರು —ಸನ್ ೧೮೯೨ ನೇ ಇಸವಿ ಜುಲೈ ೨೫ ನೇ ತಾರೀಖು ಸೋಮವಾರ. | ನಂಬರ್ ೩೦.

ಕರ್ಣಾಟಕ ಪ್ರಕಾಶಿಕಾ

ಪತ್ರಿಕೆಯ ಚಂದಾ ದರಗಳು,

[illegible]

ADVERTISEMENTS

NOTICE

VAIDYASATA SANGRAHA

HINDU MEDICINE

[illegible]

ನೋಟೀಸು

ಬೆಂಗಳೂರು ಕರ್ಣಾಟಕ್ ಪ್ರೆಸ್

[illegible]

ನೋಟೀಸ್.

[illegible]

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

[illegible]

MIR SHUJAYAT ALI KHAN,
President.

ನೋಟೀಸ್.

[illegible]

ನೋಟೀಸ್.

ಇದರಿಂದ ಈ ಪತ್ರಿಕೆಯ ಚಂದಾದಾರರಿಗೆ ನಾವು ತಿಳಿಸುವದೇನಂದರೆ.— ಸನ್ ೧೮೯೨ ನೇ ಇಸವಿ ಜನವರಿ ತಿಂಗಳ ಮೊದಲು ನಡೆಯುತಲಿರುವ ಚಾಲ್ತೀ ಸಾಲನ್ನು ಆರು ತಿಂಗಳು ಕಳೆದು ೭ ನೇ ತಿಂಗಳು ನಡೆಯುತಲಿದ್ದಾಗ್ಯೂ ನಮ್ಮ [illegible] ಅನೇಕರು [illegible] ಹಣ [illegible] ಇರುವದಕ್ಕಾಗಿ ಬಹಳ ವಿಷಾದಿಸುತ್ತೇವೆ. ಬಾಕೀದಾರರೆಲ್ಲರು ದಯವಿಟ್ಟು ಈ ನೋಟೀಸನ್ನು ನೋಡಿದ ಕೂಡಲೆ ಅವರವರು ಈ ಸಾಲಿಗೆ ಮುಂದಾಗಿ ಕೊಡಬೇಕಾದ ಚಂದಾ ಬಾಕಿಗಳನ್ನು ಇನ್ನಾದರು ಕಳುಹಿಸಿ ಕೊಡಬೇಕೆಂದು ಮತ್ತೊಂದು ದಫಾ [illegible] ತ್ತೇವೆ

[illegible] ಪ್ರೊಪ್ರೈಟರ್.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, JULY 25, 1892

೧೮೯೨ನೇ ಇಸವಿ ಜುಲೈ ತಾ॥ ೨೫ ನೇ ಸೋಮವಾರ.

THE SILVER QUESTION AND THE NATIVES OF INDIA.

ಈಗ್ಯೆ ಕೆಲವು ಕಾಲದ ಮೊದಲು ಒಂದು ಪ್ರಬಲ ವಿಷಯವು ಇಲ್ಲಿನ ಪ್ರಜೆಗಳ ವಿಚಾರಕ್ಕೆ ಗುರಿಯಾಗಿದ್ದಾಗ್ಯೂ ಅದು ಪ್ರತ್ಯಕ್ಷತಃ ಯೂರೋಪ್ ದೇಶೀಯರಿಗೂ ಪರಂಪರೆಯಾ ಇಂಡ್ಯ ದೇಶಕ್ಕೂ ಸಂಬಂಧಪಟ್ಟದ್ದೆಂಬ ಒಂದುವಿಧ ಅಭಿಪ್ರಾಯ ನೆಲಗೊಂಡಿರುತಿದೆ. ಇದು ಸರ್ವಾಂಗ ತಪ್ಪಾದದ್ದು. ಈ ವಿಷಯದ ಸ್ವರೂಪವನ್ನು ಸಾಮಾನ್ಯವಾಗಿ ಇಂಡ್ಯದೇಶದ ನೇಟಿವ್ ಜನರ ತಿಳುವಳಿಕೆ ಮತ್ತು ಪರ್ಯಾಲೋಚನೆಗೆತಂದು ಅದು ಅವರಿಗೆಪ್ರತ್ಯಕ್ಷತಃಸಂಬಂಧಪಟ್ಟದ್ದೆಂದು ನಿರೂಪಿಸಿ, ಅದನ್ನು ಒಂದು ವ್ಯವಸ್ಥೆಗೆ ತರಬೇಕಾದ ವಿಷಯದಲ್ಲಿ ಪ್ರಬಲ ಪ್ರಯತ್ನಗಳು ನಡೆಸಲ್ಪಡುತಲಿವೆ. ಇಂಡ್ಯ ದೇಶದ ಚಲಾವಣೆನಾಣ್ಯಗಳಂ ವಿಮರ್ಶೆ ಮಾಡಬೇಕಾದ ಕಾರ್ಯದಲ್ಲಿ ಯೂರೋಪಿಯನ್ನರಿಗಿಂತಲು ಇಂಡ್ಯ ದೇಶದ ನೇಟಿವ್ ಜನರಿಗೆ ಪ್ರತ್ಯಕ್ಷತಃ ಪ್ರಯೋಜನ ಉಂಟೆಂಬ ಅಂಶವನ್ನು ಸಂಗ್ರಹರೂಪವಾಗಿ ನಿರೂಪಿಸುವಣವು ಈಗ ಆವಶ್ಯಕವಾಗಿರುತಿದೆ. ಇದು ಈಗಿನ ಸವರ್ನ ಕ್ರಯವನ್ನು ಕುರಿತದ್ದಾಗಿದೆ ಈಗ ಅದರ ಕ್ರಯ ದಿನೇದಿನೆ ಅಧಿಕವಾಗುತ ಬರುವದಕ್ಕೆ ಉಂಟಾದ ಕಾರಣವು ಸ್ವಲ್ಪ ತಿಳಿಸುವೆವು.

ಯೂರೋಪ್, ಅಮೆರಿಕಾ, ಆಸ್ಟ್ರೇಲಿಯಾ ಮೊದಲಾದ ದೇಶಗಳಲ್ಲಿನ ಗಣಿಗಳಲ್ಲಿ ಬೆಳ್ಳಿ ಅಮಿತವಾಗಿಯೂ ತದಪೇಕ್ಷೆಯಾ ಬಂಗಾರ ಮಿತವಾಗಿಯೂ ಸಿಕ್ಕುವದರಿಂದ ಬೆಳ್ಳಿಗೆ ನಾಣ್ಯ ತಪ್ಪಿ, ತನ್ಮೂಲಕ ಅದರ ಕ್ರಯ ಇಳಿದುಹೋಗಿ ಬಂಗಾರದ ನಾಣ್ಯಗಳಿಗೆ ಬೆಳ್ಳಿ ನಾಣ್ಯಗಳಂ ಕೊಡಬೇಕಾದವರು ಪೂರ್ವಕ್ಕಿಂತಲು ಒಂದಕ್ಕೆ ಒಂದೂವರೆಯಷ್ಟು ಕೊಡಬೇಕಾದವರಾದರು. ಈ ದುಸ್ಥಿತಿಗೆ ಗುರಿಯಾದದ್ದು ಇಂಡ್ಯದೇಶವು. ಯೂರೋಪ್ ದೇಶದಂತೆ ಇಲ್ಲಿ ಬಂಗಾರದ ನಾಣ್ಯಗಳು ಚಲಾವಣೆಯಲ್ಲಿಲ್ಲವು. ಇಲ್ಲಿರುವ ನಾಣ್ಯಗಳು ಬೆಳ್ಳಿ ಮತ್ತು ತಾಮ್ರವಾಗಿರುತಿವೆ. ಇಂಡ್ಯ ದೇಶೀಯರು ಯೂರೋಪ್ ದೇಶದಿಂ ತರಿಸುವ ಪದಾರ್ಥಗಳಿಗೆ ಅಲ್ಲಿನ ವರ್ತಕರು ಪೌಂಡ್ ಎಂಬ (ಸವರ್ನ) ಬಂಗಾರದ ನಾಣ್ಯದಮೇಲೆ ಕ್ರಯಕಟ್ಟಿ ಬಿಲ್ಲು ಕಳುಹಿಸುತ್ತಾರೆ. ಅವರ ಬಿಲ್ ಪ್ರಕಾರ ಇಲ್ಲಿನ ವರ್ತಕರು ಹಣ ಪಾವತೀ ಮಾಡುವದಕ್ಕೆ ಇಲ್ಲಿ ಬಂಗಾರದ ಚಲಾವಣೆ ನಾಣ್ಯಗಳಿಲ್ಲವಾಗಿ, ಅದಕ್ಕೆ ಬದಲು ಯೂರೋಪಿಯನ್ನರ ದೃಷ್ಟಿಯಲ್ಲಿ ಕ್ರಯ ಇಳಿದುಹೋಗಿರುವ ಬೆಳ್ಳಿ ನಾಣ್ಯಗಳಂ (ರೂಪಾಯಿಗಳಂ) ಕೊಡಬೇಕಾಗಿರುವದರಿಂದ ಹಿಂದೆ ತಿಳಿಸಿದಂತೆ ಒಂದಕ್ಕೆ ಒಂದೂವರೆಯಷ್ಟು, ಅಂದರೆ ೧೦ ರೂಪಾಯಿಗಳಿಗೆ ಮಾರಲ್ಪಡುತಲಿದ್ದ ಸವರನ್ನಿಗೆ ೧೬ ರೂಪಾಯಿಗಳಂ ಕೊಡಬೇಕಾಗಿ ಬಂದು ತನ್ಮೂಲಕ ವ್ಯಾಪಾರಕ್ಕೆ ಬಹಳಮಟ್ಟಿಗೆ ವಿಘಾತ ಉಂಟಾಗಿರುವದಲ್ಲದೆ ಇಂಡ್ಯರಾಜ್ಯದ ಅಲ್ಪ ಐಶ್ವರ್ಯ ಸಹ ಯೂರೋಪ್ ದೇಶೀಯರ ಪಾಲಾಗುತಲಿದೆ.

ಇಂಡ್ಯದೇಶಕ್ಕೆ ಅಮಿತವಾದ ನಷ್ಟವನ್ನುಂಟುಮಾಡುತಬರುವ ಬೇರೆ ಒಂದು ಪ್ರಬಲ ವಿಷಯವಿರುತಿದೇನೆಂದರೆ, ಇಂಗ್ಲಂಡ್ ದೇಶದೊಳು ಇಂಡ್ಯ ದೇಶಕ್ಕೆ ಸಂಬಂಧಪಟ್ಟದ್ದೆಂಬ ವ್ಯಾಜದಿಂದ ನೆಲಗೊಳಿಸಲ್ಪಟ್ಟಿರುವ ಲಪಾಪಮೆಯ ಖರ್ಚುಗಳಬಗ್ಯೆ, ಇಂಗ್ಲಂಡಿನಿಂದ ಇಂಡ್ಯ ದೇಶಕ್ಕೆ ಬಂದು ನೌಕರಿ ಮಾಡಿ ಪೆನ್ಶನ್‌ಮೇಲೆ ನಿವೃತ್ತರಾಗಿ ಸ್ವದೇಶಕ್ಕೆ ವಾಪಸ್ ಹೋಗುವ ಆಫೀಸರುಗಳಿಗೆ ಸಲ್ಲಬೇಕಾದ ಹಣದಬಗ್ಯೆ, ಇನ್ನು ಬಹುವಿಧ ಕಲ್ಪಿತ ಕಾರಣಗಳಿಗಾಗಿಯೂ ಇಂಗ್ಲಂಡ್‌ದೇಶಕ್ಕೆ ಇಂಡ್ಯದೇಶದ ಹುಟ್ಟುವಳಿಯಿಂದ ಪ್ರತಿಸಂವತ್ಸರದಲ್ಲೂ ಕಳುಹಿಸಿಕೊಡಬೇಕಾದಮೊತ್ತವು ಕಳೆದ ೫೬ ಸಂವತ್ಸರಗಳಿಗೆ ಲೆಕ್ಕ ಮಾಡಿ ನೋಡುವಲ್ಲಿ ಸಂವತ್ಸರ ಒಂದಕ್ಕೆ ಸರಾಸರಿ ೧ ಕೋಟಿ ೩೩ ಲಕ್ಷ ಪೌಂಡುಗಳಾಗುತಿವೆ. ಸನ್ ೧೮೭೦ನೇ ಇಸವಿ ಮೊದಲು ಸನ್ ೧೮೯೧ನೇ ಇಸವಿಯ ವರಿವಿಗೆ ೨೪ ಕೋಟಿ ೨೦ ಲಕ್ಷ ಪೌಂಡುಗಳು ಇಂಡ್ಯಗವರ್ನಮೆಂಟಿನಿಂದ ಇಂಡಿಯಾ ಸ್ಟೇಟ್ ಸೆಕ್ರೆಟರಿಯವರಿಗೆ ರವಾನೆಯಾಗಿರುತಿದೆ. ಬಂಗಾರದ ನಾಣ್ಯಗಳ ದಾರಣೆ ಪ್ರಕಾರ ಲೆಕ್ಕ ಮಾಡಿ ಕಳುಹಿಸಿದ್ದರಲ್ಲಿ ೬ಕೋಟಿ ೬೦ಲಕ್ಷ ಪೌಂಡುಗಳು ಜಾಸ್ತೀ ಕೊಡಬೇಕಾಗಿ ಬಂದು ತನ್ಮೂಲಕವೂ ನಷ್ಟ ಉಂಟಾಗುತಲಿದೆ. ಇಂಡ್ಯದೇಶದ ಖರ್ಚಿನಬಗ್ಯೆ ಪ್ರತಿ ಸಂವತ್ಸರದಲ್ಲೂ ಇಂಗ್ಲಂಡಿಗೆ ಕಳುಹಿಸಬೇಕಾದ ಮೊತ್ತವು ಈಗಿನ ಸವರ್ನ ಕ್ರಯಪ್ರಕಾರ ಪೂರ್ವಕ್ಕಿಂತಲು ನೇಕಡ ೬೦ ರೂಪಾಯಿಗಳು ತನಕ ಜಾಸ್ತೀಯಾಗಿರುವದರಿಂದ ಇಂಡ್ಯದೇಶದ ಮಿಲಿಟರಿ ವಗೈರೆ ಇತರ ಖರ್ಚುಗಳಿಗೆ ಹಣ ಸಾಲದೆ ಅದರ ಖರ್ಚಿಯಬಗ್ಯೆ ಪ್ರಜೆಗಳು ನಾನಾವಿಧ ತೆರಿಗೆಗಳಿಗೆ ಗುರಿಮಾಡಲ್ಪಟ್ಟಿರುತ್ತಾರೆಂಬುದಕ್ಕೆ ನಮ್ಮ ಉಪ್ಪಿನಮೇಲಿನ ತೀರ್ವೆ ಮಣ ೧ಕ್ಕೆ ೨ರೂಪಾಯಿಗಳಿದ್ದ ೨½ ರೂಪಾಯಿಗಳಿಗೆ ಏರಿಸಲ್ಪಟ್ಟದ್ದೇ ಸಂಪೂರ್ಣ ನಿದರ್ಶನವಾಗಿರುತಿದೆ. ಈ ಕಾರಣಗಳ ಬೆಸೆಯಿಂದ ಇಂಡ್ಯ ರಾಜ್ಯವು ದಿನೇದಿನೆ ಕ್ಷೀಣಗತಿಗೆ ಬರುತಲಿದೆಯಾಗಿ, ಇದಕ್ಕೆ ಯಾವದಾದರೊಂದು ಪರಿಹಾರವು ಕಲ್ಪಿಸಿಕೊಳ್ಳಬೇಕಾದುದು ಅವಶ್ಯಕರ್ತವ್ಯವೆಂಬ ಭಾವ ಇಂಡ್ಯದೇಶೀಯರಿಗೆ ತೋರಿಬಂದು ಕಲ್ಕತ್ತಾ, ಮುಂಬೈ, ಮದರಾಸ್, ಮೊದಲಾದ ದೊಡ್ಡ ದೊಡ್ಡ ಶಹರುಗಳಲ್ಲಿನ ಯೂರೋಪಿಯನ್ ಮತ್ತು ನೇಟಿವ್ ವ್ಯಾಪಾರ ಸಂಘದವರೂ, ಪ್ರಮುಖರಾದವರೂ ಸಭೆ ಸೇರಿ ಮೇಲಿನ ವಿಷಯಗಳಂ ಕುರಿತು ವಿಸ್ತಾರವಾಗಿ ಚರ್ಚಿಸಿ, ಯಾವದಾದರೊಂದು ವಿಧ ಪರಿಹಾರವು ಕಲ್ಪಿಸಿಕೊಡಬೇಕೆಂದು ಬ್ರಿಟಿಷ್ ಪಾರ್ಲಿಯಮೆಂಟ್ ಸಮಾಜವನ್ನು ಪ್ರಾರ್ಥಿಸತಕ್ಕದ್ದೆಂದು ನಿರ್ಣಯಗಳಂ ಮಾಡುತಲಿದ್ದಾರೆ. ಇದು ಹೀಗಿರುವಲ್ಲಿ ಇಂಡ್ಯದೇಶದ ಚಲಾವಣೆ ನಾಣ್ಯಗಳಂ ವಿಮರ್ಶೆ ಮಾಡುವ ಉದ್ದೇಶದೊಡನೆ ಯೂರೋಪ್, ಅಮೆರಿಕಾ ಮೊದಲಾದ ದೇಶಗಳ ಸಂಸ್ಥಾನಾಧಿಪತಿಗಳೆಲ್ಲರು ಯಾವದಾದರೊಂದು ಪ್ರಶಸ್ತವಾದ ಶಹರಿನಲ್ಲಿ ಸಭೆ ಸೇರಬೇಕೆಂದು ನಿಷ್ಕರ್ಷೆಯಾಗಿ ಅದಬಗ್ಯೆ ಕಾಲ ಸಹ ಕ್ಲುಪ್ತಮಾಡಲ್ಪಟ್ಟಿದೆ. ಐಶ್ವರ್ಯದಲ್ಲೂ ಆಯುಧ ಮತ್ತು ಬುದ್ಧಿಬಲದಲ್ಲೂ ಅಧಿಕರಿಸಿರುವ ಉತ್ತರ ಅಮೆರಿಕಾ ದೇಶದೊಳಗಣ ಯುನೈಟೆಡ್ ಸ್ಟೇಟ್ಸ್ ಯೆಂಬ ಸಂಸ್ಥಾನದಲ್ಲಿ ಪ್ರಬಲರಾದ ಕೆಲವರು ಅಧಿಕಾರಿಗಳ ಪ್ರತಿಭಟನೆಯಿಂದ ಈ ವಿಷಯದಲ್ಲಿ ಇದುವರಿವಿಗೆ ನಡೆಸಲ್ಪಟ್ಟ ಬಹುವಿಧ ಪ್ರಯತ್ನಗಳು ಫಲಕಾರಿಯಾಗದೆ ಹೋಗಿರುತಿವೆ. ಆ ಸಂಸ್ಥಾನದೊಳು ಬಂಗಾರದ ನಾಣ್ಯಗಳಂತೆ ಬೆಳ್ಳಿ ನಾಣ್ಯಗಳಂ ಸಹ ಚಲಾವಣೆಯಲ್ಲಿ ತರಬೇಕೆಂದು ಅಲ್ಲಿನವರನೇಕರು ಅಭಿಪ್ರಾಯಪಟ್ಟಾಗ್ಯೂ ಬಲಿಷ್ಟರಾದವರು ಕೆಲವರು ಅದಕ್ಕೆ ಪ್ರತಿಬಂಧಕ ಸಾಮಗ್ರಿಗಳಾಗಿ ಯೇರ್ಪಟ್ಟಿರುತ್ತಾರೆ. ಯೂರೋಪ್ ದೇಶದಲ್ಲಿನಂತೆ ಇಂಡ್ಯದೇಶದೊಳಗೂ ಬಂಗಾರದ ನಾಣ್ಯಗಳಂ ಛಾಪಿಸಿ ಚಲಾವಣೆಯಲ್ಲಿ ತಂದರೆ ಯೆಲ್ಲವು ಕ್ರಮಕ್ಕೆ ಬರುವದೆಂದು ಕೆಲವರು ಸಲಹೆ ಕೊಡುತ್ತಾರೆ. ಯೂರೋಪ್ ಮೊದಲಾದ ಅನ್ಯ ರಾಜ್ಯಗಳಿಂದ ನಾಣ್ಯಗಳ ಮೂಲಕವಾಗಿಯೂ ಬೇರೇ ವಿಧವಾಗಿಯೂ ಇಂಡ್ಯ ದೇಶಕ್ಕೆ ಆಮದ್ ಆಗುವ ಬಂಗಾರವೆಲ್ಲವು ನಾನಾವಿಧ ಆಭರಣ ರೂಪವಾಗಿ ನೇಟಿವ್ ಹೆಂಗಸರಲ್ಲೂ, ಹೂಳಿಡುವದಕ್ಕೆ ಅನುಕೂಲವಾದ ಆಸ್ತಿಯ ರೂಪವಾಗಿ ಧನಿಕರಲ್ಲೂ ಮರೆಯಾಗುತ ಹೋಗುತಲಿರುವದರಿಂದ ಚಲಾವಣೆ ನಾಣ್ಯಗಳಂ ಛಾಪಿಸುವದಕ್ಕೆ ಬೇಕಾದಷ್ಟು ಬಂಗಾರ ಅನುಕೂಲಿಸಲಾರದೆಂದು ಬೇರೆ ಕೆಲವರು ಅಭಿಪ್ರಾಯ ಪಡುತ್ತಾರೆ. ಅಮೆರಿಕಾ ದೇಶೀಯರ ಔದ್ಧತ್ಯದಲ್ಲಿ, ನಮ್ಮ ಪಾಲಕರಾದ ಬ್ರಿಟಿಷ್ ಸರ್ಕಾರದವರು ತಮ್ಮ ಪ್ರಜೆಗಳಾದ ಇಂಡ್ಯ ದೇಶೀಯರೊಡನೆ ತಾವೂ ರೋದನಕ್ಕೆ ಪ್ರಾರಂಭಿಸಿರುವಂತೆ ಕಾಣುತಿದೆಯೇ ಹೊರತು ಈ ಕೆಡುಕಂ ತಪ್ಪಿಸಬೇಕಾದ ವಿಷಯದಲ್ಲಿ ಧೈರ್ಯದೊಡನೆ ಪ್ರವರ್ತಿಸುವಂತವರಾಗಿ ತೋರಲಿಲ್ಲವು. ಆಫ್ಘನಿಸ್ಥಾನಿಗೆ ಸೇರಿದ ಸರಹದ್ದು ಪ್ರಾಂತದಲ್ಲಿ ರಷಿಯಾ ದೇಶೀಯರು ಆಗಿಂದಾಗ್ಯೆ ನಡೆಸುತ ಬರುವ ಜುಲುಮಿ ಕೆಲಸಗಳಿಂದ ಕಳವಳಗೊಂಡು ತನ್ನಿವೃತ್ತ್ಯುಪಾಯದಲ್ಲೇ ಅವರ ಮನವೆಲ್ಲವು ಲೀನವಾಗಿರುವ ಈಗಿನಕಾಲದಲ್ಲಿ ತದಿತರ ವಿಷಯಗಳಿಗೆ ಅವರು ನಿಗೇಕೊಡಬೇಕೆಂದು ಕೋರುವಣವು ಫಲದಾಯಕ ವಾಗಲಾರದು. ಮುಖ್ಯವಾಗಿ ಇಂಡ್ಯದೇಶಕ್ಕೆ ಚಲಾವಣೆ ನಾಣ್ಯಗಳ ವಿಷಯದಲ್ಲುಂಟಾಗಿರುವ ದುರ್ದಶೆಯು ಅಮೆರಿಕಾ ದೇಶೀಯರಿಂದ ಪರಿಹಾರವಾದರೆ ಬಗಬಹುದೇ ಹೊರತು ಅನ್ಯರಿಂದಾಗಲಾರದೆಂದು ತೋರುತಿದೆ.

THE GENERAL ELECTION

ಬ್ರಿಟಿಷ್ ಪಾರ್ಲಿಮೆಂಟ್ ಮೆಂಬರುಗಳ ಚುನಾವಣೆಯು ಕಾರ್ಯವು ಪ್ರಾರಂಭಿಸಿದಂತೆ ನಡಿಯಬಹುದಾಗಿವೆ. ಮಾಹೇ ಜುಲೈ ೨೦ ನೇ ತಾರೀಖು ಬುಧವಾರದ ವರಿವಿಗೆ ನವರೀ ಸಭೆಗೆ ಬೇಕಾಗಿರುವ ಒಟ್ಟು ೬೭೦ ಮಂದಿಯು ಚುನಾವಣೆ ಸಮಾಪ್ತಿಗೊಂಡಂತೆ ವೃತ್ತಾಂತವು ತಿಳಿಯಬರುತಿದೆ. ಇವರ ತಪಸೀಲ್ ಹ್ಯಾಗಂದರೆ,—

೨೬೮ ಕನ್ಸರ್ವೇಟಿವ್‌ಗಳು, ಅಂದರೆ ಈಗಿರುವ ಪ್ರಭುತ್ವಕ್ಕೆ ಮತವಂ ಪೋಷಿಸಿ ತತ್ಪಕ್ಷವನ್ನವಲಂಬಿಸಿದವರು.

೨೭೨ ಲಿಬರಲ್‌ಗಳು, ಅಂದರೆ ಈಗಿನ ಪ್ರಭುತ್ವಕ್ರಮದಲ್ಲಿ ಕೆಲವು ನೂತನ ಪ್ರವೃತ್ತಿಗಳನ್ನಪೇಕ್ಷಿಸಿ ಅವಕಾಶ ವಿಧಿನಿಯಮಂ ಕೋರುವಂತಹ ಮಿ॥ ಗ್ಲಾಡ್‌ಸ್ಟನ್ ಪಕ್ಷಾವಲಂಬಿಗಳು.

೪೬ ಯೂನಿಯನಿಸ್ಟ್ಸ್, ಅಂದರೆ ಇತರ ರಾಜಕೀಯ ವಿಷಯಗಳಲ್ಲಿ ನೂತನ ಪ್ರವರ್ತನಗಳನ್ನಂಗೀಕರಿಸಿದಾಗ್ಯೂ ಐರ್ಲ್ಯಾಂಡ್ ರಾಜ್ಯದಲ್ಲಿ ಸ್ವತಂತ್ರ ಪಾರ್ಲಿಮೆಂಟ್ ಸಭೆ ನಿಯಮಿಸುವ ವಿಷಯದಲ್ಲಿ ಮಿ॥ ಗ್ಲಾಡ್‌ಸ್ಟನ್ ಯವರ ಅಭಿಪ್ರಾಯವು ಅಸಂಗತವೆಂದು ಭಾವಿಸಿ ಪ್ರಕೃತ ಸ್ಥಿತಿಯನ್ನೇ ಪೋಷಿಸತಕ್ಕವರು.

೩. ಲೇಬರ್ ಪಾರ್ಟಿ ಯವರ ಮಾರ್ಗಾವಲಂಬಿಗಳು.

೮೧ ಐರ್ಲ್ಯಾಂಡ್ ಪಕ್ಷಾವಲಂಬಿಗಳು.

ಇದರಿಂದ ಮಿ॥ ಗ್ಲಾಡ್‌ಸ್ಟನ್ ಯವರ ಪಕ್ಷಾವಲಂಬಿಗಳ ಸಂಖ್ಯೆಯು ಅಧಿಕವಾಗುವದರಿಂದ, ಈಗಿರುವ ಲಾರ್ಡ್ ಸಾಲಿಸ್‌ಬರಿ ಯವರ ಮಂತ್ರಿಮಂಡಲದವರಿಗೆ ಅಪಜಯವುಂಟಾಗಿ ಲಿಬರಲ್ ಪಕ್ಷದವರು ಪ್ರಭುತ್ವಕ್ಕೆ ಬರುವಂತಾಯಿತು. ಐರ್ಲ್ಯಾಂಡ್ ರಾಜ್ಯ ವಿಭಾಗದಲ್ಲಿ ಸಂಯುಕ್ತ ಇಂಗ್ಲಂಡ ಪ್ರಜಾಭಿಪ್ರಾಯವು ಗತ ಹತ್ತು ಸಂವತ್ಸರಗಳ ಕಾಲದೊಳಗೆ ಬಹಳ ರೂಪಾಂತರವನ್ನೈದಿದ್ದು ಕೇವಲ ಆಶ್ಚರ್ಯಕರವಾದುದಾಗಿರುತಿದೆ, ಹ್ಯಾಗಂದರೆ, ಆಗ್ಗೆ ಹತ್ತು ವರುಷಗಳ ಹಿಂದೆ ಐರ್ಲ್ಯಾಂಡ್ ದೇಶಕ್ಕೆ ಸ್ವತಂತ್ರ ಪರಿಪಾಲನಾಧಿಕಾರ ಸ್ವಾತಂತ್ರ್ಯವು ಕಲ್ಪಿಸಬೇಕೆಂದು ಮಿ॥ ಗ್ಲಾಡ್‌ಸ್ಟನ್ ಯವರು ಪ್ರಥಮತಃ ಸೂಚಿಸಿದ ಸಂದರ್ಭದಲ್ಲಿ ಅನೇಕರು ಸದರೀ ಅಭಿಪ್ರಾಯವು ಅಸಂಗತವೆಂದಲೂ, ಇಲ್ಲದ ಕಾರ್ಯವ್ಯಾಸಂಗವು ನಾವಾಗಿ ಉಂಟುಮಾಡಿಕೊಂಡಂತಾಗುವದೆಂದಲೂ ಆಕ್ಷೇಪಿಸಿ ಪ್ರತಿಷೇಧಿಸಿದರು. ಐರಿಷ್ ಪ್ರಜಾಧಿಪರಾಗಿದ್ದವರು ಕೆಲವರು ಕೂಡ ಅಲ್ಲಿನವರಿಗೆ ಸ್ವದೇಶ ಪರಿಪಾಲನಾಧಿಕಾರವಂ ಕೊಡುವದು ಪ್ರಮಾದಕರವಾದುದೆಂದು ಉಪೇಕ್ಷಿಸಿದ್ದರು. ಈ ಒಂದು ಅಂತರದಲ್ಲಿ ಭಿನ್ನಾಭಿಪ್ರಾಯ ಉಂಟಾಗಲು ಆಗ ಲಿಬರಲ್ ಗವರ್ನ್‌ಮೆಂಟ್ ನವರಿಗೆ ಅಪಜಯ ಉಂಟಾಯಿತು. ಕನ್ಸರ್ವೇಟಿವ್ ಪಕ್ಷದವರು ಪ್ರಬಲಿಸಿ, ಮಿ॥ ಗ್ಲಾಡ್‌ಸ್ಟನ್ ಯವರ ಅಭಿಪ್ರಾಯಕ್ಕೆ ಅನರ್ಥಗಳಂ ಕಲ್ಪಿಸಿ ಅವರ ಉದ್ದೇಶವು ನೆರವೇರುವದಾದರೆ ಅದರಿಂದ ರಾಜದ್ರೋಹಿಗಳು ಪ್ರಬಲಿಸಿ ತನ್ಮೂಲಕ ರಾಜ್ಯದ ಅನ್ಯೋನ್ಯ ಭಾವಕ್ಕೆ ಭಂಗವುಂಟಾಗಿ ಕೊಲೆ ಮೊದಲಾದ ದುಷ್ಕೃತ್ಯಗಳು ವ್ಯಾಪ್ತಿಯಾಗುತ ದೇಶವು ಅಸ್ವಾಧೀನವಾಗಿ ಪ್ರಜೆಗಳು ತಿರಿಗಿಬೀಳುವದಕ್ಕೆ ಅವಕಾಶ ಉಂಟಾಗುವದೆಂದು ಇಲ್ಲದ ಭೀತಿಯನ್ನುಂಟುಮಾಡಿ, ಜನರದಕ್ಕೆ ಸಮ್ಮತಿಸದಂತೆ ಮಾಡಿದರು. ಈಗಿನ ಚುನಾವಣೆಯಮೇಲೆ ದೇಶದ ಸ್ಥಿತಿಯನ್ನಾಲೋಚಿಸಿ ನೋಡಲಾಗಿ, ಇಂಗ್ಲಂಡ್ ದೇಶದ ಪ್ರಜೆಗಳಲ್ಲಿ ಅರ್ಧಪಾಲಿಗಿಂತಲು ಅಧಿಕವಾಗಿ ಐರ್ಲ್ಯಾಂಡ್ ರಾಜ್ಯಕ್ಕೆ ಸ್ವದೇಶ ಪರಿಪಾಲನಾಧಿಕಾರವನ್ನುಂಟುಮಾಡುವಣವು ಮೇಲೆಕಂಡಂತೆ ದೋಷಾವಹವಾದುದಲ್ಲವೆಂಬ ಭಾವವುಳ್ಳವರಾಗಿರುವಂತೆ ಸ್ಪಷ್ಟವಾಗುತಿದೆ. ಕಾಲಭೇದದಿಂ ಅಭಿಪ್ರಾಯಭೇದ ಉಂಟಾಗುತಿದೆಂಬುದಕ್ಕೆ ಇದೊಂದು ಮುಖ್ಯನಿದರ್ಶನವಾಗಿರುತಿದೆ. ಲಾರ್ಡ್ ಸಾಲಿಸ್‌ಬರಿಯವರು ಮಹಾರಾಜ್ಞೀಯವರ ಸುದರ್ಶನಾರ್ಥ ಹೋಗಿದ್ದ ಸಮಯದಲ್ಲಿ ಅವರೊಡನೆ ಆಲೋಚಿಸಿ, ತಮ್ಮ ಮಂತ್ರಿಮಂಡಲದವರು ಪಾರ್ಲಿಮೆಂಟ್ ಸಭೆಯನ್ನು ಕ್ರಮಪ್ರಕಾರ ನಿವಸ್ತು ಮಾಡುವರಾದರೆ ಆಗ ಬಹುಶಃ ಮಿ॥ ಗ್ಲಾಡ್‌ಸ್ಟನ್ ಯವರು, ಕೆಲವು ತಿದ್ದುಪಡಿಗಳಂ ಸೂಚಿಸಿ ತನ್ಮೂಲಕ ಗವರ್ನ್‌ಮೆಂಟಿನವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ಖಾಲೀ ಮಾಡಬೇಕೆಂದು ಬಲಾತ್ಕರಿಸಬಹುದೆಂದು ನಿಷ್ಕರ್ಷಿಸಿದರು. ಈ ಸಭೆಯು ಬರುವ ತಿಂಗಳ ಆದಿಭಾಗದಲ್ಲಿ ಮರಳಿ ಹೊಸದಾಗಿ ಸೇರುವದು. ಆ ಕಾಲದಲ್ಲಿ ಲಿಬರಲ್ ಮಿನಿಸ್ಟ್ರಿ ಯವರ ಪ್ರೋಗ್ರಾಂ ಅಂದರೆ ತಾವು ನಡೆಸಲುದ್ದೇಶಿಸಿರುವ ವಿಧಾನಗಳು ಯಥಾವತ್ತು ಪ್ರಕಟವಾಗುವುದು. ಮುಂದೆ ಇವರು ಮಾಡುವ ವಾಗ್ದಾನಗಳಂ ಅವರ ವರ್ತನೆ ಹೊಂದಿರಬೇಕಾಗಿರುತದೆ.

AN ADDITION TO THE MYSORE ROYAL FAMILY.

ಮೈಸೂರು ರಾಜವಂಶಾಭಿವೃದ್ಧಿ.

ಶುಭಮಂಗಳ ಪರಂಪರಾಪ್ರಾಪ್ತಿರಸ್ತು.

ಶ್ರೀಮನ್ಮಹಾರಾಜಾ ಚಾಮರಾಜ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ ಯವರಿಗೆ, ಗತ ಗುರುವಾರದ ದಿನ ಅಂದರೆ ಈ ಆಷಾಢ ಬಹುಳ ಪ್ರಮೋದವಿ ಶುಭದಿನದಲ್ಲಿ ಪುತ್ರೋತ್ಸವವಾದ ಶುಭಸಂತೋಷ ವೃತ್ತಾಂತವನ್ನೀ ಪತ್ರಿಕಾಮೂಲಕ ಸ್ವದೇಶೀಯರಿಗೆ ತಿಳಿಸಲಿಕ್ಕೆ ನಾವು ಬಹಳ ಉತ್ಸಾಹವುಳ್ಳವರಾಗಿದೇವೆ. ಈ ಶುಭವೃತ್ತಾಂತವು ಮಹಾರಾಜಾ ಸರ್ಕಾರದವರು ತಮ್ಮ ಪ್ರಜೆಗಳಿಗೆ ಸರ್ಕಾರಿಯಾಗಿ ತಿಳಿಸಿ ಅದರ ಗೌರವಾರ್ಥ ಈ ದಿನ ಈ ಸಂಸ್ಥಾನಕ್ಕೆ ಸಂಬಂಧಿಸಿದ ಸಕಲ ಇಲಾಖೆಗಳಿಗೂ ರಜಾ ಕೊಟ್ಟಿರುವಂತೆ ಪ್ರಕಟಿಸುತ್ತಾರೆ. ಇದಲ್ಲದೆ ಮೈಸೂರ್ನಯ ದಿನ ಈ ವಿಷಯ ಗೌರವ [illegible] ಭಾವಿಸಿ ಸಂತೋಷ ಸೂಚಕವಾಗಿ [illegible] ಉದ್ಯೋಗಸ್ಥರಿಗೂ ಔತಣ [illegible] ಕರನರೆ ಮಾಡಲ್ಪಟ್ಟಿತು. ಈ [illegible] ಭಂಗುರ ಮಂಗಳ ಪರಂಪರೆಯುಂಟಾಗ [illegible] ಷು ಸಂತೋಷಸಭೆಗಳುಂಟಾಗ [illegible] ವಿರಬೇಕೆಂಬುದು ನಮ್ಮ ಅನವರತ [illegible] ಯಾಗಿರುತಿದೆ. ಶ್ರೀಮನ್ಮಹಾರಾಣಿಯವರೀಗ ಉದ್ಭವಿಸಿದ ಮಗುವೂ ಆರೋಗ್ಯಭಾಗ್ಯದೊಡನೆ ವೃದ್ಧರಾಗಿದಾರೆಂಬ ವೃತ್ತಾಂತವು ನಮಗೆ ಮಹದಾನಂದಕರವಾದುದಾಗಿರುತಿದೆ.

THE MYSORE CIVIL SERVICE EXAMINATION—1892

ಮಾಹೇ ಮಜಕೂರ್ ೪, ೫, ೬ ನೇ ತಾರೀಖುಗಳಲ್ಲಿ ಜರಿಗಿದ, ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಯ ಫಲಿತಾಂಶವು ಗತ ಗುರುವಾರದ ದಿನ ಸದರೀ ಪರೀಕ್ಷೆಯ ಕಮಿಟಿ ಸೆಕ್ರೆಟರಿಯವರಿಂದ ಫಾಯಿಷ್ ಮಾಡಲ್ಪಟ್ಟಿತು. ಇದರಡಿ ಕಂಡ ಯೊಂಬತ್ತುಮಂದಿ ಉಮೇದ್ವಾರರು ಅದರಲ್ಲಿ ಕೆಳಗಡೆಯಾದಂತೆ ಪ್ರಕಟಸಲ್ಪಟ್ಟಿರುವದಲ್ಲದೆ ಇ ವರೆಲ್ಲರು ಆವಶ್ಯಕ ಮತ್ತು ಐಚ್ಛಿಕ ಭಾಗಗಳಲ್ಲಿಯೂ ಮೂರರಲ್ಲೊಂದು ಬಾಗಕ್ಕೆ ಕ

ಮಿಯಿಲ್ಲದ ವರ್ತಕರುಗಳು ಪಡೆದಿರುತ್ತಾರೆಂದು ತಿಳಿಯ ಬರುತ್ತದೆ.

೧. ಕೆ. ಎಸ್. ಚಂದ್ರಶೇಖರಂ, ಬಿ. ಎ. ಬಿ. ಎಲ್.
೨. ಕೆ. ಆರ್. ಶ್ರೀನಿವಾಸಯ್ಯಂಗಾರ್, ಬಿ. ಎ.
೩. { ಬಿ. ಹನುಮಂತಪ್ಪ, ಎಂ. ಏ. ಬಿ. ಎಲ್.
   { ಎಂ. ಈಶ್ವರಪ್ಪ, ಎಂ. ಎ.
೪. ಕೆ. ರಾಮ ವೆಂಕಟ್, ಬಿ. ಎ.
೫. ಎಂ. ವೆಂಗಪ್ಪ, ಬಿ. ಎ.
೬. { ಚೆಂಗಲ್ ರಾಘವಯ್ಯ, ಬಿ. ಎ.
   { ಅಂಬಳೆ ಸುಬ್ರಮಣ್ಯಯ್ಯ, ಬಿ. ಎ.

ಮೈಸೂರು ಗವರ್ನಮೆಂಟನವರು ಹಿಂದೆ ವಾಗ್ದಾನ ಮಾಡಿರುವ ಪ್ರಕಾರ ಮೆ|| ಕೆ. ಎಸ್. ಚಂದ್ರಶೇಖರಂ ಯೆಂಬವರೂ ಮೆ|| ಕೆ. ಆರ್. ಶ್ರೀನಿವಾಸಯ್ಯಂಗಾರ್ರೆಂಬವರೂ ಪ್ರೊಬೇಷನರಿ ಅಸಿಸ್ಟೆಂಟುಗಳಾಗಿ ನಿಯಮಿಸಲ್ಪಡಲಿಕ್ಕೆ ಅರ್ಹರೆನಿಸಿದ್ದರಿಂದ ಇವರು ಕೂಡಲೆ ಕೆಲಸದಲ್ಲಿ ನಿಯಮಿಸಲ್ಪಡುವರೆಂದು ನಂಬುತ್ತೇವೆ. ಇದರ ನಿರೀಕ್ಷಣೆಯಮೇಲೆ ಕೆಲವು ಬದಲಾವಣೆಗಳು ನಡೆಯದೆ ಏಡಿದುವೆಂದು ಕೇಳುತ್ತೇವೆ ಇವರಿಗೆ ಕೆಲಸಗಳು ಖಾಲಿಯಾಗುವ ಕಾಲದಲ್ಲಿ ಈಗ ಇರತಕ್ಕವರು ಕೆಲವರು ಕೆಲಸಗಳಿಂದ ನಿವೃತ್ತಿಸಲ್ಪಡುವರಾಗಿರುವರೆಂದು ಸಹ ಕೇಳುತ್ತೇವೆ

Occasional Notes
ಸ್ವಸಾಂದರ್ಭಿಕ ವಿಷಯನ್ಯಾಸ.

Cost of Sultans' Harem.—ತುರ್ಕಿ ಸುಲ್ತಾನರವರ ಜನಾನಾ ಪೋಷಣೆಯ ಬಗ್ಗೆ ಸದರಿ ಸುಲ್ತಾನರಿಗೆ ಸಾಲಿಯಾನಾ ಮೂರುಕೋಟಿ ರೂಪಾಯಿಗಳು ಖರ್ಚಾಗುತ್ತದೆ ಪ್ರತಿ ಸಂವತ್ಸರದಲ್ಲೂ ಸುಮಾರು ನೂರುಮಂದಿ ವಿವಾಹ ಮಾಡಿಕೊಳ್ಳುವದಕ್ಕಾಗಿ ಅಂತಃಪುರವನ್ನು ಬಿಟ್ಟು ಹೋಗುತ್ತಾರೆ ಹೀಗೆ ಹೋಗುವಂತೆ ಪ್ರತಿ ಹೆಣ್ಣುಗಳೂ ೭೫,೦೦೦ ರೂಪಾಯಿಗಳು ಸ್ತ್ರೀಧನರೂಪವಾಗಿ ಕೊಡಲ್ಪಡುತ್ತವೆ, ಪರಂತು ಹೀಗೆ ಹೋದವರ ಸ್ಥಾನಗಳಿಗೆ ಬೇರೆ ಹೆಂಗುಸರು ಕೂಡಲೆ ಭರ್ತಿಯಾಗಿ, ದನ್ನಿಮಿತ್ತ ಅಂತಃಪುರದಲ್ಲಿನ ಹೆಂಗುಸರ ಗುಂಪು ಯಾವಾಗಲು ಮುನ್ನೂರಕ್ಕೆ ಕಡಮೆಯಾಗುವದಿಲ್ಲವು.

The New S. C. Court buildings—ಈಗ ಮದರಾಸಿನಲ್ಲಿ ಹೊಸದಾಗಿ ಕಟ್ಟಲ್ಪಟ್ಟಿರುವ ಸ್ಮಾಲ್‍ಕಾಸ್ ಕೋರ್ಟ್ ಕಟ್ಟಡದೊಳಗೆ ಬರತಕ್ಕವರ್ಯಾರೇ ಆಗಲಿ ಅಲ್ಲಿ ಉಗಿಯುವದಕ್ಕೆ ಗೋಡೆಗಳ ಮೇಲೆ ಉಗುಳುಗಳಿಂದ ಗಲೀಜು ಮಾಡಕೂಡದು ಯಾವ ವಿಧವಾದ ಹೊಲಸಿಗೆಯನ್ನು ಮಾಡಿದಾಗ್ಯೂ ಅಂತವರು ಚಾರ್ಜ್ ಮಾಡಲ್ಪಟ್ಟು ದಂಡಿಸಲ್ಪಡುವರೆಂದು ಸದರೀ ಕಟ್ಟಡದೊಳು ಅಲ್ಲಲ್ಲಿ ನೋಟೀಸುಗಳು ಅಂಟಿಸಲ್ಪಟ್ಟಿವೆಯೆಂದು ಅಲ್ಲಿನ ಪತ್ರಿಕೆಯೊಂದು ತಿಳಿಸುತ್ತದೆ. ಈ ದೇಶದ ಕೋರ್ಟುಗಳಲ್ಲಿನ ಕಚೇರಿಗಳನ್ನು ಸಹ ಗಲೀಜಿಲ್ಲದೇ ಇಡುವಂತೆ ಇಲ್ಲಿನ ಅಧಿಕಾರಿಗಳು ಹುಕುಂ ಮಾಡಿರುವಂತೆ ತೋರುತ್ತದೆ.

Capture of cobras.—ಕಳೆದ ಬುಧವಾರದ ದಿನ ಮದರಾಸು ಯಗ್ಮೋರಿನಲ್ಲಿರುವ ಪೋಲೀಸ್ ಕಮಿಷನರವರ ತೋಟದಬಳಿ ಹುಡುಗನೊಬ್ಬನು ಹೋಗುತ್ತಿರುವಲ್ಲಿ ತೋಟದ ಬೇಲಿಯಬಳಿ ಒಂದು ಸರ್ಪವು ಕಂಡುಬಂದು ಆತನು ಕೂಡಲೆ ಅಲ್ಲಿದ್ದ ಒಬ್ಬ ಜವಾನನ್ನು ಕರೆದು ತೋರಿಸಿದನು. ಆತನು ಅದೇ ತೋಟದಲ್ಲಿ ಸಾಕಿರುವ ನಾಯಿಗಳನ್ನು ಕೊಲ್ಲುವವನೊಬ್ಬನನ್ನು ಕರೆದು ಸದರೀ ಸರ್ಪವನ್ನು ಕೊಲ್ಲುವಂತೆ ಹೇಳಿದನು. ಅವನು ಒಂದು ಸವರಿ ವಿಷ ಜಂತುವನ್ನು ಕೈಯಲ್ಲಿ ಹಿಡಕೊಂಡು ಅಲ್ಲಿದ್ದ ಒಂದು ಪೊಟ್ಟೆಯಲ್ಲಿ ಕೈ ಹಾಕಿ ಎಳೆದುಕೊಂಡು ಸರ್ಪವನ್ನು ಯಳೆದು ಹಾಕಿದ್ದಲ್ಲದೆ ಮರಳಿ ಅದರೊಳಗೆ ಕೈ ಹಾಕಿ ೫೮ ಹಾವಿನ ಮರಿಗಳನ್ನು ತೆಗೆದನು. ಈ ಸಾಹಸ ಕೃತ್ಯವು ಪೋಲೀಸ್ ಕಮಿಷನರಾದ ಕರ್ನಲ್ ಶಾಕ್ಸ್ ಯೆಂಬವರಿಗೆ ರಿಪೋರ್ಟ್ ಮಾಡಲ್ಪಡಲು ಆ ಅಧಿಕಾರಿಯು ಸದರೀ ಯರಡು ಸಾಹಸಿಗನ್ನು ಕೊಂಡಾಡುವಂತೆ ಹುಕುಂ ಮಾಡಿ ಅವನು ಹಿಡವವನಿಗೆ ಒಂದು ರೂಪಾಯಿ ಇನಾಂ ಕೊಟ್ಟರೆಂದು ಮದರಾಸ್ ಪತ್ರಿಕೆಯೊಂದರ ಮೂಲಕ ತಿಳಿದು ಸದರಿ ಅಧಿಕಾರಿಯ ಔದಾರ್ಯಕ್ಕಾಗಿ ಬಹಳ ಆಶ್ಚರ್ಯ ಪಡುತ್ತೇವೆ.

LOCAL AND PROVINCIAL NEWS
ಸ್ಥಳದೇಶವೂ ತತ್ಸಮೀಪದೇಶದ ವರ್ತಮಾನಗಳು

Arrival of H. H. the Maharaja.—ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ಬರುವ ತಿಂಗಳ ೩ ನೇ ತಾರೀಖು ಮೈಸೂರಿಗೆ ರಾಜಧಾನಿಯಿಂದ ಈ ವ್ರಾಂತಿಗೆ ದಯಮಾಡುವರೆಂದು ನಿರೀಕ್ಷಿಸಲ್ಪಟ್ಟಿರುತ್ತದೆ

Increase of pay.—ಎಮ್ಯೂಸೇಸ್ಮೆಂಟ್ ಸೆಕ್ರಟರಿಯವರ ಆಫೀಸ್ ಮ್ಯಾನೇಜರ್ ಮೆ|| ಸಿ. ವಾಸುದೇವಯ್ಯನವರ ಸಂಬಳ ೭೦ ರಿಂದ ೧೦೦ ರೂಪಾಯಿಗಳ ಬಡ್ತಿಯಾದಂತೆ ಕೇಳುವದಕ್ಕೆ ಬಹಳ ಸಂತೋಷಿಸುತ್ತೇವೆ ಎಮ್ಯೂಸೇಸ್ಮೆಂಟ್ ಸೆಕ್ರೆಟರಿಯವರು ಇವರ ವಿಷಯದಲ್ಲಿ ತೋರಿಸಿದ ಈ ವಿಶೇಷ ಪರಿಭಾವನೆಗೆತಕ್ಕಂತೆ ಅವರು ಸಂಪೂರ್ಣ ಅರ್ಹರಾಗಿಯೂ, ಬಹುಕಾಲದಿಂದ ಶ್ರದ್ಧೆಯಿಂದಲೂ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕವರಾಗಿಯೂ, ಸಮರ್ಥರಾಗಿಯೂ ಇರುತ್ತಾರೆ

Obituary.—ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮೆ|| ಎ. ಪಿ. ಲಪರಿ ಯವರು ರಜಾ ಪಡೆದು ಊಟಿಗೆ ಬಂದಿರುವಲ್ಲಿ ಅವರಿಗೆ ಗತ ಬುಧವಾರದ ದಿನ ಜ್ವರ ಕಾಲರಾ ರೋಗವು ತಗಲಿ ಅದರಿಂದ ಕಾಲಗತಿಯನ್ನೈದಿದರೆಂಬ ವೃತ್ತಾಂತವು ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ ಇವರು ಸ್ವಭಾವತಃ ಬಹಳ ಉಪಕಾರಿಗಳಾಗಿಯೂ ಸರಸಿಯೂ ಆಗಿಯೂ ಸ್ನೇಹಪರರಾಗಿಯೂ ಇದ್ದರು. ಇವರಿಗೆ ಅನಿರೀಕ್ಷಿತವಾಗಿ ಸಂಭವಿಸಿದ ಅಕಾಲ ಮರಣಕ್ಕೆ ಇವರ ಮಿತ್ರರು ಬಹಳ ಅನುತಾಪಿಸದಿರಲಾರರು. ಮುಖ್ಯವಾಗಿ ಮೃತ್ಯುವು ಪ್ರಾಣಿನಿಯೋಗವಾದುದಾದರು ಅದರ ಸೂಕ್ಷ್ಮಗತಿಯು ತಿಳಿಯಕೂಡದ್ದಾಗಿರುತ್ತದೆ

City Municipality.—ಬೆಂಗಳೂರು ಸಿಟಿ ಮುನ್ಸಿಪಲ್ ಪ್ರೆಸಿಡೆಂಟರವರು ಇದರಡಿಕಂದ ಇಷ್ಟ್ಯಾಹಾರನಾಮೆಯನ್ನು ಪ್ರಕಟಿಸಿರುವ ಬಗ್ಗೆ ಕಳುಹಿಸಿರುತ್ತಾರೆ. ಇದಕ್ಕೆ ಪಟ್ಟಣವಾಸಿಗಳೆಲ್ಲರು ಮುಖ್ಯ ಅವಧಾನ ಕೊಡಬೇಕೆಂದು ಕೋರುತ್ತೇವೆ. ಈಗ ಬ್ಯಾಕ್ ಜ್ವಾಲಾ ರೋಗವು ಸರ್ವತ್ರ ವ್ಯಾಪಿಸಿ ಅದರಿಂದ ಬಹುಜನ ಮೃತಪಡುತ್ತಿರುತ್ತಾರಾಗಿ ಇಂತಾ ಸ್ಥಿತಿಯೊಳು ಸಮಯವರಿತು ಮುಂಜಾಗ್ರತೆ ಪಡಬೇಕಾದುದು ಆವಶ್ಯಕವಾಗಿರುತ್ತದೆ:—

ಕಾಲರಾ ಔಷಧಗಳು ಈ ಪ್ರಾಂತದ ಪ್ರತಿ ಪೊಲೀಸ್ ಸ್ಟೇಷನ್ನಿನಲ್ಲಿಯೂ ಇಡಲ್ಪಟ್ಟಿರುವದರಿಂದ ಅಲ್ಲಿಗೆ ಹೋಗಿ ಕೇಳಿದರೆ ದೊರೆಯುವವು. ಕಾಲರಾ ಪೀಡಿತರಾದವರಿಗೆ ಚಿಕಿತ್ಸಾರ್ಥ ಪ್ರತ್ಯೇಕ ಒಬ್ಬ ಆಸ್ಪತ್ರೆ ಅಸಿಸ್ಟೆಂಟರು ನಿಯಮಿಸಲ್ಪಟ್ಟಿರುತ್ತಾರೆ. ಅವರು ತಾಲ್ಲೂಕ್ ಕಚೇರಿಯಲ್ಲಿರುವದರಿಂದ ಅವರ ಬಳಿಗೆ ಹೋಗಿ ತಿಳಿಸಿದರೆ ಅವರು ಮುಫತ್ತಾಗಿ ಅವರ ಮನೆಗಳಿಗೆ ಹೋಗಿ ರೋಗಿಗಳನ್ನು ನೋಡಿ ಯುಕ್ತಂತೆ ಚಿಕಿತ್ಸೆ ಮಾಡುವರು. ವಾಸಸ್ಥಳಗಳನ್ನು ಸಾಫ್ ಮಾಡಿ ರೋಗ ವ್ಯಾಪಕತೆಯು ಆಗದಂತೆ ಇಟ್ಟುಕೊಳ್ಳುವದೆಲ್ಲರು ಸಾನಿಟರಿ ಇನ್ಸ್‌ಪೆಕ್ಟರ್ ಗುಮಾಸ್ತರು ಆಗ್ಲಿಯವರಿಗೆ ತಿಳಿಸಿದರೆ ಅವರು ಅದಕ್ಕೆ ಸಿಗೇ ಕೊಡುವರು. ತಮ್ಮ ಮನೆಗಳನ್ನು ಸಾಫ್ ಮಾಡಿಕೊಂಡು ರೋಗದ ವ್ಯಾಪಕತೆಯು ನಿರೋಧಿಸಿಕೊಳ್ಳಲಿಕ್ಕೆ ಶಕ್ತಿ ಇಲ್ಲದ ಬಡವರು ಗುಮಾಸ್ತರು ಆಗ್ಲಿಯವರ ಸಹಾಯವನ್ನಪೇಕ್ಷಿಸಿದರೆ ಅವರು ತಡೆ ಇಲ್ಲದೆ ಮಾಡುವರು.

ಮಿಯರ್ ಹುಸೇಯಿನ್ ಅಲ್ಲೀಖಾನ್,
ಪ್ರೆಸಿಡೆಂಟ್.

ಬೆಂಗಳೂರು,
ತಾ|| ೨೨ನೇ ಜೂಲೈ ೧೮೯೨.

ಈ ಊರಿಗೆ ಆಗಾಗ್ಗೆ ಯಾರೋ ಒಬ್ಬ ದಿಷ್ಟೀ ಅಮಲ್ದಾರರು ರಾತ್ರಿ ಕಾಲದಲ್ಲಿ ದಯಮಾಡುತ್ತಾರೆಂತಲೂ, ಅವರು ಯಥೇಚ್ಛವಾಗಿ ಪೇಟೆಯನ್ನು ಮಾಡಿ ಬೀದಿ ಬೀದಿಗಳಲ್ಲಿಯೂ ಅರಿವು ಸ್ನೇಹಿತರ ಮನೆಗಳಲ್ಲೆಲ್ಲಾ ಬಿದ್ದಿದ್ದು ಮರುದಿವಸ ಬೆಳಗ್ಗೆ ಹೊರಟು ಹೋಗುತ್ತಾರೆಂತಲೂ ತಿಳಿಯುವೆವು. ಇದು ನಿಜವಾಗಿದ್ದ ಪಕ್ಷದಲ್ಲಿ ಏನಾದರೂ ಆಗಲಿ, ರಾತ್ರಿ ಎಲ್ಲಿ ಸರ್ಕಾರದ ಕೆಲಸದಲ್ಲಿದ್ದಾರೆಯೋ ಅಲ್ಲಿ ಇಂಥಾ ಕೆಲಸವನ್ನು ಮಾಡಬಾರದೆಂದು ತಿಳಿದು ಮೈಸೂರಿಗೆ ಬಂದು ಹೋಗುತ್ತಿದ್ದಾರಲ್ಲಾ ಅದಕ್ಕೆ ಬದಲಾಗಿ ಸುತ್ತೋಣ ಪರಬೇಕು. ಇನ್ನುಮೇಲಾದರೂ ಇವರು ಈರೀತಿ ಮಾಡದೆ ತಮ್ಮ ದುರಭ್ಯಾಸವನ್ನು ಬಿಡುವರೆಂದು ನಂಬಿದ್ದೇವೆ.—ಮೈ. ಡೆ.

Purchase of jewels.—ಶ್ರೀಮನ್ ಮಹಾರಾಜರವರು ಹಿಂದಿನ ನಗಗಳನ್ನು ಬಿಸುಂದುಮಾಡದೆ ಹೊಸ ನಗಗಳನ್ನು ಕೊಂಡುಕೊಳ್ಳುತ್ತಲಿದ್ದಾರೆ. ಇದರಲ್ಲಿ ಇವರು ಬೀಳುವ ಮೋಸವನ್ನು ಹೇಳುವದಕ್ಕಾಗುವದಿಲ್ಲ. ಮದ್ರಾಸಿನ ವರ್ತಕರು ನಗಗಳನ್ನು ತಂದು ಇಲ್ಲಿನ ಭಾರೀ ವರ್ತಕರುಗಳಿಗೆ ದಳ್ಳಾಳಿ ಕೊಡುವದಾಗಿ ಮಾತನಾಡಿಕೊಂಡು ಮಹಾರಾಜರ ಬಳಿಗೆ ಬರುತ್ತಾರೆ ಮಹಾರಾಜರು ಪ್ರತಿನಿತ್ಯ ಈ ನಾಲ್ಕು ಗಂಟೆಯ ಕಾಲದಲ್ಲಿ ನಗಗಳಿಗೆ ಅಂದಾಜು ಕಟ್ಟುವದಕ್ಕೆ ಕರೆಯುತ್ತಾರೆ. ಅವರು ೧೦ ರ ವಸ್ತುವಿಗೆ ೫೦ ಅಂದಾಜು ಕಟ್ಟಿ ಬಂದ ಹಣದಲ್ಲಿ ಪಾಲು ಹಂಚಿಕೊಳ್ಳುತ್ತಾರೆ. ಇದನ್ನು ತಿಳಿಯದೆ ಮಹಾರಾಜರವರು ಮೋಸ ಹೋಗುತ್ತಿರುವದು ನೋಡಿ ವ್ಯಸನಪಡಬೇಕಾಗಿದೆ. ಕೇವಲ ೧೦ ರೂಪಾಯಿ ಕೊಡುತ್ತೇನೆ, ನೀವು ತೆಗೆದುಕೊಳ್ಳಿರೆಂದು ಅಂದಾಜು ಕಟ್ಟಿದ ವರ್ತಕರಿಗೆ ಹಿಂದಿರುಗಿ ವಾಪಸ್ ಮಾಡಿದರೆ ಆಗ ನಮ್ಮ ವಂಚನೆ ನಿಜಸ್ಥಿತಿಯು ಗೊತ್ತಾಗುತ್ತದೆ. ಅರಸನು ಸರಿಹರು ಉಪಾಯದಿಂದ ತಪ್ಪಿಸಿಕೊಂಡು ನಿದ್ರೆ ಮಾಡುತ್ತಿದ್ದಾರೆ. ಇನ್ನಾಗೆ ಬಿನ್ನಾಣಿ ರೀತಿ ಅಂದಾಜು ಕಟ್ಟುವಂತೆ ಹೇಳಿದರೆ ಇವರು ತಮ್ಮ ಜೀವನಕ್ಕೆ ಕುಂದಕ ಬರುತ್ತೆಂಬ ಭಯದಿಂದ ಚೆನ್ನಾಗಿ ಅವಲೋಕಿಸಿ ಮಾತ್ರ ಸರಿಯಾದ ಬೆಲೆ ಕಟ್ಟುವರು. ಹೊರಗಿನ ವರ್ತಕರಿಗೆ ಈ ಭೀತಿಯು ಇಲ್ಲದ್ದರಿಂದ ತಮ್ಮ ಆದಾಯವನ್ನೇ ನೋಡಿಕೊಂಡು ಹೋಗುತ್ತಿದ್ದಾರೆ. ಮುಂದೆ ಯಾದರು ಮಹಾರಾಜರವರು ಬೆಚ್ಚಿಸ್ತೇವೆಂತು ಮಿಣಚಿಂಬಟ್ಟರಂತಿರುವ ಅರಮನೆಯ ಸರಾಫರ ಮುಖೇನ ನಗಗಳನ್ನು ಖರೀದಿ ಮಾಡಿದರೆ ನಷ್ಟ ಸಂಭವಿಸುವದಿಲ್ಲ. ಹಾಗಿಲ್ಲದಿದ್ದರೆ ತುಂಬಾ ನಷ್ಟ ಪಡುತ್ತಾರೆಂಬ ಅಂಶವನ್ನು ಸೂಚಿಸುತ್ತೇವೆ.—ಮೈ. ಡೇ.

Mr. J. COOK, M. A.

ಇಲ್ಲಿನ ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಾಲರಾದ ಮಿ|| ಕುಕ್ ಸಾಹೇಬರವರು ಗತ ಗುರುವಾರದ ದಿನ ರಾತ್ರಿ ಮದರಾಸ್ ಮೆಯಿಲ್ ಮಾರ್ಗವಾಗಿ ಸ್ವದೇಶಕ್ಕೆ ಪ್ರಯಾಣವಾದರು. ಇವರು ಈ ದೇಶದಲ್ಲಿ ಗತ ಇಪ್ಪತ್ತು ವರುಷಗಳ ಕಾಲವಾಗಿ ಮಾಡಿದ ಉಪಕಾರವನ್ನೂ, ಅದರಿಂದ ಅನೇಕರು ಅನುಭವಿಸತಕ್ಕ ಪ್ರಯೋಜನಗಳನ್ನೂ ಪರ್ಯಾಲೋಚಿಸಿ ಅವರು ಉಚಿತ ರೀತಿಯಿಂದ ಪುರಸ್ಕರಿಸಿ, ತಮ್ಮ ಭಕ್ತಿ ಗೌರವ ಕೃತಜ್ಞತಾದಿ ಭಾವ ಪ್ರದರ್ಶನಕ್ಕಿದು ಒಳ್ಳೆಯ ಸಮಯವೆಂದು ವಿದ್ಯಾರ್ಥಿಗಳೆಲ್ಲರು ಭಾವಿಸಿ, ಅದಕ್ಕಾಗಿ ಬೇಕಾದ ಯೋಜನೆಗಳು ಮಾಡಿದರು. ಅದನ್ನನುಸರಿಸಿ ಕಳೆದ ಗುರುವಾರದ ದಿನ ಬೆಳಗ್ಗೆ ಸೆಂಟ್ರಲ್ ಕಾಲೇಜಿನಲ್ಲಿ ಒಂದು ಸಭೆ ಸೇರಿ ಪ್ರಸ್ಥಾನ ಮಂಗಳ ಪ್ರಾರ್ಥನಾ ಪತ್ರಿಕೆಯೊಂದು ಅವರಿಗೆ ಒಪ್ಪಿಸಲ್ಪಟ್ಟಿತು. ಏತದರ್ಥ ಬಹುಮಂದಿ ಬೊಕ್ಕಮನುಷ್ಯರು ಬಂದಿದ್ದರಲ್ಲದೆ ಕಾಲೇಜ್ ಸೌಧವು, ವಿದ್ಯುತ್ ಸುಮನೋಹರವಾದ ಸ್ವದೇಶಿ ಗಮನೋನ್ಮುಖರಾಗಿರುವ ತಮ್ಮ ವಿದ್ಯಾ ಗುರುವಿಗೆ ಕ್ಷೇಮ ಪ್ರಾರ್ಥನೆಯಲ್ಲಿ ಎದ್ದುತ್ಸಾಹಿಗಳಾಗಿದ್ದ ವಿದ್ಯಾರ್ಥಿ ಸಮೂಹವು ನಿರವಕಾಶವಾಗಿತ್ತು. ಇಲ್ಲಿನ ಚೀಫ್ ಕೋರ್ಟ್ ಜಡ್ಜಿಯವರಾದ ಮೆ|| ಪಿ. ಎನ್. ಕೃಷ್ಣಮೂರ್ತಿಯವರು, ಬಹುಜನ ಪ್ರಾರ್ಥನೆಯಿಂದ ಗೌರವಿಸಿ ಅಗ್ರಾಸನವನ್ನಂಗೀಕರಿಸಿದರು. ಅನಂತರ ಕನ್ನಡ್ಯಾಂತರದಲ್ಲಿ ಬಂದು ಆಯುಕ್ತರಾಗಿದ್ದ ವಾಲಂಟಿಯರ್ ಕೋರ್ನವರು ಬ್ಯಾಂಡ್ ವಾದ್ಯವು ಬಾರಿಸಿದಬಳಿಕ ಅಗ್ರಾಸನಾಧಿಪತಿಯವರು ತತ್ಸಂದರ್ಭೋಚಿತವಾಗಿ ಸಭಾಮುಖದಲ್ಲಿ ತಿಳಿಸಿದ ಯಾವದಂಶವನ್ನಿಲ್ಲಿ ಸಮಗ್ರವಾಗಿ ತಿಳಿಸಲಿಕ್ಕೆ ನಮಗೆ ಅವಕಾಶವಿಲ್ಲದೆ ಹೋದಬಗ್ಗೆ ವಿಷಾದಿಸುತ್ತೇವೆ. ಮೆ|| ಟಿ. ಶಿಯವರು ಇಂಗ್ಲಿಷ್ ಭಾಷೆಯಲ್ಲಿ ಬರೆಯಲ್ಪಟ್ಟಿದ್ದ ವಿಜ್ಞಾಪನಾಪತ್ರಿಕೆಯನ್ನೂ, ವಿದ್ಯಾರ್ಥಿಗಳು ಸಂಸ್ಕೃತ ಆಂಧ್ರ ಕರ್ಣಾಟಕ ಭಾಷೆಗಳಲ್ಲಿ ಬರೆಯಲ್ಪಟ್ಟಿದ್ದ ವಿಜ್ಞಾಪನ ಪತ್ರಿಕೆಗಳನ್ನೂ ಕ್ರಮವಾಗಿ ಓದಿದಮೇಲೆ ಮೆ|| ಕುಕ್ ಯವರು ತಮ್ಮ ವಿಷಯದಲ್ಲಿ ವಿದ್ಯಾರ್ಥಿಗಳೂ ಇತರರೂ ಸೇರಿ ತೋರಿಸಿದ ಪ್ರೀತಿ ಗೌರವಗಳಿಗಾಗಿ ತಾವು ಬಹಳ ಕೃತಜ್ಞರಾಗಿರುವಂತೆಯೂ, ತಮ್ಮ ಉದ್ಯೋಗ ಧರ್ಮದಲ್ಲಿ ನ್ಯಾಯವಾಗಿ ಮಾಡತಕ್ಕಾದ ಕರ್ತವ್ಯಗಳನ್ನು ಮಾಡಿದ್ದಕ್ಕಾಗಿ ತಾವು ಇಷ್ಟರ ಪ್ರಶಂಸೆಗೆ ಅವಿಷಯರೆಂತಲೂ, ಅನೇಕ ಸಂದರ್ಭಗಳಲ್ಲಿ ವಿದ್ಯಾರ್ಥಿಗಳವಿಷಯದಲ್ಲಿ ಹೃದಯವಾತ್ಸಲ್ಯವನ್ನು ವ್ಯಕ್ತಪಡಿಸಬೇಕಾದ ಆವಶ್ಯಕತೆಯುಂಟಾಗುತ್ತಲಿದ್ದದರಿಂದ ತಮ್ಮ ಗೌರವ್ಯ ಕೆ ಆದರ ಶೇಯವಲ್ಲವೆಂತಲೂ, ಹಿಂದೂ ವಿದ್ಯಾರ್ಥಿಗಳ ವಿಧೇಯತೆ ಮೊದಲಾದ ವಿಷಯಗಳಲ್ಲಿ ತಾವು ಕೇಳಿದ್ದದೂ, ಈಗ ಅವರ ವಿಷಯದೊಳು ತಮಗುಂಟಾಗಿರುವ ಅನುಭವವೂ ಬಹಳ ವ್ಯತ್ಯಸ್ತಗಳಾಗಿವೆಯೆಂತಲೂ, ಒಂದು ಪಾಠಶಾಲಾಧಿಕಾರಿಯಾಗಿರುತ ಮಾಡಬೇಕಾದ ಕರ್ತವ್ಯಗಳಲ್ಲಿ ಇಂಗ್ಲೆಂಡಿಗೂ ಇಂಡ್ಯಾ ದೇಶಕ್ಕೂ ಬಹಳ ತಾರತಮ್ಯವಿದೆಯೆಂತಲೂ, ತಮ್ಮ ಕಾಲದಲ್ಲಿ ಕಾಲೇಜಿಗೆ ಸ್ಥಾವರ ಪ್ರಾಶಸ್ತ್ಯಕ್ಕೆ ಕಾರಣರುಗಳು ಅರ್ಹರಲ್ಲವೆಂತಲೂ, ಅದಕ್ಕೆ ಇತರ ಉಪಾಧ್ಯಾಯರ ಅಕುಟಿಲವಾಗಿ ಮಾಡಿದ ಸಹಾಯವೂ, ವಿದ್ಯಾರ್ಥಿಗಳ ಅನ್ಯೋನ್ಯ ಭಾವವೂ ಮುಖ್ಯಕಾರಣಗಳೆಂದು ನುಡಿಯಬೇಕೆಂತಲೂ, ಪಡ್ಯರಿ ತಿಳಿಸಿ ತಮ್ಮ ಸಂತೋಷಾತಿಶಯವು ವ್ಯಕ್ತಪಡಿಸಿದರು. ತರುವಾಯ ಶ್ರೀ ಗೋಪಾಲಾಚಾರ್ಯ ರೆಂಬವರಿಂದ ವೀಣೆ ಬಾರಿಸಲ್ಪಟ್ಟಿತು. ಅನಂತರ ಗಂಧಪುಷ್ಪಗಳು ಕೊಡಲ್ಪಟ್ಟು ಶುಭ ಪ್ರಾರ್ಥನಾ ಪೂರ್ವಕ ಸಭೆ ಬರಖಾಸ್ತಾಯಿತು. ಮಿಸ್ಟರ್ ಕುಕ್‍ಯವರ ಗೈರುಹಾಜರಿಯಲ್ಲಿ ಮೆ|| ಟೇಟ್ ಯವರು ಪ್ರಿನ್ಸಿಪಲ್ ಕೆಲಸವನ್ನು ಆಕ್ಟಿಂಗ್ ಆಗಿ ರೀಕ್ ನೋಡತಕ್ಕದ್ದೆಂದು ವ್ಯವಸ್ಥೆಯಾಗಿರುವದರಿಂದ ಅವರದೇ ಪ್ರಕಾರ ಅದಿನ ೧೨ ಘಂಟೆಗೆ ಪ್ರಿನ್ಸಿಪಲ್ ಕೆಲಸದಚಾರ್ಜನ್ನು ಮೆ|| ಟೇಟ್ ಯವರಿಗೆ ಒಪ್ಪಿಸಿ ಪ್ರಯಾಣವಾದರು. ಪ್ರಸಕ್ತ ಏಪ್ರಿಲಿನಲ್ಲಿ ಮೆ|| ಲಿನರ್ಡ್‍ಯವರ ಹಕ್ಕುದಾರಿಯು ಉಪೇಕ್ಷಿಸಲ್ಪಟ್ಟದ್ದು ಬಹಳ ಅನುಚಿತವೆಂದು ಅನೇಕರು ತಾತ್ಪರ್ಯಪಟ್ಟಿರುತ್ತಾರೆ.

THE BANGALORE SREENIVASA MANDIRAM.
ಬೆಂಗಳೂರು. ಶ್ರೀನಿವಾಸ ಮಂದಿರಂ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಜಮಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲೆ ತೋರಿಸುವ ತಖ್ತೆ:—

೧೮೯೨ನೇ ಇಸವಿ ಜೂಲೈ ೧೭ ನೇ ತಾರೀಖ್ ಮೊದಲು ಜೂಲೈ ೨೩ ನೇ ತಾರೀಖ್ ವರೆವಿಗೆ.—

ಅಕ್ಕಿ ವಸೂಲು ಮಾಡಿದ ಗೃಹಗಳ ಸಂಖ್ಯೆ	...	93
ಜಮಾಯಿಸಿದ ಧಾನ್ಯದ ಸೇರುಗಳ ಸಂಖ್ಯೆ	...	54
ಗತವಾರದ ಬಾಕಿ ಸೇರು	...	44
ಜುಮ್ಲಾ	...	98
ಉಟಕ್ಕೆ ಸಾಮಗ್ರಿಗಾಗಿ ಮಾರಲ್ಪಟ್ಟ ಸೇರು	...	27
ಖರ್ಚಾದ ಅಕ್ಕಿ ಸೇರು	...	27
ಬಾಕಿ ಉಳಿಕೆ	...	44

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ವಿವರ.

ಅನಾಥರು	...	7
ದಿಕ್ಕಿಲ್ಲದ ವಿದ್ಯಾರ್ಥಿ	...	8
ಬಡ ಪರಿಕ್ಷ ವಿದ್ಯಾರ್ಥಿಗಳು	...	12
ಹಬ್ಬಕೆದಾಷ್ಟಕ್ಕೆ ಅವರ, ಪರಮೇಶ ವೈರಾಗಿ ಮತ್ತು	...	17
ಪ್ರಯಾಣಿಕರು	...	10
ಜುಮ್ಲಾ	...	54

SEASON REPORT.

೧೮೯೨ ನೇ ಇಸವಿ ಜುಲೈ ೧೬ ನೇ ತಾರೀಖಿಗೆ ಪೂರೈಸಿದ ವಾರದ ಬಾಬತ್ತು ಸರ್ಕಾರೀ ಆಫಿಷಿಯಲ್ ರಿಪೋರ್ಟ್.

ಬೆಂಗಳೂರು ಡಿ|| ಈ ಡಿಸ್ಟ್ರಿಕ್ಟಿಗೆ ಸೇರಿದ ಬಹುದು ತಾಲ್ಲೂಕುಗಳಲ್ಲಿ ೨೮ ಸೆಂಟಿಗಳಿಗೆ ಒಳಪಟ್ಟು ಮಳೆ ಬಿದ್ದಿರುತಿದೆ. ಅನ್ಯತ್ರ ಅನುಕೂಲವಿಲ್ಲವು, ಸಾಧಾರಣವಾಗಿ ಜನಾರೋಗ್ಯವುಂಟು, ನೀರೂ ಹುಲ್ಲೂ ಸಿಕ್ಕುತಲಿವೆ.

ಕೋಲಾರ ಡಿ|| ಚಿಂತಾಮಣಿ, ಮತ್ತು ಗುಡಿಬಂಡೆ, ಈ ಎರಡರಲ್ಲಿ ಕೆಲವು ಸೆಂಟಿಗಳು ಮಳೆ ಬಿತ್ತು, ಅನ್ಯತ್ರ ಸುತರಾಂ ಇಲ್ಲವು. ನೀರೂ ಹುಲ್ಲೂ ಸಿಕ್ಕುತವೆ. ಜನಾರೋಗ್ಯ ಸಾಮಾನ್ಯವಾಗಿ ಉಂಟು.

ತುಮಕೂರು ಡಿ|| ಐದು ತಾಲ್ಲೂಕುಗಳಲ್ಲಿ ೫೦ ಸೆಂಟಿಗಳಿಗೆ ಒಳಪಟ್ಟು ಮಳೆ ಬಿತ್ತು, ಇತರ ತಾಲ್ಲೂಕುಗಳಲ್ಲಿ ಅದೂ ಇಲ್ಲವು. ಕೆಲವು ಕಡೆ ಮೇವು ಸಿಕ್ಕುತವೆ, ಕೆಲವು ತಾಲ್ಲೂಕುಗಳಲ್ಲಿ ದನಗಳಿಗೆ ಸೊಪ್ಪು ಹಾಕುತ್ತಾರೆ. ಜನಾರೋಗ್ಯವುಂಟು.

ಮೈಸೂರು ಡಿಸ್ಟ್ರಿಕ್ಟು.— ಹೆಗ್ಗಡದೇವನಕೋಟೆಯಲ್ಲಿ ಮಾತ್ರ ಒಂದು ಇಂಚ್ ಮಳೆ, ಅನ್ಯತ್ರ ಕೆಲವು ಸೆಂಟಿಗಳು. ದನಗಳು ಚೆನ್ನಾಗಿವೆ, ನೀರೂ ಮೇವೂ ಸಿಕ್ಕುತಿವೆ.

ಹಾಸನ ಡಿಸ್ಟ್ರಿಕ್ಟು—ಮಂಜರಾಬಾದಿನಲ್ಲಿ ೯ ಇಂಚ್, ಬೇಲೂರಿನಲ್ಲಿ ೪ ಇಂಚ್, ಹಾಸನದಲ್ಲಿ ೨, ಅರಕಲಗೂಡಿನಲ್ಲಿ ೧, ಹೊಳೇನರಸೀಪುರದಲ್ಲಿ ೧ ಇಂಚ್ ಮಳೆ ಬಿತ್ತು, ಅನ್ಯತ್ರ ಇಲ್ಲವು, ಮೇವೂ ನೀರೂ ಸಿಕ್ಕುತಿವೆ. ಜನಾರೋಗ್ಯವುಂಟು

ಶಿವಮೊಗ್ಗ ಡಿ|| ತೀರ್ಥಹಳ್ಳಿ ತಾಲ್ಲೂಕು ವಿನಾ ಇತರ ತಾಲ್ಲೂಕುಗಳ ಪೈಕಿ ನಗರದಲ್ಲಿ ೩೬, ಸಾಗರದಲ್ಲಿ ೧೩, ಸೊರಬದಲ್ಲಿ ೧೨, ಶಿವಮೊಗ್ಗ ೩, ಚೆನ್ನಗಿರಿ ೭, ಹೊನ್ನಾಳಿ ೧, ಕುಂಸಿ ೪, ಇಷ್ಟು ಇಂಚ್‌ಗಳ ಮಳೆ ಬಿದ್ದಿರುತಿದೆ.

ಕಡೂರು ಡಿಸ್ಟ್ರಿಕ್ಟು.— ಕೊಪ್ಪದಲ್ಲಿ ೨೨, ಮೂಡಿಗೆರೆ ೧೩, ತರೀಕೆರೆ ೩, ಚಿಕ್ಕಮಗಳೂರು ೭, ಕಡೂರು ೭ ಇಂಚ್ ಮಳೆ, ಯಡೆಹಳ್ಳಿಯಲ್ಲಿ ಸುತರಾಂ ಇಲ್ಲವು, ದನಗಳು ಚೆನ್ನಾಗಿವೆ, ನೀರೂ ಮೇವೂ ಸಿಕ್ಕುತಿವೆ.

ಚಿತ್ರದುರ್ಗ ಡಿಸ್ಟ್ರಿಕ್ಟು.—ಹಿರಿಯೂರ್ ಒಂದು ವಿನಾ ಉಳಿದ ಎಲ್ಲ ತಾಲ್ಲೂಕುಗಳಲ್ಲಿ ಅರ್ಧ ಇಂಚಿಗೆ ಒಳಪಟ್ಟು ಮಳೆ ಬಿತ್ತು. ದನಗಳು ಬಡಸ್ಥಿತಿಯಲ್ಲಿವೆ, ನೀರೂಮೇವೂ ಸಿಕ್ಕುತಿವೆ. ಕೆಲವು ತಾಲ್ಲೂಕುಗಳಲ್ಲಿ ದನಗಳಿಗೆ ಗಿಡಗಳ ಸೊಪ್ಪು ಹಾಕುತ್ತಾರೆ.

THE MYSORE GAZETTE.
ಮೈಸೂರು ಗಜೆಟಿ.

ಶ್ರೀಮನ್ ಮಹಾರಾಜ ರವರ ಹುಜೂರ ಸರ್ಕಾರದಿಂದ ಹೊರಟಿರುವ ಇಸ್ತಿಹಾರ್‌ನಾಮೆಗಳು.

ನಂ. ೫೬೪, G. F. ೨೪—೯೨ —ಕರ್ನಲ್ ಎ. ಎಚ್ ಮಾಕಿಂಟೈರಿಯವರು, ಸನ್ ೧೮೯೨ನೇ ಇಸವಿ ಜನವರಿ ೧೬. ನೇ ತಾರೀಖಿನ ೪೦೩ ನೇ ನಂಬರ್ ಇಸ್ತಿಹಾರಿನಲ್ಲಿ ಪ್ರಕಟಿಸಲ್ಪಟ್ಟ ಸ್ವಂತ ಕೆಲಸದಮೇಲಿನ ಆರುತಿಂಗಳ ರಜಾದಿಂದ ವಾಪಸ್ ಬಂದು ಸನ್ ೧೮೯೨ ನೇ ಇಸವಿ ಜುಲೈ ಗುರ್ರೇ ತಾರೀಖಿನ ಪೂರ್ವಾಹ್ನದಲ್ಲಿ ಕೆಪ್ಟನ್ ಆರ್. ಜಿ. ಜೋನ್ಸ್‌ಯವರಿಂದ ಶ್ರೀಮನ್ಮಹಾರಾಜರವರ ಮಿಲಿಟರಿ ಸೆಕ್ರೆಟರಿ ಕೆಲಸವನ್ನೂ ಅಮೃತ ಮಹಲ್ ಇಲಾಖಾ ಆಫೀಸರ್ ಕೆಲಸವನ್ನೂ ವಹಿಸಿದರು.

ನಂ. ೫೭೦, G. F. ೩೦—೯೨.—ಸನ್ ೧೮೯೨ ನೇ ಇಸವಿ ಜೂನ್ ೨೨ ನೇ ಮಾರ್ಚ್ ತಾರೀಖು ೧೦೫ ನೇ ನಂಬರ್ ಇಸ್ತಿಹಾರ್‌ನಲ್ಲಿ ಅಡಗಿರುವ ಹುಕುಂಗಳಿಗೆ ಅನುಸಾರವಾಗಿ, ಮೈ. ಬಿ. ಗೋಪಾಲಯ್ಯಂಗಾರ್ರವರು, ಸನ್ ೧೮೯೨ ನೇ ಇಸವಿ ಜುಲೈ ಗುರ್ರೇ ತಾರೀಖಿನ ಪೂರ್ವಾಹ್ನದಲ್ಲಿ ಅಮೃತ ಮಹಲ್ ಆಫೀಸರ ಅಸಿಸ್ಟೆಂಟ್ ಕೆಲಸಕ್ಕೆ ವಾಪಸ್ ಹೋದರು.

ನಂ ೩೭೬, G. F. ೧೨—೯೨ —ಶಿರಾ ತಾಲ್ಲೂಕು ಅಮಲ್ದಾರ್ ಸಿ. ವೆಂಕಟಾಚಲಯ್ಯನವರಿಗೆ, ಕ್ರಮವಾಗಿ ೧೮೯೨ ನೇ ಇಸವಿ ಜೂನ್ ೨ ಮತ್ತು ಜುಲೈ ಗುರ್ರೇ ತಾರೀಖ್‌ಗಳುಳ್ಳ ೧೦೩ ಮತ್ತು ೫೩ ನೇ ನಂಬರಿನಗಳುಳ್ಳ ಇಸ್ತಿಹಾರುಗಳ ಮೂಲಕ ಕೊಡಲ್ಪಟ್ಟ ೪೨ ದಿನಗಳ ಪ್ರಿವಿಲೇಜ್ ರಜಾ ಇದರಿಂದ ೧೪ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

ನಂ. ೬೩೬, G. F. ೨೬—೯೨ — ಹಾಸನ ಡಿಸ್ಟ್ರಿಕ್ಟು ಜನರಲ್ ಅಸಿಸ್ಟೆಂಟ್ ಕಮಿಷನರ್ ಮ|| ಪಿ. ಪಂಚನದರಾಯರು ಸನ್ ೧೮೯೨ನೇ ಇಸವಿ ಜೂನ್ ೧೪ ಮತ್ತು ೧೫. ಈ ಎರಡು ತಿಂಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದರು.

ನಂ. ೬೩೪, G. ೧೨೨—೯೨ — ಶಿವಮೊಗ್ಗ ಡಿಸ್ಟ್ರಿಕ್ಟು ಕುಂಸಿ ಸಬ್ ತಾಲ್ಲೂಕು ಚಾರ್ಜಿನಲ್ಲಿರುವ ಕೆ. ಸುಬ್ಬರಾಯರವರು, ೧೮೯೨ ನೇ ಇಸವಿ ಜೂನ್ ೪ ನೇ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. G. ೧೨೩—೯೨.—ಕೊಪ್ಪ ತಾಲ್ಲೂಕು ಅಮಲ್ದಾರ್ ಸಿ. ಕೃಷ್ಣರಾಯರು, ಸನ್ ೧೮೯೨ ನೇ ಇಸವಿ ಜೂನ್ ೧೧ ನೇ ತಾರೀಖಿನ ೯೯ ನೇ ನಂಬರ್ ಇಸ್ತಿಹಾರ್ ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್ ರಜಾದಿಂದ ೧೮೯೨ ನೇ ಇಸವಿ ಜು|| ೧೬ ನೇ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸದಮೇಲೆ ಹಾಜರಾದದರಿಂದ, ಸದರೀ ರಜಾ ಪೈಕಿ ಉಳಿದ ಭಾಗವು, ಅಂದರೆ ೬ ದಿನಗಳು ರದ್ದು ಮಾಡಲ್ಪಟ್ಟಿದೆ

ನಂ|| ೬೪೦-G ೧೨೫—೯೨—ಕಡೂರ್ ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಸರ್ಜನ್ ಜೆ. ಪಿ. ನಾಯುಡುವರು ಅನಾರೋಗ್ಯದ ಸರ್ಟಿಫಿಕೇಟಿನ ಮೇಲೆ ತಾರೀಖ್ ಮೊದಲು ೩೦ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದಾರೆ.

EXTRACTS.

ಪಾಟ್ನಾಪಟ್ಟಣದ ಪೈಸ್ತ್ರೀ ಸ್ಟೇಷನಿನಲ್ಲಿ ಒಬ್ಬ ಹಿಂದೂ ಚಾಕರಿ ಮಾಡುತ್ತಿದ್ದನು. ಅವನಿಗೆ ಪೂರ್ವ ವಯಸ್ಕಳಾದ ಹೆಂಡತಿಯೂ, ಸ್ಕೂಲಿಗೆ ಹೋಗುತ್ತಿದ್ದ ಒಬ್ಬ ಮಗನೂ ಇದ್ದರು. ಅವನ ಹೆಂಡತಿಯು [illegible] ದಿನದ [illegible] ತನ್ನ ಮನೆಯನ್ನು ಬಿಟ್ಟಳು. ಮಹಾಸಾತಂದೆಯು ಬರುವವರಿಗೂ ಸುಮ್ಮನೆ ಇದ್ದು ಆನಂತರ ದಿವಸದಲ್ಲಿ ಅವನ ಸಂಗತಿ ತಾಯಿಯು ತನ್ನನ್ನು ಹೊಡೆದ ಸಂಗತಿ ಹೇಳಿದನು. ತಂದೆಯು ಅವಸ್ಥೆಗಿ ಹಾಗೆ ಹೊಡೆದು ಬಾರದೆಂದು ತನ್ನ ಹೆಂಡತಿಯನ್ನು ಗದ್ದರಿಸಿಕೊಂಡನು. ಮಾರನೆದಿವಸ ಅವಳು ಕೋಪದಿಂದ ಮಗನ ಸ್ಕೂಲ ಪುಸ್ತಕವನ್ನು ಹಾಳು ಮಾಡಿದಳು. ಯಜಮಾನನು ಈ ಸಂಗತಿಯನ್ನು ತಿಳಿದ ಕೂಡಲೆ ಕೋಪದ ಮಾಡಿಕೊಂಡು ಅವಳ ಒಡವೆಗಳನ್ನು ಮಾರಿ ಅವನಿಗೆ ಪುಸ್ತಕಗಳನ್ನು ಕೊಂಡುಕೊಳ್ಳುವೆನೆಂದು ತನ್ನ ಹೆಂಡತಿಯನ್ನು ಬೆದರಿಸಿದನು. ಇಷ್ಟು ಮಾತ್ರಕ್ಕೇನೇ ಈ ಮಾತನ್ನು ಅವಳು ತಡೆಯಲಾರದೆ ಗಂಡನು ಮನೆ ಬಿಟ್ಟು ಹೊರಗೆ ಹೋದಮೇಲೆ ಹೆಚ್ಚಾಗಿ ಅಫೀಮನ್ನು ತಿಂದು ಆತ್ಮ ಹತ್ಯ ಮಾಡಿಕೊಂಡಳು. ಕಾಲ ಸಾಯಿತು, ಗಂಡನು ಹೆಂಡತಿಯನ್ನು ಪುಸ್ತಕದ ವಿಷಯ ವದೇ ಕಷ್ಟವಾಗಿದೆಯಲ್ಲಾ !! ವೃ. ಪ.

ಪುನೆಯಲ್ಲಿನ ಪಂಚಾಯತರ ಕೋರ್ಟು ಸ್ಥಾಪಿಸಲ್ಪಟ್ಟು ೧೬ ಸಂವತ್ಸರಗಳಾದವು. ಈ ಹುದ್ದೆದಾರರು ಸಂವತ್ಸರದ ಕಾಲವೆಲ್ಲಗಳಾಗಿ ಸದರೀ ಕೋರ್ಟಿನಲ್ಲಿ ಬಹಳ ಕೆಲಸಗಳು ನಡೆಯುವದಂ ಕೇಳಲು ಅತ್ಯಂತ ಸಂತುಷ್ಟಿಕರವಾಗಿದೆ. ಕಳೆದ ಸಾಲಿನಲ್ಲಿ ಮಾತ್ರ, ೧೮೯೩ ವ್ಯಾಜ್ಯಗಳು ಸದರೀ ಕೋರ್ಟಿನಲ್ಲಿ ದಾಖಲಾದವು. ಅವುಗಳ ಒಟ್ಟು ಬೆಲೆ ಎರಡೂವರೆ ಲಕ್ಷ ರೂಪಾಯಿಗಳು. ಇತರ ದೇಶದಿಂದ ಜನಗಳಿಗೆ ಸದರೀ ಕೋರ್ಟಿನ ವಿಷಯದಲ್ಲಿರುವ ನಂಬಿಕೆಯೂ ಗೌರವವೂ ವ್ಯಕ್ತವಾಗುತಿದೆ ಇದು ಸಂತೋಷಪ್ರೋತ್ಸಾಹಕರವಾದುದು. ಇದರಲ್ಲಿನ ಮತ್ತೊಂದು ವಿಶೇಷ ವೇನೆಂದರೆ, ವ್ಯಾಜ್ಯಗಳು ಸ್ವಲ್ಪವಾಗಿ ಜನಗಳು ಸ್ವಲ್ಪವನ್ನು ಪೋಗಲಾಡಿಸಿ ಕೊಳ್ಳುತ್ತಿರುವ ಈ ಕಾಲದಲ್ಲಿ ಸದರೀ ಪಂಚಾಯತ ಕೋರ್ಟಿನ ಉಪಯುಕ್ತತೆಯನ್ನು ಕುರಿತು ಜನಗಳು ಹೇಳುವದಕ್ಕೆ ಅಗತ್ಯವಾಗಿಯೇ ಇರುತಿದೆ ಇಂತಹ ಕೋರ್ಟುಗಳು ಅನೇಕ ಸ್ಥಳಗಳಲ್ಲಿ ಏರ್ಪಡಿಸಲ್ಪಟ್ಟರೆ ಬಹಳ ಪ್ರಯೋಜನಕರವಾಗಿರುತ್ತದೆ. ಇದೇ ಉದ್ದೇಶದಿಂದಲೆ ಕಲ್ಕತ್ತೆಯಲ್ಲಿ ಸ್ಥಾಪಿಸಲ್ಪಟ್ಟಿರುವ ವಾಣಿಜ್ಯದ ಪಂಚಾಯತಿ ಕೋರ್ಟಿನಲ್ಲಿ ಒಳ್ಳೆಯ ಕೆಲಸಗಳು ನಡೆಯುತಲಿವೆ. ಪರಂತು ಅವರ ಕಾರ್ಯಗಳ ಉಪಯುಕ್ತತೆಯೂ ಸ್ಪಷ್ಟವಾಗಬೇಕು.

SUMMARY OF NEWS.
ವೃತ್ತಾಂತ ಸಂಗ್ರಹವು.

ಅನಂತ ಪುರ—ಈ ಪ್ರಾಂತದಲ್ಲಿ ಪ್ರಬಲ ಮಳೆ ಬಿದ್ದು ೧೦—೧೨ ಕೆರೆಗಳು ತುಂಬಿ ಕಟ್ಟೆಗಳು ಒಡೆದುಹೋಗಿ ಬಿತ್ತ ನೋಡಿದವರು ಜಲಮಯವಾಗಿವೆ, ಇಲ್ಲಿ ಅಕ್ಕಿ ರೂ. ಒಕ್ಕೆ ೧|| ಸೇರು, ರಾಗಿ ೨೦ ಸೇರಿನಂತೆ ಮಾರುತಿವೆ,

ಬಂಗಾಳ ದೇಶದಲ್ಲಿ ನಾಲ್ಯವಾದನ ಠಾಣೇದಾರರು ಕೆಲ ನೇಟಿವ್ ಕಾಲೇಜಿಯನ್ ಸ್ಟೇಷನ್ ಕಟ್ಟುವದಕ್ಕೆ ತನಗೆ ಆಪ್ಪಣೆ ಕೊಡಬೇಕೆಂದು ಇಂಡ್ಯಾ ಗವರ್ನಮೆಂಟಿಗೆ ಬರೆದುಕೊಂಡದಕ್ಕೆ ಅವರು ಅವಕಾಶ ಕೊಡದೆ ಹೋದದಷ್ಟೆ. ಸದರೀ ಅರ್ಜಿಯು, [illegible] ಸಮಾಜಕ್ಕೆ ಅವರಲ್ಲಿ ಒಬ್ಬ ಹೆಂಬಾದ ಸೈನ್ಯರ್ [illegible] ವರಿಸಲ್ಪಟ್ಟು ಅಲ್ಲಿ [illegible] ಬರುವುದು.

ಕಳೆದ ವರ್ಷದಲ್ಲಿ ಪೂರ್ಣವಾಗಿ ಮಳೆ ಇಲ್ಲದೆ ಹೋಗಿ ತನ್ಮೂಲಕ ಈ ಸಂವತ್ಸರ ಬಹಳವಾಗಿ ಪ್ರಿಯವಾದುದರಿಂದ, ಪಶುಗಳಿಗೆ ನಾನಾ ರೋಗಗಳು ಹಾಕುತಬಂದು ತನ್ಮೂಲಕ ಅನೇಕ ಸಹಸ್ರ ದನಗಳು ಸತ್ತುಹೋದವು ಈಗ ಮಳೆ ಬಿದ್ದಿದ್ದಾಗ್ಯೂ ಉಳುವದಕ್ಕೆ ದನಗಳಿಲ್ಲದೆ ಹೋದದರಿಂದ ಬಳ್ಳಾರಿ ಪ್ರಾಂತದಲ್ಲಿ ಕೆಲವು ಪ್ರದೇಶಗಳೊಳಗೂ ಅದಿವೇಣಿಯಲ್ಲೂ ಮುತ್ತುಗಳು ಪಶುವಿನ ಕೆಲಸವನ್ನು ಮನುಷ್ಯರೇ ಮಾಡುತಲಿದ್ದಾರೆ. ಸ ಜೊ.

[illegible]

ಮದರಾಸ್ ಗವರ್ನ್‌ಮೆಂಟ್ ಪ್ರೆಸ್, ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ [illegible] ಆಫೀಸಿನ ಲಕ್ಷ್ಮಣನನ್ನು [illegible] ವರ್ಗ ಮಾಡಿದ [illegible] ಸುಮಾರು ೩,೦೦೦ ರೂಪಾಯಿಗಳು [illegible] ಸಾಂತರಗಳು ಸರ್ಕಾರದ ಲೆಕ್ಕಕ್ಕೆ [illegible] ಅವನ ಮೇಲೆ ಫಿರ್ಯಾದು ಮಾಡಿದರು. ಈತನ ವಿಚಾರಣೆ [illegible] ಮುಗಿಯುವವರೆಗೂ ಅವನ ಮೇಲಿನ ಆಪಾದನೆ [illegible].

ಬಳ್ಳಾರಿ—ಈ ಪ್ರಾಂತದಲ್ಲಿ ವಾಂತಿ ಬೇದಿ ರೋಗವು ಬಹಳ ಉಗ್ರವಾಗಿ ವ್ಯಾಪಿಸಿ ದಿನ ಒಂದಕ್ಕೆ ಸರಾಸರಿ ೧೦ ಜನರಿಗೆ ಕಮ್ಮಿ ಇಲ್ಲದೆ ಸಾಯುತಲಿರುವಂತೆ ಕೇಳುತ್ತೇವೆ. ಅವರ ವ್ಯವಸಾಯವನ್ನು ಪ್ರಾಂತದಲ್ಲೇ ಬಳಸುವ ವಿಷಯದಲ್ಲಿ ಮ್ಯುನಿಸಿಪಾಲಿಟಿಯವರು ವಿಶೇಷ ಪ್ರಯತ್ನ ಮಾಡಬೇಕೆಂದು ಕೋರುತ್ತೇವೆ, ಹಾಗೆ ಮಾಡದೆ ಹೋದರೆ ಅದು ಪ್ರಬಲವಾದಮೇಲೆ ಸಾಧ್ಯವಾಗದೆ [illegible] ತುಂಬುವಳಿಯ ಬೆಸಿಯುವ ಈ ದೊಡ್ಡ ಸ್ಪಷ್ಟವಾಗುತ್ತದೆ. ಅದು ಬಲವಾಗಿ ಎರಡು ಮೂರುದಿನ ಮಳೆ ಬಿದ್ದರೆ ಅದು ಶಾಂತವಾಗುವದು, —ಸ್ವ. [illegible]

[illegible] ತಮ್ಮ ರಾಜ್ಯ [illegible] ಒಂದು [illegible] ಯಿದಕ್ಕಿಂತಲು [illegible] ಜಾಗವನ್ನು ಉಪಯುಕ್ತವಾದ ಒಂದು ಜಾಗ [illegible]. ಈ ಮೊದಲಿಂದ ಬಿನಾತ್ಯಾಗದ ಹೊಸ ಕಟ್ಟಿಗಳು, [illegible] ದರ್ಬಾರು [illegible] ಕಟ್ಟಿಗೆ ಉಪಯೋಗಿಸಲ್ಪಡುವ ಪಾದ್ಯ [illegible] ನಮ್ಮ ದೇಶಕ್ಕೆ ಮತ್ತು ಸುಲಭವಾದ ಮಾರ್ಗಕ ಕೆಲಸಗಾರರೂ ದೊರೆತರೆ ಈ ಬಗ್ಯೆ ಯಮುನಾ [illegible] ಹೇಗೆ ಬಹುಪ್ರದ ವಾಗುವದು.

ಚೀನಾ ರಾಜ್ಯಕ್ಕೆ ದಕ್ಷಿಣ ದಿಕ್ಕಿನಲ್ಲಿ ಸಿಲಿಬೇಸ್ ಎಂಬ ಒಂದು ದ್ವೀಪವಿರುತದೆ, ಅದರ ಸಮೀಪದಲ್ಲಿರುವ ಸಾಂಗೀರ್ (Sangir) ಎಂಬ ಸಣ್ಣ ದ್ವೀಪದಲ್ಲಿ ಅವು ಎಂಬ ಅಗ್ನಿ ಪರ್ವತವಿರುತದೆ, ಕಳೆದ ಸುಮಾರು ೭೬ ವರುಷಗಳಲ್ಲಿ ಈ ಅಗ್ನಿಪರ್ವತದಿಂದ (ಲಾವಾ ಎಂಬ) ಪ್ರಳಯಕಾರವಾದ ರೋಗಗಳು ನಾಶವು ದೇಶಕ್ಕೆ ಹಾನಿ ಭೂಮಿಯು ಮೇಲೆ ಬಿದ್ದದರಿಂದ ೬,೦೦೦ ಜನರು ನಾಶವಾದರು. ಈಗ ಕೆಲವು ದಿವಸಗಳ ಹಿಂದೆ ಈ ಅಗ್ನಿ ಪರ್ವತದಿಂದ ಪುನಃ ಪ್ರಳಯವಾಗಿ ಇದ ರೋಗವು ಆ ದ್ವೀಪದಲ್ಲಿ ಬಿದ್ದ ಇದರಿಂದ ಆ ದ್ವೀಪದಲ್ಲಿ ವಾಸಮಾಡುತಲಿದ್ದ ೧೨,೦೦೦ ಜನರ ಪೈಕಿ ಒಬ್ಬನೂ ಉಳಿಯದೆ ಎಲ್ಲರೂ ಸತ್ತರೆಂದು ವರ್ತಮಾನವು ತಂತೀ ಮೂಲಕ ಬಂದಿರುತ್ತದೆ.—ಸ್ವ. ಪ.

ಈಚೆಗೆ ಕೆಲವು ದಿನಗಳ ಹಿಂದೆ ಕಂಧಂ ರೈಲ್ವೇ ಸ್ಟೇಷನ್ನಲ್ಲಿ ಒಬ್ಬ ಪ್ರಯಾಣಸ್ಥನು ತನ್ನ ಭಾರ್ಯೆಯೊಡನೆ ಇಳಿದು ಊರೊಳಗೆ ಹೋಗಿ ಆದಿನ ಅಲ್ಲಿ ಇದ್ದು ಮುಂದೆ ಹೊರಡಬೇಕೆಂದು ಯೋಚಿಸುತ್ತಿರುವಲ್ಲಿ ಆ ಸ್ಟೇಷನ್ ಜವಾನರು ಆ ದಂಪತಿಗಳಂ ನೋಡಿ ಈ ಮಳೆಯಲ್ಲಿ ವ್ಯರ್ಥವಾಗಿ ಕಷ್ಟಪಟ್ಟುಕೊಂಡು ಊರೊಳಗೆ ಹೋಗುವದರಲ್ಲಿ ಪ್ರಯೋಜನವಿಲ್ಲವೆಂದು ಅವರಿಗೆ ಜೇಳ ಸ್ಟೇಷನ್ನಲ್ಲೇ ಆ ದಿನ ರಾತ್ರಿ ನಿಲ್ಲುವದಕ್ಕೆ ಸ್ಥಳ ಕೊಟ್ಟರು. ಅವರು ಮಾಡಿದ ಉಪಚಾರಕ್ಕೆ ಸದರೀ ದಂಪತಿಗಳು ಮರುಳಾಗಿ ಸಂತೋಷ ಪಟ್ಟು ಅಲ್ಲೇ ನಿಂತು ಬಿಟ್ಟರು. ಸ್ವಲ್ಪ ಹೊತ್ತು ಕಳೆದ ಬಳಿಕ ಎಲ್ಲಾ ಗಾಡಿಗಳೂ ಹೊರಟುಹೋದಮೇಲೆ ಸ್ಟೇಷನ್ ನೌಕರರಿಗೆ ಸೇರಿದ ೧೨ ಜನರು ಕೂಡಿ, ಸದರೀ ದಂಪತಿಗಳು ಮಲಗಿದ್ದ ಕೊಠಡಿಗೆ ಹೋಗಲು, ಅವರು ತಮಗೆ ಸುಖಸ್ಥಳವನ್ನು ಮಾಡಿ ಕೊಟ್ಟವರೆಂಬ ಕೃತಜ್ಞತೆಯಿಂದ ಅವರನ್ನು ಬಿಳಿಸಿ ಕರೆದರು. ಅವರೊಳಗೊಬ್ಬನು ಕಾಮ ಪೀಡಿತನಾಗಿ ಸದರೀ ಹೆಂಗಸಿನ ಮೇಲೆ ಬೀಳಲು ಉಳಿದವರೆಲ್ಲರೂ ಆತನಂ ಅನುಸರಿಸಿದರು ಎಂದು ಪಶ್ಯರ ಧಾರ್ಮ್ಯವಾದ ಲೋಕಬಂಧು ಎಂಬ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟಿರುತದೆ. ಇದು ನಿಜವಾದದ್ದೇ ಆದರೆ ಅಪರಾಧಿಗಳು ಸರಿಯಾದ ಶಿಕ್ಷೆಯೆಂದು ಕಾಣುತದೆ,

ಬರೋಡಾದಲ್ಲಿ ಕೇವಲ ಸ್ವ ಯುಕ್ತಿಯಿಂದಲೇ ಒಂದು ಸಂಗತಿ ನಡೆದಂತೆ ತಿಳಿಯಬರುತಿದೆ.—ಒಂದು ಉದ್ಯೋಗದ ಬಾಲಕನೊಬ್ಬನು ಇಂಗ್ಲಾಂಡಿಗೆ ಹೋಗಿ ಅಲ್ಲಿನ ಪರೀಕ್ಷೆ ಕಾಲದ ಆಲ್ಲೀ ಇರುತ್ತಿದ್ದನು. ಅಲ್ಲಿ ಯೇನು ಮಾಡುತ್ತಿದ್ದನೋ ಅದು ಯಾರಿಗೂ ತಿಳಿಯದು, ಪರಂತು ಸಾಹಸದಿಂದ ಕಾಲವನ್ನು ಸಿವಿಲ್ ಸರ್ವೀಸ್ ಪರೀಕ್ಷೆಯನ್ನಾಗಲಿ ಬ್ಯಾರಿಸ್ಟರ್ ಪರೀಕ್ಷೆಯನ್ನಾದರೂ ಕೊಟ್ಟು ಬರಲಿಲ್ಲವು. [illegible] ಇಂಗ್ಲಾಂಡಿಗೆ ಹೊರಟು ಹೋಗುವದಕ್ಕೆ ಪ್ರಾರ್ಥನೆ ಮಾಡುವ ವಾತಿಕೆಯಿಂದ ತನ್ನ ಹೆಂಡತಿಯನ್ನೂ ತನ್ನಲ್ಲಿಗೆ ಕಳುಹಿಸಿ ಕೊಡಬೇಕೆಂದು ತನ್ನ ಮಾವನಿಗೆ ಪತ್ರಂ ಕೊಡುತಬಂದು ಅಲ್ಲಿನ ಮ್ಯಾಜಿಸ್ಟ್ರೇಟರಿಗೆ ಅರ್ಜಿ ಕೊಟ್ಟನು [illegible] ನ್ಯಾಯಾಧಿಪತಿಯು [illegible] ಅಪೇಕ್ಷಿಸುವಂತೆ ಆತನ ಹೆಂಡತಿಯನ್ನು ಕಳುಹಿಸಿ ಇರುವದಕ್ಕೆ ಕಾರಣ ತೋರಿಸಬೇಕೆಂದು ನೋಟೀಸ್ ಕೊಟ್ಟರು. ಪಾಂಡುರಂಗನನು ಒಬ್ಬ ವಕೀಲನೊಡನೆ [illegible] ತನ್ನ ಮಗಳು [illegible] ಈ ರೀತಿ ಬರೆದು ಆ [illegible] ತನ್ನ ಅಳಿಯನಿಗೆ ಇಂಗ್ಲಾಂಡಿನ ಒಬ್ಬ ಇಂಗ್ಲಿಷ್ ಹೆಂಗಸು ಜತೆ [illegible] ಸದರೀ [illegible] ಇಂಗ್ಲಾಂಡಿನಲ್ಲಿದ್ದ ಕಾಲದಲ್ಲಿ [illegible] ಇಂಗ್ಲಿಷ್ ಹೆಂಗಸು [illegible] ಒಬ್ಬ [illegible] ವಕೀಲರು ಸದರೀ [illegible] ಕೊಡಲಿ [illegible] ವಜಾ ಮಾಡಿದರು.

[illegible] ಹಾರಾಜರು [illegible] ಬಹುಕಾಲದ [illegible] ಒಂದು ದಿವಸ ರಾಜನ ಸನ್ನಿಧಿಗೆ ಬಂದನು. ಅವನು [illegible] ಬಹಳ ಆರ್ಭಟದಿಂದ [illegible] ತನ್ನ ಊರಿನ ಮುತ್ತಿನ [illegible] ಪ್ರಶ್ನೆ [illegible] ಒಂದು ವಿಷಯ [illegible] ನಿನ್ನ ರಾಜ್ಯದಲ್ಲಿ [illegible] ನಿನ್ನ ಶಿರಸ್ಸನ್ನು [illegible] ನನ್ನಿಂದ ನೀನು ಪರಾಜಿತನಾದರೆ ನಿನಗೆ [illegible] ಈ ಬಂಗಾರ ಕುರಿತ ನೀನು ಪೂರ್ಣವಾಗಿ ವಿಚಾರ ಮಾಡಬೇಕೆಂದು ಹೇಳಿದ [illegible] ಅವನೊಡನೆ ಒಪ್ಪಂದ ಮಾಡಲಿಲ್ಲ, ತನಗೆ ಊಟಕ್ಕೆ ಬಿಡುವಿಕೆಂದು ಕೇಳಿಕೊಂಡು [illegible] ಆ ದಿನ ರಾಣಿಯು ಬಂಗಾರದ ತಟ್ಟೆಯಲ್ಲಿ ಬಂಗಾರದ ರೊಟ್ಟಿಗಳನ್ನಿಟ್ಟು ಬಾಡಿಷಾ ಅವನ ಮುಂದೆ ತಂದಿಟ್ಟಳು. ಬಾಡಿಷಾನು ಅದು ನೋಡಿ, ಇದೇನು ? ನಿಮ್ಮ ಊರಲ್ಲಿ ಬಂಗಾರದ ರೊಟ್ಟಿಯನ್ನೇ ತಿನ್ನುವರು? ಅನ್ನ ಹುಲಿಗೆಕೆ ಒಂದು ಸ್ವಲ್ಪ ಮಾಡಲು, ನಿನ್ನ ದೇಶದಲ್ಲಿ ಅನ್ನ ಸಿಕ್ಕದೆ ನೀನು ನಮ್ಮ ರಾಜ್ಯದ ಮೇಲೆ ಬಂದಿರುತ್ತೀಯಷ್ಟೇ, ಆದ್ದರಿಂದ ಇದನ್ನು ಸ್ವೀಕರಿಸೆಂದು ಹೇಳಿದ ಮಾತಂ ಕೇಳಿ ಬಾದಷಾ ಯವನು ಭ್ರಾಂತನಾಗಿ ತಾನು ವಾಪಸ್ ಹೊರಡುವಾಗ್ಗೆ ಅಲ್ಲಿನ ಕೋಟೆಯ ಗೋಡೆಯ ಮೇಲೆ ಈ ಮುಂದಿನ ಸಂಗತಿಗಳನ್ನೆಲ್ಲ ಬರೆದು, ಮಹಮೋದನೆಂಬ ರಾಜನಾದ ನಾನು ಇಲ್ಲಿಗೆ ಬರುವದಕ್ಕೆ ಕಾರಣ ಕೇವಲ ಅವಿಚಾರ ಪರನಾಗಿಯೂ, ಮದಾಂಧನಾಗಿಯೂ ಇರುತಲಿದ್ದೆನು. ಆದರೆ ಇಲ್ಲಿಗೆ ಬಂದಮೇಲೆ ಸ್ತ್ರೀಯಿಂದ ಬುದ್ಧಿ ಕಲಿತುಕೊಂಡೆನು, ಎಂದು ಬರೆದು ಬಿಟ್ಟು ಹೋದನು. ಲೋ.

BANGALORE.—Printed and published at the KARNATAKA PRESS, No. 40, [illegible] ROAD, PETTAH—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಜಾನುವಿವಿಧವೃತ್ತ್ಯುಚಿತಮಾರ್ಗಕರ್ಣಾಟಕಪ್ರಕಾಶನಪರಾ... ಹಿತಮುದ್ರಣಾ...

Vol. XIX.] BANGALORE:—MONDAY, AUGUST 1, 1892. [No. 31.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಆಗಸ್ಟ್ ೧ ನೇ ತಾರೀಖ್ ಸೋಮವಾರ. [ಸಂಖ್ಯೆ ೩೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳ್ಳೆ	ಸ್ಥಳದವರಿಗೆ ಟಪಾಲಿಲ್ಲದೆ.	ಪರಸ್ಥಳದವರಿಗೆ ಟಪಾಲ್‌ಸಹಿತ.
ಮುಂಗಡವಾಗಿ ಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಯಮಾಡಿ ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಮೊಬಲಗು ಕಳುಹಿಸುವವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತರಿಸಿಕೊಳ್ಳಬಹುದು. ೬ ತಿಂಗಳಿಗಿಂತ ಕಡಮೆಯಾಗಿ ಚಂದಾ ಮೊಬಲಗು ಅಂಗೀಕರಿಸಲ್ಪಡುವದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆಯದಿನಾ ಪಙ್ತಿ ಒಂದಕ್ಕೆ ೦—೨—೦

ಎರಡನೆಯದಿನಾ ಪಙ್ತಿ ಒಂದಕ್ಕೆ ೦—೧—೦

ಕಡಿಮೆ—ಎರಡಾವರ್ತಿಗಿಂತ ಜಾಸ್ತಿಯಾಗಿ ಎಷ್ಟುಕಡವ ಪ್ರಕಟಿಸ ಮಾಡಿದಾಗ್ಯೂ ಪಙ್ತಿ ಒಂದಕ್ಕೆ ೧ ಆಣೆಯಂತೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟ ಮಾಡುವುದಕ್ಕೆ ಪ್ರಕಟನೆಗಳು ಕಳುಹಿಸುವವರು ಅವು ಎಷ್ಟಾವರ್ತಿ ಪ್ರಕಟ ಮಾಡಲ್ಪಡಬೇಕೋ ಆ ಅಂಶವನ್ನು ಸ್ಪಷ್ಟವಾಗಿ ತಿಳಿಸತಕ್ಕದ್ದು. ಇಲ್ಲದಪಕ್ಷಕ್ಕೆ ಅವರು ನಮಗೆ ನಿಲ್ಲಿಸುವಂತೆ ಬರೆಯುವತನಕ ಅವು ಪ್ರಕಟಿಸುತ್ತಿದ್ದು ಅನಂತರ ಎಷ್ಟಾವರ್ತಿ ಪ್ರಕಟಿಸಲ್ಪಟ್ಟಿದ್ದಾಗ್ಯೂ ಮೇಲ್ಕಂಡ ದರದಂತೆ ಕಿಮ್ಮತ್ ವಸೂಲ್ಮಾಡಲ್ಪಡುವದು. ಪ್ರಕಟನೆಗಳಿಗೆ ಕಳುಹಿಸಲ್ಪಡತಕ್ಕ ಪ್ರಕಟನೆಗಳನ್ನು ಆ ವಾರ ಶನಿವಾರದ ಮಧ್ಯಾಹ್ನ ೨ ಘಂಟೆ ಒಳಗಾಗಿ ಕಳುಹಿಸಬೇಕು. ಪ್ರಕಟನೆಯನ್ನು ಈ ಪತ್ರಿಕೆಗೆ ಕಳುಹಿಸಲ್ಪಡತಕ್ಕ ಕಾಗದಗಳಲ್ಲಿ ತಿಳಿಸಲ್ಪಡುವ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಾಗಲಾರೆವು. ಕ್ರಮವಾಗಿ ರುಜುಮಾಡಿ ದಸ್ತೂರು ಸಹಿತವಾಗದವನ್ನು ಪ್ರಕಟಿಸಲಾರೆವು. ನಿರಾಕರಿಸಲ್ಪಟ್ಟ ಕಾಗದಗಳು ಹಿಂದಕ್ಕೆ ಕಳುಹಿಸಲ್ಪಡಲಾರವು.

ADVERTISEMENTS.

NOTICE.

VAIDYASARA SANGRAHA

A TREATISE ON PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾಪೇಕ್ಷೆಯುಳ್ಳವರು ಮೊಬಲಗಿನೊಡನೆ ನಡೆ ವಳಿ ರುಜು ಮಾಡಿದತಕ್ಕವರ ಹೆಸರಿಗೆ ಬರೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಮೊಬಲಗು ಇಲ್ಲದ ಕಾಗದಗಳಿಗೆ ಸಿಗೆ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಹಾಸಲು ಸೇರಿಸಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ದಫರ್ ಆಸ್ಪತ್ರೆ ರೋಡ್ ೪೮ ನೆಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೭೩ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು ಸುಲಭಬಾಡಿಗೆಗೆ ತೀವ್ರವಾಗಿಯೂ ಅಚ್ಚುಕಟ್ಟಾಗಿಯೂ, ಮಾಡಲ್ಪಡುವವು.

ಇದರಲ್ಲಿ ಅಚ್ಚು ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತಿದೆ. ಇತರ ಕರ್ನಾಟಕಗಳನ್ನು ಸರಕಾರ ಕಚೇರಿಗಳ್ಲಲಿ ಕೂಡಿದು ತರಿಸಿಕೊಳ್ಳಬಹುದು.

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಕೆಳಕಂಡು ಬಾಬ್ತುಗಳಲ್ಲಿರುವ ಮೇಲೆ ತಿಳಿಸಲ್ಪಟ್ಟವರಿಂದ ಮಾಡಲ್ಪಟ್ಟ ಬಹಳಕಾಲ ಪ್ರಾಶಸ್ತ್ಯವುಳ್ಳ ಔಷಧಗಳು ಬೇಕಾದವರು ಅವರಿಗೆ ಬರೆದು ತರಿಸಿಕೊಳ್ಳಬಹುದು. ಈ ಔಷಧಗಳು ಶಾಸ್ತ್ರೋಕ್ತವಾದ ಕೆಲವು ಸಿದ್ಧಕ್ರಿಯೆಗಳ ಮೇಲೆ ತಯಾರಾದವಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನೂ ಔಷಧ ಪಥ್ಯಾದಿಗಳ ಕ್ರಮವನ್ನೂ ಸವಿವರವಾಗಿ ಬರೆದು ತಿಳಿಸಿಕೊಳ್ಳಬಹುದು. ಹಾಗೆ ಕಾಗದ ಬರೆಯತಕ್ಕವರು ಅವರಿಂದ ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸದ ತಮ್ಮ ಕಾಗದದಲ್ಲಿ ಅರ್ಧಾಣೆ ಸ್ಟಾಂಪ್ ಮುಚ್ಚಿ ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿದವರು ನಿರಾಕರಿಸಿದರೆ ಆ ಬಾಬ್ತು ವ್ಯಾಲ್ಯೂ ಪೇಯಬಲ್ ಖರ್ಚು ಅವರೇ ಕೊಡಬೇಕಾಗುವದು.

ತೈಲ.—ಮಹಾತಕ್ರತೈಲ, ಇದು ಶಿರೋ ಮಾಲೆಗಳಿಗೂ, ಕಾವಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿಬಂಧಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶಿರೋವ್ಯಾಧಿಗಳ ವೇದನೆಗಳಿಗೂ ಬಹಳ ಉಪಯುಕ್ತವಾದ ನಿವಾರಕವಾದುದಾಗಿದೆ. ಸಣ್ಣ ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ಕ್ಕೆ ೫ ರೂ

ಜ್ವರದ ಗುಳಿಗೆಗಳು.—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತದೆ. ರೂ. ೧ಕ್ಕೆ ೧೨ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೧೨ ದಿನಗಳವರೆಗೆ ಬಿಡದೆಮುಟ್ಟು ಹೊಟ್ಟೆಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಪ್ರಮೇಹಗಳೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕುಹಲ್ಲುಗಳು, ಸಡಿಲ ಬಿದ್ದಿರುವ ಹಲ್ಲುಗಳು, ಇವುಗಳನ್ನು ಮಾಣಿಸಿ ಭದ್ರಪಡಿಸಿ ಕಾಂತಿಯನ್ನುಂಟುಮಾಡುವುದು. ಇದು ಮೊದಲವಿಧಪ್ಪ, ಪೊಟ್ಟಣ ೧ಕ್ಕೆ ೧ ರೂ. ಇದು ೧೨ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ವರ್ತಿ.—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು, ಬೆಳಕುಕಾಣದ ಇ ಸಕಲರೋಗಗಳಿಗೂ ಪ್ರಶಸ್ತವಾದದು. ಮಲೋತಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ವರ್ತಿ ೧ಕ್ಕೆ ೪ ಆಣೆ, ಇದು ೬೦ ದಿನಗಳವರೆಗೆ ಬರುವ ಹೊತ್ತು ಬಾಕಿಕೊಳ್ಳಬಹುದು.

ಮೂಲವ್ಯಾಧಿಗೆ—ಒಂದು ಉಂಗರವು ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲರೋಗವು ಪರಿಹಾರವಾಗುವದು. ಉಂಗರ ಒಂದಕ್ಕೆ ೧ ರೂಪಾಯಿ. ಇದನ್ನು ಬಲಗೈಯಲ್ಲಿ ನಿಯತವಾಗಿ ಹಾಕಿಕೊಂಡಿರತಕ್ಕದ್ದು. ಇದರ ಸ್ಪರ್ಶದಿಂದ ಮೂಲೋಪದ್ರವವು ನಿವೃತ್ತಿಯಾಗುವದು.

ಭಸ್ಮಗಳು.—ತಾಮ್ರ, ರಜತ, ವಂಗ, ಸೀಸ, ಪ್ರವಾಳ, ಸ್ವರ್ಣ, ಅಭ್ರಕ, ಲೋಹ, ಕಾಂತ ಮೊದಲಾದ ಭಸ್ಮಗಳೂ ಸಿಂದೂರಗಳೂ ಸಿದ್ಧ ಕ್ರಿಯೆಗಳಿಂದ ತಯಾರಾದವು. ಇವು ಮಂದು ಕಾಮಿಲಾ ಕ್ಷಯಾದಿ ಸಕಲ ವ್ಯಾಧಿ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವನ್ನು ಗುಣವಾಗಿ ಔಷಧವು ಕೊಡಲ್ಪಡುವದಾದುದರಿಂದ ಇವುಗಳ ಮೇಲೆ ಕ್ರಯವು ನಿಷ್ಕರ್ಷಿಸಲ್ಪಡಲಿಲ್ಲ.

ಲೇಹ್ಯಗಳು.—ಮಹಾಪಿಪ್ಪಲಿ, ಚಿಂತಾಮಣಿ, ಕೂಷ್ಮಾಂಡ ವಗೈರೆ ದಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ಕ್ಕೆ ೩ ರೂ.

ಪರಿಮಳದ್ರವ್ಯಗಳು.—ಗಂಧ, ಪಾಚಪತ್ರೆ, ದವನ, ಮಲ್ಲಿಗೆ, ಸಂಪಗೆ, ಖಸ್ ಖಸ್, ಕೇದಗೆ ಮೊದಲಾದ ಪರಿಮಳಗಳು ತಯಾರಾಗಿವೆ. ಇವು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು.—ಮಹಾ ಸುದರ್ಶನ ಚೂರ್ಣ, ಹಿಂಗ್ವಾಷ್ಟಕ ಚೂರ್ಣ, ತಾಳೀಸಾದಿ ವಗೈರೆ ಚೂರ್ಣಗಳು ಅಜೀರ್ಣ ಪಿತ್ತ ವಾತೋಪದ್ರವಗಳಿಗೆ ಶಾಮಕವಾದವು. ಇದು ೬೦ ದಿನಗಳಿಗೆ ತೆಗೆದುಕೊಳ್ಳುವುದು, ಪಾವು ಒಂದಕ್ಕೆ ೧ ರೂ.

ನೋಟೀಸ್.

ಗಣೇಶ ರಾಮಚಂದ್ರ ಕರ್ಣ ಮತ್ತು ಕಂಪೆನಿ.

ಕಮ್ಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಶೀಘ್ರವಾಗಿ ಕಳುಹಿಸುವುದರೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕಕಮ್ಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು ಹವಳ ಮುತ್ತುಗಳು, ಆಭರಣಗಳು, ವಾಚ್‌ಗಳು, ಟೈಂಪೀಸಗಳು, ಕಾಶ್ಮೀರ ಶಾಲುಗಳು, ಪೀತಾಂಬರಗಳು, ಜರತಾರಿ ಕಣಗಳು, ಚಂದ್ರಕಾಂತ ಬಿಳುಪು ಕನ್ನಡಕಗಳು, ಮದುವೆಗೆ ಬೇಕಾದ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫೀಸ್ ಡ್ರೆಸಗಳು, ಪಟಗಳು, ಅತ್ತರಗಳು, ಉತ್ತಮ ತರಹದ ವಸ್ತ್ರಗಳು, ಭೂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ದೇವತೆಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸದೆ ಹೊರತು ಜವಾಬ ಬರೆಯಲಾರೆವು.

ವಿಳಾಸ.—ಗಣೇಶ ರಾಮಚಂದ್ರ ಕರ್ಣ,

ಮತ್ತು ಕಂಪೆನಿ, ಕಮ್ಮಿಷನ್ ಏಜಂಟ್ಸ್,

ಮಾಕರ್ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಟಪಾಲ್ ಸಹಿ	ರೂ. ಆ. ಪೈ.
ಸಟೀಕಾ ವೈದ್ಯಸಾರ ಸಂಗ್ರಹ ...	೫	೦ ೬
,, ಶಿವಗೀತೆ ...	೧	೧ ೦
,, ಶಿವಾನಂದಲಹರಿ ...	೦	೪ ೦
,, ಕಾಲಾಮೃತ ...	೧	೦ ೦
,, ಟಿ|| ವಾಲ್ಮೀಕಿರಾಮಾಯಣ ..	೦	೩ ೦
,, ಟೀ|| ಗೋಪಿಕಾ ಗೀತೆ ...	೦	೧ ೦
,, ಟೀ|| ಚಾಣಕ್ಯನೀತಿ (ಸುಭಾಷಿತ)	೦	೪ ೨
ವಿಷ್ಣುಸಹಸ್ರನಾಮ ಪತ್ರಿಕೆ ...	೦	೩ ೦
ಸೂರ್ಯಸಹಸ್ರನಾಮ ...	೦	೨ ೦
ಕೃಷ್ಣಕರ್ಣಾಮೃತ ...	೦	೨ ೦
ತ್ರಿಕಾಂಡ ಅಮರ ಮೂಲ ...	೦	೨ ೦
೧ ಕಾಂಡ ...	೦	೦ ೬

ಕನ್ನಡ ಗ್ರಂಥಗಳು.

ಶುಕಸಪ್ತತಿ ಅವ್ವೆಲ್ ...	೩	೦ ೦
ದಿವಾನ್ ದುರ್ಯ್ಯಾಂ ...	೧	೬ ೦
ವೃಷಭೇಂದ್ರವಿಜಯ ...	೧	೪ ೦
ಪಂಚಭಾಷೆ ಬಾಲಬೋಧೆ ...	೦	೬ ೦
ಹನುಮದ್ವಿಲಾಸ ...	೦	೬ ೦
ಕಾಳೀಯಮರ್ದನ ...	೦	೨ ೦
ಸುದಾಮ್ನ ಚರಿತ ...	೦	೨ ೦
ಕಲಿದೇವಾಲಯ ...	೦	೨ ೬
ಸುದಾಮ ಚರಿತ್ರೆ ...	೦	೧ ೦
ಶ್ರೀರಾಮ ಚರಿತ್ರೆ ...	೦	೧ ೦
ಬಾಲಚಿಕಿತ್ಸೆ ...	೦	೧ ೦
ಮನಸ್ಮೃರ್ದನ ಲಾ ...	೦	೧೦ ೦
ಭ್ರಾಂತಿವಿಲಾಸ ...	೦	೧೨ ೦

ನೋಟೀಸ್.

ಇದರಿಂದ ಈ ಪತ್ರಿಕೆಯ ಚಂದಾದಾರರಿಗೆ ನಾವು ತಿಳಿಸುವದೇನೆಂದರೆ:—

ಸನ್ ೧೮೯೨ ನೇ ಇಸವಿ ಜನವರಿ ತಿಂಗಳ ಮೊದಲ್ಲು ನಡೆಯುತಲಿರುವ ಕಾಲತೀ ಸಾಲಿನಲ್ಲಿ ಆರು ತಿಂಗಳು ಕಳೆದು ೭ ನೇ ತಿಂಗಳು ನಡೆಯುತಲಿದ್ದಾಗ್ಯೂ ನಮ್ಮ ಚಂದಾದಾರರ ಪೈಕಿ ಅನೇಕರು ಇದುವರೆಗೆ ಚಂದಾ ಮೊಬಲಗನ್ನು ಕಳುಹಿಸಿಕೊಡದೆ ಇರುವದಕ್ಕಾಗಿ ಬಹಳ ವಿಷಾದಿಸುತ್ತೇವೆ. ಬಾಕೀದಾರರೆಲ್ಲರು ದಯಮಾಡಿ ಈ ನೋಟೀಸನ್ನು ನೋಡಿದ ಕೂಡಲೆ ಅವರವರು ಈ ಸಾಲಿಗೆ ಮುಂಗಡವಾಗಿ ಕೊಡಬೇಕಾದ ಚಂದಾ ಬಾಕಿಗಳನ್ನು ಇನ್ನಾದರು ಕಳುಹಿಸಿ ಕೊಡಬೇಕೆಂದು ಮತ್ತೊಂದು ದಫಾ ಜ್ಞಾಪಕ ಕೊಟ್ಟಿರುತ್ತೇವೆ.

೨—೭—೯೨. ಪ್ರೊಪ್ರೈಟರ್.

THE BANGALORE SREENIVASA MANDIRAM.

ಬೆಂಗಳೂರು, ಶ್ರೀನಿವಾಸ ಮಂದಿರಂ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದಾರ್ಥ ಧರ್ಮಕ್ಕಾಗಿ ದವಸಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲು ತೋರಿಸುವ ತಖ್ತಾ:—

೧೮೯೨ನೇ ಇಸವಿ ಜುಲೈ ೨೫ ನೇ ತಾರೀಖ್ ಮೊದಲು ಜುಲೈ ೩೧ ನೇ ತಾರೀಖ್ ವರಿವಿಗೆ

ಅಕ್ಕಿ ವಸೂಲು ಮಾಡಿದ ಸ್ಥಳಗಳ ಸಂಖ್ಯೆ	...	98
ಜನಗಳಿಂದ ಧಾನ್ಯದ ಸೇರುಗಳ ಸಂಖ್ಯೆ	...	62
ಸಿಲ್ಲರೆ ಅಕ್ಕಿ ಸೇರು	...	44
ಜುಮ್ಲಾ	...	106
ಆಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	...	31
ಖರ್ಚಾದ ಅಕ್ಕಿ ಸೇರು	...	37
ಜಮಾ ಬಾಕಿ	...	38

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲು.

ಅನಾಥರು	...	7
ದಿಕ್ಕಿಲ್ಲದ ವಿದ್ಯಾರ್ಥಿ	...	7
ಬ್ರಾಹ್ಮಣ ಅರ್ತಕ್ಕ ವಿದ್ಯಾರ್ಥಿಗಳು	...	26
ಕನ್ನಡಕ ಕೊಡತಕ್ಕ ಉಪಾಧ್ಯಾಯರು, ಸಾಹುಕಾರರ ವಗೈರೆ ಸಂಖ್ಯೆ		26
ಪ್ರಯಾಣಿಕರು	...	8
ಜುಮ್ಲಾ	...	74

THE MONEY MARKET.

ಮದರಾಸ್, ಶನಿವಾರ, ತಾರೀಖ್ 30 ನೇ ಜುಲೈ 1892.

ಶೇಕಡ 4ರೂ. ಬಾಬ್ತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 106-6-0 ರಿಂದ 116 12 0ರವರೆಗೆ,

ಮದರಾಸ ಬ್ಯಾಂಕ್ ಷೇರುಗಳು, (500) ರೂಪಾಯಿಗಳು, ಬಾಬ್ತು 940 ರಿಂದ ಮೇಲು 945ವರೆಗೆ,

ಕಮರ್ಷಿಯಲ್ ದ ಬ್ಯಾಂಕ್ ಗನ್ಸಾಲಿಡೇಟ್ ಬ್ಯಾಂಕ್ ಷೇರುಗಳು, (100) ಬಾಬ್ತು 165 ರಿಂದ 170 ವರೆಗೆ

ಸವರಣಗಳು,15—14—9

ಬ್ಯಾಂಕ್ ಬಿಲ್ಲುಗಳು ಮದರಾಸಿನ ಮಾರುಗಳು, ಲಂಡನ್ಗೆ 6 ತಿಂಗಳವಾಯಿದೆಗೆ, 1s. 3 3/32d.

ಡಿಮಾಂಡ್ 3 ತಿಂಗಳ ವಾಯಿದೆಗೆ, 1s. 3 1/32d.

ಟೆಲಿಗ್ರಾಫ್ ಟ್ರಾನ್ಸ್‌ಫರ್, 1s. 2 15/16d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, AUGUST 1, 1892

೧೮೯೨ನೇ ಇಸವಿ ಆಗಸ್ಟು ತಾ|| ೧ ನೇ ಸೋಮವಾರ.

IMPORT AND EXPORT OF PRECIOUS METALS.

ಕಳೆದ ಮಾರ್ಚಿ ೩೧ ನೇ ತಾರೀಖಿಗೆ ಮುಗಿದ ಸಾಲಿನಲ್ಲಿ ನಾಲ್ಕುಕೋಟಿ ಹನ್ನೊಂದು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಬಂಗಾರವೂ, ಹತ್ತುಕೋಟಿ ಅರವತ್ತು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಬೆಳ್ಳಿಯೂ ಇಂಡ್ಯಾ ದೇಶಕ್ಕೆ ಆಮದ್ ಆದಂತೆಯೂ, ಒಂದು ಕೋಟಿ ಯೆಪ್ಪತ್ತು ಲಕ್ಷ ರೂಪಾಯಿಗಳ ಕ್ರಯ ಬಾಳುವಷ್ಟು ಬಂಗಾರವೂ, ಒಂದುಕೋಟಿ [illegible] ರೂಪಾಯಿಗಳ ಬೆಳ್ಳಿಯೂ ಇಂಡ್ಯಾ ದೇಶದಿಂದ ಅನ್ಯ ರಾಜ್ಯಗಳಿಗೆ ರಫ್ತಾಗಿರುವಂತೆಯೂ ಇಂಗ್ಲಿಷ್ ಪತ್ರಿಕೆಗಳು ತಿಳಿಸುತ್ತವೆ. ಈ ಲೆಕ್ಕ ನಿಜವಾಗಿರಲಾರದೆಂದು ನಾವು ಹೇಳುವದಿಲ್ಲವು, ಪರಂತು ಒಂದಂಶವನ್ನು ಮಾತ್ರ ಪ್ರಾಧಾನ್ಯೇನ ಇಲ್ಲಿ ತಿಳಿಸಬೇಕಾಗಿರುವದೇನಂದರೆ, ಇಂಡ್ಯಾ ದೇಶದಿಂದ ಯೂರೋಪ್ ದೇಶಕ್ಕೆ ಕಳುಹಿಸಲ್ಪಡುವ ಬಂಗಾರವು ಪ್ರಾಯಶಃ ಹನ್ನೊಂದು ಬಣ್ಣಕ್ಕೆ ಕಡಿಮೆ ಇಲ್ಲದ ಅಪರಂಜಿಯೇ ಹೊರತು ಕಡಿಮೆ ಬಣ್ಣ ಉಳ್ಳದ್ದಲ್ಲವು. ಇಂತಾ ಅಪರಂಜಿಗೆ, [illegible]ಇಂದ ಶುದ್ಧಿ ಮಾಡಲ್ಪಟ್ಟ ತಾಂಬ್ರವನ್ನು ಬೆರೆಸಿ ನಾಣ್ಯಗಳು ಛಾಪಾಹಾಕಿ, ಸಾವರ್ನಗಳೆಂದು ಹೆಸರಿಟ್ಟು ಈ ದೇಶಕ್ಕೆ ಕಳುಹಿಸಿಕೊಡುತ್ತಾರೆ. ಮಂದಮತಿಗಳಾದ ಇಲ್ಲಿನವರು ಸವರ್ನಗಳ ಬಾಹ್ಯ ಸೊಬಗಿಗೂ ತಳುಕಿಗೂ ಮರುಳಾಗಿ, ನ್ಯಾಯ್ಯವಾಗಿ ಹತ್ತು ರೂಪಾಯಿಗಳ ಕ್ರಯ ಬಾಳುವ ಸವರ್ನ ಒಂದಕ್ಕೆ ಹದಿನಾರು ರೂಪಾಯಿಗಳ ವರಿವಿಗೆ ಕೊಟ್ಟು ಕೊಂಡುಕೊಂಡು ಅವುಗಳಿಂದ ಹಾರಗಳು ವಗೈರೆ ಆಭರಣಗಳಂ ಮಾಡಿಸಿ ಧರಿಸಿಕೊಳ್ಳುತ್ತಾರೆ. ಇಂಡ್ಯಾ ದೇಶಕ್ಕೆ ಆಮದ್ ಆಗುವ ಬಂಗಾರ ಬೆಳ್ಳಿಯ ಕ್ರಯವನ್ನೂ ಇಲ್ಲಿಂದ ಅನ್ಯ ರಾಜ್ಯಗಳಿಗೆ ರಫ್ತಾಗುವ ಬಂಗಾರ ಬೆಳ್ಳಿಯ ಕ್ರಯವನ್ನೂ ನೋಡಲಾಗಿ ಇಂಡ್ಯಾದೇಶಕ್ಕೆ ಆಮದ್ ಆಗುವದರ ಪೈಕಿ ನಾಲ್ಕರಲ್ಲೊಂದುಭಾಗ ಸಹ ಇಲ್ಲಿಂದ ರಫ್ತಾಗುವದಿಲ್ಲವೆಂತಲೂ, ಇಲ್ಲಿಗೆ ಆಮದ್ ಆಗುವ ಬಂಗಾರ ಬೆಳ್ಳಿ ಯೆಲ್ಲವು ಇಲ್ಲೇ ಆಭರಣಗಳ ರೂಪವಾಗಿಯೂ ಬೇರೆವಿಧವಾಗಿಯೂ ಮರೆಯಾಗಿ ಹೋಗುತ್ತಿದೆ ಯೆಂತಲೂ, ಸಾಮಾನ್ಯವಾಗಿ ಯೂರೋಪ್ ದೇಶೀಯರೂ ವಿಶೇಷತಃ ಇಂಗ್ಲಿಷಿನವರೂ ಹೇಳಿದುತ್ತಾರೆ. ಸವರ್ನ ಒಂದಕ್ಕೆ ಯೆರಡೂಕಾಲು ವರಹಾ ತೂಕ, ಅದನ್ನು ಊದಿ ತಾಂಬ್ರವನ್ನು ಕಳೆದು ಬಿಟ್ಟರೆ ಯೆರಡುವರಹ ತೂಕ ಉಳಿಯುತ್ತದೆ. ಒಂದು ವರಹ ತೂಕಕ್ಕೆ ೪ ರೂಪಾಯಿ ಕ್ರಯವಾಯಿತು. ಇಲ್ಲಿ ಅಪರಂಜಿ ಒಂದು ವರಹ ತೂಕಕ್ಕೆ ಯೇಳೂಕಾಲು ರೂಪಾಯಿಗಳಂತೆ ಸಿಕ್ಕುತ್ತವೆ. ಸವರ್ನಗಳ ಕ್ರಯ ದಿನೇದಿನೇ ಹೆಚ್ಚುತ್ತದಂತೆಲ್ಲ ಅಪರಂಜಿಯ ಕ್ರಯವು ಯೆಚ್ಚಿಸಲ್ಪಟ್ಟಿತೇ ಹೊರತು ಅನ್ಯಥಾ ಇಲ್ಲವು. ವರಹ ತೂಕಕ್ಕೆ ಯೆಳೂಕಾಲು ರೂಪಾಯಿಗೆ ಮಾರುವ ಅಪರಂಜಿಗೆ ಯೆಂಟು ರೂಪಾಯಿಗಳಂತೆ ಕೊಟ್ಟು ಕೊಂಡುಕೊಳ್ಳುವ ಬುದ್ಧಿಹೀನರಾದ ನಮ್ಮವರನ್ನೇನೆನ್ನಬಹುದು? ಸವರ್ನಗಳ ಕ್ರಯ ಇಷ್ಟು ಹೆಚ್ಚಿ ಹೋಗುವದಕ್ಕೆ ಉಂಟಾದ ಕಾರಣವನ್ನು ಹಿಂದಿನವಾರದ ಪತ್ರಿಕೆಯಮೂಲಕ ಸ್ಪಷ್ಟವಾಗಿ ತಿಳಿಸಿರುತ್ತೇವೆಯಷ್ಟೇ. ಇಂತಾ ಸ್ಥಿತಿಯಲ್ಲಿ ಸಹ ನಮ್ಮವರಲ್ಲಿ ಆಧುನಿಕ ವೈಲಕ್ಷಣ್ಯಾಭಿಲಾಷಿಗಳಾದವರನೇಕರು, ಸವರ್ನಗಳ ಈಗಿನ ಕ್ರಯವನ್ನನುಸರಿಸಿ ಮಾರಲ್ಪಡುವ ಅಶಾಶ್ವತಗಳಾದ ಪರಂತು ಮೋಹಕರಗಳಾದ ಯೂರೋಪ್ ತಯಾರೀ ಪದಾರ್ಥಗಳಂ ಅಮಿತವಾಗಿ ಕೊಂಡುಕೊಳ್ಳುವದರ ಮೂಲಕ ಉಂಟಾಗುತಲಿರುವ ಆತ್ಮಹಾನಿಕವಂ ಸವ ಸಿದ್ಧಗ್ಯೆಯ್ಯದೆ ಅಲ್ಲಿನ ವರ್ತಕಮಂಡಲಿಗೆ ಅಧಿಕಲಾಭವನ್ನುಂಟುಮಾಡುತಲಿದ್ದಾಗ್ಯೂ ಯುರೋಪ್ ಮೊದಲಾದ ಅನ್ಯರಾಜ್ಯಗಳಲ್ಲಿ ಹುಟ್ಟುವಳಿಯಾಗುವ ಬಂಗಾರ ಬೆಳ್ಳಿಯು ಇಂಡ್ಯಾ ದೇಶದಲ್ಲಿ ಮರೆಯಾಗಿ ಹೋಗುತ್ತಿದೆ ಯೆಂಬ ಅಪಪ್ರಥೆಯು ಈ ದೇಶಕ್ಕೆ ತಪ್ಪಲಿಲ್ಲವು

WIDOW MARRIAGE
ವಿಮತವಿಧವಾ ವಿವಾಹವು

ರಾಮಾನುಜ ಮತಸ್ಥರಾದ ಸೆಲ್ಲಾರ್ ಚಕ್ರವರ್ತಿ ಕೃಷ್ಣಯ್ಯಂಗಾರ್ರೆಂಬವರ ಕುಮಾರರಾದ ವೆಂಕಟವರದಯ್ಯಂಗಾರ್ರೆಂಬಾತನಿಗೂ ಮಧ್ವ ಬ್ರಾಹ್ಮಣರಾದ ಮಿಸ್ಟರ್ ನಾಗೇಶ್ವರ ರಾವ್ ಯೆಂಬವರ ವಿಧವಾಪುತ್ರಿಯಾದ ಶ್ರೀಮತಿ ಕೃಷ್ಣಮ್ಮಾ ಎಂಬಾಕೆಗೂ ನಿನ್ನೆಯದಿನದ ಸಾಯಂಕಾಲ ೧೦ ಘಂಟೆಗೆ ಮದರಾಸ್ [illegible]ನಲ್ಲಿ ವಿವಾಹವು ನಡೆಯುವದಕ್ಕೆ ಆವಶ್ಯಕಗಳಾದ ಸನ್ನಾಹಗಳು ಮಾಡಲ್ಪಟ್ಟಿದ್ದಂತೆ ನಿನ್ನೆಯದಿನ ನಮಗೆ ಬಂದ ಮದರಾಸ್ ಮೇಲ್ ಪತ್ರಿಕಾ ಮೂಲಕ ತಿಳಿಯಬಂತು. ಹಿಂದೆ ಅಲ್ಲಿಯಲ್ಲಿ ನಡೆದ ವಿಧವಾ ವಿವಾಹಾಪೇಕ್ಷೆಯ ಪ್ರಕಾರ ವಿವಾಹದಲ್ಲಿ ಒಂದುವಿಧ ವೈಲಕ್ಷಣ್ಯ ಕಂಡುಬರುತಲಿದೆ, ಇದು ವರಿವಿಗೆ ಆಯಾ ಮತಕ್ಕೆ ಸೇರಿದವರಲ್ಲಿ ಮಾತ್ರ ವಿಧವಾಪ್ರಭವವಾದ ವಿವಾಹಗಳು ಆಗಿಂದಾಗ್ಯೆ ನಡೆಯುತಬಂದಂತೆ ನಮ್ಮ ತಿಳುವಳಿಕೆ ಬರುತಲಿತ್ತು. ಶ್ರೀವೈಷ್ಣವರಿಗೂ ಮಧ್ವರಿಗೂ ವಿಧವಾ ಪರಿಣಯರೂಪವಾದ ಸಂಬಂಧವೇರ್ಪಡುವದಕ್ಕೆ ಈಗಲೇ ಪ್ರಾರಂಭ ಮಾಡುದರಿಂದ ಇದು ಶಾಸ್ತ್ರಾವಲಂಬಿಗಳಾದವರಿಗೆ ಕೇವಲ ಸಂತೋಷಜನಕವಾದ ವೃತ್ತಾಂತವಾಗಿರಬಹುದು ಅಂತವರೆಲ್ಲರು ನಿನ್ನೆಯ ದಿನವನ್ನು ಒಂದು ಶುಭದಿನವನ್ನಾಗಿ ಕೊಂಡಾಡಬೇಕಾದುದು ಅವರಿಗೆ ಕರ್ತವ್ಯವಾಗಿರುತ್ತಿದೆ, ಯಾತಕ್ಕೆಂದರೆ, ಒಂದು ವಿಷಯದಲ್ಲಿ ಒಬ್ಬನಿಗೆ ಉಂಟಾಗಿರುವ ಪ್ರವೃತ್ತಿಯು ಅವನು ಕಾರ್ಯತಃವ್ಯಕ್ತಗೊಳಿಸಿದಹೊರತು ಅನ್ಯರಿಗೆ ಅವನಲ್ಲಿ ಪ್ರಾಮಾಣಿಕತಾ ಜ್ಞಾನವು ಹುಟ್ಟಲಾರದು. ಇದುವರಿವಿಗೆ ನಡೆದ ವಿಧವಾವಿವಾಹಗಳಲ್ಲಿ ತತ್ಪೋಷಕರಾದವರು [illegible]ಗಳಲ್ಲಿ ವಿರಳವಾಗಿ ವಿವಾಹಕಾರ್ಯವು ನೆರವೇರಿಸಲ್ಪಟ್ಟವಾಗಿ ಅಂತವರಲ್ಲಿ ಜನರಿಗೆ ಪ್ರತಿಪತ್ತಿಯುಂಟಾಗುವದಕ್ಕೆ ಸುತರಾಂ ಅವಕಾಶವಿಲ್ಲದೆ ಇತ್ತು. ಆ [illegible], ಈಗ ಉಭಯಪಕ್ಷಾವಲಂಬಿಗಳೂ, ಅಂದರೆ, ವಿಧವಾಪರಿಣಯ ಕಾರ್ಯಪ್ರವರ್ತಕರಾದವರೂ, ಮತದ್ವಯ ಬ್ರಾಹ್ಮಣರು ಪರಸ್ಪರ ಸಂಬಂಧವಂ ಮಾಡುವದಕ್ಕೆ ಶಾಸ್ತ್ರಾನುಸಾರ ಸಂಪೂರ್ಣವಾಗಿದೆಯೆಂದು ವಾದಿಸತಕ್ಕವರು ತಮ್ಮ ಹೃದಯಶುದ್ಧಿಯಂ ಕೇವಲ ಶಬ್ದಮಾತ್ರದಿಂದಲ್ಲದ ಕಾರ್ಯತಃ ನಿರೂಪಿಸಲಿಕ್ಕೆ ಇದೊಂದು ಒಳ್ಳೆಯ ಸಂದರ್ಭವಾಗಿರುತ್ತಿದೆ

ಕಾಲ ಮಹಾತ್ಮ್ಯವು.

ಲೋಕದಲ್ಲಿ ಪ್ರಾಣಿಯು ಸುಖದುಃಖಗಳೂ ಪುಣ್ಯಪಾಪಗಳೂ ತತ್ತತ್ಕರ್ಮಾನುಗುಣವಾಗಿ ಲಭಿಸತಕ್ಕವಾಗಿರುತ್ತಿವೆ ಕರ್ಮವು ಕಾಲಕ್ಕೆ ಸ್ಥಿತಿಯಿಂದೇರ್ಪಡತಕ್ಕದ್ದಲ್ಲವು. ಪರಂತು ಮನುಷ್ಯನ ಸ್ಥಿತಿಯಿಂದಲೇ ನಿರ್ವಹಿಸಲ್ಪಡತಕ್ಕಾಗಿರುವದರಿಂದ ಅಂತಾಸ್ಥಿತಿಯು ಸ್ವಪ್ರಯತ್ನದಿಂ ಲಭಿಸಬೇಕಾದುದಾಗಿರುತ್ತಿದೆ. ತಾದೃಶ ಪ್ರಯತ್ನವು ಸದುದ್ದೇಶದಿಂ ಸನ್ಮಾರ್ಗದಲ್ಲಿ ಮಾಡಲ್ಪಟ್ಟದ್ದಾದರೆ ಅದು ಸತ್ಫಲವನ್ನುಂಟುಮಾಡುತ್ತಿದೆ. ಅದೇ ಅನಿಷ್ಟವಿಷಯಗಳಲ್ಲಿ ಮಾಡಲ್ಪಟ್ಟರೆ ಅದು ದುಷ್ಫಲಗಳಂ ಕೊಡದೆ ಹೋಗುವದಿಲ್ಲವು ಏತೇನ ಕರ್ಮಾನುಗುಣವಾದ ಫಲಾನುಭವವೇ ದುಃಖಸುಖಾನರೂಪವಾಗಿ ಅವಿಚ್ಛಿನ್ನ ಪ್ರವಾಹರೂಪವಾಗಿರುತ್ತಿದೆ. ಪೂರ್ವದಲ್ಲಿ ಪ್ರಾಯೇಣ ಜನಗಳ ಪ್ರಯತ್ನಗಳೂ ಉದ್ದೇಶಗಳೂ ಸದ್ವಿಷಯಕವಾಗಿದ್ದುದರಿಂದ, ತದನುಗುಣವಾಗಿಯೇ ಅವರ ಸ್ಥಿತಿಯು ಉತ್ತಮಫಲಪ್ರದವಾಗಿತ್ತು, ಅದರಿಂದ ಅವರು ಅನೇಕ ಅದ್ಭುತ ಮಹಿಮೆಯುಳ್ಳವರಾಗಿ, ಮಹತ್ಕಾರ್ಯಗಳಂ ಮಾಡಿ ಗತಿಸಿದರು. ಈಗಿನವರ ಉದ್ದೇಶ ಪ್ರಯತ್ನಗಳು ಅಂತವಲ್ಲವು. ಇದು ದೇಶಕಾಲಭೇದದಿಂ ವಿಜಾತೀಯಗಳಾಗಿಯೂ ತತ್ತತ್ಸ್ವರೂಪಾನುಗುಣಗಳಾದ ವಿರುದ್ಧಫಲಗಳನ್ನೀಯತಕ್ಕವಾಗಿಯೂ ಇರುತ್ತಿವೆ. ಈಗ ವರ್ಣಾಶ್ರಮ ಧರ್ಮಗಳು ಲುಪ್ತಗಳಾಗಿ, ಅವು ಅನಾವಶ್ಯಕವೆಂಬ ಜ್ಞಾನವು ತಲೆದೋರಿ ಉತ್ತಮವರ್ಣದವರು ಧರ್ಮಾಚಾರಗಳನ್ನು ಬಿಡುತ ಬರುವಂತೆಲ್ಲ, ಶೂದ್ರಾದಿ ಕನಿಷ್ಟಜಾತಿಯವರು ಅವಂ ಸ್ವೀಕರಿಸಿ ಅನುಷ್ಠಿಸುತ ಬರುತಲಿದ್ದಾರೆ. ಈಗ ದೇಶದಲ್ಲಿ ಉತ್ತಮರಿಗಿಂತಲೂ, ಮ್ಲೇಚ್ಛಾದಿ ನೀಚ ಜನಗಳಿಗೆ ವಿಶೇಷ ಪೂಜ್ಯತೆಯೂ ಪ್ರಯೋಜನವೂ ಅಧಿಕವಾಗುತ ಅವರ ಪ್ರಾಬಲ್ಯವು ಯೆತ್ತ ನೋಡಿದರೂ ವೃದ್ಧಿಯಾಗುತ ಬರುತಲಿದೆ ಉತ್ತಮ ಕ್ಷತ್ರಿಯರು ನಷ್ಟರಾಗಿ ಅವರೆಲ್ಲರೂ ಕೇವಲ ಶೂದ್ರಾಚಾರನ್ನವಲಂಬಿಸಿ ವೀರ್ಯ ಶೌರ್ಯ ಸ್ವಾತಂತ್ರ್ಯಗಳನ್ನೆಲ್ಲ ಕಳೆದುಕೊಂಡು, ಅನೇಕರು ರಾಜ್ಯಭ್ರಷ್ಟರಾಗಿ ದಾರಿದ್ರ್ಯದಿಂ ಶ್ರಮಪಡತಕ್ಕಂಥ ಕಾಲವು ಪ್ರಾಪ್ತವಾಗಿದೆ. ಘನವೃಕ್ಷಗಳು ಕುಸುಮಫಲವಿಹೀನಗಳಾಗಿ ನಿಸ್ಸಾರವಾಗುತಲಿವೆ ರಾಜರು ಪ್ರಜಾಕಂಟಕರಾಗಿ ಅರ್ಥಲಾಭೇಚ್ಛೆಯ [illegible] ಬ್ರಾಹ್ಮಣಾದಿ ಉತ್ತಮವರ್ಣದವರು ಸ್ವವೃತ್ತಿಗಳಂ ತೊರೆದು ವಾಣಿಜ್ಯಾದಿ ಇತರವೃತ್ತಿಯನ್ನವಲಂಬಿಸುತಲಿದ್ದಾರೆ ಪುಣ್ಯಕಾರ್ಯಗಳೆಲ್ಲವು ಅಬದ್ಧವಿರುದ್ಧಫಲದಾಯಕಗಳಾಗುತಲಿವೆ ಕಾಲವೃಷ್ಟಿತಪ್ಪಿ ದೇಶದಲ್ಲಿ ಆಗಿಂದಾಗ್ಯೆ ಕ್ಷಾಮ ಡಾಮರಗಳು ಪ್ರಾಪ್ತವಾಗುತ ಜನರು ಶ್ರಮಪಡುತಲಿದ್ದಾರೆ ಆಸ್ತಿಕತೆಯು ಕಡಮೆಯಾಗಿ ನಿರೀಶ್ವರವಾದಿಗಳೂ ಪಾಷಂಡಿಗಳೂ ವೃದ್ಧಿಯಾಗುತ ಬರುತಲಿದ್ದಾರೆ, ಜನರಿಗೆ ಪರ[illegible]ಧರ್ಮಗಳಿಗಿಂತಲೂ ತಮ್ಮ ಶರೀರ ಸಂರಕ್ಷಣೆಯೇ ಪರಮಪುರುಷಾರ್ಥವೆಂದು ಭಾವಿಸಿ ಅದಕ್ಕಾಗಿ ಸಕಲ ನೀತಿ ನಿಯಮಗಳಂ ತ್ಯಜಿಸಲುದ್ಯುಕ್ತರಿದ್ದಾರೆ [illegible] ಫಲಿಸದೆ, ಬೀಜಗಳು ನಿಸ್ಸಾರವಾಗುತ, ಸ್ತ್ರೀ ಪ್ರಾಬಲ್ಯವೂ ಮದ್ಯಪಾನವೂ ಅಧಿಕವಾಗುತಲಿವೆ ಕ್ರಯ ವಿಕ್ರಯಾದಿ ವ್ಯಾಪಾರಗಳಲ್ಲಿ ಕಾಪಟ್ಯವೂ ಮೋಸವೂ ಹೆಚ್ಚುತಲಿವೆ [illegible] ಜನರು ಅಭಿರುಚಿಯುಳ್ಳವರಾಗಿದ್ದಾರೆ ಈಗಿನ ಸ್ಥಿತಿಯನ್ನನುಸರಿಸಿ ನೋಡಿದರೆ ಅಲ್ಪ ಕಾಲದಲ್ಲಿಯೇ ಜನರ ಸ್ಥಿತಿಯಲ್ಲಿ ಇನ್ನೂ ಬಹಳ ಬದಲಾವಣೆಗಳು ಆಗುವುದೆಂದು ಹೇಳಲಿಕ್ಕೆ ಕಾರಣಗಳು ಬಹುವಾಗಿ ಕಂಡುಬರುತಲಿವೆ ಬ್ರಾಹ್ಮಣರು [illegible] ಸ್ವಧರ್ಮದ ತಾರತಮ್ಯವಿಲ್ಲದೆ [illegible] ವೃತ್ತಿಗಳಾಗಿ ತಾವು [illegible]ಯಲ್ಲಿ ಪ್ರವರ್ತಿಸುತ ವೇದವಿಕ್ರಯಾದಿ ನಾನಾವಿಧ ದುಷ್ಕಾರ್ಯಗಳಿಗೆ ಅಭಿಮುಖರಾಗುವಣವೂ ಶೂದ್ರಾದಿಗಳಿಂದ ವೇದಾರ್ಥ ತತ್ವವಿಚಾರಗಳಂ ತಿಳಿದು, ಅವರಲ್ಲಿ ಪ್ರತಿಪತ್ತಿಯನ್ನಿಡುವಣವೂ ಸಕಲ ದುಷ್ಕೃತ್ಯಗಳಿಗೂ ತಾವೇ ಅಭಿಮುಖರಾಗಿದ್ದು ಸಹಕರಿಸುತ ಬರುವಣವೂ, ಇವರ ಪ್ರಯತ್ನೋದ್ದೇಶಗಳಿಗೆ ತಕ್ಕಂತೆ ಇವರ ಸ್ಥಿತಿಯು ಕ್ಷೀಣಿಸುತಿರುವಣವೂ ಬಹಳ ವಿಷಾದಕರವಾಗಿವೆ ಅನ್ಯ ಮತಸ್ಥರು ಯಾವದನ್ನಾದರು ಮಾಡುವದಕ್ಕೆ ಅಂಜದಾಗ್ಯೂ ಅದಕ್ಕೆ ಬ್ರಾಹ್ಮಣರು ಪ್ರೋತ್ಸಾಹಕರಾಗಿ ತಾವು ಕಲಿತ ವಿದ್ಯೆಯನ್ನು ಸ್ವಪ್ರಯೋಜನಾಪೇಕ್ಷೆಯಿಂದ, ಅನಿಷ್ಟವಿಷಯಗಳಿಗಾಗಿ ಶಾಸ್ತ್ರಪಂಕ್ತಿಗಳಿಗೆ ಅಪಾರ್ಥಗಳಂ ಮಾಡುವದರಲ್ಲಿಯೂ, ಅವುಗಳಿಗೆ ಆಧಾರವಾಗಿ ಇಲ್ಲದ ಪ್ರಮಾಣಗಳಂ ಕಲ್ಪಿಸಿ ಕೊಡುವದರಲ್ಲಿಯೂ ವಿನಿಯೋಗಿಸಿ, ಸ್ವಯಂ ನಷ್ಟಃ ಪರಾನ್ನಾಶಯತಿ ಎಂಬದಾಗಿ ತಾವೂ ಕೆಟ್ಟು ಅನ್ಯರನ್ನೂ ಕೆಡಿಸಲುಪಕ್ರಮಿಸಿದ್ದಾರೆ. ಲೋಕವೆಲ್ಲವು ಕುಜನಬಾಹುಳ್ಯವಾಗಿ ಅರ್ಥಾತುರತ್ವದಿಂ ನಾನಾ ದುಷ್ಕೃತ್ಯಗಳಂ ಮಾಡುವದರಿಂದ, ಧರ್ಮಲೋಪವೂ ಅನೇಕ ಉತ್ಪಾತಗಳೂ ದೇಶಜನಹಾನಿಯೂ ಉಂಟಾಗುವದರಲ್ಲೇನೂ ಸಂದೇಹವಿಲ್ಲವು. ಮುಂದೆ ಪ್ರಜಾಧರ್ಮ ಪ್ರವಿಜಾತೀಯಗಳಾಗಿರುವದೆಂಬದಕ್ಕೆ ಮೇಲಿಕಂಡ ವಿವಾಹವು ಸಾಕಾದದೃಷ್ಟಾಂತವಾಗಿರುತ್ತಿದೆ.

ಆಗಮಿಕೇತರರು ದೇವಾಲಯಗಳಲ್ಲಿ ವಿಗ್ರಹ ಸ್ಪರ್ಶಪೂರ್ವಕ ಆರಾಧಿಸುವಣವಂ ಕುರಿತು,

ಪಾಂಚರಾತ್ರ ವೈಖಾನಸಾಗಮರೀತ್ಯಾ ಪ್ರತಿಷ್ಠಿತವಾದ ದೇವಾಲಯಗಳಲ್ಲಿ ತದಾಗಮಪ್ರತಿಪಾದ್ಯರಾದ ದೀಕ್ಷಿತರು ವಿನಾ ವಿಪ್ರವರ್ಯರಾದವರು ಪ್ರತಿಷ್ಠಿತ ಬಿಂಬಗಳನ್ನು ಸ್ಪೃಶಿಸಿ ಆರಾಧಿಸಬಹುದೆ ಎಂಬ ಅಂಶವು ತಾಗ್ಯೇ ಕೆಲವು ಕಾಲದ ಮೊದಲು ನಮ್ಮ ವಿಚಾರಕ್ಕೆ ವಿಷಯವಾಗಿತ್ತು. ಈ ಕ್ರಮವು ಅನೇಕ ಸಂದರ್ಭಗಳಲ್ಲಿ ಕೆಲವರಿಂದ ಅನುಷ್ಠಿಸಲ್ಪಟ್ಟಂತೆಯೂ, ಪಶ್ಚಾತ್ ಅಲ್ಲಿನ ಆಗಮಿಕರು ಪುನಃ ಬಿಂಬಪ್ರತಿಷ್ಠೆ ಮೊದಲಾದವಂ ಮಾಡಿದಂತೆಯೂ ನಮ್ಮ ಕೇಳ್ವಿಕೆಗೆ ಬಂದಿರುತ್ತಿದೆ ಆದರೆ ಹೀಗೆ ಶಾಸ್ತ್ರವಿರುದ್ಧವಾದ ಕಾರ್ಯವು ನಿರಾಕ್ಷೇಪಣೆಯವಾಗಿ ಜರಿಗಿಸಲ್ಪಡಲಿಕ್ಕೆ ಬೇರೆ ಯಾವ ಕಾರಣವೂ ನಮಗೆ ಗೋಚರವಾಗುವದಿಲ್ಲವು ಈ ಕಾರ್ಯವು ಸರ್ವಸ್ಮೃತಿ(?) ಅಂಗೀಕರಿಸಲ್ಪಡತಕ್ಕದ್ದಲ್ಲವೆಂಬದಾಗಿ ಶಿಷ್ಟ ಪ್ರಮಾಣ ವಚನಗಳೊಡನೆ ಇದರಡಿ ಕಂಡ ಒಂದು ಸಂಸ್ಕೃತಲೇಖನವನ್ನು ಬೇಲೂರು "ನ್ಯಾಯಶಾಸ್ತ್ರಿ" ಎಂಬವರೊಬ್ಬರು ಬರೆದಿರುತ್ತಾರಾಗಿ ಅದಕ್ಕೆ ಯೆಲ್ಲರೂ ಅವಧಾನ ಕೊಡಬೇಕೆಂದು ಕೋರುತ್ತೇವೆ

ಶ್ರೀ ಹಯವದನಃ

ನಮಸ್ತೇ ಲೋಕನಾಥಾಯ ಜಗದಾನಂದಮೂರ್ತಯೇ ||
ನಮಸ್ತೇ [illegible] ಸರ್ವಜ್ಞ [illegible] ||೧||

[illegible]

ತ್ರಿವಿಧ್ಯಾ ಪಂಚಸಂಸ್ಕಾರಸಂಸ್ಕೃತಃ|| ಮುಕ್ತಿಪಶ್ಯಸೋಜ್ಞಾನೀ [illegible] ಪರಾಯಣಃ || ಮಂತ್ರತಂತ್ರಾರ್ಥತತ್ವಜ್ಞ ವಿಶಸ್ಥಾನಗತಸಾಧಿತಸ್ತ್ವಧಿ || ನನು ದೀಕ್ಷಾಧಿಕ್ಯವಿಶೇಷಃ ಕಥಂ ತರತಮ್ಯಸಾಧ್ಯೇಷು, ವೇದೇಷು ಅನೇಕತಯಾ ಭಗವತಃ ಆವಿರ್ಭಾವಕ ಮಂತ್ರಾಣಾಮುಪಬೃಂಹಿತತ್ವಾತ್ ತನ್ಮಂತ್ರಾಣಾಂ [illegible] ಪಠಿತೇಷುಕ್ತೇಷು, ಬ್ರಾಹ್ಮಣಾದಿವರ್ಣಾನಾಂ [illegible] ಪಿತೃಣಾಂ ಪ್ರತಿಪಾದನಾದೇವ ತನ್ನಿಷ್ಟವಿಷಯತ್ವಾತ್, ತಂತ್ರನಿಮಿತ ಮಂತ್ರಸ್ಯ [illegible] ಪ್ರತಿಪಾದನಾದೇವ ರ [illegible] ತಂತ್ರಾಣಾಂ ತಂತ್ರೋಕ್ತೈಸ್ತೈವ ಪಠ್ಯತೇ, ಭಗವದರ್ಚನಾಧಿಕಾರಿತ್ವಮಿತಿ [illegible] ವೇದಸ್ಯಾಧಿಕಾರಿತ್ವ ರಸ ನಕ್ಷತ್ರಮಿತ್ಯವಸೇಯಂ, ತದುಕ್ತಂ ಪಾದ್ಮೇ ಸ್ವಾಪರೋಪದ ಪ್ರವಸ್ಥಾಯೋಪಚಾರಿಕೋಕ್ತಾನಾಂ|| ದೀಕ್ಷಿತಾನಾಂ ಚ ವರ್ಣಾನಾಂ ತತ್ಸಂಸ್ಕಾರಾದಿನ್ [illegible] ಸಂಹಿತಾಯಾಂ, ಭಗವದ್ವಂಶಜಾತಸ್ಯ ಪಂಚರಾತ್ರವಿಧಾನತಃ || ಪೂರ್ವೋಕ್ತಾರ ಯೋಗ್ಯತ್ವಂ ಅನ್ಯತಂತ್ರಾನೇಕಾರ್ಥಿ: || ಅಭಿತ ವಸಂಪದ್ಯ || ಕಲ್ಪಾನುತ್ಯವಸ್ಥ್ಯಸ ಯಥಾತ್ಯವಸಗಿಪತ್ರಾಕಃ || ಪಂಚಕಾಲವಿಧಾನಜ್ಞಃ ಪಂಚಗಾತ್ರವಿಸ್ಥಿತ: || ಕಂ ಚಗೋತ್ರಾಸ್ಪದ್ಯೋಕ್ತ ಪಂಚರಾತ್ರಾನುಸಾರತಃ || ಏವ ಭಾಗವತಪ್ರೋಕ್ತಃ ಸ್ವಗುಣಾದ್ಯಭಿಸಾರಕ || ತ್ರೈಲೋಕ್ಯತಾಧನುಕಸ್ಥಂ ಮಧುಮ್ಯಾತಿವಿಧ ಸಂ|| ಶೇಷಸ್ಯಾಪ್ಯಸ್ಯ ಪಂತು ಜನ್ಮದೀಕ್ಷಾಬವಸ್ಥತೆ || ಚಕ್ರಾಂಕಿತಾದಿ [illegible] ಸರ್ವತಸ್ಯಾಕೀರ್ತಮಮ ವಿತ್ಯಾಧಿಕಾರಾನುಸಂಧಾನಃ

ನನು, ಭಗವದರ್ಚನ ಮಂದನ ಧ್ಯಾನಾದಿನಾಂ ಸರ್ವೇಷಾಂ ಗಿರಿಯಾ ವಿಪ್ರಾಮುಕಲತ್ವಾ, ತತ್ಸಂಗವಿಲಪದ ಸ್ವೈಯುಕ ಸಂಪನ್ನಸ್ಯ ಕಾಸ್ತ್ರವಿದಗ್ರಾಣ್ಯಸ್ಯ ಭಗವದರ್ಚನಾದಿ ಷು ಕರ್ಥಂಚಿತ್ಯುಯಶ ನಿಸೇಧ ಅತಿತೇಸ್ಸ್ಯಂ || ಚತುರ್ವೇದ ಧರೋಪ್ಯಯ್ಯೋಯುತಿರ್ಯ್ಯುಪ್ರ್ಯಸ್ಥಿತ್ತನಾಃ || ಸರ್ವಶಾಸ್ತ್ರವಿದ ಗ್ರೋಪಿ ದೇವಕರ್ಮನರ್ಹಾವಿಸಿ ಉಪನ್ಯಸಂಹಿತಾಯಾ ಮುಕ್ತತ್ವಾತ್, ಕಿಂಚ—ಅದೀಕ್ಷಿತೋಪದೇಶ ನಿಂದಾಪ್ತ ಯೋರ್ವಾದ್ಯದ್ವರೀ || ತಸ್ಮಾದಲಘುಭೋಜನ ತತ್ತ್ವಾತ್ತನ್ನ ತಿಪ್ರನಮಿತಿ ಸನತ್ಕುಮಾರಸಂಹಿತಾಯಾ ವಚನಾತ್ಕ, ಸಾಂಗೋ ಪಾಂಗವೇದಾಧ್ಯಯನ ಸಂಪನ್ನಸ್ಯಾಪಿ ತಂತ್ರೋಕ್ತ ದೀಕ್ಷಾಸಂ ಸ್ಕಾರವಿಕಂ ವಿನಾ ತಂತ್ರವಿಮಿತ ಮಂತ್ರಪಠಿತಾನಾಂ ಅ ರ್ಚನೆ, ನಾಧಿಕಾರ ಇತಿ ನಿರುಧ್ಯತೆ ||

ಲೋಕಸತ್ತ್ವಾಪಿ ಕಾಲಾನ್ಯನೇಕತಂತ್ರೇಷು ಪ್ರಸಿದ್ಧೇಷು ಕಿಂ ಪಂಚರಾತ್ರತಂತ್ರಮೇವ ಶ್ಲಾಘ್ಯತಿತಿತ್ || ಪೂರ್ವೋಕ್ತಾ ಭಿಸ್ರೋತಸಾಮು ಪರಿಪಾಡ ಕಪಿಲ, ಕಾಶ್ಯಪ, ಸುಗತ, ಜಿನ, ಪಶುಪತಿವಾತಾನಾಂ ಬ್ರಹ್ಮವಿದ್ಯಾಪಕಾರಿತ್ವೇನ ಪ್ರಮಾಣತ್ವಸ್ಯ ಪ್ರತಿಷಿದ್ಧತ್ವ || ವಿಷ್ಣೋತ್ಸವಸ್ಯತ್ವೇನ ಭಗವದ್ವಾಜಪ್ಯತ್ವ ದಾ || ಜ್ಞಾನವೈಭಾಗವಿನಿರ್ಧ್ಯೈನ್ಯವಂಪ್ರತಿಪಾದನಾಚ್ಚೋತ್ತಮ್ಯೇ|| ಬ್ರಹ್ಮಭಾಗವತಂ ಶಾಸ್ತ್ರಂ ಪ ನಾಸ್ತ್ಯಮಾಮ್ನಾಯಪ್ರಜ್ಞಾಯಾ || ಅತಃ ಪ್ರಶ್ನೋತ್ತರತ್ವಾಂಶ್ಚ ಸಾರ್ವಜ್ಞಾಸ್ಯನ್ನಸಾಧನ ಅತಿ ಪ್ರಾಮಾಣ್ಯಸಂಯುತಾಯಾಂ ಸಿಸ್ಸಂಧಯಾಂ ಭಗವತ್ಪ್ರೋಕ್ತತ್ವಾತ್, ಅನ್ಯತಂತ್ರೇಭ್ಯೋಪಿ ಪಂಚರಾತ್ರತಂತ್ರಮೇವ ಶ್ಲಾಘ್ಯ ಮಿತಿ ಯುಕ್ತಂ ||

ನನು ಅಸ್ಯ ಪಂಚರಾತ್ರತಂತ್ರಸ್ಯ ತಂತ್ರಸಾಮಾನ್ಯೇಷು ಪಂಗಣಿತತ್ವಸ್ಸಿಸ್ಸಪಿ ಪವಿತ್ರೇಷು ಭಗವದಾರಾಧನಾದಿ ಕ್ರಿಯಾವಿಧಾನಾದ್ಯುಪನಾನತ್ವಾತ್ ಅನ್ಯತಂತ್ರೋಕ್ತಮಾರ್ಗ ಕಥಂ ಪ್ರಮಾಣವಿಶಂ ಕಲ್ಪ್ಯವಿಶಿತಿನ್ನ || ಏಕಾಂತ್ರಸ್ಯ ತಿಪ [illegible] ಅನ್ಯತಂತ್ರಾಧನಂ ವ್ಯತಿರಿಕ್ತ ಸಂಶಯಪ್ರಸ [illegible] ಮುಕ್ತಂ ಪದ್ಯೇ || ಏಕ [illegible] ತೇನಪ್ರಜೋತ್ತ್ಯ ಮಃ || ಕ್ರಿಯಾಂ [illegible] || ಅಥಾ [illegible] ಪ್ರಾಧಾನ್ಯಮವಿಷ್ಯಷಃ || ತಂತ್ರ [illegible] ಸಿದ್ಧಂ [illegible] || ಉಪಾಸನಸಂಗ್ರಹ ಚ || [illegible] ಸ್ಯ [illegible] ನಿರ್ಮಂತ್ರೇಣ ದೇವಕರ್ಮ ಸಮಾಚರೇತ್ || ಸ್ಮೃತಿ ನಸಂ ತ್ರಿವಿಧ ಪಂಚರಾತ್ರವಿಧ ವಿದಾ || ಸಾಂಕರ್ಯ್ಯೇಣ ಮೂಲ ಸ್ಯಾಂ ಕೂಚಾರಾಸ್ಯ [illegible] ಪಕ್ಷವತೀತಿ || ತನ್ಮೂಲವಿಪಾಪ ಕ್ರಿಯಾಸಂಹಿತಾಯಾಂ || ಅವಿದ್ವಿಸ್ವಿನಸ್ಯ [illegible] ಕರ್ಮಕರ್ತ್ರೇ || ಸ್ವಂಗಿನಸ್ಯಬೀಜಿತ ಪಾಕಲ್ಯೇ ಸ್ವಸಂ [illegible] ಪಾರಧರಾಂ || ಉಂತಿಸೋಪವ್ಯವಸಾಯಿ ದ್ವಿಜೋಪದಿಷ್ಟಸ್ಯ [illegible] ಕಂತ್ರಯಂ || ವಿಶೇಷಂ ಗರ್ವಗಣಾಂಕಃ ಪ್ರಯೋಜನಮೇಕಾ ಪ್ಯೈ || ಸಂಸ್ಕಾರ್ಯವನಮವರಂ ಯಃ [illegible] || ಸ್ತ್ರೀಕ್ಷಿನಸ್ಯಾಮಾತ್ಯೈತ್ರ್ಯಾ ತಥ ವೈಖಾನಸೈಸ್ಸನಾಜ್ಯೈ: || ಅನ್ಯಷ್ಟ್ವ್ಯೈರ್ವಾಗಸಂಸ್ಪೃಷ್ಟ ಬಿಜೇತ್ರ್ಯಧಸುಸಂಧೃಮ || ಸ್ವಪನಮಿಧಜ್ಞಲತ್ವ ಪಂಚಿಸೋಮಾವಿಕಯಾರೈ || [illegible] ಕೃದಿ || ಸಿದ್ಧಿಪಂಚಕಾತ್ರಾಜಸ್ತ್ರಸ್ಯ ಪ್ರಾಪ್ಯಾಸ್ಯ ಶೋ ದ್ವಿಕ್ತ ಯುಕ್ತ್ಯುಪದೋಪಸಿಧ್ಯತಿ|| ಸರ್ವಂಗಸಮಾಜನಮೇವ ಯುಜ್ಯ ಸ್ವಾಕಪಾಪ್ರವಧಾಣಂ ಪಂಚರಾತ್ರನಂತ್ರಂ ಶಿವುನೇನ ಪಾಗಾಚಮಯಕೀತಿಚೆತ್, ಪಂತ, ಪ್ರತೀತನ ಅಪ್ರಮಾಣೀಕೃತ ಪಂಚರಾತ್ರತಂತ್ರವಿಮಿತ ಮಂತ್ರಪ್ರತಿಷ್ಠಾಪಿತ ಪ್ರತಿಮಾಸ್ಯ ರ್ಚನಾಯಾಮುಪ್ಯಮೋಪಿಕಸ್ಯಂ ನಿರ್ಘಾತಕೋನಸ್ಯಾ || ಸ್ಯ ದೇವ || ಆಗಮಸಿದ್ಧಾ|| ನನು, ಯಸ್ಮಿನ್ದೇಶೇಯಾಯಾ ದಿ ಪುರಸ್ತ್ಯಕ್ತ ಮಾಗತಃ || ದೇಶಾನಾಂ ಸಂಪ್ರ [illegible] ನಿಂದನಾದಾಚಾರಯುಕ್ತತೆ || ಇತ್ಯನೇನ ಅಸ್ಮತ್ಪರಂಪರಾಗತ ಸ್ಯಾಚಾರಸ್ಯ ಆಗಮವಿರುದ್ಧತ್ವೇಪಿ ಅಪರಿತ್ಯಾಜ್ಯತ್ವ ಸ್ಯ ಉಕ್ತತ್ವಾತ್, ಕಥಮಧುನಾ ತತ್ಪರಿತ್ಯಾಗ ಇತಿಚೆನ್ನ || ತಸ್ಯಾಪಿ ಆಗಮಚೋದಿತ ಬ್ರಾಹ್ಮಣೋಧಿ ಪ್ಯಾಪಾರಾಸು

ಷ್ಯಾನ ಏವತಃ ಪ್ರಾಃ || ಅನ್ಯಥಾ—ಸಮಾಚಾರೇಣಾಧ ರ್ಮಾ ದಶ ವಿಂಚರೀತ್ಯಥಾ || ಗ್ರಾಮಧರ್ಮಾ ಪಾಪಾನಿಗ್ರಾ ಪ್ಯಾಃ ಯದಿಮೀ ಸದೋಧಿತಾಃ || ಪೂರ್ವಾಪರಕಾಲ ಧರ್ಮ್ಮಕ್ಕ ವ್ಯಾಜಿನಾ ವಿರುದ್ಧಾಃ ಪ್ರವರಾಣಂ || ಇತ್ಯಾದಿಸ್ಮೃತಿ, ಸೂತ್ರಾಣಾಂಗತ್ಯಪ್ರಸಂಗಾತ್ ||

ಸತ್ಯಪ್ರಕಾರೇಣಾಪಿ ಪಂಚರಾತ್ರೋಕ್ತ ದೀಕ್ಷಾರಹಿತ ಸಂಸ್ಕಾರ ವಿರಹಿತಸ್ಯ ಅರ್ಚಕಸ್ಯ ಪೂಜಾರ್ಥಂ ರವಾಜ ಯುಪ್ರತಿಷ್ಠಾಪಿತ ದೇವತ ಪೂಜಾದಿಕವಿಷಿದ್ಧತ್ವಾತ್,

ಅನಸ್ಯೂಕಪದಾಮಸಾರದಾದ್ರಾಕ್ಷದರ್ಶ ವಿದ್ವಾಂಸಃ ಸಿಷ್ಟ್ವಕ್ಷಪಾತ ಮಿದಮಸ್ಮಾಕಮಪಲೋಕ್ಯ ಅತ್ರಾಸ್ಮತ್ ವಪಿ ಪ್ರಾಲಿಖಲಾಕಸ್ಯ ವಿನ ಸರ್ವಂ ಸಮಂಜಸಮೇತಿ ವಿದಾಂಕುರ್ವಂ ತ್ವಿತಿ ಪ್ರಾರ್ಥಯಾಮಃ,

ಸಜ್ಜನವಿಧೇಯಃ,

ಪೆರಾಳುಂಬೂರು ಸ್ವಾಮಿಸ್ವೆಷಿ.

Occasional Notes.
ನೈಮಿತ್ತಿಕ ವಿಷಯನ್ಯಾಸ.

A public meeting.—ಇಂಡ್ಯಾ ದೇಶದ ಪ ಲಾವಣಿ ನಾಣ್ಯಗಳ ವಿಮರ್ಶೆಯಬಗ್ಗೆ ಯೋಗ್ಯ ಟ್ಟಿರುವ ಮೂಲ ಸಮಾಜಕ್ಕೆ ಉಪಸಮಾಜವಾಗಿ ಈ ತಿಂಗಳ ೭ ನೇ ತಾರೀಖಿನೊಳು ಮದರಾಸಿನಲ್ಲಿ ಒಂದು ಸಮಾಜ ಸೇರ ಪುದು.

Discovery of gold mines—ಹೈದರಾಬಾದ ದೇಶಕ್ಕೆ ಸೇರಿದ ಪಸುಗಲಿ ಎಂಬ ಪಟ್ಟಣಕ್ಕೆ ೪೦ ಮೈಲಿಗಳ ಫಾಸಲೆಯಲ್ಲಿರುವ ಒಂದು ಸ್ಥಳದೊಳು ಬಂಗಾರ ಮತ್ತು ಬೆಳ್ಳಿಯ ಗನಿಗಳು ಕಂಡು ಬಂದುವೆ ಹೈದರಾಬಾದಿನ ವರ್ತಮಾನ ಬಂದಿರುವದಾಗಿ ಅಲ್ಲಿನ ಪತ್ರಿಕೆ ಯೊಂದು ತಿಳಿಸುತಿದೆ.

The Govt. Press, Madras.— ಮದರಾಸ ಗವರ್ನಮೆಂಟು ಪ್ರೆಸ್ ಆಫೀಸ್‌ನಲ್ಲಿ ಕೆಲವು ಖುದ್ದಬುದ್ದ ನಡೆದಿರುವಂತೆ ಹಿಂದಿನ ಪತ್ರಿಕೆಯ ಮೂಲಕ ತಿಳಿಸಿರುತ್ತೇವೆಯಷ್ಟೆ. ಅದರಿಂ ದೀಚೆಗೆ ಸದರೀ ಆಫೀಸ ಲೆಕ್ಕಗಳನ್ನು ತನಿಖಿ ಮಾಡಿದ್ದರಲ್ಲಿ ಹುವಪಾರು ೧೪ ಸಾವಿರ ರೂಪಾಯಿಗಳ ತನಕ ಹಾಜರ್ ಕಮ್ಮಿ ಕಂಡು ಬಂದು ಆ ಆಫೀಸು ಕ್ಯಾಷಿಯರನ್ನು ದಸ್ತಗಿರಿಮಾಡಿ ಪೋಲೀಸಿನವರ ವಶಮಾಡಿ ಮೊಕದ್ದಮೆಯು ಅವರ ವಿಚಾರಣೆಯಲ್ಲಿರುವಂತೆ ತಿಳಿಯಬರುತಿದೆ.

LOCAL AND PROVINCIAL NEWS
ಒಳದೇಶದ ಮತ್ತು ತಾಲ್ಲೂಕು ಪ್ರಾಂತ್ಯ ವೃತ್ತಾಂತಗಳು.

Release of prisoners.— ಶ್ರೀಮನ್ಮಹಾರಾಜರವರಿಗೆ ಪುತ್ರೋತ್ಸವವಾದ ವಿಶೇಷ ಸಂದರ್ಭದ ಗೌರವಾರ್ಥ ಈ ದೇಶದೊಳಗಣ ಅನೇಕ ಜೈಲಿಗಳಿಂದ ಒಬ್ಬರು ಸಡಿಲಿಸಲ್ಪಟ್ಟಿ ಕೇಲವರು ಖೈದಿಗಳು ಈ ದಿನ ಬಿಡುಗಡೆ ಮಾಡಲ್ಪಡುವರೆಂದು ಕೇಳುತ್ತೇವೆ.

Visitors to Mysore —ಈ ದಿನ ರಾಜಧಾನಿಯಲ್ಲಿ ನಡೆಯುವ ಶ್ರೀಮನ್ಮಹಾರಾಜರವರ ಪುತ್ರೋತ್ಸವದ ಬಗ್ಗೆ ಬೆಂಗಳೂರಿಂದ ಚೀಫ್‌ಕೋರ್ಟ ಜಡ್ಜಿಗಳು, ಕೌನ್ಸಿಲ್‌ಮೆಂಬರ್‌ಗಳು, ಸೆಕ್ರೆಟರಿಗಳು, ಮುಜರಾಯಿ ಸೂಪರಿಂಟೆಂಡೆಂಟು ಮೊದಲಾದ ಅಧಿಕಾರಿಗಳೆಲ್ಲರು ಮೈಸೂರಿಗೆ ಹೋಗಿರುತ್ತಾರೆ. ಪ್ರಾಯಶಃ ಯೆಲ್ಲರೂ ಬರುವ ಬುಧವಾರದವಿನ ವಾಪಸ ಬರಬಹುದೆಂದು ತೋರುತಿದೆ.

The weather.—ಕಳೆದ ಶುಕ್ರ ಶನಿವಾರಗಳ ಸಾಯಂಕಾಲ ನಾಲ್ಕು ಘಂಟೆಯಮೇಲೆ ಬಲವಾಗಿ ಮೋಡ ಮುಸುಕಿ ಜೋರಾದ ಬಿರುಗಾಳಿಯೊಡನೆ ಮಾರು ಹಿಂದು ಹದ ಮಳೆ ಬಿತ್ತು. ಇದರಿಂದ ಕೆರೆ ಕುಂಟೆಗಳಿಗೆ ನೀರು ಬರುವದಕ್ಕೆ ಅವಕಾಶ ಕಡಮೆಯಾಗಿದ್ದಾಗ್ಯೂ ಹುಲ್ಲು ಬೆಳೆದು ದನಗಳಿಗೆ ಮೇವು ದೊರಕುವದಕ್ಕೆ ಸಹಾಯವಾಗಿರುತಿದೆ. ಧಾನ್ಯ ಗಳ ಬೆಲೆಗಳು ಒಂದೇವಿಧವಾಗಿವೆ. ಪಾಂತಿಭೇದಿ ರೋಗದ ವ್ಯಾಪಕತೆ ಇನ್ನು ತಪ್ಪಲಿಲ್ಲವು. ಈ ಪೇಟೆಗೆ ಸೇರಿದ ಮಿಲಿಟರಿ ಸ್ಟೇಷನ್ನಲ್ಲಿ ಅದರ ವ್ಯಾಪಕತೆ ಅಧಿಕವಾಗಿರುವಂತೆ ತೋರುತಿದೆ.

Murder and suicide.—ನೆಲಮಂಗಲ ತಾಲ್ಲೂಕು ಹೊರಗಾನಹಳ್ಳಿ ಯೆಂಬ ಗ್ರಾಮದಲ್ಲಿ ಮಾರಿ ಯೆಂಬವಳನ್ನು ರುದ್ರಪ್ಪನೆಂಬವನು ಕೆಲ ವ್ಯ ಕಾಲದ ಮೊದಲು ಲೊವ್ ಮಾಡಿಕೊಂಡಿದ್ದನು. ಈಚೆಗೆ ೪ ದಿನಗಳ ಹಿಂದೆ ರುದ್ರಪ್ಪನೆಂಬವನು ತನ್ನ ಮನೆಯಲ್ಲಿ ಊಟ ಮಾಡಿಕೊಂಡು ಕೇಳಿದ ಬಗ್ಗೆ ನಾರಮ್ಮನ ಮನೆಗೆ ಹೋದವನು ಮರಳಿ ನಾಲ್ಕೈದು ದಿನಗಳ ವರಿಗೆ ತನ್ನ ಮನೆಗೆ ವಾಪಸ್ ಹೋಗಲಿ ಇಲ್ಲವು ಊರಿಗೆ ಹೋಗಿದ್ದ ಅವನ ತಂದೆ ವಾಪಸ್ ಬಂದಮೇಲೆ ಮಗನೆಲ್ಲಿ ಯೆಂದು ಕೇಳಲು ನಾಲ್ಕು ದಿನಗಳಿಂದ ಮನೆಗೆ ವಾಪಸ ಬರಲಿಲ್ಲವೆಂದು ಮನೆಯವರು ಹೇಳಿದರು. ಅದರಮೇಲೆ ಅವನು ಮಗನ ಪತ್ತೆಯಬಗ್ಗೆ ಪೋಲೀಸಿನವರಿಗೆ ರಿಪೋರ್ಟಮಾಡಿ ತಾನೂ ಅಲ್ಲಿಯಲ್ಲಿ ತಲಾಷ ಮಾಡುವಲ್ಲಿ ಸದರೀ ನಾರಮ್ಮನ ಮನೆಲಿ ಆತನು ಖೂನ ಮಾಡಲ್ಪಟ್ಟು ಮುರ್ದೆಯು ಒಂದು ಬಗೇವಿನಲ್ಲಿ ಮುಚ್ಚಲ್ಪಟ್ಟಿರುವಂತೆ ಪೋಲೀಸ ನವರಿಗೆ ತಿಳಿದುಬಂದು ಪೊಲೀಸವರು ಅವಳ ಮನೆಯಂ ಶೋಧಿಸಿ ಮಾಡುವಲ್ಲಿ ಮುರ್ದೆ ಸಿಕ್ಕಿ ತನಿಖೀ ಮಾಡುತ್ತಿರುವಲ್ಲಿ ಮಾರಿ ಯೆಂಬವಳು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಂತೆ ಒಬ್ಬ ಬಾತಮೀದಾರನು ತಿಳಿಸುತ್ತಾನೆ.

ಶ್ರೀಮನ್ಮಹಾರಾಜಪುತ್ರನ ಜನ್ಮಪತ್ರಿಕೆ.

ಅದಿತ್ಯಾದಿ ಗ್ರಹಾಸ್ಸರ್ವೇ ನಕ್ಷತ್ರಾಣಿ ಸ್ಸರಾಶಯಃ || ಕುರ್ವಂತು ಮಂಗಳಂ ನಿತ್ಯಂ ಯಸ್ಯೈಷಾ ಜನ್ಮಪತ್ರಿಕಾ|| ಸ್ವಸ್ತಿಶ್ರೀ ಶಾಲಿವಾಹನ ಶಕವರ್ಷಂಗಳು ೧೮೧೪ ನೇ ನಂದನನಾಮ ಸಂವತ್ಸರದ ಆಷಾಢ ಬ|| ೧೨ ನ ಗುರುವಾರ [illegible] ಘಂಟೆ ಅಂದರೆ [illegible] ಪ್ರಸವವಾಯಿತು.

	ಗುರು, ರಾಹು		ಚಂದ್ರ, ಶುಕ್ರ
	ರಾಶಿಕುಂಡಲಿ		ರವಿ
ಕುಜ			ಬುಧ
		ಲಗ್ನ, ಕೇತು	ಶ, ಗುಳಿಕ
	ಬುಧ, ಕೇತು	ಗುರು	ಕುಜ
ಲಗ್ನ	ಅಂಶಕುಂಡಲಿ		
ಶ.			ರವಿ
	ಶುಕ್ರ	ಚಂದ್ರ, ರಾಹು	

ಶ್ರೀಮನ್ಮಹಾರಾಜ ಚಾಮರಾಜ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ ಯವರಿಗೆ ಕಳೆದ ೨೮ ನೇ ತಾರೀಖು, ಅಂದರೆ ಕಳೆದ ಆಷಾಢ ಬಹುಳ ತ್ರಯೋದಶೀ ಗುರುವಾರ ಮಧ್ಯಾಹ್ನ ಸುಮಾರು ೧೨೩ ಘಂಟೆಯಲ್ಲಿ ಪುತ್ರೋತ್ಸವವಾಯಿತೆಂಬ ವಿಶೇಷ ವರ್ತಮಾನವನ್ನು ಅತ್ಯಂತ ಆನಂದ ಪರಿಪೂರ್ಣತೆಯಿಂದ ನಮ್ಮ ವಾಚಕರಿಗೆ ತಿಳಿಯಪಡಿಸುತ್ತೇವೆ. ಜನಾನಿಯಲ್ಲಿ ಸುಪುತ್ರ ನಾದ ಕೂಡಲೆ ಪದ್ಧತಿ ಪ್ರಕಾರ ೨೧ ತೋಫು ಹಾರಿಸಲ್ಪಟ್ಟವು. ೧೨—೧೩ ನಿಮಿಷಗಳಾದ ನಂತರ ಪುತ್ರಜನನವಾಯಿತೆಂಬ ಸಂತೋಷಕರ ವಾದ ವರ್ತಮಾನವನ್ನು ಶ್ರೀಮನ್ಮಹಾರಾಜ ರವರು ಕೇಳಿ ತಮ್ಮ ಆನಂದವನ್ನು ಪಟ್ಟಣದ ನಿವಾಸಿಗಳಿಗೆಲ್ಲಾ ಪುನಹಾ ೨೧ ಕುಶಾಲ ಫಿರಂಗಿಗಳಿಂದ ತಿಳಿಯಪಡಿಸಬೇಕೆಂದು ಅಪ್ಪಣೆಯಿಸಿದರು. ಕೂಡಲೆ ಸಕ್ಕರೆ ಗಾಡಿಗಳನ್ನು ಪಟ್ಟಣದ ಸಮಸ್ತ ಸಂದುಗೊಂದುಗಳಿಗೂ ಓಡಿಸಿ ಪ್ರಜೆಗಳಿಗೆಲ್ಲಾ ಹಂಚಿದರು. ಸಂಸ್ಥಾನದ ವಿಶಿಷ್ಟ ಆಫೀಸುಗಳೂ ಆ ದಿವಸ ಮುಚ್ಚಲ್ಪಡಬೇಕೆಂದು ಹುಕುಂ ಆಯಿತು. ಆ ದಿನ ಸಾಯಂಕಾಲ ರಾಜಧಾನಿಯನ್ನೂ, ವಿಶೇಷವಾಗಿ ಅರಮನೆಯನ್ನೂ ದೀಪಗಳಿಂದ ಅಲಂಕರಿಸಿದ್ದರು. ಮಾರನೇ ದಿವಸದಿಂದ ಇಲ್ಲಿನ ಎಲ್ಲಾ ವಿದ್ಯಾಶಾಲೆಗಳಲ್ಲಿಯೂ, ಆಫೀಸುಗಳಲ್ಲಿಯೂ ಇರುವವರಿಗೂ, ಮತ್ತು ಸಮಸ್ತ ದೊಡ್ಡದೊಡ್ಡ ಅಧಿಕಾರಿಗಳಿಗೂ ಪುಡಿಸಕ್ಕರೆ, ಕಂಬು ಕಲ್ಲುಸಕ್ಕರೆ, ಕೊಟೆಯಾಲದ ಕಲ್ಲುಸಕ್ಕರೆ, ಕಿತ್ತಳೇ ಹಣ್ಣುಗಳನ್ನು ಹೇರಳವಾಗಿ ಹಂಚಿದರು. ಮತ್ತು ತಟ್ಟೆಗಳಲ್ಲಿ ಕಳುಹಿಸಿಕೊಟ್ಟರು. ಐದನೇ ದಿವಸ ಅಂದರೆ ಸೋಮವಾರದ ಬೆಳಗ್ಗೆ ಶ್ರೀಮನ್ಮಹಾರಾಜರವರು ಹಿಂದುಗಳ ಪದ್ಧತಿಯ ಪ್ರಕಾರ ಪುತ್ರೋತ್ಸವವನ್ನು ಮಾಡಿಕೊಂಡರು. ಆ ಕಾಲದಲ್ಲಿ ಕೂಡ ಎಲ್ಲರಿಗೂ ಸಕ್ಕರೆ ಹಣ್ಣು ಹಂಪಲುಗಳನ್ನು ಹಂಚಿದರು. ಬ್ರಾಹ್ಮಣರಿಗೆ ದಕ್ಷಿಣೆಗಳನ್ನು ಕೊಡಿಸಿದರು. ದಿವಾನ್ ಬಹದೂರರವರ ಮನೆಯಲ್ಲಿ ಅಧಿಕಾರಸ್ಥರಿಗೆಲ್ಲಾ ಔತನ ವುಂಟಾಗಿತ್ತು. ಆ ರಾತ್ರಿ ರಾಜಧಾನಿಯಲ್ಲಿರುವ ಪ್ರತಿ ಮನೆಯವರೂ ತಮ್ಮ ಮನೆಗಳ ಮುಂದೆ ದೀಪಗಳನ್ನು ಹಚ್ಚಿದ್ದಲ್ಲದೆ ತೋರಣ ಮುಂತಾದವುಗಳಿಂದ ಅಲಂಕಾರ ಮಾಡಿದರು.ಸ್ಯ

ಮೈಸೂರು ಸಂಸ್ಥಾನದ ಮುಜರಾಯಿ ಖಾತೆ.

ಮೈಸೂರು ಸಂಸ್ಥಾನದ ಮುಜರಾಯಿ ಸೂಪರಿಂಟೆಂಡೆಂಟರವರ ಹುಜೂರು ಕಚೇರಿಯಿಂದ.

ನಂಬರ್ ೯.

ತಿರುಮಕೂಡ್ಲು ನರಸೀಪುರ ತಾಲ್ಲೂಕ್ ಸೋಸಲೆಯಲ್ಲಿರುವ ಶ್ರೀ ವ್ಯಾಸರಾಯ ಸ್ವಾಮಿಯವರ ಮಠದ ಯಜಮಾನರಾದ ಸೂರ್ಯ್ಯಾಚಾರ್ಯರಿಗೆ,

ಈ ಮೈಸೂರು ಸಂಸ್ಥಾನದಿಂದ ಸರ್ವಮಾನ್ಯ ಮೊದಲಾದ ಭೂಸ್ಥಿತಿ ಮೂಲಕವಾಗಿಯೂ, ಮಾಸಾಶನವಾಗಿ ಕೊಡಲ್ಪಡುವ ಧನರೂಪವಾಗಿಯೂ, ಶ್ರೀ ಮಠಕ್ಕೆ ಉಂಟಾಗಿರುವ ಆಯತಿಗೆ ಅನುರೂಪವಾದ ಸದ್ವಿನಿಯೋಗವು ಪ್ರಾಯಶಃ ಆಗುವದಿಲ್ಲವೆಂದು ಈ ಆಫೀಸಿಗೆ ಬಂದಿರುವ ಅನೇಕ ಅರ್ಜಿಗಳಿಂದ ತಿಳಿಯಬರುವದ್ದರಿಂದ ಇದರ ನಿಜಸ್ಥಿತಿ ತಿಳಿಯಬೇಕಾದದ್ದು ಆವಶ್ಯಕವಾಗಿರುವ ಪ್ರಯುಕ್ತ ನಿಮಗೆ ಬರೆಯುವದೇನೆಂದರೆ:—

ಮೇಲ್ಕಂಡ ಪ್ರಕಾರ ಶ್ರೀ ಮಠಕ್ಕೆ ಉಂಟಾಗುವ ಆಯತಿಯಲ್ಲಿ ಈ ದೇಶದೊಳು ಯಾವ ಕಾರ್ಯ್ಯಗಳಿಗಾಗಿ ಯೆಷ್ಟೆಷ್ಟು ವಿನಿಯೋಗಿಸಲ್ಪಡುತಿದೆಯೋ ಆ ಅಂಶವು ಸ್ಪಷ್ಟವಾಗಿ ತಿಳಿಯುವಂತೆ ಆ ಖರ್ಚುಗಳ ಲೆಕ್ಕವನ್ನು ಸಿದ್ಧಪಡಿಸಿ ಇದು ತಲಪಿದ ೧೫ ದಿವಸಗಳೊಳಗಾಗಿ ನಮ್ಮಲ್ಲಿಗೆ ಹಾಜರಾಗುವಂತೆ ಕಳುಹಿಸಬೇಕೆಂದು ಕೋರುತ್ತೇವೆ.

ಬತಾರೀಖ್ ೨೪ ನೇ ಮಾಹೆ ಜೂನ್ ೧೮೯೨ನೇ ಇಸವಿ ಮೊಕ್ಕಾಂ ಮೈಸೂರು.

ಮೇಲ್ಕಂಡಂತೆ ಶ್ರೀ ಉತ್ತರಾಧಿ ಮಠದ ಯಜಮಾನರಿಗೂ, ನಂಜನಗೂಡು ಮಠದ ಸರ್ವಾಧಿಕಾರಿಗೂ,ಇನ್ನೂ ಕೆಲವು ಮಠಗಳಿಗೂ ಬರೆದಿದೆ.

ಪಿ. ಶ್ರೀನಿವಾಸಾಚಾರ್ಲು,

ಮುಜರಾಯಿ ಸೂಪರಿಂಟೆಂಡೆಂಟ್.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಶ್ರೀ ಬಹದೂರರವರ ಸರ್ಕಾರದಿಂದ ಕೊಡಲ್ಪಟ್ಟ ಇಷ್ತಿಹಾರ್‌ನಾಮೆಗಳು.

ನಂ. ೧೧೧೩, L. S. ೩೪–೯೨, ತಾ|| ೨೧ನೇ ಜೂಲೈ ೧೮೯೨.—ಬೆಂಗಳೂರು ಮ್ಯುನಿಸಿಪಾಲಿಟಿ ಕೋಟೆ ಡಿವಿಜನ್ ಮ್ಯುನಿಸಿಪಲ್ ಕಮಿಷನರಾದ ಮೆ|| ಬಿ. ಗೋಪಾಲಯ್ಯಂಗಾರ್ರವರು ೧೮೯೨ ನೇ ಇಸವಿ ಜೂಲೈ ೨೨ ನೇ ತಾರೀಖಿನಲ್ಲಿ ತಮ್ಮ ಮೆಂಬರ್ ಕೆಲಸಕ್ಕೆ ರಾಜೀನಾಮೆ ಕೊಟ್ಟಿರುತ್ತಾರೆ.

ನಂ. ೧೨೪೩–G. ೩೧೦೨–೯೨, ತಾ|| ೨೨ ನೇ ಜೂಲೈ ೧೮೯೨ — ಪ್ರೊಬೇಷನರಿ ಪೋಲೀಸ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾದ ಮೆ|| ಅಬ್ದುಲ್ ರಹಿಂ ಮಿರ್ಜಾ ಯವರು, ಹಾಮೇ ಮಾಹೆ ೭ ನೇ ತಾರೀಖ್ ಪ್ರಾತಃಕಾಲದಲ್ಲಿ ಬೆಂಗಳೂರು ಡಿಸ್ಟ್ರಿಕ್ಟು ಪೋಲೀಸ ಆಫೀಸ್ ಚಾರ್ಜನ್ನು ಕೊಡಲು ಪೋಲೀಸ್ ಅಸಿಸ್ಟೆಂಟ್ ಸೂಪರಿಂ

ಟೆಂಡೆಂಟರಾದ ಮೆ|| ಸಿ. ಸ್ವಾಮಿಯವರು ಮರಳಿ ವಹಿಸಿರುತ್ತಾರೆ.

ನಂ. ೧೨೩೮—G. ೩೦೩—೯೨.—ಮೈಸೂರು ಪೊಲೀಸ್ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಮೆ|| ಸಿ. ಹಾರ್ಡಿ ಯವರು, ಮೂರು ದಿವಸಗಳು ಗುರ್ರೀ ತಾರೀಖಿನ ಮಧ್ಯಾಹ್ನೋತ್ತರ ಮೈಸೂರು ಡಿಸ್ಟ್ರಿಕ್ಟ್ ಪೊಲೀಸ್ ಆಫೀಸ್ ಚಾರ್ಜನ್ನು ಕೊಡಲು ಮೈಸೂರು ಆಕ್ಟಿಂಗ್ ಪೊಲೀಸ್ ಸೂಪರಿಂಟೆಂಡೆಂಟರಾದ ಮೆ|| ಪಿ. ಆರ್. ಸಬ್ಬಯ್ಯ. ಪಿದಂಬಿ ಯವರು ಮರಳಿ ವಹಿಸಿರುತ್ತಾರೆ.

ನಂ. ೧೨೩೮೦—G. ೩೦೩—೯೨, ಇದರಿಂದ ಸರ್ವರಿಗೂ ತಿಳಿಯಪಡಿಸುವದೇನಂದರೆ, ೯೨ನೇ ಇಸವಿ ಜುಲೈ ೩೦ನೇ ತಾರೀಖು ಬುಧವಾರ ಮಧ್ಯಾಹ್ನ ೧೨ ಘಂಟೆ ೪೫ ನಿಮಿಷಕ್ಕೆ ಶ್ರೀಮನ್ಮಹಾರಾಜ ರಾಜಾಸಾಹೇಬ ಬಹದೂರವರಿಗೆ ಪುತ್ರೋತ್ಸವ ಆಗಿರುವ ಪ್ರಯುಕ್ತ ಈ ತಾ ಅತ್ಯಂತ ಸಂತೋಷಕರವಾದ ಉತ್ಸವದ ಮರ್ಯಾದಾರ್ಥವಾಗಿ ನಾಮಕರಣ ನಡೆಯುವಂತಾ ಶುಭದಿವಸವಾದ ೧೮೯೨ನೇ ಇಸವಿ ಆಗಸ್ಟ [illegible] ತಾರೀಖಿನಲ್ಲಿ ಸಂಸ್ಥಾನಾದ್ಯಂತ ರಜಾದಿವಸವಾಗಿ ಭಾವಿಸಲ್ಪಡಬೇಕೆಂದು ಶ್ರೀಮನ್ಮಹಾರಾಜಾ ಸರ್ಕಾರದವರು ಆಜ್ಞಾಪಿಸುತ್ತಾರೆ.

ನಂ. ೧೨೪೩—G. ೩೦೮—೯೨.—ಮೆ|| ಕೆ. ಎಸ್. ಚಂದ್ರಶೇಖರಂ ಬಿ. ಎ. ಯವರೂ, ಮೆ|| ಕೆ. ಆರ್. ಶ್ರೀನಿವಾಸಯ್ಯಂಗಾರ್ ಬಿ. ಎ. ಯವರೂ, ಮತ್ತು ಮೆ|| ಸಿ. ದೇವರಾಜ ಅರಸಿನವರೂ (ಪ್ರೊಬೇಷನರಿ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್) ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರುಗಳಾಗಿ ನೇಮಕಮಾಡಲ್ಪಟ್ಟಿರುತ್ತಾರೆ.

ಮರಹಮ್ಮತ್ ಇಲಾಖೆ.

ನಂ. ೩೮೦೬—೫೫೫, ತಾ|| ೨೦ನೇ ಜುಲೈ ೧೮೯೨.—ಬೇಲೂರು ರೇಂಜ್ ಅಸಿಸ್ಟೆಂಟ್ ಇಂಜನಿಯರಾದ ಮೆ|| ಸಿ. ಎ. ಮಹದೇವಶಾಸ್ತ್ರಿಯವರ ನೌಕರಿಯು, ಕೋಲಾರ್ ಬಂಗಾರ ಗನಿಗೆ ಹಾಕಲ್ಪಡುವ ರೈಲ್ವೆ ರಸ್ತೆಯಲ್ಲಿ ಕೆಲಸಮಾಡತಕ್ಕ ಬಗ್ಗೆ ರೈಲ್ವೆ ಇಲಾಖೆಯವರ ವ್ಯವಸ್ಥೆಯಲ್ಲಿಡಲ್ಪಟ್ಟಿದೆ.

ಮೈಸೂರು ಮರಹಮ್ಮತ್ ಅಕೌಂಟೆಂಟ್ ಆಫೀಸಿನ ಅಸಿಸ್ಟೆಂಟ್ ಯಗ್ಜಾಮಿನರಾದ ಮೆ|| ಸಿ. ವರದರಾಜುಲು ಪಿಳ್ಳೆಯವರು, ಸನ್ ೧೮೯೨ನೇ ಇಸವಿ ಜನವರಿ ೩೦ನೇ ಮರ್ಚುಯ್ಯ ೩೬೭ನೇ ನಂಬರ್ ಈ ಆಫೀಸ್ ಇಸ್ತಿಹಾರಿನಲ್ಲಿ ಮಂಜೂರ್ಮಾಡಲ್ಪಟ್ಟಿರುವ ಆರು ತಿಂಗಳ ರಜಾಕ್ಕೆ ಜಾಸ್ತಿಯಾಗಿ ಐದು ತಿಂಗಳ ಇಂಡಿಯನ್ ಫರ್ಲೋ ರಜಾ ಕೊಡಲ್ಪಟ್ಟಿರುತ್ತಾರೆ.

EXTRACTS.

ಲಂಕಾದ್ವೀಪದಲ್ಲಿ ಪೆರಾಲಂಗಾಲಿ ಎಂಬುವ ಒಂದು ಜಹಗೀರಿಯುಂಟು ಆ ಮಠದಲ್ಲಿದ್ದ ಸನ್ಯಾಸಿಯು ಆ ಮಠದ ಸುತ್ತಲೂ ಇದ್ದ ಕಾಡು ಮರಗಳನ್ನು ಕತ್ತರಿಸಬೇಕೆಂದು ಆಳುಗಳನ್ನು ಬಿಟ್ಟು ಕೆಲಸ ಮಾಡುತ್ತಿರುವಾಗ್ಯೆ ಒಂದು ಗಿಡದ ಕೆಳಗೆ ಭಾರಿ ಚಪ್ಪಡಿ ಕಲ್ಲು ಸಿಕ್ಕಿತು ಅದನ್ನು ತೆಗೆಸಿ ನೋಡುವಲ್ಲಿ ಆ ಗುಣಿಯಲ್ಲಿ ಒಂದು ದೊಡ್ಡ ಪೆಟ್ಟಿಗೆಯು ಇತ್ತು. ಅದರ ಬಾಯಿಗೆ ಅನೇಕ ಮೊಹರುಮಾಡಿ ಬಲವಾದ ಮುಚ್ಚಳ ಹಾಕಿತ್ತು. ಅದನ್ನು ಒಡೆದು ನೋಡುವಾಗ್ಯೆ ಅದರಲ್ಲಿ ಚಿನ್ನದಿಂದಲೂ, ಬೆಳ್ಳಿಯಿಂದಲೂ ತಯಾರ್ಮಾಡಲ್ಪಟ್ಟ ಅನೇಕ ವಿಗ್ರಹಗಳು ಇದ್ದವು. ಆ ವಿಗ್ರಹಗಳೆಲ್ಲಾ ಬೌದ್ಧಮತವನ್ನು ಸ್ಥಾಪಿಸಿದ ಗೌತಮ ಶಾಕ್ಯಮುನಿಯ ಆಕಾರವುಳ್ಳದ್ದಾಗಿದ್ದವು. ಆ ಪ್ರತಿಮೆಗಳು ಎರಡು ಅಂಗುಲಗಳ ಪ್ರಮಾಣದಿಂದ ೮ ಅಂಗುಲದ ವರಿವಿಗೂ ಇರುತಿವೆ. ಈ ಸಂಗತಿಯನ್ನು ಸರ್ಕಾರದವರು ತನಿಖೆ ಮಾಡುತಲಿದ್ದಾರೆ. ಇವು ಯಾವರಾಜನ ಕಾಲದಲ್ಲಿ ಯಾರು ಹೂಳಿಟ್ಟದ್ದೆಂದು ತಿಳಿಯುವದು ಅಸಾಧ್ಯವಾಗಿದೆ.—ವೃ. ಪ.

ಇತ್ತೀಚೆಗಾಗಿ ಬಾಂಬಾಯಿಯಲ್ಲಿ ಉತ್ತಮ ತರಹ ದೇಶೀಯ ಬಟ್ಟೆಗಳು ಅರವಿಯು ತಯಾರಾಗಲಿಕ್ಕೆ ಹತ್ತಿರುತ್ತದೆ. ಈ ಅರವಿಯನ್ನೂ ಮತ್ತು ವಿಲಾಯತಿಯ ಅರವಿಯನ್ನೂ ಪರೀಕ್ಷೆ ಮಾಡಿ ನೋಡಿದರೆ ಅವುಗಳಲ್ಲಿ ಏನೂ ವ್ಯತ್ಯಾಸ ಕಂಡುಬರುವದಿಲ್ಲ. ಇದನ್ನು ನೋಡಿದರೆ, ವಿಲಾಯತಿ ಅರಿವಿಯಂತಲೇ ತೋರುತಿದೆ. ಇದು ವಿಲಾಯತಿ ಅರಿವೆಗಿಂತ ಬಹಳ ನಾಜೂಕಾಗಿಯೂ, ಪ್ರತಿ ಬಟ್ಟೆಯು ಧರಿಸಲಿಕ್ಕೆ ತಕ್ಕವಾಗಿಯೂ ಇರುತಿದೆ. ಅದನ್ನು ನೋಡಿದ ಕೆಲವು ಸಂಸ್ಥಾ ಪಡಿತ ಇರುಂದವೆಂದು ಮನಸ್ಸಿನಲ್ಲಿ ತೋರುತ್ತಿದೆ. ಈ ಪ್ರಕಾರ ನಮ್ಮ ದೇಶದಲ್ಲಿ ಬರುತ ಬರುತ ಸುಧಾರಣೆಯಾಗುತ ನಡೆದಿರುವದನ್ನು ನೋಡಿ ನಮಗೂ ನಮ್ಮ ಯಾವತ್ತು ಜನ ಬಾಂಧವರಿಗೂ ಯೆಷ್ಟು ಆನಂದವಾಗದೆ ಇರುವದು. ಇನ್ನುಮೇಲೆ ನಮ್ಮ ಜನರು ವಿಲಾಯತಿಯ ಅರಿವೆಯನ್ನು ತೆಗೆದುಕೊಳ್ಳುವದಕ್ಕಿಂತ ಇಲ್ಲೇ ದೇಶದಲ್ಲಿ ಕೊಂಡರೆ ನಮ್ಮ ದ್ರವ್ಯ ಹಿಂದುಸ್ಥಾನದಲ್ಲೇ ಉಳಿದಂತಾಗಿ ಈ ಒಳ್ಳೆಯ ಉದ್ಯೋಗಕ್ಕೆ ಮನಸು ಹಾಕಿದ ಮಾಲೀಕರಿಗೂ ಉತ್ತೇಜನ ಕೊಟ್ಟಂತಾಗುವದು. ಈ ಮಾಲು ವಿಲಾಯತಿಯಂತೆ ಸುಲಭಕ್ರಯಕ್ಕೆ ದೊರೆಯುತಿದೆ, ಘಟ್ಟಿಯಾಗಿಯೂ ಇರುತಿದೆ. ಈಗ ಆ ತಾಲ್ಲೂಕಿನ ಅನೇಕ ಶಾಹುಕಾರ್, ಶೇಟ್ ಸಾಹುಕಾರ್ ಜನರು ಇದೇ ಅರಿವೆಯನ್ನೇ ಉಪಯೋಗಿಸ ಹತ್ತಿದ್ದಾರೆ. ಇದರಂತೆ ಇದರ ಉಪಯೋಗವು ನಮ್ಮ ಜನರಲ್ಲಿ ಆಗಿ ಈ ಉದ್ಯೋಗ ಕೈಕೊಂಡವನಿಗೆ ಪ್ರೋತ್ಸಾಹಿಸುವಂತೆ ನ್ಯವರ್ತಿಯನ್ನು ಜನರು ಮಾಡ್ಯಾರೆಂದು ನಾವು ನಂಬಿರುವೆವು. ಇವರ ಕಡೆಗೆ ಸ್ವದೇಶ ಹಿತೇಚ್ಛುಗಳು ಅವಶ್ಯ ಲಕ್ಷ್ಯ ಕೊಡಬೇಕು.—ಲೋಕ.

ಸ್ಪೇಯಿನ್ ದೇಶದಲ್ಲಿ ಗುಲಾಮರನ್ನು ಯಜಮಾನರು ಬಹಳ ಕರುಣೆಯಿಂದ ಪೋಷಿಸುವರೆಂಬ ವಾರ್ತೆಯು ಎಷ್ಟರ ಮಟ್ಟಿಗೆ ನಂಬತಕ್ಕದ್ದಾಗಿದೆಯೋ ಅದು ಕೆಳಗಿನ ಸಂಗತಿಯಿಂದ ಗೊತ್ತಾಗುತದೆ. ಒಂದಾನೊಂದು ಮನೆಯಲ್ಲಿ ಯಜಮಾನಗಿತ್ತಿಯು ತನ್ನ ದಾಸಿಗೆ ಅಡಿಗೆ ಮಾಡುವದು ಆಜ್ಞಾಪಿಸಿದಳು. ಆ ದಾಸಿಯು ತನ್ನ ಎಳೇಮಗುವನ್ನು ಒಂದು ಕಡೆ ಮಲಗಿಸಿ ಅಡಿಗೇಮನೆಯಲ್ಲಿ ತಾನು ಅಡಿಗೆ ಮಾಡುತಿದ್ದಳು. ಮಗುವು ಸ್ವಲ್ಪ ಹೊತ್ತಾದಮೇಲೆ ತಾಯಿಗೋಸ್ಕರ ಅಳುವದಕ್ಕೆ ಪ್ರಾರಂಭಿಸಿತು, ಮಗುವು ಅಳುವದನ್ನು ಕೇಳಿ ಆ ಯಜಮಾನಗಿತ್ತಿ ಎಂಬ ರಾಕ್ಷಸಿಯು ಸಹಿಸಲಾರದೆ ಬಹಳ ರೇಗಿ ಒಂದು ಮಗುವಿನ ಕತ್ತನ್ನು ಹಿಡಿದುಕೊಂಡು ಹೊರಗೆ ಬಿಸಿಲಿನಲ್ಲಿ ಬಗ್ಗಿಸಿ ಹಿಡಿದಳು. ಮಗುವು ದೆಸೆಯ ಜೋಗೆ ತಾಪವನ್ನು ತಡೆಯಲಾರದ ಉಸುರು ಕಟ್ಟಿ ಪ್ರಾಣ ಬಿಡುವದಾಗಿ ಒದ್ದಾಡುತಿತ್ತು. ಆದರೆ ಈ ಮಗುವಿನ ತಾಯಿಯು ಅಡಿಗೆಯನ್ನು ಮಾಡುತಿದ್ದ ಅವಸರದಲ್ಲಿದ್ದುದರಿಂದ ಮಗುವಿನ ಕಡೆ ಅಷ್ಟು ಲಕ್ಷ್ಯವಾಗಿರಲಿಲ್ಲ. ಮಗುವು ಒದ್ದಾಡುವದನ್ನು ನೋಡಿ ಸೈರಿಸಲಾರದೆ ಆ ರಾಕ್ಷಸಿಯ ಸಹೋದರಿಯ ಯಜಮಾನಗಿತ್ತಿಯು ಮಗುವನ್ನು ಒಲೆಯೊಳಗೆ ಬಿಸಾಟಿ ಹೊರಟು ಹೋದಳು. ಆಗ ತನ್ನ ಮಗುವಿನ ಧ್ವನಿಯನ್ನು ಕೇಳಿ ಅದರ ತಾಯಿಯು ಓಡಿ ಬಂದು ನೋಡುವಾಗ್ಯೆ ಮಗುವು ಇನ್ನೇನು ಪ್ರಾಣ ಬಿಡುವದಾಗಿತ್ತು. ಅದನ್ನು ತಕ್ಷಣವೇ ಎತ್ತಿಕೊಂಡು ಹೋದಳು. ಮಗುವಿನ ಮೈಯೆಲ್ಲಾ ಸುಟ್ಟು ಹೋಗಿದ್ದುದರಿಂದ ಅದು ೧೦ ದಿವಸಗಳಲ್ಲೇ ಸತ್ತುಹೋಯಿತು. ಈ ಯಜಮಾನಗಿತ್ತಿಯನ್ನು ಈಗ ಲಾಕಪ್ಪಿನಲ್ಲಿಟ್ಟಿದ್ದಾರೆ. ಇವಳಿಗೆ ಮರಣದಂಡನೆ ಆಗಬಹುದು.—ಲೋಕಬಂಧು.

ಕೆಲವು ದಿವಸಗಳ ಕೆಳಗೆ ಮದರಾಸ್ ಪ್ರೆಸಿಡೆನ್ಸಿಗೆ ಸೇರಿದ ನಂಜುವರಂ ಎಂಬ ಊರಿನಲ್ಲಿ ನಡೆದ ಅತಿ ಶೋಚನೀಯವಾದ ಸಂಗತಿಯನ್ನು ವಾಚಕರಿಗೆ ತಿಳಿಸುವದಕ್ಕೆ ವಿಷಾದಿಸುತ್ತೇವೆ. ಅಲ್ಲಿ ಯಾವದೋ ಒಂದು ಮಹೋತ್ಸವವು ನಡೆಯುತ್ತಿರುವಾಗ ಅಲ್ಲಿನ ದೇವಸ್ಥಾನದ ಅರ್ಚಕರು ಜನರಲ್ಲಿ ಭಯಭಕ್ತಿಯನ್ನು ಹುಟ್ಟಿಸಬೇಕೆಂದು ಒಂದು ನವೀನವಾದ ಕೆಲಸವನ್ನು ನಡೆಸಿದರು, ಆ ಕೆಲಸವನ್ನು ಸಾಂಗವಾಗಿ ವರ್ಣಿಸಲು ಅಶಕ್ಯವಾಗಿದ್ದಾಗ್ಯೂ ಅದನ್ನು ಸೂಚಿಸುವದು ಪತ್ರಿಕಾಕಾರರಿಗೆ ಕರ್ತವ್ಯವೆಂದು ಎಣಿಸಿರುತ್ತೇವೆ. ಆ ಅರ್ಚಕರು ಸ್ತ್ರೀ ಪುರುಷರಿಗೆ ಸಮಾನವಾದ ಎರಡು ದೊಡ್ಡ ಪ್ರತಿಮೆಗಳನ್ನು ಮಾಡಿಸಿ, ಒಂದೊಂದರಲ್ಲಿ ಒಂದೊಂದು ತರವಾದ ಯಂತ್ರವನ್ನು ಸೇರಿಸಿ, ಎಲ್ಲರಿಗೂ ಚನ್ನಾಗಿ ಕಾಣಿಸುವಂತ ಎತ್ತರವಾದ ಒಂದು ಸ್ಥಳದಲ್ಲಿ ಆ ಪ್ರತಿಮೆಗಳನ್ನು ಇಡಿಸಿದರು. ಆ ಯಂತ್ರಗಳನ್ನು ಮುಚ್ಚುವದರಿಂದ ಅವುಗಳ ಮೇಲಿದ್ದ ಬಟ್ಟೆಗಳು ತೆರೆಯಲ್ಪಟ್ಟು, ಮನುಷ್ಯರು ತೋರಿಸಕೂಡದ ಭಾಗಗಳು ಎಲ್ಲರಿಗೂ ಕಾಣಿಸುತ್ತಿದ್ದವು. ಇದೂ ಅಲ್ಲದೆ ಇನ್ನೊಂದು ಸ್ಥಳದಲ್ಲಿ ಸ್ತ್ರೀ ಪುರುಷರು ಸಂಯೋಗ ಮಾಡುವದಾಗಿ ತೋರುವ ಎರಡು ದೊಡ್ಡ ಪ್ರತಿಮೆಗಳನ್ನು ಇಟ್ಟಿದ್ದರು. ಇಂಥಾ ಮಾತುಗಳನ್ನು ನಮ್ಮ ಪತ್ರಿಕೆಯಲ್ಲಿ ಪ್ರಕಟಿಸುವದಕ್ಕೆ ನಾಚಿಕೆಯಿಂದ ಹಿಂದೆಗೆಯುವೆವು. ಆ ಕಾಲದಲ್ಲಿ ಸಾವಿರಾರು ಮಂದಿ ಗಂಡಸರೂ, ಹೆಂಗಸರೂ, ನಂತು ಮತ್ತು ಹುಡುಗ ಮಕ್ಕಳೂ ಆ ಆಶ್ಚರ್ಯವಾದ ನೋಟವನ್ನು ನೋಡಿ, ಇದು ತಮ್ಮ ಮತಕ್ಕೆ ಸಂಬಂಧಪಟ್ಟದ್ದೆಂದು ತಿಳಿದು, ಏನು ನೆನಸಿರಬಹುದು. ಅವರಲ್ಲಿ ಕೆಲವರು, ಇದು ಭಾರತಕ್ಕೆ ಬಲವಾದ ಪ್ರೇರಣೆಯಾಗಿದೆಯೆಂದು ಸಂತೋಷಪಟ್ಟರು ಇನ್ನು ಕೆಲವರು ಇದೇನಾಶ್ಚರ್ಯ ಎಂದು ಬೇರೆ ನಾಚಿಕೆಯಿಂದಲೋ ಅಥವಾ ಗಾಬರಿಯಿಂದಲೋ ಸುಮ್ಮನಿದ್ದರು. ಕೊಂಚ ಜನರು ಮಾತ್ರ ಇದನ್ನು ನೋಡಿ ಜುಗುಪ್ಸೆಪಟ್ಟು, ಧೈರ್ಯದಿಂದ ಸುಪೀರಿಯರ್‌ರಲ್ಲಿ ಫಿರ್ಯಾದು ಹೇಳಿಕೊಂಡರು. ಈ ಕೆಲಸವು ಎರಡು ದಿವಸಗಳವರೆಗೆ ಅಪ್ರತಿಬಂಧವಾಗಿ ನಡೆಯುತಿತ್ತು. ಮೂರನೇ ದಿವಸ ಪೊಲೀಸ್ ಜವಾನರು ಸುಪೀರಿಯರ್ ಅಪ್ಪಣೆಯಿಂದ ಅದನ್ನು ನಿಲ್ಲಿಸಿದರು.—ವೃ. ಪ.

ಯೋಗಿ ಮತವು.

ಲೋಕದಲ್ಲಿ ಕೆಲವರು ಯೋಗಿಗಳು ಪರಮೇಶ್ವರ ಸಮಾನ ರೂಪರಾಗಿ ಜೀವನ್ಮುಕ್ತರಾಗಿರುತ್ತಾರೆ. ಅಂತಾ ಯೋಗಿಗಳ ಅಭಿಪ್ರಾಯವೇನಂದರೆ:—ಶರೀರವು ಅಸ್ಥಿರವಾದರೆ ಜೀವನ್ಮುಕ್ತಿಯುಂಟಾಗಲಾರದು, ಆದುದರಿಂದ ಶರೀರ ಸ್ಥೈರ್ಯಕ್ಕೆ ತಕ್ಕ ಉಪಾಯವು ಪ್ರಥಮತಃ ಸಂಪಾದಿಸಿಕೊಳ್ಳಬೇಕಾದುದು ಅತ್ಯಾವಶ್ಯಕವಾಗಿರುತಿದೆ. ಅಂತಾ ಉಪಾಯವು ಯಾವದಂದರೆ.—ಪಾರದವೆಂದು ವ್ಯವಹರಿಸಲ್ಪಡುತಲಿರುವ ರಸವೇ ಶರೀರ ಸ್ಥಿತಿಗೆ ಕಾರಣವೇ ಹೊರತು ಬೇರೊಂದಲ್ಲವು. "ಪಾರಂದದಾತಿ ಪಾರದಃ" ಎಂಬ ವ್ಯುತ್ಪತ್ತಿಯಿಂದ ಸಂಸಾರ ರೂಪವಾದ ಬಹುವಿಧ ಸ್ಥಿತಿಪರಿಣಾಮಗಳಿಂದ ತಪ್ಪಿಸಿ ಯಾವಾಗಲು ಏಕರೂಪವಾದಸ್ಥಿತಿಯಂ ಮನುಷ್ಯನಿಗೆ ಅದು ಉಂಟು ಮಾಡತಕ್ಕದ್ದಾಗಿರುತಿದೆ. ಸಂಸಾರಸ್ಯಪರಂಪಾರಂ ದತ್ತೇಸೌಪಾರದಸ್ಸ್ಮೃತಃ । ಪಾರದೋಕಥಿತೋಯಸ್ಮಾತ್ಪರಾರ್ಥಂಸಾಧಕೋತ್ತಮೈಃ । ಸುಪ್ತೋಯಂ ಮತ್ಸಮೋದೇವೀ ಮಮಪ್ರತ್ಯಂಗಸಂಭವಃ । ಮಮದೇಹ ರಸೋಯಸ್ಮಾತ್ ರಸಸ್ತೇನಾಯಮುಚ್ಯತೇ ॥ ಅಂದರೆ-- ಪಾರ್ವತೀ ಪರಮೇಶ್ವರ ಸಂವಾದದಲ್ಲಿ ಈಶ್ವರನ ವಚನವೇನಂದರೆ, ಹೇ ಸರ್ವಮಂಗಳೇ! ನನ್ನ ಶರೀರ ಜನ್ಯವಾದ ರಸವು ಶುದ್ಧಿ ಮಾಡಲ್ಪಟ್ಟು ರಸವಾದ ಪಾರಂಗತರಿಂದ ಸಕಲ ಯೋಗಸಿದ್ಧಿಗೆ ಸಾಧನವಾಗಿ ಸ್ವೀಕರಿಸಲ್ಪಡುತಿದೆಂದು ತಿಳಿಯತಕ್ಕದ್ದು. ಷಡ್ದರ್ಶನಗಳಲ್ಲಿಯೂ ಶರೀರ ನಾಶಾನಂತರವೇ ಜೀವನಿಗೆ ಮುಕ್ತಿಯುಂಟಾಗುತಿದೆಯೆಂದು ತಿಳಿಸಲ್ಪಟ್ಟಿರುತಿದೆ. ಶರೀರವಿಯೋಗಾನಂತರ ವುಂಟಾಗುವ ಮುಕ್ತಿಯಲ್ಲಿ ಯೆಂತವರಿಗೂ ಅಪೇಕ್ಷೆಯುಂಟಾಗಲಾರದಾದುದರಿಂದ ಮೋಕ್ಷ ಪ್ರಾಪ್ತಿ ಪ್ರಯತ್ನವು ಸಹ ಶೂನ್ಯವಾಗಿರುವುದು. ಆದಕಾರಣ ಷಡ್ದರ್ಶನಗಳಲ್ಲಿ ತಿಳಿಸಲ್ಪಡುವ ಮುಕ್ತಿಗಳಿಗಿಂತಲೂ ಪ್ರತ್ಯಕ್ಷ ಸಿದ್ಧವಾದ ಯೋಗಸಮ್ಮತವಾದ ಮುಕ್ತಿಯಬಗ್ಗೆ ಯೆಲ್ಲರೂ ಶ್ರಮ ಪಡಬೇಕೆಂದು ಯೋಗಶಾಸ್ತ್ರವು ಬೋಧಿಸುತಿದೆ. ಷಡ್ದರ್ಶನೇಪಿ ಮುಕ್ತಿಸ್ತು ದರ್ಶಿತಾಪಿಂಡಪಾತನೇ । ಕರಾಮಲಕವತ್ಸಾಪಿ ಪ್ರತ್ಯಕ್ಷಾನೋಪಲಭ್ಯತೇ । ತಸ್ಮಾತ್ತಂರಕ್ಷಯೇತ್ಪಿಂಡಂ ರಸೈಶ್ಚೈವರಸಾಯನೈಃ । ಕರತಲಾಮಲಕದಂತೆ ಸುಲಭವಾದ ಪ್ರತ್ಯಕ್ಷ ಸಿದ್ಧಿಗೆ ಕಾರಣಭೂತವಾದ ರಸ ರಸಾಯನಗಳಿಂದ ಶರೀರವಂ ರಕ್ಷಿಸಬೇಕಾದುದು ಮುಖ್ಯಕರ್ತವ್ಯವು, ಇದೇಅಭಿಪ್ರಾಯವನ್ನೆ ಶ್ರೀಗೋವಿಂದಭಗವತ್ಪಾದಾಚಾರ್ಯರು ತಿಳಿಸಿರುತ್ತಾರೇನಂದರೆ:-ಧನ ಶರೀರ ಭೋಗಗಳು ನಿತ್ಯವೆಂದರಿತು ಮುಕ್ತಿಯನ್ನೈದಲಿಕ್ಕೆ ಪ್ರಯತ್ನಪಡಬೇಕು ಅಂತಾಮುಕ್ತಿ ಜ್ಞಾನದಿಂದುಂಟಾಗತಕ್ಕದ್ದು. ತತ್ವಜ್ಞಾನವು ಅಭ್ಯಾಸದಿಂದುಂಟಾಗತಕ್ಕದ್ದು. ಆ ಅಭ್ಯಾಸವು ಶರೀರದಾರ್ಢ್ಯದಿಂದುಂಟಾಗುವುದು. ಈವಿಷಯದಲ್ಲಿ ಕೆಲವರಅಭಿಪ್ರಾಯವೇನಂದರೆ,—ಶರೀರವು ಅನಿತ್ಯವಾದುದರಿಂದ ನಿತ್ಯ ಶರೀರ ವೆತ್ತಣದೆಂದು ಆಕ್ಷೇಪಿಸುತ್ತಾರೆ. ಈ ಆಕ್ಷೇಪಣೆಗೆ ಪೂರ್ವದಲ್ಲಿಯೇ ಯೋಗಿಗಳು ಉತ್ತರ ಹೇಳಿರುತ್ತಾರೇನಂದರೆ,—ಸ್ಥೂಲ ಶರೀರವು ನಿತ್ಯವಲ್ಲದಿದ್ದರೂ, ರಸಾಭ್ರಕ ಪದಗಳಿಂದ ವ್ಯವಹರಿಸಲ್ಪಡುವ ರಸಧಾತುಗಳು ನಿತ್ಯವಾದುದರಿಂದ ಅಂತಾ ಧಾತುಸೇವನೆಯಿಂದ ಯೋಗಿಗಳು ಸೂಕ್ಷ್ಮ ಶರೀರ ಯುಕ್ತರಾಗಿಯೂ ಗಗನಮಾರ್ಗಚಾರಿಗಳಾಗಿಯೂ ತ್ರಿಕಾಲಜ್ಞಾನಿಗಳಾಗಿಯೂ ಅಣಿಮಾದ್ಯಷ್ಟಸಿದ್ಧಿ ಯುಕ್ತರಾಗಿಯೂ ಆಗುತ್ತಾರೆ ಅಂತವರನೇಕರಿಲ್ಲದಿಲ್ಲವು. ಅವರ ಶಕ್ತಿಯು ಅಮೋಘವಾದದ್ದು. ಅವರು ಸಾಧಾರಣವಾಗಿ ದೃಶ್ಯರಲ್ಲವು. ನಿತ್ಯ ಶರೀರವು ಯೋಗಿಗಳಿಗೆ ನಿಯತವಾದುದರಿಂದ ಜೀವನ್ಮುಕ್ತಿಯಂ ಕೋರುವಂತಾ ಯೋಗಿಯು ಪ್ರಥಮತಃ ದಿವ್ಯದೇಹವಂ ಸಂಪಾದಿಸಬೇಕು. ರಸಾಭ್ರಕ ಧಾತುಗಳು ಶಿವಶಕ್ತ್ಯಾತ್ಮಕವಾದವೆಂತಲೂ, "ಅಭ್ರಕಸ್ತವಬೀಜಂತು ಮಮಬೀಜಂತು ಪಾರದಃ, ಅನಯೋರ್ಮೇಳನಂದೇವಿ ಮೃತ್ಯುದಾರಿದ್ರ್ಯನಾಶನಂ" ಎಂಬದಾಗಿ ಈಶ್ವರನ ವಾಕ್ಯವೆಂತಲೂ, ದೇವಾಃಕೇಚಿನ್ಮಹೇಶಾದ್ಯಾಃ ದೈತ್ಯಾಃಕಾವ್ಯ ಪುರಸ್ಸರಾಃ । ಮುನಯೋವಾಲಖಿಲ್ಯಾದ್ಯಾಃನೃಪಾಸ್ಸೋಮೇಶ್ವರಾದಯಃ ॥ ಅಂದರೆ ದೇವದಾನವ ಮೊದಲಾದವರನೇಕರು ದಿವ್ಯ ಶರೀರಗಳನ್ನು ಧರಿಸಿ ನಿತ್ಯಸಿದ್ಧಿಯಂ ಪಡೆದಿರುತ್ತಾರೆಂತಲೂ ರಸೇಶ್ವರ ಸಿದ್ಧಾಂತವೆಂಬ ಗ್ರಂಥದಲ್ಲಿ ವಿಳಸಲ್ಪಟ್ಟಿರುತಿದೆ. ರಸಾದಿ ಸಾಧನಗಳಿಂದ ನಿತ್ಯಶರೀರ ಯುಕ್ತರಾಗಿ ಜೀವನ್ಮುಕ್ತಿಯಂಪಡೆಯುವವರ್ಕೆ ಈ ಸಿದ್ಧಾಂತಕ್ಕಿಂತಲೂ ಸಾಧನವು ಬೇರೊಂದಿರುವದಿಲ್ಲವು.

ಪೂರ್ವದಲ್ಲಿ ಮಹಾತ್ಮರನೇಕರು ಘುಟಿಕಾದಿ ಸಿದ್ಧಿಯಿಂದ ಅನೇಕಅದ್ಭುತಕಾರ್ಯಗಳನ್ನು ಮಾಡಿದರೆಂಬದಕ್ಕೆ ದೃಷ್ಟಾಂತಗಳಿರುತಿವೆ. ಇಂತಾಸಿದ್ಧರಿಂದ ಮಾಡಲ್ಪಡುವ ಔಷಧಗಳು ಸಹ ಸಕಲ ರೋಗ ನಿವಾರಕಗಳಾಗಿ ಅಮೋಘ ಶಕ್ತಿಯನ್ನುಂಟು ಮಾಡತಕ್ಕವಾಗಿರುತಿವೆ. ಸಿದ್ಧಪ್ರಯೋಗವಾಗಲಿ ಅವರಿಂದ ಮಾಡಲ್ಪಟ್ಟ ಔಷಧಗಳಾಗಲಿ ಸಾಧಾರಣವಾಗಿ ದೊರೆಯತಕ್ಕವಲ್ಲವು. ಸಿದ್ಧಪುರುಷರವು ಅನ್ಯರಿಗೆ ಸರ್ವಾತ್ಮನಾ ತಿಳಿಸತಕ್ಕವರಲ್ಲವು. ಸಿದ್ಧ ಪ್ರಯೋಗದಿಂದುಂಟಾಗುವ ಪ್ರಯೋಜನವಂ ಪರಿಭಾವಿಸಿ ಆವರಂತೆ ಈಗಿನ ವೈದ್ಯರು ಸಹ ರಸಲೋಹ ಪಾಷಾಣಾದಿಗಳನ್ನು ಧಾರಾಳವಾಗಿ ರೋಗಗಳ ಮೇಲೆ ಪ್ರಯೋಗಿಸುತ ಅವುಗಳಗುಂಟಾಗಿರುವ ಮಹಾತ್ಮ್ಯವನ್ನೂ ಶಕ್ತಿಯನ್ನೂ ಹೋಗಲಾಡಿಸಿ ತಾವೂ ಭ್ರಷ್ಟರಾಗಿ ರೋಗಿಯನ್ನು ನಾಶಪಡಿಸಿ ವೃತ್ತಿಗೂ ಅಗೌರವ ತರತಕ್ಕವರಾಗಿರುತ್ತಾರೆ. ಸಿದ್ಧೌಷಧವು ನಿಜವಾಗಿ ದೊರೆಯುವ ಪಕ್ಷಕ್ಕೆ ರೋಗ ಪ್ರಯುಕ್ತವಾದ ಅಪಾಂತರ ಜನ್ಯ ಮರಣದಿಂ ಮನುಷ್ಯನು ನಿಸ್ಸಂದೇಹವಾಗಿ ತಪ್ಪಿಸಿ ರಕ್ಷಿಸಬಹುದು. ಅಂತಾ ಶಕ್ತಿಯುಳ್ಳ ರಸಾಭ್ರಕಗಳು ಈಗಿನ ವೈದ್ಯರ ಕೈಗಳಲ್ಲಿ ದೊರೆತು ನಿಷ್ಪ್ರಯೋಜಕಗಳಾಗಿರುತವೆ. ರಸೋತ್ಪತ್ತಿಯ ವಿಷಯದಲ್ಲಿ ನಮ್ಮವರೂ ಇಂಗ್ಲೀಷಿನವರೂ ಒಂದು ಭಂಗವಂ ಮಾತ್ರ ಅಂದರೆ ಇತರ ಧಾತುಗಳಂತೆ ಇದೂ ಭೂಮಿಯಲ್ಲಿ ಕೆಲವುಕಡೆ ಅಗೆದರೆ ದೊರೆಯುತಿದೆಂಬದು ಅಂಗೀಕರಿಸಿದಾಗ್ಯೂ ನಮ್ಮವರು ಅದರ ಉತ್ಪತ್ತಿ ಕಾರಣವನ್ನು ಪ್ರಕಾರಾಂತರದಿಂ ತಿಳಿಸುತ್ತಾರೆ. ಅದು ಆಧುನಿಕ ವಿಚಾರ ವಿಮರ್ಶೆಗೊಳಪಡತಕ್ಕದ್ದಲ್ಲವು. ಅದಾಗ್ಯೂ ಅದರ ಶಕ್ತಿಯನ್ನು ಅವರು ಬಹಳ ಕೊಂಡಾಡುತ್ತಾರೆ. ಹ್ಯಾಗಂದರೆ—

ಸ್ಕಂದಾತ್ತಾರಕಸಂಹಾರ್ಥಂ ಕೈಲಾಸವಾಸಿ ಪ್ರಾರ್ಥಿತಸ್ಸುರೈಃ ।
ಶಂಭುನಾ ಮುಮಾದೇವ್ಯಾ ಪಾರ್ವತೀವಲ್ಲಭೋ ಭವಃ ।
ರತಾರಂಭೇತುಸಂಜಾತೇ ಗೃಹೀತಂ ವಹ್ನಿನಾಮುಖೇ ।
ಕ್ಷಿಪ್ತಂತೇನ ಸತುರ್ದಿಕ್ಷು ತಪ್ತವಕ್ತ್ರತಃ ।
ಸಾಪಿ ತಂ ವಿಕ್ಷಿಪ್ಯ ಉದ್ಯಾಂತ ದಗ್ಧಾಂಗೀ ಕೃತ್ಸ್ನಶಃ ।
ಕ್ಷಿಪ್ತ ಮಾಯಾಂತು ಸಂಕ್ಷಿಪ್ತ ಮಿತಸ್ತತಃ ಕೃತ್ಸ್ನಶಃ ।
ರಸೋತ್ಪತ್ತಿ ಸಮಾಖ್ಯಾತಾ ರಸಸ್ಯ ಮಹಿಮಾ ಇದೃಶಃ ॥ ಅಂದರೆ,

ತಾರಕಾಸುರ ವಧಾರ್ಥ ಕುಮಾರಸ್ವಾಮಿಯಂ ಸೃಜಿಸಬೇಕೆಂದು ಈಶ್ವರನನ್ನು ದೇವೇಂದ್ರನು ಮೊದಲಾದ ಸಮಸ್ತ ದೇವತೆಗಳು ಪ್ರಾರ್ಥಿಸಲು ಆತನು ಕುಮಾರಸ್ವಾಮಿಯು ಜನನಿಮಿತ್ತಾರ್ಥ ಮಹಾ ಸಂಕಲ್ಪ ಮಾಡುವಾಗ್ಯ ರೇತಸ್ಖಲನವಾಗಲು ಅದು ಅಗ್ನಿ ಧರಿಸಲಾರದೆ ಹೋದುದರಿಂದ ಭೂಮಿಯಮೇಲೆ ಬೀಳಲು ಅದು ನಾಲ್ಕು ದಿಕ್ಕುಗಳಲ್ಲಿಯೂ ಬೇರೆ ಬೇರೆಯಾಗಿ ಹರಿದು ಹೋದಂತೆಯೂ ಗೌರೀ ಶಾಪದಿಂದ ಉತ್ತರ ಪ್ರಾಗ್ದಕ್ಷಿಣ ದಿಕ್ಕುಗಳಲ್ಲಿ ಹರಿದ ರಸವು ಯಾವ ಕೆಲಸಕ್ಕು ಉಪಯೋಗಿಸುವದಿಲ್ಲವೆಂತಲೂ ಪಶ್ಚಿಮದಿಕ್ಕಿನಲ್ಲಿ ಬಿದ್ದ ರಸಮಾತ್ರ ಉಪಯುಕ್ತವಾದುದೆಂತಲೂ ಪಂಡಿತರ ಮತವಾಗಿರುತಿದೆ ಇವುಗಳ ಭೇದಗಳೂ ಮಹಾತ್ಮ್ಯವೂ ಪ್ರಯೋಜನಗಳೂ ದೋಷಗಳೂ ತದ್ದೋಷಾಪಕರ್ಷಕ ಜನಿತರೋಗಗಳೂ ಕಂಚುಕ ದೋಷಗಳೂ ಮುಂದೆ ವರಿಸಲ್ಪಡುವವು.

BANGALORE.—Printed and published at the KARNATAKA Press, No. 40, [illegible] Road, PETTAH.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE—MONDAY, AUGUST 8, 1892. [No 32.

ಸಂಪುಟ ೧೯] ಬೆಂಗಳೂರು —ಸರ್ ೧೮೯೨ ನೇ ಇಸವಿ ಆಗಸ್ಟ್ ೮ ನೇ ತಾರೀಖ್ ಸೋಮವಾರ. [ಸಂಖ್ಯೆ ೩೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ	ಪರಸ್ಥಳದವರಿಗೆ ಪಾರ್ಸಲ್ ಸಹಿ
ಮುಂಗಡವಾಗಿ ಕೊಟ್ಟರೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಟ್ಟರೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಗಳ ದರ.

[illegible]

ADVERTISEMENTS

NOTICE.

VAIDYASARA SANGRAHA

A TREATISE ON [illegible]

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ

[illegible]

ಬೆಂಗಳೂರ್ [illegible]

ನೋಟೀಸು.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

[illegible]

ನೋಟೀಸು.

ಸುಜನ್ಸನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಬೆಳರಿಗೆ.

ಬರ್ನ್ಹಂ ಪೋರ್ಟ್ಲ್ಯಾಂಡ್ ಸೀಮೆಂಟ್ ಎಂಬ ಸುಣ್ಣ.

[illegible]

ಕೋಲ್ಟ್ ತುಂಡು.

[illegible]

ಬೆಂಗಳೂರು ಸಿಟಿ ಸ್ಟೇಷನಲ್ಲಿ ಗಾಡಿಗಳಲ್ಲೇ ಒಪ್ಪಿಸಲ್ಪಡುವುದು.

ಬೇಕಾದವರು, ಬೆಂಗಳೂರಲ್ಲಿ [illegible] ಬರೆದುಕೊಳ್ಳತಕ್ಕದ್ದು.

ನೋಟೀಸ್.

[illegible] ಕಂಪೆನಿ.

[illegible]

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. [illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

[illegible]

THE MONEY MARKET.

[illegible] 6 ನೇ ಆಗಸ್ಟ್ 1892.

[illegible] 106 2-0 [illegible] 106 8-0 [illegible]

[illegible] (500) [illegible] 940 [illegible] 945 [illegible]

[illegible] (100) [illegible] 165 [illegible] 170 [illegible]

[illegible] 15—15—6

[illegible] 1s. 3 1/32d

[illegible] 1s. 3 1/32d.

[illegible] 1s. 2 7/8d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 8, 1892.

೧೮೯೨ನೇ ಇಸವಿ ಆಗಸ್ಟು ತಾ॥ ೮ ನೇ ಸೋಮವಾರ.

BRAHMIN INTER WIDOW RE-MARRIAGE.
ವಿಮತವಿಧವಾ ವಿವಾಹವು

ಗತ ವಾರದಲ್ಲಿ ನಾವು ಸೂಚಿಸಿದ್ದ ಪ್ರಕಾರ ಕಳೆದ ತಿಂಗಳ ೩೧ನೇ ತಾರೀಖ್ ಭಾನುವಾರದ ದಿನ ಬೆಳಗ್ಗೆ ೧೧ ಘಂಟೆಗೆ ಕನ್ಯಾಲಗ್ನದೊಳು, ಮದರಾಸಿಗೆ ಸೇರಿದ ಮೈಲಾಪೂರಿನಲ್ಲಿ ವಿಮತ ವಿಧವಾ ವಿವಾಹವು, ವಿಧವಾ ಶ್ರೇಯೋಭಿಲಾಷಿಯಾಗಿಯೂ, ಅನರ ಹಿತಂಕರಣ ಪ್ರವರ್ತಕರಾಗಿಯೂ, ಸಮಯಾಚಾರ ಪರಿಷ್ಕರಣಾಭಿಲಾಷಿಗಳಿಗೆ ಮಾರ್ಗ ಬೋಧಕರಾಗಿಯೂ ಇರುವ ದಿವಾನ್ ಬಹದೂರ್ ಆರ್. ರಘುನಾಥರಾಯರವರ ಪ್ರೋತ್ಸಾಹಾನುಕೂಲ್ಯದಿಂ ಅತಿ ವಿಭವದೊಡನೆ ನಡೆದಂತೆ ತಿಳಿಯಬರುತಿದೆ. ಈ ಅಪೂರ್ವ ವಿವಾಹವನ್ನು ಅಭಿನಂದಿಸಿ ಅಂಗೀಕರಿಸಿದ ವರನು ನಾವು ಹಿಂದೆ ತಿಳಿಸಿದಂತೆ, ರಾಮಾನುಜ ಮತಸ್ಥನಲ್ಲದೆ ಇನ್ನೂ ವಿಚಾರಿಸಲಾಗಿ, ವಡವೈಶೀಯನೆಂದು ಸಹ ತಿಳಿಯಬರುತಿದೆ. ವರಿಣೀತೆಯಾದವಳು ಪೆನುಕೊಂಡೆ ಸ್ಥಳ ನಿವಾಸಿಯಾದ ವಕೀಲ್ ನಾಗೇಶರಾಯರೆಂಬವರ ಪುತ್ರಿಯೆಂದು ಕೇಳುತ್ತೇವೆ. ಪ್ರತಿ ಗೃಹೀತನಾದ ವೆಂಕಟವರದಯ್ಯಂಗಾರ್ರೆಂಬಾತನು ಮೈಸೂರಲ್ಲಿ ವಿದ್ಯಾಭ್ಯಾಸ ಮಾಡುತಲಿದ್ದು ಎಫ್. ಏ. ಪರೀಕ್ಷೆಯಂ ಕೊಟ್ಟು ಇಲ್ಲಿನ ವಿದ್ಯಾಭ್ಯಾಸದ ಇಲಾಖೆಯಲ್ಲಿ ಮಾಹೆಯಾನಾ ೨೦ ರೂಪಾಯಿಗಳ ಕೆಲಸದಲ್ಲಿರುತಲಿದ್ದನು. ಪರಿಗೃಹೀತಳಾದ ಮತ್ತು ವಿಗತಸೌಮಂಗಲ್ಯ ಸಂಪ್ರಾಪ್ತಿಯಿಂ ಸೌಭಾಗ್ಯವತಿ ಯೆನಿಸಿದ ಕೃಷ್ಣಮ್ಮನೆಂಬಾಕೆಯು ವಿದ್ಯಾವೈಲಕ್ಷಣ್ಯಾ ಆಧುನಿಕ ನಾಗರಿಕತಾ ವೈದಗ್ಧ್ಯ ಪುಷ್ಟ ಪ್ರೌಢಾಂಗನೆಯಾಗಿರುತ್ತಾಳೆ. ಈ ಅನ್ಯಾದೃಕ ವಿವಾಹಾವಲೋಕನೇಚ್ಛೆಯೊಡನೆ, ರಷ್ಟಿವಾಹ ಮುಂದಿರಲಿ, ಸಮಯಾಚಾರ ಪರಿಷ್ಕರಣ ಪ್ರವರ್ತನಾಭಿಲಾಷಿಗಳಾಗಿಯೂ, ಪೂರ್ವಸಂಪ್ರದಾಯ ವಿಧ್ವಂಸಕರಾಗಿಯೂ ಇರುವ ಬಹು ಮಂದಿ ಹಿಂದೂ ದೊಡ್ಡ ಮನುಷ್ಯರು, ಅಂದರೆ ಅನೇಕಜನ ರಾಯರುಗಳು, ಅಯ್ಯರುಗಳು, ಶಾಸ್ತ್ರಿಗಳು, ಅಯ್ಯಂಗಾರುಗಳು, ಆಚಾರ್ಯರುಗಳು, ಪಿಳ್ಳೆಗಳು, ಮೊದಲಿಯಾರುಗಳು, ನಾಯುಡುಗಳು, ಶೆಟ್ಟಿಗಳು, ಇವರೆಲ್ಲರು ಹೋಗಿ ವಿವಾಹಮಂಟಪವನ್ನಲಂಕರಿಸಿದ್ದರು. ಅಲ್ಲಿಗೆ, ಮಾನಿತರಾದ ಸ್ಥಳದ ದೊಡ್ಡ ಮನುಷ್ಯರನೇಕರು ಐದುಂವರ್ತ್ಯೇಣ ಬಾರದೆ ತಪ್ಪಿಸಿಕೊಂಡದ್ದು ಬಹಳ ವಿಷಾದಿಸತಕ್ಕ ಅಂಶವಾಗಿರುತಿದೆ. ನಿಕ್ಕ ಅಂಶಗಳೆಲ್ಲವೂ ಕೊರತೆ ಇಲ್ಲದೆ ಜರಿಗಿದವು. ಪರಿಣಯ ಕಾರ್ಯ ನಿರ್ವಾಹಕ್ಕೆ ಮದರಾಸ ಹಿಂದೂ ಪತ್ರಿಕಾ ಲೇಖಕರಾದ ಮಿ॥ ಸುಬ್ರಹ್ಮಣ್ಯಯ್ಯನವರು ಬದ್ಧಕಂಕಣರಾಗಿದ್ದರು. ಮಂತ್ರಕ್ರಿಯಾಕಲಾಪ ವಿಚಾರಣೆಗೂ, ವಿವಾಹಮಂಟಪದಲ್ಲಿ ಅಧ್ಯಕ್ಷರಾಗಿದ್ದು, ಗೌರವ ಸಂಪಾದನಕ್ಕೂ ಮಿ॥ ರಘುನಾಥರಾಯರವರು ಅಭಿಮುಖರಾಗಿದ್ದರು. ಸುವಾಸಿನೀಸಮೂಹದಿಂ ಜರಗಬೇಕಾದ ಕ್ರಿಯೆಗಳಿಗೆಲ್ಲ ವಯೋವೃದ್ಧರಾದ ದಿವಾನ್ ಬಹದೂರರವರ ಭಾರ್ಯೆಯವರು ಅಭಿಮಾನಿಸಿ ತತ್ತತ್ಕಾರ್ಯನಿರ್ವಾಹಕೆಯರಾಗಿದ್ದರು. ಅನಂತರ ಸಪ್ತಪದಿ ಲಾಜಹೋಮಾದಿ ವೈವಾಹಿಕ ಕ್ರಿಯೆಗಳೆಲ್ಲವು ಮುಗಿದ ಕೂಡಲೆ ವಧೂವರರಿಗೆ ಶ್ರೇಯಃಪ್ರಾರ್ಥನಾಪೂರ್ವಕ ವೇದೋಕ್ತ ಆಶೀರ್ವಾದಗಳು ಮಾಡಲ್ಪಡಲು ಅವರಿಬ್ಬರೂ ವೃದ್ಧರಾದ ದಿವಾನ್ ಬಹದೂರರವರಿಗೂ ಅವರಕುಟುಂಬಕ್ಕೂ ಸಾಷ್ಟಾಂಗ ಪ್ರಣಾಮವು ಗೈದು ಆಶೀರ್ವಚನಪೂರ್ವಕಕೊಡಲ್ಪಟ್ಟ ಫಲಮಂತ್ರಾಕ್ಷತೆಗಳಂ ಸ್ವೀಕರಿಸಿದರು. ಬಳಿಕ ಅಲ್ಲಿದ್ದವರೆಲ್ಲರಿಗೂ ದಕ್ಷಿಣಾ ತಾಂಬೂಲಗಳು ಕೊಡಲ್ಪಟ್ಟವು. ಏತದ್ವಿವಾಹಾಂಗರೂಪವಾಗಿ ಕ್ರಿಶ್ಚಿಯನ್ ಕಾಲೇಜ್ ವಿದ್ಯಾರ್ಥಿಯಾದ ಕೈಲಾಸಯ್ಯರ್ ಎಂಬವರು ಇಂಗ್ಲಿಷ್ ಭಾಷೆಯಲ್ಲಿಯೂ, ಮತ್ತೊಬ್ಬ ಅಯ್ಯರ್ ದ್ರಾವಿಡಭಾಷೆಯಲ್ಲಿಯೂ, ಈ ಶುಭಕಾರ್ಯದಲ್ಲಿ ಅತಿ ಧೈರ್ಯದಿಂ ಪ್ರವರ್ತಿಸಿ, ಲೋಕಕ್ಕೆ ಮಾರ್ಗದರ್ಶಕರಾಗಿ ಯೇರ್ಪಟ್ಟ ಈ ವಧೂವರರ ಮಾರ್ಗವನ್ನನುಸರಿಸಿ ಅವರ ಸ್ಥೈರ್ಯಧೈರ್ಯೋತ್ಸಾಹಗಳಂ ಇತರರಂಗೀಕರಿಸಿ ತದ್ದ್ವಾರ ದರಿಗಿಸಿದ ಹೊರ್ಪ ಇಂಡ್ಯ ದೇಶಕ್ಕೆ ಪ್ರಾಪ್ತವಾಗಿರುವ ಕ್ಷೀಣಗತಿಯು ನಿವೃತ್ತಿಸಿ ಅದು ಅಭಿವೃದ್ಧಿಯನ್ನೈದಲಾರದೆಂದು ವಾಗ್ಮಿರೆತೆಳಸಿದರು. ಇವರ ಧೈರ್ಯ ಶೌರ್ಯ ಸಾಹಸಾದಿಗಳಂ ಕಾರ್ಯತಃ ಪರೀಕ್ಷಿಸಿ ನೋಡಬೇಕಾದಸಮಯವು ಅನಂತರ ಸನ್ನಿಹಿತವಾಗಲು, ಏತದ್ವಿವಾಹ ಮುಖ್ಯಪ್ರವರ್ತಕರಾದಿಯಾಗಿ ಅನೇಕರು, ನೋಡುತಲಿರು ವಂತೆಯೇ ಮೇಘಪರಂಪರೆಗಳಂತೆ ಅದೃಶ್ಯರಾದರು. ಭೋಜನ ಕಾಲದಲ್ಲಿ, ಅಂತರವಾದ ಕೋರಿಕೆಯುಳ್ಳವರು ಕೆಲವರು ಮಾತ್ರ ಹಾಜರಿದ್ದರು. ಗತ ಬುಧವಾರದ ದಿನ ಸದರೀ ವಧೂವರರಿಗೆ ವಿವಾಹಾಂಗವಾದ ಗರ್ಭಾದಾನವು ಜರಗಿದುದಾಗಿ ತಿಳಿಯಬರುತಿದೆ. ಪುನಸ್ಸಿವಾಹಿತೆಯಾದ ಕೃಷ್ಣಮ್ಮನಿಗೆ ತಾಯಿ ತಂದೆಗಳೂ ಒಡಹುಟ್ಟಿದವರೂ ಜೀವಿತರಾಗಿದ್ದಾಗ್ಯೂ ಅವರು ತಮ್ಮ ಪರಿಣಾಮವಂ ಚಿಂತಿಸಿ ಈ ವಿವಾಹಕ್ಕೆ ಒಬ್ಬರೂ ಬರದೇ ಹೋದರು. ಈವಿವಾಹದಲ್ಲಿ ವಾಶನೊಬ್ಬನು ಸ್ವತ್ವನಿವೃತ್ತಿಗೆ ಯೇರ್ಪಡದೆ ಯೋದಾಗ್ಯೂ ಕೃತಜ್ಞಮ್ಮನು ತಾನೇ ತನ್ನನ್ನು ದಾನ ಮಾಡಿಕೊಂಡಂತೆ ಕಾಣುತಿದೆ. ಮುಖ್ಯವಾಗಿ ಇಂತಾ ಮಹತ್ಕಾರ್ಯದಲ್ಲಿ ಪ್ರವರ್ತಿಸಿ ಲೋಕಕ್ಕೆ ಹಿತದರ್ಶಕರಾಗಿ ಯೇರ್ಪಟ್ಟ ಮಿ॥ ವೆಂಕಟವರದಯ್ಯಂಗಾರ್ರವರೂ, ಅವರ ಧರ್ಮಪತ್ನಿಯಾದ ಕೃಷ್ಣಮ್ಮನೂ ಯೆಲ್ಲರಿಂದ ಶುಭಕಾಲಗಳಲ್ಲಿ ಸ್ಮರಣೀಯರಾಗದಿರಲಾರರು.

Occasional Notes
ಸ್ವೈಮಿತ್ತಿಕ ವಿಷಯನ್ಯಾಸ.

Labourers on relief works.—ರಾಜಪುಟಾನಾ ದೇಶದೊಳು ಕ್ಷಾಮ ಪೀಡಿತರಾದವರ ಸಹಾಯಾರ್ಥ ಸ್ಥಾಪಿಸಲ್ಪಟ್ಟಿರುವ ಕಾಮಗಾರಿಗಳಲ್ಲಿ ಕೂಲಿ ಮಾಡುವದರ ಮೂಲಕ ೬೩,೦೦೦ ಮಂದಿ ಜೀವಿಸುತಲಿದಾರೆ.

Sanction accorded.—ಸಿಂಧುನದಿಯ ಶಾಖೆಯಾದ ಚಿನಾವ ಎಂಬ ನದಿಯ ಕಾಲ್ವೆಯನ್ನು ಬಡಾಯಿಸುವದಕ್ಕೆ ಹಿಡಿಯಬಹುದೆಂದು ಅಂದಾಜ್ ಮಾಡಲ್ಪಟ್ಟ ೧೫ ಲಕ್ಷ ರೂಪಾಯಿಗಳ ಖರ್ಚನ್ನು ಇಂಡಿಯಾ ಸ್ಟೇಟ ಸೆಕ್ರಟರಿಯವರು ಮಂಜೂರ್ಮಾಡಿರುತ್ತಾರೆ. ಈ ನಾಲೆಯು ನೀರಿನ ಮೂಲಕ ೩,೦೦,೦೦೦ ಯೆಕ್ರೆ ಜಮೀನು ಸಾಗುವಳಿಯಾಗುವದೆಂದು ಅಂದಾಜ್ ಮಾಡಲ್ಪಟ್ಟಿದೆ.

The Indian Mints.—ಸನ್ ೧೮೯೨ನೇ ಇಸವಿಯ ಮೊದಲು ಕಳೆದ ಜೂನ್ ಆಖೈರ್ ವರಿವಿಗೆ ಇಂಡ್ಯ ದೇಶದೊಳು ೩,೧೭,೫೫,೧೮೯ ರೂಪಾಯಿಗಳು ಛಾಪು ಹಾಕಲ್ಪಟ್ಟವು. ಈಮೊತ್ತದ ಪೈಕಿ ೧೬೪ ಕೋಟಿ ರೂಪಾಯಿಗಳು ಕಲ್ಕತ್ತ ಟಂಕಸಾಲೆಯಲ್ಲೂ, ೧೬ ಕೋಟಿ ರೂಪಾಯಿಗಳು ಮುಂಬೈ ಟಂಕಸಾಲೆಯಲ್ಲೂ ಛಾಪಾ ಹಾಕಲ್ಪಟ್ಟವು.

The Madras High Court.—ಮದರಾಸ್ ಹೈಕೋರ್ಟಿನ ಅಪೀಲ್‌ಸೈಡ್ ಡೆಪ್ಯುಟಿ ರಿಜಿಸ್ಟ್ರಾರಾದ ಮಿ॥ ವಾಕ್ಕರ್ ಮಾರ್ಗನ್ ಯವರು ಮೆಡಿಕಲ್ ಸರ್ಟಿಫಿಕೇಟಿನಮೇಲೆ ಯೆರಡುತಿಂಗಳ ರಜಾ ಕೊಡಲ್ಪಟ್ಟರಾಗಿ ಅವರ ಗೈರಹಾಜರೀ ಕಾಲದೊಳು ಅವರ ಕೆಲಸವು ಬದಲೀ ನೋಡುವಂತೆ ಸದರೀ ಇಲಾಖಾ ಮ್ಯಾನೇಜರಾದ ಮಿ॥ ವಿ ಎಂ. ರಾಮಯ್ಯಂಗಾರ್ರೆಂಬವರು ನೇಮಕರಾಗ್ಯಲ್ಪಟ್ಟಂತೆ ಮದರಾಸ್ ಪತ್ರಿಕೆಯೊಂದು ತಿಳಸುತಿದೆ.

The new Dewan of Travancore.—ತಿರುವಾಂಕೂರ್ ಸಂಸ್ಥಾನದ ಪ್ರಕೃತ ದಿವಾನರಾದ ಮಿ॥ ಟಿ. ರಾಮರಾಯರವರು ಕೆಲಸದಿಂದ ನಿವೃತ್ತರಾಗತಕ್ಕದ್ದೆಂದು ಕೆಲವು ತಿಂಗಳ ಹಿಂದೆಯೇ ವ್ಯವಸ್ಥೆಯಾಗಿದೆಯಷ್ಟೆ. ಸದರೀಯವರ ಸ್ಥಾನಕ್ಕೆ ಮಿ॥ ಶಂಕರಸುಬ್ಬಯ್ಯರೆಂಬವರು ನಿಯಮಿಸಲ್ಪಟ್ಟು ಈ ತಿಂಗಳ ೧೮ನೇ ತಾರೀಖಿನಲ್ಲಿ ತಮ್ಮ ಕೆಲಸದ ಚಾರ್ಜು ವಹಿಸುವರೆಂತಲೂ, ಮಾಜೀ ದಿವಾನರಿಗೆ ಮಾಹೇಯಾನಾ ೪೦೦ ರೂಪಾಯಿಗಳ ಪೆನ್ಷನ್ ಗೊತ್ತಾಯಿತೆಂತಲೂ ಆ ಪ್ರಾಂತದ ಪತ್ರಿಕೆಯೊಂದರ ಮೂಲಕ ತಿಳಿಯಲಾದೆವು.

An instance of female liberty.—ಕುಂಬಕೋಣ ಷಹರ ನಿವಾಸಿಯಾದ ಸುಮಾರ್ ೧೯ ವರ್ಷಗಳ ವಯಸ್ಸುಳ್ಳ ಬ್ರಾಹ್ಮಣ ಜಾತಿ ಬಾಲ ವಿಧವೆಯೊಬ್ಬಳು ಸ್ಕೂಲ್ ಫೈನಲ್ ಅಥವಾ ಮೆಟ್ರಿಕ್ಯುಲೇಷನ್ ಪರೀಕ್ಷೆಯಂ ಕೊಟ್ಟು ತೇರ್ಗಡೆಯಾದ ಮೇಲೆ, ಮುಂದೆ ತನ್ನ ವಿದ್ಯಾ ವ್ಯಾಸಂಗವನ್ನು ಪೂರ್ತಿಗೈಯಬೇಕೆಂಬ ಉತ್ಕಟೇಚ್ಛೆಯಿಂದ ತನ್ನ ಮನೆಯವರ ಅನುಮತಿ ಮುಂತಾದ ಅನುಮತಿಗಳಿಲ್ಲದೆ ಆಟೋವಾರದೊಳು ಮದರಾಸಿಗೆ ಬಂದು ಸೇರಿದಂತೆ ಅಲ್ಲಿನ ಸ್ಟಾಂಡರ್ಡ್ ಪತ್ರಿಕೆ ತಿಳಸುತಿದೆ. ಸ್ತ್ರೀಸ್ವಾತಂತ್ರ್ಯವನ್ನೂ ಅವರ ವಿದ್ಯಾಭಿವೃದ್ಧಿಯನ್ನೂ, ಆಧುನಿಕ ವೈಲಕ್ಷಣ್ಯಾಭಿವೃದ್ಧಿಯನ್ನೂ ಬಯಸತಕ್ಕವರಿಗೆ ಇದು ಕೇವಲ ಹರ್ಷಜನಕವಾದ ವೃತ್ತಾಂತವಾಗಿರುವದೆಂದು ನಂಬುತ್ತೇವೆ.

The privileges of a Burmese princess.—ಆಹಿವಾದದೊಳು, ಪದಭ್ರಷ್ಟರಾದಬರ್ಮ್ಮಾದೇಶದ ಅರಸರಾದ ಥೀಬಾಯವರನೊಸೆಯವರಮೇಲೆ ಕಲ್ಕತ್ತಾ ಸ್ಮಾಲ್‌ಕಾಜ್‌ಕೋರ್ಟಿನಲ್ಲಿ ತರಲ್ಪಟ್ಟ ಒಂದು ಸಿವಿಲ್ ಮೊಕದ್ದಮೆಯಲ್ಲಿ, ಆಕೆಯವರು ರಾಜವಂಶಕ್ಕೆ ಸೇರಿ ಗೌರವ್ಯರಾಗಿರುವದರಿಂದ ಆಕೆಯನ್ನು ಕೋರ್ಟಿಗೆ ಕರೆಯಿಸಕೂಡದು, ವರುತು, ಕಮಿಷನ್‌ಮೇಲೆ ಮನೆಯಲ್ಲೇ ವಿಚಾರಿಸಬೇಕೆಂದು ಆಕೆಯ ತರಫ್ ವಕೀಲರು ಜಡ್ಜಿಯವರನ್ನು ಕೇಳಿಕೊಳ್ಳಲು ಆಕೆಯು ರಾಜದ್ರೋಹಿ ಯೆನಿಸಿಕೊಂಡು ಸರ್ಕಾರಿನಿಗ್ರಹಕ್ಕೆ ಗುರಿಯಾಗಿರುವದರಿಂದ ಅಂತಾ ಗೌರವಕ್ಕೆ ಅರ್ಹಳಾಗುವದಿಲ್ಲವೆಂಬ ಕಾರಣವನ್ನು ನಮೂದಿಸಿ ಕೋರ್ಟಿಗೆ ಬಾರದೇ ತೀರಬೇಕೆಂದು ಜಡ್ಜಿಯವರು ಹುಕುಂ ಕೊಡಲು ಆಕೆಯು ಪಾಲಕಿಯಲ್ಲಿ ಕುಳತು ಕೋರ್ಟಿಗೆ ಬಂದು ಅದರಲ್ಲಿ ಕುಳತುಕೊಂಡೆ ಶೈಫಿಯತ್ತ ಕೊಟ್ಟು ಹೊರಟು ಹೋದರಂತೆ.

An inadequate punishment.—ಹಿಂದೆ ಕಡಪಾ ತಾಲ್ಲೂಕು ತಹಸೀಲ್ದಾರರಾಗಿದ್ದು ಪೆನ್ಷನ್‌ಮೇಲೆ ಕೆಲಸದಿಂದ ನಿವೃತ್ತರಾಗಿ ಈಗ ಮದರಾಸ್‌ನಲ್ಲಿ ವಾಸವಾಗಿರುವ ಮಿ॥ ಶ್ರೀನಿವಾಸಾಚಾರ್ರೆಂಬವರ ಬಾರ್ಯೆಯನ್ನು ಅವರಲ್ಲಿ ಪರಿಚಾರಕನಾಗಿದ್ದ ಕೋದಂಡ ರಾಮಯ್ಯಂಗಾರ್ರೆಂಬಾತನು ದುರ್ವ್ಯಾಪಾರಕ್ಕಾಗಿ ಅರಕುನ್ನಕ್ಕೆ ಕರೆದುಕೊಂಡು ಹೋಗಿಬಿಟ್ಟದ್ದಾಗಿ ಸದರೀ ಶ್ರೀನಿವಾಸಾ ಚಾರ್ಯರು ಆತನಮೇಲೆ ಅರಕುನ್ನಂ ಸಬ್‌ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮಾಡಿದ ಕ್ರಿಮಿನಲ್ ಮೊಕದ್ದಮೆಯ ವಿಚಾರಣೆಯು ಪ್ರತಿಸ್ಥಿಯಾಗಿ ಅಪರಾಧಿಯಮೇಲೆ ತಪ್ಪಿತಮೇರ್ಪಟ್ಟು ಮ್ಯಾಜಿಸ್ಟ್ರೇಟರು ಅವನಿಗೆ ಮೂರು ತಿಂಗಳ ಕಠಿಣ ಸಜಾ ಮತ್ತು ೫೦ ರೂಪಾಯಿಗಳ ಜುರ್ಮಾನೆ, ಅದನ್ನು ಕೊಡಲು ತಪ್ಪಿದರೆ ಒಂದು ತಿಂಗಳ ಜಾಸ್ತೀ ಸಜಾ ಅನುಭವಿಸತಕ್ಕದ್ದೆಂದು ಕಳೆದ ತಿಂಗಳ ೨೬ನೇ ತಾರೀಖಿನಲ್ಲಿ ತೀರ್ಮಾನಿಸಿ ದ್ದಿತೆ ಮದರಾಸ ಪತ್ರಿಕೆ ಯೊಂದು ತಿಳಸುತಿದೆ. ಅಪರಾಧಿಯು ನಡೆಸಿದ ಕೃತ್ಯಕ್ಕೆ ತಕ್ಕ ಶಿಕ್ಷೆಯಲ್ಲದೆ ಹೋದಬಗ್ಗೆ ಚಿಂತಿಸುತ್ತೇವೆ.

LOCAL AND PROVINCIAL NEWS.
ಒಳದೇಶಮತ್ತು ತಾಲ್ಲೂಕುವಾರ್ತಾವೃತ್ತಾಂತಗಳು.

Mr. B. L. Rice.—ಈ ಸಂಸ್ಥಾನದ ಶಾಸನಾನ್ವೇಷಣದ ಇಲಾಖಾ ಡೈರೆಕ್ಟರಾದ ಮಿ॥ ಬಿ. ಎಲ್ ರೈಸ್ ಸಾಹೇಬರವರು ಮೂರು ತಿಂಗಳ ಫರ್ಲೋ ರಜಾಮೇಲೆ ಸ್ವದೇಶಕ್ಕೆ ಹೋಗಿದ್ದರಷ್ಟೆ. ಸದರೀಯವರು ಕಳೆದ ಬುಧವಾರದ ದಿನ ಇಲ್ಲಿಗೆ ವಾಪಸ್ ಬಂದು ಸೇರಿದರು.

The Inspector General of Police.—ಈ ಸಂಸ್ಥಾನದ ಪೋಲೀಸ್ ಇನ್ಸ್ಪೆಕ್ಟರ್ ಜನರಲಾದ ಮಿ॥ ಪಿ ಬಿ. ನಾರಣರಾಯರವರು ಕೆಲವು ದಿನಗಳ ಮೊದಲು ಸರ್ಕ್ಯೂಟಿನಲ್ಲಿರುತಲಿದ್ದರಷ್ಟೆ. ಸದರೀ ಅಧಿಕಾರಿಯು ಕಳೆದ ಬೃಹಸ್ಪತಿ ವಾರದದಿನ ಮಧ್ಯಾಹ್ನ ಒಂದು ಘಂಟೆಗೆ ಇಲ್ಲಿಗೆ ವಾಪಸ್ ಬಂದು ಸೇರಿದರು.

Cholera.—ಕೋಲಾರ್‌ಪೇಟೆಯಲ್ಲಿ ಈಚೆಗೆ ವಾಂತಿ ಭೇದಿ ರೋಗ ತಲೆದೋರಿ ಪ್ರಾಣ ಹಾನಿಗಳುಂಟಾಗುತಲಿರುವಂತೆ ಅಲ್ಲಿನ ಬಾತಮೀದಾರನ ಮೂಲಕ ತಿಳಿಯಬರುತಿದೆ. ಈ ರೋಗವ್ಯಾಪಕತೆಯನ್ನು ಅಣಗಿಸುವ ವಿಷಯದಲ್ಲಿ ಅಧಿಕಾರಿಗಳು ತಕ್ಕ ಯೇರ್ಪಾಡುಗಳಂ ಕೂಡಲೇ ಮಾಡುವರೆಂದು ನಂಬುತ್ತೇವೆ.

Theft.—ತಿರುಮಕೂಡ್ಲು ನರಸೀಪುರ ತಾ॥ ಅಮಲ್ದಾರರ ಮನೆಯಲ್ಲಿ ಕನ್ನಕಳವು ನಡೆದು ಅಮಲ್ದಾರರಿಗೆ ಸಂಬಂಧಪಟ್ಟ ಕೆಲವು ಮಾಲ್‌ಗಳು ಚೋರೀಯಾದಂತೆ ತಿಳದೆವು. ಇದರಿಂದ ಅಲ್ಲಿನ ಪೋಲೀಸಿನವರು ಬಹಳ ಜಾಗ್ರತೆಯಿಂದ ಕೆಲಸ ಮಾಡುತ್ತಾರೆಂಬುವದೂ, ಅಮಲ್ದಾರರ ವಿಚಾರಣೆಯೂ ಉಸ್ತುವಾರಿಯೂ ಯೆಷ್ಟರಮಟ್ಟಿಗೆ ಇದೆ ಯೆಂಬುವದೂ ಗೊತ್ತಾಗುತಿದೆ.-ದೇ.

Leave.—ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿ॥ ಬಿ. ಕೆ. ವೆಂಕಟವರದೈಯಂಗಾರ್ರವರು ಮೂರು ತಿಂಗಳ ರಜಾ ಪಡೆದು ಕೊಂಡವರಿಂದ, ಸ್ಪೆಷಲ ರಿಲೀಫ್ ಕೆಲಸದ ಸ್ಪೆಷಲ್ ಆಫೀಸರಾಗಿದ್ದ ಮಿ॥ ಜಿ. ಜಿ. ಕೃಷ್ಣಯ್ಯಂಗಾರ್ರವರು ಈ ತಿಂಗಳ ಗುರ್ರೇ ತಾರೀಖು ಮೊದಲು ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಕೆಲಸವನ್ನು ಬದಲೀ ನೋಡುವಂತೆ ಮೊಕರರ್ಮಾಡಲ್ಪಟ್ಟು ಕಳೆದ ಬೃಹಸ್ಪತಿವಾರದದಿನ ಚಾರ್ಜ್ ವಹಿಸಿದರು.

Female advancement.—ಮಹಾರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ ಬಾಲೆಯೊಬ್ಬಳು ತನ್ನ ಮುಂದಲೆಯು ಜಾಸ್ತಿಯಾಗಿ ಬೆಳದು ಮುಖವು ಬೆಸ್ತದಾಗಿ ಮಾಡಿರುವದಕ್ಕಾಗಿ ನಿತ್ಯದಲ್ಲೂ ಮುಖಕ್ಷೌರ ಮಾಡಿಸಿಕೊಳ್ಳುತಬರುತಲಿದಾಳೆ. ಗಂಡಸ ರಂತೆ ನುತರದಲ್ಲಿ ಮಾಡಿಸಿಕೊಳ್ಳುವ ಕೇಶ ಖಂಡನವನ್ನು ಗಂಡನಿರುವಾಗಲೇ ಮಾಡಿಕೊಳ್ಳುವ ಈ ಬಾಲೆಯು ಇನ್ನುಮೇಲೆಯಾದರೂ ಈದುರಭ್ಯಾಸವಂ ಬಿಟ್ಟು ನಡೆಯುವಳೆಂದು ನಂಬಿರುವೆವು. -ದೇಶಾಭಿಮಾನಿ.

Avarice.—ಜನರಿಗೆ ದಕ್ಷಿಣೆಕೊಡುವದರಲ್ಲಿ ಹುಡುಗರಿಗೆ ೦|೦ ರೂಪಾಯಿಯೂ, ದೊಡ್ಡವರಿಗೆ ೧ ರೂಪಾಯಿಯೂ, ಯೌವನಾವಸ್ಥೆ ಕಳೆದವರಿಗೆ ರೂಪಾಯಿಯೂ ಕೊಡುವಂತೆ ಯೇರ್ಪಾಡು ಮಾಡಿದ್ದರು. ಇವರಲ್ಲಿ ಒಬ್ಬ ಯೌವನಸ್ಥನು ವಿಶಾಲ ಮುಖಕ್ಕೆಲ್ಲಾ ಬೀಸಮೆಣ್ಣೆ ಬಳದುಕೊಂಡು, ತಲೆಗೆ ಮುಸುಕು ಹಾಕಿಕೊಂಡು ಬಂದು, ರೂಪಾಯಿನ ಕಡೆ ಕೈ ಹಿಡಿಯುವಾಗ ಅಲ್ಲಿದ್ದವರು ಮುಸಕು ತೆಗಿಸಲು ಗುಟ್ಟೆಲ್ಲಾ ರಟ್ಟಾಯಿತು. ಈ ವೇಷಧಾರಿಯನ್ನು ನೋಡಿ ಎಲ್ಲರೂ ಆಶ್ಚರ್ಯ ಪಡುತ್ತಲಿದ್ದರು.-ವೃ. ಬೋ.

Twins.—ನಿನ್ನೆ ಮಂಗಳವಾರದ ದಿವಸ ಪರಾಪರ ಸ್ವಾಮಿಯ ದೇವಸ್ಥಾನದಲ್ಲಿ ಜೋಗಸರಿಗೆ ದಕ್ಷಿಣೆ ಕೊಡುತ್ತಿರುವಾಗ ಒಬ್ಬ ಪೂರ್ಣಗರ್ಭಿಣಿಯು ಬಂದು ದಕ್ಷಿಣೆ ತೆಗೆದುಕೊಂಡು ಒಳಕ್ಕೆ ಹೋದವಳು ಹಾಗೆ ಕೈಸಾಲೆ ಕೊಠಡಿಯೊಳಕ್ಕೆ ಹೋಗಿ ಅವಳ ಜವಳೀ ಮಕ್ಕಳನ್ನು ಪ್ರಸವಿಸಿದಳು. ಆಕೆಗೂ ಪುತ್ರ ಮತ್ತು ಕನ್ಯಾ ರತ್ನಗಳು ಪ್ರಾಪ್ತಿಯಾಯಿತು! ಈ ವರ್ತಮಾನ ಅರಮನೆಗೆ ತಿಳದಮೇಲೆ ಆಕೆಯನ್ನು ಆಹಾರಾತನ್ನು ಇಲ್ಲಿಗೆ ತಂದೆಂದು ಆಕೆಗೆ ಮಾಸಿಗೆ ಬನಾತು ಬಾಣಂತನದ ಖರ್ಚಿಗೆ ರೂಪಾಯಿಗಳನ್ನು ಕೊಡುವಂತೆ ಸಂತೋಷದೊಡನೆ ಅಪ್ಪಣೆ ಕೊಡಿಸಿದರು.—ವೃ. ಬೋ.

Obituary.—ಬಹುಕಾಲದ ವರೆಗೂ ವಿದ್ಯಾಭ್ಯಾಸದ ಇಲಾಖೆಯ ಸೆಕ್ರೆಟರಿಯವರಿಗೆ ಅಸಿಸ್ಟೆಂಟರಾಗಿಯೂ ಬೆಂಗಳೂರ್ ಡಿವಿಜನ್ ಸ್ಕೂಲುಗಳ ಡೆಪ್ಯುಟಿ ಇನ್ಸ್‌ಪೆಕ್ಟರಾಗಿಯೂ ಇದ್ದ ಮಿ. ವಿಲ್ಲಿಯಂ ಗ್ರೀವ್‌ಸ್ ಎಂಬವರು ಕಳೆದ ಬೃಹಸ್ಪತಿವಾರದ ದಿನ ಪ್ರಾತಃಕಾಲದಲ್ಲಿ ತಮ್ಮ ವಾಸಗೃಹದೊಳು ಅನಿರೀಕ್ಷಿತವಾಗಿ ಮೃತಪಟ್ಟರೆಂದು ಕೇಳಿ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡ ಮನುಷ್ಯರು ಬಹಳ ಶಾಂತಸ್ವಭಾವವುಳ್ಳವರಾಗಿಯೂ, ಸಾಮಾನ್ಯವಾಗಿ ಎಲ್ಲರ ಪ್ರೀತಿ ಗೌರವಗಳಿಗೆ ಪಾತ್ರರಾಗಿಯೂ ಇರುತಿದ್ದರು. ಇವರು ಅವಿವಾಹಿತರು. ಮರಣಕಾಲದಲ್ಲಿ ಇವರ ವಯಸ್ಸು ನಾಲ್ವತ್ತರದು. ಇವರಿಗೆ ಪ್ರಾಪ್ತವಾದ ಅಕಾಲ ಮರಣದ ಬಗ್ಗೆ ಎಷ್ಟು ದುಃಖಿಸಿದಾಗ್ಯೂ ಸಾಲದಾಗಿರುವುದು.

The weather—ಹವಾ ವಿಷಯದಲ್ಲಿ ಹಿಂದಿನ ವಾರದೊಳು ತಿಳಿಸಿದ್ದಕ್ಕಿಂತಲೂ ಅಧಿಕಾಂತರವೇನೂ ಇಲ್ಲವು. ಯಾವಾಗಲೂ ಮೋಡವಾದು ಚಳಿ ದಿ ಪ್ರತಿದಿನ ಸಾಯಂಕಾಲ ಐದು ಘಂಟೆಯ ಮೇಲೆ ಸ್ವಲ್ಪ ಹನಿಗಳು ಬೀಳುವವು. ಮುಂದೆರಡು ದಿನ ಕೆಲವು ನಿಮಿಷಗಳ ಕಾಲ ಸ್ವಲ್ಪ ಗಟ್ಟಿಯಾಗಿಯೂ ಬಿತ್ತು. ಇದು ರಾಗಿ ಪೈರಿಗೆ ಅನುಕೂಲವಾದದ್ದೆಂದು ಹೇಳಬಹುದಾಗ್ಯೂ ಕೆರೆಕುಂಟೆಗಳಿಗೆ ಪೂರ್ಣವಾಗಿ ನೀರು ಬಂದು ಮುಂದಿನ ಫಸಲಿಯಂ ತಪ್ಪಲು ಶಕ್ಯವಾದದ್ದಲ್ಲವು, ಪರಂತು ತಾತ್ಕಾಲಿಕವಾಗಿ ದೀರ್ಘೋಪಯೋಗಕವಾದುದು. ಆಹಾರ ಪದಾರ್ಥಗಳ ಧಾರಣೆಗಳು ಪ್ರಾಯಶಃ ಏರಿಕರವಾಗಿವೆ ಹೊರತಲ್ಲ ಹೇಳಬಹುದು. ಪಾಂಡು ಜ್ವರ ರೋಗಗಳು ಇನ್ನೂ ಈ ಪಟ್ಟಣ ಬಿಡಲಿಲ್ಲವು. ಅವರ ನಿವೃತ್ತಿಯ ವಿಷಯದಲ್ಲಿ ಅಧಿಕಾರಿಗಳು ತಮ್ಮ ಕರ್ತವ್ಯವು ಕೊರತೆ ಇಲ್ಲದೆ ಮಾಡುತಲಿದ್ದಾರೆ.

Kheddah operations.—ಕಳೆದ ತಿಂಗಳ ೨೯ ನೇ ತಾರೀಖಿನಲ್ಲಿ ಚಾಮರಾಜನಗರದ ಬಳಿ [illegible] ದ ಪರ್ಯಂತ ಇಪ್ಪತ್ತು ಆನೆಗಳು ಹಿಡಿಯಲ್ಪಟ್ಟವೆಂದು [illegible] ಕಾಗದದ ಮೂಲಕ ತಿಳಿಯಬರುತ್ತದೆ. ಆನೆಗಳು ಹಿಡಿಯುವದರಲ್ಲಿ [illegible] ಪ್ರಯತ್ನವಾಗಿದ್ದ ಮೃತಪಟ್ಟ ಮಿ|| [illegible] ಅವರ ಕಾಲಾನಂತರ ಸದರೀ ಕೆಲಸವು [illegible] ನಾಗರಿಕರಾದವರು ಈ ಕೆಲಸಗಳ ಹೃದಯದಲ್ಲಿ ನಡೆಸಿಕೊಂಡಿದ್ದ ಭಾಗವನ್ನು ಸದರೀ ಎಲಿಫೆಂಟ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ [illegible] ಗೌಡ್ರರವರು ಈ ಸಂದರ್ಭದಲ್ಲಿ ಯೋಗ್ಯರಾಗಿಸಿದ ಬಗ್ಗೆ ನಾವು ಬಹಳ ಸಂತೋಷಿಸುತ್ತೇವೆ. ಈ ವಿಷಯ ವೃತ್ತಾಂತವನ್ನು ಕಳೆದವಾರದ ಪತ್ರಿಕೆಯಲ್ಲೇ ನಾವು ಪ್ರಕಟಿಸಬೇಕಾಗಿದ್ದಾಗ್ಯೂ ಬಾಕಿಯಾದ ರಾಗದವು ಸ್ವಲ್ಪ ಕಾಲಾತೀತವಾಗಿ ಬಂದದರಿಂದ ಹಾಗೆ ಮಾಡುವದಕ್ಕೆ ಅವಕಾಶವಿಲ್ಲವಾಯಿತು. ಆದ್ದರಿಂದ ಮುಂದೆಗೆ ಅವಕಾಶವಿಲ್ಲದೇನೇ ೩೫ ಆನೆಗಳು ವಶವಾದದಕ್ಕೆ ನೆ|ರು ಮುಖ್ಯಂಗಾರ್ರವರ ಮೊದಲನ್ನಕ್ಕೇ ಮುಖ್ಯಕಾರಣವೆಂದು ತಿಳಿಯ ಬರುತಿದೆ.

Arrival of H. H. the Maharaja—ಶ್ರೀಮನ್ಮಹಾರಾಜ ರಾಜಾ ಸಾಹೇಬ್ ಬಹದೂರವರು ಕಳೆದ ಬೃಹಸ್ಪತಿ ವಾರದ ದಿನ ಸಾಯಂಕಾಲ ೬ ಘಂಟೆ ೫೦ ನಿಮಿಷಗಳಿಗೆ, ಸ್ಪೆಷಲ್ ಗಾಡಿಯಲ್ಲಿ ತಮ್ಮ ದಿವಾನರವರು, ಪ್ರೈವೇಟ್ ಸೆಕ್ರೆಟರಿಯವರು, ಮಿಲಿಟರಿ ಸೆಕ್ರೆಟರಿಯವರು, ಮುತ್ತು ಪರಿವಾರ ಪರಿಚಾರಕರೊಡನೆ ಇಲ್ಲಿಗೆ ಹಿಂತಿರುಗಿದರು. ವಿಶೇಷರೀತ್ಯಾ ಪ್ರಾಸ್ಥಾನಿಯಾಗಿ ಅಲಂಕರಿಸಲ್ಪಟ್ಟಿದ್ದ ಸ್ಟೇಷನ್ ಪ್ಲಾಟ್‌ಫಾರಂನಲ್ಲಿ ಇಲ್ಲಿನ ರೆಸಿಡೆಂಟರಾದ ಕರ್ನಲ್ ಪೀಕಾಕ್ ಸಾಹೇಬರವರು, ಅವರ ಅಸಿಸ್ಟೆಂಟರಾದ ಮೇಜರ್ ರಾವರ್ಟ್ಸ್ ಸಾಹೇಬರು, ಕರ್ನಲ್ ವೆಗ್ರಿ ಸಾಹೇಬರು, ಚೀಫ್ ಕೋರ್ಟ್ ಜಡ್ಜಿಗಳು, ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ಪೊಲೀಸ್ ಇನ್ಸ್‌ಪೆಕ್ಟರ್ ಜನರಲವರು, ಮುಜರಾಯಿ ಸೂಪರಿಂಟೆಂಡೆಂಟರವರು, ಸಿಟಿ ಅಮಲ್ದಾರರು, ಮ್ಯುನಿಸಿಪಲ್ ಕಮಿಷನರುಗಳು ಮೊದಲಾದವರು ಹಾಜರಿದ್ದು ಶ್ರೀಮನ್ಮಹಾರಾಜರವರನ್ನು ಉಚಿತ ಮರ್ಯಾದಾ ಪುರಸ್ಸರವಾಗಿ ಬರಮಾಡಿಕೊಂಡರು. ಶ್ರೀಮನ್ಮಹಾರಾಜರವರು ಗಾಡಿಯಿಂದ ಇಳಿದು ಸೇರಿದ್ದ ನಾಯಕರಾದ ಕೆಲವರು ಅಧಿಕಾರಿಗಳೊಡನೆ ಕೆಲವು ನಿಮಿಷಗಳ ಕಾಲ ಮಾತನಾಡಿದಮೇಲೆ ಸ್ಟೇಷನ್ ಬಳಿ ಹಾಜರಿದ್ದ ರಾಜಾರ್ಹವಾದ ಗಾಡಿಯಲ್ಲಿ ಕುಳಿತು ಅರಮನೆಗೆ ದಯಮಾಡಿದರು. ಮಾಮೂಲು ಮರ್ಯಾದೆಗಳೆಲ್ಲವು ಜರಿಗಿಸಲ್ಪಟ್ಟವು.

Audacity.—ಕಳೆದ ಶುಕ್ರವಾರ ರಾತ್ರಿ ೧೦ ಘಂಟೆ ಸಮಯದಲ್ಲಿ ಶ್ರೀರಾಮ ಪೇಟೆಯಿಂದ ಹಳೇ ಅಗ್ರಹಾರದಲ್ಲಿರುವ ತಮ್ಮ ಮನೆಗೆ ಹೋಗುತ್ತಲಿದ್ದ ದಂಪತಿಗಳಿಬ್ಬರೂ ಕೃಷ್ಣರಾಜ ಸೇತುವೆ ಬಳಿಯಲಿರುವ ಆಂಜನೇಯ ದೇವಸ್ಥಾನದ ಬಳಿಗೆ ಬರುವಾಗ್ಗೆ ಆಕೆಯನ್ನು ಗಾಢಾಲಿಂಗನ ಮಾಡಿಕೊಳ್ಳಬೇಕೆಂದು ಮೋಹದಿಂದ ಕಾದಿದ್ದ ಈಚೆಗೆ ದೊಡ್ಡ ಮನುಷ್ಯನೆಂದು ಹೆಸರು ವಾಸಿಯನ್ನು ಕೇಳಿದ ಆಚಾರ ಶೀಲನಾಗಿರುವ ಒಬ್ಬ ಐಶ್ವರ್ಯವಂತನು ಹಿಡಿದುಕೊಳ್ಳಲು ಆಕೆಯು ಕೂಗಿಕೊಂಡಳು. ೫—೬ ಮಾರು ಹಿಂದೆ ಬರುತ್ತಿದ್ದ ಪತಿಯು ಓಡಿಬಂದು ಆತನ ಮುಖದ ನೀರನ್ನು ಇಳಿಸಿ ಬಿಟ್ಟನು. ಆ ದೊಡ್ಡ ಮನುಷ್ಯ ಮೋಹದಾಶೆಗೆ ಒಳಪಟ್ಟು ಹಾಗೆಯೇ ಮೋರೆ ತಗ್ಗಿಸಿಕೊಳ್ಳುವ ಹಾಗೆ ಆಯಿತಲ್ಲ ಎಂದು ಬಿಡಿಗಿ ವೇಷವನ್ನು ಧರಿಸಿ ಮನೆಗೆ ಓಡಿ ಹೋಗಿ ಸೇರಿಕೊಂಡನು. ಇಂತಾ ದೊಡ್ಡ ಮನುಷ್ಯರು ಮ್ಯುನಿಸಿಪಲ್ ಕಮೀಷನರಾಗಿ ಬೇರೆ ಆಗಬೇಕೆಂದು ಅಪೇಕ್ಷಿಸುತ್ತಿದ್ದಾರೆ. ಎಂಥಾ ಪುಣ್ಯವಂತನು ಇವನು? ಎಷ್ಟು ದೊಡ್ಡ ಮನುಷ್ಯ ಎನಿಸಿಕೊಂಡನೋ? ಪ್ರತಿದಿನ ಕಟ್ಟುಗಳಲ್ಲಿ ಇವರ ಪಾದಗಳೆಲ್ಲಾ ತಾಳುವ ಕಾಲಗಳಲ್ಲಿ ಇವನ ಮೋಸಗಳು ಬೆಳಸಿಕೊಂಡ, ತಮ್ಮ ನಡತೆಯಿಂದಲೆ ತಮ್ಮ ಗೌರವವನ್ನು ಕಳೆದುಕೊಳ್ಳುವರು. ಎಂಬದಾಗಿ ಮೈಸೂರ ವೃತ್ತಾಂತ ಪತ್ರಿಕೆ ತಿಳಿಸುತ್ತಿದೆ. ಇಂಥಾ ನೀಚ ಕಾರ್ಯಗಳು ಮುಂದೆ ಅವರಿಗೆ ಒಳ್ಳೆ ಹೆಸರು ತಂದೀತೇ? ಸೇಟುಗಳ ಸಂಬಂಧಿಸಿದ ನಡವಳಿಕೆ ಎತ್ತಿಹಿಡಿಯುವಂಥಾದ್ದು ಈ ಕಾರ್ಯಗಳು ಪ್ರತಿಬಂಧಕವಾಗಿ ಕಾಣುವುದು. ಇಂಥ ನಾಚಿಕೆಗೇಡಾದ ಮನುಷ್ಯನು ಸಭ್ಯ ಜನರ ನಡುವೆ ಬಾಳುವನು ಎಂಬದು ಕ್ಷೋಭೆಯಾಗಿ ಮಾಡಿ ಅವರನ್ನು ಶಿಕ್ಷಿಸಬೇಕಾದುದು ಅವಶ್ಯಕವು. ಈ ಸ್ಥಳದಲ್ಲಿ ಸಭ್ಯತೆಯು ಮತ್ತು ಸ್ವಕ್ಷೇಮವು ಇರುವುದಿಲ್ಲವು.

BIRTH-DAY REJOICINGS.

ಶ್ರೀಮನ್ ಮಹಾರಾಜರ ೨೯ ನೇ ವರ್ಷದ ಜನ್ಮದಿನೋತ್ಸವದ ಕುರಿತು ಇಲ್ಲಿ ನಡೆದ ಉತ್ಸವದ ವಿಷಯವಾಗಿ ಶ್ರೀನಿವಾಸಯ್ಯನವರು ಕಳುಹಿಸಿದ ವೃತ್ತಾಂತವನ್ನು ಕೆಳಗೆ ಪ್ರಕಟಿಸಿರುತ್ತೇವೆ.

ಶ್ರೀಮನ್ ಮಹಾರಾಜ ಚಾಮರಾಜ ಒಡೆಯರ್ ಬಹದೂರ್ ಜಿ. ಸಿ. ಎಸ್. ಐ. ಯವರಿಗೆ ಪ್ರತಿವರ್ಷವೂ ನಡೆಯುವ ಜನ್ಮದಿನೋತ್ಸವವನ್ನು ಈ ವರ್ಷವೂ ಮಹಾ ವೈಭವದಿಂದ ನಡೆಸಲು, ಇಲ್ಲಿನ ನಗರವಾಸಿಗಳು ಬಹಳ ಸಂತೋಷದಿಂದ ಮಾಡಿದರು. ಮಹಾ ಶ್ರೀಮನ್ ಮಹಾರಾಜರ ಜನ್ಮದಿನವಾದ ಸೋಮವಾರ ಪ್ರಾತಃಕಾಲದಿಂದ ಈ ಪಟ್ಟಣದಲ್ಲಿರುವ ಮ್ಯುನಿಸಿಪಲ್ ಮೊದಲಾದ ಕಚೇರಿಗಳು ಎಲ್ಲಾ ದೇವಸ್ಥಾನಗಳಲ್ಲಿಯೂ ಪದ್ಧತಿ ಪ್ರಕಾರ ಅಭಿಷೇಕ ಕುಂಕುಮಾರ್ಚನೆ ವಗೈರೆ ಸೇವೆಗಳನ್ನು ನಡೆಸಿ ಸಂಜೆ ೮ ಘಂಟೆ ಸಮಯದಲ್ಲಿ ದೇವತಾ ಪ್ರಸಾದ ಕೊಂಡಿರುವ ಪಾತ್ರೆಗಳಿಂದ ಶ್ರೀ [illegible] ಪುಷ್ಪಗಳ ಮೇಲೆ ಮಿ|| ದಿವಾನರು ನಡೆಸುತ್ತಿರುವ ಸ್ಥಾನದಿಂದ ಪ್ರಸಿದ್ಧಪಡಿಸಲ್ಪಟ್ಟ ಛತ್ರದ ಬಳಿಯಲ್ಲಿ ಚಪ್ಪರ ಬೆಲ್ಲವು ತೋರಣಗಳು ಧ್ವಜಸ್ತಂಭಗಳಿಂದಲಂಕರಿಸಿ, ಶ್ರೀ ಅವ್ವನವರ ಚಿತ್ರಪಟವನ್ನು ವಿಜಯ ವಿಧವಾದ ಛತ್ರದ ವಿಶಾಲವಾದ ಜಾಗದಲ್ಲಿ ಪರಮ ಕೀರ್ತಿಯುಳ್ಳ ಸೊಗಸಾದ ಮನೆಯಲ್ಲಿ ಶ್ರೀಮನ್ ಮಹಾರಾಜ ಚಾಮರಾಜ ಒಡೆಯರವರು ಯುವರಾಜರು ಮೊದಲಾದ ಕುಮಾರರು ಮನೆಯಿಂದ ಕೂಡಿದ ಭಾವ ಚಿತ್ರಗಳನ್ನು ಆಗ್ರಾಸನದಲ್ಲಿ ಪ್ರತಿಷ್ಠಿಸಿ ಸಮಸ್ತ ಮರ್ಯಾದಾ ಪುರಸ್ಸರವಾದ ಪುಷ್ಪಕಗಳನ್ನು ನಡೆಸಿ ಆಸ್ಪತ್ರೆ ಸೆಕೆಂಡ್ ಹಾಸ್ಪಿಟಲ್ ಅಸಿಸ್ಟೆಂಟ್ ಸರ್ಜನ್ ಮಿ|| ಜಿಮಸೆಂಟರಾಮಯನವರು, ಪೊಲೀಸ್ ಇನ್ಸ್‌ಪೆಕ್ಟರ್ ಮಿ|| ನಾಸ್ತಿಯಾ ಸಿಂಗಾರ್ ಯವರು, ಮಿ|| ಶಿ. ಬಿ. ನಾರಾಯಣದಾಸರವರು, ಮಿ|| ತರೀಕೆರೆ ಸುಬ್ಬೇಗೌಡ್ರವರು, ಮಿ|| ಕೈಲ್ಟ ಸ್ಟೇಷನ್ ಮಾಸ್ಟರವರು, ಡಿಸ್ಟ್ರಿಕ್ಟ್ ಫಾರೆಸ್ಟ್ ರೇಂಜರ್ ಮಿ|| ನರಸಿಂಹಯ್ಯಂಗಾರ್ರವರು, ಮ್ಯುನಿಸಿಪಲ್ ಮೆಂಬರ್ ಮಿ|| ಮೈಸೂರು ಸುಬ್ಬಣ್ಣನವರು, ಮೆಂಬರ್ ಮಿ|| ಶಿಂಗಿರಿ ರಂಗಪ್ಪನವರು, ಮೆಂಬರ್ ಮಿ|| ಹೆಗ್ಗಡದೇವನ ಕೋಟೆ ತಿಮ್ಮಣ್ಣನವರು, ಮೆಂಬರ್ ಮಿ|| ಕೃಷ್ಣಶೆಟ್ಟಿಯವರು ಮಿ|| ಊರಿನ ಚೊಕ್ಕಲಿಂಗಪ್ಪನವರು, ಸರ್ಕಾರದ ವಿದ್ಯಾಶಾಲೆಯ ಉಪಾಧ್ಯಾಯರು ಗ್ರಾಮದಲ್ಲಿ ಇರತಕ್ಕ ವರ್ತಕರು ಗೌಡರು ಇವರುಗಳ ಸಹಾಯೋಪಕಾರದಿಂದ ವಾದ್ಯಗಳ ಧ್ವನಿಯಿಂದ ತಾಳ ಮುಂತಾದ ವಿನೋದಗಳಿಂದಲೂ, ಮತ್ತು ಪಟ್ಟಣದ ಜನರಿಂದ ಹಣ್ಣು, ಹೂವು, ಮುಕ್ತಾಫಲ ವಗೈರೆ ತರಿಸಿ ಪೂಜೆಗಳಿಂದಲೂ ನಂತರ ಗಂಧ ಪುಷ್ಪ ತಾಂಬೂಲ ಕರ್ಪೂರಾದಿಗಳ ವಿನಿಯೋಗದಿಂದಲೂ ಶುಭಸೂಚಕಗಳಾದ ಪುಷ್ಪವೃಷ್ಟಿಗಳನ್ನು ಮಾಡಿ ಶೋಭಿಸುತ್ತಿದ್ದ ಸಭೆಯಲ್ಲಿ ಶ್ರೀಮನ್ ಮಹಾರಾಜಾ ಸಾಹೇಬ್ ಬಹದೂರವರ ಕೀರ್ತಿಯನ್ನು ಹೊಗಳಿ ಸರ್ವರೂ ಆನಂದವಾದ ಮನದಿಂದ ಮಂಗಳವನ್ನು ಹೇಳಿದ ನಂತರ, ರಾತ್ರಿ ೩ ಘಂಟೆ ವರೆವಿಗೂ ಶ್ರೀ ಜಗದೀಶ್ವರನ ವಿಷಯಕವಾದ ಹರಿಕಥೆಯನ್ನು ನಡೆಸಿ ಆನಂದಪಟ್ಟರು.

ತಮ್ಮ ವಿಧೇಯ ತಿಪಟೂರು ನಿವಾಸಿ,

ಶ್ರೀನಿವಾಸಯ್ಯ ಬರೆದಿದ್ದು.

ಶ್ರೀಮನ್ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರವರ ಸೂರ್ಯವಂಶ ರಾಜಪುತ್ರರಾದ ಶ್ರೀ ದೇವರಾಜ ಒಡೆಯರವರ ಜನನ ಮತ್ತು ನಾಮಕರಣ ಉತ್ಸವಗಳ ಪ್ರಯುಕ್ತವಾಗಿ, ಶ್ರೀ ಶ್ರೀನಿವಾಸ ಮಂದಿರದಲ್ಲಿ ಈ ತಿಂಗಳು ೧ ನೇ ರ ರವಿವಾರ ಸೋಮವಾರದ ದಿನ ಸಾಯಂಕಾಲ, ಶ್ರೀ ದೇವರ ಸೇವೆಯು ಬಹು ವಿಜೃಂಭಣೆಯಿಂದ ನಡೆಸಲ್ಪಟ್ಟಿತು. ಆ ಕಾಲದಲ್ಲಿ ಶ್ರೀಮನ್ ಗೋಪಾಲಾಚಾರ್ಯರವರು, ಜನರಿಗೆ ಉಪನ್ಯಾಸವನ್ನು ಮಾಡಿದರು. ಮತ್ತು ಈ ಉಪನ್ಯಾಸವನ್ನು ಕೇಳಿ, ಜನಗಳು ಅಮಿತವಾದ ಆನಂದವನ್ನು ಅನುಭವಿಸಿದರು. ಏನೆಂದರೆ—

> ಸ್ವಸ್ತಿಪ್ರಜಾಭ್ಯಃ ಪರಿಪಾಲಯಂತಾಂ ನ್ಯಾಯ್ಯೇನ
> ಮಾರ್ಗೇಣ ಮಹೀಂ ಮಹೀಶಾಃ । ಗೋಬ್ರಾಹ್ಮಣೇ
> ಭ್ಯಃ ಶುಭಮಸ್ತು ನಿತ್ಯಂ ಲೋಕಾಃ ಸಮಸ್ತಾ
> ಸ್ಸುಖಿನೋ ಭವಂತು ॥ ಕಾಲೇ ವರ್ಷತು ಪರ್ಜನ್ಯಃ
> ಪೃಥಿವೀ ಸಸ್ಯಶಾಲಿನೀ । ದೇಶೋಯಂ ಕ್ಷೋಭರ
> ಹಿತೋ ಬ್ರಾಹ್ಮಣಾಸ್ಸಂತು ನಿರ್ಭಯಾಃ ॥

ಎಂಬ ಆಶೀರ್ವಚನಗಳನ್ನು ನುಡಿದು ನಮ್ಮ ಪೂರ್ವಿಕರು ಕೇವಲ ಅಪೇಕ್ಷಿಸದಾಗ ಅನಾದಿಯಿಂದ ಈಶ್ವರ ಸನ್ನಿಧಾನದಲ್ಲಿ ಪ್ರಜೆಗಳಿಗೆ ಹಿತ ಉಂಟಾಗತಕ್ಕದ್ದೆಂತಲೂ, ಅರಸರವರು ಸರ್ವದಾ ಸದಾಚಾರ ಪ್ರವರ್ತರಾಗಿರತಕ್ಕದ್ದೆಂತಲೂ, ಮಹಾತ್ಮರಾದವರಿಗೆ ನಿತ್ಯದಲ್ಲಿ ಶುಭವು ಪ್ರಾಪ್ತವಾಗತಕ್ಕದ್ದೆಂತಲೂ, ಲೋಕದಲ್ಲಿ ಸಮಸ್ತರು ಸುಖಿಗಳಾಗಿರಬೇಕೆಂತಲೂ, ವೃಷ್ಟಿ ಯಥೇಷ್ಟು ಫಲದಾಯಕವಾಗಿರಬೇಕೆಂತಲೂ, ದೇಶವು ಕ್ಷೋಭೆಯಿಲ್ಲದಾಗಿರಬೇಕೆಂತಲೂ, ಸತ್ಪುರುಷರಾದವರು ಭಯವಿಲ್ಲದವರಾಗಿರಬೇಕೆಂತಲೂ, ಪ್ರಾರ್ಥನೆಯು ನ್ಯಾಯ್ಯವಾದ ಮಾರ್ಗವಾಗಿ ಸ್ವೀಕಾರವಾಗಬೇಕಾದದ್ದಾಗಿರುತ್ತದೆ. ಅಂಥಾ ಸಂಪತ್ತಿನಲ್ಲಿ ಜನ್ಮಿಸಿದ ನಮ್ಮಗಳಿಗೆ ಆ ಗುಣವು ಸ್ವಭಾವಸಿದ್ಧವಾಗಿರುತ್ತೆ. ಒಬ್ಬನಲ್ಲಿ ಕೇವಲ ಶ್ರೇಷ್ಠವಾದ ಮತ್ತು ಪುರಾತನವಾದ ಯದುಕುಲ ವಂಶದಲ್ಲಿ ಹುಟ್ಟಿದ ನಮ್ಮ ಮಹಾರಾಜರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಮತ್ತು ಪುತ್ರಪುತ್ರಿಗಳ ಹಿತಚಿಂತನೆಯಲ್ಲಿ ನಾವು ಆಸಕ್ತರಾಗಬೇಕಾದ್ದು, ಒಬ್ಬರಿಗೆ ಹೇಳಲ್ಪಡಬೇಕಾದುದು ಅಲ್ಲವಷ್ಟೆ. ಮತ್ತು ಅಂಥಾ ಹೇಳಿಕೊಳ್ಳುವುದು ಕೇವಲ ಅನಾವಶ್ಯಕವಾದ ವಿಷಯವಾಗಿರುತ್ತೆ. ಏಕೆಂದರೆ ರಾಜ್ಯವಲ್ಲಿ "ಬದರ ಪೋಷ" ದಲ್ಲಿ ನಾವು ವಾಸಿಸುತ್ತೇವೆಯೋ, ಅಂಥ ಸಮಯದ ಯೋಗಕ್ಷೇಮಸಾಧನಗಳು ನಮಗೆ ಬಹಳ ಮುಖ್ಯವಾದ ವಿಷಯವಾಗಿರುತದೆ. ಕೇವಲ ಅನಾದಿಯಾದ ಮಹಿಸೂರು ಸಂಸ್ಥಾನವು, ನಾನಾವಿಧವಾದ ರಾಜ್ಯಾವಳಿಗಳನ್ನನುಭವಿಸಿ, ಕೆಲ ಕಾಲಗಳಲ್ಲಿ ಕಷ್ಟವನ್ನೂ ಕೆಲಕಾಲಗಳಲ್ಲಿ ಸುಖವನ್ನೂ ಅನುಭವಿಸಿರುತ್ತೆ. ಈ ಸಂಸ್ಥಾನವನ್ನು ಬಹುಮಂದಿ ದೊರೆಗಳು ಆಳಿದರು. ಇದಾವನೊಬ್ಬ ಕಾಲದಲ್ಲಿ ನಮ್ಮ ರಾಜವಂಶವು ಇಂಥಾದ್ದೆಂಬದಾಗಿ ಹೇಳಲು ಶಕ್ಯವಾದ ಅವಕಾಶವಿಲ್ಲದೆ, ಈ ದೇಶವು ಪರತಂತ್ರವು ಪರದೇಶದ ವಶದಲ್ಲಿ ಇರುತಲಿತ್ತು. ಈಶ್ವರ ಕೃಪಾಕಟಾಕ್ಷದಿಂದ ಅಂಥಾ ಕಾಲವು ನಶಿಸಿ ಹೋಗಿ, ನಮ್ಮ ರಾಜ್ಯವು ನಮಗೇ ಲಭ್ಯವಾಗಿ, ನಮ್ಮ ರಾಜವಂಶವನ್ನು ದೇವರು ಪುನಃ ನಮ್ಮಗಳಿಗೆ ಸ್ಥಾಪಿಸಿಕೊಟ್ಟನು. ಅದಾವಲ್ಲಿ? ಮಹಾಸ್ವಾಮಿಯವರ ಕಾಲದಲ್ಲಿ, ವಿದ್ಯಾಭಿವೃದ್ಧಿಗೆ ಉಚಿತವಾದ ಮಹಿಸೂರು ಸಂಸ್ಥಾನಕ್ಕೇನೇ ಮಹತಿ ಶ್ರೀ ಯಶಸ್ಸುಗಳನ್ನು ಸಂಪಾದಿಸಿ ಕೊಡಲು ಸಮರ್ಥರಾದವರು. ಅವರ ದಯೆ, ಧರ್ಮ, ವಿವೇಕಾದಿ ಗುಣಗಳು ವಿಖ್ಯಾತವಾದ ಚರಿತ್ರೆಗಳಾಗಿರುತ್ತವೆ. ಅಂಥಾ ಮಹನೀಯರಾದ ವಂಶಸ್ಥರಿಗೆ ಸಂತಾನ ಫಲವಿಲ್ಲದಿದ್ದರೆ ಪ್ರಕೃತ ಆಳುತಲಿರುವ ನಮ್ಮ ದೊರೆಯವರನ್ನು ಸ್ವೀಕೃತ ಪುತ್ರನನ್ನಾಗಿ ಮಾಡಿಕೊಂಡು, ನಮ್ಮನ್ನು ಅನಾಥರನ್ನಾಗಿ ಮಾಡದೆ ಸನಾಥರನ್ನಾಗಿ ಮಾಡಿದರು. ಈ ನಮ್ಮ ಮಹಾರಾಜರು ರಾಜ್ಯಕ್ಕೆ ದೂರ ಸಂಬಂಧಿಯೂ ಆದವರಲ್ಲವಾದ್ದರಿಂದಲೂ, ಕೇವಲ ರಕ್ತಬಾಂಧವ್ಯ ಉಂಟಾದವರಾದ್ದರಿಂದಲೂ, ಸಕಲ ವಿಷಯಗಳಲ್ಲಿ ಆದ ಮಹಾಸ್ವಾಮಿಯವರಿಗಿಂತಲು ನಮ್ಮ ಮಹಾರಾಜರ ರಾಜ್ಯಾಡಳಿತವು, ಪ್ರಜೆಗಳಾದ ನಮ್ಮಗಳಿಗೆ ಬಹಳ ಸುಖದಾಯಕವಾಗಿರುತ್ತೆ. ಅವರ ರಾಜ್ಯದಲ್ಲಿ ಅಂಥಾ ಸುಖಕ್ಕೆ ಕಾರಣವೇನೆಂದರೆ, ಶ್ರೀಮನ್ ಮಹಾರಾಜರವರು ಗತಕಾಲದ ರಾಜಶಾಸ್ತ್ರಗಳನ್ನು ಮಾತ್ರವಲ್ಲದೆ, ಪ್ರಕೃತ ಕಾಲದನ್ನನುಸರಿಸಿದ ಸಮಸ್ತ ಲೌಕಿಕ ವ್ಯಾಪಾರಗಳನ್ನು ಮತ್ತು ರಾಜ ತಂತ್ರಗಳನ್ನು ಚೆನ್ನಾಗಿ ಬಲ್ಲವರಾಗಿರುತ್ತಾರೆ. ಇಂಗ್ಲೀಷ್ ಭಾಷಾ ಪರಿಚಯವು ಇವರಿಗೆ ವಿಸ್ತಾರವಾಗಿರುವುದರಿಂದ ಶ್ರೀ ಚಕ್ರವರ್ತಿನಿಯವರಿಂದ ಆಳಲ್ಪಡುವ ರಾಜ್ಯಗಳಿಗಿಂತಲೂ ನಮ್ಮ ರಾಜ್ಯವನ್ನು ಚೆನ್ನಾಗಿ ಆಳಬೇಕೆಂದು ಸರ್ವದಾ ಇವರ ಅಭಿಪ್ರಾಯವಾಗಿರುತ್ತೆ. ಅದರಂತೆಯೇ ಮಹಿಸೂರು ಸಂಸ್ಥಾನದಲ್ಲಿರತಕ್ಕ ಸಮಸ್ತ ವರ್ಗಕ್ಕೆ ಸೇರಿದವರು ಅತ್ಯಂತ ಸ್ವಾತಂತ್ರ್ಯವನ್ನು, ಸುಖವನ್ನು, ಸಂತೋಷವನ್ನು, ಅನುಭವಿಸುತಲಿದ್ದಾರೆ. ಪ್ರಜೆಗಳಾದ ನಮ್ಮಗಳಿಗೆ ಲಬ್ಧವಾಗಿರುವ ಪ್ರಕೃತ ಸ್ವಾತಂತ್ರ್ಯವು ಯಾವಾಗಲು ನಮಗೆ ಕೈಬಿಡಲಿಲ್ಲ. ಲೌಕಿಕವೇನು, ದೇಶದ ಧನಾಢ್ಯಕ್ಕವರೇನು, ಸಕಲ ವಿದ್ಯೆಗಳನ್ನು ಬಲ್ಲವರೇನು, ವರ್ತಕರೇನು, ಬುದ್ಧಿಮಾನ್ ಜನಗಳೇನು, ಎಲ್ಲರೂ ಬಹಳ ಸುಖವಂತರಾಗಿರುತ್ತಾರೆ. ಎಂದಿಗೂ ಅನುಭವಿಸದೆ ಇರತಕ್ಕ ರೈಲ್ವೇ ಪ್ರಯಾಣದ ಸುಖವೇನು, ತಂತಿ ವೃತ್ತಾಂತದ ಸುಖವೇನು, ವಿದ್ಯಾಭ್ಯಾಸಕ್ಕಾಗಿ ಉಂಟಾಗಿರತಕ್ಕ ಪ್ರೋತ್ಸಾಹವೇನು, ಇವುಗಳೆಲ್ಲವೂ ನಮ್ಮ ಮಹಾರಾಜರಿಂದ ಪ್ರಾಪ್ತವಾಗಿರುತ್ತೆ. ಬಹುಕಾಲದಿಂದ ಮಹಿಸೂರು ರಾಜವಂಶದಲ್ಲಿ ಪುತ್ರ ಸಂತಾನವಾಗತಕ್ಕದ್ದು ಬಹಳ ದುರ್ಲಭವಾದ ವಿಷಯವೆಂತಲೂ, ಹಾಗೆ ಆದರು ಒಬ್ಬರಿಗೆ ಆಗೋ, ಮತ್ತೊಬ್ಬರಿಗೆ ಇಲ್ಲದೆ ಹೋಗಿ, ಅವರು ಸ್ವೀಕೃತ ಪುತ್ರರನ್ನು ಮಾಡಿಕೊಳ್ಳುವದು ಯಾವಾಗಲು ವಾಡಿಕೆಯೆಂತಲೂ, ಅಂಥಾ ಸ್ವೀಕೃತ ಪುತ್ರರಿಗೆ ಒಬ್ಬರೇ ರಾಜಪುತ್ರರು ಹುಟ್ಟತಕ್ಕದ್ದು ಸಹಾ ಸಂಪ್ರದಾಯವೆಂತಲೂ, ಪರಂಪರೆಯಾಗಿ ಜನರು ಹೇಳಿಕೊಳ್ಳುತಲಿದ್ದರು. ಅಂಥಾ ಮಾತುಗಳು ಸುಳ್ಳಾಗಿ, ನಮ್ಮ ಮಹಾರಾಜರವರು ಅವರಿಗೆ ಮೂರು ಹೆಣ್ಣುಮಕ್ಕಳನ್ನೂ ಮತ್ತು ಮೂರು ಗಂಡುಮಕ್ಕಳನ್ನೂ ಭಗವತ್ಕೃಪಾ ಕಟಾಕ್ಷದಿಂ ಪಡೆದಿರುತ್ತಾರೆ. ಆ ಮಕ್ಕಳಿಗೆ ಆಯುರಾರೋಗ್ಯ ಭಾಗ್ಯಗಳು ಸರ್ವದಾ ಈಶ್ವರನು ದಯಪಾಲಿಸಬೇಕೆಂಬುದು ನಮ್ಮ ಹೃದಯಪೂರ್ವಕವಾದ ಪ್ರಾರ್ಥನೆಯಾಗಿರುತ್ತೆ.

ಈ ಪ್ರಾರ್ಥನೆಯನ್ನು ಈಶ್ವರ ಸಾನ್ನಿಧ್ಯದಲ್ಲಿ ಇದಿನ ಸಾಯಂಕಾಲ ಮುಖ್ಯವಾಗಿ ನಾವೆಲ್ಲರೂ ಸೇರಿ ಅರ್ಪಿಸುವ ತಾತ್ಪರ್ಯವು ಶ್ರೀಮನ್ಮಹಾರಾಜರ ಮೂರನೇ ಪುತ್ರರಾದ ಶ್ರೀ ದೇವರಾಜ ಒಡೆಯರವರ ನಾಮಕರಣೋತ್ಸವ ಪ್ರಯುಕ್ತವಾಗಿರುತ್ತೆ. ಈ ಪುತ್ರರಿಗೆ ಪರಮ ಕಾರುಣಿಕನಾದ ಈಶ್ವರನು ರಾಜ್ಯ ಎಂಥಾ ಸಮೃದ್ಧಿಯೊಂದಲ್ಲದೆ "ಶತಮಾನಂ ಭವತಿ" ಎಂಬಂತೆ, ಪೂರ್ತಿಯಾಗಿ ೧೦೦ ವರುಷಗಳಿಗೆ ಹೇಳಲ್ಪಟ್ಟ ಆಯುಷ್ಯವನ್ನು ಕೊಟ್ಟು ಕಾಪಾಡಬೇಕೆಂಬುದು ನಮ್ಮ ಉತ್ಕಟಾಪೇಕ್ಷೆಯಾಗಿರುತ್ತೆ. ಪ್ರಜೆಗಳಾದ ನಮ್ಮಗಳಿಗೂ ಮತ್ತು ಮಹಾರಾಜರವರಿಗೂ ಇರತಕ್ಕ ಸಂಬಂಧವು ಪಿತಾ ಪುತ್ರರ ಸಂಬಂಧವು ಹ್ಯಾಗೋ ಆರೀತಿಯಾದ ಸಂಬಂಧವಾಗಿರುತ್ತೆ. ಮಹಾರಾಜರು ನಮ್ಮಗಳಿಗೆ ತಂದೆಗಳ ಸ್ಥಾನವನ್ನುಳ್ಳವರಾಗಿರುತ್ತಾರೆ. ನಾವು ಅವರಿಗೆ ಮಕ್ಕಳ ಸ್ಥಾನದಲ್ಲಿ ಇರುತ್ತೇವೆ. ಇಂಥಾ ಪ್ರಬಲಕಾರಣವಿರುವದರಿಂದ ಅವರಿಗೂ ನಮಗೂ ಇಂತಕ್ಕ ಬಾಂಧವ್ಯವನ್ನವರುಂಟೋ ಅದು ಎಂದಿಗೂ ತಪ್ಪತಕ್ಕದ್ದಲ್ಲವಾಗಿರುತ್ತೆ. ರಾಜಭಕ್ತಿ ವಿಶ್ವಾಸಗಳೆಂಬುದು ನಮ್ಮ ಸ್ವಭಾವಗುಣಗಳಾಗಿರುತ್ತವೆ. ಪ್ರಜೆಗಳನ್ನು ಪ್ರೀತಿ ವಿಶ್ವಾಸಗಳಿಂದ ಪರಿಪಾಲನೆಯು ಮಾಡತಕ್ಕದ್ದು ಅದರ ಸಹಜಗುಣಗಳಾಗಿರುತ್ತವೆ. ಸಂಬಂಧವು ಹೀಗಿರುವದ್ದರಿಂದ, ಮಹಾರಾಜರವರಿಗೆ ಪ್ರಾಪ್ತವಾಗತಕ್ಕ ಸಂತೋಷಗಳಿಗೆ ನಾವು ಭಾಗಿಗಳಾಗದೇ ಹೋದರೆ ಅನ್ಯಥಾ ಭಾವಿಸಲು ಅವಕಾಶವೇ ಇಲ್ಲ. ಮತ್ತು ತಂದೆಯಿಂದ ಪಡೆಯಲ್ಪಟ್ಟ ಉಪಕಾರವನ್ನು ಪುತ್ರನಾದವನು ಸ್ಮರಿಸದೆ ಇರತಕ್ಕದ್ದು ಕೇವಲ ಸ್ವಭಾವ ವಿರೋಧವಿಷಯವಾಗಿರುತ್ತೆ. ಪ್ರಜೆಗಳಾದ ನಾವು ಅಂಥಾ ಕೃತಘ್ನರಲ್ಲವಾದ್ದರಿಂದ ಮಹಾರಾಜರಿಂದ ನಾವು ಹೊಂದಿರುವ ಬಹು ಪ್ರಯೋಜನಗಳಿಗಾಗಿ ಉಪಕಾರ ಸ್ಮರಣೆಗೆ ಇದು ಸಮಯವಾಗಿರುವದೆಂದಲ್ಲದೆ, ಈ ಸಮಯದಲ್ಲಿ ಮಹಾರಾಜರವರಿಗೆ ಉಂಟಾದ ಮೂರನೇ ಪುತ್ರರ ಜನನ ಮತ್ತು ನಾಮಕರಣ ಇತ್ಯಾದಿ ಉತ್ಸವಗಳ ಪ್ರಯುಕ್ತವಾದ ಆನಂದವನ್ನು ಅನುಭವಿಸುವಂತೆ ಜಗದ್ರಕ್ಷಕನಾದ ಶ್ರೀಪತಿಯು ನಮಗೆ ಅನುಕೂಲ್ಯಗಳನ್ನು ಒದಗಿಸಿದ್ದಕ್ಕಾಗಿ, ಬಹಳ ಸಂತೋಷ ಪಡಬೇಕಾಗಿದೆ. ಆ ಶ್ರೀಯಃಪತಿಯು, ಈಗ ಜನಿಸಿರತಕ್ಕ ಕುಮಾರರಿಗೆ, ಆಯುರಾರೋಗ್ಯ ಭಾಗ್ಯಗಳು ಕೊಟ್ಟು, ನಮ್ಮ ಮಹಾರಾಜರನ್ನು ಮತ್ತು ಮಹಾರಾಣಿಯವರನ್ನು, ಮತ್ತು ಮಹಾರಾಜ ಪುತ್ರರನ್ನು ಮತ್ತು ಪುತ್ರಿಗಳನ್ನು, ಸರ್ವದಾ ಸರ್ವ ಸೌಖ್ಯದಿಂದ ಕಾಪಾಡಲಿ ಎಂದು ಗೈಯುವದನ್ನು ಈ ದಿವ್ಯ ಪಾದವನ್ನು, ಸಕಲ ಲೋಕ ಸಂರಕ್ಷಕನಾದ ಶ್ರೀ ಶ್ರೀನಿವಾಸನ ಸನ್ನಿಧಿಯಲ್ಲಿ, ಇದಿನ ಸಾಯಂಕಾಲ ನಾವೆಲ್ಲರೂ ಸೇರಿ, ಕೇವಲ ವಿನಯದಿಂ ಅರಿಕೆ ಮಾಡಿಕೊಳ್ಳುತ್ತೇವೆ.

ಮಂಗಳ.

ಶ್ರೀಮದ್ರಾಮಾನುಜಮುನೀಂದ್ರಕರುಣಾಪಾತ್ರಂ ವಿಧಾನಂ ಸತಾಂ । ಶ್ರೀಮತ್ಕೃಷ್ಣಸುಸೂನುಮಂಬುಜಸಮಂ ಶೋಭಾನ್ವಿತಂ ಸೂರ್ಯಸ್ಯ । ... ॥

ಮಹಿಳಿನ ಉಪನ್ಯಾಸಾನಂತರ ಆದರ ಕೆಲವು ನೃತ್ಯಗಳಂ ಕೃತಿಗಳಂ ಮತ್ತು ಪದ್ಯಂಗಳಂ ಹಾಡಿ ಅಷ್ಟು ದೇವರಿಗೆ ಸಮರ್ಪಿಸಲ್ಪಟ್ಟು ಆ ತರುವಾಯ ಶ್ರೀ ದೇವರಿಗೆ ನಿವೇದನ ಮಾಡಿದ್ದ ಮತ್ತು ಪಾಯಸ ದ್ರವ್ಯಗಳಿಂದ ಸಮ್ಮಿಳಿತವಾದ ಸಕ್ಕರೆಯು ಸಕಲ ಜನಗಳಿಗೂ ಹಂಚಲ್ಪಟ್ಟಿತು.

ಬಹುಮಂದಿ ದೊಡ್ಡ ಮನುಷ್ಯರು ಬಂದು ಇದ್ದರು. ಎಲ್ಲರೂ ಬಹಳ ಆಹ್ಲಾದ ಚಿತ್ತರಾಗಿ ಹೊರಟು ಹೋದವರು.

ಶ್ರೀ ಶ್ರೀನಿವಾಸ ಮಂದಿರ, ಬೆಂಗಳೂರು ೧ನೇ ಆಗಸ್ಟ್ ೧೮೯೨ನೇ ಇಸವಿ. } ಎ. ಗೋಪಾಲಾಚಾರ್ಲು.

THE MYSORE GAZETTE.
ಮೈಸೂರು ಗೆಜೆಟು.

ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರಕಾರದಿಂದ ಕೊಡಲ್ಪಟ್ಟ ಇಷ್ತಿಹಾರ್‌ನಾಮೆಗಳು.

೩೦ನೇ ಜುಲೈ, ನಂ॥ ೧೩೩೮-L. F. ೨೧ F.೨ —ಸನ್ ೧೮೯೨ನೇ ಇಸವಿ ಮೇ ೩೦ನೇ ಮಕ್ಕಾಂ ೪೮—L. ೮೫೫೫ನೇ ನಂಬರಿನ್ನು ಗೆಜೆಟಿನಲ್ಲಿ ಪ್ರಕಟಿಸಲ್ಪಟ್ಟಿರುವ ತೀರ್ಥಹಳ್ಳಿ ತಾಲ್ಲೂಕು ಮ್ಯುನಿಸಿಪಲ್ ಮೆಂಬರಾದ ಮೆ॥ ಸಿ. ಲಕ್ಷ್ಮೀನಾರಣಪ್ಪ ಎಂಬವರಿಗೆ ಬದಲು ಮೆ॥ ಎ. ಲಕ್ಷ್ಮೀನಾರಣಪ್ಪ ಎಂದು ತಿದ್ದಿಕೊಳ್ಳತಕ್ಕದ್ದು.

ನಂ॥ ೧೩೫೨—G. ೩೩೪—೨—ಮೈಸೂರ್ ಸಿವಿಲ್ ಸರ್ವಿಸ್ ರೆಗ್ಯುಲೇಷನಿನ ೧೩೦ ಮತ್ತು ೧೩೫ನೇ ನಿಬಂಧನೆಗಳ ನಿಯಮಗಳನ್ನನುಸರಿಸಿ, ತುಮಕೂರ್ ಡಿಸ್ಟ್ರಿಕ್ಟ್ ಟ್ರಜರಿ ಇನ್ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೆ॥ ಎ. ರಾಘವೇಂದ್ರರಾಯರವರು ೯ನೇ ಆಗಸ್ಟ್ ಗುರ್ರೇ ತಾರೀಖ್ ಮೊದಲು ೩ ದಿನಗಳ ಪ್ರಿವಿಲೇಜರಜಾ ಕೊಡಲ್ಪಟ್ಟಿರುತ್ತಾರೆ.

ನಂ॥ ೧೬೬೪—G. ೩೫೧—೨—ಪ್ರೊವಿಷನಲ್ ಪ್ರೊಸಿಡ್ಯುರ್‌ಕೋಡ್ ೧೬ನೇ ಸೆಕ್ಷನ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ೩ನೇ ಜನರಲ್ ಅಸಿಸ್ಟೆಂಟ್ ಕಮಿಷನರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ವೈದ್ಯನಾಥ ಅಯ್ಯರವರು ಒಂದನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ॥ ೧೫೫೫-G. F. ೧೨. ೯೨—ತೀರ್ಥಹಳ್ಳಿ ತಾಲ್ಲೂಕ್ ಅಮಲ್ದಾರ್ ಸಿ. ವೆಂಕಟಾಚಲಯ್ಯನವರಿಗೆ ೧೮೯೨ನೇ ಇಸವಿ ಜನ್ ೨೨ನೇ ಮುಕ್ಕಾಂ ೧೧೩, ಸನ್ ೧೮೯೨ನೇ ಇಸವಿ ಜುಲೈ ೧೧ನೇ ಮುಕ್ಕಾಂ ೩೩, ಮತ್ತು ಸನ್ ೧೮೯೨ನೇ ಇಸವಿ ಜುಲೈ ೧೪ನೇ ಮುಕ್ಕಾಂ ೨೨೬ನೇ ನಂಬರುಗಳುಳ್ಳ ಇಷ್ತಿಹಾರ್‌ಗಳ ಮೂಲಕ ಕೊಡಲ್ಪಟ್ಟ ಪ್ರಿವಿಲೇಜ್ ರಜಾ ೩ ದಿನಗಳಿಗೆ ಜಾಸ್ತೀ ಮಾಡಲ್ಪಟ್ಟಿದೆ.

೩೦ನೇ ಜುಲೈ ೯೨, ನಂ॥ ೧೫೪೧—೧.G. ೩೪೬—೯೨—ಮೈಸೂರು ತಾಲ್ಲೂಕು ಅಮಲ್ದಾರ್ ಬಿ. ಸೀತಾರಾಮಯ್ಯನವರು, ೧೮೯೨ನೇ ಇಸವಿ ಮಾರ್ಚ್ ೧೮ನೇ ತಾರೀಖ್ ಮೊದಲು ಮೇ ೧೦ನೇ ತಾರೀಖ್ ವರೆಗೂ ಉಭಯ ದಿನಗಳೂ ಸೇರಿ, ಎರಡು ತಿಂಗಳು ನಾಲ್ಕು ದಿನಗಳ ಕಾಲ ಸ್ವಂತ ಕೆಲಸದ ಬಗ್ಗೆ ರಜಾ ಮೇಲಿದ್ದರು.

ಮರಾಮತ್ತು ಇಲಾಖೆ.

ನಂ॥ ೩೫೦—೬೧೮.—೧ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರಾದ ಮೆ॥ ಬಿ. ಎಸ್. ವೆಂಕಟಾಚಾರ್ಯರವರು, ಸನ್ ೧೮೯೨ನೇ ಇಸವಿ ಜನ್ ೧೯ನೇ ತಾರೀಖ್ ಮೊದಲು, ಶಿಮೊ ಡಿವಿಷನ್ ಇನ್ ಚಾರ್ಜಿನಲ್ಲಿರುವಾಗ, ೩ನೇ ಗ್ರೇಡ್ ಎಗ್ಜಿಕ್ಯುಟಿವ್ ಇಂಜನಿಯರ್ ಕೆಲಸವನ್ನು ಬದಲೀ ನೋಡುವಂತೆ ನೇಮಕ ಮಾಡಲ್ಪಟ್ಟಿರುತ್ತಾರೆ.

ತತ್ಕಾಲದಲ್ಲಿ ಒಂದನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರಾಗಿರುವ ಮೆ॥ ಬಿ. ಪಿ. ರಾಮನಲು ನಾಯಡರವರು ಮೇಲಿನ ತಾರೀಖ್ ಮೊದಲು ೧ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ ಬಡ್ತಿ ಮಾಡಲ್ಪಟ್ಟಿರುತ್ತಾರೆ. ಇವರು ಸೂಪರ್ ನ್ಯೂಮರರಿಯಾಗಿರುತ ಖಾಲೀ ಬಿದ್ದ ಕಾಲದಲ್ಲಿ ಸೇರಿಸಿಕೊಳ್ಳಲ್ಪಡುವರು.

SEASON REPORT.

ಸನ್ ೧೮೯೨ನೇ ಇಸವಿ ಜುಲೈ ೩೦ನೇ ತಾರೀಖಿಗೆ ಕೈದಾದ ವಾರದ ಬಾಬತು ಡಿಸ್ಟ್ರಿಕ್ಟ್ ಜಾತ ಸರ್ಕಾರೀ ಕಾಲಸ್ಥಿತಿ ರಿಪೋರ್ಟ್.

ಬೆಂಗಳೂರು ಡಿಸ್ಟ್ರಿಕ್ಟ್ ಪೈಕಿ ಆನೇಕಲ್, ಮಾಗಡಿ, ಈ ಎರಡು ತಾಲ್ಲೂಕುಗಳಲ್ಲಿ ಮಾತ್ರ ಒಂದು ಇಂಚ್ ಮಳೆ, ಇತರ ತಾಲ್ಲೂಕುಗಳಲ್ಲಿ ಕೆಲವು ಸೆಂಟಗಳು. ಕೋಲಾರ್ ಡಿಸ್ಟ್ರಿಕ್ಟ್ ಪೈಕಿ ಚಿಕ್ಕಬಳ್ಳಾಪುರ, ಗುಡಿಬಂಡೆ ಈ ಎರಡರಲ್ಲಿ ಮಾತ್ರ ಒಂದಿಂಚ್ ಮಳೆ, ಅನ್ಯತ್ರ ಕೆಲವು ಸೆಂಟಗಳು. ತುಮಕೂರು ಡಿಸ್ಟ್ರಿಕ್ಟ್ ಪೈಕಿ ತುಮಕೂರು, ಗುಬ್ಬಿ ಈ ಎರಡು ತಾಲ್ಲೂಕುಗಳಲ್ಲಿ ಮಾತ್ರ ಎಂದರ್ಧ ಇಂಚ್ ಮಳೆ ಬಿತ್ತು. ಅನ್ಯತ್ರ ಕೆಲವುಕಡೆ ಕೆಲವು ಸೆಂಟಗಳು, ಕೆಲವು ತಾಲ್ಲೂಕುಗಳಲ್ಲಿ ಸುತರಾಂ ಇಲ್ಲವು. ಮೈಸೂರು ಡಿಸ್ಟ್ರಿಕ್ಟ್ ಪೈಕಿ ಒಂದು ತಾಲ್ಲೂಕಿನಲ್ಲಿಯೂ ಮಳೆಯು ಸ್ವಲ್ಪವೂ ಇಲ್ಲವು. ಹಾಸನ ಡಿಸ್ಟ್ರಿಕ್ಟ್ ಪೈಕಿ ಮಂಜರಾಬಾದಿನಲ್ಲಿ ೩ ಇಂಚ್, ಅರಕಲಗೂಡು ಮತ್ತು ಬೇಲೂರಿನಲ್ಲಿ ಒಂದೊಂದಿಂಚ್, ಅನ್ಯತ್ರ ಅಲ್ಪವರ್ಷ. ಶಿವಮೊಗ್ಗ ಡಿಸ್ಟ್ರಿಕ್ಟ್ ಪೈಕಿ ಶಿವಮೊಗ್ಗ ೧, ಹೊನ್ನಾಳಿ ೩, ಸಾಗರದಲ್ಲಿ ೬, ನಗರದಲ್ಲಿ ೩೪, ತೀರ್ಥಹಳ್ಳಿಯಲ್ಲಿ ೧೫ ಇಂಚ್ ಮಳೆ ಬಿತ್ತು. ಉಳಿದ ತಾಲ್ಲೂಕುಗಳಲ್ಲಿ ಕೆಲವು ಸೆಂಟಗಳು. ಕಡೂರ್ ಡಿಸ್ಟ್ರಿಕ್ಟ್ ಪೈಕಿ ಚಿಕ್ಕಮಗಳೂರಲ್ಲಿ ೧, ಕಡೂರಲ್ಲಿ ೧, ತರೀಕೆರೆಯಲ್ಲಿ ೪, ಕೊಪ್ಪದಲ್ಲಿ ೧೨, ಮೂಡಗೆರೆಯಲ್ಲಿ ೧೪ ಇಂಚ್ ಮಳೆ ಬಿದ್ದಿತು, ಅನ್ಯತ್ರ ಅಲ್ಪವೃಷ್ಟಿ. ಚಿತ್ರದುರ್ಗ ಡಿಸ್ಟ್ರಿಕ್ಟ್ ಪೈಕಿ ಪ್ರತಿ ತಾಲ್ಲೂಕಿನಲ್ಲೂ ಕೆಲವು ಸೆಂಟಗಳ ಮಳೆಯೇ ಹೊರತು ಎಂದರಲ್ಲಾದರೂ ಒಂದು ಇಂಚ್ ಮಳೆ ಇಲ್ಲವು, ಎಂದು ತಿಳಿಯಬರುತಿದೆ.

ಪ್ರಕೃತಸ್ಥಿತಿಯಂ ನೋಡಲಾಗಿ, ಈವರೆವ ಡಿಸ್ಟ್ರಿಕ್ಟ್‌ಗಳ ಪೈಕಿ ಚಿತ್ರದುರ್ಗ, ಮೈಸೂರು, ಬೆಂಗಳೂರು, ಕೋಲಾರ, ಈ ನಾಲ್ಕು ಡಿಸ್ಟ್ರಿಕ್ಟ್‌ಗಳಲ್ಲಿ ಪ್ರಜೆಗಳಿಗುಂಟಾಗಿದ್ದ ದುರ್ಭಿಕ್ಷ ಹೆಚ್ಚುಯುಕ್ತವಾದ ಭೀತಿಯು ತಾತ್ಕಾಲಿಕವಾಗಿ ನಿವೃತ್ತಿಯಾದಂತೆ ಹೇಳಬಹುದೇ ಹೊರತು ಪೂರಾ ತಪ್ಪಿತೆಂದು ಹೇಳುವದಕ್ಕೆ ಅವಕಾಶವಿಲವೆ ಇದೆ.

ಪಾದರ ಗುಣದೋಷ ವಿಚಾರ.

ಗತವಾರದಲ್ಲಿ ರಸೋತ್ಪತ್ತಿಯನ್ನು ವಿವರಿಸಿ ಅದರ ಶೋಧನಪ್ರಯೋಜನವೂ ಷಾಢಿಗಳಂ ನಿವರಿಸುವಂತೆ ಪ್ರತಿಜ್ಞೆಮಾಡಿದ್ದೆವಷ್ಟೆ. ಅವುಗಳ ಸ್ವರೂಪವು ಈ ಪತ್ರಿಕೆಯನ್ನೋದತಕ್ಕವರ ತಿಳುವಳಿಕೆಯ ಬಗ್ಗೆ ಬರದಿ ವಿವರಿಸುತ್ತೇವೆ ಹ್ಯಾಗೆಂದರೆ—

ಪಾದರಸವು ವರ್ಣಭೇದಗಳಿಂದ ನಾಲ್ಕು ವಿಧಗಳುಳ್ಳದ್ದಾಗಿರುತಿವೆ. ಅವುಗಳಲ್ಲಿ ಬೆಳ್ಳಗೆ ಇರದಿದ್ದು ಬ್ರಾಹ್ಮಣಜಾತಿಯೆಂತಲೂ ರಕ್ತವರ್ಣವುಳ್ಳದ್ದು ಕ್ಷತ್ರಿಯಜಾತಿಯೆಂತಲೂ, ಹಸರು ಬಣ್ಣವುಳ್ಳದ್ದು ವೈಶ್ಯಜಾತಿಯೆಂತಲೂ ಕರೀಬಣ್ಣವುಳ್ಳದ್ದು ಶೂದ್ರಜಾತಿಯೆಂತಲೂ ಅರಿಯತಕ್ಕದ್ದು. ಅವುಗಳಲ್ಲಿ ಬ್ರಾಹ್ಮಣಜಾತಿ ರಸವು ಕಲ್ಪನಿರ್ಮಾಣಗಳಲ್ಲಿಯೂ, ಕ್ಷತ್ರಿಯಜಾತಿ ರಸವು ಗುಟಿಕೆಗಳಲ್ಲಿಯೂ, ವೈಶ್ಯಜಾತಿ ರಸವು ವಾದದಲ್ಲಿಯೂ, ಶೂದ್ರಜಾತಿ ರಸವು ಇತರ ಕರ್ಮಗಳಲ್ಲಿಯೂ, ಉಪಯೋಗಿಸಲ್ಪಡುತಿವೆ. ನೀಲವರ್ಣವುಳ್ಳದ್ದು ಬಹಳ ಪ್ರಶಸ್ತವೂನವಾಗಿರುತಿವೆ. ಈ ರಸವು ಕಲ್ಪವಿಧಯದಲ್ಲಿ ಅಣಿಮಾದ್ಯಷ್ಟಸಿದ್ಧಿಯನ್ನುಂಟುಮಾಡತಕ್ಕದ್ದಾಗಿಯೂ, ಗುಟಿಕಾಸಿದ್ಧಿಯಲ್ಲಿ ಉದ್ದೇಶಿತ ಮಾರ್ಗದಿಂ ದೇಶಾಂತರಗಮನಶಕ್ತಿಯನ್ನುಂಟುಮಾಡುವುದಾಗಿಯೂ, ಔಷಧ ಪ್ರಯೋಗದಲ್ಲಿ ಕುಷ್ಠರೋಗವನ್ನು ಅಗ್ನಿಯು ದಹಿಸುವಂತೆ ಧಾತುಗತದೋಷಗಳನ್ನು ದಹಿಸಿಬಿಡತಕ್ಕದ್ದಾಗಿಯೂ ಇರುತಿದೆ. ಅದಾಗ್ಯೂ ರಸದಲ್ಲಿ ೧೨ ದೋಷಗಳಿರುತಿವೆಂದು ಆಯುರ್ವೇದಜ್ಞರು ತಿಳಿಸಿರುತ್ತಾರೆ. ಮತ್ತು ರಸದರ್ಶನದಿಂದ ಬ್ರಹ್ಮಹತ್ಯಾ ಜನಿತದೋಷವು ನಿವರ್ತಿಸುವುದು, ಅದರ ಸ್ಪರ್ಶದಿಂದ ಗೋಹತ್ಯಾಜನಿತದೋಷವು ನಿವಾರಣವಾಗುವುದು. ಅದರ ಸೇವನೆಯಿಂದ ಸ್ವರ್ಗಾದಿ ಪರಮಪದ ಪ್ರಾಪ್ತಿಯು ಸಿದ್ಧಿಸುವುದು.[1] ದೋಷರಹಿತವಾದ ರಸವು ಪರಬ್ರಹ್ಮಸ್ವರೂಪವೆಂದು ಕರೆಯಲ್ಪಟ್ಟಿರುವವರಿಂದಲೂ, ಚಲನ ರಹಿತವಾದ ರಸವು ವಿಷ್ಣುಸ್ವರೂಪವೆಂತಲೂ, ಭಸ್ಮ ಮಾಡಲ್ಪಟ್ಟ ರಸವು ರುದ್ರಸ್ವರೂಪವೆಂತಲೂ, ಬಂಧಿಸಲ್ಪಟ್ಟ ರಸವು ಮಹೇಶ್ವರ ಸ್ವರೂಪವೆಂತಲೂ, ದೇಹರೋಗಗಳಿಂದ ಮಾರಕವಾದ ರಸವು ಸದಾಶಿವ ಸ್ವರೂಪವೆಂತಲೂ ಪಂಡಿತರು ಅಭಿಪ್ರಾಯಪಟ್ಟಿರುತ್ತಾರೆ. ಈ ರಸವು ಜಾತಿಭೇದಗಳಿಂದ ಪಾರದ, ರಸನಾತು, ರಸಲೋಹ, ಮಹಾರಸ ನೆಂಬದಾಗಿ ನಾಲ್ಕು ಹೆಸರುಗಳುಳ್ಳದ್ದಾಗಿರುತಿದೆ. ಮತ್ತು ಇವು ರಸೇಂದ್ರ, ಪಾರದ, ಸೂತಕ, ರಸಕವೆಂಬದಾಗಿ ನಾಲ್ಕು ಅಂತರಾಳಕಭೇದಗಳುಳ್ಳದ್ದಾಗಿದೆ. ಇವರಲ್ಲಿ ಸ್ವಲ್ಪ ಕಪ್ಪಾಗಿ ಚಾಂಚಲ್ಯದೊಡನೆ ರೂಕ್ಷವಾಗಿರುವುದು ರಸೇಂದ್ರವೆಂತಲೂ, ಕುಕಬಣ್ಣದಂತ ಹಸರು, ಕಪ್ಪು ಬಣ್ಣವುಳ್ಳದ್ದು ಪಾರದವೆಂತಲೂ, ಹಸರುಬಣ್ಣದಿಂ ರೂಕ್ಷವಾಗಿರುವುದು ಸೂತಕವೆಂತಲೂ, ಮಯೂರ ಬಿಂಬಚ್ಛಾಯೆಯುಳ್ಳದ್ದು ರಸಕವೆಂತಲೂ ಕರೆಯಲ್ಪಡುತಿದೆ. ರಸೇಂದ್ರವೆಂಬದಂ ರಸಕರ್ಮಗಳಲ್ಲಿಯೂ, ಪಾರದವೆಂಬದನ್ನು ಚಿಕಿತ್ಸೆಗಳಲ್ಲಿಯೂ, ರಸಕವೆಂಬದಂ ರಸಾಯನಾದಿಗಳಲ್ಲಿಯೂ ಅಂಗೀಕರಿಸತಕ್ಕದ್ದು. ರಸದಲ್ಲಿ ಉಷ್ಣತೆ, ಕೌಟಿಲ್ಯ, ಅನವರ್ತ, ಸಂಕರ, ಷಂಡತ್ವ, ನಾಗ, ಮಲ, ಸಪಿಷ್ಟ್ವಗಳೆಂಬ ಏಳು ಬಗೆ ದೋಷಗಳಿರುತಿವೆ. ಈ ದೋಷದುಷ್ಟವಾದ ರಸವನ್ನು ಶುದ್ಧಿಮಾಡದೆ, ಔಷಧದಲ್ಲಿ ಪ್ರಯೋಗಿಸಿದಾಗ್ಯೂ ಸೇವಿಸಿದಾಗ್ಯೂ ರೋಗಗಳು ಜನಿಸುವವು. ಅವುಗಳ್ಯಾವವೆಂದರೆ,— ಉಷ್ಣತಾದೋಷದಿಂದ ಶೂಲೆ, ಕೌಟಿಲ್ಯದೋಷದಿಂ ಜಡತ್ವರೋಗ, ಅನವರ್ತ ದೋಷದಿಂ ಭ್ರಮೆ, ಸಂಕರದೋಷದಿಂ ನಾನಾಘಾತ್ಯ, ಷಂಡತ್ವದೋಷದಿಂ ಸಂತಾನವಿಹೀನತೆ, ಜಂಗುದೋಷದಿಂ ವಾತ ಅಥವಾ ಕುಷ್ಠರೋಗ, ಮಲದೋಷದಿಂದ ಜ್ವರ, ಮೂರ್ಛೆ, ವಿಷದೋಷದಿಂ ಕ್ಷಯರೋಗಗಳು ತಪ್ಪದೆ ಪ್ರಾಪ್ತವಾಗುವವು. ಇದಲ್ಲದೆ ಇನ್ನೂ ಜೊತೆ ಏಳುವಿಧ ದೋಷಗಳಿರುತಿವೆ. ಅವುಗಳ್ಯಾವವೆಂದರೆ, ನಾಗ, ವಂಗ, ಮಲ, ವಹ್ನಿ, ಚಾಂಚಲ್ಯ, ವಿಷ, ಗಿರಿ, ಅಸಹ್ಯಾಗ್ನಿಗಳೆಂಬವು. ಈ ಮಹಾದೋಷಗಳಲ್ಲಿ ಒಂದೊಂದರಿಂದ ಅನೇಕ ರೋಗಗಳು ಜನಿಸುತಿವೆ. ಹ್ಯಾಗೆಂದರೆ,—ನಾಗದೋಷದಿಂದ ಕುಷ್ಠ, ಗಂಡಮಾಲೆ, ಜಡತೆ, ಬುದ್ಧಿವಿಭ್ರಮೆಯು ಸಂಭವಿಸುತಿದೆ. ಮಲದೋಷದಿಂದ ಅಪಸ್ಮಾರರೋಗವುಂಟಾಗುತಿದೆ. ಅಗ್ನಿದೋಷದಿಂ ದಾಹವೂ, ಚಾಂಚಲ್ಯ ದೋಷದಿಂ ಶುಕ್ಲನಾಶವೂ, ವಿಷದೋಷದಿಂ ಮರಣವೂ, ಗಿರಿದೋಷದಿಂ ಶರೀರದಲ್ಲೆಲ್ಲಾ ಟಕಳಿಯಂತೆ ಗುಳ್ಳೆಗಳೂ, ಅಸಹ್ಯಾಗ್ನಿ ದೋಷದಿಂ ಮೋಹವೂ ಉಂಟಾಗುವುವು. ಇವುಗಳಲ್ಲದ ರಲ್ಲಿಯೂ ವಿಷಾಗ್ನಿ ಮಲದೋಷಗಳು ಬಹಳ ಮುಖ್ಯವಾದವಾಗಿರುತಿವೆ. ಇವು ಕ್ರಮವಾಗಿ ಮರಣ, ಸಂತಾಪ ಮೂರ್ಛೆಯನ್ನುಂಟುಮಾಡದ ರೈಲ್ಲಾದರಿಂದ ಯಾವಾಗಲು ತ್ಯಾಜ್ಯವು. ಮುಖ್ಯವಾಗಿ ಈ ರೋಗಗಳುಂಟಾಗದಿರುವಂತೆ ಸಪ್ತಕಂಚುಕದೋಷಗಳನ್ನು ಹೋಗಲಾಡಿಸಿ ಶುದ್ಧಿಮಾಡಬೇಕಾದುದು ಆವಶ್ಯಕವಾಗಿರುತಿದೆ. ಹಾಗೆ ಮಾಡದೆ ರಸವನ್ನುಪಯೋಗಿಸಿದರೆ, ಬಳಿಕ ಇತರ ಔಷಧಗಳಿಗೂ ಅವಕಾಶವಿಲ್ಲದೆಯೂ ರಸು. ಮುಖ್ಯವಾಗಿ ಕ್ರಮವರಿತು ಶುದ್ಧಿಮಾಡಲ್ಪಟ್ಟ ಮತ್ತು ದೋಷರಹಿತವಾದ ರಸವು ವೈದ್ಯ ಜನಗಳಂ ರೋಗಲಾಡಿಸಿ ಪ್ರತ್ಯಕ್ಷವಾದ ಅಮೃತತುಲ್ಯವಾಗಿಯೂ, ದೋಷಯುಕ್ತವಾದ ರಸವು ವಿಷರೂಪವಾಗಿಯೂ ಇರುವುದು. ಹೀಗೆ ರಸವು ಅದಂ ಉಪಯೋಗಿಸತಕ್ಕವರ ಯೋಗ್ಯತಾನುಸಾರ ನಾನಾಪ್ರಯೋಜನಗಳನ್ನುಂಟು ಮಾಡತಕ್ಕದ್ದಾಗಿರುತಿದೆ. ಸಿದ್ಧಪುರುಷರಿಗೆ ಅದು ಸರ್ವಾರ್ಥಗಳನ್ನುಂಟುಮಾಡತಕ್ಕದ್ದಾಗಿದ್ದಾಗ್ಯೂ, ತದಿತರರಿಗೆ ಮಾದದನರ್ಥಗಳನ್ನುಂಟುಮಾಡದೆ ಹೋಗುವದಿಲ್ಲವು. ಸಿದ್ಧರಾಗದವು ಇತರ ವೈದ್ಯರಿಗೆ ಅಸಾಧ್ಯವಾದುದರಿಂದ ಅವರವರು ತಮಗೆ ತಿಳಿದ ಯಾವದೋ ಒಂದು ವಿಧದಿಂದ ನಾಮಮಾತ್ರಕ್ಕೆ ರಸವಂ ಶುದ್ಧಿಮಾಡಿ, ಅದಂ ಅರ್ಥಾತುರತ್ವದಿಂ ರೋಗಿಗಳಿಗೆ ಕೊಡಲು, ಅದು ಪೂರ್ವರೋಗವಂ ಹೋಗಲಾಡಿಸದೆ ಅನೇಕ ಉಪರೋಗಗಳನ್ನುಂಟುಮಾಡುತಿವೆ. ಇದರಿಂದ ನಮ್ಮ ವೈದ್ಯರಿಗೆ ಅಪಕೀರ್ತಿಯು ವೃದ್ಧಿಯಾಗಲಿಕ್ಕೆ ಕಾರಣವಲ್ಲದೆ ಜನರಿಗೆ ಹಿಂದೂ ಚಿಕಿತ್ಸೆಯಲ್ಲಿ ಪ್ರತಿಪತ್ತಿ ಇಲ್ಲದೆ ಹೋಗಿ,

ಯಮರಾಜಸಹೋದರ ವೈದ್ಯರಾಜ ನಮಸ್ತುಭ್ಯಂ ॥ ... ಧನಂ ಹರತಿ ವೈದ್ಯೋ ...ಹ ಪ್ರಾಣಾನ್ ॥

ಎಂಬ ವಚನರೀತ್ಯಾ ಎಲ್ಲರೂ ಹಿಂದೂ ವೈದ್ಯರನ್ನು ಕಾಲಪುರುಷರಂತೆ ಭಾವಿಸಿ, ಇಂಗ್ಲಿಷ ಡಾಕ್ಟರುಗಳಿಂದ ಲಭಿಸುವ ಪ್ರಯೋಜನವು ಅಲ್ಪವಾಗಿದ್ದಾಗ್ಯೂ, ಅವರನ್ನು ಅಶ್ವಿನೀ ದೇವತೆಗಳಂತೆ ಭಾವಿಸಿರುತ್ತಾರೆ.

SUMMARY OF NEWS
ವೃತ್ತಾಂತ ಸಂಗ್ರಹವು.

ಬಾಗೆಪಲ್ಲಿಯೆಂಬ ಸ್ಥಳದಲ್ಲಿ ಸುಮಾರು ೫೦೦ ಮನೆಯುಳ್ಳ ಪೇಟೆಯು ಒಂದು ದಿನ್ನೆಗೆ ಬಿದ್ದು ಸುಟ್ಟುಹೋಗಿಯಿತು—ವೃ. ಪ.

ಹೈದರಾಬಾದ್ ನೈಜಾಂ ಕಾಲೇಜಿನಲ್ಲಿನ ವಿದ್ಯಾರ್ಥಿಗಳಿಗೆ ಫ್ರೆಂಚ್ ಭಾಷೆಯನ್ನು ಕಲಿಸುವದಕ್ಕಾಗಿ ಫ್ರಾನ್ಸ್‌ದೇಶದ ಒಬ್ಬ ಮೊನಸರ್ ಎಂಬಾತನನ್ನು ೫೦೦ ರೂಪಾಯಿ ಸಂಬಳ ಕೊಟ್ಟು ಹಾಕಿ ನೇಮಿಸಿರುತ್ತಾರೆ.—ವೃ. ಪ.

ನೆಲ್ಲೂರ್ ಡಿಸ್ಟ್ರಿಕ್ಟಿಗೆ ಸೇರಿದ ಜನತಂಬಲ ಪುರದಲ್ಲಿರುವ ಬಾಬು ಉಪ್ಪಿನಹರ್ಲ ಪಕ್ರುದಿನ್ ಎಂಬ ದೊಡ್ಡಮನುಷ್ಯನ ಹೆಸರು ಹೇಳಿಕೊಂಡು ಜಾತಿಯಿಂದ ಒಬ್ಬ ದಾಸನನ್ನು ಇಟ್ಟುಕೊಂಡಿದ್ದನು. ಒಂದಾನೊಂದು ದಿವಸ ಆ ದೊಡ್ಡ ಮನುಷ್ಯನ ಮನೆಯ ಹೆಂಗಸರು ಆತನ ಚಿಕ್ಕ ಮಗನಿಗೆ ಸುಮಾರು ೩೦೦—೫೦೦ ರೂಪಾಯಿ ಬಾಳುವ ನಗಗಳನ್ನು ಹಾಕಿ ದಾಸನ ವಶಕ್ಕೆ ಕೊಟ್ಟು ಮಗುವನ್ನು ಕರೆದುಕೊಂಡು ಹೋಗಿ ಆಡಿಸಿಕೊಂಡು ಬಾ ಎಂದು ಕಳುಹಿಸಿಕೊಟ್ಟರು. ಇಂಥ ಸಮಯಗಳನ್ನೇ ಎದುರು ನೋಡುತ್ತಿದ್ದ ದಾಸನು ಮಗುವನ್ನು ಕರೆದುಕೊಂಡು ದೂರದಲ್ಲಿದ್ದ ಒಂದು ತೋಪಿಗೆ ಹೋಗಿ, ಅಲ್ಲಿ ಆ ಮಗುವಿನ ಕಟ್ಟನ್ನು ಹಿಸುಕಿ ಕೊಂದುಹಾಕಿ, ಅದರ ಮೈಮೇಲಿದ್ದ ನಗಗಳನ್ನು ಗಂಟು ಕಟ್ಟಿಕೊಂಡು ಮಗುವನ್ನು ಒಂದು ಪೊದೆಯಲ್ಲಿ ಅಡಗಿಸಿಟ್ಟು, ಯಥಾಪ್ರಕಾರ ಮನೆಗೆ ಬಂದು ಆ ರಾತ್ರಿ ಊಟ ಮಾಡಿ, ತಾನೆತ್ತಿದ್ದ ಪದಾರ್ಥಗಳನ್ನು ಗಂಟು ಕಟ್ಟಿಕೊಂಡು ಪಟ್ಟಣದಿಂದ ಓಡಿಹೋಗಿದ್ದನು. ಆ ಪಟ್ಟಣಕ್ಕೆ ದೂರದಲ್ಲಿರುವ ಒಂದೂರಿನಲ್ಲಿ ಇವನು ತನ್ನಲ್ಲಿದ್ದ ಕೆಲವು ನಗಗಳನ್ನು ಅಲ್ಲಿನ ಒಬ್ಬ ಅಕ್ಕಸಾಲಿಗನ ವಶಕ್ಕೆ ಕೊಟ್ಟನು, ಅವನಿಗೆ ಅವನಮೇಲೆ ಸಂಶಯ ಬಂದು ಪೋಲೀಸಿನವರಿಗೆ ತಿಳಿಸಿದನು. ಅವರು ಹಿಡಿದು ಪ್ರಶ್ನೆಗಳ ಮೂಲಕ ವಿಚಾರಿಸಿದಾಗ್ಗೆ ಇನ್ನ ಸಂಗತಿ ಹೊರಗೆ ಬಂತು —ವೃ. ಪ.

ಹೈದರಾಬಾದ್ ಸೀಮೆಯಲ್ಲಿ ಜಾಫರ್‌ಷಾ ಎಂಬ ಊರಿನಲ್ಲಿ ಒಬ್ಬ ಮುಸಲ್ಮಾನರವನು ಕೆಲವು ದಿನಗಳ ಕೆಳಗೆ ಒಬ್ಬಳನ್ನು ಮದುವೆ ಮಾಡಿಕೊಂಡನು. ಅವಳು ಸುಂದರಿಯಾಗಿಯೂ, ಯುವತಿಯಾಗಿಯೂ ಇದ್ದದರಿಂದ ಅವನನ್ನು ಬಹಳ ಪ್ರೀತಿ ಮಾಡುತ್ತಿದ್ದನು ಮತ್ತು ಅವನಮೇಲೆ ವಿಶ್ವಾಸವೂ ಬಹಳ ನಿರತನಾಗಿದ್ದನು. ಹೀಗೆ ಇರುವಾಗ್ಯೆ ಇವರ ಊರಿಗೆ ಸಮೀಪದ ಅವಳು ವ್ಯಭಿಚಾರ ಮಾಡಿದಳು, ಕೊನೆಗೆ ಒಂದು ದಿವಸ ಅವನು ತನ್ನ ಉದ್ಯೋಗಕ್ಕೆ ಹೋಗುವವನಂತೆ ಹೊರಟು ಹೋಗಿ ಒಂದು ಕೋಣೆಯ ಮರೆಯಲ್ಲಿ ಅಡಗಿಕೊಂಡಿದ್ದನು. ಆ ಸಮಯದಲ್ಲಿ ಅವಳ ಜಾರನು ಬರಲು ಅವರಿಬ್ಬರೂ ಸರಸಸಲ್ಲಾಪಗಳಲ್ಲಿ ತೊಡಗಿರುವಾಗ ಗಂಡನು ತಾನು ಕುಳಿತಿದ್ದ ಸ್ಥಳದಿಂದ ಕತ್ತಿ ಹಿಡಿದುಕೊಂಡು ಹೊರಬಂದು ತನ್ನ ಹೆಂಡತಿಯನ್ನು ಕೈಯಲ್ಲಿ ಹಿಡಿದು ಕಡಿದನು. ಆಕೆಯ ಜಾರನು ಇದನ್ನು ನೋಡಿ ಹೆದರಿ ಓಡಿಹೋಗುವದಕ್ಕೆ ಪ್ರಯತ್ನ ಮಾಡಿದಳು, ಅಷ್ಟರಲ್ಲೇ ಗಂಡನು ಅವನನ್ನು ಹಿಡಿದು ಹೊಡೆದು ಕತ್ತಿಯನ್ನು ಎಳೆದು ಅವನನ್ನು ಕೊಂದುಹಾಕಿದನು. ಈ ಸಂದರ್ಭದಲ್ಲಿ ಅವನನ್ನು ಬಿಡಿಸಿಕೊಳ್ಳುವದಕ್ಕೆ ಪ್ರಯತ್ನ ಮಾಡಿದ ಅವಳ ಸಹೋದರನನ್ನೂ ಲಕ್ಷ್ಯ ಮಾಡದೆ ಅವನಿಗೂ ಎರಡು ಸಾರಿ ಹೊಡೆದು ಅವನನ್ನೂ ಕೊಂದುಬಿಟ್ಟನು. ಈ ಗಲಾಟೆಯಲ್ಲಿ ಅವಳ ಉಪಪತಿಯು ತಪ್ಪಿಸಿಕೊಂಡು ಓಡಿಹೋದನು. ಬೈಸಿಯೂ ಪೋಲೀಸಿನವರ ವಶದಲ್ಲಿ ಬಿದ್ದಿರುತ್ತಾನೆ—ವೃ. ಪ.

BANGALORE.—Printed and published at the KARNATAKA PRESS, No. 40, MOSQUE ROAD, PETTAH.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XIX] BANGALORE—MONDAY, AUGUST 15, 1892. [No 33.

ಸಂಪುಟ ೧೯.] ಬೆಂಗಳೂರು—ಸನ್ ೧೮೯೨ ನೇ ಇಸವಿ ಅಗಸ್ಟು ೧೫ ನೇ ತಾರೀಖು ಸೋಮವಾರ. [ಸಂಖ್ಯೆ ೩೩.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ	ಪರಸ್ಥಳದವರಿಗೆ
ಮುಂಗಡ...	9—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ...	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ದರಗಳು

[illegible]

ADVERTISEMENTS

NOTICE.

VAIDYASARA SANGRAHA

A TREATISE ON THE ... OF HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ನೋಟೀಸು.

ಬೆಂಗಳೂರು ಕರ್ಣಾಟಕ ಪ್ರೆಸ್.

[illegible]

ನೋಟೀಸ್.

ಸಂದಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕಠಿಣ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇವರಿಂದ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯಿಂದನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ... [illegible]

ಗಣೇಶ ರಾಮಚಂದ್ರ ಕಠಿಣ,

ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್

... ದ್ವಾರ, ... ಪೋಸ್ಟ್, ಮುಂಬಯಿ

ನೋಟೀಸ್.

ಇವರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಮಾರಲಿಕ್ಕೆ ಸಿದ್ಧವಾಗಿವೆ ಬೇಕಾದವರು ವೆಚ್ಚವನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ರೂ	ಅ	ಪೈ
ಸಟೀಕಾ ... ಸಂಗ್ರಹ	...	೫	೦	೦
,, ಶಿವಗೀತೆ	...	೧	೭	೦
,, ...	..	೦	೪	೦
,, ...	..	೧	೦	೦
,, ...	..	೦	೩	೦
,, ...	..	೦	೧	೦
,, ... (ಸುಭಾಷಿತ)		೦	೮	೦
...	...	೦	೩	೦
...	...	೦	೨	೦
...	.	೦	೨	೦
...	...	೦	೨	೦
...	..	೦	೦	೦

ಕನ್ನಡ ಗ್ರಂಥಗಳು,

		ರೂ	ಅ	ಪೈ
...	..	೩	೦	೬
...	...	೧	೨	೦
...	..	೧	೪	೦
...	...	೦	೬	೦
...	..	೦	೬	೦
...	..	೦	೨	೦
...	...	೦	೨	೦
...	..	೦	೨	೬
...	.	೦	೧	೦
...	...	೦	೧	೦
...	...	೦	೧	೦
...	...	೦	೧೨	೦
...	...	೦	೧೨	೦

THE BANGALORE SREENIVASA MANDIRAM.

ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರು ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಬಿಡಲಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ:—

೧೮೯೨ನೇ ಇಸವಿ ಅಗಸ್ಟ್ ೭ ನೇ ತಾರೀಖ್ ಮೊದಲು ೧೩ ನೇ ತಾರೀಖ್ ವರಿವಿಗೆ.—

ಅಕ್ಕಿ ...	...	98
...	..	58
...	...	27
ಜಮಾ	...	85
...	..	29½
...	..	34½
...	..	21

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪಸೀಲ್.

ಅನಾಥರು	...	7
... ವಿದ್ಯಾರ್ಥಿ	..	6
... ವಿದ್ಯಾರ್ಥಿಗಳು	..	28
... ಸಂಖ್ಯೆ		25
...	...	3
ಜಮಾ	...	69

THE MONEY MARKET.

ಮದರಾಸ್, ಶನಿವಾರ, ತಾರೀಖ್ 13ನೇ ಆಗಸ್ಟ್ 1892.

ಸೇಕಡ 4ರೂ, ... ಪತ್ರಗಳು, ರೂ ... 104 8 0 ರಿಂದ 104 14-0ರವರೆಗೆ.

... ಬ್ಯಾಂಕ್ ಷೇರುಗಳು, (500) ರೂಪಾಯಿಗಳು ... 940 ... 94...

... ಬ್ಯಾಂಕ್ ಷೇರುಗಳು, (100) ... 165 ರಿಂದ 170 ...

..., 16—7—0

ಬ್ಯಾಂಕ್ ... 6 ತಿಂಗಳ ... 1s 2 23/32d.

... 4 ತಿಂಗಳ ... 1s 2 21/32d.

..., 1s. 2 9/16d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 15, 1892.

೧೮೯೨ನೇ ಇಸವಿ ಆಗಸ್ಟ್ ೧೫ನೇ ಸೋಮವಾರ

THE TRAVANCORE STATE.

ತಿರುವಾಂಕೂರ್ ಸಂಸ್ಥಾನದ ಆಡಳಿತದಲ್ಲಿ ಮುಖ್ಯವಾದ ಕೆಲವು ಬದಲಾವಣೆಗಳು ಈಚಿನ ನಡೆಯಾಮಲೆ ವಿರೀಕ್ಷಿಸಲ್ಪಟ್ಟದೆ. ಈ ಬದಲಾವಣೆಗಳಿಂದ ಮುಂದೆ ಅಲ್ಲಿನವರಿಗೆ ... ಮಾತ್ರ ಕೆಲವು ಮಟ್ಟಿಗೆ ಭಿನ್ನಿಸಬಹುದೆಂದು ತೋರುತಿದೆ. ಸದರೀ ಸಂಸ್ಥಾನದ ದಿವಾನರಾದ ವಿ. ರಾಮರಾಯರವರು ತಮ್ಮ ಕೆಲಸದ ಚಾರ್ಜನ್ನು ಈಚಿನ ಗವರ್ನಮೆಂಟ್ ... ಎಸ್. ... ಸುಬ್ರಮಣ್ಯ... ಗೊಪ್ಪಿಸುವಂತೆ ವ್ಯವಸ್ಥೆಯಾಗಿರುವುದೆಂದೂ, ಅವರವೇ ಕರರಾತಿಯು ಈಚಿನ ಸರ್ಕಾರದವರಿಗೆ ... ಟಸಲ್ಪಡುವದೆಂತಲೂ, ಮಾರ್ಚ್ ಮುಚ್ಚಕೋಸ್ ೭ನೇ ತಾರೀಖಿನಲ್ಲಿ, ಮದರಾಸ್ ಸ್ಟಾಂಡರ್ಡ್ ಪತ್ರಿಕೆಯು ತಿರುವನಂತಪುರದ ಜಾತಿವಿಚಾರವರು ಸದರೀ ಪತ್ರಿಕೆಗೆ ಬರೆದಿರುತ್ತಾನೆ. ... ಸುಖ್ಯವಾದ ದಿವಾನರುಗಳಾಗಿರುವ

ವಿಶಿಷ್ಟ ಚತುರತೆಯೂ, ಜವಾಬ್ದಾರಿಯೂ, ಕರ್ತವ್ಯತಾಜ್ಞಾನವೂ, ಸರ್ಕಾರೀ ಕೆಲಸಗಳ ವಿಶೇಷ ಪರಿಚಯವೂ ನಿಪುಣತೆಯೂ ಆಗಿರುವದರಿಂದ ಮೆ|| ಶಂಕರ ಸುಬ್ಬಯ್ಯರವರು ಚಾರ್ಜ್ ತೆಗದುಕೊಂಡ ಕೂಡಲೇ ಅವರ ಪ್ರಥಮ ಕರ್ತವ್ಯವು, ತಮ್ಮ ಮೊದಲಿನ ರೀತಿಯಿಂದಲೂ, ಅಸಿಸ್ಟೆಂಟ್ ಸೆಟಲ್‌ಮೆಂಟ್ ಪೇಷ್ಕಾರ ಮೈಸೂರ್ ರಾಯರವರ ವರ್ಗದ ದೆಸೆಯಿಂದಲೂ ಖಾಲೀಯಾಗಿರುವ ಕೆಲವು ಕೆಲಸಗಳನ್ನು ಭರ್ತಿಮಾಡಬೇಕಾದುದಾಗಿರುತ್ತದೆ. ಇವರು ಈಗಲೇ ಮಹೋನ್ನತ ಪದವಿಗೆ ಬಂದು ರಾಜಪ್ರತಿನಿಧಿಯಾಗಿ ಅನೇಕಲಕ್ಷ ಪ್ರಜೆಗಳ ಸುಖದುಃಖಗಳಿಗೆ ಕಾರಣಭೂತರಾಗುವದರಿಂದ ಇವರು ಮಾಡುವ ಏರ್ಪಾಡುಗಳೂ, ಕೊಡುವ ಹುಕುಂಗಳೂ, ಪ್ರಕಟಿಸುವ ನಿರ್ಣಯಗಳೂ ಸಾವಧಾನ್ಯವಾದವಾಗಿಯೂ, ಜಾತಿ ಕುಲ ದೇಶ ವ್ಯಕ್ತಿತಾರತಮ್ಯರಹಿತವಾದವಾಗಿಯೂ ಇರಬೇಕೆಂದು ಅಲ್ಲಿನವರು ಕೋರುತಲಿದ್ದಾರೆ. ರಾಜ್ಯಾಡಳಿತದಲ್ಲಿ ಮೆ|| ಶಂಕರ ಸುಬ್ಬಯ್ಯರವರ ಭವಿಷ್ಯದ್ವರ್ತನವಂ ಊಹಿಸಲಿಕ್ಕೆ ಅವರು ಮಾಡತಕ್ಕ ಏರ್ಪಾಡುಗಳಿಂದ ಈಗಲೇ ಅವಕಾಶವುಂಟಾಗಿದೆ. ಅವಲ್ಲದೆ ಇವರಕಾರ್ಯಶಕ್ತಿಯು, ಚೈತನ್ಯವುಳ್ಳದ್ದಾಗಿರಬಹುದಲ್ಲದೆ ವಿರಸಕ್ಕೆ ಅವಕಾಶ ನ್ಯಥವಾಗಿರಲಾರದೆಂದು ತೋರುತಿದೆ. ಮೆ||ರಾಮರಾಯರವರು ತಮ್ಮ ಚಾರ್ಜನ್ನು ಕೊಟ್ಟದಿವಸವೇ ನಿಡಂಗೂಳಕ್ಕೆ ಹೊರಟು ಹೋಗಬೇಕೆಂಬ ತಾತ್ಪರ್ಯದೊಡನೆ ಬೇಕಾದ ಏರ್ಪಾಡುಗಳಂ ಮಾಡಿರುವಂತೆ ತಿಳಿಯಬರುತಿದೆ. ಇವರ ಪ್ರಯಾಣ ಕಾಲದಲ್ಲಿ, ಇದುವರಿವಿಗೆ ಸದರೀ ಸಂಸ್ಥಾನಕ್ಕೆ ಮಾಡಿದ ಶ್ಲಾಘ್ಯಗಳಾದ ಕಾರ್ಯಗಳನ್ನು ಉದಹರಿಸಿ ಪ್ರಜೆಗಳ ಪ್ರೀತಿ ಗೌರವ ಕೃತಜ್ಞತಾಭಾವ ನಿದರ್ಶಕವಾದ ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಬೇಕೆಂಬ ಅಭಿಪ್ರಾಯವು ಮ್ಯಾಕಾನುಪಿಳ್ಳೆ ವಗೈರೆ ಕೆಲವರಿಗೆ ನ್ಟಂಟಾಗಿ ಅವರು ಪ್ರಜೆಗಳಿಂದ ಸದರೀವಿಜ್ಞಾಪನಪತ್ರಿಕೆಗೆ ರುಜು ಮಾಡಿಸುತಲಿರುವಂತೆ ತಿಳಿಯಬರುತಿದೆ. ಈಗ ಮೊಕದ್ದಮಾದ ದಿವಾನರವರು, ಮೆ|| ರಾಮರಾಯರವರಿಗೆ, ಕಳೆದ ತಿಂಗಳ ೩೦ ನೇ ತಾರೀಖ್ ಶನಿವಾರದ ದಿನ ಒಂದು ಔತನವಂ ಮಾಡಿಸಿ ಅದಕ್ಕೆ ಸಂಸ್ಥಾನದ ಅಧಿಕಾರಿಗಳನ್ನೆಲ್ಲ ಕರೆಯಿಸಿದ್ದರು. ಮೆ||ರಾಮರಾಯರವರು ಸಣ ತೆರೆವನಿತ ಪ್ರಕಾರದಿಂದ ಹೊರಡುವದರೊಳಗಾಗಿ, ಹೊಸ ದಿವಾನರುಮೊದಲಾದಸಂಸ್ಥಾನದ ಮುಖ್ಯಾಧಿಕಾರಿಗಳೆಲ್ಲ ತಮ್ಮ ಮನೆಯಲ್ಲಿ ಔತನ ಮಾಡಿಸುವ ಅಭಿಪ್ರಾಯವುಳ್ಳವರಾಗಿರುವಂತೆ ವ್ಯಕ್ತವಾಗುತಿದೆ. ಕ್ಷಿಪ್ರದಲ್ಲಿ ತಮ್ಮ ಅಧಿಕಾರವು ನಿವೃತ್ತಿಯಾಗಿ ಅನ್ಯರ ವಶವಾಗುವದೆಂಬದನ್ನರಿತು ಮೆ|| ರಾಮರಾಯರವರು ಕೆಲವು ಮುಖ್ಯ ವಿಷಯಗಳಲ್ಲಿ ಮುಂಜಾಗ್ರತೆ ವಹಿಸುತಲಿರುವಂತೆ ಸದರೀ ಬಾತಮೀದಾರನ ಲೇಖನದಿಂ ಸ್ಪಷ್ಟವಾಗುತದೇನೆಂದರೆ :— ಇದುವರಿವಿ ಗತಮ್ಮನ್ನಾಶ್ರಯಿಸುತಲಿದ್ದವರಿಗೂ, ತಮ್ಮಮನೆಯಲ್ಲಿ ಕೆಲಸಮಾಡುತಲಿದ್ದವರಿಗೂ ನೌಕರಿಗಳನ್ನು ವಿಶೇಷವಾಗಿ ಅವರು ನಿಯಮಿಸುವದರಲ್ಲಿ ಆಸಕ್ತರಾಗಿದ್ದಾರೆಯಂತೆ. ಇದಕ್ಕೆ ನಿದರ್ಶನವಾಗಿ ಒಂದೆರಡು ಮೊಕದ್ದಮೆಗಳನ್ನು ಸದರೀ ಬಾತಮೀದಾರನು ತಿಳಿಸಿರುತ್ತಾನೆ. ತಮ್ಮ ಪರಿಚಾರಕನೊಬ್ಬನಿಗೆ ಜನರಲ್ ಕಚ್ಚೇರಿಯಲ್ಲಿ ನೌಕರಿಮಾಡಿಕೊಟ್ಟರು. ಸಾಂಬಾರ್ ಮತ್ತು ಹುಳಿಯನ್ನು ಮಾಡುವದರಲ್ಲಿ ಕೌಶಲ್ಯವಂ ತೋರಿಸಿ ಮೆ|| ರಾಮರಾಯರವರ ಪ್ರೇಮಪಾತ್ರನೆನಿಸಿದ್ದ ಒಬ್ಬ ಪರಿಚಾರಕನು ನಿನ್ನೆಯದಿನ ತನ್ನ ಕೈಯೊಳಿದ್ದ ಸೌಟನ್ನು ಬಿಸಾಡಿ ಮಾನಿತರಾದ ದೊಡ್ಡ ಮನುಷ್ಯರ ಸಮೂಹದಲ್ಲಿ ಸಂಸ್ಥಾನದ ರಾಜಕೀಯಗಳಾದ ಕಾಗದ ಪತ್ರಗಳನ್ನು ಸಂಕ್ಷೇಪಿಸಿ ಬರೆಯುವ ಜವಾಬ್ದಾರಿಯಂ ವಹಿಸುವಷ್ಟು ಶಕ್ತತೆಯು, ಕುದ್ರ ಅಭಿಮಾನಪ್ರಯುಕ್ತವಾದ ಭಾವನಾ ವಿಶೇಷದಿಂದವನಿಗೆ ವುಂಟಾದುದು ಕೇವಲ ಅಶ್ರುತಪೂರ್ವವಾದ ನೂತನ ವಿಷಯವಾಗಿರುವದರಿಂದ ಅದು ಸದರೀ ರಾಜ್ಯದ ಮುಂದಿನ ಚರಿತ್ರ ಗ್ರಂಥಲೇಖಕರ ವಿಚಾರಕ್ಕೆ ವಿಷಯವಾಗದಿರಲಾರದೆಂದು ಕಾಣುತದೆ. ಸರ್ಕಾರೀ ಉದ್ಯೋಗಸ್ಥರೊಬ್ಬರು ಇನ್ನೂ ಕೆಲವುಕಾಲ ನೌಕರಿ ಮಾಡತಕ್ಕ ಶಕ್ತರಾಗಿದ್ದಾಗ್ಯೂ ಅವರನ್ನು ಬಲಾತ್ಕರಿಸಿ ಪೆನ್ಷನ್ ಮೇಲೆ ನಿವೃತ್ತಿಸಿ ತಮ್ಮ ಅಳಿಯನಿಗೆ ಆಜಾಗೆ ಕೊಟ್ಟದ್ದು ಎರಡನೆಯ ವಿಷಯವಾಗಿರುತಿದೆ. ಹೀಗೆಯೇ ಇನ್ನೂ ಕೆಲವು ಪಕ್ಷಪಾತಗಳು ತೀವ್ರವಾಗಿ ನಡೆಸಲ್ಪಡುವದಾಗಿವೆ. ಮೆ|| ರಾಮರಾಯರವರ ಪ್ರಭುತ್ವ ಕ್ರಮವು ಕೇರಳೀಯರಿಗೆ ಚಿರಕಾಲ ಸ್ಮರಣೀಯವಾಗಿರುವಂತೆ ಅನೇಕಕಾರ್ಯಗಳಂ ಮಾಡಿದರೆಂದಲೂ, ಅವರುಗಳ ಗುಣದೋಷಗಳಂ ಅಂದಾಗ್ಯೂ ಉಚಿತ ರೀತಿಯಿಂದವ್ಯಕ್ತಪಡಿಸಿ ತತ್ಪರಿಹಾರಗಳಂ ಕೋರುತಲಿದ್ದಾಗ್ಯೂ ಕೇಳತಕ್ಕ ನಾಥರ ಅನಾದರಣೆಯಿಂದ ಎಲ್ಲವೂ ಅರಣ್ಯರೋದನದಂತೆ ನಿಷ್ಫಲಗಳಾದವು; ಪರುಶುರಾಮಕ್ಷೇತ್ರ ಕೆಲಸದಿಂ ನಿವೃತ್ತರಾಗುವ ಸಮಯದಲ್ಲಿ ಅವರ ಪೂರ್ವ ವರ್ತನಗಳಂ ಕರಿಣಪಬ್ಬಗಳುದಾಕ್ಷೇಪಿಸುವದುಚಿತವಾಗಿರಲಾರದು.

A SCHOOL FOR GROWNUP WIDOWS

ವಿಧವಾ ವಿದ್ಯಾಸದನಂ

ಕಾಲಗತಿಯಿಂದ ಪತಿಹೀನೆಯರಾದ ಸ್ತ್ರೀಯರ, ತತ್ರಾಪಿ ಬಾಲೆಯರಾಗಿ ಸ್ವರವ್ರಾಪಿಗಳಾಗಿರತಕ್ಕ ವಿತಂತುಗಳಸ್ಥಿತಿಯು ಇತರಾಪೇಕ್ಷೆಯಾಸರ್ವವಿಧದಿಂದಲೂ ಸುಖಕರವಾಗಿ ಪರಿಣಮಿಸುತಲಿದೆ. ಅವರಕ್ಷೇಮಾಭಿವೃದ್ಧಿಗಾಗಿ, ಫಲಪರ್ಯವಸಾನವಂ ಸಹ ನಿರೀಕ್ಷಿಸದೆ ಸರ್ಸ್ಕಾರದವರೂ, ಸ್ವದೇಶಾನ್ಯದೇಶೀಯರೂ ಸಹಾಯಮಾಡುತ ಅಭಿಮಾನಿಗಳಾಗಿದ್ದಾರೆ. ಸದ್ಯವಾದ ಸೌಮಂಗಲ್ಯವಂ ಮರಳಿ ಸಂಪಾದಿಸಿಕೊಟ್ಟು ಸನಾಥರನ್ನಾಗಿಮಾಡತಕ್ಕ ವಿಷಯದಲ್ಲಿ ಅನೇಕರು ಅಭಿಮುಖರಾಗಿದ್ದಾರೆ. ಅವರ ಸುಖಸಂತೋಷಾಭಿವೃದ್ಧಿಯಲ್ಲಿ ಬಹುಜನ ಆಸಕ್ತರಾಗಿದ್ದಾರೆ. ಅವರ ಜ್ಞಾನ ಮತ್ತು ಸ್ವಾತಂತ್ರ್ಯಾಭಿವೃದ್ಧಿಯು ದೇತ ಕ್ಷೇಮಾಭಿವೃದ್ಧಿ ನಿಮಿತ್ತಕವೆಂಬ ಭಾವವೊಹಗೆ ಅದಂ ಕಲ್ಪಿಸುವದಕ್ಕಾಗಿ ಸಮಸ್ತ ಯಾವಚ್ಛಕ್ತಿಯಂ ವಿನಿಯೋಗಿಸುತಲಿದ್ದಾರೆ. ಏನೇನ ಅವರ ಸ್ಥಿತಿಯು, ಪತಿಯ ಸಹವಾಸದಲ್ಲಿ ಆಸ್ವಾದೀಸಲಾಗಿ ಸುಕರಪಡುವಂತಾ ಸುಮಾಸಿಗಿಂತಲು ಉತ್ತಮವಾಗಿದೆ. ಇಷ್ಟೆನಿದ ಪ್ರೋತ್ಸಾಹವು ಅವರಿಗೆ ಉಂಟಾಗಿರುವದರಿಂದ ಅವ್ರು, ದೈವಾತ್ ಪತಿವಿಯೋಗವುಂಟಾದರೆ ಅದಕ್ಕಾಗಿ ಅವರು ಮುಂದೆ ಚಿಂತಿಸತಕ್ಕ ಆವಶ್ಯಕವಿಲ್ಲವೆನ್ನುವಷ್ಟರ ಅಭಯರೂಪವಾಗಿರುತಿದೆ. ಹಿಂದೂ ವಿಧವೆಯರ ದುರವಸ್ಥಾ ನಿವಾರಣಾರ್ಥ ಅವತರಿಸಿರುವ ಅಂಕಪುರುಷಳಾದ ಶ್ರೀಮತಿ ಪಂಡಿತ ರಮಾಬಾಯಿಯೆಂಬಾಕೆಯ ಪ್ರೋತ್ಸಾಹಪ್ರಯತ್ನಗಳಿಂದ, ಪುನೆ ಪಟ್ಟಣದಲ್ಲಿ ಬಾಲವಿತಂತುಗಳ ಪ್ರಯೋಜನಾರ್ಥ ಶಾರದಾಸದನವೆಂಬ ಅಭಿದಾನದೊಡನೆ ಒಂದುಪಾಠಶಾಲೆಯು ಸ್ವದೇಶಾನ್ಯದೇಶೀಯರ ಸಹಾಯಸಂಪತ್ತಿಯಂ ಹೊಂದಿ ಪ್ರಾರಂಭಿತವಾಗಿರುವದೂ, ಅದರಲ್ಲಿ ಸೇರಿರುವವರು ಸಕಲಾಂಶದಿಂದಲೂ ಪ್ರವರ್ಧಮಾನರಾಗುತ ತಮ್ಮ ಉಭಯ ಕುಲಕ್ಕೂ ಕೀರ್ತಿ ಸಂಪಾದಕಯರಾಗಿ ಅರುಂಧತೀ ಸೀತಾ ದಮಯಂತೀ ಮೊದಲಾದ ವಿಖ್ಯಾತ ಚಾರಿತ್ರರಾದವರ ಸಮೂಹದಲ್ಲಿ ಸೇರುವಿಕೆಗೆ ಅರ್ಹರಾಗುತ ಬರತಲಿರುವಣವೂ ಅವರು ಅಲ್ಲಿ ಅನನ್ಯ ಸಾಧಾರಣವಾದ ಸುಖಸಂತೋಷಗಳನ್ನನುಭವಿಸುತ ಸ್ವತಂತ್ರ ವಿಲಾಸದಿಂದಿರುತಲಿರುವಣವೂ ಅವರಂ ನೋಡಿಸಹಿಸದ ಶ್ರದ್ಧಾಜಡರಾದ ಲಸಹಿಷ್ಣುಗಳು ಜಾತಿ ಸಾಂಕರ್ಯಕ್ಕಾಗಿ ಪ್ರಯತ್ನಿಸುವಾಯಿತೆಂದು ಮೊರೆಯಿಡುತಲಿರುವಣವೂ, ಪ್ರಾಯಶಃ ಈ ಪತ್ರಿಕೆಯನ್ನೋದತಕ್ಕವರ ಸ್ಮರಣೆಯಲ್ಲಿಲ್ಲದೆ ಹೋಗಿರಲಾರದೆಂದು ನಂಬುತ್ತೇವೆ. ಹೀಗೆ ಶ್ರವಣಮಾತ್ರದಿಂ ಸಂತೋಷಿಸುತಲಿದ್ದ ಏತದ್ದೇಶೀಯರಿಗೆ ತಾವೇ ದೃಕ್ಸಾಕ್ಷಿಗಳಾಗಿ ತಮ್ಮ ಪುತ್ರೀ ಭಗಿನೀ ಪ್ರಭೃತಿ ಮೊದಲಾದ ಸ್ತ್ರೀವರ್ಗದಿಂ ಅನುಭವಿಸಬಹುದಾದ ಸಮಯ ಸನ್ನಿಹಿತವಾದುದಕ್ಕಾಗಿ ಅವರೆಲ್ಲರಿಗೂ ನಾವು ಶುಭವಾದನ ಮಾಡುತ್ತೇವೆ. ಈ ಮೈಸೂರ್ ಸಂಸ್ಥಾನವು, ರಾಜಕೀಯ ಅಧಿಕಾರಗಳಲ್ಲಿಯೂ, ವಿದ್ಯಾವೈಲಕ್ಷಣ್ಯಾಭಿವೃದ್ಧಿಯಲ್ಲಿಯೂ, ಸಮಯಾಚಾರ ಪರಿಷ್ಕರಣ ಪ್ರವರ್ತನಾದಿ ನವೀನ ವಿಷಯಾಂಗೀಕಾರದಲ್ಲಿಯೂ, ಸ್ತ್ರೀಸ್ವಾತಂತ್ರ್ಯಜ್ಞಾನ ವಿದ್ಯಾಪ್ರಾಧಿವಾಭಿವೃದ್ಧಿಯಲ್ಲಿಯೂ ಅಸಮಾನವೆನಿಸಿ, ಉತ್ತಮಸ್ಥಾನವನ್ನಾಕ್ರಮಿಸಿರುವಣವು ಅನುಭವೈಕ ವಿಷಯವಾಗಿದೆಯಷ್ಟೆ. ಒಂದು ವಿಷಯದಲ್ಲಿ ಮಾತ್ರ ನ್ಯೂನತೆಯುಂಟಾಗಿ ತತ್ಪರಿಹಾರಕ್ಕೆ ತಕ್ಕ ಸಮಯವು ಇದುವರಿವಿಗೆದೊರೆಯದಿದ್ದಂತೆ ಕಾಣುತಿದೆ. ಈಗ ಅಂತಾಸುಜನಸಮಯವು, ಈ ದೇಶೀಯರಾದ ವಿದವಾ ಪ್ರೌಢಾಂಗನೆಯರ ಪುಣ್ಯ ಪರಿಪಾಕದಿಂದಲೂ, ಗವರ್ನಮೆಂಟಿನವರ ಸಹ್ಯಾಜಕ್ಷಪಾತಬುದ್ಧಿಯಿಂದಲೂ, ಪ್ರಜೆಗಳ ಪ್ರೇಮೌದಾರ್ಯಾತಿಶಯದಿಂದಲೂ ಪ್ರಾಪ್ತವಾಗಿ ಕಾರ್ಯತಃ ಪ್ರಯೋಜನಕಾರಿಯಾಗಲಿಕ್ಕೆ ಪಕ್ವವಾದ ಬಗ್ಯೆ ಬಹಳ ಸಂತೋಷಿಸುತ್ತೇವೆ. ಇದುವರಿವಿಗೂ ಸ್ತ್ರೀ ವಿದ್ಯಾಭಿವೃದ್ಧಿಯಲ್ಲೀದೇಶಕ್ಕೆ ಉಂಟಾಗಿರುವ ಕೀರ್ತಿ ಪ್ರತಿಷ್ಠೆಗಳೆಲ್ಲವು, ಅನಿವಾಹಿತೆಯರಾದ ಅಪ್ರಬುದ್ಧರಿಂದಲೂ, ಕ್ವಚಿತ್ ಪ್ರಬುದ್ಧದರೆನಿಸಿರ್ವ ಪರಿಣೀತರಾದ ಕುಲಾಂಗನೆಯರಿಂದಲೂ ಉಂಟಾದವಾಗಿರುವವು. ಪರಂತು ಅವು ಅಲ್ಪವಾಗಿ, ನಿರೀಕ್ಷಿಸಿರುವಷ್ಟು ಮಹಿಮಾಪಾದಕವಾಗಿಲ್ಲದಿರುವದರಿಂದ ತದಭಿವೃದ್ಧಿಗೆ ಪ್ರಕಾರಾಂತರವಂ ಸಾಧಕವೆಂದು ಕಂಡು ಬಂದಿರುವ ಏರ್ಪಾಡೊಂದು ಏರ್ಪಾಡು ಈಚೆಗೆ ಮೈಸೂರಲ್ಲಿ ಮಾಡಲ್ಪಟ್ಟಂತೆ ತಿಳದು ಬಹಳ ಸಂತೋಷಿಸುತ್ತೇವೆ ಈಗ ದೋಷವು ನಿವೃತ್ತಿಯಾಯಿತು, ಉದ್ದಿಷ್ಟ ಫಲಪ್ರಾಪ್ತಿಕಾಲ ಸನ್ನಿಹಿತವಾಯಿತು, ಸ್ವಾತಂತ್ರ್ಯವು ಕೊನೆಮುಟ್ಟಿತು, ಸಕಲ ನಿರ್ಬಂಧಗಳೂ ನಿವೃತ್ತಿಗಳಾದವು, ಅನಾಥರೆಲ್ಲರು ಸನಾಥರಾದರು. ತತ್ತ್ವ್ಯಂತಗೌರವಗಳರ್ಜನವಾಗುವಂತಾಯಿತು. ಇನ್ನು ಮೈಸೂರ್ ದೇಶೀಯರು ಸ್ತ್ರೀಪ್ರಾಬಲ್ಯದಿಂ ಧನ್ಯರಾದರು. ಮೇಲೆ ಕಂಡಯೇರ್ಪಾಡುಗಳ ಸ್ವರೂಪವು ಹೀಗೆ ಜನಗಳೆಂತೆಂದರೆ.—ಮೈಸೂರಲ್ಲಿರುವ ಪ್ರಬುದ್ಧರಾದ ವಿತಂತುಗಳ ಮತ್ತು ಇತರ ಸ್ತ್ರೀಯರ ಜ್ಞಾನಾಭಿವೃದ್ಧಿಯ ಬಗ್ಯೆ ಒಂದು ಪ್ರಬುದ್ಧ ವಿದ್ಯಾಲಯವು « ಸಾವಿತ್ರೀ ಸದನ" ವೆಂಬ ಅಂಕಿತದೊಡನೆ ನೆಲೆಗೊಳಿಸಲ್ಪಟ್ಟಿರುತಿದೆ. ಈ ಸದನವು ಸಜನಚಿಂತಾನಿವಾರಣಪೂರ್ವಕ ಹೃದಯಾನಂದವರ್ಧಕವಾದುದರಿಂದ ತದಪೇಕ್ಷಿತರಾದ ಪ್ರೌಢಾಂಗನೆಯರೆಲ್ಲರೂ ಅದರಲ್ಲಿ ದಾರಾಳವಾಗಿ ವ್ಯಾಸಂಗ ಮಾಡಬಹುದು. ಈ ಪಾಠಶಾಲೆಯಂ ಅನ್ಯತ್ರ ಎಲ್ಲಿಯಾದರೂ ಇಟ್ಟರೆ ಅನಯಕವಾಗುವದೆಂಬ ಭಾವದೊಡನೆ ಸ್ತ್ರೀವಿದ್ಯಾಭಿಮಾನಿಯಾದ ದರ್ಬಾರ್ ಬಕ್ಷಿ ಮೆ|| ನರಸಿಂಹಯ್ಯಂಗಾರ್, ರಾಯಬಹದೂರವರ ಗೃಹದಲ್ಲಿ ಅನರ್ಘಪಿಟಾರಣೆಯೊಳಿಟ್ಟದಾರೆಂಬ ಅಂತವು ನಮಗೆ ಮತ್ತೂ ಸಂತೋಷಪ್ರದವಾದುದಾಗಿರುತಿದೆ. ಶ್ರೀಮನ್ ಮಹಾರಾಣೀಯವರ ಅಂಕಿತದಲ್ಲಿ ಸ್ಥಾಪಿತವಾಗಿರುವ ಬಾಲಿಕಾ ಪಾಠಶಾಲೆಯು ಒಕೆಯವರ ಪೂಜ್ಯವಾದ ನಾಮಧೇಯಕ್ಕೂ ಸಂಸ್ಥಾನಕ್ಕೂ ಎಷ್ಟರಮಟ್ಟಿಗೆ ಗೌರವ ಸಂಪಾದಕವಾಗಿ ತತ್ತ್ವಕ್ಕೂಟಂಬದವರಿಂದ ಪ್ರಶಂಸಿಸಲ್ಪಡುತಿದೆಯೋ ತದ್ವತ್ ಈ ನೂತನ ಸದನವು ಪರಮ ಪತಿವ್ರತಾ ಶಿರೋಮಣಿಯೆನಿಸಿ ಪುರಾಣಪ್ರಸಿದ್ಧಳಾಗಿರುವಸಾವಿತ್ರಿಯ ಅಂಕಿತದಿಂ ವ್ಯವಸ್ಥಾಪಿತವಾಗಿರುವದರಿಂದ ಅದು ಮುಂದೆ ಸಾವಿತ್ರಿಯ ಪಾರಿಶುದ್ಧ್ಯ ಕೀರ್ತಿ ನಿರ್ಧಾರಕವಾದುದಾಗಿಪರಿಣಮಿಸಬಹುದೆಂದೆಣಿಸುತ್ತೇವೆ. ಇದಕ್ಕಾಗಿ ಪ್ರತ್ಯೇಕ ಕಟ್ಟಡ ಒಂದು ತಯಾರಾಗುತಲಿದೆಯೆಂತಲೂ, ಅದು ಪೂರ್ತಿಯಾದ ಕೂಡಲೇ ಈಗಿರುವ ಪ್ರದೇಶದಿಂದ ಅಲ್ಲಿಗೆವರ್ಗ ಮಾಡಲ್ಪಡುವದೆಂತಲೂ ತಿಳಿಯಬರುತಿದೆ. ಇಂತಾ ಪಾಠಶಾಲೆಯು ಸ್ತ್ರೀ ಜ್ಞಾನಾಭಿವೃದ್ಧಿಗೆ ಆವಶ್ಯಕವೆಂದು ಭಾವಿಸಲ್ಪಟ್ಟಿರುವದರಿಂದ ಅದರಂತೆಯೇ ಪ್ರಗಲ್ಭ ವಿದ್ಯಾಲಯಗಳನ್ನು ಅಲ್ಲಿಯಲ್ಲಿ ಸ್ಥಾಪಿಸುವಂತೆ ಜನರು ಪ್ರೇರಿಸಿ ಪ್ರೋತ್ಸಾಹ ಗೊಳಿಸುವದಕ್ಕೆ ಮೆ|| ನರಸಿಹ್ಮಯ್ಯಂಗಾರ್ ವರೆಷ್ಟ ಮಾತ್ರವೂ ಹಿಂಜರಿಯಲಾರರೆಂದು ನಂಬುತ್ತೇವೆ.

Occasional Notes

ನೈಮಿತ್ತಿಕ ವಿಷಯನ್ಯಾಸ.

The Indian National Congress—ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಎಂಬ ಸಾರ್ವಜನಿಕ ಸಭೆಯನ್ನು ಈ ಸಂವತ್ಸರದಲ್ಲೂ ಅಲಹಾಬಾದನೊಳು ಲೋವರ್ ಕ್ಯಾಸಿಲ್ ಎಂಬ ಪ್ರದೇಶದಲ್ಲೇ ನಡೆಸತಕ್ಕದ್ದೆಂದು ನಿಷ್ಕರ್ಷೆಯಾಗಿರುವಂತೆ ತಿಳಿಯಬರುತಿದೆ.

Cholera in Russia.—ರಷಿಯಾದೇಶದೊಳು ವಾಂತಿ ಭೇದಿ ರೋಗದ ದೆಸೆಯಿಂದ ಈ ತಿಂಗಳ ಗುರ್ರೇ ತಾರೀಖ್ ವರಿವಿಗೆ ೧೫,೦೦೦ ಮಂದಿ ಮೃತಪಟ್ಟಂತೆಯೂ, ಇದೇ ತಿಂಗಳ ೬ ನೇ ತಾರೀಖಿನಲ್ಲಿ ೧,೫೦೦ ಮಂದಿ ಮೃತಪಟ್ಟಂತೆಯೂ ಈಚೆಗೆ ಬಂದ ತಂತಿ ವೃತ್ತಾಂತದ ಮೂಲಕ ತಿಳಿಯ ಬರುತಿದೆ

Invention of a flying machine,—ಶಿಲ್ಪ ವಿದ್ಯೆಯಲ್ಲಿ ಕುಶಲನಾದ ಇಂಜಿನಿಯರೊಬ್ಬರೆನು ಈಚೆಗೆ ನೂತನವಾಗಿ ಹಾರುವ ಯಂತ್ರವೊಂದನ್ನು ತಯಾರ್‌ಮಾಡಿರುವಾತೆಯೂ, ಬರುವ ಅಕ್ಟೋಬರ್ ತಿಂಗಳಲ್ಲಿ ಕಲ್ಕತ್ತಾಯೊಳು ಅದನ್ನು ಮೇಲಕ್ಕೆ ಹಾರಿಸುವನೆಂತಲೂ ಹಿಂದೂ ಪೆಟ್ರಿಯಾಟ್ ಎಂಬ ಪತ್ರಿಕೆ ತಿಳಸುತಿದೆ

Salt revenue in Bombay—ಮುಂಬೈ ಪ್ರಸಿಡೆನ್ಸಿಯ ನಮಕ್ ಹುಟ್ಟುವಳಿಯು ಕಳೆದ ಸಾಲಿಗಿಂತಲೂ ಈ ಸಾಲಿನಲ್ಲಿ ೨೫ ಲಕ್ಷ ರೂಪಾಯಿಗಳು ಜಾಸ್ತೀ ಯಾಗಿರುತಿದೆ ಉಪ್ಪಿನಮೇಲಿನ ತೆರಿಗೆಯು ಜಾಸ್ತೀಮಾಡಲ್ಪಟ್ಟದ್ದಾಗ್ಯೂ ಪಶ್ಚಿಮ ಇಂಡಿಯಾ ದೇಶದೊಳು ಅದರ ಉಪಯೋಗವು ಕಡಮೆಯಾಗಲಿಲ್ಲವೆಂದು ಅಲ್ಲಿನ ಪತ್ರಿಕೆಯೊಂದು ತಿಳಸುತಿದೆ

Theft of a money box—ಈಚೆಗೆ ಕೆಲವು ದಿನಗಳ ಹಿಂದೆ ಕಲ್ಕತ್ತೆಯಲ್ಲಿನ ಮಾರ್ವಾಡಿ ವರ್ತಕರು ಕೆಲವರು, ನಾಣ್ಯ ಖರೀದಿ ಮಾಡುವದಕ್ಕಾಗಿ ಪೆಟ್ಟಿಗೆ ಒಂದಕ್ಕೆ ೫೦೦೦ ರೂಪಾಯಿಗಳಂತೆ ೬೦,೦೦೦ ರೂಪಾಯಿಗಳನ್ನು ಪೆಟ್ಟಿಗೆಗಳಲ್ಲಿ ಹಾಕಿ, ಸಿರಾಜ ಗಂಜ್ ಎಂಬ ಪ್ರದೇಶಕ್ಕೆ ರೈಲ್ ಮಾರ್ಗವಾಗಿ ಕಳುಹಿಸಲು ಮಧ್ಯಮಾರ್ಗದಲ್ಲಿ ಒಂದು ಪೆಟ್ಟಿಗೆ ಕಳವಾಯಿತೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಸುತಿದೆ.

Obituary—ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪ್ರಸಿದ್ಧ ಪಂಡಿತರಾಗಿಯೂ, ಫರ್ಗ್ಯುಸನ್ ಕಾಲೇಜ್ ಪ್ರಿನ್ಸಿಪಲರಾಗಿಯೂ ಇದ್ದ ಪ್ರೊಫೆಸರ್ ವಾಮನ ಶಿವರಾಮ ಆಪ್ಟೆ, ಎಂ. ಎ. ಯವರು ಜ್ವರರೋಗ ಪೀಡಿತರಾಗಿದ್ದು, ಈ ತಿಂಗಳ ೯ನೇ ತಾರೀಖಿನಲ್ಲಿ ಪುನೆಯೊಳು ಕಾಲಗತಿಯನ್ನೈದಿದರೆಂದು ತಿಳಿದು ಬಹಳ ವಿಷಾದಿಸುತ್ತೇವೆ ಈ ಪಂಡಿತವರ್ಯರ ಕಳೇಬರವು ರುದ್ರಭೂಮಿಗೆ ಸಾಗಿಸಲ್ಪಡುವಲ್ಲಿ, ಅವರ ವಿದ್ಯಾರ್ಥಿಗಳು ಸುಮಾರ್ ನಾಲ್ಕು ಸಾವಿರ ಮಂದಿ ಅದಂ ಹಿಂಬಾಲಿಸಿ ಹೋದರೆಂಬದಾಗಿ ಈವಿಷಯವಂ ಕುರಿತು ಬಂದ ತಂತಿವೃತ್ತಾಂತ ತಿಳಸುತಿದೆ.

A royal trip—ಜಯಪುರದ ಮಹಾರಾಜರವರು ಬೃಂದಾವನದಲ್ಲಿ ಒಂದು ದೊಡ್ಡ ದೇವಾಲಯವಂ ಕಟ್ಟಿಸುತಲಿರುವದರಿಂದ, ಅದರ ನಿರ್ಮಾಣ ಕಾರ್ಯಾಭಿವೃದ್ಧಿಯಂ ಸ್ವತಃ ನೋಡುವ ಉದ್ದೇಶದೊಡನೆಯೂ, ದೇವರ ಸೇವಾರ್ಥವಾಗಿಯೂ, ಪ್ರತಿ ಸಂವತ್ಸರದಲ್ಲೂ ಹೋಗುವ ವಾಡಿಕೆಯನ್ನನುಸರಿಸಿ ಈಗ ಅಲ್ಲಿಗೆ ದಯಮಾಡಿರುವದಾಗಿಯೂ ಆ ಪ್ರಾಂತದ ಪತ್ರಿಕೆಯೊಂದು ತಿಳಸುತಿದೆ. ಇದರಿಂದ ಈ ಮಹಾರಾಜರವರಿಗೆ ಆಧುನಿಕ ವೈಲಕ್ಷಣ್ಯಾಭಿವರ್ಧಕರಾದವರ ಪರಿಚಯ ಸಾಧುಚರ್ಯಗಳಿಗೆ ಇನ್ನು ಅವಕಾಶ ವುಂಟಾಗಲಿಲ್ಲವೆಂದು ಕಾಣುತಿದೆ.

A bequest—ಮಧುರೆಯಲ್ಲಿ ವಕೀಲರಾಗಿಯೂ, ಮ್ಯುನಿಸಿಪಲ್ ಕಮಿಷನರಾಗಿಯೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರಾಗಿಯೂ ಇದ್ದ ಮೆ|| ನೀಲಕಂಠ ಶಾಸ್ತ್ರಿಗಳವರು ಈಚೆಗೆ ಕೆಲವು ದಿ

ನಗಳ ಹಿಂದೆ ಮೃತಪಟ್ಟರಷ್ಟೆ. ಈ ದೊಡ್ಡ ಮನುಷ್ಯರು ಒಂದು ಪಾಠಶಾಲೆಯಂ ಸ್ಥಾಪಿಸುವ ಕಾರ್ಯಕ್ಕಾಗಿಯೂ, ಮಧುರೆ ನೇಟಿವ್ ಹೈಸ್ಕೂಲಿನಲ್ಲಿ ಓದಿ ಎಫ್. ಎ. ಪರೀಕ್ಷೆಯಲ್ಲಿ ಮೊದಲನೆಯವನಾಗಿ ತೇರ್ಗಡೆಯಾಗುವ ಬ್ರಾಹ್ಮಣ ವಿದ್ಯಾರ್ಥಿಗೆ ಚಿನ್ನದಲ್ಲಿ ಮಾಡಲ್ಪಟ್ಟ ಒಂದು ಬಿರುದುಬಿಲ್ಲೆಯಂ ಕೊಡುವದಕ್ಕಾಗಿಯೂ, ತನ್ನ ಆಸ್ತಿಯಿಂದ ೨೨,೦೦೦ ರೂಪಾಯಿಗಳು ಕೊಡತಕ್ಕದ್ದೆಂದು ಉಯಿಲ್ ಬರೆದಿಟ್ಟರೆಂದು ಅಲ್ಲಿನ ಪತ್ರಿಕೆಯ ಮೂಲಕ ತಿಳಿಯಲು ಬಹಳ ಸಂತೋಷಿಸುತ್ತೇವೆ.

ನೋಟಿಸ್.

ಆಚೇ ವಾರದಲ್ಲಿ ಬಿಟ್ಟ್ಯಯಕ್ಕೆ ನಮ್ಮ ಚಂದಾದಾರರೆಲ್ಲರಿಗೂ ಅವರವರ ಬಾಕಿ ರಶೀತಿನ ಮೂಲಕ ಕಾರ್ಡಗಳು ಬರೆದಿರುತ್ತೇವೆಯಾಗಿ ಯೆಲ್ಲರು ದಯಮಾಡಿ ಅದು ದೊರೆತಕೂಡಲೆ ಬಾಕಿಗಳಂ ಕಳುಹಿಸಿ ಕೊಡಬೇಕೆಂದು ಇದರ ಮೂಲಕ ಜ್ಞಾಪಕ ಕೊಟ್ಟಿರುತ್ತೇವೆ. ಹಾಗೆ ಕಳುಹಿಸದೆಯೂ, ನಮಗೆ ಜವಾಬ್ ಬರೆಯದೆಯೂ, ಮೌನವಾಗಿರುವಾತವರ ಪತ್ರಿಕೆಗಳು ನಿಲ್ಲಿಸಲ್ಪಡುವುವು.

೧೫—೮—೯೨. ಪ್ರೊಪ್ರೈಟರ್.

LOCAL AND PROVINCIAL NEWS

ಒಳದೇಶಮತ್ತುತಾಲ್ಲೂಕುಜಾತಿಸ್ಥವೃತ್ತಾಂತಗಳು.

Transfer —ಬೆಂಗಳೂರು ಸಹಾಯ ಪೊಲೀಸ್ ಇನ್‌ಸ್ಪೆಕ್ಟರಾಗಿದ್ದ ಮೆ|| ಎಡ್ವರ್ಡ್ ಸನ್ ಯೆಂಬವರು ತಮ್ಮ ಉದ್ಯೋಗದ್ದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಬಗ್ಯೆ ಕಂ ತಲಬಿನಮೇಲೆ ಮೈಸೂರಿಗೆ ವರ್ಗ ಮಾಡಲ್ಪಟ್ಟರೆಂದು ಕೇಳುತ್ತೇವೆ.

Permitted to retire.—ಹಿಂದೆ ಮುನ್ಸಿಫ್ ಅಧಿಕಾರದಲ್ಲಿದ್ದು ಈಚೆಗೆ ಕೆಲವು ತಿಂಗಳಕಾಲದ ಮೇಲೆ ಸಸ್ಪೆಂಡ್ ಮಾಡಲ್ಪಟ್ಟಿದ್ದ ಮೆ|| ಮಂಗಪತಿ ನಾಯುಡುವರು ಮಾಹೆಯಾನಾ ೩೫ ರೂಪಾಯಿಗಳ ಪೆನ್ಷನಮೇಲೆ ಕೆಲಸದಿಂದ ನಿವೃತ್ತರಾಗುವಂತೆ ಗವರ್ನಮೆಂಟನವರು ಹುಕುಂ ಕೊಟ್ಟಿರುವಂತೆ ತಿಳಿಯಲಾದಿದ್ದು.

Appointment —ಕಂಟ್ರೋಲರವರ ಆಫೀಸ್ ಮ್ಯಾನೇಜರಾದ ಮೆ|| ಬ್ಯಾರೊಯೆಂಬವರು ಮಾಹೆಯಾನಾ ೭೫೦ ರೂಪಾಯಿಗಳ ತಲಬಿನಮೇಲೆ ಕಂಟ್ರೋಲರ ಚೀಫ್ ಅಸಿಸ್ಟೆಂಟರಾಗಿ ನೇಮಕ ರಮಾಡಲ್ಪಟ್ಟರೆಂತಲೂ, ಇವರ ತಲಬ್ ೫೦ ರೂಪಾಯಿಗಳಿಗೆ ಹೆಚ್ಚುವರಿನಿಕ ವರ್ಷ ಒಂದಕ್ಕೆ ೨೫ ರೂಪಾಯಿಗಳಂತೆ ಜಾಸ್ತೀ ಮಾಡಲ್ಪಡುವದೆಂತಲೂ ಕೇಳುತ್ತೇವೆ.

Certain customs in Native States —ಇಂಡ್ಯ ದೇಶದಲ್ಲಿ ಸರ್ವತ್ರ ಇಂಗ್ಲಿಷ್ ನ್ಯಾಯ ಶಾಸ್ತ್ರಗಳು ಪ್ರಬಲಿಸಿದ್ದಾಗ್ಯೂ ನೇಟಿವ್ ಸಂಸ್ಥಾನಗಳಲ್ಲಿ ಉದಾರವಾದ ಒಂದೊಂದು ನ್ಯಾಯ[illegible]ಧನೆಯು ಜಾರಿಯಲ್ಲಿರುತಿದೆ. ತಿರುವಾಂಕೂರ್ ಸಂಸ್ಥಾನದಲ್ಲಿ ಬ್ರಾಹ್ಮಣರಿಗೆ ಗಲ್ಲುಸಜಾ ಇಲ್ಲ. ಸಿಂಧ್ಯಾಹೋಲ್ಕರ್, ಗಾಯಕವಾಡಿ ಸಂಸ್ಥಾನಗಳಲ್ಲಿ ಗೋಹತ್ಯೆ ನಡೆಯುರೀಕೂಡದು. ಮೈಸೂರ್ ಸಂಸ್ಥಾನದಲ್ಲಿ ಸರ್ಕಾರ ನೌಕರರು ಬರತರ್ಫ ರಾದಾಗ್ಯೂ, ಸಜಾ ಅನುಭವಿಸಿದಾಗ್ಯೂ ಪೆನ್ಷನಿಗೆ ಹಕ್ಕು ತಪ್ಪುವದಿಲ್ಲ. ಹೈದರಾಬಾದ್‌ನಲ್ಲಿ ರುಷುವತ್ ತೆಗೆದುಕೊಂಡರೆ ಜುರ್ಮಾನ ಶಿವಾಯಿ ಸಜಾ ಇಲ್ಲ.

The weather —ಕಳೆದ ವಾರದೊಳು ಬೆಂ ಯಕೆ ಪ್ರತಿದಿನವೂ ರಾತ್ರಿ ಕಾಲದಲ್ಲಿ ಅನಿರೀಕ್ಷಿತವಾಗಿ ಮೋಡಮುಚ್ಚಿ ಕೆಲವು ಘಂಟೆಗಳ ಕಾಲ ತುಂತುರು ಮಳೆ ಬೀಳುತಲಿತ್ತು. ಬೆಳೆಯಲ್ಲಿರುವ ರಾಗಿ ಮೊದಲಾದ ಪೈರುಗಳಿಗೆ ಇದು ಬಹಳ ಉಪಯುಕ್ತ ವಾದದ್ದೆಂಬದರೊಳು ಸಂಶಯವಿಲ್ಲವು. ಪರಂತು ಕೆರೆ ಕುಂಟೆಗಳಿಗೆ ನೀರು ಬರುವದಕ್ಕೆ ಅನುಕೂಲ ವಾದದ್ದಲ್ಲದೆ ಹೋದಬಗ್ಯೆ ಚಿಂತಿಸುತ್ತೇವೆ. ಆಹಾರ ಪದಾರ್ಥಗಳ ಕ್ರಯವು ಏರಿದೆಯಿನ್ನಾಗಿರುಲಿಸೆ. ವಾಂತಿಭೇದಿ ರೋಗವು ಈ ಪಟ್ಟಣದಲ್ಲಿ ಪ್ರಾಯಶಃ ಶಮನವಾಯಿತೆಂದು ಹೇಳಬಹುದು. ಜನಬಾಹುಳ್ಯವುಳ್ಳ ಪಟ್ಟಣಗಳಲ್ಲಿ ಚಿಲ್ಲರೆ ರೋಗಗಳು ತಪ್ಪದಿರುವದು ಸ್ವಾಭಾವಿಕವಾದುದೆ. ಮುಖ್ಯವಾಗಿ ವಾಂತಿಭೇದಿ ರೋಗವು ನಮ್ಮನ್ನಗಲಿದ್ದುದೆ ಭಾಗ್ಯವಿಶೇಷವೆಂತಲೇ ಯೆಣಿಸಬೇಕು.

Re-instatement.—ತಿಪಟೂರ್ ತಾಲ್ಲೂಕಿನ ಅಮಲ್ದಾರ್ ಮೆ|| ಲಕ್ಷ್ಮಣರಾಯರವರಮೇಲೆ ಸದರೀ ತಾಲ್ಲೂಕ್ ಜನಗಳಿಂದ ತರಲ್ಪಟ್ಟ ಕೆಲವು ತಕರಾರುಗಳಮೇಲೆ ಅವರು ಸಸ್ಪೆಂಡ್ ಮಾಡಲ್ಪಟ್ಟಿದ್ದರಷ್ಟೆ. ಈ ಮೊಕದ್ದಮೆಯು ಬಹು ಕಾಲದ ಮೇಲೆ ವಿಚಾರಣೆಯೊಳದ್ದು ಕಡೆಗೆ ಅವರು ನಿರ್ದೋಷಿ ಯೆಂದು ಯೇರ್ಪಟ್ಟು ದುರಳ ಅವರು ತಮ್ಮ ಕೆಲಸವ ಕೈಗೊಳ್ಳಬಹುದೆಂದು ವ್ಯವಸ್ಥೆಯಾಗಿ, ಅವರಿಗೆ ಹುಕುಂ ಕೊಟ್ಟಿಂತೆಯೂ, ಪರಂತು ಅವರು ಚಾರ್ಜ ವಹಿಸಬೇಕಾದ ತಾಲ್ಲೂಕುಸ್ಥಳವಾವುದೆಂದು ಇನ್ನು ನಿಶ್ಚಯವಾಗಿಲ್ಲವೆಂತಲೂ ತಿಳಿಯಬರುತ್ತದೆ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಹೆಡ್‌ಕ್ವಾರ್ಟರ್ ಪೊಲೀಸ್ ಇನ್ಸ್‌ಪೆಕ್ಟರಾಗಿದ್ದ ಮೆ|| ಸೈದುದ್ದೀನ್ ಯೆಂಬವರು ಕೆಲವು ಕಾರಣಗಳಮೇಲೆ ಬಹುಕಾಲದ ಮೊದಲು ಸಸ್ಪೆಂಡ್ ಮಾಡಲ್ಪಟ್ಟಿದ್ದರಷ್ಟೆ. ಸದರೀ ಯವರು ಮಾಹೆಯಾನಾ ೧೫೦ ರೂಪಾಯಿಗಳ ತಲಬಿನಮೇಲೆ ಬೆಂಗಳೂರು ಸಿಟಿ ಪೊಲೀಸ್ ಇನ್ಸ್‌ಪೆಕ್ಟರಾಗಿ ನಿಯಮಿಸಲ್ಪಟ್ಟಂತೆ ಕೇಳುತ್ತೇವೆ.

Despatch of gold —ಈಚೆಗೆ ಕೋಲಾರದ ಪ್ರಾಂತದ ಬಂಗಾರದ ಗನಿಗಳಿಂದ ೧೬ ಬಸ್ತ್ಯಾಗಳ ಬಂಗಾರ ಮುಂಬೈಗೆ ರವಾನೆಯಾಗಿರುತಿದೆ. ಅಂದರೆ,—ಮೈಸೂರು ಗನಿಗಳಿಂದ ೮, ಅದರ ಕ್ರಯ ೩,೧೬,೫೦೮ ರೂಪಾಯಿಗಳು. ಉರಿಗಾಂಗನಿಗಳಿಂದ ೫, ಅವುಗಳಕ್ರಯ ೨,೭೮, ೩೦೪ ರೂ. ನಂದೀದುರ್ಗ ಗನಿಗಳಿಂದ ೨, ಅವುಗಳ ಕ್ರಯ ೧,೬೧,೩೦೧ ರೂ. ಬಾಲಘಾಟ ಗನಿಗಳಿಂದ ೧, ಅದರ ಕ್ರಯ ೪೬,೭೫೦ ರೂಪಾಯಿಗಳು. ಒಟ್ಟು ೮,೦೨,೮೭೩ ರೂಪಾಯಿಗಳ ಚಿನ್ನ ಅನ್ಯದೇಶಕ್ಕೆ ಹೊರಟು ಹೋಯಿತು. ಹಿಂದೆ ಒಂದು ಸಂದರ್ಭದಲ್ಲಿ ನಾವು ತಿಳಿಸಿದ್ದಂತೆ, ಸದರೀ ಚಿನ್ನಕ್ಕೆ ಶುದ್ಧಿ ಮಾಡಲ್ಪಟ್ಟ ತಾಂಬ್ರವನ್ನು ಬೆರಸಿ, ನವರ್ಣಗಳು ಟಂಕಾ ಹಾಕಿಸಿ, ಮರಳಿ ಇಂಡ್ಯ ದೇಶಕ್ಕೆ ಕಳುಹಿಸಿ, ಬೆಳ್ಳಿಯ ನಾಣ್ಯ ತಗ್ಗಿ ಹೋದದರಿಂದ, ಯೆಕ್ಸ್‌ಚೇಂಜ್ ದರ ಅಧಿಕವಾಗಿ ಹೋಯಿತೆಂಬ ವ್ಯಾಜವು ಆಧಾರ ಮಾಡಿಕೊಂಡು, ೧೦ ರೂಪಾಯಿಗಳಿಗೆ ಮಾರಲ್ಪಡಬೇಕಾದ ಸವರನಿನ ದರವನ್ನು ದಿನಕ್ರಮೇಣ ಹೆಚ್ಚಿಸಿ ಈಗ ರೂ. ೧೬—೩—೦ ರವರೆಗೆ ಬಿಟ್ಟು ಇಂಡ್ಯ ದೇಶೀಯರಿಗೆ ಬಹುನಷ್ಟವಾಗಿ ಮುಂದಿನ ಮಾತುವಲಿದಾರೆ.

Miss Govindarajulu —ಇಲ್ಲಿನ ಶ್ರೀಮನ್ಮಹಾರಾಣೀಯವರ ಧರ್ಮದ ಹೆಂಗಸರ ಆಸ್ಪತ್ರೆಗೆ ನೇಮಿಸಲ್ಪಟ್ಟಿದ್ದ ಮಿಸ್ ಗೋವಿಂದ ರಾಜಲುವವರು ಸ್ಕಾಟ್ಲೆಂಡಿನಲ್ಲಿರುವ ಎಡಿಂಬರೋ ಪಟ್ಟಣಕ್ಕೆ ಹೋಗಿ ಅಲ್ಲಿ ವೈದ್ಯ ಶಾಸ್ತ್ರವನ್ನು ಚೆನ್ನಾಗಿಕಲಿಯುವದಕ್ಕಾಗಿ ಮೈಸೂರು ಸರ್ಕಾರದಿಂದ ೨ ವರುಷದ ಸ್ಪೆಷಲ್ ರಜಾ ಪಡೆದು ಈ ದಿನ ಇಲ್ಲಿಂದ ಪ್ರಯಾಣ ಮಾಡುತ್ತಾರೆ. ಆ ಪಟ್ಟಣದಲ್ಲಿ ಇವರು ವರುಷಕ್ಕೆ ೫೦ ಪೌಂಡು ಅಂದರೆ ಸುಮಾರು ಮಾಹೆಯಾನಾ ೬೦ ರೂಪಾಯಿಯ ವಿದ್ಯಾರ್ಥಿ ವೇತನವನ್ನು ಪಡೆಯುವರು. ಅಲ್ಲದೆ ನಮ್ಮ ಮೈಸೂರು ಸರ್ಕಾರದವರೂ ತಿಂಗಳು ೧ ಕ್ಕೆ ೫ ಪೌಂಡು ಅಥವಾ ಸುಮಾರು ೭೫ ರೂಪಾಯಿಯ ವೇತನವನ್ನು ಕೊಡುವದಾಗಿ ಸ್ಯಾಂಕ್ಷನ್ ಮಾಡಿರುತ್ತಾರೆ. ಇವರು ಬೊಂಬಾಯಿ ಪಟ್ಟಣದಲ್ಲಿ ಇದೇ ತಿಂಗಳ ೨೬ ನೇ ತಾರೀಖಿನಲ್ಲಿ ಹಡಗನ್ನು ಹತ್ತಿ ಪ್ರಯಾಣ ಮಾಡಿ ಎಡಿಂಬರೋ ಪಟ್ಟಣವನ್ನು ಸೇರಿ, ಬರುವ ಅಕ್ಟೋಬರು ತಿಂಗಳಿನಿಂದ ವಿದ್ಯೆಯ ದಕ್ಕೆ ಪ್ರಾರಂಭಿಸುತ್ತಾರೆ. ಮಿಸ್ ಗೋವಿಂದ ರಾಜಲುವವರು ಇಲ್ಲಿನ ಜನರಿಗೆಲ್ಲ ಮಹೋಪಕಾರಿಗಳಾಗಿಯೂ ಮತ್ತು ಅವರ ಪ್ರೀತಿಗ ಪಾತ್ರರಾಗಿಯೂ ಇದ್ದರು. ಇನ್ನು ಎರಡು ವರುಷಗಳಾದನಂತರ ಇಲ್ಲಿಗೆ ವಾಪಸು ಬರುವದಾಗಿ ಗೊತ್ತು ಮಾಡಿರುತ್ತಾರೆ.—ವೃ. ಪ.

BRAHMIN INTER WIDOW RE-MARRIAGE

ಆಚೇ ವಾರದಲ್ಲಿ ಮೈಲಾಪುರದೊಳು ನಡೆದ ವಿಮತ ವಿಧವಾ ಪರಿಣಯ ವಿಷಯದಲ್ಲಿ ಮೈಸೂರ್ ದೇಶಾಭಿಮಾನಿ ಪತ್ರಿಕೆಯು, ಇದರಡಿ ಕಂಡ ಶಬ್ದಗಳಿಂದ ಕೊಂಡಾಡಿ ಇಂತಾ ವಿಲಕ್ಷಣ ಪುರುಷರು ತಮ್ಮ ವಂಶದಲ್ಲಿ ಜನಿಸಿದ್ದು ಸಾಮಾನ್ಯಪುಣ್ಯಫಲವೆಂದು ಭಾವಿಸಿ, ಅವರ ದಿವ್ಯ ಗುಣಚರಿತ್ರವರ್ಣನೆಗೆ ತಕ್ಕ ಶಬ್ದ ದೌರ್ಲಭ್ಯ ತಮಗುಂಟಾಗಿರುವದಕ್ಕಾಗಿ ಬಹಳ ವಿಷಾದಿಸುತಿದೆ:—

ಕೋಲಾರದ ಸಮೀಪದಲ್ಲಿನ ಸ್ಥಳವಾಸಿಯಾದ ನಮ್ಮ ದಾಯಿದ್ಯರಾದ ನಲ್ಲಾಂಚಕ್ರವರ್ತಿ ಕೃಷ್ಣಯ್ಯಂಗಾರ್ರೆಂಬುವರ ಕುಮಾರರಾದ ವೆಂಕಟವರದೈಯ್ಯಂಗಾರ್ಯರು ಮಧ್ವ ಬ್ರಾಹ್ಮಣರಾದ ನಾಗೇಶರಾಯರ ಪುತ್ರಿಯಾದ ಕೃಷ್ಣಮ್ಮ ಎಂಬ ತಂದೆವಿಹೀನೆಯಾದ ಬಾಲಿಕೆಯನ್ನು ಮದ್ರಾಸ್ ಮೈಲಾಪುರದಿನಲ್ಲಿ ಪಾಣಿಗ್ರಹಣವ ಮಾಡಿಕೊಂಡು ಜಡೆಗೆ ಗತಿಕಿಹೋಗಿದ್ದ ಸೌಮಂಗಲ್ಯವ ಮರಳಿ ಉಂಟು ಮಾಡಿಕೊಟ್ಟನೆಂದು ತಿಳಿಸುತ್ತೇವೆ. ನಮ್ಮ ವಂಶದಲ್ಲಿ ಹುಟ್ಟಿದ ಇವರು ಇದುವರಿವಿಗೂ ಯಾರೂ ಮಾಡದ ಈ ಕೆಲಸವನ್ನು ಮಾಡಿ ನಮ್ಮ ವಂಶಕ್ಕೆ ಆಚಂದ್ರಾರ್ಕವಾಗಿ ಉಂಟುಮಾಡಿದ ಕೀರ್ತಿಗಾಗಿ ಬಹಳವಾಗಿ ಸಂತೋಷಿಸುತ್ತೇವೆ. ಇವರು ವಿಧವಾ ವಿವಾಹ ರಾಮಾನುಜಾ ಚಾರ್ಯರೆಂದು ನಾಮಕರಣವಂ ಹೊಂದಿ, ತಮ್ಮ ವಿವಾಹದಿವಸ ಮೊದಲುಗೊಂಡು ವಿಧವಾ ವಿವಾಹಶಕೆಯನ್ನು ಪರಿಗಣಿಸುತ ಬರುವದಂ ಕೇಳುವ ನಮ್ಮ ಕರ್ಣಗಳ ಸುಕೃತವನ್ನು ಹೇಳಶಕ್ಯದ್ದೇ ಇಲ್ಲ. ಇನ್ನು ನಮ್ಮ ವಂಶದಲ್ಲಿ ಜನಿಸಿರುವ ಬಾಲಕರು ಇನ್ನ್ಯಾವ ಸಹಕಾರ್ಯಗಳಂ ನಾಡುವದನ್ನು ಕೇಳುವದಕ್ಕಾಗಿ ನಾವು ಜನಿಸಿ ಸುಕೃತ ಮಾಡಿದ್ದೇವೆಯೋ ಅದನ್ನು ತಿಳಿಯದೆ ಬಹಳವಾಗಿ ಪೇಚಾಡುತಲಿದ್ದೇವೆ. ನಮ್ಮಂಥಾವರೆಲ್ಲಾ ಜನಿಸಿದ್ದರಿಂದ ನಮ್ಮ ಪಿತೃಗಳು ಗತಿಯನ್ನು ಕಾಣದೆ ತಪಿಸುತಲಿದ್ದರು. ಈ ಮಹಾನುಭಾವರು ಅವತರಿಸಿ, ಅವರುಗಳಿಗೆ ಉಂಟುಮಾಡಿದ ಸದ್ಗತಿಯನ್ನು ಕೊಂಡಾಡುವದಕ್ಕಾಗಿ ಮಾತುಗಳನ್ನು ಎಲ್ಲಿ ಹುಡಿಕಿದಾಗ್ಯೂ ಸಿಕ್ಕದೆ ಇರುವದನ್ನು ನೋಡಿ ಬಹಳ ವಾಗಿ ಪೇಚಾಡುತದ್ದೇವೆ—ಮೈ. ದೇ.

ನಾಮಕರಣ ಮಹೋತ್ಸವವು ಅತಿ ಸಂಭ್ರಮದೊಡನೆ ಬೆಳೆಯಿತು. ಶಿಶುವಿಗೆ ದೇವರಾಜ ವಡೆಯರ್ ಎಂದು ನಾಮಕರಣ ಮಾಡಿದರು. ಇವರಿಗೆ ನಾಮಕರಣ ಮಾಡಿದ ಹೆಸರನ್ನು ರಾಜ ಒಡೆಯರ್ ಕಾಲಾನಂತರ ಇವರು ಆವಿರ್ಭವಿಸಿದ್ದನ್ನು ನೋಡಿದರೆ ರಾಜ ಒಡೆಯರು ಸ್ವರ್ಗ ಭೋಗದಲ್ಲಿರುವ ತಮ್ಮ ತಾತಂದರಾದ ಕೃಷ್ಣರಾಜ ಒಡೆಯರವರ ಸಮೀಪಕ್ಕೆ ಹೋಗಿ ಅವರೊಡನೆ ಸಂಸ್ಥಾನದ ವರ್ತಮಾನವನ್ನು ಹೇಳಿ, ಚಾಮರಾಜ ಒಡೆಯರವರಿಗೆ ಉಂಟಾದ ಪುತ್ರಿ ಪುತ್ರರ ಸಂತಾನ ಸಂಪತ್ತನ್ನು ತಿಳಿಸಿ, ಮಹಾರಾಜರು ಪುತ್ರ ಮಿತ್ರ ಕಳತ್ರಾದಿಗಳೊಡನೆ ಸುಖಸಾಮ್ರಾಜ್ಯವನ್ನು ಅನುಭವಿಸುವಂತೆ ಆಶೀರ್ವಾದವನ್ನು ಮಾಡಬೇಕೆಂದು ಕೇಳಿಕೊಂಡು ಅವರಿಂದ ದೇವ ಎಂಬ ಬಿರುದನ್ನು ಸಂಪಾದಿಸಿಕೊಂಡು ದಯಮಾಡಿದರೋ ಎಂಬಂತೆ ಪುರದ ಜನಗಳು ಆನಂದಪಡುತಲಿದಾರೆ.—ವೃ. ಪ.

ಪಟ್ಟೆ ಕೊಡುವ ಕಾಲದಲ್ಲಿ ವರದಾಸ್ವಾಮಿ ದೇವಸ್ಥಾನದಲ್ಲಿ ಒಬ್ಬ ಹೆಂಗಸು ಒಂದು ಗಂಡು ಮಗುವನ್ನು ಹೆತ್ತಳೆಂದು ಒಂದು ವದಂತಿಯು ಹುಟ್ಟಿತು. ಅದನ್ನ ಚಂತಾಮಣಿರಾರು ಬರೆದಿರುತ್ತಾರೆಯಷ್ಟೆ; ಈ ಸಮಾಚಾರವು ನಿಜವೆಂದು ನಂಬಿ, ಸೀತಾಪಿಲಾನ ಸನ್ನಿಧಾನದವರು ಆ ಬಡಮುತ್ತೈದೆಗೆ ಬಾಣಂತಿನದ ಖರ್ಚನ್ನೂ, ದಾಸಿಗೆ, ಹೊದ್ದಿಕೆಯನ್ನೂ ಕೊಡುವದಾಗಿ ಆರ್ಡರ್ ಮಾಡಿದರು. ಅದರ ನಿಜಾಂಶವನ್ನು ಚೆನ್ನಾಗಿ ವಿಚಾರ ಮಾಡಿದ್ದರಲ್ಲಿ ಒಬ್ಬ ಪೂರ್ಣಗರ್ಭಿಣಿಯಾದ ಸ್ತ್ರೀಗೆ ಜಲ ಮಲ ವಿಸರ್ಜನೆಗೆ ಉತ್ಕಟವಾಗಲು ಆಕೆಯು ಅದರ ಯಾತನೆಯನ್ನ ಸಹಿಸಲಾರದೆ ಒಂದು ಮರೆಯಾದ ಸ್ಥಳಕ್ಕೆ ಹೋದಳು. ಆಕೆಯಕೂಡಾ ಹೋಗಿದ್ದ ಹೆಂಗಸು ಈ ಗುಟ್ಟು ಹೊರಕ್ಕೆ ತಿಳಿದರೆ ಅಧಿಕಾರಿಗಳು ಏನು ಮಾಡಿಬಿಡುವರೋ ಎಂದು ತಿಳಿದು ಹೆದರಿ ಪ್ರಸವ ವೇದನೆಯಿಂದ ಪೀಡಿತಳಾಗಿಧಾಳೆಂದು ಹೇಳಿದಳು. ಈ ಸಮಾಚಾರವು ದೇವಸ್ಥಾನವೆಲ್ಲಾ ಹರಡಿಕೊಂಡಿತು. ದಕ್ಷಿಣೆ ಕೊಡುತಿದ್ದ ಸುಬ್ರಾಯರ ಕಿವಿಗೂ ಬಿತ್ತು. ಅವರು ಅದನ್ನ ವಿಚಾರಿಸದಲು; ಸದರೀ ದೇವಸ್ಥಾನದ ಪಾರುಪತ್ತೇಗಾರರು ಚೆನ್ನಾಗಿ ನಿಜಸ್ಥಿತಿಯನ್ನು ವಿಚಾರಿಸದೆ ಒಂದು ಹೆಣ್ಣು ಒಂದು ಗಂಡು ಮಗುವನ್ನು ಪ್ರಸವಿಸಿದಳೆಂದು ಸುಳ್ಳು ಸುದ್ದಿಯನ್ನು ಬಂದು ಹೇಳಿದರಂತೆ. ಅದನ್ನು ನಂಬಿ ತಾವೂ ವಿಚಾರಿಸದಹಾಗೆ ಚೇಲವನ್ನು ಕಟ್ಟ ಮನೆಗೆ ಹೊರಟುಬಂದರು.—ಮೈ. ದೇ.

THE MYSORE GAZETTE.

ಮೈಸೂರು ಗೆಜೆಟ್.

ಶ್ರೀಮನ್ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂ|| ೧೮೩೦—G. ೬೫೫-೯೨—ಮೈಸೂರಲ್ಲಿ ಘನವಂ ವಹೆದ ಮಹಾರಾಣಿಯವರ ಆಸ್ಪತ್ರೆ ಇನ್‌ಚಾರ್ಜನಲ್ಲಿರುವ ಅಸಿಸ್ಟೆಂಟ್ ಸರ್ಜನ್ ಮಿಸ್ ಗೋವಿಂದರಾಜುಲು ಯೆಂಬಾಕೆಯು ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಫಸ್ಟ್‌ಕ್ಲಾಸ್ ಆಸ್ಪತ್ರೆ ಅಸಿಸ್ಟೆಂಟ್ ಮಿಸ್ ಲೂಯಿಸಾಮ್ಯಾಕ್ಟರ್ ಯೆಂಬಾಕೆಯು ಹುಗಾಮಿನಾ ತರೀಖ್, ಮಿಸ ಗೋವಿಂದರಾಜುಲು ಯೆಂಬಾಕೆಯ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ, ಮೈಸೂರು ಮಹಾರಾಣೀಯವರ ಆಸ್ಪತ್ರೆ ಇನ್‌ಚಾರ್ಜನಲ್ಲಿ ರತಕ್ಕದ್ದು.

ನಂ ೧೯೪೦, G. ೬೪೬-೯೨—ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರಾದ ಮೆ|| ಸಿ. ನಾರಾಯಣರಾಯರವರು ಅವರುಪಯೋಗಿಸಿಕೊಳ್ಳುವ ತಾರೀಖ್ ಮೊದಲು ೧೫ ದಿನಗಳ ಪ್ರಿವಿಲೇಜ್‌ರಜಾ ಕೊಡಲ್ಪಟ್ಟಿರುತ್ತಾರೆ.

ಅಸಿಸ್ಟೆಂಟ್ ಕನ್ಸರ್ವೇಟರ ಮೆ|| ರಾಮಸ್ವಾಮಯ್ಯರ್ ಬಿ. ಎ. ಯವರು, ಮೆ|| ನಾರಾಯಣರಾಯರವರ ಗೈರ್‌ಹಾಜರೀ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸ್ ಚಾಲತೀ ಕೆಲಸಗಳ ಇನ್‌ಚಾರ್ಜನಲ್ಲಿರತಕ್ಕದ್ದು.

ನಂ. ೧೯೩೮, G. ೩೮೨.—ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಸಿ. ಹಾರ್ಡಿಯವರು ಅವರುಪಯೋಗಿಸಿಕೊಳ್ಳುವ ತಾರೀಖ್ ಲಾ|| ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ರಿಯುಲ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮೆ|| ಎಂ. ವೆಂಗಯ್ಯಶೆಟ್ಟಿರವರು, ಮೆ|| ಹಾರ್ಡಿ ಯವರು ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ಬೆಂಗಳೂರು ಡಿಸ್ಟ್ರಿಕ್ಟ್ ಪೊಲೀಸ್ ಸೂಪರಿಂಟೆಂಡೆಂಟರಾಗಿ ಕೆಲಸನೋಡುವರು.

ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಬಿ. ಪಿ. ಕುಮಾರಸ್ವಾಮಿ ನಾಯುಡರವರು, ಮೆ|| ವೆಂಗಯ್ಯಶೆಟ್ಟರವರು ಬೇರೆ ಕೆಲಸದಮೇಲಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ, ರಿಯುಲ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಕೆಲಸವನ್ನು ನೋಡುವಂತೆ ನೇಮಕರಮಾಡಲ್ಪಟ್ಟಿರುತ್ತಾರೆ. ಕೂಡಲೆ ಕೆಲಸದಮೇಲೆ ಹಾಜರಾಗತಕ್ಕದ್ದು.

SEASON REPORT

ಈ ತಿಂಗಳ ೬ ನೇ ತಾರೀಖಿಗೆ ಮುಗಿದ ವಾರದ ಬಾಬತ್ತು ಸರ್ಕಾರೀ ವ್ಯವಸ್ಥಿತಿ ರಿಪೋರ್ಟ

ಬೆಂಗಳೂರು ಡಿಸ್ಟ್ರಿಕ್ಟ ಪೈಕಿ ಕನಕಪುರ, ಹಳ್ಳಿ, ಮಾಗಡಿ, ಹೊಸಕೋಟೆ, ಈ ಮೂರು ತಾಲ್ಲೂಕುಗಳಲ್ಲಿ ಮಾತ್ರ ಬಂದುಗಳ ಚಿಲ್ಲರೆ ಮಳೆ, ಉಳಿದ ತಾಲ್ಲೂಕುಗಳಲ್ಲಿ ಕೆಲವು ಸೆಂಟಿಗಳು ಕೋಲಾರ ಡಿಸ್ಟ್ರಿಕ್ಟಿಗೆ ಸೇರಿದ ತಾಲ್ಲೂಕುಗಳಲ್ಲೂ ವರ್ಷವೆಂಬುದು ಸೆಂಟಿಗಳ ಲೆಕ್ಕವೇ ಹೊರತು ಇಂಚು ಲೆಕ್ಕವಿಲ್ಲ ತುಮಕೂರು ಡಿಸ್ಟ್ರಿಕ್ಟ ಪೈಕಿ ಕೆಲವು ತಾಲ್ಲೂಕುಗಳಲ್ಲಿ ಕೆಲವು ಸೆಂಟಿಗಳ ವರ್ಷ ಬಿತ್ತು, ಅನ್ಯತ್ರ ಸುತರಾಂ ಇಲ್ಲವು. ಮೈಸೂರು ಡಿಸ್ಟ್ರಿಕ್ಟ ಪೈಕಿ ಕೆಲವು ತಾಲ್ಲೂಕುಗಳಲ್ಲಿ ಕೆಲವು ಸೆಂಟಿ ಬಿತ್ತು, ಅನ್ಯತ್ರ ಅದರ ಸುದ್ದಿಯೇ ಇಲ್ಲ. ಹಾಸನ ಡಿಸ್ಟ್ರಿಕ್ಟಲ್ಲೂ ಮೇಲಿನಂತೆಯೇ. ಶಿವಮೊಗ್ಗ ಡಿಸ್ಟ್ರಿಕ್ಟ ಪೈಕಿ ಶಿಕಾರಿ ಪುರ, ಷಿಮೊಗ್ಗ, ಸಾಗರದಲ್ಲಿ ಚಿಲ್ಲರೆ, ನಗರದಲ್ಲಿ ೩೧, ತೀರ್ಥಹಳ್ಳಿಯಲ್ಲಿ ೧೧, ಕೊಪ್ಪದಲ್ಲಿ ೧೪೪ ಇಂಚು ಮಳೆ ಬಿದ್ದಿರುತ್ತದೆ ಚಿತ್ರದುರ್ಗ ಡಿಸ್ಟ್ರಿಕ್ಟ ಪೈಕಿ ದಾವಣಗೆರೆಯಲ್ಲಿ ೧, ಹೊಸದುರ್ಗದಲ್ಲಿ ೯, ಮಾಯಕೊಂಡ ಗೆಯಲ್ಲಿ ಸುಮಾರು ೪ ಇಂಚು ಮಳೆ ಬಿತ್ತು, ಅನ್ಯತ್ರ ಕೆಲವು ಪ್ರದೇಶಗಳಲ್ಲಿ ಕೆಲವು ಸೆಂಟಿಗಳು, ಉಳಿದವುಗಳಲ್ಲಿ ಏನೂ ಇಲ್ಲವು. ಚಿಕ್ಕಮಗಳೂರು ಡಿಸ್ಟ್ರಿಕ್ಟ ಪೈಕಿ, ಐದು ತಾಲ್ಲೂಕುಗಳಲ್ಲಿ ಒಂದ ಅಂಗುಳಕ್ಕೆ ಒಳಪಟ್ಟ ಕೆಲವು ಸೆಂಟಿಗಳು, ಕಡೂರು ಇಲ್ಲವು. ಮೇಲಿನ ರಿಪೋರ್ಟಿನ ದೆಸೆಯಿಂದ ಎಲ್ಲಾ ಡಿಸ್ಟ್ರಿಕ್ಟಿನಲ್ಲಿ ಮುಂದೆಯೂ ನೀರೂ ಸಿಕ್ಕದಂತೆಯೂ, ಬೆಳೆಯುತ್ತಿರುವ ಫಸಲುಗಳು ಬಾಡುವ ಸ್ಥಿತಿಯಲ್ಲಿರುವಂತೆಯೂ ತಿಳಿಯಬರುತ್ತದೆ

ಪ್ರೊಸೀಡಿಂಗ್ಸ್.

ತಾರೀಖ್ ೨೫–೭–೧೮೭೯

ಶ್ರೀಸಾವಸನ ನಾಮಸಂವತ್ಸರದ ಆಷಾಢ ಬಹುಳ ೧೨ ಗುರುವಾರ (ಸನ್ ೧೮೭೯ ನೇ ಜುಲೈ ಮಾಹೆ ತಾ ೨೪) ಬಳ್ಳಿ ಮುಹೂರ್ತದಲ್ಲಿ ಶ್ರೀಮನ್ಮಹೀಶೂರು ಮಹಾಸಂಸ್ಥಾನ ದ [illegible] ಶ್ರೀ [illegible] ಪ್ರಭುವೆ [illegible] ಶ್ರೀ [illegible] ಸವಾರಿ [illegible] ತ್ಸವವು ಆಯಿತು [illegible] ವಸರದಲ್ಲಿ ಎಡೆಯಲ್ಲಿ [illegible] ಸ್ಕೂಲಿನಲ್ಲಿ [illegible] ಮಾರಾಜಶ್ರೀ ಕಡೂರು ಡಿಸ್ಟ್ರಿಕ್ಟ ಎಕ್ಸಿಕ್ಯೂಟಿವ್ ಇಂಜನಿಯರ್ ಗೋವಿಂದ ಚಾರ್ಯರವರು, ಮಹಾರಾಜಶ್ರೀ [illegible] ಮಂಜಯ್ಯನವರು, ಮಹಾರಾಜಶ್ರೀ ಕೊಪ್ಪದ ತಾಲ್ಲೂಕ ಅಮಲ್ದಾರ್ ಕೃಷ್ಣರಾವರು, ಮಹಾರಾಜಶ್ರೀ [illegible] ಸಬ್ ಡಿವಿಜನ್ ಆಫೀಸರ್ [illegible] ರಾಯರು, [illegible] ನಾಷ್ಯರಾದ ಮಹಾರಾಜಶ್ರೀ [illegible] ವೀರಭದ್ರ [illegible] ಮಹಾರಾಜಶ್ರೀ ಸುಬ್ಬಾಶಾಸ್ತ್ರಿಗಳವರು, ಮಹಾರಾಜಶ್ರೀ [illegible] ಮಹಾರಾಜಶ್ರೀ [illegible] ಸುಬ್ಬಣ್ಣನವರು, ಮಹಾರಾಜಶ್ರೀ [illegible] ಮಹಾರಾಜಶ್ರೀ [illegible] ಮಹಾರಾಜಶ್ರೀ [illegible] ನವರು, ಮಹಾರಾಜಶ್ರೀ [illegible] ರು, ಮುಂತಾದ ಸಭ್ಯ ಜನರು [illegible] ನೆರೆದಿದ್ದರು

ತೋರಣಾದ್ಯಲಂಕೃತವಾದ ಗವರ್ನಮೆಂಟ ವಿದ್ಯಾಶಾಲೆಯ ಮಧ್ಯ ಗೃಹದೊಳಗೆ [illegible] ಶ್ರೀ [illegible] ಪತ್ರ ಪುಷ್ಪ [illegible] ಗಳೊಡನೆ [illegible] ಪ್ರಸ್ತಾರ [illegible] ದಿವ್ಯ ಪುಷ್ಪ [illegible] ಧೂಪ ದೀಪ [illegible] ದರ್ಶನ [illegible] ಸುಗಂಧ [illegible] ಈ ಮಧ್ಯೆ [illegible] ಮಹಾರಾಜಶ್ರೀ ಎಕ್ಸಿಕ್ಯೂಟಿವ್ ಇಂಜನಿಯರ್ ಗೋವಿಂದಾಚಾರ್ಯರು [illegible] ಮಹಾರಾಜಶ್ರೀ ಎಕ್ಸಿಕ್ಯೂಟಿವ್ ಇಂಜನಿಯರು [illegible] ವಿಶ್ವಾಸದಿಂದ ಅಗ್ರಾಸನಾಧಿಪತ್ಯವನ್ನು ವಹಿಸಿದರು

ಶ್ರೀಮನ್ಮಹಾ ಪ್ರಭುವಿನ ಜನನೋತ್ಸವವಾದ ಈ ಸುದಿನ ಸಂವತ್ಸರವು ಸಮೃದ್ಧಿಯಾದ ವೃಷ್ಟಿಯಿಂದಲೂ, [illegible] ನಿಂದಲೂ, [illegible] ಸುಭಿಕ್ಷವಾದ ಧಾನ್ಯ ಫಲಾದಿಗಳಿಂದಲೂ, [illegible] ವಾಗಿ ಆರೋಗ್ಯ [illegible] ಪ್ರಜೆಗಳಿಗೆ [illegible]

[illegible]

SUMMARY OF NEWS

[illegible]

ಎ ಗೋವಿಂದಾಚಾರ್ಯ

[illegible]

BANGALORE — Printed & published at the KARNATAKA PRESS, No. 40, HOSPITAL ROAD, PETTAH — 15-8

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE:—MONDAY, AUGUST 22, 1892. [No. 34.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಆಗಸ್ಟ್ ೨೨ ನೇ ತಾರೀಖು ಸೋಮವಾರ. [ಸಂಖ್ಯೆ ೩೪.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಅಫ್	ಸ್ಥಳದವರಿಗೆ ಮುಂಗಡವಿಲ್ಲದೆ	ಪರಸ್ಥಳದವರಿಗೆ ದಾಗಲ್‌ಸೇರಿ.
ಮುಂಗಡಕೊಡುತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡುತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

ಮೊದಲನೆ ಸಂಧಿ ...	೦—೩—೦
ಎರಡನೆಯ ...	೦—೧—೦

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE [illegible]

HINDU MEDICINE.

Price including Postage Rs 5 0-0

ವೈದ್ಯಸಾರ ಸಂಗ್ರಹ.

[illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ 5-0-0

ಬಿ. ಬಿ. ವೆಂಕಟಾಚಾರ್.

[illegible]

ನೋಟಿಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

[illegible]

ನೋಟಿಸ್.

ನಂಜನಗೂಡಿನ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

[illegible]

೧. [illegible]

೨. [illegible]

೩. [illegible]

೪. [illegible]

೫. [illegible]

೬. [illegible]

೭. [illegible]

ಬೆಂಗಳೂರು ಸಿಟಿ ಮ್ಯೂನಿಸಿಪಲ್ ಆಫೀಸ್, ತಾ॥ ೧೯ನೇ ಆಗಸ್ಟ್ ೧೮೯೨.

MIR SHUJAAT ALI KHAN,
President.

ನೋಟಿಸ್.

ಗಣೇಶ ರಾಮಚಂದ್ರ ರಕೇಶ್ ಮತ್ತು ಕಂಪೆನಿ.

[illegible]

ನೋಟಿಸ್.

[illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

THE MONEY MARKET.

[illegible] 1892

[illegible] 104-10-0 [illegible] 105 0-0 [illegible]

[illegible] (500) [illegible] 910 [illegible]

[illegible] (100) [illegible] 165 [illegible] 170 [illegible]

[illegible] 16—5—0

[illegible] 6 [illegible] 1s. 2 11/16d.

[illegible] 4 [illegible] 1s 2 [illegible] d

[illegible] 1s. 2 17/32d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, AUGUST 22, 1892.

೧೮೯೨ನೇ ಇಸವಿ ಆಗಸ್ಟ್ ತಾ|| ೨೨ನೇ ಸೋಮವಾರ.

THE LATE MR. S. HEMAJI ROW.

ಮೈಸೂರ್ ಚೀಫ್‌ಕೋರ್ಟ್ ರಿಜಿಸ್ಟ್ರಾರಾದ ಮೆ|| ಹೇಮಾಜಿ ರಾಯರವರು ಮಾಹೇ ಮಜಕೂರ್ ೧೮ನೇ ತಾರೀಖ್ ಗುರುವಾರದದಿನ ರಾತ್ರಿ ೭ ಘಂಟೆಯ ಸಮಯದಲ್ಲಿ ಸಿವಿಲ್ ವ ಮಿಲಿಟರಿ ಸ್ಟೇಷನಿಗೆ ಸೇರಿದ ನಾರಾಯಣಪಿಳ್ಳೆ ಬೀದಿಯೊಳಗಿರತಕ್ಕ "ಸಿಂಧಿಯಾ ಹೌಸ್" ಯೆಂಬ ಸ್ವಗೃಹದಲ್ಲಿ ಅನಿರೀಕ್ಷಿತವಾಗಿ ಕಾಲಗತಿಯನ್ನೈದಿದರೆಂಬ ವೃತ್ತಾಂತವನ್ನೀ ಪತ್ರಿಕಾ ಮೂಲಕ ತಿಳಿಸಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈ ದೊಡ್ಡಮನುಷ್ಯರ ಮರಣವು ಕೇವಲ ಆಕಸ್ಮಿಕವಾದುದಾಗಿ, ಅದಂ ಕೇಳಿದವರೆಲ್ಲರಿಗೂ ಆಶ್ಚರ್ಯವನ್ನುಂಟುಮಾಡತಕ್ಕದ್ದಾಗಿತ್ತು. ಇವರು ಪ್ರಬಲ ರೋಗಪೀಡಿತರಾಗಿ ದೀರ್ಘಕಾಲ ಸುಖಾರವಿಲ್ಲದೆ ಮಲಗಿರಲಿಲ್ಲವು. ತಮ್ಮ ಶರೀರದೌರ್ಬಲ್ಯ ನಿವೃತ್ತ್ಯರ್ಥ ವಿಶ್ರಾಂತಿ ಸುಖವನ್ನಪೇಕ್ಷಿಸಿ ಮನೆಯೊಳು ನಾಲ್ಕೈದು ದಿನಗಳಾದರೂ ನಿಂತವರಲ್ಲವು. ಇವರು ಕಳೆದ ಬುಧವಾರದ ದಿನ ಸಹ ಕೋರ್ಟಿಗೆ ಬಂದು ೩ ಘಂಟೆಯವರಿವಿಗೆ ಇದ್ದು ಜರೂರಿಯಾತ್ ಚಾಲ್ತೀ ಕೆಲಸಗಳನ್ನೆಲ್ಲ ತೀರಿಸಿಕೊಂಡು ತಮಗೆ ಸ್ವಲ್ಪ ಶರೀರಾಲಸ್ಯವಾಗಿರುವದರಿಂದ ತಾವು ಮನೆಗೆ ಹೊರಟು ಹೋಗುವಂತೆ ತಮ್ಮ ಅಸಿಸ್ಟೆಂಟರಿಗೆ ಹೇಳಿ ಮಿಕ್ಕ ಕೆಲಸಗಳನ್ನು ಅವರಿಗೆ ವಿಧಿಸಿ ಮನೆಗೆ ಹೊರಟುಹೋದರು. ಅದೇದಿನ ರಾತ್ರಿ ರಕ್ತಭೇದಿಗೆ ಉಪಕ್ರಮವಾಗಿ ಆದಿನ ಏಳೆಂಟಾವರ್ತಿ ಆಗುತಲಿತ್ತು. ಸ್ವಭಾವತಃ ಅತಿ ದುರ್ಬ [illegible] ಸ್ಥಿತಿಯನ್ನದು ಮತ್ತಷ್ಟು ದುರ್ಬಲಪಡಿಸಿ, ಶಕ್ತಿಯಂ ಕುಗ್ಗಿಸಿ ಧೈರ್ಯವಂ ತೊಲಗಿಸಿ, ಉತ್ಸಾಹವು ಹೋಗಲಾಡಿಸಿತು. ಕ್ರಮೇಣ ಅದು ವೃದ್ಧಿಯಾಗುತ ಬರಲು ಒಳಗೆ ರಕ್ತಕೋಶವು ಒಡೆದು ಅದರಿಂದ ಊರ್ಧ್ವ ಮತ್ತು ಅಧೋಮುಖವಾಗಿ ರಕ್ತ ಸ್ರವಿಸಲಿಕ್ಕೆ ಪ್ರಾರಂಭವಾಯಿತು. ಪ್ರಾಣಿ ಸಾಮಾನ್ಯಕ್ಕೆ ಜೀವವೆಂಬದು ರಕ್ತರೂಪವಾಗಿರುವದರಿಂದ ಅದು ವಿಶೇಷವಾಗಿ ನಷ್ಟವಾದ ಕೂಡಲೆ ನಿಶ್ಶಕ್ತಿ ಅಧಿಕವಾಗಿ ರಾತ್ರಿ ೭ ಘಂಟೆಗೆ ಪ್ರಾಣವಿಯೋಗವಾದಂತೆ ತಿಳಿಯಬರುತಿದೆ. ಮಾರನೆಯದಿನ ಬೆಳಗ್ಯೆ ಇವರ ಮರಣ ವೃತ್ತಾಂತವಂ ಕೇಳಿ ದಿವಾನರವರೂ ಚೀಫ್ ಜಡ್ಜಿಯವರಾದ ಮೆ|| ತಂಬುಶೆಟ್ಟರವರೂ ಹೋಗಿ ಮೃತಪಟ್ಟವರ ಕುಟುಂಬಕ್ಕೆ ಧೈರ್ಯವಂ ಹೇಳಬಂದರು. ಅನಂತರ ಮೆಸ್ಟರ್ ಹೇಮಾಜಿ ರಾಯರವರ ಮರಣ ವೃತ್ತಾಂತವು ಷಹರಿನಲ್ಲೆಲ್ಲ ವ್ಯಾಪಿಸಲು ಅವರ ಮಿತ್ರರೂ ತಾಬೇದಾರರೂ, ಇತರರೂ ತಾವು ಬಹುಕಾಲದ ಮೊದಲು ನೋಡುತಲಿದ್ದಂತಾ ವ್ಯಕ್ತಿಯ ಬಿಂಬವು ಕಣ್ಣು ಮರೆಯಾಗುವದರೊಳಗೆ ಆಖೈರಾಗಿ ಮತ್ತೊಂದುಸಲ ನೋಡುವಣವೆಂಬ ಅಪೇಕ್ಷೆಯೊಡನೆ ಸದರೀ ಯವರ ಬಂಗ್ಲೆಗೆ ಹೋದರು. ಮೃತಪಟ್ಟವರ ಗೌರವಾರ್ಥ ಶುಕ್ರವಾರದದಿನ ಚೀಫ್‌ಕೋರ್ಟಿಗೆ ರಜಾ ಕೊಡಲ್ಪಟ್ಟಿತು. ಶುಕ್ರವಾರ ಸಾಯಂಕಾಲ ೬ ಘಂಟೆಗೆ ಪ್ರೇತವು ರುದ್ರಭೂಮಿಗೆ ಸಾಗಿಸಲ್ಪಟ್ಟು ದಹನಕ್ರಿಯೆ ಅವರ ಜ್ಞಾತಿ ಮರ್ಯಾದಾನುಸಾರ ನೆರವೇರಿತು. ಆ ಸಮಯದಲ್ಲಿ ಬಹಳಮಂದಿ ದೊಡ್ಡಮನುಷ್ಯರೂ ಅಡ್ವೊಕೇಟುಗಳೂ ಹಾಜರಿದ್ದರು. ಮೆ|| ಹೇಮಾಜಿ ರಾಯರವರಿಗೀಗ ಸುಮಾರ್ ೫೮ ವರುಷಗಳ ವಯಸ್ಸಾಗಿರುತಿದೆ. ಇವರ ವಿಯೋಗಜನ್ಯವಾದ ಖೇದವನ್ನನುಭವಿಸಲಿಕ್ಕೆ ಭಾರ್ಯೆಯೂ ಬಾಲಿಕರಾದ ಮೂವರು ಪುತ್ರರೂ ಇಬ್ಬರು ಪುತ್ರಿಗಳೂ ಇರುವರು. ಯೆಷ್ಟು ವರುಷಗಳಾದಾಗ್ಯೂ ಸ್ತ್ರೀಗೆ ವೈಧವ್ಯವೆಂಬದು ದುಸ್ಸಹವಾದುದರಿಂದ ಮಕ್ಕಳಿಗಿಂತಲೂ ಅವರ ಭಾರ್ಯೆಗೆ ದುಃಖವು ಅನೇಕವಿಧದಿಂ ಅಧಿಕವಾಗಿರುವದರಲ್ಲೇನೂ ಸಂದೇಹವಿಲ್ಲವು. ಈ ಕುಟುಂಬವು ಇತರ ವಿಷಯಗಳಂ ಕುರಿತು ಚಿಂತಿಸಿ ಕ್ರಮಪಡಬೇಕಾದ ಸ್ಥಿತಿಯೊಳು ಭಗವದನುಗ್ರಹದಿಂದಿಲ್ಲದಿದ್ದರೂ ಕುಟುಂಬ ನಿರ್ವಾಹಕರಾದ ಪ್ರಬುದ್ಧರ್ಯಾರೂ ಇಲ್ಲದೆ ಹೋದದಕ್ಕಾಗಿ ಬಹಳ ಚಿಂತಿಸಬೇಕಾಗಿದೆ. ಮೆ|| ಹೇಮಾಜಿ ರಾಯರವರು ೧೮೩೪ನೇ ಇಸವಿಯಲ್ಲಿ ಜನಿಸಿ, ೧೮೬೪ನೇ ಇಸವಿಯಲ್ಲಿ ಮದರಾಸ್ ಪ್ಲೀಡರ್ಶಿಪ್ ಪರೀಕ್ಷೆಯಂ ಕೊಟ್ಟು ತೇರ್ಗಡೆಯನ್ನೈದಿ ೧೮೬೮ನೇ ಇಸವಿಯಲ್ಲಿ ಪ್ಲೀಡರಾಗಿ ಈ ದೇಶಕ್ಕೆ ಬಂದರು. ಆ ಕಾಲದಲ್ಲಿ ವಕೀಲರ ಪ್ರಾಬಲ್ಯವು ಈಗಿನದ್ದಷ್ಟು ಇಲ್ಲದಿದ್ದುದರಿಂದ ಇವರ ವೃತ್ತಿಯು ವಿಶೇಷತಃ ಆದಾಯಕರವಾದುದಾಗಿತ್ತು. ಎರಡು ಸಂವತ್ಸರಗಳ ತರುವಾಯ ಈಗಿನ ಚೀಫ್ ಜಡ್ಜಿಯವರಾದ ಮೆ|| ತಂಬುಶೆಟ್ಟರವರು ಜುಡಿಷಲ್ ಕಮಿಷನರವರ ಆಫೀಸ್ ಶಿರಸ್ತೇದಾರ್ ಕೆಲಸದಿಂದ ಜುಡಿಷಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಡಲು ಸದರೀ ಶಿರಸ್ತೇದಾರ್ ಕೆಲಸವು ಮೌಕೂಫಾಗಿ ಆಗ್ಯೆ ಜುಡಿಷಲ್ ಕಮಿಷನರಾಗಿದ್ದ ಮೆ|| ಕೆಂಡರ್ಸ್ಲೀಯವರು ಮೆ|| ಹೇಮಾಜಿ ರಾಯರವರಿಗೆ ತಮ್ಮ ಆಫೀಸ್ ಮ್ಯಾನೇಜರ್ ಕೆಲಸವಂ ಕೊಟ್ಟರು. ತರುವಾಯ ಜುಡಿಷಲ್ ಶಿರಸ್ತೇದಾರರೆಂಬ ಹೆಸರು ತಪ್ಪಿ ಜಾಸ್ತೀ ತಲಬಿನೊಡನೆ ರಿಜಿಸ್ಟ್ರಾರೆಂಬ ಹೆಸರುಂಟಾಯಿತು. ಚೀಫ್‌ಕೋರ್ಟ್ ರಿಜಿಸ್ಟ್ರಾರಾಗಿ ಮಾಹೇಯಾನಾ ೭೦೦ ರೂಪಾಯಿಗಳ ತಲಬ್ ಪಡೆಯುತಲಿದ್ದರು. ಹೀಗಿರುವಾಗ್ಯೆ ಕೆಲವು ಸಂವತ್ಸರಗಳ ಹಿಂದೆ ಒಂದು ಸಂದರ್ಭದಲ್ಲಿ ಷಟ್ಗ್ರಾಮ ಡಿವಿಜನ ಸೆಷನ್ಸ್ ಜಡ್ಜಿ ಕೆಲಸ ಖಾಲಿಯಾದುದರಿಂದ ಆಗ ಅದಕ್ಕೆ ಅನ್ಯಾನ್ಯರೂ ಅನುಕೂಲಿಸದೆ ಹೋಗಲು ಮೆ|| ಹೇಮಾಜಿರಾಯರವರು ನೂರು ರೂಪಾಯಿಗಳ ಇಜಾಫೆಯೊಡನೆ ಸದರೀ ಜಾಗೆ ಯಾಗಿ ನೇಮಕರಾದರು [illegible] ಒಂದೆರಡು ವರುಷಗಳ ಕಾಲ ಸದರೀ ಕೆಲಸವಂ ನೋಡುತಲಿದ್ದರು. ಆದರೆ ಮೈಸೂರಿನ ವಾತೋದಕಾದಿಗಳೂ ಕಾರ್ಯಬಾಹುಳ್ಯವೂ ಅವರ ಸೂಕ್ಷ್ಮಪ್ರಕೃತಿಗೆ ಅನುಕೂಲಿಸದೆಹೋದುದರ ಮೇಲೆ ಅವರಾಗಿ ಕೋರಿಕೊಂಡು ಪೂರ್ವದ ತಮ್ಮ ಕೆಲಸಕ್ಕೆ ವಾಪಸ್ ಬಂದರು, ಆದಾಗ್ಯೂ ಕಳೆದ ೨೫ ವರುಷಗಳಿಗೆ ಮೇಲ್ಪಟ್ಟು ಅವರು ಈ ಗವರ್ನ್‌ಮೆಂಟಿನಲ್ಲಿ ಮಾಡಿದ ನೌಕರಿಯಂ ಪರಿಭಾವಿಸಿ ಮಹಾರಾಜಾ ಸರ್ಕಾರದವರು ಎಂಟುನೂರು ರೂಪಾಯಿಗಳನ್ನೇ ಕೊಡುತಲಿದ್ದರು. ೧೮೯೦ ನೇ ಇಸವಿಯಲ್ಲಿ ಮೂರುತಿಂಗಳ ಕಾಲ, ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸವನ್ನೂ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲ್ ಕೆಲಸವನ್ನೂ ಮೆ|| ಪಿನಾಕ್ಷಯ್ಯರವರಿಗೆ ಬದಲಾಗಿ ಆಕ್ಟಿಂಗ್ ತರೀಕ್ ನೋಡುತಲಿದ್ದರು. ಇದಕ್ಕಾಗಿ ಆಕ್ಟಿಂಗ್ ಅಲೋವೆನ್ಸ್ ಸಲ್ಲುತಲಿತ್ತು. ಮೆ|| ಹೇಮಾಜಿರಾಯರವರು ಮೆಸ್ಸರ್ಸ್ ಕೆಂಡರ್ಸ್ಲೀ, ಸಾಂಡರ್ಸ್, ಪ್ರಿನ್ಸೆಪ್, ಮತ್ತು ಸರ ಜೇಮ್ಸ್ ಗಾರ್ಡನ್ ಮೊದಲಾದ ಅನೇಕಜನ ಯೂರೋಪಿಯನ್ ಆಫಿಸರುಗಳಿಕ್ಕೆಳಗೆ ನೌಕರಿಮಾಡಿ ಅವರ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು. ಇವರ ವಿಷಯವಾಗಿ ಪ್ರಜಾಭಿಪ್ರಾಯವು ಹ್ಯಾಗಿದ್ದಾಗ್ಯೂ, ಇವರು ಪದಂಪರ್ಯೇಣ ಒಬ್ಬರಿಗೆ ಜೀವನಹಾನಿಯನ್ನುಂಟುಮಾಡಿದವರಲ್ಲವು. ಇವರ ಖಂಡಿತ ಸ್ವಭಾವವು ಅನೇಕರಿಗೆ ಕಾಠಿಣ್ಯವನ್ನುಂಟುಮಾಡಿತು. ಮುಖ್ಯವಾಗಿ ಗತಿಸಿದವರ ವಿಷಯದೊಳು ನಾವು ದೋಷಾನ್ವೇಷಣ ಮಾಡುವದಕ್ಕಿಂತಲೂ ಪ್ರಾಧಾನ್ಯೇನ ಅವರಲ್ಲಿ ಕಂಡುಬರುತಲಿದ್ದ ಕೆಲವು ಸುಗುಣಭಾಗಗಳಂ ಪರ್ಯಾಲೋಚಿಸಲಾಗ ಒಂದು ಇಲಾಖಾ ಆತಳತಗಳನ್ನು ಶ್ರದ್ಧೆಯೊಡನೆ ಸ್ವತಃ ಶ್ರಮಿಸಿ ನಿರ್ವಹಿಸತಕ್ಕ ಶಕ್ತಿಯುಳ್ಳವರೆಂದು ಹೇಳಬಹುದಾಗಿರುತಿದೆ. ಕಾಲಗತಿಯನ್ನು ನೋಡಲಾಗಿ, ಸರ್ಕಾರಿ ನೌಕರಿಯಲ್ಲಿ ಆಖೈರ್ ವರಿವಿಗಿದ್ದು ತತ್ಪ್ರಯುಕ್ತವಾದ ಸುಖವಂ ವಾರ್ಧಕಾವಸ್ಥೆಯಲ್ಲಿ ಅನುಭವಿಸಬಹುದೆಂಬನುಬಳಿಯುಕುದ್ದಂಗವಿಲ್ಲವು.

THE CITY MUNICIPAL ELECTION.

ಹಿಂದೆ ಮೈಸೂರ್ ಗಜೆಟಿನಲ್ಲಿ ಘಾಯಿಷ್ ಮಾಡಲ್ಪಟ್ಟಿದ್ದ ಪ್ರಕಾರ ಬೆಂಗಳೂರ್ ಷಹರ್ ಮ್ಯೂನಿಸಿಪಲ್ ಮೆಂಬರುಗಳ ಚುನಾವಣೆಯು ಗತ ಶನಿವಾರದದಿನ ಉಪಕ್ರಮವಾಯಿತು. ಆದಿನ ಬೆಳಗ್ಯೆ ೮ ಘಂಟೆಯ ಮೊದಲು ಸಾಯಂಕಾಲದ ವರಿವಿಗೆ ಮೂರನೆಯ ನಂಬರ್ ಬಳೇಪೇಟೆ ಡಿವಿಜನಿಗೆ ಮೆಂಬರುಗಳ ಚುನಾವಣೆಗೆ ಇರಾದೆ ಕೊಡತಕ್ಕವರೆಲ್ಲರು ಬಳೇಪೇಟೆ ಪೋಲೀಸ್ ಸ್ಟೇಷನ್ ಬಳಿ ಗುಂಪು ಗುಂಪಾಗಿ ಜಮಾಯಿಸುತ ತಮಗೆ ತೋರಿದವರ ಹೆಸರುಗಳನ್ನು ಬರೆದುಕೊಟ್ಟು ಹೊರಟು ಹೋಗುತಲಿದ್ದರು. ಮ್ಯೂನಿಸಿಪಲ್ ಪ್ರೆಸಿಡೆಂಟರೂ, ಸಿಟಿ ಅಮಲ್ದಾರರೂ, ಸಿಟಿ ಮ್ಯೂನಿಸಿಪಲ್ ಇಂಜನಿಯರವರೂ, ಬೆಂಗಳೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರೂ ಏತದರ್ಥ ಬಂದಿದ್ದರು. ಇರಾದೆ ಕೊಡತಕ್ಕವರಿಗೆ ಕಲ್ಪಿಸಲ್ಪಟ್ಟಿದ್ದ ಸ್ಥಳಾನುಕೂಲ್ಯವು ವಿಶೇಷ ತೃಪ್ತಿಕರವಾಗಿಲ್ಲವು, ಬಹಳಮಂದಿ ಸ್ಥಳ ಸಾಲದೆ ನಡುಬೀದಿಯಲ್ಲಿಯೂ ಮರಗಳ ಕೆಳಗೂ ಕುಳಿತುಕೊಳ್ಳುವಂತೆ ಪರಿಣಮಿಸಿತು. ಇದಕ್ಕೆ ಕಾರಣವು ಜನ ಸಮ್ಮರ್ದ ವಿನಾ ಬೇರೊಂದೂ ಇಲ್ಲವು. ಜನಸಂಘವನ್ನು ನೋಡಲಾಗಿ ಸ್ವದೇಶ ಪರಿಪಾಲನಾಧಿಕಾರವಂ ಕೈಗೊಳ್ಳುವದರಲ್ಲಿ ಅವರಿಗಿದ್ದ ಅಭಿನಿವೇಶವು ಬಹಳ ಆಶ್ಚರ್ಯಕರವಾಗಿರುತಿದೆ. ಕಮಿಷನರಾಗಿ ಚುನಾಯಿಸಲ್ಪಡಲಿಕ್ಕೆ ಲಾಯಕ್ಕಾದವರೆಂದು ಗಜೆಟಿನಲ್ಲಿ ಪ್ರಕಟಿಸಲ್ಪಟ್ಟಿದ್ದ ೧೩ ಮಂದಿಯ ಪೈಕಿ ನಾಲ್ವರ ಹೆಸರುಗಳಂ ಮಾತ್ರವೇ ಪ್ರಾಯೇಣ ಬಂದವರೆಲ್ಲರು ತಿಳಿಸುತ ಬಂ[illegible] ಕೇಳುತ್ತೇವೆ. ಸದರೀ ನಾಲ್ವರು ಉಮೇದುವಾರರು ತಾವು ಚುನಾಯಿಸಲ್ಪಡಲಿಕ್ಕೆ ವಿಶೇಷ ಪರಿಶ್ರಮಪಟ್ಟು ತಮಗೆ ಬೇಕಾದ ಜನರನ್ನು ಅನುಸರಿಸಿದರಲ್ಲದೆ, ತಮ್ಮ ಸ್ನೇಹಿತರ ಮೂಲಕ ಸಹ ಅನೇಕರಿಗೆ ಹೇಳಿಸಿದರು. [illegible] ಫಾರಂಗಳೂ ನೋಟೀಸುಗಳೂ ಕ್ರಮವಾಗಿ ಕೊಡಲ್ಪಡಬೇಕಾದವರ ಪೈಕಿ ಅನೇಕರಿಗೆ ತಲಪಿದಂತೆ ಕಾಣಿಸಲಿಲ್ಲವು. ಇದರಿಂದ ಬಹುಜನ ಉದಾಸೀನರಾಗಿ ಸದರೀ ಸ್ಥಳಕ್ಕೆ ಹೋಗದೆ ನಿಂತುಬಿಟ್ಟರು. ಇಷ್ಟರ ಅನಾದರಣೆಗೆ ಸಾವಕಾಶವಿಲ್ಲದೆ ಹೋದದ್ದೋ ಅಥವಾ ವಿಷಯಸ್ವರೂಪಾನಭಿಜ್ಞತೆಯೋ ಗೊತ್ತಾಗಲಿಲ್ಲವು. ಈಗ್ಯೆ ಐದಾರು ತಿಂಗಳ ಕಾಲವಾಗಿ ಪ್ರತಿ ಮನುಷ್ಯನ ಬಾಯಿಯಲ್ಲಿಯೂ ಮ್ಯೂನಿಸಿಪಲ್ ಯೆಲೆಕ್ಷನ್ ಎಂಬ ಶಬ್ದ ಹೊರಡುತಲಿರುವಾಗ್ಯೆ ಅವಕಾಶ ಸಾಲದೆಂಬ ಸಬಬ್ ಅಂಗೀಕಾರ ಯೋಗ್ಯವಾದುದಲ್ಲವು. ಏತೇನ ನಡೆಯಬೇಕಾದ ಏರ್ಪಾಡುಗಳಲ್ಲಿ ಲೋಪವಿಲ್ಲದೆ ಹೋಗಲಿಲ್ಲವು. ಇತರ ಡಿವಿಜನ್‌ಗಳ ಚುನಾವಣೆಯು ಈ ವಾರದಲ್ಲಿಯೂ ಮುಂದಿನ ವಾರದಲ್ಲಿಯೂ ನಡೆಯುವದು. ಮ್ಯೂನಿಸಿಪಲ್ ಕಮಿಷನರುಗಳಾಗಬೇಕೆಂಬ ಕೋರಿಕೆಯುಳ್ಳವರು ಕೆಲವರು ತಮ್ಮನ್ನು ಚುನಾಯಿಸಿದರೆ ಇದುವರಿವಿಗೆ ಈ ಷಹರಿಗೆ ಲಭಿಸದಿರುವ ಅನುಕೂಲ್ಯಗಳನ್ನೆಲ್ಲ ಕಲ್ಪಿಸಿಕೊಡುವಂತೆಯೂ, ಪ್ರಜೆಗಳ ಸ್ವಾತಂತ್ರ್ಯವನ್ನು ಬೋರ್ಡಿನಲ್ಲಿ ಸಂಪೂರ್ಣವಾಗಿ ಕಾಪಾಡುವಂತೆಯೂ, ವಾಗ್ದಾನ ಮಾಡುತಲೂ ಇನ್ನು ಕೆಲವರು ತಮ್ಮ ಪ್ರಾಬಲ್ಯವನ್ನೂರ್ಜಿತಗೊಳಿಸಲಿಕ್ಕೆ ಧನವ್ಯಯಮೂಲಕ ಸಹ ಪ್ರಯತ್ನ ಪಡುತಲೂ ಇರುವದಾಗಿ ಕೇಳುತ್ತೇವೆ.

AN EXPEREMENTAL MEASURE.

ಶ್ರೀಮನ್ ಮಹಾರಾಜಾ ಸರ್ಕಾರದವರು ಈಚೆಗೆ ಮೈಸೂರಲ್ಲಿ ಅಜಮಾಯಿಷೀ ತರೀಕ್ ಹಿಂದೂ ವೈದ್ಯಶಾಸ್ತ್ರ ಕ್ರಮವನ್ನನುಸರಿಸಿ ರೋಗಿಗಳಿಗೆ ಚಿಕಿತ್ಸೆ ಮಾಡಿಸುವ ಒಂದು ಯೇರ್ಪಾಡನ್ನು ಮಂಜೂರ್ಮಾಡಿರುವರೆಂತಲೂ, ಅದಕ್ಕಾಗಿ ಮಾಹೇಯಾನಾ ೧೫೦ ರೂಪಾಯಿಗಳ ತನಕ ಖರ್ಚಾಗುತಲಿದೆಯೆಂತಲೂ, ಇದರ ಪೈಕಿ ಒಂದು ಭಾಗ ಮ್ಯುನಿಸಿಪಲ್ ಫಂಡಿನಿಂದಲೂ ಮಿಕ್ಕ ಯೆರಡುಭಾಗ ಡಿಸ್ಟ್ರಿಕ್ಟ್ ಫಂಡಿನಿಂದಲೂ ಕೊಡಲ್ಪಡುತಿದೆಯೆಂತಲೂ, ಇಲ್ಲಿ ತಯಾರಾಗತಕ್ಕ ಔಷಧಗಳ ಗುಣಾವಗುಣಗಳನ್ನು ಪರೀಕ್ಷಿಸಲಿಕ್ಕೂ ಚಿಕಿತ್ಸೆಯ ಫಲಿತಾಂಶವನ್ನು ಕಂಡು ಹಿಡಿದು ರಿಪೋರ್ಟ್ ಮಾಡಲಿಕ್ಕೂ ಸಮರ್ಥರಾದ ಒಬ್ಬ ಮೆಡಿಕಲ್ ಆಫಿಸರ್ ನಿಯಮಿಸಲ್ಪಡುವರೆಂತಲೂ, ಅವರು ಸಾಮಾನ್ಯವಾಗಿ ಔಷಧ ಕೊಡತಕ್ಕ ವಿಷಯದಲ್ಲಿ ಪ್ರವೇಶಿಸದೆ ಯಾವಾಗಲಾದರು ಕೊಡಲ್ಪಡುವ ಔಷಧವು ರೋಗಿಯ ಪ್ರಾಣಹಾನಿಕರವಾದದ್ದೆಂದು ಕಂಡುಬಂದರೆ ಅಂತಾ ಸಮಯಗಳಲ್ಲಿ ಅದಂ ಉಪಯೋಗಿಸದೆ ನಿಲ್ಲಿಸಿಬಿಡುವ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆಂತಲೂ, ಆಗ ಅವರ ನಿಯಮನಪ್ರಕಾರ ಇತರರು ನಡೆಯತಕ್ಕದ್ದೆಂದು ನಿಬಂಧಿಸಿದಾರೆಂತಲೂ ತಿಳಿಯಬರುತಿದೆ. ಹೀಗೆ ಯಾವದಾದರೊಂದು ಯೇರ್ಪಾಡನ್ನು ಮಾಡಬೇಕಾದದ್ದು ಆವಶ್ಯಕವೆಂತಲೂ, ಆ ರೀತಿ ಮಾಡುವವರಿಂದ, ಕ್ಷೀಣಗತಿಯನ್ನೈದುತಲಿರುವ ಹಿಂದೂ ವೈದ್ಯಶಾಸ್ತ್ರವು ಪ್ರಚಾರದೊಳು ಬರಲಿಕ್ಕೆ ಅವಕಾಶ ಉಂಟಾಗುವದೆಂತಲೂ, ಇದಕ್ಕೆ ಪ್ರೋತ್ಸಾಹವಿಲ್ಲದೆ ಹೋದುದರಿಂದ ಸದರೀ ವೃತ್ತಿ ನಶಿಸುತಲಿದೆಯೆಂತಲೂ, ಈಗ್ಯೆ ೮ ವರ್ಷಗಳ ಹಿಂದೆಯೇ ತಿಳಿಸಿದ್ದೆವು. ಆದರೆ ಈಗಲಾದರು ಗವರ್ನ್‌ಮೆಂಟಿನವರಿಗೀ ವಿಷಯದಲ್ಲಿ ಪ್ರವೃತ್ತಿಯುಂಟಾಗಿ ಈ ವಿಧವಾದ ಯೇರ್ಪಾಡಂ ಮಾಡಿದ ಬಗ್ಯೆ ನಾವು ಬಹಳ ಸಂತೋಷಿಸುತ್ತೇವೆ. ಇಷ್ಟರಿಂದಲೇ ಉದ್ದಿಷ್ಟ ಪ್ರಯೋಜನವು ಸಿದ್ಧಿಸುವದಿಲ್ಲವು. ಇಂಗ್ಲಿಷ್ ವೈದ್ಯಾಭಿವೃದ್ಧಿಗೆ ಕಲ್ಪಿಸಲ್ಪಟ್ಟಿರುವ ಅನುಕೂಲ್ಯಗಳಲ್ಲಿ ಅರ್ಧಭಾಗವಾದರು ಇದಕ್ಕೂ ಉಂಟುಮಾಡಬೇಕಾಗಿರುತದೆ. ಇದಕ್ಕೆ ಪ್ರತ್ಯೇಕ ಮೆಡಿಕಲ್ ಸ್ಕೂಲನ್ನು ಸ್ಥಾಪಿಸಿ ಅದರಲ್ಲಿ ಶಾರ್ಙ್ಗಧರ, ಸುಶ್ರುತ, ಬಾಹಟ, ಚರಕ ಮೊದಲಾದ ಗ್ರಂಥಗಳನ್ನು ಕ್ರಮವಾಗಿ ಪಾಠ ಹೇಳಿಸಿ ಅದರಲ್ಲಿ ವ್ಯಾಸಂಗ ಮಾಡಿದವರು ಮೂರು ವರುಷಗಳಿಗೊಂದಾವರ್ತಿ ಒಂದು ಮೆಡಿಕಲ್ ಬೋರ್ಡಿನಿಂದ [illegible] ವರಿಗೆ ಅವರವರ ಯೋಗ್ಯತಾನುಸಾರ ಈಗ ಆಸ್ಪಟಲ್ ಅಸಿಸ್ಟೆಂಟರುಗಳಿಗೆ ಕೊಡುವಂತೆ ತಕ್ಕ ವೇತನಗಳಂ ಕೊಟ್ಟು ಪ್ರೋತ್ಸಾಹ ಪಡಿಸುವ ಪಕ್ಷದಲ್ಲಿ ಕೆಲವು ವರುಷಗಳೊಳಗಾಗಿ ಹಿಂದೂ ವೈದ್ಯಶಾಸ್ತ್ರ ಪಾಠಶಾಲೆಯು ಪ್ರಸಿದ್ಧಿಗೆ ಬರುವದು ಅದರಿಂದ ಅನೇಕ ಪ್ರಯೋಜನಗಳನ್ನು ಅನ್ಯದೇಶೀಯರು ಸಹ ಅನುಭವಿಸಬಹುದು. ಈ ಸಲಹೆಯನ್ನು ದಿವಾನರವರು ಪರ್ಯಾಲೋಚಿಸಿ ಶೀಘ್ರದಲ್ಲಿ ಅದಕ್ಕೆ ತಕ್ಕ ಯೇರ್ಪಾಡು ಮಾಡಬೇಕೆಂದು ಕೋರುತ್ತೇವೆ

DEPOSITS IN GOVERNMENT TREASURIES.

ಈ ದೇಶದಲ್ಲಿ ಇದುವರಿವಿಗೆ ಮಾಡಿರುವ ಮತ್ತು ಮಾಡಬೇಕೆಂದುದ್ದೇಶಿಸಿರುವ ಧರ್ಮಕಾರ್ಯಗಳಿಗೆ ಸ್ಥಿರವಾದ ಒಂದು ಆಯತಿಯಂ ಕಲ್ಪಿಸುವ ತಾತ್ಪರ್ಯದೊಡನೆ ಲಾಭಕರವಾದ ಬಡ್ಡಿಗೆ ಸರ್ಕಾರದ ಖಜಾನೆಗಳಲ್ಲಿ ಠೇವಣಿ ಇಡಲಿಕ್ಕೆ ಅಪ್ಪಣೆ ಕೊಡಬೇಕೆಂದು ಈಚೆಗೆ ಕೆಲವರು ಗವರ್ನ್‌ಮೆಂಟಿಗೆ ಅರ್ಜಿ ಬರೆದುಕೊಂಡರೆಂತಲೂ, ಅದನ್ನಾಲೋಚಿಸಿ ಇದರಡಿ ಕಂಡ ಕೆಲವು ನಿಬಂಧನೆಗಳಿಗೊಳಪಟ್ಟು ಖುಷ್‌ಖುಷಿ ಜನಗಳು ಸರ್ಕಾರ್ ಖಜಾನೆಗಳಲ್ಲಿ ಠೇವಣಿ ಇಡಬಹುದೆಂದು ಗವರ್ನ್‌ಮೆಂಟಿನವರು ತೀರ್ಮಾನಿಸಿದಾರೆಂತಲೂ ತಿಳಿಯಬರುತಿದೆ.

೧. ಮೂರು ಸಾವಿರ ರೂಪಾಯಿಗಳಿಗೆ ಕಡಮೆಯಿಲ್ಲದೆಯೂ ಲಕ್ಷ ರೂಪಾಯಿಗಳಿಗೆ ಮೇಲ್ಪಡದೆಯೂ ಠೇವಣಿ ಇಡತಕ್ಕದ್ದು.

೨. ಹಾಗೆ ಇಡಲ್ಪಡತಕ್ಕ ಠೇವಣೀ ಮೊಬಲಗಿನ ಬಡ್ಡಿಯು ಸಾಲೀಯಾನಾ ಸೇಕಡ ೪ ರೂಪಾಯಿಗಳಿಗೆ ಜಾಸ್ತೀಯಾಗಕೂಡದು. ಮತ್ತು ಸದರೀ ಬಡ್ಡಿ ಮೊಬಲಗು ೬ ತಿಂಗಳಿಗೊಂದಾವರ್ತಿ ಪಾವತಿ ಮಾಡಲ್ಪಡತಕ್ಕದ್ದು.

೩. ಪರೋಪಕಾರಾರ್ಥವಾಗಿ ಧರ್ಮ ಅಥವಾ ವಿದ್ಯಾಭ್ಯಾಸ ಪ್ರಯುಕ್ತವಾದ ಉದ್ದೇಶಗಳೊಡನೆ ಇಡಲ್ಪಡುವ ಠೇವಣಿಗಳು ಮಾತ್ರವೇ ಅಂ

ಗೀಕರಿಸಲ್ಪಡುವವು ಲೇವಣಿ ಇತರಕ್ಕೆ ಬಗ್ಗೆ ಬರತಕ್ಕ ಅರ್ಜಿಗಳಮೇಲೆ ರಿಪೋರ್ಟು ಉದ್ದೇಶವು ಪ್ರೋತ್ಸಾಹಾರ್ಹವಾದದ್ದೇ ಎಂಬ ಅಂಶವಂ ನಿರ್ಣಯಿಸತಕ್ಕ ಸ್ವಾತಂತ್ರ್ಯವನ್ನು ಗವರ್ನಮೆಂಟಿನವರು ಸ್ವತಃ ಇಟ್ಟುಕೊಂಡಿರುತ್ತಾರೆ

೪. ಈ ನಿಬಂಧನೆಗಳನ್ನನುಸರಿಸಿ, ಲೇವಣಿ ಇಡುವಕ್ಕೆ ಇಷ್ಟಪಡುವವರು ದತ್ತ ವಾರಸುದಾರರಾಗಲಿ, ಯೆಗ್ಸಿಕ್ಯೂಟರ್ಸ್ ಎಂಬ ತಮ್ಮ ಆಸ್ತಿಯ ವಿಚಾರಣೆಕರ್ತರಾಗಲಿ, ಅಡ್ಮಿನಿಸ್ಟ್ರೇಟರ್ಸ್ ಎಂಬ ಅಧಿಕಾರ ಹೊಂದಿದವರಾಗಲಿ ಲೇವಣಿ ಮೊದಲಿನ ವ್ಯಕ್ತಿ ಒಂದು ಭಾಗವನ್ನಾದರೂ ವಿಶಿಷ್ಟವನ್ನಾದರೂ ವಾಪಸ್ ತೆಗೆದುಕೊಳ್ಳುವ ಭಿನ್ನಹವು ಪರತ್ತಿಗೆ ಅನರ್ಹರು ಒಳಪಡಿಸಿ ಗವರ್ನಮೆಂಟಿಗೆ ಕರಾರ್ ಒಪ್ಪಿಕೊಡತಕ್ಕದ್ದು ಪರಂತು ಲೇವಣೀ ಮೊಬಲಗನ್ನು ಗವರ್ನಮೆಂಟಿನವರ ಸಮ್ಮತಿಯಮೇಲೆ ಧರ್ಮಕಾರ್ಯದ ಪ್ರಯೋಜನೆ ಉದ್ದೇಶದೊಡನೆ ವಾಪಸ್ ತೆಗೆದು ಅನ್ಯಥಾ ಯೋಗ್ಯವಾದ ಮಾಡುವುದು ಸದರೀ ಲೇವಣೀದಾರರಿಗೂ ಅವರ ವಾರಸುದಾರರಿಗೂ ಎಗ್ಸಿಕ್ಯೂಟರಿಗಳಿಗೂ, ಅಡ್ಮಿನಿಸ್ಟ್ರೇಟರಿಗಳಿಗೂ ನ್ಯಾಯವಾಗಿರತಕ್ಕದ್ದು.

೫ ಧರ್ಮಕಾರ್ಯೋದ್ದೇಶದ ಬಗ್ಗೆ ಮೇಲೆಕಂಡಂತೆ ಲೇವಣಿ ಇಟ್ಟುಕೊಳ್ಳುವ ಕ್ರಮವಂ ಗವರ್ನಮೆಂಟಿನವರು ತಮಗಿಷ್ಟಬಂದಾಗ ಮನ್ನಾ ಮಾಡತಕ್ಕ ಸ್ವಾತಂತ್ರ್ಯವುಳ್ಳವರಾಗಿರುತ್ತಾರೆ

Occasional Notes
ನೈಮಿತ್ತಿಕ ವಿಷಯನ್ಯಾಸ

Appointment —ಬೊಂಬಾಯಿ ಹೈಕೋರ್ಟಿನ ಜಡ್ಜಿಯವರಾದ ಆನರೆಬಲ್ ಜಸ್ಟಿಸ್ ತೆಲಾಂಗ್, ಸಿ ಐ ಇ ಯವರ ವಿಶ್ವವಿದ್ಯಾಲಯ ವೈಸ್‌ಛಾನ್ಸಲರಾಗಿ ನೇಮಕರಾಗಿರುತ್ತಾರೆ

The Fergusson College.—ಪುನೆಯಲ್ಲಿನ ಫರ್ಗಸನ್ ಕಾಲೇಜ್ ಯೆಂಬ ಶಾಸ್ತ್ರ ಪಾಠಶಾಲೆಯ ಪ್ರಿನ್ಸಿಪಾಲರಾಗಿದ್ದು ಗತಿಸಿದ ಮಿ|| ಆಪ್ಟೆಯೆಂಬವರ ಸ್ಥಾನದಲ್ಲಿ ಪಂಡಿತ ಗೋಪಾಲಕೃಷ್ಣ ಆಗಾರ್ಕರ್, ಎಂ ಎ ಯವರು ಚುನಾಯಿಸಲ್ಪಟ್ಟರ ಹಾಗಿದೆ

The silver crisis—ಬೆಳ್ಳಿಯ ನಾಣ್ಯಕ್ಕೆ ಉಂಟಾದ ಕೊರತೆಯು ದೆಸೆಯಿಂದ ವ್ಯಾಪಾರ ಬಿದ್ದು ಹೋದದರಿಂದ ಇಂಗ್ಲಾಂಡ್ ದೇಶದ ಲ್ಯಾಂಕಾಷೈರ್ ತುಕಡಿಯ ಜನರು, ಇದರ ಪರಿಹಾರದ ಬಗ್ಗೆ ಯಾದು ಪ್ರಯತ್ನವನ್ನು ನಡಿಸಬೇಕೆಂದು ಅಲ್ಲಿನ ಗವರ್ನಮೆಂಟಿಗೆ ಅರ್ಜಿ ದಾಖಲ್ಮಾಡಿಕೊಂಡಿದ್ದಾರೆ

A fiction — ಅಲಹಾಬಾದ್ ಹೈಕೋರ್ಟ್ ಚೀಫ್ ಜಸ್ಟಿಸ್ ಅವರಿಗೂ ಇತರ ಜಡ್ಜಿಗಳ ಪೈಕಿ ಮೊಬ್ಬರಾದ ಮಿ ಮಹಮ್ಮದ್ ಯೆಂಬವರಿಗೂ ಒಂದು ವಿಷಯದಲ್ಲುಂಟಾಗಿರುವ ಮನಸ್ತಾಪ ಉಪಸ್ಥಿತ ಕಡೆಗೆ ಸದರೀ ಇಬ್ಬರ ಪೈಕಿ ಯೊಬ್ಬರು ರಾಜೀನಾಮೆ ಕೊಡುವವರಲ್ಲಿ ಪರ್ಯವಸಾನವಾಗುವಂತಿದೆ ಎಂದು ಹಿಂದೂಸ್ತಾನಿ ಪತ್ರಿಕೆ ತಿಳಿಸುತಿದೆ.

The new Dewan of Travancore —ತಿರುವಾಂಕೂರು ಸಂಸ್ಥಾನದ ದಿವಾನರಾದ ಮೆ ರಾಮರಾಯರವರು ಪೆನ್ಷನ್‌ಮೇಲೆ ನಿವೃತ್ತರಾದರಷ್ಟೆ ಈ ತಿಂಗಳ ೧೨ ನೇ ತಾರೀಖಿನಲ್ಲಿ ಶ್ರೀಮನ್ಮಹಾರಾಜರವರು ಮೆ|| ಶಂಕರ ಸುಬ್ಬಯ್ಯರೆಂಬವರನ್ನು ತಮ್ಮ ದಿವಾನರನ್ನಾಗಿ ನೇಮಕಮಾಡಿದರು ಈ ದೊಡ್ಡಮನುಷ್ಯರು ಇದುವರವಿಗೆ ತಾವು ಮಾಡಿದ ಅಧಿಕಾರದಲ್ಲಿ ಅಲ್ಲಿನ ಪ್ರಜೆಗಳ ಪ್ರೀತಿ ಗೌರವಗಳಿಗೆ ಪಾತ್ರರಾಗಿರುತಲಿದ್ದುದರಿಂದ ಇವರನ್ನು ಸಂಸ್ಥಾನದ ದಿವಾನರನ್ನಾಗಿ ಮಾಡಿದ್ದು ಯೆಲ್ಲರಿಗೂ ಸಂತೃಪ್ತಿಯನ್ನುಂಟು ಮಾಡತಕ್ಕದ್ದಾಗಿದೆಯೆಂದು ಕಾಣುತಿದೆ.

The Hardwar Enquiry — ಈಚೆಗೆ ಕೂರುನಾಲ್ಕು ತಿಂಗಳ ಹಿಂದೆ ಹರಿದ್ವಾರದಲ್ಲಿ ನಡೆದ ಜಾತ್ರೆಯ ಸಂದರ್ಭದೊಳು ಪೋಲೀಸಿನವರಿಂದ ನಡಿಸಲ್ಪಟ್ಟ ಹೃದಯವ್ಯಾಕುಲಭೂತವಾದ ಕೆಲವು ಕೃತ್ಯಗಳಂ ಕುರಿತು ದರ್ಯಾಪ್ತು ಮಾಡುವದಕ್ಕಾಗಿ ಯೇರ್ಪಟ್ಟ ಕಮಿಷನ್ ಯೆಂಬ ಅಧಿಕಾರಿಗಳು ೫೦ ಮಂದಿ ಸಾಕ್ಷಿಗಳಂ ವಿಚಾರಿಸಿದರು. ಈ ವಿಚಾರಣೆಯಲ್ಲಿ ಹಿಂಸೆ, ಕ್ರೌರ್ಯ, ಸುಲಿಗೆ, ಲೂಟಿ, ಕಳೆಗೆ ಬೂಟ್ ಮೊದಲಾದ ಘೋರ ಕೃತ್ಯಗಳು ಯಾತ್ರಾರ್ಥಿಗಳಾಗಿ ಅಲ್ಲಿಗೆ ಹೋದವರ ವಿಷಯದಲ್ಲಿ ನಡೆಸಲ್ಪಟ್ಟಂತೆ ಸ್ಪಷ್ಟವಾಗಿ ಯೇರ್ಪಟ್ಟಿದೆ. ಇದರ ಫಲಿತಾಂಶವು ಮುಂದೆ ತಿಳಿಯತಕ್ಕದ್ದಾಗಿದೆ

The Indian currency —ಇಂಡ್ಯ ದೇಶದ ಚಲಾವಣಿ ನಾಣ್ಯಕ್ಕೆ ಉಂಟಾಗಿರುವ ದುರ್ದಶೆಯು ಪರಿಹಾರವಾಗಬೇಕಾಗಿದ್ದರೆ, ಸಂಪೂರ್ಣ ವಿಮರ್ಶೆಯ ತರುವಾಯ, ಇಂಡ್ಯರಾಜ್ಯದ ಬೊಕ್ಕಸದಿಂದ ವಿಲಾಯತಿಯಲ್ಲಿ ಮಾಡಲ್ಪಡುವ ಖರ್ಚುಗಳಂ ತಗ್ಗಿಸುವದರಿಂದ ಸದರೀ ದುರ್ದಶೆಯು ಪರಿಹಾರವಾಗಬೇಕು, ಅದಕ್ಕಿಂತಲು ಉಚಿತವಾದ ಮಾರ್ಗ ಬೇರೆಯೊಂದು ಇರಲಾರದು, ಮತ್ತು ಇಂಡ್ಯದೇಶದಲ್ಲಿ ಚಲಾವಣೆಗೆ ಬಂಗಾರದ ನಾಣ್ಯಗಳಂ ಟಾಪಿಸಿ ಜಾರಿಯೆ ಳು ತರಬೇಕೆಂದು ಕೆಲವರು ಕೊಡುವ ಸಲಹೆಗಳು ಪ್ರವೇಶನಸಾಧ್ಯತಿಯಾಗಲಾರದೆಂದು ಲಂಡನ್ ಸ್ಟಾಂಡರ್ಡ್ ಪತ್ರಿಕೆ ಅಭಿಪ್ರಾಯ ಪಡುತಿದೆ.

ನೋಟಿಸ್

ಆಬೇ ಪಾನದಲ್ಲಿ ಪ್ರಾಯಶಃ ನಮ್ಮ ಚಂದಾದಾರರೆಲ್ಲರಿಗೂ ಅವರವರ ಬಾಕಿ ಪಟ್ಟೀಲಿ ನಮ್ಮಲ್ಲಿಂದ ಕಾರ್ಡುಗಳು ಒಪ್ಪಿಸಲ್ಪಟ್ಟಿವೆಯಾಗಿ ಯಲ್ಲರು ದಯಮಾಡಿ ಅದು ತಲಪಿದಕೂಡಲೆ ಬಾಕಿಗಳಂ ಕಳುಹಿಸಿ ಕೊಡಬೇಕೆಂದು ಇದರ ಮೂಲಕ ಜ್ಞಾಪಕ ಕೊಟ್ಟಿರುತ್ತೇವೆ ಹಾಗೆ ಕಳುಹಿಸದೆಯೂ, ನಮಗೆ ಜವಾಬ್ ಬರೆಯದೆಯೂ, ಮೌನವಾಗಿರುವಂತವರ ಪತ್ರಿಕೆಗಳು ಮನ್ನಾ ಮಾಡಲ್ಪಡುವುದು.

೧೫—೮—೯೨. ಪ್ರೊಪ್ರೈಟರ್,

LOCAL AND PROVINCIAL NEWS
ಒಳದೇಶಮತ್ತು ತಾಲ್ಲೂಕಿನ ವೃತ್ತಾಂತಗಳು

H. H the Maharaja,—ಶ್ರೀಮನ್ಮಹಾರಾಜರವರು ಬರುವ ಬುಧವಾರದ ದಿನ ಗೌರೀಬಿದನೂರು ಮಾರ್ಗವಾಗಿ ಮೈಸೂರಿಗೆ ದಯ ಮಾಡುವರು

The races —ಈಸಲದ ಕುದುರೆ ಪರತ್ತು ಕ್ರಮವಾಗಿ ನಡೆಯಿತು ಪ್ರತಿ ಪರತ್ತಿನ ದಿನದಲ್ಲಿಯೂ ಪರತಿ ಮೈದಾನದಲ್ಲಿ, ಬಹುಮಂದಿ ಗುಂಪು ಕೂಡುತಲಿದ್ದರು. ಇಲ್ಲಿನ ಪರತ್ತುಗಳನ್ನು ಕಟ್ಟಕಡೆಸಿಸೆ ತರುವಾಯ ಜಹಗೀರದಾರರು ತಮ್ಮ ಕುಟುಂಬದೊಡನೆ ಇಲ್ಲಿಗೆ ದಯಮಾಡಿದಾರೆ

Reduction of pay —ಈಗ್ಯೆ ಐದು ಸಂವತ್ಸರ ಕಾಲಕ್ಕಿಂತ ಮೇಲ್ಪಟ್ಟು ಸೆಕೆಂಡ್ ಅಸಿಸ್ಟೆಂಟ್ ಸ್ಯೂಪರಿಂಟೆಂಡೆಂಟರಾಗಿದ್ದು ಈಚೆಗೆ ಕೆಲವು ತಿಂಗಳ ಮೊದಲು ಚೀಫ್ ಕೋರ್ಟಿನಲ್ಲಿ ಕೆಲಸ ನೋಡುತಲಿರುವ ಮಿ|| ಎಸ್ ಎನ್ ರಾಮಸ್ವಾಮಯ್ಯಂಗಾರ್ರವರು ೫೦ ರೂಪಾಯಿಂದ ೪೦ ಕ್ಕೆ ಕಡಿಮೆ ಮಾಡಲ್ಪಟ್ಟು ಈಗಿರುವ ಸ್ಥಳದಲ್ಲಿಯೇ ಕೆಲಸ ನೋಡತಕ್ಕದ್ದೆಂದು ವ್ಯವಸ್ಥೆಯಾಗಿರುವದಾಗಿ ತಿಳಿದುಬರುತಿದೆ

Closing of the relief-works in the Mysore District —ಮೈಸೂರ್ ಡಿಸ್ಟ್ರಿಕ್ಟಿಗೆ ಸೇರಿದ ಗುಂಡ್ಲುಪೇಟೆ, ನಂಜನಗೂಡು, ತಿರುಮಕೂಡಲು ನರಸೀಪುರ ಈ ತಾಲ್ಲೂಕುಗಳಲ್ಲಿ ರಿಲೀಫ್ ಕೆಲಸಗಳನ್ನು ಸದರೀ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರು ಮನ್ನಾ ಮಾಡಿಸಿದರೆಂದು ಕೇಳುತ್ತೇವೆ ಇದಕ್ಕೆ ಕೂಲಿ ಮಾಡುವವರ ಸಂಖ್ಯೆಯು ಕ್ರಮೇಣ ಕಡಮೆಯಾಗುತ ಬಂದದ್ದೇ ಕಾರಣವೆಂದು ಕಾಣುತಿದೆ.

The Chief Court Registrarship —ಚೀಫ್ ಕೋರ್ಟ್ ರಿಜಿಸ್ಟ್ರಾರವರ ಮರಣದ ದೆಸೆಯಿಂದ ಈಗ ಖಾಲಿಯಾಗಿರುವ ಸದರೀ ಕೆಲಸಕ್ಕೆ ಜುಡಿಷಿಯಲ್ ಲೈನ್‌ನಲ್ಲಿ ದರ್ಜಾಪ್ರಕಾರ ಬಾಧ್ಯರಾಗಿ ರತಕ್ಕವರು ಮೂವರಿರುತ್ತಾರೆ. ಅವರುಗಳ್ಯಾರೆಂದರೆ,—ಅಂಡರ್ ಸೆಕ್ರಟರಿ ಮಿ|| ಅನಂತಸ್ವಾಮಿ ರಾಯರವರು, ಬೆಂಗಳೂರ್ ಸಬ್‌ಜಡ್ಜಿ ಮಿ|| ನಂಜುಂಡಯ್ಯನವರು, ಮೈಸೂರ್ ಸಬ್‌ಜಡ್ಜಿ ಮಿ|| ರಾಮಸ್ವಾಮಯ್ಯರವರು, ಇವರ ಪೈಕಿ ಮೊದಲನೆಯವರು, ಪ್ರತ್ಯೇಕ ಲೈನಿನಲ್ಲಿ ಜವಾಬ್ದಾರಿಯುಳ್ಳ ಕೆಲಸದಲ್ಲಿರುವದರಿಂದ ಮರಳಿ ಅಲ್ಲಿಗೆ ಬರುವರೆಂಬ ನಂಬಿಕೆ ನಮಗಿಲ್ಲವು ಆದುದರಿಂದ ಮಿಕ್ಕವರಿಬ್ಬರ ಪೈಕಿ ಯಾರಿಗೆ ಕೊಡಲ್ಪಡುವದೋ, ಚೀಫ್‌ಜಡ್ಜಿಯವರು ಯಾರಿಗೆ ಸಿಫಾರಸ್ ಮಾಡುವರೋ ಮುಂದೆ ತಿಳಿಯಬೇಕಾಗಿರುತದೆ.

THE MYSORE GAZETTE
ಮೈಸೂರು ಗಜೆಟ್

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದಿಂದ ಕೊಡಲ್ಪಟ್ಟಾದ ಇಷ್ತಿಹಾರ್‌ನಾಮೆಗಳು.

ನಂ|| ೫೧೫೩—೦. ೪ ೧೮೯೨—೯೩—ತಾ|| ೬ನೇ ಆಗಸ್ಟು ೧೮೯೨—ಇದರಡಿ ತಿಳಿಸಲ್ಪಡುವ ಮೈಸೂರ್ ಮೆಡಿಕಲ್ ವಿದ್ಯಾರ್ಥಿಗಳು ೩ನೇ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಡಲಿಕ್ಕೆ ಅರ್ಹರಾಗಿರುವಂತೆ ಮದರಾಸ್ ಮೆಡಿಕಲ್ ಕಾಲೇಜಿನಿಂದ ಸರ್ಟಿಫಿಕೇಟ್ ಪಡೆದಿರುತ್ತಾರಾಗಿ, ಅವರು ಕೆಲಸದಮೇಲೆ ಹಾಜರಾಗಿರುವಂತೆ ಮೈಸೂರ್ ಗವರ್ನಮೆಂಟಿನ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮ್ಮಿಷನರವರಿಗೆ ರಿಪೋರ್ಟ್ ಮಾಡಿದ ತಾರೀಖ್ ಲಾಗಾಯಿತು, ಅಂದರೆ ೧೮೯೨ನೇ ಇಸವಿ ಆಗಸ್ಟ ೪ ನೇ ತಾರೀಖ್ ಲಾಗಾಯಿತು ಮೂರನೇ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟರಾಗಿ ನೇಮಕರಮ್ಮಿಡಲ್ಪಟ್ಟು ಅವರವರ ಹೆಸರಿಗೆ ಬಾಜೂವಿನಲ್ಲಿ ಕಂಡ ಆಸ್ಪತ್ರೆಗಳಿಗೆ ನೌಕರಿಯಬಗ್ಗೆ ಕಳುಹಿಸಲ್ಪಟ್ಟಿರುತ್ತಾರೆ —

ದರ್ಜೆ—೩ನೇ ಕ್ಲಾಸ್ ಹಾಸ್ಪಿಟಲ್ ಅಸಿಸ್ಟೆಂಟುಗಳು.

ಹೆಸರು.	ಅವರು ಕಳುಹಿಸಲ್ಪಟ್ಟಿರುವ ಆಸ್ಪತ್ರೆಗಳು
ವಿ ಜನಾರ್ದನ್ ಎಂ ಶ್ರೀನಿವಾಸರಾವ್ ಜಿ ಮೋಹನ್	ಬೆಂಗಳೂರ್ ಸಿವಿಲ್ ಮಿಲಿಟರಿಯವರ ಆಸ್ಪತ್ರೆ
ಎಂ ನಂಜುಂಡೈಯ್ಯ ಎನ್ ಬಸಪ್ಪ ಒಎಂಟಿ ಪ್ಯಾಟ್ರಿಕ್	ಮೈಸೂರು ಜನರಲ್ ಆಸ್ಪತ್ರೆ
ಎಂ ವೆಂಕಟಾಚಾರ್	ಕೋಲಾರ್ ಸಿವಿಲ್ ಆಸ್ಪತ್ರೆ
ಎ ಲಿಂಗಪ್ಪ	ಚಿಕ್ಕಮಗಳೂರ್ ಡಿಟ್ಟೊ
ಎಂ ವಿಜಯರಂಗಸ್ವಾಮಿ	ಚಿತ್ರದುರ್ಗ ಡಿಟ್ಟೊ.
ಕೆ ಕೃಷ್ಣಸ್ವಾಮಯ್ಯಂಗಾರ್	ಶಿವಮೊಗ್ಗ ಡಿಟ್ಟೊ
ಸಿ ಎನ್ ಲಕ್ಷ್ಮಣ	ಹಾಸನ ಡಿಟ್ಟೊ

ನಂ|| ೫೧೦೫೫—೦ ೯ ೧೨೬—೯೨—ತಾ|| ೧೨ನೇ ಆಗಸ್ಟು ೧೮೯೨—ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಪಿ, ಪಂಚನದರಾಯರವರು, ೧೮೯೨ನೇ ಇಸವಿ ಜುಲೈ ೧೪ನೇ ಮಾರ್ಚ ನಂ|| ೬೩೬—೦ ೯ ೭೬—೯೨ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಕೊಡಲ್ಪಟ್ಟಿದ್ದ ಯೆಂಟು ದಿವಸಗಳ ಕ್ಯಾಜುಯಲ್ ರಜಾವನ್ನು ಉಪಯೋಗಿಸಿಕೊಳ್ಳದ್ದರಿಂದ ಸದರೀ ರಜಾ ಇವರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ ೫೫೩—೦ ೫೯೧—೯೨—ತಾ|| ೧೨ನೇ ಆಗಸ್ಟು, ೧೮೯೨— ಮೈಸೂರ್ ಸರ್ವಿಸ್ ರೆಗ್ಯುಲೇಷನ್‌ಗಳ ೧೩೨ನೇ ಆರ್ಟಿಕಲಿನ ನಿಯಮವನ್ನನುಸರಿಸಿ ಹಾಸನ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಜೆ ಡಬ್ಲ್ಯು ಸ್ಮೈತ್‌ಯವರಿಗೆ ೧೮೯೨ನೇ ಇಸವಿ ಜುಲೈ ೩೦ನೇ ಮಾರ್ಚಲಾಗಾಯಿತು ೧೫ ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ

ನಂ. ೫೧೪೮, ೦ ೫೩೪—೯೨—ತಾ|| ೧೩ ನೇ ಆಗಸ್ಟ ೧೮೯೨—ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಕೆ. ನಾಗೇಶರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಸ್ವಂತ ಕೆಲಸದ ಬಗ್ಗೆ ೬ ತಿಂಗಳ ರಜಾ ಕೊಡಲ್ಪಟ್ಟಿರುತಿದೆ

ಚೆನ್ನರಾಯಪಟ್ಟಣದ ಅಮಲ್ದಾರ್ ಮಿ|| ಕೆ. ರಾಮಾನುಜಯ್ಯಂಗಾರ್ರವರು ನಾಲ್ಕನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್ ತರೀಕ್ ನೇಮಕರಮ್ಮಿಡಲ್ಪಟ್ಟು ಮಿ|| ನಾಗೇಶರಾಯರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಶಿವಮೊಗ್ಗ ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನಲ್ಲಿರತಕ್ಕದ್ದು.

ನಂ ೫೧೪೨—೦ ೫೪೧—೯೨ — ತುಮಕೂರ್ ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಪಿ. ರಾಘವೇಂದ್ರರಾಯರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ. ಬೆಂಗಳೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಎಂ. ಲೇಯಿಂಗ್ ವಿಲ್ಸನ್ ಯವರು ಮಿ|| ರಾಘವೇಂದ್ರರಾಯರವರು ರಜಾಮೇಲೆ ಗೈರ್‌ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ತುಮಕೂರ್ ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನಲ್ಲಿರತಕ್ಕಬಗ್ಗೆ ತುಮಕೂರ್ ಡಿಸ್ಟ್ರಿಕ್ಟಿಗೆ ನಿಯಮಿಸಿಕಳುಹಿಸಲ್ಪಟ್ಟಿರುತ್ತಾರೆ.

ನಂ ೫೧೫೦—೦ ೫೨೦—೯೨ — ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮಿ|| ಬಿ. ಕೆ. ವೆಂಕಟವರದಯ್ಯಂಗಾರ್ರವರಿಗೆ ಮಾರ್ಚಿ ಮಾಹೆ ೫ ನೇ ತಾರೀಖ್ ಲಾಗಾಯಿತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

ಮಿ|| ಸೈಯದ್ ನಸುರುದ್ದೀನ್ ಯವರು, ಮಿ|| ಬಿ ಕೆ ವೆಂಕಟವರದಯ್ಯಂಗಾರ್ರವರು ರಜಾಮೇಲೆ ಗೈರ್‌ಹಾಜರಾಗಿರುವಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ತುಮಕೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೆಲಸಗಳನ್ನು ಆಕ್ಟಿಂಗ್ ತರೀಕ್ ನೋಡುವಂತೆ ನೇಮಕರಮ್ಮಿಡಲ್ಪಟ್ಟಿರುತ್ತಾರೆ. ಇವರು ಹಾಸನ ಡಿಸ್ಟ್ರಿಕ್ಟ್ ಚಾರ್ಜಿನಿಂದ ಬಿಡುಗಡೆಯಾದ ಕೂಡಲೆ ಕೆಲಸದಮೇಲೆ ಹೋಗಿ ಹಾಜರಾಗತಕ್ಕದ್ದು.

ಬೆಂಗಳೂರ್ ತಾಲ್ಲೂಕ್ ಅಮಲ್ದಾರ್ ಮಿ|| ಬಿ. ಕೃಷ್ಣಸ್ವಾಮಿ ನಾಯುಡುರವರು ಮಿ|| ಸೈಯದ್ ನಸುರುದ್ದೀನ್ ಯವರು ಇತರ ಕೆಲಸದಮೇಲೆ ಗೈರ್‌ಹಾಜರಾಗಿರುವತನಕ, ಬೆಂಗಳೂರ್ ಡಿಸ್ಟ್ರಿಕ್ಟ್ ನಾಲ್ಕನೇ ಕ್ಲಾಸ್ ಅಸಿಸ್ಟೆಂಟ್ ಕಮ್ಮಿಷನರಾಗಿ ಆಕ್ಟಿಂಗ್‌ತರೀಕ್ ಕೆಲಸ ನೋಡುವಂತೆ ನಿಯಮಿಸಲ್ಪಟ್ಟಿರುತ್ತಾರೆ.

ನಂ ೫೧೯೪—೦ ೫೬೪—೯೨ — ಇದರಡಿ ಕಂಡಂತೆ ಸ್ಥಳ ವಿಲೇವಾರಿ ಹುಕುಂ ಮಾಡಲ್ಪಟ್ಟಿರುತಿದೆ.

ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಸಿ ದೇವರಾಜೇ ಅರಸರವರು, ಬೆಂಗಳೂರು ಡಿಸ್ಟ್ರಿಕ್ಟಿಗೂ, ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್, ಮಿ|| ಕೆ. ಎಸ್. ಚಂದ್ರಶೇಖರಯ್ಯರ್, ಬಿ ಎ. ಬಿ ಎಲ್ ಯವರು ಚೀಫ್‌ಕೋರ್ಟಿಗೂ, ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್, ಮಿ|| ಕೆ. ಆರ್ ಶ್ರೀನಿವಾಸಯ್ಯಂಗಾರ್ರವರು ದಿವಾನರವರ ಆಫೀಸಿಗೂ ದಾಖಲಾಗಿರುತ್ತಾರೆ.

ನಂ. ೫೫೦೦—೦ ೫೩೪—೯೨.— ಕಡೂರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ನಾರಣಯ್ಯಂಗಾರ್ರವರಿಗೆ ಅವರುಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರುತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ

ಚಿಕ್ಕಮಗಳೂರ್ ಮುನ್ಸಿಫ್ ಮಿ|| ಪಿ ವೆಂಕಟಪ್ಪಯ್ಯರವರು ಮಿ|| ನಾರಣಯ್ಯಂಗಾರ್ರವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ತನಕ ಕಡೂರ್ ಡಿಸ್ಟ್ರಿಕ್ಟಿನಲ್ಲಿ ನಾಲ್ಕನೇ ಕ್ಲಾಸ್ ಜನರಲ್ ಅಸಿಸ್ಟೆಂಟ್ ಕಮ್ಮಿಷನರ್ ಮತ್ತು ೧ನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಖ್ ನೇಮಕರಮ್ಮಿಡಲ್ಪಟ್ಟಿರುತ್ತಾರೆ

ಮೈಸೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರ್ ಮಿ|| ಆರ್. ಬಿ ಕೃಷ್ಣರಾವ್ ಯವರು ಚಿಕ್ಕಮಗಳೂರಲ್ಲಿ ಡಿಸ್ಟ್ರಿಕ್ಟ್ ಟ್ರಜರಿ ಇನ್‌ಚಾರ್ಜಿನೊಳಗಿರುವ ಬಗ್ಗೆ ಕಡೂರ್ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟಿರುತ್ತಾರೆ.

ನಂ. ೨೦೪೫—೧. ೫೯೬—೯೨.—ಎಡಿಯೂರು ಸಬ ತಾಲ್ಲೂಕ್ ಶೆರ್‍ಸ್ತೆದಾರ ಅಮಲ್ದಾರ ಎಸ್. ಅಳಸಿಂಗರಯ್ಯಂಗಾರ್ರವರಿಗೆ, ೧೮೯೨ ನೇ ಇಸವಿ ಜೂನ್ ೨೨ ನೇ ಮಾರ್ಚು ೧೦೪ ನೇ ನಂಬರುಳ್ಳ ಗವರ್ನಮೆಂಟ ಇಸ್ತಿಹಾರನಾಮೆಯ ಮೂಲಕ ಕೊಡಲ್ಪಟ್ಟಿದ್ದ ರಜಾವಿಗೆ ಜಾಸ್ತಿಯಾಗಿ ೨೦ ದಿನಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತದೆ.

ನಂ. ೧೯೦೫—೧. ೪೬೨—೯೨.—ಮೈಸೂರ್ ಡಿಸ್ಟ್ರಿಕ್ಟ್ ನಂಜನಗೂಡು ತಾಲ್ಲೂಕ ಅಮಲ್ದಾರ್ ನರಸಿಂಹನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರುತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

ನಂ. ೨೩೫೦—೦. F. ೨೦—೯೨.— ೧೮೯೨ ನೇ ಇಸವಿ ಜೂಲೈ ೨ನೇ ಮಾರ್ಚು ೧೧೨ ನೇ ನಂಬರ್ ಇಸ್ತಿಹಾರ ನಾಮೆಗೆ ಸೇರಿದಂತೆ ಅಸಿಸ್ಟೆಂಟ ಕಮಿಷನರ್ ಮೆ|| ಜೆ. ಜೆ. ನಾರ್ಥ ಯವರಿಗೆ ಮೆಡಿಕಲ್ ಸರ್ಟಿಫಿಕೇಟಿ ಮೇರೆ ಕೊಡಲ್ಪಟ್ಟಿದ್ದ ರಜಾ ಇದರಿಂದ ಇನ್ನೂ ಎರಡು ತಿಂಗಳವರಿವಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ನಂ. ೨೩೫೫—G. F. ೧೩೯—೯೨ —ಬೆಂಗಳೂರಲ್ಲಿರುವ ಹುಚ್ಚರ ಮತ್ತು ಕುಷ್ಟರೋಗಿಗಳ ಆಸ್ಪತ್ರಿಗಳ ಚಾರ್ಜಿನಲ್ಲಿರತಕ್ಕ ಅಸಿಸ್ಟೆಂಟ ಸರ್ಜಿಯನ್ ಮೆ|| ಎಸ್. ಆರ್ನಾಲ್ಡ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ೩ ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತಿದೆ.

CORRESPONDEOCE.

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಬಾಧ್ಯರಲ್ಲವು.—ಎಡಿಟರ ಕ. ಪ್ರ.]

ಮ|| ರಾ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಅಯ್ಯಾ—ಪೂರ್ವ ಸಂಪ್ರದಾಯೈಕ ಶರಣ್ಯರಾಗಿಯೂ, ವೇದಶಾಸ್ತ್ರ ಪುರಾಣೇತಿಹಾಸಾದಿಗಳಲ್ಲಿ ಸಂಪೂರ್ಣ ಪ್ರಾವೀಣ್ಯತಾ ಜ್ಞಾನವುಳ್ಳವರಾಗಿಯೂ ಇರುವ ಆಸ್ತಿಕ ಶಿರೋಮಣಿಗಳಿರಾ! ಈ ಕೆಳಗೆ ತಿಳಿಸಲ್ಪಡುವ ಪ್ರಶ್ನೆಗಳಿಗೆ ಉತ್ತರಕೊಟ್ಟು ನನ್ನ ಅನುಮಾನವನ್ನು ನಿವೃತ್ತಿಸಬೇಕೆಂದು ಪ್ರಾರ್ಥಿಸುತ್ತೇನೆ.

೧. ಸೂರ್ಯನು ಮೇರು ಪರ್ವತಕ್ಕೆ ಆಚೆ ಹೋಗುವ ಕಾಲದಲ್ಲಿ ರಾತ್ರಿ ಯಾಗುತಿದೆಂದು ಸಾಧಾರಣವಾಗಿ ಯೆಲ್ಲರೂ ನುಡಿಯುತ್ತಾರೆ. ನಾವು ಪ್ರಾತಸ್ಸಾಯಂಕಾಲ ವೇಳೆಗಳಲ್ಲಿ ಪೂರ್ವ ಪಶ್ಚಿಮ ದಿಕ್ಕುಗಳನ್ನು ನೋಡುವಾಗ್ಯೆ ಸೂರ್ಯನ ಉದಯಾಸ್ತಮಾನಗಳು ಸ್ಪಷ್ಟವಾಗಿ ತಿಳಿಯಬರುತಿದೆ. ಹೀಗಿರುವಾಗ್ಯೆ ಮೇರು ಪರ್ವತವೆಂಬದು ಯೆಲ್ಲಿದೆ, ಯಾವದನ್ನು ನಾವು ಮೇರುವೆಂದು ತಿಳಿಯಬೇಕು?

೨. ಗ್ರೀನ್‌ಲ್ಯಾಂಡ ಮೊದಲಾದ ಸ್ಥಳಗಳಲ್ಲಿ ದಕ್ಷಿಣಾಯನ ಆರು ತಿಂಗಳ ಕಾಲ ಸೂರ್ಯ ರಶ್ಮಿಯು ಸ್ವಲ್ಪವೂ ಇಲ್ಲದೆ ರಾತ್ರಿಯಂತೆ ಅಂಧಕಾರವಾಗಿರುವ ಉತ್ತರಾಯಣವು ಹುಟ್ಟಿದ ಕೂಡಲೇ ಆರು ತಿಂಗಳು ಅಸ್ತಂಗತ ನಾಗದಿರುವದಕ್ಕೆ ಕಾರಣವೇನು? ನಮ್ಮ ಸಂವತ್ಸರವು ಒಂದು ದಿನವಾಗಿ ಗಣಿಸುವ ದೇವತೆಗಳಿಗೆ ವಾಸಸ್ಥಾನವೆನಿಸಿರುವ ಸ್ವರ್ಗವೆಂಬದು ಆ ಪ್ರದೇಶದಲ್ಲಿದೆಯೋ ಅಥವಾ ಇನ್ನೆಲ್ಲಿಯಾದರು ಇದೆಯೋ, ಹಾಗೆ ಇದ್ದರೆ ಯಾವದನ್ನು ಸ್ವರ್ಗವೆಂದು ಭಾವಿಸಬೇಕು?

೩. ನಮಗೆ ಮಧ್ಯಾಹ್ನವಾಗಿರುವ ಸಮಯದಲ್ಲಿ ಲಂಡನ್ ಪಟ್ಟಣದೊಳು ಉದಯಕಾಲವಾಗಿಯೂ, ಅಮೆರಿಕಾ ಖಂಡದಲ್ಲಿ ಮಧ್ಯರಾತ್ರಿಯಾಗಿಯೂ, ಚೀನಾ ರಾಜ್ಯದಲ್ಲಿ ಸಾಯಂಕಾಲವಾಗಿಯೂ ಇರಲಿಕ್ಕೆ ಉಂಟಾದ ಕಾರಣಗಳನ್ನು ವಿವರಿಸಿ.

೪. ಭೂಗೋಳದ ಸುತ್ತಳತೆಯು ಸುಮಾರಾಗಿ ಇಪ್ಪತ್ತೈದು ಸೂರ್ಯನ ನಿತ್ಯಗತಿಯಂ ಹಿಡದು ಹೇಳಬಹುದೆ? ಹಾಗೆ ಹೇಳಬಹುದಾದರೆ ಅದಂ ಕಂಡು ಹಿಡಿಯುವ ವಿಧ ಹ್ಯಾಗೆ?

೫. ಚಂದ್ರಗೋಳದಲ್ಲಿ ಯಾರಾದರು ವಾಸಿಸುತಲಿದ್ದಾರೆಯೋ? ನಮ್ಮ ಮಾಸವನ್ನೊಂದು ದಿನವಾಗಿ ಗಣಿಸತಕ್ಕ ಪಿತೃ ದೇವತೆಗಳಿರುವ ಸ್ಥಳವ್ಯಾವದು? ಯಾವ ಸ್ಥಳದೊಳಿರುವಾಗ್ಯೆ ನಮ್ಮ ತಿಂಗಳು ಒಂದು ದಿನವಾಗಿ ಗಣಿಸಲ್ಪಡಬಹುದು?

೬. ಸೂರ್ಯಾದಿ ಗೋಳಗಳು ಒಂದೇವಿಧವಾಗಿ ಸಂಚರಿಸುತಲಿರುವದು ನಮಗೆ ಅನುಭವ ಸಿದ್ಧವಾದ ವಿಷಯವಷ್ಟೆ. ಇದಕ್ಕೆ ಕಾರಣವೇನು; ಸೂರ್ಯಾದಿ ಗ್ರಹಗಳಿಗೆ ವ್ಯವಸ್ಥಿತ ಸ್ಥಾನವೆಂಬದೇತಕ್ಕಿಲ್ಲವು; ಅವುಗಳು ಅನವರತ ಸಂಚರಿಸುತ ಲಿರಲಿಕ್ಕೆ ನೀವೇನು ಕಾರಣ ಹೇಳುತ್ತೀರಿ?

೭. ಭೂಮಿಯು ಕ್ರಮೇಣ ವೃದ್ಧಿಯನ್ನೈದುತ ಬರುತಲಿದೆಯೋ ಅಲ್ಲದೆ ಯೇಕರೂಪವಾಗಿರುತಿದೆಯೋ? ಏಕರೂಪವಾಗಿರುತಿದೆಂದು ನೀವು ಹೇಳುವ ಪಕ್ಷಕ್ಕೆ ಅದಕ್ಕೆ ಕಾರಣವೇನು, ಮತ್ತು ನಿದರ್ಶನವೇನು?

೮. ನಾವು ಉತ್ತರ ದಿಕ್ಕಿನಲ್ಲೇ ಹೋದರೆ, ಕ್ರಮವಾಗಿ ಧ್ರುವನಕ್ಷತ್ರವು ಶಿರೋಮಧ್ಯಕ್ಕೆ ಬರುವಂತೆ ಕಾಣಿಸಲಿಕ್ಕೆ ಕಾರಣವೇನು?

೯. ಯಮಲೋಕವೆಂಬದು ಯೆಲ್ಲಿದೆ? ಯಮನು ಕಾಲನೆಂದು ಹ್ಯಾಗೆ ಕರೆಯಲ್ಪಟ್ಟನು ಪ್ರತ್ಯೇಕ ಯಮಲೋಕವಿದ್ದು ಅವಕ್ಕೆ ಪ್ರತಿ ಪ್ರಾಣಿಯೂ ತಪ್ಪದೆ ಹೋಗಬೇಕೆಂಬ ನಿಯಮವಿರುವ ಪಕ್ಷಕ್ಕೆ ಈ ಲೋಕದಲ್ಲಿ ಪ್ರತ್ಯೇಕ ಶಿಕ್ಷೆಯೇತಕ್ಕೆ ವಿಧಿಸಲ್ಪಡಬೇಕು? ಯಮನನ್ನು ಸೂರ್ಯ ಪುತ್ರನೆಂದೇತಕ್ಕೆ ಕರೆಯಬೇಕು. ಛಾಯಾದೇವಿಯಂ ಸೂರ್ಯ ಪತ್ನಿಯೆಂದು ಯೇತಕ್ಕೆ ನುಡಿಯುತ್ತಾರೆ; ಸೂರ್ಯನಿಗೆ ಕಾಲನೆಂಬ ಪುತ್ರರು ಹ್ಯಾಗೆ ಹುಟ್ಟಿದ; ಸೂರ್ಯನು ಮೊದಲುದ್ಭವಿಸಿದನೆಲ್ಲದೆ ಕಾಲನು ಪ್ರಥಮತಃ ಜನಿಸಿದನೆ? ಇದಕ್ಕೆ ಆಧಾರವೇನು?

೧೦. ಚತುರ್ದಶ ಭುವನಗಳೆಲ್ಲಿವೆ; ಒಂದು ಮತ್ತೊಂದರ ಮೇಲೆ ಊರ್ಧ್ವ ಭಾಗದಲ್ಲಿವೆಯೋ ಅಥವಾ ಸಮಸ್ಥಿತಿಯಲ್ಲಿವೆಯೋ, ಹಾಗೆ ಉಪರ್ಯುಪರಿಯಾಗಿರುವ ಲೋಕಗಳಲ್ಲಿ ಸೂರ್ಯ ಸಂಚಾರವು ಹ್ಯಾಗೆ ಉಂಟಾಗುತಿದೆ. ಸಕಲಲೋಕಗಳಿಗೂ ಸೂರ್ಯನೊಬ್ಬನೆ ಅಥವಾ ಪ್ರತ್ಯೇಕ ಸೂರ್ಯನಿರುತ್ತಾನೆಯೋ; ದ್ವಾದಶಾದಿತ್ಯರೆಂಬ ಸಂಖ್ಯಾವಾಚಕತ್ವವು ಆತನಿಗೆ ಹ್ಯಾಗೆ ಯಾವದರಿಂದ ಉಂಟಾಯಿತು; ಮಾಸಭೇದದಿಂದುಂಟಾದರೆ ವ್ಯಕ್ತಿ ಒಬ್ಬನೇ ಅಲ್ಲವೆ. ಗುಣಭೇದದಿಂ ಸಂಖ್ಯಾಭೇದ ಉಂಟಾಗುವುದೋ? ತತ್ತಲ್ಲೋಕಗಳ ದಿಗಂತಗಳು ಯಾವದಕ್ಕೆ ವ್ಯಾಪ್ತವಾಗಿರುವುವು; ಹಾಗಿಲ್ಲದಿದ್ದರೆ ಈ ಭೂಮಂಡಲದಲ್ಲಿಯೇ ಒಂದೊಂದು ಭಾಗವನ್ನು ಆಯಾ ಲೋಕವೆಂದು ವ್ಯವಹರಿಸುತ್ತೀರಾ?

೧೧. ಭೂಗೋಳಾಂತರ್ವರ್ತಿಯಾದ ಪರ್ವತ ಸಾಗರಾದಿಗಳನ್ನೂ ಭೂಗರ್ಭದಲ್ಲಡಗಿರತಕ್ಕ ರಸ ಲೋಹ ಮೃತ್ಪಾಷಾಣಾದಿ ಧಾತು ವರ್ಗಗಳನ್ನೂ ಭೂಗೋಳ ತತ್ವವಿವೇಚಕಶಾಸ್ತ್ರಜ್ಞರು ಪರಿಶೋಧಿಸಿ ನಿರ್ಧರಿಸಿರುತ್ತಾರೆ. ಹೀಗಿರುವಲ್ಲಿ ಪುರಾಣಾದಿ ಗ್ರಂಥಗಳಲ್ಲಿ ತಿಳಿಸಲ್ಪಟ್ಟಿರುವ ಸಪ್ತದ್ವೀಪಗಳೆಂಬವೂ ಸಪ್ತ ಸಮುದ್ರಗಳೂ ಯೆಲ್ಲಿವೆ?

೧೨. ಗ್ರಹನಕ್ಷತ್ರಗಳ ಗತಿಗಳನ್ನನುಸರಿಸಿ ಶುಭಾಶುಭ ಫಲಗಳು ನಮಗೆ ಹ್ಯಾಗೆ ಉಂಟಾಗುತಿವೆ; ಗ್ರಹಗತಿಗಳನ್ನನುಸರಿಸಿ ಮನುಷ್ಯನ ರೂಪ ಗುಣಚರ್ಯೆಗಳು ಭಿನ್ನಗಳಾಗಲಿಕ್ಕೆ ಕಾರಣವೇನು?

೧೩. ರಾವಣ, ಕುಂಭಕರ್ಣ, ಶಿಶುಪಾಲಾದಿ ತಾಮಸಗುಣ ಪ್ರಕೃತರಿಗೂ, ಜನಮೇಜಯ ವಿಕ್ರಮಾರ್ಕ ಮೊದಲಾದವರಿಗೂ, ನಾರದಾದಿ ಮಹರ್ಷಿಗಳ ಸಂದರ್ಶನವು ಆಗುತಲಿದ್ದಂತೆ ಪುರಾಣಾದಿ ಗ್ರಂಥಗಳಿಂದ ಸ್ಪಷ್ಟವಾಗುತಿದೆ. ಈ ಲೋಕವು ಗುಣದೋಷ ಮಿಶ್ರವಾಗಿರುವದರಿಂದ ಈ ಕಾಲದಲ್ಲಿಯೂ ಸಾತ್ವಿಕರಾದ ಸಜ್ಜನರು ಕೆಲವರಿರಬಹುದಾದಕಾರಣ ಅಂತವರಿಗಾದರೂ ಮೇಲೆ ಕಂಡ ನಾರದಾದಿ ಮುನಿವರ್ಯರೇತಕ್ಕೆ ಪ್ರತ್ಯಕ್ಷ ವಾಗುವದಿಲ್ಲವು. ಚಿರಜೀವಿಗಳೆನಿಸಿರುವ ವಿಭೀಷಣ, ಆಂಜನೇಯ ಬಲರಾಮರು ಮೊದಲಾದವರೀಗ ಯೆಲ್ಲಿದಾರೆ?

೧೪. ಇಂಗ್ಲಿಷಿನವರು ಬೇಳತಕ್ಕ (Power of gravitation) ಎಂಬ ಒಂದು ವಿಧ ಆಕರ್ಷಕ ಶಕ್ತಿಯು ಪೂರ್ವದಲ್ಲಿ ತಿಳಿಯದೆ ಯಿದ್ದು ಐಸಿಕ್ ನ್ಯೂಟನ್ ಯೆಂಬ ಭೌತಿಕತತ್ವ ಪರಿಶೋಧಕರು ಕಂಡು ಹಿಡಿದಂತೆ ಅನೇಕರು ಹೇಳುತ್ತಾರೆ. ಈ ದೇಶದಲ್ಲಿ ಇಂಗ್ಲಿಷಿನವರ ಪ್ರಾಬಲ್ಯ ಉಂಟಾಗಲಿಕ್ಕೆ ಅನೇಕ ಸಂವತ್ಸರಗಳಹಿಂದೆ ಆಧುನಿಕ ಭೌತಿಕಶಾಸ್ತ್ರ ಪ್ರಚಾರವಿಲ್ಲದ ಕಾಲದಲ್ಲಿ ನಮ್ಮ ಪಂಡಿತರು "ಬಸ್ಥಂ ಗುರುಸ್ವಾಭಿಮುಖಂ ಸ್ವಶಕ್ತ್ಯಾ" ಎಂದು ಒಂದು ಪ್ರಕರಣದಲ್ಲಿ ಬರೆದಿರುತ್ತಾರೆ. ಇದರಿಂದ ಸಮಸ್ತ ವಸ್ತುಗಳು ಸೆಂಟರ್ ಆಫ್ ಗ್ರಾವಿಟಿಯೆಂದು ಕರೆಯಲ್ಪಡುವ ರಮ್ಯತರವು ಮಧ್ಯಸ್ಥಾನಕ್ಕೆ ಸೆಳದುಕೊಳ್ಳುತಿವೆಯೆಂಬ ಸಿದ್ಧಾಂತವಂ ಮೊದಲೇ ಅವರು ಅರಿತಿದ್ದಂತೆ ಸ್ಪಷ್ಟವಾಗುತಿದೆ. ವಾಯುವಿಗಿಂತಲೂ ಹಗುರಾಗಿರುವ ಹೊಗೆಯು ವಾಯುಮಂಡಲವನ್ನತಿಕ್ರಮಿಸಿ ಮೇಲಕ್ಕೆ ಹೋಗಲಾರದೆ ಕೆಲವುದೂರ ಹೋಗಿ ಬಿಂದು ಕೆಳಗೆ ಬಿದ್ದು ಬರುವದು ನಾವು ಅನೇಕಾವರ್ತಿ ನೋಡಿದೇವೆ ಹೀಗಿರುವಾಗ್ಯೆ ಸ್ವರ್ಗಲೋಕ ಪುಣ್ಯಲೋಕಗಳಲ್ಲಿದ್ದವರು ವಿಮಾನಾರೂಢರಾಗಿ ಆಕಾಶ ಮಾರ್ಗದಲ್ಲಿ ಹ್ಯಾಗೆ ಸಂಚರಿಸುತಲಿದ್ದರು?

೧೫. ಗ್ರಹಗಳೆಲ್ಲವು ಭೂಮಿಯನ್ನು ಸುತ್ತುತಲಿರುವ ಪಕ್ಷಕ್ಕೆ ಕುಜ ಗುರು ಶನಿ ಗ್ರಹಗಳನ್ನು ಸ್ಥೂಲವಾದವುಗಳಾಗ್ಯೆ ಸೂಕ್ಷ್ಮವನ್ನು ತೀವ್ರಗ್ರಹಗಳಾಗಿಯೂ, ಕುಜ ಗುರು ಶನಿ ಗಳನ್ನು ಮಧ್ಯಗ್ರಹಗಳಾಗಿಯೂ, ಬುಧ ಶುಕ್ರರನ್ನು ಸ್ವಲ್ಪವಾದವುಗಳಾಗ್ಯೆ ಅವರು ತೀವ್ರಗ್ರಹಗಳಾಗಿಯೂ, ಸೂರ್ಯನು ಮಧ್ಯಗ್ರಹನಾಗಿಯೂ ಅಂಗೀಕರಿಸಿ ಗಣಿಸಲಿಕ್ಕೆ ಕಾರಣವೇನು?

೧೬. ಭೂಮಿ ಅಚಲವೆಂದು ಹೇಳಬಹುದೆ, ಮತ್ತು ಅದು ವರ್ತುಲಾಕಾರವಾಗಿದೆಯೆ; ಅದಕ್ಕೆ ಗೋಳತ್ವವು ಹ್ಯಾಗೆ ಉಂಟಾಯಿತು?

೧೭. ಗ್ರಹಗಳನ್ನು ಸ್ವಲ್ಪವಾದವಾಗ್ಯೆ ಭೂಮಿಯನ್ನು ಸಕಲ ಗ್ರಹಗಳೂ ಸುತ್ತುತಲಿವೆಯೆಂದು ಹೇಳುವ, ಸೂರ್ಯನನ್ನು ಮಧ್ಯಗ್ರಹವನ್ನಾಗಿ ಯಾವರು ತೀವ್ರ ಗ್ರಹವನ್ನಾಗಿ ಯಾವರೂ ಯೇತಕ್ಕೆ ಅಂಗೀಕರಿಸಬೇಕು

೧೮. ಭೂಮಿ ನಾಲ್ಕು ದಿಕ್ಕುಗಳಲ್ಲಿಯೂ ವ್ಯಾಪಿಸಿ ಸಮನಾಗಿರುವ ಪಕ್ಷಕ್ಕೆ ಗ್ರಹಗಳಿಗೆ ಉದಯಾಸ್ತಮಯಗಳು ಹ್ಯಾಗೆ ಉಂಟಾಗುತಿವೆ?

೧೯ "ಭೂಗೋಳವ್ಯೋಮ್ನಿತಿಷ್ಠತಿ" ಎಂಬ ಸಿದ್ಧಾಂತವಾಕ್ಯವನ್ನರಿತದ್ದಾಗ್ಯೆ ಭೂಮಿಯನ್ನು ಅನಂತನೆಂಬ ನಾಗರಾಜನು ಹೊರುತಲಿದೆನೆಂಬದಕ್ಕೆ ಅರ್ಥಾಂತರವೇನಾದರು ಉಂಟೆ?

೨೦ ಕುಜಾದಿ ಗ್ರಹಗಳಿಗೆ ವಕ್ರ ರುಜು ಮುಂತ ತೀವ್ರಗತಿ ಯುಂಟಾಗುವಂತೆ ನಮಗೆ ಗಣಿತರಿಂದ ತಿಳಿಯಬರುತಿವೆ ಗ್ರಹಗಳಿಗೆ ಸದಾ ಚಲನವನ್ನು ಒಪ್ಪಿಕೊಂಡು ಸ್ತಂಭನ ಉಂಟಾದಂತೆ ಹ್ಯಾಗೆ ಹೇಳಬಹುದು?

೨೧ "ದಿಕ್ಕಾಲಾದ್ಯನವಚ್ಛಿನ್ನಾನಂತ" ಯೆಂಬ ವಚನಕ್ಕೆ ಅರ್ಥವೇನು? ಇದರೊಡನೆ ಪುರಾಣೋಕ್ತಿಯಂ ಸಮನ್ವಯಮಾಡುವದು ಹ್ಯಾಗೆ

೨೨ ಗ್ರಹಗಳಿಗೆ ಸಂಪಾತವೆಂಬದ್ಯಾವವು; ಮಂದೋಚ್ಚನೀಚೋಚ್ಚಗಳೆಂಬವು ಯಾವವು; ಅವು ಉಂಟಾಗಲಿಕ್ಕೆ ಕಾರಣವೇನು?

೨೩ ಗ್ರಹಗತಿಗಳಿಂದುಂಟಾಗುವ ಶುಭಾಶುಭಫಲಗಳು ಕೇವಲಮಾನುಷ ಸಂಬಂಧವಾದವೆ ಅಲ್ಲದೆ ಅವುಗಳ ಪ್ರಾಬಲ್ಯ ದೌರ್ಬಲ್ಯಗಳು ದೇವತೆಗಳಮೇಲೂ ವ್ಯಾಪಿಸತಕ್ಕವೆ? ಇವರಿಗೆ ಇಷ್ಟ ದಪ್ರಾಬಲ್ಯವು ಯೇತರಿಂದುಂಟಾಯಿತು?

೨೪. ಪರಮೇಶ್ವರನಿಗೆ ಆವಾಸವೆನಿಸಿರುವ ಕೈಲಾಸ ಪರ್ವತವೆಂಬದು ಈಗ ಹಿಮವತ್ಪರ್ವತದಲ್ಲಿ ಒಂದು ಶಿಖರವಾಗಿರುವದೆ ಅಥವಾ ಪ್ರತ್ಯೇಕ ಪರ್ವತವಿದೆಯೆ? ಇದೇ ಆಗಿರುವ ಪಕ್ಷಕ್ಕೆ ಅಲ್ಲಿ ನಮಗೆ ಪರಮೇಶ್ವರ ಸಂದರ್ಶನವಾಗುವದಿದೆಯೆ? ಇವುಗಳಿಗೆಲ್ಲ ಸಮಂಜಸಉತ್ತರಗಳಂ ಕೋರುವ

ಸಂಶಯಾತ್ಮ

ಒಂದು ನವೀನ ಪ್ರಯೋಗವು.

ಮದರಾಸ ಆಥೆನಿಯಂ ಪತ್ರಿಕೆಯಿಂದ ಭಾಷಾಂತರ ಮಾಡಲ್ಪಟ್ಟು ಇದರಡಿ ಪ್ರಕಟಿಸಲ್ಪಟ್ಟಿರುತಿದೆ.

ರಾಜಸೂಯ ಯಾಗವು.
ಪ್ರಥಮಾಂಕವು.

ನಾಟ್ಯಾಂತದೊಳ್ —

ಸೂತ್ರಧಾರನು.—ನೇಪಥ್ಯಾಭಿಮುಖನಾಗಿ, ಇನ್ನು ಕಾಲವಿಳಂಬ ಮಾಡಲೇತಕ್ಕೆ ಎಲೈ ಮಿತ್ರನೆ ಪಾರಿಪಾರ್ಶ್ವಕಾ— ಬೇಗಬಾ.

ಪಾರಿಪಾರ್ಶ್ವಕನು—ಪ್ರವೇಶಿಸಿ, ಅಯ್ಯಾ, ತಮ್ಮ ಅಪ್ಪಣೆಯಂತೆ ಬಂದಿರುವೆನು, ಮುಂದೆ ಯೇನು ಅಪ್ಪಣೆಯಿಸುತ್ತೀರಿ.

ಸೂತ್ರಧಾರನು—ಪಾರಿಪಾರ್ಶ್ವಕನೆ, ಸಮಯವತಿಕ್ರಮಿಸದೆ ಯೆಂತವರಾದರು ವಿಷಯಗಳ ಪರಿಣಮಿಸುವರೆಂಬ ಲೋಕೋಕ್ತಿಯಂ ನೀನಾರಿತಿರಲ್ಲವೆ, ಇನ್ನು ಕಾಲವಿಳಂಬವಂ ಮಾಡಿ ಮಲೆನ್ನನ್ನೆ ಕೇಳುತ್ತೀಯಾ ನಾನು ಪೂರ್ವದಲ್ಲಿ ತಿಳಿಸಿದ್ದದ್ದು ನಿನ್ನ ಜ್ಞಾಪಕದಲ್ಲಿಲ್ಲವೆ?

ಕನ್ನಡ ಗ್ರಂಥಗಳು.

		ರೂ	ಆ	ಪೈ
[illegible]	...	೩	೦	೬
[illegible]	...	೧	೨	೦
[illegible]	...	೧	೮	೦
[illegible]	...	೧	೬	೦
[illegible]	...	೦	೬	೦
[illegible]	...	೦	೨	೦
[illegible]	...	೦	೨	೦
[illegible]	...	೦	೨	೬
[illegible]	...	೦	೧	೦
[illegible]	...	೦	೧	೦
ಬಾಲ [illegible]	...	೦	೧	೦
[illegible]	...	೦	೧೨	೦
[illegible]	...	೦	೧೨	೦
,, [illegible]	...	೧	೦	೦
,, [illegible]	...	೦	೮	೦
,, [illegible]	...	೧	೦	೦
,, [illegible]	...	೦	೩	೦
,, [illegible]	...	೦	೧	೦
,, [illegible] (ಸಟೀಕಾ)	...	೦	[illegible]	[illegible]
ವಿಷ್ಣುಸಹಸ್ರನಾಮ [illegible]	...	೦	೩	೦
[illegible]	...	೦	೨	೦
[illegible]	...	೦	೨	೦
[illegible]	...	೦	೨	೦
೧ [illegible]	...	೦	೧	೦

ನೋಟೀಸ್.

ಕಡೂರ್ ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕ್ ಜಾಗೀರ್ ಶೃಂಗೇರಿ ವಿದ್ಯಾರಣ್ಯಪುರದಲ್ಲಿರುವ ವಿನಾಯಕ ದೇವಸ್ಥಾನದ ಬಾಬುಭಟ್ಟನು ಈ ನೋಟಿಸ್ ಮೂಲಕ ತಿಳಿಯಪಡಿಸುವದೇನೆಂದರೆ:—

ನನ್ನ ಖಾಸ್ ಮಗನಾದ ನಾರಾಯಣಭಟ್ಟನೆಂಬವನಿಗೆ ಕೆಲವು ದಿವಸದಿಂದೀಚೆಗೆ ಬುದ್ಧಿ ಸ್ವಾಧೀನವಿಲ್ಲದೆ ಮನಸ್ವೀ ತಿರುಗುತಲಿದ್ದಾನೆ. ಆದ್ದರಿಂದ ಈ ನಾರಾಯಣಭಟ್ಟನೆಂಬವನಿಗೆ ಯಾರೂ ಸಾಲವನ್ನು ಕೊಡಕೂಡದು, ಹಾಗೆ ಸಾಲ ಕೊಟ್ಟು ಅತನಮೇಲೆ ಡಿಕ್ರಿಗಳು ಪಡೆದು ಕೊಂಡಾಗ್ಯೂ ಸದರೀ ನಾರಾಯಣಭಟ್ಟನ ತಂದೆ ಬಾಬುಭಟ್ಟನ ಚರ ಸ್ಥಿರ ಆಸ್ತಿಗಳು ಯಾವವೂ ಸದರೀ ನಾರಾಯಣಭಟ್ಟನು ಮಾಡಿದ ಸಾಲಗಳಿಗೆ ಜವಾಬ್‌ದಾರಿ ಆಗುವದಿಲ್ಲ, ಮತ್ತು ಆತನ ತಂದೆ ಬಾಬುಭಟ್ಟನಿಂದ ಸಂಪಾದಿಸಲ್ಪಟ್ಟ ವಿಶಿಷ್ಟ ಚರ ಸ್ಥಿರ ಆಸ್ತಿಗಳನ್ನು ಸದರೀ ನಾರಾಯಣಭಟ್ಟನು ಪರಾಧೀನ ಮಾಡುವದಕ್ಕೆ ಹಕ್ಕಿಲ್ಲ. ಹಾಗೆ ಪರಾಧೀನ ಮಾಡಿದಾಗ್ಯೂ ಅದು ಊರ್ಜಿತವಾಗಲಾರದೆಂದು ಈ ನೋಟಿಸ್ ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತೆ.

ಬತಾರೀಖ್ ೧೦-೯-೧೮೯೨ನೇ ಇಸವಿ.
ವಿದ್ಯಾರಣ್ಯಪುರದ ವಿನಾಯಕ ದೇವಸ್ಥಾನದ
ಬಾಬುಭಟ್ಟನ ರುಜು.

THE BANGALORE SREENIVASA MANDIRAM.
ಬೆಂಗಳೂರು, ಶ್ರೀನಿವಾಸ ಮಂದಿರಂ.

ಬೆಂಗಳೂರ್ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ಬರಾಯಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ತಪಸೀಲ್ ತೋರಿಸುವ ತಖ್ತೆ—
೧೮೯೨ನೇ ಇಸವಿ ಸೆಪ್ಟೆಂಬರ್ ೧೧ನೇ ತಾರೀಖ್ ಮೊದಲು ೧೮ ನೇ ತಾರೀಖ್ ವರಿವಿಗೆ.—

ಅಕ್ಕಿ ವಸೂಲು ದೊರೆತ [illegible] ಸಂಖ್ಯೆ	...	96
[illegible] ಸಂಖ್ಯೆ	...	63
ಗತವಾರದ ಶಿಲ್ಕು ಸೇರು	...	43
ಜುಮ್ಲಾ	...	106
ಅಡಿಗೆ ಸಾಮಗ್ರಿಗಳಿಗಾಗಿ ಮಾರಲ್ಪಟ್ಟ ಸೇರು	...	32
[illegible] ಅಕ್ಕಿ ಸೇರು	...	29
[illegible]	...	45

ಭೋಜನ ಮಾಡಿದ ಜನಗಳ ಸಂಖ್ಯೆ ಮತ್ತು ತಪ್ಸೀಲ್.

ಅನಾಥರು	...	7
[illegible] ವಿದ್ಯಾರ್ಥಿ	...	6
[illegible] ವಿದ್ಯಾರ್ಥಿಗಳು	...	16
[illegible] ಸಂಖ್ಯೆ		24
ಪ್ರಯಾಣಸ್ಥರು	...	5
ಜುಮ್ಲಾ		58

THE MONEY MARKET.

ಮದರಾಸ್, ಶನಿವಾರ, ತಾರೀಖ್ 17 ನೇ ಸೆಪ್ಟೆಂಬರ್ 1892.
[illegible] ಗವರ್ನಮೆಂಟ್ ಪತ್ರಗಳು, ರೂ [illegible] 104-2 0 ಇಂದ 104-3 0 ವರೆಗೆ.
ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳು [illegible] 940 [illegible] 945 ವರೆಗೆ.
[illegible] ಬ್ಯಾಂಕ್ ಷೇರುಗಳು, (100) [illegible] 160 ಇಂದ 165 [illegible]
[illegible], 16—3—0
[illegible] ರೂ ೧ಕ್ಕೆ
6 ತಿಂಗಳ [illegible], 1s. 2 ⅞d.
[illegible] 4 ತಿಂಗಳ [illegible], 1s. 2 11/16d.
[illegible], 1s. 2 19/32d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, SEPTEMBER 19, 1892.
೧೮೯೨ ನೇ ಇಸವಿ ಸೆಪ್ಟಂಬರ ತಾ॥ ೧೯ ನೇ ಸೋಮವಾರ.

INTERDINING NOT ESSENTIAL TO COSMOPOLITISM.

ಲೋಕದಲ್ಲಿ ಮನುಷ್ಯನು ಒಬ್ಬನು ನೋಡಿ ಮತ್ತೊಬ್ಬರು ಸುಗುಣ ದುರ್ಗುಣಗಳಂ ಕಲಿತುಕೊಳ್ಳುವದು ಅನುಭವಸಿದ್ಧವಾದ ವಿಷಯವಾಗಿರುತಿದೆ. ಅದರಲ್ಲಿ ಸುಗುಣಗಳಂ ಮಾತ್ರ ಪರಿಗ್ರಹಿಸಿ ದುರ್ಗುಣಗಳಂ ತ್ಯಜಿಸುವದು ಉತ್ತಮವಾಗಿರುವದು. ಸುಗುಣಗಳನ್ನಪೇಕ್ಷಿಸಿ ದುರ್ಗುಣಗಳನ್ನಾದರಿಸುವದು ಅಧಮಗುಣವಾದುದು. ಅನ್ಯರಂತೆ ನಾವು ನಡಸಲಪೇಕ್ಷಿಸಿದರೆ ಮೊದಲು ಅವರಿಗೂ ನಮಗೂ ಉಭಯರಿಗೆ [illegible] ಗುಣ ಸಾಮರಸ್ಯತೆಯನ್ನು, ಇತರ ಅನುಕೂಲ್ಯಗಳನ್ನೂ, ಅನಂತರ ನಮ್ಮ ಇತರರಾದರ [illegible]ವ್ಯಗಳನ್ನು ಪರ್ಯಾಲೋಚಿಸಿ ನಿರ್ಧರಿಸತಕ್ಕದ್ದು ಅವಶ್ಯಕವಾಗಿರುತಿದೆ. ಉನ್ನತಿಗಿರುವ ಕಾರ್ಯನಿರ್ವಹಣ ಶಕ್ತಿಯೂ, ಚಿತ್ತಸ್ಥೈರ್ಯವೂ, ಉತ್ಸಾಹವೂ ತಮ್ಮಲ್ಲಿಲ್ಲದೆ ಜೋದಾಗ್ಯ ನರಿಯು ಹುಲಿಯಂ ಕಂಡು ತಾನೂ ಬರೆಗಳು ಹಾಕಿಕೊಂಡಂತೆ ಅನ್ಯರನ್ನನುಕರಿಸತಕ್ಕವರೊಬ್ಬರೂ ಪರರ ಹೇಳನಕ್ಕೆ ಪಾತ್ರರಾಗದೆ ಹೋಗಲಾರರು. ಇಂಗ್ಲೀಷರವರನ್ನು ನೋಡಿ ಅವರಂತೆ ವರ್ತಿಸಲಪೇಕ್ಷಗೊಂಡು ಅನುವರ್ತಿಸುತಲಿರುವ ನಮ್ಮವರು ಸಹ ಅವರೊಳು ನೆಲೆಗೊಂಡಿರುವ ಅನೇಕ ಸಮಾಜಗಳಂತೆ ನಾನಾ ಹೆಸರುಗಳುಳ್ಳ ಸಮಾಜಗಳನ್ನೇರ್ಪಡಿಸುತ ಬರುತಲಿದ್ದಾರೆ. ಅವುಗಳಲ್ಲಿ ಕೆಲವು ಜ್ಞಾನಾಭಿವೃದ್ಧಿನಿಮಿತ್ತಕವಾದುವಾಗಿಯೂ, ಬೇರೆ ಕೆಲವು ಮತಸಂಬಂಧವಾದುವಾಗಿಯೂ, ಇತರ ಕೆಲವು ಸಮಯಾಚಾರ ಸಂಬಂಧವಾದುವಾಗಿಯೂ, ಮತ್ತು ಕೆಲವು ರಾಜಕೀಯವಾದುವಾಗಿಯೂ, ಇನ್ನೂ ಕೆಲವು ಆಧ್ಯಾತ್ಮಿಕ ವಿಷಯ ಸಂಬಂಧವುಳ್ಳವಾಗಿಯೂ ಇರುತಿವೆ. ಇವುಗಳಿಗೆ ಸಂಬಂಧಿಸದೆ ಪ್ರತ್ಯೇಕ ಒಂದು ವಿಧ ಸಮಾಜ ಸಹ ಈಚೆಗೆ ಅಲ್ಲಿಯಲ್ಲಿ ತಲೆದೋರಲುಪಕ್ರಮವಾಗಿದೆ. ಈ ಸಮಾಜವೊಂದು ಮೊದಲು ಮದರಾಸಿನಲ್ಲಿ ಉದ್ಭವವಾಯಿತು. ಅದರ ರೀತಿಯನ್ನನುಸರಿಸಿ ಈಗ್ಯೆ ಕೆಲವು ವರುಷಗಳ ಹಿಂದೆ ಈ ಪಟ್ಟಣದಲ್ಲಿಯೂ ಒಂದು ಸ್ಥಾಪಿಸಲ್ಪಟ್ಟು ಅನೇಕ ದೊಡ್ಡ ಮನುಷ್ಯರ ಪ್ರೋತ್ಸಾಹದಿಂದ ನಡೆಯುಬರುತಲಿದೆ. "[illegible] ಪಾಲಿಟನ್ ಕ್ಲಬ್" ಅಂದರೆ ಸರ್ವಜನ ಸಮಾಗಮ ಕೂಟವೆಂದು ಕರೆಯಲ್ಪಡುತಿದೆ. ಸದರೀ ಸಭೆಯಲ್ಲಿ ಸೇರತಕ್ಕವರ ಮುಖ್ಯೋದ್ದೇಶಗಳು ಅವರವರ ಅಭಿಸಂಧಿಯನ್ನನುಸರಿಸಿರುತಿವೆ. ಪರಸ್ಪರ ಬಹುಜನ ಪರಿಚಯ ಸಾಹಚರ್ಯ ಸಲ್ಲಾಪ ಸರಸ ವಿನೋದಗಳನ್ನೇಕತ್ರ ಅನುಭವಿಸಬಹುದೆಂಬದೂ, ಏತಾದೃಶ ಅನುಭವಕ್ಕೆ ಮನುಷ್ಯ ಸಾಮಾನ್ಯರು ಅರ್ಹರಾದುದರಿಂದ ಅದರಲ್ಲಿ ಜಾತಿಮತ ಪ್ರಯುಕ್ತಗಳಾದ ವ್ಯಾಪ್ಯವ್ಯಾಪಕ ಉಚ್ಚನೀಚಾದಿ ಭಾವಗಳೊಂದೂ ಇಲ್ಲದಂತೆ ಸರ್ವಸುಖ್ಯದಿಂದ ವರ್ತಿಸಬೇಕೆಂಬುದು ಮುಖ್ಯೋದ್ದೇಶವೆಂದೆಣಿಸುತ್ತೇವೆ. ಪ್ರಕೃತ ಲೋಕದಲ್ಲಿ ಎಲ್ಲರ ಸಂತೋಷವು ಏಕರೂಪವಾಗಿರುವದೆಂಬ ನಂಬಿಕೆಯು ನಮಗೆ ಸಾಲದೆ. ಆದರೆ ಏನಮಾಡಿ ಸಂತೋಷಕ್ಕೆ ಸಹಭೋಜನ ಸಹವಾಸ ಸಲ್ಲಾಪಾದಿಗಳು ಕೇವಲ ಅಪೇಕ್ಷಿತವಾದುದರಿಂದ ಅವಿಲ್ಲದ ಕಡೆಗಳಲ್ಲಿ ಪರಸ್ಪರಾನುರಾಗವೂ ಮೈತ್ರಿಯೂ ಶೂನ್ಯವಾಗಿರುವದೆಂಬದು ಅನೇಕರ ತಾತ್ಪರ್ಯವಾಗಿರುತಿದೆ. ಕಲಾವೈಷಮ್ಯಗಳೂ, ಪಕ್ಷಭೇದಗಳೂ, ಮತತಾರತಮ್ಯಗಳೂ, ಅನಾವಶ್ಯಕಗಳಾದ ಆಚಾರಭೇದಗಳೂ, ನೆಲಗೊಳ್ಳದಿಕ್ಕೂ, ನಮ್ಮದೇಶದಭಿವೃದ್ಧಿಯಾಗಲಿಕ್ಕೆ ಬದಲಾಗಿ ಕ್ಷೀಣಿಸುತಬರದಿಕ್ಕೂ, ಪರಸ್ಪರ ಸ್ನಿಗ್ಧತೆಯಿಲ್ಲದೆ ಹೋಗುವದಕ್ಕೂ, ಉಂಟಾಗುವ ಸ್ವಾರ್ಥಕ್ಕೆ ಕಾರಣವಾದ ಸಹಭೋಜನಕ್ಕೆ ಅವಕಾಶವಿಲ್ಲದೆ ಇರುವದೇ ಕಾರಣವೆಂದು ಸಹ ಅನೇಕರ ಅಭಿಪ್ರಾಯವಾಗಿರುತಿದೆ. ಮನೋಭಿಪ್ರಾಯಕ್ಕೂ ಸಹಭೋಜನಕ್ಕೂ ಸಂಬಂಧವು ಕಲ್ಪಿಸಿ ಅನೇಕರು ಅದನ್ನೇ ಅಪೇಕ್ಷಿಸುತಿದ್ದಾರೆ. ಇನ್ನೂ ಅನೇಕರು, ಅವುಗಳಿಗೆ ಯಾವ ಸಂಬಂಧವೂ ಇಲ್ಲದ್ದರಿಂದ ಅದು ಅನಾವಶ್ಯಕವೆಂದು ತಾತ್ಪರ್ಯಪಡುತ್ತಾರೆ. ಈಚೆಗೆ ಒಂದು ಪ್ರಕರಣದಲ್ಲಿ ದಿವಾನಬಹದೂರ್ ಮೆ॥ ರಘುನಾಥರಾಯರವರು ಅಧ್ಯಕ್ಷರಾದ ತಾವು ಭೋಜನ ಮಾಡಬೇಕಾದ ಸಂದರ್ಭ ಪ್ರಯೋಗಗಳು ಆಗ ಅವನು, ಮತಸಂಬಂಧವಾದುವಾಗಲಿ, ಆಚಾರ ವ್ಯವಹಾರ ಸಂಬಂಧವಾದುದಾಗಲಿ, ಇತರ ವಿಷಯಕವಾದುದಾಗಲಿ, ಕ್ರಮಪಟ್ಟು ಅಭಿವೃದ್ಧಿಯನ್ನು ಹೊಂದಲಿಕ್ಕೆ ಭೋಜನದಾನ ಮುಖ್ಯ ನಾಡಿಗಳು ಮುಖ್ಯವೆಂದು ಭಾವಿಸ್ಯವತಕ್ಕದ್ದಲ್ಲವೆಂತಲೂ, ಕಾಂಗ್ರೆಸಿಗಳಲ್ಲಿ ಭೋಜನಮಾಡಬೇಕೆಂದು ನಮ್ಮ ದಸ್ತೂರುಗಳಲ್ಲಿಲ್ಲವೆಂದು ತಿಳಿಸಲ್ಪಟ್ಟಿರುವದಲ್ಲದೆ ಜವಾಬು ಹೇಳಿದರು. ಈ ಉತ್ತರವು ಪೂರ್ವಸಂಪ್ರದಾಯಕ್ಕೆ ಬದ್ಧರಾದವರಿಗಲ್ಲ ಬಹಳ ಸಮರ್ಪಕವಾಗಿಯೂ ಆಧುನಿಕರಿಗಲ್ಲ ಅಗ್ರಾಹ್ಯವಾಗಿಯೂ [illegible] ಕವಾದುದಾಗಿಯೂ ಇರುತವೆ. ಇದು ವೈಗಾಪರು ಇರಲಿ. ಭೋಜನಪ್ರತಿಭೋಜನಗಳು ಮನುಷ್ಯನ ಸ್ವಾಭಾವಿಕಗುಣಗಳನ್ನು ಯಾವ ಪ್ರಕಾರ ಬದಲ ಮಾಡುತಿದೆಂಬದು ಈಗ ನಮ್ಮ ಪರ್ಯಾಲೋಚನೆಗೆ ವಿಷಯವಾಗಿರುತಿದೆ. ಈ ವಿಷಯದಲ್ಲಿ ನಮ್ಮ ಅನುಭವವು ಅದಕ್ಕೆ ಸಾಪ್ರಾತಿಕೂಲ್ಯವಾದುದಾಗಿರುತದೆ. ಸಹಭೋಜನ ಪ್ರತಿಭೋಜನವು ಸರ್ವಸಮಷ್ಟಿ[illegible]ವನ್ನುಂಟುಮಾಡುವದು ನಿಜವಾಗಿರುವ ಪಕ್ಷಕ್ಕೆ ಪರಸ್ಪರ ಸೌಹಾರ್ದವಿಲ್ಲದಾಗಲಿ ಪ್ರಯೋಜನ [illegible] ಜನಗಳಲ್ಲಾಗಲಿ ಒಬ್ಬರ ಮನಸ್ಸು ಮತ್ತೊಬ್ಬರ ಸ್ನೈಹವಿರಬೇಕಾದುದು ಆವಶ್ಯಕವಾಗಿರುತವೆ. ಆದರೆ ಸಹಭೋಜನಕ್ಕೆ [illegible] ಕಾಲದಲ್ಲಿ ಮನೋಭಾವವು ಸಮ್ಮತಿಗೆ ಬರುವದಕ್ಕೆ ಭೋಜನಪ್ರಯುಕ್ತವುಂಟಾಗುವ ಸ್ನೇಹವು ಯಾವ ಪ್ರಕಾರವು ಸ್ಥಿರವಾಗುವದೋ ತಿಳಿಯಲಿಲ್ಲವು. ಮುಖ್ಯವಾಗಿ ಪೋಲೆಂಡ್ ಸಿದ್ಧಾಂತದ ಮೇಲೆ ನೆಲೆಗೊಳಿಸಲ್ಪಟ್ಟಿರುವ, ಕ್ಲಬುಗಳಲ್ಲಿ ಸೇರಿರತಕ್ಕ ಮೆಂಬರುಗಳೆಲ್ಲರೂ ಜಾತಿಮತ ಯುಕ್ತವಾದ ತಾರತಮ್ಯವಿಲ್ಲದ [illegible] ಕ್ಷವಾದ ಗೂಢವೈರವನ್ನೂ ವಿಷಯವಾಗಿಸ್ವ ರೋಧರ್ಮಸದರೀ ಸಭೆಯ ಉದ್ದೇಶನೀಯ ಪ್ರವರ್ತಕವಾಗಲಾರರು. ಆದಾಗ್ಯೂ ಅಂಥಾ ಸ್ಥಳದಲ್ಲಿ ಸಹ ಆಚಾರ ಪ್ರಯುಕ್ತವಾದ ತಾರತಮ್ಯವನ್ನೂ, ಸಾಮಾನ್ಯ ಜನರಲ್ಲಿ ನಡೆಯುವವನ್ನೂ, ನೆಲೆಗೊಂಡಿರುವದಂ ನೋಡಲಾಗಿ, ಸಹಭೋಜನಕ್ಕೂ, ಸ್ನೇಹಕ್ಕೂ, ಭೋಜನದ [illegible] ಭೋಜನಾದಿಗಳಿಗೂ ಏನಿನ್ನು ಸಂಬಂಧವಿರುವದಿಲ್ಲವೆಂಬ ಮೆ॥ ರಘುನಾಥರಾಯರವರ ಅಭಿಪ್ರಾಯವನ್ನು ನಾವು ಸಹ ಕೆಲವು ಮಟ್ಟಿಗೆ ಅಂಗೀಕರಿಸುತ್ತೇವೆ.

Occasional Notes
ನೈಮಿತ್ತಿಕ ವಿಷಯಗಳು

A grant sanctioned.—ಬರ್ಮಾದೇಶಕ್ಕೆ ಉತ್ತರದಲ್ಲಿ [illegible] ಚೀನಾದೇಶದ ಸರಹದ್ದು ಪ್ರದೇಶದಲ್ಲಿ ನೇಟಿವ್ ಸೈನ್ಯಗಳ ವಾಸಕ್ಕಾಗಿ ಮನೆಗಳು ಕಟ್ಟುವ ಕೆಲಸಕ್ಕೆ ಇದುವರೆಗೆ ಕೊಟ್ಟಿರುವ ಮೊತ್ತವಲ್ಲದೆ ಮರಳಿ ೧,೮೬,೦೦೦ ರೂಪಾಯಿಗಳು ಕೊಡುವಂತೆ ಇಂಡಿಯ ಗವರ್ನಮೆಂಟಿನವರು ಮಂಜೂರ್ ಮಾಡಿರುತ್ತಾರೆ.

A remedy for low exchange.—ಇಂಗ್ಲೆಂಡಿಗೆ ಸವರನ್ ಬೆಲೆ ಅತ್ಯಧಿಕವಾಗಿ ಏರಿರುವದರಿಂದ ತನ್ನಿಮಿತ್ತ ಉಂಟಾಗುತಲಿರುವ ನಷ್ಟವು, ಇಲ್ಲಿನ ಸರ್ಕಾರ ನೌಕರಿಯಲ್ಲಿರುವ ಯೂರೋಪಿಯನ್ ಜನರ ಸ್ವಂತ್ಯ ಕಡಮೆಯಾಗುವ ಶನಿಕ ಪರಿಹಾರವಾಗಲಾರದೆಂದು ಪಾರ್ಲಿಮೆಂಟಿ ಮೆಂಬರಾದ ಮೆ॥ ದಾದಾಭಾಯಿ ನೌರೋಜಿಯವರು ಅಭಿಪ್ರಾಯಪಡುತ್ತಾರೆ.

A talking clock.—ಜನೀವಾ ಪಟ್ಟಣದಲ್ಲಿ ಗಡಿಯಾರಗಳ ನಿರ್ಮಾಣಕರ್ತನೊಬ್ಬನು ಈಚೆಗೆ ಹೊಸವಾಗಿ ಒಂದು ಗಡಿಯಾರವು ನಿರ್ಮಾಣ ಮಾಡಿರುತ್ತಾನೆ. ಅದಕ್ಕೆ ಮಾತನಾಡುವ ಶಕ್ತಿಯುಂಟುಮಾಡಲ್ಪಟ್ಟಿರುತದೆ. ಅಂದರೆ, ಸದರೀ ಗಡಿಯಾರವು ಯಾವ ಮನೆಯೊಳಿಡಲ್ಪಟ್ಟಿರುತದೆಯೋ ಆ ಮನೆಯ ಯಜಮಾನನ ಧ್ವನಿಯಲ್ಲಿ ಗಂಟೆಕಾಲದೊಳು "ಹಾಸಿಗೆ ಬಿಟ್ಟು ಏಳಿರಿ" ಯೆಂದು ಉಚ್ಚರಿಸುತಿದೆ.

The Nizam's Imperial Service Troops ಸರಹದ್ದು ಪ್ರಾಂತದ ಬಂದೋಬಸ್ತಿಯಬಗ್ಗೆ ಸೈದರಾಬಾದ್ ನಿಜಾಮರವರು ಕಳುಹಿಸಿಕೊಡುವದಾಗಿ ತಿಳಿಸಿದ ಸೈನ್ಯವಂ ಅಂಗೀಕರಿಸುವ ವಿಷಯದಲ್ಲಿ ಸ್ವಲ್ಪ ಸಂಶಯ ಪ್ರಾಪ್ತವಾಗಿರುವಂತೆ ಕಾಣುತವೆ. ಏಕೆಂದರೆ, ಸದರೀ ಸೈನ್ಯವು ಆಗಿರುವ ಸಂಖ್ಯೆಯ ಸೆ[illegible] ಬಹುವಾಗಿರಬೇಕಾದು [illegible] ಸಂಸ್ಥಾನಕ್ಕೆ ಈಗ ಇರುವ [illegible] ಅನಾವಶ್ಯಕವಾಗಿ ಅಧಿಕವಾಗಿರುವದಲ್ಲದೆ ಅದಕ್ಕೆ ಖರ್ಚಿಗೆ ಕಾರಣವಾಗಿರುವದೆಂದು ರೆಸಿಡೆಂಟರು ಗವರ್ನಮೆಂಟಿನವರು [illegible] ಅನಿಸುವದಲ್ಲಿ ಅವರಿಗೂ [illegible] ಸರ್ಕಾರಕ್ಕೂ ಹಾಗೆ [illegible] ನಡೆಯುತಲಿರುವುದು ತಿಳಿಯಬರುತದೆ.

The Hoidwar (?) enquiry.—ಕೆಲವು ತಿಂಗಳಿಂದೆ ಹರಿದ್ವಾರದಲ್ಲಿ ನಡೆದ [illegible] ಯಾತ್ರಿಕರಿಗಳು [illegible] [illegible]

LOCAL AND PROVINCIAL NEWS
ಸ್ಥಳೀಕವರ್ತಮಾನಗಳು [illegible]

The Dewan.—[illegible] ಕೆ. ಶೇಷಾದ್ರಿ ಅಯ್ಯರ್, ಸಿ. ಎಸ್. ಐ. ಯವರು [illegible] ಇನ್ನೂ ಈ ಊರಿಗೆ [illegible] ಗಳವರೆಗೆ [illegible] ಸಿಲ್ಲವು.

The Chicago Exhibition.—ಅಮೆರಿಕಾ [illegible] ಬಿಡುವ ಕಳುಹಿಸ ಬೇಕಾದ ಪದಾರ್ಥಗಳನ್ನು ಈ ಸಂಸ್ಥಾನದ ಗವರ್ನಮೆಂಟು ಮುಂಗಡವಾಗಿ ಶೇಖರಿಸಿವಲ್ಲವು. ಅವುಗಳೆಲ್ಲವು ಶೀಘ್ರವಾಗ [illegible] ದರ್ಶನ [illegible] ಇರುತವೆ.

The Resident.—ಇಲ್ಲಿನ ಕಾಯಂ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರಸನ್ ಯವರು ಬರುವ ತಿಂಗಳ ೫ ನೇ ರಾತ್ರಿಯಲ್ಲಿ ಬಂದು ತಮ್ಮ ಕೆಲಸದ ಚಾರ್ಜನ್ನು ಕರ್ನಲ್ ಪ್ರಿಡಾಕ್ಸಿಯವರಿಂದ ತೆಗೆದುಕೊಳ್ಳುವಂತೆಯೂ, ಕರ್ನಲ್ ಪ್ರಿಡಾಕ್ಸಿಯವರು ರಾಜಪುತಾನಾಗಿಗೆ ವಾಪಸ ಹೋಗುವರೆಂತಲೂ ತಿಳಿಯಬರುತಿದೆ.

Jatkas for Postal Peons.—ಈ ಪೂರುಷರ ಪೋಸ್ಟಾಫೀಸಿನಿಂದ ಆಯಾ ಬ್ರಾಂಚ್ ಆಫೀಸುಗಳಿಗೆ ಜವಾನರು ಚೀಲಗಳನ್ನು ಹೊತ್ತುಕೊಂಡು ಹೋಗುವದು ಬಹಳ ಪ್ರಯಾಸವೆಂತಲೂ, ಅದೇಗಲ್ಲವು ಸ್ವಾಯಿಬು ದೂರಸ್ಥಾನದಲ್ಲಿರುವದರಿಂದ ಜವಾನರಿಗೆ ಹೋಗಿಬರುವದು ಪ್ರಯಾಸವೆಂದಲೂ ಪೋಸ್ಟ್ ಮಾಸ್ಟರವರು ಪರ್ಯಾಲೋಚಿಸಿ ಅವರು ಜಟ್ಕಾಗಾಡಿಗಳ ಮೂಲಕ ಸಾಗಿಸಲಿಕ್ಕೆ ತಕ್ಕ ಯೋಜನೆಯನ್ನು ಮಾಡುತಿರುವಂತೆ ತಿಳಿಯಬರುತಿದೆ. ಇದು ಕೇವಲ ಆವಶ್ಯಕವಾದ ಯೋಜನೆಯಾಗಿರುತಿದೆ.

A sugar factory.—ಮದರಾಸಿನಲ್ಲಿ ಪ್ರಸಿದ್ಧ ವ್ಯಾಪಾರ ಕೋಠೀದಾರರಾದ ಮೆಸ್ಸರ್ಸ್ ಆರ್ಬತನಾಟ ಕಂಪೆನಿಯವರು, ಚಿಕ್ಕಬಳ್ಳಾಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಹೊಸದಾಗಿ ಸ್ಥಾಪಿಸಬೇಕೆಂದುದ್ದೇಶಿಸಿದಾರೆಂತಲೂ, ಬರುವ ತಿಂಗಳ ಗುರ್ರೀ ತಾರೀಖ ಮೊದಲು ಕಾರ್ಖಾನೆ ನೆಲೆಗೊಳಿಸಲ್ಪಟ್ಟು ಕ್ರಮವಾಗಿ ಕೆಲಸಕ್ಕೆ ಪ್ರಾರಂಭಿಸಲ್ಪಡುವದೆಂತಲೂ, ಈ ಉದ್ದೇಶಕವೊದಗೆ ಸದರೀ ಕೋಠಿಯ ಏಜಂಟರು ಈ ಪ್ರಾಂತಿಗೆ ಬಂದು ಕಬ್ಬು ಸರಬರಾಯಿಗಾಗಿ ಅನೇಕರಿಂದ ಪ್ರಜೆಗಳಿಗೆ ಅಡ್ವಾನ್ಸ್ ಸಹ ಕೊಟ್ಟು ಹೋದರೆಂದೂ ತಿಳಿಯಬರುತಿದೆ.

The weather.—ಮೊನ್ನೆಯದಿನ ಮಧ್ಯಾಹ್ನದ ವರಿಗೆ ಮಳೆಯು ಚನ್ನಾಗಿ ಇಲ್ಲದೆ ಬಿಸಿಲಿನ ಕಾರಣವಾಗಿ [illegible] ಮಧ್ಯಾಹ್ನದ ನಂತರ [illegible] ಕಾಲುವೆಗಳಲ್ಲಿ ನೀರು ಹರಿಯುವಷ್ಟು ಮಳೆಯಾಯಿತು. [illegible] ನೋಡಲಾಗಿ ಅತಿ ಶೀಘ್ರ ಪ್ರಾಂತಗಳಲ್ಲಿಯೂ ಇನ್ನೂ ಉಚಿತ ಮಳೆ ಆಗಿರಬೇಕೆಂದು ಊಹಿಸಬಹುದಾಗಿದೆ. ಈಗ [illegible] ಮಳೆಯ ಆವಶ್ಯಕತೆ [illegible] ಈಗ ಏನಾದರು ಹಿಂಗಾರು [illegible] ಸಲ್ಲಕ್ಕೆ ಕಾರಣವಾಗಬಹುದು. [illegible] ದಿನಗಳ [illegible] ಯೋಗಕರವು [illegible] ಗಾಡ್ಯವಿದ್ದಗಳ್ಯಾವ [illegible]

Ex....—[illegible] ಪ್ರಕರಣ [illegible] ವಾಗಿಯೆ [illegible] ತಾನೆ (ಅ [illegible] ಇಂಗ್ಲೀಷರವರು ಯುದ್ಧಕ್ಕೆ [illegible] ಕೊಡುಕ್ಕೋ [illegible] ಅವರಂತೆ ಇ [illegible] ದಾದಿಗೊಳ್ಳಸ್ವರ) ೬೦,೦೦೦ ರೂಪಾಯಿಗಳನ್ನು ಕೊಟ್ಟು [illegible] ೨೦೦ [illegible] ತೆಗೆದುಕೊಂಡು ಹೋಗಿರಾರೆ. ಇವುಗಳ [illegible] ಏರಡುವದರಿಗಾಗಿ [illegible] —ಪ್ರ. ಟಿ.

Lab...—[illegible] ಪ್ರಕಾಶಿಕೆಯವರ [illegible] ಪತ್ರಿಕಾ ಕರ್ತರು ಫಸ್ಟಕ್ಲಾಸ್ [illegible] ಕೋರ್ಟಿನಲ್ಲಿ ಮಾನ ನಷ್ಟಕ್ಕಾಗಿ ದಾವಾ ತಂದು ಈ ತಿಂಗಳು ೧೨ ನೇ ತಾರೀಖು [illegible] ಸದರಿ ಮೊಕದ್ದಮೆಯು [illegible] ಮೆ॥ ನೀರಸು [illegible] ಮತ್ತು [illegible] ಸಾಕ್ಷಿಗಾರರ ದರ್ಯಾಪ್ತಿಯೂ [illegible] ಪುನಃ ಈ ತಿಂಗಳ ೨೦ ನೇ ತಾರೀಖಿಗೆ ಮುಂದಿಗಳನ್ನು ಇಟ್ಟಿರುತ್ತಾರೆ. ಅವ [illegible] ತಕರಾರುಗಳನ್ನು ಸಹ ದಾಖಲಿನ ಮೇಲೆ ಇಟ್ಟಿರುತ್ತಾರೆ. ಇದರ ವೃತ್ತಾಂತವನ್ನು ಮುಂದೆ ತಿಳಿಸುವೆವು.—ಪ್ರ. ಪ.

Killed by an elephant.—ಆನೇಕಲ್ಲು ತಾಲ್ಲೂಕಿಯಲ್ಲಿ ಕೂಲಿ ಮಾಡುತ್ತಿದ್ದ ಒಬ್ಬ ಮುದುಕಿಯು ಗುಂಡನ್ನು ಬಿಟ್ಟು ನೀರು ಕುಡಿಯುವದಕ್ಕಾಗಿ ಸ್ವಲ್ಪ ದೂರ ಹೋದಳೆಂತಲೂ, ಸಮೀಪದಲ್ಲೇ ಅಡಗಿಕೊಂಡಿದ್ದ ಒಂದು ಆನೆಯು ನುಗ್ಗಿ ಅವಳನ್ನು ಹಿಡಿದು ಏಳಿ, ನೆಲಕ್ಕೆ ಬಡಿದು ಹಾಕಿತೆಂತಲೂ, ಅಷ್ಟರಲ್ಲೇ ಜನರೆಲ್ಲರೂ ಶಬ್ದ ಮಾಡಿಕೊಂಡು ಹೋಗಲು ಆ ಗಜವು ಓಡಿಹೋಯಿತೆಂತಲೂ ಕೇಳುತ್ತೇವೆ. ಅಲ್ಲದೆ ಆ ಆನೆಯು ಬಹಳ ತೊಂದರೆಯನ್ನು ಕೊಡುತ್ತಾ ಬಂದಿರುವದರಿಂದ ಅದನ್ನು ಗುಂಡಿನಿಂದ ಹೊಡೆದು ಕೊಲ್ಲಬೇಕೆಂದು ಮೆ॥ ಫಿಯೋಬಾರ್ಟ್ ಸಾಹೇಬರಿಗೆ ಸರ್ಕಾರದವರು ಹುಕುಂ ಕೊಟ್ಟಿರುತ್ತಾರೆಂದು ವರ್ತಮಾನವಿದೆ.

Prizes.—ಶ್ರೀಮನ್ಮಹಾ ರಾಣಿಯವರ ಬಾಲಿಕಾ ಪಾಠಶಾಲೆಯಲ್ಲಿ ನಡೆಯುವ ಪರೀಕ್ಷೆಯಲ್ಲಿ ಆರೋಗ್ಯ ಶಾಸ್ತ್ರದಲ್ಲಿ ಮೊದಲನೇಯವಳಾಗಿ ತೇರ್ಗಡೆಯಾದ ವಿದ್ಯಾರ್ಥಿನಿಗೆ ಮ|| ದಿವಾನರವರು ಚಿನ್ನದ ಆಭರಣ ರೂಪವಾದ ಒಂದು ಬಹುಮಾನವನ್ನೂ, ಭಾಷೆಯಲ್ಲಿ ಮೊದಲನೇಯವಳಾಗಿ ತೇರ್ಗಡೆಯಾದ ವಿದ್ಯಾರ್ಥಿನಿಗೆ ಚೀಫ್ ಜಡ್ಜಿಗಳಾದ ಮ|| ತುಂಬುಚೆಟ್ಟಿಯವರು ಚಿನ್ನದ ಆಭರಣ ರೂಪವಾದ ಒಂದು ಬಹುಮಾನವನ್ನೂ, ಭೂಗೋಳ ಶಾಸ್ತ್ರದಲ್ಲಿ ಮೊದಲನೆಯವಳಾಗಿ ತೇರ್ಗಡೆಯಾದ ವಿದ್ಯಾರ್ಥಿನಿಗೆ ಮ|| ಚೆಂಚಲರಾಯರವರು ಚಿನ್ನದ ಆಭರಣರೂಪವಾದ ಒಂದು ಬಹುಮಾನವನ್ನೂ ನವರಾತ್ರಿ ಉತ್ಸವ ನೆರವೇರಿದಮೇಲೆ ಆಗುವ ಬಹುಮಾನದ ಸಭೆಯಲ್ಲಿ ಕೊಡುವದಾಗಿ ಗೊತ್ತು ಮಾಡಿದಾರೆ.—ವ್ಯ. ಬಿ

Liberality.—ಬೆಂಗಳೂರ್ ಶಾಪು ಕೀಪರರಾದ ಮ|| ಕೋಂಡಾಲಿ ಸಾಹೇಬರವರು ಶಿವಮೊಗ್ಗೆಯಲ್ಲಿ ಒಂದು ದೊಡ್ಡ ಛತ್ರವನ್ನು ಕಟ್ಟಿಸಲಿಕ್ಕಾಗಿ ಸರ್ಕಾರಕ್ಕೆ ೩೨ ಸಾವಿರ ರೂಪಾಯಿಗಳನ್ನು ದಾನವಾಗಿ ಕೊಟ್ಟಿರುತ್ತಾರೆ. ಈ ಹಣಕ್ಕೆ ಸರ್ಕಾರದವರು ಇನ್ನೂ ೨೦೦೦೦ ರೂಪಾಯಿಗಳನ್ನು ಹಾಕಿ ಅಲ್ಲಿನ ಬೀದಿಯ ಆಚೆ ದಡದಲ್ಲಿ ಸೇರುವಿಗೆ ಸವಿಸ್ತಾರವಾಗಿ ಛತ್ರವನ್ನು ಕಟ್ಟಿಸಲಿಕ್ಕೆ ಪ್ರಾರಂಭಿಸಿದ್ದಾರೆ. ಆ ಛತ್ರದಲ್ಲಿ ಕ್ರಿಸ್ತರಿಗೆ ಬ್ರಾಹ್ಮಣರಿಗೆ ಮುಸಲ್ಮಾನರಿಗೆ ಇತರರಿಗೆ ಎಂದು ೪ ವಿಭಾಗಗಳಿರುವವಲ್ಲದೆ ಮುಂದುಗಡೆಯ ಪಾರ್ಶ್ವದಲ್ಲಿ ಬಂಡಿ ಮುಂತಾದ ಕಾವಲು ಜನರಿಗೆ ಸ್ಥಳವಿರುವುದಲ್ಲದೆ, ಛತ್ರದ ಹಿಂದುಗಡೆ ದೊಡ್ಡ ದವಸ, ಶೌಚ ಸ್ನಾನ ಕೊಪ್ಪಗಳೂ, ಪ್ರತಿಭಾಗಕ್ಕೂ ಒಂದೊಂದು ಮುಂದಿನ ಪ್ರಾಕಾರವೂ ಸತ್ರದ ಮುಂದುಗಡೆ ಒಂದು ಗೋಪುರವಿರುವ ಕೊಠಡಿ, ನಿರ್ಮಿಸಿದ್ದಾರೆ. ಇವುಗಳಲ್ಲಿ ಸ್ನಾನದ ಕೊಪ್ಪಗಳಿಗೇನೇ ೧೧ ೦೦೦ ರೂಪಾಯಿಗಳು ಖರ್ಚು ಆಗಿರುವುದಂತೆ.

THE MYSORE GAZETTE

ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜರಾಜೇಶ್ವರ ಚಾಮರಾಜೇಂದ್ರರವರ ಸರ್ಕಾರದಿಂದ ಹೊರಡಿಸಲಾದ ಹುಕುಮುಗಳು

ನಂ|| ೩೫೪೨, ೧ ೪೪—೯೨—ತಾ ೬ ನೇ ಸೆಪ್ಟೆಂಬರ್ ೧೮೯೨—ಬೆಂಗಳೂರು ಡಿಸ್ಟ್ರಿಕ್ಟ್ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮ|| ಬಿ. ಕೃಷ್ಣರಾಯರವರು, ೧೮೯೨ನೇ ಇಸವಿ ಆಗಸ್ಟ್ ೧೪ ನೇ ತಾರೀಖಿನ ಪ್ರಾರಂಭದಲ್ಲಿ ತಮ್ಮ ಕೆಲಸದ ಮೇಲೆ ಹಾಜರಾಗಿರುವಂತೆ ಎಣಿಸಲ್ಪಡುತ್ತಾರೆ.

ನಂ|| ೩೫೪೮, ೧ ೪೯೧—೯೨—ಮೈಸೂರ್ ಡಿಪ್ಯುಟಿ ಕಮಿಷನರವರ ಹುಕುಮಿನ ಮೇರೆಗೆ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಚಾರ್ಜನ್ನು ಸದರಿ ೧೮೯೨ನೇ ಇಸವಿ ಆಗಸ್ಟ್ ೧೪ನೇ ತಾರೀಖಿನ ಪ್ರಾರಂಭದಲ್ಲಿ ಮ|| ಸಿ. ಶ್ರೀನಿವಾಸ ಅಯ್ಯಂಗಾರವರಿಗೆ ಒಪ್ಪಿಸಿ ಅವರು ರಜಾ ತೆಗೆದುಕೊಂಡಿರುತ್ತಾರೆ.

ನಂ|| ೩೫೪೫ ೧. ೪೯೦ ೯೨—ಮ|| ಕಡೂರು ಡಿ. ವೆಂಕಟರಾಯರವರು ಕಡೂರು ಡಿಸ್ಟ್ರಿಕ್ಟ್ ಟ್ರೆಜರಿ ಚಾರ್ಜನ್ನು ಸದರಿ ೧೮೯೨ನೇ ಇಸವಿ ಆಗಸ್ಟ್ ೧೪ನೇ ತಾರೀಖಿನ ಅಪರಾಹ್ನದಲ್ಲಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಆರ್. ನಿಜಲಿಂಗಪ್ಪನವರಿಗೊಪ್ಪಿಸಲು ಅವರು ಅದನ್ನು ತೆಗೆದುಕೊಂಡಿರುತ್ತಾರೆ.

ನಂ|| ೩೯೪೨. ೧. ೯೬೦—೯೨—ಟೆಕ್ನಿಕಲ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಮ|| ಕೆ. ವಾಸುದೇವಯ್ಯಂಗಾರ್ಯರವರು ಮೈಸೂರು ದೇಶದಲ್ಲಿನ ಪೆಟ್ಟಿಗಳ ಸೂಪರಿಂಟೆಂಡೆಂಟರಾಗಿ ನೇಮಕರಾಗಿ ಕಳುಹಿಸಲ್ಪಟ್ಟಿರುತ್ತಾರೆ.

ನಂ|| ೩೨೨೨ ೧. ೩೪೬—ತಾ ೭ ನೇ ಸೆಪ್ಟೆಂಬರ್ ೧೮೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ ೧೨೧, ಮತ್ತು ೧೨೪ ನೇ ಆರ್ಟಿಕಲ್ಗಳ ನಿಯಮಗಳನ್ನನುಸರಿಸಿ, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಟಿ. ಪರಮಶಿವ ಅಯ್ಯರವರಿಗೆ ೧೮೯೨ ನೇ ಇಸವಿ ಮೇ|| ೧೪ ನೇ ತಾರೀಖ್ ಲಾಗಾಯಿತು ೪ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೩೨೯೮ ೧. ೩೪೫—೯೨—ತಾ|| ೪ ನೇ ಸೆಪ್ಟೆಂಬರ್ ೧೮೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ ೧೨೨ ನೇ ಆರ್ಟಿಕಲ್ ಅನುಸರಿಸಿ, ಮುನ್ಸಿಪಲ್ ಸೆಕ್ರೆಟರಿ ಮ|| ಜೆ. ಚ. ಬಾಳಾ, ಎಂ. ಎ. ಯವರಿಗೆ ಮಾಹೆ ಸೆಪ್ಟೆಂಬರ್ ೧೦ ನೇ ತಾರೀಖ್ ಲಾಗಾಯಿತು ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೩೨೬೭ ೧. ೪. ೩೫೦—೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ ೧೨೦ ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರೊಳಗಿರುವ ಸರ್ಕಾರಿ ತೋಟಗಳ ಸೂಪರಿಂಟೆಂಡೆಂಟರಾದ ಮ|| ಜೆ. ಕ್ಯಾಮರಾನ್ ಯವರಿಗೆ ಮಾಹೆ ಸೆಪ್ಟೆಂಬರ್ ೧೪ ನೇ ತಾರೀಖು ಲಾಗಾಯಿತು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೩೯೪೯. ೧. ೯೬೪—೯೨—ತಾ ೯ ನೇ ಸೆಪ್ಟೆಂಬರ್ ೧೮೯೨—ಚಳ್ಳಕೆರೆ ತಾಲ್ಲೂಕ್ ಅಮಲ್ದಾರ್ ಹೆಚ್. ಆರ್. ಶ್ರೀನಿವಾಸ ರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

(೨) ಮೊಳಕಾಲ್ಮೂರು ಸಬ್ ತಾಲ್ಲೂಕ್ ಡೆಪ್ಯುಟಿ ಅಮಲ್ದಾರ್ ಎನ್. ಅಳಸಿಂಗರಯ್ಯಂಗಾರ್ಯರವರು, ಅಮಲ್ದಾರ್ ಶ್ರೀನಿವಾಸ ರಾಯರವರು ರಜಾ ಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಸ್ವಂತ ಕೆಲಸಗಳ ಜತೆ ಚಳ್ಳಕೆರೆ ತಾಲ್ಲೂಕ್ ಚಾರ್ಜನ್ನೂ ನೋಡತಕ್ಕದ್ದು.

ನಂ|| ೩೯೯೫, ೧. ೧೯೫೦—೯೨—ಮೈಸೂರ್ ಡಿಸ್ಟ್ರಿಕ್ಟ್ ಸ್ಪೆಷಲ್ ಡ್ಯೂಟಿ ಪ್ರೊಬೇಷನರಿ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಎಂ. ಸುಬ್ಬರಾವ್ ಅವರವರಿಗೆ, ೧೮೯೨ ನೇ ಇಸವಿ ಜೂನ್ ೧೬ ನೇ ತಾರೀಖ್ ಲಾಗಾಯಿತು ಸೆಪ್ಟೆಂಬರ್ ೧೬ ನೇ ತಾರೀಖಿನ ವರೆಗೆ ಉಭಯ ದಿನಗಳೂ ಸೇರಿ ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ|| ೩೯೯೯ ೧. ೯೨೬ ೯೨—ಮೈಸೂರ್ ರೆವಿನ್ಯೂ ಸರ್ವೆ ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟ್ ಮ|| ಬಿ. ಎಲ್. ಮೊರೆಟನ್ನರು, ಯಾವನೋ ಒಬ್ಬನು ಸೂಪರ್ನ್ಯೂಮರರಿ ನೌಕರಿಯನ್ನು ಮಾಡಿ ಫರ್ಲೋದ ೧೮೯೨ ನೇ ಇಸವಿ ಜೂಲೈ ೧೫ ನೇ ತಾರೀಖು ಲಾಗಾಯಿತು ೧ನೇ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ನಂ|| ೪೦೦೨ ೧. ೯೨೯ ೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ಗಳ ೧೪೪ ನೇ ಆರ್ಟಿಕಲ್ ಅನುಸರಿಸಿ, ಬೇಲೂರು ತಾಲ್ಲೂಕ್ ಅಮಲ್ದಾರ್ ಬಿ. ವೆಂಕಟರಾಮಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಕೋಲಾರ್ ಡಿಸ್ಟ್ರಿಕ್ಟ್ ಆಫೀಸ್ ಮುನ್ಷಿಯಾದ ದಬ್ಬಗುಂಟೆ ರಾಮಯ್ಯನವರು, ಶಿ. ಶ್ರೀನಿವಾಸಯ್ಯನವರು ರಜಾಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಬೇಲೂರು ತಾಲ್ಲೂಕ್ ೩ ನೇ ಗ್ರೇಡ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ನೇಮಕರಾಗಿರ್ಲ್ಪಟ್ಟಿರುತ್ತಾರೆ.

ನಂ|| ೪೦೦೬, ೧. ೯೪೩—೯೨—ಮೈಸೂರಿಗೆ ವರ್ಗವಾಗಿ ಹೋದ ಮೂರನೇ ಕ್ಲಾಸ್ ಅಸಿಸ್ಟೆಂಟ್ ಅಸಿಸ್ಟೆಂಟ್ ಮಿಸ್ ಲೂಯಿಸಾ ಪ್ಲಾಟ್ ಯವರಿಗೆ ಬದಲಾಗಿ, ೧೮೯೨ ನೇ ಇಸವಿ ಜೂಲೈ ೨೦ ನೇ ತಾರೀಖ್ ಲಾಗಾಯಿತು ಮಿಸ್ ಸಾರಾ ಪ್ಲಾಟ್ ಯವರು ಹಿಂದನೇ ಕ್ಲಾಸ್ ಅಸಿಸ್ಟೆಂಟ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟು ಬೆಂಗಳೂರ್ ಪ್ರಸವ ಶಾಲೆಯಲ್ಲಿ ನೌಕರಿಯಲ್ಲಿ ಇಡ ಮಾಡಲ್ಪಟ್ಟಿರುತ್ತಾರೆ.

ನಂ|| ೪೦೧೩. ೧ ೪. ೧೩೩—೯೨—ಮೈಸೂರ್ ರೆವಿನ್ಯೂ ಸರ್ವೆ ಇಲಾಖೆಯಲ್ಲಿ ಕೆಲಸ ನೋಡುತಲಿರುವ ಫಾರೆಸ್ಟ್ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ಟಿ. ಅಬ್ದುಲ್ ಕರೀಂಯವರು, ಫಾರೆಸ್ಟ್ ಇಲಾಖೆಯಲ್ಲಿ ಡೆಪ್ಯುಟಿ ರೇಂಜರ್ ಅಸಿಸ್ಟೆಂಟರಾಗಿ ನಿಯಮಿಸಲ್ಪಡುವ ಬಗ್ಗೆ ಅವರ ನೌಕರಿಯು ಫಾರೆಸ್ಟ್ ಮತ್ತು ಪ್ಲಾಂಟೇಷನ್ಗಳ ಡೈರೆಕ್ಟರ್ ಜನರಲ್ಲವರ ಚಾರ್ಜಿಗೆ ಒಪ್ಪಿಸಲ್ಪಟ್ಟಿರುತ್ತದೆ. (೨) ಮ|| ಅಬ್ದುಲ್ ಕರೀಂ ಯವರು, ೧೮೯೨ ನೇ ಇಸವಿ ಸೆಪ್ಟೆಂಬರ್ ೨ ನೇ ತಾರೀಖಿನ ಪ್ರಾರಂಭದಲ್ಲಿ ಫಾರೆಸ್ಟ್ ಇಲಾಖಾ ಡೆಪ್ಯುಟಿ ರೇಂಜರ್ ಅಸಿಸ್ಟೆಂಟರಾಗಿ ತಮ್ಮ ಕೆಲಸದಲ್ಲಿ ಪ್ರವೇಶಿಸಿರುತ್ತಾರೆ.

ನಂ. ೩೯೪೧—೧. ೯೫೭—೯೨—ತಾ|| ೧೦ನೇ ಸೆಪ್ಟೆಂಬರ್ ೧೮೯೨.—ಮೈಸೂರ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಕೋರ್ಟಿನ ಆಕ್ಟಿಂಗ್ ರಿಜಿಸ್ಟ್ರಾರ್ ಮ|| ಜೆ. ಜಿ. ಡೋಲ್ಸ್ ಯವರು, ಮ|| ಬಿ. ವೆಂಕಟರಾಯರವರು ಸದರ ಕೆಲಸದಮೇಲೆ ಗೈರ್ ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಒಂದನೇ ಗ್ರೇಡಿನಲ್ಲಿ ಚಿಕ್ಕಮಗಳೂರ್ ಮುನ್ಸಫರಾಗಿ ಹಂಗಾಮಿ ತರೀಕೆ ನೇಮಕರಾಗಿರಲ್ಪಟ್ಟಿರುತ್ತಾರೆ.

ನಂ. ೪೦೪೩—೧. ೧೦೦೦—೯೨—ಶ್ರೀಮನ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಸಿ. ದೇವರಾಜೇ ಅರಸರವರಿಗೆ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರ ಸಾಮಾನ್ಯ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೪೦೪೯—೧. ೧೦೦೩—೯೨—ದುಮಕೂರ್ ಡಿಸ್ಟ್ರಿಕ್ಟ್ ಆಫೀಸಿಯೇಟಿಂಗ್ ಡೆಪ್ಯುಟಿ ಕಮಿಷನರ್ ಮ|| ಸೈಯದ್ ನಸಿರುದ್ದೀನ್ ಯವರಿಗೆ, ೧೮೯೨ ನೇ ಇಸವಿ ಸೆಪ್ಟೆಂಬರ್ ೬ ನೇ ತಾರೀಖ್ ಲಾಗಾಯಿತು ೪ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. ೪೦೫೨—೧. ೧೦೦೬—೯೨—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ ನೇ ಸೆಕ್ಷನ್ ಅನುಸರಿಸಿ, ದುಮಕೂರ್ ಡಿಸ್ಟ್ರಿಕ್ಟ್ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮತ್ತು ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಮ|| ಅಬ್ದುಲ್ ಅಜೀಜ್ ಯವರಿಗೆ ಮೊದಲನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ. ೪೦೬೩.—೧ ೪. ೩೩೫—೯೨—ಐದನೇ ಭಾಗ ಸಿವಿಲ್ ಅಕೌಂಟ್ ಕೋಡ್ ೧೦ನೇ ಪ್ಯಾರ ೩ನೇ ಅಧ್ಯಾಯದ ೧ನೇ ರೂಲಿನ ನಿಯಮಗಳನ್ನನುಸರಿಸಿ ಜಾಲ್ತಿ ತಿಂಗಳಿನ ಸಿಬ್ಬಂದಿ ಬಿಲ್ಲುಗಳನ್ನು ೧೮೯೨ನೇ ಇಸವಿ ಸೆಪ್ಟೆಂಬರ್ ೨೩ನೇ ತಾರೀಖಿನಲ್ಲಿ ವಿಜಯದಶಮಿ ನಿಮಿತ್ತ ಸರ್ಕಾರದವರು ಮುಚ್ಚಿರುತ್ತಾರೆ. ಆದರೆ ಈ ಹುಕುಂ ಗೆಜೆಟೆಡ್ ಆಫೀಸರ ಸಂಬಳದ ಬಿಲ್ಲುಗಳಿಗೆ ಲಾಗುವಾಗುವದಿಲ್ಲವು.

ನಂ||೪೦೧೯—೧೦೨೪—೯೨—ಈ ದಸರಾ ಹಬ್ಬಕ್ಕೋಸ್ಕರ ೧೮೯೨ನೇ ಇಸವಿ ಸೆಪ್ಟೆಂಬರ್ ೨೬ನೇ ತಾರೀಖ್ ಲಾಗಾಯಿತು ಅಕ್ಟೋಬರ್ ೪ನೇ ತಾರೀಖ್ ಶನಿವಾರದ ಪರ್ಯಂತ ರಜಾ ದಿವಸಗಳಾಗಿರುತ್ತವೆ.

೨. ಜರೂರಿಯಾತ್ ಕೆಲಸ ನಡೆಯುವವಕ್ಕಾಗಿ ಆಯಾ ಡಿಪಾರ್ಟ್‌ಮೆಂಟುಗಳ ಮೇಲ್ವಿಚಾರಣೆ ಏರ್ಪಾಡುಗಳು ಮಾಡಲ್ಪಡತಕ್ಕದ್ದು.

ನಂ ೪೧೩೪—೧. ೧೦೨೯—೯೨—ಗುಬ್ಬಿ ತಾಲ್ಲೂಕ್ ಅಮಲ್ದಾರ್ ಕೆ. ಶ್ರೀಕಂಠಯ್ಯನವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಗುಬ್ಬಿ ತಾಲ್ಲೂಕ್ ಶಿರಸ್ತೇದಾರ್ ಕೇಶವಪ್ಪನವರು, ಅಮಲ್ದಾರ್ ಶ್ರೀಕಂಠಯ್ಯನವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ಸದರೀ ತಾಲ್ಲೂಕ್ ಇನ್‌ಚಾರ್ಜಿನಲ್ಲಿರತಕ್ಕದ್ದಲ್ಲದೆ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ ೧೨ನೇ ಸೆಕ್ಷನ್ ಅನುಸರಿಸಿ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ|| ೪೧೩೦—೧. ೧೦೨೫—೯೨—ತಾ|| ೧೪ನೇ ಸೆಪ್ಟೆಂಬರ್ ೧೮೯೨—ಗುಂಡ್ಲುಪೇಟೆ ಅಮಲ್ದಾರ್ ಸೈಯದ್ ಹಾಮಿದ್‌ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಲಾಗಾಯಿತು ಮೂರು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಹೆಡ್ ಕ್ವಾರ್ಟರ್ ಪೋಲೀಸ್ ಇನ್ಸ್‌ಪೆಕ್ಟರ್ ವಿ. ಸಭಾಪತಿ ಪಿಳ್ಳೆಯವರು, ಸೈಯದ್ ಹಾಮಿದ್‌ಯವರು ರಜಾ ಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವತನಕ ಗುಂಡ್ಲುಪೇಟೆ ತಾಲ್ಲೂಕ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕೆ ನೇಮಕರಾಗಿರಲ್ಪಟ್ಟಿರುತ್ತಾರೆ.

ನಂ|| ೪೧೩೩.೧. ೧೦೨೭—೯೨—ತಿರುಮಕೂಡ್ಲು ನರಸೀಪುರ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ವೈ. ನರಸಿಂಹಯ್ಯನವರು, ನರಸಣ್ಣನವರು ರಜಾಮೇಲೆ ಗೈರ್ಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವ ವರೆಗೆ ನಂಜನಗೂಡು ತಾಲ್ಲೂಕ್ ಏವನೇ ಕ್ಲಾಸ್ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ತಾತ್ಕಾಲದೊಳಗು ಆಕ್ಟಿಂಗ್ ತರೀಕೆ ನೇಮಕರಾಗಿರಲ್ಪಟ್ಟಿರುತ್ತಾರೆ.

CORRESPONDENCE.

[ಇದರಡಿ ಪ್ರಕಟಿಸಲ್ಪಟ್ಟಿರುವ ಲೇಖನದಲ್ಲಿ ಕಂಡ ಅಭಿಪ್ರಾಯಗಳ ಗುಣದೋಷಗಳಿಗೆ ಪತ್ರಿಕಾ ಲೇಖಕರು ಬಾಧ್ಯರಲ್ಲವು.—ಎಡಿಟರ್ ಕ. ಪ.]

ಮ|| ಮ|| ಕರ್ಣಾಟಕ ಪ್ರಕಾಶಿಕಾ ಎಡಿಟರವರ ಸನ್ನಿಧಿಗೆ.

ಕಡೂರು ಡಿ| ಕೊಪ್ಪ ತಾಲ್ಲೂಕ್ ಶೃಂಗೇರಿಯಲ್ಲಿ ಈಚಿದರ ಲ್ಲಿ ನಡೆದ ಒಂದು ವಿಶೇಷ ಪ್ರಶಂಸನೀಯವಾದ ಮತ್ತು ಬಹೋಪಯೋಗಕರವಾದ ಸಭೆಯಲ್ಲಿ ನಡೆದ ಸಂಗತಿಯನ್ನು ತಮಗೆ ಸಂಕ್ಷೇಪವಾಗಿ ಅರಿಕೆ ಮಾಡುತ್ತೇನೆ. ಅದನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಪಡಿಸಬೇಕೆಂದು ಕೋರುತ್ತೇನೆ.

ಈ ವಿಷಯವು ಹೊಸದಾಗಿ ಒಂದು ಬಾಲಿಕಾ ಪಾಠಶಾಲೆಯನ್ನು ಈ ಶೃಂಗೇರಿಯಲ್ಲಿ ಸ್ಥಾಪನೆ ಮಾಡತಕ್ಕದ್ದಕ್ಕೋಸ್ಕರ ವಾಗಿರುತ್ತೆ.

ಈ ಶೃಂಗೇರಿಯೊಳಗೆ ಯಾವುದು ಶ್ರೀ ಶಾರದಾಂಬಾ ಪೀಠವಾಗಿರುವದು ಸರ್ವರಿಗೂ ತಿಳಿದ್ದೇ ಇರುತ್ತೆ. ವಿದ್ಯೆಯು ಈ ಸಂಸ್ಥಾನದ ಪ್ರಭಾವ ದಿಂದ ಪ್ರದೇಶಕ್ಕೆ ವ್ಯಾಪಿಸತಕ್ಕದ್ದಾಗಿರುತ್ತೆ. ಹೀಗಿರುವಲ್ಲಿ ಈ ಸ್ಥಳದಲ್ಲಿ ಒಂದು ಬಾಲಿಕಾ ಪಾಠಶಾಲೆಯನ್ನು ಇದುವರೆಗೂ ಸ್ಥಾಪನೆ ಮಾಡದೆ ಇದ್ದ ಕಾರಣ ಬಾಲಿಕೆಯರಿಗೆ ವಿದ್ಯಾಭ್ಯಾಸಕ್ಕೆ ಅನುಕೂಲವಿಲ್ಲದ ಪ್ರಜೆಗಳಿಗೆ ಬಹಳ ಕೊರತೆಯಾಗಿತ್ತು. ಸ್ತ್ರೀವಿದ್ಯಾಭ್ಯಾಸದಲ್ಲಿ ವಿಶೇಷ ಆಸಕ್ತಿಯನ್ನು ಹೊಂದಿಕೊಂಡು ಇದನ್ನ ಸಾಧ್ಯವಾದ ಮಟ್ಟಿಗೂ ಅನುಕೂಲವಾದ ಸ್ಥಳದಲ್ಲಿ ಪ್ರಕಾಶಗೊಳಿಸಿ ಬಾಲೆಯರು ವಿದ್ಯಾಶಿಕ್ಷಣ ಹೊಂದುವದಕ್ಕೆ ಪ್ರಕಾರದ ಸಲಕರಣೆಗಳನ್ನು ಒದಗಿಸಿ ಬಾಲಿಕೆಯರನ್ನು ಸ್ಥಾಪನೆ ಮಾಡುವದರಲ್ಲಿ ಅತ್ಯಾಸಕ್ತರಾಗಿರುವ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಹಾರಾಜಶ್ರೀ ಎ. ಗೋವಿಂದಾಚಾರ್ಯರವರು ಇಲ್ಲಿಗೆ ಈ ದಿವಸ ದಯಮಾಡಿ ಸ್ಕೂಲಿನ ಆಫೀಸಿನಲ್ಲಿ ಆಫೀಸಿನಲ್ಲಿ ಅಮಲ್ದಾರ್ ಮ|| ಶ್ರೀ. ರಾಮಯ್ಯನವರ ಸಹಾಯದಿಂದ ಈ ಸ್ಥಳಕ್ಕೆ ಅವರೋಹಣದ ಒಂದು ಸಭೆಯನ್ನು ಸೇರಿಸಿದರು. ಈ ಸಭೆಯಲ್ಲಿ ಮಹಾರಾಜಶ್ರೀ ಎ. ಗೋವಿಂದಾಚಾರ್ಯರವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದು, ಇಲ್ಲಿಗೆ ಬಂದಿದ್ದ ಸಭಿಕರೆಲ್ಲರು, ಅವರ ಪೈಕಿ ವಿಶೇಷವಾದ ಮೊತ್ತ ಮಹಾಜನಗಳು ಸುಬ್ರಹ್ಮಣ್ಯ ಸೋಮಯಾಜಿಗಳವರು, ವೆಂಕಟರಮಣ ಉಪಾಧ್ಯಾಯರವರು, ಮ|| ಅಮಲ್ದಾರ್ ಶ್ರೀ. ರಾಮಯ್ಯನವರು, ಮ|| ಸೋಡಿಯಮ್ ಸೂರ್ಯನಾರಾಯಣ ರಾಯರವರು, ಸಲ್ಲೂಕಿನ ಡೆಪ್ಯುಟಿ ಮ|| ಧೋಂಡೋ ಸಾಮಿ ಅಯ್ಯಂಗಾರ್ಯರು, ಮ|| ಚೆನ್ನಪ್ಪರ ಸಿ. ಮುಕುಂದ ಭಟ್ಟರವರು, ಮ|| ವೆಂಕಟರಮಣಶೆಟ್ಟಿಯವರು, ಕನ್ನಡ ಸ್ಕೂಲ್ ಹೆಡ್ ಮಾಸ್ಟರ್ ಮ|| ಕೃಷ್ಣಪ್ಪನವರು, ಮತ್ತು ಅನೇಕ ವಿದ್ವಾಂಸರು, ಗೃಹಸ್ಥರು, ವರ್ತಕರು, ಸಾಹುಕಾರರು ಮುಂತಾದವರು ಪ್ರಧಾನ ಪಾಠಶಾಲೆಯ ಮೇಲೆ ಮ|| ಎ. ಗೋವಿಂದಾಚಾರ್ಯರವರು ಮಾಡಿದ ಉಪನ್ಯಾಸವನ್ನು ಅಂಗೀಕರಿಸಿ ಬಹಳ ಸಂತೋಷಪಟ್ಟರು. ಈ ವಿದ್ಯಾಭ್ಯಾಸವಿಷಯದಲ್ಲಿ ಯೋಗ್ಯವಾದ ಸಲಹೆಯನ್ನು, ಇದರಿಂದ ಪ್ರಜೆಗಳಿಗೆ ಮುಂದೆ ಆಗತಕ್ಕ ಉಪಯೋಗವನ್ನು ಮತ್ತು ಸರ್ಕಾರದ ಅನುಗ್ರಹದಿಂದ ಬರುವ ವಿಶೇಷವಾದ ಅನುಕೂಲ ಮತ್ತು ಸೌಖ್ಯಗಳನ್ನು ವಿಶದವಾಗಿ ಸಭಿಕರಿಗೆ ತಿಳಿಯುವಂತೆ ವ್ಯಾಖ್ಯಾನಮಾಡಿ ಸರ್ವರೂ ಅನುಮೋದನವನ್ನು ಪಡೆದರು. ಸಭಿಕರೆಲ್ಲ ಬಾಲ್ಯವಿವಾಹ ಗಿ

[illegible]

SUMMARY OF NEWS

ವೃತ್ತಾಂತ ಸಂಗ್ರಹವು.

[illegible]

ನೋಟೀಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ.

ಮದರಾಸ್ ರೈಲ್ವೆ ರಸ್ತೆಯಲ್ಲಿ ಕೋಲಾರ್ ರೋಡ್ ಸ್ಟೇಷನ್ನಿಂದ ಕೋಲಾರ ಗೋಲ್ಡ್ ಫೀಲ್ಡ್ಸ್ ಎಂಬ ಚಿನ್ನದ ಗಣಿಗಳ ವರೆವಿಗೆ [illegible]

[illegible]

By Order,
H. Groves, Mem. Inst. Engrs.,
Supdg. Engineer and Joint Secretary for
Railways, Government of Mysore.

[illegible]

[illegible]

11. [illegible]

V. P. MADHAVA ROW,
Inspector General of Police.

Bangalore.—Printed and published at the Karnataka Press, No. 40, Hospital Road Pettah.—189[illegible].

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX. | BANGALORE—MONDAY, SEPTEMBER 26, 1892. | No. 39.

ಸಂಪುಟ ೧೯. | ಬೆಂಗಳೂರು:—೧೮೯೨ ನೇ ಇಸವಿ ಸೆಪ್ಟೆಂಬರ್ ೨೬ ನೇ ತಾರೀಖು ಸೋಮವಾರ. | ಸಂಚಿಕೆ ೩೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ.

		ಮುಂಗಡವಾಗಿ ಕೊಟ್ಟರೆ	ಕಡೆಯಲ್ಲಿ ಕೊಟ್ಟರೆ
ಬೆಂಗಳೂರಿನಲ್ಲಿ	,,	8—0—0	9—0—0
ಹೊರಗೆ	,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡ ಭಾಷೆಗಳಲ್ಲಿ.

ಬೆಂಗಳೂರಿನಲ್ಲಿ	,,	4—0—0	5—0—0
ಹೊರಗೆ	,,	5—0—0	6—0—0

[illegible]

ಪ್ರಕಟನೆಯ ದರಗಳು.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE

Price including Postage Rs. 5-0-0

ವೈದ್ಯಸಾರ ಸಂಗ್ರಹ.

[illegible]

ಬೆಂಗಳೂರು, [illegible]

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

[illegible]

ನೋಟೀಸ್.

ಸುಬ್ರಹ್ಮಣ್ಯನ ಉತ್ಸವದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ವೆ ಮತ್ತು ಕಂಪನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಖಬರದಾರಿಕೆಯಿಂದ ವ್ಯಾಲ್ಯೂ ಪೇಯಬಲ್ ಪೋಸ್ಟು ಮೂಲಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸಿದ್ಧರಾಗಿರುತ್ತೇವೆ.

[illegible]

ವಿಳಾಸ,—ಗಣೇಶ ರಾಮಚಂದ್ರ ಕರ್ವೆ, ಮತ್ತು ಕಂಪನಿ, ಕಮಿಷನ್ ಏಜಂಟ್ಸ್, [illegible]

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ. [illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

[illegible] ವಿದ್ಯಾರಣ್ಯಪುರದಲ್ಲಿರುವ ವಿನಾಯಕ ದೇವಸ್ಥಾನದ ಬಾಬುಭಟ್ಟನು ಈ ನೋಟೀಸ್ ಮೂಲಕ ತಿಳಿಯಪಡಿಸುವದೇನಂದರೆ:—

ನನ್ನ ಖಾಸ್ ಮಗನಾದ ನಾರಾಯಣಭಟ್ಟನು ನಂಬವನಿಗೆ ಕೆಲವು ದಿವಸಗಳಿಂದೀಚೆಗೆ ಬುದ್ಧಿಸ್ವಾಧೀನವಿಲ್ಲದೆ ಮನಸ್ಸಿಗೆ ತಿರುಗುತ್ತಿರುವದರಿಂದ ಈ ನಾರಾಯಣಭಟ್ಟನಿಗೆ [illegible] ಯಾರೂ ಸಾಲವನ್ನು ಕೊಡಕೂಡದು. ಹಾಗೆ ಸಾಲ ಕೊಟ್ಟು ಆತನಮೇಲೆ ಪತ್ರಗಳು ಬರೆದು ಕೊಂಡರೂ ಸದರೀ ನಾರಾಯಣಭಟ್ಟನ ತಂದೆ ಬಾಬುಭಟ್ಟನ ಚರ ಸ್ಥಿರ ಆಸ್ತಿಗಳು ಯಾವತ್ತೂ ಸದರೀ ನಾರಾಯಣಭಟ್ಟನು ಮಾಡಿದ ಸಾಲಗಳಿಗೆ ಜವಾಬುದಾರಿ ಆಗುವದಿಲ್ಲ. ಮತ್ತು ಆತನ ತಂದೆ ಬಾಬುಭಟ್ಟನಿಂದ ಸಂಪಾದಿಸಲ್ಪಟ್ಟ ಪಿತ್ರಾರ್ಜಿತ ಚರ ಸ್ಥಿರ ಆಸ್ತಿಗಳನ್ನು ಸದರೀ ನಾರಾಯಣಭಟ್ಟನು ಪರಾಧೀನ ಮಾಡುವದಕ್ಕೆ ಹಕ್ಕು ದಾರನಾಗಿ [illegible] ಪರಾಧೀನ ಮಾಡಿದಾಗ್ಯೂ ಅದು ಊರ್ಜಿತವಾಗಲಾರದೆಂದು ಈ ನೋಟೀಸ್ ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತೆ.

ಬಾಬುಭಟ್ಟನ ರುಜು

ತಾರೀಖು ೧೯-೯-೧೮೯೨ ನೇ ಇಸವಿ,

ವಿದ್ಯಾರಣ್ಯಪುರದ ವಿನಾಯಕ ದೇವಸ್ಥಾನದ

THE BANGALORE SREENIVASA MANDIRAM.

ಬೆಂಗಳೂರು, ಶ್ರೀನಿವಾಸ ಮಂದಿರ.

ಬೆಂಗಳೂರ ಶ್ರೀ ಶ್ರೀನಿವಾಸ ಮಂದಿರದ ಧರ್ಮಕ್ಕಾಗಿ ದಯಮಾಡಿಸಲ್ಪಟ್ಟ ಅಕ್ಕಿ ಮತ್ತು ಅದರ ವಿನಿಯೋಗದ ಪಟ್ಟಿಯನ್ನು ಕೆಳಗೆ ತೋರಿಸುತ್ತೇವೆ.— ೧೮೯೨ ನೇ ಇಸವಿ ಸೆಪ್ಟೆಂಬರ್ ೧೮ ನೇ ತಾರೀಖು ಮೊದಲು ೨೪ ನೇ ತಾರೀಖು ವರೆಗೆ.—

[illegible]	...	90
[illegible]	...	60
[illegible]	...	40
ಜಮಾ	...	100
[illegible]	...	30
[illegible]	...	23
[illegible]	...	42
[illegible]		
[illegible]	...	6
[illegible]	...	4
[illegible]	...	19
[illegible]		24
[illegible]	...	3
ಜಮಾ		56

THE MONEY MARKET.

[illegible] 1892. [illegible] 105 4-0 [illegible] 105-10-0 [illegible] (100) [illegible] 9 [illegible] (100) [illegible] 160 [illegible] 165 [illegible] 16-3-6 [illegible] 1s. 2 23/32 d. [illegible] 1s. 2 23/32 d. [illegible] 1s. 2 [illegible]

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, SEPTEMBER 26, 1892.

೧೮೯೨ನೇ ಇಸವಿ ಸೆಪ್ಟಂಬರ್ ತಾ|| ೨೬ನೇ ಸೋಮವಾರ.

THE GOVERNMENT ARYA BALIKA PATASALA (GIRLS' SCHOOL)

ಸನ್ ೧೮೯೨ನೇ ಇಸವಿ ಸೆಪ್ಟಂಬರ್ ೨೪ ನೇ ತಾರೀಖಾದ ಗತ ಶನಿವಾರದ ದಿನ ಬೆಳಿಗ್ಗೆ ಗವರ್ನಮೆಂಟ್ ಆರ್ಯ ಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನೀಯರಿಗೆ ತಾಲ್ಲೂಕ್ ಕಚ್ಚೇರಿಬಳಿ ಇರುವ ಗವರ್ನಮೆಂಟ್ ಗರಲ್‌ಸ್ಕೂಲ್ ಸೌಧದಲ್ಲಿ ಪಾರಿತೋಷಕವು ಅಂದರೆ ಅವರವರ ವಿದ್ಯಾಪರಿಶ್ರಮ ಪ್ರೋತ್ಸಾಹರೂಪವಾದ ಬಹುಮಾನಗಳು ಕೊಡಲ್ಪಟ್ಟವು. ಏತದರ್ಥ ಸದರೀ ಕಟ್ಟಡವು ವಿಶೇಷತಃ ತೋರಣ ಕದಳೀಸ್ತಂಭಾದಿಗಳಿಂದಲೂ, ಪಟಗ್ರಹಾದಿ ವಿಶೇಷ ಸಂವಿಭಾಗಗಳಿಂದಲೂ, ಸ್ವಾಭಾವಿಕ ಸೌಂದರ್ಯಪ್ರದರ್ಶಕವಾದ ಉದ್ಯಾಲಂಕಾರಾದಿಗಳಿಂದಲೂ, ತತ್ಸಂದರ್ಭೋಚಿತವಾಗಿ ಅಲಂಕರಿಸಲ್ಪಟ್ಟಿತ್ತು. ಸದರೀ ಪಾಠಶಾಲೆಯ ಸೆಕ್ರಿಟರಿಯವರಾ ಮ|| ಎಚ್. ಶ್ರೀನಿವಾಸಯ್ಯಂಗಾರ್ಯರವರ ಆಹ್ವಾನವನ್ನುಲ್ಲಾಸದೊಡನೆ ಅಂಗೀಕರಿಸಿ ಪ್ರಮುಖರಾದ ಬಹುಜನ ಅಧಿಕಾರಿಗಳೂ, ಅಡ್ವೊಕೇಟಿಗಳೂ, ಚಿಲ್ಲರೆ ಉದ್ಯೋಗಸ್ಥರೂ, ಸಾಹುಕಾರರೂ, ಸ್ತ್ರೀವಿದ್ಯಾಭಿಮಾನಿಗಳಾದ ಖುಷ್‌ಬಾಷ್ ದೊಡ್ಡಮನುಷ್ಯರೂ ಬಂದಿದ್ದರು. ಅವರುಗಳ ಪೈಕಿ ಪ್ರಾಧಾನ್ಯೇನ ಕೆಲವರ ಹೆಸರುಗಳನ್ನು ಮಾತ್ರ ಏತದ್ವಿಷಯ ಗೌರವಾರ್ಥ ಇಲ್ಲಿ ನಮೂದಿಸುತ್ತೇವೆ. ಅವರುಗಳ್ಯಾರೆಂದರೆ—ಚೀಫ್‌ಜಡ್ಜಿ ಮೆ|| ತಂಬುಚೆಟ್ಟಿರವರು, ಪ್ಯೂನಿ ಜಡ್ಜಿ ಮೆ|| ರಾಮಚಂದ್ರಯ್ಯರವರು, ಫಾರೆಸ್ಟ್ ಇನ್ಸ್‌ಪೆಕ್ಟರ್‌ಜನರಲ್ ಮೆ|| ರಿಕ್ಕೆಟ್ಸಿಯವರು, ಅವರ ಭಾರ್ಯೆ ಮತ್ತು ಕುಮಾರ್, ಪೊಲೀಸ್ ಇನ್ಸ್‌ಪೆಕ್ಟರ್‌ಜನರಲ್ ಮೆ|| ವಿ. ಪಿ. ಮಾಧವರಾಯರವರು, ಈ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮಿಯಾರ್ ಸುಜಾಯತ್ ಅಲ್ಲಿಖಾನ್ ಸಾಹೇಬರವರು, ಅವರ ಭಾರ್ಯೆಯವರು, ಸೆಷನ್ಸ್ ಸೂಪರಿಂಟೆಂಡೆಂಟ್ ಮೆ|| ವಿ. ಎನ್. ನರಸಿಮ್ಹಯ್ಯಂಗಾರ್ಯರವರು, ಪೆನ್ಷನರ್ ಡೆ|| ಸಿ|| ಮೆ|| ಮಹಮದಲ್ಲಿಸಾಹೇಬರು ವಗೈರೇರು. ಆ ಕಾಲದಲ್ಲಿ ಸಭೆಯು ಸಮ್ಮಾನಿತರಾದ ಬಹುಜನ ನರನಾರೀ ಸಮೂಹದಿಂನಿಬಿಡಿತವಾಗಿ ಗೌರವಾಸ್ಪದಕವಾಗಿಯೂ, ನಿರೀಕ್ಷಿತಭವಿಷ್ಯತ್ಸಲಸೂಚಕವಾಗಿಯೂ, ಆರ್ಯಮಹಿಳಾಭವಿಷ್ಯತ್ಸ್ವತಂತ್ರ್ಯಸ್ವರೂಪವಿವೇಚಕಸ್ಥಾನವಾಗಿಯೂ ಕಾಣ್ಣಲಸುತಲಿತ್ತು. ಮೊದಲು ನಿಷ್ಕೃಷ್ಟವಾಗಿದ್ದಂತೆ ರೆಸಿಡೆಂಟರವರ ಭಾರ್ಯೆಯವರಾದ ಮಿಸ್ಟ್ರೆಸ್. ಪೀಕಾಕ್‌ಯವರು ಅಗ್ರಾಸನಾಧಿಪತ್ಯವಂ ವಹಿಸಲಿಕ್ಕೆ ಆಕೆಯವರಿಗೆ ಅನಿರೀಕ್ಷಿತವಾಗಿ ಪ್ರಾಪ್ತವಾದ ಪ್ರಬಲ ಅಸಂದರ್ಭದ ದೆಸೆಯಿಂದ, ತತ್ಕಾಲದಲ್ಲಿ ತಾವು ಸಾಕ್ಷಾತ್ತಾಗಿದ್ದು ತಾದೃಶ ಆನಂದವನ್ನನುಭವಿಸಲಿಕ್ಕೆ ಅನುಕೂಲಿಸದೆ ಹೋದಬಗ್ಗೆ ತಾವು ವಿಷಾದಿಸುವಂತೆ ಹೇಳಿ ಕಳುಹಿಸಿದ್ದರಿಂದ ತರುವಾಯ ಅವರ ಸ್ಥಾನಾಪನ್ನರಾಗಿ ಬೇರೆಯೊಬ್ಬರನ್ನು ಪ್ರಾರ್ಥಿಸಬೇಕಾದ ಭಾರವು ಕಾರ್ಯನಿರ್ವಾಹಕ ಸಭೆಯವರಿಗೆ ಪ್ರಾಪ್ತವಾಯಿತು. ಅದರಮೇಲೆ ಮೆ|| ಮಿಯಾರ್ ಸುಜಾಯತ್ ಅಲ್ಲಿಖಾನ್‌ರವರ ಭಾರ್ಯೆಯವರು ವಿದ್ಯಾವಂತಳಾಗಿಯೂ, ಆಧುನಿಕ ವೈಲಕ್ಷಣ್ಯ ಸ್ವಾತಂತ್ರ್ಯಸ್ವರೂಪವನ್ನನುಭವಿಸತಕ್ಕವರಾಗಿಯೂ, ಈ ಸಭೆಗೆ ಗೌರವಾಪಾದಕರಾಗಿಯೂ ಕಂಡುಬಂದದರಿಂದ ಆಕೆಯವರು ಅಗ್ರಾಸನಾಧಿಪತ್ಯವನ್ನಂಗೀಕರಿಸಬೇಕೆಂದು ಪ್ರಾರ್ಥಿಸಲ್ಪಟ್ಟರು. ಅವರದೇ ಪ್ರಕಾರ ೮ | ಘಂಟೆಗೆ ತಮ್ಮ ಪತಿಯೊಡನೆ ಸಭಾಮಂಟಪವಂ ಪ್ರವೇಶಿಸಿ ಅಗ್ರಾಸನವನ್ನಂಗೀಕರಿಸಿದರು. ಕೂಡಲೇ ಅಮೂಲ್ಯ ವಸ್ತ್ರಾಭರಣಾದಿಗಳಿಂದಲಂಕೃತರಾಗಿಯೂ, ಸುಕುಮಾರರಾಗಿಯೂ ಇರುವ ಕನ್ಯೆಯರು ಕೆಲವರು ಮಂದಸ್ಮಿತವದನಗಳೊಡನೆ ಸ್ವಾಗತಪೂರ್ವಕವಾದ ಪಭವಾದನಮಂಗಾನರೂಪವಾಗಿ ಹಾಡಿದರು. ಅದು ಬಹಳ ಶ್ರಾವ್ಯವಾಗಿಯೂ, ಸಂಗೀತದಲ್ಲಿ ಉತ್ತರೋತ್ತರ ಆ ಬಾಲೆಯರು ಸಂಪಾದಿಸಬಹುದಾದ ಜ್ಞಾನಕ್ಕೆ ಅಂಕುರಪ್ರಾಯವಾಗಿಯೂ, ಅವರವರ ಪತಿಗೃಹಸ್ತ್ರೀವಹಾರಿಣಿಯರಾಗುವರೆಂಬದರೊಳು ದೃಢತರವಾದ ನಂಬಿಕೆಯನ್ನುಂಟುಮಾಡುವಂತಾದ್ದಾಗಿಯೂ ಇತ್ತು. ಅನಂತರ ಅಮ್ಮಯಮ್ಮನೆಂಬ ಮತ್ತೊಬ್ಬ ವಿದ್ಯಾರ್ಥಿನಿಯು ಕರ್ನಾಟ ಭಾಷೆಯಲ್ಲಿ ಪ್ರಾಚ್ಯಕವಿ ವಿರಚಿತವಾದ ಎರಡುಪದ್ಯಗಳಂ ಬಹಳ ಮನೋಹರವಾಗಿ ಓದಿದಳು. ಅನಂತರಸಾವಿತ್ರಮ್ಮರಾಜಮ್ಮನೆಂಬ ಇಬ್ಬರುಬಾಲೆಯರು ಸಭಾಭಿಮುಖರಾಗಿ ಬಂದು ಸ್ತ್ರೀ ವಿದ್ಯಾಭ್ಯಾಸವಂ ಕುರಿತು ಗಿರ್ವಾಣಭಾಷೆಯಲ್ಲಿ ಸಂಭಾಷಣೆ ಮಾಡಿದರು. ಅದು ಪೂರ್ವಭಾವಿಯಾಗಿಶಿಕ್ಷಿತವಾದುದಾಗಿದ್ದರೂ ಸಭಾಮುಖದಲ್ಲಿ ಹೆದರದೆ ಮಾಡಿದ ಪರಸ್ಪರ ಸಲ್ಲಾಪವು ಸೈಜಸ್ವಭಾವವು ವ್ಯಕ್ತಪಡಿಸತಕ್ಕದ್ದಾಗಿತ್ತು. ಇವರ ಪ್ರಶ್ನೋತ್ತರಗಳು ಪರಿಮಿತವಾಗಿಯೂ, ಬಹ್ವರ್ಥ ಗುಂಭಿತವಾಗಿಯೂ, ಬಹುಫಲ ನಿರೀಕ್ಷಿತವಾದವಾಗಿಯೂ ಇದ್ದವು. ಅನಂತರ ಚೆನ್ನಮ್ಮನೆಂಬ ಮತ್ತೊಬ್ಬ ಕನ್ಯೆಯು ಒಂದು ಕನ್ನಡ ವಾಕ್ಯಗ್ರಂಥದಲ್ಲಿ ನಿಷ್ಕೃಷ್ಟ ಭಾಗವನ್ನೋದಿದಳು. ನಾಗರತ್ನಮ್ಮ, ಸೌಕಮ್ಮ, ಕೋಮಳಮ್ಮನೆಂಬ ಮೂವರು ಬಾಲೆಯರು, ಗಾನರೂಪವಾಗಿ ಸರಸ್ವತೀ ಪ್ರಾರ್ಥನೆಯಂಗೈದರು. ಅದು ಬಹಳ ಶ್ರಾವ್ಯವಾಗಿತ್ತು. ಇವೆಲ್ಲವು ಪೂರೈಸಿದ ಬಳಿಕ ಪಾಠಶಾಲೆಯ ಸೆಕ್ರಿಟರಿಯವರಾದ ಮೆ|| ಎಚ್ ಶ್ರೀನಿವಾಸಯ್ಯಂಗಾರ್ಯರವರು ಇದರಡಿ ಪ್ರಕಟಿಸಲ್ಪಟ್ಟಿರುವ ರಿಪೋರ್ಟನ್ನು ಇಂಗ್ಲೀಷಿನಲ್ಲಿ ಓದಿ ಪಾಠಶಾಲೆಯ ಪ್ರವರ್ಧಮಾನ ವೃದ್ಧಿಯಂ ಸಂಗ್ರಹವಾಗಿ ತಿಳಿಸಿದರೇನುದರೆ –

ಏತತ್ಸಭಾಗ್ರಾಸನಾಧಿಪರಾದ ಮಿಸ್ಟ್ರೆಸ್ ಮಿಯಾರ್ ಸುಜಾಯತ್ ಅಲ್ಲಿಖಾನ್ ಸಾಹೆಬಾರವರೆ! ಮತ್ತು ಸಭಾಸದರಾದ ಇತರದೊಡ್ಡಮನುಷ್ಯರೆ! ಈಗ ಬೆಂಗಳೂರಲ್ಲಿರುವ ಗವರ್ನಮೆಂಟ್ ಬಾಲಿಕಾ ಪಾಠಶಾಲೆಗಳ ಕಾರ್ಯನಿರ್ವಾಹಕ ಸಭೆಯವರಾದ ನಾವು ಗವರ್ನಮೆಂಟ್ ಆರ್ಯಬಾಲಿಕಾ ಪಾಠಶಾಲೆಯ ಸಂಕ್ಷಿಪ್ತವಾದ ಪೂರ್ವ ವೃತ್ತಾಂತವನ್ನೀ ಸಂದರ್ಭದಲ್ಲಿ ಶ್ರುತಪಡಿಸಲಿಕ್ಕೆ ತಮ್ಮ ಅನುಜ್ಞೆಯಂ ಬೇಡುತ್ತೇವೆ.

ಸನ್ ೧೮೮೮ನೇ ಇಸವಿಯಲ್ಲಿ ಈ ಆರ್ಯಬಾಲಿಕಾ ಪಾಠಶಾಲೆಯಂತಾ ಒಂದು ಪಾಠಶಾಲೆಯು ಕೇವಲ ಅಪೇಕ್ಷಿತವೆಂದು ಕಂಡುಬಂದದರಿಂದ ಅದೇವರುಷದ ನವಂಬರ್ ತಿಂಗಳಲ್ಲಿ ಈಪ್ರಾಂತ್ಯ ಲಿವ್ಲೀಕಟ್ಟಡದೊಳು ಪ್ರಸಕ್ತ ಅಂತಸ್ತಿನಿಂದೊಡಗೂಡಿದ ಪಾಠಶಾಲೆಯು ಪ್ರಥಮತಃ ನೆಲೆಗೊಳಿಸಲ್ಪಟ್ಟಿತು. ತತ್ಕಾಲದೊಳುಂಟಾಗಿದ್ದ ಒಂದು ಪ್ರಬಲ ಲೋಪವು ನಿವೃತ್ತಿಸಿ ಸಾಮಾನ್ಯವಾಗಿ ಹಿಂದೂ ಸಮೂಹದ ಜ್ಞಾನವನ್ನಭಿವೃದ್ಧಿಗೊಳಿಸಬೇಕೆಂಬ ಕೋರಿಕೆಯೊಡನೆ ಬೆಂಗಳೂರ್ ನಿವಾಸಿಗಳಾಗಿಯೂ ಪ್ರಮುಖರಾಗಿಯೂ ಇರುವ ಕೆಲವರು ನೇಟಿವ್ ದೊಡ್ಡಮನುಷ್ಯರು ಸೇರಿ ಆರ್ಯ ಸಭೆಯೆಂಬ ಹೆಸರುಳ್ಳ ಒಂದು ಸಮಾಜವಂ ಸ್ವತಃ ಯೋಜಿಸಿಕೊಂಡರಲ್ಲದೆ ಅವರ ಪ್ರಥಮ ಪ್ರಯತ್ನವು ಏತತ್ಪಾಠಶಾಲಾ ವ್ಯವಸ್ಥಾಪನೆಯಾಗಿರುತಿದೆ. ಈ ಪಾಠಶಾಲೆಯು ಬೋಧನಾಕ್ರಮವು, ಜಾತಿ ಸಂಬಂಧಗಳಾದ ಪೂರ್ವ ಸಂಪ್ರದಾಯಗಳಿಗೂ, ಆಚಾರಗಳಿಗೂ, ಪ್ರತಿಪತ್ತಿಗಳಿಗೂ ಸ್ವಲ್ಪವೂ ಬಾಧಕ ಪ್ರಾಪ್ತವಾಗದಂತೆ ಬಾಲೆಯರನ್ನು ವಿವೇಕಿಗಳಾದ ಮತ್ತು ಪ್ರಯೋಜಕರಾದ ಕುಟುಂಬಿನೀಯರನ್ನಾಗಿಮಾಡತಕ್ಕದ್ದಾಗಿರಬೇಕೆಂದುದ್ದೇಶಿಸಲ್ಪಟ್ಟಿತ್ತು. ಅದರ ಫಲಪರ್ಯವಸಾನವಂ ನೋಡಲಾಗಿ ಈಗ ಸದರೀ ಪಾಠಶಾಲಾ ವ್ಯವಸ್ಥಾಪನೆಯು ಸಕಾಲಿಕವಾದುದೆಂತಲೂ, ಅದರ ಪ್ರಥಮವ್ಯವಸ್ಥಾಪಕರ ಉದ್ದಿಷ್ಟಪ್ರಯೋಜನ ಸಂದಾಯಕವಾದುದಾಗಿರುತಿದೆಂತಲೂ ಭಾವಿಸಬಹುದಾಗಿದೆ.

ಈ ಪಾಠಶಾಲೆಯ ಪ್ರಾರಂಭದಲ್ಲಿ ಅದಕ್ಕೆ ಆವಶ್ಯಕವಾದ ದ್ರವ್ಯ ಸಹಾಯವು ಮಾಡಲ್ಪಟ್ಟಿತಲ್ಲದೆ ಅದರ ಮೇಲ್ವಿಚಾರಣಾಧಿಕಾರವಂ ಮೇಲ್ಕಂಡ ಆರ್ಯ ಸಭೆಯ ಮೆಂಬರುಗಳು ವಹಿಸಿದರು. ಪಾಠಶಾಲೆಯು ಪ್ರಜಾರಂಜಕವಾಗುತ ದಾರ್ಢ್ಯವನ್ನೈದಿ ಸಭೆಯವರಿಗೆ ಪ್ರಯೋಜನಕರವಾಗುವಂತೆ ಓದತಕ್ಕ ವಿದ್ಯಾರ್ಥಿನೀಯರ ಸಂಖ್ಯೆಯು ಕ್ರಮೇಣ ಅಭಿವೃದ್ಧಿಯನ್ನೈದುತ ಬಂದುದರಿಂದ ಕೆಲವು ಕಾಲನಮೇಲೆ ಶ್ರೀಮನ್ಮಹಾರಾಜಾ ಸರ್ಕಾರದವರ ಪ್ರೋತ್ಸಾಹವನ್ನಪೇಕ್ಷಿಸಬೇಕಾದುದು ಅವಶ್ಯಕವೆಂದು ಭಾವಿಸಲ್ಪಟ್ಟಿತು.

ಅದರಮೇಲೆ ಗವರ್ನಮೆಂಟನವರ ಸಹಾಯವಂ ಪ್ರಾರ್ಥಿಸಲು ಅವರು, ೧೮೯೦ನೇ ಇಸವಿ ಡಿಸಂಬರ್ ೨೫ನೇ ಮಾರ್ಚಂ ೧೫೬೬ನೇ ನಂಬರ್ ಪ್ರೊಸೀಡಿಂಗ್ಸಿನಲ್ಲಿ ಸದರೀ ಪಾಠಶಾಲೆಯನ್ನು ೧೮೯೧ನೇ ಇಸವಿ ಜನವರಿ ಫಸ್ಟ್ ತಾರೀಖ್ ಮೊದಲ್ಗೊಂಡು ಗವರ್ನಮೆಂಟ್ ಬಾಲಿಕಾ ಪಾಠಶಾಲೆಯಾಗಿ ಮಾಡಬೇಕೆಂದು ಹುಕುಂಕೊಟ್ಟು ಅದರ ಮೇಲ್ವಿಚಾರಣಾಧಿಕಾರವು ಕೆಲವರು ಸರ್ಕಾರ್ ಉದ್ಯೋಗಸ್ಥರೂ, ಖುಷ್‌ಬಾಷ್ ದೊಡ್ಡಮನುಷ್ಯರೂ, ಕೆಲವರು ಪಂಡಿತರೂ ಸೇರ್ಪಡಿಸಲಾದ ಕಮಿಟಿಯವರ ಸುಪರ್ದಿಗೊಪ್ಪಿಸಲ್ಪಟ್ಟಿತು.

ಈ ಪಾಠಶಾಲೆಯಲ್ಲಿ ಲೋವರ್ ಸೆಕೆಂಡರಿ ತರಗತಿಯ ವರಿವಿಗೆ ಪಾಠಗಳು ಹೇಳಲ್ಪಡುತಿವೆಯಲ್ಲದೆ ತತ್ಕಾಲದೊಳಗೆ ೧೧ ತರಗತಿಗಳುಳ್ಳದ್ದಾಗಿರುತಿದೆ. ಒಟ್ಟು ೩೬೬ ಜನ ವಿದ್ಯಾರ್ಥಿನೀಯರು ರಿಜಿಸ್ಟರನಲ್ಲಿ ದಾಖಲಿರುತ್ತಾರೆ. ಅವರ ಪೈಕಿ ೨೨೦ ಜನ ಬ್ರಾಹ್ಮಣರಾಗಿಯೂ, ೧೦೦ ಜನ ಕಂದ್ರಾದಿ ಇತರ ಜಾತಿಯವರಾಗಿಯೂ ಇರುತ್ತಾರೆ. ಪ್ರತಿನಿತ್ಯವೂ ಸರಾಸರಿ ೨೨೦ಜನ ವಿದ್ಯಾರ್ಥಿನೀಯರು ಪಾಠಶಾಲೆಗೆ ಬರುತ್ತಾರೆ. ಸಣ್ಣ ಸಣ್ಣ ಹುಡುಗಿಯರನ್ನು ಪ್ರತಿನಿತ್ಯವೂ ಪಾಠಶಾಲೆಗೆ ಕರೆದುಕೊಂಡು ಹೋಗಿ ವಾಪಸ್ ಕರೆತಂದು ಬಿಡುವವರಲ್ಲಿ ಜವಾನರಿರುವವನ್ನೂ. ಅನೇಕ ಕಾರಣಗಳಿಂದ ಬಾಲೆಯರು ಮನೆಗಳಲ್ಲಿ ಪದೇಪದೆ ನಿಂತು ಹೋಗುತಬರುವವರನ್ನು ನೋಡಿದರೆ ಮೇಲೆ ಕಂಡ ಸಂಖ್ಯೆಯು ಸಾಮಾನ್ಯವೆಂದು ಭಾವಿಸಲಾಗದು.

ನಜನ ವಿದ್ಯಾರ್ಥಿನೀಯರು ಮೇಲ್ಪಟ್ಟ ತರಗತಿಯಲ್ಲೀಗ ಓದುತಲಿದಾರೆ ಅವರಿಗಲ್ಲಿ ಇದರಡಿ ಕಂಡ ಗ್ರಂಥಗಳು ಬೋಧಿಸಲ್ಪಡುತಿವೆ. ಅವ್ಯಾವವೆಂದರೆ —

ಇಂಗ್ಲೀಷ್—ಗಾರ್ಡ್‌ವೈಮಿಡ್ಡ್‌ಯವರ ಪ್ರಥಮ ಬಾಲಶಿಕ್ಷೆಯು.

ಕನ್ನಡ—ಸಂಸ್ಕೃತ, ಗಣಿತ ಲೋವರ್ ಸೆಕೆಂಡರಿ ಪರೀಕ್ಷೆಗೆ ಅವಶ್ಯಕವಾಗಿರುವಮಟ್ಟಿಗೆ. ಹಿಂದೂದೇಶಚರಿತ್ರೆ, ಭೂಗೋಳ ಶಾಸ್ತ್ರ, ಆರೋಗ್ಯಸಂಗ್ರಹ, ಕಸೂದಿ ಕೆಲಸಗಳು, ಸಂಗೀತ.

ಈ ಪಾಠಶಾಲೆಯು ಅನೇಕಾವರ್ತಿ ಗವರ್ನಮೆಂಟ್ ಇನ್ಸ್‌ಪೆಕ್ಟರುಗಳಿಂದಲೂ ಕಮಿಟಿಯವರ ಪ್ರಾರ್ಥನೆಯಮೇಲೆ ಇತರ ದೊಡ್ಡಮನುಷ್ಯರಿಂದಲೂ, ಪರೀಕ್ಷಿಸಲ್ಪಟ್ಟು ಅವರೆಲ್ಲರು ಸಂತೋಷ ಪ್ರವರ್ತಕವಾದ ಭಾವವನ್ನೇ ವ್ಯಕ್ತಪಡಿಸಿರುತ್ತಾರೆ. ಈ ಸಂವತ್ಸರದ ಆದಿಭಾಗದಲ್ಲಿ ಸ್ಕೂಲ್‌ಗಳ ಡೆಪ್ಯುಟಿ ಇನ್ಸ್‌ಪೆಕ್ಟರರವರು ಈ ಪಾಠಶಾಲೆಯಂ ಪರೀಕ್ಷಿಸಿ ಅದರ ಫಲಿತಾಂಶವಂ ಕುರಿತು ಗವರ್ನಮೆಂಟಿಗೆ ರಿಪೋರ್ಟ್ ಮಾಡುವಾಗ್ಯೆ ಬರೆದಿರುತ್ತಾರೇನೆಂದರೆ—ಈಗ ಮೂರು ವರುಷಗಳ ಮೊದಲು ನೆಲೆಗೊಂಡಿರುವ ಈ ಪಾಠಶಾಲೆಯು ಬಹಳ ಉಪಯುಕ್ತವಾದುದಾಗಿರುತಿದೆ. ಮಿಡಿಲ್‌ಸ್ಕೂಲ್ ಪರೀಕ್ಷೆಗೆ ಕ್ಲುಪ್ತವಾಗಿರುವಷ್ಟರ ಉನ್ನತ ದರ್ಜೆಗೆ ಇದು ಈಗಲೇ ಬಂದಿರುತಿದೆ. ಕೆಲವರು ವಿದ್ಯಾರ್ಥಿನೀಯರನ್ನು ತರಬೇತುಮಾಡಿ, ಮೈಸೂರ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಕಳುಹಿಸಿದ್ದ ಸದರೀ ಪಾಠಶಾಲೆಯ ಪ್ರಥಮೋಪಾಧ್ಯಾಯರ ಜಾಗರೂಕತೆಯೂ ಸಾಮರ್ಥ್ಯವೂ ಬಹಳ ಕೊಂಡಾಡತಕ್ಕದ್ದಾಗಿರುತಿದೆ. ಪಾಠಶಾಲೆಯವರು ತಮ್ಮ ಕರ್ತವ್ಯವನ್ನು ತೃಪ್ತಿಕರವಾಗಿ ನಿರ್ವಹಿಸುತಬರುತಲಿದಾರೆಂಬದು ವಗೈರೆ. ಮೈಸೂರ್ ಲೋವರ್ ಸೆಕೆಂಡರಿ ಪರೀಕ್ಷೆಗೆ ನಾಲ್ವರು ವಿದ್ಯಾರ್ಥಿನೀಯರು ಕಳುಹಿಸಲ್ಪಟ್ಟು ಅವರಲ್ಲಿ ಚೆಲ್ಲಮ್ಮನೆಂಬಾಕೆಯು ಮಾತ್ರ ತೇರ್ಗಡೆಯನ್ನೈದಿದ ಅಂಶವನ್ನೀಸಂದರ್ಭದಲ್ಲಿ ಪ್ರಸ್ತಾಪತ್ವೇನ ತಿಳಿಸಬಹುದಾಗಿರುತಿದೆ.

ಪಾಠಶಾಲಾ ಶಿಬ್ಬಂದಿಯಂ ಕುರಿತು ವಿಚಾರಿಸಲಾಗಿ ಮಾಹೆಯಾನಾ ೩೦ ರೂಪಾಯಿಗಳ ತಲಬುಳ್ಳ ಒಬ್ಬ ಹೆಡ್ ಮ್ಯಾಸ್ಟರೂ ೨೦ ರೂಪಾಯಿಗಳ ಮೊದಲು ೮ ರೂಪಾಯಿಗಳ ತನಕ ೧೦ ಜನ ಅಸಿಸ್ಟೆಂಟಿಗಳೂ, ಸಂಸ್ಕೃತೋಪಾಧ್ಯಾಯರೊಬ್ಬರೂ, ಸಂಗೀತ ಕಲಿಸತಕ್ಕವರೊಬ್ಬರೂ, ಹೊಲಿಗೆ ಮತ್ತು ಕಸೂದಿ ಕೆಲಸಗಳಂ ಕಲಿಸತಕ್ಕವರೊಬ್ಬರೂ ನೌಕರರಾಗಿರುತ್ತಾರೆ ಪಾಠಶಾಲೆಯ ಪ್ರಕೃತ ಅಭಿವೃದ್ಧಿಸ್ಥಿತಿಯು ಅವರ ಮನಃಪೂರ್ವಕವಾದ ಪರಿಶ್ರಮದಿಂದುಂಟಾದುದಾಗಿರುತಿದೆ.

ಅನೇಕ ಕಾರಣಗಳಿಂದ ವಿದ್ಯಾರ್ಥಿನೀಯರ ಮೂಲಕ ಈಗ ಸ್ಕೂಲ್ ಸಂಬಳವು ವಸೂಲ್ಮಾಡಲ್ಪಡುವದಿಲ್ಲವು ಇಂಡ್ಯ ದೇಶದಲ್ಲಿ ಸ್ತ್ರೀವಿದ್ಯಾಭ್ಯಾಸದ ಪ್ರಕೃತ ಸ್ಥಿತಿಯನ್ನಾಲೋಚಿಸಿ ನೋಡಲಾಗಿ ಅಂತಾಪ್ರಯತ್ನವು ಅದರ ಅಭಿವೃದ್ಧಿಗೆ ಬಹಳ ಭಂಜಕವಾಗಬಹುದೆಂಬದು ಪ್ರಥಮಕಾರಣವಾಗಿರುತಿದೆ. ಈ ವಿಷಯದಲ್ಲಿ ತಾಯಿತಂದೆಗಳ ಜಡತೆಯು ಕ್ರಮೇಣ ನಿವೃತ್ತಿಸಬೇಕಾದುದಾಗಿರುತಿದೆ ಪುಸ್ತಕಗಳೂ ಸ್ಲೇಟ್ ವಗೈರೆ ಲೇಖನ ಸಾಮಗ್ರಿಗಳು ಸಹ ಪಾಠಶಾಲೆಯ ಖರ್ಚಿನಿಂದಲೇ ವಿದ್ಯಾರ್ಥಿನೀಯರಿಗೆ ಉಚಿತವಾಗಿ ಕೊಡಲ್ಪಡುತಿವೆ. ಪಾಠಶಾಲೆಯ ಶಿಬ್ಬಂದಿ ಖರ್ಚಿಗಾಗಿಯೂ, ಸರಾಸರಿ ಮಾಹೆಯಾನಾ ೨೨ ರೂಪಾಯಿಗಳ ವಿದ್ಯಾರ್ಥಿನೀ ವೇತನಗಳಿಗಾಗಿಯೂ, ಗವರ್ನಮೆಂಟನವರು ಮಾಹೆಯಾನ ೩೬೬ ರೂಪಾಯಿಗಳಂ ಕೊಡುತ ಸಹಕರಿಸುತಲಿದಾರಲ್ಲದೆ ಬಹುಮಾನ ಸ್ಕೀಮಗಳಿಗಾಗಿ ೨೦೦ ರೂಪಾಯಿಗಳೂ ಇನಾಗಳ ಬಗ್ಗೆ ೧೫೦ ರೂಪಾಯಿಗಳೂ ಕೊಟ್ಟಿರುತ್ತಾರೆ

ಮುಖ್ಯವಾಗಿ ಇಂತಾ ಶುಭಸಂದರ್ಭದಲ್ಲಿ ತಾವು ಅಗ್ರಾಸನಾಧಿಪತ್ಯವಂ ಕೃಪೆಯೊಡನೆ ಅಂಗೀಕರಿಸಿದ ಬಗ್ಗೆ ತಮಗೆ ನಾವು ಮನಃಪೂರ್ವಕವಾಗಿ ವಂದಿಸುವೆವು.

ಚೀಫ್‌ಕೋರ್ಟ್ ಜಡ್ಜಿಯವರಾಗಿಯೂ, ಪಾಠಶಾಲಾ ಕಮಿಟಿಯ ಪ್ರೆಸಿಡೆಂಟರಾಗಿಯೂ ಇರುವ ಮೆ|| ಪಿ. ರಾಮಚಂದ್ರಯ್ಯನವರು, ವಗೈರೆ ೧೫ ಜನ ಮೆಂಬರುಗಳು.

ಮೇಲ್ಕಂಡ ರಿಪೋರ್ಟ್ ಓದಲ್ಪಟ್ಟತರುವಾಯ ಮೆ|| ಮಿಯರ್ ಸುಜಾಯತ್ ಅಲ್ಲಿಖಾನರವರು ತಮ್ಮ ಭಾರ್ಯೆಯವರ ಪ್ರತಿನಿಧಿತ್ವೇನ ಬಾಲೆಯರಿಗೆ ಕೆಲವು ಇಂಗ್ಲೀಷ್ ಕನ್ನಡ ಪುಸ್ತಕಗಳನ್ನೂ, ಪೆಟ್ಟಿಗೆಗಳನ್ನೂ, ಗಡಿಯಾರಗಳನ್ನೂ, ಬಾಲೆಯರಿಗೆ ವಿನೋದಕರಗಳಾದ ಇತರ ಪದಾರ್ಥಗಳನ್ನೂ ಕೊಟ್ಟರು. ಸಿವಿಲ್‌ಅಸಿಸ್ಟೆಂಟ್‌ಕಮಿಷನರ್ ಮೆ|| ಕೆ. ರಾಮಸ್ವಾಮಯ್ಯಂಗಾರ್ಯರ ಕುಮಾರ್ತೆಯಾದ ಸೌ|| ಚೆಲ್ಲಮ್ಮನೆಂಬಾಕೆಯು ಸದರೀ ಪಾಠಶಾಲೆಯಿಂದ ಈವರ್ಷದ ಮೈಸೂರ್ ಲೋವರ್‌ಸೆಕೆಂಡರಿ ಪರೀಕ್ಷೆಗೆ ಹೋಗಿ ತೇರ್ಗಡೆಯಾದಳಾಗಿ ಆಕೆಗೆ ಪ್ರಥಮ ಸನ್ಮಾನವು ಕೊಡಲ್ಪಟ್ಟಿತು. ಚೆಲ್ಲಮ್ಮನು ತನ್ನಮನೆಯಲ್ಲಿಯೇ ಇಂಗ್ಲೀಷ್ ವಿದ್ಯಾಭ್ಯಾಸವಂಮಾಡಿ ಪ್ರವೀಣಳೆನಿಸಿರುವದರಿಂದ ಆಕೆ ಈಬರುವ ಮದರಾಸ್ ಯೂನಿವರ್ಸಿಟಿ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ದರಖಾಸ್ತು ಕಳುಹಿಸಿದಾಳೆಂಬದಂ ಕೇಳಿ ನಾವು ಬಹಳ ಸಂತೋಷಿಸುತ್ತೇವೆ. ಹೀಗೆ ಬಾಲೆಯರಿಗೆಲ್ಲ ಅವರವರ ಯೋಗ್ಯತಾನುಸಾರ ಸನ್ಮಾನಗಳು ಮಾಡಲ್ಪಟ್ಟ ಬಳಿಕ ಅಗ್ರಾಸನಾಧಿಪತಿಯವರು ಇಂಗ್ಲೀಷಿನಲ್ಲಿ ಇದರಡಿ ಕಂಡ ಭಾವಪ್ರದರ್ಶಕವಾದ ಕೆಲವು ಮಾತುಗಳನ್ನಾಡಿದರೇನುದರೆ—ಈಸ್ಥಾನದಲ್ಲಿ ನಿಂತು ನಿಮ್ಮನ್ನಧಿಕರಿಸಿ ಮಾತನಾಡುವವರಾಗಿದ್ದ ಗೌರವ್ಯರಾದ ಪೀಕಾಕ್ ರವರಿಗೆ ಅಕಸ್ಮಾತ್ ಪ್ರಾಪ್ತವಾದ ಸಂಸ್ಕೃತಿಕ್ಲೇಶದಿಂ, ಕೇವಲ ಉತ್ಸಾಹಕರವಾದ ಪ್ರಕೃತ ಸಂದರ್ಭದಲ್ಲಿ ಭಾಗಭಾಕ್ಕಾಗಿದ್ದು ಸಂತೋಷವನ್ನವರೊಡನೆ ಅನುಭವಿಸಲಿಕ್ಕೆ ಅವಕಾಶವು ಇಲ್ಲವಾಯಾಗಿ ಹೋದುದರಿಂದ ಅವರ ಪ್ರತ್ಯಾಮ್ನಾಯರಾಗಿ ವರಿಸಲ್ಪಟ್ಟ ನಾನು ಸಂಪೂರ್ಣ ಅರ್ಹಳೆನಿಸಲ್ಪಡಲಾರೆನು, ಮ

ಸ್ತ್ರೀಯರಾದ ಯುವತಿಯರ ವಿದ್ಯಾಭ್ಯಾಸದಲ್ಲಿ ನಿರತಿಶಯವಾದ ಉತ್ಸಾಹದವನ್ನತ್ತಳೆಂಬುದು ನಾನು ದೃಢವಾಗಿ ತಮಗೆ ತಿಳಿಸತಕ್ಕವನಾದಾಗ್ಯೂ ಈಗ ನನ್ನಿಂದ ಪರಿಗ್ರಹೀತವಾಗಿರುವ ಅಗ್ರಾಸನವು ಏತತ್ಸಂದರ್ಭದಲ್ಲಿ ವಿಶೇಷವಾದ ಅರ್ಹತೆಯಂ ವ್ಯಕ್ತಪಡಿಸತಕ್ಕಂತಾ ಅನ್ಯರೊಬ್ಬರಿಂದ ಅಂಗೀಕರಿಸಲ್ಪಟ್ಟಿದ್ದರೆ ನಾನು ಬಹಳ ಸಂತುಷ್ಟನಾಗಿರುತಿದ್ದೆನು. ನಾನು ಈ ಕಾರ್ಯಕ್ಕೆ ಕುದ್ದಾಂಗ ಅನುರೂಪನಲ್ಲವೆಂಬುದಂ ಸ್ವತಃ ಅಂಗೀಕರಿಸುತ್ತೇನೆ. ಪ್ರಕೃತ ಮಹತ್ಕಾರ್ಯ ನಿರ್ವಹಣೆಯಲ್ಲಿ ನನಗೆ ಅನೇಕ ಪ್ರತಿಬಂಧಕ ಸಾಮಗ್ರಿಗಳು ಅನುಸರಿಸಿವೆ. ಅನ್ಯಭಾಷೆಯಲ್ಲಿ ನಾನು ಮಾತನಾಡಬೇಕಾಗಿರುವದು ಮೊದಲನೆಯದು, ಇಂತಾ ಪ್ರಬಲ ಸಂದರ್ಭಗಳಲ್ಲಿ ಸಭಾ ಮುಖದೊಳು ಮಾತನಾಡುವ ಅಭ್ಯಾಸವಿಲ್ಲದಿರುವದು ಎರಡನೆಯದು, ನನಗೆ ತಕ್ಕ ವ್ಯವಧಾನ ದೊರೆಯದೆ ಹೋದದು ಕಡೆಯದು. ನಿನ್ನೆಯದಿನ ರಾತ್ರಿ ಬಹಳ ಹೊತ್ತಿನಮೇಲೆ ನಾನು ಪ್ರಕೃತ ಕಾರ್ಯವನ್ನಂಗೀಕರಿಸಬೇಕೆಂದು ಪ್ರಾರ್ಥಿಸಲ್ಪಟ್ಟೆನು. ಆದುದರಿಂದ ತಮ್ಮ ಕ್ಷಮಾಪಣೆಯಂ ಬೇಡುತ್ತೇನೆ. ಪರಸ್ಪರ ಮಿತ್ರರಾದ ಈ ಬಾಲಿಕೆಯರು ಜ್ಞಾನಾಭಿವೃದ್ಧಿಯಲ್ಲಿ ವ್ಯಕ್ತಪಡಿಸುತಲಿರುವ ಆಸಕ್ತಿಯಂ ಕಂಡು ನಾನು ಬಹಳ ಸಂತೃಪ್ತನಾದೆನು. ಇವರು ನೋಡಿ ನಾನಾಗಲಿ ತಾವಾಗಲಿ ಸಂತೋಷಿಸದೆ ಇರುವದಕ್ಕೆ ಹ್ಯಾಗೆ ತಾನೇ ಸಾಧ್ಯವಾಗುವದು. ಇಲ್ಲಿ ನೆರದಿರತಕ್ಕ ಬಾಲಿಕೆಯರೆಲ್ಲರು ಸದಸ್ಯಾಸಯುತರಾದ ಪ್ರಜೆಗಳ ಕನ್ಯೆಯರೆಂದಾ ಕರ್ಷಿಸಲ್ಪಡತಕ್ಕವರಾಗುವರೆಂಬುದು ತಾವೆಲ್ಲರು ಜ್ಞಾಪಕದೊಳು ಧರಿಸತಕ್ಕದ್ದು. ಯಾವುದೇ ಲೌಕಿಕ ಶಕ್ತಿಯು ದುಷ್ಟಿಪ ಸಾಧಿಸಿದೀತ ನಿವೃತ್ತಿಶ್ರೇಷ್ಠಕವಾದ ಸದ್ಗುಣಸಂದಾಯಕವಾದುದೆಂದೆ ಆಗ ಅದು ಇವರು ಸೇರಿದುದಲ್ಲಿ ತಮ್ಮ ಹೃದಯದೊಳು ಸಂತೋಷ ವಿನಾ ಅನ್ಯತರಭಾವವ್ಯಾವದೂ ಪ್ರಾದುರ್ಭವಿಸಲಾರದು. ಈ ತರುಣಿಯರು ಪ್ರಬಲ ಶಕ್ತಿಯಿಂದಾವಿಷ್ಟರಾಗತಕ್ಕವರೆಂದು ತಿಳಿಸುವೆನಷ್ಟೆ. ಅದರಲ್ಲೇನ ಸಂಶಯವಿಲ್ಲವು. ಅದು ಯಾವರೀತಿನ ಎರಕಂಡಿಸುವದು? ಈ ಪ್ರಪಂಚದಲ್ಲಿ ಯಾವಾಗಲು ಸ್ತ್ರೀವರ್ಗಾಬಂಧಪರಿಸ್ಫೂರ್ತಿಯುತವಾಗಿರುವದೆಂಬುದು ಯಾರಾದರು ಪ್ರತಿಷೇಧಿಸಲಿಕ್ಕಾಗುವದೆ? ಸ್ತ್ರೀಸ್ವಾತಂತ್ರ್ಯ ಸಂಬಂಧವೆಂಬುದು ನಾನಾವಿಧವಾದುದಾಗಿರುತಿದೆ ಹ್ಯಾಗೆಂದರೆ :—ಮಾತೃರೂಪವಾಗಿಯೂ, ಮಾತಾಮಹಿರೂಪವಾಗಿಯೂ, ಭಾರ್ಯಾರೂಪವಾಗಿಯೂ, ಸ್ವಸಾ ರೂಪವಾಗಿಯೂ, ಅಪ್ತರೂಪವಾಗಿಯೂ ಇರುವದು ಹ್ಯಾಗಿದ್ದಾಗ್ಯೂ ಸ್ತ್ರೀಯು ಗೃಹಪಾಲಿಕೆಯೆಂದು ನುಡಿಯಬೇಕಾಗಿದೆ. ಗೃಹವೆಂಬದ್ಯಾವದು? ಅದು ಪ್ರಪಂಚಕ ಸಂಬಂಧವಾದುದಾಗಿರುತಿದೆ. ಅಂದರೆ ಪ್ರಪಂಚಕಾಂತವೆಂದು ಭಾವಿಸಬೇಕಾದದ್ದು, ಪ್ರಪಂಚವು ಕುಟುಂಬ ಸಮುದಾಯರೂಪವಾಗಿರುತಿದೆ. ಆದುದರಿಂದ ಈ ಪ್ರಪಂಚವು ಅಬಲೆಯರ ಪ್ರಾಬಲ್ಯಕ್ಕೊಳಗಾದುದಾಗಿರುತಿದೆ. ಅವರ ಶರೀರದೌರ್ಬಲ್ಯವು ಪರಿಕಿಸಿ ಅಬಲೆಯರೆಂದು ಭಾವಿಸಿದಾಗ್ಯೂ ನೀತಿಜ್ಞಾನ ಮಾರ್ಗದಲ್ಲಿ ಸುಪ್ರಬಲವಿದ್ದರೆಂದು ನುಡಿಯಬಹುದು. ಮೌರ್ಖ್ಯವನ್ನೂ ಕ್ಷುದ್ರಜಾಡ್ಯವನ್ನೂ ನಿವೃತ್ತಿಸಿ ವಿವೇಕವನ್ನೂ ವೈಲಕ್ಷಣ್ಯವನ್ನೂ ಸ್ಫುಟಪಡಿಸುವ ವಿಷಯದಲ್ಲಿ ಮಾಡಲ್ಪಡುವ ಪ್ರಯತ್ನವು ನಮ್ಮ ದೇಶವನ್ನು ಮತ್ತೊಂದಾವರ್ತಿ ಮಹೋನ್ನತಸ್ಥಿತಿಗೆ ತರಲಿಕ್ಕೆ ಯೋಗ್ಯವಾದ ಪ್ರಥಮೋಪಾಯವೆನಿಸಿರುತಿದೆ. ಮುಖ್ಯವಾಗಿ ಸ್ತ್ರೀವಿದ್ಯಾಭ್ಯಾಸವು ಖರಂತು ಯೋಗ್ಯವಾದ ವಿದ್ಯಾಭ್ಯಾಸವು ಸಕಲ ವಿನಿಮಯಗಳಗೂ ಮೂಲಭೂತವಾದುದಾಗಿರುತಿದೆ. ಈ ಬೋಧಶಾಲೆಯ ಕಮಿಟಿಯಾವವರ್ಗದ ಸ್ತ್ರೀಯರಿಗೆ ಮಹದುಪಕಾರವು ಮಾತಲೆ ಕ್ಕಿಸಿ ಸುಭ್ರಾಂತ ಶುಭಫಲವನ್ನವರು ಕೈಗೊಂಬುದಕ್ಕೆ ಅವರಿಗೆ ಶುಭವಾದನ ಮಾಡುತ್ತೇನೆ. ಇಲ್ಲಿ ಸ್ತ್ರೀವಿದ್ಯಾಭ್ಯಾಸವು ಯಥಾವತ್ತವಾಗಿರ ಬೇಕೆಂಬದಂ ವಿವರಿಸುವದರ ಮೂಲಕ ಅನರ್ಘವಾದ ತಮ್ಮ ಕಾಲವನ್ನಪಹರಿಸಲಿಕ್ಕೆ ನನಗೆ ಇಷ್ಟವಿಲ್ಲವು. ಅದಂ ವಿದ್ವನ್ಮಂಡಲಿಗೆ ಒಪ್ಪಿಸಿರುವೆನು. ಪ್ರಾಗಂಚಿಕ ವಿದ್ಯೆಯ ಪರಿಜ್ಞಾನ ಪ್ರಯಾಗಲಿಕ್ಕೆ ಪೂರ್ವವೇ ಬಾಲೆಯರು ಶಾಲೆಗಳಿಂದ ಬಿಡಲ್ಪಡುವಣ್ಣ ಪ್ರಾಯದ ವಾಡಿಕೆಯಾಗಿರುವದರಿಂದ ಕಮ್ಮಿಟಿಯವರು ಅವರ ವಿಷಯದಲ್ಲಿ ವಿಶೇಷ ಪ್ರತಿಫಲ ನಿರೀಕ್ಷಣೆಯುಳ್ಳವರಾಗಿರುವರೆಂದು ಭಾವಿಸಬೇಕಾದುದಿಲ್ಲವು. ಆದುದರಿಂದ ಈ ಸಂದರ್ಭದಲ್ಲಿ ಪಾಠಶಾಲಾ ವಿದ್ಯಾಭ್ಯಾಸದೊಡನೆ ಗೃಹವಿದ್ಯಾಭ್ಯಾಸಪದ್ಧತಿಯಂ ಸಹ ಸಮ್ಮೇಳನ ಮಾಡಿ ಬಲಪಡಿಸಬೇಕಾದುದು ಅವಶ್ಯಕವೋ ಇಲ್ಲವೋ ಯೆಂಬದನ್ನಾಲೋಚಿಸಬೇಕೆಂದು ಕೋರುತ್ತೇನೆ. ಪ್ರತಿ ಮನುಷ್ಯನು ಸಕಲ ಕಾರ್ಯವು ಸ್ವತಃ ನಿರ್ವಹಿಸುತ್ತಾನೆಂಬಪಸಾಧ್ಯವು. ಸಹಪ್ರವೃತ್ತಿಯು ಉದ್ದೇಶ ಸಾಫಲ್ಯಕ್ಕೆ ಮೂಲಸಿದ್ಧಾಂತವಾಗಿರುತಿದೆ. ಬಹುದಿನ ಒಗ್ಗಟ್ಟಾಗಿ ಸೇರಿದರೆ ಅನೇಕ ವಿಷಯಗಳು ಸುಲಭವಾಗಿ ಜರಿಗಿಸಲ್ಪಡಬಹುದು. ವಿದ್ಯಾಭ್ಯಾಸವೆಂಬುದು ಕೇವಲ ಗ್ರಂಥಿಕವಾದುದು ಮಾತ್ರವಲ್ಲವೆಂಬದು ತಾವು ಅರಿಯದಿರಲಿಲ್ಲವು. ಬಹುವಿಷಯಗಳು ನಾವು ಸಹವಾಸದಿಂದಲೂ, ಸವಾಗಮದಿಂದಲೂ ಅರಿಯಬೇಕಾಗಿರುತಿದೆ. ಈ ವಿಷಯದಲ್ಲಿ ಮತಸಂಬಂಧಗಳಿಂದ ಶಕ್ಷಿಪೇದಗಳು ಬಹಳ ಪ್ರಯೋಜನವೆಂದು ನಂಬಿದೇನೆ. ಒಂದಾನೊಂದು ನಾನಿಲ್ಲಿ ಸಂಸ್ಯಾ ತಮ್ಮ ಅವಮಾನಕ್ಕೆ ಬರಲಿಷ್ಟಪ್ಪವಾಗಿದೇನೆಂದರೆ—ಈಗ್ಯೆ ಏಂದು ವರುಷಕ್ಕಿಂದೆ ಪ್ರಸಿದ್ಧವಾದ ಒಬ್ಬ ಯೂರೋಪಿಯನ್ ಧೀಲಸಾಪಿಯು ಒಂದು ಇಂಗ್ಲಿಷ್ ಪತ್ರಿಕೆಗೆ ಹಿಂದೂ ಸ್ತ್ರೀಯರು ಕುರಿತು ವಿಶೇಷವಾಗಿ ಪ್ರಶಂಸಿಸ್ಟ ಹಿಂದುದೇಶವನು ಬರೆದಿದ್ದಲು. ಪರುಷ ಅವರ ಉದ್ದೇಶವೇನೋ ನನಗೆ ತಿಳಿಯಲಿಲ್ಲವು. ಮುಖ್ಯವಾಗಿ ಆಕೆಯವರ ಅಭಿಪ್ರಾಯವೇನೆಂದರೆ—ಹಿಂದೂ ಸ್ತ್ರೀಯರು ಪವಿತ್ರತರಾಗಿ ಮಹೌಷಧ್ಯದೊಳು ಸುಖದಿಂದಾರೆ. ಅವರಿಗೆ ಅಪೇಕ್ಷಿತವಾಗಿರುವದು ವಿದ್ಯಾಭ್ಯಾಸವಲ್ಲವು ಪರುತು ಸ್ತ್ರೀಚಿಕಿತ್ಸಕರ ಮೂಲಕವಾದ ಸಹಾಯ ಸಂಪತ್ತಿಯನ್ನವರು ಬಹಳವಾಗಿ ಅಪೇಕ್ಷಿತರಾರೆಂಬದು ರೋಗನಿವೃತ್ತಿಗಿಂತಲೂ ತದನಸ್ವಕಾಶವು ಕ್ರಿ.ಷ್ಯಮೆಂಬದು ಆಕೆಯವರು ಕುದ್ದಾಂಗ ನುಡಿತುತೆ ಕಾಣುತಿದೆ. ನಮ್ಮ ಜನಾನಾ ಹೆಂಗಸರು ಸುಖಿಂದಾರೆಂಬದು ನಾನು ಒಪ್ಪಿಕರಿಸುವದಿಲ್ಲವು. ಪರುತು ಸುಖವೆಂಬದು ತೆತ್ತದ್ವ್ಯಕ್ತಿಸಿದಂ ಭಾವನಾನುಗುಣವಾದುದಾಗಿರುತಿದೆ, ಮಧ್ಯಪ್ರಯುಕ್ತವಾದ ಆನಂದವು ನೆಲೆಗೊಂಡಿದೆ. ಅದರೊಡನೆ ವಿವೇಕವೈಲಕ್ಷಣ್ಯಯುಕ್ತವಾದ ಜೀವನದಿಂದ ಲಭಿಸತಕ್ಕ ಸುಖೋದಯವೂ ನೆಲೆಗೊಂಡಿದೆ. ನೂತನವೆಯದೇ ಅಪೇಕ್ಷಣೀಯವಾಗಿರುವದಕ್ಕೆ ನಿಜವಾಗಿ ವಿವೇಕಿಗಳು ಕೂಡ ಮುಂಧರಾಗಿರಬೇಕಾಗುತಿದೆ. ಎಳಿದಕ್ಕೆ ಬಾಲೆಯರ ವಿದ್ಯಾಭಿವೃದ್ಧಿಯನ್ನೂ ಅವರಿಗೆ ಅನುರೂಪರಾದ ಪತಿಪ್ರಾಪ್ತಿಯನ್ನೂ ಮಿಲ್ಲದಕ್ಕಿಂತಲೂ ವಿಶೇಷತಃ ಅನುರಕ್ತರಾದ ಅತ್ತೆಯರ ಮೂಲಕ ಸುಖವನ್ನು ಬಹಳವಾಗಿ ಕೋರುತ್ತೇನೆಂಬದು ನನಗಾಗಿ ಕಮಿಟಿಯವರು ಬಾಲೆಯರಿಗೆ ತಿಳಿಸಬೇಕೆಂದು ಕೋರುವವಿಲ್ಲದೆ ಅವರು ನನಗೆ ತೋರಿಸಿದ ಗೌರವಕ್ಕಾಗಿ ಅವರಿಗೆ ನಾನು ವಂದಿಸುತ್ತೇನೆಂಬದು.

ಇದರಮೇಲೆ ಮಿ ರಿಕ್ಕೆಟ್ಸ್ ಸಾಹೇಬರವರು ತಿಳಿಸಿದ ಅಂಕವನ್ನೂ ಮೆ|| ರಾಮಚಂದ್ರಯ್ಯರವರು ವ್ಯಕ್ತಪಡಿಸಿದ ಅಭಿಪ್ರಾಯವನ್ನೂ ಮುಂದಿನವಾರದಲ್ಲಿ ತಿಳಿಸುವೆವು.

LOCAL AND PROVINCIAL NEWS

ಒಳದೇಶಮತ್ತುತಾಲ್ಲೂಕ್‍ಜಾತೆವೃತ್ತಾಂತಗಳು

The weather.—ಕಾಲಸ್ಥಿತಿಗನವಾರಲ್ಲಿದ್ದಂತೆಯೇ ಇದೆ. ಮಳೆ ಹಿಮ್ಮೆಟ್ಟಿದ್ದರಿಂದಫಸಲಿಗಳು ಒಣಗಲುಪಕ್ರಮವಾಗಿದೆ. ಅಲ್ಲಿಯಲ್ಲಿ ಜ್ವರಾದ್ಯುಪದ್ರವಗಳು ತಲೆದೋರಿವೆ. ಈ ಮೂರು ಕೊರಜೆ ಕೆರೆಯಲ್ಲಿ ಕುದ್ದಾಂಗ ನೀರು ಬತ್ತಿಹೋಯಿತು.

The Dassara Assembly.—ನವರಾತ್ರಿಕಾಲದಲ್ಲಿ ಶ್ರೀಮನ್ಮಹಾರಾಜರವರು ಪ್ರತಿನಿತ್ಯ ನಡಿಸುವ ದರ್ಬಾರನ್ನು ಯಥಾಸ್ಥಿತಿಯಾಗಿ ಬರೆಯತಕ್ಕಬಗ್ಗೆ ಬೆಲ್‍ಜಿಯಂದೇಶದ ಚಿತ್ರಗಾರರೊಬ್ಬರನ್ನು ಮೈಸೂರ್ ಗವರ್ನಮೆಂಟಿನವರು ಮೊಕರರ್ಮಾಡಿದಾರೆಂದು ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

Last Saturday.—ಗತ ಶನಿವಾರವು ಈ ಮಾಹೇ ಅಕ್ಟೋಬರ್ ಶನಿವಾರವಾದುದರಿಂದ ಸರ್ಕಾರ್ ಇಲಾಖೆಗಳೆಲ್ಲವು ಮುಚ್ಚಲ್ಪಟ್ಟವು. ನವರಾತ್ರಿ ಹಬ್ಬಕ್ಕೆ ಕೊಡಲ್ಪಟ್ಟ ರಜಾ ಸ್ವರೂಪದ ಮೊನ್ನೆಯ ಮೊದಲೇ ಪ್ರಾರಂಭವಾದಂತೆ ನುಡಿಯಬಹುದು. ಬರುವತಿಂಗಳ ೧೦ನೇ ತಾರೀಖ್ ಸೋಮವಾರದವಿನ ಮರಳಿ ಆಫೀಸ್‍ಗಳೆಲ್ಲವು ತೆಗೆಯಲ್ಪಡುವವು.

A fatal accident.—ಬೆಂಗಳೂರಿನ ಸಿವಿಲ್ ವ ಮಿಲಿಟರಿ ಸ್ಟೇಷನ್ ಮುನಿಸಿಪಲ್ ಕಮ್ಮಿಷನರಾದ ಮೆ|| ಕೃಷ್ಣಸಿಂಗರವರ ಕುಮಾರಿಯು ಕಾಗದ ಚೂರನ್ನು ಬೆಂಕಿಯಲ್ಲಿ ಹಾಕಿ ಉರಿಸುತ ಆಡುತಲಿರಲು ಅದು ಆಕೆ ಉಟ್ಟಿದ್ದ ಬಟ್ಟೆಗೆ ತಗಲಿ ಮೈಯೆಲ್ಲಾ ಸುಟ್ಟುಹೋಗಿ ಅದರಿಂದ ಮೊನ್ನೆ ಸೋಮವಾರದವಿನ ಬೆಳಗ್ಗೆ ಮೃತಪಟ್ಟಳೆಂಬದಂ ಕೇಳಿ ವಿಷಾದಿಸುತ್ತೇವೆ.

A new school.—ಮೇಲುಕೋಟೆಯಲ್ಲಿ ಕೆಲವು ದಿವಸಗಳ ಕೆಳಗೆ ವೇದವೇದಾಂತ ಬೋಧಿನಿ ಎಂಬ ಹೆಸರಿನಿಂದ ಒಂದು ಸಂಸ್ಕೃತ ಪಾಠಶಾಲೆಯನ್ನು ಏರ್ಪಾಟು ಮಾಡಿ ಅದರಲ್ಲಿ ವಿದ್ಯಾರ್ಥಿಗಳಿಗೆ ಮೂರು ವೇದಗಳು, ಉಪನಿಷತ್ತುಗಳು ಮನುಸ್ಮೃತಿಯೇ ಮೊದಲಾದ ಗ್ರಂಥಗಳನ್ನುಬೋಧಿಸುವಂತೆ ಗೊತ್ತುಮಾಡಿರುತ್ತಾರೆ.—ವೃ. ಪ.

H. H. the Maharaja.—ಇನ್ನು ೧—೨ ತಿಂಗಳುಗಳಲ್ಲೇ ಶ್ರೀಮನ್ ಮಹಾರಾಜರವರು ಪರಿವಾರಸಮೇತರಾಗಿ ಸಮುದ್ರದಮೇಲೆ ಕಲ್ಕತ್ತಾ ಪಟ್ಟಣಕ್ಕೆ ಜಹಜಿನಲ್ಲಿ ಕುಳಿತು ಪ್ರಯಾಣಮಾಡುವರೆಂದು ಏರ್ಪಾಟಾಗಿರುವಂತೆ ಕೇಳುತ್ತೇವೆ. ಇವರು ಹಾಗೆಯೇ ವಿಲಾಯತಿಗಂ ಮತ್ತು ಅಮೆರಿಕಾ ಖಂಡಕ್ಕೆ ಸೇರಿದ ಸರ್ವವಸ್ತುಪ್ರದರ್ಶನ ಮಹೋತ್ಸವವು ಸರ್ವೋತ್ಕೃಷ್ಟವಾದ ರೀತಿಯಲ್ಲಿ ಜರಗುವ ಚಿಕಾಗೋ ಪಟ್ಟಣಕ್ಕೂ ದಯಮಾಡಿಸಿದಾಗ್ಯೂ ನಾವು ಆಶ್ಚರ್ಯಪಡಲಾರೆವು.—ವೃ. ಪ.

The Dassara.—ಮೈಸೂರಿಗೆ ಪ್ರತಿನಿತ್ಯ ಪೂರ ನವರಾತ್ರಿ ಉತ್ಸವದ ಬಗ್ಗೆ ಬಹುಮಂದಿ ಪರಸ್ಥಳಗಳಿಂದ ಹೋಗುತಲಿದ್ದಾರೆ. ದಿನ ಒಂದಕ್ಕೆ ಎರಡು ಮೂರಾವರ್ತಿ ಗಾಡಿಗಳು ಹೋಗಿ ಬರುತಲಿವೆ. ಅಲ್ಲಿಗೆ ಹೋಗತಕ್ಕ ಯೆಲ್ಲರ ಉದ್ದೇಶವೂ ಪುರಾತನವಾದ ಅನರ್ಘ ಸಿಂಹಾಸನವನ್ನು ನೋಡುವಣ, ಮಹಾರಾಜರವರ ಪರಿಧಪಣಗಳನ್ನೋಡುವಣ ಅವರು ವಿಜಯದಶಮಿಯ ದಿನ ಸೀಮೋಲ್ಲಂಘನ ಮಾಡಿ ವಿಜಯಸ ಸಂಭ್ರಮದೊಡನೆ ನಗರಪ್ರವೇಶ ಮಾಡುವದಂ ನೋಡುವಣ, ಇವು ಮೊದಲಾದವಾಗಿವೆ. ಮುಖ್ಯವಾಗಿ ನಾಗರಿಕರಿಗಿಂತ ಹಳ್ಳಿಗಾಡಿನವರೇ ಹೆಚ್ಚಾಗಿ ಜಮಾಯಿಸುತ್ತಾರೆ. ಅತ್ಯಾಪಿ ಪುರುಷರಿಗಿಂತಲೂ ಸ್ತ್ರೀಸಂಖ್ಯೆಯೇ ಹೆಚ್ಚು. ಯೂರೋಪಿಯನ್ ಆಫೀಸರ್‍ಗಳೂ ನೇಟಿವ್ ಆಫೀಸರ್‍ಗಳೂ ಪ್ರಜಾಪ್ರತಿನಿಧಿ ಸಮಾಜದ ಮೆಂಬರ್‍ಗಳೂ ತಾರತಮ್ಯಾನುಸಾರ ಅರಮನೆಯಿಂದ ಉಲ್ಲಾಸ ಯೆಂಬ ಭತ್ತೆ ಪಡೆಯುತ್ತಾರೆ. ಈ ಉತ್ಸವಕ್ಕಾಗಿ ದೂರದೇಶಗಳಿಂದ ಧನವ್ಯಯಮಾಡಿಕೊಂಡು ಬರತಕ್ಕವರಿಗೆ ರೈಲಿನಲ್ಲಿಸುಕಟ್ಟು ಊರಲ್ಲಿ ತಂಗಲಿಕ್ಕೆ ಸ್ಥಳಸುಕೋಚ, ಅರಮನೆಗೆ ಹೋದರೆ ಅರ್ಧಚಂದ್ರಪ್ರಯೋಗ, ಇವೆಲ್ಲರ ಪ್ರಭವದೊಡನೆ ಕೈಯಲ್ಲಿರುವದನ್ನು ಹೋಗಲಾಡಿಸಿಕೊಂಡು ಹಿಂದಿರಿಗಿ ಬರುವದೇ ಪರಮಪ್ರಯೋಜನವಾಗಿರುತಿದೆ.

ಮೈಸೂರು ರೈಲ್ವೆ ಸ್ಟೇಷನ್ ಮ್ಯಾಸ್ಟರ್ ಮತ್ತು ಮೆ|| ರಂಗಸ್ವಾಮಯ್ಯಂಗಾರ್ಯರು.

ಕಳೆದ ಬೃಹಸ್ಪತ್ಯವಾರದ ದಿವಸ ದಿವಾನರವರು ರೈಲುಮಾರ್ಗವಾಗಿ ಬರುತ್ತಾರೆಂದು ತಿಳಿಯಬಂದದ್ದರಿಂದ ಮೆ|| ಸಿ. ಶ್ರೀನಿವಾಸಯ್ಯಂಗಾರ್ಯರು, ಟಿ. ರಾಘವೇಂದ್ರರಾಯರು, ಬಿ. ಕೃಷ್ಣಯ್ಯಂಗಾರ್ಯರು, ಸೀತಾರಾಮಯ್ಯರು, ಚೆಟ್ಟಿಗಂ ನೊದಲಿಯಾರ್ರವರು, ಸೀತಾರಾಮಯ್ಯನವರು, ಮೆ|| ಅಪ್ಪಮ್ಮದಲ್ಲಿಯವರು, ಎಸ್. ಲಿಂಗಸಾಹೇಬರು, ಕಲಿಸ ಸಾಹೇಬರು, ಇವರೇ ಮೊದಲಾದ ಅನೇಕರು ರೈಲ್ವೇ ಸ್ಟೇಷನ್ನಿಗೆ ದಯಮಾಡಿಸಿದರು. ಸ್ಟೇಷನಿನ ಬಾಗಿಲಿನಲ್ಲಿದ್ದ ಟಿಕ್ಕೆಟ್ ಕಲೆಕ್ಟರ್ ಪೋರ್ಟರ್ ಮೊದಲಾದವರು ಆಣೆ ಬೆಲೆಯುಳ್ಳ ಪ್ಲಾಟ್‍ಫಾರಂ ಟಿಕ್ಕೆಟ್‍ಗಳನ್ನು ತೆಗದುಕೊಳ್ಳದು ಒಳಕ್ಕೆ ಹೋಗಸಕೂಡದೆಂದು ವಿಧಾಯಕವಾಗಿದೆ. ಅಪೇಕ್ಷೆಯುಳ್ಳವರು ತೆಗದುಕೊಳ್ಳಬೇಕೆಂಬುದಾಗಿ ಬಂದಿದ್ದವರಿಗೆಲ್ಲ ತಿಳಿಸಿದರು. ಅದಕ್ಕೆ ಎಲ್ಲರು ಟಿಕ್ಕೆಟ್‍ಗಳನ್ನು ತೆಗದುಕೊಂಡು ಪ್ಲಾಟ್‍ಫಾರಮ್ಮಿಗೆ ದಯಮಾಡಿದರು. ಅನಂತರದಲ್ಲಿ ಮೆ|| ರಂಗಸ್ವಾಮಯ್ಯಂಗಾರ್ಯರು ಸ್ಟೇಷನ್ನಿಗೆ ದಯಮಾಡಿದರು. ಅವರಿಗೂ ಅದೇ ರೀತಿಯಲ್ಲಿ ಹೇಳಿ ತಾವು ಟಿಕ್ಕೆಟ್ ಆಗದುಕೊಂಡಿದ್ದೀರ ಎಂದು ಕೇಳಿದರು. ಆಮೇಲೆ ಈ ಕೆಳಗೆ ವಿವರಿಸಿರುವ ವಾಗ್ವಾದಗಳು ಬೆಳೆದವು.

ರಂಗಸ್ವಾಮಯ್ಯಂಗಾರ್ಯರು.—ನನ್ನ ಬಳಿ ಟಿಕ್ಕೆಟ್ ಇಲ್ಲ ದಿವಾನರವರು, ಮತ್ತು ಕೆಲವು ಸ್ನೇಹಿತರು ಬರುತ್ತಾರೆ ಅವರನ್ನು ನೋಡುವದಕ್ಕೋಸ್ಕರ ನಾನು ಬಂದಿದ್ದೇನೆ.

ಟಿಕ್ಕೆಟ್ ಕಲೆಕ್ಟರ್.—ಟಿಕ್ಕೆಟ್ ಆಫೀಸಿನ ಕಿಟಕಿ ಎದುರಿಗೆ ಪ್ಲಾಟ್‍ಫಾರಮಿನ ಟಿಕೆಟ್‍ಗಳ ವಿಷಯವಾದ ನೋಟಿಸ್ ಅಂಟಿಸಿದೆ, ದಯಮಾಡಿ ಅದನ್ನು ನೋಡಬೇಕೆಂದು ಪ್ರಾರ್ಥಿಸುತ್ತೇನೆ.

ರಂ.—ಅದನ್ನು ನೋಡತಕ್ಕ ಆವಶ್ಯಕ ನನಗಿಲ್ಲ.

ಟಿ. ಕ.—ಟ್ರಾಫಿಕ್ ಮ್ಯಾನೇಜರವರ ಆಜ್ಞೆಗೆ ಅನುಸಾರವಾಗಿ ನಾನು ನಡೆಯಬೇಕಾಗಿದೆ. ಪ್ಲಾಟ್‍ಫಾರಂ ಟಿಕ್ಕೆಟ್ ತೆಗದುಕೊಳ್ಳದೆ ಇರುವವರನ್ನು ಒಳಕ್ಕೆ ಬಿಡಕೂಡದೆಂದು ವಿಧಾಯಕವಾಗಿದೆ.

ರಂ.—ನಾನು ಪೊಲ್ಯೂಟ್‍ಕಮ್ಮಿಷನರನಾಗಿಯೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನಾಗಿಯೂ ಇದ್ದೇನೆ. ಈ ವಿಷಯ ನಿನಗೆ ಗೊತ್ತಿದೆಯೋ ಇಲ್ಲವೋ? (ಹೀಗೆಂದು ಹೇಳಿ ಬಲಾತ್ಕಾರವಾಗಿ ಸ್ಟೇಷನ್ನಿನ ಒಳಕ್ಕೆ ದಯಮಾಡಿಸಿದರು. ಕೂಡಲೆ ಟಿಕ್ಕೆಟ್ ಕಲೆಕ್ಟರು ಈ ಸಂಗತಿಯನ್ನು ಸ್ಟೇಷನ್ ಮ್ಯಾಸ್ಟರಿಗೆ ರಿಪೋರ್ಟ್ ಮಾಡಿದನು. ಬಡನೆ ಸ್ಟೇಷನ್ ಮ್ಯಾಸ್ಟರು ಮೆ|| ರಂಗಸ್ವಾಮಯ್ಯಂಗಾರ್ ಬಳಿಗೆ ಬಂದು)

ಸ್ಟೇ. ಮ್ಯಾ. (ಮೆ|| ರಂಗಸ್ವಾಮಯ್ಯಂಗಾರ್ಯರವರನ್ನು ಕುರಿತು) ಸ್ವಾಮಿ ನೀವು ಪ್ಲಾಟ್‍ಫಾರಂ ಟಿಕೆಟ್ ತೆಗದುಕೊಂಡಿದ್ದೀರಾ?

ರಂ.—ಇಲ್ಲ

ಸ್ಟೇ. ಮ್ಯಾ.—ದಯಮಾಡಿ ಟಿಕ್ಕೆಟನ್ನು ಕೊಂಡುಕೊಳ್ಳಬೇಕು.

ರಂ.—ನಾನು ತೆಗೆದುಕೊಳ್ಳುವದಿಲ್ಲ. ನಾನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್. ರೈಲಿನಲ್ಲಿ ಬರತಕ್ಕ ದಿವಾನರನ್ನೂ ಇತರರನ್ನೂ ನೋಡುವದಕ್ಕೋಸ್ಕರ ಬಂದಿದ್ದೇನೆ.

ಸ್ಟೇ. ಮ್ಯಾ.—ಪ್ಲಾಟ್‍ಫಾರಂ ಟಿಕ್ಕೆಟ್ ತೆಗದುಕೊಳ್ಳದೆ ಬರತಕ್ಕವರನ್ನು ಪ್ಲಾಟ್‍ಫಾರಮಿಗೆ ಬಿಡಕೂಡದೆಂಬದಾಗಿ ಟ್ರಾಫಿಕ್ ಮ್ಯಾನೇಜರವರ ಆಜ್ಞೆಯಾಗಿರುತ್ತದೆ. ಇಲ್ಲಿಗೆ ಈಗ ದಯಮಾಡಿಸಿರತಕ್ಕ ದೊಡ್ಡ ಮನುಷ್ಯರೆಲ್ಲರೂ ಟಿಕ್ಕೆಟ್ ತೆಗದುಕೊಂಡಿದ್ದಾರೆ. ತಾವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದುಕೊಂಡು ಇಂಥಾ ಮೇಲುಪಂಕ್ತಿಯನ್ನು ಹಾಕುವದು ನ್ಯಾಯವೆ?

ರಂ.—ನಿಮ್ಮ ಟ್ರಾಫಿಕ್ ಮ್ಯಾನೇಜರಿಗೂ ಅವರ ಆಜ್ಞೆಗಳಿಗೂ ನಾನು ಬದ್ಧನಲ್ಲ.

ಸ್ಟೇ. ಮ್ಯಾ.—ಹಾಗಾದ ಪಕ್ಷದಲ್ಲಿ ನನ್ನ ಮೇಲ್ಪಟ್ಟ ಅಧಿಕಾರಿಗಳ ಆಜ್ಞೆಗನುಸಾರವಾಗಿ ಪ್ಲಾಟ್‍ಫಾರವನ್ನು ಬಿಟ್ಟು ದಯಮಾಡಿಸಬೇಕೆಂಬದಾಗಿ ನಾನು ತಮ್ಮನ್ನು ಪ್ರಾರ್ಥಿಸುತ್ತೇನೆ.

ರಂ.—ನಿನ್ನ ಮೇಲ್ಪಟ್ಟ ಅಧಿಕಾರಿಯ ಆಜ್ಞೆಗಳನ್ನು ಕವಡೆಗೆ ಸಮವಾಗಿಯೂ ಲಕ್ಷ್ಯಮಾಡತಕ್ಕವನಲ್ಲ. ನಾನು ಡೆಪ್ಯುಟಿ ಕಮ್ಮಿಷನರನಾಗಿಯೂ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟನಾಗಿಯೂ ಇದ್ದೇನೆ. ನನಗೆ ಡಿಸ್ಟ್ರಿಕ್ಟಿನ ಪೂರ್ಣವಾದ ಅಧಿಕಾರವುಂಟು.

ಸ್ಟೇ. ಮ್ಯಾ.—ನಿಮಗೆ ಡಿಸ್ಟ್ರಿಕ್ಟಿನಲ್ಲಿ ಅಧಿಕಾರವಿದ್ದರೆ ಇರಲಿ, ಈ ಸ್ಟೇಷನಿನಲ್ಲಿ ನನ್ನ ಅಧಿಕಾರವು ಸಂಪೂರ್ಣವಾದದ್ದು. ನೀವು ಟಿಕ್ಕೆಟನ್ನು ಕೊಂಡುಕೊಳ್ಳದೇಲೂ, ಪ್ಲಾಟ್‍ಫಾರವನ್ನು ಬಿಡುವದಕ್ಕೆ ಇಷ್ಟವಿಲ್ಲದೇಲೂ ಇದ್ದ ಪಕ್ಷದಲ್ಲಿ ನಾನು ನನ್ನ ಅಧಿಕಾರವನ್ನು ಚಲಾಯಿಸಬೇಕಾಗಿ ಬರುತ್ತದೆ. ಇದಕ್ಕೆ ನಾನು ಬಹಳ ವಿಷಾದಪಡುತ್ತೇನೆ. (ಎಂದು ಹೇಳಿ ಪೋಲೀಸಿನವರನ್ನು ಕರದು ...)

ರಂ.—ಸರಿ, ನೀವು ಪೋಲೀಸಿನವರನ್ನು ಕರೆದುಬಿಟ್ಟಿರಿ. ಅವರು ನನಗೆ ವಿಧೇಯರಾಗಿರುವಾಗ ಹೊಡೆತಿ ನಿಮಗೆ ಏನೂ ಮಾಡಲಿಕ್ಕಾಗುವದಿಲ್ಲ. ನೀವು ನಿಮ್ಮ ವಿವೇಕವನ್ನು ಕಳಕೊಂಡಿ, ನಾನೂ ನೋಡುತ್ತೇನೆ

ಸ್ಟೇ. ಮ್ಯಾ — "ನೀವು ನನಗೆ ಆಜ್ಞೆ ಮಾಡುತ್ತೀರೋ?" ಎಂಬದಾಗಿ ಹೇಳುತ್ತಾ ಕೂಗಿಕೊಂಡವರನ್ನು ಕರೆದರು (ಪೊಲೀಸ್ ಇನ್‌ಸ್ಪೆಕ್ಟರ್ ಬ್ರೈನಿಂಗ್‌ನವರು ಬಂದ ಕೂಡಲೆ ಅವರನ್ನು ಕುರಿತು) ಬ್ರೈನಿಂಗರವರೇ, ಈ ದೊಡ್ಡ ಮನುಷ್ಯರು ಪ್ಲಾಟ್‌ಫಾರಂ ಟಿಕ್ಕೆಟ್ ತೆಗೆದುಕೊಳ್ಳದೆ ಪ್ಲಾಟ್‌ಫಾರಮಿನೊಳಕ್ಕೆ ಬಂದಿದ್ದಾರೆ ಟಿಕ್ಕೆಟ್ ತೆಗೆದುಕೊಳ್ಳುವದಿಲ್ಲವೆಂತಲೂ, ಪ್ಲಾಟ್‌ಫಾರಂ ಬಿಟ್ಟು ಹೋಗುವದಿಲ್ಲವೆಂತಲೂ ಹೇಳುತ್ತಾರೆ ಪ್ಲಾಟ್‌ಫಾರಂ ಟಿಕ್ಕೆಟ್ ತೆಗೆದುಕೊಳ್ಳಬೇಕೆಂದು ಟ್ರಾಫಿಕ್ ಮ್ಯಾನೇಜರವರಿಂದ ವಿಧಾಯಕವಾಗಿರುತ್ತೆ ಟ್ರಾಫಿಕ್ ಮ್ಯಾನೇಜರವರ ಹುಕುಂಗಳನ್ನು ಜಾರಿಯಲ್ಲಿ ತರುವ ಬಗ್ಗೆ ಸಹಾಯ ಮಾಡುವದಕ್ಕೋಸ್ಕರ ನೀವು ಇಲ್ಲಿ ಇರುತ್ತೀರಿ ಟಿಕ್ಕೆಟ್ ತೆಗೆದುಕೊಳ್ಳಬೇಕು. ಹಾಗಿಲ್ಲದಿದ್ದರೆ ಪ್ಲಾಟ್‌ಫಾರಂ ಬಿಟ್ಟು ಆಚೆಗೆ ದಯಮಾಡಿಸಬೇಕೆಂಬದಾಗಿ ನೀವಾದರು ದಯವಿಟ್ಟು ಈ ದೊಡ್ಡ ಮನುಷ್ಯರಿಗೆ ಹೇಳುತ್ತೀರೆ.

ರಂ — ಬ್ರೈನಿಂಗ್, ನೀನು ನನ್ನ ಪಾಡೇನು, ನನ್ನನ್ನು ಪ್ಲಾಟ್‌ಫಾರಮಿನಿಂದ ಆಚೆಗೆ ಓಡಿಸುತ್ತೀಯ?

ಬ್ರೈ — ಇಲ್ಲ ಸ್ವಾಮಿ, ತಾವು ಪ್ಲಾಟ್‌ಫಾರಮಿನಲ್ಲಿ ಸ್ವೇಚ್ಛೆಯಾಗಿ ಇರಬಹುದು, ತಾವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ನಾನು ತಮ್ಮ ಸೇವಕನು ಇಲ್ಲಿ ತಾವು ಸ್ಟೇಷನ್ ಮ್ಯಾಸ್ಟರಿಗಿಂತಲೂ ಅಧಿಕವಾದ ಅಧಿಕಾರವನ್ನು ಹೊಂದಿರುತ್ತೀರಿ.

ಸ್ಟೇ ಮ್ಯಾ — (ವಿಹ್ವಲನಾದವನಾಗಿ) ಮ|| ರಂಗಸ್ವಾಮಯ್ಯಂಗಾರ್ಯರವರನ್ನು ಕುರಿತು ಸ್ವಾಮಿ, ತಮ್ಮ ನಾಮಧೇಯವೇನೋ ಅದನ್ನು ದಯವಿಟ್ಟು ಕೊಂಚ ಅಪ್ಪಣೆ ಕೊಡಿಸಬೇಕು?

ರಂ — ಅಪ್ಪಣೆ ಕೊಡಿಸುವದಿಲ್ಲ

ಸ್ಟೇ ಮ್ಯಾ — ತಾವು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ಹೀಗೆ ಅಪ್ಪಣೆ ಕೊಡಿಸಕೂಡದು, ದಯವಿಟ್ಟು ತಮ್ಮ ಹೆಸರನ್ನು ಹೇಳಬೇಕು

ರಂ — ದಯಾಳ, ಹೋಗು, ಇನ್ನೇನಾದರು ಮಾತಾಡಿದ್ದಾದರೆ ನಿನಗೆ ತಕ್ಕ ಬಂದೋಬಸ್ತನ್ನು ಮಾಡುತ್ತೇನೆ ಎಂದು ಪತ್ರವನ್ನು ಎತ್ತಿದನು.)

ಸ್ಟೇ ಮ್ಯಾ — ನನ್ನನ್ನು ಮುಖ್ಯಾಧಿಕಾರದಿಂದ ತಪ್ಪಿಸುವದಕ್ಕೆ ಪ್ರಯತ್ನ ಮಾಡುತ್ತೀರ?

ರಂ — ಹೇಳಿದ ದಯಾಳುತ್ತೇನೆ ಮುತ್ಸಾಳ ಹೋಗು, ಇಲ್ಲದಿದ್ದರೆ ತಕ್ಕ ಬಂದೋಬಸ್ತು ಮಾಡೇನು ಕೈಗೆ ಕೈಲಿಯಾಯಿಸೇನೆಂಬದಾಗಿ, ಮ|| ಟಿ ರಾಘವೇಂದ್ರ ರಾಯರವರು ಇವರಿಬ್ಬರಿಗೂ ಮಧ್ಯ ಬಂದು ನಿಂತುಕೊಂಡು ಮಿಸ್ಟರ್ ಸ್ಟೇಷನ್ ಮ್ಯಾಸ್ಟರವರೇ, ಈ ದೊಡ್ಡ ಮನುಷ್ಯರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿಯೂ, ಡೆಪ್ಯುಟಿ ಕಮಿಷನರಾಗಿಯೂ ಇರುತ್ತಾರೆ ಇವರಿಗೆ ಪ್ಲಾಟ್‌ಫಾರಮಿನ ಟಿಕ್ಕೆಟ್ ಇಲ್ಲದೆ ಬರುವದಕ್ಕೆ ಸಂಪೂರ್ಣ ಅಧಿಕಾರವುಂಟು ಎಂಬದಾಗಿ ಹೇಳಿದರು)

ಸ್ಟೇ ಮ್ಯಾ — ಮ|| ರಾಘವೇಂದ್ರರಾಯರವರನ್ನು ಕುರಿತು, ನೀವು ಆಡಿದ ಮಾತನ್ನು ನೀವು ಫೈಲ್ಟ ಮ್ಯಾಜಿಸ್ಟ್ರೇಟೆಂಬದಾಗಿ ತಿಳಿದುಕೊಂಡು ಹೇಳುತ್ತೀರೋ? ಅಥವಾ ಸಾಮಾನ್ಯರಾದ ರಾಘವೇಂದ್ರರಾಯರೆಂದು ತಿಳಿದುಕೊಂಡು ಹೇಳುತ್ತೀರೋ? ಆ ವಿಷಯವನ್ನು ಅಪ್ಪಣೆ ಕೊಡಿಸಬೇಕು ನಾನು ಕಂಪೆನಿಯವರ ಆಜ್ಞೆಯನ್ನು ಜಾರಿಯಲ್ಲಿ ತರುತಲಿದ್ದೇನೆ (ಈ ಮಾತನ್ನು ಕೇಳಿದ ಕೂಡಲೆ ರಾಘವೇಂದ್ರರಾಯರವರು ಆ ಸ್ಥಳವನ್ನು ಬಿಟ್ಟು ಹಿಂದೆ ಸರಿದರು)

ಸ್ಟೇ ಮ್ಯಾ — ಬ್ರೈನಿಂಗರೇ, ಈ ದೊಡ್ಡ ಮನುಷ್ಯರ ಹೆಸರನ್ನು ನೋಟ್ ಮಾಡಿಕೊಳ್ಳಿ

ಬ್ರೈ — ಇಲ್ಲ ನಾನು ಬರೆದುಕೊಳ್ಳಲಾರೆ.

ಸ್ಟೇ ಮ್ಯಾ — ಅವರ ಅಭಿನಯವನ್ನೂ ಮಾತುಗಳನ್ನೂ ದಯವಿಟ್ಟು ನೋಟ್ ಮಾಡಿಕೊಳ್ಳುತ್ತೀರ! ಅವುಗಳನ್ನು ನಾನು ಜ್ಞಾಪಕ ಇಟ್ಟುಕೊಳ್ಳಬಹುದು (ಅಷ್ಟರಲ್ಲಿಯೆ ರೈಲು ಬಂದಿಯು ಬಂತು ಪ್ಲಾಟ್‌ಫಾರಮಿನ ಅಂಚಿನಲ್ಲಿ ಜನಸ್ತೋಮವು ಸೇರದಂತೆ ಮಾಡುವದಕ್ಕೋಸ್ಕರ ಸ್ಟೇಷನ್ ಮ್ಯಾಸ್ಟರವರು ಹೊರಟುಹೋದರು ಹೋದ ಕೆಲಸವನ್ನು ಮಾಡಿಕೊಂಡು ಬರುವವರೊಳಗಾಗಿ ಮ|| ರಂಗಸ್ವಾಮಯ್ಯಂಗಾರ್ಯರವರು ಪ್ಲಾಟ್‌ಫಾರಮಿನ ಅಂಚಿನಲ್ಲಿರುವ ಕಲ್ಲಿನ ಮೇಲೆ ನಿಂತಿದ್ದರು

ಸ್ಟೇ ಮ್ಯಾ. — ಸ್ವಾಮಿ ಸ್ವಲ್ಪ ಹಿಂದಕ್ಕೆ ದಯಮಾಡಿಸಬೇಕು, ರೈಲು ಬರುತ್ತಲಿದೆ

ರಂ. — ನಾನು ಹಿಂದಕ್ಕೆ ಹೋಗುವದಿಲ್ಲ, ಇಲ್ಲಿಯೇ ನಿಂತಿರುತ್ತೇನೆ (ಗಾಡಿಯು ಬಂದ ಕೂಡಲೆ ದಿವಾನರೇ ಮೊದಲಾದ ದೊಡ್ಡ ಮನುಷ್ಯರೆಲ್ಲ ಗಾಡಿಯನ್ನು ಇಳಿದರು) ಎಲ್ಲರೂ ಹೊರಟುಹೋದರು.

ಈ ವಿಷಯದಲ್ಲಿ ಸ್ಟೇಷನ್ ಮ್ಯಾಸ್ಟರವರ ಹೇಳಿಕೆ.

ಮ|| ರಂಗಸ್ವಾಮಯ್ಯಂಗಾರ್ಯರವರು ಸ್ಟೇಷನಿಗೆ ಬಂದು ಪ್ಲಾಟ್‌ಫಾರಂ ಟಿಕ್ಕೆಟನ್ನು ತೆಗೆದುಕೊಳ್ಳಬೇಕೆಂಬದಾಗಿಯೇ, ಆ ವಿಷಯವಾದ ರೂಲುಗಳನ್ನು ತೋರಿಸಿದಾಗ್ಯೂ ಉಲ್ಲಂಘಿಸಿ, ಟಿಕ್ಕೆಟ್ ಕಲೆಕ್ಟರನ್ನು ನೂಕಿಬಿಟ್ಟು ಪ್ಲಾಟ್‌ಫಾರಮಿಗೆ ಬಲಾತ್ಕಾರವಾಗಿ ಪ್ರವೇಶಿಸಿದ ತಪ್ಪನ್ನೂ (೨) ಅನಂತರದಲ್ಲಿ ಟಿಕ್ಕೆಟನ್ನು ಕೊಂಡುಕೊಳ್ಳಬೇಕೆಂದು ಹೇಳಿದರೂ ಕೊಂಡುಕೊಳ್ಳದ ಕಂಪೆನಿಯವರಿಗೆ ಮೋಸಮಾಡಿದ ತಪ್ಪನ್ನೂ (೩) ಸ್ಟೇಷನ್ನಿನಲ್ಲಿ ಕಂಪೆನಿಗೆ ಪ್ರತಿನಿಧಿಯಾದವರು ಪ್ಲಾಟ್‌ಫಾರಮನ್ನು ಬಿಟ್ಟು ಹೋಗಬೇಕೆಂಬದಾಗಿ ಕಂಪೆನಿಯ ರೂಲುಗಳನ್ನು ಅನುಸರಿಸಿ ಹೇಳಿದಾಗ್ಯೂ ಅದನ್ನು ಲಕ್ಷ್ಯಮಾಡದೆ ಹಟದಿಂದ ಪ್ಲಾಟ್‌ಫಾರಮಿನಲ್ಲಿದ್ದಂಥಾ ತಪ್ಪನ್ನೂ (೪) ಕಂಪೆನಿ ಪ್ರತಿನಿಧಿಯನ್ನು ಹೈದು ಹೊಡೆಯುವದಕ್ಕೆ ಪ್ರಯತ್ನಮಾಡಿದ ತಪ್ಪನ್ನೂ (೫) ಪ್ರಾಣಕ್ಕೆ ಅಪಾಯವನ್ನುಂಟುಮಾಡುವ ಸ್ಥಳದಲ್ಲಿ ನಿಂತುಕೊಂಡಿದ್ದು ಅಲ್ಲಿಂದ ಹಿಂದಕ್ಕೆ ಹೋಗಬೇಕೆಂದು ಹೇಳಿದಾಗ್ಯೂ, ಅದನ್ನು ಲಕ್ಷ್ಯಮಾಡದೆ ಪ್ಲಾಟ್‌ಫಾರಮಿನ ಅಂಚಿನಲ್ಲಿ ನಿಂತಿದ್ದ ತಪ್ಪನ್ನೂ ಮಾಡಿದಾರೆ ಇದನ್ನು ರೈಲ್ವೆ ಕಂಪೆನಿಯವರೂ ಇಂಡಿಯಾ ಗವರ್ನ್‌ಮೆಂಟಿನವರೂ ಇತರರೂ ಯೋಚನೆಮಾಡಿ ಯಾರ ನಡತೆಯು ನಿಂದನೀಯವೋ ಅದನ್ನು ಗೊತ್ತು ಮಾಡಬೇಕು ಎಂದು ಬರೆದು ಇದಾರೆ. — ವ್ಯ. ಚಂ

ನಮ್ಮ ಶ್ರೀಮನ್ ಮಹಾರಾಜರವರ ಗುಣಾನುವರ್ಣನೆ.

ನಮ್ಮ ಶ್ರೀಮನ್ ಮಹಾರಾಜರವರು ರಾಜ್ಯಭಾರದ ಆಡಳಿತದಲ್ಲಿ ಪ್ರವೇಶಿಸುವದಕ್ಕೆ ಮೊದಲೂ, ಸರ್ಕಾರದವರಿಂದ ಪ್ರಜೆಗೆ ಗಂಟಾಗುವ ಈತಿ ಬಾಧೆಗಳನ್ನರಿಯುವದಿಲ್ಲವೆಂತಲೂ, ದಿವ್ಯಾಣದಲ್ಲಿ ನಡೆಯುವ ತಂತ್ರಗಳೇ ಅವರಿಗೆ ತಿಳಿಯದೆಂತಲೂ ಕೆಲವರು ಭೀತಿಯಿಂದ ಪಶ್ಚಾತ್ತಾಪ ಪಡುತ್ತಾರೆ. ಕೆಲವು ಅಧಿಕಾರಿಗಳು ಇದನ್ನು ನಂಬಿ ಮರ್ಯಾದೆ ನಡೆಯುತ್ತಿದ್ದಾರೆ. ನಮ್ಮ ಮಹಾರಾಜರು ಮಹಾ ಚತುರರು ನಮಗಿಂತಲೂ ವಿಶಾಲದ ತರ್ಕಯುಕ್ತರು ದುರಾಶೆಯುಳ್ಳವರಲ್ಲ ಇದುವರೆಗೂ ಸ್ವಲ್ಪಸ್ವಲ್ಪವಾಗಿ ರಾಜ್ಯಾಡಳಿತದಲ್ಲಿ ಪ್ರವೇಶಿಸುತ್ತಲಿದ್ದು ಈ ದಿವಸಕ್ಕೆ ಚೆನ್ನಾಗಿ ಪಳಗುತ್ತಾ ಬರುತ್ತಲಿದ್ದಾರೆ ಇದಕ್ಕೆ ಅನೇಕ ದೃಷ್ಟಾಂತರಗಳಿವೆ ಸರ್ಕಾರದ ಅಧಿಕಾರಿಗಳು ಪ್ರಜೆಗಳಿಗೆ ಕೊಡುವ ಉಪದ್ರವಗಳೆಲ್ಲಾ ಚೆನ್ನಾಗಿ ತಿಳಿದುಕೊಂಡಿದ್ದಾರೆ. ದಿವ್ಯಾಣದಲ್ಲಿ ನಡೆಯುವ ತಂತ್ರಗಳೆಲ್ಲಾ ಗೂಢಚಾರರಿಂದ ಸಂಪೂರ್ಣವಾಗಿ ಅರಿಯುತ್ತಿದ್ದಾರೆ ಅಧಿಕಾರಗಳ ಯೋಗ್ಯತೆಗಳನ್ನೆಲ್ಲಾ ಚೆನ್ನಾಗಿ ಪರೀಕ್ಷಿಸಿ ಇಟ್ಟಿದ್ದಾರೆ ಪ್ರಜೆಗಳ ಕಷ್ಟ ಸುಖಗಳನ್ನು ಬಹಳ ಚೆನ್ನಾಗಿ ತಿಳಿದಿದ್ದಾರೆ ಅನೇಕ ಸಂದರ್ಭದಲ್ಲಿ ದಿವ್ಯತೇಜಸ್ಸು ಪ್ರಕಾಶಿಸುತ್ತಾ ಅಧಿಕಾರಿಗಳಿಗೆ ತಮ್ಮ ಆಸ್ಥೆಯನ್ನು ತೋರಿಸಿದ್ದಾರೆ ಪ್ರಜೆಗಳ ವಿಷಯದಲ್ಲಿ ಅತಿ ಪಕ್ಷಪಾತವುಳ್ಳವರಾಗಿದ್ದಾರೆ ಯಿಲ್ಲಿ ವರ್ತಮಾನ ಪತ್ರಿಕೆಗಳನ್ನು ಅಂತರಂಗದಲ್ಲಿ ಓದುತ್ತಾ ಇದಾರೆ ಈ ಮಹಾರಾಜರವರು ಚಿರಕಾಲ ಜೀವಂತರಾಗಿರಬೇಕೆಂದು ಪ್ರಜೆಗಳೆಲ್ಲರೂ ಪ್ರಾರ್ಥನೆ ಸತತವಾಗಿ ಮಾಡುತ್ತಾರೆ ಧರ್ಮಾಧಿಕಾರಿಗಳು ಛತ್ರಕ್ಕೆ ದಯಮಾಡಿಸಬೇಕೆಂದು ಕೇಳಿಕೊಂಡರು ಅವರ ಆಕ್ರಮಗಳನ್ನೆಲ್ಲ ಪತ್ರಿಕಾ ಮುಖೇನ ಅರಿತು ಅವರಲ್ಲಿ ಕೆಲವನ್ನು ತೋರಿಸುವದಕ್ಕೆ ಒದಗಿದ ಔದಾಸೀನ್ಯವನ್ನು ತೋರಿಸಿದರು. ಪ್ರಸನ್ನ ಕೃಷ್ಣಸ್ವಾಮಿ ದೇವರ ದರ್ಶನಕ್ಕೆ ಗೋಕುಲಾಷ್ಟಮಿ ಪ್ರಯುಕ್ತವಾಗಿ ಅಪೇಕ್ಷಿತವಾಗಿ ದಯಮಾಡಿ ದೇವರ ದರ್ಶನವನ್ನು ಮಾಡಿಕೊಂಡು ದಯಮಾಡಿಸಿದರು ಈತನಿಗೆ ಇವರಿಗೆ ಉಂಟಾಗಿರುವ ಭಕ್ತಿಯು ಅನಿರ್ವಚನೀಯವು ಈಗ ಅಲ್ಲಿಗೆ ಅಪೇಕ್ಷಿತವಾಗಿ ದಯಮಾಡಿಸ ಬೇಕಾಗಿದಾರೆ. ಇದೇರೀತಿಯಾಗಿ ಮುಂದಕ್ಕೆ ಸಿವಿಲ್ ಕೋರ್ಟುಗಳಿಗೂ ಮೆಜಿಸ್ಟ್ರೇಟ್ ಕೋರ್ಟುಗಳಿಗೂ ಅಪೇಕ್ಷಿತವಾಗಿ ದಯಮಾಡಿಸ ಬೇಕು ಬಂದರೆ ಅವರು ಪ್ರಜೆಗಳಿಗೆ ಮಾಡುವ ಸಹಾಯಗಳು ನ್ಯಾಯಾನ್ಯಾಯಗಳು ವಿಶದವಾಗಿ ತಿಳಿಯುವದು ಅವರಿಗೂ ದೇವರ ಮೇಲೆ ಪ್ರಜ್ಞೆಯಿದ್ದು ಕೆಲಸ ಮಾಡುತ್ತಾರೆ. ಮಹಾರಾಜರವರು ದಿನಕ್ರಮದಲ್ಲಿ ಹೀಗೆಯೂ ನಡೆಯುವರೆಂದು ಆಶಿಸುತ್ತೇವೆ.

ಶ್ರೀ ಮನ್ಮಹಾರಾಜರವರು ಗೋಕುಲಾಷ್ಟಮಿ ದಿವಸ ಕ್ಷೇತ್ರದಲ್ಲಿ ಅರ್ಚನವನ್ನು ಪ್ರಸನ್ನ ಕೃಷ್ಣನಿಗೆ ಕೊಡತಕ್ಕ ಪದ್ಧತಿಯೆಂದು ಶ್ರೀ|| ಅಂದಿವ್ರರಂ ರಂಗಾಚಾರ್ಯರು ಮಹಾರಾಜರವರಿಗೆ ತಿಳಿಸಿದರು ಪದ್ಧತಿಗೆ ಲೋಪವಿಲ್ಲದಂತೆ ನಡೆಸತಕ್ಕದ್ದೇನೆಂದು ಶ್ರೀಯುಕ್ತರಾದದ್ದೆಂದು ಮಹಾರಾಜರು ಹೇಳಿ ಮರುದಿವಸ ದೇವಸ್ಥಾನಕ್ಕೆ ವಿಜಯಮಾಡಿಸಿ ಅತ್ಯಂತ ಭಕ್ತಿಯಿಂದ ಪ್ರಾಕಾರ ಪ್ರದಕ್ಷಿಣೆಯನ್ನು ಮಾಡಿ ಗರ್ಭಗುಡಿಯನ್ನು ಪ್ರವೇಶಿಸಿ ಅರ್ಚನ ಮುಹೂರ್ತಕನಿಂದ ಆವ ಪ್ರಸನ್ನ ಕೃಷ್ಣನ ಆರಾಧನೆ ಅರ್ಚನ ಎಲ್ಲಾ ದೇವರುಗಳನ್ನು ಸೇವಿಸಿ ಶಾಸನದ ಕಲ್ಲಿನ ಹತ್ತಿರ ದಯಮಾಡಿಸಿದರು ಇದರಲ್ಲಿ ಏನು ವಿಶೇಷವೆಂದು ಪ್ರಶ್ನೆ ಮಾಡಿದರು. ಶ್ರೀ|| ವೈದಿಕನಿಷ್ಠರಾದ ಆಗಮಿಕ ವಿದ್ಯುಗಳಾದ ವಿದ್ವಾನ್ ಕೇಶವ ಭಟ್ಟರವರು ಮೊದಲಿಂದ ಓದಿ ಮುಗಿಸಿ,

"ವದ್ವಂಶಜಾತ ಪರಮಹೋದಧಿಮಂಜುಳವಾ | ಯೇ ಭೂಮಿಪಾಲಸತತ ಮಧ್ವರ ಧನ್ಯಚಿತ್ತಾಃ | ಮದ್ಧರ್ಮಮೇವ ಸತತಂ ಪರಿಪಾಲಯಂತಿ | ಪತ್ಪಾದಪದ್ಮಯುಗಳಂ ಶಿರಸಾ ನಮಾಮಿ ||",

ಎಂಬ ಶಾಸನದ ಕಡೆಭಾಗದಲ್ಲಿ ಇದ್ದ ಶ್ಲೋಕಾರ್ಥವನ್ನು ಪ್ರಶಂಸಿಕರಿಸಿ ಮಹಾರಾಜರವರಿಗೆ ಅನಂದವಾಗುವ ಹಾಗೆ ಹೇಳಿದರು ಮಹಾರಾಜರು ಶಾಸನದ ಸಮೀಪದಲ್ಲಿರುವ ಪಕ್ಕ ವಿಗ್ರಹವ ನಮಿಸಿ ಭಕ್ತಿಯಿಂದ ಕೈಮುಗಿದುಕೊಂಡು ಶಾಸನದ ಕಡೆ ತೋರುವಂತಿರುವ ಭಾವವನ್ನು ನೋಡಿ ಅಲ್ಲಿ ಸಂತೋಷದಿಂದ ೨೦ ನಿಮಿಷಗಳ ವರೆಗೆ ಕುಳಿತು ದೇವಸ್ಥಾನದ ಆದಾಯ ವೆಚ್ಚಗಳನ್ನೆಲ್ಲಾ ಕೇಳಿದರು ಇದರಿಂದ ಈ ದೇವಸ್ಥಾನಕ್ಕೆ ಉಂಟಾದ ವಿಮೋಚನಾವಸ್ಥೆ ನಾವು ನೋಡಿ ಹೋಗಿರಬಹುದೆಂದು ನಾವು ಅಭಿಪ್ರಾಯಪಡುತ್ತೇವೆ ನಮ್ಮ ಮಹಾರಾಜರು ಇದೇ ರೀತಿಯಾಗಿ ಆಗಾಗ್ಗೆ ಎಲ್ಲಾ ದೇವಾಲಯಗಳಿಗೂ ಹೋಗಿ ದೇವರ ದರ್ಶನ ಮಾಡಿಕೊಂಡು ಬರುವದೂ, ವೃದ್ಧ ಶಿರಸ್ಸುಗಳ ಹಿತವಚನವನ್ನು ಲಾಲಿಸುವದೂ ಪಿತೃ ಸಂಪ್ರದಾಯದ ಧರ್ಮಗಳನ್ನು ಕಾಪಾಡುವದೂ, ಇದೆಲ್ಲಾ ಇವರಿಗೆ ಶ್ರೇಯಸ್ಕರವೆಂದಿದ್ದು ಮಹಾರಾಜರವರಿಗೆ ಪ್ರಸನ್ನ ಕೃಷ್ಣನಲ್ಲಿ ಭಕ್ತಿಯುಂಟಾಗುವಂತೆ ಹೇಳಬೇಕಾದದ್ದನ್ನು ಹೇಳಿ ಕರೆದುಕೊಂಡು ಬಂದದ್ದಕ್ಕಾಗಿ ಅಂದಿವ್ರರಂ ರಂಗಾಚಾರ್ಯರವರನ್ನು ಕೊಂಡಾಡುವದಲ್ಲದೆ ಶಾಸನದ ಬಿಡಿಕ್ಲೋಕಾರ್ಥವನ್ನು ಸಮಯದಲ್ಲಿ ಮರೆಯದ ಮನಸ್ಸಿಗೆ ಹಿಡಿಯುವ ಹಾಗೆ ಹೇಳಿದ ಕೇಶವಭಟ್ಟರನ್ನು ಬಹಳವಾಗಿ ಕೊಂಡಾಡುವೆವು

ಮೈಸೂರು ಶೀಮೆಯ ಅಗ್ರಹಾರಗಳಲ್ಲಿ ತತ್ತ್ವಾಲೋಕ ಇವರೊಬ್ಬರೇ ಯೋಗ್ಯರೆಂಬುವದು ನಮ್ಮ ತಿಳುವಳಿಕೆಗೆ ಬಂದಿದೆ — ಬ್ಯಾಟರಾಯ ದೇವಾಭಿಮಾನಿ

SUMMARY OF NEWS
ವೃತ್ತಾಂತ ಸಂಗ್ರಹವು.

ನಿಜಾಂ ಸರ್ಕಾರದವರು ತಮ್ಮ ಸಂಸ್ಥಾನದಲ್ಲಿ ಒಂದು ಇಂಜನೀರಿಂಗ್ ಶಾಲೆಯನ್ನು ಸ್ಥಾಪಿಸಿದ್ದಾರೆ.

ಜೀವ ಮರಗಳ ಸಮಾಸದ ಕಿರುಗಳಲ್ಲಿ ೧೮ ವರ್ಷವಾಗಿ ಬೆಳೆಯುತ್ತಾ ತೋಟಗಳಲ್ಲಿ ಇದಕ್ಕೋಸ್ಕರ ಅನೇಕರು ಸಂಕಟಪಡುತ್ತಾರೆಂದು ಒಬ್ಬ ಫ್ರಾಂಚ್ ಶಾಸ್ತ್ರಜ್ಞನು ಹೇಳುತ್ತಾನೆ.

ಆಫ್ರಿಕಾ ಖಂಡದಲ್ಲಿ ಎತ್ತರವಾದ ಮಳೆಯಲ್ಲಿ ಅಂತಿಮವಾದ ಮನುಷ್ಯರ ಮಾಂಸವನ್ನು ಮಾರುತಿರುವ ಒಂದು ಕಪ್ಪೆಯು ಬಿತ್ತು ಅದನ್ನು ತೆಗೆದು ಬಹಳ ಚಿಕಿತ್ಸೆಯಿಂದ ಸಾಕುತ್ತಿದಾರೆ

ಸುವರ್ತಾಪ್ರದೇಶದ ಕೆಲವು ಸ್ಥಳಗಳಲ್ಲಿ ಹೇನು ಎಂಬ ಹುಳುಗಳು ಹೆಚ್ಚಿವೆ ಆ ಹುಳುಗಳು ಆಕೈರೀಕಾ ಖಂಡದಲ್ಲಿ ಸಿಕ್ಕುವವಕ್ಕಿಂತ ದೊಡ್ಡವಾಗಿವೆ ಮತ್ತು ಅದು ಮರ ಗಿಡ ಬೆಳೆ ಹಾಳು ಮಾಡುತ್ತಿದೆಯಂತೆ

ಕಾಶ್ಮೀರದ ರಾಜಧಾನಿಯಾದ ಶ್ರೀನಗರ ಪಟ್ಟಣದಲ್ಲಿ ಸಿಲಿಕಿನ ಯಂತ್ರವಾಲಯವನ್ನು ತಪ್ಪಿಸಬೇಕೆಂದು ಸ್ಥಳಗಳನ್ನು ಸರ್ಕಾರದ ಅಪ್ಪಣೆ ಬಂದದ್ದು ಇದನ್ನು ತರಿಸುವದಕ್ಕೋಸ್ಕರ ಕಾಶ್ಮೀರದ ಮಹಾರಾಜರು ೩ ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದರು

ಕೆಲವು ದಿನಗಳ ಕೆಳಗೆ ಬೊಂಬಾಯಿ ಪಟ್ಟಣದಲ್ಲಿ ಒಂದು ಕಾರ್ಖಾನೆಯಲ್ಲಿ [illegible] ಜೀವಿಸಿಕೊಂಡಿದ್ದರು ಅವರು [illegible] ಎಲ್ಲರೂ ಪ್ರಾಣ್ಯಾತ್ರೆ ಇರದೆ ಆಶ್ಚರ್ಯವಾಗಿ [illegible] ರು ಕೆಲವು ದಿನಗಳ ಮೇಲೆ ಮನೆಯ ಯಜಮಾನನು ಕಾಯಿಲೆ ಬಿದ್ದನು [illegible] ಬಿಟ್ಟು ಹೋಗಿ [illegible] ಒಂದಾನೊಂದು ದಿವಸ ತನ್ನ ಹೆಂಡತಿಯನ್ನು ತನ್ನ ಬಳಿಗೆ ಕರೆದು ತನ್ನ ಜೀವನ [illegible] ಒಂದು ಅವಳಿಗೆ [illegible] ಕೊಡದೆ [illegible] ಗಳನ್ನೆಲ್ಲಾ ತಿಂದುಕೊಂಡು ಬಂದು ತನ್ನ ಗಂಡನ ಬಳಿಯಲ್ಲಿ ಬಿದ್ದಳು ಗಂಡನು ಅನಂತರ [illegible] ಸೀರೆ ತಂದುಕೊಟ್ಟು ಎಂದು ಹೆಂಡತಿಯನ್ನು ಕೇಳಿದರು ಹೆಂಡತಿಯು ಒಂದು ಸೀರೆಯನ್ನು ತೆಗೆದುಕೊಂಡು ಹೋಗಿ ಅದನ್ನು [illegible] ತನ್ನ ಗಂಡನು ಮಲಗಿದ್ದ ಹಾಸಿಗೆಯಿಂದ ತನ್ನ ಹಿಂದುಗಡೆ ಉಂಟುಮಾಡಿದ [illegible] ತನ್ನ ಗಂಡನು ಸತ್ತು ಹೋಗಿರಬಹುದೆಂದು ಸಹಜವಾಗಿ ತಿಳಿದು ತಾನು ಇನ್ನು [illegible] ಸೀರೆ ತೆಗೆದುಕೊಂಡು ಹೋಗಬೇಕು ಎಂದು ತನ್ನಲ್ಲಿ ತಾನೇ [illegible] ಅಂದುಕೊಂಡು ಗಂಡನನ್ನು ನೋಡದ ಬರದೆ ಒಂದೇ [illegible] ಹತ್ತಲಿದ್ದ ಭಾವಿಯ ಹಳ್ಳಕ್ಕೆ ಧುಮುಕಿ ಪ್ರಾಣಬಿಟ್ಟಳು

ಒಂದು ನವೀನ ಪ್ರಯೋಗವು.

ಮಹಾಭಾರತ ಸೆಂಟ್ರಲ್ ಪತ್ರಿಕೆಯಿಂದ ಭಾಷಾಂತರ ಮಾಡಲ್ಪಟ್ಟು ಇವರಡಿ ಪ್ರಕಟಿಸಲ್ಪಟ್ಟಿರುತ್ತದೆ

ರಾಜಸೂಯ ಯಾಗವು.

ಪ್ರಥಮಾಂಕವು

(ಹಿಂದೆ ಮುಂದೆ ಕೇಳು)

೪೨ — ನಿನ್ನ ದಳದಲ್ಲಿ ಪ್ರಭು ಆಜ್ಞೆಯನ್ನು ನಿರ್ವಹಿಸುವನಾಗಿಯೂ, ಚಾಣಾಕ್ಷನಾಗಿಯೂ, ಯುದ್ಧವಿದನೊಬ್ಬನೇ ಯುದ್ಧ ಸಂಬಂಧಗಳಾದ ಎಲ್ಲ ಕೆಲಸಗಳನ್ನೂ ಎಲ್ಲ ಗತಿಯೂ ತನ್ನ ಮನಸ್ಸಿಗೆ ತೋಚಿದಂತೆ ಆಜ್ಞಾಪಿಸದೆ ಇರುತ್ತಾನೆಯೋ?

೪೩ — ನಿನ್ನ ಬಳದೊಳಗಿನ ಪುರುಷನು ಪೌರುಷದಿಂದ ಶೋಭಿತನಾಗಿ ತಕ್ಕ ಕೆಲಸಗಳನ್ನು ಮಾಡಿ ಬಹುಮಾನವನ್ನೂ ಉಂಬಳಿ ಸಂಬಳಗಳ ಪ್ರವೃದ್ಧಿಯನ್ನೂ ಪಡೆಯುತ್ತಾನೆಯೋ?

೪೪ — ವಿದ್ಯಾವಂತರಾಗಿಯೂ ಜ್ಞಾನಿಗಳಾಗಿಯೂ ಇರುವವರನ್ನು ಅವರವರ ಗುಣಾನುಗುಣವಾಗಿ ದಾನದಿಂದ ತೃಪ್ತಿ ಪಡಿಸುತ್ತೀಯಾ?

೪೫ — ಎಲೈ ಭಾರತಶ್ರೇಷ್ಠನೆ, ನಿನಗೋಸ್ಕರ ಯುದ್ಧದಲ್ಲಿ ಪ್ರಾಣ ಕಳಕೊಂಡವರು, ಅಂಗಹೀನರಾದವರು, ಇವರುಗಳ ಹೆಂಡತಿಯರನ್ನು ಸಂರಕ್ಷಿಸುತ್ತೀಯಾ?

೪೬ — ಎಲೈ ಕುಂತೀ ಕುಮಾರನೇ, ನಿನ್ನ ಶತ್ರುವು ಭಯದಿಂ ನಿನ್ನ ಮರೆಹೊಂದಿದವನು, ಕ್ಷೀಣದೆಶೆಯಲ್ಲಿ ನಿನ್ನ ಬಳಿಗೆ ಬಂದರೂ, ಯುದ್ಧದಲ್ಲಿ ಜಯಿಸಲ್ಪಟ್ಟು ನಿನ್ನ ಕೈಗೆ ಸಿಕ್ಕಿಕೊಂಡರೂ ಅಂತವನನ್ನು ನಿನ್ನ ಮಕ್ಕಳೋಪಾದಿ ರಕ್ಷಿಸುತ್ತೀಯಾ?

೪೭ — ಎಲೈ ಭೂಪತಿಯೇ, ನೀನೆ ಸಕಲ ಭೂಮಂಡಲಕ್ಕೂ ಸಮನಾಗಿಯೂ ಜನಗಳಿಗೆಲ್ಲ ತಾಯಿತಂದೆಗಳೋಪಾದಿ ಶಂಕೆಯಿಲ್ಲದ ನಂಬಿಕೆಗೆ ಪಾತ್ರನಾಗಿ ಇದ್ದೀಯಾ?

೪೮ — ಎಲೈ ಭಾರತಶ್ರೇಷ್ಠನೇ, ನಿನ್ನ ಶತ್ರುವು ವ್ಯಸನಪೂರ್ವನಾಗಿ ಇರುವಿಕೆಯನ್ನು ಕೇಳಿದ ಮಾತ್ರಕ್ಕೆ ನಿನ್ನ ಮಂತ್ರ, ಕೋಶ, ಸೈನ್ಯಬಲವನ್ನು ಚೆನ್ನಾಗಿ ತಿಳಿದುಕೊಂಡು ಶೀಘ್ರವಾಗಿ ಶತ್ರುವಿನಮೇಲೆ ದಂಡೆತ್ತುತ್ತೀಯಾ?

೪೯ — ಎಲೈ ಶತ್ರುನಾಶಕನೆ, ಉಚಿತ ಸಮಯದೊಳು ಯುದ್ಧದಲ್ಲಿ ಉತ್ಸಾಹವು ಪರಿಜನರು ನಿನ್ನ ಪಕ್ಷಬಲದಿಂದ ಯಾಗುವಹಿಂದು ತಿಳಿದು ಮತ್ತು ದಳದ ಜನರಿಗೆ ಮುಂದಾಗಿ ಸಂಬಳಗಳನ್ನು ಕೊಟ್ಟು ಯುದ್ಧಯಾತ್ರೆಯನ್ನಾರಂಭಿಸುತ್ತೀಯಾ?

೫೦ — ಎಲೈ ಶತ್ರುನಾಶಕನೆ, ಪರರಾಷ್ಟ್ರದಿಂದ ಕೊಳ್ಳೆಗೊಂಡ ಧನವನ್ನು ನಿನ್ನ ಸೈನ್ಯದ ಶೂರರಿಗೆ ಅವರವರ ಯೋಗ್ಯತಾನುಗುಣವಾಗಿ ಹಂಚಿಕೊಡುತ್ತೀಯಾ?

೫೧ — ಎಲೈ ಕುಂತೀ ಕುಮಾರನೇ, ಮೊದಲು ನಿನ್ನ ಮನಸ್ಸನ್ನು ಜಯಿಸಿಕೊಂಡು ತರುವಾಯ ಇಂದ್ರಿಯಗಳನ್ನು ಜಯಿಸಿ ಅನಂತರ ಪ್ರಮಾದವಶ್ಯರಾಗಿ ಇರುವ ಶತ್ರುಗಳನ್ನು ಜಯಿಸುತ್ತೀಯಾ?

೫೨ — ಶತ್ರುಜಯಕ್ಕೋಸ್ಕರ ನೀನು ಸನ್ನದ್ಧನಾಗಿ ಹೊರಡುವಾಗ ನಿನಗೆ ಮುಂದಾಗಿಯೇ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಉಪಾಯಗಳು ಚೆನ್ನಾಗಿ ಪ್ರಯೋಗಿಸಲ್ಪಡುತ್ತವೆಯೋ?

೫೩ — ಎಲೈ ಪ್ರಜಾಪಾಲಕನೇ, ನಿನ್ನ ರಾಜ್ಯಮೂಲವನ್ನು ದೃಢವಾಗಿ ಮಾಡಿಕೊಂಡ ತರುವಾಯ ಪರರಾಜರ ಜಯಕ್ಕಾಗಿ ಹೊರಡುತ್ತೀಯಾ, ಮತ್ತು ಶತ್ರುಜಯದಲ್ಲಿ ಪರಾಕ್ರಮಿಸುತ್ತೀಯಾ, ನಿನ್ನಿಂದ ಜಯಿಸಲ್ಪಟ್ಟವರನ್ನು ರಕ್ಷಿಸುತ್ತೀಯಾ?

೫೪ — ರಥ, ಗಜ, ಅಶ್ವ, ಶೂರ, ಪದಾತಿ, ಕರ್ಮಕರ, ಭೋಗ, ದೇಶ ಜನಪದಗಳೆಂಬ ಎಂಟು ಅಂಗಗಳಿಂದ ಕೂಡಿ ಸೇನಾಪತಿಗಳಿಂದ ಚೆನ್ನಾಗಿ ನಡೆಸಲ್ಪಟ್ಟ ನಿನ್ನ ಚತುರಂಗಬಲವು ಶತ್ರುಗಳಿಗೆ ಭಯವನ್ನುಂಟುಮಾಡುತ್ತದೆಯೋ?

೫೫ — ಎಲೈ ಶತ್ರುನಾಶಕನಾದ ಮಹಾರಾಜನೇ, ಧಾನ್ಯಗಳ ಹಸಿಗಕಾಲವನ್ನೂ ಸುಗ್ಗಿಯ ಕಾಲವನ್ನು ಸಹ ತಪ್ಪಿಸದೆ ಶತ್ರುಗಳನ್ನು ಬಾಧಿಸುತ್ತೀಯಾ?

೫೬ — ನಿನ್ನ ರಾಷ್ಟ್ರದಲ್ಲಿಯೂ ಪರರಾಷ್ಟ್ರದಲ್ಲೂ ನಿನ್ನ ಅಧಿಕಾರಸ್ಥರು ನಿನ್ನ ಪ್ರಯೋಜನಗಳನ್ನುಂಟುಮಾಡುತಲೂ ಪರಸ್ಪರ ರಕ್ಷಿಸಿಕೊಳ್ಳುತ್ತಲೂ ಇದ್ದಾರೆಯೋ?

೫೭ — ಎಲೈ ಮಹಾರಾಜನೇ, ನಿನ್ನ ಅಧಿಕಾರಸ್ಥರು ದೇಶಗಳಲ್ಲಿ ಭುಜಿಸತಕ್ಕ ಪದಾರ್ಥಗಳನ್ನು, ಶರೀರಕ್ಕೆ ಹಚ್ಚಿಕೊಳ್ಳತಕ್ಕವುಗಳನ್ನು ಸುಗಂಧ ದ್ರವ್ಯಗಳನ್ನು ಸಹ ಕಾಪಾಡುವಂತೆ ಅವರಿಗೆ ಆಜ್ಞಾಪಿಸುತ್ತಲಿರುತ್ತೀಯಾ?

Bangalore — Printed and published at the Karnataka Press, No. 40, Hospital Road, Pettah — 1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧನ್ಯವೃತ್ತ್ಯಜಗಮಾರ್ಗ್ಗ ಕರ್ಣಾಟಕಪ್ರಕಾಶನಪರಾಭಿಧಾಪ್ರಥಿತಸಾಹಿತೀಕೋವಿತಾ। ಮೃಗಾಂಕಹಿತವಾಸರನಿಹಿತಮುದ್ರಣಾ ಸಜ್ಜನ್ಯೈರ್ನಿತ್ಯಾಸುವರಿ... ಸುಖಂ ॥

VOL. XIX] BANGALORE—MONDAY, OCTOBER 10, 1892. [No. 40.

ಸಂಪುಟ ೧೯.] ಬೆಂಗಳೂರು — ಸಿ. ೧೮೯೨ ನೇ ಇಸವಿ ಅಕ್ಟೋಬರ್ ೧೦ ನೇ ತಾರೀಖ್ ಸೋಮವಾರ. [ಸಂಖ್ಯೆ ೪೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ ಹಂಚಿಲ್ಲದೆ	ಪರಸ್ಥಳದವರಿಗೆ ಪಾಸ್ಟೇಜಸೇರಿ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ವರುಷಪೂರ್ತಿ ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕಳುಹಿಸತಕ್ಕವರಿಗೆ ಮಾತ್ರ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗಿಂತ ಕಡಮೆಯಾಗಿ ಚಂದಾ ಹಣವನ್ನು ಅಂಗೀಕರಿಸಲ್ಪಡುವದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೨—೦

ಎರಡನೆಯದಕ್ಕೆ ಪಙ್ಕ್ತಿ ಒಂದಕ್ಕೆ ೦—೧—೦

ಒಟ್ಟು—ಎರಡನೆಯದಕ್ಕಿಂತ ಜಾಸ್ತಿಯಾಗಿ ಎಷ್ಟು ಸರ್ತಿ ಪ್ರಕಟಿಸಬೇಕಾದರೂ ಪಙ್ಕ್ತಿ ಒಂದಕ್ಕೆ ೦—೧—೦ ರ ಮೇಲೆ ಲೆಕ್ಕ ಮಾಡಲ್ಪಡುವದು. ಈ ಪತ್ರಿಕೆಯಲ್ಲಿ ಪ್ರಕಟನೆಗಳನ್ನು ಪ್ರಕಟಿಸಬೇಕೆಂದು ಕಳುಹಿಸುವವರು ಅವುಗಳನ್ನು ಎಷ್ಟು ಸರ್ತಿ ಪ್ರಕಟಿಸಬೇಕೆಂಬದನ್ನು ಬರೆಯಬೇಕು. ಇಲ್ಲದಿದ್ದರೆ ಅವರು ನಿಲ್ಲಿಸಬೇಕೆಂದು ಬರೆಯುವವರೆಗೂ ಪ್ರಕಟಿಸಲ್ಪಡುವದು. ಪ್ರಕಟನೆಗಳಿಗೆ ಹಣವನ್ನು ಮುಂಗಡವಾಗಿ ಕೊಡಬೇಕು. ಈ ಪತ್ರಿಕೆಗೆ ಕಳುಹಿಸುವ ಪತ್ರಗಳು ಮುಂತಾದವುಗಳನ್ನು ಮ್ಯಾನೇಜರ್ ವಿಳಾಸಕ್ಕೆ ಕಳುಹಿಸಬೇಕು. ಈ ಪತ್ರಿಕೆಗೆ ಕಳುಹಿಸುವ ಲೇಖನಗಳು ಪ್ರಕಟಿಸಲ್ಪಡದಿದ್ದರೆ ಅವುಗಳನ್ನು ಹಿಂತಿರುಗಿಸಲ್ಪಡುವದಿಲ್ಲ.

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಬೆಲೆಯನ್ನು ಕೊಟ್ಟು ಕೆಳಗೆ ರುಜು ಮಾಡಿರತಕ್ಕವರ ಬಳಿಯಿಂದ ಪಡೆದುಕೊಂಡರೆ ಪುಸ್ತಕ ಕೂಡಲೇ ಕಳುಹಿಸಲ್ಪಡುವದು. ಬೆಲೆಯು ಇಲ್ಲದ ಕಾಗದಗಳಿಗೆ ಉತ್ತರ ಕೊಡಲ್ಪಡಲಾರದು.

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೇ ಹಾಸಲ್ ಸೇರಿ ಪ್ರತಿ ಒಂದಕ್ಕೆ ರೂ 5 -0—0

ಟಿ. ಬಿ. ಮಿಠಾಬಾರ್.

ಬೆಂಗಳೂರ್, ಮಹಲ್ ಆಸ್ಪತ್ರಿ ರೋಡ್ ೪೮ ನೇನಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭವಾದ ಬೆಲೆಗೆ ಶೀಘ್ರವಾಗಿಯೂ ಶುದ್ಧವಾಗಿಯೂ ಮಾಡಲ್ಪಡುವವು.

ಇದರಲ್ಲಿ ಹಚ್ಚಿ ಇಂಗ್ಲೀಷ್ ಕನ್ನಡ ಕೆಲಸ ಮಾತ್ರವೇ ನಡೆಯುತ್ತಿವೆ. ಇತರ ಪರಿಸ್ಥಿತಿಗಳನ್ನು ಪತ್ರದ ಮೂಲಕ ಮ್ಯಾನೇಜರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈ ಔಷಧಗಳು ಅನೇಕ ವರ್ಷಗಳಿಂದ ಉಪಯೋಗಿಸಲ್ಪಟ್ಟು ಪ್ರಖ್ಯಾತವಾದ ಔಷಧಗಳು. ಇವುಗಳ ಉಪಯೋಗದಿಂದ ಅನೇಕರು ಗುಣಹೊಂದಿರುವರು. ಈ ಔಷಧಗಳು ಸಿದ್ಧವಾಗಿರುವ ಶಾಪುಗಳಲ್ಲಿ ದೊರೆಯುವವು. ಅನುಭವಸಿದ್ಧವಾದ ಗುಣವನ್ನು ಹೊಂದಿದ ತಮ್ಮ ರೋಗಸ್ವರೂಪವನ್ನು ವಿವರವಾಗಿ ಬರೆದು ಕಳುಹಿಸಿದರೆ ಔಷಧಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸುವವರು ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು.

ತೈಲ—ಸರ್ವಾತಕತೈಲ, ಇದು ಶೋಭೆ ವಾಯುಗಳಿಗೂ ವಾತಸಂಬಂಧವಾದ ಮತ್ತು ವಾತಸಂಬಂಧಗಳಾದ ಸಕಲ ರೋಗಗಳಿಗೂ, ಮೈಯಲ್ಲಿ ರಕ್ತ ಬೇಳತಕ್ಕದ್ದಕ್ಕೂ, ಅನೇಕವಿಧ ಶರೀರಸಂಬಂಧವಾದ ವೇದನೆಗಳಿಗೂ ಬಹಳ ಪ್ರಖ್ಯಾತವಾದ ನಿವಾರಕವಾದುದು. ಸೀಸೆ ಒಂದಕ್ಕೆ ೧ ರೂ. ಸೀಸೆ ಒಂದಕ್ಕೆ ೪ ರೂ.

ಜ್ವರದ ಗುಳಿಗೆಗಳು—ಇದು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುವದು. ರೂ ೧ ಕ್ಕೆ ೨೦ ಗುಳಿಗೆಗಳು.

ಪೌಷ್ಟಿಕ ಗುಳಿಗೆ ನಿವಾರಕವಾದ ಎಣ್ಣೆ—ಈ ಎಣ್ಣೆಯು ೩೦ ದಿವಸಗಳವರೆಗೆ ಉಪಯೋಗಿಸುತ್ತಾ ಹುಟ್ಟಿಗೆ ತಗಲುಕೊಂಡ ಸಕಲವಿಧ ಮೇಹಗಳೂ, ಪರಿಗಳೂ, ಸ್ತ್ರೀಯರುಗಳಿಗೆ ಆಗುವ ಉಷ್ಣ ಸಂಬಂಧವಾದ ರೋಗಗಳೂ ನಿವಾರಣೆಯಾಗುವವು. ಸೀಸೆ ೧ ಕ್ಕೆ ೨—೦

ದಂತರೋಗಕ್ಕೆ ಚೂರ್ಣ—ಹುಳುಕುಹಲ್ಲುಗಳು, ಸಡಿಲ ಒತ್ತಿರುವ ಹಲ್ಲುಗಳು, ಇವುಗಳನ್ನು ಮೊದಲು ಭದ್ರಪಡಿಸಿ ಶಾಂತಿಯನ್ನುಂಟುಮಾಡುವವು. ಇದು ಮೂರುದಿವಸದ ಪೊಟ್ಟಣ ೧ ಕ್ಕೆ ೧ ರೂ. ಇದು ೧೦ ದಿವಸಗಳಿಗೆ ಆಗುವದು.

ನೇತ್ರರೋಗಕ್ಕೆ ಮಾತ್ರೆ—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವದು, ತುರಿಕೆ ಮೊದಲಾದ ಸಕಲರೋಗಗಳಿಗೂ ಪ್ರಯೋಜನಕಾರಿ. ಇದು ಸೀಸೆ ಒಂದಕ್ಕೆ ೩ ರೂ.

ಮೂಲವ್ಯಾಧಿಗೆ—ಇದು ಉಂಡೆಯ ರೂಪದಲ್ಲಿದೆ. ಇದರಿಂದ ರಕ್ತಮೂಲ ಮುಂತಾದವುಗಳು ನಿವಾರಣೆಯಾಗುತ್ತವೆ. ಉಂಡೆ ಒಂದಕ್ಕೆ ೧ ರೂಪಾಯಿ. ಇವನ್ನು ಉಪಯೋಗಿಸುವ ಕ್ರಮವನ್ನು ಪ್ರತಿಯೊಂದರ ಜೊತೆಯಲ್ಲಿ ಕೊಡಲ್ಪಡುವದು.

ಭಸ್ಮಗಳು—ತಾಮ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮೊದಲಾದ ಭಸ್ಮಗಳು ಸಿದ್ಧವಾಗಿವೆ. ಇವು ಮೂರು ಕ್ರಮಗಳಿಂದ ತಯಾರಿಸಲ್ಪಟ್ಟವು. ಇವು ಅನೇಕ ರೋಗಗಳಿಗೆ ಪ್ರಯೋಜನಕಾರಿಯಾಗಿವೆ. ರೋಗದ ಸ್ವರೂಪವನ್ನು ಬರೆದು ಕಳುಹಿಸಿದರೆ ಉಪಯೋಗಿಸುವ ಕ್ರಮವು ತಿಳಿಸಲ್ಪಡುವದು.

ಲೇಹ್ಯಗಳು—ಚ್ಯವನಪ್ರಾಶ, ಬ್ರಾಹ್ಮೀ, ಕೂಷ್ಮಾಂಡ ಮೊದಲಾದ ಧಾತುವೃದ್ಧಿಕರವಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ ಕ್ಕೆ ೩ ರೂ.

ಪರಿಮಳಗಳು—ಗಂಧ, ಪುನುಗು, ಜವ್ವಾಜಿ, ಕಸ್ತೂರಿ, ಅಂಬರ, ಪ್ಯಾರಿಸ್ ಸೆಂಟ್ ಮೊದಲಾದ ಪರಿಮಳಗಳು ತಯಾರಾಗಿವೆ. ಇವು ಸೀಸೆ ೧ ಕ್ಕೆ ೨ ರೂ.

ಚೂರ್ಣಗಳು—ಮಹಾ ಜೀರ್ಣಚೂರ್ಣ, ಜೀರ್ಣಸಂಜೀವಿನಿ ಮೊದಲಾದ ಚೂರ್ಣಗಳು ಅಜೀರ್ಣ ಪಿತ್ತ ವಾತಾದಿಗಳಿಗೆ ಪ್ರಯೋಜನಕಾರಿ. ಇದು ೫೦ ದಿನಗಳಿಗೆ ತೂಕ ಒಂದಕ್ಕೆ ೧ ರೂ.

ಫಾರೆಸ್ಟ್ ಇಲಾಖಾ.

ಇಷ್ತಿಹಾರ್

೨೩ ನೇ ಸೆಪ್ಟೆಂಬರ್ ೧೮೯೨.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಸಂಪಗೆ ಸೌದೆಯನ್ನು ಹರಾಜ್, ಇದರಡಿ ತಿಳಿಸಿರುವ ಸ್ಥಳಗಳೊಳು, ಅದರದರ ಎದುರಿಗೆ ನಮೂದಿಸಲ್ಪಟ್ಟಿರುವ ತಾರೀಖ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಮತ್ತು ಫಾರೆಸ್ಟ್ ಆಫೀಸರ್‌ಗಳಿಂದ ಹರಾಜ್ ಮಾಡಲ್ಪಡುವುದು.

				ತೂಕಗಳು
ಸಾಗರ	೨೪ ನೇ ನವೆಂಬರ್, ೧೮೯೨			೨೦೦ ಸ್ವಲ್ಪ ಹೆಚ್ಚು ಕಡಮೆ
ಶಿವಮೊಗ್ಗ	೧೮ ನೇ	,,	,,	೪೦೦ ,,
ತೀರ್ಥಹಳ್ಳಿ	೨೨ ನೇ	,,	,,	೧೨೦ ,,
ಚಿಕ್ಕಮಗಳೂರು	೨೮ ನೇ	,,	,,	೧೫೦ ,,
ಹಾಸನ	೫ ನೇ ಡಿಸೆಂಬರ್, ೧೮೯೨.			೭೦ ,,
ಶ್ರೀರಂಗಪಟ್ಟಣ	೯ ನೇ	,,	,,	೩೫೦ ,,
ಮೈಸೂರು	೧೩ ನೇ	,,	,,	೪೫೦ ,,
ಬೆಂಗಳೂರು	೧೯ ನೇ	,,	,,	೧೫೦ ,,

ಇತರ ತಪ್ಸೀಲ್‌ಗಳನ್ನು ಮೈಸೂರು ಗೆಜೆಟ್ ನೋಡಿ ತಿಳಿದುಕೊಳ್ಳತಕ್ಕದ್ದು.

L. RICKETTS,

Inspector General of Forests

ನೋಟೀಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ.

ಕಮಿಷನ್ ಏಜೆಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ಸಾಧ್ಯ ಸುಲಭ ಕ್ರಯಕ್ಕೆ ಬಹಳ ಜಾಗ್ರತೆಯಿಂದ ವ್ಯಾಲ್ಯುಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿನ್ನ ಮುತ್ತುಗಳು, ಶೀಶೆಯಾದಿಗಳು, ಪಾಮಗಳು, ಟೈಂಪೀಸ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೆ ಸೀರೆಗಳು, ಜವಳಿ ಶಾಲುಗಳು, ಚಿನ್ನಬೆಳ್ಳಿ ಆಭರಣಗಳು, ಹಾರ್ಮೋನಿಯಂಗಳು, ಹುಡುಗರ ಆಟಸಾಮಾನುಗಳು, ಆಫೀಸ್ ಸಾಮಾನುಗಳು, ಪಟಗಳು, ಅತ್ತರುಗಳು, ಅತ್ಯುತ್ತಮವಾದ ರತ್ನಗಳು, ಧಾರವಾಡದ ಕಟ್ಟಲ್ಪಟ್ಟ ಉಂಗುರಗಳು, ಬೆಳ್ಳಿ ಪಾತ್ರೆಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಶೀಸೆ, ಕನ್ನಡಿ ಮೊದಲಾದ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯಲಾರದು.

ವಿಳಾಸ,—ಗಣೇಶ ರಾಮಚಂದ್ರ ಕರ್ಕರೆ

ಮತ್ತು ಕಂಪೆನಿ ಕಮಿಷನ್ ಏಜೆಂಟ್ಸ್

ಠಾಕೂರ್ ದ್ವಾರ್, ಮಾರ್ಕೆಟ್ ಪೋಸ್ಟ್, ಮುಂಬಯಿ.

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಬೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ರೂ ಆ ಪೈ
ಸಟೀಕಾ ಪ್ರಬೋಧಚಂದ್ರೋದಯ ನಾಟಕಂ	.	೧ ೦ ೦

ಕನ್ನಡ ಗ್ರಂಥಗಳು.

		ರೂ	ಆ	ಪೈ
ಕುಶಲವತಿ ಚರಿತ್ರೆ	.	೭	೦	೬
ದಿಟ್ಟೋ ದುರ್ಮಾ	...	೧	೨	೦
ವೃಷಭೇಂದ್ರವಿಜಯ	..	೫	೪	೦
ದಂತಿವಾಣಿ ಬೋಧಿನಿ	..	೦	೬	೦
ಹನುಮದ್ವಿಲಾಸ	..	೦	೬	೦
ಕಾಳಿಮರ್ದನ	..	೦	೨	೦
ಸುಭದ್ರಾಪರಿಣಯ	...	೦	೨	೦
ಶಶಿರೇಖಾಪರಿಣಯ	..	೦	೨	೬
ಸುದಾಮಚರಿತ್ರೆ	...	೦	೧	೬
ಜ್ಯೋತಿಷ್ಮತಿ ಚರಿತ್ರೆ	..	೦	೧	೦
ಬಾಲಗ್ರಹಚಿಕಿತ್ಸೆ	...	೦	೧	೦
ಮಹದ್ವರ್ತ ಶತಕ	..	೦	೧೨	೦
ಭ್ರಾಂತಿವಿಲಾಸ	...	೦	೧೨	೦
,, ಶಿವಗೀತೆ	...	೦	೧	೦
,, ಶಿವಾನಂದಲಹರಿ	.	೦	೪	೦
,, ಕಾಲಾಮೃತ	...	೦	೧	೦
,, ಟಿಪ್ಪಣಿ ಬಾಲರಾಮಾಯಣ...		೦	೩	೦
,, ಟಿಪ್ಪಣಿ ನೀತಿಮಾಲಾ ನೀತಿ ..		೦	೧	೦
,, ಟೀಕು ಬಾಲಶಿಕ್ಷೆ ೩ (ಸುಭಾಷಿತ)		೦	೪	೦
ವಿಷ್ಣುಸಹಸ್ರನಾಮ ಪಕ್ಷಿಕೆ	..	೦	೩	೦
ಸಹಸ್ರನಾಮ	...	೦	೨	೦
ಕೃಷ್ಣಕರ್ಣಾಮೃತ	...	೦	೨	೦
ಶ್ರೀರಾಮ ಅಮರ ಮೂಲ	...	೦	೨	೦
೧ ಕಾಂಡ	...	೦	೦	೦

THE MONEY MARKET.

ಮದರಾಸ್, ಬುಧವಾರ, ತಾರೀಖ್ 10ನೇ ಅಕ್ಟೋಬರ್ 1892

ನೂರಕ್ಕೆ 4ರೂ ಬಡ್ಡಿ ಸರ್ಕಾರದ ಪತ್ರಗಳು, ರೂ ನೂರಕ್ಕೆ, 105 ರಿಂದ 106 6-0ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳು, ಬಿಡುವ 930 ರಿಂದ ಕೊಡುವ 940ವರೆಗೆ.

ಕಮರ್ಷಿಯಲ್ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರುಗಳು, (100) ಬಿಡುವ 160 ರಿಂದ 165 ವರೆಗೆ

ಸವರಿನ್‌ಗಳು, 16—3—0

ಬ್ಯಾಂಕ್ ಬಿಲ್‌ಗಳು ಲಂಡನ್ ಪತ್ರಗಳಿಗೆ, ದಸ್ತಾವೇಜು 6 ತಿಂಗಳವಾಯಿದೆಗೆ, 1s. 2 29/32d.

ಡಿಟ್ಟೋ 4 ತಿಂಗಳ ವಾಯಿದೆಗೆ, 1s. 2 27/32d.

ಟೆಲಿಗ್ರಾಫಿಕ್ ಟ್ರಾನ್ಸ್‌ಫರ್, 1s. 2 ¾d.

ಕರ್ಣ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 10, 1892

೧೮೯೨ನೇ ಇಸವಿ ಅಕ್ಟೋಬರ ತಾ|| ೧೦ನೇ ಸೋಮವಾರ.

AN OFFICIAL FRAUD.

ಕಳೆದ ಸೆಪ್ಟೆಂಬರ್ ೧೫ನೇ ತಾರೀಖ್ ಬೃಹಸ್ಪತಿವಾರದದಿನ ಈ ಸಂಸ್ಥಾನದ ಮಂತ್ರಾಲೋಚಕ ಸಭಾಜನದ ಮುಂದೆ ಒಂದು ಮೊಕದ್ದಮೆಯು ವಿಚಾರಪೂರ್ವಕ ವ್ಯವಸ್ಥೆಯಾಗಿರುತಿದೆ. ಈ ಮೊಕದ್ದಮೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮೆ| ಅಣ್ಣಾಜೀರಾಯರವರು, ಈ ಷಹರ್ ಮ್ಯುನಿಸಿಪಲ್ ಕಮಿಷನರಗಳಾದ ಮೆ|| ಅಣ್ಣಯ್ಯಪ್ಪ ಶೆಟ್ರು, ಖಯರ್‌ಖಾನರು, ಮತ್ತು ರಿಸಾಲ್‌ದಾರ್ ಮೆ|| ಕೃಷ್ಣರಾಯರವರು, ಈ ನಾಲ್ಕು ಜನರು ಸಂಬಂಧಪಟ್ಟವರಾಗಿ ಕಾಣುತ್ತಾರೆ. ಇದು, ಈ ಪ್ರೂರು ಹಲಸೂರುಬಾಗಿಲ ಬಳಿ ಇರುವ ಸುಬಂಗಿ ಕರೆಯೊಳಗಿನ ಸರ್ವೇ ೯೪ ನೇ ನಂಬರ್ ಜಮೀನ್ ಹರಾಜಾಗಿ, ಅಂತಾ ಹರಾಜ್ ಊರ್ಜಿತವದತಕ್ಕ ಬಗ್ಗೆ ಶ್ರೀಮನ್ಮಹಾರಾಜರವರ ಕೌನ್ಸಿಲಿಗೆ ಕಳುಹಿಸಲ್ಪಡಲು ಅಲ್ಲಿ ಯಾವ ಕಾರಣದಿಂದಲೋ ಮರಳಿ ವಿಚಾರಣೆಗೆ ಗುರಿಯಾದಂತೆ ತೋರುತಿದೆ. ಇದು ಮೆ|| ತುಬುಕೆಟ್ಟರು, ಮತ್ತು ಮೆ|| ಚಂಚಲರಾಯರವರ ಮುಂದೆ ವಿಚಾರಣೆಯಾಯಿತು. ಕಕ್ಷಿಗಾರರು ನಾಲ್ವರ ಪೈಕಿ ಮೆ|| ಕೃಷ್ಣರಾಯರು ವಿನಾ ಉಳಿದ ಮೂವರು ಹಾಜರಿದ್ದರು. ಕೃಷ್ಣರಾಯರವರ ತರಫ ಅಡ್ವೋಕೇಟ್ ಮೆ|| ಎಲ್. ಶ್ರೀನಿವಾಸಯ್ಯಂಗಾರ್ರವರು ಹಾಜರಿದ್ದರು. ಮೊದಲು ಇವರನ್ನು ವಿಚಾರಿಸುವಲ್ಲಿ ತಮ್ಮ ಕಕ್ಷಿಗಾರರಾದ ಮೆ|| ಕೃಷ್ಣರಾಯರವರಿಗೆ ಈ ಮೊಕದ್ದಮೆಯಲ್ಲಿ ಸ್ವಂತಪ್ರಯೋಜನೆಯಾವದೂ ಇಲ್ಲವು, ವರಂತು ಮೆ|| ಅಣ್ಣಾಜೀರಾಯರವರ ತರಫ ಅವರ ಮುಖ್ಯಳಾದ ಬಾಬೂರಾಯರವರ ಹೆಸರಿನಲ್ಲಿ ದರಖಾಸ್ತು ಮಾಡಿದರೆಂದು ಕೈಫೀಯತ್ ಬರೆಸಿದರು. ಮೆ|| ಚಂಚಲರಾಯರವರು ಮೆ|| ಅಣ್ಣಯ್ಯಪ್ಪಶೆಟ್ಟರನ್ನು ವಿಚಾರಣೆ ಮಾಡಿದ್ದರಲ್ಲಿ, ಮೆ|| ಅಣ್ಣಾಜೀರಾಯರಿಗಾಗಿ ಮೆ|| ಕೃಷ್ಣರಾಯರವರು ಹರಾಜಿನಲ್ಲಿ ಕೊಂಡುಕೊಂಡರೆಂತಲೂ, ಸದರೀ ಜಮೀನ್ ಬಾರೀ ಬೆಲೆಯುಳ್ಳದ್ದೆಂತಲೂ, ಹರಾಜ್ ಕಾಲದಲ್ಲಿ ದರಖಾಸ್ತು ಮಾಡುವದಕ್ಕೆ ಅನೇಕರಿದ್ದರೆಂತಲೂ, ಹರಾಜ್ ಮಾಡುವಣವು ಷಹರ್ ಜನರಿಗೆ ಇಷ್ಟವಿಲ್ಲದ್ದರಿಂದ ಹಾಗೆ ಮಾಡಕೂಡದೆಂದು ತಾನು ಆಕ್ಷೇಪಿಸಿದಂತೆಯೂ, ಸದರೀ ಜಮೀನಿಗೆ ವಕ್ಕದಲ್ಲಿ ತನ್ನ ತೋಟವಿರುವದರಿಂದ ಹರಾಜಾದ ಕೂಡಲೆ ಅದರ ಪೈಕಿ ಮೂರರಲ್ಲೊಂದುಭಾಗ ತನಗೆ ಕೊಡುವದಾಗಿ ಹೇಳದಂತೆಯೂ ಕೈಫೀಯತ್ ಕೊಟ್ಟರು.

ಮೆ|| ಖಯರ್‌ಖಾನರ ವಿಚಾರಣೆಯಲ್ಲಿ, ಪ್ರಸಕ್ತ ಜಮೀನ್ ಆರುಸಾವಿರ ರೂಪಾಯಿಗಳ ಕ್ರಯ ಬಾಳತಕ್ಕ ಉತ್ಕೃಷ್ಟವಾದ ಭೂಸ್ತಿತಿಯಾಗಿರುವದರಿಂದ ದರಖಾಸ್ತು ಮಾಡಬೇಕೆಂಬ ಉದ್ದೇಶದೊಡನೆ ಬಹುಮಂದಿ ಬಂದಿದ್ದರು, ಅದನ್ನು ತೆಗದುಕೊಳ್ಳಬೇಕೆಂಬ ಇಷ್ಟಪುಳ್ಳವನಾಗಿ ೫೦೦ ರೂಪಾಯಿಗಳ ತನಕ್ಕೆ ತಾನು ಹೆಚ್ಚಿಸುವಲ್ಲಿ ಮೆ|| ಕೃಷ್ಣರಾಯರವರು, ಮೆ|| ಅಣ್ಣಾಜೀರಾಯವರೂ ಮೆ|| ಅಣ್ಣಯ್ಯಪ್ಪಶೆಟ್ಟರೂ ನಿಂತುಕೊಂಡಿದ್ದ ಒಂದು ಮರದ ಬಳಿ ತನ್ನನ್ನು ಕರೆದುಕೊಂಡು ಹೋಗಿ, ತಾವು ಅಣ್ಣಾಜೀರಾಯರವರಿಗಾಗಿ ದರಖಾಸ್ತು ಮಾಡುತಲಿರುವದರಿಂದ ಹಾಗೆ ಜಾಸ್ತೀ ಮಾಡುತ ಹೋಗಬಾರದೆಂತಲೂ, ಅಲ್ಲಿಗೆ ಬಿಟ್ಟುಬಿಟ್ಟರೆ ಸದರೀ ಜಮೀನ್ನಲ್ಲಿ ತನಗೆ ಒಂದುಭಾಗ ಕೊಡುವದಾಗಿ ಹೇಳದ್ದಲ್ಲದೆ ಬಾಜೂತೋಟದ ಸ್ವಂತಗಾರರಾದ ಮೆ|| ಅಣ್ಣಯ್ಯಪ್ಪ ಶೆಟ್ಟರಿಗೆ ಸಹ ಒಂದುಭಾಗ ಕೊಡುವದಾಗಿ ಹೇಳಲುಅವರು ಒಪ್ಪಿರುತ್ತಾರೆಂತಲೂ ತಿಳಿಸಿದರು. ತನಗೆ ಅರ್ಧ ಭಾಗ ಕೊಡಬೇಕೆಂದು ಕೇಳಲು ಅದಕ್ಕೆ ಮೆ|| ಅಣ್ಣಾಜೀರಾಯರು ಒಪ್ಪಲಿಲ್ಲವು, ಕಡೆಗೆ ಬಲಾತ್ಕಾರಪೂರ್ವಕ ಮೂರರಲ್ಲೊಂದುಭಾಗಕ್ಕೆ ತನ್ನನ್ನು ಕಬೂಲಿ ಪಡಿಸಿದರು, ಅದರ ಮೇಲೆ ಮೆ|| ಕೃಷ್ಣರಾಯರವರು ಒಂದು ರೂಪಾಯಿ ಜಾಸ್ತೀ ಮಾಡಿ ೫೦೧ ರೂಪಾಯಿಗೆ ತೆಗದುಕೊಂಡರು, ಎಂದು ವಗೈರೆ ಬರೆಸಿದರು.

ಮೆ|| ಅಣ್ಣಾಜೀ ರಾಯರವರ ವಿಚಾರಣೆಯಲ್ಲಿ ತಮ್ಮನ್ನು ಈ ಪ್ರೂರಲ್ಲಿ ಅನೇಕರು ಬಲ್ಲರಾಗಿ, ತಮ್ಮಮೇಲೆ ಜಾಸ್ತೀ ಮಾಡುವದಕ್ಕೆ ಜನರು ಹಿಂಜರಿವರೆಂಬ ವಾರ್ತೆಗೆ ಅವಕಾಶವಿಲ್ಲದಂತೆ ತಮ್ಮ ಮಗನಾದ ಬಾಬೂರಾಯರ ಹೆಸರಿನಲ್ಲಿ ಪತ್ತೊಂಡಿತೆ ಹೇಳದರು. ಇದರಮೇಲೆ ಇನ್ನು ವಿಚಾರ ನಡೆದು, ಕಡೆಗೆ ಇಬ್ಬರು ಕೌನ್ಸಿಲರಗಳೂ ಏಕಕಂಠ್ಯದೊಡನೆ, ಕಕ್ಷಿಗಾರರೆಲ್ಲ ಶಿಕ್ಷಿಸಿ ತೋಸನಮಾಡುತ್ತಾರೆಂದು ಬಾವಪಟ್ಟು ಹರಾಜನ್ನು ರದ್ದು ಮಾಡಿರುತ್ತಾರೆ.

ಈ ಕೃತ್ಯಕ್ಕೆ ಸಂಬಂದಪಟ್ಟವರ ಪೈಕಿ ಇಬ್ಬರು ಅಸಿಸ್ಟೆಂಟ್ ಕಮಿಷನರಾಗಿಯೂ, ಇಬ್ಬರು ಮ್ಯುನಿಸಿಪಲ್ ಕಮಿಷನರಗಳಾಗಿಯೂ, ಒಬ್ಬರು ರಿಸಾಲ್‌ದಾರರಾಗಿ ಇರುತ್ತಾರೆ. ಇವರೆಲ್ಲರು ವಿದ್ಯಾವಂತರಾಗಿಯೂ ಕಾಯಿದೆ ಕಾನೂಗಳ ಸ್ವರೂಪವನ್ನರಿತವರೆಂದು ನಂಬಿಕೆಯಾಗಿದೆ. ಅನ್ಯ ಅಧಿಕಾರಿ ತಾರತಮ್ಯವಿಲ್ಲದೆ ಯಿಸ್ಲರ ವಿಷಯದಲ್ಲೂ ಏಕರೂಪವಾಗಿ ಉಪಯೋಗಿಸಲ್ಪಡತಕ್ಕದಾಗಿರುತಿದೆ. ಈ ಮೊಕದ್ದಮೆಯ ವಿಚಾರಣೆಯ ಬಗ್ಗೆ ಜೆಡ್ಜಿಗಳಾಗಿ ಕುಳಿತ ಇಬ್ಬರು ಅಧಿಕಾರಿಗಳೂ ಇದರಲ್ಲಿ ಸಂಪೂರ್ಣವಾದ ಮೋಸಕೃತ್ಯ ನಡೆದಿದೆಯೆಂದು ಬಾಹಾಟವಾಗಿ ತಿಳಿಸಿರುವದರಿಂದ ಮುಂದೆ ಇದರ ಪರ್ಯವಸಾನವು ಆತುರದೊಡನೆ ನಿರೀಕ್ಷಿಸುತಲಿರುತ್ತೇವೆ.

Occasional Notes.
ನೈಮಿತ್ತಿಕ ವಿಷಯಾನ್ಯಾಸ.

An additional grant.—ಬಾಬೂ ಪ್ರತಾಪಚಂದ್ರರಾಯ್ ಸಿ. ಐ. ಇ. ಯೆಂಬವರು ಮಹಾಭಾರತವನ್ನು ಇಂಗ್ಲಿಷ್ ಭಾಷೆಯಲ್ಲಿ ಗಜ್ಜನೆ ಮಾಡಿ ಛಾಪಿಸುತಲಿದಾರೆಯಷ್ಟೆ. ಈ ಪ್ರಬಲ ಕಾರ್ಯಕ್ಕೆ ಗವರ್ನಮೆಂಟನವರು ಇದುವರಿವಿಗೆ ಮಾಡಿದ ಅರ್ಥ ಸಹಾಯವಲ್ಲದೆ ಮರಳಿ ಒಂದು ಸಾವಿರ ರೂಪಾಯಿಗಳ ಕೊಡುವಂತೆ ಸ್ಟೇಟಿಸಿಕ್ರೆಟರಿಯವರು ಹುಕುಂ ಕೊಟ್ಟಿರುತ್ತಾರೆ.

A curious case.—ಬರದ್ವಾನ್ ಷಹರಿನಲ್ಲಿ ಒಬ್ಬ ಹೆಂಗಸೂ ಆಕೆಯ ಬಂದುಗಳು ಕೆಲನರೂ ಸೇರಿ ವಿಕಂತುವಾದ ಆಕೆಯ ಮಗಳನ್ನು ಬಲಾತ್ಕಾರ ಪೂರ್ವಕ ತನಗೆ ಮದುವೆ ಮಾಡಿಕೊಟ್ಟು ತನ್ನ ಜಾತಿಗೆ ಅಪಾಯವನ್ನುಂಟುಮಾಡಿದರೆಂಬದಾಗಿ ಅಳಿಯನಾದವನು ಅತ್ತೆಯಮೇಲೂ ಆಕೆಯ ಬಂಧುಗಳ ಮೇಲೂ ಅಲ್ಲಿನ ಡೆಪ್ಯುಟಿಮ್ಯಾಜಿಸ್ಟ್ರೇಟರಾದ ಬಾಬೂನಾರಾಯಣಚಂದ್ರಸೇನ್ ಯೆಂಬವರ ಕೋರ್ಟಿನಲ್ಲಿ ಕ್ರಿಮಿನಲ್ ದಾವೇಮಾಡಿರುತ್ತಾನೆಂದು ಆ ಪ್ರಾಂತದ ಪತ್ರಿಕೆಯೊಂದು ತಿಳಿಸುತಿದೆ.

Conversion.—ಕೊಚ್ಚಿ ಸಂಸ್ಥಾನಕ್ಕೆ ಸೇರಿದ ತಿರುಚ್ಚೂರಲ್ಲಿ, ಮನೆಗಳಿಗೆ ಬಂದು ಹೆಣ್ಣುಮಕ್ಕಳಿಗೆ ವಿದ್ಯೆ ಹೇಳುತಲಿದ್ದ ಒಬ್ಬ ಮಿಷನರಿ ಹೆಂಗಸಿನ ದುರ್ಬೋಧನೆಗೆ ಮರುಳಾಗಿ ಬ್ರಾಹ್ಮಣಜಾತಿಗೆ ಸೇರಿದ ಉಪವನ್ನಳಾದ ಒಬ್ಬ ಹೆಂಗಸು ಯೆಂಟು ವರ್ಷಗಳ ವಯಸ್ಸುಳ್ಳ ಸುಂದರಿಯಾದ ತನ್ನ ಮಗಳೊಡನೆ ಕ್ರಿಸ್ಟಿಯನ್ ಮತವನ್ನವಲಂಬಿಸಿ ಜ್ಞಾನಸ್ನಾನವಂಪಡೆದಳೆಂದು ಒಂದಾನೊಂದು ಮದರಾಸುಪತ್ರಿಕೆಗೆ ಕೊಚ್ಚಿ ಬಾತ್ಮಿದಾರನು ಬರೆದಿರುತ್ತಾನೆ. ಮಿಷನರಿ ಹೆಂಗಸರನ್ನು ಮನೆಗೆ ಕರೆಯಿಸಿ ಹೆಣ್ಣುಮಕ್ಕಳಿಗೆ ಪಾಠ ಹೇಳಿಸುವಂತವರಿಗೆಲ್ಲ ಕಡೆಗೆ ಇದೇ ಫಲವೆಂದು ತಿಳಿಯಬಹುದು.

A princely bequest.—ಕಳೆದ ಜೂನ್ ತಿಂಗಳಲ್ಲಿ ವಿಶಾಖಪಟ್ಟದೊಳು ಮೃತಪಟ್ಟ ಮೆ|| ನರಸಿಂಗರಾಯರೆಂಬವರು, ತನ್ನ ಸಂಪಾದನೆಯ ಪೈಕಿ ವಿಶಾಖಪಟ್ಟದೊಳು ಒಂದು ಕಾಲೇಜ್ ಪಾಠಶಾಲೆಯಂ ಸ್ಥಾಪಿಸುವದಕ್ಕಾಗಿ ಒಂದುಲಕ್ಷ ರೂಪಾಯಿಗಳು, ಪಾಠಶಾಲೆಯ ಕಟ್ಟಡಕ್ಕಾಗಿ ೧೫೦೦೦ರೂಪಾಯಿಗಳು, ಈ ಮೇರೆಗೆ ೧,೧೫,೦೦೦ ರೂಪಾಯಿಗಳು ಉಯಿಲ್ ಬರೆದಿಟ್ಟರು. ಸದರೀ ಡಿಸ್ಟ್ರಿಕ್ಟು ಕಲೆಕ್ಟರನ್ನು ಗಣ್ಯವಿಚಾರಕ ಸಭೆಯಲ್ಲಿ ಒಬ್ಬ ಮೆಂಬರಾಗಿ ನಿಯಮಿಸಿ, ಉಯಿಲ್ ಬರೆದಿಟ್ಟವರ ಕೋರಿಕೆಯಂತೆ ಅದುಲಿನ ಸ್ಥಿರಪಡಿಸ್ಸೆಂದು ಗವರ್ನಮೆಂಟನವರು ವಿದ್ಯಾಭ್ಯಾಸದ ಇಲಾಖಾ ಡೈರೆಕ್ಟರಿಗೆ ಹುಕುಂ ಕೊಟ್ಟಿರುತ್ತಾರೆ.

The sea-voyage movement.—ಸಮುದ್ರಯಾನ ಪೂರ್ವಕ ಅನ್ಯರಾಜ್ಯಗಳಿಗೆ ಹೋಗಿ ಬರುವ ವಿಷಯದಲ್ಲೂ ಬರೋಡೆ ಗಾಯಕವಾಡಿ ಮಹಾರಾಜರವರು ಈಗ ಯೂರೋಪ್ ದೇಶಕ್ಕೆ ಹೋಗಿರುವ ವಿಷಯದಲ್ಲೂ ಅಲಹಾಬಾದ್ ಪಯೋನಿಯರ್ ಎಂಬ ಪತ್ರಿಕೆ ತಿಳಿಸುವ ಅಭಿಪ್ರಾಯವೇನೆಂದರೆ—ಪಶ್ಚಿಮ ಇಂಡಿಯಾ ದೇಶದೊಳಗಣ ಶ್ರದ್ಧಾಳುಗಳಾದ ಹಿಂದೂಜನರು ಗಾಯಕವಾಡಿ ಯವರನ್ನೂ ಅವರ ಸಬಿಜನರನ್ನೂ ಬಹಿಷ್ಕೃತರನ್ನಾಗಿ ಮಾಡುವವರಾಗಿದಾರೆಯೋ ಹ್ಯಾಗೋ ನಾವರಿಯೆವು. ಗಾಯಕವಾಡಿ ಮಹಾರಾಜರವರು ತಮ್ಮ ಮತಾಚಾರಗಳಿಗೆ ಲೋಪವಿಲ್ಲದಂತೆ ವರ್ತಿಸುವರೆಂದು ನಾವೆಣಿಸಲಾರೆವು.

The activity of Poona Brahmins.—ಪುಣೇಯಲ್ಲಿನ ಬ್ರಾಹ್ಮಣರ ಸಾಹಸಪ್ರಯತ್ನಗಳು ಕೇವಲ ಆಶ್ಚರ್ಯಕರವಾಗಿ ಕಾಣುತಿವೆ. ಸದರೀ ಜನರು ಸಬ್ಬು ತಯಾರಿ, ಬೆಂಕಿಕಡ್ಡಿ ತಯಾರಿ, ರೇಷ್ಮೆಗೆ ಬಣ್ಣ ಹಾಕುವಿಕೆ, ವಿಧವಿಧ ಬೀಗಗಳು ಮಾಡುವಿಕೆ ಮೊದಲಾದನ್ನಗಳಬಗ್ಗೆ ಅನೇಕ ಉಪಯುಕ್ತಗಳಾದ ಕಾರ್ಖಾನೆಗಳಂ ಸ್ಥಾಪಿಸಿ ಅಥವಾ ಸ್ಥಾಪಿಸುತಲಿರುತ್ತಾರೆ. ಲೋಹಗಳ ತಯಾರೀಬಗ್ಗೆ ಯೇರ್ಪಡಿಸಿರುವ ಯಿರತು ಕಾರ್ಖಾನೆಗಳಲ್ಲೂ ಕೆಲಸಗಳು ಚೆನ್ನಾಗಿ ನಡೆಯುವ ಬಗ್ಗೆ ಇದಲ್ಪಟ್ಟ ಮೂಲಧನಕ್ಕೆ ನಾಲ್ಕಾನಾ ೧೦ ರೂಪಾಯಿಗಳಿಗೆ ಮೇಲ್ಪಟ್ಟ ಬಡ್ಡಿ ಗಿಟ್ಟತಲಿರುವಂತೆ ತಿಳಿಯಬರುತಿದೆ.

Attempt at murder.—ದೋಲಪಾಡ್ ಪ್ರಾಂತದಲ್ಲಿ ಒಬ್ಬ ಬ್ರಾಹ್ಮಣನು ಒಂಭತ್ತು ವರ್ಷಗಳ ವಯಸ್ಸುಳ್ಳ ತನ್ನ ಮಗಳನ್ನು ಮೂವತ್ತು ವರ್ಷಗಳ ವಯಸ್ಸುಳ್ಳ ಬೇರೊಬ್ಬ ಬ್ರಾಹ್ಮಣನಿಗೆ ವಿವಾಹ ಮಾಡಿಕೊಡುವದಾಗಿ ವಾಗ್ದಾನ ಮಾಡಿದನು. ಪರಂತು ಈ ಯೋಜನೆಗೆ ಹುಡಿಗಿಯ ತಾಯಿಯಾದವಳು ವಿರೋಧಿಸಲು ತಂದೆಯು ಕೋಪಾವಿಷ್ಟನಾಗಿ ಮಗಳನ್ನು ಕಡಿದುಹಾಕಿ ಅವಳು ಸತ್ತುಹೋದಳೆಂದು ನಂಬಿ ತಾಲ್ಲೂಕು ಕಚ್ಚೇರಿಗೆ ಹೋಗಿ ತಾನು ಮಾಡಿದ ಕೃತ್ಯವನ್ನು ತಿಳಿಸಲು ಅವರು ಅವನನ್ನು ಹಿಡಿದು ಮ್ಯಾಜಿಸ್ಟ್ರೇಟನಿಟ್ಟು ವಿಚಾರಣೆಗೆ ಗುರಿಮಾಡಿರುತ್ತಾರೆ. ಹುಡಿಗಿಯು ಆಸ್ಪತ್ರಿಯಲ್ಲಿ ಚಿಕಿತ್ಸೆಯಲ್ಲಿದಾಳೆ.

A female league.—ಜರ್ಮನೀದೇಶದ ರಾಜಧಾನಿಯಾದ ಬರ್ಲಿನ್ ಪಟ್ಟಣದೊಳು ವಿವಾಹಿತರಾದ ಕೆಲವರು ಹೆಂಗುಸರು ಸೇರಿ, ತಮ್ಮ ಪತಿಗಳ ನಡತೆಗಳಂ ಕುರಿತು ಹಿಡಿಯಬೇಕೆಂದು ಉದ್ದೇಶಿಸಿ, ಅಬಗ್ಗೆ ಸಮರ್ಥರಾದ ಪತ್ತೇದಾರರಂ ಸಹ ಯೇರ್ಪಡಿಸಿರುತ್ತಾರೆ. ಸದರೀ ಹೆಂಗುಸರಪೈಕಿ ಯಾರಗಂಡನೇ ಆಗಲಿ ದುರ್ನಡತೆಯುಳ್ಳವನೆಂದು ಕಂಡುಬಂದಕಾಡಲೇ ಹೆಂಗುಸರಕೋರ್ಟಿಗೆ ಹಾಜರಾಗುವಂತೆ ಆತನಿಗೆ ಸಮ್ಮನ್ ಕೊಡುತ್ತಾರೆ. ಒಂದುವೇಳೆ ಆತನು ಹಾಜರಾಗದೆ ಹೋಗುವಪಕ್ಷಕ್ಕೆ ವಿಚಾರಣೆ ಇಲ್ಲದೇನೇ ಆತನನ್ನು ದಂಡಿಸುತ್ತಾರೆ. ಸದರೀ ದಂಡನೆಯು ಬಹುವಿಧವಾಗಿರುವುದು. ಪರಂತು ಅದನ್ನು ಯಾವವಿಧದಿಂ ನೆರವೇರಿಸುತ್ತಾರೆಯೋ ಅದು ಮಾತ್ರ ವ್ಯಕ್ತವಾಗಲಿಲ್ಲವು.

The sea-voyage question.—ಬ್ರಾಹ್ಮಣರು ವಿಧಿಚೋದಿತವಾದ ತಮ್ಮ ನಿತ್ಯ ನೈಮಿತ್ತಿಕ ಕರ್ಮಗಳಿಗೆ ಲೋಪವಿಲ್ಲದಂತೆ ಸಮುದ್ರಯಾನ ಪೂರ್ವಕ ಯೂರೋಪ್ ಮೊದಲಾದ ಅನ್ಯರಾಜ್ಯಗಳಿಗೆ ಹೋಗಿ ಅಲ್ಲಿ ಅನ್ಯವಕಾಶ ಕೆಲವು ಕಾಲದ ವರಿವಿಗೆ ವಸಿಸಿ ಬರುವಣವು ಶಾಸ್ತ್ರನಿಷಿದ್ಧವೆ ಯೆಂಬ ಜಿಜ್ಞಾಸೆ ಯುಂಟಾಗಲು ಬಂಗಾಳೇ ಪ್ರಾಂತದ ಪಂಡಿತರುಗಳ ಪೈಕಿ ಕೆಲವರು ಮಾಡಬಹುದೆಂತಲೂ, ಕೆಲವರು ಕೂಡದೆಂತಲೂ ಅವರವರಿಗುಂಟಾದ ಶಾಸ್ತ್ರಾಧಾರಗಳ ಪೂರ್ವಕ ಅಭಿಪ್ರಾಯ ಕೊಡುತಲೂ ಕೊಟ್ಟು ಇರುತ್ತಾರೆ. ಈಚೆಗೆ ಅರವತ್ತೆಂಟುಮಂದಿ ಪ್ರಬಲರಾದ ಪಂಡಿತರುಗಳು ಸ್ವಕರ್ಮಾನುಷ್ಠಕ್ಕೆ ನ್ಯೂನತೆಯುಂಟಾಗದಂತೆ ಸಮುದ್ರಯಾನ ಪೂರ್ವಕ ಅನ್ಯರಾಜ್ಯಗಳಿಗೆ ಹೋಗಿ ಬರುವದರಲ್ಲಿ ಯಾವ ಬಾಧಕವೂ ಇಲ್ಲವೆಂದು ಅಭಿಪ್ರಾಯ ಕೊಟ್ಟರುವಂತೆ ಆಪ್ರಾಂತದ ಪತ್ರಿಕೆ ಯೊಂದು ತಿಳಿಸುತಿದೆ.

A rumour.—ಇಂಡ್ಯಾ ದೇಶದೊಳು ಸವರನಗಳ ಕ್ರಯ ದಿನದಿನೇ ಹೆಚ್ಚುತಬಂದು ಈಗ್ಗೆ ಕೆಲವು ದಿನಗಳ ಮೊದಲು ಸವರನ್ ಒಂದಕ್ಕೆ ೧೬ರೂಪಾಯಿಗೆ ನಿಂತಿದೆ. ಹೀಗಾಗುವದಕ್ಕೆ ಉಂಟಾದ ಕಾರಣಗಳನ್ನು ಹಿಂದೆ ಒಂದು ಸಂದರ್ಭದಲ್ಲಿ ಈ ಪತ್ರಿಕೆಯನ್ನೋದತಕ್ಕವರ್ಗೆ ತಿಳುವಳಿಕೆಗೆ ತಂದಿರುತ್ತೇವೆಯಷ್ಟೆ. ಸವರನ್ ಕ್ರಯ ಅತ್ಯಧಿಕವಾಗಿ ಹೋಗುವದರಿಂದ ಬಹುವಿಧವಲ್ಲಿ ಇಂಡ್ಯಾದೇಶಕ್ಕೆ ಉಂಟಾಗುತಲಿರುವ ನಷ್ಟವಂ ತಪ್ಪಿಸಬೇಕೆಂಬ ಉದ್ದೇಶದೊಡನೆ ಪ್ರಬಲರಾದ ಕೆಲವರು ಸೇರಿ, ಈ ದೇಶದೊಳು ಭಂಗಾರದ ನಾಣ್ಯಗಳಂ ಜಾರೀಯೊಳು ತರುವದಕ್ಕೆ ಅವಶ್ಯಕಗಳಾದ ಬಹುವಿಧ ಪ್ರಯತ್ನಗಳಂ ಮಾಡುತಲಿರುವಂತೆ ಕಾಣುತಿದೆ. ಇದು ಸ್ವಪ್ರಯೋಜನಪರರಾದ ಕೆಲವರು ಯೂರೋಪಿಯರುಗಳು ಮಾಡತಕ್ಕ ಕುತ್ಸಿತೋಪಾಯವೇ ಹೊರತು ಇಂಡ್ಯಾದೇಶ ಕ್ಷೇಮಾಭಿವೃದ್ಧಿಯಲ್ಲಿ ಆತರವಾದ ಆಕ್ಕರೆಯುಳ್ಳವರು ಮಾಡತಕ್ಕದ್ದಲ್ಲವು. ಹ್ಯಾಗಂದರೆ, ಬಣ್ಣವಲ್ಲೂ ತೂಕವಲ್ಲೂ ಸವರನಗಳಿಗೆ ಸಮಾನವಾದ ಭಂಗಾರದ ನಾಣ್ಯಗಳಂ ಛಾಪಿಸಿ, ಈ ದೇಶದೊಳು ಚಲಾವಣೆ ನಾಣ್ಯವಾಗಿ ಜಾರೀಯೊಳು ತಂದಾಗ್ಯೂ ಈಗ ಸವರನ್ ಒಂದಕ್ಕೆ ಯೆಷ್ಟು ರೂಪಾಯಿಗಳು ಕೊಡಬೇಕಾಗಿರುತಿದೆಯೊ ಅದಕ್ಕೆ ಸಮಾನವಾಗಿ ಇಲ್ಲಿನ ಭಂಗಾರದ ನಾಣ್ಯಗಳಿಗೂ ಕೊಡಬೇಕಾಗಿರುವದೇ ಹೊರತು ಅನ್ಯಥಾ ಆಗಲಾರದು. ಇದರಿಂದ ಇಂಡ್ಯಾದೇಶಕ್ಕೆ ಉಂಟಾಗುತಲಿರುವ ನಷ್ಟವು ಪರಿಹಾರವಾಗುವ ಬಗೆ ಕಾಣಿಸಲಿಲ್ಲವು.

LOCAL AND PROVINCIAL NEWS.
ಸ್ವದೇಶಮತ್ತು ತಾಲ್ಲೂಕುಜಾತೀವೃತ್ತಾಂತಗಳು.

Col. Henderson.—ಈ ಸಂಸ್ಥಾನದ ಕಾಯಂ ರೆಸಿಡೆಂಟರಾದ ಕರ್ನಲ್‌ಹೆಂಡರ್ಸನ್‌ಸಾಹೇಬರವರು ನಾಳೆಯದಿನ ವಾಪಸ್ ಬಂದು ತಮ್ಮ ಅಧಿಕಾರವಂ ಮರಳಿ ಕೈಗೊಳ್ಳುವರು.

The Resident.—ಈ ಸಂಸ್ಥಾನದ ಆಕ್ಟಿಂಗ್‌ರೆಸಿಡೆಂಟರಾದ ಕರ್ನಲ್ ಪೀಕಾಕ್‌ಸಾಹೇಬರವರು ನವರಾತ್ರಿ ಉತ್ಸವದಬಗ್ಗೆ ಮೈಸೂರಿಗೆ ದಯಮಾಡಿದ್ದರಷ್ಟೆ. ಸದರೀ ಯವರು ಕಳೆದ ಬೃಹಸ್ಪತಿ ವಾರದ ದಿನ ಇಲ್ಲಿಗೆ ವಾಪಸ್ ಬಂದರು.

The Dassara Speech.—ಈ ಸಲದ ಪ್ರಜಾಪ್ರತಿನಿಧಿಸಭಾಜನದಲ್ಲಿ ಓದಲ್ಪಟ್ಟ ಈ ಸಂಸ್ಥಾನದ ನಾಲ್ಕುಯಾದೆ ರಿಪೋರ್ಟಿನ ನಕಲ್ ಕಾಲಾತೀತವಾಗಿ ಬಂದದರಿಂದ ಅದನ್ನು ಮುಂದಿನ ವಾರದಲ್ಲಿ ಪ್ರಕಟಿಸುವೆವು.

The Dassara holidays.—ದಸರಾಹಬ್ಬದಬಗ್ಗೆ ಕೊಡಲ್ಪಟ್ಟ ರಜಾ ನಿನ್ನೆಯ ದಿನದೊಡನೆ ಪೂರೈಸಿಯಾಗಿ ಈದಿನ ವಿಶಿಷ್ಟ ಕಚ್ಚೇರಿಗಳಲ್ಲೂ ಕೋರ್ಟುಗಳಲ್ಲೂ ಮರಳಿ ಕೆಲಸಗಳು ಸಕ್ರಮವಾಗುವದು.

Struck out of list.—ಮೈಸೂರಿನಲ್ಲಿ ಪತ್ರಿಕೆಯ ಎಡಿಟರ ಹೆಸರನ್ನು ದರ್ಬಾರಿಗೆ ಹೋಗತಕ್ಕ ಜನರ ಪಟ್ಟಿಯಿಂದ ತೆಗದು ಹಾಕಿ

ರುತ್ತಾರೆಂದು ಅಲ್ಲಿನ ವೃತ್ತಾಂತ ಪತ್ರಿಕೆಯ ಮೂಲಕ ತಿಳಿಯಲಾದೆವು. ಇದಕ್ಕೇನು ಕಾರಣವಿರಬಹುದು ?

The Viceroy's visit to Mysore.—ಈಸಲದ ಪ್ರಜಾ ಪ್ರತಿನಿಧಿ ಸಭಾಜದಲ್ಲಿ ದಿವಾನರವರು ತಿಳಿಸಿದ್ದರಿಂದಲೂ ವೃತ್ತಾಂತ ಪತ್ರಿಕೆಗಳ ಮೂಲಕವಾಗಿಯೂ, ಬರುವ ನವಂಬರ್ ತಿಂಗಳ ಮಧ್ಯಭಾಗದಲ್ಲಿ ಇಂಡ್ಯಾ ರಾಜ್ಯದ ವೈಸರಾಯಿ ವ ಗವರ್ನರ್ ಜನರಲ್‌ರವರಾದ ಲಾರ್ಡ್ ಲ್ಯಾನ್ಸ್‌ಡೌನ್ ಸಾಹೇಬರವರು ಶ್ರೀಮನ್ಮಹಾರಾಜರವರ ಪ್ರಾರ್ಥನೆಯಂ ಲಾಲಿಸಿ ಮೈಸೂರಿಗೆ ದಯಮಾಡುವರೆಂದು ತಿಳಿಯಬರುತಿದೆ.

Return from Mysore.—ಶ್ರೀಮನ್ಮಹಾರಾಜರವರ ಕಡೆಯಿಂದ ಆಹ್ವಾನಪೂರ್ವಕ ದಸರಾ ಹಬ್ಬದ ಬಗ್ಗೆ ಮೈಸೂರಿಗೆ ಹೋಗಿದ್ದ ದೊಡ್ಡ ಮನುಷ್ಯರ ಪೈಕಿ ಪ್ರಾಯಶಃ ಯೆಲ್ಲರು ವಾಪಸು ಬಂದು ಸೇರಿದರು. ಈಸಲ ಸದರೀ ಉತ್ಸವದ ಬಗ್ಗೆ ಈವೂರಿಂದಲೂ, ತಾಲೂಕುಜಾತಿನಿಂದಲೂ ರಾಜಧಾನಿಗೆ ಹೋದ ಜನರ ಸಂಖ್ಯೆಯಂ ಯೋಚಿಸಲಾಗಿ ಅಲ್ಲಿ ಅವರು ತಮ್ಮ ಕಾರ್ಯಗಳಂ ಯಾವರೀತಿ ನಿರ್ವಹಿಸಿಕೊಂಡು ಬಂದರೋ ಯೆಂದು ಆಶ್ಚರ್ಯ ಪಡುತ್ತೇವೆ.

A rumoured altercation.—ಮೈಸೂರ್ ಕಸಬಾ ರೇಂಜಿ ಸ್ಪೇಷಲ್‌ಮ್ಯಾಜಿಸ್ಟ್ರೇಟಿಗೂ ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಚೆರ್ಮಸಂಗರಿಗೂ ಕಲಹ ನಡೆದು ಕೈ ಕೈ ಹತ್ತಲಿರುವ ಸಂಬಂಧವುಂಟಾಗಿ, ಚೆರ್ಮಸಂಗರವರು ಸ್ಪೇಷಲ್‌ಮ್ಯಾಜಿಸ್ಟ್ರೇಟರಮೇಲೆ ಚಾರ್ಜ್ ಮಾಡುವದಕ್ಕೆ ತಮ್ಮ ಇಲಾಖೆಯ ಅಧಿಕಾರಿಯ ಅಪ್ಪಣೆಯಂ ಕೇಳಿರುವದಾಗಿ ಅಲ್ಲಿನ ವೃತ್ತಾಂತ ಪತ್ರಿಕೆ ತಿಳಿಸುತಿದೆ. ಈಚೆಗೆ ಮೈಸೂರಲ್ಲಿ ಸರ್ಕಾರ್ ಅಧಿಕಾರಿಗಳಿಗೂ ರೆಯಿಲ್ವೆ ಅಧಿಕಾರಿಗಳಿಗೂ ಮಾತ್ಸರ್ಯ ವೃದ್ಧಿಯಾಗುತ ಬರುವದಕ್ಕಾಗಿ ವಿಷಾದಿಸುತ್ತೇವೆ.

The weather.—ಕಳೆದ ವಾರದ ಆದಿಭಾಗದಲ್ಲಿ ಒಂದೆರಡು ದಿನ ಸ್ವಲ್ಪ ಮಳೆ ಬಿತ್ತು. ಅದರಿಂದೀಚೆಗೆ ಮೇಘಸಂಚಾರ ಸಹ ಇಲ್ಲದೆ ಬಿಸಿಲು ಬಲವಾಗಿ ಕಾಯುತಲಿದೆ. ರಾತ್ರಿ ಕಾಲದಲ್ಲಿ ಚಳಿಗೆ ಉಪಕ್ರಮವಾಯಿತು. ಈಚೆಗೆ ತಾಲೂಕುಜಾತಿನ ಪೈಕಿ ಕೆಲವುಕಡೆ ಬಲವಾಗಿಯೂ, ಕೆಲವುಕಡೆ ಅಲ್ಪವಾಗಿಯೂ ಮಳೆ ಬಿದ್ದಂತೆ ತಿಳಿಯಬರುತಿದೆ. ಈ ಮಳೆಯ ದೆಸೆಯಿಂದ ಕೆರೆಕುಂಟೆಗಳಿಗೆ ನೀರು ಬಾರದೆ ಹೋದಾಗ್ಯೂ ರಾಗಿ ಮೊದಲಾದ ಖುಷ್ಕೀ ಪೈರುಗಳಿಗೆ ಬಹಳ ಅನುಕೂಲವುಂಟು. ಈಗ ರಾಗಿ ಫಸಲ್ ತೆನೆ ಹೊರಟೂ ಹೊರಡುತಲೂ ಇರುವ ಕಾಲವಾಗಿರುವದರಿಂದ ವರ್ಷಾಪೇಕ್ಷೆಯು ಅಧಿಕವಾಗಿದೆ. ಇಂತಾ ಸಮಯದಲ್ಲಿ ಆಗಿಂದಾಗ್ಯೆ ವರ್ಷ ಬೀಳದೆ ಹೋದರೆ ಜಮೀನುಗಳ ದಾವಣಿಗಳು ದಿನೇದಿನೇ ಹೆಚ್ಚುವದರಲ್ಲಿ ಸಂದೇಹವಿಲ್ಲವು. ಇಲ್ಲಿ ರೋಗಾದ್ಯುಪದ್ರವಗಳು ಅಧಿಕವಾಗಿ ಯಾವದೂ ಇಲ್ಲವು. ಸದ್ಯಃ ಪ್ರಜೆಗಳು ಸುಖಸ್ಥಿತಿಯಲ್ಲಿರುವರೆಂದರೇ ಹೇಳಬೇಕು.

Closepet Taluk.—ಬಹುಕಾಲದ ಮೊದಲು ಕ್ಲೋಸ್‌ಪೇಟೆಯಲ್ಲಿ ನೆಲಗೊಂಡಿದ್ದ ತಾಲೂಕ್ ಕಚ್ಚೇರಿಯನ್ನು ಚೆನ್ನಪಟ್ಟಣಕ್ಕೆ ವರ್ಗಮಾಡಿ ಈ ತಿಂಗಳ ೧೫ನೇ ತಾರೀಖ್ ಮೊದಲು ಅಲ್ಲಿ ಕಚ್ಚೇರಿ ಮಾಡುವಂತೆ ಕೆಲವು ದಿನಗಳ ಹಿಂದೆ ಹುಕುಂ ಆಗಿರುವ ಅಂಶ ಪ್ರಸಿದ್ಧವಾಗಿದೆಯಷ್ಟೆ. ಹೀಗಿರುಲ್ಲಿ, ಈ ಸಲದ ದಸರಾ ದರ್ಬಾರ್‌ನಲ್ಲಿ ಕ್ಲೋಸ್‌ಪೇಟೆ ತಾಲೂಕ್ ಪ್ರತಿನಿಧಿಗಳು ಅರಿಕೆಮಾಡಿಕೊಂಡವರಮೇಲೆ, ಪೂರ್ವದಂತೆ ತಾಲೂಕ್ ಕಚ್ಚೇರಿಯನ್ನು ಕ್ಲೋಸ್‌ಪೇಟೆಯಲ್ಲಿ ಮಾಡುವದಕ್ಕೆ ಸಾಧ್ಯವಾಗಲಾರದೆಂತಲೂ, ಅಲ್ಲಿನ ಜನರ ಅನುಕೂಲ್ಯಕ್ಕಾಗಿ ಅದನ್ನು ಸಬ್ ತಾಲೂಕಾಗಿ ಮಾಡಿ, ಅಲ್ಲಿಯೊಬ್ಬ ಡೆಪ್ಯುಟಿ ಅಮಲ್ದಾರರನ್ನು ನೇಮಿಸುವದಲ್ಲದೆ, ಅಲ್ಲಿಯೊಂದು ಮುನಸೀಫ್ ಕೋರ್ಟನ್ನು ಸಹ ಸ್ಥಾಪಿಸುವದಾಗಿಯೂ, ಸಬ್ ರಿಜಿಸ್ಟ್ರರ್ ಆಫೀಸ್ ನಿಯತವಾಗಿ ಅಲ್ಲೇ ಯಿರುವಂತೆ ಯೇರ್ಪಾಡು ಮಾಡಲ್ಪಡುವದೆಂತಲೂ ದಿವಾನರವರು ಹುಕುಂ ಕೊಟ್ಟಂತೆ ನಮ್ಮ ಮೈಸೂರು ಬಾತಮೀದಾರರ ಲೇಖನದಿಂದ ತಿಳಿಯಲಾದೆವು. ಇದು ಕೇವಲ ಆವಶ್ಯಕವಾದ ಯೇರ್ಪಾಡೆಂದು ಭಾವಿಸುತ್ತೇವೆ.

ಇದುಕಿವಾಯಿ ಮೈಸೂರ್ ಮುನಸೀಫ್ ಕೋರ್ಟ ಮತ್ತು ಸಬ್ ಜಡ್ಜಿ ಕೋರ್ಟಿನಲ್ಲಿ ಮೊಕದ್ದಮೆಗಳು ಅಧಿಕವಾಗಿ ವ್ಯವಸ್ಥೆ ಇಲ್ಲದೆ ಬಿದ್ದಿರುವದರಿಂದ ಅಲ್ಲಿಯೊಂದು ಅಡಿಷನಲ್ ಮುನಸೀಫ್ ಕೋರ್ಟನ್ನು ಸ್ಥಾಪಿಸಲ್ಪಟ್ಟು, ಅವರಿಗೆ ೫೦೦ ರೂಪಾಯಿಗಳ ವರಿವಿಗೆ ಸ್ಮಾಲ್‌ಕಾಸ್ ಅಧಿಕಾರ ಕೊಡಲ್ಪಡುವದೆಂತಲೂ, ಸದರೀ 'ಹೊಸ ಕೆಲಸಕ್ಕೆ ಮೈಸೂರ್ ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರಾಗಿ ಮೊಕರರ್ ಮಾಡಲ್ಪಟ್ಟು, ಲೆಜಿಸ್ಲೇಟಿವ್ ಸೆಕ್ರಿಟೇರಿಯಟ್ ಆಫೀಸ್‌ನಲ್ಲಿ ಕೆಲಸ ನೋಡುತಲಿರುವ ಮಿ॥ ಚಂದ್ರಸೇಖರ ಅಯ್ಯರವರು ನಿಯಮಿಸಲ್ಪಡುವರೆಂತಲೂ ಕೇಳುತ್ತೇವೆ.

ಈ ವರ್ಷದ ಪ್ರಜಾಪ್ರತಿನಿಧಿಸಭೆಯು ಅಠಾರಾ ಕಚೇರಿಯ ಮಹಡಿಯ ಮೇಲಿನ ಹಾಲಿನಲ್ಲಿ ನಡೆಯಿತು. ಹಾಲಿಗೆ ತಕ್ಕಂತೆ ಬೆಳಕುಗಳು ಕುರ್ಚಿಗಳು ತಯಾರುಮಾಡಲ್ಪಟ್ಟವೆ. ಬೆಂಚುಗಳಗೆಲ್ಲ ಮತ್ತೆ ಹೊಲಿಸಿ, ಈ ವರ್ಷ ಪ್ರತಿನಿಧಿಗಳ ವಿಶೇಷ ಸೌಕರ್ಯವನ್ನು ಉಂಟುಮಾಡಿದರು.—ವೃ. ಪ.

ಶ್ರೀಮನ್ಮಹಾರಾಣಿಯವರ ಕುಲಬಾಲಿಕಾ ಪಾಠಶಾಲೆಯಲ್ಲಿ ನಿನ್ನೇ ದಿವಸ ವಾರ್ಷಿಕ ಸಭೆಯು ಸೇರಿ ಬಾಲೆಯರಿಗೆ ಬಹುಮಾನಗಳನ್ನು ಕೊಡುವದಾಗಿ ಮೊದಲೇ ಪ್ರಕಟವಾಗಿದ್ದಂತೆ ನಡೆಯಲಿಲ್ಲ. ಮುಂದೆ ನವಂಬರ್ ತಿಂಗಳಲ್ಲಿ ಮೈಸೂರು ರಾಣಿಯವರು ದಯಮಾಡುವಾಗ್ಯೆ ಬಹುಮಾನವನ್ನು ಕೊಡಿಸುವದೆಂದು ಗೊತ್ತುಮಾಡಿ ನಿನ್ನೇ ನಡೆಯಬೇಕಾಗಿದ್ದದನ್ನು ಮಾನಸಿಕ ಮಾಡಿರುವರೆಂದು ಕೇಳುತ್ತೇವೆ.

ಮೈಸೂರು ಪ್ರಜಾಪ್ರತಿನಿಧಿಗಳ ಪೈಕಿ ಇಬ್ಬರು ರಾಜಧಾನಿಗೆ ಬಂದು ತಮಗೆ ಮೋಟೀಖಾನೆಯಿಂದ ಬರತಕ್ಕ ಲವಾಜಮೆಗಳನ್ನು ತೆಗೆಸಿಕೊಂಡು ತಮ್ಮ ಸ್ಥಳಕ್ಕೆ ದಯಮಾಡಿದವರು ಪುನಃ ಪ್ರತಿನಿಧಿಸಭೆಗೆ ಬರಲಿಲ್ಲವೆಂದು ಕೇಳುತ್ತೇವೆ. ಇದು ನಿಜವಾಗಿದ್ದ ಪಕ್ಷದಲ್ಲಿ ಇಂಥಾ ಪ್ರತಿನಿಧಿಗಳು ತಮ್ಮ ಪಕ್ಷದವರ ಕಷ್ಟ ಸುಖಗಳನ್ನು ಗವರ್ನ್‌ಮೆಂಟಿನವರಿಗೆ ಹ್ಯಾಗೆ ತಿಳಿಯಪಡಿಸಿ ಅವರಿಂದ ಪರಿಹಾರಗಳನ್ನು ಪಡೆಯುವರೋ ವಾಚಕರೇ ಊಹಿಸಬಹುದು.

ಕಳೆದ ಬುಧವಾರದ ದಿವಸ ದಿವಾನರವರ ಮನೆಯಲ್ಲಿ ದೊಡ್ಡದೊಡ್ಡ ಉದ್ಯೋಗಸ್ಥರಿಗೂ ಪ್ರಜಾ ಪ್ರತಿನಿಧಿಗಳಿಗೂ ಔತಣವು ನಡೆಯಿತು. ಭೋಜನಾನಂತರ ಸಂಗೀತ ಮೇಳ ಮೊದಲಾದವು ಜರುಗಿತು.—ವೃ. ಚಿ.

ಶ್ರೀಮನ್ ಮಹಾರಾಜ ರಾಜಾಸಾಹೇಬ ಬಹದ್ದೂರ್ರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂದನ ಸಂವತ್ಸರದ ಆಶ್ವೀಜ ಶುದ್ಧ ೭ ಬುಧವಾರಕ್ಕೆ ಸರಿಯಾದ ಸನ್ ೧೮೯೨ ನೇ ಇಸವಿ ಸೆಪ್ಟೆಂಬರ್ ತಾ॥ ೨೮ ರಲ್ಲು ದಸರಾ ಪ್ರಯುಕ್ತವಾದ ದರಬಾರಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೇಬ ಬಹದ್ದೂರ್ರವರು ಬಿರುದುಗಳನ್ನು ದಯಪಾಲಿಸಿ, ಅಪ್ಪಣೆಕೊಟ್ಟ ಇದರ ಕೆಳಗೆ ಬರುವ ಪ್ರಸಿದ್ಧಪತ್ರಿಕೆಯನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಿಸುತ್ತೇವೆ.

ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿ ಬಿರುದೆಂತೆಂಬರ ಗಂಡ ಲೋಕೈಕವೀರ ಇತ್ಯಾದಿ ಅನೇಕ ಬಿರುದಾಂಕಿತರಾದ, ಕರ್ಣಾಟಕ ಸಿಂಹಾಸನಾಧೀಶ್ವರ, ಶ್ರೀಮಚ್ಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ. ಸಿ. ಎಸ್. ಐ. ಯವರ ಹುಜೂರು ಮಹಾ ಸನ್ನಿಧಾನದಿಂದ.

ನಮ್ಮ ಸಂಸ್ಥಾನದ ವಿಷಯದಲ್ಲಿ ಹಿತಚಿಂತನೆಯಿಂದಲೂ, ಪರೋಪಕಾರವಾದ ಧರ್ಮಗಳಿಂದಲೂ, ವಿದ್ಯಾಪಾಂಡಿತ್ಯದಿಂದಲೂ, ರಾಜಾನುಗ್ರಹಕ್ಕೆ ಪಾತ್ರರಾದವರಿಗೆ ಅವರವರ ಯೋಗ್ಯತಾನುಸಾರವಾಗಿ ಬಿರುದುಮಾನಮರ್ಯಾದೆಗಳನ್ನು ಕೊಡುತ್ತಿದ್ದ ನಮ್ಮ ಸಂಸ್ಥಾನದ ಪುರಾತನ ಪದ್ಧತಿಯನ್ನು ಈಗ ಪುನರಾಚರಣೆಗೆ ತರಬೇಕೆಂದು ನಾವು ಆಲೋಚಿಸಿ, ರಾಯಬಹದ್ದೂರ್ ಅಂಬ್ಲವಾಣಂ ರತ್ನಸಭಾಪತಿಮೊದಲಿಯಾರ್ರಿಗೆ “ರಾಜಭೂಷಣ” ಎಂಬ ಬಿರುದನ್ನೂ, ರಾಯಬಹದ್ದೂರ್ ಆರ್ಕಾಟ್ ನಾರಾಯಣಸ್ವಾಮಿ ಮೊದಲಿಯಾರ್ರಿಗೆ “ಧರ್ಮರತ್ನಾಕರ” ಎಂಬ ಬಿರುದನ್ನೂ, ಗುಂಜಾ ನರಸಿಂಹಯ್ಯನವರಿಗೆ “ಧರ್ಮಪ್ರವೃತ್ತ” ಎಂಬ ಬಿರುದನ್ನೂ, ಬಂಗಳೂರು ಸೀತಾರಾಮಶಾಸ್ತ್ರಿಗಳಿಗೆ “ಪಂಡಿತರತ್ನಂ” ಎಂಬ ಬಿರುದನ್ನೂ, ಮಾಗಡಿ ಕಸ್ತೂರಿ ರಂಗಾಚಾರ್ರಿಗೆ “ಪಂಡಿತರತ್ನಂ” ಎಂಬ ಬಿರುದನ್ನೂ ಈ ಮಹೋತ್ಸವದಲ್ಲಿ ತಕ್ಕ ಮರ್ಯಾದೆಗಳೊಡನೆ ಕೊಟ್ಟಿರುತ್ತೇವೆ.—ವೃತ್ತಾಂತ ಪತ್ರಿಕೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು ೯೨ನೇ ಇಸವಿ ಅಕ್ಟೋಬರ್ ೬ನೇ ತಾ॥ ಗುರುವಾರ

೩ನೇ ಸೆಪ್ಟೆಂಬರ್ ೧೮೯೨, ನಂ॥ ೨೫ ಜ. ೦. ೧೯—ಕಡೂರ್ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮಿ॥ ನಾರಣಯ್ಯಂಗಾರ್ರವರಿಗೆ ೯೨ನೇ ಇಸವಿ ಆಗಸ್ಟ್ ೧೩ನೇ ಮುಕ್ಕಾಂ ೨೨೦ ೦. ೫೨೮—೯೨ನೇ ನಂಬರ್ ಇಷ್ತಿಹಾರ್‌ನಲ್ಲಿ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾದಲ್ಲಿ ಅವರು ಉಪಯೋಗಿಸಿಕೊಳ್ಳದ ಭಾಗ ಇದರಿಂದ ರದ್ದು ಮಾಡಲ್ಪಟ್ಟಿರುತಿದೆ.

ನಂ॥ ೦. ಜ. ೦. ೨೨—ಶಿವಮೊಗ್ಗ ಡಿಸ್ಟ್ರಿಕ್ಟ್‌ನ ಸೆಷನ್ ಜಡ್ಜಿ ನಾಡವಾದ ಮಿ॥ ಸಿ. ಕ್ರಿಸ್ ಬ್ಬವನಿಗೆ ದಸರಾ ರಜಾ ಮುಗಿದ ಕೂಡಲೆ ಅಥವಾ ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಲಾಗಾಯತು ಅರ್ಧ ತಲಬಿನಮೇಲೆ ಒಂದು ತಿಂಗಳು ೧೫ ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತಿದೆ.

೩ನೇ ಅಕ್ಟೋಬರ್—ಮೊಕ್ಕಾಂ ನಂಬರ್ ೯—೦—ತೀರ್ಥಹಳ್ಳಿ ಅಮಲ್ದಾರ್ ವೆಂಕಟಸುಬ್ಬಯ್ಯನವರು ಅವರು ಉಪಯೋಗಿಸಿಕೊಳ್ಳಬಹುದಾದ ತಾರೀಖ್ ಲಾಗಾಯತು ಆರು ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ಸಾಗರ ಸಬ್‌ಡಿವಿಜನ್ ಆಫೀಸ್ ಶಿರಸ್ತೇದಾರರಾದ ಎಸ್. ಕಾಮರಾಯರವರು ವೆಂಕಟಸುಬ್ಬಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ತೀರ್ಥಹಳ್ಳಿ ತಾಲೂಕು ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಬದಲೀ ನೋಡುವಂತೆ ಮೊಕರರ್ ಮಾಡಲ್ಪಟ್ಟಿರುತ್ತಾರೆ.

ಮೊಕ್ಕಾಂ ನಂ॥ ೧೨—೧. ೯. ೨೧—೯೨—ಅಸಿಸ್ಟೆಂಟ್ ಕಮಿಷನರ್ ಮಿ॥ ಜ. ಜೆ. ನಾರ್ಥ್‌ಯವರಿಗೆ, ೧೮೯೨ನೇ ಇಸವಿ ಆಗಸ್ಟ್ ೧೩ನೇ ಮುಕ್ಕಾಂ ೨೩೫—೧. ೯. ೨೧—೯೨ನೇ ನಂಬರ್ ಇಷ್ತಿಹಾರ್‌ನಾಮೆಯ ಮೂಲಕವಾಗಿಯೂ, ಅದಕ್ಕೆ ಹಿಂದಿನ ನೋಟಿಫಿಕೇಷನ್‌ಗಳ ಮೂಲಕವಾಗಿಯೂ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟ ರಜಾ ಮರಳಿ ಆರುವಾರಗಳಿಗೆ ಜಾಸ್ತೀ ಮಾಡಲ್ಪಟ್ಟಿರುತಿದೆ.

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖಾ.

ಸನ್ ೧೮೯೨ ನೇ ಇಸವಿಯ ೧ನೇ ನಂಬರ್ ಮಸೂದೆ ರೆಗ್ಯುಲೇಷನ್.

ಇದರ ಕೆಳಗೆ ಕಂಡ ಮಸೂದೆ ರೆಗ್ಯುಲೇಷನನ್ನು ಮಹಾರಾಜ ರಾಜಾಸಾಹೇಬ್ ಬಹದ್ದೂರವರ ಗವರ್ನ್‌ಮೆಂಟಿನವರು ಈ ಸಂಸ್ಥಾನಕ್ಕೆ ಜಾರಿಯಲ್ಲಿ ತರಬೇಕೆಂದು ಉದ್ದೇಶಿಸಿರುತ್ತಾರೆ.

ನಗದು ಹಣಗಳಿಗಾಗಿ ಯಾ ಇತರ ಚರಸೊತ್ತುಗಳಿಗಾಗಿ ಬರತಕ್ಕ ಸಿವಿಲ್ ದಾವೆಗಳನ್ನು ಒಂದು ಕ್ಲುಪ್ತವಾದ ಮೊತ್ತದ ಮಟ್ಟಿಗೆ ಹಿಡಿದು ತೈಸಲ್ಮಾಡಲು ಮೈಸೂರು ಶೀಮೆಯಲ್ಲಿ ಗ್ರಾಮ ಕೋರ್ಟುಗಳನ್ನು ಏರ್ಪಡಿಸುವ ಬಗ್ಗೆ ಅಂಥಾ ಕೋರ್ಟುಗಳ ಮರ್ಯಾದೆಯನ್ನು ನಿರ್ಣಯಿಸುವ ಬಗ್ಗೆ ಹುಟ್ಟಿದ ರೆಗ್ಯುಲೇಷನ್.

ಪೀಠಿಕೆ. ಸಿವಿಲ್ ಕೋರ್ಟುಗಳ ಕೆಲಸಗಳನ್ನು ಕಮ್ಮಿ ಮಾಡುವದಕ್ಕಾಗಿಯೂ ಜವಿ ಮೊಬಲಗಿನ ವ್ಯಾಜ್ಯದ ಖರ್ಚುಗಳನ್ನು ಕಡಿಮೆ ಮಾಡುವದಕ್ಕಾಗಿಯೂ, ಜನಗಳಿಗೆ ತಮ್ಮ ಮನೆಗಳನ್ನು ಬಿಟ್ಟು ಹೋಗಬೇಕಾದ ಅನಾನುಕೂಲ್ಯ ಉಂಟಾಗದಂತೆ ಅಂಥಾ ವ್ಯಾಜ್ಯಗಳು ಶೀಘ್ರದಲ್ಲಿ ವ್ಯವಸ್ಥೆಯಾಗೋಣವನ್ನು ಪ್ರೋತ್ಸಾಹ ಪಡಿಸುವದಕ್ಕಾಗಿಯೂ, ಘನವೆತ್ತಿದ ಶ್ರೀಮನ್ ಮಹಾರಾಜ ರಾಜಾಸಾಹೇಬ ಬಹದ್ದೂರವರವರು ಇದರ ಕೆಳಗಿನಂತೆ ನಿಬಂಧಿಸಿರುತ್ತಾರೆ.

೧ ನೇ ಅಧ್ಯಾಯ.

ಅವತರಣಿಕೆ.

ಚಿಕ್ಕ ಹೆಸರು ವ ಶುರು. ೧ (೧) ಈ ರೆಗ್ಯುಲೇಷನ್ “೧೮೯೨ ನೇ ಇಸವಿಯ ಮೈಸೂರು ಗ್ರಾಮ ಕೋರ್ಟುಗಳ ರೆಗ್ಯುಲೇಷನ್” ಎಂದು ಕರೆಯಲ್ಪಡಬಹುದು, ಮತ್ತು ಗವರ್ನ್‌ಮೆಂಟಿನವರಿಂದ ಮೈಸೂರ್ ಗೆಜೆಟನಲ್ಲಿ ಇಷ್ತಿಹಾರು ಮೂಲಕ ಗೊತ್ತುಮಾಡಲ್ಪಡುವ ತಾರೀಖ್ ಲಾಗಾಯತು ಜಾರೀಲಿ ಬರತಕ್ಕದ್ದು.

ಸ್ಥಳೀಕವ್ಯಾಪ್ತಿ. (೨) ಮೈಸೂರು ಗೆಜೆಟನಲ್ಲಿ ಆಗಿಂದಾಗ್ಯೆ ಗವರ್ನ್‌ಮೆಂಟಿನವರಿಂದ ಪ್ರಕಟಿಸಲ್ಪಡುವ ಮೈಸೂರು ಶೀಮೆಯ ಗ್ರಾಮ ಯಾ ಗ್ರಾಮಗಳಿಗೂ ಅಥವಾ ಪ್ರದೇಶಗಳಿಗೂ ಈ ರೆಗ್ಯುಲೇಷನ್ ವ್ಯಾಪಿಸತಕ್ಕದ್ದು. ಪರಂತು ಗವರ್ನ್‌ಮೆಂಟಿನವರು ಬದಸ್ತೂರ್ ಗೆಜೆಟಿನ ಪ್ರಕಟನೆಯ ಮೂಲಕ ಆಗಾಗ್ಯೆ ಯಾವದೊಂದು ಗ್ರಾಮವನ್ನಾಗಲೀ ಪ್ರದೇಶವನ್ನಾಗಲೀ ಇದರ ಜಾರಿಯಿಂದ ವಿನಾಯಿಸಬಹುದು ಮತ್ತು ಅಂಥಾ ಪ್ರಕಟನೆಯನ್ನು ರದ್ದು ಯಾ ತಿದ್ದುಪಡಿ ಮಾಡಬಹುದು.

ರೆಗ್ಯುಲೇಷನ್ನಿಂದ ವಿನಾಯಿಸಲ್ಪಟ್ಟ ಸ್ಥಳ ಸರಹದ್ದಿನಲ್ಲಿ ಬಾಕೀ ಇರುವ ವ್ಯಾಜ್ಯಗಳ ಮತ್ತು ಡಿಕ್ರಿಗಳ ವ್ಯವಹರಣೆಯನ್ನು ಕುರಿತು. (೩) ಯಾವದಾದರೂ ಒಂದು ಗ್ರಾಮ ಯಾ ಸ್ಥಳಕ್ಕೆ ಸರಹದ್ದು ಈ ರೆಗ್ಯುಲೇಷನಿನ ಜಾರಿಯಿಂದ ತೆಗೆದು ಹಾಕೋಣಾದಲ್ಲಿ, ಹಾಗೆ ತೆಗೆದುಹಾಕೋಣದ ಕಾಲದಲ್ಲಿ ಅಲ್ಲಿನ ಗ್ರಾಮ ಕೋರ್ಟಿನಲ್ಲಿ ಬಾಕಿಯಲ್ಲಿರುವ ಸಮಸ್ತ ವ್ಯಾಜ್ಯಗಳು ಅವು ಆಗಲೇ ದಾಖಲ್ಮಾಡಲ್ಪಡುವವಾದರೆ ಅವನ್ನು ವಿಚಾರಿಸಲಿಕ್ಕೆ ಯಾವ ಸಿವಿಲ್ ಕೋರ್ಟಿಗೆ ಅಧಿಕಾರವಿರುತ್ತಿತ್ತೋ ಅಂಥಾ ಕೋರ್ಟಿನವರಿಂದ ವಿಚಾರಿಸಲ್ಪಟ್ಟು ಇತ್ಯರ್ಥಪಡಿಸಲ್ಪಡತಕ್ಕದ್ದು. ಮತ್ತು ಆ ತಾರೀಖಿಗೆ ಪೂರ್ವವಾಗಿ ಗ್ರಾಮ ಕೋರ್ಟಿನಿಂದ ವಿಧಿಸಲ್ಪಟ್ಟ ಅಮಲ್‌ಜಾರಿ ನಡಿಯದೇ ಇರುವ ಸಮಸ್ತ ತೀರ್ಪುಗಳ ಅಮಲ್‌ಜಾರಿಯು ಸದರೀ ಸಿವಿಲ್ ಕೋರ್ಟಿನವರಿಂದ ನಡೆಸಲ್ಪಡತಕ್ಕದ್ದು.

ಅಂಥಾ ವ್ಯಾಜ್ಯಗಳು ಅಂಥಾ ಸಿವಿಲ್ ಕೋರ್ಟಿನಲ್ಲಿ ದಾಖಲಾದರೆ ಹ್ಯಾಗೋ ಹಾಗೆಯೇ ಸಿವಿಲ್ ಕೋರ್ಟಿನವರಿಂದ ವಿಚಾರಣೆಯಾಗತಕ್ಕದ್ದು. ಮತ್ತು ಅಂಥಾ ತೀರ್ಪುಗಳು ಹಾಗೆಯೇ ಅಮಲ್‌ಜಾರಿ ನಡೆಸತಕ್ಕದ್ದು.

ಅರ್ಥವಿವರಣೆಯ ಕಲಂ. (೨.) ಈ ರೆಗ್ಯುಲೇಷನಿನಲ್ಲಿ ಅರ್ಥಕ್ಕಾಗಲೀ, ಅನ್ವಯಕ್ಕಾಗಲೀ ವಿರೋಧಾರ್ಥ ಹುಟ್ಟುವಂಥಾದ್ದೇನೂ ಇದ್ದ ಹೊರತು ಅನ್ಯಥಾ:—

"ಗ್ರಾಮ" ಎಂದರೆ ಜಮೀನ್ ಕಂದಾಯವನ್ನು ವಸೂಲ್ಮಾಡುವ ಬಗ್ಗೆ ಒಂದು ಗ್ರಾಮವೆಂದು ಆಗಿಂದಾಗ್ಯೆ ಗವರ್ನಮೆಂಟಿನವರು ಅಂಗೀಕರಿಸುವ ಸ್ಥಳೀಯ ಪ್ರದೇಶವೆಂದರ್ಥವು. ಪರಂತು ಗವರ್ನಮೆಂಟಿನವರು ಆಗಿಂದಾಗ್ಯೆ ಮೈಸೂರ ಗೆಜೆಟಿನಲ್ಲಿ ಪ್ರಕಟಿಸಲ್ಪಡುವ ಹುಕುಂ ಮೂಲಕ ಎರಡು ಯಾ ಹೆಚ್ಚು ಗ್ರಾಮಗಳನ್ನು ಒಂದು ಗುಂಪಾಗಿ ಮಾಡಿ ಆ ಗ್ರಾಮಗಳಿಗಾಗಿ ಒಂದು ಗ್ರಾಮ ಕೋರ್ಟನ್ನಾಗಲಿ, ಅಥವಾ ಯಾವ ಗ್ರಾಮದಲ್ಲಾದರೂ ಭಾಗಗಳನ್ನು ಏರ್ಪಡಿಸಿ ಅಂಥಾ ಪ್ರತಿ ಭಾಗಕ್ಕೂ ಬೇರೆಬೇರೆ ಗ್ರಾಮ ಕೋರ್ಟನ್ನು ಮುಕರರ್ಮಾಡಬಹುದು. ಗ್ರಾಮಗಳು ಈ ಮೇರೆ ಗುಂಪಾಗಿ ಕೂಡಿಸಲ್ಪಟ್ಟು ಯಾ ವಿಭಾಗಿಸಲ್ಪಟ್ಟು ಅಲ್ಲಿ ಒಂದು ಗ್ರಾಮ ಕೋರ್ಟ್ ಏರ್ಪಡಿಸಲ್ಪಟ್ಟಾಗ, ಸದರಿ ಕೋರ್ಟಿನ ಅಖ್ತ್ಯಾರಿಯೊಳಗಣ ಪ್ರದೇಶವು ಈ ರೆಗ್ಯುಲೇಷನಿನ ಅರ್ಥವಿವರಣೆಗೊಳಪಟ್ಟ ಒಂದು ಗ್ರಾಮವಾಗಿರತಕ್ಕದ್ದು.

"ಗ್ರಾಮಕೋರ್ಟ್"

"ಗ್ರಾಮ ಕೋರ್ಟ್" ಎಂಬ ಮಾತಿನಲ್ಲಿ ೨ನೇ ಪ್ರಕರಣಕ್ಕನುಗುಣವಾಗಿ ಏರ್ಪಟ್ಟ "ಬೆಂಚ್" ಎಂಬ ನ್ಯಾಯಸ್ಥಾನ ಕೂಡಾ ಸೇರುತ್ತದೆ.

"ಡಿಸ್ಟ್ರಿಕ್ಟ್ ಜಡ್ಜ್" "ಸಬಾರ್ಡಿನೇಟ್ ಜಡ್ಜ್" ಯಾ "ಮುನಸಿಫ್"

"ಡಿಸ್ಟ್ರಿಕ್ಟ್ ಜಡ್ಜ್" "ಸಬಾರ್ಡಿನೇಟ್ ಜಡ್ಜ್" ಯಾ "ಮುನಸಿಫ್" ಅಂದರೆ ಸದರಿ ಗ್ರಾಮ ಕೋರ್ಟ್ ಯಾವ ಡಿಸ್ಟ್ರಿಕ್ಟ್ ಜಡ್ಜ್ ಸಬಾರ್ಡಿನೇಟ್ ಜಡ್ಜ್ ಯಾ ಮುನಸಿಫ್ ಕೋರ್ಟಿನ ಸ್ಥಳಿಕ ಅಧಿಕಾರ ಸರಹದ್ದಿನ ಒಳಗೆ ಇರುತ್ತದೋ ಆ ಡಿಸ್ಟ್ರಿಕ್ಟ್ ಜಡ್ಜ್ ಸಬಾರ್ಡಿನೇಟ್ ಜಡ್ಜ್ ಯಾ ಮುನಸಿಫ್ ಎಂಬದಾಗಿ ಅರ್ಥವಾಗುತ್ತದೆ.

"ಗವರ್ನಮೆಂಟ್"

"ಗವರ್ನಮೆಂಟ್" ಅಂದರೆ ಮೈಸೂರು ಮಹಾರಾಜ ಸಾಹೇಬರವರ ಗವರ್ನಮೆಂಟ್ ಎಂದರ್ಥ.

೨ನೇ ಅಧ್ಯಾಯ.

ಗ್ರಾಮ ಕೋರ್ಟುಗಳ ಸ್ಥಾಪನೆ ವ ಏರ್ಪಾಡು.

೩. ಈ ರೆಗ್ಯುಲೇಷನ್ ಪ್ರಕಾರ ಸ್ಥಾಪಿಸಲ್ಪಟ್ಟ ಒಂದು ಗ್ರಾಮಕೋರ್ಟ್ ಈ ಕೆಳಗೆ ನಿಬಂಧಿಸಲ್ಪಟ್ಟ ಮೇರೆಗೆ ನೇಮಕವಾದ ಒಬ್ಬ ಗ್ರಾಮ ಮುನಸಿಫನ ಅಥವಾ ಒಬ್ಬ ನ್ಯಾಯಾಧಿಪತಿಗಿಂತ ಹೆಚ್ಚು ಮಂದಿಗಳಿರುವ ಬೆಂಚ್ ಎಂಬ ನ್ಯಾಯಸ್ಥಾನದ ಸಮಕ್ಷಮದಲ್ಲಿ ನಡೆಯತಕ್ಕದ್ದು.

ಗ್ರಾಮ ಮುನಸಿಫರ ಮುಕರರಾತಿ.

ಗ್ರಾಮಗಳ ಪಟೇಲರು, ಅವರ ಉದ್ಯೋಗದ ನಿಮಿತ್ತದಿಂದ ಆಯಾ ಗ್ರಾಮಗಳೊಳಗೆ ಮುನಸಿಫರಾಗಿರತಕ್ಕದ್ದು; ಆದರೆ ಒಂದು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಯಾವ ಸಂದರ್ಭದಲ್ಲಾದರೂ ಗ್ರಾಮ ಮುನಸಿಫನ ಕೆಲಸಗಳನ್ನು ನಡೆಸಲು ಪಟೇಲನು ಅಸಮರ್ಥನೆಂದು ಎಣಿಸಿದರೆ, ಅಂಥಾ ಪಟೇಲನಿಗೆ ಗ್ರಾಮಮುನಸಿಫನ ಅಧಿಕಾರಗಳನ್ನು ತಪ್ಪಿಸೋಣ ಅವರಿಗೆ ನ್ಯಾಯವಾಗಿರತಕ್ಕದ್ದಲ್ಲದೆ ಗವರ್ನಮೆಂಟಿನವರು ಆಗಿಂದಾಗ್ಯೆ ವಿಧಿಸಬಹುದಾದ ಶರಾಯಿತುಗಳಿಗೊಳಪಟ್ಟು ಬೇರೊಬ್ಬನನ್ನು ಡೆಪ್ಯುಟಿ ಕಮಿಷನರು ಮುಕರರ್ಮಾಡಬಹುದು; ಪರಂತು ಗ್ರಾಮದಲ್ಲಿ ವಾಸವಾಗದ ಮನುಷ್ಯನು ಆ ಉದ್ಯೋಗಕ್ಕೆ ಅರ್ಹನಾಗತಕ್ಕವನಲ್ಲವು.

ಗ್ರಾಮ ಮುನಸಿಫನ ತಗ್ಗೀರ್ ಯಾ ಅಮಾನತಿ.

೪. ಅಯೋಗ್ಯತೆ, ಉದ್ಯೋಗದ ಧರ್ಮವಾದ ಕೃತ್ಯದಲ್ಲಿ ಅಶ್ರದ್ಧೆ, ದುರ್ನಡತೆ, ಅಥವಾ ಇತರ ನ್ಯಾಯವಾದ ವ ಸಾಕಾದ ಸಬಬುಗಳ ಮೇಲೆ ಒಬ್ಬ ಗ್ರಾಮ ಮುನಸಿಫನನ್ನು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಅಮಾನತ್ ಮಾಡಲೂ, ಕೆಲಸದಿಂದ ತಗ್ಗೀರ್ ಮಾಡಲೂ ಬಹುದು; ಮತ್ತು ಒಬ್ಬ ಗ್ರಾಮಮುನಸಿಫನ ಜುಡಿಷಿಯಲ್ ವ್ಯವಹಾರದಲ್ಲಿ ತೋರಬಹುದಾದ ಅದೇತರದ ಸಬಬುಗಳ ಮೇಲೆ ಡಿಸ್ಟ್ರಿಕ್ಟ್ ಜಡ್ಜಿಯವರು ಹುಕುಂ ಕೊಟ್ಟಲ್ಲಿ ಡೆಪ್ಯುಟಿ ಕಮಿಷನರವರು ಆ ಪ್ರಕಾರ ಅಮಾನತ್ ಅಥವಾ ತಗ್ಗೀರ್ ಮಾಡತಕ್ಕದ್ದು.

ಒಬ್ಬ ಗ್ರಾಮ ಮುನಸಿಫನನ್ನು ಅಮಾನತ್ ಯಾ ಕೆಲಸದಿಂದ ತಗ್ಗೀರು ಮಾಡಿ ಡೆಪ್ಯುಟಿ ಕಮಿಷನರವರಿಂದ ಕೊಡೋಣಾದ ಪ್ರತಿ ಒಂದು ಹುಕುಮಿನ ಮೇಲೆ, ಸದರೀ ಹುಕುಂ ಡಿಸ್ಟ್ರಿಕ್ಟ್ ಜಡ್ಜಿಯವರ ಅಪ್ಪಣೆ ಮೇರೆಗೆ ಮಾಡೋಣಾಗದೆ ಇದ್ದಲ್ಲಿ ಗವರ್ನಮೆಂಟಿನವರಿಗೂ ಅಂಥಾ ಅಪ್ಪಣೆ ಮೇರೆಗೆ ಮಾಡೋಣಾಗಿದ್ದಲ್ಲಿ ಚೀಫ್ ಕೋರ್ಟಿಗೆ ಕೂಡಾ ಸದರೀ ಹುಕುಮಿನ ತಾರೀಖಿನಿಂದ ೩ ತಿಂಗಳ ಒಳಗಾಗಿ ಅಪ್ಪೀಲ್ಮಾಡಬಹುದು. ಗವರ್ನಮೆಂಟಿನವರಾಗಲೀ ಚೀಫ್ ಕೋರ್ಟಿನವರಾಗಲಿ ಸಂದರ್ಭಾನುಸಾರ ಅಂಥಾ ಅಪ್ಪೀಲುಗಳ ಮೇಲೆ ಕೊಟ್ಟ ತೀರ್ಪು ಆಖೈರಾಗಿರತಕ್ಕದ್ದು.

ಬೆಂಚುಗಳ ಬಾಬಿನಲ್ಲಿ ನಿಯಮ ಮತ್ತು ನೋಟೀಸ ಮೂಲಕವಾಗಿ ಅವುಗಳನ್ನು ಯಾವ ಗ್ರಾಮಕ್ಕಾದರೂ ಲಗಾವ ಮಾಡೋಣ.

೫. (೧) ಮೈಸೂರು ಗೆಜೆಟಿನಲ್ಲಿ ಗವರ್ನಮೆಂಟಿನವರು ಪ್ರಕಟಿಸುವ ಹುಕುಂ ಮೂಲಕವಾಗಿ ಈ ಪ್ರಕರಣದ ಕೆಳಗಣ ಕ್ಲಾಜುಗಳನ್ನು ಫಲಾನಾ ತಾರೀಖಿನಿಂದ ಯಾವದೊಂದು ಗ್ರಾಮದಲ್ಲಾಗಲೀ ಅಥವಾ ಯಾವದೊಂದು ಸ್ಥಳಿಕ ಪ್ರದೇಶದೊಳಗಣ ಗ್ರಾಮಗಳಲ್ಲಾಗಲಿ ಜಾರಿಯಲ್ಲಿ ಬರತಕ್ಕದ್ದೆಂತ ಅಪ್ಪಣೆ ಕೊಡಬಹುದು, ಮತ್ತು ಹಾಗೆಯೇ ಅಂಥಾ ಹುಕುಮನ್ನು ಆಗಾಗ್ಯೆ ತಿದ್ದುಪಡಿಮಾಡಲೂ ರದ್ದುಪಡಿಸಲೂ ಬಹುದು

ಬೆಂಚುಗಳಲ್ಲಿ ಕೆಲಸ ನೋಡುವದಕ್ಕೆ ಯೋಗ್ಯರಾದ ಜನರ ಪಟ್ಟಿಯನ್ನು ಇಡತಕ್ಕದ್ದು.

(೨) ಅಂಥಾ ಒಂದು ಹುಕುಂ ಜಾರಿಯಲ್ಲಿರುವ ಪ್ರತಿ ಒಂದು ಗ್ರಾಮದ ಬಗ್ಗೆ ಮತ್ತು ಗವರ್ನಮೆಂಟಿನವರು ಈ ಬಾಬಿನಲ್ಲಿ ಮಾಡಬಹುದಾದ ಯಾವದೊಂದು ಕ್ರಮಗಳಿಗೆ ಒಳಪಟ್ಟು, ಈ ರೆಗ್ಯುಲೇಷನಿಗನುಗುಣವಾಗಿ ತೀರ್ಪಡಬಹುದಾದ ವ್ಯಾಜ್ಯಗಳನ್ನು ಇತ್ಯರ್ಥಿಸುವ ಬಗ್ಗೆ ಬೆಂಚಿನ ಮೆಂಬರಾಗಿ ಕೂತುಕೊಳ್ಳುವದಕ್ಕೆ ಯೋಗ್ಯರಾದ ಸದರೀ ಗ್ರಾಮದ ನಿವಾಸಿಗಳ ಒಂದು ಪಟ್ಟಿಯನ್ನು ಡೆಪ್ಯುಟಿ ಕಮಿಷನರು ತಯಾರ್ಮಾಡಿ ಇಡತಕ್ಕದ್ದು; ಅಂಥಾ ಪಟ್ಟಿಯನ್ನು ಸದರೀ ಗ್ರಾಮ ಮುನಸೀಫನ ಕೋರ್ಟಿನಲ್ಲಿ ಬಿಗಿಯಿಸತಕ್ಕದ್ದು.

ವ್ಯಾಜ್ಯದ ಉಭಯ ಪಕ್ಷಗಾರರಲ್ಲೊಬ್ಬ ಯಾ ಪಕ್ಷದವರಾಗಲೀ ಬೆಂಚಿನವರಿಂದ ಇತ್ಯರ್ಥಿಸಲ್ಪಡತಕ್ಕದ್ದೆಂತ ಕೇಳಬಹುದು.

(೩) ಅಂಥಾ ಯಾವದೊಂದು ಗ್ರಾಮದ ಗ್ರಾಮ ಕೋರ್ಟ್ ಮುಂದೆ ದಾಖಲ್ಮಾಡಬಹುದಾದ ಯಾವದಾದರೂ ವ್ಯಾಜ್ಯದಲ್ಲಿ, ವಾದಿಯು ತನ್ನ ದಾವಾ ಅರ್ಜಿಯಲ್ಲಿ ಅಥವಾ ಪ್ರತಿವಾದಿಯು ತನ್ನ ಉದಾಹರಣೆಯಲ್ಲಿ ಸದರೀ ವ್ಯಾಜ್ಯವು ೩ ಜನ ಜಡ್ಜಿಯರಿಂದ ಕೂಡಿರುವ ಬೆಂಚಿನಿಂದ ಇತ್ಯರ್ಥಿಸಲ್ಪಡಬೇಕೆಂದು ಕೇಳಬಹುದು. ಮತ್ತು ಈ ಪ್ರಕರಣದ (೨) ನೇ ಒಳಕಲಮಿನಲ್ಲಿ ಹೇಳಿದ ಪಟ್ಟಿಯಲ್ಲಿ ನಮೂದಿರುವ ಯಾವನೊಬ್ಬ ಮನುಷ್ಯನನ್ನಾದರೂ ಸದರೀ ಬೆಂಚಿನ ಮೆಂಬರನ್ನಾಗಿ ಹೆಸರು ಹೇಳಬಹುದು; ಪರಂತು ಅಂಥಾ ಮನುಷ್ಯನು ಅವನ ನೌಕರ ಯಾ ತನ್ನ ವಾಸದ ಮನೆಯ ಯಜಮಾನ ಯಾ ಸಂಬಂಧಿ ಯಾ ಸಮೀಪದ ಒಕ್ಕಲು ಅಥವಾ ವ್ಯಾಜ್ಯದ ಫಲದಲ್ಲಿ ಸ್ವತಃ ಸಂಬಂಧಪಟ್ಟವನಾಗಿರಕೂಡದು.

ಬೆಂಚಿಗೆ ಮೆಂಬರಾಗಿ ಹೆಸರು ಹೇಳೋಣ.

(೪) ವಾದಿಯು ತನ್ನ ದಾವೇ ಅರ್ಜಿಯಲ್ಲಿ ಅಂಥಾ ಮನುಷ್ಯನ ಹೆಸರು ಹೇಳಿ ಇದ್ದರೆ ಪ್ರತಿವಾದಿ ಕೂಡಾ ಒಬ್ಬನ ಹೆಸರು ಹೇಳುವ ಹಾಗೆ ಸಮ್ಮನ್ನಲ್ಲಿ ವಿಧಿಸತಕ್ಕದ್ದು. ವ್ಯಾಜ್ಯವು ಬೆಂಚಿನಿಂದ ಇತ್ಯರ್ಥಿಸಲ್ಪಡಬೇಕಾಗಿ ಪ್ರತಿವಾದಿ ಅಪೇಕ್ಷಿಸಿ ಅಂಥಾ ಮನುಷ್ಯನ ಹೆಸರು ಹೇಳಿ ಇದ್ದರೆ ವಾದಿ ಕೂಡಾ ಒಬ್ಬ ಮನುಷ್ಯನ ಹೆಸರು ಹೇಳುವ ಹಾಗೆ ವಿಧಿಸತಕ್ಕದ್ದು. ಬೆಂಚಿನಲ್ಲಿ ಕೆಲಸ ನಡೆಸುವ ಬಗ್ಗೆ ಹೆಸರು ಹೇಳಲ್ಪಟ್ಟ ಯಾವನೊಬ್ಬ ಮನುಷ್ಯನು ಕೆಲಸ ನಿರ್ವಹಿಸಲಿಕ್ಕೆ ನಿರಾಕರಿಸಿದರೆ ಯಾ ನಿರ್ವಹಿಸುವದಕ್ಕೆ ಅಸಮರ್ಥನಾದರೆ ಅಂಥಾ ಮನುಷ್ಯನ ಹೆಸರು ಹೇಳಿದ ಕಕ್ಷಿಯು ಹೊಸದಾಗಿ ಇನ್ನೊಬ್ಬನನ್ನ ಹೆಸರು ಹೇಳುವ ಹಾಗೆ ವಿಧಿಸತಕ್ಕದ್ದು. (ಸಶೇಷ)

SUMMARY OF NEWS.

ವೃತ್ತಾಂತ ಸಂಗ್ರಹವು.

ಕೋಕನಾ ರಾಜ್ಯದ ದೊಡ್ಡ ಖಜಾನೆಯಲ್ಲಿ ೪೦,೦೦೦ ರೂಪಾಯಿಗಳು ಚೋರಿಯಾಗಿರುತ್ತೆ.

ಈಚೆಗೆ ಅಂದರೆ, ಕಳೆದ ಸೆಪ್ಟಂಬರ್ ತಿಂಗಳ ೨೦ನೇ ತಾರೀಖಿನಲ್ಲಿ, ರಾಜಮಹೇಂದ್ರ ಪಟ್ಟಣದಲ್ಲಿ ಬ್ರಾಹ್ಮಣರಲ್ಲಿ ಒಂದು, ವೈಶ್ಯರಲ್ಲಿ ಒಂದು, ಈ ಮೇರೆ ಎರಡು ವಿಧವಾ ವಿವಾಹಗಳು ನಡೆದವು.

ಮುಂಬೈ ಪಟ್ಟಣದ ಕೋಟೆಯಲ್ಲಿ ಫಾರ್ಸಿ ಬಜಾರ ಸ್ಟ್ರೀಟ್ ಎಂಬ ಬೀದಿಯಲ್ಲಿ ಒಂದು ಹಳೇ ಮನೆಯನ್ನು ಕೆಡವಿ ಪುನಃ ಕಟ್ಟಬೇಕೆಂದು ಕಾಮಗಾರಿ ಮಾಡಿಸುತ್ತಿದ್ದಾಗ್ಯೆ ಅಗಾಧವಾದ ದ್ರವ್ಯ ಸಿಕ್ಕಿರುತ್ತದೆಂದು ಬಹಳ ಗದ್ದಲ ಉಂಟಾಗಿರುತ್ತದೆ.

ಆಗ್ರಾ ಪಟ್ಟಣದ ಬಳಿಯಲ್ಲಿರುವ ಯಮುನಾ ನದಿಯ ಸೇತುವೆಯು ಆಕಸ್ಮಾತ್ ಕಳಚಿ ಬಿದ್ದುಹೋದದರಿಂದ ಅದರ ಮೇಲೆ ಹೋಗುತಲಿದ್ದ ಅನೇಕ ಬಂಡಿಗಳೂ ಜನರೂ ನೀರೊಳಗೆ ಬಿದ್ದು ಮುಳುಗಿಹೋಗಿ ಎಷ್ಟೋ ಮೊಸಳೆಗಳಿಗೆ ಆಹಾರವಾದರು

ಬಾದಾಮಿ ಎಂಬ ಪಟ್ಟಣದಲ್ಲಿ ಒಬ್ಬ ವಿಟಗಾರನು ತನ್ನ ಗೆಳತಿಯ ಮೂಗನ್ನು ಅರ್ಧರಾತ್ರಿಗೆ ಕೊಯಿದು ಹಾಕಿದ ತಪ್ಪಿತದ ಬಗ್ಗೆ ದಂಡಿಸಲ್ಪಟ್ಟನು ಅವನು ಸೆರೆಯಿಂ ಅನುಭವಿಸಿ ವಾಪಸ ಬಂದಮೇಲೆ ಅವಳ ಮೂಗಿನ ಮೈಕಿ ಉಳಿದದ್ದನ್ನು ಮೂಲೋತ್ಪಾಟನ ಮಾಡಿದನು.

ಹಿಂದ್ಯಾರದಲ್ಲಿ ಸಾಧಾರಣವಾದ ಒಂದು ದಿನ್ನೆಯಲ್ಲಿ ಎಂಟು ವರ್ಷಗಳ ವಯಸ್ಸಿನ ಒಬ್ಬ ಹುಡುಗನೂ, ನಾಲ್ಕೈದು ವರ್ಷಗಳ ವಯಸ್ಸಿನ ಒಬ್ಬ ಹುಡುಗಿಯೂ ಅದ್ಭುತ ಪರಬ್ರಹ್ಮರೂ ಆ ಪವಾಡದಲ್ಲಿ ಸಂಚರಿಸುತ ಪ್ರದಾನ ಸ್ಥಳ ಬೇಕಾದ ಭೋಜನವನ್ನೂ, ಬಟ್ಟೆಗಳನ್ನೂ, ಭಾಗ್ಯವನ್ನೂ ಕೊಡುತಲಿದ್ದಾರಂತೆ.

ಬಾಗದಾದಿನ ಬಳಿ ಒಂದು ಭಾವಿಯೊಳಗೆ ಒಂದು ಅಲದ ವೃಕ್ಷವಿದ್ದು ಅದರ ಬೇರುಗಳು ಆರು ಪರದಿ ದೂರದ ವರೆಗೆ ನೆಲದೊಳಗೆ ವ್ಯಾಪಿಸಿ, ಅಲ್ಲಲ್ಲಿ ದೊಡ್ಡದೊಡ್ಡ ಮರಗಳಾಗಿ ಬೆಳೆದಿರುತಿವೆ. ಮತ್ತು ಸದರೀ ಗಿಡಗಳ ಕಟ್ಟೆಯಿಂದ ಒಂದುವಿಧ ರಸ ತುಪ್ಪದಂತೆ ಹೊರಡುತ ದೀಪ ಹಚ್ಚುವ ಕೆಲಸಕ್ಕೆ ಅಲ್ಲಿನವರಿಗೆ ಬಹಳ ಉಪಯುಕ್ತವಾಗಿರುತಿದೆ.

ಫೋನೊಗ್ರಾಫ್ ಎಂಬ ಹೆಸರಿನ ಒಂದು ಯಂತ್ರವು ಇಟಲಿ ದೇಶದ ಪಾರ್ಲಿಮೆಂಟಿನಲ್ಲಿ ಇಡಲ್ಪಟ್ಟಿದೆ. ಇದರಿಂದ ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣಗಳನ್ನು ಸಂಕ್ಷಿಪ್ತರೀತಿಯಿಂದ ಬಹುವೇಗ ಬರೆದುಕೊಳ್ಳಲು ಬರುತಿದೆ. ಇದರ ವೇಗವು ಒಂದು ಮಿನಿಟಿಗೆ ೨೫೦ ಶಬ್ದಗಳನ್ನು ಬರೆದುಕೊಳ್ಳುವಷ್ಟು ಇರುತಿದೆ. ಮತ್ತು ಈ ಯಂತ್ರವನ್ನು ಕುರುಡನು ಕೂಡ ನಡೆಸಬಹುದಂತೆ.

ಕಲ್ಕತ್ತೆಯ ನೀರಿನ ಪೋಲೀಸ ಇನ್ಸ್‌ಪೆಕ್ಟರಾದ ಮಿಸ್ಟರ್ ಪ್ರಿನ್ಸ್ಲೀ ಎಂಬವರು ನೀರಿನಲ್ಲಿ ಮುಳುಗುವಂತಾ ಮನುಷ್ಯರನ್ನೂ ಸಾಮಾನುಗಳನ್ನೂ ಉಳಿಸಿಕೊಳ್ಳುವ ಬಗ್ಗೆ ಹೊಸ ನಮೂನೆಯ ಒಂದು ಯಂತ್ರವನ್ನು ಹುಡುಕಿ ತೆಗೆದಿದ್ದಾರೆ. ಇಲ್ಲಿನ ಪ್ರಿನ್ಸೆಸ ಡಾಕ್ ಎಂಬ ಗೋದಿ ಕಾರ್ಖಾನೆಯಲ್ಲಿ ಈ ಯಂತ್ರದ ಅನುಭವ ತೆಗೆದುಕೊಳ್ಳುವವರಿದ್ದಾರೆ.

ಹೈಕೋರ್ಟಿನಲ್ಲಿ ಅಪೀಲುದಾಖಲ್ಮಾಡುವಂತವರು ಸದರೀ ಅಪೀಲಿಗೆ ಸಂಬಂಧಪಟ್ಟ ರೆಕಾರ್ಡ ವಗೈರೆಗಳನ್ನು ತರ್ಜುಮೆ ಮಾಡಿ ಅಚ್ಚು ಹಾಕಿಸಬೇಕೆಂದು ಅರ್ಜಿ ಕೊಡುವದಕ್ಕೆ ಪೂರ್ವ ಫಲಾನಾ ದಸ್ತಾವೇಜನ್ನು ತರ್ಜುಮೆ ಮಾಡಿ ಅಚ್ಚು ಹಾಕಿಸುವಂತೆ ಅರ್ಜಿ ಕೊಡುವವನಾಗಿದ್ದೇನೆಂದು ಪ್ರತಿವಾದಿಗಳಿಗೆ ಲಿಖಿತಮೂಲಕ ನೋಟೀಸ ಕೊಟ್ಟು, ಆ ಸಂಗತಿಯನ್ನು ಅಪ್ಲಿಕೇಷನ್ನಲ್ಲಿ ನಮೂದಿಸಬೇಕೆಂದು ಹೈಕೋರ್ಟಿನವರ ಹುಕುಂ ಆಗಿದೆ.

ಬರ್ಹಾಂಪುರದ ಡಿಸ್ಟ್ರಿಕ್ಟ್ ಮುನಸಫ್ ಕೋರ್ಟ್ ಪ್ಲೀಡರಾದ ಸುಂದರಂ ಪಂತಲುವರು ತನ್ನ ಕಕ್ಷಿಗಾರನು ಕೊಟ್ಟ ಒಂದು ತಪ್ಪುದಸ್ತಾವೇಜನ್ನು ದುರಾಲೋಚನೆಯಿಂದ ಕೋರ್ಟಿನಲ್ಲಿ ದಾಖಲ್ಮಾಡಿದ ತಪ್ಪಿತದ ಬಗ್ಗೆ ವಿಶಾಖಪಟ್ಟಣದ ಡಿಸ್ಟ್ರಿಕ್ಟ್ ಜಡ್ಜಿಯವರು ಆತನಿಗೆ ಆರು ತಿಂಗಳ ಸಾಧಾರಣ ಕೈದ್ ಸಜಾ ಮತ್ತು ಒಂದು ಸಾವಿರರೂಪಾಯಿಗಳ ಜುರ್ಮಾನೆ ವಿಧಿಸಿದರು. ಆದರಮೇಲೆ ಅವರು ಮದರಾಸ ಹೈಕೋರ್ಟಿಗೆ ಮಾಡಿದ ಅಪೀಲ್ ವಿಚಾರಣೆಯಲ್ಲಿ ಅಪೀಲ್‌ವಾದಿಯ ಮೇಲೆ ಹೊರಿಸಲ್ಪಟ್ಟ ತಪ್ಪು ಅನುಮಾನಾಸ್ಪದವಾಗಿದೆಯೇ ಹೊರತು ಪ್ರತ್ಯಕ್ಷ ರುಜುವಾತ್ ಸಾಲದೆಂಬ ಕಾರಣದಮೇಲೆ ಕೆಳಕೋರ್ಟಿನವರು ವಿಧಿಸಿದ ದಂಡನೆಯನ್ನು ಅಪೀಲ್ ಕೋರ್ಟ್ ಜಡ್ಜಿಗಳು ರದ್ದುಮಾಡಿದರು.

ಜರ್ಮನೀ ದೇಶಕ್ಕೊಳಪಟ್ಟ ಕ್ಯಾನಿಂಗ್ ಎಂಬ ಪ್ರದೇಶದೊಳು ಹರಿಯುತಲಿದ್ದ ಒಂದು ಆಳವಾದ ಹೊಳೆಯ ದಡದಮೇಲೆ ೧೦ ವರ್ಷಗಳ ವಯಸ್ಸಿನ ಒಬ್ಬ ಹುಡುಗನೂ ಹುಡುಗಿಯೂ ಆಡುತಲಿರಲು ಆಕಸ್ಮಾತ್ ಸದರೀ ಇಬ್ಬರೂ ಹೊಳೆಯಲ್ಲಿ ಬಿದ್ದು ಮುಳುಗಿ ಹೋದದನ್ನು ಅಲ್ಲಿದ್ದ ನಾಯಿಯು ನೋಡಿ ಕೂಡಲೇ ನೀರೊಳಗೆ ಧುಮಿಕಿ ಆ ಹುಡುಗನ ಅಂಗಿಯನ್ನು ಕಚ್ಚಿಕೊಂಡು ಹುಡುಗನನ್ನು ಸೆಳದುಕೊಂಡು ಬಂದು ದಡದಮೇಲೆ ಹಾಕಿ ಮರಳಿ ನೀರೊಳಗೆ ಧುಮಿಕಿ ಅದೇರೀತಿ ಹುಡುಗಿಯನ್ನೂ ತಂದುಹಾಕಿ ಕೂಡಲೇ ಊರೊಳಕ್ಕೆ ಹೋಗಿ ಮನೆಗಳ ಹತ್ತಿರ ಅಂಗಿಯನ್ನು ಹಿಡಿದು ಸೆಳಕೊಂಡು ಬಂದು ಸದರೀ ಇಬ್ಬರನ್ನು ತೋರಿಸಿತು. ಅವರು ಸದರೀ ನಾಯಿಯ ಬುದ್ಧಿ ವಿಶೇಷಕ್ಕೆ ಬೆರಗಾಗಿ, ಆ ಇಬ್ಬರನ್ನೂ ಎಚ್ಚರಗೊಳಿಸಿ ಮನೆಗೆ ಕರದುಕೊಂಡು ಹೋಗಿದ್ದರು.

ಹುಚ್ಚನಾಯಿ ಕಚ್ಚಿದ್ದಕ್ಕೆ ಉಪಾಯ — ಹುಚ್ಚನಾಯಿಗಳ ದೆಸೆಯಿಂದ ಅನೇಕರು ಸಾಯುತ್ತಾರೆ. ಅದಕೆ ಇದುವರೆಗೆ ಏನೂ ಕ್ರಮ ದೊರೆಯಲಿಲ್ಲ. ವಿಶೇಷ ಶ್ರಮ ತಾಳದ ಒಂದು ಸುಲಭವಾದ ಉಪಾಯವು ನೂತನವಾಗಿ ಹೊರಬಿದ್ದಿರುತ್ತದೆ. ಯಾವನಿಗೆ ಹುಚ್ಚನಾಯಿ ಕಚ್ಚಿದ ವಿಷದಿಂದ ಬಾಧೆಯುಂಟಾಗಲಿಕ್ಕೆ ಪ್ರಾರಂಭವಾಗಿರುವದೋ ಅವನನ್ನು ಒಂದು ಬೆತ್ತದ ಹೆಣಿಕೆಯ ಸಣ್ಣ ಕುರ್ಚಿಯ ಮೇಲೆ ಇಲ್ಲವೆ ವಿಶ್ರಾಂತಿಯ ಕುರ್ಚಿಯಮೇಲೆ ಮಲಗಿಸಿ ಅಲ್ಲಾಡದಂತೆ ಕಟ್ಟಿ, ಆ ಕುರ್ಚಿಯ ಸುತ್ತುಮುತ್ತಲು ಗೋಣಿ ಇಲ್ಲವೆ ಬ್ಲಾಂಕೆಟ್‌ಗಳನ್ನು ಸುತ್ತಿ ಒಳಗೆ ಗಾಳಿ ಆಡದಂತೆ ಮಾಡಬೇಕು. ಆಮೇಲೆ ಒಂದು ಪಾತ್ರೆಯಲ್ಲಿ ನೀರು ಎಸರು ಬರುವಂತೆ ಕಾಸಿ ಅದನ್ನು ಆ ಕುರ್ಚಿಯ ಕೆಳಕ್ಕೆ ಇಟ್ಟು ಅವನಿಗೆ ಚನ್ನಾಗಿ ಉಗಿ ಕೊಡಬೇಕು. ಈ ರೀತಿ [illegible] ಉಗಿ ಕೊಡುವದರಿಂದ ರಕ್ತದಲ್ಲಿ ಬೆರೆತಿದ್ದ ವಿಷವು ದೇಹದ ಬೆವರಿನ ದ್ವಾರವಾಗಿ ಹೊರಟು ಹೋಗಿ ಬಾಧೆಯು ನಿರ್ಮೂಲವಾಗುವದು. ಈ ಉಪಾಯವು ನಿಶ್ಶಂಕೆಯಾಗಿ ಗುಣ ಕೊಡುವಂತಹದ್ದೆಂದು ಅನೇಕ ಅನುಭವಗಳಿಂದ ಸಿದ್ಧವಾಗಿರುತ್ತದಂತೆ. ಇದನ್ನು ಎಲ್ಲರೂ ಧ್ಯಾನದಲ್ಲಿಟ್ಟುಕೊಳ್ಳತಕ್ಕದ್ದು —ಲೋ. ಬಂ.

ನಮ್ಮ ಬಿದಂಕುಂಟಿಯಲ್ಲಿ ಹೊಗೆಬಂಡಿ ಯಂತ್ರದ ಒಂದು ಚಕ್ರ ಹುಟ್ಟಿ ಗರಗರನೆ ತಿರುಗುತ್ತಾ ಹೋಗಿ ಕುಂಬಾರಿಕೆ ಕೇರಿಯಲ್ಲಿ ಐಕ್ಯವಾಗಿ ಅಲ್ಲಿಂದ ಅದ್ಭುತಧ್ವನಿಯಾಗಿ ಭೂಮಿಯನ್ನು [illegible] ಹೊಗೆಯೋಪಾದಿಯಲ್ಲಿ ಪಶ್ಚಿಮ ದಿಕ್ಕಿಗೆ ಸೇರಿ ಅಲ್ಲಿ [illegible] ಆಯಿತು. ಇದು ಉರಿದೊತ್ತಿನ ಭಯಾವತ್ತು ಜನರು ನೋಡಿದ್ದಾರೆ. ಇದು ಉದ್ಭವಿಸಿದ ಸ್ಥಳದಲ್ಲಿ ಮೂರಡಿ ಹಾದ್ದು ಬಿದ್ದಿರುತ್ತದೆ. ಚಕ್ರವು ಹಾಯ್ದು ಹೋದ ಸ್ಥಳದಲ್ಲಿ ಎಂಟು ಮಾರ ಪ್ರಮಾಣವಾಗಿ ಬೆಳೆಗಳ ಹೊತೆಗಳು ಮತ್ತು ಎಲೆಗಳು ಅದೃಶ್ಯವಾಗಿ ಬಿದ್ದಿರುತ್ತವೆ. ಕೈರಿಲ್ಲದಲ್ಲಿ (ಹೂರತಿ ಭೂಮಿಯಲ್ಲಿ) ಕಲ್ಲುಗಳು ಒಂದಕ್ಕೊಂದು ತಾಕಲಾಡಿ ಅಲ್ಲಲ್ಲಿಗೆ ಪಾಷಾಣಗಳ ಗುಂಪು ಬಿದ್ದಿರುತ್ತದೆ. ಸದರೀ ಚಕ್ರವು ಹೋಗುವುದನ್ನು [illegible] ನೋಡಿ ಹೊಲದೊಳಗಿನ ಜನರೂ, ದನಕಾಯುವ ಹುಡುಗರು ಸ್ಮೃತಿತಪ್ಪಿ ಅಲ್ಲಿಯೇ ಸುಸ್ತಾಗಿ ಬಿದ್ದರು. ದನಗಳು ಬೆದರಿ ಚಕ್ಕೊತ್ತಿಗೆ ಓಡಿಹೋದವು. ಮಂಗಳವಾರ ಬೆಳಿಗ್ಗೆ ಬದರಕೊಂಡಿ ಮುದ್ದೀಬಿಹಾಳ ಕೊಂಟೋಜಿ [illegible] ಮೇಲೆ ಬರೆದ ಅನರ್ಥವು ಒದಗಿತು. [illegible] ಇದು ಐಕ್ಯವಾದ ಸ್ಥಳದಲ್ಲಿ ಸಣ್ಣಾಗಿ ಜಲವು ಹರಿಯುತ್ತದೆ. ಪರಮಾತ್ಮನ ಲೀಲೆಯು [illegible] —ಲೋ. ಬಂ.

ವಾಯುವ್ಯ ಪ್ರಾಂತದಲ್ಲಿ ಸೀತಾಪುರ ಎಂಬ ಗ್ರಾಮದಲ್ಲಿರುವ ಶ್ಯಾಮಲಾಲನೆಂಬ ಸಾಹುಕಾರನು ಕಟ್ಟಿಸಿದ ಒಂದು ದೇವಾಲಯವನ್ನು ಭ್ರಷ್ಟಪಡಿಸಿದ ಪ್ರಕರಣವನ್ನು ನಾವು ಒಂದೆರಡು ವಾರಗಳ ಹಿಂದೆ ತಿಳಿಸಿದ್ದೆವಷ್ಟೆ. ಈ ಸಂಬಂಧವಾಗಿ ವರ್ತಮಾನ ಪತ್ರಗಳಲ್ಲಿ ಆದ ಗದ್ದಲವು ಸ್ಥಳಿಕ ಸರ್ಕಾರದವರ ಕಿವಿಯ ತನಕ ಮುಟ್ಟಿದ್ದರಿಂದ, ಅವರು ಲೋಕಲ್ ಕಮಿಷನರವರಿಗೆ ಈ ವಿಷಯ ಚೌಕಸಿ ಮಾಡಲಿಕ್ಕೆ ಅಪ್ಪಣೆ ಕೊಟ್ಟರು. ಇವರು ಸ್ವತಃ ಸೀತಾಪುರಕ್ಕೆ ಹೋಗಿ ಚೌಕಸಿ ಮಾಡಿ ಡೆಪ್ಯುಟಿ ಕಮಿಷನರವರು ದೇವಾಲಯವನ್ನು ಕಿತ್ತು ತೆಗೆಯುವ ಬಗ್ಗೆ ಶ್ಯಾಮಲಾಲನಿಗೆ ಕೊಟ್ಟ ಹುಕುಂ ರದ್ದು ಪಡಿಸಿದ್ದಲ್ಲದೆ ಶ್ಯಾಮಲಾಲನ ಕಡೆಯಿಂದ ಬಲಾತ್ಕಾರದಿಂದ ಕಸಗೊಂಡ ಕೀಲಿಗಳನ್ನು ಸಹ ಶ್ಯಾಮಲಾಲನಿಗೆ ತಿರುಗಿ ಕೊಡಿಸಿದರೆಂದು ಕೇಳಲಿಕ್ಕೆ ಸಂತೋಷಪಡುತ್ತೇವೆ. ಇಷ್ಟರವರಿಗೆ ಬಹಳ ಯೋಗ್ಯವೇ ಆಯಿತು. ಆದರೆ ಡೆಪ್ಯುಟಿ ಕಮಿಷನರ ಅವಿಚಾರದ ನಡತೆಯ ದೆಸೆಯಿಂದ ದೇವಾಲಯವು ಭ್ರಷ್ಟಪಡಿಸಿದ ಬಗ್ಗೆ ಶ್ಯಾಮಲಾಲನಿಗೆ ನಿವಾರಣ ಹಿಂಸೆ ಪಡಿಸಿದ ಬಗ್ಗೆ ಯಾವ ಬಗೆಯಿಂದ ಸಮಾಧಾನ ಮಾಡಲು ಯೋಚಿಸಿದ್ದಾರೋ ತಿಳಿಯದು. ಸದರೀ ದೇವಾಲಯದಲ್ಲಿ ಸಂಪ್ರೋಕ್ಷಣೆ ವಗೈರೆ ನಡೆಸಿ ಶುದ್ಧಪಡಿಸಿ ಸಾರ್ವಜನಿಕ ಪೂಜೆಗೆ ಯೋಗ್ಯಪಡಿಸುವದಕ್ಕೆ ಹತ್ತಬಹುದಾದ ಖರ್ಚನ್ನು ಸದರೀ ಡೆಪ್ಯುಟಿ ಕಮಿಷನರ ಕಡೆಯಿಂದ ಸರ್ಕಾರದವರು ಕೊಡಿಸಬೇಕಾಗಿ ನಮ್ಮ ಸೂಚನೆ ಉಂಟು. ಹೀಗೆ ಮಾಡುವದರಿಂದ ಸದರೀ ಡೆಪ್ಯುಟಿ ಕಮಿಷನರವರು ಇನ್ನು ಮುಂದೆ ಇಂಥಾ ಅವಿಚಾರ ನಡೆಸದಹಾಗೆ ಚನ್ನಾಗಿ ನೆನಪು ಉಳಿಯುವಂತೆ ಆಗುವದಲ್ಲದೆ, ಈ ಮಾದರಿಯು ಇತರ ಉದ್ಯೋಗಸ್ಥರಿಗೆ ಇಂಥಾ ಕೆಲಸಗಳಿಗೆ ಕೈ ಹಾಕದಂತೆ ಒಳ್ಳೇ ಎಚ್ಚರ ಕೊಟ್ಟಂತೆ ಆದೀತು —ಕ. ಸು.

BANGALORE:—Printed and published at the KARNATAKA PRESS, No 40, HOSPITAL ROAD PETTAH.—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿಧಪ್ರವೃತ್ತಿವಿಶಗಮಾರ್ಗಕರ್ನಾಟಕಪ್ರಕಾಶಿಕಸಂಭಾಷಣಪ್ರಕ್ಷೇಪಿತಸಾಹಿತೀಕೋಭಿತಾ|ಮ್ಯಾಗಾಂಕಹಿತವಾಸನೆನಿಹಿತಮುದ್ರಣಾಸಜ್ಜನೈರ್ವಿಷಾಸುಪರಿಪೂರ್ಣಾಧಿತಾದಿಶಕ್ತಿಮಾನಸಂಸುಮದಂ||

Vol. XIX] BANGALORE—MONDAY, OCTOBER 17, 1892 [No. 41.

[ಸಂಪುಟ ೧೯.] ಬೆಂಗಳೂರು:—ಸರ್ ೧೮೯೨ ನೇ ಇಸವಿ ಅಕ್ಟೋಬರ್ ೧೭ ನೇ ತಾರೀಖ್ ಸೋಮವಾರ. [ಸಂಚಿಕೆ ೪೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲೀಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ಹಣಮುಂಚಿತ	ಪರಸ್ಥಳದವರಿಗೆ ಹಣಹಿಂದೆ
ಮುಂಗಡವಾಗಿ ಕೊಟ್ಟರೆ	8—0—0	9—0—0
ಹಿಂದಾದರೆ ,,	9—0—0	10—8—0

ಇಂಗ್ಲೀಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡವಾಗಿ ಕೊಟ್ಟರೆ	4—0—0	5—0—0
ಹಿಂದಾದರೆ ,,	5—0—0	6—0—0

ಈ ವರೆಗೆ ದರಗಳನ್ನು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡಬೇಕು. ಕೆಲವು ಜನಂತವರಿಗೆ ಮಾತ್ರವೇ ಅಡ್ವಾನ್ಸ್ ದರದಂತೆ ಪತ್ರಿಕೆ ಕಳುಹಿಸಲ್ಪಡುವದು. ಚಂದಾದಾರರು ಇಂಗ್ಲೀಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳುವುದು ಮತ್ತಾವ ತಿಂಗಳಿಗೆ ಬಿಡುವುದೋ ಆ ಚಂದಾ ಸಿಕ್ಕುವರೆಗೂ ಕಳುಹಿಸಲ್ಪಡುವದಿಲ್ಲ.

ಪ್ರಕಟನೆಯ ರಿವಾಜ್.

ಮೊದಲನೆ ಸಾರಿ ಸಾಲೊಂದಕ್ಕೆ	೦—೨—೦
ಎರಡನೆಯ ಸಾರಿ ಸಾಲೊಂದಕ್ಕೆ	೦—೧—೦

ಷರಾ—ಎರಡಕ್ಕಿಂತ ಹೆಚ್ಚು ಸಾರಿ ಪ್ರಕಟಿಸಬೇಕಾದರೆ ಸ್ಪೆಷಲ್ ಕಂಟ್ರಾಕ್ಟ್ ಮಾಡಿಕೊಳ್ಳಬಹುದು. ಈ ಪತ್ರಿಕೆಯಲ್ಲಿ ಪ್ರಕಟಿಸಬೇಕಾದ ಸಂಗತಿಗಳನ್ನು ಕಳುಹಿಸುವವರು ತಮ್ಮ ಹೆಸರು ವಿಳಾಸಗಳನ್ನು ಬರೆಯಬೇಕು. [illegible]

ADVERTISEMENTS

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಕನ್ನಡದಲ್ಲಿ ಬರೆಯಲ್ಪಟ್ಟಿದೆ. [illegible] ಬೇಕಾದವರು ಈ ಕೆಳಗೆ ಹೇಳಿರುವವರಿಗೆ ಬರೆಯಬೇಕು.

ಬೆಲೆ ಕ್ರಮ—ವ್ಯಾಲ್ಯೂ ಪೇಯಬಲ್ ಮತ್ತು ಅಂಚೆ ಖರ್ಚು ಸೇರಿ ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರ್, ಮಹಲ್ ಆಸ್ಪತ್ರೆ ರೋಡ್ ೪೮ ನೇ ನಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭ ಚಾರ್ಜಿನಿಂದ ತ್ವರಿತವಾಗಿಯೂ ಶುದ್ಧವಾಗಿಯೂ ಮಾಡಲ್ಪಡುವವು.

ಇದರಲ್ಲಿ ಸಂಸ್ಕೃತ ಇಂಗ್ಲೀಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುತ್ತವೆ. ಇತರ ವಿವರಗಳನ್ನು ಮನೇಜರ್ ಕರ್ಣಾಟಕ ಪ್ರೆಸ್ ರವರಿಗೆ ಬರೆದು ತಿಳಿದುಕೊಳ್ಳಬಹುದು.

ನೋಟೀಸ್.

ನುಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈ ಕೆಳಗೆ ಬರೆದಿರುವ ಔಷಧಗಳು ತಯಾರಿಸಲ್ಪಟ್ಟಿವೆ. ಇವುಗಳ ಹೆಚ್ಚಿನ ವಿವರಗಳು ಬೇಕಾದವರು ಅವರಿಗೆ ಬರೆದು ತಿಳಿದುಕೊಳ್ಳಬಹುದು. ಈ ಔಷಧಗಳು ಪ್ರಶಸ್ತವಾದ ಕೆಲವು ಸಿದ್ಧಕ್ರಿಯೆಗಳಿಂದ ತಯಾರಾದವುಗಳೂ, ಅನುಭವಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವುಗಳೂ ಆಗಿರುತ್ತವೆ. ತಮ್ಮ ರೋಗಸ್ವರೂಪವನ್ನು ವಿವರವಾಗಿ ಬರೆದು ಕಳುಹಿಸಿದರೆ ಔಷಧಗಳ ಕ್ರಮವನ್ನು ಸಹ ತಿಳಿಸಲ್ಪಡುವುದು. ಹಾಗೆ ಕಾಗದ ಬರೆಯತಕ್ಕವರು ಅಪೇಕ್ಷಿಸಲ್ಪಡುವ ಪ್ರತ್ಯುತ್ತರಕ್ಕೆ ಸಹ ತಮ್ಮ ಕಾಗದದಲ್ಲಿ ಅರ್ಧಾಣೆ ಸ್ಟಾಂಪ್ ಇಟ್ಟು ಕಳುಹಿಸಬೇಕು. ವ್ಯಾಲ್ಯೂಪೇಯಬಲ್ ಮೂಲಕ ಸಹ ಪದಾರ್ಥಗಳು ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತೆಗೆದುಕೊಳ್ಳದೆ ನಿರಾಕರಿಸಿದರೆ ಆ ಬಾಬತು ವ್ಯಾಲ್ಯೂ ಪೇಯಬಲ್ ಖರ್ಚು ಅವರೇ ಕೊಡಬೇಕಾಗುವುದು.

ತೈಲ—ಮಹಾತಕ್ರತೈಲ, ಇದು ತಲೆ ನೋವಿಗೂ, ವಾತ ಸಂಬಂಧಗಳಾದ ಮತ್ತು ಪಿತ್ತಸಂಬಂಧಗಳಾದ ಸಕಲ ವ್ಯಾಧಿಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ಶಿರೋವ್ಯಾಧಿ ವೇದನೆಗಳಿಗೂ ಬಹಳ ಶ್ಲಾಘ್ಯವಾದ ನಿವಾರಕವಾದದ್ದಾಗಿದೆ, ಸಣ್ಣ ಸೀಸೆ ಒಂದಕ್ಕೆ ೧ ರೂ, ದೊಡ್ಡ ಸೀಸೆ ೧ಕ್ಕೆ ೫ ರೂ.

ಜ್ವರದ ಗುಳಿಗೆಗಳು.—ಇವು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತೆ, ರೂ. ೧ಕ್ಕೆ ೧೨ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೧೨ ದಿವಸಗಳವರೆಗೆ ಉಪಯೋಗಿಸುತ್ತಾ ಹೊಟ್ಟೆಗೆ ತೆಗೆದುಕೊಂಡರೆ ಸಕಲವಿಧ ಮೇಹಗಳೂ, ಸರ್ಪಗಳೂ, ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ಕ್ಕೆ ೨—೮—೦

ದಂತರೋಗಕ್ಕೆ ಚೂರ್ಣ.—ಹುಳುಕಾದ ಹಲ್ಲುಗಳು, ಸಡಲ ಬಿದ್ದಿರುವ ಹಲ್ಲುಗಳು, ಇವುಗಳನ್ನು ಮಾರವಾಗಿ ಘಟ್ಟಿಪಡಿಸಿ ಕಾಂತಿಯನ್ನುಂಟುಮಾಡುವುದು. ಇದು ಪುಡಿರೂಪವಾದ್ದು. ಡಬ್ಬಿ ೧ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು

ನೇತ್ರರೋಗಕ್ಕೆ ಪಾತ್ರೆ—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಲ್ಲಿ ನೀರು ಸುರಿಯುವುದು, ಬಳುಕಾಮೊದಲಾದ ಸಕಲರೋಗಗಳಿಗೂ ಪ್ರಶಸ್ತವಾದವು ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಪಾತ್ರೆ ೧ಕ್ಕೆ ೪ ಆಣೆ, ಇದು ೪೦ ದಿನಗಳವರೆಗೆ ಒಂದು ಹೊತ್ತು ಹಾಕಿಕೊಳ್ಳಬಹುದು.

ಮೂಲವ್ಯಾಧಿ—ಒಂದು ಲೇಹ್ಯವು ತಯಾರಾಗಿದೆ, ಇದರಿಂದ ದೀರ್ಘಕಾಲಿಕವಾದ ಮೂಲೋಪದ್ರವಗಳೆಲ್ಲವು ವಾಸಿಯಾಗುತ್ತವೆ. ಒಂದರ ೧ಕ್ಕೆ ೧ ರೂಪಾಯಿ. ಇದನ್ನು ಬೆಳಿಗ್ಗೆಯಲ್ಲಿ ನಿಯತವಾಗಿ ಧರಿಸಿಕೊಂಡಿರತಕ್ಕದ್ದು. ಇದರ ಸ್ವಭಾವ ಮೂಲೋಪದ್ರವವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಂಬ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ವಗೈರೆ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾದವು, ಇವು ನಾನಾ ಕಾಮಿಲಾಕ್ಷಯವೇ ಸಕಲ ಪ್ರಬಲ ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ. ರೋಗ ಸ್ವರೂಪವನ್ನು ಗುರುತಾಗಿ ಬರೆದರೆ ಅವರವರಿಗೆ ಬೇಕಾದ ಭಸ್ಮ ಕ್ರಮವು ಕಳುಹಿಸಲ್ಪಡುತ್ತದೆ.

ಲೇಹ್ಯಗಳು.—ಸುವರ್ಣಮಾಲಿನಿ, ಚಿಂತಾಮಣಿ, ಕೂಷ್ಮಾಂಡ ವಗೈರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೇರು ೧ಕ್ಕೆ ೪ ರೂ.

ಪರಿಮಳದ್ರವ್ಯಗಳು.—ಗಂಧ, ಜವಾಜಿ, ಪುನುಗು, ಪಚ್ಚೆ ಕರ್ಪೂರ, ಕಸ್ತೂರಿ, ಕುಂಕುಮ ಕೇಸರಿ ಮೊದಲಾದವುಗಳು ತಯಾರಾಗಿವೆ. ಒಂದು ಸೀಸೆ ೧ಕ್ಕೆ ೨ ರೂ.

ಚೂರ್ಣಗಳು.—ಮಹಾ ಪುಷ್ಟಿಕರ ಚೂರ್ಣ, ಅಗ್ನಿ ಚೂರ್ಣ, ಶಿಲಾಜಿತು ವಗೈರೆ ಚೂರ್ಣಗಳು ಇವುಗಳು ಪಿತ್ತ, ವಾತ, ಪ್ರಮೇಹಗಳಿಗೆ ಉಪಯುಕ್ತವಾದವು. ಇದು ೪೦ ದಿನಗಳಿಗೆ ತೆಗೆದುಕೊಳ್ಳಬಹುದು, ತೊಲೆ ೧ಕ್ಕೆ ೧ ರೂ.

ಫಾರೆಸ್ಟ್ ಇಲಾಖಾ.

ಇಷ್ತಿಹಾರ್.

೨೬ ನೇ ಸೆಪ್ಟಂಬರ್ ೧೮೯೨.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಸಂಡಲ್ ಸಾಲೀಯಾನಾ ಹರಾಜ್, ಇದರಡಿ ತಿಳಿಸಿಲ್ಪಡುವ ಸ್ಥಳಗಳಲ್ಲಿ, ಅದರದರ ರೂಬರೂಚ್ ನಮೂದಿಸಲ್ಪಟ್ಟಿರುವ ತಾರೀಖ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಮತ್ತು ಫಾರೆಸ್ಟ್ ಆಫಿಸರುಗಳಿಂದ ಹರಾಜ್ ಮಾಡಲ್ಪಡುವುದು.

				ಟನ್ನುಗಳು.	
ಸಾಗರ	೧೪ ನೇ ನವಂಬರ್, ೧೮೯೨.			೨೦೦	ಸ್ವಲ್ಪ ಹೆಚ್ಚು ಕಡಮೆ
ಶಿವಮೊಗ್ಗ	೧೮ ನೇ	,,	,,	೪೦೦	,,
ತೀರ್ಥಹಳ್ಳಿ	೨೨ ನೇ	,,	,,	೧೨೦	,,
ಚಿಕ್ಕಮಗಳೂರು	೨೮ ನೇ	,,	,,	೧೫೦	,,
ಹಾಸನ	೫ ನೇ ಡಿಸೆಂಬರ್, ೧೮೯೨.			೨೫೦	,,
ಶ್ರೀರಂಗಪಟ್ಟಣ	೯ ನೇ	,,	,,	೩೫೦	,,
ಹುಣಸೂರು	೧೪ ನೇ	,,	,,	೫೫೦	,,
ಬೆಂಗಳೂರು	೧೮ ನೇ	,,	,,	೧೫೦	,,

ಇತರ ವಿವರಗಳನ್ನು ಮೈಸೂರು ಗಜೆಟ್ ನೋಡಿ ತಿಳಿದುಕೊಳ್ಳತಕ್ಕದ್ದು.

L. RICKETTS,
Inspector General of Forests.

ನೋಟೀಸ್.

ಗಣೇಶ ರಾಮಚಂದ್ರ ಕರ್ಕೆ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬರಹದ ಪತ್ರಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಚಿಪ್ಪಿ ಮುತ್ತುಗಳು, ಘಡಿಯಾರಗಳು, ಪಾಚ್‌ಗಳು, ಟ್ರಂಕುಗಳು, ಕಾಶ್ಮೀರ ಶಾಲುಗಳು, ಪಟ್ಟೇಗಳು, ಜರತಾರಿ ಕಾಗಗಳು, ಚಿತ್ರಕಾಂತ ಲೇಸು ಕಸ್ತೂರಿಕಗಳು, ಮುಕುಟಗಳು, ಗಿತ್ತ ಜರತಾರಿ ಉಡುಪುಗಳು, ಜರತಾರಿ ಟೋಪಿಗಳು, ಆಫಿಸ್ ಡ್ರೆಸುಗಳು, ಷರ್ಟುಗಳು, ಅತ್ತರ್ ಬಾಟಲ್, ಅತ್ಯುತ್ತಮವಾದ ರತ್ನಗಳು, ಭಂಗಾರದಿಂದ ಕಟ್ಟಲ್ಪಟ್ಟ ಉಂಗುರಗಳು, ಜರ್ಮನ್ ಸಿಲ್ವರ್ ಪಾತ್ರೆಗಳು, ಕೇಸರಿ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಿದ ಹೊರತು ಜವಾಬ್ ದೊರೆಯುವುದಿಲ್ಲ.

ವಿಳಾಸ.—ಗಣೇಶ ರಾಮಚಂದ್ರ ಕರ್ಕೆ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
ರಾಕಡೀ ದ್ವಾರ, ಮಾರ್ಕೆಟ್ ಪೋಸ್ಟ್, ಮುಂಬೈ

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕರಿಗೆ ಸಿದ್ಧವಾಗಿವೆ. ಬೇಕಾದವರು ಮೊಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

		ಕ್ರಯ	ರೂ. ಆ. ಪೈ
ಶಬ್ದಾರ್ಥ ವೈದ್ಯಸಾರ ಸಂಗ್ರಹ	...	೫	೦ ೦

ಕನ್ನಡ ಗ್ರಂಥಗಳು.

ಶುಕಸಪ್ತತಿ ಅಪ್ಪೆಂಡ್	...	೩	೦	೪
ದಿಲ್ಲೀ ದರ್ಬಾರ್	...	೧	೨	೦
ವ್ಯಾಘ್ರೇಂದ್ರವಿಜಯ	...	೧	೮	೦
ಪಂಚತಂತ್ರದ ಕಾರಿಕೆ	...	೦	೪	೦
ಹನುಮದ್ವಿಲಾಸ	...	೦	೪	೦
ಕಾಳೀಯಮರ್ದನ	...	೦	೨	೦
ಸುಭದ್ರಾಪರಿಣಯ	...	೦	೨	೦
ಕನಕಾಂಗಿ ಪರಿಣಯ	...	೦	೨	೪
ಸುದಾಮಚರಿತ್ರೆ	...	೦	೧	೦
ಶ್ರೀರಾಮಚರಿತ್ರೆ	...	೦	೧	೦
ಬಾಲಪ್ರಬೋಧಿಕೆ	...	೦	೧	೦
ಮುಹಮ್ಮದನ್ ಲಾ	...	೦	೧೨	೦
ಭ್ರಾಂತಿವಿಲಾಸ	...	೦	೧೨	೦
,, ಶಿವಗೀತೆ	...	೧	೦	೦
,, ಶಿವಾನಂದಲಹರಿ	...	೦	೮	೦
,, ಕಾಲಾಮೃತ	...	೧	೦	೦
,, ಟಿ.|| ಬಾಲರಾಮಾಯಣ ..		೦	೩	೦
,, ಟೀ|| ಗೋಪಿಕಾ ಗೀತೆ ...		೦	೧	೦
,, ಟೀ|| ಚಾಣಕ್ಯನೀತಿ (ಸುಭಾಷಿತ)		೦	೪	೦
ವಿಷ್ಣುಸಹಸ್ರನಾಮ ವಗೈರೆ	...	೦	೩	೦
ಸೂರ್ಯಸಹಸ್ರನಾಮ	...	೦	೨	೦
ಕೃಷ್ಣಕರ್ಣಾಮೃತ	...	೦	೨	೦
ತ್ರಿಕಾಂಡ ಅಮರ ಮೂಲ	...	೦	೪	೦
೧ ಕಾಂಡ	...	೦	೦	೦

THE MONEY MARKET.

ಮದರಾಸ್, ಶನಿವಾರ, ತಾರೀಖ್ 15ನೇ ಅಕ್ಟೋಬರ್ 1892

ಸೇಕಡಾ 4ರೂ. ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 106-8ರಿಂದ 106-14 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳು ಬಾಬತು 930 ಲಾಗಾಯತು 940 ವರೆಗೆ.

ಕನಾರ್ಷಿಯಲ್ ಆ್ಯಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 160 ರಿಂದ 165 ವರೆಗೆ

ಸವರಿನ್‌ಗಳು, 16—2—0

ಬ್ಯಾಂಕ್‌ಬಿಲ್ಲುಗಳು ಯೂನಿವರ್ಸಲ್ ಹುಂಡಿಗಳು, ರೂಪಾಯಿಕ್ಕೆ 6 ತಿಂಗಳವಾಯಿದೆಗೆ, 1s. 3 5/32d.

ಡಿಟ್ಟೋ 4 ತಿಂಗಳ ವಾಯಿದೆಗೆ, 1s.3 3/32d.

ಡಿಟ್ಟೋ ಕೇಳಿದಾಗ, 1s. 3d.

ನೋಟೀಸು.

ಈ ಮೂಲಕ ಸಕಲರಿಗೂ ತಿಳಿಯಪಡಿಸುವದೇನಂದರೆ,—

ಹಾಸನ ಡಿಸ್ಟ್ರಿಕ್ಟು ಮಂಜರಾಬಾದ್ ತಾಲ್ಲೂಕ್ ಕಸಬಾ ಸಕಲೇಶಪುರದಲ್ಲಿ ಸೀ. ವೆಂಕಟಾಚಲ ಶೆಟ್ಟಿ, ತಿಮ್ಮೇಗೌಡ ಅಂಡ್ ಕೋ ಎಂಬ ಹೆಸರಿನಿಂದ ನಡೆಸಲ್ಪಡುತಿದ್ದ ಮೇಲು ಗಾಡಿ ವ್ಯಾಪಾರದ ಕೆಲಸ ವಗೈರೆ ಸಂಬಂಧಗಳಲ್ಲಿ ನನ್ನೊಡನೆ ಪಾಲುಗಾರರಾಗಿದ್ದ,

ಪ್ರಯುಕ್ತ ದೋಣಿಗಾಲು ಬಸವೇಗೌಡರು ೧೮೯೧ನೇ ಇಸವಿ ಸೆಪ್ಟಂಬರ್ ೬ನೇ ತಾರೀಖಿನಲ್ಲಿಯೂ,
" ಲಕ್ಷ್ಮಯ್ಯ ನಾಯುಡರು ೧೮೯೨ನೇ ಇಸವಿ ಮಾರ್ಚ್ ೩ನೇ ತಾರೀಖಿನಲ್ಲಿಯೂ,
" ಹೊಸಕೆರೆ ತಿಮ್ಮೇಗೌಡರು ೧೮೯೨ನೇ ಇಸವಿ ಆಗಸ್ಟ್ ೧೯ನೇ ತಾರೀಖಿನಲ್ಲಿಯೂ,

ಮೇಲ್ಕಂಡ ಪಾಲುಗಾರಿಕೆಯ ಎಲ್ಲಾ ಸಂಬಂಧಗಳಿಂದಲೂ ಅವರವರ ಸಮ್ಮತಿಯಿಂದ ನಿವೃತ್ತರಾಗಿರುವ ಪ್ರಯುಕ್ತ ಸನ್ ೧೮೯೨ನೇ ಇಸವಿ ಆಗಸ್ಟ್ ತಾ॥ ೧೯ ರ ಲಾಗಾಯತು ಮೇಲ್ಕಂಡ ಪಾಲುಗಾರಿಕೆಯ ಜವಾಬ್ದಾರಿಯೆಲ್ಲವೂ ನನ್ನನ್ನೇ ಹೊಂದಿರುತವೆಯಾಗಿ ಸದರೀ ವ್ಯಾಪಾರವನ್ನು ಸೀ. ವೆಂಕಟಾಚಲಶೆಟ್ಟಿ ಅಂಡ್ ಸನ್ಸ್ ಎಂಬ ಹೆಸರಿನಿಂದ ನಡೆಸುವದಲ್ಲದೆ ಅದಕ್ಕೆ ಸಂಬಂಧಪಟ್ಟ ಎಲ್ಲಾ ರಿಕಾರ್ಡುಗಳನ್ನು ನನ್ನ ಮಗನಾದ ಎಂ. ಎಸ್. ಸುಬ್ಬಯ್ಯನು, ಸೀ. ವೆಂಕಟಾಚಲಶೆಟ್ಟಿ ಅಂಡ್ ಸನ್ಸ್ ಎಂದು ರುಜು ಮಾಡುವದಲ್ಲದೆ ಎಲ್ಲಾ ಕಾರ್ಯಗಳೂ ಅವನ ಮುಖಾಂತ್ರವಾಗಿಯೇ ನಡೆಸಲ್ಪಡುತವೆ.

ಸಕಲೇಶಪುರ, ತಾ॥ ೧೮-೯-೯೨. } ಸಿ. ವೆಂಕಟಾಚಲಶೆಟ್ಟಿ.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 17, 1892
೧೮೯೨ನೇ ಇಸವಿ ಅಕ್ಟೋಬರ್ ತಾ॥ ೧೭ನೇ ಸೋಮವಾರ.

THE DARBAR ON SOCIAL QUESTIONS

ಹಿಂದೂ ಸಮಯಾಚಾರ ವೈವಾಹಿಕ ಕ್ರಮ ಪರಿಷ್ಕರಣ ವಿಷಯದಲ್ಲಿ ಹಿಂದೂ ಸಂಸ್ಥಾನಾಧಿಪತಿಗಳು ಕೂಡ ಬ್ರಿಟಿಷ್ ಗವರ್ನಮೆಂಟಿನವರನ್ನನುಸರಿಸಲಾರಂಭಿಸಿರುವಂತೆ ಕಾಣುತದೆ. ಈ ವಿಷಯದಲ್ಲಿ ಹಿಂದೂ ಸಂಸ್ಥಾನಾಧಿಪತಿಗಳು ಪ್ರವರ್ತಿಸಿ ಉಭಯ ಪಕ್ಷವನು ಹಿಡಿದು ವಾದಿಸಿ ನಿರ್ಧರಿಸಲಿಕ್ಕೂ, ಅದರಂತೆ ತಮ್ಮ ಸಂಸ್ಥಾನದಲ್ಲಿ ಆಚರಣೆಯೊಳು ತರುವದಕ್ಕೂ, ಅವರಿಗುಂಟಾಗಿರುವಷ್ಟರ ಅನುಕೂಲ್ಯ ಸೌಲಭ್ಯಗಳು ಬ್ರಿಟಿಷ್ ಗವರ್ನಮೆಂಟಿನವರಿಗಿಲ್ಲವೆಂತಲೂ ಅತಏವ ಅವರ ಪ್ರವೇಶವು ಅಪೇಕ್ಷಿತವೆಂತಲೂ, ನಾವು ಹಿಂದೆ ಅನೇಕ ಸಂದರ್ಭಗಳಲ್ಲಿ ತಿಳಿಸಿದ್ದೇವಷ್ಟೆ. ಶ್ರೀಮನ್ ಮಹಾರಾಜಾ ಸರ್ಕಾರದವರು ಹಿಂದೂ ವೈವಾಹಿಕ ವಿಷಯ ವಿಮರ್ಶೆಯಲ್ಲಿ ಆಸಕ್ತರಾಗಿ ಕೆಲವು ನಿಬಂಧನೆಗಳಂ ಮಾಡಬೇಕೆಂಬ ತಾತ್ಪರ್ಯವುಳ್ಳವರಾಗಿರುವಂತೆ ಈ ಸಲದ ದಸರಾ ದರ್ಬಾರ್ ಕಾಲದಲ್ಲಿ ದಿವಾನರವರು ಪ್ರತಿನಿಧಿಗಳಿಗೆ ತಿಳಿಸಿದರು. ಗತ ಸಂವತ್ಸರದ ಇದೇ ಕಾಲದಲ್ಲಿ ಪ್ರತಿನಿಧಿಗಳು, ಬಾಲ್ಯವಿವಾಹದ ಯುಕ್ತಾಯುಕ್ತವಂ ಕುರಿತು ಸಭೆಯಲ್ಲಿ ಚರ್ಚಿಸಿ ಬಾಲೆಯರಿಗೆ ಪರಿಣಯ ಕಾಲವಂ ಹಂಭತ್ತು ಅಥವಾ ಹತ್ತು ವರ್ಷಗಳಿಗೆ ಕ್ಲುಪ್ತಪಡಿಸಬೇಕೆಂತಲೂ, ವೃದ್ಧರಾಗಿ ಬಾಲೆಯರಂ ವಿವಾಹ ಮಾಡಿಕೊಳ್ಳತಕ್ಕ ದುಸ್ಸಂಪ್ರದಾಯವಂ ನಿರೋಧಿಸಿದರೆ ಬಾಲ ವಿಧವೆಯರ ಸಂಖ್ಯೆ ಕಡಮೆಯಾಗುವದಲ್ಲದೆ ಅವರಿಗೆ ಜನಿಸುವ ಮಕ್ಕಳು ದುರ್ಬಲರಾಗಿ ನಿಸ್ತೇಜಸ್ಕರಾಗಿರಲಾರರೆಂತಲೂ ಹೇಳಿ ಈ ವಿಷಯದಲ್ಲಿ ಸರ್ಕಾರದವರ ಸಹಾಯ ಸಂಪತ್ತಿಯು ಅಪೇಕ್ಷಿತವಾಗಿದೆಯೆಂತಲೂ, ಇದಕ್ಕಾಗಿ ಒಂದು ವಿಶೇಷ ಕಾನೂನ್ ಮಾಡಬೇಕೆಂತಲೂ ದಿವಾನರವರನ್ನು ಕೇಳಿಕೊಂಡಿದ್ದರು. ವಿವಾಹದ ಆವಶ್ಯಕತೆಯಂ ಕುರಿತು ಅನೇಕರು ನಾನಾವಿಧವಾಗಿ ಚರ್ಚಿಸಿ ಅಭಿಪ್ರಾಯ ಪಟ್ಟಿದ್ದರು, ಆ ಕಾಲದಲ್ಲಿ ದಿವಾನರವರು ಬಹಳ ಜಾಗರೂಕರಾಗಿ ಪ್ರತಿನಿಧಿಗಳಿಗೆ ಜವಾಬ್ ಹೇಳಿ ಸಮಾಧಾನ ಪಡಿಸಿದರು ಹ್ಯಾಗಂದರೆ—ಬಾಲ್ಯ ವಿವಾಹ ವಿಷಯದಲ್ಲಿಯೂ ವಯಸ್ಸಾದವರು ಬಾಲೆಯರಂ ಮದುವೆ ಮಾಡಿಕೊಳ್ಳುವ ವಿಷಯದಲ್ಲಿಯೂ ನಿರೋಧಕವಾದ ಒಂದು ಕಾನೂನನ್ನೇರ್ಪಡಿಸಿದರೆ ಸ್ವರೂಪತಃ ಒಳ್ಳೇ ಪ್ರಯೋಜನವುಂಟಾಗುವದೆಂಬುದರಲ್ಲೇನೂ ಸಂಶಯವಿಲ್ಲವು. ಬಾಲಕರ ಮಾತಾಪಿತೃಗಳೂ ರಕ್ಷಕರೂ ಅವರ ಶ್ರೇಯೋಭಿಲಾಷಿಗಳಾಗಿಯೂ ಅವರ ಶ್ರೇಯೋಭಿವೃದ್ಧಿಗೆ ಮುಖ್ಯ ಜವಾಬ್ದಾರರಾಗಿಯೂ ಇರುತ್ತಾರೆ. ಪ್ರಾಯೇಣ ಅವರು ತಮ್ಮ ಮಕ್ಕಳ ಯೋಗಕ್ಷೇಮಾಭಿವೃದ್ಧಿಯಲ್ಲಿ ತಮಗೆ ಯುಕ್ತವೆಂದು ತೋರಿದವನ್ನೆಲ್ಲ ತಪ್ಪದೆ ಮಾಡುತ್ತಾರೆ. ಆದರೆ ಅವರು ಯಾವಾಗ ತಮ್ಮ ಮಕ್ಕಳ ಪ್ರಯೋಜನಕ್ಕೆ ಭಂಗ ವುಂಟಾಗುವ ಹಾಗೆ ತಮ್ಮ ಕರ್ತವ್ಯವನ್ನುಪೇಕ್ಷಿಸುತ್ತಾರೆಯೋ ಅಂತಾ ಸಂದರ್ಭಗಳಲ್ಲಿ ಆ ಮಕ್ಕಳ ರಕ್ಷಣೆಯ ವಿಷಯದಲ್ಲಿ ಗವರ್ನಮೆಂಟಿನವರ ಪ್ರವೇಶವು ಆವಶ್ಯಕವಾಗಿ ತೋರ್ಪಡುವದು. ಈ ಅಭಿಪ್ರಾಯದಿಂದಲೂ ಈಗ ನೆಲೆಗೊಂಡಿರುವ ಪದ್ಧತಿಯು ಶಾಸ್ತ್ರವಿರುದ್ಧವೆಂಬ ಭಾವನೆಯಿಂದಲೂ ಬರೋಡಾ ಗವರ್ನಮೆಂಟಿನವರು ಇದರಲ್ಲಿ ಪ್ರವೇಶಿಸಿ ಒಂದು ನಿಬಂಧನೆಯಂ ಮಾಡಿದರೂ ಮಾಡಬಹುದು, ಆದರೆ ಇದು ಕೇವಲ ಮುಖ್ಯವಿಷಯವಾಗಿಯೂ ಒಡಂಬಡಿಗೆಯನ್ನನುಸರಿಸತಕ್ಕದ್ದಾಗಿಯೂ ಇರುವದರಿಂದ ಈ ಸಂಸ್ಥಾನದ ಪ್ರಜೆಗಳ ಮುಖ್ಯಮುಖ್ಯ ಮಠಾಧಿಪತಿಗಳೊಡನೆ ಆಲೋಚಿಸಿ ಅವರ ಅಭಿಪ್ರಾಯಗಳನ್ನರಿಯಬೇಕಾಗಿರುತದೆಂದು ಹೇಳಿದರು. ಈಚೆಗೆ ಸದರೀ ವಿಷಯವಂ ಕುರಿತು ಆಯಾ ಮಠಾಧಿಪತಿಗಳ ಅಭಿಪ್ರಾಯಗಳನ್ನು ಗವರ್ನಮೆಂಟಿನವರು ವಿಚಾರಿಸಿದ್ದರಲ್ಲಿ, ಮೇಲೆ ಕಂಡ ಎರಡು ಪದ್ಧತಿಗಳೂ ಕೆಲವು ಮಟ್ಟಿಗೆ ಶಾಸ್ತ್ರವಿರುದ್ಧವಾಗಿದೆಯೆಂದು ತಿಳಿಸಿದರಂತೆ. ಮಠಾಧಿಪತಿಗಳ ಅಭಿಪ್ರಾಯವನ್ನೂ ಶಾಸ್ತ್ರಾಧಾರವನ್ನೂ ಜನಗಳ ಮನೋಭಾವವನ್ನೂ ಆಲೋಚಿಸಲಾಗಿ, ಪ್ರಕೃತದೊಳು ೮ ವರುಷದೊಳಗಿನ ಬಾಲೆಯರ ವಿವಾಹವನ್ನೂ, ೫೦ ವರುಷಗಳ ವಯಸ್ಸಿಗೆ ಮೇಲ್ಪಟ್ಟ ಪುರುಷನಿಗೆ ೧೬ ವರುಷಗಳ ವಯಸ್ಸಿಗೆ ಕಡಮೆಯಾದ ಬಾಲಿಕೆಯಂ ಕೊಟ್ಟು ವಿವಾಹ ಮಾಡುವದನ್ನೂ ನಿಷೇಧಪಡಿಸುವದಕ್ಕಿಂತ ಹೆಚ್ಚಾದ ಪ್ರವರ್ತನೆಗೆ ಪ್ರಯತ್ನಪಡುವದು ಅನುಚಿತವೆಂದು ತೋರುವಂತೆಯೂ, ಇಂತಾ ವಿವಾಹಗಳನ್ನು ನಡೆಸಲಿಕ್ಕೆ ಯಾರು ಜವಾಬ್ದಾರರೋ ಅವರನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸುವದಕ್ಕಿಂತ ಇನ್ನೇನು ವಿಶೇಷವಾಗಿ ಮಾಡುವದಕ್ಕೆ ಸಾಧ್ಯವಾಗಲಾರದೆಂದು ತೋರುವಂತೆಯೂ, ನೀತಿ ಮತ್ತು ಸಮಯಾಚಾರ ಸಂಬಂಧಗಳಾದ ವಿಷಯಗಳಲ್ಲಿದು ಕೇವಲ ಮುಖ್ಯವಾದುವದರಿಂದ ಈ ಭಾಗದಲ್ಲಿ ಬಹಳ ಎಚ್ಚರಿಕೆಯೊಡನೆ ಪ್ರವರ್ತಿಸತಕ್ಕದ್ದು ಉಚಿತವೆಂಬದಾಗಿಯೂ ದಿವಾನರವರು ತಿಳಿಸಿದರು. ಈ ವಿಷಯದಲ್ಲಿ ನಮ್ಮ ಅಭಿಪ್ರಾಯವಂ ಮುಂದಿನವಾರದಲ್ಲಿ ತಿಳಿಸುವೆವು.

Occasional Notes.
ನೈಮಿತ್ತಿಕ ವಿಷಯನ್ಯಾಸ.

The successor of Lord Roberts.— ಇಂಡ್ಯಾ ದೇಶದ ಕಮಾಂಡರ್ ಇನ್ ಚೀಫರಾಗಿದ್ದ ಲಾರ್ಡ್ ರಾಬರ್ಟ್ಸ್ ಯವರ ಕೆಲಸಕ್ಕೆ, ವೈಸ್ರಾಯ್ ಯವರ ಮಂತ್ರಾಲೋಚಕ ಸಮಾಜದಲ್ಲಿ ಮಿಲಿಟರಿ ಮೆಂಬರಾಗಿರುವ ಜನರಲ್ ಬ್ರಾಕೆನ್‌ಬರಿಯವರು ನೇಮಕರಾಗತಕ್ಕವರೆಂದು ಅನೇಕ ತಿಂಗಳ ಹಿಂದೆಯೇ ವ್ಯವಸ್ಥೆಯಾಗಿರುವಂತೆ ತಿಳಿಯಬಂದಿರುವದಾಗಿ ಮಾರ್ನಿಂಗ್ ಪೋಸ್ಟ್ ಎಂಬ ಪತ್ರಿಕೆ ತಿಳಿಸುತಿದೆ.

Nomination of a lady President.— ಅಮೆರಿಕಾ ದೇಶದ ಯುನೈಟೆಡ್ ಸ್ಟೇಟ್ಸ್ ಸಂಸ್ಥಾನದ ಕಾರ್ಯ ನಿರ್ವಾಹಕ ಸಭೆಯ ಅಗ್ರಾಸನಾಧಿಪತಿಯ ನಿಯಾಮಕದಲ್ಲಿ ಅಭಿಪ್ರಾಯ ಕೊಡತಕ್ಕ ಅರ್ಹರಾದ ಸ್ತ್ರೀ ಸಾಮಾಜಿಕರು ಮಿಸ್ಸ್ ವಿಕ್ಟೋರಿಯಾ ವುಡ್‌ಹಲ್ ಎಂಬಾಕೆಯನ್ನು ನಿಯಾಮಕ ಮಾಡಿರುವಂತೆ ಅಲ್ಲಿಂದ ಬಂದ ತಂತಿ ವೃತ್ತಾಂತದ ದೆಸೆಯಿಂದ ತಿಳಿಯಬರುತಿದೆ.

A question as to stamp duty.— ಈಚೆಗೆ ಮದರಾಸ್ ಸ್ಮಾಲ್‌ಕಾಸ್ ಕೋರ್ಟ್ ಮೂವರು ಜಡ್ಜಿಗಳೂ ಸೇರಿ ಒಂದು ಮೊಕದ್ದಮೆಯನ್ನು ವ್ಯವಸ್ಥೆ ಮಾಡಿದರು, ಅದು ಕಾನೂನಿಗೆ ಸಂಬಂಧಪಟ್ಟದ್ದಾಗಿಯೂ ಎಲ್ಲರಿಗೂ ಅವಶ್ಯ ತಿಳಿಯತಕ್ಕ ವಿಷಯವಾಗಿಯೂ ಇರುವದರಿಂದ ಅದರ ಸಾರಾಂಶವಂ ಇದರಡಿ ತಿಳಿಸುತ್ತೇವೆ ಹ್ಯಾಗಂದರೆ—ಒಬ್ಬಾತನು ತಾನು ಕೊಡಬೇಕಾದ ಸಾಲಕ್ಕಾಗಿ ಸಾಲ ಕೊಟ್ಟವನಿಗೆ ಮೂರನೇಯವನ ಮೇಲೆ ಹುಂಡಿ ಬರೆದು ಅದಕ್ಕೆ ಒಂದಾಣೆ ರಸೀದ ಸ್ಟ್ಯಾಂಪ್ ಅಚ್ಚಟಾಯಿಸಿ, ಪರಂತು ಮಾಯಿದೆ ಹಾಕದೆ ಕೊಟ್ಟನು ಸದರೀ ಹುಂಡಿಯು ಗೌರವಿಸಲ್ಪಡದೆ ಹೋದದರಿಂದ ಸಾಲಕೊಟ್ಟವನು ಸಾಲಗಾರನ ಮೇಲೆ ಸ್ಮಾಲ್‌ಕಾಸ್ ಕೋರ್ಟಿನಲ್ಲಿ ದಾವಾ ಮಾಡಿದನು. ಹುಂಡಿಯಲ್ಲಿ ಮಾಯಿದೆ ನಮೂದಿಲ್ಲವಾಗಿ ಅದಕ್ಕೆ ಒಂದಾಣೆ ಸ್ಟ್ಯಾಂಪ್ ಸಾಲದೆಂದು ಮೊದಲು ಒಬ್ಬ ಜಡ್ಜಿಯವರು ಮೊಕದ್ದಮೆಯನ್ನು ವಜಾ ಮಾಡಿದರು. ಅದರ ಮೇಲೆ ಫುಲ್ ಬೆಂಚಿಗೆ ಅಪೀಲಾಗಿ ನಡೆದ ವಿಚಾರದಲ್ಲಿ ಹುಂಡಿಯೊಳು ಮಾಯಿದೆ ನಮೂದಿಲ್ಲದ್ದರಿಂದ ಅದು ದರ್ಶನ ಹುಂಡಿಯೆಂದು ನಿರ್ಣಯಿಸಿ, ಮಾಡಿದ ಮೊಕದ್ದಮೆಯನ್ನು ದಾಖಲ್ ಮಾಡಿಕೊಳ್ಳಬೇಕೆಂದು ಮೂವರು ಜಡ್ಜಿಗಳೂ ಹುಕುಂ ಮಾಡಿದರು

LOCAL AND PROVINCIAL NEWS.
ಸ್ವದೇಶಮತ್ತುತಾಲ್ಲೂಕ್ ಪ್ರಾಂತ್ಯವೃತ್ತಾಂತಗಳು

Central College.— ಈಸಲ ಬಿ. ಎ. ಪರೀಕ್ಷೆಗೆ ಈ ಊರಿನ ಸೆಂಟ್ರಲ್ ಕಾಲೇಜಿನಿಂದ ೩೦ ಜನ ವಿದ್ಯಾರ್ಥಿಗಳು ದರಖಾಸ್ತು ಮಾಡಲಿಕ್ಕೆ ಚುನಾಯಿಸಲ್ಪಟ್ಟದಾರೆಂದು ತಿಳಿಯಬರುತದೆ.

Official changes.— ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ॥ ಅಬ್ದುಲ್ ರಹಮಾನ್ ಸಾಹೇಬರವರು ಕ್ಷಿಪ್ರದಲ್ಲಿ ರಜಾ ತೆಗೆದುಕೊಳ್ಳುವವರಾಗಿದಾರೆಂತಲೂ ಸಾಗರ್ ಸಬ್ ಡಿವಿಜನ್ ಆಫೀಸರ್ ಮ॥ ನಾಮಕಲ್ ರಾಯರವರು ಅವರಿಗೆ ಬದಲಾಗಿ ಆಕ್ಟಿಂಗ್ ಡೆಪ್ಯುಟಿ ಕಮಿಷನರ್ ಕೆಲಸ ನೋಡುವರೆಂತಲೂ, ಚಿತ್ರದುರ್ಗ ಡೆಪ್ಯುಟಿಕಮಿಷನರ್, ಮ॥ ಪಿ. ತಿರುಮಲಾಚಾರ್ಯರವರು ಮ ಸ್ಕೀನ್ ಸಾಹೇಬರಿಂದ ಚಾರ್ಜ್ ತೆಗೆದುಕೊಂಡು ಕೆಲಸ ನೋಡುತಲಿದಾರೆಂತಲೂ ತಿಳಿಯಬರುತಿದೆ.

The Chennapatam Taluk.— ಮೊನ್ನೆಯದಿನ ಮೊದಲು ಚೆನ್ನಪಟ್ಟಣತಾಲ್ಲೂಕ್ ಏರ್ಪಾಡಾಗಿ ಅಲ್ಲಿಯೇ ಅಮಲ್ದಾರರು ಕಚ್ಚೇರಿ ಮಾಡುತಲಿದಾರೆ. ಜನರ ಅನುಕೂಲ್ಯಕ್ಕಾಗಿ ಚೆನ್ನಪಟ್ಟಣದಲ್ಲಿ ಒಂದು ಎರಡನೇ ಗ್ರೇಡ್ ಸಬ್ ರಿಜಿಸ್ಟ್ರಾರ್ ಆಫೀಸು ಸ್ಥಾಪಿಸಲ್ಪಟ್ಟು ಅದೇ ದಿನದ ಮೊದಲು ಕೆಲಸಕ್ಕೆ ಪ್ರಾರಂಭಿಸಲ್ಪಟ್ಟಿತು. ಸದರೀ ಕೆಲಸಕ್ಕೆ ಬೆಂಗಳೂರ್ ಡಿಸ್ಟ್ರಿಕ್ಟ್ ರಿಜಿಸ್ಟ್ರೇಷನ್ ಹೆಡ್ ಕ್ಲರ್ಕ್ ಮ॥ ಡಿ. ನಾರಾಯಣರಾಯರವರು ನೇಮಕರಾಗಿ ಗತ ಶನಿವಾರದದಿನ ತಮ್ಮ ಕೆಲಸದ ಚಾರ್ಜನ್ನು ತೆಗೆದುಕೊಂಡರೆಂದು ಕೇಳುತ್ತೇವೆ.

The Residents.— ಈ ಸಂಸ್ಥಾನದ ಕಾಯಂ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್‌ಯವರು ರಜಾದಿಂದ ವಾಪಸ್ ಬಂದು ಕಳೆದ ಗುರುವಾರದದಿನ ತಮ್ಮ ಕೆಲಸದ ಚಾರ್ಜನ್ನು ಕರ್ನಲ್ ಪೀಕಾಕ್‌ಯವರಿಂದ ತೆಗೆದುಕೊಂಡರು. ಇವರು ಮೊನ್ನೆಯದಿನ ಮಧ್ಯಾಹ್ನ ೧೪ ಘಂಟೆಗೆ ಸರಿಯಾಗಿ ಮುಂಬೈ ಮಾರ್ಗವಾಗಿ ಜಯಪುರಕ್ಕೆ ದಯಮಾಡಿದರು. ಇವರನ್ನು ಸಾಗಕಳುಹಿಸುವಬಗ್ಗೆ ರೆಯಿಲ್ವೇ ಪ್ಲಾಟ್‌ಫಾರಮಿಗೆ ಅನೇಕಜನ ದೊಡ್ಡಮನುಷ್ಯರು ಹೋಗಿದ್ದರು. ಆ ಕಾಲದಲ್ಲಿ ಪದ್ಧತಿಪ್ರಕಾರ ತೋಫ್ ವಗೈರೆ ಸಕಲ ಮರ್ಯಾದೆಗಳೂ ಜರಿಗಿದವು.

Cholera and small pox.— ಈ ಷಹರಿನಲ್ಲೀಗ ಜನಾರೋಗ್ಯವು ಕಡಮೆಯಾಗುತ ಬರುವಂತೆ ಕಾಣುತಿದೆ. ಸಿಡುಬು ಮತ್ತು ಕಾಲರಾ ಮರಳ ತಲೆದೋರಿರುವಂತೆ ಸ್ವದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತದೆ. ಈ ಊರು ಪದಾರ್ಥ ಬಾಹುಳ್ಯದಲ್ಲೂ ಆರೋಗ್ಯವಿಷಯದಲ್ಲಿಯೂ ಎಷ್ಟೋಮಟ್ಟಿಗೆ ಶ್ಲಾಘ್ಯವೆನಿಸಿಕೊಳ್ಳೇ ಈಗ ಜನ ಬಾಹುಳ್ಯವು ಅಧಿಕವಾಗುತ ಬರುವಂತೆಲ್ಲ ಅನಾರೋಗ್ಯಕ್ಕೆ ಮಾತ್ರ ಸ್ಥಾನವಾಗಿ ಇರದೆ ನೀರು ದೊರೆಯುವದೇ ಪ್ರಯಾಸವು. ಆ ದಾಚಿತ್ತ ದೊರತಾಗ್ಯೂ ರೋಗಕಾರಿಯಾಗಿಯೂ ಮಾಧುರ್ಯರಹಿತವಾಗಿಯೂ ಇದೆ.

An address.— ಈ ಸಂವತ್ಸರದ ದಸರಾ ಮಹೋತ್ಸವ ಕಾಲದಲ್ಲಿ ಕೆಲವರು ದೊಡ್ಡಮನುಷ್ಯರಿಗೆ ಶ್ರೀಮನ್ ಮಹಾರಾಜರವರು ಕೆಲವು ನೂತನ ಪ್ರಶಸ್ತಿಗಳಂ ದಯಪಾಲಿಸಿದರೆಂಬ ಅಂಶವಂ ಗತವಾರದಲ್ಲಿಯೇ ತಿಳಿಸಿದ್ದೆವಷ್ಟೆ. ಆ ಯಬಸವೂರ್ ಮ॥ ಆರ್ಕಾಟ್ ನಾರಾಯಣಸ್ವಾಮಿ ಮುದಲಿಯಾರ್‌ರವರಿಗೆ ಧರ್ಮರತ್ನಾಕರವೆಂಬ ಪ್ರಶಸ್ತಿಯಂ ಕೃಪೆ ಗೈದದಕ್ಕಾಗಿ, ಸದರೀ ಮುದಲಿಯಾರ್‌ರವರಿಗೆ, ಅವರಿಂದ ಪರಿಪೋಷಿತವಾಗಿರುವ ಸ್ಕೂಲ್ ವಿದ್ಯಾರ್ಥಿಗಳೂ, ಉಪಾಧ್ಯಾಯರೂ ಸೇರಿ ಒಂದು ವಿಜ್ಞಾಪನ ಪತ್ರಿಕೆಯನ್ನೊಪ್ಪಿಸಿ, ಅದರೊಡನೆ ಬೆಳ್ಳಿಯಲ್ಲಿ ತಯಾರಿಸಲ್ಪಟ್ಟ ಟೀ ತಯಾರಿ ಪಾತ್ರೆಗಳಂ ಸಂತೋಷಸೂಚಕವಾಗಿ ಕೊಟ್ಟರು. ಕೂಡಲೇ ಸದರೀ ಸಭೆಯು ಫೋಟೋಗ್ರಾಫ್ ತೆಗೆಯಲ್ಪಟ್ಟಿತು.

Transfers and appointments— ಸಾಗರ ಮುನ್ಸಫ್ ಮ॥ ಎಫ್. ಎ. ಶಿವಪ್ರಕಾಶ ಪಿಳ್ಳೆಯವರು ಹೊನ್ನಾಳಿಗೆ ವರ್ಗಮಾಡಲ್ಪಟ್ಟರಲ್ಲದೆ ಚಿಕ್ಕಮಗಳೂರ್ ಆಕ್ಟಿಂಗ್ ಮುನ್ಸಫ್ ಮ॥ ಜೆ. ಶಾಸ್ತ್ರಿಯವರು, ಮ॥ ವೆಂಕಟಕೃಷ್ಣಯ್ಯರಿಂದ ಬಿಡುಗಡೆಯಾದ ಕೂಡಲೆ ಸಾಗರ ಮುನ್ಸಫ್ ಕೋರ್ಟ್ ಚಾರ್ಜನ್ನು ತೆಗೆದುಕೊಳ್ಳತಕ್ಕದ್ದೆಂದು ವ್ಯವಸ್ಥೆಯಾಗಿರುತಿದೆ. ನಗರ ಡಿವಿಜನ್ ಡಿಸ್ಟ್ರಿಕ್ಟ್ ನ ಸರ್ಕಲ್ ಕೋರ್ಟ್ ಶಿರಸ್ತೇದಾರ್ ಮ॥ಸಿ. ಎಂ ರಾಮಾನುಜಯ್ಯಂಗಾರ್‌ರವರು ಮ॥ ಶಾಸ್ತ್ರಿಯವರು ಚಿಕ್ಕಮಗಳೂರಲ್ಲಿರುವವರೆಗೆ ಅಥವಾ ಮತ್ತೊಂದು ಹುಕುಂ ಕೊಡಲ್ಪಡುವವರೆಗೆ ಸಾಗರ ಮುನ್ಸಫರಾಗಿ ಹಂಗಾಮಿ ತರೀಕ್ ನೇಮಕಪಡಿಸಲ್ಪಟ್ಟದಾರೆಂದು ತಿಳಿಯ ಬರುತಿದೆ.

ಯೆಜ್ಯುಕೇಷನ್ ಸೆಕ್ರೆಟರಿಯವರ ಅಸಿಸ್ಟೆಂಟರಾಗಿ ಈಚೆಗೆ ನೇಮಕರಾದ ಮ॥ ಎಂ. ಶಾಮರಾವ್ ಎಂ. ಎ. ಯವರಿಗೆ ಬದಲಾಗಿ ಶಿವಮೊಗ್ಗ ಕಾಲೇಜ್ ಅಸಿಸ್ಟೆಂಟ್ ಮಾಸ್ಟರ್ ಮ॥ ಆರ್ ನರಸಿಂಹಾಚಾರ್ಯರು ನೇಮಕರಾದಂತೆ ಕೇಳುತ್ತೇವೆ.

A fatal accident.— ಸದರ್ನ್ ಮರಾಟಾ ರೆಯಿಲ್ವೇ ಇಲಾಖೆಯಲ್ಲಿ ನೌಕರಿಯಲ್ಲಿದ್ದ ಕುಮಾರಸ್ವಾಮಿ ಮುದಲಿಯಾರ್‌ರ ಮಗನಾದ ೧೬ ವರುಷಗಳ ಬಾಲಕನೊಬ್ಬನು ನೌಕರಿಂ ವಿಷಯ ಗತ ಮಂಗಳವಾರದದಿನ ಮಧ್ಯಾಹ್ನ ೩ ಘಂಟೆಗೆ ಟ್ರಾಲಿಯಲ್ಲಿ ಕುಳಿತು ಬಿಡದಿಗೆ ಹೋಗುತಲಿರಲಾಗ್ಯೆ ಕೆಂಗೇರಿಗೂ ಬಿಡದಿಗೂ ಮಧ್ಯೆ ೨೦ನೇ ಮೈಲಿನಲ್ಲಿ ಎದುರಿಗೆ ಗೂಡ್ಸ್ ಟ್ರೈನ್ ಬರಲು ಆ ಟ್ರಾಲಿಯನ್ನು ಎತ್ತಿ ಕಟ್ಟೆಯ ಕೆಳಗೆ ಬಿಸಾಡಲು ಅದರಲ್ಲಿ ಕುಳಿತಿದ್ದ ಸದರೀ ಬಾಲಕನು ಕೂಡಲೇ ಮೃತಪಟ್ಟನು. ಅವನೊಡನೆ ಕುಳಿತಿದ್ದ ಕಂಟ್ರಾಕ್ಟರ್ ಮಾತ್ರ ತಪ್ಪಿಸಿಕೊಂಡನು. ರೆಯಿಲ್ವೇ ಇಲಾಖೆಯೇ ಒಂದು ಅಪಾಯಕರವಾದದ್ದು. [illegible] ಟ್ರಾಲಿ ಎಂಬದು ಅನೇಕರಿಗೆ ಅನೇಕ ಅಪಾಯಗಳನ್ನುಂಟುಮಾಡತಕ್ಕದ್ದಾಗಿರುತಿದೆ.

The S. M. R Police.— ಬೆಕ್ಕಿಗೆ ಚೆಲ್ಲಾಟ ಇಲಿಗೆ ಪ್ರಾಣಸಂಕಟವೆಂಬ ಲೋಕೋಕ್ತಿಯಂತೆ ಮೈಸೂರ್ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೂ, ಮೈಸೂರ್ ರೆಯಿಲ್ವೆ ಸ್ಟೇಷನ್ ಮಾಸ್ಟರಿಗೂ ಮಧ್ಯೆ ವುಂಟಾದ ವೈಮನಸ್ಯದಲ್ಲಿ ರೆಯಿಲ್ವೆ ಇನ್‌ಸ್ಪೆಕ್ಟರಾಗಿದ್ದ ಮ॥ ಚೆನ್ನಸಿಂಗರವರು ೧೫೦ ರೂಪಾಯಿಗಳ ಬತ್ತೆಯೊಡನೆ ಬಿಗರ್ ಡಿಸ್ಟ್ರಿಕ್ಟಿಗೆ ವರ್ಗಮಾಡಲ್ಪಟ್ಟರಲ್ಲದೆ ಮ॥ರಂಗಸ್ವಾಮಿ ಅಯ್ಯಂಗಾರ್‌ರವರಿಗೆ ಹಾಕೆ ಕ್ರಿಟಿ ಕೆಲಸವಾಗುವ ಸಂಭವ ಕಂಡುಬರುತದೆ. ಏತನ್ಮಧ್ಯೆ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್‌ಸನ್‌ಯವರು ರಜಾ ಭುಕ್ತೈಸಿ ವಾಪಸ್

ಬಂದು ಕೆಲಸದ ಚಾರ್ಜನ್ನು ತೆಗೆದುಕೊಂಡಿರುವದರಿಂದಲೂ, ವೈಸರಾಯಿ ಯವರು ಊಟಿಗೆ ದಯಮಾಡುವ ಸಮಯವು ಸನ್ನಿಹಿತವಾಗಿರುವದರಿಂದಲೂ ಅದಕೋಸ್ಕರ ಲೆಫ್ಟಿನೆಂಟ್ ಕ್ಲೋಲೀಸ್ ಬ್ರಿಟಿಷ್ ಗವರ್ನರವರಿಗೆ ದಾಖಲಾಗಬೇಕಾದ ಪ್ರೋಗ್ರಾಂಗಳನ್ನೆಲ್ಲ ಮಾಡಿ ಜಾಗ್ರತೆಯಾಗಿಯೇ ಜಾರಿಯಲ್ಲಿ ತರುವರೆಂತಲೂ, ಇನ್ನೂ ಕೆಲವು ಬದಲಾವಣೆಗಳು ನಡೆಯಬಹುದೆಂತಲೂ ಮಳವೇಕದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತ್ತದೆ. ಲೇಡಿ ಲೈಟ್ ಹಾಲಿವುಡಿಕೆರವರನೊಡನೆ ಮೋಜಸ್ಟೀ ಅಧಿಕಾರ ವಿಷಯವೂ ಸಂಬಂಧಿಸಿರುವದರಿಂದ ಅವರು ವ್ಯವಸ್ಥೆಯಾದರೆ ಮುಂದೆ ಯಾರ ಅನುವಾದಿಸಿಕ್ಕೂ ಅವ್ಯಕ್ತವಿಲ್ಲದೆ ಹೋಗುತ್ತದೆ. ಇಬ್ಬರ ಜಗಳದಲ್ಲಿ ಕೂಸು ನಷ್ಟವಾದಂತೆ ಮಹಾರಾಜಾ ಸರ್ಕಾರದವರು ನಷ್ಟವನ್ನನುಭವಿಸಬೇಕಾದವರಾಗಿ ಯೋಚಿಸಲ್ಪಟ್ಟಿತು.

The Viceroy —ಬರುವ ತಿಂಗಳ ೧ನೇ ತಾರೀಖಿನಲ್ಲಿ ವೈಸರಾಯಿಯವರು ಹೈದರಾಬಾದ್ ಮಾರ್ಗವಾಗಿ ಊಟಿಗೆ ದಯಮಾಡುವ ಅಂಶವು ವ್ಯವಸ್ಥೆಯಾಗಿದೆಯಷ್ಟೆ. ಆ ಕಾಲದಲ್ಲಿ ಅವರಿಗೆ ಒಂದು ವಿಜ್ಞಾಪನೆ ಪತ್ರಿಕೆಯನ್ನು ತಯಾರ್ಮಾಡಿ ಒಪ್ಪಿಸಬೇಕೆಂತಲೂ, ಅದರಲ್ಲಿ ಕೇವಲ ಉದ್ದೇಶಿತಗಳಾಗಿರುವ ವಿಷಯಗಳು ಅಂದರೆ, ಜಲವಸತಿ, ಪ್ರತ್ಯೇಕ ಒಬ್ಸರ್ವೇಟರಿ ಯೋರ್ಕ್, ಅರ್ಕಟುಸ್ಸ್ ಮಾರ್ಕೆಟ್ ಮೊದಲಾದ ಏವರಾಜಿಗಳು ತೀರಿಸಿ ವೈಸರಾಯಿಯವರನ್ನು ಕೇಳಿಕೊಳ್ಳಬೇಕೆಂತಲೂ, ಸಿವಿಕ್ ವ ಮಿಲಿಟರಿ ಸ್ಟೇಷನ್ ವ ಮ್ಯುನಿಸಿಪಲ್ ಮೆಂಬರ್‌ಗಳೆಲ್ಲರು ಆಲೋಚಿಸುತ್ತಲಿದ್ದಾರೆಂದು ಕೇಳುತ್ತೇವೆ. ಸದರೀ ಸಂದರ್ಭದಲ್ಲಿ ಬೆಟ್ಟಿನಿವಾಸಿಗಳು ತಮಗಾಗಬೇಕಾಗಿರುವ ಜಲವಸತಿಯನ್ನು ಕುರಿತು ಸೂಚಿಸಬೇಕಾದುದು ಅವಶ್ಯಕವಾಗಿರುತ್ತದೆ. ಸಿವಿಕ್ ವ ಮಿಲಿಟರಿ ಸ್ಟೇಷನಿನ ವಾಟರ್ ಪ್ರಾಜೆಕ್ಟ್ ಒಂದು ಬಗೆಯಾಗಿ ಸ್ಥಿರಸ್ಥಿಯಾಗುವ ವರೆಗೂ ಇಲ್ಲಿನ ಜಲಕಷ್ಟವು ನಿವೃತ್ತಿಯಾಗುವಂತಿಲ್ಲವು. ಈ ವಿಷಯದಲ್ಲಿ ಶ್ರೀಮದ್ವೈಸರಾಯ್ ಮೋರ್ಡು ಮಾಡುವಂತೆ ಇವಾನರವರು ಸದರಿ ಊರಿನಿಂದ ಬೇಕಾಗಿದ್ದ ಪ್ರತಿನಿಧಿಗಳಿಗೆ ಧೈರ್ಯ ಹೇಳಬೇಕೆಂದು ಕೇಳುತ್ತೇವೆ. ಇಲ್ಲಿಗೆ ಆಗಂತುಕರಾಗಿ ಬರತಕ್ಕ ದೊಡ್ಡ ಮನುಷ್ಯರಿಗೆಲ್ಲ ಲೆಫ್ಟಿನೆಂಟ್ ಸ್ಟೇಷನ್ ಬಿಟ್ಟ ಕೂಡಲೆ ಹೃದಯಾಕರ್ಷಕವಾಗಿಯೂ, ನೇತ್ರಾನಂದಕರವಾಗಿಯೂ ಇದ್ದ ಇಲ್ಲಿನ ಕಾರಂಜಿ ಕಟ್ಟೆಯೂ, ಮ್ಯುನಿಸಿಪಲ್ ಆಫೀಸೂ ಈಗ ಲಾರ್ಡ್ ಲ್ಯಾಂಡ್ಸ್‌ಡೌನ್ ಯವರಿಗೂ ಅವರ ಭಾರ್ಯೆ ಸುಂದರಿಗೂ ಪ್ರತ್ಯಕ್ಷಸ್ಥಿತಿಯಲ್ಲಿ ಬಿಡುವ ಆನಂದ ಸಂದರ್ಭಕ್ಕೆ ಬರುವುದೆಂದು ನಂಬುತ್ತೇವೆ. ಯೋಗ್ಯವಾದ ಲಾಂಛನವಿಲ್ಲದಕೆರೆಯೂ ಅದರಲ್ಲಿ ಅಪರಿಮಿತವಾಗಿ ಬೆಳೆದಿರುವ ಜೊಂಡೂ ಒಂದಾಕವೆಯಲ್ಲಿಯೂ, ನೀರಿಲ್ಲದೆಯೂ ಕ್ರಮವಾದ ಕೆಲಸ ಇಲ್ಲದೆಯೂ ಒಣಗಿ ಕಾಡಾಗಿರುವ ಮ್ಯುನಿಸಿಪಲ್ ತೋಟ ಮತ್ತೊಂದು ಕಡೆಯಲ್ಲಿಯೂ ದೃಷ್ಟಿಪರಿಹಾರ ರೂಪವಾಗಿರುವುದು.

ಶ್ರೀಮದ್ರಾಜಾಧಿರಾಜ ಚಾಮರಾಜೇಶ್ವರ ಶರನ್ನವರಾತ್ರೋತ್ಸವಃ.

ಸ್ರಗ್ಧರಾವೃತ್ತ.

ಶ್ರೀವತ್ಸಶ್ರೀಕರಂ ವೈ ಕಾಸಮವಿಭವಲಸಚ್ಛ್ರೀಕಟಾಕ್ಷಾದ್ಯುದೀರ್ಘ್ಯ | ದ್ವೈವರ್ಣ್ಯಸಂಸಕ್ತವಕ್ಷೋವಿಬುಧನಿಚಯಕರಪ್ರೀಣಿತಾವಿರ್ಭೂತಪ್ರೇಮ ಪ್ರಭಾವಾಸಿತ್ಯಕ್ತನಿತ್ಯ ಪ್ರತಿವಚನವರತಂ ಸಸ್ವತ್ತ್ವಾಂತರಾಂತಃ ಸ್ನೇಹವ ಶ್ರೀಚಾಮರಾಜೇಂದ್ರಮೀಶಂ ತವ ತಿರಯಿಕಾಭಾಮರಾಜೇಂದ್ರವರ್ಯಂ |೧||

ಕ || ಪುಣ್ಯನೀವಸ್ಸರದಾ | ಸುದರ್ಶನಾಕ್ಷ್ಯಾಯುತ್ತ ಸ್ಥಾನಮತಿಪ್ರಯುಲ್ಲ | ಸಂಪದಿಗೆ ಗುರು ಶಾಸ್ತ್ರ ಬುಧ ಕವಿತನಯನೃತೀಶಮುಮಂ ... |೨||

ತ ಪತಿಸಿಕ್ಕಾಸನಮಂ | ಚಾಮರಾಜೇಂದ್ರ ತಿನಿಸಾರ್ಹನ್ನೆ ದೆಮುಂಡಿನಿಮನಿವಿಧಿಸಮದರಗ್ರಮೋಳೆಗೆದು ವಾದ್ಯಮನಲಿಪ್ರಪವಧರಿಸಲ್ಪದು ಮನೋರ |೩|

ಉದಯಧರಾದ್ರಿಂಪೆಸೆಯ | ದೊದವಿದಮಣಿಕಾಂತಿಪೂರವೊಜ್ಜೃಂಭಿಸಿ | ದಿವೆದೊಪ್ಪಿರೆದ ಪಿಸೋಲ್ಫ್ಯ | ಸುಂದರಿಸ್ವರನಲಂಕರಿಸುತ್ತ ಸರಸಿ ... |೪||

ಮಂದಿರಗಳಿಗೆ ಸರ್ವೇಶ | ನೊಂದಿದಜಲಧೋಷಮಂಚಿಕಾಮರಾಜನಗರ | ಸಿಂಧುವೆನೆಮೆರೆವ ಸಭೆಯೊಳ್ | ಚೆಂದಿರನಸುಕೆನೆಮೆರೆವ ಸ್ವಸಿವರಾರ್ ... |೫||

ವಿತತಸಭಾಜನಸೀಸೆಯೊಳ್ | ನುತಸಂಪಿಸೀ ಧಿರೂಢಮಂಚ್ಛತಲೋಕಂ | ಪ್ರಥಿತಸದಾನಸಜನುಗಂ | ಕ್ಷಿತಿಪತಿಪರಿಯಂತಮೆರೆದನು ರಮಾಧಾರಂ ... |೬||

ವರರಾಜಸಂಸಮಂಜುಳ | ಸುರವಿಬುಧವಿನುತ್ಯನಾಗಿರಲ್ಕಾ ಮೋಂದ್ರಂ | ಸರಸತಿಯೊಂದಿದಳಭೂ|ವರನಂಜರಿವನ್ನಿತವಾದಿಯಂ ವಿದಿಯಿಂದಲ್ ೭

ದೀನರಗಮಕುಲೋತ್ಸವಂ | ಮಾನಸಮುನ್ನತರಿಪುಪ್ರಜಕ್ಕಂತಕಸಮಂ | ಮಾನಿನಿಯರ್ಗಗಳಮುಂ|ರಾಸನೇಚಾಮೇಂದ್ರನೆಸೆನೆ ನಚ್ಚರಿಯೋ |

ನಿಜಬಲದಿಂಜಲನಿಧಿಯಂ ನಿಜವಿಕ್ರಮಧರಿದರವಿಯಕೆಂಗಲಿಸೆ ಮುಖ ನಿಜಮುಖದಿಂಚಂದ್ರಿಕೆಯಂ ನಿಜದಿಂದಂಚೈಸಿಮೆರೆದನಾಚಾಮೇಂದ್ರಂ ೯

ಜಗದ್ದೀ ಸಡಗರದಿಂದೆಕುಂಬಿತ ಮನಮಂತ್ರಿಬಾಂ ಮೂದಪರವಾಬ್ಬಿರೆಗ್ಗಿರನಿಂ | ಬೆಡಗೆದಸಾರವಂಗುಡಾನಪಕ್ಷ ವಿನಾಯಕರಿಂವಿಮೆರ್ಸಲ್ ಬಿಡದಚಾಮರನ್ನಜನನಂಸಲೆ ತಾಳ್ವನೇರಿರಾಳದಿಂ|ಗತಹಸಿನಿನ್ನು ಚಿಸ್ತಥೆಕಿಪಜನಂಗೆ ರಂಜನಂನ್ನರಂ ... |೧೦

ಕುಲ ರಂತಾಚಾಮೀಪವಾಗೋಗ | ಮಾತ್ರಿಕೆ ಟ್ಟದಿಂಗಳೆಸಾವೆತುರಂಗಬಲಂ | ತಾಂತೆಳ್ಳ್ಪ್ರದಿಮಲ್ಲರ | ಸಂತತವಿಧವಿಕಾಳಗವನೊಡರ್ಪ್ಪರಂ ... |೧೧

ಶಿನ್ನಯ ಸಂತತದೊಳೊಳೆದ ಗಿ ಸ್ನ್ವನ್ನ ತನ್ನೆಬ್ಬಿದೆಮರೆವನ್ನವಸುನೋಡಲಿ | ಚೊನ್ನೊಳಿನ ನಿಸಿತಸುಂ | ವನ್ನಂಬಂದನಸೆಮೆರೆದುದಾಕು ಗಜಕರಂ ... |೧೨

ವಿಳಸಚ್ಛೀರೀವರಮ ಗ್ಗಳಸಿನಭೋನಂಯು ಮಂಪಳಂಚಿಲ್ಪ್ಪರಂ | ಪಳವಳನುದರಿದತಾರಾ | ಪಳಯನ್ಪೊಲಂದೊಂದುಮಪ್ಪಿನಸೋಗಸು ದೆಸೆಗಂ ... |೧೩

ಬಳಯಾಜ್ಞಾನೋಪಗನೆನೊಬಗಂ | ನಿಳಯದರಿ ಕೈಸುಕೆನಲನಿಂಕರೆದಿಲಲ | ಕ್ಷಾಳಿಯಂತಿರೆತಾರಾಮಂ | ತಳಮಿಂಬಾಮದ್ದುರ್ಗವತ್ತಿಮೆರೆದು ದಿನಭದೊಳ್ ... |೧೪

ಪ್ರತಿಪನಮಿಂತುಸ್ವವನಿಮಂ | ತತಿಕಯಮೆಸೆಕಳಿಪನವದಿನಂಗಳನಾಗಲ್ | ಕ್ಷಿತಿಪತಿದಸವಿಯೊಳ್ನಿಐದ | ನವಲಮುದ್ದುವಿಜಯದಿಕಮಿಯಿ ದೇಗೀವಳ್ಳಿಂ ... |೧೫

ರಥೋದ್ಧತವೃತ್ತ. ಭವ್ಯವಂತಿವರಕಿಂದರಾಗ್ರದೊಳ್ | ಸನ್ನುತಿಸ್ವರಿವವೇಮಹೀಪಮಂ | ಅಸ್ವ್ಯೋನೆವದ್ದರ್ನೆಲ್ಲರು | ನ್ನಿದ್ರರೋಚನರಧೀಕ್ಷಿಸುತ್ತಿರಲ್ ... |೧೬

ಉತ್ಪಲ. ಸಾಧಮನೇರಿನೋಳ್ಬಿಯುವತೀಜನಮಜ್ಝನಿನೇತ್ರಕಾಂತಿಯಿಂ | ಮೇದುರಮಾದವದಯನವದರ್ಪಿಸಾಪ್ರಿಯ ನೀಳವಿಮಹಾ | ಯಾಥದರಗ್ರದೊಳ್ಕುರಿದುಬೆಚ್ಚಿದಸಂಭ್ರಮದಿಂದಿವ್ಯತ್ರಯಾ | ತ್ರಾವರನಾಜಿದ್ದುವಿಸ್ವರ್ಗನ್ನು ದೆಗೊಂದನುದಾರಘೂರಂ|೧೭

ಕಂ|| ಇಂತ್ಯನಿಸೆವಿಬುಧಜನ | ಸಂತತಿಗತಿಮುದವನೀವ್ರತರದೆ ನೆಪ್ಪುಕ್ಕಂ | ಕಾಂತಿತವಕ್ಕಿಸವರಿಗಿರು | ಹಂತಿನಮಂಭ್ರಕ್ಕ ಕೇಸರಿಯ ಪ್ರೋಲ್ಲಪ್ಪಂ ... |೧೮

ಉತ್ಪಲಹನೃತ್ತ. ದಾನವಾವಿಲಿಂಚನಾಂಬು ಪಾತವಾದವಂಕರು ಪೀನವಾರಿದಗ್ರಥೈಕಥಸ್ಥನಿಸುಹೃದ್ಯಂ | ಘನಘೀನವೋನಕೀಸಗೆಂ ದಸಿಎತ್ಕೆಟರು | ಸಾನವರಾಗನೀಗೆಚಾಮಭೂಮಿಪಂಗೆಬೀಚೈಮಂ ... |೧೯

ಕಂ|| ಶ್ರೀಮಚ್ಚಾಮನೃಪೇಂದ್ರೋ | ದ್ದಾಮೋತ್ಸವವಮನವಿವರ್ಣಿಸೆನಾ ರಾಜರ | ಸ್ತೋಮವಿಧೇಯಂಗರಪುರ | ಧಾಮಂಗೆ ಶೀಶಕೃತ ನಾಕರಿಬಸನು ... |೨೦

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖಾ.

ಸನ್ ೧೮೯೨ನೇ ಇಸವಿಯ ೧ನೇ ನಂಬರ್ ಮಸೂದೆ ರೆಗ್ಯುಲೇಷನ್.

ಕಳದವಾರದ ಶೇಷತೆ.

ಈ ಕಲ್ಲಂಜಿ ಪ್ರಕಾರ ವಿಧಿಸೋಣಾದ ತಾರೀಖಿನಿಂದ ೪೫ ದಿನಸಗಳ ಅವಧಿಗೂ ಆ ವಿಧಿ ಪ್ರಕಾರ ನಡೆಸೋಣಾಗದೆ ಇರುವಲ್ಲಿ ಹಾಗೆ ವಿಧಿಸೋಣಾದ ವಿಧಿ ಮೇರೆಗೆ ನಡೆದುಕೊಳ್ಳದೆ ಇರುವ ಕಕ್ಷಿಗಾರನ ಬಗ್ಯೆ ಗ್ರಾಮ ಮುನಸೀಫನು ಸದರೀ ಪಟ್ಟಿಯಲ್ಲಿ ಹೆಸರು ನಮೂದಿಸುತ ಒಬ್ಬ ಮನುಷ್ಯನನ್ನ ನೇಮಿಸತಕ್ಕದ್ದು.

(೫) ಸದರೀ ವ್ಯಾಜ್ಯವನ್ನು ಇತ್ಯರ್ಥಿಸುವ ಬಗ್ಯೆ ತನ್ನೊಂದಿಗೆ ಕೂಡಿ ಕೆಲಸವಿವರಕ್ಕೆ ಮೇಲೆ ಹೇಳಿದ ಮೇರೆಗೆ ಹೆಸರು ಹೇಳಿದ ಯಾ ಆರಿಸಿ ಕೆಗೆದ ಇಬ್ಬರನ್ನು ಗ್ರಾಮ ಮುನಸೀಫನು ಸಮ್ಮರ್ ಮಾಡತಕ್ಕದ್ದು.

ಪಂಚರ ಮೆಂಬರನ್ನ ಮುನಸೀಫನುಸಮ್ಮರ್ ಕೊಡುವದು.

(೬) ಗ್ರಾಮ ಮುನಸೀಫನು ಅಂಥಾ ಪಂಚಿನ ಅಧ್ಯಕ್ಷನಾಗಿದ್ದು ವ್ಯವಹರಣೆ ಕ್ರಮ ಪಡಿಸಲೂ ಅಲ್ಲಿ ಸಮ್ಮರ್‌ಗಳು ನೋಟಿಸುಗಳು ಮುಂತಾದವುಗಳನ್ನು ತನ್ನ ಸ್ವಂತ ಹೆಸರಿನಲ್ಲಿ ಕೊಟ್ಟು ಸಾದರ್ ಮಾಡತಕ್ಕದ್ದು. ಪರಂತು ಡಿಕ್ರಿಯು ಪಂಚಿನ ೩ ಜನ ಮೆಂಬರುಗಳ ಹೆಸರಿನಲ್ಲಿಕೊಡತಕ್ಕದ್ದು. ಪಂಚಿನ ಮೆಂಬರು ಒಗ್ಗಟ್ಟಾಗಿ ಏಕಾಭಿಪ್ರಾಯ ಪಡದಿದ್ದರೆ ಬಹುಭಾಗದವರ ಅಭಿಪ್ರಾಯವೇ ಊರ್ಜಿತ ವಾಗತಕ್ಕದ್ದು.

ವ್ಯವಹರಣೆ.

(೭) ಈ ಪ್ರಕರಣಪ್ರಕಾರ ಪಂಚಿನಲ್ಲಿ ಕೆಲಸ ನಿರ್ವಹಿಸುವಬಗ್ಯೆ ಸಮ್ಮರ್ ಮಾಡಲ್ಪಟ್ಟ ಯಾವನೊಬ್ಬ ಮನುಷ್ಯನು ಯಾವದೊಂದು ತಿಂಗಳಲ್ಲಿ ೩ ದಿನಗಳಿಗೆ ಮಿಾರಿ ಪಂಚಿನಲ್ಲಿ ಕೂತು ಕೆಲಸ ನಿರ್ವಹಿಸುವದಕ್ಕೆ ಬದ್ಧನಾಗಿರುವದಿಲ್ಲ; ಪರಂತು ತನ್ನ ಮುಂದೆ ತಿನಿಸಿಗೆ ಪ್ರಾರಂಭಿಸಿದ ಯಾವದೊಂದು ಮೊಕದ್ದಮೆಯು ತೀರ್ಪು ಆಗುವವರಿಗೂ ಅಂಥಾ ಮನುಷ್ಯನು ತನಿಖೆಬಗ್ಯೆ ಹಾಜರಿರುವದಕ್ಕೆ ಬದ್ಧನಾಗಿರುತ್ತಾನೆ.

ಪಂಚಿನಲ್ಲಿ ಕೆಲಸನಿರ್ವಹಿಸುವವರ ಜವಾಬ್ದಾರಿ.

(೮) ಒಂದು ಪಂಚಿನಲ್ಲಿ ಕೆಲಸ ನೋಡುವ ಬಗ್ಗೆಗೆ ಈ ಪ್ರಕರಣದವೇರಿಗೆ ಕ್ರಮವಾಗಿ ಸಮ್ಮರ್ ಮಾಡಲ್ಪಟ್ಟ ಯಾವನೊಬ್ಬನು, ತಕ್ಕ ಸಬಬು ಇಲ್ಲದೆ ತನ್ನ ಹಾಜರಿಗೆ ಗೊತ್ತಾದ ತಾರೀಖಿನಲ್ಲಿ ಹಾಗೆ ಕೆಲಸ ನಿರ್ವಹಿಸುವದಕ್ಕೆ ತಪ್ಪಿದರೆ, ಆ ಸಂಗತಿಯು ಒಬ್ಬ ಮ್ಯಾಜಿಸ್ಟ್ರೇಟನ ಮುಂದೆ ಸಾಬೀತು ಪಟ್ಟಲ್ಲಿ ೧೦ರೂ ದಾಮಿಗೆ ಮಿಾರದಜುಲ್ಮಾನೆಗೆ ಗುರಿಯಾಗುತ್ತಾನೆ.

ಕೆಲಸನಿರ್ವಹಿಸುವದಕ್ಕೆ ತಪ್ಪಿದಕ್ಕಾಗಿ ದಂಡನೆ.

V. ಗ್ರಾಮ ಕೋರ್ಟನಲ್ಲಿ ದಾಖಲಾದ ವ್ಯಾಜ್ಯಗಳ ಒಂದು ಫೈಲನ್ನು ಗ್ರಾಮ ಮುನಸೀಫನು ಇಡ ತಕ್ಕದ್ದು, ಮತ್ತು ಕೋರ್ಟಿನ ಫೀಸಿ ನಿಮಿತ್ತಗಳನ್ನು ಬರೆಯತಕ್ಕದ್ದು; ಅಥವಾ ತನ್ನ ಡಾಸ್ ಮೇಲ್ವಿಚಾರಣೆಗೊಳಪಟ್ಟು ಬರೆಸತಕ್ಕದ್ದು. ಅಂಥಾ ಫೈಲನ್ನು ಇಡುವದಕ್ಕೂ ಕೋರ್ಟಿನ ಪ್ರೊಸೀಡಿಂಗ್ಸ್‌ಗಳನ್ನು ಬರೆಯುವದಕ್ಕೂ ಆಗತ್ಯಬಿದ್ದಲ್ಲಿ ಗ್ರಾಮ ಶಾನುಭೋಗನು ಗ್ರಾಮ ಮುನಸೀಫನಿಗೆ ಸಹಾಯ ಮಾಡುವದು ಅವನ ಕೆಲಸವಾಗಿರತಕ್ಕದ್ದು.

ವ್ಯಾಜ್ಯಗಳ ರಿಜಿಸ್ಟರ ನ್ನು ವ್ಯವಹರಣೆಯ ರೆಕಾರ್ಡನ್ನೂ ಇಡುವದಕ್ಕೆ ಗ್ರಾಮ ಶಾನುಭೋಗನು ಮುನಸೀಫನಿಗೆ ಸಹಾಯ ಮಾಡತಕ್ಕದ್ದು.

೯. ಈ ರೆಗ್ಯುಲೇಷನಿಗನುಗುಣವಾಗಿ ಕೊಡೋಣಾದ ಸಮಸ್ತ ಸಮ್ಮರ್‌ಗಳನ್ನೂ ನೋಟೀಸ್‌ಗಳನ್ನೂ ವ ಹುಕುಂಗಳನ್ನು ಜಾರಿ ಜಾರೀಮಾಡುವ ಕೆಲಸವು ಈ ರೆಗ್ಯುಲೇಷನ್ ಪ್ರಕಾರ ಜಪ್ತಿ ಮಾಡೋಣಾದ ಚರ ಜೀನಸಿಗಳನ್ನು ಹಿಡಿದಿರುವಲ್ಲಿ, ವಿಕ್ರಯಿಸುವಲ್ಲಿ ಸ್ವಾಧೀನಕ್ಕೆ ಕೊಡುವಲ್ಲಿ ಸಹ ಗ್ರಾಮ ಮುನಸೀಫರ ಅಪ್ಪಣೆಸುಸಾ-

ಗ್ರಾಮ ನಾಜರು ಸಮ್ಮರ್‌ವಗೈರೆ ಸದರಿ ಜಾರಿಮಾಡುವದು.

ರವಾಗಿ ನಡೆಯತಕ್ಕ ಕೆಲಸ ಕೂಡ ವಾದಿಕೆಯಾಗಿ ಜಾಗತ ಪತ್ರಗಳನ್ನು ಕೊಂಡುಹೋಗುವ ಗ್ರಾಮ ತಳವಾರ ತೋಟಿ ಯಾ ಇತರ ನೌಕರ ನಡುಗಿರತಕ್ಕದ್ದು.

೧೦. ಮುಂಚಿತವಾಗಿ ಗವರ್ನ್‌ಮೆಂಟಿನವರ ಮಂಜೂರಾತಿಯನ್ನು ಪಡೆದು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರವರು ೮ನೇ ಪ್ರಕರಣಗಳಲ್ಲಿ ಹೇಳೋಣಾದ ಕೆಲಸಗಳನ್ನು ನಡೆಸುವಬಗ್ಯೆಗಾಗಿ ಯಾ ಶಾನುಭೋಗನಿಗೆ ಅಥವಾ ೯ನೇ ಪ್ರಕರಣದಲ್ಲಿ ಹೇಳಿದ ಗ್ರಾಮ ನೌಕರನಿಗೆ ಬದಲಾಗಿ ಯಾ ಅವರಿಗೆ ಸಹಾಯಾರ್ಥವಾಗಿ ಬೇರೆ ಯಾವ ಮನುಷ್ಯನನ್ನಾದರೂ ನೇಮಿಸಬಹುದು.

ಗ್ರಾಮ ಶಾನುಭೋಗನು ಮತ್ತು ಗ್ರಾಮ ನೌಕರ ಇವರ ಬದಲಾಗಿ ಯಾ ಅವರಿಗೆ ಸಹಾಯಾಗಿ ಯಾವ ಮನುಷ್ಯನನ್ನಾದರೂ ಡೆಪ್ಯುಟಿ ಕಮಿಷನರವರು ನೇಮಿಸಬಹುದು.

---

೩ ನೇ ಅಧ್ಯಾಯ.

ಅಧಿಕಾರ ಸರಹದ್ದು, ತೀರ್ಮಾನದ ಸಂಗತಿಗಳು ವ ಕಾಲನಿಬಂಧನೆ.

೧೧. ಗ್ರಾಮ ಕೋರ್ಟುಗಳಿಂದ ಈ ಕೆಳಗೆ ನಮೂದಿಸಲ್ಪಡುವ ಮೊಗಳು ವಿಚಾರಿಸಲ್ಪಟ್ಟು ಇತ್ಯರ್ಥವಾಗತಕ್ಕ ಪ್ರಕರಣಗಳಾಗಿ ಇರುತ್ತವೆ. ಯಾವವೆಂದರೆ,-ಕರಾರ್ಕಿಲೆ ದಿಂದಾವತೀಯಾಗತಕ್ಕ ಹಣಕ್ಕೆ ದಾವೆ, ಅಥವಾ ಚರವಸ್ತುವಿಗೆ ಅಥವಾ ಅಂಥಾ ಜೀನಿಸಿಗೆಯ ಮೌಲ್ಯವನ್ನು ಕುರಿತ ದಾವೆ, ಚಿಕ್ಕಾಚಾರ ಬಾಕಿಯಿಂದ ಅಥವಾ ಇತರ ವಿಧದಿಂದ ಸಾಲ ಯಾ ತಗಾದೆಯು ೧೦ ರೂಪಾಯಿನ ಮೊಬಲಗು ಯಾ ಮೌಲ್ಯಕ್ಕೆ ಮಿಾರಿ ಇಲ್ಲದಿದ್ದರೆ.

ಗ್ರಾಮ ಕೋರ್ಟಿನ ಮೂಲಕ ಇತ್ಯರ್ಥಿಸಲ್ಪಡ ತಕ್ಕ ವ್ಯಾಜ್ಯಗಳು.

ಪರಂತು ಅಂಥಾ ಕೋರ್ಟಿನಲ್ಲಿ ಈ ಕೆಳಗಣ ದಾವೆಗಳ್ಯಾವವೂ ತರಲ್ಪಡ ಕೂಡದು, ಅವುಗಳ್ಯಾವವೆಂದರೆ;—

ನಿಯಮ.

(೧) ಪಾಲುಗಾರಿಕೆ ಲೆಕ್ಕಾಚಾರ ಬಾಕೀಯನ್ನು ಕುರಿತು, ಅಂಥಾ ಲೆಕ್ಕಾಚಾರದ ಫೈಸಲಾಬಾಕಿಯನ್ನು ಕಕ್ಷಿಗಾರರಾಗಲೀ, ಅವರ ಮುಖಾಂತರದವರಾಗಲೀ ಕೋರಿಸಿದ್ದ ಸಂಗತಿಯಲ್ಲಿ ಅಲ್ಲದೆ ಅನ್ಯಥಾ;

(೨) ಮರಣಶಾಸನ ಬರೆದಿಡದೆ ಸತ್ತು ಹೋದವನ ಸೊತ್ತಿನ ಪಾಲಿನ ಯಾ ಪಾಲಿನ ಅಂಶದ ಬಗ್ಯೆ ಅಥವಾ ಒಂದು ಮರಣಶಾಸನಪ್ರಕಾರ ಬಿಟ್ಟ ಆಸ್ತಿಯ ಬಗ್ಯೆ ಯಾ ಅಂಥಾ ಆಸ್ತಿಯ ಪಾಲಿನಬಗ್ಯೆ;

(೩) ಭೂಮಿಯ ಗೇಣಿಬಗ್ಯೆ ಅಂಥಾ ಗೇಣಿಯು ಪ್ರತಿವಾದಿಯಿಂದ ದಸ್ತಖತ್ತು ಮಾಡಲ್ಪಟ್ಟ ಬರಹ ಮೂಲಕವಾದ ಕರಾರಿನ ಮೇಲೆಬರಬೇಕಾಗಿದ್ದ ಸಂಗತಿಯಲ್ಲಿಲ್ಲದೆ;

(೪) ಗವರ್ನ್‌ಮೆಂಟನವರ ಮೇಲೆ ಯಾ ಅವರ ತರಫಿನಿಂದ ಅಥವಾ ಗವರ್ನ್‌ಮೆಂಟ್ ಉದ್ಯೋಗಸ್ಥರ ಮೇಲೆ ಯಾ ಅವರ ತರಫಿನಿಂದ ಅವರಉದ್ಯೋಗಪ್ರಯುಕ್ತವಾಗಿ;

(೫) ಅಪ್ರಾಪ್ತವಯಸ್ಕರ ಯಾ ಬುದ್ಧಿಸ್ವಸ್ಥತೆ ಇಲ್ಲದವರಮೇಲೆ ಯಾ ಅವರ ತರಫಿನಿಂದ;

೧೨ (ಎ) ಉಭಯ ಕಕ್ಷಿಗಳು ಕೋರ್ಟಿನವರ ಸಮ್ಮತಿಯಿಂದ ಬರೆಕೊಟ್ಟಲ್ಲಿ ವ್ಯಾಜ್ಯಗಳ ಮೌಲ್ಯವು ೫೦ ರೂಪಾಯಿಗಳಿಗೆ ಮಿಾರದಿದ್ದರೆ ೧೧ನೇ ಪ್ರಕರಣದಲ್ಲಿ ವಿವರಿಸಿದ ಸ್ವಭಾವದ ವ್ಯಾಜ್ಯಗಳನ್ನು ಒಂದು ಗ್ರಾಮ ಕೋರ್ಟನವರು ಕೇಳಿ ಇತ್ಯರ್ಥ ಪಡಿಸಬಹುದು.

ಸಮ್ಮತಿಯಮೇರೆ ೫೦ ರೂಪಾಯಿವರೆಗೆ ಅಧಿಕಾರ.

(ಬಿ) ಈ ರೆಗ್ಯುಲೇಷನ್ ಮೇರೆಗೆ ಗ್ರಾಮ ಮುನಸೀಫರ ಯಾ ಬ್ಯಾರಿಗೊಳಪಟ್ಟ ಯಾವವಾದರೂ ಅಂಥಾ ಗ್ರಾಮ ಮುನಸೀಫರ ಕೋರ್ಟಿನ ಅಧಿಕಾರದರಾಜ್ಯಸೀಯ ಸರಹದ್ದಿನೊಳಗೆ ಅಧಿಕಾರವುಳ್ಳ ಮತ್ಯಾವ ಕೋರ್ಟನಲ್ಲಿಯೂ ವಿಚಾರಣೆ ಯಾ ಇತ್ಯರ್ಥವಾಗಕೂಡದು.

(ಸಶೇಷ)

ADDRESS
OF THE
DEWAN OF MYSORE
TO THE REPRESENTATIVE ASSEMBLY HELD AT MYSORE,
on Tuesday, the 4th October 1892

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೪ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ

ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದೂರವರು ಕಳೆದ ಸಂವತ್ಸರದ ವರಮಾನ ಖರ್ಚು ತೋರಿಸುವ ತಖ್ತೆಗಳನ್ನು, ಹೋದ ವರುಷದಲ್ಲಿ ಸಭೆ ಸೇರಿದಂದಿನಿಂದ ಸರ್ಕಾರದವರು ನಡೆಸಿರುವ ಮುಖ್ಯವಾದ ವಿಷಯಗಳ ಸಾರಾಂಶವನ್ನು, ಈದಿವಸ ನಿಮಗೆ ತಿಳಿಸಬೇಕೆಂದು ಅಪ್ಪಣೆ ದಯಪಾಲಿಸಿರುತ್ತಾರೆ

[illegible] ವರಮಾನ ಖರ್ಚು ಲೆಕ್ಕಗಳನ್ನು ಸುಲಭವಾಗಿ ಸಿದ್ಧಗಳು ಮಾಡಿಕೊಳ್ಳುವದಕ್ಕಾಗಿ, ಸರಕಾರಿ ಸಾಲಿನ ಅವಧಿಯನ್ನು ಗಣನೆ ಮಾಡುವದರಲ್ಲಿ ಈವರೆಗೆ ಜಾರಿಯಲ್ಲಿ ತಂದ ಬದಲಾವಣೆ ವಿಷಯವನ್ನು ಪ್ರಥಮತಃ ಸೂಚಿಸಬೇಕಾದ್ದು ಅವಶ್ಯಕವಾಗಿರುತ್ತೆ ಇದುವರಿವಿಗೆ ಸರ್ಕಾರಿ ಸಾಲ್ ಮಾರ್ಚ್ ೩೧ನೇ ತಾರೀಖಿಗೆ ಆಖೈರಾಗುತ್ತಾ ಇದ್ದದ್ದು ಇತರ [illegible] ಜೂನ್ ೩೦ನೇ ತಾರೀಖಿಗೆ ಆಖೈರಾಗುತ್ತೆ ಈರೀತಿಯಾದ ಬದಲಾವಣೆಯು ಹೋದ ವರ್ಷದಲ್ಲಿ ಪ್ರಥಮತಃ [illegible] ಬಂದಿರುವ, ಹೋದವರ್ಷದ ಸಾಮಾನ್ಯವಾದ ಅವಧಿಯಾದ ೧೨ ತಿಂಗಳುಗಳಿಗೆ ೧೮೯೨ನೇ ಇಸವಿ ಏಪ್ರಿಲ್ ೧ನೇ [illegible] ವರಮಾನ [illegible] ತಿಂಗಳುಗಳು ಸೇರಿ ೧೫ ತಿಂಗಳಾಯಿತು ಕಳೆದ ಸಂವತ್ಸರದ ಸಭೆಯಲ್ಲಿ ನಿಮ್ಮ ಕೋರಿಕೆಯನ್ನನುಸರಿಸಿ, ಕಂದಾಯ ಕಿಸ್ತುಗಳು ಮಾರ್ಚಿ ತಿಂಗಳಿಗೆ ಆಖೈರಾಗುತ್ತಿದ್ದವನ್ನು ತಪ್ಪಿಸಿ, ಮೇ ತಿಂಗಳಿಗೆ ಪೂರೈಸುವ ವ್ಯವಸಾಯ ಕಾಲಾವಧಿಯನ್ನು ಸಂಪೂರ್ಣವಾಗಿ ಸೇರಿಸಿಕೊಂಡಿರುವಂತೆ ಕಿಸ್ತುಬಂದಿಯನ್ನು ಬದಲಾಯಿಸಿದ ಕಾರಣ, ಇಲ್ಲಿ ಹೇಳಿದಂತೆ ಸಾಲಿನ ಅವಧಿಯಲ್ಲಿ ಬದಲಾವಣೆಯು ಅವಶ್ಯಕವಾಯಿತು ಯಾತಕ್ಕೆಂದರೆ, ರೆವಿನ್ಯೂ ಸಾಲ್ ಎಂಬುದು ವಸೂಲಿ ಕ್ರಮ ಇದ್ದ [illegible] ತಿಂಗಳುಗಳನ್ನು ಅಡಗಿಸಿಕೊಂಡಿರತಕ್ಕದ್ದು ಮುಖ್ಯ ಕೆಲಸಗಳಿಗೆ ಅವಶ್ಯಕವಾದ್ದರಿಂದಲೂ, ರೆವಿನ್ಯೂ ಉದ್ಯೋಗಗಳಿಗೆ ಸಾಲನ್ನು ಜೂನ್ ೩೦ಕ್ಕೆ ಆಖೈರ್ ಮಾಡಿಕೊಂಡು ಇತರ ಉದ್ಯೋಗಗಳಿಗೆ ಮಾರ್ಚ್ ೩೧ಕ್ಕೆ ಪೂರೈಸುವಹಾಗೆ ಇಟ್ಟುಕೊಳ್ಳುವದು [illegible] ಅನುಕೂಲವಲ್ಲವಾದ್ದರಿಂದಲೂ, ರೆವಿನ್ಯೂ ವಸೂಲಾತಿ ಮೊದಲಾದ ಎಲ್ಲಾ ಸರಕಾರಿ ಉದ್ಯೋಗಗಳಿಗೂ ಜೂನ್ ೩೦ [illegible] ಸಾಲನ್ನು ಖೈದು ಮಾಡತಕ್ಕದ್ದು ಯುಕ್ತವಾಗಿ ಕಂಡುಬಂತು ಇದಲ್ಲದೆ, ಈ ಬದಲಾವಣೆಯು ಈ ವ್ಯವಸಾಯದ [illegible] ಗಳು ಗಿರುವ [illegible] ಸರಕಾರಿ ಸಾಲು ಸಾಗುವದಕ್ಕೆ ಅವಕಾಶವನ್ನು, ವ್ಯವಸಾಯದ ವಿಷಯದಲ್ಲಿ ಜನರು [illegible] ಮಾಡಿಕೊಳ್ಳುವ ಒಪ್ಪಂದಿಕೆಗಳ ಕಾಲಾವಧಿಯನ್ನೂ ಅನುಸರಿಸುವಂತೆ ಮಾಡುವದು ಅನುಕೂಲಕ್ಕೆ ಕಾರಣವಾಗಿರುತ್ತೆ

ಮೇಲ್ಕಂಡ ಕಾರಣಗಳಿಂದ ೧೮೯೧—೯೨ನೇ ಇಸವಿ [illegible] ವರಮಾನ ಖರ್ಚು ಲೆಕ್ಕಗಳಲ್ಲಿ ಮಾರ್ಚಿ ೩೧ನೇ ತಾರೀಖ್ ವರೆಗಿನ ೧೨ ತಿಂಗಳುಗಳಿಗೆ ಪ್ರತ್ಯೇಕವಾಗಿಯೂ, ಜೂನ್ ೩೦ನೇ ತಾರೀಖಿಗೆ ಆಖೈರಾದ ಮೂರು ತಿಂಗಳುಗಳಿಗೆ ಪ್ರತ್ಯೇಕವಾಗಿಯೂ, ತೋರಿಸಿ ಒಟ್ಟು ೧೫ ತಿಂಗಳುಗಳ ವರಮಾನವನ್ನು ಸಂವತ್ಸರದ ವರಮಾನವಾಗಿ ತೋರಿಸಿರುತ್ತೆ

ಕೈಲಿಷ್ಟ ಇಲಾಖೆ ವರಮಾನ ಖರ್ಚು ಕಿವಾಯಿ ಬಾಕಿ ಬಾಬುಗಳ ಮೊಬಲಗು ವರಮಾನ ಮತ್ತು ಖರ್ಚು ತೋರಿಸುವ ಪಟ್ಟಿಗಳನ್ನು ಈಗ ತಿಳಿಯಪಡಿಸುತ್ತೇನೆ —

ಮುಖ್ಯವಾದ ವರಮಾನಗಳ ಪಟ್ಟೀ.	1890—91	ಜಮಾ ಬಾಬುಗಳು 91ನೇ ಏಪ್ರಿಲಿನಿಂದ 92ನೇ ಮಾರ್ಚಿ.	92ನೇ ಏಪ್ರಿಲಿನಿಂದ 92ನೇ ಜೂನ್‌ವರೆಗೆ.	ಜಮಾ.
	ರೂ	ರೂ	ರೂ	ರೂ
ಲ್ಯಾಂಡ್‌ರೆವಿನ್ಯೂ ಎಂಬ ಜಮಾಬಾಬ				
(a) ಜಮೀನಿನ ಕಂದಾಯ [illegible]	87,12,705	46,95,302	33,68,981	80,64,283
(b) ಉಪ್ಪಿನ ಮೇಲಿನ ಕಂದಾಯ	22,489	15,537	1,441	17,278
(c) ಕಂದಾಯ [illegible]	25,938	31,3-2	847	32,169
ಲ್ಯಾಂಡ್ ರೆವಿನ್ಯೂ ಜಮಾ	87,61,132	47,42,461	33,71,269	81,13,730
ಅಬ್ಕಾರಿ	20,28,076	19,73,865	6,17,942	25,91,807
ಫಾರೆಸ್ಟ್	14,46,012	15,11,267	1,43,919	16,55,186
ಸ್ಟಾಂಪ್	5,79,936	6 04,780	1,89,023	7,93,803
ಸಾಯರ್	3,88,586	4,05,527	1,10,968	5,16,495
ಮೊಹತರ್ಫಾ	3,38,063	2,14,080	98,851	3,12,931
ಲಾ ಅಂಡ್ ಜಸ್ಟಿಸ್ ಎಂಬ ಜುಡಿಷಿಯಲ್ ಜೈಲುಗಳು ದೇಮೀಲ್	71,173	76,447	18,031	94,478
ರಜಿಸ್ಟ್ರೇಷನ್	66,529	76,033	24,076	1,00,109
ಅಮೃತಮಹಲ್ ಇಲಾಖೆ	34,162	30,766	3,461	34,227
ವಿದ್ಯಾಭ್ಯಾಸದ ಇಲಾಖೆ	43 682	44,319	12 827	57,146
ಪಬ್ಲಿಕ್‌ವರ್ಕ್ಸ್ ಎಂಬ ಮರಾಮತ್ತಿನ [illegible] ಭಂಗಾರದ ಗಣಿಗಳು	16,687	27,341	3,453	30,794
(a) ಲೀಜುದಾರರಿಂದ ರಾಯಲ್ಟಿ	2,34 341	3,75,784	1,39,504	5,15,288
(b) ಭಂಗಾರವಿರತಕ್ಕ ಸ್ಥಳಗಳನ್ನು ಹುಡುಕತಕ್ಕ ಎಗ್ಸ್‌ಪ್ಲೊರೇಷನ್ ಲೈಸೆನ್ಸ್‌ಗಳ ಫೀಸ್ ಎಂಬ ರುಸುಂಗಳು, ಮತ್ತು ಹೊಸ ಗಣಿಗಳಿಗೋಸ್ಕರ ಬಂದ ದರಖಾಸ್ತುಗಳಿಗಾಗಿ ಪ್ರೀಮಿಯಂ ಎಂಬ ರುಸುಂಗಳು	71,225	2,162	1,000	3,162
ಮೆಡಿಕಲ್ ಎಂಬ ವೈದ್ಯಶಾಲೆಗಳ ಬಗೆ	6,286	10,766	902	11 668
ಸ್ಟೇಷನರಿ ಮತ್ತು ಇತರ ಜಿಲ್ಲಾ [illegible]	6,052	6,562	3,440	10,002
ಇಂಡಿಯಾ ಗವರ್ನ್‌ಮೆಂಟ್ ಪ್ರಾಮಿಸರಿ ನೋಟುಗಳನ್ನು ಖರೀದಿಗೆ ತೆಗೆದದ್ದರಲ್ಲಿ ಬಂದ ಲಾಭ	14,270	75,765	1,34,391	2,10,156
ಇಂಡಿಯಾ ಗವರ್ನ್‌ಮೆಂಟ್ ಪ್ರಾಮಿಸರಿ ನೋಟುಗಳ ಮೂಲಕ ಇಟ್ಟಿರುವ ಮೊಬಲಗಿನ ಬಡ್ಡಿ ಮತ್ತು ಮೈಸೂರ್ ರೈಲ್ವೆ ಪತ್ರಗಳ ಬಡ್ಡಿ	2,49,400	2,75,104	86,760	3,61,864
ಮದರಾಸ್ ಬ್ಯಾಂಕಿನ ಚಾಲತಿ ಡಿಪಾಜಿಟ್ ಮೊಬಲಗಿನ ಬಡ್ಡಿ	60,337	64,207		64,207
ಚಿಲ್ಲರೆ ಬಾಬುಗಳು	92,607	87,249	23,255	1,10,504
ಜಮಾ	115,08 506	106,34,485	49,83,072	156,17,557

ಖರ್ಚಿನ ಬಾಬುಗಳು.

A				
ಸಬ್‌ಸಿಡಿ ಎಂಬ ಕಪ್ಪ	24,50,000	24,50,000	..	24,50,000
ಸಿವಿಲ್ ಲಿಸ್ಟ್ ಎಂಬ ಅರಮನೆ ಇಲಾಖೆ ಖರ್ಚು	13,00,000	13,83,333	3,50,000	17,33,333
ಪೊಲಿಟಿಕಲ್ ವೇತನಗಳು, ಜಹಗೀರ್ ಬದಲಾಗಿ ಕೊಡುವ ಅಲೋವೆನ್ಸ್‌ಗಳು ದೇಮೀಲ್	1,00,129	1,03,753	30,965	1,34,718
ಮಿಲಿಟರಿ ಫೌಜು	7,55,837	8,46,257	2,20,090	10 66,34-
ಜಮಾ ..	46,05,966	47,83,343	6,01,035	53,83,398

B				
ಹುಜೂರು ಇಲಾಖೆ ಖರ್ಚು	2,74,128	2,82,071	88,964	3,66,035
ಲ್ಯಾಂಡ್‌ರೆವಿನ್ಯೂ ಸಂಬಂಧವಾದ ಖರ್ಚು—				
ಡೆಪ್ಯುಟಿಕಮಿಷನರಿಗಳು ಮತ್ತು ಅವರ ಸಿಬ್ಬಂದಿಗಳು	1,72,411	1,69,404	43,858	2,12,762
ಸಬ್‌ಡಿವಿಜನ್ ಆಫೀಸರಿಗಳು		6,122	5,234	11,356
ಅಸಿಸ್ಟೆಂಟ್ ಕಮಿಷನರಿಗಳು ಮತ್ತು ಅವರ ಸಿಬ್ಬಂದಿಗಳು	67,317	64,543	17,228	81,771
ತಾಲ್ಲೂಕ್ ಸಿಬ್ಬಂದಿಗಳು	3,14,985	3,15,620	77,805	3,93,425
ರೆವಿನ್ಯೂ ಸರ್ವೆ ಇಲಾಖೆ	1,76,966	1,73,907	47,441	2,21,348
ಇನಾಂ ಇಲಾಖೆ	7,829	7,758	1,912	9,670
ಗ್ರಾಮ ನೌಕರರ ವೇತನ	5 11,313	3,11,587	2,64,772	5,76 359
ಇತರ ಬಾಬುಗಳು	40,154	31,167	14,887	46,054
ಅಬ್ಕಾರಿ	60,274	86,135	31,517	1,17,682
ಫಾರೆಸ್ಟ್ ಅನೆ ಬಂಗಡಿ ಬಾಬು ಸಹ	6,98,914	5,70,703	1,50,552	7,21,255
ಸ್ಟಾಂಪು	19,948	21,881	4,878	26,759
ಸಾಯರ್	14,127	12,932	3,233	16,165
ಸಾದಿಲ್ವಾರ್ ಮತ್ತು ಛಾಪಖಾನೆ	85,533	92,526	31,859	1,24,385
ಅಮೃತ ಮಹಲ್	27,934	27,804	4,263	32,0.7
ಸ್ಟೇಷನರಿ ಮತ್ತು ಇತರ ಜಿಲ್ಲೆ ಇಲಾಖೆಗಳು	64,746	72 467	21,754	94,221
ಜಮಾ	24,96,694	22,46,607	8,03,607	30,50,214

C				
ಲಾ ಅಂಡ್ ಜಸ್ಟಿಸ್ ಎಂಬ ಜುಡಿಷಿಯಲ್ ಮತ್ತು ಜೈಲ್‌ಗಳು	7,73 613	7,94,168	2 06,991	10,00,999
ಪೋಲೀಸ್	6,77,871	6,98,742	1,83 540	8,82,282
ವಿದ್ಯಾಭ್ಯಾಸದ ಇಲಾಖೆ	3 02,729	3,30,547	1,02 890	4,33,437
ಮುಜರಾಯಿ	2,82,559	3,02,556	78,315	3,80,971
ಮೆಡಿಕಲ್ ಎಂಬ ವೈದ್ಯಶಾಲೆಗಳು	1,96,590	2,01,635	54,706	2,56,341
ಪೆನ್ಷನ್‌ಗಳು ಮತ್ತು ಗ್ರ್ಯಾಚ್ಯುಟಿಗಳು	2,90,191	2,81,046	76,324	3,57,370
ಪಬ್ಲಿಕ್ ವರ್ಕ್ಸ್ ಎಂಬ ಮರಾಮತ್ತು	19,90,639	22,33,076	5,04,213	27,37,289
ಆಂಕೆ	3,337	122	—	122
ರಜಿಸ್ಟ್ರೇಷನ್	32,201	37,002	11,066	48,068
ಪ್ರಿವಿಲೇಜ್‌ಗಳ ಫರ್ಲೋ ಮತ್ತು ಅಲೋವೆನ್ಸ್, ಗ್ರ್ಯಾಚ್ಯುಟಿ ಕಂಪೆನ್ಸೇಷನ್, ರಜಾ ಮತ್ತು ಇತರ ಬಗ್ಗೆ ಕಟ್ಟ ಪ್ಯಾಪರ್	34 002	34 334	5,977	40 311
ಮೈಸೂರು ಸೇವಿಂಗ್ ಬ್ಯಾಂಕ್ ಡಿಪಾಜಿಟ್‌ಗಳ ಬಡ್ಡಿ	58 666	68 000	17,815	85 815
ಧರ್ಮಾದಾಯ [illegible] ಇಟ್ಟಿರುವ ಮೊಬಲಿಗಿನ ಬಡ್ಡಿ			737	737
ಲೀಸಂಡ್ ಎಂಬ ಮಿನಸ್ ಖರ್ಚು	3 33 989	13 080	9 059	22,139
ಸೆನ್ಸಸ್ ಎಂಬ ಖಾನೇಷುಮಾರಿ ಇಲಾಖೆ	16 373	82 333	13 059	95 392
ಚಿಲ್ಲರೆ ಬಾಬುಗಳು	1 16 770	95 940	59,061	1,55 001
ಮಹಾರಾಣಿಯವರ [illegible] ಸೇರಿಸಿದ [illegible] ಖರ್ಚು		15,472	52	15 524
ಫ್ಯಾಮಿನ್ ರಿಲೀಫ್ ಎಂಬ ಕ್ಷಾಮನಿವಾರಣೆ ಖರ್ಚಿನ ಸಮಾಸಕ್ಕೆ ಸೇರತಕ್ಕದ್ದು		7 631	17 351	25 018
ಇಂಡಿಯಾ ಗವರ್ನ್‌ಮೆಂಟ್ ಪ್ರಾಮಿಸರಿ ನೋಟುಗಳನ್ನು ಖರೀದಿಗೆ ತೆಗೆದದ್ದರಲ್ಲಿ ಕೊಟ್ಟ ರುಸುಂ ವಗೈರೆ,		95 810		95,810
ನೀಲಗಿರಿಯಲ್ಲಿ ಖರೀದಿಗೆ ತೆಗೆದುಕೊಂಡ ಆಸ್ತಿ [illegible]			30 000	30,000
ಜಮಾ	51,09,189	53,22 707	13 65,059	66,90 746
ಒಟ್ಟು ಜಮಾ	122,12,049	123,52,607	27,72 701	151 25 353

ವರಮಾನದಿಂದ—೧೮೯೦—೯೧ನೇ ಇಸವಿಯ ಮೊಬಲಗಿಗೆ ಹೋಲಿಸಿದಲ್ಲಿ ಕಡಿಮೆಯಾಗಿ, ೧೮೯೧—೯೨ನೇ ಇಸವಿಯ ಆದ್ಯಂತದ ೧೨ ತಿಂಗಳು ವಸೂಲಿಯಲ್ಲಿ ಒಟ್ಟುಮೇಲೆ ಸ್ವಲ್ಪ ಮೊತ್ತ ಕಡಮೆಯಾಗಿ ೮¾ ಲಕ್ಷ ರೂಪಾಯಿಗಳ ವರೆಗೆ ಭಾರಿ ಕಮ್ಮಿಯಾಗಿರುತ್ತೆ

ಲ್ಯಾಂಡ್ ರೆವಿನ್ಯೂ ಎಂಬ ಜಮೀನ್ ಬಾಬಿನಲ್ಲಿ ೪೦,೧೮,೦೦೦ ರೂಪಾಯಿಯೂ, ಮೊಹತರ್ಫಾ ಬಾಬಿನಲ್ಲಿ ೧,೨೪,೦೦೦ ರೂಪಾಯಿಯೂ, ಕಮ್ಮಿ ಕಂಡುಬರುವದು ಹಿಂದಣ ವರುಷಗಳಲ್ಲಿ ಮಾರ್ಚಿ ೩೧ನೇ ತಾರೀಖಿನೊಳಗೇನೇ ವಸೂಲಾಗುತ್ತಿದ್ದ ಒಟ್ಟು ಜಮಾಬಂದಿ ಕೈಕಿ ಲೇಕದ ಬಾಕಿ ಮೊಬಲಗಿನ ಮೊತ್ತವು ಈವರೆಗೆ ಇದ್ದ ರೀತಿಯ ಕಿಸ್ತುಬಂದಿ ಬದಲಾವಣೆಯಿಂದ ಮಾರ್ಚಿ ಆಖೈರಾದನಂತರವೇ ವಸೂಲಾಗಬೇಕಾಗಿ ಬಂತು ಇದರಿಂದ ಹೊಲ್ಲದಾಗದೆ ವಿಶೇಷವಾದ ಕಮ್ಮಿ ಕಾಣಲು ಕಾರಣವಾಯಿತು ಈ ಬಾಬುಗಳಲ್ಲಿ ಉಳಿದ ಮೊಬಲಗಿಗೆ, ಸ್ವಲ್ಪ ಮೊತ್ತ ಕಡಮೆಯಾಗಿ ಮೈದಾನ ಪ್ರದೇಶಗಳಲ್ಲೆಲ್ಲ ಹೋದವರ್ಷ ಸಂಭವಿಸಿದ ಅನಾವೃಷ್ಟಿಯು ಕಾರಣವಾಗಿರುತ್ತೆ ಇದೇ ಕಾರಣದಿಂದ ಸುಮಾರು ೪ ಲಕ್ಷ ರೂಪಾಯಿಗಳ ಮೊಬಲಗು ರಿಮಿಷನ್ ಎಂಬ ಮುಜರೆಯನ್ನು ಕೊಡಬೇಕಾಗಿಯೂ ಸುಮಾರು ೬ ಲಕ್ಷದ ವರಿವಿಗೆ ಮುಂದಿನ ವಸೂಲಿಗೆ ನಿಲ್ಲಿಸಬೇಕಾಗಿಯೂ ಬಂತು ಈಮೇರೆ ಮುಂದಿನ ವಸೂಲಿಗೆ ನಿಲ್ಲಿಸಿರುವ ಮೊಬಲಗು ಕೈಕಿ ಉತ್ತರೋತ್ತರ ಕೆಲವು ಭಾಗ ಮಾಫ ಕೊಡಬೇಕಾಗಿ ಬರಬಹುದು.

ಎಕ್ಸೈಸ್ ಎಂಬ ಅಬ್ಕಾರಿ ಬಾಬು ಕಿವಾಯಿ ಇತರ ದೊಡ್ಡ ಬಾಬುಗಳ ೧೮೯೦—೯೧ನೇ ಇಸವಿ ಪೂರಾ ೧೨ ತಿಂಗಳ ಒಟ್ಟು ವರಮಾನವು ೪೭ ಲಕ್ಷ ರೂಪಾಯಿ ಆಯಿತು ೧೮೯೧ ೯೨ನೇ ಇಸವಿಯ ವರಮಾನವು ೪೬¾ ಲಕ್ಷ ರೂಪಾಯಿ ಆಗಿದ್ದದ್ದರಿಂದ ಹೋದ ವರುಷದಲ್ಲಿ ೩¼ ಲಕ್ಷ ರೂಪಾಯಿ ಜಾಸ್ತಿ ಕಂಡುಬಂದಿದೆ ಅಬ್ಕಾರಿ ಬಾಬಿನಲ್ಲಿ ಹೆಚ್ಚು ಮತ್ತು ಕೆಲವು ಕಂಟ್ರ್ಯಾಕ್ಟ್‌ರುಗಳಿಂದ ವಸೂಲಾಗಬೇಕಾದ ಬಾಕಿಯು ಮಾರ್ಚಿ ೩೧ನೇ ತಾರೀಖಿನಲ್ಲಿ ಬಂದಿರದೇ ನಿಂತಿದ್ದರಿಂದ, ಸುಮಾರು ¾ ಲಕ್ಷದ ವರಿವಿಗೂ ಕಮ್ಮಿ ಆಯಿತು ಈ ರೀತಿಯಾಗಿ ೧೮೯೦ ೯೧ನೇ ಇಸವಿ ಬಾಬತು ವಸೂಲಿಗೂ, ೧೮೯೧—೯೨ನೇ ಇಸವಿ ಬಾಬತು ೧೨ ತಿಂಗಳ ವಸೂಲಿಗೂ ಹೋಲಿಸಿ ನೋಡಿದ್ದಲ್ಲಿ, ಜಮೀನು ಮತ್ತು ಮೊಹತರ್ಫಾ ಬಾಬುಗಳು ಕಿವಾಯಿ ಇತರ ಬಾಬುಗಳಲ್ಲಿ ಸುಮಾರು ೩¾ ಲಕ್ಷ ರೂಪಾಯಿಗಳ ವರಿವಿಗೆ ಜಾಸ್ತಿ ಕಂಡುಬಂದಿದೆ,

ಅವರ ಮೇಲ್ಕಂಡ ಜಮೀನು ಮತ್ತು ಮೊಹತರ್ಫಾ ಬಾಬುಗಳು ಕಿವಾಯಿ ಇತರ ಬಾಬುಗಳ ಮೊಬಲಗುಗಳು ಜಾಸ್ತಿಯಾಗಿಯೂ ಮಿತ್ತೂರ ಮಟ್ಟಿಗೆ ಅಭಿವೃದ್ಧಿಯಾಗಿ ಇರುತ್ತಿರುವದನ್ನು ತಿಳಿಯಬೇಕಾದರೆ, ೧೮೯೦—೯೧ನೇ ಇಸವಿಯ ಕಡೆ ರುಪಾಕಾ ವಸೂಲಿಗೂ, ಅದರ ಹಿಂದಣ ೧೫ ತಿಂಗಳ ವಸೂಲಿಗೂ ಹೋಲಿಕೆ ಮಾಡಬೇಕು ಈರೀತಿಯಾದ ಹೋಲಿಕೆಯನ್ನು ಕೆಳಗಿನ ತಖ್ತೆಯಲ್ಲಿ ಮಾಡಿರುತ್ತೆ

BANGALORE.—Printed and published at the KARNATAKA PRESS, No. 40, HOSPITAL ROAD PETTAH.—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಕಾಮವಿವಿದಸ್ರುವೃತ್ತ್ಯವಗಮಾರ್ಥ್ಯಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ॥ಮ್ರುಗಾಂಕಹಿತವಾಸರನಿಹಿತಮುದ್ರಣಾಸಜ್ಜನೈರ್ನಿಕಾಸುಪರಿದೋಷಿತಾದಿಕತಿಮಾನಸಂಸುಮುದಃ

Vol. XIX.] BANGALORE:—MONDAY, OCTOBER 24, 1892 [No. 42.

ಸಂಪುಟ ೧೯.] ಬೆಂಗಳೂರು:—ಸರ್ ೧೮೯೨ ನೇ ಇಸವಿ ಅಕ್ಟೋಬರ್ ೨೪ ನೇ ತಾರೀಖ್ ಸೋಮವಾರ. [ಸಂಚಿಕೆ ೪೨.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,
ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧೯ಕ್ಕೆ	ಸ್ಥಳದವರಿಗೆ ಹಾಕವಿಲ್ಲದೆ.	ಪರಸ್ಥಳದವರಿಗೆ ಪೋಸ್ಟೇಜುಸಹಿತ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

[illegible]

ಪ್ರಕಟನೆಯ ರಿವಾಜ್.

ಮೊದಲ ಸಾರಿ ಸಾಲೊಂದಕ್ಕೆ ೦—೨—೦
ಎರಡನೆಯದಕ್ಕೆ ಸಾಲೊಂದಕ್ಕೆ ೦—೧—೦

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಟಿ. ಬಿ. ವೆಂಕಟಾಚಾರ್.

ಬೆಂಗಳೂರು.

ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

[illegible]

ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ಫಾರೆಸ್ಟ್ ಇಲಾಖಾ.

ಇಷ್ತಿಹಾರ್

೨೩ ನೇ ಸೆಪ್ಟಂಬರ್ ೧೮೯೨.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಮೈಸೂರು ದೇಶದಲ್ಲಿ ಉತ್ಪತ್ತಿಯಾದ ಸಂದಲ್ ಸಾಲೀಯಾನಾ ಹರಾಜ್, ಇದರಡಿ ತಿಳಿಸಿರುವ ಸ್ಥಳಗಳೊಳು, ಅದರದರ ರೂಬರೂಹ್ ನಮೂದಿಸಲ್ಪಟ್ಟಿರುವ ತಾರೀಖ್‌ಗಳಲ್ಲಿ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಮತ್ತು ಫಾರೆಸ್ಟ್ ಆಫಿಸರ್‌ಗಳಿಂದ ಹರಾಜ್ ಮಾಡಲ್ಪಡುವುದು.

		ಟನ್‌ಗಳು.
ಸಾಗರ	೧೭ ನೇ ನವೆಂಬರ್, ೧೮೯೨.	೨೦೦ ಸ್ವಲ್ಪ ಹೆಚ್ಚು ಕಡಮೆ
ಶಿವಮೊಗ್ಗ	೧೯ ನೇ ,, ,,	೪೦೦ ,,
ತೀರ್ಥಹಳ್ಳಿ	೨೨ ನೇ ,, ,,	೧೨೦ ,,
ಚಿಕ್ಕಮಗಳೂರು	೨೯ ನೇ ,, ,,	೧೫೦ ,,
ಹಾಸನ	೫ ನೇ ಡಿಸೆಂಬರ್, ೧೮೯೨.	೨೫೦ ,,
ಶ್ರೀರಂಗಪಟ್ಟಣ	೯ ನೇ ,, ,,	೪೫೦ ,,
ಮೈಸೂರು	೧೩ ನೇ ,, ,,	೩೫೦ ,,
ಬೆಂಗಳೂರು	೧೯ ನೇ ,, ,,	೧೫೦ ,,

ಇತರ ತಪ್ಸೀಲ್‌ಗಳನ್ನು ಮೈಸೂರು ಗೆಜೆಟ್ ನೋಡಿ ತಿಳಿದುಕೊಳ್ಳತಕ್ಕದ್ದು.

L. RICKETTS,
Inspector General of Forests.

ನೋಟಿಸ್.

ಗಣೇಶ ರಾಮಚಂದ್ರ ಆರ್ಕ ಮತ್ತು ಕಂಪೆನಿ.

ಕಮಿಷನ್ ಏಜಂಟ್ಸ್.

[illegible]

ವಿ. ಸ.—ಗಣೇಶ ರಾಮಚಂದ್ರ ಆರ್ಕ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್, [illegible]

ನೋಟಿಸ್.

[illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

ಕ ಕಸಲ್ಲತಿ ಅವೈಲ್	...	೩	೦	೬
ದಿಟೋ ದುಮ್ಮೂ	...	೧	೨	೦
ನೃಪತೀಂದ್ರವಿಜಯ	...	೧	೪	೦
ಪಂಚತಾಡಿ ಚಾವಡಿ	...	೦	೩	೦
ಹನುಮದ್ವಿಲಾಸ	...	೦	೩	೦
ಕಾಳೀಯಮರ್ದನ	...	೦	೨	೦
ಸುಭದ್ರಾಪರಿಣಯ	...	೦	೨	೦
ಶಶಿರೇಖಾಪರಿಣಯ	...	೦	೨	೬
ಗಜೇಂದ್ರಚರಿತ್ರೆ	...	೦	೧	೦
ಪ್ರಹ್ಲಾದ ಚರಿತ್ರೆ	...	೦	೧	೦
ಬಾಲಕ್ಕ ಚರಿತ್ರೆ	...	೦	೧	೦
ಮಯೂರಧ್ವಜ ಲಾ	...	೦	೧೨	೦
ಪ್ರಾಕೃತ ವಿಲಾಸ	...	೦	೧೨	೦
,, ಶಿವಗೀತೆ	...	೧	೦	೦
,, ಶಿವಾನಂದಲಹರಿ	...	೦	೮	೦
,, ಕಾಲಾಮೃತ	...	೧	೦	೦
,, ಟಿ॥ ಬಾಲರಾಮಾಯಣ...		೦	೩	೦
,, ಟಿ॥ ಗೋಪಿಕಾ ಗೀತೆ ...		೦	೧	೦
,, ಟಿ॥ ಚಾಣಕ್ಯನೀತಿ (ಸುಭಾಷಿತ)		೦	೫	೦
ವಿಷ್ಣುಸಹಸ್ರನಾಮ ಪದ್ಧತಿ	...	೦	೩	೦
ಸವಿಸ್ತರಸಹಸ್ರನಾಮ	...	೦	೨	೦
ಕೃಷ್ಣಕರ್ಣಾಮೃತ	...	೦	೨	೦
ತ್ರಿಕಾಲ ಅಮರ ಕೋಶ	...	೦	೬	೦
೧ ಕಾಂಡ	...	೦	೦	೦

THE MONEY MARKET.

ಮದರಾಸ್, ಶನಿವಾರ, ತಾರೀಖ್ 22ನೇ ಅಕ್ಟೋಬರ್ 1892

ನೂರಕ್ಕೆ ೪ರೂ. ಬಾಬತು ಗವರ್ನ್‌ಮೆಂಟ್ ಪತ್ರಗಳು, ರೂಪಾಯಿಗಳು, 106-8 ರಿಂದ 106-14 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ ಬಾಬತು 930 ರಿಂದ ಮೇಲೆ 940ವರೆಗೆ.

ಅರ್ಬತ್‌ನಾಟ್ ಕಂಪೆನಿ ಮದ್ರಾಸ್ ಬ್ಯಾಂಕ್ ಷೇರ್‌ಗಳು, (100) ಬಾಬತು 160 ರಿಂದ 165 ವರೆಗೆ

ಸವರನ್‌ಗಳು, 16—2—0

ಬ್ಯಾಂಕ್ ಬಿಲ್‌ಗಳು ಯೂರೋಪಿಗೆ, ರೂಪಾಯಿಗೆ, 6 ತಿಂಗಳ ವಾಯಿದೆಗೆ, 1s. 3 5/32d.

ಡಿಟೋ 1 ತಿಂಗಳ ವಾಯಿದೆಗೆ, 1s. 3 ?/32d.

ಡಿಟೋ ಕೇಬಲ್, 1s. 3d.

BANGALORE CITY MUNICIPALITY.

ಬೆಂಗಳೂರು ಸಿಟಿ ಮ್ಯೂನಿಸಿಪಾಲಿಟಿ.

ಸನ್ ೧೮೯೨ ನೇ ಇಸವಿ ಅಕ್ಟೋಬರ್ ೨೨ ನೇ ತಾರೀಖ್ ಶನಿವಾರದ ದಿನ ಬೆಳಿಗ್ಗೆ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮಿಷನ್ ಸಂಘದವರು ಬೆಂಗಳೂರು ಕೋಟೆಯೊಳಗಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವಾಗ್ಯೆ ಅವರ ಆಲೋಚನೆಗೆ ತರಲ್ಪಡುವ ವಿಷಯಗಳ ಯಾದಿ.

೧. ಸನ್ ೧೮೯೨ನೇ ಇಸವಿ ಸೆಪ್ಟೆಂಬರ್ ತಿಂಗಳ ಬಾಬತು ಹಿಸಾಬು ಜಮಾಖರ್ಚು ಲೆಕ್ಕ, ಮರಣಲೆಕ್ಕ, ಮನೆಗಳಿಗೆ ಹೋಗಿ ಚಿಕಿತ್ಸೆ ಮಾಡುವ ಮೆಡಿಕಲ್ ಆಫೀಸರ ಲೆಕ್ಕ, ಕಾಮಗಾರಿಗಳ ಅಭಿವೃದ್ಧಿಯನ್ನು ಕುರಿತ ರಿಪೋರ್ಟ್ ಮತ್ತು ಶ್ರೀವಾಸ ಮಂದಿರದ ಧೈಕೆ ಬೇಗೆ ಬಂದ ಜನರ ಸಂಖ್ಯೆ.

೨. ಲಂಗರಖಾನೆ ಜನರಿಗೆ ೧೫೦ ಅಥವಾ ೧೭೫ ರೂಪಾಯಿಗಳ ಲಾಗುವಡಿನಲ್ಲಿ ಬಟ್ಟೆಗಳು ಸರಬರಾಯಿ ಮಾಡಿಸ್ಸೆನ್ನು ಕುರಿತ ಯಾದಾಸ್ತು.

೩. ಕಾಳೇಶ್ವರಗುಡಿಯ ರಸ್ತೆಗಾಗಿ ತೆಗೆದುಕೊಂಡ ಜಮೀನಿಗಾಗಿ ಲಕ್ಷ್ಮಣಾಚಾರ್ಯರವರಿಗೆ ಕೊಡಬೇಕಾದ ಈಡು ಮೊಬಲಗಿನ ಮೊತ್ತವನ್ನು ತೋರಿಸುವ ತಖ್ತೆ.

೪. ಮೆ|| ಕೃಷ್ಣಮೂರ್ತಿಯವರ ಜಮೀನಿನಮೇಲೆ ಹೋಗುವ ಕಾಳೇಶ್ವರ ಗುಡಿ ರಸ್ತೆಯ ವಿಷಯದಲ್ಲಿ ಸಬ್ ಕಮಿಟಿಯವರ ರಿಪೋರ್ಟ್.

೫. ಕಂಟ್ರ್ಯಾಕ್ಟುದಾರ್ ಅಹಮ್ಮದ್ ಷಾ ಸಾಹೇಬರು ಮ್ಯೂನಿಸಿಪಾಲಿಟಿಗೆ ಮಾಡಿದ ಕೆಲಸ ಮತ್ತು ಸರಬರಾಯಿ ಮಾಡಿದ ಪದಾರ್ಥಗಳ ಬಗ್ಗೆ ಅವರಿಗೆ ಸಲ್ಲಬೇಕಾದ ೨೦೦ ರೂಪಾಯಿಗಳನ್ನು ಕೊಟ್ಟು ಫೈಸಲ್ ಮಾಡಬೇಕೆಂದು ಅವರ ಕಡೆ ಅಡ್ವೋಕೇಟುಗಳಾದ ಮೆ|| ನರಸಿಂಹಯ್ಯಂಗಾರ್ಯರು ಬರೆದುಕೊಂಡದರಮೇಲೆ ಮೆಸ್ಸರ್ಸ್ ಬಿ. ಗಂಗಯ್ಯನವರು ಮತ್ತು ಸಾಂಬಮೂರ್ತ್ಯನವರು ಮಾಡಿದ ರಿಪೋರ್ಟ್.

೬. ಕೋಟೆಯ ಕಲ್ಯಾಣಿ ಮೊದಲಾದವುಗಳಲ್ಲಿ ಯಾರೂ ಸ್ನಾನ ಮಾಡಕೂಡದು, ಮತ್ತು ಬಟ್ಟೆ ಒಗೆಯಕೂಡದೆಂದು ಕಳೆದ ಸೆಪ್ಟೆಂಬರ್ ತಿಂಗಳ ೨೫ ನೇ ತಾರೀಖಿನಲ್ಲಿ ಕೊಟ್ಟ ಹುಕುಂ ಸಿಟಿ ಬೆಂಗಳೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಬರೆದ ಕಳೆದ ತಿಂಗಳ ೨೭ ನೇ ತಾರೀಖು ೪೯೪ ನೇ ನಂಬರ್ ಯಾದಿ.

೭. ಮ್ಯೂನಿಸಿಪಲ್ ಮೆಂಬರುಗಳ ಮಾಹೇವಾರಾ ಮೀಟಿಂಗ್ ಮುಂದೆ ಇಡಲ್ಪಡುವ ವಿಷಯಗಳ ಯಾದಾಸ್ತನ್ನು ಪ್ರಕಟನೆಯ ಬಗ್ಗೆ ತಮ್ಮ ಬೇಗನೆ ಕಳುಹಿಸುವ ಪದ್ಧತಿಯನ್ನು ಮಾಳ ನಡೆಸಿಕೊಡಬೇಕೆಂದು ಡೆಯಿಲಿಪೋಸ್ಟ್ ಪತ್ರಿಕೆಯ ಪ್ರೊಪ್ರೈಟರು ಕಳೆದ ತಿಂಗಳ ೫ ನೇ ತಾರೀಖಿನಲ್ಲಿ ಬರೆದ ಲೆಟರ್.

೮. ಮ್ಯೂನಿಸಿಪಲ್ ಎಗ್ಜಿಕ್ಯೂಟಿವ್ ಇಂಜಿನಿಯರವರು ಇದರಡಿ ತಿಳಿಸಲ್ಪಡುವ ಎರಡು ಅಂದಾಜ್ ಪಟ್ಟಿಗಳನ್ನು ಮಂಜೂರಾತಿಯ ಬಗ್ಗೆ ಕಳುಹಿಸಿ ಕಳೆದ ತಿಂಗಳ ೧೭ ನೇ ತಾರೀಖಿನಲ್ಲಿ ಬರೆದ ೪೮೭ ನೇ ನಂಬರ್ ಯಾದಿ.

೧. ಮೆ|| ಅಣ್ಣಾಜೀರಾಯರವರ ಮನೆ ಮುಂದಣಕಡೆ ಗುಂಡಿಯ ಒಳ ಬರುವ ಬಾವಿಗೆ ಕೈಪಿಡಿ ಗೋಡೆ ಮತ್ತೂರೆ ಕಟ್ಟುವದಕ್ಕೆ ೪೦ ರೂಪಾಯಿಗಳ ಅಂದಾಜ್ ಪಟ್ಟಿ.

೨. ಆಪ್ಟರಸ್ಕೆ ಪ್ಲೇಗ್ರೌಂಡಿನಲ್ಲಿರತಕ್ಕ ಬಾವಿಗೆ ಸುತ್ತಲು ಜಲ್ಲಿ ಹಾಕುವದಕ್ಕೂ ಕಟ್ಟೆಯನ್ನು ರಿಪೇರಿ ಮಾಡುವದಕ್ಕೂ ೮೧ ರೂಪಾಯಿಗಳ ಅಂದಾಜ್ ಪಟ್ಟಿ.

೯. ಶ್ರೀನಿವಾಸ ಮಂದಿರದ ಮೆ|| ಎ. ಗೋಪಾಲಾಚಾರ್ಲು ರವರು ಸದರಿ ಸ್ಥಾಪನೆಗೆ ಮಾಹೇವಾರಾ ಕೊಡಲ್ಪಡುವ ೨೫ ರೂಪಾಯಿಗಳನ್ನು ೫೦ ರೂಪಾಯಿಗಳಿಗೆ ಹೆಚ್ಚಿಸಬೇಕೆಂದು, ಸನ್ ೧೮೯೨ ನೇ ಇಸವಿ ಜೂನ್ ೧೫ನೇ ತಾರೀಖಿನಲ್ಲೂ ಕಳೆದ ಸೆಪ್ಟೆಂಬರ್ ತಿಂಗಳ ೧೮ ನೇ ತಾರೀಖಿನಲ್ಲೂ ಬರೆದುಕೊಂಡ ಅರ್ಜಿ.

೧೦. ಮ್ಯೂನಿಸಿಪಲ್ ಕಮ್ಮಿಷನರ್ ಮೆ|| ಬಿ. ವೆಂಕಟಸುಬ್ಬಯ್ಯನವರು ಇದರಡಿ ಬರುವ ವಿಷಯಗಳನ್ನು ಕುರಿತು ಸನ್ ೧೮೯೨ನೇ ಇಸವಿ ಸೆಪ್ಟೆಂಬರ್ ೨೨ನೇ ತಾರೀಖಿನಲ್ಲಿ ಬರೆದ ಲೆಟರ್.—

೧. ಈ ಷಹರ್ ಅಭಿವೃದ್ಧಿ ಮತ್ತು ಜಾಗರೂಕತೆಗೆ ಸಂಬಂಧಪಟ್ಟ ಯಾವ ವಿಷಯವನ್ನಾಗಲಿ ಕುರಿತು ರಿಪೋರ್ಟ್ ಮಾಡುವದಕ್ಕೆ ಮೂವರು ಅಥವಾ ಅಧಿಕ ಸಂಖ್ಯೆಯುಳ್ಳ ಕಮಿಷನರ್‌ಗಳನ್ನು ಕಾಯಂ ಕಮಿಟಿಯಾಗಿ ಏರ್ಪಡಿಸುವಿಕೆ.

೨. ಇದರಡಿ ಬರುವ ವಿಷಯಗಳನ್ನು ಕುರಿತು ತನಿಖೆ ಮಾಡಿ ರಿಪೋರ್ಟ್ ಮಾಡುವದಕ್ಕೆ ಬಗ್ಗೆ ಇಬ್ಬರು ಅಥವಾ ಮೂವರು ಕಮಿಷನರ್‌ಗಳನ್ನು ಒಂದು ಕಮಿಟಿಯಾಗಿ ಏರ್ಪಡಿಸುವಿಕೆ:—

(ಎ.) ಈ ಸಿಟಿಯಲ್ಲಿ ಯಾವ ಹುಕುಮಿನ ಮೇಲೆ ಮ್ಯೂನಿಸಿಪಲ್ ತೆರಿಗೆಗಳು ವಸೂಲ್ಮಾಡಲ್ಪಡುತಿವೆ.

(ಬಿ.) ತೆರಿಗೆಗಳು ಹಾಕುವಿಕೆ ಮತ್ತು ಅವನ್ನು ವಸೂಲ್ ಮಾಡುವಿಕೆ, ಈ ವಿಷಯದಲ್ಲಿ ಅನುಸರಿಸಲ್ಪಡುವ ಕ್ರಮವು ಈಗ ಜಾರಿಯಲ್ಲಿರುವ ಹುಕುಂಗಳಿಗೆ ಅನುಸಾರವಾಗಿವೆಯೆ.

(ಸಿ.) ಮ್ಯೂನಿಸಿಪಲ್ ಆಫೀಸಿನಲ್ಲಿ ಕ್ರಮವಾಗಿ ಲೆಕ್ಕಪತ್ರಗಳು ಇಡಲ್ಪಡುತಿವೆಯೆ.

(ಡಿ.) ಇದುವರಿಗೆ ಜಾರಿಯಲ್ಲಿರುವಂತೆ ಯೋಚಿಸಲ್ಪಡಬಹುದಾದ ಉಪನಿಬಂಧನೆಗಳು ಜೋಡಿಸಲ್ಪಡಲಾದರು ಇರುತಿವೆಯೆ

೧೧. ಮ್ಯೂನಿಸಿಪಲ್ ಕಮ್ಮಿಷನರ್ ಮೆ|| ಸುಬ್ಬರಾಯರವರು ಇದರಡಿ ಕಂಡ ವಿಷಯಗಳಂ ಕುರಿತು ಕಳೆದ ತಿಂಗಳ ೧೨ ನೇ ತಾರೀಖಿನಲ್ಲಿ ಬರೆದ ಕಾಗದ.

೧. ಮೀಟಿಂಗಿಗೆ ಸಂಬಂಧಪಟ್ಟ ಕಾಗದಗಳ ಪ್ರಚಾರ.

೨. ಪ್ರತಿ ಮ್ಯೂನಿಸಿಪಲ್ ಕಮ್ಮಿಷನರಿಗೂ ಒಬ್ಬ ಪೈನಾತಿ ಜವಾನನನ್ನು ಕೊಡಬೇಕಾದದ್ದು.

೧೨. ಹೊಸ ತಿಗಳರ ಪೇಟೆಯಲ್ಲಿ ಜಟ್ಕಾ ಗಾಡಿಗಳು ನಿಲ್ಲುವ ಬಗ್ಗೆ ತೆಗೆದುಕೊಳ್ಳುವದಾಗಿರುವ ಜಮೀನಿನ ವಿಷಯದಲ್ಲಿ ದೋಭಿ ಹನುಮಂತನೆಂಬವನು ತಿಳಿಸಿದ ಆಕ್ಷೇಪಣೆ.

೧೩. ಸರ್ಕಾರಿ ಉಪಯೋಗಗಳಿಗಾಗಿ ಉಳಿಸಿಕೊಳ್ಳಲ್ಪಟ್ಟಿರುವ ಖಾಲಿ ಜಮೀನಿನ ಒಂದು ನಕ್ಷೆ ಮತ್ತು ಅಚ್ಚು ಹಾಕಲ್ಪಟ್ಟ ಒಂದು ಇಸ್ತಿಹಾರನ್ನು ಇತರ ಮೆಂಬರುಗಳ ಅಭಿಪ್ರಾಯಗಳ ನಿಮಿತ್ತ, ದಾಖಲೆಯ ಬಗ್ಗೆ, ಜೋಡಿಸಿ ಪ್ರತಿಮೆಂಬರಿಗೂ ಕೊಡಿಸಬೇಕೆಂಬದಾಗಿ ಸೂಚಿಸಿ, ಮ್ಯೂನಿಸಿಪಲ್ ಕಮ್ಮಿಷನರ್ ಡಾಕ್ಟರ್ F. F. L. ವೆನ್ಬ್ಲೇಯವರು ಬರೆದ ಮಾಹೇ ಸಪ್ಟೆಂಬರ್ ೬ನೇ ತಾರೀಖು ಪತ್ರ ಕಾಗದ

ನಿಲ್ಲಿಸಲ್ಪಟ್ಟ ವಿಷಯಗಳು.

೧೪. ಕಾರಂಜೀ ಬಾಗಿಲಿನಲ್ಲಿಯೂ ಅದರ ಕಟ್ಟೆಯ ಹಿಂದುಗಡೆಯಲ್ಲಿಯೂ ಇರುವ ಸ್ಥಾನವನ್ನೂ, ಕೋಟೆಯ ಹಿಂಭಾಗದಲ್ಲಿರುವ ಪ್ರಾಟೆಸ್ಟೆಂಟ್ ಸಿಮಿಟ್ರಿಯನ್ನೂ ಸದರೀ ಪ್ರದೇಶಗಳಿಂದ ತೆಗೆದು ಹಾಕಬೇಕೆಂಬದಾಗಿ, ೧೮೯೨ನೇ ಇಸವಿ ಆಗಸ್ಟ್ ೧೬ನೇ ತಾರೀಖಿನಲ್ಲಿ ಸೀನಿಯರ್ ಸರ್ಜನ್ ರವರು ಬರೆದ ೨೩೦೪ನೇ ನಂಬರುಳ್ಳ ಲೆಟರಿನೊಡನೆ ಸಬ್ ಕಮಿಟಿಯವರ ರಿಪೋರ್ಟ್.

೧೫. ಜಟ್ಕಾಗಾಡಿ ಹೊಡೆಯುವ ರಹಮಾನ್‌ಖಾನನೆಂಬವನು ತನ್ನ ಕುದುರೆಗೆ ಬಳೇಪೇಟೆಯಲ್ಲಿರುವ ಒಂದು ಗಲ್ಲಿಯಲ್ಲಿ ಬಡಿದ ಬಗ್ಗೆ ತನಗುಂಟಾದ ನಷ್ಟಸಾಹಸ ರೂಪವಾಗಿ ಈಡು ಕೊಡಿಸಬೇಕೆಂಬದಾಗಿ ಬರೆದುಕೊಂಡ ಅರ್ಜಿ

ತಾರೀಖ್ ೧೮ನೇ ಅಕ್ಟೋಬರ್ ೧೮೯೨

ಸನ್ ೧೮೯೨ನೇ ಇಸವಿ ಅಕ್ಟೋಬರ್ ೨೯ನೇ ತಾರೀಖ್ ಶನಿವಾರ ಪ್ರಾತಃಕಾಲ ೮ ಘಂಟೆಗೆ ಬೆಂಗಳೂರು ಸಿಟಿ ಮ್ಯೂನಿಸಿಪಲ್ ಕಮ್ಮಿಷನ್ ಸಂಘದವರು ಬೆಂಗಳೂರು ಕೋಟೆಯಲ್ಲಿರುವ ತಮ್ಮ ಆಫೀಸಿನಲ್ಲಿ ಸಾಮಾನ್ಯ ಸಭೆ ಸೇರುವಾಗ್ಯೆ ಅವರ ಆಲೋಚನೆಗೆ ತರಲ್ಪಡುವ ಜಾಸ್ತೀ ವಿಷಯಗಳ ಯಾದಾಸ್ತು.

೨. ಪ್ರಸವ ಆಸ್ಪತ್ರೆಯಲ್ಲಿ ಮಾಹೇವಾರಾ ೧೧ ರೂಪಾಯಿಗಳ ತಲಬಿನೊಳು ಕಂಪೌಂಡರ್ ಅಥವಾ ಔಷಧ ಸಂಯೋಜಕನನ್ನು ನಿಯಮಿಸಬೇಕಾದ ವಿಷಯದಲ್ಲಿ ಸೀನಿಯರ್ ಸರ್ಜನ್ ರವರು ಕಳೆದ ತಿಂಗಳ ೧೮ ನೇ ತಾರೀಖಿನಲ್ಲಿ ಬರೆದ ೧೫೩ ನೇ ನಂಬರ್ ದಾಖಲು.

೨. ಷಹರ್ ಮ್ಯೂನಿಸಿಪಲ್ ಡಿಸ್ಪೆನ್ಸರಿಗಳಿಗೆ ಸರಬರಾಯಿ ಮಾಡಲ್ಪಟ್ಟ ಪದಾರ್ಥಗಳಿಗಾಗಿ ರೂ ೩೩—೪—೦ ಗೆ ಬಂದ ಬಿಲ್ಲನ್ನು ಕಳುಹಿಸಿ, ಸೀನಿಯರ್ ಸರ್ಜನ್ ರವರು, ೧೮೯೨ ನೇ ಇಸವಿ ಸೆಪ್ಟೆಂಬರ್ ೨೦ ನೇ ತಾರೀಖಿನಲ್ಲಿ ಬರೆದ ೩೮೭೦ ನೇ ನಂಬರುಳ್ಳ ದಾಖಲು.

೩. ಮಾಗಡಿ ರಸ್ತೆಯಲ್ಲಿ ಕಾಲರಾ ಆಸ್ಪತ್ರೆಯನ್ನು ಸ್ಥಾಪಿಸಿರುವ ವಿಷಯದಲ್ಲಿ ಚಿಟ್ಟಿ ಯಜಮಾನರು ಮಾಡಿದ ಫಿರ್ಯಾದಿನಮೇಲೆ ಸೀನಿಯರ್ ಸರ್ಜನ್ ರವರು ತಮ್ಮ ಅಭಿಪ್ರಾಯವನ್ನು ತಿಳಿಸಿ ಬರೆದ ೧೮೯೨ ನೇ ಇಸವಿ ಸೆಪ್ಟೆಂಬರ್ ೨೨ ನೇ ಮಾರ್ಕಂ ಪುಟ ೩೧೧೮ ನೇ ನಂಬರ್ ಲೆಟರ್.

೪. ಅಲಸೂರಿನಲ್ಲಿರುವ ಇಂಜಿನಿಯರುಗಳಾದ ಮತ್ತು ಕಬ್ಬಿಣ ಹಿತ್ತಾಳೆ ಕಾರ್ಖಾನೆದಾರರಾದ ಮೆಸ್ಸರ್ಸ್ ಕಾರ್ಲಿ ಕಂಪೆನಿಯವರು, ಹೊಸದಾಗಿ ಕಬ್ಬಿಣದ ರೇಕಿನಲ್ಲಿ ಸಾಗಿಸಲಿಕ್ಕೆ ಸುಲಭವಾಗಿರುವಂತೆ ಮಾಡಿರುವ ಪಾಯಖಾನೆ ತೊಟ್ಟಿಗಳನ್ನು ಕುರಿತು ಬರೆದ ಕಾಗದದ ವಿಷಯದಲ್ಲಿ ಗವರ್ನಮೆಂಟಿನವರು ಮಾಡಿದ ೧೮೯೨ ನೇ ಇಸವಿ ಅಕ್ಟೋಬರ್ ೧೧ ನೇ ಮಾರ್ಕಂ ೫೦೧೪—೧೮೫—೯೨ ನೇ ನಂಬರ್ ಪ್ರೊಸೀಡಿಂಗ್ಸ್.

೫. ಹಳೇ ತರಗುಪೇಟೆಯಲ್ಲಿರುವ ಪಟ್ಟಿಗೆ ನಮೂನೆಯುಳ್ಳ ಚರಂಡಿಯನ್ನು ೬೭—೫—೬ ರೂಪಾಯಿಗಳ ಲಾಗವಡಿನಲ್ಲಿ ದುರಸ್ತು ಮಾಡುವದಕ್ಕಾಗಿ ಜಾಸ್ತೀ ಖರ್ಚ್ ಅಂದಾಜ್ ಪಟ್ಟಿ.

MIR SHUJAET ALI KHAN,
President.

ನೋಟಿಸ್.

ಇದರಿಂದ ಸಮಸ್ತರಿಗೂ ತಿಳಿಯಪಡಿಸುವದೇನೆಂದರೆ.—

ಹಾಸನ ಡಿಸ್ಟ್ರಿಕ್ಟ್, ಮಂಜರಾಬಾದ್ ತಾಲ್ಲೂಕ್ ಕಸಬಾ ಸಕಲೇಶಪುರದಲ್ಲಿ ಸೀ. ವೆಂಕಟಾಚಲಶೆಟ್ಟಿ, ತಿಮ್ಮೇಗೌಡ ಅಂಡ್ ಕೋ. ಎಂಬ ಹೆಸರಿನಿಂದ ನಡೆಸಲ್ಪಡುತಿದ್ದ ಪಾಲುಗಾರಿಕೆ ವ್ಯಾಪಾರದ ಕೋವಿ ವಗೈರೆ ಸಂಬಂಧದಲ್ಲಿ ನನ್ನೊಡನೆ ಪಾಲುಗಾರರಾಗಿದ್ದ,

ಮಾ|| ರಾ|| ರೋಣಿಗಾಲು ಬಸವೇಗೌಡರು ಸನ್ ೧೮೯೬ನೇ ಇಸವಿ ಸೆಪ್ಟೆಂಬರ್ ೬ನೇ ತಾರೀಖಿನಲ್ಲಿಯೂ,

„ ಲಕ್ಷ್ಮಯ್ಯ ನಾಯಡರು ೧೮೯೨ನೇ ಇಸವಿ ಮಾರ್ಚಿ ೩೧ನೇ ತಾರೀಖಿನಲ್ಲಿಯೂ,

„ ಹೊಸಕೆರೆ ತಿಮ್ಮೇಗೌಡರು ೧೮೯೨ನೇ ಇಸವಿ ಆಗಸ್ಟ್ ೧೮ ನೇ ತಾರೀಖಿನಲ್ಲಿಯೂ,

ಮೇಲ್ಕಂಡ ಪಾಲುಗಾರಿಕೆಯ ಎಲ್ಲಾ ಸಂಬಂಧಗಳಿಂದಲೂ ಅವರವರ ಸಮ್ಮತಿಯಿಂದ ನಿವೃತ್ತರಾಗಿರುವ ಪ್ರಯುಕ್ತ ಸನ್ ೧೮೯೨ನೇ ಇಸವಿ ಆಗಸ್ಟ್ ತಾ|| ೧೮ ರ ಬಳಿಕಾಗುತು ಮೇಲ್ಕಂಡ ಪಾಲುಗಾರಿಕೆಯ ಜವಾಬ್ದಾರಿಯೆಲ್ಲವೂ ನನ್ನನ್ನೇ ಹೊಂದಿರುವದಾಗಿ ಸದರೀ ವ್ಯಾಪಾರವನ್ನು ಸೀ. ವೆಂಕಟಾಚಲಶೆಟ್ಟಿ ಬ್ರದರ್ಸ್ ಎಂಬ ಹೆಸರಿನಿಂದ ನಡೆಸುವದರಿಂದ ಅದಕ್ಕೆ ಸಂಬಂಧಪಟ್ಟ ಎಲ್ಲಾ ರಿವಾಜುಗಳನ್ನು ನನ್ನ ಮಗನಾದ ಎಂ. ಎಸ್. ಸುಬ್ಬಯ್ಯನು, ಸೀ. ವೆಂಕಟಾಚಲಶೆಟ್ಟಿ ಬ್ರದರ್ಸ್ ಎಂದು ರುಜು ಮಾಡುವದಲ್ಲದೆ ಎಲ್ಲಾ ಕಾರ್ಯಗಳೂ ಅವನ ಮುಖಾಂತ್ರವಾಗಿಯೇ ನಡೆಸಲ್ಪಡುತವೆ.

ಸಕಲೇಶಪುರ, ತಾ|| ೧೮—೮—೯೨. | ಸಿ. ವೆಂಕಟಾಚಲಶೆಟ್ಟಿ

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ :—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜನ್ ರಾಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ ಸಿದ್ದೀಕಟ್ಟೆಯಲ್ಲಿರುವ ಗುಂಡೋಪಂತರವರ ಮನೆಯ ಪಕ್ಕದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆಮಾಡುವದಕ್ಕೆ ಒಂದು ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸದರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೮ ಘಂಟೆಯ ಮೊದಲು ೧೦ ಘಂಟೆಯ ವರಿವಿಗೂ ಆಸ್ಥಳದಲ್ಲಿದ್ದು ವಿಶಿಷ್ಟ ರೋಗಿಗಳಿಗೂ, ಮುಖ್ಯವಾಗಿ ಕಣ್ಣುಗಳ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು.

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ|| ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೪ ರೂಪಾಯಿಗಳ ರುಸುಂ ಕೊಡಬೇಕು.

C. G. R. NAYLOR,
M. R. C. S., ENGLAND,
Surgeon

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, OCTOBER 24, 1892.
೧೮೯೨ನೇ ಇಸವಿ ಅಕ್ಟೋಬರ್ ತಾ|| ೨೪ನೇ ಸೋಮವಾರ.

THE VICEROY'S VISIT.

ಶ್ರೀಮನ್ ಮಹಾರಾಜ್ಞೀ ಚಕ್ರವರ್ತಿನೀಯವರ ಪ್ರತಿನಿಧಿಯಾಗಿಯೂ, ಇಂಡ್ಯಾದೇಶದ ಪಾಲಕರಾಗಿಯೂ ಇರುವ ಲಾರ್ಡ್ ಲ್ಯಾನ್ಸ್‌ಡೌನ್ ಯವರು ತಮ್ಮ ಭಾರ್ಯೆಯೊಡನೆ ಈರಾಜ್ಯಕ್ಕೆ ದಯಮಾಡುವ ಕಾಲವು ಸನ್ನಿಹಿತವಾಗಿರುವದರಿಂದ ವೈಸ್‌ರಾಯ್‌ಯವರ ಪ್ರಭುತ್ವ ವೈಭವಾಧಿಕಾರಗಳಿಗೂ, ಪುರಾತನವಾದ ಈ ಸಂಸ್ಥಾನದ ಕೀರ್ತಿ ಗೌರವಗಳಿಗೂ ಅನುಗುಣವಾಗಿರುವಂತೆ ಸಮುಚಿತ ಮರ್ಯಾದೆಗಳೊಡನೆ ಅವರಂ ಬರಮಾಡಿಕೊಂಡು ಸತ್ಕರಿಸಲಿಕ್ಕೆ ಆವಶ್ಯಕಗಳಾದ ಏರ್ಪಾಡುಗಳು ಈ ಪುರದಲ್ಲಿಯೂ ಪ್ರಧಾನನಗರವಾದ ಮೈಸೂರಲ್ಲಿಯೂ ಬಹಳಮಟ್ಟಿಗೆ ಜರುಗುತಲಿವೆ. ಲಾರ್ಡ್ ಲ್ಯಾನ್ಸ್‌ಡೌನ್ ಯವರ ಸಂದರ್ಶನವು ಅವರ ಪ್ರಭುತ್ವಕ್ಕೆ ಸಾಕ್ಷಾತ್ತಾಗಿಯೂ, ಪರಂಪರೆಯಾಗಿಯೂ ಸಂಬಂಧಪಟ್ಟಿರುವ ಪ್ರಜೆಗಳೆಲ್ಲರಿಗೂ ವಿಶೇಷ ಆನಂದಸಂದಾಯಕವಾದುದಾಗಿದ್ದಾಗ್ಯೂ ಅವರು ತಮ್ಮ ದಕ್ಷಿಣದೇಶ ಸಂಚಾರ ಕಾಲದಲ್ಲಿ ಹೈದರಾಬಾದ್ ಮತ್ತು ಮೈಸೂರ್ ಈ ಎರಡು ಸಂಸ್ಥಾನಗಳಿಗೆ ಬಂದು ಹೋಗುವದಕ್ಕುಂಟಾದ ಅಂತರವಾದ ಉದ್ದೇಶವು ಅವ್ಯಕ್ತವಾಗಿರುವದರಿಂದ ಅದಂ ತಿಳಿದುಕೊಳ್ಳಬೇಕೆಂಬ ಕುತೂಹಲವು ಪ್ರಾಯಶಃ ಅನೇಕರಿಗುಂಟಾಗಿರುತಿದೆ. ಈಗ ವೈಸ್‌ರಾಯಿ ಯವರು ಇದೇಶಕ್ಕೆ ದಯಮಾಡಲಿಕ್ಕೇನು ಕಾರಣವು, ಇವರು ವಿನೋದಾರ್ಥ ಬರುತ್ತಾರೆಯೋ ಅಥವಾ ಪ್ರಬಲವಾದ ರಾಜಕಾರ್ಯೋದ್ದೇಶದೊಡನೆ ದಯಮಾಡುತ್ತಾರೆಯೆ? ಲಾರ್ಡ್ ಲ್ಯಾನ್ಸ್ ಡೌನ್ ಯವರು ಇಂಡ್ಯಾದೇಶಾಧಿಪತ್ಯವಂ ವಹಿಸಿ ಈಗ್ಯೆ ನಾಲ್ಕು ವರುಷಗಳಾಗುತ ಬಂದದರಿಂದಲೂ, ಶೀಘ್ರದಲ್ಲಿ ತಮ್ಮ ಕೆಲಸದಿಂದ ನಿವೃತ್ತರಾಗುವವರಾಗಿರುವದರಿಂದಲೂ, ತಮ್ಮ ಪ್ರಭುತ್ವಕ್ಕೊಳಪಟ್ಟಿರುವ ಅನೇಕ ಕೋಟಿ ಪ್ರಜೆಗಳ ಶೀಲಸ್ವಭಾವಗಳನ್ನೂ ತಮ್ಮ ಪ್ರಭುತ್ವಕಾಲದೊಳು ಅವರು ಅನುಭವಿಸಿದ ಸುಖಸಂತೋಷಗಳನ್ನೂ, ನೇಟಿವ್ ಸಂಸ್ಥಾನಗಳ ಪ್ರಭುತ್ವ ಕ್ರಮಗಳನ್ನೂ, ಅಲ್ಲಿನ ಪ್ರಜೆಗಳು ಸ್ವರಾಜರ ಪಾಲನೆಯಲ್ಲಿ ಅನುಭವಿಸತಕ್ಕ ಸುಖ ಸ್ವಾತಂತ್ರ್ಯಗಳನ್ನೂ ಸಾಕ್ಷಾತ್ತಾಗಿ ಅರಿತು ತಾವು ಸ್ವದೇಶಕ್ಕೆ ಹೋದ ಕೂಡಲೆ ಶ್ರೀಮನ್ಮಹಾರಾಜ್ಞೀಯವರಿಗೆ ವಿಜ್ಞಾಪಿಸಲಿಕ್ಕೆ ಶಕ್ತರಾಗಬೇಕೆಂಬ ಅಭಿಪ್ರಾಯದೊಡನೆ ಬರಬಹುದೆಂದೂಹಿಸಬೇಕಾಗಿದೆ. ಪ್ರಕೃತ ಆಗಮನವು ಉಲ್ಲಾಸಾರ್ಥವೆಂದು ನುಡಿಯುವಣವಂದರೆ, ಲಾರ್ಡ್ ಮತ್ತು ಲೇಡೀ ಲ್ಯಾನ್ಸ್‌ಡೌನ್ ಯವರಿಗೆ ಹೃದಯಾಹ್ಲಾದವನ್ನುಂಟುಮಾಡತಕ್ಕ ಸೃಷ್ಟಿ ವೈಚಿತ್ರ್ಯ ಪ್ರದರ್ಶಕಗಳಾದ ಅದ್ಭುತವಿಷಯಗಳು ಉತ್ತರ ದೇಶದೊಳಿರುವದಕ್ಕಿಂತ ಇಲ್ಲಿ ವಿಶೇಷವಾಗಿಲ್ಲವು. ರಾಜ್ಯಕಾರ್ಯೋದ್ದೇಶದೊಡನೆ ಬರುವರೆಂದು ಹೇಳಲಿಕ್ಕೆ ವೈಸ್‌ರಾಯಿಯವರು ಸ್ವತಃ ಬಂದು ಪ್ರತ್ಯಕ್ಷವಾಗಿದ್ದು ತಕ್ಕ ಏರ್ಪಾಡು ಮಾಡಬೇಕಾದಷ್ಟರ ಆವಶ್ಯಕವಾದ ವಿಷಯಗಳೇನೂ ಪ್ರಾಪ್ತವಾಗಲಿಲ್ಲವು. ಅತಏವ ನಾವು ಮೇಲೆ ತಿಳಿಸಿದ್ದದಕ್ಕಿಂತಲೂ ಅನ್ಯತರವಾದ ಕಾರಣಗಳ್ಯಾವದೂ ಸ್ಫುರಿಸದಿಲ್ಲವು ವೈಸ್‌ರಾಯಿಯವರು ಗತ ಸಂವತ್ಸರದಲ್ಲಿ ಮಧ್ಯ ಇಂಡ್ಯಾ ದೇಶದೊಳಿರುವ ನೇಟಿವ್ ಸಂಸ್ಥಾನಗಳಿಗೆಲ್ಲ ಹೋಗಿ ಅಲ್ಲಿನ ಸ್ಥಿತಿಗತಿಗಳಂ ಕಟಾಕ್ಷಿಸಿಬಂದರು. ಸದರೀ ಸಂಸ್ಥಾನಗಳ ವಿಷಯಗಳಲ್ಲಿಯೂ ಅವಸರ ವಿಷಯವಾಗಿಯೂ ವೈಸ್‌ರಾಯಿಯವರು ಪಟ್ಟ ಅಭಿಪ್ರಾಯಗಳಿಗೆ ಅನುಗುಣವಾದ ಶುಭ ಫಲಗಳು ಮುಂದೆ ಉಂಟಾಗಬಹುದೆಂದು ನಂಬುತ್ತೇವೆ. ಈ ಕಾಲದ ಹಿಂದೂ ಸಂಸ್ಥಾನಾಧಿಪತಿಗಳೆಲ್ಲರು ತಮ್ಮ ಪೂರ್ವಿಕರಿದ್ದಂತೆ ಇಲ್ಲವು. ಪ್ರಾಯೇಣ ಇವರೆಲ್ಲರೂ ಪೂರ್ವವಯಸ್ಕರಾಗಿಯೂ, ಇಂಗ್ಲೀಷ್ ವಿದ್ಯಾಭ್ಯಾಸ ಮಾಡಿ ಇಂಗ್ಲೀಷಿನವರ ನಡವಳಿಕೆಗಳಲ್ಲಿ ಬಹಳ ಆದರವುಳ್ಳವರಾಗಿಯೂ, ತಮ್ಮ ಪ್ರಭುತ್ವ ಕ್ರಮವು ಸಾಧ್ಯವಾದ ಮಟ್ಟಿಗೆ ಇಂಗ್ಲೀಷ್ ಕ್ರಮವನ್ನನುಸರಿಸಿದ್ದಾಗಿರುವಂತೆ ಮಾಡಬೇಕೆಂಬ ಕೋರಿಕೆಯುಳ್ಳವರಾಗಿಯೂ ಇರುತ್ತಾರೆ. ಸಮರ್ಥರಾದ ಮಂತ್ರಿ ಸಾಮಾಜಿಕರ ಯೋಗ್ಯವಾದ ಸಲಹೆಗಳಿಂದಲೂ, ಸಹಾಯದಿಂದಲೂ ಇವರು ಪ್ರಭುತ್ವವನ್ನು ಯೋಗ್ಯವಾಗಿಯೇ ನಿರ್ವಹಿಸುತಲಿದಾರೆ. ನೇಟಿವ್ ಅರಸರ ಗುಣಾತಿಶಯಗಳನ್ನೂ ಅವರ ಪ್ರಭುತ್ವಕ್ರಮವನ್ನೂ ನೋಡಿ ವೈಸ್‌ರಾಯಿ ಯವರು ಪುರಸ್ಕರಿಸಿ ಶ್ಲಾಘಿಸುವದು ಸದರೀ ಸಂಸ್ಥಾನಾಧಿಪತಿಗಳ ಭವಿಷ್ಯಚ್ಛುಭಪ್ರಯತ್ನಗಳಿಗೆ ಉತ್ತೇಜಕವಾಗಿರಬಹುದೆಂದೆಣಿಸುತ್ತೇವೆ. ಇರಲಿ ಅಂತಾ ಸೂಚನೆಗಳ್ಯಾವದೂ ಸದ್ಯಃ ಕಂಡುಬರಲಿಲ್ಲವು. ಪೊಲಿಟಿಕಲ್ ಏಜಂಟರುಗಳು ಆಗಿಂದಾಗ್ಗೆ ಔತನ ಕಾಲಗಳಲ್ಲಿ ಭೋಜನಾನಂತರದೊಳು ಮಾಡುವ ಮುಖಸ್ತುತಿ ರೂಪವಾದ ಪ್ರಶಂಸಾವಾಕ್ಯಗಳೂ ಅವರ ಮಾತುಗಳಮೇಲಿನ ಪ್ರಾಮಾಣಿಕತೆಯಿಂದ ವೈಸ್‌ರಾಯಿಯವರ ಶ್ಲಾಘನೆಗಳೂ ನಿಷ್ಪ್ರಯೋಜಕಗಳಾಗುವದೇನೂ ಆಶ್ಚರ್ಯವಲ್ಲವು. ಪ್ರಜೆಗಳ ಸುಖಾಭಿವೃದ್ಧಿಗೆ ಪರಿಮಿತಿ ಇರಲಾರದು. ಅದಂ ತಿಳಿದು ಯಥಾವಿಧಿಯಿಂ ಬಹುದಿಸಿದರೂ ಅಷ್ಟಕಕ್ಕೆ ನ್ಯೂನವಾಗಿಯೇ ಇರುವುದು. ನೇಟಿವ್ ಸಂಸ್ಥಾನಗಳ ಆಡಳಿತಗಳ

ದೊರಸ್ವಭಿಟ್ಟಗೆ ಬಹಳ ಮನೋಹರವಾಗಿಯೂ ರಮಣೀಯವಾಗಿಯೂ ಕಂಡು ಬರದೆ ಇರುವದಿಲ್ಲವು. ಮತ್ತು ಸತ್ಯದ್ದರ್ಶನದಿಂದ ನೇತ್ರಮಾಂದ್ಯವನ್ನುಂಟುಮಾಡುವಂತಾ ವಿಚಿತ್ರ ಶಕ್ತಿಯುಳ್ಳದ್ದಾಗಿರುತಿದೆ. ಸದರೀ ಸಂಸ್ಥಾನಗಳಲ್ಲಿ ಜರುಗುವ,ಅಕ್ರಮಗಳಾಗಿಯೂ,ನಿರ್ಬಂಧಕರಗಳಾಗಿಯೂ,ಭುರೋವೃದ್ಧಿ ಭುಜಕಗಳಾಗಿಯೂ ಇರುವ ಅನೇಕವಿಷಯಗಳು ಅವ್ಯವಸ್ಥಿತಗಳಾಗಿ ಅಪರಿಹಾರ್ಯಗಳಾಗಿರುತಿವೆ. ಇನ್ನು ನೇಟಿವ್ ಸಂಸ್ಥಾನಗಳ ಸರಹದ್ದನ್ನು ದಾಟಿ ಹೋಗದಿರುವದಕ್ಕೆ ಬೇಕಾದ ದಿಗ್ಬಂಧನಗಳೆಲ್ಲವು ಮಾಡಲ್ಪಟ್ಟಿರುವದರಿಂದಲೂ, ವಶೀಕರಣ ದಮನೋಚ್ಚಾಟನಾದಿ ಶಕ್ತಿಯಿಂದ ಬದ್ಧವಾಗಿರುವದರಿಂದಲೂ, ಗುಣಭಾಗಗಳೇ ಪ್ರಾಯಶಃ ಪ್ರಕಟವಾಗುತ ಪ್ರತುಸಾರ್ದರನ್ನಾಗಿ ಮಾಡುತಿವೆ. ನೇಟಿವ್ ಅರಸರ ಪಾಲನೆಯೊಳಿರತಕ್ಕ ಅನೇಕಕೋಟಿ ಪ್ರಜೆಗಳ ಯೋಗಕ್ಷೇಮಗಳೆಂಬವು ಬ್ರಿಟಿಷ್ ಗವರ್ನಮೆಂಟಿನವರ ಸ್ವಾಂತ ಆಳ್ಕೆಯಾಳಿರತಕ್ಕವರಿಗಿರುವಷ್ಟರ ಮಟ್ಟಿಗಾದರೂ ಯಿರಬೇಕಲ್ಲವೆ. ಐವರ ಸುಖಸಂಪಾದನದಲ್ಲಿ ಸಂಸ್ಥಾನಾಧಿಪಾಲಕರಾದ ನೇಟಿವ್ ಅರಸರಿಗೆ ಆಸಕ್ತಿ ಯೆಂಬದು ಕಡಮೆಯಾಗಿರುತಿದೆ. ಬ್ರಿಟಿಷ್ ಗವರ್ನಮೆಂಟಿನವರವಲಂಬಿಸಿರುವ ತಾಟಸ್ಥ್ಯಭಾವದಿಂದವರಿಗೆ ಅನಾವಶ್ಯಕ ವಿಷಯವಾಗಿ ಮೀರ್ಪಟ್ಟಿರುತಿದೆ. ನೇಟಿವ್ ಸಂಸ್ಥಾನಗಳ ಒಳಆಡಳಿತಗಳ ವಿಷಯದಲ್ಲಿ ತಾವು ಪ್ರವೇಶಿಸುವದಿಲ್ಲವೆಂದು ಹೇಳುತ ಬ್ರಿಟಿಷ್ ಗವರ್ನಮೆಂಟಿನವರು ಅವಲಂಬಿಸಿದತಕ್ಕ ತಾಟಸ್ಥ್ಯಭಾವದ ವಿಷಯದಲ್ಲಿ ನಮಗೆ ಸ್ವಲ್ಪವೂ ಸುಭಿಕ್ಷೆಯಿಲ್ಲವು. ಯೇತಸ್ಮಾದರೆ, ಸ್ವರೂಪತಃ ಅಂತಾ ತಾಟಸ್ಥ್ಯವೆಂಬದು ಅವರಲ್ಲಿ ಕಂಡುಬರುವದಿಲ್ಲವು. ತಮ್ಮ ಕರ್ತವ್ಯವೊಳೇನಾದರೂ ಲೋಪ ಉಂಟಾದರೆ ಆಗ ಅದು ಸ್ಥಿರಪಡಿಸಿಕೊಳ್ಳುವದಕ್ಕಾಗಿ ತಾಟಸ್ಥ್ಯವಂ ಕಾರಣಕ್ಕೇನ ಉಪಯೋಗಿಸುತ್ತಾರೆ. ಸ್ವಪ್ರಯೋಜನಕ್ಕೆ ಯತ್ಕಿಂಚಿತ ಲೋಪಬರುವ ಸಂದರ್ಭದಲ್ಲಿ ಬ್ರಿಟಿಷರವರ ಸಕಲ ಸಿದ್ಧಾಂತಗಳೂ ಸನ್ನಿಯಮಗಳೂ ವಿಶಿಷ್ಟ ಪ್ರತಿಜ್ಞೆಗಳೂ ಕಾರ್ಯಕಾರಿಗಳಾಗದೆ ಹೋಗುತಿವೆ. ಕಾಶ್ಮೀರ ಮಹಾರಾಜರವರ ಅಧಿಕಾರವಂ ತಪ್ಪಿಸಿ ಪ್ರಸ್ತುತ್ತವು ಬ್ರಿಟಿಷ್ ಗವರ್ನಮೆಂಟಿನವರು ವಹಿಸಿದ ಕಾಲದಲ್ಲಿ ಲಾರ್ಡ್ ಲ್ಯಾನ್ಸ್‌ಡೌನ್ ಯವರು ತಮ್ಮ ಯೇರ್ಪಾಟನ್ನು ಪ್ರೋಟಸಿಕೊಂಡು, ಕಾಶ್ಮೀರ ರಾಜ್ಯವು ಮಹಾರಾಜರಿಂದ ಸ್ವಸ್ಥತರವಾಗಿ ಪಾಲಿಸಲ್ಪಡದೆಯೂ, ಪ್ರಜಾಸೌಖ್ಯವು ತುದ್ವಾಂಗ ಗೌರವಿಸಲ್ಪಡದೆಯೂ ಹೋಗುವರಿಂದ ಕೇವಲ ಜನಗಳ ಕ್ಷೇಮಾರ್ಥವಾಗಿ, ಬ್ರಿಟಿಷ್ ಗವರ್ನಮೆಂಟಿನವರು ಈ ನೇಟಿವ್ ಸಂಸ್ಥಾನದ ಒಳ ಆಡಳಿತದಲ್ಲಿ ಸದ್ಯಃ ಪ್ರವೇಶಿಸಿ ಮುಗಾಮಿಯಾಗಿ ಯೇರ್ಪಾಟು ಮಾಡಬೇಕಾಯಿತೆಂದು ನುಡಿದರು. ಈ ಮಾತನ್ನು ಲಾರ್ಡ್ ಲ್ಯಾನ್ಸ್‌ಡೌನ್ ಯವರು ನೇಟಿವ್ ಸಂಸ್ಥಾನಗಳಲ್ಲಿ ಸಂಚರಿಸುವ ಕಾಲದೊಳು ಸ್ಮರಿಸಿಕೊಂಡಿರಬೇಕಾದುದು ಆವಶ್ಯಕವಾಗಿರುತಿದೆ. ಈಗ ವೈಸ್‌ರಾಯಿಯವರ ಸಾಕ್ಷಾತ್ಸಂದರ್ಶನಕ್ಕೆ ವಿಷಯಗಳಾಗಿರುವ ಪ್ರಬಲ ಸಂಸ್ಥಾನಗಳ ಪೈಕಿ ಮೊದಲನೆಯದು ಹೈದರಾಬಾದಾಗಿಯೂ, ಎರಡನೆಯದು ಈ ಸಂಸ್ಥಾನವಾಗಿಯೂ, ಇರುತಿವೆ. ಹೈದರಾಬಾದ್‌ನಲ್ಲಿ ಪ್ರತ್ಯಕ್ಷವಾಗಿ ಅರಿಯಬೇಕಾದ ವಿಷಯಗಳು ಅನೇಕವಾಗಿವೆ. ಸರ್ ಸಾಲಾರ್‌ಜಂಗರವರು ಗತಿಸಿದ ಕಾಲದ ಮೊದಲು ಆ ಸಂಸ್ಥಾನದ ಆಳತನವು ತೃಪ್ತಿಕರವಾದದ್ದಲ್ಲವೆಂತಲೂ ನಿಜಾಮರವರು ರಾಜ್ಯಾಡಳಿತದ ವಿಷಯದಲ್ಲಿ ಯೆಷ್ಟರ ಶ್ರದ್ಧೆಯನ್ನು ನ್ಯಾಯವಾಗಿ ತೋರಿಸಬೇಕೋ ಅಷ್ಟರ ಶ್ರದ್ಧೆಯಂ ವ್ಯಕ್ತಪಡಿಸಲಿಕ್ಕೆ ಅವರ ಅವಧಾನವನ್ನನ್ಯಥಾ ಆಕರ್ಷಿಸಲಿಕ್ಕೆ ಬೇಕಾದಪ್ರತಿಕೂಲ ಸಾಮಗ್ರಿಗಳು ಪ್ರಬಲಿಸಿವೆಯೆಂತಲೂ, ರಾಜ್ಯಭಾರದಲ್ಲಿ ಪರಸ್ಪರ ಈರ್ಷ್ಯಾಸೂಯೆಗಳೂ ವೈಮನಸ್ಯಗಳೂ ಅಧಿಕವಾಗಿ ಅನೇಕ ಕಕ್ಷಿಭೇದಗಳು ಯೇರ್ಪಟ್ಟಿವೆಯೆಂತಲೂ ಆಗಿಂದಾಗ್ಗೆ ಇಂಗ್ಲಿಷ್ ಪತ್ರಿಕೆಗಳು ಹಿಂದುಕಡೆ ಪ್ರಕಟಿಸುತಿದ್ದವು. ಇಂಡ್ಯಾದೇಶದಲ್ಲಿರುವ ಹಿಂದೂ ಸಂಸ್ಥಾನಗಳಲ್ಲಿ ಹೈದರಾಬಾದ್ ಬಲಿಷ್ಠವಾದುದೆಂತಲೂ, ಅಲ್ಲಿನ ಪ್ರಜೆಗಳಾದ ಮುಸಲ್ಮಾನರು ಅನುಪಶಾಂತರಾದ ಜನರೆಂತಲೂ ಗವರ್ನಮೆಂಟಿನವರು ಭಾವಿಸಿಕೊಂಡಿರುತ್ತಾರಾಗಿ ಅವರ ರಾಜಭಕ್ತಿ ವಿಶ್ವಾಸಗಳನ್ನೂ, ತಮ್ಮ ಕಷ್ಟಕಾಲದೊಳೆಷ್ಟರಮಟ್ಟಿಗೆ ಸಹಾಯಕರಾಗುವರೆಂಬದನ್ನೂ, ಸದರೀ ಸಂಸ್ಥಾನದಿಂದ ಕೊಡುವಂತೆ ವಾಗ್ದಾನಮಾಡಲ್ಪಟ್ಟಿರುವ ಸಹಾಯ ಸೇನೆಯ ಅರ್ಹತೆಯನ್ನೂ, ಅವರ ಪ್ರಾಮಾಣಿಕತೆಯನ್ನೂ ತಿಳಿದುಕೊಳ್ಳಬೇಕಾದುದು ಪ್ರಕೃತ ಸಂದರ್ಭದಲ್ಲಿ ಮುಖ್ಯಕರ್ತವ್ಯವೆಂದುಭಾವಿಸಲ್ಪಡದಿರಲಾರದು. ಇದು ಸಾಮಾನ್ಯವಿಷಯವೆಂತೇನ ಪರಿಗಣಿಸಲ್ಪಟ್ಟಾಗ್ಯೂ ಇದರಲ್ಲಿ ರಾಜನೀತಿಯುಗಳಾದ ಅರ್ಥಕಲ್ಪನಕ್ಕೆ ಬೇಕಾದ ಅವಕಾಶ ಉಂಟಾಗುತಿದೆ. ಇಷ್ಟರ ವಿಷಯಪರಿಜ್ಞಾನವು ವೈಸ್‌ರಾಯಿಯವರಿಗೆ ಯಸ್ಮೂಲಕ ಉಂಟಾಗುವದೋ ನಾವರಿಯೆವು. ಅದು ನಿಜಾಮರು ಮಾಡುವ ಸತ್ಕಾರಗಳಿಂದಾಗಲಿ, ಪ್ರಜೆಗಳು ವಿನೋದಾರ್ಥ ನೇರಿತಕ್ಕ ಗುಂಪಿನಿಂದಾಗಲಿ, ರಾಜಮಾರ್ಗ ಪರಿಷ್ಕಾರ ಪುರಾಲಂಕಾರಾದಿ ಅರ್ಥವ್ಯಯಕಾರಿಗಳಾದ ಔಪಚಾರಿಕ ಯೇರ್ಪಾಡುಗಳಿಂದಾಗಲಿ ಸುತರಾಂ ಉಂಟಾಗಲಾರದು. ಪರಂತು ಅಂತಾ ವಿಷಯಪರಿಜ್ಞಾನವಂ ಸಂಪಾದಿಸಲಿಕ್ಕೆ ಹ್ಯಾಗೆ ಪ್ರಯತ್ನ ಪಡಬೇಕೋ ಅದು ವೈಸ್‌ರಾಯಿಯವರು ಅರಿಯದಿರಲಾರರೆಂದು ನಂಬುತ್ತೇವೆ

LOCAL AND PROVINCIAL NEWS.

ಒಳದೇಶವು ಮತ್ತು ತಾಲ್ಲೂಕಿನ ವೃತ್ತಾಂತಗಳು

The Imperial troops.—ಸರಹದ್ದು ಪ್ರಾಂತದ ರಕ್ಷಣೆಯ ವಿಷಯದಲ್ಲಿ ಬ್ರಿಟಿಷ್ ಗವರ್ನಮೆಂಟಿಗೆ ಸಹಾಯಾರ್ಥ ಇಲ್ಲಿ ಕಟ್ಟಲ್ಪಟ್ಟಿರುವ ಸೇನೆಯು ವೈಸ್‌ರಾಯ್ ಸಾಹೆಬರವರ ನೋಟದ ಬಗ್ಗೆ ಅವರು ಮೈಸೂರಿಗೆ ಬರುವ ಸಂದರ್ಭದಲ್ಲಿ ಅಲ್ಲಿಗೆ ಕಳುಹಿಸಲ್ಪಡುವದೆಂದು ಕೇಳುತ್ತೇವೆ.

New Sub Registry Offices.—ಬರುವತಿಂಗಳ ೧ನೇ ತಾರೀಖಿನಿಂದಾರಭ್ಯ ಆನೇಕಲ್, ತಿಪಟೂರ್, ಮತ್ತು ಕೃಷ್ಣರಾಜಪೇಟೆ ತಾಲ್ಲೂಕ್‌ಗಳಲ್ಲಿ ಹೊಸದಾಗಿ ಸಬ್‌ರಿಜಿಸ್ಟ್ರೀ ಆಫೀಸುಗಳು ಸ್ಥಾಪಿಸುವಂತೆ ಹುಕುಂ ಆಗಿರುವದಾಗಿ ತಿಳಿಯಬರುತಿದೆ.

Execution.—ಕೋಲಾರ ಡಿಸ್ಟ್ರಿಕ್ಟು ಚಿಕ್ಕಬಳ್ಳಾಪುರ ತಾಲ್ಲೂಕ್ ತಿಮ್ಮಯ್ಯನೆಂಬವನ ಮಗ ಚೆನ್ನಿಗನೆಂಬಾತನು ಸದರೀ ತಾಲ್ಲೂಕಿನಲ್ಲಿ ಖೂನಿ ನಡಸಿದ ಆಕ್ಷೇಪಣೆ ಬಗ್ಗೆ ನಂದಿದುರ್ಗ ಡಿವಿಜನ್ ಸೆಷನ್ ಜಡ್ಜಿಯವರಿಂದ ವಿಧಿಸಲ್ಪಟ್ಟ ದಂಡನೆಯನ್ನನುಸರಿಸಿ, ಈ ತಿಂಗಳ ೧೮ನೇ ತಾರೀಖ್ ಪ್ರಾತಃಕಾಲ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೆ ಹಾಕಲ್ಪಟ್ಟನು.

The Resident.—ಈಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಪಿ. ಡಿ. ಹೆಂಡರ್ಸನ್ ಸಾಹೆಬರವರು ತಮ್ಮ ರಜಾವನ್ನು ಪೂರೈಸಿಕೊಂಡು ವಾಪಸ್ ಬಂದು ತಮ್ಮ ಕೆಲಸದ ಚಾರ್ಜು ಮರಳಿ ಕೈಗೊಂಡ ಕೂಡಲೇ ಶ್ರೀಮನ್ಮಹಾರಾಜರವರ ದರ್ಶನಾರ್ಥವಾಗಿಯೂ, ಬೇರೆ ಕೆಲಸದಬಗ್ಗೂ ಮೈಸೂರಿಗೆ ಹೋಗಿದ್ದರಷ್ಟೆ. ಸದರೀ ಯವರು ಕಳೆದ ಮಂಗಳವಾರದ ದಿನ ಇಲ್ಲಿಗೆ ವಾಪಸು ಬಂದು ಸೇರಿದರು.

Rumoured official changes.—ಫಾರೆಸ್ಟ್ ಇನ್ಸ್‌ಪೆಕ್ಟರ್ ಜನರಲ್‌ರವರಾದ ಮೆ|| ಎಸ್. ರಿಕೆಟ್ಸಿಯವರು ಕ್ಷಿಪ್ರದಲ್ಲಿ ಆರು ತಿಂಗಳ ಫರ್ಲೋ ರಜಾ ಮೇರೆ ಹೊರಟು ಹೋಗುವರೆಂತಲೂ, ಅವರು ಈಗ ನೋಡುತಲಿರುವ ಯೆಕ್ಸೈಸ್ ಕಮಿಷನರ್ ಕೆಲಸಕ್ಕೆ ಚೀಫ್‌ಸೆಕ್ರೆಟರಿ ಮೆ|| ಆನಂದರಾಯರವರೂ, ಅವರ ಕೆಲಸಕ್ಕೆ ಮೈಸೂರ್ ಡೆಪ್ಯುಟಿ ಕಮಿಷನರಾದ ಮೆ|| ರಂಗಸಾಮಯ್ಯಂಗಾರ್ರವರೂ, ಅವರ ಅಧಿಕಾರಕ್ಕೆ ಬೆಂಗಳೂರು ಡೆಪ್ಯುಟಿ ಕಮಿಷನರಾದ ಮೆ|| ಮಿಯರ್ ಹುಜಾಯತ್ ಅಲೀಖಾನರವರೂ, ಇವರ ಕೆಲಸಕ್ಕೆ ಹಾಸನ ಡಿಪ್ಯುಟಿ ಕಮಿಷನರವರಾದ ಮೆ|| ಪಿ. ಎನ್. ಕೃಷ್ಣಯ್ಯನವರೂ ವರ್ಗ ಮಾಡಲ್ಪಡುವರೆಂತಲೂ ಒಂದು ಪ್ರವಾದ ಉಂಟಾಗಿರುವಂತೆ ಒಳದೇಶದ ಸ್ಪೆಕ್ಟೇಟರ್ ಪತ್ರಿಕೆ ತಿಳಿಸುತಿದೆ.

The weather.—ಕಳೆದವಾರದೊಳು ಪ್ರಾಯಶಃ ಪ್ರತಿದಿನ ಸಾಯಂಕಾಲದಲ್ಲಿ ಸ್ವಲ್ಪ ಮೋಡ ಮುಸುಕಿ ಮಳೆಸಿದಂತೆ ಕೆಲವು ಹನಿಗಳು ಬೀಳುತಲಿತ್ತು. ಇದು ಯಾವ ವಿಧದಲ್ಲೂ ಪ್ರಯೋಜನಕಾರಿಯೆಂದು ಹೇಳುವದಕ್ಕಾಗುವದಿಲ್ಲವು. ಅನೇಕ ಪ್ರದೇಶಗಳೊಳು ಮಳೆ ಇಲ್ಲದೆ ಬುಸ್ಸೀ ಫಸಲುಗಳು ಒಣಗುತಲಿರುವಂತೆ ನಮ್ಮ ಬಾತಮೀದಾರರ ಕಾಗದಗಳ ದೆಸೆಯಿಂದ ತಿಳಿಯಬರುತಿದೆ. ಕಾಲವರ್ಷ ತಪ್ಪಿಹೋಗುವ ಪಕ್ಷದಲ್ಲಿ ಮುಂದೆ ದುರ್ಭಿಕ್ಷದ ಭೀತಿ ನಮ್ಮನ್ನು ಗಲಿದ್ದಲ್ಲವು. ಈ ಪಟ್ಟಣದಲ್ಲಿ ಈಗಲೇ ಜಲದೌರ್ಲಭ್ಯ ಉಂಟಾಗಿದೆ, ಮನೆಗಳ ಭಾವಿಗಳಲ್ಲಿ ನೀರಿಲ್ಲವು, ಧರ್ಮಾಂಬುಧಿ ಕೆರೆ ಬಣಗಿಹೋಯಿತು. ವಾಂತಿ ಭೇದಿ ರೋಗ ತಲೆದೋರಿ ಅಲ್ಲಲ್ಲಿ ಪ್ರಾಣಹಾನಿಗಳುಂಟಾಗುತಲಿವೆ. ಪದಾರ್ಥಗಳ ದಾರಣೆಗಳು ಪ್ರಾಯಶಃ ಒಂದೇ ವಿಧವಾಗಿವೆಯೇ ಹೊರ್ತು ಇಳುಮುಖ ಕಾಣಿಸಲಿಲ್ಲವು. ಸಾಮಾನ್ಯ ಜನರು ಬಹಳ ಭೀತರಾಗಿರುತ್ತಾರೆ. ದೈವಯೋಗ ಹ್ಯಾಗಿರುವದೊ ಮುಂದೆ ನೋಡಬೇಕು. ತಾತ್ಕಾಲಿಕ ಸ್ಥಿತಿ ಪ್ರೋತ್ಸಾಹಕರವಾಗಿಲ್ಲವೆಂತಲೇ ಹೇಳಬೇಕಾಗಿರುತಿದೆ.

Freak of nature.—ತಿರುಮಕೂಡ್ಲು ನರಸೀಪುರದಲ್ಲಿ ಒಬ್ಬ ಶ್ರೀವೈಷ್ಣವ ಮತದ ಗರ್ಭಿಣಿಯು ಎರಡುತಲೆ, ಒಂದ ಶರೀರ, ಒಂದೇಕಾಲುಳ್ಳ ಒಂದುಮಗುವನ್ನು ಪ್ರಸವಿಸಿದಳು. ಅದು ೩ ದವಸ ಬದುಕಿದ್ದು ಮೃತವಾಯಿತು.—ಚಿ.

Additional Munsiff's court.— ಇಲ್ಲಿನ ಕೋರ್ಟುಗಳಲ್ಲಿ ಮೊಕದ್ದಮೆಗಳು ಬಹಳ ಬಾಕಿ ಬಿದ್ದಿರುವದರಿಂದ ಫೈಸಲಾತಿ ಬಗ್ಗೆ ಹಂಗಾಮಿ ವಿಲ್ಲತರೀಕ್ ಅಡಿಷನಲ್ ಮುನ್‌ಸಬ್ ಕೋರ್ಟನ್ನು ಇಟ್ಟು ಕೆಲಸ ನೆರವೇರಿಸುವ ಬಗ್ಗೆ ಮೆ|| ವೆಂಕಟವರದಯ್ಯಂಗಾರ್ರವರನ್ನು ನೇಮಿಸಿದಾರೆ. ಇವರು ಜಾಗ್ರತೆಯಲ್ಲೇ ಬರುವದಾಗಿ ಇಲ್ಲಿಗೆ ಬಂದ ತಂತಿವರ್ತಮಾನದಿಂದ ತಿಳಿಯಬರುತ್ತದೆ.—ಚಿ.

ವೈಸ್‌ರಾಯ್‌ಯವರು ಮೈಸೂರಿಗೆ ದಯಮಾಡುವ ಸಂದರ್ಭದಲ್ಲಿ ಅವರನ್ನು ತಕ್ಕ ಮರ್ಯಾದೆಗಳೊಡನೆ ಬರಮಾಡಿಕೊಳ್ಳುವಬಗ್ಗೆ ಮೈಸೂರು ನಗರ್ ನಿವಾಸಿಗಳು ಸಭೆಸೇರಿ ನಡೆಸಿದ ಜನರಲ್ ಮೀಟಿಂಗ್ ಪ್ರೊಸೀಡಿಂಗ್ಸ್.

ಸನ್ ೧೮೯೨ನೇ ಇಸವಿ ಅಕ್ಟೋಬರ್ ೧೬ನೇ ತಾರೀಖಿನದಿನ ಸಾಯಂಕಾಲ ಮೈಸೂರಲ್ಲಿ ಲೇಟ್ ದಿವಾನ್ ರಂಗಾಚಾರ್ಯರವರ ಮೆಮೋರಿಯಲ್ ಹಾಲಿನಲ್ಲಿ ಮೈಸೂರು ಪ್ರಜಾ ಪ್ರತಿನಿಧಿಗಳು ಸಭೆಯನ್ನು ಸೇರಿದ್ದರು. ಈ ಸಭೆಯಲ್ಲಿ ಆಕೆಳಗೆ ವಿವರಿಸುವ ದೊಡ್ಡಮನುಷ್ಯರೂ, ಮತ್ತು ಅನೇಕ ಇತರ ದೊಡ್ಡಮನುಷ್ಯರು ಸಹ ದಯಮಾಡಿದ್ದರು.

ರೆವರೆಂಡ್ ಮೆ|| ಹೇಗ್‌ಸಾಹೆಬರವರು.
ಮ||ರಾ|| ನಂಜುಂಡರಾಯರವರು.
,, ಅಂಬಳೆ ಅಣ್ಣಯ್ಯಪಂಡಿತರು.
,, ಎಂ. ವೆಂಕಟಕೃಷ್ಣಯ್ಯನವರು.
,, ಗೋಮಠಂಶ್ರೀನಿವಾಸಜೋಯಿಸರು.
,, ಗೋಪಶೆಟ್ಟರು.
,, ಕೃ. ಪೇಟೆ ರಂಗಯ್ಯಂಗಾರ್ಯರವರು.

ಈ ಸಭೆಯು ಈ ಸಾಯಂಕಾಲ ೬ ಘಂಟೆಗೆ ಸೇರತಕ್ಕ ಬಗ್ಗೆ ಮ||ರಾ|| ಅಣ್ಣಯ್ಯಪಂಡಿತರೂ ಮ|| ರಾ|| ನಂಜುಂಡರಾಯರವರೂ ಕೊಟ್ಟಿದ್ದ ನೋಟೀಸ್ ಓದಲಾಯಿತು.

ಘನವನ್ನು ಹೊಂದಿದ ಇಂಡಿಯಾ ಗವರ್ನರ್ ಜನರಲ್ ಮತ್ತು ವೈಸ್‌ರಾಯಿ ಸಾಹೆಬರವರು ಬಾಳೆ ನವಂಬರ್ ೧ನೇ ತಾರೀಖಿನಲ್ಲಿ ಮೈಸೂರಿಗೆ ದಯಮಾಡುವ ವಿಷಯ ಯೆಲ್ಲರಿಗೂ ತಿಳಿದೇ ಇದೆಯಷ್ಟೆ. ಆ ಕಾಲದಲ್ಲಿ ಮೈಸೂರು ಪಟ್ಟಣ ನಿವಾಸಿಗಳು ಅವರ ಗೌರವಾರ್ಥವಾಗಿ ಅನೇಕವಿಧವಾದ ಮರ್ಯಾದೆ ಮಾಡಲು ಪ್ರವರ್ತಿಸಿದಾರಲ್ಲದೆ ಶ್ರೀಮನ್ಮಹಾರಾಜ ರಾಜಾಸಾಹೆಬ ಬಹದೂರವರು ಸಹ ಅನೇಕ ಮರ್ಯಾದೆ ಮಾಡಲು ಪ್ರಯತ್ನ ನಡೆಸುತಲಿದಾರೆ. ಮೈಸೂರು ದೇಶದ ಪ್ರಜಾ ಪ್ರತಿನಿಧಿಗಳಾದ ನಾವೂ ಘನವನ್ನು ಹೊಂದಿದ ವೈಸರಾಯಿ ಗವರ್ನರ್ ಜನರಲ್ ಸಾಹೆಬರವರು ಮೈಸೂರಿಗೆ ದಯಮಾಡುವಾಗ, ಪೂರ್ವ ೧೮೮೬ನೇ ಇಸವಿಯಲ್ಲಿ ಲಾರ್ಡ್ ಡಫರಿನ್ ಸಾಹೆಬರವರು ಇಲ್ಲಿಗೆ ದಯಮಾಡಿದ್ದಾಗ, ಪ್ರತಿನಿಧಿಗಳು ಅವರಿಗೆ ಒಂದು ವಿಜ್ಞಾಪನ ಪತ್ರಿಕೆಯನ್ನು ಒಪ್ಪಿಸಿದಂತೆ ಈಗಲೂ ಒಪ್ಪಿಸತಕ್ಕ ವಿಷಯದಲ್ಲಿ ಯೋಚಿಸುವದಕ್ಕೋಸ್ಕರ ಈ ಸಭೆ ಸೇರಿಸಲ್ಪಟ್ಟಿದೆ ಯೆಂಬದಾಗಿ ಮ||ರಾ|| ಅಂಬಳೆ ಅಣ್ಣಯ್ಯಪಂಡಿತರವರು ಉಪನ್ಯಾಸ ಮಾಡಿದರು.

ಇದು ಮೈಸೂರು ಪ್ರಜಾ ಪ್ರತಿನಿಧಿಗಳ ವಿಶೇಷ ಸಭೆ ಯೆಂಬದಾಗಿ ಕರೆಯಲ್ಪಟ್ಟು ಈಸಭೆಗೆ ಮ||ರಾ|| ಎಂ. ವೆಂಕಟಕೃಷ್ಣಯ್ಯನವರು ಸಭಾನಾಯಕರಾಗಿರಬೇಕೆಂದು ಮ|| ರಾ|| ಅಣ್ಣಯ್ಯಪಂಡಿತರು ಸೂಚಿಸಿದ್ದನ್ನು ಮ||ರಾ|| ಗೋಮಠಂ ಶ್ರೀನಿವಾಸ ಜೋಯಿಸರವರು ಅನುಮೋದಿಸಿದರು. ಇದಕ್ಕೆ ಯೆಲ್ಲರೂ ಒಪ್ಪಿದರು.

ಮ||ವೆಂಕಟಕೃಷ್ಣಯ್ಯನವರು ತಾವು ಪ್ರೆಸಿಡೆಂಟರಾಗಿರುವದಕ್ಕೆ ಅನುಕೂಲವಿಲ್ಲವೆಂದು ಕೆಲವು ಅನಿವಾರ್ಯಗಳನ್ನು ತಿಳಿಸಿದ್ದರಿಂದ ಮ||ರಾ|| ಅಣ್ಣಯ್ಯ ಪಂಡಿತರು ಪ್ರೆಸಿಡೆಂಟರಾಗಬೇಕೆಂತಲೂ, ಮ||ರಾ|| ಗೋ|| ಶ್ರೀನಿವಾಸಜೋಯಿಸರು ಸೆಕ್ರೆಟರಿ ಮತ್ತು ಟ್ರೆಜರರಾಗಿರಬೇಕೆಂತಲೂ, ಮಹಾರಾಜಶ್ರೀ ವೆಂಕಟಕೃಷ್ಣಯ್ಯನವರು ಸೂಚಿಸಿದ್ದನ್ನು ರೆವರೆಂಡ್ ಹೇಗ್ ಸಾಹೆಬರವರು ಅನುಮೋದಿಸಿದರು, ಎಲ್ಲರೂ ಒಪ್ಪಿದರು.

ಘನವನ್ನು ಹೊಂದಿದ ವೈಸರಾಯಿ ಸಾಹೆಬರವರು ದಯಮಾಡುವ ಕಾಲದಲ್ಲಿ ಒಂದು ವಿಜ್ಞಾಪನ ಪತ್ರಿಕೆಯನ್ನು ಯೋಗ್ಯವಾದ ಪೆಟ್ಟಿಗೆಯೊಳಗಿಟ್ಟು, ಒಪ್ಪಿಸತಕ್ಕ ವಿಚಾರವನ್ನು ಮ||ರಾ|| ಅಣ್ಣಯ್ಯ ಪಂಡಿತರವರೂ,ವೆಂಕಟಕೃಷ್ಣಯ್ಯನವರು ಸಹ ದಿವಾನ್‌ಸಾಹೆಬರವರಿಗೆ ತಿಳಿಸಿ ಗೊತ್ತು ಮಾಡತಕ್ಕದ್ದು. ಮತ್ತು ಸದರೀ ವಿಜ್ಞಾಪನಪತ್ರಿಕೆಯನ್ನು ಮ|| ಅಡ್ವೊಕೇಟ್ ಎಂ. ಎಸ್. ನರಸಿಂಹಯ್ಯಂಗಾರ್ರವರು, ರೆ. ಹೇಗ್‌ಸಾಹೆಬರವರು, ಮ||ರಾ|| ವೆಂಕಟಕೃಷ್ಣಯ್ಯನವರು ಇಂಗ್ಲೀಷನಲ್ಲಿ ತಯಾರ್ಮಾಡಬೇಕೆಂದು ಮ|| ರಾ|| ನಂಜುಂಡರಾಯರವರು ಸೂಚಿಸಿದ್ದನ್ನು ಮ|| ಗೋಪಶೆಟ್ರು ಅನುಮೋದಿಸಿದರು, ಎಲ್ಲರೂ ಒಪ್ಪಿದರು.

* ಈ ವಿಚಾರವು ದಿವಾನ್‌ಸಾಹೆಬರವರಿಂದ ಮಂಜೂರ್ಮಾಡಲ್ಪಟ್ಟಿದೆ.

ಈ ಪತ್ರಿಕೆ ಪ್ರಿಂಟಿಂಗ್ ಚಾರ್ಜ್ ಕ್ಯಾಸ್ಕೆಟ್ (ಅಂದರೆ ಪೆಟ್ಟಿಗೆ) ವಗೈರೆ ಖರ್ಚುಗೋಸ್ಕರ ದ್ರವ್ಯ ಸಹಾಯವು ಬೇಕಾಗಿರುವದರಿಂದ ಒಂದು ಚಂದಾ ಪಟ್ಟಿ ತಯಾರ್‌ಸಿಕಿ ಚಂದಾ ವಸೂಲ್ಮಾಡಬೇಕೆಂದುತೀರ್ಮಾನವಾಗಿ ಅನಂತರ ಚಂದಾ ಪಟ್ಟಿಯು ತಯಾರ್ಮಾಡಲ್ಪಟ್ಟು ಎಲ್ಲರೂ ಯಥಾಶಕ್ತ್ಯಾನುಸಾರ ಚಂದಾ ಹಾಕಿದರು.

ಈ ಸಭೆಯ ಉದ್ದೇಶಗಳನ್ನು ತಿಳಿಸಿ, ಈ ಕಾರ್ಯ ನಿರ್ವಾಹಕ್ಕಾಗಿ ಪ್ರತಿತಾಲ್ಲೂಕಿನ ಒಬ್ಬೊಬ್ಬ ಪ್ರತಿನಿಧಿಗಳಿಗೂ ಮತ್ತು ಮ್ಯುನಿಸಿಪಾಲಿಟಿ, ಲೋಕಲ್‌ಫಂಡ್ ಬೋರ್ಡ್, ಅಸೋಸಿಯೇಷನ್ ಯಾನೆ ಸಭೆಗಳು, ಮತ್ತು ದೊಡ್ಡ ದೊಡ್ಡ ಪಟ್ಟಣಗಳು, ಇವುಗಳಿಂದ ಬಂದಿದ್ದ ಮೆಂಬರ್‌ಗಳ ಪೈಕಿ ಒಬ್ಬೊಬ್ಬರಿಗೆ ಬರೆದು ಈ ಪ್ರೊಸೀಡಿಂಗ್ಸಿನ ಕಾಪಿಯನ್ನು ಕಳುಹಿಸಬೇಕಾದ್ದಲ್ಲದೆ ನವಂಬರ್ ೬ ನೇ ತಾರೀಖಿನಲ್ಲಿ ಇದಕ್ಕಾಗಿ ಒಂದು ಜನರಲ್‌ಮೀಟಿಂಗ್ ಮೈಸೂರಲ್ಲಿ ನಡೆಯುತ್ತೆಯಾಗಿ ಅನುಕೂಲವುಳ್ಳವರು ಆ ಕಾಲಕ್ಕೆ ಸರಿಯಾಗಿ ದಯಮಾಡಬೇಕೆಂಬದಾಗಿಯೂ ನಮೂದಿಸತಕ್ಕದ್ದು.

ಅಂ. ಅಣ್ಣಯ್ಯಪಂಡಿತರು,
ಪ್ರೆಸಿಡೆಂಟ್.

ADDRESS
OF THE
DEWAN OF MYSORE
TO THE REPRESENTATIVE ASSEMBLY HELD AT MYSORE,
on Tuesday the 4th October 1892

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೪ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ

ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ

(ಹಿಂದಿನ ಪಾಠದ ಶೇಷ)

ಬಾಬು	1890—91 (೧)	1890—91 (೨)	1890—91 (೩)	1891—92 (೧)	1891—92 (೨)	1891—92 (೩)	ಹೆಚ್ಚು
	ರೂ	ರೂ	ರೂ	ರೂ	ರೂ	ರೂ	ರೂ
ಒಟ್ಟು	51,09,411	1,40,48[illegible]	66,55,796	56,77,914	15,12,953	71,90,896	5,35,100
ಇತರ ಬಾಬುಗಳು	9,70,599	60,716	8,31,315	2,88,150	65,369	3,48,819	17,504
[illegible]	3,24,007	67,825	3,91,832	4,15,076	2,21,151	6,36,227	2,14,39[illegible]
[illegible]	66,320	18,411	84,940	76,038	24,074	1,00,103	15,169
[illegible]	5,70,936	1,12,737	7,22,077	6,04,780	1,89,023	7,93,803	71,130
[illegible]	3,88,596	1,18,425	5,07,011	4,05,527	1,10,908	5,16,495	9,481
[illegible]	20,25,076	5,44,144	2[illegible]7,220	19,73,562	6,17,942	25,91,507	19,[illegible]87
(b) [illegible]	5,08,282	1,13,559	7,01,841	5,72,121	1,32,861	7,04,982	3,141
(a) [illegible]	9,17,730	9,058	9,46,788	9,69,146	11,056	9,80,204	33,416
[illegible]	3,00,560	91,610	3,92,176	3,77,946	1,10,504	5,18,450	1,21,274

ಕೋಲಾರದ [illegible] ತಿಂಗಳ ಹುಟ್ಟುವಳಿಗೂ, ಅದರ ಹಿಂದಣ [illegible] ತಿಂಗಳ ಹುಟ್ಟುವಳಿಗೂ, [illegible] ಹೋಲಿಸಿ ನೋಡಿದ್ದರಲ್ಲಿ ಸಾಮಾನ್ಯವಾಗಿ ಎಲ್ಲಾ ಬಾಬುಗಳ ಹುಟ್ಟುವಳಿಯು ಜಾಸ್ತಿಯಾಗಿ ಒಟ್ಟು [illegible] ರೂಪಾಯಿ ಜಾಸ್ತಿಯಾಗಿರುತ್ತೆ. ಚಿನ್ನದ ಗಣಿ ಬಾಬಿನಲ್ಲಿ ವಸೂಲಾದ ರಾಜಭಾಗದ ಮೊಬಲಗಿನಲ್ಲಿ ವಿಶೇಷ ಜಾಸ್ತಿ ಕಂಡುಬಂದಿರುತ್ತೆ. ಹೋದ ವರುಷದ [illegible] ತಿಂಗಳುಗಳಲ್ಲಿ ಹಿಂದಕ್ಕಿಂತ [illegible] ರೂಪಾಯಿಗಳಿಗಿಂತ ಹೆಚ್ಚಾಗಿರುವ ಬೆಲೆಯ [illegible] ಚಿನ್ನ ಉತ್ಪತ್ತಿಯಾಯಿತು. ಕೋಲಾರ ಡಿಸ್ಟ್ರಿಕ್ಟಿನ ಚಿನ್ನದ ಗಣಿಗಳ ಪೈಕಿ ಮುಖ್ಯವಾದವುಗಳಲ್ಲಿ ಕಳೆದ ೩ ವರುಷಗಳಲ್ಲಾದ ಉತ್ಪತ್ತಿಯನ್ನು ಈ ಕೆಳಗಣ ಪಟ್ಟಿಯಲ್ಲಿ ತೋರಿಸಿರುತ್ತೆ.

ಗಣಿಗಳ ಹೆಸರು	1889	1890	1891
	ಔನ್ಸುಗಳು	ಔನ್ಸುಗಳು	ಔನ್ಸುಗಳು
ಮೈಸೂರು	49,238	58,183	66,[illegible]00
ಊರಿಗಾಂ	16,437	27,351	[illegible]1,841
ನಂದಿದುರ್ಗ	6,129	15,637	23,598
ಬಾಲಘಾಟ	3,586	3,633	5,906
ಜುಮ್ಲಾ	75,390	104,804	1,30,145

ಮೇಲ್ಕಂಡ ಎಲ್ಲಾ ಗಣಿಗಳ ಉತ್ಪತ್ತಿಯು ವಿಶೇಷವಿಲ್ಲದೆ ಅಭಿವೃದ್ಧಿಯಾಗುತ್ತಿರುವದು ತೃಪ್ತಿಕರವಾಗಿರುತ್ತೆ. ಇತರ ಕೆಲವು ಗಣಿಗಳು ಜಲ್ದಿಯಾಗಿ ಪ್ರಬಲಕ್ಕೆ ಬಂದು, ಮುಂದೆ ಲಾಭಕರವಾಗುವ ಚಿಹ್ನೆಗಳು ತೋರುತ್ತಲಿವೆ. ಕೋಲಾರ ಡಿಸ್ಟ್ರಿಕ್ಟಿನಲ್ಲಿ ಇರತಕ್ಕ ಇತರ ಗಣಿಗಳಲ್ಲಿಯೂ, ಹಾಸನ, ಹೊನ್ನಾಳಿ [illegible] ಗಣಿಗಳಲ್ಲಿಯೂ, ಬಂಡವಾಳದ ಶಕ್ತಿ ಕಮ್ಮಿಯಾದ್ದರಿಂದಲೂ, ಇತರ ಕಾರಣಗಳಿಂದಲೂ, ಲಾಭಕರವಾದ ಉತ್ಪತ್ತಿಯಾಗುವಷ್ಟರಮಟ್ಟಿಗೆ ಕೆಲಸಗಳು ನಡೆದಿಲ್ಲ.

ಫಾರೆಸ್ಟ್ ಬಾಬಿನಲ್ಲಿ ಸಂದಲ್ ಬಾಬಿನ ಹುಟ್ಟುವಳಿಯಲ್ಲಿ ಸ್ವಲ್ಪಮಟ್ಟಿಗೆ ಜಾಸ್ತಿ ಕಂಡುಬಂದಿರುತ್ತೆ. ಇತರ ಬಾಬುಗಳಲ್ಲಿ ಕಾಣುವ ಜಾಸ್ತಿಯು ಅತ್ಯಲ್ಪವಾಗಿರುತ್ತೆ.

ಅಬ್ಕಾರಿ ಬಾಬಿನಲ್ಲಿ ೧೮೯೨ನೇ ಇಸವಿ ಏಪ್ರೆಲ್ ಗುರ್‍ಲೆ ಲಾಗಾಯಿತು ಮೂರುತಿಂಗಳ ವಸೂಲಿಯಲ್ಲಿ ಜಾಸ್ತಿ ಕಂಡಿರುತ್ತೆ. ಮುಖ್ಯವಾಗಿ ಏಪ್ರೆಲ್ [illegible] ಲಾಗಾಯಿತು [illegible] ಮತ್ತು ಮರ್ಚೆಂಟ್ ಬಾಬಿನಲ್ಲಿ ಜಾರಿಗೆ ಬಂದ ಹೊಸ [illegible] ಏರ್ಪಾಡುಗಳ ದೆಸೆಯಿಂದ ಈ ಮೇರೆ ಜಾಸ್ತಿಯಾಗಲು ಕಾರಣವಾಯಿತು. ಈ ಏರ್ಪಾಡುಗಳ ವಿಷಯವಾಗಿ ಮುಂದೆ ಸೂಚಿಸುತ್ತೇನೆ.

ಸಾಯರ್ ಬಾಬಿನ ಹುಟ್ಟುವಳಿಯಲ್ಲಿ ಸ್ವಲ್ಪಮಟ್ಟಿಗೆ ಜಾಸ್ತಿ ಕಂಡಿರುತ್ತೆ. ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಈ ಎರಡು ಬಾಬುಗಳಲ್ಲಿ ವಿಶೇಷವಾಗಿ ಜಾಸ್ತಿ ಹುಟ್ಟುವಳಿ ಕಂಡುಬಂದಿರುವದು ದುರ್ಭಿಕ್ಷಪ್ರಯುಕ್ತವಾಗಿ ಲೇವಾದೇವಿಯು ಹೆಚ್ಚಾಗಿ ನಡೆದಿರುವದನ್ನು ಸೂಚಿಸುತ್ತೆ.

ಸರಕಾರದ ತರಫ್ ಗವರ್ನಮೆಂಟ್ ಪ್ರೋಮಿಸರಿ ನೋಟುಗಳ ಮೇಲಣ [illegible] ಮತ್ತು ಮದರಾಸು ಬ್ಯಾಂಕಿನಲ್ಲಿ ಹಾಜರಿರುವ ಡಿಪಾಜಿಟ್ಟುಗಳ ಮೇಲಣ ಬಡ್ಡಿ ಹುಟ್ಟುವಳಿಯು ಹಿಂದಣ ಸಂವತ್ಸರಕ್ಕಿಂತ [illegible] ರೂಪಾಯಿ ಜಾಸ್ತಿಯಾಗಿತ್ತು. [illegible] ದುರ್ಭಿಕ್ಷ ಸಂಭವನೆಗಳು ಇದ್ದ ಕಾಲದಲ್ಲಿ ಸರಕಾರದವರು ಗವರ್ನಮೆಂಟ್ ಪ್ರೋಮಿಸರಿ ನೋಟುಗಳನ್ನು ಮಾರಿದ ಸಂದರ್ಭದಲ್ಲಿ ವಿಶೇಷವಾದ ಲಾಭವು ಬಂದದ್ದು, ಅಂದರೆ, ಮಾರ್ಚಿ [illegible] ರ ವರಿಗೆ [illegible] ರೂಪಾಯಿಯೂ, ಏಪ್ರೆಲ್ ಗುರ್‍ಲೆ ಲಾಗಾಯಿತು ಜೂನ್ [illegible] ರ ವರಿಗೆ [illegible] ರೂಪಾಯಿಯು [illegible] ಉತ್ಪತ್ತಿ ಆಯಿತು.

ಅಂತು ೧೮೯೧—೯೨ನೇ ಇಸವಿಯ [illegible] ತಿಂಗಳುಗಳ ಒಟ್ಟು ಹುಟ್ಟುವಳಿಯು [illegible] ರೂಪಾಯಿ ಆಯಿತು.

ಖರ್ಚು ಬಾಬು—ಕಳೆದ ಎರಡು ಸಂವತ್ಸರಗಳ ಖರ್ಚು ಬಾಬುಗಳನ್ನು ನೋಡುವದರಲ್ಲಿ, ದರೋಬಸ್ತು ಬಾಬುಗಳ ಖರ್ಚು ಎಲ್ಲಾ ತಿಂಗಳುಗಳಲ್ಲಿಯೂ ಬಹುಮಟ್ಟಿಗೆ ಸಮನಾಗಿ [illegible] ಆಗಿರುವದರಿಂದ, ೧೮೯೨ನೇ ಏಪ್ರೆಲ್, ಮೇ, ಜೂನ್ ಈ ಮೂರು ತಿಂಗಳ ಖರ್ಚನ್ನು ಪ್ರತ್ಯೇಕವಾಗಿ ಗಣನೆಗೆ ತೆಗೆದುಕೊಳ್ಳುವ ಪ್ರಯೋಜನವಿರುವದಿಲ್ಲ. ರೈಲ್ವೆಗಳ ಬಗ್ಗೆ ಖರ್ಚಾದ ರಕಮುಗಳು ಶಿವಾಯಿ, ೧೮೯೧—೯೨ನೇ ಇಸವಿ ಜಾಸ್ತಿ [illegible] ತಿಂಗಳುಗಳ ಇತರ ಎಲ್ಲಾ ಬಾಬುಗಳ ಖರ್ಚು [illegible] ರೂಪಾಯಿ, ಅಂದರೆ ಹಿಂದಣ ವರುಷದ [illegible] ತಿಂಗಳ ಖರ್ಚಿಗಿಂತ ಸ್ವಲ್ಪ ಹೆಚ್ಚು ಕಡಿಮೆಯಾಗಿ [illegible] ರೂಪಾಯಿ ಜಾಸ್ತಿಯಾಗಿರುತ್ತೆ.

[illegible] ಜಾಸ್ತಿ ಕಂಡುಬಂದಿರುವ ಬಾಬುಗಳು ಯಾವವೆಂದರೆ—

ರೂ

[illegible] ೧೮೯೦ನೇ ಇಸವಿ ಜೂನ್ ೧ ರ್‍ಲೆ ಲಾಗಾಯಿತು ಆರಂಭಿಸಿ ಖರ್ಚು ಮಾಡಿದ [illegible] ಲಕ್ಷ ರೂಪಾಯಿ ಇದ್ದದ್ದನ್ನು [illegible] ಲಕ್ಷ ರೂ [illegible] ಏರಿಸಿದ್ದರಿಂದ ಜಾಸ್ತಿ.

[illegible] ಪೋಲೀಸ್ ಬಾಬಿನಲ್ಲಿ ಜಾಸ್ತಿ—ಈ [illegible] ೧೮೯೧ ನೇ ಇಸವಿ [illegible] ಗುರ್‍ಲೆ ಲಾಗಾಯಿತು ಆರವತ್ತು [illegible] ಜಾಸ್ತಿ [illegible] ಕೊಟ್ಟ [illegible] ವಾಗಿರುತ್ತೆ.

[illegible] ಅಬ್ಕಾರಿ ಬಾಬಿನಲ್ಲಿ—[illegible] ಜಾಸ್ತಿ [illegible] ಕೊಡಿಸಿದ್ದರಿಂದಲೂ, [illegible] ಹೊಸ [illegible] ಇದ್ದದ್ದರಿಂದಲೂ, ಜಾಸ್ತಿ.

[illegible] ಜ್ಯುಡಿಷಿಯಲ್ ಬಾಬಿನಲ್ಲಿ—[illegible] ೧೮೯೦—೯೧ ನೇ ಇಸವಿ [illegible] ತಿಂಗಳ ಖರ್ಚು [illegible] ೧೮೯೧—೯೨ನೇ ಇಸವಿ [illegible] ಖರ್ಚು [illegible] ಮಾಡಿದ್ದರಿಂದಲೂ ಜಾಸ್ತಿ.

[illegible] [illegible]—[illegible] ಪ್ರಯೋಜನವಾದ [illegible] ಕೊಡುವ [illegible] ಖರ್ಚನ್ನು [illegible] ಸರಕಾರದ [illegible] ಜಾಸ್ತಿ.

[illegible] [illegible]—[illegible] ಸರಕಾರದ [illegible] ಮಾಡಿದ್ದರಿಂದಲೂ, [illegible] ಮಾಡಿದ್ದರಿಂದಲೂ ಜಾಸ್ತಿ.

[illegible] [illegible] ಬಾಬಿನಲ್ಲಿ—[illegible] ೧೮೯೧ನೇ ಇಸವಿ ಜೂನ್ [illegible] ಲಾಗಾಯಿತು [illegible] ಸರಕಾರದ [illegible] ಜಾಸ್ತಿ.

[illegible] [illegible]—[illegible] ಜಾಸ್ತಿ.

[illegible] [illegible] ಜಾಸ್ತಿ [illegible]

[illegible] [illegible]

[illegible] [illegible] ಸ್ಪೆಷಲ್ ಆಫೀಸರವರ ಖರ್ಚು

[illegible] [illegible] ಮಾಡಿದ್ದು

[illegible] [illegible] ಹೊಸ [illegible] ಜಾಸ್ತಿ [illegible]

[illegible] ಒಟ್ಟು [illegible] ರೂಪಾಯಿಗಳು ಆಯಿತು.

ಇದಕ್ಕೆ ಬದಲಾಗಿ ಈ ಕೆಳಗೆ ನಮೂದಿಸುವ ಬಾಬುಗಳಲ್ಲಿ [illegible] ಕಮ್ಮಿ [illegible]—

[illegible] ಗ್ರಾಮಸಂಬಂಧದ [illegible] ಕಮ್ಮಿ—[illegible] ಕಮ್ಮಿಯೊಂದು [illegible], ಯಾವಕ್ಕೆಂದರೆ, [illegible] ಇರುತ್ತೆ.

[illegible] [illegible] ಕಮ್ಮಿ—೧೮೯೧—೯೨ನೇ ಇಸವಿಯಲ್ಲಿ [illegible] ರೂಪಾಯಿಗಳು [illegible] ಸಂವತ್ಸರದ [illegible] ೧೮೯೧—೯೨ನೇ ಇಸವಿಯಲ್ಲಿ ಈ ತರಹೇಖರ್ಚು ಇಲ್ಲದ್ದರಿಂದ ಈ ಬಾಬಿನಲ್ಲಿ ಕಮ್ಮಿ ಕಂಡುಬಂದಿದೆ.

[illegible] [illegible] ಫಂಡ್ ಯಾನೆ ವಾಪಸು [illegible] ಹಿಂದಣ ಸಂವತ್ಸರಗಳಲ್ಲಿ [illegible] ಹೊಸ [illegible] ೧೮೯೦—೯೧ನೇ ಇಸವಿಯ [illegible] ಲಕ್ಷ ರೂಪಾಯಿಗಳನ್ನು ಒಟ್ಟಾಗಿ ವಾಪಸು ಜಮೆ ಕೊಟ್ಟಿತು. ಈ ತರಹೇ [illegible] ವರ್ಷದಲ್ಲಿಯೂ [illegible].

ಮೇಲೆ ಕಂಡ ಕಮ್ಮಿ [illegible] ಒಟ್ಟು [illegible] ರೂಪಾಯಿ ಆಯಿತಾದ್ದರಿಂದ [illegible] ಸಂವತ್ಸರದ [illegible] ತಿಂಗಳ ಖರ್ಚು [illegible] ರೂಪಾಯಿ [illegible] ಜಾಸ್ತಿಯಾಗಿರುತ್ತೆ.

೧೮೯೨ನೇ ಇಸವಿ [illegible] ಲಾಗಾಯಿತು [illegible] ರೂಪಾಯಿಗಳು [illegible] ೧೨ ತಿಂಗಳ ಒಟ್ಟು [illegible] ರೂಪಾಯಿಗಳು ಆಯಿತು.

[illegible] ಹುಟ್ಟುವಳಿ ಮತ್ತು ಖರ್ಚಿನ ಕಮ್ಮಿ ಜಾಸ್ತಿ ತಖ್ತೆಯನ್ನು [illegible] ವಿವರಿಸಿದ್ದಾಯಿತು.

ಈಗ ೧೮೯೦—೯೧ನೇ ಮತ್ತು ೧೮೯೧—೯೨ನೇ ಇಸವಿಗಳ ಒಟ್ಟು [illegible] ಹುಟ್ಟುವಳಿ ಮತ್ತು ಖರ್ಚಿನ ತಪಸೀಲನ್ನು ತೋರಿಸುವ ಈ ಕೆಳಗೆ ಬರುವ ತಖ್ತೆಗಳಿಗೆ ನಿಮ್ಮ ಗಮನವನ್ನು ಕೊಡತಕ್ಕದ್ದಾಗಿರುತ್ತೆ.

* ಪ್ರಕಟಿಸಲ್ಪಡುವದಿಲ್ಲ.

(ಇದರ ಶೇಷ ಮುಂದಿನ ಪತ್ರಕ್ಕೆ)

ಪ್ರತಿ ಒಬ್ಬ ಪ್ರತಿವಾದಿಯು ವ್ಯಾಜ್ಯವನ್ನು ಕುರಿತು ಮುಂದಣ ದಿವಸಗಳ ಮುಂಚಿತವಾಗಿ ನೋಟೀಸ್ ಬೇಕೆಂದು ಅಪೇಕ್ಷಿಸಬಹುದು. ಸದರೀ ಸಮ್ಮನು ನಿಶ್ಚಯಿಸಲ್ಪಟ್ಟ ತಾರೀಖಿನಲ್ಲಿ ಪ್ರತಿವಾದಿಯು ಉತ್ತರ ಕೊಡುವದಕ್ಕೆ ಸಂದರ್ಭವಾಗುವಹಾಗೆ ತಕ್ಕ ಕಾಲದಲ್ಲಿ ಸಮ್ಮನು ಜಾರೀ ಆಗಲಿಲ್ಲವಾಗಿದ್ದರೆ ತನಿಖೆಯನ್ನು ಇನ್ನೊಂದು ದಿವಸಕ್ಕೆ ಮುಂದರಿಸಿ ಇಡತಕ್ಕದ್ದು, ಮತ್ತು ಅದನ್ನು ಕುರಿತು ಪ್ರತಿವಾದಿಗೆ ಬರಹಮೂಲಕ ನೋಟೀಸುಕೊಡತಕ್ಕದ್ದು.

ಪ್ರಾಸೆಸ್ ಜಾರಿಯು ಅಪೇಕ್ಷಿಸುವ ಕಕ್ಷಿಗಾರನ ಖರ್ಚಿನಮೇಲಾಗತಕ್ಕದ್ದು.

೧೬ ಈ ರೆಗ್ಯುಲೇಷನ್ನಮೇಲೆ ಗ್ರಾಮ ನೌಕರನಿಂದ ಅಲ್ಲದೆ ಇತರ ವಿಧದಲ್ಲಿ ಜಾರೀ ಆಗುವ ಪ್ರತಿ ಸಮ್ಮನು ಅದು ಯಾರ ಕಡೆಯಿಂದ ಕೇಳಲ್ಪಡುತ್ತದೋ ಆ ಕಕ್ಷಿಗಾರನ ಖರ್ಚಿನಿಂದ ಜಾರೀ ಮಾಡಿಸತಕ್ಕದ್ದು. ಮತ್ತು ಅಂಥಾ ಜಾರೀಬಗ್ಗೆ ವಸೂಲಾಗತಕ್ಕ ಫೀಸಿನ (ಭತ್ಯೆಯ) ಮೊಬಲಗು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ನಿಶ್ಚಯಿಸಲ್ಪಡತಕ್ಕದ್ದು. ಮತ್ತು ಗ್ರಾಮ ಮುನಸೀಫನು ಅದನ್ನು ಗವರ್ನಮೆಂಟಿನವರು ಆ ವಿಚಾರವನ್ನು ಕುರಿತು ನಿರ್ದೇಶಿಸಬಹುದಾದಂಥ ರೀತಿಯಲ್ಲಿ ವ ಕ್ರಮಗಳಿಗೆ ಒಳಪಟ್ಟು ವಸೂಲ್ಮಾಡತಕ್ಕದ್ದು.

(ಸಶೇಷ)

ADDRESS.

OF THE

DEWAN OF MYSORE

TO THE REPRESENTATIVE ASSEMBLY HELD AT MYSORE,

on Tuesday, the 4th October 1892

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೪ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಅನಾವೃಷ್ಟಿ ಸಂಭವಿಸಿದ್ದ ಪ್ರತಿ ಒಂದು ತಾಲ್ಲೂಕನ್ನೂ ಪ್ರತ್ಯೇಕ ಪ್ರತ್ಯೇಕ ಸರ್ಕಲುಗಳಾಗಿ ವಿಂಗಡಿಸಿ ಜನಗಳು ವಾಸವಾಗಿರುವ ಪ್ರತಿ ಒಂದು ಗ್ರಾಮದವರಿಗೂ, ೬-೮ ಮೈಲಿ ಫಾಸಲೆಯಲ್ಲಿಯೇ ಸರಿಯಾದ ಕೂಲಿ ಸಿಕ್ಕುವಂತೆ ತಕ್ಕ ಪ್ರದೇಶಗಳಲ್ಲಿ ಉಚಿತವಾದ ಕಾಮಗಾರಿಗಳನ್ನು ಆರಿಸಿದ್ದಾಯಿತು. ಆರಿಸಿದ ಕಾಮಗಾರಿಗಳು ಹುಟ್ಟುವಳಿ ಬರತಕ್ಕ ಅಥವಾ ಇಲ್ಲದಿರತಕ್ಕ ಚಿಕ್ಕ ಚಿಕ್ಕ ಕೆರೆಗಳಾಗಿದ್ದವು. ಈ ಕೆರೆಗಳ ಕಾಮಗಾರಿಯು, ಸಮುದಾಯತ್ವೇನ ಗ್ರಾಮಸ್ಥರಿಗೆ ಬಹಳ ಮುಖ್ಯವಾದ್ದರ ಪ್ರಯುಕ್ತ, ಅದಕ್ಕಾಗಿ ವ್ಯಯ ಮಾಡಿದ ದ್ರವ್ಯವು ಸರಿಯಾಗಿ ವಿನಿಯೋಗವಾಗಿ, ಆದರಿಂದ ಖರ್ಚಾದ ಹಣಕ್ಕೆ ತಕ್ಕ ಕೆಲಸವು ನಡೆಯುವದೆಂಬದಕ್ಕೆ ಯಾವ ಸಂದೇಹವೂ ಇರಲಿಲ್ಲ. ರಿಲೀಫ್ ಕಾಮಗಾರಿಗೋಸ್ಕರ ಚಿಕ್ಕ ಕೆರೆಗಳು ದೊರಕದ ಹೋದ ಸ್ಥಳಗಳಲ್ಲಿ [illegible]. ಮೊದಲಾರಂಭಿಸಿದ ಕೆರೆಗಳ ಕಾಮಗಾರಿ ಪೂರೈಸಿದ ನಂತರ ಗ್ರಾಮಗಳ ಸಮೀಪದಲ್ಲಿ ಕಾಮಗಾರಿ ನಡೆಯುತ್ತಿರುವಹಾಗೆ ಮಾಡುವಬಗ್ಗೆ, ಅನ್ನು ಕೆಲವು ಕಾಮಗಾರಿಗಳನ್ನು ಆರಿಸಿ ಒಂದುಪಟ್ಟಿಯನ್ನು ತಯಾರುಮಾಡಿತು. ಅವುಗಳು ಅಂದರೆ ಗ್ರಾಮ ಸ್ಕೀಮ್ ಮಾಡೋಣ, ಗ್ರಾಮಗಳಲ್ಲಿಯೂ ಮತ್ತು ದೊಡ್ಡ ದೊಡ್ಡ ಕೆರೆಗಳ ನೀರು ನಿಲ್ಲುವ ಪ್ರದೇಶದ ಅರುಗಿನ ಸುತ್ತಲೂ ತೋಪುಗಳನ್ನು ಹಾಕೋಣ, ಇವೇ ಮೊದಲಾದ ಈ ಕಾಮಗಾರಿಗಳೂ ಕೂಡ ಮುಖ್ಯವಾಗಿ ಸ್ಥಳೋಪಯೋಗವುಳ್ಳವುಗಳಾಗಿದ್ದವು.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದೂರವರ ಸರ್ಕಾರದವರು ಕ್ಷಾಮ ನಿವಾರಣೆಗೋಸ್ಕರ ಮುಖ್ಯವಾಗ ಉದ್ದೇಶಿಸಿದ ವಿಧಾನವು, ಸಂಕ್ಷೇಪವಾಗಿ ಮೇಲ್ಕಂಡ ಸ್ವಭಾವ ಉಳ್ಳದ್ದಾಗಿತ್ತು. ಈ ವಿಧಾನದಂತೆ ಜಾರಿ ಮಾಡುವ ಕೆಲಸವನ್ನು ವಂಶ ಪಾರಂಪರ್ಯವಾಗಿರುವ ಗ್ರಾಮದ ಪಟೇಲನಿಗೆ ವಹಿಸಿತ್ತು. ಈ ಕೆಲಸಕ್ಕೆ ಸಂಬಳ ನೌಕರರ್ವಾಡಿ ಜೊತೆಗಿನ [illegible] ಗ್ರಾಮಾಧಿಕಾರಿಯನ್ನು ನೇಮಿಸುವದೇ ಉತ್ತಮವೆಂದೆಣಿಸಿ ಕಾಲಕಾಲಕ್ಕೆ ಸೇರಿದರು ಮತ್ತು ಆಗಾಗ ಹೋಗಿ ಮೇಲು ತನಿಖೆ ಮಾಡುವವರ ಮೂಲಕ ಸಾಮಾನ್ಯವಾದ ಪರೋಕ್ಷವನ್ನಿಟ್ಟುಕೊಂಡಿರುವಂತೆ ಕ್ರಮಪಡಿಸಿ ಸ್ಥಳ ವಿವ್ಯತನಕ್ಕನುಸಾರವಾಗಿ ಕೆಲಸ ಜರಗಿಸುವ ತಪ್ಸೀಲುಗಳ ವಿಷಯದಲ್ಲಿ ಡೆಪ್ಯುಟಿ ಕಮಿಷನರ್ ಖಾಸಾವಾಗಿ ತಮ್ಮ ಯುಕ್ತಾನುಸಾರ ನಡೆಸುವಂತೆ ಸ್ವತಂತ್ರ ಕೊಟ್ಟಿತ್ತು. ಮೇಲಿನಿಂದ ಹಿಡಿದು ಡೆಪ್ಯುಟಿ ಕಮಿಷನರವರಿಗೆ ಕೆಲಸ ನಡಿಸತಕ್ಕವರುಗಳೆಲ್ಲರು ತಮ್ಮಗಳಿಗೆ ವಹಿಸಿದ್ದ ಕೆಲಸದ ಭಾರವನ್ನು ಅರ್ಹರೆಂದು ಕಾರ್ಯತಃ ತೋರಿಸಿಕೊಂಡದ್ದಲ್ಲದೆ ಉದ್ದೇಶಿಸಿದ್ದ ಕ್ಷಾಮ ನಿವಾರಣೆ ವಿಧಾನವು ಸಂಪೂರ್ಣವಾಗಿಯೂ ಸಫಲವಾಗುವಂತೆ ಚಿಂತಿಸಿದವು ಸಂದೇಹವಿಲ್ಲ.

ಕಾಲುವೆಯ ನೀರಿನ ಭೂಮಿಗಳು ಕ್ರಮವಾದ ರಿಲೀಫ್ ಕಾಮಗಾರಿಗಳಲ್ಲವೆ, ಆ ಕಾಮಗಾರಿಗಳು ಯಾವ ಉದ್ದೇಶಕ್ಕಾಗಿ ನಡೆಸಲ್ಪಡುತ್ತಿದ್ದವೋ, ಅದೇ ಉದ್ದೇಶಕ್ಕಾಗಿ ಮತ್ತು ಅವುಗಳು ಯಾವಾಗ ನಡೆಸಲ್ಪಡುತ್ತಿದ್ದವೋ ಅವರುಗಳ ಮಿಹನತಿನೊಂದಿಗೆ ಒಳಪಟ್ಟು ಕುಡಿಯುವ ನೀರಿನ ಭೂಮಿಗಳ ಕಾಮಗಾರಿಗಾಗಿ (ಮುಖ್ಯವಾಗಿ ಲೋಕಲ್ ಫಂಡಿನಿಂದ) ೧೪೯,೦೦೦ ರೂಪಾಯಿ ಕೊಟ್ಟಿತ್ತು. ಒಟ್ಟು ೧೩೦ ಭಾವಿಗಳ ಕೆಲಸ ನಡೆದು ಆ ಪೈಕಿ ವಿಶೇಷವಾಗಿ, ಕೇವಲ ಅವಶ್ಯವಾಗಿದ್ದ ಕಡೆಗಳಲ್ಲಿ ತೋಡಿಸಿದ ಹೊಸ ಭಾವಿಗಳಾಗಿಯೂ, ಉಳಿದವುಗಳು ಹಳೇ ಭಾವಿಗಳಾಗಿಯೂ ಇದ್ದವು. ಇವುಗಳಲ್ಲಿ ಶಾಶ್ವತವಾಗಿ ಉಪಯೋಗವಾಗತಕ್ಕ ಕಾಮಗಾರಿಗಳಾಗಿದ್ದವಲ್ಲದೆ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ದುರ್ಭಿಕ್ಷವಿದ್ದದ್ದರಿಂದ ಆ ಕ್ಷಣದಲ್ಲಿ ವಿಶೇಷ ಉಪಯೋಗಕರವಾಗಿಯೂ ಇದ್ದವು.

ಭವಿಷ್ಯಗಳನ್ನು ಶಾಶ್ವತವಾಗಿ ಅಭಿವೃದ್ಧಿ ಪಡಿಸುವುದಕ್ಕೆ [illegible] ಜಮೀನುದಾರರುಗಳು ತಮ್ಮ ಜಮೀನುಗಳಮೇಲೆ ಶಾಶ್ವತವಾದ ಅಭಿವೃದ್ಧಿ ಕೆಲಸಗಳನ್ನು ಮಾಡಿಸುವದಕ್ಕಾಗಿ, ಸರ್ಕಾರದಿಂದ ಸಾಲಗಳನ್ನು ಕೊಡುವದರ ಮೂಲಕ ಸರ್ಕಾರ್ ಮಾಡುತ್ತಾ ನಡೆಯುತ್ತ ರಿಲೀಫ್ ಕಾಮಗಾರಿಗಳ ಜೊತೆಗೆ ಖಾಸಗೀ ಕಾಮಗಾರಿಗಳು ಬಹಳವಾಗಿ ನಡೆದು ಕೆಲಸ ಮಾಡತಕ್ಕ ಜನರಿಗೆ ಉಪಯೋಗವಾಯಿತು.

ನೀರಾವರಿ ಭಾವಿಗಳು—ಈ ತರಹೇದ ಕಾಮಗಾರಿಗಳ ಪೈಕಿ ಹೋದ ವರುಷದ ಉಪನ್ಯಾಸದಲ್ಲಿ ಸೂಚಿಸಿದ ನೀರಾವರಿ ಭಾವಿಗಳು ಬಹಳ ಮುಖ್ಯವುಗಳಾಗಿದ್ದವು. ಕೋಲಾರ, ತುಮಕೂರು, ಚಿತ್ರದುರ್ಗ, ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಲ್ಲಿ ಈ ಯೋಜನೆಯನ್ನು ಜಾರಿಗೆ ತರತಕ್ಕ ಕೆಲಸವನ್ನು ಡೆಪ್ಯುಟಿ ಕಮಿಷನರ್‌ಗಳ ತಾಬೆಯಲ್ಲಿ ನಡೆಸಲು ಸ್ಪೆಷಲ್ ಆಫೀಸರಿಗೆ ವಹಿಸಿತ್ತು. ಈ ತರದ ಹೊಸ ಯೋಜನೆಯ ವಿಷಯದಲ್ಲಿ ಮೊದಲಿನಲ್ಲಿ ಆಸಾಂಖಿಕ ಯುಕ್ತವಾಗಿದ್ದ ರೈತರು ಕೂಡಲೇ ಸಾಲಗಳನ್ನು ಪಡೆಯಲು ಆಸಕ್ತರಾದರು. ಸಾಲದಬಗ್ಗೆ ನಾನಾ ಕಡೆಗಳಿಂದ ದರಖಾಸ್ತುಗಳು ಹೆಚ್ಚಾಗಿ ಬರುವದಕ್ಕೆ ಪ್ರಾರಂಭವಾಯಿತಾದ್ದರಿಂದ ಯಾವ ಪ್ರಾಂತ್ಯದಲ್ಲಿ ಕೂಲಿ ಮಾಡತಕ್ಕ ಜನರಿಗೆ ಕಾಮಗಾರಿಗಳನ್ನು ಒದಗಿಸಬೇಕಾದ್ದು ಅವಶ್ಯವಾಗಿತ್ತೋ ಅಂಥಾ ಕಡೆಗಳಲ್ಲಿ ಮಾತ್ರಗೆ ಭಾವಿಗಳಿಗೋಸ್ಕರ ಸಾಲಗಳನ್ನು ಕೊಡಬೇಕಾಗಿ ಬಂತು. [illegible] ಎಕರೆ ವಿಸ್ತೀರ್ಣಕ್ಕೆ ನೀರನ್ನು ಸರಬರಾಯಿ ಒದಗುವ [illegible] ಹೊಸ ಭಾವಿಗಳಿಗೂ [illegible] ಹಳೇ ಭಾವಿಗಳಿಗೂ ಒಟ್ಟು [illegible] ರೂಪಾಯಿ ಸಾಲ ಕೊಡುವದನ್ನು ಮಂಜೂರ್ಮಾಡಿರುತ್ತೆ.

ಸಾಗುವಳಿ ಕಟ್ಟೆಗಳಿಗೋಸ್ಕರ ಸಾಲಗಳು—ಸಾಗುವಳಿ ಕಟ್ಟೆಗಳನ್ನು ಹೊಸದಾಗಿ ಕಟ್ಟುವದು, ಮತ್ತು ಹಳೇ ಕಟ್ಟೆಗಳನ್ನು ದುರಸ್ತು ಮಾಡುವದು ಈ ತರಹೇದ ಕಾಮಗಾರಿಗಳೂ ಕೂಡ ಬಹಳ ಮುಖ್ಯವಾದವು. ಈ ಕಟ್ಟೆಗಳನ್ನು ಕಟ್ಟಿ ಅಭಿವೃದ್ಧಿ ಮಾಡುವದಕ್ಕೆ ೧೮೯೧ನೇ ಇಸವಿಯಲ್ಲಿ ಹುಟ್ಟಿದ್ದ ಒಂದು ದುಃಖದಿಂದಮುಂಟಾಗಿದ್ದ ನಿರ್ಬಂಧವು ಜನಗಳಿಗೆ ಬಹಳ ಕುಂದಕವಾಗಿತ್ತು. ಈ ಕಟ್ಟೆಗಳ ಕೆಳಗೆ ಇರತಕ್ಕ ಜಮೀನು ಇದ್ದವುಗಳೆಲ್ಲ ಬಿಟ್ಟು ಸಾಗುವಳಿಗೆ ವಿಶೇಷ ಉಪಯೋಗವಾದ್ದರಿಂದ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ ಮೇಲ್ಕಂಡ ನಿರ್ಬಂಧವು ಬಹಳ ಕಷ್ಟಕ್ಕೆ ಕಾರಣವಾಗಿತ್ತಾದ್ದರಿಂದ ಆ ಹುಕುಮನ್ನು ವಾಪಸ್ ತೆಗೆದುಕೊಂಡು, ಸರ್ಕಾರದಿಂದ ಹಣವನ್ನು ಸಾಲ ಕೊಡುವದರ ಮೂಲಕ ಕೇವಲ ಉಪಯುಕ್ತವಾದ ಈ ಖಾಸಗಿ ಕಟ್ಟೆಗಳನ್ನು ಕಟ್ಟಿ ಅಭಿವೃದ್ಧಿ ಪಡಿಸುವದಕ್ಕಾಗಿ ವಿಶೇಷ ಪ್ರೋತ್ಸಾಹವನ್ನುಂಟುಮಾಡಿದ್ದಾಯಿತು. ಹೋದ ಆಯಾಮಿನಲ್ಲಿ [illegible] ಎಕರೆ ಜಮೀನಿಗೆ ಉಪಯೋಗವಾಗುವಂಥಾ [illegible] ಇಂಥ ಕಟ್ಟೆಗಳಿಗಾಗಿ [illegible] ರೂಪಾಯಿಗಳ ವರೆಗೂ ಸಾಲ ಕೊಡುವದನ್ನು ಮಂಜೂರ್ ಮಾಡಿರುತ್ತೆ. ಇನಾಂದಾರರು ತಮ್ಮ ಕೆರೆಗಳನ್ನು ದುರಸ್ತು ಮಾಡಿಕೊಳ್ಳುವದಕ್ಕೋಸ್ಕರವಾಗಿಯೂ ಕೆಲವು ಸಂದರ್ಭಗಳಲ್ಲಿ ಸಾಲ ಕೊಟ್ಟಿತು.

ಅನಾವೃಷ್ಟಿ ಹೊಂದಿದ್ದ ಪ್ರದೇಶಗಳಲ್ಲಿ ಮೇಲೆ ಹೇಳಿದ ಸರಕಾರಿ ಮತ್ತು ಖಾಸಗಿ ಕಾಮಗಾರಿಗಳ ಪೈಕಿ ಸುಮಾರು [illegible] ಕಾಮಗಾರಿಗಳ ಮೇಲೆ ಕೆಲಸ ನಡೆಯುತ್ತಿತ್ತು. ಇವರ ಪೈಕಿಯಿಂದ ಜನಗಳು ತಮ್ಮ ತಮ್ಮ ಮನೆಗಳ ಸಮೀಪದಲ್ಲಿಯೇ ಕೆಲಸ ಮಾಡಿಕೊಂಡಿದ್ದರು ಮತ್ತು ಕಳೆದ ಆಯಾಮಿನಲ್ಲಿ ಇವುಗಳ ಪೈಕಿ ಸುಮಾರು [illegible] ಕಾಮಗಾರಿಗಳವರೆಗೂ ಪೂರೈಸಲಿಕ್ಕಾಗಲಿಲ್ಲವೆಂಬ ಅಂಶವೇ ಈ ತರಹೇದ ಕಾಮಗಾರಿಗಳು ಜನಗಳ ಸಮಾಯಕ್ಕೆ ಸಾಕಾದ್ದೆಂಬುವದಕ್ಕೆ ದೃಷ್ಟಾಂತವಾಗಿದೆ. ಕ್ರಮದ ಮರಮತ್ತು ಇಲಾಖಾ ಮಾರ್ಗದ ಅಲ್ಲಲ್ಲಿ ನಡೆಯುವ ಭಾರಿ ಕಾಮಗಾರಿಗಳಿಗಿಂತಲೂ ಈ ಸಣ್ಣ ಕಾಮಗಾರಿಗಳೇ ಬಹಳ ಉಪಯೋಗವಾದವುಗಳಾಗಿರುತ್ತವೆ.

ದೂರದ ಫಾಸಲೆಯಲ್ಲಿ ನಡೆಯುವ ಭಾರಿ ಕಾಮಗಾರಿಗಳು—ದೂರದ ಫಾಸಲೆಯಲ್ಲಿ ನಡೆಯುತಕ್ಕ ಭಾರಿ ಕಾಮಗಾರಿ ಕೆಲಸಕ್ಕೆ ಯಾವ್ಯಾವ ಕಡೆಯಿಂದಲೂ ಜನರು ಒಂದು ಗುಂಪು ಸೇರುವದನ್ನು ತಪ್ಪಿಸಬೇಕೆಂಬುದೇ ಮುಖ್ಯವಾಗಿ ಯೋಚನೆಯುಳ್ಳದ್ದು. ಯಾತಕ್ಕೆಂದರೆ, ಕ್ಷಾಮ ಬಂದಂಥ ತರುಣದಲ್ಲಿ ಜನಗಳು ತಮ್ಮ ಮನೆಗಳನ್ನು ಬಿಟ್ಟು ದೂರ ಫಾಸಲೆಯಲ್ಲಿ ನಡೆಯುವ ಕಾಮಗಾರಿಗಳನ್ನು ಹುಡುಕಿಕೊಂಡು ಹೋಗುವಂತೆ ಮಾಡುವದು ಯಾವಾಗಲೂ ಆಗುವದಿಲ್ಲ. ಅವರ ಕೆಲಸದ ಜರೂರ್ ಅವರಿಗೆ ಇಲ್ಲದ ಪ್ರಯುಕ್ತ ಅವರ ಅಸಹ್ಯವಾಗುತ್ತೆಂದು ಎಣಿಸತಕ್ಕದ್ದಲ್ಲವು. ತಮ್ಮಗಳನ್ನು ಅವಲಂಬಿಸಿರುವ ಪತ್ನೀ ಪುತ್ರ ಮೊದಲಾದವರಲ್ಲಿ ನಿರೂಢವಾದ ಬಂಧನವನ್ನು ಛೇದಿಸುವದಕ್ಕೆ ಸಾಧ್ಯವಿಲ್ಲದೆ ಮನೆಯಲ್ಲಿಯೇ ನಿಲ್ಲುತ್ತಾರೆಂಬ ಆಶಯ ಹೋದ ಕ್ಷಾಮದಲ್ಲಿ ಅನುಭವಕ್ಕೆ ಬಂದಿತು. ತಮ್ಮ ದನ ಕರುಗಳೆಲ್ಲವು ಹೋಗಿ ಮನೆಯಲ್ಲಿ ದುರ್ಬಲರಾಗಿದ್ದವರು ವ್ಯಾಕುಲಪಟ್ಟು ಅವರುಗಳ ಕ್ಲೇಶವಾದ ಸ್ಥಿತಿಗೆ ಬರುವವರಿಗೂ, ಜನಗಳು ತಮ್ಮ ಮನೆಗಳನ್ನು ಬಿಟ್ಟು ಜೀವನೋಪಾಯವನ್ನು ಸಂಪಾದಿಸಿಕೊಳ್ಳುವದಕ್ಕಾಗಿ ಬೇರೇ ಕಡೆಗೆ ಹೋಗುವದಿಲ್ಲ. ಕ್ರಮೇಣ ಹಾಗೆ ಹೊರಡಬೇಕಾದ ಸಂಭವ ಬಿದ್ದಾಗ ಅವರುಗಳ ಬುದ್ಧಿ ಕೆಟ್ಟುಹೋಗಿ, ಉದ್ದೇಶವಿಲ್ಲದೆ ಸಿಕ್ಕಿದ ಕಡೆ ಸುಮ್ಮನೆ ಅಲೆಯುತ್ತಿರುವ ಪ್ರಯೋಜನ ಹೆಚ್ಚಾಗಿಯೂ, ಅಪರಿಚಿತ ದೂರದ ಮಾರ್ಗಾಂತರ ದೂರದ ಫಾಸಲೆಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಬಳಿಗೆ ಹೋಗಿ ಅಲ್ಲಿ ನೆಲೆಯಾಗಿ ನಿಲ್ಲುವದಿಲ್ಲವೆಂಬುವದು ಚೆನ್ನಾಗಿ ಗೊತ್ತಾಗಿದೆ. ಆದಾಗ್ಯೂ, ವಿಶೇಷ ದೀರ್ಘಕಾಲ ಮುಂದುವರಿದ ಕ್ಷಾಮ ಪ್ರಾಪ್ತವಾಗುವ ಸಂದರ್ಭವು ಬಂದುವೇಳೆ ಬಿದ್ದ ಪಕ್ಷದಲ್ಲಿ, ಮರಮತ್ತು ಇಲಾಖೆ ಮುಖಾಂತರ ನಡೆಯತಕ್ಕ ಕಾಮಗಾರಿಗಳ ಒಂದು ಪಟ್ಟಿಯನ್ನೂ ಕೂಡ ತಯಾರ್ಮಾಡಿಸಿತ್ತು. ಆದರೆ ಸಾಧಾರಣವಾದ ಮರಮತ್ತು ಇಲಾಖೆ ಕಾಮಗಾರಿಗಳನ್ನು ಬಡಾಯಿಸುವದಕ್ಕಿಂತ ಹೆಚ್ಚಾಗಿ ಈ ಭಾಗದಲ್ಲಿ ಪ್ರವರ್ತಿಸಬೇಕಾದ ಅವಶ್ಯಕತೆಯು ದೈವಾನುಗ್ರಹದಿಂದ ಸಂಭವಿಸಲಿಲ್ಲವು.

Bangalore — Printed and published at the Karnataka Press, No 40, Hospital Pettah — 1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol XIX] BANGALORE —MONDAY, NOVEMBER 14, 1892. [No 45.

ಸಂಪುಟ ೧೯.] ಬೆಂಗಳೂರು — ಸನ್ ೧೮೯೨ ನೇ ಇಸವಿ ನವಂಬರ್ ೧೪ ನೇ ತಾರೀಖ್ ಸೋಮವಾರ. [ಸಂಖ್ಯೆ ೪೫.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಕ್ಕೆ	ಸ್ಥಳದವರಿಗೆ	ಪರಸ್ಥಳದವರಿಗೆ
		[illegible]
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—9—6

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	1—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಯಮಾಡಿ [illegible]

ಪ್ರಕಟನೆಯ ರಿವಾಜ್.

ದೊಡ್ಡ [illegible] ೦—೨—೦

ಎರಡನೆಯ [illegible] ೦—೧—೦

[illegible]

ADVERTISEMENTS

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವನ್ನು [illegible] ಕೊಡಲ್ಪಡಲಾರವು.

ಇದರ ಕ್ರಯ—[illegible] ಮತ್ತು [illegible]

ಪ್ರತಿ ಒಂದಕ್ಕೆ ರೂ 5—0—0

ಟಿ. ಬಿ [illegible]

ಬೆಂಗಳೂರ್, [illegible]

ನೋಟೀಸು.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು [illegible] ಇಂಗ್ಲಿಷ್ ಕನ್ನಡ [illegible]

ನೋಟೀಸ್.

ಸರ್ಟಿಫಿಕೇಟ್ ಕೊಡಲ್ಪಟ್ಟ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪನಿ.

ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ಸಾಧ್ಯ ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, [illegible] ಮುಂತಾದ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ [illegible] ಕಳುಹಿಸದ ಹೊರ್ತು ಜವಾಬ್ ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಕರ್ಕರೆ,

ಮತ್ತು ಕಂಪನಿ, ಕಮಿಷನ್ ಏಜಂಟ್ಸ್,

[illegible] ಮುಂಬೈ

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ವೆಂಬಳ [illegible] ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ರೂ	ಆ	ಪೈ
[illegible]	೪	೦	೦

ಕನ್ನಡ ಗ್ರಂಥಗಳು.

	ರೂ	ಆ	ಪೈ
[illegible]	೩	೮	೬
[illegible]	೧	೨	೦
[illegible]	೧	೪	೦
[illegible]	೦	೩	೦
[illegible]	೦	೬	೦
[illegible]	೦	೨	೦
[illegible]	೦	೨	೦
[illegible]	೦	೨	೬
[illegible]	೦	೧	೦
[illegible]	೦	೧	೦
[illegible]	೦	೧	೦
[illegible]	೦	೧೨	೦
[illegible]	೦	೧೨	೦
,, [illegible]	೦	೧	೦
,, [illegible]	೦	೪	೦
,, [illegible]	೦	[illegible]	೦
,, [illegible]	೦	[illegible]	೦
,, [illegible]	೦	೧	೦
,, [illegible] (ಸುಭಾಷಿತ)	೦	೮	೦
[illegible]	೦	೭	೦
[illegible]	೦	೨	೦
[illegible]	೦	೨	೦
[illegible]	೦	೨	೦
[illegible]	೦	೦	೦

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜಯನ್ನರಾಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ [illegible] ಗುಂಡೋಪಂತರವರ ಮನೆಯ ಪಕ್ಕದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆಮಾಡುವದಕ್ಕೆ ಒಂದು ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸವರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೮ ಘಂಟೆಯ ಮೊದಲು ೧೦ ಘಂಟೆಯ ವರಿವಿಗೂ ಆಸ್ಥಳದಲ್ಲಿದ್ದು ವಿಶಿಷ್ಟ ರೋಗಿಗಳಿಗೂ, ಮುಖ್ಯವಾಗಿ ಕಣ್ಣಿಗೆ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು.

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೮ ರೂಪಾಯಿಗಳ ರುಸುಂ ಕೊಡಬೇಕು.

C. G. R. NAYLOR,
M. R. C. S., ENGLAND,
Surgeon.

ಸದರ್ನ್ ಮರಾಟಾ ರೈಲ್ವೇ ಕಂಪನಿ
(ಲಿಮಿಟೆಡ್)
ನೋಟಿಸ್.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ —

ಸನ್ ೧೮೯೩ನೇ ಇಸವಿಯಲ್ಲಿ ಆವಶ್ಯಕವಾಗಿರುವ ೪೦,೦೦೦ ತೇಗದ ಸ್ಲೀಪರ್‌ಗಳ ಸರಬರಾಯಿ ಬಗ್ಗೆ, ೧೮೯೨ನೇ ಇಸವಿ ನವಂಬರ್ ೩೦ನೇ ತಾರೀಖ್‌ವರಿವಿಗೆ ದರಖಾಸ್ತುಗಳು ಏಜಂಟರಿಂದ ಅಂಗೀಕರಿಸಲ್ಪಡುವವು. ಮೇಲ್ಕಂಡ ಸಂಖ್ಯೆಯಲ್ಲಿ ಸ್ಲೀಪರ್‌ಗಳ ಬ್ಯಾಚಿ ಅರವಾಸಿಗೆ ಕಡಮೆ ಇಲ್ಲದಂತೆ ಆ ಸಾಲಿನ ಮೊದಲು ಆರು ತಿಂಗಳ ಕಾಲದೊಳಗೆ ಪಾವತೀ ಮಾಡತಕ್ಕದ್ದು.

ದರಖಾಸ್ತು ದಾರರ ಮೆತ್ತ್ಯಾಚ್ ಮತ್ತು ಆವಶ್ಯಕವಾದ ಖಾನೆ [illegible] ಚೀಫ್ ಇಂಜನಿಯರ್ ಮೂಲಕವಾಗಲಿ ಅಥವಾ ಬೆಂಗಳೂರಲ್ಲಿರುವ [illegible] ಇಂಜನಿಯರ್ ಮೂಲಕವಾಗಲಿ ಪಡೆಯಬಹುದು.

“ತೇಗದ ಸ್ಲೀಪರುಗಳ ಬಗ್ಗೆ ದರಖಾಸ್ತುಗಳು” ಎಂಬದಾಗಿ ದರಖಾಸ್ತು ಪತಿಭಾಷೆಯಮೇಲೆ ಬರೆದು, ಅದನ್ನು ಮೊಹರ್ ಮಾಡಿ, ಧಾರ್ವಾಡಿನಲ್ಲಿರತಕ್ಕ ಸದರ್ನ್ ಮರಾಟಾ ರೈಲ್ವೇ ಕಂಪನಿಯ ಏಜಂಟರ ವಿಳಾಸಕ್ಕೆ ರವಾನಿಸತಕ್ಕದ್ದು.

ಕಂ ದರಖಾಸ್ತನ್ನಾಗಲಿ, ಯಾ ಯಾವ ದರಖಾಸ್ತನ್ನೇಯಾಗಲಿ ಅಂಗೀಕರಿಸಲಿಕ್ಕೆ ಏಜಂಟರವರು ಬದ್ಧರಾಗಿರಲಾರರು.

ಧಾರ್ವಾಡ್ } J. CAMPBELL
[illegible] } *Agent.*
೧೮೯೨ನೇ [illegible] } S. M. RAILWAY.

ನೋಟಿಸ್.

ಕೊಡಗುದೇಶದ ಗಂಧದ ಹರಾಜ್.

ಸನ್ ೧೮೯೨ನೇ ಇಸವಿ ಡಿಸಂಬರ್ ತಾರೀಖ್ [illegible]

ಮು ೧೮೦ ರ್ಪ ಗಂಧ ಹರಾಜ್ ಮಾಡಲ್ಪಡುತದೆ.

ಷರತ್ —ಸರ್ನ ೧೮೮೫ನೇ ಇಸವಿ ಜನವರೀ ತಾರೀಖ್ ೩ ರ ನಂಬರ್ ೧ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಪ್ರಕಟಿಸ್ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ಸಾಹೇಬರವರ ಸರ್ನ ೧೮೮೧ ನೇ ಇಸವಿ ಫೆಬ್ರವರಿ ತಾರೀಖ್ ೧೫ ನಂಬರ್ ೫೭ ರ ನೋಟಿಫಿಕೇಷನ್ ಮೇರೆಗೆ, ಆಖರಿ ಬೋಲಿ ಕೂಗಿದ ಐದನೇ ಒಂದು ಭಾಗದಷ್ಟು ಹಣವನ್ನು ಹರಾಜ್ ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು ೧೮೯೩ ನೇ ಇಸವಿ ಮಾರ್ಚಿ ತಾರೀಖ್ ೧೫ ರ ಒಳಗೆ ಸಾಕಲ್ಯವಾಗಿ ಪಾವತೀ ಮಾಡತಕ್ಕದ್ದು.

೧ನೇ ನವಂಬರ್ ೧೮೯೨ನೇ ಇಸವಿ } G. H. FOSTER, Dy. Conservator of Forests, Coorg.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, NOVEMBER 14 1892

೧೮೯೨ನೇ ಇಸವಿ ನವೆಂಬರ್ ತಾ|| ೧೪ ನೇ ಸೋಮವಾರ

THE VICEROY'S VISIT TO MYSORE.

ಈ ಇಂಡ್ಯಾದೇಶದಲ್ಲಿ ಶ್ರೀಮತ್ ಮಹಾರಾಜ್ಞೀ ವಿಕ್ಟೋರಿಯಾಯವರಿಗೆ ಪ್ರತಿನಿಧಿಯಾಗಿಯೂ, ಅನುದಿನವೂ ಘನ ಮಹಿಮಾಸ್ಪದರಾಗಿಯೂ, ಅನವರತ ನಿಜಪರಿಪಾಲ್ಯ ಪ್ರಾರ್ಥನಾಪ್ರಸನ್ನರಾಗಿಯೂ ಇರುವ ಲಾರ್ಡ್ ಲ್ಯಾನ್ಸ್‌ಡೌನ್ ಪ್ರಭುವರರು ಪರಿಜನಪರಿವಾರಸಮೇತರಾಗಿ ಈ ಗುರುವಾರದ ದಿನ ಬೆಳಿಗ್ಗೆ ಈ ಊರು ಮಾರ್ಗವಾಗಿ ರಾಜಧಾನಿಯಾದ ಮೈಸೂರಿಗೆ ದಯಮಾಡಿದರು. ಇಲ್ಲಿ ಅವರ ಆಗಮನ ನಿರ್ಗಮನಗಳು ಕೇವಲ ಸಾಮಾನ್ಯವಾದುವಾಗಿದ್ದು, ವಿಶೇಷ ಸಮಾರಂಭಾಲಂಕಾರಾದಿಗಳಿಗೆ ಅವಕಾಶವಿರಲಿಲ್ಲ. ರಾಜಧಾನಿಯಲ್ಲಿ ವೈಸ್‌ರಾಯಿಯವರ ಆಗಮನ ಪ್ರಯುಕ್ತಗಳಾದ ಉತ್ಸವ ವಿಶೇಷಗಳು ಅತ್ಯಂತ ವಿಭವದೊಡನೆ ಆದುವೆಂದು ತಿಳಿಯುವದಕ್ಕೆ ನಾವು ಬಹಳ ಸಂತೋಷಿಸುತ್ತೇವೆ. ನಮ್ಮ ಸ್ನೇಹಿತರೊಬ್ಬರಿಂದ ತಿಳಿಸಲ್ಪಟ್ಟ ಸವರೀ ಉತ್ಸವದ ವಿವರಣವನ್ನಿದರಡಿ [illegible]ವಾಗಿ ಅಡಗಿಸಿ ಪತ್ರಿಕೆಯ ವಾಚಕರಿಗೆ ಹೃದಯೋಲ್ಲಾಸಕರವಾಗಿರುವದೆಂದು ನಂಬುವೆವು.

ಶ್ರೀಮದಖಂಡಿತ ಮಂಗಳ ಸರ್ವಾವಾಸ ಮಹಿತವಾದ ಮಹೀಶೂರ ರಾಜಧಾನಿಯು, ಸರ್ವಮಂಗಳಾಲಯವಂತೆ ತೋರಣ ಧ್ವಜ ಪತಾಕಾ ಚಿತ್ರ ವಿತಾನಾದ್ಯನೇಕ ಮಂಗಳಸಾಮಗ್ರಿಗಳಿಂದ ಮನೋಜ್ಞವಾಗಿ ವೈಸ್‌ರಾಯ್‌ಯವರಿಗಾನಂದದಾಯಕವಾಗುವಂತೆ ಅಲಂಕರಿಸಿ ಆಯತ್ತಗೊಳಿಸಲ್ಪಟ್ಟಿತು. ಈ ಮಾಹೆ ನವಂಬರ್ ೧೦ನೇ ತಾರೀಖು ಗುರುವಾರದ ದಿನ ಸಾಯಂಕಾಲ ೪ ಘಂಟೆಗೆ ಸರಿಯಾಗಿ ವೈಸ್‌ರಾಯಿಯವರ ಸವಾರಿಯು ಮಹಾರಾಜಾರ್ಹವಾದ ರಥಗಳಿಂದಲಂಕೃತವಾಗಿದ್ದ ಸ್ಪೆಷಿಯಲ್ ಟ್ರೈನಿನಲ್ಲಿ ಈ ಪುರಿಗೆ ಬಿಜಯಂಗೈಸಿತು. ರೆಯಿಲ್ವೇ ಸ್ಟೇಷನಿನಲ್ಲಿ ೧೨೦ ಅಡಿ ಉದ್ದವೂ ೬೦ ಅಡಿ ಅಗಲವೂ ಉಳ್ಳ ಒಂದು ಮಂಟಪವು ವಿವಿಧಾಲಂಕಾರದಿಂ ನಿರ್ಮಿತವಾಗಿದ್ದುದರಿಂದ ಅದರಲ್ಲಿ ವೈಸ್‌ರಾಯಿಯವರ ಆಗಮನ ಪ್ರತೀಕ್ಷಣೆಯೊಡನೆ ಪೂರ್ವಭಾವಿಯಾಗಿ ಬಂದು ಕಾದಿದ್ದ ಶ್ರೀಮತ್ ಮಹಾರಾಜರವರು, ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್ಸನ್ ಯವರು, ದಿವಾನರು ಮೊದಲಾದ ಈ ಸಂಸ್ಥಾನದ ಮುಖ್ಯ ಆಫಿಸರ್‌ಗಳು ವೈಸ್‌ರಾಯಿಯವರು ಮರ್ಯಾದಾಪೂರ್ವಕವಾಗಿ ಬರಮಾಡಿಕೊಂಡರು. ಆಗ ಕುಶಲ ಪ್ರಶ್ನಾದಿ ಸೂಚಕವಾದ ಪರಸ್ಪರ ಸಂಭಾಷಣೆಗಳು ಸಂಗ್ರಹವಾಗಿ ಜರಗಿದ ಕೂಡಲೆ, ವೈಸ್‌ರಾಯಿಯವರು, ಶ್ರೀಮತ್ ಮಹಾರಾಜರವರೊಡನೆ ತಮಗಾಗಿ ಸಿದ್ಧವಾಗಿದ್ದ ಮೊದಲನೆಯ ಗಾಡಿಯಲ್ಲಿ, ಲೇಡೀ ಲ್ಯಾನ್ಸ್‌ಡೌನ್‌ಯವರೂ ಕರ್ನಲ್ ಹೆಂಡರ್ಸನ್‌ಯವರೂ ಎರಡನೆಯ ಗಾಡಿಯಲ್ಲಿಯೂ, ಪ್ರೈವೇಟ್ ಸೆಕ್ರೆಟರಿ ಮೊದಲಾದ ಪರಿಜನರೆಲ್ಲರು ಇತರ ನಾಲ್ಕು ಗಾಡಿಗಳಲ್ಲಿಯೂ ಕುಳಿತು, ಮೊದಲೇ ನಿಶ್ಚಯಿಸಲ್ಪಟ್ಟಿದ್ದ ರಾಜಮಾರ್ಗವಾಗಿ ರೆಸಿಡೆನ್ಸಿಗೆ ದಯಮಾಡಿದರು. ವೈಸ್‌ರಾಯಿಯವರ ಸವಾರಿಯೊಡನೆ ಮಹಾರಾಜರವರ ಬಾಡಿಗಾರ್ಡ್ ಎಂಬ ಅಂಗರಕ್ಷಕರು ಪ್ರಜ್ವಲಿಪ ಗದಾಧಾರಿಗಳಾಗಿ ಅನುವರ್ತಿಸಿ ಹೋದರಲ್ಲದೆ ಮಹಾರಾಜರವರ ಇಂಪೀರಿಯಲ್ ಸರ್ವಿಸ್ ಕೇವಲ್ರಿ ಸೇನೆಗಳು ಗೌರವಾರ್ಥ ಹಿಂಬಾಲಿಸಿಹೋಯಿತು. ಆ ಮಾರ್ಗದೊಳು ಅಲ್ಲಲ್ಲಿ ನಿರ್ಮಿಸಲ್ಪಟ್ಟಿದ್ದ ಮಂಟಪಗಳು ಬಹಳ ಕೌಶಲ್ಯಸೂಚಕವಾಗಿಯೂ, ನೇತ್ರಾನಂದಕರವಾಗಿಯೂ, ಇದ್ದುವಲ್ಲದೆ ಮಾರ್ಗಾಲಂಕಾರಗಳು ಸಹ ಪ್ರಶಂಸನೀಯವಾಗಿದ್ದವು. ನಾಲ್ಕನೆಯ ಚಪ್ಪರದ ಬಳಿ ಜಮಾಯಿಸಿದ್ದ ಆಯಾ ಸ್ಕೂಲ್ ವಿದ್ಯಾರ್ಥಿಗಳೆಲ್ಲರೂ ವೈಸ್‌ರಾಯಿಯವರ ಸವಾರಿಯು ತಮ್ಮ ಮುಂದಾದ ಬಳಿ ಬರುವಾಗ್ಯೆ ಅವರಿಗೆ ಸ್ವಾಗತವು ಮಾಡಿ ಕುಶಲಪ್ರಶ್ನ ರೂಪವಾದ ಗಾನ ಮಾಡುವದಲು ಅಲ್ಲಿ ಕೆಲವು ಕ್ಷಣಕಾಲ ನಿಂತು ಅಲ್ಲಿಂದ ಮುಂದಕ್ಕೆ ಚಿತ್ತೈಸಿದರು. ಮಾರ ಗಾಬ್ರಿಯರವರ ಮೆಮೋರಿಯಲ್ ಹಾಲಿನ ಬಳಿ ಬರುವಾಗ್ಯೆ ಅಲ್ಲಿ ಮ್ಯೂನಿಸಿಪಾಲಿಟಿಯವರು ನಿರ್ಮಿಸಿದ್ದ ಚಪ್ಪರದಲ್ಲಿ, ಮ್ಯೂನಿಸಿಪಲ್ ಕಮಿಷನರ್‌ಗಳೆಲ್ಲರ ಸೇರಿಕೊಂಡು ವಿಜ್ಞಾಪನಪತ್ರಿಕೆಯನ್ನೊಪ್ಪಿಸಿದರು. ಸದರೀ ವಿಜ್ಞಾಪನೆಯ ಪತ್ರಿಕೆಯಲ್ಲಿ ತಿಳಿಸಲ್ಪಟ್ಟಿರುವ ಅಂಶಗಳು ಮತ್ತು ಪನ್ನೆರಡು ವರ್ಷಗಳಿಂದ ಇಲ್ಲಿ ಸೇರಿದ [illegible] ಗಿರುತಿವೆ. ಮುಖ್ಯವಾಗಿ ಮೈಸೂರು ಪ್ರಜೆಗಳು ತಮ್ಮ ಜಾಣ್ಮೆಯವರೊಡನೆ ತಮ್ಮ [illegible] ಬಾಧಾರಹಿತವಾಗಿ ಅನುಭವಿಸುವ ಸಂತೋಷದ ಪೂರ್ಣತ್ವವನ್ನೂ ಸೂಚಿಸಿ, ಗತಿಸಿದ ಕಾಲದಲ್ಲಿ ಮೈಸೂರು ನಗರಾಭಿವೃದ್ಧಿಗಾಗಿ ತಾವು ಮಾಡಿದ ಮದವನ್ನೂ, [illegible] ರಾಜರು ಮಾಡಿದ ಸಹಾಯವನ್ನೂ ಅರುಹಿ, ಮಹಾರಾಣಿಯವರ ಬಾಲಿಕಾ ಪಾಠಶಾಲೆಯಂ ಪ್ರಾಣಾನ್ಯೇನ ಲೇಡಿ ಲ್ಯಾನ್ಸ್‌ಡೌನ್ ಯವರ ಅಭಿಮಾನಕ್ಕೆ ತುದು, ಮಹಾರಾಣಿಯವರ ಅಂತಃ[illegible] ಹೆಂಗಸರಿಗಾಗಿ ಸ್ಥಾಪಿಸಲ್ಪಟ್ಟಿರುವ ಆಸ್ಪತ್ರೆಯಂ ಕುರಿತು ಪ್ರಶಂಸಿಸಿ, ಗತಿಸಿದ ೧೦ ವರುಷಗಳ ಕಾಲದಲ್ಲಿ ಶ್ರೀಮತ್ ಮಹಾರಾಜರವರ ಪ್ರಭುತ್ವದಿಂದುಂಟಾದ ಅನೇಕ ವಿಧವಾದ ಸುಖ ಸಂತೋಷಗಳನ್ನು, ಅಂದರೆ ರೆಯಿಲ್ವೇ ಸಾರಿಗೆ ಅಭಿವೃದ್ಧಿ, ವಿದ್ಯಾಭಿವೃದ್ಧಿ ಮೊದಲಾದ ಅನೇಕ ಪ್ರಯೋಜನಗಳಂ ವಿಷಯಿಸಿ ವೈಸ್‌ರಾಯಿಯವರಿಗೂ ಅವರ ಕಳತ್ರ ಮಿತ್ರ ಪುತ್ರ ಬಾಂಧವರಿಗೂ, ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನಿಯವರಿಗೂ ಅವಿಚ್ಛಿನ್ನವಾದ ಮಂಗಳವನ್ನು ಕೋರಿ ಪ್ರಾರ್ಥನಾಪೂರ್ವಕ ಮುಕ್ತಾಯ ಮಾಡಲ್ಪಟ್ಟಿದೆ.

ಪನ್ನೊಂದನೆಯ ತಾರೀಖ್ ಶುಕ್ರವಾರದ ದಿನ ೧೧½ ಘಂಟೆಗೆ ಸಕಲ ರಾಜಮರ್ಯಾದೆಗಳೊಡನೆ ಶ್ರೀಮತ್ ಮಹಾರಾಜರವರು ತಮ್ಮ ಆಸ್ಥಾನ ಪರಿವಾರಗಳು ಮೊದಲಾದವರೊಡನೆ ವೈಸ್‌ರಾಯಿಯವರ ಸಂದರ್ಶನಾರ್ಥವಾಗಿ ರೆಸಿಡೆನ್ಸಿಗೆ ದಯಮಾಡಿದರು. ಅಂದಿನ ಸಾಯಂಕಾಲ ೪ ಘಂಟೆಗೆ ವೈಸ್‌ರಾಯಿಯವರು ತಮ್ಮ ಪರಿಜನ ಪರಿವಾರಗಳೊಡನೆ ಸಕಲ ಮರ್ಯಾದೆಗಳೊಡನೆ ಮಹಾರಾಜರ ಪ್ರತಿಸಂದರ್ಶನಾರ್ಥ ಅರಮನೆಗೆ ದಯಮಾಡಿದರು. ಆ ಕಾಲದಲ್ಲಿ ಕೋಟೆಯ ಬತೇರಿಯಿಂದ ಸವಾರೀ ವಿಶೇಷ ಸಂದರ್ಭ ಸೂಚಕವಾಗಿ ಅವರವರ ಕೀರ್ತಿಪ್ರತಿಷ್ಠೆಗಳಂ ಗಂಭೀರನಾದದಿಂ ಮುದ್ಘೋಷಿಸಿ ಸೂಚಿಸುವಂತೆ ತೋಪುಗಳು ಹಾರಿಸಲ್ಪಟ್ಟುವು.

ರಾತ್ರಿ ಭೋಜನಾನಂತರ ಬಾಣ ಬಿರುಸು ಮೊದಲಾದ ವಿನೋದಗಳೆಲ್ಲವೂ ಸಂಭ್ರಮವಾಗಿ ಜರಿಗಿದವು. ವೈಸ್‌ರಾಯಿಯವರ ಸವಾರಿಯು ಬರುವ ಮಾರ್ಗಗಳೂ ಚತುಷ್ಪಥಗಳೂ ದೀಪಪಂಕ್ತಿಗಳಿಂದಲಂಕೃತವಾಗಿ ನಗರವು ಶೋಭಾಯಮಾನವಾಗಿ ಕಂಗೊಳಿಸುತಲಿತ್ತು.

ಹನ್ನೆರಡನೆಯ ತಾರೀಖ್ ಶನಿವಾರದ ದಿನ ರಾತ್ರಿ ಜಗನ್ಮೋಹಿನೀ ಬಂಗ್ಲೆಯಲ್ಲಿ ವೈಸ್‌ರಾಯಿಯವರಿಗೆ ಮಹಾರಾಜರವರ ಔತಣವು ವಿಭವಾನುಗುಣವಾಗಿ ಜರಿಗಿತು. ಆ ಕಾಲದಲ್ಲಿ ಶ್ರೀಮನ್ಮಹಾರಾಜರವರೂ ಅನೇಕ ಜನ ಯೂರೋಪಿಯನ್ ದೊಡ್ಡ ಮನುಷ್ಯರೂ ದಯಮಾಡಿದ್ದರು. ಇಂಥಾ ಸಂದರ್ಭಗಳಲ್ಲಿ ಪದ್ಧತಿ ಪ್ರಕಾರ ನಡೆಯತಕ್ಕ ಪರಸ್ಪರ ಶ್ರೇಯೋಭಿಪ್ರಾಯ ಸೂಚಕ ಪಾನಾದಿ ಸಂಭಾಷಣವು ವಾದುವಾಗ್ಯೆ ದಿವಾನ್ ಪೆ|| ಶೇಷಾದ್ರಿ ಅಯ್ಯಂಗಾರವರು, ಮಹಾರಾಜರಿಂದಾಜ್ಞಪ್ತರಾಗಿ ತಿಳಿಸಿದರೇನೆಂದರೆ, —

ಈಗ ದಯಮಾಡಿ ನಮ್ಮ ಆತಿಥ್ಯವನ್ನಂಗೀಕರಿಸಿರತಕ್ಕ ಪ್ರಸಿದ್ಧರಾದ ಲಾರ್ಡ್ ಮತ್ತು ಲೇಡೀ ಲ್ಯಾನ್ಸ್‌ಡೌನ್‌ಯವರ ಆರೋಗ್ಯ ಭಾಗ್ಯಾಭಿವೃದ್ಧಿ ಸೂಚಕವಾದ ಶುಭಾಶೀರ್ವಾದವು ಮಹಾರಾಜರವರಿಗಾಗಿ ಮಾಡುವಂತೆ ನಾನು ಅವರಿಂದಾಜ್ಞಪ್ತನಾಗಿ ಈಗ ಅಭಿಮುಖನಾಗಿ ದೇನೆ. ಶಾರೀರಕವಾದ ಬಹುವಿಧ ಅನಾನುಕೂಲ್ಯಗಳಿಗೂ ಅಸೌಖ್ಯಗಳಿಗೂ ಒಳಪಟ್ಟರೂ ಬಹುದೂರದಲ್ಲಿರುವ ಈ ರಾಜ್ಯಕ್ಕೆ ದಯಮಾಡಿದರ ಮೂಲಕ ಶ್ರೀಮತ್ ಮಹಾರಾಜರವರ ಆತಿಥ್ಯವನ್ನು ನಿರಾಕರಿಸದೆ [illegible] ಅವರು ಗತಿಸಿದ ವಿಷಯಗಳ ಬಗ್ಗೆ ಅವರು ಬಹಳ ಸಂತೃಪ್ತರಾಗಿದ್ದಾರೆ, ಈ ಮೈಸೂರ್ ಸಂಸ್ಥಾನಕ್ಕೆ ಹಿಂದೆ ಬಂದಿದ್ದ ಮಹಾರಾಜ್ಞೀ ಪ್ರತಿನಿಧಿಗಳನ್ನು ಎದುರುಗೊಂಡು ಸತ್ಕರಿಸಿದ ಗೌರವಕ್ಕೆ ಅವರು ಪಾತ್ರರಾದುದಲ್ಲದೆ, ಗ್ಯಾಸ್ಪ್ರೂತದಲ್ಲಿ ಲಾರ್ಡ್ ಲ್ಯಾನ್ಸ್‌ಡೌನ್ ಯವರು, ಕೆಲವು ದಿವಸಗಳ ಹಿಂದೆ ಈ ಪಟ್ಟಣಕ್ಕೆ ದಯಮಾಡಿರುವದರ ಮೂಲಕ ಅವರಿಗೆ ವಿಶೇಷ ಸಂತೋಷವು ಉಂಟಾಗಿದೆ. [illegible] ಆಗಮನ [illegible] ಅಭಿಮಾನ [illegible] ಮನ್ನಿಸಿ [illegible] ರಾಗಿದ್ದಾರೆ [illegible] ಮೈಸೂರು ರಾಜ್ಯದ ಪ್ರಜೆಗಳು ಮಹಾರಾಜರ ಪ್ರಭುತ್ವ ಸ್ವರೂಪವನ್ನು ಗ್ರಹಿಸಿ [illegible] ದೇಶದ ಆರ್ಥಿಕ ಸ್ಥಿತಿಯು ಸ್ವತಃ ಕಣ್ಣಾರೆ ನೋಡಿ [illegible] ತಂತ್ರವನ್ನು ಪಾಲಿಸುವರಾಗಿ ಪರಿಗಣಿಸಲ್ಪಟ್ಟಿದೆ. [illegible] ತತ್ರತ್ಯ ಸ್ಥಿತಿಗತಿಗಳನ್ನು [illegible] ನೋಡುವರಾದರೆ, ಅವರು, ಈ ರಾಜ್ಯವು ಅದರ ಪ್ರೀತಿಗಾಗಿ ಬ್ರಿಟಿಷರ ನ್ಯಾಯ [illegible] ನಡೆಯುತ್ತಿದೆ [illegible] ಮಹಾರಾಜರ [illegible] ಗಳ [illegible] ವೃದ್ಧಿಗೆ [illegible] ಇಂಡ್ಯಾ ಗವರ್ನಮೆಂಟಿನವರ [illegible] ದ್ದೇಶವು [illegible] ಗಳನ್ನು [illegible] ದಲ್ಲಿ ತಾವು [illegible] ರಂಗಕೆಂಬ ದೇವ ಮಹಾರಾಜನ ಸಂತೋಷಕೋರಿಕೆಯಾಗಿರುತಿದೆ.

ಆ ವೈಸ್‌ರಾಯಿಗಳಿಗೆ ವಿಶೇಷ ಸ್ಮಾರಕ [illegible] ವನ್ನು [illegible] ಬ್ರಿಟಿಷ್ ಗವರ್ನ್‌ಮೆಂಟಿನವರಿಗೆ ಹೀಗೆ ತಾವು ಸಹ ಯಾಕರಾಗುವಾಗ್ಯೆ ಪ್ರಾಂತದವಾದ [illegible] ಜನಂತವಂ ಮರಳಿ ಉಪಕಾರವನಿಸಿ ಅದು ಸಿದ್ಧಿಸಲ್ಪಡುವ ಅಭಿವೃದ್ಧಿಯಾಗುವಂತೆ ಮಾಡಿದ, ಬ್ರಿಟಿಷರವರ ಔದಾರ್ಯ ಪ್ರದರ್ಶನಕ್ಕೆ ತಕ್ಕ ಅನುಗುಣವಾದ ಪ್ರತ್ಯುಪಕಾರಗಳಂ ಮಾಡಬೇಕಾದುದು ತಮ್ಮ ಕರ್ತವ್ಯವೆಂದು ಮಹಾರಾಜರವರು ದೃಢವಾಗ ಭಾವಿಸದಿರಲಿಲ್ಲವು. ಇಂಡ್ಯಾದೇಶ ಸಂರಕ್ಷಣಾರ್ಥವಾಗಿ ತಾವು ಕೊಡುವಂತ ತಿಳಿಸಿದ ಸಹಾಯವನ್ನು ಬ್ರಿಟಿಷ್ ಗವರ್ನಮೆಂಟಿನವರು ಗೌರವಿಸಿ ಅಂಗೀಕರಿಸಿದರ ಮೂಲಕ ಅವರು ಮಹಾರಾಜರವರಲ್ಲಿ ಸಂಪೂರ್ಣ ನಂಬಿಕೆಯನ್ನಿಟ್ಟವರೆಂಬದಕ್ಕೆ ನವೀನವಾದ ಪ್ರಮಾಣ ನಿದರ್ಶನವಾಗಿರುತದೆ. ಮೈಸೂರ್ ಸವಾರ್ ಪಾದನ್ನು ಇಂಪೀರಿಯಲ್ ಸರ್ವೀಸಿಗೆ ಉಪಯೋಗಿಸಿಕೊಳ್ಳುವಣವು ಮಹಾರಾಜರವರು, ಗೌರವಾರ್ಹವಾದ ಕೆಲಸವೆಂದು ಮಹತ್ತಾಗಿ ಸಂತೋಷಪೂರ್ವಕವಾಗಿ ಭಾವಿಸುತ್ತಾರೆ ಏಕೆಂದರೆ ತಮ್ಮ ರಾಜರ ಕಡೆಯಿಂದ ತೋರಿಸಲ್ಪಟ್ಟ ರಾಜಭಕ್ತಿ ಪ್ರದರ್ಶಕಗಳಾದ ಕಾರ್ಯಗಳು ಮಾಗಲಿಸುತ್ತಿರುವನವೆಂದು ಭಾವಿಸಿರುವರಲ್ಲದೆ ಶ್ರೀಮನ್ಮಹಾರಾಜ್ಞೀ ಚಕ್ರವರ್ತಿನೀಯವರ ವಿಶೇಷ ಪಕ್ಷಪಾತ ಸೂಚಕವಾಗಿ ಸಹವರಿಗಣಿಸುತ್ತಾರೆ. ಹಿಂದೆ ಅನೇಕ ಸಂದರ್ಭಗಳಲ್ಲಿ ಮೈಸೂರ್ ಸೇನೆಯು, ಪ್ರಬಲ ಕಾರ್ಯಗಳಂ ಮಾಡಿದವೆಂಬದಕ್ಕೆ ಅನೇಕ ದಾಖಲೆಗಳು ಇಲ್ಲದೆ ಹೋಗ [illegible] ಅಸ್ಪಷ್ಟವಾಗುತ್ತ ಇರಿಗಿಯೆಂಬಲ್ಲ ದೇಶಗಳ, ಪ್ರಸಿದ್ಧರಾದ ಇಂಗ್ಲೀಷ್ ಜನರಲ್ಲವರ ಸಾಕ್ಷಾತ್ [illegible] ರಣೆಯಲ್ಲಿ ಅವರ ಸಾನ್ನಿಧ್ಯದೊಳು ಬ್ರಿಟಿಷ್ ಸೇನೆಯಾವೊಡನೆ ಸೇರಿದ್ದಂಥಾ ಸೈನಿಕರ ಸಂತತಿಯವರೆಂಬ ಘನತರ ಪ್ರಾಶ್ಯಸ್ತ್ಯಕ್ಕೆ ಅನುರೂಪರಾಗುವಂತೆ ಪ್ರತಿಕಾಲದಲ್ಲಿ ಅಂದರೆ ಗವರ್ನಮೆಂಟಿನವರು ಸೈನಿಕಸಹಾಯವನ್ನಪೇಕ್ಷಿಸಿದಾಗ ಅವರು ಮನಃಪೂರ್ವಕವಾಗಿ ಶ್ರಮಿಸಿ ಸ್ವತಃ ಪ್ರಯೋಜಕರಾಗುವರೆಂದು ಮಹಾರಾಜರವರು ನಂಬಿದಾರೆಂಬದು ಅನಂತರ ವೈಸ್‌ರಾಯಿಯವರು ಅಪ್ಪಣೆ ಕೊಡಿಸಿದರೇನೆಂದರೆ, —

ನಮ್ಮ ಆಗಮನದಿಂದುಂಟಾದ ಸಂತೋಷವನ್ನು ವ್ಯಕ್ತಪಡಿಸಿ ತಿಳಿಸಿದ ಶ್ರೀಮತ್ ಮಹಾರಾಜರವರ ಪ್ರಸಂಗವನ್ನಾಲೈಸಿ, ಸಂತೃಪ್ತರಾದೆವಲ್ಲದೆ, ಬ್ರಿಟಿಷ್ ಗವರ್ನಮೆಂಟಿನವರಲ್ಲರು ಮಹಾರಾಜರವರ ಸ್ಥಾನಗಳ ನಿರ್ವಹಣರಾಗಿ ಈ ಸಂಸ್ಥಾನದವರು ಹಿಂದೆ ಅನೇಕ ಪ್ರಕರಣಗಳಲ್ಲಿ ಕಾರ್ಯತಃ ತೋರಿಸುವವರಾಗಿದ್ದವರ ಪ್ರಾಮಾಣ್ಯೇನ ಉದಹರಿಸಿದ್ದು ತುಂಬಾ ಅನುಕೂಲಕರವಾಗಿದೆ. ನಮ್ಮ ಆರೋಗ್ಯಪ್ರಾರ್ಥನಾ ರೂಪವಾಗಿಯೂ ಲೇಡೀ ಲ್ಯಾನ್ಸ್‌ಡೌನ್‌ಯವರು, ಲೇಡೀ [illegible] ಮಹನೀಯ ಮಹಾರಾಜರು [illegible] ದ ರಕವಾದ ವಿಷಯ [illegible] ರಾಗದ [illegible] ಗೌರವ [illegible] ತಮ್ಮ ಅಂಶಗಳಿಗಾಗಿ ನಾವು ಅವರಿಗೆ ವಂದನೆ ಮಾಡುತ್ತೇವೆ. ನಾವು [illegible] ಅವರ ಸಂಸ್ಥಾನದಲ್ಲಿ ಕೆಲವು ದಿನಗಳನ್ನು ಕಳೆದು ಬಹಳ ಸಂತೋಷಪಟ್ಟವರಾಗಿ ಬಂದಿರುತ್ತೇವೆ. ಈ ಮೈಸೂರ್ ಸಂಸ್ಥಾನ ಸ್ಥಿತಿಯು ಇತರ ನೇಟಿವ್ ಸಂಸ್ಥಾನಗಳಂತಲ್ಲವು ಅನೇಕ ವಿಷಯಗಳಲ್ಲಿ ಅಸದೃಶವಾಗಿದೆ. [illegible] ಶ್ರೀಮತ್ ಮಹಾರಾಜ್ಞೀ ಸರ್ಕಾರದವರು ಮೈಸೂರ್ ಸಂಸ್ಥಾನವನ್ನು [illegible] ಕಾಲ [illegible] ವಿಶೇಷ ಚಿಂತೆಯನ್ನು [illegible] ಅನುಭವಿಸಿದ [illegible] ಸುಮಾರು [illegible] ಕಾಲದಲ್ಲಿ ಮಾಡಲ್ಪಟ್ಟ ರಿಂಡಿಷನ್ [illegible] ಇಸವಿಯಲ್ಲಿ ಮಹಾರಾಜರವರಿಗೆ ಪ್ರಭುತ್ವವು ಒಪ್ಪಿಸಲ್ಪಟ್ಟಾಗ್ಯೂ ಅವರ [illegible] ಪ್ರಭುತ್ವವು ನೇಟಿವ್ ರಾಜ್ಯಗಳ ವಿಷಯದಲ್ಲಿ ನಮಗುಂಟಾಗಿರುವ ಚಿಂತೆಗೆ ಪ್ರೋತ್ಸಾಹಕವಾಗುವಂತೆ, ಸಂತೋಷಪ್ರದವಾಗಿ ಪರಿಣಮಿಸಿರುವದನ್ನೂ ಮೈಸೂರು ದೇಶೀಯರಾದ ಪ್ರಜೆಗಳು ಸಹ ತಮಗೆ ಲಬ್ಧವಾಗಿರುವ ಸ್ಥಿತಿಯಿಂದ ತೃಪ್ತರಾಗಿದಾರೆಂಬದು ಅತಿ ಸಂತೋಷಿಸುತ್ತೇವೆ. ಈ ಸಂಸ್ಥಾನದ ಪಾಲಕರು ತಮ್ಮಲ್ಲಿ ಇಟ್ಟ ನಂಬಿಕೆಯನ್ನೂ ವಿಶ್ವಾಸವನ್ನೂ ತಮ್ಮ ವರ್ತನೆಗಳಿಂದ ಸಾರ್ಥಕತೆಗೊಳಿಸುವರಾಗಿರುವಂತೆ ವ್ಯಕ್ತಪಡಿಸುತ್ತಾರೆ. ಹಿಂದಿನ ವೇಳೆ ಅವರ ವರ್ತನೆಗಳು ಅನ್ಯತರವಾಗಿದ್ದರೆ ಆಗ ಒದಗುವ ಪರಿಣಾಮಕ್ಕೆ ಮಹಾರಾಜರವರು ಬಾಧ್ಯರಾಗಬೇಕಾಗಿರುತ್ತಿತ್ತು. ಅದರ ಸಕಲ ವಿಷಯಗಳನ್ನೂ ಯಥಾರ್ಥವಾಗಿಯೂ ವಿವೇಕಶಾಲಿಯಾಗಿಯೂ ಇರುವ ಪ್ರಜಾ ಪಾಲಕರನ್ನಿರಿಸಿಕೊಂಡಿರುವ ಅಂಶಕ್ಕಿಂತಲೂ ನಮಗೆ ಸಂತೋಷಕರವಾದದ್ದು ಬೇರೊಂದೂ ಇಲ್ಲ ವೆಂಬದಾಗಿ ನುಡಿದರು. ಹೀಗೆಯೇ ಮಹಾರಾಜರವರ ಗುಣಾತಿಶಯಗಳನ್ನು ಸಮುಚಿತ ವಾಕ್ಯಗಳಿಂದ ವೈಸ್‌ರಾಯಿಯವರು ಪ್ರಕಾಶಿಸಿ ಅವರ ಅಜ್ಞಾನುಸಾರ ರಾಜಕಾರ್ಯಗಳ ಜರಿಗಿಸಿದ ಸಮರ್ಥರಾಗಿಯೂ, ದೂರದೃಷ್ಟಿಯುಳ್ಳವರಾಗಿಯೂ, ಜಾಗ

ರೂಢಿಯಾಗಿರುವ ಇರುವ ಅಂತ ದಿವಾನರ ಶ್ರ ದ್ಧೆಗಳು ಸಿಬ್ಬಂದಿಯವರ ಶಕ್ತಿಯಿಂ ಕೊಂಡಾಡ ಪ್ರಾಣನಿವಾರಣೆಯ ವಿಷಯದಲ್ಲಿ ಮಹಾರಾಜಾ ಸರ್ಕಾರದವರು ಕೃಪಾಪೂರ್ವಕವಾಗಿ ಮಾಡಿದ ಏ ರ್ಪಾಡುಗಳನ್ನು ರೆಸಿಡೆಂಟ್ ಅಧಿಪತಿಯನ್ನು ಶ್ಲಾಘನೀಯ ನನುಊಹಿಸಿ ಈ ಸುಸ್ಥಾನದಲ್ಲಿ ಬಾಲ್ಯವಿವಾಹಕರಿಗಿರುವ ಅನ್ಯೋನ್ಯಭಾವವು ಅ ನ್ಯತ್ರ ಅದೃಶ್ಯವೆಂಬದಾಗಿಯೂ ಅಂತಾ ಅನ್ಯೋ ನ್ಯಭಾವಕ್ಕೆ ಸಾಧಕವಾಗಿ ಮಹಾರಾಜಾ ಸರ್ಕಾ ರದವರು ಏರ್ಪಡಿಸಿರುವ ದಸರಾ ರಿಪ್ರಸೆಂಟ ಟಿವ್ ಸಮಾಜದ ಪ್ರತಿ ಈ ಸೃಷ್ಟಿಯು ತಾವು ಅನ ವರತ ಬಯಸುತ್ತಿರುವುದೆಂದೂ, ಅದು ಮಹಾ ರಾಜರವರ ಪ್ರಭುತ್ವ ವೈಭವಕ್ಕೆ ಬಹುತ್ತರ ವಾದ ಸಾಧನವಾಗುವುದೆಂಬದಾಗಿಯೂ ಈ ಅದರ ಉಪಯುಕ್ತತೆಯು ವಿಶೇಷತಃ ಒಪ್ಪಡಿಸುವ ತಾತ್ಪರ್ಯವೆಂತವೆ [illegible] ಸಮಾಜದ ಮೆಂಬರ್ ಗಳ ಸಂಖ್ಯೆಯು ತೃಪ್ತಿಕರವಿಸಿಲ್ಲವೆ [illegible] ಪ್ರಮುಖರಿಂದ ಮತ್ತು ವಿದ್ಯಾವಂತರಿಂದ [illegible] ಜ್ಞಾನವಂತರಿಂದ ದ [illegible] ವೃದ್ಧ [illegible] ಮೆಂಬರುಗಳ ಕಡೆಯ ಅಧಿಕಾರವನ್ನು ಪ್ರಜ ಗಳಿಗೊಪ್ಪಿಸಿದ್ದು [illegible] ಮೊದಲಾಗಿಯೂ, [illegible] ಸ್ವತಿಯು ತೃಪ್ತಿಕರವಾದ [illegible] ಬರುವಂತೆ [illegible] ಮಹಾರಾಜರವರಿಗೆ [illegible] ದನ [illegible] ವಹಿಸಿ ಯಾವ [illegible] [illegible] ಪ್ರತಿಷ್ಠೆ [illegible] ಕೆಲ ವಿಷ್ಣುವಾದ ಅವೇ [illegible] ಸುತ, ದೃಷ್ಟಾಂತವಾಗಿ ಮುಂದೆ [illegible] ಮಾದರಿಯು [illegible] ಯು, ಮಹಾರಾಜರವರು ದಯವಿಟ್ಟು [illegible] ರ್ವಮೆಂಬರವರು ಹವಿರಿರು [illegible] ಸನ್ನಿ ಸಂದರ್ಭದಲ್ಲಿ ಬಹಿರಂಗವಾಗಿ ವ್ಯಕ್ತಪಡಿ ಸುತ್ತದೆಯೂ, ಬಳಿಕ [illegible]. ಅನಂತರ ಮಹಾ ರಾಜರವರು, ದಮ್ಮಗೆ [illegible] ದ ಪೈಕಿಯ ವರ್ಷಗಳು, [illegible] ವರ್ಷ ಮೊದಲ [illegible] [illegible] ತಾವು ಮುಂದೆಯೂ ಅನು [illegible] ದಿವಸದಲ್ಲಿ [illegible] [illegible] ವಾಗಿ ಪ್ರಸಿದ್ಧಿಯುವರು [illegible] ಗಾಗಿ ಮನಃಪೂರ್ವಕವಾಗಿ [illegible] ತಂತಿಯೂ ತಿಳಿಸಿದರು.

THE MYSORE GAZETTE
ಮೈಸೂರು ಗೆಜೆಟ್

ಶ್ರೀಮನ್ ಮಹಾರಾಜ [illegible] ಸರ್ಕಾರದಿಂದ ಕೊಡಲ್ಪಟ್ಟ [illegible]

ನಂ ೧೧೬೬ [illegible] ೬೮-೯೩-೩|| ೨೧ನೇ ನ ವಂಬರ್ ೧೮೯೩—ಸ್ಟೇಟ್ ಅಸಿಸ್ಟೆಂಟ್ ಸ್ಯೂಪರಿಂ ಟೆಂಡೆಂಟ್ ಮೆ|| ಕೆ ತ್ರಿ [illegible] ಬೆಂಗ ಳೂರು ಸಿಟಿ ಮ್ಯುನಿಸಿಪಾಲಿಟಿಯ ಬಿಸ್ಟಿ ಮೆಂ ಬರಾಗಿಯೂ [illegible] ನೇ ಮಾ [illegible] ಕರಣ್ಯಾದಲ್ಪಟ್ಟಿರುತ್ತಾರೆ.

ನಂ|೬೦೬೯. ೧೪೦೨—೯೩ ಬೆಂಗಳೂರು ಅಫಿಷಿಯೇಟಿಂಗ ಸಬ್ ಜಡ್ಜ್ ಮ|| ಪಿ. ನಂಜುಂಡಯ್ಯ, ಎಂ. ಎ. ಬಿ ಎಲ್. ಯವರಿಗೆ ಅವರ ಉಪಯೋಗಿಸಿಕೊಳ್ಳುವ ತಾರೀಖ್ ಮೊದಲ ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತ ದೆ. ಅಡ್ವೊಕೇಟ್ ಮುನಸಿಫ್ ಮೆ|| ಎಚ್. ವೆ ಕಟ ವರದಯ್ಯಂಗಾರ್ಯರು. ಮೆ|| ಪಿ. ವಿ ನಂಜುಂ ದಯ್ಯನವರು ರಜಾಮೇಲೆ ಗೈರುಹಾಜರಾಗಿರುವ ಕಾಲದಲ್ಲಿ, ಅಥವಾ ಮತ್ತೊಂದು ಹುಕುಂ ಕೊಡ ಲ್ಪಡುವ ತನಕ ಬೆಂಗಳೂರ್ ಸಬಾರ್ಡಿನೇಟ್ ಜ ಡ್ಜಿ ವ ೧ನೇಕ್ಲಾಸ್ ಮ್ಯಾಜಿಸ್ಟ್ರೇಟಾಗಿ ಆ ಫೀಗಿಶಿಯೇಕ ಮೊಕರರ್ಮಾದಲ್ಪಟ್ಟಿರುತ್ತಾರೆ.

ನಂ|೬೦೪೯, ೧೪೩೩—೨ ೧೮೯೩ನೇ ಇ ಸಿವಿ ನವಂಬರ್ ೧ನೇ ತಾರೀಖು ಟಿ೯೮೩೬ನೇ ನಂಬರುಳ್ಳ ಇನ್ಸ್ಪೆಕ್ಟರ್ ನಾಮೆಯನ್ನನು ಸರಿಸಿ ಕ್ರಿಮಿನಲ್ ಪ್ರೊಸಿಜ್ಯರ್ ಕೋಡಿನ ೧೨ನೇ ಸೆಕ್ಷನ್ ಪ್ರಕಾರ ಮೆ|| ರಾಮಸ್ವಾಮಯ್ಯಂ ಗಾರ್ಯರವರಿಗೆ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟಿ ಅ ಧಿಕಾರಗಳು ಕೊಡಲ್ಪಟ್ಟಿರುತ್ತವೆ.

ನಂ ೬೩೮೨-, ೧೮೩೦-೯೩ ತಾ||೫ನೇ ನವಂ ಬರ್ ೧೮೯೩-ಯಕೆಸ್ಟ್ರಿಜ್ ಸ್ಕೂಲು [illegible] ಅಸಿಸ್ಟೆಂಟ್ ಕನ್ಸರ್ವೇಟರ್ ಮೆಸ್ಟರ್ [illegible] ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ ಆಗ ಮಿಸು ೩ ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪ ಟ್ಟಿರುತ್ತದೆ.

ಮೊಹಿಕ್ಕಂ ನಂ| ೧೬೦—೩ ನೌಗ್ಗ್ಗ [illegible] ಡಿಸ್ಟ್ರಿ ಕ್ಟ ಪ ಕೆಡ್ನೆನ್ ಜಡ್ಜ್ ಮೆ|| ಸಿ. ಕ್ರಿಸ್ ಯವರು [illegible] ಮಹಾರ್ [illegible] ಬಿ ದಿಮು ತಾವು ಕೆಲಸಕ್ಕೆ ಹಾಜರಾಗಿರುವಂತೆ ರಿ ಪ್ರೊರ್ಟ [illegible] ಅವರು [illegible] ಸೀಕೊಳ್ಳವೆ [illegible] ಇದರಿಂದ ರದ್ದು ಮಾಡ ಲ್ಪಟ್ಟಿರುತ್ತದೆ. ಮೆ|| ಸಿ. [illegible] ಯವರು ಪ್ರ [illegible] ಬಿಡ್ಜ [illegible] [illegible] ಸೆಷನ್ಸ್ ಜಡ್ಜಿ ಯಾಗಿ [illegible] ಟ್ಟ ನವರೀ ಡಿವಿಜನ್ನಿನ ಬಿ [illegible] ಡಿಸ್ಟ್ರಿಕ್ಟ ಜಡ್ಜಿಯ ಅಧಿಕಾರಗಳು ಕೊಡಲ್ಪಟ್ಟಿರುತ್ತಾರೆ.

ನಂ|| ೬೮೬೨—೮ ೧೮೯೩, ೯೩-೧೮೯೩ನೇ ಇಸಿವಿ ಆಗಸ್ಟ್ [illegible] ನೇ ತಾ [illegible] ಕೆ [illegible] ಸಿಸ್ [illegible] ರವಿ [illegible] ಪಾರ್ಟಿ [illegible] ದ [illegible] ರಿ ಗಿರುತ್ತಾರೆ.

ಇಂಗ್ಲಿಷ್

೧ ೨೬—೫೧ ಸಿ [illegible], ಬೆಂಗ ಳೂರಿನವರಡೆಪ್ಯುಟಿಕಮಿಷನರ್.
೨ ೧-೨—೩೧ [illegible], ನಗರದ ಅಡ್ವ ಡಿಸ್ಟ್ರಿಕ್ಟ [illegible] ದ ಫ್ರಿಷ [illegible] ಮತ್ತು [illegible] ಪ್ಲೋಟರ್
೩- ೨೦—೮ ಕೃಷ್ಣಯ್ಯಂಗಾರ್ [illegible] ನಗರ ಸವ [illegible] ಪವಿತ್ರಸಿಟಿ
೪ ೨೬—೮ ಎನ್ ಲಕ್ಷ್ಮಣ ಅಯ್ಯರ್, ಡಿಪಿಷ್ನ [illegible] ಸಿರಿಂದ್ರಕೇಟರ್.
೫ ೧೯—೩೦. [illegible], [illegible] ಕೋಟೆ [illegible]
೬ ೯೨—೫ ಅನಂತಯ್ಯಂಗಾರ್, ಅರಸೀಕೆರೆ, [illegible] ಸೆಕ್ಷನ್ [illegible] ಫ್ರೊಬೇಷ ಇನ್ಸ್ಪೆಕ್ಟರ್.
೭ ೨೦ - ೩ [illegible], ಬೆಂಗಳೂರ್ [illegible] ಅಸಿ ಸ್ಟೆಂಟ್ [illegible]
೮ ೧೪೩ —[illegible] ಅಬ್ದುಲ್ [illegible], ಕೋಲಾರ [illegible] ಫ್ರೊಬೆಷ ನರ್ ಇನ್ಸ್ಪೆಕ್ಟರ್
೯ ೧೮೦—೫ [illegible] ಅಯ್ಯರ್ ಕೋಲಾರ [illegible]
೧೦ ೨೧—ಎಸ್. [illegible], [illegible] ಮಧುರ [illegible]
೧೧ ೧-೪-೫ [illegible] ಅಬ್ದುಲ್ [illegible], [illegible] ಸೆಕ್ರೆ ಟರಿ [illegible] ಮ್ಯಾಜಿಸ್ಟ್ರೇಟ್
೧೨ ೧೧೨—೮ ಕೃಷ್ಣಸ್ವಾಮಿ [illegible] ಮಿ [illegible]
೧೩ ೧೪೬—೩, ಶೇಷಯ್ಯಂಗಾರ್, [illegible] ಶ್ರೀರಂಗಪಟ್ಟಣ [illegible].
೧೪ ೧೧—ಮೆ||ಜೆ [illegible], ನರಸೀಪುರದ ಪ್ರೊ ಬೇಷನರ್ ಇನ್ಸ್ಪೆಕ್ಟರ್.
೧೫ ೧೮೦—ಎಸ್ [illegible], [illegible] ತಾ|| ಶಿರಸ್ತೇದಾರ್.
೧೬ ೯೧ —ಸುಬ್ಬರಾಮಯ್ಯರ್, ಶಿವಮೊಗ್ಗ [illegible] ಆಫೀಸ್ ನೋಟ [illegible] ಕನ್ನಡ [illegible] ಪರೀಕ್ಷೆ [illegible]

ಇ ನಂ೩೩ ತಾ||೩ನೇ ನವಂಬರ್ ೧೮೯೩— ಮಹಾರಾಜರವರ ಕಾಲೇಜ್ ಅಸಿಸ್ಟೆಂಟ್ ಮಾ ಸ್ಟರ್ ಮೆ||ಕೆ. ವೆಂಕಟಸ್ವಾಮಿ ಅಯ್ಯರ್, ಬಿ. ಎ. ಯವರು ೧೮೯೩ನೇ ಇಸವಿ ಅಕ್ಟೋಬರ್ ಗುರ್ರ [illegible] ತಾರೀಖ್ [illegible] ಅಸಿಸ್ಟೆಂಟ್ ಮ್ಯಾಸ್ಟರ್ ಗಳ ೩ ನೇ ತರಗತಿಯಿಂದ ೨ನೇ ತರಗತಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ಮೈಸೂರು ಗವರ್ನ್ಮೆಂಟ್
ಲೆಜಿಸ್ಲೇಟಿವ್ ಇಲಾಖಾ.

ಕಳೆದವಾರದ ಶೇಷವು.

೧೮. ಪ್ರತಿವಾದಿಯು ಹಾಜರಿಬಗ್ಗೆ ನಿಶ್ಚಯಿಸಲ್ಪಟ್ಟ ದಿನ ಸದಲ್ಲಿ.

> ವಾದಿ ಗೈರುಹಾಜರಾದ ಮತ್ತು ಪ್ರತಿ ವಾದಿ ದಾವ [illegible] ಅಥವಾ [illegible] ಪಡಿಸಿದ [illegible] ಜಾಲ [illegible] ಸಡಿಸ [illegible] ಕ್ರಮ

(೧) ಉಭಯ ಪಕ್ಷದವರೂ ಹಾಜರಾಗದೆ ಹೋದರೆ, ಅಥವಾ

(೨) ವಾದಿಯು ಹಾಜರಾಗದೆಯೂ, ಪ್ರ ತಿವಾದಿಯು ಹಾಜರಾಗಿ ದಾವೆಯ ನ್ನು ಒಪ್ಪಿಕೊಳ್ಳದಿದ್ದರೆ, ಅಥವಾ

(೩) ವಾದಿಯು ತಪ್ಪಿರವ ದೆಸೆಯಿಂದ ಪ್ರ ತಿವಾದಿಯ ಮೇಲೆ ಸಮ್ಮನು ಜಾರಿ ಆಗಲಿಲ್ಲವಾದರೆ, ವ ಪ್ರತಿವಾದಿಯು ಹಾಜರಾಗದೆ ಹೋದರೆ,

ಗ್ರಾಮ ಕೋರ್ಟಿನವರು ಒಳ್ಳೇ ವ ಸ್ತ್ರ ಸ ಕಾ ದ ಕಾರಣಕೊಳ್ಳಿಸ್ತರೆ ಅನ್ಯಥಾ ವಿಧಿಸಿದ ದೊರ ತು ಸರಿ, ವ್ಯಾಜ್ಯ [illegible] ವಜಾ ಮಾಡಲ್ಪಡತ ಕ್ಕದ್ದು.

೧೯. ವಾದಿಯು ಹಾಜರಾಗದೆಯೂ, ಪ್ರತಿ ವಾದಿಯು ಹಾಜರಾಗಿ ದಾವೆಯನ್ನು ಪೂರ್ತಿ ಯಾಗಿ ಯಾ ಅಂಶವಾಗಿ ಒಪ್ಪಿಕೊಂಡರೆ, ಅಂಥಾ ಕಬೂಲಿಯಮೇರಿಗೆ ಗ್ರಾಮ ಕೋರ್ಟಿನವರು ಪ್ರ ತಿವಾದಿಯ ಮೇಲೆ ತೀರ್ಪುಕೊಡತಕ್ಕದ್ದು.

> ವಾದಿ ಹಾಜರಾಗದೆ ಇ ದ್ದು ಪ್ರತಿವಾದಿ ದಾವೆಯ ನ್ನೊಪ್ಪಿಕೊಂಡರೆ ನ್ಯಾಯಪದ್ಧತಿ.

೨೦. ೧೮ ನೇ ಪ್ರಕರಣದ (೧) ನೇ ಕ್ಲಾಜ್ ಮೇರಿಗೆ ಯಾ (೩) ನೇ ಕ್ಲಾಜ್ ಮೇರಿಗೆ ಒಂದು ವ್ಯಾಜ್ಯವನ್ನು ವಜಾಮಾಡಿ ದ ಪಕ್ಷದಲ್ಲಿ, ವಾದಿಯು ಒಂದು ಹೊಸವ್ಯಾಜ್ಯವ ನ್ನು ತರಬಹುದು; ವ್ಯಾಜ್ಯ [illegible] ವಜಾಮಾಡಿ ೧೮ ನೇ ಪ್ರಕರಣದ (೨) ನೇ ಕ್ಲಾಜ್ ಮೇರಿಗೆ ಕೊಟ್ಟ ಒಂದು ಮಾಮೂಲಿನ ಅವಾ ದಾವೆಯ ಒಂದು ಅಂಶದಬಗ್ಗೆ ಮಾತ್ರ ೧೯ನೇ ಪ್ರಕರಣದ ಮೇರೆಗೆ ಕೊಟ್ಟ ಒಂದು ಡಿಕ್ರಿಯು ಜಾರಿಯಿಂದ ದ ಮೂವತ್ತು ದಿವಸಗಳ ಒಳಗಾಗಿ, ವಾದಿಯು ತಾನು ಸಾಕಾದ ಸಬಬಿನಿಂದ ಹಾಜರಾಗುವದಕ್ಕೆ ಆಗದ್ದಾಗಿ ಗ್ರಾಮ ಕೋರ್ಟಿಗೆ ಸಮಾಧಾನ ಪಡಿಸಿದರೆ, ಗ್ರಾಮಕೋರ್ಟ ನವರೀ ಡಿಸ್ಮಿಸ್ ಮಾಡಿ ಕೊಟ್ಟ ತೀರ್ಪನ್ನು ಯಾ ಡಿಕ್ರಿಯನ್ನು ರದ್ದು ಪಡಿಸತಕ್ಕದ್ದು; ಮತ್ತು ವ್ಯಾಜ್ಯದ ವಿ ಚಾರಣೆಗೆ ಒಂದು ದಿವಸ ನಿಶ್ಚಯಿಸತಕ್ಕದ್ದು.

> ಗಬುರಿ [illegible] ೧೮ನೇ ಪ್ರಕರಣ [illegible] ವಜಾ [illegible]

೨೧. ಏಕಪಕ್ಷ ವಿಚಾರಣೆಯಿಂದ ಒಂದು ಡಿ ಕ್ರಿ ಕೊಡಲ್ಪಟ್ಟಿರುವಯಾ ವನೊಬ್ಬ ಪ್ರತಿವಾದಿಯು ಸ್ಯಮನ್ಸು ಜಾರಿಯಾಗಲಿಲ್ಲವೆಂಬದಾಗಿ, ಜಾರಿಯಾದ ದಿವಸದಿಂದ ಮೂವತ್ತು ದಿ ವಸಗಳ ಒಳಗಾಗಿ, ಗ್ರಾಮಕೋರ್ಟನವರ ಬಳಿ ಅದನ್ನು ರದ್ದುಪಡಿಸುವದಕ್ಕೆ ಹುಕುಂ ಆಗಬೇ ಕೆಂದು ಅರ್ಜಿ ಮಾಡಬಹುದು, ಮತ್ತು ಸಮ್ಮ ನು ಯಾ ನೋಟೀಸು ಸರಿಯಾಗಿ ಜಾರಿಯಾಗ ಲಿಲ್ಲವಾಗಿ, ಅಥವಾ ವ್ಯಾಜ್ಯವನ್ನು ದನಿವೆಗೆ ಕೆಗ ದ ಗ್ಯ ಪ್ರತಿವಾದಿ ಹಾಜರಾಗುವದಕ್ಕೆ ಯಾ ವಾದರೂ ಸಾಕಾದ ಸಬ್ಬನಿಂದ ಅಡ್ಡಿಯಾಗಿ ಕೋರ್ಟನವರಿಗೆ ಸಮಾಧಾನವಾದರೆ ಡಿಕ್ರಿಯ ನ್ನು ರದ್ದುಪಡಿಸಿ ವ್ಯಾಜ್ಯದ ತನಿಖೆಬಗ್ಗೆ ಒಂ ದು ದಿವಸ ನೇಮಿಸತಕ್ಕದ್ದು.

> ಏಕಪಕ್ಷವಾಗಿ ಪ್ರತಿ ವಾದಿಯಮೇಲೆಕೊಟ್ಟ ಡಿಕ್ರಿ ರದ್ದುಪಡಿಸೋ [illegible]

೨೨. ಅಂಥಾ ದುಸಖಾಸ್ತು ಎದುರು ಕಕ್ಷಿದಾರನ ಮೇಲೆ ನೋಟೀಸ್ ಜಾರಿಮಾಡಿಸಿದ ವಿನಾ ೨೧ನೇ ಪ್ರಕರಣಕ್ಕನುಸಾರವಾದ ಯಾವದೊಂದು ಅರ್ಜಿಯ ಮೇರೆಗೆ ಯಾವ ಡಿಕ್ರಿಯನ್ನು ರದ್ದು ಮಾಡತಕ್ಕದ್ದಾಗಿರುವದಿಲ್ಲ.

> ಎದುರುಕಕ್ಷಿಗೆ ನೋಟೀಸ್ ಕೊಟ್ಟ ವಿನಾ ಡಿಕ್ರಿ ರದ್ದು ಮಾಡಕೂಡದು.

೫ನೇ ಅಧ್ಯಾಯ.

ವ್ಯಾಜ್ಯಗಳ ದರ್ಖಾಸ್ತು, ದಾವೆಗಳನ್ನು ಹಿಂದಕ್ಕೆ ತೆಗೆದುಕೊಳ್ಳೋಣ ಅಥವಾ ರಾಜಿಮಾಡೋಣ, ಸಾಕ್ಷಿಗಾರರನ್ನು ಸಮ್ಮನ್ ಮತ್ತು ವಿಚಾರಣೆ ಮಾಡೋಣ.

೨೩. ಪ್ರತಿವಾದಿಯು ಹಾಜರಾದಲ್ಲಿ ಆತನು ದಾವೇ ಅರ್ಜಿಯಲ್ಲಿರುವ ಹಿದ ದಾವೆಯನ್ನು ಒ ಪ್ಪಿಕೊಳ್ಳುತ್ತಾನೋ ಎಂಬದನ್ನು ಆತನನ್ನ ಕೋರ್ಟನವರು ವಿಚಾರಿಸತಕ್ಕದ್ದು. ಆತನು ದಾವೆಯನ್ನು ಒಪ್ಪಿಕೊಂಡಲ್ಲಿ ಅಥವಾ ವ್ಯಾಜ್ಯ ವನ್ನು ರಾಜೀ ಮಾಡಿಕೊಂಡಲ್ಲಿ, ಅಂಥಾ ಕಬೂ ಲಿ ಯಾ ರಾಜಿಯನ್ನು ಬರಹಮೂಲಕ ಬರಿಸಿ ಉಭಯ ಕಕ್ಷಿಗಾರರು ಅದಕ್ಕೆ ತಮ್ಮ ದಸ್ತಕ ಮಾಡತಕ್ಕದ್ದು. ಮತ್ತು ಕೋರ್ಟನವರು ಅ ದಕ್ಕನುಗುಣವಾದ ತೀರ್ಪು ಕೊಡತಕ್ಕದ್ದು. ಆ ತನು ದಾವೆಯನ್ನು ಒಪ್ಪದಿದ್ದರೆ ಆತನ ಆಕ್ಷೇ ಪವೇನೆಂಬದನ್ನು ಬಾಯಿಮಾತಿಂದ ಅಥವಾ ಬರ ಹಮೂಲಕವಾಗಿ ಹೇಳಬೇಕೆಂಬದಾಗಿ ಆಜ್ಞಾ ಪಿಸತಕ್ಕದ್ದು. ಮತ್ತು ಕೋರ್ಟನವರಿಗೆ ಯುಕ್ತವೆಂದು ತೋರಿದಲ್ಲಿ ಬರಹಮೂಲಕವಾದ ಹೇಳಿಕೆಯನ್ನು ಆತನು ಹಾಜರುಪಡಿಸುವ ಬ ಗ್ಯಾಗಿ ವ್ಯಾಜ್ಯವನ್ನು ಮುಂದಿರಿಸಿಡಬಹುದು.

> ಉಭಯ ಕಕ್ಷಿಗಾರರು ಹಾಜರಾದಲ್ಲಿ ನಡೆಸಬೇಕಾದ ವ್ಯವಹಾರ.

೨೪. ಒಂದು ವ್ಯಾಜ್ಯವನ್ನು ವಾದಿಯು ವಾ ಪಸು ತೆಗೆದುಕೊಳ್ಳಲು ಅಪೇಕ್ಷಿಸುವನಾದರೆ ಆ ವನು ಆ ಸಂಗತಿಯನ್ನ ಕುರಿತು ಕೋರ್ಟಿಗೆ ಬರಹಮೂಲಕ ತಿಳಿಸತಕ್ಕ ದ್ದು. ಆಮೇರಿಗೆ ಕೋರ್ಟನವರು ಅದನ್ನು ಫೈ ಲಿನಿಂದ ತಳ್ಳಹಾಕತಕ್ಕದ್ದು. ಅದೇವ್ಯಾಜ್ಯದ ಹೇತುವಿನಮೇಲೆ ಒಂದು ಹೊಸವ್ಯಾಜ್ಯವನ್ನು ತರಕೂಡದು.

> ವ್ಯಾಜ್ಯವನ್ನು ವಾಪಸು ತೆಗೆದುಕೊಳ್ಳೋಣ.

೨೫. ವ್ಯಾಜ್ಯವನ್ನು ಒಂದು ಪಕ್ಷದವರಿಗೆ ಪ್ರಮಾಣಕ್ಕೆ ಬಿಟ್ಟು ಇತ್ಯರ್ಥವಾಗುವದು ಇ ನ್ನೊಂದು ಪಕ್ಷದವರಿಗೆ ಸಮ್ಮತಿ ಇರುವಹಾದರೆ ಮತ್ತು ಆ ಪಕ್ಷದವರು ಪ್ರಮಾಣವನ್ನು ಮಾಡು ವದಕ್ಕೆ ಕಬೂಲು ಇದ್ದು ಪ್ರಮಾಣ ಮಾಡಿದರೆ ಕೋರ್ಟನವರು ಅಂಥಾ ಪ್ರಮಾಣಕ್ಕನುಸರಿಸಿ ಫೈಸಲ್ ಕೊಡತಕ್ಕದ್ದು.

> ಪ್ರಮಾಣದಮೇಲೆ ವ್ಯಾಜ್ಯವನ್ನು ಇತ್ಯರ್ಥ ಪಡಿ ಸೋಣ.

೨೬. ವಾದಿಯಿಂದ ಪ್ರತಿವಾದಿಗೆ ನ್ಯಾಯವಾ ಗಿ ಸಲ್ಲಬೇಕಾದ ಹಣ ಮತ್ತು ಆತನು ಆಬಗ್ಗೆ ಒಂದು ಗ್ರಾಮ ಮುನಸಿಫ್ ಕೋರ್ಟನ ಲ್ಲಿ ಒಂದು ವ್ಯಾಜ್ಯ ತರಬಹುದಾಂಥಾ ಯಾವದೂ ಬಾಕಿ ಇದ್ದರೂ ಮುಜ್ರೆ ಮಾಡಬೇಕೆಂಬದಾಗಿ ಪ್ರತಿವಾದಿ ಕೇಳಬಹುದು. ಅಂಥಾ ಮುಜ್ರೆ ಯು ಕೊಡಬೇಕೆಂಬದಾಗಿಯೂ ಪಟ್ಟಿಯಲ್ಲಿ ಆಸ್ಪೈರಿ ನೆ ಒಬ್ಬ ಕಕ್ಷಿಗಾರನಿಂದ ಮತ್ತೊಬ್ಬನಿಗೆ ಕೊ ಡಬೇಕಾದ ಮೊಬಲಗಿಗೆ ತೀರ್ಪುಕೊಡತಕ್ಕದ್ದು.

> ಮುಜ್ರೆ.

೨೭. ಪ್ರತಿವಾದಿಯ ಹೇಳಿಕೆ ಆದಮೇಲೆ, ಕೋರ್ಟನವರು ವಿಚಾರಿಸತಕ್ಕದ್ದು. ಮತ್ತು ಕಕ್ಷಿಗಾರರು ಅಪೇಕ್ಷಿಸಿ ಗೈರುಹಾಜರ್ ಇರುವ ಸಾಕ್ಷಿಗಾರರಿಗೆ ಸಮ್ಮನ್ ಹೊರಡಿಸತಕ್ಕದ್ದು.

> ಸಾಕ್ಷಿಗಾರರು ಮೊದಲಾದವರ ಸಮ್ಮನು.

(ಸಶೇಷ)

ADDRESS.

OF THE

DEWAN OF MYSORE

TO THE REPRESENTATIVE ASSEMBLY HELD AT MYSORE,

on Tuesday, the 11th October 1892.

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೧೧ನೇ ಮಂಗಳವಾರದಲ್ಲು ಮೈಸೂರಿನಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ನೇಯಿಗೆ ಚಕ್ಕರಿ—ಕೆಲವು ಕಸಬುದಾರರಿಗೂ ಮತ್ತು ಇತರರಿಗೂ ಸಹಾಯ—ಸಾಮಾನ್ಯವಾಗಿ ಎಲ್ಲ ಜನಗಳು ಸುಲಭವಾಗಿ ಕೆಲಸವನ್ನು ಸಂಪಾದಿಸಲು ಅನುಕೂಲ್ಯಗಳನ್ನು ಕಲ್ಪಿಸಿದ್ದಲ್ಲದೆ, ಕೆಲವು ಕಸಬುದಾರರ ಮತ್ತು ಇತರ ಸಹಾಯಕ್ಕೆ ಅನೇಕ ಏರ್ಪಾಡುಗಳನ್ನು ಮಾಡಿದ್ದೆವು. ಇವರ ಪೈಕಿ ನೇಗೆಯ ಕಸಬಿನವರಿಗೆ ವಿಶೇಷವಾಗಿ ಸಹಾಯವನ್ನು ಕೊಟ್ಟಿತು. ಇದಲ್ಲದೆಯೂ ವಿಶೇಷವಾಗಿ ಹೆಚ್ಚು ಸಬಬು ಇವರು ತಯಾರು ಮಾಡಿದ ಸರಕುಗಳಿಗೆ ಪ್ರಾಯಶಃ ಗಿರಾಕಿಯೇ ತಪ್ಪಿಹೋಗಿತ್ತು. ಅನೇಕ ವಿಧವಾದ ಏರ್ಪಾಡುಗಳನ್ನು ಚನ್ನಾಗಿ ಆಲೋಚಿಸಿ ಬೆಂಗಳೂರು ಡಿಸ್ಟ್ರಿಕ್ಟಿಗೆ ಮೊದಲು ಮಾಡಿದವರು ನೇಯಿಗೆಯವರು ತಯಾರು ಮಾಡಿದ ಪ್ರಕಾರದ ತಯಾರಾದ ಸರಕುಗಳನ್ನು ಸರ್ಕಾರಕ್ಕೆ ಖರೀದಿಗೆ ತೆಗೆದುಕೊಳ್ಳತಕ್ಕ ಏರ್ಪಾಡನ್ನು ಜಾರಿಯಲ್ಲಿ ತಂದದ್ದಾಯಿತು. ಈ ಏರ್ಪಾಡು ಅನುಸರಿಸಿ ಸರ್ಕಾರದವರು ಆಯಾ ಸ್ಥಳದ ಮೆಂಬರುಗಳ ಸಾಹುಕಾರರುಗಳಿಗೆ ವಸ್ತ್ರಗಳ ಉತ್ಪತ್ತಿಯಲ್ಲಿ ಈ ಕರದ ತರಹ ಆದ ಬೆಲೆಗೆ ಕೊಂಡುಕೊಂಡು ಬಜಾರು ದರದ ಪ್ರಕಾರ ಗಿರಾಕಿ ಮಾಡುವಂತೆ ಏರ್ಪಡಿಸಿ ಅಡ್ವಾನ್ಸ್ ಕೊಟ್ಟರು. ಈ ಕೆಲಸಕ್ಕಾಗಿ ಸದರಿ ಸಾಹುಕಾರರುಗಳಿಗೆ ಕೊಡತಕ್ಕ ರುಸುಂ ಕೊಟ್ಟದ್ದಾಯಿತು. ಆದ್ದರಿಂದ ಪ್ರತಿಫಲವಾಗಿ ಅವರು ಅಡ್ವಾನ್ಸ್ ಹಣವನ್ನು ಪೂರ್ತಿಯಾಗಿ ಭರ್ತಿ ಮಾಡಿಕೊಡುವ ಜವಾಬ್ದಾರಿ ವಹಿಸಿದರು. ಘನತೆಯುಳ್ಳ ಜಾಸ್ತಿಯಾಗಿ ವಿಶೇಷವಾಗಿ ದುರ್ಭಿಕ್ಷ ಸಂಭವಿಸುವ ಸಂದರ್ಭದಲ್ಲೆಲ್ಲ ಮೊದಲು ಕಷ್ಟಕ್ಕೆ ಗುರಿಯಾಗುವ ಸ್ವಂತವೊಸನತ್ತಿನಿಂದ ಜೀವನ ಮಾಡುವ ಈ ನೇಯಿಗೆಯವರಿಗೆ ಮೇಲ್ಕಂಡ ಏರ್ಪಾಡು ವಿಶೇಷ ಸಹಾಯಕರವಾಯಿತು. ಬೆಂಗಳೂರು, ದೊಡ್ಡಬಳ್ಳಾಪುರ, ಆನೇಕಲ್, ಕೋಲಾರ, ಮೇಲುಕೋಟೆ, ಮೊಳಕಾಲ್ಮೂರು ಮತ್ತು ನಿಮಿಗೆ ಕೆಲಸದವರು ಇರತಕ್ಕ ಇತರ ಸ್ಥಳಗಳಲ್ಲೂ ಈ ಏರ್ಪಾಡು ಜಾರಿಯಲ್ಲಿತ್ತು. ಹಿಂದಿನ ರುಸುಂ ವಗೈರೆ ಇತರ ಖರ್ಚುಗಳು ಸೇರಿ ಕೊಟ್ಟ ಅಡ್ವಾನ್ಸ್ ಒಟ್ಟು ೪೨,೦೦೦ ರೂಪಾಯಿ ಆಯಿತು. ಈ ಪೈಕಿ ಬಾಕಿಗಳನ್ನು ಮಾರುವುದರಲ್ಲಿ ಇದುವರೆವಿಗೆ ೩೪,೫೫೦ ರೂಪಾಯಿ ವಸೂಲಾಗಿರುತ್ತದೆ. ಬಾಕಿ ಮೊಬಲಗು ವಸೂಲಾಗುತಲಿದೆ. ಸಹಾಯ ಹೊಂದಿದ ಜನಗಳ ಸಂಖ್ಯೆಯನ್ನು ನೋಡಿದಲ್ಲಿ ಅದ್ದರಲ್ಲಿ ಸರ್ಕಾರಕ್ಕೆ ಮೇಲ್ಕಂಡ ಏರ್ಪಾಡಿನಿಂದ ಸಂಭವಿಸಿ ಬರುವ ನಷ್ಟವು ಅತ್ಯಲ್ಪವಾಗಿರುವುದು. ಬೆಂಗಳೂರು ಪಟ್ಟಣದಲ್ಲಿಯೇ ೪,೦೦೦ ಮಗ್ಗಗಳವರು ೧೧,೦೦೦ ನೇಯಿಗೆಯವರಿಗೆ ಸಹಾಯ ಕೊಟ್ಟಿರುತ್ತೆ.

ಚಿಲ್ಲರೆ ಗ್ರಾಮ ನೌಕರರು — ಚಿಲ್ಲರೆ ಗ್ರಾಮ ನೌಕರರಾದ ಮಾದಿಗ, ತೋಟಿ, ತಳವಾರ ವಗೈರೆಯರಿಗೂ ಪ್ರತ್ಯೇಕವಾಗಿ ಸಹಾಯಮಾಡಬೇಕಾದದ್ದು ಆವಶ್ಯಕವಾಗಿತ್ತು. ಈ ನೌಕರರ ಜೀವನಕ್ಕೆ ಸಾಮಾನ್ಯವಾಗಿ ಆಧಾರಭೂತವಾದ ಗ್ರಾಮಸ್ಥರು ಕೊಡತಕ್ಕ ಮಿರಾಸೆಯು ಬೆಳೆಯು ಕೆಟ್ಟುಹೋದ ಸಂವತ್ಸರಗಳಲ್ಲೆಲ್ಲ ನಿಂತುಹೋಗುತ್ತೆ. ಈ ನೌಕರರ ಪೈಕಿ ಪೋಲೀಸ್ ಉಪ್ಪದಗಳಲ್ಲಿ ಕಾವಲು ಕೆಲಸವನ್ನು ಪೋಲೀಸ್ ಸ್ಟೇಷನ್ನದ ಇತರ ಕೆಲಸಗಳನ್ನು ಮಾಡುತ್ತಿದ್ದವರಿಗೆ ಜನವರಿ ತಿಂಗಳಿನಿಂದ ಕಳೆದ ಜೂನ್ ತಿಂಗಳು ವರೆಗೆ ದಿವಸ ೧ಕ್ಕೆ ೧ ರೂಪಾಯಿಗಳವರೆಗೆ ಪಡಿಯೋ ಸಂಬಳವನ್ನು ಕೊಡುತ್ತಿತ್ತು. ಈ ಸಂಬಳವನ್ನು ಬರುವ ಸುಗ್ಗಿಯವರೆಗೆ ನಡೆಸಬೇಕಾಗುತ್ತೆ. ಸ್ಥಳ ಮೇಲೆ ನೌಕರಿಗೆ ಸೇರದ ಇದ್ದವರಿಗೆ ರಿಲೀಫ್ ಕಾಮಗಾರಿಗಳಲ್ಲಿ ಮೇಸ್ತ್ರಿ, ಪಹರೆಗಾರ ವಗೈರೆ ಕೆಲಸಕ್ಕೆ ಇಟ್ಟುಕೊಂಡು ಕೂಲಿ ಕೊಟ್ಟಿತು. ಕೋಲಾರ ಡಿಸ್ಟ್ರಿಕ್ಟಿನಲ್ಲಿ ತಂಗಡಿ ಚಕ್ಕೆ ಮಾಡಿಸುವ ಕೆಲಸದಮೇಲೂ, ಕೋಲಾರ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿ ಸರ್ಕಾರಿ ಡಿಪೋಗಳಿಗೋಸ್ಕರ ಬಂಬುಗಳನ್ನು ಬಡಿಯುವ ಕೆಲಸದಲ್ಲಿಯೂ ಜೋಲೀರನ್ನೂ ಮಾದಿಗರನ್ನೂ ಇಟ್ಟುಕೊಂಡಿತ್ತು.

ಸಿಲೇದಾರರುಗಳು.—ಖುದ್ಧಿಯಾಗಿ ಆಹಾರಾದ್ದರಿಂದ ಸಿಲೇದಾರರುಗಳಿಗೆ ಕೊಟ್ಟ ಸಹಾಯವು ಜುಲೈ ತಿಂಗಳಿಗೆ ೪೬,೦೦೦ ರೂಪಾಯಿಗೆ ಏರಿ ಇತ್ತು. ಮುಂದಿನ ಹಾರ್ವೆಸ್ಟು ಶುರು ಆಗುವವರೆಗೆ ಬಹುಶಃ ಈಮೇಲಿಗೆ ಮುಸಾರದ್ದನ್ನು ಕೊಡುತ್ತಿರಬೇಕಾಗುತ್ತೆ.

ಗ್ರಾಮಾಧಿಕಾರಿಗಳು.—ಗ್ರಾಮಾಧಿಕಾರಿಗಳ ಜೋಡೀ ಹಣದಲ್ಲಿ ಅರ್ಧವನ್ನು ಅವರು ಅಪೇಕ್ಷಿಸಿದಲ್ಲಿ ಖಾವತೀಯಾಗದೇ ಕಾದ ತಾರೀಖಿಗಿಂತ ಮುಂಚಿತವಾಗಿಯೇ ಕೊಡಬೇಕೆಂದು ಹುಕುಂ ಮಾಡಿತ್ತು.

ಧರ್ಮಸಹಾಯ.—ಸಾಮಾನ್ಯವಾಗಿ ಸರಕಾರದಿಂದ ಸಹಾಯವನ್ನಪೇಕ್ಷಿಸುವ ಎಲ್ಲಾ ಜನಗಳಿಗೂ ಸಹಾಯ ಮಾಡುವದಕ್ಕೆ ಮೇಲ್ಕಂಡಮೇರೆ ತಕ್ಕ ಏರ್ಪಾಟುಗಳನ್ನು ಮಾಡಿದ್ದರಿಂದ ಧರ್ಮಸಹಾಯ ಮಾಡಬೇಕಾದ ಪ್ರಸಕ್ತವು ಅತ್ಯಲ್ಪವಾಗಿ ಸಂಭವಿಸಿತು ಮತ್ತು ಅದರ ಆವಶ್ಯಕತೆಯು ವಿಶೇಷವಾಗಿ ಇರಲಿಲ್ಲ.

ಕಂದಾಯದ ರಿಮಿಷನ್ ಅಥವಾ ಖಯಿಂದಾ ಹಿಂಪತೀಬಗ್ಗೆ ಮಾಯಿದೆ ಕೊಡೋಣ.—ಕೆರೆಕಟ್ಟೆಗಳ ತಾಬೇದಾರೀ ಖುಷ್ಕಿ ಬೀಳುಗಳಿಗೆ, ಅಥವಾ ಖುಷ್ಕಿ ಪೈರು ಮಾತ್ರ ಬೆಳೆದು ಆಗಿದ್ದ ಜಮೀನುಗಳ ಕಂದಾಯದಲ್ಲಿ ಅರ್ಧಭಾಗವನ್ನೂ, ಚಿಲ್ಲರೆ ಗ್ರಾಮ ನೌಕರರ ನೌಕರಿ ಇನಾಮತಿ ಜಮೀನುಗಳ ಮೇಲಿನ ಜೋಡಿ ಪೈಕಿ ಅರ್ಧಭಾಗವನ್ನೂ, ಜಮೀನ್ ಇಲ್ಲದ ಕೇವಲ ಬಡವರಾದವರ ಮನೆ ಕಂದಾಯವನ್ನೂ ರಿಮಿಷನ್ ಮಾಡಿ ಸುಮಾರು ಮುಟ್ಟದ ಮೂಲಕ ಅನೇಕರಿಗೆ ಸಹಾಯವನ್ನು ಮಾಡಿರುತ್ತೆ. ಈ ಮೇರೆ ಮಾಡಿದ ಕೊಟ್ಟದ್ದು ಒಟ್ಟು ಸುಮಾರು ೪ ಲಕ್ಷ ರೂಪಾಯಿ ಆಗಬಹುದು. ಇದು ಅಲ್ಲದೆ ೩ ಲಕ್ಷ ರೂಪಾಯಿವರೆಗೆ ಮುಂದೆ ವಸೂಲಾಗುವಬಗ್ಗೆ ಮಾಯಿದೆ ಕೊಟ್ಟಿರುತ್ತೆ. ಆದರೆ ಈ ಮೊಬಲಗಿನಲ್ಲಿ ವಿಶೇಷವಾಗಿ ಉತ್ತರೋತ್ತರ ಮುಂದೆ ಕೊಡಬೇಕಾಗಿ ಬರಬಹುದು.

ಕ್ಷಾಮದ ಖರ್ಚು.—ಕಂದಾಯದಲ್ಲಿ ರಿಮಿಷನ್ ಕೊಟ್ಟದ್ದು ಹೊರತು ಮೇಲ್ಕಂಡ ಇತರ ಸಹಾಯಾರ್ಥವಾದ ಏರ್ಪಾಡುಗಳಿಗೆ ತಗಲಿದ ಒಟ್ಟು ಖರ್ಚನ್ನು ಕೆಳಗೆ ಬರೆಯಲಾಗಿದೆ.

			ರೂ.
೧.	ಗ್ರಾಮದರೋಡ್ ಕಾಮಗಾರಿಗಳಿಗೆ, ತೆಗೆಯಲ್ಪಟ್ಟ ಹೊಂಡ ಜಮೆಯಾಗತಕ್ಕದ್ದಕ್ಕೆ ಮತ್ತು ಅವಸರದ ಸಾಗುವಳಿಗೆ	...	೨,೯೦,೩೦೦
೨.	ಕಟ್ಟಿಯುವ ನೀರಿನ ಬಾವಿಗಳಬಗ್ಗೆ ಸಾಲ	...	೧,೩೩,೩೦೦
೩.	ತೋಟಿ ತಳವಾರಿಗಳಿಗೆ ರುಸುಂ	...	೭೮,೪೦
೪.	ಸಿಲೇದಾರರಿಗೆ ಮುಂಗಡ ಹಣ	...	೫೯,೭೦೦
೫.	ಧರ್ಮಸಹಾಯಕ್ಕಾಗಿ	...	೧,೯೦೦
೬.	ನೇಯಿಗೆಯವರಿಗೆ ಸಹಾಯಕ್ಕಾಗಿ	...	೪೫,೩೦೦
೭.	ನೀರಾವರಿ ಬಾವಿಗಳಿಗಾಗಿ ಸಾಲ ಕೊಡತಕ್ಕದ್ದಕ್ಕೆ	...	೨,೪೦,೦೦೦
೮.	ಸಾಗುವಳಿ ಸೆಟ್ಟ ವಗೈರೆಗೆ	...	೬೩,೪೦೦
೯.	ದೇವಸ್ಥಾನಗಳು, ಆಫೀಸರುಗಳು ವಗೈರೆ	...	೬೩,೦೦೦
		ಜುಮ್ಲಾ	೮,೫೫,೩೦೦

ಮೇಲ್ಕಂಡಮೇರೆ ಖರ್ಚಾದ ೮,೫೫,೩೦೦ ರೂ॥ ಪೈಕಿ ೩,೮೭,೩೦೦ ರೂ॥ ವಾಪಸು ವಸೂಲಾಗತಕ್ಕ ಅಡ್ವಾನ್ಸು ಕೊಟ್ಟಿರುತ್ತೆ. ಈಮೇರೆ ಕ್ಷಾಮ ಬಾಧಾ ನಿವಾರಣೆಬಗ್ಗೆ ಮಾಡಿದ ಸ್ಪೆಷಲ್ ಏರ್ಪಾಡುಗಳಿಗಾಗಿ ಖರ್ಚಾದದ್ದು ಅಲ್ಲದೆಯೇ, ದುರ್ಭಿಕ್ಷ ಪೀಡಿತವಾದ ಪ್ರದೇಶಗಳಲ್ಲಿ ಮರಾಮ್ಮತ್ ಇಲಾಖೆಯಲ್ಲಿ ಕಳೆದ ಡಿಸೆಂಬರು ಮೊದಲಾಗಿ ಜೂನ್‌ವರೆಗೆ (ಬಿಲ್ಡಿಂಗ್ ಅಪನಿಸರಂಜಾಮು ಖರ್ಚುವಿನಾ) ಸಾಧಾರಣವಾದ ಮರಾಮ್ಮತ್ ಕಾಮಗಾರಿಗಳಬಗ್ಗೆ ಸುಮಾರು ೧೦ ಲಕ್ಷವೂ ಹಿಂದೂಪುರದ ರೈಲ್ವೆಗಾಗಿ ಸುಮಾರು ೨ ಲಕ್ಷವೂ ಖರ್ಚಾಗಿ ಇರುತ್ತೆ.

ಕ್ಷಾಮಕಾಲದಲ್ಲಿನ ತಕರಾರುಗಳು ಮತ್ತು ಮರಣ.—ಅನ್ನವಿಲ್ಲದೆ ಪ್ರಾಣಬಿಟ್ಟ ಸಂದರ್ಭವೇ ಇರಲಿಲ್ಲವೆಂಬ ವಿಷಯದಲ್ಲಿಯೂ ಸಂದೇಹ ಸರಾಸರಿ ಮೃತಪಟ್ಟವರ ಸಂಖ್ಯೆಗಿಂತ ಈಬಾರಿ ಮೃತಪಟ್ಟವರ ಸಂಖ್ಯೆಯು ಹೆಚ್ಚಾಗಿ ಇಲ್ಲ ಅಂದರೆ ಹಿಂದಿನ ೫ ವರುಷಗಳ ಸರಾಸರಿಯು ೬೫,೦೦೦ ವಾಗಿದ್ದುದು ಹೋದವರುಷದಲ್ಲಿ ೬೧,೦೦೦ ವಾಗಿತ್ತೆಂಬ ಅಂಶದಲ್ಲಿಯೂ ಸಂತೋಷ ಪಡತಕ್ಕದ್ದಾಗಿರುತ್ತೆ. ಕ್ಷಾಮಕಾಲಗಳಲ್ಲಿ ಸಾಧಾರಣವಾಗಿ ಸಂಭವಿಸುವಂಥ ಚೋರಿದ್ದಾವೆಗಳು ಪ್ರವಾಸು ಹೋದರವರುಷದಲ್ಲಿ ಉದ್ದಿಂಗವಾಗಿ ಸಂಭವಿಸಲಿಲ್ಲ.

ಈ ವಿಷಯವನ್ನು ಪೂರೈಸುವದಕ್ಕೆ ಮುಂಚಿತವಾಗಿ ತಿಳಸತಕ್ಕದ್ದೇನೆಂದರೆ, ಡಿಸ್ಟ್ರಿಕ್ಟುಗಳ ಡೆಪ್ಯುಟಿಕಮಿಷನರುಗಳೂ ಚಿಕ್ಕಬಳ್ಳಾಪುರ ಮತ್ತು ಪ್ರೊಬೇಷನರ್ಸ್ ಸಬ್‌ಡಿವಿಜನ್ ಆಫೀಸರುಗಳೂ ಈ ಕಷ್ಟಕಾಲದಲ್ಲಿ ಅಪಾರ್ಟ್ಮೆಂಟದ ಮೇಲೆ ಹಚ್ಚಿದೂ ಸರ್ಕಾರದ ಕೆಲಸದ ವಿಷಯವಾಗಿ ವಿಶೇಷವಾದ ಶ್ರದ್ಧೆಯನ್ನೂ ತೋರಿಸಿರುತ್ತಾರೆ. ಸದರಿ ಆಫೀಸರುಗಳು ಹೆಚ್ಚಾದ ಹಿಂದಿನ ರಿಪ್ಪೋರ್ಟು ಇಲ್ಲದೇನೆ ಅಂದರೆ ಕ್ಷಾಮನಿವಾರಣ ಕೆಲಸಕ್ಕಾಗಿ ಕೊಟ್ಟದ್ದು ೪ ಜನ ಯೂರೋಪಿಯನ್ ಅಸಿಸ್ಟೆಂಟ್ ಕಮಿಷನರುಗಳು, ೪ ಜನ ಪೋಲೀಸ್ ಆಫೀಸರುಗಳು, ಇವರುಗಳನ್ನು ಮಾತ್ರ ಇಟ್ಟುಕೊಂಡು ಸರ್ಕಾರದವರಿಂದ ವಿಧಿಸಲ್ಪಟ್ಟ ಕ್ಷಾಮನಿವಾರಣಾರ್ಥವಾದ ಏರ್ಪಾಟುಗಳೆಲ್ಲವನ್ನು ಕ್ರಮವಾಗಿ ಜಾರಿಯಲ್ಲಿ ತಂದರು. ಭಕ್ತಿಪೂರ್ವಕವಾಗಿ ಅವರಿಗೆ ಹಾರ್ದಿಕ ಪ್ರಶಂಸೆಯನ್ನು ನಾವು ಬರೆಯುವುದು, ಎಲ್ಲರೂ ಕೆಲಸ ಮಾಡಿರುವ ಸಂದರ್ಭಗಳು ಹೆಚ್ಚಿದ್ದುವು.

ಸಿಕರನ್ನು ಪ್ರತ್ಯೇಕಿಸಿ ಅವರು ಮಾಡಿದ ಕೆಲಸಗಳನ್ನು ಶ್ಲಾಘಿಸುವುದು ಪರಸ್ಪರ ತುಲನೆಯನ್ನು ಭೇದವನ್ನುಂಟು ಮಾಡುವುದಾಗಿ ಆಗುತ್ತೆ. ಆದರೆ ಕಳೆದ ಕಷ್ಟಕಾಲದಲ್ಲಿ ಇತರರಿಗಿಂತಲೂ ವಿಶೇಷವಾದ ಭಾರವನ್ನು ವಹಿಸಿ ಕ್ಷಾಮನಿವಾರಣಾರ್ಥವಾದ ಏರ್ಪಾಟುಗಳನ್ನು ಪರಿಪೂರ್ಣವಾಗಿ ಜಾರಿಯಲ್ಲಿ ತಂದದ್ದಕ್ಕಾಗಿ ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ॥ ವೆಂಕಟವರದೈಯ್ಯಂಗಾರ್ಯ, ಕೋಲಾರದ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರಾದ ಮಿ॥ ಮಾಧ್ವಯಾನವರೂ, ಸರ್ಕಾರದ ಪ್ರಶಂಸೆಗೆ ವಿಶೇಷವಾಗಿ ಪಾತ್ರರಾಗಿರುತ್ತಾರೆ. ಈ ಸಮಯದಲ್ಲಿ ರೆವಿನ್ಯು ಆಫೀಸರುಗಳೊಂದಿಗೆ ಏಕೀಭವಿಸಿ, ಪೂರ್ಣವಾಗಿ ಬಹಳ ಶ್ರದ್ಧೆಯಿಂದ ಕೆಲಸಮಾಡಿದ್ದಕ್ಕಾಗಿ ಎಲ್ಲಾ ಮೈದಾನ್ ಡಿಸ್ಟ್ರಿಕ್ಟುಗಳ ಎಗ್ಸಿಕ್ಯುಟಿವ್ ಎಂಜಿನಿಯರುಗಳನ್ನು ಬಹಳವಾಗಿ ಶ್ಲಾಘಿಸತಕ್ಕದ್ದಾಗಿರುತ್ತೆ.

ಅನುಕೂಲ ಸೂಚಕವಾದ ಈಗಿನ ಕಾಲಸ್ಥಿತಿ.—ಕಳೆದ ಮೇ ಜೂನ್ ತಿಂಗಳಲ್ಲಿ ಸರಾಸರಿಗಿಂತ ಪುಷ್ಕಳವಾಗಿ ಮಳೆ ಬಂದದ್ದರಿಂದ ರಿಲೀಫ್ ಸಂಬಂಧವಾದ ಕೆಲಸಗಳನ್ನೆಲ್ಲಾ ಮುಕ್ತಾಯ ಮಾಡುವದಕ್ಕನುಕೂಲವಾಯಿತು. ಇದುವರೆಗೆ ಬಿದ್ದಿರುವ ಮುಂಗಾರುಮಳೆಯು ಎಂದಿನ ಸರಾಸರಿಗಿಂತಲೂ ಹೆಚ್ಚಾಗಿದೆ. ಪ್ರತಿವರ್ಷವು ಸಾಗುವಳಿ ಆಗುತ್ತಿದ್ದ ಪ್ರಕೃತದ ಜಮೀನು ಸಾಗುವಳಿ ಆಗಿರುವುದಾಗಿ ತಿಳಿಯುತ್ತದೆ. ಮುಂಗಾರು ಖುಷ್ಕಿ ಫಸಲು ಆಗಲೇ ಕೊಯ್ಯಲಾಗುತ್ತಲಿದೆ. ಕಾರ್ತೀಕ ಭತ್ತ ಮತ್ತು ಇತರ ಫಸಲುಗಳು ಒಳ್ಳೆಸ್ಥಿತಿಯಲ್ಲಿವೆ. ದನಕರುಗಳ ಸ್ಥಿತಿಯು ವಿಶೇಷವಾಗಿ ಅನುಕೂಲವಾಗಿರುತ್ತೆ. ಧಾರಣೆಗಳಿಯು ಹಿಂದಿನ ೪ ತಿಂಗಳಿಂದ ಬಹಳ ಇಳಿಯುತ್ತಾ ಬಂದಿರುವದು ಬಹುತೇಕ ಪೂರ್ವದ ಸ್ಥಿತಿಗೆ ಬರಬಹುದಾಗಿ ತೋರುತ್ತೆ. ರಿಲೀಫ್ ಕಾಮಗಾರಿಗಳನ್ನು ವಾಪಸು ಮಾಡಿದ್ದರಿಂದ ಅಪೂರ್ಣವಾಗಿ ನಿಂತಿರುವ ಅನೇಕ ದೊಡ್ಡ ದೊಡ್ಡ ಕಾಮಗಾರಿಗಳನ್ನು ಸ್ಥಳೀಯ ರೆವಿನ್ಯೂ ಆಫೀಸರುಗಳ ಮುಖಾಂತರವಾಗಿ ಸಾಧಾರಣ ಕಾಮಗಾರಿಗಳಂತೆ ಪೂರೈಸಲು ತಜವೀಜು ಇಡಿಸಿದೆ.

ಪಬ್ಲಿಕ್ ವರ್ಕ್ಸ್ ಯಾನೆ ಮರಾಮತ್ ಇಲಾಖೆ.—ರೈಲ್ವೆ.—ಮರಾಮ್ಮತ್ ಇಲಾಖೆಯಲ್ಲಿ ನಡೆದ ಕೆಲಸವನ್ನು ಕುರಿತು ತಿಳಸಬೇಕಾದ್ದೇನೆಂದರೆ ಹೋದವರ್ಷ ತಯಾರಾಗುತ್ತಿದ್ದ ಕಾಮಗಾರಿಗಳ ಪೈಕಿ ಬೆಂಗಳೂರು–ಹಿಂದೂಪುರದ ರೈಲ್ವೆಯು ಬಹಳ ಮುಖ್ಯವಾದದ್ದು. ಇದರಪೈಕಿ ಘಾಟಿನತ್ತೀವರಿಗೆ, ಅಂದರೆ ೨೫ ಮೈಲಿವರೆಗೆ ಕಂಬಿಗಳನ್ನು ಹಾಕಿ ಆಗಿದೆ. ಅದರಾಚೆ ಆಗಬೇಕಾದ ಘಟ್ಟಿ ಕಾಮಗಾರಿಯು ಸಮರ್ಪಕವಾಗಿ ನಡೆಯುತ್ತಲಿದೆ. ಈಲ್ಲೆನ್ನಪೈಕಿ ದೊಡ್ಡಬಳ್ಳಾಪುರದವರೆಗೆ ೨೫ ಮೈಲು ಭಾಗದಲ್ಲಿಯ ಭಾಗವು ಸಿಂಗಾರು ಮಳೆ ಮುಗಿದಕೂಡಲೆ ಆಮದು ರಸ್ತೆಗಾಗಿ ಉಪಯೋಗಿಸುತ್ತೆ. ಅದರ ಬಳಿ ಈ ರೈಲ್ವೆಯು ಸರಹದ್ದಿರವರೆಗೆ ಇರುವ ಭಾಗವು ಬರುವ ಮಾರ್ಚಿ ಆಖೈರಿನೊಳಗಾಗಿ, ಅಂದರೆ ಬ್ರಿಟಿಷ್ ಇಲಾಖೆಯಲ್ಲಿ ಧರ್ಮಾವರದಿಂದ ಹಿಂದೂಪುರದ ವರೆಗಿನ ರೈಲ್ವೆಯು ಪೂರೈಸುವ ಕಾಲಕ್ಕೆ ಸರಿಯಾಗಿ ಪೂರ್ತಿಯಾಗಬಹುದಾದ ನಿರೀಕ್ಷಣೆಯುರುತ್ತೆ. ಈ ಮೇರೆ ಕಾಮಗಾರಿ ನಡೆದಲ್ಲಿ ಬೆಂಗಳೂರು–ಗುಂಟಕಲ್ಲಿನವರೆಗಿನ ಪೂರಾ ಲೈನ್, ಬರುವ ಏಪ್ರಿಲ್ ತಿಂಗಳಲ್ಲಿ ಆಮದಾರಸ್ತೆಬಗ್ಗೆ ಉಪಯೋಗಿಸಬಹುದು. ಈ ಲೈನ್ ಪೈಕಿ ಮೈಸೂರು ಸೀಮೆಯೊಳಗಿರುವ ಭಾಗವನ್ನು ಐರುಸ ನಡೆಸುವ ಬಗ್ಗೆ ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪೆನಿಯವರಿಗೆ ವಹಿಸಲು ಯೋಚಿಸಿದುತ್ತೆ. ಅವರೊಡನೆ ಮಾಡಿಕೊಳ್ಳುವ ಕರಾರಿನಲ್ಲಿ ಕೆಲಸ ನಡೆಸುವದಕ್ಕೆ ತಗಲುವ ಖರ್ಚುಗಳು ಹೊರತು ಉಳಿಯುವ ಪೂರಾ ನಿವ್ವಳ ಉತ್ಪತ್ತಿಯನ್ನೂ ಮೈಸೂರು ಸರಕಾರದವರು ಪಡೆಯತಕ್ಕದ್ದೆಂಬುದು ಮುಖ್ಯಾಂಶವಾಗಿರುತ್ತೆ. ಕರಾರಿನ ಅವಧಿಯು ಅದರಲ್ಲಿ ೩೩ನೇ ವರ್ಷದಮಟ್ಟಿಗೆ ಇರತಕ್ಕದ್ದು.

ಕೋಲಾರದ ಘಾಟಿಗಳವರೆಗೆ ಬ್ರಾಂಚ್ ರೈಲ್ವೆಯ ಕೆಲಸವು ಕೊನೆಗೆಯೇ ಮುಗಿಯಿತು. ಲೈನಿನ ಲಾಗಾಯ್ತು ೫,೭೭,೧೫೭ ರೂಪಾಯಿ ಆಗಿರುತ್ತೆ. ಕ್ರಯ ಸಾಮಾನು ಅಮದಾರಸ್ತೆ ಬಗ್ಗೆ ಬರುವ ಏಪ್ರಿಲ್ ತಿಂಗಳೊಳಗೆ ಸಿದ್ಧವಾಗಬಹುದು. ಆ ಲೈನ್ ಮೇಲೆ ಬಂಡಿಗಳನ್ನು ನಡೆಸುವ ವಗೈರೆ ಕೆಲಸವನ್ನು ಮದರಾಸು ರೈಲ್ವೆ ಕಂಪೆನಿಯವರು, ಬೆಂಗಳೂರು—ಹಿಂದೂಪುರದ ರೈಲ್ವೆಯ ವಿಷಯವಾದ ಕರಾರುಗಳನ್ನನುಸರಿಸಿ ಮೈಸೂರು ಸರಕಾರದ ತರಫಾಸ್ಲಿ ನಡೆಸುವರೆಂದು ಏರ್ಪಾಟು ಆಗಿದೆ.

ಬೀರೂರು—ಶಿವಮೊಗ್ಗ ರೈಲ್ವೆ.—ಬೀರೂರಿಂದ ಶಿವಮೊಗ್ಗೆವರೆಗೆ ಬ್ರಾಂಚ್ ರೈಲ್ವೆ ಹಾಕಲು ೩೭|| ಮೈಲಿ ಘಾಟಿಯುಳ್ಳ ಹಿಂದು ಸಮರ್ಪಕವಾದ ಮಾರ್ಗವು ಗುರ್ತು ಮಾಡಲ್ಪಟ್ಟಿದೆ. ಇದರ ಬಾಬು ಸರ್ವೇ ಪ್ರೋಗ್ರೆಸ್ ಅಂದಾಜು ತಯಾರಿಸುತ್ತಲಿದೆ.

೧೫ನೇ ಮೈಲಿ ಘಾಟಿಯುಳ್ಳ ಮೈಸೂರು ನಂಜನಗೂಡು ರೈಲ್ವೆಯು ಲಾಭಕರವಾಗುವುದು ದಕ್ಷಿಣ ಮಹಾರಾಷ್ಟ್ರ ಕಂಪೆನಿಯವರಲ್ಲಿ ಬರುವ ಆಯ ನಿಂತಿರುವ ಮೊದಲನೆಯ ಪೈಕಿ ಸಾಗಾಣಿ ಮಾಡುವದಕ್ಕೆ ಬದಲಾಗಿ ನಮ್ಮ ಸರಕಾರದ ಹಣದಿಂದಲೇ ಹಾಕುವದನ್ನು ನೋಡಬೇಕೆಂದಲೂ, ಆ ರಸ್ತೆಯ ಮೇಲೆ ಬಂಡಿಗಳನ್ನು ನಡೆಸುವ ವಗೈರೆ ಕೆಲಸವನ್ನು ಸದರಿ ಕಂಪೆನಿಯವರು ಬೆಂಗಳೂರು-ಹಿಂದೂಪುರದ ರೈಲ್ವೆ ವಿಷಯವಾದ ಕರಾರುಗಳನ್ನನುಸರಿಸಿ ಮೈಸೂರು ಸರಕಾರದ ತರಫಾಸ್ಲಿ ನಡೆಸಬೇಕೆಂತಲೂ ಏರ್ಪಾಟಾಗಿದೆ.

ಹಾಸನ ಮತ್ತು ಚಿಕ್ಕಮಗಳೂರಿಗೆ ಬ್ರಾಂಚ್ ರೈಲ್ವೆಗಳನ್ನು ಹಾಕಲು ಉತ್ತಮವಾದ ಮಾರ್ಗಗಳನ್ನು ಕಂಡು ಹಿಡಿಯುವದಕ್ಕಾಗಿ ಇನ್ನೂ ವಿಚಾರ ನಡೆಸಬೇಕಾಗಿರುತ್ತೆ. ಅದನ್ನು ಈ ವರ್ಷ ಮಾಡುತ್ತೆ. ಇದುವರೆಗೆ ನೋಡಿರುವ ವರಿಗೆ ತಕ್ಕಮಟ್ಟಿಗೆ ಸುಲಭವಾದ ಮಾರ್ಗಗಳು ಸಿಕ್ಕಬಹುದಾಗಿ ತೋರುತ್ತೆ.

ಸಾಧಾರಣವಾದ ಮರಾಮತ್ ಕಾಮಗಾರಿಗಳು.—ರೈಲ್ವೆಗಳು ಹೊರತು, ಮರಾಮ್ಮತ್ ಇಲಾಖೆ ಇತರ ಕಾಮಗಾರಿಗಳು ಅಂದರೆ ಸ್ಟೇಟ್ ಫಂಡ್ಸ್ ಯಿಂದ ಹಾಗೂ ಮುನ್ಸಿಪಾಲಿಟಿಯಿಂದಲೂ, ಲೋಕಲ್ ಫಂಡಿನಿಂದ ಮತ್ತು ಇದರಂತೆ ಹಣದಿಂದಲೂ, ನಡೆದ ಕಾಮಗಾರಿಗಳಿಗಾಗಿ ೩೬,೯೪,೦೦೦ ರೂಪಾಯಿಗಳು ಖರ್ಚಾಗಿರುತ್ತೆ. ಇದು ಹೊರತು ಇತರ ಇಲಾಖೆಗಳ ಕಾಮಗಾರಿಗಳಿಗಾಗಿ ೧,೩೦,೦೦೦ ರೂಪಾಯಿಗಳು ಖರ್ಚಾಗಿರುತ್ತೆ. ಜುಮ್ಲಾ ಒಟ್ಟು ೩೮,೨೪,೦೦೦ ರೂಪಾಯಿನ ಮಿಲಿಟರಿ ಬಿಲ್ಡಿಂಗ್ ಇಲಾಖೆಯಲ್ಲಿ ಇದುವರೆಗೆ ಮಾಡಲ್ಪಟ್ಟಿರುವದು ಸಂಖ್ಯೆಯಿಲ್ಲ. ಈ ಬಾಬತು ಖರ್ಚಿನ ವಿವರವನ್ನು ಕೆಳಗಣ ಪಟ್ಟಿಯಲ್ಲಿ ತೋರಿಸಿರುತ್ತೆ.—

ಬಾಬುಗಳ ತಪ್ಸೀಲ್		ಬಜೆಟಿನಲ್ಲಿ ಕಂಡ ಮೊಬಲಗು	ರಿಸೇರ್ವ್	ಜುಮ್ಲಾ
ಮಿಲಿಟೇರಿ ಕಟ್ಟಡಗಳು	...	68,000	4,000	72,000
ಸಿವಿಲ್ ಕಟ್ಟಡಗಳು	..	3,39000	52,000	3,91,000
ರಸ್ತೆಗಳು	...	4,04,000	6,22,000	10,26,000
ನೀರಾವರಿ ಕಾಮಗಾರಿಗಳು	.	11,11,000	1,80,000	12,91,000
ಉಪಯೋಗಕರವಾದ ಚಿಲ್ಲರೆ ಕಾಮಗಾರಿಗಳು	...	2,46,000	13,000	2,59,000
ಅಪನಿಸರಂಜಾಮು	...	...		33,000
ಸಿಬ್ಬಂದಿ ಖರ್ಚು	...	...		6,12,000
ಜುಮ್ಲಾ.		...		36,84,000
ಸರ್ವೇಸ ಯಾನೆ ಪೈಮಾಷಿ ಜಮಾ ಖರ್ಚು	...	...		10,000
ಜುಮ್ಲಾ.		..		36,94,000
ಫಾರೆಸ್ಟು, ವಿದ್ಯಾಭ್ಯಾಸದ ಇಲಾಖೆ ಮುಜರಾಯಿ, ಇನ್ಸ್ಟಿಟ್ಯೂಷನ್ ವಗೈರೆ ಲೆಕ್ಕಕ್ಕೆ ಖರ್ಚು ಹಾಕತಕ್ಕದ್ದು, ಮರಾಮತ್ ಇಲಾಖೆ ಬಜೆಟಿನಲ್ಲಿ ಸೇರದೆ ಬರುವ ಕಾಮಗಾರಿಗಳು				1,30,000
ಒಟ್ಟು ಜುಮ್ಲಾ.				38,24,000

ಮಿಲಿಟೇರಿ ಇಲಾಖೆ ಕಟ್ಟಡಗಳಪೈಕಿ, ಅವರು ಡಿಸ್ಟ್ರಿಕ್ಟ್ ಕಸಬಾ ಜಾಗಗಳಲ್ಲಿ ಸವಾರ್ ಮತ್ತು ಖಾಸು ಇಲಾಖೆ ನೌಕರರು ಹಾಲಿ ವಾಸವಾಗಿರುವ ಮನೆಗಳು ಕೇವಲ ಹೀನಸ್ಥಿತಿಯಲ್ಲಿರುವದರಿಂದ ಅವುಗಳನ್ನು ಅಭಿವೃದ್ಧಿ ಮಾಡುವದರಲ್ಲೂ, ವಿಸ್ತರಿಸುವದರಲ್ಲೂ, ವಿಶೇಷವಾದ ಖರ್ಚು ತಗಲಿರುತ್ತೆ. ಮುಂದೆ ಬರುವ ಕೆಲವು ಸಾಲುಗಳವರೆಗೆ ಮಿಲಿಟೇರಿ ಇಲಾಖೆಗೆ ಆವಶ್ಯಕವಾದ ಕಾಮಗಾರಿಗಳ ಪಟ್ಟಿಯು ತಯಾರಾಗಿರುವದಲ್ಲದೆ, ಅಂಥಾ ಕಾಮಗಾರಿಗಳಿಗೋಸ್ಕರ ಕೆಲವು ಮೊಬಲಗನ್ನು ಪ್ರತ್ಯೇಕವಾಗಿ ಮೀಸಲು ಇಡತಕ್ಕದ್ದು ಆವಶ್ಯಕವಾಗಿದೆ. ಬೆಂಗಳೂರು ಪಟ್ಟಣದಲ್ಲಿರುವ ಇಂಪೀರಿಯಲ್ ಸರ್ವಿಸ್ ರೆಜಿಮೆಂಟ್ ಮತ್ತು ತಪ್ಪಾಲುವಾದ ಟ್ರಾನ್ಸ್‌ಪೋರ್ಟ್ ಕೋರಿಗೆ ಸೇರಿದ ಸವಾರರಿಗೆ ವಾಸದ ಮನೆಗಳನ್ನೂ ಕುದುರೆಗಳಿಗೆ ತಬೇಲೆಗಳನ್ನೂ ಕಟ್ಟಿಸುವಬಗ್ಗೆ ೪ ಲಕ್ಷ ರೂಪಾಯಿ ಖರ್ಚಿನ ಅಂದಾಜು ಶ್ರೀಮನ್ ಮಹಾರಾಜ ಸರಕಾರದವರ ಆಲೋಚನೆಯಲ್ಲಿದೆ.

ಸಿವಿಲ್ ಕಟ್ಟಡಗಳ ಕಾಮಗಾರಿ ಖರ್ಚಿನ ಪೈಕಿ ಕೆಲವುಭಾಗ ಸಿವಿಲು ಇಲಾಖೆ ಅನೇಕ ಕಡೆಗಳಲ್ಲಿ ಉಪಯೋಗವಾದ ಕಾಮಗಾರಿಗಳಿಗೂ, ವಿಶೇಷವಾಗಿ ಮೈಸೂರು ಪಟ್ಟಣದಲ್ಲಿ ಮಹಾರಾಜಾ ಕಾಲೇಜಿನ ಇಂಗ್ಲೀಷು ಪಾಠಶಾಲೆ, ಪಬ್ಲಿಕ್ ಆಫೀಸು ಕಚೇರಿಯ ಗವರ್ನಮೆಂಟ್ ಪ್ರೆಸ್ ಈ ಕಟ್ಟಡಗಳನ್ನು ಪೂರ್ತಿ ಮಾಡುವದಕ್ಕೂ ಉಪಯೋಗಿಸಲ್ಪಟ್ಟಿತು. ಈ ಆಸ್ಪತ್ರೆಗಳೇ ಮೊದಲಾದ ಅನೇಕ ಚಿಲ್ಲರೆ ಕಟ್ಟಡಗಳ ಕಾಮಗಾರಿಗಳು ನಡೆಸಲ್ಪಟ್ಟವು.

BANGALORE — Printed and published at the KARNATAKA PRESS, No. 40, [illegible] PETTAH — 1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX] BANGALORE:—MONDAY, NOVEMBER 21, 1892. [No. 46.

ಸಂಪುಟ ೧೯.] ಬೆಂಗಳೂರು:—[illegible] ನವಂಬರ್ ೨೧ನೇ ತಾರೀಖ್ ಸೋಮವಾರ. [ಸಂಖ್ಯೆ ೪೬.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು.

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಕಾಲ್ ಗಳ್ಳ	ಸ್ಥಳದವರಿಗೆ ಮುಂಗಡ	ಪರಸ್ಥಳದವರಿಗೆ ಸಹಿತ
ಮುಂಗಡ[illegible]	8—0—0	9—0—0
[illegible] ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡ[illegible]	4—0—0	5—0—0
[illegible] ,,	5—0—0	6—0—0

ಈ ಪತ್ರಿಕೆಗೆ [illegible]

ಪ್ರಕಟನೆಯ ರಿವಾಜ್.

[illegible] ೦—೨—೦

[illegible] ೦—೧—೦

[illegible]

ADVERTISEMENTS

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ಬೆಂಗಳೂರು, [illegible]

ನೋಟಿಸ್.

ಬೆಂಗಳೂರು ಕರ್ನಾಟಕ ಪ್ರೆಸ್.

[illegible]

ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟಿಸ್.

ಗಣೇಶ ರಾಮಚಂದ್ರ ಕರ್ಕರೆ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟ್ ಮೂಲಕ ರಕ್ತ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರದ ಔಷಧಗಳು, ಪುಸ್ತಕಗಳು, ಮುತ್ತುಗಳು, [illegible] ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು [illegible]

ವಿಳಾಸ,—ಗಣೇಶ ರಾಮಚಂದ್ರ ಕರ್ಕರೆ, ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್, [illegible]

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ನಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಬೆಲೆಯನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟೇಜ್ ಸಹಿತ	ರೂ	ಆ	ಪೈ
[illegible] ...		[illegible]	೦	೦

ಕನ್ನಡ ಗ್ರಂಥಗಳು.

[illegible] ...	[illegible]	೦	[illegible]
[illegible]	[illegible]	[illegible]	೦
[illegible] ...	೧	[illegible]	೦
[illegible] ...	೦	[illegible]	೦
[illegible] ...	೦	[illegible]	೦
[illegible] ...	೦	[illegible]	೦
[illegible] ...	೦	[illegible]	೦
[illegible] ...	೦	[illegible]	[illegible]
[illegible] ...	೦	೧	[illegible]
[illegible] ...	೦	೧	೦
[illegible] ...	೦	೧	೦
[illegible] ...	೦	೧೨	೦
[illegible] ...	೦	[illegible]	೦
,, [illegible] ...	೧	[illegible]	೦
,, [illegible] ...	೦	[illegible]	೦
,, [illegible] ...	೧	೦	೦
,, [illegible] ..	೦	[illegible]	೦
,, [illegible] ...	೦	೧	೦
,, [illegible]	೦	[illegible]	[illegible]
[illegible] ...	೦	[illegible]	೦
[illegible] ..	೦	[illegible]	೦
[illegible] ...	೦	[illegible]	೦
[illegible] ..	೦	[illegible]	೦
[illegible] ...	೦	೦	[illegible]

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಹಿಂದೆ ಬರ್ಮ್ಮಾ ದೇಶದಲ್ಲಿ ಸಿವಿಲ್ ಸರ್ಜನ್ ರಾಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ [illegible] ಗಳ ಸ್ವರೂಪವನ್ನರಿತು ಚಿಕಿತ್ಸೆ ಮಾಡುವದಕ್ಕೆ ಒಂದು ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸದರಿಯವರು ಪ್ರತಿದಿನದಲ್ಲೂ [illegible] ರೋಗಿಗಳಿಗೂ, ಮುಖ್ಯವಾಗಿ ಕಣ್ಣಿನ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು.

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ|| ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ [illegible] ರುಸುಂ ಕೊಡಬೇಕು.

C. G. R. NAYLOR,
M. R. C. S., ENGLAND,
Surgeon.

ಕೊಡಗು ಫಾರೆಸ್ಟು [illegible]

ನೋಟೀಸ್.

1892 ನೇ ಇಸವಿ ನವೆಂಬರ್ ತಾರೀಖ್ 13.

[illegible] 1892 ನೇ ಇಸವಿ ಡಿಸಂಬರ್ ತಾರೀಖ್ 11 [illegible]

60 [illegible]	1800 ಘ.	[illegible]
490 [illegible]	11100 ಘ.	
180 [illegible] ...	4200 ಘ.	

ಷರತ್:—ಸನ್ 1889 ನೇ ಇಸವಿ ಡಿಸಂಬರ್ ತಾರೀಖ್ 19 [illegible]

G. H. FOSTER,
[illegible]

ಪ್ರಕಟನೆ.

"ಆಂಗ್ಲೋ ಇಂಡಿಯನ್ ಪಾಕೆಟ್ ಡೈರಿ"

[illegible]

[illegible]

ನೋಟೀಸು.

ಕೊಡಗುದೇಶದ ಸಂಧದ ಹರಾಜು.

[illegible]

[illegible], [illegible],	G. H. FOWLER, Dy. Conservator of Forests, Coorg

ನೋಟೀಸು.

ಇದರಿಂದ ಸಮಸ್ತ್ರರಿಗೂ ತಿಳಿಯಪಡಿಸುವದೇನಂದರೆ —

[illegible]

ಹುರುಳಿ.

ಸಣ್ಣಬತ್ತ.

ರಾಗಿ ಹುಲ್ಲು.

ಬಸೀ ಹುಲ್ಲು.

[illegible], [illegible], [illegible]	HAROLD HOAD, Captain, Sup. H. R. Depot

ನೋಟೀಸು.

ಗುಪ್ಪ ನಾಕ್ಷತ್ರಮಾರ್ಗದ ಸ್ವಾಮಿ ಬ್ಯಾಂಕ್ (ಲಿಮಿಟೆಡ್) ಆಫೀಸು.

ಇದರಿಂದ ಸಮಸ್ತ್ರರಿಗೂ ತಿಳಿಯಪಡಿಸುವದೇನಂದರೆ —

[illegible]

Bangalore City Municipality.

ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

[illegible]

[illegible]

K. SRINIVASA RAO, Vice President.

THE MONEY MARKET

[illegible] 1892.

[illegible], 106 2-0 [illegible] 106-4-0 [illegible],

[illegible], (500) [illegible]

[illegible] 95 [illegible],

[illegible]

[illegible], (100) [illegible] 160 [illegible] 165 [illegible]

[illegible], 16-2-0

[illegible]

[illegible], 1 s. 8 1/32 d.

[illegible], 1 s. 3 31/32 d.

[illegible], 1 s. 2 3/4 d.

ಕರ್ನಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, NOVEMBER 21, 1892.

[illegible]

H. E. THE VICEROY IN BANGALORE

[illegible]

[illegible]

A SAD FATAL ACCIDENT

[illegible]

Occasional Notes.

The Dewan of Cochin [illegible]

Periyapallium festival.— [illegible]

A good living as a prophet.— [illegible]

University examinations.— [illegible]

The Dewan Bahadur Raghunath Rao [illegible]

Congress meetings.— [illegible]

Appointment of a Commission.— [illegible]

A Mahar under sentence of death.— [illegible]

[illegible]

LOCAL AND PROVINCIAL NEWS.

The Resident.— [illegible]

Holidays.— [illegible]

A meeting.— [illegible]

The weather.— [illegible]

[illegible]

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖೆ.

ಕಳೆದವಾರದ ಶೇಷವು

೩೪. ಗ್ರಾಮ ಮುನಸೀಫ್‌ಕೋರ್ಟಿನ ಅಧಿಕಾರ ಸರಹದ್ದಿನೊಳಗಾಗಿ ವಾಸವಾಗಿರುವ ಯಾವ ಸಾಕ್ಷಿಗಾರನನ್ನಾದರೂ ಬರಹ ಮೂಲಕವಾಗಿಯಾಗಲಿ, ಬಾಯಿಮಾತಿನಿಂದಾಗಲೀ ಸಮ್ಮನ್ಸ್ ಮಾಡಬಹುದು. ಕೋರ್ಟಿನವರ ಅಧಿಕಾರ ಸರಹದ್ದಿನಿಂದಲೂ ಐದು ಮೈಲು ದೂರದೊಳಗಾಗಿ ವಸಿಸುವ ಸಾಕ್ಷಿಗಾರನಿಗೆ ಬರಹಮೂಲಕವಾಗಿ ಸಮ್ಮನ್ಸ್ ಮಾಡತಕ್ಕದ್ದು. ಮತ್ತು ಅಂಥಾ ಸಮ್ಮನ್ಸ್ ಸದರೀ ಸಾಕ್ಷಿಗಾರನು ಯಾವ ಗ್ರಾಮ ಮುನಸೀಫನ ಚಕ್ಕುಬಂದಿಯೊಳಗೆ ವಾಸವಾಗಿರುತ್ತಾನೋ ಆ ಗ್ರಾಮ ಮುನಸೀಫನ ದ್ವಾರಾ ಸಾವರು ಮಾಡತಕ್ಕದ್ದು. ಇಷ್ಟು ಸಾಕ್ಷಿಗಾರನು ಅಧಿಕಾರ ಸರಹದ್ದಿನ ಐದು ಮೈಲುಗಳ ಹೊರಗೆ ವಸಿಸುತ್ತಾನಾದರೆ ಬರಹಮೂಲಕ ಸವಾಲುಗಳನ್ನು ತಯಾರಿಸಿ ಕೊಡಬೇಕೆಂದು ಸಾಕ್ಷಿಗಾರರಿಗೆ ಕೋರ್ಟಿನವರು ಆಜ್ಞಾಪಿಸಬಹುದು. ಅಂಥಾ ಸವಾಲುಗಳನ್ನು ಸದರೀ ಸಾಕ್ಷಿಗಾರನು ಯಾವ ಗ್ರಾಮ ಮುನಸೀಫನ ಅಧಿಕಾರ ಸರಹದ್ದಿನೊಳಗೆ ವಾಸವಾಗಿರುತ್ತಾನೋ ಆ ಗ್ರಾಮ ಮುನಸೀಫನ ಬಳಿಗೆ ಒಂದು ಕಾಗದ ಸಹಿತ ಕಳುಹಿಸಿ ಕೊಡತಕ್ಕದ್ದು. ಆತನು ಸದರೀ ಸಾಕ್ಷಿಗಾರನನ್ನು ಕರೆತರಿಸಿ ಸಮ್ಮನ್ಸ್ ನೀಡಿ ಕರೆಸಿಕೊಂಡು ಸದರೀ ಸವಾಲುಗಳನ್ನು ಕೇಳಿ ಆತನ ಉತ್ತರಗಳನ್ನು ವ್ಯಾಜ್ಯ ಬಾಕಿ ಇರುವ ಕೋರ್ಟಿಗೆ ವಾಪಸು ಮಾಡತಕ್ಕದ್ದು.

(ಸಾಕ್ಷಿಗಾರರಿಗೆ ಸಮ್ಮನ್ಸ್ ಮಾಡುವ ಬಗ್ಗೆ.)

(ಸವಾಲುಗಳ ಮೂಲಕ ಸಾಕ್ಷಿ ತೆಗೆದುಕೊಳ್ಳುವುದು.)

೩೫. ಸಮ್ಮನ್ಸ್ ಪಟ್ಟ ಮನುಷ್ಯನು ಹಾಜರು ಆಗಿ ಸಾಕ್ಷ್ಯವನ್ನು ಕೊಡಬೇಕೆಂದಾಗಲಿ, ಅಥವಾ ಯಾವದಾದರೂ ದಸ್ತಾವೇಜನ್ನು ಹಾಜರು ಮಾಡಬೇಕೆಂದಾಗಲಿ, ಹಾಜರು ಪಡಿಸುವುದಕ್ಕೆ ಮಾಡಬೇಕೆಂದಾಗಲೀ ಸಮ್ಮನ್ಸಿನಲ್ಲಿ ಆಜ್ಞಾಪಿಸಬಹುದು.

(ಹಾಜರಾಗುವ ಬಗ್ಗೆ ಮತ್ತು ಸಾಕ್ಷ್ಯವನ್ನು ಕೊಡತಕ್ಕ ಬಗ್ಗೆ ಅಥವಾ ದಸ್ತಾವೇಜನ್ನು ಹಾಜರು ಪಡಿಸುವ ಬಗ್ಗೆ ಸಮ್ಮನ್ಸ್.)

೩೬. ಊರು ರಿವಾಜು ವ ಪದ್ಧತಿಪ್ರಕಾರ ಬುರುಗವಾಗಿ ಕಾಣಿಸಿಕೊಳ್ಳಕೂಡದಂಥವರಾದ ಹೆಂಗಸರನ್ನಾಗಲೀ ಅಥವಾ ಕೋರ್ಟಿಗೆ ಖುದ್ದು ಹಾಜರಾಗುವಿಕೆ ಯಿಂದ ವಿನಾಯಿಸಲ್ಪಟ್ಟ ಮನುಷ್ಯರನ್ನಾಗಲೀ ಅಸ್ವಸ್ಥತೆ ಯಾ ಶರೀರದಲ್ಲಿ ಅಶಕ್ತಿ ಇದ್ದು ಭಾರಿ ಅನಾನುಕೂಲತೆಯಿಂದ ಅಲ್ಲದೆ ಹಾಜರಾಗಕೂಡದಂಥ ಯಾವನೊಬ್ಬ ಮನುಷ್ಯನನ್ನಾಗಲೀ ಸಮ್ಮನ್ಸ್ ಮಾಡಕೂಡದು; ಪರಂತು ಅಂಥವರ ಸಾಕ್ಷ್ಯವು ಅಗತ್ಯವಿದ್ದರೆ, ಅವರನ್ನು ಅವರ ವಾಸಸ್ಥಾನಕ್ಕೆ ಹೋಗಿ ಗ್ರಾಮ ಕೋರ್ಟಿನವರು ವಿಚಾರಣೆ ಮಾಡತಕ್ಕದ್ದು.

(ಖುದ್ದು ಹಾಜರಾಗುವಿಕೆಯಿಂದ ಕೆಲವು ಹೆಂಗಸರನ್ನು ವ ಇತರರನ್ನು ವಿನಾಯಿಸುವಿಕೆ.)

೩೭. ಸಾಕ್ಷಿಗಾರರನ್ನು ಪ್ರಮಾಣಪೂರ್ವಕವಾಗಿ ಯಾ ವಾಕ್ಪ್ರಮಾಣಪೂರ್ವಕವಾಗಿ ವಿಚಾರಣೆ ಮಾಡತಕ್ಕದ್ದು. ಪರಂತು ಗ್ರಾಮ ಕೋರ್ಟಿನವರು ಸಾಕ್ಷಿಗಾರರ ವಾಙ್ಮೂಲಗಳನ್ನು ಪೂರ್ತಿಯಾಗಿ ಬರೆಕೊಳ್ಳುವ ಅಗತ್ಯವಿಲ್ಲ; ಆದರೆ ಪ್ರತಿ ಸಾಕ್ಷಿಯ ವಿಚಾರಣೆ ನಡೆಯುತ್ತಿರುವಾಗ ಅವನು ಉಚ್ಚರಿಸತಕ್ಕಂಥ ಸಾರಾಂಶವನ್ನು ಒಂದು ಯಾದಾಸ್ತಿನಲ್ಲಿ ಗ್ರಾಮ ಮುನಸೀಫನು ತಯಾರಿಸಬೇಕು; ಅಂಥಾ ಯಾದಾಸ್ತು ಗ್ರಾಮ ಮುನಸೀಫನಿಂದ ಬರೆಯಲ್ಪಟ್ಟ ದಾಖಲು ಮಾಡಲ್ಪಡದೇಯಿಲ್ಲದೆ ಗ್ರಾಮ ಕೋರ್ಟಿನ ಇತರ ಮೆಂಬರುಗಳು ಸಹ ಆ ಯಾದಾಸ್ತಿಗೆ ತಮ್ಮ ರುಜುಗಳನ್ನು ಹಾಕಬೇಕು.

(ಸಾಕ್ಷಿಗಾರರ ವಿಚಾರಣೆ.)

೩೮. ಸಾಕ್ಷಿಗಾರರು ಕಚೇರಿಗೆ ರಾಜಿಯಿಂದ ಫಡಚೆ ಮಾಡಿಕೊಂಡರೆಂಬ ಸಂಭವ ಕೋರಿದರೆ ಅಥವಾ ಇತರ ಸಾಕಾರ ಸಬಬು ಇದ್ದರೆ, ವ್ಯವಹಾರತೆಯು ಯಾವ ಕಾಲದಲ್ಲಾದರೂ ಸಾಕ್ಷಿಗಾರರ ಸಮಕ್ಷಮದಲ್ಲಿ ಯಾ ಪ್ರತಿವಾದಿಯು ಹಾಜರಾಗದ ಸಂಗತಿಗಳಲ್ಲಿ ವಾದಿಯ ಸಮಕ್ಷಮದಲ್ಲಿ ತೀರ್ಪುಮಾಡತಕ್ಕ ಯಾವ ಯಾವನೊಂದು ದಿವಸಕ್ಕೆ ವ್ಯಾಜ್ಯದ ತನಿಖೆಯನ್ನು ಗ್ರಾಮ ಕೋರ್ಟಿನವರು ಮುಂದಿರಿಸಬಹುದು. ಅಂಥಾ ದಿವಸದಲ್ಲಿ ಕಕ್ಷಿಗಾರರಾಗಲೀ ಯಾ ಅವರಪೈಕಿ ಯಾವನೊಬ್ಬನಾಗಲೀ ಹಾಜರಾಗದ್ದರೆ ಆ ಸಂದರ್ಭವನ್ನು ಕುರಿತು ೩೦ನೇ ವ ೩೧ನೇ ಪ್ರಕರಣಗಳಿಂದ ನಿರ್ದೇಶಿಸಲ್ಪಟ್ಟ ರೀತಿಗಳ ಪೈಕಿ ಒಂದರಮೇರೆಗೆ ಯೋಕದ್ದೋ ಅದನ್ನು ಗ್ರಾಮ ಕೋರ್ಟಿನವರು ತೀರ್ಪು ಮಾಡುವದಕ್ಕೆ ಉಪಕ್ರಮಿಸಬಹುದು. ಅಥವಾ ಕೆಳಗೆ ಯುಕ್ತ ತೋರುವಂಥ ಇತರ ಯಾವ ಹುಕುಂ ಆದರೂ ಕೊಡಬಹುದು.

(ಒಂದೇ ದಿವಸದಿಂದ ಭಾಷಿತವಾದ ಯಾ ಇತರ ಸಾವಕಾಶ ಬಗ್ಗೆ ವ್ಯವಹಾರ ನಿಲ್ಲಿಸುವಿಕೆ.)

೬ನೇ ಅಧ್ಯಾಯ.

ಡಿಕ್ರಿ ವ ಅದರ ಅಮಲ್ದಾರಿ ಕುರಿತು.

೪೩. ಕಕ್ಷಿಗಾರರ ಯಾ ಅವರ ಮುಖಾಂತರ ಹೇಳಿಕೆಯನ್ನು ಕೇಳಿದ ಮೇಲೆ ಉಭಯ ಪಕ್ಷದ ರುಜುವಾತನ್ನು ಆಲೋಚಿಸಿದನಂತರ ನ್ಯಾಯಕ್ಕು ನೀತಿಗೂ ಒಳ್ಳೇ ಮನಸ್ಸಾಕ್ಷಿಗೂ ಸರಿಯಾಗಿ ತೋರುವ ಡಿಕ್ರಿಯನ್ನು ಗ್ರಾಮ ಕೋರ್ಟಿನವರು ಕೊಡತಕ್ಕದ್ದು.

(ವಿಚಾರಣೆ ಪೂರ್ಣವಾದ ಮೇಲೆ ತೀರ್ಪುಕೊಡೋಣ.)

೪೪. ಮೊಕದ್ದಮೆಯ ನಂಬರು, ಕಕ್ಷಿಗಾರರ ಹೆಸರುಗಳು, ದಾವೆಯ ತಪ್ಸೀಲು, ಹಾಜರಾದ ಸಾಕ್ಷಿಗಾರರ ಹೆಸರುಗಳು, ಪಿರ್ಯಾದಿದಾರನ ದಸ್ತ್ರಿಜೂಗಳು ಇದ್ದರೆ ಅವುಗಳ ಮೇಲಣ ತೀರ್ಪು ಮತ್ತು ಅಂಥಾ ತೀರ್ಪಿಗೆ ಆಧಾರವಾದ ಕಾರಣಗಳು ಕೂಡಾ ಡಿಕ್ರಿಯಲ್ಲಿ ನಮೂದಿರತಕ್ಕದ್ದು. ಈರ್ಪುನಿಸಿದ ಹಣದ ಯಾ ಕೊಡಬೇಕಾದ ಚರಸ್ವತ್ತಿನ ತಪ್ಸೀಲು ಮತ್ತು, ಅಂಥಾ ಚರಸ್ವತ್ತು ಕೊಡುವದಕ್ಕೆ ತಪ್ಪಿದರೆ ಚರಸ್ವತ್ತಿನ ಬದಲಿಗೆ ಕೊಡತಕ್ಕ ಮೊಬಲಗು ಮತ್ತು ಖರ್ಚಿನ ಮೊಬಲಗು ವ ಅಂಥಾ ಖರ್ಚು ಯಾವ ಕಕ್ಷಿಗಾರರಿಂದ ಮತ್ತು ಯಾವ ದಾವಾಸ್ಥೆಯಿಂದ ಪಾವತಿ ಆಗತಕ್ಕದ್ದೆಂಬದನ್ನು ಸಹ ನಮೂದಿಸತಕ್ಕದ್ದು.

(ಡಿಕ್ರಿಯಲ್ಲಿ ಇರಬೇಕಾದ ಮಾತುಗಳು.)

ಡಿಕ್ರಿ ಹೇಳಿದ ದಿವಸದ ತಾರೀಖು ವ ಗ್ರಾಮ ಮುನಸೀಫನ ದಸ್ಕತ್ತು ಡಿಕ್ರಿಗೆ ಇರತಕ್ಕದ್ದು. ನ್ಯಾಯಾಧಿಪತಿಗಳ ಸಭೆಯಲ್ಲಿ (ಬೆಂಚಿ ಆಗಿ) ಒಂದು ವ್ಯಾಜ್ಯವು ತನಿಖೆಯಾಗಿ ತೀರ್ಮಾನಿಸೋಣವಾದರೆ ಡಿಕ್ರಿಗೆ ಅಂಥಾ ನ್ಯಾಯಾಸನದಲ್ಲಿದ್ದ ಜಡ್ಜಿಯರ ಪೈಕಿ ತೀರ್ಪಿಗೆ ಸಮ್ಮತ ಕೊಡುವವರು ದಸ್ಕತ್ತು ಹಾಕಿರತಕ್ಕದ್ದು. ಸದರೀ ಬೆಂಚಿನ ಮೆಂಬರುಗಳ ಪೈಕಿ ಡಿಕ್ರಿಗೆ ಆಕ್ಷೇಪಿಸುವವನು ಅದನಿಗೆ ಹಾಗೆ ನಡಿಸಲು ಇಷ್ಟವಿದ್ದರೆ ತನ್ನ ಭಿನ್ನಾಭಿಪ್ರಾಯವನ್ನು ಬರಹಮೂಲಕ ದಾಖಲು ಮಾಡಲು ಹಕ್ಕುಳ್ಳವನಾಗಿ ಇರತಕ್ಕದ್ದು. ಅರ್ಜಿ ಮಾಡಿಕೊಂಡಲ್ಲಿ ಡಿಕ್ರಿಯ ನಕಲನ್ನು ಪಡಕೊಳ್ಳುವದಕ್ಕೆ ಪ್ರತಿ ಕಕ್ಷಿಗಾರನು ಅರ್ಹನಾಗಿರತಕ್ಕದ್ದು.

೪೫. ದಾವೆ ತಾರೀಖಿನಿಂದ ವಸೂಲಿ ತಾರೀಖಿನವರಿಗೆ ವರುಷಕ್ಕೆ ಶೇಕಡಾ ೧೨ಕ್ಕೆ ಮೀರದಬಡ್ಡಿಯನ್ನು ತೀರ್ಪುಪಡಿಸ್ಯ ಕೊಂಡವ್ಯಾಜ್ಯಗಳಲ್ಲಿ ಗ್ರಾಮ ಕೋರ್ಟಿನವರು ಕೊಡಿಸಬಹುದು.

(ಡಿಕ್ರಿಯಲ್ಲಿ ಬಡ್ಡಿ ಕೊಡಿಸ ಬಹುದು ಯಾ ಕಾಲಾಂತರದ ವಸೂಲಿಗೆ ಅಪ್ಪಣೆ ಹಾಕ ಬಹುದು.)

೪೬. ದಾವತಿಬಗ್ಗೆ ಗ್ರಾಮ ಕೋರ್ಟಿನವರು ಡಿಕ್ರಿ ಕೊಡುವಾಗ್ಗೆ ಡಿಕ್ರಿ ಮೊಬಲಗನ್ನು ಕಂತುಗಳಿಂದ ಮೇಲೆ ಹೇಳಿದ ದರದ ಬಡ್ಡಿ ಸಮೇತ ಯಾ ಬಡ್ಡಿಯಿಲ್ಲದೆ ಕೊಡಬೇಕೆಂತ ವಿಧಿಸಬಹುದು.

(ಸಶೇಷ)

ADDRESS

OF THE

DEWAN OF MYSORE

TO THE REPRESENTATIVE ASSEMBLY HELD AT MYSORE,

on Tuesday, the 11th October 1892

೧೮೯೨ನೇ ಇಸವಿ ಅಕ್ಟೋಬರ್ ತಾರೀಖು ೧೧ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ)

ರಸ್ತೆಗಳ ವಿಷಯ.—ಒಟ್ಟು ಸುಮಾರು ೫,೧೦೦ ಮೈಲಿಗಿಂತ ಹೆಚ್ಚಾಗಿ ತಯಾರಾದ ರಸ್ತೆಗಳಿವೆ, ಅವುಗಳನ್ನು ರಿಪೇರಿ ಮತ್ತು ಮತ್ತು ಸಂಚಾರಕ್ಕೆ ಕಂಡಿ ಹಾಗೆಯೇ ಸಾಧ್ಯವಾದ ವಸ್ತುಗಳ ಒಳ್ಳೇ ಸ್ಥಿತಿಯಲ್ಲಿ ಕಾಪಾಡುತ್ತಿದೆ. ಮತ್ತು ಅವುಗಳ ಅಭಿವೃದ್ಧಿ ಮತ್ತು ಬದಲಾವಣೆ ವಿಷಯವು ಸರಕಾರದ ಆಲೋಚನೆಯಲ್ಲಿದೆ. [illegible]

[illegible]

Bangalore.—Printed and published at the Karnatic Press, No. 10, Hospital Road Petta.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning

Vol. [illegible] | BANGALORE—MONDAY NOVEMBER 28 1892 | No 47.

ನೋಟಿಸು.

ನೋಟೀಸು.

ಸಂಸ್ಕೃತ ಗ್ರಂಥಗಳು.

ನೋಟೀಸು.

C. G. H. Nation,
M. R. C. S., England,
Surgeon

1892 [illegible] 13

[illegible]	[illegible]	} [illegible]
400	11000 [illegible]	
180	4200 [illegible]	

C. H. [illegible]

ಪ್ರಕಟನೆ.

OIL [illegible]

NOTICE

[illegible] SANGHA

HINDU MEDICINE

ನೋಟೀಸು.

ನೋಟಿಸ್.

ಕೊಡಗುದೇಶದ ಗಂಧದ ಹರಾಜ್.

ಸನ್ ೧೮೯೨ನೇ ಇಸವಿ ಡಿಸಂಬರ್ ತಾರೀಖ್ ೧೫ರಲ್ಲು ಫ್ರೇಜರಪೇಟೆ ಸ್ವಲ್ಪ ಡಿಪೋಗಳ ಲ್ಲಿ ೧೮೦ ಟನ್ ಗಂಧ ಹರಾಜ್ ಮಾಡಲ್ಪಡುತ್ತದೆ.

ಷರತ್ತು.—ಸನ್ ೧೮೯೫ನೇ ಇಸವಿ ಜನವರೀ ತಾರೀಖ್ ೩ ರ ನಂಬರ್ ೧ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಪ್ರಾಯಿಷ್ ಮಾಡಲ್ಪಟ್ಟ ಕೊಡಗು ಚೀಫ್‌ಕಮಿಷನರ್ ನೋಟಿಫಿಕೇಷನ್ ಸನ್ ೧೮೯೧ನೇ ಇಸವಿ ಫೆಬ್ರವರಿ ತಾರೀಖ್ ೧೫, ನಂಬರ್ ೨೮ ರ ನೋಟಿಫಿಕೇಷನ್ ಮೇರೆ, ಆದರೆ ಕೇಳಿದ ಬಿಡ್ಡು ಕ್ಕೆ ಖರೀದಿದಾರರು ಹಣವನ್ನು ಹರಾಜ್ ಕಾಲದಲ್ಲೇ ಕೊಡತಕ್ಕದ್ದು. ಬಾಕಿ ಹಣಗಳನ್ನು ೧೮೯೩ ನೇ ಇಸವಿ ಮಾರ್ಚ್ ತಾರೀಖು ೧೫ ರ ಒಳಗೆ ಸಾಕಲ್ಯವಾಗಿ ಕೊಡತಕ್ಕದ್ದು.

೧೫ ನವಂಬರ್, ೧೮೯೨ನೇ ಇಸವಿ } G. H. FOSTER, Dy. Conservator of Forests, Coorg

ನೋಟಿಸ್.

ಅದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

ಸನ್ ೧೮೯೩ನೇ ಇಸವಿ ಏಪ್ರಿಲ್ ಗುರ್ರೇ ತಾರೀಖ್ ಮೊದಲು ೧೮೯೪ ನೇ ಇಸವಿ ಮಾರ್ಚಿ ೩೧ನೇ ತಾರೀಖ್ ವರೆವಿಗೆ, ಹೊಸೂರ್ ರಿಮೌಂಟ್ ಡಿಪೋಗೆ ಇದರಡಿ ನಮೂದು ಮಾಡಲ್ಪಡುವ ಜಿನಿಸುಗಳು ಬೇಕಾಗಿರುವದರಿಂದ ಅವುಗಳ ಸರಬರಾಯಿ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು, ರಿಮೌಂಟ್ ಡಿಪೋ ಸೂಪರಿಂಟೆಂಡೆಂಟರವರು ಸನ್ ೧೮೯೩ನೇ ಇಸವಿ ಜನವರಿ ೯ನೇ ತಾರೀಖ್ ಸೋಮವಾರ ಮಧ್ಯಾಹ್ನ ೧೨ ಘಂಟೆಯ ವರೆವಿಗೆ ಬರಮಾಡಿಕೊಳ್ಳುವರು.

ಅವನ್ನು ಕುರಿತ ಜಾಸ್ತಿ ವಿವರಗಳನ್ನು ತಿಳಿಯಬೇಕಾದವರು ೧೮೯೨ನೇ ಇಸವಿ ನವಂಬರ್ ೪ ನೇ ತಾರೀಖಿನ ೪೬ ನೇ ನಂಬರ್ ಫೋರ್ಟ್‌ಸೆಂಟ್‌ಜಾರ್ಜ್ ಗೆಜೆಟ್ ೧೪೬ ನೇ ಭಾಗದ ೧೯೫೫ನೇ ಪುಟವನ್ನು ನೋಡಿ ತಿಳಿಯತಕ್ಕದ್ದು.

ಹುರಳಿ.
ನೆಲ್ಲುಹುಲ್ಲು.
ರಾಗಿ ಹುಲ್ಲು.
ಹಸೀ ಹುಲ್ಲು.

ರಿಮೌಂಟ್ ಡಿಪೋ, ಹೊಸೂರ್, ೨೨–೧೧–೯೨. } HAROLD GOAD, Captain, Supdt., R. Depot.

Bangalore City Municipality.
ಬೆಂಗಳೂರು ಸಿಟಿ ಮ್ಯುನಿಸಿಪಾಲಿಟಿ.

ಸನ್ ೧೮೯೨ನೇ ಇಸವಿ ನವಂಬರ್ ೩೧ನೇ ತಾರೀಖಿನಲ್ಲಿ ನಡೆದ ಬೆಂಗಳೂರು ಸಿಟಿ ಮ್ಯುನಿಸಿಪಲ್ ಕಮಿಟಿಯ ಸಾಧಾರಣ ಮೀಟಿಂಗ್‌ನಲ್ಲಿ ಅವರ ಪರ್ಯಾಲೋಚನೆಯ ಬಗ್ಗೆ ಇಡಲ್ಪಡಬೇಕಾದ ಜಾಸ್ತಿ ನಿಶ್ಚಯಗಳು.—

೧. ಬೆಂಗಳೂರು ಪೇಟೆಯಲ್ಲಿರುವ ಜಮೀನುಗಳು, ಮನೆಗಳು, ವಿ ಕಟ್ಟಡಗಳು ವಗೈರೆಗಳ ಮೇಲೆ ಹಾಕೋ ಹಾಕಲ್ಪಟ್ಟಿರುವ ಕಂದಾಯ ದರಗಳನ್ನು ಪರಿಷ್ಕರಿಸಬೇಕಾದ ವಿಷಯ ದಲ್ಲಿ ಮ್ಯುನಿಸಿಪಲ್ ಕಮಿಷನರ್ ಮಿ|| ಎಸ್. ಸುಬ್ಬರಾಯರವರು ಬರೆದ, ೧೮೯೨ನೇ ಇಸವಿ ನವಂಬರ್ ೧೬ನೇ ಮಾರ್ಕ್ ಉಳ್ಳ ೬೬೯ನೇ ನಂಬರ್ ಲೆಟರ್.

ಹೊಸ ತಿಗಳರ ಪೇಟೆಯಲ್ಲಿ ಜಟ್ಕಾ ಸ್ಟ್ಯಾಂಡ್ ಬಗ್ಗೆ ತೆಗೆದುಕೊಳ್ಳಲ್ಪಡುವದಾಗಿರುವ ದೋಭಿ ಹನುಮಾನ ಜಮೀನಿನ ವಿಷಯದಲ್ಲಿ ಮ್ಯುನಿಸಿಪಲ್ ಕಮಿಷನರ್ ಮಿ|| ವಿ ಎಸ್. ನರಸಿಮ್ಹಯ್ಯಂಗಾರ್ರವರು ಬರೆದ ೧೮೯೨ನೇ ಇಸವಿ ನವಂಬರ್ ೧೬ನೇ ಮಾರ್ಕ್‌ಉಳ್ಳ ರಿಪೋರ್ಟ್.

ಬೆಂಗಳೂರು, ಸಿಟಿ ಮ್ಯುನಿಸಿಪಲ್ ಆಫೀಸ್, ತಾ|| ೧೮ನೇ ನವಂಬರ್ ೯೨. } K. SRINIVAS RAO, Vice President.

ಕರ್ಣಾಟಕ ಪ್ರಕಾಶಿಕಾ.
THE KARNATAKA PRAKASIKA

MONDAY, NOVEMBER 28, 1892
೧೮೯೨ನೇ ಇಸವಿ ನವಂಬರ್ ತಾ|| ೨೮ ನೇ ಸೋಮವಾರ

THE LIGHTING OF THE CITY STREETS

ಬೆಂಗಳೂರ್ ಪೇಟೆ ಮ್ಯುನಿಸಿಪಾಲಿಟಿಯು "ಬಹುನಾಯಕಂ ಅನಾಯಕಂ" ಎಂಬಂತೆ ಬಹುಮಂದಿ ವಿಚಾರಣಾ ಕರ್ತರೂ, ಅಧಿಕಾರಿಗಳೂ, ಯೋಗ್ಯವಾದ ಬಂದೋಬಸ್ತಿನಿಂದ ನಿಯುಕ್ತವಾದ ವಿಚಾರಣೆ ಇಲ್ಲದೆ ಯಿದ್ದರೆ ಅವರವರ ಮನಸ್ಸಿಗೆ ಸ್ವತಂತ್ರರಾಗಿ ಇದ್ದು ಬಂದಂತೆ ಕೆಲಸ ನೋಡುತ್ತಿದ್ದಾರೆ. ಮ್ಯುನಿಸಿಪಲ್ ಜಾಗಗಳು ಇದ್ದೂ ಇಲ್ಲದಂತಿವೆ. ಅವು ಉರಿಯುವ ಕಾಲವೇ ಗೊತ್ತಿಲ್ಲವು. ದೀಪ ಹಚ್ಚುವ ಕಾಲವು ದೀಪ ಹಚ್ಚತಕ್ಕವನ ಇಷ್ಟಾನುಸಾರ ಯೋಗ್ಯವಾಗಿರುತ್ತದೆ. ಮ್ಯುನಿಸಿಪಲ್ ರ್ಯಾಫೇರಿಯವರು ದೀಪಗೊಳಿಸು ಛತ್ರ ಬಾವುದಾಗ್ಯೋಗ್ಯ ರಾಗಿ ತಾಂಬೂಲ ಚರ್ವಣ ಮಾಡುವ ಪಾರವಶ್ಯತೆಯೊಡನೆ ೭ ಘಂಟೆಯ ವರೆವಿಗೂ ನಿದ್ರೆಯಲ್ಲಿರುವುದಾಗಿ ಕೇಳುತ್ತೇವೆ. ನಿದ್ರಾವಸ್ಥೆಯ ವಾತಸ್ವಭಾವಕ್ಕೂ, ದಾರುಣವಾದ ಬಾಲಾತಪಕ್ಕೂ, ಹಿಮಸ್ವರ್ಶದ ಸುರುಮೃತ್ಯಕ್ಕೂ ಪುರಜನ ಪಾದರೇಣುಗ್ರ ಸಕಲೆಯುದ್ವಿಯ ವ್ಯಾಪಾರ ನಿರೀಕ್ಷಕನಾಗಿ ದುಸ್ಸನರಾದ ಸಂಕಟವನ್ನು, ಮನೋವ್ಯಸನವನ್ನೂ ಉಂಟುಮಾಡಿದ ಮಳ್ಳವು. ಕದಾಚಿತ್ ಪ್ರಸಿದ್ಧಪುರುಷರ್ಯಾರಾದರೂ ನಗರಪ್ರವೇಶವು ಮಾಡಿದರೆ ಆಸಮಯಕ್ಕೆ ನ್ಯೂಸಜನ ವಿಪರೀತನಾಗಿರುವದರಿಂದ ಅಭ್ಯಾಗತರ ದೃಷ್ಟಿಗೋಚರವಾದ ಕರೆಗಳಲ್ಲ ತಾತ್ಕಾಲಿಕ ಸನ್ನಾಹ ಸಂರಂಭಗಳಿಂದ ಅವರ ಚಿತ್ತಕ್ಕೆ ಪರಿತೋಷವಾಗಿ ಸುತ್ತುವದನ್ನು ಬಿಡಬೇಕಾಗಿಲ್ಲವು. ಪರಿಸ್ಥಿತಿಯ ದ ಪಸ್ತುಸ್ಥಿತಿ ಯೊಂದಿಗೂ ಅವರ ದೃಷ್ಟಿಗೆ ಗೋಚರವಾಗಲಾರದು. ಅಬ್ಬಕ್ಕ ಪ್ರತಿಷ್ಠೆಯು ಅನ್ಯೂನವಾಗಿಲಭಿಸುವರಲ್ಲಿ ಸಂಶಯವಿಲ್ಲವು. ಕಲ್ಯಾಣವೆಂಬ ವಿಶೇಷಣವು ಪ್ಯಾನದ ಘಟಿತವಾದ ಈ ನಗರವು ಕಬ್ಬಾಲಿಕೆಯಿಂದ ಪ್ರತ್ಯೇಕವಾಗಿರುವ ರಿಂದ ತಾವನ್ನುಪ್ರಶೋಧಿಸು ಪುರನಿವಾಸಿಗಳು ಸುಸ್ಥಿರರಾಗಿರದೆ ಮಲಯ ವಿಷಯಗಳನ್ನು ಬರೆದು ಅರಿಬುಸಿದಕ್ಕಾಗಿ ಕ್ಲೇಶಪಡುವ ಪದೇ ಪದೇ ಬರೆಯುವುದರಿಂದ ಅವರ ಮನೋ ಚಾಂಚಲ್ಯಕ್ಕೆ ಅತ್ಯಲ್ಪವಾದರೂ ಕಾರಣವಾಗಿದೆ. ಈ ನಗರ ಪಾರಿಶುದ್ಧ್ಯ ವಿಚಾರವು ಪುರಪ್ರಮುಖರಿಗೆ ಸರಿಯಾಗಿರದಿದ್ದರೆ ಮ ಪ್ರತಿಗಳು ಮಾಡಿದ್ದ ಮ್ಯುನಿಸಿಪಲ್ ಕೋರ್ಟಿಗೆ ಕಳುಹಿಸುವ ಪ್ರಯತ್ನದ ಲೇಶವೂ ಕಾಣುತ್ತಿಲ್ಲವಾದ್ದರಿಂದ ಮ್ಯುನಿಸಿಪಾಲಿಟಿಯವರು ವೈಸ್‌ರಾಯಿಯವರಿಗೊಪ್ಪಿಸಿದ ವಿಜ್ಞಾಪನೆ ಪತ್ರಿಕೆಯೂ ಅದಕ್ಕೆ ಅವರು ಕೊಟ್ಟ ಉತ್ತರವೂ, ಕಸ್ತೂರಿರಂಗಯ್ಯಂಗಾರ್ ಸ್ವಾಮಿಯವರು, ದಿವಾನ್ ಸಾಹೇಬರವರು ಸನ್ನಿಧಾನ ವಿಭಾಗ ಸನ್ನಿಕರ್ಷಗಳಿಂದಲೂ ಸುಸ್ಥಿರವಾದ ಸದ್ಗುಣಿಯೂ ಮ್ಯಾಂತರ ರೂಪವಾಗಿರುವು ದಿದ್ದವು. ಪರಂತು ಈಗ ಸುಪ್ರಸಿದ್ಧವಾಗಿರುವ ಇಷ್ಟ ನಿವಾರಣೆಗೆ ಸದ್ಯಃ ಪ್ರತಿಕ್ರಿಯೆಯು ಇಟ್ಟರೂ ಸೂಚಿಸಲಿಲ್ಲವು. ಸಕಲ ಸುತ್ತಿಗ ಳನ್ನೆಲ್ಲಾ ಪ್ರಾಣವು ತಾಳ್ಳದ್ದರಿಂದ ಯೆಂದಿಗೂ ಶುಭವು ಪಡೆಯದೆ ಹೋಗಲಾರವೆಂದು ವೈಸ್‌ರಾಯಿಯವರು ದಂಪತಿಯುಕ್ತರಾಗಿ ಅನುಗ್ರಹಿಸಿ ಆಶೀರ್ವದಿಸಿಂದ ಮಾಡಿಸಿ ಅಕೃತ್ರಿಮವಾದ ಯಲಾಗಿ ಬಲ್ಲಿಂದಪ್ರಯಾಣವಾದರು. ಮ್ಯುನಿಸಿಪಾಗಿ ಯಾವುದಾದ ಭಾಗವು ಚಿಂತಿಸಿದ್ದರಿಂದ ಗ್ಯಾಸ್ ಈಗ ಶರೀರಧಾರಣವು ದುಸ್ಸಹವಾಗಿ ಹೋಗಿದ್ದಿಟ್ಟದೆ. ಸರ್ವವ್ಯಾಪಕವಾದ ಅವಿಶಕ್ತಿಯಬಲ ಹೀಗೇ ನಮ್ಮನ್ನು ಪ್ರಾಣಗಳಿಂದುಳಿಸಬೇಕಾಗಿದೆಯೇ ಹೊರ್ತು ಬೇರೆ ಉಪಾಯವ್ಯಾವದೂ ಕಾಣಸಲ್ಲಿಲ್ಲವು.

H. E. THE VICEROY IN BANGALORE.

ಗತವಾರದಲ್ಲಿ ನಾವು ಸೂಚಿಸಿದ್ದ ಪ್ರಕಾರ ವೈಸ್‌ರಾಯಿಯವರು ತಮ್ಮ ಪರಿಜನ ಪರಿಚಾರಕರೊಡನೆ ಕಳೆದ ಮಂಗಳವಾರದವರ ಬೆಳಿಗ್ಗೆ ೯ ಘಂಟೆಗೆ ಸರಿಯಾಗಿ ಶ್ರೀರಂಗದ ಸ್ಟೇಷನ್ ರಾಜಧಾನಿಗರವಾದ ಈ ಕಲ್ಯಾಣಪುರವನ್ನು ಪ್ರವೇಶಿಸಿ, ಸಿಟಿ ರೈಲ್ವೇ ಸ್ಟೇಷನಿನಲ್ಲಿ ರಂಗ್ರ ಸುದರ್ಶನ ಮಾಗ್ಯತಿರ್ಮಿತಿ ಸ್ಥಿರಿ ಬುರ್ಜಿ ನಿರ್ಮೆಯವಾದ ವರಾನ ಬಯಲಿನ ಮನ್ನನೆ ಸ್ಥಳ ಸ್ಥಿರದ ನಿವಾಸಕ್ಕೆ ಬೆಳ್ನಾ ಜ್ಯೋತಿಯಂತೆ ಗೇರಿ, ರಹದಾರಿ ಪ್ರತಿನೆ ತಂದಿರುವದರ ಸುನಿಷ್ಟವನ್ನೂ, ಲಿಖಿತಗಳನ್ನು ಉತ್ತಮವಾದ ಅಲ್ಪದ ಮಸ್ತ್ಯಾಯದಿಂದೊಳ್ಳಗಾಗಿ ಅತ್ಯುತ್ತಮವಾದ ಸೇಕರ್ಪವಾದ ರಥಕ್ಕೆ ಮಂದ ಗತಿಯ ಚಕ್ರವಾಗಿ ದೀನಿಪೇಟೆ ಬುಗ್ಗೆ ಗೆ ದಯಮಾಡಿದರು. ಅವರ ಆಗಮನದಯ ಕಾಲದಲ್ಲಿ ಮಹಾರಾಜ್ಞಿ ಪ್ರತಿನಿಧಿ ಸುವರ್ಣವೇ ತ್ತಿಕಪರ್ಯಂದೊಡನೆ ಪಾಲಿತ ಪರಾಲೀ ಸಮುದಾಯ ಕಾಲಕ್ಕಿಳಿಸಿ ರಾಜನಗರಗಳು ದರ್ಬಾರಿನ ತಗಳಾಗಿ ಅಯನಾರೋಗಿಗಳಡ ದ ಕಾಂತಿಗಳು ಭೂಮಿಗೆ ಸ್ತೋತ್ರಗಳಲ್ಲೆ ವಿನಯಿಂದಸಿಕ್ಕಿದ್ದು ವೃತ್ತವೀಧಿ ಪ್ರತಿಯಾಯಿದೊಡನೇ ಪಾಲನಾದ ಪಕ್ಷಿತ್ರಮುಖ್ಯಗಳನ್ನಿರಿಸಿ ಸನ್ನಿವೇಶ ಸಭಾಮಂಟಪದ ಪುರವಾಡಿ ಮಿರ್ಜಾ ಸ್ಟ್ರೀಟ್ ಪ್ರಕೋಣಗಳೊಳು ಮ್ಯುನಿಸಿಪಾಲಿಟಿಯವರು ನಿರ್ಮಿಸಿದ್ದ ವಿಜಯತೋರಣದ ಸುಂದರವಾದ ಮಂಟಪದಲ್ಲಿ ನೆರೆದಿದ್ದ ಮ್ಯುನಿಸಿಪಲ್ ಪ್ರಸಿಡೆಂಟರು ಕಮಿಷನರುಗಳು ಮುಂತಾದವರು ರಾಜಕೀಯವಾದ ಸುಪ್ರಸಿದ್ಧವಾದ ವಿನಯ ಕ್ಷೇಮ ವಿಜ್ಞಾಪನ ಪತ್ರಿಕೆಯನ್ನು ಸಮರ್ಪಿಸಿದರು. ಅಂಗೀಕರಿಸಿ ಅವರು ರಾಜಭಕ್ತಿ ವಿಶ್ವಾಸ ಪ್ರದರ್ಶಕವಾದ ಪ್ರಜೆಗಳಿಂದ ತಮಗೆ ದೊರೆತ ಸ್ವಾಗತದ ಸಂತೋಷವನ್ನು ಸೂಚಿಸಿ ಅದಕ್ಕೆ ಕೃತಜ್ಞತೆಯನ್ನು ತಿಳಿಸಿದರು. ಅನಂತರ ಅಲ್ಲಿಂದ ಮುಂದೆ ಕಲೆಕ್ಟ್‌ರಿಕಚೇರಿ ಬಳಿ ಸಾಗಿ ನಗರ ಪಶ್ಚಿಮದಲ್ಲಿರುವ ನವಾಬ್ ರಾಜಸರೋವರ ವ್ಯವಸ್ಥೆ ಮಾಡಲ್ಪಟ್ಟಿದ್ದ ರಾಜಮಾರ್ಗದಲ್ಲಿ ದಯಮಾಡಿ ಮುನಿಸಿಪಲ್ ಪ್ರಸಿಡೆಂಟ್ ಹಾಗೂ ಮಹಾರಾಜರವರ ರಟ್ಟಿಸಿದ ಹರಿಸರ ಪ್ರದೇಶದಲ್ಲಿ ಎದುರುಗೊಂಡು ಸರ್ಕಾರದ ನಿವಾಸ ಗೃಹವಾಗಿ ಕಟ್ಟಲ್ಪಟ್ಟ ಬಂಗಲೆಗೆ ದಯಮಾಡಿದರು. ನಿಶ್ಚಯಿಸಿರುವ ೧೨ ಘಂಟೆಗೆ ಕರ್ನಲ್ ಮೈಸೂರು ಮ್ಯುನಿಸಿಪಲ್ ಕಮಿಷನರುಗಳನ್ನು ಪರಿಚಯ ಮಾಡಿಸಿದರು. ಅನಂತರ ಬೀಳ್ಕೊಟ್ಟು ಹಿರಿಯ ರಾಜಕೀಯ ವ್ಯವಹಾರಗಳಿಂದ ಅವರು ಮಹಾರಾಜರ ರಾಜಭವನಕ್ಕೆ ದಯಮಾಡಿದರು. ಮಹಾರಾಜರು ಮಹಾರಾಣಿಯರ ಕಳುಹಿಸಿದ ಮಹಾಜನ ಸಭಾಂಗಣದಲ್ಲಿ ದರ್ಬಾರ್ ಮಂಟಪವಾಗಿ ಶೃಂಗರಿಸಲ್ಪಟ್ಟ ಪ್ರಾಸಾದದೊಳು ಸೇರಿದರು. ಆ ವೇಳೆ ನಗರದ ಪ್ರಮುಖರು, ಶೇಠ್‌ಗಳು, ಲಕ್ಷ್ಮೀಪತಿಗಳು ಮೊದಲಾದ ಆ ಸಭೆಯಲ್ಲಿ ಕುಳಿತಿದ್ದರು. ಪತ್ರಿಕಾ ಸಂಪಾದಕರಿಗೂ ಅಲ್ಲಿ ಕೂರುವುದಕ್ಕೆ ಸ್ಥಳ ಕಲ್ಪಿಸಲಾಗಿತ್ತು. ಮುಂದೆ ಶ್ರೀಮನ್ಮಹಾರಾಜರವರು ರಾಜೋಚಿತ ರಾಜಾಸನದ ಬಳಿ ವೈಸ್‌ರಾಯಿಯವರನ್ನು ಅದ್ವಿತೀಯ ಸತ್ಕಾರದಿಂದ ಸ್ವಾಗತಿಸಿ ಸಿಂಹಾಸನದ ಸಮೀಪ ಕುಳ್ಳಿರಿಸಿದರು. ಮಹಾರಾಜರವರ ಪ್ರಸ್ತಾಪಿಸಿದ ಹಿತವಾಕ್ಯಗಳಿಂದ ದೃಢಪಡಿಸಿದ ಮೈತ್ರಿಯನ್ನು ವೈಸ್‌ರಾಯಿಯವರು ಅಂಗೀಕರಿಸಿ ಉತ್ತರದಲ್ಲಿ ಸೂಚಿಸಿದರು. ಬಳಿಕ ಪಾನ ಸುಪಾರಿ ಸ್ವೀಕರಿಸಿ ಅಲ್ಲಿಂದ ಹೊರಟು ಹಿಂದಿರುಗಿದರು. ಅದೇ ದಿವಸ ಸಾಯಂಕಾಲ ವೈಸ್‌ರಾಯಿ ದಂಪತಿಗಳು ಲಾಲ್‌ಬಾಗಿಗೆ ಹೋಗಿ ಅಲ್ಲಿ ಅಲಂಕರಿಸಲ್ಪಟ್ಟಿದ್ದವು. ವೈಸ್‌ರಾಯಿಯವರು ಬರುವುದಕ್ಕಾಗಿ, ಉದ್ಯಾನ ವನದಿಂದ ಸ್ವಲ್ಪ ದೂರದವರೆಗೂ ಹಿಂದಿರುಗಿ ಹೋದರು. ಜನರು ಮುಖ್ಯವಾಗಿ ನಗರಗಳು ನಿರಂತರ ಮಾಡಿದ್ದವು ಎಂದಿಗೂ ಬೆಳಿಗ್ಗೆ ವೈಸ್‌ರಾಯಿಯವರು

ರಸವಾರಿಯು ಬಂದ ಕೂಡಲೇ ರಿಸಿಪ್ಷನ್ ಕಮಿಟಿಯ ಪ್ರಸಿಡೆಂಟರಾದ ಮಿಸ್ಟರ್ ರಿಕೆಟ್ಸ್, ಕರ್ನಲ್ ಸಿಬ್ಲ್ ಮಿ|| ದೊಡ್ಡ ರಾಮರಾಯರವರು ಮೊದಲಾದ ದೊಡ್ಡ ಮನುಷ್ಯರು, ಉಚಿತ ಮರ್ಯಾದೆಗಳೊಡನೆ ಹಾರ್ದಿಕ ಸ್ವಾಗತ ಹೇಳಿ ಬಂಗಲೆಯ ಪಾಲಿನ ಮುಂಭಾಗದಲ್ಲಿ ಬರಮಾಡಿಕೊಂಡು ಈ ವನ ಗೋಡೆಯಿಂದ ಕೆಳಗೆ ದಯಮಾಡಿದ ಕೂಡಲೆ ಅವರವರ ಗೌರವಾರ್ಥ ಹಸ್ತ ಸ್ಪರ್ಶ ಮಾಡಿದ್ದ ಕಲೆಯ ವಿನೋದಗಳನ್ನೆಲ್ಲ ಕಂಡು ಸಂತೋಷಿಸಿ ಅವುಗಳ ಪ್ರತಿ ಮಹಾರಾಜರವರ ಪರಿಕೋಟೆಯ, ಮನೆಗೆ ಬಂದ ಪ್ರಾಣ ವಿಷ್ಟಕ್ಕೆ, ಇನ್ನೊಬ್ಬರೊಡನೆ ವಿನೋದ ಮಾಡಿದ ಆನಂದವನ್ನು ಕಂಡು ಕಾಲದಲ್ಲಿ ತಮ್ಮ ಸಂತೋಷದ ರಸಕ್ಕೆ ಅರುಹಿ ಅಲ್ಲಿಂದ ಹೊರಗೆ ಸವಾರಿ ದಯಮಾಡಿದರು. ಅವರ ಅಗಮನಾರ್ಥ, ಮಹಾರಾಜ್ಞಿ ಮೂರ್ತಿಯ ಪ್ರತಿ ಬಿಂಬವಾಗಿ ತಮ್ಮ ತಿಳಿವಳಿಕೆಗಳ ಮುಂಭಾಗದಲ್ಲಿ ರಚಿಸಿದ್ದ ಮಂದಿರವು ದೀಪಾವಳಿಯಿಂದ ಶೋಭಿಸುತ್ತಿರುವದನ್ನು ನೋಡಿ ಸಂತೋಷಿಸಿದ್ದರು. ಮರು ದಿನ ತಾರೀಖ್ ಬುಧವಾರದಲ್ಲಿ ಬೆಳಿಗ್ಗೆ ಕಾರ್ಯಪ್ರವೃತ್ತರಾಗಿ ಈ ಊರಿನಲ್ಲಿರತಕ್ಕ ಸಕಲ ಪ್ರಮುಖರ ಒಂದು ರಮ್ಯ ಸೈನಿಕ ಕವಾಯಿತು ಪ್ರದರ್ಶನವು ವೈಸ್‌ರಾಯಿಯವರು ನೋಡಿ ಸಂತೋಷಿಸಿ ದರು. ಅನಂತರ ರಿಕೆಟ್ಸ್ ದೊರೆ ಯವರು ಶಿಕ್ಷಕ ಶಾಲೆಗಳ ರಕ್ಷಣಾ ಪ್ರತಿಷ್ಠಾನಕ್ಕೆ ರಚಿಸಿದ ವಿಭಾಗಗಳ ವ್ಯಾಪಾರ ಪರೀಕ್ಷಿಸಿ ಅವರ ಪಾಠಶಾಲೆ ಕಟ್ಟಡವನ್ನು ನೋಡಿ ಸಂತೋಷಿಸಿ, ತಮ್ಮ ತಿಳುವಳಿಕೆಯ ಪ್ರಶಂಸೆಯನ್ನು ಬರೆಯುವ ಪುಸ್ತಕದಲ್ಲಿ ಬರೆದು ತಿಳಿಸಿದರು. ಅಲ್ಲಿಂದ ಬಂದ ಮೇಲೆ ದರ್ಬಾರಿಗೆ ಹಿಂತಿರುಗಿ ಬಂದು, ಸಂಧ್ಯಾಕಾಲದ ಒಂದು ಘಂಟೆಯ ಸಮಯವನ್ನು ದಯಮಾಡಿಸಿದರು. ಅನಂತರ ಮಿಲಿಟರಿ ಮುಖ್ಯ ಸೇನಾಪತಿಗಳಿಗೆ ಸ್ವಾಗತಕ್ಕೆಗೊಂಡು ನಾಮುಂತಾದವರು ದರ್ಶನವನ್ನು ತರುವಾಯ ರಾ|| ಬ|| ಕೆ|| ಸಾಂಬಯ್ಯರವರು ಮುಂತಾದವರೂ ಕೃತಜ್ಞತೆಯ ಪ್ರತಿಪಾದನಾರ್ಥ ದಯಮಾಡಿದ್ದರು. ವಿನೋದೋತ್ಸವಗಳಿಂದ ಹೊರಟು ಅತ್ಯಂತ ಸಂತೋಷದಿಂದಾಗ ಉತ್ತಮ ವಿನಯ ಭಾವದಿಂದ ದಿವಾನರವರು ಸನ್ಮಾನಪಡಿಸಿದರು. ಮಹಾರಾಜರವರ ಪ್ರತಿನಿಧಿಯಾಗಿ ದಿವಾನ್‌ ಸಾಹೇಬರವರು ಮಾಡಿದ ವ್ಯವಸ್ಥೆಯನ್ನು ನೋಡಿ ಸಂತೋಷಿಸಿ, ಸಂಸ್ಥಾನದ ಪ್ರಜೆಗಳ ಉತ್ಕರ್ಷಕ್ಕೆ ರಾಜ್ಯದ ಸುವ್ಯವಸ್ಥಿತ ಸರಕಾರದಿಂದ ಆದ ಒಳ್ಳೆ ಕೆಲಸಗಳನ್ನು ಕೊಂಡಾಡಿದರು. ಸ್ವಲ್ಪಕಾಲ ವಿದ್ಯಾರ್ಥಿಗಳ ಮುಂದೆ ವಿದ್ಯೆಯ ಪ್ರಯೋಜನವನ್ನು ತಿಳಿಸಿ ಸೂಚಿಸಿದರು. ದೇಶ ಪ್ರಜೆಗಳ ಸಂತೋಷದ ಗೌರವವನ್ನು ಕೊಂಡಾಡಿದರು. ಮಹಾರಾಜರವರು ಪ್ರತಿನಿಧಿಯಾಗಿ ತಮ್ಮ ಅಭಿವೃದ್ಧಿಯ ಕುರಿತು ವೃತ್ತಾಂತಗಳನ್ನು ಕೇಳಿ ಸಂತೋಷಗೊಂಡರು. ಅವರ ವಿಜ್ಞಾಪನದ ಪತ್ರಿಕೆಯಿಂದ ದೊರೆತ ರಾಜಕೀಯ ಸುಧಾರಣೆಯನ್ನು ವೈಸ್‌ರಾಯಿಯವರಿಗೆ ಅರ್ಪಿಸಿದರು. ಅದು ಅವರು ಪರಿಗ್ರಹಿಸಿ ಮೊದಲು ಯಾವ ಕ್ರಿಯೆಯಿಂದ ಪ್ರತಿಗ್ರಹಿಸಿದ ಮಹತ್ತು ಅಕೃತ್ರಿಮವಾದ ಧರ್ಮ ಬುದ್ಧಿಯನ್ನೂ ಸೇವಾಧಿಕಾರಿಗಳ ಸತ್ಕಾರ್ಯವನ್ನೂ ಕೊಂಡಾಡಿ ಅನನ್ಯ ಭಾವದಿಂದ ಪ್ರತಿಷ್ಠೆಯು ಪಡೆದು, ಸರ್ವ ಸ್ಥಾನಗಳ ಸಕಲ ಕಾರ್ಯಗಳೊಳೊತ್ತಿ ತಿಳಿಸಿದರು. ಬೆಳಿಗ್ಗೆ ೭ ಯವರಾದಿ ರಾತ್ರಿ ೯ ಘಂಟೆಗೆ ಸ್ಪೆಷಿಯಲ್ ಟ್ರೈನಿನಲ್ಲಿ ಮೈಸೂರಿಗೆ ಪ್ರಯಾಣವಾದರು. ಇವರ ನಿರ್ಗಮನವನ್ನು ಕೇಳಿ ಗುಪ್ತವಾಗಿ ಪ್ರದರ್ಶಿಸಿ ರೈಲ್ವೇ ಪ್ಲಾಟ್‌ಫಾರಮಿಗೆ ಬರುವ ಜನ ವಗೈರೆ ಕೆಲವರು ಬರುವವರು ವಿನಾ ಮತ್ಯಾರೂ ಹೋಗಲಿಲ್ಲವು. ಮತ್ತು ರಾಜನು ವ್ಯಾಧಿಗಳಿಂದ ಜನಗಳಿಲ್ಲವು; ಆದರೆ ವಾರದೊಳಗಿನ ಪ್ರಯಾಣಕಾಲದಲ್ಲಿ ಪ್ರಸ್ತಾಪಿಸುವ ಕನ್ನಡ ೩೧ ನೇ ರೆಜಿಮೆಂಟಿನ ಸೈನಿಕ ರ ನಾದ

[illegible] ಸಿದ್ಧನಾದನೆಂತಲೂ [illegible] ಅಪ್ಪಣೆಯನ್ನು ಪ್ರಚೀಕರಿಸಿ [illegible] ಕಾಲದ ತನಕ ಅವರ ಸಂ[illegible] ವಿಚಾರ [illegible] ವಿಶೇಷವಾದ [illegible] ಗೌರವಕ್ಕನುಗುಣವಾಗಿ [illegible] ಪ್ರಯತ್ನ [illegible] ಅವಿಚಾರಿತವಾದ [illegible] ಅನೇಕಾನೇಕ ವ್ಯವಹಾರಗಳಲ್ಲಿ [illegible] ಸಂದರ್ಭಾನುಸಾರವಾಗಿ [illegible] ತಿಳಿಸುತ್ತೇವೆ.

ಈ ಸಂವತ್ಸರ ಹೊರಟ ದರ್ಖಾಸ್ತುಗಳಿಂದ ಈ ಸಲದ ಪರೀಕ್ಷೆಗೆ ದರಖಾಸ್ತು ಕಳುಹಿಸಿದವರ ಸಂಖ್ಯೆಯು ಅತ್ಯಧಿಕವಾಗಿರುವಂತೆ ಕೇಳುತ್ತೇವೆ. ಮುಂದಿನ ವರುಷದ ಮೊದಲು ಎಫ್. ಎ. ಪರೀಕ್ಷೆ ಕೊಟ್ಟವರು ಎರಡನೇ ಗ್ರೇಡ್ ಪ್ಲೀಡರ್ ಪರೀಕ್ಷೆಗೂ ಬಿ. ಎ. ಗಳು ಒಂದನೇ ಗ್ರೇಡಿಗೂ ಹೋಗಬಹುದಲ್ಲದೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರು [illegible] ಆಗಿರಬೇಕೆಂದು ಆಜ್ಞಾಪಿಸಲ್ಪಟ್ಟಿರುತ್ತದೆ.

ಪ್ರಿಯಳಲ್ಲಿ ಪರಮಾನಂದ ಮತ್ತರಾಗಿದ್ದ ಯುವತಿ [illegible] ತನ್ನ ಪತಿಯೊಡನೆ ಕಲಹಿಸಿ ಬಿನ್ನ[illegible] ಜೊತೆಯಲ್ಲಿ ಕರೆಸಿದ [illegible] ಯನ್ನು ತುಂಬಾ ಮೈಮೇಲೆ ಸುರಿದುಕೊಂಡು ತಾನು ಉಪ್ಪರಿಗೆ ಬೆಂಕಿ ಹಚ್ಚಿಕೊಂಡಳು. ಕೂಡಲೇ ಆಕೆಯು [illegible] ಆಸ್ಪತ್ರೆಗೆ ತೆಗೆದುಕೊಂಡು ಹೋದ ಕೆಲವು ಘಂಟೆಗಳ ಕಾಲದೊಳಗೆ ಮೃತಪಟ್ಟಳು. ಒಬ್ಬ ಸ್ತ್ರೀ ಮತ್ತೊಂದು ಪ್ರದೇಶದೊಳು [illegible] ಪತಿ ಮೂಲಕವಾದ ನಿರ್ಬಂಧವೆಂದೆ ಭಾವಿಸಿ [illegible] ಆತ್ಮಹತ್ಯೆ ಮಾಡಿಕೊಂಡಳು. [illegible] ದರ್ಜೆಯವರೂ [illegible] ಕಾಲದಲ್ಲಿ ಬಹಳ ಪ್ರತಿಬಂಧಕ [illegible] ಸಂದೇಹ ವಿಲ್ಲ ವೆಂದು ಹೇಳಬಹುದಾಗಿದೆ.

ಕೃಪೆ [illegible] ಅರಸರವರಿಂದ ವಿಶೇಷ ಪ್ರಶಂಸೆ [illegible] ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ. ಡೆಪ್ಯುಟಿ ಅಮಲ್ದಾರ್ [illegible] ಅರಸಿನವರು, ಸಿ. ಬಿ. ರಾಮಸ್ವಾಮಿ ಅಯ್ಯಂಗಾರರು ರಜಾ ಮೇಲೆ ಗೈರುಹಾಜರಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಆಗುವ ತನಕ ನೆಲಮಂಗಲ ತಾಲ್ಲೂಕ್ ಅಮಲ್ದಾರ್ [illegible] ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ [illegible] ಮಾಡಲ್ಪಟ್ಟಿರುತ್ತಾರೆ.

Occasional Notes
ಪ್ರಾಸಂಗಿಕ ವಿಷಯಗಳು.

The Dewanship of Cochin.—[illegible] ದಿವಾನರಾದ [illegible] ಕಾಲವಾದನಂತರ [illegible] ತಿಳಿಸಿದ್ದೆವಷ್ಟೆ. ಕೊಯಂಬತ್ತೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರ್ ಮ|| ಸುಬ್ಬರಾಯ [illegible] ದಿವಾನಗಿರಿಯು [illegible] ಆಗುತ್ತದೆ.

Loss by floods.—[illegible] ಸಂಸ್ಥಾನದ ದಕ್ಷಿಣಭಾಗದಲ್ಲಿ [illegible] ಪ್ರವಾಹವಾದುದರಿಂದ ಅನೇಕರು [illegible] ಬಹುಜನ [illegible] ಅನೇಕ [illegible] ನಷ್ಟವಾದವೆಂತಲೂ ತಿಳಿಯಬರುತ್ತದೆ.

Granting a pension.—[illegible] ಸಂಸ್ಥಾನದಲ್ಲಿ [illegible] ನವಾಬ್ [illegible] ತಿಂಗಳ [illegible] ಕೊಟ್ಟು [illegible] ಈಚೆಗೆ [illegible] ಗವರ್ನಮೆಂಟಿನವರು ಅವರಿಗೆ [illegible] ಕೊಟ್ಟಿರುವುದಾಗಿ [illegible] ಪತ್ರಿಕೆ ತಿಳಿಸುತ್ತದೆ.

An entertainment.—[illegible] ಸಿ. [illegible] ಮಹಾರಾಜರವರಿಗೆ [illegible] ತಿಳಿಸುತ್ತದೆ.

Abolition of Jury system.—[illegible] ಯವರು ತಮ್ಮ [illegible] ನ್ಯಾಯ [illegible] ರಾಜ್ಯದಲ್ಲಿ [illegible] ಕೊಟ್ಟಿರು[illegible] ತೀರ್ಮಾನವನ್ನು ಅವರ [illegible] ಅಸಮಾಧಾನವನ್ನುಂಟುಮಾಡಿದೆ ಯೆಂಬುದಾಗಿ ವೃತ್ತಾಂತ ಪತ್ರಿಕೆಗಳಲ್ಲಿ ಬಹಳ ಆಕ್ಷೇಪಿಸುತ್ತಿರುವಂತೆ ಕಲ್ಕತ್ತೆ [illegible] ಪತ್ರಿಕೆ ತಿಳಿಸುತ್ತದೆ.

The Pleadership Examination.—ಮದರಾಸ್ ಪ್ಲೀಡರ್ ಟೆಸ್ಟ್ ಪರೀಕ್ಷೆಗೆ ಮೆಟ್ರಿಕ್ಯುಲೇಷನ್ ಪರೀಕ್ಷೆ ಕೊಟ್ಟವರು ಹೋಗಬಹುದೆಂಬ [illegible] ನಡೆಗೊಂಡಿದ್ದ ನಿಬಂಧನೆ

The Guickwar of Baroda.—[illegible] ತಮ್ಮ ಅಸಾಧಾರಣ ವಿದ್ಯಾ [illegible] ಸ್ವದೇಶೀಯರಿಂದ [illegible] ಅನ್ಯದೇಶೀಯರ [illegible] ಸಾಮ್ರಾಜ್ಯ [illegible] ಮಹಾರಾಣಿ [illegible] ಚಕ್ರವರ್ತಿನಿ [illegible] ಅನೇಕ ವಿಷಯಗಳಿಂ ಕುರಿತು [illegible] ತಿಳಿವು ಬಹಳ [illegible]

The Secretary of State and female education.—[illegible] ಬಾಲಿಕಾ ಪಾಠಶಾಲೆಗೆ [illegible] ಗವರ್ನಮೆಂಟಿನವರು [illegible] ಸ್ತ್ರೀ ವಿದ್ಯಾಭ್ಯಾಸಕ್ಕೆ ಗವರ್ನಮೆಂಟ [illegible] ಅನುಕೂಲವಾದ [illegible] ಪ್ರೋತ್ಸಾಹ [illegible] ತಿಳಿಯಬರುತ್ತದೆ.

A quarrel ending in suicide.—[illegible] ಬಾಲ್ಯಕೇ [illegible] ಸುಖಕರವಾಗಲಾರದು. [illegible] ಪುರುಷನಿಗೆ [illegible] ಯೋಗ್ಯತೆಯು [illegible] ಇದಕ್ಕೆ ನಿದರ್ಶನವಾಗಿ ಈಚೆಗೆ ಮುಂ[illegible]

A point of law.—[illegible] ಒಬ್ಬನ ಸಂರಕ್ಷಣೆಯೊಳಗಿದ್ದ [illegible] ನನ್ನು [illegible] ಡಿಸ್ಟ್ರಿಕ್ಟ್ ಡೆಪ್ಯುಟಿ ಮ್ಯಾಜಿಸ್ಟ್ರೇಟರವರು [illegible] ತಿಂಗಳ [illegible] ವಿಧಿಸಿದರು. ಅದರ ಮೇಲೆ ಮದರಾಸ್ ಹೈಕೋರ್ಟಿಗೆ ಅಪೀಲಾಯಿತು. ಪ್ರೈವೇಟ್ [illegible] ಟಿ. ರಂಗಾಚಾರ್ಯರವರು ಹಾಜರಾಗಿ ವಕೀಲ [illegible] ಜಸ್ಟಿಸ್ [illegible] ಮುತ್ತುಸಾಮಿ ಅಯ್ಯರವರೂ ಜಸ್ಟಿಸ್ ಮಿ|| ವಿಲ್ಕಿನ್ಸ್ [illegible] ಅಪೀಲ್ ಮೊಕದ್ದಮೆಯನ್ನು ವಿಚಾರಿಸುತ್ತಿರುವಲ್ಲಿ [illegible] ನ್ಯಾಯವಿಷಯಕವಾದ [illegible] ಮೊಕದ್ದಮೆಯಲ್ಲಿ [illegible] ಗಂಡನ ಮೇಲೆ [illegible] ಮನೆಯೊಳು [illegible] ರಕ್ಷಕನ ಅಧೀನದಲ್ಲಿದ್ದಂತೆ [illegible] ಗಂಡನ [illegible] ಅಂಗೀಕಾರಾರ್ಹವಾದುದು [illegible] ಗಂಡನ [illegible] ರಕ್ಷಣೆಯಿಂದ ಅವನ [illegible] ಮೊಕದ್ದಮೆಯು ತಳ್ಳಲ್ಪಟ್ಟು [illegible] ತಿಳಿದು ಬರುತ್ತದೆ.

THE MYSORE GAZETTE

ಮೈಸೂರು ಗೆಜೆಟು.

ಶ್ರೀಮನ್ ಮಹಾರಾಜ [illegible] ಆಜ್ಞಾನುಸಾರ [illegible]

ನಂ [illegible] ೧೮೯೨—ಮೈಸೂರು [illegible] ತಾಲ್ಲೂಕ್ [illegible] ಅಮಲ್ದಾರ್ [illegible] ೧೮೯೨ ನೇ [illegible] ದಿನಗಳ [illegible] ಕೊಡಲ್ಪಟ್ಟಿದೆ.

ನಂ [illegible] ೧೮೯೨—[illegible] ಅಸಿಸ್ಟೆಂಟ್ ಕಮಿಷನರ್ ಮಿ|| ಜೆ. [illegible] ಯವರು ಹಾಸನ ಡಿಸ್ಟ್ರಿಕ್ಟ್ [illegible] ೧೮೯೨ ನೇ ಇಸವಿ ಅಕ್ಟೋಬರ್ [illegible] ನೇ ತಾರೀಖು [illegible] ವಹಿಸಿಕೊಂಡಿರುತ್ತಾರೆ.

ಮೈಸೂರು [illegible] ನೇ ನವಂಬರ್ ೧೮೯೨—ನೆಲಮಂಗಲ ತಾ|| [illegible] ರಾಮಸ್ವಾಮಯ್ಯನವರಿಗೆ [illegible] ನೇ ತಾರೀಖ್ [illegible] ಅಥವಾ ಅವರು

ನಂ [illegible] ೧೮೯೨—ತಾ|| [illegible] ಟಿಂಗ್ ಅಸಿಸ್ಟೆಂಟ್ ಕಮಿಷನರ್ ಮಿ. ಪಿ. [illegible] ರವರು ಕಡೂರು ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ ಆಫೀಸ್ ಚಾರ್ಜನ್ನು ೧೮೯೨ ನೇ ಇಸವಿ ನವಂಬರ್ ೧ ನೇ ತಾರೀಖಿನ ಅಪರಾಹ್ನದಲ್ಲಿ ಸದರೀ ಡಿಸ್ಟ್ರಿಕ್ಟ್ ಡೆಪ್ಯುಟಿ [illegible] ರಾಮಸ್ವಾಮಯ್ಯಂಗಾರ್ಯರು ಸದರೀ ಆಫೀಸ್ ಚಾರ್ಜನ್ನು ಅದೇ ತಿಂಗಳ ೧೧ ನೇ ತಾರೀಖಿನ ದಿನ ತಗೆದುಕೊಂಡಿರುತ್ತಾರೆ.

ನಂ [illegible] ೧೮೯೨—ತಾ|| ೧೯ ನೇ ನವಂಬರ್—ನಾಗಮಂಗಲ ತಾಲ್ಲೂಕ್ [illegible] ಚಲುವಯ್ಯಂಗಾರ್ಯರು ೧೮೯೧ ನೇ ಇಸವಿ ಜುಲೈ [illegible] ನೇ ತಾರೀಖ್ ಮೊದಲು [illegible] ಸದರೀ ತಾಲ್ಲೂಕ್ [illegible]

ನಂ [illegible] ೧೮೯೨—ತಾ|| [illegible] ನೇ ನವಂಬರ್ ೧೮೯೨—ಅಸಿಸ್ಟೆಂಟ್ ಕಮಿಷನರ್ [illegible] ಶಿವಮೊಗ್ಗ ಡಿಸ್ಟ್ರಿಕ್ಟ್ [illegible] ೧೮೯೨ ನೇ ಇಸವಿ [illegible] ವಹಿಸಿರುತ್ತಾರೆ.

ರಿಜಿಸ್ಟ್ರೇಷನ್ ಇಲಾಖೆಯಲ್ಲಿ [illegible] ಅಧಿಕಾರಿ [illegible] ೧೮೯೩ ನೇ ಇಸವಿ [illegible] ಮೈಸೂರ್ [illegible] ಪರೀಕ್ಷೆಗಳಲ್ಲಿ ಪ್ರತ್ಯೇಕ ಭಾಗವಾಗಿ ರಿಜಿಸ್ಟ್ರೇಷನ್ ಆಕ್ಟ್ ಮತ್ತು ಅದನ್ನನುಸರಿಸಿ [illegible] ಕಾನೂನುಗಳಲ್ಲಿಯೂ [illegible] ಪರೀಕ್ಷೆಯು ನಡೆಸಲ್ಪಡುತ್ತದೆ. ಸದರೀ ಪರೀಕ್ಷೆಗೆ [illegible] ತಲ್ಪಡುತ್ತದೆ.

ಸ[illegible] ೧೮೯೩ ನೇ ಇಸವಿ ಆಗಸ್ಟ್ ತಿಂಗಳಲ್ಲಿ [illegible] ಪ್ಲೀಡರುಗಳಿಗೆ [illegible] ಪರೀಕ್ಷೆಯಲ್ಲಿ [illegible] ಉಮೇದುವಾರರು [illegible] ಯಾಗಿರುತ್ತಾರೆ.

[illegible] ದಕ್ಷಿಣ [illegible]

[illegible] ೧೮೯೩ ನೇ ಇಸವಿ [illegible] ನೇ ಸಾಲಿನಲ್ಲಿ [illegible] ನಿಯಮಗಳನ್ನನುಸರಿಸಿ, [illegible] ಪ್ಲೀಡರ್ಸ್ ಪರೀಕ್ಷೆಗೆ [illegible] ಉಮೇದುವಾರರು [illegible] ಪ್ಲೀಡರ್ ಪರೀಕ್ಷೆಗೆ [illegible] ಅವರು [illegible] ಗ್ರೇಡ್ ಪ್ಲೀಡರುಗಳಾಗಿ [illegible] ರಾಗಿ [illegible]

೧ [illegible] ಮೈಸೂರ್
೨ [illegible] ಚಿಕ್ಕಬಳ್ಳಾಪುರ.
೩ [illegible] ಬಂಗಾರಪೇಟೆ.
೪ [illegible]
೫ [illegible] ಮೈಸೂರ್.
೬ [illegible] ಮೈಸೂರ್
೭ [illegible] ಚಿಕ್ಕಬಳ್ಳಾಪುರ.
೮ [illegible] ಮೈಸೂರ್.
೯ [illegible]

[illegible]

[illegible]

೩. ೧೮೯೨ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡೆದ ಮೈಸೂರ್ ಸೀನಿಯರ್ ಎಕ್ಸೇಂಜ್ ಪ್ಲೀಡರ್ ಪರೀಕ್ಷೆಯಲ್ಲಿ ಇವರಡಿ ಕಂಡ ಉಮೇದುವಾರರು ತೇರ್ಗಡೆಯಾಗಿರುತ್ತಾರೆ.

೧. ಎ. ಸಿ. ಸೂರ್ಯನಾರಾಯಣರಾವ್, ಬೆಂಗಳೂರ್,
೨. ಜಿ. ಎಂ. ಜ್ಞಾನೋಬರಾವ್, ಶಿವಮೊಗ್ಗ.
೩. ಕೆ. ಜಿ. ಸಿಟ್ಟರಾವ್, ಮೈಸೂರ್,

ಮೈಸೂರು ಗವರ್ನಮೆಂಟ್ ಲೆಜಿಸ್ಲೇಟಿವ್ ಇಲಾಖಾ.

ಕಳೆದವಾರದ ಶೇಷವು.

೪೬. ಡಿಕ್ರಿಗಳು ಟಿಕ್ರಿಕೊಟ್ಟ ಗ್ರಾಮಕೋರ್ಟನಿಂದ ಅಥವಾ ಇದರಲ್ಲಿ ಮುಂದೆ ಅಡಗಿರುವನಿಬಂಧನೆ ಗಳಿಗನುಸಾರವಾಗಿ ಯಾರಬಳಿಗೆ ಅಮಲ್‌ಜಾರೀಬಗ್ಗೆ ಅದು ಕಳುಹಿಸಲ್ಪಡುತ್ತೊ ಅಂಥಾ ಗ್ರಾಮ ಕೋರ್ಟನಿಂದಾಗಲೀ ಯಾ ಮುನಸೀಫರಿಂದಾಗಲೀ ಅಮಲ್‌ಜಾರೀ ನಡಿಸಲ್ಪಡತಕ್ಕದ್ದು.

ಯಾವ ಕೋರ್ಟಿನವರು ಡಿಕ್ರಿಯ ಅಮಲ್‌ಜಾರೀ ನಡಿಸಬಹುದು.

೪೭. ವ್ಯಕ್ತವಾದ ಯಾವದಾದರೂ ಚರಸ್ವತ್ತಿನಬಗ್ಗೆ ಡಿಕ್ರಿಯಾಗಿದ್ದರೆ, ಅಂಥಾ ಸ್ವತ್ತನ್ನು ಹಿಡಿದು, ಡಿಕ್ರೀ ಪಡಕೊಂಡವನಿಗೆ ಅದನ್ನು ಕೊಡಿಸಿ ಜಾರಿ ನಡಿಸಬಹುದು, ಮತ್ತು ಅಂಥಾ ಸ್ವತ್ತನ್ನು ಹಿಡಿಯುವದು ಸಾಧ್ಯವಲ್ಲವಾದರೆ, ಅದರ ಬದಲಿಗೆ ವಿಧಿಸೋಣಾದ ಐವಜುಕೊಡಿಸಿ ಡಿಕ್ರಿ ಅಮಲ್‌ಜಾರಿನಡಿಸತಕ್ಕದ್ದು.

ವ್ಯಕ್ತವಾದ ಚರ ಸೊತ್ತಿನ ಬಗ್ಗೆ ಆದ ಡಿಕ್ರಿ ಯಾವಪ್ರಕಾರ ಅಮಲ್ಜಾರಿ ಮಾಡತಕ್ಕದ್ದು.

೪೮. (ಎ) ಗ್ರಾಮ ಮುನಸಫ್‌ಕೋರ್ಟ್ ಡಿಕ್ರಿ ಪ್ರಕಾರಕೊಡಬೇಕಾದ ಎಲ್ಲಾ ಐವಜು ಡಿಕ್ರಿಪಡಕೊಂಡವನಿಗೆಯಾ ಆತನಿಂದ ಅಧಿಕಾರವನ್ನು ಕುರಿತು ಬರಹಮೂಲಕ ಅಧಿಕಾರ ಹೊಂದಿದ ಆತನ ಮುಖ್ತಾರಿಗೆ ಡಿಕ್ರಿಯ ಅಮಲ್‌ಜಾರಿ ನಡಿಸದೆ ಗ್ರಾಮ ಮುನಸೀಫನ ಮುಂದೆ ಪಾವತೀ ಮಾಡತಕ್ಕದ್ದು; ಆದರೆ ಡಿಕ್ರಿಯನ್ನು ಪಡೆದವರಿಗೆ ತೃಪ್ತಿಕರವಾಗಿ ಅದು ಅನ್ಯಥಾ ಪಡಿಚಾ ಮಾಡೋಣಾಗಿದ್ದರೆ ಅಂಥಾ ರಾಜಿಯ ಸ್ವಭಾವವನ್ನು ಬರಹಮೂಲಕ ರಿಕಾರ್ಡು ಮಾಡತಕ್ಕದ್ದು, ಮತ್ತು ಆತನಿಂದ ಯಾ ಆತನ ಮುಖ್ತಾರನಿಂದ ಗ್ರಾಮ ಮುನಸೀಫನ ಸಮಕ್ಷಮದಲ್ಲಿ ಅದಕ್ಕೆ ದಸ್ತಖತ್ತು ಹಾಕಲ್ಪಡತಕ್ಕದ್ದು. ಮತ್ತು ಅದಕ್ಕೆ ಗ್ರಾಮ ಮುನಸೀಫನ ದಸ್ತಖತ್ತು ಇರತಕ್ಕದ್ದು.

ಡಿಕ್ರಿ ಯಾ ಇತರ ಐವಜುಗಳು ಡಿಗೆ ಪಾವತಿಯಾದ ಪಾವತಿಯು ಮುನಸೀಫನ ಸಮಕ್ಷಮದಲ್ಲಿ ಮಾಡಲ್ಪಡಬೇಕು, ಯಾ ರಿಕಾರ್ಡು ಮಾಡಲ್ಪಡಬೇಕು.

(ಬಿ.) ಅಂಥಾ ಪಾವತಿ ಯಾ ಲೆಕ್ಕ ತೀರಿಸುವಿಕೆಯನ್ನು ಗ್ರಾಮ ಮುನಸೀಫನು ಡಿಕ್ರಿಮೇಲೆ ಇಂಡಾರ್ಸಮಾಡಿ ೧೦ ನೇ ಪ್ರಕರಣದಲ್ಲಿ ನಮೂದಿಸಿದ ವ್ಯಾಜ್ಯಗಳ ರಿಜಿಸ್ಟರ್ ಪುಸ್ತಕದಲ್ಲಿ ದಾಖಲ್ಮಾಡಲ್ಪಡತಕ್ಕದ್ದು.

(ಸಿ) ಒಂದು ಡಿಕ್ರಿಯ ಸಮಾಧಾನಾರ್ಥವಾಗಿ ಮಾಡಿದ ಪಾವತಿಯನ್ನು ಮತ್ತು ಒಂದು ಡಿಕ್ರಿಯ ಪೂರ್ಣ ಯಾ ಅಂಶವನ್ನು ಕುರಿತು ವ್ಯವಸ್ಥೆಯನ್ನು ಈ ಪ್ರಕರಣದಿಂದ ನಿರ್ದೇಶಿಸಲ್ಪಟ್ಟ ರೀತಿಯಲ್ಲಿ ಅಥವಾ ಮುನಸಿಫಕೋರ್ಟನಲ್ಲಿ ಮಾಡಿದ ಬರಹಮೂಲಕ ಸಡಿಸಿದ ಹೊರತು ಅದು ಅಂಗೀಕರಿಸಲ್ಪಡಲಾಗದು.

೪೯. (ಎ) ೩೬ನೇ ವ ೩೭ನೇ ಪ್ರಕರಣಗಳ ನಿಬಂಧನೆಗಳಿಗೆ ಒಳಪಟ್ಟ ಬಂದುಗ್ರಾಮ ಕೋರ್ಟನಿಂದ ಕೊಡೋಣಾದಯಾವದಾದರೂ ಡಿಕ್ರಿಯ ಅಮಲ್‌ಜಾರಿಯಲ್ಲಿ ಯಾವನೊಬ್ಬ ಫೈಸಲ್ ಪ್ರತಿವಾದಿಯನ್ನು ಬೈದು ಮಾಡಲೂ ಅಥವಾ ಯಾವದಾದರೂ ಸ್ಥಿರಸ್ವತ್ತನ್ನು ಜಪ್ತೀ ಮಾಡಲೂ ಕೂಡದು.

ಸ್ಥಿರಸ್ವತ್ತು ಜಪ್ತೀ ಮಾಡ ಲೂ ಫೈಸಲ್ ಪ್ರತಿವಾದಿಗೆ ಬಡಿಯಲೂ ಕೂಡದು.

(ಬಿ). ಡಿಕ್ರೀ ತಾರೀಖು ಲಾಗಾಯತಾಗಲಿ, ಯಾ ಡಿಕ್ರಿಯಂತೆ ಯಾವದಾದರೂ ಮೊಬಲಗು ಪಾವತಿ ಯಾಗಬೇಕಾಗುವ ತಾರೀಖ್ ಲಾಗಾಯಿತಾಗಲಿ ಒಂದು ವರುಷ ಕಳೆದ ನಂತರ ಅಮಲ್‌ಜಾರೀ ಬಗ್ಗೆ ಬರುವ ಅರ್ಜಿಯನ್ನು ಹಿಡಿಯ ಕೂಡದು.

೫೦. ಡಿಕ್ರಿ ಪಡಕೊಂಡವನ ಅರ್ಜಿಯಮೇಲೆ ಫೈಸಲ್‌ಪ್ರಕಾರ ಕೊಡಬೇಕಾದ ಐವಜಿಗೆ ಸರಿಯಾದ ಮೌಲ್ಯವುಳ್ಳಂಥಾ ಫೈಸಲ್ ಪ್ರತಿವಾದಿಯ ಬಾಬತು ವಾದಿಯು ತೋರಿಸಿದಂಥ ಆತನ ಅಧಿಕಾರ ಸರಹದ್ದಿನೊಳಗಿರುವಂಥ ಚರಸ್ವತ್ತನ್ನು ಗ್ರಾಮ ಕೋರ್ಟಿನವರು ಜಪ್ತಿ ಮಾಡತಕ್ಕದ್ದು. ಪರಂತು ಈ ಕೆಳಗೆ ಕಾಣಿಸಿದ ಸ್ವತ್ತುಗಳನ್ನು ಜಪ್ತೀ ಮಾಡಕೂಡದು; ಯಾವದೆಂದರೆ:—

ಚರಸ್ವತ್ತಿನ ಜಪ್ತಿ.

(ಎ) ಫೈಸಲ್ ಪ್ರತಿವಾದಿಯು ಆತನ ಹೆಂಡತಿ ವ ಮಕ್ಕಳು ಧರಿಸಿಕೊಳ್ಳುವದಕ್ಕೆ ಆವಶ್ಯಕವಾದ ಉಡುಪು, ವ ಹಾಸಿಗೆ;

(ಬಿ) ಕಸಬಿನವರ ಆಯುಧಗಳು, ಮತ್ತು ಫೈಸಲ್ ಪ್ರತಿವಾದಿಯು ವ್ಯವಸಾಯಗಾರನಾಗಿದ್ದರೆ ಆತನ ವ್ಯವಸಾಯದ ಸಾಮಗ್ರಿ), ಮತ್ತು ಆತನು ತಾನೇ ಜೀವನ ನಡಿಸುವದಕ್ಕೆ ಕೋರ್ಟಿನವರ ಅಭಿಪ್ರಾಯದ ಮೇರಿಗೆ ಅಗತ್ಯವಿರಬಹುದಾದಂಥ ಜಾನುವಾರುಗಳು ಮತ್ತು ಬೀಜಧಾನ್ಯ;

(ಬಿಎಚ್) ವ್ಯವಸಾಯಗಾರರ ಸ್ವಾಧೀನದಲ್ಲಿರುವ ಯಾ ಅವರಿಗೆ ಸೇರಿದ ಮನೆಗಳು ವ ಇತರ ಕಟ್ಟಡಗಳು ಬಿಟ್ಟಿದೆ ಇರುವ ಸಾಮಾನುಗಳು;

(ಸಿ) ಲೆಕ್ಕದ ಪುಸ್ತಕಗಳು;

(ಡಿ) ಗವರ್ನಮೆಂಟ್ ಮಿಲಿಟರಿ ಮತ್ತು ಸಿವಿಲ್ ಪೆನ್‌ಷನ್‌ದಾರರ ಸಂಬಳ ವ ಉಪಜೀವನಾರ್ಥ ಧನ, ಮತ್ತು ರಾಜಾಂಗಸಂಬಂಧವಾದ ಪೆನ್‌ಷನ್;

(ಇ) ಸರ್ಕಾರಿ ಅಧಿಕಾರಿಗೆ, ಅಥವಾ ರೈಲ್ವೆ ಕಂಪೆನಿಯವರ ಯಾ ಸ್ಥಳಿಕ ಅಧಿಕಾರವುಳ್ಳವರ ನೌಕರಿಗೆ ಸಲ್ಲತಕ್ಕ ಸಂಬಳ, ಅಂಥ ಸಂಬಳವು ತಿಂಗಳಿಗೆ ೨೦ ರೂಪಾಯಿಗಿಂತ ಜಾಸ್ತೀ ಇದ್ದ ವಿನಾ ಈ ಪಕ್ಷದಲ್ಲಿ ಅಂಥ ಸಂಬಳದ ಅರೆವಾಸಿಯನ್ನು ಜಪ್ತಿ ಮಾಡಬಹುದು;

(ಎಫ್) ನೇಟಿವ್ ಆರ್ಮಿ ಆಫೀಸರ್ (ಎಂಬ ಯುದ್ಧದ ದೇಶೀಯ ಸರದಾರ್ಗಳು) ಲಗಾಯಾಗುವಂಥ ಮನುಷ್ಯರ ಸಂಬಳ ವ ವರ್ತನೆ;

(ಜಿ) ಕೂಲಿ ಕೆಲಸದವರ ವ ಮನೆಯ ನೌಕರರ ಕೂಲಿ.

೫೧. ಫೈಸಲ್ ಪ್ರತಿವಾದಿಯು ಸ್ವಾಧೀನದಲ್ಲಿ ಸವರೀ ಸ್ವತ್ತು ಇದ್ದರೆ, ಅದನ್ನು ಪ್ರತ್ಯಕ್ಷವಾಗಿ ಹಿಡಿದು ಜಪ್ತೀ ಮಾಡತಕ್ಕದ್ದು, ಮತ್ತು ಗ್ರಾಮ ಮುನಸೀಫನು ಅದನ್ನು ಬಂದೋಬಸ್ತಿನಲ್ಲಿ ಇಡಲಿಕ್ಕೆ ಬಗ್ಗೆ ಹಿಡಿ ಕಾಯುವದತಕ್ಕದ್ದು. ಕೇಳಿದಾಗ್ಯೆ ಹಾಜರು ನಡಿಸಿಕೊಟ್ಟೇನು ಎಂಬದಾಗಿ ಪ್ರತಿವಾದಿಯು ಬರಹಮೂಲಕ ಸಾಕಾದ ಜಾಮೀನು ಕೊಟ್ಟಲ್ಲಿ ಅದನ್ನು ಆತನ ಸ್ವಾಧೀನಕ್ಕೆ ಬಿಡಬಹುದು. ಹಾಜರು ಪಡಿಸುವದಕ್ಕೆ ತಪ್ಪಿದಲ್ಲಿ ಹಾಜರು ಪಡಿಸದೆ ಇರುವ ಸ್ವತ್ತಿನ ಮೌಲ್ಯಕ್ಕೆ ಜಾಮೀನ್‌ದಾರನ ಮೇಲೆ ಅಮಲ್‌ಜಾರಿ ನಡಿಸಬಹುದು.

ಫೈಸಲ್ ಪ್ರತಿವಾದಿಯು ಸ್ವಾಧೀನದಲ್ಲಿದ್ದರೆ ಯಾವ ಪ್ರಕಾರ ಅಮಲ್ಜಾರಿಮಾಡಬೇಕೆಂಬುದು.

೫೨. ಫೈಸಲ್ ಪ್ರತಿವಾದಿಯು ಸ್ವಾಧೀನದಲ್ಲಿ ಆ ಜೋಡಗಿಯು ಇಲ್ಲದಿದ್ದಲ್ಲಿ, ಯಾರ ಸ್ವಾಧೀನದಲ್ಲಿ ಆಜಂದಗಿಯು ಇರುವದೋ ಆ ಮನುಷ್ಯನು ಆ ಜಂದಗಿಯನ್ನು ಫೈಸಲ್ ಪ್ರತಿವಾದಿಗೆ ಕೊಡಕೂಡದೆಂದು ಬರಹಮೂಲಕ ಹುಕುಂ ದ್ವಾರಾ ಜಪ್ತಿ ಮಾಡತಕ್ಕದ್ದು. (ಸಶೇಷ)

ಫೈಸಲ್ ಪ್ರತಿವಾದಿಯುಸ್ವಾಧೀನದಲ್ಲಿಲ್ಲದಿದ್ದರೆ ಯಾವಪ್ರಕಾರ ಮಾಡಬೇಕು.

ADDRESS

OF THE

DEWAN OF MYSORE

TO THE REPRESENTATIVE ASSEMBLY HELD AT MYSORE,

on Tuesday, the 4th October 1892.

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೪ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ಆನೆಯುಗಳು—ಕಳೆದ ನವಂಬರ್ ಮತ್ತು ಜನವರಿ ತಿಂಗಳಲ್ಲಿ ಕಾಕನಕೋಟೆ ಜಂಗಲ್‌ನಲ್ಲಿ ಎರಡಾವರ್ತಿ ಆನೆಗಳನ್ನು ಖೆಡ್ಡದಿಂದ ಸೇರಿಸಿ ಒಟ್ಟು ೭೫ ಆನೆಗಳನ್ನು ಹಿಡಿದದ್ದಾಯಿತು. [illegible]

[illegible]

BANGALORE.—Printed and published at the KARNATIC PRESS, No. 40, HOSPITAL ROAD PETTA.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರಜಾಮವಿವಿಧವೃತ್ತಾಂತಪಗವಾರ್ತಾಕರ್ನಾಟಕಪ್ರಕಾಶನಪದಲಾಭಧಾಪ್ರಕಟನಾಹಿತಃ [illegible]

Vol. XIX] BANGALORE—MONDAY, DECEMBER 5, 1892. [No 48.

ಸಂಪುಟ ೧೯.] ಬೆಂಗಳೂರು—ಸರ್ ೧೮೯೨ ನೇ ಇಸವಿ ಡಿಸೆಂಬರ್ ೫ ನೇ ತಾರೀಖ್ ಸೋಮವಾರ. [ಸಂಖ್ಯೆ ೪೮.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ೧ಕ್ಕೆ	ಸ್ಥಳದವರಿಗೆ ತಪಾಲಿಲ್ಲದೆ	ಪರಸ್ಥಳದವರಿಗೆ ಟಪಾಲ್ ಸಹಿತ
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0
ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.		
ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಯಮಾಡುತ್ತ ಪಾವತಿರ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಕೊಡುವರು [illegible] ಸವಂತರಾದವರಿಗೆ ಮಾತ್ರವೇ [illegible] ದಂತೆ ಪತ್ರಿಕೆ ಕಳುಹಿಸಲ್ಪಡುವದು [illegible] ಇಂಗ್ಲಿಷ್ [illegible] ಕನ್ನಡ [illegible] ಅಥವಾ [illegible] ತಿಳಿಸಿಕೊಳ್ಳುವದು [illegible] ಚಂದಾ ಕೊಡುವರು [illegible]

ಪ್ರಕಟನೆಯ ರಿವಾಜ್.

ಮೊದಲನೆಸಾರೆಗೆ ಸಾಲ್ ೧ಕ್ಕೆ ಒಂದಕ್ಕೆ 0—೨—0

ಎರಡನೆಯದಕ್ಕೆ ಸಾಲ್ ಒಂದಕ್ಕೆ 0—೧—0

ಪರಾ—ಎರಡನೆಸಾರೆಗಿಂತ ಹೆಚ್ಚಾಗಿ ಎಷ್ಟು ಕರ್ತ [illegible] ಒಂದಕ್ಕೆ [illegible] ಈ ಪತ್ರಿಕೆಯಲ್ಲಿ [illegible] ಪ್ರಕಟನೆಗಳು [illegible] ಪ್ರಕಟಿಸಲ್ಪಡುವವು [illegible] ಮೇಲೆಕಂಡ ದರದಂತೆ [illegible] ಪ್ರಕಟನೆಯು [illegible] ಪ್ರಕಟನೆ [illegible] ಪತ್ರಿಕೆಗೆ [illegible] ಕಾಗದಗಳನ್ನು [illegible] ಪ್ರಕಟಿಸಲಾರೆವು [illegible]

ADVERTISEMENTS

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥಾರಂಭಕ್ಕೆ [illegible] ಮೊದಲಾದ [illegible] ರೋಗಗಳ [illegible] ಕನ್ನಡ [illegible]

ಇದರ ಕ್ರಯ—ಪೋಸ್ಟೇಜ್ ಮತ್ತು ಅಂಚೆ ಸಾಕಲ್ ರೆಜಿಸ್ಟರ್ ಪ್ರತಿ ಒಂದಕ್ಕೆ ರೂ 5 0—0

[illegible]

ಬೆಂಗಳೂರ್, [illegible] ನಂಬರ್.

ನೋಟೀಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೬೫ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ, ಸಕಲವಿಧ ಕೆಲಸಗಳು [illegible] ವಾಗಿಯೂ [illegible] ವಾಗಿಯೂ, [illegible]

ಇದರಲ್ಲಿ [illegible] ಇಂಗ್ಲಿಷ್ ಕನ್ನಡ ಕೆಲಸ [illegible] ಇತರ [illegible] ಉಕ್ತ [illegible]

ನೋಟೀಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಯಿದು ಉತ್ಸಾಹ [illegible] ಔಷಧಗಳು [illegible] ಈ ಔಷಧಗಳು [illegible] ಕೆಲವು ಸಿದ್ಧ [illegible] ತಯಾರಾದವಾಗಿಯೂ, ಅನುಭವ ಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವಾಗಿಯೂ ಇರುತ್ತವೆ. [illegible] ರೋಗಸ್ವರೂಪದನ್ನೂ ಔಷಧ [illegible] ಪಥ್ಯಗಳ ಕ್ರಮವನ್ನೂ [illegible] ಪ್ರತ್ಯುತ್ತರಕ್ಕೆ ಸಹ [illegible] ಕಳುಹಿಸಿ [illegible] ಪದಾರ್ಥಗಳು [illegible] ಕಳುಹಿಸಲ್ಪಟ್ಟ ಪದಾರ್ಥಗಳನ್ನು [illegible]

ತೈಲ—[illegible] ಕಾರಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ [illegible] ರಕ್ತ [illegible] ಸೀಸೆ ಒಂದಕ್ಕೆ ೧ ರೂ [illegible] ಸೀಸೆ ೧ಕ್ಕೆ ೫ ರೂ

ಜ್ವರದ ಗುಳಿಗೆಗಳು—[illegible] ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುವ [illegible] ರೂ ೧ಕ್ಕೆ ೧೨ ಗುಳಿಗೆಗಳು

[illegible] ಎಣ್ಣೆ—ಈ ಎಣ್ಣೆಯು [illegible] ದಿನಗಳತನಕ [illegible] ನಾನಾವಿಧ ಮೇಹಗಳೂ, [illegible] ಸ್ತ್ರೀಯರಿಗುಂಟಾಗುವ ಉಷ್ಣ ಸಂಬಂಧವಾದ ರೋಗಗಳೂ, [illegible] ಸೀಸೆ ೧ಕ್ಕೆ [illegible]

[illegible] ಚೂರ್ಣ—[illegible] ಹಲ್ಲುಗಳ [illegible] ಈ [illegible] ಸೀಸೆ ೧ಕ್ಕೆ ೧ ರೂ [illegible] ದಿನಗಳಿಗೆ ಆಗುವದು

ನೇತ್ರರೋಗಕ್ಕೆ ದವತ್ರ—[illegible] ದೃಷ್ಟಿ [illegible] ಕಣ್ಣುರಿ, ತಲೆನೋವು, ಕಣ್ಣಿನ ನೀರು [illegible] ಸಕಲರೋಗಗಳಿಗೂ ಪ್ರಶಸ್ತವಾದುದು [illegible] ಪ್ರಯೋಗದಿಂದ [illegible] ಉತ್ತಮವಾದ [illegible] ೧ಕ್ಕೆ [illegible] ದಿನಗಳವರೆಗೆ [illegible]

[illegible]—[illegible] ಮಾಡಿಕೊಳ್ಳಬಹುದು [illegible] ೧ಕ್ಕೆ ೧ ರೂಪಾಯಿ [illegible] ಸಿಯಮವಾಗಿ [illegible] ನಿವೃತ್ತಿಯಾಗುತ್ತದೆ

ಭಸ್ಮಗಳು—ತಾಮ್ರ, ರಜತ, ನಾಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, [illegible] ಭಸ್ಮಗಳೂ [illegible] ತಯಾರಾದವು. [illegible] ರೋಗಗಳಿಗೂ ಪ್ರಶಸ್ತವಾದವಾಗಿರುತ್ತವೆ ರೋಗ ಸ್ವರೂಪವು [illegible] ಕ್ರಯವು [illegible]

[illegible]—[illegible] ಧಾತು ವೃದ್ಧಿಕರಗಳಾದ [illegible] ೧ಕ್ಕೆ ೪ ರೂ

ಪರಿಮಳ ದ್ರವ್ಯಗಳು—ಗಂಧ, [illegible] ಹಣ್ಣು, [illegible] ಮೊದಲಾದ [illegible] ತಯಾರಾಗಿವೆ [illegible] ಸೀಸೆ ೧ಕ್ಕೆ [illegible] ರೂ.

[illegible]—[illegible] ಪಂಚಾಂಗ [illegible] ಪಗೈರೆ [illegible] ರೂ.

ನೋಟೀಸ್.

ಗಣೇಶ ರಾಮಚಂದ್ರ ಶರ್ಮ ಮತ್ತು ಕಂಪೆನಿ. ಕಮಿಷನ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ಸಾಧ್ಯ ಸುಲಭ ಕ್ರಯಕ್ಕೆ ಬಹಳ ಶ್ರಮವಾಗದಂತೆ ವ್ಯಾಲ್ಯು ಪೇಯಬಲ್ ಪೋಸ್ಟಿನಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಪಂಚಾಂಗಗಳು, [illegible] ಗಳು, [illegible] ಗಳು, ಬಟ್ಟೆಗಳು, [illegible] ಗಳು, [illegible] ಕಣಗಳು, [illegible] ಗಳು, [illegible] ಗಳು, [illegible] ಗಳು, [illegible] ಗಳು, ಅತ್ತರುಗಳು, ಅತ್ಯುತ್ತಮಗಳಾದ ರತ್ನಗಳು, [illegible] ಉಂಗುರಗಳು, [illegible] ಪಾತ್ರೆಗಳು, [illegible] ಪಾತ್ರೆಗಳು, [illegible] ವಗೈರೆ ಇತರ ಸಾಮಾನುಗಳು

ಜವಾಬ್ ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟ್ಯಾಂಪ್ ಕಳುಹಿಸದ ಹೊರತು ಜವಾಬ್ ದೊರೆಯಲಾರದು

ವಿಳಾಸ—ಗಣೇಶ ರಾಮಚಂದ್ರ ಶರ್ಮ,
ಮತ್ತು ಕಂಪೆನಿ, ಕಮಿಷನ್ ಏಜಂಟ್ಸ್,
[illegible], ಮೈಸೂರು.

ನೋಟೀಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ಬಿಕರಿಗೆ ಸಿದ್ಧವಾಗಿವೆ ಬೇಕಾದವರು ವೆಂಬಲಗು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು

	ಟಪಾಲ್ ಸಹಿ	ರೂ	ಆ	ಪೈ
ಸಟೀಕಾ ವೈದ್ಯಸಾರ ಸಂಗ್ರಹ	.	೫	0	0

ಕನ್ನಡ ಗ್ರಂಥಗಳು.

ಕ ಕಸಕ್ತಿ [illegible]	.	೩	0	೬
[illegible]	..	೧	೨	0
ವೃಷಭೇಂದ್ರವಿಜಯ	.	೧	೮	0
ಪಂಚಧಾಟಿ ಟಾಲಿಕೆ	..	0	೬	0
[illegible]	.	0	೬	0
[illegible] ಜನಾರ್ದನ	..	0	೨	0
[illegible]		0	೨	0
[illegible]		0	೨	೬
[illegible]	.	0	೧	೨
[illegible] ಚರಿತ್ರೆ	..	0	೧	0
ಬಾಲ ಚಿಕಿತ್ಸೆ	..	0	೧	0
[illegible]		0	೧೨	0
[illegible] ವಿಲಾಸ		0	೧೨	0
,, [illegible]		೧	೨	0
,, [illegible]	..	0	೮	0
,, [illegible]		೧	0	0
,, [illegible] ರಾಮಾಯಣ		0	೩	0
,, [illegible]		0	೧	0
,, [illegible] (ಸುಭಾಷಿತ)		0	೪	0
ವಿಷ್ಣುಸಹಸ್ರನಾಮ ವಗೈರೆ	.	0	೩	0
ಸೂರ್ಯಸಹಸ್ರನಾಮ	.	0	೨	0
ಕೃಷ್ಣಕರ್ಣಾಮೃತ	.	0	೧	0
[illegible]		0	೨	0
೧ [illegible]			0	0

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯುವದು ಏನೆಂದರೆ.—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜನ್ ರಾಗಿದ್ದ ಡಾಕ್ಟರ್ ನೇಯಿಲರ್ ಎಂಬವರು ಬೆಂಗಳೂರು [illegible] ಗುಂಡೋಪಂತರವರ ಮನೆಯ ಹತ್ತಿರದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆ ಮಾಡುವದಕ್ಕೋಸ್ಕರ ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸದರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೮ ಘಂಟೆಯ ಮೊದಲು ೧೦ ಘಂಟೆಯ ವರೆವಿಗೂ ಆಸ್ಪತ್ರೆಯಲ್ಲಿದ್ದು ವಿಶಿಷ್ಟ ರೋಗಿಗಳಿಗೂ, ಮುಖ್ಯವಾಗಿ ಕಣ್ಣಿನ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೮ ರೂಪಾಯಿ ಗಳ ರುಸುಂ ಕೊಡಬೇಕು.

C G R NAYLOR
M R. C S, ENGLAND,
Surgeon.

ಕೊಡಗು ಫಾರೆಸ್ಟು ಇಲಾಖಾ.

ನೋಟಿಸ್.

1892 ನೇ ಇಸವಿ ನವೆಂಬರ್ ತಾರೀಖ್ 19.

ಇದರಡಿ ನಮೂದಿಸಿದ ಸಾಮಾನುಗಳು [illegible] ಡಿಪೋದಲ್ಲಿ ಸರ್ 1892 ನೇ ಇಸವಿ ಡಿಸೆಂಬರ್ ತಾರೀಖ್ 11 ರಲ್ಲು ಹರಾಜ್ ಹಾಕಲ್ಪಡುತ್ತದೆ.

60 [illegible]	1800 ಅಡಿ	} [illegible]
490 [illegible] ವಗೈರೆ	11400 ಅಡಿ	
180 ಇತರ	4200 ಅಡಿ	

ಷರತ್ತು—ಸರ್ 1889 ನೇ ಇಸವಿ [illegible] ತಾರೀಖ್ 19 ನಂಬರ್ 53 [illegible] ಕಮಿಷನರ [illegible] ಹರಾಜ್ [illegible] ದಿನಗಳ [illegible]

G. H FOSTER,
[illegible],
ಕೊಡಗು ಫಾರೆಸ್ಟ್.

ಪ್ರಕಟನೆ.

"ಆಂಗ್ಲೋ ಇಂಡಿಯನ್ ಪಾಕೆಟ್ ಡೈರಿ"

ನಾವು ಪ್ರತಿ ವರ್ಷದಲ್ಲಿಯೂ ಪ್ರಚುರಪಡಿಸುತ್ತಿರುವ ಮೇರೆಗೆ ಸರ್ವರಿಗೂ ಬಹಳ ಉಪಯುಕ್ತವಾಗಿರುವಂಥ ಇಂಗ್ಲಿಷ್ ತಿಂಗಳ ತಾರೀಖು, ಅದಕ್ಕೆ ಸರಿಯಾದ [illegible] ಸಂವತ್ಸರ, ತಿಂಗಳು, ತಿಥಿ, ವಾರ, ನಕ್ಷತ್ರ ಸಹಿತವಾಗಿಯೂ, ನಮ್ಮ ಅವಶ್ಯಕವಾಗಿ ತಿಳಿಯಬೇಕಾದ ಸಂಗತಿಗಳು, ರಯಿಲ್ವೇ ಸ್ಟೇಷನ್‌ಗಳು, ಅಲ್ಲಿಗೆ ರಯಿಲ್ವೇ ಛಾರ್ಜ್ [illegible] ಪೋಸ್ಟಾಫೀಸ್ ರೂಲ್ಸ್ ಮುಂತಾದ ವಿಶೇಷ ಸಂಗತಿಗಳನ್ನು [illegible] ಇಸವಿಯ [illegible] ಪುಸ್ತಕವನ್ನು ವಿಕ್ರಯಕ್ಕೆ ಸಿದ್ಧಮಾಡಿರುತ್ತೇವೆ.

ಕ್ರಯ ಪ್ರತಿ ೧ಕ್ಕೆ ಟಪ್ಪಾಲ್ ಹಾಸಲ್ ಸಹಿತ 0—೬—0 [illegible] ಪ್ರತಿ [illegible] ಕಳುಹಿಸುತ್ತೇವೆ [illegible] ಹೆಸರ [illegible] ಪ್ರತಿ [illegible] ಟಪ್ಪಾಲ್ ಹಾಸಲ್ [illegible] ಕಳುಹಿಸಿ ಕೊಡಬೇಕು

[illegible] } [illegible]
ವ್ಯಾಪಾರಸ್ಥರ [illegible]
[illegible], ಬೆಂಗಳೂರ್

ನೋಟಿಸ್.

ಕೊಡಗುದೇಶದ ಗಂಧದ ಹರಾಜ್

ಸರ್ ೧೮೯೨ನೇ ಇಸವಿ ಡಿಸೆಂಬರ್ ತಾರೀಖ್ ೧೫ರಲ್ಲು ಪ್ರೋಜರಿ ಟೇಟೀಲಿ ಸ್ವಲ್ಪ ಬೆಚ್ಚು ಕಡಮೆ ೧೯೦ ಟನ್ ಗಂಧ ಹರಾಜ್ ಹಾಕಲ್ಪಡುತದೆ

ಷರತ್ — ಸನ್ ೧೮೮೫ನೇ ಇಸವಿ ಜನವರೀ ತಾರೀಖ್ ೩ ರ ನಂಬರ್ ೧ನೇ ಕೊಡಗು ಡಿಸ್ಟ್ರಿಕ್ಟ್ ಗೆಜೆಟಿನಲ್ಲಿ ಛಾಯಿಷ್ ಮಾಡಲ್ಪಟ್ಟ ಕೊಡಗು ಚೀಫ್ ಕಮ್ಮಿಷನರ್ ಸಾಹೇಬರವರ ಸನ್ ೧೮೮೧ ನೇ ಇಸವಿ ಫೆಬ್ರವರಿ ತಾರೀಖ್ ೧೫, ನಂಬರ್ ೫೬ ರ ನೋಟಿಫಿಕೇಷನ್ ಮೇರೆ, ಆವರೆ ಕೇಳಿತ ಐದ್ದ ಕ್ಕೃದರಷ್ಟು ಹಣವನ್ನು ಹರಾಜ್ ಕಾಲದಲ್ಲಿ ಕೊಡತಕ್ಕದ್ದು. ಬಾಕಿ ಮೊಬಲಗನ್ನು ೧೮೯೩ ನೇ ಇಸವಿ ಮಾರ್ಚಿ ತಾರೀಖ್ ೧೫ ರ ಒಳಗೆ ಸಾಕಲ್ಯವಾಗಿ ಪಾವತೀ ಮಾಡತಕ್ಕದ್ದು.

೧ನೇ ನವಂಬರ್, ೧೮೯೨ನೇ ಇಸವಿ } G H TOSHR, Dy. Conservator of Forests, Coorg

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ —

ಸನ್ ೧೮೯೩ನೇ ಇಸವಿ ಏಪ್ರಿಲ್ ೧ನೇ ತಾರೀಖ್ ಮೊದಲು ೧೮೯೪ ನೇ ಇಸವಿ ಮಾರ್ಚ ೩೧ನೇ ತಾರೀಖ್ ವರಿವಿಗೆ, ಹೊಸೂರ್ ರಿಮೌಂಟ್ ಇಲಾಖೆಗೆ ಇದರಡಿ ನಮೂದ್ ಮಾಡಲ್ಪಡುವ ಜಿನಿಸಿಗಳು ಬೇಕಾಗಿರುವವರಿಂದ ಅವುಗಳ ಸರಬರಾಯಿ ಬಗ್ಗೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳನ್ನು, ರಿಮೌಂಟ್ ಡೆಪೊ ಸೂಪರಿಂಟೆಂಡೆಂಟರವರು ಸನ್ ೧೮೯೨ನೇ ಇಸವಿ ಜನವರಿ ೯ನೇ ತಾರೀಖ್ ಸೋಮವಾರ ಮಧ್ಯಾಹ್ನ ೧೨ ಘಂಟೆಯ ವರಿವಿಗೆ ಬರಮಾಡಿಕೊಳ್ಳುವರು.

ಅದನ್ನು ಕುರಿತ ಜಾಸ್ತೀ ತಪ್ಸೀಲುಗಳನ್ನು ತಿಳಕೊಳ್ಳಬೇಕಾದವರು ೧೮೯೨ನೇ ಇಸವಿ ನವಂಬರ್ ೮ ನೇ ತಾರೀಖುಳ್ಳ ೪೨ ನೇ ನಂಬರ್ ಪ್ರೋರ್ಟ್ ಸೆಂಟ್ ಜಾರ್ಜ್ ಗೆಜೆಟಿನ ೨ ನೇ ಭಾಗದ ೧೫೫೫ನೇ ಪುಟವನ್ನು ನೋಡಿ ತಿಳಕೊಳ್ಳತಕ್ಕದ್ದು.

ಹುರಳಿ.
ನೆಲ್ಲುಹುಲ್ಲು
ರಾಗಿ ಹುಲ್ಲು
ಹಸೀ ಹುಲ್ಲು.

ರಿಮೌಂಟ್ ಡಿಪೊ, ಹೊಸೂರ್ ೧೫—೧೧ ೯೨ } Harold Goad, Captain, Supt., Re. Depot

ನೋಟಿಸ್

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ —

ಹುಚ್ಚರ ಮತ್ತು ಕುಷ್ಟರೋಗಿಗಳ ಆಸ್ಪತ್ರಿಗೂ ಪ್ರಸವಾಸ್ಪತ್ರಿಗೂ, ವೈದ್ಯಶಾಲೆಗೂ, ಬೇಕಾದ ಆಹಾರಜಿನಿಸಿಗಳು, ಔಷದಸಾಮಾನುಗಳು ಮತ್ತು ಚಿಲ್ಲರೆ ಸಾಮಾನುಗಳು, ಇವುಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಕೊಡಬಹುದು. ಸದರೀ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಕಮಿಷನರವರಿಂದ ಸನ್ ೧೮೯೨ನೇ ಇಸವಿ ಡಿಸೆಂಬರ್ ೨೦ನೇ ತಾರೀಖ್ ವರಿವಿಗೆ ಅಂಗೀಕರಿಸಲ್ಪಡುವವು. ಇತರ ತಪಸೀಲುಗಳಬಗ್ಗೆ ಸನ್ ೧೮೯೨ ನೇ ಇಸವಿ ಡಿಸೆಂಬರ್ ೧ನೇ ತಾರೀಖಿನ ಮೈಸೂರ್ ಗೆಜೆಟನ್ನು ನೋಡತಕ್ಕದ್ದು.

T J McGann, Senior Surgeon &c, Govt of Mysore

THE MONEY MARKET

ಮದರಾಸ್, ಶನಿವಾರ, ತಾರೀಖ್ ೩ನೇ ಡಿಸೆಂಬರ್ 1892

ಸೇಕಡ ೪ರೂ ಬಾಬತು ಗವರ್ನಮೆಂಟ್ ಪತ್ರಗಳು, ರೂಪಾಯಿಗಳು, 106–2–0 ಇಂದ 106–8–0 ರವರಿಗೆ

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳು ಬಾಬತು 954 ಆಗಾ ಯಿತು 950ವರಿವಿಗೆ

ಅರ್ಬುಥ್‌ನಾಟ್ ವ ಬ್ಯಾಂಕ್ ಮದ್ರಾಸ್ ಬ್ಯಾಂಕ್ ಷೇರ್‌ಗಳು, (100) ಬಾಬತು 150 ರಿಂದ 155 ವರಿವಿಗೆ

ಸವರಿಗಳು, 16–2–0

ಬ್ಯಾಂಕ್‌ಬಿಲ್‌ಗಳು ಯಾನ ದರ್ಶನದುಂಡಿಗಳು, ಲಂಡನಿಗೆ 6 ತಿಂಗಳವಾಯಿದೆಗೆ, 1s 3 32d

ಹಿಂದೆ 4 ತಿಂಗಳವಾಯಿದೆಗೆ, 1s 3 1/32d

ಟೆಲಿಗ್ರಾಫಿಕ್ ಟ್ರಾನ್ಸ್‌ಫರ್, 1s. 215/16d

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA

MONDAY, DECEMBER 5, 1892

೧೮೯೨ನೇ ಇಸವಿ ಡಿಸೆಂಬರ್ ತಾ॥ ೫ನೇ ಸೋಮವಾರ

INTER-MARRIAGES

ಪ್ರಾಚೀನ ಹಿಂದೂ ಮತಾಚಾರ ಸಮೂಹ ಕ್ರಮದ ನಿವೃತ್ತ್ಯರ್ಥ ಪ್ರವರ್ತಿಸಿರುವ ಲೋಕೋಪಕಾರ ದಾಕ್ಷಿಣರಾದ ಆಧುನಿಕ ನವನಾಗರಿಕರು ಶಿಷ್ಟಾಚಾರ ರಕ್ಷಣಾನುರಕ್ತರಾಗಿ ನೂತನ ಕರ್ತ್ರಾನುಷ್ಠಾನದ ಶೀಲ ವ್ಯಕ್ತಪಡಿಸುವ ಔತ್ಸುಕ್ಯವು ನಿರತಿಶಯವಾದುದಾಗಿದ್ದರೂ ಅವರ ಉದ್ದೇಶ ಪ್ರಯತ್ನಗಳು ಬಹ ವಿಧ ನಷ್ಟ ಪರುಷ ರಾಹಿತ್ಯ ಭೂತವಾಗದೆ ಹೋಗುವದಿಲ್ಲವು ವಿದ್ಯಾಭ್ಯಾಸ ಪ್ರಯುಕ್ತ ಸಮುದಿತ ಸ್ತ್ರೀ ಸ್ವಾತಂತ್ರ್ಯವನ್ನನುಭವಿಸಬೇಕೆಂದಿಚ್ಛೆಯುಳ್ಳವರನೇಕರಿಗೆ ವಿದ್ಯಾಭ್ಯಾಸಾನಂತರ ಯತ್ಪ್ರಯುಕ್ತವಾದ ಹಿತಫಲವು ಸ್ತ್ರೀಯರಿಗೆ ಹ್ಯಾಗೆ ಘಟಿಯಿಸಬಹುದೆಂಬ ಪ್ರಬಲತರ ಚಿಂತೆಯು ಪ್ರಬಲಿಸುತ ಬರುತಲಿದೆ ಸಂಘಸಂಸ್ಕರಣಪ್ರವರ್ತಕರಿಗೆ ಸ್ತ್ರೀ ಪ್ರಾಬಲ್ಯವು ಕ್ರಮೇಣ ಪುರುಷ ಸ್ವಾತಂತ್ರ್ಯ ನಿರೋಧಕವಾಗುವದೆಂಬ ಭೀತಿಯು ಈಚೆಗೆ ಬಲವತ್ಕಾರಣಗಳುಂಟಾಗಿ ಅವರದುಪ್ರಕಾರಾಂತರೇಣ ಹೊರಪಡಿಸಲಿಚ್ಛಿಸಿರುವರು. ಇನ್ನು ಕೆಲವರು, ತಮ್ಮ ವಯೋರೂಪ ಶಕ್ತಿಯುಕ್ತಿ ಸಾಮರ್ಥ್ಯಗಳು ಕಾಲಧರ್ಮವನ್ನನುಸರಿಸಿ ಲಯಿಸುತ ಬರುವದುಕಂಡು ಚಿಂತಿಸುತ ತಮ್ಮ ಕಾಲಾನಂತರ ತಮ್ಮ ಸ್ಥಾನಾಪನ್ನರಾಗಿ ಸ್ತ್ರೀಯರೇ ನೆರೆಗೊಂಡು ವ್ಯಾಪಕರಾಗಿರಬೇಕೆಂಬ ಕೋರಿಕೆಯಿಂದ ಸ್ತ್ರೀಯರಿಗೆ ನಾನಾ ರಾಜಕೀಯಾಧಿಕಾರಗಳು ಕೊಟ್ಟು ಮಹೋನ್ನತ ನಾಗರಿಕ ದಶೆಗವರು ತರಬೇಕೆಂದು ವಾದಿಸಲುಪಕ್ರಮಿಸಿದರೆ ಪಶ್ಚಾತ್ತಿ ಅವರಿಗುಂಟಾಗುವುದಾದ ಪ್ರಚುರ ಶಕ್ತಿಯೂ ರಾಜಕಾರ್ಯ ನಿರ್ವಹಣ ಚಾತುರ್ಯವೂ ಸಪ್ಪೆ ವಿಚಾರಾರ್ಹಗಳಲ್ಲದಿದ್ದರೂ ಮೇಷನಾಬಾಮರು ಈಗ ಕ್ಲೇಶಪಡುತಲಿರುವ ವಿದ್ಯಾವಂತರಾದ ಬಾಲಕರನೇಕರಿಗದು ಅನಿಷ್ಟದಾಗಿದೆ. ರಾಜಕೀಯಾಧಿಕಾರಗಳಲ್ಲಿ ಸ್ತ್ರೀಯರಂನಿಯಮಿಸುವದನೇಕಾನರ್ಥ ಹೇತುವೆಂದು ಭಾವಿಸಿ ಬ್ರಿಟಿಷ್ ಗವರ್ನಮೆಂಟವರು ಪ್ರೋಫೆಷನಲ್ ಉದ್ಯೋಗಗಳಿಗೆ ಸಹ ವಿವಾಹಿತೆಯರು ಅನರ್ಹರೆಂದು ನಿರ್ಧರಿಸಿದಾರೆ. ಆದುದರಿಂ ರಾಜ್ಯಾಡಳಿತದಲ್ಲಿ ಹಿಂದೂ ಸ್ತ್ರೀಯರು ಯಾವಯಾವ ಅಧಿಕಾರಗಳಿಗೆ ಮುಂದೆ ಅರ್ಹರೆನಿಸಿ ಪ್ರಭುಶಕ್ತಿಯಂ ಕೈಗೊಳ್ಳುವರೊ ಅದಂ ನೋಡಬೇಕಾದ ಕಾಲವು ಆವರದಿಂ ನಿರೀಕ್ಷಿಸಲ್ಪಡುತಲಿದೆ. ಸ್ತ್ರೀಪುನರುದ್ವಾಹಪ್ರೋತ್ಸಾಹರಾಗಿ, ಪ್ರೌಢಾಂಗನಾ ಪರಿಣಯಾನುರಕ್ತರಿಂದ ಮುಖ್ಯಂ ದ್ವಿವಿಧ ನಿರ್ಬಂಧವು ಈಗ ಪ್ರಬಲಿಸಿರುವಂತೆ ಕಾಣುತಿದೆ. ಆಯಾ ಮತಸ್ಥರಲ್ಲಿ ವಿಧವಾ ಭೋಗಾಭಿಲಾಷಿಗಳಾಗಿಯೂ, ಸದ್ಯಸ್ಸಂಭೋಗಾರ್ಹರಾದ ಪ್ರೌಢ ನಾಯಿಕಾ ಸಂಪಾದನೇಚ್ಛೆಯುಳ್ಳವರಾಗಿಯೂ ಇರತಕ್ಕ ಅನುರೂಪರಾದ ಪುರುಷರು ದೊರೆಯುವದು ದುರ್ಲಭವಾಗಿ ಕಂಡುಬರುವದರಿಂದ ತತ್ಪ್ರತೀಕಾರಾರ್ಥ ಅವರುನಾನಾವಿಧ ಉಪಾಯಗಳು ಹುಡುಕುತ ತಮ್ಮ ಪ್ರಯತ್ನೋದ್ದೇಶಗಳು ಶಾಸ್ತ್ರೀಯಗಳೆಂದೂ, ಶಿಷ್ಟಾಚಾರಸಮ್ಮತವಾದವೆಂತಲೂ ಲೋಕಕ್ಕೆ ತಿಳಿಸುವವ್ಯಾಜದಿಂ ಮಠಾಧಿಪತಿಗಳಿಂಸಹ ಸ್ವಾಧೀನಪಡಿಸಿಕೊಳ್ಳುವದಕ್ಕೆ ಪ್ರಯತ್ನಪಡುತಲಿರುವಂತೆ ಕಾಣುತಿದೆ. ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯರಾದ ಶ್ರೀ ಶೃಂಗೇರಿ ಸ್ವಾಮಿಗಳವರು ತಮ್ಮ ಶಿಷ್ಯಾನುಗ್ರಹಾರ್ಥ ದೇಶಸಂಚಾರಮಾಡುತ ಈಗ ಕೊಯಂಬತೂರ್ ಡಿಸ್ಟ್ರಿಕ್ಟಿನಲ್ಲಿ ಬಿಜಯಮಾಡಿರುವಂತೆ ತಿಳಿಯಬರುತಿದೆ. ಹಿರೋಡ ಮತ್ತು ಕರೂರ್ ಪ್ರಾಂತಗಳಲ್ಲಿರುವ ಬ್ರಾಹ್ಮಣರನೇಕರು. ತತ್ಕಾಲದಲ್ಲಿ ತಮ್ಮ ಹೆಣ್ಣು ಮಕ್ಕಳಿಗೆ ಸ್ವಸವರ್ಣ್ಯಯೊಳು ಅನುರೂಪರಾದ ಗಂಡಂದಿರು ದೊರೆಯುವದಸಾಧ್ಯವಾಗಿರುವದರಿಂದಲೂ, ತಾವು ಅನ್ವೇಷಣ ಮಾಡಿ ನಿಶ್ಚಯಿಸುವ ವರನಂ ಅಂಗೀಕರಿಸಿ ವಿವಾಹ ಮಾಡಿಕೊಳ್ಳಬೇಕೆಂಬ ನಿರ್ಬಂಧದಿಂ ಈ ಕಾಲದ ತರುಣಿಯರು ಬದ್ಧಾಂಗ ವಿಮುಕ್ತರಾಗಿದಾರೆಂತಲೂ, ಅವರ ಅಭೀಷ್ಟವಂ ಯಥೋಚಿತ ತಾವು ಗೌರವಿಸಿ ತದನುಸಾರ ವರ್ತಿಸದಿದ್ದರೆ ಮುಂದೆ ತಮ್ಮ ಔತ್ಕೃಷ್ಟ್ಯವೂ ಗೌರವವೂ ಉಳಿಯುವದು ಪ್ರಯಾಸವೆಂತಲೂ, ವರ್ತಮಾನಕಾಲದ ಬಾಲೆಯರ ದೃಷ್ಟಿಯು ವಿಜಾತೀಯವಾದುದಾಗಿ ಅವರಮನವು ನೂತನವಿಷಯಾನುಭವದಲ್ಲಿಯೇ ಆಸಕ್ತವಾಗಿರುತಿದೆಯಾಗಿ ಕಾಲಗತಿಯಿಂ ಸಂಪ್ರಾಪ್ತವಾದ ಪ್ರೌಢಾ ಪರಂಪರೆಯ ಪದ್ಧತಿಯು ತಮಗೆ ಅಸಾಧ್ಯವಾಗಿದೆಯೆಂತಲೂ, ಅನಾದಿಯಾದ ಪೂರ್ವಸಂಪ್ರದಾಯವೆಂಬ ನಿರ್ಬಂಧದೊಳು ಸಿಲುಕಿ ಮರಾಧಿಪತಿಗಳ ಆಜ್ಞೆಯೆಂಬ ಶೃಂಖಲದಿಂ ಬದ್ಧರಾಗಿ, ನಮ್ಮ ಅಜ್ಞಾನಾಂಧಕಾರ ವಿಧ್ವಂಸನಾರ್ಥ ಉದಯಿಸಿರುವ ದಿವಾಕರ ಪ್ರಾಯರಾದ ಆಚಾರ ಪ್ರವರ್ತಕರಸ್ವಪ್ರತಿಷ್ಠಾಜನಿತ ಕಾಂತಿಯಿಂತಾವು ತೇಜೋರಹಿತರಾಗಿಯೂ, ತಮ್ಮಸ್ವರಗಳು ನಿಸ್ವರವಾಗಿ ಮಾಡಲುದ್ಯುಕ್ತಗಿಸಿರುವ ನಿಂದಾರೂಪವಾದ ಅವರ ವಾಕ್ಯಗಳಿಂದ ತಾವು ಬಹಳ ಖಿನ್ನರಾಗಿರುವುದೆಯೂ, ಏವಮಾದಿ ಸಂಕಟಗಳಂ ನಿರೋಧಿಸಿ ಯೋಗ್ಯವಾದ ಯಾವದಾದರೊಂದು ವಿಧ ಯೋಜನೆಯನ್ನು ಮಾಡಿಕೊಳ್ಳಲಿಕ್ಕೆ ಅಪ್ಪಣೆ ಪಿಸಬೇಕೆಂತಲೂ ಪ್ರಾರ್ಥಿಸಿ ಒಂದು ವಿಜ್ಞಾಪನಾ ಪತ್ರಿಕೆಯಂ ಶ್ರೀ ಸ್ವಾಮಿಗಳವರ ಸನ್ನಿಧಿಯಲ್ಲಿ ಅರ್ಪಿಸಿದರು. ಇದಲ್ಲದೆ ಒಂದು ಹಿರಿಯ ಶಿಷ್ಯವರ್ಗಕ್ಕೆ ಸೇರಿ ಏಕ ಮತಾವಲಂಬಿಗಳಾಗಿಯೂ ಒಂದು ಸಿದ್ಧಾಂತಾವಲಂಬಿಗಳಾಗಿಯೂ ಇರತಕ್ಕವರು ದೇಶಭೇದದಿಂ ದೂರರಾಗಿ ದಾನ ಪ್ರತಿಗ್ರಹ ರಹಿತರಾಗಿರುವದರಿಂದ ಅಂತವರೊಡನೆ ಸಂಬಂಧವು ಮಾಡುವದೇನಾದರು ಶಾಸ್ತ್ರವಿರುದ್ಧವೇ ಯೆಂದು ಸ್ವಾಮಿಗಳಂ ಕೇಳಿರುವಂತೆ ತಿಳಿಯಬರುತಿದೆ. ಅದ್ವೈತ ಸಿದ್ಧಾಂತಾವಲಂಬಿಯಾಗಿಯೂ, ಶಂಕರ ಮತಕ್ಕೆ ಶಿಷ್ಯರಾಗಿಯೂ, ಸ್ಮಾರ್ತಮತಸ್ಥರಾಗಿಯೂ ಇರತಕ್ಕ ದ್ರಾವಿಡ ದೇಶೀಯರ ಕನ್ಯೆಯಂ ಕರ್ಣಾಟಕ ಅಥವಾ ಆಂಧ್ರ ದೇಶೀಯರು ಸಮಾನ ಸಿದ್ಧಾಂತಾಚಾರ ವ್ಯವಹಾರಗಳುಳ್ಳವರಾಗಿದ್ದರೆ ಯೇಕೆ ಪರಿಗ್ರಹಿಸಕೂಡದೆಂಬ ವಿಷಯವು ಈಗ ವಿಚಾರಣೀಯವಾಗಿದೆ. ಈಗ ನೆರೆಗೊಂಡಿರುವ ಮತಭೇದಗಳೂ ತತ್ತನ್ಮತಾಂತರಾಳಿಕ ಪ್ರಭೇದಗಳೂ ಸ್ಮೃತಿ ಚೋದಿತಗಳಲ್ಲವೆಂತಲೂ, ಅವುಗಳೆಲ್ಲವು ಆಧುನಿಕ ಕಲ್ಪಿತವೆಂತಲೂ ಅನೇಕರು ಅಭಿಪ್ರಾಯಪಡುತ್ತಾರೆ. ಇವು ಆಧುನಿಕಗಳಾಗಿದ್ದಾಗ್ಯೂ ಯಾವ ಕಾರಣಕ್ಕಾಗಿ ಯಾವ ಆಧಾರಗಳಮೇಲೆ ಯೇರ್ಪಡಿಸಲ್ಪಟ್ಟವೋ ಅವಂ ಮರವಾತವೆ ತಿಳಿಸತಕ್ಕವರಿಲ್ಲವು. ಒಂದುವೇಳೆ ಅವು ವಿನೋದಾರ್ಥ ನಿರಾಧಾರವಾಗಿ ಕಲ್ಪಿಸಲ್ಪಟ್ಟವಾಗಿದ್ದರೆ ಅನೇಕಕೋಟಿ ಪ್ರಜೆಗಳು ಅವು ಕೇವಲ ಅಂಧರಾಗಿ ಅನುವರ್ತಿಸಲಾರರು. ಕೇವಲ ನಮ್ಮ ಮೌಢ್ಯಪ್ರಯುಕ್ತವೆಂದು ಭಾವಿಸಿದಾಗ್ಯೂ ಸರ್ವಶಕ್ತನಾದ ಭಗವಂತನ ಕರ್ತೃತ್ವಕರ್ತೃಯನ್ನಂಗೀಕರಿಸುವಂತಾ ಸಕಲ ಆಸ್ತಿಕ ಮತಗಳಲ್ಲಿ ಏವಮಾದಿ ತಾತ್ಪರ್ಯಭೇದಗಳೂ, ಆಚಾರ ಭೇದಗಳೂ ನೆರೆಗೊಂಡಿರುತಿವೆ. ಯೆಲ್ಲರೂ ಅಜ್ಞಾನಿಗಳೇ ಯೆಂದು ನುಡಿಯುವದಕ್ಕೆ ಅಜ್ಞಾನ ಪ್ರಚುರವಾದ ಈ ಭೂಮಂಡಲದಲ್ಲಿ ಮೇಲೆ ಕಂಡ ಸತ್ಯವಿವೇಕಿಗಳು ಕೂಡ ಮೂಢತ್ವೇನ ಪರಿಗಣಿಸಲ್ಪಡದಿರಲಾರರು. ವಿಷಕ್ರಿಮಿನ್ಯಾಯದಿಂದವರ ಜನ್ಮವೇ ನಿಷ್ಪ್ರಯೋಜಕವಾಗುತಿದೆ. ಇದು ಕೇವಲ ಮುಖ್ಯವಿಷಯವಾಗಿಯೂ, ಬಹುಕಾಲದ ಮೊದಲು ಅನುಷ್ಠಿಸಲ್ಪಡುತಬರುವ ಒಂದು ಕಟ್ಟುಪಾಡನ್ನು ಸಡಲಿಸತಕ್ಕದ್ದಾಗಿಯೂ, ಇದೇಆಧಾರವಮೇಲೆ ಇನ್ನೂ ಅನೇಕ ಭವಿಷ್ಯದ್ವಿನಿಯಮಗಳಿಗೆ ಅವಕಾಶವಂ ಕೊಡತಕ್ಕದ್ದಾಗಿಯೂ ಇರುವದರಿಂದ ಶ್ರೀಸ್ವಾಮಿಗಳವರು ಮೇಲೆ ಕಂಡ ವಿಜ್ಞಾಪನ ಪತ್ರಿಕೆಗೆ ವಿಧಾಯಕ ರೂಪವಾದ ಉತ್ತರವಂ ಕೊಡುವಷ್ಟು ಯುವಾಗ್ಯ ಪ್ರಾಜ್ಞರಾಗಿಯೂ ತಪೋಧನರಾಗಿಯೂ, ಲೌಕಿಕರಾಗಿಯೂಇರುವ ತಮ್ಮ ಅಧಿಕಾರವನ್ನೂ ವ್ಯಾಪಕತೆಯನ್ನೂ ಸಾಧಕ ಬಾಧಕಗಳನ್ನೂ ಚೆನ್ನಾಗಿ ಪರ್ಯಾಲೋಚಿಸುವರೆಂದು ನಂಬುತ್ತೇವೆ. ಅದುನಾವು ಅತ್ಯಾದರದೊಡನೆನಿರೀಕ್ಷಿಸುತಲಿರುವದರಿಂದ ಆ ವಿಷಯದೊಳು ನಾವೀಗ ಯೇನೂ ತಿಳಿಸಲು ಸಾಧ್ಯವಲ್ಲವು. ಒಂದುವೇಳೆ ತಾದೃಶ ದೇಶಭೇದ ಪ್ರಯುಕ್ತವಾದ ತಾರತಮ್ಯವು ಅನಾವಶ್ಯಕವೆಂದು ಆಜ್ಞಾಪಿಸಿ ಪರಸ್ಪರ ವಿವಾಹವು ಆಗಬಹುದೆಂದುತಿಳಿಸಿದಾಗ್ಯೂ ಅದು ಸ್ಮಾರ್ತರಲ್ಲಿಯೂ ಮಾಧ್ವರಲ್ಲಿಯೂ ಕೆಲವು ಮಟ್ಟಿಗೆ ಸಾಧ್ಯವಾಗಬಹುದು. ಮಹಾರಾಷ್ಟ್ರ ದೇಶಸ್ಥ ಬ್ರಾಹ್ಮಣನೊಬ್ಬನು ಧಾರಾಳವಾಗಿ ಕರ್ಣಾಟಕರ ಮನೆತನದ ಕನ್ಯೆಯಂ ತೆಗದುಕೊಳ್ಳುತ್ತಾನೆ, ಸ್ಮಾರ್ತ ಕರ್ಣಾಟಕನು ಮಧ್ವಮತವನ್ನವಲಂಬಿಸಿ ತನ್ನ ಆಚಾರವ್ಯವಹಾರಗಳಂ ಬದಲಾಯಿಸಿ ಕೊಳ್ಳುತ್ತಾನೆ. ಮಧ್ವ ಮತಸ್ಥನು ಸ್ಮಾರ್ತಮತವನ್ನವಲಂಬಿಸಿ ಭಸ್ಮ ರುದ್ರಾಕ್ಷಧಾರಣ ಮಾಡಿಕೊಳ್ಳುತ್ತಾನೆ. ಇವುಗಳಿಗೆ ಈ ದೇಶದಲ್ಲಿಯೇ ಅನೇಕ ದೃಷ್ಟಾಂತಗಳು ಕಂಡುಬಂದಿವೆ. ಆದರೆ ಶ್ರೀ ವೈಷ್ಣವರಲ್ಲಿ ನೆರೆಗೊಂಡಿರುವ ಪ್ರಭೇದಗಳೂ ಅಂತರಾಳಿಕ ಪ್ರಭೇದಗಳೂ ಭಿನ್ನಗಳಾಗಿಯೂ, ಆಚಾರಗಳು ವಿಜಾತೀಯಗಳಾಗಿಯೂ, ಅವರ ಗುರು ಪರಂಪರೆಗಳು ನಾನಾ ರೂಪವಾಗಿಯೂ ಇರುವದರಿಂದ ಅವರಲ್ಲಿ ಪರಸ್ಪರ ಸಂಬಂಧ ಪ್ರಾಪ್ತವಾಗುವದೆಂಬದು ಅಸಾಧ್ಯವು. ಮುಖ್ಯವಾಗಿ ಇಂತಾ ವಿದೇಶ ಜನ ಸಹಿತ ಪರಿಗ್ರಹದಿಂದ ನಿಯತ ವಿವಾಹಗಳು ಹೇರಳವಾಗಿ ಜರಿಗಿದಹೊರತು ಸಂಘ ಪರಿಷ್ಕರಣವು ಕ್ರಮವಡಲಾರದೆಂತಲೂ ಅದಕ್ಕೆ ಇದೇ ಪ್ರತಿಬಂಧಕವಾಗಿದೆಯೆಂತಲೂ ಅನೇಕರು ವಾದಿಸುತಲಿದಾರೆ. ವಿವಾಹ ಸಂಬಂಧ ನಿಯಮವು ಒಂದುಬಗೆಯಾಗಿ ನಿವೃತ್ತಿಯಾದರೆ ಅನಂತರ ವಿವಾಹವು ಬಿಚ್ಚಕವೆಂಬದಾಗಿ ವ್ಯವಹರಿಸಲಿಕ್ಕೆ ತನ್ನಾವುದೂ ಕೇವಲ ಒಡಂಬಡಿಕೆಯಂತೆ ಭಾವಿಸಿ ಬೇಕಾದಾಗ ಅದಂ ದಂಪತಿಗಳು ಪರಿತ್ಯಜಿಸಬಹುದೆಂದು ವಾದಿಸಲಿಕ್ಕೂ ಅವಕಾಶ ಪ್ರಾಪ್ತವಾಗದೆ ಹೋಗಲಾರದು.

Occasional Notes
ನೈಮಿತ್ತಿಕ ವಿಷಯನ್ಯಾಸ.

A costly pipe — ಪರ್ಷಿಯಾದೇಶದ ಷಾಯವರು ವಿಶೇಷ ಸಂದರ್ಭಗಳಲ್ಲಿ ಸೇದುವ ಹುಕ್ಕಾಕೊಳವೆಯು, ವಜ್ರ, ಕೆಂಪು, ಪಚ್ಚೆ ಮೊದಲಾದ ಅನರ್ಘ್ಯಗಳಾದ ರತ್ನಗಳು ಕೆತ್ತಲ್ಪಟ್ಟ ೪೦,೦೦೦ ಪೌಂಡ್ ಗಳ ಕ್ರಯ ಉಳ್ಳದ್ದಾಗಿರುತಿದೆ

A protest. — ಅಲಹಾಬಾದ್ ಹೈ ಕೋರ್ಟ್ ಜಡ್ಜಿಗಳಲ್ಲೊಬ್ಬರಾದ ಜಸ್ಟಿಸ್ ಮಾಮೂದ್ ಯವರ ಸ್ಥಾನದಲ್ಲಿ ನೇಟವ್ ಲಾಯರೊಬ್ಬರನ್ನ ನೇಮಕಮಾಡದೆ ಹೋದದ್ದು ಅಕ್ರಮವೆಂದು ಆಕ್ಷೇಪಿಸುವದಕ್ಕಾಗಿ ವಾಯುವ್ಯದೇಶದೊಳು ಅಲ್ಲಲ್ಲಿ ಸಭೆಗಳು ಸೇರುತಲಿವೆ

Hindus in England — ಹಿಂದೂಗಳು ತಮ್ಮ ಜಾತಿ ಮತಾಚಾರಗಳಿಗೆ ಯಾವ ಭಂಗ ವಲ್ಲದೆ ದೋಷವಿಲ್ಲದೆ ಇಂಗ್ಲಾಂಡಿನೊಳು ವಾಸಮಾಡುವ ವಿಷಯದಲ್ಲಿ ಯಾವ ಅನಾನುಕೂಲವೂ ಇರುವದಿಲ್ಲವೆಂದು ಕಲ್ಕತ್ತಾ ಹೈಕೋರ್ಟ್ ಚೀಫ್ ಜಡ್ಜಿಯವರು ಒಬ್ಬ ನೇಟವ್ ದೊಡ್ಡಮನುಷ್ಯರಲ್ಲಿ ಪ್ರಸ್ತಾಪಿಸಿದಂತೆ ಒಂದಾನೊಂದು ಪತ್ರಿಕೆ ತಿಳಿಸುತಲಿದೆ.

The Gaekwar Princes — ಬರೋಡೆ ಗಾಯಕವಾಡ್ ಮಹಾರಾಜರವರ ಜ್ಯೇಷ್ಠ ಕನಿಷ್ಠ ಪುತ್ರರಿಬ್ಬರೂ ಈಗ ತಂದೆಯೊಡನೆ ವಿಲಾಯತಿಗೆ ಹೋಗಿರುತ್ತಾರೆಯಷ್ಟೆ. ಸದರೀ ಇಬ್ಬರು ರಾಜಕುಮಾರರು ಇಂಗ್ಲೆಂಡಿನ ಮಾರ್ಗವಾಗಿ ಇಂತ್ಯರಾಜ್ಯಕ್ಕೆ ವಾಪಸ್ ಬರುವವರಾಗಿದಾರೆ ಶ್ರೀಮನ್ಮಹಾರಾಜರವರು ಸಹ ತಮ್ಮ ಭಾರ್ಯೆಯವರೊಡನೆ ಶೀಘ್ರದಲ್ಲಿ ಸ್ವದೇಶಕ್ಕೆ ವಾಪಸ್ ಬಂದು ಸೇರುವರು

The Dewanship of Cochin.— ಈ ನಡುವೆ ಖಾಲಿಯಾಗಿರುವ ಕೊಚ್ಚಿ ಸಂಸ್ಥಾನದ ದಿವಾನಗಿರಿ ವಿಷಯದಲ್ಲಿ ಕರ್‍ಸ್ಪಾಂಡೆಂಟ್ ಯೆಂಬ ಪತ್ರಿಕೆ ತಿಳಿಸುವದೇನೆಂದರೆ,—ಮೆ|| ಶಂಕರಯ್ಯರವರು, ತಮ್ಮ ಶತೃಗಳಿಂದ ಪ್ರಕಟಿಸಲ್ಪಡುವ ಪತ್ರಿಕೆಯ ಮೂಲಕ ಮನಸ್ಸಿಗೆ ನೊಂದಿಸುವ ಕೆಲವು ಅಪವಾದಗಳಿಂ ತ್ಯಜಿಸುವಂತೆ ಪ್ರೇರಿಸಲ್ಪಡುವರಾದರೆ ಕೊಚ್ಚಿ ಸಂಸ್ಥಾನದಲ್ಲಿ ಅವರಿಗಿಂತಲೂ ಉತ್ತಮರಾದ ಬೇರೆಯೊಬ್ಬರನ್ನು ದಿವಾನಗಿರಿಗೆ ನಾವು ಕೋರಲಾರೆವು, ಎಂಬದು.

LOCAL AND PROVINCIAL NEWS.
ಸ್ಥಳದೇಶಮತ್ತು ತಾಲ್ಲೂಕುವಾರ್ತೆ ವೃತ್ತಾಂತಗಳು

The Dewan.—ಈ ಸಂಸ್ಥಾನದ ದಿವಾನರಾದ, ಮೆ|| ಕೆ. ಶೇಷಾದ್ರಿಅಯ್ಯರ್, ಸಿ.ಎಸ್.ಐ ಯವರು ನಿನ್ನೆಯದಿನ ಸಾಯಂಕಾಲ ೭ ಘಂಟೆಗೆ ಮೈಸೂರಿಂದ ಇಲ್ಲಿಗೆ ದಯಮಾಡಿದರು.

The Resident.—ಈ ಸಂಸ್ಥಾನದ ಬ್ರಿಟಿಷ್ ರೆಸಿಡೆಂಟರಾದ ಕರ್ನಲ್ ಹೆಂಡರ್‌ಸನ್ ಸಾಹೆಬರವರು ಶ್ರೀಮನ್ಮಹಾರಾಜರವರ ಸವಾರಿಯೊಡನೆ ಕಲ್ಕತ್ತೆಗೆ ಪ್ರಯಾಣಮಾಡುವರೆಂದು ಕೇಳುತ್ತೇವೆ.

The Acting Dewan.—ಇಲ್ಲಿನ ದಿವಾನರವರು ಶ್ರೀಮನ್ಮಹಾರಾಜರವರ ಸವಾರಿಯೊಡನೆ ಕಲ್ಕತ್ತೆಗೆ ದಯಮಾಡುವ ಕಾಲದಲ್ಲಿ ಅವರ ಕೆಲಸವನ್ನು ಚೀಫ್‌ಕೋರ್ಟ್ ಚೀಫ್ ಜಡ್ಜಿಯವರಾದ ಮೆ|| ಟಿ. ಆರ್. ಎ ತಂಬುಚೆಟ್ಟಿಯರವರು ನೋಡುವರೆಂದರಿತೆವು.

Dr. McGann—ಈ ಸಂಸ್ಥಾನದ ಸೀನಿಯರ್ ಸರ್ಜಿಯನ್ ಮತ್ತು ಸಾನಿಟರಿ ಇನ್ಸ್‌ಪೆಕ್ಟರಾದ ಡಾಕ್ಟರ್ ಮೆಗ್ಯಾನ್ ಸಾಹೆಬರವರು ಶ್ರೀಮನ್ಮಹಾರಾಜರವರ ಮತ್ತು ಅವರ ಪರಿಜನ ಆರೋಗ್ಯ ವಿಚಾರಣೆಯಬಗ್ಗೆ ಅವರ ಸವಾರಿಯೊಡನೆ ಕಲ್ಕತ್ತೆಗೆ ಹೋಗುವರೆಂದರಿತೆವು.

A municipal meeting— ಈಗ ಇಲ್ಲಿನ ಮಿಲಿಟರಿ ಸ್ಟೇಷನ್ನಲ್ಲಿ ವ್ಯಾಪ್ತವಾಗಿರುವ ಜಲದೌರ್ಲಭ್ಯವಂ ಕುರಿತು ಆಲೋಚಿಸಿ, ತನ್ನಿವಾರಣೆಯ ಬಗ್ಗೆ ಮಾಡಬೇಕಾದ ಕರ್ತವ್ಯವಂ ನಿರ್ಧರಿಸುವದಕ್ಕಾಗಿ ಸದರೀ ಸ್ಟೇಷನ್ ಮ್ಯುನಿಸಿಪಲ್ ಸಂಘದವರು ಈ ತಿಂಗಳ ೪ನೇ ತಾರೀಖ್ ಬೃಹಸ್ಪತಿವಾರದದಿನ ಮೇಯೋಹಾಲ್‌ನಲ್ಲಿ ಸಭೆ ಸೇರುವರು,

The royal tour – ಶ್ರೀಮನ್ಮಹಾರಾಜರವರು ಈ ತಿಂಗಳ ೧೫ ನೇ ತಾರೀಖ್ ಸುಮಾರಿಗೆ ಕಲ್ಕತ್ತೆಗೆ ದಯಮಾಡುವದು ಸರಿಯಷ್ಟೆ. ಅಲ್ಲಿನ ವಿಶೇಷಾಂಶಗಳಂ ನೋಡಿಕೊಂಡು, ಅಲ್ಲಿಂದ ವಾಪಸ್ ಬರುವ ಕಾಲದಲ್ಲಿ ರಂಗೂನ್, ಬದ್ರಿನಾಥ, ಅಂಡಮಾನ್ ದ್ವೀಪ, ಸಿಲೋನ್, ರಾಮೇಶ್ವರ, ತಿರುವಾಂಕೂರ್ ಮೊದಲಾದ ಪ್ರದೇಶಗಳಂ ನೋಡಿಕೊಂಡು ಇಲ್ಲಿಗೆ ದಯಮಾಡುವರೆಂದು ಇಲ್ಲಿನ ವೃತ್ತಾಂತ ಪತ್ರಿಕೆಗಳು ತಿಳಿಸುತಲಿವೆ.

A dacoity — ಕಳೆದ ತಿಂಗಳ ೧೪ ನೇ ತಾರೀಖ್‌ನಲ್ಲಿ, ಚಿತ್ರದುರ್ಗ ಸಿವಿಲ್ ಡಿಸ್ಪೆನ್ಸರಿ ಅಸಿಸ್ಟೆಂಟ್ ಅಸಿಸ್ಟೆಂಟ್ ಮೆ|| ನರಸಿಂಹಯ್ಯಂಗಾರ್‌ರವರು ಸಂಸಾರ ಸಮೇತರಾಗಿ ರೈಲ್ವೇ ಸ್ಟೇಷನಿನಿಂದ ಚಿತ್ರದುರ್ಗಕ್ಕೆ ಹೋಗುತ್ತಿದ್ದಲ್ಲಿ ದರೋಡೆ ಕಳ್ಳರು ಬಂದುಬಿದ್ದು ಅಲ್ಲಿದ್ದ ಸುಮಾರು ೨೦೦೦ ರೂಪಾಯಿಗಳ ಕ್ರಯ ಬಾಳುವಷ್ಟು ಒಡವೆಗಳಂ ಕದ್ದುಕೊಂಡು ಹೋದರೆಂತಲೂ, ಈ ಮೊಕದ್ದಮೆಯು ಈಗ ಪೋಲೀಸಿನವರ ವಿಚಾರಣೆಯಲ್ಲಿರುವಂತೆಯೂ, ಮೈಸೂರ್ ಹೆರಾಲ್ಡ್ ಪತ್ರಿಕೆಯಮೂಲಕ ತಿಳಿಯಲಾದೆವು.

Rumoured official changes.— ಇಲ್ಲಿನ ಚೀಫ್ ಜಡ್ಜಿಯವರು ದಿವಾನಗಿರಿಯನ್ನು ನೋಡಬೇಕಾಗಿರುವದರಿಂದಲೂ, ಯೆರಡನೆಯ ಜಡ್ಜಿಯವರಾದ ಮೆ|| ರಾಮಚಂದ್ರಯ್ಯನವರು ಜರೂರಿಯಾತ್ ಕೆಲಸದಮೇಲೆ ಮೂರುತಿಂಗಳ ರಜಾ ಪಡಕೊಳ್ಳುವವರಾಗಿರುವದರಿಂದಲೂ, ಮೆ|| ಕೃಷ್ಣಮೂರ್ತಿಯವರು ಚೀಫ್ ಜಸ್ಟಿಸ್ ಕೆಲಸವನ್ನೂ, ಮೆ|| ಮೀನಾಕ್ಷಿ ಅಯ್ಯರವರು ಯೆರಡನೇ ಜಡ್ಜಿ ಕೆಲಸವನ್ನು, ಮೆ|| ಕ್ರೆಸ್ ಯವರು ಮೂರನೇ ಜಡ್ಜಿಯ ಕೆಲಸವನ್ನೂ ನೋಡುವರಲ್ಲದೆ, ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸವನ್ನು ಮೆ|| ವಿ. ಪಿ. ಮಾಧವ ರಾಯರವರು ನೋಡಿಕೊಳ್ಳುವರೆಂದು ಒಂದು ಪ್ರವಾದ ನಮ್ಮ ಕೇಳ್ವಿಕೆಗೆ ಬಂದಿರುತಿದೆ.

The weather.—ಮಳೆಯಸುದ್ದಿಯೇ ಯಿಲ್ಲವು. ಮೊನ್ನೆಯ ದಿನ ಸಾಯಂಕಾಲ ಆರುಘಂಟೆಗೆ ಸ್ವಲ್ಪಮೋಡ ಮುಸಿಕಿ ಯೆರಡು ನಿಮಿಷಗಳಕಾಲ ಕೆಲವು ಹನಿಗಳು ಬಿದ್ದವು. ರಾಗಿ ಮತ್ತು ಅಕ್ಕಿಯ ದಾರಣೆಗಳು ಬಹಳಹೆಚ್ಚಿದವು. ಇದಕ್ಕೆಕಾರಣ ಉಚಿತಕಾಲದಲ್ಲಿ ಮಳೆ ಇಲ್ಲದೆಹೋದದ್ದೊಂದು, ಪರಸ್ಥಳಗಳ ಗಿರಾಕಿ ಯೊಂದು. ಸುಗ್ಗಿ ಕಾಲದಲ್ಲೇ ಈ ರೀತಿಯಾದಮೇಲೆ ಮುಂದಿನ ಸ್ಥಿತಿಯಂ ಕುರಿತು ಹೇಳತಕ್ಕದ್ದೇನಿದೆ. ದುರ್ಭಿಕ್ಷ ಪ್ರಯುಕ್ತವಾದ ಭೀತಿಯು ಈ ಸಂವತ್ಸರದಲ್ಲಿ ನಮ್ಮನ್ನಗಲಿದ್ದಲ್ಲವೆಂದು ತೋರುತಲಿದೆ, ದೈವಯೋಗ ದ್ಯಾಗಿರುವದೊಂದಾಕೆ ವು, ಧರ್ಮಾಂಬುಧಿ ಕೆರೆ ಪೂರಾ ಬತ್ತಿ ಹೋಯಿತು. ಈ ಪಟ್ಟಣದ ಜನರಿಗೆ ನೀರಿನ ಕಷ್ಟ ದಿನೇದಿನೇ ಅಧಿಕವಾಗುತ ಬರುತಲಿದೆ. ಈ ಊರುವಾಸವು ಬಹುಮಟ್ಟಿಗೆ ಅನುತ್ಸಾಹಕಾರಿಯಾದಿತು.

NEWS-LETTERS.
ವೃತ್ತಾಂತ ಪತ್ರಿಕೆಗಳು.

ಗುಂಟೂರು, ಕೊಟನಹಳ್ಳಿ, ತಾ|| ೨೯ನೇ ನವಂಬರ್ ೧೮೯೨— ನಾನು ತಮ್ಮ ಅಪ್ಪಣೆಯಂ ಪಡೆದುಕೊಂಡು ಈ ತಿಂಗಳ ೧೭ನೇ ತಾರೀಖ್‌ನಲ್ಲಿ ಅರಕೋಣಂ ಬಿಟ್ಟು, ೧೯ನೇ ತಾರೀಖಿನಲ್ಲಿ ರೈಲಿನ ಮಾರ್ಗವಾಗಿ ಗುಂಟಕಲ್ ಸ್ಟೇಷನಿಗೆ ಬರುತಲಿದ್ದೆನು. ಕಡಪೆ ಸ್ಟೇಷನ ಸಮೀಪದಲ್ಲಿ ನನ್ನ ಕಂಪಾರ್ಟ್‌ಮೆಂಟನೊಳು ಕುಳಿತಿದ್ದ ಒಬ್ಬ ತೆಲುಗು ಜನಾಂಗದವನು ಒಂದು ಕೀರ್ತನೆಯನ್ನು ಹಾಡಿದನು. ಅದು ಶುದ್ಧ ಅದ್ವೈತ ಪರವಾದ ತತ್ವವು ಬೋಧಕ ತತ್ವನ್ನಾಗಿಯೂ, ಒಳ್ಳೆಯ ಸಂಸ್ಕೃತದ ಸರಳಮಯವನ್ನಾಗಿಯೂ ಇದ್ದುದರಿಂದ ಅದು ನನ್ನ ಬುದ್ಧಿಯನ್ನಾಕರ್ಷಿಸಿತು. ಅದು ನಾನು ಅವನಾಡಿದ ನಂತರ ಕೇಳಲಾಗಿ ಸದರೀ ಕೀರ್ತನದ ಕಡೇ ಚರಣದಲ್ಲಿ ಶ್ರೀಯುಸರೇಣದಾಸನೆಂಬ ಅಂಕಿತವು ಕೇಳಬಂತು. ಅಷ್ಟು ಸ್ಪಷ್ಟವಾಗಿ ಉಚ್ಚರಿಸಿದ ಬಾಯಿಯಲ್ಲಿ ಸಿದ್ಧಸೇನದಾಸನೆಂದು ಹೊರಡದೆ ಅಪಭ್ರಂಶವಾಗಿ ಹೊರಟತಲ್ಲಾ ಯೆಂದಾಲೋಚಿಸಿ, ಮಾನವಸ್ವಭಾವವುಳ್ಳ ನನ್ನ ಬುದ್ಧಿಯು ಅದು ಮತ್ತೊಂದಾವರ್ತಿ ಕೇಳಬೇಕೆಂದಪೇಕ್ಷಿಸಿ, ಅಂಕಿತವನ್ನು ಮತ್ತೊಂದಾವರ್ತಿ ಹೇಳಬೇಕೆಂದು ಅವನನ್ನಪೇಕ್ಷಿಸಿದೆನು. ಸದರೀ ಮನುಷ್ಯನು ಯುಸರೇಣದಾಸನೆಂದು ಮರಳ ಹೇಳಿದನು. ಬಳಿಕ ಸದರೀ ಯುಸರೇಣದಾಸನ್ಯಾರೆಂದು ಕೇಳಲಾಗಿ, ಕಡಪೆಯಲ್ಲಿ ಈಗ ಹಾಜರಿರುವ ಒಂದು ಪೀಠಸ್ಥನೆಂದು ಹೇಳಿದನು. ನಾನು ಕಡಪೆಯಲ್ಲಿ ಗುರುತು ಇಳಿದು ಊರಿಗೆ ಹೋಗಿ ವಿಚಾರಿಸಲಾಗಿ, ಸ್ಪಷ್ಟವಾಗಿ ತಿಳಿಯಬಂತು. ನಾನು ಕೂಡಲೇ ಸದರೀ ದಾಸರ ಮಠವು ವಿಚಾರಿಸಿಕೊಂಡು ಹೋಗಿ ಪ್ರತ್ಯಕ್ಷವಾಗಿ ಅವರ ದರ್ಶನವು ಮಾಡಿಕೊಂಡೆನು. ಅವರ ಸುತನೆ ಅನಾದಿಯಾದ ಒಬ್ಬ ವಿರಾಗಿ ಮತವಾಗಿ ಕಾಣಬಂತು. ಇಲ್ಲಿದ್ದ ಸ್ವಾಮಿಗಳು ಮುಸಲ್ಮಾನ ಜಾತಿಯವರಾಗಿದ್ದರು. ಅವರಿಗೆ ದಾಡಿ ಇಲ್ಲವು. ಸ್ವಲ್ಪ ಮೀಸೆ ಮಾತ್ರ ಇಟ್ಟುಕೊಂಡಿದ್ದರು. ತಲೆಗೆ ರೇಷ್ಮೆ ಮುಂಡಾಸು ಸುತ್ತಿಕೊಂಡಿದ್ದರು. ಕಪ್ಪು ಜರಾಯಿಗಳಿಗೆ ಬದಲಾಗಿ ಕಾವಿ ರಂಗುಳ್ಳ ಒಂದು ಭಾರೀ ಧೋತ್ರವನ್ನು ಹೊದಿಕೆಯ ಇಲ್ಲದೆ ಸುತ್ತಿಕೊಂಡಿದ್ದರು. ಕವಂಡಲು ಕಾಣಿಸಲಿಲ್ಲವು. ವೇಣುದಂಡ ಒಂದು ಸಮೀಪದಲ್ಲಿ ಕಂಡುಬಂತು. ನಾನು ಅವರಿಗೆ ಸಲಾಂ ಮಾಡಿ, ಹಿಂದುಸ್ಥಾನಿಯಲ್ಲಿ ತಮ್ಮ ಹೆಸರೇನು, ತಂದೆ ಹೆಸರೇನೆಂದು ಕೇಳಲಾಗಿ, ತಮ್ಮ ಹೆಸರು ಹುಸೇನೆಂಬದಾಗಿಯೂ, ತಂದೆ ಹೆಸರು ಗುಲಾಮನೆಂಬದಾಗಿಯೂ ಹೇಳಿದರು. ಬಳಿಕ ಅವರೊಡನೆ ಸ್ವಲ್ಪಕಾಲ ಮಾತನಾಡುತಿರುವಲ್ಲಿ ಅನ್ನಾವಧೂತರೆಂಬ ಒಬ್ಬ ಯೋಗಿಯು ತಮ್ಮಗುರುಗಳೆಂತಲೂ, ಯಾಜ್ಞವಲ್ಕ್ಯರು ತಮ್ಮ ಆದಿಪುರುಷರೆಂತಲೂ, ತಮ್ಮದು ಬೃಹದ್ವಾಸಿಷ್ಠ ಸಂಪ್ರದಾಯವೆಂತಲೂ ಹೇಳಿದರು. ಅನಂತರ ವೇದಾಂತ ವಿಷಯದಲ್ಲಿ ಸಂಸ್ಕೃತದಲ್ಲೂ ಆಂಧ್ರದಲ್ಲೂ ಪ್ರಸಂಗಿಸಲಿಚ್ಛಿಸಲು ಒಳ್ಳೆಯ ಪಂಡಿತರೆಂದು ಕಂಡುಬಂತು. ಇವರಿಗೆ ಪ್ರಸ್ಥಾನತ್ರಯ ಭಾಷ್ಯ ಕಂಠಿತಯಾಗಿರುವಂತೆ ವ್ಯಕ್ತವಾಯಿತು. ವೇದಾಂತಸಾರವಾದ ಒಂಭತ್ತು ಮಹಾವಾಕ್ಯಗಳಂ ಇವರ ಮುಖದಿಂ ಕೇಳಿದೆನು. ಇಲ್ಲಿರತಕ್ಕ ಬ್ರಾಹ್ಮಣರು ಕೆನುಗುಬಣಜಿಗರು ಮೊದಲಾದವರನೇಕರು ಈ ಸ್ವಾಮಿಗಳ ಶಿಷ್ಯರೆಂದು ತಿಳಿಯಬಂತು.

ಅಯ್ಯಾ, ಮುಸಲ್ಮಾನರೊಳು ಮತ ವಿಷಯಕವಾದ ಭಕ್ತಿಯು ಅಧಿಕವು, ಹಿಂದೂಮತ ದೂಷಣವೇ ಅವರ ಸಿದ್ಧಾಂತವು. ಜಾಹಲೀತನಕ್ಕೆ ಆ ಜಾತಿಯವರೇ ಮೂಲರೆಂದು ನಾನು ತಿಳಿದುಕೊಂಡಿದ್ದೆನು. ಮಹಮ್ಮದೀಯರಾರು ಶುದ್ಧ ದ್ವೈತ ಮತಾವಲಂಬಿಗಳೆಂದು ಕ್ರಿಶ್ಚಿಯನ್ ಗ್ರಂಥಗಳಲ್ಲಿ ನೋಡಿದ್ದೆನು. ಈ ಸ್ವಾಮಿಗಳು ಅವರು ತಿಳಿಸಿದಂತೆ ಮಹಮದೀಯರಾದಾಗ್ಯು ಅವರ ಸಿದ್ಧಾಂತವು ಶುದ್ಧಾದ್ವೈತವೆಂದು ಯೋಚಿಸಬೇಕಾಯಿತು. ೧೯ನೇ ತಾರೀಖಿನಲ್ಲಿ ಮರಳ ನಾನು ರೈಲಿನ ಹತ್ತುವಲ್ಲಿ ಸದರೀ ಸ್ವಾಮಿಗಳನ್ನು ಮರಳ ಸ್ಟೇಷನ್ ಬಳಿ ನೋಡಿದೆನು. ಅವರು ಗಾಡಿಹತ್ತಿ ಶಿಷ್ಯಾನುಗ್ರಹಾರ್ಥ ಗುಂಟಕಲ್‌ಗೆ ಹೊರಟುಹೋದರು, ನಾನು ಗುಂಟೂರಿಗೆ ಪ್ರಯಾಣಮಾಡೆನು.

ಬೆಂಗಳೂರು ಶೇರೂ ಇಲ್ಲಿನ ಶೇರೂ ಒಂದೇಯಾಗಿದೆ. ಬೆಂಗಳೂರಲ್ಲಿ ಸೇರು ೧ಕ್ಕೆ ೧೨-೧೩ ರೂಪಾಯಿಗಳಿಗೆ ಮಾರುವ ಅಕ್ಕಿಯು ಇಲ್ಲಿ ೯ರೂಪಾಯಿಗೆ ಮಾರುತಲಿದೆ. ಬಿಪನ್ನಾಡು ತುಪ್ಪ ೪೦ ಸೇರು ಮಣಕ್ಕೆ ೧೩ರೂಪಾಯಿ ಮೇರಿಗೂ ಒಳ್ಳೆ ಯೆಣ್ಣೆ ಮಣ ೧ಕ್ಕೆ ೩-೮-೦ ಮೇರೆಗೂ ಮಾರಲ್ಪಡುತಲಿದೆ.

ಇಲ್ಲಿ ಕಳೆದ ಸೆಪ್ಟಂಬರ್ ತಿಂಗಳಲ್ಲಿ ಆದ ಅತಿವೃಷ್ಟಿಯ ದೆಸೆಯಿಂದ ಇಲ್ಲಿನ ಮಣ್ಣಿನ ಗೋಡೆಗಳುಳ್ಳ ಮನೆಗಳೆಲ್ಲವು ಪ್ರಾಯಶಃ ಬಿದ್ದುಹೋಗಿವೆ. ಗುಂಟೂರು ಪಟ್ಟಣದಲ್ಲಿ ಪ್ರತಿದಿನವೂ ಒಂದೆರಡು ಕಡೆಯ ಇಲ್ಲದಂತ ಕನ್ನಚೋರಿ ನಡೆಯುತಲಿವೆ. ಇದರಿಂದಲೇ ಇಲ್ಲಿನ ಪೋಲೀಸ್‌ಬಂದೋಬಸ್ತಿನ ಸ್ಥಿತಿಯು ವ್ಯಕ್ತವಾಗದೆ ಹೋಗಲಾರದು. ಇಲ್ಲಿ ಕಾಲಸ್ಥಿತಿಯೂ ಜನಾರೋಗ್ಯವೂ ಅನುಕೂಲವಾಗಿವೆ. ಇತರಾಂಶಗಳಂ ಮುಂದೆ ತಿಳಿಸುತ್ತೇನೆ

THE MYSORE GAZETTE.
ಮೈಸೂರು ಗೆಜೆಟಿ.

ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದ್ದೂರವರ ಸರ್ಕಾರದಿಂದ ಕೊಡೋಣಾದ ಇಷ್ತಿಹಾರ್‌ನಾಮೆಗಳು.

ನಂ ೩೦೨೨ ೮. ೧೨೮೬-೯೨, ತಾ|| ೨೯ನೇ ನವಂಬರ್ ೧೮೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೭೨ನೇ ಆರ್ಟಿಕಲ್ ಅನುಸರಿಸಿ, ಹೊಸೂರು ತಾಲ್ಲೂಕ್ ಅಮಲ್‌ದಾರ್ ಚೌಡಯ್ಯನವರಿಗೆ ೧೮೯೨ನೇ ಇಸವಿ ಸೆಪ್ಟಂಬರ್ ೨೬ನೇ ತಾರೀಖ್ ಮೊದಲು ಅಕ್ಟೋಬರ್ ೧೧ನೇ ತಾರೀಖ್ ವರಿವಿಗೆ ಉಭಯದಿನಗಳೂ ಸೇರಿ, ೧೫ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿತ್ತು.

ನಂ|| ೩-೩೬, ೮. ೯. ೩೦೪-೯೨-ತೀರ್ಥಹಳ್ಳಿ ತಾಲ್ಲೂಕು ಅಮಲ್‌ದಾರ್ ಪಿ. ಆರ್. ವೆಂಕಟಸುಬ್ಬಯ್ಯನವರಿಗೆ ೧೮೯೨ನೇ ಇಸವಿ ಅಕ್ಟೋಬರ್ ೩ನೇ ಮಾರ್ಚಿ ಮೊದಲ ೯ನೇ ಡಿ. ಸಂಬರ್ವರೆಗೆ ಇಷ್ತಿಹಾರ್ ಮೂಲಕ ಕೊಡಲ್ಪಟ್ಟ ಆರು ವಾರಗಳ ರಜಾ ಮತ್ತು ಯೆರಡುವಾರಗಳಿಗೆ ಜಾಸ್ತಿ ಮಾಡಲ್ಪಟ್ಟಿರುತಿದೆ.

ನಂ|| ೩೦೫೯. ೮. ೯, ೩೬-೯೨, ತಾ|| ೨೬ನೇ ನವಂಬರ್ ೧೮೯೨—ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೦ನೇ ಆರ್ಟಿಕಲ್ ಅನುಸರಿಸಿ, ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರ್ ಮೆ|| ಪಿ. ಪಂಚನದರಾಯರವರಿಗೆ, ೧೮೯೨ ಇಸವಿ ಡಿಸೆಂಬರ್ ೬ನೇ ತಾರೀಖ್ ಮೊದಲು ಆರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ.

ನಂ|| ೩೩೪೪. ೮. ೧೭೯೨-೯೨—ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮೆ|| ಕುಮಾರಸಾಮಿ ನಾಯಕರವರಿಗೆ ೧೮೯೨ನೇ ಇಸವಿ ಅಕ್ಟೋಬರ್ ೧೩ನೇ ತಾರೀಖ್ ಲಾಗಾಯತು ನಾಲ್ಕುದಿನಗಳ ಕ್ಯಾಜುಯಲ್‌ರಜಾ ಕೊಡಲ್ಪಟ್ಟಿತ್ತು.

ನಂ|| ೩೩೩೬. ೮. ೧೭೪೬-೯೨, ತಾ|| ೨೪ನೇ ನವಂಬರ್ ೧೮೯೨—೧೮೯೨ನೇ ಇಸವಿ ಆಗಸ್ಟ್ ತಿಂಗಳಲ್ಲಿ ನಡದ ರೆವಿನ್ಯೂ ಪರೀಕ್ಷೆಯಲ್ಲಿ ತೇರ್ಗಡೆಯಾದ ಉಮೇದವಾರರ ಪಟ್ಟಿಯು ಅವರವರ ಯೋಗ್ಯತಾನುಗುಣವಾಗಿ ಇದರಡಿ ಪ್ರಕಟಿಸಲ್ಪಟ್ಟಿದೆ:—

೧. ಮೆ|| ಟಿ. ಪರಮಶಿವ ಅಯ್ಯರ್, ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್.
೨. ಬಿ. ವಿ. ಲಕ್ಷ್ಮಣರಾವ್, ಬೆಂಗಳೂರು ಡಿಸ್ಟ್ರಿಕ್ಟ್ ಮ್ಯುನಿಸಿಪಲ್ ಕ್ಲರ್ಕ್.
೩. ಮೆ|| ಎಸ್. ಆರ್ ಸುಬ್ಬರಾಯಅಯ್ಯರ್, ಅಸಿಸ್ಟೆಂಟ್ ಕಮಿಷನರ್, ಬೆಂಗಳೂರ್.
೪. ಜಿ. ಶ್ರೀನಿವಾಸ ಅಯ್ಯಂಗಾರ್, ಕಡೂರ್ ಡಿ|| ರೆವಿನ್ಯೂ ಶಿರಸ್ತೇದಾರ್.
೫. ಎನ್. ಸೂರಪ್ಪ, ಯಡ್ಯುಕೇಷನ್ ಸೆಕ್ರೆಟರಿ ಆಫೀಸ್ ರೆಕಾರ್ಡ್‌ಕೀಪರ್.
೬. ಕೆ. ಲಕ್ಷ್ಮೀನಾರಣಯ್ಯ, ಚೀಫ್‌ಕೋರ್ಟ್ ಕ್ಲರ್ಕ್.
೭. ಮೆ|| ಎ. ಡಬ್ಲ್ಯು ಎಚ್ ಹೇಜ್, ದಿವಾನರವರ ಆಫೀಸ್ ರಿಜಿಸ್ಟರಿಂಗ್ ಕ್ಲರ್ಕ್.
೮. ಬಿ. ಕೃಷ್ಣಸಿಂಗ್, ಮೈಸೂರು ಸ್ಟ್ಯಾಟಿಸ್ಟಿಕ್ ಮತ್ತು ಅಗ್ರಿಕಲ್‌ಚ್ಯುರಲ್ ಇಲಾಖಾ ಡೈರೆಕ್ಟರವರ ಆ|| ಡಿ ಕ್ಲರ್ಕ್.
೯. ಜೆ ಬಿ. ಚಿನ್ನಸಾಮಿ. ಶಿವಮೊಗ್ಗ ಆಸ್ಪೆಟಲ್ ಅಸಿಸ್ಟೆಂಟ್.
೧೦. ಟಿ. ಕೆ. ಸುಂದರರಾಜಯ್ಯಂಗಾರ್, ಮೈಸೂರ್‌ಡೆಪ್ಯುಟಿಕಮಿಷನರ ಆಫೀಸ್ ರೆವಿನ್ಯೂ ಹೆಡ್ ಅಕೌಂಟೆಂಟ್,
೧೧. ಮೆ|| ಆರ್. ಬಿ. ಫ್ಲ್ಯಾವರ್, ಮೈಸೂರ್ ಪ್ರೊಬೇಷನರಿ ಅ. ಕಮಿಷನರ್.
೧೨. ಎಂ. ಎಸ್. ರಾಮಸ್ವಾಮಯ್ಯಂಗಾರ್, ಚಿತ್ರದುರ್ಗ ಡಿವಿಷನ್ ಎಗ್ಜಿಕ್ಯುಟಿವ್ ಇಂಜಿನಿಯರ್ ಆಫೀಸ್ ಅಕೌಂಟೆಂಟ್.
೧೩ ಕೆ. ವೆಂಕಟರಾಮಯ್ಯ, ತುಮಕೂರ್ ಡಿ ಕುಣಿಗಲ್ ತಾ|| ಪೋಲೀಸ್ ಇನ್ಸ್‌ಪೆಕ್ಟರ್.
೧೪. ಟಿ. ಚೊಕ್ಕಣ್ಣ, ಮೈಸೂರ್‌ಡಿ|| ರೆವಿನ್ಯೂ ಪ್ರೊಬೇಷನರ್.
೧೫ ವ್ಹಿ. ವೇದಾಂತ ದೇಶಿಕಯ್ಯಂಗಾರ್, ಚಿತ್ರದುರ್ಗ ಡಿ|| ಚಕ್ಬಂಗ್ ರೆ|| ಶಿರಸ್ತೇದಾರ್
೧೬. ಎಂ. ಪದ್ಮನಾಭರಾವ್, ಮೈಸೂರು ಡೆ|| ಕಮಿಷನರವರ ಆಫೀಸ್ ರೆವಿನ್ಯೂ ಹೆ ಅಕೌಂಟೆಂಟ್.
೧೭. ಮೆ|| ಜೆ. ಡಬ್ಲ್ಯು ಸ್ಮಿತ್, ಹಾಸನ ಡಿ ಪೋಲೀಸ್ ಸೂಪರಿಂಟೆಂಡೆಂಟ್.
೧೮. ಎಚ್. ಶ್ರೀನಿವಾಸಯ್ಯಂಗಾರ್, ಶಿವಮೊಗ್ಗ ಡಿ|| ಟ್ರೆಜರಿ ಅಕೌಂಟೆಂಟ್.
೧೯. ಕೆ. ನಾರಾಯಣಯ್ಯಂಗಾರ್, ಕಡೂರು ಡಿ|| ಡೆ|| ಕಮಿಷನರ್ ಆಫೀಸ್ ರೆವಿನ್ಯೂ ಅಕೌಂಟೆಂಟ್.
೨೦. ನರಸಯ್ಯ, ಶ್ರೀರಂಗಪಟ್ಟಣ ಮುನ್ಸಿಫ್ ಕೋರ್ಟ್ ಹೆಡ್‌ಮುನಿಷಿ.
೨೧. ಮೆ|| ಪಿ. ವೆಂಕಟರಾವ್, ಮಾಗಡಿಸಿಫ್ ಮತ್ತು ಕಡೂರ್ ಡಿ|| ಟ್ರೆಜರಿ ಆಫೀಸರ್.
೨೨ ಜಿ. ನಾರಾಯಣರಾವ್, ಬೆಂಗಳೂರು ಡಿ|| ಆಫೀಸ್ ೪ನೇ ಕ್ಲರ್ಕ್.
೨೩. ಎಚ್. ಶೇಷಾಚಾರ್, ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಆಫೀಸ್ ರೆವಿನ್ಯೂ ಹೆಡ್‌ಅಕೌಂಟೆಂಟ್.

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖಾ.

ಕಳೆದವಾರದ ಶೇಷವು.

೫೨. ಡೈಸಲ್ ಪ್ರತಿವಾದಿಗೆ ಸಲ್ಲತಕ್ಕಂಥಾ ಸಾಲದ ಹಣವನ್ನು ಗ್ರಾಮ ಕೋರ್ಟಿನವರು ಮುಂದಿನಸಹುಕುಂ ಕೊಡುವ ವರಿಗೆ ಅವನು ತೆಗೆದುಕೊಳ್ಳದಂತೆ ಮತ್ತು ಸಾಲಗಾರನು ಅವುಗಳನ್ನು ಅವನಿಗೆ ಕೊಡದಂತೆ ಬರಹ ಮೂಲಕ ಹುಕುಂ ಮಾಡಿದ್ದಾರೆ ಅವುಗಳನ್ನು ಜಪ್ತಿ ಮಾಡತಕ್ಕದ್ದು. ಈ ಪ್ರಕರಣದಲ್ಲಿ ಇರುವಂಥಾದ್ದೇನಿದ್ದರೂ ಸ್ಥಿರ ಆಸ್ತಿಯಮೇಲೆ ಹೊಂದಿರುವ ಯಾವ ಸಾಲವನ್ನಾದರೂ ಜಪ್ತಿ ಮಾಡುವುದಕ್ಕಾಗಲೀ ವಿಕ್ರಯಿಸಲಿಕ್ಕಾಗಲೀ ಗ್ರಾಮ ಕೋರ್ಟಿಗೆ ಅಧಿಕಾರ ಕೊಡಿಸುವದಾಗಿ ತಿಳುಕೊಳ್ಳಕೂಡದು.

ಸಾಲಗಳನ್ನು ಜಪ್ತಿ ಮಾಡುವ ಕ್ರಮ.

೫೩. ವಾಸ್ತವ್ಯವಾಗಿ ಹಿಡಿದುಕೊಳ್ಳುವದರಿಂದ ಯಾ ಬರಹಮೂಲಕವಾದ ಹುಕುಮಿನಿಂದ ಒಂದು ಜಪ್ತಿಯು ಮಾಡಲ್ಪಟ್ಟಮೇಲೆ ಜಪ್ತಿಯು ಬಾಳುವತನಕ ಜಪ್ತಿ ಮಾಡಿದ ಜೆಂಗಿಯನ್ನು ವಿಕ್ರಯದಾನ ಅಡವಾನ ಯಾ ಬೇರೆ ವಿಧದಿಂದ ಖಾಸಗಿಯಾಗಿ ಪರಾಧೀನ ಮಾಡೋಣವು ಮತ್ತು ಡೈಸಲ್ ಪ್ರತಿವಾದಿಗೆ ಸಾಲವನ್ನು ಕೊಡೋಣವು ಜಪ್ತಿಯಿಂದ ವಸೂಲಾಗತಕ್ಕ ದಾವೆಗೆ ಬಾಧಕವಾಗದಂತೆ ಸಿದ್ಧವಾಗಿರತಕ್ಕದ್ದು.

ಜಪ್ತಿನಂತರ ಖಾಸಗಿ ಪರಾಧೀನವು ರದ್ದಾಗತಕ್ಕದ್ದು.

೫೪. ಒಂದು ಡೈಸಲಿನ ಅಮಲ್ದಾರಿಯಲ್ಲಿ ಜಪ್ತಿ ಮಾಡಿದ ಯಾವದೊಂದು ಆಸ್ತಿಗೆ ಒಂದು ಬಾಧ್ಯತೆಯು ಹೇಳಲ್ಪಟ್ಟರೆ, ಗ್ರಾಮ ಕೋರ್ಟು ಆ ಹಕ್ಕನ್ನು ತನಿಖೆ ಮಾಡತಕ್ಕದ್ದು. ಮತ್ತು ಡೈಸಲ್ ಪ್ರತಿವಾದಿಗೆ ಅದರಲ್ಲಿ ಯಾವದೊಂದು ಮಾರಲ್ಪಡಬಹುದಾದ ಹಕ್ಕು ಇಲ್ಲವೆಂತ ತೋರಿಬಂದರೆ ಜಪ್ತಿಯಿಂದ ಆ ಆಸ್ತಿಯನ್ನು ವಿಮೋಚನೆ ಪಡಿಸತಕ್ಕದ್ದು.

ಜಪ್ತಿಯಾದ ಆಸ್ತಿಗೆ ತಕರಾರು ಬಾಧ್ಯತೆಗಳ ಕುರಿತು ವಿಚಾರಣೆ.

೫೫. ಗ್ರಾಮ ಕೋರ್ಟಿನವರು ಜಪ್ತಿ ಮಾಡಿದನಂತರ ಆದಷ್ಟು ಬೇಗನೇ ಜಪ್ತಿ ಮಾಡಿದ ತಾರೀಖಿನಿಂದ ೩೦ ದಿವಸಕ್ಕೆ ಕಡಮೆಯಾಗದೆ ಜಪ್ತೀ ಮಾಡಿದ ಸೊತ್ತನ್ನು ಮಾರಲಿಕ್ಕೆ ದಿವಸವನ್ನು ನಿಶ್ಚಯಿಸತಕ್ಕದ್ದು. ಮತ್ತು ನಿಶ್ಚಯಿಸಲ್ಪಟ್ಟ ಮಾರಾಟವನ್ನು ಕುರಿತು ಇಸ್ತಿಹಾರನ್ನು ಸಾಧಾರಣವಾಗಿ ತನ್ನ ಕೋರ್ಟಿನ ಹೊರಗೆ ಹಚ್ಚತಕ್ಕದ್ದು; ಮತ್ತು ನಿಶ್ಚಯಿಸಲ್ಪಟ್ಟ ಮಾರಾಟವನ್ನು ಕುರಿತು ಮಾರಾಟಕ್ಕೆ ಮುಂಚಿತವಾಗಿ ಟಮಟೆ ಹೊಡಿಸಿ ಪ್ರಕಟಿಸತಕ್ಕದ್ದು.

ಜಪ್ತಿನಂತರ ಹದಿನೈದು ದಿವಸಕ್ಕೆ ಕಮ್ಮಿಯಾಗದ ಹಾಗೆ ವಿಕ್ರಯಕ್ಕಾಗಿ ಸ್ವತ್ತು ಮಾರಕೂಡದು. ಮತ್ತು ವಿಕ್ರಯವನ್ನು ಪ್ರಕಟಪಡಿಸತಕ್ಕದ್ದು.

ಪರಂತು (೧) ಡೈಸಲ್ ಪ್ರತಿವಾದಿಯ ಬರಹ ಮೂಲಕವಾದ ಅನುಮತಿ ಇದ್ದು ಯಾ (೨) ಹಿಡಿದ ಸೊತ್ತು ತ್ವರಿತವಾಗಿ ಸ್ವಾಭಾವಿಕವಾಗಿ ಕೆಟ್ಟುಹೋಗುವಂಥಾದ್ದಾದರೆ ಯಾ (೩) ಅದನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳುವ ಖರ್ಚು ಅದರ ಮೌಲ್ಯಕ್ಕಿಂತಲೂ ಹೆಚ್ಚಾಗುವದಾದರೆ ಜಪ್ತಿ ತಾರೀಖಿನಿಂದ ೩೦ ದಿವಸಗಳೊಳಗೆ ಯಾವಾಗಲಾದರೂ ಟಮಟೆ ಹೊಡಿಸುವದರ ಮೂಲಕ ತಕ್ಕ ನೋಟೀಸ್ ಕೊಟ್ಟು ಜಪ್ತಿಯ ಜೆಂಗಿಯನ್ನು ವಿಕ್ರಯಿಸತಕ್ಕದ್ದು. ಮತ್ತು ಇಂಥಾ ಸಂಗತಿಯಲ್ಲಿ ವಿಕ್ರಯ ಆಮಲ್ದಾರಿಯಲ್ಲಿ ಜಪ್ತಿ ಮಾಡಲ್ಪಟ್ಟ ಹಣವನ್ನು ತರುವ ಬಗ್ಗೆ ಇದರಲ್ಲಿ ಮುಂದೆ ಮಾಡಲ್ಪಟ್ಟ ನಿಬಂಧನೆಗಳಿಗೆ ಒಳಗಾಗಿ ಸದರೀ ಮಾರಾಟದ ಹಣವನ್ನು ಕೋರ್ಟಿನವರು ಇಟ್ಟುಕೊಳ್ಳತಕ್ಕದ್ದು.

ನಿಯಮವು.

೫೬. (ಎ) ಆಸ್ತಿಯು ಮಾರಾಟಕ್ಕೆ ನೇಮಿಸಿದ ದಿವಸ ಗ್ರಾಮ ಮುನಸೀಫನ ಸಮಕ್ಷಮದಲ್ಲಿ ಏಲಂ ಹಾಕಲ್ಪಡತಕ್ಕದ್ದು. ಮತ್ತು ಆ ಏಲಂನಲ್ಲಿ ಇತರರಿಗಿಂತ ಹೆಚ್ಚು ಕ್ರಯಕ್ಕೆ ಕೇಳುವವನಿಗೆ ಆ ಆಸ್ತಿಯು ಮಾರಲ್ಪಡತಕ್ಕದ್ದು. ಆತನು ಅದರ ವಿಕ್ರಯದ ಹಣವನ್ನು ಕೂಡಲೇ ವಸೂಲ್ ಕೊಡತಕ್ಕದ್ದು. ಹಾಗೆ ಆ ಕ್ರಯವನ್ನು ಅವನು ಕೊಡಲಿಕ್ಕೆ ತಪ್ಪಿದರೆ ಆಸ್ತಿಯು ತಿರಿಗಿ ಏಲಮಿನಲ್ಲಿ ಮಾರಲ್ಪಡತಕ್ಕದ್ದು.

ವಿಕ್ರಯವನ್ನು ಕುರಿತು ಕ್ರಮ.

(ಬಿ) ವಿಕ್ರಯದ ಹಣವು ಬಂದಕೂಡಲೇ ಗ್ರಾಮ ಮುನಸೀಫನು ಆ ಹಣಕ್ಕೆ ರಸೀದಿ ಕೊಡತಕ್ಕದ್ದು. ಮತ್ತು ಆ ಮಾರಾಟವು ಕಾಯಮಾಗತಕ್ಕದ್ದು.

(ಸಿ) ಎರಡನೇ ಮಾರಾಟದಿಂದ ಕ್ರಯದಲ್ಲಿ ಆದಂಥ ಕೊರತೆಯು ಯಾವದಾದರೂ ಇದ್ದರೆ ಡೈಸಲ್ ಪ್ರತಿವಾದಿಯ ಯಾ ಡೈಸಲ್ದಾರನ ಅಪೇಕ್ಷೆ ಮೇರೆಗೆ ಮೊದಲಿನ ಮಾರಾಟದ ಕ್ರಯವನ್ನು ಕೊಡಲಿಕ್ಕೆ ತಪ್ಪಿದವನಿಂದ ಆತನಮೇಲೆ ಹುಕುಮ್ ಆಗಿದ್ದರೆ ವಸೂಲ್ ಮಾಡತಕ್ಕದ್ದು.

೫೭. ಈ ರೆಗ್ಯುಲೇಷನ್ ಪ್ರಕಾರ ಪ್ರಕಟಿಸಲಾದ ಯಾವ ವಿಕ್ರಯದ ಏಲಂಗಳನ್ನು ಮಾಡಿಸುವ ಗ್ರಾಮ ಕೋರ್ಟಿನವರ ಮುನಸೀಫನು ಪ್ರಕಾರ ೫೬ನೇ ಪ್ರಕರಣದ ಮೇರೆಗೆ ಆಖೈರಿನಲ್ಲಿ ಪ್ರಕಟಿಸಿ ಕೊಟ್ಟ ಘಳಿಗೆಯು ಯಾವದೋ ಆ ದಿವಸಕ್ಕೆ ಮುಂದರಿಸಿ ಇಡಬಹುದು.

ಏಲಂಗಳನ್ನು ಮುಂದರಿಸಲಿಕ್ಕೆ ಸ್ವಾತಂತ್ರ್ಯ.

೫೮. ಈ ರೆಗ್ಯುಲೇಷನ್ನಿಗನುಸಾರವಾಗಿ ಮಾಡಲ್ಪಡುವ ಯಾವದೊಂದು ಮಾರಾಟಕ್ಕೆ ಸಂಬಂಧಿಸಿ ನಯಾದವನೊಂದು ಕೆಲಸವನ್ನು ಮಾಡಲಿಕ್ಕೆ ಸ್ವಾತಂತ್ರ್ಯವಿರುವ ಗ್ರಾಮ ಮುನಸೀಫನಾಗಲೀ ಯಾ ಬೇರೆ ನೌಕರನಾಗಲೀ ಸ್ವತಃ ಯಾ ಪರೋಕ್ಷವಾಗಿ ಇಂಥಾ ಏಲಮಿನಿಂದ ಮಾರಲ್ಪಟ್ಟ ಯಾವದೊಂದು ಆಸ್ತಿಯನ್ನು ಕುರಿತು ದರಖಾಸ್ತಿಗೆ ನಿಲ್ಲಲೂ ಅದರಲ್ಲಿ ಯಾವದೊಂದು ಪ್ರಯೋಜನವನ್ನು ಹೊಂದಲೂ ಕೂಡದು.

ಏಲಮಿನ ಸೊತ್ತನ್ನು ಗ್ರಾಮ ಮುನಸೀಫ ಯಾ ಇತರ ಆಫೀಸರು ದರಖಾಸ್ತಿಗೆ ನಿಲ್ಲಲೂ ಕ್ರಯಕ್ಕೆ ಪಡಕೊಳ್ಳಲೂ ಕೂಡದು.

೫೯. ಏಲಂ ಗಿಟ್ಟ ಜೆಂಗಿಯು ಮಾರಲ್ಪಡುವದಕ್ಕೆ ಮುಂಚೆಯೇ ಡೈಸಲಿನ ಹಣವು ಮಾರಾಟಕ್ಕೆ ತಗಲಿದ ಖರ್ಚು ಗ್ರಾಮ ಮುನಸೀಫನ ಒಳಗೆ ಪಾವತಿ ಮಾಡಲ್ಪಟ್ಟರೆ, ಈ ರೆಗ್ಯುಲೇಷನ್ನಿಗನುಸಾರವಾಗಿ ಮಾಡಲ್ಪಡುವ ಅಂಥಾ ಪ್ರತಿಯೊಂದು ಮಾರಾಟವು ನಿಲ್ಲಿಸಲ್ಪಡತಕ್ಕದ್ದು.

ಡೈಸಲ್ ಹಣ ಮತ್ತು ಖರ್ಚು ಪಾವತಿಯಾದರೆ ಏಲಮನ್ನು ನಿಲ್ಲಿಸೋಣ.

೬೦. ಅಮಲ್ದಾರಿಯಲ್ಲಿ ಹುಟ್ಟಿಬಂದ ಮೊಬಲಗಿನಿಂದ ಅಮಲ್ದಾರಿಯ ಖರ್ಚುಗಳು ಪ್ರಥಮತಃ ತೆಗೆದು ಅನಂತರ ಡೈಸಲ್ದಾರನಿಗೆ ಸಲ್ಲತಕ್ಕ ಮೊಬಲಗು ಪಾವತಿಯಾಗತಕ್ಕದ್ದು. ಬಾಕಿ ಏನಾದರೂ ಉಳಿದರೆ ಡೈಸಲ್ ಪ್ರತಿವಾದಿಗೆ ಕೊಡತಕ್ಕದ್ದು.

ವಿಕ್ರಯದಿಂದ ಹುಟ್ಟಿಬಂದ ಮೊಬಲಗನ್ನು ವಿಭಾಗಿಸೋಣ.

೬೧. ಮಾರಲ್ಪಟ್ಟ ಜೆಂಗಿಯು ವಾಸ್ತವ್ಯವಾಗಿ ಹಿಡಿಯಲ್ಪಟ್ಟದಾದರೆ, ಆ ಜೆಂಗಿಯು ಕೊಂಡುಕೊಂಡವನಿಗೆ ಕೊಡಲ್ಪಡತಕ್ಕದ್ದು.

ವಾಸ್ತವ್ಯವಾಗಿ ಹಿಡಿದಿಟ್ಟ ಸ್ವತ್ತು ಕೊಂಡವರಿಗೆ ಕೊಡಲ್ಪಡತಕ್ಕದ್ದು.

೬೨. ಮಾರಲ್ಪಟ್ಟ ಜೆಂಗಿಯು ಡೈಸಲ್ ಪ್ರತಿವಾದಿ ಅಲ್ಲದೆ ಬೇರೆ ಯಾವನೊಬ್ಬ ಮನುಷ್ಯನ ಸ್ವಾಧೀನದಲ್ಲಿರುವದಾದರೆ, ಅಥವಾ ಡೈಸಲ್ ಪ್ರತಿವಾದಿಗೆ ಯಾವನೊಬ್ಬ ಮನುಷ್ಯನಿಂದ ಸಲ್ಲತಕ್ಕಂಥಾ ಸಾಲವಾಗಿದ್ದರೆ, ಅದನ್ನು ಕೊಂಡುಕೊಂಡವನಿಗಲ್ಲದೆ ಬೇರೆ ಯಾರಿಗೂ ಜೆಂಗಿಯನ್ನು ಒಪ್ಪಿಸಿ ಕೊಡಕೂಡದೆಂತಲೂ ಅಥವಾ ಸಾಲಕೊಡಕೂಡದೆಂತಲೂ ಅಂಥಾ ಮನುಷ್ಯನಿಗೆ ಬರಹಮೂಲಕ ನೋಟೀಸ್ ಕೊಡುವ ಮೂಲಕ ಕೊಂಡುಕೊಂಡವನಿಗೆ ಒಪ್ಪಿಸಿಕೊಡತಕ್ಕದ್ದು. ಅಂಥಾ ಜೆಂಗಿ ಯಾ ಸಾಲದಲ್ಲಿ ಜಪ್ತಿ ಮಾಡುವ ಸಮಯದಲ್ಲಿ ಡೈಸಲ್ ಪ್ರತಿವಾದಿಗೆ ಇದ್ದ ಯಾವದೊಂದು ಹಕ್ಕು ಕೊಂಡುಕೊಂಡವನಿಗೆ ಸಂಬಂಧಿಸತಕ್ಕದ್ದು.

ಇತರ ಸಂಗತಿಗಳಲ್ಲಿ ಖರೀದಿದಾರನಿಗೆ ಸ್ವತ್ತು ಯಾವರೀತಿಗೆ ಒಪ್ಪಿಸಿಕೊಡತಕ್ಕದ್ದು.

(ಸಶೇಷ)

ADDRESS

OF THE

DEWAN OF MYSORE

TO THE REPRESENTATIVE ASSEMBLY HELD AT MYSORE,

on Tuesday, the 11th October 1892.

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೧೧ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ವಿದ್ಯಾಭ್ಯಾಸ.—೧೮೯೦—೯೧ನೇ ಇಸವಿಯಲ್ಲಿ ಪಬ್ಲಿಕ್ ವಿದ್ಯಾಶಾಲೆಗಳ ಸಂಖ್ಯೆಯು ೧,೫೯೭ ರಿಂದ ೧,೬೫೩ ರವರೆಗೂ ಅವರಲ್ಲಿ ಓದತಕ್ಕ ವಿದ್ಯಾರ್ಥಿಗಳ ಸಂಖ್ಯೆಯು ೬೨,೯೬೦ ರಿಂದ ೬೬,೩೭೨ ವರೆಗೂ ಜಾಸ್ತಿ ಆಯಿತು. ಇದಲ್ಲದೆ ೨,೦೬೦ ಸ್ವಂತ ಶಾಲೆಗಳಲ್ಲಿ ೨೫,೦೫೧ ಜನ ವಿದ್ಯಾರ್ಥಿಗಳು ಓದುತ್ತಿದ್ದರು. ಎಲ್ಲಾ ತರಹೇದ ಸ್ಕೂಲುಗಳ ಒಟ್ಟು ಸಂಖ್ಯೆಯು ೩,೬೧೩, ಅವುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ೧,೦೧,೪೨೩.

೧೨ ತಿಂಗಳುಳ್ಳ ಹೋದ ಸಂವತ್ಸರದಲ್ಲಿ ವಿದ್ಯಾಭ್ಯಾಸಕ್ಕಾಗಿ ಎಲ್ಲಾ ಬಾಬುಗಳಿಂದಲೂ, ೯,೦೬,೫೩೮ ರೂಪಾಯಿ ಖರ್ಚಾಯಿತು. ಈ ಪೈಕಿ ಸ್ಟೇಟ್ ಫಂಡಿನಿಂದ ೪,೯೬,೦೩೫ ರೂಪಾಯಿ, ಲೋಕಲ್ ಫಂಡಿನಿಂದ ೨,೧೧,೬೨೩ ರೂಪಾಯಿ, ಮ್ಯುನಿಸಿಪಲ್ ಫಂಡಿನಿಂದ ೨೫,೦೭೭ ರೂಪಾಯಿ, ಫೀಜ್ ಮೊಬಲಗು ಬಾಬತು ೯೭,೫೮೯ ರೂಪಾಯಿ, ಇತರ ಎಲ್ಲಾ ಬಾಬುಗಳಿಂದ ೭೦,೧೧೧, ೧೩೪ ರೂಪಾಯಿ, ಈ ಮೇರೆ ಖರ್ಚಾಯಿತು. ಸಹಾಯದ್ರವ್ಯಕ್ಕಾಗಿ ೫೭, ೯೭೪ ರೂಪಾಯಿ ಖರ್ಚಾಗಿರುತ್ತೆ.

ವಿದ್ಯಾಭಿವೃದ್ಧಿಗೋಸ್ಕರ ಹೋದ ವರ್ಷ ಜಾರೀಗೆ ಬಂದ ಏರ್ಪಾಡುಗಳ ಪೈಕಿ ಮುಖ್ಯವಾದವುಗಳು ಯಾವವೆಂದರೆ,—ಲೋವರ ಸೆಕಂಡರಿ ಎಂಬ ಪರೀಕ್ಷೆಯನ್ನಿಟ್ಟದ್ದು, ಪಾಠಶಾಲೆಗಳನ್ನ ದರ್ಜೆವಾರಾಗಿ ವಿಂಗಡಿಸಿ ಅವುಗಳಲ್ಲಿ ಎಲ್ಲವುಗಳಿಗೆ ಪಾಠಕ್ಕೆ ಬೇಕಾದ ಎಂಬವನ್ನು ಬಿದ್ಧಮಾಡುಮಾಡಿದ್ದು, ಪಾಠಶಾಲೆಗಳಲ್ಲಿ ಶಿಕ್ಷಾಕ್ರಮವನ್ನ ಇನ್ನೂ ಚನ್ನಾಗಿ ಇಟ್ಟುಕೊಂಡಿರುವದಕ್ಕೋಸ್ಕರ ನಿಬಂಧನೆಗಳಮಾಡಿದ್ದು, ರೈತರು ಸ್ಕೂಲಿಗೆ ಮೇಲ್ವಿಚಾರಣೆ ತೆಗೆದುಕೊಳ್ಳುವದಕ್ಕೋಸ್ಕರ ಇರುವ ಕಮಿಟಿಯನ್ನು ಸಭಾಪಡಿಸಿದ್ದು, ಪಾಠ ಪುಸ್ತಕಗಳನ್ನ ಪರಾಮರಿಸುವದಕ್ಕಾಗಿ ಒಂದು ಕಮಿಟಿಯನ್ನೇರ್ಪಡಿಸಿದ್ದು, ಸಂಸ್ಕೃತ ಪಾಠಶಾಲೆಗಳಲ್ಲಿ ಬೋಧಕವಾಗುವ ವಿಷಯಗಳು ವಿದ್ಯಾರ್ಥಿಗಳಿಗೆ ಪ್ರಸಕ್ತ ವ್ಯವಹಾರದಲ್ಲಿ ಉಪಯೋಗಿಸುವದಾಗಿ ಮಾಡಬೇಕಾದ ಕ್ರಮವನ್ನು ತಿದ್ದುಪಡಿಮಾಡಿದ್ದು, ಇದೇ ಆಗಿರುತ್ತವೆ. ಮೈಸೂರಲ್ಲಿ ಈಚೆಗೆ ಸ್ಥಾಪಿಸಿದ ಕಸುಬು ಕಲಿಸುವ ಪಾಠಶಾಲೆಯ ಮೂಲಕ ಶಿಲ್ಪವಿದ್ಯಾಭ್ಯಾಸಕ್ರಮವು ಪ್ರಾರಂಭವಾಗಿದೆ. ಈ ಪಾಠಶಾಲೆಯಲ್ಲಿ ಬಡಗಿ ಮತ್ತು ಕಂಬಾರಿಕೆ ಕಸುಬುಗಳನ್ನು ನಕ್ಷತೆಗೆಯುವದನ್ನೂ ಕೂಡಾ ಕಲಿಸುತ್ತಾರೆ.

ಸ್ತ್ರೀವಿದ್ಯಾಭ್ಯಾಸ.—ಸ್ತ್ರೀ ವಿದ್ಯಾಭ್ಯಾಸವು ಏಕ ಪ್ರಕಾರವಾಗಿ ಪ್ರಬಲಿಸುತ್ತಲಿದೆ. ಬಾಲಿಕಾ ಪಾಠಶಾಲೆಗಳಿಗಾಗಿ ಹೋದವರ್ಷ ೧,೦೫,೩೬೫ ರೂಪಾಯಿಗಳೂ ಅದರ ಹಿಂದಿನವರ್ಷ ೬೬,೯೦೦ ರೂಪಾಯಿಗಳೂ ಖರ್ಚಾಯಿತು. ಎಲ್ಲಾ ಸರ್ಕಾರಿ ಬಾಲಿಕಾ ಪಾಠಶಾಲೆಗಳ ಮೇಲ್ವಿಚಾರಣೆಯು ಮೊಕದ್ದಮೆಗಳ ಆಜ್ಞೆ ವಿಚಾರಕ್ಕೆ ಸಭೆಯವರುಗಳು ತಮ್ಮೊಳಗೆ ಕೆಲಸದಲ್ಲಿ ಬಹಳ ಮುತವರ್ಜಿಯನ್ನು ವಹಿಸಿ ಸ್ತ್ರೀವಿದ್ಯಾಭಿವೃದ್ಧಿಗೆ ಬಹಳ ಸಹಾಯ ಮಾಡಿದರು.

ಶ್ರೀ ಮಹಾರಾಣಿಯವರ ಬಾಲಿಕಾ ಪಾಠಶಾಲೆ.—ಮೈಸೂರಿನಲ್ಲಿರುವ ಈ ಪಾಠಶಾಲೆಯು ಹೋದ ವರ್ಷ ಒಳ್ಳೇ ಅಭಿವೃದ್ಧಿಸ್ಥಿತಿಯಲ್ಲಿ ಇತ್ತು. ಅಸೌತ ಸದಸ್ಯತಕ್ಕ ಕಮ್ಮಿಟಿಯವರು ತರಗತಿಗಳನ್ನು ಪುನಃ ವಿಂಗಡಿಸಿ ಕ್ರಮವನ್ನು ತಿದ್ದುಪಡಿಮಾಡಿ, ಗುಣಸಂಪನ್ನರಾದ ೨೫ ಮಂದಿ ಉಪಾಧ್ಯಾಯರುಗಳನ್ನು ಕಲಸುಂತ ತರಗತಿ ಪಾಠ ಮಿಡಲ್ ಸ್ಕೂಲ್ ತರಗತಿಗಳಿಗಾಗಿ ೪ ಮಂದಿ ಉಪಾಧ್ಯಾಯಿನಿಯರನ್ನು ಮೊಕರರ್ ಮಾಡಿದರು. ಈ ಪಾಠಶಾಲೆಯಲ್ಲಿ ಉಪಾಧ್ಯಾಯಿನಿಯರು ವಿಶೇಷವಾಗಿ ಇರತಕ್ಕದ್ದು ಇದು, ೧೨ ವರ್ಷಗಳ ವಯಸ್ಸಿಗಿಂತ ಹೆಚ್ಚು ಪ್ರಾಯದ ಬಾಲೆಯರ ಸಂಖ್ಯೆಯೂ ಉತ್ತಮ ವರ್ಗದ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿರತಕ್ಕದ್ದು ಇದು, ಈ ವಿದ್ಯಾಸಂಸ್ಥೆಗಳು ಈ ಪಾಠಶಾಲೆಯ ಸಂಬಂಧದಲ್ಲಿ ವಿಶೇಷವಾದ ನ್ಯೂನತೆ. ಒಟ್ಟು ೩೩ ಜನ ಉಪಾಧ್ಯಾಯರುಗಳ ಪೈಕಿ ೧೬ ಮಂದಿ ಸ್ತ್ರೀಯರಾಗಿರುತ್ತಾರೆ. ವಿದ್ಯಾರ್ಥಿನಿಯರ ಪೈಕಿ ೫೯ ಬಾಲಿಕೆಯರಿಗೆ ೧೨ ವರ್ಷಗಳಿಗಿಂತ ಹೆಚ್ಚಾದ ವಯಸ್ಸಾಗಿದೆ. ಈ ಪಾಠಶಾಲೆಯಿಂದ ಲೋವರ್ ಸೆಕಂಡರಿ ಪರೀಕ್ಷೆಗೆ ಹೋಗಿದ್ದ ೧೨ ಮಂದಿ ಬಾಲೆಯರ ಪೈಕಿ, ೯ ಜನ ಜಯಶೀಲರಾದರು. ಇಂಗ್ಲೀಷ್ ಮೈಸ್ಕೂಲುಗಳಲ್ಲಿನ ೬ ನೇ ತರಗತಿ ಸ್ವಭಾವವುಳ್ಳ ಒಂದು ನಾರ್ಮಲ್ ಕ್ಲಾಸ್ (ಅಂದರೆ ಪಾಠಕರಾಗಿ ತಯಾರಾಗತಕ್ಕವರ್ಗೆ ಉಪಯುಕ್ತವಾದ ಕ್ಲಾಸ್) ನಲ್ಲಿ ೧೦ ಮಂದಿ ವಿದ್ಯಾರ್ಥಿನಿಗಳಿದ್ದಾರೆ. ಕೇಂಬ್ರಿಡ್ಜ್ ಪಟ್ಟಣದ ನ್ಯೂನ್ಹ್ಯಾಮ್ ಕಾಲೇಜಿನ ಮಿಸ್ ಓಯೀಸ್ ಎಂಬವರು ಲೇಡಿ ಸೂಪರಿಂಟೆಂಡೆಂಟಾಗಿ ಮೊಕರರ್ ಆಗಿದ್ದಾರೆ. ಅವರಿಗೆ ಮೈಸ್ಕೂಲಿನ ಆಸೋತದ ವಿಷಯದಲ್ಲಿ ವಿಶೇಷವಾದ ಅನುಭವವು ಇರುತ್ತದೆ. ಇವರ ಮೇಲ್ವಿಚಾರಣೆಗೆ ಒಳಪಟ್ಟ ಈ ಪಾಠಶಾಲೆಯು ವಿಶೇಷವಾಗಿ ಉಪಯೋಗಕರವಾಗಿ ಅಭಿವೃದ್ಧಿಯನ್ನು ಹೊಂದುವ ಸೂಚನೆಯು ತೋರುತ್ತಲಿದೆ.

ಓರಿಯಂಟಲ್ ಲೈಬ್ರರಿ ಎಂಬ ಪುಸ್ತಕ ಭಂಡಾರ.—ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿರುವ ಮುಖ್ಯವಾದ ಎಲ್ಲಾ ಗ್ರಂಥಗಳನ್ನೂ ಬಿಡದೆ ಸಂಗ್ರಹಮಾಡಬೇಕೆಂಬ ಉದ್ದೇಶದಿಂದ ಕಳೆದ ಅಕ್ಟೋಬರ್ ತಿಂಗಳಲ್ಲಿ ಸ್ಥಾಪಿಸಲ್ಪಟ್ಟ ಪುಸ್ತಕಭಂಡಾರದಲ್ಲಿ ಸಾಲಾಖೈರಲ್ಲಿ ೧,೦೫೫ ಛಾಪೆಯಾದ ೩೧೯ ಕೈ ಬರಹದ ಗ್ರಂಥಗಳು ಸಂಗ್ರಹಿಸಿದ್ದವು.

ಅಪೂರ್ವವಾದ ಗ್ರಂಥಗಳು.—ಶೇಖರಿಸಲ್ಪಟ್ಟಿರುವ ಸಂಸ್ಕೃತಗ್ರಂಥಗಳ ಪೈಕಿ ಭಟ್ಟಭಾಸ್ಕರಾಚಾರ್ಯರಿಂದ ರಚಿತವಾದ ಯಜುರ್ವೇದ ಭಾಷ್ಯದ ಅನೇಕ ಪ್ರತಿಗಳು ಇರುತ್ತವೆ. ಸಾಯಣಾಚಾರ್ಯರು ಈ ವೇದಕ್ಕೆ ಭಾಷ್ಯವನ್ನು ಬರೆಯುವಾಗ್ಯೆ ಯಜುರ್ವೇದಕ್ಕೆ ಪುರಾತನವಾದ ಭಾಸ್ಕರಾಚಾರ್ಯರ ಭಾಷ್ಯವನ್ನು ಬಹಳವಾಗಿ ಉಪಯೋಗಿಸಿದ್ದರು. ಈ ಭಾಷ್ಯವನ್ನು ಛಾಪಿಸಿದನಂತರ ಸಾಯಣಾಚಾರ್ಯರ ಭಾಷ್ಯಕ್ಕೆ ಅನುಪಯುಕ್ತವಾದ ಟಿಪ್ಪಣಿಯಾಗುತ್ತೆ. ಇದು ಅಲ್ಲದೆ ಸಾಯಣಾಚಾರ್ಯರ "ಧಾತುವೃತ್ತಿ" ಎಂಬ ಗ್ರಂಥದ ಸಂಪೂರ್ಣವಾದ ಶುದ್ಧಪ್ರತಿಗಳು, ವಾಚಸ್ಪತಿ ಮಿಶ್ರರ ನ್ಯಾಯವಾರ್ತಿಕಟೀಕಾ ಮತ್ತು ಇಂಡಿಯಾ ದೇಶದ ಈ ಪ್ರಾಂತದಲ್ಲಿ ಮಾತ್ರ ದೊರಕುವ ಅನೇಕ ಇತರ ಪುರಾತನ ಗ್ರಂಥಗಳು ಇರುತ್ತವೆ. ಕನ್ನಡ ಪುಸ್ತಕಗಳಲ್ಲಿ ಚರಿತ್ರೆ ಮತ್ತು ಭಾಷಾ ಸಂಬಂಧವಾದ ಕೆಲವು ಪುರಾತನ ಜೈನ ಗ್ರಂಥಗಳು ಇರುತ್ತವೆ. ಈ ಪ್ರಕಾರ ಶೇಖರವಾಗಿರುವ ಅಮೂಲ್ಯವಾದ ಗ್ರಂಥಗಳನ್ನು ಒಂದು ಕ್ರಮವನ್ನನುಸರಿಸಿ ಛಾಪಿಸತಕ್ಕದ್ದಕ್ಕೆ ಏರ್ಪಾಡು ಮಾಡುತ್ತೇನೆ. ದರ್ಶನಾಚಾರ್ಯರ ಭಾಷ್ಯಸಹಿತವಾದ ಆಪಸ್ತಂಬ ಗೃಹ್ಯಸೂತ್ರವು ಛಾಪೆಯಲ್ಲಿರುತ್ತೆ. ಕನ್ನಡದಲ್ಲಿ ಇದುವರೆಗೆ ಛಾಪಿಸಲ್ಪಡದೆ ಇರುವ ಕ್ರಿಸ್ತ ಶಕದ ೧೦ ನೇ ಶತಮಾನಕ್ಕೆ ಸಲ್ಲುವ ಪಂಪ ಕವಿಯಿಂದ ರಚಿತವಾದ ವಿಕ್ರಮಾರ್ಜುನ ವಿಜಯ ಎಂಬ ಗ್ರಂಥವನ್ನೂ, ೧೧ನೇ ಶತಮಾನಕ್ಕೆ ಸಲ್ಲುವ ಅಭಿನವ ಪಂಪನು ರಚಿಸಿದ ರಾಮಚಂದ್ರ ಚರಿತ್ರ ಪುರಾಣದ ಶುದ್ಧಪ್ರತಿಯನ್ನೂ ಸಹ ಛಾಪೆ ಮಾಡಿ ಪ್ರಕಟಿಸಿರುತ್ತೆ.

ಪ್ರಾಚೀನ ಲಿಪ್ಯನ್ವೇಷಣ.—ಈ ಕೆಲಸವು ಹೋದ ವರುಷ ಶಿವಮೊಗ್ಗ ಮತ್ತು ಬೆಂಗಳೂರ್ ಡಿಸ್ಟ್ರಿಕ್ಟುಗಳಲ್ಲಿ ಪೂರೈಸಿ ಇದುವರೆಗೂ ಪ್ರಾರಂಭಿಸದೆ ಇದ್ದ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿಯೂ ಉಪಕ್ರಮಿಸಲಾಯಿತು. ಸಂಸ್ಥಾನದಲ್ಲಿ ಇದುವರೆಗೆ ಕಂಡು ಹಿಡಿದ್ದರ ಪೈಕಿ, ಮುಖ್ಯವಾದ ಲಿಪಿ, ಅಂದರೆ ಅಶೋಕ ಮಹಾರಾಜನ ಕಾಲದ ಶಾಸನ ಮೊಳಕಾಲ್ಮೂರು ತಾಲೂಕಿನಲ್ಲಿ ಸಿಕ್ಕಿತು. ಇದು ಕ್ರಿಸ್ತ ಶಕಕ್ಕೆ ಮುಂಚೆ ೩ ನೇ ಶತಮಾನದಲ್ಲಿ ಹುಟ್ಟಿದ್ದು. ಆದ್ದರಿಂದ ಹಿಂದೂದೇಶದ ಚರಿತ್ರೆಯಲ್ಲಿ ಲಿಪಿಗಳು ಜಾರಿಯಲ್ಲಿದ್ದದ್ದಾಗಿ ವಿದಿತವಾಗುವ ಕಾಲದಷ್ಟು ಪುರಾತನವಾದದ್ದು. ಹೋದ ವರುಷದಲ್ಲಿ ಕಂಡುಹಿಡಿದ ಇತರ ಶಾಸನಗಳ ಪೈಕಿ ಸರ್ ೬೮೯ನೇ ಇಸವಿಯಲ್ಲಿ ಗಂಗಾವಂಶದವರು ಕೊಟ್ಟ ಶಾಸನವೂ, ೭೭೬ನೇ ಇಸವಿಯಲ್ಲಿ ಪಲ್ಲವ ಕುಲದ ದೊರೆಗಳು ಕೊಟ್ಟ ಶಾಸನ, ಸರ್ ೧೧೫೦ ಮತ್ತು ೧೧೯೫ ರಲ್ಲಿ ಕದಂಬ ವಂಶದವರು ಶ್ರೀ ಶಂಕರಾಚಾರ್ಯರ ಮಠಕ್ಕೆ ಕೊಟ್ಟ ಶಾಸನಗಳೂ, ಸೊರಬ ಸಮೀಪದಲ್ಲಿ ಸಿಕ್ಕಿದ ೧೭ನೇ ಶತಮಾನದಲ್ಲಿ ಹುಟ್ಟಿದ ಪೋರ್ಚುಗೀಸ ಶಾಸನಗಳೂ ಕೂಡ ಮುಖ್ಯವಾಗಿರುತ್ತವೆ. ಕ್ರಿಸ್ತ ಶಕಕ್ಕೆ ಮುಂಚೆ ೧ನೇ ಶತಮಾನದಲ್ಲಿ ಚಲಾವಣೆಯಲ್ಲಿದ್ದ ರೋಮನ್ ನಾಣ್ಯಗಳು ಬೆಂಗಳೂರು ಸಮೀಪದಲ್ಲಿ ದೊರೆತದ್ದು ಕೂಡ ಮುಖ್ಯ ಸಂಗತಿಯಾಗಿದೆ.

ಮಳೆ ಗಾಳಿ ಮುಂತಾದ ಕಾಲಸ್ಥಿತಿ ಕಂಡು ಹಿಡಿಯುವದಕ್ಕೋಸ್ಕರ ಮಾಡಿರುವ ಏರ್ಪಾಡುಗಳು.—ಸಂಸ್ಥಾನದ ಮಳೆ ಮಾಪಕಗಳಲ್ಲಿ ಮಳೆ ಗಾಳಿ ಮುಂತಾದ ಕಾಲಸ್ಥಿತಿಯು ಬದಲಾಯಿಸುವ ರೀತಿಯಲ್ಲಿರುವ ಭೇದವನ್ನು ಮುಂಚಿತವಾಗಿಯೇ ಗೊತ್ತುಮಾಡಿಕೊಂಡಿರಲು ಬೇಸಾಯದ ನ್ಯೂನತೆಯನ್ನು ಪರಿಹರಿಸುವದಕ್ಕೋಸ್ಕರ ಕಾಲಸ್ಥಿತಿಯನ್ನು ಕುರಿತು ಸ್ಪಷ್ಟವಾಗಿ ಕಂಡುಹಿಡಿಯಲ್ಪಟ್ಟ ಸಂಗತಿಗಳನ್ನ ಲಿಖಿತರೂಪವಾಗಿ ಕಾಪಾಡುವ ಉದ್ದೇಶದಿಂದ ಬೆಂಗಳೂರಲ್ಲಿ ಒಂದು ಮೊದಲನೆ ತರಗತಿಯ ಶಾಲೆಯನ್ನೂ, ಮೈಸೂರು, ಹಾಸನ, ಮತ್ತು ಚಿತ್ರದುರ್ಗದಲ್ಲಿ ಒಂದೊಂದು ೨ನೇ ತರಗತಿ ಶಾಲೆಯನ್ನೂ ಇಂಡಿಯಾದೇಶದ ಅನೇಕ ಕಡೆಗಳಲ್ಲಿರುವ ಒಟ್ಟು ಏರ್ಪಾಡಿನ ಅಂಗವಾಗಿ ಸ್ಥಾಪಿಸಲು ಆಲೋಚಿಸಿರುತ್ತೆ. ಕಳೆದ ನವಂಬರ ತಿಂಗಳಲ್ಲಿ ಬೆಂಗಳೂರು ಸೆಂಟ್ರಲ್ ಕಾಲೇಜ್ ಪ್ರಿನ್ಸಿಪಲರಾದ ಮಿ॥ ಕುಕ್ ಸಾಹೇಬರವರು ಮತ್ತು ಅವರ ಒಬ್ಬ ಅಸಿಸ್ಟೆಂಟರು ಕಲ್ಕತ್ತಾಕ್ಕೆ ಹೋಗಿ ಅಲ್ಲಿ ಕಾಲಸ್ಥಿತಿ ಕಂಡುಹಿಡಿಯುವದಕ್ಕೋಸ್ಕರ ಸ್ಥಾಪಿಸಿರುವ ಶಾಲೆಯಲ್ಲಿ ಏರ್ಪಾಡು ಯಾವ ರೀತಿಯಲ್ಲಿ ನಡೆಯುತ್ತಿದೆಯೆಂಬುದನ್ನು ತಿಳಿದುಕೊಂಡು ಬರಲು ನೇಮಿಸಿ ಕಳುಹಿಸಿತ್ತು.

BANGALORE.—Printed and published at the KARNATAKA PRESS, No 40, HOSPITAL ROAD, PETTA.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

[illegible]

Vol. XIX | ಸಂಪುಟ ೧೯. | BANGALORE—MONDAY DECEMBER 12, 1892. | ಬೆಂಗಳೂರು:—ಸನ್ ೧೮೯೨ನೇ ಇಸವಿ ಡಿಸೆಂಬರ್ ೧೨ ನೇ ತಾರೀಖ್ ಸೋಮವಾರ. | [No. 49. [ಸಂಖ್ಯೆ ೪೯.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

[illegible]	9—0—0	10—8—0
[illegible]	1—0—0	5—0—0
[illegible]	5—0—0	6—0—0

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

ಬೆಂಗಳೂರು ಕರ್ಣಾಟಿಕ್ ಪ್ರೆಸ್.

[illegible]

ನೋಟೀಸ್.

ನಂಜನ್ನನಗರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

[illegible]

ನೋಟೀಸ್.

ಗಣೇಶ ರಾಮಚಂದ್ರ ಕರೀ ಮತ್ತು ಕಂಪೆನಿ, ಕಮೀಷನ್ ಏಜಂಟ್ಸ್.

[illegible]

ನೋಟೀಸ್.

[illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ:—

[illegible]

C. G. R. NAYLOR,
M. R. C. S., ENGLAND,
Surgeon.

ಕೊಡಗು ಫಾರಸ್ಟ್ ಇಲಾಖಾ.

ನೋಟೀಸ್.

1892 ನೇ ಇಸವಿ ನವಂಬರ್ ತಾರೀಖ್ 13.

[illegible]

60 [illegible]	1800 ಅಡಿ.	[illegible]
490 [illegible]	11400 ಅಡಿ.	
180 [illegible]	4200 ಅಡಿ	

[illegible]

G. H. FOSTER,

[illegible]

ಪ್ರಕಟನೆ.

[illegible]

ನೋಟಿಸ್.

ಇದರಿಂದ ಸಕಲ ಸ್ತ್ರೀ ಜನರಿಗೂ ತಿಳಿಯಪಡಿಸುವದೇನೆಂದರೆ.—

ಹುಚ್ಚರ ಮತ್ತು ಕುಷ್ಟರೋಗಿಗಳ ಆಸ್ಪತ್ರೆಗೂ ಪ್ರಸವಾಸ್ಪತ್ರೆಗೂ, ವೈದ್ಯಶಾಲೆಗೂ, ಬೇಕಾದ ಆಹಾರಪದಾರ್ಥಗಳು, ಔಷಧಸಾಮಾನುಗಳು ಮತ್ತು ಬಟ್ಟೆ ಸಾಮಾನುಗಳು, ಇವುಗಳ ಸರಬರಾಯಿ ಬಗ್ಗೆ ದರಖಾಸ್ತುಗಳು ಕೊಡಬಹುದು. ಸದರೀ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರಿಂದ ೧೮೯೨ನೇ ಇಸವಿ ಡಿಸಂಬರ್ ೩೧ನೇ ತಾರೀಖಿನವರಿಗೆ ಅಂಗೀಕರಿಸಲ್ಪಡುವವು. ಇತರ ಷರತುಗಳಬಗ್ಗೆ ೧೮೯೨ನೇ ಇಸವಿ ಡಿಸಂಬರ್ ೧ನೇ ತಾರೀಖಿನ ಮೈಸೂರ್ ಗೆಜೆಟನ್ನು ನೋಡತಕ್ಕದ್ದು.

I. J. McGann,
Senior Surgeon, &c.
Govt of Mysore

THE MONEY MARKET

ಮದರಾಸ್, ಶನಿವಾರ, ತಾ|| 10ನೇ ಡಿಸಂಬರ್ 1892

ಶೇಕಡ 4 ರೂ. ಬಾಬತು ಗವರ್ನಮೆಂಟ್ ಪತ್ರಗಳು, ನೂರು ರೂಪಾಯಿಗಳಿಗೆ, 105–8–0 ಇಂದ 105–14–0 ವರವಿಗೆ.

ಮದರಾಸ್ ಬ್ಯಾಂಕ್ ಷೇರುಗಳು (500) ರೂಪಾಯಿಗಳ ಬಾಬತು 910 ಇಂದ 914 ವರವಿಗೆ

ಕಮರ್ಷಿಯಲ್ ವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಷೇರುಗಳು, (100) ಬಾಬತು 150 ಇಂದ 155 ವರವಿಗೆ

ಸವರೇನುಗಳು, 10–4–0

ಬ್ಯಾಂಕಿನವರು ಮಾರುವ ಹುಂಡಿಗಳು, ಆರು ತಿಂಗಳವಾಯಿದೆಗೆ, 1s. 2 15/16 d.

ಮೂರು 4 ತಿಂಗಳವಾಯಿದೆಗೆ, 1s 2 7/8 d.

ಟೆಲೀಗ್ರಾಫಿನಿಗೆ, 1s 2 25/32 d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 12, 1892

೧೮೯೨ನೇ ಇಸವಿ ಡಿಸಂಬರ್ ತಾ|| ೧೨ನೇ, ಸೋಮವಾರ.

A REJOINDER

ಶ್ರೀಮುಮ್ಮಡಿ ಕೃಷ್ಣರಾಜೇಂದ್ರ ಬಾಲಿಕಾ ಪಾಠಶಾಲೆಯ ಪರೀಕ್ಷೆಯು ನಡೆದಾಗ, ಅಲ್ಲಿನ ವಿದ್ಯಾರ್ಥಿನಿಯರು ವಿದ್ಯಾ ವಿಷಯಗಳಲ್ಲಿ ಪಡೆದಿರುವ ಅಸಾಧಾರಣವಾದ ಬುದ್ಧಿಕೌಶಲ್ಯಗಳನ್ನು ನೋಡಿ ಆಗಿಂದಾಗ್ಯೆ ಆ ಸ್ಥಾನಕ್ಕೆ ಬರತಕ್ಕ ದೊಡ್ಡ ಮನುಷ್ಯರೆಲ್ಲರು ಬಹಳವಾಗಿ ಪ್ರಶಂಸಿಸುತ್ತಿರುತ್ತಾರೆ. ಇಲ್ಲಿ ಅಧಿಕಾರ ಪದವಿಯಲ್ಲಿರುವ ದೊಡ್ಡ ಮನುಷ್ಯರಾರೇ ಆಗಲಿ ತಮ್ಮ ಔದಾರ್ಯ ಪ್ರದರ್ಶನಕ್ಕಿದು ಉಚಿತ ವಿಷಯವೆಂದು ಯೋಚಿಸಿ ಕರ್ತವ್ಯಬುದ್ಧಿ ಪ್ರೇರಿತರಾಗಿಯೂ, ಆಭರಣರೂಪವಾಗಿಯೂ, ವಸ್ತ್ರರೂಪವಾಗಿಯೂ ಅಪೇಕ್ಷಿತಗಳಾದ ಇತರ ರೂಪವಾಗಿಯೂ ಸಮರ್ಪಿಸುತ್ತ ಬರುತ್ತಿರುವ ಅಂಶ ಸದರೀ ಶಾಲೆಯ ರಿಪೋರ್ಟುಗಳಿಂದ ಸ್ಪಷ್ಟವಾಗುತ್ತದೆ. ನಾವು ಇದುವರಿವಿಗೂ ಪಾಠಶಾಲಾಸ್ಥಿತಿಯು ಪ್ರತ್ಯಕ್ಷವಾಗಿ ಕಂಡವರಲ್ಲವಾದಕಾರಣ, ನಮ್ಮ ಅಭಿಪ್ರಾಯಕ್ಕಿಂತಲೂ "ಸ್ವಳದಲ್ಲಿರುವ ಸ್ವದೇಶಾಭಿಮಾನಿಯೆನಿಸಿ ಸ್ವದೇಶಸ್ಥರ ಶ್ರೇಯಸ್ಸನ್ನು ಕೋರುತಲಿರುವವರ ಮಾತುಗಳನ್ನು ಲಕ್ಷಿಸಬಹುದಾಗಿ ಸದರೀ ಪಾಠಶಾಲೆಯ ವಿಷಯದಲ್ಲಿ ಅಂಥವರ ಅಭಿಪ್ರಾಯಗಳು ಯಥಾವತ್ತಾಗಿ ಕೆಳಗೆ ಪ್ರಕಟಿಸುತ್ತೇವೆ, ಏನೆಂದರೆ:—

"ಮೈಸೂರಿನಲ್ಲಿ ಸ್ತ್ರೀ ವಿದ್ಯಾಭ್ಯಾಸವು ನಿಜವಾದ ಪ್ರಾಬಲ್ಯಕ್ಕೆ ಬಂದಿರುವ ಶಬ್ದವು ಊರಲೆಲ್ಲ ವ್ಯಾಪಿಸಿ ಇರುತ್ತದೆಯಷ್ಟೇ;ಒಳಗೆ ಪ್ರವೇಶಿಸಿ ನೋಡಿದರೆ ಏನೂ ತೋರುವದಿಲ್ಲ. ಮಹಾರಾಣೀಯವರ ಕುಲ ಬಾಲಿಕಾ ಪಾಠಶಾಲೆಯನ್ನು ಸ್ಥಾಪಿಸಿ ೧೦ ವರುಷಗಳಾದವು. ಅಂದಿನಿಂದಲೂ ವಿದ್ಯಾಭ್ಯಾಸಮಾಡಿಸುತ್ತಾರೆ. ಒಬ್ಬ ಬಾಲಿಕೆಗಾದರೂ ಚೆನ್ನಾಗಿ ಓದುವದಕ್ಕೂ, ಸ್ವತಂತ್ರವಾಗಿ ಬರೆಯುವದಕ್ಕೂ ಬಾರದು. ದುರಭಿಮಾನವು, ಧುರಂಧರನ ತಿರಸ್ಕರಿಸಿ ಮಾತನಾಡುವಪ್ಪ, ಪತಿಯು ತನಗೆ ಅನುಕೂಲವನಾಗಿಲ್ಲವೆಂದು ತಿರಸ್ಕರಿಸುವಪ್ಪ, ತಾನು ಮಾಡುವ ದುರಾಗತಗಳನ್ನೆಲ್ಲಾ ಸಹಿಸಿಕೊಂಡು ಹೋಗುವವನಾಗಿದ್ದರೆ ಮಾತ್ರ ಪುರುಷನನ್ನು ಸ್ವೀಕರಿಸುವಪ್ಪ, ಲಜ್ಜೆ ಕೊನೆಯಾಗಿ ಕಾಟಿಯಿಲ್ಲದೆ ಬೀದಿಯಲ್ಲಿ ತಿರುಗುವಪ್ಪ, ಬಾಲ್ಯದಿಂದ ದೋಷ ಮೇಲೆ ಬಿಟ್ಟ ಹಾರೈಕೆಯಿಂದ ಪುರಸ್ಸರವಾಗಿ ಪೋಷಣೆ ಮಾಡುವ ದುರ್ಗುಣಗಳು ಚೆನ್ನಾಗಿ ಅಭ್ಯಾಸವಾಗಿವೆ. ಈ ದುಷ್ಟ ಗುಣಗಳ ಅಭಿವೃದ್ಧಿಯೇ ಸ್ತ್ರೀ ವಿದ್ಯಾಭ್ಯಾಸಕ್ಕೆ ಫಲವೆಂದು ಭಾವಿಸಬೇಕೇ? ವಿಶೇಷಕಾಲಗಳಲ್ಲಿ ಹುಡುಗಿಯರಿಗೆ ಅಲಂಕಾರಮಾಡಿ ಗ್ಯಾಲರಿಗಳಮೇಲೆ ಕೂಡಿಸಿ ಬಂದವರೆಲ್ಲ ಅಧಿಕಾರಿಗಳಿಗೆ ತೋರಿಸುವದಾತ್ರಕ್ಕೆ ಲೋಕವೆಲ್ಲಾ ಮೆಚ್ಚುವಂಥಾ ವಿದ್ಯಾಭ್ಯಾಸ ಮಾಡಿಸಿದಂತಾಯಿತೋ? ಪರಿಚಾರಕ ಮಾಡುವವನು ನಿವಾಹವಾಗಿರುವ ಸ್ತ್ರೀಗೆ ದುರ್ಗುಣವನ್ನು ಸಾಹಿತ್ಯವನ್ನು ಕಲಿಸುವದೆ ಆಕೆಯ ವಿದ್ಯೆಯಿಂದ ಆಕೆಗುಂಟಾಗುವ ಪ್ರಯೋಜನವೇನು? ಅಂತವಳು ಪತಿಯಲ್ಲಿ ಗುರುತ್ವವು ಭಾವಿಸುವಳುಂಟೇ?" ಎಂಬುದು ಸಗ್ಯೆದೆ.

ಸ್ವದೇಶ ಏಕಾಭಿ ತಿಳಿಸುವ ಮೇಲ್ಕಂಡ ಅಭಿಪ್ರಾಯಗಳೆಲ್ಲವು ನಿರಾಧಾರವೆಂದು ನಂಬಿಯಲಿಕ್ಕೆ ನಮಗೆ ಯಾವ ಸಾಧನಗಳಿಲ್ಲದೆ ಹೋದಾಗ್ಯೂ ಒಂದಂಶವು ಮಾತ್ರ ನಿರಾಕರಿಸಬೇಕಾಗಿದೆ, ಏನುದರೆ.—ಒಬ್ಬ ಬಾಲಿಕೆಗಾದರೂ ಚೆನ್ನಾಗಿ ಓದುವದಕ್ಕೂ ಸ್ವತಂತ್ರವಾಗಿ ಬರೆಯುವದಕ್ಕೂ ಬಾರದೆಂಬುದು ಸರಿಯಾದದ್ದಾಗಿಲ್ಲವು. ಆದೇ ಸಂವತ್ಸರದಲ್ಲಿ ಸದರೀ ಶಾಲೆಯ ವಿದ್ಯಾರ್ಥಿನೀಯರು ಸಂಸ್ಕೃತ ಗ್ರಂಥಗಳಲ್ಲಿ ಪರೀಕ್ಷಿಸಿದ ನಮಗೆ ಅಪ್ಪರಾವ ಒಬ್ಬ ದೊಡ್ಡ ಮನುಷ್ಯರ ಮುಖೇನ ನಾವು ಕೇಳಿದ್ದರಲ್ಲಿಯೂ ಅವರ ಉತ್ತರ ಪತ್ರಿಕೆಗಳನ್ನು ನೋಡಿದ್ದರಲ್ಲಿಯೂ ಅನೇಕರು ಭಾಷಾ ಜ್ಞಾನವು ಸಂಪಾದಿಸಿ ಚತುರತೆಯಿಸಿರುವಂತೆ ತಿಳಿಯಬಂತು. ಸದರೀ ಪ್ರಶ್ನೆಗಳಿಗೆ ಬರೆಯಲ್ಪಟ್ಟ ಉತ್ತರಗಳು ಅನ್ಯರ ಸಹಾಯವಿಲ್ಲದೆ ವಿದ್ಯಾರ್ಥಿನೀಯರ ಜ್ಞಾನ ಜನ್ಯವಾದವಾಗಿದ್ದ ಪಕ್ಷಕ್ಕೆ, ದೇಶಾಭಿಮಾನಿಯ ಆಕ್ಷೇಪಣೆಗೆ ಅವಕಾಶವಿರುವದಿಲ್ಲವು. ಇದಲ್ಲದೆ ಸದರೀ ಪತ್ರಿಕೆಯು ಮತ್ತೊಂದಂಶವು ಮುಖ್ಯಾಂಗವಾಗಿರುವಂತೆ ಕಾಣುತಿದೆ. ಮೇಲೆ ಕಂಡ ಪಾಠಶಾಲೆಯ ವಿದ್ಯಾರ್ಥಿನೀಯರು ಗಾನ ವಿದ್ಯಾಕುಶಲರೆಂಬುದು ಬಹು ಪರಸ್ಪರ ಸ್ನೇಹಪೂರ್ವಕ ನಿದರ್ಶನವಾಗಿ, ಅನ್ಯರುದಗಳಿಗೆ ಸಹ ವ್ಯಾಪಿಸಿರ್ತವ್ಯಸಂಪಾದಕವಾಗಿದೆ.

ಮೈಸೂರಿನಲ್ಲಿರುವ ಅನೇಕರೊಡ್ಡ ಮನುಷ್ಯರು, ತಾವ್ಯಕ ಪ್ರಯೋಜನದ ಸ್ನಾನುಭವಿಸುತ್ತಿರುವರೂ, ವಿಶೇಷ ಸಂದರ್ಭಗಳಲ್ಲಿ ಅವರಿಗಾಸವಿದ್ಯೆಯು ಸಭಾಸದರಚಿತ್ತಾಕರ್ಷಕವಾಗಿರುವದು ಪ್ರಸಿದ್ಧವಾಗಿರುವಲ್ಲಿ ಅವರು ದುರ್ಭೂತರೆಂದು ಹ್ಯಾಗೆ ನುಡಿಯಬಹುದು? ಸೌಂದರ್ಯಗಳಾಗಿಯೂ, ದರಿದ್ರರಾಗಿಯೂ, ಕೇವಲ ಬಾಲಿಕೆಯರಾಗಿಯೂ ಬಹುಮಂದಿ ಕದಾಚಿತ್ ಉಪೇಕ್ಷಕರಾಗಿ ಸೃಷ್ಟಿಕರ್ತನ ಪ್ರತೀಕ್ಷೆಯು ಪಡೆಯುವ ಹೊಂದು ಮಾತ್ರದಿಂದಲೇ ಯೆಲ್ಲರನ್ನು ದುರಭಿಮಾನಿಗಳೆಂದು ಹ್ಯಾಗೆ ಹೇಳಬಹುದು? ಅವರು ಸ್ವೀಯರಲ್ಲಿ ಅಭಿಮಾನಿಗಳಾಗಿದ್ದ ಮಾತ್ರದಿಂ ಅನ್ಯತ್ರ ಹೃದಯ ಸೌರಭ್ಯವು ವ್ಯಗ್ರವಾಗಿರುವ್ರದೇ? ಎಲ್ಲಾ ವಿಷಯಗಳಿಗೂ ಸುಲಭ ಸಾಧ್ಯವಾಗಿಯೂ ಯೆಲ್ಲವಿದೆ ಸಹ ಕರೆಯಲ್ಪಡುವ ಸ್ಥಳಗಳೆಲ್ಲ ನಿರಾತಂಕವಾಗಿ ಹೋಗುವುದಕ್ಕೆ ದಂಬವಾದರೆ! ಮೊದಲಿನ ಗುಣವಾದ ಲಜ್ಜೆ ಹೀನತೆಯು ಒಂದು ಪ್ರಬಲ ದೋಷವೆಂದು ಸದರೀ ಪತ್ರಿಕೆಯು ಪರಿಗಣಿಸುತಿದೆ. ಯೋಗ್ಯತಾನುಸಾರವಾಗಿ ಬುದ್ಧನನ್ನು ಲಕ್ಷ್ಯದಿಂ ಪಡೆಯಬೇಕೆಂತು ಅಪೇಕ್ಷೆ ತುಂಬಿದ ಸ್ವರುಚಿ ನಡೆಯದೆ ಪೂರ್ವದಿಂದಿರುವ ನಾದರೆ ಆಕೆಯಿಗೆ ಪೂರ್ಣಾಭ್ಯುದಯವು ನಿವೃತ್ತಿಯಾಗಿ ಮನಸ್ಸಂತೋಷವನ್ನುಂಟಾಗುವದೆ? ಆ ಪಕ್ಷದಲ್ಲಿ ಅಭೀಷ್ಟ ವಿಷಯ ಪ್ರಾಪ್ತಿಗೆ ಲಜ್ಜೆಯು ಸರ್ವ ವಿಧದಿಂದಲೂ ಪ್ರತಿಬಂಧಕ ಸಾಮಗ್ರಿಯಾದುದರಿಂದ ಅದರಿಂ ತ್ಯಜಿಸುವದ್ದರೆ ಮಹಾ ರಾಜಾಧಿರಾಜರುಗಳಿಂದಲೂ ಸ್ತುತಿಸಲ್ಪಡತಕ್ಕ ಸಾಧ್ಯವಾಗುವದೆ? ಇದು ಪರ್ಯಾಲೋಚಿಸದೆ ಅವರ ಪ್ರಾಭವ ವಿರೋಧಿಯಾದ ಗುಣವು ಪಡೆಯಲಿಲ್ಲವೆಂದು ದೂಷಿಸುವುದು ಅಭಿಮಾನಿಗೆ ಸ್ವಲ್ಪವೂ ದಸ್ತವಲ್ಲವು. ಪರ್ತೃ ಭಾರ್ಯೆಯರು ಅಸಮಾನ ಗುಣಗಳು ಪಡೆದ ಹೊರತು ಅವರ ದಾಂಪತ್ಯ ಸಾಮರಸ್ಯವು ತೆಪ್ಪಲಾರದು. ಅವು ಸತಿಯು ತನಗೆ ಅವರಿಗೆ ಸ್ವಚ್ಛಂದ ಪ್ರವೃತ್ತಿಯುಳ್ಳವಳಾದರು, ಅವು ಬಯಸುವ ಪರಿಪಿಗೆ ಅಭೀಷ್ಟ ವಿಷಯ ಪ್ರಾಪ್ತಿಗೆ ಅವಕಾಶ ದೊರೆಯದು. ಇಂಥಾ ಅವಕಾಶವು ಲಭಿಸದಿದ್ದರೆ ಸಸ್ಯಂತೆ ಈ ಪ್ರಪಂಚದಲ್ಲಿ ಯಾರು ಮನಸ್ಸಿನ ಸ್ವೇಚ್ಛೆಯುಳ್ಳವನ್ನು ದೆಸೆ ಸ್ವಾತಂತ್ರ್ಯ ಪ್ರಯೋಗಳಾದರು. ಅದು ಅನುಸರಿಸುವರ ಗದ್ದರೆ ಪೈಲಕ್ಷಣ್ಯಾವಿಷ್ಟತೆಯಲ್ಲಿ ಪ್ರವೃತ್ತಿಯುಂಟಾಗಲಾರದು. ವೈಲಕ್ಷಣ್ಯ ಪ್ರಯೋಗಿದ್ದರೆ ಅನಾದರಣೆಗುರಿಯಾಗಬೇಕಾಗಿ ಬರುವುದರಿಂದ ಅಭಿಮಾನಿಯ ಅಭಿಪ್ರಾಯವು ಅವರಿಯುವಾಗಲಾರದು.

THE RAJAHAMSA.

ಈಚೆಗೆ ವಿದ್ಯಾವಿಷಯದಲ್ಲಿ ಪರಿವರ್ತಿತವಾದ ಪ್ರಾಚೀನ ಅಭಿವೃದ್ಧಿಯನ್ನುಂಟುಮಾಡುವ ಸುಸ್ಥಿತಿಗೆ ಬರುತಲಿರುವದು ಕೇಳಿದರೆ ನಾವು ಬಹಳ ಸಂತೋಷಿಸುತ್ತೇವೆ. ಜನಗಳಿಗೆ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಬೇಕಾದ ಸ ಕಣ್ಣಗಳು ಇಲ್ಲಿ ಅಲ್ಪವಾಗಿದ್ದಾಗ್ಯೂ ಇದರ ವೈಶಿಷ್ಟ್ಯವೆಲ್ಲೀ ಹೇಗೆ ಕೊರತೆ ಇಲ್ಲವು. ಸದರೀ ಷರ್ ಬಂದರ್ ಗವರ್ನಮೆಂಟ್ ಕನ್ನಡ ವೃತ್ತಾಂತ ಪತ್ರಿಕೆಗಳು ಪ್ರಕಟಿಸಲ್ಪಡುತಲಿವೆ. ಈಚೆಗೆ ಮುದ್ರಿಸಲ್ಪಡುತಲಿರುವ ರಾಜಹಂಸವೆಂಬ ಒಂದು ವಾರ ಪತ್ರಿಕೆಯು ಚೆನ್ನ ಗಮನದಲ್ಲಿಯೂ ವರ್ಣದಲ್ಲಿಯೂ ವಾಚಕರಿಗೂ ಎಗಲಾಗಿ ರೂಪಾಂತರವನ್ನೈತ್ತು ಮತೆ ಒರುವದು ನೋಡಿ ಆಶ್ಚರ್ಯ ಪಡಬೇಕಾಗಿದೆ. ಇದು ಸಕ್ಕರೆ ಲೇಖನೊಳು ಬ್ರಹ್ಮ ಮಾನಸ ಸರೋವರದ ತೀರದಲ್ಲಿ ಸಂಚರಿಸತಕ್ಕದ್ದಾದರೂ ಶ್ರೀಜಗಲ್ಲಕ್ಷ್ಮೀಕ್ಷೇತ್ರವಾದ ದಾರವಾಡದಲ್ಲಿ ಜನಿಸಿರುವದು ಸಿದ್ಧಾಂತ್ಯವು ಭಾವಿಸಲಾಗದು. ಈ ರಾಜಹಂಸಕ್ಕೆ ಸಹ ಈಗಿನ ಕಾಲದ ಸೈನಿಕರೆಂತೆ ಭಿನ್ನಾಭಿರುಚಿಗಳುಂಟಾಗಿರುವಂತೆ ತೋರುತಿದೆ. ರಾಜಹಂಸವೆಂಬ ನಾಮದಿಂ ತೃಪ್ತಿಗೊಳ್ಳದೆ ಇಂಗ್ಲೀಷು ವರ್ಣದ ತಳ್ಳುವ ಅನ್ಯಗೂ ಸಂತುಷ್ಟಿಯನ್ನೈದದೆ ಅದು ಈಗ ಮರಾಠಿ ರೂಪವನ್ನಂಗೀಕರಿಸಿತು. ಹೀಗೆಯೇ ಮುಂದೆ ಎಷ್ಟು ರಿವರ್ಣಭೇದಗಳು ಹೊಂದಿ ಸೌಂದರ್ಯ ಹೇತು ಬೋಧವಾಗಬೇಕೆಂದಿದೆಯೋ ನಮಗೆ ತಿಳಿಯಲಿಲ್ಲವು. ಇದು ನ್ಯಾಗಿದ್ದಾಗ್ಯೂ ಚಿರಂಜೀವಿಯಾಗಿ ವರ್ಧಿಸ್ಯವೆನಿಸಬೇಕೆಂದು ಕೋರುತ್ತೇವೆ.

THE SALA PATRAKA.

ಪಾಠಶಾಲೆಗಳ ವಿದ್ಯಾಭ್ಯಾಸ ಮಾಡತಕ್ಕ ಬಾಲಕರಿಗೆ ಈಗ ಪ್ರಚಾರದೊಳಗಿರುವ ವಾರ್ತಾಪತ್ರಿಕೆಗಳು ಸೋದರ್ಯ ಲೌಕಿಕ ವಿಷಯ ಬೋಧಕವಾಗಿದ್ದರೂ ವಿದ್ಯಾರ್ಥಿ ದಶೆಯೊಳಿರುವ ಬಾಲಕರಿಗೆ ಅವರ ಅವಸ್ಥಾನುಗುಣವಾದ ವಿಷಯಗಳನ್ನರುಹತಕ್ಕ ಬಗ್ಗೆ ಮ|| ರಾ|| ಗೋವಿಂದ ಬಿ. ಕೌಂಡಿಕರ್ ಎಂಬ ದೊಡ್ಡಮನುಷ್ಯ ರೊಬ್ಬರು ಪ್ರವರ್ತಿಸಿ "ಶಾಲಾ ಪತ್ರಿಕಾ" ಎಂಬ ಅಂಕಿತವುಳ್ಳ ಒಂದು ಮಾಸ ಪತ್ರಿಕೆಯು ಮುದ್ರಿಸಿ ಪ್ರಕಟಿಸುತ ಬರುತಲಿದಾರೆ. ಸದರೀ ಮಾಸ ಪತ್ರಿಕೆಯ ೧೨ನೇ ಸಂಚಿಕೆಯೊಂದು ಈ ವಾರದಲ್ಲಿ ನಮಗೆ ಕಳುಹಿಸಲ್ಪಡಲು ಅದನ್ನಂಗೀಕರಿಸಿ ಆಮೂಲಾಗ್ರ ಓದಿ ನೋಡಿದೆವು. ನಮ್ಮ ಹಸ್ತಗತವಾಗಿರುವ ಸಂಚಿಕೆಯಲ್ಲಿ ಪ್ರಯೋಜನ ಇತರ ಪತ್ರಿಕೆಗಳಲ್ಲಿ ಪ್ರಕಟಿಸಲ್ಪಟ್ಟದ್ದು ಸಾಮಾನ್ಯ ವಿಷಯಗಳೇ ಕಂಡುಬರುತಿವೆಯಲ್ಲದೆ ವಿದ್ಯಾರ್ಥಿಗಳ ಅವಸ್ಥಾನುಗುಣವಾದ ಜ್ಞಾನ ಸಂಪಾದನೋಪಯೋಗಿ ವಿಷಯಗಳ್ಯಾವ ಪ್ರಾಸ್ತವು ದೃಷ್ಟಿಯಲ್ಲಿ ಬೀಳಲಿಲ್ಲವು. ಮಾಸಲ ಚಿಕಾಗೋ ಮತ್ತು ನ್ಯೂಯಾರ್ಕ್ ಪಟ್ಟಣಗಳಲ್ಲಿ ಟೆಲಿಫೋನ್ ಯೆಂಬ ಧ್ವನಿವಾಹಕ ಯಂತ್ರ ನಿರ್ಮಾಣವಾದ ಮಾತ್ರದಿಂ ಧಾರವಾಡ ಜನರಿಗಿರುವ ಕನ್ನಡ ವಿದ್ಯಾರ್ಥಿಗಳಿಗೇನೂ ಪ್ರಯೋಜನ ಪ್ರಾಪ್ತವಾಗುವಂತೆ ತೋರಲಿಲ್ಲವು. ಏತನ್ಮಾತ್ರ ವಿಷಯಗಳನ್ನು ಬೋಧಿಸಲಿಕ್ಕೆ ಅಲ್ಲದೆಯೇ ಇತರ ಪತ್ರಿಕೆಗಳು ಮೇಲ್ಪಟ್ಟದ್ದು ಸ್ಪರ್ಧಿಸುತಲಿವೆ. ಆದಕಾರಣ ನಮ್ಮ ಮಿತ್ರರು ಜ್ಞಾನಾಭಿವೃದ್ಧಿಪ್ರಿಯರಾದುದರಿಂದ ಬಾಲಕರಿಗೆ ವಿಶೇಷ ಜ್ಞಾನವರ್ಧಕರಾಗಬೇಕೆಂಬುದಂ ಅವರಿಗೆ ಪ್ರತ್ಯೇಕ ತಿಳಿಸುವದ ನಾವ್ಯಕವೆಂದು ಭಾವಿಸುತ್ತೇವೆ.

THE VIGNANADIPIKA

ವಿಜ್ಞಾನ ದೀಪಿಕೆಯೆಂಬ ಒಂದು ಮಾಸಪತ್ರಿಕೆಯು ಕಳೆದ ತಿಂಗಳ ಮೊದಲು ಈ ಊರಲ್ಲಿ ಪ್ರಾರಂಭಿಸಲ್ಪಟ್ಟು ಮುದ್ರಿಸಲ್ಪಡುತ ಬರುತಲಿದ. ಅದರ ಪ್ರಥಮ ಸಂಚಿಕೆಯು ಈ ವಾರದಲ್ಲಿ ನಮ್ಮ ಕಾರ್ಯಸ್ಥಾನಕ್ಕೆ ಕಳುಹಿಸಲ್ಪಟ್ಟಿತು. ಎರಡು ಪುಟಗಳುಳ್ಳ ಈ ಪತ್ರಿಕೆಯು ಮುಖ್ಯೋದ್ದೇಶ ಪ್ರಥಮ ಪುಟದಲ್ಲಿ—

> ಅಜ್ಞಾನಸಂಹಾರತ್ವಲಿ,
> ವಿಜ್ಞಾನವಿಮಲಸಂವರ್ಧನೋಪಾಯಕೋ|
> ಪ್ರಜ್ಞಾವಿಗ್ರಹಗಲಿ|
> ಸುಜ್ಞಾನ ದೀಪೋಷಿಯಂ ಪ್ರಕಾಶಿಸಿಂ|

ಎಂದು ಸ್ಪಷ್ಟವಾಗಿರುವದರಿಂದ ನಾವಿಲ್ಲಿ ಪ್ರತ್ಯೇಕ ತಿಳಿಸುವ ಅವಶ್ಯವಿಲ್ಲ. ಪತ್ರ ಪತ್ರಿಕಾ ಪ್ರೋತ್ಸಾಹಕರಾದ ಬೆಂಗಳೂರು ಗವರ್ನಮೆಂಟ್ ಕಾಲೇಜ್ ಪ್ರಿನ್ಸಿಪಾಲ್ ಮಿ|| ಬಿ. ಕೇಸಪಾಸ್ ವಿದ್ಯಾರ್ಥಿಗಳಿಗೆ ಓದಲು ಉಪಯುಕ್ತವಾಗಿ ಕಳುಹಿಸಿ ಸ್ವೀಕರಿಸಬಹುದೆಂದು ತಿಳಿಸಲ್ಪಟ್ಟದೆಯೋ ಹೇಗೆ? ಅವರ ಮುದ್ರಾಯತ್ರಕರಾ ತಿಲ್ಲೋಮು ಕರ ಪತ್ರಿಕೆಯನುಸರಿಸಿಯು ಸ್ಪಷ್ಟವಾಗುವದಿಲ್ಲವು. ಆದರಂತೆ, ಆ ವಿವರನ್ನರಿಯಬೇಕಾದ ಅವಶ್ಯಕತೆಯು ನಮಗಿಲ್ಲವು. ಈ ಸಂಚಿಕೆಯು "ಉಪ್ಪೋದ್ಘಾತ, ಪಂಚಭೂತಗಳ ವಿಷಯ, ಪ್ರಾಕೃತಿಕಗಳು ವಸ್ತುವಿವರಣೆ" ಗಳೆಂಬ ವಿಷಯ ಚತುಷ್ಟಯದಿಂದೊಡಗೂಡಿದ್ದಾಗಿದೆ. ಇವು ಬಾಲಕರಿಗೆ ಉಪದೇಶನೀಯವು ವಾದುದರಿಂದ ಯೆಲ್ಲವೂ ಕೇವಲ ವ್ಯಾಕರಣ ನಿಯಮಗಳನ್ನನುಸರಿಸಿ ಬರೆಯಲ್ಪಟ್ಟವಾಗಿವೆ. ಆದರೆ ಕಡೆಗಳಲ್ಲಿ ಇದರ ವಾಕ್ಯಶೈಲಿಯೂ ಪದಪ್ರಯೋಗಗಳು ವ್ಯಾಕರಣ ವಿಪ್ರಯೋಗ ಸರಳಗ ವಿಷ್ಣಿಸಿರುವದು. ಎಂದು ಅವನೋವನೋಕ್ತವರಿಗೆ ವ್ಯಕ್ತವಾಗಬಹುದು. ಅತಿಶಯವು ಬಹಳವಾದ ವಿಜಾತೀಯ ಪ್ರಯೋಗ ಸಾಹಸ್ಯವನು ವಿಮರ್ಶಿಸಲಿಕ್ಕೆ ಕರ್ಣಾಟಕ ಭಾಷೆಯೊಳು ನಮಗುಂಟಾಗಿರುವ ಅಲ್ಪ ಜ್ಞಾನವು ಅಲ್ಪವಾದುದರಿಂದ ಅವುಗಳ ಗುಣದೋಷ ವಿಮರ್ಶನಾಧಿಕಾರವು ಪ್ರಬಲ ಪಂಡಿತರಿಗೊಪ್ಪಿಸಿರುತ್ತೇವೆ. ಇತರ ವಿಷಯಗಳಲ್ಲಿರು ಬಾಲಕರಿಗೆ ಪರಿಗ್ರಹಸಾಧ್ಯವಾಗಿಯೂ ಸುಲಭ ಸಾಧ್ಯವಾಗಿಯೂ ಜ್ಞಾತವ್ಯಾಂಶಗಳುಳ್ಳದ್ದಾಗಿಯೂ ಇರುತಿವೆ. ಪ್ರಶ್ನೆಪತ್ರಿಕೆಗಳನ್ನು ಹಾಗೆಯೇ ಪ್ರಕಟಿಸಿ ಸ್ವಲ್ಪ ಪ್ರಯೋಜನವಾಗುವದಕ್ಕಿಲ್ಲ. ಸದರೀ ಪ್ರಶ್ನೆಗಳಿಗೆ ಸರಿಯಾದ ಉತ್ತರ ಬರೆಯಲು ನಿಯಮವನ್ನರಿಯ ಬೇಕೆ ಅವುಗಳಲು ತ್ತರಗಳನ್ನು ಅವುಗಳ ಕೆಳಗೆ ಪ್ರಕಟಿಸಿದ್ದರೆ ವಿದ್ಯಾರ್ಥಿಗಳು ಉಪಯುಕ್ತವಾಗಿರುತ್ತಿದ್ದವು. ಇದರ ಔಚಿತ್ಯವುಂತಪ್ಪ ಪ್ರಕಾಶಕರು ಆಲೋಚಿಸಬಹುದು. ಇದು ಕೆಲವು ಕಡೆಗಳಲ್ಲಿ ಪ್ರಾಚೀನ ಸಾಂಕೇತಿಕ ಶಬ್ದಗಳು, ತದ್ಭವ ಬೋಧಕಗಳಾದ ಭಾಷಾಂತರ ಶಬ್ದಗಳನ್ನು ಉಪಯೋಗಿಸದೆ ಬಿಡಲ್ಪಟ್ಟವಿಲ್ಲದೆ, ಪ್ರಯೋಗಿಸಲ್ಪಟ್ಟಿವೆ. ಅವುಗಳಿಗೆ ಸಮಾನಾರ್ಥ ಪದಗಳು ಇಂಗ್ಲೀಷಿನಲ್ಲಿ ಆವರಣಾಕ್ಷರದಲ್ಲಿ ಪ್ರಕಟಿಸಿದ್ದರೆ, ಸಾಂಕೇತಿಕಪದಾರ್ಥ ಸಾಧುತ್ವವಂ ಸುಲಭವಾಗಿ ಅರಿತುಕೊಳ್ಳಲಿಕ್ಕೆ ಸಾಧ್ಯವಾಗಿರುತಿತ್ತು, ಇದೂ ಪರ್ಯಾಲೋಚಿಸಬೇಕಾದ ವಿಷಯವಾಗಿದೆ. ಮುದ್ರಾಂಕನಾದಿ ವಿಷಯಗಳಲ್ಲಿ ಪ್ರಸಕ್ತ ಪತ್ರಿಕೆಯು ಶ್ಲಾಘ್ಯವಾಗಿ ಕಂಡು ಬರುತಿದೆ.

THE [illegible] RAMAYANA.

[illegible] ಅಭಿನವ ಪಂಪನೆಂಬ [illegible] ಕೃತ ರಾಮ ಚಂದ್ರ ಚರಿತ ಪುರಾಣವೆಂಬ ಗದ್ಯ ಪದ್ಯಾತ್ಮಕವಾದ ಚಂಪೂ ಪ್ರಬಂಧ ಪ್ರೂಫು, ಮೈಸೂರುಗವರ್ನಮೆಂಟು ಅರಕಿಯೋಲಾಜಿಕಲ್ ಇಲಾಖಾ ಡೈರೆಕ್ಟರಾದ ಮ|| ಬಿ. ಎಲ್. ರೈಸ್, ಸಿ. ಐ. ಇ. ಯವರು ವಿಶ್ವಾಸ ಪೂರ್ವಕ [illegible] ನಮಗೆ ಕಳುಹಿಸಲ್ಪಟ್ಟಿತು, ಅದು ನಾವು ಬಹಳ ಗೌರವದಿಂ ಅಂಗೀಕರಿಸಿದೆವು. ಪುರಾತನವಾದ ಈ ಜೈನ ಗ್ರಂಥವು, ೧೮೮[illegible] ನೇ ಇಸವಿಯಲ್ಲಿ ಪ್ರಥಮವಾಗಿ [illegible] ಈಗ [illegible] [illegible] ಅನೇಕ ವ್ಯಾಖ್ಯೆಗಳ [illegible] ಮುದ್ರಿಸಿ ಬಯಲು ಪಟ್ಟಿಗೆ [illegible] ವಿಶೇಷವಾಗಿ [illegible] ಪ್ರಕಟಿಸಲ್ಪಟ್ಟಿದ್ದಾಗಿ [illegible] ಪ್ರಸಕ್ತ [illegible] [illegible] ವಿಷಯಗಳನ್ನು ಪರಿಶೀಲಿಸಿ [illegible] ೧೮೨೫ನೇ [illegible] ಬಿ. ಎ. [illegible] ಅಂಗೀಕರಿಸಲ್ಪಟ್ಟು [illegible] ಶ್ಲೋಕಗಳು ಪ್ರತ್ಯೇಕವಾಗಿ ಪ್ರಕಟಿಸಲ್ಪಟ್ಟಿರುವುದು [illegible] [illegible] [illegible] [illegible] ಈ ಪುಸ್ತಕದಲ್ಲಿ [illegible]

[illegible]
[illegible]

The National Congress.—[illegible] ಎಂಟನೇ [illegible] ನ್ಯಾಷನಲ್ ಕಾಂಗ್ರೆಸ್ ಸಭೆ [illegible] ಈ ತಿಂಗಳ ೨೮ನೇ ತಾರೀಖು ಬುಧವಾರದ ದಿವಸ ಅಲಹಾಬಾದಿನಲ್ಲಿ ನಡೆಯುತ್ತದೆ.

Bribery.—[illegible] ಡಿಸ್ಟ್ರಿಕ್ಟ್ ಸಬ್ [illegible] [illegible] [illegible] ಮೇಲೆ [illegible] [illegible] [illegible] ತಮ್ಮ ವಿಚಾರಣೆ ಕೆಲಸವನ್ನು [illegible] ವರು.

Theft.—[illegible] [illegible] [illegible] [illegible] [illegible] [illegible] [illegible] ಮುಂದೆ ತಿಳಿಯಬೇಕು.

A charge against the Mahant of Tirupati.—ತಿರುಪತಿಯಲ್ಲಿ [illegible] [illegible] [illegible] [illegible] ಅಷ್ಟನೆ ಮಹಂತರ [illegible] ಡಿಸ್ಟ್ರಿಕ್ಟ್ [illegible] [illegible] [illegible] ಕೋರ್ಟಿನಲ್ಲಿ [illegible] [illegible] ಇವರ [illegible] ಮಾಡಿ [illegible] ದಲ್ಲಿ [illegible] ರಾಜ್ಯದ [illegible] ಒಡೆಯರವರು [illegible] ಮ್ಯಾಜಿಸ್ಟ್ರೇಟರ ಕೋರ್ಟಿನ [illegible] ನಡೆಯುತ್ತಿರುವುದು. ಮುಂದೆ ಇದರ [illegible] ತಿಳಿಸುವೆವು.

A novel plea.—[illegible] [illegible] ಮ|| ಫ್ರಾನ್ಸಿಸ್ [illegible] [illegible] ಬಾಕಿ [illegible] [illegible] ಕೋರ್ಟಿನಲ್ಲಿ ದಾವೆ ಮಾಡಿ ಅದು [illegible] ಗಳ್ಳಿ ೬ನೇ ತಾರೀಖು ಮಂಗಳವಾರದ ದಿನ ವಿಚಾರಣೆ ನಡೆದಕಾಲದಲ್ಲಿ ಪ್ರತಿವಾದಿಯು ಪ್ರತಿತಿಂಗಳಲ್ಲೂ ಮನೆ ಖರ್ಚಿಗಾಗಿ ತನ್ನ ಹೆಂಡತಿಯ ವಶದಲ್ಲಿ ಇಷ್ಟೆಂದು ಕೊಡುತ್ತಲಿರುವುದರಿಂದ ಸಾಲವಾಗಿ ಹಾಲು ತೆಗೆದುಕೊಳ್ಳುವದಕ್ಕೆ ಕಾರಣವಿರುವದಿಲ್ಲ. ಆದುದರಿಂದ ಸದರೀ ಸಾಲವನ್ನು ತಾನು ಒಪ್ಪಿಕೊಳ್ಳುವದಿಲ್ಲವೆಂದು ವಾದಿಸಿದರು. ನಿಮ್ಮ ಗೃಹಕೃತ್ಯ ನಿರ್ವಹಣೆಯ ಕ್ರಮವನ್ನು ಪಟಾರಿಸುವದಕ್ಕೆ ಕೋರ್ಟಿನವರಿಗೆ ಅವಶ್ಯಕವಿಲ್ಲವಾಗಿ ಹಾಲು ಸರಬರಾಯಾಗಿರುವದರಿಂದ ಹಣ ಕೊಡಬೇಕೆಂದು ಕೋರ್ಟಿನವರು ತೀರ್ಮಾನಿಸಿದರು.

Exemption.—[illegible] [illegible] [illegible] [illegible] ವ್ಯವಹಾರಗಳ [illegible] ಕಾಲದಲ್ಲಿ ಅದರಿಂ ಬರುವ [illegible] [illegible] ಗವರ್ನಮೆಂಟಿನವರು [illegible] ಮಾಡಿರುತ್ತಾರೆ. [illegible] [illegible] ಸಂದರ್ಭದಲ್ಲಿ [illegible] ಸರಕಾರಿ [illegible] [illegible] ಕೆಲಸಕ್ಕಾಗಿ [illegible] [illegible] [illegible] [illegible] [illegible] [illegible] [illegible] [illegible] [illegible] ತನ್ನ [illegible] [illegible] [illegible] ವಿಷಯದಲ್ಲಿ ಸದರೀ ವಿನಾಯತಿಯನ್ನು ಜಾರಿಯಲ್ಲಿ ತರತಕ್ಕದ್ದು ಎಂಬದು.

LOCAL AND PROVINCIAL NEWS
ಸ್ಥಳದೇಶದ ಮತ್ತು ಪ್ರಾಂತ್ಯಗಳ ವರ್ತಮಾನಗಳು

The late Mr. G. G. Brown.—ಈ ಪಟ್ಟಣದಲ್ಲಿ ಪ್ರಸಿದ್ಧ ಇಂಗ್ಲಿಷ್ ಹೋಟಲ್ ಪ್ರೊಪ್ರೈಟರಾದ ಮ|| ಜಿ. ಜಿ. ಬ್ರೌನ್ ಅವರು ಈಚೆಗೆ ಅಸ್ವಸ್ಥರಾಗಿದ್ದು ಮದರಾಸಿನಲ್ಲಿ ಕಾಲಗತಿಯನ್ನೈದಿದರೆಂದು ಕೇಳುವುದಕ್ಕೆ ನಾವು ವಿಷಾದಿಸುತ್ತೇವೆ.

H. H. the Maharaja.—[illegible] ಶ್ರೀಮನ್ ಮಹಾರಾಜರವರು [illegible] ಪರಿವಾರ [illegible] [illegible] [illegible] [illegible] [illegible] ಪ್ರಯಾಣವಾದರು [illegible] [illegible] ದಿವಾನರವರು [illegible] ಕೆಲವರು ಅಧಿಕಾರಿಗಳು [illegible] [illegible] [illegible] [illegible] [illegible] [illegible] [illegible] ರಾಮಸ್ವಾಮಿ [illegible] [illegible] [illegible]

A new arrangement.—ಈ ಪ್ರಾಂತ್ಯದ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ನಾವು [illegible] [illegible] ನಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ತಿಳಿಸುವೆವು.

St. Martha's Hospital.—[illegible] ೧೮೮[illegible] ನೇ ಇಸವಿಯಲ್ಲಿ, ಅನೇಕರು [illegible] ಗವರ್ನಮೆಂಟಿನವರು ಕೇಳಿದ, ಹೊಂಬಾಳೆಯ ಗಿಲ ಬಳಿ ಯಿದ್ದ ಸರಕಾರಿ ಆಸ್ಪತ್ರಿಯನ್ನು ಸೇಂಟ್ ಮಾರ್ಥಾ ಯವರ ಆಸ್ಪತ್ರೆಯೊಡನೆ ಸೇರಿಸಿ ಅದರ ವಿಚಾರಣೆಗೊಪ್ಪಿಸಿ, ಅದರ ಖರ್ಚಿನ ಬಗ್ಗೆ ವರ್ಷಕ್ಕೆ [illegible] ರೂಪಾಯಿಗಳು ಕೊಡುತಲಿದ್ದಾರೆಯಷ್ಟೆ. ಇದುವರೆವಿಗೆ ಆಡಳಿತ [illegible] ಮಾಡಿದ್ದರಲ್ಲಿ ಅಲ್ಲಿನವರ ಕೆಲಸ ತೃಪ್ತಿಕರವಾಗಿಲ್ಲದಿರಲು, ಗವರ್ನಮೆಂಟಿನವರು ಬರುವ ತಿಂಗಳ ೧೫ ನೇ ತಾರೀಖಿನ ಮೊದಲು [illegible] [illegible] ಪ್ರತ್ಯೇಕಿಸಬೇಕೆಂದು ಹುಕುಂ ಕೊಟ್ಟರಾರೆ. ಇದರ ಇತರ ತಪ್ಸೀಲನ್ನು ಮುಂದಿನ ವಾರದಲ್ಲಿ ತಿಳಿಸುತ್ತೇವೆ.

Official changes.—ಈ ಪತ್ರಿಕೆಯ ಮತ್ತೊಂದು ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಮೈಸೂರ್ ಗೆಜೆಟ್ ಇಸ್ತಿಹಾರ್ ನಾಮೆಗಳನ್ನನುಸರಿಸಿ ಅವರಲ್ಲಿ ತಿಳಿಸಲ್ಪಟ್ಟಿರುವ ಅಧಿಕಾರಿಗಳೆಲ್ಲರೂ ಈದಿನ ತಮ್ಮ ತಮ್ಮ ಕೆಲಸಗಳ ಚಾರ್ಜುಗಳನ್ನು ತೆಗೆದುಕೊಂಡು ಕೆಲಸ ನೋಡುತ್ತಲಿದ್ದಾರೆ. ಮ|| ವಿಜಯರಂಗಯ್ಯಂಗಾರರವರು ಡೆಪ್ಯುಟಿ ಕಮೀಷನರ್ ಕೆಲಸನೋಡುವ ಕಾಲದಲ್ಲಿ ಅವರಿಗೆ ಸ್ವಂತ ಪೇಯ [illegible] ರೂಪಾಯಿಗಳು [illegible] ನ ಮೇಲೆ, ಮ|| [illegible] ರಾಯರವರಿಗೆ, ಇನ್ಸ್‌ಪೆಕ್ಟರ್ ಜನರಲ್ ಕೆಲಸ ನೋಡುವದಕ್ಕಾಗಿ ಅಡೀಷನಲ್ ಅಲೋಯೆನ್ಸ್ [illegible] [illegible] [illegible] ರೂಪಾಯಿಗಳು [illegible] ಮ|| ಅನಂದರಾಯರವರಿಗೆ ಲೆಜಿಸ್ಲೇಟಿವ್ ಸೆಕ್ರೆಟರಿಯವರ ಕೆಲಸದಲ್ಲಿ ಸೇರತಾ [illegible] ಗಳ ಪ್ರಕಾರ ೧೦೦ ರೂಪಾಯಿಗಳು ಅಕ್ಟಿಂಗ್ ಅಲೋಯೆನ್ಸ್ ಕೊಡಲ್ಪಡುವವೆಂತಲೂ ತಿಳಿಯಬರುತ್ತದೆ.

The Dharmambudhi Tank.—ಕಡೆಗೆ ಮೈಸೂರು ಗವರ್ನಮೆಂಟಿಗೆ ಕೃಪೆ ಯುಂಟಾಗಿ ಈಗ್ಯೆ ಮೂರು ನಾಲ್ಕು ದಿನಗಳ ಮೊದಲು ಈ ನಗರದ ಧರ್ಮಾಂಬುಧಿ ಕೆರೆಗೆ ಸ್ಯಾಂಕೀಯವರಿಂದ ನೀರು ತಪ್ಪದೆ ಬಿಡಲ್ಪಡುತ್ತಿದೆ. ಕೆರೆಗೆ ಈಗ ಯಥೇಷ್ಟವಾಗಿ ನೀರು ಬಂದಿದೆ. ಇದು ಆರೋಗ್ಯಕರವಾಗಿ ಕಾಣಿಸಲಿಲ್ಲವು. ಕಾಡಿದ್ದ ನೆಲದಲ್ಲಿ ಹರಿದು ಬರುವದರಿಂದ ನೀರಿನ ಸ್ವಭಾವಿಕ ಗುಣ ಬದಲಾಯಿಸಿ ಕೀತದ್ರವ್ಯವಾಗಿ ರುತ್ತಿದೆ. ಇದರಿಂದ ಕೆಮ್ಮುಲೂ ಇತರ ಬಾಧೆಗಳೂ ಉಪಕ್ರಮವಾಗಿವೆ. ಏತೇನ ಬಿಗ್ರಾಹ್ಯವಾದ ನೀರು ದೊರೆತದ್ದಕ್ಕಾಗಿ ಯೆಲ್ಲರು ಸಂತೋಷಿಸತಕ್ಕದ್ದಾಗಿದೆ. ದಿವಾನರವರು ಇಷ್ಟಕ್ಕೆ ಪೂರ್ವಭಾವಿಯಾಗಿ ದಯಮಾಡಿ ಮೆಡಿಕಲ್ ಸ್ಪೆಷಲಿಸ್ಟ್ ಯಂ ಸ್ವತಃ ಕಟಾಕ್ಷಿಸಿದರಿಂದ ಪ್ರಜೆಗಳ ಕಷ್ಟವು ತಿಳಿದುಬಂದು ಅದರಮೇಲೆ ಈವಿಧ ಯೋಗ್ಯ [illegible] ಮಾಡಿದರು. ಇದು ಪ್ರಬಲ ಉಪಕಾರವೆಂದೇ ಭಾವಿಸುವೆವು. ಆರುಕೋಟಿ ಗ್ಯಾಲನ್‌ಗಳ ನೀರು [illegible] ಕೆರೆಯಲ್ಲಿ ನೀರಿರುವದಕ್ಕೆ ತಕ್ಕ ನಿರ್ಮಾಣ ಮಾಡಲ್ಪಟ್ಟಿದೆ ಇದ್ದಾರೆ ಜಗಿ [illegible] [illegible] [illegible] [illegible] ಇಲ್ಲಿನ ಪಟ್ಟಣ ಮ್ಯುನಿಸಿಪಾಲಿಟಿಯವರು ತಮ್ಮ ಕೋಟೆಕ್ಕೆ ಬಳಸಿಕೊಳ್ಳುತಲಿರುವದು [illegible] ಅನುಕೂಲವಾಗಿದೆ. ಕೆರೆಯ [illegible] ತಿಕಕ್ಕಾಗಿ ಕಳಗೆ ನೀರು ಹರಿಸುತಲಿರುವದು ನೋಡುವದರೇ ಇಲ್ಲವು. ಕೆರೆಯಲ್ಲಿ ನೀರಿದ್ದ ಕಾಲದೊಳು ಅದರ ಮೇಲೆ ವಿಶೇಷವಾಗಿಲ್ಲವು. ಗ್ಯಾಲನ್‌ಗಳ ಪ್ರಕಾರ [illegible] ನಾಡಿ [illegible] ಯಮ್ಮ ಕೊಂಡು ಕೊಳ್ಳಬೇಕಾದ ಕಾಲ [illegible] ನಿನ್ನು ಮಾಗಿರುವಾಗ್ಯೆ ಸ್ನಾನಪಾನಾದಿಗಳಿಗೆ ಹೊರಿಯ ಬೇಕಾದ ಆವಶ್ಯಕತೆ ಯುಂಟಾಗಿದೆ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ [illegible] [illegible] ಸರ್ಕಾರದಿಂದ ಕೊಡಲಾದ ಇಸ್ತಿಹಾರ್‌ನಾಮೆಗಳು.

ವೆಂಕಟ್ರಾಂ[illegible] ಎನೇ ಡಿಸೆಂಬರ್ ೧೮೯೨— ದಿವಾನರವರ ಆಫೀಸಿನಲ್ಲಿ ಕೆಲಸ ನೋಡುತಲಿರುವ ಅಸಿಸ್ಟೆಂಟ್ ಕಮಿಷನರ್ ಮ|| ಎಚ್. ಆರ್. ಸುಬ್ಬರಾಯ ಅಯ್ಯರವರೂ, ಬೆಂಗಳೂರು ಅಕ್ಟಿಂಗ್ ಸಿವಿಲ್‌ಜಡ್ಜಿಯವರಾದ ಮ|| ಎಚ್. ವಿ. [illegible] ಯ್ಯನವರೂ ೧೮೯೨ನೇ ಇಸವಿ ಆಗಸ್ಟ್ ೧೫ನೇ ತಾರೀಖು ಮೊದಲು ತಾತ್ಕಾಲಿಕವಾಗಿ ಎರಡನೇ ಕ್ಲಾಸ್ ಸಿವಿಲ್ ಜಡ್ಜಿಗಳಾಗಿ ಖಾಯಮ್ ಮಾಡಲ್ಪಟ್ಟಿರುತ್ತಾರೆ.

ಮ|| ಎಚ್. ಆರ್. ಸುಬ್ಬರಾಯ ಅಯ್ಯರವರು ಡೆಪ್ಯುಟಿ ಕಮಿಷನರ್ ಆಗಿ [illegible] ಲ್ಪಟ್ಟಿರುತ್ತಾರೆ, ಇವರು ಮತ್ತೊಂದು [illegible] ಕೊಡಲ್ಪಡುವ ವರೆಗೆ ದಿವಾನರವರ ಆಫೀಸಿನಲ್ಲಿಯೇ ಯಥಾಪ್ರಕಾರ ಕೆಲಸ ನೋಡತಕ್ಕದ್ದು.

ನಂ|| ೩೨೪೪-೦. ೧೮೯೨, ತಾ|| [illegible] ನೇ ಡಿಸೆಂಬರ್ ೧೮೯೨—ಸರ್ವೆ ಡಿವಿಜನ್ ಅಧಿಕಾರಿಯಾದ ಮ|| [illegible] ಸ್ಮೈತ್ [illegible] ರವರು ೧೮೯೨ನೇ ಇಸವಿ ನವಂಬರ್ [illegible] ನೇ ತಾರೀಖು ಮೊದಲು [illegible] ತಿಂಗಳು ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತಾರೆ.

ನಂ. ೩೩೩೩-೦. ೧೮೯೦-೯೨, ತಾ|| [illegible] ನೇ ಡಿಸೆಂಬರ್ ೧೮೯೨—ಶ್ರೀಮನ್ ಪ್ರೊವಿನ್ಷಿಯಲ್ ಸರ್ವಿಸ್ [illegible] ನೇ ಸೆಕ್ಷನ್ ನಿಯಮಗಳನ್ನನುಸರಿಸಿ, [illegible] ಶ್ರೀನಿವಾಸಯ್ಯಂಗಾರ್ಯರು, [illegible] ಸಬ್ ಡಿವಿಜನ್ ಆಫೀಸರ್ ಸರ್ವೆಜಡ್ಜಿ [illegible] ಇದರಿಂದ ಖಾಯಮ್ ಮಾಡಲ್ಪಟ್ಟಿರುತ್ತಾರೆ.

ನಂ|| ೩೪೫೦-೦. ೧೮೯೦-೯೨, ತಾ|| [illegible] ನೇ ಡಿಸೆಂಬರ್ ೧೮೯೨—ಈ ಸಂವತ್ಸರದಲ್ಲಿ ಕ್ರಿಸ್ಮಸ್ ಹಬ್ಬವು ಆದಿತ್ಯವಾರದಲ್ಲಿ ಬೀಳುವದರಿಂದ, ಅದರ ಬಗ್ಯೆ, ೧೮೯೨ನೇ ಇಸವಿ ಡಿಸೆಂಬರ್ ೨೬ನೇ ತಾರೀಖು ಸೋಮವಾರದ ಮೊದಲು ೧೮೯೩ನೇ ಇಸವಿ ಜನವರಿ ೨ನೇ ತಾರೀಖು ಸೋಮವಾರದ ವರೆಗೆ ಉಭಯದಿನಗಳೂ ಸೇರಿ ಅನುಸ್ಥಾನದ ಪಬ್ಲಿಕ್ ಆಫೀಸುಗಳೂ ಮುಚ್ಚಲ್ಪಡುವವು.

೧. ಖಜಾನೆಯ ಕೆಲಸಗಳು ನಡೆಯುವುದಕ್ಕೆ ಬಗ್ಯೆ ಆಯಾ ಇಲಾಖಾ ಮುಖ್ಯಾಧಿಕಾರಿಗಳಿಂದ ಏರ್ಪಾಟು ಮಾಡಲ್ಪಡುವದು.

೨. ಈ ಪಬ್ಲಿಕ್ ಹಾಲಿಡೇ ರಜೆಗಳು ಅತ್ಯವಶ್ಯಕ ಜವಾಬುದಾರಿ ಕೆಲಸ ನೋಡುವ ಆಫೀಸುಗಳಿಗೂ ಸಂಬಂಧಿಸುವದಿಲ್ಲವು.

ನಂ|| ೩೪೮೩-೦. ೧೮೯೨-೯೩, ತಾ|| [illegible] ನೇ ಡಿಸೆಂಬರ್ ೧೮೯೨—ದಿವಾನರವರು ಮ|| ಕೆ. ಕೃಷ್ಣ ಅಯ್ಯರವರನ್ನು ತಮ್ಮ ಪ್ರೈವೇಟ್ ಸೆಕ್ರೆಟರಿಯವರಾಗಿ ನೇಮಕಮಾಡಿರುತ್ತಾರೆ.

ನಂ|| ೪.೩೯. ೧. ೧೮೯೦-೯೨—ಶ್ರೀಮನ್ ಮಹಾರಾಜರವರು ಕಲ್ಕತ್ತೆ ಮತ್ತೆ ಇತರ ಪ್ರದೇಶಗಳಿಗೆ ಚಿತ್ತೈಸುವುದಕ್ಕೆ ದಯಮಾಡುವದರಿಂದ ಹುಜೂರ್ ಸೆಕ್ರೆಟರಿ (ರಾಮಚಂದ್ರ) ಅಯ್ಯರವರು ಸರಕಾರಿ ಕೆಲಸದಮೇಲೆ ಮಹಾರಾಜರವರ ಸವಾರಿ ಜೊತೆ ಹೋಗುವರಾಗಿ ಅವರ ಗೈರುಹಾಜರಿ ಕಾಲದಲ್ಲಿ ಇದರಡಿ ತಿಳಿಸಲ್ಪಡುವ ಏರ್ಪಾಟುಗಳನ್ನು ಶ್ರೀಮನ್ ಮಹಾರಾಜರವರು ಅಪ್ಪಣೆಕೊಡಿಸುತ್ತಾರೆ:—

೧. ಚೀಫ್ ಜಡ್ಜಿ ಮ|| ಟಿ. ಆರ್. ಎ. ತಂಬು ಚೆಟ್ಟಿಯವರು ದಿವಾನರವರಾಗಿಯೂ, ಕೌನ್ಸಿಲಿನ ಎಕ್ಸ್ ಅಫಿಷಿಯೋ ಪ್ರೆಸಿಡೆಂಟರಾಗಿಯೂ, ಅಕ್ಟಿಂಗ್ ತರಹ ಕೆಲಸ ನೋಡುತಲಿರತಕ್ಕದ್ದು.

೨. ಜಡ್ಜಿ ಮ|| ಎ. [illegible] ಅಯ್ಯರವರು ಚೀಫ್ ಜಡ್ಜಿಯಾಗಿಯೂ ಕೌನ್ಸಿಲ್ ಮೆಂಬರಾಗಿಯೂ ಅಕ್ಟಿಂಗ್ ತರಹ ಕೆಲಸ ನೋಡತಕ್ಕದ್ದು.

೩. ಲೆಜಿಸ್ಲೇಟಿವ್ ಸೆಕ್ರೆಟರಿ ಮತ್ತು [illegible] ಇನ್ಸ್‌ಪೆಕ್ಟರ್ ಜನರಲ್ ಮ|| ಸಿ. [illegible] ನವರು ಚೀಫ್ ಕಮಿಷನರ್ ಜಡ್ಜಿಯಾಗಿ ಅಕ್ಟಿಂಗ್ ತರಹ ಕೆಲಸ ನೋಡತಕ್ಕದ್ದು.

೪. ಮ|| ಎಚ್. [illegible] ರಾಯರವರು ದಿವಾನರ ಆಫೀಸಿನಲ್ಲಿ ತಮ್ಮ ಸ್ವಂತ ಕೆಲಸ ದೊಡನೆ ರಿಜಿಸ್ಟ್ರೇಷನ್ ಇನ್ಸ್‌ಪೆಕ್ಟರ್ ಜನರಲ್ ಆಗಿ ಅಕ್ಟಿಂಗ್ ತರಹ ಕೆಲಸ ನೋಡುವ ಕಾಲದಲ್ಲಿ ಚೀಫ್ ಸೆಕ್ರೆಟರಿಯವರು ಲೆಜಿಸ್ಲೇಟಿವ್ ಸೆಕ್ರೆಟರಿ ಕೆಲಸಗಳ ಚಾರ್ಜಿನಿಂದ ಮ|| [illegible] ಅಯ್ಯರವರನ್ನು ಬಿಡುಗಡೆ ಮಾಡತಕ್ಕದ್ದು.

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇರಾಖಾ.

ಕಳೆದವಾರದ ಶೇಷವು.

೬೫. ಒಂದು ಗ್ರಾಮ ಕೋರ್ಟಿನವರು ಮಾಡಿದ ಯಾವದೊಂದು ಫೈಸಲನ್ನು ಫೈಸಲ್‌ದಾರನ ಅರ್ಜಿಮೇರಿಗೆ ಅಮಲ್‌ಜಾರಿ ಮಾಡಲಿಕ್ಕೆ ಮುನಸಿಫನ ಬಳಿಗೆ ಕಳುಹಿಸಬಹುದು. ಮತ್ತು ಇವರು ಆ ಫೈಸಲನ್ನು ಜಾರೀ ಮಾಡಿದ್ದರೆ ಹ್ಯಾಗೋ ಹಾಗೆಯೇ ಅದರ ಜಾರಿ ನಡಿಸಬಹುದು. ಅಥವಾ, ಪ್ರತಿವಾದಿಯ ಬಾಬತು ಬೇರೆಸೊತ್ತು ಉಂಟೆಂಬದಾಗಿ ಹೇಳಲ್ಪಟ್ಟಿದ್ದ ಇತರ ಯಾವದೊಂದು ಗ್ರಾಮದ ಕೋರ್ಟಿನವರ ಬಳಿಗೆ ಅಮಲ್‌ಜಾರೀಬಗ್ಗೆ ಕಳುಹಿಸಬಹುದು. ಅಂಥಾ ಕೋರ್ಟಿನವರು ಆ ಫೈಸಲ್ ತಾವೇ ಮಾಡಿದ್ದರೆ ಹ್ಯಾಗೋ ಹಾಗೆಯೇ ವರ್ತಿಸತಕ್ಕದ್ದು.

ಅಮಲ್‌ಜಾರೀ ಬಗ್ಗೆ ಡಿಕ್ರಿಯನ್ನು ಮುನಸಿಫರ ಬಳಿಗೆ ಕಳುಹಿಸಬಹುದು.

೬೬. ಒಂದು ಫೈಸಲಿನ ಅಮಲ್‌ಜಾರೀಯನ್ನು ಒಂದು ಗ್ರಾಮ ಕೋರ್ಟಿನವರು ನಿಲ್ಲಿಸಿ ಅದು ತಾನು ಮಾಡಿದ ಫೈಸಲಾದರೆ ಹ್ಯಾಗೋ ಹಾಗೆ ಆ ಫೈಸಲನ್ನು ಸ್ವತಃ ಜಾರೀ ಮಾಡಲಿಕ್ಕೆ ಮುನಸಿಫರಿಗೆ ನ್ಯಾಯವಾಗಿರತಕ್ಕದ್ದು.

ಯಾವತಿರ್ಪಿನ ಅಮಲ್‌ಜಾರೀ ಯನ್ನು ಮುನಸಿಫರು ತಾವೇ ಕೊಳ್ಳಬಹುದು.

೭ನೇ ಅಧ್ಯಾಯ.

ವಿವಿಧ ವಿಷಯ.

೬೭. ವ್ಯಾಜ್ಯದಲ್ಲಿ ಫೈಸಲಾಗುವದಕ್ಕೆ ಮೊದಲೇ ವಾದಿ ಯಾ ಪ್ರತಿ ವಾದಿಯು ಸತ್ತರೆ, ಅವನ ಎದುರು ಪಕ್ಷದವನ ಯಾ ಅವನ ನ್ಯಾಯವಾದ ಪ್ರತಿನಿಧಿಯ ಹೆಸರನ್ನು ಅವನ ಬದಲಿಗೆ ರಿಕಾರ್ಡಿನಲ್ಲಿ ಸೇರಿಸಬಹುದು. ಆದರೆ ಮೃತನಾದ ಪ್ರತಿವಾದಿಯ ನ್ಯಾಯವಾದ ಪ್ರತಿನಿಧಿಯುಮೇಲೆ ಆತನಿಂದ ಅವನಿಗೆ ಸಿಕ್ಕಿದ ವ ಅವನು ಲೆಕ್ಕದಲ್ಲಿ ವಜಾ ತೋರಿಸಿದ ಆಸ್ತಿಯ ಮೌಲ್ಯಕ್ಕಿಂತಲೂ ಹೆಚ್ಚಾದ ಐವಜಿಗೆ ಫೈಸಲ್ ಮಾಡಕೂಡದು.

ಕಕ್ಷಿಗಾರನು ಸತ್ತಲ್ಲಿ ಅರ್ಜಿ ಮಾಡಿಕೊಂಡವನ ನ್ಯಾಯವಾದ ಪ್ರತಿನಿಧಿಯ ಹೆಸರನ್ನು ರಿಕಾರ್ಡಿನಲ್ಲಿ ಸೇರಿಸತಕ್ಕದ್ದು.

೬೮. ವಾದಿ ಯಾ ಪ್ರತಿವಾದಿಯು ಮೃತ ಪಟ್ಟ ದಿವಸದಿಂದ ಆರು ತಿಂಗಳು ದಿವಸಗಳೊಳಗೆ ಅಂಥಾ ಅರ್ಜಿಯು ಮಾಡಲ್ಪಡದಿದ್ದರೆ ವ್ಯಾಜ್ಯವು ತೆಗದುಹಾಕಲ್ಪಡತಕ್ಕದ್ದು. ಮತ್ತು ಅದೇ ವ್ಯಾಜ್ಯ ಕಾರಣದಮೇಲೆ ಪುನಃ ಹೊಸ ಹೊಸ ವ್ಯಾಜ್ಯವು ಅಂಗೀಕರಿಸಲ್ಪಡಕೂಡದು.

ಅರ್ಜಿ ಮಾಡದೇ ಹೋಗಿದ್ದರೆ ವ್ಯಾಜ್ಯ ತೆಗೆದುಹಾಕಲ್ಪಡತಕ್ಕದ್ದು.

೬೯. ಒಬ್ಬನಿಗಿಂತಲೂ ಹೆಚ್ಚು ವಾದಿಯರಾಗಲಿ ಪ್ರತಿ ವಾದಿಯರಾಗಲಿ ಇದ್ದು ಅವರ ಪೈಕಿ ಯಾರಾದರೂ ಒಬ್ಬನು ಮೃತಪಟ್ಟು ಅವನ ಪ್ರತಿ ನಿಧಿಯು ಹಿಂದೆ ಹೇಳಿದ ಪ್ರಕಾರ ಸೇರಿಸಲ್ಪಡದೆ ಇದ್ದರೆ, ಉಳಿದ ವಾದಿಯು ಯಾ ವಾದಿಯರ ಅರಿಜೆ ಪ್ರಕಾರ ಅಥವಾ ಉಳಿದ ಪ್ರತಿವಾದಿ ಯಾ ಪ್ರತಿವಾದಿಗಳ ಮೇಲೆ ಆ ವ್ಯಾಜ್ಯವು ಮುಂದೆ ನಡೆಯತಕ್ಕದ್ದು.

ಒಬ್ಬನಿಗಿಂತ ಹೆಚ್ಚು ವಾದಿ ಯಾ ಪ್ರತಿವಾದಿಯಿದ್ದರೆ ಉಳಿದವರ ಅರ್ಜಿಮೇರೆಗೆ ಯಾ ಅವರಿಗೆ ವಿರೋಧವಾಗಿ ವ್ಯಾಜ್ಯವು ನಡೆಯತಕ್ಕದ್ದು.

೭೦. ಫೈಸಲ್ ಘೂರಾ ಜಾರಿಗೆ ತರಲ್ಪಡುವದಕ್ಕಿಂತ ಮುಂಚೆ ಫೈಸಲ್ ದಾರನು ಮೃತಪಟ್ಟರೆ ಗ್ರಾಮಕೋರ್ಟಿನವರು ತಮ್ಮ ಬಳಿಗೆ ತನ್ನ ಹೆಸರನ್ನು ಫೈಸಲ್‌ದಾರನಾಗಿ ಇತರಮೇಕೆಂದು ಅವನ ನ್ಯಾಯವಾದ ಪ್ರತಿನಿಧಿಯು ಅರ್ಜಿ ಮಾಡಬಹುದು. ಮತ್ತು ಸದರೀ ಕೋರ್ಟಿನವರು ಫೈಸಲ್ ಪ್ರತಿವಾದಿಗೆ ನೋಟೀಸ್ ಕೊಟ್ಟ ನಂತರ ಅರ್ಜಿದಾರನೇ ಮೃತಪಟ್ಟವನ ನ್ಯಾಯವಾದ ಪ್ರತಿನಿಧಿಯೆಂತ ಸಮಾಧಾನ ಪಟ್ಟರೆ ರಿಕಾರ್ಡಿನಲ್ಲಿ ಆತನ ಹೆಸರನ್ನು ಫೈಸಲ್‌ದಾರನಾಗಿ ಸೇರಿಸತಕ್ಕದ್ದು.

ಫೈಸಲ್ ದಾರನು ಮೃತಪಟ್ಟಲ್ಲಿ ನ್ಯಾಯವಾದ ಅವನ ಪ್ರತಿನಿಧಿಯು ಹೆಸರು ದಾಖಲಾಗಬಹುದು.

೭೧. ಫೈಸಲ್ ಘೂರಾ ಜಾರಿಗೆ ತರಲ್ಪಡುವದಕ್ಕಿಂತ ಮುಂಚೆ ಫೈಸಲ್ ಪ್ರತಿವಾದಿಯು ಮೃತಪಟ್ಟರೆ, ಫೈಸಲ್‌ದಾರನು ಅರ್ಜಿ ಮಾಡಿದ್ದಲ್ಲಿ ಫೈಸಲ್ ಪ್ರತಿವಾದಿಯು ನ್ಯಾಯವಾದ ಪ್ರತಿನಿಧಿಯುಮೇಲೆ ಮೃತಪಟ್ಟವನಿಂದ ಅವನಿಗೆ ಸಿಕ್ಕಿದ ವ ಅವನು ಲೆಕ್ಕದಲ್ಲಿ ವಜಾ ತೋರಿಸಿದ ಆಸ್ತಿಯ ಮೌಲ್ಯದಷ್ಟು ಐವಜಿಗೆ ಫೈಸಲನ್ನು ಜಾರಿ ಮಾಡಬಹುದು.

ಫೈಸಲ ಪ್ರತಿವಾದಿಯು ಮೃತಪಟ್ಟರೆ ಫೈಸಲ್ ಅಮಲ್‌ಜಾರಿಯು ಆತನ ನ್ಯಾಯವಾದ ಪ್ರತಿನಿಧಿಯ ಮೇಲೆ ನಡಿಸಬಹುದು.

೭೨. ಗ್ರಾಮ ಕೋರ್ಟಿನ ಡಿಕ್ರಿ ಯಾ ಹುಕುಮಿನಿಂದ ಅನ್ಯಾಯ ಹೊಂದಿದ್ದಾಗಿ ತಿಳಿದುಕೊಳ್ಳುವ ಯಾವ ನೊಬ್ಬ ಕಕ್ಷಿಗಾರನು ಅಂಥಾ ಡಿಕ್ರಿ ಯಾ ಹುಕುಮಿನ ತಾರೀಖಿನಿಂದ ಮೂವತ್ತು ದಿವಸಗಳೊಳಗಾಗಿ ಅರ್ಜಿಮಾಡಿಕೊಂಡಲ್ಲಿ—

ಗ್ರಾಮಕೋರ್ಟಿನ ಫೈಸಲುಗಳನ್ನು ಮುನಸಫರು ಪುನಃ ಪರ್ಯಾಲೋಚಿಸಬಹುದು.

ಗ್ರಾಮ ಕೋರ್ಟಿನವರು ಲಂಚ ತೆಗೆದುಕೊಂಡು ಕೇವಲ ಪಕ್ಷಪಾತ, ಯಾ ದುರ್ನಡತೆ ಸಂಬಂಧ, ಅಥವಾ ಕಾನೂನು ಮೇರಿಗೆ ಅಧಿಕಾರವಿಲ್ಲದ ಸಂಗತಿಗಳಲ್ಲಿ ಗ್ರಾಮ ಕೋರ್ಟಿನವರು ಪ್ರವೇಶಿಸಿದ್ದರೆ ಯಾ ನ್ಯಾಯ ವಿರುದ್ಧವಾದ ಯಾ ಮುಖ್ಯವಾದ ಅಕ್ರಮ ನಡೆದಿದ್ದರೆ;

ಅಥವಾ ಡಿಕ್ರಿ ಯಾ ಹುಕುಂ ಸ್ಪಷ್ಟವಾಗಿ ಅನ್ಯಾಯ ಯಾ ಕಾನೂನಿಗೆ ವಿರೋಧವಾಗಿದ್ದರೆ ಡಿಸ್ಟ್ರಿಕ್ಟ್ ಜಡ್ಜ ಯಾ ಅಬ್ಸ್ ಡಿಸ್ಟ್ರಿಕ್ಟ್ ಜಡ್ಜಿಯಿಂದ ಅಧಿಕಾರ ಹೊಂದಿರುವ ಸಬ್ ಜಡ್ಜಿಯವರು ಸದರೀ ಸಬಬುಗಳಮೇಲೆ ಅಂಥಾ ಡಿಕ್ರಿ ಯಾ ಹುಕುಮನ್ನು ರದ್ದು ಮಾಡಬಹುದು, ಮತ್ತು ತಮಗೆ ಯುಕ್ತ ತೋರುವ ಬೇರೆ ಡಿಕ್ರಿ ಯಾ ಹುಕುಂ ಕೊಡಬಹುದು, ಹೇಗಂದರೆ ಎದುರು ಕಕ್ಷಿಗಾರರಿಗೆ ಅಂಥಾ ಅರ್ಜಿಯ ವಿಷಯ ನೋಟೀಸ್ ಕೊಟ್ಟ ವಿನಃ ಗ್ರಾಮಮುನಸಿಫನ ಡಿಕ್ರಿ ಯಾ ಹುಕುಮನ್ನು ರದ್ದು ಮಾಡಕೂಡದು. ಮತ್ತು ಅಂಥಾ ಅರ್ಜಿ ಘಟಿಸಿ ನಿರೀಕ್ಷಣೆಯಿಂದ ಸದರೀ ಡಿಕ್ರಿ ಯಾ ಹುಕುಮಿನ ಜಾರಿಯನ್ನು ಡಿಸ್ಟ್ರಿಕ್ಟ್ ಜಡ್ಜಿ ಯಾ ಸಬ್‌ಜಡ್ಜಿಯವರು ನಿಲ್ಲಿಸಬಹುದು.

ಸಾಕಷ್ಟು ಕಾರಣವಿದ್ದಲ್ಲಿ ಕೊಟ್ಟ ಸಬಬನ್ನು ಕುರಿತು ಡಿಸ್ಟ್ರಿಕ್ಟ್ ಜಡ್ಜಿ ಯಾ ಸಬ್‌ಜಡ್ಜಿಯವರು ಸಮಾಧಾನಪಟ್ಟರೆ ಈ ಪ್ರಕರಣ ಪ್ರಕಾರ ಕೊಟ್ಟ ಅರ್ಜಿಯನ್ನು ೩೦ ದಿವಸಗಳ ನಂತರವೂ ಅಂಗೀಕರಿಸಿಕೊಳ್ಳಬಹುದು.

ಈ ಪ್ರಕರಣದಲ್ಲಿ ನಿಬಂಧಿಸಿದ ಮೇರೆಗಲ್ಲದೆ ಅನ್ಯಥಾ ಗ್ರಾಮಕೋರ್ಟಿನ ಪ್ರತಿಯೊಂದು ಡಿಕ್ರಿ ಯಾ ಹುಕುಂ ಅಖೈರಾಗಿರತಕ್ಕದ್ದು.

೭೩. ಹಿಂದಿನ ಪ್ರಕರಣ ಪ್ರಕಾರ ಒಂದು ಡಿಕ್ರಿ ಯಾ ಹುಕುಂ ರದ್ದಾಗಲ್ಪಟ್ಟರೆ, ಅಥವಾ ಪುನರ್ವಿಚಾರಣೆ ಸಲುವಾಗಿ ಇನ್ನೊಬ್ಬ ಗ್ರಾಮ ಮುನಸಿಫನ ಡಿಕ್ರಿ ಯಾ ಹುಕುಂ ರದ್ದು ಮಾಡಲ್ಪಟ್ಟಿದ್ದಾಗ, ಹಾಗೆ ರದ್ದು ಮಾಡುವ ಡಿಸ್ಟ್ರಿಕ್ಟ್ ಯಾ ಸಬ್‌ಜಡ್ಜಿಯವರು ಆ ಸಂಗತಿಯನ್ನು ಸದರೀ ಗ್ರಾಮಮುನಸಿಫರು ತಿಳಿಸಿದ ನಿವರ್ತಿಸಲ್ಪಡುವ ಬಗ್ಗೆ ಯಾವ ಅವಧಿ ನಿಶ್ಚಯವಾಗಿದ್ದಲ್ಲಿ ಅಗತ್ಯವೆಂದು ತೋರಿದಾಗ ಅದರಂತೆ ನಡಿಸುವ ಬಗ್ಗೆಗಾಗಿ ಹೆಚ್ಚಿನ ಸವಿಸ್ತರವಾಗಿ ತಿಳಿಸತಕ್ಕದ್ದು.

ಗ್ರಾಮ ಮುನಸಿಫರ ಡಿಕ್ರಿಯಾ ಹುಕುಂ ರದ್ದಾದ್ದನ್ನು ಡಿಸ್ಟ್ರಿಕ್ಟ್ ಯಾ ಸಬ್‌ಜಡ್ಜಿಯವರು ತಿಳಿಸತಕ್ಕದ್ದು.

೭೪. ಗ್ರಾಮ ಕೋರ್ಟುಗಳಲ್ಲಿ ಉಪಯೋಗಿಸಬೇಕಾದ ನಮೂನೆಗಳನ್ನು ಮತ್ತು ಅವರು ಯಾವದಾದ ರಿಜಿಸ್ಟರುಗಳೆಂಬ ಲೆಕ್ಕಗಳನ್ನು ಕಾನೂನಿಗೆ ಬದ್ಧರಾಗಿರುತ್ತಾ ಚೀಫ್‌ಕೋರ್ಟಿನವರು ಆಗಿಂದಾಗ್ಯೆ ಪರ್ಯಟಿಸಬಹುದು. ಗ್ರಾಮ ಮುನಸಿಫರ ರಿಕಾರ್ಡುಗಳನ್ನು ರಿಜಿಸ್ಟರುಗಳನ್ನು ಡಿಸ್ಟ್ರಿಕ್ಟ್ ಜಡ್ಜಿಯು ಯಾವಾಗ ಬೇಕಾದರೂ ತರಿಸಿಕೊಂಡು ತನಿಖೆಮಾಡಬಹುದು.

ನಮೂನೆಗಳನ್ನು ನಿರ್ಮಿಸುವದಕ್ಕೆ ಚೀಫ್‌ಕೋರ್ಟಿನವರು ಮತ್ತು ರಿಕಾರ್ಡುಗಳನ್ನು ಸಂದರ್ಶಿಸಿ ನೋಡುವದಕ್ಕೆ ಡಿಸ್ಟ್ರಿಕ್ಟ್ ಜಡ್ಜಿಯು ಅಧಿಕಾರವುಳ್ಳವರಾಗಿರುತ್ತಾರೆ.

ADDRESS OF THE DEWAN OF MYSORE.

TO THE REPRESENTATIVE ASSEMBLY HELD AT MYSORE,

on Tuesday, the 4th October 1892.

೧೮೯೨ನೇ ಇಸವಿ ಅಕ್ಟೋಬರ್ ತಾರೀಖ್ ೪ನೇ ಮಂಗಳವಾರದಲ್ಲು ಮೈಸೂರಲ್ಲಿ ಸೇರಿದ ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ನಡೆದ ಮೈಸೂರು ಸಂಸ್ಥಾನದ ದಿವಾನರವರ ಉಪನ್ಯಾಸ.

(ಕಳೆದ ವಾರದ ಶೇಷ.)

ಅವಶ್ಯಕವಾದ ಸಂಗತಿಗಳನ್ನು ತಿಳಿದುಕೊಂಡು ಬೇಕಾದ ಉಪಕರಣಗಳನ್ನು [illegible]

[illegible]

Bangalore.—Printed and published at the Karnatic Press, No. 40, Hospital Road, Petta.—1892.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು

Published Every Monday Morning.

[illegible]

Vol. XIX.] BANGALORE—MONDAY, DECEMBER 19, 1892 [No. 50.

ಸಂಪುಟ ೧೯.] ಬೆಂಗಳೂರು:—[illegible] ಸೋಮವಾರ. [ಸಂಚಿಕೆ ೫೦.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

	[illegible]	[illegible]
[illegible]	8—0—0	9—0—0
[illegible] ,,	9—0—0	10—8—0

ಇಂಗ್ಲಿಷ್ [illegible] ಭಾಗಗಳಿಗೆ.

[illegible]	4—0—0	5—0—0
[illegible] ,,	[illegible]	6—0—0

ಈ ಪತ್ರಿಕೆಗೆ [illegible]

ಪ್ರಕಟನೆಯ ವಿವಾಜಿ.

[illegible]

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE.

Price including Postage Rs 5 0 0

ವೈದ್ಯಸಾರ ಸಂಗ್ರಹ.

[illegible]

ನೋಟೀಸ್.

ಬೆಂಗಳೂರು ಕರ್ಣಾಟಕ್ ಪ್ರೆಸ್.

[illegible]

ನೋಟೀಸ್.

ನೂತನವಾಗಿ [illegible]

[illegible]

ನೋಟೀಸ್.

[illegible]

[illegible]

ನೋಟೀಸ್.

[illegible]

ಸಂಸ್ಕೃತ ಗ್ರಂಥಗಳು.

[illegible]

ಕನ್ನಡ ಗ್ರಂಥಗಳು.

[illegible]

ನೋಟೀಸ್.

[illegible]

C. G. R. Naylor,

M. R. C. S., England,

Surgeon.

THE MONEY MARKET.

ಮದರಾಸ್, ಶನಿವಾರ, [illegible] 17 [illegible] 1892.

[illegible] 104-12-0 [illegible] 105-2-0 [illegible]

[illegible] (500) [illegible] 940 [illegible] 945 [illegible]

[illegible] (100) [illegible] 155 [illegible] 160 [illegible]

[illegible] 16-4-0

[illegible] 1s. 2 27/31 d.

[illegible] 1s. 2 5/32 d.

[illegible] 1s. 2 11/16 d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 19, 1892.

[illegible]

CASTE AND SEA VOYAGE.

[illegible]

ಗಿರಲಿಲ್ಲವು. ಏತಕ್ಕೆಂದರೆ, ಇದುವರೆವಿಗೆ ಸಮುದ್ರಯಾನ ಮಾಡಿದವರೆಲ್ಲರು ದ್ವಿಜೇತರರಾಗಿಯೂ, ಮಾಂಸಭಕ್ಷಕರಾಗಿಯೂ ಕರ್ಮಮಾರ್ಗದಲ್ಲದವರೂ ಇರುತ್ತಾರೆ. ಈಗ್ಯೆ ದೇಶಸಂಬಂಧದ ಸಂಸ್ಥಾನಾಧಿಪತಿಗಳ ಸ್ಯಕೆ ಶ್ರೀಮನ್ಮಹಾರಾಜಾ ಚಾಮರಾಜೇಂದ್ರ ಒಡೆಯರ್ ಬಹದೂರರವರೊಬ್ಬರೇ ವೈದಿಕ ಕರ್ಮಾನುಷ್ಠಾತರಾಗಿಯೂ ಉಪನಯನಾದಿ ಷೋಡಶ ಕರ್ಮಬದ್ಧರಾಗಿಯೂ, ಶಾಸ್ತ್ರಸಂಪ್ರದಾಯಾನುಸಾರ ವರ್ತಿಸಬೇಕೆಂಬ ನಿರ್ಬಂಧಕ್ಕೊಳಪಟ್ಟವರಾಗಿಯೂ, ಪ್ರಸಿದ್ಧರಾದ ಹಿಂದೂ ಮಠಾಧಿಪತಿಗಳಿಗೆ ಮುಖ್ಯ ಪ್ರಿಯ ಶಿಷ್ಯರಾಗಿಯೂ, ಅನುಲ್ಲಂಘನೀಯವಾದ ಅವರ ಆಜ್ಞೆಯಂ ಪರಿಪಾಲಿಸಿ ಸ್ವಕೀಯ ಅನುಷ್ಠಿಸತಕ್ಕವರಾಗಿಯೂ ಇರುತ್ತಾರೆ; ಇಂತಿವರೀಗ ನಾವಾರೋಹಣವು ಮಾಡಿ ಸಮುದ್ರವನ್ನಾಗಲೀಗ ಕಳೆದಕಲಿವಾರದವರ ಕಲ್ಕತ್ತೆಗೆ ದಯಮಾಡಿದರು. ಕಲ್ಕತ್ತೆಗೆ ಹೋಗಿ ಸೇರಲಿಕ್ಕೆ ಏಳಾರು ದಿನಗಳಾಗಬಹುದು. ಏತನ್ಮಧ್ಯಕಾಲದಲ್ಲಿವರು ನಾವೆಯಲ್ಲಿ ಇತರರಂತೆ ವಾಸ ಮಾಡಬೇಕಾಗಿರುತ್ತದೆ. ಮುಂದೆ ಕಲ್ಕತ್ತೆಯಿಂದ ರಂಗೂನ್, ಸಿಲೋನ್ ವಗೈರೆ ಪ್ರಾಂತಗಳಿಗೆ ಜಹಜಿನಲ್ಲಿಯೇ ಪ್ರಯಾಣ ಮಾಡುವದಾಗಿ ಸಹ ನಿಶ್ಚಯಿಸಿಯಾಗಿರುತ್ತದೆ. ಆಗಲೂ ಯೇಳೆಂಟು ದಿನಗಳ ಕಾಲ ಜಲನಿಧಿವಾಸವಂ ಮಾಡಬೇಕಾಗಿರುವದರೊಳೇನೂ ಸಂಶಯವಿರುವದಿಲ್ಲವು. ಆದರೆ ಅಲ್ಲಿಯಲ್ಲಿ ಇಳಿದು ಮಧ್ಯೆ ಇರುವ ಕೆಲವು ಪ್ರದೇಶಗಳಂ ಕಟಾಕ್ಷಿಸುತ ಮುಂದಕ್ಕೆ ದಯಮಾಡುವರೆಂದು ತಿಳಿಯಬರುವದರಿಂದ ಅದು ವಿಶೇಷ ಆಕ್ಷೇಪಣೆಗೆ ಕಡಿಮೆತಿ ಅವಕಾಶ ಕೊಡದಿರಬಹುದು. ಪ್ರಾತ್ಯಧರ್ಮವೆಂದು ಭಾವಿಸಿ ಶ್ರೀಮನ್ಮಹಾರಾಜರವರಿಗೆ ಅದು ಉಚಿತವೇಯೆಂದು ನುಡಿವಾಗ್ಯೂ ಅವರನ್ನನುವರ್ತಿಸಿ ಹೋಗಿರುವ ದಿವಾನರು ವಗೈರೇರವಿಷಯವು ಭಿನ್ನವಾದುದಾಗಿರುತ್ತದೆ. ಇದೇ ಆಧಾರವು ಮುಂದೆ ದೇಶಾಂತರ ಸಂಚಾರಗಳಿಗೆ ಸಹ ಅನ್ವಯಿಸದೆ ಹೋಗಲಾರದು. ಭವಿಷ್ಯತ್ಪ್ರಯತ್ನಾಂಕುರವಾದ ಪ್ರಸಕ್ತ ಸಮುದ್ರಯಾನ ವಿಷಯದಲ್ಲಿ ಅನೇಕರು ಅನೇಕವಿಧವಾಗಿ ಸಂಶೋಭಿಸುತ್ತಲಿದ್ದಾರೆ. ಮಹಾರಾಜರವರಿಗಿದುವರೆವಿಗುಂಟಾಗಿದ್ದ "ಅಜ್ಞಾನಾಂಧಕಾರವು" ನಿವೃತ್ತಿಯಾಗಿ ಜ್ಞಾನೋದಯವಾದುದರಿಂದ ಮುಂದೆ ತಾದೃಶ ವಿಲಕ್ಷಣಜ್ಞಾನದಿಂ ಒಬ್ಬವಿಧ ಶುಭವು ದೊರೆಯಬಹುದೆಂದು ಕೆಲವರೂ, ಮಹಾರಾಜರವರಿಗೆ ಜಾತಿ ಮತಾಚಾರಗಳಲ್ಲಿರುವದರಿವಿಗೆ ತೆರೆಗೊಂಡಿದ್ದ "ಮೂಢಭಕ್ತಿಯು" ಉತ್ಸನ್ನವಾಗಿ ವೈಲಕ್ಷಣ್ಯವು ಅಂಕುರಿಸಿತೆಂದು ಇನ್ನು ಕೆಲವರೂ, ಅವರನ್ನಾವರಿಸಿಕೊಂಡು ಕೆಲವು ಕಾರ್ಯದುಕ ಅವ್ಯಕ್ತಗೊಳಿಸಿದ್ದ "ಶ್ರದ್ಧಾಜಾಡ್ಯ"ವೆಂಬುದು ಧ್ವಂಸವಾಗಿ ಧೈರ್ಯೋತ್ಸಾಹಗಳು ಪ್ರಬಲಿಸಿದ್ದರಿಂದ ಕ್ರಮೇಣ ಲೌಕಿಕ ವೈದಿಕ ರಾಜಕೀಯಮಾರ್ಗಪರಿಷ್ಕರಣಾದಿಗಳಿಗೆ ಅವಕಾಶ ಪ್ರಾಪ್ತಿಯಾಯಿತೆಂದು ಮತ್ತು ಕೆಲವರೂ, ಅಂತರ್ಗ್ಗಂಭೀರವಾಗಿದ್ದ ಪ್ರಭುಶಕ್ತಿಯು ಪ್ರಕಟವಾಗುವ ಸಮಯವು ಹತ್ತಿರ ಬಂದಿದ್ದರಿಂದ ವೈದಿಕರ ಗರ್ವಭಂಗವಾದುದಕ್ಕಾಗಿ ಅನ್ಯರು ಕೆಲವರೂ ಅನುಭವಿಸಲಾರಂಭಿಸಿದ್ದಾರೆ. ಫಲದರ್ಶನಾನಂತರವೇ ತಿದ್ದಿರೂ ಪ್ರಾಸಂಗಿಕವಾಗಿಯೇ ಅವರ ಆನಂದವು ಉನ್ಮತ್ತಕವಾಗಿರುವಂತೆ ಕಾಣುತ್ತದೆ. "ಮಹಾರಾಜರವರು ಇದುವರೆವಿಗೂ ಇಂತಾ ಮೂಢಭಕ್ತರ ಮಾತುಗಳನ್ನು ಉಪೇಕ್ಷಿಸಿ ಸುಮ್ಮನಿದ್ದರು. ಈಚೆಗೆ ಅವರು ಈ ವಿಷಯವನ್ನು ವಿದ್ವಾಂಸರಲ್ಲಿ ಚರ್ಚೆಗೆ ತಂದು ಸಮುದ್ರದಲ್ಲಿ ಪ್ರಯಾಣಮಾಡುವದರಲ್ಲಿ ಯಾವದೊಂದು ದೋಷವೂ ಉಂಟಾಗಲಾರದೆಂದು ತೀರ್ಮಾನ ಪಡೆದು ಧೈರ್ಯದಿಂದ ಹೊರಟು ಹೋಗುತ್ತಾರೆ" ಎಂಬದಾಗಿ ಈ ತಿಂಗಳ ೯ನೇ ತಾರೀಖಿನ ಮೈಸೂರು ವೃತ್ತಾಂತ ಪತ್ರಿಕೆಯು ತಿಳಿಸಿ, ಮಹಾರಾಜರವರ ಧೈರ್ಯವಂ ಬಹಳವಾಗಿ ಪ್ರಶಂಸಿಸುತ್ತದೆ. ಸಮುದ್ರಯಾನವು ಶಾಸ್ತ್ರೀಯವೆಂತಲಾಗಲಿ, ಪ್ರತ್ಯವಾಯವಿಲ್ಲದ್ದೆಂತಲಾಗಲಿ, ವಿಚಾರಪೂರ್ವಕ ನಿರ್ಧರವಾಗಿರುವದನ್ನು ಮೇಲಿಕಂಡ ಪತ್ರಿಕೆ ತಿಳಿಸುವಂತೆ ನಿಜವಾಗಿದ್ದರುವ ಪಕ್ಷಕ್ಕೆ ತತ್ಕಾಲದಲ್ಲಿ ಬಹು ಜನೋಪಯುಕ್ತವಾದ ತಾದೃಶ ಪಂಡಿತನಿರ್ಣಯವು ಮಹಾರಾಜರೇತರ ಕೈಬಿಡ್ಯಪ್ರಕಟಪಡಿಸಲಾಧಾರವಾಗಿಟ್ಟಿದ್ದಾರೆಯೋ ತಿಳಿಯಲಿಲ್ಲವು. ಜಗದ್ಗುರುಗಳಾದ ಶ್ರೀ ಶೃಂಗೇರಿ ಸ್ವಾಮಿಗಳವರೂ, ರಾಜಗುರುಗಳಾದ ಶ್ರೀ ಪರಕಾಲಸ್ವಾಮಿಗಳವರೂ, ಸಮುದ್ರಯಾನವಾಡದರಲ್ಲೇನೂ ಬಾಧಕವಿಲ್ಲವೆಂದು ಅನುಜ್ಞೆಯಂ ಕೊಟ್ಟಿರುವ ಪಕ್ಷಕ್ಕೆ ಅವನ್ನವರು ಇತರರೆಲ್ಲ್ಯಾನುಗ್ರಹಾರ್ಥ ಪ್ರಕಟಪಡಿಸದೆ ಗುಪ್ತವಾಗಿಟ್ಟಿರುವಂತೆ ಅವರುಯಾರದು ಬಲಾತ್ಕರಿಸಿತೋ ತಿಳಿಯಲಿಲ್ಲವೆ ಇತರು, ದಾಕ್ಷಿಣ್ಯ ಬದ್ಧವಾದ ತಮ್ಮ ನಿರ್ಣಯವು ಅನ್ಯರಿಂದಾದರಣೀಯವಾಗಲಾರದೆಂಬ ಭೀತಿಯಿಂದಲೋ ಅಥವಾ ಅದು ಅತ್ಮಪ್ರಾಗಲ್ಭ್ಯ ಭಂಜಕವಾಗುವದೆಂಬ ಅನುಮಾನಸಂದರ್ಭವೋ, ಏಕವ್ಯಕ್ತಿ ವಿಷಯಕವಾದ ನಿರ್ಣಯವು ಸಾಮಾನ್ಯೇನ ಅನ್ವಯಿಸಲ್ಪಡತಕ್ಕದ್ದಲ್ಲವೆಂಬ ಭಾವನೆಯಿಂದಲೋ ತಮ್ಮ ಶಾಸ್ತ್ರನಿರ್ಣಯದಂ ಹೊರಪಡಿಸಬದಿದ್ದಾರೆ. ಇದರ ಕಾರಣವಂ ನಾವು ಸವರೀ ವೃತ್ತಾಂತ ಪತ್ರಿಕೆಯನ್ನೇ ಕೇಳುವೆವು. ಸಮುದ್ರಯಾನ ವಿಚಾರದಲ್ಲಿ ಶ್ರೀ ಶೃಂಗೇರಿ ಸ್ವಾಮಿಗಳವರ ಅಭಿಪ್ರಾಯವು ಕೇಳಲ್ಪಡಲಿಲ್ಲವೆ, ಅವರು, ಪರ್ಣಾರಣ್ಯದಲ್ಲಿ ಕರ್ಮಾರ್ತಲಕ್ಷಣೆಯಲ್ಲಿ ಇಷ್ಟವಿಲ್ಲವೆ, ಅನ್ಯಗಳ ನಾವಶ್ಯಕವೆಂತಲೂ, ಅದಂ ತ್ಯಜಿಸುವದರಿಂದ ಪ್ರತ್ಯೇಕ ಬಾಧಕವಿಲ್ಲವೆಂತಲೂ ಅನುಮತ್ಯ ಮತ್ತಿಗೆ ಸ್ವಲ್ಪವೂ ಅಂಗೀಕರಿಸಲಿಲ್ಲವೆಂತಲೂ ಭಾವಿಸತಕ್ಕವರೆಲ್ಲರೂ ಪ್ರಸಕ್ತ ಪ್ರಯಾಣೋತ್ಸವವಂ ನಿರೀಕ್ಷಿಸದೆ ಮನಸ್ಸಿನ ಸಂಚಾರ ಮಾಡುವವರಲ್ಲಿ ಯಾವ ಅಭ್ಯಂತರವೂ ಇರುವದಿಲ್ಲವೆಂದು ತಿಳಿಸಿದಂತೆ ನಮ್ಮ ಕೇಳ್ವಿಕೆಗೆ ಪ್ರಾಸ್ತವಾಗಿ ಬುದ್ಧಿವಂತ ಪಂಡಿತ ಮಂಡಲಿಯಲ್ಲಿ ಈ ವಿಷಯ ವಿಚಾರವಾಗಿ ಶಾಸ್ತ್ರಾಧಾರಗಳನ್ನನುಸರಿಸಿ ಗ್ರಂಥರೂಪವಾಗಿ ನಿರ್ಧರವಾದ ವಿಷಯವು, ವೃತ್ತಾಂತ ಪತ್ರಿಕೆ ವಿನಾ ಮತ್ತೊಬ್ಬರಿಗೂ ತಿಳಿದಂತೆ ಕಾಣಿಸಲಿಲ್ಲವು. ಹೀಗೆ ಒಬ್ಬರಿಗೂ ತಿಳಿಯದ ಅತಿ ಗೂಢವಾದ ವಿಷಯವು ವೃತ್ತಾಂತ ಪತ್ರಿಕೆಗೆ ಯಾವ ದೇವದೂತನು ಬಂದು ಕಿವಿಯೊಳು ನುಡಿದು ಹೋದನೋ ಅದನ್ನಾದರು ತಿಳಿಸಿದರೆ ಅದರ ಮಾತುಗಳನ್ನು ಭಗವದ್ವಾಕ್ಯದಂತೆ ಭಾವಿಸಿ ಗೌರವಿಸುವೆವು. ಇದಲ್ಲದೆ ಕೇವಲ ನಿರಾಧಾರವಾದ ಮಾತುಗಳಿಂದ ಸಾಮಾನ್ಯರಂ ಮರುಳುಗೊಳಿಸುವದರಿಂದೇನು ಸಾಧಿಸುವಂತಾಯಿತೋ ತಿಳಿಯಲಿಲ್ಲವು. ಪ್ರಕೃತ ಸಂದರ್ಭದಲ್ಲಿ, ಸಮುದ್ರಯಾಯಿಗಳಾದ ಮಹಾರಾಜರು ಮತ್ತು ಅವರ ದಿವಾನರು ವಗೈರೇರ ವಿಷಯದಲ್ಲಿ ಶಾಸ್ತ್ರೀಯ ಶರಣ್ಯರಾದ, ಅಧಃಕರ್ತರಲ್ಲದ ವೈದಿಕರೂ, ದರ್ಶನ ಪರಿಪಾಲಕರಾದ ಮಠಾಧಿಪತಿಗಳೂ ಯೇನು ಭಾವಿಸಿದಾರೆಯೋ ತಿಳಿಯಲಿಲ್ಲವು. ಯಾವ ವಿಧ ನಿರ್ಣಯವಾಗಲಿ, ಯಾರ ಅಭಿಮತವಾಗಲಿ, ಕೇವಲ ಐಹಿಕ ಸುಖಾಭಿಲಾಷಿಗಳಿಗೆ ಅನಾವಶ್ಯಕವೆಂದು ನುಡಿಯುವ ಪಕ್ಷಕ್ಕೆ ನಮ್ಮ ಮಹಾರಾಜರವರನ್ನು ಅವರ ಮಂತ್ರಿವರ್ಗಾದಿಗಳನ್ನೂ ಅನ್ಯರುಚಿಯೇ ಭಾವಿಸಬೇಕಾಗಿರುವದಲ್ಲವೆ. ಅವರ ಆಚಾರವ್ಯವಹಾರಗಳೂ ಜಾತಿ ಮತ ವಿಷಯಕಗಳಿಂದ ಅವರ ಶಿಷ್ಟಮಾರ್ಗಗಳೂ ಅಚಲಿತ ಬಲದಿಂದ ವಿನಾ ಅನ್ಯಥಾ ಯೆಷ್ಟುಮಾತ್ರವೂ ಆದರಣೀಯವಾಗಲಾರವು. ವೃತ್ತಾಂತ ಪತ್ರಿಕೆ ತಿಳಿಸುವಂತೆ "ಮಹಾರಾಜರವರು ಪ್ರಜೆಗಳಿಗೆ ಇಂತಾ ಶ್ರೇಷ್ಠವಾದ ಒಂದು ಮೇಲ್ಪಂಕ್ತಿಯನ್ನು ತೋರಿಸಿದ್ದಕ್ಕಾಗಿ" ನಮಗೇ ಪತ್ರಿಕೆಯೊಂದೇ ಸಂತೋಷಪಡಬೇಕಾಗಿರುವದು.

THE PAMPARAMAYANA.

ಅರ್ಹತ ಸಿದ್ಧಾಂತಾವಲಂಬಿಯಾದ ಅಭಿನವ ಪಂಪನೆಂಬ ನಾಗಚಂದ್ರಕೃತ ರಾಮ ಚಂದ್ರ ಚರಿತ ಪುರಾಣವೆಂಬ ಗದ್ಯ ಪದ್ಯಾತ್ಮಕವಾದ ಚಂಪೂ ಪ್ರಬಂಧವಂ ಕುರಿತ ನಮ್ಮ ಅಭಿಪ್ರಾಯವು ಆಕಾರದಲ್ಲಿ ತಿಳಿಸುವಂತೆ ಹಿಂದೆಯೇ ಸೂಚಿಸಿದ್ದವಷ್ಟೆ. ಪುರಾತನವಾದ ಈ ಚಂಪೂ ಪ್ರಬಂಧವು ಅಭಿನವ ಪಂಪನೆಂಬ ಬಿರುದುಳ್ಳ ನಾಗಚಂದ್ರನೆಂಬ ಕವಿವರನಿಂದ ರಚಿಸಲ್ಪಟ್ಟದ್ದಾಗಿರುತ್ತದೆ. ಆದಿಕಾವ್ಯವೆನಿಸಿರ್ಪ ಶ್ರೀರಾಮಾಯಣವು ಪ್ರಸಿದ್ಧ ವಾಲ್ಮೀಕಿ ಮಹರ್ಷಿಯ ಕಾಲಾನಂತರ, ಮೂಲಗ್ರಂಥವಾದ ಸಂಸ್ಕೃತದಲ್ಲಿ ತಿಳಿಸಲ್ಪಟ್ಟಿರುವ ಅರ್ಥವನ್ನೇ ಕರ್ಣಾಟಕ ಭಾಷೆಯಲ್ಲಿ ಪದ್ಯರೂಪವಾಗಿ ತೊರವೆ ರಾಮಾಯಣವೆಂಬ ಅಂಕಿತದಿಂದ ಕುಮಾರವಾಲ್ಮೀಕಿಯು ರಚಿಸಿದನು. ಆದರೆ ಏತದ್ಗ್ರಂಥಕರ್ತನಾದ ಅಭಿನವಪಂಪನು ತಾದೃಶ ಮಾರ್ಗವನ್ನವಲಂಬಿಸದೆ ವಿಲಕ್ಷಣವಾದ ರೀತಿಯಿಂದ ಕ್ರಮವನ್ನವಲಂಬಿಸಿ ಈ ಗ್ರಂಥವಂ ರಚಿಸಿದಂತೆ ಸ್ಪಷ್ಟವಾಗುತ್ತದೆ. ಇದರಲ್ಲಿ ತಿಳಿಸಲ್ಪಟ್ಟಿರುವ ಕಥಾಭಾಗವು ಸಾಹಿತ್ಯರಾಗೀಗ ಯೆಲ್ಲರಾತಿಳಿದಿರತಕ್ಕ ರಾಮಾಯಣ ಕಥೆಯಂತಿರುವದಿಲ್ಲವು.

ಕಂ॥ ವಿಸ್ತರಿಪೆಗಳೆಯೆನ್ನ್ಯದೆ |
ನವ ಪೂರ್ವದೊಳಗಿಂತಿವಳಗ ಗ್ರಂಥಮಂ|
ಧರಣಿಯೊಳುಸಿರದೆಯುಕ್ತ |
ನವಾನ್ವಯದಿಂದ ಮಾತುಮಾನವ ಪರ್ವಗಳಂ ||

ಅಂದರೆ—ವಿಸ್ತಾರವಾಗಿ ಹೇಳಲ್ಪಟ್ಟ ವರ್ಧಮಾನ ತೀರ್ಥಂಕರರ ಸಾನ್ನಿಧ್ಯದೊಳು ಗೌತಮ ಗಣಧರರು ಮಗಧದೇಶ ಧರಿತ್ರಿಯಾದ ಶ್ರೇಣಿಕ ಮಹಾರಾಜನಿಗೆ ಉಪದೇಶಿಸಿದ್ದ ಕೇಳಿದ ಅಪೂರ್ವವಾದ (ಈ ರಾಮಚರಿತ್ರೆ) ಕೃತಿಕಾವ್ಯಗುಣ ವ್ಯಾಪಿಸಿರುವದಲ್ಲದೆ ಸಮಗ್ರ ಪ್ರಾಶಸ್ತ್ಯವುಳ್ಳ ದೇವತೆ" ಮುಂತಾಗಿ ಸಂಕಲ್ಪಿಸಿ "ನಾಯಕನನ್ನಾಗೆಗೈತಪಿಸ್ರನಿಗಾಗ" ಎಂದು ತಿಳಿದು ಪ್ರಯೋಜನಾರ್ಥವಾದ ರಾಮಾಯಣವಂ ಗ್ರಂಥನಾಯಕನನ್ನಾಗಿ ಅಂಗೀಕರಿಸಿ, (ಅಗಣಿತ ಪ್ರದೀಪ ಪ್ರಪಂಚವರು ಜ್ಞಾನಸಂಪನ್ನರ| ಸ್ವಗಣ ಚಿತ್ತದ ಶ್ರಮವನುಗ್ರಹಿಸಿ ಪೇಳ್ವುದುಂಟು) ರಚಿಸಿರುತ್ತಾನೆ. ಈ ಗ್ರಂಥವರ್ತನ್ನಾಶ್ರಯಿಸಿದೆ. ೬೭—೬೮ ನೇ ಪದ್ಯಗಳ ನ್ಯಾಯಾಚರಣದಲ್ಲಿ— "ಸತ್ಕವಿನಾಗಚಂದ್ರನು" "ನಾಗಚಂದ್ರವಿಬುಧ" ಎಂದು ಬರೆಯಲ್ಪಟ್ಟಿರುವದರಿಂದ ಗ್ರಂಥಕರ್ತನ ಹೆಸರು ನಾಗಚಂದ್ರನೆಂದು ಸ್ಪಷ್ಟವಾಗುತ್ತದೆ. ಇದಲ್ಲದೆ ಪ್ರತಿ ಆಶ್ವಾಸಾಂತದಗದ್ಯದಲ್ಲಿ "ಬಾಲಚಂದ್ರ ಮುನೀಂದ್ರ ಚರಣ ನಖಕಿರಣ ಚಕೋರನುಂ, ಭಾರತೀಕರ್ಣಪೂರನುಂ ಶ್ರೀಮದಭಿನವಪಂಪ ವಿರಚಿತ"ಮೆಂದು ಬರೆಯಲ್ಪಟ್ಟಿರುವದರಿಂದ, ಬಾಲಚಂದ್ರಮುನಿಯೆಂಬುವರ ಶಿಷ್ಯನೆಂತಲೂ, ಅರ್ಹತ ಸಿದ್ಧಾಂತಾವಲಂಬಿಯೆಂತಲೂ ಗ್ರಹಿಸಬಹುದಾಗಿದೆ. ಈ ನಾಗಚಂದ್ರನ ಕಾಲಕ್ಕೆ ಹಿಂದೆ ಅಂದರೆ, ಕ್ರಿಸ್ತಶಕ ೧೧ನೆಯ ಸಂವತ್ಸರದಲ್ಲಿ ಪಶ್ಚಿಮಗೋದಾವರೀ ಪ್ರಾಂತ್ಯದ ಪಂಪನೆಂಬ ಪ್ರಾಚೀನ ಕರ್ಣಾಟಕವಿಯೊಬ್ಬನಿದ್ದಂತೆಯೂ, ಆತನಿಂವಿರಚಿತವಾದ ಆದಿಪುರಾಣ, ವಿಕ್ರಮಾರ್ಜುನವಿಜಯ ಮೊದಲಾದ ಗ್ರಂಥಗಳಲ್ಲಿ ಆತನ ಚರಿತ್ರೆ ವಿಸ್ತಾರವಾಗಿ ಬರೆಯಲ್ಪಟ್ಟಿರುವಂತೆಯೂ, ಆತನ ವಿಷಯವಂ ಕುರಿತು, ನಾಗವರ್ಮ ಕೇಶಿರಾಜ ಮೊದಲಾದ ಪ್ರಸಿದ್ಧ ಪೂರ್ವ ಕವಿಗಳು ತಮ್ಮ ಗ್ರಂಥಗಳಲ್ಲಿ ಪ್ರಾಧಾನ್ಯೇನ ಪ್ರಸ್ತಾವಿಸಿದಾರೆಂತಲೂ ಅವನು "ಕವಿತಾಗುಣಾರ್ಣವ, ಸುಕವಿಜನ ಮನೋಮಾನಸೋತ್ತಂಸ ಹಂಸ, ಸುಜನೋತ್ತಂಸ ಸರಸ್ವತೀಮಣಿಹಾರ" ಮುಂತಾದ ಅಸಾಧಾರಣ ಘನತರ ಪ್ರಶಸ್ತಿಗಳಂ ಪಡೆದು ಚಾಳುಕ್ಯರ ಆಸ್ಥಾನದಲ್ಲಿ ಸನ್ಮಾನಿತನಾಗಿದ್ದಂತೆಯೂ ಮಿ॥ ರೈಸ್ ಸಾಹೇಬರವರ ಉಪೋದ್ಘಾತದಿಂ ವ್ಯಕ್ತವಾಗುತ್ತದೆ. ತತ್ಕಾಲದಲ್ಲಿ ಆತನ ವಿಚಾರವೆ ನಮಗೆ ಅನಾವಶ್ಯಕವೆಂದು ತೋರಿದಾಗ್ಯೂ ಅಭಿನವ ಶಬ್ದಾರ್ಥ ವಿವೇಚನೆ ಮಾಡುವಲ್ಲಿ ಆತನು ಇಲ್ಲಿ ಸ್ಮರಿಸಬೇಕಾದ ಅವಶ್ಯಕತೆ ಯುಂಟಾಯಿತು. ಪ್ರಸಕ್ತ ಗ್ರಂಥಕರ್ತನ ಕಾಲ ದೇಶ ವೃತ್ತಾಂತಗಳು ಸ್ಪಷ್ಟವಾಗಿ ಈ ಗ್ರಂಥದಿಂ ತಿಳಿಯಬರುವದಿಲ್ಲವು. ಆದರೆ ಇತರ ಕೆಲವು ಕಾವ್ಯ ಕಾರಣಗಳಿಂ ಪರಿಭಾವಿಸಿ ಈ ಗ್ರಂಥಕರ್ತನು ರಚಿಸಿದ್ದನು ಈ ನಾಗವರ ಮಧ್ಯ ಭಾಗದೊಳ್ ರಚಿಸಲ್ಪಟ್ಟದ್ದಾಗಿರಬಹುದೆಂದು ಮಿ॥ ರೈಸ್‌ವರು ನಿಶ್ಚಯಿಸಿರುತ್ತಾರೆ. ನಾಗಚಂದ್ರನು ಈ ಕರ್ಣಾಟಕ ಭಾಷೆಯಲ್ಲಿ ಇನ್ನು ಹಲವು ಗ್ರಂಥಗಳಂ ರಚಿಸಿರುತ್ತಾನೆ. ಗೀರ್ವಾಣ ಕರ್ಣಾಟ ಭಾಷೆಗಳೆರಡರಲ್ಲಿಯೂ ಆತನು ಪರಿಣತನೆಂಬುದಕ್ಕೆ ಪ್ರದರ್ಶನಕ್ಕೆ ಶಬ್ದಾರ್ಥ ಪರಿಷ್ಕಾರ ವಿಷಯ ವೈಲಕ್ಷಣ್ಯದಿಂ ಸಂಪಾದಿತವಾದ ಶಿರಶ್ಚಾಲನೀಯವಾದ ಪ್ರಸಕ್ತ ರಾಮಚಂದ್ರಚರಿತ ಪುರಾಣವೇ ತಕ್ಕ ನಿದರ್ಶನವಾಗಿರುತ್ತದೆ.

ಏತದ್ಗ್ರಂಥದಲ್ಲಿ ಪ್ರತಿಪಾದ್ಯವಾದ ಶ್ರೀರಾಮವೃತ್ತಾಂತವು "ವ್ಯಾಮಮಧುರ ಕಾವ್ಯಮನ್ನು ದಿವ್ಯಭಾಷೆಯಿಂ" ಅಂದರೆ ದಿವ್ಯಭಾಷೆಯಾದ ಸಂಸ್ಕೃತದಲ್ಲಿ ಆದಿದೇವನ ಸಾನ್ನಿಧ್ಯದೊಳು ಪುರುಷರಮೇಶ್ವರನು ಆದಿಚಕ್ರಧರನೀಗೆ ಸ್ವರೂಪವಾಗಿ ಕ್ರಮವಾಗಿ ತಿಳಿಸಿದನು. ಅಲ್ಲಿಂದ ಆ ಮಾ ಪರಂಪರಾಗತವಾಗಿ ವರ್ಧಮಾನ ತೀರ್ಥಂಕರರಲ್ಲಿ ಬಂದು ನೆಲಸಿತು. ಅವರು ಅದಂ ಶ್ರೇಣಿಕನಿಗೆ ಪ್ರಸಿದ್ಧಗೊಳಿಸಿದರು... ಉಪದೇಶಿಸಿದರು, ಸರ್ವಜ್ಞಾನವನ್ನು ಮಹಾನುಭಾವರಾದ ಶ್ರೇಣಿಕನಿಗೆ ಉಪದೇಶಿಸಿದರು. ಈ ಪ್ರಾಕ್ಕಥೆಯು ಅವಿಚ್ಛಿನ್ನ ಗುರುಪರಂಪರಾಗತವಾಗಿ ಸಿದ್ಧಿಯನ್ನೈದಿ ಕೀರ್ತಿಭಟ್ಟಾರಕ, ನಂದಿಮುನಿ, ಕವಿಪರಮೇಷ್ಠಿ, ರವಿಸೇನಾಚಾರ್ಯ, ವೀರಸೇನ ಸಿದ್ಧಸೇನ, ಪದ್ಮನಂದಿ, ಗುಣಭದ್ರ), ಸಕಲಕೀರ್ತಿ ಪ್ರಭೃತಿಗಳಿಂದ ಪ್ರಚಾರದೊಳು ತಪ್ಪಿತ್ತು. ಚಾವುಂಡರಾಯ, ನಾಗಚಂದ್ರ, ವೀರಸೇನಂದ ಸಿದ್ಧಾಂತಿ, ಕುಮುದೇಂದು, ನ್ಯಾಯಸೇನ ಮೊದಲಾದವರು ರಚಿಸಿದ ಪುರಾಣಗಳಲ್ಲಿ ಸಿದ್ಧ ಈ ವೃತ್ತಾಂತವು ಗರ್ಭಿತವಾಗಿರುತ್ತದೆ. ಏತದ್ವಾದ ಕೆಲವು ಕಾರಣಗಳಿಂದಲೋ ರಾಮಕಥೆಯು ಜೈನ ಮತೀಯರ್ಯ್ಯದೆನೆಸ ಬೇಕಾಗಿರುತ್ತದೆ. ರಾಮಚರಿತ್ರವು ಬೌದ್ಧಮತೀಯರಿಂದ ಸ್ವೀಕರಿಸಲ್ಪಟ್ಟಿದೆಂದು ಪಾಶ್ಚಾತ್ಯರಲ್ಲಿ ಕೆಲವರು ಯೂರೋಪಿಯನ್ ಪಂಡಿತರು ತಾತ್ಪರ್ಯಪಟ್ಟಿರುತ್ತಾರೆ. ಆರ್ಯ ನಗ್ಗೀರೇರು ಇನ್ನು ಕೆಲವರು ಬ್ರಾಹ್ಮಣ ಸಂಬಂಧವೆಂದೆಣಿಸುತ್ತಾರೆ. ಈ ಕಥೆಯು ಕೆಲವರು ಪೌರಾಣಿಕವೆಂತಲೂ ಮತ್ತು ಕೆಲವರು ರೂಪಕವೆಂತಲೂ ಭಾವಿಸಿದಾರಲ್ಲದೆ ಇದರ ಕಾಲನಿರ್ಣಯವಂ ಕುರಿತು ವಿಚಾರಮಾಡುವಾಗ್ಯೆ ಸರ್ ಮಾನಿಯರ್ ವಿಲಿಯಮ್ಸ್‌ಯವರು, ರಾಮಾಯಣದಲ್ಲಿ ಕೆಲವು ಭಾಗವಾಗಲಿ, ಅಥವಾ ಸಂಪೂರ್ಣವಾಗಲಿ ಕ್ರಿಸ್ತಶಕಕ್ಕೆ ಪೂರ್ವದ ನೆಯ ಶತಮಾನದೊಳು ಇಂದ್ರದೇಶದಲ್ಲಿ ಪ್ರಚಾರದೊಳಿದ್ದರಬೇಕೆಂದು ತಿಳಿಸುತ್ತಾರೆ. ಬೌದ್ಧರು ತಿಳಿಯುವ ಕಥಾಭಾಗದಲ್ಲಿ ಸೀತಾಪಹರಣ ಲಂಕಾ ದಿಗ್ವಿಜಯಾದಿ ಮನೋಹರವಾದ ಪ್ರಸಕ್ತಿಯಾವದೂ ಇರುವದಿಲ್ಲವು. ರಾಮಾಯಣ ಕಾಲನಿರ್ಣಯ ವಿಷಯದಲ್ಲಿ ಪ್ರಸಿದ್ಧರಾದ ಪ್ರೊಫೆಸರ್ ವೇಬರ್ ಮೊದಲಾದ ಯೂರೋಪಿಯನ್ ಪಂಡಿತರು ಪಡೆದ ಅಭಿಪ್ರಾಯಗಳಂ ಮೊನ್ನೆಸ್ವೀಕರಿಸಿರುವ ಮತ್ತು ಸೂಕ್ಷ್ಮವಾಗಿ ಮುಂದಿನ ಭಾಗದಲ್ಲಿ ತಿಳಿಸಿರುತ್ತೇವೆ. ಆದರೆ ಈ ವಿಷಯದಲ್ಲಿ ಯಾರು ಯಾಗೆ ಅಭಿಪ್ರಾಯ ಪಟ್ಟಾಗ್ಯೂ ಈಗ ವಿಚಾರ ರ್ಹವಾಗಿರುವ ಪಂಪ ರಾಮಾಯಣವು ಸಂಪೂರ್ಣವಾಗಿ ಜೈನ ಮತೀಯನ್ನಾದುದಾಗಿಯೂ, ಅದರಲ್ಲಿ ಪ್ರತಿಪಾದ್ಯಗಳಾದ ಪಾತ್ರಗಳೆಲ್ಲವೂ ಅರ್ಹತ ಸಿದ್ಧಾಂತವನ್ನವಲಂಬಿಸಿದವಾಗಿಯೂ ಕಂಡುಬರುತ್ತವೆ.

ಈ ಕಥೆಯು ಸ್ಥೂಲವಾದದ್ದು ವಾಲ್ಮೀಕಿ ಮಹರ್ಷಿ ಪ್ರೋಕ್ತವಾದ ಶ್ರೀಮದ್ರಾಮಾಯಣ ಕಥೆಗೆ ಅನುಗುಣವಾದುದಾಗಿದ್ದರೂ ಅದರ ಅಂತರಾಳಕ ವಿಷಯಗಳು ಕಿಂಚಿದಂಗ ಭಿನ್ನವಾಗಿಯೂ, ಅನ್ಯಥಾ ಪ್ರೋಕ್ತವಾಗಿಯೂ, ನವೀನಾಕೃತಿ ಯುಳ್ಳವಾಗಿಯೂ ಇರುತ್ತವೆ. ಶ್ರೀರಾಮನು ಕಾರಣ ಪುರುಷನೆಂತಲೂ, ಯಾವದೋ ಒಂದು ಮುಖ್ಯಕಾರ್ಯ ನಿರ್ವಹಣಾರ್ಥ ಅವತರಿಸಿದಂತಾ ಸುಗ ಸಾಧಾರಾಮನೆಂತಲೂ ಬಿಲ್ಲರೂ ನಂಬಿದ್ದಾರೆ. ರಾಮಲಕ್ಷ್ಮಣರಿಬ್ಬರೂ ಅಷ್ಟಮ ಬಲದೇವ ವಾಸುದೇವರೆಂತಲೂ, ಅಷ್ಟಮ

ಪಕ್ಷಪಾತಿಗಳೂ ಅಲ್ಲ, ಬಾಲಾಭ್ಯಾಸರೂ ಅಲ್ಲ, ಪ್ರವೀಣರ ಅಭಿಪ್ರಾಯ ದಿಕ್ಕಾಗಿದ್ದಾರೆ.

ಈ ರಾಮಚಂದ್ರ ಚರಿತ ಪುರಾಣವು ೧೬ ಆಶ್ವಾಸಗಳುಳ್ಳದ್ದಾಗಿರುತ್ತದೆ, ಅವುಗಳ್ಯಾವುವೆಂದರೆ:

೧ ಪೀಠಿಕಾಪ್ರಕರಣಂ
೨ ದಶರಥ ವಂಶವರ್ಣನಂ,
೩ ದಶರಥ ಪುತ್ರೋತ್ಪತ್ತಿಯ ವರ್ಣನಂ
೪ ಜನಕಜನಕ ವರ್ಣನಂ
೫ ಸೀತಾಸ್ವಯಂವರ ವರ್ಣನಂ,
೬ ದಶರಥವೈರಾಗ್ಯ ವರ್ಣನಂ
೭ ಅರಣ್ಯ ವರ್ಣನಂ
೮ ಚರಣಯುಗಳ ದರ್ಶನಂ,
೯ ಸೀತಾಹರಣ ವರ್ಣನಂ
೧೦ ದಶವದನ ವಂಶವರ್ಣನಂ
೧೧ ಲಂಕಾಪುರದ ವರ್ಣನಂ
೧೨ ಶ್ರೀರಾಮಚಂದ್ರ ಲಂಕಾದಿಗ್ವಿಜಯ ಪ್ರಯಾಣ ವರ್ಣನಂ
೧೩ ಮಹಾಯುದ್ಧ ವೃತ್ತಾಂತ ವರ್ಣನಂ,
೧೪ ರಘುವೀರ ವಿಜಯ ವರ್ಣನಂ
೧೫ ಸೀತಾಪರಿತ್ಯಾಗ ವರ್ಣನಂ
೧೬ ನಿರ್ವಾಣ ಕಲ್ಯಾಣೋತ್ಸವ ವರ್ಣನಂ

ಶ್ರೀಮದ್ವಾಲ್ಮೀಕಿ ಮಹರ್ಷಿಪ್ರೋಕ್ತವಾದ ಸಂಸ್ಕೃತ ರಾಮಾಯಣದಲ್ಲಿ ತಿಳಿಸಲ್ಪಟ್ಟಿರುವ ಕಥಾಭಾಗವನ್ನೂ ಜೈನರ ಈ ರಾಮಚರಿತವನ್ನೂ ಓದಿ ನೋಡಿದರೆ ಪರಸ್ಪರ ಇರುವ ವ್ಯತ್ಯಾಸಗಳೂ ಕಥಾ ಸಂಬಂಧ ಭಾಗಗಳು ಸ್ಪಷ್ಟವಾಗಿ ಗೋಚರವಾಗುವುದು. ಈ ಗ್ರಂಥವು ಜೈನ ಮತದವರು ಅಭ್ಯಾಸದಲ್ಲಿ ಕರ್ತವ್ಯ ಪಠಿಸುವಂಥಾ ದೋಷರಹಿತವಾದ ಗ್ರಂಥವಾಗಿದೆ. ಅದರ ಕವಿಯು ಪರಮ ಪಂಡಿತನು. ಇದರಲ್ಲಿ ಬಹಳ ಚಮತ್ಕಾರ ಪ್ರಯೋಗಗಳೂ, ವಿಶೇಷ ಯಮಕಾದಿಗಳೂ, ವ್ಯಾಕರಣ ನಿಯಮಗಳೂ ಸರಿಯಾಗಿ ಕಾಣಬರುತ್ತವೆ. ಅಂತಹ ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿರುವುದು ಅತ್ಯಂತ ಶ್ಲಾಘನೀಯ ಕಾರ್ಯವು. ಪ್ರತಿಯೊಂದು ಪುಟದ ಕೆಳಗೂ ಪಾಠಾಂತರಗಳನ್ನು ಕೊಟ್ಟಿದ್ದಾರೆ. ಪರಮ ಜೈನರಿಗೆ ಬಹಳ ಉಪಯುಕ್ತವಾಗುವುದು. ಇದನ್ನು ಉತ್ತಮ ಮಾರ್ಗದಲ್ಲಿ ಅಚ್ಚು ಮಾಡಿಸಿರುತ್ತಾರೆ. ಇವರು ಇದಕ್ಕೆ ಒಂದು ಉಪೋದ್ಘಾತವನ್ನು ಬರೆದಿದ್ದಾರೆ. ಅದರಲ್ಲಿ ಕವಿಯ ಕಾಲ, ಚರಿತ್ರೆ, ಗ್ರಂಥಗಳು ಮೊದಲಾದ ವಿಷಯಗಳನ್ನು ಚರ್ಚಿಸಿದ್ದಾರೆ. ಈ ಗ್ರಂಥ ಕವಿಯ ಚಮತ್ಕಾರದಿಂದ ಸಂಸ್ಕೃತ ಪ್ರಯೋಗಗಳಿಂದಲೂ ಕೂಡಿ, ಅಲಂಕಾರಗಳಿಂದ ಶೋಭಿತವಾಗಿ, ಗದ್ಯಪದ್ಯಗಳಿಂದ ಕೂಡಿರುವ ಚಂಪೂ ಕಾವ್ಯವಾಗಿರುತ್ತದೆ. ವ್ಯಾಕರಣ ಛಂದಸ್ಸು ಅಲಂಕಾರ ಮೊದಲಾದ ಶಾಸ್ತ್ರಗಳ ಪರಿಚಯವುಳ್ಳವರಿಗೆ ಇದು ಬಹು ಉಪಯುಕ್ತವಾಗಿರುವುದು. ಪ್ರಾಚೀನ ಕನ್ನಡ ಗ್ರಂಥಗಳ ಅಭ್ಯಾಸಕ್ಕೆ ಉಪಯುಕ್ತವಾದ ಈ ಗ್ರಂಥವನ್ನು ಜನರು ಕೊಂಡು ಓದಿ ಪ್ರೋತ್ಸಾಹಿಸಬೇಕಾಗಿದೆ. ಈ ಕನ್ನಡ ಗ್ರಂಥವು ಮುದ್ರಿತವಾದುದರಲ್ಲಿ ಮಿ|| ರೈಸ್ ಸಾಹೇಬರವರ ಕೃಪೆಯೂ ಸಹಾಯವೂ ಇದ್ದುದರಿಂದ ಅವರು ಉಪಕಾರಿಗಳು. ಗ್ರಂಥದ ಬೆಲೆ ಮಿತವಾಗಿರುತ್ತದೆ. ಇದರ ಪೀಠಿಕೆಯಲ್ಲಿ ಗ್ರಂಥಕರ್ತನ ಕಾಲ ಮೊದಲಾದ ವಿಷಯಗಳು ಸುಲಭವಾದ ರೀತಿಯಲ್ಲಿ ತಿಳಿಸಲ್ಪಟ್ಟಿವೆ. ಈ ಗ್ರಂಥದ ಪರಿಷ್ಕರಣ ವಿಷಯದಲ್ಲಿ ಅವರ ಆಪ್ತ ಪ್ರಧಾನಪಂಡಿತರಾದ ಶ್ರೀಮಾನ್ ಪದ್ಮರಾಜಪಂಡಿತರೂ ಶ್ರೀನಿವಾಸಯ್ಯಂಗಾರ್ಯರೂ ಮಾಡಿದ ಸಹಾಯವನ್ನು ಮೈಸೂರಿನವರು ಪ್ರಶಂಸಿಸಿ ಉಪಕಾರ ಸ್ಮರಿಸಿ, ಅವರ ಯೋಗ್ಯತೆಯನ್ನು ಪ್ರಕಟಿಸುತ್ತಿದ್ದಾರೆ. ಮುದ್ರಿತ ಕರ್ನಾಟಕ ಭಾಷಾಗ್ರಂಥಗಳು ಬಹಳ ವಿರಳವಾಗಿ ದೊರೆಯುತ್ತಿರುವಲ್ಲಿ ಇಂಥಾ ಗ್ರಂಥ ಪರಿಶೋಧಕರಾದ ಮಹಾಶಯರು ಮಾಡುವ ಉಪಕಾರಕ್ಕೆ ನಾವು ಬಹಳ ಕೃತಜ್ಞರಾಗಿರುವುದರಿಂದ ಪ್ರೋತ್ಸಾಹ ಕೊಡಬೇಕಾದದ್ದು ಬಹು ಅವಶ್ಯಕವಾಗಿದೆ. ಮೈಸೂರು ಶಿಕ್ಷಣ ಇಲಾಖೆಯ ಡೈರೆಕ್ಟರ್ ಮಿಸ್ಟರ್ ರೈಸ್ ಸಾಹೇಬರವರು ಕನ್ನಡ ಭಾಷಾ ಪ್ರಾಚೀನ ವಿಷಯದಲ್ಲಿ ಈ ದೇಶೀಯರಿಗೆ ಇದುವರೆಗೆ ಮಾಡಿರುವ ಅತ್ಯಧಿಕ ಉಪಕಾರವು ಅನ್ಯಾದೃಶವಾಗಿರುತ್ತದೆ. ಇದಲ್ಲದೆ ಅವರಿಗೆ ಇಂತಹ ಅಪೂರ್ವ ವಿಷಯಗಳಲ್ಲಿ ಸಾಮರ್ಥ್ಯವೂ ಆಸಕ್ತಿಯೂ ಇರುವುದರಿಂದ ಅವರ ಕೃತಿಗಳು ಬಹು ವಿದ್ವಜ್ಜನರಿಂದ ಪ್ರಶಂಸಿಸಲ್ಪಟ್ಟಿವೆ. ಇಲ್ಲಿ ನಾವು ಅವರ ಪ್ರತ್ಯೇಕ ಪ್ರಶಂಸೆ ಮಾಡಬೇಕಾದ ಅವಶ್ಯಕತೆ ಇಲ್ಲವು. ಶ್ರೀಮಾನ್ ಶ್ರೀನಿವಾಸಾಚಾರ್ಯರ ಯೋಗ್ಯತೆಯನ್ನು ನಾವು ಚೆನ್ನಾಗಿ ಬಲ್ಲೆವು. ಅವರ ವಿಷಯದಲ್ಲಿ ಮಿಸ್ಟರ್ ರೈಸ್ ಸಾಹೇಬರವರು ವ್ಯಕ್ತಪಡಿಸಿರುವ ಅಭಿಪ್ರಾಯವು ಸಂಪೂರ್ಣವಾಗಿ ಸರಿಯಾಗಿರುತ್ತದೆ. ಈ ಕೆಲಸದಲ್ಲಿ ಸಹಾಯಕರಾದ ವಿದ್ವಾಂಸರು ಸಹ ಕರ್ಣಾಟಕ ಶಬ್ದಾನುಶಾಸನವೆಂಬ ಅತ್ಯಂತ ಶ್ರೇಷ್ಠವಾದ ಗ್ರಂಥವನ್ನು ವ್ಯಾಖ್ಯಾನ ಸಹಿತ ಪರಿಷ್ಕರಿಸಿ ಪ್ರಕಟಿಸಿರುತ್ತಾರೆ. ಕರ್ಣಾಟಕ ಕವಿಗಳ ಚರಿತ್ರೆಯನ್ನೂ, ಅವರ ಕಾಲವನ್ನೂ ಅವರು ರಚಿಸಿದ ಗ್ರಂಥಗಳನ್ನೂ, ಆ ಗ್ರಂಥಗಳ ವಿಷಯವನ್ನೂ ತಿಳಿಸುವ ವಿಷಯದಲ್ಲಿ ಬಹಳ ಶ್ರಮಪಟ್ಟಿದ್ದಾರೆ. ಈ ಕೆಲಸವು ಕರ್ನಾಟಕ ವಾಙ್ಮಯದ ಚರಿತ್ರೆಗೆ ಬಹಳ ಉಪಯುಕ್ತವಾಗಿರುವುದರಿಂದ ಇಂಥಾ ಮಹನೀಯರ ಸಾಹಸ ಪ್ರಶಂಸನೀಯವು. ಈ ದೇಶದ ಆದ್ಯ ಗ್ರಂಥಗಳು ಪ್ರಚಾರ ಹೊಂದುವುದಕ್ಕೆ ಇವರು ಅನುಭವಿಸುತ್ತಿರುವ ಕಷ್ಟವು ಶ್ಲಾಘ್ಯವು. ಶ್ರೀಮನ್ಮಹಾರಾಜರವರ ಸರ್ಕಾರದವರು ಅವರ ಪ್ರಯತ್ನವನ್ನು ಪ್ರೋತ್ಸಾಹಿಸುವ ರೀತಿಯಿಂದ ಪ್ರಶಂಸಿಸಿ ಗೌರವಿಸುವುದು ಅವರ ಯೋಗ್ಯತೆಗೆ ತಕ್ಕುದಾಗಿರುವುದು.

LOCAL AND PROVINCIAL NEWS.
ಬೆಂಗಳೂರು ಮತ್ತು ಸ್ಥಳೀಕ ವರ್ತಮಾನಗಳು.

The University Examinations.—ಈ ತಿಂಗಳ ೧೫ನೇ ತಾರೀಖಿನಲ್ಲಿ ಪ್ರಾರಂಭವಾದ ಮದರಾಸ್ ಯೂನಿವರ್ಸಿಟಿಗೆ ಸೇರಿದ ಎಫ್. ಎ. ಮತ್ತು ಮೆಟ್ರಿಕ್ಯುಲೇಷನ್ ಪರೀಕ್ಷೆಗಳು ನಾಳೆ ವಿವರ ಪೂರೈಸಲಾಗುವುವು.

H. H. the Maharaja.—ಶ್ರೀಮನ್ಮಹಾರಾಜರವರು ನೆನ್ನೆ ದಿವಸ ಇಲ್ಲಿಗೆ ಚಿತ್ತೈಸಿದರು. ಬಹಳ ಜನರಲ್ಲಿ ಕಲ್ಕತ್ತೆಗೆ ಪ್ರಯಾಣವಾದರು. ಇವರು ಮದರಾಸಿನಲ್ಲಿ ದಯಮಾಡಿದ್ದ ಕಾಲದಲ್ಲಿ ಅಲ್ಲಿನ ಗವರ್ನರವರ ಸಂದರ್ಶನಾರ್ಥ ದಯಮಾಡಿದ್ದರು.

Mr. Knight.—ಹಾಸನ ಡಿಸ್ಟ್ರಿಕ್ಟ್ ಪ್ರೊಬೇಷನ್ ಅಸಿಸ್ಟೆಂಟ್ ಕಮೀಷನರಾದ ಮಿ|| ನೈಟ್ ಸಾಹೇಬರು, ವ್ಯಾಧಿಯಿಂದ ಪೀಡಿತರಾಗಿ ಮೈಸೂರಿಗೆ ದಯಮಾಡಿದ್ದ ಕಾಲದಲ್ಲಿ ಹಾಸನ ಜಾರಿ ರಜ ಕೊಡಲು ಅಪ್ಪಣೆಯಾಗಿ ಚಿಕಿತ್ಸೆಯ ನಿಮಿತ್ತ ಮದರಾಸು ಜನರಲ್ ಆಸ್ಪತ್ರೆಯಲ್ಲಿರುವರೆಂದು ಕೇಳುತ್ತೇವೆ.

The Weather.—ಮಳೆ ವಿಷಯದಲ್ಲಿ ಇತ್ತೀಚೆಗೆ ಯಾತರ ವಿಷಯವೂ ಇಲ್ಲವು. ಪರಂತು ಕಳೆದ ಬೃಹಸ್ಪತಿವಾರದ ದಿನ ಸ್ವಲ್ಪ ಹೊತ್ತು ಮಾತ್ರ ಭೂಮಿ ನೆನೆಯುವಷ್ಟು ಮಳೆ ಬಿತ್ತು. ಇದು ಅದೇ ದಿನ ಮದರಾಸಿನಲ್ಲಿ ಬಿದ್ದ ಬಿರುಗಾಳಿಯ ಪರಿಣಾಮವೆಂದು ಹೇಳುತ್ತಾರೆ. ಬಿರುಗಾಳಿಯಿಂದ ಅಲ್ಲಿ ಯಾವ ನಷ್ಟವೂ ಸಂಭವಿಸಲಿಲ್ಲವು. ಇದರ ವಿಷಯ ಪೂರ್ತಿಯಾಗಿ ಮತ್ತೊಂದು ಕಡೆ ತಿಳಿಸಿರುತ್ತೇವೆ.

Introduction of a regulation.—ಈ ದೇಶದೊಳು ಯಂತ್ರದ ಕಾರ್ಖಾನೆಗಳು ದಿನೇ ದಿನೇ ವೃದ್ಧಿಯಾಗುತ್ತ ಬರುವುದರಿಂದ ಅವುಗಳೊಳು ಕೆಲಸಮಾಡುವ ಕೂಲೀ ಜನರ ರಕ್ಷಣೆಗೋಸ್ಕರ ಈ ಚಾಲಸೀರಾಯ ಪರ್ವಕಿ ವಿಷಯಗಳನ್ನು ನಿರ್ಧರಿಸಿ ಇಂಡಿಯಾ ಗವರ್ನಮೆಂಟಿನವರು ರಚಿಸಿ ಜಾರಿಯೊಳು ತಂದಿರುವ ಇಂಡಿಯನ್ ಫ್ಯಾಕ್ಟರಿಸ್ ಆಕ್ಟೆಂಬ ಕಾನೂನನ್ನು ಮಹಾರಾಜಾ ಸರ್ಕಾರದವರು ಕೆಲವು ಬದಲಾವಣೆಗಳೊಡನೆ, ಇಲ್ಲಿ ಜಾರಿಯೊಳು ತರುವವರಾಗಿದ್ದಾರೆಂದು ಕೇಳುತ್ತೇವೆ.

Food grains.—ಈಗ ಕೆಲವು ದಿನಗಳಲ್ಲಿ ಮತ್ತು ದುರ್ಭಿಕ್ಷ ಸಂಭವದಲ್ಲಿ ವರ್ಷಾಭಾವದಿಂದ ಫಸಲೆಗಳಲ್ಲದೆ ಹೋಗಿ ಇಲ್ಲಿಂದ ಅಲ್ಲಿಗೆ ಧಾನ್ಯಗಳು ಅಧಿಕವಾಗಿ ರಫ್ತಾಗುತ್ತಲಿರುವುದರಿಂದ ಇಲ್ಲಿಯೂ ಆಹಾರ ಧಾನ್ಯಗಳ ಧಾರಣೆಗಳು ದಿನೇ ದಿನೇ ಹೆಚ್ಚುತ್ತಲಿವೆ. ಈ ದೇಶದಲ್ಲಿ ಅನೇಕ ಪ್ರದೇಶಗಳೊಳು ಮಳೆ ಅಲ್ಪವಾಗಿ ಫಸಲೆಗಳು ಕೆಲವು ಮಟ್ಟಿಗೆ ಕೆಟ್ಟುಹೋದದರಿಂದ ಇಲ್ಲಿನ ವ್ಯಾಪಾರಿಗಳು ಮುಂದಿನ ಸಮ್ಮತ ಪರಿಣಾಮವು ಯೋಚಿಸಿ ವಿಶೇಷವಾಗಿ ಧಾನ್ಯವನ್ನು ಕೊಡದೆ ಬಿಗಿ ಹಿಡಿಯುತಲಿರುವುದರಿಂದ ಧಾನ್ಯಗಳು ಹೀಗೆ ವಿಶೇಷವಾಗಿ ಬರುತ್ತ ನಿಂತು ಹೋಗಿವೆ. ಏತಕ್ಕೆನೆ ಕಾಲಸ್ಥಿತಿಯು ಪ್ರೋತ್ಸಾಹಕರವಾಗಿಲ್ಲವು.

The Yesvantapoor-Doddaballapoor Section.—ನವಂಬರ್ ೧೯ನೇ ತಾರೀಖು ಮೊದಲುಗೊಂಡು ಬೆಂಗಳೂರು ಹಿಂದೂಪುರ ರೈಲ್ ಮಾರ್ಗದಲ್ಲಿ ದೊಡ್ಡಬಳ್ಳಾಪುರದವರೆಗೆ ರೈಲುಗಾಡಿಗಳು ಸಂಚರಿಸಲಿಕ್ಕೆ ಪ್ರಾರಂಭವಾಗಿ ಇದಕ್ಕೆ ಸಂಬಂಧಪಟ್ಟ ಪ್ರಯಾಣ ನಿಬಂಧನೆಗಳು ಪ್ರಕಟಿಸಲ್ಪಟ್ಟವು. ಪ್ರತಿನಿತ್ಯವೂ ಬೆಳಿಗ್ಗೆ ೯ ಘಂಟೆ ೫ ನಿಮಿಷಗಳಿಗೆ ಟ್ರೈನ್ ಯಶವಂತಪುರದವರೆಗೆ ಹೋಗುತ್ತದೆ. ಅಲ್ಲಿಂದ ಬೆಳಿಗ್ಗೆ ೬ ಘಂಟೆಗೆ ಒಂದು ಟ್ರೈನ್ ಹೊರಟು ಈ ಸ್ಟೇಷನಿಗೆ ೮ ಘಂಟೆಗೆ ಬರುತ್ತದೆ. ಇದನ್ನು ಅನುಸರಿಸಿ ಬೆಂಗಳೂರು ಅಲಸೂರಿನ ಮಾರ್ಗದಲ್ಲಿ ಸಹ ಗಾಡಿಯ ಸಂಚಾರ ಕಾಲವು ಸ್ವಲ್ಪ ಬದಲಾಯಿಸಲ್ಪಟ್ಟಿರುತ್ತದೆ. ತುಮಕೂರು ಗಾಡಿಯು ೯ ಘಂಟೆ ೧೦ ನಿಮಿಷಗಳಿಗೆ ಈ ಊರಿಂದ ಹೊರಟು ಸಾಯಂಕಾಲ ೬ ಘಂಟೆ ೧೦ ನಿಮಿಷಗಳಿಗೆ ತುಮಕೂರಿಗೆ ತಲುಪುತ್ತದೆ. ಅಲ್ಲಿಂದ ೪೫ ೦ ಬೆಳಿಗ್ಗೆ ಹೊರಟು ಸಾಯಂಕಾಲ ೪ ಘಂಟೆ ೪೫ ನಿಮಿಷಗಳಿಗೆ ಈ ಸ್ಟೇಷನಿಗೆ ಬಂದು ಸೇರುತ್ತದೆ. ವಿವರಗಳನ್ನು ಅಪೇಕ್ಷಿಸುವವರು ರೈಲ್ವೆ ಟೈಂಟೇಬಲ್ ನೋಡಿ ತಿಳಿದುಕೊಳ್ಳಬೇಕು.

Expected official changes.—ಅಮೃತ್ ಮಹಲ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮಿ|| ಎ. ಅರ್. ಸುಬ್ಬರಾಯರವರು ಕಂಟ್ರೋಲರ್ ಕೆಲಸದ ಚಾರ್ಜನ್ನು ವಹಿಸುವರೆಂತಲೂ, ಇದುವರೆಗೂ ಮಿ|| ಸೀತಾರಾಮಯ್ಯನವರು ಅದನ್ನು ವಹಿಸಿದ್ದರು ಎಂದು ಕೇಳುತ್ತೇವೆ. ಇವರು ಅರಮನೆ ಕಛೇರಿಯ ಕೆಲಸಕ್ಕೆ ಹೋಗುವರೆಂತಲೂ ತಿಳಿಯಬರುತ್ತದೆ.—ಜಿ.

Loss of currency notes.—ಕಳೆದ ಶನಿವಾರದ ದಿನ ಈ ಪ್ರಾಂತದಲ್ಲಿರುವ ಮದರಾಸ್ ಬ್ಯಾಂಕಿನಲ್ಲಿ ೫೦೦ ರೂಪಾಯಿಗಳ ಬಾಬತು ಒಂದು, ೧೦೦ ರೂಪಾಯಿಗಳ ಬಾಬತು ನಾಲ್ಕು ನೋಟುಗಳು ಕಳೆದುಹೋದವು.—ಜಿ.

Elephant catch.—ಇತ್ತೀಚೆಗೆ ಕೆ. ಜಿ. ಎಫ್. ಬಳಿ ೨ ಘಂಟೆ ಸಮಯದಲ್ಲಿ ೧೯ನೇ ನಂಬರು ಖೆಡ್ಡಕ್ಕೆ ೪೫ ಆನೆಗಳು ಬಿದ್ದಿವೆ. ಇವುಗಳನ್ನು ಹಿಡಿಯುವ ಕೆಲಸ ಬಹು ಉತ್ಸಾಹದಿಂದ ನಡೆಸಲ್ಪಟ್ಟಿತು. ಮಿ|| ಶ್ರೀನಿವಾಸಯ್ಯಂಗಾರ್ಯರವರು ವಿಶೇಷ ಜಾಗರೂಕತೆಯಿಂದ ಮಾಡಿದರೆಂದು ವರ್ತಮಾನಪತ್ರಗಳಲ್ಲಿ ಪ್ರಕಟವಾಗಿದೆ.—ಜಿ.

Mr. C. Srinivasa Iyengar.—ಮೇಲ್ಕಂಡ ಶ್ರೀನಿವಾಸಯ್ಯಂಗಾರ್ಯರು ಈ ತಿಂಗಳ ೧೩ನೇ ತಾರೀಖಿನ ದಿವಸ ಚಿಕ್ಕಪೇಟೆ ಗರ್ಲ್ಸ್ ಸ್ಕೂಲ್ ಬಹುಮಾನ ವಿತರಣೆಯ ದಿನ ರೈಲ್ವೆ ಸ್ಟೇಷನಿಗೆ ಅನೇಕ ಜನರು ಯಾತ್ರೆಗಳೂ ಸ್ತ್ರೀ ಮತ್ತು ಪುರುಷರೂ ಬಹಳವಾಗಿ ಬಂದು ಅವರ ದರ್ಶನ ಮಾಡಿದರು. ಬಹು ಜನರು ಬೀಳ್ಕೊಳ್ಳಲು ಸ್ಟೇಷನಿನವರೆಗೂ ಹೋಗಿ ಅವರನ್ನು ಪುಷ್ಪಹಾರಗಳಿಂದ ಸತ್ಕರಿಸಿ ಕಳುಹಿಸಿದರು. ಈ ಶ್ರೀನಿವಾಸಯ್ಯಂಗಾರ್ಯರು ಪ್ರಜೆಗಳಿಗೆ ಹಿತವನ್ನುಂಟುಮಾಡಿ ಹೋಗಿದ್ದ ಜನಗಳು ಪರಸ್ಪರ ವಿಯೋಗದಿಂದ ಬಹಳ ವ್ಯಸನಪಡುತ್ತ ಇದ್ದರು.—ಜಿ.

THE MYSORE GAZETTE.
ಮೈಸೂರು ಗೆಜೆಟ್.

ಶ್ರೀಮನ್ ಮಹಾರಾಜ ರಾಜಶ್ರೀ ಬಹದೂರರವರ ಸರ್ಕಾರದಿಂದ ಹೊರಡಿಸಲ್ಪಟ್ಟ ಪ್ರಕಟನೆಗಳು.

ನಂ|| ೨೯೪೧–೧ ೧೮೯೧–೯೨ ತಾರೀಖು ೭ ನವಂಬರ್— ಮೈಸೂರ್ ಸಿವಿಲ್ ರೆಗ್ಯುಲೇಷನ್‌ಗಳ ೧೨೧ನೇ ಆರ್ಟಿಕಲ್ ಅನುಸರಿಸಿ, ಬೆಂಗಳೂರು ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂಟ್ ಕಮೀಷನರ್ ಮಿ|| ಎ. ಅಣ್ಣಾಜಿ ರಾಯರವರಿಗೆ ೧೮೯೨ನೇ ಇಸವಿ ನವಂಬರ್ ೨ನೇ ತಾರೀಖು ಮೊದಲು ೩ ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತದೆ.

ನಂ ೪೨೮೨. ೧ ೧೮೯೧–೯೨—ತಾ|| ೪ನೇ ಡಿಸಂಬರ್ ೧೮೯೨—ಅಭಿಷೇಕ ಮಾರ್ಕೆಟ್ ಬಿಲ್ಡಿಂಗ್ಸ್ ಮಿ|| ಎ. ರಾಮಸ್ವಾಮಿ ಅಯ್ಯರವರು ಮಿ|| ಟಿ. ಆರ್. ತಿಂಮಪ್ಪರವರು ಇತರ ಕೆಲಸದ ಮೇಲೆ ಹೋಗಿರುವ ಕಾಲದಲ್ಲಿ ಅವರ ಕೆಲಸವನ್ನು ಮಾಡುವುದಕ್ಕೆ ನೇಮಿಸಲ್ಪಟ್ಟರು. ಕೆಲಸದ ಮೈಸೂರು ಡಿವಿಜನ್‌ನಲ್ಲಿ ಎಕ್ಸಿಕ್ಯೂಟಿವ್ ಇಂಜನಿಯರಾಗಿ ಅವರಿಗೆ ತಾತ್ಕಾಲಿಕವಾಗಿ ನೇಮಕ ಮಾಡಲ್ಪಟ್ಟಿರುತ್ತದೆ.

ನಂ ೪೮೪೪ ೧೮೯೧–೯೨ ತಾ|| ೬ನೇ ಡಿಸಂಬರ್ ೧೮೯೨—ಶ್ರೀಮನ್ಮಹಾರಾಜರವರ ಸರ್ಕಾರಕ್ಕೆ ಸೇರಿದ ನೌಕರಿಯ ಮೇಲೆ ಹೋಗಿರುವ ಬ್ರಿಗೇಡ್ ಸರ್ಜನ್ ಮೇಜರ್ ಡಿಸ್ಟ್ರಿಕ್ಟ್ ಮೆಡಿಕಲ್ ಆಫೀಸರ್ ಮಿ|| ಜೆ. ಮೆಕ್ಗ್ರೆಗರ್‌ರವರು ಗೈರುಹಾಜರಿ ಕಾಲದಲ್ಲಿ ಮೈಸೂರ್ ಸಿವಿಲ್ ಸರ್ಜನ್ ಮೇಜರ್ ಮಿ|| ಪಿ. ಜೆ. ಪೆರ್ಸಿವಲ್‌ರವರು, ತಮ್ಮ ಸ್ವಂತ ಕೆಲಸವಲ್ಲದೆ ಮತ್ತು ಆ ಸಾನ ಕೆಲಸಗಳಿಗೆ ಬಂಧಕ ಮೈಸೂರ್ ಡಿವಿಜನ್ ಸೂಪರಿಂಟೆಂಡೆಂಟ್ ಸೀನಿಯರ್ ಸರ್ಜನ್ ಆಗಿ ನೇಮಿಸಲ್ಪಟ್ಟಿರುತ್ತಾರೆ.

ಶಿವಮೊಗ್ಗ ಡಿವಿಜನ್‌ಗೆ ಸೇರಿದ ಪಿ|| ಹೌಸ್ ಇನ್ಸ್‌ಪೆಕ್ಟರ್, ೩ನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸದಿಂದ ಎರಡನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಕೆಲಸಕ್ಕೆ, ೧೮೯೨ನೇ ಇಸವಿ ಅಕ್ಟೋಬರ್ ತಾರೀಖು ಮೊದಲುಗೊಂಡು ಎರಡನೇ ಗ್ರೇಡ್ ಅಸಿಸ್ಟೆಂಟ್ ಇಂಜನಿಯರ್ ಮಿ|| ಸಿ. ಎ. ಮಹದೇವಯ್ಯನವರು ರಜೆಯಲ್ಲಿರುವ ಕಾಲದಲ್ಲಿ ತಾತ್ಕಾಲಿಕವಾಗಿ ನೇಮಿಸಲ್ಪಟ್ಟಿದ್ದಾರೆ.

ನಂ ೩೩. ತಾ|| ೬ನೇ ಡಿಸಂಬರ್ ೧೮೯೨—ಮೈಸೂರ್ ಡಿಸ್ಟ್ರಿಕ್ಟ್ ದಕ್ಷಿಣ ಸರ್ಕಲ್ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್ ಮಿ|| ಬಿ. ಶಿವಣ್ಣನವರಿಗೆ ಮಾರ್ಚ್ ೧ನೇ ತಾರೀಖು ಮೊದಲುಗೊಂಡು ೧೫ ದಿನಗಳ ಪ್ರಿವಿಲೆಜ್ ರಜಾ ಕೊಡಲ್ಪಟ್ಟಿರುತ್ತದೆ.

ಮೈಸೂರು ಗವರ್ನ್‌ಮೆಂಟ್ ಲೆಜಿಸ್ಲೇಟಿವ್ ಇಲಾಖೆ.

ಳನೇ ಅಧ್ಯಾಯ.

ಕಳೆದುಹೋದ ಆಸ್ತಿ.
ಕ್ರಿಮಿನಲ್ ಕೋರ್ಟುಗಳು ಮತ್ತು ದಂಡಾಧಿಕಾರಿಗಳನ್ನು ಕುರಿತು.

೭೬. ಒಬ್ಬ ಗ್ರಾಮಾಧಿಕಾರಿಯಿಂದ ಹೊರತು ಬೇರೆ ಒಂದು ಮನುಷ್ಯನಿಂದ ಮಾರ್ನೋಟೀಸು ಮುಖೇನ ತನ್ನ ಮೇಲೆ ಹಾಜರಾಗಲು ಪ್ರಸ್ತಾಪಿಸಲ್ಪಟ್ಟ ಗ್ರಾಮಾಧಿಕಾರಿಯ ಪ್ರಮಾಣಕ್ಕೆ ಒಪ್ಪಿಸಿಕೊಂಡ ಪದಾರ್ಥಗಳು ವಿಚಾರಣೆ ನಡೆಯುವುದನ್ನು ಪಡೆಯುವ ಸಿದ್ಧವಾದ ವಿವರಗಳು ಸಿಕ್ಕಿದಲ್ಲಿ, ಅದು ಆ ವಸ್ತುವಿನ ಮೇಲೆ ಹಾಜರಾಗತಕ್ಕದ್ದು, ಅದನ್ನು ಆ ಕ್ರಿ

ಗ್ರಾಮಮುನಸೀಫನಿಂದ ೫ ರೂಪಾಯಿಗಳಿಗೆ ಮಿಂಚದ ಜುಲ್ಮಾನೆ ಹಾಕಲ್ಪಡತಕ್ಕದ್ದು.

೩೫ ಕ್ರಮವಾಗಿ ಸಮ್ಮನು ದಾಹಲ್ಪಟ್ಟ ಒಬ್ಬ ಸಾಕ್ಷಿಯು ನ್ಯಾಯವಾದ ಸಬಬಿಲ್ಲದೆ, ಹಾಜರಾಗಲು ತಪ್ಪಿದರೆ ಯಾ ಅವನು ಹಾಜರ್ಮಾಡಲು ಸಮ್ಮನು ಮಾಡಲ್ಪಟ್ಟ ಯಾವ ದಸ್ತಾವೇಜನ್ನಾದರೂ ಹಾಜರ್ಮಾಡಲು ತಪ್ಪಿದರೆ, ಯಾ ಹಾಜರಾಗಿ, ಜವಾಬು ಕೊಡಲು ಯಾ ಪ್ರಮಾಣ ಮಾಡಲು ತಿರಸ್ಕರಿಸಿದರೆ, ಅಂಥಾ ಸಾಕ್ಷಿಯು ಅಂಥಾ ಪ್ರತಿ ತಕ್ಸೀರಿಗಾಗಿ, ಗ್ರಾಮ ಮುನಸೀಫನ ಮುನಾಸಬಿನಂತೆ ೫ ರೂಪಾಯಿಗಳಿಗೆ ಮಿಂಚದ ಜುಲ್ಮಾನೆಗೆ ಒಳಗಾಗತಕ್ಕದ್ದು.

ನ್ಯಾಯವಾದ ಸಬಬಿಲ್ಲದಾಗ ಸಾಕ್ಷಿ ಗೈರ್ಹಾಜರು ವಗೈರೆಬಗ್ಗೆ ಶಿಕ್ಷೆ.

೨೬. ಈ ರೆಗ್ಯುಲೇಷನ್ ಪ್ರಕಾರ ಯಾದದಾದರೂ ಸ್ವತ್ತಿನ ಜಪ್ತಿ ಯಾ ಹರಾಜನ್ನು ನಡಿಸುವಾಗ್ಯೆ ಯಾ ಈ ರೆಗ್ಯುಲೇಷನಿನಂತೆ ಹುಟ್ಟಿದ ಯಾವದಾದರೂ ಸಮ್ಮನ್, ನೋಟೀಸ್, ಹುಕ್ಕುಂ ಯಾ ಪ್ರೋಸೆಸ್ಸನ್ನು ಜಾರಿ ಮಾಡುವಾಗ್ಯೆ ಒಬ್ಬ ಗ್ರಾಮ ಮುನಸೀಫನನ್ನಾಗಲಿ ಅವನ ಅಪ್ಪಣೆಯನುಸಾರ ನಡೆಯುತ್ತಿರುವ ಮನುಷ್ಯನನ್ನಾಗಲಿ ಯಾವನಾದರೂ ಅಟಂಕಪಡಿಸಿದರೆ, ಅವನಿಗೆ ೫ ರೂಪಾಯಿಗಳಿಗೆ ಮಿಂಚದ ಜುಲ್ಮಾನೆಯು ಗ್ರಾಮ ಮುನಸೀಫನಿಂದ ವಿಧಿಸಲ್ಪಡತಕ್ಕದ್ದು.

ಗ್ರಾಮಮುನಸೀಫನನ್ನು ಯಾ ಅವನ ಅಪ್ಪಣೆದಾರರನ್ನು ಈ ರೆಗ್ಯುಲೇಷನ್ನಂತೆ ಅವರ ಕರ್ತವ್ಯ ನಡಿಸುವಾಗ್ಯೆ ಅಟಂಕಪಡಿಸುವದಕ್ಕೆ.

೨೭. ಒಂದು ಗ್ರಾಮ ಕೋರ್ಟಿಗೆ ಬೇಅದಬ ನಡಿಸಿದ ತಕ್ಸೀರ ಸಾಬೀತಾದ ಕಕ್ಷಿಗಾರರು ಯಾ ಅವರ ಮುಖ್ತಾರೀಕರು ಯಾ ಸಾಕ್ಷಿಗಳು ಅಂಥಾ ಕೋರ್ಟಿನಿಂದ ೫ ರೂಪಾಯಿಗಳಿಗೆ ಮಿಂಚದ ಜುಲ್ಮಾನೆ ವಿಧಿಸಲ್ಪಡತಕ್ಕದ್ದು.

ಗ್ರಾಮಕೋರ್ಟಿಗೆ ಬೇಅದಬ ನಡಿಸಿದ್ದಕ್ಕೆ.

೨೮. ಈ ರೆಗ್ಯುಲೇಷನ್ ಪ್ರಕಾರ ಯಾವ ಮನುಷ್ಯನಿಗೆ ಗಾದರೂ ಒಂದು ಗ್ರಾಮಕೋರ್ಟಿನವರು ಜುಲ್ಮಾನೆ ವಿಧಿಸಿದಾಗ್ಯೂ, ಅವನು ಯಾವ ಅಧಿಕಾರ ಸರಹದ್ದಿನೊಳಗೆ ವಾಸವಾಗಿದ್ದಾನೋ ಆ ಗ್ರಾಮ ಕೋರ್ಟಿನ ಪಿಂದ, ಈ ರೆಗ್ಯುಲೇಷನ್ ಮೇರೆಗೆ ಸವರೀಮಾಡುವಂಥ ಸವರೀ ಮನುಷ್ಯನ ಮೇಲೆ ಡಿಕ್ರಿ ಆಗಿದ್ದರೆ ಹ್ಯಾಗೋ ಅದೇರೀತಿಯಾಗಿ, ವಸೂಲು ಮಾಡಲ್ಪಡತಕ್ಕದ್ದು; ಮತ್ತು ಹಾಗೆ ವಸೂಲು ಮಾಡಲ್ಪಟ್ಟ ಜುಲ್ಮಾನೆ ಸವರೀ ಗ್ರಾಮಕೋರ್ಟಿನಿಂದ ಸರಕಾರಕ್ಕೆ ಜಮೆಯಾಗುವ ಬಗ್ಗೆ ಆ ಕ್ಷೇಂತ ಸಮೀಪದಲ್ಲಿರುವ ಗವರ್ನ ಮೆಂಟು ಖಜಾನೆಗೆ ಇರಸಾಲು ಮಾಡಲ್ಪಡತಕ್ಕದ್ದು.

ಜುಲ್ಮಾನೆ ವಸೂಲಿ ಮತ್ತು ಅದರ ವಿಲೇವಾರಿ.

೨೯. ಯಾವದಾದರೂ ಗ್ರಾಮ ಕೋರ್ಟಿನ ವೃತ್ತಿಯಲ್ಲಿ ಯಾ ಅದರಿಂದಾಗಲಿ ಇಂಡಿಯನ್ ಪೀನಲ್ ಕೋಡಿನ ೧೮೦ನೇ ಅಧ್ಯಾಯದಲ್ಲಿ ವಿಚಾರಿಸಿರುವ ಯಾವ ತಕ್ಸೀರಾದರೂ ನಡಿಸಲ್ಪಟ್ಟರೆ, ಅದು ನಡಿಸಲ್ಪಟ್ಟ ತಕ್ಸೀರುಗಾಗಿ ಅಪರಾಧಿಯಾದ ಮನುಷ್ಯನನ್ನು ವಿಚಾರಣೆ ಮಾಡಲು ಯಾ ವಿಚಾರಣೆ ಬಗ್ಗೆ ಕಳುಹಿ ಕೊಡಲು ಅಧಿಕಾರವುಳ್ಳ ಒಬ್ಬ ಮೇಜಿಸ್ಟ್ರೇಟರ ಬಳಿಗೆ ಸದರಿ ಮೊಕದ್ದಮೆಯನ್ನು ಕಳುಹಿಕೊಡಲು ಆ ಗ್ರಾಮ ಕೋರ್ಟಿಗೆ ನ್ಯಾಯವಾಗಿರತಕ್ಕದ್ದು.

ಗ್ರಾಮಕೋರ್ಟಿನವರು ಪೀನಲ್ ಕೋಡಿನ ೧೮೦ನೇ ಅಧ್ಯಾಯದ ತಕ್ಸೀರುಗಳನ್ನು ಮೇಜಿಸ್ಟ್ರೇಟರ ಬಳಿಗೆ ಕಳುಹಿಸುವದು.

೩೦. ಗವರ್ನ್ ಮೆಂಟಿನವರು ಮುಂಜೂರಾತಿಯಿಂದ ಹಣ ಯಾ ಗವರ್ನ್ ಮೆಂಟಿನವರ ಮುಂಜೂರಾತಿಯಿಂದ ಯಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರ್ರವರ ಅನುಮತಿಯಿಂದ, ಈ ರೆಗ್ಯುಲೇಷನಿನ ಮಿಂಚದ ಕಾರ್ಯ ಮಾಡಿದ ಒಬ್ಬ ಗ್ರಾಮ ಮುನಸೀಫನಿಂದ ಯಾ ಒಂದು ಪಂಚಾಯಿತಿ ಯಾವ ಸಾದರೂ ಮೊಬರಿನಿಂದ ಅವರ ಕೆಲಸಗಳನ್ನು ಜರಗಿಸುವಾಗ್ಯೆ ನಡಿಸಲ್ಪಡುವ ತಕ್ಸೀರಿನ ಬಾಬತು ಫಿರ್ಯಾದು

ಗ್ರಾಮಮುನಸೀಫ ಯಾ ಪಂಚಾಯಿತಿ ಮೇಲೆ ಫಿರ್ಯಾದು ಮಾಡುವ ಕ್ರಮ.

ಅಂಥಾ ಗ್ರಾಮಮುನಸೀಫನ ಮೇಲಾಗಲಿ ಪಂಚಾಯಿತಿನ ಮೆಂಬರು ಮೇಲಾಗಲಿ ಅಥವಾ ಮೇಲೆ ಹೇಳಲ್ಪಟ್ಟಂತೆ ನಡಿಯುವ ದುತ್ತಾಯ ಇತರ ಮನುಷ್ಯನ ಮೇಲಾಗಲಿ ದಾಖಲ್ಮಾಡಿಕೊಳ್ಳಲ್ಪಡತಕ್ಕದ್ದಲ್ಲ.

೧ ಈ ನ ಸಿವಿಲ್ ರೆಗ್ಯುಲೇಷನಿನ ಉದ್ದೇಶವು ಪೀಠಿಕೆಯಲ್ಲಿ ತಿಳಿಸಲ್ಪಟ್ಟಿರುತ್ತದೆ.

೨ ಜುಜಬಿ ಮೊಕದ್ದಮೆಗಳನ್ನು ಫೈಸಲ್ಮಾಡುವ ಅಧಿಕಾರವು ಗ್ರಾಮಗಳ ಮುಖಂಡರಿಗೆ ಸುಲಭವಾಗಿ ಕೊಡಲ್ಪಡುವದು, ಮತ್ತು ಅಂತಾ ಮೊಕದ್ದಮೆಗಳನ್ನು ಅವರ ಫೈಸಲಿಗೆ ಬಿಡತಕ್ಕ ಪದ್ಧತಿಯು ಮದರಾಸ್ ಪ್ರೆಸಿಡೆನ್ಸಿಯಲ್ಲಿ ಚನ್ನಾಗಿ ನಡೆದು ಬರುತಲಿದೆ.

೩. ಮದರಾಸ್ ಪ್ರೆಸಿಡೆನ್ಸಿಯಲ್ಲಿ ಗ್ರಾಮಮುನಸೀಫರ ಸ್ಥಳಾಧಿಕಾರವು ಪ್ರತ್ಯೇಕವಾಗಿಲ್ಲವು ವರಂಕು, ಡಿಸ್ಟ್ರಿಕ್ಟ್ ಮುನ್ಸಿಫರ ಸ್ಥಳಾಧಿಕಾರಕ್ಕೆ ಸಂಬಂಧಿಸಿದ್ದಾಗಿರುತ್ತದೆ. ಆದರೆ ಈ ದೇಶದಲ್ಲೀಗ ಪ್ರಚಲಿಸುತ ಬರುವ ವಿವಾದಸಂಬಂಧವಾದ ಮನೋಭಾವದಿಂ ನೋಡಿದರಾಗಿ ನ್ಯಾಯಸ್ಥರು ಶೀಮೆಯಲ್ಲಿ ಸದರೀ ಸ್ಥಳಾಧಿಕಾರವನ್ನು ಪ್ರತ್ಯೇಕಿಸಬೇಕಾದದ್ದು ಅಪೇಕ್ಷಿತವೆಂದು ಕಾಣಬರುತದೆ.

೪ ಪ್ರಕೃತ ಮಸೂದೆ ರೆಗ್ಯುಲೇಷನ್ ೧೮೮೯ನೇ ಇಸವಿಯ ೧೧ನೇ ನಂಬರ್ ಮದರಾಸ್ ಆಕ್ಟಿನ ಸಮಯದಲ್ಲಿ ಈ ದೇಶದ ಸ್ಥಿತಿಗಳಿಗೆ ಸರಿಹೋಗುವಂತೆ ಕೆಲವು ಅಲ್ಪ ಬದಲಾವಣೆಗಳೊಡನೆ ತೆಗೆದುಕೊಳ್ಳಲ್ಪಟ್ಟಿರುತದೆ.

೫ ಗ್ರಾಮಪಂಚಾಯಿತಿಯ ಕ್ರಮವು ಜನರಿಗೆ [illegible] ಮಾಡಲ್ಪಟ್ಟಿರುತದೆ. [illegible] ತಕ್ಕ ಮೊಕದ್ದಮೆಗಳ ಫೈಸಲಾತಿಯು ಬಳ್ಳಾಪ್ ಅಂತಹ ಮೊಬರು ಮೇಲೆ [illegible] ಮೊಕದ್ದಮೆಗಳಲ್ಲಿ ಯಾವ [illegible] ಕಕ್ಷಿಗಾರರ ಒಪ್ಪಿಗೆಯಿಂದ ಮಾತ್ರ [illegible] ಸಾಕ್ಷಿಗಳನ್ನು ಸ್ವೀಕರಿಸುವುದರಿಂದಾಗಿರುತ್ತಾರೆ.

೬ ಮದರಾಸ್ ಆಕ್ಟಿನ ೧೫ನೇ ಸೆಕ್ಷನ್ ಅನುಸರಿಸಿ ಒಂದು ಗ್ರಾಮ ಕೋರ್ಟಿಗೆ ದಸ್ತಗಿರಿ ಕೈದಿಯುತ್ತನ್ನು ಲಿಖಿತಮೂಲಕವಾಗಿ ತೆಗೆದುಕೊಳ್ಳಬೇಕಾದ ಅವಶ್ಯಕತೆಯು ಇರುವದಿಲ್ಲವು ಅದಕ್ಕನುಗುಣವಾದ ಅಂಶ ಸೆಕ್ಷನ್ನಲ್ಲಿ ಕೈಫಿಯತ್ತುಗಳನ್ನು ಪ್ರತ್ಯೇಕವಾಗಿ ಬರೆದು ಮುಖ್ಯ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದು ತಿಳಿಸಲ್ಪಟ್ಟಿದ್ದಾಗ್ಯೂ, ಗ್ರಾಮ ಮುನಸೀಫರು ಪ್ರತಿನಿತ್ಯಯ ವಾಜ್ಮೂಲವನ್ನು ಮಾಡಿ ಸಂಗ್ರಹಿಸಿ ಮುಖ್ಯಾಂಶವಾಗಿ ಬರೆಯಬೇಕೆಂದು ವಿಧಿಸಲ್ಪಟ್ಟಿರುತದೆ. ಒಂದು ಮೊಕದ್ದಮೆಯಲ್ಲಿ ತೆಗೆದುಕೊಳ್ಳಲ್ಪಟ್ಟ ಲಿಖಿತಮೂಲಕವಾದ ಕೈಫಿಯತ್ತುಗಳ ವಿಶಾದ ಇಲ್ಲದೇನೆ, ಡಿಸ್ಟ್ರಿಕ್ಟ್ ಜಡ್ಜಿಗಾಗಲಿ, ಅಥವಾ ಸಬ್ ಜಡ್ಜಿಗಾಗಲಿ, ೨೦ನೇ ಸೆಕ್ಷನ್ ಅನುಸರಿಸಿ ಪುನರ್ವಿಮರ್ಶೆಯ ಬಗ್ಗೆ ದರಖಾಸ್ತು ಮಾಡಲ್ಪಡುವ ಕಾಲದ ಸಂದರ್ಭದಲ್ಲಿ ಅವರಿಗೆಕೊಡಲ್ಪಟ್ಟ ನಿರ್ಣಯವು ನ್ಯಾಯವಾದದ್ದು ಅಥವಾ ಅನ್ಯಾಯವಾದದ್ದು ಎಂಬದನ್ನು ಕುರಿತು ಒಂದು ಅಭಿಪ್ರಾಯವನ್ನು ವ್ಯಕ್ತಪಡಿಸುವದಕ್ಕಾದರೂ ಅಥವಾ, ಒಂದು ಗ್ರಾಮ ಕೋರ್ಟಿನಲ್ಲಿ ನಡೆಸಿದ್ದು [illegible] ನ್ಯಾಯವಾದದ್ದು ಎಂಬದನ್ನರಿಯಲಿಕ್ಕಾದರೂ ನ ಪ್ರವಾಗಲಾರದು ಅದೇಕಾರಣದಿಂ ಸೆಕ್ಷನ್ನಿನಲ್ಲಿ, ಮದರಾಸು ಆಕ್ಟಿನಲ್ಲಿ ದೊರೆಯದ [illegible] ರುವಂಥ ಒಂದು ನಿಯಮವು, ಗ್ರಾಮಕೋರ್ಟಿನಲ್ಲಿ ಧಿಕ್ಕಾರ್ಯವಾದ್ಯವನ್ನು ಒಬ್ಬ ಮೆಂಬರು ಹಿನ್ನ ಇದ್ದಲ್ಪದ್ದಕ್ಕೆ ತನ್ನ ಭಿನ್ನಾಭಿಪ್ರಾಯವನ್ನು ಲಿಖಿತಮೂಲಕವಾಗಿ ದಾಖಲ್ ಮಾಡಲು ಅರ್ಹನಾಗಿರುತ್ತಾನೆಂದು ವಿಧಿಸಲ್ಪಟ್ಟಿರುತದೆ.

೭ ಮೈಸೂರು ಶೀಮೆಯಲ್ಲಿ ಕಳೆದ ಐದು ವರುಷಗಳ ಕಾಲದಲ್ಲಿ ದಾಖಲ್ ಮಾಡಲ್ಪಟ್ಟ ೫ರ ತ್ತು ರೂಪಾಯಿಗಳ ಅಥವಾ ಅದಕ್ಕೆ ಕಡಮೆಯಾದ ಕ್ರಯವುಳ್ಳ ಸ್ಥಿರ ಜಂಗಮ ಸೇರಿದ ದಾವೆಗಳ ಸಂಖ್ಯೆಯು ತಿಳಿಸಲ್ಪಟ್ಟಿರುತದೆ.

ಸಿ. ಮಾನಪ್ಪಯ್ಯ,
ರೆವಿನ್ಯೂ ಸೆಕ್ರೆಟರಿ.

ADDRESS OF THE DEWAN OF MYSORE TO THE REPRESENTATIVE ASSEMBLY HELD AT MYSORE,

on Tuesday the 4th October 1892

೧೮೯೨ನೇ ಇಸವಿ ಅಕ್ಟೋಬರ್ ತಾ ೪ನೇ ಮಂಗಳವಾರದಲ್ಲಿ ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ದಿವಾನ್ ರವರು ಮಾಡಿದ ಉಪನ್ಯಾಸ

(ಕಳೆದ ವಾರದ ಶೇಷ)

ಬಾಲ್ಯವಿವಾಹ ವಿಷಯ.— [illegible]

[illegible]

ದಿವಾನ್ ಪೂರ್ಣಯ್ಯನವರ [illegible]

ಮೈಸೂರು,
ತಾ॥ [illegible]

[illegible]
ದಿವಾನ್ ಮತ್ತು [illegible]

ಸದರನ್ ಮರಾಠಾ ರೈಲ್ವೇ ಕಂಪನಿ

ಮೈಸೂರ್ ಸ್ಟೇಟ್ ರೈಲ್ವೆ

ರೋಗಗಳ [illegible]
[illegible]

ಈಗ ಜಾರಿಯಲ್ಲಿರುವ [illegible] ಮೈಸೂರ್ ಸ್ಟೇಟ್ ರೈಲ್ವೆಯ [illegible] ದೊಡ್ಡಬಳ್ಳಾಪುರ ಮಾರ್ಗದಲ್ಲಿ ೧೮೯೨ನೇ ಇಸವಿ ಡಿಸೆಂಬರ್ ೧೫ನೇ ತಾರೀಖು ಗುರುವಾರದ ದಿನದಿಂದ [illegible] ತೆರೆಯಲ್ಪಡುವ [illegible] ಗಾಡಿಗಳು ಬಿಡಲ್ಪಡುವವು ಈ ಮಾರ್ಗದಲ್ಲಿ [illegible] ಕೆಳಗೆ ತಿಳಿಸಲ್ಪಡುವ ಕಾಲಗಳಲ್ಲಿ ಸಂಚರಿಸುವವು, ಹ್ಯಾಗಂದರೆ —

ಬೆಂಗಳೂರಿಂದ.		ಘಂಟೆ ನಿಮಿಷ	ದೊಡ್ಡಬಳ್ಳಾಪುರದಿಂದ.		ಘಂಟೆ ನಿಮಿಷ
ಬೆಂಗಳೂರು	ಹೊರಡುವದು	16 — 0	ದೊಡ್ಡಬಳ್ಳಾಪುರ	ಹೊರಡುವದು	7—15
ಯಲಹಂಕಪುರ	ತಲ್ಪುವದು	16—21	ರಾಜಾನಕುಂಟೆ	ತಲ್ಪುವದು	7—44
	ಹೊರಡುವದು	16—30		ಹೊರಡುವದು	7—18
ದೊಡ್ಡಜಾಲ	ತಲ್ಪುವದು	17— 5	ದೊಡ್ಡಜಾಲ	ತಲ್ಪುವದು	8— 5
	ಹೊರಡುವದು	17 10		ಹೊರಡುವದು	8—13
ರಾಜಾನಕುಂಟೆ	ತಲ್ಪುವದು	17—30	ಯಲಹಂಕಪುರ	ತಲ್ಪುವದು	8— 39
	ಹೊರಡುವದು	17—34		ಹೊರಡುವದು	8—48
ದೊಡ್ಡಬಳ್ಳಾಪುರ	ತಲ್ಪುವದು	18— 0	ಬೆಂಗಳೂರು	ತಲ್ಪುವದು	9 — 2

ಸದರೀ ತಾರೀಖಿನಲ್ಲಿ ಮತ್ತು ಅದರತರುವಾಯ ಮೈಲು ಬೆಂಗಳೂರಿಗೂ ಅರಸೀಕೆರೆಗೂ ಮಧ್ಯೆ ಇವರಡಿ ಕಂಡ ಕಾಲಗಳಲ್ಲಿ ಮಿಕ್ಸಡ್ ಅಂದರೆ ಗೂಡ್ಸ್ ಮತ್ತು ಪ್ಯಾಸಂಜರ್ ಗಾಡಿಗಳುಳ್ಳ ಟ್ರೇನು ಒಂದು ಹೋಗಿಬರುವವು

ಬೆಂಗಳೂರಿಂದ	ಹೊರಡುವದು ಘಂಟೆ	೯	ನಿಮಿಷ	೧೦.
ಅರಸೀಕೆರೆ	ತಲ್ಪುವದು	,,	೧೮	,,	೧೦
ಅರಸೀಕೆರೆ	ಹೊರಡುವದು	,,	೮	,,	೨
ಬೆಂಗಳೂರು	ತಲ್ಪುವದು	,,	೧೬	,,	೪೮

ಇತರ ತಪಸೀಲುಗಳನ್ನು ಸ್ಟೇಷನ್ ಮಾಸ್ಟರುಗಳಿಂದಾಗಲಿ, ಬೆಂಗಳೂರಲ್ಲಿರುವ ಅಸಿಸ್ಟೆಂಟ್ ಟ್ರಾಫಿಕ್ ಮ್ಯಾನೇಜರಿಗಾಗಲಿ, ಅಥವಾ ಇವರಡಿ ಕಂಡವರಿಗಾಗಲಿ ಬರೆದು ತಿಳಿದುಕೊಳ್ಳಬಹುದು

ಟ್ರಾಫಿಕ್ ಮ್ಯಾನೇಜರ್ ಆಫೀಸ್
ಧಾರ್ವಾಡ, ತಾ॥ 12ನೇ ಡಿಸೆಂಬರ್,
1892

W. M. STUART,
Offg. Traffic Manager

BANGALORE.—Printed and published at the KARNATAKA PRESS, No. 40, HOSPITAL ROAD PETTA.—1892

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

ಪ್ರತಿ ಸೋಮವಾರ ಪ್ರಾತಃಕಾಲದಲ್ಲಿ ಪ್ರಕಟಿಸಲ್ಪಡುವದು.

Published Every Monday Morning.

ಪ್ರ[illegible]ಮವಿವಿಧಪ್ರವೃತ್ತ್ಯವಗಮಾರ್ಥಂ ಕರ್ಣಾಟಕಪ್ರಕಾಶನವರಾಭಿಧಾಪ್ರಥಿತಸಾಹಿತೀಶೋಭಿತಾ। ಮೃಗಾಂಕಹಿತವಾಸರೇಸಿಹಿತಮುದ್ರಣಾಸಜ್ಜನೈರ್ನಿ[illegible]ಸಾಸುಪರಿಶೋಭಿತಾದಿಶತಿಮಾನಸುಸುಖಂ॥

Vol. XIX.] BANGALORE:—MONDAY, DECEMBER 26, 1892. [No. 51.

ಸಂಪುಟ ೧೯.] ಬೆಂಗಳೂರು:—ಸನ್ ೧೮೯೨ ನೇ ಇಸವಿ ಡಿಸೆಂಬರ್ ೨೬ ನೇ ತಾರೀಖ್ ಸೋಮವಾರ. [ಸಂಚಿಕೆ ೫೧.

ಕರ್ಣಾಟಕ ಪ್ರಕಾಶಿಕಾ.

ಪತ್ರಿಕೆಯ ಚಂದಾ ದರಗಳು,

ಇಂಗ್ಲಿಷ್ ಮತ್ತು ಕನ್ನಡಭಾಗಗಳಿಗೆ.

ಸಾಲ್ ಒಂದಕ್ಕೆ	ಸ್ಥಳದವರಿಗೆ ಅಂಚೆಯಿಲ್ಲದೆ.	ಪರಸ್ಥಳದವರಿಗೆ. ಅಂಚೆಸೇರಿ.
ಮುಂಗಡಕೊಡತಕ್ಕವರಿಗೆ	8—0—0	9—0—0
ತರುವಾಯ ,,	9—0—0	10—8—0

ಇಂಗ್ಲಿಷ್ ಅಥವಾ ಕನ್ನಡಭಾಗಗಳಿಗೆ.

ಮುಂಗಡಕೊಡತಕ್ಕವರಿಗೆ	4—0—0	5—0—0
ತರುವಾಯ ,,	5—0—0	6—0—0

ಈ ಪತ್ರಿಕೆಗೆ ದಸ್ತಾವತ್ತು ಮಾಡಿದ ತಾರೀಖ್ ಮೊದಲು ಒಂದು ತಿಂಗಳೊಳಗಾಗಿ ಚಂದಾ ಹಣವನ್ನು ಕಳುಹಿಸತಕ್ಕವರಿಗೆ ಮಾತ್ರವೆ ಅಡ್ವಾನ್ಸ್ ದರದಂತೆ ಪತ್ರಿಕೆಯು ಕಳುಹಿಸಲ್ಪಡುವುದು. ಚಂದಾದಾರರು ಇಂಗ್ಲಿಷ್ ಭಾಗವನ್ನಾಗಲಿ ಕನ್ನಡಭಾಗವನ್ನಾಗಲಿ ಅಥವಾ ಎರಡನ್ನಾಗಲಿ ತೆಗೆದುಕೊಳ್ಳಬಹುದು. ಮೂರು ತಿಂಗಳಿಗೆ ಕಡಮೆಯಾಗಿ ಚಂದಾ ಹಣವು ಅಂಗೀಕರಿಸಲ್ಪಡಲಾರದು.

ಪ್ರಕಟನೆಯ ರಿವಾಜ್.

ಮೊದಲನೆಯದಕ್ಕೆ ಸಾಲು ಒಂದಕ್ಕೆ ೦—೨—೦
ಎರಡನೆಯದಕ್ಕೆ ಸಾಲು ೧ ಕ್ಕೆ ೦—೧—೦

[illegible] ಎರಡುಸಾರಿಗಿಂತ ಹೆಚ್ಚಾಗಿ [illegible] ಪ್ರಕಟನೆಗಳನ್ನು ಕುರಿತು [illegible] ಕ್ರಮವಾಗಿ [illegible] ಮಾಡಲ್ಪಡುವುದು. ಈ ಪತ್ರಿಕೆಯಲ್ಲಿ ಪ್ರಕಟಿಸತಕ್ಕ [illegible] ಮಾಡಲ್ಪಡುವದಿಲ್ಲ. [illegible] ಪತ್ರಿಕೆಗೆ ಕಳುಹಿಸತಕ್ಕ [illegible] ಪ್ರಕಟನೆಗಳು [illegible] ಪತ್ರಿಕೆಗೆ ಕಳುಹಿಸತಕ್ಕ ಪ್ರಕಟನೆಗಳು ಕಳುಹಿಸುವವರ ಅಭಿಪ್ರಾಯಗಳಿಗೆ [illegible] ಕ್ರಮವಾಗಿ [illegible] ಪ್ರಕಟಿಸಲಾಗುವುದಿಲ್ಲ.

ADVERTISEMENTS.

NOTICE.

VAIDYASARA SANGRAHA

A TREATISE ON THE PRINCIPLES OF

HINDU MEDICINE

Price including Postage Rs 5 0 0

ವೈದ್ಯಸಾರ ಸಂಗ್ರಹ.

ಈ ಗ್ರಂಥವು ಬೇಕಾದವರು ಮೊಬಲಗನ್ನೂ ಕಳುಹಿಸಿಕೊಂಡರೆ ಪುಸ್ತಕ ಕೊಡಲ್ಪಡುವುದು. [illegible]

ಇದರ ಕ್ರಯ—ಪ್ಯಾಕಿಂಗ್ ಮತ್ತು ಅಂಚೆ ಖರ್ಚು ಸೇರಿ ಪ್ರತಿ ಒಂದಕ್ಕೆ ರೂ 5- 0—0

ಟಿ. ಬಿ. ವೆಂಕಟಾಚಾರ್.

ಬೆಂಗಳೂರು, [illegible] ರೋಡ್ ೪೮ ನೆಂಬರು.

ನೋಟಿಸ್.

ಬೆಂಗಳೂರು ಕರ್ಣಾಟಕ ಪ್ರೆಸ್.

೧೮೭೬ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟದ್ದು.

ಇದರಲ್ಲಿ ಸಕಲವಿಧ ಕೆಲಸಗಳು ಸುಲಭಬೆಲೆಗೆ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ ಮಾಡಲ್ಪಡುವುವು. ಇದರಲ್ಲಿ ಸಂಸ್ಕೃತ ಇಂಗ್ಲಿಷ್ ಕನ್ನಡ ಕೆಲಸಗಳು ಮಾತ್ರವೇ ನಡೆಯುವುವು. ಇತರ ವರ್ತಮಾನಗಳನ್ನು ಸದರಿ ಕಾರ್ಖಾನೆಯ ಮ್ಯಾನೇಜರವರಿಂದ ತಿಳಿದುಕೊಳ್ಳಬಹುದು.

ನೋಟಿಸ್.

ನಂಜಪ್ಪನವರ ಉತ್ತಮವಾದ ಮತ್ತು ಅನುಭವಸಿದ್ಧವಾದ ಔಷಧಗಳು.

ಈಚೆಯ ಉಷ್ಣಾರಣ್ಯದಲ್ಲಿರುವ ವೆಂಕಟಗಿರಿಯಿಂದ ಪ್ರಸಿದ್ಧವಾದ ಸಂಸ್ಥಾನದಿಂದ [illegible] ಔಷಧಗಳು ಬೇಕಾದವರು ಅವರ ಬಳಿ ತರಿಸಿಕೊಳ್ಳಬಹುದು. ಈ ಔಷಧಗಳ ಜಾಹೀರ್ ಪ್ರಕಟನೆಯ [illegible] ಸಿದ್ಧಿಸಿದ ಉತ್ತಮವಾದವುಗಳಾಗಿಯೂ, ಅನುಭವಸಿದ್ಧವಾಗಿಯೂ, ಅನೇಕರಿಗೆ ಗುಣವನ್ನುಂಟುಮಾಡಿದವುಗಳಾಗಿಯೂ ಇರುತ್ತವೆ. ತಮ್ಮ ರೋಗಸ್ವರೂಪವನ್ನು [illegible] ಬರೆದು ತಿಳಿಸಿದರೆ ಔಷಧವನ್ನು ಕಳುಹಿಸಲಾಗುವುದು. [illegible] ಕಳುಹಿಸಲ್ಪಡುವವು. ಕಳುಹಿಸಲ್ಪಟ್ಟ ಪದಾರ್ಥಗಳನ್ನು ತರಿಸಿಕೊಂಡವರು [illegible] ಕೊಡಬೇಕಾಗುವುದು.

ತೈಲ.—ಮಹಾತಕ್ರತೈಲ, ಇದು ರೋಗ ವಾಯುಗಳಿಗೂ, ಕಾಲಕ ಸಂಬಂಧಗಳಾದ ಮತ್ತು ವಾತಸಂಬಂಧಗಳಾದ ಸಂಧಿವಾತಗಳಿಗೂ, ಮೂಗಿನಲ್ಲಿ ರಕ್ತ ಬೀಳತಕ್ಕದ್ದಕ್ಕೂ, ಅನೇಕವಿಧ ರೋಗಗಳಿಗೂ [illegible] ಪರಿಹಾರಕವಾದುದಾಗಿದೆ. ಸೀಸೆ ಒಂದಕ್ಕೆ ೧ ರೂ. ದೊಡ್ಡ ಸೀಸೆ ೧ ಕ್ಕೆ ೩ ರೂ.

ಜ್ವರದ ಗುಳಿಗೆಗಳು.—ಇವು ಚಾತುರ್ಥಿಕಾದಿ ಸಕಲವಿಧ ಜ್ವರಗಳಿಗೂ ಪ್ರಸಿದ್ಧ ಔಷಧವಾಗಿರುತ್ತವೆ. ಪೆ. ೧ ಕ್ಕೆ ೨೦ ಗುಳಿಗೆಗಳು.

ಮೇಹ ರೋಗ ನಿವಾರಕವಾದ ಎಣ್ಣೆ.—ಈ ಎಣ್ಣೆಯು ೨೦ ದಿನಗಳವರೆಗೆ ಉಪಯೋಗಿಸುತ್ತಾ ಬಂದರೆ [illegible] ಸಕಲವಿಧ ಮೇಹಗಳೂ, ಪ್ರಮೇಹಗಳೂ, ಸ್ತ್ರೀಯರಿಗೂ ಆಗುವ ಉಷ್ಣ ಸಂಬಂಧವಾದ ರೋಗಗಳೂ, ನಿವಾರಣೆಯಾಗುವವು. ಸೀಸೆ ೧ ಕ್ಕೆ ೨—೦.

ದಂತರೋಗಕ್ಕೆ ಚೂರ್ಣ.—ಹಲ್ಲುಕುಟುಕುಗಳು, ಹಲ್ಲು ಅಲ್ಲಾಡುವ ಹಲ್ಲುಗಳು, ಹಲ್ಲುಗಳನ್ನು ಬಾಧಿಸುವ ಕ್ರಿಮಿಗಳು [illegible] ಸರಿಯಾಗಿ ಹಚ್ಚಿದರೆ ಗುಣವಾಗುವುದು. ಡಬ್ಬಿ ೧ ಕ್ಕೆ ೧ ರೂ. ಇದು ೨೦ ದಿನಗಳಿಗೆ ಆಗುವುದು.

ನೇತ್ರರೋಗಕ್ಕೆ ಮಾತ್ರೆ.—ಪೊರೆಗಳು, ದೃಷ್ಟಿಮಾಂದ್ಯ, ಕಣ್ಣುರಿ, ತಲೆನೋವು, ಕಣ್ಣಿನಲ್ಲಿ ನೀರು ಸುರಿಯುವುದು, ಬಿಳುಪು ಮೊದಲಾದ ಸಕಲರೋಗಗಳಿಗೂ ಪ್ರಸಿದ್ಧವಾದುದು. ಮೂಲಿಕಾ ಪ್ರಯೋಗದಿಂದ ಮಾಡಲ್ಪಟ್ಟ ಉತ್ತಮವಾದ ಮಾತ್ರೆ ೧ ಕ್ಕೆ ೭ ಆಣೆ. ಇದು ೩೦ ದಿನಗಳವರೆಗೆ ಒಂದು ಮಾತ್ರೆ ಹಾಕಿಕೊಳ್ಳಬಹುದು.

ಮೂಲವ್ಯಾಧಿಗೆ.—ಇದು ಊಟಗಳಿಗೆ ತಯಾರಾಗಿದೆ. ಇದರಿಂದ ದೀರ್ಘಕಾಲಿಕವಾದ ಮೂಲರೋಗದವರುಗಳಿಗೆ [illegible] ನಿವಾರಣೆಯಾಗುತ್ತದೆ. ಊಟದ ೧ ಕ್ಕೆ ೧ ರೂಪಾಯಿ. ಇದನ್ನು ದಿವಸಕ್ಕೆ ಎರಡು ಸಲ ನಿಯತವಾಗಿ ಉಪಯೋಗಿಸತಕ್ಕದ್ದು. ಇದರ ಸ್ಪರ್ಶದಿಂದ ಮೂಲರೋಗದ ಸುಖವು ನಿವೃತ್ತಿಯಾಗುತ್ತದೆ.

ಭಸ್ಮಗಳು.—ತಾಮ್ರ, ರಜತ, ವಂಗ, ಸೀಸ, ಪ್ರವಾಳ, ಶೃಂಗ, ಅಭ್ರಕ, ಲೋಹ, ಕಾಂತ ಮಣ್ಡೂರ ಭಸ್ಮಗಳೂ ಸಿಂಧೂರಗಳೂ ಸಿದ್ಧ ಕ್ರಿಯೆಯಿಂದ ತಯಾರಾಗುತ್ತವೆ. ಇವುಗಳಿಂದ ಕಾಯಿಲೆಯಾದವರು ಸಕಲ ಪ್ರಬಲ ರೋಗಗಳಿಗೂ ಪ್ರಸನ್ನವಾದವಾಗಿರುತ್ತದೆ. ರೋಗ ಸ್ವರೂಪವು ಗುಣವಾಗಿ ದೇಹವು ಕುಶಲವಾದವರಿಂದ ಅವರವರಿಗೆ ಕ್ರಯವು ನಿಷ್ಕರ್ಷಿಸಲ್ಪಡಬೇಕಾಗಿದೆ.

ಲೇಹ್ಯಗಳು.—ಚ್ಯವನಪ್ರಾಶ, ಬಿಲ್ವಾದಿ, ಕೂಷ್ಮಾಂಡ ವಸ್ತ್ವರೆ ಧಾತು ವೃದ್ಧಿಕರಗಳಾದ ಲೇಹ್ಯಗಳು ಸಿದ್ಧವಾಗಿವೆ. ಸೀಸೆ ೧ ಕ್ಕೆ ೩ ರೂ.

ಪದಾರ್ಥಗಳು.—ಗಂಧ, ಬಿಳೇಹಣ್ಣು, ಬಸಿಯದ ಹಣ್ಣು, ಅಂಜೂರು, ದ್ರಾಕ್ಷೆಹಣ್ಣು ಸಹ ಮೊದಲಾದ ಪದಾರ್ಥಗಳು ತಯಾರಾಗಿವೆ. ಒಣ ಸೀಸೆ ೧ ಕ್ಕೆ ೨ ರೂ.

ಯಂತ್ರಗಳು.—ಮಹಾ ಯಂತ್ರಗಳು ಮತ್ತು ಸಂಬಂಧಿ [illegible] ಚಾರ್ಣ, ಶ್ವೇತ [illegible]ಗಳು ಅಲ್ಲದೆ ಪುತ್ರ ಮತ್ತು ಪ್ರವಾದವುಗಳಿಗೆ ಉಪಯುಕ್ತವಾದವು. ಇದು ಒಂದು ದಿನಗಳಿಗೆ ತೆಗೆದುಕೊಳ್ಳುವುದು, ಡಬಿ ಒಂದಕ್ಕೆ ೧ ರೂ.

ನೋಟಿಸ್.

ಗಣೇಶ ರಾಮಚಂದ್ರ ಆಸಿ ಮತ್ತು ಕಂಪೆನಿ. ಕಮಿಷ್ನರ್ ಏಜಂಟ್ಸ್.

ಇದರಡಿ ತಿಳಿಸಲ್ಪಡುವ ಸಾಮಾನುಗಳನ್ನು ಬೇಕಾದವರಿಗೆ ನಾವು ಸುಲಭ ಕ್ರಯಕ್ಕೆ ಬಹಳ ಪ್ರಾಮಾಣಿಕತೆಯೊಡನೆ ವ್ಯಾಲ್ಯೂ ಪೇಯಬಲ್ ಪೋಸ್ಟು ಮೂಲಕ ತಕ್ಕ ಕಮಿಷನ್ ತೆಗೆದುಕೊಂಡು ರವಾನಿಸಲಿಕ್ಕೆ ಸನ್ನದ್ಧರಾಗಿರುತ್ತೇವೆ.

ಎಲ್ಲಾ ತರಹ ಔಷಧಗಳು, ಪುಸ್ತಕಗಳು, ಮುತ್ತುಗಳು, ಹವಳ ಮುತ್ತುಗಳು, ಕಠಿಣಾದಿಗಳು, ವಾಚ್‌ಗಳು, ಕ್ಲಾಕ್‌ಗಳು, ಕಾಶ್ಮೀರ ಶಾಲುಗಳು, ಪಟ್ಟೆವಸ್ತ್ರಗಳು, ಜರತಾರಿಗಳು, ಚಂದ್ರಕಾಂತ ಶಿಲೆಯ ಕನ್ನಡಕಗಳು, ಪಾದರಕ್ಷೆಗಳು, ಚಿತ್ರ ಪಟಗಳು [illegible], ಜರತಾರಿ ಟೋಪಿಗಳು, ಆಫೀಸು ಸಾಮಾನುಗಳು, ಪರ್ಸ್‌ಗಳು, ಅತ್ತರುಗಳು, ಅತ್ಯುತ್ತಮವಾದ ವರ್ಣಗಳು, ಛಾಯಾಚಿತ್ರ ಬಣ್ಣಗಳು, ಉಂಗುರಗಳು, ಪತ್ರ ಪತ್ರಗಳು, ಜರ್ಮನ್ ಬೆಳ್ಳಿ ಪಾತ್ರೆಗಳು, ಕೊಡೆ, ಕಸ್ತೂರಿ ವಗೈರೆ ಇತರ ಸಾಮಾನುಗಳು.

ಜವಾಬು ಅಪೇಕ್ಷಿಸತಕ್ಕವರು ಅರ್ಧಾಣೆ ಪೋಸ್ಟೇಜ್ ಸ್ಟಾಂಪ್ ಕಳುಹಿಸಬೇಕು ಹೊರತು ಜವಾಬು ದೊರೆಯಲಾರದು.

ವಿಳಾಸ.—ಗಣೇಶ ರಾಮಚಂದ್ರ ಆಸಿ, ಮತ್ತು ಕಂಪೆನಿ, ಕಮಿಷ್ನರ್ ಏಜಂಟ್ಸ್, ಹನುಮಂತ ಕಟ್ಟೆ, ಮಾರ್ಕೆಟ್ ಪೋಸ್ಟ್, ಮುಂಬೈ.

ನೋಟಿಸ್.

ಇದರಡಿ ತಿಳಿಸಲ್ಪಡುವ ಸಂಸ್ಕೃತ ಕನ್ನಡ ಪುಸ್ತಕಗಳು ಬೆಂಗಳೂರು ಕರ್ಣಾಟಕ ಮುದ್ರಾಕ್ಷರ ಶಾಲೆಯಲ್ಲಿ ವಿಕ್ರಯಕ್ಕೆ ಸಿದ್ಧವಾಗಿವೆ. ಬೇಕಾದವರು ಹಣವನ್ನು ಕಳುಹಿಸಿ ತರಿಸಿಕೊಳ್ಳಬಹುದು.

ಸಂಸ್ಕೃತ ಗ್ರಂಥಗಳು.

	ಪೋಸ್ಟೇಜ್ ಸಹಿತ ರೂ	ಆ.	ಪೈ
ಸಟೀಕಾ ವೈದ್ಯಸಾರ ಸಂಗ್ರಹ ...	೫	೦	೦

ಕನ್ನಡ ಗ್ರಂಥಗಳು.

	ರೂ	ಆ.	ಪೈ
ಕಿ.ಸಪ್ತತಿ ಅವ್ವಲ್ ...	೩	೦	೬
ದಿಟಿಜೋ ದುಯ್ಯಂ ...	೧	೨	೦
ವೃಷಭೇಂದ್ರವಿಜಯ ...	೧	೪	೦
ಪಂಚಭಾರತ ಚಾಲಿಸಿ ...	೦	೬	೦
ಹನುಮದ್ವಿಲಾಸ ...	೦	೬	೦
ಕಾಳಿಂಗಮರ್ದನ ...	೦	೨	೦
ಸುಭದ್ರಾಪರಿಣಯ ...	೦	೨	೦
ಕೌರವರ ಪಾಂಡವರ ...	೦	೨	೬
ಸುರಾಮಚರಿತ್ರೆ ...	೦	೧	೦
ಮೈರಾವಣ ಚರಿತ್ರೆ ...	೦	೧	೦
ಬಾಲ್ಯ ಚಿಕಿತ್ಸೆ ...	೦	೧	೦
ಮಹಿಷಾಸುರ ವಧೆ ...	೦	೧೦	೦
ಭಗವದ್ಗೀತೆಯು ...	೦	೧೦	೦
,, ಶಿವಗೀತೆ ...	೦	೧	೦
,, ಶಿವಾನಂದಲಹರಿ ...	೦	೪	೦
,, ಆನಂದಾಮೃತ ...	೦	೦	೦
,, ಟೀಕೆ ಮಹಾರಾಮಾಯಣ ...	೦	೨	೦
,, ಟೀಕೆ ಗೋಪಿಕಾ ಗೀತೆ ...	೦	೧	೦
,, ಟೀಕೆ ಚಾಣಕ್ಯನೀತಿ (ಸುಭಾಷಿತ)	೦	೨	೦
ವಿಷ್ಣುಸಹಸ್ರನಾಮ ಪತ್ರಿಕೆ ...	೦	೩	೦
ಹರಿಸಹಸ್ರನಾಮ ...	೦	೨	೦
ಕೃಷ್ಣಕರ್ಣಾಮೃತ ...	೦	೨	೦
ತ್ರಿಶಂಕು ಅಮರ ಕೋಶ ...	೦	೨	೦
೧ ಕಾಂಡ ...	೦	೦	೦

ನೋಟಿಸ್.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನೆಂದರೆ :—

ಹಿಂದೆ ಬರ್ಮಾ ದೇಶದಲ್ಲಿ ಸಿವಿಲ್ ಸರ್ಜಯನ್ ರಾಗಿದ್ದ ಡಾಕ್ಟರ್ ನೆಯಿಲರ್ ಯವರು ಬೆಂಗಳೂರು ಪೇಟೆ ಸಿದ್ದೀಕಟ್ಟೆಯಲ್ಲಿರುವ ಗುಂಡೋಪಂತರವರ ಮನೆಯ ಪಕ್ಕದಲ್ಲಿ ರೋಗಿಗಳ ಸ್ವರೂಪವನ್ನರಿತು ಚಿಕಿತ್ಸೆಮಾಡುವದಕ್ಕೋಸ್ಕರ ಒಂದು ಸ್ಥಳವನ್ನು ಗೊತ್ತುಮಾಡಿರುತ್ತಾರೆ.

ಸದರೀಯವರು ಪ್ರತಿದಿನದಲ್ಲೂ ಬೆಳಗ್ಗೆ ೮ ಘಂಟೆಯ ಮೊದಲು ೧೦ ಘಂಟೆಯ ವರಿವಿಗೂ ಆಸ್ಥಳದಲ್ಲಿದ್ದು ವಿಶೇಷ ರೋಗಿಗಳಿಗೂ, ಮುಖ್ಯವಾಗಿ ಕಣ್ಣಿನ ಮತ್ತು ಕಿವಿ ರೋಗಗಳಿಗೆ ಚಿಕಿತ್ಸೆ ಮಾಡುವರು.

ರೋಗಸ್ವರೂಪವನ್ನು ಅರಿತು ಹೇಳುವದಕ್ಕೆ ೨ ರೂ| ರುಸುಂ ಕೊಡಬೇಕು. ರೋಗಿಗಳ ಮನೆಗಳಿಗೆ ಹೋಗಿ ನೋಡುವದಕ್ಕೆ ೪ ರೂಪಾಯಿಗಳ ರುಸುಂ ಕೊಡಬೇಕು.

C. G. R. NAYLOR,
M. R. C. S., ENGLAND,
Surgeon.

THE MONEY MARKET.

ಮದರಾಸ್, ಶನಿವಾರ, ಡಿಸೆಂಬರ್ 24 ನೇ ತಾರೀಖು 1892.

ಸೇಕಡ 4ರೂ. ಬಡ್ಡಿಯ ಗವರ್ನಮೆಂಟ್ ಪತ್ರಗಳು, ೩೩ ಪಾಯಿಗಳು, 104-2-0 ಇಂದ 104—8-0 ವರೆಗೆ.

ಮದರಾಸ್ ಬ್ಯಾಂಕ್ ಷೇರುಗಳು, (500) ರೂಪಾಯಿಗಳ್ಳೆ, ಬಡ್ಡಿಯು 940 ಬಾಗಾ ಬಡ್ಡಿ 945 ವರಿಗೆ,

ಕಮರ್ಷಿಯಲ್ ಆಫ್ ಇಂಡಿಯಾ ಬ್ಯಾಂಕ್ ಷೇರುಗಳು, (100) ಬಡ್ಡಿಯು 160 ಇಂದ 165 ವರಿಗೆ,

ಸವರನ್‌ಗಳು, 16-5-0

ಬ್ಯಾಂಕು ವರ್ಗಳು ಮಾನಿಟರ್ ಸಂಬಂಧಗಳು, ರಿಯ್ಯಾಕ್ಟ್

6 ತಿಂಗಳವಾಯಿದೆಗೆ, 1s. 2 31/16d.

ದಿಟಿಜೋ 4 ತಿಂಗಳವಾಯಿದೆಗೆ, 1s. 2 1/4 d.

ದಿಟಿಜೋ ಕೇಬಿಲ್ ಕ್ರಾಸ್, 1s. 2 21/32 d.

ಕರ್ಣಾಟಕ ಪ್ರಕಾಶಿಕಾ.

THE KARNATAKA PRAKASIKA.

MONDAY, DECEMBER 26, 1892.

೧೮೯೨ನೇ ಇಸವಿ ಡಿಸೆಂಬರ್ ತಾ|| ೨೬ನೇ ಸೋಮವಾರ.

NOTICE.

ಈ ವಾರದಲ್ಲಿ ಅನಿರೀಕ್ಷಕವಾಗಿ ನಮಗೆ ಪ್ರಾಪ್ತವಾದ ಅದ್ಭುತ್ತೀಕರವಾದ ಒಂದು ಶೋಕ ವರ್ತಮಾನದ ದೆಸೆಯಿಂದ ಈ ಪತ್ರಿಕೆಯು ಕಾಲಕ್ಕೆ ಸರಿಯಾಗಿ ಪ್ರಕಟಿಸಲಿಕ್ಕೆ ಅವಕಾಶವಿಲ್ಲದೆ ಹೋದ ಬಗ್ಗೆ ಚಂದಾದಾರರು ಕಾಲವಿಳಂಬದಿಂ ಪತ್ರಿಕೆ ರವಾನಿಸಲ್ಪಟ್ಟದ್ದಕ್ಕಾಗಿ ನಮ್ಮ ಚಂದಾದಾರರೆಲ್ಲರೂ ಮನ್ನಿಸುವರೆಂದು ನಂಬುತ್ತೇವೆ.

ಬರುವ ಭಾನುವಾರ ಇಂಗ್ಲಿಷ್ ನೇವಿಕ್ಸ್ಮಸ್ ದಿಯಾರು ದೆಸೆಯಿಂದಲೂ, ಆದಿನ ಪಾಡುಮೂಸ್ ಮೇಕೆ ಈ ಕಾರ್ಖಾನೆಯು ನೌಕರ್ ಸಾಹೇಬರಿಗೆಲ್ಲ ರಜಾ ಕೊಡಲ್ಪಡುವದರಿಂದಲೂ ೧೮೯೩ ನೇ ಇಸವಿ ಜನವರಿ ೨ ನೇ ತಾರೀಖ್ ಸೋಮವಾರದ ಪತ್ರಿಕೆಯು ಮುಂದಿನ ವಾರ ನಿಲ್ಲಿಸಲ್ಪಟ್ಟಿರುವ ಅಂಶವನ್ನು ನಮ್ಮ ಚಂದಾದಾರರಿಗೂ ಇದರಿಂದ ಸಹ ಇದರಿಂದ ಅರಿಕೆಮಾಡಿಕೊಳ್ಳುತ್ತೇವೆ.

MISINTERPRETATION

ಗತವಾರದಲ್ಲಿ ಮೈಸೂರ ವೃತ್ತಾಂತ ಪತ್ರಿಕೆಗೆ ಉತ್ತರರೂಪವಾದ ನಮ್ಮ ಲೇಖನವನ್ನೋದಿದವರು ಯಾರೋ ಈ ಪ್ರಾಂತದಲ್ಲಿರತಕ್ಕವರು ಕೆಲವರು, ಅದರ ನಿಜಾರ್ಥವಂ ತಿಳಿದುಕೊಳ್ಳಲಿಕ್ಕೆ ಪ್ರಯತ್ನಪಡದೆ ಅಪಾರ್ಥಗಳಂಮಾಡಿ ಶ್ರೀಮನ್ಮಹಾರಾಜರವರನ್ನೂ, ಅವರ ಮಂತ್ರಿಯಾದ ಮ|| ಶೇಷಾದ್ರಿ ಅಯ್ಯರವರನ್ನೂ ವಿರುದ್ಧ ಭಾವದಿಂ ಅಗೌರವವಾಗಿ ನಾವು ನಿಂದಿಸಿ, ಅವರಿಗೆ ವ್ಯರ್ಥವಾದ ಹೃದಯಾಯಾಸವನ್ನುಂಟುಮಾಡಿದವರಾದೆವೆಂದು ತಾತ್ಪರ್ಯ ಪಟ್ಟಂತೆ ಒಬ್ಬ ಬಾತ್ಮೀದಾರನ ಲೇಖನದಿಂ ನಮಗೆ ತಿಳಿಯಬಂದುದರಿಂದಲೂ, ಸದ್ಭಾವದಿಂ ಬರೆಯಲ್ಪಟ್ಟ ವಿಷಯವು ಅನ್ಯರ ಅಪಾರ್ಥ ಕಲ್ಪನೆಗೆ ವಿಷಯವಾದುದರಿಂದಲೂ ಮರಳಿ ಅದೇ ವಿಷಯವಂ ಕುರಿತು ಬಹಳ ನಿರ್ವೇದದೊಡನೆ ಪ್ರಸ್ತಾಪಿಸಬೇಕಾದವರಾದೆವು. ನಾವು ಗವರ್ನಮೆಂಟಿಗೆ ಪ್ರತ್ಯರ್ಥಿಗಳೆಂಬ ಒಂದು ವಿರುದ್ಧಾಭಿಪ್ರಾಯವು ಅಕಾರಣವಾಗಿ ಉದ್ಭವಿಸಿ ಅದು ಇಂತಾ ಅಪಾರ್ಥಗಳಿಗೆಲ್ಲ ನಮ್ಮನ್ನೊಳಪಡಿಸುತಿದೆಯೋ ಹೊರ್ತು ಶ್ರೀಮನ್ಮಹಾರಾಜರವರನ್ನೂ ಅವರ ದಿವಾನರವರನ್ನೂ ಅನ್ಯರಂತೆ ತಾರತಮ್ಯಜ್ಞಾನಶೂನ್ಯರಾಗಿ ಇದುವರೆವಿಗೆ ಯೆಂದಿಗೂ ನಾವು ದೂಷಿಸಿದವರಲ್ಲವು. ಮುಂದೆ ರಾಜನಿಂದೆಗೂ ನಾವು ಗುರಿಯಾಗತಕ್ಕವರಲ್ಲವು. ಶ್ರೀಮನ್ಮಹಾರಾಜರವರಿಗೂ ಅನ್ಯರಾಜರಿಗೂ ನೆರೆಗೊಂಡಿರುವ ತಾರತಮ್ಯಗಳನ್ನರುಹಿ ಅವರ ಕರ್ಮ ಶ್ರದ್ಧೆಯನ್ನೂ ದೈವಭಕ್ತಿಯನ್ನೂ ಬಹಳ ಕೊಂಡಾಡಿ ಅಂತವರ ಅನುಷ್ಠಾನವು ಸಾಮಾನ್ಯವೆಂದು ಭಾವಿಸತಕ್ಕದ್ದಲ್ಲವೆಂತಲೂ, ಅವರು ಅಲ್ಲಿಯಲ್ಲಿ ತಂಗಿ ಪ್ರಜೆಗಳಮೇಲೆ ದಯಮಾಡುವದರಿಂದ ಅವರಲ್ಲಿ ಯಾರ ಆಕ್ಷೇಪಣೆಗೂ ಅವಕಾಶ ಇರುವದಿಲ್ಲವೆಂತಲೂ ನಾವೇ ತಿಳಿಸಿರುವಾಗ್ಯೂ, ಅವರ ಪ್ರಸಕ್ತ ಸಂಚಾರವಂ ಕುರಿತು ದೂಷಿಸಿದೆವೆಂದು ಅನ್ಯರು ಭಾವಿಸಲಿಕ್ಕೆ ಯೆಷ್ಟುಮಾತ್ರವೂ ಅವಕಾಶ ಕಾಣಿಸಲಿಲ್ಲವು. ಸಮುದ್ರಯಾನ ವಿಚಾರವು ಪಂಡಿತಸಮೂಹದಲ್ಲಿ ಚರ್ಚಿಸಲ್ಪಟ್ಟು ಗ್ರಾಹ್ಯವೆಂದು ನಿರ್ಧಾರವಾಗಿರುತ್ತೆಂದು ಸದರೀ ವೃತ್ತಾಂತ ಪತ್ರಿಕೆ ದೃಢವಾಗಿ ಹೇಳಿದ್ದರಿಂದ ತತ್ಕಾಲದೊಳು ದೇಶಜನಸ್ಥಿತಿಯನ್ನನುಸರಿಸಿ ಸಕಲಜನಾಪೇಕ್ಷಿತವಾದ ಪ್ರಕೃತವಿಷಯ ನಿರ್ಣಯವು ಪ್ರಕಟಿಸಲ್ಪಡತಕ್ಕದ್ದಾಗಿರುವಲ್ಲಿ ಅದಂ ಮಠಾಧಿಪತಿಗಳಾಗಲಿ, ಆಸ್ಥಾನ ವಿದ್ವಾಂಸರಾಗಲಿ, ಶ್ರೀಮನ್ಮಹಾರಾಜಾಸರ್ಕಾರದವರಾಗಲಿ ಹೊರಪಡಿಸದೆ ಗುಪ್ತವಾಗಿಟ್ಟರಲಿಕ್ಕುಂಟಾಗಿರುವ ಪ್ರಬಲತರ ಕಾರಣವಂ ಸದರೀ ಪತ್ರಿಕೆಯಂ ಕೇಳಿದವೇ ಹೊರ್ತು ಬೇರೆ ಯಾವ ಉದ್ದೇಶವೂ ಇಲ್ಲವು. ಕದಾಚಿತ್ ಅವರು ಹಾಗೆ ನಿರ್ಧರಿಸಿದ್ದಗೆ ಅದರ ಆಧಾರವನ್ನಂಗೀಕರಿಸಿ ಮುಂದೆ ಅನೇಕರು ಹೊರಡುವದಕ್ಕೆ ಪ್ರಯತ್ನ ಪಡುವದಾದುದರಿಂದ ಅವರಿಗೆ ಮಾರ್ಗದರ್ಶಕರಾದವರ ವಿಷಯದಲ್ಲಿ ಮಠಾಧಿಪತಿಗಳು ಯಾವವಿಧ ಅಭಿಪ್ರಾಯಪಟ್ಟು ವ್ಯಕ್ತಪಡಿಸಿದರೋ ಅದಂ ನಿಷ್ಕೃಷ್ಟವಾಗಿ ತಿಳಿದುಕೊಳ್ಳಬೇಕೆಂಬ ತಾತ್ಪರ್ಯದೊಡನೆಯೂ, ಇದೇ ವಿಷಯದಲ್ಲಿ ಕೆಲವರು ಮಠಾಧಿಪತಿಗಳು ಅನ್ಯರಿಗೆ ತಿಳಿಸಿದ ಅಭಿಪ್ರಾಯವನ್ನುದಹರಿಸಿ, ಅವರು ಕಾಲಾನುಗುಣವಾಗಿ ಅಭಿಪ್ರಾಯಗಳಂ ಬದಲಾಯಿಸುತಲಿರುವದರಿಂದ ಅದು ಯಾವವಿಧದಿಂದಲಾಗಲಿ ಒಂದು ವಿಶೇಷ ವಿಧಿಯಾಗಿ ಪ್ರಕಟಪಡಬೇಕೆಂಬ ಕೋರಿಕೆಯೊಡನೆಯೂ, ಒಂದುವೇಳೆ ಅವರ ಅನುಷ್ಠಾನವು ವ್ಯಕ್ತಿನಿರ್ದಿಷ್ಟವಾಗಿ ಮಹಾರಾಜರವರೂ ದಿವಾನರವರೂ ವರ್ತಿಸುವ ಪಕ್ಷಕ್ಕೆ ಅದು, ಅಲ್ಲಿಯಲ್ಲಿ ಪ್ರಬಲಿಸುತಲಿರುವ “ರಿಫಾರ್ಮರುಗಳು” ಅಂದರೆ ಆಚಾರ ಪರಿಷ್ಕರಣ ಪ್ರವರ್ತಕರ ವರ್ತನೆಗಳಂತೆ ಭಾವಿಸಲ್ಪಡುವದಲ್ಲದೆ ಸರ್ವಸಾಧಾರಣ್ಯೇನ ಅನುಷ್ಠಿಸಲ್ಪಡುವದಕ್ಕೆ ಅಸಾಧ್ಯವಾದುದರಿಂದ ಅದು ವ್ಯವಸ್ಥೆಯಾದರೆ ಬಹುಜನರಿಗೆ ಪ್ರಯೋಜನಕರವಾಗಿರುವದೆಂಬ ನಿರೀಕ್ಷಣೆಯೊಡನೆಯೂ ತಿಳಿಸಿದೆವಲ್ಲದೆ ಮಹಾರಾಜರು ವಗ್ಯೆರೇರು ಸಮುದ್ರ ಮಾರ್ಗವಾಗಿ ಪಯಣಮಾಡಿದ್ದು ಅಕ್ರಮವೆಂತಲಾಗಲಿ, ಪ್ರಾಯಶ್ಚಿತ್ತಾರ್ಹವೆಂತಲಾಗಲಿ ಸೂಚಿಸಿದವರಲ್ಲವು. “ಅನ್ಯರಂತೆ” ಯೆಂಬ ಒಂದು ಶಬ್ದಕ್ಕೆ ವಿಪರೀತಾರ್ಥವಂ ಮಾಡಿ ನಮ್ಮ ಉದ್ದೇಶವಂ ಅನ್ಯಥಾ ಗ್ರಹಿಸಿ, ನಮ್ಮನ್ನು ರಾಜನಿಂದಾ ದೋಷಕ್ಕೆ ಗುರಿ ಮಾಡಿದವರ ಅನ್ಯಥಾಜ್ಞಾನವು ಇದರಿಂದಲಾದರೂ ನಿವೃತ್ತಿಯಾಗಬಹುದೆಂದು ನಂಬುತ್ತೇವೆ. ಮುಖ್ಯವಾಗಿ ಶ್ರೀಮನ್ಮಹಾರಾಜರವರಾಗಲಿ ಅವರ ದಿವಾನರವರಾಗಲಿ ಈ ಪತ್ರಿಕೆಯಂ ಕಟಾಕ್ಷಿಸುವದಕ್ಕೆ ಅವಕಾಶ ವುಂಟಾದರೆ ಆಗ ಅವರಲ್ಲಿ ನಮಗಿರುವ ರಾಜಭಕ್ತಿ ವಿಶ್ವಾಸಗಳು ವ್ಯಕ್ತವಾಗಿ, ನಮ್ಮ ಲೇಖನೋದ್ದೇಶವು ಅನ್ಯದಾ ಗ್ರಹಿಸಲ್ಪಟ್ಟಂತೆ ಅವರಿಗೆ ತೋರುವದರಲ್ಲಿ ಸಂಶಯವಿರಲಾರದು.

ಈವಾರದ ಪತ್ರಿಕೆಯೊಡನೆ ನಾವು ಕಳುಹಿಸಿರುವ ಉಪಪತ್ರಿಕೆಯಂ ಓದತಕ್ಕವರೆಲ್ಲರಿಗೂ ನಾವು ಮುಂದಿನ ಸಂವತ್ಸರದಲ್ಲಿ ಮಾಡಲುದ್ದೇಶಿಸಿರುವ ಏರ್ಪಾಡುಗಳೂ ಕಲ್ಪಿಸಿರುವ ಸೌಕರ್ಯಗಳೂ ಫಲಾನೆವೆಂದು ಸ್ಪಷ್ಟವಾಗದೆಹೋಗಲಾರವು. ಈ ವಾರದೊಡನೆ ಪೂರ್ತಿಯನ್ನೈದಿದ ಗತ ೧೯ ವರುಷಗಳ ಕಾಲದಲ್ಲಿ, ಈ ಪತ್ರಿಕೆಯು ಸಕಲರಿಗೂ ಪ್ರಯೋಜನಕಾರಿಯಾಗುವದಕ್ಕೋ ಅದರಿಂದ ಇದಂ ಓದುವವರ ಹೃದಯಗಳು ಅನುಮೋದಿಸುವದಕ್ಕೂ ನಾವು ಮಾಡಿದ ಪ್ರಯತ್ನಗಳು ಸಾರ್ಥಕಗಳಾದುವೋ ಅಲ್ಲವೋ ಅದು ನಮ್ಮ ಚಂದಾದಾರರಿಗೆ ತಿಳಿದಿರಬಹುದು. ಇದರ ವಿಷಯದಲ್ಲಿ ಮೊದಲಿನಿಂದಲೂ ಇರುವ ಚಂದಾದಾರರ ಅಭಿಮಾನವು ಒಂದೇಬಗೆಯಾಗಿರುತ ಬಂದುದರಿಂದಲೂ, ಅವರ ಸಹಾಯವು ಏಕರೂಪವಾಗಿದ್ದುದರಿಂದಲೂ, ಅವಿಚ್ಛಿನ್ನವಾಗಿ ಪತ್ರಿಕೆಯಂ ಜರಿಗಿಸುತ ಬಂದೆವು. ಉಪಪನ್ನರಾದ ಉದಾರಿಗಳು ಅಲ್ಪಸಂಖ್ಯೆಯುಳ್ಳವರಾಗಿಯೂ, ಇದರ ಪ್ರಯೋಜನಾಪೇಕ್ಷೆಯುಳ್ಳ ಅನುಪಪನ್ನರು ಅಧಿಕರಾಗಿಯೂ ಇರುವದರಿಂದ, ವಿಶೇಷಫಲವಂ ಪಡೆಯಲಿಕ್ಕೆ ಏತನ್ಮೂಲಕ ತಾವು ಸಮರ್ಥರಾಗಬೇಕೆಂಬ ಅಭಿರುಚಿಯುಳ್ಳವರೆಲ್ಲರಿಗೂ ಪರಿಗ್ರಹಯೋಗ್ಯವಾಗಿ, ಪ್ರಯೋಜನಕಾರಿಯಾಗಬೇಕೆಂಬ ಕೋರಿಕೆಯೊಡನೆ ಪತ್ರಿಕೆಯ ಚಂದಾದರವನ್ನು ಸಾಧ್ಯವಾದ ಮಟ್ಟಿಗೆ ತಗ್ಗಿಸಿರುತ್ತೇವೆ. ಮುಂದೆ ಪ್ರಜೆಗಳು ನಮ್ಮ ಪ್ರಯತ್ನಗಳಿಗೆ ಹ್ಯಾಗೆ ಸಹಾಯಕರಾಗಿರತಕ್ಕದ್ದೋ ಅದು ಅವರೇ ಬಲ್ಲರಾಗಿ ನಾವಿಲ್ಲಿ ತಿಳಿಸಬೇಕಾದ ಆವಶ್ಯಕತೆಯಿಲ್ಲವು. ಈ ಪತ್ರಿಕೆಯು ವಿಶೇಷಾಭಿವೃದ್ಧಿಯನ್ನೈದಲಿಕ್ಕೆ ಉಂಟಾಗಿರುವ ಕೆಲವು ಆಂತರಾಳಿಕ ಪ್ರತಿಬಂಧಕಗಳು ಗೂಢವಾದುದರಿಂದ ಅವು ನಾವಿಲ್ಲಿ ತಿಳಿಸಲಾರೆವು. ಪರಂತು ಪ್ರಸಕ್ತವಿಷಯ ವಿಚಾರವಂ ಪೂರ್ತಿಗೈಯುವದಕ್ಕೆ ಪೂರ್ವಭಾವಿಯಾಗಿ ಸಾಮಾನ್ಯೇನ ನೇಟಿವ್ ವೃತ್ತಾಂತ ಪತ್ರಿಕೆಗಳೂ ತತ್ರಾಪಿ ದೇಶಭಾಷಾ ಪತ್ರಿಕೆಗಳೂ ಅಭಿವೃದ್ಧಿಯನ್ನೈದದೆ ಕ್ಷಯಿಸುತ ಬರುವದಕ್ಕೂ, ಅವು ಅನಾದರಣೀಯಗಳಾಗಿ ನಿಂದಿಸಲ್ಪಡಲಿಕ್ಕೂ, ಅವುಗಳ ಮುಖ್ಯಪ್ರವರ್ತಕರು ಪ್ರೋತ್ಸಾಹರಹಿತರಾಗಿ ಕಡೆಗೆ ಬಹುವಿಧನಷ್ಟಗಳನ್ನನುಭವಿಸಿ ನಿರ್ಭಾಗ್ಯರಾಗಿ ಜನರ ಹೇಳನಕ್ಕೆ ಗುರಿಯಾಗಲಿಕ್ಕೂ ಉಂಟಾದ ಕೆಲವು ಕಾರಣಗಳಂ ತಿಳಿಸುತ್ತೇವೆ. ಇದರಿಂದ ಈ ಲೇಖನಕ್ಕೆ ವ್ಯಕ್ತಿನಿರ್ದೇಶವೂ ಅನ್ಯತ್ರಾನ್ವಯವೂ ಕುದ್ಧಂಗ ಇರಲಾರದಾಗಿ ನಮ್ಮ ಅಭಿಪ್ರಾಯವು ಸರ್ವಸಾಧಾರಣ್ಯವಾದದ್ದೆಂದು ಇದು ಓದತಕ್ಕವರೆಲ್ಲರು ಗ್ರಹಿಸುವರೆಂದು ನಂಬುತ್ತೇವೆ.

೧. ಲೋಕದಲ್ಲಿ ಮನುಷ್ಯನ ಉತ್ತಮವಾದ ಸುಖ ಸಂತೋಷಾಭಿವೃದ್ಧಿಗೆ ಧನವು ಕೇವಲ ಮುಖ್ಯವಾದುದಾಗಿರುತಿದೆ. ಅಂತಾ ಧನಾರ್ಜನಕ್ಕೆ ವಿದ್ಯಾವೈಲಕ್ಷಣ್ಯಗಳು ಅಪೇಕ್ಷಿತಗಳು. ಆದುದರಿಂದ ಅನ್ಯೋನ್ಯಾಶ್ರಯಗಳಾದ ಸದರೀ ಎರಡು ವಿಷಯಗಳೂ ಕಾರ್ಯ ಕಾರಣ ಭಾವ ರೂಪವಾಗಿರುತಿವೆ. ಇಂತಾ ಅಭಿವೃದ್ಧಿಯನ್ನೈದಬೇಕಾದ ಅಂಶದಲ್ಲಿ ಪ್ರಯತ್ನಪಡತಕ್ಕವರಿಗೆ ತಕ್ಕ ಪ್ರೋತ್ಸಾಹವನ್ನೂ ಸಹಾಯವನ್ನೂ ಧನಿಕರಾಗಿಯೂ ವಿದ್ಯಾವಂತರಾಗಿಯೂ ಇರತಕ್ಕವರು ತಪ್ಪದೆ ಮಾಡುತಲಿರಬೇಕಾದುದು ಆವಶ್ಯಕವಾಗಿರುತಿದೆ. ತಾದೃಶ ಸಹಾಯಸಂಪತ್ತಿಯು ಪ್ರಾಯಶಃ ವೃತ್ತಾಂತ ಪತ್ರಿಕೆಗಳ ವಿಷಯದಲ್ಲಿ, ತತ್ರಾಪಿ ದಕ್ಷಿಣದೇಶದಲ್ಲಿ ಅಲಭ್ಯವಾಗಿರುವದರಿಂದ ಈ ಪ್ರಯತ್ನವು ಸಫಲವಾಗುವದಿಲ್ಲವು.

೨. ಈ ಪ್ರಪಂಚವು ಜ್ಞಾನಮಯವೆಂದು ಕೆಲವರು, ಜ್ಞಾನಪ್ರಕಾಶ್ಯವೆಂದು ಕೆಲವರು, ಜ್ಞಾನವಿದ್ದರೆ ಪ್ರಯೋಜಕವೆಂದು ಮತ್ತು ಕೆಲವರು, ಜ್ಞಾನದಿಂದೊಡಗೂಡಿದ್ದೆಂದು ಇನ್ನೂ ಕೆಲವರು, ಹೀಗೆ ತಾತ್ಪರ್ಯಗಳು ಅನೇಕ ವಿಧವಾಗಿರುವದಂ ವಿಚಾರಿಸಲಾಗಿ, ಜ್ಞಾನ ವಿಲ್ಲದವನಿಗೆ ಈ ಪ್ರಪಂಚವು ವ್ಯರ್ಥವಾಗಿರುವದೆಂದು ತಾತ್ಪರ್ಯವಾಗುತಿದೆ. ಮತ್ತು ಜ್ಞಾನ ಶೂನ್ಯತೆಯು ಪ್ರಬಲತರ ದುಃಖನಿಮಿತ್ತಕವಾಗುವ ದೆಂಬದು ಪ್ರಸಿದ್ಧ ವಿಷಯವಾಗಿರುತಿದೆ. ಜ್ಞಾನಾಭಿವೃದ್ಧಿಗೆ ಲೌಕಿಕ ಸಂಬಂಧವು ಆವಶ್ಯಕವು. ಅದು ದೇಶಾಟನದಿಂದಲೂ, ಪಂಡಿತ ಸಮಾಗಮದಿಂದಲೂ, ದೇಶಾಂತರ ವಿಷಯಸ್ವರೂಪ ಗ್ರಹಣದಿಂದಲೂ ಉಂಟಾಗುತಿದೆ. ಅದಕ್ಕೆ ಪ್ರಧಾನಸಾಧನವು ವೃತ್ತಾಂತಪತ್ರಿಕೆಯಾದುದರಿಂದ ಅದರ ಪ್ರಯೋಜನವನ್ನರಿತು ಅಭಿನಂದಿಸಿ ಪಡೆಯುವ ಕುತೂಹಲವು ಸರ್ವಸಾಧಾರಣವಾಗಿ ಪ್ರಸರಿಸದಿರುವದರಿಂದ ಜನರ ಔದಾಸೀನ್ಯವು ಯೆರಡನೆಯ ಕಾರಣವೆಂದು ಅರಿಯತಕ್ಕದ್ದು.

೩. ವೃತ್ತಾಂತ ಪತ್ರಿಕಾ ಲೇಖಕರಾದವರ ನಂಬಿಕೆಗೆ ಆಸ್ಪದವಾದ ಯಾವದಾದರೊಂದು ಮಾರ್ಗದಿಂ ಸಂತೋಷಕರವಾಗಿಯಾಗಲಿ ದುಃಖಕರವಾಗಿಯಾಗಲಿ ಬಂದ ವಿಷಯ ತಿಳಿಯಬಂದಲ್ಲಿ ಅದು ಕೇವಲ ಜನಗಳ ತಿಳುವಳಿಕೆಗೆ ಮಾತ್ರ ಬರಬೇಕಾದುದಾಗಿದ್ದರೆ ಅಷ್ಟು ಮಾತ್ರ ಪ್ರಕಟಿಸಲಿಕ್ಕೂ, ಸ್ವಲ್ಪ ವಿಶೇಷವಾದುದಾದರೆ ಸ್ವಾಭಿಪ್ರಾಯವನ್ನು ಯುಕ್ತಾನುಸಾರ ಸಂಗ್ರಹಿಸಿ ಅಥವಾ ವಿಸ್ತರಿಸಿ ತಿಳಿಸಲಿಕ್ಕೂ ತಕ್ಕ ಅಧಿಕಾರವೂ ಸ್ವಾತಂತ್ರ್ಯವೂ ಅವರಿಗೆ ನೆರೆಗೊಂಡಿರುತಿವೆ. ಇಂತಾ ಸ್ವಾತಂತ್ರ್ಯವುಳ್ಳ ಪತ್ರಿಕಾ ಲೇಖಕರಲ್ಲಿರುವ ಕ್ರಮವನ್ನೂ ಅವರ ಉದ್ದೇಶಗಳನ್ನೂ ವಿಚಾರಿಸಿದರೆ ಇವರಿಗೊಬ್ಬರು ಅಹಿತರೆಂತಲೂ ಮತ್ತೊಬ್ಬರು ಹಿತರೆಂತಲೂ, ಒಬ್ಬರು ನಿಂದ್ಯರೆಂತಲೂ ಇನ್ನೊಬ್ಬರು ಶ್ಲಾಘ್ಯರೆಂತಲೂ ಇಲ್ಲವಾಗಿ ಪಕ್ಷಪಾತ ಶೂನ್ಯವಾದ ಮಾತುಗಳನ್ನವರು ವಿನಿಯೋಗಿಸಬೇಕಾಗಿರುವದಿಲ್ಲವು. ಇಂತವರಲ್ಲಿ ಪಕ್ಷಪಾತವೆಂಬುವದಕ್ಕೆ ಅವಕಾಶವು ವಸ್ತುತಃ ಇಲ್ಲವಾದಾಗ್ಯೂ ಆಯಾ ವಿಷಯದ ಸ್ವರೂಪ ಸ್ಥಿತಿಯಂ ತಿಳಿಸದೆ ಬಿಡುವದಕ್ಕಾಗುವದಿಲ್ಲವು. ಯಾತಕ್ಕೆಂದರೆ ಸ್ವಾಭಾವಿಕಗಳಾದವಳ್ಳೆಯಗುಣಗಳೂ ಸತ್ಪ್ರವರ್ತನವೂ ಲೋಕದಲ್ಲಿ ಪ್ರಚುರಗಳಾಗಬೇಕಾದ್ದೇ ಅವರ ಮುಖ್ಯೋದ್ದೇಶವಾಗಿರುತ್ತೆ. ಹೀಗೆ ಸಾಮಾನ್ಯನ್ಯಾಯವನ್ನವಲಂಬಿಸಿ ಬರೆಯಲ್ಪಡತಕ್ಕ ಲೇಖನಗಳಿಗೆಲ್ಲ ಕೆಲವರು ವಿರುದ್ಧಾಭಿಪ್ರಾಯಗಳಂ ಕಲ್ಪಿಸಿ ದ್ವೇಷಾಸೂಯೆಗಳನ್ನುಂಟುಮಾಡಿ ತಲ್ಲೇಖಕರಂ ಪ್ರಬಲ ಶತ್ರುರೂಪೇಣ ಪರಿಗಣಿಸಿ ಅವರ ಹಾನಿಯಂ ಅಂತರವಾಗಿ ಬಯಸುತ ಅವರ ಮತ್ತು ಅವರಪತ್ರಿಕಾ ಸಾಧನಕ್ಕೆ ಬೇಕಾದ ಸಹಾಯಗಳಂ ಮಾಡುತ ಪತ್ರಿಕಾ ಪ್ರಚಾರವಂ ಪರಾಪರೆಯಾ ತಡೆಯುವದರಿಂದ ಅವರ ದಾಕ್ಷಿಣ್ಯಬದ್ಧರಾದವರು ಸಹ ಪ್ರತಿಭಟಿಸಿ ಪ್ರತಿಕೂಲವನ್ನುಂಟುಮಾಡುವದರಿಂದ ವೃತ್ತಾಂತ ಪತ್ರಿಕೆಗಳ ಬಾಳ್ವಿಕೆಯು ಕ್ಷಣಿಕಗಳಾಗಿರುತಿವೆ.

೪. ವೃತ್ತಾಂತ ಪತ್ರಿಕೆಯು ರಾಜ್ಯಪಾಲಕರಿಗೆ ಮಧ್ಯವರ್ತಿಯೆನಿಸಿರುತಿದೆ. ಇದು ಪ್ರಭುಗಳಿಗೆ ತೃಪ್ತಿಕರಗಳಾಗಿಯೂ, ಅವರ ಪ್ರತಿರೂಪಗಳಾಗಿಯೂ, ಅವರ ದುರ್ಗುಣಗಳನ್ನೆಲ್ಲ ಗುಣತ್ವೇನ ಕೊಂಡಾಡತಕ್ಕವಾಗಿಯೂ, ಮುಖಸ್ತೋತ್ರಪರಗಳಾಗಿಯೂ ಇರುವ ಶಬ್ದಗಳನ್ನುಪಯೋಗಿಸುತ, ಕುಧ್ಯಸ್ತುತಿಪಾಠಕರಂತಿದ್ದರೇನೇ ಅವರು ಅಭಿಮಾನಿಸುವರು. ರಾಜಪಕ್ಷವನ್ನವಲಂಬಿಸಿ ರಾಜಕಾರ್ಯ ಗುಣದೋಷ ವಿಚಾರಪೂರ್ವಕ ಪ್ರಜೆಗಳಿಗೆ ಬಂದು ಸಹಾಯವಂ ಮಾಡಿದ್ದರೆ ಅವರದಂ ಗೌರವಿಸುವದಿಲ್ಲವು. ಉಭಯ ಸಂಬಂಧವನ್ನರಿತು ತಾಟಸ್ಥ್ಯವಂ ವಹಿಸಿದರೆ ಅವುಗಳ ಸ್ಥಿತಿಯು ಉಭಯರಿಂದಲೂ ಉಪೇಕ್ಷಿಸಲ್ಪಡತಕ್ಕದ್ದಾಗಿರುತಿದೆ. ಆದುದರಿಂದ ಈ ದ್ವೈವಿಧ್ಯದಲ್ಲಿ ಪತ್ರಿಕಾಭಿವೃದ್ಧಿಗೆ ಅವಕಾಶವು ಕಡಿಮೆಯೆಂದು ಭಾವಿಸಬೇಕಾಗಿದೆ.

೫. ವೃತ್ತಾಂತ ಪತ್ರಿಕೆಗಳಿಂದ ಯಾವ ಪ್ರಯೋಜನಗಳುಂಟಾಗುವದೆಂದು ವಿವೇಕಿಗಳು ತಿಳಿದಿರೆಯೋ ಅಂತರಂಗಗಳೊಳಗೆ ರಾಜ್ಯಾಂಗದ ವಿಷಯಗಳನ್ನು ಕುರಿತು, ಆಳತಕ್ಕ ಅರಸರಿಗೂ ಆಳಲ್ಪಡುವ ಪ್ರಜೆಗಳಿಗೂ ಕಾಲೋಚಿತವಾಗಿರುವ ಆವಶ್ಯಕ ವಿಷಯಗಳನ್ನು ಚರ್ಚಿಸಿ ತಿಳಿಸುತಲೂ, ಅವರವರ ಕರ್ತವ್ಯಗಳನ್ನು ಸೂಚಿಸುತಲೂ ಇರಬೇಕಾದ್ದು ಮುಖ್ಯಪ್ರಯೋಜನವಾಗಿರುತಿದೆ. ಗವರ್ನಮೆಂಟಿನವರು ತಮ್ಮ ಪ್ರಭುತ್ವಕ್ರಮವು ಗುಣದೋಷವಿಮರ್ಶಾವಕಾಶ ಪೃಕ್ತದ್ದಾಗಿರಕೂಡದೆಂಬ ಭಾವದೊಡನೆ ಸಾಧ್ಯವಾದ ಮಟ್ಟಿಗೆ ಅದಂ ಗುಪ್ತವಾಗಿ ಜರಿಗಿಸುತಲಿರುತ್ತಾರೆ. ಇದರಿಂದ ಅಧಿಕಾರಿಗಳಿಗೂ ಪ್ರಜೆಗಳಿಗೂ ನೆರೆಗೊಂಡಿರಬೇಕಾದ ಸಂಬಂಧವು ದೂರವಾಗುವದರಿಂದ ಸರ್ಕಾರಿಯಾದ ಉಪಯುಕ್ತಾಂಶಗಳು ಪತ್ರಿಕಾಮೂಲಕ ಪ್ರಕಟವಾಗಲಿಕ್ಕೆ ಅವಕಾಶವಿಲ್ಲದೆ ಹೋಗುವದರಿಂದ ಜನರಿಗೆ ಅನುತ್ಸಾಹಕಾರಿಯಾಗಿ ಆದರಣೀಯವಲ್ಲದೆ ಉಪೇಕ್ಷಿಸಲ್ಪಡುವದು ಅದರ ನಾಶನಕ್ಕೆ ಮತ್ತೊಂದು ಕಾರಣ.

೬. ಪತ್ರಿಕಾ ಪ್ರಚಾರ ಕಾರ್ಯವು ಅನಿಯತವಾದ ಆಯತಿಯುಳ್ಳದ್ದಾಗಿಯೂ, ನಿಯತವಾದ ವ್ಯಯವುಳ್ಳದ್ದಾಗಿಯೂ, ಸಹಾಯಕರು ಸಕೃತ್ತಾಗಿಯೂ, ಪ್ರತ್ಯರ್ಥಿಗಳು ಅಪರಿಮಿತವಾಗಿಯೂ ಇರುವದರಿಂದ ಅದರ ಜೀವನವು ಅನಿಶ್ಚಿತವಾಗಿರುತಿದೆ.

೭. ಇಂಗ್ಲಿಷ್ ಪತ್ರಿಕೆಗಳಿಗೆ ಉಂಟಾಗಿರುವ ಅನೇಕ ಆನುಕೂಲ್ಯಗಳೂ ಬಹುವಿಧ ಆದಾಯಗಳೂ ಹಿಂದೂ ಪತ್ರಿಕೆಗಳಿಗಿಲ್ಲದ್ದರಿಂದ ಅವು ಚಂದಾದಾರರ ಔದಾರ್ಯವನ್ನೇ ನಿರೀಕ್ಷಿಸಿಕೊಂಡಿರಬೇಕಾದವಾಗಿರುತಿವೆ ಅವರ ಔದಾರ್ಯವು ಅನಿಯತವಾಗಿಯೂ ಕದಾಚಿತ್ ಲಭಿಸತಕ್ಕದ್ದಾಗಿಯೂ, ಸ್ವಾರ್ಥಪರವಾದುದಾಗಿಯೂ ಇರುವದರಿಂದ ಅವುಗಳ ಕಾಲಹರಣವು ಅತಿ ಪ್ರಯಾಸಕರವಾಗಿರುತಿದೆ.

೮. ವೃತ್ತ್ಯಂತರವನ್ನವಲಂಬಿಸಲಾರದ ಅನುಭವಶೂನ್ಯರಾದವರು ಅಲ್ಲಿಯಲ್ಲಿ ಪ್ರಬಲಿಸುತ ಇದನ್ನೊಂದು ಜೀವನೋಪಾಯವನ್ನಾಗಿ ಅಂಗೀಕರಿಸಿ ತೋರಿದ ಹೆಸರುಗಳನ್ನಿಡುತ ಒಂದೊಂದು ಪತ್ರಿಕೆಯನ್ನಾರಂಭಿಸುತಲೂ, ಅದರ ಜೀವನಾಧಾರವಂ ಪರಿಕಿಸದೆ, ತಮ್ಮ ಹೆಸರು ಪ್ರಕಟವಾಗುವದರಿಂದ ತೃಪ್ತರಾಗಿ ಲಭಿಸಿದ್ದಕ್ಕೆ ಆನಂದಿಸುತಲೂ, ವಿಷಯಸ್ವರೂಪಾನುಗುಣವಾಗಿ ಬರೆಯದೆ ತಮ್ಮ ವಾಕ್ಯ ರಚನಾ ಕೌಶಲ್ಯಮಂ ಪ್ರದರ್ಶಿಸುವದಕ್ಕಾಗಿ ಅಯೋಗ್ಯಗಳಾಗಿಯೂ, ಅಗೌರವಕರಗಳಾಗಿಯೂ, ಪರಿಹಾಸಾಸ್ಪದಗಳಾಗಿಯೂ, ದಾರುಣಗಳಾಗಿಯೂ, ಅಗ್ರಹಪ್ರವರ್ತಕಗಳಾಗಿಯೂ ಯಿರುವ ಶಬ್ದಗಳಂ ಪ್ರಯೋಗಿಸುತಲೂ ಬರುವದರಿಂದ ಪತ್ರಿಕಾ ಗೌರವವು ಕೆಡುವದಲ್ಲದೆ ಸಾಧಾರಣವಾಗಿ ಪತ್ರಿಕಾ ಲೇಖಕರಿಗೆಲ್ಲ ಅಪಪ್ರಥೆಯುಂಟಾಗದಿರುವದಿಲ್ಲವು. ಇಂತಾ ಪತ್ರಿಕೆಗಳನ್ನು ಸ್ವರೂಪ ತಾರತಮ್ಯ ಜ್ಞಾನವಿಹೀನರು ಕೆಲವರು ತೆಗೆದುಕೊಂಡು ಓದಿ ಅನುಭವಿಸಬಹುದಾದಾಗ್ಯೂ ಬಹುಮಂದಿ ಅವಂ ತಿರಸ್ಕರಿಸಿ ಯೆಂಜಲುಯೆಲೆಗಳಿಗಿಂತಲೂ ಅಧಮವಾಗಿ ಭಾವಿಸುತ್ತಾರೆ. ಯಾವಾಗ ಪತ್ರಿಕೆಗಳು ಹೀಗೆ ಬಹುಜನ ಪರಿಗ್ರಹಾರ್ಹಗಳಾಗದೆ ಹೋಗಲು ಅವುಗಳ ಆಯತಿಯು ತಗ್ಗಿ ಅವು ಜೀವಿಸುವದು ಪ್ರಯಾಸಕರವಾಗಲು ಅವುಗಳ ಚಂದಾದರವನ್ನು ಇಷ್ಟಬಂದಂತೆಲ್ಲ ಕಡಿಮೆಮಾಡಿ ಲಾಘವಪಡಿಸುತ್ತಾರೆ. ಅತ್ಯಲ್ಪ ಮೌಲ್ಯಕ್ಕೆ ನಾಮಮಾತ್ರಕ್ಕೆ ಲಭಿಸತಕ್ಕ ಪತ್ರಿಕೆಗಳನ್ನು ಜನರು ಗುಣದೋಷವಿಮರ್ಶೆಮಾಡದೆ ಅಂಗೀಕರಿಸಿ ಕಡೆಗೆ ಅವುಗಳನ್ನು ಸಹ ಉದಾಸೀನ ಮಾಡುವದರಿಂದ “ಸ್ವಯನ್ನಷ್ಟಃ ಪರಾನ್ನಾಶಯತಿ” ಎಂಬಂತೆ ಅವು ಸ್ವತಃ ನಷ್ಟಪಡುವದಲ್ಲದೆ ಈ

ವಿಸಿರುವ ಇತರ ಪತ್ರಿಕೆಗಳಂ ಸಹ ತಮ್ಮ ಸಹಾಯಾರ್ಥ ಆಕರ್ಷಿಸುತ್ತಿವೆ. ಹೀಗೆ ಪರಸ್ಪರ ಸಹಾಯದಿಂ ಯೆಲ್ಲವೂ ನಿರ್ನಾಮಗಳಾಗಲಿಕ್ಕೆ ಇದೊಂದು ಕಾರಣವು.

೯ ಜನರು ಸ್ವೀಯವಿಷಯದಲ್ಲಿ ವಿಮುಖರಾಗುತಲೂ ಪರಕೀಯವಾದವುಗಳಲ್ಲಿ ಅನುರಕ್ತರಾಗುತಲೂ ಬರುವದರಿಂದ ಅವರಿಗೆ ದೇಶಭಾಷಾ ಪತ್ರಿಕೆಗಳ ಸ್ಪರ್ಶನಸಹ ಅತಿನಿಂದ್ಯವೆಂಬ ಭಾವವುಂಟಾಗಿದೆ. ಇದರಿಂದ ಸಹ ದೇಶಭಾಷಾ ಪತ್ರಿಕೆಗಳು ತಲೆಯೆತ್ತುವದಿಲ್ಲವು.

೧೦. ಹಿಂದೂಗಳಿಗೆ ತಾವು ಕಲಿತ ವಿದ್ಯೆಗಳನ್ನು ಪ್ರದರ್ಶಿಸಲಿಕ್ಕೆ ಇಂಗ್ಲಿಷ್ ಭಾಷೆ ವಿನಾ ಅನ್ಯಭಾಷೆಗಳು ಅನರ್ಹವೆಂಬ ತಾತ್ಪರ್ಯವೂ, ಇಂಗ್ಲಿಷ್ ಭಾಷಾಮಯವಾದದ್ದೇ ಲೇಖನವೆಂಬ ಪ್ರತಿಪತ್ತಿಯೂ ಅದು ತ್ಯಜಿಸಿ ಇತರಭಾಷೆಗಳಲ್ಲಿ ಬರೆಯುವದನ್ನು ಪ್ರತಿಷ್ಠಾನುಮಾಪಕವಲ್ಲವೆಂಬ ನಂಬಿಕೆಯೂ ಊರ್ಜಿತವಾಗಿ ವಿದ್ಯಾವಂತರ ಸಹಾಯವಿಲ್ಲದೆ ಹೋಗುವದನ್ನು ಕೂಡ ಪತ್ರಿಕಾ ನಾಶನಹೇತುವೆಂದು ನಿರ್ಧರಿಸುವೆವು

೧೧ ಹೀಗೆ ಇವುಗಳ ಪ್ರತಿ ಅಭಿವೃದ್ಧಿಬಾಧಕಗಳಾದ ಪ್ರತಿ ಬಂಧಕಗಳು ಅನುಕ್ರಮವಾಗಿರುವದರಿಂದ ಅನ್ಯಗಳನ್ನೆಲ್ಲ ತಿಳಿಸಲಿಕ್ಕೆ ಒಂದು ವಾರದಲ್ಲಿ ಸಾಧ್ಯವಾಗಲಾರದು. ಮುಖ್ಯವಾಗಿ ಕರ್ಣನ ಮರಣಕ್ಕೆ ಕೃಷ್ಣನು, ಅರ್ಜುನನು, ಕುಂತಿ, ವಾಸವಿ, ಬ್ರಾಹ್ಮಣ, ಶಲ್ಯನು, ಈ ಆರುಜನ ಹ್ಯಾಗೆ ಕಾರಣಭೂತರಾದರೋ ಹಾಗೆ ದೇಶ ಭಾಷಾ ವೃತ್ತಾಂತ ಪತ್ರಿಕೆಗಳ ನಾಶನಕ್ಕೆ ಮೊದಲು ಅನನುಭವಶಾಲಿಗಳ ಮುಂಗ್ರುಪಬಿಷ್ಟವಾದ ಲೇಖನಗಳೂ, ಬಳಿಕ ಗವರ್ನಮೆಂಟಿನವರೂ, ತೆಲುವಾಯ ಪ್ರವೇಶಗಳೂ, ಅನಂತರ ಪತ್ರಿಕಾ ಬಾಹುಳ್ಯವೂ, ಬಳಿಕ ಇಂಗ್ಲಿಷ್ ಭಾಷಾ ಪ್ರಾಚುರ್ಯವೂ, ಕಡೆಗೆ ಪುಸ್ತಕರಿಗಳ ಈರ್ಷ್ಯಾಸೂಯೆಗಳೂ ಕಾರಣಗಳಾಗಿ ಮೀರ್ಪಟ್ಟು ದಿನೇದಿನೇ ಕ್ಷೈಣಿಸಿ ಜೀರ್ಣಿಸಲ್ಪಡೆಹೋಗಬೇಕಾದ ಕಾಲವು ಈಗಪ್ರಾಪ್ತವಾಗಿರುವದಕ್ಕಾಗಿ ನವೆಲ್ಲರನೆ ಯೆಲ್ಲರೂ ಚಿಂತಿಸದಿರಲಾರರೆಂದು ನಂಬುತ್ತೇವೆ.

ಸಾಮಾನ್ಯವಾಗಿ ಈ ಕಾಲದಲ್ಲಿ ಜನರಿಗೆ, ತತ್ರಾಪಿ ಉತ್ತಮಜಾತಿಯವರಿಗೆ ದೇವಾಲಯಗಳು, ನಿಗಮಾರಾಧನವು, ಉತ್ಸವಾದಿಗಳು, ಗುರುಮಠಗಳು, ಮಠಾಧಿಪತಿಗಳು, ಅವರ ನಿಗ್ರಹಾನುಗ್ರಹ ಶಕ್ತಿ ಮೊದಲಾದ ವಿಷಯಗಳಲ್ಲಿ ಔದಾಸೀನ್ಯವನ್ನಾದರೂ, ಅಂತಃ ವಿದ್ವೇಷವನ್ನೂ ವುಂಟಾಗಿ ಅವರು ಅನ್ಯಗಳನ್ನು ನಾನಾಮುಖವಾಗಿ ಹೇಳಲನುಮಾನತೊಡಗಿದಾರೆ. ಸುಮ್ಮನೆ ಮೆಲ್ಲನೆ ಬಾಯಿಗೆ ಬಂದ ಆಕ್ಷೇಪಣೆಯನ್ನು ಹಾಕಿದಂತೆ ಅವರ ದೂಷಣ ತಿರಸ್ಕಾರಗಳಿಗೆ ಬೇಕಾದ ಅವಾಂತರಗಳಂ ನಮ್ಮಂತವರು ಸಾಧ್ಯವಾದಮಟ್ಟಿಗೆ ಕಲ್ಪಿಸುವ ಬರುತ್ತಾರೆ. ಇದರಿಂದ ಅನ್ಯಮತಸ್ಥರು ತಮ್ಮ ದೋಷಗಳನ್ನು ಪರಿಗಣಿಸದೆ ಕೇವಲ ಪರದೂಷಣೆ ಮಾಡುವಾಗ್ಯೆ ನಾವು ನಾಚಿಕೆಯಿಂದ ಸುಮ್ಮನಿರಬೇಕಾಗುತಿದೆ. ತಾವನ್ಯಾತ್ರ ಬಿಂಬದೇ ಪರಮತ ಭುವನ ಆರ್ಯಕ ಸ್ವಮತಸ್ಥಾಪನೆ ಮಾಡಿದಂತೆ ಅವನು ಭಾವಿಸಿ ಉಬ್ಬುರುತೆ ಕೆಲವರು ಮೆರೆಯುವದು ನೋಡಿ ನಾವು ನಗಬೇಕಾಗುತಿದೆ. ಕೆಲವು ಸಮಯದಲ್ಲಿ ನಮ್ಮವರ ಅವಿವೇಕಕ್ಕಾಗಿ ನಡುನಾವು ದುಃಖಿಸಬೇಕಾಗಿದೆ. ಈಚೆಗೆ ತಿರುಪತಿ ಮಹಂತರವರ ಮೇಲೆ ತರಲ್ಪಟ್ಟ ವ್ಯಭಿಚಾರ ಮೊಕದ್ದಮೆಯು ಬಹಳ ಅಪಮಾನ ಕರವಾದುದಾಗಿರುತಿದೆ. ಇವರು ಅನಾದಿಯಾದ ಗುರು ಪೀಠಾಧಿಪತಿಯಾಗಿಯೂ, ಭಗವತ್ಪ್ರತ್ಯರ್ಥರಾಗಿಯೂ, ವಿರಕ್ತರಾಗಿಯೂ, ಧರ್ಮಕರ್ತರಾಗಿಯೂ ಇರುತ್ತಾರೆ. ಇಂತವರಮೇಲೆ ಅಗಿಂದ್ಯಾಗ್ಯೆ ದೈವ ವಿತ್ತಾಪಹರಣ ದೋಷವೂ ಪರದಾರಗಮನ ದೋಷವೂ ಬರುತ ಸಿವಿಲ್ ಮತ್ತು ಮೇಜಸ್ಟ್ರೇಟಿ ಕೋರ್ಟುಗಳಲ್ಲಿ ಇವರದೊಂದು ನಿಯತ ವ್ಯಾಜ್ಯವಾಗಿ ಕುದರಿರುವದು ಯೆಲ್ಲರಿಗೂ ಬಹಳ ಅಗೌರವವಾಗಿರುತಿದೆ. ಇಂತಾ ಕಪಟ ವೇಷಧಾರಿಗಳಾದ ಮಠಾಧಿಪತಿಗಳ ವರ್ತನವು ಕುರಿತು ಈ ತಿಂಗಳ ೧೭ನೇ ತಾರೀಖಿನ ಮದರಾಸ್ ಆಂಧ್ರಪ್ರಕಾಶಿಕಾ ಪತ್ರಿಕೆಯು ತಿಳಿಸಿರುವ ಅಭಿಪ್ರಾಯವಂ ನಮ್ಮ ಪತ್ರಿಕೆಯಲ್ಲಿ ಪ್ರಕಟಸಲಿಕ್ಕೆ ಕುದ್ದಾಂಗ ಇಷ್ಟವಿಲ್ಲದಿದ್ದಾಗ್ಯೂ ನಮ್ಮ ಮತ ಸಂಬಂಧವಾದ ವಿಷಯದಲ್ಲಿ ಅನ್ಯರು ಮಾಡುವ ಅಗೌರವ ಕರಗಳಾದ ದೂಷಣ ಸ್ವಭಾವಗಳೀತೆರನಾದವೆಂದಾದರೂ ನಮ್ಮವರು ತಿಳಿದು ಉಚಿತ ರೀತಿಯಿಂದ ವರ್ತಿಸುವರೋ ಯೆಂಬ ಪ್ರತ್ಯಾಶೆಯೊಡನೆ ಅದನ್ನಿದರದಿ ಪ್ರಕಟಸುತ್ತೇವೆ:—

"ಹಿಂದೂ ಮತದಲ್ಲಿ ಮತೋದ್ಧಾರಕರೆಂದು ಬಿರುದು ಹೊಂದಿರುವ ಮಠಾಧಿಪತಿಗಳು ಅನೇಕರಿರುತ್ತಾರೆಂಬ ಅಂಶ ಯೆಲ್ಲರಿಗೂ ತಿಳದದ್ದಾಗಿರುತಿದೆ. ಆಂಗ್ಲೇಯರ ಪ್ರಭುತ್ವದಲ್ಲಿ ಪ್ರಸಿದ್ಧರಾದವರಿಗೆ ಕೊಡಲ್ಪಡತಕ್ಕ ಅಕ್ಷರ ಬಿರುದುಗಳಂತಲ್ಲದೆ ಅತಿ ದೀರ್ಘ ಪ್ರಶಸ್ತ್ಯಗಳಂ ಪಡೆದು ಅವುಗಳನ್ನು ಸ್ವತಃ ಪ್ರಕಟ ಪಡಿಸಿಕೊಂಡು ದೇಶ ಸಂಚಾರ ಮಾಡುತ ರಾತ್ರಿ, ಪಗಲು ಕಷ್ಟಪಡುತ ತಮ್ಮ ಕುಟುಂಬ ಸಂರಕ್ಷಣೆಗಾಗಿ ಸಂಪಾದಿಸುವ ಹಣವು ಮುಗ್ಧ ಗೃಹಸ್ಥರಂ ಪೀಡಿಸಿ ತೆಗದುಕೊಂಡು ಅದರಿಂದ ತಮ್ಮ ಡಂಭವನ್ನು ಕಾಪಾಡಿಕೊಳ್ಳುತಲಿರುವರು. ಮಠಾಧಿಪತಿಗಳಿಗೆ ಅವರ ಪಾಂಡಿತ್ಯವನ್ನನುಸರಿಸಿಯೂ ಅವರು ನಿರ್ವಹಿಸುವ ಕಾರ್ಯಸ್ವಭಾವನ್ನನುಸರಿಸಿಯೂ ಅವರಿಗೆ ಗೌರವ ವುಂಟಾಗಬೇಕಲ್ಲದೆ ಈಗಿನ ಆಂಗ್ಲೇಯ ಪ್ರಭುತ್ವದಲ್ಲಿ ಉದ್ಯೋಗಸ್ಥರಿಗುಂಟಾಗಿರುವಂತೆ ಅವರವರ ಸ್ಥಾನ ಗೌರವದಿಂದ ಲಭಿಸತಕ್ಕದ್ದಲ್ಲವು. ಆದಾಗ್ಯೂ ಅದು ಈ ಕಾಲದಲ್ಲಿ ಸಹಜವಾಗಿ ಹೋಗಿದೆ......... ಮಠಾಧಿಪತಿಗಳೆಂದು ಕರೆಯಲ್ಪಡುತಲಿರುವವರು ಸನ್ಯಾಸವನ್ನಂಗೀಕರಿಸಿದಾರೆಂಬ ಹೆಸರೇ ಹೊರ್ತು ಅವರಪದವಿಯು ಮಹಾರಾಜಪದವಿಯಂತಿರುತಿದೆ. ಅವರು ಯಜ್ಞೋಪವೀತವಂ ವಿಸರ್ಜಿಸಿದಾಗ್ಯೂ ಅನರ್ಘಗಳಾದರತ್ನಹಾರಗಳು ಕಂಠದೊಳೀಲ್ಪಡುತಿವೆ. ಕೇಶರಹಿತವಾಗಿ ಮುಂಡನ ಮಾಡಲ್ಪಟ್ಟಾಗ್ಯೂ ಅಭ್ಯಂಜನ ಸುವಾಸನ ತೈಲ ಲೇಪನಾದಿ ಅಲಂಕಾರಗಳಲ್ಲಿ ನ್ಯೂನತೆ ಇಲ್ಲವು. ಕೌಪೀನ ಧಾರಿಗಳಾಗಿರಬೇಕಾಗಿದ್ದಾಗ್ಯೂ ಅಮೂಲ್ಯಗಳಾದ ಶಾಲುವೆಗಳೂ, ಪೀತಾಂಬರಗಳೂ, ಕಲಾಬತ್ ವಂಚೆಗಳೂ ದೊರೆಯುತಿವೆ. ಈ ಮಹಾನುಭಾವರು ಅನ್ಯಕಾಂತಾ ಮುಖಾವಲೋಕನವುಮಾತನೆ ವಿರಕ್ತರಾಗಿರಬೇಕಾದಾಗ್ಯೂ ವಾರಾಂಗನಾ ನಾಟ್ಯಾವಲೋಕನ ಕುತೂಹಲ ವೃತ್ತಿವರಾಗಿರುತ್ತಾರೆ. ಇವರು ಬ್ರಹ್ಮಚಾರಿಗಳಾಗಿರಬೇಕಾದಾಗ್ಯೂಗಜಾಶ್ವಾಂದೋಳಿಕಾದಿ ಸಾಧನ ಸಂಪತ್ತಿಯುಳ್ಳವರಾಗಿರುತ್ತಾರೆ. ವಿಶೇಷತಿಃಸಲ್ಯಾಕೆ, ಇವರು ತಾವು ಸ್ವೀಕರಿಸಿದ ಆಶ್ರಮಾನುಕೂಲಗಳಾದ ಐಹಿಕಸುಖ ನಿಮುಖರಾಗಲಿಕ್ಕೆ ಪ್ರತಿಯಾಗಿ ಪಟ್ಟಾಭಿಷಿಕ್ತರಾದ ಭೂಪತಿಗಳಾಗುತ್ತಾರೆ. ಇವರು ವಿಶೇಷ ಐಶ್ವರ್ಯವುಳ್ಳದಿಂದ ಮತ್ತರಾಗಿರುವದರಿಂದಲೂ, ಸಚಿವ ಸಾಮಂತಾದಿ ಆಶ್ರಿತ ಪರಿಜನ ಬಾಹುಳ್ಯದಿಂದಲೂ, ಸಂಚಾರಕಾಲಗಳಲ್ಲಿ ಶಿಷ್ಯವರ್ಗದಿಂ ಕಾಣಿಕೆಗಳಂ ತೆಗದುಕೊಳ್ಳುವದರಿಂದಲೂ, ತಮ್ಮ ಇಷ್ಟಾನುಸಾರ ವರ್ತಿಸದೆ ತಮ್ಮ ಆಜ್ಞೆಯಂ ನಿರಾಕರಿಸಿದವರನ್ನು ಶ್ರೀಮುಖಾಸ್ತ್ರಪ್ರಯೋಗದಿಂ ದಂಡಿಸುವದರಿಂದಲೂ ಪ್ರಭುತ್ವಮಾಡತಕ್ಕ ಮಹಾರಾಜರೆಂದು ಹೇಳಲಿಕ್ಕೆ ಯೆಷ್ಟುಮಾತ್ರವೂ ಸಂಶಯವಿಲ್ಲವು. [ಕೆಲವು ವಿಷಯಗಳಲ್ಲಿವರು ಹಿಂದೂ ಸಂಸ್ಥಾನಾಧಿಪತಿಗಳಿಗಿಂತ್ವಾಧಿಕರೆಂದಲೂ, ಪ್ರಾಭುಕಾಲಿಗಳೆಂತಲೂ ಭಾವಿಸಬೇಕಾಗಿದೆ. ರಾಜ್ಯ ಪರಿಪಾಲಕರಿಗೆ ಬೇಕಾದಂತೆ ಸಂಚರಿಸಲಿಕ್ಕೂ, ಇಷ್ಟಬಂದಕಡೆಗಳಿಗೆ ಹೋಗುವದಕ್ಕೂ ನಿರಾಳವಾಗಿ ಯೆಲ್ಲರೊಡನೆ ಮಾತನಾಡಲಿಕ್ಕೂ ಅವಕಾಶವಿರುವದಿಲ್ಲವು. ಇವರ ಪ್ರತಿವರ್ತನವನ್ನು ಕುರಿತು ಮೇಲಕ್ಕೆ ತಿಳಿಸಲಿಕ್ಕೆ ಇಂಗ್ಲಿಷ್ ಗವರ್ನಮೆಂಟಿನಿಂದ ನಿಯಮಿತರಾದ ರೆಸಿಡೆಂಟರು ಬಬ್ಬರು ಸಾಲದೆ ಕೆಲವು ಕಡೆಗಳಲ್ಲಿ ಇಬ್ಬರು ಇವರ ಅನವರತ ಅವರಹಿಂದೆಯೋ ಇರುತಲಿದ್ದಾರೆ. ಇವಲ್ಲದೆ ವಿಶೇಷ ಧನ ವ್ಯಯ ಮಾಡಿದಾಗ್ಯೂ ಸಾಲ ಮಾಡಿದಾಗ್ಯೂ ಅದರಂ ಆಕ್ಷೇಪಿಸಿ ನಿಂದಿಸಲಿಕ್ಕೆ ಇಂಗ್ಲಿಷ್ ಗವರ್ನಮೆಂಟಿನವರೂ ಸಾಲದ್ದಕ್ಕೆ ಪ್ರಜೆಗಳೂ ಸನ್ನದ್ಧರಾಗಿದಾರೆ. ಪರಕ್ಷಿತ ನಿರ್ಬಂಧಗಳ ಗೊಳದಟ್ಟರುವ ಸಂಸ್ಥಾನಾಧಿಪತಿಗಳನ್ನು ಕಾರ್ಯನಿರ್ಬಂಧಗಳ್ಯಾವವೂ ಇಲ್ಲದ ಮಠಾಧಿಪತಿಗಳಿಗೆ ಸಮಾನರೆಂದು ನುಡಿಯುವದುಕೂಡ ಅನುಚಿತವು] ಐಹಿಕ ಸುಖಗಳನ್ನೆಲ್ಲವರ್ಜಿಸಿ ಆಮುಷ್ಮಿಕ ಸುಖಾಪೇಕ್ಷೆಯೊಡನೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದ ಇಂತವರಿಗೆ ಮೇಲೆ ಕಂಡಂತಾ ರಾಜಪದವಿ ಯುಚಿತವೇ ಎಂಬ ಸಂಶಯ ವುಂಟಾಗಿದೆ. "ರಾಜ್ಯಾಂತೇ ನರಕಂಧ್ರುವಂ" ಯೆಂಬದಾಗಿ ಪೂರ್ವಿಕರು ಹೇಳರುವದರಿಂದ ರಾಜ ಪದವಿಯು ಪಾಪ ಹೇತುವೆಂಬದು ನಿಶ್ಚಯವು. ಮುಮುಕ್ಷುಗಳಾಗಿ ತಮ್ಮ ವ್ಯತಿರೇಕ ಫಲಪ್ರದಗಳಾದ ಕಾರ್ಯಗಳಂ ಮಾಡುವದು ಯುಕ್ತವೆಂದು ನಾವು ಭಾವಿಸಲಾರೆವು. ಇವರು ಮಠಾಧಿಪತಿಗಳೆಂದು ಹೆಸರಿಟ್ಟುಕೊಂಡು ಸಂಚರಿಸುವ ದೇಶಗಳಲ್ಲಿ ಜನರಿಗೆ ಯೇನು ಉಪಕಾರ ಮಾಡುತ್ತಾರೆಂದು ಆಲೋಚಿಸಿದರೆ ಅದು ಸರ್ವ ಶೂನ್ಯವು. ಕ್ರಮವಾಗಿ ಭಿಕ್ಷೆ ಮಾಡಿಸಿ ಕಾಣಿಕೆಗಳಂ ಕೊಡದವರೆಲ್ಲರು ಇವರ ಅಭಿಪ್ರಾಯಾನುಸಾರ ಪತಿತರಾಗಬೇಕಾಗುತಿದೆ, ಮತ್ತು ಅಂತವರು ಕೂಡಲೇ ಮತಬಾಹ್ಯರೆಂದು ಗಣಿಸಲ್ಪಡುತ್ತಾರೆ. ತಮ್ಮ ತಪ್ಪಿತಗಳನ್ನು ತಿಳಿದುಕೊಂಡು ಕನಕಾಭಿಷೇಕದಿಂ ಮಠಾಧಿಪತಿಗಳಂ ಸಂತೃಪ್ತಿಗೊಳಿಸುವದಾದರೆ ಅವರು ಕೂಡ ಲೇಶಪುನೀತರಾಗುವದರಲ್ಲಿಷ್ಟು ಮಾತ್ರವೂ ಸಂಶಯವಿಲ್ಲವು. ಹಾಗೆ ಮಾಡದವರು ಕಠ್ರಚಂಡಾಳರಾಗಿ ಯಾವದಕ್ಕೂ ಅರ್ಹರಲ್ಲದೆ ಹೋಗುತ್ತಾರೆ. ಪ್ರಾತು ಕಾಲಗಳಲ್ಲಿ ಆನೆ ಕುದುರೆ ಮೊದಲಾದ ಪರಿಧನಗಳೊಡನೆ ಬಂದು ಗೃಹಸ್ಥರನ್ನು ಸಾಲಗಾರರು ಮಾಡಿ ಭೋಜ್ಯ ಪದಾರ್ಥಗಳನ್ನು ತುಚ್ಛ ಪಡಿಸತಕ್ಕ ಲಾಭ ವೊಂದುವಿನಾ ಬೇರೆ ಯಾವದೂ ಅವರಿಂದುಂಟಾಗಲಾರದು," ಎಂಬದು.

ಯತಿನಿಂದಾ ರೂಪವಾದ ಮೇಲೆಕಂಡ ಪತ್ರಿಕಾಭಿಪ್ರಾಯವು ನಮಗೆ ಬಹಳ ಮನೋವ್ಯಥೆಯನ್ನುಂಟುಮಾಡಿದಾಗ್ಯೂ ಅದರ ಆಕ್ಷೇಪಣೆಗಳಿಗೆಲ್ಲ ಸಮಾಧಾನಗಳು ಹೇಳಿ ಒಡಂಬಡಿಸಲಿಕ್ಕೆ ತಕ್ಕ ಸಾಮಗ್ರಿಯು ಕಡಮೆಯಾಗಿರುವದರಿಂದ ಮೌನದೊಡನೆ ಕೇಳಬೇಕಾದ ದುರ್ವಿಧಿಯು ನಮಗೆ ಪ್ರಾಪ್ತವಾದದಕ್ಕಾಗಿ ಬಹಳ ವಿಷಾದಿಸುತ್ತೇವೆ.

ಇಂಡ್ಯದೇಶದ ಸ್ತ್ರೀ ಸಮುದಾಯಕ್ಕೆ ವಿಶೇಷ ಕೀರ್ತಿ ಸಂಪಾದಕಳಾಗಿದ್ದ ಆನಂದಬಾಯಿ ಜೋಷಿ ಯೆಂಬಾಕೆಯು ಆಚೇ ಶನಿವಾರದ ದಿನ ರಾತ್ರಿ ಕಾಲಗತಿಯನ್ನೈದಿದ ವೃತ್ತಾಂತವಂ ಕೇಳಲಿಕ್ಕೆ ನಾವು ಬಹಳ ವಿಷಾದಿಸುತ್ತೇವೆ. ಈಗ್ಯೆ ಯೆರಡು ತಿಂಗಳ ಕಾಲವಾಗಿ ಈಕೆ ಪುನೇಪಟ್ಟಣದಲ್ಲಿಯೇ ವಾಸವಾಗಿದ್ದಂತೆ ತಿಳಿಯಬರುತಿದೆ. ಮಧ್ಯೆ ಪ್ರಾಪ್ತವಾದ ಕ್ಷಯರೋಗವು ನಾನಾವಿಧ ಚಿಕಿತ್ಸೆಯಿಂದುಪಶಮಿಸದೆ ಅದೇ ಶರೀರ ವಿಯೋಗ ಹೇತುವಾಯಿತು. ಆನಂದಬಾಯಿಯು ಅಮೇರಿಕಾ ವಗೈರೆ ಅನ್ಯ ಖಂಡಗಳಿಗೆ ಹೋಗಿ ಬಂದುದರಿಂದ ಹಿಂದೂ ಸಂಪ್ರದಾಯಾನುಸಾರ ದಹನ ಕ್ರಿಯೆಗಳು ಜರಗಲಿಕ್ಕೆ ಸ್ವಮತಸ್ಥರು ವಿರೋಧಿಸುವರೆಂದೆಣಿಸಿ ಅನೇಕರು ಚಿಂತಿಸುತಲಿದ್ದಂತೆಯೂ, ಹಾಗಿಲ್ಲದೆ ಆಕೆಯಲ್ಲಿ ಪಡೆದಿದ್ದ ಪ್ರೀತಿ ಗೌರವ ವಿಶೇಷದಿಂದ ಜನರೆಲ್ಲರೂಬಂದು ಬಹಳ ವಿಷಾದಿಸಿ ಒಗ್ಗಟ್ಟಾಗಿ ಪ್ರೇತವಂ ದಹನಭೂಮಿಗೆ ಸಾಗಿಸಿಕೊಂಡು ಹೋಗಿಮತ ಪದ್ಧತಿ ಪ್ರಕಾರ ಸಂಸ್ಕಾರ ಮಾಡಿದರೆಂಬದಾಗಿಯೂ, ಆಕೆಯ ಕಳೇಬರವು ಚಿತೆಯಮೇಲೆ ಇಡಲ್ಪಟ್ಟ ಬಳಿಕ ಮಿ॥ ರಾನಡೇಯವರು ಶ್ಲಾಘ್ಯಗಳಾದ ಆಕೆಯ ಸುಗುಣಗಳನ್ನೂ ಧೈರ್ಯೋತ್ಸಾಹಗಳನ್ನೂ ಆಕೆಯ ಮೂಲಕನಿರೀಕ್ಷಿಸಲ್ಪಟ್ಟದ್ದ ಪ್ರಯೋಜನಗಳನ್ನೂ ಈಗಿಲ್ಲವುಗಳಗುಂಟಾದ ಭಂಗಗಳನ್ನೂ ನಮೂದಿಸಿದಮೇಲೆ ದಹನಕ್ರಿಯೆ ನಡೆದಂತೆಯೂ ತಿಳಿಯಬರುತಿದೆ. ಯೂರೋಪಿಗೆ ಹೋಗಿಬಂದ ಹಿಂದೂ ಸ್ತ್ರೀಯರಲ್ಲಿ ಈಕೆ ಮಾತ್ರವೇ ಸ್ವಮತವು ತೊರೆಯದೆ ಕಾಪಾಡಿಕೊಂಡದ್ದಂತೆ ಕೇಳುತ್ತೇವೆ ಎಂದು ಆಂಧ್ರಪ್ರಕಾಶಿಕಾ ಪತ್ರಿಕೆ ತಿಳಿಸುತ್ತಿದೆ.

LOCAL AND PROVINCIAL NEWS.

ಬಳದೇಶಮತ್ತು ತಾಲ್ಲೂಕಿಜಾತಿವೃತ್ತಾಂತಗಳು.

The Maharaja.—ಘನವು ಪಡೆದ ಶ್ರೀಮನ್ಮಹಾರಾಜರವರೂ ಅವರ ಪರಿಜನರೂ ಕಳೆದ ಬುಧವಾರದದಿನ ಕಲ್ಕತ್ತೆಯಂ ಸೇರಿದರು.

The Christmas holidays—ಕ್ರಿಸ್ಮಿಸ್ ಹಬ್ಬಪ್ರಯುಕ್ತವಾದ ರಜಾ ಕಳೆದ ಆದಿತ್ಯವಾರ ಪ್ರಾರಂಭವಾಯಿತು. ಇಲ್ಲಿನವರು ಅನೇಕರು ಪರಸ್ಥಳಗಳಿಗೆ ಹೋಗುತಲೂ ಅಲ್ಲಿನವರು ಈ ಪಟ್ಟಣಕ್ಕೆ ಬರುತಲೂ ಇರುತ್ತಾರೆ.

The Assistant Resident.—ಇಲ್ಲಿನ ಅಸಿಷ್ಟೆಂಟ್ ರೆಸಿಡೆಂಟರಾದ ಮೇಜರ್‌ರಾರ್ವಕ್‌ಷಾ ಯವರು ಶ್ರೀಮನ್ಮಹಾರಾಜರವರ ಸವಾರಿಯೊಡನೆ ಮದರಾಸ್‌ಪಟ್ಟಣಕ್ಕೆ ಹೋಗಿದ್ದರಷ್ಟೆ. ಸದರೀಯವರು ಕೆಲವು ದಿನಗಳ ಹಿಂದೆ ಇಲ್ಲಿಗೆ ವಾಪಸು ಬಂದು ಸೇರಿದರು.

The weather.—ಹವಾ ವಿಷಯದಲ್ಲಿ ಅಧಿಕಾಂಶ ವಿಶೇಷವೇನೂ ಇಲ್ಲವು. ಆಹಾರ ಪದಾರ್ಥಗಳ ಧಾರಣೆಗಳು ಹಿಂದಿನಂತೆವಿಧವಾಗಿರುತಿದೆ. ಧರ್ಮಾಂಬುಧಿ ಕೆರೆಯಲ್ಲಿ ನೀರಿರುತಿದೆ. ಪರಂತು ಮನೆಗಳ ಬಾವಿಗಳಲ್ಲಿ ಜಲಾಭಾವದಿಂ ಜನರು ಬಹಳ ಕಷ್ಟಕ್ಕೆ ಗುರಿಯಾಗಿದಾರೆ. ಅಂತಾ ಕಷ್ಟವಂ ಪರಿಹರಿಸುವದಕ್ಕೆ ದೇವರೊಬ್ಬನೇ ಶಕ್ತನು.

ವೃತ್ತಾಂತಸಾರ.

ಮುಂಬೈ, ತಾ|| ೨೦ನೇ ಡಿಸಂಬರ್,೧೮೯೦—ಈ ಪಟ್ಟಣವು ಈ ಹಿಂದುಸ್ಥಾನದಲ್ಲಿ ಅಸಮಾನವಾದ್ದೆಂಬದಕ್ಕೆ ನಾನು ಪ್ರತ್ಯೇಕ ತಿಳಿಸಬೇಕಾದ ಆವಶ್ಯಕವೇ ಇಲ್ಲ. ಹತ್ತುಲಕ್ಷಜನ ರಾವಾಸವಾಗಿ ಇರುವ ಈ ಪಟ್ಟಣದ ಆಡಳಿತವು ಇಲ್ಲಿನ ಮ್ಯೂನಿಸಿಪಾಲಿಟಿಯಲ್ಲಿದ್ದು ವ್ಯಾಪಾರದ ಆಮದ್ ರಫ್ತು ಆಗುವದು ಅಗಣಿತವಾಗಿರುವದು. ಇಲ್ಲಿನ ಆರೋಗ್ಯ ರಕ್ಷಣೆಗೋಸ್ಕರವಾಗಿಯೂ, ಜಲ ಸಮೃದ್ಧಿಗೋಸ್ಕರವಾಗಿಯೂ ಮುಂಬೈ ಮ್ಯೂನಿಸಿಪಾಲಿಟಿಯು ವಹಿಸಿರುವ ಮುತವರ್ಜಿಯು ಶ್ಲಾಘಿಸತಕ್ಕದ್ದಾಗಿರುತ್ತೆ. ಈಗ ಒಂದು ವರುಷದ ಮೊದಲು, ಜನರಿಗೆ ನೀರಿನ ವಿಷಯಕವಾದ ಅಡಚಣೆಯು ತಕ್ಕಷ್ಟು ಇರುತಿದ್ದು ಅದು ಸಹ ಈಗ ನಿವೃತ್ತಿಯಾಗಿರುವದು. ಮೊದಲಿಗೆ ಕೊಳಕು ಕಕ್ಕಲಗಳು ರಸ್ತೆಯ ಇಬ್ಬದಿಗೆ ಕಟ್ಟಿಸಿದ ಗಟಾರ (ಚರಂಡಿ) ಗಳಲ್ಲಿ ಹೋಗುತಿದ್ದವು. ಅದರಿಂದ ಮಾರ್ಗದಲ್ಲಿ ಹೋಗಿ ಬರುವ ಜನರಿಗೆ ಚರಂಡಿಗಳ ದುರ್ವಾಸನೆಯು ಅಸಹ್ಯವಾಗಿರುತಿತ್ತು. ಇದನ್ನು ಆಲೋಚಿಸಿ ರಸ್ತೆಯ ಒಳಗಡೆ ಸುರಂಗದಂತೆ ಮಾಡಿ ಒಳ ಚರಂಡಿಗಳನ್ನು ನಿರ್ಮಿಸಿ, ಸಕಲತರದ ಹೊಲಸುಗಳನ್ನು ಒಳಚರಂಡಿಗಳಿಂದ ಹೋಗುವಂತೆ ಮಾಡಿದರು. ಇದಕ್ಕಾಗಿ ಭಾರಿ ಭಾರಿ ಕ್ರಯದ ಮಣ್ಣಿನ ನಳಿಗಳನ್ನು ವಿಲಾಯತಿಯಿಂದ ತರಿಸಿದರು. ಇದಕ್ಕಾಗಿ ಅನೇಕ ಲಕ್ಷಗಟ್ಟಲೆ ರೂಪಾಯಿಗಳು ವ್ಯಯ ಮಾಡಲ್ಪಟ್ಟವು. ನೀರಿನ ಪೂರೈಸುವಿಕೆಗಾಗಿ "ಕಾಲ್ವಾ" ಯೆಂಬ ಸರೋವರವನ್ನು ಭದ್ರಪಡಿಸುವದಕ್ಕಾಗಿ ಕೋಟಿಗಟ್ಟಲೆ ಹಣವು ವ್ಯಯವಾಗಲ್ಪಟ್ಟಿತು. ಬಿಷ್ಟಾದರೂ ಬೇಕಾದಷ್ಟು ನೀರು ಸಿಕ್ಕುವದು ಸಂಶಯಾಸ್ಪದವಾಗಿರುತ್ತೆ. ಇದರ ಹೊರ್ತು ಒಳಚರಂಡಿಗಳನ್ನು ಮಾಡಿದ್ದರಿಂದ, ದುರ್ಗಂಧ ವಾಯುವಿಗೆ ಎಡೆ ಸಾಲದೆ ಜನರು ಉಪಯೋಗಿಸುವ ಮೊರಿಗಳಲ್ಲಿ ಮನೆಯ ಒಳಕ್ಕೆ ಸೇರತೊಡಗಿದ್ದರಿಂದ ಕಾರಣ ಊರಲ್ಲಿ ರೋಗ ರುಜೆಗಳು ವೃದ್ಧಿಯಾಗುತ ಬಂದಿರುವದನ್ನು ಕುರಿತು ಪ್ರತಿರೋಧವನ್ನು ಆಲೋಚಿಸ ತೊಡಗಿರುವರು.

ಈ ಪಟ್ಟಣದಲ್ಲಿರುವಷ್ಟು ಪ್ರಾಯ ಪ್ರೋತಿ ಜನಗಳು ಇನ್ನೆಲ್ಲಿಯೂ ಇರಲಾರರು. ಇಂತವ

ಕಮೇಲೆ ನಿಗಾ ಇಟ್ಟು ಈ ಪಟ್ಟಣವನ್ನು ರಕ್ಷಿಸಲು ದಕ್ಷತೆ ಹೊಂದಿದ ಇಲ್ಲಿನ ಪೋಲೀಸಿನವರ ಜಾಣತನವು ತುಂಬಾ ಹೊಗಳತಕ್ಕದ್ದಾಗಿರುತ್ತೆ ಇದರ ಹೊರ್ತು ಡಿಪಟ್ಟಿ (ಗ ಪ್ತ) ಪೋಲೀಸಿನವರ ಧೂರ್ತತನವನ ಪ್ರಸಕ್ತಿಯಿಲ್ಲದಿರುತದೆ. ಇಲ್ಲಿ ದೊಡ್ಡವರು ಬಡವರು ಎಂಬ ತಾರತಮ್ಯ ವ್ಯಸನಕ್ಕೆ ಇಲ್ಲವೇ ಇಲ್ಲ. ಜಡ್ಜಿಗಳ್ಯಾರೆ? ಕಲೆಕ್ಟರ್ಯಾರೊ? ಈ ಸಂಗತಿಯೇ ಎಲ್ಲಿನವರಿಗೆ ಗೊತ್ತಿಲ್ಲ. "ಯಾರಿಗೆ ಯಾರೋ ಪುರಂದರವಿಠಲ"

ಇಲ್ಲಿ ಸಿವಿಲ್ ಬಾಬಿನ ನ್ಯಾಯ ವಿಚಾರಣೆಗಾಗಿ ಸ್ಮಾಲ್ ಕಾಜ್ ಕೋರ್ಟ್ ಇರುವದು, ಇದರಲ್ಲಿ [illegible] ನ್ಯಾಯಾಧೀಶರಿರುತ್ತಾರೆ ಪ್ರತಿ ಯೊಬ್ಬ ನ್ಯಾಯಾಧೀಶರು [illegible] ರಿಂದ ೧೦೦೦ ವರೆಗೆ ಕದ್ದಮೆಗಳನ್ನು ತೀರ್ಮಾನಿಸುವರು ಇದರಂತೆ ಕ್ರಿಮಿನಲ್ ವಿಚಾರಣೆಗಾಗಿ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಕೋರ್ಟ್ ಇರುವದು, ಈ ಕೋರ್ಟಿನಲ್ಲಿ [illegible] ನ್ಯಾಯಾಧೀಶರುಗಳಿರುತ್ತಾರೆ. ಇವರಾದರೂ ಪ್ರತಿಯೊಂದು [illegible] ರಿಂದ [illegible] ವರೆಗೆ ಮೊಕದ್ದಮೆ[illegible] ತೀರ್ಮಾನಿಸುವರು.

THE MYSORE GAZETTE
ಮೈಸೂರು ಗೆಜೆಟ್

ಶ್ರೀಮನ್ ಮಹಾರಾಜ ರಾಜಶ್ರೀ ಬಹದ್ದೂರವರ ಸರ್ಕಾರದಿಂದ ಕೊಡಲ್ಪಟ್ಟ ಇಸ್ತಿಹಾರ ಸಾರಾಂಶಗಳು

ನಂ||[illegible] ತಾ|| ೧೧ನೇ ಡಿಸಂಬರ್ ೧೮೯೨—ದಿವಾನರವರ ಆಫೀಸಿನಲ್ಲಿ ಕೆಲಸ ಮಾಡುತಲಿದ್ದ ಅಮಲ್ದಾರ್ ಲಕ್ಷ್ಮಣರಾಯರವರು, ಅಮಲ್ದಾರ್ ಗೋಪಾಲಯ್ಯಂಗಾರ್ಯರವರನ್ನು ಇತರ ಕೆಲಸದ ಮೇಲೆ ನಿಯಮಿಸಿರುವ ಕಾಲದಲ್ಲಿ ಮಾಗಡಿ ತಾಲ್ಲೂಕ್ ಅಮಲ್ದಾರ್ ಮತ್ತು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿ ನೇಮಕ ಮಾಡಲ್ಪಟ್ಟಿರುತ್ತಾರೆ

ನಂ|| [illegible] ತಾ|| ೧೧ನೇ ಡಿಸಂಬರ್ ೧೮೯೨—ಶಿವಮೊಗ್ಗೆಯಲ್ಲಿರುವ ಆಕ್ಟಿಂಗ್ ಸಿವಿಲ್ ಸರ್ಜನ್ ಮ|| ಪಿ ಎಸ್. ಅಚ್ಯುತರಾಯರವರು, ೧೮೯೧ನೇ ಇಸವಿ ಡಿಸಂಬರ್ [illegible]ನೇ ಮಾರ್ಚಿ ಲಾಗಾಯಿತು (ಲೋಕಲ್ ಸರ್ವಿಸ್) ೩ನೇ ಗ್ರೇಡ್ ಸಿವಿಲ್ ಸರ್ಜನ್ನರಾಗಿ ಅದೇ ಕೆಲಸದಲ್ಲಿ ಖಾಯಂ ಮಾಡಲ್ಪಟ್ಟಿರುತ್ತಾರೆ

ನಂ|| [illegible] ತಾ|| [illegible]ನೇ ಡಿಸಂಬರ್ ೧೮೯೨—ಇದರಡಿ ಕಂಡ ಮೈಸೂರ್ ಮೆಡಿಕಲ್ ವಿದ್ಯಾರ್ಥಿಯು ಮದರಾಸ್ ಮೆಡಿಕಲ್ ಕಾಲೇಜಿನಿಂದ ಮೂರನೇ ಸ್ಟಾಫ್ ಆಸ್ಪಿಟಲ್ ಅಸಿಸ್ಟೆಂಟ್ ಯೋಗ್ಯತಾ ಪತ್ರಿಕೆಯಂ ಪಡೆದಿರುವದರಿಂದ, ಅವರು ಮೈಸೂರ್ ಗವರ್ನಮೆಂಟ್ ಸೀನಿಯರ್ ಸರ್ಜನ್ ಮತ್ತು ಸಾನಿಟರಿ ಕಮಿಷನರವರಲ್ಲಿ ಹಾಜರಾದ ತಾರೀಖ್ ಲಾಗಾಯ್ತು, ಅಂದರೆ, ೧೮೯೨ನೇ ಇಸವಿ ಅಕ್ಟೋಬರ್ [illegible]ನೇ ಮಾರ್ಚಿ ಲಾಗಾಯ್ತು ಸದರೀ ಗ್ರೇಡ್ ಆಸ್ಪಿಟಲ್ ಅಸಿಸ್ಟೆಂಟರಾಗಿ ನೇಮಕ ಮಾಡಲ್ಪಟ್ಟು, ಅವರ ಹೆಸರಿನ ಎದುರು ನಮೂದು ಮಾಡಲ್ಪಟ್ಟಿರುವ ಸ್ಥಳದಲ್ಲಿ ಕೆಲಸದ ಬಗ್ಗೆ ನಿಯಮಿಸಲ್ಪಟ್ಟಿರುತ್ತಾರೆ.

ಟಿ ರಾಮಚಂದ್ರರಾವ್—ಬೆಂಗಳೂರು ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರ ಆಸ್ಪತ್ರೆಯಲ್ಲಿ

ನಂ|| [illegible] ತಾ|| [illegible]ನೇ ಡಿಸಂಬರ್ ೧೮೯೨—ಸನ್ ೧೮೯೨ನೇ ಇಸವಿ ಆಗಸ್ಟ್ [illegible], ಮತ್ತು ಸೆಪ್ಟಂಬರ್ [illegible]ನೇ ಮಾರ್ಚಿ[illegible] ಮತ್ತು [illegible]ನೇ ನಂಬರುಗಳುಳ್ಳ ಇಸ್ತಿಹಾರ್‌ಗಳಲ್ಲಿ ಪ್ರೊಬೇಷನರಿ ಪೋಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟ್ ಮ|| ಅಬ್ದುಲ್ ರಹಿಂ ಮೇಕರಿಯವರಿಗೆ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾ ಕಾಹಿಲೆ ರಜಾವಿಗೆ ಬದಲಾಯಿಸಲ್ಪಟ್ಟು ಮರಳಿ ಮೂರು ತಿಂಗಳಿಗೆ ಜಾಸ್ತಿ ಮಾಡಲ್ಪಟ್ಟಿರುತಿದೆ.

ನಂ|| [illegible]—ಸನ್ ೧೮೯೨ನೇ ಇಸವಿ ಜುಲೈ [illegible]ನೇ ಮಾರ್ಚಿ [illegible]ನೇ ನಂಬರ್ ಇಸ್ತಿಹಾರ್‌ನಾಮೆಯ ಮೂಲಕ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ಆರ್ ಬಿ. ಬ್ರಹ್ಮಯ್ಯನವರಿಗೆ ಕೊಡಲ್ಪಟ್ಟ ಅಯಿದುವಾರಗಳ ಪ್ರಿವಿಲೇಜ್ ರಜಾ ಒಂದು ದಿನ ಜಾಸ್ತಿ ಮಾಡಲ್ಪಟ್ಟಿದೆ.

ನಂ|| [illegible]—ಸನ್ ೧೮೯೨ನೇ ಇಸವಿ ಅಕ್ಟೋಬರ್ [illegible]ನೇ ಮಾರ್ಚಿ [illegible]ನೇ ನಂಬರ್ ಇಸ್ತಿಹಾರ್ ನಾಮೆಯ ಮೂಲಕ, ಶಿವಮೊಗ್ಗ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್ ಮ|| ಅಬ್ದುಲ್ ರಹಮಾನ್ ಯವರಿಗೆ ಕೊಡಲ್ಪಟ್ಟ ಮೂರು ತಿಂಗಳ ಪ್ರಿವಿಲೇಜ್ ರಜಾ ಅವರು ಅಪೇಕ್ಷಿಸಿದಂತೆ ರದ್ದು ಮಾಡಲ್ಪಟ್ಟಿದೆ.

ನಂ|| [illegible]—ಮೈಸೂರ್ ಸಿವಿಲ್ ಸರ್ವಿಸ್ ರೆಗ್ಯುಲೇಷನ್ [illegible]ನೇ ಆರ್ಟಿಕಲ್ ಅನುಸರಿಸಿ, ಚಿಕ್ಕಮಗಳೂರ್ ತಾಲ್ಲೂಕ್ ಅಮಲ್ದಾರ್ ಪಿ ಶ್ರೀನಿವಾಸರಾಯರವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು [illegible] ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತಿದೆ

ನಂ|| [illegible]—ಸೂಪರ್ನ್ಯೂಮರರಿ ಅಸಿಸ್ಟೆಂಟ್ ಕನ್ಸರ್ವೇಟರ್ ಮ|| ವಿ ಶ್ರೀನಿವಾಸ ರಾಯರವರು, ಸನ್ ೧೮೯೨ನೇ ಇಸವಿ ನವಂಬರ್ [illegible]ನೇ ತಾರೀಖಿನ ಪೂರ್ವಾಹ್ನದಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಕೆಲಸಕ್ಕೆ ಹಾಜರಾದಂತೆ ರಿಪೋರ್ಟ್ ಮಾಡಿದರು

ನಂ|| [illegible]—೧೮೯೨ನೇ ಇಸವಿ [illegible]ನೇ ನಂಬರ್ ರಿಜಿಸ್ಟ್ರೇಷನ್ ಆಕ್ಟ್ [illegible] ಸೆಕ್ಷನ್ ನಿಯಮಗಳನ್ನನುಸರಿಸಿಯೂ, ಸನ್ ೧೮೯೨ನೇ ಇಸವಿ ಮಾರ್ಚಿ [illegible]ನೇ ಮಾರ್ಚಿ [illegible]ನೇ ನಂಬರು ಗವರ್ನಮೆಂಟ್ ಇಸ್ತಿಹಾರ್ ನಾಮೆಗೆ ಅನುಗುಣವಾಗಿಯೂ, ರಿಜಿಸ್ಟ್ರೇಷನ್ ಕೆಲಸಗಳಬಗ್ಗೆ ದಾವಣಗೆರೆ ಸಬ್ ಡಿಸ್ಟ್ರಿಕ್ಟಿಗೆ ಸೇರಿದ ಹರಿಹರವನ್ನು ಪ್ರತ್ಯೇಕ ಸಬ್ ಡಿಸ್ಟ್ರಿಕ್ಟಾಗಿ ಮಾಡಿ, ಮೇಲಿನ ಇಸ್ತಿಹಾರ್‌ನಾಮೆಯ ಮೂಲಕ ಗೊತ್ತುಪಡಿಸಲ್ಪಟ್ಟ ಹರಿಹರ ಮತ್ತು ಮಾಲೇಬೆನ್ನೂರು ಹೋಬಳಿಗಳ ಮೇಲೆ ಅಧಿಕಾರ ಸರಹದ್ದುಳ್ಳ, ಹರಿಹರ ಡೆಪ್ಯುಟಿ ಅಮಲ್ದಾರರನ್ನು ಎಕ್ಸ್ ಆಫಿಷಿಯೋ ಸಬ್ ರಿಜಿಸ್ಟ್ರಾರಾಗಿ ನೇಮಕ ಮಾಡಲ್ಪಡುವ ವಿಷಯದಲ್ಲಿ ಶ್ರೀಮನ್ಮಹಾರಾಜಾ ಸರ್ಕಾರದವರು ಸಂತೋಷಪೂರ್ವಕ ರಾಗಿರುತ್ತಾರೆ

ನಂ|| [illegible] ತಾ|| [illegible]ನೇ ಡಿಸಂಬರ್ ೧೮೯೨—ಮೈಸೂರ್ ಸರ್ವಿಸ್ ರೆಗ್ಯುಲೇಷನ್ [illegible]ನೇ ನಂಬರ್ ಆರ್ಟಿಕಲ್ ಅನುಸರಿಸಿ, ನಗರ ತಾಲ್ಲೂಕ್ ಅಮಲ್ದಾರ್ ಕೆ ಜಿ. ಅನಂತರಾಮಯ್ಯಂಗಾರ್ಯರವರು ಸನ್ ೧೮೯೨ನೇ ಇಸವಿ ಡಿಸಂಬರ್ [illegible]ನೇ ತಾರೀಖ್ ಮೊದಲು ಮೂರು ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದ್ದಾರು

ನಂ|| [illegible]—ಮೈಸೂರು ಗವರ್ನಮೆಂಟ್ ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮ|| ಜಿ ಆರ್, ಬ್ಯಾರೊ ಯವರು ೧೮೯೨ನೇ ಇಸವಿ ಸೆಪ್ಟಂಬರ್ [illegible]ನೇ ತಾರೀಖ್ ಮೊದಲು ಅಕ್ಟೋಬರ್ [illegible] ತಾರೀಖ್ ವರಿವಿಗೆ ಉಭಯ ದಿನಗಳೂ ಸೇರಿ, ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದ್ದರು

ನಂ|| [illegible]—ಮೈಸೂರ್ ಸರ್ವಿಸ್ ರೆಗ್ಯುಲೇಷನ್ [illegible]ನೇ ಆರ್ಟಿಕಲ್ ಅನುಸರಿಸಿ, ಕಡೂರ್ ಡಿಸ್ಟ್ರಿಕ್ಟ್ ಪೊಲೀಸ್ ಅಸಿಸ್ಟೆಂಟ್ ಸೂಪರಿಂಟೆಂಡೆಂಟಾದ ಮ|| ಜೆ ಡನ್ನಿಂಗ್ ಯವರು, ಅವರು ಉಪಯೋಗಿಸಿಕೊಳ್ಳುವ ತಾರೀಖ್ ಮೊದಲು [illegible] ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತಾರೆ

ನಂ|| [illegible]—ಮೈಸೂರ್ ಸರ್ವಿಸ್ ರೆಗ್ಯುಲೇಷನ್ [illegible]ನೇ ಆರ್ಟಿಕಲ್‌ಗಳ ಷರತುಗಳಿಗೆ ಅನುಗುಣವಾಗಿ ಹಾಸನ ಡಿಸ್ಟ್ರಿಕ್ಟಿಗೆ ಸೇರಿದ ಪ್ರೊಬೇಷನರಿ ಅಸಿಸ್ಟೆಂಟ್ ಕಮಿಷನರ್ ಮ|| ವಿ. ಶ್ರೀನಿವಾಸಾಚಾರ್ಯ ಯವರು, ಸನ್ ೧೮೯೨ನೇ ಇಸವಿ ಮೇ [illegible]ನೇ ತಾರೀಖ್ ಮೊದಲು [illegible] ತಾರೀಖ್ ವರಿವಿಗೆ ಉಭಯ ದಿನಗಳೂ ಸೇರಿ, [illegible] ದಿನಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿದಾರೆ

ನಂ|| [illegible]—ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡ್ [illegible]ನೇ ಸೆಕ್ಷನ್ ಅನುಸರಿಸಿ, ಶಿವಮೊಗ್ಗ ಡಿಸ್ಟ್ರಿಕ್ಟ್ ಆಕ್ಟಿಂಗ್ ಅಸಿಸ್ಟೆಂಟ್ ಕಮಿಷನರಾದ ಮ|| ಕೆ ರಾಮಾನುಜಯ್ಯಂಗಾರ್ಯರು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಅಧಿಕಾರಗಳು ಕೊಡಲ್ಪಟ್ಟಿರುವದಲ್ಲದೆ ದರ್ಖ್ಯಾಸ್ತು ಯಬಗ್ಗೆ ಕಮಿಟ್ ಮಾಡುವ ಅಧಿಕಾರ ಸಹ ಕೊಡಲ್ಪಟ್ಟಿರುತ್ತಾರೆ. ([illegible]ನೇ ಸೆಕ್ಷನ್)

ನಂ|| [illegible]—ಸನ್ ೧೮೯೨ನೇ ಇಸವಿ ಡಿಸಂಬರ್ [illegible]ನೇ ತಾರೀಖಿನ ಪೂರ್ವಾಹ್ನದಲ್ಲಿ ಅಷ್ಟಗ್ರಾಮ ಡಿವಿಜನ್ ಡಿಸ್ಟ್ರಿಕ್ಟ್ ಮುನ್ಸಫ್ ಕೋರ್ಟಿನ ಚಾರ್ಜನ್ನು ಮ|| ಸಿ ಶ್ರೀನಿವಾಸಯ್ಯಂಗಾರ್ಯರವರು ಕೆ [illegible] ಮ|| ಸಿ [illegible] ಯವರು ತೆಗೆದುಕೊಂಡಿರುತ್ತಾರೆ

ನಂ|| [illegible]—ಮೈಸೂರ್ ಸಿವಿಲ್ ಅಕೌಂಟ್ ಕೋಡ್ ([illegible]ನೇ ಭಾಗ) [illegible]ನೇ ಅಧ್ಯಾಯ, [illegible]ನೇ ಆರ್ಟಿಕಲ್, [illegible] ನಂಬರ್ ನಿಬಂಧನೆಯ ನಿಯಮಗಳನ್ನನುಸರಿಸಿ, ಬರಾವರ್ದಾರರ ಚಾಲತೀ ತಿಂಗಳ ತಲಬನ್ನು ಡಿಸಂಬರ್ [illegible]ನೇ ತಾರೀಖಿನಲ್ಲಿ ಕೆ [illegible] ಸರ್ಕಾರದವರು ಹುಕುಂ ಮಾಡಿರುತ್ತಾರೆ [illegible] ಗೆಜೆಟೆಡ್ ಆಫೀಸರುಗಳ ತಲಬಲ್ಲವು

ನಂ|| [illegible] ತಾ|| [illegible]ನೇ ಡಿಸಂಬರ್ ೧೮೯೨—೧೮೯೨ನೇ ಇಸವಿ ಡಿಸಂಬರ್ [illegible]ನೇ ತಾರೀಖಿನ ಪೂರ್ವಾಹ್ನದಲ್ಲಿ ಮ|| ಎ ರಾಮಚಂದ್ರ ಅಯ್ಯರವರು ಆಫಿಷಿಯೇಟಿಂಗ್ ಚೀಫ್ ಜಡ್ಜ್ ಅಧಿಕಾರವನ್ನು ಕೈಗೊಂಡರು

ಮ|| [illegible] ರಿಸ್ಟ್ರರ್ [illegible] ಅಯ್ಯಂಗಾರ್ಯರು ೧೮೯೨ನೇ ಇಸವಿ ಡಿಸಂಬರ್ [illegible] ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರ್ ರಿಜಿಸ್ಟ್ರೇಷನ್ ಇನ್ಸ್ಪೆಕ್ಟರ್ ಜನರಲರವರ ಮತ್ತು ಕಂಪನಿ ರಿಜಿಸ್ಟ್ರಾರ್‌ರವರ ಅಧಿಕಾರಗಳ [illegible] ಯೇಂದ್ರ ರಯರಿಂದಲೂ, ರೆಜಿಸ್ಟ್ರೇಷನ್ ಆಫೀಸರಿಂದ [illegible] ಚೀಫ್ ಸೆಕ್ರೆಟರಿಯ [illegible] ರಿಂದಲೂ ವಿಮುಕ್ತಿ ಮಾಡಲ್ಪಟ್ಟು, ಸದರೀ [illegible] ಮ|| [illegible] ಅಧಿಕಾರವನ್ನು ಪ್ರವೇಶಿಸಿದರು

SUMMARY OF NEWS
ವೃತ್ತಾಂತ ಸಂಗ್ರಹವು

[illegible] ಪಟ್ಟಣದಲ್ಲಿ ನಡೆಯುವ ಸರ್ವವಸ್ತು ಪ್ರದರ್ಶನ [illegible] ಮನುಷ್ಯಾಕಾರವಾಗಿ [illegible] ಪ್ರತಿಮೆ[illegible] ವನ್ನು [illegible] ಎನ್ನುವ [illegible] ಕೆಲಸಗಾರರು ನಿರ್ಮಿಸುತ್ತಾರಂತೆ [illegible] ಎತ್ತರವಿರುವದಂತೆ [illegible] ವೆಚ್ಚವು [illegible] ಲಕ್ಷ ರೂಪಾಯಿಗಳಂತಲೂ [illegible] ವೆಚ್ಚವು [illegible] ಲಕ್ಷ ರೂಪಾಯಿಗಳಾಗುತ್ತದೆ ಎಂದೂ ಅಂದಾಜಾಗಿದೆ

ಕಳೆದ ವರುಷದಲ್ಲಿ ಲಂಡನ್ ಪಟ್ಟಣದಲ್ಲಿ ನಡೆದ ಕಳವು [illegible] ಗಣ ವಿಷಯದ ಸಂಗತಿ [illegible] ತಿಳಿಸುತ್ತದೆ [illegible] ಗಂಡಸನ್ನು ಕೊಂದವರು [illegible], ಲ್ಯಾಂಡು [illegible] ವಾಗಿ [illegible] ಮಾಡಿದವರು [illegible], ಬಲಾತ್ಕಾರದಿಂದ [illegible], [illegible] ಮಾಡಿದವರು [illegible], ಆತ್ಮಹತ್ಯ ಮಾಡಿಕೊಂಡವರು [illegible], [illegible] ಮೈಮೇಲೆ [illegible] ಬಿದ್ದವರು [illegible], ಮನೆಹೊಕ್ಕು ಕಳವು ಮಾಡಿದವರು [illegible], ಇತರ [illegible] ಮಾಡಿದವರು [illegible] ಜನಗಳು [illegible] ಲೆಕ್ಕಕ್ಕೆ ಸಿಕ್ಕಿದವರಾಗಿದ್ದಾರೆ

[illegible] ಪಟ್ಟಣದಲ್ಲಿ ಸ್ತ್ರೀಯರನ್ನು ಯಾರಾದರೂ ಸ್ವಲ್ಪ [illegible] ಕೇಳಿದರೆ, ಅವರು ತಮ್ಮ ಹತ್ತಿರ [illegible] "ನನ್ನಲ್ಲಿ [illegible] ಇದೆ" ಎಂದು ಹೇಳುತ್ತಾರೆ ಮನೆಯಲ್ಲಿ ಮಕ್ಕಳು ಇಲ್ಲದೆ [illegible] ಹೊರಗೆ ಹೋಗಿದ್ದ [illegible] ಎಂದು ಹುಡುಗರು ಎಲ್ಲಿ ಹೋದರು ಎಂದು ಕೇಳಿದರೆ ಅವರು [illegible] ಹೊರಗೆ ಹೋಗಿದ್ದಾರೆ [illegible] "ಮನೆಯಲ್ಲಿ [illegible]" ಎಂದು ಹೇಳುತ್ತಾರೆ [illegible] ಆಶ್ಚರ್ಯಕರ [illegible] ಮಾತನಾಡುವದು.

ನಮ್ಮ ಹಿಂದೂ ಸ್ತ್ರೀಯರನ್ನು [illegible] ಯ [illegible] ಪ್ರತಿನಿತ್ಯದಲ್ಲೂ ಎರಡು ಘಂಟೆಗಳ ಕಾಲ [illegible] ನೀರಿನಲ್ಲಿ ಕುಳಿತುಕೊಂಡು ತಪಸ್ಸು ಮಾಡುತ್ತಾಳೆಂತಲೂ, ಈ [illegible] ಯಲ್ಲಿ ಅವಳಲ್ಲದೆ [illegible] ಕೋಡೆ [illegible] ಕ್ಷಣವೇ ಸುಟ್ಟು ಬೂದಿಯಾಗುವಷ್ಟು ತೀಕ್ಷ್ಣವಾಗಿದೆ ಎಂತಲೂ, ಅವಳು ಇನ್ನೂ [illegible] ಹೀಗೆಯೇ ತಪಸ್ಸು ಮಾಡುತ್ತಿದ್ದ ಕಾಲದಲ್ಲಿ [illegible] ಸುಡಲಿಕ್ಕೆ ಬಂದು ಅಲ್ಲಿ ಸಂಚಾರ ಮಾಡುವನೆಂದು ಹೇಳುತ್ತಿದ್ದಾನೆಂತಲೂ ಒಬ್ಬನೊಬ್ಬ ಬಾತ್ಮೀದಾರನು ತಿಳಿಸುತ್ತಾನೆ. ಅಂಥಾ ಕಾಲವೂ ಬರುವದೇ !! ಪ್ರ|| ಪ|

ವಿಲಾಯತಿಯಲ್ಲಿ [illegible] ಸವಾರೋಜಿಗಳ ಪ್ರತಿಸ್ಪರ್ಧಿಗಳಾದ ಕ|| [illegible] ಮೇಜರ್ ಮ|| [illegible] ಸಮರೋಜಿ ಯವರ [illegible] ಗಳನ್ನೂ ಕ|| [illegible] ರವರ [illegible] ಗಳನ್ನೂ [illegible] ಕೊಡುವದಕ್ಕೆ [illegible] ಕೊಟ್ಟವರ ಸಂಖ್ಯೆಯು [illegible] ತಳದಿ [illegible] ಸಮವಾಯಿತು ಹೀಗೆ [illegible] ಮ|| [illegible] ಸವರೋಜಿಯವರನ್ನು [illegible] ಪಾರ್ಲಿಮೆಂಟ್ [illegible] ಭಾವಿಸುವದಕ್ಕೆ ಆಗುವದಿಲ್ಲವೆಂದು [illegible] ಪತ್ರಿಕಾ [illegible] ಹೀಗೆ [illegible] ಭಾಗದಲ್ಲಿ ಮತ್ತೆ [illegible] ಚುನಾವಣೆ ನಡೆಯುವಂತೆ [illegible] ಆ ಪ್ರಾಂತದವರು [illegible] ಸವರೋಜಿ ಯವರನ್ನೇ ಚುನಾಯಿಸುವದು ತೋರುತ್ತದೆ

ಹೈದರಾಬಾದ್ ಸಂಸ್ಥಾನದಲ್ಲಿ [illegible] ಮ|| [illegible] ಸರ್ವವಸ್ತುಪ್ರದರ್ಶನಶಾಲೆಯನ್ನು [illegible] ಹೈದರಾಬಾದ ಸರ್ಕಾರದವರು ಇದಕ್ಕಾಗಿ [illegible] ರೂಪಾಯಿಗಳನ್ನು ಕೊಡುವಂತೆ [illegible] ಹೈದರಾಬಾದ್ [illegible] ನಡೆಸಬೇಕೆಂದು ಗೊತ್ತಾಗಿದೆ [illegible] ೩,೦೦೦ [illegible]

[illegible]

[illegible] ವರುಷದಲ್ಲಿ [illegible] ಜನಗಳು ಪ್ರಯಾಣ [illegible] ಜನಗಳು [illegible]

[illegible]

[illegible] ಕಾರಣಗಳನ್ನು ಗೊತ್ತು ಮಾಡುವದರಲ್ಲಿ ಅಶಕ್ತನಾಗಿರುತ್ತಾನೆ ಸಾಧಾರಣವಾಗಿ ಇವರನ್ನು [illegible] ಯಿಂದ [illegible] ಮತ್ತ್ಯಾರೂ [illegible] ರೆಂದು ಹೇಳುತ್ತಾರೆ ಅವರಲ್ಲಿ [illegible] ಆಗುತ್ತದೆ [illegible] ಸುಮಾರು [illegible] ಗಂಟೆಗಳ [illegible] ಕೆಲವು ಸಂದರ್ಭಗಳಲ್ಲಿ [illegible] ನಡೆಯುತ್ತಲಿರುತ್ತದೆ. [illegible] ದಿವಸಗಳ ವರೆಗೂ [illegible] ರುವವರು ತಮ್ಮ ಸ್ಥಳವನ್ನು ಬಿಟ್ಟು ಹೋಗದಷ್ಟು [illegible] ಇರುವರು.

BANGALORE—Printed and published at the KARNATAKA Press, No 40, HOSPITAL ROAD, CITY—189[illegible]